# నవయుగ

226

NAVAYUGA

౨౦ పై

# ನಿರುದ್ಯೋಗಿ

**ಮೊದಲೊಂದು ಉದ್ಯೋಗ ಬೇಕು; ಅದು ಉದರವಹ್ನಿಯನ್ನು ತಣಿಸಬೇಕು. ವಶೀಲಿ—ಪ್ರಭಾವಗಳ ಪಾಶಕ್ಕೆ ಮಾತ್ರ ಸಿಕ್ಕಬೇಕಾದ ಇಂದಿನ ನೌಕರಿ ನೀತಿ ಕರುಣಾಮಯವೂ ದಾರುಣವೂ ಆಗಿಲ್ಲವೆ?**

**ಶ್ರೀ ಕಾ. ರಾ. ಸಾರಂಗ.**

ಕಾಲೇಜಿನಲ್ಲಿರುವಾಗಲೇ ಈ ಕಥೆ ಬರೆಯುವ ಹವ್ಯಾಸ ನನ್ನ ಬೆನ್ನು ಹಿಡಿದಿತ್ತು. ಅಂತು ಹೇಗಾದರೂ ಮಾಡಿ 'ಇಂಟರ್‌ಮೀಡಿಯಟ್'ನಲ್ಲಿ ಮೊದಲ ಬಾರಿಗೆ ಪಾಸಾಗದಿದ್ದರೂ ಎರಡನೆ ಬಾರಿ ಕುಳಿತು ಪಾಸು ಮಾಡಿಕೊಂಡೆ.

ಮುಂದೆ ಜೀವನ ಸಾಗಬೇಕಾದರೆ ಏನಾದರೂ ಒಂದು ಉದ್ಯೋಗ ಹಿಡಿಯಬೇಕು. ನಾನು ಕಥೆಗಾರ, ಕಾದಂಬರಿಕಾರನೆಂದರೆ ಹೊಟ್ಟೆ ತುಂಬಬೇಡವೇ? ಕಥೆಯೊಂದು ಪತ್ರಿಕೆಯಲ್ಲಿ ಪ್ರಕಟವಾದರೆ ಕೆಲವು ಪತ್ರಿಕೆಯವರು ಏನಾದರೂ ಅಲ್ಪ ಸಂಭಾವನೆ ಕೊಡುತ್ತಾರೆ—ಕಥೆಗಾರನಲ್ಲಿ ಕರುಣೆದೋರಿ. ಇನ್ನು ಕೆಲವು ಪತ್ರಿಕೆಗಳು ತಮ್ಮಲ್ಲಿ ಕೊಡುವ ಸಾಮರ್ಥ್ಯವಿದ್ದರೂ ಪುಕ್ಕಟೆಯಾಗಿ ಕಥೆಗಳನ್ನು ಗಿಟ್ಟಿಸಿಕೊಂಡು ಪತ್ರಿಕೆಗಳನ್ನು ನಡೆಸುತ್ತಿರುತ್ತಾರೆ.

ಜೀವನ ಸಾಗಬೇಕಾದರೆ ಕಥೆಗಾರನಾದರೂ ಬೇರೆ ಉದ್ಯೋಗ ಹಿಡಿಯಲೇಬೇಕು. ಉದ್ಯೋಗ ನಾವು ಬೇಕೆಂದಾಗ ದೊರಕುತ್ತದೆಯೇ? ಪತ್ರಿಕೆಗಳಲ್ಲಿ ಬರುವ 'Wanted'ಗಳನ್ನೆಲ್ಲಾ ನೋಡಿ 'ಎಪ್ಲಿಕೇಶನ್' ಬರೆದು ಕಳುಹಿಸುವುದು ವರಮಾನವಿಲ್ಲದ ಒಂದು ಉದ್ಯೋಗವೇ ಆಗಿದೆ ನನಗೆ. ಆ ವೇಳೆಯಲ್ಲಿ ನಾಲ್ಕು ಕಥೆಗಳನ್ನಾದರೂ ಹೆಣೆಯುತ್ತಿದ್ದರೆ, ನನಗೆ ಯಾವ ಪ್ರತಿಫಲ ದೊರೆಯದಿದ್ದರೂ, ಕೆಲವರಾದರೂ ಅದನ್ನು ಓದಿ ಸಂತೋಷ ಪಡುತ್ತಿದ್ದರು. ನನ್ನ ಪಾಲಿನ ಶ್ರಮ ಸಾರ್ಥಕವಾಗುತ್ತಿತ್ತು.

ಕೆಲವೊಮ್ಮೆ 'ಇಂಟರ್‌ವ್ಯೂ' ಕಾರ್ಡುಗಳು ಬರುತ್ತಿದ್ದರೂ ಪ್ರಯೋಜನವಾಗುತ್ತಿರಲಿಲ್ಲ. ಯಾವುದಾದರೂ "ಕ್ಲಾರ್ಕ್" ಕೆಲಸಕ್ಕೆ ಕೂಡಾ "ಗ್ರೇಜ್ಯುವೇಟು"ಗಳೇ ಬರುತ್ತಿದ್ದರು. ಅಂದರೆ, ಅಲ್ಲಿಯೂ influence ನಡೆದು S. S. L. C.ಯಲ್ಲಿ ಫೇಲಾದವರೇ ಹೆಚ್ಚಾಗಿ 'ಸಿಲೆಕ್ಟ್' ಆಗುತ್ತಿದ್ದರು.

ಬಾಳಿನತ್ತ ಒಮ್ಮೆ ದೃಷ್ಟಿಹರಿಸಿದಾಗ ಪ್ರಪಂಚವೇ ವಿಚಿತ್ರವಾಗಿ ತೋರುತ್ತದೆ.

ಸಾಕಷ್ಟು ಹಣ ವ್ಯಯಿಸಿ 'ಡಿಗ್ರಿ ಹೋಲ್ಡರ್'ಗಳಾದವರಿಗೂ ಕೆಲಸವಿಲ್ಲದೆ ಹೋಗುವಾಗ ಅವರ ಹೃದಯ ಎಷ್ಟು ನೋಯಬೇಕು....! ಅವರ ಹೃದಯಾಂತರಾಳದಲ್ಲಿ ಎಷ್ಟು ವೇದನೆಯುಂಟಾಗಬೇಕು. ಅದರೆಡೆಗೆ ನನ್ನದು ಬರೇ ಅಲ್ಪ.

ಅದೊಂದು ದಿನ ಬಂದಿದ್ದ interview cardನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಅದರಲ್ಲಿ ಸಂತೋಷವೇನು...? ಇಂತಹ ಹಲವು ಇಂಟರ್‌ವ್ಯೂಗಳನ್ನು ನಾನು ಮುಗಿಸಿದ್ದೆ. ಆದರೆ, ಈಗ ನಡೆಯುವಂತಹ interview ಬಹಳ ದೂರದ ಊರಿನದು. Travelling expense ಬೇರೆ ಕೊಡುತ್ತೇನೆ ಅಂದಿದ್ದಾರೆ. ಹಾಗಾದರೆ ಕೆಲವೇ ಮಂದಿಗೆ ಈ ಸೌಭಾಗ್ಯ ದೊರೆಯಬಹುದೆಂದೆಣಿಸಿಕೊಂಡೆ.

ನನ್ನ ಕೈಯಲ್ಲಿ ಒಂದು ಚಿಕ್ಕಾಸೂ ಇಲ್ಲ. 'Travelling expense ಕೊಡುವುದು interviewಗೆ ಹಾಜರಾದ ಬಳಿಕ. ಕಥೆ ಬರೆಯಲು ಕಾಗದದ ಹಾಳೆಯನ್ನು ಪಡೆದುಕೊಳ್ಳಲು ಸಾಧ್ಯವಾಗದಿದ್ದ ನನ್ನಲ್ಲಿ interviewಗೆ ಹೋಗಲು ಹಣ ಎಲ್ಲಿಂದ ಬರಬೇಕು...?

ಸಾಯಂಕಾಲ ತಂದೆ ಮನೆಗೆ ಬಂದಾಗ—

"ಅಪ್ಪಾ! ನನಗೆ "ಇಂಟರ್‌ವ್ಯೂ"ಗೆ ಬಂದಿದೆ"—ಇಳುದನಿಯಲ್ಲಿ ಹೇಳಿದೆ.

ಈ ಮೊದಲು ಹಲವು interviewಗಳಿಗೆ ಹೋಗಲು ಅವರಿಗೆ ಹಣ ಕೊಟ್ಟು ಸಾಕಾಗಿತ್ತು. ಅಲ್ಲದೆ ಕಥೆ ಬರೆದು ಕಳುಹಿಸಲು ಅವರ ಜೇಬಿನಿಂದ ಹಲವಾರು ಸಲ ನಾನು ಪುಡಿಕಾಸು ಹಾರಿಸಿದ ವಿಷಯ ಅವರಿಗೆ ತಿಳಿದಿತ್ತು.

ಮನೆಯಲ್ಲಿ ಕಲ್ಪನಾದರೂ, ಕಥೆಗಾರನಾಗಬೇಕೆಂಬ ಹಂಬಲ ಅದೂ ಒಂದು ಹವ್ಯಾಸ! ಒಬ್ಬೊಬ್ಬರಿಗೆ ಒಂದೊಂದು ಹವ್ಯಾಸ ಬೆನ್ನು ಹಿಡಿಯುತ್ತದೆ. ಇಸ್ಪೀಟು ಆಡುವುದು, ಹೆಂಡ ಕುಡಿಯುವುದು, ಸಿಗರೇಟು ಸೇದುವುದು, ಕಥೆ ಬರೆಯುವುದು—ಎಲ್ಲಾ ಒಂದೊಂದು ಹವ್ಯಾಸ. ಅಂಟು ರೋಗವೆಂತಲೇ ಹೇಳಬಹುದು.

ಒಂದು ಮನೆಯಲ್ಲಿ ಇಸ್ಪೀಟು ಆಡುವವರಿದ್ದರೆ, ಆ ಮನೆಯ ಚಿಕ್ಕ ಮಕ್ಕಳೂ ಇಸ್ಪೀಟಿನ ಎಲೆ ಹಿಡಿದು ಆಟಕ್ಕಾರಂಭಿಸುತ್ತಾರೆ. ಕಥೆ ಬರೆಯುವವರಿದ್ದರೆ ಉಳಿದವರೂ ತಮ್ಮಿಂದ ಸಾಧ್ಯವಾಗಲೀ, ಆಗದೇ ಇರಲಿ ಏನೇನೋ ಪ್ರಯತ್ನಗಳನ್ನು ನಡೆಸಿ ಬರೆಯುತ್ತಾರೆ.

Interviewನ ಪ್ರಸ್ತಾಪ ತಂದೆಯಲ್ಲಿ ಹೇಳಿಯಾಯ್ತು. ಆದರೆ, ಅವರು ಏನು ಹೇಳುತ್ತಾರೋ ಎನ್ನುವ ಭಯ ನನಗೆ. ಅವರು ಹೇಳುವುದು ಇಂತಹದ್ದೇ ಎಂದು ನನಗೆ ತಿಳಿದಿತ್ತು. ಆದರೆ; ಅವರು ಏನೂ ಮಾತಾಡಲಿಲ್ಲ. ನಾನು ಪೆಚ್ಚು ಮೋರೆ ಹಾಕಿ ಕುರ್ಚಿಯಲ್ಲಿ ಕುಳಿತುಕೊಂಡೆ.

"ಏನು ಹಣ ಬೇಕಿತ್ತು..?"— ಸ್ವಲ್ಪ ಹೊತ್ತು ಕಳೆದ ಬಳಿಕ ಅವರು ಕೇಳಿದರು.

"ಹ್ಞಂ"—ಎಂದೆ.

ಗಟ್ಟಿಯಾಗಿ "ಬೇಕು" ಎನ್ನುವ ಧೈರ್ಯವೂ ನನ್ನಲ್ಲಿರಲಿಲ್ಲ.

"ನನಗೆ ಸಾಕಾಯ್ತು ಈ ನಿನ್ನ interview! ಎರಡು ವರ್ಷ ಇನ್ನೂ ಹೆಚ್ಚು ಕಲಿ ಎಂದು ಹೇಳಿದರೆ ಇವನಿಗೆ ಕಥೆ ಬರೆಯುವ ರೋಗ ಹಿಡಿಯಿತು. ಏನಾದರೂ B. A. ಮುಗಿಸುತ್ತಿದ್ದರೆ ಹೇಗಾದರೂ ಇಷ್ಟರಲ್ಲಿಯೇ ದೊರಕಿಸಿಕೊಳ್ಳಬಹುದಿತ್ತು..."—ತಂದೆ ಜರಿಯತೊಡಗಿದರು.

ನಾನು ಅವರಿಂದ ನಿರೀಕ್ಷಿಸುತ್ತಿದ್ದ ಉತ್ತರ ಇದು. ಯಾವಾಗಲೂ ಗಿಳಿಪಾಠದ ಹಾಗೆ ಹೇಳುತ್ತಾರೆ. B. A. ಓದಬೇಕಿತ್ತಂತೆ... B. A. ಓದಿದವರ ಪಾಡು ನನ್ನಿಂದಲೂ ಕಡೆಯೆಂದು ಅವರಿಗೆ ಇದು ಹೇಗೆ ತಿಳಿಯಬೇಕು? ಅವರೂ ನನ್ನ ಹಾಗೆಯೇ ನಿರುದ್ಯೋಗಿಯಾಗಿ ಒಂದು "ಇಂಟರ್‌ವ್ಯೂ"ನಲ್ಲಿ ಭಾಗವಹಿಸಿ ನೋಡಲಿ"—ಮನಸ್ಸಿನಲ್ಲಿಯೆ ಎಣಿಸುತ್ತಿದ್ದೆ.

"Travelling expense ಕೊಡುತ್ತಾರೆಂದಿದ್ದಾರಪ್ಪಾ... ಸಿಕ್ಕಿದ ಕೂಡಲೆ ನಿಮ್ಮ ಹಣ ಹಿಂದಿರುಗಿಸುವೆ"—ನಾನು ಹೇಳಿದೆ. ಹೇಗಾದರೂ ತಂದೆಯನ್ನು ಸಮಾಧಾನ ಪಡಿಸಬೇಕಲ್ಲ!

ದೂರದ ಪಯಣ—ನನಗೆ ಹೊಸ ಅನುಭವ. 'ಟ್ರೈನ್'ನಲ್ಲಿ ಕುಳಿತು ಹೋಗಬೇಕಿತ್ತು. ನಮ್ಮೂರಲ್ಲಿ "ಟ್ರೈನ್" ಇದ್ದಿರಲಿಲ್ಲ. ಬಸ್ಸಿನಲ್ಲಿ ನಾನು ಹಲವು ಬಾರಿ ಓಡಾಡಿದ್ದೆ. "ಟ್ರೈನ್"ನಲ್ಲಿ ಕುಳಿತುಕೊಳ್ಳುವುದು ಬಿಟ್ಟು ಅದನ್ನ ಈ ವರೆಗೆ ನಾನು ನೋಡಿಯೇ ಇರಲಿಲ್ಲ. ಪಠ್ಯ ಪುಸ್ತಕಗಳಲ್ಲಿ ಅದರ ಕುರಿತು ಓದಿ ಬಲ್ಲೆನಷ್ಟೆ!

"ಇಂಟರ್‌ವ್ಯೂ"ನ ಮೊದಲ ದಿನ—

"ಇಂಟರ್‌ವ್ಯೂ" ಬಹಳ ದೂರದ ಊರಿನಲ್ಲಾದುದರಿಂದ ಒಂದು ದಿನ ಮುಂಚಿತವಾಗಿಯೇ ಹೊರಟೆ. ಒಂದು ಜತೆ ಉಡುಪಿನೊಂದಿಗೆ, ಇದ್ದ ಪ್ರಮಾಣಪತ್ರಗಳ ಕಟ್ಟೊಂದನ್ನು Hand-bagನಲ್ಲಿ ತುಂಬಿಸಿಕೊಂಡೆ.

"Medical Representative ಆಗಬೇಕು" — ಅಪೇಕ್ಷಿತರು ಯಾರಾ

(ಹದಿನೈದನೇ ಪುಟ ನೋಡಿರಿ)





**8%** ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7½ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | ... ... | 4 |

## ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಶ್ರೀ ಕೆ.ಕೆ.ಶೆಟ್ಟಿ,ಎಂ.ಎಲ್.ಸಿ.,ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Telephone 226.

Estd. 1921
**NAVAYUGA**
Leading Kannada Weekly
UDIPI, S. Kanara
(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

# ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2 00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

## ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಕಮಾಡ ದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಟಪಾಲಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟ್ ಮತ್ತು ಇತರ ಪ್ರಕಟಣ್ಯ ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

**ಚಂದಾದಾರರಿಗೆ—**

ಚಂದಾ ಹಣವನ್ನಾಗಲೀ ಜಾಹೀರಾತಿನ ಬಿಲ್ಲುಗಳನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಕಮಿಷನ್ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

**ಮುಖಪತ್ರದಲ್ಲಿ:**

ಈಗ ಚರ್ಮ ಸಂಶೋಧನೆಯು ವಿದೇಶ ವಿನಿಮಯ ಆದಾಯವನ್ನು ಹೆಚ್ಚಿಸುತ್ತಿದೆ. ಈ ಚಿತ್ರದಲ್ಲಿ ವಿಜ್ಞಾನಿಗಳ ತಂಡವೊಂದರ ಮುಂದಾಳು ಡಾ| ಎನ್. ರಾಮನಾಥನ್ ಅವರ ನೇತೃತ್ವದ ಸೆಂಟ್ರಲ್ ಲೆದರ್ ಸಂಶೋಧನಾ ಸಂಸ್ಥೆಯಲ್ಲಿ ಚಪ್ಪಲಿ ಚರ್ಮದ ಸೌಕರ್ಯವನ್ನು ಹೆಚ್ಚಿಸುವುದಕ್ಕಾಗಿ ಇಲೆಕ್ಟ್ರೋ ಮೈಕ್ರೋಸ್ಕೋಪನ್ನು ಉಪಯೋಗಿಸುತ್ತಿರುವುದನ್ನು ಕಾಣಬಹುದು.

# ನವಯುಗ

| ಸಂಪುಟ ೪೫ | ಉಡುಪಿ | Vol. 45 |
| --- | --- | --- |
| ಸಂಚಿಕೆ ೫ | ೭—೧೦—೧೯೬೫ | No. 5 |

## ನಮ್ಮ ದಾರಿ ನಮಗೆ

ಇಂಡೋನೇಶ್ಯದ ಅಧ್ಯಕ್ಷ ಸುಕರ್ಣರು ಇಂದು ಎಲ್ಲಿ ಹೋಗಿದ್ದಾರೆಂಬುದು ಖಚಿತವಾಗಿ ಗೊತ್ತಿಲ್ಲ. ಅವರು ಅಧಿಕಾರದಲ್ಲಿರಬಹುದು; ಸ್ವತಂತ್ರವಾಗಿಯೂ ಇರಬಹುದು; ಅಥವಾ ರಾಜಕೀಯ ಕೈದಿಯಾಗಿದ್ದರೂ ಇರಬಹುದು. ಇಲ್ಲವೇ ಗತಾಸುವಾಗಿದ್ದರೂ ಇರಬಹುದು. ಆದರೆ, ಇಂಡೋನೇಶ್ಯದಲ್ಲಿ ನಡೆದ ರಾಜಕೀಯ ದುರಂತ ಅಗಣ್ಯವೆನ್ನುವುದಂತೂ ಸಾಧ್ಯವಿಲ್ಲ. ಅಲ್ಲಿ ಬಂಡೆದ್ದ ಕ್ರಾಂತಿಕಾರಿ ಮಂಡಳಿಯೆಂದು ಅಧ್ಯಕ್ಷ ಸುಕರ್ಣರನ್ನು ಪದಚ್ಯುತಗೊಳಿಸಿತೆಂದು ಮೊದಲಿಗೆ ತಿಳಿದು ಬಂದರೆ, ಒಂದನ್ನು ಒಗ್ಗಬಡೆದು ಸುಕರ್ಣರು ತಮ್ಮ ಸ್ಥಾನವನ್ನು ಭದ್ರಪಡಿಸಿದ್ದಾರೆಂದೂ ಸೇನೆ, ವಾಯು ಮತ್ತು ನೌಕಾದಳಗಳು ಅವರಲ್ಲಿ ನಿಷ್ಠೆ ಪ್ರದರ್ಶಿಸಿವೆಯೆಂದೂ ಮತ್ತೆ ಬಹಿರಂಗವಾಯಿತು. ಸತ್ಯಸಂಗತಿಗಳೇನೇ ಇದ್ದರೂ ಅಧ್ಯಕ್ಷ ಸುಕರ್ಣರ ಧೋರಣೆ ಇಂಡೋನೇಶ್ಯದಲ್ಲಿ ಪ್ರತಿಕೂಲವನ್ನು ಎದುರಿಸಬೇಕಾಗಿದೆ ಎಂಬುದಂತೂ ಖಂಡಿತ.

ಅಧ್ಯಕ್ಷ ಸುಕರ್ಣರು ಇಂಡೋನೇಶ್ಯದ ಅನಭಿಷಿಕ್ತ ದೊರೆ. ಆದರ ಆಜೀವ ಅಧ್ಯಕ್ಷರೆಂದು ಆಯ್ಕೆಗೊಂಡವರು. ಕಳೆದ ೨೦ ವರ್ಷಗಳ ಸುದೀರ್ಘ ಆಡಳಿತೆಯಿಂದ ಜಗತ್ತಿನಲ್ಲಿ ಹೆಸರು ಇಟ್ಟುಕೊಂಡವರು. ಮೊದಮೊದಲಿಗೆ ತಟಸ್ಥ ನೀತಿಯ ಪುರಸ್ಕರ್ತರಾಗಿ ಬಂದ ಇವರು ನಮ್ಮ ಗೆಳೆಯರೂ ಆಗಿದ್ದರು. ಆದರೆ, ಬರಬರುತ್ತ ಸುಕರ್ಣರ ಮೇಲೆ ಕೆಂಪು ಚೀನಾದ ಪ್ರಭಾವ ಬೀಳತೊಡಗಿತು. ಅವರ ಒಲವು ಕಮ್ಯೂನಿಜಂನತ್ತ ಸರಿಯತೊಡಗಿತು. ಕೆಂಪು ಚೀನಾ ೧೯೬೨ರಲ್ಲಿ ಭಾರತದ ಉತ್ತರದ ಗಡಿಯಲ್ಲಿ ಆಕ್ರಮಣ ಮಾಡಿತು. ಈ ಸಂಬಂಧದಲ್ಲಿ ಮಧ್ಯಸ್ಥಿಕೆಯ ಮಾತುಕತೆ ನಡೆಸಿದ ಕೊಲಂಬೋ ರಾಷ್ಟ್ರಗಳಲ್ಲಿ ಇಂಡೋನೇಶ್ಯವೂ ಒಂದು. ಆಗ ಭ್ರಾಂತವಾದರೂ ಸುಕರ್ಣರಿಂದ ಬಹಳವನ್ನು ನಿರೀಕ್ಷಿಸಿತ್ತು. ಆದರೆ, ಭಾರತದ ನಿರೀಕ್ಷೆ ಸುಳ್ಳಾಯಿತು. ಕೆಂಪು ಚೀನಾವು ಭಾರತದ ಮೇಲೆ ಅಪಚಾರ ಮಾಡಿರುವುದೆಂದು ಅವರು ಸಾರಲು ಸಿದ್ಧರಾಗಲಿಲ್ಲ. ಅವರಂದಿನ ನಿಲುವು ಕೆಂಪು ಚೀನಾದಿಂದ ಕಲಿತ ಪಾಠವನ್ನು ಒಪ್ಪಿಸಿದಂತಿತ್ತು!

ಇಂಡೋನೇಶ್ಯ ಕೆಂಪು ಚೀನಾದ ಕೈಗೊಂಬೆಯೆಂಬುದೀಗ ಸ್ಪಷ್ಟವಾಗಿದೆ. ಬೋರ್ನಿಯೋ ಸನ್ನಿವೇಶದಲ್ಲಿ ಭಾರತವು ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸಿತ್ತು. ಆದರೆ, ಭಾರತವು ಮಲೇಶ್ಯಾ ಇಂಡೋನೇಶ್ಯ ವಿವಾದದಲ್ಲಿ ಮಲೇಶ್ಯಾದ ಪಕ್ಷವಹಿಸಿದ್ದರಿಂದ ಸುಕರ್ಣರ ಕಾದ ಕಾವಲಿಗೆ ನೀರು ಸುರಿದಂತಾಯಿತು. ಅಂದಿನಿಂದಲೂ ಅವರು ಭಾರತದ ಬಗ್ಗೆ ದುರಭಿಪ್ರಾಯತಾಳುತ್ತ ಬಂದಿದ್ದಾರೆ. ಕೆಂಪು ಚೀನಾದ ಮಾತು ಕೇಳಿ ಪ್ರತಿ ವಿಶ್ವಸಂಸ್ಥೆಯನ್ನು ಕಟ್ಟುವ ಕನಸು ಕಾಣುತ್ತ ವಿಶ್ವಸಂಸ್ಥೆಯಿಂದ ಹೊರಬಿದ್ದರು. ಸದ್ಯದ ಭಾರತ—ಪಾಕ ಹೋರಾಟದಲ್ಲಿ ಪಾಕಿಸ್ತಾನದ ಬಾಲ ಹಿಡಿದರು. ಬಹಿರಂಗವಾಗಿಯೇ ಯುದ್ಧದಲ್ಲಿ ಪಾಲ್ಗೊಂಡರು. ಪೂರ್ವ ಪಾಕಿಸ್ತಾನಕ್ಕೆ ಸೈನಿಕ ಶಕ್ತಿಯನ್ನು ಕಳಿಸಿ ಅದ್ವಿತೀಯ ದಾಖಲೆನ್ನು ನಿರ್ಮಿಸಿದರು. ಜಾತ್ಯತೀತ ಮತ್ತು ಜಾತೀಯ ಪಂಥಗಳಲ್ಲಿ ಅವರು ಜಾತೀಯತೆಯನ್ನೇ ಎತ್ತಿ ಹಿಡಿದರು. ಜಕಾರ್ತಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯ ಮೇಲೆ ಜನ ನುಗ್ಗಿ ಬಂದಾಗಲೂ ಇವರದನ್ನು ಲೆಕ್ಕಾಗಿ ಮನಸ್ಸಿಗೆ ತಂದುಕೊಂಡಿಲ್ಲ. ಭಾರತವನ್ನು ಬೆಂಬಲಿಸುವ ಮಾತು ದೂರವುಳಿಯಲಿ, ಚೀನೀಯರಂತೆಯೇ ಭಾರತದ ಬಗ್ಗೆ ಅಪಪ್ರಚಾರ ಮಾಡುವುದರಲ್ಲೇ ನಿರತರಾದರು. ಭಾರತದ ಪರಮ ಮಿತ್ರರಾಗಿದ್ದ ಸುಕರ್ಣರೀಗ ಪರಮ ಶತ್ರುವಿನ ಸ್ಥಾನವನ್ನೇ ಹಿಡಿದಿದ್ದಾರೆಂದರೂ ತಪ್ಪಿಲ್ಲ

ಪ್ರತಿ ದೇಶದಲ್ಲೂ ರಾಜಕಾರಣದ ಗತಿಯೊಪ್ಪುದಿದ್ದರೂ ಕಲವರಾದರೂ ಬುದ್ಧಿಜೀವಿಗಳಿರುತ್ತಾರೆ. ಸುಕರ್ಣರು ಹಾಕಿದ ಅಂತರಂಗದಿಂದ ಕೆಲವರಾದರೂ ನೊಂದಿರುವುದು ನಿಜ. ಹೀಗಾಗಿ ಅವರು ಅಂತಃಕಲಹಕ್ಕೆ ಬೀಜ ಬಿತ್ತಿದರು. ಅದರ ಫಲವನ್ನು ಅನುಭವಿಸದಿರುವುದು ಸಾಧ್ಯವೆ? ಇದರ ಪರಿಣಾಮವೇ ಅಲ್ಲಿನ ದುರಂತವೆನ್ನಬೇಕು. ಅವರು ಹೇಳಿದರೆಂದು ಮಂದಿಯೂ ದುರಿರ ಅಧಾರದ ಮೇಲೆ ಹೇಳುವುದಾದರೆ, ಸುಕರ್ಣರು ಒಂದು ದುರಂತದಿಂದ ಬದುಕುಳಿದರೆ - ಬಂಡುಗಾರರ ನಾಯಕರನ್ನು ಮುಗಿಸಿಬಿಟ್ಟರು. ತ್ರಿದಳಗಳಿಂದಲೂ ಮತ್ತೊಮ್ಮೆ ನಿಷ್ಠೆಯ ಪ್ರಮಾಣವಚನ ಸ್ವೀಕರಿಸಿದರು. ಆದರೆ, ಒಮ್ಮೆ ಎಬ್ಬಿಸಿದ ಕೊಳಕು ಮತ್ತೊಮ್ಮೆ ಭುಗಿಲ್ಲೆನ್ನದಿರದು. ಇದನ್ನರಿತೇ ದೇಶದಲ್ಲಿ ಯುದ್ಧ ಸ್ಥಿತಿಯನ್ನವರು ಘೋಷಿಸಿದ್ದಾರೆ. ಈ ಯುದ್ಧ ಯಾರ ಸಂಗಡ? ಅಧ್ಯಕ್ಷ ಸುಕರ್ಣರು ಮೈಯ್ಯೆಲ್ಲ ಕಣ್ಣಾಗಿ ನೋಡಿಕೊಂಡರೂ ಅವರ ಪತನಕ್ಕೆ ನಾಂದಿ ಬಿದ್ದಿದೆ; ಅವರೆಷ್ಟೇ ಉಳಿದುಕೊಂಡರೂ ಅವರ ಪತನ ಬಹುದೂರವಿದೆಯೆನಿಸುವುದಿಲ್ಲ.

ಪಾಕಿಸ್ತಾನದ ಸೇನೆಯಲ್ಲಿಯೂ ರಾಜಕೀಯದಲ್ಲಿಯೂ ಎರಡು ಬಣಗಳಿವೆಯೆಂದು ವರದಿಯಾಗಿದೆ. ಅಯ್ಯೂಬಖಾನರೂ ಅವರ ನಿಷ್ಠಾವಂತ ಸೈನ್ಯವೂ ಅಮೆರಿಕೆಯನ್ನು ನೆಚ್ಚಿದರೆ, ಭುಟ್ಟೋ ಮತ್ತವರ ಪಕ್ಷ ಕೆಂಪು ಚೀನಾದತ್ತ ವಾಲುತ್ತಿದೆ. ಸದ್ಯ ಪಾಕಿಸ್ತಾನವು ಭಾರತದೊಡನೆ ಹೋರಾಡಿ ಸೈನಿಕವಾಗಿಯೂ ರಾಜಕೀಯವಾಗಿಯೂ ಸೋತುದರಿಂದ ಪಾಕಿಸ್ತಾನದಲ್ಲಿಯೂ ಒಂದು ಬಗೆಯ ಕ್ರಾಂತಿಯಾದರೆ ಅದೂ ಸೋಜಿಗವಲ್ಲ. ಆದರೆ, ಕರಾಚಿ — ಜಕಾರ್ತಾಗಳಲ್ಲಿ ಯಾವ ತರದ ಸ್ಥಿತ್ಯಂತರವಾದರೂ ಅದರಿಂದ ಭಾರತದ ಮೇಲೆ ಸತ್ ಪ್ರಭಾವ ಬೀರುವುದು ಸಾಧ್ಯವಿಲ್ಲ. ಆದ ದರಿಂದ ನಾವು ನಮ್ಮ ಮೂಲಭೂತ ತತ್ವಗಳಿಂದ ಅವಿಚಲರಾಗದೆ ಆತ್ಮರಕ್ಷಣೆ—ರಾಷ್ಟ್ರೋದ್ಧಾರದ ಪವಿತ್ರ ಕಾರ್ಯಗಳಲ್ಲಿ ತಲ್ಲೀನರಾಗಬೇಕು, ಪರರ ಸಂಕಟದಿಂದ ಆನಂದಿತರಾಗದೆ ಸ್ವಹಿತಚಿಂತನೆಯಲ್ಲೇ ತೊಡಗಬೇಕು.

**ವಚನಸುಧೆ**

ಅಗ್ನಿ ಸ್ತೇಜೋ ಮಹಲ್ಲೋಕೇ
ಗೂಢಸ್ತಿಷ್ಠತಿ ದಾರುಷು।
ನ ಚೋಪಯುಂಕ್ತೇ ತದ್ದಾರು
ಯಾವನ್ನೋದ್ದೀಪ್ಯತೇ ಪರೈಃ॥

ಅಗ್ನಿಯೊಂದು ಮಹಾ ಶಕ್ತಿ, ಇದು ಕಟ್ಟಿಗೆಯಲ್ಲಿ ಸುಪ್ತವಾಗಿರುತ್ತದೆ ಹಾಗಿದ್ದರೂ ಇನ್ನೊಬ್ಬರು ಅದನ್ನು ಪ್ರಜ್ವಲಿಸದ ಹೊರತು ಅಗ್ನಿಯಿಂದ ಯಾರಿಗೂ ಭಯವಿಲ್ಲ.

## ಬೇಕಾಗಿದ್ದಾರೆ

ಸಾಕಷ್ಟು ಅನುಭವವುಳ್ಳ ಕಂಪೋಸಿಟರ್, ಪ್ರಿಂಟರ್ ಬೇಕಾಗಿದ್ದಾರೆ.

ಪ್ರಿಂಟಿಂಗ್ ಪ್ರೆಸ್ಸಿನ ಬೇರೆ ಬೇರೆ ವಿಭಾಗಗಳಲ್ಲಿ ತರಬೇತಿಗಾಗಿ X ನೇ ತರಗತಿವರೆಗೆ ಓದಿದ ಕೆಲವು ಹುಡುಗರನ್ನು ತೆಗೆದು ಕೊಳ್ಳಲಾಗುವುದು. ಸ್ಥಳೀಯರಿಗೆ ಮೊದಲ ಪ್ರಾಶಸ್ತ್ಯ. ವಿಚಾರಿಸಿರಿ:

**ನವಯುಗ ಪ್ರೆಸ್ ಉಡುಪಿ**

## ನರಸಣ್ಣನ ಸರಸ

'ಉಳುವವನೇ ಹೊಲದೊಡೆಯ ಮಾಡಿದ ಹಾಗೇನೇ ಇನ್ನೊಂದು ಕಾನೂನು ಮಾಡಬೇಕ್ರಿ...'

'ಏನೋ ಅದು ..?'

"ಮತ್ತೇನಿಲ್ಲ ಸ್ವಾಮಿ, ನಾನೂ ಈ ಮನೇ ಯಜಮಾನನಾಗ ಬೇಕ್ರಿ...."

'ಮತ್ತೆ ನಾನು?'

"ನನ್ನ ನೌಕರ...."

"ನಡೆಯೋ ಆಚೆ, ನಿನ್ನ ಸೊಕ್ಕು...."

## ಗೇಹ ರಾಜ್ಯದಲ್ಲಿ

# ಬಾಡಿಗೆದಾರನದೇ ಮನೆಯಾದೀತೆ?

"ಗಾಂಧಿ ಹುಟ್ಟಿ ೯೬ ವರ್ಷ ಕಳೀತಂತೆ ನೋಡಿ...."

"ಇದ್ರಲ್ಲೇನೇ ವಿಶೇಷ? ಆ ಮಹಾತ್ಮ ಕಣ್ಣು ಮುಚ್ಚಿಯೂ ಹದಿನೇಳು ವರ್ಷ ಕಳೀತು ನೋಡು..."

"ಹೌದೆ? ಆದ್ರೂ ನೋಡಿ, ಅವ ಸತ್ತದ್ದು ಮೊನ್ನೆ ಮೊನ್ನೆ ಎಂಬಂತಾಗಿದೆ...'

'ಪಾಪ, ಅಲ್ವೆ ಅತ ಸಾಯುವಾಗ ನೀನು ಇದ್ದೆಯೇನು?"

'ಎಲ್ಲಿ?"

"ಎಲ್ಲಯಂತೆ; ಬಿರ್ಲಾ ಮಂದಿರದಲ್ಲಿ..."

"........"

"ಅಲ್ವೆ, ದೊಡ್ಡ ಅಜ್ಜಮ್ಮ ಮಾತಾಡಿದ ಹಾಗೆ ಆಡ್ತಾ ಇದ್ದೀಯಲ್ಲಾಂತ ಹಾಗಂದೆ...'

'ಅಲ್ರಿ, ನಾನೇನು ಇರ್ಲಿಲ್ವೆ? ನನಗಾಗ ಮೂರೋ ನಾಲ್ಕೋ ವರ್ಷ... ನೀವು?"

"ನಾನು....ನಾನು ಪ್ರಾಯಃ ಶಾಲೇ ಹೋಗುತ್ತಿದ್ದೆ. ಮೂರೋ ನಾಲ್ಕೋ ಫಾರ್ಮ್ ಕಲೀತಿದ್ದಿರ್ಬೇಕು..."

'ಅಲ್ರಿ, ಮೊನ್ನೆ ನೆಹ್ರು ಕಾಲವಶರಾದ್ದಕ್ಕೆ ರಜೆಯಿತ್ತಲ್ಲಾ? ಹಾಗೆಯೇ ಅಂದೂ...."

"ಸರಿಯಾಗಿ ನೆನಪಿಗೆ ಬರೋದಿಲ್ಲ. ನೋಡು, ಗಾಂಧೀಯವರು ಗೋಡ್ಸೆ ಗುಂಡಿಗೆ ತುತ್ತಾದುದು ಪ್ರಾಯಃ ಶುಕ್ರವಾರ ಸಂಜೆ. ಶನಿವಾರ ಆದಿತ್ಯವಾರ ಶಾಲೆಗೆ ರಜೆ ಇತ್ತು ನೋಡು...."

"ಹೌದೆ? ನೀವು ಶಾಲೆಗೆ ಹೋಗುವಾಗ ಶನಿವಾರವೂ ರಜೆಯಿತ್ತೆ? ಅಯ್ಯೋ, ಎಷ್ಟು ಭಾಗ್ಯಶೀಲರಪ್ಪ ನೀವು!"

"ಯಾಕೆ?"

"ತುಂಬ ರಜೆ ಪಡೆದವರು...."

"ನಿನಗಿಂತ ಹೆಚ್ಚೇನಲ್ಲ.... ಅಂದ್ರೆ, ೧೮೦ ದಿನ ಶಾಲೆ ನಡೆಸಿದರೆ ಸಾಕಿತ್ತು..."

"ಆದ್ರೆ ಈಗ ನೋಡಿ ಹಂಗಸಂಗೆ ತಿಂಗಳಗೋದು ಶಿಟಿ, ಶಿಟಿ...."

"ಅದು ಒಳ್ಳೆಯದೇ ಆಯ್ತು..."

"ಯಾಕೆ?"

"ಹೀಗೆ ಆದದ್ದು ಯಾವಾಗ್ನಿಂದ ಹೇಳು...."

'ಅದೇ ನಿಮ್ಮ ಕರ್ನಾಟಕ ನಮ್ಮನ್ನು ಅಪ್ಪಿದ ಮೇಲೆ...."

"ಅಂದ್ರೆ...."

"ಅಂದ್ರೆ ರಾಜ್ಯ ಪುನರ್ಘಟನೆ ಆಗಿ ನಾವೆಲ್ಲಾ..."

"ಹ್ಞಾಂ....ಆದ್ರೆ ನೋಡು...ಅದನ್ನೇ ಒಳ್ಳೆಯದೆಂದದ್ದು .."

"ಅಂದ್ರೆ?"

"ಇಷ್ಟೂ ಅರ್ಥವಾಗ್ಲಿಲ್ಲಾ...?"

'ಆದ್ರೆ ಮತ್ಯಾಕೆ ಕೇಳ್ತೀನೆ?'

'ಕೇಳದ್ಯಾ, ಈಗ ಪರೀಕ್ಷೆ ಪರಿಣಾಮ ಹೇಗೆ ಬರುತ್ತೇಂತ....'

'ನಾನು ಕಲ್ತ ಶಾಲೆಯಂತೂ ಪ್ರತಿ ವರ್ಷ ಕಂಕ್ಕಿಂತ ಹೆಚ್ಚು....'

'ಅದೇ ನೋಡು, ನಾವೆಲ್ಲ ಕಡಿಮೆ ದಿನ ಶಾಲೆಗೆ ಹೋಗಿ ಕಡಿಮೆ ಪಾಸಾಗುತಿದ್ದೆವು. ನೀವೆಲ್ಲಾ ಹೆಚ್ಚು ದಿನ ಶಾಲೆಗೆ ಹೋಗಿ ಒಳ್ಳೆ ಫಲಿತಾಂಶ ಪಡೆಯುತ್ತೀರಿ...'

'ನಿಜಾನ್ರಿ! ಆದ್ರೂ...."

'ಆದ್ರೂ ಏನು?'

'ನಿಮ್ಮನ್ನ ಸರ್ಕಾರದ ವಕ್ತಾರರನ್ನಾಗಿ ಮಾಡಬೇಕ್ರಿ....'

'ಯಾಕೆ?"

'ಅಲ್ರಿ, ಉತ್ತಮ ಫಲಿತಾಂಶ ಬರುತ್ತೇಂದ್ರಿಯಲ್ಲಾ....ಎಲ್ಲಿ ಹೇಳಿ ನೋಡೋಣ...'.

'ಎಲ್ಲಿ, ಅಂದ್ರೆ, ನಮ್ಮ ಜಿಲ್ಲೆಯಲ್ಲಿ...'

'ಹಾಗೆ ಬನ್ನಿ. ಆದ್ರೆ ಮೈಸೂರ್ನ ಕಥೆ ನೋಡಿ ಹೇಗೆ ಚಿಂತಾಜನಕವಾಗಿದೆ? ಪಾಪ, ಏನು ಮಾಡಿದ್ರೂ ಅಲ್ಲಿನ ಕಥೆ ಕೈಬಾಸ....'

"ಅಂದ್ರೆ?"

'ಅಂದ್ರೆ ಏನು? ನೀವೇನೇ ಹೇಳಿ, ಹಿಂದೆ ಶಾಲೆ ಹೋಗುತಿದ್ದುದು ಕಡಿಮೆಯಾದ್ರೂ ಕಲೀತಿದ್ದುದು ಹೆಚ್ಚು. ಇವತ್ತೇನು ಹಾಗೆ ಇದೆಯೆ?"

'ಅಂದ್ರೆ ನಿನ್ನ ಅಭಿಪ್ರಾಯವೇನೂಂತ?'

"ಅಲ್ರಿ ಈಗಿನ ಪರೀಕ್ಷಾ ಮಟ್ಟ ಇಳಿದದ್ರಿಂದ ನಮ್ಮ ಜಿಲ್ಲೆಯಲ್ಲಿ ಒಳ್ಳೆ ಫಲಿತಾಂಶ ಬರುತ್ತೆ, ಅಷ್ಟೇ ಹೊರ್ತು ಹೆಚ್ಚು ಶಾಲೇ ಹೋಗುತ್ತಿರುವುದರಿಂದಲ್ಲ."

"ಇದನ್ನ ಹೇಗೆ ಸಿದ್ಧ ಮಾಡುತ್ತಿ?"

"ಶಾಲೇ ಹೋಗೋದು ನಮ್ಮಲ್ಲಿ ಮಾತ್ರ ಹೆಚ್ಚಲ್ಲ. ಇಡಿಯ ರಾಜ್ಯದಲ್ಲೇ ಹೆಚ್ಚು ಹಾಗಿದ್ರೂ ನಮ್ಮ ಜಿಲ್ಲೆಯಲ್ಲಿ ಮಾತ್ರ ಒಳ್ಳೆಯ ಪರಿಣಾಮ ಬರಬೇಕು ಯಾಕೆ?"

"ಪರ್ವಾಗಿಲ್ವೇ ನೀನು. ನಿನ್ನ ಹುಟ್ಟಿದ ಜಿಲ್ಲೆಯ ಮೇಲೆ ಎಷ್ಟೊಂದು ಮೋಹವೇ ನಿನಗೆ?"

"ಇದು ಮೋಹವಲ್ಲ ಇದ್ದದ್ದನ್ನು ಅನ್ನೋದು...."

"ಆದಿರ್ಲಿ, ಅಲ್ಲ, ಗಾಂಧೀ ಸುದ್ದಿ ಎತ್ತಿದವ್ಳು ಮತ್ತೆ ಅದೆಲ್ಲಾ ಬಿಟ್ಟು...'

'ಓ ಹೌದ್ರಿ...'

'ಅದೇ ಅಂದದ್ದಲ್ಲಾ?'

'ಏನು?'

'ಮತ್ತೇನು? ನಿಮಗೆ ಹೆಂಗಸ್ರಿಗೆ ಮಾತಿಗೆ ಕೂತ್ರೆ ಹೊತ್ತು ಗೊತ್ತು, ವಿಷ್ಯಾ ಕಥೆ ಏನೂ ತಿಳಿಯೋಲ್ಲ, ಹಾಲಿಗೆ ಹೋದವ್ಳು ಗೋ ಮೂತ್ರ ಹಿಡಕೊಂಡು ಬರ್ತೀರಿ...."

"ಹೌಹೌದು. ನಾವು ಗೋ ಮೂತ್ರವನ್ನಾದರೂ ತರ್ತೇವೆ. ನೀವು...?"

"ನಾವು?...ನಾವು ಬರಿಗೈಯಲ್ಲೇ ಮರಳ್ತೇವೆ..."

"ಪರ್ವಾಗಿಲ್ರಿ ನೀವು. ನಿಮ್ಮೊಡನೆ ಮಾತಾಡಿದ್ರೆ ನಮ್ಮ ಉತ್ರ ಹೇಳೋಕೇ ಇಲ್ಲ. ಎಂದೂ ಕಡೆ ಮಾತುಗಳನ್ನ ನೀವೇ ಅಂತೀರಿ..."

'ಅಷ್ಟಲ್ಲಾ....ಏಕ ಪಾತ್ರಾಭಿನಯ?"

"ಏನು?"

"ಇನ್ನೇನಾಗ್ಬೇಕೂಂತ..."

"ಯಾಕ್ರಿ ಏನಾಯ್ತೂಂದ್ರೆ...'

"ಏನೂ ಇಲ್ಲ, ನಾಯೂನೂ ಇಲ್ಲ. ಮತ್ತೆ ಗಾಂಧೀ ಹೂಂತ ನನ್ನ ಮುಖದ್ಮೇಲೆ ನೀನೇ ಉಗುಳಿದಿಂದ ಮೇಲೆ..."

'ಅಯ್ಯೋ ರಾಮ ರಾಮ....'

'ರಾಮ ರಾಮ ಅಲ್ಲ, ಇಂದು ಬೇಕಾಗೋದು ಭೀಮ ಮಂತ್ರ....'

'ಅಂದ್ರೆ....'

'ರಾಮಧ್ಯಾನ ಮಾಡಿದ ಬಾಪೂ ಕೊಲೆಯಾದರು. ಮತ್ಯಾಕೆ ನೋಡು ರಾಮ?'

'ಬಾಪೂ ಹುತಾತ್ಮರಾದದು ನಿಜ. ಆದ್ರೆ ಅವರು ಚಿರಂಜೀವಿಯಾಗಿದ್ದಾರೆ. ಇಂದಿಗೂ ಅವರು ನಮ್ಮ ಕಣ್ಣ ಮುಂದೆ ನಿಲ್ಲುತ್ತಾರೆ...'

'ಏನು ನಿಲ್ಲುತ್ತಾರೆಯೇ? ನೀನೆಲ್ಲಿ ನೋಡಿದ್ದಿ ಅವರನ್ನು'

'ಅಯ್ಯೋ, ಅವರನ್ನು ಕಣ್ಣಾರೆ ನೋಡಿದ್ದೇನೆ. ಪಟದಲ್ಲಿ....ನೋಡಿ ಅದೇ ಬೋಳು ತಲೆ, ಹಲ್ಲಿಲ್ಲದ ಬಚ್ಚ ಬಾಯಿ, ಸೊಂಟದಲ್ಲಿ ಮೊಣಗಂಟಿನ ತನಕ ಉಟ್ಟ..."

"ಸಾಕಮ್ಮ ಸಾಕು... ನೀನು ಅಷ್ಟಾದ್ರೂ ಕಾಣ್ತೀಯಲ್ಲಾ..."

'ಕಾಣದೆ ಮತ್ತೆ... ಒಬ್ಬ ಭಾರತೀಯನನ್ನು ಇಡೀ ಜಗತ್ತೇ ಮಹಾತ್ಮಾ ಅಂತ ಗೌರವಿಸುವಾಗ ಭಾರತೀಯರಾದ ನಾವು...."

"ಹ್ಞಾಂ... ಅಂತಹ ಉಜ್ವಲ ಭಾವ ನಿನ್ನಲ್ಲಿದೆಯಲ್ಲಾ...'

'ಅಲ್ರಿ, ನೀವು ಗಾಂಧಿಯನ್ನು ನೋಡಿದ್ದೀರಾ?"

'ಹ್ಞಾಂ, ನಿನ್ನ ಹಾಗೇನೇ..."

"ಹೋ, ಮತ್ತೆ ನೆಹರು..."

"ಅವರನ್ನು ನೋಡಿದ್ದೇನೆ ಮಂಗಳೂರಿನಲ್ಲಿ, ಎಂತಹ ಅಮೋಘ ವ್ಯಕ್ತಿತ್ವ....'

'ಅಂತೂ ಎರಡೂ ಮಹಾಜೀವಗಳು ನಮ್ಮ ಕಣ್ಣಿನಿಂದ ಅಗೋಚರವಾಗಿಯೇ ನಮ್ಮನ್ನು ನಡೆಸುತ್ತವೆಯಲ್ಲಾ...."

'ಬಾಪೂಜಿ ಕನಸಿನ ಭಾರತವನ್ನು ಕಟ್ಟಿದರು, ನೆಹರು ಅದನ್ನು ಕಾರ್ಯರೂಪಕ್ಕೆ ತರುವ ದಾರಿ ಹಿಡಿದರು...ನಮ್ಮ ರಾಜ್ಯ ಸರಕಾರದವರು ಭೂಸುಧಾರಣೆಯನ್ನು ನೋಡು ಗಾಂಧೀಜಿಯಂತೆಯೇ ಜ್ಯಾರಿಗೆತಂದರು..?'

"ಹ್ಞಾಂ.... ಅದೊಂದು ಭೂಸುಧಾರಣೆ, ಅಲ್ರಿ, ಅದರಿಂದ ಏನು ಪ್ರಯೋಜನ?"

"ಏನು ಅಂದ್ರೆ? ಉಳುವವನೇ ಹೊಲದೊಡೆಯನಾಗುವಂತೆ ಈ ಶಾಸನ ಅನುವು ಮಾಡಿಕೊಡುವುದು...."

"ಅಂದ್ರೆ, ಯಾರು ಬೇಸಾಯ ಮಾಡುತ್ತಾನೆಯೋ ಅವನೇ ಭೂಮಿಯ ಒಡೆಯ, ಧನಿಯೆಂಬವನಿಲ್ಲ..."

"ಸದ್ಯ ಸರಕಾರವೇ ಧನಿ ಅನ್ನು. ಸರಕಾರ ಅಂದ್ರೆ ನಾವು—ನೀವು ಎಲ್ಲ.... ಮುಂದೆ, ಭೂಮಿಯ ಮೌಲ್ಯ ತೆತ್ತ ಮೇಲೆ ಆ ಬೇಸಾಯಗಾರನದೇ ಭೂಮಿ ...."

"ಅದು ಹೌದ್ರಿ, ಒಂದು ಕಾಲದಲ್ಲಿ ಜಮೀನುದಾರರದೇ ಭೂಮಿಯಿತ್ತು. ಅದಿಂದು ಉಳುವವನ ಕೈ ಸೇರಿತು....ನೋಡಿ, ಎಲ್ಲಿಯೋ ಒಂದು ಪದ್ಯ ಓದಿದ ನೆನಪು...."

"ಏನದು?"

"ನೋಡಿ..."

'ನೋಡ್ತಾ ಇದ್ದೇನೆ ಕಣೇ, ಆದ್ರೆ ತೋರೋದಿಲ್ಲ....'

"ನಿಮಗೆ ಇಳಿಯಾಯ ತಮಾಷೆನ್ನ ಹೊಳೆಯುತ್ತೆ...."

'ತಮಾಷೆಯೇನು ಬಂತೆ? ಕವಿತೆ ಓದಿದ ನೆನಪು ನೋಡಿಂದಿ...ನಾನು ಓಲ್ಲಾಂದೆ....'

'ಅಲ್ರಿ, ನೆನಪು ಕಾಣೋದಾದ್ರೂ ಹೇಗೆ?'

'ಹೇಗೆಂದ್ರೆ, ಗಾಂಧಿ ನೆಹರು ನೆನಪು ಹೇಗೆ ಕಾಣುತ್ತೆ ಹಾಗೆ...'

'ನಿಲ್ಲಿ ಸ್ವಲ್ಪ...'

'ಕೂತು ಕೂತು ಸೊಂಟ ನೋವಾಗ್ತೆಯಾಯ್ತು. ಇನ್ನು ನಿಂತು..'

'ಇಲ್ಲಿ ಬಿಡಿ...ಹ್ಞಾಂ....ನೋಡಿ ಈಗ ನೆನಪಿಗೆ ಬಂತು. ಕಾಂವೇಶ್ವರ ಕೇಳು ಧರಣೀ ನಾರಿಯಾಗಿ ಬಂಗೊಳ್ಳತನವಿದ್ದಾರ ಮೆಚ್ಚಿದಳಾರ ಸಂಗಡ ಉಳಿಯ ಹಾಯಿದಳು? ಭೂರಿಮುಕ್ತಾರದಲಿ ನೃಪರು ವಿಚಾರಿಸದೆ ಧರೆ ತನ್ನದೆಂದೇ ನಾರಕದ ಸಾಮ್ರಾಜ್ಯಕ್ಕೆಳಸರೆಂದು ಹರಿ ನುಡಿದ, ಅಲ್ವೆ?'

"ಹೌದಮ್ಮ ಹೌದು. ಅದನ್ನು ಹೇಳ್ತಾ ಕೇಳ್ತಾ ಇದ್ರೂ ಈ ಧರೆ ನಮ್ಮದಲ್ಲಾಂತ ಅನ್ನೋರು ಮಾತ್ರ ಯಾರೊಬ್ರೂ ಇಲ್ಲ. ಇದುವರೆಗೆ ಜಮೀನುದಾರ ಧರೆ ತನ್ನದು ಅಂದ್ರೆ ಇನ್ನು ಮುಂದೆ ಒಕ್ಕಲು ಹಾಗೆ ಹೇಳಿಕೊಳ್ಳುತ್ತಾನೆ...'

"ಹಾಗೇ ಅಲ್ವೆ?"

"ಆಗಲಿ. ಜಮೀನುದಾರರು ನರಕಕ್ಕೆ ಹೋಗುವುದಾದರೂ ಉಳಿಯಿತಲ್ಲಾ..."

'ಅವ್ರ ಬದಲಿಗೆ ಒಕ್ಕಲುಗಳು ಹೋಗ್ತಾರಲ್ಲಾ...."

"ಆಗ್ಲೇ ನರಕದ ಬ್ಯಾಲನ್ಸ್ ಸರಿ ನಿಲ್ಲುವುದು."

"ಏನೋ ಎಂಥದೋ... ಅಲ್ರಿ, ಇವತ್ತು ಒಕ್ಕಲಿನದೇ ಭೂಮಿಯಾಯ್ತು... ನಾಳೆ...'

"ಗಿರಾಕಿಯದೇ ಅಂಗಡಿ; ಉಂಬವನದೇ ಅನ್ನ.... ತೊಡುವವನದೇ ತೊಡುಗೆ.... ನೌಕರರದೇ ಕಾರ್ಖಾನೆ...."

'ಹ್ಞಾಂ ಹಾಗೇ ಅನ್ನಿ. ಆದ್ರೆ ಎಂದಾದರೂ ಬಾಡಿಗೆದಾರನದೇ ಮನೆ; ಸಾಲ ಕೊಟ್ಟವನದ್ದೇ ಸಾಲ ಎಂದಿಲ್ಲೇಂತ...'

"ಹಾಗಾದರೆ ಮತ್ತೇನು? ನಾವು ಸಂತೋಷದಿಂದ ಇಂಟಹುದನ್ನು... ಯಾವ ಚಿಂತೆಯೂ ಇಲ್ಲದೆ...'

'ಹೌಹೌದು......ಊರವರ ಸೊತ್ತಿನ ಮೇಲೆ ನಿಮಗೆ ಆಸೆ..."

'ಊರವರದ್ದಲ್ವೆ...., ಉಳುವವನೇ ಹೊಲದೊಡೆಯನಾಗುವಾಗ ಬಾಡಿಗೆದಾರನೇ ಮನೆಯೊಡೆಯನೇಕಾಗಬಾರದು?'

"ಆಗ್ಲಿ ಆಗ್ಲಿ, ಆಗೋ ಕಾಲ ಬಂದಾಗ ನೋಡಿಕೊಳ್ಳೋಣ, ಈಗ್ಲೇ ಇನ್ನು ಸ್ವರ್ಗ ಸುಖ ಕಾಣೋದು ಬೇಡ....?"

(ಹದಿನಾರನೇ ಪುಟ ನೋಡಿರಿ)

### ಮೂಗುಮುರಿಯ ಬೇಡಿ

# ಫ್ಯಾಷನ್ ಹಿಂದೆಯೂ ಇತ್ತು

**ಕಾಲ, ಸನ್ನಿವೇಶ, ಸೌಲಭ್ಯಗಳಿಗನುಸಾರ ಬದಲಾಗುವ ಫ್ಯಾಷನ್ ಹಿತ-ಮಿತವಾಗಿರಬೇಕು — ಅತಿವಿನಾಶದ ಹಾದಿ.**

ಶ್ರೀ ಸ. ನಾರಾಯಣ.

ಇಪ್ಪತ್ತನೆಯ ಶತಮಾನ, ನವನಾಗರೀಕ ಯುಗ, ಮಾನವನ ಮನೋಭಾವ ಎಲ್ಲ ಬಗೆಯಲ್ಲಿಯೂ ನವೀನ ಭಾವನೆ ತಾಳಿದೆ. ಜೀವನದ ಪ್ರತಿ ಹೆಜ್ಜೆಯಲ್ಲಿಯೂ ಫ್ಯಾಷನ್ ತನ್ನ ಸ್ಥಾನ ಗಳಿಸಿದೆ. ದಿನ ದಿನಕ್ಕೂ ಗಂಟೆ ಗಂಟೆಗೂ ಫ್ಯಾಷನ್ ಹೊಸ ರೂಪ ತಾಳುತ್ತಿದೆ. ಇಂದಿನ ಅಲಂಕಾರ, ಉಡುಗೆ ತೊಡುಗೆ ಹೊಸ ಮಾದರಿ; ಆದರೆ ನಾಳೆಗೆ ಅದು ಹಳೆಯದು. ಇಂದಿನದು ಈ ವೇಳೆಗಷ್ಟೇ ಹೊಸದು ಮುಂದಿನ ಗಂಟೆಗೆ ಹಳೆಯದು. ಹಳೆಯ ಆಭರಣ, ಉಡುಗೆ-ತೊಡಿಗೆ, ಅಲಂಕಾರಗಳನ್ನು ಅನುಸರಿಸಿದರೂ ಅದು ಫ್ಯಾಷನ್.

ಪ್ರಾಚೀನ ಭಾರತೀಯರಲ್ಲಿ ನವೀನ ವಿಜ್ಞಾನ ಯುಗದ ಅಲಂಕಾರ ಸಾಮಗ್ರಿಗಳು, ಉಡುಗೆ-ತೊಡಿಗೆಗಳು ನಡವಳಿಕೆಗಳು ಬಳಕೆಯಲ್ಲಿರಲಿಲ್ಲ. ಆದರೆ ಅವರ ಕಾಲಕ್ಕೆ ತಕ್ಕಂತಹ ಫ್ಯಾಷನ್ ಇಲ್ಲದಿರಲಿಲ್ಲ. ಸ್ನೋ, ಪೌಡರು, ಲಿಪ್‌ಸ್ಟಿಕ್, ಕೇಶತೈಲ, ನೈಲಾನ್ ಸೀರೆ, ಟೆರಿನ್ ಬುಷ್ ಷರಟುಗಳಾವುವೂ ಯಾವುವೂ ಪೂರ್ವಿಕರ—ಪ್ರಿಯ ವಸ್ತುಗಳಾಗಿರಲಿಲ್ಲ; ಪರಿಚಯವೂ ಇರಲಿಲ್ಲ.

ಆದರೆ ಇಂದು ಬಳಸುವ ಅಲಂಕಾರ ಸಾಮಗ್ರಿಗಳೇ ಬೇರೆ; ಅಂದು ಬಳಸುತ್ತಿದ್ದ ವಸ್ತುಗಳೇ ಬೇರೆ. ಫ್ಯಾಷನ್ ಎಲ್ಲ ಕಾಲದಲ್ಲೂ ಇತ್ತು. ಅದು ಸ್ತ್ರೀಯರ ಪುರುಷರ ಮನವನ್ನೂ ಸೆಳೆದಿತ್ತು. ಆದರೆ ಫ್ಯಾಷನ್ (ಮಾದರಿ) ಒಂದು ಕಾಲದಲ್ಲಿ ಪ್ರಾಚೀನ ಮತ್ತೊಂದು ಕಾಲದ ನವೀನ ಅಷ್ಟೆ.

ಸ್ತ್ರೀಯಂತೆ ಪುರುಷರು ವಿವಿಧ ಬಗೆಯ ವಸ್ತುಗಳನ್ನು, ಅಂದರೆ ಆಭರಣ, ವಸ್ತ್ರ, ಸುಗಂಧ ತೈಲಗಳನ್ನು ತಮ್ಮ ಸಹಜ ಸೌಂದರ್ಯದ ವೃದ್ಧಿಗೆ ಪ್ರದರ್ಶನಕ್ಕೆ ಬಳಸುತ್ತಿದ್ದರು ಎಂಬುದು ಆದಿಕವಿ ವಾಲ್ಮೀಕಿಯ ರಾಮಾಯಣದಲ್ಲಿಯೇ ಪ್ರಸ್ತಾಪಿಸಲ್ಪಟ್ಟಿದೆ.

ಅಲಂಕಾರ ಕುರೂಪಿಯನ್ನು ಸುರೂಪಿಯನ್ನಾಗಿ (ಸುಂದರನನ್ನಾಗಿ) ಮಾಡಲಾರದು. ಆದರೆ ವ್ಯಕ್ತಿಯ ಸೌಂದರ್ಯವನ್ನೂ ಅಲಂಕಾರ ಹೆಚ್ಚಿಸುತ್ತದೆ. ಅಂದ ಹೆಚ್ಚಲು ಅನುವುಮಾಡಿಕೊಡುತ್ತದೆ. ಬಾಹ್ಯ ಅಲಂಕಾರ ವ್ಯಕ್ತಿಯ ರೂಪಿಗೆ ಹೊಸಮೆರಗು ಕೊಡುತ್ತದೆ.

ಉಂಗುರ, ಹಾರ, ಕುಂಡಲ ಮೊದಲಾದ ಆಭರಣಗಳು ಪುರುಷರ ಪ್ರಿಯ ಸೌಂದರ್ಯ ಸಾಮಗ್ರಿಗಳಾಗಿದ್ದವುಎಂಬುದು ಖಚಿತ. ಪುರುಷರು ಧರಿಸುತ್ತಿದ್ದ [illegible] ಉಡುಗೆ, ತೊಡಿಗೆಗಳು, ಸುಗಂಧಯುಕ್ತ ತೈಲಗಳು ಅವರ ಶಕ್ತಿ, ತೇಜಸ್ಸು, ಬಾಹುಬಲವನ್ನೂ ಹೊರ ಹೊಮ್ಮಿಸುವ ಪ್ರಮುಖ ವಸ್ತುಗಳಾಗಿದ್ದುವು. ಅಲಂಕಾರಗಳಲ್ಲಿಯೂ ನಾನಾ ಬಗೆ.

ಪುರುಷರ ಅಲಂಕಾರದ ಬಗೆಯೇ ಬೇರೆ. ಸ್ತ್ರೀಯರ ಅಲಂಕಾರದ ಬಗೆಯೇ ಬೇರೆ. ಶೋಭಾ, ಕಾಂತಿ, ದೀಪ್ತಿ, ಮಾಧುರ್ಯ ಧೈರ್ಯ ಪ್ರಗಲ್ಭದೆ ಮತ್ತು ಔದಾರ್ಯ ಇವು ಸ್ತ್ರೀಯರ ಸ್ವಾಭಾವಿಕ ಅಲಂಕಾರಗಳು. ಅಂತೆಯೇ ಶೋಭಾ, ವಿಲಾಸ, ಮಾಧುರ್ಯ, ಸ್ಥೈರ್ಯ, ಗಾಂಭೀರ್ಯ, ಲಲಿತ, ಔದಾರ್ಯ ಮತ್ತು ತೇಜ ಇವು ಪುರುಷರ ಅಲಂಕಾರಗಳು ಎಂದು ನಾಟ್ಯ ಶಾಸ್ತ್ರದಲ್ಲಿ ಭರತ ಮುನಿ ಪ್ರಸ್ತಾಪಿಸಿದ್ದಾನೆ.

ಅಂದವಾದ ಸ್ತ್ರೀ ಪುರುಷರ ಸೌಂದರ್ಯ ಮತ್ತು ಕಾಂತಿಯನ್ನು ಅಲಂಕಾರ ಇಮ್ಮಡಿಗೊಳಿಸುತ್ತದೆ. ಎಂಬುದು ಅಂದು ಇಂದು ಎಲ್ಲರೂ ಒಪ್ಪುವ ಮಾತು ಪಾಚಿಯ ಮಧ್ಯೆ ಬೆಳೆದ ಕಮಲ ಪುಷ್ಪ, ಮಲಿನವಾಗಿದ್ದರೂ ಮೆಂಗಿನಿಂದ ತುಂಬಿದ ಚಂದ್ರನ ಕಲೆ, ವಲ್ಕಲಧಾರಿಯಾದ ಶಕುಂತಳೆಯ ಮನೋಜ್ಞ ರೂಪ ಸಹಜ ಸೌಂದರ್ಯಕ್ಕೆ ಉದಾಹರಣೆ— ಎಂಬ ಕಾಳಿದಾಸನ ಹೇಳಿಕೆ ಸತ್ಯ.

ಸಾಮಾಜಿಕ ಉತ್ಸವಗಳಲ್ಲಿ, ರಾಜ ಸಭೆಗಳಲ್ಲಿ, ಸಂತೋಷ ಸಮಾರಂಭಗಳಲ್ಲಿ ಬಳಸುತ್ತಿದ್ದ ಅಲಂಕಾರಗಳು ಭಿನ್ನ ಭಿನ್ನವಾಗಿದ್ದವು. ಸ್ತ್ರೀ ಪುರುಷರ ಅಲಂಕಾರದಲ್ಲಿ ವ್ಯತ್ಯಾಸವಿದ್ದಂತೆಯೇ ಬಾಲ್ಯ, ಯುವತಿಯರು, ವಯಸ್ಕ ಸ್ತ್ರೀ ಪುರುಷರ ಆಯ್ಕೆ ಅಭಿರುಚಿ ಅಲಂಕಾರಗಳಲ್ಲಿಯೂ ಭಿನ್ನತೆ ಇತ್ತೆಂಬುದು ಗಮನಾರ್ಹ. ಅಲಂಕಾರ ವ್ಯಕ್ತಿಯ ಗುಣ, ಸ್ವಭಾವ, ಸಂಸ್ಕಾರಗಳ ಸಂಕೇತವೂ ಆಗಿರುತ್ತಿತ್ತು.

ದೇಹದ ಅಂಗಾಂಗಗಳ ಸ್ಪಷ್ಟತೆಯೇ ರೂಪ, ಬಿಳಿ-ಕಪ್ಪು ಬಣ್ಣಗಳೇ ವರ್ಣ. ಮುಖ ಮಂಡಲದ ತೇಜಸ್ಸೇ ಪ್ರಭೆ. ವ್ಯಂದು ಮಂದಹಾಸವೇ ರಾಗ. ಕೋಮಲ ಮನೋಭಾವವೇ ಅಭಿಜಾತ್ಯ, ಅಂಗ, ಉಪಾಂಗಗಳಲ್ಲಿ ವಯೋಧರ್ಮಕ್ಕನುಗುಣವಾಗಿ ಹೊರ ಹೊಮ್ಮುವ ನಿಭ್ರಯ ವಿಲಾಸ ವರ್ತನೆಯೇ "ವಿಲಾಸ", ಸಹಜ ಸೌಂದರ್ಯ, ಮಧುರ—ಮುಗ್ಧ ಮಂದಹಾಸಯುಕ್ತ ವ್ಯಕ್ತಿತ್ವವೇ ಲಾವಣ್ಯ, ಇವೆಲ್ಲವೂ ಪ್ರತಿ ಸ್ತ್ರೀ-ಪುರುಷರಲ್ಲಿಯೂ ಸಹಜವಾಗಿ ಮೂಡಿ ಬರಲು ವಯೋಧರ್ಮಕ್ಕನುಸಾರವಾದ ಅಲಂಕಾರಗಳು. ವ್ಯಕ್ತಿಗೆ ಎರಡು ಬಗೆಯ ಅಲಂಕಾರಗಳು. ಒಂದು ದೈವದತ್ತವಾಗಿ ಬಂದು ಅವನ ಸೌಂದರ್ಯವನ್ನು ಬೆಳಗಿಸುತ್ತದೆ, ಮತ್ತೊಂದು ಅಲಂಕಾರ ಸಾಮಗ್ರಿಗಳ ಮೂಲಕ ಸೌಂದರ್ಯವನ್ನು ಬೆಳಕಿಗೆ ತರುತ್ತದೆ.

ಸುಂದರ ವ್ಯಕ್ತಿಯನ್ನು ಆತ್ಮ ಸೌಂದರ್ಯ, ಅಲಂಕಾರ ಸೌಂದರ್ಯಗಳೆರಡೂ ಪ್ರಿಯನನ್ನಾಗಿ ಮಾಡುತ್ತವೆ. ಪ್ರಿಯನಲ್ಲಿ ಮನೋಹರ ರೂಪ, ಮೋಹಕ ಗುಣ ಇರುವುದು ಸ್ವಾಭಾವಿಕ. ಹೃದಯನಲ್ಲಿ ಅಂತರ್ಗತವಾಗಿರುವ ದಶ ಗುಣಗಳು ಬ್ರಹ್ಮನ ವರವೆಂದು ಹಿಂಯರೆ ಮತ. ವ್ಯಕ್ತಿಗೆ ಅಂಗ ಸೌಂದರ್ಯ, ಅಲಂಕಾರ ಸೌಂದರ್ಯ ಎರಡೂ ಇರಬಹುದು. ಅಥವಾ ಅಂಗ ಸೌಂದರ್ಯವಿಲ್ಲದೆ ಅಲಂಕಾರ ಸೌಂದರ್ಯದಿಂದಲೇ ಮೋಹನಾಕಾರವಾಗಬಹುದು. ಆದರೆ ಆತ್ಮ ಸೌಂದರ್ಯಕ್ಕೆ ಸಂಸ್ಕಾರ ಬೇಕು.

ಪೂರ್ವಿಕರು ಚಿನ್ನ, ಬೆಳ್ಳಿ ಮತ್ತು ರತ್ನಗಳಿಂದ ನಿರ್ಮಿತವಾದ ಆಭರಣಗಳನ್ನು ತೊಡುತ್ತಿದ್ದರೆಂದು ತೋರುತ್ತದೆ. ಕುಂಡಲ, ಕಿವಿಯ ಮಾಲೆ, ಶ್ರೇಣೀಸೂತ್ರ (ಉಡುದಾರ) ಚೂಡಾಮಣಿ, ಶಿಖಾ-ದ್ವಿಕೆ, ಉಂಗುರ, ಕಟಕ, ನಾಗಪುರ (ಮಂಜೀರ) ಮಾಲೆ, ಹಾರ, ನಕ್ಷತ್ರಮಾಲಿಕೆ ಮೊದಲಾದುವುಗಳು ಅಂದಿನ ಪ್ರಮುಖ ಅಲಂಕಾರ ಸಾಮಗ್ರಿಗಳಾಗಿದ್ದವು. ಚಿನ್ನ, ಬೆಳ್ಳಿ, ರತ್ನಗಳ ಆಭರಣಗಳಂತೆಯೇ ಪುಷ್ಪಗಳ ಬಳಕೆಯೂ ಪ್ರಮುಖವಾಗಿತ್ತು. ಪುಷ್ಪಾಲಂಕಾರದ ವರ್ಣನೆ ಸಂಸ್ಕೃತ ಸಾಹಿತ್ಯದಲ್ಲಿ ವಿಶೇಷವಾಗಿದೆ.

ಸ್ತ್ರೀಯರು ಧರಿಸುವ ವಸ್ತ್ರಾದಿಗಳ ಮತ್ತು ಲೇಪಿಸಿಕೊಳ್ಳುವ ಸುಗಂಧಯುಕ್ತ ತೈಲಗಳ ಅಲಂಕಾರವೇ ಬೇರೆ ಅಲ್ಲದೆ ಕೋಶ ಮತ್ತು ದೇಹದಲ್ಲಿ ಧರಿಸುತ್ತಿದ್ದ ಆಭರಣಗಳೇ ಬೇರೆ ಎಂಬುದು ಖಚಿತ. ಇದಕ್ಕೆ ಮಲ್ಲಿನಾಥನ ಮೇಘ ಸಂದೇಶದ ವ್ಯಾಖ್ಯಾನ ಉದಾಹರಣೆ

ನಾಲ್ಕು ಬಗೆಯ ವಸ್ತ್ರಗಳನ್ನೂ ಪ್ರಾಚೀನ ಕಾಲದಲ್ಲಿ ಬಳಸುತ್ತಿದ್ದರೆಂದು ತಿಳಿದು ಬರುತ್ತದೆ. ಮರದ ತೊಗಟೆ (ಕ್ಷೌಮ-) ಫಲ (ಕಾರ್ಪಾಸ-ಹತ್ತಿ) ಕೀಟ (ಕೌಶೇಯ-ರೇಷ್ಮೆ) ಮತ್ತು ರೋಮ (ಕೂದಲು— ರಾಂಕವ ಉಣ್ಣೆ)— ಗಳಿಂದ ತಯಾರಿಸುತ್ತಿದ್ದರೆಂದು ಕಾಣಬರುತ್ತದೆ. ಇವುಗಳನ್ನು ಧರಿಸುವ ಬಗೆಯೂ ಮೂರು ಬಗೆ, ಮೊದಲನೆಯದಾಗಿ ನಿಬಂಧನೀಯ (ಸೊಂಟದ ಬಗೆ) ಎರಡನೆಯದಾಗಿ ಪ್ರಕ್ಷೇಪ್ಯ (ಕುಪ್ಪಸ) ಮೂರನೆಯದಾಗಿ ಆರೋಪ್ಯ (ಉತ್ತರೀಯ) ಈ ಬಗೆಯ ಬಳಕೆ ರೂಢಿಯಲ್ಲಿತ್ತು.

ಕಸ್ತೂರಿ, ಕುಂಕುಮ, ಚಂದನ, ಕರ್ಪೂರ, ಅಗುರ, ಕುಲಕ, ದಂತಕುಮ, ಪಟವಾಸ ಸಹಕಾರ ತೈಲ, ತಾಂಬೂಲ, ಅರಗು, ಅಂಜನ ಮೊದಲಾದ ದ್ರವ್ಯಗಳನ್ನು ಬಳಸುವ ವೇಳೆ, ಬಗೆ ಭಿನ್ನವಾಗಿತ್ತು. ಇವೆಲ್ಲವೂ ಮಂಗಳ ದ್ರವ್ಯಗಳು.

ಅಂಗಾಂಗಗಳ ಶೋಭೆಗೆ ಗಮನ ಕೊಟ್ಟಂತೆಯೇ ಸ್ತ್ರೀ ಪುರುಷರು ಅಂದದ ಪ್ರತೀಕವಾದ ಕೇಶಕ್ಕೂ ಪ್ರಾಶಸ್ತ್ಯವನ್ನಿತ್ತಿದ್ದರು. ಅಂಗಗಳನ್ನು ಬಹು ಬಗೆಯ ವಸ್ತ್ರ, ಆಭರಣಗಳಿಂದ ಸುಂದರಗೊಳಿಸುತ್ತಿದ್ದಂತೆಯೇ ಕೇಶವನ್ನು ಬೆಳೆಸುವ ರೀತಿ ಅಲಂಕಾರಕ್ಕೆ ಬಳಸುವ ರೀತಿಯೂ ರಮ್ಯವಾಗಿತ್ತು.

(ಎನ್ನೆರಡನೇ ಪುಟ ನೋಡಿರಿ)

**ಭೂಮಿಯೇಕೆ ಸುತ್ತಲೂ ತಿರುಗುತ್ತಿದೆ?**
**ಏಕಮ್ಮಾ ಏಕೆ?**
**ಚಂದ್ರನೇಕೆ ಹಳದಿಯಾಗಿದ್ದಾನೆ?**

ಪ್ರಶ್ನೆಗಳು, ಉತ್ತರದ ಆವಶ್ಯಕತೆಯುಳ್ಳ ಪ್ರಶ್ನೆಗಳು. ಮಗುವಿನ ಕೋಮಲ ಮನಸ್ಸಿನ ಕುತೂಹಲವು ಒಂದು ಅಮೂಲ್ಯವಾದ ಸೊತ್ತಾಗಿದೆ. ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವ ಅವಕಾಶ ಅವನಿಗಿರ ಬೇಡವೆ? ನಿಮ್ಮ ಮಗನೇ ಈ ಪರಿಯಾಗಿರಲು ಸಾಧ್ಯ. ನೀವು ಹೇಗೆ ಯೋಚಿಸುವಿರಿ? ಆತನ ಭವಿಷ್ಯ ನಿಮ್ಮ ಮೇಲೆ ಆಧರಿಸಿದೆ. ಆತನಿಗಾಗಿ ಮತ್ತು ಸ್ವತಹ ನಿಮಗಾಗಿ ಹೆಚ್ಚಿನ ಉತ್ಕರ್ಷವನ್ನು ಬಯಸುವಿರಿ ತಾನೆ? ಹಾಗಾದರೆ ಈ ಬಗ್ಗೆ ಈಗೇನು ಮಾಡುತಿದ್ದೀರಿ? ಅವನಿಗಾಗಿ ಎಷ್ಟು ಉಳಿಸುತಿದ್ದೀರಿ? ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಗೆ ಹೋಗಿ ಅವನ ಹೆಸರಿನಲ್ಲಿ ಒಂದು ಕ್ಯುಮುಲೇಟಿವ್ ಖಾತೆಯನ್ನು ತೆರೆಯಿರಿ. ಪ್ರತಿ ತಿಂಗಳು ಸ್ವಲ್ಪ ಸ್ವಲ್ಪ ಒತ್ತಟ್ಟಿಗೆ ಉಳಿಸಿರಿ. ನೀವು ಉಳಿಸುವ ಪ್ರತಿಯೊಂದು ರೂಪಾಯಿಯೊಡನೆ ಅವನ ಭವಿಷ್ಯ ಬಲಗೊಳ್ಳುವುದು.

FAITHFUL SB FRIENDLY

**ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್**

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು. 200ಕ್ಕೂ ಹೆಚ್ಚು. | ರೂ. 70 ಕೋಟಿಗೂ ಮಿಕ್ಕಿದ ಸಂಪನ್ಮೂಲಗಳು:

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No- 466 N/50 dated 2-12-19.0 of the Directer of Public Instruction Madras.

ನಾವು ನೆನೆಯುತ್ತೇವೆ

# ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ

ಅಹಿಂಸೆಯ ಸಾಕಾರ ಮೂರ್ತಿ ಗಾಂಧೀಜಿ. ದೇಶ ಕಬಳಿಸ ಬಂದ ಶತ್ರುಗಳ ದವಡೆ ಮುರಿಯಬಾರದು ಎಂಬುದು ಗಾಂಧೀ ಅಹಿಂಸೆಯ ಅರ್ಥವಲ್ಲ.

**ಶ್ರೀ ಲಕ್ಷ್ಮೀಸುತ.**

ಇಪ್ಪತ್ತನೆಯ ಶತಮಾನದಲ್ಲಿ ಸತ್ಯ ಮತ್ತು ಅಹಿಂಸೆಗಳ ಪ್ರತಿಮೂರ್ತಿಯಲ್ಲಿ ಭಾರತದಲ್ಲಿ ಪ್ರಕಟರಾದವರು ವಿಶ್ವಖ್ಯಾತಿ ಮಹಾತ್ಮಾ ಗಾಂಧೀಜೀ. ವಿಶ್ವಪ್ರೇಮದ ಅಗ್ರದೂತರಾಗಿದ್ದ ಅವರ ಧಾರ್ಮಿಕ ಮಹತ್ವ ಹಿಮಾಲಯದಂತೆ ವಿಶಾಲವೂ ಉಚ್ಚಮಟ್ಟದ್ದೂ ಆಗಿರುವುದು. ಯಾವ ಪುಣ್ಯಭೂಮಿಯಾದ ಭಾರತವು ಐದು ಸಾವಿರ ವರುಷಗಳ ಮೊದಲು ಮಹಾತ್ಮಾ ಬುದ್ಧನಿಗೆ ಜನ್ಮವಿತ್ತಿತೊ ಅದೇ ಭಾರತ ಮಹಾತ್ಮಾ ಗಾಂಧೀಜೀಯಂತಹ ನರದೇವನಿಗೆ ಜಗತ್ತಿಗಾಗಿ ಜನ್ಮತೆತ್ತಿತು! ಇದೊಂದು ಸೌಭಾಗ್ಯದ ಮಾತು! ಈ ಮಹಾ ಮನುಷ್ಯನು ಭೌತಿಕವಾದದಿಂದ ಉನ್ಮತ್ತವಾದ ಜಗತ್ತಿಗೆ ಆತ್ಮಶಕ್ತಿ ಮತ್ತು ಚಾರಿತ್ರ್ಯ ಬಲದ ಆದರ್ಶವನ್ನು ಎತ್ತಿ ತೋರಿಸಿದನು. ಹಿಂಸೆಯಲ್ಲಿ ವಿಶ್ವಾಸವನ್ನಿಡುವವರಿಗೆ ಸತ್ಯ ಮತ್ತು ಅಹಿಂಸೆಯ ಅದ್ಭುತ ಚಮತ್ಕಾರವನ್ನು ತೋರಿಸಿಕೊಟ್ಟನು. ತನ್ನ ಧರ್ಮ ಮತ್ತು ಆತ್ಮಬಲಗಳಿಂದ ಬ್ರಿಟಿಷರ ದಾಸ್ಯ ಶೃಂಖಲೆಗೆ ಒಳಗಾಗಿ ಪಾಡುಪಡುತ್ತಿದ್ದ ಭಾರತವನ್ನು ಸ್ವತಂತ್ರಗೊಳಿಸಿದನು. ಅವನು ಸ್ವದೇಶೀಯನಲ್ಲ ಬದಲಾಗಿ ಅಂತರ್‌ದೇಶೀಯ ವ್ಯಕ್ತಿ ಎಂದರೆ ಅತಿಶಯೋಕ್ತಿಯಲ್ಲ! ಅವನ ಜೀವನದಲ್ಲಿ ಸಂಪೂರ್ಣ ಮಾನವ ಜಾತಿಯ ವಿಕಸಿತ ಸ್ವರೂಪದ ಪ್ರತಿಬಿಂಬವು ಚಿತ್ರಿತವಾಯಿತು.

ಮೋಹನದಾಸ್ ಕರಮ ಚಂದ್ ಗಾಂಧೀಜೀಯವರು ೧೮೬೯ನೇ ಇಸವಿ ಅಕ್ಟೋಬರ್ ತಿಂಗಳ ತಾರೀಕು ೨ರಂದು ಗುಜರಾಥಿನ ಪೋರ್ ಬಂದರಿನಲ್ಲಿ ಜನ್ಮ ತಳೆದಿದ್ದರು. ತಂದೆಯವರಾದ ಕರಮಚಂದ ಗಾಂಧಿಯವರು ರಾಜಕೋಟೆಯ ದೀವಾನನಾಗಿ ಸೇವೆಸಲ್ಲಿಸುತ್ತಿದ್ದರು. ಮೆಟ್ರಿಕ್ ಪರೀಕ್ಷೆಯನ್ನು ಪಾಸುಮಾಡಿ ಬಳಿಕ ಮೋಹನದಾಸರು ಕಾನೂನಿನ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ತೆರಳಿದರು. "ಪರದೇಶದಲ್ಲಿಯೂ ಸತ್ಯವನ್ನು ಪಾಲಿಸುತ್ತೇನೆ" ಎಂದು ತಾಯಿಯೊಡನೆ ಪ್ರತಿಜ್ಞೆಗೈದ ಅವರು ಅಲ್ಲಿಯ ವಿಶ್ವವಿದ್ಯಾಲಯದಿಂದ ಬ್ಯಾರಿಸ್ಟರ್ ಪದವಿಯನ್ನು ಪಡೆದು ೧೮೯೧ರಲ್ಲಿ ಸ್ವದೇಶಕ್ಕೆ ಹಿಂತಿರುಗಿದ್ದರು. ವಕೀಲ ವೃತ್ತಿಯನ್ನಾರಂಭಿಸಿದ ಅವರಿಗೆ ವಿಶೇಷ ಸಫಲತೆ ದೊರಕಲಿಲ್ಲ.

೧೮೯೩ರಲ್ಲಿ ಮೊಕದ್ದಮೆಯೊಂದರ ಕಾರಣದಿಂದ ದಕ್ಷಿಣಾಫ್ರಿಕಕ್ಕೆ ತೆರಳಿದ ಗಾಂಧೀಜಿಯವರು ಅಲ್ಲಿನ ಪ್ರವಾಸೀ ಭಾರತೀಯರ ಮೇಲೆ ನಡೆಯುತ್ತಿದ್ದ ಘೋರ ಅತ್ಯಾಚಾರಗಳನ್ನು ಕಂಡರು. ಅವರ ಹೃದಯ ಕರಗಿ ನೀರಾಯಿತು. ಭಾರತೀಯರನ್ನು ಸಂಘಟಿಸಿ ಅವರ ನೇತೃತ್ವವನ್ನು ವಹಿಸಿ ಅನೇಕ ಚಳವಳಗಳನ್ನು ಹೂಡಿದರು. ಈ ಕಾರ್ಯದಲ್ಲಿ ಸಫಲರಾದರು.

ದಕ್ಷಿಣಾಫ್ರಿಕದಲ್ಲಿ ವಿಜಯಿಗಳಾದ ಗಾಂಧೀಜಿಯವರು ಭಾರತಕ್ಕೆ ಬಂದರು. ಗೋಖಲೆಯವರಂಥ ರಾಜನೀತಿಗಳ ಅನುಭವಗಳನ್ನು ಪಡೆದು ಸಬರ್ಮತಿಯಲ್ಲಿ ಸತ್ಯಾಗ್ರಹ ಆಶ್ರಮವೊಂದನ್ನು ತೆರೆದರು. ಈಗ ಗಾಂಧೀಜೀಯವರು ಭಾರತೀಯ ರಾಜನೀತಿಯ ನಿಕಟ ಸಂಪರ್ಕದಲ್ಲಿ ಬಂದರು ತನ್ನ ಅಹಿಂಸಾ ತತ್ವದ ಪ್ರಯೋಗವನ್ನು ಇಲ್ಲಿಯೂ ಆರಂಭಿಸಿದರು.

೧೯೧೪ರಲ್ಲಿ ಮಹಾ ಜಾಗತಿಕ ಯುದ್ಧ ಪ್ರಾರಂಭವಾಯಿತು. ಇಂಗ್ಲೀಷರ ನ್ಯಾಯಪ್ರಿಯತೆ ಪೂರ್ಣ ವಿಶ್ವಾಸವನ್ನಿಟ್ಟಿದ್ದ ಗಾಂಧೀಜೀಯವರು ಇಂಗ್ಲೀಷರಿಗೆ ಯುದ್ಧದಲ್ಲಿ ಸಹಾಯವೀಯಲು ತನ್ನ ಸಹಚರರಿಗೆ ಹೇಳಿದರು. ಆದರೆ ಯುದ್ಧಾನಂತರದಲ್ಲಿ ಅವರಿಗೆ ಇಂಗ್ಲೀಷರ ನ್ಯಾಯ ನೀತಿಗಳು ಏನೆಂದು ಮನವರಿಕೆಯಾದುವು. ಕುಪಿತರಾದ ಭಾರತೀಯರು ತಮ್ಮ ಮತ ಪಂಥ ಪಂಗಡವೆಲ್ಲವನ್ನೂ ತೊರೆದು "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ತತ್ವವನ್ನು ಮುಂದಿಟ್ಟು, ಅಹಿಂಸೆಯನ್ನು ಆಯುಧವಾಗಿ ಉಪಯೋಗಿಸಿ, ಸ್ವಾತಂತ್ರ್ಯ ಉದ್ದೇಶವಾಗಿಟ್ಟುಕೊಂಡು ಅವಿರತವಾಗಿ ಹೋರಾಡಿದರು. ಗಾಂಧೀಜೀಯವರು ಇವರ ನೇತೃತ್ವ ವಹಿಸಿದ್ದರು. ೧೯೨೦ರಲ್ಲಿ ಆರಂಭವಾದ ಈ ಸತ್ಯಾಗ್ರಹವು 'ಅಸಹಯೋಗ ಸತ್ಯಾಗ್ರಹ' ಎಂದು ಕರೆಯಲ್ಪಟ್ಟಿತು. ವಿದೇಶ ವಸ್ತುಗಳನ್ನು ಬಹಿಷ್ಕರಿಸುವುದರೊಂದಿಗೆ ಸ್ವದೇಶ ವಸ್ತುಗಳನ್ನು ಪ್ರಚಾರ ಮಾಡುವುದು ಇದರ ಪ್ರಧಾನ ಉದ್ದೇಶವಾಗಿತ್ತು. ಅಸಹಯೋಗದ ಕ್ರಮದಂತೆ ವಿದ್ಯಾರ್ಥಿಗಳು ವಿದ್ಯಾಲಯಗಳನ್ನು ವಕೀಲರು ಕಛೇರಿಗಳನ್ನೂ ಸರಕಾರೀ ಉದ್ಯೋಗಸ್ಥರು ತಮ್ಮ ಉದ್ಯೋಗಗಳನ್ನು ಪರಿತ್ಯಾಗ ಮಾಡಿದರು. ಇಡೀ ದೇಶದಲ್ಲಿ ರಾಷ್ಟ್ರೀಯ ಆಂದೋಲನದ ಧೂಳು ಹರಡಿತು. ಈ ಆಂದೋಲನವನ್ನು ತಡೆಗಟ್ಟುವುದೆಂತು ಎಂದು ಸರಕಾರವು ಸಮಾಲೋಚನೆ ನಡೆಸಿತು. ಆದರೆ ...ಗಾಂಧೀಜೀಯವರ ನಿರ್ಣಯದ ವಿರುದ್ಧವಾಗಿ ಚೌರಿ ಚೌರಿ ಎಂಬಲ್ಲಿ ಸತ್ಯಾಗ್ರಹಿಗಳು ಪೋಲೀಸರ ಗುಂಪೊಂದನ್ನು ಸುಟ್ಟು ನಾಶಪಡಿಸಿದರು. ಇದರಿಂದ ಗಾಂಧೀಜಿಯವರು ಸತ್ಯಾಗ್ರಹವನ್ನು ನಿಲ್ಲಿಸಿದುದರೊಂದಿಗೆ ಅದು

(ಹನ್ನೆರಡನೇ ಪುಟ ನೋಡಿರಿ)


ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ಕಮಿ ಪ್ರತಿಗಳಿಗೆ ವಿಚಾರಿಸಿರಿ :-

**ನವಯುಗ ಪ್ರೆಸ್, ಉಡುಪಿ**



## ಕ್ಷಯರೋಗದ ವಿರುದ್ಧ ಹೋರಾಡಲು ಸಹಕರಿಸಿರಿ

**ಹೊಸ ಟಿ ಬಿ ಮೊಹರುಗಳು ಮಾರಾಟದಲ್ಲಿವೆ.**

ಜಯಪ್ರದ ಕ್ಷಯರೋಗ ನಿರೋಧ ಕಾರ್ಯಕ್ರಮವು ಈ ಕೆಳಗಿನವುಗಳನ್ನು ಅವಲಂಬಿಸಿದೆ:—

- ಸಾಕಷ್ಟು ನಿಧಿ,
- ಚೆನ್ನಾದ ತಿಳುವಳಿಕೆ ಉಳ್ಳ ಮತ್ತು ಸಹಕಾರ ಭಾವದ ಸಾರ್ವಜನಿಕರು,
- ಸಮಾಜದ ಸದಸ್ಯರ ವಿಶೇಷ ದುಡಿಮೆ, ಮತ್ತು
- ಉದ್ಯೋಗಿ ವೈದ್ಯ ಮುಂದಾಳುಗಳ ಉತ್ಸಾಹ.




ಟಿ ಬಿ ಮೊಹರು ಮಾರಾಟ ಚಳವಳವು ಈ ಉದ್ದೇಶ ಸಾಧನೆಗಾಗಿ ಸಹಕರಿಸುತ್ತದೆ. ಮೊಹರುಗಳನ್ನು ಅಧಿಕ ಸಂಖ್ಯೆಯಲ್ಲಿ ಪಡಕೊಳ್ಳಿರಿ. ಅವುಗಳ ಬೆಲೆ ಪ್ರತಿಯೊಂದಕ್ಕೆ ಹತ್ತು ಪೈಸೆ.

**ಮೊಹರುಗಳು ದೊರೆಯುವ ಸ್ಥಳ:—** ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಮಂಗಳೂರು, ಮತ್ತು ಅದರ ವಿವಿಧ ಏಜನ್ಸಿಗಳು.

## 16ನೆ ಕ್ಷಯರೋಗ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಏರ್ಪಡಿಸಲಾದುದು)

**ಸ್ಥಳ ದಾನ:**
**Consolidated Coffee Estates (1943) Ltd.,**
**Pollebetta.**

ಒಂದೇ ಸೂತ್ರದಲ್ಲಿ ಕೋದ

# ಭಾರತೀಯ ಸಂಸ್ಕೃತಿ

ಮೂಲ: ಡಾ॥ ಬಾಬುರಾಜೇಂದ್ರ ಪ್ರಸಾದ್.
ಸಂಗ್ರಹ ಅನುವಾದ: ಶ್ರೀ ಬಿ. ನರಸಿಂಗ ರಾವ್.

ಭಾರತಕ್ಕೆ ಅಪರಿಚಿತನೆನಿಸಿದ ಯಾವನಾದರೊಬ್ಬ ವಿದೇಶಿಯು ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಪ್ರಯಾಣ ಕೈಕೊಂಡಲ್ಲಿ ಆತನು ಈ ದೇಶದ ವಿಭಿನ್ನತೆಯನ್ನು ಕಂಡು ತನ್ನ ಆಶ್ಚರ್ಯವನ್ನು ಈ ರೀತಿ ಪ್ರಕಟಿಸಿಯಾನು, "ಇದೊಂದು ದೇಶವಲ್ಲ; ದೇಶಗಳ ಸಮೂಹ." ಭಾರತದ ಬಾಹ್ಯ ಚಿತ್ರವು ವಿಶೇಷವಾಗಿ ಕಣ್ಣಿಗೆ ಗೋಚರಿಸುವ ದೃಶ್ಯ ವರ್ಣರಂಜಿತವೇ ಇದೆ. ಆ ದೃಶ್ಯದ ಒಂದೊಂದು ಮೂಲೆಗೆ ಒಂದೊಂದು ವರ್ಣ ಹಚ್ಚಿದಂತಿದೆ. ಒಂದು ಮಹಾ ದ್ವೀಪದಲ್ಲಿ ಕಾಣಬರುವಂತೆ ಇಲ್ಲಿಯ ಪ್ರಾಕೃತಿಕ ಭಿನ್ನತೆಯು ಬಹಳ ಗಾಢವೂ ಅಗಾಧವೂ ಆಗಿದೆ. ಭಾರತದ ಒಂದು ಮೂಲೆಯಲ್ಲಿ ಹಿಮಾಲಯದ ಹಿಮತುಂಬಿದ ಶಿಖರಗಳು ಇನ್ನೊಂದೆಡೆ ದಕ್ಷಿಣಕ್ಕೆ ಕಾಲಿಡುತ್ತಲೆ ಗಂಗಾ ಯಮುನಾ ಬ್ರಹ್ಮಪುತ್ರಾ ನದೀ ಬಯಲುಗಳು. ಅನಂತರ ವಿಂಧ್ಯಾ, ಅರಾವಳಿ ಸಾತ್ಪುರ, ಸಹ್ಯಾದ್ರಿ ನೀಲಗಿರಿ ಬೆಟ್ಟಗಳೂ ಗೋಚರಿಸುತ್ತವೆ. ಪಶ್ಚಿಮದಿಂದ ಪೂರ್ವಕ್ಕೂ ಇದೇ ರೀತಿಯ ಪ್ರಾಕೃತಿಕ ಭಿನ್ನತೆ ಕಾಣಬರುತ್ತದೆ. ಒಂದೆಡೆ ಹಿಮಾಲಯದ ಶೀತಲ ಮಂಗಟ್ಟುವಂತೆ ಮಾಡುವ ಹವೆಯಿದ್ದರೆ ರಾಜಸ್ಥಾನದ ಮರುಭೂಮಿಯಲ್ಲಿ ಉಷ್ಣವು ಸಹಿಸಲಸಾಧ್ಯ. ಕನ್ಯಾಕುಮಾರಿಯ ಸುಖದ ಹವೆಯೂ ಶೀತೋಷ್ಣ ಮಿಶ್ರಿತ ಗಾಳಿಯ ಅನುಭವವೂ ಆಹ್ಲಾದಕರವೇ ಆಗಿದೆ. ಅಸ್ಸಾಮಿನ ಬೆಟ್ಟಗಳಲ್ಲಿ ವರ್ಷಕ್ಕೆ ೪೦೦ ಇಂಚು ಮಳೆ ಬಿದ್ದಲ್ಲಿ ಜೈಸಲ್ಮೇರಿನ ತಪ್ತ ಭೂಮಿಯಲ್ಲಿ ವರ್ಷಕ್ಕೆ ೩ ಇಂಚು ಮಳೆ ಬೀಳುವುದೇ ಕಷ್ಟ. ಈ ದೇಶದಲ್ಲಿ ಉತ್ಪನ್ನವಾಗದ ವಸ್ತುವೇ ಇಲ್ಲ; ಉತ್ಪನ್ನವಾಗದ ಹಣ್ಣುಗಳೆ ಇಲ್ಲ; ಈ ದೇಶದಲ್ಲಿ ಸಮಸ್ತ ಖನಿಜಗಳು ದೊರಕುತ್ತವೆ. ಈ ದೇಶದ ಭೂಗರ್ಭವು ಅಕ್ಷಯ ಪಾತ್ರವೇ ಸರಿ! ಇಲ್ಲಿ ಕಾಣಬಾರದ ವೃಕ್ಷಗಳೂ ಪ್ರಾಣಿಗಳೂ ಇಲ್ಲ. ಈ ಭಿನ್ನತೆಯಿಂದೊಡಗೂಡಿದ, ವೈಚಿತ್ರ್ಯಪೂರ್ಣ ಹವಾಗುಣದ ಪರಿಣಾಮದಿಂದ ಜನತೆಯ ವೇಷ ಭೂಷಣ, ಶಾರೀರಿಕ--ಮಾನಸಿಕ ಕ್ಷೇತ್ರಗಳಲ್ಲಿ ಎಷ್ಟೊಂದು ಭಿನ್ನತೆಯುಂಟಾಗಿದೆ ಎಂದು ತಿಳಿಯಬೇಕಾದರೆ ಸಂಪೂರ್ಣ ಭಾರತದ ಚಿತ್ರವನ್ನೊಮ್ಮೆ ನೋಡಬೇಕು; ಭಿನ್ನ ಭಿನ್ನ ಪ್ರಾಂತ್ಯಗಳ ದರ್ಶನ ಪಡೆಯಬೇಕು. ಇದೇ ರೀತಿ ಭಾಷೆಗಳಲ್ಲೂ ಭಿನ್ನತೆಯಿದೆ. ಇಲ್ಲಿ ಮಾತಾಡುವ ಭಾಷೆಗಳಿಗಂತೂ ಲೆಕ್ಕವೇ ಇಲ್ಲ. ಮೈಲಿಗೂ ಮೈಲಿಗೂ ಭಾಷಾಭೇದ!

ಜಗತ್ತಿನಲ್ಲೆಲ್ಲಾ ಇರುವಂತೆ ಇಲ್ಲಿಯೂ ಭಿನ್ನಭಿನ್ನ ಮತಾವಲಂಬಿಗಳು ಇದ್ದಾರೆ. ಭಾಷಾಭೇದದಂತೆ ಧಾರ್ಮಿಕ ಭೇದಗಳೂ ಲೆಕ್ಕವಿಲ್ಲದಷ್ಟು! ಈ ವಿಭಿನ್ನತೆಯನ್ನು ಕಂಡು ಯಾವನಾದರೂ ಅಪರಿಚಿತನು ಗಾಬರಿಗೊಂಡು, "ಇದು ದೇಶವಲ್ಲ, ದೇಶಗಳ ಸಮೂಹ. ಇಲ್ಲಿ ಒಂದೇ ಜಾತಿ ಇಲ್ಲ, ಜಾತಿಗಳ ಸಮೂಹವೇ ಇದೆ." ಎಂದು ಹೇಳಿದರೆ ಆಶ್ಚರ್ಯಕ್ಕೆ ಎಡೆ ಇರಲಾರದು, ಯಾಕೆಂದರೆ ಇದು ಆತನು ಕಣ್ಣಾರೆ ಕಂಡ ಸತ್ಯ. ಆದರೆ ಬಾಹ್ಯ ಭಿನ್ನತೆಯ ಕುರಿತು ಆಳವಾಗಿ ಆತನು ವಿಚಾರ ಮಾಡಿದರೆ ಆತನಿಗೆ ಈ ಭಿನ್ನತೆಯ ಕುರಿತು ಆಳವಾಗಿ ಆತನು ವಿಚಾರ ಮಾಡಿದರೆ ಆತನಿಗೆ ಈ ಭಿನ್ನತೆಯ ಅಂತರಾಳದಲ್ಲಿಯೂ ಐಕ್ಯತೆಯ ಕಿರಣವೊಂದು ಕಂಡು ಬಂದೀತು, ಸಮಾನತೆಯ ವಜ್ರವೊಂದು ಗೋಚರಿಸೀತು. ಯಾವ ರೀತಿಯಲ್ಲಿ ರೇಶ್ಮೆಯ ದಾರದಿಂದ ಮಣಿಗಳನ್ನೊ ಪುಷ್ಪಗಳನ್ನೊ ಪೆಣೆದು ಮಾಲೆ ಮಾಡಿದ್ದಾರೋ, ಯಾವ ರೀತಿಯಲ್ಲಿ ಮಾಲೆಯಲ್ಲಿ ಒಂದೊಂದೂ ಹೂವು ಸರದಿಂದ ಬೇರಾಗದೆ ತನ್ನದೆ ಸೌಂದರ್ಯದಿಂದ ಗರ್ವ ಪಡದೆ ಸಂಪೂರ್ಣ ಮಾಲೆಯ ಸೌಂದರ್ಯಕ್ಕೆ ಕಾರಣವಾಗುತ್ತದೋ, ಅದೇ ರೀತಿ ಇಲ್ಲಿಯ ಭಿನ್ನತೆಯು ಕೂಡಾ ಐಕ್ಯವೆಂಬ ಮಾಲೆಯಲ್ಲಿ ವಿರಾಜಿಸುತ್ತಿದೆ. ಇದೊಂದು ಕವಿತಾ ಭಾವನೆಯಲ್ಲ, ಐತಿಹಾಸಿಕ ಸತ್ಯ. ವರ್ಷಗಳಿಂದಲೂ, ಶತಮಾನಗಳಿಂದಲೂ ಪುರಾತನ ಭಾರತೀಯ ಜೀವನದಲ್ಲೊಂದಾಗಿ ಅನೇಕಾನೇಕ ಪ್ರಪಾತಗಳಿಂದಲೂ, ಪ್ರವಾಹಗಳಿಂದಲೂ ಒಂದಾಗಿ ಮಹಾ ಸಮುದ್ರದೋಪಾದಿಯಲ್ಲಿ ಹರಿಯುತ್ತಾ ಇರುವ ಆ ಒಂದು ಅಜ್ಞಾತ ಭಾವಾಂಬುಧಿಯೇ ಭಾರತೀಯ ಸಂಸ್ಕೃತಿ. ಈ ಮಹಾ ಅಂಬುಧಿಯೊಡನೆ ಸೇರುವ ನದಿಗಳು ಭಿನ್ನಭಿನ್ನವಾಗಿದ್ದು ಅವುಗಳ ಉಗಮ ಸ್ಥಾನ ಬೇರೆ ಬೇರೆ ಇರುತ್ತವೆ. ಈ ನದಿಯ ಧಾರೆಗಳು ಭಿನ್ನಭಿನ್ನವಿದ್ದು ಆಯಾಯ ಪ್ರದೇಶಾನುಸಾರ ಭಿನ್ನಭಿನ್ನ ಫಲಪುಷ್ಪಗಳನ್ನೀಯುತ್ತಾ ಇವೆ. ಆದರೆ ಈ ಎಲ್ಲಾ ಫಲಪುಷ್ಪಗಳಲ್ಲೂ ಶುದ್ಧ ಸುಂದರ ಸ್ವಚ್ಛ ಮತ್ತು ಶೀತಲ ಜಲ ಅದರ ಹರಿಯುತ್ತಿದ್ದು ಉದ್ಗಮವೂ ಸಂಗಮವೂ ಒಂದೇ ಆಗಿರುತ್ತದೆ.

ಈ ಒಂದು ನೈತಿಕ ಹಾಗೂ ಆಧ್ಯಾತ್ಮಿಕ ಸ್ರೋತವು ಅನಂತ ಕಾಲದಿಂದ ಪ್ರತ್ಯಕ್ಷವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ ಸಮಸ್ತ ಭಾರತದಲೆಲ್ಲಾ ಹರಿಯುತ್ತಾ ಇದೆ. ಮತ್ತು ಆಗಾಗ ಮೂರ್ತ ರೂಪದಿಂದ ಕಾಣಬರುತ್ತದೆ. ನಾವು ಅದೇ ರೀತಿಯ ಮೂರ್ತ ರೂಪವನ್ನು ನಮ್ಮೊಡನೆ ಅಲೆದಾಡುತ್ತಾ, ನಗುತ್ತಾ, ಅಳುತ್ತಾ, ಕಂಡಿದ್ದೇವೆ. ಮತ್ತು ಆ ಮೂರ್ತಿಯೇ ಅಮರತೆಯ ನೆನೆಗನ್ನಿತ್ತು ನಮ್ಮ ಒಣ ಎಲುಬುಗಳಲ್ಲಿ ಮಜ್ಜೆಯನ್ನು ತುಂಬಿಸಿ ಮೃತಪ್ರಾಯ ಶರೀರದಲ್ಲಿ ನವಪ್ರಾಣವನ್ನು ಊದಿ, ಬಾಡಿದ ಹೃದಯವನ್ನು ಪುನಃ ಅರಳುವಂತೆ ಮಾಡಿತು; ಆ ಅಮರತ್ವವು ಸತ್ಯ ಮತ್ತು ಅಹಿಂಸೆಯಾಗಿದ್ದು ಕೇವಲ ಈ ಭಾರತಕ್ಕಷ್ಟೆ ಸೀಮಿತವಾಗಿರದೆ ಸಮಸ್ತ ವಿಶ್ವದ ಜನಾಂಗಕ್ಕೆ ಅತ್ಯಂತ ಆವಶ್ಯಕವಾಗಿದೆ. ನಾವು ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದೇವೆ. ವ್ಯಕ್ತಿಯ ಪೂರ್ಣ ಸ್ವಾತಂತ್ರ್ಯದಿಂದ ತನ್ನ ಪೂರ್ಣ ವಿಕಾಸವನ್ನು ಹೊಂದುವುದೆ ಪ್ರಜಾಪ್ರಭುತ್ವದ ಗುರಿ ಇದರೊಂದಿಗೆಯೇ ಸಾಮೂಹಿಕ ಹಾಗೂ ಸಾಮಾಜಿಕ ಏಕತೆಯನ್ನು ಆ ವ್ಯಕ್ತಿಯನ್ನು ಉಂಟು ಮಾಡಲು ಪ್ರಯತ್ನಿಸಬೇಕು. ವ್ಯಕ್ತಿ ಹಾಗೂ ಸಮಾಜದ ನಡುವೆ ವಿರೋಧದ ಆಭಾಸ ಇದ್ದೇ ಇರುತ್ತದೆ. ಪ್ರತಿಯೋರ್ವ ವ್ಯಕ್ತಿಯು ತನ್ನ ವಿಕಾಸವನ್ನು ಉನ್ನತಿಯನ್ನು ಬಯಸುತ್ತಾನೆ. ಆದರೆ ಈ ವಿಕಾಸದಿಂದ ಇತರರ ವಿಕಾಸ ಪಥದಲ್ಲಿ ಬಾಧೆಯುಂಟಾಗದಂತೆ ಪ್ರಯತ್ನಿಸುವುದು ಆತನ ಕರ್ತವ್ಯ. ಆ ರೀತಿ ಮಾಡದಿದ್ದರೆ ಆದರೆ ಅಲ್ಲಿ ಸಂಘರ್ಷಕ್ಕೆಡೆಯುಂಟಾಗುತ್ತದೆ. ಈ ಸಂಘರ್ಷ ದೂರವಾಗಬೇಕಾದರೆ ಅಹಿಂಸೆಯ ಮಾರ್ಗವನ್ನಾತ ಅನುಸರಿಸಬೇಕು. ನಮ್ಮ ನೈತಿಕ ಸಿದ್ಧಾಂತದ ವರ್ಣನೆಯಾಗಿರುವುದೋ ಅಲ್ಲೆಲ್ಲಾ ಅಹಿಂಸೆಗೇನೇ ಮುಖ್ಯಸ್ಥಾನ ದೊರೆತಿದೆ. ಅಹಿಂಸೆಯ ಇನ್ನೊಂದು ಅರ್ಥವೆ ತ್ಯಾಗ. ಹಿಂಸೆಯ ಅರ್ಥವೆಂದರೆ ಸ್ವಾರ್ಥ. ಈ ಸ್ವಾರ್ಥವನ್ನು ನಾವು ಹೆಚ್ಚಾಗಿ ಭೋಗದ ರೂಪದಲ್ಲಿ ಕಾಣಬಹುದು. ಆದರೆ ನಮ್ಮ ಸಂಸ್ಕೃತಿಯು ಭೋಗವನ್ನು ತ್ಯಾಗದಿಂದಲೇ ತ್ಯಜಿಸಿ ಭೋಗವನ್ನು ತ್ಯಾಗದಲ್ಲಿ ಪಡೆದಿದೆ. ಶ್ರುತಿಯಲ್ಲಿ ಹೇಳಿದಂತೆ "ತೇನತ್ಯಕ್ತೇನ ಭುಂಜೀಥಾಃ" ಅರ್ಥಾತ್ ಜಗತ್ತೆಲ್ಲಾ ಈಶ್ವರಮಯ. ಆದುದರಿಂದ ಜಗತ್ತನ್ನು ತ್ಯಾಗಪೂರ್ವಕ ಭೋಗಿಸಬೇಕು. ಇದರಿಂದಲೇ ನಾವು ವ್ಯಕ್ತಿ ವ್ಯಕ್ತಿಗಳ ನಡುವಿನ ಭೇದ, ಸಮಾಜ ಸಮಾಜದ ನಡುವಿನ ಭೇದ, ದೇಶ ದೇಶಗಳೊಳಗಣ ಭೇದವನ್ನು ನಿವಾರಿಸಬಹುದು. ನಮ್ಮ ಎಲ್ಲಾ ನೈತಿಕ ತತ್ವಗಳೂ ಇದರಿಂದಲೇ ತುಂಬಿಕೊಂಡಿವೆ. ಇದೇ ಕಾರಣದಿಂದ ನಾವು ಭಿನ್ನ ಭಿನ್ನ ವಿಚಾರಧಾರೆಗಳನ್ನು ಸ್ವಚ್ಛಂದ ಪೂರ್ವಕ ತಮ್ಮ ತಮ್ಮ ದಾರಿಯಲ್ಲಿ ಹರಿಯಬಿಟ್ಟೆವು. ಇದೇ ಕಾರಣದಿಂದ ಭಿನ್ನ ಭಿನ್ನ ಧರ್ಮ ಹಾಗೂ ಸಂಪ್ರದಾಯಗಳನ್ನೂ ಸ್ವಾತಂತ್ರ್ಯಪೂರ್ವಕ ವೃದ್ಧಿ ಹೊಂದಲೂ ಪಸರಿಸಲೂ ಬಿಟ್ಟೆವು. ಭಿನ್ನ ಭಿನ್ನ ಭಾಷೆಗಳನ್ನೂ ವಿಕಸಿತಗೊಳ್ಳಲು, ಪ್ರಸ್ಫುಟಿತವಾಗಲು ಬಿಟ್ಟೆವು; ಭಿನ್ನ ಭಿನ್ನ ದೇಶದ ಜನತೆಯನ್ನು ನಮ್ಮೊಳಗೆ ಅಭಿನ್ನ ಭಾವದಿಂದ ಒಂದುಗೂಡಲು ಬಿಟ್ಟೆವು. ಭಿನ್ನ ಭಿನ್ನ ಸಂಸ್ಕೃತಿಗಳನ್ನು ನಮ್ಮಲ್ಲಿ ಸೇರಿಸಿ ನಮ್ಮನ್ನು ಅವುಗಳೊಂದಿಗೆ ಒಂದಾಗಲು ಬಿಟ್ಟು ದೇಶ ವಿದೇಶದಲ್ಲಿ ಏಕಸೂತ್ರತೆಯನ್ನು ಖಡ್ಗದ ಪ್ರಯೋಗದಿಂದಲ್ಲ, ಅವರ ಪ್ರೇಮ ಹಾಗೂ ಸೌಹಾರ್ದತೆಯಿಂದ ಸ್ಥಾಪಿಸಿದೆವು. ಪರರ ಕೈಕಾಲುಗಳಿಗೆ ಬೇಡಿ ತೊಡಿಸದೆ ಮನಸ್ಸುಗಳನ್ನು ದೋಚದೆ ಅವರ ಹೃದಯವನ್ನು ಗೆದ್ದು ಅವುಗಳ ಮೇಲೆ ಚಾರಿತ್ರ್ಯ ಮತ್ತು ಚೇತನೆಯ ಪ್ರಭುತ್ವವನ್ನು ಜಾರಿಗೊಳಿಸಿ ಅದನ್ನು ಶಾಶ್ವತಗೊಳಿಸಿದ್ದೇವೆ. ಇದನ್ನು ಮುಂದುವರಿಸಿಕೊಂಡು ಬರುವುದು ನಮ್ಮ ಕರ್ತವ್ಯ.

---

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 337/1965

ಲೂಯಿಸ್ ಯಾನೆ ಎಲೋಶಿಯಸ್ ಮತಾಯಸ್, ಯಿತನ ಏಜೆಂಟ ಕಾಶ್ಮೀರ್ ಮತಾಯಸ್ —ವಾದಿ.

ಮತ್ತು

ಯಿಜಬೆಲ್ಲಾ ಡಿ ಸೋಜಾ ಸಹಾ —ಪ್ರತಿವಾದಿಯು.

ಯಿವರೊಳಗೆ

ಕೋರ್ಟು ಪ್ರಮಾಣ ಪ್ರಕಾರ ಸದ್ರಿ ದಾವೆಯ ೩ನೇ ಪ್ರತಿವಾದಿ Sri ಲೋರೆನ್ಸ್ ಡಿ ಸೋಜಾ 1, 4ನೇ ಪ್ರತಿವಾದಿ Sri ಚಾರ್ಲಿಸ್ ಡಿ ಸೋಜಾ 3, ಪಾಸ್ಕಲ್ ಡಿಸೋಜರ ಮಕ್ಕಳು, ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಗಂಪದ ಕೋಡಿ ಎಂಬಲ್ಲಿರುವವರು. ಯಿವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ವಾದಿಯು ಪ್ರತಿವಾದಿರ ಮೇಲೆ ಮೂಲಗೇಣಿ ಗೇಣಿ ರೂ. 935-40ನ್ನು ಬರಮಾಡಿಕೊಳ್ಳುವ ಬಗ್ಗೆ ಹೂಡಿದ ಸದ್ರಿ ದಾವೆಯು ಸದ್ರಿ 2-4ನೇ ಪ್ರತಿವಾದಿರ ಆಕ್ಷೇಪದ ಬಗ್ಗೆ ತಾ. 4-11-1965ಕ್ಕೆ ಯಿಡಲಾಗಿಯದೆ. ಆದ್ರಿಂದ ಆ ಕುರಿತು ಆಕ್ಷೇಪ ಯಿದ್ರೆ ಸದ್ರಿ ದಿನ ಸದ್ರಿ ಪ್ರತಿವಾದಿರು ಸದ್ರಿ ಕೋರ್ಟಿನ ಮುಂದೆ ಬೆಳಗ್ಗೆ 10 ಗಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಪ್ರತಿವಾದಿರ ಆಕ್ಷೇಪದ ಉಜಾರು ಶಿವಾಯಿ ಸದ್ರಿ ದಾವಾ ತೀರ್ಮಾನಿಸಲ್ಪಡುತ್ತದೆ.

H. K. Gopalkrishna Rao,
*Vakil for Plff.*

Karkala, 30-9-65.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕಮ್ಯೂನಿಜಂ ಆಕ್ರಮಣವನ್ನೆದುರಿಸಲು ಪಾಕಿಸ್ತಾನಕ್ಕೆ ಬೃಹತ್ಪ್ರಮಾಣದ ಸೈನಿಕ ನೆರವು ನೀಡಲು ಅಮೆರಿಕೆ ನಿರ್ಧರಿಸಿದಾಗ ಪ್ರಧಾನಿ ನೆಹರು ಆ ಯೋಜನೆಯನ್ನು ವಿರೋಧಿಸಿದ್ದರು. ಭಾರತ ಉಪಖಂಡದಲ್ಲಿ ಇದು ಅಶಾಂತಿಯ ಜ್ವಾಲೆ ಹರಡುತ್ತದೆ ಎಂದವರು ಭವಿಷ್ಯ ನುಡಿದಿದ್ದರು. ಆದರೆ ಕೊಡುವ ಐಕರು ನೀಡಿದ ಭರವಸೆಯಿಂದಲೇ ಅವರು ಸುಮ್ಮನಿರಬೇಕಾಯಿತು. ಅಂದಿನಿಂದ ಕೊನೆಯ ತನಕವೂ ನೆಹರು ಪಾಕ್ ಭೀತಿಯನ್ನು ಗಮನಿಸಿದ್ದರು. ಆ ಪುಣ್ಯಪುರುಷ ಭವಿಷ್ಯ ದ್ರಷ್ಟಾರನ ಮಾತು ನಿಜವಾಗಬೇಕಾದರೆ, ಆತನ ಭೌತಿಕ ದೇಹ ಅಳಿಯ ಬೇಕಾಯಿತು.

ನೆಹರೂ ತೋರಿದ ದಾರಿಯಲ್ಲೇ ಮುನ್ನಡೆಯುವ ದೃಢತೆಯಿಂದ ಅವರ ಉತ್ತರಾಧಿಕಾರಿಯಾಗಿ ಬಂದ ಲಾಲ ಬಹದೂರ್ ಐಕರು ನೆಹರೂಗಿತ್ತ ಭರವಸೆಯು ಈಡೇರಲಿಲ್ಲವೆಂದು ನಾವು ಹೇಳೆವು. ಜಾನ್ಸನ್ ಅಸಮರ್ಥತೆಯನ್ನು ಶಾಸ್ತ್ರಿಗಳ ಮುಂದೆ ತೋಡಿಕೊಂಡರು. ಮತ್ತೆ ಇದಕ್ಕಿಂತ ಹೆಚ್ಚಿನದನ್ನು ಜಾನ್ಸನ್ನರೂ ಮಾಡಲಾರರು, ಶಾಸ್ತ್ರಿಗಳೂ ಮಾಡಲಾರರು.

ಇಂದು ಶಾಸ್ತ್ರಿಯವರ ಹೊಣೆಗಾರಿಕೆ ಹೆಚ್ಚಿಗಿದೆ. ಪಾಕ್ ಅಪಪ್ರಚಾರದಿಂದ ಮತ್ತು ಭಾರತದ ಮಿತ ಪ್ರಚಾರದಿಂದ ಜಾಗತಿಕ ಅಭಿಪ್ರಾಯ ಒಂದು ಕಲಸುಮೇಲೋಗರವಾಗಿದೆ. ಸತ್ಯ ಪ್ರಚಾರವು ಮಿಥ್ಯದಂತೆ ಬೇಗನೇ ಗಗನ ವ್ಯಾಪಿಯಾಗಲಾರದು. ಕಷ್ಟಕರವಾದ ಈ ಕಾರ್ಯದಲ್ಲಿ ಶಾಸ್ತ್ರಿ ಆಸಕ್ತಿ ವಹಿಸಬೇಕು. ಸದ್ಯದ ಪ್ರಸಂಗದಲ್ಲಿ ಅವರು ತಳೆದ ನಿಲುವು ದೃಢವಾಗಿದೆ—ಇದರಿಂದ ಅವರು ಸರಿಯುವುದಿಲ್ಲ. ಅಧ್ಯಕ್ಷ ಲಿಂಡನ್ ಜಾನ್ಸನ್ ಭಾರತದ ಹಿತವನ್ನು ಬಯಸುವವರು ಎಂಬುದು ನಿಜವಾದರೆ, ಒಮ್ಮೆ ಒಡಂಬಡಿಕೆಯನ್ನು ಮುರಿದ ಪಾಕಿಸ್ತಾನಕ್ಕೆ ಮತ್ತೆ ಸೈನಿಕ ನೆರವು ನೀಡುವುದನ್ನು ನಿಲ್ಲಿಸಬೇಕು. ಈ ಬಗ್ಗೆ ಜಾನ್ಸನ್ನರ ಮನಒಲಿಸುವುದು ಬಹು ಕಠಿನ. ಆದರೂ ಶಾಸ್ತ್ರಿ ತಮ್ಮ ಪ್ರಯತ್ನವನ್ನು ಬಿಡಬಾರದು. ಹಾಗೆಯೇ ಸಿಕ್ಕಸಿಕ್ಕಲ್ಲಿ ಶಸ್ತ್ರ ಸಹಾಯಕ್ಕಾಗಿ ಕೈ ಚಾಚುವ ಅಯ್ಯೂಬರು ಬಂಗೈಯಿಂದಲೇ ಬರುವಂತೆ ನೋಡಿಕೊಳ್ಳಬೇಕು.

# ಅಯ್ಯೂಬ ಖಾನರ

## ಅಮೆರಿಕನ್ ಶಸ್ತ್ರಾಸ್ತ್ರ
## ಸರ್ವಾಧಿಕಾರಿ ನೀತಿ

ಅಡಿಗೆ ಬಿದ್ದರೂ ಮೂಗು ಮೇಲೆಂದು ಹಾರಾಡುತ್ತಾರೆ ಫೀಲ್ಡ್ ಮಾರ್ಶಲ್ ಅಯ್ಯೂಬ ಖಾನ್. ಏಕೆ? ಕಾಶ್ಮೀರದಲ್ಲಿ ಘರ್ಷಣೆಯನ್ನು ಹುಟ್ಟಿಸಿ ಯುದ್ಧ ಘೋಷಣೆಯನ್ನೇಕೆ ಮಾಡಿದರು?— ಕೋರಿಕೆಗೆ ಇವು ಜಟಿಲವೆನಿಸಿದರೂ ವಾಸ್ತವಿಕವಾಗಿ ಸರಳ. ಸೀಟೋ—ಸೆಂಟೋ ಒಪ್ಪಂದ ಕೂಟಗಳ ಸದಸ್ಯ ರಾಷ್ಟ್ರವಾಗಿ ಪಾಕಿಸ್ತಾನವು ಪಡೆದುಕೊಂಡ ಶಸ್ತ್ರಾಸ್ತ್ರ ಮದವೇ ಅಯ್ಯೂಬರ ಈ ಭ್ರಾಂತಿಗೆ ಕಾರಣ.

ಸೀಟೋ ಮತ್ತು ಸೆಂಟೋ ಒಪ್ಪಂದ ಕೂಟಗಳ ಸದಸ್ಯ ರಾಷ್ಟ್ರವಾಗಿರುವ ಪಾಕಿಸ್ತಾನವು ಒಪ್ಪಂದದ ಕೂಟದ ಕಾರ್ಯಯೋಜನೆಗಿಂತ ಅಧಿಕ ಪ್ರಮಾಣದ ಮಿಲಿಟರಿ ನೆರವು ಪಡೆದಿದೆ. ಸುಮಾರು ರೂ. ೮೦೦ ಕೋಟಿ ಮೌಲ್ಯದ ನೆರವು ಪಾಕಿಗೆ ದೊರೆತಿದೆಯೆಂಬುದು ಅಂದಾಜು ಮಾತ್ರ. ಇದರಲ್ಲಿ ಅಮೆರಿಕನ್ ನೆರವು ಕೂಡಿಲ್ಲ. ಪಾಕಿಸ್ತಾನವು ಅಮೆರಿಕೆಯಿಂದ ಎಷ್ಟು ಮಿಲಿಟರಿ ನೆರವನ್ನು ಪಡೆದಿದೆಯೆಂದು ಸರಿಯಾಗಿ ಅಂದಾಜು ದೊರೆಯಲಿಲ್ಲ. ಹಾಗಿದ್ದರೂ ಕಳೆದೊಂದು ವರ್ಷದಲ್ಲಿಯೇ ಅಮೆರಿಕೆಯು ಹತ್ತು ಲಕ್ಷ ಡಾಲರ್ ಬೆಲೆಯ ಮಿಲಿಟರಿ ನೆರವನ್ನು ನೀಡಿದೆಯೆಂದು ಅಂದಾಜು ಮಾಡಿದ್ದಾರೆ.

ಕಳೆದ ಹನ್ನೆರಡು ವರ್ಷಗಳಿಂದ ಅಮೆರಿಕನ್ ನೆರವು ಪಾಕಿಗೆ ದೊರೆಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಅಮೆರಿಕನ್ ನೆರವನ್ನು ಧಾರಾಳ ಪ್ರಮಾಣದಲ್ಲಿ ಪಡೆಯುವ ರಾಷ್ಟ್ರ ಪಂಕ್ತಿಯಲ್ಲಿ ಪಾಕ್ ಮೊತ್ತಮೊದಲ ಸ್ಥಾನ ಪಡೆಯುತ್ತದೆ. ದಕ್ಷಿಣ ಕೊರಿಯಾ ಮತ್ತು ದಕ್ಷಿಣ ವಿಯತ್ನಾಮಗಳು ಎರಡನೆ ಮತ್ತು ಮೂರನೆಯವು. ಅಮೆರಿಕೆಯು ಪಾಕಿಸ್ತಾನಕ್ಕೆ ಉದಾರವಾಗಿ ನೆರವು ನೀಡಿದೆ. ಈ ಸಂಧಿ ಸಾಧಿಸಿ ಪಾಕ್ ಅಮೆರಿಕೆಯಿಂದ ಜೆಟ್ ವಿಮಾನಗಳು, ಟ್ಯಾಂಕ್‌ಗಳು, ಮಿಲಿಟರಿ ವಾಹನಗಳು, ಮತ್ತಿತರ ಆಧುನಿಕ ಶಸ್ತ್ರಾಸ್ತ್ರಗಳನ್ನು ಮದ್ದುಗುಂಡುಗಳನ್ನು ಸಂಗ್ರಹಿಸಿತು. ಅದೊಂದು ಕಿಲುಬು ಕಾಸನ್ನೂ ವ್ಯಯಿಸದೆ ಅಮೆರಿಕನ್ ಕೃಪಾಕಟಾಕ್ಷದಲ್ಲಿ ಮಿಲಿಟರಿ ಕೇಂದ್ರಗಳನ್ನು, ರಾಡಾರ್ ಕೇಂದ್ರಗಳನ್ನು, ವಿಮಾನ ನಿಲ್ದಾಣಗಳನ್ನು ನಿರ್ಮಿಸಿಕೊಂಡಿತು. ಅಲ್ಲಿ ಈಗ ಕ್ಷಿಪಣಿಗಳನ್ನು ಪ್ರಯೋಗಿಸುವ ನೆಲೆಗಳೂ ಇವೆ. ಅಲ್ಲಿನ ಭೂ ಮತ್ತು ವಾಯು ಬಲಗಳ ಸೈನಿಕರು ವಿಶಿಷ್ಟ ತರಬೇತಿ ಪಡೆದಿದ್ದಾರೆ. ಇವೆಲ್ಲವುಗಳಿಗಾಗಿ ಪಾಕ್ ಬೊಕ್ಕಸದಿಂದ ಚಿಕ್ಕಾಸೂ ವೆಚ್ಚವಾಗಿಲ್ಲ. ಪಾಕ್ ಮಿಲಿಟರಿ ಅಧಿಕಾರಿಗಳಿಗೆ ಕೂಡ ಸೈನಿಕ ಒಪ್ಪಂದ ಕೂಟಗಳಿಂದಲೇ ಸಂಬಳ ನೀಡಲಾಗುತ್ತಿದೆ.

ಅಮೆರಿಕೆಯು ಪಾಕಿಗೆ ನೀಡುವ ಸಹಾಯ ಮಿಲಿಟರಿ ಕ್ಷೇತ್ರದಲ್ಲಿ ಮಾತ್ರವಲ್ಲ. ಮಿಲಿಟರಿ—ಆರ್ಥಿಕ ನೆರವಿನ ಅಂಗವಾಗಿ

ಅಮೆರಿಕೆಯು ರೂ. ೨,೦೦೦ ಕೋಟಿ ನೀ
ಡಿದೆಯೆಂದು ಗೊತ್ತಾಗಿದೆ. ಇದೂ ಸಾಲ
ದಾಗಿ ಪಾಕ್ ತನ್ನ ಮುಂಗಡ ಪತ್ರದಲ್ಲಿ
ಸೇ. ೪೦—೫೦ರಷ್ಟನ್ನು ಮಿಲಿಟರಿ ಸಿದ್ಧ
ತೆಗಾಗಿ ವ್ಯಯಿಸುತ್ತಿದೆ!

ಪಾಕ್ ಈ ರಾಕ್ಷಸ ಪ್ರಮಾಣದ ನೆ
ವು ಹೇಗೆ ಪಡೆಯಿತು? 'ಸೀಟೋ ಮತ್ತು
ಸೆಂಟೋ ಕೂಟಗಳು ಐಸನ್‌ಹಾವರ್
ಸಿದ್ಧಾಂತದ ಪರಿಣಾಮವಾಗಿ ಅಸ್ತಿತ್ವಕ್ಕೆ
ಬಂದುವು. ಅಂತಾರಾಷ್ಟ್ರೀಯ ಮಟ್ಟ
ದಲ್ಲಿ ಕಮ್ಯುನಿಜಂ ಪ್ರಚಾರವನ್ನು ಎದು
ರಿಸಬಲ್ಲ ರಕ್ಷಣಾ ವ್ಯವಸ್ಥೆಯನ್ನು ಕಲ್ಪಿ
ಸುವುದೇ ಆ ಸಿದ್ಧಾಂತದ ಉದ್ದೇಶ. ಐಸ
ನ್‌ಹಾವರ್ ೨೫—೨—೧೯೫೪ರಂದು
ಮಾತಾಡುತ್ತ ಪಶ್ಚಿಮ ಏಶ್ಯಾದ ರಾಷ್ಟ್ರ
ಗಳ ರಕ್ಷಣಾ ವ್ಯವಸ್ಥೆ ದುರ್ಬಲವಾಗಿರು
ವುದು ಅಮೆರಿಕೆಗೆ ಚಿಂತನಕಾರಿಯಾಗಿ
ದೆಯೆಂದರು. ಈ ಭಾಗದ ರಾಷ್ಟ್ರಗಳ
ಮೇಲೆ ಸೋವಿಯತ್ ರಶ್ಯ ದಾಳಿ ಮಾ
ಡಬಹುದೆಂಬ ಭೀತಿಯಿಂದ ಅಮೆರಿಕನ್
ಕಾಂಗ್ರೆಸ್ ಈ ಪ್ರದೇಶದ ಸಂರಕ್ಷಣೆಗಾ
ಆರ್ಥಿಕ ನೆರವನ್ನು ಒದಗಿಸಿತು. ನೆರವಿ
ಅಗತ್ಯವಿರುವ, ವಿಶ್ವಸಂಸ್ಥೆಯ ಚೌಕಟ್ಟಿ
ಗೆ ಒಳಪಟ್ಟು ಅಂತಾರಾಷ್ಟ್ರೀಯ ಶಾಂ
ಸಂವರ್ಧನೆ ಮತ್ತು ಸುಭದ್ರತೆಗಾಗಿ ಶ
ಶ್ರಮಿಸ ಬಯಸುವ ರಾಷ್ಟ್ರಗಳಿಗೆ ನೆ
ವು ನೀಡುವ ಉದ್ದೇಶದಿಂದ ಈ ಬಗೆಯ
ನಿರ್ಣಯಕ್ಕೆ ಬಂದಿತು.

ಅದೇ ಸಮಯದಲ್ಲಿ ದಿ। ಪ್ರಧಾನಿ
ನೆಹರೂರವರು ಇಂತಹ ವ್ಯವಸ್ಥೆಯ
ಗ್ಗೆ ಭೀತಿ ವ್ಯಕ್ತಪಡಿಸಿದರು. ಐಸನ್ ಹ
ವರ್ ಶ್ರೀ ನೆಹರೂ ಅವರ ಭೀತಿಯನ್ನು
ನಿವಾರಿಸುತ್ತ ಅಮೆರಿಕವು ಪಾಕಿಸ್ತಾನಕ್ಕೆ
ನೀಡುತ್ತಿರುವ ಈ ನೆರವನ್ನು ಭಾರತ
ವಿರುದ್ಧ ಉಪಯೋಗಿಸಲಾಗುವುದಿಲ್ಲವೆ
ಬ ಆಶ್ವಾಸನ ನೀಡಿದರು. ಇಂದಿಗದು ಬ
ಯ ಆಶ್ವಾಸನ ಮಾತ್ರವಾಯಿತು!

ಪಾಕಿಸ್ತಾನವು ತಾನು ಅಮೆರಿಕೆಯಿಂ
ಪಡೆದ ಮಿಲಿಟರಿ ಸಹಾಯ ಶಕ್ತಿಯನ್ನು
ದುರುಪಯೋಗ ಪಡಿಸುತ್ತದೆಂಬುದು ಗೊ
ತ್ತಾದುದು ಈ ವರ್ಷವಲ್ಲ. ೧೯೬೦ರಲ್ಲಿ
ಧ್ಯಕ್ಷ ಅಯ್ಯೂಬಖಾನರು ಪಠಾಣರ
ಮತ್ತು ಬಲೂಚಿಗಳ ಸ್ವಾತಂತ್ರ್ಯ ಹೋ
ರಾಟವನ್ನು ಹತ್ತಿಕ್ಕುವಲ್ಲಿ ಇದನ್ನು ಬಳ
ದ್ದರು. ಪ್ರಬಲವಾಗಿ ನಡೆದು ಬಂದ
ಹೋರಾಟವನ್ನು ಸದೆಬಡೆಯಲು
ಯ್ಯೂಬರು ಸಮಗ್ರ ಪಖ್ತೂನಿಸ್ತಾನ
ಮೇಲೆ ಬಾಂಬು ದಾಳಿ ಮಾಡಿದರು. ಇ
ಕ್ಕಾಗಿ ಅವರು ಅಮೆರಿಕನ್ ವಿಮಾನಗ
ನ್ನು ಬಳಸಲು ಹಿಂಜರಿಯಲಿಲ್ಲ.

ಸ್ವಾತಂತ್ರ್ಯ ಪ್ರೇಮಿ ಅಮೆರಿಕನ್ನ

# ರಾಯ ದರ್ಬಾರ್

## ಉಪಯೋಗ ಮಾಡಿದ ಅವರೆಷ್ಟು ಸಮಯ ...ು?

...ನ್ನು ಅಯ್ಯೂಬರ ಈ ಕೃತಿ ಸಹಜವಾಗಿ ...ಯೇ ಚಿಂತೆಗೀಡು ಮಾಡಿತು, ಆದರೂ ಅಯ್ಯೂಬರು ತಮ್ಮ ಮಿಲಿಟರಿ ಹತಿಯಾ...ರನ್ನು ಬಳಸಿದ್ದಾರೆಂದು ಖಚಿತವಾಗುವವರೆಗೆ ಸುಮ್ಮನಿರ ಬಯಸಿದರು. ಅದ...ಕ್ಕಾಗಿ ತನಿಖೆ ನಡೆಸುವಾಗ ಅಯ್ಯೂಬರು ಬಾಯಿ ಬಿಟ್ಟರು. "ಪಾಕಿಸ್ತಾನವು ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ಚಿನ್ನದ ಒರೆಯಲ್ಲಿ ಮುಚ್ಚಿಡಲಾರದು; ಶತ್ರುಗಳನ್ನು ಸದೆಬಡೆಯಲು ಉಪಯೋಗಿಸಬೇಕು"

...ಅಮೆರಿಕೆಯ ಹಿತಾಸಕ್ತಿಗಳ ಸಂರಕ್ಷಣೆಗಾಗಿ, ಅಂದರೆ ದಕ್ಷಿಣ ವಿಯತ್ನಾಮ, ಲಾವೋಸ್, ಕೋರಿಯಾಗಳಲ್ಲಿ ಅಥವಾ ಅಸಂಭವನೀಯವಾದ ಸೋವಿಯಟ್ ರಶ್ಯಾ, ಚೀನಾಗಳ ದಾಳಿಗಳ ವಿರುದ್ಧ ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವುದಾದರೆ, ಅಂತಹ ಶಸ್ತ್ರಾಸ್ತ್ರಗಳಿಂದ ಪಾಕಿಸ್ತಾನಕ್ಕೆ ಏನು ಪ್ರಯೋಜನ? ಇದು ಅಯ್ಯೂಬರ ಪ್ರತಿ ಸವಾಲು.

ಅಯ್ಯೂಬರ ಪರಿಪೂರ್ಣ ಅನುಗ್ರಹ ಪಾತ್ರ 'ಡಾನ್' ಪತ್ರಿಕೆ ಈ ಅಮೆರಿಕನ್ ತನಿಖೆಯನ್ನು 'ಅಸಂಬದ್ಧ'ವೆಂದು ವರ್ಣಿಸಿತು. ಪಾಕಿಸ್ತಾನವು ಅಮೆರಿಕನ್ ಮಿಲಿಟರಿ ನೆರವನ್ನು ಅಫಘಾನಿಸ್ತಾನ ಅಥವಾ ಭಾರತದ ವಿರುದ್ಧ ಬಳಸುವಂತಿಲ್ಲವಾದರೆ ಪಾಕ್ ಅಮೆರಿಕೆಯೊಂದಿಗೆ ಏಕೆ ಒಪ್ಪಂದ ಮಾಡಿಕೊಂಡಿತು? ಏಕೆ ಮಿಲಿಟರಿ ಕೂಟಗಳಲ್ಲಿ ಸೇರಿತು? ಎಂದು ಅದೂ ರೇಂಕರಿಸಿತು.

"ಅನೇಕ ಸಲ ನಮ್ಮ ಅಮೆರಿಕನ್ ಮಿತ್ರರು ನಮ್ಮ ರಾಷ್ಟ್ರಗಳನ್ನು ರಕ್ಷಿಸಿಕೊಳ್ಳಲು ನಮಗಿರುವ ಅಧಿಕಾರವನ್ನೂ ಪ್ರಶ್ನಿಸುವಂತಿದೆ. ಒಪ್ಪಂದ ಕೂಟಗಳ ನಮ್ಮ ಮಿತ್ರರು ಈ ಬಗೆಯ ನಿಲುಮೆಯನ್ನು ತಿದ್ದಿಕೊಳ್ಳಬೇಕು—" ಎಂದು ಅಯ್ಯೂಬಖಾನರು ಹೇಳಿದ್ದಾಗಿಯೂ ಅವರ 'ಡಾನ್' ವರದಿ ಮಾಡಿತು.

'ಪಾಕಿಸ್ತಾನ ಟೈಮ್ಸ್' ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಪಾಕ್ ಅಧಿರ ಜರೆದ್ದುವನ್ನೇ ಬಿಚ್ಚಿ ಜಗತ್ತಿನ ಮುಂದೆ ಇಟ್ಟಿತು. ಅದು ಬರಿ ಮತ್ತ 'ಪಾಕಿಸ್ತಾನಕ್ಕೆ ಕಮ್ಯೂನಿಸ್ಟ್ ರಾಷ್ಟ್ರಗಳಿಗಿಂತಲೂ ಕಮ್ಯೂನಿಸ್ಟೇತರ ದೇಶಗಳಿಂದಲೇ ಆಕ್ರಮಣ ಭೀತಿ ಹೆಚ್ಚಿದೆ"—ಎಂದು ಸೂಚ್ಯವಾಗಿಯೇ ಸೂಚಿಸಿತ್ತು.

ಅಮೆರಿಕನ್ ಶಸ್ತ್ರಾಸ್ತ್ರಗಳ ಬಳಕೆಗೆ ಸಂಬಂಧಿಸಿದ ನಿಬಂಧನೆಗಳನ್ನು ಅಯ್ಯೂಬಖಾನರು ವಿರೋಧಿಸಿ ಮಾತ್ರಕೂ ಅಲ್ಲ ತಮಗೆ ಯಾವುದು 'ಆಕ್ರಮಣ'ವೆಂದು ತೋರುತ್ತದೆಯೋ ಅದನ್ನು ಹತ್ತಿಕ್ಕಲು ಈ ಬಲವನ್ನು ಅವರು ಉಪಯೋಗಿಸಲು ನಿರ್ಧರಿಸಿದ್ದರು. ೧೯೬೧ರಲ್ಲಿ ಪಠಾಣರು ಮತ್ತು ಬಲೂಚಿಗಳು ನಡೆಸಿದ ಸ್ವಾತಂತ್ರ್ಯ ಹೋರಾಟವು 'ಬಾದ ಷಾ' ಅಯ್ಯೂಬಖಾನರ ದೃಷ್ಟಿಯಲ್ಲಿ ಆಕ್ರಮಣವೆನಿಸಿತು. ೧೯೬೫ರಲ್ಲಿ ತನ್ನ ಮೇಲಿನ ಪಾಕ್ ಆಕ್ರಮಣವನ್ನು ಹಿಮ್ಮೆಟ್ಟಲು ಭಾರತ ಕೈಗೊಂಡ ದೃಢ ನಿಲುಮೆಯೂ ಅಯ್ಯೂಬ ಖಾನರಿಗೆ ಆಕ್ರಮಣವಾಗಿ ಕಂಡಿತು! ಅಮೆರಿಕನ್ನರು ಉದಾರವಾಗಿ ನೀಡಿರುವ ಶಸ್ತ್ರಾಸ್ತ್ರಗಳ ಬಳಕೆಯನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕೆಂದು ಅಯ್ಯೂಬರು ತಾವೇ ನಿ...

(ಮುಂದಿನ ಪುಟಕ್ಕೆ)

...

೧೯೫೪ರಲ್ಲಿ ವಿಶ್ವಸಂಸ್ಥೆಯ ಚೌಕಟ್ಟಿನೊಳಗಿರುವ ಅನಭಿವೃದ್ಧ ರಾಷ್ಟ್ರಗಳಿಗೆ ಕಮ್ಯೂನಿಜಂ ಆಕ್ರಮಣವನ್ನು ಎದುರಿಸಲು ಸಹಾಯವಾಗುವಂತೆ ಅಮೆರಿಕೆಯು ಒಂದು ಸೈನಿಕ ನೆರವಿನ ಯೋಜನೆಯನ್ನು ಮಾಡಿತು. ಅದರ ಜನಕ ಅಂದಿನ ಅಮೆರಿಕನ್ ಅಧ್ಯಕ್ಷ ಶಾಂತಿದೂತನೆಂಬ ಹೆಸರಾದ ಐಸನ್ ಹಾವರ್. ಈ ನೆರವಿನ ಯೋಜನೆಯನ್ನು ಒಪ್ಪಿಕೊಂಡ ರಾಷ್ಟ್ರ ಪಾಕಿಸ್ತಾನ್. ಅಂದಿನಿಂದ ಇಂದಿನವರೆಗೂ ಅಮೆರಿಕನ್ ಸೈನಿಕ ನೆರವು ಅದಕ್ಕೆ ವಿಪುಲ ಪ್ರಮಾಣದಲ್ಲಿ ದೊರೆಯುತ್ತಲೇ ಇದೆ.

ಅದೇ ಆಗ, ಭಾರತದ ಪ್ರಧಾನಿ ಜವಾಹರಲಾಲರು ಪಾಕಿಗೆ ನೀಡುವ ಸೈನಿಕ ನೆರವನ್ನು ಖಂಡಿಸಿದರು. ಆಗ ಭಾರತಕ್ಕೆ ಐಕ್ ಹೀಗೆ ಭರವಸೆಯಿತ್ತರು: ನಾವು ಪೂರೈಸುವ ನೆರವು ಕಮ್ಯೂನಿಜಂ ಆಕ್ರಮಣದ ವಿರುದ್ಧವಾಗಿ ಮಾತ್ರ ಉಪಯೋಗಿಸಬೇಕಾದುದು. ಆದುದರಿಂದ ಪಾಕಿಸ್ತಾನ ಈ ಶಸ್ತ್ರಾಸ್ತ್ರಗಳನ್ನು ಭಾರತದ ಮೇಲೆ ಉಪಯೋಗಿಸುವ ಪ್ರಮೇಯವೆಂಬುದೇ ಇಲ್ಲ.

೧೯೫೪ರಲ್ಲಿ ಭಾರತಕ್ಕೆ ಭರವಸೆ ನೀಡಿದ ಐಸನ್‌ಹಾವರ್ ಮತ್ತವರ ಉತ್ತರಾಧಿಕಾರಿ ಮೃದುವತಾವಾದ ಜಾನ್ ಕೆನ್ನೆಡಿಯವರನ್ನು ಈ ಚಿತ್ರದಲ್ಲಿ ಕಾಣಬಹುದು.

...

೧೯೫೪ರಲ್ಲಿಯೇ ಐಸನ್ ಹಾವರ್ ಭಾರತಕ್ಕೆ ಭರವಸೆ ನೀಡಿದ್ದರ ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನ ಭಾರತದ ವಿರುದ್ಧ ಎತ್ತಲಾರದು ಎಂದು ತಾನಿತ್ತ ಭರವಸೆಯು ಪೊಳ್ಳಾಗುವುದನ್ನು ಕಾಣಲು ಐಕರು ಅಧಿಕಾರದಲ್ಲೂ ಉಳಿಯಲಿಲ್ಲ, ಈಗ ಜೀವಹಿಡಿದೂ ಇಲ್ಲ. ಅಧ್ಯಕ್ಷ ಕೆನ್ನೆಡಿಯವರು ಪಾಕಿಸ್ತಾನವು ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ದುರುಪಯೋಗ ಪಡಿಸುತ್ತಿದೆಯೆಂದು ಕಂಡುಕೊಂಡರೂ ಅದನ್ನು ದೃಢಪಡಿಸಲು ಅಸಾಧ್ಯವಾಯಿತು. ಬಲೂಚಿಗಳ, ಪಖ್ತೂನಿಗಳ ಸ್ವಾತಂತ್ರ್ಯದ ಹೋರಾಟವನ್ನು ಅಯ್ಯೂಬರು ಈ ಶಸ್ತ್ರಾಸ್ತ್ರಗಳಿಂದ ಅಡಗಿಸಿದ್ದರು.

ಆದರೆ, ಐಕರ ಭರವಸೆ, ವಿಶ್ವಾಸ ದಾನ ಪೂರಾ ಪೊಳ್ಳಾದುದನ್ನು ಲಿಂಡನ್ ಬಿ. ಜಾನ್ಸನ್ ಕಾಣಬೇಕಾಯಿತು. ಕಚ್ಛರಣ ತಂಟೆಯನ್ನು ಪಾಕ್ ಎಬ್ಬಿಸಿ ಭಾರತದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಸಿದ್ಧವಾದಾಗಲೇ ಅಮೆರಿಕನ್ ಟ್ಯಾಂಕುಗಳು ಶಸ್ತ್ರಾಸ್ತ್ರಗಳು ಬೆಳಕಿಗೆ ಬಂದುವು. ಭಾರತವು ಇದಕ್ಕೆ ತಕ್ಕ ಪುರಾವೆಗಳನ್ನು ಒದಗಿಸಿತು. ಕಾಶ್ಮೀರದ ಅಘೋಷಿತ ಕದನದಲ್ಲಂತೂ ಪ್ಯಾಟನ್ ಟ್ಯಾಂಕುಗಳು, ಸೇಬ್ರೆ ಜೆಟ್ಟುಗಳನ್ನು ಇನ್ನಿತರ ಶಸ್ತ್ರಾಸ್ತ್ರಗಳು ಭಾರತೀಯ ವೀರ ಯೋಧರ ಗುರಿಗೆ ಬಿದ್ದು ಪುಡಿಯಾದುವು. ಜಾನ್ಸನ್ ತನ್ನ ಪೂರ್ವಿಕರಿತ್ತ ಭರವಸೆಯನ್ನು ಈಡೇರಿಸಲಿಲ್ಲವೆಂದು ಮರುಗಬೇಕಾಯಿತು. ತಾನು ಈ ಸಂಬಂಧದಲ್ಲಿ ಅಸಹಾಯಕ, ಅಸಮರ್ಥನೆಂದು ಉದ್ಗರಿಸಿದರು.

ಇಷ್ಟು ಮಾಡಿದ್ದರಿಂದಲೇ ಅವರ ಕರ್ತವ್ಯ ಪೂರೈಸಲಿಲ್ಲ. ಅನ್ಯಾಯವಾಗಿ ಆಕ್ರಮವಾಗಿ ಶಸ್ತ್ರ ಬಳಸುವ ಪಾಕಿಸ್ತಾನಕ್ಕೆ ಇನ್ನು ಮುಂದಾದರೂ ಅವರು ಸೈನಿಕ ನೆರವನ್ನು ನಿಲ್ಲಿಸಬೇಕು. ಅಯ್ಯೂಬ ಖಾನರೇ ಹೇಳುವಂತೆ ಅವರಿಗೆ ಸೋವಿಯತ್ ರಶ್ಯ-ಕಮ್ಯೂನಿಸ್ಟ್ ಚೀನಾಗಳ ಆಕ್ರಮಣದ ಭೀತಿಯಿಲ್ಲ. ಮತ್ತೇಕೆ ಕಮ್ಯೂನಿಜಂ ವಿರೋಧಿ ಸೈನಿಕ ನೆರವು?

# ನಡೆನುಡಿಗಳಲ್ಲಿ ಎಚ್ಚರವಿರಿ

ಸಮರಕ್ಕೆ ಶೂಲವಾದ ಯಾವುದೇ ನಡೆ, ನುಡಿ, ರಾಷ್ಟ್ರದ್ರೋಹ. ಆದ್ದರಿಂದ ಅಂತಹ ಯಾವುದೇ ವಿದ್ರೋಹಿ ಕೆಲಸವನ್ನು ಮಾಡಬಾರದು. ಜನತೆಯಲ್ಲಿ ಜಾತೀಯ ಕಲಹ, ಭಾಷಾ ಕಲಹ, ಭಿನ್ನಭಾವಗಳ ದುರ್ಬೀಜ ಬಿತ್ತುವ ಯಾವುದೇ ರೀತಿಯ ಮಾತುಗಳನ್ನು ಆಡಬಾರದು; ಕ್ಷುಲ್ಲಕವಾದ ಸುದ್ದಿಯನ್ನು ಹರಡಬಾರದು. ಊಹಾಪೋಹಗಳನ್ನು, ಸುಳ್ಳು ಸುದ್ದಿಗಳನ್ನು ಹಂಚಬಾರದು. ಬೇಜವಾಬ್ದಾರಿ ಮಾತುಗಳು ಶತ್ರುಗಳಿಗೆ ಸಹಾಯಕಾರಿ— ಎಂದು ಮೈಸೂರು ರಾಜ್ಯದ ಹಣಕಾಸಿನ ಶಾಖೆಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಮಾಡಿದ ಪ್ರಸಾರ ಭಾಷಣದಲ್ಲಿ ಜನತೆಗೆ ಮನವಿ ಮಾಡಿಕೊಂಡಿರುವರು.

ನೀವೆಲ್ಲ ತಿಳಿದಿರುವಂತೆ ನಮ್ಮ ನಾಡು ಮತ್ತೊಮ್ಮೆ ವಿಷಮವಾದ ತುರ್ತು ಪರಿಸ್ಥಿತಿಯ ಹಿಡಿತಕ್ಕೆ ಸಿಕ್ಕಿಬಿದ್ದಿದೆ. ಮೂರು ವರ್ಷಗಳ ಹಿಂದೆ, ಅನಿರೀಕ್ಷಿತವಾಗಿ ಚೀನಾ ವಿದ್ರೋಹದ ದಾಳಿ ಮಾಡಿತು. ಈಗ ನಮ್ಮ ನೆರೆರಾಜ್ಯ ಪಾಕಿಸ್ತಾನ, ನೆರೆಹೊರೆಯ ಭ್ರಾತೃತ್ವವನ್ನು ಬೆಳೆಸಿ, ಎರಡೂ ರಾಷ್ಟ್ರಗಳ ಸುಖಶಾಂತಿಗಳಿಗೂ ವಿಶ್ವದ ಶಾಂತಿಗೂ ಬೆಂಬಲವಾಗುವ ಬದಲು, ವಿದ್ರೋಹ—ಶತ್ರುತ್ವ ಬೆಳೆಸಿ, ಅಲ್ಲಿಯ ನಾಯಕರು ನಮ್ಮ ಮಾತೃಭೂಮಿಯ ಮೇಲೆ ಕಣ್ಣು ಹಾಯಿಸಿದ್ದಾರೆ. ಅಮಾನುಷ ಮಾರ್ಗದಲ್ಲಿ ಗಡಿದಾಟಿ ನುಗ್ಗಿ, ಅತಿಕ್ರಮ ಪ್ರವೇಶ ಮಾಡಿದ್ದಾರೆ.

ನಮ್ಮ ಸೇನಾಬಲದ ವಿಮಾನಗಳು ಧೀರತನದಿಂದ ನುಗ್ಗಿ, ಶತ್ರುವನ್ನು ಮೆಟ್ಟಿ ಹಾಕಿವೆ. ಅವರ ರಾಜ್ಯದೊಳ ಹೊಕ್ಕು ವಿದ್ರೋಹಕರ ಸೇನಾ ಚಟುವಟಿಕೆಯ ಮೂಲಗಳನ್ನು ನಾಶಪಡಿಸಿವೆ. ಪಾಕಿಸ್ತಾನದ ಸೈನ್ಯ ಶಕ್ತಿಯ ಅರ್ಧಕ್ಕೂ ಹೆಚ್ಚು ಭಾಗವನ್ನು ನಾಶ ಮಾಡಿದ್ದಾರೆ. ಪಾಕಿಸ್ತಾನದ ಈ ದುರಾಕ್ರಮಣ, ಚೀಣೀ ದುರಾಕ್ರಮಣಕ್ಕಿಂತ ಅಪಾಯಕಾರಿಯಾದದ್ದೆಂಬುದನ್ನು ನಾವು ಗಮನಿಸಬೇಕು. ಈ ಸಮಯದಲ್ಲಿ, ನಮ್ಮ ಐಕಮತ್ಯ, ದೇಶಭಕ್ತಿ, ದುಡಿಮೆ ಮತ್ತು ಬಲಿದಾನ-ಇವು ಮಾತ್ರವೇ ನಮಗೆ ಬೇಗ ಜಯ ತರಬಲ್ಲವು.

ನಮ್ಮ ನಾಯಕರು, ನಾವೇನು ಮಾಡಬೇಕು, ಏನು ಮಾಡಬಾರದು, ನಮ್ಮ ಕರ್ತವ್ಯ ಏನು ಎಂಬುದನ್ನೆಲ್ಲ ವಿವರಿಸಿದ್ದಾರೆ. ಅದನ್ನೆಲ್ಲ ಮತ್ತೆ ಮತ್ತೆ ಹೇಳಬೇಕಾದ ಅಗತ್ಯವಿಲ್ಲ. ನಮ್ಮ ರಾಷ್ಟ್ರಪತಿಗಳು ಹೇಳಿರುವಂತೆ, "ನಾವಿಂದು ಕಾದಾಡುತ್ತಿರುವುದು ತುಂಡು ನೆಲಕ್ಕಲ್ಲ, ಒಂದು ಮೂಲಭೂತ ತತ್ವಕ್ಕಾಗಿ. ನಾವಿಂದು ಎದುರಿಸುತ್ತಿರುವುದು ಮಿಲಿಟರಿ ಸರ್ವಾಧಿಕಾರತ್ವವನ್ನು, ವೃತ್ತ ಪತ್ರಿಕೆಗಳ ಕಂಠಾಳ ಶಾಸನವನ್ನು ಮತ್ತು ಜಾತೀಯ ರಾಷ್ಟ್ರವಾದವನ್ನು. ಪ್ರಜಾಪ್ರಭುತ್ವದ ನೆಲೆಗಾಗಿ ನಮಗೆ ವಿಜಯ ಪ್ರಾಪ್ತವಾಗಲೇಬೇಕು. ಇಲ್ಲದಿದ್ದರೆ ಏಷಿಯಾ ಖಂಡದಿಂದ ಸ್ವಾತಂತ್ರ್ಯ ಜ್ಯೋತಿ ಆರಿ ಹೋಗುತ್ತದೆ. ಹಲವು ಮಂದಿ ಅಧಿಕಾರ ಮತ್ತರಾದ, ಸ್ವಯಂ ಪ್ರತಿಷ್ಠಿತ ಪಾಕಿಸ್ತಾನಿ ನಾಯಕಮಣಿಗಳು, ಇಂದು ವಿಶ್ವದ ಒಂದು ದೊಡ್ಡ ಪ್ರಜಾಪ್ರಭುತ್ವ, ಜಾತ್ಯತೀತ ರಾಷ್ಟ್ರವನ್ನು ಬೆದರಿಸುತ್ತಿದ್ದಾರೆ. ನಾವು ಸ್ವಾತಂತ್ರ್ಯವನ್ನು, ಶಾಂತಿಯನ್ನು ಎಲ್ಲಕ್ಕಿನ್ನ ಬಯಸುವವರು. ರಾಷ್ಟ್ರಕ್ಕಾಗಿ ಯಾವ ತ್ಯಾಗವೂ ಹಿರಿದಾದುದಲ್ಲ. ನಮ್ಮ ನಾಡಿನ ಪ್ರತಿಯೊಬ್ಬರೂ ಯಾವುದೇ ಭಾಷೆಯವರಾಗಲಿ, ಕೋಮಿನವರಾಗಲಿ, ಯಾವ ಭಾಗದವರೇ ಆಗಿರಲಿ, ನಾವೆಲ್ಲ ಈ ಸಮಯದಲ್ಲಿ ಎಚ್ಚೆತ್ತು ನಿಂತು ಪಾಕಿಸ್ತಾನದ ನಾಯಕರಿಗೆ ಪಾಠ ಕಲಿಸೋಣ.

ನಮ್ಮ ಸೇನಾನಿಗಳು ಯುದ್ಧರಂಗದಲ್ಲಿ ಶತ್ರುವಿನ ನಾಶದಲ್ಲಿ ಸನ್ನದ್ಧರಾಗಿರುವ ಈ ಸಮಯದಲ್ಲಿ ನಾವು ಅವರ ಧೀರತನದಿಂದ ಸ್ಫೂರ್ತಿಗೊಂಡು ಅವರಿಗೆ ಅವರ ವಿಜಯಕ್ಕೆ ಬೆಂಬಲಿಗರಾಗಬೇಕು. ಅದಕ್ಕಾಗಿ ದುಡಿಯ ಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

ಸಮರಕ್ಕೆ ಶೂಲವಾಗುವ ಯಾವುದೇ ನಡೆ, ನುಡಿ, ರಾಷ್ಟ್ರದ್ರೋಹ. ಆದ್ದರಿಂದ ಅಂತಹ ಯಾವುದೇ ವಿದ್ರೋಹಿ ಕೆಲಸವನ್ನು ಯಾರು ಮಾಡಬಾರದು. ಜನತೆಯಲ್ಲಿ ಜಾತೀಯ ಕಲಹ, ಭಾಷಾ ಕಲಹ—ಭಿನ್ನ ಭಾವಗಳ ದುರ್ಬೀಜ ಬಿತ್ತುವ ಯಾವುದೇ ರೀತಿಯ ಮಾತುಗಳನ್ನಾಡಬಾರದು, ಕ್ಷುಲ್ಲಕ ಸುದ್ದಿ ಹರಡಬಾರದು, ಊಹಾಪೋಹಗಳ ಸುಳ್ಳು ಸುದ್ದಿಗಳನ್ನು ಹರಡಬಾರದು. ಬೇಜವಾಬ್ದಾರಿಯ ಮಾತುಗಳು ಶತ್ರುಗಳಿಗೆ ಸಹಾಯಕಾರಿ. ಅಲ್ಲ, ಅದು ಪ್ರಾಣ ಹಾನಿ ಉಂಟುಮಾಡುವಂತಹದ್ದು. ವೃತ್ತಪತ್ರಿಕೆಗಳದ್ದು ಮುಖ್ಯವಾಗಿ ಗುರುತರ ಜವಾಬ್ದಾರಿ ಮತ್ತು ಕರ್ತವ್ಯ ಈ ಯುದ್ಧದಲ್ಲಿದೆ. ಸುದ್ದಿ ಮತ್ತು ಟೀಕೆ—ಟಿಪ್ಪಣಿಗಳನ್ನು ಕೊಡುವಾಗ ಅತಿಜಾಗರೂಕತೆ ವಹಿಸಬೇಕೆಂದು ವೃತ್ತಪತ್ರಿಕೆಗಳಲ್ಲಿ ನಾನು ಭಿನ್ನವಿಸಿಕೊಳ್ಳುತ್ತೇನೆ. ಶತ್ರುಗಳಿಗೆ ಪ್ರತ್ಯಕ್ಷವಾಗಿ ಸಹಾಯ ಸಾಮಗ್ರಿಗಳಾಗಬಹುದಾದ, ಅಥವಾ ಜನಸಾಮಾನ್ಯರಲ್ಲಿ ಗಾಬರಿ ಹುಟ್ಟಿಸುವಂತಹ ಸುದ್ದಿ, ಚಿತ್ರ, ಟೀಕೆ ಟಿಪ್ಪಣಿಗಳನ್ನು ಅವರು ಪ್ರಕಟಿಸಬಾರದು. ವೃತ್ತ ಪತ್ರಿಕೆಗಳೂ, ಜನತೆಯೂ ನಮಗೆ ಗೊತ್ತಾದ ಅಂತಹ ಸುದ್ದಿಗಳನ್ನು ಸರ್ಕಾರಕ್ಕೆ ತಿಳಿಸಿ ಸಹಾಯ ಮಾಡಬೇಕು.

ಭಾರತ ಇದುವರೆಗೂ ತನಗಿದ್ದ ಒಬ್ಬನೇ ಶತ್ರು—ಬಡತನವನ್ನು ಎದುರಿಸುತ್ತಿತ್ತು. ಆ ಹಾದಿಯಲ್ಲಿ ಅದು ಅಭಿವೃದ್ಧಿ ಕಾರ್ಯಗಳ ಕಡೆಗೇ ಗಮನಕೊಟ್ಟಿತ್ತು. ಈಗ ನೆರೆಹೊರೆಯ ಚೀಣಾ ಮತ್ತು ಪಾಕಿಸ್ತಾನಗಳು ನಮ್ಮ ಸ್ವಾತಂತ್ರ್ಯಕ್ಕೇ ಕೊಡಲಿಪೆಟ್ಟು ಹಾಕಲು ಎದ್ದು ನಿಂತು, ಸಮರ ರಂಗಕ್ಕೆ ಇಳಿದಿವೆ. ಇದರಿಂದ ಭಾರತವೂ ಆತ್ಮರಕ್ಷಣೆಗೆ, ನಾಡ ರಕ್ಷಣೆಗೆ ಸಮರ ಸನ್ನದ್ಧವಾಗಬೇಕಾಗಿದೆ. ಆಘಾತ ನಿಕ ಸಮಂದ ವೆಚ್ಚ ಅಪಾರ. ಅದಕ್ಕಾಗಿ ಇಂದು ಭಾರತ ತನ್ನೆಲ್ಲ ಇತರ ಕಾರ್ಯಗಳನ್ನೂ ಬದಿಗಿಟ್ಟು ಯುದ್ಧ ಸನ್ನದ್ಧವಾಗಬೇಕು. ಇದಕ್ಕೆ ಜನತೆಯ ಸಹಾಯ ಅತ್ಯಗತ್ಯ. ಜನತೆ ಉದಾರವಾಗಿ ರಾಷ್ಟ್ರೀಯ ರಕ್ಷಣಾ ನಿಧಿಗೆ, ರಾಷ್ಟ್ರೀಯ ಉಳಿತಾಯ ಯೋಜನಾ ನಿಧಿಗೆ ಹಣ ನೀಡಬೇಕು. ಪ್ರತಿಯೊಬ್ಬ ಪ್ರಜೆಯೂ ತನ್ನ ಕೈಲಾದಷ್ಟು ಹಣವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ನೀಡಬೇಕು.

ಯುವಜನಕ್ಕೆಂದು ಮಾತು. ಕರ್ನಾಟಕದ ಚರಿತ್ರೆ ಶೌರ್ಯ—ಪರಾಕ್ರಮಗಳಿಂದ ತುಂಬಿ ತುಳುಕುತ್ತದೆ. ಅನಾದಿ ಕಾಲದಿಂದಲೂ ಕರ್ನಾಟಕ, ಸ್ವಾತಂತ್ರ್ಯ ರಕ್ಷಣೆಗಾಗಿ ಕಾದು, ಕೀರ್ತಿ ಪಡೆದಿದೆ. ಚಾಲುಕ್ಯ ಪುಲಕೇಶಿ, ಹೊಯ್ಸಳ, ಕುಮಾರ ರಾಮ, ಕಿತ್ತೂರು ಚನ್ನಮ್ಮ —ಈ ವ್ಯಕ್ತಿತ್ವಗಳು ಸಾಹಸೀ ಯುವ ಮಾತ್ರವಲ್ಲ, ಮಾರ್ಗದರ್ಶಕರಾಗಿದ್ದಾರೆ. ಸ್ವಾತಂತ್ರ್ಯ ಸಾಧನೆಯ ಅಹಿಂಸಾತ್ಮಕ ಚಳುವಳಿಯಲ್ಲಿ ಮುಂದಾಳಾಗಿ ದುಡಿದ ಕೀರ್ತಿ ಕನ್ನಡಿಗರದು. ಈ ಹಿಂದಿನ ಕೀರ್ತಿ ಕನ್ನಡಿಗರದು. ಈ ಹಿಂದಿನ ಕೀರ್ತಿ ಕಲಶ ಇಂದು ಮತ್ತೆ ಬೆಳಗಬೇಕು. ಮುಂದಿನ ಪೀಳಿಗೆ ಇಂದಿನ ಯುವಕ ಜನಾಂಗವನ್ನು ಅಧೀರರೆಂದು ಕರೆಯುವುದು ಬೇಡ. ಪ್ರತಿಯೊಬ್ಬ ಶಕ್ತ ಯುವಕನೂ ಮಾತೃಭೂಮಿಯ ಕರೆಗೆ ಓಗೊಡಬೇಕು. ಪ್ರತಿ ಮನೆಯೂ ರಾಷ್ಟ್ರ ರಕ್ಷಣೆಗಾಗಿ ಒಬ್ಬನನ್ನು ಮುಡಿಪಾಗಿ ನೀಡಬೇಕು.

---

(ಹಿಂದಿನ ಪುಟದಿಂದ)

ಧರಿಸಿಕೊಂಡಿದ್ದಾರೆ. ಈ ನಿರ್ಧಾರವು ಸಹಾಯದ ಉದ್ದೇಶಗಳಿಗೆ ತೀರ ವಿರುದ್ಧವಾಗಿದ್ದರೂ ಅಮೆರಿಕ ಕೈಕಟ್ಟಿ ಕುಳಿತಿದೆ.

ಅಯ್ಯೂಬರು ಅಮೆರಿಕನ್ ಶಸ್ತ್ರಾಸ್ತ್ರಗಳೊಡನೆ ನಂದರಾಯ ದರ್ಬಾರ್ ನಡೆಸಿದರು. ಜನತೆಯು ತಂಗಿಯ ಹಣದಿಂದ ಶಸ್ತ್ರಾಸ್ತ್ರಗಳನ್ನವರು ಕೊಂಡಿದ್ದರೆ, ಅವುಗಳ ಬಳಕೆಯ ಒಗಗೂ ತಲೆ ಹಾಕೋಟಿಯಿಡುತ್ತಿದ್ದರು. ಧರ್ಮಕ್ಕೆ ದೊರೆತ ಶಸ್ತ್ರಾಸ್ತ್ರಗಳನ್ನು ಹೀಗೆ ಬಳಸಿದರೇನಂತೆ? ಒಂದು ಕಾಸೂ ನೀಡದೆ ಕೈ ಸೇರಿದ ಇವನ್ನು ಕಸ ಸಮಾನ ಬಗೆದರು. ಕಸದಂತೆ ಎಸೆದರು, ಗೂಟ್ಟರ ಮಾಡಿದರು. ಈ ಶಸ್ತ್ರಾಸ್ತ್ರಗಳ ಬಳಕೆಗೊಂದು ನೆಪ ಬೇಕಾಗಿತ್ತು ಅವರಿಗೆ. ಅದು ಸಿಕ್ಕೊಡನೆಯೇ ತಪ್ಪು ಸಿದ್ಧಾಂತದ ತಳಹದಿಯಲ್ಲಿಯೇ ಅವರು ಮುಂದುವರಿಯುತ್ತಾರೆ; ಕಷ್ಟಕರತೆಗಳನ್ನು ಸೃಜಿಸುತ್ತಾರೆ.

ಅಯ್ಯೂಬಖಾನ್ ನಿರಂಕುಶ ಸರ್ವಾಧಿಕಾರಿ. ಅಮೆರಿಕೆಯು ಈ ಸರ್ವಾಧಿಕಾರಿಯ ವರ್ತನೆಯ ಬಗ್ಗೆ ತನ್ನ ಅಸಮರ್ಥತೆಯನ್ನು ತೋರಿಸಿದೆ. ಅಯ್ಯೂಬಖಾನರು ಉದ್ದೇಶ ಮೀರಿ ತನ್ನ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಿದರೂ ಅದು ಅಸಮರ್ಥವಂತೆ! ಈ ಮಿಲಿಟರಿ ಅಧಿಕಾರಿಯ ನಿರ್ಧಾರವನ್ನು ಪಾಕಿಸ್ತಾನದ ವಿಚಾರವಂತರು ಅನುಮೋದಿಸುವರೆ? ಪಾಕಿಸ್ತಾನದ ಜನರೇ ಈ ಪ್ರಶ್ನೆಗೆ ಉತ್ತರ ನೀಡಬೇಕು. ಅಯ್ಯೂಬರ ಈ ವಿನಾಶಕಾರಿ ನೀತಿಯನ್ನು ಯಾವ ವಿಚಾರವಂತನೂ ಒಪ್ಪಲಾರನು.

---

# ನಾವು ಮರೆಯದಿರೋಣ

ನಾವು ಇಂದು ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ದೇಶದ ಸ್ವಾತಂತ್ರ್ಯ ಮತ್ತು ಸಮಗ್ರತೆಗೆ ಅಪಾಯ ಒದಗಿ ಬಂದಿದೆ. ಇಂತಹುದೇ ಒಂದು ಸಂದರ್ಭದಲ್ಲಿ ನಮ್ಮ ದಿವಂಗತ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರು ಮಾಡಿದ ಉಪದೇಶವನ್ನು ಇಲ್ಲಿ ಸ್ಮರಿಸಿಕೊಳ್ಳೋಣ. ದಿವಂಗತ ನೆಹರೂ ಅವರು ಅಂದು ರಾಷ್ಟ್ರವನ್ನುದ್ದೇಶಿಸಿ ಮಾತನಾಡುತ್ತ ಈ ರೀತಿ ಅಭಿಪ್ರಾಯ ಪಟ್ಟರು.

ಶಾಂತಿಯುತವಾದ ಮಾತುಕತೆಗಳ ಮೂಲಕ ವಿವಾದವನ್ನು ಗೌರವಯುತ ರೀತಿಯಲ್ಲಿ ಬಗೆಹರಿಸಿಕೊಳ್ಳಲು, ಸಾಧ್ಯವಿದ್ದ ಎಲ್ಲ ಮಾರ್ಗಗಳನ್ನೂ ನಾವು ಹುಡುಕಿದ್ದೇವೆ. ವಿಶ್ವದಾದ್ಯಂತವೂ ನಾವು ಇದೇ ಕಾರ್ಯನೀತಿಯನ್ನು ಅನುಸರಿಸಿದೆವು. ನಮ್ಮ ದೇಶಕ್ಕೆ ಇದೇ ಕಾರ್ಯನೀತಿಯನ್ನು ಅನ್ವಯಿಸಿದೆವು. ಇಂದಿನ ಯುಗದಲ್ಲಿ ಯುದ್ಧದಿಂದಾಗಬಹುದಾದ ಅನಾಹುತದ ಅರಿವೂ ನಮಗಿದೆ. ಯುದ್ಧವು ವಿಶ್ವವನ್ನು ಆವರಿಸದಂತೆ ಪ್ರತಿಬಂಧಿಸಲು ನಾವು ಶಕ್ತಿಮೀರಿ ಯತ್ನಿಸಿದ್ದೇವೆ. ನಮ್ಮ ದೇಶದ ಗಡಿಗಳಿಗೆ ಸಂಬಂಧಿಸಿದಂತೆ ನಮ್ಮ ಈ ಎಲ್ಲ ಯತ್ನಗಳೂ ವಿಫಲಗೊಂಡಿವೆ. ಶಾಂತಿ ಅಥವಾ ಶಾಂತಿಯುತ ವಿಧಾನಗಳಲ್ಲಿ ನಂಬುಗೆಯಿಲ್ಲದ ಪ್ರಬಲ ಶತ್ರು ನಿರಂತರವಾಗಿ ಗಡಿಯಲ್ಲಿ ನಮಗೆ ಬೆದರಿಕೆ ಹಾಕುತ್ತಿದ್ದಾನೆ. ಈ ಬೆದರಿಕೆಗಳನ್ನು ಕಾರ್ಯಗತಗೊಳಿಸಲೂ ಅವನು ಹಿಂದೆ ಮುಂದೆ ನೋಡಿಲ್ಲ.

ನಮ್ಮ ಜನರ ಸ್ವಾತಂತ್ರ್ಯ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಒದಗಿರುವ ಈ ಅಪಾಯದ ಸ್ವರೂಪವನ್ನು ಸಂಪೂರ್ಣವಾಗಿ ಅರಿತುಕೊಳ್ಳುವ ಸಮಯವೀಗ ಬಂದಿದೆ. ಅಸಮಾನ ತ್ಯಾಗ—ಬಲಿದಾನಗಳಿಂದ ನಿರಂತರ ಹೋರಾಟದಿಂದ ಗೆದ್ದುಕೊಂಡ ಈ ಸ್ವಾತಂತ್ರ್ಯವನ್ನು ಅಪಾಯಕ್ಕೆ ಗುರಿಮಾಡುವ ಶಕ್ತಿ ಯಾರಿಗೂ ಇಲ್ಲವೆಂದು ನನಗೆ ಗೊತ್ತಿದ್ದರೂ ನಾನು ಹೀಗೆ ಹೇಳುತ್ತಿದ್ದೇನೆ.

ನಮ್ಮ ದೇಶದ ಸ್ವಾತಂತ್ರ್ಯವನ್ನು ಸಮಗ್ರತೆಯನ್ನು ರಕ್ಷಿಸಿಕೊಳ್ಳಲು, ನಾವು ಕಂಕಣಬದ್ಧರಾಗಬೇಕು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಬಂದೊದಗಿರುವ ಈ ಭಾರೀ ವಿಪತ್ತನ್ನು ಎದುರಿಸಲು ಸಿದ್ಧರಾಗಬೇಕು. ಈ ಹೋರಾಟದಲ್ಲಿ ಕೊನೆಗೆ ಜಯ ನಮ್ಮದೇ ಎಂದು ನನಗೆ ಪೂರ್ಣ ವಿಶ್ವಾಸವಿದೆ. ನಮ್ಮ ಜನರ ಹಾಗೂ, ನಮ್ಮ ದೇಶದ ಸ್ವಾತಂತ್ರ್ಯಕ್ಕಿಂತ ಮಿಗಿಲಾದುದು ಬೇರೊಂದಿಲ್ಲ. ಈ ಸ್ವಾತಂತ್ರ್ಯ ರಕ್ಷಣೆಗಾಗಿ ಅಗತ್ಯವಾದರೆ ಈ ವಿಪತ್ತಿನ ಸಂದರ್ಭದಲ್ಲಿ ಎಲ್ಲವನ್ನೂ ತ್ಯಾಗಮಾಡಲು ಸಿದ್ಧರಾಗಬೇಕು.

---

### ಚಾರುಚಯನ

# ಸತ್ಯ ನ್ಯಾಯ ಧರ್ಮ ಬೋಧಿಸುವ ಗುರು ಬೇಕು

ಕಾಶ್ಮೀರದ ಮೇಲೆ ಭಾರತಕ್ಕಿರುವ ಸಾರ್ವಭೌಮಾಧಿಕಾರವನ್ನು ಪ್ರಶ್ನಿಸುವ ಅಧಿಕಾರ ಜಗತ್ತಿನಲ್ಲಿ ಯಾರಿಗೂ ಇಲ್ಲ.

ಆದರೂ ಪಾಕ್ ಘಟಸರ್ಪ ಬುಸುಗುಟ್ಟುತ್ತದೆ. ಭಾರತೀಯ ಯೋಧರು ಅದರ ವಿಷದ ಹಲ್ಲನ್ನು ಕಿತ್ತರೂ ಸಾಕಷ್ಟು ಹೊಡೆತ ತಿನ್ನಿಸಿದರೂ ಅದು ಬುಸುಗುಟ್ಟುವುದನ್ನು ನಿಲ್ಲಿಸಿಲ್ಲ. ಕಾಶ್ಮೀರ ತನ್ನದು ಅಥವಾ ತನಗೆ ಬೇಕು ಎಂದದು ಅಧಿಕಾರ ವಾಣಿಯಿಂದ ಬೊಬ್ಬಿಡುತ್ತಿದೆ. ತನಗೆ ಹಾಲುಣಿಸಿದವರನ್ನು ಅಂಗಲಾಚುತ್ತಿದೆ.

ಕಾಶ್ಮೀರ ಕಪ್ಪೆಯಲ್ಲ. ಅದು ಭಾರತದ ಒಂದು ರಾಜ್ಯ. ಅದರ ಮೇಲೆ ಪರರಿಗೆ ಎಳ್ಳಿನ ಏಳು ಭಾಗದಷ್ಟೂ ಅಧಿಕಾರವಿಲ್ಲ. ಕಾಶ್ಮೀರಿಗಳು ಸಾಕಷ್ಟು ವಿಚಾರ ನಡೆಸಿಯೇ ತಮ್ಮ ರಾಜ್ಯವನ್ನು ಹದಿನೆಂಟು ವರ್ಷಗಳಿಗೆ ಮೊದಲೇ ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಿದ್ದಾರೆ. ಒಕ್ಕೂಟ ಭಾರತದ ಒಂದು ರಾಜ್ಯದ ಪ್ರಜೆಗಳಾಗಿ ಸುಖದಿಂದ ಬಾಳುತ್ತಿದ್ದಾರೆ.

ಕಾಶ್ಮೀರದ ಮಂತ್ರಿ ಮಿರ್ ಕಾಸಿಮ್ ವಿಶ್ವಸಂಸ್ಥೆಯಲ್ಲಿ ಹೇಳಿದ್ದಾರೆ. ಪಾಕಿಸ್ತಾನವು ಭಾರತವನ್ನು ಸಮೃದ್ಧಿಯಲ್ಲಿಡಲು ಬಯಸುವುದಿಲ್ಲ. ಕಾಶ್ಮೀರದ ಮೇಲಿನ ಅಯ್ಯೂಬರ ಮೋಹ ಮಾತ್ರವಲ್ಲ, ಭಾರತದ ಪ್ರಗತಿಯ ಬಗ್ಗೆ ಹುಟ್ಟಿದ ಈರ್ಷ್ಯೆಯೂ ಅವರ ದ್ವೇಷಕ್ಕೆ ಕಾರಣ. ಇದರಿಂದಲೇ ಸ್ವಾತಂತ್ರ್ಯ ದೊರೆತ ಬಳಿಕ ಅದು ಮೂರು ಬಾರಿ ನಮ್ಮ ದೇಶದ ಮೇಲೆ ಆಕ್ರಮಣ ಮಾಡಿದೆ.

ಅವರು ಇನ್ನೂ ಹೇಳಿದರು: ಪಾಕಿಸ್ತಾನಕ್ಕೆ ಕಾಶ್ಮೀರಿಗಳನ್ನು ಸುಖದಲ್ಲಿಡುವ ಇಚ್ಛೆಯಿಲ್ಲ. ಆಜಾದ ಕಾಶ್ಮೀರದ ಜನತೆಯ ಮೇಲೆ ಅದರ ನಿರಂಕುಶಾಧಿಕಾರ, ಪ್ರಜೆಗಳ ದುರ್ಧರ ಪರಿಸ್ಥಿತಿಗಳಿಂದಲೇ ಇದು ಮನವರಿಕೆಯಾಗುತ್ತದೆ. ತಮ್ಮ ಒಣ ಪ್ರತಿಷ್ಠೆಗೆ, ಭಾರತದ ಪ್ರಗತಿ ತಡೆಯುವುದಕ್ಕೆ ಕಿರುಕುಳವೆಬ್ಬಿಸುವುದಕ್ಕೆ ಅವರಿಗೆ ಕಾಶ್ಮೀರ ಬೇಕು.

ಮಿರ್ ಕಾಸಿಮ್ ಇನ್ನೂ ಒಂದು ಸತ್ಯಾಂಶವನ್ನು ನುಡಿದರು: ನನ್ನ ದೇಶ ಪಾಕಿಸ್ತಾನಿಗಳನ್ನು ದ್ವೇಷಿಸುವುದಿಲ್ಲ. ನಮ್ಮ ಸರಕಾರ ಹೆರವರೊಡನೆ ಸ್ನೇಹದಿಂದಿರ ಬಯಸುತ್ತದೆ. ಪಾಕಿಸ್ತಾನದೊಡನೆ ನಮಗೆ ಸಖಾನುಭೂತಿಯಿದೆ. ವಿವಾದಗಳೇನೇ ಇದ್ದರೂ ಅವನ್ನು ಶಾಂತಿಯಿಂದ ಮೇಜಿನ ಸುತ್ತ ಮಾತುಕತೆಗಳ ಮೂಲಕ ಪರಿಹರಿಸಲು ಬಯಸುತ್ತದೆ. ಕಾಲುವೆ ನೀರಿನ ಪ್ರಶ್ನೆಯನ್ನು ಬಗೆಹರಿಸಿದ್ದು, ಮತ್ತು ಕಚ್ ರಣ ತಂಟೆಯಲ್ಲಿ ಕದನವಿರಾಮಕ್ಕೆ ಒಪ್ಪಿದುದು ಇದಕ್ಕೆ ಜ್ವಲಂತ ಸಾಕ್ಷಿ.

ಬುದ್ಧಿಯಿದ್ದವರಿಗೆ ಇದನ್ನು ಅರ್ಥ ಮಾಡಿಕೊಳ್ಳುವ ಶಕ್ತಿಯಿದೆ. ಆದರೆ....

ಗರ ಹೊಡೆದವರ ನುಡಿಸಲು ಬಹುದು; ಸಿರಿಗರ ಹೊಡೆದವರ ನುಡಿಸಲು ಬಾರದಯ್ಯ...

ಸಿರಿಗರ ಹೊಡೆದವರಂತೆ ನಟಿಸುವರನೆಂತು ನುಡಿಸಲು ಬಹುದು?

ಆದುದರಿಂದಲೇ ಪಾಕಿಸ್ತಾನ ಸರ್ವಾಧಿಕಾರಿಗಳ ಕುರುಡು ರಾಜಕೀಯದ ಮುಂದೆ ಉಳಿದುದೆಲ್ಲವೂ ಮಿಥ್ಯ—ಅವರು ಹಿಡಿದುದೇ ಸತ್ಯ.

ಕುರುಡ ಹಿಡಿದುದೇ ಬಡಿಗೆ—ಹರಿದೆಲ್ಲಾ ಕಡೆಗೆ.

ಸಮರ ವಿರಾಮವನ್ನೊಪ್ಪಿದ ಪಾಕ್ ಅದನ್ನು ಪಾಲಿಸಿದೆಯೆ? ಬರಿಯ ಒಂದು ವಾರದಲ್ಲೇ ೫೦ ಬಾರಿ ಉಲ್ಲಂಘಿಸಿದೆ. ನಾಗರಿಕರನ್ನು ಸೆರೆಹಿಡಿದಿದೆ, ಕೊಂದಿದೆ, ಗ್ರಾಮಗಳನ್ನು ಸುಟ್ಟುಹಾಕಿದೆ—ಸೈನಿಕ ಘರ್ಷಣೆ ನಡೆಸುತ್ತಿದೆ

ಕಳೆದ ಕೊಂಡ ನೆಲೆಗಳನ್ನು ಮರಳಿ ಪಡೆಯುವ ಹವಣಿಕೆ—ವ್ಯರ್ಥ ಪ್ರಯತ್ನ.

ಸಂಯುಕ್ತರಾಷ್ಟ್ರಸಂಘದ ನಿರೀಕ್ಷಕರ ವರದಿಯೇ ಪಾಕ್ ಸಂಧಾನ ಉಲ್ಲಂಘನೆಯನ್ನು ಸಾರುತ್ತದೆ. ನಮ್ಮ ಸೈನಿಕರೂ ಸುಮ್ಮನುಳಿದಿಲ್ಲ. ಶಠಸ್ಯ ಪ್ರತಿ ಶಾಠ್ಯಂ

ಪಾಕಿಸ್ತಾನ ತಾನು ವಶಪಡಿಸಿಕೊಂಡಿರುವ ಪ್ರದೇಶದಿಂದ ಸೇನೆ ವಾಪಾಸು ಕರೆಯುವುದಿಲ್ಲ—ಭುಟ್ಟೋ ಗರ್ಜನೆ.

ಚಾಂಬ್ ಪ್ರದೇಶದ ಹಳ್ಳದಲ್ಲಿ ಅವರು ಅಡಗಿದ್ದಾರೆ, ಭಾರತೀಯ ಸಂರಕ್ಷಣಾ ಪಡೆಗಳು ಅವರನ್ನು ಸುತ್ತುವರಿದಿವೆ.

ಆಗಸ್ಟ್ ೫ರಂದಿದ್ದ ಪ್ರದೇಶಕ್ಕೆ ಸೇನೆಯನ್ನು ಹಿಂತೆಗೆಯಬೇಕು—ಸೇನೆ ಅಂದರೆ ಏನು?

ಪಾಕ್ ಸೇನೆಯು ಯುನಿಫಾರ್ಮ್ ಇಲ್ಲದೆಯೂ ಭಾರತದೊಳಗೆ ನುಗ್ಗಿದೆ. ಸಶಸ್ತ್ರ ನಾಗರಿಕರನ್ನೂ ಅಟ್ಟಿದೆ. ಯುನಿಫಾರ್ಮ್ ಧರಿಸಿದವರಂತೂ ಇದ್ದೇ ಇದ್ದಾರೆ. ಇವರೆಲ್ಲರನ್ನೂ ಪಾಕಿಸ್ತಾನ ಹಿಂದೆ ಕರೆದುಕೊಳ್ಳಬೇಕು. ಭುಟ್ಟೋ ಇದಕ್ಕೆ ತಯಾರಿಲ್ಲ. ಆದುದರಿಂದಲೇ ಅವರು ಸೇನಾ ವಾಪಸಾತಿಗೆ ಸಿದ್ಧರಿಲ್ಲ.

ಮತ್ತೆ ಭಾರತವೇನು ಮಾಡೀತು? ತನ್ನ ಸೇನೆಯನ್ನು ಹಿಂದೆಗೆದು, ಮತ್ತಷ್ಟು ಆಕ್ರಮಣಕಾರರಿಗೆ ಅವಕಾಶ ಮಾಡಿಕೊಡುವುದೆ?

ಅದು ಸಾಧ್ಯವಿಲ್ಲ. ಶಾಸ್ತ್ರೀ ಪ್ರತಿನುಡಿದಿದ್ದಾರೆ: ಭಾರತವು ಸಮರ ವಿರಾಮವನ್ನೂ ಎಂದೋ ಸ್ವೀಕರಿಸಿದೆ. ಪಾಕಿಸ್ತಾನವೇ ಹಿಂದೆಮುಂದೆ ನೋಡಿದುದು. ಆದುದರಿಂದ ಭಾರತೀಯ ಪ್ರದೇಶದಲ್ಲಿರುವ ತನ್ನ ಅಕ್ರಮ—ಸಕ್ರಮ, ಸಶಸ್ತ್ರ—ನಿಶ್ಶಸ್ತ್ರ "ಸೇನೆ"ಯನ್ನೂ ಅದು ಮೊದಲು ಹಿಂತೆಗೆಯಲಿ. ಭಾರತ ಅನಂತರ.

ಇದು ೧೯೪೮ರಲ್ಲಿ ಪಾಕಿಸ್ತಾನವೇ ನಮಗೆ ಕಲಿಸಿದ ಪಾಠ. ಅಂದು ಮಾಡಿದ ಆಕ್ರಮಣವನ್ನು ಕಾಶ್ಮೀರದಿಂದ ಪಾಕಿಸ್ತಾನ ಇಂದಿಗೂ ತೆರವು ಮಾಡಿಲ್ಲ. ಭಾರತೀಯ ಸೇನೆಗಳು ಮಾತ್ರ ಹಿಂದೆ ಬಂದುವು—ಯುನೋ ಸಲಹೆಯಂತೆ!

ಆಕ್ರಮಣ ಮಾಡಿದವರು, ಯುದ್ಧ ಘೋಷಿಸಿದವರು ಸಮರ ವಿರಾಮದ ಗೊತ್ತುವಳಿಯನ್ನು ಮೊದಲು ಪಾಲಿಸಬೇಕು. ಸರ್ಪವನ್ನು ಮೊದಲು ಹುತ್ತದಲ್ಲಿಡಬೇಕು.

ಈ ಶಕ್ತಿ ವಿಶ್ವಸಂಸ್ಥೆಯಲ್ಲಿದೆಯೆ? ಇಲ್ಲವಾದರೆ, ಅದರ ಬೆಲೆಯೇನು?

ಪಾಕಿಸ್ತಾನ ವಿಶ್ವಸಂಸ್ಥೆಯಲ್ಲಿ ವಿಶ್ವಾಸವಿಲ್ಲ. ೧೯೪೮ರಲ್ಲಿಯೇ ಇದು ವ್ಯಕ್ತವಾಗಿದೆ. ತಾನು ಕಾಶ್ಮೀರದ ಮೇಲೆ ಮಾಡಿದ ಆಕ್ರಮಣವನ್ನದು ತೆರವು ಮಾಡಲಿಲ್ಲ. ವರ್ಣವಾದಿ ದಕ್ಷಿಣ ಆಫ್ರಿಕೆಯೊಡನೆ ಇನ್ನೂ ವ್ಯಾಪಾರ ಸಂಬಂಧವನ್ನು ಬೆಳೆಸಿಕೊಂಡು ಬಂದಿದೆ, ವಿಶ್ವಸಂಸ್ಥೆಯನ್ನು ತ್ಯಜಿಸುವ ಬೆದರಿಕೆ ಮೇಲಿಂದ ಮೇಲೆ ಹಾಕುತ್ತಿದೆ.... ಇನ್ನೇನು ಬೇಕು?

ಹೋರಾಟದ ವೇಳೆ ವಿಶ್ವಸಂಸ್ಥೆಯ ಸದಸ್ಯರಿಂದ ಮಾತ್ರವಲ್ಲ ಸದಸ್ಯರಲ್ಲದವರಿಂದಲೂ ಸೈನಿಕ ನೆರವು ಕೇಳಿದ ಧೀರ ರಾಷ್ಟ್ರ ಪಾಕ್. ತಮ್ಮ ಪಡೆಗೆ ಯಾವ ನಷ್ಟವೂ ಆಗಲಿಲ್ಲ, ಕಾಫಿರರನ್ನು ನೆಲಸಮ ಮಾಡಿದ್ದೇವೆಂದು ಆರ್ಭಟಿಸುವ ಪಾಕ್ ಬಾದಷಹರ ಒಣ ಬಡಾಯಿ ಈಗ ಬಯಲಾಗಿದೆ.

ಜಾತೀಯ ಸಂಬಂಧಕ್ಕೆ ಕಟ್ಟುಬಿದ್ದ ಟರ್ಕಿ ಅನ್ಯಾಯವಾಗಿ ಕರಾಚಿಗೆ ಸೆಂಟೋ ಸಹಾಯವಾಗಿ ಬಂದ ಶಸ್ತ್ರಾಸ್ತ್ರಗಳನ್ನು ಕಳಿಸುವ ಸಂಚು ಹೂಡಿತು.

ಸುಯೇಜ ಕಾಲುವೆಯಲ್ಲಿ ಮಾತ್ರ ಪಾಪ, ಅದು ಮುಂದುವರಿಯದಾಯಿತು. ಹಡಗದ ಕಪ್ತಾನ ಮೋಸದ ಹೇಳಿಕೆಯನ್ನೇ ಇತ್ತ—ನ್ಯಾಯದ ಮುಂದೆ ಅನ್ಯಾಯವು ತಲೆತಗ್ಗಿಸಲೇ ಬೇಕು. ನಸ್ಸೇರ ಹೇಳಿಕೇಳಿ ಭಾರತದ ಪಕ್ಷಪಾತಿ. ಯಾಕೆ?

ಚಿಲಿ ದೇಶದ ಮುಂದೆ ಅಯ್ಯೂಬಖಾನರು ಶಸ್ತ್ರಾಸ್ತ್ರಗಳಿಗಾಗಿ ಕೈ ಚಾಚಿದರು. ಆದರೆ, ಪಡೆದ ಉತ್ತರ: ಭಾರತದೊಡನೆ ಚಿಲಿಯ ಸಂಬಂಧ ಮೈತ್ರಿಯುತವಾಗಿದೆ. ಅದನ್ನು ಕೆಡಿಸಲು ನಾವು ಬಯಸುವುದಿಲ್ಲ.

ಇದೀಗ ಪಾಕ್ ವರ್ತನೆಯೊಂದು ಸತ್ಯವನ್ನು ಬಿಂಬಿಸುತ್ತದೆ. ಸಮರ ವಿರಾಮವನು ಮನ್ನಿಸಿಯೂ ಅದು ಉಲ್ಲಂಘನೆ ಮಾಡುತ್ತಿದೆ. ತನ್ನ ಸೇನೆಯನ್ನು ಆಗಸ್ಟ ೫ರಂದಿದ್ದ ನೆಲೆಗಳಿಗೆ ಮರಳಿ ಕರೆಯಲು ನಿರಾಕರಿಸುತ್ತಿದೆ. ವಿದೇಶಗಳಿಂದ ಅನ್ಯಾಯ ಕ್ರಮದಿಂದಲಾದರೂ ಸೈನಿಕ ನೆರವು ಪಡೆಯುವ ತಂತ್ರ ಹೂಡಿದೆ..

ಆದರೆ, ಸಮರ ವಿರಾಮವು ಪಾಕ್ ನಾಯಕರಿಗೆ ಬೇಕಾಗಿಲ್ಲ. ಅವರು ಬಯಸುತ್ತಾರೆ ಯುದ್ಧ ...ಯುದ್ಧ.. We want war, You are at war ಎಂದು ಮುಂತಾಗಿ ಉಗ್ಗಡಿಸಿದ ಧೀರರಲ್ಲವೇ ಅವರು?

ಅವರೂ ವಿರಾಮದ ಸೋಗ! ಭಾರಿ ಪ್ರಮಾಣದಲ್ಲಿ ಕದನ ಮಾಡುವ ಹೆಗ್ಗುರಿ ಪಾಕ್ ನಾಯಕರದ್ದು. ವಿಶ್ವಸಂಸ್ಥೆಯೇನು ಮಾಡೀತು?

ಭಾರತದ ಮೇಲೆ ಒಂದಲ್ಲ ಒಂದು ರೀತಿಯ ಒತ್ತಾಯ ತರುವ ಮಹತ್ಕಾರ್ಯಕ್ಕೆ ಪಾಕ್ ಮಿತ್ರರದ್ದು. ಆದರೆ, ಇದುವರೆಗಿನ ಅನುಭವದಿಂದ ಭಾರತ ಪಾಠ ಕಲಿತಿದೆ—ಅದಿಂದು ತಲೆ ತಗ್ಗಿಸುವುದು ಸತ್ಯದ ಮುಂದೆ, ನ್ಯಾಯದ ಮುಂದೆ, ಧರ್ಮದ ಮುಂದೆ.

ಕಾಶ್ಮೀರವು ಸರ್ವಪ್ರಕಾರವಾಗಿಯೂ ಭಾರತ ಒಕ್ಕೂಟದ ಒಂದು ರಾಜ್ಯವಾಗಿದೆ—ಇದು ಸತ್ಯ.

ಅಕ್ರಮವಾಗಿ ತಾನು ಆಕ್ರಮಿಸಿರುವ ಕಾಶ್ಮೀರದ ಭಾಗದಿಂದ ಪಾಕಿಸ್ತಾನ ಹಿಂದೆಸರಿದು, "ಆಜಾದ್ ಕಾಶ್ಮೀರಿ"ಗಳ ಜೀವ ಹಿಂಡುವುದನ್ನು ನಿಲ್ಲಿಸಬೇಕು — ಇದು ನ್ಯಾಯ.

ನೆರೆಹೊರೆಯ ದೇಶದೊಡನೆ ಸ್ನೇಹದಿಂದ, ಗೌರವದಿಂದ ಬಾಳುವುದನ್ನು ಪಾಕಿಸ್ತಾನ ಕಲಿತುಕೊಳ್ಳಬೇಕು — ಇದು ಧರ್ಮ.

ಸತ್ಯ ನ್ಯಾಯ ಸತ್ವವೆಂದು ಸಾಧಿಸಿ ಅಸತ್ಯವನ್ನೇ ನ್ಯಾಯವೆಂದು ನಂಬಿ ಕೆಟ್ಟ ಹೇಡಿಗಳು ಪಾಕ್ ನಾಯಕರು.

ಆಕ್ರಮಣಕಾರರಾದರೂ ಆಕ್ರಮಿತರೆಂದು ಕಿರುಬೊಬ್ಬೆ ಹಾಕುವ ಅನ್ಯಾಯಿಗಳು ಪಾಕ್ ನಾಯಕರು.

ಸ್ನೇಹ—ಶಾಂತಿ—ಗೌರವಗಳ ಹೆಸರಿನಲ್ಲಿ ಹತ್ತಿರ ಬಂದವರ ರಕ್ತ ಹೀರುವ ಜಿಗಳೆಗಳು ಪಾಕ್ ನಾಯಕರು.

—ಈ ನಾಯಕರಿಗೆ ಸದ್ಬುದ್ಧಿ ಬರುವಂತೆ ಮಾಡುವ ತಾಕತ್ತು ಯಾರಿಗಿದೆ?

ವಿಶ್ವಸಂಸ್ಥೆಗಿದೆಯೆ?

ಖಂಡಿತವಾಗ್ಯೂ ಇಲ್ಲ.

ಹಾಗಾದರೆ, ಮುಂದೇನು?... ಪಾಕಿನ ಕಿವಿ ಊದುವವರೇ ಕಿವಿ ಹಿಂಡಿಯಾರೆ?

— ರಾಶಿ.


ಟೆಲಿಗ್ರಾಂ. 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 342

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು–೧

READ & ADVERTISE IN NAVAYUGA WEEKLY

ನಟಿಕೇಶ'ರ ಹೃದಯಸ್ಪರ್ಶಿ ನವೀನ ಕಾದಂಬರಿಗಳು

**ಹಸುರು ಹಂಸ**

ಬೆಲೆ: ರೂ. ಎರಡು.

**ಋಣ ಯಾತ್ರೆ**

ಬೆಲೆ ರೂ 1-50 ನ. ಪೈಸೆ

**ಭಾವಾರ್ಚನೆ**

ಬೆಲೆ ರೂ 2–00

ಪ್ರತಿಗಳು ಸಿಗುವ ಸ್ಥಳ: ನವಯುಗ ಪ್ರೆಸ್, ಉಡುಪಿ.

## ಫ್ಯಾಷನ್ ಹಿಂದೆಯೂ ಇತ್ತು

(ಐದನೇ ಪುಟದಿಂದ)

ಸ್ತ್ರೀಯರ ಕಣ್ಣು ಹುಬ್ಬಿನ ರೀತಿ, ಕೇಶ ರಚನೆಯ ಅಭ್ಯಾಸ, ತುರುಬು ಕಟ್ಟುವ ಬಗೆ ಭಾವನಾಮಯವಾಗಿಯೂ ಇರುತಿತ್ತು, ಭವ್ಯವಾಗಿಯೂ ಇರುತ್ತಿತ್ತು. ಪುರುಷರ ದಾಡಿ, ಮೀಸೆ, ಕೇಶ ರಚನಾ ವೈಖರಿ ಅನುಕರಣೀಯ ರೂಪ ತಾಳಿರುತ್ತಿತ್ತು. ಅಂದಿನ ಸ್ತ್ರೀ ಪುರುಷರ ಅಂಗ ಸೌಂದರ್ಯದಂತೆಯೇ ಕೇಶ ಸೌಂದರ್ಯಕ್ಕೂ ಇತ್ತಿದ್ದ ಮಹತ್ವವನ್ನು ಗಮನಿಸಿದರೆ ಅವರ ಕಲಾಭಿರುಚಿ, ಪಾಂಡಿತ್ಯ ಅರಿವಾಗುವುದು. ಸ್ತ್ರೀ, ಪುರುಷರ ಕೇಶ ಸೌಂದರ್ಯ ವೈಖರಿ, ರಚನಾ ವೈಖರಿಯ ವಿವರಣೆ ಶೈಲಿಗಳನ್ನು ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಚಿತ್ರಗಳಲ್ಲಿ ಕಾಣಬಹುದು. ದೇವಾಲಯಗಳ ವಾಸ್ತು ಶಿಲ್ಪ, ಗುಹಾಂತರ್ದೇವಾಲಯಗಳ ವರ್ಣ ಚಿತ್ರಗಳು ಇವಕ್ಕೆ ಉದಾಹರಣೆಯಾಗಿವೆ.

ಅಬ ಎಲಿಫೆಂಟಾ, ಕೋಣಾರ್ಕ, ನಾಗಾರ್ಜುನಕೊಂಡ, ಎಲ್ಲೋರಾ ಅಜಂತ, ಬೇಲೂರು, ಬಾದಾಮಿ, ಹಳೆಬೀಡು, ಕಾಂಚಿ, ಐಹೊಳೆ, ಪಟ್ಟದಕಲ್ಲು, ಮಹಬಲಿಪುರ ಮೊದಲಾದ ವಿಶ್ವ ವಿಖ್ಯಾತ ಸ್ಥಳಗಳು ಪ್ರಾಚೀನ ಭಾರತದ ಸ್ತ್ರೀ, ಪುರುಷರ ಅಲಂಕಾರಗಳ ಅಭಿರುಚಿ ಶೈಲಿ, ಬಳಸಿದ ರೀತಿ, ಸೂಕ್ಷ್ಮತೆ, ಭವ್ಯತೆಗಳನ್ನು ಎತ್ತಿ ಸಾರುತ್ತವೆ. ಅವರ ಸಂಸ್ಕೃತಿ, ಸಂಸ್ಕಾರ, ಕಲೆಯನ್ನು ಪ್ರದರ್ಶಿಸುವ ಉತ್ತಮ ಸಾಧನಗಳಾಗಿವೆ, ಉದಾಹರಣೆಗಳಾಗಿವೆ.

ಉಚಿತ ಪ್ರಮಾಣದ ಆಕರ್ಷಣೀಯ ರಮಣೀಯತೆ ಅಲಂಕಾರ ಸಾಮಗ್ರಿಗಳ ಬಳಕೆಯ ರೀತಿಯೆಂಬುದು ಗಣನೀಯ.

ಯೌವನ ವ್ಯಕ್ತಿಯ ಜೀವನ ಎನ್ನುವ ಕಾದಂಬರಿಯಲ್ಲಿ ಒಂದು ಪ್ರಮುಖ ಅಧ್ಯಾಯ. ಆ ಅವಸ್ಥೆಯಲ್ಲಿ ಸ್ತ್ರೀ ಪುರುಷರಿಗೆ ವಯೋಧರ್ಮಕ್ಕೆ ಅನುಗುಣವಾಗಿ ಮೂಡಿ ಬರುವ ಸಹಜ ಅಂಗ ವಿಪುಲತೆ ಮತ್ತು ಸೌಷ್ಠವ ಕಾಂತಿಯು ತವಾಗಿರುತ್ತದೆ. ಈ ಕಾಲದಲ್ಲಿ ಅವರ ಮೈ ಮನಗಳು ಹತ್ತು ಕನಸುಗಳನ್ನು ಕಾಣುವುದು ಸಹಜ. ಅಲಂಕಾರ ಪ್ರಿಯತೆಯೂ ಒಂದು. ಸಹಜ ಕ್ರಿಯೆ, ಕೇಶವಿನ್ಯಾಸ, ವಸ್ತ್ರ ನಿಬಂಧನ, ದಂತ ಪರಿಕರ್ಮ, ಪರಿಷ್ಕಾರಣ, ದರ್ಪಣೇಕ್ಷಣ, ಪುಷ್ಪಚರ್ಯ, ಹಾರ ಧಾರಣ, ಜಲಕ್ರೀಡೆ, ದ್ಯೂತ, ಅಕಾರಣ ಲಜ್ಜೆ, ಅನುಭವ ಮತ್ತು ಶೃಂಗಾರ ಚೇಷ್ಟೆಗಳು ಸಹಜ ಕ್ರಿಯೆಗಳು. ವ್ಯಕ್ತಿಯ ಮೈಮುಖಗಳು ಯಾವುದೋ ಲೋಕದಲ್ಲಿ ವಿಹರಿಸುತ್ತಿರುತ್ತವೆ ಎಂಬುದು ಶಾಸ್ತ್ರಕಾರರೇ ಒಪ್ಪಿ ನಿರೂಪಿಸಿರುವ ಸಂಗತಿ.

ಬಾಹ್ಯ ಅಲಂಕಾರಗಳ ನಾನಾ ಬಗೆಯ ವರ್ಣನೆಯನ್ನು ಸಂಸ್ಕೃತ ಸಾಹಿತ್ಯ ನಾನಾ ಭಾವಗಳಿಂದ ರೂಪಿಸಿವೆ. ಪ್ರಾಚೀನ ಶಿಲಾ ಮತ್ತು ಲೋಹಗಳ ಮೂರ್ತಿಗಳು, ಚಿತ್ರಗಳು ಮತ್ತು ಕಾವ್ಯಗಳು ಅಲಂಕಾರದ ವಿಶಿಷ್ಟತೆ, ಶ್ರೇಷ್ಠತೆ, ಆಗತ್ಯವನ್ನು ಬಹು ವಿಧವಾಗಿ ವಿವರಿಸಿವೆ.

ಅಲಂಕಾರಗಳ ಅರ್ಥ ಉದ್ದೇಶವನ್ನು ಅರಿಯುವುದು ಅವಶ್ಯಕ. ಕಾಲ, ಸನ್ನಿವೇಶ, ಸೌಲಭ್ಯತೆಗಳಗನುಗುಣವಾಗಿ ಅಲಂಕಾರದ ರೀತಿ ಬದಲಾಗುವುದು ಸಹಜ; ಅನಿವಾರ್ಯ. ಉಡುಗೆ, ತೊಡಿಗೆ, ಆಭರಣಗಳನ್ನು ಬಳಸುವ ರೀತಿಯೇ "ಫ್ಯಾಷನ್". ಅದು ಮಿತವಾಗಿರಬೇಕು, ಹಿತವಾಗಿರುವ ಹಾಗೂ ಇರಬೇಕು. ಇಂದಿನ ನೂರಾರು ಫ್ಯಾಷನ್‌ಗಳು ನಮ್ಮ ಪೂರ್ವದ ಅನಾಗರೀಕ ಅಸಂಸ್ಕೃತ ಜನರ ರೀತಿನೀತಿ ನಡವಳಿಕೆಗಳನ್ನು ಸ್ಮರಣೆಗೆ ತರುತ್ತವೆ.

ಫ್ಯಾಷನ್ ಸ್ತ್ರೀ ಪುರುಷರ ಸಂಸ್ಕೃತಿಯ–ಸಂಸ್ಕಾರದ ಪ್ರತಿಬಿಂಬವಾಗಬೇಕು. ನಾಗರೀಕತೆ ನೂತನತೆಯ ಹೆಸರಿನ ಮರೆಯಲ್ಲಿ ವಿರೋಧಾಭಾಸಕ್ಕೆ ಎಡೆಮಾಡಿ ಕೊಡಬಾರದು.

---


ಇದೀಗ ಪ್ರಕಟವಾಗಿದೆ–

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

**ಭಾರತದ ವೀರಾಂಗನೆಯರು**

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

……… "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುವರೆಗೆ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚುಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ… ……… ……… ."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಣಿನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಎಂ.ಆರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.


## ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ

(ಆರನೇ ಪುಟದಿಂದ)

ವರ್ಷಗಳ ಕಠಿಣ ಸಜೆಯನ್ನು ಅನುಭವಿಸಬೇಕಾಯಿತು.

ಎರಡು ವರುಷಗಳ ನಂತರ ಬಂಧವಿಮುಕ್ತರಾದ ಗಾಂಧೀಜಿಯವರು ೧೯೩೦ರ ತನಕ ಖಾದಿ ಪ್ರಚಾರ ಮತ್ತು ಹರಿಜನೋದ್ಧಾರ ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ಭಾಗಿಯಾದರು. ೧೯೩೦ರಲ್ಲಿ ಇವರ ನೇತೃತ್ವದಲ್ಲಿ ಉಪ್ಪಿನ ಸತ್ಯಾಗ್ರಹವು ಪ್ರಾರಂಭಿಸಲ್ಪಟ್ಟಿತು. ಸಬರ್ಮತಿ ಆಶ್ರಮದಿಂದ ದಾಂಡೀಲಿ ತನಕ ಗಾಂಧೀಜೀ ಮತ್ತು ಅನುಯಾಯಿಗಳು ಹೋಗಿ ಸ್ವತಃ ಉಪ್ಪನ್ನು ತಯಾರಿಸಿದರು. ಇದು ಒಂದು ಐತಿಹಾಸಿಕ ಘಟನೆಯಾಗಿದೆ! ದೇಶದ ಪ್ರತಿಯೊಂದು ಮೂಲೆಯಲ್ಲೂ ಉಪ್ಪನ್ನು ತಯಾರಿಸ ತೊಡಗಿದರು. ಕೊನೆಗೆ ೧೯೩೧ರ ಗಾಂಧೀ ಇರ್ವಿನ್ ಒಪ್ಪಂದದೊಂದಿಗೆ ಸತ್ಯಾಗ್ರಹವು ಕೊನೆಗಾಣಿತು.

೧೯೩೫ರಲ್ಲಿ ಭಾರತದಲ್ಲಿ ಗವರ್ನ್‌ಮೆಂಟ್ ಒಫ್ ಇಂಡಿಯಾ ಆಕ್ಟ್ ಜಾರಿಗೆ ಬಂದಿತು. ಈ ಸಂದರ್ಭದಲ್ಲಿ ಗಾಂಧೀಜೀಯವರನ್ನು ಬಂಧಿಸಿದುದರಿಂದ ಅಶಾಂತಿಯು ಎಲ್ಲೆಲ್ಲೂ ಹರಡಿತು. ೧೯೩೯ರಲ್ಲಿ ೨ನೇ ಮಹಾಯುದ್ಧ ಪ್ರಾರಂಭವಾಯಿತು. ಭಾರತೀಯರು ಬ್ರಿಟನರಿಗೆ ಸಹಾಯವೆಸಗಲು ಮುಂಬರಲಿಲ್ಲ.

೧೯೪೨ರಲ್ಲಿ 'ಇಂಗ್ಲಿಷರೆ ಭಾರತದಿಂದ ತೊಲಗಿರಿ' ಎಂಬ ಮುದ್ರಾಘೋಷದೊಂದಿಗೆ ಕ್ವಿಟ್ ಇಂಡಿಯಾ ಚಳವಳಿವು ಪ್ರಾರಂಭವಾಯಿತು. ಸ್ವಲ್ಪ ದಿನಗಳ ಮೊದಲೆ ಬಂಧಿತರಾಗಿದ್ದರು ಗಾಂಧೀಜೀ ಮತ್ತು ನೆಹರೂರವರು. ಇದರಿಂದ ಸಿಟ್ಟಿನಿಂದ ರೊಚ್ಚಿಗೆದ್ದ ಭಾರತೀಯರು ಎಲ್ಲೆಲ್ಲೂ ಚಳವಳಿ ಹೂಡಿದರು.

೧೯೪೩ರಲ್ಲಿ ಲೋರ್ಡ್ ವೇವೆಲ್ ಪ್ರಭುವು ಭಾರತಕ್ಕೆ ಬಂದನು. ಅವನ ಯಾವ ಕಾರ್ಯಗಳೂ ಭಾರತೀಯರಿಗೆ ರುಚಿಸಲಿಲ್ಲ. ಕೊನೆಗೆ ಕೆಬಿನೆಟ್ ಮಿಶನ ಆಗಮನವಾಯಿತು. ಬಳಿಕ ದೇಶ ಸ್ವಾಧೀನವಾಯಿತು! ೧೯೪೭ನೇ ಇಸ್ವಿ ಆಗೋಸ್ತು ತಿಂಗಳ ತಾರೀಕು ೧೫ ಭಾರತದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಬೇಕಾದ ಸುದಿನ. ದೇಶದ ಎಲ್ಲಾ ಭಾಗಗಳಲ್ಲಿ ಸಂತೋಷದ ಉತ್ಸವಗಳು ಜರುಗಿದುವು.

ಹೀಗಿರಲು ೧೯೪೮ ಜನವರಿ ೩೦ರಂದು ಸಂಜೆ ಗಂಟೆ ಐದಕ್ಕೆ ಗಾಂಧೀಜೀಯವರು ಪ್ರಾರ್ಥನಾ ಸಭೆಗೆ ಹೋಗುತ್ತಿದ್ದಾಗ ಮಹಾರಾಷ್ಟ್ರ ಯುವಕನಾದ ನಾಥುರಾಮ್ ವಿನಾಯಕ ಗೋಡ್ಸೆಯು ಪಿಸ್ತೂಲಿನಿಂದ ಅವರ ಆತ್ಮ ಬಲಿದಾನ ತೆಗೆದುಕೊಂಡನು. ಅವರ ಆತ್ಮ ಈ ರೀತಿಯಲ್ಲಿ ಅಂತ್ಯವಾಗುತ್ತಿತ್ತು ಅಂತ ಯಾರು ತಾನೆ ಬಲ್ಲವರು? ಸಮಸ್ತ ದೇಶವೇ ಶೋಕಸಾಗರದಲ್ಲಿ ಮುಳುಗಿ ಹೋಯಿತು. ವಿದೇಶಗಳಿಂದ ಅನೇಕ ಸಂವೇದನ ಸಂದೇಶಗಳು ಬಂದವು. ದೆಹಲಿಯಲ್ಲಿನ ರಾಜಘಾಟದಲ್ಲಿ ಅವರ ಅಂತಿಮ ಸಂಸ್ಕಾರವನ್ನು ಮಾಡಲಾಯಿತು. ಹದಿಮೂರು ದಿನಗಳ ತನಕ ಅವರ ಚಿತಾಭಸ್ಮವನ್ನು ತ್ರಿವೇಣಿ ಮತ್ತು ಅನ್ಯ ಪ್ರಾಮುಖ್ಯ ನದಿಗಳಲ್ಲಿ ಹರಿಸಲಾಯಿತು. ಇಂತು ಗಾಂಧಿ ಸ್ಮಾರಕ ಕೋಶ ತೆರೆದು ಹೋಯಿತು!

"ದೇಶದ ಎಲ್ಲ ಜನತೆ ಗಾಂಧೀಜೀಯವರ ಕಾಲ ಹಜ್ಜೆಗಳ ಗುರುತುಗಳ ಮೇಲೆ ನಡೆಯಲು ಪ್ರಾರಂಭಿಸಿದರೆ ಪರಮೇಶ್ವರನು ಕೂಡಾ ಪೃಥ್ವಿಯ ಮೇಲೆ ಚಲಿಸಲು ಪ್ರಾರಂಭಿಸ ತೊಡಗುವನು" ಎಂದು ಶ್ರೀಮತಿ ಎನ್ನಿಬೆಸೆಂಟರು ಗಾಂಧೀಜೀಯವರ ಕುರಿತು ಅಭಿಪ್ರಾಯಪಟ್ಟಿದ್ದಾರೆ. ಅವರ ಕನಸಿನ ರಾಮರಾಜ್ಯ ನೆನಸಾಗಲಿ—ಸ್ವಾತಂತ್ರ್ಯ— ಸಾರ್ವಭೌಮತೆ ಮತ್ತು ಸಮಗ್ರತೆಗಳನ್ನು ಭಾರತೀಯ ಜನತೆ ಉಳಿಸಿಕೊಳ್ಳಲು ಹೋರಾಡಲಿ.

---


ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

**ಕರ್ನಾಟಕ ಒಪ್ಟಿಕಲ್ ಕಂ.,**

**[London Qualified Optometrist]**

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು

● ಶಾಸ್ತ್ರೀಯ ನೇತ್ರಪರೀಕ್ಷೆ—ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವವು

# ಬಾಡಿಗೆದಾರನದೇ ಮನೆಯಾದೀತೆ?

(ನಾಲ್ಕನೇ ಪುಟದಿಂದ)

"ವಾಸ್ತವಿಕ ಸುಖಕ್ಕಿಂತಲೂ ಕಾಲ್ಪನಿಕ ಸುಖವೇ ಪ್ರಿಯಕರ...."

"ಹೌದು ಅಲ್ಲಿ, ಕಲ್ಲು ಮುಳ್ಳು ಒಂದೂ ಕಾಣೋದಿಲ್ಲ.... ಆದ್ರಿಂದ್ಲೇ..."

"ನೀನು ಏನೇ ಹೇಳು, ಉಳುವವನೇ ಹೊಲದೊಡೆಯನಾದ್ರೆ ನಮ್ಮ ಭೂಸಮಸ್ಯೆ ಪರಿಹಾರವಾಗುತ್ತೈಂತ?'

"ಹಾದು ನೋಡೋಣ ಏನಾಗುತ್ತೋ... ಆಮ್ಯಾ"

'ಏನು?'

'ಬಾಡಿಗೆದಾರನದೇ ಮನೆಯಾದ್ರೆ ಖಂಡಿತ ವಸತಿ ಸಮಸ್ಯೆ ಪರಿಹಾರವಾಗುತ್ತೆ. ಗಾಂಧೀ ಶತಮಾನದ ಸ್ಮಾರಕವಾಗಿ ಈ ಬಗ್ಗೆ ಶಾಸನ ಮಾಡಿದ್ರೆ..."

'ಹ್ಹ... ಹ್ಹ... ಏನು ಪರಿಹಾರವಾಗುತ್ತೋ. ಅಂತೂ ಈಯೆಲ್ಲಾ ಸಮಸ್ಯೆಗಳು ಸರ್ವಸಮಾನ. ಅವುಗಳನ್ನು ಕೊಲ್ಲುವುದೂ ಪಾಪ, ಸಾಕುವುದೂ ಪಾಪ...."

'ಮತ್ತೇನು ಮಾಡಬೇಕ್ರಿ?"

'ಅದೇ ಯಕ್ಷಪ್ರಶ್ನೆ...."

'ಅದನ್ನು ಉತ್ತರಿಸುವ ಧರ್ಮರಾಯ ಹುಟ್ಟಿ ಬರಬೇಕಲ್ಲಾ...'

'ಹೆದರ ಬೇಡ. ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ವಿಶ್ವಾಸವಿಟ್ಟ ಮೇಲೆ ಹಾಗೆ ಅನ್ನ ಬಾರದು. ಕಾಲ ಬಂಜೆಯಾಗದು. ವೀರ ಪುತ್ರನೊಬ್ಬ ಭಾರತೀಯ ವಿಶಾಲೋದರದಲ್ಲಿ ಜನಿಸಿಯಾನು. ಯಕ್ಷ ಪ್ರಶ್ನೆಯನ್ನುತ್ತರಿಸಿ ಧರ್ಮರಾಜ್ಯ ಸ್ಥಾಪಿಸಿಯಾನು...'

'ಇದೇ ಸಾಂತ್ವನವಲ್ಲವೇ ಸದ್ಯ?'

'ಮತ್ತೆ...'

'ಹ್ಞಾಂ....ಆಯ್ತು. ಹಾಗೇ ಆಗಲಿ. ಸದ್ಯ ಗಂಟೆ ನೋಡಿ ಹನ್ನೊಂದು....'

'ಓ....ಬಂದ್ಬಿಟ್ಟೆ ...'

'ಹಾಲೆಲ್ಲಾ ಚಪ್ಪೆ ಕಣೋಸು ಆಯಿತೋ ಏನೋ...."

'ಅದ ಉಪ್ಪಿನ ಹಾಲು ಕುಡಿಯಲು ಸುಲಭ....'

'ನೀವೊಂದು....ಬನ್ನಿ ಬೇಗ. ಕಣ್ಣು ಬೆಲ್ಲ ಆಗುತ್ತೆ....'

'ಹ್ಞಾಂ....'

—ಗೋರಾ

---

# ನನ್ನ ಮಾತೆ-ಭಾರತಾಂಬೆ

ನನ್ನ ಮಾತೆಯು
ಭಾರತಾಂಬೆಯು
ರಕ್ಷಿಸಲು ನಾ ಸಿದ್ಧನೂ
ನನ್ನ ಪ್ರಾಣವು
ತೃಣ ಸಮಾನವು
ಯಾವ ತ್ಯಾಗಕು ಬದ್ಧನೂ ‖ ೧ ‖
ನನ್ನ ದೇಹವು
ನನ್ನ ರಕ್ತವು
ನನ್ನ ಮಾತೆಗೆ ಅರ್ಪಿತ
ಭಾರತಾಂಬೆಯು
ಸಕಲ ತ್ಯಾಗಕು
ನನ್ನ ಕಾಯ ಸಮರ್ಪಿತ ‖ ೨ ‖
ದೇಶ ಭಕ್ತಿಯು
ಉಕ್ಕಿ ಹರಿಯುವ
ನೊರೆಯು ನನ್ನಯ ದೇಹದಿ
ತುಂಬಿ ತುಳುಕಿದೆ
ಸಹನೆ ಮೀರಿದೆ
ಬಿಸಿಯು ಏರಿದೆ ಕಾಪದಿ ‖ ೩ ‖
ಭೀಮಸೇನನ
ವೀರ ಹನುಮನ
ನೆನೆದು ಸಮರದ ರಂಗದಿ
ವಿಜಯ ಧ್ವನಿಯನು
ವೀರತನವನು
ಎತ್ತಿ ಹಿಡಿಯುವೆ ಧೈರ್ಯದಿ ‖ ೪ ‖
ಶಾಂತಿ ಇಲ್ಲವು
ಸಹನೆ ಎಲ್ಲವು
ನನ್ನ ತೊರೆದೇ ಹೋಗಿದೆ
ಮಾತೃ ದೇಶದ
ನನ್ನ ರಾಷ್ಟ್ರದ
ನೀತಿ ಜಗಕಿಗೆ ತಿಳಿದಿದೆ ‖ ೫ ‖
ನನ್ನ ಉಸಿರಿನ
ನನ್ನ ಪ್ರಾಣದ
ಕೊನೆಯ ಗಳಿಗೆಯ ತನಕವೂ
ವೈರಿ ಸ್ಪರ್ಶವು
ದೇಶಕಿಲ್ಲವು
ಇದಕೆ ಆತ್ಮವು ಸಾಕ್ಷಿಯೂ ‖ ೬ ‖
ಪಾಕಿಸ್ತಾನದ
ಚೀಣಾ ದೇಶದ
ಹೇಯಾತನದಾ ಶೌರ್ಯವ
ಬಡಿದು ಓಡಿಸಿ
ಹೊಡೆದು ಉರುಳಿಸಿ
ಕಾಯ್ವೆ ನನ್ನಯ ಮಾತೆಯ ‖ ೭ ‖
ಭಾರತೀಯರ
ವೀರ ಶೂರರ
ಶೌರ್ಯ ಜಗತಿಗೆ ತಿಳಿಯಲಿ
ಭಾರತಾಂಬೆಯು
ಜನ್ಮದಾತೆಯು
ಕೀರ್ತಿ ಮೈಗೆ ಅರಿಯಲಿ ‖ ೮ ‖

ಕುತ್ಯಾರುಗುತ್ತು ರವೀಂದ್ರ ಶೆಟ್ಟಿ.

---

## ಎಲ್ಲೆಲ್ಲಿ ಏನೇನು?

### ಧರ್ಮಸ್ಥಳದ ಹೆಗ್ಗಡೆಯವರ ಪಟ್ಟ ವರ್ಧಂತಿ

ಧರ್ಮಸ್ಥಳದ ವಸಂತ ಮಹಲಿನಲ್ಲಿ ಕಳೆದ ತಾ. 19ರಂದು ಶ್ರೀ ರತ್ನವರ್ಮ ಹೆಗ್ಗಡೆಯವರ ಪಟ್ಟ ವರ್ಧಂತಿಯನ್ನು ವಿಜೃಂಭಣೆಯಿಂದ ಜರಗಿಸಲಾಯಿತು. ಸ್ಥಳೀಯ ಸಂಘ ಸಂಸ್ಥೆಗಳಿಂದ ಹಾರಾರ್ಪಣೆಯಾದ ಬಳಿಕ, ಶ್ರೀ ಪ್ರಿ. ರಾಮಣ್ಣ ಶೆಟ್ಟರು ಶ್ರೀ ಹೆಗ್ಗಡೆಯವರಿಗೆ ಶುಭಾಶಯಗಳನ್ನು ಸಲ್ಲಿಸಿ, ಊರವರ ಮತ್ತು ನೌಕರರ ಆವಶ್ಯಕತೆಗಳನ್ನು ನೆರವೇರಿಸಿ ಕೊಡಬೇಕೆಂದು ಕೇಳಿಕೊಂಡು ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ಕೃತಜ್ಞತೆ ಸಲ್ಲಿಸಿದರು. ಕೊನೆಯಲ್ಲಿ ವಿವಿಧ ವಿನೋದಾವಳಿಗಳು ನೆರವೇರಿದುವು.

### ಶ್ರೀ ಧರ್ಮಸ್ಥಳದಲ್ಲಿ ವಿಶೇಷ ಪೂಜೆ

ಧರ್ಮಸ್ಥಳಕ್ಕೆ ಸಂದರ್ಶನ ನೀಡಿದ ಜಿಲ್ಲಾಧಿಕಾರಿಗಳೊಡನೆ ಶ್ರೀ ಹೆಗ್ಗಡೆಯವರು, ದೇಶಕ್ಕೆ ಒದಗಿದ ಸದ್ಯದ ಪರಿಸ್ಥಿತಿಯಲ್ಲಿ ಭಾರತಕ್ಕೆ ವಿಜಯ ದೊರಕುವಂತೆ ಶ್ರೀ ಮಂಜುನಾಥ ಸ್ವಾಮಿಗೆ 48 ದಿನದ ವಿಶೇಷ ಪೂಜೆ ಸಲ್ಲಿಸುವ ತಮ್ಮ ನಿರ್ಧಾರವನ್ನು ತಿಳಿಸಿದ್ದಾರೆಂದು ತಿಳಿದುಬಂದಿದೆ.

### ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿ

ಕಳೆದ ತಾ. 12ರಂದು, ತಾಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿ ತಾಲೂಕು ಪ್ರಾತಿನಿಧಿಕ ಸಭೆ ಸೇರಿ, ರಾಷ್ಟ್ರೀಯ ರಕ್ಷಣಾ ಸಮಿತಿಯು ನಿರ್ಮಾಣವಾಯಿತು. ಸಭೆ ಕರೆದಿದ್ದ ತಹಶೀಲ್ದಾರ್ ಶ್ರೀ ಮಹಾಲಿಂಗಪ್ಪನವರು ಸಂಕಟದ ಅದೇ-ರೀತಿ ಐದು ಸಮಿತಿಗಳ ರಚನೆಯ ಆಗತ್ಯವನ್ನು ವಿವರಿಸಿದ ಬಳಿಕ ಶ್ರೀ ಟಿ. ರಮೇಶ ಪೈಗಳು ಅಧ್ಯಕ್ಷರಾಗಿರುವ ರಾಷ್ಟ್ರೀಯ ರಕ್ಷಣಾ ನಿಧಿ ಸಮಿತಿ, ಡಿ. ವೈ. ಎಸ್. ಪಿ. ಶ್ರೀ ಬ್ರೌನ್ ಅಧ್ಯಕ್ಷರಾಗಿರುವ ನಾಗರಿಕ ರಕ್ಷಣಾ ಸಮಿತಿ, ಶ್ರೀ ಎ. ಜೆ. ಅಲ್ಸೆಯವರು ಅಧ್ಯಕ್ಷರಾಗಿರುವ ಪ್ರಚಾರ ಸಮಿತಿ, ಶ್ರೀಮತಿ ಮನೋರಮಾ ಮಧ್ವರಾಜರು ಅಧ್ಯಕ್ಷೆಯಾಗಿರುವ ಸೈನಿಕ ಹಿತಾಭಿವೃದ್ಧಿ ಸಮಿತಿ, ಹಾಗೂ ಶ್ರೀ ಕೆ. ಪ್ರಭಾಕರ ಪೈಗಳು ಅಧ್ಯಕ್ಷರಾಗಿರುವ ಬೆಲೆ ನಿಯಂತ್ರಣ ಸಮಿತಿಗಳನ್ನು ನಿರ್ಮಿಸಲಾಯಿತು. ಅಲ್ಲದೇ, ಈ ಸಮಿತಿಗಳನ್ನು ಸಂಘಟಿಸಲು, ಕಾರ್ಯ ನಿರ್ವಹಿಸಲು ತಹಶೀಲ್ದಾರರು ಕಾರ್ಯದರ್ಶಿಯಾಗಿರುವ ಮತ್ತು ಶ್ರೀ ಎಮ್. ಮಧ್ವರಾಜ್, ಎಂ. ಎಲ್. ಎ. ಅಧ್ಯಕ್ಷರಾಗಿರುವ, ಶ್ರೀಗಳಾದ ಕೆ. ಭಾಸ್ಕರ ಶೆಟ್ಟಿ, ಎಂ. ಎಲ್. ಎ., ಶ್ರೀಪಿಸ್. ಧರ್ಮಸಾಮ್ರಾಜ್ಯ, ಎಂ. ಎಲ್. ಎ., ನಗರ ಸಭಾಪತಿ ಶ್ರೀ ಸಿ. ರಂಗನಾಥ ಶೆಣೈ ಹಾಗೂ ಮೇಲಿನ ಐದು ಉಪಸಮಿತಿಗಳನ್ನೊಳಗೊಂಡ ಹತ್ತು ಜನರ ಮುಖ್ಯ ಸಮಿತಿಯನ್ನೂ ನಿರ್ಮಿಸಲಾಯಿತು.

ತಹಶೀಲ್ದಾರರು ಮಾತನಾಡುತ್ತಾ ನ್ಯಾಯ ರೀತಿಯಲ್ಲಿ ಹಣ ಸಂಗ್ರಹಿಸಬೇಕೆಂದು ಹೇಳಿದರು. ಶ್ರೀ ರಮೇಶ ಪೈಗಳು ತಮ್ಮ ಭಾಷಣದಲ್ಲಿ, ಕದನ ವಿರಾಮವಾಯಿತೆಂದು ನಾವು ಜಾಗ್ರತೆ ತಪ್ಪಬಾರದು ಎಂದು ನುಡಿದರು.

### ಎನ್. ಸಿ. ಸಿ. ತರಬೇತಿ ಶಿಬಿರದಲ್ಲಿ ಸಚಿವ ಡಾ| ನಾಗಪ್ಪ ಆಳ್ವರು

ಉಪ್ಪಿನಂಗಡಿ, ರಾಜ್ಯದ ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರು ಇಲ್ಲಿ ನಡೆಯುತ್ತಿರುವ ಎನ್. ಸಿ. ಸಿ. ತರಬೇತಿ ಶಿಬಿರದಲ್ಲಿ ಮಾತನಾಡುತ್ತಾ ರಾಷ್ಟ್ರದ ಸ್ವಾತಂತ್ರ್ಯ ಸಮಗ್ರತೆಗಳ ವಿರುದ್ಧ ಯಾವುದೇ ಮೂಲೆಯಿಂದಲಾದರೂ ಒದಗಬಹುದಾದ ಪಂಥಾಹ್ವಾನವನ್ನೆದುರಿಸಲು ಯುವ ಜನಾಂಗದವರು ಸಂಪೂರ್ಣ ಸನ್ನದ್ಧರಾಗಿರಬೇಕೆಂದರು. ಅಲ್ಲದೆ ತರಬೇತಿ ಶಿಬಿರಗಳ ಆಗತ್ಯವನ್ನೂ ವಿವರಿಸಿದರು. ಶಿಬಿರದ "ಸೆಕೆಂಡ್ ಇನ್ ಕಮಾಂಡ್" ಕ್ಯಾಪ್ಟನ್ ಕೆ. ವಿ. ಶಂಕರನಾರಾಯಣರವರು ವಂದನಾರ್ಪಣೆಗೈದರು.

### ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಕಳೆದ ತಾ. 21ರಂದು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಳಿಯ ಹಾಗೂ ಕಾಂಗ್ರೆಸ್ ಶಾಸಕರ ಮತ್ತು ತಾಲೂಕು ಬೋರ್ಡ್ ಅಧ್ಯಕ್ಷರುಗಳ ಸಭೆಯು, ಮಂಗಳೂರಿನ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಕೆ.ಕೆ. ಶೆಟ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ದುರಂತ ಮರಣಕ್ಕೀಡಾದ ಬಲವಂತ ರಾಯ್ ಮೆಹತಾ ಹಾಗೂ ಅವರ ಪತ್ನಿ ಮತ್ತು ಇತರರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಈ ಕೆಳಗಿನ ನಿರ್ಣಯವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಪಾಕಿಸ್ತಾನೀಯರ ಗುಂಡಿಗಾಹುತಿಯಾದ ಈ ವಿಮಾನ ದುರಂತಕ್ಕೆ ವಿಷಾದ ವ್ಯಕ್ತಪಡಿಸಿತು, ಈ ಸಭೆಯು ಮೃತರ ಕುಟುಂಬದವರೊಡನೆ ಸಹತಾಪ ಸೂಚಿಸುತ್ತದೆ. ಪಾಕಿಸ್ತಾನೀಯರು ಮಾನವತೆಗೆ ಗಮನವೀಯದೆ ಈಗ ನಡೆಸುವ ಪೈಶಾಚಿಕ ಅತ್ಯಾಚಾರವು ಲೋಕದ ನಾಗರಿಕ ಸಮಾಜದ ಮನಸಾಕ್ಷಿಗೇನೇ ಕ್ರೂರ ಆಘಾತವಾಗಿದ್ದು ನಿಷೇಧಕರವಾಗಿದೆಯೆಂದು ಸಭೆಯು ಅಭಿಪ್ರಾಯ ವ್ಯಕ್ತಪಡಿಸಿದೆ. ಅಪ್ರತಿಮ ಸಾಹಸದಿಂದ ಹೋರಾಡಿ, ದೇಶವನ್ನು ಗಂಡಾಂತರದಿಂದ ಪಾರು ಮಾಡಿರುವ ನಮ್ಮ ಸೇನೆಯ ಕುರಿತು ಈ ಸಭೆಯು ಮೆಚ್ಚುಗೆ ಸೂಚಿಸಿ, ಈ ಹೋರಾಟದಲ್ಲಿ ಬಲಿದಾನವಿತ್ತಿರುವ ಸೈನಿಕರಿಗೆಲ್ಲಾ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ಕೊನೆಯದಾಗಿ, ಪಾಕಿಸ್ತಾನದ ಆಕ್ರಮಣದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗಲೇ ಚೀನೀಯರ ಧೂರ್ತ ಧಾಳಿಯನ್ನು ಎದುರಿಸಬೇಕಾಗುವ ಈ ಗಂಭೀರ ಪರಿಸ್ಥಿತಿಯಲ್ಲಿ ಎಲ್ಲರೂ ಒಗ್ಗಟ್ಟಾಗಿ ಸಂಘಟನಾ ಕಾರ್ಯದಲ್ಲಿ ತೊಡಗಬೇಕೆಂದು ಸಭೆಯು ಕೇಳಿಕೊಂಡಿದೆ.

### ಮೈಸೂರು ರಾಜ್ಯ ಮೆಡಿಕಲ್ ಕಾನ್ಫರೆನ್ಸು

ಮಂಗಳೂರು, 32ನೆಯ ಮೈಸೂರು ರಾಜ್ಯ ಮೆಡಿಕಲ್ ಕಾನ್ಫರೆನ್ಸನ್ನು ತಾ. 2ರಂದು ಉದ್ಘಾಟಿಸುತ್ತಾ ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರು, ಪದ್ಮಶ್ರೀ ಡಾ. ಟಿ. ಎಂ. ಎ. ಪೈಯವರ ನೆರವಿನ ಮೂಲಕ ಸದ್ಯದಲ್ಲಿಯೇ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಸೇರಿದಂತೆ ಒಂದು ಸಂಶೋಧನಾಲಯವನ್ನು ಸ್ಥಾಪಿಸಲಾಗುವುದು ಎಂದು ಬಹಿರಂಗಗೊಳಿಸಿದರು. ಪ್ರಾರಂಭದಲ್ಲಿ ಡಾ. ಎಂ. ಡಿ. ಅಡಪ್ಪರವರು ಸ್ವಾಗತಿಸಿದರು. ಡಾ. ಪೈಯವರು ಭಾಷಣ ಮಾಡುತ್ತಾ, ಡಾಕ್ಟರುಗಳು ಜನಸಾಮಾನ್ಯರು ತಮ್ಮ ಆರೋಗ್ಯವನ್ನು ಆದಂತು ರಕ್ಷಿಸಬಹುದಾಗಿದೆ ಎಂದು ಜನತೆಗೆ ತಿಳುವಳಿಕೆ ನೀಡುವ ಕಾರ್ಯ ಕೈಗೊಳ್ಳಬೇಕೆಂದರು. ಗತ ವರುಷದ ಮೈಸೂರು ಮೆಡಿಕಲ್ ಎಸೋಸಿಯೇಶನಿನ ಅಧ್ಯಕ್ಷರಾಗಿದ್ದ ಡಾ. ಪೈಗಳು ತಮ್ಮ ಅಧಿಕಾರ ಲಾಂಛನವನ್ನು ನವ ಚುನಾಯಿತ ಅಧ್ಯಕ್ಷ ಡಾ| ಸಿ. ಗೋಪಾಲರಾಜ್ ಚೆಟ್ಟಿಯವರಿಗೆ ಅರ್ಪಿಸಿ, ಅಭಿನಂದಿಸಿದರು.

ಲೆ| ಜನರಲ್ ಮುಕುಂದ ರಾವ್ ಅವರು ಕಾನ್ಫರೆನ್ಸಿನ ಸ್ಮಾರಕ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಅಲ್ಲದೇ ರಾಷ್ಟ್ರರಕ್ಷಣಾ ಕಾರ್ಯಕ್ಕೆ ಡಾಕ್ಟರುಗಳು ಹಾಗೂ ನರ್ಸುಗಳು ಮುಂಬರಬೇಕೆಂದು ವಿನಂತಿಸಿದರು.

ಕೊನೆಯಲ್ಲಿ ಡಾ. ಕೆ. ಆರ್. ಶೆಟ್ಟಿಯವರು ವಂದನಾರ್ಪಣೆಗೈದರು.

### ಕ್ಷಯರೋಗ ಮುದ್ರೆಗಳ ಮಾರಾಟ ಚಳವಳಿ ಪ್ರಾರಂಭ

ದ. ಕ. ಜಿಲ್ಲಾ ಟ್ಯೂಬರ್ ಕ್ಯುಲೋಸಿಸ್ ಅಸೋಸಿಯೇಶನ್‌ನವರು ಕೈಗೊಂಡಿರುವ 16ನೆಯ ಟಿ. ಬಿ ಮುದ್ರೆಗಳ ಮಾರಾಟ ಚಳವಳಿಯನ್ನು, ಆರೋಗ್ಯ ಸಚಿವ ಡಾ. ಕೆ. ನಾಗಪ್ಪ ಆಳ್ವರವರು ಗವರ್ನಮೆಂಟ್ ಕಾಲೇಜಿನಲ್ಲಿ, ತಾ. ಮೂರರಂದು, ಡಾ| ಸಿ ಗೋಪಾಲರಾಜ್ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಡಾ| ಎಂ. ಉಮೇಶ ರಾವ್ ರವರು ಸ್ವಾಗತಿಸಿ, ಅಸೋಸಿಯೇಶನ್ ಈ ವರೆಗೆ ಸಾಧಿಸಿದ ಸಾಧನೆಯನ್ನು ವಿವರಿಸಿದರು. ಮಂತ್ರಿಗಳು ಮಾತನಾಡುತ್ತ, ಸ್ಥಳೀಯ ಮುನಿಸಿಯಪಾಲಿಟಿಯವರು ಸರಕಾರವು ಕ್ಷಯರೋಗ ಆಸ್ಪತ್ರೆಗೆ ನಿವೇಶನ ಪಡೆದುಕೊಂಡಲ್ಲಿ ಅವಶ್ಯವಿರುವ ಕಟ್ಟಡವನ್ನು ತನ್ನ ವೆಚ್ಚದಲ್ಲಿಯೇ ಕಟ್ಟಿಸಿ ಕೊಡುವುದಾಗಿ ವಾಗ್ದಾನ ಮಾಡಿರುವರೆಂದೂ ತನ್ನ ಹೆಸರನ್ನು ಮಾತ್ರ ಬಯಸಲಾಗಿಸ ಬಾರದಾಗಿ ಅವರು ವಿನಂತಿಸಿಕೊಂಡಿರುವರೆಂದೂ ಬಹಿರಂಗಪಡಿಸಿದರು

ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯ ಆಡಳಿತ ವರ್ಗದವರು ಅಸೋಸಿಯೇಶನ್ನಿಗೆ

---


### ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S. 274/1965.

ಪದ್ಮ ಶೆಡ್ತಿ ಸಹಾ —ವಾದಿರು

ಕೊರ್ರ ಶೆಟ್ಟಿ ಸಹಾ —ಪ್ರತಿವಾದಿರು,

4. ಮಹಾಬಲ ಶೆಟ್ಟಿ, ಚಿಕ್ಕ ಶೆಡ್ತಿರ ಮಗ, Shivaji Park, Hindu Hotel, Lady Jamshedji Road, Shivaji Park, Bombay-15 ಎಂಬಲ್ಲಿರುವವ.

4ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ಸ್ಥಿರಾಸ್ತಿ ಹಿಸೆ ವಗೈರೆ ಬಗ್ಗೆ ವಾದಿರು ನಿಮ್ಮ ವ ಮಿಕ್ಕ ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಸದ್ರಿ ದಾವೆಯು ತಾರೀಕು 19-10-65ಕ್ಕೆ ನಿಮಗೆ ಅಖೈರ ನೋಟೀಸಿನ ಬಗ್ಗೆ ಇಟ್ಟಿದೆ. ಅಕ್ಷೇಪ ಯಿದ್ರೆ ಸದ್ರಿ ದಿನ ಬೆಳಗ್ಯೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಿಸ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Plaintiffs.

Karkala, 2-10-65.

2,000 ರೂ. ಮತ್ತು ಸರ್ಸುಗಳು 400 ರೂ.ಗಳ ನಿಧಿಯನ್ನೂ ಡಾ. ಕೆ. ಶ್ರೀನಿವಾಸರವರ ಮೂಲಕ ಅರ್ಪಿಸಿರುವರು. ಕೊನೆಯಲ್ಲಿ ಶ್ರೀ ಮಣೇಲ್ ಶ್ರೀನಿವಾಸ ನಾಯರು ವಂದನಾರ್ಪಣೆ ಗೈದರು.

## ಮೈಸೂರಿನಲ್ಲಿ ಉಡುಪಿ ಶ್ರೀಕೃಷ್ಣ ಮಂದಿರ ಮತ್ತು ಕಲ್ಯಾಣ ಮಂಟಪ

ಮೈಸೂರಿನಲ್ಲಿ ಧರ್ಮಭೂಷಣ ಶ್ರೀ ಕೆ. ಸೀತಾರಾಮ ರಾಯರು ಶ್ರೀ ಭಂಡಾರಕೇರಿ, ಶ್ರೀ ಪೇಜಾವರ ಹಾಗೂ ಶ್ರೀ ಅದಮಾರು ಮಠಾಧೀಶರುಗಳ ನೆರವಿನಿಂದ, ಉಡುಪಿ ಶ್ರೀ ಕೃಷ್ಣ ಮಂದಿರ ಮತ್ತು ಕಲ್ಯಾಣ ಮಂಟಪ ಕಟ್ಟಿಸಿರುವುದು ಸರಿಯಷ್ಟೆ. ಈ ಭವ್ಯ ಮಂದಿರದಲ್ಲಿ ತಾ. 5-3-65ರಂದು ಶ್ರೀಕೃಷ್ಣ ಮೂರ್ತಿಯನ್ನು ವಿಧಿವತ್ತಾಗಿ ಶ್ರೀ ಭಂಡಾರಕೇರಿ, ಶ್ರೀ ಅದಮಾರು ಹಾಗೂ ಶ್ರೀ ಪೇಜಾವರ ಮಠಾಧೀಶರು ಪ್ರತಿಷ್ಠಾಪಿಸಿದ್ದರು. ತಾ. 20-4-65ರಂದು ಕಲ್ಯಾಣ ಭವನದ ಉದ್ಘಾಟನೆಯನ್ನು ರಾಜ್ಯಪಾಲ ಶ್ರೀ ವಿ. ವಿ. ಗಿರಿಯವರು ಶ್ರೀ ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದ್ದರು. ನಂತರ ಈಗ್ಗೆ 2 ತಿಂಗಳುಗಳ ಹಿಂದೆ ಚಾತುರ್ಮಾಸ್ಯ ಸಂಕಲ್ಪಕ್ಕಾಗಿ ಶ್ರೀ ಕೆ. ಸೀತಾರಾಮರಾಯರ ಪ್ರಾರ್ಥನೆಯಂತೆ ಉಡುಪಿ ಶ್ರೀ ಭಂಡಾರಕೇರಿ ಶ್ರೀಗಳವರು ಮೈಸೂರು ನಗರಕ್ಕೆ ಆಗಮಿಸಿ ಶ್ರೀ ಕೃಷ್ಣ ಮಂದಿರದಲ್ಲಿ ಸಂಕಲ್ಪಕ್ಕೆ ಕೂತರು. ಈ ಎರಡು ತಿಂಗಳುಗಳ ಕಾಲಾವಧಿಯಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ಶ್ರಾವಣ ಬಹುಳ ಅಷ್ಟಮಿ ದಿನದಿಂದ ಗೋಕುಲಾಷ್ಟಮಿ ಪ್ರಯುಕ್ತ ಶ್ರೀ ಕೃಷ್ಣ ಜಯಂತಿ ಉತ್ಸವವನ್ನು ಹತ್ತು ದಿನಗಳ ಕಾಲ ಶ್ರೀಕೃಷ್ಣ ಮಂದಿರದ ಕಮಿಟಿಯವರು ಏರ್ಪಡಿಸಿದ್ದರು. ಕೊನೆಯ ದಿನ ಸೋಸಲೆ ಶ್ರೀ ವ್ಯಾಸರಾಜ ಮಠಾಧೀಶರು ಆಗಮಿಸಿ ವೈಭವದ ಸಮಾರಂಭವನ್ನು ನಡೆಸಿ ಅನುಗ್ರಹ ಭಾಷಣ ಮಾಡಿದರು.

ತಾ. 10-9-65ರಂದು ಈ ಚಾತುರ್ಮಾಸ್ಯ ಮಂಗಲ ಮುಕ್ತಾಯ ಸಮಾರಂಭವು ಬಹಳ ವಿಶೇಷ ರೀತಿಯಿಂದ ನಡೆಯಿತು. ಶ್ರೀ ಕೆ. ಸೀತಾರಾಮರಾಯರು 2 ತಿಂಗಳಿಂದಲೂ ಸಲ್ಲಿಸಿದ ಸೇವೆಗೆ ಮೆಚ್ಚಿ ತಮ್ಮ ಆಶೀರ್ವಾದ ಪತ್ರವನ್ನು ಬೆಳ್ಳಿಯ ಕರಂಡದಲ್ಲಿ ಇಟ್ಟು ಕಲಾಪತ್ತಿನ ಪೀತಾಂಬರವನ್ನು ಶ್ರೀ ಭಂಡಾರಕೇರಿ ಶ್ರೀಗಳವರು ಅನುಗ್ರಹಿಸಿ ಆಶೀರ್ವದಿಸಿದರು. ಹಲವಾರು ಪಂಡಿತರು ಈ ಸಂದರ್ಭದಲ್ಲಿ ಮಾತನಾಡಿದರು. ತಾ. 11-9-65 ರಂದು ಶ್ರೀ ಕೃಷ್ಣ ಮಂದಿರದಲ್ಲಿ ಮುಖ್ಯಪ್ರಾಣ ದೇವರ ಪ್ರತಿಷ್ಠೆಯನ್ನು ಶ್ರೀ ಭಂಡಾರಕೇರಿ ಶ್ರೀಗಳವರು ನಡೆಸಿದರು.

ಸಂಜೆ ನಡೆದ ಸಭೆಯಲ್ಲಿ ಶ್ರೀ ವ್ಯಾಸರಾಯ ಮಠಾಧೀಶರು, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಾಧೀಶರು, ಶ್ರೀ ಭಂಡಾರಕೇರಿ ಶ್ರೀಗಳವರು, ಉಡುಪಿ ಶ್ರೀ ಪೇಜಾವರ ಶ್ರೀಗಳವರು ಉಪಸ್ಥಿತರಿದ್ದರು. ನೂರಾರು ಮಂದಿ ವಿದ್ವಾಂಸರು ಸಾವಿರಾರು ಮಂದಿ ಭಕ್ತರು ಶ್ರೀಗಳವರ ದರ್ಶನ ಪಡೆದರು. ಈ ಸಂದರ್ಭದಲ್ಲಿ ಪುರಂದರದಾಸರ ಭಾವಚಿತ್ರವನ್ನು ರಾಘವೇಂದ್ರ ಸ್ವಾಮಿಗಳವರ ಮಠಾಧೀಶರೂ, ಉಡುಪಿ ಶ್ರೀ ಪುತ್ತಿಗೆ ಮಠದ ಶತಾಯುಷಿಗಳಾದ ಶ್ರೀ ಸುಧೀಂದ್ರ ತೀರ್ಥರ ಭಾವಚಿತ್ರವನ್ನು ಭಂಡಾರಕೇರಿ ಶ್ರೀಗಳವರೂ, ಭಕ್ತ ಗೋವಿಂದ ದಾಸರ ಭಾವಚಿತ್ರವನ್ನು ರಾವ್‌ಬಹದ್ದೂರ್ ಬಿ. ವೆಂಕಟೇಶಾಚಾರ್ಯರೂ ಅನಾವರಣ ಮಾಡಿದರು. ನಾಲ್ಕು ಮಂದಿ ಶ್ರೀಗಳವರೂ ಜನತೆಯನ್ನುದ್ದೇಶಿಸಿ ಅನುಗ್ರಹ ಭಾಷಣ ಮಾಡಿದರು. ನಂಜನಗೂಡಿನ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಾಧೀಶರು ಶ್ರೀ ಕೆ. ಸೀತಾರಾಮರಾಯರಿಗೆ "ಧರ್ಮಕಾರ್ಯ ಪ್ರವೀಣ" ಎಂಬ ಪ್ರಶಸ್ತಿಯನ್ನಿತ್ತು ಅಭಿನಂದಿಸಿದರು. ಬಳಿಕ ಮೈಸೂರು ಮಹಾಜನರ ಪರವಾಗಿ ರಾವ್‌ಬಹದ್ದೂರ್ ಎಂ. ರಾಮಸ್ವಾಮಿಯವರು ಮಾತನಾಡಿ ಶ್ರೀ ರಾಯರಿಗೆ ಹಾಗೂ ಶ್ರೀಗಳವರಿಗೆ ಮಾನಪತ್ರ ಸಮರ್ಪಿಸಿದರು.

ರಾತ್ರಿ ವಿಶೇಷ ಪೂಜೆ ನಡೆದು ಶ್ರೀಗಳವರನ್ನೂ, ವಿದ್ವಾಂಸರನ್ನೂ ಸತ್ಕರಿಸಲಾಯಿತು.

### ಮಂಗಳೂರಿನ ಎನ್. ಸಿ. ಸಿ. ಶಿಬಿರದಲ್ಲಿ ಡಾ। ನಾಗಪ್ಪ ಆಳ್ವ

ಮಂಗಳೂರಿನಲ್ಲಿ ನಡೆಯುತ್ತಿರುವ ಎನ್. ಸಿ. ಸಿ. (ನೌಕಾ ವಿಭಾಗ)ವನ್ನು ಉದ್ದೇಶಿಸಿ ಮಾತಾಡುತ್ತಾ, ಮಂತ್ರಿ ಡಾ। ನಾಗಪ್ಪ ಆಳ್ವರವರು, ವಿದ್ಯಾರ್ಥಿಗಳು ಶಿಸ್ತಿನ ಹಾಗೂ ಭ್ರಾತೃತ್ವದ ಮಾದರಿಯ ಜೀವನ ಮಾಡಲು ಕಲಿಯಬೇಕೆಂದು ನುಡಿದರು. ಪ್ರಚಲಿತ ವಿಷಮ ಪರಿಸ್ಥಿತಿಯಲ್ಲಿ ಎನ್. ಸಿ. ಸಿ.ಯ ಪ್ರಾಮುಖ್ಯ ಪಾತ್ರದ ಕುರಿತು ಒತ್ತಿ ಹೇಳುತ್ತಾ ಅವರು ರಾಷ್ಟ್ರದ ರಕ್ಷಣಾ ವ್ಯಾಪಕ ವ್ಯವಸ್ಥೆಯಲ್ಲಿ ಒಂದು ಪ್ರಾಮುಖ್ಯ ಸಂಘಟನವಾಗಿದೆಯೆಂದು ನುಡಿದರು.

ಎನ್. ಸಿ. ಸಿ. ಗ್ರೂಪ್ ಹೆಡ್ ಕ್ವಾರ್ಟರ್ಸ್ ಕಮಾಂಡಿಂಗ್ ಆಫೀಸರ್ ಲೆ। ಕ। ಬಿ. ಸಿ. ಜೋಶಿಯವರು ಧನ್ಯವಾದಾರ್ಪಣೆ ಮಾಡುತ್ತಾ ರಾಷ್ಟ್ರದ ಬಗ್ಗೆ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಅಧಿಕಾರಿಗಳು ತಮ್ಮಿಂದ ಸಾಧ್ಯವಿರುವ ಸರ್ವ ಪ್ರಯತ್ನ ಮಾಡಲಿರುವುದಾಗಿ ಪ್ರತಿಜ್ಞೆ ಮಾಡಿರುವರು.

### ಬಂಟ್ವಾಳ ಪಂಚಾಯತಿಗೆ ಜಲ ಪೂರೈಕೆ

ಬಂಟ್ವಾಳ ಪಂಚಾಯತಿಗೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರವರು ಡಾ. ಕೆ. ನಾಗಪ್ಪ ಆಳ್ವರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಪ್ರಾರಂಭದಲ್ಲಿ ಪಂಚಾಯತ್ ಅಧ್ಯಕ್ಷರು ಸ್ವಾಗತಿಸಿದರು. ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀ ಕೃಷ್ಣಮೂರ್ತಿಯವರು ವರದಿ ವಾಚನ ಮಾಡಿದರು. ಶ್ರೀ ಜನಾರ್ಧನ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು.

### ರೋಗಿಗಳಿಗೆ ಆಹಾರ ಒದಗಣೆ

ಮಂಗಳೂರು, ಸೌ. ಕ ಜಿಲ್ಲೆಯ ಕೋಓಪರೇಟಿವ್ ಸೊಸೈಟಿಯ ವತಿಯಿಂದ ಜಿಲ್ಲಾ ವೆನ್ಲಾಕ್ ಆಸ್ಪತ್ರೆಯಿಂದ ಹೊಸದಾಗಿ ಸ್ಥಾಪಿಸಲಾದ ರೋಗಿಗಳ ಆಹಾರ ತಯಾರಿ ಯೋಜನೆಯನ್ನು ವೆನ್ಲಾಕ್ ಆಸ್ಪತ್ರೆಯ ಆವರಣದಲ್ಲಿ ಆರೋಗ್ಯ ಸಚಿವ ಡಾ. ಕೆ. ನಾಗಪ್ಪ ಆಳ್ವರು, ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿಯವರು ಈ ಯೋಜನೆಯಿಂದ ಜನತೆ ಪಡೆಯಬಹುದಾದ ಪ್ರಯೋಜನಗಳನ್ನು ವಿವರಿಸಿದರು.

**ಬೆಳ್ತಂಗಡಿ ಡಿ. ಮು. ಕೋರ್ಟಿನಲ್ಲಿ**

R. I.A.No. 378/1965 (O.S 181/64

ಕೆ. ರಾಮಕೃಷ್ಣ ಪ್ರಭು —ಅರ್ಜಿದಾರ

ಸೂರ್ಯನಾರಾಯಣ ಭಟ್ಟ ಸಹ —ಯೆದ್ರಿರು.

2ನೇ ಎದ್ರಿ ಸೀತಾರಾಮ ಭಟ್ಟ, ಗೋಪಾಲ ಕೃಷ್ಣ ಭಟ್ಟರ ಮಗ ಬೆಳ್ತಂಗಡಿ ತಾಲ್ಲೂಕು ಕಲ್ಮಂಜ ಗ್ರಾಮದ ಹಾರ್ಲರಿಗೆ—

ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲ್ಕಂಡ ವ್ಯವಹರಣೆಯಲ್ಲಿ ಪೈಸ್ಲ್ ಆದ ವೇಜಿಗೆ ಜವಾಬ್ದಾರಿಯಿರುವ ಸ್ಥಿರಾಸ್ತಿ ಏಲಂ ಕುರಿತು ಫೈನಲ್ ಡಿಕ್ರಿ ಕೊಡಬೇಕೆಂತ ವಗೈರೆ ಅರ್ಜಿದಾರ ಕೊಟ್ಟ ಅರ್ಜಿ ಕುರಿತು ನಿಮಗೆ ಆಕ್ಷೇಪ ಇದ್ದಲ್ಲಿ ತಾ. 22-10-65ಕ್ಕೆ ಬೆಳಿಗ್ಗೆ 10 ಗಂಟೆಗೆ ನೀವು ಸ್ವತಃ ಯಾ ವಕೀಲ ದ್ವಾರಾ ಕೋರ್ಟು ಮುಂದೆ ಹಾಜರಾಗಿ ಉಜರಿಸ ತಕ್ಕದ್ದು, ತಪ್ಪಿದ್ರೆ ನಿಮ್ಮ ಶಿವಾಯ್ ತೀರ್ಮಾನಿಸಲಾದೀತು.

(By order of the Court)

**B. K. Suryanarayana Rao**

(Advocate for Petitioner)

ಬೆಳ್ತಂಗಡಿ, ತಾ. 1.10.1965




ಈ ಪ್ರಪಂಚವೆ ಸಣ್ಣದು....

ವಿಶ್ವವ್ಯಾಪಿ ಬ್ಯಾಂಕಿಂಗ್ ವ್ಯವಹಾರಕ್ಕೆ ನೀವು ಕೆನರಾ ಬ್ಯಾಂಕನ್ನು ಬಳಸಿದಾಗ.

ಈ ಸೌಲಭ್ಯಗಳಿಂದ ನಿಮಗೆ ಸಮಗ್ರವಾದ ವಿಶ್ವವ್ಯಾಪಿ ಬ್ಯಾಂಕಿಂಗ್ ಸೇವೆ ಸಲ್ಲಿಸಲು ಕೆನರಾ ಬ್ಯಾಂಕ್ ಸುಸಜ್ಜಿತವಾಗಿದೆ.

- ಪ್ರಪಂಚದಾದ್ಯಂತ ಪ್ರತಿನಿಧಿಗಳು
- ಆಮದು—ರಫ್ತು ಕುರಿತು ಸಲಹೆ ನೀಡಿಕೆ
- ವೇಗ ಗತಿಯ ಹಾಗೂ ಕರಾರುವಾಕ್ಕಾದ ಅಂತರರಾಷ್ಟ್ರೀಯ ವ್ಯವಹಾರ ಸಂಪರ್ಕಕ್ಕೆ 'ಟೆಲೆಕ್ಸ್' ವ್ಯವಸ್ಥೆ
- ವ್ಯಾಪಕವಾದ ಬ್ಯಾಂಕಿಂಗ್ ಸೇವಾ ವ್ಯವಸ್ಥೆಗಳು
- 60 ವರ್ಷಗಳ ಅನುಭವ
- ಭಾರತದಲ್ಲಿ 236ಕ್ಕೂ ಹೆಚ್ಚು ಶಾಖೆಗಳು

ಕೆನರಾ ಬ್ಯಾಂಕ್ ಬಗ್ಗೆ ಹೆಚ್ಚಿಗೆ ತಿಳಿದಷ್ಟು, ನೀವು ಈ ಬ್ಯಾಂಕ್‌ನ್ನೇ ಹೆಚ್ಚಿಗೆ ಬಳಸುವಿರಿ.

ವಜ್ರ ಮಹೋತ್ಸವ ವರ್ಷ

ವಿಳಂಬ ಮಾಡಬೇಡಿ—ಕೂಡಲೆ ವ್ಯವಹರಿಸಿ

ಕೆನರಾ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಕಛೇರಿ: ಮಂಗಳೂರು (ಸ್ಥಾಪನೆ: 1906) ಆಡಳಿತ ಕಛೇರಿ: ಬೆಂಗಳೂರು

90 ಕೋಟಿ ರೂ. ಗಳಿಗೂ ಹೆಚ್ಚಿನ ಸಂಪನ್ಮೂಲಗಳು

CB-130 KN

ರಾಷ್ಟ್ರೀಯ ರಕ್ಷಣಾ ನಿಧಿಗೆ ಧಾರಾಳ ಸಹಾಯ ಸಲ್ಲಿಸಿರಿ

ಕೆನರಾ ಬ್ಯಾಂಕಿನ ಎಲ್ಲ ಶಾಖೆಗಳಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ಸಲ್ಲಿಸುವ ವಂತಿಗೆಗಳು ಮೂಲ ಬೆಲೆಗೆ ಸ್ವೀಕರಿಸಲ್ಪಡುತ್ತವೆ.

# ನಿರುದ್ಯೋಗಿ

(ಎರಡನೇ ಪುಟದಿಂದ)

ದಾರೂ ನನ್ನನ್ನು ಕಂಡರೆ ಹಾಗೆ ಊಹಿಸಿ ಯಾರು. ಪದ್ಯಕ್ಕೆ ಆ ಕೆಲಸವೂ ನನಗಿರಲಿಲ್ಲ.

"ಬಸ್ ಸ್ಟ್ಯಾಂಡ್"

ಅಂತು ಬಸ್ ಸ್ಟ್ಯಾಂಡ್ ತಲಪಿದೆ. ಒಂದು ಬಸ್ಸು ನಿಂತಿತ್ತು. ಅದರಲ್ಲಿ "ಕಾಸರಗೋಡ.—ಪುತ್ತೂರು" ಎಂದು ಬರೆದಿತ್ತು. ಅದು ಕಾಸರಗೋಡಿಗೆ ಹೋಗುವುದೇ ಅಥವಾ ಕಾಸರಗೋಡಿನಿಂದ ಬಂದದ್ದೋ....? ನನಗೆ ತಿಳಿಯಲೇ ಇಲ್ಲ. ಕಂಡಕ್ಟರನನ್ನು ವಿಚಾರಿಸಿದಾಗ ಕಾಸರಗೋಡಿಗೆ ಹೋಗುತ್ತದೆ—ಎಂದನಾತ. ಬಸ್ಸಿನಲ್ಲಿ ಹತ್ತಿ ಕುಳಿತಾಯ್ತು. ಒಮ್ಮೆ ಬಾಯಿ ಆಕಳಿಸಿತು. ನನ್ನ ಪಕ್ಕದಲ್ಲಿ ಕುಳಿತ ವ್ಯಕ್ತಿಯಲ್ಲಿ ವಿಚಾರಿಸಿದಾಗ—ಆತ ಬೆಂಗಳೂರಿನಲ್ಲಿ ಯಾವುದೋ ಉದ್ಯೋಗದ ಮೇಲೆ ಹೋಗುವುದೆಂದು ತಿಳಿಸಿದ. ನನಗೂ interview ಇರುವುದು ಬೆಂಗಳೂರಿನಲ್ಲಿ. ನನಗೆ ಸ್ವಲ್ಪ ಧೈರ್ಯ ಬಂತು—"ಜೊತೆಯಲ್ಲಿ ಇನ್ನೊಬ್ಬನಿದ್ದಾನಲ್ಲಾ" ಎಂದು.

ತುಂಬಿದ ಪ್ರಯಾಣಿಕರನ್ನು ಹೊತ್ತುಕೊಂಡು ಬಸ್ಸು ಹೊರಟಿತು. Town ಬಿಟ್ಟು ಸ್ವಲ್ಪ ಮುಂದೆ ಹೋದಾಗ, ಅಲ್ಲಿ ಜನ ಸಂದಣಿಯೇ ವಿರಳ. ಗಿಡಮರಗಳಿಂದ ನಿಬಿಡವಾದ ಪ್ರದೇಶ. ಅಲ್ಲಲ್ಲಿ ಸಣ್ಣ, ಸಣ್ಣ ಗುಡ್ಡಗಳಿದ್ದವು. ಇಂತಹ ಸ್ಫೂರ್ತಿಯ ನೆಲೆವೀಡಾದ ಪ್ರಕೃತಿ ಸೌಂದರ್ಯದ ಸೊಬಗನ್ನು ನಾ ಸವಿದೆ. ಭಾವಪರವಶನಾಗಿ ಕುಳಿತಾಗ ಕಣ್ಣಿಗೆ ಕಾಣುವ ದೃಶ್ಯದ ವರ್ಣನೆ ಕವನವಾಗಿ ಹೃದಯದಲ್ಲಿ ನಡಿಯುತ್ತಿತ್ತು. ಕೋಗಿಲೆಯೊಂದು "ಕುಹೂ..." ಎಂದು ಅದಕ್ಕೆ ಧ್ವನಿ ಸೇರಿಸಿತು. ಅದು ಸ್ವತಂತ್ರವಾಗಿ ಹಾರಾಡಿ, ಕುಣಿದಾಡಿ ಮಧುರಗಾನ ಸುಧೆ ಸೂಸುತ್ತಿತ್ತು.

"ನೀನು ನಿರುದ್ಯೋಗಿ!"—ಹೃದಯ ಇರಿಯುತ್ತಿತ್ತು.

ನಾನು ನಿರುದ್ಯೋಗಿ—ಉದ್ಯೋಗ ಬೇಟೆಗೆ ಹೋಗುತ್ತೇನೆ. ಇದೂ ಒಂದು ಉದ್ಯೋಗ—"ಇಂಟರ್‌ವ್ಯೂ"ನ ನೆಪದಲ್ಲಿ ಹಲವು ಊರುಗಳನ್ನು ಸುತ್ತುವುದು. ಕಾಸರಗೋಡು ತಲಪಿತು. ರಸ್ತೆಯ ಅಕ್ಕಪಕ್ಕದಲ್ಲಿ ಹಲವಾರು ಮನೆಗಳು, ಅಂಗಡಿಗಳ ಸಾಲುಗಳು ಕಾಣಿಸಿಕೊಂಡವು.

ಇದು ಇನ್ನೊಂದು ಪ್ರಪಂಚ!

ಕಾಸರಗೋಡಿನ "ಬಸ್‌ಸ್ಟ್ಯಾಂಡ್"ನಲ್ಲಿ ಬಸ್ಸು ನಿಂತಿತು. ಎಲ್ಲರೂ ಇಳಿದು ಬಸ್ಸು ಖಾಲಿಯಾಯಿತು. ಜೊತೆಯಲ್ಲಿ ಒಬ್ಬ ಸಂಗಾತಿ ದೊರಕಿರುದರಿಂದ ನಾನು ಆತನ ಸಂಗಡ ಹೊರಟೆ. ಅಪರಿಚಿತ ಊರು. ಹೋಟೆಲೊಂದರಲ್ಲಿ ಕಾಫಿ ಕುಡಿಯುತ್ತ ನಾವು ಜೊತೆಗೆ ಬಂದೆವು.

"ತಡವಾದರೆ 'ಟ್ರೈನ್' ಮಿಸ್ಸಾಗಬಹುದು"—ನನ್ನ ಜೊತೆಯಲ್ಲಿದ್ದ ವ್ಯಕ್ತಿ ಎಚ್ಚರಿಸಿತು. Taxiಯೊಂದನ್ನು ಬಾಡಿಗೆಗೆ ಪಡೆದು ನಾವು 'ರೈಲ್ವೆ ಸ್ಟೇಶನ್'ನತ್ತ ಸಾಗಿದೆವು.

ಹೊಗೆ ಕಾರುವ ನೀಳವಾದ ಆಕೃತಿ!—ಇದು ನಾನು ಅಲ್ಲಿಗೆ ತಲಪಿದಾಗ ಕಂಡದ್ದು ಜೊತೆಯಲ್ಲಿದ್ದಾತ ಅವಸರ ಪಡಿಸಿದ "ಅದೇ ಟ್ರೈನ್..." ಆತ ಓಡಿದ. ಆತನ ಹಿಂದೆ ನಾನೂ ಓಡಿದೆ. ಆತನೇ ಟಿಕೇಟು ಪಡೆಯಲು ಕ್ಯೂ ನಿಂತು ನನಗೂ ಟಿಕೇಟು ಪಡೆದ. ಇಬ್ಬರೂ ರೈಲಿನಲ್ಲಿ ಹತ್ತಿ ಕುಳಿತೆವು. "ಕೂ...."—ಎಂದು ಕೂಗಿಕೊಳ್ಳುತ್ತ ಅದು ಚಲಿಸಿತು.

ಪುನಃ ಪ್ರಕೃತಿ ಸೌಂದರ್ಯ!

ನನ್ನ ಜೊತೆಗಿದ್ದವನು ನನ್ನಲ್ಲಿ ಹೇಳಿದ "ನಾನೂ ಅದೇ 'ಇಂಟರ್‌ವ್ಯೂ'ಗೆ ಹೋಗುವುದು"—ಎಂದು. ರೈಲು ಮುಂದೆ ಚಲಿಸುತ್ತ ಇತ್ತು. ನನ್ನ ಜೊತೆಗಿದ್ದವನು ಬೆಪ್ಪನಂತೆ ಕುಳಿತಿದ್ದ. ಪಾಪ! ಆವನು ದುಃಖಿಯಾಗಿರಬೇಕು. ನಿರುದ್ಯೋಗಿಯ ಬಾಳು ಯಾವಾಗಲೂ ಗೋಳು! ಹಾಗಾದರೆ ನಾನೂ ದುಃಖಿ ಅಲ್ಲವೇ? ಹೌದು! We are sailing in the same boat. ನಾನು ಪ್ರಕೃತಿ ಸೌಂದರ್ಯಕ್ಕೆ ಮಾರುಹೋಗಿ ನಿರುದ್ಯೋಗ ಸಮಸ್ಯೆಯನ್ನು ಮರೆತು ಕುಳಿತುಬಿಟ್ಟೆ.

ಜಾಲಾರ್‌ಪೇಟೆ "ಜಂಕ್ಷನ್" ತಲಪಿದಾಗ ಆತ ನನ್ನನ್ನು ಇಳಿಯ ಹೇಳಿದ. ನಾನು ಇಳಿದೆ. ವಿಷಯ ವೇನೆಂದು ನನಗೆ ತಿಳಿಯಲಿಲ್ಲ. ಬಳಿಕ ತಿಳಿಯಿತು. ಅದು "ಜಂಕ್ಷನ್" ಎಂದು.

ನಮ್ಮ ಪ್ರಯಾಣ ಮತ್ತೆ ಮುಂದುವರಿಯಿತು. ಬೆಂಗಳೂರು ತಲಪಿದೊಡನೆ ನಾವು ಇಳಿದೆವು. ನನ್ನ ಜೊತೆಗಿದ್ದ ವ್ಯಕ್ತಿ ನನ್ನನ್ನು "ಇಂಟರ್‌ವ್ಯೂ"ನ ಆಫೀಸಿನ ಬಳಿ ಕರೆದುಕೊಂಡು ಹೋಗಿ ತೋರಿಸಿತು. ಬಳಿಕ ಆತನಿಗೆ ಬೇರೆಲ್ಲಿಗೆ ಹೋಗಲಿದೆಯೆಂದು ಹೇಳಿ ಆತ ಹೊರಟು ಹೋದ. ಆತನಿಗೆ ಆ ಊರು ಚಿರಪರಿಚಿತವಿರಬೇಕು.

ಆಗಲೇ ಬೆಳಗಾಗಿತ್ತು ಇನ್ನು "ರೂಂ" (Room) ಬಾಡಿಗೆಗೆ ಪಡೆಯುವುದು ಬೇಡವೆಂದು ನಾನು ಅಲ್ಲೇ ರಸ್ತೆಯಲ್ಲಿ ಅತ್ತಿತ್ತ ಸುತ್ತಾಡತೊಡಗಿದೆ.

ಹತ್ತು ಘಂಟೆಗೆ interview ಎಂದು ಬರೆದಿತ್ತು. ನಾನು 9 30ಕ್ಕೆ ಆಫೀಸಿನ ದ್ವಾರದಲ್ಲಿ ಹಾಜರಿದ್ದೆ. "ಇಂಟರ್‌ವ್ಯೂ" ಕಳೆಯಿತು. "ಟ್ರೇವೆಲಿಂಗ್ ಎಕ್ಸ್‌ಪೆನ್ಸ್"ನ್ನೂ ಕೊಟ್ಟರು. ನಾನು ಅಲ್ಲಿಂದ ಹೊರಡಲು ಸಿದ್ಧನಾದೆ. ಹೋಗುವಾಗ ನನ್ನೊಂದಿಗೆ ಬಂದಿದ್ದ ವ್ಯಕ್ತಿ ಇನ್ನೂ ಅಲ್ಲಿಯೇ ನಿಂತಿದ್ದ. ಆತನ ಇಂಟರ್‌ವ್ಯೂ ಆಗಲೇ ಆಗಿತ್ತು. ಆತ ನನ್ನೊಂದಿಗೆ ಬರುವುದಿಲ್ಲವೆಂದು ತಿಳಿದು ನಾನು ರಸ್ತೆಯಲ್ಲಿ ನಡೆಯತೊಡಗಿದೆ

ನನಗೆ ಒಂದೇ ಲಾಭ!

'ಇಂಟರ್‌ವ್ಯೂ'ನಲ್ಲಿ "ಸಿಲೆಕ್ಟ್" ಆಗದಿದ್ದರೂ ದೂರದ ಊರಿನ ಪ್ರಯಾಣದಿಂದ ನನಗೆ ಕಥೆ ಬರೆಯುವ ಸ್ಫೂರ್ತಿ ಬಂದಿತು. ನಿರುದ್ಯೋಗಿಯಾಗಿದ್ದರೂ ನನಗೆ ಕೆಲಸವಿತ್ತು. ಪ್ರತಿಫಲವಿಲ್ಲದ ಲೇಖನ ವ್ಯವಸಾಯ!

"ಸಿಗರೇಟು ಸೇದದವರು ಕಥೆಗಾರರಲ್ಲ"—ನನ್ನ ಮಿತ್ರ ನನ್ನನ್ನು ಕೆಣಕುತ್ತಿದ್ದ. "ಅಭಿಮಾನಕ್ಕೆ ಧಕ್ಕೆ. ಛಿ! ಇಂತಹ ನಿಂದೆಯೇ....?"—ಆತ್ಮ ಚಡಪಡಿಸಿತು.

"ಛೇ! ಈಗಿನ ಸಾಹಿತಿಗಳು, ಕಥೆಗಾರರು ಸಿಗರೇಟು ಸೇದುವುದಿಲ್ಲೇ...."—ಹೇಳಿದ್ದೆ.

ನನ್ನಲ್ಲಿ ಹಣವಿದ್ದಲ್ಲವೇ ಸೇದುವುದು? ತಂದೆಯ ಜೇಬಿನಿಂದ ಅಪಹರಿಸಿದರೂ ಅಡಗಿ ಸೇದಬೇಕಿತ್ತು.

ಇದು ನಿರುದ್ಯೋಗಿಯ ದಿನಚರಿ! ನನ್ನದೇ ಎಂದು ಬೇರೆ ಹೇಳಬೇಕಾಗಿಲ್ಲ. ಎಲ್ಲಾ ದಿನವೂ ಒಂದೇ ರೀತಿಯಾಗಿದೆ. ಯೋಚಿಸುವುದು, ಕಥೆ ಬರೆಯುವುದು; ಸ್ಫೂರ್ತಿಕಡಿಮೆಯಾದಾಗ ಮಲಗಿ ನಿದ್ದೆ ಹೋಗುವುದು;ಎಚ್ಚೆತ್ತಾಗ ಬಡ ಸೀಗಲು Walking ಹೋಗುವುದು.

ಕೆಲವು ತಿಂಗಳು ಹೀಗೆಯೇ ಸಾಗಿತು ಮತ್ತೆ ಕಥೆ ಬರೆಯಲೂ ನಿರುತ್ಸಾಹ. ಲೇಖನಿ ಕೈಯಲ್ಲಿ ಹಿಡಿದು ಕುಳಿತರೆ ಬಿಳಿಯ ಹಾಳೆಯ ಮೇಲೆ ಅಸ್ಪಷ್ಟವಾಗಿ ಕಾಣುವುದು—"ನೀನು ನಿರುದ್ಯೋಗಿ!" ಹಾಳಾಯಿತು. ಈ ಹವ್ಯಾಸ. ನನಗೆ ಸ್ಫೂರ್ತಿಯಿಲ್ಲ. ನಾನು ಕಥೆ ಬರೆಯುವುದಾದರೂ ಹೇಗೆ?

ಹವ್ಯಾಸ ಬಿಡಲಿಲ್ಲ!

"ನೀನು ಕಥೆ ಬರೆಯದಿರ ಬೇಡ. ನೀನೇ ನಿನಗೆ ಸ್ಫೂರ್ತಿ"—ಅಂತರಾತ್ಮ ಕೇಳಿತು. ನಾನೇ ನನಗೆ ಸ್ಫೂರ್ತಿ! ನಾನು ನಿರುದ್ಯೋಗಿ. ಅದೇ ಸ್ಫೂರ್ತಿ! ಅದೇ ಕಥಾವಸ್ತು ನಾನು ಬರೆದುದೂ ಅದೇ ಕಥೆ—ನಿರುದ್ಯೋಗಿ.

---

## ಕಳ್ಳ ಹಗೆ ಸುಳ್ಳೆ ಬಗೆ

(ಪಾಕಿಸ್ತಾನ, ಸ್ವಾತಂತ್ರ್ಯವಾಗಿ ಇಷ್ಟು ವರ್ಷ ಆದರೂ, ಅಲ್ಲಿಯ ಜನಕ್ಕೆ, ಅಲ್ಲಿಯ ಆಡಳಿತದಾರರು ಏನನ್ನು ಕೊಟ್ಟಿದ್ದಾರೆ? ಉದ್ಯೋಗ ವರ್ಧನೆ ಮಾಡಿದ್ದಾರೆಯೇ? ತಮ್ಮ ಜನತೆಗೆ ಅನ್ನ ಸಮೃದ್ಧಿ ಸಾಧಿಸಿದ್ದಾರೆಯೇ ಶಿಕ್ಷಣ ಉದಾತ್ತ ಧ್ಯೇಯ ಕೊಟ್ಟಿದ್ದಾರೆಯೆ? ಯಾವುದೂ ಇಲ್ಲ. ಪಾಕಿಸ್ತಾನದ ಆಡಳಿತಗಾರರು ತಮ್ಮ ಜನಕ್ಕೆ ಕೊಟ್ಟದ್ದು ಕೇವಲ ಮತವೈರ ಭಾರತೀಯರ ದ್ವೇಷ, ಕಳ್ಳ ಅತಿಕ್ರಮಣದೀಕ್ಷೆ)

ಕಳ್ಳಹಗೆ, ಸುಳ್ಳ ಬಗೆ, ಕೊಲ್ಲಿನ ಭ್ರಷ್ಟ |
ರೊಳ್ಳೆ ರಂಪುಳ್ಳರಾ ಸೀಳುವಡೆ ಇಷ್ಟ ||
ಹೊಕ್ಕು ಹೊಡೆ, ಇಕ್ಕು ನಡೆ ಸಿಕ್ಕಿಹನು
ದುಷ್ಟ |
ಉಕ್ಕಿಲೆದೆ ಉಕ್ಕಿನದೆ, ರಕ್ಕಸನ ನಷ್ಟ ||
ಇಷ್ಟುದಿನ ತಾಳಿದೆವು
ಮುಳ್ಳಾಡಿಸಿದ್ದರು |
ನಮ್ಮ ಸೀಮೆಯ ಭೂಮಿಯನೆ
ಕದ್ದರು ||
ನಾಡವ್ವೆ ನಮ್ಮವ್ವೆ, ಅದಕೊರೆದು
ಕೊಟ್ಟೆವು |
ನೆಮ್ಮದಿಯೊಳಿಂಲೆಂದು ಈ ಬಂಧು
ಶ್ರಮಬಟ್ಟೆವು ||
ಅದರಿವ ಮಾತ್ರ ಬೋಧಿಸಿದ ಮತ
ವೈರ |
ತನ್ನ ಜನಕೆಲ್ಲನ್ನು ವಸ್ತ್ರ ಆಧಾರ ||
ಬರಿಯ ವೈರ ಕಿರಿಗೊಟ್ಟೆ ಸರಿನಾದ ಜನಕೆ
ಒರಿ ಮೊಲು ಉರಿಗುಂಡು ಸಾತೀತೆ ರಣಕೆ||
ಕೊಲ್ಲುವುದು ಮತವೈರ ತನ್ನ ತನ್ನವರ|
ಹಿತ ಚಿತ್ರ ನರಕಕ್ಕೆ ಆಡಳಿತಗಾರ||
ಸೀಳಿರೀ ಮುಳಿಂಸ ಸಿಕ್ಕಲ್ಲಿ ಹಿಡಿದು |
ಕೊಲ್ಲದ ಸೀ ಕೂಳ್ಳೆಗಾರರನು ತೊಡೆದು|
ಮಾತು ಮಾತಿಂಗೆ ಮತಗಣನೆ ಎಂಬ |
ಅತ್ತಿತ್ತ ಮಿಸುಕಗೊಡ ತನ್ನವರ ಈ |
ಕುಂಬ ||

ಲೇ: ಶ್ರೀ ನಾರಾಯಣ ಸಂಗಮ.
ಸೌಜನ್ಯ: ಆಕಾಶವಾಣಿ, ಪಿ. ಐ. ಬಿ.





**ಅಸ್ತಮಾ ರೋಗಿಗಳ ತಿಳುವಳಿಕೆಗೆ**

ರಿಜಿಸ್ಟ್ರಿಯಾದ ಚಿತ್ರಕೂಟ ಅಸ್ತಮಾ ಪರಿಹಾರಕ ಬೂಟಿಯನ್ನು ತಾ. 10.10.66ನೇ ಹುಣ್ಣಿಮೆ ರಾತ್ರಿ ಕ್ಷೀರನೊಂದಿಗೆ ಸೇವಿಸುವುದರಿಂದ ಅಸ್ತಮಾ, ಶ್ವಾಸ ಕೆಮ್ಮು, ನೆಗಡಿ ಪರಿಹಾರವಾಗುತ್ತದೆ. ಕೂಡಲೇ ಜುಣ್ಣೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram, P. O. Chitrakot U. P.

**NAVAYUGA 7—10—1965**
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೭-೧೦-೬೫ರಿಂದ ೧೩-೧೦-೬೫ರ ವರೆಗೆ

### ೧ ಮೇಷ

ಜನ್ಮಪತಿಯಾದ ಕುಜನು ಅಷ್ಟಮಕ್ಕೆ ಬಂದಿಹ ಕಾರಣ ಆರೋಗ್ಯ ವಿಚಾರದಲ್ಲಿ ತುಂಬ ಜಾಗರೂಕರಾಗಿರಿ. ಮೋಟಾರು, ಸೈಕಲ್ ಸ್ಕೂಟರ್ ಮೊದಲಾದ ವಾಹನಗಳಲ್ಲಿ ಪ್ರಯಾಣವನ್ನು ಸದ್ಯ ಬಹಿಷ್ಕರಿಸುವುದೊಳ್ಳಿತು. ನೌಕರಿ ಉದ್ಯಮಾದಿಗಳಲ್ಲಿ ಫಲಾಪ್ತಿಯು ತೃಪ್ತಿಕರವಿರುವದು. ಅಧಿಕ ವಿಚಾರದಲ್ಲಿ ನಿಶ್ಚಿಂತರಾದ ನಿಮಗೆ ಸಣ್ಣ ಪುಟ್ಟ ಗೃಹಕಲಹಗಳು ತಲೆದೋರಲಿವೆ. ತಾ. 7, 8, 11, 12 ಅನುಕೂಲ.

### ೨. ವೃಷಭ

ನಿಮ್ಮ ಪರಿಸ್ಥಿತಿಯಿಂದು ಮುಂಚಿಗಿಂತ ಸ್ವಲ್ಪ ಸುಧಾರಿಸಿತಾದರೂ ಮನೋನೆಮ್ಮದಿಯು ನಿಮಗಿರಲಾರದು. ಸ್ತ್ರೀ ನಿಮಿತ್ತವಾಗಿ ಕಲಹ ಅಪವಾದಾದಿಗಳಿಗೆ ಗುರಿಯಾಗುವಿರಿ. ವಿಶೇಷತಃ ಸತಿಪತಿಗಳಲ್ಲಿ ವಿರಸವಧಿಕವಾಗಲಿದೆ. ಉದ್ಯಮ ವ್ಯವಹಾರಗಳು ನಿರಾತಂಕವಾಗಿ ಸಾಗಲಿವೆ. ಜನಾದರವಂ ಗಳಿಸಿದ ನಿಮಗೆ ತಾ. 7ರಿಂದ 10ರ ವರೆಗಿನ ದಿನಗಳು ಸುಖಭೋಗ ಲಾಭದಾಯಿಗಳಾಗಿವೆ.

### ೩. ಮಿಥುನ

ನಿಮ್ಮ ಲಾಭಪತಿಯಾದ ಕುಜನೊಬ್ಬನನ್ನುಳಿದು ಇತರ ಎಲ್ಲಾ ಗ್ರಹರ ಅವಕೃಪೆಗೆ ಪಾತ್ರರಾದ ನಿಮಗೆ ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಸೋಲು ನಷ್ಟಗಳುಂಟಾಗಲಿವೆ. ಆದರೂ ಶತ್ರು ದಮನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುವಿರಿ. ಸೋದರ ವರ್ಗದಲ್ಲೂ ಹೆಂಡತಿ ಮಕ್ಕಳ ಕೂಡೆ ಸಹಾ ಮನಸ್ತಾಪ ಕಲಹಗಳುಂಟಾಗಲಿವೆ. ಬಹುಮುಖವಾದ ಖರ್ಚುಗಳಿಗೊಳಗಾದ ನಿಮಗೆ ತಾ. 9ರಿಂದ 12ರ ವರೆಗಿನ ದಿನಗಳು ಅನುಕೂಲವಾಗಿ ಪರಿಣಮಿಸುವವು.

### ೪ ಕರ್ಕಟ

ಧನಸುಖ ಲಾಭಪತಿಗಳ ಅನುಗ್ರಹಕ್ಕೆ ಪಾತ್ರರಾಗಿರುವ ನಿಮಗೆ ಸದ್ಯ ಹಣದ ಕೊಂತೆ ಕಾಣಸದು. ಆದರೂ ಆಕಸ್ಮಿಕ ಪ್ರವಾಸದಿಂದಾಗಿ ದೇಹಾಲಸ್ಯ ವ್ಯರ್ಥ ಖರ್ಚುಗಳಿಗೆ ಗುರಿಯಾದೀರಿ. ಶತ್ರುವರ್ಗದವರು ಹೆಚ್ಚಿನ ಉಪದ್ರವವಂ ಕೊಡಲಿರುವರು. ಬಂಧುಗಳ ನೆರವೂ ನಿಮಗಿರದು. ಸತ್ಕರ್ಮ ಸದಾಚಾರ ನಿರತರಾದ ನಿಮಗೆ ವಾರಾಂತ್ಯದ 3 ದಿನಗಳು ಅನುಕೂಲವಾಗಿವೆ.

### ೫. ಸಿಂಹ

ಕರ್ತವ್ಯದಕ್ಷರೂ ಕಾರ್ಯತತ್ಪರರೂ ಆದ ನಿಮಗೆ ಈ ವಾರವು ಸಾಕಷ್ಟು ಸುಖಮಯವಾಗಿ ಪರಿಣಮಿಸಲಿದೆ. ಸಮವಾಸ ದೋಷದಿಂದಾಗಿ ಜನಾಪವಾದಕ್ಕೆ ಸಿಲುಕಲಿರುವಿರಿ. ಅಧಿಕಾರಿವರ್ಗದವರ ವಕ್ರದೃಷ್ಟಿಯು ನಿಮ್ಮ ಮೇಲಿರುವುದರಿಂದ ಅತೀವ ಜಾಗರೂಕತೆಯಿಂದ ಕೆಲಸ ನಿರ್ವಹಿಸಬೇಕಾಗುವದು. ಪಿತ್ಥದೋಷವು ಆಗಾಗ ಕಂಡುಬರಲಿದೆ. ತಾ. 1, 8, 13 ಈ ದಿನಗಳು ತುಂಬ ಅನುಕೂಲವಾಗಿವೆ.

### ೬. ಕನ್ಯಾ

ನಿಮ್ಮ ಯೌವನತ್ವ ಮನೋರಥಗಳು ನಿರ್ವಿಘ್ನದಿಂದ ಪೂರ್ತಿಗೊಳ್ಳಲಿವೆ. ಜನತೆಯ ಸಹಕಾರಯುಕ್ತರಾದ ನಿಮಗೆ ರಾಜಕೀಯ ರಂಗದಲ್ಲಿ ವಿಜಯವು ಕಟ್ಟಿಟ್ಟ ಗಂಟೆನಂತಿರುವುದು. ಎಂತಹ ಪ್ರಬಲ ಪ್ರತಿಪಕ್ಷಿಯೂ ಕೂಡ ಇಂದು ನಿಮಗೆ ತಲೆಬಾಗಲಿರುವನು. ವ್ಯವಹಾರ ಚತುರರಾದ ನಿಮಗೆ ಸರ್ವತ್ರ ಸನ್ಮಾನಗಳು ದೊರೆಯಲಿವೆ. ವಾರಾದಿಯ 4 ದಿನಗಳು ವಿಜಯ ಲಾಭದಾಯಿಗಳಾಗಿವೆ.

### ೭. ತುಲಾ

ನಿಮ್ಮ ದುಡಿಮೆಯು ಸಾಕಷ್ಟು ತೃಪ್ತಿಕರವಾಗಿದ್ದರೂ ಗಳಿಸಿದುದನ್ನು ಉಳಿಸುವ ದೃಷ್ಟಿ ನಿಮ್ಮಲ್ಲಿಲ್ಲವು. ಋಣಂ ಕೃತ್ವಾ ಘೃತಂ ಪಿಬೇತ್ ಎಂಬ ಗಾದೆಯಂತೆ ನೀವಿಂದು ಸ್ವಂತ ಸುಖಭೋಗಗಳಿಗಾಗಿ ಹೆಚ್ಚಿನಂಶ ವ್ಯಯಿಸುವಿರಿ. ನಿಷ್ಕರವಾದಿಗಳಾದ ನಿಮಗೆ ಹಲವರ ಕೂಡೆ ಕಲಹವಾದೀತು ರಾಜಕೀಯ ರಂಗಕ್ಕಿಂದು ಪ್ರವೇಶಿಸದಿರಿ. ತಾ. 9ರಿಂದ 12ರ ವರೆಗಿನ ದಿನಗಳು ಅನುಕೂಲವಾಗಿವೆ.

### ೮. ವೃಶ್ಚಿಕ

ಕರ್ಮಪತಿಯಾದ ರವಿಯು ಲಾಭಕ್ಕೆ ಬಂದಿದ್ದರೂ ಧನಪತಿಯಾದ ಗುರುವಿನ ಆಗ್ರಹಕ್ಕೆ ಪಾತ್ರರಾಗಿರುವ ನಿಮ್ಮ ಕಾರ್ಯಕಲಾಪಗಳು ಎತ್ತು ಬರುವಾಗ ಗಾಣ ಮುರಿಯಿತೆಂಬ ಗಾದೆಯಂತೆ ನಿರರ್ಥಕವಾಗಲಿವೆ. ಮನೋರೋಗದಿಂದ ಬಳಲುತ್ತಿರುವ ನಿಮಗೆ ಸ್ವಜನ ವಿರೋಧ ವಿಯೋಗಗಳುಂಟಾಗಲಿವೆ. ಆದರೂ ವಾರಾಂತ್ಯದ 3 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

### ೯. ಧನು

ದೈವಬಲದಿಂದ ಪರಿಪೂರ್ಣವಾಗಿರತಕ್ಕ ನೀವು ಪ್ರತಿಯೊಂದು ಕಾರ್ಯಗಳಲ್ಲೂ ಸಂತೃಪ್ತರಾಗುವಿರಿ. ಯಾವೊಂದು ನ್ಯೂನಾತಿರೇಕಗಳೂ ನಿಮ್ಮಲ್ಲಿಂದು ಕಾಣಿಸಲಾರವು. ಧನ ಜನ ಬೆಂಬಲದಿಂದ ಸದಾ ಕೂಡಿರತಕ್ಕ ನಿಮಗೆ ಕಾಲ ಕಳೆದುದು ತಿಳಿಯಲೊಲ್ಲದು ರಾಜಕೀಯ ರಂಗದಲ್ಲಿ ಅಧಿಕ ವ್ಯಯವಾಗುವ ಸಂಭವವಿದೆ. ತಾ. 7, 8, 13 ಅತ್ಯುತ್ತಮ ದಿನಗಳು.

### ೧೦. ಮಕರ

ನಿಮ್ಮ ಸುಖಲಾಭಪತಿಯಾದ ಅಂಗಾರಕನಿಂದು ಸ್ವಕ್ಷೇತ್ರವಾದ ಲಾಭಸ್ಥಾನದಲ್ಲೇ ಕುಳಿತಿರುವ ಕಾರಣ ಪವಿತ್ರಮಾಕ್ಕಿಂತಲೂ ಅಧಿಕವಾದ ಫಲವನ್ನು ಪಡೆವಿರಿ. ಕಫದೋಷವು ಆಗಾಗ್ಗೆ ಕಾಣಿಸಿಕೊಳ್ಳಲಿದೆ. ಅಧಿಕಾರಿಗಳ ಕೃಪೆಗೆ ಪಾತ್ರರಾದ ನಿಮಗೆ ಉದ್ಯೋಗದಲ್ಲಿ ಭಡತಿಯು ಸಂಭವವಿದೆ. ತಾ 9, 10 ಈ ದಿನಗಳು ವಿಜಯ ಧನಲಾಭಕಾರಿಗಳಾಗಿವೆ.

### ೧೧ ಕುಂಭ

ಧನಲಾಭಪತಿಯಾದ ಬೃಹಸ್ಪತಿಯು ಪೂರ್ಣ ದೃಷ್ಟಿಯಿಂದ ನಿಮ್ಮ ರಾಶಿಯನ್ನು ನೋಡುತ್ತಿರುವುದರಿಂದ ಶನೈಶ್ಚರನ ಕಾಟವಿದ್ದರೂ ಆರೋಗ್ಯಕ್ಕೆ ಹಾನಿ ಬರಲಾರದು. ಮಾತ್ರವಲ್ಲದೆ, ಆರ್ಥಿಕ ಪರಿಸ್ಥಿತಿಯು ತುಂಬಾ ಸುಧಾರಿಸಲಿದೆ. ವಿನಾಕಾರಣ ವಾಕ್ಕಲಹವುಂಟಾಗುವ ಸಂಭವವಿದೆಯಾದ ಕಾರಣ ಮಿತಭಾಷಿಯಾಗಿರುವುದೊಳ್ಳಿತು. ತಾ. 7, 8, 11, 12 ಇತರ ದಿನಗಳಿಗಿಂತ ಉತ್ತಮವಿರುವವು.

### ೧೨. ಮೀನ

ಕಳೆದ ದಿನಗಳಿಗಿಂತ ಉತ್ತಮವಾಗಿ ಕಾಣಿಸುವದಾದರೂ ಮನಸ್ಸಿಗೆ ನೆಮ್ಮದಿಯಿರದು. ಎಷ್ಟೇ ದುಡಿದರೂ ದಿನದ ಕೊನೆಯಲ್ಲಿ ಕಾಸೊಂದೂ ಉಳಿಯಲಾರದು. ಕುಜನರ ಸಹವಾಸ ಸಂಸರ್ಗಗಳಿಂದ ವ್ಯರ್ಥ ಖರ್ಚುಗಳು ಹೆಚ್ಚಲಿವೆ. ವಿಶೇಷತಃ ರಾಜಕೀಯ ರಂಗದಲ್ಲಿ ಧನ ಹಾನಿಯಾದೀತು. ಸ್ವಜನರಿಂದ ಪರಿತ್ಯಕ್ತರಾದ ನಿಮಗೆ ತಾ. 9, 10 ಇದ್ದುದರಲ್ಲಿ ಉತ್ತಮವಾಗಿ ಕಾಣಿಸಲಿವೆ.

## ವೀರ ಭೆಟ

ಗುಡುಗುತಿದೆ ರಣರಂಗ
ಗೋಣಗಿಲ್ಲ ಭಟನು
ನಡುಗುತಿದೆ ಭೂಮಿಯಿಡಿ
ನಡುಗಿಲ್ಲ ಭಟನು
ಕಿವುಡಾದರೂ ಕಿವಿಯು
ಮುಚ್ಚಿಲ್ಲ ಭಟನು
ಸಿಡಿಸಿರೂ ಗುಂಡೊಂದು, ಸನಿಹದಲ್ಲಿ
ಕದಲದೆ ನಿಂತಿಹನು ಅತ ನಿಂತಲ್ಲಿ
ಪ್ರಾಣವೇ ಹಾರಿದರೂ ಇಲ್ಲ, ಚಿಂತಿಲ್ಲ
ರಣರಂಗದಿಂ ಆತ ಹಿಂತಿರುಗಲೊಲ್ಲ
ಜಯವೊಂದೇ ರಣಕ್ಷೇತ್ರದಲಿ ಅವನ
ಗುರಿಯಂತೆ
ಶತ್ರುವನು ಯಮಪುರಿಗೆ
ಅಟ್ಟುವುದೆ ಚಿಂತೆ
ಭಾರತಿಯ ರಕ್ಷಿಸಲು ಬಲಿಗೊಳ್ಳುವವನು
"ತ್ಯಾಗಕ್ಕೆ ನಾನಿದೋ ಸಿದ್ಧನಾಗಿಹೆನು"
ಕಾದಾಡಿ ಬಳಲಿ ಬೆಂಡಾದರನ್ನೂ
ವೀರಕಳೆ ಅಂದು ಮುಖದ ಮೇಲವನ
ಪ್ರಾಣವಂ ಬಿಟ್ಟರೂ ಆತ ಬಿಡನು
ಮಾತೃಭೂಮಿಯೊಳಿಹ ಪ್ರೇಮವನ್ನ

ಶ್ರೀ ಬಿ. ನರಸಿಂಗರಾವ್

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**ಸುಲಭದಲ್ಲಿ ಇಂಗ್ಲಿಷ್**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

**ಸುಲಭದಲ್ಲಿ ಪತ್ರಲೇಖನ**

**LETTER WRITING MADE EASY**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

**ಹೊಸಕೆರೆ ಚಿದಂಬರಯ್ಯನವರ**
**ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ**

**ಗೀತೆಯ ಕೈಗನ್ನಡಿ**

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

**ಉಡುಪಿ ಕರ್ನಾಟಕ ಸಂಘದ**
**ಒಂದೊಂದು ರೂಪಾಯಿ ಬೆಲೆಯ**
**ಮೂರು ಪ್ರಕಟಣೆಗಳು.**

**ಚಂದ್ರಲೋಕಕ್ಕೆ ಪ್ರಯಾಣ**
ಯು. ರಾಘವೇಂದ್ರ ಆಚಾರ್ಯ, ಎಂ.ಎ.

**ಸಾಮಾನ್ಯ ರೋಗಗಳು**
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

**ಭೌತಿಕ ದರ್ಶನ**
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

**ನವಯುಗಕ್ಕೆ**
**ಚಂದಾದಾರರಾಗಿ ಪ್ರೋತ್ಸಾಹಿಸಿರಿ.**
**ವಾರ್ಷಿಕ ಚಂದಾ ರೂ. ೧೦**

Edited, Printed & Published by K. H. Shetty at the Navayuga Press, Udipi, S. India.

# నవయుగ

14—10—1965

226

౧౦
పై

# ರೈತ ಮುರುಗ

ತಮಿಳು ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

ಹಿಂದಿನ ವಾರ ಪ್ಯೆಡೋರುತ್ತೇನೆ ಎಂದು ಹೇಳಿಕೊಂಡ ರೈತ ಮುರುಗ ನಾಲ್ಕು ವಾರಗಳ ನಂತರವೇ ಮುಂದೆ ಬಂದು ನಿಂತಿದ್ದಾನೆ. ಇದೇಕೆ ಹಾಗೆ ಎನ್ನುವವರೇ ಎಲ್ಲಾ. ಪಾಕ, ನಮ್ಮ ಪವಿತ್ರ ಜನ್ಮಭೂಮಿಯ ಮೇಲೆ ಪಾಕಿಸ್ತಾನ ಆಕ್ರಮಣ ನಡೆಸಿ ರಣರಂಗವನ್ನು ನಿರ್ಮಿಸಿರುವಾಗ, ರೈತ ಮುರುಗ ತನ್ನ ಸಹಜ ಸೌಜನ್ಯದಿಂದ ನುಡಿದ: "ವೀರ ಗೀತೆ ಹಾಡಿಸಿರಿ; ನಾ ಹಿಂದೆ ಉಳಿಯುತ್ತೇನೆ" ಆತನ ಕಳಕಳಿಯಲ್ಲಿ ಸಹಜತೆಯಿತ್ತು.

ಇದೀಗ ಪಾಕ್ ಯುದ್ಧ ಭೀತಿ ನಿಂತಿದೆಯೆಂದಲ್ಲ; ಆದರೂ ಒಮ್ಮೆಗೆ ಆ ಕೆಂಡದ ಮೇಲೆ ಬೂದಿ ಕವಿದಿದೆ. ಭಾವಿ ಕದನದ ತಯಾರಿಗಾಗಿ ಅಯ್ಯೂಬ ಖಾನ್ ಸಮರ ವಿರಾಮವನ್ನು ಒಪ್ಪಿ ಅದನ್ನೇ ಉಲ್ಲಂಘಿಸುತ್ತಿದ್ದಾರೆ. ಆದರೂ ಇನ್ನೊಮ್ಮೆ ಪಾಕಿಸ್ತಾನವೋ ಕೆಂಪು ಚೀನಾವೋ ರಣರಂಗಕ್ಕೆ ಭಾರತವನ್ನು ಕೈ ಹಿಡಿದೆಳೆಯುವುದರೊಳಗೆ "ರೈತ ಮುರುಗ" ನಿಮ್ಮ ಮುಂದೆ ಬಂದು ಮನದಲ್ಲಿ ಹಿಂದಿಸಿ ಅದೃಶ್ಯನಾಗಾನು ಎಂಬ ವಿಶ್ವಾಸದಿಂದ ಆವನನ್ನು ಎಳೆದು ತಂದಿದ್ದೇವೆ. ಒಲ್ಲದ ಮನದಿಂದ ಆತನೂ ಹೂಂಗುಟ್ಟಿದ್ದಾನೆ. ಭೂಮಿ ತಾಯಿಯ ಸರಳ ಮುಗ್ಧ ಮನಸ್ಸಿನ ಮಗನಲ್ಲವೆ ಆತ?

ಆಲವಂತಿ ಹಳ್ಳಿಯಲ್ಲಿ ಕಾವೇರಿಯು ಸಿರಿವಂತಿಕೆಯಿಂದ ತುಂಬಿ ಹರಿಯುವ ನದಿ. ಅದರ ಒಲ ದಡದಲ್ಲಿ ರಾಮಚಂದ್ರನ ಬಹು ಚೆಂದದ ತೆಂಗಿನ ತೋಟವಿದೆ. ಮನೆಯಿಂದ ಅದೇನೂ ಬಹು ದೂರದಲ್ಲಿಲ್ಲ. ಸುಮಾರು ಏಳು ತಲೆಮಾರುಗಳ ಹಿಂದಿನಿಂದಲೂ ಶಾಂತವಾಗಿ ಮತ್ತು ಭದ್ರವಾಗಿ ನಿಂತಿರುವ ಮುರುಗನ ಪೂರ್ವಿಕರ ಮನೆಯೂ ಅಲ್ಲಿದೆ. ಆ ಹಳ್ಳಿಯಲ್ಲಿ ಆ ತೋಟವು ಅದೆಂತಹವರ ಮನಸ್ಸನ್ನೂ ಆಕರ್ಷಿಸುವಂತಹದಿದೆ. ಆಲವಂತಿಯ ಭೂಮಿಗೆ ಮುರುಗನ ಉಪಯುಕ್ತತೆ ಬಹಳ.

ಅದು ಜೂನ್ ತಿಂಗಳ ಮುಂಜಾನೆ. ಮೋಡರಹಿತ ಶುಭ್ರ ಆಕಾಶದಿಂದ ವಿಷುವ ಪ್ರದೇಶದ ಸೂರ್ಯ ತನ್ನ ಪ್ರಭಾವವನ್ನು ಪ್ರಕಟಿಸಲು ಆಗಲೇ ಪ್ರಾರಂಭಿಸಿದ್ದನು. ಹೆಚ್ಚು ಹೊತ್ತು ನಿದ್ದೆ ಮಾಡಿದುದಕ್ಕೆ ತನ್ನಲ್ಲಿ ತಾನೇ ಬೇಸರ ಪಡುತ್ತ ಮುರುಗನು ಗದ್ದೆಗಳಿಗೆ ಗೊಬ್ಬರವನ್ನು ಸಾಗಿಸಲಿಕ್ಕಾಗಿ ಎತ್ತುಗಳನ್ನು ಗಾಡಿಯ ನೊಗಕ್ಕೆ ಕಟ್ಟುತ್ತಿದ್ದನು. ಅದೇ ಸಮಯದಲ್ಲಿ ಅಂದಿನ ಕಾರ್ಯಕ್ರಮಗಳ ಪಟ್ಟಿಯನ್ನು ಗುಣುಗುಟ್ಟುತ್ತ ತಯಾರಿಸಿಕೊಳ್ಳುತ್ತಿದ್ದನು. ಪರಿಚಿತವಾದ ಧ್ವನಿಯು ಕಿವಿಯ ಮೇಲೆ ಬಿದ್ದಂತಾದೊಡನೆ ನಿಜವೆಂದು ಖಚಿತಪಡಿಸಿಕೊಳ್ಳಲು ಹಿಂದಕ್ಕೆ ತಿರುಗಿದಾಗ ಅವನ ಧಣಿಯ ಧ್ವನಿ ಆಶ್ಚರ್ಯವನ್ನುಂಟು ಮಾಡಿತು. ಹಿಂದಿನಿಂದ ಸ್ವಲ್ಪ ದೂರದಲ್ಲಿ ಸ್ವಾಮಿಯು ನಿಂತುಕೊಂಡಿದ್ದನು.

"ಮುರುಗ, ಒಂದು ಆಂಗ್ಲೇಯ ಗಾದೆ ಜ್ಞಾಪಕಕ್ಕೆ ಬರುತ್ತಿದೆ: ದುರದೃಷ್ಟದ ಯಕ್ಷಿಣಿ ಯಾವಾಗಲೂ ಒಬ್ಬಂಟಿಗಳಾಗಿ ಬರುವದಿಲ್ಲ." ಮೃದುವಾದ ಹಾಗೂ ದುಃಖಪೂರಿತ ಸ್ವರವು ಕೇಳಿ ಬಂತು. ತೆಂಗಿನ ಸೋಗೆಗಳು ಶಬ್ದ ಗೈಯುತ್ತ ಆ ಸ್ವರವನ್ನು ಇನ್ನಷ್ಟು ಕ್ಷೀಣಿಸಿದುವು.

"ತಮಿಳಿನಲ್ಲೂ ಒಂದು ಇದೆ." ಗಾಯವಾಗಿರುವ ಕಾಲಿನ ಬೆರಳಿಗೆ ಪುನಃ ಪುನಃ ಗಾಯವಾಗುತ್ತದೆ." ಮುರುಗನು ಉತ್ತರ ಕೊಟ್ಟನು. ಅವನಿಗೆ ಮನೆ ಭಾಷೆಯ ಮೇಲೆ ಬಹಳ ಮಮತೆ. ತನ್ನದೇ ಕೆಲ ಕಾರಣಗಳಿಂದ ಅವನು ಪರಭಾಷೆಯನ್ನು ಗುಪ್ತವಾಗಿ ತಾತ್ಸಾರ ದೃಷ್ಟಿಯಿಂದ ಕಾಣುತ್ತಿದ್ದನು.

"ಸಂಭಾವ್ಯ ದೇಶಭಕ್ತ ಮುರುಗ" ರಾಮಚಂದ್ರನು ಅದೇ ಚಿಂತಾಕ್ರಾಂತ ಸ್ವರದಲ್ಲಿ ಮುಂದರಿಸಿದನು. "ಆ ಗಾದೆಯು ನನ್ನ ವಿಷಯದಲ್ಲಿ ಬಹು ಸತ್ಯವಿದೆ. ಆದರಲ್ಲೂ ತಮಿಳು ಗಾದೆಯು ಬಹು ಉಚಿತವಿದೆ. ನಾನು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ."

"ತೇರ್ಗಡೆ ಹೊಂದಲಿಲ್ಲ!" ಎತ್ತುಗಳ ಭಾರವನ್ನು ಸಡಿಲು ಬಿಟ್ಟು ಮುರುಗನು ಸುಮ್ಮನೆ ಮಾರ್ನುಡಿದನು. ಸೋಲುತಿರುವ ಧಣಿಯತ್ತ ಎತ್ತುಗಳು ನೋಡುತ್ತ ನಿಂತುವು. ಮೇಲ್ವಿಚಾರಕನ ಅಪೂರ್ವ ಭೇಟಿಯಿಂದಾಗಿ ತಮಗಿಂದು ಬಿಡುವು ಸಿಗಬಹುದೆಂಬಾಶೆಯಿಂದ ಅತ್ತ ಎಡೆ ಬಿಡದೆ ನೋಡುತ್ತ ನಿಂತುವು.

'ಎರಡು ವರ್ಷಗಳ ವ್ಯಾಸಂಗ ಮತ್ತು ಬಹಳಷ್ಟು ಹಣ ಹಾಳಾಗಿ ಹೋಯಿತು," ಹೆಚ್ಚು ತನಗೆನೇ ಕೇಳುವಂತೆ ಹೇಳುತ್ತ, 'ಅದು ಕೂಡಾ ಅಷ್ಟು ದೊಡ್ಡ ವಿಷಯವಲ್ಲ. ಈ ಬಿ. ಎ. ಯ ಹೆಮ್ಮೆಯನ್ನುಂಟುಮಾಡಿತ್ತು. ಆ ನನ್ನ ಸ್ವಾರ್ಥದಿಂದಾಗಿ ತಾಯಿಯ ವಿರುದ್ಧ, ಅವರ ತೀಕ್ಷ್ಣ ಇಚ್ಛೆಯ ವಿರುದ್ಧ ಗಲಾಟೆ ಮಾಡುವಂತಾಯಿತು.'

'ಹೌದು, ಸ್ವಾಮಿ,' ಮುರುಗನು ನೂಲನ್ನು ಸರ್ರನೆ ಕಿತ್ತು ಕೊಂಡನು. ಅಭಿಪ್ರಾಯವನ್ನು ಹೊರಗೆಡಹಲು ಸಂದರ್ಭವನ್ನು ಕಾಯುತಿದ್ದವನಿಗೆ ತಾನಾಗಿಯೇ ದೊರಕಿತು. 'ಮೃತ್ಯುಶಯ್ಯೆಯಲ್ಲಿ ಕೂಡಾ ಅವರು ವ್ಯಥಿಸಪಟ್ಟಿದ್ದರಾದರೂ ನಿಮ್ಮ ಹಟಕ್ಕೆ ಕ್ಷಮಿಸಿದ್ದಾರೆ. ನೀವು ಯಾವಾಗಲೂ ಕಿಡಿಗೇಡಿ ಮಗುವಾಗಿದ್ದರೂ ಅವರ ಅತಿ ಮುದ್ದಿನ ಕೂಸು. ತಾಯಿಯು ಮಾತ್ರ ಆಶೆ ಪಡುವಂತೆ. ಅವರೂ ತಾವು ಕೊನೆಯುಸಿರು ಎಳೆಯುವದಕ್ಕಿಂತ ಮುಂಚೆ ನಿಮ್ಮ ಕಲ್ಯಾಣ ಜೀವನವನ್ನು ಕಾಣಲು ಆಶೆಪಟ್ಟಿದ್ದರು. ಆವರ ಪುನೀತ ಹಾಗೂ ಅರಿಕೆಯ ಕುಲದಿಂದ ಹೆಣ್ಣನ್ನು ತರಬೇಕೆಂಬ ಇಚ್ಛೆ ಅವರಿಗಿತ್ತು. ನಿಮ್ಮ ತೀರ್ಥರೂಪರವರ ಮರಣಾ ನಂತರದ ಅವರ ಜೀವನದಲ್ಲಿ ಇದ್ದದ್ದು ಅದೇ ಒಂದು ಆಶೆಮಾತ್ರ. ತೆಂಗಿನ ಸಸಿಯನ್ನು ನೆಟ್ಟು ಕಾಪಾಡಿ ಅದರಲ್ಲಿ ಫಲವನ್ನು ಕಾಣುವಂತೆ ನಿಮ್ಮನ್ನು ಅವರು ಜಾಗ್ರತೆಯಿಂದ ಸಾಕಿ ಬೆಳೆಸಿದ್ದರು. ಆಶ್ಚರ್ಯಕರ ವಿರೋಧ ಅಭಿಪ್ರಾಯಗಳ ಅನುಭವದಿಂದ ನೀವು ಒಂದು ದಿನ ಓಡಿ ಹೋಗಬಹುದೆಂಬ ಭಯ ಅವರಲ್ಲಿತ್ತು. ಒಟ್ಟಿಗೆ—"

"ಮುರುಗಾ, ನಿನ್ನ ಕಂಪಿಸುತ್ತಿರುವ ಸ್ವರ ಮತ್ತು ಸ್ವಭಾವಗಳಿಂದ ಮೋಕ್ಷಶ್ರೀಯವರ ಮಾತುಗಳನ್ನು ಜ್ಞಾಪಕಕ್ಕೆ ತಂದು ಕೊಟ್ಟು ದುಃಖವನ್ನು ಹೆಚ್ಚಿಸಬೇಡ. ನಿನ್ನ ಶ್ರಮದ ಫಲವಾಗಿರುವ ಈ ಸಂಪತ್ತನ್ನು ಹೀರುತ್ತ ಇರುವ ಈ ವಿದ್ಯೆಯನ್ನು ನೀನು ತಿರಸ್ಕರಿಸುತ್ತಿರುವದು ನನಗೆ ಗೊತ್ತಾಗಿದೆ. ಮೊಂಡು ಮಾರ್ಗದಲ್ಲಿ ಹೋಗುತ್ತಿದ್ದಾಗ, ಸ್ವೇಚ್ಛಾಭಿಪ್ರಾಯದಲ್ಲಿದ್ದಾಗ ತಾಯಿಯವರು ಎಚ್ಚರಿಕೆ ಕೊಟ್ಟಿದ್ದರು. ನಿಜ, ನನ್ನ ಸ್ವಾಭಾವಿಕ ತತ್ವಜ್ಞಾನವು ಅವರ ಕಾಯಿಲೆಯನ್ನು ಹೆಚ್ಚಿಸಿತ್ತು, ಅಶಿಕ್ಷಿತ ಮನಸ್ಸಿಗೆ ನೋವನ್ನುಂಟುಮಾಡಿತ್ತು. ಅವರು ಶ್ರೇಷ್ಠ ಹಾಗೂ ಉತ್ತಮ ತಾಯಿ, ವಿಶಾಲ ಮತ್ತು ಇಕ್ಕಟ್ಟಿನ, ಅಶಿಕ್ಷಿತ ಮತ್ತು ಶುದ್ಧ, ಬುದ್ಧಿವಂತ ಮತ್ತು ಅಜ್ಞಾನಿ, ಹೀಗ ಬದಲಾವಣೆಯ ಕಾಲದ ದ್ವಂದ್ವ ರೀತಿಯ ಚಿಹ್ನೆ ಅವರಾಗಿದ್ದರು. ಅವಂದೇ ಅದ ಒಂದು ವಿಶಿಷ್ಟ ಸಂಸ್ಕೃತಿಯಲ್ಲಿ ಅವರು ಬೆಳೆದಿದ್ದರು. ಏನಿದ್ದರೂ ಅವರು ನನ್ನ ತಾಯಿಯಾಗಿದ್ದರು. ಹೌದು, ನಾನೊಬ್ಬ ನಿರ್ದಯಿ ಹಾಗೂ ವ್ಯಗಳ್ಳ ಮಗ— ಒಬ್ಬ ಕೇವಲ ಹುಡುಗನಿದ್ದೇನೆ.'

"ಆದರೆ, ಹೇಳು ನನಗೆ ಮುರುಗ' ರಾಮಚಂದ್ರನು ಕಲ್ಪನಾ ತರಂಗವನ್ನು ಬದಿಗೆ ಸರಿಸಿ ಕೇಳಿದನು. "ನಮ್ಮ ಕುಟುಂಬದ ರುಚಿಗೆ ಮತ್ತು ಸಂಪ್ರದಾಯಕ್ಕೆ ವಿರುದ್ಧವಾಗಿ ನನ್ನನ್ನು ಇಂಗ್ಲೀಷ್ ಶಾಲೆಗೆ ಸೇರಿಸಿದವರ್ಯಾರು? ಈ ಪದಾರ್ಥ ನಮ್ಮ ರಕ್ತದಲ್ಲಿಲ್ಲ. ನಾನು ನ್ಯಾಯಾಲಯದ ಭಾಷೆಯನ್ನು ಕಲಿತು ಈ ಸ್ಥಳದಲ್ಲಿ ಚಿಕ್ಕ ರಾಜನಂತೆ ಮೆರೆಯುವಂತಾಗಬೇಕೆಂದು ಹಾಗೆ ಮಾಡಿದರೇನು?"

"ತನಗಿರುವ ಒಬ್ಬನೇ ಒಬ್ಬ ಮಗನು ಪರಕೀಯ ಭಾಷೆಯನ್ನು ಕಲಿತು ಸಂಧ್ಯಾ ಪ್ರಾರ್ಥನೆಯನ್ನು ತಪ್ಪುತಪ್ಪಾಗಿ ಉಚ್ಚರಿಸಕೂಡದು, ಅಥವಾ ಉತ್ತರಕ್ರಿಯೆಯ ಅರ್ಘ್ಯ (ಪಿಂಡ)ವನ್ನು ದೋಷವಾದ ಉಚ್ಚಾರಣೆ ಅಥವಾ ವೈಜ್ಞಾನಿಕ ಅಲಕ್ಷ್ಯದಿಂದ ಕೊಡದಂತಾಗಲೆಂದು ನಿಮ್ಮ ತಂದೆಯವರು ವಿರೋಧಿಸಿದ್ದರು. ನಿಮ್ಮ ತಂದೆಯವರ ಅಭಿಪ್ರಾಯದಂತೆ ನೀವು ಇದ್ದದ್ದು ಸಂಸ್ಕೃತಕ್ಕಾಗಿ—

(ಹನ್ನೊಂದನೇ ಪುಟ ನೋಡಿರಿ)


# 8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... ... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7½ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7¾ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | ... ... | 4 |

## ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.




Telephone 226.

Estd. 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

# ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

## ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿಂಬೇಕು. ಕಾಲು ತಾವಿನ ಪ ಮಾಣ ದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆ ಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಲೇಖನ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

**ಚಂದಾದಾರರಿಗೆ—**

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ರವಾನೆ ಮಾಡುವಾಗಲಾಗಲಿ ಪತ್ರ ವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಚಿತ್ರದಲ್ಲಿ:

ಅಂತಾರಾಷ್ಟ್ರೀಯ ಹಿಂದೂ ಸಾಗರ ಯಾನದಲ್ಲಿ ಭಾಗವಹಿಸಿದ ಅಮೆರಿಕನ್ ಸಂಶೋಧನಾ ಹಡಗು ಆರ್ಗೋನಾಟ್ ಚಾರ್ಲ್ಸ್ ಡೆರೋಡ್'ರೊಡನೆ ಕೇರಳ ವಿಶ್ವವಿದ್ಯಾಲಯದ ಸಾಗರಿಕ ಸಂಶೋಧನಾಲಯದ ಶ. ಪಿ. ಬಾಲಕೃಷ್ಣನ್.



# ನವಯುಗ

| ಸಂಪುಟ ೪೫ | ಉಡುಪಿ | Vol. 45 |
| --- | --- | --- |
| ಸಂಚಿಕೆ ೬ | ೧೪—೧೦—೧೯೬೫ | No. 6 |

## ಪಾಂಚಜನ್ಯದ ಏಕನಾದ

ನಮ್ಮ ಭಾರತದ ಮೇಲೆ ಪಾಕಿಸ್ತಾನವು ಮೊತ್ತ ಮೊದಲು ಆಕ್ರಮಣ ಮಾಡಿತಾದರೂ ಅದನ್ನು ಜಗತ್ತು ಇಂದು ಹೇಳಲು ಸಿದ್ಧವಿಲ್ಲ. ಭಾರತವು ಆತ್ಮ ರಕ್ಷಣೆಗಾಗಿ ಪ್ರತಿ ದಾಳಿ ನಡೆಸಿತೆಂಬುದನ್ನು ಹೇಳುವವರೂ ಇಲ್ಲ. ಕಾಶ್ಮೀರವು ಭಾರತದ ಅಂಗವೆಂಬುದನ್ನು ಒಪ್ಪಿಕೊಳ್ಳುವ ಕೆಲವಾದರೂ ರಾಷ್ಟ್ರಗಳಿವೆ—ಇದೇ ನಮಗೆ ಸಂತೋಷ. ನಮ್ಮ ಮಿತ್ರರಾರು, ಶತ್ರುಗಳಾರು ಎಂಬುದು ಪಾಕ್ ಆಕ್ರಮಣದ ಫಲವಾಗಿ ತಿಳಿದು ಬರುವಂತಿದೆ. ಸಮರ ವಿರಾಮದ ಹೆಸರಿನಲ್ಲಿ ಭಾರತವನ್ನು ಮಣಿಸುವ ಸಂಚನ್ನು ವಿಶ್ವಸಂಸ್ಥೆಯು ಮಾಡಿತು. ದುರ್ದೈವವಶಾತ್ ಅದಕ್ಕೆ ಪಾಕಿಸ್ತಾನವೇ ಅಡ್ಡ ಬಂತು. ಸಮರ ವಿರಾಮವನ್ನು ಮಾಡಲೇ ಮಾಡಬೇಕೆಂಬ ಒತ್ತಾಯ ಉಭಯತರರ ಮೇಲೂ ಆದು ಹೊರಿಸಿತು. ಭುಟ್ಟೋ ಇದಕ್ಕೆ ಒಪ್ಪಬೇಕಾದರೆ, ವಿಶ್ವಸಂಸ್ಥೆಗೆ ಹೋಗಬೇಕಾಯಿತು. ಅಷ್ಟೆ ಅಮೆರಿಕೆ, ಬ್ರಿಟನ್ ಮೊದಲಾದುವುಗಳೊಡನೆ ವಿಚಾರ ವಿನಿಮಯ ಮಾಡಬೇಕಾಯಿತು. ಆದ್ದರಿಂದ ನಾವು ಮಾತ್ರವಲ್ಲದೆ ಸಮರವಿರಾಮದ ನಂತರದ ಪರಿಸ್ಥಿತಿಗಳು ಭಾರತದ ಮೇಲೆ ಬಹುಮುಖ ಒತ್ತಾಯವನ್ನು ಹೇರುವಂತಹವಿವೆಯೆಂಬುದು ವ್ಯಕ್ತವಾಗುತ್ತದೆ.

ಭದ್ರತಾ ಮಂಡಳಿಯ ಗೊತ್ತುವಳಿಯ ಮೊದಲನೆಯಂಶ, ಸಮರವಿರಾಮ, ಎರಡನೆಯದು ಉಭಯ ಸೇನೆಗಳು ಆಗಸ್ಟ ೫ರಂದಿದ್ದ ನೆಲೆಗಳಿಗೆ ಹಿಂದೆಗೆಯುವುದು. ವಿವಾದ ಬಗೆಹರಿಸಲು ಎತ್ತಿ ಮಾತುಕತೆ ನಡೆಸುವುದು. ಇವುಗಳ ಅರ್ಥವೇನೇ ಇರಲಿ, ಪಾಕಿಸ್ತಾನವು ಮಾಗಲನಯ ಅಂಶವನ್ನೇ ಇನ್ನೂ ಕಾರ್ಯಗತಗೊಳಿಸಲಿಲ್ಲ. ಏಮಾನದಾಳಿಯೊಂದಿದು ಉಳಿದಲ್ಲ ಬಗೆಯ ಹಾವಳಿ, ತೀವ್ರ ಮೋರ್ಟಾರ್ ಅನ್ನು ಅದು ಮುಂದುವರಿಸುತ್ತಿದೆ. ಹಾಗಿದ್ದರೂ ಭದ್ರತಾ ಸಮಿತಿಯಾಗಲಿ, ಅವರ ಹಿರಿಯ ಸದಸ್ಯರುಗಳೇ ಪಾಕ್ ಸರ್ವಾಧಿಕಾರಿಗಳಿಗೆ ಬುದ್ಧಿ ಹೇಳ ಹೋಗುವುದಿಲ್ಲ. ಭಾರತದ ಮೇಲೆಯೇ ಬಹುಮುಖ ಒತ್ತಾಯ ತರುವ ಸಂಚು ತೆರೆಯ ಮರೆಯಲ್ಲಿ ನಡೆಯುತ್ತಿದೆ. ಭಾರತವು ತನ್ನ ಪಾಕ್ ಸಂಬಂಧವನ್ನು ತಿಳಿಗೊಳಿಸಬೇಕು. ಇದರಿಂದ ಭಾರತ ಉಪಖಂಡಕ್ಕೆ ತುಂಬ ಒಳ್ಳೆಯದಾಗುವುದು; ವಿದೇಶಗಳಿಗೆ ಇವುಗಳಿಗೆ ನೆರವೀಯಲು ಅನುಕೂಲವಾಗುವುದು— ಇದು ಅಮೆರಿಕೆಯ ಬಯಕೆ. ಮಾತುಕತೆಯ ಮೇಜಿನಿಂದ ಗಗನಕ್ಕೆ ನೆಗೆದ್ದ ಅಯ್ಯುಬ—ಭುಟ್ಟೋ, ಭಾರತವನ್ನು ಶಾಂತಿಗಿಂತ ಶಸ್ತ್ರ ಮೂಲಕ ಬಗ್ಗು ಬಡಿಯಬಹುದು; ಶ್ರೀನಗರ—ಜಮ್ಮುಗಳನ್ನು ವಶಪಡಿಸಿ ಕಾಶ್ಮೀರವನ್ನೇ ನುಂಗಬಹುದೆಂದು ಬಹು ದೀರ್ಘ ಯೋಜನೆಯನ್ನು ತಯಾರಿಸಿದ್ದರು. ತಮ್ಮ ಕೆಂಪು ಮಾವನಿಂದ ಕಲಿತ ಪಾಠವಿದು. ಆದರೆ, ಅವರು ನಂಬಿದ ಶಕ್ತಿ ಅನಾವಶ್ಯಕವಾಗಿ ಭಾರತೀಯ ಯೋಧರ ಮುಂದೆ ಪ್ರಕಟವಾಯಿತು. ಈ ಬಗೆಯ ಆಕ್ರಮಣ ಶೀಲ—ಅನ್ಯಾಯ ಸರ್ವಾಧಿಕಾರಿ, ಮತಾಂಧರೊಡನೆ ಸಂಬಂಧ ತಿಳಿಗೊಳಿಸಬೇಕಾದರೆ, ಕಾಶ್ಮೀರವನ್ನು ಅವರಿಗೆ ಬಳುವಳಿ ಕೊಡಬೇಕು. ಹೀಗೆ ಹೇಳುವ ಅಧಿಕಾರ, ಎದೆಗಾರಿಕೆ ಯಾವ ದೇಶಕ್ಕೂ ಇಲ್ಲ ಅಂತಲೇ ನಾನಾ ಪರಿಯಲ್ಲಿ ಇದನ್ನು ಹೇಳುತ್ತಾರೆ. ಭಾರತವನ್ನು ಬೆದರಿಸಿ ಗದರಿಸಿ ನೋಡುತ್ತಿದ್ದಾರೆ. ಆದರೆ, ಇಂತಹ ಬೆದರಿಕೆ ಗದರಿಕೆಗಳಿಗೆ ಭಾರತ ಸೊಪ್ಪು ಹಾಕುವುದಿಲ್ಲ.

ಭಾರತದ ಬಗ್ಗೆ ಪಕ್ಷಪಾತ ಧೋರಣೆ ವಹಿಸಿದ ಬ್ರಿಟನ್ ತನ್ನ ನಾಲಗೆಯನ್ನು ತುಸು ಎಚ್ಚರಿಕೆಯಿಂದಿದೆ. ಭಾರತದ ವಾದವನ್ನು ಸಂಪೂರ್ಣ ತಳ್ಳಿಹಾಕಲು ಸಾಧ್ಯವಿಲ್ಲವೆಂದಿದೆ ಅದು. ಪಾಕ್ ತಪ್ಪು ಮಾಡಿದೆ ಎಂದು ಹೇಳದಿದ್ದರೂ ತಪ್ಪು ಮಾಡಲಿಲ್ಲ ಎಂದೂ ಹೇಳಲಿಲ್ಲ—ಇದರಿಂದ ಭಾರತ ತೃಪ್ತವಾಗಬೇಕು! ಅದು ಸಾಧ್ಯವಾದೀತೆ? ಇರಲಿ ಭಾರತವೀಗ ಸ್ವರಕ್ಷಣೆ ಮಾಡಿಕೊಳ್ಳುವಲ್ಲಿ ಸಮರ್ಥವಾಗಿದೆಯೆಂದು ಬ್ರಿಟನ್ ಅಭಿಪ್ರಾಯಪಟ್ಟು ಶಸ್ತ್ರಾಸ್ತ್ರ ನೆರವನ್ನು ನೀಡುವುದಿಲ್ಲವಂತೆ. ಭಾರಿ ಪ್ರಮಾಣದಲ್ಲಿ ಕೆಂಪು ಚೀನಾ ಆಕ್ರಮಣ ಮಾಡಿದರೆ, ಆ ಮೇಲೆ ನೆರವು ನೀಡುವ ವಿಚಾರವನ್ನು ಪರ್ಯಾಲೋಚಿಸಬಹುದಂತೆ! ಆಕ್ರಮಣಕಾರ ಪಾಕ್ ಮದಾಂಧರನ್ನು ಎಡೆ ಹಿಡಿದುದಕ್ಕೆ ಕಾಮನ್‌ವೆಲ್ತಿನ ರಾಣಿ ನೀಡಿದ ಬಳುವಳಿ ಹೇಗಿದೆ?

ಅಮೆರಿಕೆಯದು ಬೇರೆಯೇ ದಾರಿ. ಪಾಕ್ ಪಾದವನ್ನು ಈದೀಗ ಪೂರ್ಣ ಒಪ್ಪುತ್ತದಿಲ್ಲ. ಜನಮತಗಣನೆಯ ಪ್ರಶ್ನೆಯನ್ನದು ಉಲ್ಲೇಖಿಸುತ್ತದಿಲ್ಲ. ಆದರೆ, ಭಾರತ ಉಪಖಂಡದ ಈ ಎರಡು ಮಿತ್ರ ರಾಷ್ಟ್ರಗಳಲ್ಲಿ ಸೌಹಾರ್ದ ಹೆಚ್ಚಬೇಕು ಹೇಗೆ? ಶಕ್ತಿಯನ್ನು ಶಕ್ತಿಯಿಂದಲೇ ಎದುರಿಸಿ ಭಾರತ ಯಶಸ್ವಿಯಾಗಿದೆ. ಅತ್ಯದ್ಭುತ ಪ್ಯಾಟನ್‌ಗಳನ್ನೂ ನ ಚ್ಚನುರಿ ಮಾಡಿರುವಾಗ ಹಾಗೆನ್ನದಿರಲು ಸಾಧ್ಯವೆ? ಭಾರತದ ನೀತಿ ಪ್ರಶಂಸನೀಯ ನಿಜ. ಹಾಗಿದ್ದರೂ ಹಿರಿಯಣ್ಣನ ಸ್ಥಾನದಲ್ಲಿ ನಿಂತ. ಭಾರತವು ತಮ್ಮ ಪಾಕಿಸ್ತಾನಕ್ಕೆ ಸ್ವಲ್ಪ ರಿಯಾಯತಿ ಮಾಡಿ ಶರಿಯಾಯತಿಯನ್ನು ತೋರಿಸಿ ವಿವಾದವನ್ನು ಕೊನೆಗೊಳಿಸಿ ಸೌಹಾರ್ದದಿಂದ ಬಾಳಬೇಕು. ಈ 'ರಿಯಾಯತಿ' ಶಬ್ದದ ಹಿಂದೆ ಅಡಗಿರುವ ಗೂಢಾರ್ಥವನ್ನು ಗಮನಿಸಬೇಕು. ಕಾಶ್ಮೀರವನ್ನು ಬಳುವಳಿ ಕೊಡಿ— ಎಲ್ಲವೂ ತಿಳಿಯಾಗುತ್ತದೆ? ರಾಜಕೀಯ ಸಂಬಂಧ ತಿಳಿಯಾಗದ ಹೊರತು ಭಾರತಕ್ಕೆ ನೆರವು ನೀಡುವುದು ದುಸ್ತರವಾಗುತ್ತದೆ! ಕಾಂಗ್ರೆಸ್, ಅಧ್ಯಕ್ಷ ಜಾನ್ಸನರ ಕೈಹಿಡಿಯುತ್ತದೆ!

ಪಾಶ್ಚಾತ್ಯ ಬಣದಿಂದ ನಮಗಿನ್ನು ಇದೇ ಸ್ಥಿತಿಯಾಳಿದರೆ ನೆರವು ದೊರೆಯುವುದು ಕಠಿಣ. ದೊರೆತರೂ ಅದು ನಮಗೆ ಏನೇನೂ ಸಾಲದು. ನೆರವಿನ ಹೆಸರಿನಲ್ಲಿ ಭಾರತದ ಮೇಲೆ ಬರುತ್ತಿರುವ ಬಹುಮುಖ ಒತ್ತಾಯ—ಬಲಾತ್ಕಾರಗಳನ್ನು ಭಾರತ ಮನ್ನಿಸುವುದಿಲ್ಲ. ಪಾಕಿಸ್ತಾನಕ್ಕೆ ಕಾಶ್ಮೀರ ತೆತ್ತು ಅಮೆರಿಕೆಯಿಂದ ಗೋಧಿ ತಂದು ತನ್ನ ಹೊಟ್ಟೆ ತುಂಬಿಸಲು ಭಾರತೀಯ ಸಿದ್ಧನಿಲ್ಲ. ತನ್ನ ದೇಹದ ಅಂಗಗಳನ್ನು ಯಾರೂ ಮಾರುವುದಿಲ್ಲ. ತ್ಯಾಗ—ತಪಸ್ಸು, ಧರ್ಮ, ನ್ಯಾಯ ಮತ್ತು ಸತ್ಯಗಳ ಪಾಂಚಜನ್ಯ ನಮ್ಮದು. ಪ್ರಜಾಪ್ರಭುತ್ವ ತಳಹದಿಯಲ್ಲಿ ಸಮೃದ್ಧಿಯಾಗುವಂತೆ ಪ್ರಜಾಸತ್ತಾತ್ಮಕ ರಾಷ್ಟ್ರಗಳು ನಿಶ್ಯರ್ತ ನೆರವು ನೀಡದೆ ಹೋದರೆ, ರಾಷ್ಟ್ರ ಕಟ್ಟಲು ಕಮ್ಯುನಿಜಂ ಒಂದೇ ತಾರಕೋಪಾಯವೆಂಬುದಕ್ಕೆ ಪುಟ ಬರುತ್ತದೆ. ಪ್ರಜಾಪ್ರಭುತ್ವ ನಿಷ್ಠರು ಅಮೆರಿಕೆ—ಬ್ರಿಟನ್ ಮೊದಲಾದವು ಈ ಬಗೆಯ ಯಕ್ಷ ಪರೀಕ್ಷೆಗೆ ತೊಡಗದೆ ಭಾರತದ ಪಾಂಚಜನ್ಯವನ್ನು ಅರ್ಥಮಾಡಿಕೊಳ್ಳಲಿ. ಪಾಕ್ ರಾಜಕೀಯ ಸಂಬಂಧ ಮತ್ತು ತಾವು ನೀಡುವ ನೆರವುಗಳನ್ನು ಮತ್ತು ಮಣಸುಗಳಂತೆ ಜತೆ ಸೇರಿಯದಿರಲಿ.

**ವಚನ ಸುಧೆ**

ಯಥಾ ಶಕ್ತಿ ಚಿಕೀರ್ಷಂತಿ
ಯಥಾ ಶಕ್ತಿ ಚ ಕುರ್ವತೇ
ನ ಕಿಂಚಿದವಮನ್ಯಂತೇ
ನರಾಃ ಪಂಡಿತ ಬುದ್ಧಯಃ||

ವಿವೇಕಿಯೂ ಬುದ್ಧಿಶಾಲಿಯೂ ಆದವನು ತನ್ನ ಶಕ್ತಿಗನುಸಾರವಾಗಿ ಕೆಲಸ ಮಾಡುತ್ತಾನೆ. ಯಾರನ್ನಾದರೂ ಯಾವುದನ್ನಾದರೂ ಹೀನವೆಂದು ತಿಳಿಯುವುದಿಲ್ಲ, ಅವನ್ನು ನಿಂದಿಸುವುದಿಲ್ಲ

## ನರಸಣ್ಣನ ಸರಸ

"ಪಾಕಿಸ್ತಾನಕ್ಕೆ ಕಾಲುವೆ ನೀರು ಕೊಡಬಾರದೆಂತ ಪಂಜಾಬ ಮುಖ್ಯಮಂತ್ರಿ ಅಭಿಪ್ರಾಯಪಡುತ್ತಾರಂತೆ..."

"ನಮ್ಮ ಜವಾನರ ರಕ್ತ ಕೊಟ್ಟ ಮೇಲೆ ಕಿಸಾನರ ನೀರು ಯಾಕೆ ಕೊಡ್ಬೇಕು?"

ಮುಂದೆ

## ಗೇಹ ರಾಜ್ಯದಲ್ಲಿ

# ಎರಡು ಸಂಗತಿಗಳನ್ನು ಸಾಧಿಸಬೇಕು

"ಅಲ್ರಿ, ಈಗ್ಗೆ ಕೆಲದಿನಗಳಿಂದ ನನಗೊಂದೇ ಯೋಚನೆ..."

'ಏನಪ್ಪಾ ಅಂತಹ ಘನವಾದ ಆಲೋಚನೆ?'

'ಮತ್ತೇನೂ ಇಲ್ಲ. ನೋಡಿ, ಇಂದು ನಮ್ಮನ್ನ ಕೇಳುವವರು ಯಾರು?"

"ನಮ್ಮನ್ನ ಅಂದ್ರೆ?'

'ನಮ್ಮನ್ನ ಅಂದ್ರೆ ಭಾರತೀಯರನ್ನ...'

"ಯಾಕೆ? ಏನಾಯಿತು?"

"ಮತ್ತಿನ್ನು ಆಗ ಬೇಕಾದದ್ದಾದ್ರೂ ಏನೂಂತ?"

"ಏನೇ ಅಂತಹ ಗಂಡಾಂತರ ಬಾಗಿಲ ಬಳಿ ಕಾದಿರೋದು?"

"ಅಯ್ಯೋ, ತಿಳಿ ತಿಳಿದೂ ಮತ್ತೆ ನನ್ನ ಬಾಯಿಂದ್ಲೇ ಹೊರಡಿಸ್ಬೇಕಂತೀರ?"

"ಅಲ್ಲಾ ವಿಷಯವಾದ್ರೂ ಏನೂಂತ?'

'ಅಯ್ಯಪ್ಪ, ನೋಡಿ, ಆಕ್ರಮಣ ಮಾಡಿದ್ದು ಪಾಕಿಸ್ತಾನ, ಆಕ್ರಮಣಕ್ಕೆ ಗುರಿಯಾದದ್ದು ಭಾರತ. ಆದ್ರೂ ವಿದೇಶೀಯರು, ಮುಖ್ಯವಾಗಿ ಅಮೆರಿಕೆ, ಬ್ರಿಟನ್, ಚೀನಾ ಮೊದಲಾದುವು ಹಾಗೆ ಹೇಳದೆ ಭಾರತದ ಮೇಲೇ ಆರೋಪ ಹೊರಿಸುತ್ತಿವೆಯಲ್ಲಾ? ಯಾಕೆ ಹಾಗೇಂತ?"

"ಯಾಕೆ ಅಂದ್ರೆ ಏನು ಹೇಳೋದು?"

"ಅಂದ್ರೆ?"

"ಅಂದ್ರೆ ಮತ್ತೇನೂ ಇಲ್ಲ. ಭಾರತ ಸ್ವತಂತ್ರವಾದಂದಿನಿಂದ್ಲೂ ಬೇರೆಯವರು ತೋರಿಸಿದ ಅಥವಾ ನಡೆದ ದಾರಿಯಲ್ಲಿ ನಡೆಯದೆ ಸ್ವತಂತ್ರವಾಗಿಯೇ ಮುಂದುವರಿಯುತ್ತಿದೆ..."

"ಹೌದು, ಅದು ಸರಿ.."

"ಸತ್ಯವನ್ನ ಸತ್ಯವೆಂದು ಹೇಳಲು ಹಿಂದು ಮುಂದು ನೋಡಲಿಲ್ಲ.."

"ಅದೂ ಹೌದಣ್ಣಿ. ನೋಡಿ ಕೆಲವು ವರ್ಷಗಳಿಗೆ ಮೊದಲು ಎಂತಹದು ಕಾಲುವೆಯಂತೆ..."

"ಸಿಂಧೂ ನದಿ..."

"ಅದಲ್ಲಿ, ಅಚೆ ನೋಡಿ.... ಎರಡು ಸಮುದ್ರಗಳನ್ನ ಕೂಡಿಸೋದು...."

"ಪನಾಮಾ ಕಾಲುವೆ..."

"ಪನಾಮಾ ಅಲ್ರಿ, ..."

"ಓ, ಸುಯೇಜ ಕಾಲುವೆ..."

"ಹೌದೌದು ಅದೆ, ನೋಡಿ, ಅದನ್ನ ಆ ದೇಶದ...."

"ನಸ್ಸೇರ್..."

"ಸರಿ. ನಸ್ಸೇರ್ ರಾಷ್ಟ್ರೀಕರಣ ಮಾಡಿದಾಗ ಬ್ರಿಟನ್ ದಾಳಿಮಾಡಿದಾಗ ಭಾರತ ಹೇಳತ್ತು ನೋಡಿ: ಸುಯೇಜ ಕಾಲುವೆಯು..."

"ಈಜಿಪ್ತಿಗೆ ಸೇರಿದ್ದೂಂತ...."

"ಹೌದ್ರಿ, ಹಾಗೆಯೇ...."

"ಹ್ಞಾಂ, ಉಂಟು. ನೂರಾರು:..ಅದೇ ನೋಡು ನಮಗೀಗ ತೊಂದ್ರೆ ಬಂದದ್ದು...."

'ಕಂಡದ್ದನ್ನ ಕಂಡಂತೆ ಹೇಳಿದರೆ...."

'ಹ್ಞಾಂ, ಅಂದಿನ ಸಿಟ್ಟನ್ನ ಇಂದು ಬ್ರಿಟನ್ ತೀರಿಸುವಂತಿದೆ. ಏಯುತನಾಮದಲ್ಲಿ ಅಮೆರಿಕನ್ ನೀತಿಯನ್ನ ಖಂಡಿಸಿತ್ತು ಭಾರತ. ಅದರ ಪ್ರತೀಕಾರ ಅಮೆರಿಕೆ ತೆಗೆದುಕೊಳ್ಳುತ್ತಿದೆಯೋ ಏನೋ..."

"ಸತ್ಯವಂತರಿಗೆ ಒಂದೇ ದಾರಿ ನೋಡಿ..."

'ಹೌದು, ಅದೇ ಇಂದು ಗಂಡಾಂತರಕಾರಿ.'

"ಯಾಕೆ?'

'ಮೊದಲನೆಯದಾಗಿ ಲೋಕದಲ್ಲಿ ಸತ್ಯವಂತ ರಾಜಕಾರಣಿಗಳು ಎಷ್ಟು ಜನ ಇದ್ದಾರೆ?'

'ಯಾರೂ ಇಲ್ರಿ, ಭಾರತ ಮಾತ್ರ.... ಇನ್ನು ಇದ್ರೆ ಎಲ್ಲೋ ಕೈ ಬೆರಳೆಣಿಕೆಯಷ್ಟು..."

"ಸತ್ಯ ಮತ್ತು ರಾಜಕಾರಣಗಳು ಒಂದೆಡೆಯಲ್ಲೇ ನಿಲ್ಲುವುದು ಸದ್ಯ ಸಾಧ್ಯವಿಲ್ಲ...."

"ಹಾಗಾದರೆ ನಮ್ಮ ಗತಿ?'

"ನಮ್ಮ ದಾರಿ ನಮಗೆ.ಸ್ವಾರ್ಥಮಯ ಜಗತ್ತು ಇಂದು ಪಾಕಿಸ್ತಾನದ ಪರವಕಾಲತ್ತು ಮಾಡಲಿ...'

'ಅಲ್ರಿ, ನಮ್ಮ ನೀತಿ ನಡಾವಳಿಯ ಬಗ್ಗೆ ವಿಶೇಷ ಪ್ರಚಾರ ನಡೀಲಿಲ್ಲವಂತಲ್ಲಾ...."

'ನೋಡಿ. ಸತ್ಯಪ್ರಿಯರು ಹೆಚ್ಚು ಪ್ರಚಾರವನ್ನ ಬಯಸುವುದಿಲ್ಲ. ಆಡಂಬರ ಶೂರರು, ಮಿಥ್ಯಾವಾದಿಗಳು, ಸತ್ಯದ ಸೋಗೆಳದುಕೊಂಡವರು ತಮ್ಮ ಸ್ವಾರ್ಥ ಸಾಧನೆಗಾಗಿ ಲಘು ಭಾಷೆಯಲ್ಲಿ ಪ್ರಚಾರ ನಡೆಸುತ್ತಾರೆ. ಪಾಕ ರಾಯಭಾರಿ ಕಚೇರಿಗಳಿಗೆ ಇದೇ ಕೆಲಸ. ಭಾರತವನ್ನ ಬಯ್ಯುವುದು ತಮ್ಮ ಆಡಂಬರವನ್ನ ಪ್ರದರ್ಶಿಸುವುದು ಭಾರತದ ವಿರುದ್ಧ ಇತರ ರಾಷ್ಟ್ರಗಳನ್ನ ಎತ್ತಿ ಕಟ್ಟಲು ಪ್ರಯತ್ನಮಾಡುವುದು..."

'ಹ ಗಿರುವಾಗ, ನಾವೂ ತ.ಸು...'

'ಏನಿದು ರಮಣಿ, ಕೇಳಿಲ್ಲವೇ ನೀತಿ? ಶ್ವಾನನಾನೆಯ ಬೊಗಳಲಾನೆ ತಾ ಬೊಗಳುವುದೆ ಶ್ವಾನನಂದದಲಾನೆ ಬೊಗಳಲಭಿಮಾನಪಡಗಿಹುದೆ?"

"ಸರಿ, ಆದರೆ, ನೋಡುವವಂಗೆ...."

"ಅದೇ ಬಂದುದೀಗ ಗಂಡಾಂತರ..."

"ಇಂದಿನದು ಪ್ರಚಾರಯುಗ. ಅಶೋಕನ ಕಾಲದಲ್ಲಿ ಕೂಡ ಪ್ರಚಾರಕರು ವಿದೇಶಗಳಿಗೆ ಹೋಗಿದ್ದರಂತೆ..."

'ಸರಿಯೇ. ಆದರೆ, ಪಾಕಿಸ್ತಾನದ ಲಘು ಭಾಷೆ ನಮಗೆ ಬರುವುದಿಲ್ಲ. ಗೌರವಯುಕ್ತವಾದ ರೀತಿಯಲ್ಲೇ ನಾವು ಮುಂದುವರಿಯಬೇಕು.'

"ಹೌದ್ರಿ ನೀವನ್ನುವುದು ನಿಜ. ಆದರೆ ನಿಮ್ಮ ಮಾತು ಭುಟ್ಟೋ ಗರ್ಜನೆಯ ಮಧ್ಯೆ ಕೇಳಿಸೀತೆ?"

'ನೋಡೋಣ, ಏನಾದೀತೂಂತ. ರಾಷ್ಟ್ರಪತಿ ರಾಧಾಕೃಷ್ಣನ್ ಯುಗೊಸ್ಲಾವಿಯಾ, ಜೆಕೊಸ್ಲಾವಿಯಾ ಮತ್ತು ರುಮೇನಿಯಾಗಳಿಗೆ ತೆರಳಿದ್ದಾರೆ."

"ಅವರ ಕಥೆ ಬಿಡಿ, ಹೋದೆಲ್ಲೆಲ್ಲ ಭಾರತದ ನೀತಿಯ ಬಗ್ಗೆ ತಲೆದೂಗಿಸಿ ಬರುವ ಮಹಾವ್ಯಕ್ತಿ ಅವರು..."

"ಹಾಗೆಯೇ ಆಗಿದೆ ನೋಡು. ಮತ್ತೆ ವಿಜಯಲಕ್ಷ್ಮಿ ಪಂಡಿತರು ಫ್ರಾನ್ಸಿನಿಂದ ಮರಳಿದ್ದಾರೆ..."

"ವಿಜಯ ಅಂದ್ರೆ, ನೆಹರೂರ ತಂಗಿ...'

'ಹ್ಞಾಂ. ಡಿಗಾಲೆಯುವರು ಭಾರತೀಯ ದೃಷ್ಟಿಕೋಣವನ್ನ ಸರಿಯಾಗಿ ಮನವರಿಕೆ ಮಾಡಿಕೊಂಡಿದ್ದಾರೆ. ಭಾರತಕ್ಕೆ ಸಂಪೂರ್ಣ ಬೆಂಬಲ ನೀಡುವ ಆಶ್ವಾಸನೆ ನೀಡಿದ್ದಾರೆ."

"ಮತ್ತೆ ಮಲೇಸ್ಯಾ, ಸಿಂಗಾಪುರ, ಬರ್ಮಾ..."

"ಅಲ್ಲಿಗೂ ಇಷ್ಟರಲ್ಲೇ ಹೋಗಲಿದ್ದಾರೆ, ಒಬ್ಬ ಮಂತ್ರಿ...'

'ಅಲ್ರಿ, ಆ ನಸ್ಸೇರರು ಯಾಕೆ ಹಾಗೆ ಮಾಡಿದ್ದು?"

"ಏನು?"

"ಪಾಕಿಸ್ತಾನಿ ಹಡಗವೆಲ್ಲದ್ದ! ಭಾರತೀಯ ಮಾಲುಗಳನ್ನ ಇಳಿಸಲು ಅನುಮತಿ ಕೊಡಲಿಲ್ಲ?'

"ಅವರೇನು ಮಾಡಿಯಾರು? ನ್ಯಾಯಾಲಯದ ತೀರ್ಪು ಅದು...'

'ಅದು ಸರಿಯೇಂತ?"

"ಪರಿಶೀಲಿಸಬೇಕು... ಅಷ್ಟೆ...'

"ಎಂಥದೋ ಏನೋ. ನನಗಂತೂ ಭಾರಿ ಹೆದರಿಕೆಯಾಗುತ್ತಿದೆ. ಸತ್ಯವನ್ನ ಹೇಳಲು ಈ ಜಗತ್ತು ಯಾಕೆ ಹೆದರುತ್ತೇಂತ...."

'ಧರ್ಮರಾಯನೇ ಅಸತ್ಯ ನುಡಿದಿದ್ದಾನಂತೆ. ಮತ್ತೆ ನಮ್ಮ ನಿಮ್ಮ ಪಾಡೇನು ಬಂತು'"

"ಅಲ್ರಿ, ಎಲ್ಲಾ ಷಾಕ್ ಬಾಲ ಹಿಡಿದರೆ...."

"ಎಲ್ಲಾ ಎಲ್ಲಿ? ಕೆಲವರು ಮಾತ್ರ. ಉಳಿದವರು ತಟಸ್ಥರು..."

"ಆದ್ರೂ ಆ ಕೇ ಪರೀ ಸಾಕಲ್ರಿ..."

"ಅದು ನಿಜ. ಆದರೂ ಅವ್ರು ಭಾರತದ ಮೇಲೆ ಒತ್ತಾಯ ತರುವ ಪ್ರಯತ್ನ ಮಾಡುತಿದ್ದಾರೆ. ಅದ್ರೂ ಯಶಸ್ವಿಯಾಗಿಲ್ಲ."

"ಅದು ಹೇಗೆ ಗೊತ್ತು?" "ಭಾರತಕ್ಕೆ ಒಪ್ಪಿಗೆಯಿಂದ ಯಾವ ಗೊತ್ತುವಳಿಯನ್ನೂ ರಷ್ಯ ವಿರೋಧಿಸುತ್ತದೆ. ಅದ್ರಿಂದ...."

"ಅಂತೂ ಏನೋ ಎಂಥದೋ? ಸತ್ಯವಂತರಿಗಿದು ಕಾಲವಲ್ಲ..."

"ಇಲ್ಲ. ಇದೀಗ ಭಾರತ ಎರಡು ಸಂಗತಿಗಳನ್ನು ಸಾಧಿಸ ಹೊರಟಿದ....'

"ಏನು?"

'ಭಾರತದಂತಹ 'ಬಡ' ದೇಶವನ್ನು ಪ್ರಜಾಂತಂತ್ರಾತ್ಮಕವಾಗಿಯೇ ಸಮೃದ್ಧಗೊಳಿಸಬಹುದೆಂಬುದೊಂದು. ಸತ್ಯವಂತರು ಈ ಕಾಲದಲ್ಲೂ ಬದುಕ ಬಲ್ಲರೆಂಬುದಿನ್ನೊಂದು....'

"ಹ್ಞಾಂ... ಅದು ಸರಿ...."

"ನೋಡೋಣ, ಬಿರುಗಾಳಿ, ಸುಳಿ ತುಂಬಿದ ವಿಕ್ಷುಬ್ಧ ಸಾಗರದಲ್ಲಿ ನಮ್ಮ ನಾವೆ ಬಿಟ್ಟಿದ್ದೇವೆ. ದಡ ಸೇರುತ್ತೇವೆ ಬದ್ಧ ನಿರ್ಧಾರವೂ ನಮ್ಮದು. ಕಾರ್ಯಶೀಲನೇ ಯಶಗಳಿಸುತ್ತಾನೆ...'

'ಹ್ಞಾ.... ಸರಿಯಪ್ಪಾ, ಅಯ್ಯೋ! ಹತ್ತರ ಗಂಟೆ."

'ಓ ಹನ್ನೊಂದ.... ಹೌದು ಇಂದ ಬರುವಾಗ್ಲೇ ಲೇಟ್....'

"ಬೇಗ ಕೈಕಾಲು ತೊಳ್ಕೊಳ್ಳಿ ಮತ್ತೆ........"

"ಅಂದ ಅಂಬಲಿ ಕುಡಿಯಿರಿ...."

'ಸರ್ವಾಗಿಲ್ಲ ನೀವು...'

"ಏನು?"

"ಹ್ಞಾಂ..."

—ಗೋರಾ.

---

### ಅಂಕೋಲಾ ತಾಲೂಕಿನ ವಿವಿಧ ಸಂಘ-ಸಂಸ್ಥೆಗಳಿಂದ ರಾಷ್ಟ್ರ ರಕ್ಷಣಾ ನಿಧಿಗೆ ದೇಣಿಗೆ ನೀಡಲು ನಿರ್ಧಾರ

ಅಂಕೋಲೆ, ಅಕ್ಟೋಬರ್-೫- ಅಂಕೋಲಾ ತಾಲೂಕ ಶಿಂಗರ ಕುಂಬ ಕೈಗಾರಿಕ ಸಹಕಾರಿ ಸಂಘದ ವಾರ್ಷಿಕ ಸಭೆಯಲ್ಲಿ ರಾಷ್ಟ್ರರಕ್ಷಣಾ ನಿಧಿಗೆ ೧೦೧-೦೦ ರೂಪಾಯಿಯನ್ನು ಅರ್ಪಿಸಲು ನಿರ್ಧರಿಸಿರುತ್ತಾರೆ.

ಅಂಕೋಲೆಯ ಹಿಚಕಡ ಯಾಗೂ ಅಂಕೋಲಾ ಕೂಲಿಕಾರರ ಸಹಕಾರಿ ಸಂಘಗಳು ೧೦೦೧-೦೦ ರೂಪಾಯಿಯನ್ನು ರಕ್ಷಣಾ ನಿಧಿಗೆ ನೀಡಲು ಕಳೆದ ತಾ. ೨೬ರಂದು ನೆರೆದ ತಮ್ಮ ವಾರ್ಷಿಕ ಸಭೆಯಲ್ಲಿ ನಿರ್ಣಯಿಸಿದ್ದಾಗಿ ತಿಳಿಯುತ್ತದೆ.

ಅಂಕೋಲಾ ಅರ್ಬನ್ ಕೋಆಪರೇಟಿವ್ ಬ್ಯಾಂಕಿನವರು ರಕ್ಷಣಾ ನಿಧಿಗೆ ೧೦೦೦.೦೦ ರೂ.ಯನ್ನು ದೇಣಿಗೆಯಾಗಿ ತಾಲೂಕಿನ ತಹಶೀಲದಾರರ ಹತ್ತಿರ ಒಪ್ಪಿಸಿರುವರೆಂದು ತಿಳಿಯುತ್ತದೆ.

ರಾಷ್ಟ್ರ ರಕ್ಷಣಾ ನಿಧಿಗೆ ಅಂಕೋಲಾ ತಾಲೂಕಿನಿಂದ ೫೦ ಸಾವಿರ ರೂಪಾಯಿ ಸಂಗ್ರಹಿಸುವ ಗುರಿಯಿದ್ದು, ಅ ಪೈಕಿ ಈಗಾಗಲೆ ಸಂಗ್ರಹಿಸಿದ್ದ ರೂ. ३४२४-२५ ಪೈಸೆಯನ್ನು ತಾಲೂಕಿನ ತಹಶೀಲದಾರರು, ನವ್ವದ ಕೋಲೆಗೆ ಭೆಟ್ಟಿಯಿತ್ತ ಅರ್ಥಮಂತ್ರಿಗಳಿಗೆ ಅರ್ಪಿಸಿದ್ದಾರೆ.


## ನವಯುಗ

# ದೀಪಾವಳಿ ಸಂಚಿಕೆ

ಕರ್ನಾಟಕದ ಪ್ರಸಿದ್ಧ ಲೇಖಕರನೇಕರ ಲೇಖನ, ಕವನ, ಹರಟೆ ಮೊದಲಾದುವುಗಳನ್ನೊಳಗೊಂಡು ವಿಶಿಷ್ಟ ರೀತಿಯಲ್ಲಿ

ತಾ. **28-10-65** ರಂದು

**ಪ್ರಕಟವಾಗುವುದು.**

ಜಾಹೀರಾತುದಾರರು ತಾ. 20-10-65ರ ಒಳಗೆ ಜಾಹೀರಾತುಗಳನ್ನು ಕಳಿಸುವಂತೆ ವಿನಂತಿ.

ತುರ್ತು ಪರಿಸ್ಥಿತಿಯಿಂದ

# ಶಾಂತಿಪ್ರಿಯ ಭಾರತೀಯರ ಸತ್ವಪರೀಕ್ಷೆ

ಶ್ರೀ ಬಿ. ವೈಕುಂಠ ಬಾಳಿಗಾ, ಮೈಸೂರು ವಿಧಾನ ಸಭಾಧ್ಯಕ್ಷರು

ಪಾಕಿಸ್ತಾನದ ಅಪಪ್ರಚಾರವನ್ನು ಹಿಂದಿನಿಂದಲೂ ನಂಬಿಕೊಂಡು ಬಂದು, ಅದಕ್ಕೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನೆರವು ಕೊಟ್ಟ ಅನೇಕ ದೇಶಗಳಿಗೆ ಈಗ ಪಾಕಿಸ್ತಾನದ ಬಣ್ಣ ಬಯಲಾಗಿದೆ. ಭಾರತದ ಜನತೆ ಅಂತೂ, ಈ ಸಲ ಪಾಕಿಸ್ತಾನದ ಕಿರುಕುಳಕ್ಕೆ ಪೂರ್ಣವಿರಾಮ ಕೊಟ್ಟೇ ಸಿದ್ಧವೆಂದು ಪ್ರತಿಜ್ಞೆ ಮಾಡಿದೆ. ದೇಶ ಗೌರವವನ್ನೂ, ಸ್ವಾತಂತ್ರ್ಯವನ್ನೂ, ಸಮಗ್ರತೆಯನ್ನೂ ಕಾಪಾಡುವ ಮಹೋದ್ದೇಶದಿಂದ, ಭಾರತವು ಈ ಆತ್ಮ ರಕ್ಷಣೆಯ ಕಾರ್ಯವನ್ನು ಕೈಗೊಳ್ಳದೆ ವಿಧಿಯಿಲ್ಲವಾಗಿದೆ. ನಮ್ಮ ದೇಶದಲ್ಲಿ ನಾನಾ ಧರ್ಮಗಳಿವೆ, ರೂಢಿ ಸಂಪ್ರದಾಯಗಳಿವೆ. ದೇಶದ ಗಡಿಯಲ್ಲಿ ಶತ್ರುಗಳು ಬಾಯ್ದೆರೆದು ವಿಜೃಂಭಿಸುತ್ತಿರುವ ಈ ಸಂಧಿಕಾಲದಲ್ಲಿ ನಮ್ಮ ಆಂತರಿಕ ಭಿನ್ನತೆಗಳೆಲ್ಲವನ್ನೂ ಮರೆತು ದೇಶ ರಕ್ಷಣಾ ಕಾರ್ಯದಲ್ಲಿ ಸರ್ವರೂ ಟೊಂಕ ಕಟ್ಟಬೇಕಾಗಿದೆ.

●

ನಾವಿಂದು ಭಾರತದ ಚರಿತ್ರೆಯ ಸಂಧಿಕಾಲದಲ್ಲಿದ್ದೇವೆ. ಶಾಂತಿಗೂ, ಸದ್ವರ್ತನೆಗೂ, ಉಜ್ವಲ ಸಂಸ್ಕೃತಿಗೂ ಪ್ರಸಿದ್ಧರಾದ ಭಾರತೀಯರಿಗೆ ಇಂದೀಗ ಸತ್ವ ಪರೀಕ್ಷೆಯ ಕಾಲ ಬಂದೊದಗಿದೆ. ಶಾಂತಿಪ್ರಿಯ ದೇಶವೆಂದು ಲೋಕ ಪ್ರಸಿದ್ಧವಾಗಿ, ಲೋಕ ಶಾಂತಿಗೂ ಶಾಂತಿಯುತ ಸಹಜೀವನಕ್ಕೂ ಅಹೋರಾತ್ರಿ ಶ್ರಮಿಸುವ ನಮ್ಮ ಭಾರತ ವರ್ಷವನ್ನು ನಮ್ಮ ನೆರೆಯ ರಾಷ್ಟ್ರವು ನಾನಾ ರೀತಿಯ ಅತ್ಯಾಚಾರ, ಅಪಪ್ರಚಾರ, ಕುಹಕ, ಅವಹೇಳನೆಗೆ ಗುರಿಪಡಿಸಿ, ಈಗ ಯುದ್ಧಕ್ಕೆ ಎಳೆದಿದೆ. ಶಾಂತಿಮೂರ್ತಿಗಳೂ ರಾಷ್ಟ್ರಪಿತಾಮಹರೂ ಆದ ಗಾಂಧೀಜಿಯವರಂತಹ ಮಹಾತ್ಮರ ಕರ್ಮ ಭೂಮಿಯಾದ ಭಾರತ ವರ್ಷಕ್ಕೆ, ಶಾಶ್ವತ ವಿಶ್ವಶಾಂತಿ ಸ್ಥಾಪನೆಗಾಗಿ ತಮ್ಮ ಜೀವನ ಸರ್ವಸ್ವವನ್ನೂ ಧಾರೆಯೆರೆದ, ಲೋಕ ನಾಯಕರಲ್ಲಿ ಅಗ್ರಗಣ್ಯರಾದ ಪಂಡಿತ ಜವಾಹರಲಾಲ್ ನೆಹರೂರವರು ವಿಧಿವಶರಾಗಿ ಒಂದು ವರ್ಷದೊಳಗೆ ಈ ವಿಷಮ ಸ್ಥಿತಿ ಪ್ರಾಪ್ತವಾಗಿದೆ. ಭಾರತಕ್ಕೆ ರಾಜ್ಯದಾಹವಿಲ್ಲ, ಪರಮತದ್ವೇಷವಿಲ್ಲ, ಪಾಕಿಸ್ತಾನದ ಜನತೆಯ ಮೇಲೆ ಎಳ್ಳಷ್ಟೂ ವೈರವಿಲ್ಲ. ಆದರೆ, ಪದೇ ಪದೇ ಕಾಲುಕೆರೆದು ಜಗಳಕ್ಕೆ ನಿಂತು, ಮೊದಮೊದಲು ಪ್ರಚ್ಛನ್ನ ಯುದ್ಧಕ್ಕೆ ತೊಡಗಿ, ಕೊನೆಗೆ ಪ್ರತ್ಯಕ್ಷ ಯುದ್ಧ ಘೋಷಣೆ ಮಾಡಿ, ನಮ್ಮ ದೇಶದ ಸರ್ವನಾಶ ಮಾಡಬೇಕೆಂದಿರುವ ಪಾಕಿಸ್ತಾನದ ಈ ದುಷ್ಟ ಸಂಕಲ್ಪಕ್ಕೆ ನಾವು ಎಂದಿಗೂ ತಲೆಬಾಗುವಂತಿಲ್ಲ. ಆದದರಿಂದ ನಾವು ದೀರ್ಘವಾದ ಹೋರಾಟಕ್ಕೆ ಶೀಘ್ರ ಸಿದ್ಧರಾಗಿರಬೇಕು; ಅಪಾರ ತ್ಯಾಗ, ಬಲಿದಾನಗಳಿಗೂ ಸಿದ್ಧರಾಗಿರಬೇಕು.

ಇಂತಹ ಕಾಲದಲ್ಲಿ ಜನರ ಕರ್ತವ್ಯಗಳು ಅಪಾರವಾಗಿವೆ. ನಮ್ಮ ದೇಶದಲ್ಲಿರುವ ರಾಜಕೀಯ ಭಿನ್ನತೆಗಳು ಏನೇ ಇದ್ದರೂ, ಈಗ ಅವುಗಳೆಲ್ಲವೂ ಮಾಯವಾಗಬೇಕು. ನಮ್ಮ ಪಾರ್ಲಿಮೆಂಟಿನಲ್ಲೂ ವಿಧಾನ ಮಂಡಲಗಳಲ್ಲೂ ಸರ್ವ ರಾಜಕೀಯ ಪಕ್ಷಗಳೂ ಈ ಯುದ್ಧ ಸ್ಥಿತಿಯಲ್ಲಿ ತಮ್ಮ ಭಿನ್ನಾಭಿಪ್ರಾಯಗಳನ್ನೆಲ್ಲ ಬದಿಗಿರಿಸಿವೆ. ದೇಶ ರಕ್ಷಣಾ ಕಾರ್ಯಕ್ರಮದಲ್ಲಿ ಎಲ್ಲಾ ಪಕ್ಷಗಳೂ ಮುಕ್ತ ಹಸ್ತದಿಂದ ಸಹಾಯ ಸಹಕಾರಗಳನ್ನು ನೀಡಿವೆ. ರಾಜಕೀಯ ಪಕ್ಷಗಳ ಬೆಂಬಲದಿಂದ ಸರಕಾರದ ಬಲ ಹೆಚ್ಚಿದೆ, ಸಂಕಲ್ಪ ಶಕ್ತಿಯು ದೃಢವಾಗಿದೆ, ಇದು ಗಮನಾರ್ಹವಾದ ಬೆಳವಣಿಗೆ.

ಈ ಯುದ್ಧಕ್ಕೆ ಭಾರತವು ಕಾರಣವಲ್ಲ. ಪಾಕಿಸ್ತಾನದ ಅಪಪ್ರಚಾರವನ್ನು ಹಿಂದಿನಿಂದಲೂ ನಂಬಿಕೊಂಡು ಬಂದು, ಅದಕ್ಕೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನೆರವು ಕೊಟ್ಟ ಅನೇಕ ದೇಶಗಳಿಗೆ ಈಗ ಪಾಕಿಸ್ತಾನದ ಬಣ್ಣ ಬಯಲಾಗಿದೆ. ಭಾರತದ ಜನತೆ ಅಂತೂ ಈ ಸಲ ಪಾಕಿಸ್ತಾನ ಕಿರುಕುಳಕ್ಕೆ ಪೂರ್ಣವಿರಾಮ ಕೊಟ್ಟೇ ಸಿದ್ಧವೆಂದು ಪ್ರತಿಜ್ಞೆ ಮಾಡಿದೆ. ದೇಶ ಗೌರವವನ್ನೂ ಸ್ವಾತಂತ್ರ್ಯವನ್ನೂ ಸಮಗ್ರತೆಯನ್ನೂ ಕಾಪಾಡುವ ಮಹೋದ್ದೇಶದಿಂದ ಭಾರತವು ಈ ಆತ್ಮ ರಕ್ಷಣಾ ಕಾರ್ಯವನ್ನು ಕೈಗೊಳ್ಳದೆ ವಿಧಿಯಿಲ್ಲದಾಗಿದೆ. ನಮ್ಮ ದೇಶದಲ್ಲಿ ನಾನಾ ಧರ್ಮಗಳಿವೆ, ರೂಢಿ ಸಂಪ್ರದಾಯಗಳಿವೆ, ದೇಶದ ಗಡಿಯಲ್ಲಿ ಶತ್ರುಗಳು ಬಾಯ್ದೆರೆದು ವಿಜೃಂಭಿಸುತ್ತಿರುವ ಈ ಸಂಧಿಕಾಲದಲ್ಲಿ ನಮ್ಮ ಆಂತರಿಕ ಭಿನ್ನತೆಗಳೆಲ್ಲವನ್ನೂ ಮರೆತು, ದೇಶ ರಕ್ಷಣಾ ಕಾರ್ಯಕ್ಕೆ ಸರ್ವರೂ ಟೊಂಕಕಟ್ಟಬೇಕಾಗಿದೆ. ಮಹಾಭಾರತದಲ್ಲಿ ಇರುವ ಬೋಧೆ, "ನಮ್ಮ ನಮ್ಮೊಳಗಿನ ವಾದವಿವಾದಗಳ ಕಾಲದಲ್ಲಿ ನಾವು ಐದು ಮಂದಿ, ಕೌರವರು ನೂರು ಮಂದಿ; ಆದರೆ ಹೊರಗಿನ ವೈರಿ ಆಕ್ರಮಣಕ್ಕೆ ಬಂದಾಗ ನಾವು ನೂರೈದು ಮಂದಿ"— ಎಂದು ಧರ್ಮರಾಯನು ಅರ್ಜುನನಿಗೆ ಬೋಧಿಸಿರುವುದು ತಾವುಗಳೆಲ್ಲರೂ ಅರಿತಿರುವ ವಿಚಾರ. ಈ ತತ್ವವನ್ನು ನಾವಿಂದು ಕಾರ್ಯರೂಪಕ್ಕೆ ತರಬೇಕಾಗಿದೆ. ಸರಕಾರಿ ಅಧಿಕಾರಿಗಳೂ, ಖಾಸಗಿ ಸಂಘಸಂಸ್ಥೆಗಳೂ ಉದ್ಯಮ ಕಾರ್ಖಾನೆಗಳೂ, ವೈದ್ಯರೂ, ಇಂಜಿನಿಯರುಗಳೂ ತಮ್ಮ ಕೆಲಸವನ್ನು ಶಕ್ತಿಮೀರಿ ನಿರ್ವಹಿಸಿ, ಸರಕಾರಕ್ಕೆ ಸಕಲ ರೀತಿಯ ಸಹಾಯ ಸಹಕಾರಗಳನ್ನೂ ನೀಡಿ ಯುದ್ಧ ಕಾರ್ಯಕ್ಕೆ ನೆರವಾಗಬೇಕಾಗಿದೆ. ವ್ಯಾಪಾರಿ ವರ್ಗದವರು ಆಹಾರ ವಸ್ತುಗಳನ್ನು ನಿತ್ಯೋಪಯೋಗಕ್ಕೆ ಬೇಕಾದ ಯಾವುದೇ ಸಾಮಗ್ರಿಗಳ ಬೆಲೆ ಹೆಚ್ಚದಂತೆ ದೃಢ ಪ್ರಯತ್ನ ಮಾಡಿ ಸಫಲರಾಗಬೇಕು. ರೈತರು ಆಹಾರದ ಕೊರತೆಯನ್ನು ನೀಗಬೇಕು; ಜನ ಆಹಾರದ ದುರ್ವ್ಯಯವನ್ನು ದುರುಪಯೋಗವನ್ನು ನಿಲ್ಲಿಸಬೇಕು. ಉದ್ಯಮ ಕಾರ್ಮಿಕರು ಶಕ್ತಿಮೀರಿ ಶ್ರಮಿಸಿ ಉತ್ಪಾದನೆಯನ್ನು ಹೆಚ್ಚಿಸಬೇಕು. ಉತ್ಪಾದನೆಗೆ ಭಂಗ ತರುವ ಯಾವುದೇ ರೀತಿಯ ಅಡ್ಡಿ ಆತಂಕಗಳಿಗೂ ಇಂದು ಅವಕಾಶವಿರಕೂಡದು.

ರಣರಂಗದಲ್ಲಿ ಭೀಕರ ಯುದ್ಧ ನಡೆಯುತ್ತಿದೆ. ನಮ್ಮ ಮರ್ಮ ಸ್ಥಾನಗಳನ್ನು ನಾಶಮಾಡಲು ವೈರಿಗಳ ಪ್ರಯತ್ನ ಹಗಲಿರುಳೂ ನಡೆಯುತ್ತಲೇ ಇದೆ. ಆದರೆ ಅವರ ಯಾವ ದುಷ್ಪ್ರಯತ್ನಗಳೂ ಈ ವರೆಗೆ ಸಫಲವಾಗಿಲ್ಲ. ನಮ್ಮ ಸೈನಿಕರ ಶಕ್ತಿ ಸಾಮರ್ಥ್ಯಗಳೂ ದೇಶ ರಕ್ಷಣೆಗಾಗಿ ಆತ್ಮತ್ಯಾಗ ಮಾಡಲು ಮುನ್ನುಗ್ಗುವ ವೀರಯೋಧರ ಸಾಹಸ ಕಾರ್ಯಗಳೂ ವೈರಿಯನ್ನು ದಂಗು ಬಡಿಸಿವೆ. ನಮ್ಮ ವೀರ ಸಾಹಸಿಗಳೂ ತೋರ್ಪಡಿಸಿದ ಅಸಮಾನ ಶೌರ್ಯಗಳ ಕಥೆ ದಿನ ದಿನವೂ ಪತ್ರಿಕೆಗಳಲ್ಲಿ ಬರುತ್ತಿದೆ. ನಮ್ಮ ಜನ ತಮ್ಮ ತಮ್ಮ ನಿತ್ಯ ವ್ಯವಹಾರಗಳನ್ನು ಶಾಂತವಾಗಿ, ನಿರಾತಂಕವಾಗಿ ನಡೆಸುತ್ತಿರಬೇಕು. ಯಾವ ಬಗೆಯ ಗಾಳಿ ಸುದ್ದಿಗಳಿಗೂ ಅವಕಾಶ ಕೊಡಕೂಡದು. ಯಾವ ಬಗೆಯ ಭಯಭ್ರಾಂತಿಗಳಿಗೂ ಎಡೆಗೊಡಕೂಡದು. ಭೀತಿ ಸೂಚಕವಾದ ಸುದ್ದಿಗಳನ್ನು ಹರಡಿಸಲೂ ಕೂಡದು. ನಂಬಲೂ ಕೂಡದು. ಇಲ್ಲವಾದರೆ ಕೆಡಕು ಪರಿಣಾಮಗಳು ಅನಗತ್ಯವಾಗಿ ಹರಡುತ್ತವೆ.

ಇಂದು ಪ್ರತಿಯೊಂದು ನಗರದಲ್ಲೂ ಪೌರ ರಕ್ಷಣೆ ಸಂಸ್ಥೆಗಳು ಕಾರ್ಯ ಸನ್ನದ್ಧವಾಗಿವೆ. ಪೌರ ರಕ್ಷಣೆಯ ನಾನಾ ವ್ಯವಸ್ಥೆಗಳನ್ನು ಆಯಾ ಅಧಿಕಾರಿಗಳು ಈಗಾಗಲೇ ಪತ್ರಿಕೆಗಳಲ್ಲೂ ರೇಡಿಯೋ ಮೂಲಕವೂ ಪ್ರಕಟಿಸಿದ್ದಾರೆ. ಸೈನಿಕ ದೃಷ್ಟಿಯಿಂದ ಈ ಸೂಚನೆಗಳಿಗೆ ಯುದ್ಧ ಕಾಲದಲ್ಲಿ ವಿಶೇಷ ಮಹತ್ವವಿದೆ. ಅವುಗಳನ್ನು ನಾವು ಚೂರೂ ತಪ್ಪದೆ ಅನುಸರಿಸಬೇಕು. ವೈರಿಯು ನಿರಾಶನಾದಾಗ ಯಾವ ಕೃತ್ಯಕ್ಕೂ ಹೇಸುವುದಿಲ್ಲ. ಅಂತಹ ಸ್ಥಿತಿಯಲ್ಲಿ ವೈರಿಯು ಕೈಗೊಳ್ಳಬಹುದಾದ ಧಾಳಿಯನ್ನು ವಿಫಲಗೊಳಿಸುವುದಕ್ಕಾಗಿ

(ಎಂಟನೇ ಪುಟ ನೋಡಿರಿ)

## ನಿಮ್ಮ ಮಗನ ಭಾವನಾ ಪ್ರಪಂಚದಲ್ಲಿ ನೀವೆಂದಾದರೂ ವಿಹರಿಸಿದ್ದುಂಟೆ?

ಆತನ ಕನಸುಗಳಲ್ಲಿ ಪಾಲುಗೊಂಡಿದ್ದೀರಾ? ಅವನ ರಹಸ್ಯಗಳು ನಿಮಗೆ ತಿಳಿದಿವೆಯೇ? ನಿಮ್ಮೆಡೆಗೆ ಆತ ನೋಡುತ್ತಿದ್ದಾನೆ. ಅವನ ಕಣ್ಣುಗಳಲ್ಲಿ ಹೊಳೆಯುವ ಪ್ರೀತಿ ಮತ್ತು ಸಂತೋಷವನ್ನು ನೋಡಿರಿ. ನೀವೇ ಆತನ ಸುರಕ್ಷೆ. ಅವನಿಗಾಗಿ ಯೋಜನೆಗಳನ್ನು ಹಾಕಿ, ಬೆನ್ನ ಭವಿಷ್ಯತ್ತಿನ ಕಡೆಗೆ ಸಾಗಲು ಅವನಿಗೆ ನೀವೊಬ್ಬರೇ ಸಹಾಯ ಮಾಡತಕ್ಕವರು. ಆದ್ದರಿಂದ ಇಂದೇ ವಿವೇಕ ಪೂರ್ಣ ನಿರ್ಧಾರವನ್ನು ಮಾಡಿರಿ. ನಾಳೆ ನಿಮ್ಮ ಆಕಾಂಕ್ಷೆಗಳನ್ನು ಅವನು ಪೂರೈಸುವನು. ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಗೆ ಹೋಗಿ ಅವನ ಹೆಸರಿನಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆಯಿರಿ. ನೀವು ಉಳಿಸುವ ಪ್ರತಿಯೊಂದು ರೂಪಾಯಿಯೊಡನೆ ಅವನ ಭವಿಷ್ಯ ಬಲಗೊಳ್ಳುವುದು.

FAITHFUL SB FRIENDLY

### ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು. ಮಣಿಪಾಲ, ಮೈಸೂರು ರಾಜ್ಯ.

ಶಾಖೆಗಳು. 200ಕ್ಕೂ ಮಿಕ್ಕಿ

ಚಲಾವಣಾ ಸಂಪತ್ತು: ರೂ 70 ಕೋಟಿಗೂ ಮಿಕ್ಕಿ.



೧



೨

೩

ತಲ್ಲಿ

# ಅಭಿವೃದ್ಧಿಪಥದಲ್ಲಿ

**ಕೃಷಿಯೊಡನೆ ಖಾಸಗಿ ಮತ್ತು ಸಾ**
**ಆರ್ಥಿಕವಾಗಿ ನಾವು ಸ್ವತಂತ್ರರಾದೇವು**

ರಾಜಕೀಯ ಸ್ವಾತಂತ್ರ್ಯವನ್ನು ೧೯೪೭ರಲ್ಲಿ ಪಡೆದಿದ್ದರೂ ಆರ್ಥಿಕವಾಗಿ ನಾವಿನ್ನೂ ಸ್ವತಂತ್ರರಾಗಿಲ್ಲ. ಔದ್ಯಮೀಕರಣ ಮತ್ತು ಕೃಷಿರಂಗಗಳು ಸಮತೋಲವಾಗಿ ಅಭಿವೃದ್ಧಿ ಹೊಂದಿದರೇನೇ ಭಾರತವು ಸರ್ವಾಂಗೀಣ ಅಭಿವೃದ್ಧಿ ಹೊಂದಬಹುದು. ಸರ್ವ ಸಮರ್ಥ ರಾಷ್ಟ್ರ ನಿರ್ಮಾಣವಾಗಬೇಕಾದರೆ ಉದ್ಯಮಗಳು ಬೆಳೆದು ಬರಬೇಕು. ಪ್ರತಿರಂಗದಲ್ಲಿಯೂ ನಾವು ಸ್ವಾವಲಂಬಿಗಳಾಗಬೇಕು. ಇದಕ್ಕಾಗಿ ನಾವು ಮುಂದಡಿಯಿಡುತ್ತಿದ್ದೇವೆ. ಆಂತರಿಕ ಸಂಪತ್ತಿನೊಡನೆ ಬಾಹ್ಯ ಸಂಪತ್ತಿನ ನೆರವನ್ನು ಪಡೆದು ರಾಷ್ಟ್ರ ಪುನಾರಚನೆಯಲ್ಲಿ ನಿಮಗ್ನರಾಗಿದ್ದೇವೆ. ನಮ್ಮ ಬಗ್ಗೆ ಕೆಂಪು ಚೀನಾ—ಪಾಕಿಸ್ತಾನಗಳು ಉರಿದು ಬೀಳುವುದಕ್ಕೆ ನಮ್ಮ ಪ್ರಗತಿಯೂ ಒಂದು ಕಾರಣ.

ಯಾವುದೇ ವಸ್ತುವಿಗಾಗಿ ನಾವು ವಿದೇಶೀಯರನ್ನೇ ನಂಬಿ ಕೂತುಕೊಳ್ಳುವುದು ಸಾಧ್ಯವಿಲ್ಲ. ಇತ್ತೀಚಿನ ಪಾಕ್ ಹೋರಾಟದ ವೇಳೆ ನಮಗೆ ಹಿಂದೆ ಮಾಡಿಕೊಂಡಿದ್ದ ಒಡಂಬಡಿಕೆಯಿದ್ದರೂ ಅಮೆರಿಕೆ—ಬ್ರಿಟನ್ನುಗಳು ಶಸ್ತ್ರಗಳ ಪೂರೈಕೆ ನಿಲ್ಲಿಸಿದುವು. ಅವು ನೀಡಿದವನ್ನು ನಾವು ಪಾಕ್ ವಿರುದ್ಧ ಉಪಯೋಗಿಸಲಿಲ್ಲ, ಆದರೆ, ಪಾಕ್ ದುರುಪಯೋಗಪಡಿಸಿದೆ. ಅದೇನೇ ಇದ್ದರೂ ನಾವು ಸ್ವಾವಲಂಬಿಗಳಾಗುವುದು ಅತ್ಯಗತ್ಯವಿದೆ. ಪರರೊಡ್ಡವದ ಮುಂದೆ ಕೈಚಾಚಿದರೆ ಉದ್ದೇಶ ಸಾಧನೆಯಾಗುವುದೆಂಬ ಭರವಸೆಯಿಲ್ಲ. ಹೀಗೆ ಪ್ರತಿ ಕ್ಷೇತ್ರದಲ್ಲಿಯೂ ಉಕ್ಕು, ಯಂತ್ರಸಾಮಗ್ರಿ, ತೈಲ, ವಿಮಾನ, ಕಾಗದ, ವಿದ್ಯುತ್— ಇತ್ಯಾದಿ ಇತ್ಯಾದಿ ಒಂದಲ್ಲ ನೂರು ಉದ್ದಿಮೆಗಳಲ್ಲಿ ನಾವು ಸರ್ವತಂತ್ರ ಸ್ವತಂತ್ರರಾದಾಗಲೇ ನಾವು ಯಾರ ಹಂಗು, ದಾಕ್ಷಿಣ್ಯ, ಒತ್ತಾಯ, ಬಲಾತ್ಕಾರಗಳ ಮುಂದೆ ಮಣಿಯದೆ ಸತ್ಯ, ನ್ಯಾಯ, ಧರ್ಮಗಳ ತ್ರಿವೇಣಿಯಲ್ಲಿ ಮುಂದುವರಿಯಬಹುದು.

ದೇಶದ ಉದ್ಯಮಗಳಲ್ಲಿ ಕೆಲವು ಸಾರ್ವಜನಿಕ ರಂಗದಲ್ಲಿವೆ. ಇನ್ನು ಕೆಲವು ಖಾಸಗಿ ಕ್ಷೇತ್ರದಲ್ಲಿವೆ. ಸರಕಾರಿ—ಗೈರ ಸರಕಾರಿ ಉದ್ಯಮಗಳು ಏಕಪ್ರಕಾರವಾಗಿ ಬೆಳೆದು ಬರುವ ಸದವಕಾಶಗಳು ನಮ್ಮ ದೇಶದಲ್ಲಿವೆ. ಖಾಸಗಿ ಉದ್ದಿಮೆಗಳಿಗೆ ಸರ್ವವಿಧದ ಸಹಾಯವನ್ನು ಒದಗಿಸಲು, ತನ್ಮೂಲಕ ಅವನ್ನು ಬೆಳೆಸಲು ಭಾರತದಲ್ಲಿ ಒಂದು ಮಹಾ ಸಂಸ್ಥೆಯಿದೆ. ಇದನ್ನು ಭಾರತದ ಔದ್ಯಮಿಕ ಋಣ ಮತ್ತು ಬಂಡವಾಳ ತೊಡಗಿಸುವ ಮಹಾ ಮಂಡಲವೆಂದು ಕರೆಯುತ್ತಾರೆ (ಐ ಸಿ ಸಿ). ಹತ್ತು ವರ್ಷಗಳಿಗೆ ಹಿಂದೆ ಸ್ಥಾಪಿತವಾದ ಈ ಮಹಾಮಂಡಳವು ಔದ್ಯಮಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ; ಒಂದೇ ದಶಕದಲ್ಲಿ ಅದು ಸಾರ್ಥಕ ಕಾರ್ಯ ಸಾಧಿಸಿದೆ.

ಭಾರತ ಸರಕಾರ, ಭಾರತದ ಖಾಸಗಿ ಸಂಸ್ಥೆಗಳು ಮತ್ತು ಬ್ಯಾಂಕುಗಳು, ವಿದೇಶೀಯ ಔದ್ಯಮಿಕ ಸಂಸ್ಥೆಗಳು, ಜಾಗತಿಕ ಬ್ಯಾಂಕು ಮತ್ತು ಭಾರತದ ಮಿತ್ರರಾಷ್ಟ್ರಗಳು ಈ ಮಹಾ ಮಂಡಲಕ್ಕೆ ಆರ್ಥಿಕ ಬಂಡವಾಳವನ್ನು ಒದಗಿಸುತ್ತವೆ.

ಭಾರತದ ಖಾಸಗಿ ಉದ್ಯಮಗಳಿಗೆ ದೀರ್ಘಾವಧಿ ಸಾಲಗಳನ್ನು ನೀಡಿ ಅವುಗಳ ವಿಸ್ತರಣೆ ಸಾಧಿಸುವ ಸಲುವಾಗಿ ೧೯೫೫ರಲ್ಲಿ ಭಾರತ ಸರಕಾರವು ಜಾಗತಿಕ ಬ್ಯಾಂಕಿನ ಆರ್ಥಿಕ ಹಾಗೂ ತಾಂತ್ರಿಕ ನೆರವಿನೊಡನೆ ಈ ಮಹಾಮಂಡಳವನ್ನು ಸ್ಥಾಪಿಸಿತು.

ಭಾರತದಲ್ಲಿ ಪ್ರಾಕೃತಿಕ ಸಂಪತ್ತು ಧಾರಾಳವಿದ್ದು ಔದ್ಯಮಿಕ ವಿಸ್ತರಣೆಗೆ ಹೇರಳ ಅವಕಾಶವಿದೆ. ಜಗತ್ತಿನ ಏಳರಲ್ಲಿ ಒಬ್ಬ ಭಾರತೀಯ—ಮಾನವ ಶಕ್ತಿ ಅಪಾರವಿದೆ. ತಾಂತ್ರಿಕ ಜ್ಞಾನ, ಬಂಡವಾ



ಲ್ಲಿಲು

# ಮ್ಮ ಉದ್ದಿಮೆರಂಗ

**...ಗಳು ಅಭಿವೃದ್ಧಿಗೊಂಡರೆ ಮಾತ್ರ ...ನರ ಒತ್ತಾಯಕ್ಕೂ ಬಗ್ಗಬೇಕಾಗಿಲ್ಲ.**

...ಳದ್ದ ಕೊರತೆಗಳಿಂದ ಉದ್ಯಮವು ದೇಶದಲ್ಲಿ ಹಿಂದೆಯಿತ್ತು.

ಆದರೂ ಸ್ವಾತಂತ್ರ್ಯಾನಂತರ ನಾವು ಸಾಧಿಸಿದ ಕಾರ್ಯಗಳು ಮಹತ್ತರವಾಗಿವೆ. ನಮ್ಮ ಎಂಟಿಡೆಯ ಕಾರ್ಯಕ್ರಮಗಳೇ ಇದಕ್ಕೆ ಸಾಕ್ಷಿ. “ಐ ಸಿ ಸಿ” ಮಹತ್ವಪೂರ್ಣ ಪಾತ್ರವನ್ನು ಇಲ್ಲಿ ವಹಿಸಿದೆ. ಇದರ ಪರಿಣಾಮವಾಗಿಯೇ ಬೃಹತ್ ಪ್ರಮಾಣದ ಮತ್ತು ಮಧ್ಯಮ ವರ್ಗದ ಉದ್ದಿಮೆಗಳು ಭಾರತೀಯ ರಾಷ್ಟ್ರೀಯ ಆದಾಯ (ಸು. ೧೬,೫೫೦ ಕೋಟಿ ರೂಪಾಯಿ)ದಲ್ಲಿ ಸೇ. ೧೧ರಷ್ಟು ಇಂದು ಒದಗಿಸುತ್ತಿವೆ. ೪೫ ಲಕ್ಷ ನೌಕರರು ಈ ರಂಗದಲ್ಲಿ ದುಡಿಯುತ್ತಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ‘ಐ ಸಿ ಸಿ’ಯು ಭಾರತದ ಬೇರೆ ಬೇರೆಡೆಯಲ್ಲಿರುವ ೩೧೬ ಕಂಪೆನಿಗಳ ೩೫೮ ಯೋಜನೆಗಳಿಗೆ ರೂ. ೧೦೦ ಕೋಟಿಯ ಆರ್ಥಿಕ ಸಹಾಯವನ್ನು ನೀಡಿದೆ. ಈ ಯೋಜನೆಗಳ ಪೈಕಿ ಸುಮಾರು ೧೫೦ ಈಗಾಗಲೇ ಮುಕ್ತಾಯವಾಗಿದ್ದು ಅವು ಉತ್ಪಾದನೆಗೆ ತೊಡಗಿವೆ ದೇಶದ ಮುಖವನ್ನು ಬದಲಿಸುವಲ್ಲಿ ಅಹರ್ನಿಶಿ ದುಡಿಯುತ್ತಿವೆ.



‘ಐಸಿಸಿ’ಯು ನೀಡಿದ ಈ ನೆರವು ಯೋಜನೆಗೆ ಬೇಕಾದ ಬಂಡವಳದ ಒಂದಂಶವಾದರೂ ಅದು ಅತಿ ಪ್ರಮುಖವಾದುದು. ಈ ಮಹಾಮಂಡಳದ ಪ್ರತಿಯೊಂದು ರೂಪಾಯಿಯೂ ಮತ್ತೆ ನಾಲ್ಕು ರೂಪಾಯಿಗಳನ್ನು ಬಂಡವಾಳದಲ್ಲಿ ತೊಡಗಿಸುವುದು. ಇದು ವರೆಗೆ ಐಸಿಸಿ ನೀಡಿದ ನೆರವಿನಿಂದ ಯೋಜನೆಗಳು ಪೂರ್ಣಗೊಂಡಾಗ ವಾರ್ಷಿಕ ೧,೪೭,೦೦೦ ಟನ್ ಕಾಗದ, ೧೭,೭೧,೦೦೦ ಟನ್ ಸಿಮೆಂಟು, ೧, ೭೩,೦೦೦ ಟನ್ ಉಕ್ಕಿನ ಟ್ಯೂಬುಗಳು, ೧, ೧೮,೦೦೦ ಟನ್ ಕಬ್ಬಿಣದ ಪೈಪುಗಳು, ೨೦,೦೦೦ ಟನ್ ವಯರ್ ರೋಪ್, ೧,೯೦,೦೦೦ ಟನ್ ಸೂಪರ್ ಫೋಸ್ಫೇಟ್ಸ್, ೩,೪೦೦ ಮೈಲು ಪವರ್ ಕೇಬಲ್ ಮತ್ತು ೨, ೪೩,೦೦೦ ವಿದ್ಯುತ್ ಮೋಟರ್ ಯುನಿಟ್‌ಗಳನ್ನು ಉತ್ಪಾದಿಸುವುದು. ಇನ್ನೂ ಅನೇಕ ಉದ್ದಿಮೆಗಳಿಗೆ ಇದು ನೆರವು ನೀಡಿದೆ. ಗೊಬ್ಬರ, ಕೃಷ್ಯುಪಕರಣ, ಎಲ್ಯೂಮಿನಿಯಂ ಇತ್ಯಾದಿ ಕಾರಖಾನೆಗಳಿಗೂ ‘ಐ ಸಿ ಸಿ’ ಸಹಾಯಮಾಡಿದೆ.

ಐ ಸಿ ಸಿ ಯು ರೂಪಾಯಿ ಮತ್ತು ವಿದೇಶ ವಿನಿಮಯ ರೂಪದಲ್ಲಿ ಉದ್ದಿಮೆಗಳಿಗೆ ಸಹಾಯ ಮಾಡುವುದು. ಇಂದು ಈ ಮಹಾಮಂಡಳದ ಸಾಧನ ಸಂಪತ್ತು ೮೦ ಕೋಟಿ ರೂಪಾಯಿಗಳಷ್ಟಿದೆ. ಇದರಲ್ಲಿ ಭಾರತ ಸರಕಾರವು ನೀಡಿದ ರೂ. ೭.೫ ಕೋಟಿ ಮತ್ತು ಪಿಎಲ್. ೪೮೦ರಂತೆ ಅಮೆರಿಕೆಯು ನೀಡಿದ ಸಾಲ ರೂ. ೨೦ಕೋಟಿ ಇವೆ. ೧೦೫ ಕೋಟಿ ಡಾಲರ್ (ಸುಮಾರು ರೂ. ೨೨ ಕೋಟಿ) ಜಾಗತಿಕ ಬ್ಯಾಂಕ ಮತ್ತು ಅಮೆರಿಕನ್ ಸಾಲಗಳು ವಿದೇಶೀ ನಾಣ್ಯ ರೂಪದಲ್ಲಿವೆ.

ಐ ಸಿ ಸಿಯ ನೆರವಿನಿಂದ ನಡೆಯುವ ಉದ್ದಿಮೆಗಳು ದೇಶದ ಅನಭಿವೃದ್ಧ ಪ್ರದೇಶದಲ್ಲಿಯೇ ಸಾಮಾನ್ಯವಾಗಿವೆ. ಆಂಧ್ರ, ಪ್ರದೇಶ, ಅಸ್ಸಾಮು, ಕೇರಳ, ಮಧ್ಯಪ್ರದೇಶ,

(ಹತ್ತನೆಯ ಪುಟ ನೋಡಿರಿ)

### ಚಿತ್ರಗಳು

೧. ನಾಗರಿಕ ಪ್ರಪಂಚದಲ್ಲಿ ಕಾಗದದ ಸ್ಥಾನ ಕಡಿಮೆಯುಳ್ಳ. ಪರದೇಶಗಳಿಂದ ಕಾಗದ ಆಮದು ಮಾಡುವ ನಾವು ಈಗ ಹೆಚ್ಚು ಕಾಗದ ಉತ್ಪಾದಿಸುತ್ತೇವೆ.

೨. ಎಲ್ಯುಮಿನಿಯಂನ ಸ್ಥಾನಮಾನವಿಂದು ಗಣ್ಯವಾದುದು. ಭಾರತದಲ್ಲಿ ಎಲ್ಯುಮಿನಿಯಂನ ಕಾರಖಾನೆ ಈಗ ರಭಸದಿಂದ ಕಾರ್ಯತತ್ಪರವಾಗಿದೆ.

೩. ಬೊಂಬಾಯಿಯ ಇಂಜನಿಯರ್ ಆಂಧ್ರ ಪ್ರದೇಶದಲ್ಲಿ ತನ್ನದೆ ಆದ ಕಾರಖಾನೆಯೊಂದನ್ನು ತೆರೆದಿದ್ದಾನೆ. ಐಸಿಸಿಯು ಈತನಿಗೆ ಆರ್ಥಿಕ ಸಹಾಯವನ್ನು ನೀಡಿತ್ತು.

೪. ವಿದ್ಯುತ್ ಬಲ್ಬ್ ತಯಾರಿಸುವ ಚಿಕ್ಕ ಕಾರಖಾನೆಯಲ್ಲಿ ನೌಕರಾಣಿ ಬಲ್ಬಿಗೆ ಟೊಪ್ಪಿಗೆ ಜೋಡಿಸುತ್ತಿದ್ದಾಳೆ.

೫. ಗೌಹಾತಿ ಕಾರಖಾನೆಯಲ್ಲಿ ಕ್ರೂಡ್ ಆಯಿಲ್‌ನ್ನು ಶುದ್ಧಮಾಡುವ ವಿಭಾಗವಿದು.

೬. ಅಸ್ಸಾಮದ ಗೌಹಾತಿಯಲ್ಲಿ ತೈಲ ಶುದ್ಧೀಕರಣ ಕಾರಖಾನೆಯಿದೆ. ಚಿಮಣಿ ಎಣ್ಣೆಯ ವಿಭಾಗವಿದು.



೬

ನಮ್ಮ ಕರ್ತವ್ಯ

# ನಿರಂತರ ಮಿಲಿಟರಿ ಸಿದ್ಧತೆ

ಲೇಖಕರು:—
**ಶ್ರೀ ಚಂಚಲ್ ಸರ್ಕಾರ್**

ಮಿಲಿಟರಿ ಸಿದ್ಧತೆಯಲ್ಲಿ ನಾವು ಒಂದು ಕ್ಷಣವೂ ವಿರಮಿಸಬಾರದೆಂದು ಖ್ಯಾತ ಲೇಖಕ ಶ್ರೀ ಚಂಚಲ್ ಸರ್ಕಾರ್‌ರವರು ತಮ್ಮ ಈ ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಪಾಕಿಸ್ತಾನವು ಕಾಶ್ಮೀರದಲ್ಲಿ ಶಾಂತಿಭಂಗ ಮಾಡಿ ಮತ್ತೆ ನಮ್ಮನ್ನು ಹೋರಾಟಕ್ಕೆ ಎಳೆಯುವ ಸಂಭವವಿದೆ. ಪಾಕಿಸ್ತಾನದ ಮಿಲಿಟರಿ ಬಲವು ಇನ್ನೂ ಸಂಪೂರ್ಣವಾಗಿ ನಾಶಗೊಂಡಿಲ್ಲ. ಈ ಕಾರಣದಿಂದಾಗಿ ನಾವು ಆಕ್ರಮಣವನ್ನು ಎದುರಿಸಲು ಸದಾ ಸಿದ್ಧರಿರುವುದು ಅಗತ್ಯವಾಗಿದೆ.

೦—೦

ನಾವು ಒಂದು ಎಚ್ಚರಿಕೆಯ ಬಳಿಕ ಇನ್ನೊಂದು ಎಚ್ಚರಿಕೆಯನ್ನು ಎದುರಿಸುತ್ತಿರುವಂತೆ ಭಾಸವಾಗುತ್ತಿದೆ. ಪಾಕಿಸ್ತಾನದ ವಿದೇಶಾಂಗ ಮಂತ್ರಿ ಭುಟ್ಟೋ ಅವರು ವಿಶ್ವಸಂಸ್ಥೆಯು ಕಾಶ್ಮೀರ ಸಮಸ್ಯೆಯನ್ನು ತಮ್ಮ ಮೂಗಿನ ನೇರಕ್ಕೆ ಬಗೆಹರಿಸದಿದ್ದರೆ ಪಾಕಿಸ್ತಾನವು ೧೯೬೬ರ ಜನವರಿ ೧ರಂದು ಅಗತ್ಯವಾದರೆ ಅದಕ್ಕಿಂತ ಮೊದಲೇ— ವಿಶ್ವಸಂಸ್ಥೆಯನ್ನು ತ್ಯಜಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

"ಪಾಕಿಸ್ತಾನವು ವಿಶ್ವಸಂಸ್ಥೆಯನ್ನು ಬಿಟ್ಟರೆ ಬಿಡಲಿ" ಎಂದು ನೀವು ಒಂದು ಕ್ಷಣ ಉಪೇಕ್ಷೆಯಿಂದ ಹೇಳಬಹುದು. ಆದರೆ ವಿಶ್ವಸಂಸ್ಥೆಯ ಇತರ ೧೧೫ ಸದಸ್ಯ ರಾಷ್ಟ್ರಗಳು ವಾಸ್ತವ ಪರಿಸ್ಥಿತಿಯನ್ನು ನಾವು ನೋಡುವ ರೀತಿಯಲ್ಲಿಯೇ ನೋಡುತ್ತಿವೆಯೆಂದು ಭಾವಿಸಕೂಡದು. ಈ ಎಲ್ಲಾ ರಾಷ್ಟ್ರಗಳು ಪಾಕಿಸ್ತಾನಕ್ಕೆ ಅನುಕೂಲ ಅಭಿಪ್ರಾಯ ಹೊಂದಿರುವುವೆಂದೂ ಹೇಳಲಿಕ್ಕಾಗುವುದಿಲ್ಲ. ಇನ್ನು ಮುಂದೆ ಕಾಶ್ಮೀರಕ್ಕೆ ಸಂಬಂಧಿಸಿದಂತೆ ನಾವು ಭಾರಿ ರಾಜಕೀಯ ಒತ್ತಡವನ್ನು ಎದುರಿಸಬೇಕಾಗುತ್ತದೆ. ಈ ಸಲ ಬ್ರಿಟನ್ ಮತ್ತು ಅಮೇರಿಕಾಗಳಿಂದ ಮಾತ್ರವಲ್ಲ, ರಷ್ಯಾ ಮತ್ತು ಸಮಗ್ರ ಆಫ್ರೋ—ಏಷ್ಯನ್ ರಾಷ್ಟ್ರಗಳಿಂದ ಈ ಒತ್ತಡ ಬರುವ ಸಂಭವವಿದೆ.

ಈ ಒತ್ತಾಯವನ್ನು ನಾವು ಹೇಗೆ ಎದುರಿಸಬೇಕು? ಎಂಬುದೇ ಇಂದಿನ ಪ್ರಶ್ನೆ. ನನ್ನ ಮಟ್ಟಿಗೆ ಹೇಳುವುದಾದರೆ, ಈ ಸಂದಿಗ್ಧ ಸ್ಥಿತಿಯಿಂದ ಪಾರಾಗಲು ಎರಡೇ ಎರಡು ದಾರಿಗಳಿವೆ. ಒಂದನೆಯದು, ನಾವು ಅನೇಕ ವರ್ಷಗಳಿಂದಲೂ ಯಾವ ಸ್ಥಾನದಲ್ಲಿದ್ದೆವೋ ಆ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕು. ಮಿಲಿಟರಿ ದೃಷ್ಟಿಯಿಂದಲೂ ನಾವು ಬಲಿಷ್ಠರಾಗಿದ್ದೇವೆ. ದೇಶವಿದೇಶಗಳಲ್ಲಿ ಭಾರತದ ಪ್ರತಿಷ್ಠೆಯು ಹೆಚ್ಚಿದೆ. ಕಾನೂನಿನ ದೃಷ್ಟಿಯಿಂದಲೂ ನಮ್ಮ ವಾದವು ಸಿಂಧುವಾಗಿದೆ. ಪಾಕಿಸ್ತಾನವೇ ಯುದ್ಧಕ್ಕೆ ಪ್ರಚೋದನೆ ನೀಡಿದೆ. ನಾವು ನೊಂದ ಪಕ್ಷದವರು. ಯಾವುದೇ ಹೊಂದಾಣಿಕೆಯ ಯತ್ನಗಳನ್ನು ತಿರಸ್ಕರಿಸಬಹುದಾಗಿದೆ.

ನಾವು ನಮ್ಮ ಮಿಲಿಟರಿ ಬಲ ಸಂವರ್ಧನೆಯೊಂದಿಗೆ ಭಾರತ—ಪಾಕ್ ಸಂಬಂಧಗಳನ್ನು ಕಹಿಯಾಗಿಸುವ ಎಲ್ಲಾ ಸಮಸ್ಯೆಗಳಿಗೂ ಸಂಬಂಧಿಸಿದಂತೆ ದೃಢವಾದ ನಿಲುವೊಂದನ್ನು ರೂಪಿಸಿಕೊಳ್ಳಬೇಕು. ಈ ಸಂಬಂಧದಲ್ಲಿ ಅನುಸರಿಸಬೇಕಾದ ಕಾರ್ಯನೀತಿಯನ್ನು ಸಿದ್ಧಗೊಳಿಸಬೇಕು. ಪಾಕಿಸ್ತಾನದ ಸದ್ಭಾವನೆಯನ್ನು ಹೆಜ್ಜೆ ಹೆಜ್ಜೆಗೂ ಪರೀಕ್ಷಿಸುವ ಅಗತ್ಯವನ್ನು ವಿಶ್ವಸಂಸ್ಥೆ ಮತ್ತು ವಿಶ್ವಕ್ಕೆ ಮನವರಿಕೆ ಮಾಡಿಕೊಡಬೇಕು. ಇದು ಎರಡನೆಯ ದಾರಿ.

ಈ ದಿಶೆಯಲ್ಲಿ ಯುದ್ಧ ಸ್ತಂಭನವೇ ಮೊದಲ ಹೆಜ್ಜೆ. ಪಾಕಿಸ್ತಾನವು ಯುದ್ಧಸ್ತಂಭನ ಜಾರಿಯಲ್ಲಿ ಬಂದ ೩೬ ಗಂಟೆಗಳೊಳಗಾಗಿಯೇ ಅನೇಕ ಸಲ ಭಾರತದ ಗಡಿಗಳನ್ನು ಉಲ್ಲಂಘಿಸಿದೆ. ಅನಂತರದ ಅವಧಿಯಲ್ಲಿ ನಡೆದಿರುವ ಅತಿಕ್ರಮಣಗಳಿಗಂತೂ ಲೆಕ್ಕವೇ ಇಲ್ಲವೆಂದು ನಮ್ಮ ಭೂಸೇನೆಯ ಮುಖ್ಯಾಧಿಕಾರಿ ಜನರಲ್ ಚೌಧರಿ ಅವರು ನಾನು ವಿಜ್ಞಾನ ಭವನದಲ್ಲಿದ್ದಾಗ ಹೇಳಿದರು.

ಜನರಲ್ ನಿಮ್ಮೋ ಅವರು ಪಾಕಿಸ್ತಾನಿ ಸೈನಿಕರು ಕದನ ವಿರಾಮ ರೇಖೆಯನ್ನು ಉಲ್ಲಂಘಿಸಿರುವುದನ್ನು ಪಾಕ್ ಸೇನೆಯ ಮುಖ್ಯಾಧಿಕಾರಿಗಳಿಗೆ ತಿಳಿಸಿದ್ದಾರೆ.

### ಅನಿಶ್ಚಿತ ಒಪ್ಪಂದ

ಪಾಕಿಸ್ತಾನದ ಅಧ್ಯಕ್ಷ ಅಯೂಬ್ ಖಾನರು ಕಾಶ್ಮೀರ ಸಮಸ್ಯೆಯು ಇತ್ಯರ್ಥಗೊಳ್ಳುವ ವರೆಗೂ ತಮ್ಮ ಸೇನೆಯನ್ನು ಹಿಂತೆಗೆದುಕೊಳ್ಳುವುದಿಲ್ಲವೆಂದೂ ಅದು ಈಗಿರುವ ಪ್ರದೇಶಗಳಲ್ಲಿಯೇ ಇರುವುದೆಂದೂ ಸ್ಪಷ್ಟಗೊಳಿಸಿದ್ದಾರೆ. ಭದ್ರತಾ ಸಮಿತಿಯಲ್ಲಿದ್ದರೂ ಪ್ರಧಾನ ಕಾರ್ಯದರ್ಶಿ ಉ. ಥಾಂಟ್ ಪಾಕಿಸ್ತಾನದ ಸಶಸ್ತ್ರ ದಾಳಿಕಾರರ ಸಂಬಂಧದಲ್ಲಿ ಅಸ್ಪಷ್ಟ ನಿಲುವು ತಳೆದಿದ್ದಾರೆ. ಈ ಕಾರಣದಿಂದಲೇ ಕದನ ವಿರಾಮದ ಬಳಿಕ ಅನೇಕ ಪಾಕ್ ದಾಳಿಕಾರರು ಜಮ್ಮು—ಕಾಶ್ಮೀರದಲ್ಲಿ ನುಸುಳಿಕೊಂಡಿದ್ದಾರೆ. ಇವೆಲ್ಲವೂ ನಿರ್ದಾಕ್ಷಿಣ್ಯವಾಗಿ ಸ್ಪಷ್ಟಗೊಳ್ಳಬೇಕು. ಪಾಕಿಸ್ತಾನಕ್ಕೆ—ಕದನ ವಿರಾಮವೆಂದರೆ ಸಶಸ್ತ್ರ ದಾಳಿಕಾರರನ್ನು ಪುನಃ ಸಜ್ಜುಗೊಳಿಸಿ ಭಾರತದೊಳಗೆ ಕಳುಹಿಸಲು ದೊರೆತ ಕಾಲಾವಕಾಶವೆಂದು ಅರಿತುಕೊಳ್ಳಬೇಕು.

ಪಾಕಿಸ್ತಾನದ ದೃಷ್ಟಿಯಲ್ಲಿ ವಿಶ್ವಸಂಸ್ಥೆಯು ಒಂದು ಯಃಕಶ್ಚಿತ್ ಸಂಸ್ಥೆ. ಪಾಕಿಸ್ತಾನವು ಈ ಅವಧಿಯಲ್ಲಿ ಅತಿಕ್ರಮಣಕಾರರ ಮೂಲಕ ಕಾಶ್ಮೀರದಲ್ಲಿ ಶಾಂತಿಭಂಗ ಮಾಡುವ ಸಾಧ್ಯತೆಯಿದೆ. ವಿಶ್ವಸಂಸ್ಥೆಯು ಮತ್ತೆ ಆಕ್ರಮಣ ಮಾಡಿದವರನ್ನು ಆಕ್ರಮಣಕ್ಕೆ ಒಳಗಾದವರನ್ನು ಸಮದೃಷ್ಟಿಯಿಂದ ನೋಡುತ್ತದೆ. ಈ ಸಲ ಬಹುಶಃ ಅನೇಕ ನಿರ್ಬಂಧಗಳನ್ನು ಹಾಕುತ್ತದೆ.

### ನಿರಂತರ ಜಾಗರೂಕತೆ

ಮಿಲಿಟರಿ ಸಿದ್ಧತೆಯಲ್ಲಿ ನಾವು ಒಂದು ಅರೆ ಕ್ಷಣವಾದರೂ ವಿರಮಿಸಬಾರದು. ಪಾಕಿಸ್ತಾನಿ ಸೇನೆಯು ಇನ್ನೂ ಸಂಪೂರ್ಣವಾಗಿ ನಿರ್ಮೂಲವಾಗಿಲ್ಲ. ಅಮೆರಿಕಾದಿಂದ ಪಡೆದಿರುವ ಶಸ್ತ್ರಾಸ್ತ್ರಗಳು ನಮ್ಮ ಬಳಿಯಲ್ಲಿನ ಶಸ್ತ್ರಾಸ್ತ್ರಗಳಿಗಿಂತ ಪ್ರಬಲವಾಗಿವೆ.

ಭಾರತ—ಪಾಕಿಸ್ತಾನಗಳ ನಡುವೆ ಈಗ ನಡೆದಿರುವ ಯುದ್ಧದ ಗತಿ ಮತ್ತು ಸ್ವರೂಪ ಇವೇ ಮೊದಲಾದ ಕಾರಣಗಳಿಂದಾಗಿ ಪಾಕಿಸ್ತಾನಕ್ಕೆ ಈ ಶಸ್ತ್ರಾಸ್ತ್ರಗಳನ್ನು ಪರಿಣಾಮಕಾರಿ ರೀತಿಯಲ್ಲಿ ಬಳಸಲು ಸಾಧ್ಯವಾಗಿಲ್ಲ.

ಶೌರ್ಯದಿಂದ ಟ್ಯಾಂಕ್‌ಗಳನ್ನು ತಡೆಗಟ್ಟುವುದು ಸಾಧ್ಯವೆಂಬುದನ್ನು ನಮ್ಮ ಯೋಧರು ತೋರಿಸಿಕೊಟ್ಟಿದ್ದಾರೆ. ಆದರೂ ಇದಕ್ಕಾಗಿ ನಾವು ತೆರಬೇಕಾದ ಬೆಲೆ ಅಮೂಲ್ಯ. ಇಂದು ಭಾರತದ ಎಷ್ಟೋ ಕುಟುಂಬಗಳಲ್ಲಿನ ಪ್ರಿಯವಾದ ವ್ಯಕ್ತಿಗಳು ದೇಶರಕ್ಷಣೆಗಾಗಿ ಅವರನ್ನಗಲಿ ವೀರಸ್ವರ್ಗವನ್ನೈದಿದ್ದಾರೆ. ನಾವು ಎಂತಹದೇ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾಗಬೇಕು.

### ರಾಜಕೀಯ ಸಮರ

ರಾಜಕೀಯ ಹೋರಾಟವನ್ನು ಎದುರಿಸಲು ನಾವು ಸಿದ್ಧರಾಗಬೇಕು. ಪ್ರಧಾನ ಮಂತ್ರಿ ಶ್ರೀ ಶಾಸ್ತ್ರಿ ಅವರು ತಾಷ್ಕೆಂಟ್‌ನಲ್ಲಿ ಭಾರತ ಪಾಕಿಸ್ತಾನ್ ನಾಯಕದ್ವಯರ ನಡುವೆ ಮಾತುಕತೆ ನಡೆಯಬೇಕೆಂದು ಮಿ. ಕೋಸಿಗಿನ್‌ರವರು ಮಾಡಿದ ಸಲಹೆಯನ್ನು ಒಪ್ಪಿಕೊಂಡು ಆ ದಿಶೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಆದರೆ ಅಯ್ಯೂಬಖಾನ್ ಅದನ್ನು ಒಪ್ಪಲಿಲ್ಲ. ನಾವು ರಾಜಕೀಯ ಸವಾಲನ್ನು ಕೇವಲ ಶಾಸನಾತ್ಮಕ ಅಥವಾ ಇನ್ನಾವುದೇ ಬಗೆಯ ವಾದಗಳಿಂದಷ್ಟೇ ಎದುರಿಸಕೂಡದು.

ರಾಜಕೀಯ ಒತ್ತಡವನ್ನು ಆರಂಭದಲ್ಲಿಯೇ ದುರ್ಬಲಗೊಳಿಸಬೇಕು. ನಾವು ನಮ್ಮ ಕಾರ್ಯ ಸೂಚನೆಗಳನ್ನು ವಿಶ್ವಕ್ಕೆ ವಿವರಿಸಬೇಕು. ನಮ್ಮ ನಿಲುವನ್ನು ಬದಲಾಯಿಸಲು ತರುವ ಯಾವುದೇ ಒತ್ತಡಕ್ಕೂ ನಾವು ಜಗ್ಗಬಾರದು.

ಇನ್ನು ನ್ಯೂಯಾರ್ಕಿನ ಈಸ್ಟ್ ನದಿಯ ದಡದ ಮೇಲಿರುವ ವಿಶ್ವಸಂಸ್ಥೆಯ ಬಗ್ಗೆ ಒಂದು ಮಾತು. ವಿಶ್ವಸಂಸ್ಥೆಯು ಕೊರಿಯ, ಗಾಝಾ, ಪ್ರದೇಶ ಮತ್ತು ಕಾಂಗೋಗಳನ್ನು ಸ್ಮರಿಸಿಕೊಳ್ಳಲಿ. ಭಾರತವು "ವಿಶ್ವಸಂಸ್ಥೆಗೆ ಹಲವಾರು ವಿಧದಲ್ಲಿ ಸೇವೆ ಸಲ್ಲಿಸಿದೆ. ವಿಶ್ವಸಂಸ್ಥೆ ಇದನ್ನು ಅರಿತುಕೊಳ್ಳಬೇಕು.

(ಆಕಾಶವಾಣಿ ಸೌಜನ್ಯ)

## ಶಾಂತಿಪ್ರಿಯ ಭಾರತೀಯರ ಸತ್ವಪರೀಕ್ಷೆ

(ಐದನೇ ಪುಟದಿಂದ)

ಪೌರ ರಕ್ಷಣ ಸಂಸ್ಥೆಯು ಹೇಳಿರುವ ವಿಧಿನಿಷೇಧಗಳನ್ನು ಸರ್ವರೂ ಹೃತ್ಪೂರ್ವಕವಾಗಿ ಸ್ವಾಗತಿಸಬೇಕು. ವೈರಿಯ ಪಂಚಮ ದಳಗಳು ವೇಷ ಮರೆಸಿಕೊಂಡು ಬಂದು ನಮ್ಮ ಜನರೊಡನೆ ಸೇರಿ, ಯುದ್ಧ ರಹಸ್ಯಗಳನ್ನು ತಿಳಿದುಕೊಳ್ಳಲು ಯತ್ನಿಸಬಹುದು; ಜಾತೀಯ ಕಲಹಗಳಿಗೆ ಉತ್ತೇಜನ ಕೊಡಲು ಬಯಸಬಹುದು; ಸುಳ್ಳು ಸುದ್ದಿಗಳನ್ನು ಹರಡಿಸಬಹುದು. ಇಂತಹ ಸಂದರ್ಭಗಳನ್ನು ಒಡನೆಯೇ ಪೌರರಕ್ಷಣ ಸಂಸ್ಥೆಗಳಿಗೆ ತಿಳಿಸಿ ವೈರಿಗಳ ಕುಹಕವನ್ನು ನಿಗ್ರಹಿಸಬೇಕು.

ಕೊನೆಯದಾಗಿ ನಾನು ವಿಶೇಷವಾಗಿ ಭಿನ್ನವಿಸಿಕೊಳ್ಳತಕ್ಕ ಅಂಶವು ಇನ್ನೊಂದಿದೆ. ನಮ್ಮ ವಿಧಾನ ಮಂಡಲಗಳು ಯುದ್ಧಕಾಲದಲ್ಲಿ ಹೃತ್ಪೂರ್ವಕ ಸಹಕಾರ ನೀಡಬೇಕು. ಇದು ವರೆಗೆ ಸಿದ್ಧವಾಗಿರುವ ಸಮಸ್ತ ಯೋಜನೆಗಳಿಗೂ ಅನುಮೋದನೆ ಕೊಟ್ಟು ಯುದ್ಧಕಾಲಕ್ಕೆ ನೆರವಾಗುವಂತೆ ತುರ್ತಾಗಿ ಶಾಸನ ನಿರ್ಣಯ ಮಾಡಬೇಕು. ಶಾಸನ ನಿರ್ಣಯವಾದರೆ ಮಾತ್ರವೇ ಸಾಲದು, ಅವುಗಳನ್ನೂ, ಅವುಗಳ ಮೇರೆಗೆ ರೂಪಿತವಾದ ನಿಯಮ ನಿಬಂಧನೆಗಳನ್ನೂ ಕಾರ್ಯರೂಪಕ್ಕೆ ತಂದು ಜನರಲ್ಲಿ ಧೈರ್ಯ— ಉತ್ಸಾಹಗಳನ್ನು ಮೂಡಿಸಬೇಕು; ಜನರ ನೈತಿಕ ಶಕ್ತಿಯನ್ನು ವೃದ್ಧಿಪಡಿಸಬೇಕು. ದೇಶರಕ್ಷಣೆಯ ಈ ಪವಿತ್ರ ಕಾರ್ಯವನ್ನು ನಿರ್ವಹಿಸಲು ಅವಶ್ಯವಾದ ಶಕ್ತಿಯನ್ನು ಭಗವಂತನು ಕರುಣಿಸಲಿ.

ಇದು ನಮ್ಮ ಜೀವನ— ಮರಣಗಳನ್ನು ನಿರ್ಣಯಿಸುವ ಯುದ್ಧ. ಸತ್ಯ ಸಂಕಲ್ಪಕ್ಕಾಗಿ ಜನತೆ ನಡೆಸುವ ಭೀಕರ ಸಂಗ್ರಾಮ. ಸತ್ಯಕ್ಕೆ ಎಂದಿಗೂ ಚ್ಯುತಿಯಿಲ್ಲ; ಅಸತ್ಯಕ್ಕೆ ಎಂದಿಗೂ ಉಳಿವಿಲ್ಲ. ಈ ಕಲ್ಪನೆ ಕನಸಿನ ಭ್ರಾಂತಿಯಲ್ಲ—ಲೋಕ ಚರಿತ್ರೆಯಿಂದ ಸಿದ್ಧವಾಗಿರುವ ತತ್ವ ವಿಶೇಷ. ಜೈಹಿಂದ್

(ಆಕಾಶವಾಣಿ ಸೌಜನ್ಯ)


**ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್**
**ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ**
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

**ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.**
**ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.**

## ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
**ಮಂಗಳೂರು—3**

ಚಾರುಚಯನ

# ದೊಡ್ಡವರ ಗಿಡ್ಡತನ

ಅಲ್ಪ—ಅತ್ಯಲ್ಪ ಬಹುಮತದಿಂದ ಬ್ರಿಟನ್ನನ್ನು ಲೇಬರ್ ಪಕ್ಷ ಆಳುತ್ತದೆ; ಅದರ ನಾಯಕತ್ವದಲ್ಲಿ ಕುಳಿತಿರುವ ಪ್ರಧಾನಿ ಹೆರಾಲ್ಡ್ ವಿಲ್ಸನ್

ಕಾಮನ್‌ವೆಲ್ತಿನ ರಾಣಿ ಬ್ರಿಟನ್ ಒಂದು ಕಾಲದಲ್ಲಿ ಭೂಮಿ—ಸಮುದ್ರ—ಆಕಾಶಗಳ ಅದ್ವಿತೀಯ ಮಹಾರಾಣಿಯಾಗಿ ಮೆರೆದಾಡಿದ ದೇಶ ಬ್ರಿಟನ್. ಜಾಗತಿಕ ರಾಜಕೀಯದ ಅಂಗ ಅಂಗದಲ್ಲೂ ಪ್ರಭಾವ ಮೂಡಿಸಬಲ್ಲ ಶಕ್ತಿಯಂತೆ ಬ್ರಿಟನ್.

ಆದರೆ ಇಂದು? ಬರಿಯ ಕಾಮನ್‌ವೆಲ್ತಿನ ರಾಣಿಯೆಂದು ಮಾತ್ರ ಮುಖವ ರಳಿಸಿ ಕೂತುಕೊಳ್ಳಬೇಕಾಗಿದೆ.

ಇದಕ್ಕೆ ಯಾರು ಹೊಣೆ? ಕಾಲಕ್ಕೆ ತಕ್ಕ ಕೋಲ ಕಟ್ಟಬೇಕು, ಗಾಳಿ ಬಂದತ್ತ ತೂರಿಕೊಳ್ಳಬೇಕು. ಇಲ್ಲವೇ ಕುಟಿಲಾಗ್ರಣಿ ಆಗ್ಬೇಕು!

ಲೇಬರ್ ಸರಕಾರದ ಪ್ರಧಾನಿ, ಕಾಮನ್‌ವೆಲ್ತಿನ ಮಹಾ ನಾಯಕ ವಿಲ್ಸನ್ ದೇಶದಲ್ಲಿ ಜನಾನುರಾಗ ಉಳಿಸಿಕೊಂಡಿರಬಹುದು—ಆದರೆ ವಿದೇಶದಲ್ಲಿ? ಮುಖ್ಯವಾಗಿ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ?

ಇತರರ ಬಗ್ಗೆ ನಾವೇನೂ ಹೇಳುವಂತಿಲ್ಲ. ಆದರೆ, ಭಾರತ ಮಾತ್ರ ಅವರ ಬೇಜವಾಬ್ದಾರಿಯ ವರ್ತನೆಯಿಂದ ನೊಂದಿದೆ. ಇದನ್ನು ತಿಳಿ ತಿಳಿದೂ ವಿಲ್ಸನ್ ಮತ್ತೂ ಭಾರತೀಯರ ಕುಸುಮ ಕೋಮಲ ಹೃದಯವನ್ನು ಇರಿಯ ಹತ್ತಿದ್ದಾರೆ.

ಭಾರತ—ಪಾಕ್ ಯುದ್ಧದ ವೇಳೆಯಲ್ಲಿ ಬ್ರಿಟನ್ನಿನ ಪಕ್ಷಪಾತ ಬಹಿರಂಗವಾಗಿದೆ. 'ಯುದ್ಧ ವಿರಾಮ'ದ ನಂತರವೂ ಅದು ಮತ್ತಷ್ಟು ಸ್ಪಷ್ಟವಾಗಿದೆ.

ಅಘೋಷಿತ ಕದನ ನಡೆಯುತ್ತಿದ್ದ ವೇಳೆ ಬ್ರಿಟನ್ನಿನ ಪತ್ರಿಕೆಗಳು ಭಾರತವನ್ನೇ ಅಪರಾಧಿಯ ಸ್ಥಾನಕ್ಕೇರಿಸುವಂತೆ ಪಾಕ್ ಪಕ್ಷ ವಹಿಸಿ, ಭಾರತದ ಮೈಮೇಲೆ ಮಸಿ ಬಳೆಯ ತೊಡಗಿದುವು. ಆಗೋಸ್ಟು ೫ರಂದು ತೊಡಗಿದ ಪಾಕ್ ಅಕ್ರಮ- ಸಕ್ರಮ ಆಕ್ರಮಣವನ್ನು ಉಲ್ಲೇಖಿಸಲು ಅವು ಮುಂದೆ ಬರಲಿಲ್ಲ

ಇದನ್ನು ನೋಡುತ್ತ ಬ್ರಿಟಿಷ್ ಸರಕಾರ ದೀರ್ಘ ಮೌನವ್ರತ ಅವಲಂಬಿಸಿತು.

ತನ್ನ ಮೇಲೆ ನುಗ್ಗಿ ಬಂದ ಪಾಕ್ ಆಕ್ರಮಣಕಾರರನ್ನು ಬಗ್ಗು ಬಡಿಯಲು, ಅನ್ಯತ್ರ ಸಾಧನವಿಲ್ಲದ ಭಾರತವು ಪಟ್ಟಂಬರ ೬ರಂದು ಪಾಕ್— ಭಾರತ ಗಡಿಯನ್ನು ಮೀರಿ ಮುಂದುವರಿಯಿತು. —ಆತ್ಮರಕ್ಷಣೆಯ ಅಂತಿಮ ಸಾಧನವಾಗಿತ್ತು, ಅದು.

ಆದರೆ, ಬ್ರಿಟನ್ನಿನ ದೃಷ್ಟಿಯಲ್ಲಿ ಇದು ಆಕ್ರಮಣವಾಯಿತು!

ಪಾಕಿಸ್ತಾನ, ಅದಕ್ಕೆ ಮೊದಲು ಭಾರತದ ಒಂದು ರಾಜ್ಯ—ಕಾಶ್ಮೀರದ ಮೇಲೆ ಅನೈತಿಕ, ಅಕ್ರಮ ಪ್ರವೇಶ ಮಾಡಿದುದು ಆಕ್ರಮಣವಲ್ಲ, ಅದನ್ನು ಬಡಿದೋಡಿಸಿದ ಭಾರತೀಯ ಸೇನೆಯ ಪವಿತ್ರ ಕೃತಿ ಆಕ್ರಮಣ! ನರಿಯ ನೀತಿ ಇದೇ.

ಬ್ರಿಟನ್ನಿನ ಪತ್ರಿಕೆಗಳು ಹೊಣೆಗೆಟ್ಟ ವ್ಯಕ್ತಿಗಳು, ಕಿರುಕುಳ ನೀಡುವ ತುಂಡು ರಾಜಕಾರಣಿಗಳು—ಅಜ್ಞಾನಿಗಳು—ಹೀಗೆ ಕರೆದರೆ ಅದನ್ನು ಸಹಿಸಬಹುದು.

ಬ್ರಿಟಿಷ್ ಪ್ರಧಾನಿ—ಮಹಾ ರಾಷ್ಟ್ರವೊಂದರ ಪ್ರಧಾನಿ ಇದನ್ನು ಅನ್ನುವುದೆಂದರೆ, ಅದನ್ನೂ ಮೀರಿದ ಹೊಣೆಗೇಡಿತನ ಎಲ್ಲಿದೆ?

ಕಡೆಗೆ ವಿಲ್ಸನರದ್ದು ತಪ್ಪಿಲ್ಲವೇನೋ! ಅವರಿಗೆ ಸಂಗತಿ ತಿಳಿಸಬೇಕಾದುದು ಕಾಮನ್‌ವೆಲ್ತ್ ಮಂತ್ರಿ ಶಾಖೆಯ ಕೆಲಸವಲ್ಲವೆ?

ಕಾಮನ್‌ವೆಲ್ತ್ ಮಂತ್ರಿಯಿರಲಿ, ಪ್ರಧಾನ ಮಂತ್ರಿಯಿರಲಿ, ಆಗಸ್ತ ೫ರಿಂದ ಸಪ್ಟಂಬರ ೬ರ ವರೆಗ ಮೂವತ್ತೈದು ದಿನಗಳ ಬೆಕ್ಕು ಸನ್ಯಾಸಿಯ ಮೌನವ್ರತವನ್ನು ತ್ಯಜಿಸಿ ಆತ್ಮರಕ್ಷಣೆಗಾಗಿ ಭಾರತ ಕೈಗೊಂಡ ಕ್ರಮವನ್ನು ಆಕ್ರಮಣವೆಂದು ಸಾರುವುದಕ್ಕೆ ಮೊದಲಾದರೂ ವಸ್ತುಸ್ಥಿತಿಯನ್ನು ಪರಿಶೀಲಿಸ ಬೇಡವೆ?

ಮಹಾ ಮಹಾ ಸಮರಗಳಲ್ಲಿ ರಾಜತಾಂತ್ರಿಕ ಚಾತುರ್ಯ ತೋರಿದ ಬ್ರಿಟಿಷ್ ಸರಕಾರವಿಂದು ದಿವಾಳಿಕೋರತನವನ್ನೇಕೆ ತೋರಿಸಿತು?

ಪಾಕಿಸ್ತಾನದೊಡನೆ ಅದಕ್ಕೆ ಮೋಹವೇ ?

ಇರಬಹುದು. ಬ್ರಿಟಿಷ್ ಲೀಟರ ಸರಕಾರ ಹುಟ್ಟಿಸಿದ ಕೂಸು ಅದು. ಬ್ರಿಟಿಷ್ ತಾಯಿಯ ಬಡಿಯುವ ತಾಳಕ್ಕೆ ಸರಿಯಾಗಿಯಲ್ಲವಾದರೂ ಕುಣಿಯುವ ಇರಾದೆಯನ್ನು ಪ್ರದರ್ಶಿಸುವ ಹಸುಗೂಸು ಅದು

ಭಾರತವನ್ನು ಯಾರೂ ಸೃಷ್ಟಿಸಿಲ್ಲ. ಅದು ಅನಾದಿ—ಜಗತ್ತು ಅಂಧಕಾರದಲ್ಲಿ ತೊಳಲುತ್ತಿರುವಾಗ ಅದಕ್ಕೆ ಬೆಳಕು ಬೀರಿದ ಸೂರ್ಯ ಅದು. ಸೂರ್ಯನಿಗೆ ಚ್ಯುತಿಯಿಲ್ಲ. ಅದು ಸ್ಥಿರ. ತನ್ನ ಸ್ವಪ್ರಕಾಶದಿಂದಲೇ ಲೋಕವನ್ನು ಬೆಳಗಬಲ್ಲ ಸ್ವಯಂ ಜ್ಯೋತಿ ಪುಂಜ.

ಪಾಕಿಸ್ತಾನ ತಿರು ಬೊಬ್ಬೆ ಹಾಕಿತೆಂದ, ಬ್ರಿಟನ್ ತನ್ನ ದನಿಗೂಡಿಸಿತೆಂದು ಭಾರತದ ಐಕ್ಯ ನಿಷ್ಠೆಗೆ ಭಂಗ ಬರಬಾರದು.

ಪಾಕಿಸ್ತಾನದ ಮೇಲೆ ವಿಲ್ಸನರಿಗೆ ಮೋಹವಿರಲಿ, ಯಾರೂ ಬೇಡವೆನ್ನುವಂತಿಲ್ಲ, ಆದರೆ, ಭಾರತವೂ ಅವರ ಕಾಮನ್‌ವೆಲ್ತಿನ ಒಂದು ಸದಸ್ಯ ರಾಷ್ಟ್ರ— ಇದನ್ನವರು ಮರೆತು ಬಿಡಬಾರದಿತ್ತು.

ಕಚ್ಛ ರಣದ ತಂಟೆಯನ್ನು ಪಾಕಿಸ್ತಾನ ಪ್ರಾರಂಭಿಸಿದಾಗ, ಅದು ಉಲ್ಬಣಾವಸ್ಥೆಗೇರಿದಾಗ, ತಾನೇ ಮಾಡಿದ ಮಧ್ಯಸ್ಥಿಕೆಗೆ ಭಾರತ ಒಪ್ಪಿದುದನ್ನು ಅವರು ಮರೆತು ಬಿಡಬಾರದಿತ್ತು.

ಪ್ರಜಾಪ್ರಭುತ್ವದ ರಾಣಿ ಬ್ರಿಟನ್ನಿನ ಪ್ರಧಾನ ಮಂತ್ರಿಗಳು ವಿಶ್ವದ ಬಹು ದೊಡ್ಡ ಪ್ರಜಾತಂತ್ರ ಭಾರತದ ಕೃತಿಯನ್ನು ಯಥಾರ್ಥವಾಗಿ ತಿಳಿದುಕೊಳ್ಳುವ ಪ್ರಯತ್ನ ಮಾಡಲು ಮರೆತು ಬಿಡಬಾರದಿತ್ತು.

ಜಾತೀಯ—ಜಾತ್ಯತೀತ ಮತ್ತು ಸರ್ವಾಧಿಕಾರಿ-ಪ್ರಜಾಪ್ರಭುತ್ವವಾದ ತತ್ವಗಳ ನಡುವಣ ಈ ಹೋರಾಟದ ಬಗ್ಗೆ ಹೇಳಿಕೆ ನೀಡುವುದಕ್ಕೆ ಮೊದಲು ನೂರು ಸಲ ಯೋಚಿಸಲು ಮರೆತು ಬಿಡಬಾರದಿತ್ತು.

ಪಾಕ್ ಪ್ರೇಮದ ಒತ್ತಡದಿಂದ ಭಾರತದ ಬಗ್ಗೆ ಪೂರ್ವಗ್ರಹ ಪೀಡಿತರಾದ ವಿಲ್ಸನ್ ಭಾರತದ ಕೃತಿಯನ್ನು ಸಮರ್ಥಿಸದೆ ಹೋದರೂ ಬಾಯಿ ಬಿಚ್ಚುವ ಅಪರಾಧವನ್ನು ಮಾಡಬಾರದಿತ್ತು....

ವಿಲ್ಸನ್ ಇವೆಲ್ಲವನ್ನೂ ಮಾಡಿದರು.

ಭಾರತಕ್ಕೆ ಕಳಿಸಬೇಕಾಗಿದ್ದ ಸಾಮಗ್ರಿಗಳನ್ನು, ಪಾಕ್—ಭಾರತ ವಿರಸವನ್ನು ಅರಿತೂ, ಕರಾಚಿಯ ಗಡಿಯನ್ ಹಡಗದಲ್ಲಿ ಕಳಿಸಿ ಮತ್ತೊಂದು ಅಪರಾಧ ಮಾಡಿದರು!

ಇವೆಲ್ಲವನ್ನೂ ನೋಡುವ ಬಡ ಭಾರತೀಯನಿಗೆ ಅರ್ಥವಾಯಿತು; ಬ್ರಿಟನ್ ಪಾಕ್ ಆಧಿನಾಯಕರಿಗೆ ಒತ್ತಾಸೆ ನೀಡಿದೆ; ಪಕ್ಷಪಾತತನ ಧೋರಣೆ ವಹಿಸಿದೆ. ಇದನ್ನು ಪಾಕ್ ಮೋಕೆಯೆಂದು ಕರೆಯಿರಿ; 'ಇಲ್ಲ, ಭಾರತದೊಡನೆ ಹಗೆತನವೆನ್ನಿರಿ—

ಎರಡರ ಪರಿಣಾಮದಲ್ಲೂ ಏನಿದೆ ವ್ಯತ್ಯಾಸ?

ಕೆಂಪ ಚೀನಾಕ್ಕೂ ವಿಮಾನ ಪೂರಯ್ಸುವ ಬ್ರಿಟನ್ ಏನು ಬಯಸುತ್ತದೆ?

ತನ್ನ ಉತ್ಪಾದನೆಗೆ ಮಾರುಕಟ್ಟೆಯನ್ನು!

ವ್ಯಾಪಾರಿಗೆ ವ್ಯಾಪಾರವೊಂದೇ ದೃಷ್ಟಿ. ವ್ಯಭಿಚಾರಿಗ ತನ್ನ ಬಳಿ ಬಂದವನೇ ಗಂಡ. ಯಾರಾದರೇನಂತೆ? ಹೇಗಿದ್ದರೇನಂತೆ- ತನ್ನ ಕೆಲಸವಾದರೆ ತೀರಿತು...

ಬ್ರಿಟಿಷ್ ಸರಕಾರದ, ಪತ್ರಿಕೆಗಳ ನೀತಿ ಭಾರತವನ್ನು ಎಚ್ಚರಿಸಿದೆ. ಈ ವ್ಯಾಪಾರಿಯೊಡನೆ ತನ್ನ ಸಂಬಂಧ ಹೇಗಿರಬೇಕು ಎಂಬುದನ್ನು ಮತ್ತೊಮ್ಮೆ ವಿವೇಚಿಸುವಂತೆ ಮಾಡಿದೆ

ಏನೇ ಬರಲಿ, ಏನೇ ಆಗಲಿ, ಬ್ರಿಟನ್ನರ ಹಳೆಯ ಭೇದ ನೀತಿಯಿಂದು ಭಾರತವನ್ನು ಮಣಿಸದು—

ಕಾಶ್ಮೀರ ಭಾರತದ ಒಂದು ರಾಜ್ಯ ಅದನ್ನು ಕಬಳಿಸುವ ಪಾಕಿಗೆ ಆದಾರ ಒತ್ತಾಸೆ, ನೆರವು, ಉತ್ತೇಜನ, ಪ್ರಚಾರ ಕಾರ್ಯಗಳಿರಲಿ, ಭಾರತ ಭಾಸ್ಕರ ಅವನ್ನು ಗಣಿಸಲಾರನು.

ಭಾರತೀಯರಿಗು ದೃಢ ಪ್ರತಿಜ್ಞೆ.

ಧರ್ಮವಿರುವಲ್ಲಿ ಜಯವಿದ್ದೇ ಇದೆ.

ಸೂರ್ಯನಿಗೂ ಮೋಡ ಅಡ್ಡಬರಬಹುದು; ಗ್ರಹಣ ಹಿಡಿಯ ಬಹುದು; ಅದೆಷ್ಟು ಕಾಲ?

ವಿಲ್ಸನ್ ಹೊಣೆಗೆಟ್ಟ ಹೇಳಿಕೆಯಿತ್ತರು—

ಹೊಣೆಯೇ ಇಲ್ಲದ ಆಯ್ಯೂಬರಿಗೆ ಊರುಗೋಲಾದರು — ಕೆಂಪು ಊರುಗೋಲಿಗೆ ಶರಣು ಹೋಗುವ ಆಯ್ಯೂಬರನ್ನು ತನ್ನತ್ತ ಕರೆಯಲು ಹೀಗೆ ಮಾಡಿದರೆ? ಅದಿದ್ದರೂ ದೊಡ್ಡವರ ಗಿಡ್ಡತನ ವಿದಾಗಲಿಲ್ಲವೆ? ಆದುದರಿಂದಲೇ ಅವರ ಕೃತಿ ನಿಂದ್ಯ.

ಸತ್ಯಪ್ರಿಯ ಭಾರತೀಯನೇ ಅಭಿವಂದ್ಯ.

—ರಾಶಿ.

---

### ಮಣಿಪಾಲ ವಿದ್ಯಾರ್ಥಿಗಳಿಂದ ರಕ್ಷಣಾ ನಿಧಿಗೆ ೬೬೧೭ ರೂ

ಮಣಿಪಾಲ, ಅ. ೭.-ಸ್ಥಳೀಯ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ೩೬೧೭ ರೂ ಗಳನ್ನು ಸಂಗ್ರಹಿಸಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಕಳಿಸಿದ್ದಾರೆ. ಅವರು ಈ ಹಿಂದೆ ೩೦೦೦ ರೂ ಗಳನ್ನು ಸಲ್ಲಿಸಿದ್ದಾರೆಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ. ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವುದರಲ್ಲಿ ಪ್ರಧಾನ ಮಂತ್ರಿಯವರಿಗೆ ವಿದ್ಯಾರ್ಥಿಗಳು ಸಂಪೂರ್ಣ ಬೆಂಬಲ ಸೂಚಿಸಿದ್ದಾರೆ.

### ವಾರ್ಷಿಕೋತ್ಸವ ಮತ್ತು ದಸರಾ ಸಮಾರಂಭಗಳು

ಸುರತ್ಕಲ್, ಅಗ್ಗಿದಕಳಿ ಹಾಯರ್ ಎಲಿಮೆಂಟರೀ ಶಾಲಾ 70ನೇ ವಾರ್ಷಿಕೋತ್ಸವ ಮತ್ತು ದಸರಾ ಸಮಾರಂಭಗಳು ದಿನಾಂಕ ೩ರಂದು ಹೆಜಮಾಡಿ ಬೋರ್ಡ್ ಹೈಸ್ಕೂಲ್ ಹೆಡ್‌ಮಾಸ್ಟರ್ ಶ್ರೀ ಟಿ. ಮಹಾಬಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಿಂದ ವರದಿವಾಚನವಾದೊಡನೆ ಶ್ರೀ ಯಂ. ಗೋಪಾಲ ಮಾಸ್ತರ್ ಶಾಲಾಭಿವಂದನಾ ಕಾರ್ಯವನ್ನು ಜರಗಿಸಿದರು. ಶ್ರೀ ಸಂಜೀವನಾಥ ಐಕಳ, ಎಂ. ಎಲ್. ಎ., ಇವರು "ಉದಯ" ಹಸ್ತಪತ್ರಿಕೆಯನ್ನು ಉದ್ಘಾಟಿಸಿ ಈ ಶಾಲಾ ಕೆಲಸಗಳು ಉತ್ತಮವಾಗಿ ಜರಗಿ ಶಾಶ್ವತ ಕೀರ್ತಿಯನ್ನು ಗಳಿಸು ವಂತಾಗಲೆಂದರು. ಇನಾಂ ಹಂಚೋಣದ ಅನಂತರ ಸಭಾಧ್ಯಕ್ಷರು ಶಾಲೆಯು 70 ವರ್ಷಗಳ ತನಕ ಸೇವೆ ಸಲ್ಲಿಸಿ ಸಾವಿರಾರು ಮಂದಿಯನ್ನು ವಿದ್ಯಾವಂತರನ್ನಾಗಿ ಮಾಡಿ ಪುಣ್ಯಗಳಿಸಿದೆ. ಜಿಲ್ಲೆಯಲ್ಲಿ ಇಂತಹ ಪ್ರಸಿದ್ಧ ಶಾಲೆಗಳು ಕೆಲವು ಮಾತ್ರ ಇರಬಹುದು. ಇನ್ನೂ ಕೂಡ ಅಭಿವೃದ್ಧಿಯಾಗಲೆಂದು ಹರಸಿ ಶುಭವನ್ನು ಕೋರಿದರು. ಬಳಿಕ ವಂದನಾರ್ಪಣೆ, ವಿವಿಧ ವಿನೋದಗಳಾದುವು.

### ದಸರಾ ಮಹೋತ್ಸವ

ಸುರತ್ಕಲ್ ಮುಕ್ಕ ಮಿತ್ರಪಟ್ಣ ರಾತ್ರಿ ಶಾಲೆಯಲ್ಲಿ ದಿನಾಂಕ ೩ರಂದು ಭಜನೆ, ಪೂಜೆ, ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳೊಂದಿಗೆ ದಸರಾ ಮಹೋತ್ಸವವು ಯಶಸ್ವಿಯಾಗಿ ಆರಗಿತು.

### ಅಂಕೋಲಾ ತಾಲೂಕ 'ಭಾರತೀಯ ಜನಸಂಘ'ದ ಸರ್ವಸದಸ್ಯರ ಸಭೆ

ಅಂಕೋಲೆ, ಅಕ್ಟೋಬರ್ ೫—ಕೆಲವು ವರ್ಷಗಳಿಂದ ಅಂಕೋಲೆಯಲ್ಲಿ ಪ್ರಚಾರದಲ್ಲಿದ್ದ "ಭಾರತೀಯ ಜನಸಂಘ"ದ ಅಂಕೋಲಾ ಶಾಖೆಯ ಸರ್ವಸದಸ್ಯರ ಸಭೆಯು ಕಳೆದ ತಾ. ೨೬ರಂದು ಅಂಕೋಲೆಯ ಶ್ರೀ ಶಾಂತಾದುರ್ಗಾ ದೇವಸ್ಥಾನದ ಆವಾರದಲ್ಲಿ ಶ್ರೀ ಗೋವಿಂದ ಎಸ್. ಮಹಾಲೆ ಇವರ ಅಧ್ಯಕ್ಷತೆಯಲ್ಲಿ ಜರುಗಿ, ತಾಲೂಕಿನಾದ್ಯಂತ ಜನಸಂಘದ ಶಾಖೆಯನ್ನು ಬಲಪಡಿಸಲು ಹಾಗೂ ರಾಷ್ಟ್ರ ರಕ್ಷಣೆಗೆ ಸಹಾಯ ಸಲ್ಲಿಸಿ, ದೇಶಕ್ಕೆ ಬಂದಿರುವ ಗಂಡಾಂತರ ಪರಿಸ್ಥಿತಿಯನ್ನು ಎದುರಿಸಲು ಜನಜಾಗೃತಿಗೊಳಿಸುವ ದಕ್ಕೋಸುಗ ೧೧ ಜನ ಸದಸ್ಯರುಳ್ಳ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಶ್ರೀಗಳಾದ ಸುಬ್ರಾಯ ಮುಕುಂದ ನಾಯಕ (ಅಧ್ಯಕ್ಷ), ಮೊನಪ್ಪ ದೇವು ನಾಯಕ (ಕೋಶಾಧ್ಯಕ್ಷ), ಗೋವಿಂದ ಎಸ್. ಮಹಾಲೇ (ಕಾರ್ಯದರ್ಶಿ), ಮಧುಕರ ವಾಗಳೇಕರ (ಸಹ-ಕಾರ್ಯದರ್ಶಿ)ಗಳಾಗಿ ಇವರು ಆರಿಸಲ್ಪಟ್ಟಿರುತ್ತಾರೆ.

---

ಅಭಿಪ್ರಾಯ

# ಭೂಸುಧಾರಣೆ ಸಾಧಿಸಿದೇನು?

೧

ಕೊನೆಗೂ ಗಾಂಧೀ ಜಯಂತಿಯ ಶುಭದಿನದಂದು ಮೈಸೂರಿನ ಭೂಸುಧಾರಣಾ ಶಾಸನ ಅನುಷ್ಠಾನಕ್ಕೆ ಬಂತು. ಇದು ಕ್ರಾಂತಿಕಾರಿಯೋ ಶಾಂತಿಕಾರಿಯೋ ಎಂದು ಹೇಳಬೇಕಾದರೆ ತುಂಬ ಸಮಯ ಹೋಗಬೇಕು. ಶಾಸನದ ಪ್ರತಿಯೊಂದು ಅನುಚ್ಛೇದದ ಅರ್ಥ ವ್ಯಾಪ್ತಿಯನ್ನು ನ್ಯಾಯಾಲಯಗಳು ನಿರ್ಣಯಿಸಬೇಕಾದೀತು. ಶಾಸನವು ಚೊಕ್ಕದಾಗಿ ಸರಳವಾಗಿರದೆ ಇರುವುದೇ ಇದಕ್ಕೆ ಕಾರಣ. ಅದೇನೇ ಇದ್ದರೂ ಶಾಸನದ ಉದ್ದೇಶ ಉಳುವವನನ್ನೇ ಹೊಲದೊಡೆಯನನ್ನಾಗಿ ಮಾಡುವುದು.

ನಮ್ಮ ಜಿಲ್ಲೆಯ ಹಿಡುವಳಿ ಇತರೆಡೆಯಂತೆ ವಿಸ್ತಾರವಾಗಿರುವುದಿಲ್ಲ. ಇಲ್ಲಿನ ಭೂಮಾಲಿಕರು ಜಮೀನುದಾರರು ಎಂಬ ಹೆಸರನ್ನು ಪಡೆದಿದ್ದರೂ ಅದಕ್ಕೆ ಬೇಕಷ್ಟು ಜಮೀನು ಉಳ್ಳವರಲ್ಲ. ಸಾಮಾನ್ಯವಾಗಿ ಚಿಕ್ಕ ಚಿಕ್ಕ ಹಿಡುವಳಿದಾರರೇ ಹೆಚ್ಚು. ನಾನಾ ಕಾರಣಗಳಿಂದ ಸ್ವತಃ ಬೇಸಾಯ ಮಾಡದೆ ಒಕ್ಕಲುಗಳಿಗೆ ಬಿಟ್ಟುಕೊಟ್ಟಿದ್ದಾರೆ. ಗೇಣಿ ಕೊಡದೆ ಇದ್ದರೂ ಒಕ್ಕಲೆಬ್ಬಿಸಬಾರದು ಎಂದಿರುವಾಗ ಕಮ್ಯೂನಿಸ್ಟ್ ಪ್ರಭಾವಿತ ಒಕ್ಕಲುಗಳು ಗೇಣಿಯನ್ನೂ ಕೊಟ್ಟಿರದ ಪ್ರಸಂಗಗಳು ಹಲವಾರು. ಆದರೆ, ತೀರ್ವೆಯನ್ನು ಧನಿ ಮಹಾರಾಜರೇ ತೆರಬೇಕಷ್ಟೆ? ಎಂಥ ದರದಲ್ಲಿ?

ಇದರಿಂದಾಗಿ ಕೆಲವೊಂದು ಸಮಸ್ಯೆಗಳು ಉದ್ಭೂತವಾಗಿವೆ. ಸ್ವಂತ ಬೇಸಾಯ ಮಾಡಬಯಸುವ ಭೂಮಾಲಿಕನಿಗೆ ಪರಮಾವಧಿ ಮಿತಿಗೊಳಪಟ್ಟ ಭೂಮಿಯನ್ನು ಒಕ್ಕಲಿಂದ ಬಿಡಿಸಿಕೊಳ್ಳುವ ಅಧಿಕಾರವಿದೆಯೆ?—ಈ ಬಗ್ಗೆ ಸ್ಪಷ್ಟವಾದ ಉಲ್ಲೇಖ ಕಂಡು ಬರುವುದಿಲ್ಲ. ಆದುದರಿಂದಲೇ ಹೆಚ್ಚು ಗಲಿಬಿಲಿ.

ಭೂಮಾಲಿಕರಿಗೆ ನಗದಾಗಿ ರೂ.೨೦೦೦ ಪರಿಹಾರವನ್ನು ಮಾತ್ರ ನೀಡುವುದು ಉಳಿದದ್ದನ್ನು ಬಾಂಡುಗಳರೂಪದಲ್ಲಿ. ಪರಿಹಾರದ ಹಣವನ್ನು ಭೂಮಾಲಿಕ ವ್ಯಾಪಾರಾದಿಗಳಲ್ಲಿ ತೊಡಗಿಸಿ ಜೀವನ ನಡೆಸಬಹುದಾದರೆ, ಅದಕ್ಕೂ ಅವಕಾಶವಿಲ್ಲ. ಬರಿಯ ಎರಡು ಸಾವಿರ ರೂಪಾಯಿಗಳಿಂದ ಇಂದು ಏನು ತಾನೇ ಮಾಡಲು ಸಾಧ್ಯ!

ನಮ್ಮ ಜಿಲ್ಲೆಯಲ್ಲಿನ ಭೂಮಿಯ ಲೆಕ್ಕಾಚಾರವೂ ಆಗಿಲ್ಲವಂತೆ. ಅದು ಮುಗಿಯಬೇಕಾದರೆ, ಕನಿಷ್ಟ ಮೂರು ವರ್ಷಗಳಾದರೂ ಬೇಕಾದೀತಂತೆ. ಹಾಗಿರುವಾಗ ಅದುವರೆಗೆ ಈ ಶಾಸನವನ್ನು ಅನುಷ್ಠಾನಕ್ಕೆ ತರಲಾಗುವುದಿಲ್ಲ. ಅಂದರೆ ಧನಿತನ ಹೋಯಿತು; ಒಕ್ಕಲು ಸ್ವತಂತ್ರನಾದ. ಧನಿಗೆ ಪರಿಹಾರ ದೊರೆಯಬೇಕಾದರೆ ಮೂರೋ ಆರೋ ವರ್ಷ ಹೋಗಬೇಕು-ಅದುವರೆಗೆ ಆತನು ತ್ರಿಶಂಕುವೇರಿ ಉಪವಾಸ ವ್ರತ ಮಾಡಬೇಕು.

ಭೂಸುಧಾರಣೆಯ ಮುಖ್ಯ ಉದ್ದೇಶ ಉಳುವ ರೈತನಿಗೆ ಭೂಮಿಯ ಒಡೆತನವನ್ನು ಕೊಟ್ಟು, ಬೇಸಾಯದಲ್ಲಿ ಆಸಕ್ತಿ ಹೆಚ್ಚುವಂತೆ ಮಾಡಿ ಆಹಾರ ಸ್ವಾವಲಂಬನೆಯನ್ನು ಸಾಧಿಸುವುದು; ರೈತ ಜನರ ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸುವುದು. ರೈತರ ಶ್ರಮ ಪರಿಶೀಲತೆಯೇ ಈ ಎರಡೂ ಉದ್ದೇಶಗಳನ್ನು ಈಡೇರಿಸಬಲ್ಲುದು. ಆದರೆ, ಕೆಲವೆಡೆ ಭೂಮಿಯನ್ನು ಬಂಜರು ಬಿಡುವುದೀಗ ಫ್ಯಾಷನ್ ಆದಂತಿದೆ. ಗೇಣಿ ಕೊಡಬೇಕಾಗಿಲ್ಲ,—ಮತ್ತೇನಂತೆ. ಇಂತಹ ಅಲಸ ರೈತರಿಗೆ ಯಾವ ಕಾನೂನು ಬಂದರೇನಂತೆ? ಅವರ ಶಂಖದಿಂದ ಒಂದೇ ನಾದ ಹೊರಡುವುದು!

ಸದ್ಯ ಅಮಲಿಗೆ ಬಂದ ಭೂ ಶಾಸನವು ಒಕ್ಕಲುಗಳಿಗೆ ಅಮಲನ್ನು ತಂದಿದೆ. ಇದು ಪಕ್ಕನೇ ಇಳಿಯುವ ಲಕ್ಷಣಗಳು ತೋರುವುದಿಲ್ಲ. ಸಮಾಜವಾದ ಮಾದರಿಯ ಸಮಾಜ ರಚನೆ ನಮ್ಮ ಉದ್ದೇಶ. ಆದರೆ, ಇದಕ್ಕಾಗಿ ಸಮಾಜದ ಒಂದಂಗವನ್ನು ಬಲಿ ತೆತ್ತು ಇನ್ನೊಂದಂಗದ ಹೊಟ್ಟೆ ತುಂಬ ಮಾಡುವುದು ನ್ಯಾಯವಲ್ಲ. ರಾಜ್ಯದ ಹಲವಾರು ಪತ್ರಿಕೆಗಳು ಭೂಶಾಸನವನ್ನು ಸ್ವಾಗತಿಸಿದರೂ ಅದರಿಂದ ಯಾರಿಗೂ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕೆಂದು ಅಭಿಪ್ರಾಯಪಟ್ಟಿವೆ. ಜನತೆಯ ಆಶೆಯಾದರೂ ಇದೇ ಆಗಿತ್ತು. ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಈ ಭೂ ಸುಧಾರಣೆಯಿಂದ ಭೂ ಮಾಲಿಕರ ತಲೆಗೆ ಬಲವಾದ ಪೆಟ್ಟು ಬಿದ್ದಿದೆ; ಇದರಿಂದ ಅವರು ಎಂದಿಗೂ ಚೇತರಿಸಿಕೊಳ್ಳಲಾರರು. ಆದುದರಿಂದ ಸರಕಾರ ಈ ಜಿಲ್ಲೆಯ ಮಟ್ಟಿಗೆ, ಇಲ್ಲಿನ ವಿಶಿಷ್ಟ ಪರಿಸ್ಥಿತಿಗಳನ್ನು ಮನಗಂಡು, ತುಸುವಾದರೂ ರಿಯಾಯಿತಿ ತೋರಿಸಬೇಕು. ಶಾಸಕರು ಇನ್ನಾದರೂ ಕಣ್ಣು ತೆರೆಯಬೇಕು.

—ರಾಜೇಂದ್ರ

---

(ಏಳನೇ ಪುಟದಿಂದ)

ಮೈಸೂರು ಮತ್ತು ಒರಿಸ್ಸಾಗಳಲ್ಲಿ ಇದರ ವ್ಯಾಪಕತೆಯಿದೆ.

ಅಮೆರಿಕೆಯಲ್ಲಿ ಮೊದಲು ಭಾರತದ ರಾಯಭಾರಿಯಾಗಿದ್ದ ಶ್ರೀ ಜೆ. ಎಲ್. ಮೇಹ್ತಾ ಐ ಸಿ ಸಿಯ ಅಧ್ಯಕ್ಷರು. ರಾಷ್ಟ್ರೀಯ ಮಟ್ಟದ ಯೋಜನೆಯಂತೆಯೇ ಔದ್ಯಮಿಕ ರಂಗದಲ್ಲಿ ವೈಯಕ್ತಿಕ ಯೋಜನೆಗಳಿರಬೇಕು. ಐ ಸಿ ಸಿ ತೃತೀಯ ಯೋಜನಾವಧಿಯಲ್ಲಿ ಬಹುಮುಖ ಸೇವೆಯನ್ನು ಉದ್ಯಮ ರಂಗಕ್ಕೆ ಒದಗಿಸಿದೆ. ಕಷ್ಟ ಕಾಲದಲ್ಲಿಯೂ ಬಂಡವಳ ವಿನಿಯೋಗವು ಮುಂದುವರಿಯುವಂತೆ ಎಚ್ಚರಿಕೆ ವಹಿಸಿದೆ. ಇತರ ಪೇಟೆ ಬೆಳವಣಿಗೆಯನ್ನು ಪರಿಶೀಲಿಸಿದೆ. ಇದೇ ರೀತಿ ಚತುರ್ಥ ಯೋಜನೆಯ ಅವಧಿಯಲ್ಲಿಯೂ ಈ ಮಹಾಮಂಡಳ ದೇಶಕ್ಕೆ ಉಚಿತ ಸೇವೆ ಸಲ್ಲಿಸಬಲ್ಲುದು.

ದೇಶವನ್ನು ಸ್ವಾವಲಂಬಿಯಾಗಿ ಕಟ್ಟಬೇಕು; ನಮ್ಮ ಸಾಧನ ಸಂಪತ್ತಿನ ಸಂಪೂರ್ಣ ಉಪಯೋಗವನ್ನು ನಾವು ಮಾಡಿಕೊಳ್ಳಬೇಕು. ನಿಶ್ಶರ್ತವಾಗಿ ದೊರೆಯುವ ವಿದೇಶೀ ನೆರವನ್ನು ಪಡೆದುಕೊಂಡು ಸಮೃದ್ಧ ಭಾರತವನ್ನು ಕಟ್ಟೋಣ. ನಮ್ಮಲ್ಲಿ ಶಕ್ತಿಯಿದ್ದರೆ, ನಮ್ಮನ್ನು ನೋಯಿಸಲು, ನಮ್ಮ ಶಾಂತಿಗೆ ಭಂಗ ತರಲು ಯಾರೂ ಬರುವುದಿಲ್ಲ. ಆದುದರಿಂದ ದುಡಿಯೋಣ, ದೇಶ ಕಟ್ಟೋಣ, ತಲೆಯೆತ್ತಿ ಬದುಕೋಣ.

---

## ವಿಶೇಷಾಂಕ ಉದ್ಘಾಟನೆ

ಕಿನ್ನಿಗೋಳಿ, ಕಳೆದ ತಾ. 1೮ರಂದು "ಯುಗಪುರುಷ" ಮಾಸಪತ್ರಿಕೆಯ ವಿಶೇಷಾಂಕದ ಉದ್ಘಾಟನೆಯು, ನೂತನ ಕಾರ್ಯಾಲಯದಲ್ಲಿ, ಶೀರೂರು ಮಠದ ಶ್ರೀ ಲಕ್ಷ್ಮೀಮನೋಜ್ಞತೀರ್ಥರ ಅಧ್ಯಕ್ಷತೆಯಲ್ಲಿ ರಾಜ್ಯದ ಆರೋಗ್ಯ ಸಚಿವ ಡಾ| ನಾಗಪ್ಪ ಆಳ್ವರಿಂದ ನೆರವೇರಿತು.

ಪ್ರಾರಂಭದಲ್ಲಿ ಶ್ರೀ ಶ್ರೀನಿವಾಸ ಉಡುಪರು ಸ್ವಾಗತಿಸುತ್ತಾ ಯುಗಪುರುಷ ಉದಯಗೊಂಡ ಹಿನ್ನೆಲೆಯನ್ನು ವಿವರಿಸಿದರು. ಶ್ರೀ ಕೆ. ಎಸ್. ಪದ್ಮನಾಭ ಆಚಾರ್ಯರಿಂದ ಪರಿಚಯ ಭಾಷಣ ನಡೆಯಿತು. ಶ್ರೀ ಕೆ. ಎಸ್. ಮಲ್ಯರು ಮಾನ್ಯ ಸಚಿವರನ್ನು ಸ್ವಾಗತಿಸಿದರು. ಡಾ| ಆಳ್ವರು ಮಾತನಾಡುತ್ತಾ, ರಾಷ್ಟ್ರದಲ್ಲಿ ಒಗ್ಗಟ್ಟು ಸಾಧಿಸಲು ಸಾಹಿತ್ಯ ಪತ್ರಿಕೆ ವಹಿಸುವ ಪಾತ್ರ ಹಿರಿದಾದುದು. ಆಧ್ಯಾತ್ಮಿಕ ಭಾವನೆಯ ತಳಹದಿಯಲ್ಲಿ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ವಿಚಾರಗಳು ಪ್ರಸ್ಫುಟಿತಗೊಳ್ಳಬೇಕು. ಜನತೆಯಲ್ಲಿ ಶ್ರದ್ಧೆ, ದೇವರಲ್ಲಿ ಭಕ್ತಿ, ಸಾಹಿತ್ಯದಲ್ಲಿ ಆಸಕ್ತಿಯನ್ನು ಕೆರಳಿಸುವುದೇ ಪತ್ರಿಕಾ ಧರ್ಮ. ಇಂಥ ಮಟ್ಟವನ್ನು ಉಳಿಸಿಕೊಂಡು ಮುಂದುವರಿಯುವುದರಲ್ಲಿ ಶ್ರೀ ಉಡುಪರು ಯಶಸ್ವಿಗಳಾಗಿದ್ದಾರೆಂದು ನುಡಿದರು.

ಬಳಿಕ ಶ್ರೀ ರಘುರಾಮ ಐತಾಳ ಬೇಂದ್ರೆಯವರ ಹಾಗೂ ಕುವೆಂಪುರವರ ಗೀತೆಗಳನ್ನು ಹಾಡಿದರು. ಶ್ರೀ ಅ. ಗಾ. ಕಿನ್ನಿಗೋಳಿಯವರು ಪತ್ರಿಕೆಗೆ ಸ್ವಸ್ತಿವಾಚನಗೈದರು. ಅಧ್ಯಕ್ಷರು ಹರಸಿ ಭಾಷಣವಿತ್ತ ಬಳಿಕ ಸಂಪಾದಕ ಶ್ರೀ ಕೊ. ಅ. ಉಡುಪರು ವಂದನಾರ್ಪಣೆಗೈದರು.

## ಸೇವಾಭಾವದ ಪ್ರಕಟನೆ

ಸುರತ್ಕಲ್, ಸ್ವಾಮಿ ವಿವೇಕಾನಂದರು ಬರೆದ ಸೇವಾ ಭಾವದ ಅನುವಾದದ ಪ್ರಕಟನೆ ಹಾಗೂ ವಿಜಯದಶಮೀ ಸಾಂಸ್ಕೃತಿಕ ಸಮಾರಂಭವು ವಿಜಯ ಸಾಹಿತ್ಯ ಮಾಲಿಯ ವತಿಯಿಂದ ತಾ. ೨೦ರಂದ ವಿಜಯ ಮಹಾಶಾಲೆಯಲ್ಲಿ ನೆರವೇರಿತು. ಶ್ರೀ ಕೆ. ವೆಂಕಟರಾಯಾಚಾರ್ಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ಸಿ. ಪಿ. ವಾಸುದೇವರಾವ್ ಕವಿತಾ ವಾಚನಗೈದರು. ಶ್ರೀ ಮುನಿಪಾಲ ರಾಜು ಮತ್ತು ಶ್ರೀ ಕುಂಬಳೆ ಸುಂದರರಾವ್ ಭಾರತದ ಜಾಗೃತಿ ಹಾಗೂ ವಿವೇಕಾನಂದರ ಜೀವನ ಚರಿತ್ರೆಗಳನ್ನು ವಿವರಿಸಿದರು. ಶ್ರೀ ಎಂ. ಎಸ್. ಆಚಾರ್ ಸೇವಾಭಾವದ ಕೆಲವು ನುಡಿಮುತ್ತು ವಾಚಿಸಿದರು.

---


### ಪುತ್ತೂರು ಫ್ರಿ ಮುನ್ಸಿಫ್ ಕೋರ್ಟಿನಲ್ಲಿ

S C 155/65

ಅಚ್ಯುತ ಶ್ಯಾನುಭಾಗ— ವಾದಿ

ಶ್ರೀಧರ ಪೂಜಾರಿ— ಪ್ರತಿವಾದಿ

ಸೊರಕೆ ಚೆನ್ನಪ್ಪನವರ ಮಗ, ಪುತ್ತೂರು ತಾಲ್ಲೂಕು ಕುದ್ಮಾರುಗುತ್ತಿನ ಕಡೆಂಜಗುತ್ತು P. O. ಕುದ್ಮಾರು.

ಸದ್ರಿ ಪ್ರತಿವಾದಿಗೆ:—

ವಾದಿಯು ನಿಮ್ಮ ಮೇಲೆ ಮಾಡಿದ ಡಿ. ಪೋ. ನೋಟಿನ ವ್ಯಾಜ್ಯವು ತಾ. 20-10-65ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಈ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪಣೆಗಳೇನಾದರೂ ಇದ್ರೆ ಸದ್ರಿ ದಿವಸ 11 ಘಂಟೆಗೆ ಸ್ವತಹಾ ವ ವಕೀಲರ ಮೂಲಕ ಈ ಕೋರ್ಟಿನ ಮುಂದೆ ಹಾಜರಾಗಿ ದಾಖಲ್ಲು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲಾಗುವುದು.

ಕೋರ್ಟು ಹುಕುಂ ಪ್ರಕಾರ

B. Chidananda Rao,
Vakil for Plff.

25-9-65.

### ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

S. I. A. 126/65. S. C. 156/65.

ಕೆ. ಶ್ರೀಧರ ಶಾಸ್ತ್ರಿ —ವಾದಿ

Vs

ಕೆ. ಕುಮಾರ ರೈ ಕೂಡಾ —ಪ್ರತಿವಾದಿ.

ಕಾಸರಗೋಡು ತಾಲೂಕು, ಉದ್ಯಾವರ ಗ್ರಾಮದ ಕುಂಜತ್ತೂರಿಯಂಬಲ್ಲಿರುವ, ಗಾಳ ಬ್ಯಾರಿಗಳ ವಿಧವೆ, ಶೆಲ್ಮ ಬ್ಯಾರ್ತಿಯರಿಗೆ, ತನ್ನ ಮಕ್ಕಳ ಕತಿಜಮ್ಮ ಮತ್ತು ಮಮ್ಮುಂಞಾಯವರ ಗಾರ್ಡಿಯಾನಳಾಗಿ ಸಹ ತಿಳಿಸುವುದೇನೆಂದರೆ–

ಮೇಲೆ ಹೇಳಿದ ಕೋರ್ಟಿನಲ್ಲಿ ವಾದಿಯು, ನಿಮ್ಮ ಮೃತ ಗಂಡನಿಂದ ಬರಬೇಕಾದ ಐವೇಜಿಗೆ ದಾವಾ ಮಾಡಿರುತ್ತಾನೆ. ಸದ್ರಿ ದಾವೆ ನಿಮ್ಮೆಲ್ಲರ ಹಾಜರಾತಿಗೆ, ತಾ. 20-10-65ಕ್ಕೆ ಇದೆ. ಸದ್ರಿ ದಿವಸ ನೀವು ವ ವಕೀಲ ಮುಖಾಂತರವಾಗಲಿ ಹಾಜರಾಗಿ, ಉದಹರಿಸಲು ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತೆಂದು ಕೋರ್ಟು ಹುಕುಂ ಮೇರೆಗೆ ತಿಳಿಸಿದೆ.

ವೆಂಕಟ್ರಮಣ ಬಿ. ಯನ್.,
ವಾದಿ ಕಡೆ ವಕೀಲ.

ಪುತ್ತೂರು, 9-10-65.

ನಡೆ ನುಡಿಯಲ್ಲಿ ನಾವು ಒಂದು

ಭಾರತೀಯರು ನಾವು ಎಂದೆಂದೂ

# ರೈತ್ರ ಮುರುಗ

(ಎರಡನೇ ಪುಟದಿಂದ)

ನಾನೂ ಅವರ ಸಾಲನ್ನೇ ಹಿಡಿದಿದ್ದೆ. ಆದರೆ "ನಿಮ್ಮ ತಾಯಿ ಬಾಲ್ಯದಲ್ಲಿ ನಿಮಗೆ ದೊರೆಯಾ ಹಾಗೆ ವೇಷ ಹಾಕುತ್ತಿದ್ದರು. ಈ ಹಳ್ಳಿಯ ರಸ್ತೆಯಲ್ಲಿ ನೀವು ಜಿಲ್ಲಾಧಿಕಾರಿ (ಕಲೆಕ್ಟರ್ ಸಾಹೇಬ) ಆಗಿ ಬಂದು ನಡೆಯುವುದನ್ನು ಕಾಣುವ ಹಂಬಲ ಅವರಲ್ಲಿತ್ತು."

"ಅವರ ಆಕಾಂಕ್ಷೆಗೆ ಸರಿಯಾದ ಪ್ರತಿಫಲವನ್ನಿತ್ತೆನು!" ರಾಮಚಂದ್ರನು ತನ್ನ ಪಕ್ಕಕ್ಕೆ ಒರಗಿಕೊಂಡನು ಮತ್ತು ಕೂಗಿದನು, "ಓ ದೇವತೆಗಳೇ! ನನ್ನ ಸಂಪೂರ್ಣ ವಿದ್ಯೆಯನ್ನು ಹಿಂತೆಗೆದುಕೊಳ್ಳಿರಿ, ಆದರೆ ತಾಯಿ ನನ್ನ ತಾಯಿಯವರನ್ನು ಕೊಡಿರಿ—ಒಂದು ದಿನಕ್ಕಾದರೂ ಚಿಂತಿಲ್ಲ—ಮೊಣಕಾಲೂರಿ ಅವರೊಡನೆ ಕ್ಷಮೆ ಬೇಡುತ್ತೇನೆ. ಆಗಿರುವ ಹಾಗೂ ಆಗದ ಸಂಗತಿಗಳಿಗಾಗಿ ಮರುಗುವ ಈ ಸಮಯದಲ್ಲಿ ಅವರ ತೊಡೆಯಲ್ಲಿ ಮಗುವಾಗಿರ ಬಯಸುತ್ತೇನೆ. ಈ ವಿಶಾಲ ವಿಶ್ವದಲ್ಲಿ ನಾನು ಒಂಟಿಯಾಗಿದ್ದೇನೆ.

"ಏನ್ಸಾಸಿ ಮುರುಗಾ ನಿನ್ನನ್ನು ಬಿಟ್ಟಲ್ಲಿ ನನಗಾರೂ ಸ್ನೇಹಿತರಿಲ್ಲ. ನನ್ನ ಪೂರ್ಣ ದುಃಖದ ಪಾಲನ್ನು ನಿನ್ನೊಡನೆ ಅನುಭವಿಸಲು ಅದು ಹೇಗೆ ಸಾಧ್ಯ? ನೀನು ನನ್ನ ಸೇವಕ ಮಾತ್ರನಿರುವೆ."

ಪಡೆಯಲಾರದ ಸುಖಕ್ಕಾಗಿ ಚಿಕ್ಕ ಮಗುವಿನಂತೆ ರಾಮಚಂದ್ರನು ಬಿಕ್ಕಿ ಅತ್ತನು.

"ಈಗ ಕೂಡ ನಿಮ್ಮ ತಾಯಿಯವರನ್ನು ತೃಪ್ತಿಪಡಿಸಬಹುದು, ಸ್ವಾಮಿ, ಅತ್ತು ಅಲ್ಲ. ಆದರೆ ಸಾಯುವಾಗ ಅವರಿಗಿದ್ದ ಆಶೆಯ ಪೂರ್ತಿಗಾಗಿ ದುಡಿದು ತೃಪ್ತಿಪಡಿಸಿ." ಮುರುಗನು ಕಪಟವನ್ನು ಮತ್ತು ಅಲಂಕಾರ ರಹಿತ ಮಾತುಗಳನ್ನಾಡಿ ಒಡೆಯನನ್ನು ಸಂತೈಸಲು ಪ್ರಯತ್ನಿಸಿದನು.

"ನನ್ನ ಬಿ.ಎ.ಯಿಂದ ಮತ್ತು ಆಟದ ಪದಕಗಳಿಂದ ಹೇಗೆ ಶಪಥ ಮಾಡಲಿ! ಅವರ ಮಿತಿ ಇಲ್ಲದಿದ್ದ ವಾತ್ಸಲ್ಯಕ್ಕೆದುರಾಗಿ ಆರ್ಥಿಕ ತತ್ವಗಳನ್ನು ಹೇಳುತ್ತಿದ್ದೆ—ಮದುವೆಯಾಗುವ ಮುಂಚೆ ಸಂಪಾದಿಸಲಾರಂಭಿಸಬೇಕು. ಇದರಿಂದಾಗಿ ಅವರ ಕಣ್ಮುಂದೆ ನನ್ನ ವಿವಾಹ ನಡೆಯದೆ ಹೋಯಿತು. ಹೆಂಡತಿಯನ್ನು ಮನೆಗೆ ಕರೆದು ತರುವ ಮುಂಚೆ ನಾನು ಕನಿಷ್ಟಪಕ್ಷ ಒಬ್ಬ ಬಿ. ಎ. ಆಗಿರಬೇಕೆಂದು ಅವರಿಗೆ ಭಾಷಣ ಕೊಡುತ್ತಿದ್ದೆ. ಶುಭ ದೇವತೆಗಳೇ! ನಾನು ಆರ್ಥಿಕ ಗದ್ದೆಯನ್ನು ಉತ್ತುಬಿಟ್ಟೆ. ನಾನು ತೀರಾ ಪರಕೀಯ ವಿಷಯದಲ್ಲಿ ಮಾತಾಡಿದ್ದು ಅವರಿಗೆ ಅರ್ಥವಾಗಲಿಲ್ಲ. ಮುರುಗಾ, ನಿಜವಾಗಿ ನಿನಗರ್ಥವಾಗದಿದ್ದರೂ ನಿಜವಾಗಿ ಇದು ಹಳೆಯ ದ್ರಾಕ್ಷಾರಸವನ್ನು ಹೊಸ ಸೀಸೆಯಲ್ಲಿ ಹಾಕುವುದು."

ರಾಮಚಂದ್ರನಿಗೆ ದುಃಖ ತುಂಬಿ ಗಂಟಲೊಳಗಿಂದ ಮಾತು ಹೊರಬೀಳಲಿಲ್ಲ. ಕ್ಷಣಕಾಲ ಸುಮ್ಮನಿರಬೇಕಾಯಿತು. ಮುರುಗನಿಗೆ ಮಾತಾಡಲು ಆ ಸಂದರ್ಭವು ಪ್ರಯೋಜನವಾಯಿತು.

"ಸ್ವಾಮಿ, ಚೆಲ್ಲಿಹೋದ ಹಾಲಿನ ಮೇಲೆ ಕಣ್ಣೀರು ಸುರಿಸಿದರೇನು ಫಲ? ಭವಿಷ್ಯತ್ತೆಂಬುದು ಇದೆ. ಕೊನೆಯ ಪಕ್ಷ ನಿಮ್ಮ ತಾಯಿಯವರ ಸಾಯುವಾಗಿನ ಆಶೆಗಾದರೂ ಆದರ ಕೊಡಿರಿ. ಅವರ ಆರಿಸಿಟ್ಟ ಹುಡುಗಿಯನ್ನೇ ಮದುವೆಯಾಗಿರಿ. ಅವರ ಕುಟುಂಬವು ನಿಮ್ಮದರಂತೆಯೇ ಉತ್ತಮ ಹಾಗೂ ಪ್ರಾಚೀನವಾದುದು. ಹಾಗೇ ಹಳ್ಳಿಯ ಶಾಂತ ವಾತಾವರಣದಲ್ಲಿ ವಾಸ ಮಾಡಿಕೊಂಡಿರಿ. ನೀಚ ನಿರುಪಯೋಗಿ ಕನಸು ಮತ್ತು ಪೊಳ್ಳು ಪಟ್ಟಣ ವಾಸವನ್ನು ಬಿಟ್ಟುಬಿಡಿ."

ಕಾದ ಕಬ್ಬಿಣಕ್ಕೆ ಹೊಡೆದು ರೂಪ ಬರಿಸುವ ನ್ಯಾಯದಂತೆ ಆಗಿನ ರಾಮಚಂದ್ರನ ಮನೋಪರಿಸ್ಥಿತಿಯ ಮೇಲೆ ಹೊಡೆದು, ಅವನನ್ನು ಹಳ್ಳಿಯಲ್ಲೇ ನೆಲಸುವಂತೆ ಮಾಡುವ ತನ್ನ ಉಪಾಯದಲ್ಲಿ ಜಯಶಾಲಿಯಾಗಲು ಮುರುಗನು ಪ್ರಯತ್ನಿಸಿದನು.

"ಮುರುಗ, ನನ್ನ ಹೃದಯವು ದುಃಖದಿಂದ ಅಲುಗಾಡುತ್ತಿದೆ. ಅದು ನಿನಗೆ ಗೊತ್ತಿಲ್ಲ. ಈಗ ಬಿ. ಎ. ಎಂಬುದು ಶೂನ್ಯ ಆದರೆ ಈ ಸೋಲು ನನ್ನ ಇರುವಿಕೆಯ ಅಂಧಕಾರಮಯವಾಗಿರುವ ಬಿರುಕುಗಳಿಗೂ ಮೂಲೆಗಳಿಗೂ ಬೆಳಕನ್ನು ಬೀರಿದೆ. ಕುಲೀನ ತಾಯಿಗೆ ಹೇಗೆ ಅವಿಶ್ವಾಸಿ ಮಗನಾಗಿ ಬಿಟ್ಟೆ! ರಾಜಕುಮಾರನಂತೆ ಹಣಕ್ಕಾಗಿ ಮನೆಗೆ ಬರೆಯುತ್ತಿದ್ದೆ ತಪ್ಪದೆ ಅವರು ಹಣವನ್ನು ಕಳುಹಿಸುತ್ತಿದ್ದರು; ಒಂದು ದಿನ ಕೂಡಾ ತಡಮಾಡುತ್ತಿದ್ದಿಲ್ಲ. ತನ್ನ ಆಭರಣಗಳನ್ನು ಮಾರಿ ಬಂದ ಹಣವನ್ನಾದರೂ ಕಳುಹಿಸುತ್ತಿದ್ದರು. ಅಂತಹ ಹಣವನ್ನು ಕಾಫಿಗಾಗಿ ಮತ್ತು ಲಂಪಟರಿಗಾಗಿ ಹಿಂದು ಮುಂದು ನೋಡದೆ, ಸ್ಥಿತಿಗತಿಗಳನ್ನಾಲೋಚಿಸದೆ ಹಾಳು ಮಾಡಿದೆ. ಆಗ ನಾನು ಯೋಚನೆ ಇಲ್ಲದ ಯುವಕನಾಗಿದ್ದೆ. ಕಲಾಶಾಲೆಯ ಬೂಟಾಟಿಕೆಯ ಮಿಥ್ಯ ಜೀವನವನ್ನು ಸಾಗಿಸುತ್ತಿದ್ದೆ. ತರುಣರ ತಂಡದಲ್ಲಿ ಹತ್ತಕ್ಕೆ ಹನ್ನೊಂದಾಗಿದ್ದೆ. ಅತ್ತ ಕಣ್ಣುಗಳು ಮತ್ತು ಹೃದಯ ಆ ನನ್ನ ತಾತ್ಸಾರದ ಪಾಪಗಳನ್ನು ತೊಡೆದು ಹಾಕಬಹುದೋ, ಏನೋ. ಕೂಟದಲ್ಲಿ ಆದ್ಯಾರು ಆಲೋಚನೆ ಇಲ್ಲದ ಮುಂಚು ಒಡನಾಟಿಯಾಗಿರುವದಿಲ್ಲ? ಆದರೆ ಈ ಶಬ್ದಗಳೆಲ್ಲಾ ನಿನಗೆ ಅಪರಿಚಿತ. ಅವು ನಿನ್ನ ಎಣಿಕೆಗೂ ಬಾರದಿರುವಂತಹವು...."

ರಾಮಚಂದ್ರನು ತನ್ನ ಸಮಾಧಾನಕ್ಕಾಗಿ ಬಿಕ್ಕಿ ಬಿಕ್ಕಿ ಅತ್ತನು.

"ಸ್ವಾಮಿ ಮಾತಿನ ತಾತ್ಪರ್ಯ ಗ್ರಹಿಸಿಕೊಂಡೆನು." ಮುರುಗನು ನಿರಕ್ಷರ ಕುಕ್ಷಿಯಿದ್ದರೂ ಮಂಕನಲ್ಲ. ಸೋತ ಮೇಲೆ ದೊಡ್ಡ ದೊಡ್ಡ ತತ್ವಗಳನ್ನು ಆಡಿದರೆ ಅಥವಾ ಒಡೆದ ವಸ್ತುಗಳಿಗಾಗಿ ಕೂಗಾಡಿದರೆ ಪ್ರಯೋಜನವೇನು? ಅದು ಆ ಕಾಲದಲ್ಲಿ ಬೀಜಗಳನ್ನು ಬಿತ್ತುವಂತಿದೆ. ಸ್ವಾಮಿಯು ಬಡ ಮುರುಗನ ಮಾತುಗಳನ್ನು ಕೇಳಿದಲ್ಲಿ ಭವಿಷ್ಯತ್ತು ಶಾಂತ ಹಾಗೂ ನಿರ್ಮಲವಾಗಬಹುದು. ನಮ್ಮ ಪುಟ್ಟ ಸಂಪತ್ತನ್ನು ಹೀರಿರುವ ಮದ್ರಾಸು ವಿದ್ಯಾಭ್ಯಾಸವನ್ನು ಬಿಟ್ಟುಬಿಡಿ. ನಿಮ್ಮ ಹಿರಿಯರಂತೆ ನೀವೂ ಈ ಭೂಮಿಯತ್ತ ನೋಡುತ್ತ ಇಲ್ಲೇ ಹಳ್ಳಿಯಲ್ಲಿ ನೆಲೆಸಿಬಿಡಿ. ಈ ನೆಲದಿಂದಾಗಿ ನಿಮ್ಮ ತಂದೆಯವರೂ ತಂದೆಯ ತಂದೆಯವರೂ ಗೌರವಪೂರ್ಣ ಹಾಗೂ ಶ್ರೀಮಂತ ಜೀವನವನ್ನು ಚೆನ್ನಾಗಿ ಸಾಗಿಸಿದ್ದರು. "ನಿಮ್ಮ ತಂದೆಯವರು ತೀರಿ ಹೋದಂದಿನಿಂದ ಇಂದಿನ ಈ ಹನ್ನೆರಡು ವರ್ಷಗಳ ಅವಧಿಯಲ್ಲಿ ಈ ಗದ್ದೆಗಳೆಲ್ಲಾ ಒಡೆಯನಾರೆಂದು ತಿಳಿಯದೆ ತಬ್ಬಲಿಗಳಾಗಿ ಬಡ ಮುರುಗನ ಜಾಗ್ರತೆಯ ಲಾಲನೆಯಲ್ಲಿ ಬಾಳಿಕೊಂಡಿವೆ."

ಅವನು ಉಸಿರಿಗಾಗಿ ಮತ್ತು ವಿಚಾರಧಾರೆಯನ್ನು ಹಿಡಿದಿಟ್ಟುಕೊಳ್ಳಲು ಕ್ಷಣಕಾಲ ಸುಮ್ಮನಾದನು. ಮತ್ತೆ ಮುಂದುವರಿಸಿದನು. "ನಿಮಗಾಗಿ ನಿಮ್ಮ ತಾಯಿಯವರ ದೃಷ್ಟಿಯಲ್ಲಿ ಯಾವ ಹುಡುಗಿ ಇತ್ತೋ ಆದನ್ನೇ ಮದುವೆಯಾಗಿರಿ. ಒಳ್ಳೆಯ ಬಾಂಧವ್ಯ ನಿಮ್ಮ ಪೂಜ್ಯಶ್ರೀಯರ ಆತ್ಮಕ್ಕೆ ಸಮಾಧಾನ ಕೊಟ್ಟೀತು. ಏಳು ತಲೆ ಮಾರುಗಳ ಉಪ್ಪಿಗೆ ಮುರುಗನು ಹಿಂದಿನಂತೆ ನಿಷ್ಠೆಯಿಂದಿರುತ್ತಾನೆ. ತಮ್ಮ ಧಣಿಯು ಇಲ್ಲೇ ಇದ್ದಲ್ಲಿ ಈ ಗದ್ದೆಗಳು ಎರಡು ಪಾಲಷ್ಟು ಕೊಡಬಹುದು. ಆದಿಲ್ಲಿ ಸರಳ ಹಾಗೂ ನೈಜ ಜೀವನವನ್ನು ಸಾಗಿಸಲು ಸಾಕು. ಅಷ್ಟು ಮಾತ್ರವಲ್ಲ, ಸ್ವಾಮಿಯವರು ಸ್ವಲ್ಪ ಸ್ವಲ್ಪ ಹಣವನ್ನು ಕೂಡಿರಿಸಿಟ್ಟು ಮದ್ರಾಸು ವಿದ್ಯಾಭ್ಯಾಸಕ್ಕಾಗಿ ಆಗಿರುವ ಸಾಲದ ಹೊರೆಯನ್ನು ತಪ್ಪಿಸಿಬಿಡಬಹುದು. ಮುರುಗನು ಉಸಿರಾಡುತ್ತಿರುವಷ್ಟು ದಿನ ಸ್ವಾಮಿಗೆ ಯಾವ ತರದ ಜಾಗ್ರತೆಯೂ ಬೇಕಾಗಿಲ್ಲ."

"ಮುರುಗ, ನೀನು ಸರಿ. ನೀನು ನಿಜ ಸೇವಕನಂತೆ ಮಾತನಾಡುತ್ತಿ. ನಿನ್ನ ಮಾತುಗಳು ವಿವೇಕಿಯ ಮಾತುಗಳಿವೆ. ಮುಳು ಹಾಸಿಗೆಯಲ್ಲಿ ಬೇಸಿಗೆಯ ಬಾಗ್ಗೆ ಹರಿಯುವಂತೆ ನಿನ್ನ ಮಾತುಗಳು ಹರಿಯುತ್ತಿವೆ. ಮಹತ್ವಾಕಾಂಕ್ಷೆಯೆಂಬುದು ತನ್ನ ದಡಗಳನ್ನೇ ಕೊರೆಯುವ ಪ್ರವಾಹ ನದಿ. ಪಟ್ಟಣವಾಸವು ಆಶೆ ತೋರಿಸ ವ ಆಟ. ನಾನಲ್ಲಿ ಅರಸನಾಗಿ ಆತ್ತು ಆಸಾಧ್ಯ; ಕೇವಲ ಕೈಗೊಂಬೆ ಆಗಿರಬೇಕು."

ಆಂಗ್ಲರಿಂದ ಹಣೆಯನ್ನೊರಸಿಕೊಳ್ಳುತ್ತ ರಾಮಚಂದ್ರನು ಕ್ಷಣಕಾಲ ತಡೆದನು. "ನನ್ನ ಹಿರಿಯರು ಈ ಚಿಕ್ಕ ಹಳ್ಳಿಯನ್ನು 'ಇನಾಂ' ಆಗಿ ಪಡೆದರು. ನಿನಗೆ ಗೊತ್ತಿದೆಯೇ ಮುರುಗ, ಯಾವುದಕ್ಕಾಗಿ? ನಾಯಕ ಅರಸರು ಶ್ರೇಷ್ಠ ಕೈಗಳಿಂದ ಪರರ ಜೀವನ ಹಾಗೂ ಉದಾತ್ತ ಆಲೋಚನೆಗಳಿಗಾಗಿ ಕೊಟ್ಟದ್ದಾರೆ. ಅವರು ಬಿ. ಎ. ಇದ್ದಿಲ್ಲ ಆದರೆ ಒಬ್ಬ ಬಡ ಪಂಡಿತರಾಗಿದ್ದರು. ಆ ಸಾಲಿನಲ್ಲಿ ನಾನು ಏಳನೆಯವನು ಹಾಗೂ ಸಹಜ ಪ್ರತಿಫಲವಿದ್ದೇನೆ!"

"ಸ್ವಾಮಿಯವರ ವಚನಗಳು ಶಾವೇರಿ ಕೊಡುವ ಮುಂಜಾವಿನ ಹುಲ್ಲಿನದಂತೆ ಸಂತೋಷವನ್ನುಂಟುಮಾಡುತ್ತಿವೆ."

"ತಾಯಿಯವರು ತೀರಿ ಹೋಗಿ ಬಹಳ ಸಮಯವಾಗಿಲ್ಲ. ಆ ದುಃಖ ಇನ್ನೂ ಮಾಸಿಲ್ಲ. ಅಷ್ಟರಲ್ಲೇ ಮದುವೆ ಮಾಡಿಕೊಳ್ಳುವದು ಚಂದವೇನು, ಮುರುಗ? ನಾನಿಲ್ಲೇ ಶಾಂತವಾಗಿ ನೆಲಸುತ್ತೇನೆ. ನಿನ್ನೊಂದಿಗೆ ಕಷ್ಟದ ಕೆಲಸವನ್ನೂ ಮಾಡುತ್ತೇನೆ. ಪುಸ್ತಕಗಳು, ಕಾಫಿ ಕ್ಲಬ್‌ಗಳು ಗಳೆಯರು ಹಾಗೂ ಉಪನ್ಯಾಸಕರುಗಳು ಇಲ್ಲದೆ ನಿನ್ನೊಂದಿಗೆ ಇರುತ್ತೇನೆ. ಮುರುಗ, ನಿನ್ನ ಬುದ್ಧಿವಾದವನ್ನು ನಾನು ಕೇಳುತ್ತೇನೆ. ಮದುವೆಯ ಆಲೋಚನೆ ಬರುವ ವರ್ಷ ಮಾಡೋಣ, ಮಾತೃಶ್ರೀಯವರು ಮೃತರಾಗುವಾಗ ಅವರಿಗಿದ್ದ ಆಶೆ ಮತ್ತು ನಿನ್ನ ಮಾತುಗಳು ನನಗೆ ಬಹು ಪವಿತ್ರವಾಗಿವೆ. ನೀತಿ ಸಮ್ಮತ ನಿರಹಂಕಾರ ಹಳ್ಳಿಗರಲ್ಲಿ ಮಾತ್ರ ವಾಸಮಾಡುತ್ತದೆಂಬುದನ್ನು ನಾನೀಗ ಕಲಿತುಕೊಂಡೆ."

(ಮುಂದುವರಿಯುವುದು)


ಇದೀಗ ಪ್ರಕಟವಾಗಿದೆ—

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.......... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುವರೆಗೆ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ......................"

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್‌ಡಿಪೊ, ಪಾಲುಕೋಟೆ, ಉಡುಪಿ.



ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

NAVAYUGA 14—10—1965
Registered with the Registrar
of News Papers for India
under No. K. N. 3646/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೧೪-೧೦-೬೫ರಿಂದ ೨೦-೧೦-೬೫ರ ವರೆಗೆ

### ೧. ಮೇಷ

ಹಿಂದಿಗಿಂತ ಇಂದಿನ ದಿನಗಳು ಸ್ವಲ್ಪ ಬಿಕ್ಕಟ್ಟಿನವುಗಳಾಗಿ ಪರಿಣಮಿಸಲಿವೆ. ಆದಾಯಕ್ಕಿಂತ ಅಧಿಕ ವ್ಯಯವಾಗುವುದರಿಂದ ಹಣದ ಅಡಚಣೆಗೆ ಸಿಲುಕುವಿರಿ. ಸಾಂಸಾರಿಕ ತಾಪತ್ರಯಗಳಿಂದ ಮನನೊಂದ ನಿಮಗೆ ಶತ್ರುಗಳ ಪೀಡೆಯು ಹೆಚ್ಚಲಿದೆ. ರಾಜಕೀಯದಲ್ಲಿ ಪರಾಜಯವುಂಟಾದೀತು. ಕಷ್ಟಸಹಿಷ್ಣುಗಳಾದ ನಿಮಗೆ ತಾ. 16, 17 ಸ್ವಲ್ಪ ಅನುಕೂಲವಾಗಿ ಕಾಣಿಸುವದು.

### ೨. ವೃಷಭ

ದೈವತ್ತ ಸಾಕಷ್ಟು ಉತ್ತಮವಿರುವದು. ನಿಮ್ಮ ಇಷ್ಟಾರ್ಥಗಳು ಬಹುತೇಕ ಕೈಗೂಡಲಿವೆ. ಹಿಂದಿನ ಸಾಲ ಕಡಿಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನ ಸಂಚಯವಾದೀತು. ಕುಜನರ ಕೆಟ್ಟತನವು ಮೇಲಿಂದ ಮೇಲೆ ಬಂದರೂ ವಿವೇಕಿಗಳಾದ ನೀವು ಅವುಗಳಿಂದ ಪಾರಾಗುವಿರಿ. ತಾ. 14, 16, 18, 19ರಲ್ಲಿ ಹೆಚ್ಚಿನ ಸಂಕಲ್ಪಗಳು ಈಡೇರುವವು.

### ೩. ಮಿಥುನ

ದಿನದಿಂದ ದಿನಕ್ಕೆ ಪರಿಸ್ಥಿತಿಯು ಕಠಿಣವಾಗುತ್ತಾ ಬರುತ್ತಿರುವುದು. ಕಾಸು ಇಲ್ಲದವರ ಕಲ್ಲಿಗೆ ಕಸುವೆಂಬ ಗಾದೆಯು ಸದ್ಯ ನಿಮ್ಮ ಅನುಭವಕ್ಕೆ ಬರಲಿದೆ. ಹೆರವರ ವಿಚಾರವಂತಿರಲಿ, ಹೆಂಡಂದಿರು ಮಕ್ಕಳೂ ಸಹ ಇಂದು ನಿಮ್ಮನ್ನು ತಾತ್ಸಾರದ ದೃಷ್ಟಿಯಿಂದ ನೋಡುವರು. ಬಂದದನ್ನು ಅನುಭವಿಸಿಯೇ ಸಿದ್ಧ ಎಂಬ ನಿಮ್ಮ ದೃಢ ನಿರ್ಧಾರ ತಾ. 16, 17, 20 ಇವು ಸಹಕಾರಿಗಳಾಗಿರುವವು.

### ೪. ಕರ್ಕಾಟಕ

ದೇಹಾಲಸ್ಯ, ಗೃಹ ತಾಪತ್ರಯ, ಆರ್ಥಿಕ ಬಿಕ್ಕಟ್ಟು ಇವುಗಳು ಸದಾ ನಿಮ್ಮನ್ನು ಕಾಡುತ್ತಿರುವವು. ಆತ ಏನ ನೀವಿಂದು ಮುಂದೇನು ಮಾಡಬೇಕೆಂದು ತೋಚಲಾರದೆ ಉದಾಸೀನರಾಗಿ ಉಳಿಯುವಿರಿ. ಆಪ್ತೀಯರು ಕೂಡ ಇಂದಿನ ಕಷ್ಟ ಕಾಲದಲ್ಲಿ ನೆರವಾಗರು. ಮರ್ಯಾದೆಯಿಂದ ದಿನಗಳೆವುದು ದುಃಸಾಧ್ಯವೆನಿಸುವದು. ತಾ. 14, 15, 18, 19 ಇದ್ದುದರಲ್ಲಿ ಉತ್ತಮ.

### ೫. ಸಿಂಹ

ಶ್ರಮವಹಿಸಿ ದುಡಿಯುವಿರಿ. ಪರಿಶ್ರಮವು ಸಾರ್ಥಕವೆನಿಸಲಿದೆ. ಮಹಾತ್ಮರ ನೆರವು ನಿಮ್ಮ ಇಂದಿನ ಬಯಕೆಗಳ ಹೆಚ್ಚಿನಂಶ ನೆರವೇರುವವು. ಕುಜನರ ಮಾಯಾಜಾಲಕ್ಕೆ ಸಿಲುಕಿ ಜನಾಪವಾದಕ್ಕೊಳಗಾಗುವ ಸಂಭವವಿದೆ. ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಸಿಲುಕುವ ಸಂಭವವಿರುವುದರಿಂದ ಜಾಗರೂಕರಾಗಿ ಕೆಲಸ ನಿರ್ವಹಿಸಿರಿ. ವಾರಾದಿಯ 4 ದಿನಗಳು ಅನುಕೂಲವಾಗಿವೆ.

### ೬. ಕನ್ಯಾ

ನಿಮ್ಮ ನಿರೀಕ್ಷೆಯಂತೆ ಸಕಲ ಕಾರ್ಯ ನೆರವೇರುವವು. ಎಂತಹ ಮಹತ್ಕಾರ್ಯವಾದರೂ ಸರಿಯೆ, ಹೆರವರ ನೆರವಿಲ್ಲದೆ ಸ್ವಯಂ ನಿರ್ವಹಿಸಲು ಶಕ್ತರಾದ ನಿಮಗೆ ಎಣಿಸಿದುದಕ್ಕಿಂತಲೂ ಹೆಚ್ಚಿನ ಫಲವು ಅನಾಯಾಸದಿಂದ ಲಭಿಸಲಿವೆ. ಪ್ರಬಲನಾದ ಇದಿರಾಳಿಯೂ ನಿಮ್ಮೆದುರಿಂದು ಬರಲಾರನು. ತಾ. 11ರಿಂದ 19ರ ವರೆಗಿನ ದಿನಗಳು ನಿಮ್ಮ ಇಷ್ಟಾರ್ಥಗಳು ಸಫಲವಾಗಲಿವೆ.

### ೭. ತುಲಾ

ಇಲ್ಲಸಲ್ಲದ ತಂಟೆತಕರಾರುಗಳು ಮೇಲಿಂದ ಮೇಲೆ ಬರುವವಾದರೂ ಗುರ್ವನುಗ್ರಹವಂ ಪಡೆದ ನಿಮಗೆ ದಿನಗಳು ಕಷ್ಟಕರಗಳಾಗಲಾರವು. ಪಿತ್ತೋಷ್ಣ ದೋಷದಿಂದ ಆರೋಗ್ಯಕ್ಕೆ ಧಕ್ಕೆಯುಂಟಾಗಲಿದೆ. ನಿಷ್ಕಾರಣ ವಾಕ್ಕಲಹವೂ ಸಂಭವಿಸೀತು. ಪ್ರವಾಸದಲ್ಲಿ ಪುಣ್ಯಕ್ಷೇತ್ರಗಳ ದರ್ಶನ ಯೋಗವಿಹುದು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಫಲಿತಾಂಶವನ್ನು ಪಡೆವಿರಿ. ವಾರಾಂತ್ಯದ 3 ದಿನಗಳು ಅನುಕೂಲ.

### ೮. ವೃಶ್ಚಿಕ

ಜನ್ಮಸ್ಥ ಶುಕ್ರನೊಬ್ಬನನ್ನುಳಿದು ಇತರ ಗ್ರಹಮಂಡಲವೇ ನಿಮಗಿಂದು ಪ್ರತಿಕೂಲವಿರುವುದರಿಂದ ಸದ್ಯದ ದಿನಗಳು ಬಹಳ ದುಃಖದಾಯಿಗಳಾಗಿ ಪರಿಣಮಿಸಲಿವೆ. ಮಾನೋದೌರ್ಬಲ್ಯದಿಂದಾಗಿ ಕೈಗೆ ಬಂದ ತುತ್ತನ್ನೂ ಕಳೆದುಕೊಳ್ಳುವಿರಿ. ಅನಿರೀಕ್ಷಿತ ಪ್ರವಾಸದಿಂದಾಗಿ ಧನಹಾನಿ ಅನಾರೋಗ್ಯಗಳಿಗೆ ತುತ್ತಾಗಲಿರುವಿರಿ. ಮುಂದಿನ ಕಲ್ಯಾಣ ದೃಷ್ಟಿಯಿಂದ ನೀವು ಇಂದು ದಿನಗಳನ್ನು ಕಳೆಯಬೇಕಾಗಿದೆ. ತಾ. 14, 15, 20 ಇತರ ದಿನಗಳಿಗಿಂತ ಉತ್ತಮ.

### ೯. ಧನು

ನಿಮ್ಮ ಅದೃಷ್ಟವಿಂದು ಅತೀವ ಉತ್ತಮ ಮಟ್ಟಕ್ಕೆ ಬಂದಿದೆ. ಗಾಳಿ ಬಂದಾಗ ತೂರಿಕೊಂಡದ್ದೇ ಬಂತೆಂಬ ಗಾದೆಯಂತೆ ನೀವು ನಿಮ್ಮ ಸಂಕಲ್ಪಗಳನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿರಿ. ನಿಮ್ಮಾಣೆಕೆಯು ಎಳ್ಳಷ್ಟೂ ನಿಷ್ಫಲವಾಗದು. ಜನಾನುರಾಗವನ್ನು ಗಳಿಸಿದ ನಿಮಗೆ ಸರ್ವತ್ರ ಸ್ಥಾನಮಾನಾದಿಗಳು ಪ್ರಾಪ್ತವಾಗುವವು. ವಾರಾದಿಯ 4 ದಿನಗಳಲ್ಲಿ ನಿಮ್ಮ ಸಕಲ ಅಭೀಷ್ಟಗಳೂ ಪೂರ್ಣವಾಗಲಿವೆ.

### ೧೦. ಮಕರ

ನಿಮ್ಮ ದುಸ್ಥಿತಿಯು ಇಂದು ಬಹುಮಟ್ಟಿಗೆ ಮುಗಿಯಿತೆನ್ನಬಹುದು. ಹೆರವರ ನೆರವಿಲ್ಲವಾದರೂ ಸ್ವಯಂಶಕ್ತರಾದ ನಿಮ್ಮ ಎಲ್ಲಾ ಕಾರ್ಯಕಲಾಪಗಳೂ ನಿರೀಕ್ಷೆಗಿಂತಲೂ ಅಧಿಕವಾದ ಫಲವನ್ನು ಕೊಡಲಿವೆ. ವಿಶೇಷತಃ ರಾಜಕೀಯ ಕ್ಷೇತ್ರದಲ್ಲಿ ವಿಜಯ ಲಾಭಗಳನ್ನು ಗಳಿಸಲಿರುವಿರಿ. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾದ ನಿಮಗೆ ತಾ. 16ರಿಂದ 19ರ ವರೆಗಿನ ದಿನಗಳು ಅನುಕೂಲವಾಗಿವೆ.

### ೧೧ ಕುಂಭ

ಕರ್ತವ್ಯತತ್ಪರರಾದ ನಿಮಗೆ ಗುರುಹಿರಿಯರ ನೆರವೂ ಲಭಿಸುವದು. ಆದರೇನು? ಮನೆಯವರೇ ನಿಮ್ಮನ್ನಿಂದು ವಂಚಿಸಲಿರುವರು. ಖರ್ಚುಗಳು ಹಲವಾರಿದ್ದರೂ ನಿಮಗಿಂದು ಹಣದ ಬಿಕ್ಕಟ್ಟು ಕಾಣಿಸದು. ವ್ಯಾಪಾರೀ ಜನತೆಗೆ ಅನಿರೀಕ್ಷಿತ ನಷ್ಟ ಸಂಭವಿಸುವಂತಿದೆ. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ. ವಾರಾಂತ್ಯದ 3 ದಿನಗಳು ಉತ್ತಮವಿವೆ.

### ೧೨. ಮೀನ

ಸುಖಪತಿಯಾದ ಬುಧನು ನೀಚನಾದ ರವಿಯಿದ ಕೂಡಿ ಅಸ್ತಮದಲ್ಲಿಹನು. ಸಾಲದ್ದಕ್ಕೆ ಹಳೆವದ ಶನಿಯೂ ಕೂಡ ವ್ಯಯಸ್ಥಾನದಲ್ಲಿದ್ದು ಅನಿರೀಕ್ಷಿತ ಆಪದನರ್ಥಗಳನ್ನು ತಂದೊಡ್ಡುತ್ತಿರುವನು. ಅಂದ ಮೇಲೆ ನಿಮ್ಮ ಮನಸ್ಸಿಗೆ ನೆಮ್ಮದಿ ಎಲ್ಲಿಹುದು? ಸ್ವಜನ ವಿರೋಧವು ಕೂಡ ದಿನದಿಂದ ದಿನಕ್ಕೆ ಉಬ್ಬಣಿಸಲಿರುವದು. ಅಂತೂ ಕಷ್ಟದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ತಾ. 14, 15, 20 ಈ ದಿನಗಳು ಸ್ವಲ್ಪ ಉತ್ತಮವೆನಿಸುವವು.

---

**ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ ನವಕಾಲಕ್ಕೊಪ್ಪುವ ಪುಸ್ತಕಗಳು**

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**ಸುಲಭದಲ್ಲಿ ಇಂಗ್ಲಿಷ್**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ (ಟ. ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

**ಸುಲಭದಲ್ಲಿ ಪತ್ರಲೇಖನ**

**LETTER WRITING MADE EASY**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ. ಖ. ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

**ಗೀತೆಯ ಕೈಗನ್ನಡಿ**

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

---

**ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ**

O. S. No. 99/1965

ಲಕ್ಷ್ಮೀನಾರಾಯಣ ಭಟ್ಟ — ವಾದಿ
ಮತ್ತು
ಕಲ್ಯಾಣ ಯಾನೆ ಗುಬ್ಬಿ ಶೆಟ್ಟಿ ಸಹಾ — ಪ್ರತಿವಾದಿಗಳು

ಇವರೊಳಗೆ

ಈ ಮೂಲಕ ಸದ್ರಿ ದಾವೆಯ 7ನೆ ಪ್ರತಿವಾದಿ, ಬಡ್ಡು ಶೆಟ್ಟಿ, ಗಿರಿಯಮ್ಮ ಶೆಡ್ತಿ ಮಗ, ಉಡುಪಿ ತಾಲ್ಲೂಕು ಸಾಂತೂರು ಗ್ರಾಮದ ಸಾಮನಾಡಿ ಗುತ್ತಿನ ಮನೆಯವರಿಗೆ ತಿಳಿಸುವದೇನೆಂದ್ರೆ—

ವಾದಿ ನೀವು ವಗೈರೆ ಮೇಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರಿ ಬಗ್ಗೆ ತಾರೀಕು 30-10-1965ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಹಿನ್ನಾ ಮಾಡಿ ಸದ್ರಿ ದಾವೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

*By order of the Court.*

N. M. ADYANTHAYA,
Advocate for Plaintiff.

Karkala, 3-10-1965.

*READ &*
*ADVERTISE IN*
**NAVAYUGA WEEKLY**

Edited, Printed & Published by K. H. Shetty at the Navayuga Press, Udipi, S. India.

# నవయుగ

21—10—1965

226

౨౦ పైస

ಧಾರಾವಾಹಿ ಕಾದಂಬರಿ

# ರೈತ ಮುರುಗ

ತಮಿಳು ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

— ಇದಕ್ಕೆ ಮೊದಲು —

ಅಲವಂತಿಯ ನಿಷ್ಠಾವಂತ ಕರ್ತವ್ಯಶೀಲ, ಪರಿಶ್ರಮಿ ರೈತ ಮುರುಗ, ಮದ್ರಾಸಿನಿಂದ ಊರಿಗೆ ಮರಳಿದ್ದ ಸ್ವಾಮಿ ಪುತ್ರ ರಾಮಚಂದ್ರನನ್ನು ಗ್ರಾಮ ಜೀವನಕ್ಕೆ ಅಳವಡುವಂತೆ ಮಾಡಿದ ಆತನ ಸಾಹಸ ಅಂದಿಗೆ ಯಶಸ್ವಿಯಾಗಿತ್ತು. ತಾಯ್ತಂದೆಗಳನ್ನು ಕಳೆದುಕೊಂಡ ತಾನು 'ನೀನೆಂದಂತೆಯೇ ಮದ್ರಾಸದ ಓದನ್ನು ಬಿಟ್ಟುಕೊಟ್ಟು ನಿನ್ನೊಡನೆಯೇ ಉಳಿಯುವೆ, ಹಿರಿಯರ ಭೂಮಿಯಲ್ಲಿ ಗೇಯುವೆ' ಎಂದಾತ ಪ್ರತಿಜ್ಞೆ ಮಾಡಿದನು. ಮುಂದೆ ಓದಿರಿ.

ಮುರುಗನ ಪ್ರಾಮಾಣಿಕತೆಯು ಮಾತುಗಳು ಆ ಒಂದು ದಿನ ಮಾತ್ರ ಸಮಾಧಾನ ಕೊಡಲು ಶಕ್ಯವಾಗಿದ್ದುವು. ಅನಂತರ ರಾಮಚಂದ್ರನು ತನ್ನಷ್ಟಕ್ಕೆ ಗಾಢವಾಗಿ ಹಿಂದಕ್ಕೆ ಬಿಸಾಡಲ್ಪಟ್ಟನು. ಮಾತುಗಳು ನದಿಯ ಮೇಲಿನ ನೀರಿನ ಹನಿಗಳ ಹಾಗೆ. ಅವನ ದುಃಖದ ಕಾರಣವು ಬಹು ಗೂಢವಾದುದಾಗಿತ್ತು. ಯಾವದನ್ನು ಅವನಿಂದ ಪುನಃ ಕರೆಯಲು ಸಾಧ್ಯವಿದ್ದಿಲ್ಲವೋ, ಅಂತಹ ಘಟಿಸಿ ಹೋಗಿದ್ದ ಭೂತಕಾಲದ ದುಃಖವು ಅವನದ್ದಾಗಿತ್ತು. ದಡದಲ್ಲಿರುವ ಯಜಮಾನನಿಗಾಗಿ ಸಮುದ್ರ ಮಧ್ಯದಲ್ಲಿರುವ ಒಡೆದ ಹಡಗು ಕಾಯುವಂತೆ, ಅವನ ತಾಯಿಯ ಮೂರ್ತಿ ಶೋಕದ ಬಿರುಗಾಳಿಯಿಂದ ಹೊಯ್ದಾಡುತ್ತಿದ್ದ ಮನಸ್ಸಿನ ಮುಂದೆ ಬಂದು ನಿಲ್ಲುತ್ತಿತ್ತು.

ಮುರುಗನು ತನ್ನಿಂದಾದಷ್ಟು ಪ್ರಯತ್ನಿಸಿದ್ದನು. ಆದರೆ ಎಷ್ಟು ನೀರೆರೆದಿದ್ದರೂ ಮಧ್ಯಾಹ್ನದ ಸೂರ್ಯನಿಂದ ಚೇತರಿಸಿಕೊಳ್ಳಲಾಗದ ಎಳೆ ಬಳ್ಳಿಯ ಹಾಗೆ ರಾಮಚಂದ್ರನು ಕ್ಷೀಣವಾಗುತ್ತಿದ್ದನು. ನೈಸರ್ಗಿಕ ಸ್ವಂತ ಚೇತನದಾಯಿ ಮಳೆ ಬರುವ ವರೆಗೆ ಮಾತ್ರ ಆ ಬಳ್ಳಿಗಳು ಸಾಯದಂತೆ ಆತನು ಕಾಪಾಡಬಹುದು. ಆದರೆ ಸೋಲಿನ ಗಾಳಿಯು ಮಳೆ ಕೂಡುವ ಮುಗಿಲನ್ನು ಹಿಂದೊಗೆದು ಬಿಟ್ಟಿತ್ತು. ಮುರುಗನಿಗೆ ಅದು ಗೊತ್ತಿತ್ತು. ಆದರೆ ಅವನಿಗೆ ರೈತನ ತಾಳ್ಮೆ ಹಾಗೂ ಕೆಲಸ ಇತ್ತು.

ಈ ಮೂರು ತಿಂಗಳಿನಿಂದ ತನಗಿದ್ದ ಒಬ್ಬನೇ ಒಬ್ಬ ಮಿತ್ರನಾದರೂ ಯಾತಕ್ಕಾಗಿ ಪತ್ರ ಬರೆದಿಲ್ಲವೆಂದು ರಾಮಚಂದ್ರನು ಆಶ್ಚರ್ಯಪಡುತ್ತಿದ್ದನು. ಜಯದ ಹೆಮ್ಮೆಯೇನು? ಅಲ್ಲ, ಅದು ಅನ್ಯಾಯವಿದೆ. ಮರುದಿನ ಅವನಿಗೊಂದು ಪತ್ರ ಬಂದಿತು. ಅಕ್ರೋಟನ್ನು ಒಡೆಯುತ್ತಿದ್ದಂತೆ ಆತನ ತುಟಿಗಳು ಮುಗುಳ್ನಗೆಯಿಂದ ಒಡೆಯುತ್ತಿದ್ದುವು. ಕೇದಾರಿಯ ಉತ್ಸಾಹಪರ ಮತ್ತು ದೊಡ್ಡ ಅಕ್ಷರಗಳ ಪರಿಚಯ ಅವನಿಗೆ ಚೆನ್ನಾಗಿತ್ತು.

ಪೂನಮಲ್ಲಿ ಹೆದ್ದಾರಿ,
ಮದ್ರಾಸು,
೩ನೇ ಜುಲಾಯಿ.

ಪ್ರಿಯ ರಾಮು,

ನಿನ್ನ ಮಾತೃಶ್ರೀಯವರು ಮೃತ್ಯುವಶರಾದ ವಾರ್ತೆ ಕೇಳಿ ಬಹಳ ದುಃಖವಾಯಿತು. ತಡವಾದರೂ, ಪ್ರಾಮಾಣಿಕತನದಿಂದ ಸಹಾನುಭೂತಿಯನ್ನು ತೋರಿಸುತ್ತಿದ್ದೇನೆ. ಅವರು ಶ್ರೇಷ್ಠ ತಾಯಂದಿರಲ್ಲಿ ಒಬ್ಬರಿದ್ದರು. ತನ್ನ ತಾಯಿಯ ಕುರಿತೇನೂ ಗೊತ್ತಿಲ್ಲದಿರುವ ನಾನು ಗೌರವವನ್ನು ಸಮರ್ಪಿಸುತ್ತಿದ್ದೇನೆ. ಆದರೆ ಅವರ ಮರಣ ನಿನ್ನನ್ನು ಉದಾಸೀನಗೊಳಿಸದಿರಲಿ. ಅವರು ನಿನ್ನ ವಿದ್ಯಾಭ್ಯಾಸಕ್ಕಾಗಿ ಬಹಳ ತ್ಯಾಗ ಮಾಡಿದ್ದಾರೆ. ದುಃಖ ನಿನ್ನನ್ನು ಅವರ ತ್ಯಾಗದ ಗುರಿಯನ್ನು ಮುಟ್ಟದೆ ಇರುವ ಹಾಗೆ ಮಾಡದಿರಲಿ. ನಮ್ಮ ಪರೀಕ್ಷಾ ಪ್ರಪಂಚದಲ್ಲಿ ಅದೃಷ್ಟದ ದೊಡ್ಡ ಚೀಲವಿದೆ. ನಿನ್ನ ಅಪಜಯವು, ಅದೂ ಅರ್ಥಶಾಸ್ತ್ರದಲ್ಲಿ, ನನಗೊಂದು ಒಗಟಿದೆ. ಬಹುಶಃ ನೀನು ಪರೀಕ್ಷಕನ ಜ್ಞಾನಕ್ಕಿಂತಲೂ ಹೆಚ್ಚು ಬರೆದಿದ್ದಿರಬಹುದು. ಈ ವಿಪರೀತಗಳನ್ನು ನಮ್ಮ ಒಳ್ಳೆಯದಕ್ಕಾಗಿ ನಡೆಸಿಕೊಳ್ಳೋಣ. ಅಲ್ಲಿ ಹಳ್ಳಿಯಲ್ಲಿ ಕುಳಿತು, ಬಿ. ಎ. ಗೆ ಖಾಸಗಿ ಸ್ಥಾನಾರ್ಥಿಯಾಗಿ ಪ್ರತ್ಯಕ್ಷನಾಗುವದು ಪ್ರಯೋಜನವಿಲ್ಲ. ಅದು ನಿನ್ನ ಸಂಸ್ಕೃತಿ ಬೆಳವಣಿಗೆ ಮತ್ತು ಒಕ್ಕಟ್ಟನ್ನು ನಾಶ ಮಾಡಬಹುದು. ಹಳ್ಳಿ ಜೀವನವನ್ನು ನೀನು ಅನುಭವಿಸಲಾರೆ. ಕೂಡಲೇ ನೀನು ಇಲ್ಲಿ ಬಂದು ಈ ವರ್ಷ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಿ ಸೋಲಿನಿಂದ ಬಿಡುಗಡೆ ಹೊಂದಲು ಪ್ರಯತ್ನಿಸಬೇಕು.

ಬಾಲ್ಯದಿಂದ ಕಾಪಾಡಿಕೊಂಡು ಬಂದಿರುವ ಸಾಹಸವನ್ನು ಮುಂದುವರಿಸಲು ಸಹಾಯ ಆಗುವಂತೆ ನ್ಯಾಯ ವಿದ್ಯಾಲಯಕ್ಕೆ ಸೇರಿದ್ದೇನೆ. ದುಃಖ ದೇವತೆಯ ಪರಪ್ರಸಾದ ನನ್ನಲ್ಲಿದ್ದರೂ ಅದು ಫಲಪ್ರದವಾಗುವಂತಾಗಲು ನಂನದಕ್ಕೆಂದೂ ಸಹಾಯ ಮಾಡುವದಿಲ್ಲ. ಬೆಂಕಿ ಇದ್ದಲ್ಲಿ ಹೊಗೆ ಇರುತ್ತದೆ. ಆದರೆ ಜ್ವಾಲೆಯು ಇನ್ನೂ ಮುಂದಕ್ಕೆ ಬರಲು ಪ್ರಯತ್ನಿಸುತ್ತದೆ. ಕೂಡಲೇ ಹೊರಡಲು ಪ್ರಾರ್ಥಿಸುತ್ತೇನೆ. ಇಲ್ಲದಿದ್ದಲ್ಲಿ ಗುಣಹೊಂದಲಾರದಂತಹ ಗಾಯವನ್ನು ನೀನೇ ಮಾಡಿಕೊಳ್ಳುತ್ತಿ.

ನಾನು ಸ್ವಾರ್ಥಿಯೂ ಹೌದೆಂಬುದನ್ನು ಒಪ್ಪಿಕೊಳ್ಳಬೇಕು. ಕಲಾ ಶಾಲೆಯ ನಾಲ್ಕು ವರ್ಷದ ಜೀವನದಲ್ಲಿ ನಾವು ಒಬ್ಬರಿಗೊಬ್ಬರು ಹೊಂದಿಕೊಂಡು ಬಾಳಿದ್ದೇವೆ. ಈಗ ನೀನಿಲ್ಲದೆ ದಿನ ಕಳೆಯುವದು ಕಷ್ಟವೆಂಬುದನ್ನು ಕಂಡುಕೊಂಡಿದ್ದೇನೆ. ನಿಜವಾಗಿ ನಮ್ಮಿಬ್ಬರಿಗೆ ಬೇಕಾಗುವಂತಹ ವಿಶಾಲಕೋಣೆಯನ್ನು ತೆಗೆದುಕೊಂಡಿದ್ದೇನೆ. ಕೂಡಲೇ ಹೊರಡೆಂದು ಪುನಃ ಪ್ರಾರ್ಥಿಸುತ್ತಿದ್ದೇನೆ.

ಇತಿ,
ನಿನ್ನ ಅಕ್ಕರೆಯ,
ಕೇದಾರಿ.

[ವಿ. ಸೂ.] ಇತಿಹಾಸ ಮತ್ತು ಅರ್ಥಶಾಸ್ತ್ರದ ಪ್ರಶಸ್ತಿಗಳು ನನಗೆ ದೊರಕುತ್ತವೆ ಎಂಬುದು ಗೊತ್ತಾಗಿದೆ. ಪರೀಕ್ಷಕರಾಗಿದ್ದ ಉಪನ್ಯಾಸಕರ ಟಿಪ್ಪಣಿಗಳನ್ನು ಕುರುಡು ಪಾಠ ಮಾಡಿದುದರಿಂದ ಅದು ಸಾಧ್ಯವಾಗಿದೆಂಬುದು ನಿನಗೆ ಗೊತ್ತಿದೆ, ನಮ್ಮ ವಿಶ್ವವಿದ್ಯಾಲಯಕ್ಕೂ ಗೊತ್ತಿದೆ. ಆದರೆ ಬೇರೆ ಯಾವುದನ್ನೂ ಅದು ಗ[illegible] ವಿಸುವದಿಲ್ಲ. ನಿನ್ನ ಸ್ವಯಂ ಕಲ್ಪಿತ [illegible] ಭ್ಯಾಸವು ಆರ್ಥಿಕ ಶಾಸ್ತ್ರದಲ್ಲಿ ಉತ್ತೀರ್ಣನಾಗುವಂತೆಯೂ ಸಹಾಯ ಮಾಡಿ[illegible] ಕಚೇರಾ ಮತ್ತು ನಿರ್ಭೀತಂಗೆ ಈ ಪ್ರಪಂಚವು ಯಾವಾಗಲೂ ದಯಾಳುವಿದೆ. [illegible] ಮ್ಮ ಸಾಧುಗಳು ಭೂಮಿಯನ್ನು ಬಾಧ್ಯತೆಯಿಂದ ಪಡೆಯಲೆಂದೂ ಸಾಧ್ಯವಿಲ್ಲ. ನೀನು ಸ್ವಲ್ಪ ಜಾಸ್ತಿ "ಹೋಗು" ರಾ[illegible] ಸ ಬೇಕು.

ಕೇದಾರಿ

ರಾಮು ಪುನಃ ಪುನಃ ಆ ಪತ್ರ[illegible] ನ್ನೋದಿದನು. ಯಾವುದನ್ನು ಅವನು [illegible] ರೀಕ್ಷಿಸಿಕೊಂಡಿದ್ದನೋ ಅಂತಹ, ಅವ[illegible] ಸ್ವಭಾವಕ್ಕನುಗುಣವಾಗಿ ಆ ಸಮಯದಲ್ಲಿ ಬೇಕಾಗಿದ್ದ, ಶಾಂತ ಸಹಾನುಭೂತಿಯ ಚಿಹ್ನೆಯನ್ನವನು ಕಳೆದುಕೊಂ[illegible] ನು. ತನ್ನ ಸೋಲಿನ ಮಾರನೆ ದಿನ [illegible] ಸ್ವಲ್ಪ ಅಟ್ಟಹಾಸದ ಸ್ವರದಲ್ಲಿ ಕೇವ[illegible] ಕಾರ್ಯಕ್ಕಾಗಿ ಕೊಟ್ಟ ಕರೆಯು ಅವನ [illegible] ನಸ್ಸಿಗೆ ಸ್ವಲ್ಪ ನೋವನ್ನುಂಟು ಮಾ[illegible] ತು. ಅವನ ನಿಕಟ ಸ್ನೇಹಿತ ಕೇದಾರಿ[illegible] ಷ್ಟು ಬೇಗನೆ ಬೆಡಗಿನವನಾಗುವದು ಸಾಧ್ಯ ಇದೆ. ಹೇಗಾದರೂ ಅವನ [illegible] ದ್ಧಿವಾದವು ಒಂದು ಕೆಟ್ಟ ನಂಬಿಕೆಯ[illegible] ಲ್ಲ. ಆದರೆ ಅದರಲ್ಲಿ ತಿಳುವಳಿಕೆಯ ಝು[illegible] ಕಾರವಿತ್ತು. ಈಗ ಉಪಚರಿಸಲು [illegible] ಬಲಶಾಲಿ ಸ್ನೇಹಿತನ ಆವಶ್ಯಕತೆ ಇದೆ.

ಈ ರೀತಿ ಚರ್ವಿತ ಚರ್ವಣ ಮಾ[illegible] ತ್ತಿದ್ದಾಗ ಮುರುಗನು ಒಳಗೆ ಬಂದ[illegible] ಅವನು ಮಾತಿಗಾರಂಭಿಸಿದನು. "[illegible] ಮಿ, ಈ ರೀತಿಯ ದುಃಖ ನಿಮಗ[illegible] ಡುಂಟುಮಾಡೀತು. ಇಂದು ಬಂದು[illegible] ಗಳನ್ನು ನೋಡಿರಿ, ನಿನ್ನ ರಾತ್ರಿ ಪ[illegible] ದಿಂದ ಒಂದಿದ್ದ ಕಂಪು ಪ್ರವಾಹವ[illegible] ನಮ್ಮ ಹಳ್ಳಿಯಲ್ಲೇ ಚೆನ್ನಾಗಿರುವ, [illegible] ಪಿನ ನೇಜಿ ಕಳದ ಗದ್ದೆಗ ಬಿಟ್ಟದ್ದೆ[illegible] ಇಂದು ಬೆಳಗ್ಗೆ ಒಂದಂಗುಲ ಕಸರು[illegible]

(ಹನ್ನೊಂಭನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... .. | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7¾ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | ... ... | 4 |

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 1226.

Estd. 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

### ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಲೇಖನ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

**ಚಂದಾದಾರರಿಗೆ—**

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲೀ ಪತ್ರವ್ಯವಹಾರ ಮಾಡುವಾಗಲಾಗಲೀ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಗಗನ ಯಾತ್ರಿಗಳಾದ ಚಾರ್ಲ್ಸ್ ಕೊನ್ರಾಡ್ ಮತ್ತು ಗಾರ್ಡನ್ ಕೂಪರ್‌ರವರು ಎಂಟು ದಿನ ಪರ್ಯಂತ ಗಗನ ಯಾತ್ರೆ ನಡೆಸಿದ ಬಳಿಕ ನಡೆದು ಬರುತ್ತಿದ್ದಾರೆ.

# ನವಯುಗ

| ಸಂಪುಟ ೪೫ | ಉಡುಪಿ | Vol. 45 |
| --- | --- | --- |
| ಸಂಚಿಕೆ ೭ | ೨೧—೧೦—೧೯೬೫ | No. 7 |

**ವಚನ ಸುಧೆ**

ಆತ್ಮಜ್ಞಾನಂ ಸಮಾರಂಭ
ಸ್ತಿತಿಕ್ಷಾ ಧರ್ಮನಿತ್ಯತಾ।
ಯಮರ್ಥಾನ್ನಾಪಕರ್ಷಂತಿ
ಸ ವೈ ಪಂಡಿತ ಉಚ್ಯತೇ ॥

ತನ್ನ ವಾಸ್ತವಿಕ ಸ್ವರೂಪದ ಜ್ಞಾನ, ಉದ್ಯೋಗ, ದುಃಖ ಸಹನಾಶಕ್ತಿ ಮತ್ತು ಧರ್ಮದಲ್ಲಿ ಸ್ಥಿರತೆ— ಈ ಗುಣಗಳು ಪುರುಷಾರ್ಥ ಚ್ಯುತಗೊಳಿಸಗದ ಮಾನವನು ಮೇಧಾವಿಯೆನಿಸುತ್ತಾನೆ.

## ಸಾರ್ವಭೌಮತೆಗೆ ಸವಾಲು ಬೇಡ

ಪಾಕ್—ಭಾರತ ವಿವಾದ—ಯುದ್ಧಗಳಿಗೆ ಕಾಶ್ಮೀರವೊಂದು ನೆಪಮಾತ್ರವೆಂಬುದೀಗ ವ್ಯಕ್ತವಾಗಿದೆ. ಭಾರತೀಯ ಅಭಿವೃದ್ಧಿಯನ್ನು ತಡೆ ಹಿಡಿಯುವುದು ಜಾತೀಯತೆಯನ್ನು ಕೆರಳಿಸುವುದು, ಹೇಗಾದರೂ ಮಾಡಿ ಭಾರತದ ಪ್ರಜಾತಂತ್ರವನ್ನು ನಷ್ಟ ಮಾಡುವುದು ಪಾಕಿಸ್ತಾನದ ಉದ್ದೇಶವಿದೆ. ಕಾಶ್ಮೀರವನ್ನೇ ಅದು ರಣರಂಗವನ್ನಾಗಿ ಈ ಬಾರಿ ಚುನಾಯಿಸಿತು. ಆದರೆ, ಭಾರತೀಯ ವೀರ ಯೋಧರು ಪಾಕಿಸ್ತಾನದ ಆಕ್ರಮಣದ ವಿರುದ್ಧ ಹೋರಾಡಿದರು, ರಕ್ತದ ಕಾಲುವೆ ಹರಿಯಿತು; ಶತ್ರುಗಳು ಸಂಪೂರ್ಣ ಸೋಲುಂಡರು. ನಿಜವಾದ ಆಕ್ರಮಣಗಾರರು ಬಲವಾದ ಪೆಟ್ಟು ತಿಂದರು—ಸಮರ ವಿರಾಮವು ಜ್ಯಾರಿಗೆ ಬಂದ ಬಳಿಕವೂ ಅವರ ಕುಚೋದ್ಯ ನಿಂತಿಲ್ಲ. ಯಾಕೆಂದರೆ ಸಮರ ವಿರಾಮವೇ ಅನಿಶ್ಚಿತವಿಷಯವಾಗ ಉಳಿದವರು ಏನಂದಾರು? ಪ್ರತಿದಿನವೂ ಹತ್ತಾರು ಅತಿಕ್ರಮಣ ಮಾಡುತ್ತಿದೆ ಪಾಕ್, ನಾವದನ್ನು ಯಶಸ್ವಿಯಾಗಿ ಎದುರಿಸುತ್ತೇವೆ. ಇದನ್ನು ನೋಡುವಾಗ, ನಿಕಟ ಭವಿಷ್ಯದಲ್ಲೇ ಮತ್ತೆ ಪಾಕ್ ಬೃಹತ್ ಪ್ರಮಾಣದ ಆಕ್ರಮಣ ಮಾಡುವ ನಿರೀಕ್ಷೆಯಿದೆ; ವಿದೇಶಗಳಿಂದದು ಶಸ್ತ್ರಾಸ್ತ್ರಗಳನ್ನೂ ಬೇಡುತ್ತಿದೆ.

ಪಾಕಿಸ್ತಾನ ಆಕ್ರಮಣಕಾರ ರಾಷ್ಟ್ರವೆಂದು ತಿಳಿದಿದ್ದರೂ ಅಮೇರಿಕ—ಬ್ರಿಟನ್‌ಗಳು ಅದನ್ನ ಘೋಷಿಸಲು ಸಿದ್ಧವಿಲ್ಲ. ಆದರೆ, ಹೇಗಾದರೂ ಮಾಡಿ ಭಾರತದ ಮೇಲೆ ಒತ್ತಾಯ ತಂದು ಪಾಕಿಸ್ತಾನದ ಹಿತ ಸಾಧಿಸುವ ಪಾಶ್ಚಿಮಾತ್ಯ ನೀತಿ ಈ ಬಾರಿ ಕಂಡಿತವೂ ಯಶಸ್ವಿಯಾಗುವುದಿಲ್ಲ. ಭಾರತದ ನಿಲುವು ಅಚಲವಿದೆ. ಬ್ರಿಟನ್ ಶಸ್ತ್ರಾಸ್ತ್ರಗಳ ನಿರ್ಬಂಧವನ್ನು ಸಡಿಲಿಸುತ್ತದೆ; ಭಾರತೀಯರ ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥವಾಗಿದೆಯಂತೆ! ಅಭೇದ್ಯ ಅಮೆರಿಕನ ಟ್ಯಾಂಕುಗಳನ್ನೂ ಭೇದಿಸಿದ ಧೀರರಲ್ಲವೆ ಭಾರತೀಯರು? ಆದರೆ, ಅಮೆರಿಕ ಹೀಗೆ ಹೇಳುತ್ತಿಲ್ಲ. ಮೊದಮೊದಲಿಗೆ ಜನಮತಗಣನೆಯ ಪಾಕ್ ವಾದವನ್ನು ಪುರಸ್ಕರಿಸುತ್ತ ಬಂದಿದ್ದರೂ ಇಂದು ಪರಿಸ್ಥಿತಿ ಹಾಗಿರುವುದಿಲ್ಲ. ಭಾರತ ಉಪಖಂಡಕ್ಕೆ ತನಗೆ ಸಹಾಯ ಮಾಡಲು ಅನುಕೂಲವಾಗುವಂತೆ ವಿವಾದವನ್ನು ತೀರ್ಮಾನ ಮಾಡಿಕೊಳ್ಳಿ—ಇದು ನಿಮ್ಮ ಒಳಿತಿಗಾಗಿ ಎನ್ನುತ್ತದೆ ಅದು. ಆದರೆ, ತೀರ್ಮಾನ ಹೇಗೆ ಮಾಡಬೇಕು? ತಾನು ಹಿಡಿದ ಹಠವನ್ನು ಬಿಡಲಾರದ ಪಾಕ್ ಸರ್ವಾಧಿಕಾರಿಗಳೊಡನೆ ವಿವಾದ ಪರಿಹಾರವೆಂತು ಸಾಧ್ಯ? ಕಾಶ್ಮೀರವು ಭಾರತದ ಒಂದು ರಾಜ್ಯವಾಗಿರುವಾಗ, ಅದರ ಮೇಲೆ ಪಾಕ್ ಅಧಿಕಾರವನ್ನು ಯಾವ ಭಾರತೀಯ ಒಪ್ಪಿಯಾನು? ಒಂದು ದೇಶದ ಒಂದು ಭಾಗವನ್ನು ಪರರಿಗೆ ಕೊಡಲು ಯಾರು ತಯಾರಾದಾರು? ಅದಾಗದ ಮಾತು. ಮತ್ತೆ ರಾಜಿಯೆಂತು? ಈ ದೆಸೆಯಲ್ಲಿ ಉಭಯತರರ ಮಿತ್ರರೆನಿಸುವವರು ಪಾಕಿಸ್ತಾನದ ಮೇಲೆ ಪ್ರಭಾವ ಬೀರಬೇಕು; ಹಾಲನ್ನು ಹಾಲೆನ್ನಲು ಹಿಂಜರಿಯಬಾರದು. ಏನಾದರೂ ಒತ್ತಾಯ ತರುವುದಿದ್ದರೆ, ಅದು ಪಾಕ್ ಸರ್ವಾಧಿಕಾರಿಗಳ ಮೇಲಿರಬೇಕೇ ಹೊರತು ಜಾತ್ಯತೀತ ಪ್ರಜಾತಂತ್ರಪ್ರತ್ಯಕ್ಷ ಭಾರತದ ಮೇಲಲ್ಲ.

ಆದರೆ, ಇದು ವರೆಗೂ ಬಿದ್ದ ಒತ್ತಾಯ ಭಾರತದ ಮೇಲೆಯೇ. ಪಾಕ್ ಪುಂಡುವಾದಿಗಳು ತಮ್ಮ ಕುದುರೆಗೆ ಮೂರು ಕಾಲೆಂದು ವಾದಿಸುವ ಮೋಡಿಗಳು. ಪರರ ಮಾತನ್ನೆಂದೂ ಲಕ್ಷಿಸುವವರಲ್ಲ; ತಮ್ಮ ನಾಡಿಗರ ಹಿತಕ್ಕಿಂತಲೂ ಭಾರತದ ಅಹಿತವನ್ನು ಬಯಸುವವರು. ಪಾಶ್ಚಿಮಾತ್ಯ ಮಿತ್ರರು ತಾವು ಭಾರತಕ್ಕೆ ನೀಡುವ ನೆರವನ್ನು ರಾಜಕಾರಣಕ್ಕೆ ಜೋಡಿಸುವ ಇರಾದೆಯುಳ್ಳವರು. ಶುದ್ಧ ಉದ್ದೇಶದಿಂದ ನೆರವು ನೀಡಲು ಯು. ಎಸ್. ಎ. ಕೊಡಮಾಡಿದ ೧೧ ಕೋಟಿ ಡಾಲರ್‌ಗಳ ಸಹಾಯವನ್ನು ಭಾರತ ತೆಗೆದುಕೊಳ್ಳಲಾಗಲಿಲ್ಲ. ಅಮೇರಿಕ ವಾಗ್ದಾನ ಮಾಡಿದ ೩೫ ಕೋಟಿ ಡಾಲರ್ ವಿದೇಶ ವಿನಿಮಯವನ್ನು ಅದು ಬಿಡುಗಡೆ ಮಾಡದಿರುವುದೇ ಇದಕ್ಕೆ ಕಾರಣ. ಹಾಗಿದ್ದರೂ ಅಮೇರಿಕ ಗೂತ್ತು, ಭಾರತದ ಕೈಬಿಟ್ಟರೆ ಆಗದೆಂದು. ಶಾಸ್ತ್ರಿ—ಅಯ್ಯೂಬ್ ಖಾನರನ್ನು ತನ್ನೆಡೆಗೆ ಮಾತುಕತೆಗೆ ಜಾನ್ಸನ್ನರು ಈಗ ಆಹ್ವಾನಿಸಿದ್ದಾರೆ, ಸಂಯಮವನ್ನೇ ಮಾಡಿದ್ದಾರೆ, ದೇಶದ ಪರಿಸ್ಥಿತಿಯಿಂದಾಗಿ ತಾನೀಗ ಅಮೇರಿಕಕ್ಕೆ ಬರಲಾರೆ ಎಂದಿದ್ದಾರೆ ಅವರು. ತಪ್ಪೇನು!

ಇನ್ನಾದರೂ ಅಮೆರಿಕ ತನ್ನ ದ್ವಂದ್ವವಾದವನ್ನು ಬಿಡಬೇಕು. ಆರ್ಥಿಕ ನೆರವನ್ನು ರಾಜಕೀಯ ಪ್ರಶ್ನೆಗಳಿಗೆ ಜೋಡಿಸುವುದನ್ನು ನಿಲ್ಲಿಸಬೇಕು. ಸಾರ್ವಭೌಮ ರಾಷ್ಟ್ರವೊಂದಕ್ಕೆ ಸ್ವತಂತ್ರ ನೀತಿಯನ್ನವಲಂಬಿಸುವ ಅಧಿಕಾರವಿದೆ. ಭಾರತದ ನಿಲುವನ್ನು ವಿದೇಶಗಳಲ್ಲಿ ಮಂಡಿಸಲು ಮಂತ್ರಿ ನಾಯಕರು ಸಂಚಾರದಲ್ಲಿ ತೊಡಗಿದ್ದಾರೆ. ಅವರು ಯಶವನ್ನೂ ಗಳಿಸುತ್ತಾರೆ. ಪಾಕ್ ಕುತಂತ್ರಗಳು ಮತ್ತು ಅವರನ್ನೆತ್ತಿ ಕಟ್ಟುವವರ ತಂತ್ರಗಳು ಭಾರತದ ಸತ್ಯದೆದುರು ಪರಾಜಿತವಾಗುವುವು. ಐಕ್ಯದಿಂದಿದ್ದು ರಾಷ್ಟ್ರವನ್ನೆದುರಿಸುವ ಸಮಸ್ಯೆಗಳೊಡನೆ ಹೋರಾಡಲು ನಾವೆಲ್ಲರೂ ಕಟಿಬದ್ಧರಾಗಿದ್ದೇವೆ, ಅಲ್ಲವೆ?

---

## ಮುಂಬೈಯಲ್ಲಿ ವಿಜಯ ದಶಮಿ

"ಚೇತನ ಪಬ್ಲಿಕೇಶನ್ಸ್" ನೇತೃತ್ವದಲ್ಲಿ ರಚಿಸಲಾಗಿದ್ದ ಸಂಯುಕ್ತ ದಸರಾ ಮಹೋತ್ಸವ ಸಮಿತಿಯವರು ವಿಜಯ ದಶಮಿಯನ್ನು ತಾ. 4—10—1965ರಂದು ಮುಂಬಯಿಯ ಮೇಯರ್ ಶ್ರೀ ಯಂ. ಮಾಧವನ್‌ರವರ ಅಧ್ಯಕ್ಷತೆಯಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಸಭಾಸದನದಲ್ಲಿ ವಿಜೃಂಭಣೆಯಿಂದ ನೆರವೇರಿಸಿರುವರು. ಮೇಯರ್ ಮಾಧವನ್‌ರವರು ತನ್ನ ಅಧ್ಯಕ್ಷ ಭಾಷಣದಲ್ಲಿ, ಕನ್ನಡದಲ್ಲಿ "ಸಚೇತನ"ವನ್ನು ಮುಂಬಯಿಯಂತಹ ಮಹಾನಗರದಲ್ಲಿ ಪ್ರಕಟಿಸುವುದೆಂದರೆ ನಿಜವಾಗಿಯೂ ಆಶ್ಚರ್ಯದ ವಿಷಯವೆಂದು, ಸಂಪಾದಕ ಶ್ರೀ ಶಂಕರ ಹೆಜ್ಮಾಡಿಯವರ ಸಾಹಸವನ್ನು ಪ್ರಶಂಸಿಸಿದರು. ಶ್ರೀ ವರದರಾಜ ಆಚಾರ್ಯರವರು ವಿಜಯ ದಶಮಿಯ ಮಹತ್ವವನ್ನು ವಿವರಿಸಿದರು. ಶ್ರೀಮತಿ ಇಂದುಮತಿ ಆಚಾರ್ಯರವರು ಬಹುಮಾನ ವಿತರಣೆ ಮಾಡಿದರು.

ಪ್ರಾರಂಭದಲ್ಲಿ, ದೇಶದ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಿದ ವೀರ ಸೇನಾನಿಗಳಿಗೆ ಗೌರವಾರ್ಪಣೆ ಮಾಡಿದ ಮೇಲೆ, ಶ್ರೀ ಶಂಕರ ಹೆಜ್ಮಾಡಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕಾಪು ಉಮ್ಮರಬ್ಬರವರು ಸಂದೇಶಗಳನ್ನು ಓದಿದರು.

ನೆರೆದ ಅತಿಥಿಗಳಲ್ಲಿ ಸರ್ವಶ್ರೀ ಬಿ. ವಿ. ರಾವ್, ಕೆ. ಎ. ಎಸ್. ರಾವ್, ಎಂ. ಯಸ್. ಕೋಟ್ಯಾನ್, ಯಚ್. ಯಸ್. ನಾಯಕ್, ಮತ್ತು ಬಿ. ಯಂ. ರಾವ್‌ರವರು ಸಮಯೋಚಿತ ಭಾಷಣ ಮಾಡಿದ ಮೇಲೆ ಶ್ರೀ ನಾರಾಯಣ ಗುರುಸ್ವಾಮಿ ಯಕ್ಷಗಾನ ಮಂಡಳಿಯವರು ಕವಿ ಮುದ್ದಣ ವಿರಚಿತ "ರತ್ನಾವತಿ ಕಲ್ಯಾಣ" ಎಂಬ ಯಕ್ಷಗಾನ ಬಯಲಾಟವನ್ನು ಆಡಿ ತೋರಿಸಿದರು.

---

## ನರಸಣ್ಣನ ಸರಸ



"ನಿನ್ನೆ ಬಂದ ಹೊಸ ಆಕ್ಷಿಯನ್ನ... ನೋಡ್ರೊ. ಹಳೆಯದೆಂದೇ ಮಾರುವುದು, "ಕೊಂಡಿದ್ದೆ, ಮಾರಲಿ ತಂದೆ?"

"ಕೊಟ್ಟ ಮಾಲು ವಾಪಸಿಲ್ಲ ಅಂತ ಬೋರ್ಡು ತೂಗಾಡಿಸಿಬಿಡು, ಸಾ.?"

## ಗೇಹರಾಜ್ಯದಲ್ಲಿ

# ಅಧಿಕಾರವನ್ನು ಪ್ರಶ್ನಿಸಬಾರದು

"ಓಯ್, ಸ್ವಲ್ಪ ಇಲ್ಲಿ ಕೇಳೀಂದ್ರೆ...."

'ಅಲ್ವೆ, ಮತ್ತೆ ನಾನೆಲ್ಲಿ ಕೇಳ್ತೀನಿ?"

"ಅದಲ್ಲಾ ನನಗೆ ಹೇಗ ಗೊತ್ತಾಗ್ಬೇಕೂಂತ?"

"ಹಾಕೇ, ಏನು ಮಾತಾಡಿದ್ರೂ ಸುಮ್ನೆ ನಿರ್ತೇನೆಂದು ಕೊಂಡಿಯೇನು?'

'ಯಾರು ಹಾಗಂದವ್ರು?"

'ಮತ್ತೆ...?"

'ಅದಲ್ಲಾ ಬಿಟ್ಬಿಡಿ. ನ ನನ್ನೋ ಮಾತನ್ನ ತುಸು ಕೇಳ್ತೀರೀಂತ...."

"ತುಸು ಕೇಳೋ ಅಭ್ಯಾಸ ನಮಗಿಲ್ಲ ಅದೆಲ್ಲಾ ನಿಮಗೇ ಸೇರಿರೋ ಕೆಲಸ..."

"ಅಂದ್ರೆ?..."

"ಅಂದ್ರೆ ಮತ್ತೇನಿಲ್ಲ. ನೋಡು, "ಸ್ತ್ರೀ ಬುದ್ಧಿಃ ಪ್ರಳಯಾಂತಕಃ' ಅನ್ನೋದನ್ನ ಕೇಳಿದ್ದೀಯಲ್ಲಾ.."

"ಎಲ್ರೋ ನಿಮ್ಮಂತವರ ಬಾಯ್ಲ..'

"ಹ್ಹೂನ್ನು. ಸ್ತ್ರೀಯರ ಬುದ್ಧಿ ಪ್ರಳಯಕಾರಿ ಯಾಕೆ ಗೊತ್ತೆ?"

"ಶುರುವಾಯ್ತು ಇವ್ರದ್ದೊಂದು....'

"ಕೇಳಿದ್ದಕ್ಕೆ ಉತ್ರಕೊಡು...."

'ಆಯ್ತಪ್ಪ, ಯಾಕೆ ಹೇಳಿ ಕೇಳೋಣ ......'

'ಅದಕ್ಕೆ ನೋಡು, ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ ಅನ್ನೋದು ...'

'ಹೋದು ಗಂಡಸ್ರದ್ದು ಮಾತ್ರ ಆ ಸ್ಕೈಬರ ಜುಟ್ಟಿನಂತೆ ಗಗನದತ್ತಂದಕ್ಕೆ ಹಾರಾಡೋದು...'

"ಏ...ಏನೇ ಇದು! ಸ್ಕೈಬರ ಜುಟ್ಟು ಗಗನದಲ್ಲಿ ಹಾರಾಡೋದೆಂತದದು"

"ಎಂಥದೊಂದ್ರೆ, ಹೇಳಿನೋಡೋಣ. ಗಂಡಸ್ರಲ್ವೆ ನೀವು?

'ನಾನು ಒಂದರ ಅರ್ಥ ಏನಸೋಕೆ ಹೋದ್ರೆ ನೀನು ಮತ್ತೊಂದು ಸಮಸ್ಯೆಯನ್ನೇ ತಂದೊಡ್ಡಿದೆಯಲ್ಲ....'

"ನೀವು ಗಂಡಸಾದ್ರೆ ಇದನ್ನ ಹೇಳಿ. ಇಲ್ಲಾಂದ್ರೆ ಇನ್ನುಮುಂದೆ ಹೆಂಗಸರ ಬುದ್ಧಿಯನ್ನು ಟೀಕಮಾಡೋಕೆ, ಅಳಿಸಮಾಡೋಕೆ ಹೋಗಬೇಡಿ..."

"ಭಾರಿದೊಡ್ಡ ಕತೆಯಾಯ್ತಲ್ಲಾ ಇದು! ಸ್ಕೈಬರೆಲ್ಲಿ ಜುಟ್ಟು ಇಟ್ಕೋತಾರೆ? ಆಚಾರವಂತ ವೇದಮೂರ್ತಿಗಳೂ ಜುಟ್ಟು ಕಟ್ಟು ಮಾಡಿಕೊಳ್ಳುತ್ತಿರುವ ಈ ಕಾಲದಲ್ಲಿ ಜುಟ್ಟು ಇಟ್ಕೊಳ್ಳುವ ಸ್ಕೈಬ ಯಾರಪ್ಪ?'

"ಸೋತೇಂತನ್ನಿ....'

'ಶಿವ ಪೂಜೆಗೆ ಹೊಂಟವ ಕರಡಿ ಬೇಟೆ ಹೂಡಿದ ಅಂದಂತಾಯ್ತಲ್ಲ ಇದು...'

"ಶಿವ ಪೂಜೆಗೆ ಹೋದಿ, ಭೂತದ ಗುಡಿಗೆ ಹೋಗಿ, ಕರಡಿ ಬೇಟೆಯಾಡ್ಲಿಕ್ಕೆ ಹೋಗಿ, ಅದರ ಪಂಜಿನಲ್ಲಿ ಸಿಕ್ಕಿ ಬಿದ್ರಿ....'

'ಆಯ್ತಪ್ಪ, ಸೋತೆ. ಹೇಳು ನೋಡೋಣ ನಿನ್ನ ವಾಕ್ಯಾರ್ಥ..."

"ಮೊದಲು ನಿಮ್ಮದನ್ನಿ..."

"ನೀನು ಸೋತೇಂತನ್ನು...."

'ನಾನು ಯಾಕನ್ಬೇಕು?"

'ಮತ್ತೆ?"

'ನೋಡಿ, ನೀವೇ ಏಕೆ ಗೊತ್ತೇ ಅಂತ ರಾಗ ಎಳೆದ್ರಿ. ಮತ್ತೆ ನನ್ನ ಕೇಳಿದ್ರೆ...'

"ಅಂತೂ ನನ್ನ ಸುಖಕ್ಕೆ ಮಂಗಳಾರತಿ ಎತ್ತೋಕೆ ಏನೋ ಭಾರಿ ಮಸಲತ್ತು ನಡೆದಿದೇಂತ ತೋರುತ್ತೆ. ನಾವಿನ್ನೂ ಹೀಗೆ ವಾದ ಬೆಳೆಸಿದ್ರೆ ಮಧ್ಯಸ್ಥಿಕೆಗೆ ಮೂರನೆಯವ್ರು ಬರ್ಬೇಕಾದೀತು...."

'ಬರ್ಲಿ ನಮಗೇನಂತೆ?'

'ಛೀ, ನಮ್ಮನೇ ಕೂತನ್ನ ಎಲ್ರ ಮುಂದೆ ಪ್ರದರ್ಶನಕ್ಕೆ ಇಡೋದೆ?'

"ಹಾಗಾದ್ರೆ ಹೇಳಿ ನೀವು..."

"ಹಾಗೂ ನಾನೇ ಕೆಳಗೆ, ಹೀಗೂ ನಾನೇ ಕೀಳು....'

ಮತ್ತೆ ಯಾವಾಗ್ಲೂ ನಾವೇ ಮೇಲೂಂತ ಹಾರಾಡ್ತಾ ಇದ್ರೆ ಹೇಗೇಂತ...'

"ಹ್ಞೂ....ಒಂದು ವಿಷ್ಯವನ್ನ ತುಸು ಹೇಳೋದು, ಕೇಳೋದು, ಮಾಡೋದು ಎಲ್ಲಾ ಹೆಂಗಸ್ರ ಬುದ್ಧಿ ಅದ್ರಿಂದ್ಲೇ ಅದು ಪ್ರಳಯಾಂತಕ, ಮೊಣಕಾಲ ಕೆಳಗೆ... ಆದ್ರೆ ಗಂಡಸ್ರು ಹಾಗಲ್ಲ. ಪೂರಾ ಪೂರಾ ಹೇಳ್ತಾರೆ, ಕೇಳ್ತಾರೆ, ಮಾಡ್ತಾರೆ..."

"ಅದ್ರಿಂದ್ಲೇ ಅದು ಸ್ಕೈಬರ ಜುಟ್ಟು. ಮೇಲೆ ಮೇಲೆ ಹಾರಾಡಿ ಹಾರಾಡಿ ಮತ್ತೆ ರೆಕ್ಕೆ ಮುರಿದು ಕೆಳಕ್ಕೆಬೀಳುತ್ತೆ ........."

'ಅಲ್ವೆ ಸ್ಕೈಬರ ಜುಟ್ಟು ಅಂದ್ರೆ ಏನೆ?"

'ಅಯ್ಯೋ, ನೀವೊಬ್ರು....ಅದೂ ತಿಳೀಲಲ್ವೆ?"

'ಒಳ್ಳೆದಾಯ್ತಲ್ಲ ಇದು. ಅಲ್ಲ, ಗೊತ್ತಿದ್ರೆ ಯಾಕೆ ಕೇಳ್ತಿದ್ದೆ...?'

"ಅಂತೂ ನೀವ ಗಂಡಸ್ರಲ್ವೆ, ಅದ್ರಿಂದ್ಲೆ ನೀವು ಪೂರಾಪೂರ ಸೋತು ಬಿಟ್ರಿ ಇವತ್ತು. ನೋಡಿ, ಪಾಕಿಸ್ತಾನಕ್ಕೆ ಅಮೆರಿಕೆ...."

"ಓ, ಸಾಬ್ರೆ ಜೆಟ್ ವಿಮಾನ! ಹ್ಞ ಹ್ಞ ಹ್ಞ....ನಾನು ಏನೋಂತ ತಿಳಿದಿದ್ದೆ....'

"ಅದು ಸರೀನ್ನಿ. ನಿಮ್ಮ ಬುದ್ಧಿ ತನ್ನ ಕಾಲಡಿ ನೋಡೋದೇ ಇಲ್ಲ. ಯಾವಾಗ್ಲೂ ಎಲ್ಲೆಲ್ಲೋ ಹಾರಾಡ್ತಾ ಇರ್ತದೆ. ಅದ್ರಿಂದ್ಲೇ ಹೀಗೆ..."

"ಸರಿಯಪ್ಪ....'

'ನೋಡಿ, ಏನೋ, ಯಾರೋ ಹೇಳಿದ್ರು ಅಮೆರಿಕೆ ಕೂಡ ಭಾರತದ ಕಾಶ್ಮೀರ ನೀತಿಯನ್ನು ಒಪ್ಪಿಕೊಳ್ಳುವಂತಹ ಪರಿಸ್ಥಿತಿ ಬಂದಿದೆಯಂತೆ. ಬ್ರಿಟನ್ನು ತನ್ನ ರಾಗವನ್ನು ಬದಲಾಯಿಸಿದೆಯಂತೆ. ಹೌದೆ?"

"ಹಾಗಂದ್ರೆ?'

"ಹಾಗಂದ್ರೆ, ಸರಾಗದಿಂದ ಏರಿಗಕ್ಕೆ ಸಂಗೀತವನ್ನು ಬದಲಾಯಿಸಿದೆ..."

"ಹ್ಞೂಂ....ಸರೀನ್ನು..."

"ಯಾಕೆ?"

"ಮತ್ತೆ ಮಾಡೋದಾದ್ರೂ ಏನು? ಯಾವ ರೀತಿಯಲ್ಲೂ ಭಾರತದ ತಕ್ಕ ... ಗ್ಗಿಸುವ ಪ್ರಯತ್ನ ಅಸಫಲವಾದಾಗ ... ಡೋದಾದ್ರೂ ಏನೂಂತ?"

"ಅಲ್ರಿ ಅಮೆರಿಕೆ ಏನನ್ನುತ್ತೆ?'

"ಅನ್ನೋದೇನು? ಕಾಶ್ಮೀರ ವಿವಾದ ಗ್ರಸ್ತ ಪ್ರದೇಶ ಅನ್ನೋ ನೀತಿ ಬದಲಾಯಿಸಿಲ್ಲ. ಅದು ಭಾರತಕ್ಕೆ ಸೇರಲಿ, ಪಾಕಿಸ್ತಾನಕ್ಕೆ ಸೇರಲಿ, ನಮಗೆರಡೂ ಒಂದೇ. ಆದರೆ, ನೀವು ನೀವು ರಾಜಿ ಮಾಡಿಕೊಳ್ಳದೆ ಹೋದರೆ, ಕೆಂಪು ಚೀನಾ ಪ್ರಭಾವವನ್ನ ಬೆಳೆಸುತ್ತೀರಿ. ನಮ್ಮ ... ನಿಮ್ಮ ಸಹಾಯ ಮಾಡುವ ... ಕಾಶ ದೊರೆಯುವಂತೆ ವಿವಾದ ತೀರ್ಮಾನ ಮಾಡಿಕೊಳ್ಳಿ. ಅನ್ನುತ್ತಾರೆ...."

"ಓಹೋ ಇದಕ್ಕೇ ಇರಬೇಕು, ... ಸ್ತ್ರಿ ಅಯ್ಯೂಬರು ಅಮೆರಿಕೆಯನ್ನು ... ದರ್ಶಿಸ ವಂತೆ ಮಾಡುವ ಪ್ರಯತ್ನ ನ... ಯುತ್ತಿರೋದು."

"ಹ್ಞೂಂ. ಆದ್ರೂ ಶಾಸ್ತ್ರಿ ಹೋ... ಬೇಕಾದರೆ ಅರ್ಥಿಕ ಸಹಾಯ ಮತ್ತು ಪಿ. ಎಲ್. ೪೮೦ರ ಬಗ್ಗೆ ನಿರ್ಣಯ ಅಮೆರಿಕೆ ಮೊದಲು ಕೊಡ್ಬೇಕಂತೆ..."

"ಅಂತೂ ಅಮೆರಿಕೆ ಈಗ ತುಸು ಪೇಚಿನಲ್ಲಿ ಸಿಕ್ಕು ಬಿದ್ದಾನ್ನಿ...."

'ಖಂಡಿತಕ್ಕೂ. ಪಾಕಿಸ್ತಾನವನ್ನು ... ದು ಪ್ರೀತಿಸಿದ್ರೂ ಭಾರತದ ಕೈ ... ಟ್ರೆ, ಅದು ಕಮ್ಯೂನಿಜಂನತ್ತ ವಾಲಿದರೂ ವಾಲಬಹುದು...'

'ಮತ್ತೆ ಮಾಡೋದಾದ್ರೂ ಏನು? ದೇವರು ಕೈ ಬಿಟ್ರೆ ಮತ್ತೆ ದಿಂಡರೇ ... ತಿ...."

"ಹ್ಞೂನ್ನು. ಅದಕ್ಕೇ ಅಮೇರಿಕೆ ... ಸು ಮೃದು ಧ್ವನಿ ಹೊರಡಿಸೋದು....'

"ಪರಿಣಾಮ?"

"ಯಾರಿಗೆ ಗೊತ್ತು?"

'ನಾನೊಂದು ಹೇಳ್ತೇನೆ..."

"ಏನು?"

"ಕಾಶ್ಮೀರ ಯಾರದ್ದೂಂತ ನಾವು ನಾವೇ ಇತ್ಯರ್ಥ ಮಾಡಿಕೊಳ್ಳೋಕೆ ಅನೇಕೆಯೇ ಮೊದಲಾದುವು ಅನುಮತಿಯಿತ್ತು ಕೈಕಟ್ಟಿಕೊಂಡಿರಬೇಕು...."

'ಮತ್ತೆ?"

"ಭಾರತ — ಪಾಕಿಸ್ತಾನಗಳು ಯುದ್ಧ —ಶಕ್ತಿಗಳ ಮೂಲಕ ಹೋರಾಡಿ ಯಾ

(ಒಂಭತ್ತನೇ ಪುಟ ನೋಡಿರಿ)

---

**ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ**

R E P No. 55/1965

(ಕಾರ್ಕಳ ಮುನ್ಸಿಫ್ ಕೋರ್ಟು S. C.. 306/1958.)

ಕೆ. ರಾಮಯ್ಯ ಹೆಗ್ಡೆ — ಅರ್ಜಿದಾರ,

ಕೆ. ಬಾಬು ಪೂಜಾರಿ, ಪೋಂಟು ಹೆಂಗ್ಸಿನ ಮಗ, ಚಕ್ಕನ್ ಮತ್ತು ಕಲ್ಯಾಡಿ ಎಸ್ಟೇಟು ರೈಟರ್, ಗಂಗಣಕುಡಿಗೆ ಪೋಸ್ಟು (via) ಕಳಸ — ಎದ್ರಿ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಡಿಕ್ರಿದಾರನಾದ ಅರ್ಜಿದಾರನು ಮೇಲ್ಕಂಡ S.C. 306/58ನೇ ಡಿಕ್ರಿಯ ಕುರಿತು ನಡ್ಸದ ನೀಲಿನ ಅಪ್ಲಿಕೇಶನ್ ತಾ. 4-11-65ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮಗೆ ಆಕ್ಷೇಪಯಿದ್ದರೆ, ಸದ್ರಿ ಮೇಲ್ಕಂಡ ದಿನ ಪೂರ್ವಾಹ್ನ ಗಂಟೆ 10ಕ್ಕೆ ನೀವು ಸ್ವತಃ ಯಾ ವಕೀಲ ಮುಖಾಂತರ ಕೋರ್ಟಿನ ಮುಂದೆ ಹಾಜರಾಗಿ ಉತ್ತರ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಯುಕ್ತ ಕಂಡಂತೆ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕುಂ ಪ್ರಕಾರ,

B. K. Suryanarayana Rao.
*Advocate for Petitioner.*

ಬೆಳ್ತಂಗಡಿ,
ತಾ. 18-10-1965.

---


ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: **ಸುದರ್ಶನ ಟೈಲ್ ವರ್ಕ್ಸ್**, ಬೋಳಾರ, ಮಂಗಳೂರು-೧



# ಇಂದು ಪ್ರತಿಯೊಬ್ಬ ನಾಗರಿಕನೂ ಸೈನಿಕ

ಪಾಕಿಸ್ತಾನದ ಸವಾಲನ್ನೆದುರಿಸಲು ನೀವೇನು ಮಾಡುತ್ತಿದ್ದೀರಿ?

DA-65/F1

ಯಶಸ್ಸಿನ ರಹಸ್ಯ

# ಸಾಹಸ ಮತ್ತು ಇಚ್ಛಾಶಕ್ತಿ

ಸಾಹಸಿಯೂ ಇಚ್ಛಾಶಕ್ತಿವಂತನೂ ಆದವನು ಕೊನೆಯಲ್ಲಿ ಯಶ ಗಳಿಸುತ್ತಾನೆ. ಈ ಬಗ್ಗೆ ಸ್ವಾಮಿ ಸತ್ಯದೇವರ ಅಭಿಪ್ರಾಯವನ್ನು ಶ್ರೀ ಬಿ. ನರಸಿಂಗ ರಾವ್ ಕನ್ನಡಿಗರಿಗಾಗಿ ಕನ್ನಡಿಸಿದ್ದಾರೆ.

ಸಾಹಸಿಗಳಿಗಾಗಿಯೇ ಈ ಜಗತ್ತು ಮೀಸಲು, ಹೇಡಿಗಳು ಸದಾ ಗಾಳಿಗೋಪುರವನ್ನು ಕಟ್ಟುವುದರಲ್ಲೆ ಮಗ್ನರಾಗಿರುತ್ತಾರೆ. ಸಾಹಸಿಗಳು ಕೈ ಹಾಕಿದ ಯಾವುದೇ ಕಾರ್ಯದಲ್ಲಿ ಜಯವು ಅವರ ಪಾಲಿನದ್ದೆ. ಸಾಹಸವಿಲ್ಲದೆ ಯೋಗ್ಯತೆಯಿದ್ದರೂ ವ್ಯರ್ಥ. ಸಾಫಲ್ಯವು ಸಾಹಸದ ಪುತ್ರಿ. ಅವಳು ಸದಾ ಸಾಹಸಿಗಳೊಂದಿಗೆ ಇರಬಯಸುತ್ತಾಳೆ. ಆಲಸಿಗಳು ಅಂಜುಬುರುಕರಾಗಿ ಮನಸ್ಸಿನಲ್ಲೆ ಮಂಡಿಗೆ ತಿನ್ನುತ್ತಾ ಕುಳಿತಿರುತ್ತಾರೆ. ಕರ್ಮವೀರನ, ಆತನ ಭಾಗ್ಯ ದ್ವಾರವು ಸದಾ ಜಯಕುಮಾರಿಯ ಸ್ವಾಗತಕ್ಕೆ ಸಜ್ಜಾಗಿರುತ್ತದೆ.

ಸಾಹಸವನ್ನು ಕಳೆಕೊಂಡವರು ಸಾಫಲ್ಯದೊಂದಿಗ ಕೈಜಾಡಿಸಿದಂತೆ. ಹೇಡಿಯು ಸದಾ ಭಯದಿಂದಾಗಿ ನಡುಗುತ್ತಲೇ ಇರುವನು ಮನಸ್ಸಿನಲ್ಲಿ. ಸಾಹಸಿಯಾದರೂ ಭಯವನ್ನು ಕಂಡೊಡನೆ ದ್ವಿಗುಣಿತ ಉತ್ಸಾಹಿಯಾಗುತ್ತಾನೆ. ಆತನ ರಕ್ತವು ಭಯವನ್ನು ಕಂಡೊಡನೆ ಉತ್ಸಾಹದಿಂದ ಉಕ್ಕೇರುತ್ತದೆ. ದಪ್ಪ ಶರೀರವಿದ್ದರೂ ಸಾಹಸೀ ಸ್ವಭಾವವಿಲ್ಲದಿದ್ದರೆ ಅದು ನಿಷ್ಫಲ. ಅಂತಹ ಶರೀರವು ಕೇವಲ ಒಂದು ಹೊರೆಯಾಗಿಯಷ್ಟೆ ಪರಿಣಮಿಸಬಹುದು. ವಿಶ್ವದ ಇತಿಹಾಸವು ಸಾಹಸಿ ಸ್ತ್ರೀ-ಪುರುಷರ ಕಥೆಗಳಿಂದಲೇ ತುಂಬಿ ಹೋಗಿದೆ. ಅವರ ಕಥೆಯನ್ನೋದುವುದೆಂದರೆ ಉತ್ತಮದಿಂದ ಉತ್ತಮನಾಗಲು ಪಾಠ ಕಲಿಯುವುದೆಂದರ್ಥ. ಅಂತಹ ಸ್ತ್ರೀ-ಪುರುಷರ ಜೀವನವು ಶಿಕ್ಷಾಪ್ರದವಾಗಿದ್ದು ಜನಮೆಚ್ಚುಗೆಯನ್ನವರು ಗಳಿಸಿರುವರು. ಸಾಹಸವು ಕೇವಲ ಯುದ್ಧ ಕ್ಷೇತ್ರಕ್ಕಷ್ಟೆ ಸೀಮಿತವಾಗಿಲ್ಲ. ದೈನಂದಿನ ಜೀವನದಲ್ಲೂ ಸಾಹಸಕ್ಕೆ ಮಹತ್ವದ ಸ್ಥಾನವಿದೆ. ಕಠಿಣ ಕಾರ್ಯವನ್ನು ಪ್ರಥಮವಾಗಿ ಮಾಡುವಾಗ ಹಿಂಜರಿಯದಿರಿ. ಆಗಲೇ ನಿಮ್ಮ ಪರೀಕ್ಷೆ ನಡೆಯುವುದು. ಹಿಂಜರಿಯದಿರಿ, ಹಿಂಜರಿದರೆ ನಿಮ್ಮ ಕಾರ್ಯವು ಕೈಗೂಡದು. 'ನಾನೀಗಲೆ ನಿಶಯಿಸಿಲ್ಲ'— ಇದು ದುರ್ಬಲರ ಬಾಯಿಯಿಂದ ಹೊರಡುವ ಮಾತು, ಅಂತಲೇ ಅವರಿಂದಾವರಿಗೆ ಏನನ್ನೂ ಸಾಧಿಸಿದವರಲ್ಲ. ಸಾಹಸಿಯು ಖಚಿತಪಡಿಸಿಕೊಳ್ಳುವುದರಲ್ಲಿ, ದೃಢ ನಿರ್ಧಾರ ಮಾಡಿಕೊಳ್ಳುವುದರಲ್ಲಿ ವಿಳಂಬಿಸಲಾಗದು ಆತನ. 'ಒಂದು ಕಾರ್ಯವನ್ನೆ ಮಾಡಿಯೇ ತೀರುವೆನು' ಎಂದು ಪಣತೊಟ್ಟು, ಅದಕ್ಕಾಗಿ ಪ್ರಾಣವನ್ನು ಪಣವಿಡಬೇಕು. ಜಗತ್ತು ಅವರನ್ನು ಕಂಡು ಮೊದಲಿಗೆ ನಗಬಹುದು, ಆದರೆ ಕೊನೆಗೆ ಅವರನ್ನೇ ಪೂಜಿಸೀತು.

ಇಚ್ಛಾಶಕ್ತಿ —

ತಮಗೇನು ಬೇಕೋ ಹಾಗೆ ಆಗಬಹುದು: ಏಕೆಂದರೆ ತಮ್ಮಲ್ಲೆಲ್ಲಾ ಶಕ್ತಿಗಳು ಸಂಚಯಿತವಾಗಿವೆ. ಮಾನವನೊಬ್ಬ ಯೋಜನಾ ಪಟುವಾಗಿದ್ದಾನೆ. ಆತನೆಂತು ಯೋಚಿಸುವನೋ ಅಂತೆಯೇ ಆಗಿ ಬಿಡುತ್ತಾನೆ, ಆಗಲು ಪ್ರಯತ್ನಿಸುತ್ತಾನೆ. ತಾವು ಯಾವುದಾದರೂ ಒಂದು ಕಠಿಣ ಕೆಲಸ ಮಾಡಬೇಕಿದ್ದಲ್ಲಿ ಈಗಿಂದೀಗಲೆ ದೃಢ ಪ್ರತಿಜ್ಞೆ ಮಾಡಿ, ಆಗ ಆ ಕಾರ್ಯವು ಅಷ್ಟರಲ್ಲೆ ಅರ್ಧ ಮುಗಿದಂತಾಗುತ್ತದೆ, ಉಳಿದರ್ಧವು ಅಷ್ಟರಲ್ಲೆ ಶೀಘ್ರವಾಗಿ ಕೈಗೂಡೀತು. "ನನ್ನಿಂದ ಇದನ್ನು ಮಾಡಲು ಸಾಧ್ಯ" ಅಥವಾ 'ನಾನು ಹಾಗೆ ಮಾಡಲೊಲ್ಲೆ"—ಎಂದು ಯೋಚಿಸಿದಲ್ಲಿ ದೈವವೂ ನಿಮಗೆ ಒಲಿಯಲಾರದು. ಪ್ರಥಮವಾಗಿ ನಾವು ನಮ್ಮಲ್ಲಿ ಅಡಗಿರುವ ದೌರ್ಬಲ್ಯವನ್ನು ಹೊಡೆದೋಡಿಸಬೇಕು, ನಿರಾಶಾಭಾವವನ್ನು ಹೊರದಬ್ಬಬೇಕು. ನಿಮ್ಮ ಸಾಫಲ್ಯವು ನಿಮ್ಮ ನಿಮ್ಮ ಆತ್ಮವಿಶ್ವಾಸದ ಮೇಲೆ ಅವಲಂಬಿತವಾಗಿದೆ. ನಿಮ್ಮಲ್ಲೆಷ್ಟು ಆತ್ಮ ವಿಶ್ವಾಸವಿದೆಯೋ, ಅಷ್ಟೆ ಶಕ್ತಿಯೂ ನಿಮ್ಮ ಕಾರ್ಯಸಾಧನೆಗೆ ದೊರಕೀತು. ನಿಮ್ಮ ಸಫಲತೆಯ ಮೇಲೆ ದೃಢ ವಿಶ್ವಾಸವಿಟ್ಟು, ಹಗಲೂ-ರಾತ್ರಿ ಅದನ್ನೇ ಕುರಿತು ಯೋಚಿಸಿ, ಅದರ ಸಾಧನೆಯ ಕುರಿತೇ ಆಲೋಚಿಸಿ ಮುಂದಡಿಯಿಡಿ. ಮನಸ್ಸಿನಲ್ಲಿ ಭಯ ಹಾಗೂ ಸಂಶಯದ ಭಾವವನ್ನಿಟ್ಟುಕೊಂಡಲ್ಲಿ ಯೋಜನೆ ಕೈಗೂಡದು. ತಮ್ಮ ಮನಸ್ಸಿನ ದಿಕ್ಕು ಬದಲಾಯಿಸಿ ಸಫಲತೆಯ ಕಡೆ ಅದನ್ನು ತಿರುಗಿಸಿ. ಮನಸ್ಸಿನಂಚ ಕೋಶೆಯಲ್ಲಿ ಆಶೆ, ಪ್ರಸನ್ನತೆ, ಸಫಲತೆಯ ಚಿತ್ರವನ್ನೇ ಸಜ್ಜುಗೊಳಿಸಿ. ಆಗ ಸಾಫಲ್ಯವು ತಮ್ಮ ಮುಷ್ಟಿಯಲ್ಲೇ ಉದುರುವುದು. ಆಗ ಅದು ಕೈಕಟ್ಟಿ ತಮ್ಮ ಮುಂದೆ ಬಂದು ನಿಲ್ಲುವುದು, ಆಗ ಜಗತ್ತೇ ನಿಮ್ಮ ಮುಂದೆ ತಲೆಬಾಗುವುದು.

— ಸಮಾಪ್ತಿ —

SAFETY SERIES 1

ಅವನು ಮುಂದೆ ಒಬ್ಬ ಸರ್ಕಸ್ ಸಾಹಸಿಯಾಗಬಹುದು. ಆದರೆ ಅಂತಹ ಸಾಹಸ ಕೃತ್ಯಗಳನ್ನು ರಸ್ತೆಯಲ್ಲಿ ಪ್ರಯತ್ನಿಸಲು ಬಿಡುವುದು ಸರಿಯೇ? ಜೀವ ಮತ್ತು ಅಂಗಗಳನ್ನು ಗಂಡಾಂತರಕ್ಕೀಡು ಮಾಡುವುದೇ? ಇತರರ ಜೀವಗಳನ್ನು ಕಂಟಕಕ್ಕೆ ಗುರಿಪಡಿಸುವುದೇ? ರಸ್ತೆಯನ್ನು ಉಪಯೋಗಿಸಲು ಇತರ ಜನರಿಗಿರುವ ಹಕ್ಕಿಗೆ ಮಾನ್ಯಕೊಡುವಿಕೆ, ವಾಹನಗಳ ಓಡಾಟದ ಚಿಹ್ನೆಗಳ ತಿಳಿಯುವಿಕೆ, ಸುರಕ್ಷಿತವಾಗಿ ಆಟವಾಡುವ ಆವಶ್ಯಕತೆ, ಇವುಗಳನ್ನೆಲ್ಲಾ ಆತನು ಮನಗಾಣುವಂತೆ ನೋಡಿರಿ. ಅವನ ಸಂಪೂರ್ಣ ಜೀವನವು ಅವನ ಮುಂದಿದೆ. ಅದಕ್ಕೆ ಪೂರ್ಣ ಲಕ್ಷ್ಯವನ್ನು ಕೊಟ್ಟು ಅದನ್ನು ಭದ್ರಗೊಳಿಸಿರಿ

## ಅಮ್ಮಾ, ನೋಡು-ಕೈ ಬಿಟ್ಟಿದ್ದೇನೆ!

ಜೀವ ವಿಮೆಗಿಂತ ಶ್ರೇಷ್ಠ ಭದ್ರತೆ ಮತ್ತೊಂದಿಲ್ಲ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras.

## ವಿಜ್ಞಾನದ ಸಾಧನೆ

# ಚಂದ್ರಲೋಕದಲ್

## ಭೂಲೋಕದಲ್ಲಿ ಪ್ರಜಾ
## ವಸಾಹತುವಾದಕ್ಕೆ ಕ
## ವಸಾಹತುವಾ

ಅಂತರ್ಗ್ರಹ ಯಾತ್ರೆಯ ಕನಸು ಕಾಣುತಿದ್ದಾನೆ ಮಾನವ. ತಾನು ಗಳಿಸಿದ ಜ್ಞಾನ ಬಲದಿಂದ ಅದೂ ಸಾಧ್ಯವೆಂದಾತ ದೃಢವಾಗಿ ನಂಬಿದ್ದಾನೆ. ಹಲವಾರು ಪ್ರಯೋಗಗಳನ್ನು ಮಾಡಿ ಯಶದ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿದ್ದಾನೆ, ಆಶಾವಾದಿಯಾಗಿದ್ದಾನೆ.

ಅಂತರಿಕ್ಷ 'ಯಾತ್ರೆಯ ಇತಿಹಾಸದಲ್ಲಿ ಉಪಗ್ರಹಗಳು ಹಾರತೊಡಗಿದಂದು ಹೊಸ ಪುಟಗಳು ತೆರೆಯಲ್ಪಟ್ಟುವು. ಅಮೆರಿಕೆ—ರಶ್ಯಾಗಳ ನಡುವೆ ಎದ್ದ ಸ್ಪರ್ಧೆಯಿಂದಾಗಿ ಈ ದಿಸೆಯಲ್ಲಿ ಹತ್ತಾರು ಪ್ರಯತ್ನಗಳು ನಡೆದುವು. ಪ್ರತಿ ಪ್ರಯೋಗದಲ್ಲೂ ಮಾನವನ ತಿಳುವಳಿಕೆಗೆ ಒಂದೊಂದು ಅಂಶವೆಂದರೆ, ಚಂದ್ರಾದಿ ಕೆಲ ಗ್ರಹಗಳಲ್ಲಿಯಾದರೂ ಮಾನವ ಸಜೀವವಾಗಿಯೇ ಇಳಿಯಬಹುದ, ತಕ್ಕ ವ್ಯವಸ್ಥೆಗಳು ಮಾತ್ರಬೇಕು ಎಂಬುದು.

ಅದೃಷ್ಟವಾದಿಂಗಿತಲೂ ವಿಜ್ಞಾನಿ ಅಧಿಕ ಆಶಾವಾದಿಯಾಗಿರುತ್ತಾನೆ. ಪ್ರಯತ್ನಗಳು ಅಸಫಲ ಅಲ್ಲವೆ ಅರೆ ಸಫಲವಾಗುತ್ತ ಬಂದಂತೆ ಆತನ ಉತ್ಸಾಹ ಇಮ್ಮಡಿಸುತ್ತದೆ. ಈ ಕಾರಣದಿಂದಾಗಿಯೇ ವಿಜ್ಞಾನ ಅಪರಿಮಿತ ಪ್ರಗತಿ ಪಡೆಯುವುದು ಸಾಧ್ಯವಾಗಿದೆ. ಯಂತ್ರ—ತಂತ್ರ ಕೌಶಲ್ಯಗಳಲ್ಲೂ ಪರ್ವತದಷ್ಟು ಸಾಧನೆ ನಡೆದಿದೆ. ಮಾನವನು ತಾನು ಕಾಣುತಿದ್ದ ಕನಸನ್ನು ಇಂದು ಯಥಾರ್ಥ ರೂಪದಲ್ಲಿ ಕಾಣುವಂತಾಗಿದ್ದಾನೆ. ಚಂದ್ರ, ಶುಕ್ರ ಮೊದಲಾದ ಗ್ರಹಗಳಲ್ಲೂ ಮಾನವನು ವಲಸೆ ಹೋಗಿ ವಸಾಹತುಶಾಹಿ ಮತ್ತೆ ಪ್ರಾರಂಭವಾಗುವ ದಿನಗಳೂ ನಿಕಟವಾಗುತ್ತಿವೆಯೆನ್ನ ಬಹುದು. ಭೂಲೋಕದಲ್ಲಿ ಪ್ರಜಾಸತ್ತೆ ಬೆಳೆದು ಬಂದರೆ, ಚಂದ್ರ ಲೋಕದಲ್ಲಾದರೂ ವಸಾಹತುವಾದವಿಂಬೇಡವೆ?

ಕಳೆದ ಆಗಸ್ಟ ತಿಂಗಳಲ್ಲಿ ಅಮೆರಿಕೆಯು ಜೆಮಿನಿ ೫ ಉಪಗ್ರಹವನ್ನು ಹಾರಿಸಿತು. ಆದರೆ, ಚಂದ್ರಲೋಕ ಗಮನದಲ್ಲಿ ಅದು ಯಶಗಳಿಸಲಿಲ್ಲ. ಯಂತ್ರ ಕೆಟ್ಟು ಹೋದುದರ ಪರಿಣಾಮವಾಗಿ ಗಗನ ಯಾತ್ರಿಗಳನ್ನು ಹಿಂದೆ ಕರೆಸಿಕೊಳ್ಳಲಾಯಿತು. ಹಾಗಿದ್ದರೂ ತನ್ನ ಸಾಧನೆಯಲ್ಲಿ ಅಮೆರಿಕೆ ನಿರಾಶವಾಗಿರುವುದಿಲ್ಲ. ಚಂದ್ರಮುಖಿ ಯಾರ ಕೊರಳಿಗೆ ಹೂಮಾಲೆ ಹಾಕುವರೋ ಕಾದು ನೋಡಬೇಕು.

ಅಂತರಿಕ್ಷ ಯಾತ್ರೆಗೆ ಸಂಬಂಧಪಟ್ಟ ಕೆಲವು ಚಿತ್ರಗಳನ್ನು ಇಲ್ಲಿ ಕಾಣಬಹುದು.

**ಚಿತ್ರ ೧**

ಗಗನಯಾತ್ರಿ ಗಾರ್ಡನ್ ಕೂಪರ್‌ರವರು (ಬಲ) ತನ್ನ ಗಗನಯಾತ್ರೆಗೆ ಮೊದಲು ಟೆಕ್ಸಾಸಿನಲ್ಲಿ ಪತ್ರಿಕಾ ಪ್ರತಿನಿಧಿಗಳನ್ನು ಕುರಿತು ಮಾತನಾಡಿದರು. ಯಾತ್ರೆಯ ವೇಳೆ ಸಾಂಕೇತಿಕ ಸ್ಥಳದಲ್ಲಿ ಇಬ್ಬರು ಒಟ್ಟು ಸೇರುವುದೂ ಸಾಧ್ಯವಿದೆಯೆಂದು ಹೇಳಿದ ಅವರು ಗಗನಯಾತ್ರಿ ಚಾರ್ಲ್ಸ್‌ಕೊನ್‌ರಾಡ್ (ಎಡ) ಅವರು ತನ್ನನ್ನು ನಡುಬಾನಿನಲ್ಲಿ ಕೂಡು... ಯತ್ನ ಮಾಡುವುದಾಗಿ ತಿಳಿಸಿದರು... ಪರ್ ಆಗಸ್ಟ ಕೊನೆಯಲ್ಲಿ ಯಾನ... ಡಿದ ಉಪಗ್ರಹ ಜೆಮಿನಿ ೫ರ ಯಾ... ಈ ಯಾನ ಸಫಲವಾಗಲಿಲ್ಲ.

**ಚಿತ್ರ ೨**

ಕಳೆದ ಆಗಸ್ಟ ಕೊನೆಯಲ್ಲಿ ಅಮೆ... ಕೆಯು ಜೆಮಿನಿ ೫ ಅಂತರಿಕ್ಷ ಯಾ...

೧

೨

# ಸಾಹತುವಾದ

## ಪರಿಪುಷ್ಟವಾಗುತ್ತ ಬಂದಂತೆ ತ್ತದೆ. ಇಲ್ಲಿ ಉಸಿರು ಬಿಟ್ಟ ದಲ್ಲಿ ಆರಂಭವಾದೀತೆ?

ನ್ನ ತೇಲಿಸಿತು. ಇದರಲ್ಲಿ ಗಗನಯಾತ್ರಿಗಳಾದ ಚಾರ್ಲ್ಸ್ ಕೊನ್‌ರಾಡ್ (ಎಡ) ಮತ್ತು ರಿಚರ್ಡ್ ಗಾರ್ಡನ್ ಕೂಡ ರ್‌ ಯಾತ್ರೆ ಮಾಡಿದ್ದರು. ಯಾತ್ರಾ ಮಧ್ಯದಲ್ಲಿ ಒಬ್ಬರಿನ್ನೊಬ್ಬರಿಂದ ದೂರವಾಗಿ ಮತ್ತೆ ಬಂದು ಸೇರುವ ಪ್ರಯತ್ನವನ್ನವರು ಮಾಡಲಿದ್ದರು.

### ಚಿತ್ರ ೩

ಹವಾಯ್ ದ್ವೀಪದ ಹವಾಯ್ ವಾಲ್ಕೆನೋ ನೇಶನಲ್ ಪಾರ್ಕ್‌ನ ಬಳಿ ಲಾವಾವು ಶೇಖರಣೆಯಾಗಿದೆ. ಇದೇ ತರದ ಲಾವಾವನ್ನು ಚಂದ್ರಲೋಕದಲ್ಲಿ ಇಳಿಯಬಲ್ಲ ಗಗನಯಾತ್ರಿಗಳು ಎದುರಿಸ ಬೇಕಾಗುತ್ತದೆ ಎಂದು ತಿಳಿದು ಬಂದಿದೆ. ಆದಕ್ಕಾಗಿಯೇ ಕ್ಲಿಫ್ಟನ್ ವಿಲ್ಲಿಯಮ್ಸ್ ಮತ್ತಿತರ ಅಮೆರಿಕನ್ ಗಗನಯಾತ್ರಿಗಳು ಪಾರ್ಕ್ ಬಳಿಯ ಲಾವಾವನ್ನು ಪರಿಶೀಲಿಸುವಲ್ಲಿ ಮಗ್ನರಾಗಿದ್ದಾರೆ.

### ಚಿತ್ರ ೪

ಅಂತರಿಕ್ಷಯಾನದಲ್ಲಿ ಯಾತ್ರಿಯು ವಿಶಿಷ್ಟ ಉಡುಗೆ ತೊಡುಗೆಗಳನ್ನು ಉಪಯೋಗಿಸ ಬೇಕಾಗುತ್ತದೆ. ಹಲವಾರು ವಿಘ್ನ ವಿಡ್ಡೂರಗಳನ್ನು ಎದುರಿಸ ಬೇಕಾಗುತ್ತದೆ. ಅಮೆರಿಕನ್ ಗಗನಯಾತ್ರಿಗಳ ಉಪಯೋಗಕ್ಕೆಂದು ಉಪಗ್ರಹದಲ್ಲಿ ನಿರ್ಮಿಸಿದ ಅಂತರಿಕ್ಷ ಪ್ರಯೋಗಾಲಯವಿದು. ಇದರಲ್ಲಿ ಹೊರ-ಒಳ ಹೋಬರಲು ತಕ್ಕ ವ್ಯವಸ್ಥೆಗಳಿವೆ. ಭಾರ ಹೀನತೆಯ ಏರ್ಪಾಡೂ ಇದೆ. ಈ ವ್ಯವಸ್ಥೆಯು ಅಂತರಿಕ್ಷ ಯಾತ್ರೆಯಲ್ಲಿನ ಹಲವಾರು ಅಡೆತಡೆಗಳನ್ನು ನಿವಾರಿಸ ಬಹುದೆಂದು ನಂಬಲಾಗಿದೆ.

### ಚಿತ್ರ ೫

ಜುಲೈ ೧೪ ರಂದು ಯಾತ್ರೆ ಕೈಗೊಂಡಿದ್ದ ಅಮೆರಿಕನ್ ಮಾರ್ರಿನರ್ ೪ ಚಂದ್ರನ ೨೨ ಚಿತ್ರಗಳನ್ನು ತೆಗೆದು ಕಳಿಸಿತ್ತು. ಅವುಗಳಲ್ಲಿ ಒಂದು ಇದು. ಕೆಲಿಫೋರ್ನಿಯಾದ ಜೆಟ್ ಪ್ರೊಪಲ್ಶನ್ ಪ್ರಯೋಗಾಲಯದಲ್ಲಿನ ಮಾರ್ರಿನರ್ ವಿಜ್ಞಾನಿಗಳ ಅಭಿಪ್ರಾಯದಲ್ಲಿ 'ಈ ಯುಗದ ವೈಜ್ಞಾನಿಕ ಚಿತ್ರಪಟಗಳಲ್ಲಿ ಇದೊಂದು ಉಲ್ಲೇಖಾರ್ಹವಾದುದು" ಸೌರವ್ಯೂಹದ ಮೂಲ ಮತ್ತು ರಚನೆಯ ಕೂಲಂಕಷ ಅಧ್ಯಯನ ಕಾರ್ಯಕ್ಕೆ ಈ ಚಿತ್ರಗಳು ಪಥಪ್ರದೀಪಿಕೆಗಳಾಗುವುದೆಂದು ನಂಬಲಾಗಿದೆ.

### ಚಿತ್ರ ೬

ಚಂದ್ರಲೋಕದಲ್ಲಿ ಇಳಿಯುವುದು ಹೇಗೆ? ಇದಕ್ಕೆಂದೇ ಅಮೆರಿಕನ್ ಕಲಾವಿದರು ಒಂದು ವಿಶೇಷ ಯಾನದ ಮಾದರಿಯನ್ನು ತಯಾರಿಸಿದ್ದಾರೆ. ಅದರ ಚಿತ್ರವಿದು. ಇದನ್ನು ಸರ್ವೇಯರ್ ಎನ್ನುತ್ತಾರೆ. ಹಗುರವಾಗಿ ಚಂದ್ರನ ಮೈಮೇಲೆ ಇಳಿಯುವ ಮತ್ತು ಚಂದ್ರನ ಬಗೆಗಿನ ಹೆಚ್ಚಿನ ವಿಷಯವನ್ನು ಟೆಲಿವಿಶನ್ ಚಿತ್ರಗಳ ಮೂಲಕ ಭೂಮಿಗೆ ಕಳಿಸುವ ವ್ಯವಸ್ಥೆಗಳು ಈ ಯಾನದಲ್ಲಿವೆ. ಇದರ ಯಶ—ಸಾಫಲ್ಯಗಳನ್ನು ವರ್ಷಾಂತ್ಯದಲ್ಲಿ ಮೊದಲಿಗೆ ಈ ವರ್ಷಾಂತ್ಯದಲ್ಲಿ ಪರಿಶೀಲಿಸಲಾಗುತ್ತದೆ.

### ಚಿತ್ರ ೭

ಚಂದ್ರನ ಮೈಮೇಲೆ ನಡೆದ ಬಿದ ಮೇಲೆ ಅಲ್ಲಿ ಮಾನವ ನೆಲಸುವ ಸಾಧ್ಯತೆಯಿದೆ. ಆಗ ಆತನಿಗೆ ವಿದ್ಯುತ್ ಶಕ್ತಿ ಬೇಕೇ ಬೇಕು. ಇದಕ್ಕಾಗಿ ಅಲ್ಲಿಯೂ ಅಣುಶಕ್ತಿಯನ್ನು ಉಪಯೋಗಿಸುವ ಸಾಧ್ಯತೆಯ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಮೇಲಿನದು ಅಣುಶಕ್ತಿ ಯೋಜನೆಯ [illegible] ಮಾದರಿ 'ಸ್ನಾಪ್' ಎಂಬ ಈ ಯೋಜನೆಯು ಅಮೆರಿಕನ್ ಅಣುಶಕ್ತಿ ಕಮಿಶನ್ನಿನ ಒಂದು ಕಾರ್ಯಕ್ರಮ. ಕುದುರೆಗೆ ಮೊದಲೇ ಹುರುಳಿಯಿಡಾಗಬಹುದಾದರೂ ವಿಜ್ಞಾನಿ ಆಶಾವಾದಿಯಾಗಿಯೇ ಇದ್ದಾನೆ.

೩

೬

೭

## ಕೃತಿ ಪರಿಚಯ

**ಮದ್ರಾಸ್ ಮಾಧ್ವ ಸಂಘದ ಮಧ್ವನವಮೀ ಉತ್ಸವದ ರಜತ ಮಹೋತ್ಸವ ಮತ್ತು ಉಡುಪಿ ಶ್ರೀ ಶ್ರೀ ಭಂಡಾರಕೇರಿ ಸ್ವಾಮಿಗಳವರ ಶ್ರೀ ಮನ್ಮಾಧ್ವರಾದ್ಧಾಂತ ಸಂವರ್ಧಿನೀ ಸಭೆಯ ೨೦ನೆಯ ಅಧಿವೇಶನ—ಸ್ಮಾರಕ ಗ್ರಂಥ—1965.**

ಮದ್ರಾಸದ ಮಾಧ್ವ ಸಂಘವು ಕಳೆದ ೨೫ ವರ್ಷಗಳಿಂದ ಮಾಧ್ವ ಸಂಘಟನೆಯನ್ನು ಯಥಾವತ್ತಾಗಿ ಮಾಡಿಕೊಂಡು ಬರುತ್ತಿದೆ. ಅಂತೆಯೇ ಮಾಧ್ವ ಸಿದ್ಧಾಂತ ಪ್ರಚಾರವನ್ನು ಶ್ರೀ ಮನ್ಮಾಧ್ವರಾದ್ಧಾಂತ ಸಂವರ್ಧಿನೀ ಸಭೆಯೂ ಎರಡು ದಶಕಗಳಿಂದ ನಡೆಸುತ್ತದೆ. ಇವುಗಳ ಅಧಿವೇಶನ ಸ್ಮಾರಕ ಗ್ರಂಥವು ಮಾಧ್ವ ಸಂಪ್ರದಾಯದ ಬಹು ಹದ್ವಿಷಯಗಳನ್ನು ಕುರಿತ ವಿವೇಚನೆಗಳಿಂದ ಕೂಡಿದೆ. ಎರಡೂ ಸಂಸ್ಥೆಗಳ ವಿಸ್ತಾರ ಪರಿಚಯದಿಂದ ಅವು ಮಾಧ್ವ ಜನಾಂಗದ ಸೇವೆಯನ್ನು ಮಾಡಿ ಯಶಸ್ವಿಯಾಗಿವೆಯೆನ್ನಬಹುದು. ಇಲ್ಲಿನ ಹರಿಸರ್ವೋತ್ತಮತ್ವ, ಜಗತ್ತು ಸತ್ಯತೆ, ತಾರತಮ್ಯಭಾವ—ಮೊದಲಾದ ತಾತ್ವಿಕ ವಿವೇಚನೆ ಸ್ತುತ್ಯವಿವೆ. ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ತಮಿಳು ಭಾಷೆಗಳ ಲೇಖಯುಕ್ತ ಈ ಸ್ಮಾರಕ ಗ್ರಂಥವು ಮಾಧ್ವ ಸಂಘದ ಹತ್ತಾರು ಚಟುವಟಿಕೆಗಳ ಹಲವಾರು ಚಿತ್ರಗಳಿಂದ ಅಲಂಕೃತವಾಗಿದೆ. 'ದಾಸಪ್ರಕಾಶ' ಹೋಟೆಲ್‌ಗಳ ಸಂಚಾಲಕ ಶ್ರೀ ಕುತ್ತೆತ್ತೂರು ಸೀತಾರಾಮರಾಯರ ತ್ಯಾಗ, ದಾನ ಮತ್ತು ಧರ್ಮ ಪ್ರೇಮಗಳು ಪತ್ನಿ ಭಕ್ತಿ ಪರಾಯಣತೆಯಿಂದ ಪೋಷಕವಾಗಿ ಭಗವತ್ ಪ್ರೇಮದಲ್ಲಿ ವಿಲೀನಗೊಳ್ಳುತ್ತಿದೆ—ಇಂತಹರ ಮೇಲ್ವಿಚಾರಣೆಯಲ್ಲಿ ಪ್ರಕಟವಾದ ಈ ಬೃಹತ್ ಗ್ರಂಥ ಮಾಧ್ವರಿಗೆ ದೀಪಿಕೆ, ಇತರರಿಗೆ ಒಂದು ಸೊತ್ತು.

**ಮಧುರಸ್ಮೃತಿ:—** ಪ್ರಕಾಶನ: ಗೀತಾ ಪ್ರಕಾಶನ, ಕಾಸರಗೋಡು. ಬೆಲೆ. ರೂ ೧—೫೦.

ಮಧೂರಿನ ಗಣಪತಿಯ ಸನ್ನಿಧಿಯಲ್ಲಿ ಮೊನ್ನೆ ಬೇಸಗೆಯಲ್ಲಿ ನಡೆದ ಮೂಡಪ್ಪ ಸೇವೆಯ ಸಿಹಿಯ ನಡುವೆ ಬಂದ 'ಮಧುರ ಸ್ಮೃತಿ'ಯನ್ನು ಕೆ. ವೆಂಕಟಕೃಷ್ಣಯ್ಯನವರು ಸಂಪಾದಿಸಿದ್ದಾರೆ. ಮೂಡಪ್ಪ ಸೇವೆಯ ವಿವರಗಳೊಡನೆ ಕುಂಬಳೆ ಸೀಮೆಯ ಮಧುಪುರದ ಪರಿಚಯವನ್ನು ನಾವು ಐತಿಹಾಸಿಕವಾಗಿಯೂ ಇಲ್ಲಿ ಮಾಡಿಕೊಳ್ಳುತ್ತೇವೆ. ಕಾಸರಗೋಡಿನ ಭವ್ಯ ಕನ್ನಡ ಪರಂಪರೆಯನ್ನು ಬಾ. ಕಿ. ನ. ಮಾಡಿಕೊಟ್ಟರೆ, ನಮ್ಮ ಜಾನಪದ ಕಲೆ ಯಕ್ಷಗಾನದ ಕುರಿತಾದ ಒಂದು ಲೇಖನವೂ (ಕೃಷ್ಣ ಕಾರಂತ) ಇತ್ತಿದೆ. ಸಾಕಷ್ಟು ವಾದಾಂಗಕ್ಕೆ ಬಂದು ನವೆದಿದ್ದ ಯಕ್ಷಗಾನ ಕವಿ ಸುಬ್ಬನು ಮತ್ತೊಮ್ಮೆ ಇಲ್ಲಿ ತಲೆಯೆತ್ತಿದ್ದಾನೆ—ಸಿರಿಬಾಗಿಲು ವೆಂಕಪ್ಪಯ್ಯನವರ ಲೆಕ್ಕಣಿಕೆಯಿಂದ ಜತೆಗೆ ವಿದ್ವಾಂಸರ ಸ್ತವಗಳೂ ಇವೆ.

'ಮಧುರ ಸ್ಮೃತಿ' ಒಂದು ಲೇಖ ಸಂಕಲನ ಉಪಯುಕ್ತವಾದುದು, ಸಂಗ್ರಾಹ್ಯವಾದುದು.

**ಪಡುವಣ:** ಕಾರವಾರದಲ್ಲಿ ಕಳೆದ ಬೇಸಗೆಯಲ್ಲಿ ನಡೆದ ೪೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮಾರಕ ಸಂಚಿಕೆಯಿದು. ಪಡುಗಡಲಿನ ನೆರೆಯ ಉತ್ತರ ಕನ್ನಡ ಜಿಲ್ಲೆಯ ಹಲವಾರು ಲೇಖಕರು ತಮ್ಮ ಜಿಲ್ಲೆಯ ಜನ ಜೀವನ, ಇತಿಹಾಸ, ಸಂಸ್ಕೃತಿ, ಸಂಪತ್ತು, ಸಾಹಿತ್ಯ ಮತ್ತು ಹಿರಿಯ ವ್ಯಕ್ತಿಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಒಂದು ಜಿಲ್ಲೆಯ ಸಮಗ್ರ ಪರಿಚಯದ ಸ್ಥೂಲ ತಿಳುವಳಿಕೆಯನ್ನು ನಾವೀ 'ಪಡುವಣ'ದಿಂದ ಪಡೆದುಕೊಳ್ಳಬಹುದು. ಈ ಸ್ಮಾರಕ ಸಂಚಿಕೆ ಉತ್ತರ ಕನ್ನಡ ಜಿಲ್ಲೆಯ ಒಂದು ಕೈಗನ್ನಡಿ. ಇದನ್ನು ಕನ್ನಡಿಗರಿಗೆ ಒದಗಿಸಿದ ಸಂಪಾದಕ ಮಂಡಳಿಯ ಕಾಯ್ಕಿಣಿ, ಭಟ್ ಮತ್ತು ಭಂಡಾರ್ಕರ್ ಅಭಿನಂದನೀಯರು. ಅಲ್ಪಕಾಲದಲ್ಲೂ ಮಹಾ ಕಾರ್ಯವನ್ನು ಮಾಡಬಹುದ, ಮನಸ್ಸಿದ್ದರೆ ಮಾರ್ಗವೆಂಬುದನ್ನಿವರು ತೋರಿಸಿಕೊಟ್ಟಿದ್ದಾರೆ.

ಇಲ್ಲಿ ಪ್ರಕಟವಾದ ಲೇಖ, ಲೇಖನಗಳ ವ್ಯಾಪ್ತಿ ಸಂಕುಚಿತವಾಗಿದೆಯೆನ್ನುವವರೂ ಇರಬಹುದು. ಆದರೆ, ಅವರಿಗೆ ಉತ್ತರವೂ ಇದೆ. ಕಲಸು ಮೇಲೋಗರಕ್ಕಿಂತ ಹೋಳಿಗೆಯ ರುಚಿ ಲೇಸು. ಈ ದಿಸೆಯಲ್ಲಿ ಕಾರವಾರದ ಸಮ್ಮೇಳನವು ಮುಂದಿನ ಸಮ್ಮೇಳನ ಸಂಯೋಜಕರಿಗೆ ಮಾರ್ಗದರ್ಶನವಾಗಿದೆ, ಈ ಸಂಚಿಕೆಯು ಅವಶ್ಯ ಸಂಗ್ರಹಿಸಬೇಕಾದುದು; ಇದರ ಬೆಲೆ ರೂ. ೧-೫೦.

ಮುನ್ನೋಟ ೪೫ನೆಯ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಾಗಿ ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ಪ್ರಕಟಿಸಿದೆ. ಸಾಹಿತ್ಯ ಹರಿಯುವ ದಿಸೆಯನ್ನು ಕುರಿತಾದ ಲೇಖಗಳು ಇಲ್ಲಿವೆ. ಸಮ್ಮೇಳನಾಧ್ಯಕ್ಷ ಶಂಕರ ಭಟ್ಟ ಮತ್ತು ಅವರ ಮದ್ರಿಯ ಚಿತ್'ಯ ಪರಿಚಯವಿದೆ. ಖ್ಯಾತನಾಮಗಳ ಲೇಖಗಳು ಇಲ್ಲಿದ್ದು ಇವು ವಿವೇಚನೆಗೊಂದು ಪ್ರಚೋದನೆಯನ್ನು ಕೊಡುತ್ತಿವೆ; ಕನ್ನಡದ ಗತಿವಿಧಿಗಳನ್ನು ರೂಪಿಸುವಲ್ಲಿ ನಮ್ಮನ್ನು ವಿಚಾರಶೀಲರನ್ನಾಗಿ ಮಾಡುತ್ತವೆ. ಈ ದಿಸೆಯಲ್ಲಿ ಕನ್ನಡ ಸಾಹಿತ್ಯಪರಿಷತ್ತಿನ ಈ ಮೊದಲ ಯತ್ನ ಸಫಲವಾಗಿದೆ. ಟಿ. ಎಸ್. ರಾಮಚಂದ್ರರಾಯರು ಗೌರವ ಸಂಪಾದಕರಾಗಿರುವ ಈ ಸಂಚಿಕೆಯು ಮುಂದಿನವರಿಗೆ ಪಥಪ್ರದರ್ಶಕವಾಗಲಿ.

**ಜ್ಞಾನ ಜ್ಯೋತಿ:** ಹೆಜಮಾಡಿಯ ಬೋರ್ಡ್ ವಿವಿಧೋದ್ದೇಶ ಹೈಸ್ಕೂಲಿನ ವಿದ್ಯಾರ್ಥಿ ಪತ್ರಿಕೆಯ ವಾರ್ಷಿಕಾಂಕವಿದು. ಎಳೆಯ ಮಕ್ಕಳ ಸಾಹಿತ್ಯಾಭಿಮಾನ ಮತ್ತು ಸಾಹಿತ್ಯ ನಿರ್ಮಾಣ ಶಕ್ತಿ ಪ್ರಶಂಸನೀಯ. ಸಾಹಿತ್ಯದ ಮೌಲ್ಯ ಅದರ ಗಾತ್ರದಲ್ಲಿಲ್ಲ; ವಿಸ್ತಾರದಲ್ಲಿಲ್ಲ. ಎದೆಯಾಳದಿಂದ ಹೊರಟು ಹೃದಯದಲ್ಲಿ ನಾಟಿದರೆ ಸಾಕು, ಅದು ಸಾಹಿತ್ಯವಾಗುವುದು—ಕಾವ್ಯರ್ಷಿ ವಾಲ್ಮೀಕಿಯ ಶೋಕದಂತೆ. ಉತ್ಸಾಹದಿಂದ ಬರೆದರೆ ಅದು ಹಿತವಲ್ಲದು, ಬರೆದವನಿಗೂ, ಓದುವವನಿಗೂ ಜ್ಞಾನಜ್ಯೋತಿಯ ಗಾತ್ರ ಪರ್ವತವಿಲ್ಲ, ನಿಜ. ಆದರೆ, ಸಾಹಿತ್ಯ ಮಾತ್ರ ಅದರಲ್ಲಿ ಹರಡಿದೆ.

**ವಿದ್ಯಾ:** ಬೆಂಗಳೂರು—೧೮ ನೆ ಭಾರತೀಯ ಸಂಸ್ಕೃತಿ ವಿದ್ಯಾಪೀಠದ ಹೊಸ ಮಾಸ ಪತ್ರಿಕೆಯಿದು.

ಸಂಸ್ಕೃತಿ ಮತ್ತು ಶಿಕ್ಷಣಗಳ ಪ್ರಸಾರದಲ್ಲಿ ತೊಡಗಿದ ಈ ವಿದ್ಯಾಪೀಠವು ತನ್ನ ವಿವಿಧ ಚಟುವಟಿಕೆಗಳನ್ನು ಜನರಿಗೆ ತಿಳಿಸಲು ಈ ಮಾಸ ಪತ್ರಿಕೆಯನ್ನು ತೊಡಗಿದಂತೆ ತೋರುತ್ತದೆ. ಪ್ರಧಾನ ಕಾರ್ಯದರ್ಶಿ ಶ್ರೀ ನಾಗೇಶ ಹತ್ವಾರರೇ ಪತ್ರಿಕೆಯ ಸಂಪಾದಕರೂ ಆಗಿದ್ದಾರೆ. ಮುಂಬರುವ ಸಂಚಿಕೆಗಳು ಇನ್ನೂ ಆಕರ್ಷಕವಾಗಲಿ. ವಾ. ಚಂದಾ. ರೂ. ೧—೫೦.

—ಗೋರಾ.

## ಇದು ಕಂಕಣ

ಬಿಡು ಸೆಜ್ಜೆಯ!
ಇಡು ಹೆಜ್ಜೆಯ
ನಿರ್ಧಾರದಿ ಮುಂದೆ!
ನಿನ್ನಯ ನಡೆ
ಕಾಣುತಲಿದೆ
ಹಾಡಲಿ "ನಾ ಮುಂದೆ" ‖ ೧ ‖

ನಾಡೆದೆಯಲಿ
ಸಂಚರಿಸಲಿ
ಚೈತನ್ಯದ ಸೆಲೆಯು
ಗುಂಡಿಗೆ ಎದೆ
ಒಡ್ಡಿರೆ ಇದೆ
ಚಿರ ನೂತನ ಬೆಲೆಯು ‖ ೨ ‖

ಹುಟ್ಟಿರೆ ತನು
ಸಾವಿದೆ ಎನು!
ಕಳೆಯದೆ ನ್ಯೆ ಕಾವು?
ಎದೆ, ಹಿಂದಣ
ಹೊಲೆ—ಬಂಧನ
ಮರೆವುದೆ? ಆ ನೋವು? ‖ ೩ ‖

ಧರ್ಮದ ಪಥ—
ದಲಿ ಶನಿ—ರಥ
ಸಾಗಿದ್ದುದ ನೆಲದಿ
ಪಾಂಡವರು
ಕಾಲಿಟ್ಟರು
ಹುಡಿಗುಡ್ಡೆಯ ಛಲದಿ! ‖ ೪ ‖

ಓ! ಯೋಧನೆ!
ಇದು ಸಾಧನೆ
ಸಾಧಿಸು ಮುಂದಿಹುದು
ಕ್ಷಾತ್ರ್ಯದ ಪಂ—
ಶಿರವನು ತರಿ
ಸಮಯವು ಬಂದಿಹುದು! ‖ ೫ ‖

ಬಾಳೊಡತಿಯು,
ಸುತ್ತೆ, ಗೆಳತಿಯು,
ಹೆತ್ತವ್ವೆಯ ಮಾನ
ಕಳೆಯಲು ಬರೆ,
ಹೋಗಲಿ ಅರಿ—
ಗಳಿಗೆಗೆ ತನು ಪ್ರಾಣ! ‖ ೬ ‖

ಸಿರಿಸ್ವಾಂಡದ
ಸಾಕಾಂದ
ಈತಾಯ್ ಭಾರತಿಗೆ
ಕರಗಿದ ನೆಣ
ಇಲ್ಲವೆ ಹಣ!
ಕಾಣತೆಯಿದಾಂತಿಗೆ! ‖ ೭ ‖

ತಾಯ್ ಹರಸಲಿ
ಪ್ರಿಯೆ ಸುರಿಸಲಿ
ಪ್ರೇಮದ ಮುತ್ತುಗಳ:
'ಗೆಲ್ಲೃ ರಣ
ಇದು ಕಂಕಣ!'
ವೆನ್ನುವ ಮಾತುಗಳ ‖ ೮ ‖

ಬಿಡು ಸೆಜ್ಜೆಯ
ಇಡು ಹೆಜ್ಜೆಯ
ನಿರ್ಧಾರದಿ ಮುಂದೆ
ನಿನ್ನಯ ನಡೆ
ಕಾಣುತಲಿದೆ
ಹಾಡಲಿ 'ನಾ ಮುಂದೆ!'

—ಯಸ್. ಕೃಷ್ಣಮುಕಾರಿ,
ಮಂಗಳೂರು.

### In the Court of the Munsif of Coondapoor.

*O S. 53/1962.*

Ramachandra *alias* Govinda Sheregara
Nagappa — *Plaintiffs*
Ramakrishna Sheregara and others —*Defendants.*

To the 5th defendant Nagappa, son of Kodi Narayana Sheregara, residing in Basrur— now Hotel Worker in Bangalore.

Please take notice that in the above suit for partition and possession of the share of Annappa Sheregara's properties you had been added during your minority as you had interest. Now by order of Court you are declared a Major.

The above suit is posted to 29—10—1965 for hearing in the above Court at 11 A.M. You are required to appear either in person or by a duly authorised Advocate it you wish to contest failing which you will be declared Ex parte.

*By order of Court.*

K. Raghunath Shenai
Advocate.

*Coondapoor. 13-10.65*


**ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.**

**ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ.**

**ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.**

# ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
**ಮಂಗಳೂರು—3**

### ಚಾರುಚಯನ

# ಅರಿಗಿಲ್ಲವಿನಿತು ಗೆಲು

೧

ಸಂಯುಕ್ತ ರಾಷ್ಟ್ರ ಸಂಘದ ಸಭೆಯ ವಿರಾಮದ ಕರೆಯನ್ನು ಒತ್ತಾಯ ಪೂರ್ವಕವಾಗಿ ಒಪ್ಪಿದ ಪಾಕಿಸ್ತಾನ ತನ್ನ ಕುನೀತಿಯಿಂದ ಜಗತ್ತನ್ನೇ ಮೋಸಗೊಳಿಸುತ್ತಿದೆ.

ಯುದ್ಧ ವಿರಾಮವೇ ಅನಿಶ್ಚಿತವಾಗಿದೆಯೆಂದು ಯು ಥಾಂ ಅನ್ನಬೇಕಾದರೆ, ಗಡಿ ಉಲ್ಲಂಘನೆ ಎಷ್ಟು ಪ್ರಮಾಣವಾಗಿ ನಡೆಯುತ್ತಿರಲೇ ಬೇಕು— ನಡೆಯುತ್ತಿದೆ ಎಂಬುದಕ್ಕೆ ಅವರೂ ಒಪ್ಪಿಗೆಯ ಮುದ್ರೆ ಹಾಕಿದರು.

ಆರಂಭದಲ್ಲಿ ಉಲ್ಲಂಘನೆ ಮಾಡುವವರು ಯಾರು? ಭಾರತ—ಪಾಕಿಸ್ತಾನವೆಂದರೆ, ಪಾಕ್ ಭಾರತವನ್ನು ಬೊಟ್ಟು ಮಾಡುತ್ತಿದೆ. ಹಾಗಿದ್ದರೂ ಆಕ್ರಮಣ ಮನೋವೃತ್ತಿಯ ಪಾಕ್ ಕಳೆದು ಕೊಂಡ ಗೌರವವನ್ನು ರಕ್ತ ಸುರಿದಾದರೂ ಹಸಿ ಮಾಡಲು ಮುಂದೆ ಬರುತ್ತಿದೆ—ಇದು ಸ್ವಾಭಾವಿಕ ನೊಂದ ಹುಲಿ ಗಾಯಗೊಂಡ ಘಟಸರ್ಪ!

ಭಾರತೀಯ ಪಡೆಗಳು ಆತ್ಮ ರಕ್ಷಣೆಗಾಗಿಯಾದರೂ ಹೋರಾಡಲೇ ಬೇಕು- ಇದು ಕರ್ತವ್ಯ. ಇದರಿಂದ ವಾದ ಬೆಳೆಸುವಂತಿಲ್ಲ.

ತಂಗಿರುವ ವೀಕ್ಷಕರಿಗೆ ಇದು ತಿಳಿಯದ ವಿಷಯವಲ್ಲ. ಆದರೂ ಅವರು ಯಾರ ಮೇಲೂ ದೂರು ಹೊರಿಸುವಂತಿಲ್ಲ. ಮಧ್ಯಸ್ಥಿಕೆಗಾರರ ಮಂಗ ಬುದ್ಧಿಯೇ ಹಾಗೆ!

ಜಗತ್ತಿನಲ್ಲೆಲ್ಲಾ ಪಾಕ್ ರೋದನ ಕಾಡು ಕೂಗಾಗಿದೆ. ಆದರೆ ಮನೀಷೆಯ ಪರಿಚಯ ಎಲ್ಲರಿಗೂ ಆಗುತ್ತಿದೆ – ಇದು ನಮ್ಮ ಸುದೈವ. ಆದರೆ, ಬರಿಯ ಪರಿಚಯದಿಂದ ಏನು? ಭಾರತದ ಸತ್ಯ ನೀತಿಗೆ ಎಲ್ಲೆಂದರಲ್ಲಿ ಬೆಂಬಲ ನೀಡಬೇಕು ಅವು; ಅದನ್ನು ಗಳಿಸುವುದು ನಮ್ಮ ರಾಯಭಾರಿಗಳ, ವಿಶೇಷ ಪ್ರತಿನಿಧಿಗಳ ಹೊಣೆಗಾರಿಕೆ.

ಬ್ರಿಟನ್ ಭಾರತ — ಪಾಕಿಸ್ತಾನಗಳಲ್ಲಿನ ತನ್ನ ರಾಯಭಾರಿಗಳನ್ನು ಸಮಾಲೋಚನೆಯ ಬಗ್ಗೆ ಕರೆದಿದೆ, ತನ್ನ ಸಲ್ಲವಿಗೆ ಮತ್ತೊಂದು ಹೊಸ ರಂಗವನ್ನು ನೀಡಲು ಅದು ಬಯಸುತ್ತಿದೆ. ಭಾರತದ ನೀತಿಯಿಂದ ಬ್ರಿಟನ್ ಪಾಠ ಕಲಿಯುವ ಸದವಕಾಶ ಬಂದರೂ ಬರಬಹುದು.

ಜಾನ್ಸನ್ ಕೂಡಾ ಶಾಸ್ತ್ರಿಯವರ ದೃಢತೆಯಿಂದ ಕಂಗಾಲಾಗಿದ್ದಾರೆ ಯಾವ ಭಯ ತೋರಿಸಿದರೂ ಈ ಕುಳ್ಳ ಜಗ್ಗುವುದಿಲ್ಲ! ಎಂತಹದಿದು? ಸರ್ವತ್ರ ಸರವೇ ನಮಗೆ ಬೇಡ ಎನ್ನುವ ಎದೆಗಾರಿಕೆ ಭಾರತೀಯರ ರಕ್ತಗುಣವಿರಬೇಕು! ಇವನೇ ವಿಶುದ್ಧ ನೆಹರೂ ಉತ್ತರಾಧಿಕಾರಿ!

ಅದಕ್ಕೆಂದೇ ಶಾಸ್ತ್ರಿಯವರನ್ನು ಅದೇ ಕಾಲದಲ್ಲಿ ಅಯ್ಯೂಬಖಾನರನ್ನು ವಾಶಿಂಗ್‌ಟನ್ನಿಗೆ ಕರೆಸುವ ಪ್ರಯತ್ನ....

ಆದರೆ ಶಾಸ್ತ್ರಿ ಮೌನ.. ಆರ್ಥಿಕ ಸಹಾಯ ಮತ್ತು ಪಿ. ಎಲ್. ೪೮೦ರ ಬಗ್ಗೆ ಅಮೇರಿಕೆಯ ನಿರ್ಧಾರಕ್ಕೆ ಬಾಗದ ಹೋರಾಟ ಶಾಸ್ತ್ರಿ ಅಮೇರಿಕೆಗೆ ತೆರಳಲಾರರು.

ನಿಜ. ರಾಜಕೀಯವನ್ನೂ ಆರ್ಥಿಕ ಸಹಾಯವನ್ನೂ ಒಂದೇ ನೂಲಿನಲ್ಲಿ ಕೋಯುವ ಅಮೇರಿಕನ್ ನೀತಿಗೆ ಭಾರತದ ಧಿಕ್ಕಾರವಿದೆ. ಹಾಗಾಗಿ ಅಮೇರಿಕೆ ಈಗ ಮತ್ತೆ ತಡವರಿಸುವಂತಾಗಿದೆ.

ಪ್ರಪಂಚದಲ್ಲಿ ಅನಭಿವೃದ್ಧ ದೇಶಗಳು ಕಮ್ಯೂನಿಜಂನತ್ತ, ಸರ್ವಾಧಿಕಾರದತ್ತ ಒಲಿಯುತ್ತಿರುವಾಗ ಪ್ರಜಾತಂತ್ರದ ತಳಹದಿಯಲ್ಲಿ ಮುಂಬರಿಯುವ ಏಕಮಾತ್ರ ರಾಷ್ಟ್ರ— ಭಾರತ.

ಇದನ್ನು ಇದೇ ದಾರಿಯಲ್ಲಿ ನಡೆಸದೆ ಹೋದರೆ, ಮತ್ತೆ ಆಫ್ರೋ ಏಶ್ಯಾ ಕಮ್ಯೂನಿಜಂಮಯವಾಗುವ ಭೀತಿ!

ಒತ್ತಾಯದ ಮುಂದೆ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ನೀಡುವ ಇಚ್ಛೆ ಭಾರತಕ್ಕಿಲ್ಲ. ಪಾಕಿಸ್ತಾನಕ್ಕೆ ರಾಜಕೀಯ ರಿಯಾಯತಿಯ ರೂಪದಲ್ಲಿ ಕಾಶ್ಮೀರವನ್ನು ದಾನ ಮಾಡುವ ಉದಾರತೆಯೂ ಭಾರತದಲ್ಲಿಲ್ಲ. ಅಂತಹ ಪರ್ವರಾಯರ ಕಾಲ ಅದೆಂದೋ ಕಳೆದು ಹೋಗಿದೆ.

ಭಾರತ ಸಾರ್ವಭೌಮ ರಾಷ್ಟ್ರ. ಅದು ಯಾರ ಒತ್ತಾಯಕ್ಕೂ ಬಗ್ಗುವುದಿಲ್ಲ. ಸತ್ಯ, ನ್ಯಾಯ, ಧರ್ಮದ ಮುಂದೆ ಮಾತ್ರ ತಲೆಬಾಗುತ್ತದೆ.

ಪಾಕಿಸ್ತಾನಕ್ಕೆ ಮತ್ತಿತರ ರೀತಿಯಿಂದ ಇದಕ್ಕೆ ಮೊದಲೇ ಭಾರತ ರಿಯಾಯತಿ ತೋರಿಸಿದೆ ಈಗ ಅದು ನಮ್ಮ ನಾಗರಿಕರ ಮೇಲೆ ಬಾಂಬು ಹಾಕಿದರೂ ನಾವು ಹಾಗೆ ಮಾಡಲಿಲ್ಲ. ನಮ್ಮ ಕಾಶ್ಮೀರವನ್ನು ಭೂದಾನ ಮಾಡಿ ನಮಗದರೊಡನೆ ಸಖ್ಯ ಬೇಡ.

ಎಸ್ ಕೆ. ಪಾಟೀಲ್, ವಿಜಯಲಕ್ಷ್ಮಿ ಪಂಡಿತ್, ದಿನೇಶಸಿಂಗ, ದ ಪ. ಕರಮರ್ಕರ್ ಮೊದಲಾದವರು ಜಗತ್ತಿನ ಮುಂದೆ ಭಾರತದ ನೀತಿಯನ್ನು ವಿವರಿಸಲು ತೆರಳಿದ್ದಾರೆ, ಕೆಲವರು ಮರಳಿದ್ದಾರೆ

ಅಧ್ಯಕ್ಷ ರಾಧಾಕೃಷ್ಣನ್ ಪೂರ್ಣ ಯಶಗಳಿಸಿ ಮರಳಿ ಬಂದಿದ್ದಾರೆ.

ಧರ್ಮದ ಹೆಸರಿನಲ್ಲಿ, ಆಕ್ರಮಣ ಮನೋವೃತ್ತಿಯಲ್ಲಿ ಶಕ್ತಿ ಪ್ರದರ್ಶನದಲ್ಲಿ, ಕುತಂತ್ರ ಸಾಧನೆಯಲ್ಲಿ ಇನ್ನು ಯಾವ್ಯಾವುದೋ ಅನ್ಯಾಯದ ಮಾರ್ಗದಲ್ಲಿ ಭಾರತವನ್ನು ಮಣಿಸಲು ಯಾರಿಗೂ ಸಾಧ್ಯವಿಲ್ಲ—ಮತ್ತೆ ಪಾಕಿಸ್ತಾನದ ಕಥೆಯೇನು!

ನಾವು ಭಾರತೀಯರು. ಭಾರತ ರಕ್ಷಣೆ ನಮ್ಮ ಆದ್ಯ ಕರ್ತವ್ಯ

ಅನ್ನ ನೀರು ತೊರೆದು ಬೆವರ ನೀರು ಹರಿಸಿ ತಾಯ್ನೆಲದ ಸಮಗ್ರತೆಯನ್ನುಳಿಸುವೆವು. ಶತ್ರುಗಳನ್ನು ಹಿತ ಶತ್ರುಗಳನ್ನು ಮಣಿಸುವೆವು, ಇದು ನಮ್ಮ ನೀತಿ.

ನಮ್ಮ ನೀತಿ ಸತ್ಯ ನೀತಿ, ನಮ್ಮ ಧರ್ಮ ಸದ್ಧರ್ಮ, ನಮ್ಮ ಮನೋವೃತ್ತಿ ಸತ್ವ ಮನೋವೃತ್ತಿ, ನಮ್ಮ ಶಕ್ತಿ ಸಚ್ಚಿದಾನಂದ ಶಕ್ತಿ, ನಮ್ಮ ತಂತ್ರ ಪ್ರಜಾತಂತ್ರ.

ಇದಕೆಂದಿಗಿಲ್ಲ ಸೋಲು.
ಅರಿಗಿಲ್ಲವಿನಿತು ಗೆಲು||

—ರಾಕಿ

(ನಾಲ್ಕನೇ ಪುಟದಿಂದ)

ವುದಾದರೊಂದು ಕಾಶ್ಮೀರವನ್ನು ವಶಪಡಿಸುತ್ತದೆ...."

'ಇದು...ಪಿಳ್ಳೆಯದು....ಆದರೆ, ನಮ್ಮ ರಾಜ್ಯವನ್ನು ಕೇಳುವ ಅಧಿಕಾರ ಪಾಕಿಗಿಲ್ಲ?'

"ಸರಿಯಪ್ಪ. ನನ್ನ ಮೇಲೆ ನಿಮಗಿರುವ ಅಧಿಕಾರವನ್ನು ಪ್ರಶ್ನಿಸುವವರು ಯಾರು?'

'ಸಂಶಯವಿಲ್ಲ ಅಣ್ಣ. ಹಾಗೆಯೇ ನನ್ನ ಮೇಲೆ ನಿನಗಿರುವ ."

'ಅಯ್ಯೋ, ಬಿನ್ನ ಮುಗಿಯಿತು....'

"ಇನ್ನೊಂದು ಬಟ್ಟಲಿಡು ನೋಡೋಣ..'

"ಅಯ್ಯಪ್ಪ ಹುಚ್ಚಾ, ಬನ್ನಿ....'

— ಗೋರಾ






### ಅಕಾಡೆಮಿಯ ವಿಶೇಷ ಘಟಿಕೋತ್ಸವ

ಮಣಿಪಾಲ, ಅ. ೧೦- ವಿದ್ಯಾಭ್ಯಾಸಕ್ಕಾಗಿ ಹಣ ವಿನಿಯೋಗಿಸುವುದು ಅತ್ಯಗತ್ಯವೆಂದೂ, ಆ ಹಣದಿಂದ ಸರಿಯಾದ ಪ್ರಯೋಜನ ಸಿಗುವಂತೆ ನೋಡಿಕೊಳ್ಳಬೇಕೆಂದೂ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿ ಶ್ರೀ ಜಯಕುಮಾರ ಅನಗೋಳ್ ನುಡಿದರು. ಅಕಾಡೆಮಿ ಆಫ್ ಜನರಲ್ ಎಜುಕೇಶನಿನ ಘಟಿಕೋತ್ಸವ ಭಾಷಣವನ್ನು ಮಾಡುತ್ತಾ ಕಳೆದ ೧೫ ವರ್ಷಗಳಲ್ಲಿ ನಮ್ಮ ದೇಶದಲ್ಲಿ ಶಿಕ್ಷಣ ರಂಗದ ವಿವಿಧ ಹಂತಗಳಲ್ಲಿ ಶೇ. ೪೦೦ರಷ್ಟು ಏರಿಕೆಯಾಗಿರುವುದು ನಾವು ನಿರೀಕ್ಷಿಸಿದ್ದಕ್ಕಿಂತ ಕಡಿಮೆಯಾಗಿದೆ ಎಂದು ಅವರು ಹೇಳಿದರು ದೇಶದ ಪ್ರಗತಿಗೆ ಆರ್ಥಿಕ ಮತ್ತು ಶಿಕ್ಷಣ ಸ್ಥಿತಿ ಉತ್ತಮಗೊಳ್ಳುವುದಗತ್ಯ. ಯೋಗ್ಯತೆ ಇರುವವರಿಗೆ ಮಾತ್ರ ಅವಕಾಶ ಸಿಗುವಂತಾಗಿ ಶಾಲೆ ಬಿಡುವುದು ಹಾಗೂ ಅನುತ್ತೀರ್ಣರಾಗುವುದರಿಂದಾಗುತ್ತಿರುವ ಹಾನಿಗಳನ್ನು ತೊಡೆದುಹಾಕಬೇಕೆಂದು ಅವರು ಅಭಿಪ್ರಾಯಪಟ್ಟರು.

ಮೈಸೂರು ರಾಜ್ಯದಲ್ಲಿ ಇಡೀ ದೇಶದಲ್ಲಿಯ ಅತಿ ಹೆಚ್ಚು ಸಂಖ್ಯೆಯ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಇರುವುದಕ್ಕೆ ಡಾ| ಪೈ ಕಾರಣರಾಗಿದ್ದಾರೆಂದು ಶ್ರೀ ಅನಗೋಳ್ ನುಡಿದರು. ಅಕಾಡೆಮಿ ಹಾಗೂ ಇತರ ಸಂಸ್ಥೆಗಳನ್ನು ಆರಂಭಿಸುವುದರ ಮೂಲಕ ಡಾ| ಪೈಯವರು ಗೌರವಾರ್ಹವಾದ ಸೇವೆ ಸಲ್ಲಿಸಿದ್ದಾರೆಂದರು.

ಅಕಾಡೆಮಿಗೆ ಸಹಾಯ ಹಾಗೂ ಪ್ರೋತ್ಸಾಹ ಕೊಡುತ್ತಿರುವುದಕ್ಕಾಗಿ ಬಾಲ್ಟಿಮೋರಿನ ಶ್ರೀ ಮತ್ತು ಶ್ರೀಮತಿ ಹೆನ್ರಿ ಇ. ನೈಲ್ಸ್‌ರವರಿಗೆ ಗೌರವ ಫೆಲೋಶಿಪ್‌ಗಳನ್ನು ನೀಡಲಾಯಿತು. ಬಾಲ್ಟಿಮೋರ್ ವಿಮಾ ಕಂಪೆನಿಯ ಅಧ್ಯಕ್ಷರೂ, ಭಾರತದಲ್ಲಿ ಅಮೇರಿಕದ ತಾಂತ್ರಿಕ ಸಹಕಾರ ಆಯೋಗದ ಡೆಪ್ಯೂಟಿ ಡೈರೆಕ್ಟರರಾಗಿದ್ದವರೂ ಆದ ಶ್ರೀ ನೈಲ್ಸ್‌ರವರು ಮಾತನಾಡಿ ಡಾ| ಪೈಯವರು ವಿವಿಧ ದೇಶಗಳಿಗೆ ಸೇರಿದ ನೂರಾರು ಜನರ ಸಹಕಾರವನ್ನು ಗಳಿಸಿದ ಮಹಾವ್ಯಕ್ತಿಯಾಗಿದ್ದಾರೆಂದರು. ಮ್ಯಾನೇಜ್‌ಮೆಂಟ್ ತಜ್ಞರೂ, ಫ್ರೆಂಡ್ಸ್ ವರ್ಲ್ಡ್ ಕಾಲೇಜಿನ ಸಮಿತಿಯ ಸದಸ್ಯರೂ ಆದ ಶ್ರೀಮತಿ ಮೇರಿ ಕುಶಿಂಗ್ ನೈಲ್ಸ್‌ರವರು ಪ್ರಪಂಚದಲ್ಲೆಲ್ಲ ಸ್ನೇಹ ಹಾಗೂ ಪ್ರೀತಿ ನೆಲೆಗೊಳ್ಳಬೇಕೆಂದು ಆಶಿಸಿದರು.

ಅಕಾಡೆಮಿಯ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ಸ್ವಾಗತಿಸುತ್ತಾ ವಿದ್ಯಾಭ್ಯಾಸ ಪ್ರಸರಣೆಗಾಗಿ ಅಕಾಡೆಮಿ ಮಾಡಿರುವ ಕಾರ್ಯವನ್ನು ಬಹಳವಾಗಿ ಮೆಚ್ಚಿಕೊಳ್ಳಲಾಗಿದೆ ಎಂದರು. ಘಟಿಕೋತ್ಸವದಲ್ಲಿ ೯೦ ಮಂದಿಗೆ ಅಕಾಡೆಮಿ ಫೆಲೋಶಿಪ್‌ಗಳನ್ನು ನೀಡಲಾಯಿತು. ಉಪಾಧ್ಯಕ್ಷ ಶ್ರೀ ಎ. ಎಲ್. ಎನ್. ರಾವ್‌ರವರು ವಂದನಾರ್ಪಣೆ ಮಾಡಿದರು.

### ನಾಡ ಹಬ್ಬ

ರಂಗಪೇಟೆ, ಕನ್ನಡ ಸಾಹಿತ್ಯ ಸಂಘದ ವತಿಯಿಂದ ನಾಡಹಬ್ಬವು ಕಳೆದ ತಾ. 29 9-65ರಿಂದ 1.10 65ರ ವರೆಗೆ ಜರಗಿತು

ಮೊದಲ ದಿನ ಮುಂಜಾನೆ ಶ್ರೀ ರಾಮಣ್ಣ ಬೋಡಾರವರ ಹಸ್ತದಿಂದ ಧ್ವಜವಂದನೆ ನೆರವೇರಿತು. ಬಳಿಕ ನಾಡದೇವಿಯ ಸ್ಥಾಪನೆ, ಪೂಜಾ ಪ್ರಸಾದ ವಿನಿಯೋಗವಾಯಿತು. ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಬಿ. ಎ ಸನದಿಯವರು ಮಾತನಾಡಿದರು. ಬಳಿಕ ಛಾಯಾಚಿತ್ರ ಪ್ರದರ್ಶನ ನಡೆಯಿತು.

ಎರಡನೇ ದಿನ ಶ್ರೀ ರಾಘವೇಂದ್ರ ಶೆಟ್ಟಿಯವರು ಭಾಷಣ ಮಾಡಿದರು. ಮೂರನೇಯ ದಿನ ಶ್ರೀ ಬೋಡಾ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ರಾಯಚೂರ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ವಿ. ಕೃಷ್ಣಶೆಟ್ಟರೂ ಶ್ರೀ ಪೃಥ್ವಿರಾಜ ಶಾದಿಯವರೂ ಭಾಷಣ ಮಾಡಿದರು. ಡಾ| ಕೆ. ಮುದ್ದಣ್ಣನವರು "ಬೃಂದಾವನ" ಕವನ ಸಂಕಲನದ ಪ್ರಕಾಶನ ಮಾಡಿ 'ಹಂಪೆಯ ಹರಿಹರ' ಎಂಬ ವಿಷಯವಾಗಿ ಮಾತನಾಡಿದರು. ನಂತರ ಶ್ರೀ ಕೆ. ಮುದ್ದಣ್ಣನವರ ಅಧ್ಯಕ್ಷತೆಯಲ್ಲಿ ಕವಿ ಸಮ್ಮೇಳನ ನಡೆಯಿತು.

ನೀವೂ ತಿಳಿಯಿರಿ

# ಭೂ ಸುಧಾರಣಾ ಶಾಸನದ ಮುಖ್ಯಾಂಶಗಳು

ಸಾಮಾಜಿಕ ನ್ಯಾಯವೊದಗಿಸುವ ಉದ್ದೇಶದಿಂದ ಉಳುವವನೇ ಹೊಲದೊಡೆಯನಾಗುವುದು ಅಗತ್ಯವೆಂಬುದು ಮನವರಿಕೆಯಾಗಿದ್ದು, ಇದನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಸಿದ್ಧವಾದ ಮೈಸೂರಿನ ಭೂಸುಧಾರಣಾ ಶಾಸನವು ಮೊನ್ನೆ, ಗಾಂಧೀ ಜಯಂತಿಯಂದು ಜ್ಯಾರಿಗೆ ಬಂದಿದೆ. ನೈಜ ವ್ಯವಸಾಯಗಾರನಿಗೆ ಆಗುತ್ತಿರುವ ಅನ್ಯಾಯವನ್ನು ತಡೆದು, ವ್ಯವಸಾಯೋತ್ಪನ್ನವನ್ನು ಹೆಚ್ಚಿಸುವುದೂ ಈ ಶಾಸನದ ಗುರಿ.

ಈಗ ಭೂಮಾಲೀಕರಾಗಿರುವವರು ೨೭ ಸ್ಟ್ಯಾಂಡರ್ಡ್ ಎಕ್ರೆ ಭೂಮಿಯನ್ನು ಹೊಂದಿರಬಹುದು. ಮುಂದೆ ಭೂಸ್ವಾಮಿಯಾಗುವವರು ೧೮ ಸ್ಟ್ಯಾಂಡರ್ಡ್ ಎಕ್ರೆಯಷ್ಟನ್ನು ಹೊಂದಲು ಮಾತ್ರ ಅವಕಾಶವಿದೆ. ಪರಮಾವಧಿ ಹಿಡುವಳಿಯು ಪ್ಲಾಂಟೇಶನ್ ಮತ್ತು ಸಾಮೂಹಿಕ ವ್ಯವಸಾಯ ಕ್ಷೇತ್ರಗಳಿಗೆ ಅನ್ವಯಿಸುವುದಿಲ್ಲ. ಈ ಕಾನೂನಿನಿಂದಾಗಿ ರಾಜ್ಯದಲ್ಲಿ ೫೦ರಿಂದ ೬೦ ಲಕ್ಷ ಎಕ್ರೆ ಭೂಮಿಯ ಮೇಲೆ ನೈಜ ವ್ಯವಸಾಯಗಾರರಿಗೆ ಒಡೆತನ ಒದಗುವುದೆಂಬ ನಿರೀಕ್ಷೆಯಿದೆ.

ಕಾನೂನು ಸಕ್ರಿಯ ವ್ಯವಹಾರಕ್ಕೆ ಬಂದ ನಂತರ ತಮ್ಮ ಹೆಚ್ಚಿನ ಹಿಡುವಳಿಕೆಯನ್ನು ಒಡೆಯರು ಸರಕಾರಕ್ಕೆ ಬಿಟ್ಟುಕೊಡಬೇಕು. ನಿಶ್ಚಿತ ಪರಿಹಾರ ಅವರಿಗೆ ದೊರೆಯುತ್ತದೆ. ೧೮ನೆ ನವಂಬರ ೧೯೬೧ಕ್ಕೆ ಮೊದಲು ರೂಪುಗೊಂಡ ವಿದ್ಯಾಸಂಸ್ಥೆಗಳ ಅಥವಾ ೧೮ ಜುಲೈ ೧೯೬೫ರಲ್ಲಿ ಸರಕಾರದ ವಶವಿರುವ ಹಾಗೂ ಸರಕಾರಿ ಮೇಲ್ವಿಚಾರಣೆ ಇದ್ದಿರುವ ಸಂಸ್ಥೆಗಳು, ಸಾರ್ವಜನಿಕ ಟ್ರಸ್ಟ್‌ಗಳು ಯಾ ಧಾರ್ಮಿಕ ಕ್ಷೇತ್ರಗಳು ಹೊಂದಿರುವ ಜಮೀನುಗಳಿಗೆ ಈ ಕಾನೂನು ಅನ್ವಯವಾಗುವುದಿಲ್ಲ.

ಕೆಲವು ನಿಶ್ಚಿತ ಪರಿಸ್ಥಿತಿಯ ಪ್ರಕರಣಗಳಲ್ಲದೆ ಈ ಕಾನೂನು ಪ್ರಕಾರ ಗೇಣಿ ಪದ್ಧತಿಯು ನಿಷೇಧಿಸಲ್ಪಟ್ಟಿದೆ. ಆದರೂ ಈಗಿರುವ ಒಕ್ಕಲುಗಳು ಸಕ್ರಿಯ ವ್ಯವಹಾರಕ್ಕೆ ಕಾನೂನು ಬರುವ ವರೆಗೆ ಮುಂದುವರಿಯುವರು. ಯಾವ ಭೂಮಿಯನ್ನು ಸರಕಾರ ವಶಪಡಿಸಿಕೊಳ್ಳಬೇಕು ಯಾವುದನ್ನು ಮಾಲಿಕರಿಗೆ ಬಿಡಬೇಕು ಎಂಬುದು ಸ್ಪಷ್ಟವಾಗಿ ನಿರ್ಧಾರವಾಗುವ ವರೆಗೆ ಈಗಿರುವ ಪರಿಸ್ಥಿತಿಯೇ ಮುಂದುವರಿಯುವುದು. ಆಕ್ಟಿನ ೧೪ನೆ ಸೆಕ್ಷನ್ ಮೇರೆಗೆ ಭೂಮಾಲಿಕರು ತಮ್ಮ ಭೂಮಿಯನ್ನು ಹಿಂದಕ್ಕೆ ಪಡೆಯಬಹುದು.

ಒಕ್ಕಲಿನಿಂದ ಭೂಮಿಯನ್ನು ತನ್ನ ಉಪಯೋಗಕ್ಕಾಗಿ ಪಡೆಯಲಿಚ್ಛಿಸುವ ಭೂಮಾಲಿಕ ಆ ಉದ್ದೇಶಕ್ಕಾಗಿ ನೇಮಿಸಿದ ಟ್ರಿಬ್ಯುನಲಿಗೆ ಅರ್ಜಿ ಬರೆದುಕೊಳ್ಳಬೇಕು. ಈಗಿರುವ ಮುನ್ಸಿಫ್ ಮೆಜಿಸ್ಟ್ರೇಟರೇ ಟ್ರಿಬ್ಯುನಲ್‌ನ ಅಧಿಕಾರಿಗಳು. ಡಿಸ್ಟ್ರಿಕ್ಟ್ ಜಡ್ಜರು ಅಪಿಲೇಟ್ ಅಧಿಕಾರಿಗಳು.

ಕಾಯಂ ಒಕ್ಕಲಿಗ ಕೂಡಿಕೊಟ್ಟ ಯಾ ಒಂದು ಸಂಸ್ಥೆ, ಕಂಪನಿ, ಅವಿಭಕ್ತ ಕುಟುಂಬವಲ್ಲದ ಇತರ ವ್ಯಕ್ತಿಗಳು ಸೇರಿರುವ ಸಂಸ್ಥೆಗಳು, ಧಾರ್ಮಿಕ ಯಾ ಸಾರ್ವಜನಿಕ ಹಿತಕ್ಕೆಂದು ಕೊಡಮಾಡಿದ ಜಮೀನನ್ನು ಮತ್ತೆ ಹಿಂದಕ್ಕೆ ಪಡೆಯುವ ಅವಕಾಶವಿರುವುದಿಲ್ಲ. ಯಾವುದೇ ಕಾರಣದಿಂದ ಒಕ್ಕಲುತನದ ಒಪ್ಪಂದವನ್ನು ರದ್ದು ಪಡಿಸುವುದು ಸಾಧ್ಯವಿಲ್ಲ.

೧೦-೯-೧೯೫೭ರಿಂದು ಗೇಣಿದಾರರಾದ ವರು ತಮ್ಮ ಬೇಸಾಯದ ಭೂಮಿಯನ್ನು ಪುನಃ ಪಡೆಯುವ ಅಧಿಕಾರ ಹೊಂದಿದ್ದಾರೆ. ಆಕ್ಟಿನ ೩೨ನೆ ಸೆಕ್ಷನ್ನನ್ವಯ ಮಾತ್ರವೇ ಗೇಣಿದಾರರನ್ನು ಕಿತ್ತು ಹಾಕಬಹುದು. ಕಾನೂನು ಜ್ಯಾರಿಗೆ ಬಂದೊಡನೆಯೇ ಗೇಣಿಯ ಎಲ್ಲ ಭೂಮಿಯು ರಾಜ್ಯ ಸರಕಾರದ ಹೆಸರಿಗೆ ಬರುವುದು.

ಪರಮಾವಧಿ ಮಿತಿಯ ನಿರ್ಧಾರವು ಏಳು ರೀತಿಯ ವಿಭಾಗವನ್ನೂ ಹೊಂದಿದೆ. ಒಂದು ಸ್ಟ್ಯಾಂಡರ್ಡ್ ಎಕ್ರೆ ಅಂದರೆ ಪ್ರಥಮ ದರ್ಜೆಯ ಒಂದು ಎಕ್ರೆ ಭೂಮಿ. ಪರಮಮಿತಿ ಅಂದರೆ, ಒಂದನೆ ದರ್ಜೆಯ ಭೂಮಿ ೧೮ ಎಕ್ರೆ; ಎರಡನೆಯದು ೨೭ ಎಕ್ರೆ; ಮೂರನೆಯದು ೩೦ ಎಕ್ರೆ, ನಾಲ್ಕನೆಯದು ೫೪ ಎಕ್ರೆ, ಐದನೆಯದು ೭೨ ಎಕ್ರೆ ಆರನೆಯದು ೧೦೮ ಎಕ್ರೆ ಮತ್ತು ಏಳನೆಯದು ೧೪೪ ಎಕ್ರೆ.

---

**ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ**

O. S. No 229/1965

ಲಕ್ಷ್ಮಣ ಕಾಮತ ಇತ್ಯಾ — ವಾದಿರು

ಅಪೋಲಿ ಡಿ. ಸೋಜ ಇತ್ಯಾ — ಪ್ರತಿವಾದಿರು.

3. ಶ್ರೀ ತೋಮಸ ಡಿ. ಸೋಜ, B. D. ಸೋಜರ ಮಗ, ಮಂಗಳೂರು ತಾಲ್ಲೂಕು ಕೊಲ್ಲೂರು ಗ್ರಾಮದ ಮೇಗಿನಹಿತ್ಲು ಮನೆಯಲ್ಲಿರುವವ.

3ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ನಿಮ್ಮ ವ 1.2ನೇ ಪ್ರತಿವಾದಿರಿಂದ ವಾದಿಗೆ ಕಳದ ತಾ. 31-3-1964 ಮತ್ತು 31-3-65ನೇ ವ್ಯಾದೆಗಳಿಗೆ ಬರತಕ್ಕ ಮೂಲ ಗೇಣಿ ಗೇಣಿ ಬದ್ಧಿ ಕೂಡಾ ರೂಪ್ಯಾ 605-30 ಕ್ಕೆ ವಾದಿರು ಮಾಡ್ಲ ಮಾಡಿದ ಸದ್ರಿ ದಾವೆಯು ತಾ. 4-11-65ಕ್ಕೆ ನಿಮಗೆ ಅಕ್ಯೆರ ನೋಟೀಸಿಗ ಯಿಟ್ಟದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
*Advocate for Plaintiffs.*

Karkala, 17-10-65.

---

**ಉದ್ಘಾಟನಾ ಸಮಾರಂಭ**

ಸರಕಾರಿ ಕಿರಿಯ ಬುನಾದಿ ಪ್ರಾಥಮಿಕ ಶಾಲಾ, ಸಟ್ಟಿಬೆಟ್ಟು ಇದರ ಹೊಸ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. ೬ರಂದು ಉಡುಪಿ ತಾಲೂಕು ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎ. ಕೊರಗಪ್ಪ ಇವರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಎಡ್ವಕೇಟ್ ಶ್ರೀ ಪಿ. ಶಿವಾಜಿ ಶೆಟ್ಟರು ವಹಿಸಿದ್ದರು.

---

## ಎಲ್ಲೆಲ್ಲಿ ಏನೇನು?

**ಮಂತ್ರಿ ಆಳ್ವರಿಂದ ಮಹಾದೇವಿ ಹೈಸ್ಕೂಲ್ ಶಂಕುಸ್ಥಾಪನೆ**

ಕಾಪು, ಎಡ್ವಕೇಟ್ ಶ್ರೀ ಕೆ. ಎಸ್. ಎನ್. ಅಡಿಗರವರ ಅಧ್ಯಕ್ಷತೆಯಲ್ಲಿ ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವರು, ಕಾಪು ಗ್ರಾಮೋದ್ಧಾರಕ ಸಂಘದವರು ನಡೆಸುತ್ತಿರುವ ಶ್ರೀ ಮಹಾದೇವಿ ಪ್ರೌಢ ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ತಾ. ೪ರಂದು ನೆರವೇರಿಸಿದರು.

ಪ್ರಾರಂಭದಲ್ಲಿ ಶಾಲಾ ಸಮಿತಿಯ ಅಧ್ಯಕ್ಷ ಶ್ರೀ ಕೆ. ಸರ್ವೋತ್ತಮ ಶೆಟ್ಟರು ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನೂ ಶ್ರೀ ಬಿ. ಆರ್. ಶೆಟ್ಟರು ಸಮಿತಿಯ ವರದಿಯನ್ನೂ ಓದಿದರು.

ಡಾ| ಆಳ್ವರು ಮಾತನಾಡುತ್ತಾ ಶಾಲೆಗೆ ಅಭಿವೃದ್ಧಿಯಾಗಲೆಂದು ಹಾರೈಸಿದರು. ಅಧ್ಯಕ್ಷರು ರಾಷ್ಟ್ರದ ಮುಂದಿರುವ ಸಮಸ್ಯೆಯನ್ನು ಪ್ರಸ್ತಾಪಿಸಿ ಸಮಿತಿಯ ಕಾರ್ಯವನ್ನು ಶ್ಲಾಘಿಸಿದರು. ಅಂತ್ಯದಲ್ಲಿ ಶ್ರೀ ಭೋಜರಾಜ ಹೆಗ್ಡೆಯವರು ವಂದನಾರ್ಪಣೆಗೈದರು.

**ಮಹಾಸಭೆ**

ಹೆರ್ಗ ಸಹಕಾರಿ ಕೃಷಿಕರ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಕಳೆದ ತಾ. ೩೦ರಂದು ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿ ರಿಪೋರ್ಟು, ಬಜೆಟ್, ಆಫೀಸು ಕಟ್ಟಡಕ್ಕೆ ರೂ. ೫೫ ಸಾವಿರ ಮಂಜೂರು ಮಾಡಲಾಯಿತು.

**ಇನ್ನಂಜೆ ಎನ್. ಸಿ. ಸಿ. ಶಿಬಿರ**

ಕಳೆದ ತಾ. 26ರಿಂದ ಇನ್ನಂಜೆ ಎಸ್. ವಿ. ಎಚ್. ಹೈಸ್ಕೂಲ್‌ನಲ್ಲಿ ಕಿರಿಯ ವಿಭಾಗದ ಎನ್. ಸಿ. ಸಿ. ವಾರ್ಷಿಕ ತರಬೇತಿ ಶಿಬಿರವು ಯಶಸ್ವಿಯಾಗಿ ಜರಗಿತು. ಇದೇ ತಾ. 4 ರಂದು ಮೈಸೂರು ರಾಜ್ಯದ ಎನ್. ಸಿ. ಸಿ. ಡೈರೆಕ್ಟರ್ ಏರ್ ಕೊಮೊಡೋರ್ ಎ. ಡಬ್ಲ್ಯು. ಜಾಕೋ ಇವರು ಶಿಬಿರವನ್ನು ಸಂದರ್ಶಿಸಿದರಲ್ಲದೆ, ಶಿಬಿರದಲ್ಲಿ ಜರಗಿದ ವಿವಿಧ ವಿನೋದಾವಳಿ ಪ್ರದರ್ಶನದ ವೇಳೆ ಹಾಜರಿದ್ದರು. ಇವರು ತಮ್ಮ ಭಾಷಣದಲ್ಲಿ ಎನ್. ಸಿ. ಸಿ.ಯ ಧ್ಯೇಯಾದಿಗಳನ್ನು ವಿವರಿಸಿದರು. ಇವರೊಂದಿಗೆ ಮಂಗಳೂರಿನ ಗ್ರೂಪ್ ಕಮಾಂಡರ್ ಲೆ| ಕ| ಬಿ. ಸಿ. ಜೋಶಿಯವರು ಆಗಮಿಸಿದ್ದರು. ಶಿಬಿರಾಧಿಕಾರಿ ಮೇಜರ್ ಕೆ. ಜೆ. ಜೋಸೆಫರು ವಂದನೆಗಳನ್ನರ್ಪಿಸಿದರು.

**ಅಮೆರಿಕಾದಲ್ಲಿ ಗಾಂಧಿ ತತ್ವ ಮತ್ತು ಅಧ್ಯಾತ್ಮ**

ಆಳಿಕೆ, ಪ್ರಸಿದ್ಧ ತತ್ವಜ್ಞಾನಿಗಳೂ, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರೂ, ಕನ್ನಡದ ಖ್ಯಾತ ಬರಹಗಾರರೂ ಆದ ಶ್ರೀ ಯಮುನಾಚಾರ್ಯರು ತಾ. ೬ ರಂದು ಲೋಕಸೇವಾ ಹೈಸ್ಕೂಲಿನಲ್ಲಿ "ಅಮೇರಿಕಾದಲ್ಲಿ ಗಾಂಧಿ ತತ್ವ ಮತ್ತು ಅಧ್ಯಾತ್ಮ" ಎಂಬ ಕುರಿತಾಗಿ ಮಾತನಾಡುತ್ತಾ "ಲೋಕಹಿತಕ್ಕಾಗಿ ಅನೇಕ ಸಂತರು ಶ್ರಮಿಸಿದ್ದಾರೆ. ಗಾಂಧೀಜಿಯವರು ಅದೇ ಸಂತರ ಪರಂಪರೆಗೆ ಸೇರಿದವರು. ಅವರು ಅಂತಹ ಸಂತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮನ್ನು ನಡೆಸಿಕೊಂಡು ಹೋಗಿದ್ದಾರೆ. ಅವರ ಜೀವನ ತತ್ವ ಮತ್ತು ಅವರು ಮಾಡಿದ ಮಹತ್ಕಾರ್ಯಗಳಿಂದ ಅವರ ಹೆಸರು ಅಮರವಾಗಿ ಉಳಿದೀತು. ಅದ್ದರಿಂದ ಅಮೇರಿಕದ ಜನತೆ ಗಾಂಧೀಜಿಯವರಿಂದ ಬಹಳವಾಗಿ ಪ್ರಭಾವಿತರಾಗಿದ್ದಾರೆ. ಅವರು ಭಾರತಕ್ಕೆ ಮಾತ್ರವೇ ಅಲ್ಲ, ಇಡೀ ಜನಾಂಗಕ್ಕೇ ಮಾರ್ಗದರ್ಶಕರು ಎಂಬುದಾಗಿ ಅವರು ಹೇಳುತ್ತಾರೆ.

ಅಮೇರಿಕಾದಲ್ಲಿ ನಾಗರಿಕ ಹಕ್ಕುಬಾಧ್ಯತೆಗಳನ್ನು ಸ್ಥಾಪಿಸಲಿಕ್ಕಾಗಿ ಅಮೇರಿಕಾದ ಶ್ವೇತವರ್ಣೀಯರು ಮತ್ತು ನಿಗ್ರೋಗಳು ಮಾರ್ಟಿನ್ ಲೂಥರ್ ಕಿಂಗ್ ಎಂಬವರ ನೇತೃತ್ವದಲ್ಲಿ ಆಂದೋಲನ ಮಾಡುತ್ತಿದ್ದಾರೆ. ಅವರು ಗಾಂಧೀಜಿಯವರ ಸತ್ಯಾಗ್ರಹದ ವಿಧಾನಗಳನ್ನೇ ಈ ಆಂದೋಲನದಲ್ಲಿ ಅನುಸರಿಸುತ್ತಿದ್ದಾರೆ ಎಂದರು. ಅಲ್ಲದೆ ಅಮೇರಿಕನರು ಭಾರತೀಯ ಅಧ್ಯಾತ್ಮದ ಕಡೆಗೆ ಹೇಗೆ ಆಸಕ್ತರಾಗಿದ್ದಾರೆಂಬುದನ್ನು ಉದಾಹರಣೆ ಸಹಿತ ವಿವರಿಸುತ್ತಾ "ಅಮೇರಿಕಾದಂತಹ ದೇಶಗಳಲ್ಲಿ ಅಧ್ಯಾತ್ಮಿಕತೆ ಬೇಕೆಂಬ ಬಯಕೆ ಇದ್ದಿರುವಾಗ ನಾವು ಅಂತಹುದನ್ನು ಹಳಿಯಲಿಕ್ಕೆ ಸಿದ್ಧರಾಗಿದ್ದೇವೆ. ಈ ಅಧ್ಯಾತ್ಮದಿಂದ ನಾವು ಕೆಟ್ಟು ಹೋಗಿದ್ದೇವೆ ಎಂದು ಹೇಳುತ್ತೇವೆ. ಆರ್ಥಿಕ ಪ್ರಗತಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಹೇಳುವುದನ್ನೂ ನಾವು ಕೇಳುತ್ತೇವೆ. ನಿಜವಾಗಿಯೂ ನಾವು ಆರ್ಥಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಹಿಂದುಳಿದಿದ್ದೇವೆ. ಅಮೇರಿಕನರು ಪ್ರಪಂಚವಾದಿಗಳೆಂದು ನಾವು ಟೀಕಿಸುವುದಿದೆ. ಆದರೆ ನಮ್ಮಲ್ಲಿ ಪ್ರಾಪಂಚಿಕತೆ ಕಡಿಮೆಯಿದೆಯೇ? ನಿಜವಾಗಿ ನಾವು ಅಸಮರ್ಥ ಪ್ರಪಂಚವಾದಿಗಳು ಅವರು ಸಮರ್ಥ ಪ್ರಪಂಚವಾದಿಗಳು ಎಂದು ನನಗನಿಸುತ್ತದೆ. ಅಮೇರಿಕದ ಜನತೆಯಲ್ಲಿ ಭಾರತದ ಅಧ್ಯಾತ್ಮದ ಕುರಿತಾಗಿ ತೀವ್ರವಾದ ಶ್ರದ್ಧೆ ಮತ್ತು ಆಸಕ್ತಿಗಳು ಇದ್ದರೂ ಇಲ್ಲಿಯ ಜನಜೀವನದ ಸಮಸ್ಯೆಗಳನ್ನು ಬಗೆಹರಿಸಲು ಏಕೆ ಸಮರ್ಥವಾಗಿಲ್ಲ ಎಂಬುದಾಗಿ ಅಲ್ಲಿಯ ವಿಚಾರವಾದಿಗಳು ಪ್ರಶ್ನಿಸುತ್ತಾರೆ. ಅಧ್ಯಾತ್ಮವನ್ನು ಜೀವನದಲ್ಲಿ ನಾವು ಅಳವಡಿಸಿ ನಮ್ಮ ಜನಜೀವನದ ಸಮಸ್ಯೆಗಳನ್ನು ಬಗೆಹರಿಸಲು ನಾವು ಯತ್ನಿಸಬೇಕು. ಆಗ ಭಾರತೀಯ ಅಧ್ಯಾತ್ಮದ ಅನುಸರಣೆಗಿರುವ ಒಂದೇ ಒಂದು ತಡೆ ಇಲ್ಲವಾಗುವುದು. ಮಾತ್ರವಲ್ಲ, ಮಾನವ ಪ್ರಗತಿಗಾಗಿ ವಿಜ್ಞಾನ ಮತ್ತು ಸುಜ್ಞಾನಗಳನ್ನು ಸಮನ್ವಯಿಸಿಕೊಂಡು ಬಳಸಿಕೊಳ್ಳಬೇಕು. ಆಗ ಆತ್ಮ ಕಲ್ಯಾಣವೂ ಆಗುವುದು. ಆಗ ಲೋಕ ಕಲ್ಯಾಣವೂ ಏರ್ಪಡುವುದು" ಎಂದರು.

ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷ ಶ್ರೀ ಭದ್ರಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಯಂ. ನಾರಾಯಣ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಸದಾಶಿವ ಭಟ್ಟರು ಅತಿಥಿಗಳ ಪರಿಚಯ ಮಾಡಿಸಿದರು. ಯಂ. ಗಂಗಾಧರ ಭಟ್ಟರಿಂದ ವಂದನಾರ್ಪಣೆ ನಡೆಯಿತು.

**ಮಳೆ ಇಲ್ಲ**

ಸುಮಾರು ಎರಡು ತಿಂಗಳಿಂದ ಮಳೆಯೇ ಇಲ್ಲ. ಎಪ್ರಿಲ್ ಮೇ ತಿಂಗಳಂತೆ ಉರಿ ಬಿಸಿಲು ಕಾಯುತ್ತಿದೆ, ರೈತ ಕಂಗಾಲಾಗಿದ್ದಾನೆ. ಮಳೆಗಾಲ ತಡವಾಗಿ ಪ್ರಾರಂಭವಾಗಿ ನೆಡುವಾಗಲೇ ವಿಳಂಬವಾಗಿತ್ತು. ಈಗ ಮಳೆ ಇಲ್ಲದ್ದರಿಂದ ಕಡೆಗೆ ನಟ್ಟ ಬೆಳೆ ಕದಿರು ಬರುವಾಗಲೇ ಸುಟ್ಟುಹೋಗಿದೆ. ಬೆಟ್ಟು ಗದ್ದೆ ಬಂಜರಾಗಿಯೇ ಉಳಿದಿತ್ತು. ಹೀಗಾಗಿ ಬೆಳೆ ತೀರ ಕಡಿಮೆ ಎಂದು ಹೇಳಬಹುದು. ಎರಡನೆ ಬೆಳೆಗೆ ನೀರಿಲ್ಲದೆ ತುಂಬಾ ತೊಂದರೆಯಾಗಿ ರೈತರು ಕಂಗಾಲಾಗಿದ್ದಾರೆ. ಎಲ್ಲೆಲ್ಲಿಯೂ ನೀರಿನ ಅಭಾವ ತೋರಿಬರುತ್ತದೆ.

---


**ನಿರೀಕ್ಷಿಸಿರಿ!**

ಬರುವ ವಾರ

(ತಾ 28—10—65)

**ದೀಪಾವಳಿ ಸಂಚಿಕೆ**

ವಿಶಿಷ್ಟ ತರದಲ್ಲಿ
ಪ್ರಕಟವಾಗುವುದು

*READ &*
*ADVERTISE IN*
**NAVAYUGA WEEKLY**

# ಕ್ಷೇತ್ರ ಮುರುಗ

( …ನೇ ಪುಟದಿಂದ)

ತಿದೆ. ಅಂ… ಈ ವರ್ಷ ಪ್ರಶಂಸನೀಯ ಬೆಳೆ ಬಂದೇ ಬರಬೇಕು. ಇಡೀ ಹಳ್ಳಿಯು ನನ್ನ ಕೆಲಸ ಮತ್ತು ಕೈಯ ಅದೃಷ್ಟಕ್ಕಾಗಿ ಹೊಟ್ಟೆಕಿಚ್ಚು ಪಡುತ್ತಿದೆ. ನಿನ್ನೆ ರಾತ್ರಿ ಕಣ್ಣು ಕಳಿಸುವಷ್ಟು ನಿದ್ದೆ ಮಾಡಿಲ್ಲ. ಕೈಯಲ್ಲಿ ಆರತಿಯನ್ನು ತೆಗೆದುಕೊಂಡ ಕೆನ್ನೀರನ್ನು ಗದ್ದೆಗೆ ತಿರುಗಿಸುವ…."

"ಅನಂತ ವಂದನೆಗಳು, ನನಗೆ ಸಂತೋಷವಾಯಿತು, ಮುರುಗ. ಆದರೆ ನಾವು, ಪಟ್ಟಣದಲ್ಲಿ ಬೆಳೆದಿರುವ ಜನರು, ಈ ವಿಷಯಗಳನ್ನು ಏನೂ ತಿಳಿದುಕೊಂಡಿಲ್ಲ…." ಏನು ಹೇಳಬೇಕೆಂದು ತಿಳಿಯದ ರಾಮು ಒಟ್ಟಾರೆ ಉತ್ತರ ಕೊಟ್ಟನು.

"ನನ್ನೊಂದಿಗೆ ಬನ್ನಿ ಸ್ವಾಮಿ. ಚಲೋ ಹೋರಿಗಳ ಜತೆಯಿಂದ ಗದ್ದೆಯನ್ನು ಹೇಗೆ ಉಳುತ್ತೇನೆಂಬುದನ್ನು ನೋಡಿರಿ. ಆ ಎತ್ತುಗಳು ಕೆಸರಿಗೆ ಜಗ್ಗದೆ ಹೇಗೆ ಕಷ್ಟಪಡುತ್ತವೆಂಬುದನ್ನೂ ನೋಡಿರಿ. ಅವುಗಳಿಗೆ ಕೊಟ್ಟಿರುವ ಹಣ ನಿಜವಾಗಿ ಯೋಗ್ಯವಾಗಿದೆ."

ಇಷ್ಟೆಲ್ಲಾ ಹೇಳಿದರೂ ತನ್ನನ್ನು ನಗಾಡಿಸಲು ರಾಮು ಒಂದು ಮಾತನ್ನು ಆದರೂ ಆಡದಿರುವದನ್ನೂ, ತಲೆಯಲ್ಲಾಡಿಸದೆ ಇರುವದನ್ನೂ ಕಂಡ ಮುರುಗ ಒಂದು ನಿಮಿಷ ಸುಮ್ಮಗಾದನು. ಅನಂತರ ಮುಂದುವರಿಸಿದನು. "ನಿಮ್ಮ ತಾಯಿಯವರು ನೆಟ್ಟಿರುವ ತರಕಾರಿಯ ಗಿಡಗಳು ಈಗ ಉತ್ತಮ ಫಲವನ್ನೀಯುತ್ತಿವೆ. ಅವುಗಳನ್ನು ನೀವೇ ಕೈಯ್ಯಾರೆ ಕಿತ್ತು ಮನೆಗೆ ತರುವದು ಒಳ್ಳೆಯದು. ಅದು ನಿಮ್ಮ ದುಃಖವನ್ನು ಕಡಿಮೆ ಮಾಡೀತು; ಊಟದ ರುಚಿಯನ್ನು ಹೆಚ್ಚು ಮಾಡೀತು. ನಿಮ್ಮದೇ ಸ್ಥಳದಲ್ಲಿ, ನೀವೇ ಬೆಳೆಸಿ, ನೀವೇ ಕೊಯ್ದು ತಂದ ಆಹಾರಕ್ಕೆ ಬೇರೆ ಯಾವ ಆಹಾರವೂ ಸಮವಾಗಲಾರದು. ಅದು ಪವಿತ್ರವಿದೆ."

"ನೀನು ಚಲೋ ವಿಷಯಗಳನ್ನು ಹೇಳುತ್ತಿ, ಮುರುಗ—ಆದರೆ ನನ್ನ ಮನಸ್ಸು ಬೇರೆ ಆಲೋಚನೆಯನ್ನು ಮಾಡುತ್ತಿದೆ. ಸರಳ ಜೀವನದ ಪಾವಿತ್ರ್ಯದ ಕುರಿತು ನನಗೆ ಕಲಿಸಬೇಕೇನು? ಈ ಹಳ್ಳಿಯನ್ನು ನಾನು ಪ್ರೀತಿಸುತ್ತೇನೆ. ಏಳು ತಲೆಮಾರುಗಳಿಂದ ನಮಗೆ ಬಂದಿರುವ ಈ ಭೂಮಿಯ ರಕ್ತವು ನನ್ನಲ್ಲಿ ಹರಿಯುತ್ತಿದೆ."

ಒಂದು ನೀಳ ಉಸಿರನ್ನೆಳೆದುಕೊಂಡು ಸಹಾಯದ ನಿಟ್ಟುಸಿರನ್ನು ಬಿಟ್ಟು ರಾಮು ಮುಂದರಿಸಿದನು. "ಸಮಯ ಬದಲಾಗಿದೆ. ಆದರೆ ಹಳೆಯದನ್ನು ಒಂದೇ ದಿನದಲ್ಲಿ ಕೊಡೆದುಹಾಕಲು ಸಾಧ್ಯವಿರುವದಿಲ್ಲ, ಮುರುಗ. ಹುರಿ ಬಿಡಿಸುವದಕ್ಕಿಂತಲೂ ಹಣೆಯುವದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಹಾಗಲ್ಲವೇನು? ನನ್ನ ಸ್ನೇಹಿತ ಕೇದಾರಿಯಿಂದ ಮತ್ತು ಕಲಾ ಶಾಲೆಯ ಉಪನ್ಯಾಸರೊಬ್ಬರಿಂದ, ನಾನು ಹೇಗಾದರೂ ಬಿ. ಎ. ಮುಗಿಸಬೇಕೆಂದು ಪ್ರೇಮ ಪೂರ್ಣ ಪತ್ರ ಬಂದಿದೆ. ಇಲ್ಲದಿದ್ದಲ್ಲಿ ಎಲ್ಲವೂ ಹಾಳಾಗುತ್ತದೆ, ಮುರುಗ, ನಾನು ನಿನ್ನನ್ನು ಕೇಳುತ್ತೇನೆ.. ನದಿಯ ನೀರು ಹರಿದುಕೊಂಡು ಬಂದಿಲ್ಲದಾಗ ಸಾಯುತ್ತಿರುವ ಗಿಡಗಳಿಗೆ ಬಾಲ್ದಿಯಲ್ಲಿ ನೀರನ್ನು ಒಯ್ದು ಹಾಕಿ ನೀನು ಸಲಹುವುದಿಲ್ಲವೇ? ಮುರುಗ, ನನ್ನ ತಾಯಿಯವರ ನನ್ನನ್ನು ಇಂಗ್ಲಿಷ್ ಶಾಲೆಗೆ ಸೇರಿಸಿದ್ದರೆಂದು ನೀನೇ ಹೇಳಿದ್ದಿಯಲ್ಲಾ? ಅವರ ಮೊದಲಿನ ಆಶೆಯನ್ನು ತೃಪ್ತಿಪಡಿಸುತ್ತೇನೆ."

"ನಂಬಿಕೆಯ ಮುರುಗ, ನಿನ್ನ ಕೈಯಲ್ಲಿ ಭೂಮಿಯು ಜಾಗೃತೆಯಾಗಿರುತ್ತದೆ. ವ್ಯವಸಾಯದ ವಿಷಯದಲ್ಲಿ ನನಗೇನೂ ಗೊತ್ತಿರುವದು ಇಲ್ಲ. ನಾನು ಹೋಗಿ ವಿದ್ಯಾಭ್ಯಾಸವನ್ನು ಮುಗಿಸಬೇಕು. ಆ ವಿಷಯ ಚೆನ್ನಾಗಿ ಆಲೋಚಿಸಿದ್ದೇನೆ. ನೀನು ನನಗೀಗ ನೂರು ರೂಪಾಯಿ ದೊರಕುವಂತೆ ಮಾಡಬೇಕು. ಬಿ. ಎ. ಪದವಿಯನ್ನು ಪಡೆದು ಕೊಂಡು ನಾನು ಹಿಂತಿರುಗಿ ಬರುತ್ತೇನೆ. ನಿನ್ನೊಂದಿಗೆ ನಿಜವಾಗಿ ಇಲ್ಲಿ ನೆಲಸುತ್ತೇನೆ ಪವಿತ್ರ ಹಾಗೂ ಗೌರವದ ಉಳುವ ಕೆಲಸಕ್ಕಾಗಿ ಜೀವನವನ್ನು ಮೀಸಲಾಗಿರಿಸುತ್ತೇನೆ. ಹಾಗೆ ನವತರುಣರಿಗೆ ಆದರ್ಶಪ್ರಾಯನಾಗುತ್ತೇನೆ. ಈಗ ನಾನೇನು ಇದ್ದೇನೆ? ಮುರುಗ, ಫಲವೀಯ ಕೆಲ ದಿನಗಳಿರುವಾಗ ಭತ್ತದ ಸಸಿಯ ಹೊಟ್ಟೆಯಲ್ಲೇ ಒಣಗಿ ಹೋಗಿರುವ ಕದಿರು ಇರುವ, ಆದರೆ ಚನ್ನಾಗಿ ಬೆಳೆದಿರುವ ಭತ್ತದ ಸಸಿಯಂತೆ ನನ್ನ ಅವಸ್ಥೆ ಇದೆ. ಈಗ ನಾನು ಕೇವಲ ಪರಾಜಯ ಹೊಂದಿದವನು. ನಾನೀಗ ಇತರರ ತಾತ್ಸಾರ ಹಾಗೂ ಕರುಣೆಗೊಳಗಾದವನು. ಅದು ಯಾವಾಗಲೂ ನನ್ನ ಹೃದಯವನ್ನು ಕೊರೆಯುತ್ತದೆ…."

ಮುರುಗನು ಆ ಉದ್ದ ಭಾಷಣವನ್ನು ತಾಳ್ಮೆಯಿಂದ ಕೇಳಿದನು. ಮಾತಾಡಲು ಸಂದೇಹಪಟ್ಟರೂ ಮೆಲ್ಲಗೆ ಮತ್ತು ದುಃಖದಿಂದ ಉತ್ತರಿಸಿದನು. "ಸ್ವಾಮಿಯು ಹಾಗೆ ನಿಶ್ಚಯಕ್ಕೆ ಬಂದಿರುವರಾದಲ್ಲಿ ಬಡ ಮುರುಗನಿಗೆ 'ಹೌದು' ಮತ್ತು 'ಅಲ್ಲ' ಹೇಳಲಿಕ್ಕೇನೂ ಇರುವದಿಲ್ಲ. ಅವನ ಧಣಿಯ ಆಜ್ಞೆಯಂತೆ ಮತ್ತು ಇಚ್ಛೆಯಂತೆ ದುಡಿಯಬೇಕು."

"ನಾಳೆ ನಾನು ಮದ್ರಾಸಿಗೆ ಹೊರಡಬೇಕು, ಮುರುಗ."

"ಸ್ವಾಮಿಯು ಹೋಗುವ ಮುಂಚೆ ಭೂಮಿಯನ್ನು ನೋಡಿಕೊಂಡು ಹೋಗಬೇಕು."

"ನೋಡಲಿಕ್ಕೇನಿದೆ, ಮುರುಗ? ಐದು ತಲೆಮಾರುಗಳೊಳಗೆ ಏಳು ನೂರು ಎಕ್ರೆಗಳಿದ್ದದ್ದು ಏಳು ಎಕರೆಗಳಿಗೆ ಕಮ್ಮಿಯಾಗಿದೆ. ಕಾಲದಿಂದಾಗಿ ಇಂದು ಅಷ್ಟಾದರೂ ಇದೆಯೋ ಎಂಬುದರಲ್ಲಿ ಸಂದೇಹವಿದೆ. ಇಂದಿನ ಆಧುನಿಕ ತಳಕು ಬೆಳಕಿನ ಮತ್ತು ಭೋಗಕ್ಕೆ ಪ್ರಾಮುಖ್ಯತೆ ಇರುವ ಜೀವನಕ್ಕಾಗಿ ದುಂದುವೆಚ್ಚ ಮಾಡಿ ಸಾಲಕ್ಕೆ ಭಾಗಿಗಳಾಗಬೇಕಾಗುತ್ತದೆ. ಜ್ಞಾನವು ಕೂಡಾ ಅದರದೇ ಕೃಷಿಯ ಖರ್ಚು ಮತ್ತು ಬೆಳೆಯನ್ನು ವಹಿಸಿಕೊಂಡಿದೆ. ನಾಗರಿಕತೆಗಾಗಿ ನಾನು ಖರ್ಚು ಮಾಡುತ್ತೇನೆ. ಅವು ನನ್ನ ಹೊಟ್ಟೆಯನ್ನು ಖಾಲಿಯನ್ನಾಗಿ ಮಾಡುತ್ತದೆ. ನಾನು ಹೋಗುವ ಮುಂಚೆ ನಿನ್ನನ್ನು ಸಂತೋಷಪಡಿಸಲಿಕ್ಕಾದರೂ ಜಮೀನನ್ನು ನೋಡುತ್ತೇನೆ."

ಮುರುಗನು ಹೋದ ಕೂಡಲೇ ರಾಮು ವಿಚಾರ ಭ್ರಮಣೆಯಲ್ಲಿ ಬಿದ್ದನು.

"ಕೇದಾರಿ, ಬಿ. ಎ. ಮುಗಿಸಲಿಕ್ಕೆ ನಾನು ಲಕ್ಷ್ಯಕೊಡಲಿಕ್ಕಿಲ್ಲ. ಬಿ. ಎ. ಗಿಂತಲೂ ನಿನ್ನ ಸಹವಾಸವೇ ನನ್ನನ್ನು ಮದ್ರಾಸಿಗೆ ಸೆಳೆಯುತ್ತಿದೆ. ಹಡಗುಗಳಿಗೆ ಸಮುದ್ರ ಅಥವಾ ಹಾಯಿಗಳಿಗೆ ಗಾಳಿ ಇರುವಂತೆ ನನಗೆ ನೀನಿರುವೆ. ನಾನು ಹೆಣ್ಣಿನಂತಿದ್ದೇನೆ. ಈ ವಿಶಾಲ ವಿಶ್ವದಲ್ಲಿ ಒಬ್ಬಂಟಿಗನಾಗಿ, ನಾನೇ ನಾನಾಗಿ, ನನ್ನವೇ ಆದ ಆಲೋಚನೆಗಳ ಮೇಲೆ ಚಿಂತನೆ ಮಾಡುತ್ತಾ, ಬದುಕಲಾರೆ. ಒಬ್ಬ ನಿಜ ಸ್ನೇಹಿತನ ಬಳಿಯಲ್ಲಿ ರಾಣಿಯ ಆನಂದವನ್ನು ಅನುಭವಿಸುತ್ತೇನೆ. ನೀನು ಬಲು ಬಲವುಳ್ಳವನು. ನೀನು ಬೇರೆ ನಮೂನೆಯಲ್ಲಿ ಎರಕ ಹೊಯ್ಯಲ್ಪಟ್ಟವನು. ಬಂಗಾರದ ಗುಂಪಿನಲ್ಲಿ ತಾಮ್ರದ ಸ್ಪರ್ಶಕ್ಕೊಳಗಾದುದರ ಹಾಗೆ, ಪ್ರಚಲಿತ ನಾಣ್ಯದಂತಿದೆ ನನ್ನ ಸ್ಥಿತಿ. ನೀನಾದರೋ ಧೈರ್ಯದಿಂದ ತಾನೇ ತಾನಾಗಿ ಬಾಳಬಲ್ಲೆ. ನೀನು ಪಾಪಿಗಳಿಂದಾಗಲೀ, ಸಂತರಿಂದಾಗಲೀ ಪೀಡಿಸಲ್ಪಡುವದಿಲ್ಲ; ಬದಲು ಅವರನ್ನು ನಿನ್ನ ದಾರಿಯನ್ನು ಸಂಪಡಿಸಿಕೊಳ್ಳಲಿಕ್ಕೆ ಬೇಕಾಗುವ ದೊಡ್ಡ ಕತ್ತರಿಯಂತೆ ಉಪಯೋಗಿಸಿಕೊಳ್ಳಬಲ್ಲೆ. ಕೆಲ ಮಹಾನ್ ಕಾರ್ಯಗಳಿಗಾಗಿ ನೀನಿರುವದು. ನಿನ್ನೊಂದಿಗೆ ನಾನಿದ್ದಲ್ಲಿ, ನಿನ್ನಷ್ಟಕ್ಕೆ ನಿನ್ನನ್ನು ನೀನೇ ಕಂಡುಕೊಳ್ಳುವಂತೆ ಸಹಾಯವಾಗಲು ನಿನಗೆ ನಾನು ಪ್ರಯೋಜನವಾಗಬಹುದು. ಪ್ರಿಯ ಕೇದಾರಿ, ನಿನ್ನ ಬೆಳವಣಿಗೆ ಮತ್ತು ಜಯದಿಂದ ನಾನು ಆಶೀರ್ವದಿಸಲ್ಪಡಲಿ.

(ಮುಂದುವರಿಯುವುದು)

---

**ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ,**

A. S. No. 70/1965.

ಸೀತು ಹೆಂಗಸು ಕೂಡಾ … … … ಅಪ್ಪೀಲಾಂಟರು

ಮತ್ತು

ತಿಮ್ಮಪ್ಪ ಕೂಡಾ … … … ರೆಸ್ಪೋಂಡೆಂಟರು

ಯವರೊಳಗೆ —

ಮೇಲ್ಕಂಡ ಅಪ್ಪೀಲಿನ ರೆಸ್ಪೋಂಡೆಂಟರು:—

(4) ಲಕ್ಷ್ಮಿ, ಸುಬ್ಬು ಹೆಂಗ್ಸಿನ ಮಗಳು, ಸ್ವತಹಾ ಮತ್ತು ತನ್ನ ಮ್ಯೂನರ್ ಮಗ 11ನೇ ರೆಸ್ಪೋಂಡೆಂಟ್ ದಾಮೋದರನ ಗಾರ್ಡಿಯನಳಾಗಿ ಸಹಾ ಪುತ್ತೂರು ತಾಲೂಕು ಚಿಕ್ಕ ಪುತ್ತೂರು ಗ್ರಾಮದಲ್ಲಿರುವವಳು.

(10) ಮೋಹನದಾಸ ಭಂಡಾರಿ, ಲಕ್ಷ್ಮಿ ಮಗ, ಪುತ್ತೂರು ತಾಲೂಕು ಆರ್ಯಾಪು ಗ್ರಾಮದ ಗೆಣಸಿನ ಕುಮೇರಿ ಎಂಬಲ್ಲಿರುವವ.

(15) ಸುಗುಣ, ಕಮಲನ ಮಗಳು, ಸ್ವತಹಾ ಮತ್ತು ತನ್ನ ಮ್ಯೂನರ ಮಕ್ಕಳು 105ನೇ ರೆಸ್ಪೋಂಡೆಂಟ್ ರಮಣ, 106ನೇ ರೆಸ್ಪೋಂಡೆಂಟ್ ಗಣೇಶ ಇವರ ಗಾರ್ಡಿಯನಳಾಗಿ ಸಹಾ—ಪುತ್ತೂರು ತಾಲೂಕು ಚಿಕ್ಕ ಪುತ್ತೂರು ಗ್ರಾಮ.

(21) ಲೋಕಯ್ಯ, ಸೀತು ಹೆಂಗ್ಸು ಮಗ.
(22) ಗಂಗ, ಸೀತು ಹೆಂಗ್ಸು ಮಗಳು, ಸ್ವತಹಾ ಮತ್ತು ತನ್ನ ಮ್ಯೂನರ್ ಮಕ್ಕಳು (31) ರವೀಂದ್ರ, (32) ರಂಜನ, (33) ವತ್ಸಲ, (34) ರುಕೀಂದ್ರ—ಯಿವರ ಗಾರ್ಡಿಯನ್ ಳಾಗಿ ಸಹಾ } ಮಂಗಳೂರು ತಾಲೂಕು ಸಸಿಹಿತ್ಲು ಗ್ರಾಮ.

(24) ಶ್ರೀಧರ.
(25) ಸದಾಶಿವ.
(26) ಸರೋಜಿನಿ.
(27) ಸುಶೀಲ.
} ನಸೀ ಹೆಂಗ್ಸಿನ ಮಕ್ಕಳು, 26ನೇ ರೆಸ್ಪೋಂಡೆಂಟಳು ಸ್ವತಹಾ ಮತ್ತು ತನ್ನ ಮ್ಯೂನರ ಮಕ್ಕಳು (35) ಶೀಲ, (36) ಶೋಭ, (37) ಸುಮ, (38) ರಮ—ಇವರ ಗಾರ್ಡಿಯನ್ ಳಾಗಿ ಸಹಾ. } — ಡಿ —

(28) ಸುಲೋಚನ.
(29) ರಘುವೀರ.
(30) ರಮೇಶ.
} ಗಂಗನ ಮಕ್ಕಳು, ಮಂಗಳೂರು ತಾಲೂಕು ಸಸಿಹಿತ್ಲು ಗ್ರಾಮ.

(39) ದೇವಪ್ಪ ಭಂಡಾರಿ, ವೆಂಕಪ್ಪ ಭಂಡಾರಿ ಮಗ — ಡಿ —

(46) ಚೆನ್ನಯ್ಯ ಭಂಡಾರಿ, ಪುಟ್ಟಮ್ಮನ ಮಗ, ಶಿಮಂತೂರು ಗ್ರಾಮ.

(73) ಶೀನ ಭಂಡಾರಿ, ಬೊಮ್ಮ ಮಗ, c/o ಈರಪ್ಪ ಭಂಡಾರಿ, ಬಂಟ್ವಾಳ ತಾಲೂಕು ಪೊಳಲಿ ಗ್ರಾಮ.

ಇವರೀಗೆ ಈ ಮೂಲಕ ತಿಳಿಸುವುದೇನಂದ್ರೆ—

ಕಾರ್ಕಳ ಮುನ್ಸೀಫ್ ಕೋರ್ಟು O.S. No. 700/1963ನೇ ವ್ಯಾಜ್ಯದಲ್ಲಿ ತಾ. 25-3-1965ಲ್ಲು ಕೊಡೋಣಾದ ಡಿಕ್ರಿ ಜಡ್ಜ್ಮೆಂಟಿನ ಮೇಲೆ ಅಪ್ಪೀಲಾಂಟರು ಮಾಡಿರುವ ಮೇಲ್ಕಂಡ ಅಪ್ಪೀಲು ತಾ. 26-10-1965ಕ್ಕೆ ಮೇಲ್ಕಂಡ ರೆಸ್ಪೋಂಡೆಂಟರ ನೋಟೀಸು ಬಗ್ಗೆ ಬಿಟ್ಟಿರುತ್ತದೆ. ಸದ್ರಿ ರೆಸ್ಪೋಂಡೆಂಟರಿಗೆ ಮೇಲ್ಕಂಡ ಅಪ್ಪೀಲಿನಲ್ಲಿ ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ. 30-10-1966ನೇ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಶಿಷ್ಟಾಚಾರ ಮಾಡಿ ಸದ್ರಿ ಅಪ್ಪೀಲು ಫೈಸಲು ಮಾಡಲ್ಪಡುವುದು.

ಉಡುಪಿ,
ತಾ. 11-10-66.

**P. V. Acharya,**
*Counsel for appellants.*

---

ನವಯುಗಕ್ಕೆ,
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
**ವಾರ್ಷಿಕ ಚಂದಾ ರೂ. ೧೦**

ನೀವೂ ತಿಳಿಯಿರಿ

# ಭೂ ಸುಧಾರಣಾ ಶಾಸನದ ಮುಖ್ಯಾಂಶಗಳು

ಸಾಮಾಜಿಕ ನ್ಯಾಯವನ್ನೊದಗಿಸುವ ಉದ್ದೇಶದಿಂದ ಉಳುವವನೇ ಹೊಲದೊಡೆಯನಾಗುವುದು ಅಗತ್ಯವೆಂಬುದು ಮನವರಿಕೆಯಾಗಿದ್ದು, ಇದನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಸಿದ್ಧವಾದ ಮೈಸೂರಿನ ಭೂಸುಧಾರಣಾ ಶಾಸನವು ಮೊನ್ನೆ, ಗಾಂಧೀ ಜಯಂತಿಯಂದು ಜ್ಯಾರಿಗೆ ಬಂದಿದೆ. ನೈಜ ವ್ಯವಸಾಯಗಾರನಿಗೆ ಆಗುತ್ತಿರುವ ಅನ್ಯಾಯವನ್ನು ತಡೆದು, ವ್ಯವಸಾಯೋತ್ಪನ್ನವನ್ನು ಹೆಚ್ಚಿಸುವುದೂ ಈ ಶಾಸನದ ಗುರಿ.

ಈಗ ಭೂಮಾಲಿಕರಾಗಿರುವವರು ೨೭ ಸ್ಟ್ಯಾಂಡರ್ಡ್ ಎಕ್ರೆ ಭೂಮಿಯನ್ನು ಹೊಂದಿರಬಹುದು. ಮುಂದೆ ಭೂಸ್ವಾಮಿಯಾಗುವವರು ೧೮ ಸ್ಟ್ಯಾಂಡರ್ಡ್ ಎಕ್ರೆಯಷ್ಟನ್ನು ಹೊಂದಲು ಮಾತ್ರ ಅವಕಾಶವಿದೆ. ಪರಮಾವಧಿ ಹಿಡುವಳಿಯು ಪ್ಲಾಂಟೇಶನ್ ಮತ್ತು ಸಾಮೂಹಿಕ ವ್ಯವಸಾಯ ಕ್ಷೇತ್ರಗಳಿಗೆ ಅನ್ವಯಿಸುವುದಿಲ್ಲ. ಈ ಕಾನೂನಿನಿಂದಾಗಿ ರಾಜ್ಯದಲ್ಲಿ ೫೦ರಿಂದ ೬೦ ಲಕ್ಷ ಎಕ್ರೆ ಭೂಮಿಯ ಮೇಲೆ ನೈಜ ವ್ಯವಸಾಯಗಾರರಿಗೆ ಒಡೆತನ ಒದಗುವುದೆಂಬ ನಿರೀಕ್ಷೆಯಿದೆ.

ಕಾನೂನು ಸಕ್ರಿಯ ವ್ಯವಹಾರಕ್ಕೆ ಬಂದ ನಂತರ ತಮ್ಮ ಹೆಚ್ಚಿನ ಹಿಡುವಳಿಕೆಯನ್ನು ಒಡೆಯರು ಸರಕಾರಕ್ಕೆ ಬಿಟ್ಟುಕೊಡಬೇಕು. ನಿಶ್ಚಿತ ಪರಿಹಾರ ಅವರಿಗೆ ದೊರೆಯುತ್ತದೆ. ೧೮ನೆ ನವಂಬರ ೧೯೬೧ಕ್ಕೆ ಮೊದಲು ರೂಪುಗೊಂಡ ವಿದ್ಯಾಸಂಸ್ಥೆಗಳ ಅಥವಾ ೧೮ನೆ ಜುಲೈ ೧೯೬೫ರಲ್ಲಿ ಸರಕಾರದ ವಶವಿರುವ ಹಾಗೂ ಸರಕಾರಿ ಮೇಲ್ವಿಚಾರಣೆಯಲ್ಲಿರುವ ಸಂಸ್ಥೆಗಳು, ಸಾರ್ವಜನಿಕ ಟ್ರಸ್ಟ್‌ಗಳು ಯಾ ಧಾರ್ಮಿಕ ಕ್ಷೇತ್ರಗಳು ಹೊಂದಿರುವ ಜಮೀನುಗಳಿಗೆ ಈ ಕಾನೂನು ಅನ್ವಯವಾಗುವುದಿಲ್ಲ.

ಕೆಲವು ನಿಶ್ಚಿತ ಪರಿಸ್ಥಿತಿಯ ಪ್ರಕರಣಗಳಲ್ಲದೆ ಈ ಕಾನೂನು ಪ್ರಕಾರ ಗೇಣಿ ಪದ್ಧತಿಯು ನಿಷೇಧಿಸಲ್ಪಟ್ಟಿದೆ. ಆದರೂ ಈಗಿರುವ ಒಕ್ಕಲುಗಳು ಸಕ್ರಿಯ ವ್ಯವಹಾರಕ್ಕೆ ಕಾನೂನು ಬರುವ ವರೆಗೆ ಮುಂದುವರಿಯುವರು. ಯಾವ ಭೂಮಿಯನ್ನು ಸರಕಾರ ವಶಪಡಿಸಿಕೊಳ್ಳಬೇಕು ಯಾವುದನ್ನು ಮಾಲಿಕರಿಗೆ ಬಿಡಬೇಕು ಎಂಬುದು ಸ್ಪಷ್ಟವಾಗಿ ನಿರ್ಧಾರವಾಗುವ ವರೆಗೆ ಈಗಿರುವ ಪರಿಸ್ಥಿತಿಯೇ ಮುಂದುವರಿಯುವುದು. ಆಕ್ಟಿನ ೧೪ನೆ ಸೆಕ್ಷನ್ ಮೇರೆಗೆ ಭೂಮಾಲಿಕರು ತಮ್ಮ ಭೂಮಿಯನ್ನು ಹಿಂದಕ್ಕೆ ಪಡೆಯಬಹುದು.

ಒಕ್ಕಲಿನಿಂದ ಭೂಮಿಯನ್ನು ತನ್ನ ಉಪಯೋಗಕ್ಕಾಗಿ ಪಡೆಯಲಿಚ್ಛಿಸುವ ಭೂಮಾಲಿಕ ಆ ಉದ್ದೇಶಕ್ಕಾಗಿ ನೇಮಿಸಿದ ಟ್ರಿಬ್ಯುನಲಿಗೆ ಅರ್ಜಿ ಬರೆದುಕೊಳ್ಳಬೇಕು. ಈಗಿರುವ ಮುನ್ಸಿಫ್ ಮೆಜಿಸ್ಟ್ರೇಟರೇ ಟ್ರಿಬ್ಯುನಲ್‌ನ ಅಧಿಕಾರಿಗಳು. ಡಿಸ್ಟ್ರಿಕ್ಟ್ ಜಡ್ಜರು ಅಪಿಲೇಟ್ ಅಧಿಕಾರಿಗಳು.

ಕಾಯಂ ಒಕ್ಕಲಿಗ ಕೂಡ್ಪಟ್ಟಿಯಾ ಒಂದು ಸಂಸ್ಥೆ, ಕಂಪೆನಿ, ಅವಿಭಕ್ತ ಕುಟುಂಬವಲ್ಲದ ಇತರ ವ್ಯಕ್ತಿಗಳು ಸೇರಿರುವ ಸಂಸ್ಥೆಗಳು, ಧಾರ್ಮಿಕ ಯಾ ಸಾರ್ವಜನಿಕ ಹಿತಕ್ಕೆಂದು ಕೊಡಮಾಡಿದ ಜಮೀನನ್ನು ಮತ್ತೆ ಹಿಂದಕ್ಕೆ ಪಡೆಯುವ ಅವಕಾಶವಿರುವುದಿಲ್ಲ. ಯಾವುದೇ ಕಾರಣದಿಂದ ಒಕ್ಕಲುತನದ ಒಪ್ಪಂದವನ್ನು ರದ್ದು ಪಡಿಸುವುದು ಸಾಧ್ಯವಿಲ್ಲ.

೧೦-೯-೧೯೫೭ರಿಂದ ಗೇಣಿದಾರರಾದವರು ತಮ್ಮ ಬೇಸಾಯದ ಭೂಮಿಯನ್ನು ಸ್ವಂತ ಪಡೆಯುವ ಅಧಿಕಾರ ಹೊಂದಿದ್ದಾರೆ. ಆಕ್ಟಿನ ೪೫ನೆ ಸೆಕ್ಷನ್‌ನನ್ವಯ ಮಾತ್ರವೇ ಗೇಣಿದಾರರನ್ನು ಕಿತ್ತು ಹಾಕಬಹುದು. ಕಾನೂನು ಜ್ಯಾರಿಗೆ ಬಂದೊಡನೆಯೇ ಗೇಣಿಯ ಎಲ್ಲ ಭೂಮಿಯು ರಾಜ್ಯ ಸರಕಾರದ ಹೆಸರಿಗೆ ಬರುವುದು.

ಪರಮಾವಧಿಮಿತಿಯ ನಿರ್ಧಾರವು ಏಳು ರೀತಿಯ ವಿಭಾಗವನ್ನೂ ಹೊಂದಿದೆ. ಒಂದು ಸ್ಟ್ಯಾಂಡರ್ಡ್ ಎಕ್ರೆ ಅಂದರೆ ಪ್ರಥಮ ದರ್ಜೆಯ ಒಂದು ಎಕ್ರೆ ಭೂಮಿ. ಪರಮಾವಧಿ ಅಂದರೆ, ಒಂದನೆ ದರ್ಜೆಯ ಭೂಮಿ ೧೮ ಎಕ್ರೆ; ಎರಡನೆಯದು ೨೭ ಎಕ್ರೆ; ಮೂರನೆಯದು ೩೬ ಎಕ್ರೆ, ನಾಲ್ಕನೆಯದು ೫೪ ಎಕ್ರೆ, ಐದನೆಯದು ೭೨ ಎಕ್ರೆ ಆರನೆಯದು ೧೦೮ ಎಕ್ರೆ ಮತ್ತು ಏಳನೆಯದು ೧೪೪ ಎಕ್ರೆ.

---

**ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ**

O. S. No 229/1965

ಲಕ್ಷ್ಮಣ ಕಾಮತ ಸಹಾ —ವಾದಿರು

ಅಪೋಲಿ ಡಿ. ಸೋಜ ಸಹಾ— ಪ್ರತಿವಾದಿರು.

3. ಶ್ರೀ ತೋಮಸ ಡಿ. ಸೋಜ, B. D. ಸೋಜರ ಮಗ, ಮಂಗಳೂರು ತಾಲ್ಲೂಕು ಕೊಲ್ಲೂರು ಗ್ರಾಮದ ಮೇಗಿನಹಿತ್ಲು ಮನೆಯಲ್ಲಿರುವವ.

3ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ನಿಮ್ಮ ವ 1.2ನೇ ಪ್ರತಿವಾದಿರಿಂದ ವಾದಿರಿಗೆ ಕಳದ ತಾ. 31-3-1964 ಮತ್ತು 31-3-65ನೇ ವ್ಯಾದೆಗಳಿಗೆ ಬರತಕ್ಕ ಮೂಲ ಗೇಣಿ ಗೇಣಿ ಬಡ್ಡಿ ಕೂಡಾ ರೂಪ್ಯಾ 605-30ಕ್ಕೆ ವಾದಿರು ದಾಖಲ್ಲ ಮಾಡಿದ ಸದ್ರಿ ದಾವೆಯು ತಾ. 4-11-65ಕ್ಕೆ ನಿಮಗೆ ಅಕ್ಯರ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಯೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
*Advocate for Plaintiffs.*

Karkala, 17-10-65.

---

## ಉದ್ಘಾಟನಾ ಸಮಾರಂಭ

ಸರಕಾರಿ ಕಿರಿಯ ಬುನಾದಿ ಪ್ರಾಥಮಿಕ ಶಾಲಾ, ಸಟ್ಟಬೆಟ್ಟು ಇದರ ಹೊಸ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. ೬ರಂದು ಉಡುಪಿ ತಾಲೂಕು ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎ. ಕೊರಗಪ್ಪ ಇವರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಎಡ್ವಕೇಟ್ ಶ್ರೀ ಪಿ. ಶಿವಾಜಿ ಶೆಟ್ಟರು ವಹಿಸಿದ್ದರು.

## ಎಲ್ಲೆಲ್ಲಿ ಏನೇನು?

### ಮಂತ್ರಿ ಆಳ್ವರಿಂದ ಮಹಾದೇವಿ ಹೈಸ್ಕೂಲ್ ಶಂಕುಸ್ಥಾಪನೆ

ಕಾಪು, ಎಡ್ವಕೇಟ್ ಶ್ರೀ ಕೆ. ಎಸ್. ಎನ್. ಅಡಿಗರವರ ಅಧ್ಯಕ್ಷತೆಯಲ್ಲಿ ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವರು, ಕಾಪು ಗ್ರಾಮೋದ್ಧಾರಕ ಸಂಘದವರು ನಡೆಸುತ್ತಿರುವ ಶ್ರೀ ಮಹಾದೇವಿ ಪ್ರೌಢ ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ತಾ. 2ರಂದು ನೆರವೇರಿಸಿದರು.

ಪ್ರಾರಂಭದಲ್ಲಿ ಶಾಲಾ ಸಮಿತಿಯ ಅಧ್ಯಕ್ಷ ಶ್ರೀ ಕೆ. ಸರ್ವೋತ್ತಮ ಶೆಟ್ಟರು ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನೂ ಶ್ರೀ ಬಿ. ಆರ್. ಶೆಟ್ಟರು ಸಮಿತಿಯ ವರದಿಯನ್ನೂ ಓದಿದರು.

ಡಾ| ಆಳ್ವರು ಮಾತನಾಡುತ್ತಾ ಶಾಲೆಗೆ ಅಭಿವೃದ್ಧಿಯಾಗಲೆಂದು ಹಾರೈಸಿದರು. ಅಧ್ಯಕ್ಷರು ರಾಷ್ಟ್ರದ ಮುಂದಿರುವ ಸಮಸ್ಯೆಯನ್ನು ಪ್ರಸ್ತಾವಿಸಿ ಸಮಿತಿಯ ಕಾರ್ಯವನ್ನು ಶ್ಲಾಘಿಸಿದರು. ಅಂತ್ಯದಲ್ಲಿ ಶ್ರೀ ಭೋಜರಾಜ ಹೆಗ್ಡೆಯವರು ವಂದನಾರ್ಪಣೆಗೈದರು.

### ಮಹಾಸಭೆ

ಹೆರ್ಗ ಸಹಕಾರಿ ಕೃಷಿಕರ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಕಳೆದ ತಾ. ೩೦ರಂದು ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿ ರಿಪೋರ್ಟು, ಬಜೆಟ್, ಆಫೀಸು ಕಟ್ಟಡಕ್ಕೆ ರೂ. ೫|| ಸಾವಿರ ಮಂಜೂರು ಮಾಡಲಾಯಿತು.

### ಇನ್ನಂಜೆ ಎನ್. ಸಿ. ಸಿ. ಶಿಬಿರ

ಕಳೆದ ತಾ. ೨೬ರಿಂದ ಇನ್ನಂಜೆ ಎಸ್. ವಿ. ಎಚ್. ಹೈಸ್ಕೂಲ್‌ನಲ್ಲಿ ಕಿರಿಯ ವಿಭಾಗದ ಎನ್. ಸಿ. ಸಿ. ವಾರ್ಷಿಕ ತರಬೇತಿ ಶಿಬಿರವು ಯಶಸ್ವಿಯಾಗಿ ಜರಗಿತು. ಇದೇ ತಾ. 4ರಂದು ಮೈಸೂರು ರಾಜ್ಯದ ಎನ್. ಸಿ. ಸಿ. ಡೈರೆಕ್ಟರ್ ಏರ್ ಕಮೊಡೋರ್ ಎ. ಡಬ್ಲ್ಯು. ಜಾಕೋ ಇವರು ಶಿಬಿರವನ್ನು ಸಂದರ್ಶಿಸಿದ್ದಲ್ಲದೆ, ಶಿಬಿರದಲ್ಲಿ ಜರಗಿದ ವಿವಿಧ ವಿನೋದಾವಳಿ ಪ್ರದರ್ಶನದ ವೇಳೆ ಹಾಜರಿದ್ದರು. ಇವರು ತಮ್ಮ ಭಾಷಣದಲ್ಲಿ ಎನ್. ಸಿ. ಸಿ.ಯ ಧ್ಯೇಯಾದಿಗಳನ್ನು ವಿವರಿಸಿದರು. ಇವರೊಂದಿಗೆ ಮಂಗಳೂರಿನ ಗ್ರೂಪ್ ಕಮಾಂಡರ್ ಲೆ| ಕ| ಬಿ. ಸಿ. ಜೋಶಿಯವರು ಆಗಮಿಸಿದ್ದರು. ಶಿಬಿರಾಧಿಕಾರಿ ಮೇಜರ್ ಕೆ. ಜೆ. ಜೋಸೆಫರು ವಂದನೆಗಳನ್ನರ್ಪಿಸಿದರು.

### ಅಮೆರಿಕಾದಲ್ಲಿ ಗಾಂಧಿ ತತ್ವ ಮತ್ತು ಅಧ್ಯಾತ್ಮ

ಅಲಿಕೆ, ಪ್ರಸಿದ್ಧ ತತ್ವಜ್ಞಾನಿಗಳೂ, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರೂ, ಕನ್ನಡದ ಖ್ಯಾತ ಬರಹಗಾರರೂ ಆದ ಶ್ರೀ ಯಮುನಾಚಾರ್ಯರು ತಾ. ೭ರಂದು ಲೋಕಸೇವಾ ಹೈಸ್ಕೂಲಿನಲ್ಲಿ "ಅಮೇರಿಕಾದಲ್ಲಿ ಗಾಂಧಿ ತತ್ವ ಮತ್ತು ಅಧ್ಯಾತ್ಮ" ಎಂಬ ಕುರಿತಾಗಿ ಮಾತನಾಡುತ್ತಾ "ಲೋಕಹಿತಕ್ಕಾಗಿ ಅನೇಕ ಸಂತರು ಶ್ರಮಿಸಿದ್ದಾರೆ. ಗಾಂಧೀಜಿಯವರು ಅದೇ ಸಂತರ ಪರಂಪರೆಗೆ ಸೇರಿದವರು. ಅವರು ಅಂತಹ ಸಂತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮನ್ನು ನಡೆಸಿಕೊಂಡು ಹೋಗಿದ್ದಾರೆ. ಅವರ ಜೀವನ ತತ್ವ ಮತ್ತು ಅವರು ಮಾಡಿದ ಮಹತ್ಕಾರ್ಯಗಳಿಂದ ಅವರ ಹೆಸರು ಅಮರವಾಗಿ ಉಳಿದೀತು. ಅದ್ದರಿಂದ ಅಮೇರಿಕದ ಜನತೆ ಗಾಂಧೀಜಿಯವರಿಂದ ಬಹಳವಾಗಿ ಪ್ರಭಾವಿತರಾಗಿದ್ದಾರೆ. ಅವರು ಭಾರತಕ್ಕೆ ಮಾತ್ರವೇ ಅಲ್ಲ, ಇಡೀ ಜನಾಂಗಕ್ಕೇ ಮಾರ್ಗದರ್ಶಕರು ಎಂಬುದಾಗಿ ಅವರು ಹೇಳುತ್ತಾರೆ

ಅಮೇರಿಕಾದಲ್ಲಿ ನಾಗರಿಕ ಹಕ್ಕುಬಾಧ್ಯತೆಗಳನ್ನು ಸ್ಥಾಪಿಸಲಿಕ್ಕಾಗಿ ಅಮೇರಿಕಾದ ಶ್ವೇತ ವರ್ಣೀಯರು ಮತ್ತು ನಿಗ್ರೋಗಳು ಮಾರ್ಟಿನ್ ಲೂಥರ್ ಕಿಂಗ್ ಎಂಬವರ ನೇತೃತ್ವದಲ್ಲಿ ಆಂದೋಲನ ಮಾಡುತ್ತಿದ್ದಾರೆ. ಅವರು ಗಾಂಧೀಜಿಯವರ ಸತ್ಯಾಗ್ರಹದ ವಿಧಾನಗಳನ್ನೇ ಈ ಆಂದೋಲನದಲ್ಲಿ ಅನುಸರಿಸುತ್ತಿದ್ದಾರೆ" ಎಂದರು. ಅಲ್ಲದೆ ಅಮೇರಿಕನರು ಭಾರತೀಯ ಅಧ್ಯಾತ್ಮದ ಕಡೆಗೆ ಹೇಗೆ ಆಸಕ್ತರಾಗಿದ್ದಾರೆಂಬುದನ್ನು ಉದಾಹರಣೆ ಸಹಿತ ವಿವರಿಸುತ್ತಾ "ಅಮೇರಿಕಾದಂತಹ ದೇಶಗಳಲ್ಲಿ ಅಧ್ಯಾತ್ಮಿಕತೆ ಬೇಕೆಂಬ ಬಯಕೆ ಇದ್ದಿರುವಾಗ ನಾವು ಅಂತಹುದನ್ನು ಅಳಿಯಲಿಕ್ಕೆ ಸಿದ್ಧರಾಗಿದ್ದೇವೆ. ಈ ಅಧ್ಯಾತ್ಮದಿಂದ ನಾವು ಕೆಟ್ಟು ಹೋಗಿದ್ದೇವೆ ಎಂದು ಹೇಳುತ್ತೇವೆ. ಆರ್ಥಿಕ ಪ್ರಗತಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಹೇಳುವುದನ್ನೂ ನಾವು ಕೇಳುತ್ತೇವೆ. ನಿಜವಾಗಿಯೂ ನಾವು ಆರ್ಥಿಕವಾಗಿ ಮತ್ತು ಅಧ್ಯಾತ್ಮಿಕವಾಗಿ ಹಿಂದುಳಿದಿದ್ದೇವೆ. ಅಮೇರಿಕನರು ಪ್ರಪಂಚವಾದಿಗಳೆಂದು ನಾವು ಟೀಕಿಸುವುದಿದೆ. ಆದರೆ ನಮ್ಮಲ್ಲಿ ಪ್ರಾಪಂಚಿಕತೆ ಕಡಿಮೆಯಿದೆಯೇ? ನಿಜವಾಗಿ ನಾವು ಅಸಮರ್ಥ ಪ್ರಪಂಚವಾದಿಗಳು ಅವರು ಸಮರ್ಥ ಪ್ರಪಂಚವಾದಿಗಳು ಎಂದು ನನಗನಿಸುತ್ತದೆ. ಅಮೇರಿಕದ ಜನತೆಯಲ್ಲಿ ಭಾರತದ ಅಧ್ಯಾತ್ಮದ ಕುರಿತಾಗಿ ತೀವ್ರವಾದ ಶ್ರದ್ಧೆ ಮತ್ತು ಆಸಕ್ತಿಗಳು ಇದ್ದರೂ ಇಲ್ಲಿಯ ಜನಜೀವನದ ಸಮಸ್ಯೆಗಳನ್ನು ಬಗೆಹರಿಸಲು ಏಕೆ ಸಮರ್ಥವಾಗಿಲ್ಲ ಎಂಬುದಾಗಿ ಅಲ್ಲಿಯ ವಿಚಾರವಾದಿಗಳು ಪ್ರಶ್ನಿಸುತ್ತಾರೆ. ಅಧ್ಯಾತ್ಮವನ್ನು ಜೀವನದಲ್ಲಿ ನಾವು ಅಳವಡಿಸಿ ನಮ್ಮ ಜನಜೀವನದ ಸಮಸ್ಯೆಗಳನ್ನು ಬಗೆಹರಿಸಲು ನಾವು ಯತ್ನಿಸಬೇಕು. ಆಗ ಭಾರತೀಯ ಅಧ್ಯಾತ್ಮದ ಅನುಸರಣೆಗಿರುವ ಒಂದೇ ಒಂದು ತಡೆ ಇಲ್ಲವಾಗುವುದು. ಮಾತ್ರವಲ್ಲ, ಮಾನವ ಪ್ರಗತಿಗಾಗಿ ವಿಜ್ಞಾನ ಮತ್ತು ಸುಜ್ಞಾನಗಳನ್ನು ಸಮನ್ವಯಿಸಿಕೊಂಡು ಬಳಸಿಕೊಳ್ಳಬೇಕು. ಆಗ ಆತ್ಮ ಕಲ್ಯಾಣವೂ ಆಗುವುದು. ಆಗ ಲೋಕ ಕಲ್ಯಾಣವೂ ಏರ್ಪಡುವುದು" ಎಂದರು.

ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷ ಶ್ರೀ ಭದ್ರಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಯಂ. ನಾರಾಯಣ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಸದಾಶಿವ ಭಟ್ಟರು ಅತಿಥಿಗಳ ಪರಿಚಯ ಮಾಡಿಸಿದರು. ಯು. ಗಂಗಾಧರ ಭಟ್ಟರಿಂದ ವಂದನಾರ್ಪಣೆ ನಡೆಯಿತು.

### ಮಳೆ ಇಲ್ಲ

ಸುಮಾರು ಎರಡು ತಿಂಗಳಿಂದ ಮಳೆಯೇ ಇಲ್ಲ. ಎಪ್ರಿಲ್ ಮೇ ತಿಂಗಳಂತೆ ಉರಿಬಿಸಿಲು ಕಾಯುತ್ತಿದೆ, ರೈತ ಕಂಗಾಲಾಗಿದ್ದಾನೆ. ಮಳೆಗಾಲ ತಡವಾಗಿ ಪ್ರಾರಂಭವಾಗಿ ನೆಡುವಾಗಲೇ ವಿಳಂಬವಾಗಿತ್ತು. ಈಗ ಮಳೆ ಇಲ್ಲದ್ದರಿಂದ ಕಡೆಗೆ ನೆಟ್ಟ ಬೆಳೆ ಕದಿರು ಬರುವಾಗಲೇ ಸುಟ್ಟುಹೋಗಿದೆ. ಬೆಟ್ಟು ಗದ್ದೆ ಬಂಜರಾಗಿಯೇ ಉಳಿದಿತ್ತು. ಹೀಗಾಗಿ ಬೆಳೆ ತೀರ ಕಡಿಮೆ ಎಂದು ಹೇಳಬಹುದು, ಎರಡನೆ ಬೆಳೆಗೆ ನೀರಿಲ್ಲದೆ ತುಂಬಾ ತೊಂದರೆಯಾಗಿ ರೈತರು ಕಂಗಾಲಾಗಿದ್ದಾರೆ. ಎಲ್ಲೆಲ್ಲಿಯೂ ನೀರಿನ ಅಭಾವ ತೋರಿಬರುತ್ತದೆ.

---

**ನಿರೀಕ್ಷಿಸಿರಿ!**

ಬರುವ ವಾರ

(ತಾ 28—10—65)

**ದೀಪಾವಳಿ ಸಂಚಿಕೆ**

ವಿಶಿಷ್ಟ ತರದಲ್ಲಿ
ಪ್ರಕಟವಾಗುವುದು

READ &
ADVERTISE IN
NAVAYUGA WEEKLY

# ಕ್ಷೇತ್ರ ಮುರುಗ

(ಎರಡನೇ ಪುಟದಿಂದ)

...ದೆ. ಅಂದರೆ ಈ ವರ್ಷ ಪ್ರಶಂಸನೀಯ ಬೆಳೆ ಬಂದೇ ಬರಬೇಕು. ಇದೇ ಹಳ್ಳಿಯ ನನ್ನ ಗೆಳೆಯ ಮತ್ತು ಕೈಯ ಅದೃಷ್ಟಕ್ಕಾಗಿ ಹೊಟ್ಟೆಕಿಚ್ಚು ಪಡುತ್ತಿದೆ. ನಿನ್ನೆ ರಾತ್ರಿ ಕಣ್ಣು ಮಿಳಿಕಿಸುವಷ್ಟು ನಿದ್ದೆಮಾಡಿ, ಕೈಯಲ್ಲಿ ಹಾರೆಯನ್ನು ತೆಗೆದುಕೊಂಡು ಕೆನ್ನೀರನ್ನು ಗದ್ದೆಗೆ ತಿರುಗಿಸುವ...."

"ಅನಂತ ವಂದನೆಗಳು, ನನಗೆ ಸಂತೋಷವಾಯಿತು, ಮುರುಗ. ಆದರೆ ನಾವು, ಪಟ್ಟಣದಲ್ಲಿ ಬೆಳೆದಿರುವ ಜನರು, ಈ ವಿಷಯಗಳನ್ನು ಏನೂ ತಿಳಿದುಕೊಂಡಿಲ್ಲ..." ಏನು ಹೇಳಬೇಕೆಂದು ತಿಳಿಯದ ರಾಮು ಒಟ್ಟಾರೆ ಉತ್ತರ ಕೊಟ್ಟನು.

"ನನ್ನೊಂದಿಗೆ ಬನ್ನಿ ಸ್ವಾಮಿ. ಚಲೋ ಹೋರಿಗಳ ಜತೆಯಿಂದ ಗದ್ದೆಯನ್ನು ಹೇಗೆ ಉಳುತ್ತೇನೆಂಬುದನ್ನು ನೋಡಿ. ಆ ಎತ್ತುಗಳು ಕೆಸರಿಗೆ ಜಗ್ಗದ ಹೇಗೆ ಕಷ್ಟಪಡುತ್ತವೆಂಬುದನ್ನೂ ನೋಡಿ. ಅವುಗಳಿಗೆ ಕೊಟ್ಟಿರುವ ಹಣ ನಿಜವಾಗಿ ಯೋಗ್ಯವಾಗಿದೆ."

ಇಷ್ಟೆಲ್ಲಾ ಹೇಳಿದರೂ ತನ್ನನ್ನು ನಗಾಡಿಸಲು ರಾಮು ಒಂದು ಮಾತನ್ನು ಆಡದಿರುವದನ್ನೂ, ತಲೆಯಲ್ಲಾಡಿಸದೆ ಇರುವದನ್ನೂ ಕಂಡ ಮುರುಗ ಒಂದು ನಿಮಿಷ ಸುಮ್ಮಗಾದನು. ಅನಂತರ ಮುಂದುವರಿಸಿದನು. "ನಿಮ್ಮ ತಾಯಿಯವರು ನೆಟ್ಟಿರುವ ತರಕಾರಿಯ ಗಿಡಗಳು ಈಗ ಉತ್ತಮ ಫಲವನ್ನೀಯುತ್ತಿವೆ. ಅವುಗಳನ್ನು ನೀವೇ ಕೈಯ್ಯಾರೆ ಕಿತ್ತು ಮನೆಗೆ ತರುವದು ಒಳ್ಳೆಯದು. ಅದು ನಿಮ್ಮ ದುಃಖವನ್ನು ಕಡಿಮೆ ಮಾಡೀತು; ಊಟದ ರುಚಿಯನ್ನು ಹೆಚ್ಚುಮಾಡೀತು. ನಿಮ್ಮದೇ ಸ್ಥಳದಲ್ಲಿ, ನೀವೇ ಬೆಳೆಸಿ, ನೀವೇ ಕೊಯ್ದು ತಂದ ಆಹಾರಕ್ಕೆ ಬೇರೆ ಯಾವ ಆಹಾರವೂ ಸಮವಾಗಲಾರದು. ಅದು ಪವಿತ್ರವಿದೆ."

"ನೀನು ಚಲೋ ವಿಷಯಗಳನ್ನು ಹೇಳುತ್ತಿ, ಮುರುಗ—ಆದರೆ ನನ್ನ ಮನಸ್ಸು ಬೇರೆ ಆಲೋಚನೆಯನ್ನು ಮಾಡುತ್ತಿದೆ. ಸರಳ ಜೀವನದ ಪಾವಿತ್ರ್ಯದ ಕುರಿತು ನನಗೆ ಕಲಿಸಬೇಕೇನು? ಈ ಹಳ್ಳಿಯನ್ನು ನಾನು ಪ್ರೀತಿಸುತ್ತೇನೆ. ಏಳು ತಲೆಮೂರುಗಳಿಂದ ನಮಗೆ ಬಂದಿರುವ ಈ ಭೂಮಿಯ ರಕ್ತವು ನನ್ನಲ್ಲಿ ಹರಿಯುತ್ತಿದೆ."

ಒಂದು ನೀಳ ಉಸಿರನ್ನೆಳೆದುಕೊಂಡು ಸಹಾಯದ ನಿಟ್ಟುಸಿರನ್ನು ಬಿಟ್ಟು ರಾಮು ಮುಂದರಿಸಿದನು. "ಸಮಯ ಬದಲಾಗಿದೆ. ಆದರೆ ಹಳೆಯದನ್ನು ಒಂದೇ ದಿನದಲ್ಲಿ ತೊಡೆದುಹಾಕಲು ಸಾಧ್ಯವಿರುವದಿಲ್ಲ, ಮುರುಗ. ಹುರಿ ಬಿಡಿಸುವದಕ್ಕಿಂತಲೂ ಹೆಣೆಯುವದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಹಾಗಲ್ಲವೇನು? ನನ್ನ ಸ್ನೇಹಿತ ಕೇದಾರಿಯಿಂದ ಮತ್ತು ಕಲಾಶಾಲೆಯ ಉಪನ್ಯಾಸರೊಬ್ಬರಿಂದ, ನಾನು ಹೇಗಾದರೂ ಬಿ. ಎ. ಮುಗಿಸಬೇಕೆಂದು ಪ್ರೇಮ ಪೂರ್ಣ ಪತ್ರ ಬಂದಿದೆ. ಇಲ್ಲದಿದ್ದಲ್ಲಿ ಎಲ್ಲವೂ ಹಾಳಾಗುತ್ತದೆ. ಮುರುಗ, ನಾನು ನಿನ್ನನ್ನು ಕೇಳುತ್ತೇನೆ. ನದಿಯ ನೀರು ಹರಿದುಕೊಂಡು ಬಂದಿರುವಾಗ ಸಾಯುತ್ತಿರುವ ಗಿಡಗಳಿಗೆ ಬಾಲ್ದಿಯಲ್ಲಿ ನೀರನ್ನು ಒಯ್ದು ಹಾಕಿ ನೀನು ಸಲಹುವುದಿಲ್ಲವೇ? ಮುರುಗ, ನನ್ನ ತಾಯಿಯವರ ನನ್ನನ್ನು ಇಂಗ್ಲಿಷ್ ಶಾಲೆಗೆ ಸೇರಿಸಿದ್ದರೆಂದು ನೀನೇ ಹೇಳಿದಿಯಲ್ಲಾ? ಅವರ ಮೊದಲಿನ ಆಶೆಯನ್ನು ತೃಪ್ತಿಪಡಿಸುತ್ತೇನೆ."

"ನಂಬಿಕೆಯ ಮುರುಗ, ನಿನ್ನ ಕೈಯಲ್ಲಿ ಭೂಮಿಯು ಜಾಗೃತೆಯಾಗಿರುತ್ತದೆ. ವ್ಯವಸಾಯದ ವಿಷಯದಲ್ಲಿ ನನಗೇನೂ ಗೊತ್ತಿರುವದು ಇಲ್ಲ. ನಾನು ಹೋಗಿ ವಿದ್ಯಾಭ್ಯಾಸವನ್ನು ಮುಗಿಸಬೇಕು. ಆ ವಿಷಯ ಚೆನ್ನಾಗಿ ಆಲೋಚಿಸಿದ್ದೇನೆ. ನೀನು ನನಗೀಗ ನೂರು ರೂಪಾಯಿ ದೊರಕುವಂತೆ ಮಾಡಬೇಕು. ಬಿ. ಎ. ಪದವಿಯನ್ನು ಪಡೆದುಕೊಂಡು ನಾನು ಹಿಂತಿರುಗಿ ಬರುತ್ತೇನೆ. ನಿನ್ನೊಂದಿಗೆ ನಿಜವಾಗಿ ಇಲ್ಲಿ ನೆಲಸುತ್ತೇನೆ. ಪವಿತ್ರ ಹಾಗೂ ಗೌರವದ ಉಳುವ ಕೆಲಸಕ್ಕಾಗಿ ಜೀವನವನ್ನು ಮೀಸಲಾಗಿರಿಸುತ್ತೇನೆ. ಹಾಗೆ ನವತರುಣರಿಗೆ ಆದರ್ಶಪ್ರಾಯನಾಗುತ್ತೇನೆ. ಈಗ ನಾನೇನು ಇದ್ದೇನೆ? ಮುರುಗ, ಫಲವೀಯದ ಕೆಲ ದಿನಗಳಿರುವಾಗ ಭತ್ತದ ಸಸಿಯು ಹೊಟ್ಟೆಯಲ್ಲೇ ಒಣಗಿ ಹೋಗಿರುವ ಕದಿರು ಇರುವ, ಆದರೆ ಚನ್ನಾಗಿ ಬೆಳೆದಿರುವ ಭತ್ತದ ಸಸಿಯಂತೆ ನನ್ನ ಅವಸ್ಥೆ ಇದೆ. ಈಗ ನಾನು ಕೇವಲ ಪರಾಜಯ ಹೊಂದಿದವನು. ನಾನೀಗ ಇತರರ ತಾತ್ಸಾರ ಹಾಗೂ ಕರುಣೆಗೊಳಗಾದವನು. ಅದು ಯಾವಾಗಲೂ ನನ್ನ ಹೃದಯವನ್ನು ಕೊರೆಯುತ್ತದೆ...."

ಮುರುಗನು ಆ ಉದ್ದ ಭಾಷಣವನ್ನು ತಾಳ್ಮೆಯಿಂದ ಕೇಳಿದನು. ಮಾತಾಡಲು ಸಂದೇಹಪಟ್ಟರೂ ಮೆಲ್ಲಗೆ ಮತ್ತು ದುಃಖದಿಂದ ಉತ್ತರಿಸಿದನು. "ಸ್ವಾಮಿಯು ಹಾಗೆ ನಿಶ್ಚಯಕ್ಕೆ ಬಂದಿರುವರಾದಲ್ಲಿ ಬಡ ಮುರುಗನಿಗೆ 'ಹೌದು' ಮತ್ತು 'ಅಲ್ಲ' ಹೇಳಲಿಕ್ಕೇನೂ ಇರುವದಿಲ್ಲ. ಅವನ ಧನಿಯ ಆಜ್ಞೆಯಂತೆ ಮತ್ತು ಇಚ್ಛೆಯಂತೆ ದುಡಿಯಬೇಕು."

"ನಾಳೆ ನಾನು ಮದ್ರಾಸಿಗೆ ಹೊರಡಬೇಕು, ಮುರುಗ."

"ಸ್ವಾಮಿಯು ಹೋಗುವ ಮುಂಚೆ ಭೂಮಿಯನ್ನು ನೋಡಿಕೊಂಡು ಹೋಗಬೇಕು."

"ನೋಡಲಿಕ್ಕೇನಿದೆ, ಮುರುಗ? ಐದು ತಲೆಮೂರುಗಳೊಳಗೆ ಏಳು ನೂರು ಎಕ್ರೆಗಳಿದ್ದದ್ದು ಏಳು ಎಕರೆಗಳಿಗೆ ಕಮ್ಮಿಯಾಗಿದೆ. ಸಾಲದಿಂದಾಗಿ ಇಂದು ಅಷ್ಟಾದರೂ ಇದೆಯೋ ಎಂಬುದರಲ್ಲಿ ಸಂದೇಹವಿದೆ. ಇಂದಿನ ಅಧಿಕ ತಳಕು ಬೆಳಕಿನ ಮತ್ತು ಭೋಗಕ್ಕೆ ಪ್ರಾಮುಖ್ಯತೆ ಇರುವ ಜೀವನಕ್ಕಾಗಿ ದುಂದುವೆಚ್ಚಮಾಡಿ ಸಾಲಕ್ಕೆ ಭಾಗಿಗಳಾಗಬೇಕಾಗುತ್ತದೆ. ಜ್ಞಾನವೂ ಕೂಡಾ ಅದರದೇ ಕೃಷಿಯ ಖರ್ಚು ಮತ್ತು ಬೆಳೆಯನ್ನು ವಹಿಸಿಕೊಂಡಿದೆ. ನಾಗರಿಕತೆಗಾಗಿ ನಾನು ಖರ್ಚು ಮಾಡುತ್ತೇನೆ. ಅವು ನನ್ನ ಹೊಟ್ಟೆಯನ್ನು ಖಾಲಿಯನ್ನಾಗಿ ಮಾಡುತ್ತದೆ. ನಾನು ಹೋಗುವ ಮುಂಚೆ ನಿನ್ನನ್ನು ಸಂತೋಷಪಡಿಸಲಿಕ್ಕಾದರೂ ಜಮೀನನ್ನು ನೋಡುತ್ತೇನೆ."

ಮುರುಗನು ಹೋದ ಕೂಡಲೇ ರಾಮು ವಿಚಾರ ಭ್ರಮಣೆಯಲ್ಲಿ ಬಿದ್ದನು.

"ಕೇದಾರಿ, ಬಿ. ಎ. ಮುಗಿಸಲಿಕ್ಕೆ ನಾನು ಲಕ್ಷ್ಯಕೊಡಲಿಕ್ಕಿಲ್ಲ. ಬಿ. ಎ. ಗಿಂತಲೂ ನಿನ್ನ ಸಹವಾಸವೇ ನನ್ನನ್ನು ಮದ್ರಾಸಿಗೆ ಸೆಳೆಯುತ್ತಿದೆ. ಹಡಗುಗಳಿಗೆ ಸಮುದ್ರ ಅಥವಾ ಹಾಯಿಗಳಿಗೆ ಗಾಳಿ ಇರುವಂತೆ ನನಗೆ ನೀನಿರುವೆ. ನಾನು ಹೆಣ್ಣಿನಂತಿದ್ದೇನೆ. ಈ ವಿಶಾಲ ವಿಶ್ವದಲ್ಲಿ ಒಬ್ಬಂಟಿಗನಾಗಿ, ನಾನೇ ನಾನಾಗಿ, ನನ್ನವೇ ಆದ ಆಲೋಚನೆಗಳ ಮೇಲೆ ಚಿಂತನೆ ಮಾಡುತ್ತಾ, ಬದುಕಲಾರೆ. ಒಬ್ಬ ನಿಜ ಸ್ನೇಹಿತನ ಬಳಿಯಲ್ಲಿ ರಾಣಿಯ ಆನಂದವನ್ನು ಅನುಭವಿಸುತ್ತೇನೆ. ನೀನು ಬಲು ಬಲವುಳ್ಳವನು. ನೀನು ಬೇರೆ ನಮೂನೆಯಲ್ಲಿ ಎರಕ ಹೊಯ್ಯಲ್ಪಟ್ಟವನು. ಬಂಗಾರದ ಗುಂಪಿನಲ್ಲಿ ತಾಮ್ರದ ಸ್ಪರ್ಶಕ್ಕೊಳಗಾದುದರ ಹಾಗೆ, ಪ್ರಚಲಿತ ನಾಣ್ಯದಂತಿದೆ ನನ್ನ ಸ್ಥಿತಿ. ನೀನಾದರೋ ಧೈರ್ಯದಿಂದ ತಾನೇ ತಾನಾಗಿ ಬಾಳಬಲ್ಲೆ. ನೀನು ಪಾಪಿಗಳಿಂದಾಗಲೀ, ಸಂತರಿಂದಾಗಲೀ ಪೀಡಿಸಲ್ಪಡುವದಿಲ್ಲ, ಬದಲು ಅವರನ್ನು ನಿನ್ನ ದಾರಿಯನ್ನು ಸಂಪಾದಿಸಿಕೊಳ್ಳಲಿಕ್ಕೆ ಬೇಕಾಗುವ ದೊಡ್ಡ ಕತ್ತರಿಯಂತೆ ಉಪಯೋಗಿಸಿಕೊಳ್ಳಬಲ್ಲೆ. ಕೆಲ ಮಹಾನ್ ಕಾರ್ಯಗಳಿಗಾಗಿ ನೀನಿರುವದು. ನಿನ್ನೊಂದಿಗೆ ನಾನಿದ್ದಲ್ಲಿ, ನಿನ್ನಷ್ಟಕ್ಕೆ ನಿನ್ನನ್ನು ನೀನೇ ಕಂಡುಕೊಳ್ಳುವಂತೆ ಸಹಾಯವಾಗಲು ನಿನಗೆ ನಾನು ಪ್ರಯೋಜನವಾಗಬಹುದು. ಪ್ರಿಯ ಕೇದಾರಿ, ನಿನ್ನ ಬೆಳವಣಿಗೆ ಮತ್ತು ಜಯದಿಂದ ನಾನು ಆಶೀರ್ವದಿಸಲ್ಪಡಲಿ.

(ಮುಂದುವರಿಯುವುದು)


### ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ,

A. S. No. 70/1965.

ಸೀತು ಹೆಂಗಸು ಕೂಡಾ ... ... ... ಅಪ್ಪೀಲಾಂಟರು

ಮತ್ತು

ತಿಮ್ಮಪ್ಪ ಕೂಡಾ ... ... ... ರೆಸ್ಪೊಂಡೆಂಟರು

ಇವರೊಳಗೆ —

ಮೇಲ್ಕಂಡ ಅಪ್ಪೀಲಿನ ರೆಸ್ಪೊಂಡೆಂಟರು:—

(4) ಲಕ್ಷ್ಮಿ, ಸುಬ್ಬು ಹೆಂಗ್ಸಿನ ಮಗಳು. ಸ್ವತಹಾ ಮತ್ತು ತನ್ನ ಮೈನರ್ ಮಗ 11ನೇ ರೆಸ್ಪೊಂಡೆಂಟ್ ದಾಮೋದರನ ಗಾರ್ಡಿಯನಳಾಗಿ ಸಹಾ ಪುತ್ತೂರು ತಾಲೂಕು ಚಿಕ್ಕ ಪುತ್ತೂರು ಗ್ರಾಮದಲ್ಲಿರುವವಳು.

(10) ಮೋಹನದಾಸ ಭಂಡಾರಿ, ಲಕ್ಷ್ಮಿ ಮಗ, ಪುತ್ತೂರು ತಾಲೂಕು ಆರ್ಯಾಪು ಗ್ರಾಮದ ಗೆಣಸಿನ ಕುಮೇರಿ ಎಂಬಲ್ಲಿರುವವ.

(15) ಸುಗುಣ, ಕಮಲನ ಮಗಳು, ಸ್ವತಹಾ ಮತ್ತು ತನ್ನ ಮೈನರ ಮಕ್ಕಳು 105ನೇ ರೆಸ್ಪೊಂಡೆಂಟ್ ರಮಣಿ, 106ನೇ ರೆಸ್ಪೊಂಡೆಂಟ್ ಗಣೇಶ ಇವರ ಗಾರ್ಡಿಯನಳಾಗಿ ಸಹಾ—ಪುತ್ತೂರು ತಾಲೂಕು ಚಿಕ್ಕ ಪುತ್ತೂರು ಗ್ರಾಮ.

(22) ಲೋಕಯ್ಯ, ಸೀತು ಹೆಂಗ್ಸು ಮಗ.
(23) ಗಂಗ, ಸೀತು ಹೆಂಗ್ಸು ಮಗಳು, ಸ್ವತಹಾ ಮತ್ತು ತನ್ನ ಮೈನರ್ ಮಕ್ಕಳು (31) ರವೀಂದ್ರ, (32) ರಂಜನ, (33) ವತ್ಸಲ, (34) ರುಶೀಂದ್ರ—ಇವರ ಗಾರ್ಡಿಯನ್ ಳಾಗಿ ಸಹಾ } ಮಂಗಳೂರು ತಾಲೂಕು ಸಸಿಹಿತ್ಲು ಗ್ರಾಮ.

(24) ಶ್ರೀಧರ,
(25) ಸದಾಶಿವ,
(26) ಸರೋಜಿನಿ,
(27) ಸುಶೀಲ,
{ ನರ್ಸಿ ಹೆಂಗ್ಸಿನ ಮಕ್ಕಳು, 26ನೇ ರೆಸ್ಪೊಂಡೆಂಟಳು ಸ್ವತಹಾ ಮತ್ತು ತನ್ನ ಮೈನರ ಮಕ್ಕಳು (35) ಶೀಲ, (36) ಶೋಭ, (37) ಸುಮ, (38) ರಮ—ಇವರ ಗಾರ್ಡಿಯನ್ ಳಾಗಿ ಸಹಾ. } — ಡಿ —

(28) ಸುಲೋಚನ,
(29) ರಘುವೀರ,
(30) ರಮೇಶ,
} ಗಂಗನ ಮಕ್ಕಳು, ಮಂಗಳೂರು ತಾಲೂಕು ಸಸಿಹಿತ್ಲು ಗ್ರಾಮ.

(39) ದೇವಪ್ಪ ಭಂಡಾರಿ, ವೆಂಕಪ್ಪ ಭಂಡಾರಿ ಮಗ — ಡಿ —

(46) ಚನ್ನಯ್ಯ ಭಂಡಾರಿ, ಪುಟ್ಟಮ್ಮನ ಮಗ, ಶಿಮಂತೂರು ಗ್ರಾಮ.

(73) ಶೀನ ಭಂಡಾರಿ, ಬೊಮ್ಮಿ ಮಗ, c/o ಈರಪ್ಪ ಭಂಡಾರಿ, ಬಂಟ್ವಾಳ ತಾಲೂಕು ಪೊಳಲಿ ಗ್ರಾಮ.

ಇವರೀಗೆ ಈ ಮೂಲಕ ತಿಳಿಸುವುದೇನಂದ್ರೆ—

ಕಾರ್ಕಳ ಮುನ್ಸೀಫ್ ಕೋರ್ಟ O.S. No. 700/1963ನೇ ವ್ಯಾಜ್ಯದಲ್ಲಿ ತಾ. 26.3.1965ರಲ್ಲು ಕೊಡೋಣಾದ ಡಿಕ್ರಿ ಜಜ್ಮೆಂಟಿನ ಮೇಲೆ ಅಪ್ಪೀಲಾಂಟರು ಮಾಡಿರುವ ಮೇಲ್ಕಂಡ ಅಪ್ಪೀಲು ತಾ. 26-10-1965ಕ್ಕೆ ಮೇಲ್ಕಂಡ ರೆಸ್ಪೊಂಡೆಂಟರ ನೋಟೀಸು ಬಗ್ಗೆ ಇಟ್ಟಿರುತ್ತದೆ. ಸದ್ರಿ ರೆಸ್ಪೊಂಡೆಂಟರಿಗೆ ಮೇಲ್ಕಂಡ ಅಪ್ಪೀಲಿನಲ್ಲಿ ವ್ಯವಹರಿಸುವ ಇದ್ದಲ್ಲಿ ಸದ್ರಿ ತಾ. 26-10-1965ನೇ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷ ಮಾಡಿ ಸದ್ರಿ ಅಪ್ಪೀಲು ಫೈಸಲು ಮಾಡಲ್ಪಡುವುದು.

ಉಡುಪಿ,
ತಾ. 11-10-65.

**P. V. Acharya**
*Counsel for appellants.*



ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 21–10–1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೨೧-೧೦-೬೫ರಿಂದ ೨೭-೧೦-೬೫ರ ವರೆಗೆ

### ೧. ಮೇಷ

ಪ್ರಬಲರಾದ ಪ್ರತಿಗಾಮಿ ಶಕ್ತಿಗಳು ನಾನಾ ತೆರದಿಂದ ನಿಮಗಿಂದು ತೊಡಕು ತೊಂದರೆಗಳನ್ನೊಡ್ಡಿದರೂ ಸ್ವಯಂಶಕ್ತರಾದ ನೀವು ಅವೆಲ್ಲವುಗಳಿಂದಲೂ ಪಾರುಗಾಣುವಿರಿ. ಮುಖ್ಯವಾಗಿ ನಿಮ್ಮ ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ. ಕೆಲವೊಮ್ಮೆ ಆರ್ಥಿಕ ಬಿಕ್ಕಟ್ಟು ತಲೆದೋರಿದರೂ ಸಮಿತ್ರರ ನೆರವಿನಿಂದ ನೀವು ಪಾರಾಗಲಿರುವಿರಿ. ಪ್ರವಾಸವು ಅನಾನುಕೂಲಕಾರಿಯಾಗಿ ಪರಿಣಮಿಸೀತು. ತಾ. 22ರಿಂದ 26ರ ವರೆಗಿನ ದಿನಗಳು ಅನುಕೂಲವಿವೆ.

### ೨. ವೃಷಭ

ನಿಮ್ಮ ಯೋಜನೆಗಳೂ ವ್ಯವಹಾರಗಳು ನಿರಾತಂಕವಾಗಿ ಸಾಗಲಿವೆ. ವಿಜಾತೀಯ ಸಹವಾಸ ಹೆಚ್ಚುಗಳಿಂದಾಗಿ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆವಿರಿ. ಅಧಿಕಾರಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾದ ನಿಮಗೆ ನೌಕರಿ ವಿಭಾಗದಲ್ಲಿ ಭಡತಿಯ ಯೋಗವಿದೆ. ಆದರೆ ಅಧಾರ್ಮಿಕ ಜನರು ನಿಮ್ಮನ್ನು ನೆಮ್ಮದಿಯಿಂದಿರಗೊಡಲಿಕ್ಕಿಲ್ಲವು. ವಾರಾಂತ್ಯದ 4 ದಿನಗಳಲ್ಲಿ ಲಾಭ ವಿಜಯಗಳಂ ಗಳಿಸುವಿರಿ.

### ೩. ಮಿಥುನ

ಸದ್ಯ ನಿಮಗೆ ಉಪಚಯಗತನಾದ ಕುಜನೋರ್ವನನ್ನುಳಿದು ಇತರ ಯಾವ ಬೆಂಬಲವೂ ಇಲ್ಲದ ಕಾರಣ ಸ್ವಜನ ವಿರೋಧ, ಗೃಹ ತಾಪತ್ರಯ, ಅಧಿಕಾರಿಗಳ ಪ್ರಕೋಪ ಇತ್ಯಾದಿ ಅನಿಷ್ಟಗಳು ಮೇಲಿಂದ ಮೇಲೆ ಬರಲಿವೆ. ನಾನಾ ತರದ ಖರ್ಚುವೆಚ್ಚಗಳು ನಿಮ್ಮನ್ನು ಕಾಡುವವಾದರೂ ಸದ್ಯಕ್ಕೆ ಅವನ್ನು ನಿರ್ವಹಿಸಲು ನೀವು ಶಕ್ತರಿರುವಿರಿ. ಅತ್ಮ ಸತ್ವಶಾಲಿಗಳಾದ ನಿಮಗೆ ತಾ. 21, 26, 27 ಇದ್ದುದರಲ್ಲುತ್ತಮವಾಗಿ ಕಾಣಿಸೀತು.

### ೪. ಕರ್ಕಟ

ನಿಮ್ಮ ಧನಪತಿಯಾದ ರವಿಯು ನೀಚನಾಗಿದ್ದು ಭಾಗ್ಯಪನಾದ ಬೃಹಸ್ಪತಿಯೂ ವ್ಯಯಗತನಾಗಿರುವುದರಿಂದ ವಿಶೇಷವಾಗಿ ಹಣದ ಅಡಚಣೆಯು ನಿಮ್ಮನ್ನಿಂದು ಬಾಧಿಸಲಿದೆ. ಅಷ್ಟೇಶ್ವರ ಪಿರಹದಿಂದಾಗಿ ಮನೋರೋಗಕ್ಕೆ ಗುರಿಯಾದೀರಿ. ವ್ಯಾಪಾರೀ ಜನತೆಗೂ ನೌಕರವರ್ಗಕ್ಕೂ ಪರಿಶ್ರಮಕ್ಕೆ ತಕ್ಕ ಫಲ ಲಭಿಸೀತು. ಶ್ರಮಜೀವಿಗಳಿಗೀ ಕಾಲವು ತುಂಬ ಕಷ್ಟದಾಯಿಯಾಗಲಿದೆ. ತಾ. 22, 23 ಇತರ ದಿನಗಳಿಗಿಂತ ಮೇಲು.

### ೫. ಸಿಂಹ

ನಿಮ್ಮ ಪ್ರಯತ್ನಕ್ಕೂ ಮಿಗಿಲಾದ ಫಲವು ಲಭಿಸಲಿದೆ. ಆದರೆ ಕೆಲವೊಂದು ಕುಜನರು ನಿಮ್ಮ ಮಾನ ಧನಾದಿಗಳಿಗೆ ಧಕ್ಕೆಯನ್ನುಂಟುಮಾಡಲು ಹವಣಿಸುತಿಹರು. ವ್ಯವಹಾರ ಚತುರರಾದ ನಿಮಗೆ ಜನತೆಯ ಪೂರ್ಣ ಸಹಕಾರವಿದ್ದರೂ ರಾಜಕೀಯದಲ್ಲಿ ಪರಾಜಯವುಂಟಾದೀತು. ಆಕಸ್ಮಿಕ ಪರ್ಯಟನದ ಯೋಗವಿದೆ. ತಾ. 21, 24, 25ರಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗುವವು.

### ೬. ಕನ್ಯಾ

ನಿಮ್ಮ ಕರ್ತವ್ಯಪಥಕ್ಕೆ ಎಂತಹ ಅಡೆತಡೆಗಳು ಅಡ್ಡ ಬಂದರೂ ಅವನ್ನು ಒದ್ದೊಗೆದು ಮುಂದೆ ಸಾಗುವಿರಿ. ನಿಮ್ಮ ಕಾರ್ಯಕಲಾಪಗಳಿಗೆ ಎಂದೂ ವ್ಯತ್ಯಯ ಉಂಟಾಗದು. ಕಳೆದುಹೋದ ವಸ್ತುವಡವೆಗಳೂ ಪುನಃ ಕೈಸೇರುವವು. ನಿಮ್ಮ ಆರ್ಥಿಕ ಪರಿಸ್ಥಿತಿಯು ಪೂರ್ಣ ತೃಪ್ತಿಕರವಿರುವದು. ನಿರೋಗಿಗಳೂ ನಿಶ್ಚಿಂತರೂ ಆದ ನಿಮಗೆ ತಾ. 22, 23, 27 ಅತೀವ ಅನುಕೂಲವಾಗಿದೆ.

### ೭. ತುಲಾ

ಬೃಹಸ್ಪತಿಯ ಪೂರ್ಣದೃಷ್ಟಿ ನಿಮ್ಮ ಮೇಲಿದ್ದರೂ ಪಿತ್ಥೋದ್ರೇಕ ದೋಷದಿಂದಾಗಿ ಇಂದು ನಿಮ್ಮ ಆರೋಗ್ಯ ಕೆಡಲಿದೆ. ನಿಶ್ಚಯವಾಗಿ ವಾಕ್ಕಲಹವಾದೀತು. ನಿಮ್ಮ ಗೆಳೆಯರು ಸಾಕಷ್ಟು ತೃಪ್ತಿಕರವಿರುವುದರಿಂದ ಚಿಂತನೆಯು ಸುಗಮವಾಗುವದು. ತೀರ್ಥಕ್ಷೇತ್ರಾದಿಗಳ ಯಾತ್ರಾಯೋಗವಿದೆ. ರಾಜಕೀಯ ಕಾರ್ಯಗಳಿಗೀ ಕಾಲವು ಅನುಕೂಲವಾಗಿಲ್ಲ. ತಾ. 21, 24, 25, 26ರಲ್ಲಿ ಮಿತ್ರಕೊಟ್ಟ ಧನಾಗಮಗಳಾಗಲಿವೆ.

### ೮. ವೃಶ್ಚಿಕ

ಅದೃಷ್ಟವಿಂದು ತೀರ ದುರ್ಬಲವಿರುವುದು. ನಿಮ್ಮ ಆಶಾಕಾಂಕ್ಷೆಗಳು ಗಗನ ಗೋಪುರಗಳಂತಾಗುವವು. ನಿಮ್ಮಲ್ಲಿನ ಮನೋದೌರ್ಬಲ್ಯದಿಂದಾಗಿ ಯಾವ ಕಾರ್ಯವನ್ನೂ ಸಾಧಿಸಲಾರಿರಿ. ಆರ್ಥಿಕ ಮುಗ್ಗಟ್ಟಿನಿಂದಾಗಿ ಮಾಯೋಗದೆ ಕಾಪಾಡಿಕೊಳ್ಳುವದು ಕಷ್ಟವಾದೀತು. ವಿಷಯಾದಿಗಳಿಗೆ ಸಿಲುಕಿ ಕಷ್ಟನಷ್ಟಗಳನ್ನು ಹೊಂದುವಿರಿ. ಶನಿ ಮನೋರೋಗಗಳಿಂದ ಸಂತಪ್ತರಾದ ನಿಮಗೆ ತಾ. 21, 22, 23, 27 ಈ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

### ೯. ಧನು

ನಿಮ್ಮ ಅದೃಷ್ಟದ ಕದವಿಂದು ತೆರೆದಿರುವೆಂದರೂ ಅತಿಶಯೋಕ್ತಿಯಾಗದು. ಯಾವೊಂದು ವಿಭಾಗದಲ್ಲೂ ನಿಮಗಿಂದು ಕುಂದು ಕೊರತೆಗಳಿರಲಾರವು. ಮಧು ತುಂಬಿದ ಕುಸುಮಗಳನ್ನು ಮಧುಕರಗಳು ಬಂದು ಮುತ್ತುವಂತೆ ಹಲವರು ನಿಮ್ಮ ಆಶ್ರಯವನ್ನು ಬಯಸಿ ಮುಂದೆ ಬರಲಿರುವರು. ಮುಂಗುಸಿಯಂ ಕಂಡ ಸರ್ಪದಂತೆ ವಿಪಕ್ಷೀಯರು ಮರೆಯಾಗುವರು. ತಾ. 25ರಿಂದ 26ರ ವರೆಗಿನ ದಿನಗಳು ಸರ್ವೋತ್ಕೃಷ್ಟಗಳಾಗಿವೆ.

### ೧೦. ಮಕರ

ದುರ್ದಿನಗಳು ದೂರವಾದವು. ನಿಮ್ಮ ಪರಿಸ್ಥಿತಿಯಲ್ಲಿಂದು ಹಲವಾರು ಬದಲಾವಣೆಗಳಾಗಲಿವೆ. ನಿಮ್ಮ ಯೋಜನೆ ಉದ್ಯಮಗಳು ನಿರೀಕ್ಷಿಸಿದ ಫಲವನ್ನು ಕೊಡಲಿವೆ. ಗೃಹಶತ್ರುಗಳಿಂದ ಮುಕ್ತರಾದ ನಿಮಗೆ ದಿನಗಳು ಸುಗಮವಾಗಿ ಸಾಗಲಿವೆ. ಗುರುಹಿರಿಯರ ವಿರೋಧ ಅತ್ಯಂತ ವಿರಳಕ್ಕೆ ಗುರಿಯಾದ ನಿಮಗೆ ವಾರಾಂತ್ಯದ 4 ದಿನಗಳು ಧನಲಾಭ ಸುಖಸಾಧಕಗಳಾಗಿವೆ.

### ೧೧ ಕುಂಭ

ಆರ್ಥಿಕ ಬಿಕ್ಕಟ್ಟಿನಿಂದ ನೀವಿಂದು ಮುಕ್ತರಾದರೂ ಮನೋರೋಗದಿಂದ ಮುಕ್ತರಾಗಲಾರಿರಿ. ನೀವಷ್ಟೇ ಮುಖಭಾಷಿಗಳಾಗಿದ್ದರೂ ಕೆಲವೊಂದು ಮಿತಶತ್ರುಗಳು ಕಾಲ ಕಳೆದು ನಿಮ್ಮ ಕೂಡೆ ಕಲಹಕ್ಕೆ ನಿಲ್ಲುವರು. ಹಣದ ವ್ಯವಹಾರ ನಿಮಿತ್ತ ಕೋರ್ಟು ಮನೆಗಳಿಗೆ ತಿರುಗುವ ಪ್ರಸಂಗ ಬಂದೀತು. ವಾರದ ಅಂತ್ಯದ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

### ೧೨. ಮೀನ

ಅನಿರೀಕ್ಷಿತ ಅಪದನರ್ಥಗಳಿಗೆ ನೀವಿಂದು ಗುರಿಯಾಗಲಿರುವಿರಿ. ಆತ್ಮೀಯರೇ ನಿಮ್ಮನ್ನಿಂದು ವಿರೋಧಿಸುವರು. ಕಾಸು ಇಲ್ಲದ ನರ ಕಲ್ಲಿಗೆ ಸಮನೆಂಬ ಗಾದೆಯು ನಿಮಗಿಂದು ಅನುಭವಕ್ಕೆ ಬರಲಿದೆ. ಕರ್ತವ್ಯಪರರಾದ ನೌಕರಿವರ್ಗಕ್ಕೂ ವ್ಯಾಪಾರೀ ವೃಂದಕ್ಕೂ ದುಡಿಮೆಗೆ ತಕ್ಕ ಫಲ ಲಭಿಸೀತು. ವಾರಾದಿಯ 3 ದಿನಗಳು ಸ್ವಲ್ಪ ಅನುಕೂಲವಾಗಿ ಪರಿಣಮಿಸುವವು.

— —

ಭೂಮಿಯೇಕೆ ಸುತ್ತಲೂ ತಿರುಗುತ್ತಿದೆ?
ನಿಕಮ್ಮಾ ಏಕೆ?
ಚಂದ್ರನೇಕೆ ಹಳದಿಯಾಗಿದ್ದಾನೆ?

ಪ್ರಶ್ನೆಗಳು, ಉತ್ತರದ ಆವಶ್ಯಕತೆಯುಳ್ಳ ಪ್ರಶ್ನೆಗಳು. ಮಗುವಿನ ಕೋಮಲ ಮನಸ್ಸಿನ ಕುತೂಹಲವು ಒಂದು ಅಮೂಲ್ಯವಾದ ಸೊತ್ತಾಗಿದೆ. ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವ ಅವಕಾಶ ಅವನಿಗಿರ ಬೇಡವೆ? ನಿಮ್ಮ ಮಗನೇ ಈ ಪರಿಯಾಗಿರಲು ಸಾಧ್ಯ. ನೀವು ಹೇಗೆ ಯೋಚಿಸುವಿರಿ? ಆತನ ಭವಿಷ್ಯ ನಿಮ್ಮ ಮೇಲೆ ಆಧರಿಸಿದೆ. ಆತನಿಗಾಗಿ ಮತ್ತು ಸ್ವತಹ ನಿಮಗಾಗಿ ಹೆಚ್ಚಿನ ಉತ್ಕರ್ಷವನ್ನು ಬಯಸುವಿರಿ ತಾನೆ? ಹಾಗಾದರೆ ಈ ಬಗ್ಗೆ ಈಗೇನು ಮಾಡುತಿದ್ದೀರಿ? ಅವನಿಗಾಗಿ ಎಷ್ಟು ಉಳಿಸುತಿದ್ದೀರಿ? ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಗೆ ಹೋಗಿ ಅವನ ಹೆಸರಿನಲ್ಲಿ ಒಂದು ಕ್ಯುಮುಲೇಟಿವ್ ಖಾತೆಯನ್ನು ತೆರೆಯಿರಿ. ಪ್ರತಿ ತಿಂಗಳು ಸ್ವಲ್ಪ ಸ್ವಲ್ಪ ಒತ್ತಟ್ಟಿಗೆ ಉಳಿಸಿರಿ. ನೀವು ಉಳಿಸುವ ಪ್ರತಿಯೊಂದು ರೂಪಾಯಿಯೊಡನೆ ಅವನ ಭವಿಷ್ಯ ಬಲಗೊಳ್ಳುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು 200ಕ್ಕೂ ಹೆಚ್ಚು. ರೂ. 70 ಕೋಟಿಗೂ ಮಿಕ್ಕಿದ ಸಂಪನ್ಮೂಲಗಳು.

### ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S.E.A. 56/65. S. C. 145/64.

ಬಿ. ಎಮ್. ಮಹಮ್ಮದ್ — ಅರ್ಜಿದಾರ

ಸೀತು ಹೆಂಗಸು ಸಹಾ — ಎದ್ರಿರು

ನೀಲಮ್ಮ ನಾಯ್ಕ (೩) ಬಾಬಣ್ಣ ನಾಯ್ಕ, ಕರಿಮಣೇಲು ಗ್ರಾಮ ವಾಸಸ್ಥರು.

ಮೇಲಿನ ವ್ಯವಹರ್ಣೆಯಲ್ಲಿ ಅರ್ಜಿದಾರನು ಮಾಡಿದ ಅಪೀಲಾರಿಯಲ್ಲಿ ನಿಮ್ಮ ಬ್ಗರೆ ಜಾಪ್ರತಿ ಬಗ್ಗೆ ತಾ. 21.10.1965ಕ್ಕೆ ಇಟ್ಟಿರುತ್ತಾರೆ. ಅದ್ದರಿಂದ ನೀವು ಆ ದಿವಸ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪ ಇದ್ದಲ್ಲಿ ಹೇಳದಿದ್ದಲ್ಲಿ ನಿಮ್ಮನ್ನು ಶಿಮ್ಮಾ ಮಾಡಿ ಸದ್ರಿ ಅಮಲ್ದಾರಿಯನ್ನು ಮುಂದುವರಿಸಲಾಗುವುದು.

(Sd.) N. J. KADAMBA,
Advocate for Petitioner.

ಬೆಳ್ತಂಗಡಿ, 1-10-1965.

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

# నవయుగ

# NAVAYUGA

౨౦ పైస

ಸೌಂದರ್ಯದ ಅನುಭೂತಿಗೆ ಮತ್ತು

ಅತ್ಯುತ್ತಮವಾದ ಕೋರಿಕೆಗೆ....

ಮೈಸೂರು ಸರ್ಕಾರದ
ನೂರಕ್ಕೆ ನೂರರಷ್ಟು ಶುದ್ಧವಾದ
ಸಿಲ್ಕ್ ಸೀರೆಗಳನ್ನೇ ಆರಿಸಿಕೊಳ್ಳಿ
ಆಧುನಿಕ ಫ್ಯಾಷನ್ನಿನಲ್ಲಿ ಕಂಗೊಳಿಸಿರಿ–

ಅವು ನಯವಾಗಿಯೂ,
ಬಾಳಿಕೆಗೂ,
ಶ್ರೇಷ್ಠತೆಗೂ
ಹೆಸರಾಗಿವೆ.

GOVT SILK WEAVING FACTORY MYSORE
TRADE MARK
HALLMARK OF QUALITY

## ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು–4

**ಷೋರೂಮುಗಳು:—**

1 ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು–4.

2 ಗುಪ್ತ ಮಾರ್ಕೆಟ್, ಕೆಂಪೇಗೌಡ ರೋಡ್, ಬೆಂಗಳೂರು–9

3 ಮೈಸೂರು ಸಿಲ್ಕ್ ಪ್ಯಾಲೇಸ್, ಲಜ್‌ಕಾರ್ನರ್, 92, ರಾಯಪೇಟಾ ಹೈರೋಡ್, ಮದರಾಸ್–4.

ದೀಪಾವಳಿ ಸಂಚಿಕೆ ೧೯೬೫

# ನವಯುಗ

ಸಂಪುಟ ೪೫ | ಉಡುಪಿ | Vol. 45
ಸಂಚಿಕೆ ೮ | ೨೮—೧೦—೧೯೬೫ | No. 8

Telephone 226.

Estd. 1921

**NAVAYUGA**

Leading Kannada Weekly

UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

**ನವಯುಗ**

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

**ವಾರ್ಷಿಕ ಚಂದಾ:**

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೮

**ಜಾಹೀರಾತು ದರಗಳು:**

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

**ಸೂಚನೆಗಳು**

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಫೂಲ್ಸ್ ಕ್ಯಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

**ಚಂದಾದಾರರಿಗೆ—**

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಜಡತೆಯಿಂದ ಚೇತನದತ್ತ ಒಯ್ಯುವ ಪರ್ವ ದೀಪಾವಳಿ. ಅಜ್ಞಾನದಿಂದ ಜ್ಞಾನದತ್ತ ಒಯ್ಯುವುದು ಎ ಕೆ ಡಿ ಮಿ ಶಿಕ್ಷಣ ಸಂಸ್ಥಾವಳಿ. ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜು ಕಟ್ಟಡದ ಆರಂಭೋತ್ಸವದಂದು ಕೇಂದ್ರ ಶಿಕ್ಷಣ ಉಪಮಂತ್ರಿ ಶ್ರೀಮತಿ ಸೌಂದರಂ ರಾಮಚಂದ್ರನ್ ಜ್ಯೋತಿ ಹೊತ್ತಿಸಿದರು. ಚಿತ್ರದಲ್ಲಿ ಉದ್ಘಾಟಕ ಮುಖ್ಯ ಮಂತ್ರಿ ನಿಜಲಿಂಗಪ್ಪ ಎಕೆಡಿಮಿ ರಿಜಿಸ್ಟ್ರಾರ್ ಡಾ|ಮಾಧವ ಗಳನ್ನು ಕಾಣಬಹುದು.

## ಸಾಹಸದ ನೆನಹು ಸಾಹಸ ತುಂಬಲಿ

ದೀಪಾವಳಿ ಇಡಿಯ ಭಾರತದ ಹಬ್ಬಗಳ ರಾಜ. ಚಳಿಗಾಲ ಆರಂಭದಲ್ಲಿ ಬರುವ ಈ ಮೂರು ದಿನಗಳ ಪರ್ವ ಭಾರತೀಯರ ಹೆಮ್ಮೆಯ ಹಬ್ಬ. ಭಗವಾನ್ ಶ್ರೀ ಕೃಷ್ಣ ನರಕಾಸುರನನ್ನು ಕೊಂದು ಲೋಕ ಸುಭಿಕ್ಷೆಯನ್ನು ಸಾಧಿಸಿದ ದಿನವೊಂದು. ವಾಮನಾವತಾರದಲ್ಲಿ ಶ್ರೀ ವಿಷ್ಣುವು ಸಾಮ್ರಾಜ್ಯವಾದಿ ಮದೋನ್ಮತ್ತ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಿದ ದಿನವೊಂದು. ಶ್ರೀ ಕೃಷ್ಣನೇ ಇಂದ್ರನ ದರ್ಪದ ಕೋಡನ್ನು ಮುರಿದು ಜನಕಲ್ಯಾಣಕಾರಕವಾದ ಪರ್ವತವನ್ನೂ ಗೋವುಗಳನ್ನೂ ಪೂಜಿಸಿದ ದಿನವೊಂದು— ಹೀಗೆ ಮೂರು ವಿಶೇಷ ಘಟನೆಗಳಿಂದಾಗಿ ಮೂರು ದಿನಗಳ ಹಬ್ಬವನ್ನು ನಾವು ಆಚರಿಸುತ್ತೇವೆ; ಶತ ಶತಮಾನಗಳಿಂದಲೂ ಇದು ರಕ್ತಗತವಾಗಿ ಸಂಪ್ರದಾಯವಾಗಿ ನಡೆದು ಬಂದಿದೆ; ಮುಂದೆಯೂ ನಡೆದು ಬರುತ್ತದೆ. ಭಾರತೀಯರು ಇರುವ ತನಕ ದೀಪಾವಳಿಯೂ ಇರುತ್ತದೆ.

ಇಂದು, ಭಾರತೀಯರ ಮೇಲೆ ಹಲವಾರು ಪ್ರಕಾರದಲ್ಲಿ ಒತ್ತಾಯವನ್ನು ತರುತ್ತಿರುವ ನರಕಾಸುರರು ನಮ್ಮ ಸುತ್ತ ತುಂಬಿದ್ದಾರೆ. ಅಮೆರಿಕ ಬ್ರಿಟನ್‌ಗಳು ತಾವು ನೀಡುತ್ತಿರುವ ನೆರವಿನ ಮೇಲೆ ಶರ್ತವನ್ನು ಹೇರ ತೊಡಗಿವೆ. ಭಾರತದ ಒಂದು ರಾಜ್ಯವಾದ ಕಾಶ್ಮೀರವು 'ವಿವಾದಗ್ರಸ್ತ ರಾಜ್ಯ'ವೆಂಬ ಅವರ ತಪ್ಪು ತಿಳುವಳಿಕೆ ಇನ್ನೂ ದೂರವಾಗಿಲ್ಲ. ಭಾರತದಂತಹ ವಿಶಾಲ ದೇಶ ತನ್ನ ಒಂದು ಭಾಗವನ್ನು ಪಾಕಿಸ್ತಾನಕ್ಕೆ ದಾನ ನೀಡಬೇಕು ಎಂಬುದೇ ಅವರ ಮನೀಷೆ ಇದ್ದಂತಿದೆ. ಅದಕ್ಕೆಂದೇ ಪಾಕಿಸ್ತಾನವು ಮಾಡಿದ ಆಕ್ರಮಣ-ಅತ್ಯಾಚಾರಗಳ ಮೇಲೆ ಮುಸುಕೆಳೆದು ಅವರು ಪಾಕ್ ಅಸುರರಿಗೆ ಪರೋಕ್ಷ—ಕೆಲವೊಮ್ಮೆ ಪ್ರತ್ಯಕ್ಷ—ಬೆಂಬಲವನ್ನೂ ನೀಡುತ್ತಿದ್ದಾರೆ. ಇದನ್ನು ನಾವು ತಡೆಯದೆ ಹೋದರೆ, ನಾಳೆ ಭಾರತದ ಸಮಗ್ರತೆಯೇ ಇಲ್ಲವಾದೀತು. ಯಾವುದೇ ಪ್ರಕಾರದ ಒತ್ತಾಯ-ಬಲತ್ಕಾರಗಳಿಗೆ ನಾವು ಕಟ್ಟು ಬೀಳಬಾರದು. ಆರ್ಥಿಕ ಸಹಾಯ ಮತ್ತು ರಾಜಕೀಯ ವಿಚಾರಗಳನ್ನು ಒಂದೇ ಸೂತ್ರದಲ್ಲಿ ಪೋಣಿಸುತ್ತಿರುವವರಿಗೆ ಸರಿಯಾದ ಉತ್ತರವನ್ನು ಕೊಡಬೇಕು. ಅಂತಹ ಉತ್ತರ ನೀಡಲು ನಾವು ತುಂಬ ಸಾಹಸ ಮಾಡಬೇಕಾದೀತು. ನಮ್ಮ ಅಭಿವೃದ್ಧಿ ಯೋಜನೆಗಳಿಗೆ ಬೇಕಾದ ಸಂಪತ್ತನ್ನು ನಾವೇ ನಮ್ಮಲ್ಲಿಯೇ ಕೂಡಿಸಬೇಕಾದೀತು. ಮುಖ್ಯವಾಗಿ, ವಿದೇಶ ವಿನಿಮಯದ ಕೊರತೆಯನ್ನು ನೀಗಿಸಲು ಭಾರತೀಯ ಜನತೆ ತುಂಬ ತ್ಯಾಗ ಮಾಡ ಬೇಕಾಗುತ್ತದೆ. ಭಾರತ ಸರಕಾರವು ಚಿನ್ನದ ರೂಪದಲ್ಲಿಯೇ ಪಡೆದು, ಅದೇ ರೂಪದಲ್ಲಿ ಹಿಂದಿರುಗಿಸುವ ಚಿನ್ನದ ಬಾಂಡುಗಳನ್ನು ಇದೇ ಸಂದರ್ಭದಲ್ಲಿ ಹೊರಡಿಸಿದೆ. ನಮ್ಮ ದುರ್ಬಲತೆಗಳನ್ನು ಅರಿತುಕೊಂಡು ನಮ್ಮನ್ನು ಬಂಧನದಲ್ಲಿಡುವ ಸಂಚು ಹೂಡುತ್ತಿರುವ ಸಿರಿವಂತ ದೇಶಗಳಿಗೆ ನಾವೀಗ ನಮ್ಮ ತ್ಯಾಗ ವೀರ್ಯವನ್ನು ತೋರಿಸುವ ಅವಕಾಶ ಬಂದಿದೆ. ನರಕಾಸುರನನ್ನು ದಮನಿಸಿ ಸ್ವಾತಂತ್ರ್ಯವನ್ನು ಸರ್ವ ಕ್ಷೇತ್ರದಲ್ಲಿಯೂ ಗಳಿಸುವ ಮತ್ತು ಉಳಿಸುವ ಸಂಕಲ್ಪವನ್ನು ನಾವು ಮಾಡಬೇಕು.

ಭಾರತದ ಪ್ರಗತಿಯಿಂದ ಹೊಟ್ಟೆಯುರಿದು, ಕಾಶ್ಮೀರವನ್ನು ಕಬಳಿಸ ಬಂದ ಅಯೂಬಖಾನರ ಮಹತ್ವಾಕಾಂಕ್ಷೆಯನ್ನು ಸದ್ಯ ನಾವು ತಡೆಹಿಡಿದಿದ್ದೇವೆ. ಅವರ ಈ ವರ್ತನೆಗೆ ಪೂರ್ಣವಿರಾಮ ಬೀಳುವ ಲಕ್ಷಣಗಳೇನೂ ಕಂಡುಬರುವುದಿಲ್ಲ. ಸಾಲದ್ದಕ್ಕೆ ಚೀನೀಯರ ಚೌ—ಎನ್-ಲಾಯರು ಆಕ್ರಮಣ ಪ್ರವೃತ್ತಿಯನ್ನು ಮುಂದುವರಿಯುತ್ತ ದ.ಏಶ್ಯಾಖಂಡದಲ್ಲಿಯೇ ತನ್ನ ಪ್ರಭಾವವನ್ನು ಮೆರೆದಂಡ ಬಯಸುವ, ತನ್ನ ಮುಷ್ಟಿಯನ್ನು ಬಿಗಿಗೊಳಿಸ ಬಯಸುವ ಮಹತ್ವಾಕಾಂಕ್ಷೆಗಳನ್ನು ಏಕಮನಸ್ಕರಾಗಿ ಭಾರತ ದಮನಿಸಲೇ ಬೇಕು. ಜಾತ್ಯತೀತ ಪ್ರಜಾತಂತ್ರ ಮಾನವ ಕಲ್ಯಾಣಕಾರಕವೆಂಬುದನ್ನು ಸರಿಯಾಗಿ ತಿಳಿದುಕೊಂಡ ನಾವು, ಭಾರತೀಯರು ಸರ್ವಾಧಿಕಾರವನ್ನು ಎಂಟೆದೆಯಿಂದ ಎದುರಿಸಲೇಬೇಕು; ಜಾತೀಯತೆಯನ್ನು ಪ್ರತಿಭಟಿಸಲೇ ಬೇಕು. ವಿಜಯಿಯಾಗಬೇಕು.

ಯಾರು ಏನೆಂದರೂ ಕಷ್ಟಕಾಲದಲ್ಲಿ ನೆರವಾಗುವವನೇ ನಿಜ ಮಿತ್ರ. ಮಿತ್ರತ್ವದ ಪರೀಕ್ಷೆ ನಡೆಯುವುದು ಸಂಕಟದ ಸಂದರ್ಭದಲ್ಲಿ. ನಮಗೆ ನಿಶ್ಶರ್ತವಾಗಿ ಸಹಾಯ ಮಾಡುವವರನ್ನು ನಾವು ಗೌರವಿಸಬೇಕು. ಪಶುಗಳಿಗೆ ಆಹಾರ ಒದಗಿಸುವ, ಭೂಮಿಗೆ ಮಳೆ ಸುರಿಸುವ ಬೆಟ್ಟವನ್ನು ಬಾಲಕೃಷ್ಣ ಪೂಜಿಸಿದ್ದು ನ್ಯಾಯ. ಇದರಿಂದ ರೊಚ್ಚಿಗೆದ್ದ ಇಂದ್ರ ದಂಡೆತ್ತಿದರೂ ಆವನ ಬೇಳೆ ಬೇಯಲಿಲ್ಲ. ದೃಢ ಸಂಕಲ್ಪ ಮತ್ತು ಸಾಹಸದಿಂದ ಕೃಷ್ಣ ತನ್ನ ಹಾಗೂ ತನ್ನವರ ರಕ್ಷಣೆ ಮಾಡಿದ, ಕೀರ್ತಿಗಳಿಸಿದ. ಗೌರವವು ಯಾರೊಬ್ಬರ ಗುತ್ತಿಗೆಯ ವಸ್ತುವಲ್ಲ. ನಮಗೆ ಉಪಕಾರ ಮಾಡಿದವರು, ಅವರೆಷ್ಟು ಕೀಳಿನವರೇ ಇರಲಿ, ಅವರನ್ನು ಗೌರವಿಸುವ ಮತ್ತು ನಮಗೆ ಅಪಚಾರವೆಸಗಿ ಇರಿಯುವವರು, ಅವರೆಷ್ಟು ಹಿರಿಯರೇ ಇರಲಿ, ಅವರನ್ನು ತಿರಸ್ಕರಿಸುವ ದೃಢ ಮನೋವೃತ್ತಿ ನಮ್ಮದಾಗಬೇಕು.

ಈ ವರ್ಷದ ದೀಪಾವಳಿ ಭಾರತೀಯರು ಹೊಸ ಲೆಕ್ಕಾಚಾರ ಪ್ರಾರಂಭಿಸಬೇಕೆಂಬ ಸೂಚನೆ ಕೊಡುತ್ತಿದೆ. ನಮ್ಮ ನೈಜ ಮಿತ್ರರು ಯಾರು, ಶತ್ರುಗಳು ಯಾರು, ಹಿತಶತ್ರುಗಳು ಯಾರು ಎಂಬುದರ ಲೆಕ್ಕಾಚಾರ ನಾವು ಸರಿಯಾಗಿ ಮಾಡಿಕೊಳ್ಳಬೇಕು. ಇಲ್ಲಿ ನಾವು ತಪ್ಪಿದ್ದರೆ, ಮುಂದೆ ದಿವಾಳಿಯಾಗುವ ಸಂಭವವೇ ಹೆಚ್ಚು. ಈ ದಿಸೆಯಲ್ಲಿ ಈಗಾಗಲೇ ತೊಡಗಿದ ನಮ್ಮ ಪ್ರಯತ್ನಗಳು ಇನ್ನೂ ಮುಂದುವರಿಯಬೇಕು; ಅದು ಪರಿಪೂರ್ಣವಾಗಬೇಕು. ಒತ್ತಾಯ, ಹಿಂಸೆ,ಶಕ್ತಿಗಳ ಮುಂದೆ ಭಾರತೀಯರು ಎಂದಿಗೂ ತಲೆ ತಗ್ಗಿಸಿದವರಲ್ಲ. ನರಕಾಸುರ, ಬಲಿ ಚಕ್ರವರ್ತಿ ಮತ್ತು ದೇವೇಂದ್ರರ ಮುಖಭಂಗವೇ ಇದಕ್ಕೆ ಜ್ವಲಂತ ನಿದರ್ಶನ. ಇದೇ ದೃಢತೆಯಿಂದ ಮುಂದುವರಿಯೋಣ; ಅನ್ಯಾಯ — ಅನ್ಯಾಯಿಗಳನ್ನು ಸದೆಬಡಿದೋಡಿಸೋಣ; ಅತ್ಯಾಚಾರ-ಅತ್ಯಾಚಾರಿಗಳನ್ನು ಸದೆಬಡಿಯೋಣ; ಅಪಚಾರ—ಅಪಚಾರಿಗಳನ್ನು ನೆಲಸಮ ಮಾಡೋಣ. ಪೂರ್ವ ಪುರುಷರ ಸಾಹಸದ ನೆನಹು ನಮ್ಮೆಲ್ಲಾ ಸಾಹಸವನ್ನು ತುಂಬಲಿ; ಯಶ ಒದಗಿಸಲಿ.

ಜೈಹಿಂದ್

## ದೀಪಾವಳಿಯ ಶುಭಾಶಯ

ಗಂಡಾಂತರ ಪರಿಸ್ಥಿತಿಯ ನಡುವೆ ಮತ್ತೆ ಬಂದಿದೆ ದೀಪಾವಳಿ. ನಮ್ಮ ಪರಮ ಪ್ರೋತ್ಸಾಹಕರಾದ ನಿಮಗೆ, ಸಮಸ್ತ ವಿಶ್ವಕ್ಕೆ ಸಂತೋಷವನ್ನಿದು ತರಲಿ ನವಚೇತನ, ನವಜೀವನದ ಸವಿಯನ್ನು ಉಣ್ಣಿಸಿ ಸದಾ ನಿರೋಗಿಗಳೂ ಸದಾಚಾರಿಗಳೂ ಸಚ್ಚರಿತರೂ ಮಾನವತಾವಾದಿಗಳೂ ಆಗುವಂತೆ ನಮಗೆಲ್ಲಾ ಮಾರ್ಗದರ್ಶನ ಮಾಡಲಿ. ಕತ್ತಲೆ ಕಳೆದು ಬೆಳಕು ಹರಡಲಿ; ದುಃಖದಾರಿದ್ರ್ಯಗಳು ದೂರ ಸರಿಯಲಿ, ಸುಖ ಸಮೃದ್ಧಿ ಯಃ ಭಾಗ್ಯ ನಮ್ಮೆಲ್ಲರದ್ದಾಗಲಿ.

"ನವಯುಗ"

ದೀಪಾವಳಿಯ ಶುಭಾಶಯಗಳು!

ಸೌಜನ್ಯ, ಸೌಲಭ್ಯ ಹಾಗೂ ಭದ್ರತೆಗಳ ಹೆಗ್ಗುರುತು—

# ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್,

(ಶೆಡ್ಯೂಲ್ಡ್ ಬ್ಯಾಂಕ್)

ವಿವಿಧ ಬ್ಯಾಂಕಿಂಗ್ ಸೌಕರ್ಯಗಳು:

ಕರೆ, ಚಿಕ್ಕ ಉಳಿತಾಯ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು.

ಬಡ್ಡಿ ಸೇಕಡಾ 8ರ ವರೆಗೆ

ಚಲಾವಣಾ ಭಂಡವಾಳ ರೂ. **2** ಕೋಟಿಗೂ ಮಿಕ್ಕಿದೆ.

ಪ್ರಗತಿ ಪಥದಲ್ಲಿ ಮುಂದಡಿಯಿಡುತ್ತಿರುವ **ನಾಯಕ್ ಬ್ಯಾಂಕ್** ಪ್ರತಿಯೊಬ್ಬರಿಗೂ

ಏಕಪ್ರಕಾರದ ಸೌಜನ್ಯ ಸೇವೆ ಸಲ್ಲಿಸಲು ಸಿದ್ಧವಿದೆ.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಶಾಖಾ ಕಛೇರಿಯನ್ನು ಸಂದರ್ಶಿಸಿರಿ.

# THE PANGAL NAYAK BANK LIMITED

(SCHEDULED BANK)

ESTD 1920

**Regd. Office: UDIPI, S. Kanara.**

ದೀಪಾವಳಿಯ ಶುಭಾಶಯಗಳು

ಹಬ್ಬಗಳ ರಾಜ ದೀಪಾವಳಿ! ಫರ್ನಿಚರುಗಳ ರಾಜ ಖೀರಾ!

# ಖೀರಾ ಉಕ್ಕಿನ ಫರ್ನಿಚರುಗಳು

ಮನೆ, ಆಫೀಸು, ಆಸ್ಪತ್ರೆಗಳಿಗೆಲ್ಲಾ ಬೇಕಾಗುವ ಕಪಾಟು, ಕುರ್ಚಿ, ಮೇಜು ಮೊದಲಾದ ಯಾವತ್ತೂ ಖೀರಾ ಉಕ್ಕಿನ ಫರ್ನಿಚರುಗಳು, ಉಪಕರಣಗಳು, ಚಿತ್ರದ ಸಾಹಿತ್ಯೋಪಕರಣಗಳು, ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ಉಕ್ಕಿನ ಕಿಟಿಕಿ ಬಾಗಿಲುಗಳು, ಮಕ್ಕಳಿಗಾಗಿ ನವೀನ 'ಬೇಬಿ ವಾಕರ್' ಇತ್ಯಾದಿಗಳಿಗೆ ವಿಚಾರಿಸಿರಿ.

ಇಬ್ಬಗೆಯ ಉಪಯೋಗದ "ಸೋಫಾ-ಕಂ-ಬೆಡ್', ಬೇಕಾದಂತೆ ಶಾಖ—ತಂಪು ಕೊಡುವ ಫ್ಯಾನು ಇತ್ಯಾದಿಗಳಿಗೆ ಹಂಪನಕಟ್ಟೆಯಲ್ಲಿರುವ ನಮ್ಮ ಶೋ ರೂಮನ್ನು ಸಂದರ್ಶಿಸಿರಿ!

ಹೆಚ್ಚಿನ ವಿವರಗಳಿಗೆ—

# ಶಾಸ್ತ್ರಿ & ಕೊ Shastry & Co.

ಹಂಪನಕಟ್ಟೆ,
ಮಂಗಳೂರು.

ಫೋನ್: **3788**

**HAMPANKATTA,**
**MANGALORE.**

Telegrams: "SHASTRYCO"

# ರಾಧಿಕೆ

ಶ್ರೀ ಯನ್. ಕೃಷ್ಣ ಮುಕಾರಿ, ಮಂಗಳೂರು.

(ಅದೊಂದು ಚೈತ್ರದ ದಿನ, ಮರಗಳೆಲ್ಲಾ ಚಿಗುರು ಹೇರಿ, ಹುಲ್ಲೆಲ್ಲಾ ಚಿಗುರಿ ಬನವೆಲ್ಲಾ ಹೂ ಮುಡಿ, ಚಿಗುರುಗಳಿಂದ ಕಂಗೊಳಿಸುತಿತ್ತು. ಉದಯಾಚಲದ ಮೇಲೆ ಕೆಂಗಿರಣದ ರವಿ ಮೂಡಿ ಬಂದಾಗ ಕೃಷ್ಣನ ಪ್ರೇಯಸಿಯೆಂದು ಖ್ಯಾತಳಾದ ರಾಧೆ ನೀರ ಕೊಡವನ್ನು ಸೊಂಟದ ಮೇಲಿಟ್ಟು ಬರುತ್ತಾ ಇದ್ದಳು).

— ೧ —

ಏಕೊ! ನಾಚುಗೆಯಲ್ಲಿ ಕೆಂಪೇರುತಿದೆ
ಚೂತ!
ಬಿಂಬಾಧರಂ ಮೇಲು ಅಳೆಯುದು,
ಎನೆ, ಪೂತ
ನ ದನಿಲತೆ ನಡುಗುತಿದೆ? ವೃಕ್ಷಮಂ
ತವೆ ತಬ್ಬಿ!
ರದನ ಪಙ್ಕ್ತಿಯ ಹೊಳಪ ಕಂಡು?
ಮೈಯೊಳ ಗುಬ್ಬಿ—
ಅಲೆಯುತಿಹ ತಂಬೆಲರು ತನ್ನೊಳಗೆ
ಇಡಿದಿರ್ದ—
ಕಮ್ಮನೆಯ ಭಾರಮಂ ಇಳಿಸಿ ತಾಂ
ನಡೆದಿರ್ದ!
ಬರುವ ನಾರಿಯ ಕಂಪು ತನಗಿಂಥ
ಮಿಗಿಲೆಂದು?
ಶುಕಪಿಕದ ರಾಗರಸ ಸಲ್ಲಾಪಮೇಕಿಂದ —
ಅಡಗಿಹುದು? ತಮಗಿಂಥ ನುಣ್ಪೆಂದ
ದನಿಯವಳ?
ಮೇಖಲೆಯುಡಿಗೆಳಲಿ ಉಲಿವ
ಕಾಲ್ಗೆಜ್ಜೆಗಳ || ೧೦ ||
ಕಿಂಕಿಣಿಯ ನಾದಕ್ಕೆ ಬೆಂಗಾಗಿ ಕಣ್
ಬಿಟ್ಟು
ನೋಡುವುವೆ? ಮಾವಿನೆಳೆ ರೆಂಬೆಯಲಿ
ಮರವಟ್ಟು?
ಹಸುರು ಹುಲ್ಲಿನ ಸೀರೆಯುಡೆ ವಸುಂಧರೆ
ಸೀರೆ—
ತಾನಾಗಿ ಮೈಮರೆಸೆ, ನಾಲದೆನೆ, ಅದೊ
ಸೀರೆ —
ಮುತ್ತಾಗಿ ಮಿಂದ ಮಿರನೆ ಮಿರುಗುತಿದೆ!
ಏನೆಂದ!
ಅಲ್ಲೆ ಕಾದಿಹ ನಲ್ಲೆ ಬರುವ ಪಥದಲಿ
ನಂದ—
ನಂದನನು ಕೊಳಲಿನಲಿ ಹೊನ್ನ ರಾಗವ
ಸುರಿದು
ಮೈಮರೆದು ಮರೆಯಿಸುವ ರಸಗಂಗೆಯಂ
ಕರದು!
ಸುಳಿತಿಹನದೀ ಭಾಗ್ಯವಾವಳಿಗೆ?
ಅಲ್ಲೇಕೆ
ಈ ತೆರಂ ಚೆಲು ಪ್ರಕೃತಿ ಕೂಡಿಹುದು?
ಓ! ಅಕೆ || ೨೦ ||
ರಾಧೆ!....ರಾಧಾ!....ರಾಧಿಕೆ!

— ೨ —

ಮೆಲ್ಲ ಮುಂದಿಡೆ ಹೆಜ್ಜೆ
ನಲಿದು ಉಲಿಯಿತು ಗೆಜ್ಜೆ
"ರಾಧೆ ಅಡಿಗಳ ಸಖಿಯು ನಾನು."
ಎಂದು!
ಉಡಿಯೊಳಿಹ ಒಡ್ಯಾಣ
ನೋಡುತ್ತ ತಲ್ಲೀನ—
ವಾಗಿಹವು ಗೋಕುಲವು ಹಿಂದು
ಮುಂದು!
ಚಂಚಲದ ಅಕ್ಷಿಗಳ
ಕಂಡದೋ ಹಿಂಬಿದಳ—
ಬಿಟ್ಟು ತಬ್ಬಿಬ್ಬಾಗಿ ಹಾರುತಿಹುದು!
ಹಣೆಯಲ್ಲಿ ಮುಂಗುರುಳ || ೩೦ ||
ಕಂಡು ಕಂತುವಿನುರುಳ—
ಸುರುಳಿಯದೊ ಕೈಯಿಂದ
ಜಾರುತಿಹುದು!
ಆಕೆ ಗೋಪಿಕ ಕನ್ನೆ!
ಮೋಹನನ ಮನದನ್ನೆ!
ಸಂಪನ್ನೆ! ರೂಪೊಲ್ಮೆ ಜವ್ವನದಲಿ!
ಮುಗ್ಧ ಮೂತಿನ ಚಿಲುಮೆ,
ನುಣ್ಪಿನಿಯ ಸಿರಿ, ನಲ್ಮೆ
ಮೈತಳೆದ ತೆರದಿ ಬರಿ ಹೂಬನದಲಿ!
ತೊನೆಯುತೊಯ್ಯಾರದಲಿ
ಮುಂಜೆರಗು ಮಿಗೆ ಗಾಳಿ- || ೪೦ ||
ರೋಮಾಂಚನಂಗೊಂಡು ಸ್ಪರ್ಶದಲ್ಲಿ
ಮೌನ ಸಂಕೇತಮಂ
ಉಸುರುತ್ತ ದೇಹಮಂ
ನವಿರಾಗಿ ಸವರುತಿಹ ಹರ್ಷದಲ್ಲಿ!

— ೩ —

ಕೇಳಿದಳು: ಪಿಕವಲ್ಲ! ಶುಕವಲ್ಲ!
ಅಳಿಕುಲದ
ಝಾಲು ಝೇಂಕೃತಿಯಲ್ಲ! ಸಿಟ್ಟಿಸಿ
ದೂಡೀ ಕೆಂದ—
ಬಳ್ಳಿ-ಮೃಗ-ಮರ ಚಿಗುರು ನಡುವೆ
ಬಾಯ್ಬಿಟ್ಟಿಲ್ಲಿ
ಮತ್ತಾವುದೀ ದನಿಯ ಪೊಣ್ಮುತಿದೆ?
ಗುಟ್ಟಿಲ್ಲಿ
ಬಲ್ಲೆ ನಾ ಹಾಲ್ಗಳ್ಳ! ಎಂದು ಕವೆ
ಕೆಂಪೇರಿ,
ಬರುತಿಹಳು! ಬರುತಿಹಳು! ರಾಧೆ
ತನ್ನಯ ದಾರಿ— || ೫೦ ||
ಯಲಿ ಕಣ್ಣ ಕಿರಣಗಳ ಪಸರಿಸುತ,
ಪರಿಕಿಸುತ,
ನಿಶ್ಚ ಮೋಹಕನಲ್ಲಿ ಇರಬಹುದು
ಎಂದೆನುತ!

— ೪ —

ಅಲ್ಲೆ ಹುಲ್ಲ ಹಾಸಿನಲ್ಲಿ
ಮಲಗಿ, ಶ್ಯಾಗ ದೂರದಲ್ಲಿ
ನೀರ—ಸೀರೆ ಬರಲು ಜಘನ
ಎಡಕೆ ಬಲಕೆ ಬಾಗೆ, "ನಿನ್ನ
ಎದೆಯ ಭಾರ ತಾಳಲಾರೆ!
ಏಕೆ ಹೊರುವೆ ನೀರು ಬೇರೆ?"
ನೆನೆದು ಮನಸ್ಸಿನಲ್ಲೆ ನಕ್ಕ
"ರೆಪ್ಪೆ ಕಣ್ಗೆ ಪರದೆಯಿಕ್ಕ!" ||೬೦||
ಎನಲು ಕರದ ಕೊಳಲು ಬೆರಳು
ಸರಸವಾಡೆ ಮನಕೆ ಮರುಳು
ಕವಿದ ತೆರದಿ ಖಗದ ಕೊರಳು
ಮೌನವನ್ನೆ ತಾಳೆ ಇರಲು
ಬಂದಳಲ್ಲೆ ರಾಧಿಕೆ!
ಬರಡು ಬದಿರ ನಾದರಸದೊ
ಕ್ಯೈಕ್ಯವಾಗೆ ಮೋದಕೆ!

(ಮೂವತ್ತನೇ ಪುಟ ನೋಡಿರಿ)

ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್

ನಿಮ್ಮ ಬ್ಯಾಂಕ್-

ಕೆನರಾ ಬ್ಯಾಂಕ್

90 ಕೋಟಿ ರೂ. ಗಳಿಗೂ ಮಿಗಿಲಾದ ಸಂಪತ್ಸಾಧನಗಳು

ಭಾರತದಲ್ಲಿ 235 ಕ್ಕೂ ಹೆಚ್ಚಿಗೆ ಶಾಖೆಗಳು

ಪ್ರಪಂಚದಾದ್ಯಂತ 145 ಕ್ಕೂ ಹೆಚ್ಚು ಸಂಖ್ಯೆಯ ಪ್ರತಿನಿಧಿಗಳು

60 ವರ್ಷಗಳ ಅನುಭವ ಮತ್ತು

ವಿಶಾಲ ವ್ಯಾಪ್ತಿಯ ಸೇವಾ ಸೌಲಭ್ಯಗಳು

ಕೆನರಾ ಬ್ಯಾಂಕನ್ನು ಬಲ್ಲಂತೆಲ್ಲಾ ಹೆಚ್ಚಿಗೆ
ನೀವು ಈ ಬ್ಯಾಂಕನ್ನೇ ಬಳಸುವಿರಿ

60 ವರ್ಷಗಳ ಸೇವೆ
ವಜ್ರ ಮಹೋತ್ಸವ ವರ್ಷ

CB-132 KAN

ಮುನ್ನಡೆಯಿರಿ—ನಮ್ಮೊಡನೆ ಮುನ್ನಡೆಯಿರಿ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)
ರಿಜಿಸ್ಟರ್ಡ್ ಆಫೀಸು ಮಂಗಳೂರು
ಆಡಳಿತ ಕಚೇರಿ ಬೆಂಗಳೂರು

ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್

ರಾಷ್ಟ್ರೀಯ ರಕ್ಷಣಾ ನಿಧಿಗೆ ಧಾರಾಳ ಸಹಾಯ ಸಲ್ಲಿಸಿರಿ.

ಕೆನರಾ ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ಸಲ್ಲಿಸುವ ವಂತಿಗೆಗಳು ಮೂಲಬೆಲೆಗೆ ಸ್ವೀಕರಿಸಲ್ಪಡುತ್ತವೆ.

ಚಿಕ್ಕ ಹಿಡುವಳಿದಾರರಿಗೆ ಉತ್ತಮ ಕೊಡುಗೆ:-

# ವರ್ಜಿನ್

ಕ್ರೂಡ್ ಆಯಿಲ್
ಪಂಪು ಸೆಟ್ಟುಗಳು...........

- 3 H. P.
- ಸುದೃಢವಾದ ರಚನೆ
- ಕ್ರೂಡ್ ಆಯಿಲಿನಿಂದಾಗಿ ಅತೀ ಕಡಿಮೆ ಖರ್ಚು
- ವರ್ಷ ಪರಿಯಂತ ಕಿರುಕುಳ ರಹಿತ ಸೇವೆ
- ಸುಲಭದಲ್ಲಿ ಒಯ್ಯಲು ಅನುಕೂಲವಾಗುವಂತೆ ನಾಲ್ಕು ಗಾಲಿಗಳ ಮೇಲೆ ಅಳವಡಿಸಲಾಗಿದೆ

# ಧನ

ಇಲೆಕ್ಟ್ರಿಕ್ ಮೋಟಾರು ಮತ್ತು
ಪಂಪು ಸೆಟ್ಟುಗಳು

- ಸ್ಕ್ರೀನ್ ಪ್ರೊಟೆಕ್ಟೆಡ್ ಮೋಟಾರುಗಳು
- ಟೋಟಲಿ ಎನ್‌ಕ್ಲೋಸ್ಡ್ ಮೋಟಾರುಗಳು,
- ಇಬ್ಬಗೆಯ ವೇಗದ ಮೋಟಾರುಗಳು.

ವಿತರಣೆಗಾರರು:—

## ನಿತ್ಯಾನಂದ ಇಂಡಸ್ಟ್ರಿಯಲ್ ಏಜೆನ್ಸಿ

ಕಾರ್ಕಳ (ದ. ಕ.)

---

ನಮ್ಮ ಗ್ರಾಹಕ ಮತ್ತು ಹಿತಚಿಂತಕರಿಗೆ

ದೀಪಾವಳಿಯ ಶುಭಾಶಯಗಳು.

ಅನುಭವಶಾಲಿಗಳ ಮೇಲ್ವಿಚಾರಣೆಯಲ್ಲಿ
ನಮ್ಮ ರಾಜಧಾನಿ ಬೆಂಗಳೂರಿನ ಕೇಂದ್ರ ಸ್ಥಳದಲ್ಲಿ
ನಿಮ್ಮ ಸ್ವಾಗತ—ಸತ್ಕಾರಗಳಿಗೆ

# ಹೊಟೆಲ್ ಸತ್ಕಾರ್

(ಬೋರ್ಡಿಂಗ್ ಮತ್ತು ಲಾಜಿಂಗ್)

ಕಾರ್ಪೊರೇಶನ್ ಆಫೀಸಿನ ಬಳಿ, 9, ಮಿಶನ್ ರೋಡ್

ಬೆಂಗಳೂರು—2. Phone: 28337

ಕಾರ್ ಪಾರ್ಕಿಂಗ್ ವ್ಯವಸ್ಥೆ, ಬಾತ್‌ರೂಂ ಲಗ್ತೀಕರಿಸಿದ ರೂಮುಗಳು
ಮತ್ತು ಫ್ಯಾಮಿಲಿ ರೂಮುಗಳ ಸೌಕರ್ಯ.
ಶಾಂತ ವಾತಾವರಣದಲ್ಲಿ ದಕ್ಷ ಸೇವೆ.

— ಪಾರ್ಟ್‌ನರ್ಸ್ —

ಟಿ. ಎಸ್. ಶೆಟ್ಟಿ ಬಿ. ವಿ. ಶೆಟ್ಟಿ

## HOTEL SATKAR

**Boarding & Lodging**

Near Corporation Office

9, Mission Road, BANGALORE – 2

---

## ನಮ್ಮ ವೀರ ಜವಾನರು

ರಾಷ್ಟ್ರದ ಗಡಿಗಳಲ್ಲಿ ಭಾರತದ ಕೀರ್ತಿಧ್ವಜ
ಮೆರೆಸುತ್ತಿದ್ದಾರೆ!

## ಆನಂದ ಟೈಪ್ ಫೌಂಡ್ರಿಯವರು

ನಾಡಿನ ಮೂಲೆ ಮೂಲೆಗಳಲ್ಲೂ
ಮುದ್ರಣಾಕ್ಷರಗಳ ಜಯಭೇರಿ
ಹೊಡೆಯುತ್ತಿದ್ದಾರೆ!!

ವಿಲಾಯತಿಯಿಂದ ಬಂದ ಮುದ್ರಣಾಕ್ಷರಗಳು ಮಾತ್ರವೇ ಉತ್ತಮವಾಗಿರುತ್ತವೆಯೆಂಬ ಅಂಧಶ್ರದ್ಧೆಯನ್ನು ದೂರ ಮಾಡಿ ನಾವೂ ಅಷ್ಟೇ ಉತ್ಕೃಷ್ಟವಾದ ಮುದ್ರಣಾಕ್ಷರಗಳನ್ನು ತಯಾರಿಸಬಲ್ಲೆವೆಂಬುದನ್ನು ಸಿದ್ಧಮಾಡಿ ತೋರಿಸಿದ ಕನ್ನಡ ನಾಡಿನ ಏಕಮೇವ ಸಂಸ್ಥೆಯೆಂದರೆ

# ಆನಂದ ಟೈಪ್ ಫೌಂಡ್ರಿ

ಕೊಪ್ಪಿಕರ ರೋಡ ಹುಬ್ಬಳ್ಳಿ

ದೊಡ್ಡ ಆರ್ಡರೇ ಆಗಲಿ, ಚಿಕ್ಕ ಆರ್ಡರೇ ಆಗಲಿ, ಎಲ್ಲದಕ್ಕೂ ಸಮನಾಗಿ ಲಕ್ಷ್ಯವಿತ್ತು ಸಮಯಕ್ಕೆ ಸರಿಯಾಗಿ, ಕರಾರುವಾಕ್ಕಾಗಿ ಪೂರೈಕೆ ಮಾಡುವದು ಈ ಸಂಸ್ಥೆಯ ವೈಶಿಷ್ಟ್ಯ.

ನೆನಸಿರಲಿ, ಆನಂದ ಟೈಪುಗಳೆಂದರೆ
ಇಮ್ಮಡಿ ಸೌಂದರ್ಯ!
ಮುಮ್ಮಡಿ ಅಚ್ಚುಕಟ್ಟು!!
ನಾಲ್ಮಡಿ ಬಾಳಿಕೆ!!!

ಬೆಳಕಿನ ಹಬ್ಬವಾದ ದೀಪಾವಳಿಯು ಈ ಶುಭ ಪ್ರಸಂಗದಲ್ಲಿ ಜನರ ಜ್ಞಾನಜ್ಯೋತಿಯನ್ನು ಬೆಳಗುವ ಮುದ್ರಣಾಕ್ಷರಗಳನ್ನು ಇನ್ನೂ ಹೆಚ್ಚೆಚ್ಚಾಗಿ ನಾಡಿಗೆ ನೀಡುವದಾಗಿ ಈ ಸಂಸ್ಥೆ ಪ್ರತಿಜ್ಞೆ ಮಾಡುತ್ತದೆ.

ದೀಪಾವಳಿ ಪ್ರತಿ ಮನೆಯನ್ನೂ ಬೆಳಗಲಿ!
ಆನಂದ ಟೈಪು ಪ್ರತಿ ಮುದ್ರಣಾಲಯವನ್ನೂ
ಪ್ರವೇಶಿಸಲಿ!!

**N. A. V. Naidu**
Proprietor

# ರೈತ ಮುರುಗ

ತಮಿಳು ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ಮೊದಲು —

ಆಲವಂತಿಯ ರೈತ ಮುರುಗನ ಮಾತಿನಿಂದ ಪ್ರಭಾವಿತನಾದ ಭೂಮಿಯೊಡೆಯ ಯುವಕ ರಾಮಚಂದ್ರ ಹಳ್ಳಿಯಲ್ಲಿರಲು ನಿರ್ಧರಿಸಿದ್ದರೂ ಗೆಳೆಯ ಕೇದಾರಿಯ ಪತ್ರ ಕೈಸೇರಿದ ಗಳಿಗೆಯಲ್ಲೇ ಚಂಚಲಚಿತ್ತನಾದನು. ಬಿ ಎ. ಪಾಸುಮಾಡಿದ ಅಸ್ಪಷ್ಟ ತನಗಿಲ್ಲವಾದರೂ ನಗರದ ಆಕರ್ಷಣೆ ಆತನನ್ನು ಮರುಳು ಮಾಡಿತ್ತು. ಮದ್ರಾಸಕ್ಕೆ ಹೋರಡುವ ದೃಢ ಸಂಕಲ್ಪ ರಾಮುವಿನದಾಯಿತು.

ಮುಂದೆ . . . .

ಕೇದಾರಿಯು ಸ್ವಪ್ರಯತ್ನದಿಂದ ಮುಂದಕ್ಕೆ ಬಂದವನು. ಅವನಿಗೆ ವಾತ್ಸಲ್ಯಮಯೀ ತಾಯಿ ತಂದೆಯವರ ಶಾಂತಗೊಳಿಸುವ ಸ್ಪರ್ಶವಾಗಲೀ ಅಥವಾ ಸಂಸಾರದ ಸೌಖ್ಯನೀಡುವ ವಾತಾವರಣವಾಗಲೀ ಏನೂ ಗೊತ್ತಿರಲಿಲ್ಲ. ಪಟ್ಟುಕೋಟೆ ತಾಲ್ಲೂಕಿನ ಒಂದು ಶುಷ್ಕ ಹಳ್ಳಿಯಲ್ಲಿ ನಿರ್ವಿಣ್ಣವಾಗಿ ಆದರೆ ಬಡತನದಲ್ಲಿ ಹುಟ್ಟಿದ್ದನು. ಐದು ವರ್ಷದ ಬಾಲಕನಾಗಿದ್ದಾಗಲೇ ಅವನು ತಾಯಿ ತಂದೆಯವರನ್ನು ಕಳೆದುಕೊಂಡಿದ್ದನು. ನಿಸರ್ಗವು ಕೂಡಲೇ ಅವನನ್ನು ಪಟ್ಟಣದ ಹುಡುಗನನ್ನಾಗಿ ಮಾಡಿತು. ಮುಖ್ಯ ಪಟ್ಟಣ ಮದ್ರಾಸಿನ ತಾನು ಬಿ. ಎ. ಗೆ ಹೇಗೆ ಬಂದನೆಂಬುದೇ ಅವನಿಗೆ ಸೋಜಿಗದ ಸಂಗತಿ. ಶಾಂತಚಿತ್ತನಾಗಿ ಆಲೋಚಿಸಿ ಅವನೊಂದು ನಿರ್ಣಯಕ್ಕೆ ಬಂದಿದ್ದನು. ಈ ಜಗತ್ತು ಸಾಹಸಿಗಳಿಗೆ ಆತಿಥ್ಯ ನೀಡಲು ಕಾದು ನಿಂತಿದೆ. ಅದಕ್ಕಾಗಿ ಈ ಪ್ರಪಂಚ ಮೋಹಗೊಳಿಸುವ ಮುಖಮುದ್ರೆಯನ್ನು ಬಹುಮಾನವಿತ್ತಿದೆ. ಚತುರನಾಗಿದ್ದ ಹಾಗೂ ಎದೆಗಾರ ಆ ತರುಣನು ಪರಿಸ್ಥಿತಿಗನುಗುಣವಾಗಿ ತನ್ನ ಮನಸ್ಸಿಗೆ ಆಕಾರಕೊಟ್ಟಿದ್ದನು. ಮರದ ತೊಲೆಯು ದೋಣಿಯಾಗಿ ಮಾರ್ಪಟ್ಟು ನೀರಿನಲ್ಲಿ ತೇಲುವಂತೆ ಅವನೂ ಮನಸ್ಸಿಗೆ ಆಕಾರವನಿತ್ತು ಬಾಳ ನೀರಿನಲ್ಲಿ ಚೆನ್ನಾಗಿ ಜಾರಿಬಿಟ್ಟಿದ್ದನು.

ಧೈರ್ಯವು ಕೇದಾರಿಯ ಮನಸ್ಸಿನ ಆಶ್ಚರ್ಯಕರ ಗುಣವಾಗಿದ್ದಲ್ಲಿ ಸತ್ವಪೂರ್ಣ ಹಾಗೂ ಚೆಲೋ ಚಹರೆಯು ಅತನ ಮುಖದ ಲಕ್ಷಣ. ಯಾವ ಕಾರಣಕ್ಕೂ ಕೆಲಸಕ್ಕೂ ಅವನಲ್ಲಿ ಬೇಕಾದಷ್ಟು ಶಕ್ತಿ ಇದೆ. ಅವನು ಮುಖ್ಯವಾಗಿ ಕಾರ್ಯದ ಮನುಷ್ಯನಿದ್ದರೂ ದೂರದರ್ಶಿತ್ವ ಹಾಗೂ ಆಕರ್ಷಕ ಕಲ್ಪನಾವಾದದಿಂದ ಅದನ್ನು ಮುಚ್ಚಿಬಿಟ್ಟಿದ್ದನು.

ಅಂತಹ ಗುಣಗಳ ಶುಭಕರ ಮಿಶ್ರಣವು ಅವನನ್ನು ಬಿ. ಎ. ಯಲ್ಲಿ ಮೊದಲ ಶ್ರೇಣಿಯಲ್ಲಿ ಪ್ರಶಂಸನೀಯ ರೀತಿಯಲ್ಲಿ ತೇರ್ಗಡೆ ಹೊಂದುವಂತೆ ಮಾಡಿದೆ. ಅವನು ಜಯದ ಮೇಲೆ ಜಯ ಪಡೆದುಕೊಂಡು ಅಭಿವೃದ್ಧಿ ಹೊಂದುತ್ತಿದ್ದನಾದರೂ ಅವನಲ್ಲಿ ಒಂದಿಷ್ಟು ಗರ್ವವೆಂಬುದಿಲ್ಲ. ಅವನಲ್ಲಿದ್ದ ನಮ್ರತೆ ಭಯಭಕ್ತಿಗಳು ಯಾರ ಮನಸ್ಸನ್ನೂ ಸೆಳೆಯುವಂತಹದಿದೆ. ಅವನು ನ್ಯಾಯಶಾಸ್ತ್ರ ಕಲಿಯಲು ಸೇರಿದೊಡನೆ ಅತ್ತ ಪಕ್ವವಿದ್ಯಾಲಯದ ಉಚ್ಚ ತರಗತಿಯ ಪ್ರಾಧ್ಯಾಪಕರುಗಳ ಮನಸ್ಸನ್ನೂ ಸಹ ವಿದ್ಯಾರ್ಥಿಗಳ ಮನಸ್ಸನ್ನೂ ಸೆಳೆದುಕೊಂಡಿದ್ದ. ಅವನು ಪ್ರಥಮ ವಿದ್ಯಾಲಯದಲ್ಲಿ ಪ್ರಸಿದ್ಧ ವಿದ್ಯಾರ್ಥಿಯಾಗಿದ್ದನಲ್ಲದ ಮದ್ರಾಸಿನಲ್ಲೇ ಶ್ರೇಷ್ಠನಾಗಿದ್ದನು. ಹಾಗಿದ್ದ ಕೇದಾರಿಯು ರಾಮುವಿನ ಸಲಿಗೆಯ ಸ್ನೇಹಿತ. ಕೇದಾರಿಯ ವಿಷಯದಲ್ಲಿ ನಿಜವಾಗಿಯೂ ರಾಮುವಿಗೆ ಹೆಮ್ಮೆ.

ಉಚ್ಚ ನ್ಯಾಯಾಲಯದ ಕಟ್ಟೋಣದಲ್ಲಿರುವ ಅಂಚೆ ಕ[illegible] ಆಲವಂತಿಯಲ್ಲಿದ್ದ ತನ್ನ ಮಿತ್ರನಿಗೆ, ಕೇದಾರಿಯು ಕಾಗದವನ್ನು ಹಾಕಿದ್ದ. ಆ ಬಿಳಿ ಲಕೋಟೆಯು ಪತ್ರ-ಪೆಟ್ಟಿಗೆಯಲ್ಲಿ ಕಣ್ಮರೆಯಾಗುವವರೆಗೆ ನೋಡುತ್ತಾ ನಿಂತಿದ್ದನಲ್ಲದೆ, ಅದು ಬುಡಕ್ಕೆ ತಗಲಿ ಶಬ್ದ ಬಂದಾಗಲೇ ಅವನಿಗೆ ತೃಪ್ತಿಯಾದದ್ದು.

ಕೇದಾರಿಯು ಯಾವಾಗಲೂ "ಇದು ನನ್ನ ಕೆಲಸವನ್ನು ಮಾಡೀತು ಎನ್ನುವದರಲ್ಲಿ ವಿಶ್ವಾಸವಿದೆ" ಎನ್ನುತ್ತ, ತಾನೇ ಸ್ವತಃ ಅಂಚೆ ಡಬ್ಬಿಯಲ್ಲಿ ಪತ್ರಗಳನ್ನು ಹಾಕುತ್ತಿದ್ದನು. ಈ ಸಲ ಇನ್ನೂ ಹೆಚ್ಚು ಗಂಭೀರತೆಯಿಂದಲೇ ಅದನ್ನು ಹಾಕಿದ್ದನು. ನಿಜವಾದ ಮನೋಸ್ಥಿತಿಯಲ್ಲಿದ್ದಾಗಲೇ ಆ ಪತ್ರವನ್ನಾತ ಬರೆದಿದ್ದ.

ಅದೊಂದು ಶುಭ್ರ ಸಾಯಂಕಾಲ. ಕೇದಾರಿಯು ಚೆನ್ನಾಗಿ ಉಡುಪುಗಳನ್ನು ಧರಿಸಿಕೊಂಡಿದ್ದನು. ನ್ಯಾಯ ವಿದ್ಯಾಲಯವು ಅವನಲ್ಲಿ ಬಹು ವ್ಯತ್ಯಾಸವನ್ನುಂಟು ಮಾಡಿದೆ. ಉತ್ತಮ ಉಡುಪು ಧರಿಸಿದವನ ಮನಸ್ಸಿನ ಮೇಲೆ ಉತ್ತಮ ಪರಿಣಾಮವನ್ನುಂಟು ಮಾಡುತ್ತದಲ್ಲದೆ ವೀಕ್ಷಕನ ಮನಸ್ಸಿನ ಮೇಲೂ ಒಳ್ಳೆಯ ಮರ್ಯಾದೆ ಸಲ್ಲಿಸುವ ಸ್ವಭಾವವನ್ನುಂಟು ಮಾಡುತ್ತದೆ. ಅವನು ತನ್ನಷ್ಟಕ್ಕೆ ಸಿಳ್ಳು ಹಾಕುತ್ತ ಇದ್ದನು. ಪಟ್ಟಣ ಜೀವನದಲ್ಲಿ ಬರಿಯ ಬಟ್ಟೆಯಿಂದಾಗುವ ಚಮತ್ಕಾರವೇ ಹೆಚ್ಚು. ಅಲ್ಲಿ ಹೊಟ್ಟೆಯನ್ನಾರೂ ನೋಡುವದಿಲ್ಲ. ಹತ್ತಿಯ ವಸ್ತ್ರವಿಗೂ ಮೃದುಳಿಗೂ ಇರುವ ಆ ಸಮೀಪದ ಸಂಬಂಧದ ಗುಟ್ಟು ತನಗೆ ಮುಂಚಿತವಾಗಿ ತಿಳಿಯದಿದ್ದುದಕ್ಕೆ ಆತನಿಗೆನೇ ಸ್ವಲ್ಪ ಬೇಸರವಾಯಿತು. ಹೀಗೆ ಆತನು ಕಲ್ಪನಾ ತರಂಗದ ಮೇಲೆ ಎಲ್ಲಿಂದಲ್ಲಿಗೋ ಸಂಚರಿಸುತ್ತಿದ್ದನು. ಪಕ್ಕದಲ್ಲಿ ಟ್ರಾಂ ಕಂಬಕ್ಕೊಂದು ಕಾರು ಢಿಕ್ಕಿ ಹೊಡೆದು ಮರುಗಿದಾಗಲೇ ಆತನಿಗೆ ನಿಜ ಪ್ರಪಂಚದ ಅರಿವಾದದ್ದು. ಕಾರಿನ ಕೆಸರು-ಕಾವಲಿಗೆ ಮಾತ್ರ ಚೆನ್ನಾಗಿ ಪೆಟ್ಟಾಗಿತ್ತಲ್ಲದೆ ಒಳಗಿದ್ದವರಿಗೆ ಒಳ್ಳೆ ಕಂಪನದ ಅನುಭವವಾಗಿತ್ತು. ಕೇದಾರಿಯು ಆ ಸ್ಥಳದಿಂದ ಬಹುದೂರದಲ್ಲಿರಲಿಲ್ಲ. ಆ ಘಟನೆಯು ಅವನಿಗೊಂದು ಪಾಠವನ್ನು ಕಲಿಸಿತು. ಮಾರ್ಗದಲ್ಲಿ ಹೋಗುತ್ತಿರುವಾಗ ಯಾವದರ ಕುರಿತಾಗಲಿ—ವಿಷಯವು ಎಷ್ಟೇ ಉತ್ತಮವಿರಲಿ—ಧ್ಯಾನಮಗ್ನನಾಗುವದೆಂದರೆ ಅಪಾಯ ದೇವತೆಯನ್ನು ಧ್ಯಾನಿಸುವದೇ ಇದೆ. ಪತ್ರಿಕೆಗಳ 'ಬೀದಿಯಲ್ಲಿ ಅಪಘಾತ' ವಿಭಾಗಕ್ಕೆ ಒಂದಿಷ್ಟು ಸುದ್ದಿ ಒದಗಿಸಿಕೊಟ್ಟು ಪುಟ ತುಂಬಿಸಿಕೊಡಲು ಇಷ್ಟವಿಲ್ಲದ ಆತನು ಅಂಕುಡೊಂಕಾಗದ ಪುಟ್ಟ ಪಥದಲ್ಲಿ ಮುನ್ನಡೆಯಲು ಪ್ರಾರಂಭಿಸಿದನು.

ಅವನಿಗೆ ನಡೆದು ಚೆನ್ನಾಗಿ ಅಭ್ಯಾಸವಿದ್ದುದರಿಂದ ಜನರ ಗುಂಪುಗಳನ್ನೆಲ್ಲಾ ಹಿಂದಕ್ಕೆ ಬಿಟ್ಟು "ಬ್ರೋಡ್‌ವೇ"ಯತ್ತ ಕಾಲುಹಾಕಿದನು. ರಸ್ತೆಯ ಮೂಲೆಗಳಲ್ಲಿ ಕೆಲಸವಿಲ್ಲದೆ ತಿರುಗಾಡುತ್ತಿದ್ದ ರಿಕ್ಷಾವಾಲಾಗಳು ಅವನನ್ನು ಕಂಡೊಡನೆ "ಸ್ವಾಮಿ" ಎಂದು ಆಮಂತ್ರಣವಿತ್ತರು. ತಾನು ಸರಿಯಾಗಿರುವಾಗಲೇ ನಡೆಯಲು ಇತರರ ಸಹಾಯವನ್ನು ಪಡೆಯಲು ಅವರಿಗೆ ಇಷ್ಟವಿಲ್ಲ. ಅವನು ಹಾಗೆಯೇ ಮುಂದಕ್ಕೆ ಹೋಗುತ್ತಿದ್ದುದನ್ನು ನೋಡಿದ್ದ ರಿಕ್ಷಾವಾಲಾಗಳಲ್ಲಿ ಒಬ್ಬನು — ಇತರರಿಗಿಂತ ಧೈರ್ಯವಂತನೂ ಮತ್ತು ಬಹುಶಃ ಹೆಚ್ಚು ಹಸಿವೆಯಾಗಿದ್ದವನೊಬ್ಬನು ಗಟ್ಟಿಯಾಗಿ "ಓ, ದೇವರೇ! ಇಂತಹ ಶ್ರೀಮಂತ ಜನರು ಮತ್ತು ಮರ್ಯಾದೆವಂತರು ಹೀಗೆ ಕಾಲ್ನಡಿಗೆಯನ್ನಾರಂಭಿಸಿದರೆ, ಬಡ ರಿಕ್ಷಾವಾಲಾಗಳು ಹೇಗೆ ಜೀವಿಸಲು ಸಾಧ್ಯ?" ಹೇಳಿದನು.

ಕೇದಾರಿಯು ಸೊಗಸಾದ ಉಡುಗೆಯಿಂದುತ್ಪನ್ನ ಆಗಿದ್ದ ಆಲೋಚನೆಗಳಿಂದ ಮುದ್ದೆಯಾಗಿದ್ದನು. ಮನಸ್ಸಿನೊಳಗಣ ಗಲಿಬಿಲಿಯಿಂದಾಗಿ ಕೋಣೆ ಬಿಟ್ಟು ಹೊರಡುವಾಗ ಹೊಸ ಕೋಟು ಹೇಗೆ ಹಿಡಿದುಕೊಂಡಿದೆ ಎಂಬುದನ್ನು ಕನ್ನಡಿಯಲ್ಲಿ ಕಂಡುಕೊಳ್ಳದಿದ್ದುದಕ್ಕಾಗಿ ಅವನು ಕಸಿಕಂಪಟ್ಟುಕೊಂಡನು. ಈಗ ರಿಕ್ಷಾವಾಲಾ ಹಾಗೆ ಕರೆದುದರಿಂದ ಅವನ ನಿಜವಾದ ಕನ್ನಡಿಗಿಂತಲೂ ಹೆಚ್ಚೆಂದು ಕೇದಾರಿಯು ಭಾವಿಸಿದನು. ತನ್ನಲ್ಲಿ ನೆಲೆಸಿದ್ದ ಶ್ರೀಮಂತಿಕೆಯ ಪ್ರಕಾಶ, ಕಿರಣದನುಭವದಿಂದ ಅವನು ಸಂತೋಷಪಟ್ಟುಕೊಂಡನು. ಯೋಗ್ಯತೆಯ ವಿಮರ್ಶೆಗಾಗಿ ಕಣ್ಣು ಹಾಯಿಸುತ್ತ ಮತ್ತು ತಲೆಯಲ್ಲಾಡಿಸುತ್ತ ಪಕ್ಕನೆ ತನ್ನ ಅಂಗಿಯನ್ನು ನೋಡಿಕೊಂ

(ಇಪ್ಪತ್ತೆಂಟನೇ ಪುಟ ನೋಡಿರಿ)

*With compliments from*

JAGGY & COMPANY

**Plastic Moulders**

12 Rampart Row
**BOMBAY 1**
Tel. 251693

*WITH THE COMPLIMENTS*
*OF*

# BHARAT COATED FABRICS

**FACTORY**
POWAI POINT
AGRA ROAD, VIKHROLI,
BOMBAY-79
Ph: 581369

**CABLE**
TEXPLASTIC

**OFFICE**
BOTAWALA BLDG., III FLOOR
8, HORNIMAN CIRCLE, FORT
BOMBAY-1
Ph: 253340

**MANUFACTURERS OF THE POPULAR**
**KESARI BRAND PVC LEATHER CLOTH**

# ಭಾರತ್ ಕೋಟೆಡ್ ಫೆಬ್ರಿಕ್ಸ್

ಇವರ
## ಅಭಿನಂದನೆಗಳು

**ಫೇಕ್ಟರಿ**
ಪವಾಯಿ ಪ್ಯೊಂಟ್
ಆಗ್ರಾ ರೋಡು, ವಿಖರೋಲಿ
**ಬೊಂಬಾಯಿ - 79**
ಫೋನ್: 581369

ಕೇಬಲ್
ಟೆಕ್ಸ್‌ಪ್ಲಾಸ್ಟಿಕ್

**ಆಫೀಸು**
ಬೊಟಾವಾಲಾ ಬಿಲ್ಡಿಂಗ್, III ಫ್ಲೋರ್
8, ಹೊರ್ನಿಮೇನ್ ಸರ್ಕಲ್, ಫೋರ್ಟ್
**ಬೊಂಬಾಯಿ - 1**
ಫೋನ್: 253340

ಜನಪ್ರಿಯವಾದ ಕೇಸರಿ ಬ್ರಾಂಡ್ ಪಿವಿಸಿ ಲೆದರ್ ಕ್ಲೋತ್
ತಯಾರಿಸುವವರು



***WITH BEST COMPLIMENTS***
FROM

# NEELA

## PLASTIC AND RUBBER PRODUCTS

**Manufacturers and Exporters of Quality Bangles**

**SONAWALA ESTATE**
**GOREGAON (EAST)**
**BOMBAY-62**
**TELEPHONE: 84676**

**ಹಾರ್ದಿಕ ಅಭಿನಂದನೆಗಳು!**

# ನೀಲಾ

## ಪ್ಲಾಸ್ಟಿಕ್ ಎಂಡ್ ರಬ್ಬರ್ ಪ್ರೊಡಕ್ಟ್ಸ್

ಉತ್ಕೃಷ್ಟ ಬಳೆಗಳ ತಯಾರಕರು ಮತ್ತು ರಫ್ತು ಮಾಡುವವರು

ಸೊನವಾಲ ಎಸ್ಟೇಟ್
ಗೊರೇಗಾನ್ (ಪೂರ್ವ)
**ಬೊಂಬಾಯಿ — 62**
ಟೆಲಿಫೋನ್ 84676

# — ಯೌವನ —

ತುಂಬು ಜವ್ವನಿಗನಾಗಿ ಮೆರೆಯಬೇಕಾದ ಕಾಲದಲ್ಲಿ...ವೃದ್ಧಾಪ್ಯ ಬಂದುಬಿಟ್ಟರೆ...?
ಹಾಗೆಯೇ ವೃದ್ಧಾಪ್ಯದ ಕಾಲದಲ್ಲಿ ತುಂಬು ಜವ್ವನ.... ಪ್ರಾಪ್ತವಾದರೆ...?
ಏನು? ಏನಾಗುತ್ತದೆ? ಅದನ್ನೇ ಇಲ್ಲಿ ಓದಿ ನೋಡಿ!

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಪ್ರಿಯೇ!... ಪ್ರಿಯೇ! ನಿನ್ನೊಡನೆ ಂದು ವಿಶೇಷ ಸಮಾಚಾರ ಹೇಳಬೇಾಗಿದೆ! ಕೇಳಿದರೆ ನೀನಿದನ್ನು ನಂಬಾರೆ! ಆದರೂ ಇದು ಸತ್ಯ! ಸತ್ಯವೆಂದ ಇದು ಸೂರ್ಯಪ್ರಕಾಶದಷ್ಟು ಸತ್ಯ!... ಳಲೇ?"

"ಅಯ್ಯೋ! ಅಷ್ಟೊಂದು ವಿಶೇಷವಾದ ಮಾಚಾರವಾದರೆ, ಬೇಗನೆ ಹೇಳಲಾರಿರಾ? ದನ್ನು ಕೇಳಲು ನಾನು ಉತ್ಸುಕಳಾಗಿ ೇನೆ!"

"ಪ್ರಿಯೆ! ಒಬ್ಬ ಮಹಾಯೋಗಿಯು ಂದ್ರಪ್ರಸ್ಥಕ್ಕೆ ಬಂದು ತಲುಪಿದ್ದಾನೆ! ಶೇಷವೆಂದರೆ ಆತನು ವೃದ್ಧರನ್ನೂ ುಂಬು ಜವ್ವನಿಗರನ್ನಾಗಿ ಮಾರ್ಪಡಿಸು ್ತನಂತೆ! ಆತನ ತಪೋಮಹಿಮೆ ಅ ್ದೆ! ನಾವಿಬ್ಬರೂ ಕೂಡಿ ಅಲ್ಲಿಗೆ ಹೋ ಯೌವನವನ್ನು ಪಡೆದು ಪುನಃ ಸುಖ ೋಗವನ್ನು ಹೊಂದೋಣ! ಆಹಾ! ನ ಗೆ ಇನ್ನು ಯೌವನ ಪ್ರಾಪ್ತವಾದರೆ? ಸುಖ! ಆ ಭೋಗ! ಆಹಾ! ಅದೆಷ್ಟು ನಂದ!"

ಎಪ್ಪತ್ತರ ಗಡಿ ದಾಟಿದ ಗಂಗಾದತ್ತ ಾಪ್ತು ಅರುವತ್ತರ ಗಡಿಗೇರಿದ ಆತನ ತ್ನಿ ಗಾಂಗಿ, ಇವರೊಳಗೆ ಈ ಮಾತಿ ಂತೆ ಮಾತುಕತೆ ನಡೆಯಿತು. ಅತ್ಯಾಶ್ಚ ರ್ಯಕರವಾದ ಪತಿಯ ಈ ಮಾತುಗಳ ್ನು ಕೇಳಿದ ಗಾಂಗಿ ಮೌನವಾಗಿಯೇ ನ್ನ ಪತಿಯ ಮುಖಭಾವವನ್ನು ನೋ ುತ್ತ ನಿಂತಳು!

ಇಷ್ಟೊಂದು ಸೋಜಿಗದ ಸುದ್ದಿ ಹೇಳಿ ರೂ ಆಶ್ಚರ್ಯವನ್ನು ಪ್ರಕಟಿಸದೆ ಮೌನ ಾಗಿಯೇ ಇದ್ದ ತನ್ನ ಪತ್ನಿಯನ್ನು ನೋ ಡ ಗಂಗಾದತ್ತನು ಪುನಃ ಹೇಳ ತೊಡ ದನು—

'ಪ್ರಿಯೇ! ನಿನಗೆ ಅನುಮಾನ ಬೇಡ! ನ್ನ ಮಿತ್ರ ಮೋಹನದತ್ತನು ಇಂದ್ರ ಪ್ರಸ್ಥಕ್ಕೆ ಹೋಗಿ ತುಂಬು ಜವ್ವನಿಗನಾಗಿ ಂತಿರುಗಿ ಬಂದಿದ್ದಾನೆ! ನಾನು ಪ್ರತ್ಯಕ್ಷ ವನನ್ನು ನೋಡಿ ಮಾತನಾಡಿಸಿ ಬಂದಿ ್ದೇನೆ. ಆಹಾ! ಅವನೀಗ ಎಷ್ಟು ಸುಖಿ ಾಗಿದ್ದಾನೆ! ನಮ್ಮಿಬ್ಬರನ್ನೂ ಇಂದ್ರಪ್ರ ಸ್ಥಕ್ಕೆ ಕರೆದೊಯ್ಯಲು ರಥವನ್ನು ತೆಗೆದು ಂಡು, ಅವನು ಈಗಲೀಗ ಇಲ್ಲಿಗೆ ಬ ುತ್ತಾನೆ! ಆದುದರಿಂದ ನೀನು ಬೇಗನೆ ೊರಟು ಸಿದ್ಧಳಾಗಿರು! ಎಲ್ಲಿಯಾದರೂ ಒಲ್ಲೆ" ಎನ್ನಬೇಡ. ಆನಂದಮಯವಾ ಯೌವನದ ಒಟ್ಟಿಲನ್ನು ತಿರಸ್ಕರಿಸಿ ಾಳು ಮಾಡಬೇಡ."

ಪತಿಯ ಈ ಮಾತುಗಳನ್ನು ಕೇಳಿ ಆಕೆ ಡಿಮಿಡಿಯಾದಳು. "ನೀವು ನನ್ನ ಒಪ್ಪಿ ಪಡೆಯದೆ, ನನ್ನಲ್ಲಿ ಈ ಮೊದಲು ಏ ನ್ನೂ ಹೇಳದೆ ರಥವನ್ನು ತೆಗೆದುಕೊಂ ು ಬರಲು ಆತನಿಗೆ ಏಕೆ ಹೇಳಿದಿರಿ? ಾನು ಬರಲಾರೆ!'

"ಛೇ...ಛೇ....ಹಾಗೆ ಹೇಳಬೇಡ. ಈ ವೃದ್ಧಾಪ್ಯದಲ್ಲಿ ಅಲಭ್ಯವಾಗಿರುವ ಯೌವ ನವು ನಮಗೆ ಈಗ ಪ್ರಾಪ್ತವಾಗುತ್ತಿರುವ ಶುಭಮುಹೂರ್ತದಲಿ ನೀನು ಯಾಕೆ ೀಗೆ ನಿರಾಕರಿಸುತ್ತಿರುವೆಯೋ! ನನಗೆ ೊತ್ತಾಗುವುದಿಲ್ಲ."

"ಸ್ವಾಮಿ! ನನ್ನ ಮೂಲಕ ಈಗ ನೀ ು ಕಟು ವಾಕ್ಯಗಳನ್ನು ಕೇಳಬೇಕಾಗು ್ತದೆ. ಆದರೆ ನಾನು ನಿರುಪಾಯಳಾಗಿ ದ್ದೇನೆ. ಈ—ವೇಳೆ ಹಾಗೆ ನಿಮ್ಮೊಡನೆ ಮಾತನಾಡದಿರಲು ನನಗೆ ಸಾಧ್ಯವೇ ಇಲ್ಲ ವಾಗಿದೆ, ಅಲ್ಲ!...ಈ ವಿಷಯದಲ್ಲಿ ನಿಮಗೆ ಈ ಯೌವನದ ಹುಚ್ಚು ಏಕೆ ಹಿಡಿಯಿ ತೋ? ನಿಮಗೆ ಮಕ್ಕಳು ಮೊಮ್ಮಕ್ಕಳು ಮರಿ ಮಕ್ಕಳು ನೂರು ಸಂಖ್ಯೆಯಲ್ಲಿವೆ! ವೃದ್ಧಾಪ್ಯ ಬಂದಿದೆ. ಈ ಕಾಲದಲ್ಲಿ ಇನ್ನು ಳಿದ ಆಯುಷ್ಯವನ್ನು ಭಗವದ್ ಚಿಂತನೆ ಯಲ್ಲಿ ಕಳೆಯುವುದನ್ನು ಬಿಟ್ಟು ಏಕೆ ಹೀ ಗೆ ಮಾಡುತ್ತೀರಿ? ಈಗ ಯೌವನ—ಬಂ ದರೂ ಮುಂದಾದರೂ ಒಂದು ದಿನ ವೃ ದ್ಧಾಪ್ಯ ಬಂದೇ ಬರುವುದು. ಪ್ರಕೃತಿ ನಿ ಯಮಕ್ಕೆ ವಿರೋಧವಾದ ಈ ದುರಾಗ್ರಹ ನಿಮಗೇಕೆ? ಆ ಯೋಗಿಗಳಿಂದ ನೀವು ಯೌವನವನ್ನು ಪಡೆಯುವ ಬದಲು ಭಗ ವದ್ ಕೃಪೆಯ ಅನುಗ್ರಹವನ್ನಾದರೂ ಪಡೆಯಿರಿ. ಈ ಯೌವನ ಪ್ರಾಪ್ತಿಯ ಅಶುಭ ವರದಾನ ಪಡೆಯಲು ನಾನು ಖಂಡಿತ ಬರಲಾರೆ. ಒಂದು ಸಲವಲ್ಲ! ಮೂರು ಸಲ ಹೇಳಿದ್ದೇನೆ! ತಿಳಿಯಿರಿ!" ಎಂದಳು. ಗಂಗಾದತ್ತನು ತನ್ನ ಪತ್ನಿಗೆ ಹಲವು ಪರಿಯಿಂದ ಹೇಳಿದನು. ಆದರೆ ಕೊನೆಗೂ ಆಕೆ ಒಪ್ಪಲಿಲ್ಲ. ಅಷ್ಟರಲ್ಲಿ ಮೋಹನದತ್ತನು ರಥಾರೂಢನಾಗಿ ಬಂ ದೇ ಬಿಟ್ಟನು. ಆಗತಾನೆ, ಜವ್ವನಿಗನಾ ಗಿದ್ದ ಮೋಹನದತ್ತನನ್ನು ತೋರಿಸುತ್ತ— ಗಂಗಾದತ್ತನು ತನ್ನ ಪತ್ನಿಯೊಡನೆ— "ಪ್ರಿಯೇ! ನೋಡು... ನೀನೇ ನೋ ಡು! ಈ ಮೋಹನದತ್ತನನ್ನು. ಈತನು ಮುದುಕನಾಗಿ ಇದ್ದವನು! ಈಗ ಈತನಿಗೆ ದೊರೆತ ಯೌವನದಿಂದ ಎಂತಹ ಉಜ್ವ ಲ ಕಾಂತಿ ಪ್ರಾಪ್ತವಾಗಿದೆ! ಇದನ್ನು ನೋಡು! ಈ ದುರ್ಬಲವಾದ ಅಂಗಾಂಗ ಗಳು ನನಗೆ ಅಸಹ್ಯ ಹುಟ್ಟಿಸಿವೆ! ನಡೆ, ಹೋಗೋಣ. ಸಿಕ್ಕಿರುವ ಈ ಸ್ವರ್ಣಾವ ಕಾಶವನ್ನು ಕಳೆದುಕೊಳ್ಳಬೇಡ!' ಎಂದ ನು. ಗಂಗಾದತ್ತನು ಎಷ್ಟು ಹೇಳಿದರೂ ಗಾಂಗಿಯ ಮೇಲೆ ಏನೂ ಪರಿಣಾಮವಾ ಗಲಿಲ್ಲ! ಕೊನೆಗೆ ನಿರಾಶನಾದ ಗಂಗಾ ದತ್ತನು ತಾನು ಒಬ್ಬನೇ ಯೌವನ ಪ್ರಾ ಪ್ತಿಗಾಗಿ ಇಂದ್ರಪ್ರಸ್ಥಕ್ಕೆ ಹೊರಟು ಹೋ ದನು.

೦ ೦ ೦

ಗಂಗಾದತ್ತನ ಅಭೀಷ್ಟ ನೆರವೇರಿತು. ಯೋಗಿಯ ತಪೋ ಮಹಿಮೆಯಿಂದ ಆತ ನಿಗೆ ಪುನಃ ಯೌವನ ಪ್ರಾಪ್ತವಾಯಿತು. ಗಂಗಾದತ್ತನು ಯೌವನಿಗನಾದ ಬಳಿಕ ಮೋಹನದತ್ತನು ತಾನೊಬ್ಬನೇ ಹೊರ ಟು ಹೋದನು. ಗಂಗಾದತ್ತನ, ಹೊಸ ಯೌವನದ ಹುರುಪಿನಿಂದ ಆನಂದ ತುಂ ದಿಲನಾಗಿದ್ದನು. ತನ್ನ ಯೌವನದ ಹೊಸ ರೂಪವನ್ನು ನೋಡಿಕೊಳ್ಳಬೇಕೆಂಬ ಆತ ನ ಇಚ್ಛೆ ಪ್ರಬಲವಾಗಿತ್ತು. ಆದರೆ, ಕನ್ನ ಡಿಯನ್ನು ಕೊಂಡುಕೊಳ್ಳಲು ಆತನಲ್ಲಿ ಹಣವಿರಲಿಲ್ಲ. ಅದಕ್ಕಾಗಿ ಆತನು ಕತ್ತ ಲಾಗುವ ಮೊದಲೇ ಯಾವುದಾದರೂ ಹೊಳೆಯ ದಡಿಗಾದರೂ ಹೋಗಿ ತನ ಪ್ರತಿಬಿಂಬವನ್ನು ನೋಡಿಕೊಳ್ಳಬೇಕೆಂ ದು ಸರಸರನೆ ಮುನ್ನಡೆದನು. ಹೀಗೆ ಮು ನ್ನಡೆದ ಗಂಗಾದತ್ತನು ಒಂದು ಮನೆಯ ಮುಂದೆ ಹೋಗಿ ತಲುಪಿದನು.

ಆ ಮನೆಯ ಒಳಗಡೆ ಸುಂದರ ನರ್ತ ಕಿಯೋರ್ವಳು ತನ್ನ ಮೋಹಕವಾದ ಅಂ ಗಾಂಗಗಳನ್ನು ಅಲಂಕರಿಸುತ್ತ ನಿಲುಗ ನ್ನಡಿಯ ಮುಂದೆ ನಿಂತಿದ್ದಳು. ಇದನ್ನು ಕಂಡ ಗಂಗಾದತ್ತನು ಹೊಸ ಯೌವನದ ಹುಮ್ಮಸ್ಸಿನಿಂದಾಗಿ ತನ್ನನ್ನು ತಾನೇ ಮ ರೆತು ಆ ಮನೆಯೊಳಗೆ ನುಗ್ಗಿದನು. ನೇ ರಾಗಿ ಹೋಗಿ ಆ ನರ್ತಕಿಯ ಹಿಂದೆ ನಿಂ ತು, ಅದೇ ಕನ್ನಡಿಯಲ್ಲಿ ತನ್ನ ಹೊಸ ರೂಪವನ್ನು ನೋಡುತ್ತ ಮೈಮರೆತನು! ಆನಂದದಿಂದ ಕುಣಿಯ ತೊಡಗಿದನು. ತನ್ನ ಕನ್ನಡಿಯಲ್ಲಿ ತರುಣನೊಬ್ಬನ ಪ್ರತಿ ಬಿಂಬ!, ಅನಿರೀಕ್ಷಿತವಾಗಿ ಮೂಡಿದು ದನ್ನು ಕಂಡ ಆಕೆ, ಭಯ ಲಜ್ಜೆಗಳಿಂದ ಚಿಟಾರ್ರನೆ ಚೀರಿದಳು! "ಅಯ್ಯೋ ಕಳ್ಳ! ಕಳ್ಳ!" ಎಂದು ಬೊಬ್ಬಿಟ್ಟಳು. ಅಷ್ಟ ರಲ್ಲಿ ಆ ಮನೆಯವರು ಮತ್ತು ಆಜೀಜಿಯ ಜನರು ಓಡೋಡಿ ಬಂದು, ಈ ಗಂಗಾದತ್ತನನ್ನು ಕಳ್ಳನೆಂದೇ ತಿಳಿ ದು, ಚೆನ್ನಾಗಿ ಥಳಿಸಿದರು! ಗಂಗಾದತ್ತ ನು ತನ್ನ ನಿಜವೃತ್ತಾಂತವನ್ನು ಹೇಗೆ ಹೇಳಿದರೂ ಅವರು ಅದನ್ನಾಲಿಸದೆ ಚೆ ನ್ನಾಗಿ ಹೊಡೆದರು. ಕೊನೆಗೆ ಹೊಡೆ ಹೊ ಡೆದು ಆತನನ್ನು ಅಲ್ಲಿಯೇ ಕೊಂದು ಹಾ ಕುತ್ತಿದ್ದರು. ಆದರೆ, ಗಂಗಾದತ್ತನು ತಾ ನು ಬ್ರಾಹ್ಮಣನೆಂದು ಹೇಳಿ ಜನಿವಾರವ ನ್ನು ತೋರಿಸಿದದರಿಂದ— ಆತನನ್ನು ಜೀವ ಸಹಿತಬಿಟ್ಟು ಬಿಟ್ಟರು!

ಅಸಮಯದಲ್ಲಿ ದೊರೆತ ಯೌವನಕ್ಕೆ ಸಿಕ್ಕಿದ ಈ ಪ್ರಥಮ ಪುರಸ್ಕಾರದಿಂದ ನೊಂದ ಗಂಗಾದತ್ತನು ಮತ್ತೆ ನೇರಾಗಿ ತನ್ನ ಊರಿನ ದಾರಿಯನ್ನು ಹಿಡಿದನು. ಹೊಡೆತತಿಂದು ಮೈ ಕೈ ನೋವಾಗುತ್ತಿ ದ್ದರೂ, ಸಹ ಆತನು—'ತನ್ನಲ್ಲಿ ಯೌವ ನ ತುಂಬಿದೆ!, ಎನ್ನುವುದಕ್ಕೆ ನಡೆದ ಘ ಟನೆಯೊಂದು ಉತ್ತಮವಾದ ನಿದರ್ಶನ ವೆಂದು ಆಲೋಚಿಸುತ್ತ ಸಂತೋಷ ಪ ಡುತ್ತ ಮುಂದೆ ಸಾಗುತ್ತಿದ್ದನು. ತುಂ ಬು ಜವ್ವನಿಗನಾದ ಗಂಗಾದತ್ತನಿಗೆ ಆ ಸುಂದರ ನರ್ತಕಿಯ ಮೋಹಕವಾದ ಅಂ ಗಾಂಗಗಳ ಮಾದಕತೆ ತಲೆಗಡರಿ ಹೋ ಗಿತ್ತು! ಆತ—'ಆಹಾ! ಎಂತಹ ಸು ಪುಷ್ಟ ದೇಹ! ತನ್ನ ಪತ್ನಿಯೂ ಇಂದ್ರ ಪ್ರಸ್ಥಕ್ಕೆ ಹೊರಡುತ್ತಿದ್ದರೆ ಹೀಗೆಯೇ ಮೋಹನಾಂಗಿಯಾಗುತ್ತಿದ್ದಳು!, ಎಂದು ಮುಂತಾಗಿ ಯೋಚಿಸುತ್ತ ಯೌವನ ದ ಸುಖ ಸ್ವಪ್ನಗಳಲ್ಲಿ ಓಲಾಡುತ್ತ ಮು ನ್ನಡೆಯುತ್ತಿದ್ದನು!

ಹಾಗೂ ಹೀಗೂ ಮಧ್ಯರಾತ್ರಿಯ ವೇ ಳೆಗೆ ಗಂಗಾದತ್ತನು, ತನ್ನ ಮನೆಯ ಸ ಮೀಪಕ್ಕೆ ಬಂದು ತಲುಪಿದನು. ಮನೆಗೆ ಬಂದುದೇ ತಡ; ಆತನು ಬಾಗಿಲ ಬಳಿ ನಿಂತು—'ಸುಂದರೀ! ಬಾಗಿಲು ತೆಗೆ!, ಎಂದು ಗಟ್ಟಿಯಾಗಿ ಕೂಗಿ ಹೇಳಿದನು. ಕ ರೆ ಕೇಳಿದ ಕೂಡಲೇ ಗಾಂಗಿಯು ಎದ್ದು ಬಂದು ಬಾಗಿಲು ತೆರೆದು ನೋಡುತ್ತಾಳೆ ಎದುರಿಗೆ ದೃಢಕಾಯನಾದ ತರುಣನೋರ್ವನು ನಿಂತಿದ್ದಾನೆ! ಗಾಂಗಿಗೆ ಎಂದು ಚಣ ಅವನಾರೆಂದೇ ತಿಳಿ ಯಲಿಲ್ಲ! ಆದರೆ, ಮರುಕ್ಷಣವೇ ಆಕೆ ಆತನ್ನು ಗುರುತಿಸಿ ಹೇಳಿದಳು- "ಯಾ ರು? ಜ್ಞಾನದತ್ತನೋ? ಥೂ....ಘಟಿಂ ಗಾ! ಇಲ್ಲಿ ಬಂದು ಮತ್ತೆ ಸುಂದರೀ" ಎಂದು ಕರೆಯುತ್ತಿದ್ದೀಯಾ? ನಿ ರ್ಲಜ್ಜ! ನಿನ್ನ ಮನೆ ಆಚೆಗಿದೆ- ಹೋ ಗು! ಮೂಗಿನ ವರೆಗೆ ಕುಡಿದು ಬಂದು ಬಾಯಿಗೆ ಬಂದ ಹಾಗೆ ಬೊಗಳುತ್ತಿರುವೆ! ಬೇಗ ನಡೀ ಇಲ್ಲಿಂದ!, ಎಂದು ಗರ್ಜಿಸಿ ದಳು.

ಆದರೆ ಗಂಗಾದತ್ತನಿಗೆ, ಅದು ತನ್ನ ಮನೆ, ತನ್ನ ಪತ್ನಿ, ಎಂಬುದು ಗೊತ್ತಿದ್ದಿ ತು. ಆದುದರಿಂದ ಆವನು ನೇರಾಗಿ ಮನೆಯೊಳಗೇ ಹೋಗಿ 'ಪ್ರಿಯೇ! ನನಗೆ ಯೌವನ ಬಂ ದಿರುವುದರಿಂದ ನೀನು ನನ್ನನ್ನು ಗುರುತಿ ಸಲಿಲ್ಲ! ನಾನು ನಿನ್ನ ಪತಿಯಲ್ಲವೇ? ಗಾಂಗಿ! ನೀನೂ ಇನ್ನಾದರೂ ಇಂದ್ರಪ್ರ ಸ್ಥಕ್ಕೆ ಹೋಗಿ ಯುವತಿಯಾಗಿ ಬಾ!" ಎಂದನು ನಸು ನಗುತ್ತ. "ಅರೇ! ನನ್ನನ್ನೇಕೆ ಹೀಗೆ ದುರುಗುಟ್ಟಿ ನೋಡುವೆ? ನಾನು ನಿನ್ನ ಪತಿ, ಗಂಗಾದತ್ತ ತಿಳಿಯಿತೇ?" ಗಂಗಾದತ್ತನು ನಿಜ ಸ್ಥಿತಿಯನ್ನು ಮತ್ತೊಂದು ಬಾರಿ ಹೇಳಿದನು.

ಆದರೆ 'ಸ್ತ್ರೀ ಬುದ್ಧಿಃ ಪ್ರಳಯಾಂತಕಃ' ಎಂಬ ಹಾಗೆ ಗಾಂಗಿಯು 'ಅಯ್ಯೋ! ಘಾತ! ಘಾತ! ಘಾತವಾಯಿತು! ಯಾ ರಾದರೂ ಬನ್ನೀ....ಬನ್ನೀ...' ಎಂದು ಬೊಬ್ಬಿಡಲಾರಂಭಿಸಿದಳು. ಅಷ್ಟರಲ್ಲಿ ಗಾಂಗಿಯ ಪುತ್ರರೂ ಇತರರೂ ಎಲ್ಲರೂ ಏನು ಅನಾಹುತವೆಂದು ಓಡಿ ಬಂದು ಗಂ ಗಾದತ್ತನನ್ನು ಹಿಡಿದು ಹೊಡೆಯ ತೊಡ ಗಿದರು. ಆಗ ಗಂಗಾದತ್ತನು—ಅತ್ಯಂತ ದೀನನಾಗಿ—"ಅಯ್ಯೋ ನನ್ನನ್ನು ಹೊಡೆ ಯಬೇಡಿರಿ! ನಾನು ಈ ಮನೆಯವನು! ನಿಮ್ಮ ತಂದೆ ಗಂಗಾದತ್ತ! ನನಗೆ ಯೌ ವನ ಪ್ರಾಪ್ತವಾದುದರಿಂದ ಹೀಗೆ ತರುಣ ನಾಗಿದ್ದೇನೆ!" ಎಂದು ಅಂಗಲಾಚಿ ಬೇಡಿ ಕೊಳ್ಳ ತೊಡಗಿದನು. ಇಷ್ಟಾದರೂ ಅವ ರ್ಯಾರೂ ಅದನ್ನು ನಂಬಲಿಲ್ಲ! ಕೊನೆಗೆ ಆ ಸಂಸಾರದಲ್ಲಿ ಹಿಂದೆ ನಡೆದ ಎಷ್ಟೋ ಘ ಟನೆಗಳನ್ನು ಗಂಗಾದತ್ತನು ಚಾಚೂ ತಪ್ಪದೆ ಹೇಳಿದನು. ಕೊನೆಗೆ ತನ್ನ ಬೆನ್ನಿ ನಲ್ಲಿದ್ದ ಒಂದು ಮಚ್ಚೆಯನ್ನೂ ಗುರು ತಿಗಾಗಿ ತೋರಿಸಿದನು. ಆದರೆ ಕೊನೆಗೂ ಆತನ ಹೆಂಡತಿ, ಮಕ್ಕಳು ಮತ್ತು ನೆರೆಹೊರೆಯವರೂ ಆತನನ್ನು ಗುರುತಿಸಲಿಲ್ಲ! ಗಂಗಾದತ್ತನ ದೌರ್ಭಾ ಗ್ಯವೆಂದೇ ಹೇಳಬೇಕು! ಕೊನೆಗೂ ಆ

(ಇಪ್ಪತ್ತಾರನೇ ಪುಟ ನೋಡಿರಿ)

# ಜಯದೇವ ಮಹಾಕವಿ ಮತ್ತು ಗೀತಗೋವಿಂದ

ಸಂಸ್ಕೃತ ಸಾಹಿತ್ಯದ ಅಮರಕೃತಿಗಳಲ್ಲಿ ಜಯದೇವನ ಗೇಯಕೃತಿ ಗೀತ ಗೋವಿಂದ ಒಂದು. ರಾಧಾಕೃಷ್ಣ ಭಕ್ತನಾದ ಕವಿ ಶೃಂಗಾರ ಲೋಲರಾದ ರಾಧಾಗೋವಿಂದರ ಸಮ್ಮಿಲನ ಮಾಡಿದ್ದಾನೆ. ರಾಧಾರಾಣಿಯಂತೆ ತ್ರಿಭುವನ ಮೋಹಕವಾದ ಜಯದೇವನ ಕಾವ್ಯಕಲೆಯ ಗರಿಮೆಯನ್ನು ಎಲ್ಲರೂ ತಿಳಿದುಕೊಳ್ಳಬೇಡವೆ?

ಬರೆದವರು
ಶ್ರೀ ಯ. ನಾ. ಉಡುಪ, ವಿದ್ವಾನ್.

— ೧ —

ಸಂಸ್ಕೃತ ಸಾಹಿತ್ಯಕ್ಷಿತಿಜದ ಗೌರೀಶಂಕರನೆನ್ನಿಸಿದ ಕಾಳಿದಾಸನಿಗೆ ಜೊಯ್ ಕಯ್ಯಾಗಿ ನಿಲ್ಲಬಲ್ಲ ಮತ್ತೊಬ್ಬ ಕವಿಯಿದ್ದರೆ ಆತನೇ ಮಹಾಕವಿ ಜಯದೇವ. ಈತನಂತಹ ಋಷಿ ಸದೃಶ ಕವಿಗಳು ಸಂಸ್ಕೃತ ಸಾಹಿತ್ಯದಲ್ಲೇ ವಿರಳ. ಕಾಳಿಕಾದೇವಿಯ ಪರಮಾನುಗ್ರಹದಿಂದ ಕಾಳಿದಾಸನು ಮಹಾಕವಿಗಳ ಪಂಕ್ತಿಯಲ್ಲಿ ವಿರಾಜಿಸುತ್ತಿರುವಂತೆ ಜಯದೇವನೂ ಶ್ಯಾಮಸುಂದರನ ಆಶೀರ್ವಾದದಿಂದ ವಿಶ್ವಕವಿಗಳ ಸಾಲಿಗೇರಿದನು. ಇವನ ಗೀತಗೋವಿಂದವು 'ನಭೂತೋ ನಭವಿಷ್ಯತಿ'ಯ ಮಹಾಕಾವ್ಯ. ದೈವಪೊಲ್ಮೆ ಇದ್ದ ಕಾವ್ಯ ಕವಿಗಳು ಎಂದೂ ಚಿರಂತನ ಯಶಸ್ಸನ್ನು ಹೊಂದುವರೆಂಬುದಕ್ಕೆ ಗೀತಗೋವಿಂದ ಮತ್ತು ಜಯದೇವರೇ ಉತ್ತಮ ದೃಷ್ಟಾಂತ!

ಕಾಳಿದಾಸನು ತನ್ನ ಕಾವ್ಯಗಳಿಗೆ ವಾಲ್ಮೀಕಿ ಮತ್ತು ಅಶ್ವಘೋಷಾದಿಗಳು ಆಗಲೇ ಬಳಸಿ ಹದಮಾಡಿದ ಸಾಹಿತ್ಯ ಮಾರ್ಗವನ್ನೇ ಅನುಸರಿಸಿ ಸಾರ್ಥಕ್ಯ ಪಡೆದಿದ್ದಾನೆ. ಈತನು ಸಂಸ್ಕೃತ ವಾತಾವರಣದಲ್ಲಿ ಸಂಸ್ಕೃತ ಛಂದಸ್ಸನ್ನು ಆಶ್ರಯಿಸಿದ ಕವಿ. ಜಯದೇವನಂತೆ ಪ್ರಾಂತೀಯ ಭಾಷೆಯ ವಾತಾವರಣದಲ್ಲಿ ದೇಶೀಯ ಛಂದಸ್ಸನ್ನು ತನ್ನ ಸಂಸ್ಕೃತ ಕಾವ್ಯದಲ್ಲಿ ಉಪಯೋಗಿಸಿಕೊಳ್ಳುವಷ್ಟು ಎಂಟೆದೆಯು ಆ ಮಹಾಕವಿಗೆ ಇರಲಿಲ್ಲವೆಂಬುದಕ್ಕೆ ಆತನ ರಘುವಂಶಾದಿ ಮಹಾಕಾವ್ಯಗಳೇ ಉದಾಹರಣೆ. ಜಯದೇವನು ಸಂಸ್ಕೃತ ಸಾಹಿತ್ಯದ ಸವ್ಯಸಾಚಿ! ಆತನ ಪಾಂಡಿತ್ಯವೆಂಬ ಅಕ್ಷಯ ತೂಣೀರದಲ್ಲಿ ಸಂಸ್ಕೃತ ಮತ್ತು ದೇಶೀಯ ಸಾಹಿತ್ಯಗಳ ಪ್ರೋಜ್ವಲ ಭವಿಷ್ಯವಿದೆ. ಆತನ ಶಬ್ದ ಸಂಪತ್ತು, ಅರ್ಥ ನಾವೀನ್ಯವೂ ಅನುಪಮವಾದುವು. ಆತನ ಕಾವ್ಯಕಲೆಯು ರಾಧಾರಾಣಿಯಂತೆ ತ್ರಿಭುವನ ಮೋಹಕವಾದುದು.

ಜಯದೇವನ ಕೀರ್ತಿಯು ಕಾಳಿದಾಸನಿಗೆ ಎರಡನೆಯವನಾದರೂ ಆತನನ್ನು ಮೆಚ್ಚದ ವಿಮರ್ಶಕನಿಲ್ಲ; ಅವನ ಕಾವ್ಯಕಲೆಗೆ ಬೆರಗಾಗದ ವಿದ್ವಾಂಸನಿಲ್ಲ. ಆತನ ಕಲ್ಪನಾ ದೃಷ್ಟಿಯು ಉದಗ್ರವೂ ಹೌದು, ಸಮಗ್ರವೂ ಹೌದು. ಅವನ ಕಾವ್ಯ ಸೃಷ್ಟಿಯು ಅಭಿನವವೂ ಹೌದು; ಅಭಿರಾಮವೂ ಹೌದು. ಅವನ ರಸ ದೃಷ್ಟಿಯು ಬಗೆ ಮುಗುಳನ್ನು ಅರಳಿಸಬಲ್ಲುದು; ಆನಂದ ಲತೆಯನ್ನು ಕೊನರಿಸಬಲ್ಲುದು. ಅವನ ಕಾವ್ಯವು ವಸಂತ ಸಮಯದ ಕುಸುಮಿತ ವನರಾಜಿ; ಬೇಸಗೆ ಬಿರುಬಿಸಿಲಿನ ತೀಕ್ಷ್ಣತೆಯನ್ನು ಕಬಳಿಸುವ ಗಿರಿತೊರೆಗಳ ಮಂಜುಳ ಮನೋಹರ ಸಂಗೀತ; ಶಾರದಾ ಶರ್ವರಿಯ ಅಮೃತ ಮಯೂಖ ಮಾಲೆ; ಹೈಮಾಚಲದ ಸಾನುವಿನ ಪ್ರಶಾಂತ ರಮಣೀಯ ಸಂಧ್ಯಾರಾಗ!

ಜಯದೇವನ ಗೀತ ಗೋವಿಂದಕ್ಕೆ ಸರಸ ಭಾವ—ಜೀವವನ್ನು ಆತನ ಸಮಗ್ರ ಕಾವ್ಯದ ಇಪ್ಪತ್ತನಾಲ್ಕು ಅಷ್ಟಪದಿಗಳೇ ತುಂಬಿದುವು. ಆ ದೇಶೀಯ ಛಂದಸ್ಸನ್ನು ತನ್ನ ಕಾವ್ಯದಲ್ಲಿ ಬಳಸಲು ಈ ಕವಿಯ ಬೆನ್ನು ತಟ್ಟಿದ ಪ್ರಾಚೀನ ಕಾವ್ಯ ಪರಂಪರೆಯೊಂದು ಹನ್ನೆರಡನೆಯ ಶತಮಾನದಲ್ಲಿದ್ದಿರಬೇಕು. ಬಹುಶಃ ಭಕ್ತಿ ಸೂತ್ರದ ನಿರ್ಮಾತೃವಾದ ನಾರದ ಮಹರ್ಷಿಯ ಅನುಯಾಯಿಗಳ ಕೂಟವೊಂದು ಆಗ ಬಂಗಾಳ ಪ್ರಾಂತದಲ್ಲಿದ್ದಿರಬಹುದೆ? ಪುರಾಣ ಯುಗದಲ್ಲಿ ಭಕ್ತಿಪಂಥದ ಪ್ರಮುಖ ಪ್ರಸಾರಕನಾದ ನಾರದನೆಂಬ ಮಹಾವ್ಯಕ್ತಿಯೊಂದು ಅಂದಿನ ಸುವರ್ಣ ಭಾರತದಲ್ಲಿ ಬದುಕಿ ಬಾಳಿತ್ತೆಂಬುದು ಸತ್ಯ. ಅವನು ನಮ್ಮ ದಾಸಕೂಟದ ಕಾರ್ಯವನ್ನು ನಿರ್ವಹಿಸಿ ಲೋಕ ಕ್ಷೇಮಕ್ಕೆ ಬದ್ಧಕಂಕಣನಾದುದೂ ಸತ್ಯ. ಆದರೆ ಅವನು ಭಕ್ತಿ ಗೀತಗಳನ್ನು ಯಾವ ಛಂದಸ್ಸಿನಲ್ಲಿ ಹಾಡುತ್ತಿದ್ದನೆಂಬುದಕ್ಕೆ ಇಂದು ಭಾರತೀಯರಿಗೆ ಯಾವ ಆಧಾರವೂ ದೊರೆಯುತ್ತಿಲ್ಲ. ಆದರೆ ನಾರದ ಮಹರ್ಷಿಯ ಧ್ಯೇಯವು ಪಂಡಿತ ಮಂಡಲಿಯ ಉದ್ಧಾರದ ಕಡೆಗೆ ಹರಿದಿತ್ತೆಂಬುದಕ್ಕಿಂತ ಪ್ರಕಾಂಡ ಪಾಮರರ ಮೇಲ್ಮೆಯ ಕಡೆಗೆ ಹರಿದಿತ್ತೆಂಬುದಕ್ಕೆ ಸಮರ್ಥಕ ಸಮರ್ಥನವಿದೆ. ಈ ಆಧಾರವು ವಿಶ್ವಸನೀಯವಾದರೆ ಪುರಂದರದಾಸರಂತೆ ನಾರದನೊಬ್ಬ ಅಂದಿನ ದೇಶೀಯ ಛಂದಸ್ಸಿನಲ್ಲಿ ಸಂಸ್ಕೃತ ಭಾಷೆಯಲ್ಲಿ ಭಗವನ್ನಾಮಾಮೃತವನ್ನು ಅರಮನೆಯಿಂದ ಗುಡಿಸಲಿನವರೆಗೆ ಸಾಗಿಸಿದ ಭಕ್ತಿ ಸಾಮ್ರಾಜ್ಯದ ರಾಯಭಾರಿ. ಭಕ್ತಿಯೇ ಭವಭೇಷಜವೆಂಬುದನ್ನು ಭಾವಿಸಿದ ಭಾವಿಕ!

— ೨ —

ಉತ್ತರ ಭಾರತದಲ್ಲಿ ಭಗವಾನ್ ಚೈತನ್ಯ ದೇವನ ಅವತಾರಕ್ಕಿಂತ ಮೊದಲೇ ವೈಷ್ಣವ ಸಂಪ್ರದಾಯವು ಪ್ರಬಲವಾಗಿ ನೆಲೆಯೂರಿತ್ತು. ಈ ಸಂಪ್ರದಾಯದವರಲ್ಲಿ ರುಕ್ಮಿಣೀ ಕೃಷ್ಣನನ್ನು ಆರಾಧ್ಯ ದೇವನನ್ನಾಗಿಟ್ಟುಕೊಂಡು ಪೂಜಿಸುವ ಪಂಥವೊಂದಿತ್ತು. ಇದಕ್ಕೆ ಜ್ಞಾನೇಶ್ವರ, ನಾಮದೇವ, ಏಕನಾಥ, ತುಕಾರಾಮ ಮೊದಲಾದವರು ಸೇರಿದ್ದರು. ಇವರು ಪ್ರತಿಪಾದಿಸಿದ ರುಕ್ಮಿಣೀ ಕೃಷ್ಣ ಭಕ್ತಿಯನ್ನು ಭಕ್ತಿ ಶಾಸ್ತ್ರವು ಶಾಂತಭಾವ ಭಕ್ತಿಯೆಂದು ಕರೆದಿದೆ. ಇನ್ನೊಂದು ವೈಷ್ಣವ ಪಂಥವು ರಾಧಾಕೃಷ್ಣನನ್ನೇ ಹೃನ್ಮಂದಿರದ ಅಧಿದೈವವನ್ನಾಗಿಟ್ಟುಕೊಂಡು ಅವನ ಒಲುಮೆ ಮತ್ತು ಸಾಕ್ಷಾತ್ಕಾರಕ್ಕೆ ತನ್ನ ಬಾಳನ್ನೇ ಅರ್ಪಿಸಿದೆ. ಈ ಎರಡನೆಯ ಸಂಪ್ರದಾಯಾವಲಂಬಿಗಳಲ್ಲಿ ಉತ್ತರ ಭಾರತದ ನಿಂಬಾರ್ಕ, ಜಯದೇವ, ವಿಷ್ಣುಸ್ವಾಮಿ, ಚಂಡೀದಾಸ, ವಿದ್ಯಾಪತಿ, ಮೀರಾಬಾಯಿ, ವಲ್ಲಭಾಚಾರ್ಯ, ಚೈತನ್ಯ ಮೊದಲಾದವರು ಪ್ರಸಿದ್ಧರು. ಇವರು ನೈಗೂಡಿಸಿಕೊಂಡ ರಾಧಾಕೃಷ್ಣ ಭಕ್ತಿಗೆ ಮಧುರ ಭಾವಭಕ್ತಿಯೆಂದು ಭಕ್ತಿ ಶಾಸ್ತ್ರದಲ್ಲಿ ಹೇಳಿದ್ದಾರೆ. ಈ ರಾಧಾಕೃಷ್ಣರ ಭಕ್ತಿ ಮಾರ್ಗಕ್ಕೆ ದೇಶೀಯನಾದ ನಿಂಬಾರ್ಕನೇ (೧೧ನೆಯ ಶತಮಾನದ ಕೊನೆಯ ಭಾಗ) ಮೊದಲಿಗನೆಂದು ಹೇಳುತ್ತಾರೆ. ಇವನು ತನ್ನ ಜೀವನದ ಉತ್ತರ ಭಾಗವನ್ನು ಶ್ರೀಕೃಷ್ಣನ ಲೀಲೆಯಿಂದ ಪಾವನವೆನ್ನಿಸಿದ ವೃಂದಾವನದಲ್ಲಿ ಕಳೆದು ಬ್ರಹ್ಮಸೂತ್ರದ ಮೇಲೆ ಒಂದು ಭಾಷ್ಯವನ್ನೂ ದಶಶ್ಲೋಕೀ ಎಂಬ ಕಾವ್ಯವನ್ನೂ ಬರೆದನು.

ರಾಧಾಕೃಷ್ಣನ ಅರ್ಚನೆಯಿಂದ ಬಾಳನ್ನು ಬೆಳಗಿಸಿಕೊಂಡ ಇನ್ನೊಬ್ಬ ಮಹಾವ್ಯಕ್ತಿಯೇ ಜಯದೇವ (ಕ್ರಿ. ಶ. ೧೨ನೆಯ ಶತಮಾನ) ಈತನು ಮಹಾ ಭಕ್ತ ಮತ್ತು ಮಹಾಕವಿ. ಸಮಗ್ರ ಭಾರತ ದೇಶವನ್ನು ತನ್ನ ಸಾಹಿತ್ಯ ಸಂಪತ್ತಿನಿಂದ ಬೆಳಗಿಸಿದವರಲ್ಲಿ ಎರಡನೆಯವನೇ ಜಯದೇವ ಮಹಾಕವಿ. ಈತನ ಸರಸಸುಂದರ ಸಾಹಿತ್ಯಮಾರ್ಗವನ್ನು ಮಿಥಿಲೆಯ ವಿದ್ಯಾಪತಿಯು ಮೈಥಿಲಿ ಭಾಷೆಯಲ್ಲಿ ಅನುಸರಿಸಿ ಸಾಹಿತಿಗಳಿಂದ ಅಭಿನವ ಜಯದೇವನೆಂದು ಕರೆಯಲ್ಪಟ್ಟನು. ಇವನೇ ಜಯದೇವನೆಂಬ ಭ್ರಾಂತಿಯಿಂದ ಜಯದೇವನ ಹುಟ್ಟೂರು ಗುಜರಾತಿನ ಮೈಥಿಲಗ್ರಾಮವೆನ್ನುವವರೂ ಇದ್ದಾರೆ. ಆದರೆ ಜಯದೇವನೇ ತಾನು ಕಿಂದುಬಿಲ್ವಗ್ರಾಮದಲ್ಲಿ ಹುಟ್ಟಿದನೆಂದು (೩-೭ನೆಯ ಅಷ್ಟಪದಿ-೧೦) ಸ್ಪಷ್ಟವಾಗಿ ಹೇಳಿದ್ದಾನೆ. ಈ ಕಿಂದುಬಿಲ್ವ ಗ್ರಾಮವು ಬಂಗಾಳದ ವೀರಭೂಮ ಜಿಲ್ಲೆಯ ಒಂದು ಗ್ರಾಮ. ಮೈಥಿಲ ಗ್ರಾಮ ಮತ್ತು ಕಿಂದುಬಿಲ್ವ ಗ್ರಾಮಕ್ಕೆ ಯಾವ ಸಂಬಂಧವೂ ಇಲ್ಲ.

— ೩ —

ಜಯದೇವನ ತಂದೆ ಭೋಜದೇವ; ತಾಯಿ ರಾಮಾದೇವಿ. ಈಕೆಗೆ ವಾಮಾದೇವಿ—ರಾಧಾ ದೇವಿಯೆಂಬ ಹೆಸರೂ ಉಂಟು. ಜಯದೇವನಿಗೆ ಪರಾಶರನೆಂಬ ಗೆಳೆಯನಿದ್ದನು. (೧೨-೩೪-೧೧) ಈತನು ಮಾಧವಾಚಾರ್ಯನ ಗುರುಕುಲದಲ್ಲಿ ವಿದ್ಯಾರ್ಥಿಯಾಗಿದ್ದನು.

ಬಂಗಾಳದ ನದಿಯಾ ಜಿಲ್ಲೆಯ ದೇವಗ್ರಾಮದ ವಸುದೇವ ಭಟ್ಟಾಚಾರ್ಯ ಮತ್ತು ವಸುಮತೀ ದೇವಿಯರಿಗೆ ಪುರಿಯ ಜಗನ್ನಾಥ ಸ್ವಾಮಿಯ ಅನುಗ್ರಹದಿಂದ ಜನಿಸಿದ ಪದ್ಮಾವತಿಯು ಜಯದೇವನ ಪತ್ನಿಯಾದಳು. ಈಕೆಯಿಂದ ಜಯದೇವನ ದಾಂಪತ್ಯವು ಹಾಲು ಸಕ್ಕರೆ ಮಿಶ್ರವಾದಂತೆ ಸುಮಧುರವಾಗಿತ್ತು. ಇಬ್ಬರೂ ದೈವೀ ಭಕ್ತಿ ಸಂಪನ್ನರು; ರಾಧಾಕೃಷ್ಣನ ಭಕ್ತರು.

ಜಯದೇವನೊಮ್ಮೆ ಕೌಂಚರಾಜನೊಡಗೂಡಿ ಅರಣ್ಯಕ್ಕೆ ಬೇಟೆಯಾಡಲು ಹೋಗಿದ್ದ. ಅರಮನೆಯಲ್ಲಿ ರಾಣಿಯು ವಿನೋದಕ್ಕಾಗಿ -- ಬೇಟೆಯಲ್ಲಿ ಜಯದೇವನನ್ನು ಹುಲಿಯು ಕೊಂದಿತು, ಎಂದು ಶೋಕವನ್ನು ನಟಿಸಲು, ಸಮೀಪದಲ್ಲಿದ್ದ ಪದ್ಮಾವತಿಗೆ ಆಗಲೇ ಪ್ರಾಣೋತ್ಕ್ರಮಣವಾಯಿತು. ಜಯದೇವನೊಡನೆ ಬೇಟೆಯಿಂದ ಸುರಕ್ಷಿತವಾಗಿ ಹಿಂದಿರುಗಿದ ರಾಜನು ಪದ್ಮಾವತಿಯ ಮರಣ ವಿಚಾರವನ್ನು ತಿಳಿದು ದುಃಖಿತನಾಗಿರಲು ಜಯದೇವನು ರಾಜನನ್ನೂ ಆತನ ಪರಿವಾರವನ್ನೂ ಸಮಾಧಾನಗೊಳಿಸಿ ಪತ್ನಿಯ ಬಳಿಯಲ್ಲೇ ನಿಂತು ಗೀತಗೋವಿಂದದ ಇಪ್ಪತ್ತನಾಲ್ಕು ಅಷ್ಟಪದಿಗಳಿಂದ ರಾಧಾಗೋವಿಂದನನ್ನು ಪ್ರಾರ್ಥಿಸಲು ಆ ದೇವದೇವನ ಅನುಗ್ರಹದಿಂದ ಪದ್ಮಾವತಿಯು ಎಚ್ಚರಗೊಂಡಳು. ಜಯದೇವನಂತಹ ಆಧ್ಯಾತ್ಮಿಕ ಜೀವಿಗಳಿಗೆ ಅಸಾಧ್ಯ ಕಾರ್ಯವುಂಟೆ? ಗೀತಗೋವಿಂದವು ಕಾವ್ಯಮಾತ್ರವಲ್ಲ; ಭಕ್ತರ ದಿವ್ಯ ಮಂತ್ರ; ಪಾರಾಯಣದ ಪವಿತ್ರಗ್ರಂಥ.

ಜಯದೇವ ಪದ್ಮಾವತಿಯರು ಕೂಡಿಯೇ ಭಕ್ತಿ ಪ್ರೇಮದ ಸಂಜೀವಿನಿಯಾದ ಗೋವಿಂದ ಲೀಲಾಮೃತ ಮೃದುಮಧುರ-ದೈವಿಕ ಪದ ಪುಂಜಗಳಿಂದ ಜಗನ್ನಾಥ ಕ್ಷೇತ್ರದಲ್ಲಿ ಕೆಲವು ಭಾಗಗಳನ್ನೂ, ಇವರ ವಾಸಸ್ಥಾನವಾಗಿದ್ದ ನವದ್ವೀಪದಲ್ಲಿ ಕೆಲವು ಭಾಗಗಳನ್ನೂ ರಚಿಸಿದರೆಂದು ಹೇಳುತ್ತಾರೆ. ದಂಪತಿಗಳು ನಿತ್ಯವೂ ಈ ಕಾವ್ಯದ ಅಷ್ಟಪದಿಗಳನ್ನು ರಾಗವಾಗಿ ಹಾಡುತ್ತಾ ವಜ್ರಕಿಶೋರನಿಗೆ ತಮ್ಮ ನರ್ತನ ಸೇವೆಯನ್ನು ಅರ್ಪಿಸುತ್ತಿದ್ದರು. ಈ ಕಾವ್ಯದ ಪ್ರತಿ ಶ್ಲೋಕ—ಅಷ್ಟಪದಿಯೂ ರಚಿತವಾದ ಮೇಲೆ ಶ್ರೀ ರಾಧಾಮಾಧವ ಸ್ವಾಮಿಗೆ ಅರ್ಪಿತವಾಗಿ ಪಂಡಿತ ಪಾಮರ ಮಂಡಲಿಯ ಮುಂದೆ ಬರುತ್ತಿತ್ತು.

'ಸ್ಮರಗರಲ ಖಂಡನಂ ಮಮ ಶಿರಸಿ ಮಂಡನಂ' ಎಂದು ತನ್ನ ಕಾವ್ಯದಲ್ಲಿ ಬರೆದ ಜಯದೇವನು ಮುಂದಿನ 'ದೇಹಿ ಪದಪಲ್ಲವ ಮುದಾರಂ' ಎಂಬ ವಾಕ್ಯಖಂಡವನ್ನು ರಾಧಾಗೋವಿಂದನಿಂದಲೇ ಬರೆಸಿದನೆನ್ನುತ್ತಾರೆ.

ಜಯದೇವನ ಶತ್ರುಗಳಾದ ಕಳ್ಳರಿಗೆ ಶ್ರೀ ಕೃಷ್ಣನೇ ಭಯಂಕರವಾಗಿ ಶಿಕ್ಷಿಸಲು ಜಯದೇವನು 'ಗೋಪಾಲಚೂಡಾಮಣಿ, ನಿನ್ನ ಶತ್ರುಗಳನ್ನು ನೀನು ಅನುಗ್ರಹಿಸಿದಂತೆ ನನ್ನ ಶತ್ರುಗಳನ್ನೂ ನೀನು ಅನುಗ್ರಹಿಸಬಾರದೆ?' ಎಂದು ಗೋಳಿಟ್ಟಾಗ ರಾಧಾಮನೋಹರನು ಪ್ರತ್ಯಕ್ಷನಾಗಿ ಆತನನ್ನು ಸಮಾಧಾನಪಡಿಸಿದನಂತೆ!

ಹರಿಯ ಸ್ಮರಣೆಯಿಂದ ಮನಸ್ಸು ತೃಪ್ತಿಗೊಳ್ಳಬೇಕೆನ್ನುವವರೂ, ವಿಲಾಸ ಕಲೆಗಳಲ್ಲಿ ಕುತೂಹಲವುಳ್ಳವರೂ ಗೀತಗೋವಿಂದವನ್ನೊಮ್ಮೆ ಓದಲೇ ಬೇಕು.

ಜಯದೇವನ ಕಾಲದಲ್ಲಿ ಬಂಗಾಳವನ್ನು ರಾಜಾ ಲಕ್ಷ್ಮಣದೇ

(ಇಪ್ಪತ್ತೈದನೆಯ ಪುಟ ನೋಡಿರಿ)

# - ಯೌವನ -

ತುಂಬು ಜವ್ವನಿಗನಾಗಿ ಮೆರೆಯಬೇಕಾದ ಕಾಲದಲ್ಲಿ..ವೃದ್ಧಾಪ್ಯ ಬಂದುಬಿಟ್ಟರೆ..?
ಹಾಗೆಯೇ ವೃದ್ಧಾಪ್ಯದ ಕಾಲದಲ್ಲಿ ತುಂಬು ಜವ್ವನ.... ಪ್ರಾಪ್ತವಾದರೆ...?
ಏನು? ಏನಾಗುತ್ತದೆ? ಅದನ್ನೇ ಇಲ್ಲಿ ಓದಿ ನೋಡಿ!

ಶ್ರೀ ಕೆ. ಎನ್. ಭಟ್, ತಿರಾಡಿಪಾಲ್.

"ಪ್ರಿಯೇ!... ಪ್ರಿಯೇ! ನಿನ್ನೊಡನೆ ಒಂದು ವಿಶೇಷ ಸಮಾಚಾರ ಹೇಳಬೇಕಾಗಿದೆ! ಹೇಳಿದರೆ ನೀನಿದನ್ನು ನಂಬಲಾರೆ! ಆದರೂ ಇದು ಸತ್ಯ! ಸತ್ಯವೆಂದರೆ ಇದು ಸೂರ್ಯಪ್ರಕಾಶದಷ್ಟು ಸತ್ಯ!... ಹೇಳಲೇ?"

"ಅಯ್ಯೋ! ಅಷ್ಟೊಂದು ವಿಶೇಷವಾದ ಸಮಾಚಾರವಾದರೆ, ಬೇಗನೆ ಹೇಳಿರಲ್ಲ? ಅದನ್ನು ಕೇಳಲು ನಾನು ಉತ್ಸುಕಳಾಗಿದ್ದೇನೆ!"

"ಪ್ರಿಯೆ! ಒಬ್ಬ ಮಹಾಯೋಗಿಯು ಇಂದ್ರಪ್ರಸ್ಥಕ್ಕೆ ಬಂದು ತಲುಪಿದ್ದಾನೆ! ವಿಶೇಷವೆಂದರೆ ಆತನು ವೃದ್ಧರನ್ನು ತುಂಬು ಜವ್ವನಿಗರನ್ನಾಗಿ ಮಾರ್ಪಡಿಸುತ್ತಾನಂತೆ! ಆತನ ತಪೋಮಹಿಮೆ ಅಷ್ಟಿದೆ! ನಾವಿಬ್ಬರೂ ಕೂಡಿ ಅಲ್ಲಿಗೆ ಹೋಗಿ ಯೌವನವನ್ನು ಪಡೆದು ಪುನಃ ಸುಖಭೋಗವನ್ನು ಹೊಂದೋಣ! ಆಹಾ! ನಮಗೆ ಇನ್ನು ಯೌವನ ಪ್ರಾಪ್ತವಾದರೆ! ಆ ಸುಖ! ಆ ಭೋಗ! ಆಹಾ! ಅದೆಷ್ಟು ಆನಂದ!"

ಎಪ್ಪತ್ತರ ಗಡಿ ದಾಟಿದ ಗಂಗಾದತ್ತ ಮತ್ತು ಅರುವತ್ತರ ಗಡಿಗೇರಿದ ಆತನ ಪತ್ನಿ ಗಾಂಗಿ. ಇವರೊಳಗೆ ಈ ಮೇಲಿನಂತೆ ಮಾತುಕತೆ ನಡೆಯಿತು. ಅತ್ಯಾಶ್ಚರ್ಯಕರವಾದ ಪತಿಯ ಈ ಮಾತುಗಳನ್ನು ಕೇಳಿದ ಗಾಂಗಿ ಮೌನವಾಗಿಯೇ ತನ್ನ ಪತಿಯ ಮುಖಭಾವವನ್ನು ನೋಡುತ್ತ ನಿಂತಳು!

ಇಷ್ಟೊಂದು ಸೋಜಿಗದ ಸುದ್ದಿ ಹೇಳಿದರೂ ಆಶ್ಚರ್ಯವನ್ನು ಪ್ರಕಟಿಸದೆ ಮೌನವಾಗಿಯೇ ಇದ್ದ ತನ್ನ ಪತ್ನಿಯನ್ನು ನೋಡಿದ ಗಂಗಾದತ್ತನು ಪುನಃ ಹೇಳ ತೊಡಗಿದನು—

'ಪ್ರಿಯೇ! ನಿನಗೆ ಅನುಮಾನ ಬೇಡ! ನನ್ನ ಮಿತ್ರ ಮೋಹನದತ್ತನು ಇಂದ್ರಪ್ರಸ್ಥಕ್ಕೆ ಹೋಗಿ ತುಂಬು ಜವ್ವನಿಗನಾಗಿ ಹಿಂತಿರುಗಿ ಬಂದಿದ್ದಾನೆ! ನಾನು ಪ್ರತ್ಯಕ್ಷ ಆತನನ್ನು ನೋಡಿ ಮಾತನಾಡಿಸಿ ಬಂದಿದ್ದೇನೆ. ಆಹಾ! ಅವನೀಗ ಎಷ್ಟು ಸುಖವಾಗಿದ್ದಾನೆ! ನಮ್ಮಿಬ್ಬರನ್ನೂ ಇಂದ್ರಪ್ರಸ್ಥಕ್ಕೆ ಕರೆದೊಯ್ಯಲು ರಥವನ್ನು ತೆಗೆದುಕೊಂಡು, ಅವನು ಈಗಲೀಗ ಇಲ್ಲಿಗೆ ಬರುತ್ತಾನೆ! ಆದುದರಿಂದ ನೀನು ಬೇಗನೆ ಹೊರಟು ಸಿದ್ಧಳಾಗು! ಎಲ್ಲಿಯಾದರೂ 'ಒಲ್ಲೆ" ಎನ್ನಬೇಡ. ಆನಂದಮಯವಾದ ಯೌವನದ ಒಬ್ಬಲನ್ನು ತಿರಸ್ಕರಿಸಿ ಹಾಳು ಮಾಡಬೇಡ."

ಪತಿಯ ಈ ಮಾತುಗಳನ್ನು ಕೇಳಿ ಆಕೆ ಸಿಡಿಮಿಡಿಯಾದಳು. "ನೀವು ನನ್ನ ಒಪ್ಪಿಗೆ ಪಡೆಯದೆ, ನನ್ನಲ್ಲಿ ಈ ಮೊದಲು ಏನನ್ನೂ ಹೇಳದೆ ರಥವನ್ನು ತೆಗೆದುಕೊಂಡು ಬರಲು ಆತನಿಗೆ ಏಕೆ ಹೇಳಿದಿರಿ? ನಾನು ಬರಲಾರೆ!'

"ಛೀ....ಛೀ....ಹಾಗೆ ಹೇಳಬೇಡ. ಈ ವೃದ್ಧಾಪ್ಯದಲ್ಲಿ ಅಲಭ್ಯವಾಗಿರುವ ಯೌವನವು ನಮಗೆ ಈಗ ಪ್ರಾಪ್ತವಾಗುತ್ತಿರುವ ಈ ಶುಭಮುಹೂರ್ತದಲ್ಲಿ ನೀನು ಯಾಕೆ ಹೀಗೆ ನಿರಾಕರಿಸುತ್ತಿರುವೆಯೋ? ನನಗೆ ಗೊತ್ತಾಗುವುದಿಲ್ಲ."

"ಸ್ವಾಮಿ! ನನ್ನ ಮೂಲಕ ಈಗ ನೀವು ಕಟು ವಾಕ್ಯಗಳನ್ನು ಕೇಳಬೇಕಾಗುತ್ತಿದೆ. ಆದರೆ ನಾನು ನಿರುಪಾಯಳಾಗಿದ್ದೇನೆ ಈ—ವೇಳೆ ಹಾಗೆ ನಿಮ್ಮೊಡನೆ ಮಾತನಾಡದಿರಲು ನನಗೆ ಸಾಧ್ಯವೇ ಇಲ್ಲವಾಗಿದೆ, ಅಲ್ಲ!...ಈ ವಿಷಯದಲ್ಲಿ ನಿಮಗೆ ಈ ಯೌವನದ ಹುಚ್ಚು ಏಕೆ ಹಿಡಿಯಿತೋ? ನಿಮಗೆ ಮಕ್ಕಳು ಮೊಮ್ಮಕ್ಕಳು ಮರಿ ಮಕ್ಕಳು ನೂರು ಸಂಖ್ಯೆಯಲ್ಲಿವೆ! ವೃದ್ಧಾಪ್ಯ ಬಂದಿದೆ. ಈ ಕಾಲದಲ್ಲಿ ಇನ್ನುಳಿದ ಆಯುಸ್ಸನ್ನು ಭಗವದ್ ಚಿಂತನೆಯಲ್ಲಿ ಕಳೆಯುವುದನ್ನು ಬಿಟ್ಟು ಏಕೆ ಹೀಗೆ ಮಾಡುತ್ತೀರಿ? ಈಗ ಯೌವನ—ಬಂದರೂ ಮುಂದಾದರೂ ಒಂದು ದಿನ ವೃದ್ಧಾಪ್ಯ ಬಂದೇ ಬರುವುದು. ಪ್ರಕೃತಿ ನಿಯಮಕ್ಕೆ ವಿರೋಧವಾದ ಈ ದುರಾಗ್ರಹ ನಿಮಗೇಕೆ? ಆ ಯೋಗಿಗಳಿಂದ ನೀವು ಯೌವನವನ್ನು ಪಡೆಯುವ ಬದಲು ಭಗವದ್ ಕೃಪೆಯ ಅನುಗ್ರಹವನ್ನಾದರೂ ಪಡೆಯಿರಿ. ಈ ಯೌವನ ಪ್ರಾಪ್ತಿಯ ಅಶುಭ ವರದಾನ ಪಡೆಯಲು ನಾನು ಖಂಡಿತ ಬರಲಾರೆ. ಒಂದು ಸಲವಲ್ಲ! ಮೂರು ಸಲ ಹೇಳಿದ್ದೇನೆ! ತಿಳಿಯಿರಿ!" ಎಂದಳು. ಗಂಗಾದತ್ತನು ತನ್ನ ಪತ್ನಿಗೆ ಹಲವು ಪರಿಯಿಂದ ಹೇಳಿದನು. ಆದರೆ ಕೊನೆಗೂ ಆಕೆ ಒಪ್ಪಲಿಲ್ಲ. ಅಷ್ಟರಲ್ಲಿ ಮೋಹನದತ್ತನು ರಥಾರೂಢನಾಗಿ ಬಂದೇ ಬಿಟ್ಟನು. ಆಗ ತಾನೆ, ಜವ್ವನಿಗನಾಗಿದ್ದ ಮೋಹನದತ್ತನನ್ನು ತೋರಿಸುತ್ತ— ಗಂಗಾದತ್ತನು ತನ್ನ ಪತ್ನಿಯೊಡನೆ— "ಪ್ರಿಯೇ! ನೋಡು... ನೀನೇ ನೋಡು! ಈ ಮೋಹನದತ್ತನನ್ನು. ಈತನು ಮುದುಕನಾಗಿ ಇದ್ದವನು! ಈಗ ಈತನಿಗೆ ದೊರೆತ ಯೌವನದಿಂದ ಎಂತಹ ಉಜ್ವಲ ಕಾಂತಿ ಪ್ರಾಪ್ತವಾಗಿದೆ! ಇದನ್ನು ನೋಡು! ಈ ದುರ್ಬಲವಾದ ಅಂಗಾಂಗಗಳು ನನಗೆ ಅಸಹ್ಯ ಹುಟ್ಟಿಸಿವೆ! ನಡೆ, ಹೋಗೋಣ. ಸಿಕ್ಕಿರುವ ಈ ಸ್ವರ್ಣಾವಕಾಶವನ್ನು ಕಳೆದುಕೊಳ್ಳಬೇಡ!' ಎಂದನು. ಗಂಗಾದತ್ತನು ಎಷ್ಟು ಹೇಳಿದರೂ ಗಾಂಗಿಯ ಮೇಲೆ ಏನೂ ಪರಿಣಾಮವಾಗಲಿಲ್ಲ! ಕೊನೆಗೆ ನಿರಾಶನಾದ ಗಂಗಾದತ್ತನು ತಾನು ಒಬ್ಬನೇ ಯೌವನ ಪ್ರಾಪ್ತಿಗಾಗಿ ಇಂದ್ರಪ್ರಸ್ಥಕ್ಕೆ ಹೊರಟು ಹೋದನು.

o o o

ಗಂಗಾದತ್ತನ ಅಭೀಷ್ಟ ನೆರವೇರಿತು. ಯೋಗಿಯ ತಪೋ ಮಹಿಮೆಯಿಂದ ಆತನಿಗೆ ಪುನಃ ಯೌವನ ಪ್ರಾಪ್ತವಾಯಿತು. ಗಂಗಾದತ್ತನು ಯೌವನಿಗನಾದ ಬಳಿಕ ಮೋಹನದತ್ತನು ತಾನೊಬ್ಬನೇ ಹೊರಟು ಹೋದನು. ಗಂಗಾದತ್ತನು, ಹೊಸ ಯೌವನದ ಹುರುಪಿನಿಂದ ಆನಂದ ತುಂದಿಲನಾಗಿದ್ದನು. ತನ್ನ ಯೌವನದ ಹೊಸ ರೂಪವನ್ನು ನೋಡಿಕೊಳ್ಳಬೇಕೆಂಬ ಆತನ ಇಚ್ಛೆ ಪ್ರಬಲವಾಗಿತ್ತು. ಆದರೆ, ಕನ್ನಡಿಯನ್ನು ಕೊಂಡುಕೊಳ್ಳಲು ಆತನಲ್ಲಿ ಹಣವಿರಲಿಲ್ಲ. ಅದಕ್ಕಾಗಿ ಆತನು ಕತ್ತಲಾಗುವ ಮೊದಲೇ ಯಾವುದಾದರೂ ಹೊಳೆಯ ಬದಿಗಾದರೂ ಹೋಗಿ ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳಬೇಕೆಂದು ಸರಸರನೆ ಮುನ್ನಡೆದನು. ಹೀಗೆ ಮುನ್ನಡೆದ ಗಂಗಾದತ್ತನು ಒಂದು ಮನೆಯ ಮುಂದೆ ಹೋಗಿ ತಲುಪಿದನು.

ಆ ಮನೆಯ ಒಳಗಡೆ ಸುಂದರ ನರ್ತಕಿಯೋರ್ವಳು ತನ್ನ ಮೋಹಕವಾದ ಅಂಗಾಂಗಗಳನ್ನು ಅಲಂಕರಿಸುತ್ತ ನಿಲುಗನ್ನಡಿಯ ಮುಂದೆ ನಿಂತಿದ್ದಳು. ಇದನ್ನು ಕಂಡ ಗಂಗಾದತ್ತನು ಹೊಸ ಯೌವನದ ಹುಮ್ಮಸ್ಸಿನಿಂದಾಗಿ ತನ್ನನ್ನು ತಾನೇ ಮರೆತು ಆ ಮನೆಯೊಳಗೆ ನುಗ್ಗಿದನು. ನೇರಾಗಿ ಹೋಗಿ ಆ ನರ್ತಕಿಯ ಹಿಂದೆ ನಿಂತು, ಅದೇ ಕನ್ನಡಿಯಲ್ಲಿ ತನ್ನ ಹೊಸ ರೂಪವನ್ನು ನೋಡುತ್ತ ಮೈಮರೆತನು! ಆನಂದದಿಂದ ಕುಣಿಯ ತೊಡಗಿದನು. ತನ್ನ ಕನ್ನಡಿಯಲ್ಲಿ ತರುಣನೊಬ್ಬನ ಪ್ರತಿಬಿಂಬ!, ಅನಿರೀಕ್ಷಿತವಾಗಿ ಮೂಡಿದುದನ್ನು ಕಂಡ ಆಕೆ, ಭಯ ಲಜ್ಜೆಗಳಿಂದ ಚಿಟಾರ್ರನೆ ಚೀರಿದಳು! "ಅಯ್ಯೋ ಕಳ್ಳ! ಕಳ್ಳ!" ಎಂದು ಬೊಬ್ಬಿಟ್ಟಳು, ಅಷ್ಟರಲ್ಲಿ ಆ ಮನೆಯವರು ಮತ್ತು ಆಚೀಚಿನ ಜನರು ಓಡೋಡಿ ಬಂದು, ಈ ಗಂಗಾದತ್ತನನ್ನು ಕಳ್ಳನೆಂದೇ ತಿಳಿದು, ಚೆನ್ನಾಗಿ ಥಳಿಸಿದರು! ಗಂಗಾದತ್ತನು ತನ್ನ ನಿಜವೃತ್ತಾಂತವನ್ನು ಹೇಗೆ ಹೇಳಿದರೂ ಅವರು ಅದನ್ನಾಲಿಸದೆ ಚೆನ್ನಾಗಿ ಹೊಡೆದರು. ಕೊನೆಗೆ ಹೊಡೆ ಹೊಡೆದು ಆತನನ್ನು ಅಲ್ಲಿಯೇ ಕೊಂದು ಹಾಕುತ್ತಿದ್ದರು, ಆದರೆ, ಗಂಗಾದತ್ತನು ತಾನು ಬ್ರಾಹ್ಮಣನೆಂದು ಹೇಳಿ ಜನಿವಾರವನ್ನು ತೋರಿಸಿದುದರಿಂದ— ಆತನನ್ನು ಜೀವ ಸಹಿತ ಬಿಟ್ಟು ಬಿಟ್ಟರು!

ಆಶ್ರಮದಲ್ಲಿ ದೊರೆತ ಯೌವನಕ್ಕೆ ಸಿಕ್ಕಿದ ಈ ಪ್ರಥಮ ಪುರಸ್ಕಾರದಿಂದ ನೊಂದ ಗಂಗಾದತ್ತನು ಮತ್ತೆ ನೇರಾಗಿ ತನ್ನ ಊರಿನ ದಾರಿಯನ್ನು ಹಿಡಿದನು. ಹೊಡೆತ ತಿಂದು ಮೈ ಕೈ ನೋವಾಗುತ್ತಿದ್ದರೂ, ಸಹ ಆತನು—'ತನ್ನಲ್ಲಿ ಯೌವನ ತುಂಬಿದೆ!, ಎನ್ನುವುದಕ್ಕೆ ನಡೆದ ಘಟನೆಯೊಂದು ಉತ್ತಮವಾದ ನಿದರ್ಶನವೆಂದು ಆಲೋಚಿಸುತ್ತ ಸಂತೋಷ ಪಡುತ್ತ ಮುಂದೆ ಸಾಗುತ್ತಿದ್ದನು. ತುಂಬು ಜವ್ವನಿಗನಾದ ಗಂಗಾದತ್ತನಿಗೆ ಆ ಸುಂದರ ನರ್ತಕಿಯ ಮೋಹಕವಾದ ಅಂಗಾಂಗಗಳ ಮಾದಕತೆ ತಲೆಗಡರಿ ಹೋಗಿತ್ತು! ಆತ— 'ಆಹಾ! ಎಂತಹ ಸುಪುಷ್ಟ ದೇಹ! ತನ್ನ ಪತ್ನಿಯೂ ಇಂದ್ರಪ್ರಸ್ಥಕ್ಕೆ ಹೊರಡುತ್ತಿದ್ದರೆ ಹೀಗೆಯೇ ಮೋಹನಾಂಗಿಯಾಗುತ್ತಿದ್ದಳು!, ಎಂದು ಮುಂತಾಗಿ ಯೋಚಿಸುತ್ತ ಯೌವನದ ಸುಖ ಸ್ವಪ್ನಗಳಲ್ಲಿ ಓಲಾಡುತ್ತ ಮುನ್ನಡೆಯುತ್ತಿದ್ದನು!

ಹಾಗೂ ಹೀಗೂ ಮಧ್ಯರಾತ್ರಿಯ ವೇಳೆಗೆ ಗಂಗಾದತ್ತನು, ತನ್ನ ಮನೆಯ ಸಮೀಪಕ್ಕೆ ಬಂದು ತಲುಪಿದನು. ಮನೆಗೆ ಬಂದುದೇ ತಡ; ಆತನು ಬಾಗಿಲ ಬಳಿ ನಿಂತು—'ಸುಂದರೀ! ಬಾಗಿಲು ತೆಗೆ!, ಎಂದು ಗಟ್ಟಿಯಾಗಿ ಕೂಗಿ ಹೇಳಿದನು. ಕರೆ ಕೇಳಿದ ಕೂಡಲೇ ಗಾಂಗಿಯು ಎದ್ದು ಬಂದು ಬಾಗಿಲು ತೆರೆದು ನೋಡುತ್ತಾಳೆ ಎದುರಿಗೆ ದೃಢಕಾಯನಾದ ತರುಣನೋರ್ವನು ನಿಂತಿದ್ದಾನೆ! ಗಾಂಗಿಗೆ ಒಂದು ಚಣ ಅವನಾರೆಂದೇ ತಿಳಿಯಲಿಲ್ಲ! ಆದರೆ, ಮರುಕ್ಷಣವೇ ಆಕೆ ಆತನನ್ನು ಗುರುತಿಸಿ ಹೇಳಿದಳು. "ಯಾರು? ಜ್ಞಾನದತ್ತನೋ? ಥೂ....ಘಟಿಂಗಾ! ಇಲ್ಲಿ ಬಂದು ನನ್ನನ್ನೇ ಸುಂದರೀ" ಎಂದು ಕರೆಯುತಿದ್ದೀಯಾ? ನಿರ್ಲಜ್ಜ! ನಿನ್ನ ಮನೆ ಅಜ್ಜಿಗಿದೆ- ಹೋಗು! ಮೂಗಿನ ವರೆಗೆ ಕುಡಿದು ಬಂದು ಬಾಯಿಗೆ ಬಂದ ಹಾಗೆ ಬೊಗಳುತ್ತಿರುವೆ! ಬೇಗ ನಡೀ ಇಲ್ಲಿಂದ!, ಎಂದು ಗರ್ಜಿಸಿದಳು.

ಆದರೆ ಗಂಗಾದತ್ತನಿಗೆ, ಅದು ತನ್ನ ಮನೆ, ತನ್ನ ಪತ್ನಿ, ಎಂಬುದು ಗೊತ್ತಿದ್ದಿತು. ಆದುದರಿಂದ ಅವನು ನೇರಾಗಿ ಮನೆಯೊಳಗೇ ಹೋಗಿ 'ಪ್ರಿಯೇ! ನನಗೆ ಯೌವನ ಬಂದಿರುವುದರಿಂದ ನೀನು ನನ್ನನ್ನು ಗುರುತಿಸಲಿಲ್ಲ! ನಾನು ನಿನ್ನ ಪತಿಯಲ್ಲವೇ? ಗಾಂಗಿ! ನೀನೂ ಇನ್ನಾದರೂ ಇಂದ್ರಪ್ರಸ್ಥಕ್ಕೆ ಹೋಗಿ ಯುವತಿಯಾಗಿ ಬಾ!" ಎಂದನು ನಸು ನಗುತ್ತ. "ಅರೆ! ನನ್ನನ್ನೇಕೆ ಹೀಗೆ ದುರುಗುಟ್ಟಿ ನೋಡುವೆ? ನಾನು ನಿನ್ನ ಪತಿ, ಗಂಗಾದತ್ತ ತಿಳಿಯಿತೇ?" ಗಂಗಾದತ್ತನು ನಿಜ ಸ್ಥಿತಿಯನ್ನು ಮತ್ತೊಂದು ಬಾರಿ ಹೇಳಿದನು.

ಆದರೆ 'ಸ್ತ್ರೀ ಬುದ್ಧಿಃ ಪ್ರಳಯಾಂತಕಃ' ಎಂಬ ಹಾಗೆ ಗಾಂಗಿಯು 'ಅಯ್ಯೋ! ಘಾತ! ಘಾತ! ಘಾತವಾಯಿತು! ಯಾರಾದರೂ ಬನ್ನೀ....ಬನ್ನೀ...' ಎಂದು ಬೊಬ್ಬಿಡಲಾರಂಭಿಸಿದಳು. ಅಷ್ಟರಲ್ಲಿ ಗಾಂಗಿಯ ಪುತ್ರರೂ ಇತರರೂ ಎಲ್ಲರೂ ಏನು ಅನಾಹುತವೆಂದು ಓಡಿ ಬಂದು ಗಂಗಾದತ್ತನನ್ನು ಹಿಡಿದು ಹೊಡೆಯ ತೊಡಗಿದರು. ಆಗ ಗಂಗಾದತ್ತನು—ಅತ್ಯಂತ ದೀನನಾಗಿ —"ಅಯ್ಯೋ ನನ್ನನ್ನು ಹೊಡೆಯ ಬೇಡಿರಿ! ನಾನು ಈ ಮನೆಯವನು! ನಿಮ್ಮ ತಂದೆ ಗಂಗಾದತ್ತ! ನನಗೆ ಯೌವನ ಪ್ರಾಪ್ತವಾದುದರಿಂದ ಹೀಗೆ ತರುಣನಾಗಿದ್ದೇನೆ!" ಎಂದು ಅಂಗಲಾಚಿ ಬೇಡಿಕೊಳ್ಳ ತೊಡಗಿದನು. ಇಷ್ಟಾದರೂ ಅವರಾರೂ ಅದನ್ನು ನಂಬಲಿಲ್ಲ! ಕೊನೆಗೆ ಆ ಸಂಸಾರದಲ್ಲಿ ಹಿಂದೆ ನಡೆದ ಎಷ್ಟೋ ಘಟನೆಗಳನ್ನು ಗಂಗಾದತ್ತನು ಚಾಚೂ ತಪ್ಪದೆ ಹೇಳಿದನು. ಕೊನೆಗೆ ತನ್ನ ಬೆನ್ನಿನಲ್ಲಿದ್ದ ಒಂದು ಮಚ್ಚೆಯನ್ನೂ ಗುರುತಿಗಾಗಿ ತೋರಿಸಿದನು. ಆದರೆ ಕೊನೆಗೂ ಆತನ ಹೆಂಡತಿ, ಮಕ್ಕಳು ಮತ್ತು ನೆರೆಹೊರೆಯವರೂ ಆತನನ್ನು ಗುರುತಿಸಲಿಲ್ಲ! ಗಂಗಾದತ್ತನ ದೌರ್ಭಾಗ್ಯವೆಂದೇ ಹೇಳಬೇಕು! ಕೊನೆಗೆ ಆ

(ಇಪ್ಪತ್ತಾರನೇ ಪುಟ ನೋಡಿರಿ)

# ಜಯದೇವ ಮಹಾಕವಿ ಮತ್ತು ಗೀತಗೋವಿಂದ

ಸಂಸ್ಕೃತ ಸಾಹಿತ್ಯದ ಅಮರಕೃತಿಗಳಲ್ಲಿ ಜಯದೇವನ ಗೀತಗೋವಿಂದ ಒಂದು. ರಾಧಾಕೃಷ್ಣ ಭಕ್ತನಾದ ಕವಿ ಶೃಂಗಾರ ಲೋಲರಾದ ರಾಧಾಗೋವಿಂದರ ಸಮ್ಮಿಲನ ಮಾಡಿದ್ದಾನೆ. ರಾಧಾರಾಣಿಯಂತೆ ತ್ರಿಭುವನ ಮೋಹಕವಾದ ಜಯದೇವನ ಕಾವ್ಯಕಲೆಯ ಗರಿಮೆಯನ್ನು ಎಲ್ಲರೂ ತಿಳಿದುಕೊಳ್ಳಬೇಡವೆ?

ಬರೆದವರು
ಶ್ರೀ ಯು. ನಾ. ಉಡುಪ, ವಿದ್ವಾನ್.

— ೧ —

ಸಂಸ್ಕೃತ ಸಾಹಿತ್ಯಶೈಲದ ಗೌರೀಶಂಕರನೆನ್ನಿಸಿದ ಕಾಳಿದಾಸನಿಗೆ ಹೋಲಿಕೆಯಾಗಿ ನಿಲ್ಲಬಲ್ಲ ಮತ್ತೊಬ್ಬ ಕವಿಯಿದ್ದರೆ ಆತನೇ ಮಹಾಕವಿ ಜಯದೇವ. ಈತನಂತಹ ಋಷಿ ಸದೃಶ ಕವಿಗಳು ಸಂಸ್ಕೃತ ಸಾಹಿತ್ಯದಲ್ಲೇ ವಿರಳ. ಕಾಳಿಕಾದೇವಿಯ ಪರಮಾನುಗ್ರಹದಿಂದ ಕಾಳಿದಾಸನು ಮಹಾಕವಿಗಳ ಪಂಕ್ತಿಯಲ್ಲಿ ವಿರಾಜಿಸುತ್ತಿರುವಂತೆ ಜಯದೇವನೂ ಶ್ಯಾಮಸುಂದರನ ಆಶೀರ್ವಾದದಿಂದ ವಿಶ್ವಕವಿಗಳ ಸಾಲಿಗೇರಿದನು. ಇವನ ಗೀತಗೋವಿಂದವು 'ನಭೂತೋ ನಭವಿಷ್ಯತಿ' ಯ ಮಹಾಕಾವ್ಯ. ಧ್ರುವಮೂರ್ತಿ ಇದ್ದ ಕಾವ್ಯ ಕವಿಗಳು ಎಂದೂ ಚಿರಂತನ ಯಶಸ್ಸನ್ನು ಹೊಂದುವರೆಂಬುದಕ್ಕೆ ಗೀತಗೋವಿಂದ ಮತ್ತು ಜಯದೇವರೇ ಉತ್ತಮ ದೃಷ್ಟಾಂತ!

ಕಾಳಿದಾಸನು ತನ್ನ ಕಾವ್ಯಗಳಿಗೆ ವಾಲ್ಮೀಕಿ ಮತ್ತು ಅಶ್ವಘೋಷಾದಿಗಳು ಆಗಲೇ ಬಳಸಿ ಹದಮಾಡಿದ ಸಾಹಿತ್ಯ ಮಾರ್ಗವನ್ನೇ ಅನುಸರಿಸಿ ಸಾರ್ಥಕ್ಯ ಪಡೆದಿದ್ದಾನೆ. ಈತನು ಸಂಸ್ಕೃತ ವಾತಾವರಣದಲ್ಲಿ ಸಂಸ್ಕೃತ ಛಂದಸ್ಸನ್ನು ಆಶ್ರಯಿಸಿದ. ಕವಿ ಜಯದೇವನಂತ ಪ್ರಾಂತೀಯ ಭಾಷೆಯ ವಾತಾವರಣದಲ್ಲಿ ದೇಶೀಯ ಛಂದಸ್ಸನ್ನು ತನ್ನ ಸಂಸ್ಕೃತ ಕಾವ್ಯದಲ್ಲಿ ಉಪಯೋಗಿಸಿಕೊಳ್ಳುವಷ್ಟು ಎಂಟೆದೆಯು ಆ ಮಹಾಕವಿಗೆ ಇರಲಿಲ್ಲವೆಂಬುದಕ್ಕೆ ಆತನ ರಘುವಂಶಾದಿ ಮಹಾಕಾವ್ಯಗಳೇ ಉದಾಹರಣ. ಜಯದೇವನು ಸಂಸ್ಕೃತ ಸಾಹಿತ್ಯದ ಸವ್ಯಸಾಚಿ! ಆತನ ಎಂಡೆ ಎಂಬ ಅಕ್ಷಿಯ ಕೊನೀರದಲ್ಲಿ ಸಂಸ್ಕೃತ ಮತ್ತು ದೇಶೀಯ ಸಾಹಿತ್ಯಗಳ ಪ್ರೋಜ್ವಲ ಭವಿಷ್ಯವಿದೆ. ಆತನ ಶಬ್ದಸಂಪತ್ತು, ಅರ್ಥ ನಾವೀನ್ಯವೂ ಅನುಪಮವಾದುವು. ಆತನ ಕಾವ್ಯಕಲೆಯು ರಾಧಾರಾಣಿಯಂತೆ ತ್ರಿಭುವನ ಮೋಹಕವಾದುದು.

ಜಯದೇವನ ಕೀರ್ತಿಯನ್ನು ಕಾಳಿದಾಸನಿಗೆ ಎರಡನೆಯವನೆಂದರೂ ಆತನನ್ನು ಮೆಚ್ಚದ ವಿಮರ್ಶಕರಿಲ್ಲ; ಆತನ ಕಾವ್ಯಕಲೆಗೆ ಬೆರಗಾಗದ ವಿದ್ವಾಂಸರಿಲ್ಲ. ಆತನ ಕಲ್ಪನಾ ದೃಷ್ಟಿಯು ಉಗ್ರವೂ ಹೌದು. ಸಮಗ್ರವೂ ಹೌದು. ಅವನ ಕಾವ್ಯ ಸೃಷ್ಟಿಯು ಅಭಿನವವೂ ಹೌದು; ಅಭಿರಾಮವೂ ಹೌದು. ಅವನ ರಸ ದೃಷ್ಟಿಯು ಜಗಮುಗುಳನ್ನು ಅರಳಿಸಬಲ್ಲುದು, ಆನಂದಲತೆಯನ್ನು ಕೊನರಿಸಬಲ್ಲುದು. ಅವನ ಕಾವ್ಯವು ವಸಂತ ಸಮಯದ ಕುಸುಮಿತ ವನರಾಜಿ, ಬೇಸಗೆ ಬಿರುಬಿಸಿಲಿನ ತೀಕ್ಷ್ಣತೆಯನ್ನು ಕಳೆಯುವ ಗಿರಿತೊರೆಗಳ ಮಂಜುಳ ಮನೋಹರ ಸಂಗೀತ, ಶರದಾಶರ್ವರಿಯ ಅಮೃತ ಮಯೂಖ ಮಾಲೆ, ಹೈಮಾಚಲದ ನೀರವ ಪ್ರಶಾಂತ ರಮಣೀಯ ಸಂಧ್ಯಾರಾಗ!

ಜಯದೇವನ ಗೀತಗೋವಿಂದಕ್ಕೆ ಸರಸ ಭಾವ—ಜೀವವನ್ನು ಆತನ ಸಮಗ್ರ ಕಾವ್ಯದ ಇಪ್ಪತ್ತನಾಲ್ಕು ಅಷ್ಟಪದಿಗಳೇ ತುಂಬಿದುವು. ಈ ದೇಶೀಯ ಛಂದಸ್ಸನ್ನು ತನ್ನ ಕಾವ್ಯದಲ್ಲಿ ಬಳಸಲು ಈ ಕವಿಯ ಬೆನ್ನು ತಟ್ಟಿದ ಪ್ರಾಚೀನ ಕಾವ್ಯ ಪರಂಪರೆಯೊಂದು ಹನ್ನೆರಡನೆಯ ಶತಮಾನದಲ್ಲಿದ್ದಿರಬೇಕು. ಬಹುಶಃ, ಭಕ್ತಿ ಸೂತ್ರದ ನಿರ್ಮಾತೃವಾದ ನಾರದ ಮಹರ್ಷಿಯ ಅನುಯಾಯಿಗಳ ಕೂಟವೊಂದು ಆಗ ಬಂಗಾಳ ಪ್ರಾಂತದಲ್ಲಿದ್ದಿರಬಹುದೆ? ಪುರಾಣ ಯುಗದಲ್ಲಿ ಭಕ್ತಿಪಂಥದ ಪ್ರಮುಖ ಪ್ರಚಾರಕನಾದ ನಾರದನೆಂಬ ಮಹಾವ್ಯಕ್ತಿಯೊಂದು ಅಂದಿನ ಸುವರ್ಣ ಭಾರತದಲ್ಲಿ ಬದುಕಿ ಬಾಳಿತ್ತೆಂಬುದು ಸತ್ಯ. ಅವನು ನಮ್ಮ ದಾಸಕೂಟದ ಕಾರ್ಯವನ್ನು ನಿರ್ವಹಿಸಿ ಲೋಕಕ್ಷೇಮಕ್ಕೆ ಬದ್ಧಕಂಕಣನಾದುದೂ ಸತ್ಯ. ಆದರೆ ಅವನು ಭಕ್ತಿ ಗೀತಗಳನ್ನು ಯಾವ ಛಂದಸ್ಸಿನಲ್ಲಿ ಹಾಡುತ್ತಿದ್ದನೆಂಬುದಕ್ಕೆ ಇಂದು ಭಾರತೀಯರಿಗೆ ಯಾವ ಆಧಾರವೂ ದೊರೆಯುತ್ತಿಲ್ಲ. ಆದರೆ ನಾರದ ಮಹರ್ಷಿಯ ಧ್ಯೇಯವು ಪಂಡಿತ ಮಂಡಲಿಯ ಉದ್ಧಾರದ ಕಡೆಗೆ ಹರಿದಿತ್ತೆಂಬುದಕ್ಕಿಂತ ಪ್ರಚಂಡ ಪಾಮರರ ಮೇಲ್ಮೆಯ ಕಡೆಗೆ ಹರಿದಿತ್ತೆಂಬುದಕ್ಕೆ ಸಮರ್ಥಕ ಸಮರ್ಥನವಿದೆ. ಈ ಆಧಾರವು ವಿಶ್ವಸನೀಯವಾದರೆ ಪುರಂದರದಾಸರಂತೆ ನಾರದನೊಬ್ಬ ಅಂದಿನ ದೇಶೀಯ ಛಂದಸ್ಸಿನಲ್ಲಿ ಸಂಸ್ಕೃತ ಭಾಷೆಯಲ್ಲಿ ಭಗವನ್ನಾಮಾಮೃತವನ್ನು ಅರಮನೆಯಿಂದ ಗುಡಿಸಿಲಿನವರೆಗೆ ಸಾಗಿಸಿದ ಭಕ್ತಿ ಸಾಮ್ರಾಜ್ಯದ 'ರಾಯಭಾರಿ' ಭಕ್ತಿಯೇ ಭವಭೇಷಜವೆಂಬುದನ್ನು ಭಾವಿಸಿದ ಭಾವಿಕ!

— ೨ —

ಉತ್ತರ ಭಾರತದಲ್ಲಿ ಭಗವಾನ ಚೈತನ್ಯ ದೇವನ ಅವತಾರಕ್ಕಿಂತ ಮೊದಲೇ ವೈಷ್ಣವ ಸಂಪ್ರದಾಯವು ಪ್ರಬಲವಾಗಿ ನೆಲಯೂರಿತ್ತು. ಈ ಸಂಪ್ರದಾಯದವರಲ್ಲಿ ರುಕ್ಮಿಣೀ ಕೃಷ್ಣನನ್ನು ಆರಾಧ್ಯ ದೇವನನ್ನಾಗಿಟ್ಟುಕೊಂಡು ಪೂಜಿಸುವ ಪಂಥವೊಂದಿತ್ತು. ಇದಕ್ಕೆ ಜ್ಞಾನೇಶ್ವರ, ನಾಮದೇವ, ಏಕನಾಥ, ತುಕಾರಾಮ ಮೊದಲಾದವರು ಸೇರಿದ್ದರು. ಇವರು ಪ್ರತಿಪಾದಿಸಿದ ರುಕ್ಮಿಣೀ ಕೃಷ್ಣ ಭಕ್ತಿಯನ್ನು ಭಕ್ತಿ ಶಾಸ್ತ್ರವು ಶಾಂತಭಾವ ಭಕ್ತಿಯೆಂದು ಕರೆದಿದೆ. ಇನ್ನೊಂದು ವೈಷ್ಣವ ಪಂಥವು ರಾಧಾಕೃಷ್ಣನನ್ನೇ ಧ್ಯಾನ್ಯಂದ ಅಧಿದೈವವಾಗಿಟ್ಟುಕೊಂಡು ಅವನ ಒಲುಮೆ ಮತ್ತು ಸಾಕ್ಷಾತ್ಕಾರಕ್ಕೆ ತನ್ನ ಬಾಳನ್ನೇ ಅರ್ಪಿಸಿದ. ಈ ಎರಡನೆಯ ಸಂಪ್ರದಾಯಾವಲಂಬಿಗಳಲ್ಲಿ ಉತ್ತರ ಭಾರತದ ನಿಂಬಾರ್ಕ, ಜಯದೇವ, ವಿಷ್ಣುಸ್ವಾಮಿ, ಚಂಡೀದಾಸ, ವಿದ್ಯಾಪತಿ, ಮೀರಾಬಾಯಿ, ವಲ್ಲಭಾಚಾರ್ಯ, ಚೈತನ್ಯ ಮೊದಲಾದವರು ಪ್ರಸಿದ್ಧರು. ಇವರು ಕೈಗೂಡಿಸಿಕೊಂಡ ರಾಧಾಕೃಷ್ಣ ಭಕ್ತಿಗೆ ಮಧುರ ಭಾವಭಕ್ತಿಯೆಂದು ಭಕ್ತಿ ಶಾಸ್ತ್ರದಲ್ಲಿ ಹೇಳಿದ್ದಾರೆ. ಈ ರಾಧಾಕೃಷ್ಣರ ಭಕ್ತಿ ಮಾರ್ಗಕ್ಕೆ ದೇಶೀಯನಾದ ನಿಂಬಾರ್ಕನೇ (೧೧ನೆಯ ಶತಮಾನದ ಕೊನೆಯ ಭಾಗ) ಮೊದಲಿಗನೆಂದು ಹೇಳುತ್ತಾರೆ. ಇವನು ತನ್ನ ಜೀವನದ ಉತ್ತರ ಭಾಗವನ್ನು ಶ್ರೀಕೃಷ್ಣನ ಲೀಲೆಯಿಂದ ಪಾವನವೆನ್ನಿಸಿದ ವೃಂದಾವನದಲ್ಲಿ ಕಳೆದು ಬ್ರಹ್ಮಸೂತ್ರದ ಮೇಲೆ ಒಂದು ಭಾಷ್ಯವನ್ನೂ ದಶಶ್ಲೋಕಿ ಎಂಬ ಕಾವ್ಯವನ್ನೂ ಬರೆದನು

ರಾಧಾಕೃಷ್ಣನ ಅರ್ಚನೆಯಿಂದ ಬಾಳನ್ನು ಬೆಳಗಿಸಿಕೊಂಡ ಇನ್ನೊಬ್ಬ ಮಹಾವ್ಯಕ್ತಿಯೇ ಜಯದೇವ (ಕ್ರಿ. ಶ. ೧೨ನೆಯ ಶತಮಾನ) ಈತನು ಮಹಾ ಭಕ್ತ ಮತ್ತು ವರಕವಿ. ಸಮಗ್ರ ಭಾರತ ದೇಶವನ್ನು ತನ್ನ ಸಾಹಿತ್ಯ ಸಂಪತ್ತಿನಿಂದ ಬೆಳಗಿಸಿದವರಲ್ಲಿ ಎರಡನೆಯವನೇ ಜಯದೇವ ಮಹಾಕವಿ. ಈತನ ಸರಸಸುಂದರ ಸಾಹಿತ್ಯಮಾರ್ಗವನ್ನು ಮಿಥಿಲೆಯ ವಿದ್ಯಾಪತಿಯು ಮೈಥಿಲಿ ಭಾಷೆಯಲ್ಲಿ ಅನುಸರಿಸಿ ಸಾಹಿತಿಗಳಿಂದ ಅಭಿನವ ಜಯದೇವನೆಂದು ಕರೆಯಲ್ಪಟ್ಟನು. ಇವನೇ ಜಯದೇವನೆಂಬ ಭ್ರಾಂತಿಯಿಂದ ಜಯದೇವನ ಹುಟ್ಟೂರು ಗುಜರಾತಿನ ಮೈಥಿಲಗ್ರಾಮವೆನ್ನುವವರೂ ಇದ್ದಾರೆ. ಆದರೆ ಜಯದೇವನೇ ತಾನು ಕಿಂದುಬಿಲ್ವಗ್ರಾಮದಲ್ಲಿ ಹುಟ್ಟಿದನೆಂದು (೩-೭ನೆಯ ಅಷ್ಟಪದಿ ೧೦) ಸ್ಪಷ್ಟವಾಗಿ ಹೇಳಿದ್ದಾನೆ. ಈ ಕಿಂದುಬಿಲ್ವ ಗ್ರಾಮವು ಬಂಗಾಳದ ವೀರಭೂಮ ಜಿಲ್ಲೆಯ ಒಂದು ಗ್ರಾಮ. ಮೈಥಿಲ ಗ್ರಾಮ ಮತ್ತು ಕಿಂದುಬಿಲ್ವ ಗ್ರಾಮಕ್ಕೆ ಯಾವ ಸಂಬಂಧವೂ ಇಲ್ಲ.

— ೩ —

ಜಯದೇವನ ತಂದೆ ಭೋಜದೇವ, ತಾಯಿ ರಾಮಾದೇವಿ. ಈಕೆಗೆ ವಾಮಾದೇವಿ—ರಾಧಾದೇವಿಯೆಂಬ ಹೆಸರೂ ಉಂಟು. ಜಯದೇವನಿಗೆ ಪರಾಶರನೆಂಬ ಗೆಳೆಯನಿದ್ದನು (೧೨-೨೪-೧೧) ಈತನು ಮಾಧವಾಚಾರ್ಯನ ಗುರುಕುಲದಲ್ಲಿ ವಿದ್ಯಾರ್ಥಿಯಾಗಿದ್ದನು.

ಬಂಗಾಳದ ನಡಿಯಾ ಜಿಲ್ಲೆಯ ದೇವಗ್ರಾಮದ ಎಸದೇವ ಭಟ್ಟಾಚಾರ್ಯ ಮತ್ತು ವಸುಮತೀ ದೇವಿಯರಿಗೆ ಪುರಿಯ ಜಗನ್ನಾಥ ಸ್ವಾಮಿಯ ಅನುಗ್ರಹದಿಂದ ಜನಿಸಿದ ಪದ್ಮಾವತಿಯು ಜಯದೇವನ ಪತ್ನಿಯಾದಳು. ಈಕೆಯಿಂದ ಜಯದೇವನ ದಾಂಪತ್ಯವು ಹಾಲು ಸಕ್ಕರೆ ಮಿಶ್ರವಾದಂತೆ ಸುಮಧುರವಾಗಿತ್ತು. ಇಬ್ಬರೂ ದೈವೀ ಭಕ್ತಿ ಸಂಪನ್ನರು, ರಾಧಾಕೃಷ್ಣನ ಭಕ್ತರು.

ಜಯದೇವನೊಮ್ಮೆ ಕೌಂಚರಾಜನೊಡಗೂಡಿ ಅರಣ್ಯಕ್ಕೆ ಬೇಟೆಯಾಡಲು ಹೋಗಿದ್ದ. ಅರಮನೆಯಲ್ಲಿ ರಾಣಿಯು ವಿನೋದಕ್ಕಾಗಿ ಬೇಟೆಯಲ್ಲಿ ಜಯದೇವನನ್ನು ಹುಲಿಯು ಕೊಂದಿತು ಎಂದು ಶೋಕವನ್ನು ನಟಿಸಲು, ಸಮೀಪದಲ್ಲಿದ್ದ ಪದ್ಮಾವತಿಗೆ ಆಗಲೇ ಪ್ರಾಣೋತ್ಕ್ರಮಣವಾಯಿತು. ಜಯದೇವನೊಡನೆ ಬೇಟೆಯಿಂದ ಸುರಕ್ಷಿತವಾಗಿ ಹಿಂದಿರುಗಿದ ರಾಜನು ಪದ್ಮಾವತಿಯ ಮರಣ ವಿಚಾರವನ್ನು ತಿಳಿದು ದುಃಖಿತನಾಗಿರಲು ಜಯದೇವನು ರಾಜನನ್ನೂ ಆತನ ಪರಿವಾರವನ್ನೂ ಸಮಾಧಾನಗೊಳಿಸಿ ಪತ್ನಿಯ ಬಳಿಯಲ್ಲೇ ನಿಂತು ಗೀತಗೋವಿಂದದ ಇಪ್ಪತ್ತನಾಲ್ಕು ಅಷ್ಟಪದಿಗಳಿಂದ ರಾಧಾಗೋವಿಂದನನ್ನು ಪ್ರಾರ್ಥಿಸಲು ಆ ದೇವದೇವನ ಅನುಗ್ರಹದಿಂದ ಪದ್ಮಾವತಿಯು ಎಚ್ಚರಹೊಂದಿದಳು. ಜಯದೇವನಂತಹ ಆಧ್ಯಾತ್ಮಿಕ ಜೀವಿಗಳಿಗೆ ಅಸಾಧ್ಯ ಕಾರ್ಯವುಂಟೆ? ಗೀತಗೋವಿಂದವು ಕಾವ್ಯಮಾತ್ರವಲ್ಲ, ಭಕ್ತರ ದಿವ್ಯ ಮಂತ್ರ, ಪಾರಾಯಣದ ಪವಿತ್ರಗ್ರಂಥ.

ಜಯದೇವ ಪದ್ಮಾವತಿಯರು ಕೂಡಿಯೇ ಭಕ್ತಿ ಪ್ರೇಮದ ಸಂಜೀವಿನಿಯಾದ ಗೋವಿಂದ ಲೀಲಾಮೃತ ಮೃದುಮಧುರದೈವಿಕ ಪದ ಪುಂಜಗಳಿಂದ ಜಗನ್ನಾಥಕ್ಷೇತ್ರದಲ್ಲಿ ಕೆಲವು ಭಾಗಗಳನ್ನೂ, ಇವರ ವಾಸಸ್ಥಾನವಾಗಿದ್ದ ನವದ್ವೀಪದಲ್ಲಿ ಕೆಲವು ಭಾಗಗಳನ್ನೂ ರಚಿಸಿದರೆಂದು ಹೇಳುತ್ತಾರೆ. ದಂಪತಿಗಳು ನಿತ್ಯವೂ ಈ ಕಾವ್ಯದ ಅಷ್ಟಪದಿಗಳನ್ನು ರಾಗವಾಗಿ ಹಾಡುತ್ತಾ ವಜ್ರಕಿಶೋರನಿಗೆ ತಮ್ಮ ನರ್ತನ ಸೇವೆಯನ್ನು ಅರ್ಪಿಸುತ್ತಿದ್ದರು. ಈ ಕಾವ್ಯದ ಪ್ರತಿ ಶ್ಲೋಕ—ಅಷ್ಟಪದಿಯೂ ರಚಿತವಾದ ಮೇಲೆ ಶ್ರೀ ರಾಧಾ ಮಾಧವಸ್ವಾಮಿಗೆ ಅರ್ಪಿತವಾಗಿ ಪಂಡಿತ ಪಾಮರ ಮಂಡಲಿಯ ಮುಂದೆ ಬರುತ್ತಿತ್ತು.

'ಸ್ಮರಗರಲ ಖಂಡನಂ ಮಮ ಶಿರಸಿ ಮಂಡನಂ' ಎಂದು ತನ್ನ ಕಾವ್ಯದಲ್ಲಿ ಬರೆದ ಜಯದೇವನು ಮುಂದಿನ 'ದೇಹಿ ಪದಪಲ್ಲವ ಮುದಾರಂ' ಎಂಬ ವಾಕ್ಯಖಂಡವನ್ನು ರಾಧಾಗೋವಿಂದನೇ ಬರೆಸಿದನೆನ್ನುತ್ತಾರೆ.

ಜಯದೇವನ ಶತ್ರುಗಳಾದ ಕಳ್ಳರಿಗೆ ಶ್ರೀ ಕೃಷ್ಣನೇ ಭಯಂಕರವಾಗಿ ಶಿಕ್ಷಿಸಲು ಜಯದೇವನು 'ಗೋಪಾಲಚೂಡಾಮಣಿ, ನಿನ್ನ ಶತ್ರುಗಳನ್ನು ನೀನು ಅನುಗ್ರಹಿಸಿದಂತೆ ನನ್ನ ಶತ್ರುಗಳನ್ನೂ ನೀನು ಅನುಗ್ರಹಿಸಬಾರದೆ?' ಎಂದು ಗೋಳಿಟ್ಟು ರಾಧಾಮನೋಹರನು ಪ್ರತ್ಯಕ್ಷನಾಗಿ ಆತನನ್ನು ಸಮಾಧಾನಪಡಿಸಿದನಂತೆ!

ಹರಿಯ ಸ್ಮರಣೆಯಿಂದ ಮನಸ್ಸು ತೃಪ್ತಿಗೊಳ್ಳಬೇಕೆನ್ನುವವರೂ ವಿಲಾಸಕಲೆಗಳಲ್ಲಿ ಕುತೂಹಲವುಳ್ಳವರೂ ಗೀತಗೋವಿಂದವನ್ನೊಮ್ಮೆ ಓದಲೇ ಬೇಕು.

ಜಯದೇವನ ಕಾಲದಲ್ಲಿ ಬಂಗಾಳವನ್ನು ರಾಜಾ ಲಕ್ಷ್ಮಣದೇ

(ಇಪ್ಪತ್ತೈದನೆಯ ಪುಟ ನೋಡಿರಿ)

# ಭಾರತೀಯ ವಾಸ್ತುಶಿಲ್ಪ

**ಅನುಪಮ ಕಲೆ ವಾಸ್ತು ಶಿಲ್ಪ. ಪ್ರಾಚೀನ ಭಾರತದಲ್ಲಿ ಹಲವಾರು ಶಿಲ್ಪ ಕೃತಿಗಳಿವೆ, ಪ್ರೇಕ್ಷಕರನ್ನು ದಂಗುಬಡಿಸುತ್ತಿವೆ. ಈ ಕೃತಿಗಳು ಭಾರತೀಯರ ಕಲಾಭಿಜ್ಞತೆಯೊಡನೆ ಕಲಾಪ್ರಿಯತೆಯನ್ನೂ ತೋರಿಸುತ್ತವೆ. ಶಿಲ್ಪ ಕಲೆಯ ಸ್ಥೂಲ ಪರಿಚಯವನ್ನು ಮಾಡಿಕೊಡುವ ಪ್ರಯತ್ನ ಇಲ್ಲಿ ನಡೆದಿದೆ.**

ಬರೆದವರು
ಶ್ರೀ ಸ. ನಾರಾಯಣ.

ನಿರಾಕಾರನಾದ ಭಗವಂತನನ್ನು ಪೂಜಿಸುವ ಸಲುವಾಗಿ ಸುಂದರ ಸ್ವರೂಪವನ್ನಿತ್ತ ಪೂರ್ವಿಕರು (ಆರ್ಯರು) ಭಗವಂತನ ನೆಲೆಗೆ ಯೋಗ್ಯ ಪ್ರಶಾಂತ ಸ್ಥಳವನ್ನು ಹುಡುಕಿ ದೇವ ಮಂದಿರಗಳನ್ನು ನಿರ್ಮಿಸಿ ದೇವಾಲಯಗಳಲ್ಲಿ ಸಾಕಾರ ಶಿಲಾ ಮೂರ್ತಿಯನ್ನು ಸ್ಥಾಪಿಸಿ ಪ್ರತಿಷ್ಠಾಪಿಸಿ ಆರಾಧಿಸಲಾರಂಭಿಸಿದರು.

ದೇವಾಲಯಗಳ ಪರಿಚಯ ಮಾಡಿಕೊಳ್ಳುವ ಮುಂಚೆ ಆಸೇತು ಹಿಮಾಚಲ ವ್ಯಾಪಿಸಿರುವ ದೇವಮಂದಿರಗಳ ಬಗೆಯನ್ನು ಅರಿತುಕೊಳ್ಳುವುದು ಅವಶ್ಯಕ. ಉತ್ತರ ಭಾರತದ ಆಲಯಗಳಿಗೆ ನಾಗರ, ಪೂರ್ವೀಯ ಆಲಯಗಳಿಗೆ ವೇಸರ, ದಾಕ್ಷಿಣಾತ್ಯ ಆಲಯಗಳಿಗೆ ದ್ರಾವಿಡವೆಂದು ಹೆಸರು.

ದಾಕ್ಷಿಣಾತ್ಯ ದೇವಾಲಯಗಳಲ್ಲಿ ಎರಡು ಸಂಪ್ರದಾಯ. ಒಂದು ದ್ರಾವಿಡ ಮತ್ತೊಂದು ಚಾಲುಕ್ಯ (ಹೊಯ್ಸಳ). ದ್ರಾವಿಡ ಶೈಲಿಯಲ್ಲಿ ವಿಮಾನ, ಮುಖಮಂಟಪ, ಗೋಪುರ, ಹಜಾರ, ದ್ವಾರಮಂಟಪ ಇವು ಮುಖ್ಯ. ಚಾಲುಕ್ಯ ಶೈಲಿಯಲ್ಲಿ ವಿಮಾನ, ನವರಂಗ, ಮುಖಮಂಟಪ, ದ್ವಾರ ಮಂಟಪ, ಸಭಾ ಮಂಟಪ ಇವು ಮುಖ್ಯ.

ಸರ್ವ ಪ್ರಥಮ ಕ್ರಿ. ಪೂ. ೨೦೦ನೆಯ ನಗರಿಯ ಶಿಲಾ ಲೇಖದಲ್ಲಿ ಸಂಕರ್ಷಣ, ಮತ್ತು ವಾಸುದೇವ ಮೂರ್ತಿಯ ಅರ್ಚನೆಗೋಸ್ಕರ ದೇವಾಲಯ ನಿರ್ಮಿಸಿದ ಉಲ್ಲೇಖವಿದೆ. ೧೯೩೭ರಲ್ಲಿ ಪಾಟ್ನಾ ನಗರದ ಬಳಿ ಲೋಹನಿಪುರ ಎಂಬಲ್ಲಿ ದೊರೆತಿರುವ ಎರಡು ದಿಗಂಬರ ಜೈನ ಮೂರ್ತಿಗಳೇ ಪ್ರಾಚೀನ ಮೂರ್ತಿಗಳು ಎಂದು ಸಂಶೋಧಕರ ಮತ.

ಗುಹೆ, ಮಂದಿರ, ಸ್ತಂಭ ಮತ್ತು ಪ್ರತಿಮೆಗಳು ಪ್ರಾಚೀನ ಭಾರತದ ಶಿಲ್ಪ ಸಂಪ್ರದಾಯದ ಅಂಗಗಳಾಗಿವೆ. ನಮ್ಮ ದೇಶದಲ್ಲಿ ಬೆಟ್ಟಗಳನ್ನು ಕೊರೆದು ಗುಹೆ ನಿರ್ಮಿಸುವ ಪದ್ಧತಿ ಅತಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿತ್ತು. ಇಂದಿಗೂ ಅನೇಕ ಉದಾಹರಣೆಗಳನ್ನು ಕಾಣಬಹುದು.

ಗುಡಿಗಳಲ್ಲಿ ಮುಖ್ಯವಾಗಿ ಗಾಣಪತ್ಯ, ಕೌಮಾರ, ಸೌರ, ಶೈವ, ವೈಷ್ಣವ ಎಂಬ ಬಗೆಯುಂಟು. ಶೈವ ದೇವಾಲಯ ನಿರ್ಮಾಣ, ದೇವತಾರ್ಚನೆಗೆ ೨೮ ಶೈವಾಗಮಗಳೇ ಆಧಾರ. ವೈಷ್ಣವ ಆಗಮಗಳಲ್ಲಿ ವೈಖಾನಸಾಗಮ ಮತ್ತು ಪಂಚರಾತ್ರಾಗಗಳು ಮುಖ್ಯ. ವಿಗ್ರಹಗಳಲ್ಲಿಯೂ ಮೂರು ಬಗೆ. ವ್ಯಕ್ತ ಮೂರ್ತಿ ಅಂದರೆ ಸಂಪೂರ್ಣ ಮೂರ್ತಿ, ಎರಡನೆಯದಾಗಿ ಅವ್ಯಕ್ತ (ಲಿಂಗ, ಸಾಲಿಗ್ರಾಮ) ಮೂರನೆಯದಾಗಿ ವ್ಯಕ್ತಾವ್ಯಕ್ತ (ತ್ರಿಮೂರ್ತಿ, ಅರ್ಧನಾರೀಶ್ವರ ವಿಗ್ರಹಗಳು).

ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ಶ್ರೇಷ್ಠ ಶಿಲ್ಪ ಶಾಸ್ತ್ರ ಗ್ರಂಥಗಳ ಬಳಕೆಯೂ ಪ್ರಚಾರದಲ್ಲಿತ್ತು. ವೈಷ್ಣವರಲ್ಲಿ ವೈಖಾನಸ, ಪಂಚರಾತ್ರ, ಶೈವರಲ್ಲಿ ಕರಣ ಕಟಕ ಮಕುಟ ಆಗಮಗಳೂ ಇವಲ್ಲದೆ ವಾಸ್ತು ಶಿಲ್ಪ, ಶಿಲ್ಪಶಾಸ್ತ್ರ, ಮಾನಸಾರ, ಮಯಮತ, ಈಶಾನ ಗುರುದೇವ ಪದ್ಧತಿ, ಕಾಶ್ಯಪ ಶಿಲ್ಪ, ಪ್ರಯೋಗ ಮಂಜರಿ, ತಂತ್ರ ಸಮುಚ್ಚಯ, ಮನುಷ್ಯಾಲಯ ಚಂದ್ರಿಕಾ ಮತ್ತು ಶಿಲ್ಪರತ್ನ ಅತಿ ಮುಖ್ಯ ಆಧಾರ ಗ್ರಂಥಗಳು.

ದೇವಾಲಯಗಳ ಸ್ಥಳವಿನ್ಯಾಸದಲ್ಲಿಯೂ ಬಗೆಯುಂಟು. ಚತುರಸ್ರ (ಚೌಕ) ವೃತ್ತ (ಗುಂಡಾಕಾರ) ಚತುರ ಸುದೀರ್ಘ (ಆಯಾಕಾರ) ಹಸ್ತಿಪೃಷ್ಠ ವೃತ್ತಾಯತ (ಅಂಡಾಕಾರ) ಷಟ್ಕೋಣ. ಅಷ್ಟಾಸ್ರ (ಎಂಟು ಮೂಲೆ) ಇವು ಬಳಕೆಯಲ್ಲಿದ್ದ ಸಂಪ್ರದಾಯಗಳು.

ಮಾನವನ ದೇಹದಂತೆ ದೇವಾಲಯದ ಭಾಗಗಳಿಗೂ ಹೆಸರುಗಳಿವೆ. ಪಾದುಕೆ, ಪಾದ, ಚರಣ, ಅಂಘ್ರಿ, ಜಂಘಾ, ಊರು, ಗಳ, ಗ್ರೀವ ಕಂಠ, ಶಿಖರ, ಶಿರ, ಶೀರ್ಷ, ಕೂಟ, ಕರ್ಣ, ನಾಸಿಕ, ಶಿಖೆ ಇವುಗಳು ಶಿಲ್ಪಿಗಳ ಕಲಾ ಶಕ್ತಿಯ ಪ್ರತಿಮುಖವಾಗಿರುತ್ತಿದ್ದವು.

ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ಬಗೆ ಬಗೆಯ ಕೆಲಸಗಾರರು ಯೋಜಿಸಲ್ಪಟ್ಟಿರುತ್ತಿದ್ದರು. ಆದರೂ ಗುರುವಿನ ಪಾತ್ರ ಮುಖ್ಯವಾಗಿರುತ್ತಿತ್ತು. ಅವನ ಸಹಾಯಕರಾಗಿ ಕುಶಲ ಕರ್ಮಿಗಳು ದುಡಿಯುತ್ತಿದ್ದರು. ಅವರಲ್ಲಿ ಮುಖ್ಯರಾದವರು ಸ್ಥಪತಿ (ಮೇಸ್ತ್ರಿ) ಸೂತ್ರಗ್ರಾಹಿ (ನಕ್ಷೆ, ಚಿತ್ರರಚನಕಾರ) ವರ್ಧಕಿ (ಚಿತ್ರಗಾರ) ತಕ್ಷಕ (ಬಡಗಿ) ಸ್ಥಪತಿ ಆಚಾರ್ಯ (ವೇದ ಪರಿಚಯವಿದ್ದ ಮೇಲ್ವಿಚಾರಕ) ವಿಶ್ವಕರ್ಮ ಬ್ರಾಹ್ಮಣರು. ಶಿಲ್ಪಿಗಳು ಮೊದಲಾದವರು.

ಸ್ತಂಭಗಳಲ್ಲಿ ಕೆಳಗಿನಿಂದ ಮೇಲಕ್ಕೆ ಓಮ, ಘಂಟೆ, ಮಂದಿ, ವೀರ ಕಂಡ, ಪೋಟಿಕ ಎಂಬ ಭಾಗಗಳು ಶಿಲ್ಪ ಶಾಸ್ತ್ರಕ್ಕೆ ಅನುಸಾರವಾಗಿ ರೂಪಗೊಂಡಿರುತ್ತಿದ್ದವು.

ದೇವಾಲಯದ ಪ್ರಾಕಾರಗಳಲ್ಲಿ ದೂರದವರಿಗಳ ಜನಮನ ಆಕರ್ಷಿಸುವ ಮನೋಹರ ಶಿಲಾಮೂರ್ತಿಗಳನ್ನು ರೂಪಿಸಿ ಸ್ಥಾಪಿಸಿರುತ್ತಿದ್ದರು. ಶಿಲೆಯ ಕೆತ್ತನೆಯಲ್ಲಿಯೂ ಎರಡು ಗುಂಪು. ಒಂದು ಮೃಗ ಪಂಕ್ತಿ, ಬಳ್ಳಿ ಸಾಲು ಮೊದಲಾದ ಚಿತ್ರಪಟ್ಟಿಕೆ ಮತ್ತೊಂದು ವಿಸ್ತಾರವಾದ ಮೂರ್ತಿ ಚಿತ್ರಣ, ಮೋಹಿನಿ ಮತ್ತು ಮದನಿಕೆ ವಿಗ್ರಹಗಳ ಅಪ್ರತಿಮ ಪ್ರತಿಮಾ ಸಮೂಹ.

ಭಾರತಾದ್ಯಂತ ತನ್ನ ಶಿಲ್ಪಕಲಾ ಪ್ರಾಥಿಮೆಯನ್ನು ಮೆರೆಸುತ್ತಾ ತಲೆಎತ್ತಿ ನಿಂತಿರುವ ಅಸಂಖ್ಯಾತ ದೇವಮಂದಿರಗಳು ವಾಸ್ತುಶಿಲ್ಪಕ್ಕೆ ಮಾದರಿಯಾಗಿವೆ. ಒಂದು ನಾಡಿನಲ್ಲಿ, ಒಂದು ದೇವಾಲಯದ ಒಂದು ಸಂಪ್ರದಾಯದ ಶಿಲ್ಪ ಕಲ್ಪನೆ ಮತ್ತು ರಚನೆ ಮತ್ತೊಂದರಲ್ಲಿ ಇಲ್ಲ ಎನ್ನುವುದು ಗಮನಾರ್ಹ ಸಂಗತಿ.

ದ್ರಾವಿಡ ವಾಸ್ತುಶಿಲ್ಪಕ್ಕೆ ಪಲ್ಲವ, ಚೋಳ, ಪಾಂಡ್ಯ, ವಿಜಯನಗರ ಮತ್ತು ಮಧುರೆಯ ನಾಯಕ ಮನೆತನದವರು ಸಲ್ಲಿಸಿದ ಸೇವೆ ಸ್ತುತ್ಯಾರ್ಹ.

ದೇವಾಲಯಗಳಲ್ಲಿ ಅಂತರ ಮಂಡಲ (ಒಳ ಅಂಗಳ) ಇದರ ಹೊಂಗೆ ಕ್ರಮವಾಗಿ ಅಂತರನಿಹಾರ, ಮಧ್ಯಮಹಾರ, ಪ್ರಾಕಾರ, ಮಹಾಗೋಪುರ, ಇವುಗಳಲ್ಲಿ ದ್ವಾರಶೋಭಾ, ದ್ವಾರಶಾಲಾ, ದ್ವಾರ ಪ್ರಾಸಾದ, ದ್ವಾರ ಹರ್ಮ್ಯ ಮಹಾಗೋಪುರಗಳು ಮುಖ್ಯವಾದುವು.

ದೇವಾಲಯಗಳಂತೆಯೇ ಬೆಟ್ಟ (ಬಂಡೆ)ಗಳನ್ನು ಕೊರೆದು ನಿರ್ಮಿಸಿದ ಗುಹೆಗಳು ಶಿಲ್ಪಕಲಾ ಚಾತುರ್ಯಕ್ಕೆ ಹೆಸರಾದುವು. ಗುಹೆಗಳಲ್ಲಿ ಎರಡು ವಿಧ: ಚೈತ್ಯ ಮತ್ತು ವಿಹಾರ ಎಂದು.

ಸ್ಥಾಪವಿದ್ದು ಜನ ಕುಳಿತುಕೊಳ್ಳಲು ವಿಶಾಲ ಅಂಗಳವಿದ್ದರೆ ಅದು ಚೈತ್ಯ. ಇದು ಜೈನರ ದೇವಾಲಯವೆಂದು ಹೇಳಬಹುದು. ಜೈನ ಮಂದಿರಗಳಿಗೆ ಬಸದಿ ಎಂಬ ಮತ್ತೊಂದು ಹೆಸರೂ ಇದೆ. ಇಂತಹ ಗುಹೆಗಳಲ್ಲಿ ಕಾರ್ಲಿಯ ಗುಹೆ ಪ್ರಖ್ಯಾತವಾದುದು.

ಬೌದ್ಧ ಮಂದಿರಗಳಿಗೆ ವಿಹಾರವೆಂದು ಹೆಸರು.

ಭಾರತದಲ್ಲಿ ಅಜಂತ, ಎಲ್ಲೋರ, ಕಾರ್ಲಿ, ಭೂಜ, ಭಾಲಾಸ, ಜುನ್ನಾರ, ನಾಸಿಕ, ಮೊದಲಾದ ಗುಹೆಗಳ ಶಿಲ್ಪ ವಿಶ್ವವಿಖ್ಯಾತವಾದುದು. ೨ನೆಯ ಶತಮಾನದಲ್ಲಿ ರೂಪುಗೊಂಡ ಜೈನ ಮತಕ್ಕೆ ಸಂಬಂಧಿಸಿದ ಹತಿಗುಂಫ, ರಾಣಿಗುಂಫ ಮಾಗ್ರಗುಂಫೆ, ಮಂಚಪುರಿ ಗುಂಫ, ಅನಂತ ಗುಂಫದಲ್ಲಿಯ ಶಿಲ್ಪಕಲೆ ಅದ್ವಿತೀಯ. ಅದರಂತೆಯೇ ಒರಿಸ್ಸಾ ರಾಜ್ಯದ ಉದಯಗಿರಿ ಮತ್ತು ಖಂಡಗಿರಿಯ ಬೌದ್ಧ ಸಂಪ್ರದಾಯದ ಶಿಲ್ಪ ಮಹತ್ವಪೂರ್ಣವಾಗಿವೆ.

ಗುಹೆಯೊಂದರಲ್ಲಿ ರಂಗಶಾಲೆ ಮತ್ತು ಪ್ರೇಕ್ಷಾಗೃಹದ ಅವಶೇಷ ಸಂಶೋಧಕರ ಗಮನಕ್ಕೆ ಬಂದಿರುವುದು ಉಲ್ಲೇಖನಾರ್ಹ.

ಚೈತ್ಯಾಲಯಗಳಲ್ಲಿ ಜೈನ ಮತ್ತು ತೀರ್ಥಂಕರರಿಗೆ ಸಂಬಂಧಿಸಿದ, ವಿಹಾರಗಳಲ್ಲಿ ಬೌದ್ಧ ಮತ್ತು ಭಗವಾನ್ ಬುದ್ಧನಿಗೆ ಸಂಬಂಧಿಸಿದ, ವೈಷ್ಣವ ದೇವಾಲಯಗಳಲ್ಲಿ ವಿಷ್ಣು ಪುರಾಣ ಮತ್ತು ಶೈವ ಮಂದಿರಗಳಲ್ಲಿ ಶೈವ ಪುರಾಣ ಮತ್ತು ಶಿವನ ಲೀಲಾ ವಿಲಾಸದ ಚಿತ್ರಗಳನ್ನು ರೂಪಿಸುವುದು ಸಂಪ್ರದಾಯವಾಗಿತ್ತು. ಗುಹೆ ದೇವಾಲಯಗಳನ್ನು ಸಂದರ್ಶಿಸಿದ ಪ್ರೇಕ್ಷಕರು ಆಯಾ ದೇವತೆ ಮತ್ತು ದೇವಾಲಯದ ಲೀಲಾ ವೈಭವಗಳನ್ನು ಅರಿತು ಅನುಸರಿಸಲಿ ಎಂಬುದು ಉದ್ದೇಶ್ಯ ದೇವಾಲಯಗಳು ಭಕ್ತರ ಮ

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

*Deepavali Greetings*
*To All Patrons:*

HOOGHLY INK CO.
(BOMBAY) LIMITED.

*Manufacturers of quality Printing Inks for over 50 Years.*

**Kumpta Street, Fort, BOMBAY.**

**Associate Companies:**

**HOOGHLY INK CO. LIMITED,**
**CALCUTTA – MADRAS – DELHI.**

The Richardson Printing Ink Co. Ltd.,
**ENGLAND.**

**LOCAL DEALER:**

The Universal Trading Corporation,
**KATAPADI. (SOUTH KANARA DT.)**

# ಹುರುಳು ಉರುಳುವ ಹರಟೆ

ಶ್ರೀ "ನವಗಿರಿನಂದ"

ಹಳ್ಳಿಗಳಲಿ ಜನಜಾಗೃತಿಯನ್ನುಂಟು ಮಾಡುವ ಉದ್ದೇಶದಿಂದ ಪಂಚಾಯತ ರಾಜ್ಯ ಸ್ಥಾಪನೆಯಾಗಿದೆ. ವಾಚನಾಲಯ ಪುಸ್ತಕ ಭಂಡಾರ, ವಯಸ್ಕ ಶಿಕ್ಷಣಕೇಂದ್ರ— ಹೀಗೆ ಏನೇನೆಲ್ಲಾ ಬೇಕೆನಿಸುತ್ತೋ ಅವೆಲ್ಲವೂ ಗ್ರಾಮದಲ್ಲಿ ತಲೆದೋರಿವೆ. ಸಾಮಾನ್ಯ ಹಳ್ಳಿ ವಾಚನಾಲಯದ ಸನ್ನಿವೇಶವೊಂದನ್ನು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ.

"ಒಂದು ಏರೋಪ್ಲೇನು ಹುಟ್ಟುಬಿದ್ದಾಗಲೂ ನೂರಾರು ಜನರ ಸಾವು.. ಬಸ್ ಡಿಕ್ಕಿ. ನೆರೆ ಹಾವಳಿ.. ಊರಿಗೆ ಊರೇ ಜಲ ಸಮಾಧಿ.... ಬೆಂಕಿ ಅನಾಹುತ ...ಜ್ವಾಲಾಮುಖಿ ಸಿಡಿತ...ಗ್ರಾಮಗಳೇ ಹುಡಿ. ನದಿಯಲ್ಲಿ ಮುಳುಗಿದುವು ಛೀ ಛೀ! ಏನು ಸುಡುಗಾಡು ಪೇಪರ್ರು! ಈ ಹಳ್ಳಿಗೆ ಬರುವ ಇದೊಂದೇ ಪೇಪರ್‍ನಲ್ಲಿ ದಿನ ಇಂಥಾದ್ದು ಮೂರು ನಾಲ್ಕಾದರೂ ಗುಂಪು ಗುಂಪಾಗಿ ಸಾವಿನಾಟದ ಸುದ್ದಿ ಇಲ್ಲದೇ ಇರೋದೇ ಇಲ್ಲ. ಅಷ್ಟೇ ಇಷ್ಟೇ ಯುದ್ಧದ ಜತೆ ಬೇರೆ ಯುದ್ಧ ಎಂಬುದು ನಿಂತರೂ ಹಲ್ಲಿ ಹಲ್ಲಿ ದಂಗೆ ದೊಂಬಿ ಸಾವಂತೂ ನಡೆದೇ ಇದೆ"—ಎಂದರು ಜಗನ್ನಾಥ ಭಟ್ಟರು ಪತ್ರಿಕೆ ಓದುತ್ತ ಕನ್ನಡಕದೆಡೆಯಿಂದ ತಮ್ಮ ಹತ್ತಿರ ಕುಳಿತವರನ್ನು ನೋಡುತ್ತಾ.

ಅದೊಂದು ಗ್ರಾಮ ಸಂಘದ ಬೋರ್ಡು ತಗಲಿಸಿಕೊಂಡಿರುವ ವಾಚನಾಲಯದ ಕೋಣೆ. ಮುರುಕು ಬೆಂಚು, ಒಡಕು ಕುರ್ಚಿ, ಆಡುವ ಮೇಜು, ಬಿರುಕು ಕವಾಟಿನಲ್ಲಿ ಹರಕು ಲೈಬ್ರರಿ, ಅಲ್ಲಲ್ಲಿ ಚೆದರಿದ ಪತ್ರಿಕೆಗಳು—ಎಲ್ಲ ಇದ್ದುವು. ವೀಳ್ಯಕ್ಕೆ ಸುಣ್ಣ ಹಚ್ಚುವ ಸುಬ್ಬನೊಬ್ಬ, ಬೀಡಿ ಹೊಗೆಯುಗುಳುತ್ತ ಯಾರನ್ನೋ ಮಾತಿಗೆಳೆಯುವ ಇನ್ನೊಬ್ಬ, ಹಳೇ ಪತ್ರಿಕೆಯ ಮೇಲೆ ಚಿಂಗಾ ಮರುಗಾ ಕಣ್ಣೋಡಿಸುವವನು ಮತ್ತೊಬ್ಬ, ಕವಾಟಿನ ಪುಸ್ತಕಗಳನ್ನು ಬಿಡಿಸಿ ಬಿಡಿಸಿ ನೋಡಿ ಇಡುವವನು ಬೇರೊಬ್ಬ. ಒಟ್ಟಿನ ಮೇಲೆ ಯಾರೂ ಉದ್ದೇಶಪೂರ್ವಕವಾಗಿ ಏನೂ ಮಾಡುತ್ತಿದ್ದಿಲ್ಲ. ಏನೋ ಒಂದಿಷ್ಟು ಹೊತ್ತು ಕಳೆಯಲಿಕ್ಕೆ ಇಲ್ಲಿಗೆ ಬಂದು ಪುಸ್ತಕ ಪತ್ರಿಕೆಗಳನ್ನು ಮುಟ್ಟಿ, ಬಿಡಿಸಿ, ಕೊಡವಿ ಹರಟೆ ಹೊಡೆಯುವುದೊಂದು ನಾಗರಿಕತೆಯ ಲಕ್ಷಣವೆಂದು ಅವರೆಲ್ಲ ತಿಳಿದುಕೊಂಡ ಹಾಗಿತ್ತು. ಅಲ್ಲಿಗೆ ಬಾರದವರೆಲ್ಲ ಹಳ್ಳಿ ಮಕ್ಕಳು, ಮುದುಕರು, ಕೂಪ ಮಂಡೂಕರು ಎಂಬ ಭಾವನೆ.

ತಾವು ಶ್ರದ್ಧೆಯಿಂದ ಪತ್ರಿಕೆಯ ಸಾರವನ್ನೇ ಗ್ರಹಿಸಿಕೊಂಡು ಓದುವವರಂತೆ ಜಗನ್ನಾಥ ಭಟ್ಟರು ಹೇಳಿದ ಮಾತನ್ನು ಕೇಳಿ ವೆಂಕಪ್ಪ ಶೆಟ್ಟಿ ಬಾಯಿಯಲ್ಲಿದ್ದ ತಂಬಾಕುರಸವನ್ನು ಕಿಟಕಿಯಿಂದ ಉಗುಳಿ "ಅಲ್ಲ ಸ್ವಾಮಿ, ಪ್ರಜೆಗಳ ಸಂಖ್ಯೆ ಭಾರೀ ಜೋರಾಗಿ ಏರುತ್ತ ಇದೆಯೆಂತಲೂ ಪೇಪರಿನಲ್ಲಿ ಆಗಾಗ ದೊಡ್ಡ ದೊಡ್ಡ ಲೆಕ್ಕಾಚಾರ ನೋಡುವವರು ಲೆಕ್ಕ ಮಾಡಿ ಮಾಡಿ ಕಾಣಿಸ್ತಾ ಇದ್ದಾರಲ್ಲಾ, ಹಾಗೆ ಜನ ಸಂಖ್ಯೆ ಹೆಚ್ಚಾಗ್ತಿದ್ದಕ್ಕೇ"—ಎನ್ನುವುದರೊಳಗೆ ನಾಸಿಕಾ ರಂಧ್ರಕ್ಕೇರಿದ ನಶ್ಯದಿಂದ ಸುಖಕರವಾಗಿ ಕಣ್ಣುಮುಚ್ಚಿ ಬಲವಾಗಿ ಸೀನಿ ಉಗ್ರಪ್ಪನೆಂದ. "ನೀನೊಬ್ಬ ವೆಂಕಪ್ಪ. ಪ್ರಜೆಗಳ ಸಂಖ್ಯೆ ಹೆಚ್ಚಾಯ್ತು ಅಂತ ದೊಡ್ಡ ದೊಡ್ಡ ಲೆಕ್ಕಾಚಾರದವರು ಪೇಪರಿನಲ್ಲಿ ಹೇಳಿದರಷ್ಟೇ ಗೊತ್ತಾಗಬೇಕೇನು? ಕಣ್ಣಿದ್ದವರು ಸ್ವಲ್ಪ ಹೊತ್ತು ಪಟ್ಟಣದ ಬೀದೀಲಿ ನೋಡ್ತಾ ನಿಂತಿದ್ರೇನೇ ಸಾಕು. ಅಯ್ಯೋ! ಅಯ್ಯೋ! ಅದೆಂಥಾ ಗುಂಪೂ! ಬೆಳಗ್ಗೆ ಸಾಯಂಕಾಲವೂ ಇದೇನು ಜನ! ಏಜಿ ಏಜಿ ಇರುವೆಗಳ ಸಾಲು! ಇರುವೆ ಸಾಲಾದ್ರೂ ಒಂದೇ ದಿಕ್ಕಿಗೆ ಸಾಗುತ್ತೆ ಹೌದು? ಇದು ಹಾಗಲ್ಲ. ಆಚೆಗೆ ಈಚೆಗೇ ಅಂತ ನಾಲ್ಕು ದಿಕ್ಕಿಗೂ ಹೋಗ್ತಾರೇ, ಬರ್‍ತಾರೇ; ಒತಾರ ಹೋಗ್ತಾನೇ ಇರ್ತಾರೆ! ಆ ಜನಕ್ಕೆ ಇರುವ ಎಂಟು ದಿಕ್ಕು ಸಾಲದೆ ಒಂಭತ್ತನೇ ಹತ್ತನೇ ದಿಕ್ಕು ಉಂಟೋಂತ ಹುಡುಕ್ಕೊಂಡು ಕಾಲಿನಡಿಗೋ ಲಾರಿಯಡಿಗೋ ತೂರಿ ಆ ಕಟ್ಟಕಡೇ ಊರಿಗೇ ಹೋಗಿಬಿಡ್ತಾರೆ..."

ಎಲ್ಲರೂ ನಗುತ್ತಿರಲು ಒಬ್ಬ ಜೋರಾಗಿ ನಕ್ಕು "ನಿಜವೇ ಉಗ್ರಪ್ಪ. ನಾನು ಕಣ್ಣಾರೆ ಕಂಡಿದ್ದೇನೆ. ಅದೇ ಮೊನ್ನೆ ಮದ್ರಾಸಿಗೆ ಹೋಗಿ ಬಂದೆನಲ್ಲಾ,—ಅಲ್ಲಿ ಅಷ್ಟಷ್ಟಗಲದ ಬೀದಿಗಳುಂಟು. ಅಂಥಾ ಉದ್ದಗಲದ ಬೀದೀಲಿ ಒಂದೇ ಒಂದು ಜನ ನಡೆದರೆ ನನ್ನಾಣೆ!" ಎಂದು ಹೊಡೆದು ಹೇಳಿ ಎಲ್ಲರ ಮುಖವನ್ನೂ ನೋಡಿದ!

ಈ ಸಪ್ಪೆಸ್ಸಿನ ಹೊಡೆತದಿಂದ ಎಲ್ಲರೂ "ಹಾ!?" ಎಂದು ಬಾಯಿ ತೆರೆದ. ಪ್ರಶ್ನೆಗಳ ಸುಳಿ ನುಡಿಯನ್ನು ಅವನ ಮುಖದ ಮೇಲೆ ಬೀರಿದರು.

'ಅಂದರೆ ಅಲ್ಲಿ ಜನ್ರೇ ಇಲ್ಲೇನು?' —ತಾಳ್ಮೆಗೆಟ್ಟು ಕೇಳಿಯೇ ಬಿಟ್ಟರು ಜಗನ್ನಾಥ ಭಟ್ಟರು.

ಆತ ಬೀಡಿಯ ಹೊಗೆಯನ್ನು ತಲೆಯೆತ್ತಿ ಆಕಾಶಕ್ಕೆ ಊಟ ಹಾರಿಸಿ, "ಒಳ್ಳೇ ಕೇಳಿದಿರಿ ಭಟ್ರೇ! ಅಲ್ಲಿ ಜನರು ಬೀದಿಗಿಳಿದು ಬಿಟ್ರೆ ಅಂಪ್ರ ತೀರ ಹೋಗುತ್ತೆ ಅವರ ಕತೆ. ಅಹಾ! ಅಲ್ಲಿ ನಡುಬೀದೀಲಿ ನಿಂತ್ಕೊಂಡು ಆ ಪೋಲೀಸ್ನೋನು ಮಾಡುವ ಕಥಕ್ಕಳಿಯ ಮುದ್ರಾಭಿನಯ ನೀವು ನೋಡ್ಲೇಬೇಕಾದ್ದು ಬಿಡಿ!"

"ಅದರಪ್ಪನಂಥಾ ಆಟ ನೋಡಿದವನು ನಾನು. ಅದಿರ್ಲಿ, ಹಾಗಂದ್ರೆ ಅಲ್ಲಿ ಜನ್ರು!" ಜಗನ್ನಾಥ ಭಟ್ಟರಿಗೆ ಸಂಶಯ ತೀರಲಿಲ್ಲ.

"ಜನ್ರಾ? ಜನ್ರು ಸಮುದ್ರದ ಹಾಗೆ ಬೀದಿಯ ಎರಡು ಬದೀಲೂ ದಿಮು ದಿಮು ಹೋಗ್ತಾ ಬರ್ತಾ, ಪ್ರತಿ ಹೆಜ್ಜೆಗೂ ಒಬ್ಬರಿಗೊಬ್ಬರು ಡಿಕ್ಕಿ ಕೊಡ್ತಾ ನಡೀ ಬೇಕು. ದಿಕ್ಕೂ ದೆಸೇ ಇಲ್ಲದಷ್ಟು ಜನ್ರು."

"ಹಾಗಾದ್ರೆ ಆ ಬೀದಿಯೊಳಕ್ಕೇಂತ?"

"ಅಯ್ಯೋ ಭಟ್ರೇ! ಕಾರುಗಳಿಗೇ! ಆ ಕಾರುಗಳ ಕತೆ ಏನು ಕೇಳ್ತೀರಿ ಬಿಡಿ! ಎಷ್ಟಪ್ಪಾ ಆ ಕಾರುಗಳ ಸಾಲು! ಒಂದು ಗಂಟೆ ನಿಂತರೂ ಆ ಕಾರುಗಳ ಸಾಲಿನ ಸಂಕೋಲೆ ಕಡಿಯೋದಿಲ್ಲಾಂತ್ರೆ ನಂಬಿ. ಇನ್ನು ಸ್ಕೂಟರುಗಳೆಷ್ಟು, ಬಸ್ಸುಗಳೆಷ್ಟು ರೈಲುಗಳೆಷ್ಟು .."

ಅಗತಾನೇ ಒಳಗೆ ಬಂದ ಒಕ್ಕಲಿಗ ತುಕ್ರ "ಬಸ್ಸು ರೈಲುಗಳಿಗೇನು ಬಿಡಪ್ಪಾ. ಅದೆಲ್ಲಾ ಎಲ್ಲರಿಗೂ ಬೇಕಾದ್ದು ಅಂತ ಆಯ್ತು. ಒಂದೊಂದು ಕಾರಿನ ವಿಸ್ತೃತ ಕ್ಕೊಳ್ಳಿ. ಒಂದೊಂದು ಕಾರಿಗೇ ಸಾವಿರಾರು ರೂಪಾಯಿ ಆಗುತ್ತಂತೆ. ಹಾಗಾದರೆ ಲೆಕ್ಕವಿಲ್ಲದಷ್ಟು ಕಾರುಗಳೂ ಅಂದರೆ ಎಷ್ಟಾಯಿತು ರೂಪಾಯಿ? ಎಷ್ಟು ರೂಪಾಯಿ ಇದ್ದೀತು, ಆ ಕಾರುಗಳ ಭೂಪರ ಹತ್ತಿರ? ನಮಗೊಂದು ಪೈಸೆಗೆ ಹುಡುಕಾಡಬೇಕಾಗುತ್ತೆ ಇಲ್ಲಿ" ಎಂದು ಉಸ್ಸೆನ ನೆಲದಲ್ಲೇ ಕುಳಿತ.

ಓದಿ ಓದಿಯೇ ದೇಶದೊಳಗಿನ ಪರಿಸ್ಥಿತಿಯನ್ನೆಲ್ಲ ಅರಿತುಕೊಂಡವರ ಹಾಗೆ ಜಗನ್ನಾಥ ಭಟ್ಟರು "ಲೋ ತುಕ್ರಾ, ಈ ಹಳ್ಳೀಲೇ ಕೂತುಕೊಂಡಿರುವ ನಿನಗೇನೋ ಅದೆಲ್ಲ ಒಂದು ಆಶ್ಚರ್ಯವಾಗಿ ಕಂಡೀತು. ದೇಶದಲ್ಲೇ ಈಗ ಹಣದ ರಾಶಿ ತುಂಬಿ ಹೋಗಿದೆ ಕಣೋ! ಎಲ್ಲರ ಕೈಯಲ್ಲಿಯೂ ಕಿಸೆಯಲ್ಲಿಯೂ ಹಣವೇ, ಹೀಗೆ ಹೆಚ್ಚುಚ್ಚು ಹಣ ಕೂಡುವ ಶಕ್ತಿ ಜನರಿಗೆ ಇಲ್ಲದಿದ್ರೆ ಯಾಕೆ ಹೀಗಾಗುತ್ತೆ? ಕೂಲಿ ಹೆಚ್ಚು, ಸಂಬಳ ಹೆಚ್ಚು, ಸಂಪಾದನೆ ಹೆಚ್ಚು, ಬೆಲೆ ಹೆಚ್ಚು. ಇದಕ್ಕೆ ಹಣದ ಉಬ್ಬರ ಅಂತ ಹೆಸರಿಟ್ಟಿದ್ದಾರೆ."

"ಒಳ್ಳೇ ಹೆಸರು! ಯಾವುದೋ ಉಬ್ಬಸ ರೋಗದ ಹೆಸರಿದ್ದ ಹಾಗೆ."

"ರೋಗದ ಹಾಗೆ ಏನು ಬಂತು! ರೋಗವೇ ಅನ್ನಿ. ಜನರೆಲ್ಲಾ ಉಬ್ಬಸ ಬಿಟ್ಕೊಂಡೇ ಇದ್ದಾರಲ್ಲ!"

ಈ ಉದ್ಗಾರಗಳನ್ನೆಲ್ಲ ಕೇಳಿ ತುಕ್ರ "ಅದೇನು ರೋಗವೋ ಸಾವೋ ನಂಗೊತ್ತಿಲ್ಲಾ? ಹಣ ಏನೋ ಎಲ್ಲಿಯೋ ಹೆಚ್ಚು ಹೆಚ್ಚು ಉಂಟು ಅಂಬೋದೇನೋ ನಿಜವೇ. ನಮ್ಮಂಥವರು ಮಾತ್ರ ಏನು ಕೇಳಿದರೂ ಎಲ್ಲದಕ್ಕೂ ಹೆಚ್ಚು ಬೆಲೆ. ಅಷ್ಟು ಕೊಡಲಿಕ್ಕೆ ಮಾತ್ರ ನಮ್ಮ ಹತ್ರ ಹಣ ಇಲ್ಲಾ. ನಿಜ ಹೇಳ್ಲಾ ಭಟ್ರೇ, ಇವತ್ತು ರಾತ್ರಿಗೆ ನಂಗೆ ನೀವ್ಯಾರಾದರೂ ಒಂದು ರೂಪಾಯಿ ಸಾಲಾ ಕೊಟ್ರೇನೇ ನನ್ನ ಮನೇಲಿ ಗಂಜಿ. ಇಲ್ಲದಿದ್ರೆ ನೀರೇ ಗತಿ" ಎಂದು ಗೋಗರೆದ.

ಇದಕ್ಕೆಲ್ಲ ಕಿವಿಕೊಡದವರ ಹಾಗೆ ಒಂದು ಪುಸ್ತಕದಲ್ಲೇ ಶ್ರದ್ಧೆಯಿಟ್ಟಿದ್ದ ರಾಮಜೋಯಿಸರು ಕೂಡಲೇ— 'ಇಕ್ಕೋ ತುಕ್ರ, ಯಾವಾಗ ವಾಪಾಸು ಕೊಡ್ತಿ?' ಎನ್ನುತ್ತ ತಮ್ಮ ಜೇಬಿನಿಂದ ಪರ್ಸ್ ತೆಗೆದು ಒಂದು ರೂಪಾಯಿ ಅವನಿಗೆ ಕೊಟ್ಟರು.

"ಮೂರು ನಾಲ್ಕು ದಿನದಲ್ಲಿ ಬಾಳೇಗೊನೆಯೊಂದು ಮಾರಲಿಕ್ಕೆ ಆಗುತ್ತೆ ಸ್ವಾಮಿ. ಆ ಕೂಡಲೇ ಕೊಟ್ಟು ಬಿಡುತ್ತೇನೆ" ಎಂದು ಹೇಳಿ ತುಕ್ರ ಮತ್ತೆ ಹರಟೆಯ ಸ್ವಾರಸ್ಯ ಸವಿಯಲು ಅಲ್ಲಿ ನಿಲ್ಲದೆ, ಎಲ್ಲಕ್ಕೂ ಹೆಚ್ಚಿನದಾದ ಹೊಟ್ಟೆಯ ವ್ಯಾಪಾರ ನೋಡಲು ಅಂಗಡಿಯ ಕಡೆಗೆ ಬಿರಬಿರನೆ ಸಾಗಿದ.

"ಪರವಾಯಿಲ್ಲಲ್ಲಾ! ಜೋಯಿಸ್ರ ಜೇಬು ಯಾವಾಗಲೂ ಗಿಜಿಗಿಜೀಂತಲೇ ಇರುತ್ತೆ!" ಎಂದರು ಯಾರೋ ಒಬ್ಬರು.

"ಹೌದೌದು. ಮೊದಲು ಎರಡಾಣೆಯ ಪ್ರಶ್ನೆಗಳಿಗೆಲ್ಲ, ಈಗ ಎರಡೆರಡು ರೂಪಾಯಿ ಹೊಡೀತಾರಲ್ಲಾ! ಜನರಿಗೆ ಜ್ಯೋತಿಷ್ಯದಲ್ಲಿ ಏನಾದರೂ ನಂಬುಗೆ ಕಡಿಮೆಯೇ? ಏನೋ ಮೇಲೆ ನೋಡಿದರೆ ಮಾತ್ರ ಜ್ಯೋತಿಷ್ಯದಲ್ಲಿ ವಿಶ್ವಾಸವಿಲ್ಲದವರ ಹಾಗೆ ವಿಜ್ಞಾನದ ಬೂಟಾಟಿಕೆ ಮಾತಾಡ್ತಾರೆ. ಪರೀಕ್ಷೇಲಿ ಪಾಸಾ ಫೇಲಾ, ಕೆಲಸ ಸಿಕ್ಕುತ್ತೋ ಇಲ್ವಾ ಅಂತ ತಿಳಿಯಲು ಗುಟ್ಟಾಗಿ ಜೋಯಿಸರ

(ಇಪ್ಪತ್ತಮೂರನೇ ಪುಟ ನೋಡಿರಿ)



ಹುರುಳು ಉರುಳುವ ಹರಟೆ

ಆದರ್ಶ ಗ್ರಾಮ

# ಕವಿ ಚಮೂಪತಿಯಾಗಿ ಮೆರೆದಿರುವ ನಮ್ಮ ನಾಡು

## — ಕಯ್ಯಾರರ ಆಡಳಿತದಲ್ಲಿ ಪೆರಡಾಲದ ಮುನ್ನಡೆ —

[ಕೇರಳ ಸರಕಾರದ ಸಾರ್ವಜನಿಕ ಸಂಪರ್ಕ ಖಾತೆಯವರು ಹೊರಡಿಸಿದ ಒಂದು ವಿಶೇಷ ಪತ್ರಿಕಾ ಪ್ರಕಟಣೆಯ ಸಾರವನ್ನು ಇಲ್ಲಿ ಕೊಡಲಾಗಿದೆ. ಕನ್ನಡದ ಕವಿ ಶ್ರೇಷ್ಠರಲ್ಲೊಬ್ಬರಾದ ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರ ಸಮರ್ಥ ಅಧ್ಯಕ್ಷತೆಯಲ್ಲಿರುವ ಪಂಚಾಯತಿಗೆ ಸೇರಿದ ಗ್ರಾಮವಾದ ಪೆರಡಾಲವು ಕೇರಳ ಸರಕಾರದಿಂದ ಒಂದು ಆದರ್ಶಗ್ರಾಮವೆಂಬ ಪ್ರಶಸ್ತಿಗೆ ಅರ್ಹತೆ ಪಡೆಯಲು ಪಂಚಾಯತು ಅಧ್ಯಕ್ಷರೂ ಸದಸ್ಯರೂ ಅವರಿಗೆ ಬೆಂಬಲವಾಗಿ ನಿಂತ ಊರಿನ ಜನತೆಯೂ ಕೈಗೊಂಡ ಸಾಹಸ ಪೂರ್ಣ ಸಾಧನೆಯೇನು? ಎಂಬ ವಿಷಯವನ್ನು ಸರಕಾರೀ ಪ್ರಕಟಣೆಯಿಂದ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.]



ಶ್ರೀ ಕಯ್ಯಾರ ಕಿಞ್ಞಣ್ಣ ರೈ.

"ಕೇರಳ ರಾಜ್ಯದ ಬಡಗು ಗಡಿಯಲ್ಲಿರುವ ಗ್ರಾಮಗಳಲ್ಲಿ ಪೆರಡಾಲ ಒಂದು. ಕಾಸರಗೋಡು ತಾಲೂಕಿನ ಬದಿಯಡ್ಕ ಪಂಚಾಯತಿಗೆ ಸೇರಿದ ಈ ಗ್ರಾಮ, ಕಣ್ಣನ್ನೂರು ಜಿಲ್ಲೆಯಲ್ಲಿ ಅತ್ಯುತ್ತಮ ಗ್ರಾಮವೆಂದು ಈ ವರ್ಷ ಪ್ರಶಸ್ತಿ ಪಡೆಯಿತು. ಕಳೆದ ಆಗಸ್ಟ್ ೧೫ರ ಸ್ವಾತಂತ್ರ್ಯದಿನೋತ್ಸವದಂದು ಕಣ್ಣನ್ನೂರಿನಲ್ಲಿ ಸೇರಿದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಈ ಗ್ರಾಮಕ್ಕೆ ದೊರಕಿದ ಜಿಲ್ಲಾ ಪ್ರಶಸ್ತಿಯನ್ನು ಜಿಲ್ಲಾ ಕಲೆಕ್ಟರ ಹಸ್ತದಿಂದ ಪಂಚಾಯತ್ ಅಧ್ಯಕ್ಷ ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು ಸ್ವೀಕರಿಸಿದರು.

"ಈ ಪ್ರಶಸ್ತಿ ದೊರೆತ ಬಗ್ಗೆ ನಮಗೆ ಅಭಿಮಾನವಿದೆ; ಆದರೆ ಇದರಲ್ಲಿ ಆಶ್ಚರ್ಯ ಪಡಬೇಕಾದುದೇನೂ ಇಲ್ಲ. ಕಳೆದ ವರ್ಷ ನಾವು ಅಷ್ಟೊಂದು ಪರಿಶ್ರಮಪಟ್ಟೆವು. ಅದರ ಫಲವಾಗಿ ಈ ಪ್ರಶಸ್ತಿ ದೊರಕಿದೆ. ಈ ಕುರಿತು ನಾವು ನಮ್ಮ ಗ್ರಾಮಸ್ಥರೆಲ್ಲರನ್ನೂ ಕೊಂಡಾಡುತ್ತೇವೆ" ಎಂದು ಪಂಚಾಯತ್ ಅಧ್ಯಕ್ಷರು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಸರಗೋಡಿನಿಂದ ಪುತ್ತೂರಿಗೆ ಹೋಗುವ ಮಾರ್ಗದಲ್ಲಿ ಹನ್ನೆರಡು ಮೈಲುಗಳ ಮಧ್ಯೆ ಪೆಂಡಾಲ ಗ್ರಾಮ ಸಿಗುತ್ತದೆ. ಸಹ್ಯಾದ್ರಿಗೆ ಸೇರಿಕೊಂಡು ಪಂಕ್ತಿ ಪಂಕ್ತಿಯಾಗಿ ತೋರುವ ಬೆಟ್ಟಗಳ ಬುಡದಿಂದ ಹರಿದು ಬರುತ್ತಿರುವ ನೀರಿನ ಸೇಚನ ಪೋಷಣೆಗಳಿಂದ ಶೋಭಿಸುತ್ತಿರುವ ಈ ಗ್ರಾಮದ ಸೌಂದರ್ಯವು ಯಾರನ್ನಾದರೂ ಆಕರ್ಷಿಸದಿರದು. ಹಸಿರು ಹುಲ್ಲನ್ನು ಹೊತ್ತ ಬೆಟ್ಟಗಳು, ಪದರು ಪದರಾಗಿ ಹಾಸಿರುವ ಬಂಡೆಗಲ್ಲುಗಳು, ಕಲನಾದ ಹರಿಯುತ್ತಿರುವ ನದಿಗಳ ಇಕ್ಕಡೆಗಳಲ್ಲಿ ತಟ್ಟುಗಳಾಗಿ ಹರಡಿಕೊಂಡಿರುವ ಬಯಲು ಪ್ರದೇಶಗಳು, ವಿತ್ತವನ್ನು ಉತ್ಪತ್ತಿ ಮಾಡುತ್ತಿರುವ ಸಾಲು ಸಾಲಾಗಿ ಉನ್ನತವಾಗಿ ನಿಂತ ಅಡಿಕೆ ಮರದ ತೋಟಗಳು, ಅಲ್ಲಲ್ಲಿ ಕಂಗೊಳಿಸುವ ತೆಂಗಿನ ಮರಗಳು, ಕದಳೀ ವನಗಳು-ಇವುಗಳಿಂದೆಲ್ಲಾ ಈ ಗ್ರಾಮ ಪ್ರಕೃತಿ ಶ್ರೀ ರಮಣೀಯವಾಗಿದೆ. ಒಟ್ಟು ೧೧೨೩೭ ಎಕ್ರೆ (೧೭.೫೩ ಚದರ ಮೈಲು) ವಿಸ್ತೀರ್ಣವುಳ್ಳ ಪೆರಡಾಲದಲ್ಲಿ ೬೧೦೦ ಮಂದಿ ಪುರುಷರೂ, ೫೬೨೦ ಮಂದಿ ಸ್ತ್ರೀಯರೂ ಕೂಡಿ ೧೧೭೨೦ ಜನ ಸಂಖ್ಯೆ ಇದೆ. ಇವರಲ್ಲಿ ಹೆಚ್ಚಿನವರು ಕೃಷಿಕರೂ, ಬೇಸಾಯದ ಕೂಲಿಗಾರರೂ ಆಗಿರುವರು.

"ಕೃಷಿ ಉತ್ಪತ್ತಿಯನ್ನು ಅಭಿವೃದ್ಧಿಗೊಳಿಸುವ ಎಲ್ಲಾ ನೂತನ ವಿಧಾನಗಳನ್ನೂ ಪರಿಶ್ರಮಶೀಲರಾದ ಇಲ್ಲಿನ ಕರ್ಷಕರು ಬಳಸುತ್ತಿದ್ದಾರೆ. ಬೀಜ, ಗೊಬ್ಬರ, ನೀರಾವರಿ ಮೊದಲಾದ ಕೃಷಿ ಸಹಾಯಕ ಕಾರ್ಯಗಳಲ್ಲಿ ಸಮಾಜ ವಿಕಾಸ ಖಾತೆ, ಕೃಷಿ ಇಲಾಖೆ ಎಂಜಿನಿಯರಿಂಗ್ ಡಿಪಾರ್ಟ್‌ಮೆಂಟು ಇವೆಲ್ಲವುಗಳ ನೆರವೂ ಇಲ್ಲಿನ ಕೃಷಿಕರ ನಿರಂತರ ಪರಿಶ್ರಮವೂ ಜತೆಗೂಡಿ ಗ್ರಾಮದ ಅಭಿವೃದ್ಧಿಗೆ ಸಹಾಯವಾಗುತ್ತಿರುವುದನ್ನು ನಾವಿಲ್ಲಿ ನೋಡಬಹುದಾಗಿದೆ. ಕಾಲು ಶತಮಾನಕ್ಕಿಂತ ಮೊದಲು, ಕಾಡು ಗುಡ್ಡೆಯಾಗಿದ್ದು, ಬಂಜರುಬಿದ್ದಿದ್ದ ಅನೇಕ ಸ್ಥಳಗಳು ಈಗ ಕೃಷಿಗೆ ಯೋಗ್ಯವಾಗಿ ಪರಿವರ್ತಿಸಲ್ಪಟ್ಟಿವೆ. ಈ ಗ್ರಾಮದಲ್ಲಿ ೬೫೫ ಎಕ್ರೆ ಸ್ಥಳದಲ್ಲಿ ಭತ್ತದ ಬೇಸಾಯವೂ ೭೫೩ ಎಕ್ರೆ ಸ್ಥಳದಲ್ಲಿ ಅಡಿಕೆ ತೋಟವೂ ಇರುವುದು. ಪ್ರಕೃತಿ ಸಿದ್ಧವಾದ ನೀರಾವರಿ ಸೌಕರ್ಯ ಇಲ್ಲಿ ಕಡಿಮೆಯಾದರೂ, ಬಾವಿ ಹಾಗೂ ಕೆರೆಗಳನ್ನು ತೋಡಿಸಿ, ತೋಡುಗಳಿಗೆ ಕಟ್ಟಗಳನ್ನು ಹಾಕಿಸಿ, ಪಂಪು ಸೆಟ್ಟುಗಳನ್ನು ಉಪಯೋಗಿಸಿ ಈ ಗ್ರಾಮದ ಕೃಷಿಯ ಕೆಲಸ ಸಾಗುವುದು. ನೀರಾವರಿ ಇಲಾಖೆಯವರು ಇಷ್ಟರಲ್ಲೇ ಈ ಗ್ರಾಮದಲ್ಲಿ ಒಂದು ಅಣೆಕಟ್ಟನ್ನು ಕಟ್ಟಿಸಿದ್ದು, ಇನ್ನು ಮೂರು ಅಣೆಕಟ್ಟುಗಳನ್ನು ನಿರ್ಮಿಸುವ ಸಿದ್ಧತೆ ನಡೆಯುತ್ತಿದೆ. ಗ್ರಾಮೀಣ ಜನಶಕ್ತಿ ಯೋಜನೆಯನ್ವಯ ಕೆಲವು ಕೆರೆಗಳನ್ನು ಕಟ್ಟಿಸುವ ಕೆಲಸ ಪ್ರಾರಂಭಿಸಲ್ಪಟ್ಟಿದೆ.

"ಸಮ್ಮಿಶ್ರ ಗೊಬ್ಬರದ ಪ್ರಯೋಜನವನ್ನು ಇಲ್ಲಿನ ಬೇಸಾಯಗಾರರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಕಳೆದ ವರ್ಷ ೭೩೫೦ ಟನ್ ಸಮ್ಮಿಶ್ರಗೊಬ್ಬರವನ್ನು ಉತ್ಪಾದಿಸಲಾಗಿದೆ. ೭೫೫ ಟನ್ ರಾಸಾಯನಿಕ ಗೊಬ್ಬರವನ್ನು ೬೫೫ ಮಂದಿಗೆ ವಿತರಣೆ ಮಾಡಲಾಗಿದೆ. ವರ್ಷದಲ್ಲಿ ಮೂರೋ ನಾಲ್ಕೋ ಸಲ ಬೋರ್ಡೋ ಮಿಶ್ರಣವನ್ನು ಉಪಯೋಗಿಸಿ ಅಡಿಕೆ ಮರಗಳಿಗೆ ತಗಲುವ ಮಹಾ ರೋಗವನ್ನು ಪೂರ್ಣ ತಡೆಗಟ್ಟಲಾಗುತ್ತಿದೆ. ಒಟ್ಟು ೬೪೬೩ ಜಾನುವಾರುಗಳು ಈ ಗ್ರಾಮದಲ್ಲಿವೆ. ಇವುಗಳಲ್ಲಿ ಉತ್ತಮ ಜಾತಿಗೆ ಸೇರಿದವುಗಳೂ ಇವೆ. ಜಾನುವಾರು ಸಾಕಣೆಯಲ್ಲಿ ಅವುಗಳಿಗೆ ಬಾಧಿಸುವ ರೋಗಗಳ ಶುಶ್ರೂಷೆಯಲ್ಲಿ ಇಲ್ಲಿನ ಕೃಷಿಕರು ತುಂಬಾ ಆಸಕ್ತಿ ವಹಿಸುತ್ತಿದ್ದಾರೆ. ಇಲ್ಲಿ ಒಂದು ಮೃಗಾಸ್ಪತ್ರೆ ಇದ್ದು, ಅದರ ಸರ್ಜನರು ಉತ್ತಮ ಸೇವೆ ಸಲ್ಲಿಸುತ್ತಾರೆ.

"ವಿತ್ತ ಮತ್ತು ವಿದ್ಯೆ ಇವುಗಳೆರಡನ್ನೂ ಸಮಾನವಾಗಿ ಈ ಗ್ರಾಮಸ್ಥರು ಬಯಸುತ್ತಾರೆ. ಇಲ್ಲಿ ಎಂಟು ಪ್ರೈಮರಿ ಶಾಲೆಗಳು, ಐದು ಅಪ್ಪರ್ ಪ್ರೈಮರಿಗಳೂ, ಎರಡು ಹೈಸ್ಕೂಲುಗಳೂ, ಒಂದು ಸಂಸ್ಕೃತ ಕಾಲೇಜೂ ಇದೆ. ಇಲ್ಲಿನ ಮಹಾಜನ ಕಾಲೇಜು ನಾಡಿಗೆ ಪ್ರತಿಭಾವಂತರಾದ ಅನೇಕ ವಿದ್ವಾಂಸರನ್ನೂ ಒದಗಿಸಿ ಕೊಟ್ಟದ್ದು ಮಾತ್ರವಲ್ಲದೆ, ಕಳೆದ ವರ್ಷ ಆ ಸಂಸ್ಥೆ ತನ್ನ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತ್ತು. 'ಗ್ರಾಮಗುರು'ವೆಂದು ಗೌರವಿಸಲ್ಪಡುವ ಶ್ರೀ ಅನಂತ ಭಟ್ಟರ ಸ್ಮಾರಕವಾಗಿರುವ ಒಂದು ಶಾಲೆಯ ಆಡಳಿತವನ್ನು ಸ್ವತಃ ಪಂಚಾಯತು ವಹಿಸಿಕೊಂಡು ನಡೆಸುತ್ತಿದೆ. ಈ ಶಾಲೆಗೆ ಒಂದು ಯೋಗ್ಯವಾದ ಕಟ್ಟಡ ಕಟ್ಟಿಸಲು ತೊಡಗಿದ್ದು ಗ್ರಾಮಸ್ಥರು ಶ್ರಮದಾನ ಹಾಗೂ ಸಹಾಯಗಳ ಮೂಲಕ ನೆರವು ನೀಡುತ್ತಿದ್ದಾರೆ.

"ಸಹಕಾರ ರಂಗದಲ್ಲಿಯೂ ಪೆರಡಾಲ ಒಂದು ಆದರ್ಶ ಗ್ರಾಮವಾಗಿದೆ. ೧೨೫೭ ಸದಸ್ಯ ಸಂಖ್ಯೆಯುಳ್ಳ ನೀರ್ಚಾಲಿನಲ್ಲಿರುವ ತಾಲೂಕು ಕೃಷಿಕರ ಸಹಕಾರೀ ಮಾರಾಟ ಸಂಘವು ಇಲ್ಲಿನ ಒಂದು ಪ್ರಾಮುಖ್ಯ ಸಂಸ್ಥೆಯಾಗಿರುವುದು, ಅದು ಮಾತ್ರವಲ್ಲದೆ ಸೇವಾ ಸಹಕಾರೀ ಸಂಘ, ಸಹಕಾರೀ ಸ್ಟೋರು, ಭತ್ತದ ಕೈಗಾರಿಕೆ ಸಹಕಾರೀ ಸಂಸ್ಥೆ ಮುಂತಾದವುಗಳು ಇಲ್ಲಿ ನಡೆಯುತ್ತಿದ್ದು ಉತ್ತಮ ಸಹಕಾರಿಗಳಾಗಲು ಪ್ರಚೋದಕಗಳಾಗಿವೆ.

"ಪಿ. ಡಬ್ಲ್ಯು. ಡಿ.ಗೆ ಸೇರಿದ ೧೧ ಮೈಲು ಮುಖ್ಯ ರಸ್ತೆಯೂ, ೧೬ ಮೈಲು ಗ್ರಾಮೀಣ ರಸ್ತೆಯೂ ಮಾತ್ರವಲ್ಲದೆ ಇಲ್ಲಿನ ಕೃಷಿಕರು ಅವರವರ ಆವಶ್ಯಕತೆ ಅನುಕೂಲಗಳ ಬಗ್ಗೆ ಶ್ರಮದಾನದಿಂದಲೂ ಸ್ವಂತ ವೆಚ್ಚದಿಂದಲೂ ನೂರಾರು ಮೈಲುಗಳಷ್ಟು ಮಾರ್ಗ ಮಾಡಿಸಿದ್ದಾರೆ. ಈ ವರ್ಷದಲ್ಲಿ ಪಂಚಾಯತು ೫೫ ಮೈಲುಗಳಷ್ಟು ಮಾರ್ಗ ಮಾಡಿಸಿ ತನ್ನ ಪಾಲಿನ ಕರ್ತವ್ಯವನ್ನು ಪಾಲಿಸಿದೆ.

"ಎಲ್ಲಾ ವಿಧದ ಸೌಕರ್ಯಗಳಿಂದ ಕೂಡಿದ ಒಂದು ಸರಕಾರೀ ಆಸ್ಪತ್ರೆ ಇಲ್ಲದಿರುವುದರಿಂದ ಇಲ್ಲಿನ ಗ್ರಾಮಸ್ಥರು ತುಂಬಾ ತೊಂದರೆಗಳಿಗೀಡಾಗಿದ್ದಾರೆ. ಈಗ ಇಲ್ಲಿರುವ ಒಂದು ಸರಕಾರೀ ಆಯುರ್ವೇದ ಆಸ್ಪತ್ರೆಯ ಪ್ರಯೋಜನವೂ ಜನತೆಗೆ ಸರಿಯಾಗಿ ದೊರಕುವ ವ್ಯವಸ್ಥೆ ಆಗಬೇಕಾಗಿದೆ. ಆರೋಗ್ಯ ರಕ್ಷಣೆ ಅತ್ಯಂತ ಅವಶ್ಯವಾದ ಪ್ರಾಥಮಿಕ ಸೌಕರ್ಯವೆಂದರೆ ಶುದ್ಧ ನೀರಿನ ವ್ಯವಸ್ಥೆಯೂ

(ಇಪ್ಪತ್ತೆರಡನೆ ಪುಟ ನೋಡಿರಿ)



ನಡೆ ನುಡಿಯಲ್ಲಿ ನಾವು ಒಂದು
ಭಾರತೀಯರು ನಾವು ಎಂದೆಂದೂ

DA-65.F

# ಜೈಮಿನಿ ಭಾರತದಲ್ಲಿ ಸೀತಾಪರಿತ್ಯಾಗದ ಹಿನ್ನೆಲೆ

ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್.

ಶ್ರೀ ರಾಮಚಂದ್ರ ರಜಕನೊರ್ವನ ಮಾತ ಕೇಳಿ ಅಗ್ನಿಪರಿಶುದ್ಧೆಯಾದ ಪತ್ನಿ ಸೀತಾದೇವಿಯನ್ನು ಮತ್ತೆ ತ್ಯಜಿಸಿದ. ಲೋಕಾಪವಾದಕ್ಕೆ ಹೆದರಿ ಆತ ಹೀಗೆ ಮಾಡಿದನೆಂದಿದ್ದರೆ, ಅದು ಸಮರ್ಥನೀಯವಲ್ಲ. ಯಾಕೆ? ಸೀತಾ ಪರಿತ್ಯಾಗದ ಹಿನ್ನಲೆಯನ್ನು ಜೈಮಿನಿ ಭಾರತ ನಮಗೆ ತಿಳಿಸುತ್ತದೆ.

ಭಾರತ ದೇಶದ ಪ್ರಾಚೀನತಮ ಇತಿಹಾಸ ಗ್ರಂಥಗಳಲ್ಲಿ ವ್ಯಾಸರಚಿತ ಭಾರತದಂತೆ ರಾಮಾಯಣದ ಸ್ಥಾನಮಾನಗಳೆ ಹಿರಿಮೆಯನ್ನು ಪಾಶ್ಚಾತ್ಯ ಪೌರ್ವಾತ್ಯರೆಲ್ಲರೂ ಒಪ್ಪಿ ಹೊಗಳುತ್ತಾರೆ. ರಾಮಾಯಣದ ಕತೆ ಹಲವಾರು ಕೃತಿಗಳಲ್ಲಿ ಪಡಿಮೂಡಿದೆ. ವಾಲ್ಮೀಕಿ ರಾಮಾಯಣ, ಆನಂದ ರಾಮಾಯಣ, ಅಧ್ಯಾತ್ಮ ರಾಮಾಯಣ, ಅದ್ಭುತ ರಾಮಾಯಣ, ಶೇಷ ರಾಮಾಯಣ ಇತ್ಯಾದಿ ಮೌಲಿಕ ಗ್ರಂಥಗಳಲ್ಲಿ ಶ್ರೀರಾಮನ ಕಥೆ ಅನೇಕಶಃ ವಿವರಿಸಿವೆ. ಇವುಗಳಲ್ಲಿಯ ಕತೆಯಲ್ಲಿ ಏಕತೆಯಂತೆ ಅನೇಕತೆಯೂ ಅಲ್ಲಲ್ಲಿ ಕಾಣುತ್ತದೆ. ಸಂವಾದಿಗಳಾದ ವಿಭಾಗಗಳನ್ನು ಸಮನ್ವಯಿಸಿಕೊಳ್ಳುವುದು ಜಾಣತನವಾಗಿದೆ. ಒಂದು ಕೃತಿಯಲ್ಲಿಲ್ಲದ ವಿಷಯವು ಇನ್ನೊಂದು ಕೃತಿಯಲ್ಲಿದ್ದರೆ, ಅದಕ್ಕೆ ಹೊಂದಿಸಬಹುದಾದರೆ, ಸಂಯುಕ್ತರೂಪವಾಗಿ ನಿರೂಪಿಸುವುದು ಚೆನ್ನು. ಉದಾಹರಣವಾಗಿ, ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮಾಶ್ವಮೇಧದ ಕಥೆ ಸೂಚಿತವಾಗಿದೆ, ವಿಸ್ತಾರವಾಗಿಲ್ಲ. ಅಶ್ವಮೇಧದ ಕುದುರೆ ಒಂದು ವರ್ಷ ರಾಜ್ಯಾಂತರಗಳಲ್ಲಿ ಸುತ್ತಿ ಬರಬೇಕು. ಆಗ ಅದನ್ನು ಕಟ್ಟಿದ ರಾಜರನ್ನು ಯುದ್ಧದಲ್ಲಿ ಗೆದ್ದು ಅದನ್ನು ಬಿಡಿಸಿ ತರಬೇಕು. ಹಾಗೂ ತಾವಾಗಿ ಕಪ್ಪಗೊಟ್ಟರೆ ಒಪ್ಪಿಕೊಳ್ಳಬೇಕು. ಈ ವಿಭಾಗವು ಪದ್ಮಪುರಾಣದಲ್ಲಿ ಸವಿಸ್ತಾರವಾಗಿ ಹೇಳಿದೆ. (ಈ ಕತೆಯ ಕೊನೆಯ ಅಂಶ ಲವಕುಶರ ಕಾಳಗವು ವಾಲ್ಮೀಕಿ ರಾಮಾಯಣಕ್ಕೆ ಹೊಂದಿಕೆಯಾಗಿಲ್ಲ) ಜೈಮಿನಿ ಭಾರತದಲ್ಲಿ ಬಭ್ರುವಾಹನ ಕಾಳಗಕ್ಕೆ ಉಪಮಿಸಿ, ಕುಶಲವರ ಕಾಳಗ ಹೇಳಿದುದು ಇಲ್ಲಿ ಸ್ಮರಣೀಯ! ಶ್ರೀರಾಮಾಶ್ವಮೇಧದ ಕುದುರೆಯ ಪಯಣವು ಇವೆರಡು ಕೃತಿಗಳಲ್ಲಿ ಹೇಳಿರುವುದರಿಂದ, ವಾಲ್ಮೀಕಿ ರಾಮಾಯಣಕ್ಕೆ ಹೊರತಾಗಿದ್ದರೂ, ಶ್ರೀರಾಮನ ಕಥಾನಕಗಳಲ್ಲದು ಸೇರ್ಪಡೆಯಾಗತಕ್ಕದೆಂದು ಹೇಳಬಹುದು.

**ಜೈಮಿನಿ ಭಾರತ:** ಪ್ರಚಲಿತವಾದ ಜೈಮಿನಿ ಭಾರತವು ಕೇವಲ ಪಾಂಡವಾಶ್ವಮೇಧ ಕಥೆಯನ್ನು ಒಳಗೊಂಡ ಒಂದು ಪರ್ವವಾಗಿದೆ. ಆದರೆ ಈ ಜೈಮಿನಿ ಭಾರತದ ಕೊನೆಯ ಅಧ್ಯಾಯದ ಒಂದು ಶ್ಲೋಕದಿಂದ, ಇದೂ ಮೂಲತಃ ವ್ಯಾಸ ಭಾರತದಂತೆ ಹದಿನೆಂಟು ಪರ್ವಗಳಲ್ಲಿ ವಿಸ್ತಾರಿತವಾಗಿ ರಚಿತವಾಗಿತ್ತೆಂದು ತಿಳಿಯುತ್ತಿದೆ:

"ಚತುರ್ದಶ ಚ ಪರ್ವಾಣಿ
ಕಥಿತಾನಿ ವಿಶಾಂಪ ತೇ।
ಅಶ್ವಾಶ್ವಮೇಧಾಸಾಖ್ಯಂ
ಪರ್ವರಾಜಂ ಶೃಣಿಷ್ವ ತತ್॥"

(68—14).

ಪ್ರಸ್ತುತ ಜೈಮಿನಿ ಭಾರತದ ಅರುವತ್ತೆಂಟು ಅಧ್ಯಾಯಗಳಲ್ಲಿ ಅಯ್ದು ಸಾವಿರದ ನೂರತೊಂಬತ್ತನಾಲ್ಕು ಶ್ಲೋಕಗಳವೆ. ಜೈಮಿನಿ ಭಾರತದ ಬಗ್ಗೆ ಹೇಳಿಕೆಯೊಂದು ಪ್ರತೀತವಾಗಿದೆ: "ಜನಮೇಜಯ ಮಹಾರಾಜನು ಸರ್ಪಯಾಗಕ್ಕೆ ತೊಡಗಿ, ಮುನಿವರನ ಅಪೇಕ್ಷೆಯಂತೆ ಅದನ್ನು ಅರ್ಧದಲ್ಲಿ ನಿಲ್ಲಿಸಿದನು. ಅದರಿಂದಾಗಿ ಆ ರಾಜನಿಗೆ ತೊನ್ನು ಹಿಡಿಯಿತು. ಮತ್ತೆ ವ್ಯಾಸಭಾರತವನ್ನು ಅವನು ಕೇಳಿದುದರಿಂದ ಅವನ ದೇಹದೆಲ್ಲೆಡೆಯ ತೊನ್ನು ಮಾಯವಾಗಿ, ಮೂಗಿನ ಕೊನೆಯಲ್ಲಿ ತುಸ ಉಳಿಯಿತು. ಬಳಿಕ ಜೈಮಿನಿ ಭಾರತದ ಶ್ರವಣದಿಂದಾಗಿ ಆ ತೊನ್ನು ತೊಲಗಿತು. ಈ ಜೈಮಿನಿ ಭಾರತದ ಅಶ್ವಮೇಧ ಪರ್ವವನ್ನುಳಿದು ಮಿಕ್ಕೆಲ್ಲಾ ಭಾಗವು ಸಮುದ್ರಕ್ಕೆ ಎಸೆಯಲಾಗಿತ್ತೆಂದು." ಈ ಪ್ರವಾದದಲ್ಲಿ ಅದೆಷ್ಟು ಕೃತಕತೆಯಿದೆಯೆಂಬುದು ಹೇಳಸಲ್ಲ. ಪರಂತು, ವ್ಯಾಸ ಭಾರತದ ಅಶ್ವಮೇಧ ಪರ್ವದಲ್ಲಿ ಹೇಳದ ಕೆಲವು ಕತೆಗಳು ಜೈಮಿನಿ ಭಾರತದ ಅಶ್ವಮೇಧ ಪರ್ವದಲ್ಲಿ ಇವೆ, ಕೆಲವು ಬೇರೆ ಹೇಳಿವೆ. ಈ ಸಂಸ್ಕೃತ ಕೃತಿರತ್ನವನ್ನು ಕನ್ನಡದಲ್ಲಿ ಲಕ್ಷ್ಮೀಶ ಮಹಾಕವಿಯು ಅನುವಾದಿಸಿದ್ದಾನೆ. ಮೂಲ ಗ್ರಂಥದ ಹಲವು ವಿಷಯ ವರ್ಣನೆಗಳನ್ನು ಇಲ್ಲಿ ಅನುಸರಿಸಿ ವರ್ಣಿಸಿದ್ದರೆ, ಕೆಲವೆಡೆ ಸ್ವಕೀಯ ಚಮತ್ಕಾರದಿಂದ ಸಾಗಿದ್ದಾನೆ. ಪ್ರಕೃತ ಲೇಖನದಲ್ಲಿ ಜೈಮಿನಿ ಹಾಗೂ ಲಕ್ಷ್ಮೀಶ ಹೇಳಿದ ಸೀತಾಪರಿತ್ಯಾಗದ ಕತೆಯು ದೇಹಲೀದೀಪನ್ಯಾಯದಂತೆ ಬರೆಯಲಾಗಿದೆ. "ಪುಣ್ಯಮಿದು ಕೃಷ್ಣ ಚರಿತಾಮೃತಂ ಸುಕವೀಂದ್ರಗಣ್ಯಮಿದು ಭಾವುಕರ ಕಿವಿದೊಡವಿಗೊದವಿದ ಹಿರಣ್ಯಮಿದು ಭೂತಳದೊಳೆನೆ ಮಿಂಚುವುದು ಲಕ್ಷ್ಮೀಪತಿಯ ಕಾವ್ಯ ರಚನೆ' ಯೆಂದು ಕವಿಯು ಈ ಕೃತಿಯ ಉತ್ತಮಿಕೆಯ ಪ್ರಸ್ತಾವನೆ ಮಾಡಿದ್ದಾನೆ. "ಕರ್ಣಾಟಕ ವಿಚೂತವನಚೈತ್ರ"ನೆಂಬ ಬಿರುದು ಇವನಿಗಿದೆ. (ಕರ್ಣಾಟಕವಿಚೈತ್ರವನ ಚೂತನೆಂಬುದಾಗಿ ಇದನ್ನು ಹೇಳಬೇಕೆಂದು ಕೆಲವರು ಬರೆದಿದ್ದಾರೆ. ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯು ಪ್ರಕಟಿಸಿದ ಕನ್ನಡ ಜೈಮಿನಿ ಭಾರತದ ಕವಿ-ಕಾವ್ಯ ವಿಚಾರ ಪುಟ 17, 18 ನೋಡಿ. ಪರಂತು, ಇವನಿಗೆ 'ಕರ್ಣಾಟಕವಿಚೂತವನ ಚೈತ್ರ'ನೆಂಬುದೇ ಸರಿಯೆಂದು ಬೇರೆಡೆ ಬರೆಯಲಾಗಿದೆ. ಮೈಸೂರು ವಿಶ್ವವಿದ್ಯಾಲಯದ ತ್ರೈಮಾಸಿಕ 'ಪ್ರಬುದ್ಧ ಕರ್ಣಾಟಕ) ಇವನು ಮೈಸೂರು ಪ್ರಾಂತ್ಯದ ಚಿಕ್ಕಮಗಳೂರಿನ ದೇವಪುರ (ದೇವನೂರು)ವನೆಂಬುದೇ ವಿದ್ವತ್ಸಮ್ಮತವಾಗಿದೆ.

**ಸೀತಾಪರಿತ್ಯಾಗದ ಹಿನ್ನಲೆ:** ಶ್ರೀರಾಮನು ರಾವಣನನ್ನು ಸಂಹರಿಸಿ "ಸೀತಾಮಗ್ನಿ ಮುಖಾಚ್ಛುದ್ಧಾಂ ಆದಾಯ ಸ್ವಪುರಂ ಯಯೌ" ಎಂದು ಮಾತ್ರ ಜೈಮಿನಿ ಚುಟುಕಾಗಿ ಹೇಳಿದ್ದಾನೆ. ಲಕ್ಷ್ಮೀಶನು ಈಯೆಡೆಯಲ್ಲಿ ಅರು ಕಾಂಡಗಳ ಪೂರ್ವಕಥೆಯನ್ನು 6, 8 ಪದ್ಯಗಳಲ್ಲಿ ಲಗುಬಗೆಯಾಗಿ ಬಣ್ಣಿಸಿದ್ದಾನೆ. "ತತಃ ಕಾಲೇನ ಮಹತಾ ಸೀತಾ ಗರ್ಭಮಧತ್ತ ಸಾ" ಎಂದು ಜೈಮಿನಿಯಲ್ಲಿ ಬಹಳ ಸಂಕ್ಷೇಪವಾಗಿದೆ. ಇದು ಲಕ್ಷ್ಮೀಶನಿಂದ ಸಾಧಾರಣ 20 ಪದ್ಯಗಳಲ್ಲಿ, ಬೇರೆ ಕೃತಿಗಳಲ್ಲಿರುವಂತೆ, ವರ್ಣಿತವಾಗಿದೆ. ರಾಮ ಸೀತೆಯರು ಮಕ್ಕಳಿಲ್ಲದುದಕ್ಕೆ ಚಿಂತಿಸಿದುದು, ವಸಿಷ್ಠನು ಸಂತೈಸಿದುದು, ಸೀತೆಯು ದೇಹಾಲಂಕಾರ ಮಾಡಿದುದು, ಆಕೆ ಬಸಿರಾದುದು ಇಲ್ಲಿ ವಿಸ್ತರಿಸಿಯದೆ. ಇಲ್ಲಿ ಸೀತಾದೇವಿಯ ದೇಹಾಲಂಕಾರಾದಿ ಶೃಂಗಾರವು ಕವಿ ಸಮಯಾನುಸಾರ ಮಾತ್ರವಲ್ಲ, ಕಾವ್ಯೋಚಿತವಾಗಿ ಹೇಳಲಾಗಿದೆ. "ನೀರ್ದ ಕಾಸಾರಕೆ ಅರವಿಂದವಿಲ್ಲದೊಡೆ-ಮೆರೆದಪುದೆ" ಮೊದಲಾದ ರಾಮ ಸೀತೆಯರ ಸಂವಾದವೂ ಬಲು ರಮ್ಯ—ಹೃದ್ಯವಾಗಿದೆ. "ಪುತ್ರವತಿಯಹುದು ಜನ್ಮಾಂತರದ ಪುಣ್ಯ ಮೈಸಲೆ ಪೆಣ್ಗೆಂ"ದು, ಮೊದಲಾದವು ಇಲ್ಲಿ ಮನನೀಯಗಳಾಗಿವೆ.

ಸೀತೆ ಗರ್ಭವತಿಯಾದ ಮುಹೂರ್ತವೇ ಆಕೆಯ ಹೊರಪಯಣದ ಫಲದಾಯಕವಾಗಿದೆ:

"ನಕ್ಷತ್ರೇ ವೈಷ್ಣವೇ ತುರ್ಯೇ
ಪಾದೇ ತದ್ದೇವತಾಭಿಧೇ !
ಚರೇ ಲಗ್ನೇ ಪ್ರವೃತ್ತೇ ಚ
ಮಾತುರ್ದೇಶಾಂತರ ಪ್ರದೇ॥"

ಲಕ್ಷ್ಮೀಶನಲ್ಲಿ "ಹರಿವಿಷ್ಣು ನಕ್ಷತ್ರದಂತ ದೊಳ್ ವೈದೇಹಿಗಾಯ್ತು ಗರ್ಭಾಧಾನಮದರ ಫಲಮಂ ನೋಡಲು, ಎಂತಾದೊಡಂ ತನ್ನ ಕಾಂತನಗಲ್ದು ಸೀಮಂತಿನಿ ಪರಸ್ಥಳದೊಳಣುಗರಂ ಪಡೆವಳ್, ಅದಂ ತಿಳಿಯದುತ್ಸವದೊಳಿರ್ದಳಾ ಕಾಂತೆ ಬಸಿರಾಂತ ಲಾಂಛನವನಾಂತು" ಎಂದಿದೆ! ಮಗು ಹುಟ್ಟಿದ ರಾಶಿಲಗ್ನಗಳ ಗ್ರಹಮಾನಗಳನ್ನು ಆಧರಿಸಿ ಜನ್ಮಕುಂಡಲಿಯನ್ನು ಬರೆದು ಯಾವಜ್ಜೀವ ಭವಿಷ್ಯವನ್ನು ಹೇಳುವುದು ಸಾಮಾನ್ಯವಾದ ರೂಢಿ. ಆದರೆ ಅದಕ್ಕೆ ಮೊದಲಾಗಿ ಗರ್ಭಾಧಾನದ ಹೊತ್ತಿನ ಮೇರೆಗೆ ಫಲವನ್ನು ಹೇಳುವ ವಿಶೇಷ ಕ್ರಮ ಇಲ್ಲಿದೆ!

ಸೀತೆಯ ಗರ್ಭಸ್ಥ ಶಿಶುವಿಗೆ ಪುಂಸವನ ಮೊದಲಾದ ಸಂಸ್ಕಾರಗಳನ್ನು ರಾಮನು ನೆರವೇರಿಸಿದನು. ಮಾನವನು ಆತ್ಮಿಕ ಸಂಸ್ಕಾರಗಳಿಂದಲೆಂಬಂತೆ ದೈಹಿಕ ಸಂಸ್ಕಾರಗಳಿಂದ ಯುಕ್ತನಾಗಿದ್ದರೆ ಸಂಸಿದ್ಧಿಯನ್ನು, ಪೂರ್ಣಸಾರ್ಥಕ ಜೀವನವನ್ನು ಪಡೆಯುವನೆಂಬುದೇ ಇಲ್ಲಿ ತಿಳಿಯಬರುವುದು. ಅದೊಮ್ಮೆ ರಾಮನು ಸೀತೆಯನ್ನು ಕುರಿತು "ಬಯಕೆಯೇನೆಂ"ದು ಕೇಳಲು, "ಭಾಗೀರಥೀ ತೀರಗಮನ ಹಾಗೂ ಮುನಿಪತ್ನಿಗಳ ಸಂದರ್ಶನ"ದ ಬಯಕೆಯನ್ನು ತಿಳುಹಿದಳು. ರಾಮನು ಅದನ್ನು ನೆರವೇರಿಸುವೆನೆಂದು ಒಪ್ಪಿದನು.

ಈಯೆಡೆಯಲ್ಲಿ ಒಮ್ಮೆ ರಾಮನಿಗೆ ಒದವಿದ ಸ್ವಪ್ನ ವಿಶೇಷವನ್ನು ಗಮನಿಸಬೇಕು:

"ಪ್ರಾಪ್ತೇ ತು ಪಂಚಮೇ ಮಾಸೇ
ರಾಮಃ ಸ್ವಪ್ನಂ ದದರ್ಶ ಸಃ ।
ಸೀತಾಂ ಭಾಗೀರಥೀ ತೀರೇ
ವಿಲಪಂತೀಯನಾಥವತ್ ।
ಲಕ್ಷ್ಮಣೇನ ಪರಿತ್ಯಕ್ತಾಂ."

ಸೀತಾ ಪರಿತ್ಯಾಗದ ಮುನ್ಸೂಚನೆಗಳು ವಿಧಿಯಿಂದ ಅದೊಂದು ವಿಧಾನದಿಂದ ನಡೆದಿವೆ ಇದರ ಕಾರಣಾದಿಗಳು ವಿವರಿಸಿಲ್ಲ. ಈ ವಿಚಾರ ಕನ್ನಡ ಕೃತಿಯಲ್ಲೂ ಹೇಳಿದೆ: "ಈ ಕ್ಷೋಣಿಸುತೆ ಗಂಗೆಯಂ ಕಳೆದು ಕಾಡೊಳ್ ಮಹಾಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಯನೀಕ್ಷಿಸುತೆ ಮರುಗುತಳುತಿರ್ದದಂ" ರಾಮನು ಸ್ವಪ್ನದಲ್ಲಿ ಕಂಡನು. ಅದಕ್ಕೆ ಶಾಂತಿಯನ್ನು ಮಾಡಿಸಿದನು. ಸೀತಾಪರಿತ್ಯಾಗದ ಹಿನ್ನೆಲೆಯಾಗಿ ಒಂದು ಅಮಾನುಷಿಕ ಚಿತ್ರಣವಿದು! ಜೀವನದ ಪಡಿನೆಳಲು ಸ್ವಪ್ನದಲ್ಲಿ ಪಡಿಮೂಡುತ್ತದೆಯೆಂಬಂತೆ ಲೌಕಿಕವಾಗಿಯೂ ಇದು ಪರಿಗ್ರಾಹ್ಯವಾಗಿದೆ. ವೈದ್ಯ ಕೀಯ—ಜ್ಯೋತಿಷ್ಯಾದಿಗಳಲ್ಲಿ ಸ್ವಪ್ನಫಲಾದಿಗಳು ಹೇಳಿರುತ್ತಿವೆಯೆಂಬುದು ಗಮನೀಯವಾಗಿದೆ.

**ಅಗಸನಿಂದ ರಾಮನ ನಿಂದೆ:** ಅಯೋಧ್ಯೆಯಲ್ಲಿ ರಾಜನೀತಿಯಂತೆ ಗೂಢಚಾರರು ರಾತ್ರಿ ನಗರದೆಲ್ಲೆಡೆ ಸಂಚಾರ ಮಾಡಿದರು. ಆಗ ತಿಳಿದ ವಿಚಾರವನ್ನು ರಾಜನಿಗೆ ಅವರು ತಿಳಿಸುವರು. ಒಬ್ಬ ಗೂಢಚಾರನು ಅಗಸನೊಬ್ಬನಿಂದ ರಾಮನ ದೂರನ್ನು ಕೇಳಿದ್ದರೂ, ರಾಮನಿಗೆ ಅದನ್ನು ಹೇಳಲೊಲ್ಲದೆ ಸುಮ್ಮನಿದ್ದನು. ಆಗ ರಾಮನು ಕಟ್ಟುನುಡಿಯಿಂದ ಪುನಃ ಆ ಗೂಢಚಾರನನ್ನು ವಿಚಾರಿಸಿದನು. "ಅಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ ಕೊಂಡಾಳುವವನಲ್ಲ ತಾನೆಂದು ರಜಕನುದ್ದಂಡದೊಳ್ ನುಡಿಯೆ ಕಿವಿ ಮುಚ್ಚಿಕೊಳ್ಳುತೆಯ್ದಿದೆ"ನೆಂದು ಚರನು ಅದನ್ನು ಬಿನ್ನವಿಸಿದನು.

ರಾಮನು ಈ ಮಾತಿಂದ ಒಳಗೊಳಗೆ ಕುದಿದನು. "ಬಂಧನಕ್ಕೊಳಗಾದ ಮತ್ತಗಜವಂದದಿಂ ನಿಜ ಶಿರವನೊಲೆದು, ಮೂಗಿನ ಮೇಲೆ ಬೆರಳಿಟ್ಟು, ಮೌನದಿಂದಿಂದು, ಸೈವೆರಗಾಗ ನೆನೆನೆನೆದು ಚಿತ್ರದೊಳ್ ನೊಂದು, ಬಿಸುಸುಯ್ದು ಕಡುವಳಿದು ಕಾತರಿಸಿ ಕಳೆಗುಂದಿ ದುಮ್ಮಾನದಿಂ ಪೊಕ್ಕನಂತಃಪುರಕೆ, ಪುತ್ತುವುಗವಹಿಪನಂತೆ" ಎಂದು ಕನ್ನಡ ಕೃತಿಯಲ್ಲಿದು ಬಣ್ಣಿಸಲಾಗಿದೆ.

(ಇಪ್ಪತ್ತೊಂದನೇ ಪುಟ ನೋಡಿರಿ)

# ಜ್ವಲಿಸಲೀ ಜ್ಯೋತಿ ಹೃದಯ ಹಣತೆಯಲಿ

ಶ್ರೀ ಶಿವಶಂಕರ.

ಚೀನೀಯ ಆಕ್ರಮಣವು ನಮ್ಮ ನಿದ್ರೆಯನ್ನು ದೂರಮಾಡಿದರೆ, ಪಾಕ್ ಆಕ್ರಮಣವು ಹೃದಯ ಹಣತೆಯಲ್ಲಿ ಜ್ಯೋತಿ ಉರಿಸಿತು. ಈ ರಾಷ್ಟ್ರೀಯ ಜ್ಯೋತಿ ಸದಾಕಾಲ ಜ್ವಲಿಸುತ್ತಿರಬೇಕು, ಅಂದರೇನೇ ನಮ್ಮ ಸ್ವಾತಂತ್ರ್ಯ ಸಮಗ್ರತೆ ಮತ್ತು ಸಾರ್ವಭೌಮತೆ ಉಳಿಯುತ್ತದೆ. ಈ ಜಾಗ್ರತ ಜನಾಂಗದ ಧೀರ ನಾಯಕರಾಗುತ್ತಾರೆ ಲಾಲ ಬಹದೂರ್.

ಪೂರ್ವ ಭಿನ್ನಭೇದಗಳ ಮಾರಣ ಹೋಮ ಮಾಡಿ, ಜಾತಿ–ಪಂಥ–ಭಾಷೆ–ರಾಜ್ಯ–ವಗೈರೆಗಳೆಂಬ ಕೆಲುಬನ್ನು ತಮ್ಮ ಹೃದಯ ಹಣತೆಯಿಂದ ತೆಗೆದು ನಿರ್ಮೂಲಗೊಳಿಸಿ ಭಾರತೀಯ ಜನತೆ ಒಂದಾಗಿ ಸೇರಿತ್ತು ಭಾರತಮಾತೆಯ ಪವಿತ್ರ ಮಂದಿರದಲ್ಲಿ. ಅವರು ಅದೆಂತಹ ಅತುಲನೀಯ ತ್ಯಾಗ-ಬಲಿದಾನಗಳಿಗೂ ಸಿದ್ಧರಾಗಿದ್ದರು, ಕಟಿ ಬದ್ಧರಾಗಿದ್ದರು—ಕೇವಲ ಕೆಲವೇ ದಿನಗಳ ಹಿಂದೆ ಭಿನ್ನಪ್ರಾಂತ್ಯ, ಇತರ ಉದ್ದೇಶಗಳಿಗಾಗಿ ಹೋರಾಡುತ್ತಿದ್ದ ಜನಜಂಗುಳಿ ಇದೆಯೋ ಎಂಬ ಸಂದೇಹವನ್ನುಂಟು ಮಾಡುವಂತೆ, ಯಾವ ಪಂಥ ಒಂದೂ ರಾಷ್ಟ್ರದ ರಕ್ಷಣೆಗಾಗಿ ಆಯುಧವನ್ನು ಹಿಡಿದಿತ್ತೋ, ಅದೇ ಪಂಥದ ನತದೃಷ್ಟ ನೇತಾರರೆಂದು ತಮಗೂ ಒಂದೂ ರಾಷ್ಟ್ರ ಧರ್ಮಕ್ಕೇನೂ ಸಂಬಂಧವಿಲ್ಲವೆಂದು ಬೊಬ್ಬಿಡುತ್ತ ಪ್ರತ್ಯೇಕ ರಾಜ್ಯದ ಕನಸು ಕಾಣುತ್ತಿದ್ದರು. ತಮ್ಮ ...ಗನ ಸೌಧದ ರಚನೆಯಾಗಬೇಕೆಂದವರು ಪ್ರಯತ್ನಿಸುತ್ತಿದ್ದರು. ಉತ್ತರದಲ್ಲಿ ನಾಗಾದಲ್ಲ ದಕ್ಷಿಣದಲ್ಲೂ ಅಷ್ಟೇ. ಭಾರತಾಂಬೆಯ ಧರ್ಮಧ್ವಜ ಬಾನೆತ್ತರದಲ್ಲಿ ಹಾರಾಡಬೇಕೆಂದು ಉನ್ನತ ಗುಡಿಗೋಪುರಗಳನ್ನು ಕಟ್ಟುವ ತಮಿಳು ನಾಡಿನ ಜನತೆಯ ವಂಶಜರು ದಿಲ್ಲಿಗೂ ಇಲ್ಲಿಗೂ ಇನಿತೂ ಸಂಬಂಧವೇ ಇಲ್ಲವೆಂದೂ ಪ್ರತ್ಯೇಕ ರಾಜ್ಯದ ಕನಸಿನ ಮಂಡಿಗೆಯನ್ನು ಸವಿಯುತ್ತಿದ್ದರು. ಪೂರ್ವದಲ್ಲಿ ನಾಗಾಲೇಂಡ್, ಪಶ್ಚಿಮದಲ್ಲಿ ಗೋವಾಲೇಂಡ್ ...ಹೀಗೆ ಅಂದರು ಪ್ರತ್ಯೇಕ ಲೇಂಡಿಗಾಗಿ ರಾಗ ಹಾಕುತ್ತಿದ್ದರು. ಹೀಗೆ ದೂರಾಲೋಚನೆ ಇಲ್ಲದೆ ಕೇವಲ ದುರಾಲೋಚನೆಯಿಂದ ಹೊಡೆದಾಡಿಕೊಳ್ಳುತ್ತಿದ್ದ ಜನರಾಶಿ ಒಂದಾದುದಾದರೂ ಹೇಗೆ?

ಕಚ್ಛ ಕರಾರಿನ ಮಾತು ಕೇಳಿ ಬಂದಾಗ 'ನವಯುಗ'ವು ನಾಗರಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಎಚ್ಚರಿಕೆಯನ್ನು ಕೊಟ್ಟಿತ್ತು. ಒಪ್ಪಂದಕ್ಕೆ ಒಪ್ಪದಿರುತ್ತಿದ್ದಲ್ಲಿ ಪಾಕ್ ಸೈನ್ಯ ನೀರಿನಲ್ಲಿ ಕೊಚ್ಚಿ ಹೋಗುತ್ತಿತ್ತು. ಅದನ್ನಲ್ಲಿಂದ ತಪ್ಪಿಸಿ ಕಾಶ್ಮೀರದಲ್ಲಿ ಮುನ್ನುಗ್ಗಿಸಲಿಕ್ಕಾಗಿ ಪಾಕಿಸ್ಥಾನ ಕರಾರಿಗೆ ಸಮ್ಮತಿಸಿತ್ತು. ಅದರಂತೆ ಶ್ರೀನಗರದ ವರೆಗೂ ಪಾಕ್ ಸೈನ್ಯ ಮುಂದಕ್ಕೆ ಬಂದಿತ್ತು; ಹಲವಾರು ವೇಷಗಳಲ್ಲಿ. ಪಾಕಿಸ್ತಾನಕ್ಕೆ ಅಷ್ಟು ಧೈರ್ಯ ಹೇಗೆ ಬಂತು?

ಕುತಂತ್ರಿ ಬ್ರಿಟಿಷರು ಬಹಳ ಜಾಗ್ರತೆಯಿಂದ ಅಫಘಾನಿಸ್ತಾನ, ಬ್ರಹ್ಮಪ್ರದೇಶ, ತ್ರಿವಿಷ್ಟಪ, ಶ್ರೀಲಂಕೆ ಅಲ್ಲದೆ ಅನೇಕ ಇತರ ಚಿಕ್ಕಪುಟ್ಟ ಪ್ರದೇಶಗಳನ್ನು ಭಾರತದಿಂದ ಭಿನ್ನಗೊಳಿಸಿದರು. ಅದರಿಂದ ಉತ್ತೇಜನ ಪಡೆದುಕೊಂಡ ಮುಸ್ಲಿಂ ಮುಂದಾಳುಗಳು ತಮಗೂ ಪ್ರತ್ಯೇಕ ರಾಜ್ಯಬೇಕೆಂದರು. ಒಡೆದು ಆಳುವ ನೀತಿಯಲ್ಲಿ ಪಳಗಿದ ಕೈ ಎನಿಸಿಕೊಂಡಿರುವ ಬ್ರಿಟಿಷರು ಅದಕ್ಕೊಪ್ಪಿದರು. ಕೇವಲ ದಿಲ್ಲಿ ಸಿಂಹಾಸನದ ಮೇಲೆ ಮಾತ್ರ ಕಣ್ಣಿಟ್ಟುಕೊಂಡಿದ್ದ, ದೂರ ದೃಷ್ಟಿ ಇಲ್ಲದಿದ್ದ ಭಾರತೀಯ ನೇತಾರರೂ ಅದಕ್ಕೆ 'ಅಸ್ತು' ಅಂದರು. ವರ ದಯ ಪಾಲಿಸಿದವನ ತಲೆಯ ಮೇಲೆಯೇ ಕೈ ಇಡಲು ಭಸ್ಮಾಸುರ ಮುಂದಕ್ಕೆ ಬಂದಂತೆ ಪಾಕಿಸ್ತಾನವೂ ಮುಂದಕ್ಕೆ ಬಂತು. ಮನುಷ್ಯ ರಕ್ತದ ರುಚಿ ಕಂಡಿರುವ ಹುಲಿಯಂತೆ, ಭಿನ್ನ ರಾಜ್ಯದ ರುಚಿ ಕಂಡ ಪಾಕಿಸ್ತಾನಿಗಳು ಪೂರ್ಣ ಭಾರತದ ಮೇಲೆ ಕೆಟ್ಟ ದೃಷ್ಟಿ ಹಾಯಿಸಿದ್ದಾರೆ. ಅವರಿಗೆ ಉತ್ತೇಜನವೀಯುತ್ತಿರುವದು ಪಂಜಾಬ ಸುಭಾ, ನಾಗಾಲೇಂಡ್, ಮಿಝೋಲೇಂಡ್, ದ್ರಾವಿಡ ನಾಡು, ಗೋವಾಲೇಂಡ್ ಇತ್ಯಾದಿ. ಭಾರತೀಯರಾದರೋ ಪಾಕಿಸ್ಥಾನ ನಿರ್ಮಾಣಕ್ಕೆ ಮಾತ್ರ 'ಅಸ್ತು' ಅಂದದ್ದಲ್ಲದೆ, ತಾವು ಕೇಳಿದೊಡನೆ ಶ್ರೀ ಹಟ (ಸಿಲ್ಹಟ್), ಬೆರುಬಾರಿ ಮುಂತಾದ ಪ್ರದೇಶಗಳನ್ನು ಬಿಟ್ಟುಕೊಟ್ಟಿದ್ದಾರೆ. ಅಷ್ಟೇ ಅಲ್ಲ, ತಾವು ಹದಿನೇಳು ವರ್ಷಗಳಿಂದ ಆಕ್ರಮಿಸಿ ಹಿಡಿದುಕೊಂಡಿರುವ ಕಾಶ್ಮೀರವನ್ನು ಬಿಡಿಸಿಕೊಳ್ಳುವದುಂಟೇ, ಮತ್ತು ತಮ್ಮನ್ನೆದುರಿಸುವದಾದರೂ ಉಂಟೇ—ಆದರಲ್ಲೂ ತಮ್ಮ ಪರವಾಗಿ ವಾದಿಸಲು ಸರ್ವ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ, ಜಯಪ್ರಕಾಶ ನಾರಾಯಣ, ಭೂದಾನಿ ವಿನೋಬಾ ಭಾವೆಯಂತಹವರಿರುವಾಗ ಮತ್ತು ಭಾರತದ ಮೇಲೆ ಒತ್ತಡ ಹಾಕಲು ಅಮೇರಿಕ ಹಾಗೂ ಬ್ರಿಟನ್‌ಗಳಿರುವಾಗ ಪಾಕಿಸ್ಥಾನ ಸುಮ್ಮಗುಳಿದೀತೇ? ಕಮ್ಯೂನಿಸ್ಟ ಕಪಿ ಚೈನಾವೂ ಪಾಕಿಸ್ತಾನದ ಆಮೋದ—ಪ್ರಮೋದಕ್ಕೆ ಅಡಿಯ ಮುಂದಕ್ಕಿಟ್ಟಿರುವಾಗ ಅದು ಶಾಂತವಾಗುಳಿಯುವದಾದರೂ ಹೇಗೆ? ಕೇವಲ ಕೆಲವೇ ದಿನಗಳ ಹಿಂದೆ ಕಚ್ಛ ಕರಾರಿಗೆ ಕೈ ಬರಹ ಹಾಕಿ ಕಾರ್ಗಿಲಿನಿಂದ ಕಾಲ್ತೆಗೆದಿರುವ ಭಾರತವು ಇನ್ನೊಂದು ಒಪ್ಪಂದಕ್ಕೆ ಒಪ್ಪಿಕೊಂಡು ಕಾಶ್ಮೀರದಿಂದ ಕಾಲ್ತೆಗೆಯದಿರಲಿಕ್ಕಿಲ್ಲವೆಂಬ ಹುಸಿ ಧೈರ್ಯ ಪರ ಆ ಹೃದಯದಲ್ಲಿ ಮನೆಮಾಡಿಕೊಂಡಿತ್ತು. ಆದರೆ ಸಹನೆಗೂ ಒಂದು ಸೀಮೆ ಇಲ್ಲವೇನು?

ಬ್ರಹ್ಮ ಪ್ರದೇಶ ಹೇಳಿದಂತೆ ಒಪ್ಪಂದಕ್ಕೆ ಒಪ್ಪಿಕೊಂಡ ಭಾರತ, ಸಿಂಹಳದ ಸಿಹಿನುಡಿಗಳ ಬಲೆಯಲ್ಲಿ ಸುಲಭವಾಗಿ ಸಿಲುಕಿಕೊಂಡ ಭಾರತ, ಚೈನೀ ಕಮ್ಯೂನಿಸ್ಟ ಕಪಿಯು ನೇಫಾ, ಲಢಾಕಗಳನ್ನು ಮುಷ್ಟಿಯೊಳಗಿಟ್ಟುಕೊಂಡಿರುವಾಗಲೂ ಸುಮ್ಮಗಿರುವ ಭಾರತ, ದೇಶದಾದ್ಯಂತ ಪಂಚಮ ಸ್ತಂಭೀಯರು ಹರಡಿಕೊಂಡಿರುವಾಗಲೂ ಸುಮ್ಮಗಿರುವ ಭಾರತ, ತನ್ನ ನೈಜ ರಾಷ್ಟ್ರೀಯತೆಯನ್ನು ತೊಡೆದು ಹಾಕಲು ಪ್ರಯತ್ನಿಸುತ್ತಿದೆಯೋ ಎಂಬಂತಿರುವ ಭಾರತವು ಪಾಕಿಸ್ತಾನವನ್ನೆದುರಿಸುವದುಂಟೇ? ಪಾಕಿಸ್ತಾನಿಗಳ ಲೆಖ್ಖ ತಪ್ಪಿಯಿತು. ಮೂಕನೂ ಮಾತಾಡಬಹುದು, ಕುಳ್ಳನೂ ಪರ್ವತದ ಮೇಲೆ ಹಾರಬಹುದೆಂಬ ಮಾತಿನ ಅರ್ಥ ಪಾಕಿಸ್ತಾನಕ್ಕಾಯಿತು.

ಜನತೆ ಆಗೋಸ್ಟ ದಿನಾಂಕ ಹದಿನೈದರಂದು ದೇಶದ ನಾಲ್ದೆಸೆಗಳಿಂದಲೂ ಬಂದು ದಿಲ್ಲಿಯಲ್ಲಿ ಸೇರಿ, ದಿನಾಂಕ ಹದಿನಾರರಂದು ಭಾರತೀಯ ಪ್ರತಿನಿಧಿ ಸಭೆ ಸೇರಿದಾಗ, ಕಚ್ಛ ಕರಾರಿಗೆ ತಮ್ಮ ವಿರೋಧವನ್ನು ಆಡಳಿತ ವರ್ಗಕ್ಕೆ ವ್ಯಕ್ತಪಡಿಸಿತು. ಪ್ರದರ್ಶಕರ ಪ್ರಮುಖರ ಬಳಿ ಪ್ರಧಾನಿ ಶ್ರೀ ಲಾಲಬಹದ್ದೂರಜೀಯವರು ಕಚ್ಛ ಕರಾರಿನ ಕುರಿತ ಮಾತಾಡುತ್ತ, ಇಲ್ಲಿನ ಜನಜಂಗುಳಿಯ ಬೆಂಬಲ ತನಗೆ ನೀಡಲೆಂದರು, ಹಾಗಾದಲ್ಲಿ ಪ್ರದರ್ಶಕರಿಗುಳಿದೊಂದೇ ಮಾರ್ಗ. ಅಂತಹ ದೇಶಭಕ್ತರ ಸಂಖ್ಯೆಯನ್ನು ವರ್ಧಿಸುವದು. ಮತ್ತು 'ಪ್ರಧಾನಿಜೀ ಈಗ ನೋಡಿ ಜನತಾ ಜನಾರ್ದನ ತನ್ನ ವಿರಾಟ ರೂಪದರ್ಶನ ಮಾಡಿಸುತ್ತಿದ್ದಾನೆ. ಇನ್ನು ಭ್ರಾಂತಿಯನ್ನು ಬಿಟ್ಟುಬಿಡಿ. ಕಾರ್ಯೋನ್ಮುಖರಾಗಿರೆ'ಂದು ಹೇಳುವದು ಮಾತ್ರ.

ಶ್ರೀ ಲಾಲಬಹದೂರ ಶಾಸ್ತ್ರೀಜೀ ಗಾತ್ರದಲ್ಲಿ ವಾಮನಮೂರ್ತಿಯಾದರೂ, ಜನತೆಯ ನಾಡಿ ಶಾಸ್ತ್ರ ಬಲ್ಲ ಬಹದ್ದೂರ್ ಶಾಸ್ತ್ರಿ ಇದ್ದಾರೆ. ಅವರಿಗೆ ಜನತೆಯ ನಾಡಿ ಬಡಿತದ ಅರ್ಥ ಆಯಿತು. ಅವರು ಕಾರ್ಯೋನ್ಮುಖರಾದರು. ಈಗ ಅವರಿಗೆ ಮನವರಿಕೆಯಾಯಿತು; ತಾನೊಂದು ಪಕ್ಷದ ಪ್ರಮುಖನು ಮಾತ್ರವಲ್ಲ, ದೇಶದ ಪ್ರಧಾನಿ ಇದ್ದೇನೆಂಬುದು. ಒಂದು ಪ್ರಧಾನಿಯವರ ಹಿಂದುಗಡೆ ಅಲ್ಲಿಯ ಮಕ್ಕಳೆಲ್ಲರೂ ಇರುತ್ತಾರೆ. ಹಾಗೆಯೇ ತನ್ನ ಬೆನ್ನಲುಬಾಗಿ ಭಾರತೀಯರು ನಿಂತಿದ್ದಾರೆ—ಪಾಕಿಸ್ತಾನ ಪಿಶಾಚಿಯ ತಲೆಗೆ ಮೊಳೆ ಹೊಡೆಯಲು ತಾನು ಪಕ್ಷಾತೀತನಾಗಿ ಕಾರ್ಯೋನ್ಮುಖನಾದಲ್ಲಿ ಪಕ್ಷ–ಪಂಗಡಗಳ ಭಿನ್ನಭಾವ ತೊರೆದು ಜನತೆ ಒಂದಾಗಿ ಭಾರತೀಯತ್ವದ ಮನವರಿಕೆ ಮಾಡಿಕೊಳ್ಳುತ್ತದೆ. ಅಂದರೆ ಅಧಿಕಾರ ಗದ್ದುಗೆಯನ್ನೇರಿದ ಆದ್ಯಾವನೇ

(ಪತ್ತೊಂಭತ್ತನೇ ಪುಟ ನೋಡಿರಿ)

Telegram : 'CORONET' MALPE.    Telephone: MALPE 33, 34, 45

*With best compliments from:*

**M. MADHVA RAJ,** *M. L. A.,*

*Proprietor:*

**CORONET CANNING COMPANY,**
**MALPE**
&
**KARNATAKA FISHERIES CORPN.,**
**MANGALORE.**

BUY THE IDOL OF YOUR CHOICE!

# NEW ART

proudly present

**the spectacle of our spiritual heritage**



**Plastic idols in gold, silver or any lacquer**

*Manufactured by:* **NEW ART INDUSTRIES**

**Telephone** 84023] RAM BAUG, G. B ROAD, MALAD, **BOMBAY-64** [Telegram NEWART, MALAD

ನಿಮ್ಮ ಆಯ್ಕೆಯ ಪ್ರತಿಮೆಗಳನ್ನು ಕೊಂಡುಕೊಳ್ಳಿರಿ!

# ನ್ಯೂ ಆರ್ಟ್

ನಮ್ಮ ಅಧ್ಯಾತ್ಮಿಕ ಪರಂಪರೆಯ
ದೃಶ್ಯಗಳನ್ನು ನೀಡಲು ಹೆಮ್ಮೆಪಡುತ್ತದೆ.

ಚಿನ್ನ, ಬೆಳ್ಳಿ, ಅಥವಾ ಯಾವದೇ ಲೋಹದಲ್ಲಿ ಪ್ಲಾಸ್ಟಿಕ್ ಪ್ರತಿಮೆಗಳು

ನಿರ್ಮಾಪಕರು: ನ್ಯೂ ಆರ್ಟ್ ಇಂಡಸ್ಟ್ರೀಸ್

ಟೆಲಿಫೋನ್: 84023] ರಾಮ್ ಭಾಗ್, ಜಿ. ಬಿ. ರೋಡು, ಮಲಾಡ್, ಬೊಂಬಾಯಿ-64 [ಟೆಲಿಗ್ರಾಂ: 'ನ್ಯೂಆರ್ಟ್', ಮಲಾಡ್.

ಆಹಾರ ಟ್ರೇಡಿಂಗ್ ಕಾರ್ಪೊರೇಶನ್‌ನ ಅಧ್ಯಕ್ಷ

# ಶ್ರೀ ಟಿ. ಎ. ಪೈ ಅವರು

ಶ್ರೀ ಎನ್. ನಾರಾಯಣ ಬಲ್ಲಾಳ

ಶ್ರೀ ಪೈ ತನ್ನ ಸಾಮರ್ಥ್ಯ, ಪರಿಶ್ರಮ ಮತ್ತು ಸಜ್ಜನಿಕೆಗಳಿಂದ ಗುರುತರ ಹೊಣೆ ಹೊರುವ ಎದೆಗಾರಿಕೆ ತೋರುವಂತಾಗಿದ್ದಾರೆ. ಅವರ ವ್ಯಕ್ತಿತ್ವ ನೂರು ತೆರೆಗಳ ಹೊಡೆತವನ್ನು ತಡೆಯುವ ಮಳಲ ತಡಿಯದು. ಇದರಿಂದಾಗಿಯೇ ಅಖಿಲ ಭಾರತ ಮಟ್ಟದಲ್ಲಿ ಜಟಿಲ ಕಾರ್ಯದಲ್ಲಿ ಅವರು ಸಫಲರಾಗುತಿದ್ದಾರೆ.

1952ರ ಚುನಾವಣೆಯ ಕಾಲ. ಉಡುಪಿಯಿಂದ ಮದ್ರಾಸು ಶಾಸನ ಸಭೆಗೆ ಒಬ್ಬ ತರುಣ ಸ್ಪರ್ಧಿ ಕಾಂಗ್ರೆಸ್ ಪಕ್ಷದಿಂದ ನಿಲ್ಲಲಿರುವನೆಂದು ತಿಳಿದಾಗ ಅನೇಕರಿಗೆ ಆಶ್ಚರ್ಯವಾಯಿತು. ಸಾಮಾನ್ಯವಾಗಿ ಇಂತಹ ಚುನಾವಣೆಗೆ ನಿಲ್ಲುತ್ತ ಬಂದವರು ಮುದಿ ಪ್ರಾಯದವರು, ಮಧ್ಯ ವಯಸ್ಸನ್ನು ದಾಟಿದವರೇ ಆಗಬೇಕೆಂತ್ತೆನ್ನುವಷ್ಟು ಪ್ರಚಲಿತವಿತ್ತು. ಶ್ರೀ ಪೈ ನಿಲ್ಲಲು ಮುಂದೆ ಬಂದಾಗ ಅದೇ ರೀತಿಯ ಆಶ್ಚರಿಯು ... ಅವರ ಅನನುಭವಿಕತೆ, ಸ್ವಾತಂತ್ರ್ಯ ಚಳವಳಿಯ ಅವರ ಇತಿಹಾಸವನ್ನು ಪ್ರಶ್ನಿಸಿದವರೂ ಇದ್ದರು. ಶಾಸನ ಸಭೆಯಂತಹ ಜವಾಬ್ದಾರಿ ಸ್ಥಾನಗಳಿಗೆ 'ಹುಡುಗು ಬುದ್ಧಿ'ಯ ಜನರಿಗೆ ಅವಕಾಶ ಮಾಡಿಕೊಡಬಾರದೆಂಬ ಸೊಲ್ಲು ಹಂಗಡೆಯಿಂದ ಪ್ರಚಾರಗೊಳಿಸಲಾಯಿತು. ಆದರೆ, ಶ್ರೀ ಟಿ. ಎ. ಪೈಗಳ ತಾರುಣ್ಯ ಸಹಜ ಸೇವಾಕಾಂಕ್ಷೆ, ಅವರ ಯಥಾರ್ಥ ಮನೋಭಾವ, ಗಾಂಭೀರ್ಯದಲ್ಲೂ ಇದ್ದ ಸೌಹಾರ್ದ—ಮತದಾರ ಕ್ಷೇತ್ರದ ಎಲ್ಲ ಕಡೆ ಜನಪ್ರಿಯತೆ ಸಾಧಿಸಿತ್ತು. ಅವರು ತನ್ನ ಬೇರೆ ಪ್ರಭಾವವನ್ನು ಎಷ್ಟೇ ತೋರಿಸಿ ಮತದಾರರನ್ನು ಆಕರ್ಷಿಸಬಹುದಿತ್ತು. ಶ್ರೀ ಪೈ ಹಾಗೆ ಮಾಡದೆ ಹೆಚ್ಚಾಗಿ ಪ್ರತಿಯೊಬ್ಬ ಮತದಾರರನ್ನು, ಯಾ ಮತದಾರ ಗುಂಪುಗಳನ್ನು ವೈಯಕ್ತಿಕವಾಗಿ ಕಂಡು ಅವರ ಸೌಹಾರ್ದ, ಪ್ರೀತಿ ಗಳಿಸಿದರು. ಸ್ವತಃ ಮತದಾರ ಕ್ಷೇತ್ರದ ಹಳ್ಳಿ, ಸಂದು, ಓಣಿ, ಓರಿಗಳಲ್ಲೆಲ್ಲಾ ಕಾಲ್ನಡಿಗೆಯಲ್ಲೂ ತಿರುಗಿದರು. ಇದೇ ಅವರ ಸೇವಾ ಜೀವನಕ್ಕೆ, ಜನಸಾಮಾನ್ಯರ ಸ್ಥಿತಿ ನಿರೀಕ್ಷಣೆಗೆ ಪ್ರತ್ಯಕ್ಷ ಅನುಭವಕ್ಕೆ ಸಾಕ್ಷಿಯಾಯಿತು. ನಮ್ಮ ಜನರ ಸ್ಥಿತಿಯನ್ನು ಕಂಡು ಅವರ ಮನಸ್ಸಿನಲ್ಲಿ ಬಹು ಪರಿಣಾಮವಾಯಿತು. ಫಲವಾಗಿ ಅವರು ಅಂದಿನಿಂದ ಇಂದಿನವರೆಗೂ ಜನಸಾಮಾನ್ಯರ ಎಲ್ಲ ಸಮಸ್ಯೆಗಳ ಸೂಕ್ಷ್ಮ ನಿರೀಕ್ಷಕರೂ, ಅಧ್ಯಯನಗಾರರೂ ಆಗಿದ್ದಾರೆ.

ಅವರು ಮದ್ರಾಸು ಶಾಸನ ಸಭೆಗೆ ಆರಿಸಿ ಬಂದ ಹೊಸತರಲ್ಲಿ ಈ ಚಿಗುರು ಮೀಸೆಯ ತರುಣನ ಆಕರ್ಷಕ ವ್ಯಕ್ತಿತ್ವ ಎಲ್ಲರಿಗೂ ಕುತೂಹಲಗೊಳಿಸಿತು. ಪಶ್ಚಿಮ ಕರಾವಳಿಯ ಈ ದಕ್ಷಿಣ ಕನ್ನಡಿಗ ಶಾಸನ ಸಭೆಯ ಕಾರ್ಯಕಲಾಪಗಳಲ್ಲಿ ಆಸಕ್ತಿಯಿಂದ, ನಿಷ್ಠೆಯಿಂದ ಭಾಗವಹಿಸುತ್ತಿದ್ದ ರೀತಿಯು ಎಲ್ಲರ ಸಮಾಧಾನಕ್ಕೆ ಪಾತ್ರವಾಯಿತು. ಇವರ ಉತ್ಸಾಹವನ್ನು ಇವರ ಸೂಕ್ಷ್ಮ ವಿವೇಚನೆಯನ್ನು ಅಂದಿನ ಮುಖ್ಯಮಂತ್ರಿ ಶ್ರೀ ರಾಜಾಜಿಯವರು ತೀವ್ರ ಗಮನಿಸಿದ್ದರು.

ಒಮ್ಮೆ ಅವರಿಗೆ ರಾಜ್ಯಪಾಲರ ಭಾಷಣವನ್ನು ಅಭಿನಂದಿಸುವ ಗೊತ್ತುವಳಿಯನ್ನು ಶಾಸನ ಸಭೆಯಲ್ಲಿ ಸಮರ್ಥಿಸಲು ಅವಕಾಶ ನೀಡಲಾಯಿತು. ಮದ್ರಾಸು ಶಾಸನ ಸಭೆಯೆಂದರೆ ಬಹು ಜವಾಬ್ದಾರಿ ಹಾಗೂ ಮೇಧಾವಿ ಸದಸ್ಯರನ್ನು ಹೊತ್ತುಕೊಂಡ ಮಹಾ ಶಾಲೆ. ಅಲ್ಲಿ ಈ ತರುಣನಿಗೆ ಕಾಂಗ್ರೆಸ್ ಪಕ್ಷ ಈ ಜವಾಬ್ದಾರಿ ವಹಿಸಿಕೊಟ್ಟದ್ದೇನೂ ಸಾಮಾನ್ಯದ್ದಾಗಿರಲಿಲ್ಲ. ಶ್ರೀ ಪೈಗೆ ಈ ಜವಾಬ್ದಾರಿ ಕೊಟ್ಟಾಗ—ಅದೂ ಹೊಸದರಲ್ಲಿ—ನಿರಾಕರಿಸಬಹುದೆಂದು ಎಲ್ಲರೂ ಯೋಚಿಸಿದರು. ಆದರೆ ಶ್ರೀ ಪೈ ಅಳುಕಲಿಲ್ಲ. ಭಾಷಣವನ್ನು ಎಷ್ಟು ಚೆನ್ನಾಗಿ ಮಾಡಿದರೆಂದರೆ ಅದೊಂದು ಮದ್ರಾಸು ಶಾಸನ ಶಾಲೆಯ ಅಂದಿನ ಒಂದು ಮಹಾ ಪ್ರತಿಭಾ ಪೂರ್ಣ ಭಾಷಣವಾಗಿದೆ ಎಂದು ಎಲ್ಲ ಪತ್ರಿಕೆಗಳಿಂದಲೂ ಪ್ರಶಂಸಿಸಲ್ಪಟ್ಟಿತು. ಮದ್ರಾಸಿನ ಪ್ರಭಾವಿ ದಿನ ಪತ್ರಿಕೆಗಳು ಕೂಡಾ ಅವರ ಭಾಷಣಕ್ಕೆ ಕಾಲಂಗಟ್ಟಲೆ ಅವಕಾಶ ಒದಗಿಸಿದುವು. ಭಾಷಣದಲ್ಲಿ ಕೇವಲ ಸರಕಾರವನ್ನು ಪ್ರಶಂಸಿಸುತ್ತಾ ಅಥವಾ ಸಾಧನೆಗಳ ಬಗ್ಗೆ ಬೃಹತ್ ಪ್ರಚಾರ ನೀಡುತ್ತಾ ಹೋಗಲಿಲ್ಲ. ನಮ್ಮ ಜವಾಬ್ದಾರಿ, ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿವೇಚನೆ ನಡೆಸಿ, ಸರಕಾರದ ದೌರ್ಬಲ್ಯವನ್ನು ಒಪ್ಪಿಕೊಂಡು, ಸಾಧಿಸ ಬಹುದಾದ ಸಲಹೆಗಳನ್ನು ನಿರ್ಭೀತವಾಗಿ ನೀಡಿದರು. ಈ ರೀತಿ ಮದ್ರಾಸು ಶಾಸನ ಸಭೆಯಲ್ಲಿ ತಮ್ಮ ವ್ಯಕ್ತಿತ್ವದಿಂದ ದಕ್ಷಿಣ ಭಾರತದಲ್ಲೇ ಸುಪರಿಚಿತರಾದರು. ಆಗಿನ ಅರ್ಥ ಸಚಿವರಾಗಿದ್ದ ಶ್ರೀ ಸುಬ್ರಹ್ಮಣ್ಯಂ ಗೆಳೆಯರಾಗಿ ಯಾವಾಗಲೂ ರಾಜ್ಯದ ಆರ್ಥಿಕ ಸಮಾಲೋಚನೆಗಳ ವಿನಿಮಯ ಚರ್ಚೆ ಮಾಡಿಕೊಳ್ಳುತ್ತಿದ್ದರು.

ಶ್ರೀ ಪೈಗಳದು ಸರಳ ಮನೋಭಾವ. ಯಾವಾಗಲೂ ವಿವೇಕಪೂರ್ಣ ವಿವೇಚನೆ ನಡೆಸುತ್ತಿದ್ದಾರೆ. ಪ್ರತಿಯೊಂದು ವಿಭಾಗದಲ್ಲೂ ಪರಿಣತಿ ಸಾಧಿಸಿಕೊಳ್ಳುತ್ತಿದ್ದಾರೆ. ಅದು ಕೇವಲ ತೋರ ತೋರಿಕೆಯದಾಗಿರದೆ ಸತತ ಅಭ್ಯಾಸ, ಸಂಶೋಧನೆಯಿಂದ ಬಂದುದಾಗಿದೆ. ಕುಶಾಗ್ರ ಮತಿಗಳಾಗಿ ಎಲ್ಲವನ್ನು ಪರಿಶೀಲಿಸಿ, ಆನಂತರ ಪರಿಸ್ಥಿತಿಯ ವಿಮರ್ಶೆಗೆ ತೊಡಗುತ್ತಾರೆ. ಯಾವುದೇ ವಿಷಯವಿರಲಿ, ಅದನ್ನು ಅವರು ಅಭ್ಯಸಿಸುವ ಕ್ರಮ ವಿಶಿಷ್ಟವಾದುದು. ಅವರ ಮತ್ತೊಂದು ಪ್ರಧಾನ ಗುಣವೆಂದರೆ ಅಮಿತ ಉತ್ಸಾಹ. ಅವರು ಜನರೊಂದಿಗೆ ಬೆರೆತರೆ ಜನರ ಆಲಸ್ಯವೇ ಕಳೆದು ಹೋಗಿ ಬಿಡುತ್ತದೆ. ಅವರೇ ಎಲ್ಲರ ಉತ್ಸಾಹಕ್ಕೆ ಪ್ರೇರಣ ಶಕ್ತಿಯಾಗಿ ಮಾರ್ಪಡುತ್ತಾರೆ. ಅಂತಹ ಒಂದು ಸಂಜೀವಿನಿ ಶಕ್ತಿ ಅವರಲ್ಲಿದೆ

ಅದು ಇನ್ನೂ ರಾಜಕೀಯದಲ್ಲಿ ಪ್ರವೇಶಿಸಲು ಯೋಚಿಸುತ್ತಿದ್ದ ಕಾಲ. 1950 ನೇ ಇಸವಿಯಿರಬಹುದು. ಭಾರತವು ರಾಜ್ಯಾಂಗವನ್ನು ಅಂಗೀಕರಿಸಿ, ಪ್ರಜಾಪ್ರಭುತ್ವವನ್ನು ಘೋಷಿಸಿದ ದಿನ ಜನವರಿ 20. ಆ ದಿನ ಅವರಿಗೆ ಪ್ರಧಾನ ಭಾಷಣಕಾರರಾಗಿ ರಾಜ್ಯಾಂಗದ ವಿಷಯ ಮಾತಾಡಲು ಉಡುಪಿಯ ಅಜ್ಜರಕಾಡಿನಲ್ಲಿ ನಿಯೋಜಿಸಲಾಯಿತು. ಶ್ರೀ ಪೈಗಳು ಬಂದರು. ಭಾಷಣ ಪ್ರಾರಂಭಿಸಿದರು. ಭಾರತದ ರಾಜ್ಯಾಂಗದಂತಹ ಘಟನಾತ್ಮಕ ವಿಚಾರಗಳನ್ನು, ಅದೂ ಆಗತಾನೇ ಸಿದ್ಧವಾಗಿ ಹೊರಬಂದ ಘಟನೆಯ ಅನುವಾದವನ್ನು ತಿಳಿ ಕನ್ನಡದಲ್ಲಿ ಮಾತನಾಡುವುದು ಯಾರಿಗೂ ಸಾಧ್ಯವಾಗದ ಮಾತು. ಆದರೂ ಶ್ರೀ ಪೈ ಕನ್ನಡದಲ್ಲಿ ಭಾಷಣ ಆರಂಭಿಸಿಯಾಗಿತ್ತು. ಭಾಷಣದಲ್ಲಿ ಆದಷ್ಟು ಕನ್ನಡ ಶಬ್ದಗಳನ್ನೇ ಬಳಸಿ, ಭಾಷಣ ಮುಂದರಿಸಲು ನೋಡಿದರು. ಆಗಲಿಲ್ಲ. ಕೊನೆಗೆ ಭಾಷಣವನ್ನು ಕನ್ನಡದಲ್ಲೇ ಮುಗಿಸಲು ತುಂಬ ಕಷ್ಟವಾಯಿತು. ಇದೇ ಅವರಿಗೆ ಆಹ್ವಾನವಾಯಿತು. ಶ್ರೀ ಪೈಗಳು ಸೋಲನ್ನು ಅರಿಯರು. ಮರುದಿನದಿಂದಲೇ ಅವಕಾಶ ದೊರೆತ ಹಾಗೆಲ್ಲಾ ಕನ್ನಡ ಪುಸ್ತಕಗಳನ್ನು ವಿಪುಲವಾಗಿ ಓದತೊಡಗಿದರು. ರಾತ್ರಿ ಮಲಗುವ ಮೊದಲು, ಕಾರಿನಲ್ಲಿ ಪ್ರಯಾಣ ಹೊರಡುವ ಸಮಯ ಕನ್ನಡ ಪುಸ್ತಕಗಳು ಕಾದಂಬರಿಗಳು ಅವರ ಕೈಯಲ್ಲಿರುವುದನ್ನು ನೋಡಬಹುದಿತ್ತು. ಹೀಗೆ ಸತತವಾದ ಅಭ್ಯಾಸದಿಂದ ಅವರ ಕನ್ನಡ ಶಬ್ದ ಸಂಪತ್ತು ಹೆಚ್ಚಿತು, ಕನ್ನಡದ ಅವರ ಭಾಷಣ ತೇಜಸ್ವೀ, ಓಜಸ್ವೀಯಾಯಿತು. ಇಂದು ಅವರು ಕನ್ನಡದ ಅತ್ಯುತ್ತಮ ಭಾಷಣಕಾರರಲ್ಲಿ ಒಬ್ಬರಾಗಿದ್ದಾರೆ. ಸಮಯೋಚಿತ ಶಬ್ದ ಗಾಂಭೀರ್ಯ ಅವರದ್ದಾಗಿದೆ. ವಿಷಯ ಪ್ರತಿಪಾದನೆಯ ಸಂದರ್ಭದಲ್ಲಿ ಬಳಸುವ ಶಬ್ದಪ್ರಯೋಗ ಎಷ್ಟು ಸಮ

(ಹದಿನೆಂಟನೇ ಪುಟ ನೋಡಿರಿ)

ರೈತ ಭಾಂದವರ ಜೀವನ ಸಂಗಾತಿ.......

ಇಮಾನಿ ಕ್ರೂಡ್ ಆಯಿಲ್ ಇಂಜಿನ್
(5, 7, 10 & 13 H P) ಮತ್ತು ಪಂಪು ಸೆಟ್ಟುಗಳು....

ಉತ್ತಮ ತರಗತಿಯ—
ಅತೀ ಕಡಿಮೆ ನಿರ್ವಾಹಣ ವೆಚ್ಚದ—
ಪ್ರಥಮ ವರ್ಷದಲ್ಲೇ ಕ್ರೂಡ್ ಆಯಿಲಿನ ಉಪಯೋಗದಿಂದ
ರೂ. 1000 ಉಳಿತಾಯ.

ಎಸ್. ಇ. ಐ. ಇಲೆಕ್ಟ್ರಿಕ್ ಮೋಟಾರು
($\frac{1}{4}$ H P ಯಿಂದ 20 H P ವರೆಗೆ) ಮತ್ತು ಪಂಪುಸೆಟ್ಟುಗಳು..
ಕಿರುಕುಳವಿಲ್ಲದ— ದೀರ್ಘ ಕಾಲ ಬಾಳಿಕೆಯ—
ಅತೀ ಕಡಿಮೆ ವೆಚ್ಚದಲ್ಲಿ ಸೇವೆಸಲ್ಲಿಸುವ.

ಬ್ಲೂ ಸ್ಟಾರ್ ಸ್ಟಾರ್ಟರುಗಳು....

ಭಾರತದಲ್ಲಿ ತಯಾರಿಸುವ ಸ್ಟಾರ್ಟರುಗಳಲ್ಲಿ
ಪ್ರಪ್ರಥಮ ವಿಮಾ ರಕ್ಷಣೆಗೆ
ಒಳಪಟ್ಟಿರುವ ಶ್ರೇಷ್ಠ ತರಗತಿಯ

ವಿತರಕರು:—
ಸ್ವಾಮಿ ಇಲೆಕ್ಟ್ರಿಕಲ್ಸ್, ಕಾರ್ಕಳ (ದ. ಕ.)

# ನವನಿರ್ಮಿತ ವಿದ್

## ಸ್ವತಂತ್ರ ವಿಶ್ವವಿ ಬೆಳೆಯು

ಮಣಿಪಾಲ, ಉಡುಪಿ–ಕಾರ್ಕಳ ರಾಜ ಮಾರ್ಗದಲ್ಲಿ ಉಡುಪಿಯಿಂದ ಬರಿಯ ಮೂರೇ ಮೂರು ಮೈಲು ದೂರದಲ್ಲಿ, ಬೆಟ್ಟದ ಮೇಲೆ ಕಟ್ಟಿದ ಒಂದು ಪುಟ್ಟ ಊರು. ಸುಮಾರು ಹದಿನೈದು ವರ್ಷಗಳಿಗೆ ಮೊದಲು ಪರಿಮಿತ ಜನ ಸಂಖ್ಯೆ—ಸೌಕರ್ಯಗಳಿಂದ ಕೂಡಿದ ಹಳ್ಳಿಯಾಗಿದ್ದ ಮಣಿಪಾಲ ಇಂದು ಬೆಳೆದು ಬರುತ್ತಿರುವ ನವಭಾರತದ ಒಂದು ವಿದ್ಯಾನಗರವೆನಿಸುತ್ತಿದೆ. ಮರುಭೂಮಿಗಳು ವಜ್ರದ ಗಣಿಗಳಿಂದಾಗಿ ಹೆಸರು ಪಡೆದದ್ದಿವೆ; ಗುಡ್ಡ ಬೆಟ್ಟಗಳು ಲೋಹಗಳಿಂದಾಗಿ ಬೆಳಕಿಗೆ ಬಂದದ್ದಿದೆ; ಪ್ರಾಕೃತಿಕ ಸಂಪತ್ತಿನಿಂದಾಗಿ ಹಲವಾರು ಹಿಂದುಳಿದ ಪ್ರದೇಶಗಳು ಮುಂದೆ ಬಂದಿವೆ. ಮಣಿಪಾಲದಲ್ಲಿ ವಜ್ರದ ಗಣಿಗಳಿಲ್ಲ, ಲೋಹವೂ ದೊರೆಯುತ್ತಿಲ್ಲ. ಆದರೆ, ಇವೆಲ್ಲವುಗಳಿಗಿಂತಲೂ ನೂರು ಪಾಲು ಉತ್ತಮವೆನಿಸಿದ ಸರಸ್ವತಿಯ ಕ್ರೀಡಾರಂಗವಿದೆ; ಇದರಿಂದಲೇ ಮಣಿಪಾಲದ ಹೆಸರಿಂದು ವಿಶ್ವವ್ಯಾಪಿಯಾಗಿದೆ. ಮಣಿಪಾಲವನ್ನು ಸರಸ್ವತಿಯ ಭವ್ಯ ಮಂದಿರವಾಗಿ ಕಟ್ಟಿದ ಅಮರ ಕೀರ್ತಿ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಎಂಬ ಸಂಸ್ಥೆಯದು ಮತ್ತದರ ರಿಜಿಸ್ಟ್ರಾರ್ ಡಾ॥ ಟಿ. ಮಾಧವ ಪೈಯವರದು.

ವೃತ್ತಿಯಲ್ಲಿ ಡಾಕ್ಟರಾಗಿದ್ದ ಶ್ರೀ ಮಾಧವ ಪೈಗಳು ತಮ್ಮ ಅನುಯಾಯಿಗಳ ಸಂಪೂರ್ಣ ಸಹಕಾರದಿಂದ ಹಲವಾರು ವಾಣಿಜ್ಯ ಸಂಸ್ಥೆಗಳ ಜನ್ಮಕ್ಕೆ ಕಾರಣ ಪುರುಷರಾದರು. ಅವುಗಳ ಉನ್ನತಿಗಾಗಿ ಅಹರ್ನಿಶಿ ದುಡಿದರು. ಇಡಿಯ ಭಾರತದಲ್ಲಿ ಬ್ಯಾಂಕಿಂಗ್ ವ್ಯವಹಾರದಲ್ಲಿ ಸುಪ್ರಸಿದ್ಧವಾದ ಸಿಂಡಿಕೇಟ್ ಬ್ಯಾಂಕ್ ಡಾ॥ ಮಾಧವ ಪೈಯವರ ದುಡಿಮೆಯ ಮೂರ್ತರೂಪವೆಂದರೂ ತಪ್ಪಲ್ಲ. ಅದಕ್ಕೆ ಭೀಮಾಕಾರ ಬರಬೇಕಾದರೆ, ಅವರು ಪಟ್ಟ ಬವಣೆ ಎಷ್ಟೆಂದು ಹೇಳುವಂತಿಲ್ಲ.

ವಾಣಿಜ್ಯರಂಗದೊಡನೆ ಡಾ॥ ಪೈಯವರ ದೂರದೃಷ್ಟಿ ಶಿಕ್ಷಣರಂಗದತ್ತ ಸರಿಯಿತು. ಎರಡು ದಶಕಗಳಿಗೂ ಮೊದಲೇ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಸಂಸ್ಥೆಯು ಸ್ಥಾಪನೆಯಾಗಿತ್ತು. ಅಂದು ಸಂಸ್ಥೆ ಮತ್ತು ಅದರ ಸಂಸ್ಥಾಪಕರು ಯಾವ ಯಾವ ಕನಸುಗಳನ್ನು ಕಾಣುತ್ತಿದ್ದರೋ! ಕಲ್ಪನೆಗೂ ನಿಲುಕದಂತಹ ಮಹಾ ಸಾಹಸವನ್ನದು ಪ್ರದರ್ಶಿಸಿ ಯಶಗಳಿಸುತ್ತಿದೆ. ಏನಿದ್ದುದು ಏನಾಯಿತು ಎಂಬೆಲ್ಲರೂ ಮೂಗಿಗೆ ಬೆರಳೇರಿಸುವಂತಾಗಿದೆ.

೧೯೫೩ನೆಯ ಇಸವಿ ಎಕೆಡೆಮಿಯ ಇತಿಹಾಸದಲ್ಲೇ ಮಹತ್ವದ ವರ್ಷ. ಅದುವರೆಗೆ ಒಂದೆರಡು ಪ್ರಾಥಮಿಕ ಮತ್ತೊಂದು ಪ್ರೌಢ ಶಾಲೆಗಳನ್ನು ಮಾತ್ರ ನಡೆಸುತ್ತಿದ್ದ ಎಕೆಡೆಮಿ ಆ ವರ್ಷ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜನ್ನು ಸ್ಥಾಪಿಸಿತು. ಮುಂದೆ ವೃತ್ತಿಪರ ಕಾಲೇಜುಗಳನ್ನು ತೆರೆಯುವ ಮಹತ್ವಾಕಾಂಕ್ಷೆ ಡಾ॥ ಪೈಯವರಲ್ಲಿ ಹುಟ್ಟಿತು. ಸರಕಾರದವರೂ ತೆರೆಯಲು ಹಿಂಜರಿಯುತ್ತಿದ್ದ ಮೆಡಿಕಲ್ ಕಾಲೇಜೊಂದನ್ನು ಎಕೆಡೆಮಿ ತೆರೆಯಲು ನಿರ್ಧರಿಸಿದಾಗ ಅದನ್ನು ಹುಚ್ಚಾಟವೆಂದು ಕರೆದವರೇ ಹೆಚ್ಚು. ಆದರೆ, ಒಳ್ಳೆಯ ಕಾರ್ಯಗಳು ಒಳ್ಳೆಯ ರೀತಿಯಲ್ಲೇ ನೆರವೇರುತ್ತವೆ. 'ವಿದ್ಯಾರ್ಥಿಗಳ ಪಾಲಕರಿಂದ ಸಹಾಯಧನ ತೆಗೆದುಕೊಂಡೇ ಕಾಲೇಜ್ ಕಟ್ಟುವ ಹೊಸ ಯೋಜನೆಯೊಂದನ್ನು ಡಾ॥ ಪೈ ರೂಪಿಸಿದರು. ಇದು ಕ್ರಾಂತಿಕಾರಕವೆನಿಸಿತು. ಅಂದಿಗೇ ಯೋಜನೆ ಹೊಚ್ಚ ಹೊಸತಾಗಿದ್ದರೂ ಇಂದು ಇದೇ ತಳಹದಿಯಲ್ಲಿ ತಲೆಯೆತ್ತಿದ ಹಲವು ವೃತ್ತಿಪರ ಕಾಲೇಜುಗಳು ನಮ್ಮ ರಾಜ್ಯದಲ್ಲಿಯೇ ಇವೆ.

ಇಂದು ಮಣಿಪಾಲದಲ್ಲಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಡೆಂಟಲ್ ಕಾಲೇಜು, ಫಾರ್ಮಸ್ಯುಟಿಕಲ್ ಕಾಲೇಜುಗಳಿವೆ. ಮಣಿಪಾಲ್ ಕಾಲೇಜ್ ಆಫ್ ಎಜುಕೇಶನ್ ಮತ್ತು ಉಡುಪಿ ಲಾ ಕಾಲೇಜುಗಳು ಉಡುಪಿಯಲ್ಲಿವೆ. ಎಕೆಡೆಮಿಯು ಇವುಗಳನ್ನಲ್ಲದೆ ಕುಂದಾಪುರ, ಕಾರ್ಕಳ, ಮೂಡಬಿದ್ರಿ, ಮೂಲ್ಕಿ ಮತ್ತು ಶೃಂಗೇರಿಗಳಲ್ಲಿ ಕಾಲೇಜುಗಳನ್ನು ನಡೆಸುತ್ತಿದೆ. ಹೀಗೆ ಶಿಕ್ಷಣೇಚ್ಛುಗಳಿಗೆ ಅವರವರ ಮನೆಯ ಬಳಿಯಲ್ಲಿಯೇ ಉಚ್ಚ ವಿದ್ಯಾಭ್ಯಾಸವನ್ನು ಕೊಡುವ ವ್ಯವಸ್ಥೆಯನ್ನು ಎಕೆಡೆಮಿ ಮಾಡಿದೆ.

ಇಂದು ಎಕೆಡೆಮಿ ಹಲವು ಪ್ರೌಢ ಶಾಲೆಗಳನ್ನೂ ನಡೆಸುತ್ತಿದೆ. ಮಣಿಪಾಲ, ಪಡುಬಿದ್ರಿ, ನಗರ, ಪಾಣೆಮಂಗಳೂರು, ಕಡಿಯಾಳಿ, ಅಲೆವೂರು, ಪರ್ಕಳ ಮತ್ತು ಆಗುಂಬೆಗಳಲ್ಲಿ ಎಕೆಡೆಮಿಯ ಹೈಸ್ಕೂಲುಗಳಿವೆ. ಮುಂದೆ ಪಾಲಿಟೆಕ್ನಿಕ್?, ಎಗ್ರಿಕಲ್ಚರಲ್, ಶಾರೀರಿಕ ಶಿಕ್ಷಣ ಕಾಲೇಜುಗಳನ್ನೂ ತೆರೆಯುವ ಆಲೋಚನೆ ಎಕೆಡೆಮಿಗಿದೆ. ಅಂತೆಯೇ ಎಂ. ಜಿ. ಎಂ. ಕಾಲೇಜಿನಲ್ಲಿ ಸ್ನಾತಕೋತ್ತರ ಶಿಕ್ಷಣ ವಿಭಾಗವನ್ನು ತೆರೆಯುವ ಆಶಯವಿದೆ.

ಎಕೆಡೆಮಿಯ ಶೈಕ್ಷಣಿಕ ಸೇವೆಯು ಬಹುಮುಖವಾದುದು. ಒಂದು ಸ್ವತಂತ್ರ ವಿಶ್ವವಿದ್ಯಾಲಯದ ಸ್ಥಾಪನೆಗೆ ಅನುಕೂಲವಾದುದು. ಡಾ॥ ಮಾಧವ ಪೈಯವರು ವಿಶ್ವವಿದ್ಯಾಲಯದ ಕನಸನ್ನೂ ಕಾಣುತ್ತಿದ್ದಾರೆ. ಹೊಸ ವಿಶ್ವವಿದ್ಯಾಲಯವನ್ನು ತೆರೆಯಲು ಸದ್ಯ ಸರಕಾರ ಅನುಮತಿ ಕೊಡುವುದಿಲ್ಲವೆಂದು ವಿಧಾನ ಸಭೆಯಲ್ಲಿ ಶಿಕ್ಷಣ ಮಂತ್ರಿಗಳು ಹೇಳಿದ್ದರೂ ಅನುಮತಿ ಕೊಡುವ ಕಾಲದಲ್ಲಿ ಡಾ॥ ಮಾಧವ ಪೈಯವರ ಕೋರಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸುವರೆಂದು ಆಶಿಸಬಹುದು.

ಮೆಡಿಕಲ್ ಕಾಲೇಜಿನ ಸ್ಥಾಪನೆಯ ವೇಳೆ ಅಡ್ಡ ಬಂದಿದ್ದ ಒಂದು ಮಹಾ ಪ್ರಶ್ನೆ ಆಸ್ಪತ್ರೆಯದ್ದು. ಕಾಲೇಜು ಸ್ಥಾಪಿತವಾಗಲಿ; ಆಸ್ಪತ್ರೆ ತಾನಾಗಿಯೇ ನಿರ್ಮಾಣವಾಗುವುದು ಎಂಬ ಡಾ॥ ಪೈಯವರ ವಾದವನ್ನು ಅಂದು ಅಧಿಕಾರಿಗಳು ಸರಿಯಾಗಿ ಅರ್ಥ ಮಾಡಿಕೊಂಡಿರಲಾರರು. ಇಂದು ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಹೆಸರು ಜಗತ್ಪ್ರಸಿದ್ಧವಾಗಿದೆ. ದೊಡ್ಡ ದೊಡ್ಡ ಸರಕಾರಿ ಆಸ್ಪತ್ರೆಗಳಲ್ಲಿ ದೊರೆಯುವಂತಹ ಎಲ್ಲ ವೈದ್ಯಕೀಯ ಸೌಲಭ್ಯಗಳು ಇಂದು ಇಲ್ಲಿ ದೊರೆಯುವಂತಾಗಿದೆ. ಮೆಟರ್ನಿಟಿ ವಾರ್ಡ್ ಕೂಡ ಇಲ್ಲಿದೆ. ಇನ್–ಪೇಶಂಟ್‌ಗಳಿಗೆ ಮಾತ್ರವಲ್ಲ, ಔಟ್–ಪೇಶಂಟ್‌ಗಳಿಗೂ ಇಲ್ಲಿ ವೈದ್ಯಕೀಯ ಸೌಲಭ್ಯ ದೊರೆಯುವುದು. ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಲು ದೂರ ದೂರದ ನಗರ ಪ್ರದೇಶಗಳಿಂದಲೂ ರೋಗಿಗಳು ಬರುತ್ತಿದ್ದಾರೆ—ಇದುವೇ ಆಸ್ಪತ್ರೆಯ ಚಿಕಿತ್ಸಾ ಮಟ್ಟಕ್ಕೆ ಸಾಕ್ಷಿಯಾಗಿದೆ. ಸಾರಾ ರೋಗಿಗಳಿಗೆ ಚಿಕಿತ್ಸಾ ಸೌಕರ್ಯವಿರುವ ಈ ಆಸ್ಪತ್ರೆಯೂ ಮಣಿಪಾಲದಲ್ಲೇ ಇರುವುದರಿಂದ ಸದ್ಯ ಮಂಗಳೂರಿನಲ್ಲಿರುವ ಮೆಡಿಕಲ್ ಕಾಲೇಜಿನ ವಿಭಾಗವನ್ನೂ ಮಣಿಪಾಲದಲ್ಲೇ ನಡೆಸುವ ಗುರಿಯಿದೆ. ಆಸ್ಪತ್ರೆಯ ಸೌಕರ್ಯಕ್ಕಾಗಿ ಸದ್ಯ ಇದು ಮಂಗಳೂರಿನಲ್ಲಿದೆ.

ಆಸ್ಪತ್ರೆಯ ಸೇವೆಗಾಗಿ ನರ್ಸ್‌ಗಳು

1

2

3

# ಗರಿ — ಮಣಿಪಾಲ

## ಅನುಕೂಲವಾಗಿ ಕೇಂದ್ರ

ಬೇಕಾಗಿದ್ದಾರೆ. ಆದುದರಿಂದ ನರ್ಸಿಂಗ್ ತರಬೇತಿಯ ಸೌಕರ್ಯವನ್ನು ಇಲ್ಲಿ ಒದಗಿಸಬೇಕಾಯಿತು. ಇಂಜಿನಿಯರಿಂಗ್ ಕಾಲೇಜಿಗಾಗಿ ವರ್ಕ್‌ಶಾಪ್ ಅಗತ್ಯವಾಯಿತು— ಹೀಗೆ ಒಂದರ ಹಿಂದೆ ಒಂದು ಎಂಬಂತೆ ಇಂದು ಮಣಿಪಾಲದಲ್ಲಿ ಹಲವಾರು ಕಟ್ಟಡಗಳು ತಲೆಯೆತ್ತಿ ನಿಂತಿವೆ. ಇವುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ; ಜೀವನ ಯಾಪನೆಗಾಗಿ ಮಾತ್ರವಲ್ಲ, ಸೇವಾಭಾವನೆಯನ್ನು ಬೆಳೆಸಿಕೊಳ್ಳುವುದಕ್ಕಾಗಿಯೂ ಅವರು ಇಲ್ಲಿ ಶಿಕ್ಷಣ ಪಡೆಯುತಿದ್ದಾರೆ.

ಅಂದು ನರಿ-ಹುಲಿಗಳ ಬೀಡಾಗಿದ್ದ ಮಣಿಪಾಲವಿಂದು ವಿದ್ಯಾನಗರಿಯಾಗಿದೆ. ಪಶ್ಚಿಮದಲ್ಲಿ ವಿಶಾಲ ನೀಲಿ ಸಾಗರ ಪೂರ್ವದಲ್ಲಿ ಅದೇ ಬಣ್ಣದ ಪಶ್ಚಿಮ ಘಟ್ಟಗಳು ಉಳಿದೆರಡು ದಿಕ್ಕಿನಲ್ಲಿ ಹಸುರು ತುಂಬಿದ ಚಿಕ್ಕ ಪುಟ್ಟ ಬೆಟ್ಟ-ಬೈಲುಗಳು —ಪ್ರಕೃತಿ ರಮಣೀಯವಾದ ಮಣಿಪಾಲ ವಿದಿಯು ಕೆತ್ತಿದ ಬೆಟ್ಟ. ಅದರ ಮೇಲೆ ಈಗ ನಿಂತಿರುವುದು ಡಾ| ಮಾಧವ ಪೈಗಳ ಮೇಧಾಶಕ್ತಿ. ಅಲ್ಲಿ ಹರಿಯುವುದು ಅವರ ಬೆವರು— ಪರಿಶ್ರಮದ, ಸಾಧನೆ, ಸಾಹಸದ ಫಲ.

ಕ್ಯಾಪಿಟೇಶನ್ ಫೀಯ ಬಗ್ಗೆ ಗುಡುಗುವವರು, ಗೊಣಗುವವರು ತುಂಬ ಮಂದಿ. ಈ ಪದ್ಧತಿಯನ್ನು ಶಿಕ್ಷಣದ ಬ್ಲಾಕ್ ಮಾರ್ಕೆಟ್ ಎಂದು ಕರೆಯುವವರೂ ಇದ್ದಾರೆ. ಆದರೆ, ದೇಶದಲ್ಲಿ ವೃತ್ತಿಪರ ಕಾಲೇಜುಗಳು ಹೆಚ್ಚ ಬೇಕು; ಸರಕಾರದಲ್ಲಿ ತಾಕತ್ತು ಇಲ್ಲದಾಗ ಖಾಸಗಿ ರಂಗದಲ್ಲಿ ಹೆತ್ತವರಿಂದಲೇ ಹಣತೆಗೆದುಕೊಂಡು, ಸರಕಾರಕ್ಕೆ ಪೈಸೆ ಕರ್ಚು ಇಲ್ಲದಂತೆ, ನಡೆದು ಬರುತ್ತಿರುವ ಇಂತಹ ಕಾಲೇಜುಗಳು ದೇಶದ ದೊಡ್ಡ ಆಸ್ತಿ. ಕ್ಯಾಪಿಟೇಶನ್‌ನನ್ನು ಬ್ಲಾಕ್ ಮನಿಗೆ ಸೇರಿಸುವ ಈ ವ್ಯಕ್ತಿಗಳು ವಸೂಲಾದ ಹಣ ಹೇಗೆ ಉಪಯೋಗವಾಗಿದೆಯೆಂದು ವಿವೇಚಿಸಿದರೆ, ಅವರ ಪ್ರಶ್ನೆ ತಿಳಿಯಾಗುವುದು.

ಕ್ಯಾಪಿಟೇಶನ್ ಫೀ ಕೊಡುವ ಶಕ್ತಿಯಿಲ್ಲದವರು ಸರಕಾರದ ಕಾಲೇಜುಗಳಲ್ಲಿ ಸೇರಿಕೊಳ್ಳಬಹುದು. ಶಿಕ್ಷಣ ಪಡೆಯುವ ಅಭಿಲಾಷೆಯಿರುವವರಿಗೆ ಸರಕಾರ ಸೌಲಭ್ಯ ದೊರಕಿಸಿಕೊಡುವ ವರೆಗೆ ಖಾಸಗಿ ಪ್ರಯತ್ನಗಳನ್ನು ಸದ್ದೃಷ್ಟಿಯಿಂದ ನೋಡಬೇಕು.

ಮಣಿಪಾಲದ ಕಾಲೇಜುಗಳು ಪಗಡಿ ಕಾಲೇಜುಗಳೆನ್ನುವವರಿದ್ದಾರೆ. ಪಗಡಿಯು ತಲೆಗೆ ಭೂಷಣವಾಗಿರುವಂತೆಯೇ ಈ ಕಾಲೇಜುಗಳು ಭಾರತ ಮಾತೆಯ ಶಿರೋಭೂಷಣವಾಗಿವೆ.

ಅಜ್ಞಾನಾಂಧಕಾರವನ್ನು ಸವೆಬಡಿಸಲು ಸೊಂಟಕಟ್ಟಿ ದುಡಿವ ಎಕೆಡೆಮಿಯ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈ.

ಎಕೆಡೆಮಿಯ ರಿಜಿಸ್ಟ್ರಾರು ಡಾ| ಟಿ. ಮಾಧವ ಪೈ ಅವರ ಕಾರ್ಯದಲ್ಲಿ ಹೆಗಲಿಗೆ ಹೆಗಲಿತ್ತು ದುಡಿಯುತ್ತಿರುವ (ಎಕೆಡೆಮಿಯ ಭಾವಿ ರಜಿಸ್ಟ್ರಾರ್) ಶ್ರೀ ಟಿ. ರಮೇಶ್ ಯು. ಪೈ. ಎಕೆಡೆಮಿಯ ಹಲವು ಹೈಸ್ಕೂಲುಗಳ ಕರೆಸ್ಪೋಂಡೆಂಟರೂ ಇವರೇ.

ಎಕೆಡೆಮಿಯ ಪೆಡರೂರು ಮತ್ತು ಕರಿಯಾಳಿಯ ಹೈಸ್ಕೂಲುಗಳ ಕರೆಸ್ಪೋಂಡೆಂಟರೂ ಹಲವಾರು ಸಾರ್ವಜನಿಕ ಶೈಕ್ಷಣಿಕ ಸಂಘ ಸಂಸ್ಥೆಗಳೊಡನೆ ಸಂಪರ್ಕವಿರುವವರೂ ಆದ ಸಿಂಡಿಕೇಟ್ ಬ್ಯಾಂಕಿನ ಚೀಫ್ ಆಫೀಸರ್ ಶ್ರೀ ಕೆ. ಕೆ. ಪೈ.

### ಚಿತ್ರಗಳು

1) ಮಣಿಪಾಲದ ಮೆಟರ್ನಿಟಿ ಆಸ್ಪತ್ರೆಯ ವಿಸ್ತರಣಾ ಕಟ್ಟಡಕ್ಕೆ 26-11-59 ರಂದು ಅಂದಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಅಡಿಗಲ್ಲನ್ನಿಡುವುದು.

2) ತಾ. 23—9—56ರಂದು ಅಂದಿನ ಮದ್ರಾಸ ರಾಜ್ಯಪಾಲ ಶ್ರೀ ಶ್ರೀಪ್ರಕಾಶರು ಕಸ್ತೂರ್ಬಾ ಮೆಟರ್ನಿಟಿ ಆಸ್ಪತ್ರೆಯ ಬಾಹ್ಯ ರೋಗಿಗಳ ವಿಭಾಗವನ್ನು ಉದ್ಘಾಟಿಸುವುದು.

3) ಕಸ್ತೂರ್ಬಾ ಜನರಲ್ ಮತ್ತು ಮೆಟರ್ನಿಟಿ ಆಸ್ಪತ್ರೆಯಲ್ಲಿನ ನರ್ಸ್ ತರಬೇತಿ ತರಗತಿಯ ಒಂದು ದೃಶ್ಯ.

4) ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಒಂದು ನೋಟ.

5) ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಅಡಿಗಲ್ಲನ್ನು 22—8—54ರಂದು ಡಾ| ಎ. ವಿ. ಬಾಳಿಗಾ ಇಡುತ್ತಿರುವುದು.

4



5



# ಶ್ರೀ ಟಿ. ಎ. ಪೈ ಅವರು

(ಹದಿನೈದನೇ ಪುಟದಿಂದ)

ರ್ಥವಾಗಿದೆ ಹಾಗೂ ಸಮರ್ಪಕವಾಗಿದೆ ಎಂದು ಅವರ ಭಾಷಣ ಕೇಳಿದವರೆಲ್ಲಾ ಬಲ್ಲರು.

ಶ್ರೀ ಪೈಗಳು ಅಳುಕುವವರಲ್ಲ. ಅವರು ಅಳುಕುವುದಿದ್ದರೆ ನರಳುವಿಕೆಗೆ, ಗಾಸಿಗೊಂಡವರನ್ನು ಕಂಡಾಗ. ಆಗ ಅವರ ಶ್ರೀಮಂತ ಅಂತಃಕರಣ ಮಿಡಿಯುತ್ತದೆ ಅವರ ಸಹಾನುಭೂತಿ ಅವರ್ಣನೀಯ. ಶ್ರೀ ಪೈಗಳ ಸಾರ್ವಜನಿಕ ಜೀವನವು ಒಂದು ಬಗೆಯ ತ್ಯಾಗಮಯವಾಗಿದೆ. ಅವರದು ತುಂಬು ಮನೋಭಾವ. ಯಾರೇ ಆದರೂ ಯೋಚನೆಗೆ ಬಂದವರು ಬರಿಗೈಯಿಂದ ಹಿಂದೆ ಕಳಿಸಿದ್ದಿಲ್ಲ. ವಿಷಯವು ಸತ್ಯವೆಂದು ಮನಗಂಡರೆ ಅವರು ಎಷ್ಟೇ ಸಹಾಯ ಸಲ್ಲಿಸಲೂ ಅಳುಕುವುದಿಲ್ಲ. ತಿಂಗಳ ಕೊನೆಯಲ್ಲಿ ಅವರ ಮನೆಯ ಕಡೆ ಒಂದು ಬೆಳಿಗ್ಗೆ ಹೋಗಬೇಕು. ಅಲ್ಲಿ ಕೆಲವೊಂದು ಜನರು ಮುದುಕಿಯರು, ವಿದ್ಯಾರ್ಥಿಗಳು, ಸಂಬಂಧಿಕ ಬಡವರ ಸಣ್ಣ ಗುಂಪೇ ಇರುತ್ತದೆ. ಅವರಿಗೆ ತಿಂಗಳು ತಿಂಗಳಿಗೆ ಇಂತಿಷ್ಟೆಂದು ಸಹಾಯ ಸಲ್ಲಿಸುವ ಕ್ರಮವಿದೆ. ಯಾವುದೇ ಬೇಸರವಿಲ್ಲದೆ ತಮ್ಮ ಕರ್ತವ್ಯ ಎಂಬ ರೀತಿಯಲ್ಲಿ ಕೊಡುತ್ತ ಬರುತ್ತಿದ್ದಾರೆ. ಅದು ತನ್ನ ಧರ್ಮ ಎಂದು ಭಾವಿಸಿದ್ದಾರೆ. ಈ ಧರ್ಮ ಬುದ್ಧಿಯ ಹಿಂದುಗಡೆಯಲ್ಲಿ ಯಾವುದೇ ಪ್ರತಿಫಲಾಪೇಕ್ಷೆ, ದೂರದ ಆಕಾಂಕ್ಷೆ ಇಲ್ಲ. ಏಕೆಂದರೆ ಅದು ಅವರ ಗುಪ್ತದಾನವಾಗಿರುತ್ತದೆ.

ಶ್ರೀ ಪೈಗಳ ವ್ಯಕ್ತಿತ್ವವನ್ನು ಉನ್ನತವಾದ, ಅಸದೃಶವಾದ ಅಖಂಡತೆಗೆ ಹೋಲಿಸಬಹುದು. ಅವರದು ಮಹತ್ವಾಕಾಂಕ್ಷೆಯ ಜೀವ ಎನ್ನುವವರಿದ್ದಾರೆ. ಅದೂ ನಿಜವಿರಬಹುದು. ಅವರು ಬದುಕಿ ಬಂದ ಬಗೆ, ಅವರ ಪರಿಸರ, ಅವರ ಅನುಕೂಲತೆ ಹಾಗೂ ಅವರ ದೀರ್ಘ ಕಾಲೀನ ಅನುಭವ, ಉತ್ಸಾಹವನ್ನು ಕಂಡಾಗ ಅವರು ತಳೆಯುತ್ತ ಬಂದ ಮಹತ್ವಾಕಾಂಕ್ಷೆ ತಪ್ಪೆಂದು ಯಾರೂ ಹೇಳಲಾರರು. ಆನೆ ಹಟ್ಟಿಯಲ್ಲಿ ವಾಸಿಸಲು ಸಾಧ್ಯವೇ?

ಶ್ರೀ ಟಿ. ಎ. ಪೈಗಳು ರಾಜಕೀಯವನ್ನು ಪ್ರವೇಶಿಸಿದ್ದು ಆಕಸ್ಮಿಕವಾಗಿ. ಅಷ್ಟೇ ತೀವ್ರವಾಗಿ ಅವರು ಮೇಲೇರಿ ಬಂದರು. ಅಷ್ಟೇ ಪ್ರಭಾವೀ ವ್ಯಕ್ತಿತ್ವವನ್ನು ಅವರು ಬೆಳೆಸಿಕೊಂಡರು. ಆ ವೇಳೆ ಕೆಲವು ದಿನ ರಾಜಕೀಯದಿಂದ ಬೇರೆಯಾಗಿ ನಿಲ್ಲಲು ಯತ್ನಿಸಿದರೂ, ಅದವರಿಂದ ಸಾಧ್ಯವಾಗಲಿಲ್ಲ. ಅರ್ಥಾತ್ ಜನ ಅವರನ್ನು ಬಿಡಲಿಲ್ಲ. ಅವರನ್ನೇ ಜನ ನಾಯಕರಾಗಿ ಸ್ವೀಕರಿಸಿದ ಮೇಲೆ ಅವರು ಆ ನಾಯಕತ್ವದಿಂದ ದೂರ ಸರಿದಾಗಲೂ, ಅವರದ್ದೇ ನಾಯಕ ಸ್ಥಾನವೆಂದು ಜನ ಭಾವಿಸಿದರು. ಎಂ. ಎಲ್. ಎ. ಸ್ಥಾನಕ್ಕೆ ಎರಡನೇ ಬಾರಿ ಸ್ಪರ್ಧಿಸದಿದ್ದರೂ, ಈಗ ಕಳೆದ ಹತ್ತು ವರ್ಷಗಳಿಂದ ನಮ್ಮ ನಾಡಿನ ಮಹಾ ನಾಯಕರಲ್ಲೊಬ್ಬರಾಗಿದ್ದಾರೆ ಶ್ರೀ ಟಿ. ಎ. ಪೈಗಳು.

ಸ್ವಾತಂತ್ರ್ಯ ಪೂರ್ವದ ತ್ಯಾಗದಿಂದ ನಾಯಕ ಸ್ಥಾನಕ್ಕೇರಿದವರು ಹಲವರು; ರಾಜಕೀಯ ಒಳಸುಳಿಯಲ್ಲಿ ತಮ್ಮ ಬೇಳೆ ಬೇಯಿಸಿಕೊಂಡು ನಾಯಕರಾದವರು ಕೆಲವರು. ಆದರೆ ನಿಸ್ವಾರ್ಥ ಸೇವೆ, ಸತತ ಸಾಧನೆ, ಅನನ್ಯವಾದ ಜನಪ್ರೀತಿಯಿಂದ ಜನರೇ ಶ್ರೀ ಪೈಗಳನ್ನು ನಾಯಕರಾಗಿ ಸ್ವೀಕರಿಸಿದರು. ಸ್ವಾತಂತ್ರ್ಯಾನಂತರ ಇಂತಹ ಪರಿಶುದ್ಧ ಕ್ರಮದಲ್ಲಿ ಜನರ ಮನಸ್ಸನ್ನಾಕರ್ಷಿಸಿದವರು ನಮ್ಮ ದೇಶದಲ್ಲೇ ಹೆಚ್ಚಿಲ್ಲ.

ಅವರ ಭಾವನೆಗಳು ಯಾವಾಗಲೂ ಅಭ್ಯಾಸ ಹಾಗೂ ಅನುಭವದಿಂದ ಪಕ್ವಗೊಂಡು, ವಿಚಾರ ವೀಥಿಯಲ್ಲಿ ಮೂರ್ತಸ್ವರೂಪಕ್ಕೆ ಬರುತ್ತವೆ. ಅವು ಪರಿಪೂರ್ಣವೆಂದು ಯಾವಾಗಲೂ ಭಾವಿಸಿದವರಲ್ಲ. ಜನರ ಮಥನ ಕಾಲದಲ್ಲಿ ಈ ವಿಚಾರವು ಕಡೆದುಕೊಂಡಾಗ ಹುಟ್ಟಿಕೊಳ್ಳುವ ಹಾಲಾಹಲವನ್ನು ನಿವಾರಿಸಿ, ಅಮೃತವನ್ನಷ್ಟೇ ಜನರಿಗೆ ಬಡಿಸುವ ಮನೋಭಾವವಿದೆ. ಜನರ ದುಃಖ-ದುಮ್ಮಾನ ಹಾಗೂ ಕಳಕಳಿ ಕಂಡಾಗ ಅವರ ಅಂತಃಕರಣ ಕಲಕುತ್ತದೆ. ಅದರ ನಿವಾರಣೆಗಾಗಿ ತಕ್ಷಣವಾಗಿ ನಿರ್ಧಾರಕ್ಕೆ ಬಂದು ಬಿಡುತ್ತಾರೆ. ಅಪೇಕ್ಷಿತ ಜನರಲ್ಲೂ ಪ್ರತಿಗಾಮಿ ಮನೋಭಾವದವರಿದ್ದಾರೆಂದು ಭಾವಿಸುವುದಿಲ್ಲ. ಹಾಗಾಗಿ ಶ್ರೀ ಪೈಗಳ ಗುಂಪಿನಲ್ಲಿ ವಿಷನಾಗರಗಳೂ ಕೆಲವು ಸೇರಿಕೊಂಡಿವೆ. ಅವರಿಗೆಂದು ತಿಳಿಯದೆ ಹೋದುದರಿಂದಲೇ ಹೊರಗಿನ ತಡೆಗಿಂತಲೂ, ಆಂತರಿಕ ಹಿತಶತ್ರುಗಳ ಕೈವಾಡದಿಂದ ಅವರು ಅನೇಕ ಭಾರಿ ತಡೆದು ನಿಲ್ಲುವಂತಾಗಿದೆ. ಆದರೆ ಇಂತಹ ಜನರ ಪ್ರಭಾವ ಸೂರ್ಯನ ಇದಿರಿನ ಮೋಡದ ಬತ್ತಿಯಂತೆ ತಾತ್ಕಾಲಿಕ. ಹಾಗಾಗಿ ಎಷ್ಟೋ ಮಂದಿ ಶ್ರೀ ಪೈಗಳ ಮಹಾ ಪ್ರಭಾವದಿದಿರು ಸಗೆಯಿಡಾಗಿದ್ದಾರೆ.

ಶ್ರೀ ಟಿ. ಎ. ಪೈಗಳು ಸತತ ಅಭ್ಯಾಸಿಗಳು. ಅವರ ಮೆದುಳಲ್ಲಿ ವಿಜ್ಞಾನಿಗಳು ಸಂಶೋಧಿಸಿದರೆ ಮೂರು ಚಿತ್ರಗಳು ಕಾಣಸಿಗಬಹುದು. ಒಂದು—ಪುನಾರಚನೆಯ ಭಾರತ. ಎರಡು—ಪ್ರಪಂಚದ ಎಲ್ಲ ಅನುಕೂಲತೆಗಳನ್ನು ಅಳವಡಿಸಿ, ಸಮೃದ್ಧಗೊಂಡ ಭಾರತ. ಮತ್ತೊಂದು—ಅಂತಃಶಕ್ತಿಯ ಮಹಾತೇಜಸ್ಸಿನ ಸ್ವಾವಲಂಬಿ ಭಾರತ. ಅವರ ಕನಸು, ನೆನಪು ಎಲ್ಲವೂ ವಾಸ್ತವಿಕ ನೆಲೆಯಲ್ಲೇ ರೂಪುಗೊಳ್ಳುತ್ತದೆ. ಅವರ ಪ್ರತಿಯೊಂದು ಮಾತೂ ಆಳವಾದ ಅನುಭವದ ದ್ಯೋತಕ.

ಆಹಾರ ಟ್ರೇಡಿಂಗ್ ಕಾರ್ಪೋರೇಶನ್ ನಂತಹ ಹೊಣೆ ಹೊತ್ತು ಶ್ರೀ ಪೈಗಳು ಈ ವರೆಗೆ ಸೃಜಿಸಿಕೊಂಡ ಕೀರ್ತಿಗೆ ಎರವಾಗುತ್ತಾರೆ ಎಂದು ಅನೇಕರು ಟೀಕಿಸಿದ್ದುಂಟು. ಅಸಾಧ್ಯವನ್ನೇ ಸಾಧ್ಯ ಮಾಡಿದರೆ ಮಾತ್ರ ಅದು ಸಾಧನೆ ಎಂಬುದು ಶ್ರೀ ಪೈಗಳ ಸಿದ್ಧಾಂತ. ಹಾಗೆಯೇ ಆಹಾರ ಸಮಸ್ಯೆಯು ಜಟಿಲವಾದುದು ಮನುಷ್ಯನಿಂದ. ಆದ್ದರಿಂದ ಸರಿ ಮಾಡಲು ಮನುಷ್ಯನಿಗೆ ಸಾಧ್ಯವಿದೆ ಎಂದೇ ಅವರು ಧೈರ್ಯದಿಂದ ಮುಂದೆ ಬಂದಿದ್ದಾರೆ. ಅಂತಹ ಎದೆಗಾರಿಕೆ ಅವರದು. ಈ ಹೊಣೆ ಹೊರುವ ಮೊದಲು ಅವರು ಜಪಾನ್, ಅಮೇರಿಕಾ ಸಂದರ್ಶಿಸಿ ಬಂದಿದ್ದಾರೆ; ದೇಶದ ಹಿರಿಕಿರಿಯ ಮುಖಂಡರನ್ನು, ತಜ್ಞರನ್ನು ಭೆಟ್ಟಿಯಾದರು; ದೇಶದ ಹವಾಗುಣ, ಮಣ್ಣಿನ ಗುಣ, ಬೀಜದ ವೈವಿಧ್ಯತೆಯನ್ನು ಪರೀಕ್ಷಿಸಿದರು; ಬೇಸಾಯದ ಪದ್ಧತಿಯನ್ನು ನೋಡಿ ಬಂದರು. ಗದ್ದೆಯಲ್ಲಿ ಹೂಡುವ ರೈತರು, ಒಕ್ಕಲಿಗರು, ಭೂಮಾಲಿಕರು, ವ್ಯಾಪಾರಿಗಳು, ಸಂಘಗಳು, ಎಲ್ಲರೂ, ಎಲ್ಲವೂ—ಇವರ ವಿಚಾರ ವಿಮರ್ಶೆಯಲ್ಲಿ ಪಾಲುದಾರರಾದರು. ಈಗ ನಿರ್ವಹಿಸಲು ಸಿದ್ಧವಾದ ಹೊಣೆ ಸಾಮಾನ್ಯವಲ್ಲ, ಇದು ಮಹಾ ಜವಾಬ್ದಾರಿ. ಇಡೀ ದೇಶದ ಕೋಟಿ ಜನರ ನೇರ ಪ್ರಶ್ನೆಯೆಂದೇ ಅವರು ಜಾಗ್ರತೆಯಿಂದ ಮುಂದಡಿ ಇಡುತ್ತಿದ್ದಾರೆ. ಮುಂದಿಟ್ಟ ಹೆಜ್ಜೆ ಹಿಂದಿಟ್ಟ ಅನುಭವವೇ ಅವರಿಗಿಲ್ಲ. ಅಂತಹ ಮನೋಧರ್ಮ ಅವರದೂ ಅಲ್ಲ. ಅಂತಹ ದೌರ್ಬಲ್ಯ ಶಕ್ತಿಯೂ ಅವರಿಗಿಲ್ಲ. ಜಾಗ್ರತ ಮನೋಭಾವದ ವಿಪುಲ ವಿಚಾರ ಶಕ್ತಿಯ ಶ್ರೀ ಪೈ ಅಣ್ಣವರಂತ ಅಸದೃಶ ಶಕ್ತಿ ಸಂಪನ್ನರು, ಅಂತೆಯೇ ಅಜೇಯವಾದ ಯಶಸ್ಸು ಅವರದ್ದಾಗುವದರಲ್ಲಿ ಸಂದೇಹವಿಲ್ಲ.

ಪ್ರಾಮಾಣಿಕತೆ, ಅನನ್ಯಶ್ರದ್ಧೆ, ಅಮಿತ ಉತ್ಸಾಹ, ವಿಶಾಲ ಅನುಭವ, ಪರಂಪರಾಗತ ಚಾರಿತ್ರ್ಯಶುದ್ಧಿ ಹಾಗೂ ಅಭ್ಯಾಸದ ಮನೋಧರ್ಮವುಳ್ಳ ವ್ಯಕ್ತಿಗೆ ಜನಪ್ರಿಯತೆ ತಾನಾಗಿ ಒಲಿದು ಬರುವುದು ಹಾಗೂ ಯಶಸ್ಸು ಸಂಪೂರ್ಣತೆಯ ದ್ವನಿಸುವುದರಲ್ಲಿ ಏಕೆ ಅನುಮಾನ?

---

**ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ**

O.S. 245/1965.

U. ಕೃಷ್ಣಪ್ಪ ಕೂಡಾ —ವಾದಿಗಳು

ಮತ್ತು

U. ಲಕ್ಷ್ಮಣ ಯಾನೆ ಸೀತಾರಾಮ ಕೂಡಾ—ಪ್ರತಿವಾದಿಗಳು

ಇವರೊಳಗೆ—

ಪ್ರಕಟಣೆ

೩ನೆ ಪ್ರತಿವಾದಿ U. ವಿಠಲ, ಸುಂದರಿಯ ಮಗ, ಉಡುಪಿ ತಾಲ್ಲೂಕು ಮೂಡನಿಡಂಬೂರು ಗ್ರಾಮದ ಕಾಡ್ಪೆಟ್ಟು ವಾರ್ಡಿನಲ್ಲಿರುವ ಆಶ್ರಯ ವಾಸ್ತವ್ಯ—ಇವರಿಗೆ ತಿಳಿಸುವದು—

ಮೇಲ್ಕಂಡ ವಾದಿಯು ಕೂಡಾ, ನೀವು ವಗೈರೆಯ ಮೇಲೆ ಪಾಲಿನ ಬಗ್ಗೆ ಮಾಡಿದ ಮೇಲ್ಕಂಡ ನಂಬ್ರವು ತಾ. 29-10-65ಕ್ಕೆ ನಿಂವ ನೋಟೀಸಿನ ಬಗ್ಗೆ ಇಟ್ಟಿರುವದರಿಂದ ನೀವು ಸ್ವತಹಾ ಯ ವಕೀಲರ ಮೂಲಕ ಹಾಜರಾಗಿ ನಿಂವ ಉದಾಹರಣೆ ವಗೈರೆ ಇದ್ದರೆ ಹಾಜರು ಮಾಡತಕ್ಕದ್ದು. ಇಲ್ಲವಾದರೆ ನಿಮ್ಮ ಗೈರುಹಾಜರಿಯಲ್ಲಿ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla,
*Advocate for Plaintiff.*

Udipi, 18-10-65.

ನಮ್ಮ ಗಿರಾಕಿಗಳಿಗೂ ಹಿತೈಷಿಗಳಿಗೂ

**ದೀಪಾವಳಿಯ ಶುಭಾಶಯಗಳು!**

**ದಿ ಕೆನರಾ ನರ್ಸರಿ ರಿಸರ್ಚ್ ಗಾರ್ಡನ್ಸ್**

ಸ್ಥಾಪನೆ: 1914

(ದಿವಂಗತ ಕಾಪು ಮುದ್ದಣ್ಣ ಶೆಟ್ಟರಿಂದ ಸ್ಥಾಪನೆಯಾದದ್ದು)

**ಪೋಸ್ಟ್: ಉಳಿಯಾರಗೋಳಿ, ಕಾಪು. ದ. ಕನ್ನಡ**

೫೧ ವರ್ಷಗಳ ಅನುಭವದಿಂದ ಸಿದ್ಧಪಡಿಸಿದ ವಿವಿಧ ಜಾತಿಯ ಕಸಿ ಗಿಡಗಳಿಗೆ ದಕ್ಷಿಣ ಭಾರತದಲ್ಲೆಲ್ಲಾ ಹೆಸರುವಾಸಿಯಾದುದು

- ಮಾವು * ಚಿಕ್ಕು (ಸಪೋಟ) * ಪೇರಳೆ * ಅಂಜೂರ * ಪನ್ನೇರಳೆ * ಜಂಬುನೇರಳೆ * ಸೀತಾಫಲ * ಮಾದಳ * ಸಕ್ಕರೆಕಂಚು * ಅನಾನಸ್ * ಲಿಂಬೆ * ನೇರಳೆ * ದಾಳಿಂಬ ಇತ್ಯಾದಿ ಗಿಡಗಳಿಗೂ
- ಒಳ್ಳೆಯ ಜಾತಿಯ ಹೂವಿನ ಗಿಡಗಳಿಗೂ ವಿಚಾರಿಸಿರಿ.
- ವಿಶೇಷವಾಗಿ ಚಿಕ್ಕು, ಮಾವು ಹಣ್ಣುಗಳನ್ನು ಮತ್ತು ತೆಂಗಿನ ಸಸಿಗಳನ್ನು ಸಪ್ಲೈ ಮಾಡಲಾಗುವುದು.

ಸಪೋಟ (ಚಿಕ್ಕು) ನಮ್ಮ ವಿಶೇಷತೆ

ಅನೇಕ ಸರಕಾರಿ ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನೂ ಸುವರ್ಣ ಪದಕಗಳನ್ನೂ ಪಡೆದಿದೆ. ವ್ಯಾಪಾರಿಗಳು ಮತ್ತು ಕಮಿಷನ್ ಏಜಂಟರು ವ್ಯವಹರಿಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ—

**The Canara Nursery Research Gardens**

**Post: Uliargoli Kaup, S. K.**

# 255 . . . !

ಇದು ನಾವು ತಯಾರಿಸುವ
ಆಯುರ್ವೇದ ಔಷಧಗಳ ಸಂಖ್ಯೆ.

| | | |
|---|---|---|
| ಇದರಲ್ಲಿ | ಆಸವಾರಿಷ್ಟ | - 32 |
| | ಕ್ವಾಥ-ಕಷಾಯಗಳು | - 7 |
| | ಚೂರ್ಣಗಳು | - 9 |
| | ತೈಲಗಳು | - 18 |
| | ಭಸ್ಮಗಳು | - 22 |
| | ರಸೌಷಧಿಗಳು | - 130 |
| | ಲೇಹಘೃತಗಳು | - 12 |
| ಮತ್ತಿತರ | ಜನಪ್ರೀತ ಔಷಧಗಳು | - 25 |

ವಿವರಗಳಿಗೆ ಉಚಿತ ಕ್ರಯಪತ್ರಿಕೆಗೆ ವಿಚಾರಿಸಿ:—

## ಸ್ವದೇಶಿ ಔಷಧ ಭಂಡಾರ (ರಿ)

ಅಂಚೆ: ಕುಂಜಾಲು (ದ. ಕನ್ನಡ).


# ಜ್ವಲಿಸಲೀ ಜ್ಯೋತಿ ಹೃದಯ ಹಣತೆಯಲಿ

(ಹದಿಮೂರನೇ ಪುಟದಿಂದ)

ಆಗಲಿ ತಾನು ಪಕ್ಷದ ಮಟ್ಟಕ್ಕಿಂತಲೂ ಮೇಲ್ಮಟ್ಟಕ್ಕೆ ಬಂದು ಪೂರ್ಣ ಜನತೆಯ ಸೇವೆ ಮಾಡಬೇಕು. ಅಂದರೆ ಆತ ತನ್ನನ್ನು ಅಧಿಕಾರ ಗದ್ದುಗೆಗೇರಿಸಿರುವ ಪಕ್ಷಕ್ಕೆ ತಿಲಾಂಜಲಿ ಕೊಡಬೇಕೆಂದಲ್ಲ. ಪಕ್ಷದ ಬೆಳವಣಿಗೆಗೆ ಅದರ ಅಧ್ಯಕ್ಷ—, ಕಾರ್ಯದರ್ಶಿ ಮುಂತಾದವರಿದ್ದಾರೆ. ಇವರ ಕಾರ್ಯರಂಗ ಆಗ ಬೇರೆಯಾಗುತ್ತದೆ, ಅಷ್ಟೇ. ಆಗ ಮಾತ್ರ ಪೂರ್ಣ ಜನತೆ ಅಧಿಕಾರ ಗದ್ದುಗೆಯನ್ನೇರಿದವನನ್ನು ಗೌರವಿಸುತ್ತದೆ. ಇಲ್ಲದಿದ್ದಲ್ಲಿ ಎದುರು ಪಕ್ಷದ ಸರಕಾರವೆಂದು ಹೇಳೀತು. ತನ್ನ ಸರಕಾರ, ತನ್ನ ಮಂತ್ರಿವರ್ಯರೆಂದು ಹೇಳಲು, ಆ ಭಾವನೆ ಬಾರದಿದಲ್ಲಿ ಸಂಕಟದ ಸಮಯ ಅವರು ಅಧಿಕಾರಸ್ಥರ ಅಕ್ಕಪಕ್ಕದಲ್ಲಿ ನಿಲ್ಲಲಾರರು.

ಹೀಗೆ ಜನತೆಯು ಪ್ರಧಾನಿಗಳಿಗೆ ಬೆನ್ನೆಲುಬಾಗಿ ನಿಂತಾಗಲೂ ಅವರು ಮೋಹಗ್ರಸ್ತರಾಗಿ ತೊಯ್ದಾಡುವದುಂಟು. ಇಷ್ಟರ ವರೆಗೆ ಪಾಕಿಸ್ಥಾನಕ್ಕೊಂದು ಬಿಗಿನುಡಿಯಾಡಲೂ ಅವರಿಗೆ ಮನಸ್ಸಾಗುತ್ತಿರಲಿಲ್ಲ. ಕೆಲ ಕಾರಣಗಳಿಂದಾಗಿ ಕೇಂದ್ರ ಹಿಂದೂ ಧರ್ಮದಿಂದ ದೂರ ಹೋಗಿ ಇಂದು ಅದರ ನಾಶಕ್ಕೆ ಹವಣಿಸುತ್ತಿರುವವರು, ಕೇವಲ ಹದಿನೆಂಟು ವರ್ಷಗಳ ಹಿಂದೆ ಇಲ್ಲಿ ಒಂದಾಗಿದ್ದವರು ತಾನೇ! ಅವರ ಮೇಲೆ ಗದಾಪ್ರಹಾರ ನಡೆಸುವದಾದರೂ ಹೇಗೆ? ಸಹಿಸಿಕೊಳ್ಳುವ ಅವರ ಕಿರುಕುಳಗಳನ್ನೆಂದು ಅವರ ಶಾಸ್ತ್ರೀ ಕಂಣಕ್ಕಾಗಿಯೇ ಅವರು ಪ್ರಯತ್ನಿಸುತ್ತಿದ್ದರು. ಜನತಾ ಜನಾರ್ಧನನ ವಿರಾಟ ರೂಪ ದರ್ಶನವು ಆ ಮೋಹವನ್ನಿಂದು ದೂರಗೊಳಿಸಿರುತ್ತದೆ.

ಪಕ್ಷದ ಮೋಹಕೋಶದಿಂದ ಪ್ರಧಾನಿಯವರು ಹೊರಬಂದಾಗ ಸಂಪೂರ್ಣ ಭಾರತ ಅವರಿಗೆ ಸುಸ್ವಾಗತವನ್ನೀಯಲು ಕಾದಿರುತ್ತದೆ. ಸಂಪೂರ್ಣ ಜನತೆ ಭಿನ್ನ ಭಾವನೆಗಳನ್ನು ತೊರೆದು ಅವರ ಹಿಂದುಗಡೆ ನಿಂತಲ್ಲಿ ಅವರಿಗೂ ಎಲ್ಲಿಲ್ಲದ ಉತ್ಸಾಹ ಬರುತ್ತದೆ. ಆಗ ಇದೆಂತಹ ಅರಿದಳಕ್ಕೂ ನಮ್ಮತ್ತ ಕುದೃಷ್ಟಿ ಹಾಯಿಸಲು ಧೈರ್ಯ ಬರುವದಿಲ್ಲ. ಅದಕ್ಕೆ ಜನತೆಯು ಹಾಗೂ ಪ್ರಧಾನಿಯವರ ಹೃದಯ ಹಣತೆಯಲ್ಲಿ ಸಹಜ ರಾಷ್ಟ್ರೀಯತೆಯ ಜ್ಯೋತಿ ಜ್ವಲಿಸುತ್ತಿರಬೇಕು. ನಾವೆಲ್ಲರೂ ವಾತ್ಸಲ್ಯಮಯಿ ಭಾರತಮಾತೆಯ ಮಂದಿರದ ಪೂಜಾರಿಗಳು. ನಮ್ಮ ದೇಹ ಪುಷ್ಪ ಆಕೆಯ ಪವಿತ್ರ ಪಾದಪೂಜೆಗೆ ಮೀಸಲೆನ್ನುವ ಧೈರ್ಯಪೂರ್ಣ ತ್ಯಾಗ ಭಾವನೆ ನಮ್ಮಲ್ಲಿರಬೇಕು. ಇದರ ಆಶಾಜ್ಯೋತಿ ಇಂದು ಸ್ವಲ್ಪ ಮಟ್ಟಿಗಾದರೂ ಕಂಡು ಬರುತ್ತಿದೆ. ಜ್ವಲಿಸಲೀ ಜ್ಯೋತಿ ಹೃದಯ ಹಣತೆಯಲ್ಲಿ. ಇಂತಹ ಹೃದಯ ಹಣತೆಯ ದೀಪ ಸಮೂಹದ ದೀಪಾವಳಿಗೆ, ಇನ್ನಾವ ದೀಪಾವಳಿ ಸರಿಸಾಟಿ?

---

ಭಾರತದ ಕೀರ್ತಿಗಾಗಿ
**ಸರ್ವಸ್ವವನ್ನೂ ತ್ಯಾಗಮಾಡಿ!**

---


ದೀಪಾವಳಿಯ ಶುಭಾಶಯಗಳು.

# ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಸ್ಥಾಪನೆ:— 1931
ಫೋನ್ ನಂಬ್ರ 4640

ರಿ. ಆಫೀಸ್:— "ವಿಜಯಾ ಬ್ಯಾಂಕ್ ಬಿಲ್ಡಿಂಗ್"
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

## -: 54 ಶಾಖೆಗಳು ನಿಮ್ಮ ಸೇವೆಯಲ್ಲಿ :-

### ನಮ್ಮ ಸೌಲಭ್ಯಗಳು:-

- "ಜೀವನ ನಿಧಿ"— ದೈನಿಕ ಉಳಿತಾಯದ ನವೀನ ಯೋಜನೆ.
- "ವಿಜಯಾ ಕೇಶ್ ಸರ್ಟಿಫಿಕೇಟ್ಸ್"— ಮೂರು ವರ್ಷದ ಯೋಜನೆ.
- "ರಿಕರಿಂಗ್ ಡಿಪೋಸಿಟ್"— ತಿಂಗಳ ಕಂತಿನ ಉಳಿತಾಯ ಯೋಜನೆ.
- ಸೇವಿಂಗ್ಸ್ ಬ್ಯಾಂಕ್"— ಖಾತೆಯ ಮೇಲೆ ಸಾ. ಸೇ. 4½ ದರದ ಬಡ್ಡಿ.
- "ನಿರಖು ಠೇವಣಾತಿ"—ಗಳ ಮೇಲೆ ಸಾ. ಸೇ. 8ರ ವರೆಗಿನ ಬಡ್ಡಿ ದರ.

**ಅಲ್ಲದೆ ಇತರ ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು.**

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

# ಮಹಿಳೆಗೆ ಶಿಕ್ಷಣ ಏಕೆ ಬೇಕು?

ಶ್ರೀ ಬಿ. ಎ. ಶೆಟ್ಟಿ, ಬೆಂಞಾನ್ತಿಮಾರ್.

ಈ ಪ್ರಶ್ನೆ ಉದ್ಭವಿಸಿದುದು ಇಂದಲ್ಲ, ನಿನ್ನೆಯಲ್ಲ. ಆದರೂ ಇಂದಿಗೂ ಹೊಚ್ಚ ಹೊಸತಾಗಿಯೇ ಇದೆ. ಸುಶಿಕ್ಷಿತ ಸ್ತ್ರೀಯರ ಪ್ರಮಾಣವೇ ಈ ಪ್ರಶ್ನೆ ಕೇಳುತ್ತದೆ. ಹೆಣ್ಣು ಒಳ್ಳೆಯವಳಾದರೆ, ನೂರು ಜನ ಒಳ್ಳೆಯವರಾಗುತ್ತಾರೆ, ಅದುದರಿಂದಲೇ ಮಹಿಳೆಗೆ ಶಿಕ್ಷಣ ಬೇಕು; ಅಲ್ಲವೆ?

ಜಿಂತ್ತು ಸುಗಮವಾಗಿ ಸಾಗಬೇಕಾದರೆ, ಸಮಾಜದ ಪ್ರತಿಯೊಬ್ಬ ಪ್ರತಿನಿಧಿಯೂ ವಿದ್ಯಾ ಪಾರಂಗತನಾಗಿರಬೇಕು. ಸಮಾಜವೆಂಬುದು ಸ್ತ್ರೀ ಪುರುಷರಿಂದೊಡಗೂಡಿದ ಒಂದು ಸಂಸ್ಥೆ. ಆದ್ದರಿಂದ ಇವರಿಬ್ಬರೂ ಉತ್ತಮ ಶಿಕ್ಷಣವನ್ನು ಪಡೆದು ವಿದ್ಯಾವಂತರಾಗಬೇಕು. ಸ್ತ್ರೀ ಮತ್ತು ಪುರುಷ ಒಂದು ನಾಣ್ಯದ ಎರಡು ಬದಿಗಳಂತೆ ಮಾತ್ರವಲ್ಲ ಸಂಸಾರವೆಂಬ ಗಾಡಿಯ ಎರಡು ಗಾಲಿಗಳಂತೆ. ಗಾಲಿಗಳೆರಡೂ ಸರಿಯಾಗಿ ತಿರುಗಿದರೇ ಗಾಡಿ ಸುರಕ್ಷಿತವಾಗಿ ಮುನ್ನಡಿಯಿಡಲು ಸಾಧ್ಯ. ಅದಕ್ಕಾಗಿಯೇ ಈಗೀಗ ಸರಕಾರವು ಸ್ತ್ರೀಯು ಉತ್ತಮ ಗುಣ ಶೀಲವುಳ್ಳವಳಾಗಬೇಕಾದರೆ ಅವಳಿಗೆ ಉತ್ತಮ ಶಿಕ್ಷಣ ದೊರೆಯಬೇಕೆಂದು ಅಭಿಪ್ರಾಯಪಟ್ಟು ಶಾಲಾ ಕಾಲೇಜುಗಳಲ್ಲಿ ಸ್ತ್ರೀಯರನ್ನು ಪ್ರೋತ್ಸಾಹಿಸುತ್ತಿದ್ದಾರೆ. ಎಲ್ಲಿಯೋ ಒಂದು ಕುಟುಂಬದಲ್ಲಿ ಹುಟ್ಟಿದ ಒಬ್ಬಳು ಹೆಣ್ಣುಮಗಳನ್ನು ಯಾವನೋ ಒಬ್ಬ ತರುಣನಿಗೆ ಕೊಟ್ಟು ವಿವಾಹವಾದರೂ ಅವರು ಬಹು ಪ್ರೀತಿಯಿಂದ ಒಂದುಗೂಡಿ ಜೀವಿಸುವರು. ಹೆಣ್ಣಿಗೆ ಪತಿ ದೊರಕಿದೊಡನೆ, ಅತ್ಯಂತ ಪ್ರೀತಿ ಮಮಕಾರಗಳಿಂದ ಲಾಲನೆ ಪಾಲನೆ ಮಾಡಿ ಒಂದು ನಿಮಿಷವೂ ಅಗಲದೆ ಜೀವಿಸುತ್ತಿದ್ದ ಮಾತಾಪಿತೃಗಳನ್ನೂ ಗಣಿಸದೆ ಅತನೊಡನೆ ಕಷ್ಟಕಾರ್ಪಣ್ಯಗಳ ಕೋಟೆಯಲ್ಲಿ ಸಿಲುಕಿ ಬಿದ್ದು ಕಂಗಾಲಾದರೂ ತನ್ನ ಇನಿಯನನ್ನು ಆ ಸಾಧ್ವಿಯು ತೊರೆಯಲಾರಳು. ಈ ಉದಾಹರಣೆಗಳಿಂದ ಸ್ತ್ರೀ ಪುರುಷರಿಬ್ಬರೂ ಪರಸ್ಪರ ಹೊಂದಿಕೊಂಡು ಸಹಕಾರದಿಂದ ಸಾಂಸಾರಿಕ ಸಾಮಾಜಿಕ ಕಾರ್ಯಗಳಲ್ಲಿ ಒಂದುಗೂಡಿ ಬಾಳಲು ಅರ್ಹರೆಂದು ತಿಳಿಯಬಹುದು. ಮಾನವ ಜನಾಂಗವನ್ನು ಇತರ ಜೀವ ಜಂತುಗಳಿಗೆ ಸಮಾನಾಗದೆ ತೀರಾ ಭಿನ್ನ ಭಿನ್ನ ರೀತಿಯಲ್ಲಿ ಸೃಷ್ಟಿಸಿ ಅತುಲವಾದ ಜ್ಞಾನ ಶಕ್ತಿಯೆಂಬ ಮಹಾ ತೇಜಸ್ಸನ್ನು ಪರಮಾತ್ಮನು ಕರುಣಿಸಿದ್ದಾನೆ. "ವಿದ್ಯಾವಿಹೀನ ಪಶುಃ ಎಂಬ ಹಿರಿಯರ ನಾಣ್ಣುಡಿಯಂತೆ ವಿದ್ಯೆಯಿಲ್ಲದವನೊಬ್ಬ ಪಶುವಿಗೆ ಸಮಾನ, ಉತ್ತಮ ತಿಳುವಳಿಕೆ ಸದಾಚಾರವಿರುವ ಸಭ್ಯ ಪ್ರಜೆಗಳ ರಚನೆಯು ಶಿಕ್ಷಣ ಮಾತ್ರದಿಂದಲೇ ನಿರ್ಮಾಣವಾಗುತ್ತದೆಂದ ಮೇಲೆ ಶಿಕ್ಷಣವು ಪುರುಷರಿಗೆ ಮಾತ್ರ ಮೀಸಲಾಗಿರಿಸಿರುವುದಲ್ಲವಷ್ಟೆ?

ಮುಸ್ಲಿಮರ ದಾಳಿಯ ನಂತರ ಬಾದಶಹ ಸುಲ್ತಾನರ ಅಧಿಕಾರಗಳ ಚಲಾವಣೆಯು ಆರಂಭವಾಯಿತು. ಅಧಿಕಾರಿಗಳ ಬೀಬಿಯಂದಿರು ಸುಖ ವಿಲಾಸಗಳಲ್ಲಿ ಮಗ್ನರಾಗುತ್ತಿದ್ದರು. ಭಾರತ ದೇಶದಲ್ಲಿ ಭಾರತೀಯರಲ್ಲಿ ರಕ್ತಗತವಾಗಿದ್ದ ಮಾನ ಮರ್ಯಾದೆಗೆ ಎಲ್ಲಿ ಧಕ್ಕೆ ಬರಬಹುದೋ? ಬಹು ಪತ್ನಿತ್ವದಲ್ಲಿ ವಿಶ್ವಾಸವಿರಿಸಿದ್ದ ಅಧಿಕಾರಿಗಳಿಂದ ನಮ್ಮ ಮಾನಕ್ಕೆ ಎಲ್ಲಿ ಹಾನಿ ಒದಗಿತೋ? ಎಂಬ ಭಯವು ಭಾರತೀಯರಲ್ಲಿ ಉಂಟಾಗಿ ಮಹಿಳೆಯರೂ ಮನೆಯೊಳಗೆ ಇರಲು ಕಲಿತರು. ಇದರಿಂದ ಹತ್ತೊಂಭತ್ತನೆ ಶತಮಾನದಲ್ಲಿ ಸ್ತ್ರೀಯರಿಗೆ ಒಂದೇ ಒಂದು ವೃತ್ತಿ ಗೃಹಕೃತ್ಯ ಮತ್ತು ಅವರು ಪುರುಷರ ಲೈಂಗಿಕ ತೃಪ್ತಿಯ ಸಾಧನಗಳಾಗಿ ಮಾರ್ಪಟ್ಟರು.

ಸಾಂಸಾರಿಕ ಜೀವನದಲ್ಲಿ ಸ್ತ್ರೀಗೆ ಶಿಕ್ಷಣ ಯಾಕೆ ಬೇಕು? ಮೊದಲೆ ತಿಳಿಸಿದಂತೆ ಗೊತ್ತು ಗುರಿಯಿಲ್ಲದ ಅಪರಿಚಿತ ಕುಟುಂಬಗಳ ವ್ಯಕ್ತಿಗಳಿಬ್ಬರನ್ನು ವಿವಾಹವೆಂಬ ಬಂಧನದಲ್ಲಿ ನಾವು ಬಂಧಿಸುತ್ತೇವೆ. ಆ ಕೌಟುಂಬಿಕ ಜೀವನವು ಶಾಂತಿಯಿಂದಲೂ ನೆಮ್ಮದಿಯಿಂದಲೂ ಪ್ರೇಮ ಸಹಕಾರದಿಂದಲೂ ಬಾಳಿ ಬದುಕಬೇಕಾದರೆ ಸ್ತ್ರೀಯು ಉತ್ತಮ ನಡತೆ ತಿಳುವಳಿಕೆ ವಿನಯ ಸಂಪನ್ನತೆಯುಳ್ಳವಳಾಗಿರಬೇಕಾದುದು ಅಗತ್ಯ. ನೆಂಟರಿಷ್ಟರು ಬಂದಾಗ ಅತಿಥಿ ಅಭ್ಯಾಗತರು ಕೂಡಿದಾಗ ಅವರನ್ನು ಸ್ವಾಗತಿಸುವ, ಅತಿಥಿಸತ್ಕಾರ ಮಾಡುವ ಹೊಣೆಯನ್ನು ಸ್ತ್ರೀಯಾದವಳು ಹೊರಬೇಕಾಗುತ್ತದೆ. ಇದಕ್ಕೆ ಶಿಕ್ಷಣವು ಅತ್ಯಾವಶ್ಯಕ

ಮಕ್ಕಳನ್ನು ಉತ್ತಮ ಪ್ರಜೆಗಳಾಗಿ ತಿದ್ದುವಲ್ಲಿ ಉತ್ತಮ ಮಹತ್ವವನ್ನು ಕಾಪಾಡುವಲ್ಲಿ ಸ್ತ್ರೀಗೆ ಶಿಕ್ಷಣವು ಅತಿ ಅಗತ್ಯ.

ಅದಕ್ಕಾಗಿಯೇ ಉತ್ತಮ ಶೈಕ್ಷಣಿಕ ಸಂಪನ್ನತೆಯಿಂದ ಕೂಡಿದ ಮಾತೆಯೇ ನಮಗೆ ಪ್ರಾಮುಖ್ಯ. ಹಿರಿಯರಾಡಿದಂತೆ "ಮಾತೃ ದೇವೋಭವ" ಎಂಬ ಪೂಜನೀಯವಾದ ಭಾವನೆಯು ಮಕ್ಕಳಲ್ಲಿ ನೆಲೆಗೊಳಿಸಬೇಕಾದರೆ ಏನೂ ತಿಳಿಯದ ಅನಕ್ಷರಸ್ಥಳಾದ ತಾಯಿಯಿಂದ ಸಾಧ್ಯವಾಗಲಾರದು.

ಒಬ್ಬ ಪುರುಷನು ವಿದ್ಯಾವಂತನಾದರೆ ಅದರಿಂದ ಒಬ್ಬನ ಅಭಿವೃದ್ಧಿ ಆದೀತು ಒಬ್ಬ ಸ್ತ್ರೀಯು ನಿಜವಾದ ವಿದ್ಯಾವಂತೆಳಾದರೆ ಆಕೆಯಿಂದ ಒಂದು ಕುಟುಂಬವೇ ಉನ್ನತಿ ಹೊಂದಲು ಸಾಧ್ಯವಿದೆ. ಜ್ಞಾನದ ಮಟ್ಟವನ್ನೂ ಸೂಕ್ಷ್ಮ ಬುದ್ಧಿಯನ್ನೂ ಪರಾಂಬರಿಸಿ ನೋಡಿದರೆ ಇಂದು ಸ್ತ್ರೀ ವರ್ಗವು ಪುರುಷರಿಗಿಂತಲೂ ಮುಂದಿರುವರೆಂಬುದನ್ನು ನಾವು ನಮ್ಮ ಪರಿಸರದ ಶಾಲಾ ಕಾಲೇಜುಗಳ ಪರೀಕ್ಷಾ ಫಲಿತಾಂಶವನ್ನು ನೋಡಿದರೆ ಗೊತ್ತಾಗುತ್ತದೆ.

ಸ್ತ್ರೀಯಾದವಳಿಗೆ ಶಿಕ್ಷಣವಿದ್ದರೆ ಆಕೆಗೆ ತನ್ನ ಕುಟುಂಬದ ಆಯವ್ಯಯಗಳನ್ನು ಸಮತೋಲನವಾದ ರೀತಿಯಲ್ಲಿರಿಸಲು ಸಾಧ್ಯ. ದಿನದ ಉತ್ಪತ್ತಿಯಲ್ಲಿ—ಆಹಾರಕ್ಕೆ, ಬಟ್ಟೆಬರೆಗೆ, ಮನೆಬಾಡಿಗೆಗೆ, ಇತರ ಖರ್ಚುಗಳಿಗೆ ಎಂಬ ಅಂದಾಜುಪಟ್ಟಿಯನ್ನು ತಯಾರಿಸಿ ತನ್ನ ಕುಟುಂಬದ ಭಾವೀ ಭವಿಷ್ಯವನ್ನು ಹೇಗೆ ಸಂಪಾದಿಸಬಹುದೆಂಬುದನ್ನು ಆಕೆಯು ಚಿಂತಿಸುತ್ತಾಳೆ. ಅನಕ್ಷರಸ್ಥಳಾದ ಸ್ತ್ರೀಯೊಬ್ಬಳಿಗೆ ಈ ರೀತಿಯ ಅಚ್ಚುಕಟ್ಟಾದ ನಿಯಮ ಪಿಂಡಿತವಾಗಿ ಬರಲಾರದು.

ಯೋಗ್ಯ ವಿದ್ಯೆಪಡೆದ ಸ್ತ್ರೀಯು ತನ್ನ ಮಕ್ಕಳು ಮರಿಗಳ ಲಾಲನೆ ಪೋಷಣೆ ಗೃಹಕೃತ್ಯ ಪತಿ ಶುಶ್ರೂಷೆ, ಗುರುಹಿರಿಯರ ಸೇವೆ ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ನೆರವೇರಿಸಿ ಉಳಿಕೆಯ ವಿರಾಮ ಕಾಲವನ್ನು ಸದುಪಯೋಗಗೊಳಿಸುವ ಹೊಲಿಗೆ ಕಸಬು ಅಥವಾ ಯೋಗ್ಯ ಸಲಹೆ ಸೂಚನೆ ಇತ್ಯಾದಿಗಳಿಗಾಗಿ ವಿನಿಯೋಗಿಸುವಳು.

ಹೆಮ್ಮಕ್ಕಳಿಗೆ ವಿದ್ಯೆ ಅನಗತ್ಯ, ಅವರಿಗೆ ವಿದ್ಯೆ ಕೊಟ್ಟರೆ ಅಂಕಿತದಲ್ಲಿ ನಿಲ್ಲಲಾರರೆಂಬ ಕೆಲವರ ಅಭಿಪ್ರಾಯವಿದೆ. ಇಂತಹ ಅಭಿಪ್ರಾಯವು ನಿಜವಾಗಿಯೂ ತಪ್ಪು ಗ್ರಹಿಕೆಯದು.

ಐತಿಹಾಸಿಕ ಉದಾಹರಣೆಗಳನ್ನು ನೋಡಿ— ನೂರ್‌ಜಹಾನ್, ಚಾಂದಬೀಬಿ, ಝಾನ್ಸಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ, ಅಕ್ಕಮಹಾದೇವಿ, ಅನ್ನಿಬೆಸೆಂಟ್, ಸರೋಜಿನಿದೇವಿ ಇವರೆಲ್ಲಾ ನಾರಿಯರಲ್ಲವೇ?

ತಮ್ಮ ಪ್ರತಿಭಾವಂತ ಶಿಕ್ಷಣದಿಂದ ನಾರೀ ರತ್ನಗಳಾಗಿ ಮೆರೆದು ಉತ್ತಮ ಗುಣಸಂಪನ್ನರೂ ಮರ್ಯಾದವಂತರೂ ಆಗಿ ಅಮರ ಕೀರ್ತಿಯನ್ನು ಸಂಪಾದಿಸಿದವರಲ್ಲವೇ? ಇವರ ಕೀರ್ತಿಯು ಇಡೀ ಭಾರತ ದೇಶದಲ್ಲೇ ವ್ಯಾಪಿಸಿ ದೇಶ ವಿದೇಶಗಳಲ್ಲಿ ಜಾಜ್ವಲ್ಯಮಾನವಾಗಿ ಪ್ರಶಂಸನಾರ್ಹವಾಗಿದ್ದುದು ಸರ್ವರಿಗೂ ತಿಳಿದ ವಿಷಯ. ಇಂದಿನ ವಿಜಯ ಲಕ್ಷ್ಮಿ ಪಂಡಿತ್, ಇಂದಿರಾ ಗಾಂಧಿ ಮುಂತಾದವರು ಶಿಕ್ಷಣದಿಂದ ದೇಶಕ್ಕೆ ಗೌರವವನ್ನು ತರಲಿಲ್ಲವೇ?

ಕುಟುಂಬದ ಜೀವನವು ಸುಖಶಾಂತಿ ಸಂತೋಷಗಳಿಂದಲೂ ನೆಮ್ಮದಿಯಿಂದಲೂ ಬಾಳಿ ಬದುಕಲು, ಮುಂದಿನ ಜನಾಂಗವಾದ ಮಕ್ಕಳನ್ನು ಯೋಗ್ಯ ರೀತಿಯಿಂದ ರೂಪಿಸಲೂ, ಗೇದು ತರುವ ಪತಿಯ ವರಮಾನಕ್ಕೆ ಶಕ್ತಿ ಕೊಟ್ಟು ತಾನೂ ಸಾಧ್ಯವಿದ್ದವಂತೆ ಗೇಯ್ಮೆಯಲ್ಲಿ ನೆರವಾಗಿ ಸಹನೆಯಿಂದ ಜೀವಿಸಲು ನೆರೆಕರೆಯವರೊಡನೆ ಬಂಧು ಬಳಗದವರೊಡನೆ ಉತ್ತಮ ಸಹಕಾರ ಪ್ರೀತಿ ವಾತ್ಸಲ್ಯಗಳಿಂದ ಸಮಾಜದಲ್ಲಿ ಶಾಂತಿಯನ್ನು ನೆಲೆಗೊಳಿಸಲು, ದೀನ ದಲಿತರಲ್ಲಿ ಕರುಣೆ, ಬಡವರಲ್ಲಿ ದಯೆ, ಕ್ಷಮಾಶೀಲತೆ, ವಿನಯ ಸಂಪನ್ನತೆಗಳನ್ನು ಹೊಂದುವಂತೆ ಸಮಾಜವು ಮಾರ್ಪಡಲು, ಸತ್ಪ್ರಜೆಗಳ ಸಮಾಜ ರಚನೆಯಾಗಲು ಸ್ತ್ರೀಯಾದವಳಿಗೆ ಶಿಕ್ಷಣವು ಅಗತ್ಯವಿದೆ.

ಸಮಾಜದ ಒಂದಂಗವಾದ ಸ್ತ್ರೀ ಸಮಾಜವು ನಾಶದ ಕಡೆಗೆಸೆಯಲ್ಪಡದೆ, ಆ ಸಮೂಹವನ್ನು ಸತ್ಪಥದಲ್ಲಿ ಮುನ್ನಡಿಸಿ, ಯೋಗ್ಯ ವಿದ್ಯೆಯನ್ನವರಿಗೆ ಇತ್ತರೆ ಭಾರತದ ಭವಿತವ್ಯವು ಹೇಳಲಸದಳವಾದ ಅಭಿವೃದ್ಧಿಯ ಸೋಪಾನವಾಗಿ ಬದಲಾವಣೆ ಹೊಂದುವುದೆಂಬುದು ಸತ್ಯ ಸಂಗತಿ.

ಬಡವನಾದರೂ ತಂತಮ್ಮ ಹೆಮ್ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಪೂರ್ತಿಗೊಳಿಸಲು ಹಿಂಜರಿಯಬಾರದು. ಮುಂದಿನ ಏಳಿಗೆಯ ಪೀಳಿಗೆಯಾದ ಇಂದಿನ ಮಕ್ಕಳಿಗೆ ನಿಜವಾದ ಶಿಕ್ಷಣವನ್ನು ಕೊಟ್ಟರೇನೆ ಸಮಾಜದ ಪ್ರಗತಿ. ತೃತೀಯ ಯೋಜನಾವಧಿಯಲ್ಲಿ ಸರಕಾರವು ಹೆಚ್ಚಾಗಿ ಹೆಣ್ಣುಮಕ್ಕಳ ಶಿಕ್ಷಣದ ಕಡೆಗೇನೆ ಗಮನ ಕೊಟ್ಟಿದೆ. ಆದ್ದರಿಂದ ಪ್ರತಿ ಮಕ್ಕಳೂ ವಿದ್ಯಾವಂತರಾಗಿ ಸಮಾಜವು ಉನ್ನತ ಮಟ್ಟಕ್ಕೇರಲಿ. ನಮ್ಮ ನಾಡು, ಸಂಸ್ಕೃತಿಯು ಬೆಳಗಲಿ.

*With best compliments*

*From*

**S. Chandrashekar**

*Proprietor,*

**S. C. S. MOTOR SERVICE**

**MANGALORE**

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
**ವಾರ್ಷಿಕ ಚಂದಾ ರೂ. ೧೦**

# ಜೈಮಿನಿ ಭಾರತದಲ್ಲಿ ಸೀತಾಪರಿತ್ಯಾಗದ ಹಿನ್ನೆಲೆ

(ಹನ್ನೆರಡನೇ ಪುಟದಿಂದ)

ಈ ವಿಚಾರದಿಂದ ಕಳವಳಗೊಂಡ ತಮ್ಮಂದಿರು ಬಂದು ರಾಮನನ್ನು ಆದೆಷ್ಟು ಕದಲ್ಲಿ ಸಂತಯಿಸಿದರೂ ರಾಮನು ಸುಮ್ಮನಾಗಲಿಲ್ಲ "ಕಲಿಯುಗದ ವಿಪ್ರರಾಚಾರವಂ ಬಿಡುವಂತೆ-ಸೀತೆಯಂ ಬಿಟ್ಟೆ"ನೆಂದು ರಾಮನು ಹೇಳಿದನು. (ಈ ಮಾತು ಮೂಲಕೃತಿಯ ಮಾತಿಗಿಂತ ವಿಕೃತವಾಗಿದೆ. ಲಕ್ಷ್ಮೀಶನ ಕಾಲದ ಸಾಮಾನ್ಯ ಜನಜೀವನ ಇಲ್ಲಿ ತುಸ ಪಡಿಮೂಡಿದೆ!) ಜನ್ಮಾಪಕೀರ್ತಿಗೊಳಗಾಗಲೇತಕೆ, ಮತ್ತೆಯುಂ ಮಹಾಯೋಗಿ ಬಿಡುವಂತೆ ವನುಳಿವೆಂ' ಎಂದೂ ರಾಮನು ಹೇಳಿದನು. ಇವುಗಳು ಮೂಲಕೃತಿಯಲ್ಲಿ ಹೀಗಿವೆ:

'ಸೀತಾಚ ತ್ಯಜ್ಯತೇ ಲೋಕೇ
ಕಲ್ಪಾಪಾಷಂಡಭಿಃ ಶ್ರುತಿಃ'
"ಲೋಕಾಪವಾದ ಭೀತೇನ
ತ್ಯಜ್ಯತೇ ಜಾನಕೀ ಮಯಾ।
ಸಂಸಾರ ಭಯಭೀತೇನ
ಯೋಗಿನಾ ಮಮತಾ ಯಥಾ."

ಇದು ಮಾತ್ರವಲ್ಲ, ನಿಂದೆಯ ವಿಷಯದಲ್ಲಿ ಇನ್ನೊಂದು ಮಾತು ಹೇಳಿದೆ:

'ಯೈಃ ಪುತ್ರೈಃ ಬಂಧುಭಿರ್ದಾರೈಃ
ಧ್ವಂಸಾಮಸ್ಮಯಶೋ ಭವೇತ'|
ತ್ಯಾಜ್ಯಾಃ ಪುತ್ರಾಃ ಬಾಂಧವಾಶ್ಚ
ದಾರಾಃ ಪ್ರಾಣಪ್ರಿಯಾ ಅಪಿ||'
"ಆತ್ಮಾನಮಪ್ಯಹಂ ಜಹ್ಯಾಂ
ಯುಷ್ಮಾಂಶ್ಚ ಪುರುಷರ್ಷಭಾನ್ |
ಅಪವಾದ ಭಯೋದ್ವಿಗ್ನಃ
ಕಿಂಪುನರ್ಜನಕಾತ್ಮಜಾಂ ||"

ವಾಲ್ಮೀಕಿರಾಮಾಯಣ ಹಾಗೂ ಪದ್ಮಪುರಾಣಗಳಲ್ಲಿ ಈ ಮಾತಿನ ಪಡಿಯಚ್ಚು ಮೂಡಿದೆ. 'ಅವಳೆನ್ನೊಳ್ಪಾಡಿರ್ದ ಕೊಪ್ಪೆ ಕಾನನಕ್ಕೈದ ಬೇಕೆಂದು ಬಯಕೆಯಿಂದದನೆನಂ ನಿನಗೆಂದು' ರಾಮನು ಕಾಡಿನಲ್ಲಿ ಸೀತೆಯನ್ನು ಬಿಟ್ಟುಬರುವಂತೆ ಲಕ್ಷ್ಮಣನಿಗೆ ಕಟ್ಟಪ್ಪಣೆ ಮಾಡಿದನು.

**ಅಗಸನ ಪೂರ್ವಕಥೆ:** ಈ ಅಗಸನ ಬಗ್ಗೆ ಪೂರ್ವ ಕಥೆ ಪದ್ಮಪುರಾಣದಲ್ಲಿ ಹೇಳಿದೆ; ಇಲ್ಲಿಗೆ ಅದನ್ನು ಸಮನ್ವಯಿಸಬಹುದು: "ಬಾಲ್ಯದಲ್ಲಿ ಒಮ್ಮೆ ಸೀತೆಯು ಉದ್ಯಾನದಲ್ಲಿರುವಾಗ ಗಂಡು ಹೆಣ್ಣು ಗಿಳಿಗಳೆರಡು ಮುಂದಲ್ಲಿ ಕೂತು, ಸೀತೆಗೂ ರಾಮನಿಗೂ ಮುಂದಾಗುವ ವಿವಾಹದ ಕತೆಯನ್ನು ಮಾತಾಡಿದುದು ಸೀತೆಗೆ ಗೊತ್ತಾಯಿತು, ಆಕೆ ಅವನ್ನು ಗೆಳತಿಯರಿಂದ ಹಿಡಿಸಿದಳು. ಅವು ವಾಲ್ಮೀಕಿಯಾಶ್ರಮದಲ್ಲಿ ಭವಿಷ್ಯದ ರಾಮಾಯಣ ಕಥೆ ಕೇಳಿದಂತೆ ಹೇಳಿದ್ದವು. ಆಗ ಸೀತೆಯು ತನ್ನ ವಿವಾಹದವರೆಗೆ ಅವನ್ನು ಸಾಕುವೆನೆಂದಳು; ಗಂಡು ಗಿಳಿಯು ಆದೆಷ್ಟು ಸಮಾಧಾನ ಹೇಳಿದರೂ ಕೇಳಲಿಲ್ಲ. ಗಂಡು ಗಿಳಿಯನ್ನು ಬಿಟ್ಟು ಆ ಹೆಣ್ಣು ಗಿಳಿಯನ್ನು ಬಿಡಲೊಲ್ಲದಾದಳು. ಆಗ ಹೆಣ್ಣು ಗಿಳಿಯು ಗರ್ಭಿಣಿಯಾದ ತಾನು ಗಂಡು ಗಿಳಿಯಿಂದ ವಿಯೋಗಿಸಲ್ಪಟ್ಟಂತೆ, ಸೀನೂ ಗರ್ಭಿಣಿಯಾದಾಗ ಗಂಡನಿಂದ ವಿಯೋಗಿಸಲ್ಪಡು' ಎಂದು ಶಪಿಸಿ ತೀರಿಕೊಂಡಿತು. ಅದನ್ನೆಲ್ಲಾ ನೋಡುತಿದ್ದ ಗಂಡು ಗಿಳಿಯು ಗಂಗೆಯಲ್ಲಿ ಬಿದ್ದು ತೀರಿಕೊಂಡಿತು. ಅಯೋಧ್ಯೆಯಲ್ಲಿ ಕ್ರೋಧನನೆಂಬ ಅಗಸನಾಗಿ ಹುಟ್ಟಿತು. ಗರ್ಭಿಣಿಯಾದಾಗ ಸೀತೆಯನ್ನು ರಾಮನಿಂದ ವಿಯೋಗಿಸಲ್ಪಡುವಂತೆ ದುರ್ವಾಕ್ಯವಾಡಿತು!" ಈ ಕತೆಯಿಂದಾಗಿ, ಸೀತಾರಾಮರು ಕೆಲವು ವರ್ಷ ವಿಯೋಗಗೊಳ್ಳುವ ವಿಷಯ ವಿಧಿವಿಧಾನ—ವಿಧಿ ವಿಲಾಸವೆಂದು (ಪೂರ್ವವಿಹಿತವೆಂದು) ನಾವು ತಿಳಿದುಕೊಳ್ಳಬಹುದಾಗಿದೆ!

**ಸೀತಾ ಪರಿತ್ಯಾಗದ ಕಾರಣಗಳು:** ಈ ಮೇಲೆ ಸೂಚಿಸಿದ ವಿಚಾರಗಳಿಂದ ಸೀತಾಪರಿತ್ಯಾಗದ ಕಾರಣಗಳೇನೆಂದು ತುಸ ತಿಳಿಯುತ್ತವೆ. "ಲೋಕಾಪವಾದಕ್ಕೆ ಜನ ಹೆದರಬೇಕು. ನಿಜ. ಆದರೆ ಲೋಕಾಭಿಪ್ರಾಯ ಯಾವುದು? ಯಾರ ಅಭಿಪ್ರಾಯ ಲೋಕಾಭಿಪ್ರಾಯವೆನ್ನಿಸುತ್ತದೆ...ಲೋಕಮತವನ್ನು ಅಂತುಕೊಳ್ಳುವುದೂ ಸುಲಭವಲ್ಲ ಲೋಕೋಭಿನ್ನರುಚಿಃ" ಎಂಬ ಹೇಳಿಕೆ ಎಲ್ಲ ಕಾಲಕ್ಕೂ ಸತ್ಯ. ಸೀತೆಯನ್ನು ರಾಮ ಬಿಟ್ಟದ್ದು ಆ ಅಗಸನೊಬ್ಬನಿಗೆ ಸಮ್ಮತವೆನಿಸಿರಬಹುದೇನೋ? ಅಯೋಧ್ಯೆಯ ಪ್ರಜೆಗಳೆಲ್ಲ ಒಪ್ಪಿದರೆಂದು ತಿಳಿಯಬಾರದು. ಅರಮನೆಯಲ್ಲಿನ ಜನರೇ ರಾಮನ ಈ ನಿರ್ಧಾರವನ್ನು ಒಪ್ಪಲಿಲ್ಲ. ಭರತ ಶತ್ರುಘ್ನರು [ಲಕ್ಷ್ಮಣನೂ] ಈ ವಿಷಯದಲ್ಲಿ ರಾಮನನ್ನು ಉಗ್ರವಾಗಿ ವಿರೋಧಿಸಿದರು....ರಾಮ ದೊಡ್ಡವನಾದರೂ ಅವನು ಮಾಡಿದ ಈ ಕ್ರೂರ ಕರ್ಮ ಧರ್ಮವೆನಿಸಲಾರದು" ಎಂದು ಹಿರಿಯ ಮಂದಿಯಿಂದ ದೊಡ್ಡ ಮಾತು ಕೇಳುತ್ತದೆ. (ಸುಧಾ. 19—9-65) ಶ್ರೀ ಕೆ. ವೆಂಕಟರಾಮಪ್ಪನವರ ಲೇಖನ)

ಸೀತೆಯು ರಾವಣನ ಅಶೋಕ ವನದಲ್ಲಿದ್ದ ಮಾತ್ರಕ್ಕೆ—ಆ ಮೊದಲು ರಾವಣನು ಅವಳನ್ನು ಕೈ ಮುಟ್ಟಿ ಕದ್ದೊಯ್ದ ಮಾತ್ರಕ್ಕೆ ಆಕೆ ಅನ್ಯಮನಸ್ಕಳೆಂದು—ಅಧರ್ಮಸ್ಥೆಯೆಂದು ಹೇಳಲು ಬರುವುದಿಲ್ಲ ಅಂತೆ, ರಾವಣ ವಧೆಯಾದ ವೇಳೆ ರಾಮನಿದಿರು—ನೆರೆದ ಲೌಕಿಕ ಅಲೌಕಿಕರ ಇದಿರು ಆಕೆ ಅಗ್ನಿಪೂತೆಯೆಂದು ತಿಳಿದುದೇ ಆಗಿದೆ. ಅನಂತರ ಕೆಲವು ವರ್ಷಗಳು ದಾಟಿದ ಮೇಲೆ ಸೀತೆ ಗರ್ಭಿಣಿಯಾದುದು. ಆಗ ಅಗಸನೊಬ್ಬನು ತನ್ನ ಹೆಂಡತಿಯ ನಾಲ್ಕು ದಿನದ ಪರಗೃಹವಾಸವನ್ನು ಸಹಿಸದೆ ಆಡಿದ ಮಾತಿನೆಡೆಯಲ್ಲಿ 'ರಾಮನಂತೆ ತಾನು ಹೆಂಡತಿಯನ್ನು ಕೊಂಡು ಬಾಳೆನೆಂದ ದೂರು 'ಲೋಕಾಭಿಪ್ರಾಯ'ವೆಂದು ಮುದ್ರೆಯೊತ್ತುವಷ್ಟು ಪ್ರಾಧಾನ್ಯವಾಗಿಲ್ಲ! ರಾಮನು ಅದನ್ನು ನಿಮಿತ್ತೀಕರಿಸಿ ಸೀತೆಯ ಪರಿತ್ಯಾಗಕ್ಕೆಳಸಿದುದಕ್ಕೆ ಈ ಮೊದಲಿನ ಕಾರಣಗಳೆ ಪ್ರಾಬಲ್ಯವೆಂದು ತಿಳಿಯಬೇಕು.

'ಲೋಕಾಭಿಪ್ರಾಯ'ವೆಂಬುದು ಸಾರ್ವಜನಿಕವಾಗಿ ಮಾಡತಕ್ಕ ಸಾಮಾಜಿಕ ರಾಜಕೀಯ ಧಾರ್ಮಿಕಾದಿ ಕಾರ್ಯಗಳಿಗೆ ಬೇಕಾದುದು. ರಾಜನಾದರೂ ಪ್ರಜೆಯಾದರೂ ವೈಯಕ್ತಿಕ ವಿಷಯಗಳಲ್ಲಿ ಪ್ರಾಮಾಣಿಕವಾದ ವಿಚಾರದಿಂದ ತನ್ನ ಪಾಪ ಪುಣ್ಯಗಳ ಶಂಕೆಯ ಬಗ್ಗೆ ತನಗೆ ಕಂಡ ನಿಲುವಿನಲ್ಲಿ ಸಾಗುವುದು ಸಾಹಜಿಕವಾಗಿದೆ. ಕೈಕೆಗೆ ಬಾಯ್ದೆರೆ ಒಪ್ಪಿಗೆಯಿತ್ತ ತಂದೆಯ ಮಾತಿನ ಸತ್ಯತೆಗಾಗಿ ರಾಮನು ವನವಾಸಕ್ಕೆಳಸುವಾಗಲೂ, ದಶರಥನೇ ರಾಮನನ್ನು ಅಡ್ಡಯಿಸಿದ್ದನು. ಲಕ್ಷ್ಮಣನೂ ಅಡ್ಡಯಿಸಿ ಮಾತಾಡಿದ್ದನು. ಅಯೋಧ್ಯೆಯ ಜನತೆಯೇ ರಾಮನೊಂದಿಗೆ ಕಾಡಿನ ವಾಸಕ್ಕೆಳಸಿ ಹೊರಟಿತ್ತು. ಆಗ ರಾಮನು ಆದೆಷ್ಟು ಸಮಾಧಾನದಿಂದ ತಡೆದು ಅವರನ್ನು ಮರಳುವಂತೆ ಹೇಳಿದರೂ ಕೇಳದೆ ಮತ್ತೆ ಅವರು ಅನುಸರಿಸುವಲ್ಲಿ, ರಾಮನು ಅವರಿಗೆ ತಿಳಿಯದಂತೆ ಮುಂದೆ ಸಾಗಿದನು ಮತ್ತೆ ಜನರು ಊರಿಗೆ ಸಾಗಿದರು. (ಅಯೋಧ್ಯಾಕಾಂಡ ಅ. 47). ಲೋಕಾಭಿಪ್ರಾಯಕ್ಕೆ ಇಲ್ಲಿ ಅದೇನೂ ಪ್ರಾಬಲ್ಯವಿಲ್ಲ, ಲೋಕಾಭಿಪ್ರಾಯವು ರಾಮನನ್ನು ತಡೆದಿಲ್ಲ!

ಕೈಕೆಗೆ ರಾಜನು ಎರಡು ವರ ಕೊಟ್ಟಿದ್ದನು. ಅವುಗಳನ್ನು ಈಗ ಕೈಕೆ ತನ್ನ ಆಶಯಕ್ಕೆ ತಕ್ಕ ಬಳಸಿದಳು. ರಾಜನು ಈ ಬಗ್ಗೆ ಹಿನ್ನುಡಿಯಲು ಸಲ್ಲನು. ರಾಜನ ಮಾತಿನ ಸತ್ಯತೆಗಾಗಿ ರಾಮನು ಕಾಡಿಗೈದನು. ಪಿತನು ಅಸತ್ಯಭಾಷಿಯೆಂದಾಗಬಾರದು ಎಂಬುದೊಂದೇ ರಾಮನ ಧರ್ಮಸೂತ್ರವಾಗಿತ್ತು! ರಾಜ್ಯದಲ್ಲಿ ಯುವರಾಜ ಪಟ್ಟಕ್ಕೆ ಇತ್ತ ಸಿದ್ಧವಾಗಿತ್ತು. ರಾಜ್ಯದ ಮಂತ್ರಿ ಗುರುಜನರೆಲ್ಲರೂ ರಾಮನ ಪಟ್ಟಾಭಿಷೇಕಕ್ಕೆ ಒಪ್ಪಿದ್ದರು. ಅಂದ ಮೇಲೆ, ರಾಮನು ಕಾಡಿಗೆ ಹೋಗಲು ಒಲ್ಲೆನೆಂದಿದ್ದರೇನಾಗುತ್ತಿತ್ತು? ರಾಮನು ದಶರಥನ ಸತ್ಯತೆಯ ಸಲುವಾಗಿ ಕಾಡಿಗೆ ಹೊರಟನು. ಲೋಕಾಭಿಪ್ರಾಯವೇನೆಂದು ಇಲ್ಲಿ ರಾಮನು ತಿಳಿಯ ಬಯಸಿಲ್ಲ. ಅಂದರೆ, ರಾಮನ ವನವಾಸಕ್ಕೆ ಕೈಕೆಯ ವರಗಳು ನಿಮಿತ್ತ ಕಾರಣಗಳಷ್ಟೆ! ದೈವವಿಲಾಸದಂತೆ ರಾಮನು ಕಾಡಿಗೆ ನಡೆದನು, ಮುಂದಿನ ರಾಮಾಯಣದ ಕತೆಗೊಂದು ಸದವಕಾಶವಾಯಿತು!

ಅಂತೆ, ಸೀತಾ ಪರಿತ್ಯಾಗದ ವಿಷಯದಲ್ಲೂ ಈ ಮೊದಲಿಂದ ಹಿನ್ನೆಲೆಯ—ಮೂಲಕಾರಣಗಳೇ ಪರಿಗಣನೀಯಗಳಾಗಿವೆ. ಅಗಸನ ಮಾತು ಇಲ್ಲಿ ಕೇವಲ ನಿಮಿತ್ತ ಕಾರಣವೆಂದು ತಿಳಿಯಲಡ್ಡಿಯಿಲ್ಲ! ಇಂತಹ ಸಮಸ್ಯೆಗಳನ್ನು—ಪ್ರಮೇಯಗಳನ್ನು ಕೇವಲ ತಾರ್ಕಿಕ—ಲೌಕಿಕ ದೃಷ್ಟಿಯಲ್ಲಿ ಏನೋ ವಿವರಿಸುವುದು ಚೆನ್ನಲ್ಲ. "ರಾಮನು ದೊಡ್ಡವನಾದರೂ ಅವನು ಮಾಡಿದ ಈ ಕ್ರೂರ ಕರ್ಮ ಧರ್ಮವೆನಿಸಲಾರದು" ಎನ್ನುವುದು ನಮ್ಮ ಮೌಢ್ಯವೂ ಅಧರ್ಮ ಬುದ್ಧಿಯೂ ಆಗಿದೆಯಲ್ಲದೆ ಬೇರೇನೂ ಹೇಳಿಸಿಲ್ಲ! ಜೈಮಿನಿ ಈ ಬಗ್ಗೆ ಹೇಳಿದ—ಸೀತೆಯಿಂದ ಹೇಳಿಸಿದ ಮಾತುಗಳಿವು:

"ಸ ರಾಮೋ ವ್ಯಜಹಾತ್ಸೀತಾಂ
ದೈವಮೇವಹಿ ಕಾರಣಂ |
ನ ದೋಷಸ್ತಸ್ಯ ರಾಮಸ್ಯ
ಮಮಾಯಮಿತಿ ಚಿಂತಯೇ||"

ಅದು ಕಾರಣ, ಲಕ್ಷ್ಮೀಶ ಕವಿಯು ಈ ಬಗ್ಗೆ ಹೇಳಿದ ಸೀತೆಯಿಂದ ಹೇಳಿಸಿದ ಮಾತುಗಳಿವು: "ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ, ಕಡು ಪಾತಕಂಗೈದು ಪೆಣ್ಣಾಗಿ ಸಂಭವಿಸಿದೊಡಲಂ ಪೊರೆವುದಿನ್ನೊಳಪರಾಧವುಂಟು"

ಕನ್ನಡದ ಮಹಾಕವಿ ಲಕ್ಷ್ಮೀಶನು ಬರೆದ ಜೈಮಿನಿ ಭಾರತವನ್ನು ಪರಿಶೀಲಿಸುವಾಗ ಮೂಲಗ್ರಂಥವನ್ನು ಹೊಂದಿಸಿ ಅರ್ಥವಿಸಬೇಕು. ಇಲ್ಲಿ ಮೂಲದ ಕೆಲವು ನುಡಿಮುತ್ತುಗಳು ನಮಗೆ ತುಂಬಾ ತಿಳಿವನ್ನುಂಟುಮಾಡುತ್ತವೆ. ಪ್ರತಿಯೊಂದು ಕಾರ್ಯಕ್ಕೆ ಲೌಕಿಕವಾದ ಕಾರಣವಿರುವಂತೆ ಅಲೌಕಿಕವಾದ ಕಾರಣದ ಹಿನ್ನೆಲೆಯಿರುವುದೆಂದು ಭಾರತೀಯರು ಅದೆಂತೂ ಮರೆಯುವಂತಿಲ್ಲ! ರಾಮಾಯಣ ಕಥಾ ಸಾಗರದಲ್ಲಿ ಸೀತಾ ಪರಿತ್ಯಾಗದ ಕತೆ ನಿಚ್ಚ ಹೊಳೆವ ಅತ್ಯಮೌಲ್ಯವಾದ ದಿವ್ಯ ರತ್ನವೊಂದು!

---

ಬಡತನದಿಂದ ರಾಜಶಕ್ತಿ ನಾಶವಾಗುತ್ತದೆ. ಸಿರಿತನದಿಂದ ಪ್ರಜಾಶಕ್ತಿ ಮಣ್ಣುಗೂಡುತ್ತದೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

## ಕವಿ ಚಮೂಪತಿಯಾಗಿ ಮೆರೆದಿರುವ ನಮ್ಮ ನಾಡು

(ಹನ್ನೊಂದನೇ ಪುಟದಿಂದ)

ಗಿರುವುದು. ಈಗಾಗಲೇ ಬದಿಯಡ್ಕಕ್ಕೆ ಪೆರಡಾಲ ಹೊಳೆಯಿಂದ ನಳ್ಳಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಪಂಚಾಯತಿನಿಂದ ಸರಕಾರದ ನೆರವು ಪಡೆದು ಒಂದೇ ವರ್ಷದಲ್ಲಿ ಇಪ್ಪತ್ತು ಬಾವಿಗಳನ್ನು ತೋಡಿಸಲಾಗಿದೆ. ಕೆಲವು ಬಾವಿಗಳನ್ನು ನೀರು ಸಿಕ್ಕಲು 20,೫೦ ಅಡಿಗಳ ಆಳಕ್ಕೆ ಹೊಂಡ ತೋಡಬೇಕಾಗಿ ಬಂದಿದೆ.

"ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಪೆರಡಾಲ ಗ್ರಾಮ ಮುಂದುವರಿದಿದೆ. ಯಕ್ಷಗಾನ, ತಾಳ ಮದ್ದಳೆ, ನಾಟಕ, ನೃತ್ಯ, ಸಂಗೀತಾದಿ ಕಾರ್ಯಕ್ರಮಗಳು ಆಗಾಗ ಇಲ್ಲಿ ನೆರವೇರುತ್ತವೆ; ಕವಿ ಸಮ್ಮೇಳನಗಳನ್ನೂ ಇಲ್ಲಿ ಏರ್ಪಡಿಸಲಾಗುತ್ತಿದೆ. ಕಲೆ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅಗ್ರಗಣ್ಯರಾದ ಮಹನೀಯರನ್ನು ಆಮಂತ್ರಿಸಿ ಅವರಿಗೆ ಗೌರವ ಪೂರ್ವಕ ಸನ್ಮಾನ ಪ್ರಶಸ್ತಿ ಪತ್ರಗಳನ್ನು ಪಂಚಾಯತು ಸಮರ್ಪಿಸುತ್ತಿದೆ"—ಎಂದು ಪಂಚಾಯತ್ ಅಧ್ಯಕ್ಷರಾದ ಶ್ರೀ ರೈಯವರು ತಿಳಿಸಿದರು.

ಗ್ರಾಮಸ್ಥರ ಉದಾರ ಸಹಕಾರದ ಉತ್ತಮ ನಿದರ್ಶನವಾಗಿ ಈ ಎಲ್ಲಾ ಕಾರ್ಯಕಲಾಪಗಳು ಜರಗುತ್ತಿದ್ದರೂ, ಇಂತಹ ಕಾರ್ಯಗಳಲ್ಲೆಲ್ಲಾ ಯೋಗ್ಯ ಮಾರ್ಗದರ್ಶನ ನೀಡುತ್ತಿರುವ, ನಿಃಸ್ವಾರ್ಥದಿಂದಲೂ, ಸ್ವಯಂ ಸ್ಫೂರ್ತಿಯಿಂದಲೂ, ಸೇವಾ ಮನೋಭಾವನೆಯಿಂದಲೂ ದುಡಿಯುತ್ತಿರುವ ಗ್ರಾಮದ ಮುಂದಾಳುಗಳನ್ನು ನಾವೀ ಸಂದರ್ಭದಲ್ಲಿ ಗಣಿಸತಕ್ಕದ್ದಿದೆ: ಇದರಲ್ಲಿ ಪ್ರಥಮ ಗಣನೀಯರಾಗಿರುವವರು, ಗ್ರಾಮದ ಪ್ರಥಮ ನಾಗರಿಕರಾದ, ಶ್ರೇಷ್ಠ ಕವಿಯೂ, ವಿದ್ವಾಂಸರೂ ಧುರೀಣರೂ ಆಗಿರುವ ಪಂಚಾಯತ್ ಅಧ್ಯಕ್ಷ ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು. ಅಧ್ಯಕ್ಷರು ಸಹಿತ ಮೂರು ಮಂದಿ ಪಂಚಾಯತ್ ಸದಸ್ಯರು ಯುನಿವರ್ಸಿಟಿ ಪದವೀಧರರು ಮತ್ತು ಅಧ್ಯಾಪಕರು. ಈ ಸಂದರ್ಭದಲ್ಲಿ ಇಂತಹ ಸಮರ್ಥ ಮುಂದಾಳುಗಳನ್ನೋ, ಇವರನ್ನು ಆಯ್ಕೆಮಾಡಿದ ಜನತೆಯನ್ನೋ ಯಾರನ್ನು ನಾವು ಅಭಿನಂದಿಸತಕ್ಕುದೆಂದು ಸಂಶಯಪಡುವ ಪರಿಸ್ಥಿತಿಯಾಗಿದೆ. ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಧರ್ಮಗಳಿಗೆ ಸೇರಿದ ಇಲ್ಲಿನ ಜನರು ಪರಸ್ಪರ ಸೌಹಾರ್ದ ಸಹಕಾರಗಳ ಜೀವನ ಸಾಗಿಸುತ್ತಿದ್ದಾರೆ.

ಸ್ವಾತಂತ್ರ್ಯ ಪ್ರಾಪ್ತಿಯ ನಂತರದ ಇಲ್ಲಿನ ಎಲ್ಲಾ ಅಭಿವೃದ್ಧಿ ಕಾರ್ಯಗಳ ಕುರಿತಾಗಿ ತಿಳಿಸುವಾಗ ಪಂಚಾಯತ್ ಅಧ್ಯಕ್ಷರು ಗ್ರಾಮದ 'ಗಾಂಧಿ'ಯ ಕುರಿತು ಗೌರವಪೂರ್ವಕ ಪ್ರಸ್ತಾಪಿಸಿದರು. "ನಾಡಿನ ಬಿಡುಗಡೆಯ ಹೋರಾಟದ ಸಂದರ್ಭದಲ್ಲಿ ಈ ಗ್ರಾಮದ ಜನತೆ ತನ್ನ ಪಾಲಿನ ಸೇವೆಯನ್ನು ಸಲ್ಲಿಸಿದೆ. ಇಲ್ಲಿನ ಸ್ವಾತಂತ್ರ್ಯ ಯೋಧರನೇಕರು ಲಾಠಿ ಪೆಟ್ಟುಗಳನ್ನು ತಿಂದು, ಸೆರೆಮನೆ ಸಂಕಷ್ಟಗಳನ್ನೆಲ್ಲಾ ಅನುಭವಿಸಿದ್ದಾರೆ: ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಚ್ಚಿನ ತ್ಯಾಗ ಮಾಡಿದ ಮಹನೀಯರಲ್ಲಿ ಒಬ್ಬರು ಶ್ರೀ ಖಂಡಿಗ ಕೃಷ್ಣ ಭಟ್ಟರು. ಇವರನ್ನು 'ಪೆರಡಾಲ ಗಾಂಧಿ' ಎಂಬ ಅಭಿಧಾನದಿಂದ ಜನರು ಗೌರವಿಸುತ್ತಿದ್ದರು. ನಮ್ಮ ಪಂಚಾಯತಿನ ಇಬ್ಬರು ಮಾಜೀ ಅಧ್ಯಕ್ಷರಾದ ಶ್ರೀ ಬಿ. ಕಮಲಾಕ್ಷ ಪೈಗಳು, ಡಾ॥ ಪಿ. ಎಸ್. ಶಾಸ್ತ್ರಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರು." ಎಂದು ಶ್ರೀ ರೈಯವರು ಅಭಿಮಾನ ಪೂರ್ವಕ ಹೇಳಿದರು.

ಇಂದು ಇಂತಹ ಸಮರ್ಥ ಧುರೀಣರ ಮಾರ್ಗದರ್ಶನದಿಂದ ಈ ಗ್ರಾಮ ಅಭಿವೃದ್ಧಿಯ ಹಾದಿಯಲ್ಲಿ ಮುಂದಡಿಯಿಟ್ಟಿದೆ. ತ್ಯಾಗಕ್ಕೆ ಸನ್ನದ್ಧರಾದ ಇಲ್ಲಿನ ಜನತೆಯ ಹಾಗೂ ಜನತಾ ಧುರೀಣರ ಒಗ್ಗಟ್ಟಿನ ಚಟುವಟಿಕೆಗಳ ಫಲವಾಗಿ ಈ ಪೆರಡಾಲ ಗ್ರಾಮವು ಐಶ್ವರ್ಯದ ಮಣಿಗೋಪುರವನ್ನು ಬಹುಬೇಗನೇ ಮುಟ್ಟುವುದೆಂದು ನಾವು ನಿಶ್ಚಯವಾಗಿಯೂ ನಂಬುವಂತಾಗಿದೆ.

---


**ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ**

ಹಗಲೆನ್ನದೆ ಇರುಳೆನ್ನದೆ
ಋತುಭೇದ ವೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

# ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ
ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ, ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ


## ದೇಶಕಾಗಿ ದೇಹ

ಈ ದೇಶದ ಮಣ್ಣಲಿ ಬೆಳೆದಿಹ ನಾವೀ-
ದೇಶಕೆ ದೇಹವನೊಪ್ಪಿಪೆವು
ದೇಶಕೆ ಮಿಗಿಲೀ ದೇಹವು ಎನ್ನುವ
ದೋಷಿಗಳಾಗದೆ ಮರೆಯುವೆವು
ಭಾರತವೆನ್ನುವ ಶಬ್ದದ ನಾಲಿಗೆ
ಉಚ್ಚರಿಸಲಿ, ಕಿವಿ ಕೇಳುತಿರೆ
ಭಾರತ ಧೂಳಿನ ಕಣಕಣ ಸ್ಪರ್ಶಿಸೆ
ಭಾರತ ವಾಸನೆ ಘ್ರಾಣಿಸಲಿ
ಹಿಮವತ್ಪರ್ವತದೆತ್ತರ ಮನವಿರೆ
ಹಿಂದೂಸಾಗರ ವಿಶಾಲ ಭಾವ
ತುಂಬಲಿ ಜಗವೇ ಮನೆಯೆನೆ ಮಾನವ
ವರ್ಗವು ನಮ್ಮಯ ಬಂಧುಗಳು
ಹಿಂಸೆಯ ಕಾರ್ಯವ ಹಿಂಸೆಯೊಳೆ
ದುರಿಪ
ವೀರರು ಭಾರತ ಪುತ್ರರಿದೊ
ಸಂಶಯದಲ್ಲಿ ಹೇಡಿಯು ಎಂದೆನುವಗೆ
ಸಿಂಹಪ್ರಾಯರು ವಿಕ್ರಮರು
ಚೀನವೊ ಪಾಕಿಸ್ತಾನವೊ ರಶ್ಯವೊ
ಜಗವೇ ಒಂದಾಗುತ ಬರಲಿ
ಅಣ್ವಸ್ತ್ರವೊ ಮಾನವ ಸಾಮರ್ಥ್ಯವೊ
ಎಲ್ಲವ ಕೂಡಿಸುತೈತರಲಿ
ಭಾರತ ಪುತ್ರರು ಬೆದರೆವು, ಎದುರಿಪ
ಕೆಚ್ಚಿದೆ, ಕೊನೆ ರಕ್ತದ ಬಿಂದು
ಉದುರುವ ತನಕವು ಹೋರುವೆವು
ವೈರಿಯು
ಸೋಲಿಪೆವಿಲ್ಲವೆ ಸಾಯುವೆವು
ಹೆದರುತ ಬದುಕಲಿ ಕೋಚುವ ಉತ್ತರ-
ಕುಮಾರ ವಂಶಜರಾವಲ್ಲ
ಸುತ್ತಲು ವ್ಯೂಹದ ರಚನೆಯನೆದುರಿಸೆ
ಅಭಿಮನ್ಯುಗಳೇ ನಾವೆಲ್ಲ
ಯಾರೇ ಬರಲಿ, ಎಂತೇ ಇರಲಿ
ಈ ದೇಶಕೆ ದೇಹವು ಸಿದ್ಧವಿದೆ
ದೇಶಕೆ ದೇಹವನರ್ಪಿಪ ಪಣದಲಿ
ಈ ಭಾರತ ಜನವೇ ಬದ್ಧವಿದೆ.

— ಎ. ಬಾಲಕೃಷ್ಣ ಶೆಟ್ಟಿ, ಪೊಳಲಿ.

## ಹೃದಯ ಕ್ಷೇತ್ರ

— ೧ —

ಹೃದಯವೆ ಪುಣ್ಯತಮ ಕ್ಷೇತ್ರವಾಗಿರೆ
ಮತ್ತೆ ಬೇರೆ ಕ್ಷೇತ್ರಗಳ ತಿರುಗಲೇಕೆ!
ಈಶನಾವಾಸವದು ಹೃದಯ
ಮಂದಿರದೊಳೆ!
ಎಂಬ ಗೀತಾ ನುಡಿಯ ಮರೆಯಲೇಕೆ!

— ೨ —

ದೂರದಾ ಊರಿನಲಿ ಕಲ್ಲಿನಾ ಮೂರ್ತಿಯೊಳ್
ಆ ದೇವ ಮಾಧವನನು ಕಾಣಬಹುದೆ!
ಎದೆಯ ಗುಡಿಯೊಳಗಿಲ್ಲಿ ಕಾಣದಿಹ ಈಶ-
ನನು ಕಲ್ಲಿನಲಿ ಕಾಣಬಹುದೆ?

— ೩ —

ಕಾಯ ವಾರಾಣಸಿಯು, ಮನವೆ
ಗಂಗಾ ನದಿಯು
ಎನ್ನಾತ್ಮವೇ ಶ್ರೀ ವಿಶ್ವನಾಥ!
ಸದ್ಗುಣದ ಸೌರಭದ ಕುಸುಮಗಳ
ನರ್ಪಿಸಲು
ನಲಿಯುತಿಹ ಶ್ರೀ ಜಗನ್ನಾಥ!

— ೪ —

ಭಕ್ತಿ ಭಾವಕೆ ಮೆಚ್ಚಿ ಹೃದಯ ಮಂದಿರದ
ದೇವ
ತಾವರೆಯ ನೀಡೆ ಸುಪ್ರಸನ್ನನಾಗಿ
ಹೃದ್ವೀಣೆ ನುಡಿಸೆ ತತ್ವಮಸಿಯ
ಕೃತಿಗೊಡಲು
ನಾ ಹಾಡುತಿರುವೆ ಅವನಡಿಗೆ ಬಾಗಿ!

— ೫ —

ಹೃದಯವೆ ಪುಣ್ಯತಮ ಕ್ಷೇತ್ರವಾಗಿರೆ
ಮತ್ತೆ ಬೇರೆ ಕ್ಷೇತ್ರಗಳ ತಿರುಗಲೇಕೆ?
ಈಶನಾವಾಸವದು ಹೃದಯ
ಮಂದಿರದೊಳಗೆ
ಎಂಬ ಗೀತಾ ನುಡಿಯ ಮರೆಯಲೇಕೆ!

— ದಿಗಂಬರ ಜೋಶಿ, ಬೆಳಗಾವಿ.

## — ಭಾವ ಶ್ರೀ —

ಯಾರಮ್ಮ ನೀ ಚೆಲುವೆ
ಏಕೆನ್ನ ಬಳಿ ಬರುವೆ
ಸುತ್ತುತ್ತ ಸುಳಿ ತರುವೆ
ಮತ್ತಲ್ಲಿಯೆ ನಿಲುವೆ
ಏನಿದಾಟ
ಹೊಸತು ಬೇಟ ॥ ೧ ॥

ನಿನ್ನ ಶ್ರೀ ಮುಖದೊಸಗೆ
ಎನ್ನ ಮನದಂಗಳದಿ
ಮೂಡಿ ಬಂದಿರೆ ಜವದಿ
ಯಾವ ಪ್ರೇರಣೆಯೊಸಗೆ
ಹೊಂಚುತಿರುವೆ
ಮುಂಚುತಿರುವೆ ॥ ೨ ॥

ನಿನ್ನ ಕಾಮನೆಯಿಂದೆ
ಮನಮೆಚ್ಚಿ ಕಾಯುತಿರೆ
ಎದೆ ತುಂಬಿ ಕರೆಯುತಿರೆ
ಬಾಲ್ಯದಲಿ ನೀ ಹಿಂದೆ
ಬಾರದಾದೆ
ತೋರದಾದೆ ॥ ೩ ॥

ಕಾಲ ಪುರುಷನ ಗತಿಗೆ
ಇರುಳು ಹಗಲಿನ ಹೆಜ್ಜೆ
ಹಾಕುತಿರೆ, ನಾ ಬಿಜ್ಜೆ
ಗಳಿಸೆ, ಬಂದಿಹೆ ಮತಿಗೆ
ನಿನ್ನ ನೆನಪು
ಹೊನ್ನ ಹೊಳಪು ॥ ೪ ॥

ನಿನ್ನ ಪ್ರೇಮಕೆ ಭ್ರಾಂತ
ಕವಿ ವರನು ಖತ ನಿರುತ
ಅರ್ಥರಾಗದಿ ಭರಿತ
ಕವಿತೆಯ ನವಿಶ್ರಾಂತ
ಬರೆದನಲ್ಲ
ಬರೆಯಬಲ್ಲ ॥ ೫ ॥

ಹೃದಯ ವೃಂದಾವನದಿ
ಬಿರಿದಿರುವ ಚೆಲುವ ಮುಗುಳೆ
ಕಾವ್ಯ ದೇವಿಯ ಮಗಳೆ
ನಿನ್ನ ನಾ ಜೀವನದಿ
ಬೆಳೆಸ ಬಲ್ಲೆ
ಉಳಿಸ ಬಲ್ಲೆ ॥ ೬ ॥

ಮಾತೆ ಚರಣವ ಕಂಡು
ನೀನು ನರ್ತಿಸಿದಂದು
ಅದುವೆ ಹಿರಿಸಿರಿಯೆಂದು
ಅಕ್ಕರೆ ಸಂತಸಗೊಂಡು
ನೋಡಿ ತಣಿವೆ
ಹಾಡಿ ಕುಣಿವೆ ॥ ೭ ॥

— ಪಿ. ಶಾಮ ಭಟ್, ಪೆರಡಾಲ.

# ಹುರುಳು ಉರುಳುವ ಹರಟೆ

(ಹತ್ತನೇ ಪುಟದಿಂದ)

ಕ್ಕೆ ಓಡಸ್ತಾರೆ. 'ಅಷ್ಟೇನೋ ಜೋಯಿಸ್ರೆ!"

ಜೋಯಿಸರು ಸುಮ್ಮನೊಮ್ಮೆ ಮುಗುಳ್ನಗುವಿನೊಂದಿಗೆ ನೋಟ ಹಾರಿಸಿ, ಮತ್ತೆ ಪುಸ್ತಕದಲ್ಲೇ ಕಣ್ಣು ಇಟ್ಟರು.

"ಏನು ಮಾಡೋದು? ತನಗೆ ತಾನು ಮೋಸ ಮಾಡಿಕೊಳ್ಳೋದೇ ನಾಗರಿಕತೆಯಾಯಿತು. ಹಗಲು ಹಾಡೇ ಜೋಯಿಸರ ಹತ್ರ ಹೋಗುವುದು ಅನಾಗರಿಕತೆ! ಹಃ! ಹೆ!" ಎಂದು ನಕ್ಕರೊಬ್ಬರು.

"ಏನು, ಜೋಯಿಸರು ಸುಮ್ಮನಿದ್ದಾರಲ್ಲಾ?"

ಜೋಯಿಸರು ಮತ್ತೆ "ಉದುರಿಸು" ವ ಪರ ಹೀಗೆ ತಡೆ. ಹೇಳ್ತೀನಿ. ಜ್ಯೋತಿಷ್ಯ ಕೂಡಾ ಒಂದು ವಿಜ್ಞಾನವೇ ಅಂತ ಒಪ್ಪಿಕೊಂಡ್ರೆ ಬಿಡಿ. ಆಗ ಇದೂ ನಾಗರಿಕತೆಯಾಗಿಬಿಡುತ್ತೆ" ಎಂದರು.

"ಹಾಗಂತ ಒಪ್ಪಿಕೊಂಡೇ ದೊಡ್ಡ ದೊಡ್ಡವರು ಪತ್ರಿಕೇಲಿ ಬರೀತಾ ಇದ್ದಾರಲ್ಲ? ಯಾವುದರಲ್ಲೋ ಓದಿದ ನೆನಪು: ಜ್ಯೋತಿಷ್ಯವೂ ವಿಜ್ಞಾನವೇ ಅಂತ" ಎಂದರು ಜಗನ್ನಾಥ ಭಟ್ಟರು.

ಅದೇ ಆಗ ಕೈದಾಲ ಒಳಕ್ಕೆ ನುಗ್ಗಿದ ಉಪೇಂದ್ರ ಮಾಸ್ತರು, ಅನಾಯಾಸವಾಗಿ ಆ ಮಾತಿಗೆ ಬಾಯಿ ಹಾಕಿ, "ಆದರೆ ಈಗಿನ ಹೊಸ ಹೊಸ ವಿಜ್ಞಾನ ಶೋಧಗಳಿಂದ ಜ್ಯೋತಿಷ್ಯ ವಿಜ್ಞಾನವೂ ತಾರುಮಾರಾಗಿ ಹೋಗುತ್ತೇ ಅಂತ ನಾನು ಎದೆ ತಟ್ಟಿ ಹೇಳ್ತೀನಿ" ಎಂದರು ಧೀರವಾಣಿಯಿಂದ. ಎನ್ನುತ್ತಾ ಭಟ್ಟರ ಕೈಯಿಂದ ಪತ್ರಿಕೆಯನ್ನು ಎಳೆದುಕೊಳ್ಳುತ್ತಾ "ಲೇಟೆಸ್ಟಾ?" ಎಂದರು.

"ಅದು ಹ್ಯಾಗೆ ಮಾಸ್ತ್ರೆ?" ಹೊಂಟಿತೊಬ್ಬನ ಪ್ರಶ್ನೆ.

ಕೂಡಲೇ ಮಾಸ್ತರ ಪೇಪರನ್ನು ಜಗನ್ನಾಥ ಭಟ್ಟರ ತಲೇ ಮೇಲೆಯೇ ಕುಕ್ಕಿ, ಈಗ ನೋಡಿ, ರಷ್ಯಾ, ಅಮೇರಿಕಾ, ಚೀನಾ ಮೊದಲಾದ ದೇಶಗಳು ಬಲ್ಲಿದರ ಮೇಲೆ ಹಲ್ಲಹರಿಸಿ ತಾವೇ ಅಂತ ನೆದು ಹೊಡೆದು ಹೋಳಾಗಿಸಿ ಆಡ್ತಾ ಇವೆ ಹೌದು?—

"ಹೌದು ಹೇಳಿ"

"ಅದೂ ಏನೇಥಾ ಪ್ರೋಜಕ್ಟು? ಯಾವ ರೀತಿಯದು?"

"ಸ್ವಲ್ಪ ನೀವೇ ವಿವರಿಸಿ ಹೇಳಿ ಬಿಡಿ ಮಾಸ್ತ್ರೆ"

"ಹಾಗೆ ಕೇಳಿ. ಪ್ರಕೃತಿ ಶಕ್ತಿಗಳೊಂದಿಗೇ ಚೆಲ್ಲಾಟವಾಡ್ತಿದ್ದಾರಯ್ಯಾ ಅವ್ರೆಲ್ಲಾ! ನೆಲ್ಲದಲ್ಲಿ ಜಲದಲ್ಲಿ ಆಕಾಶದಲ್ಲಿ ಎಲ್ಲಾ ಅಣುಬಾಂಬು ಸಿಡಿಸೋದು, ಪರೀಕ್ಷೆ ನಡೆಸ್ತೀದ್ರು! ಅದರಿಂದ ಏನಾಗುತ್ತೆ ಗೊತ್ತೇ? ಯಾವ ವಿಜ್ಞಾನಿಗೂ ಗೊತ್ತಾಗದ ಸಂಗತಿಯಾಗುತ್ತೆ"

"ಇದು ಹೊಸಾಗೆ, ಗೊತ್ತಾಯಿತೂ ಅನ್ನಿ"

"ಹೂಂ. ನಾನು ವಿಜ್ಞಾನಿ ಅಷ್ಟೇ?"

"ಅದೇನಾಗುತ್ತೆ ಮಾಸ್ತ್ರೆ"

"ಹೇಳ್ತೀನಿ. ಅದರಿಂದ ಗಾಳಿಯಲ್ಲಿ, ಮೋಡದಲ್ಲಿ, ಸಮುದ್ರದಲ್ಲಿ ಎಲ್ಲಾ ತಾರುಮಾರು ಅದಲು ಬದಲು ಗಜಿಬಿಜಿ ಆಗಿಬಿಡುತ್ತಾಗುತ್ತೆ. ಏನು ಕಾಲಕ್ಕೆ ಎಲ್ಲಿ ಬೀಸಬೇಕೆಂದು ತಿಳಿಯದ ಗಾಳಿ ಗುಂಡೆ ಬಡಿಸಿಕೊಂಡು ಮತ್ತೆಲ್ಲಿಗೋ ಹೋಗಿ ಅಲ್ಲಿ ಗಡಿಬಿಡಿ ಎಬ್ಬಿಸಿ ಬಿಡತ್ತೆ. ಪರಿಣಾಮವಾಗಿ ಅಕಾಲ ವರ್ಷ, ಋತುವ್ಯತ್ಯಾಸ. ಒಂದು ಕಡೆ ವಿಪರೀತ ಮಳೆಯಿಂದ ಪ್ರಳಯವಾದರೆ ಇನ್ನೊಂದು ಕಡೆ ಮಳೆಯೇ ಇಲ್ಲ. ಇದರಿಂದ ಬೆಳೆಗಳಿಗೆಲ್ಲ ನಾಶವೇ. ಹೇಗಾಗಿ ಉದ್ಧಾರವಾದೀತೆ?

"ಹಾಗಾದ್ರೀಗ? ಹೆಚ್ಚಿಗೆ ಮಳೆ ಬಂದರೂ ನಷ್ಟವೇ. ಮಳೆ ಇಲ್ಲದಿದ್ದರೆ ಅದೂ ನಷ್ಟವೇ. ಎಲ್ಲವೂ ಹಿತಮಿತವಾಗಿದ್ದರೇನೇ ಚೆನ್ನ" ಎಂದು ಉದ್ಗರಿಸಿದರು ಜಗನ್ನಾಥ ಭಟ್ಟರು.

"ನಿಮ್ಮ ಹಿತಮಿತವಾದವನ್ನೆಲ್ಲ ಗಂಟು ಕಟ್ಟಿ ಮೂಲೆಗೆ ಹಾಕಿ ಬಿಡಿ ಭಟ್ಟರೆ" ಎಂದರು ಮಾಸ್ತರು.

"ಚೆಂದಾಗಿ ಹೇಳಿದಿರಿ ಮಾಸ್ತ್ರೆ. ಆಸಲು ಈಗ ಭೂಮಿಯಲ್ಲಿ ಬೆಳೆಯುದರಲ್ಲೇ ನಾಶವಾಯಿತು ಅನ್ನಲಿಕ್ಕೆ? ಜನರಿಗೆ ಒಪ್ಪತ್ತು ಊಟ ಮಾಡಲಿಕ್ಕೂ ಹಿಡಿಂಗುಗಳೇ ಏಳಲಿಕ್ಕೆ ತಡವಾಗಿಯೇ ಇವೆ. ಕಮ್ಯೂನಿಸ್ಟ್ ಭಾವನೆಯ ಬಂಜೆಯಾಗುತ್ತಾ ಬರೋ ಹಾಗಿದೆ ನಮ್ಮದು" ಎಂದ ನೊಬ್ಬ ಕೃಷಿಕ.

"ಹಾಗಾಗಲಿಕ್ಕೆ ಈ ವಿಜ್ಞಾನವೇ ಕಾರಣ. ನಮ್ಮ ಕೃಷಿಯಲ್ಲಿಯೂ ವಿಜ್ಞಾನ ತಲೆ ಹಾಕಿದೆಯಲ್ಲ! ನೆಲ ಹದ ಮಾಡಲಿಕ್ಕೆ ಯಂತ್ರ, ಉಳಲಿಕ್ಕೆ ಯಂತ್ರ. ನೀರಿಗೆ ಯಂತ್ರ, ಹೀಗೆ ಎಲ್ಲವೂ ಯಾಂತ್ರಿಕವಾಗಿ ಎತ್ತುಗಳ ದುಡಿತ ಕಡಮೆಯೂ ಆಯ್ತು. ಮನುಷ್ಯರು ದುಡಿಯುವ ಜಡರಾದ್ರು, ಸೋಮಾರಿಗಳಾದ್ರು. ಹೀಗೆ ಬೇಳಾಡಿಸಿ ಬಿಟ್ರೆ ನೀರು ಸುರಿಯೋದು, ಹಾಗೆ ತಿರುಗಿಸಿ ಬಿಟ್ರೆ ಗದ್ದೆ ಉಳೋದು ಅಂತ ಆದ್ರೆ ಯಾರು ಯಾಕೆ ಮೈಬಗ್ಗಿ ಕೆಲಸ ಮಾಡ್ತಾರೆ?" ಎಂದರು ಮಾಸ್ತರು ಅಡ್ಡ ಹಾಕಿ ನೋಡುತ್ತಾ.

"ಅಲ್ಲ ಮಾಸ್ತ್ರೆ, ಹೀಗೆಲ್ಲಾ ಆಗೋದರಿಂದ ಹೆಚ್ಚೆಚ್ಚು ಬೆಳೆ ಬರಲಿಕ್ಕೆ ಒಳ್ಳೆಯ ಅನುಕೂಲವಲ್ಲವೇ? ಯಂತ್ರದ ಮೂಲಕ ಮಳೆಯನ್ನಾ ಧರಿಸಿಬಿಟ್ರೆ ವರುಷಕ್ಕೆ ಮೂರಲ್ಲ ಆರು ಬೆಳೆ ತೆಗೀಬಹುದು" ಎಂದನೊಬ್ಬ.

"ಹೌದಯ್ಯ, ನೀನು ಹೇಳುವ ಬಂದರೆ ಗಂದರೆ ಆದರೆ ತೊಂದರೆಯ ಮಾತದು. ಎಲ್ಲೋ ಒಂದೆರಡು ಕಡೆ ಯಂತ್ರ ಬಂದ, ಇದ್ದವರನ್ನೆಲ್ಲಾ ಆಶ್ಚರ್ಯದಿಂದ ಬಾಯಿ ತೆರೆಸಿ ನಿಲ್ಲಿಸಿ ಬಿಟ್ಟಂತಾಯಿತೆ? ಎಲ್ಲರಿಗೂ ಯಂತ್ರದ ಸೌಕರ್ಯ ಬೇಕಲ್ಲ? ಆಗ ನಿನ್ನ ಮಾತು ಸರಿ ಅಂತ ಒಪ್ಪಬಹುದು. ಅಂಥಾ ಸೌಕರ್ಯ ಬರಲೂ ಇಲ್ಲ, ಸದ್ಯಕ್ಕಂತೂ ಬರುವ ಮಾರ್ಗವೂ ಇಲ್ಲ. ಅದೇ ನೋಂಗ ಹೇಳಿದ ಹಾಗೆ, ಹೊಸ ನೀರು ಬಂದು ಹಳೆ ನೀರನ್ನೆಲ್ಲಾ ಕೊಚ್ಚಿಕೊಂಡು ಹೋಯ್ತಂತೆ! ಇತ್ತ ಕಷ್ಟಾಳುಗಳೆಲ್ಲ ಉದಾಸೀನವಂತರಾದರು, ನಗರಕ್ಕೆ ಹೋದರು— ಬೀದಿ ಬೀದಿ ತಿರುಗಲಿಕ್ಕೆ ಸಿನಿಮಾ ನೋಡಲಿಕ್ಕೆ. ಹೆಚ್ಚಿಗೆ ಬೆಳೆ ಹೇಗಯ್ಯಾ ಆದೀತು?"

"ನಿಮ್ಮ ಮಾತು ನಿಜ ಮಾಸ್ತ್ರೆ. ನಮ್ಮ ಶ್ರೀನಿವಾಸರಾಯರಲ್ಲಿ ಪಂಪೂ ಟ್ರಾಕ್ಟರೂ ಬಂದು ಏನಾಯಿತು ಗೊತ್ತೆ? ನಮ್ಮ ಯಕ್ಕೆ ಕರೆಂಟು ನಿಂತು ಹೋಗೋದೂ, ಯಂತ್ರ ಕೆಟ್ಟು ಹೋಗೋದೂ, ರಿಪೇರಿಗೆ ಅಲೆದಾಡೋದೂ ಇದೇ ಕಥೆ. ದುಡ್ಡಿದ್ದವರ ಖಾಸೂ ಅನ್ನಿ" ಎಂದರು ಜಗನ್ನಾಥ ಭಟ್ಟರು.

"ಅದಕ್ಕೇ ನಾನು ಹೇಳೋದು ಏನೂಂದರೆ, ನಮ್ಮ ಯಾತ್ರಾತಂತ್ರ ಎಲ್ಲಾ ಸ್ವಪ್ನ ಭ್ರಮೆ. ಎಲ್ಲದಕ್ಕೂ ನೀರು ಮುಖ್ಯವಾಗಿ ಬೇಕೇಬೇಕು ನೋಡಿ. ಕಾಲ ಕಾಲಕ್ಕೆ ಮಳೆ ಬಂದು, ಬಿಸಿಲು ಕಾಯ್ತಾ ಇದ್ರೇನೇ ವಿಜ್ಞಾನವೂ ಬದುಕೀತು. ಅವಿಜ್ಞಾನವೂ ಬದುಕೀತು. ನೀವೇನು ಹೇಳ್ತೀರಿ ಜೋಯಿಸ್ರೇ? ಎಂಥಾ ಪುಸ್ತಕ ಅದು?" ಎಂದು ಮಾಸ್ತರರು, ಜೋಯಿಸರ ಕೈಯಿಂದ ಪುಸ್ತಕವನ್ನು ಎಳೆದುಕೊಂಡರು.

"ಆಯ್ತು, ಪ್ರತಿ ವರ್ಷವೂ ಇಂತಿಂಥ ಪ್ರದೇಶಕ್ಕೆ ಇಂತಿಂತಿಷ್ಟು ಕೊಳಗ ನೀರೂ ಅಂತ ಗ್ರಹಗಳು ಮೊದಲೇ ನಿರ್ಣಯಿಸಿಬಿಟ್ಟಿವೆ. ಮನುಷ್ಯರು ಯಾಂತ್ರಿಕ ಮಳೆ, ಅಣುಗುಂಡು ಪರೀಕ್ಷೆ ಅಂತೆಲ್ಲ ಶುರುಮಾಡಿ ಆ ನೀರನ್ನ ಮತ್ತೆಲ್ಲಿಗೋ ಒಯ್ದುಬಿಟ್ರೆ ಬೇಕಾದಲ್ಲಿ ಹ್ಯಾಗೆ ಮಳೆ ಬಂದೀತು? ಇದರ ಮೇಲೆ ಆಕಾಶದಲ್ಲೆಲ್ಲಾ ಮಾನವನದೇ ಕಾರುಬಾರು ಆಗಿಬಿಟ್ಟಿದೆ. ಗ್ರಹಗಳ ಕೆಲ್ಸ....'

'ಹಾಗೆ ಬನ್ನಿ ನನ್ನ ದಾರಿಗೆ ಜೋಯಿಸರೆ!' ಎಂದು ಮಾಸ್ತರು ಜೋಯಿಸರ ಬೆನ್ನಿಗೊಂದು ಶಾಭಾಸು ಹೊಡೆದು, 'ನೀವೇನು ಹೇಳ್ತೀರಿ ಜಗನ್ನಾಥ ಭಟ್ರೆ?' ಎಂದು ಕೇಳಿದರು.

"ನಾನು ಹೇಳೋದು ಇಷ್ಟೇ; ಇದು ಒಂದು ಸಂಧಿಕಾಲ. ಯಾಂತ್ರಿಕ – ಅಯಾಂತ್ರಿಕ ಯುಗಗಳು ಹೋಗಿ ಬರುವ ಸಂಧಿಕಾಲ. ಸಂಧಿಕಾಲವೂ ಯಾವಾಗಲೂ ಕಷ್ಟತಾನೆ? ಅದೂ ಉಂಟು, ಇದೂ ಉಂಟು; ಅದೂ ಇಲ್ಲ, ಇದೂ ಇಲ್ಲ ಎಂಬ ಹಾಗೆ. ಇವುಗಳ ತಿಕ್ಕಾಟದಲ್ಲಿ ಹೇಗೆ ಜನರು ಬದುಕುತ್ತಾರೋ ದೇವರಿಗೇ ಗೊತ್ತು.' ಎಂದರು ಭಟ್ಟರು.

"ಕುಜ ರಾಹು ಸಂಧೀ ಅನ್ನಿ.'

"ಅದಕ್ಕೇ ಇರವ ಜನಸಂಖ್ಯೆ ಸುಖವಾಗಿ ಬದುಕಬೇಕೆಂತಲೇ ಸರಕಾರದವರು ಕುಟುಂಬ ಯೋಜನೆ ಶುರು ಮಾಡಿದ್ದಾರೆ— ಕಮ್ಮಿ ಮಕ್ಕಳು ಹುಟ್ಟುವ ಹಾಗೆ" ಎಂದರೊಬ್ಬರು ನಗುತ್ತಾ.

ಕೂಡಲೇ ಜಗನ್ನಾಥ ಭಟ್ಟರು "ಅದನ್ನು ಭೂದೇವಿಯೇ ಶುರುಮಾಡಿದ್ದಾಳಲ್ಲಾ; ನಾನಾವಿಧ ಅಪಘಾತ, ಭೂಕಂಪ, ಜ್ವಾಲಾಮುಖಿ, ಯುದ್ಧ ಎಲ್ಲಾ ಒರೋದು ಏಕೇ ಅಂತ ಮಾಡಿದಿರಿ? ಎಲ್ಲವೂ ಭೂಭಾರಹರಣಾಯ ಜಾವೇ! ಎಲ್ಲಾ ಆ ಪರಮಾತ್ಮನ ಚಿತ್ತ! ಲೀಲೆ.'

'ಈಗ ಆ ಪರಮಾತ್ಮನ ಚಿತ್ತ ನಮ್ಮ ಮೇಲೆಯೇ ತಿರುಗಿದೆಯಲ್ಲಾ? ಪಾಕಿನ ಸೀಕಲಾಟದಿಂದ— ಚೀನಾ ಮಾವನ ಕೆದಕಾಟದಿಂದ ಎಷ್ಟು ಜನ ಸತ್ರು! ಎಷ್ಟು ಭೂಭಾರ ಹರೀತು!"

ಕೂಡಲೇ ಎಲ್ಲರೂ ಒಂದೇ ಬಾಯಿಗೆ, "ಆಹಾ! ಅದರಿಂದ ನಮ್ಮ ವೀರ ಭಾರತೀಯರ ಸತ್ಯ ಸ್ವರೂಪ ಏನೂಂತ ಗೊತ್ತಾಯ್ತು. ಘನಾ ಡಂಗುರವಾಗಿ ಗೊತ್ತಾಯ್ತು!"

ಜಗನ್ನಾಥ ಭಟ್ಟರು ದೊಡ್ಡದೊಂದು ಕೆಮ್ಮು ಕೂಡಿದು ಜೋರಾಗಿ ಕೆನೆದು "ನಿಜ ನಿಜ. ತುಂಬ ನಿಜ. ಭಾರತೀಯರೆಂದರೆ ಇರುವೆಗಳ ರಾಶಿ, ಒಂದೇಟಿಗೆ ಸಫಾಯಿ ಮಾಡಿಬಿಡಬಹುದು ಅಂದುಕೊಂಡ ಮಹಾನುಭಾವರೆಲ್ಲ ಕಣ್ಣು ಕಣ್ಣು ಬಿಟ್ಟು ಬಾಯಿಬಾಯಿ ತೆರೆಯುವ ಹಾಗಾಯ್ತಯ್ಯ! ಸತ್ತ ಪ್ರತಿಯೊಬ್ಬ ಭಾರತೀಯನೂ ವೀರ ರತ್ನಾನ್ನ, ವೀರ ರತ್ನ! ಧನ್ಯರು ನಮ್ಮ ಮಕ್ಕಳು!" ಅನ್ನುವಾಗ ಅವರಿಗೆ ಕಂಬನಿದುಂಬಿ ಗಂಟಲು ಕಟ್ಟಿಕೊಂಡಿತು.

ಸ್ವಲ್ಪ ಹೊತ್ತು ಮೌನ.

---

ಚಿಕ್ಕಿನ ಟೆಂಗಿಗೆ ಕಂಬನಿ ಮಿಡಿದರೆ ಬೆಕ್ಕಿಗೆ ಹಾಲಿನ ಜೊತೆಗೆ ಉಪ್ಪೂ ದೊರೆತಂತಾಗುವುದು.


ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.

ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ನೆಳ್ಳದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇದಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೂಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು.

# ಭಾರತೀಯ ವಾಸ್ತುಶಿಲ್ಪ

(ಒಂಭತ್ತನೇ ಪುಟದಿಂದ)

ತನ್ನಿಗೆ ಬೆಳಕು ಬೀರಿ ಭಕ್ತನನ್ನು ಭಗವಂತನ ಲೀಲಾ ವಿಲಾಸದಲ್ಲಿ ತನ್ಮಯನನ್ನಾಗಿ ಮಾಡುವಂತಹ ಪುಣ್ಯಧಾಮಗಳಾಗಿದ್ದವು.

ಉತ್ತರಭಾರತದಲ್ಲಿ ಜೈನ ಮತ್ತು ಬ್ರಾಹ್ಮಣ ಮಂದಿರಗಳ ಸಂಖ್ಯೆ ಹೆಚ್ಚು.

ಜೈನ ಮಂದಿರಗಳಲ್ಲಿ ಒಮ್ಮೊಮ್ಮೆ ಎರಡು ಮಂಟಪ ಮತ್ತು ಒಂದು ವೇದಿಕೆ, ಬ್ರಾಹ್ಮಣರ ಗುಡಿಗಳಲ್ಲಿ ದೇವ ಮೂರ್ತಿ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವುದು ಸ್ವಾಭಾವಿಕ ಸಂಪ್ರದಾಯ. ಈ ಮಂದಿರಗಳ ಗರ್ಭಗೃಹದ ಮೇಲೆ ಶಿಖರ; ಶಿಖರದ ತುದಿಯಲ್ಲಿ ಚಕ್ರವಿರುವುದು ಸಂಪ್ರದಾಯ. ದೊಡ್ಡ ಚಕ್ರಕ್ಕೆ "ಆಮಲಕ" ಎಂದು ಹೆಸರು. ಆಮಲಕದ ಮೇಲೆ ಕಳಸ ಅದರ ಮೇಲೆ ಧ್ವಜದಂಡವಿರುವುದನ್ನು ಗಮನಿಸಬಹುದು. ದ್ರಾವಿಡ ಶೈಲಿಯಲ್ಲಿ ಗರ್ಭಗೃಹದ ಮೇಲೆ ಅನೇಕ ಅಂತಸ್ತಿನ ಚೌಕವಾದ ಮಂಟಪವಿರುತ್ತದೆ. ಇದಕ್ಕೆ ವಿಮಾನವೆಂದು ಹೆಸರು. ಉತ್ತರ ಭಾರತದ ದೇವಾಲಯಗಳಲ್ಲಿ ಶಿಖರವಿರುವ ಕಡೆ ದಕ್ಷಿಣ ಭಾರತದಲ್ಲಿ ವಿಮಾನವಿರುತ್ತದೆ. ಈ ಗರ್ಭಗೃಹದ ಮುಂದೆ ದೊಡ್ಡ ದೊಡ್ಡ ಸ್ತಂಭಗಳುಳ್ಳ ಮಂಟಪವಿರುತ್ತದೆ. ಮಂದಿರದ ಒಳ ಹೊರ ಪ್ರಾಕಾರ ಮತ್ತು ದ್ವಾರಗಳ ಮೇಲೆ ದೇವ ದೇವತೆಯರನ್ನು ನಿರ್ಮಿಸುವುದು ಸಂಪ್ರದಾಯವಾಗಿತ್ತು. ದಕ್ಷಿಣ ಭಾರತದ ಅಸಂಖ್ಯಾತ ದೇವಾಲಯಗಳ ಪ್ರಾಕಾರದಲ್ಲಿ ಶಿಲ್ಪ ಶಾಸ್ತ್ರ, ಸೂತ್ರವನ್ನು ಅನುಸರಿಸಿ ಬಗೆ ಬಗೆಯ ಭಾವ ಭಂಗಿಗಳಲ್ಲಿ ವಿಗ್ರಹಗಳನ್ನು ಕಡೆದು ನಿಲ್ಲಿಸಿರುವ ಸಂಪ್ರದಾಯವನ್ನು ಕಾಣಬಹುದಾಗಿದೆ. ದ್ರಾವಿಡ ಶೈಲಿಯ ಮಹಾದ್ವಾರದ ಮೇಲಿನ ಗೋಪುರದ ರಚನೆ, ಕೆತ್ತನೆ, ಭದ್ರತೆಯೂ ಸ್ಮರಣೀಯ.

ದೇವಾಲಯಗಳ ಗೋಪುರ, ಪ್ರಾಕಾರಗಳ ಮೇಲೆ ಗುಹೆಗಳ ಗೋಡೆಗಳ ಮೇಲೆ ಶಿಲ್ಪಗಳ ಜಾಣ್ಮೆ, ಕಲಾನೈಪುಣ್ಯತೆಯಿಂದ ರೂಪುಗೊಂಡು ನಿಂತಿರುವ ಅಸಂಖ್ಯಾತ ಚಿತ್ರಗಳು ಆ ಕಾಲದ ಜೀವನ, ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ, ಅಭಿರುಚಿಗಳನ್ನು ತಿಳಿಸುತ್ತವೆ.

ಭಾರತೀಯ ಸಮಾಜದ ರೀತಿ ನೀತಿಗಳನ್ನು ತಿಳಿಯಲು ಪ್ರಾಚೀನ ವಾಸ್ತುಶಿಲ್ಪ ಪರಂಪರೆಯ ಭವ್ಯ ಕಲಾಕೃತಿಗಳೂ ಪ್ರಮುಖ ಸಾಧನವೆಂದು ಹೇಳಬಹುದು. ಭಾರತೀಯ ದೇವಾಲಯಗಳ—ಗುಹೆಗಳ ನಿರ್ಮಾಣ ಕಾರ್ಯದಲ್ಲಿ ಶಿಲ್ಪಿಯ ಒಂದು ಉಳಿ ಏಟೂ ವ್ಯರ್ಥವಾಗಿಲ್ಲವೆಂದು ವಿದೇಶೀಯ ಶಿಲ್ಪಕಲಾ ಪಂಡಿತ (ತಜ್ಞ)ರೊಬ್ಬರು ಪ್ರಶಂಶಿಸಿರುವುದು ಆಶ್ಚರ್ಯ ಸಂಗತಿಯಲ್ಲ. ದೇಶ ವಿದೇಶೀಯ ಕಲಾಪ್ರಿಯರನ್ನು ಕೈಬೀಸಿ ಕರೆಯುವ ಭಾರತದ ಭವ್ಯ ವಾಸ್ತುಶಿಲ್ಪಕಲೆ ತನ್ನ ಪ್ರಾಚೀನ ಪರಂಪರಾಗತ ನೈಜ ಕಲಾ ಶಕ್ತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಸ್ಥಿರವಾಗಿ ಉಳಿದಿದೆ.

"ದೇವ ಮಂದಿರ ಮತ್ತು ಗುಹೆಗಳ ನಿರ್ಮಾಣ ಕಾರ್ಯದಲ್ಲಿ ತೋರಿರುವ ಧೈರ್ಯ, ಬಳಸಿಕೊಂಡಿರುವ ವೈವಿಧ್ಯಪೂರ್ಣ ಜಾಣ್ಮೆ, ಅನುಸರಿಸಿರುವ ಸಂಪ್ರದಾಯ, ಮೈಮನಗಳಿಂದ ಮೂಡಿ ಬಂದ ಅನಂತ ಶಕ್ತಿಯುತ ಕಲೆ, ಹಸ್ತಕೌಶಲ್ಯ ಎಲ್ಲವೂ ಕಲಾ ವಿಶಾರದರ ಪಾಂಡಿತ್ಯ ಪ್ರತಿಭೆಗಳಿಗೆ ಸವಾಲು ಕೋರಿ ನಿಂತಿವೆ. ಇಂತಹ ಅಮೋಘ ಕಲಾಪೂರ್ಣ ಸೃಷ್ಟಿ ದೊರೆಯುವುದು ಕಾಣುವುದು ವಿರಳ"—ಎಂದು ವಿದೇಶೀಯ ವಿಖ್ಯಾತ ಪಂಡಿತರೂ ಶಿಲ್ಪ ವಿಶಾರದರು, ಕೃತಜ್ಞಪೂರ್ವಕವಾಗಿ ಹೊಂದಿಸಿರುವ ಅಭಿಪ್ರಾಯದಲ್ಲಿ ಸತ್ಯಾಂಶವಿದೆ.

ಕಲಾವಿದರು ರೂಪಿಸಿದ ಕೃತಿಗಳು ಅರಸನ ಆಗ್ರಹಕ್ಕೆ ಅಥವಾ ಮೆಚ್ಚುಗೆಗೆ ಮಾತ್ರವೇ ಅಲ್ಲ. ಹೊಗಳಿಕೆಗಾಗಿಯೂ ಅಲ್ಲ. ಅನುಗ್ರಹ ಆಗ್ರಹಗಳ ಬಂಧನದಿಂದ ವಿಮುಕ್ತರಾಗಿದ್ದ ಶಿಲ್ಪಿಗಳಿಂದ, ಅವರ ಅಂತರಾಳದಲ್ಲಿ ಅಂತರ್ಗತವಾಗಿದ್ದು ಹೊರಹೊಮ್ಮಿ ಬಂದ ದೈವದತ್ತ ಪ್ರತಿಭಾಪೂರ್ಣ ಕಲಾಶಕ್ತಿಯಿಂದ ಕಲಾಕೃತಿ ಮತ್ತು ಕಲೆ ಜೀವಂತವಾದುವು. ಕಲೆ ಕಳಂಕವನ್ನು ಕಳೆದು ಕೀರ್ತಿಯನ್ನು ಬೆಳೆಸಿತು. ಭಾರತದ ಮೂಲೆಮೂಲೆಯಲ್ಲಿ ತೋರಿಬಂದ ವಾಸ್ತುಶಿಲ್ಪದಲ್ಲಿ ಸಂಪ್ರದಾಯವೂ ಇದೆ; ಸಂಸ್ಕಾರ, ಸಂಸ್ಕೃತಿಗಳೂ ಇವೆ.

ಅಜಂತ, ಎಲ್ಲೋರ, ಕೋಣಾರ್ಕ, ಮಹಾಬಲಿಪುರ, ಅಬುಬೆಟ್ಟ, ಕಾರ್ಲಿ, ಎಲಿಫೆಂಟಾ, ಬಾದಾಮಿ, ಬೇಲೂರು, ಹಳೇಬೀಡು, ಕಂಚಿ, ಮಧುರೆ, ರಾಮೇಶ್ವರದ ವಾಸ್ತುಶಿಲ್ಪ ಪ್ರಾಚೀನ ಕಲಾವಿದರ, ಕಲಾಪ್ರಿಯರ ಆಸ್ತಿ. ಶಿಲ್ಪಿಗಳು ರೂಪಿಸಿದುದು ಶಿಲಾಕೃತಿಗಳನ್ನಲ್ಲ; ಸಜೀವ ಕಲಾಕೃತಿಗಳನ್ನು. ಭಾರತೀಯ ಪ್ರಾಚೀನ ಲಲಿತ ಕಲೆಗಳ ಭವ್ಯ ಸಂಪ್ರದಾಯ, ಜನಮನದಲ್ಲಿ ಉಳಿದಿದೆ; ಬೆಳೆದು ಬಂದಿದೆ; ಬದುಕಿದೆ.

ಎಲ್ಲೋರ ಅಜಂತೆಯ ಕೃತಿಗಳ ಸೌಂದರ್ಯ, ಎಲಿಫೆಂಟಾ ಗುಹೆಗಳ ಭವ್ಯ ಮೂರ್ತಿಗಳು, ದಕ್ಷಿಣ ಭಾರತದ ಉನ್ನತ ದೇವಮಂದಿರಗಳು, ಬೇಲೂರು ಹಳೇಬೀಡಿನ ಮನಮೋಹಕ ಜೀವಂತ ಶಿಲಾಕಲಾಕೃತಿಗಳು ಎಲ್ಲವೂ ನಾಗರಿಕನ, ಸುಸಂಸ್ಕೃತನ ಮನೆ ಮನಗಳಲ್ಲಿ ಸದಾ ಕಾಣಬರುವ ಸುಂದರ ಚಿತ್ರಗಳು.

ಕಲೆ ಬಾಳ ಹಾದಿಯಲ್ಲಿ ಬೆಳಕು ನೀಡುವ ಕೈದೀವಿಗೆ. ಕಲೆ ಗೌರೀಶಂಕರದಷ್ಟು ಉನ್ನತ. ಗಂಗೆಯಷ್ಟು ಪವಿತ್ರ; ಸಾಗರದಷ್ಟು ವಿಶಾಲ. ರವಿಚಂದ್ರರಂತೆ ಶಾಶ್ವತ. ಸಾಹಿತ್ಯ, ಸಂಸ್ಕೃತಿ, ಜ್ಞಾನ, ಕಲೆಗಳಿಗೆ ಮಾನವ ಮನಗಳಿಗೇ ಬೆಳಗುವ ಶಕ್ತಿ ಇದೆ. ಈ ಶಕ್ತಿ ಅನಾದಿ, ಅನಂತ.

## ಮರುಕಳಿಸುತಿದೆ ನೆನಪು!

ಇಂದು ಕಳೆದಿಹುದಂತೆ ವರ್ಷವೊಂದು!
ಎನಿಸುವುದು ದಿನ ಕೆಲವೆ ಕಳೆದುವೆಂದು!

ಏಕೆಂತು?

ಹೌದು, ಇಲ್ಲದೆಯು ಇರುವೊಂದು ಶಕ್ತಿ ನೀನು!
ಮುಗಿಲ ಮರೆಯಾದರೂ ಬೆಳಗನೇ ಬಾನು!

ಇಂದು—

ನೀನಿಲ್ಲದಿದ್ದರೂ ಇರುವಂತೆಯೇ ಕಥಕು,
ಕ್ಷಣ ಕ್ಷಣಕು ಮನದಂಕೆಗಿದೊ ನಿನ್ನ ನೆನೆಪು!
ಪಾಕ್ ಗಡಿದಾಟುತಿರೆ, ಚೀನ ಮುಡಿ ಮೀಟುತಿರೆ,
ಅಣುಶಕ್ತಿಯದು ರುದ್ರ ನಾಟ್ಯವನ್ನಾಡುತಿರೆ
ವಿಶ್ವ ಶಾಂತಿಯ ಕದಡಿ ದ್ವೇಷಾಗ್ನಿ ಜ್ವಲಿಸುತಿರೆ,
ನಮ್ಮವರೆ ಅಭಿಮಾನವನು ಬಿಟ್ಟು ಕ್ರಾಂತಿಗಿರೆ—
ಎಲ್ಲದಕು ನಿನ್ನದೇ ಸ್ಮರಣೆ!
ಪರಿಹಾರದಾಶೆಯಲಿ ನಿನ್ನ ಅನುಕರಣೆ!

ಮಗುಗೆ—

ಮುಗ್ಧ ಶಿಶು ನಗುತಿರಲು ನಿನ್ನ ನಗುವಿನ ಛಾಯೆ!
ಹೂವರಳಿದಾಗಲೂ ಚೆಂಗುಲಾಬಿಯ ಮಾಯೆ!

ಏಕೆಂತು?

ಹೌದು; ನೀ ಮಹಾತ್ಮ!
ಭಾರತದ ಕಣಕಣದಿ ಜಾಗ್ರತವು ನಿನ್ನಾತ್ಮ!

ಆದರೂ—

ನೆನಪಿಗಿಲ್ಲ ಬುದ್ಧಿ!
ಬುದ್ಧಿಯೇ ಇಲ್ಲದಿರೆ ಮತ್ತೆಲ್ಲಿ ಸಿದ್ಧಿ?
ಹಲಿ ತುಂಬಿ ಕೊರೆಯುತಿವೆ ನೂರು ಜಟಿಲ ಸಮಸ್ಯೆ
ಬಿಡಿಸಲಾರದ ಒಗಟು ನಿನ್ನೊಳಿದೆ ನಮ್ಮಾಸೆ!
ಬಾ ಮಹಾತ್ಮಾ . . . .
ಅವ್ಯಕ್ತ ಶಕ್ತಿಯನು ತುಂಬು ನಮ್ಮೆದೆಯೊಳಿದೊ
ಮರುಕಳಿಸುತಿದೆ ನೆನಪು! ಮೊಸಲೆಳಸೆವು ಬೇಗ
ಬಾರಿಮ್ಮ ಮರೆಯದಿರು! ಬಂದು ಮುನ್ನಡೆಸು!

—ಶ್ರೀ ಮುಚಿಬೈಲು ಭಾಸ್ಕರ ಭಂಡಾರಿ,
ಮಂಜೇಶ್ವರ.

## ಅಮೃತ ಬಿಂದು

ಮಾತು ಮೃದುವಾಗಿದ್ದರೂ ಕೈಯಲ್ಲಿ ಕೋಲಿರಬೇಕು. ಹಾಗಾದರೆ ಜೀವನ ಸುಲಭವಾಗುವುದು.

o o o

ಕಷ್ಟದಲ್ಲಿರುವವರನ್ನು ಕಂಡು ಮರುಕಪಡುವುದು ಮಾನವತೆ. ಕಷ್ಟದಲ್ಲಿರುವವರಿಗೆ ನೆರವು ನೀಡುವುದು ದೈವಿಕತೆ.

o o o

ನಿಶ್ಚಿತ ಸಮಯಕ್ಕಿಂತ ಹೆಚ್ಚು ನಿಮಿಷ ಮುಂದಿರುವವನೇ ನಿಜವಾದ ಮನುಷ್ಯ ನೆನಿಸಿ ಮೇಲೇರುತ್ತಾನೆ.

o o o

ವ್ಯಾಯಾಮದಿಂದ ಶರೀರ ಬಲಗೊಳ್ಳುತ್ತದೆ; ಓದುವದರಿಂದ ಮನಸ್ಸು ಶಕ್ತಿ ಪಡೆಯುತ್ತದೆ.

o o o

ಪರಿಶೀಲಿಸದವನು ಧರ್ಮಾಂಧ, ಪರಿಶೀಲಿಸಲಾರದವನು ಅಜ್ಞಾನಿ, ಪರಿಶೀಲಿಸಲು ಹೆದರುವವನು ಸೇವಕ.

o o o

ತನ್ನ ಬಂಧುಗಳಿಂದಲೇ ದೂರ ತಳ್ಳಲ್ಪಟ್ಟವನಿಗೆ ಬೇರೆಲ್ಲಿಯೂ ಗೌರವ ದೊರೆಯದು.

o o o

ಧರ್ಮಕ್ಕಾಗಿ ಜನ ವಾದ ಮಾಡುತ್ತಾರೆ, ಬರೆಯುತ್ತಾರೆ, ಯುದ್ಧ ಮಾಡುತ್ತಾರೆ, ಸಾಯುತ್ತಾರೆ. ಆದರೆ ಧರ್ಮದಂತೆ ಜೀವಿಸುವವರು ವಿರಳ.


## ನಮ್ಮ ಹೆಮ್ಮೆಯ ಕಾಣಿಕೆ!

**ಶ್ರೀ ತಿಮುಂಚಿ ಪರಾರಿ ಅವರ**

**ನವಪ್ರಭಾತ** — ಅಶೋಕ ಕಾಲೀನ ಐತಿಹಾಸಿಕ ನಾಟಕ. ಪು. xxiv + 78. ಬೆಲೆ: ೧—೨೫.

**ನಿಯೋಗ** — ಧಾರ್ಮಿಕ ವಿವೇಚನೆ. ಪುಟ. 28. ಬೆಲೆ: ೦—೩೫.

**ಹುತಾತ್ಮರು** — ಸಶಸ್ತ್ರ ಕ್ರಾಂತಿಕಾರರ ಜೀವನಚಿತ್ರಗಳು. ಪುಟ: 81. ಬೆಲೆ: ೧—೨೫.

**ಹಣತೆ** (ಅಚ್ಚಿನಲ್ಲಿದೆ) — ೮೮ ಭಾವಕತೆಗಳ ಸುಂದರ ಸಂಕಲನ. ಬೆಲೆ: ೧—೫೦.

ಪ್ರತಿಗಳಿಗಾಗಿ ಇಲ್ಲಿ ವಿಚಾರಿಸಿರಿ.
ವಿದ್ಯಾನಿಧಿ ಬುಕ್ ಡಿಪೊ, ೩೦ ಮಾರುತೀ ಲೇನ್, ಮುಂಬಯಿ-೧.

# ಜಯದೇವ ಮಹಾಕವಿ ಮತ್ತು ಗೀತಗೋವಿಂದ

(ಎಂಟನೆಯ ಪುಟದಿಂದ)

ನನೆಂಬ (ಕ್ರಿ. ಶ. ೧೧೧೬) ಹಿಂದೂ ರಾಜನು ಆಳುತ್ತಿದ್ದನು. ಈತನ ಆಸ್ಥಾನದಲ್ಲಿ ಉತ್ತಮ ವರ್ಗದ ಶೃಂಗಾರ ಕವಿಯಾದ ಗೋವರ್ಧನನೇ (೧—೪) ಮೊದಲಾದ ಕೆಲವು ಕವಿಗಳಿದ್ದರೂ ಅಜರಾಮರವಾದ ಯಶಸ್ಸನ್ನು ನೋಂತು ಸಫಲನಾದವನು ಜಯದೇವನು ಮಾತ್ರ. ಈತನ ಗೀತಗೋವಿಂದವು ಭಾರತದಲ್ಲೇ ವಿದ್ವಾಂಸರ, ಕವಿಗಳ, ಗಮಕಿಗಳ, ನರ್ತಕರ ಚೇತೋಪಹಾರಿಯಾದ ಕಾವ್ಯವಾಗಿದೆ. ಈ ಕಾವ್ಯವನ್ನು ಕವಿಯು ಅಂದಿನ ಬಂಗಾಲದಲ್ಲಿ ರೂಢಿಯಲ್ಲಿದ್ದ ಯಾತ್ರಾ ಮಹೋತ್ಸವಗಳ ಸದುಪಯೋಗಕ್ಕಾಗಿ ನಿರ್ಮಾಣ ಮಾಡಿದನು. ಈ ಕಾವ್ಯದಲ್ಲಿ ಶ್ರೀಕೃಷ್ಣ—ರಾಧೆ—ಸಖಿಯರೆಂಬ ಮೂರು ಪಾತ್ರಗಳಿರುವಂತೆ, ಸಂವಾದಗೀತ, ವರ್ಣನೆಗಳೆಂಬ ಮೂರು ಭಾಗಗಳಿವೆ. ಈ ಕಾವ್ಯದ ಕುರಿತು ವಿದ್ವಾಂಸರೂ ಉತ್ತಮ ವಿಮರ್ಶಕರೂ ಆದ ಶ್ರೀ| ಡಾ. ಕೃಷ್ಣಮೂರ್ತಿಯೊಬ್ಬರ ಅಭಿಪ್ರಾಯವೇ ಸಾಕು. "ಗೀತಗೋವಿಂದದ ಶೈಲಿಯು ಅನುಪಮ; ಅದರ ಮೋಹಕತ್ವ ಅದ್ಭುತ, ಅದರ ಅಗಾಧ ಶೃಂಗಾರ ಪ್ರವಾಹದ ಅಂತರಾಳದಲ್ಲಿ ಅಮೋಘವಾದ ಮಧುರ ಭಾವವು ಅಡಗಿದೆ. ಸಮಗ್ರ ಸಂಸ್ಕೃತ ಸಾಹಿತ್ಯದಲ್ಲೇ ಈ ಮಟ್ಟದ ಮಧುರ ರಚನೆ ಮತ್ತೊಂದಿಲ್ಲ. ಸಂಸ್ಕೃತ ವಾಣಿಯ ಸೌಂದರ್ಯ, ಮಾಧುರ್ಯಗಳ ಪರಾಕಾಷ್ಠೆಯನ್ನು ಗೀತಗೋವಿಂದದಲ್ಲಿ ಅವಲೋಕಿಸಬಹುದು. ಅದರ ಶಬ್ದಚಿತ್ರಗಳ ಕಿಲುವಿನ ಬೆಳಕು ಗೊಂಚಲು ಗೊಂಚಲಾಗಿ ಮಿಂಚುತ್ತದೆ. ಅದರ ಅಷ್ಟಪದಿ ಗೀತೆಗಳಲ್ಲಿ ಅಲೌಕಿಕವಾದ ನಾದಾಮೃತವು ಲಹರಿಲಹರಿಯಾಗಿ ತರಂಗಿಸುತ್ತದೆ. ಅದರ ಛಂದೋಬಂಧಗಳಲ್ಲಿ ಅಪೂರ್ವವಾದ ತಾಳಮೇಳವಿದೆ........ ವಿಶ್ವ ಸಾಹಿತ್ಯದಲ್ಲೇ ವಿಲಾಸ ಕಲಾಕುತೂಹಲಿಗಳಿಗೆ ಇಂಥ ಮಧುರ-ಕೋಮಲ-ಕಾಂತ ಪದಾವಲಿಗಳು ಮತ್ತೆಲ್ಲೂ ದೊರೆಯಲಾರವು...... .." ಗೀತಗೋವಿಂದವು ವಿಶ್ವಸಾಹಿತ್ಯದಲ್ಲೇ ಅಮರ—ಅಮೋಘವಾದ ಕಾವ್ಯವೆಂಬುದಕ್ಕೆ ಸಂದೇಹವಿಲ್ಲ. ಗೀತಗೋವಿಂದವು ಭಾರತೀಯರ ಭಗವದ್ಗೀತೆ!

ಶ್ರೀಕೃಷ್ಣ ಜನ್ಮಖಂಡವೆಂಬ ಗ್ರಂಥದಿಂದ ಜಯದೇವನು ಪ್ರಚೋದಿತನಾಗಿ ಗೀತಗೋವಿಂದವನ್ನು ಬರೆದನೆನ್ನುತ್ತಾರೆ. ಇದರಲ್ಲಿ ಸತ್ಯಾಂಶವಿದ್ದರೂ ಮೂಲ ಗ್ರಂಥಕ್ಕೂ ಗೀತಗೋವಿಂದಕ್ಕೂ ಅಜಗಜಾಂತರವಿದೆ. ಸುಬಂಧುವಿನ ವಾಸವದತ್ತೆಗೂ ಬಾಣಭಟ್ಟನ ಕಾದಂಬರಿಗೂ ಇರುವ ಹೋಲಿಕೆಗಳು ಈ ಎರಡು ಗ್ರಂಥಗಳಿಗಿವೆ. ಗೀತಗೋವಿಂದವೊಂದು ಉತ್ಕೃಷ್ಟ ಭಾವಗೀತ. ಇದು ಶೃಂಗಾರ ಸುಖದಿಂದ ಆರಂಭಿಸಿ ವೇದಾಂತ ಆಶಯ ವರೆಗೆ ಸರ್ವರ ಆದರಕ್ಕೂ ಪಾತ್ರವಾದ ಗ್ರಂಥ. ಇದೊಂದು ಸಾಹಿತ್ಯ ಸ್ವರ್ಗ!

ವಸಂತಮಾಸದಲ್ಲೊಮ್ಮೆ ಮುಗ್ಧ ರಾಧೆಯು ಶ್ರೀ ಕೃಷ್ಣವಿರಹದಿಂದ ದುಃಖಿಯಾಗಿ ವೃಂದಾವನದಲ್ಲೆಲ್ಲಾ ಆತನನ್ನು ಹುಡುಕುತ್ತಿರುವ ಸನ್ನಿವೇಶದಿಂದ ಕಾವ್ಯವು ಆರಂಭವಾಗುತ್ತದೆ. ಕಾವ್ಯಾರಂಭದಲ್ಲಿ ಕವಿಯು ವರ್ಣಿಸಿದ ವಸಂತ ಮಾಸದ ವರ್ಣನವೇ ಮನಸ್ಸಿಗೆ ಅದೆಷ್ಟೋ ಹಿತವನ್ನುಂಟು ಮಾಡುವುದು. ಆಗ ವಾಸಂತೀ ಕುಸುಮ ಕೋಮಲೆಯಾದ ರಾಧೆಯ ವಿರಹ ದುಃಖವನ್ನು ಮರೆಮಾಡುವುದಕ್ಕಾಗಿ ಆಕೆಯ ಗೆಳತಿಯು ಸಿದ್ಧ ಪದಗಳಿಂದ ವಸಂತ ಕಾಲವನ್ನು ವರ್ಣಿಸುವಳು. ಕವಿಯು ಈ ವರ್ಣನೆಯ ಅಷ್ಟಪದಿಯನ್ನು ವಸಂತರಾಗದಿಂದ ಹಾಡಿದ್ದಾನೆ. "ವಸಂತ ಋತುವಿನಲ್ಲಿ ಲಲಿತ ಲವಂಗ ಲತೆಗಳ ಸ್ಪರ್ಶದಿಂದ ಕೋಮಲವಾದ ಮಲಯಮಾರುತವು ಪರಿಮಳವನ್ನು ಹೊಂದಿ ಬೀಸುತ್ತಿದೆ. ತುಂಬಿಗಳ ಝೇಂಕಾರದಿಂದ ಕೋಗಿಲೆಗಳ ಕೂಜನದಿಂದ ಕುಂಜ ಕುಟೀರಗಳೆಲ್ಲಾ ಶೋಭಿತವಾಗಿವೆ. ಸಂಚಾರೀ ತರುಣರ ಕಾಂತೆಯರು ಉಲ್ಲಸಿತರಾಗಿ ಮದನೇಚ್ಛೆಯಿಂದ ವಿಹರಿಸುತ್ತಲೂ ವಿಲಪಿಸುತ್ತಲೂ ಇದ್ದಾರೆ. ಬಕುಲ ಪುಷ್ಪಗಳಲ್ಲಿ ಭ್ರಮರಗಳು ಮೊರೆಯುತ್ತಿರಲು ಬಕುಲ ವೃಕ್ಷಗಳು ವಿಲಾಪಿಸುವ ಪಥಿಕಜನದಂತೆ ಕಾಣಿಸುತ್ತಿವೆ. ತಮಾಲಗಳು ಚಿಗುರು ಕಸ್ತೂರಿಯ ಕಂಪನ್ನು ಬೀರುತ್ತಿವೆ. ಆಗ ನಾಗಕೇಸರ ಪಾಟಲೀ ಕುಸುಮಗಳು ಮನ್ಮಥನ ಕುಸುಮ ಬಾಣಗಳು! ತುಂಬಿಗಳು ಮುತ್ತಿದ ಪಾಟಲೀ ಕುಸುಮ ಮಂಜರಿಯು ಕಂದರ್ಪನ ಬತ್ತಳಿಕೆ! ಕೇತಕಿಗಳು ವಿರಹಿಗಳನ್ನು ನೋಯಿಸುವ ಆಯುಧಗಳು! ಮಾಧವಿ ನವಮಲ್ಲಿಕೆಗಳ ಸೌರಭವು ಮುನಿಜನರ ಮನಸ್ಸಿನಲ್ಲೂ ಮೋಹವನ್ನು ಹುಟ್ಟಿಸುತ್ತಿವೆ; ಮಾಲತೀ ಲತೆಯ ಆಲಿಂಗನದಿಂದ ಮಾಮರವು ಪುಷ್ಪಿತ ರೋಮಾಂಚನಗೊಂಡಿದೆ. ಆಗ ವೃಂದಾವನದ ಪರಿಸರದಲ್ಲಿ ಹರಿಯುವ ಪಾವನ ಯಮುನೆಯ ಸೊಬಗು ಸಾಮಾನ್ಯವೇ?......"

ಗೀತ ಗೋವಿಂದದಲ್ಲಿ ಶ್ರೀಕೃಷ್ಣನ ವರ್ಣನೆಯೇ ಒಂದು ಅಮೃತ ಸ್ತೋತ್ರ! ಇದರಲ್ಲಿ ಯಮಕ, ಅನುಪ್ರಾಸಾದಿ ಶಬ್ದಾಲಂಕಾರಗಳು ಅಗಣಿತವಾಗಿ ಕಿವಿಗೆ ರಮ್ಯವಾಗುವಂತೆ ಕಾವ್ಯದ ಉದ್ದಕ್ಕೂ ತಮಗೆ ತಾವೇ ಹರಿದಂತೆ ಕಾಣುತ್ತದೆ.

|| ಅಷ್ಟಪದಿ ||

'ಚಂದನ ಚರ್ಚಿತ ನೀಲ ಕಲೇವರ
ಪೀತವಸನ ವನಮಾಲೀ
ಕೇಳಿ ಚಲನ್ಮಣಿ ಕುಂಡಲ ಮಂಡಿತ
ಗಂಡಯುಗ: ಸ್ಮಿತ ಶಾಲೀ ||

೦ ೦ ೦

ಸಂಚರದಧರ ಸುಧಾಮಧುರ ಧ್ವನಿ
ಮುಖರಿತ ಮೋಹನ ವಂಶಂ
ಚಲಿತ ದೃಗಂಚಲ ಚಂಚಲ ಮೌಳಿಕ
ಪೋಲ ವಿಲೋಲ ವತಂಸಂ.

೦ ೦ ೦

ಚಂದ್ರಕ ಚಾರು ಮಯೂರ ಶಿಖಂಡಕ
ಮಂಡಲ ವಲಯಿತ ಕೇಶಂ
ಪ್ರಚುರ ಪುರಂದರಧನುರನುರಂಜಿತ
ಮೇದುರ ಮುದಿರ ಸುವೇಶಂ.

೦ ೦ ೦

ಬಂಧು ಜೀವಮಧುರಾಧರ ಪಲ್ಲವ
ಮುಲ್ಲಸಿತಸ್ಮಿತ ಶೋಭಂ

೦ ೦ ೦

ಜಲದ ಪಟಲವಲದಿಂದುವಿನಿಂದಕ
ಚಂದನ ತಿಲಕ ಲಲಾಟಂ.

೦ ೦ ೦

ಪೀನ ಪಯೋಧರ ಪರಿಸರ ಮರ್ದನ
ನಿರ್ದಯ ಹೃದಯಕಪಾಟಂ.

೦ ೦ ೦

"ನೋಡು, ನೀಲಮೇಘಶ್ಯಾಮನು ತನ್ನ ದೇಹಕ್ಕೆ ಚಂದನವನ್ನು ಲೇಪಿಸಿಕೊಂಡು ಪೀತಾಂಬರವನ್ನುಟ್ಟು ವನಮಾಲೆಯನ್ನು ಧರಿಸಿದ್ದಾನೆ. ಅವನು ಗೋಪ ಕಾಮಿನಿಯರೊಂದಿಗೆ ಆಡುವಾಗ ಮಣಿ ಕುಂಡಲಗಳು ಅಲ್ಲಾಡಿ, ಅವನ ಕಪೋಲ ಪ್ರದೇಶಕ್ಕೆ ಶೋಭೆಯನ್ನಿತ್ತು, ಅವನ ಮುಗುಳುನಗೆಯ ಸೊಬಗನ್ನು ಇಮ್ಮಡಿಸುತ್ತಿವೆ."

ರಾಧೆಯ ಚಿಂತಾಕುಲ ಹೃದಯದಲ್ಲಿ ವಾಸುದೇವನ ವಿರಹಾಗ್ನಿಯು ದಾವಾನಲಸ್ವರೂಪಿಯಾಗದಂತೆ, ಶ್ರೀಕೃಷ್ಣನೂ ರಾಧಾ ವಿರಹದಿಂದ ತಪ್ತನಾಗಿದ್ದಾನೆಂದು ಸಖಿಯು ಹೇಳುತ್ತಾಳೆ.

'ಶ್ರೀಕೃಷ್ಣನು ಅಮೃತವನ್ನು ಸುರಿಸುವ ಅಧರಗಳಲ್ಲಿ ವೇಣುವನ್ನೂದುವಾಗ ಆತನ ಚಂಚಲ ನೋಟ, ತಲೆಯನ್ನಲ್ಲಾಡಿಸುವಾಗ ಕಪೋಲಗಳಲ್ಲಿ ತೂಗಾಡುತ್ತಿದ್ದ ಕರ್ಣಾಭರಣಗಳ ಕುಣಿದಾಟ— ಏನು ಚಂದ!"

"ಮನೋಹರವಾದ ನವಿಲು ಗರಿಗಳಿಂದ ಅಲಂಕೃತವಾದ ಕೂದಲುಗಳುಳ್ಳ ಶ್ಯಾಮಸುಂದರನು ಕಾಮನಬಿಲ್ಲುಗಳಿಂದ ಮನೋಹರವಾಗಿ ಕಾಣುವ ಮೋಡದಂತಿದ್ದನು."

"ಮೋಡಗಳ ತೆರೆಯ ಹಿಂದಿನಿಂದ ಮಿರುಗುವ ಚಂದ್ರನನ್ನು ಮೀರಿದ ಸುಂದ

ರವಾದ ಹಣೆಯ ಚಂದನ ತಿಲಕವುಳ್ಳವನಾಗಿದ್ದನು. ತಳಿರಿನಂತೆ ಸುಂದರವಾದ ಆತನ ಚೆಂದುಟಿಯಲ್ಲಿ ಮಿಂಚುವ ಎಳನಗೆಯು ಅವರ್ಣನೀಯ.’

“ಕಠಿನವಾದ ಪಯೋಧರ ಮರ್ದನಕ್ಕೆ ಹಿಂಜರಿಯದ ವಿಶಾಲವಾದ ಹೃದಯ ಪ್ರದೇಶವುಳ್ಳವನು ಆ ಹರಿ.”

ರಾಧೆಯ ಪೂರ್ವಾನುಭವಗಳಿವು. ಕೃಷ್ಣದರ್ಶನಕ್ಕಾಗಿ ಆಕೆಯ ಹೃದಯವು ತುಂಬಾ ತುಡಿದುಕೊಳ್ಳುತ್ತಿದೆ.

ವೃಂದಾವನವು ಪುಣ್ಯ ಭೂಮಿ; ವೃಂದೆಯ ನೆಲ, ಅಲ್ಲಿ ವೃಂದೆಯು ಸಹಸ್ರ ತುಲಸಿಯ ರೂಪಗಳಿಂದ ಅವತರಿಸಿ ರಾಧಾಕೃಷ್ಣರ ವಿಲಾಸವನ್ನು ನೋಡಿ ಸದಾ ಹಸನ್ಮುಖಿಯಾಗಿರುವಳು. ವೃಂದಾವನವು ಬ್ರಹ್ಮನ ಮಾನಸ ಮೋಹಕ ಸೃಷ್ಟಿ! ವಸಂತ ಮನ್ಮಥರು ಒಮ್ಮನಸ್ಸಿನಿಂದ ನೆಟ್ಟ ಉದ್ಯಾನ! ಅದು ಪರಮ ಪುರುಷನ ಆನಂದದ ಆಡುಂಬೊಲ! ಅಲ್ಲಿ ಸದಾ ಶ್ರೀಕೃಷ್ಣನ ಸಂದರ್ಶನದಿಂದ ಭೂದೇವಿಯು ತೃಣ ಸಸ್ಯಗಳ ಚಿಗುರೆಂಬ ರೋಮಾಂಚನಗೊಂಡಳೆಂಬಂತೆ. ಸಸ್ಯ ಸಂಪತ್ತೇ ಚೆಂದಳಿರನ್ನು ಹೊತ್ತವು; ಮಾಮರಗಳು ತಳಿರಿನ ತೋರಣ ಹಿಡಿದಿದ್ದವು; ಅಶೋಕವು ಚಿಗುರಿನ ಚೆಲು ಗುಡಿಯನೆತ್ತಿತ್ತು; ಲತೆಗಳು ನಂದಕುಮಾರನಿಗಾಗಿ ಪುಷ್ಪಮಾಲೆಗಳನ್ನೆತ್ತಿ ಹಿಡಿದಿದ್ದವು. ತುಂಬಿಗಳ ವಾದ್ಯ ಧ್ವನಿಯು ಎಲ್ಲೆಲ್ಲಿಯೂ ಪ್ರತಿಧ್ವನಿಸ ತೊಡಗಿತ್ತು. ಕೋಗಿಲೆಗಳು, ‘ರಾಧಾಮಾಧವ,ರಾಧಾಮಾಧವ’ ಎಂದು ಹಾಡತೊಡಗಿದ್ದುವು. ಗಿಳಿಗಳು ‘ರಾಸವಿಹಾರಿ, ರಾಧೇಶ್ಯಾಮ’ನೆಂದು ಗಳಹತೊಡಗಿದ್ದುವು; ಭ್ರಮರಗಳು ‘ಮುಕುಂದನು ರಾಧಾರಮಣನಾಗಲು ಕುಂಜ ಕುಟೀರಕ್ಕೆ ಆಗಮಿಸುತ್ತಿರುವನು’ ಎಂದು ಹಾಡುತ್ತಿದ್ದವು ನವಿಲುಗಳು ಈ ಆನಂದ ನಿರ್ಭರದಿಂದ ಕುಣಿಯತೊಡಗಿದ್ದುವು; ಮಂದಮಾರುತನು ಈ ರಸ ನಿಮಿಷದ ಪ್ರಚಾರಕನಾದನು!

ಗೀತ ಗೋವಿಂದದ ವಸಂತ ಋತುವಿನ ವರ್ಣನೆ, ರಾಧೆಯು ಪೂರ್ವದಲ್ಲಿ ಕೇಶವನೊಡನೆ ತನಗಾದ ಸಮಾಗಮದ ಸುಖವನ್ನು ನೆನೆದು ಹಾಕುವುದು, ಮುಗ್ಧ ಮಧುಸೂದನನ ರಾಧಾವಿರಹದ ಮನೋವೇದನೆ, ರಾಧೆಯ ದುರ್ಭರ ವಿರಹದ ವರ್ಣನೆ, ವಿಪ್ರಲಬ್ಧಳಾಗಿ ವಿಲಪಿಸುವ ರಾಧೆಯ ಸಂಕಷ್ಟಗಳ ತೀವ್ರತೆ, ಚತುರ ಚತುರ್ಭುಜ ರಾಧೆಯರ ಸಲ್ಲಾಪ ರಾಧಾಕೃಷ್ಣರ ಮಿಲನ ಮತ್ತು ತಾಪಶಾಂತಿ — ಈ ಸೊಬಗು ಸೌಂದರ್ಯಗಳು ಯಾವ ಭಾಷೆಯ ಸಾಹಿತ್ಯದಲ್ಲಿ ದೊರೆತಾವು?

ಕೇಶವನು ರಾಧೆಯನ್ನು ರಮಿಸುವ ವಿಧಾನವು ಮನೋಹರವಾದುದು. ರಾಧೆಯೊಡನೆ

ಶ್ಲೋ|| ತ್ವಮಸಿ ಮಮ ಭೂಷಣಂ,
ತ್ವಮಸಿ ಮಮ ಜೀವನಂ
ತ್ವಮಸಿ ಮಮ ಭವಜಲಧಿ ರತ್ನಂ ||

“ಪ್ರಿಯೇ, ನೀನೇ ನನ್ನ ಅಲಂಕಾರ, ನನ್ನ ಪ್ರಾಣ, ಹೆಚ್ಚೇಕೆ? ನನ್ನ ಸಂಸಾರ ಸಾಗರದ ಅಮೌಲ್ಯ ರತ್ನ’

ಶ್ಲೋ|| ಮುಗ್ಧೇ ವಿಧೇಹಿ ಮಯಿ
ನಿರ್ದಯದಂತದಂಶ—
ದೋರ್ವಲ್ಲಿ ಬಂಧ ನಿಬಿಡಸ್ತನ
ಪೀಡನಾನಿ ||

‘ಮುಗ್ಧೇ, ನನ್ನಲ್ಲಿ ದಯೆ ತೋರಬೇಡ; ದಂತಕ್ಷತ ಮಾಡುತ್ತಾ ಬಾಹುಲತೆಗಳಿಂದ ಬಿಗಿದು; ನಿಬಿಡಸ್ತನಗಳಿಂದ ಹೊಡೆ’ ಎನ್ನುತ್ತಾನೆ.

ಇನ್ನೂ ರಾಧೆಯ ಮೌನ ಭಂಗವಾಗಲಿಲ್ಲ. ಶ್ರೀಕೃಷ್ಣನು ಪುನಃ ರಾಧಾರಾಣಿಯನ್ನು ಪ್ರಶಂಸಿಸುತ್ತಾನೆ. “ಪ್ರಿಯೆ, ನಿನ್ನ ಬಂಧೂಕ ಕುಸುಮದ ಅಧರ, ಮಧೂಕ ಪುಷ್ಪದ ಲಾವಣ್ಯಮಯ ಕಪೋಲ, ನೀಲೋತ್ಪಲದ ಕಾಂತಿಯನ್ನು ಸೂರೆಗೈವ ನೇತ್ರಗಳು, ತಿಲ ಪುಷ್ಪದಂತಹ ನಾಸಿಕ, ಕುಂದ ಕುಟ್ಮಲದಂತಹ ದಂತಪಂಕ್ತಿಗಳು — ಇವನ್ನು ಆಶ್ರಯಿಸಿಯೇ ಕುಸುಮ ಬಾಣನು ಜಗತ್ತನ್ನು ಜಯಿಸುತ್ತಿದ್ದಾನೆ’ ಯಾವ ತರುಣಿಯು ಸುಂದರ ತರುಣನೊಬ್ಬನ ಇಂತಹ ಸಮ್ಮೋಹಕ ವಾಕ್ಯಗಳಿಗೆ ಮರುಳಾಗಳು?

ಆಗ ಚಂದ್ರೋದಯವಾಯಿತು. ಹಾಲಿನ ಕಡಲಲ್ಲೇ ವಿಶ್ವವು ತೇಲಾಡತೊಡಗಿತು. ಸಖಿಯು ರಾಧೆಯನ್ನು ಮಾಧವನ ಮದನ ಕಲಾಮಂದಿರವನ್ನು ಪ್ರವೇಶಿಸಿ ದೂರ ಹೊರಟುಹೋದಳು.

ರಾಧೆಯ ಲಜ್ಜೆಯು ಸರಿಯಿತು. ಮಂದಹಾಸವು ಆಕೆಯನ್ನು ಅಧರ ಪಲ್ಲವದಲ್ಲಿ ನಲಿದಾಡಿತು. ಅನುರಾಗವತಿಯಾದ ರಾಧೆಯೊಡನೆ, ಮಾಧವನು ಮಾತನಾಡಲುಪಕ್ರಮಿಸಿದನು.

ರಾಧೆಯ ಬಯಕೆಯನ್ನು ಶ್ರೀ ಕೃಷ್ಣನು ಪೂರೈಸಿದನು.

ಜಯದೇವನೇ ತನ್ನ ಕಾವ್ಯಕ್ಕೆ ಪ್ರಿಯೆಯ ಅಧರವೂ ಸರಿಸಾಟಿಯಾಗಲಾರದೆಂದು ಕೊನೆಯ ತೀರ್ಮಾನವನ್ನಿತ್ತು ರಸಿಕರಿಗೆ ಪರಮಾಹ್ಲಾದಕಾರಿಯಾಗಿದ್ದಾನೆ!

ಗೀತಗೋವಿಂದದ ಕಾವ್ಯವು ಮೊದಲಿನಿಂದ ತುದಿಯವರೆಗೆ ಸರಳವಾಗಿದೆ. ರಾಧಾ ಗೋವಿಂದರ ಸಮ್ಮಿಲನ ಕಾರ್ಯದಲ್ಲಿ ಎಲ್ಲಿಯೂ ರಸಭಂಗವಾಗಿಲ್ಲ. ಕಾವ್ಯ ಚಿತ್ರಕ್ಕೆ ಭಾಷೆಯ ಚೌಕಟ್ಟು ಸುಂದರವಾಗಿ ಹೊಂದಿಕೊಂಡಿದೆ. ಸಾಹಿತ್ಯವೂ ಗಾಯನ ಕುಶಲನೂ ಜಗತ್ತಿನಲ್ಲಿ ಮೇಳವಿಸುವುದು ಅಪರೂಪ, ಜಯದೇವನಲ್ಲಿ ಈ ಎರಡೂ ಸದ್ಗುಣಗಳು ಸಮಾಂಶ ಹೊಂದಿ ಸಮಪ್ರಮಾಣದಲ್ಲಿವೆ. ಈ ಕಾವ್ಯದಿಂದ ಉಗಮವಾದ ಭಕ್ತಿ ಪ್ರವಾಹವು ರಾಧಾರಾಣಿಯ ನೆಪದಲ್ಲಿ ಹರಿದು ಪ್ರೇಮಮೂರ್ತಿ ಶ್ಯಾಮಸುಂದರನಲ್ಲಿ ಐಕ್ಯವಾಗಿದೆ. ಭಕ್ತರು ಭಗವಂತನಿಗೆ ಇದಕ್ಕಿಂತ ಹೆಚ್ಚಿಗೆ ಯಾವ ಕಾಣಿಕೆಯನ್ನು ಕೊಡಬಲ್ಲರು?

# ಯೌವನ

(ಏಳನೇ ಪುಟದಿಂದ)

ತನನ್ನು ಚೆನ್ನಾಗಿ ಹೊಡೆದು ಮನೆಯಿಂದ ಎಳೆದು ಹೊರಗೆ ಹಾಕಿಬಿಟ್ಟರು!

ಹೊರಗೆ ಉರುಳಿಬಿದ್ದ ಗಂಗಾದತ್ತನು ಒಂದು ಮರದ ಬುಡದಲ್ಲಿ ಕುಳಿತು ಎರಡೂ ಕೈಗಳನ್ನು ತಲೆಯ ಮೇಲಿಟ್ಟುಕೊಂಡು ತನ್ನ ದೌರ್ಭಾಗ್ಯವನ್ನು ನೆನೆಯುತ್ತ ಚಿಕ್ಕ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳತೊಡಗಿದನು. ಆತ ಈ ದುಃಖವನ್ನು ತಡೆಯಲಾರದಾದನು. ಪೆಟ್ಟುಗಳ ನೋವಿನಿಂದ ನರಳುತ್ತಿದ್ದ ಆತನು— “ಹೇ ಶಂಕರಾ! ನನಗೆ ಈ ಕಾಲದಲ್ಲಿ ಯೌವನ ದೊರಕಿಸಿಕೊಳ್ಳುವ ದುರ್ಬುದ್ಧಿಯನ್ನು ಏಕೆ ಕೊಟ್ಟೆಯೋ? ಅಯ್ಯೋ! ಇದರಿಂದ ನನ್ನ ಸುಖ, ಶಾಂತಿ, ಎಲ್ಲವೂ ನಾಶವಾಗಿ ನಾನು ನಿರ್ಗತಿಕನಾದೆನಲ್ಲ!’ ಎಂದೆನ್ನುತ್ತ ಅತ್ಯಂತ ದೀನನಾಗಿ ರೋದಿಸತೊಡಗಿದನು! ಪಾಪ! ತಡೆಯಲಾರದ ಕಷ್ಟ ಬಂದಾತ ಕಣ್ಣೀರೇ ಗತಿ! ಎಂಬಂತಾಯಿತು ಗಂಗಾದತ್ತನ ಸ್ಥಿತಿ.

ಇದಾದ ಬಳಿಕ ಕೆಲವು ದಿನ ಕಳೆದರೂ ಗಂಗಾದತ್ತನು ಮರಳಿ ಮನೆಗೆ ಬರಲಿಲ್ಲ! ಇಂದ್ರಪ್ರಸ್ಥಕ್ಕೆ ಹೋದ ಗಂಗಾದತ್ತನು ಏಕೆ ಇನ್ನೂ ಬರಲಿಲ್ಲವೆಂದು, ಗಾಂಗಿಯೂ ಮಕ್ಕಳೂ ಎಲ್ಲರೂ ಚಿಂತಿಸತೊಡಗಿದರು. ಕೊನೆಗೆ ಗಾಂಗಿಯು ತನ್ನ ಮಕ್ಕಳನ್ನು ಇಂದ್ರಪ್ರಸ್ಥದ ರಾಜಧಾನಿಗೆ ಕಳುಹಿಸಿ ಕೊಟ್ಟಳು. ಇಂದ್ರಪ್ರಸ್ಥಕ್ಕೆ ಹೋಗಿ ತಲುಪಿದ ಆ ಮಕ್ಕಳು ಮೋಹನದತ್ತನನ್ನು ಕಂಡು, ತಮ್ಮ ತಂದೆಯ ಸಮಾಚಾರವನ್ನು ಕೇಳಿದರು. ಗಂಗಾದತ್ತನು ಇನ್ನೂ ಮನೆ ಸೇರಲಿಲ್ಲ ಎಂಬುದನ್ನು ಕೇಳಿ ಮೋಹನದತ್ತನಿಗೆ ಆಶ್ಚರ್ಯವಾಯಿತು, ಗಂಗಾದತ್ತನು ಇಂದ್ರಪ್ರಸ್ಥಕ್ಕೆ ಹೊರಟು ಹೋದ ಆ ದಿನದ ರಾತ್ರಿಯೇ ಮರಳಿ ಹೋಗಿದ್ದನೆಂದೂ, ಆ ಬಳಿಕ ತನಗೆ ಏನೂ ತಿಳಿಯದೆಂದೂ ಮೋಹನದತ್ತನು ತಿಳಿಸಿದಾಗ—ಅದೇ ದಿನ ರಾತ್ರಿ ತಾನು ಗಂಗಾದತ್ತನೆಂದು ಹೇಳಿಕೊಳ್ಳುತ್ತ ಓರ್ವ ತರುಣನು ಮನೆಗೆ ಬಂದಿದ್ದನೆಂದೂ ಆದರೆ ಆತನು ಗಂಗಾದತ್ತನಲ್ಲವೆಂದು ಎಲ್ಲರೂ ಭಯಭೀತರಾಗಿ, ಆತನನ್ನು ಹೊಡೆದು ಹೊರಗೆ ಕಳುಹಿಸಲಾಯಿತೆಂಬ ಸಮಾಚಾರವನ್ನೂ ಆ ಮಕ್ಕಳು ಮೋಹನದತ್ತನಿಗೆ ಹೇಳಿದರು.

ಇದನ್ನು ಕೇಳಿ ಅತ್ಯಂತ ಚಿಂತಿತನಾದ ಮೋಹನದತ್ತನು— ಆ ಮಕ್ಕಳಿಗೆ “ಆ ದಿನ ರಾತ್ರಿ ಬಂದ ಆವನೇ ನಿಮ್ಮ ತಂದೆ ಗಂಗಾದತ್ತ, ಯೌವನವನ್ನು ಪಡೆದು ಬಂದಿದ್ದ ಕಾರಣ,ನೀವುಗಳು ತಂದೆಯನ್ನು ಗುರುತಿಸದೆ, ಹೊಡೆದು ಬಡಿದು ಆತನನ್ನು ಮನೆಯಿಂದ ಹೊರಗೆ ಹಾಕಿ ದೊಡ್ಡ ಅನ್ಯಾಯ ಮಾಡಿದಿರಿ! ಈ ಪಾಪ, ಎಂದಿಗೂ ನಿವಾರಣೆಯಾಗಲಾರದು!! ಎಂದು ಹೇಳಿದನು.

ಪಶ್ಚಾತ್ತಾಪದಿಂದ ನೊಂದ ಆ ಮಕ್ಕಳು ಮನೆ ಸೇರಿ ಮಾತೆಯೊಡನೆ ಈ ಸಮಾಚಾರವನ್ನು ಹೇಳಿದಾಗ - ಆ ಪತಿಭಕ್ತೆಯಾದ ಗಾಂಗಿಯು ಅತ್ಯಂತ ದುಃಖಿತಳಾಗಿ— “ತನ್ನ ಪತಿದೇವನಿಗೆ ತಾನು ಮಾಡಿದ ಘೋರ ಅನ್ಯಾಯವನ್ನು ನೆನೆನೆನೆದು, ತಲೆ ಚಚ್ಚಿಕೊಳ್ಳುತ್ತ— ಅಯ್ಯೋ ಇನ್ನಿದಕ್ಕೆ ಪರಿಹಾರವೇನೆಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು— “ಅಯ್ಯೋ! ನಾನು ಅವರ ಮಾತನ್ನು ಕೇಳದೆ ನನ್ನ ಪತ್ನೀಧರ್ಮಕ್ಕೆ ಚ್ಯುತಿ ತಂದುಕೊಂಡೆ! ಅವರು ಜವ್ವನಿಗರಾಗಿ ಬಂದಾಗ ನಾನು ಮುದುಕಿಯಾಗಿಯೇ ಉಳಿದೆ! ಇದರಿಂದಲೂ ಅವರು ಬಹಳ ನೊಂದುಕೊಂಡಿರಬಹುದು. ನನ್ನಿಂದ ಅಕ್ಷಮ್ಯ ಅಪರಾಧ ಆಗಿಹೋಯಿತು!, ಎಂದು ಚಿಂತಿಸುತ್ತ ಆಕೆ ಕೊನೆಗೆ ತಾನೂ ಇಂದ್ರಪ್ರಸ್ಥಕ್ಕೆ ಹೋಗಿ ಆ ಯೋಗಿಯ ಮೂಲಕ ಯೌವನವನ್ನು ಪಡೆದು ಬರುವುದಾಗಿ ನಿರ್ಧರಿಸಿದಳು. ಆದರೆ ಮರುಕ್ಷಣದಲ್ಲಿಯೇ ಆಕೆಗೆ ತಾನು ಪರಪುರುಷನಲ್ಲಿಗೆ ಹೋಗುವುದು ಹೇಯ ಕೃತ್ಯ! ಎಂದೆನಿಸಿತು. ಕಟ್ಟಕಡೆಗೆ ಆಕೆ- “ಜಗನ್ಮಾತೆಯಾದ ಪಾರ್ವತಿಯನ್ನು ಭಜಿಸಿ ಯೌವನವನ್ನು ವರದಾನವಾಗಿ ಪಡೆಯುವುದೇ ಸರಿಯಾದ ಮಾರ್ಗವೆಂದು ತಿಳಿದು ಮೋಹ ಮಾಯೆಗಳನ್ನು ತೊರೆದು, ಹಿಮಾಲಯಕ್ಕೆ ಹೋಗಿ ಪಾರ್ವತಿಯನ್ನು ಒಲಿಸಲು ತಪಸ್ಸುಮಾಡತೊಡಗಿದಳು!

o o o o

ಪತಿವ್ರತೆಯಾದ ಗಾಂಗಿಯ ತಪಸ್ಸಿಗೆ ಒಲಿದ ಪಾರ್ವತೀ ದೇವಿಯು ಕೊನೆಗೆ ಗಾಂಗಿಗೆ ಯೌವನವನ್ನು ಅನುಗ್ರಹಿಸಿದಳು! ವೃದ್ಧೆಯಾದ ಗಾಂಗಿಯು ಆ ಕ್ಷಣವೇ ಯುವತಿಯಾಗಿ ಪರಿವರ್ತನೆಗೊಂಡಳು.

ಇಷ್ಟೆಲ್ಲ ಆಗುವಾಗ ಸುಮಾರು ಒಂದು ವರ್ಷವೇ ಕಳೆದಿತ್ತು. ಯುವತಿಯಾದ ಗಾಂಗಿಯು ತನ್ನ ಪತಿಯ ಇಚ್ಛೆಯನ್ನು ಈಗಲಾದರೂ ಪೂರ್ಣಗೊಳಿಸಿದೆನೆಂದು ಸಂತೋಷದಿಂದ ಮನೆ ಸೇರಿದಳು. ಅಷ್ಟರಲ್ಲಿ ಗಂಗಾದತ್ತನೂ ಸಹ ಮನೆಗೆ ಮರಳಿದ್ದಾನೆಂಬ ವಾರ್ತೆ ಆಕೆಗೆ ತಿಳಿಯಿತು. ಯುವತಿಯಾದ ತಾನು ಯಾವ ಕ್ಷಣದಲ್ಲಿ ಪತಿಯ ದರ್ಶನ ಪಡೆದೇನು? ಎಂದು ಕಾತರಳಾಗಿದ್ದ ಗಾಂಗಿಯು ಮನೆಯಲ್ಲಿ ಪತಿದೇವನ ಆಗಮನವನ್ನೇ ನಿರೀಕ್ಷಿಸತೊಡಗಿದಳು!

ಆ ಗಳಿಗೆಯೂ ಬಂದೇ ಬಿಟ್ಟಿತು! ಗಂಗಾದತ್ತನು ಮನೆಸೇರಿ ತನ್ನ ಮಲಗುವ ಕೋಣೆಗೆ ಪ್ರವೇಶಿದನು. ಆ ಕ್ಷಣವೇ ಗಾಂಗಿಯು ಶಯನಾಗಾರವನ್ನು ಪ್ರವೇಶಿಸಿ — “ನಾಥಾ! ನಿಮ್ಮ ಇಚ್ಛೆಯಂತೆ ಯುವತಿಯಾಗಿ ಬಂದಿದ್ದೇನೆ! ನನ್ನನ್ನು ಸ್ವೀಕರಿಸಬೇಕು!, ಎನ್ನುತ್ತ ಪತಿಯ ಪಾದಗಳ ಮೇಲೆ ಮಸ್ತಕವನ್ನಿಟ್ಟು ಆನಂದ ಬಾಷ್ಪಗಳನ್ನು ದುರಿಸತೊಡಗಿದಳು!

ಆಗ ಗಂಗಾದತ್ತನು ನಸು ನಗುತ್ತ- “ಪ್ರಿಯೆ! ನಾನು ಅಸಮಯದಲ್ಲಿ ಯೌವನ ಪಡೆದ ತಪ್ಪಿಗೆ ನನಗೆ ಆಗ ಬೇಕಾದ ಶಿಕ್ಷೆ ಆಗಿ ಹೋಯಿತು. ನಾನು ಹೇಳಿದಂತೆ ವರ್ತಿಸಿ ಈಗ ನೀನು ಬಹಳ ತಡವಾಗಿ ತರುಣಿಯಾಗಿ ಬಂದಿರುವೆ! ಆದರೆ ನಾನು ನೀನು ಹೇಳಿದಂತೆ ವರ್ತಿಸಿ ಈಗ ಮುದುಕನಾಗಿ ಬಂದಿದ್ದೇನೆ! ನಿನ್ನ ಹೇಳಿಕೆಯಂತೆ, ನಾನು ಪ್ರಕೃತಿ ನಿಯಮವನ್ನು ಉಲ್ಲಂಘನೆ ಮಾಡಿದ್ದು ತಪ್ಪು! ಕೊನೆಗೆ ಶಂಕರನ ತಪಸ್ಸು ಮಾಡಿ, ವೃದ್ಧಾಪ್ಯವನ್ನೇ ಪಡೆದು ಈಗ ಮನೆಗೆ ಬಂದಿದ್ದೇನೆ! ಪ್ರಿಯೇ! ನೀನು ಮೊದಲು ಹೇಳಿದ ಮಾತೇ ಸತ್ಯ!...., ಎಂದು ಮುಂತಾಗಿ ಗಂಗಾದತ್ತನು ಹೇಳುತ್ತಿದ್ದಂತೆಯೇ—ನವತರುಣಿ ಗಾಂಗಿಯು ಥರ ಥರನೆ ನಡುಗುತ್ತ, ಅನಿರೀಕ್ಷಿತವಾಗಿ ಪತಿಯ ಪಾದ ಕಮಲಗಳ ಮೇಲೆ ಉರುಳಿ ಬಿದ್ದು ಬಿಟ್ಟಳು!

(ಮರಾಠಿ ‘ಸಹ್ಯಾದ್ರಿ’ಯಿಂದ)

PLEASE PATRONIZE
OUR ADVERTISERS

# ಜಯದೇವ ಮಹಾಕವಿ ಮತ್ತು ಗೀತಗೋವಿಂದ

(ಎಂಟನೆಯ ಪುಟದಿಂದ)

ವನೆಂಬ (ಕ್ರಿ. ಶ. ೧೧೧೬) ಹಿಂದೂ ರಾಜನು ಆಳುತ್ತಿದ್ದನು. ಇವನ ಆಸ್ಥಾನದಲ್ಲಿ ಉತ್ತಮ ವರ್ಗದ ಶೃಂಗಾರ ಕವಿಯಾದ ಗೋವರ್ಧನನೇ (೧—೪) ಮೊದಲಾದ ಕೆಲವು ಕವಿಗಳಿದ್ದರೂ ಅಜರಾಮರವಾದ ಯಶಸ್ಸನ್ನು ನೋಂತು ಸಫಲನಾದವನು ಜಯದೇವನು ಮಾತ್ರ. ಈತನ ಗೀತಗೋವಿಂದವು ಭಾರತದಲ್ಲೇ ವಿದ್ವಾಂಸರ, ಕವಿಗಳ, ಗಮಕಿಗಳ, ನರ್ತಕರ ಚೇತೋಪಹಾರಿಯಾದ ಕಾವ್ಯವಾಗಿದೆ. ಈ ಕಾವ್ಯವನ್ನು ಕವಿಯು ಅಂದಿನ ಬಂಗಾಲದಲ್ಲಿ ರೂಢಿಯಲ್ಲಿದ್ದ ಯಾತ್ರಾ ಮಹೋತ್ಸವಗಳ ಸದುಪಯೋಗಕ್ಕಾಗಿ ನಿರ್ಮಾಣ ಮಾಡಿದನು. ಈ ಕಾವ್ಯದಲ್ಲಿ ಶ್ರೀಕೃಷ್ಣ—ರಾಧೆ—ಸಖಿಯರೆಂಬ ಮೂರು ಪಾತ್ರಗಳಿರುವಂತೆ, ಸಂವಾದಗೀತ, ವರ್ಣನೆಗಳೆಂಬ ಮೂರು ಭಾಗಗಳಿವೆ. ಈ ಕಾವ್ಯದ ಕುರಿತು ವಿದ್ವಾಂಸರೂ ಉತ್ತಮ ವಿಮರ್ಶಕರೂ ಆದ ಶ್ರೀ| ಡಾ. ಕೃಷ್ಣಮೂರ್ತಿಯೊಬ್ಬರ ಅಭಿಪ್ರಾಯವೇ ಸಾಕು. "ಗೀತಗೋವಿಂದದ ಶೈಲಿಯು ಅನುಪಮ; ಅದರ ಮೋಹಕತ್ವ ಅದ್ಭುತ, ಅದರ ಅಗಾಧ ಶೃಂಗಾರ ಪ್ರವಾಹದ ಅಂತರಾಳದಲ್ಲಿ ಅಮೇಯವಾದ ಮಾಧುರ ಭಾವವು ಅಡಗಿದೆ. ಸಮಗ್ರ ಸಂಸ್ಕೃತ ಸಾಹಿತ್ಯದಲ್ಲೇ ಈ ಮಟ್ಟದ ಮಾಧುರ ರಚನೆ ಮತ್ತೊಂದಿಲ್ಲ. ಸಂಸ್ಕೃತ ವಾಣಿಯ ಸೌಂದರ್ಯ, ಮಾಧುರ್ಯಗಳ ಪರಾಕಾಷ್ಠೆಯನ್ನು ಗೀತಗೋವಿಂದದಲ್ಲಿ ಅವಲೋಕಿಸಬಹುದು. ಅದರ ಶಬ್ದಚಿತ್ರಗಳ ಚೆಲುವಿನ ಬೆಳಕು ಗೊಂಚಲು ಗೊಂಚಲಾಗಿ ಮಿಂಚುತ್ತದೆ. ಅದರ ಅಷ್ಟಪದಿ ಗೀತಗಳಲ್ಲಿ ಅಲೌಕಿಕವಾದ ನಾದಾಮೃತವು ಲಹರಿಲಹರಿಯಾಗಿ ತರಂಗಿಸುತ್ತಿದೆ. ಅದರ ಛಂದೋಬಂಧಗಳಲ್ಲಿ ಅಪೂರ್ವವಾದ ತಾಳಮೇಳವಿದೆ......... ವಿಶ್ವ ಸಾಹಿತ್ಯದಲ್ಲೇ ವಿಲಾಸ ಕಲಾಕುತೂಹಲಿಗಳಿಗೆ ಇಂಥ ಮಧುರ – ಕೋಮಲ – ಕಾಂತ ಪದಾವಲಿಗಳು ಮತ್ತೆಲ್ಲೂ ದೊರೆಯಲಾರವು........" ಗೀತಗೋವಿಂದವು ವಿಶ್ವಸಾಹಿತ್ಯದಲ್ಲೇ ಅಮರ—ಅಮೋಘವಾದ ಕಾವ್ಯವೆಂಬುದಕ್ಕೆ ಸಂದೇಹವಿಲ್ಲ. ಗೀತಗೋವಿಂದವು ಭಾರತೀಯರ ಭಗವದ್ಗೀತೆ!

ಶ್ರೀಕೃಷ್ಣ ಜನ್ಮಖಂಡವೆಂಬ ಗ್ರಂಥದಿಂದ ಜಯದೇವನು ಪ್ರಚೋದಿತನಾಗಿ ಗೀತಗೋವಿಂದವನ್ನು ಬರೆದನೆನ್ನುತ್ತಾರೆ. ಇದರಲ್ಲಿ ಸತ್ಯಾಂಶವಿದ್ದರೂ ಮೂಲ ಗ್ರಂಥಕ್ಕೂ ಗೀತಗೋವಿಂದಕ್ಕೂ ಅಜಗಜಾಂತರವಿದೆ. ಸುಬಂಧುವಿನ ವಾಸವದತ್ತೆಗೂ ಬಾಣಭಟ್ಟನ ಕಾದಂಬರಿಗೂ ಇರುವ ಹೋಲಿಕೆಗಳು ಈ ಎರಡು ಗ್ರಂಥಗಳಿಗಿವೆ. ಗೀತಗೋವಿಂದವೊಂದು ಅತ್ಯುತ್ತಮ ಭಾವಗೀತ. ಇದು ಶೃಂಗಾರದಿಂದ ಆರಂಭಿಸಿ ವೇದಾಂತ ದರ್ಶನದ ವರೆಗೆ ಸರ್ವರ ಆದರಕ್ಕೂ ಪಾತ್ರವಾದ ಗ್ರಂಥ. ಇದೊಂದು ಸಾಹಿತ್ಯ ಸ್ವರ್ಗ!

ವಸಂತಮಾಸದಲ್ಲೊಮ್ಮೆ ಮುಗ್ಧ ರಾಧೆಯು ಶ್ರೀ ಕೃಷ್ಣವಿರಹದಿಂದ ಹುಚ್ಚಿಯಾಗಿ ವೃಂದಾವನದಲ್ಲೆಲ್ಲಾ ಆತನನ್ನು ಹುಡುಕುತ್ತಿರುವ ಸನ್ನಿವೇಶದಿಂದ ಕಾವ್ಯವು ಆರಂಭವಾಗುತ್ತದೆ. ಕಾವ್ಯಾರಂಭದಲ್ಲಿ ಕವಿಯು ವರ್ಣಿಸಿದ ವಸಂತ ಮಾಸದ ವರ್ಣನವೇ ಮನಸ್ಸಿಗೆ ಅದೆಷ್ಟೋ ಹಿತವನ್ನುಂಟು ಮಾಡುವುದು. ಆಗ ವಾಸಂತೀ ಕುಸುಮ ಕೋಮಲೆಯಾದ ರಾಧೆಯು ವಿರಹ ದುಃಖವನ್ನು ಮರೆಮಾಡುವುದಕ್ಕಾಗಿ ಆಕೆಯ ಗೆಳತಿಯು ಸಿದ್ಧ ಪದಗಳಿಂದ ವಸಂತ ಕಾಲವನ್ನು ವರ್ಣಿಸುವಳು. ಕವಿಯು ಈ ವರ್ಣನೆಯ ಅಷ್ಟಪದಿಯನ್ನು ವಸಂತರಾಗದಿಂದ ಹಾಡಿದ್ದಾನೆ. "ವಸಂತ ಋತುವಿನಲ್ಲಿ ಲಲಿತ ಲವಂಗ ಲತೆಗಳ ಸ್ಪರ್ಶದಿಂದ ಕೋಮಲವಾದ ಮಲಯಮಾರುತವು ಪರಿಮಳವನ್ನು ಹೊಂದಿ ಬೀಸುತ್ತಿದೆ. ತುಂಬಿಗಳ ಝೇಂಕಾರದಿಂದ ಕೋಗಿಲೆಗಳ ಕೂಜನದಿಂದ ಕುಂಜ ಕುಟೀರಗಳೆಲ್ಲಾ ಶೋಭಿತವಾಗಿವೆ. ಸಂಚಾರೀ ತರುಣರ ಕಾಂತೆಯರು ಉಲ್ಲಸಿತರಾಗಿ ಮದನೇಚ್ಛೆಯಿಂದ ವಿಹರಿಸುತ್ತಲೂ ವಿಲಪಿಸುತ್ತಲೂ ಇದ್ದಾರೆ. ಬಕುಲ ಪುಷ್ಪಗಳಲ್ಲಿ ಭ್ರಮರಗಳು ನೆರೆಯುತ್ತಿರಲು ಬಕುಲ ವೃಕ್ಷಗಳು ವಿಲಾಪಿಸುವ ಪಥಿಕಜನದಂತೆ ಕಾಣಿಸುತ್ತಿವೆ. ಕವಲಗಳು ಚಿಗುರು ಕಸ್ತೂರಿಯ ಕಂಪನ್ನು ಬೀರುತ್ತಿವೆ. ಆಗ ನಾಗ ಕೇಸರ ಪಾಟಲೀ ಮೊಗ್ಗುಗಳು ಮನ್ಮಥನ ಕುಸುಮ ಬಾಣಗಳು! ತುಂಬಿಗಳು ಮುತ್ತಿದ ಪಾಟಲೀ ಕುಸುಮ ಮಂಜರಿಯು ಕಂದರ್ಪನ ಬತ್ತಳಿಕೆ! ಕೇತಕಿಗಳು ವಿರಹಿಗಳನ್ನು ನೋಯಿಸುವ ಆಯುಧಗಳು! ಮಾಧವಿ ನವಮಲ್ಲಿಕೆಗಳ ಸೌರಭವು ಮುನಿಜನರ ಮನಸ್ಸಿನಲ್ಲೂ ಮೋಹವನ್ನು ಹುಟ್ಟಿಸುತ್ತಿವೆ; ಮಾಲತೀ ಲತೆಯ ಆಲಿಂಗನದಿಂದ ಮಾಮರವು ಪುಷ್ಪಿತ ರೋಮಾಂಚನಗೊಂಡಿದೆ. ಆಗ ವೃಂದಾವನದ ಪರಿಸರದಲ್ಲಿ ಹರಿಯುವ ಪಾವನೆ ಯಮುನೆಯ ಸೊಬಗು ಸಾಮಾನ್ಯವೇ?......"

ಗೀತ ಗೋವಿಂದದಲ್ಲಿ ಶ್ರೀಕೃಷ್ಣನ ವರ್ಣನೆಯೇ ಒಂದು ಅಮೃತ ಸ್ರೋತ! ಇದರಲ್ಲಿ ಯಮಕ, ಅನುಪ್ರಾಸಾದಿ ಶಬ್ದಾಲಂಕಾರಗಳು ಅಗಣಿತವಾಗಿ ಕಿವಿಗೆ ರಮ್ಯವಾಗುವಂತೆ ಕಾವ್ಯದ ಉದ್ದಕ್ಕೂ ತಮಗೆ ತಾವೇ ಹರಿದಂತೆ ಕಾಣುತ್ತದೆ.

|| ಅಷ್ಟಪದಿ ||

'ಚಂದನ ಚರ್ಚಿತ ನೀಲ ಕಲೇವರ
ಪೀತವಸನ ವನಮಾಲೀ
ಕೇಲಿ ಚಲನ್ಮಣಿ ಕುಂಡಲ ಮಂಡಿತ
ಗಂಡಯುಗ: ಸ್ಮಿತ ಶಾಲೀ ||

o o o

ಸಂಚರದಧರ ಸುಧಾಮಧುರ ಧ್ವನಿ
ಮುಖರಿತ ಮೋಹನ ವಂಶಂ
ಚಲಿತ ದೃಗಂಚಲ ಚಂಚಲ ಮೌಲಿಕ
ಪೋಲ ವಿಲೋಲ ವತಂಸಂ.

o o o

ಚಂದ್ರಕ ಚಾರು ಮಯೂರ ಶಿಖಂಡ
ಕಮಂಡಲ ವಲಯಿತ ಕೇಶಂ
ಪ್ರಚುರ ಪುರಂದರಧನುರನುರಂಜಿತ
ಮೇದುರ ಮುದಿರ ಸುವೇಶಂ.

o o o

ಬಂಧು ಜೀವಮಧುರಾಧರ ಪಲ್ಲವ
ಮುಲ್ಲಸಿತಸ್ಮಿತ ಶೋಭಂ

o o o

ಜಲದ ಪಟಲವಲದಿಂದುವಿನಿಂದಕ
ಚಂದನ ತಿಲಕ ಲಲಾಟಂ.

o o o

ಪೀನ ಪಯೋಧರ ಪರಿಸರ ಮರ್ದನ
ನಿರ್ದಯ ಹೃದಯಕವಾಟಂ.

o o o

"ನೋಡು, ನೀಲಮೇಘಶ್ಯಾಮನು ತನ್ನ ದೇಹಕ್ಕೆ ಚಂದನವನ್ನು ಲೇಪಿಸಿಕೊಂಡು ಪೀತಾಂಬರವನ್ನುಟ್ಟು ವನಮಾಲೆಯನ್ನು ಧರಿಸಿದ್ದಾನೆ. ಅವನು ಗೋಪ ಕಾಮಿನಿಯರೊಂದಿಗೆ ಆಡುವಾಗ ಮಣಿ ಕುಂಡಲಗಳು ಅಲ್ಲಾಡಿ, ಅವನ ಕಪೋಲ ಪ್ರದೇಶಕ್ಕೆ ಶೋಭೆಯನ್ನಿತ್ತು, ಅವನ ಮುಗುಳುನಗೆಯ ಸೊಬಗನ್ನು ಇಮ್ಮಡಿಸುತ್ತಿವೆ."

ರಾಧೆಯ ಚಿಂತಾಕುಲ ಹೃದಯದಲ್ಲಿ ವಾಸುದೇವನ ವಿರಹಾಗ್ನಿಯು ದಾವಾನಲಸ್ವರೂಪಿಯಾಗದಂತೆ, ಶ್ರೀಕೃಷ್ಣನೂ ರಾಧಾ ವಿರಹದಿಂದ ತಪ್ತನಾಗಿದ್ದಾನೆಂದು ಸಖಿಯು ಹೇಳುತ್ತಾಳೆ.

'ಶ್ರೀಕೃಷ್ಣನು ಅಮೃತವನ್ನು ಸುರಿಸುವ ಅಧರಗಳಲ್ಲಿ ವೇಣುವನ್ನೂದುವಾಗ ಆತನ ಚಂಚಲ ನೋಟ, ತಲೆಯನ್ನಲ್ಲಾಡಿಸುವಾಗ ಕಪೋಲಗಳಲ್ಲಿ ತೂಗಾಡುತ್ತಿದ್ದ ಕರ್ಣಾಭರಣಗಳ ಕುಣಿದಾಟ— ಏನು ಚಂದ!"

"ಮನೋಹರವಾದ ನವಿಲು ಗರಿಗಳಿಂದ ಅಲಂಕೃತವಾದ ಕೂದಲುಗಳುಳ್ಳ ಶ್ಯಾಮಸುಂದರನು ಕಾಮನಬಿಲ್ಲುಗಳಿಂದ ಮನೋಹರವಾಗಿ ಕಾಣುವ ಮೋಡದಂತಿದ್ದನು."

"ಮೋಡಗಳ ತೆರೆಯ ಹಿಂದಿನಿಂದ ಮಿರುಗುವ ಚಂದ್ರನನ್ನು ಮೀರಿದ ಸುಂದ

ರವಾದ ಹಣೆಯು ಚಂದನ ತಿಲಕವುಳ್ಳುದ ನಾಗಿದ್ದನು. ತಳಿರಿನಂತೆ ಸುಂದರವಾದ ಆತನ ಚೆಂದುಟಿಯಲ್ಲಿ ಮಿಂಚುವ ಎಳನ ಗೆಯು ಅವರ್ಣನೀಯ.'

"ಕಠಿನವಾದ ಪಯೋಧರ ಮರ್ದನಕ್ಕೆ ಹಿಂಜರಿಯದ ವಿಶಾಲವಾದ ಹೃದಯ ಪ್ರದೇಶವುಳ್ಳವನು ಆ ಹರಿ."

ರಾಧೆಯ ಪೂರ್ವಾನುಭವಗಳಿವು. ಕೃಷ್ಣದರ್ಶನಕ್ಕಾಗಿ ಆಕೆಯ ಹೃದಯವು ತುಂಬಾ ತುಡಿದುಕೊಳ್ಳುತ್ತಿದೆ.

ವೃಂದಾವನವು ಪುಣ್ಯ ಭೂಮಿ; ವೃಂದೆಯ ನೆಲ, ಅಲ್ಲಿ ವೃಂದೆಯು ಸಹಸ್ರ ತುಲಸಿಯ ರೂಪಗಳಿಂದ ಅವತರಿಸಿ ರಾಧಾಕೃಷ್ಣರ ವಿಲಾಸವನ್ನು ನೋಡಿ ಸದಾ ಹಸನ್ಮುಖಿಯಾಗಿರುವಳು. ವೃಂದಾವನವು ಬ್ರಹ್ಮನ ಮಾನಸ ಮೋಹಕ ಸೃಷ್ಟಿ! ವಸಂತ ಮನ್ಮಥರು ಒಮ್ಮನಸ್ಸಿನಿಂದ ನೆಟ್ಟ ಉದ್ಯಾನ! ಅದು ಪರಮ ಪುರುಷನ ಆನಂದದ ಆಡುಂಬೊಲ! ಅಲ್ಲಿ ಸದಾ ಶ್ರೀಕೃಷ್ಣನ ಸಂದರ್ಶನದಿಂದ ಭೂದೇವಿಯು ತೃಣ ಸಸ್ಯಗಳ ಚಿಗುರೆಂಬ ರೋಮಾಂಚನಗೊಂಡಳೆಂಬಂತೆ. ಸಸ್ಯ ಸಂಪತ್ತೇ ಚಿಂದಳಿರನ್ನು ಹೊತ್ತವು; ಮಾಮರಗಳು ತಳಿರಿನ ತೋರಣ ಹಿಡಿದಿದ್ದುವು; ಅಶೋಕವು ಚಿಗುರಿನ ಚೆಲು ಗುಡಿಯನೆತ್ತಿತ್ತು; ಲತೆಗಳು ನಂದನಮಾರನಿಗಾಗಿ ಪುಷ್ಪಮಾಲೆಗಳನ್ನು ಎತ್ತಿ ಹಿಡಿದಿದ್ದುವು. ತುಂಬಿಗಳ ವಾದ್ಯ ಧ್ವನಿಯು ಎಲ್ಲೆಲ್ಲಿಯೂ ಪ್ರತಿಧ್ವನಿಸ ತೊಡಗಿತ್ತು. ಕೋಗಿಲೆಗಳು, 'ರಾಧಾಮಾಧವ,ರಾಧಾಮಾಧವ' ಎಂದು ಹಾಡ ತೊಡಗಿದ್ದುವು. ಗಿಳಿಗಳು 'ರಾಸವಿಹಾರಿ, ರಾಧೇಶ್ಯಾಮ'ನೆಂದು ಗಳಹ ತೊಡಗಿದ್ದುವು; ಭ್ರಮರಗಳು 'ಮುಕುಂದನು ರಾಧಾ ರಮಣನಾಗಲು ಕುಂಜ ಕುಟೀರಕ್ಕೆ ಆಗ ಮಿಸುತ್ತಿರುವನು' ಎಂದು ಹಾಡುತ್ತಿದ್ದವು ನವಿಲುಗಳು ಈ ಆನಂದ ನಿರ್ಭರದಿಂದ ಕುಣಿಯ ತೊಡಗಿದ್ದುವು; ಮಂದ ಮಾರುತನು ಈ ರಸ ನಿಮಿಷದ ಪ್ರಕಾಶಕನಾದನು!

ಗೀತ ಗೋವಿಂದದ ವಸಂತ ಋತುವಿನ ವರ್ಣನೆ, ರಾಧೆಯು ಪೂರ್ವದಲ್ಲಿ ಕೇಶವನೊಡನೆ ತನಗಾದ ಸಮಾಗಮದ ಸುಖವನ್ನು ನೆನಪು ಹಾಕುವುದು, ಮುಗ್ಧ ಮಧುಸೂದನನ ರಾಧಾವಿಂಹದ ಮನೋವೇದನೆ, ರಾಧೆಯ ದುರ್ಭರ ವಿರಹದ ವರ್ಣನೆ, ವಿಪ್ರಲಬ್ಧಳಾಗಿ ವಿಲಪಿಸುವ ರಾಧೆಯ ಸಂಕಲ್ಪಗಳ ತೀವ್ರತೆ, ಚತುರ ಚತುರ್ಭುಜ ರಾಧೆಯರ ಸಲ್ಲಾಪ ರಾಧಾಕೃಷ್ಣರ ಮಿಲನ ಮತ್ತು ತಾನಿಶಾಂತಿ — ಈ ಸೊಬಗು ಸೌಂದರ್ಯಗಳ, ಯಾವ ಭಾಷೆಯ ಸಾಹಿತ್ಯದಲ್ಲಿ ದೊರೆತಾವು?

ಕೇಶವನು ರಾಧೆಯನ್ನು ರಮಿಸುವ ವಿಧಾನವು ಮನೋಹರವಾದುದು. ರಾಧೆಯೊಡನೆ

ಶ್ಲೋ|| ತ್ವಮಸಿ ಮಮ ಭೂಷಣಂ,
ತ್ವಮಸಿ ಮಮ ಜೀವನಂ
ತ್ವಮಸಿ ಮಮ ಭವಜಲಧಿ ರತ್ನಂ ||

"ಪ್ರಿಯೇ, ನೀನೇ ನನ್ನ ಅಲಂಕಾರ, ನನ್ನ ಪ್ರಾಣ, ಹೆಚ್ಚೇಕೆ? ನನ್ನ ಸಂಸಾರ ಸಾಗರದ ಅವಹೊಲ್ಯ ರತ್ನ'

ಶ್ಲೋ|| ಮುಗ್ಧೇವಿಧೇಹಿಮಯಿ
ನಿರ್ದಯದಂತದಂಶ—
ದೋರ್ವಲ್ಲಿ ಬಂಧ ನಿಬಿಡಸ್ತನ
ಪೀಡನಾನಿ ||

# ಯೌವನ

(ಏಳನೇ ಪುಟದಿಂದ)

ತನನ್ನು ಚೆನ್ನಾಗಿ ಹೊಡೆದು ಮನೆಯಿಂದ ಎಳೆದು ಹೊರಗೆ ಹಾಕಿಬಿಟ್ಟರು!

ಹೊರಗೆ ಉರುಳಿಬಿದ್ದ ಗಂಗಾದತ್ತನು ಒಂದು ಮರದ ಬುಡದಲ್ಲಿ ಕುಳಿತು ಎರಡೂ ಕೈಗಳನ್ನು ತಲೆಯ ಮೇಲಿಟ್ಟು ಕೊಂಡು ತನ್ನ ದೌರ್ಭಾಗ್ಯವನ್ನು ನೆನೆಯುತ್ತ ಚಿಕ್ಕ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳತೊಡಗಿದನು. ಆತ ಈ ದುಃಖವನ್ನು ತಡೆಯಲಾರದಾದನು. ಪೆಟ್ಟುಗಳ ನೋ

'ಮುಗ್ಧೇ, ನನ್ನಲ್ಲಿ ದಯೆ ತೋರಬೇಡ; ದಂತಕ್ಷತ ಮಾಡುತ್ತಾ ಬಾಹುಲತೆಗಳಿಂದ ಬಿಗಿದು; ನಿಬಿಡಸ್ತನಗಳಿಂದ ಹೊಡೆ' ಎನ್ನುತ್ತಾನೆ.

ಇನ್ನೂ ರಾಧೆಯ ಮೌನ ಭಂಗವಾಗಲಿಲ್ಲ. ಶ್ರೀಕೃಷ್ಣನು ಪುನಃ ರಾಧಾರಾಣಿಯನ್ನು ಪ್ರಶಂಸಿಸುತ್ತಾನೆ. "ಪ್ರಿಯೆ, ನಿನ್ನ ಬಂಧೂಕ ಕುಸುಮದ ಅಧರ, ಮಧೂಕ ಪುಷ್ಪದ ಲಾವಣ್ಯಮಯ ಕಪೋಲ, ನೀಲೋತ್ಪಲದ ಕಾಂತಿಯನ್ನು ಸೂರೆಗೈವ ನೇತ್ರಗಳು, ತಿಲ ಪುಷ್ಪದಂತಹ ನಾಸಿಕ, ಕುಂದ ಕುಟ್ಮಲದಂತಹ ದಂತ ಪಂಕ್ತಿಗಳು — ಇವನ್ನು ಆಶ್ರಯಿಸಿಯೇ ಕುಸುಮ ಬಾಣನು ಜಗತ್ತನ್ನು ಜಯಿಸುತ್ತಿದ್ದಾನೆ' ಯಾವ ತರುಣಿಯು ಸುಂದರ ತರುಣನೊಬ್ಬನ ಇಂತಹ ಸರ್ವೋತ್ಕೃಷ್ಟ ವಾಕ್ಯಗಳಿಗೆ ಮರುಳಾಗಳು?

ಆಗ ಚಂದ್ರೋದಯವಾಯಿತು. ಹಾಲಿನ ಕಡಲಲ್ಲೇ ವಿಶ್ವವು ತೇಲಾಡ ತೊಡಗಿತು. ಸಖಿಯು ರಾಧೆಯನ್ನು ಮಾಧವನ ಮದನ ಕಲಾಮಂದಿರವನ್ನು ಪ್ರವೇಶಿಸಿ ದೂರ ಹೊರಟುಹೋದಳು.

ರಾಧೆಯ ಲಜ್ಜೆಯು ಸರಿಯಿತು. ಮಂದಹಾಸವು ಆಕೆಯನ್ನು ಅಧರ ಪಲ್ಲವದಲ್ಲಿ ನಲಿದಾಡಿತು. ಅನುರಾಗವತಿಯಾದ ರಾಧೆಯೊಡನೆ, ಮಾಧವನು ಮಾತನಾಡಲುಪಕ್ರಮಿಸಿದನು.

ರಾಧೆಯ ಬಯಕೆಯನ್ನು ಶ್ರೀ ಕೃಷ್ಣನು ಪೂರೈಸಿದನು.

ಜಯದೇವನೇ ತನ್ನ ಕಾವ್ಯಕ್ಕೆ ಪ್ರಿಯೆಯ ಅಧರವೂ ಸರಿಸಾಟಿಯಾಗಲಾರದೆಂದು ಕೊನೆಯ ತೀರ್ಮಾನವನ್ನಿತ್ತು ರಸಿಕರಿಗೆ ಪರಮಾಹ್ಲಾದಕಾರಿಯಾಗಿದ್ದಾನೆ!

ಗೀತಗೋವಿಂದದ ಕಾವ್ಯವು ಮೊದಲಿನಿಂದ ತುದಿಯವರೆಗೆ ಸರಳವಾಗಿದೆ. ರಾಧಾ ಗೋವಿಂದರ ಸಮ್ಮಿಲನ ಕಾರ್ಯದಲ್ಲಿ ಎಲ್ಲಿಯೂ ರಸಭಂಗವಾಗಿಲ್ಲ. ಕಾವ್ಯ ಚಿತ್ರಕ್ಕೆ ಭಾಷೆಯ ಚೌಕಟ್ಟು. ಸುಂದರವಾಗಿ ಹೊಂದಿಕೊಂಡಿದೆ. ಸಾಹಿತ್ಯವೂ ಗಾಯನ ಕುಶಲನೂ ಜಗತ್ತಿನಲ್ಲಿ ಮೇಳವಿಸುವುದು ಅಪರೂಪ, ಜಯದೇವನಲ್ಲಿ ಈ ಎಂಡೂ ಸದ್ಗುಣಗಳು ಸಮರಸ ಹೊಂದಿ ಸಮಪ್ರಮಾಣದಲ್ಲಿವೆ. ಈ ಕಾವ್ಯದಿಂದ ಉಗ್ರಮವಾದ ಭಕ್ತಿ ಪ್ರವಾಹವು ರಾಧಾರಾಣಿಯ ನೆವದಲ್ಲಿ ಹರಿದು ಪ್ರೇಮಮೂರ್ತಿ ಶ್ಯಾಮಸುಂದರನಲ್ಲಿ ಐಕ್ಯವಾಗಿದೆ. ಭಕ್ತರು ಭಗವಂತನಿಗೆ ಇದಕ್ಕಿಂತ ಹೆಚ್ಚಿಗೆ ಯಾವ ಕಾಣಿಕೆಯನ್ನು ಕೊಡಬಲ್ಲರು?

ವಿನಿಂದ ನರಳುತ್ತಿದ್ದ ಆತನು— "ಹೇ ಶಂಕರಾ! ನನಗೆ ಈ ಕಾಲದಲ್ಲಿ ಯೌವನ ದೊರಕಿಸಿಕೊಳ್ಳುವ ದುರ್ಬುದ್ಧಿಯನ್ನು ಏಕೆ ಕೊಟ್ಟೆಯೋ? ಅಯ್ಯೋ! ಇದರಿಂದ ನನ್ನ ಸುಖ, ಶಾಂತಿ, ಎಲ್ಲವೂ ನಾಶವಾಗಿ ನಾನು ನಿರ್ಗತಿಕನಾದೆನಲ್ಲ!' ಎಂದೆನ್ನುತ್ತ ಅತ್ಯಂತ ದೀನನಾಗಿ ರೋದಿಸ ತೊಡಗಿದನು! ಪಾಪ! ತಡೆಯಲಾರದ ಕಷ್ಟ ಬಂದಾಗ ಕಣ್ಣೀರೇ ಗತಿ! ಎಂಬಂತಾಯಿತು; ಗಂಗಾದತ್ತನ ಸ್ಥಿತಿ.

ಇದಾದ ಬಳಿಕ ಕೆಲವು ದಿನ ಕಳೆದರೂ ಗಂಗಾದತ್ತನು ಮರಳಿ ಮನೆಗೆ ಬರಲಿಲ್ಲ! ಇಂದ್ರಪ್ರಸ್ಥಕ್ಕೆ ಹೋದ ಗಂಗಾದತ್ತನು ಏಕೆ ಇನ್ನೂ ಬರಲಿಲ್ಲವೆಂದು, ಗಾಂಗಿಯೂ ಮಕ್ಕಳೂ ಎಲ್ಲರೂ ಚಿಂತಿಸ ತೊಡಗಿದರು. ಕೊನೆಗೆ ಗಾಂಗಿಯು ತನ್ನ ಮಕ್ಕಳನ್ನು ಇಂದ್ರಪ್ರಸ್ಥದ ರಾಜಧಾನಿಗೆ ಕಳುಹಿಸಿ ಕೊಟ್ಟಳು. ಇಂದ್ರಪ್ರಸ್ಥಕ್ಕೆ ಹೋಗಿ ತಲಪಿದ ಆ ಮಕ್ಕಳು ಮೋಹನದತ್ತನೆನ್ನು ಕಂಡು, ತಮ್ಮ ತಂದೆಯ ಸಮಾಚಾರವನ್ನು ಕೇಳಿದರು. ಗಂಗಾದತ್ತನು ಇನ್ನೂ ಮನೆ ಸೇರಲಿಲ್ಲ ಎಂಬುದನ್ನು ಕೇಳಿ ಮೋಹನದತ್ತನಿಗೆ ಆಶ್ಚರ್ಯವಾಯಿತು, ಗಂಗಾದತ್ತನು ಇಂದ್ರಪ್ರಸ್ಥಕ್ಕೆ ಹೊರಟು ಹೋದ ಆ ದಿನದ ರಾತ್ರಿಯೇ ಮರಳಿ ಹೋಗಿದ್ದನೆಂದೂ, ಆ ಬಳಿಕ ತನಗೆ ಏನೂ ತಿಳಿಯದೆಂದೂ ಮೋಹನದತ್ತನು ತಿಳಿಸಿದಾಗ—ಅದೇ ದಿನ ರಾತ್ರಿ ತಾನು ಗಂಗಾದತ್ತನೆಂದು ಹೇಳಿಕೊಳ್ಳುತ್ತ ಓರ್ವ ತರುಣನು ಮನೆಗೆ ಬಂದಿದ್ದನೆಂದೂ ಆದರೆ ಆತನು ಗಂಗಾದತ್ತನಲ್ಲವೆಂದು ಎಲ್ಲರೂ ಭಯಭೀತರಾಗಿ, ಆತನನ್ನು ಹೊಡೆದು ಹೊರಗೆ ಕಳುಹಿಸಲಾಯಿತೆಂಬ ಸಮಾಚಾರವನ್ನೂ ಆ ಮಕ್ಕಳು ಮೋಹನದತ್ತನಿಗೆ ಹೇಳಿದರು.

ಇದನ್ನು ಕೇಳಿ ಅತ್ಯಂತ ಚಿಂತಿತನಾದ ಮೋಹನದತ್ತನು—ಆ ಮಕ್ಕಳಿಗೆ "ಆ ದಿನ ರಾತ್ರಿ ಬಂದ ಅವನೇ ನಿಮ್ಮ ತಂದೆ ಗಂಗಾದತ್ತ, ಯೌವನವನ್ನು ಪಡೆದು ಬಂದಿದ್ದ ಕಾರಣ,ನೀವುಗಳು ತಂದೆಯನ್ನು ಗುರುತಿಸದೆ, ಹೊಡೆದು ಬಡಿದು ಆತನನ್ನು ಮನೆಯಿಂದ ಹೊರಗೆ ಹಾಕಿ ದೊಡ್ಡ ಅನ್ಯಾಯ ಮಾಡಿದಿರಿ! ಈ ಪಾಪ, ಎಂದಿಗೂ ನಿವಾರಣೆಯಾಗಲಾರದು!" ಎಂದು ಹೇಳಿದನು.

ಪಶ್ಚಾತ್ತಾಪದಿಂದ ನೊಂದ ಆ ಮಕ್ಕಳು ಮನೆ ಸೇರಿ ಮಾತೆಯೊಡನೆ ಈ ಸಮಾಚಾರವನ್ನು ಹೇಳಿದಾಗ - ಆ ಪತಿಭಕ್ತೆಯಾದ ಗಾಂಗಿಯು ಅತ್ಯಂತ ದುಃಖಿತಳಾಗಿ— "ತನ್ನ ಪತಿದೇವನಿಗೆ ತಾನು ಮಾಡಿದ ಘೋರ ಅನ್ಯಾಯವನ್ನು ನೆನೆನೆನೆದು, ತಲೆ ಚಚ್ಚಿಕೊಳ್ಳುತ್ತ— ಅಯ್ಯೋ ಇನ್ನಿದಕ್ಕೆ ಪರಿಹಾರವೇನೆಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು— "ಅಯ್ಯೋ! ನಾನು ಅವರ ಮಾತನ್ನು ಕೇಳದೆ ನನ್ನ ಪಾತಿವ್ರತ್ಯಕ್ಕೆ ಚ್ಯುತಿ ತಂದುಕೊಂಡೆ! ಅವರು ಜವ್ವನಿಗರಾಗಿ ಬಂದಾಗ ನಾನು ಮುದುಕಿಯಾಗಿಯೇ ಉಳಿದೆ! ಇದರಿಂದಲೂ ಅವರು ಬಹಳ ನೊಂದುಕೊಂಡಿರಬಹುದು. ನನ್ನಿಂದ ಅಕ್ಷಮ್ಯ ಅಪರಾಧ ಆಗಿಹೋಯಿತು!, ಎಂದು ಚಿಂತಿಸುತ್ತ ಆಕೆ ಕೊನೆಗೆ ತಾನೂ ಇಂದ್ರಪ್ರಸ್ಥಕ್ಕೆ ಹೋಗಿ ಆ ಯೋಗಿಯ ಮೂಲ

ಕ ಯೌವನವನ್ನು ಪಡೆದು ಬರುವುದಾಗಿ ನಿರ್ಧರಿಸಿದಳು. ಆದರೆ ಮರುಕ್ಷಣದಲ್ಲಿಯೇ ಆಕೆಗೆ ತಾನು ಪಂಪಾಯಿಂಪವನಕ್ಕೆ ಹೋಗುವುದು ಹೇಯ ಕೃತ್ಯ! ಎಂದೆನಿಸಿತು. ಕಟ್ಟಕಡೆಗೆ ಆಕೆ-"ಜಗನ್ಮಾತೆಯಾದ ಪಾರ್ವತಿಯನ್ನು ಭಜಿಸಿ ಯೌವನವನ್ನು ವರದಾನವಾಗಿ ಪಡೆಯುವುದೇ ಸಂಯೋದ ಮಾರ್ಗ"ವೆಂದು ತಿಳಿದು ಮೋಹ ವಾಸನೆಗಳನ್ನು ತೊರೆದು, ಹಿಮಾಲಯಕ್ಕೆ ಹೋಗಿ ಪಾರ್ವತಿಯನ್ನು ಒಲಿಸಲು ತಪಸ್ಸುಮಾಡತೊಡಗಿದಳು!

○ ○ ○ ○

ಪತಿವ್ರತೆಯಾದ ಗಾಂಗಿಯ ತಪಸ್ಸಿಗೆ ಒಲಿದ ಪಾರ್ವತೀ ದೇವಿಯು ಕೊನೆಗೆ ಗಾಂಗಿಗೆ ಯೌವನವನ್ನು ಅನುಗ್ರಹಿಸಿದಳು! ವೃದ್ಧೆಯಾದ ಗಾಂಗಿಯು ಆ ಕ್ಷಣವೇ ಯುವತಿಯಾಗಿ ಪರಿವರ್ತನೆಗೊಂಡಳು.

ಇಷ್ಟೆಲ್ಲ ಆಗುವಾಗ ಸುಮಾರು ಒಂದು ವರ್ಷವೇ ಕಳೆದಿತ್ತು. ಯುವತಿಯಾದ ಗಾಂಗಿಯು ತನ್ನ ಪತಿಯ ಇಚ್ಛೆಯನ್ನು ಈಗಲಾದರೂ ಪೂರ್ಣಗೊಳಿಸಿದೆನೆಂದು ಸಂತೋಷದಿಂದ ಮನೆ ಸೇರಿದಳು. ಅಷ್ಟರಲ್ಲಿ ಗಂಗಾದತ್ತನೂ ಕಹ ಮನೆಗೆ ಮರಳಿದ್ದಾನೆಂಬ ವಾರ್ತೆ ಆಕೆಗೆ ತಿಳಿಯಿತು. ಯುವತಿಯಾದ ತಾನು ಯಾವ ಕ್ಷಣದಲ್ಲಿ ಪತಿಯ ದರ್ಶನ ಪಡೆದೇನು? ಎಂದು ಕಾತರಳಾಗಿದ್ದ ಗಾಂಗಿಯು ಮನೆಯಲ್ಲಿ ಪತಿದೇವನ ಆಗಮನವನ್ನೇ ನಿರೀಕ್ಷಿಸ ತೊಡಗಿದಳು!

ಆ ಗಳಿಗೆಯೂ ಬಂದೇ ಬಿಟ್ಟಿತು! ಗಂಗಾದತ್ತನು ಮನೆಸೇರಿ ತನ್ನ ಮಲಗುವ ಕೋಣೆಗೆ ಪ್ರವೇಶಿಸಿದನು. ಆ ಕ್ಷಣವೇ ಗಾಂಗಿಯು ಶಯನಾಗಾರವನ್ನು ಪ್ರವೇಶಿಸಿ—"ನಾಥಾ! ನಿಮ್ಮ ಇಚ್ಛೆಯಂತೆ ಯುವತಿಯಾಗಿ ಬಂದಿದ್ದೇನೆ! ನನ್ನನ್ನು ಸ್ವೀಕರಿಸಬೇಕು!, ಎನ್ನುತ್ತ ಪತಿಯ ಪಾದಗಳ ಮೇಲೆ ಮಸ್ತಕವನ್ನಿಟ್ಟು ಆನಂದ ಬಾಷ್ಪಗಳನ್ನುದುರಿಸತೊಡಗಿದಳು!

ಆಗ ಗಂಗಾದತ್ತನು ನಸು ನಗುತ್ತ— "ಪ್ರಿಯೆ! ನಾನು ಅಸಮಯದಲ್ಲಿ ಯೌವನ ಪಡೆದ ತಪ್ಪಿಗೆ ನನಗೆ ಆಗ ಬೇಕಾದ ಶಿಕ್ಷೆ ಆಗಿ ಹೋಯಿತು,ನಾನೇ. ಹೇಳಿದಂತೆ ವರ್ತಿಸಿ ಈಗ ನೀನು ಬಹಳ ತಡವಾಗಿ ತರುಣಿಯಾಗಿ ಬಂದಿರುವೆ! ಆದರೆ ನಾನು ನೀನು ಹೇಳಿದಂತೆ ವರ್ತಿಸಿ ಈಗ ಮುದುಕನಾಗಿ ಬಂದಿದ್ದೇನೆ! ನಿನ್ನ ಹೇಳಿಕೆಯಂತೆ, ನಾನು ಪ್ರಕೃತಿ ನಿಯಮವನ್ನು ಉಲ್ಲಂಘನೆ ಮಾಡಿದ್ದು ತಪ್ಪು! ಕೊನೆಗೆ ಶಂಕರನ ತಪಸ್ಸು ಮಾಡಿ, ವೃದ್ಧಾಪ್ಯವನ್ನೇ ಪಡೆದು ಈಗ ಮನೆಗೆ ಬಂದಿದ್ದೇನೆ! ಪ್ರಿಯೇ! ನೀನು ಮೊದಲು ಹೇಳಿದ ಮಾತೇ ಸತ್ಯ!...., ಎಂದು ಮುಗುಳ್ನಗೆಯಿಂದ ಗಂಗಾದತ್ತನು ಹೇಳುತ್ತಿದ್ದಂತೆಯೇ—ನವತರುಣಿ ಗಾಂಗಿಯು ಥರ ಥರನೆ ನಡುಗುತ್ತ, ಅತಿ ದೀಕ್ಷಿಕವಾಗಿ ಪತಿಯ ಪಾದ ಕಮಲಗಳ ಮೇಲೆ ಉರುಳಿ ಬಿದ್ದು ಬಿಟ್ಟಳು!

(ಮರಾಠಿ, 'ಸಹ್ಯಾದ್ರಿ'ಯಿಂದ)

**PLEASE PATRONIZE OUR ADVERTISERS**

# MODERN GARAGE

**UDIPI**

( ESTD : 1950 )

## Offers

**The Car & Truck Owners, the service of a well equipped**

# SERVICE STATION

## Benz Service a Speciality

*Supervision by*

**Technically Qualified Staff**

Phone: 65



*WITH BEST COMPLIMENTS*

*FROM*

# KAJ INDUSTRIES

**(MANUFACTURERS OF PLASTIC MATERIALS)**

**384-K, KALBADEVI ROAD, BOMBAY-2**

TELEPHONE : 22761
TELEGRAM : PLEXI, BOMBAY

**WE ALSO EXPORT**



# R. O. I.

**spectacle frames is the fashion of the day**

# ಆರ್. ಒ. ಐ.

ಕನ್ನಡಕದ ಫ್ರೇಮುಗಳು ಇಂದಿನ ಸೊಬಗಾಗಿದೆ

R. O. I. Spectacle frames are becoming more and more popular in several countries of the world where they are being exported in an increasing measure. They are made to specifications of the buyer and are known for their strength, durebility and elegance.

ಆರ್. ಒ. ಐ. ಕನ್ನಡಕದ ಫ್ರೇಮುಗಳು ಜಗತ್ತಿನ ಅನೇಕ ಊರುಗಳಲ್ಲಿ ಹೆಚ್ಚು ಹೆಚ್ಚಾಗಿ ಜನಪ್ರಿಯವಾಗುತ್ತಿವೆ. ಮತ್ತು ಅವು ಅಧಿಕ ಸಂಖ್ಯೆಯಲ್ಲಿ ರಫ್ತಾಗುತ್ತಿವೆ. ಅವು ಖರೀದಿಸುವವರ ಅಪೇಕ್ಷೆಗನುಸಾರವಾಗಿ ತಯಾರಿಸಲ್ಪಡುತ್ತವೆ ಮತ್ತು ಅವು ಬಲ, ಬಾಳಿಕೆ ಮತ್ತು ಸೌಂದರ್ಯಕ್ಕೆ ಹೆಸರುವಾಸಿಯಾಗಿವೆ,

## Royal Optical Industries

Naigaum Cross Road, Wadala, Bombay 31
Phone:60175 Grams: CELLULOID

**Branch Office:**
72, Canning Street, 1st floor, Room No.71, CALCUTTA-1
Tel: No. 324244 Cable: "Sightaid"

## ರೋಯಲ್ ಒಪ್ಟಿಕಲ್ ಇಂಡಸ್ಟ್ರೀಸ್

ನೈಗಾಂವ್ ಕ್ರಾಸ್ ರೋಡ್, ವಡಲಾ, ಬೊಂಬ್ಯಾ 31
ಫೋನ್: 60175 ಗ್ರಾಂ: ಸೆಲ್ಲುಲ್ಯೊಡ್

ಬ್ರಾಂಚ್ ಆಫೀಸ್:
72, ಕ್ಯಾನಿಂಗ್ ಸ್ಟ್ರೀಟ್, 1ನೆ ಮಾಳಿಗೆ, ರೂಂ ನಂ. 71, ಕಲ್ಕತ್ತಾ-1
ಟೆಲ್. ನಂ. 324244 ಕೇಬಲ್: "ಸೈಟೈಡ್"

# ಚೈತ್ರ ಮುರುಗ

(ಐದನೇ ಪುಟದಿಂದ

ಡನು. ಕೇದಾರಿಯು ಹೆಜ್ಜೆಗಳು ಚಿಕ್ಕ ಚಿಕ್ಕವಾಗುತ್ತಿದ್ದುದನ್ನು ಗಮನಿಸುತ್ತಿದ್ದ ಮನುಷ್ಯ ಬಂಡಿಯನ್ನೆಳೆಯುವವನು (ರಿಕ್ಷಾವಾಲಾ) ಇನ್ನೂ ಧೈರ್ಯದಿಂದ ತನ್ನಷ್ಟಕ್ಕೆ ಪುನಃ ಆ ಶಬ್ದಗಳನ್ನು ಹೇಳಿಕೊಂಡನು. ಆಗ ತಾನೇ ಚಿಗುರೊಡೆಯುತ್ತಿದ್ದ ಘನತೆಯ ಸಸಿಯನ್ನು ಕಾಪಾಡಲು ಹಾಗೆ ತನ್ನ ಧೂಳು ರಹಿತ ಪಾದವು ಮನಸೆಳೆಯುವ ವಿನಂತಿಯನ್ನು ಮಾಡಿಕೊಳ್ಳಬೇಕಾಗಿರುವದನ್ನು ನೆನಪಿಗೆ ತಂದುಕೊಂಡ ಕೇದಾರಿಯು "ಬುದ್ಧಿವಂತ ಗೆಳೆಯನೇ, ನೀನೊಂದು ಬೆಳ್ಳಿ ನಾಣ್ಯವನ್ನು ಪಡೆಯಲೇ ಬೇಕು" ಎಂದು ಹೇಳಿ ರಿಕ್ಷಾವಾಲಾನನ್ನು ಸ್ವಾಗತಿಸಿದನು.

ಕಾಲಿನ ಮೇಲೆ ಕಾಲು ಹಾಕಿಕೊಂಡು, ಕೇದಾರಿಯು ರಿಕ್ಷಾದಲ್ಲಿ ಕುಳಿತುಕೊಂಡನು. ಅವನು ಅಲ್ಲಿಯೇ ಭಾವನಾಸಮಾಧಿಯನ್ನು ಹೊಂದಿದನು. ಪ್ರೇಮಮಯ ಆಲೋಚನೆಗಳಿಂದಾಗಿ ಕಣ್ಣುಗೊಂಬೆಗಳು ಹಾಗೆ ಬಾಡಿದ್ದುವು. ತಮಟೆಗೆ ಹೊಡೆಯುತ್ತಿದ್ದಂತೆ ಎಡಗೈಯ ಬೆರಳುಗಳ ಮೇಲೆ ಬಲಗೈಯ ಬೆರಳುಗಳಿಂದ ಹೊಡೆಯುತ್ತಿದ್ದನು. ಬಂಡಿಗಳ ಕೂಗು ವಾಹನ ಸಂಚಾರದ ಪರಿಚಯವನ್ನುಂಟುಮಾಡುತ್ತಿದ್ದುವು. ತಾರುಣ್ಯ ಮತ್ತು ಯುವದ ಸೌಂದರ್ಯವು, ಮಾರುಕಟ್ಟೆಯಲ್ಲಿ ಆಗ ತಾನೇ ರಾಶಿ ಹಾಕಿರುವ ಮಲ್ಲಿಗೆಯು ಪ್ರಕಾಶಿಸುವಂತೆ, ಅವನ ಮುಖದಲ್ಲಿ ಪ್ರಕಾಶಿಸುತ್ತಿತ್ತು.

ಆ ಚೆಂದದ ನೋಟವು ರಿಕ್ಷಾವಾಲಾನ ತಲೆಗಿಂತಲೂ ಎತ್ತರದಲ್ಲಿತ್ತು. ಇತರ ಗಿರಾಕಿಗಳೊಂದಿಗೆ ಹೋಲಿಸಿದಲ್ಲಿ ಕೇದಾರಿಯ ಭಾರವು ಏನೂ ಹೆಚ್ಚಿನದಾಗಿದ್ದಿಲ್ಲ. ಅಬ್ಬ! ಆ ವರ್ತಕ ಮಕ್ಕಳ ಭಾರವು! ಆ ಸ್ವಾಭಾವಿಕ ಕೊಬ್ಬಿನ ಭಾರದ ಮೇಲೆ ತಲೆಗೆ ಸುತ್ತಿಕೊಳ್ಳುತ್ತಿದ್ದ ವಸ್ತ್ರದ ಭಾರವೂ ಸೇರಿದಾಗ ಒಟ್ಟು ಅದೆಷ್ಟು ಭಾರವಾಗುತ್ತಿತ್ತು! ಆದರೆ ರಿಕ್ಷಾವಾಲನ ದೃಷ್ಟಿಯಲ್ಲಿ ರಿಕ್ಷಾದಲ್ಲಿದ್ದ ಭಾರವು ಬಹು ಶ್ರೇಷ್ಠವಿತ್ತು. ಆ ಭಾರವು ಅವನ ಚೀಲವನ್ನು ಆಗಾಗ ಹೆಚ್ಚು ಹೆಚ್ಚಾಗಿ ತುಂಬಿಸಬಹುದೆಂಬ ದೃಷ್ಟಿ ಅವನದ್ದಾಗಿತ್ತು. ಉದಾರಿ ಒಡೆಯನನ್ನು ಎಳೆಯುತ್ತಿರುವೆನೆಂಬುದನ್ನು ತಿಳಿದುಕೊಂಡಿದ್ದ ಆ ಬಂಡಿಯವನು ಕುಂದ್ಯಾಟದ ಕುದುರೆಗಿಂತಲೂ ಅಥವಾ ಬೊಂಬಾಯಿ ಮೆಯಿಲ್‌ಗಿಂತಲೂ ಜೋರಾಗಿ ಓಡುತ್ತಿದ್ದನು. ತನ್ನ ಅದೃಷ್ಟದ ಮನೆಯ ಬಾಗಿಲು ತೆರೆಯಲ್ಪಟ್ಟಿದೆಂದೇ ಆತನು ಭಾವಿಸಿಕೊಂಡಿದ್ದನು. ಅವನು ಸುಮ್ಮಸುಮ್ಮನೆ ಹೆಚ್ಚು ಶ್ವಾಸವನ್ನು ಖರ್ಚು ಮಾಡದೆ, ಆಗಾಗ ಗೊಣಗುಟ್ಟುತ್ತ ಓಡುತ್ತಿದ್ದನು. ಕೇದಾರಿಯು ಮುಂದುವರಿದಿದ್ದ ಮೌನವನ್ನವನು ಅನುಮತಿ ಎಂದು ಅರ್ಥಮಾಡಿಕೊಂಡಿದ್ದನು.

ಕೇದಾರಿಯು ಆಲೋಚನಾ ಆಕಾಶದಲ್ಲಿ ಅಡೆತಡೆಯಿಲ್ಲದೆ ಮನಸ್ಸಿನ ಹಾರಾಡುತ್ತಿದ್ದುದರಿಂದ ತನ್ನ ಸರಾಳ್ವದೊಂದಿಗೆ ಏನಾದರೂ ಮಾತಾಡುವ ಅಥವಾ ತನ್ನ ಘನತೆಗಳಿಗೆ ಕುಂದು ತರುವಂತಹ ಶುಷ್ಕವಾದಕ್ಕಿಳಿಯುವ ಪರಿಸ್ಥಿತಿಯಲ್ಲಿ ಅವನಿರಲಿಲ್ಲ. ಹೆಚ್ಚಾಗಿ ತನ್ನ ಸೌಖ್ಯಕ್ಕೋಸ್ಕರ ಇತರರಿಂದ ಅವನು ಸೇವೆಯನ್ನು ಮಾಡಿಸಿಕೊಳ್ಳುತ್ತಿದ್ದಿಲ್ಲ; ಒಂದು ವೇಳೆ ಮಾಡಿಸಿಕೊಂಡರೂ ಧಾರಾಳವಾಗಿ ಅವರಿಗೆ ಹಣ ಕೊಡುತ್ತಿದ್ದನು. ಅಲ್ಲದೆ ಜಾನಕಿಯ ಮನೆಯೆದುರು ಚಿಲ್ಲರೆ ಲೆಕ್ಕಾಚಾರ ಮಾಡಿಕೊಳ್ಳುವ ಇಚ್ಛೆಯೂ ಅವನಿಗಿದ್ದಿಲ್ಲ.

ರಿಕ್ಷಾವು ಮತ್ತು ಮುದಲಿ ಬೀದಿಯ ಹದಿನೈದನೆ ಸಂಖ್ಯೆಯ ಮನೆಯೆದುರು ನಿಲ್ಲುವ ಮುಂಚೆ ಜೋರ್ಜ್ ಟೌನಿನ ಹಲವಾರು ಗಲ್ಲಿಗಳಲ್ಲಿ ಸುತ್ತಾಡಿಕೊಂಡು ಬಂದಿತು. ಜಾನಕಿಯು ತೆರೆದ ಜಗಲಿಯಲ್ಲಿ ನಿಂತುಕೊಂಡಿದ್ದಳು. ವೃದ್ಧವಾಗಿದ್ದ ಸಂಧ್ಯಾ ಸೂರ್ಯನ ಕಿರಣವು ಆಕೆಯ ಮೇಲೆ ಬಿದ್ದು ಕಾಂತಿಯನ್ನೀಯುತ್ತಿತ್ತು. ಅದನ್ನು ಕಂಡೊಡನೆ, ಬಹಳ ಜೋರಾಗಿ ಓಡುತ್ತಿದ್ದ ರಿಕ್ಷಾವಾಲನನ್ನು "ನಿಲ್ಲು" 'ನಿಲ್ಲು' ಎಂದು ಕರೆದು ಹೇಳಿದನು. ನಿರ್ಣಯಿಸಿದ್ದ ಎರಡು ಪಾಲನ್ನು—ಒಂದು ರೂಪಾಯಿಯನ್ನು— ಅವನ ಕೈಗಿತ್ತನು. ಉಳಿದ ಚಿಲ್ಲರೆಯನ್ನು ಕೇಳಲಿಕ್ಕೂ ಅವನಿಂದಾಗಲಿಲ್ಲ. ಅಷ್ಟು ಹಣವನ್ನು ಕೊಡಬೇಕೆಂಬ ಆಲೋಚನೆಯೂ ಅವನಲ್ಲಿರಲಿಲ್ಲ. ರಿಕ್ಷಾವಾಲನಿಗೆ ಅತಿ ಆಶ್ಚರ್ಯವಾಯಿತು. ಅಷ್ಟು ಹಣ ದೊರೆಯಬಹುದೆಂಬ ಕಲ್ಪನೆಯೇ ಅವನಲ್ಲಿ ಇದ್ದಿರಲಿಲ್ಲ. ಹಣ ಸಿಕ್ಕಿದೊಡನೆ ಕೊಟ್ಟವರಿಗೆ, ದೇವರಿಗೆ ಧನ್ಯವಾದ ಅರ್ಪಿಸುತ್ತ ತನ್ನ ಸ್ಥಿತಿಯ ಪೇಟೆದಂಗಡಿಯತ್ತ ಜಾರಿದನು. ಬೀದಿಯ ಮೂಲೆಯಲ್ಲಿ ಸೋಮಾರಿಗಳಾಗಿ ನಿಂತಿದ್ದ ತನ್ನ ಸಹೋದ್ಯೋಗಿಗಳು ತನ್ನಷ್ಟು ಅದೃಷ್ಟವಂತರಲ್ಲವೆಂದು ಅವರತ್ತ ಕರುಣಾಪೂರ್ಣ ಮುಗುಳ್ನಗೆಯನ್ನು ಬೀರಿದನು.

ಎಲ್ಲೆಲ್ಲೂ ಸಾಹಸವೇ ಸರಿಯಾದ ಪ್ರತಿಫಲವನ್ನು ಕೊಡುತ್ತದೆ.

ಕೇದಾರಿಯ ಆಗಮನದ ಸುದ್ದಿಯನ್ನು ತಾಯಿಗೆ ತಲುಪಿಸಲಿಕ್ಕಾಗಿ ಜಾನಕಿಯು ಒಡನೆ ಮನೆಯೊಳಗೆ ಓಡಿದಳು. ಜಾನಕಿಗೆ ಅವನು ದೂರದ ಸಂಬಂಧಿಕ. ಜಾನಕಿಯ ತಾಯಿ, ಮೀನಾಕ್ಷಿಯು, ಸ್ವಾಗತಿಸಿ, ಅವನಿಗೆ ಕುಳಿತುಕೊಳ್ಳಲು ಮಣೆ ಕೊಟ್ಟಳು. ಆ ಕೋಣೆಯು ಹಗಲು ಹೊತ್ತಿನಲ್ಲಿ ಮಾತಾಡಲು ಕುಳಿತುಕೊಳ್ಳಲಿಕ್ಕೆ, ಹಾಗೆಯೇ ರಾತ್ರಿಯಲ್ಲಿ ಮಲಗಿಕೊಳ್ಳಲಿಕ್ಕೂ ಪ್ರಯೋಜನಕ್ಕೆ ಬರುತ್ತಿತ್ತು. ಅಲ್ಲಿ ಆ ಮಣೆಯನ್ನು ಬಿಟ್ಟಲ್ಲಿ ಕುಳಿತುಕೊಳ್ಳುವ ಸಾಧನ ಬೇರಾವದೂ ಇದ್ದಿಲ್ಲ. ಅಷ್ಟರಿಂದಲೇ ಕೇದಾರಿಯು ಸಂತೋಷಸಾಗರದಲ್ಲಿ ತೇಲಾಡಿದನು. ಜಾನಕಿಯ ಅಂದದಿಂದಾಗಿ ಆ ಮಲಿನ ಕೋಣೆಯು ಪ್ರಕಾಶಮಾನವಾಗಿ ಅವನಿಗೆ ಕಂಡಿತು. ಅಡಿಗೆಯ ಕೋಣೆಯ ಹೊಸ್ತಿಲಿನ ಹತ್ತಿರ ಲಜ್ಜೆಯಿಂದ ಜಾನಕಿಯು ನಿಂತುಕೊಂಡಿದ್ದಳು.

ಅಲ್ಲಿಗೆ ಬಂದವರನ್ನು ಯಾವಾಗಲೂ ಅಲ್ಲಿರುವ ವಸ್ತುಗಳತ್ತ ಗಮನ ಕೊಡಲು ಬಿಡದೆ ತನ್ನ ಆನಂದದಾಯಿ ಹಾಗೂ ಚುರುಕಾದ ಮಾತಿನ ಪ್ರವಾಹದಲ್ಲಿ ಮೀನಾಕ್ಷಿಯು ತೇಲಿಸಿಬಿಡುತ್ತಿದ್ದಳು.

"ಕೇದಾರಿ, ಈ ಬಡ ಕುಟುಂಬದತ್ತ ನೀನು ಬಹು ಕರುಣೆ ತೋರಿಸುತ್ತಿರುವದಕ್ಕಾಗಿ ಹೇಗೆ ಧನ್ಯವಾದಗಳನ್ನರ್ಪಿಸಬೇಕೆಂದು ನನಗೆ ಗೊತ್ತಾಗುವದಿಲ್ಲ. ನಿಜವಾಗಿ ನಿನ್ನ ಆಗಮನವು ನಮಗೆ ಸೂರ್ಯಪ್ರಕಾಶದ ಹಾಗೆ ಇದೆ. ಹೀಗೆಲ್ಲಾಡುವದರಿಂದ ನಿನ್ನ ಕಾರುಣ್ಯವನ್ನು ಬಹು ಅಗ್ಗವನ್ನಾಗಿ ಮಾಡಿದ ಹಾಗೆ ಆಗುತ್ತದೋ ಎಂದು ಭಯವಾಗುತ್ತದೆ. ಈಗ ಅವರು—ಜಾನಕಿಯ ತಂದೆ—ಬದುಕಿರುತ್ತಿದ್ದಲ್ಲಿ..."

"ಅಮ್ಮ, ನನ್ನ ಪ್ರಾಯದವನಿಗೆ ಸೇವೆ ಮಾಡಿದಾಗ ಆಗುವ ಆನಂದವೇ ಬಹು ಪ್ರಿಯ ಹಾಗೂ ಉತ್ಸಾಹಕರವೂ ಇದೆ." ಕೇದಾರಿಯು ಮೆಲ್ಲನೆ ಉತ್ತರಿಸಿದನು. ಪ್ರಾಮಾಣಿಕತೆಯ ಸೌಮ್ಯ ಅಗ್ನಿಯ ಅನುಭವ ಆ ಮಾತಿನಲ್ಲಿ ಇತ್ತು. ನುಡಿಯಲಾರದ ವಾಗ್ವೈಖರಿಯ ಬದಲು ಆತನ ಮುಖದಲ್ಲಿ ಪ್ರೀತಿಯ ಕಿಡಿ ಕಂಡು ಬರುತ್ತಿತ್ತು. "ನಿಮಗೆ ಧನ ಸಹಾಯ ಮಾಡುವ ಎಂದರೆ ನಾನೇ ಬಹಳ ಬಡವನಿದ್ದೇನೆ. ಹೃದಯದಿಂದ ಬರುವ ಮಾತುಗಳಿಗೆ ನಾವೇನೂ ಬೆಲೆ ಕೊಡಬೇಕಾಗಿಲ್ಲ. ಅವು ನಿಮಗೆ ಪ್ರಯೋಜನವಾಗಲೂ ಬಹುದು. ಪಟ್ಟಣದಲ್ಲಿ ಕಡ್ಡಿಗೆ ಹಾಗೂ ನೀರಿನ ಹನಿಗೂ ಕ್ರಯ ಇದೆ. ಆದರೂ ಶಬ್ದಗಳಿಗೆ ಹಣ ಕೊಡಬೇಕಾಗಿಲ್ಲ."

"ಆದರೆ, ವಕೀಲರುಗಳು ಶಬ್ದವನ್ನೇ ಲಿಪ್ಪಮಾಡಿ, ಪ್ರತಿ ಒಂದು ಶಬ್ದಕ್ಕೂ ಹಣ ವಸೂಲು ಮಾಡುತ್ತಾರೆಂದು ಜನರು ಹೇಳುತ್ತಾರೆ." ಮುಗುಳ್ನಗುತ್ತ ಕುಗ್ಗಿದ ಸ್ವರದಿಂದ ಜಾನಕಿಯು ಹೇಳಿದಳು.

'ಅಂತಹವರ ಅಂತಸ್ತಿಗೆ ನಾನಿನ್ನೂ ಬಂದಿಲ್ಲ. ಎಂತಹ ಪ್ರಸಂಗದಲ್ಲೂ ನಿನಗಾಗಿ ನಾನು ಪುಕ್ಕಟೆ ವಾದಿಸುತ್ತೇನೆ ಜಾನಕಿ, ಯಾರು ತಾನೆ ಹಾಗೆ ಮಾಡಲಿಕ್ಕಿಲ್ಲ?"

ಈ ಬುದ್ಧಿವಂತಿಕೆಯ ಮಾತುಗಳಿಂದ ತಾಯಿಗೆ ಬಹಳ ಸಂತೋಷವಾಯಿತು. ಈಗ ಅವಳೇ ಮಾತನ್ನು ಮುಂದುವರಿಸಿದಳು. 'ಜಾನಕಿಗೆ ವರ್ಷ ಜಾಸ್ತಿಯಾಗುತ್ತಾ ಇದೆ. ಈ ಸಲ ಅವಶ್ಯವಾಗಿ ಅವಳಿಗೆ ಮದುವೆಯನ್ನು ಮಾಡಲೇಬೇಕು." ಇಷ್ಟು ಕೇಳಿ ಆಕೆ ಜಾನಕಿಯತ್ತ ತಿರುಗಿ ನೋಡಿದಳು. ವಿಷಯ ಬದಲಾಗಿ ತನ್ನ ಮದುವೆಯ ಪ್ರಸ್ತಾಪ ಬಂದಾಗ ಆಕೆ ಅಲ್ಲಿಂದ ಜಾರಿದಳು. ಜಾರಿ ಹೋಗುವಾಗ ಕೇದಾರಿಯತ್ತ ಆಶಾಪೂರ್ಣ ದೃಷ್ಟಿಯನ್ನು ಬೀರಿದಳು. ಅದೃಷ್ಟವಶಾತ್ ಕೇದಾರಿಗೂ ಅದು ಗೊತ್ತಾಗಿತ್ತು. ಅವನ ತಾರುಣ್ಯ ಚೈತನ್ಯವು ಕ್ಷೋಭೆಯ ಸಂತೋಷದಿಂದ ದಂಗೆ ಎದ್ದಿತು.

ಒಂದು ನಿಮಿಷ ಮೌನದ ನಂತರ ಆಸೆಯಿಂದೊಡಗೂಡಿದ ಸ್ವರದಿಂದ ಮೀನಾಕ್ಷಿಯು ಆರಂಭಿಸಿದಳು. "ಕೇದಾರಿ, ಜಾನಕಿಯ ಮದುವೆಗಾಗಿ ನಾವು ಸಾವಿರ ರೂಪಾಯಿಗಳಿಗೆ ಮಾತ್ರ ಖರ್ಚುಮಾಡಲು ಶಕ್ತರೆಂಬುದು ನಿನಗೆ ಗೊತ್ತಿದೆ. ಆಕೆಯ ತಂದೆಯವರು ತೀರಿಹೋದ ಆ ಅಂಧಕಾರಮಯ ಕಾಲದಲ್ಲಿ ಸಹಾಯ ಮಾಡಲು ವಿಧಿಯೇ ನಿನ್ನನ್ನಿಲ್ಲಿಗೆ ಕಳುಹಿಸಿದೆ. ನಿನ್ನನ್ನು ಬಿಟ್ಟಲ್ಲಿ ನಮಗಾರೂ ಸಹಾಯಕರಿಲ್ಲ. ಆಕೆಯ ತಂದೆಯವರು ಜೀವದಲ್ಲಿದ್ದಾಗ ನಮಗೇನೋ ಭಾರೀ ಆಶೆ ಇತ್ತು. ನಾವು ಮಿತವ್ಯಯದಿಂದ ಹಣವನ್ನುಳಿಸಿ ಈ ಮಗಳ ಭಾವೀ ಉತ್ತಮ ಜೀವನವನ್ನು ಕಾಣಬೇಕೆಂಬಾಶೆ ಇತ್ತು. ಅವಳಿಗಾಗಿ ಅವರನ್ನು ಹಳ್ಳಿಯಿಂದ ಈ ಮಹಾ... ಪಟ್ಟಣಕ್ಕೆ ಓಡಿಸಿದೆನು. ಅವರು ಬೆವರು ಸುರಿಸಿ ತನ್ನ ಪ್ರೀತಿಯ ಜಾನಕಿಗಾಗಿ ಸಂಪಾದಿಸುತ್ತಿದ್ದರು. ಅವರು ಈಗ ಬದುಕಿರುತ್ತಿದ್ದಲ್ಲಿ ಉತ್ತಮ ಸಂಬಳದ ಮುಖ್ಯ ಕಾರಕೂನರಾಗುತ್ತಿದ್ದರು. ಆ ಒಂದು ಮಾತಿನ ಮೇಲೆಯೇ ನಾನು ಮೂರು ಸಾವಿರ ರೂಪಾಯಿ ಸಾಲವನ್ನು ಪಡೆದುಕೊಂಡು ನ್ಯಾಯ ಶಾಸ್ತ್ರ ಕಲಿಯುವ ಉತ್ತಮ ಹಾಗೂ ಶ್ರೀಮಂತ ಯುವಕನೊಂದಿಗೆ ಅವಳ ವಿವಾಹಮಾಡಿ ಬಿಡುತ್ತಿದ್ದೆನು. ಅದೆಲ್ಲಾ ಕನಸಾಗಿ ಹೋಯಿತು."

ಕೇದಾರಿಯು ಅವಳಿಗೆ ಭರವಸೆಯನ್ನಿತ್ತು, ಏರುತ್ತಿದ್ದ ವಾಗ್ವೈಖರಿಗೆ ತಡೆಯನ್ನುಂಟುಮಾಡಬೇಕೆಂದು ಪ್ರಯತ್ನಿಸಿದನು. ಆದರೂ ಆಕೆಯು ಮುಂದುವರಿಸಿದಳು. "ಕೇದಾರಿ, ನೀನು ವಿದ್ಯಾರ್ಥಿಗಳೆಲ್ಲರಿಗೂ ಚೆನ್ನಾಗಿ ತಿಳಿದವನು ಹಾಗೂ ಶಕ್ತಿಶಾಲಿಯಿರುವೆ. ಈ ಬಡ ಹಾಗೂ ತಂದೆ ಇಲ್ಲದ ಜಾನಕಿಯನ್ನು, ನಮ್ಮ ಮೇಲಿನ ಕರುಣೆಯಿಂದ, ಮದುವೆಯಾಗುವ ಒಬ್ಬ ತರುಣನನ್ನು ದಯವಿಟ್ಟು ಆರಿಸು. ಆಕೆಯ ಸಭ್ಯತೆಯ ಚೆಂದವನ್ನು ನೋಡಿ ವಿವಾಹವಾಗುವವನ್ನಾದರೂ ಆರಿಸು. ಕೇದಾರಿ, ನಮ್ಮ ಪರಿಚಯವಾಗುವ ಕೇವಲ ಒಂದು ತಿಂಗಳ ಹಿಂದೆ ನಿನ್ನ ಮದುವೆಯಾಗಿ ಹೋಯಿತು. ಇಲ್ಲದಿದ್ದಲ್ಲಿ ಇ... ಮು ನಿನ್ನನ್ನು ಹೆಮ್ಮೆಯಿಂದ ಅಳಿಯನೆಂದು ಕರೆಯಬಹುದಿತ್ತು. ನನ್ನ ಮಗಳನ್ನು ನಿನ್ನ ಹೆಂಡತಿಯ ತಂಗಿ, ಅಲ್ಲ, ನಿನ್ನ ಸ್ವಂತ ತಂಗಿಯೆಂದೇ ಭಾವಿಸು."

"ಅಮ್ಮ ನಿಮಗೆ ನಾನು ಭರವಸೆಯನ್ನು ಕೊಡುತ್ತೇನೆ. ನನಗಿಂತಲೂ ಉತ್ತಮ ಹಾಗೂ ಶ್ರೀಮಂತ ವರನನ್ನು ಆರಿಸಿ ಜಾನಕಿಯ ಮದುವೆಯನ್ನು ಮಾಡುವೆ. ನಾನು ಸ್ವಂತ ಅಥವಾ ಇತರರ ಯಾವ ಕೆಲಸದಲ್ಲೂ ಕೈ ಹಾಕುವದಿಲ್ಲ. ಈಕೆ ನನಗೆ ಸ್ವಂತ ಸಹೋದರಿಯಂತೆ ಪ್ರೀತಿಪಾತ್ರಳು. ಸುಖಿ ಸ್ಥಾನದಲ್ಲಿ ನ್ಯಾಯಕ್ಕೆ ಸ್ಥಾನವಿದ್ದಲ್ಲಿ ಮತ್ತು ಮನುಷ್ಯ ಪ್ರಯತ್ನಕ್ಕೆ ಬಲವಿದ್ದಲ್ಲಿ ಈಕೆಗೆ ಉತ್ತಮ ವರನು ದೊರಕುವನು. ಆ ಕುರಿತು ನಾನು ಮುಂಚೆಯೇ ಆಲೋಚಿಸಿದ್ದೇನೆ. ಆದಕ್ಕೆ ಬೇಕಾಗುವ ಕೆಲಸವನ್ನೆಲ್ಲಾ ಮುಗಿಸಿ ಇಲ್ಲಿಗೆ ಬಂದಿದ್ದೇನೆ. ದೇವರು ನಮಗೆ ಸಹಾಯ ಮಾಡುವನು. ನಾಳೆಯು ಶನಿವಾರ ಪುನಃ ನಾನಿಲ್ಲಿಗೆ ಬರುತ್ತೇನೆ."

ಮಕ್ಕಳ ಮಮತೆಯ

"ಬಿಕ್ಕೊ"ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು– ರುಚಿಕರ ಸೇವನೆಗೆ ಪ್ರಸಿದ್ಧಿಪಡೆದಿವೆ.

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ.

ತಯಾರಕರು:

**ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,**

ಕಾಪು, ದ. ಕ.

ನಮ್ಮ ಸಕಲ ಗ್ರಾಹಕರಿಗೆ
ನಂಬರ್ **30**ರ ಬೀಡಿ – ನಮ್ಮ ಸ್ಟಾಕಿಸ್ಟರಿಗೆ
ಮತ್ತು ಯಾವತ್ತೂ ಹಿತೈಷಿಗಳಿಗೆ

**ದೀಪಾವಳಿಯ ಹಾರ್ದಿಕ ಶುಭಾಶಯಗಳು!**



(ಪ್ರೊಪ್ರೈಟರ್.- ಎಂ ಎಲ್ ಶೆಟ್ಟಿ)

**ಎಂ. ಎಲ್. ಶೆಟ್ಟಿ ಎಂಡ್ ಸನ್ಸ್**

**ನ್ಯೂ ಕರ್ನಾಟಕ ಸ್ಟೋರ್ಸ್,**

ಕಾರವಾರ

**M/s. M. L. Shetty & Sons**

**New Karnataka Stores,**

Imperial Tobacco Dealers &
No. **30** Beedies Stockists,

**KARWAR**

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

# ಆರ್ಯ ವೈದ್ಯ ಶಾಲಾ,

## ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು. ಕೋಟ್ಟಕಲ್ ಫೋನ್ ನಂ. **44** (ತಿರೂರು ಎಕ್ಸ್‌ಚೇಂಜ್)

ಶಾಖೆಗಳು :

1. ಕೋಝಿಕೋಡ್ (ಫೋನ್ ನಂ. 2155) ಕಲ್ಲಾಯಿ ರೋಡ್.
2. ತಿರೂರು (ಫೋನ್ ನಂ 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ವಡಕ್ಕಂತರ.
4. ಪಾಲ್ಘಾಟ್ ಸೇಲ್ಸ್ ಡಿಪೋ ಜಿ ಬಿ. ರೋಡ್.
5. ಎರ್ನಾಕುಳಂ (ಫೋನ್ ನಂ. 3026) ಮಹಾತ್ಮಾ ಗಾಂಧೀ ರೋಡ್.
   ,, ವೈದ್ಯರ ನಿವಾಸ (ಫೋನ್ ನಂ 671)
6. ತ್ರಿವೆಂಡ್ರಮ್ (ಫೋನ್ ನಂ. 3924) ಸ್ಟ್ಯಾಚು ರೋಡ್.
7. ಈರೋಡು (ಫೋನ್ ನಂ. 172) 45, ಕಾವೇರಿ ರೋಡ್.
8. ಆಲ್ವಾಯಿ ಸೇಲ್ಸ್ ಡಿಪೋ: ಬ್ಯಾಂಕ್ ರೋಡ್.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಖ್ಯಾತಿಯಾದ ಸುಪ್ರಸಿದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

**ಸೆಂಟಿನರಿ ಜ್ಯುಬಿಲಿ ನರ್ಸಿಂಗ್ ಹೋಮ್**

ಇಲ್ಲಿ ನಡೆಸಲ್ಪಡುತ್ತವೆ.

ಎಲ್ಲಾ ಪತ್ರವ್ಯವಹಾರಗಳನ್ನು ಇಂಗ್ಲಿಷ್, ಮಲಯಾಳಂ ಅಥವಾ ತಮಿಳಿನಲ್ಲಿ ನಡೆಸಬೇಕು. ಹೆಚ್ಚಿನ ವಿವರಗಳಿಗೆ ದಯಮಾಡಿ ಬರೆಯಿರಿ:

**ಮೆನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕಲ್.**

# ರಾಧಿಕೆ
(ಮೂರನೇ ಪುಟದಿಂದ)

— ೫ —

"ನನ್ನ ಕೃಷ್ಣ!
ನೀನು ರಕ್ಷ!
ಬಿಡಲೆ ಬೇಕು! ಸೆರಗನು"
"ಇಲ್ಲ!" ವೆನಲು
"ಒಗೆವೆ ಕೊಳಲು
ಹಚ್ಚ ಬೇಡ ಕೊರಗನು!
ನಿನ್ನ ದನಿಗೆ
ಸೀರೆ ನಿರಿಗೆ
ಉಡಿಯಿತಯ್ಯೊ! ನೀರನು!
ಮನವ ಕದ್ದು
ನಗುವೆ ಬಿದ್ದು
ಸಾಕು! ನಿಲಿಸು' ಕೊಳಲನು!"

— ೬ —

ಹಿಡಿದಿದ್ದ ಕೊಡ ಬರಿದು
ಆಗಿರಲು ನಸು ಮುನಿದು
ರಾಧೆ ಕುಳಿತಳು ನೆಲದಿ
ಸೆರಗ ಬಿಡಿಸುವ ಛಲದಿ!
ಅದರವ ಬಿಡಲಿಲ್ಲ
ಹಾಡದನಿ ನಿಲಲಿಲ್ಲ!
ತುಟಿ ನಗುವೊಳದ್ದಿತ್ತು!
ರಾಧೆ ಸನೆ ಗೆದ್ದಿತ್ತು!
ಅಂತಿರಲು, ಕಣ್ಣಿನಲಿ
ಹೊಸ ಬೆಳಕು! ಕೆನ್ನೆಯಲಿ
ಸುಳಿ ತಂದು, ಕನ್ನೆಯಲಿ
ಬಗೆಯು ಬೇರಾಗಿಸಿತು!
ಒ ಕುಳಿಯು ನಾಡಿಸಿತು!
ಕೃಷ್ಣ ಮನದೊಳಗಿದ್ದ!
ಕುಂತಳದೊಳಡಗಿದ್ದ!
ಮುಂಗುರುಳೊಳೊಲೆದಿದ್ದ!
ಮೈಯಲ್ಲಿ ಹುಡಿದಿದ್ದ!
ನೀಲಾಕ್ಷಿಯಾಗಿದ್ದ!
ಬಾಳ ಗುರಿಯಾಗಿದ್ದ!
ಮುಖ ಕಮಲದಳಯಾಗಿ,
ಪ್ರೇಮ ಮಯ ಕಣ್ಣಾಗಿ,
ದಿನದ ಬೆಳಕಾಗಿದ್ದ!
ಅಂತಿಪ್ಪ ಇನಿಯನಂ
ಓಸರಿಸಲೀ ಮನಂ!
ಎಂತು ಕ್ಷಣ ಕಳೆದೀತು?
ಚೇತನಂ ಕಳೆದೀತು!
ಎನುತ ತನೆ ಪ್ರೇಮ ದಿಂ
ತಬ್ಬಿ ನಿಷ್ಕಾಮ ದಿಂ
ಹೃದಯ ಮಿಡಿಯುತ! ಕೃಷ್ಣ'
ನಾಡಿ ಮಿಡಿಯಿತು ಕೃಷ್ಣಾ!
ಮನದೊಳಗೆ: ಓ ಕೃಷ್ಣಾ!
ತನು ತುಂಬ ಹೇ ಕೃಷ್ಣಾ!
ಕೃಷ್ಣಾ! ಜಗನ್ಮಯಂ!
ಕೃಷ್ಣಾ! ತೇಜೋಮಯಂ!
ಕೃಷ್ಣಾ! ಕೃಪಾಮಯಂ!
ಕೃಷ್ಣ! ತಪೋಮಯಂ!
ಎನುತಿರಲು ತನು ತುಂಬ—
ಆದುವೆ ತೇಜೋ ಬಿಂಬ!
ಧನ್ಯೆ! ಧನ್ಯೆ! ರಾಧೆ! ಗೆದ್ದೆ! ಗೆದ್ದೆ!
ಪರಮಾತ್ಮನಾಕದಲಿ ಬಿದ್ದು ಎದ್ದೆ!

— ೭ —

ಎನಿತೊ ತೆರಗಳ ಸವರಿ
ಮೆರೆದಿರ್ದನಾ ಶೌರಿ
ರಾಧೆ ಧರೆಯನ್ನೇನೂ ಆಳಲಿಲ್ಲ!
ಎನಿತೊ ರಾಜ್ಯವ ಕೊಡಿಸಿ;
ವನಿತೆಯರೊಡಂಬಡಿಸಿ –
ದಂಥ ಮನ—ಪಟ್ಟದಿಂದಿಳಿಯಲಿಲ್ಲ.
ಅವಳಿಗೇಂ ಬೇಕಿತ್ತು?
ಅದು ಅವಗೆ ಗೊತ್ತು.
ಹೃದಯ ಸಿರಿ-ಸಂಪತ್ತು
ಮತ್ತೊಂದು ಮುತ್ತು!

---

**ಉಡುಪಿ ಶಿವಿಲ್ ಜಡ್ಜ ಕೋರ್ಟಿನಲ್ಲಿ,**

A. S. No. 66/1965

ಗೋಪಾಲ ಪೈ —ಅಪ್ಪಿಲಾಂಟ.

ಮತ್ತು

ರತ್ನಾ ಬಾಯಿ ಕೂಡಾ —ರೆಸ್ಪೊಂಡೆಂಟರು.

ಇವರೊಳಗೆ—

6ನೆ ಯದ್ರಿ ರಗುನಾತ ಪೈ, ಜನಾರ್ಧನ ಪೈ ಮಗ, ಕುಂದಾಪುರ ತಾಲ್ಕು ಕೋಟೇಶ್ವರ ಕಸಬಾ—ಯವರಿಗೆ ಯಿ ಮೂಲ್ಕ ತಿಳಿಸುವ ದೇನೆಂದರೆ—

ಕುಂದಾಪುರ ಮುನ್ಸಿಫ ಕೋರ್ಟು O. S. 605/62ನೆ ದಾವೆಯ ತೀರ್ಪಿನ ಮೇಲೆ ಅಪ್ಪೀಲಾಂಟನು ದಾಖ್ಲಮಾಡಿದ ಮೇಲ್ಮಂಡ ಅಪ್ಪೀಲಿನಲ್ಲಿ 6ನೆ ಯದ್ರಿ ನೋಟೀಸಿನ ಬಗ್ಗೆ ತಾ. 29-೧೦-65ಕ್ಕೆ ಮುದೋಣಾಗಿಯದೆ. ಆ ಕುರಿತು 6ನೆ ಯದ್ರಿಗೆ ಆಕ್ಷೇಪಣೆ ಹೇಳತಕ್ಕದ್ದು ಯಿದ್ದರೆ ಸದ್ರಿ ದಿವ್ಸ ಪೂರ್ವಾಹ್ನ 11 ಗಂಟೆಗೆ ಮೇಲ್ಮಂಡ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ನ್ಹಿಗ್ಗೆ ತಿಳಿಸೋಣಾಗಿಯದೆ.

N. V. Kamath,
*Advocate for Appellant.*

ಉಡ್ಪಿ, 19-೧೦-1965.

---



---

**ಇದೀಗ ಪ್ರಕಟವಾಗಿದೆ–**

**ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ**

# ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.......... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುವರೆಗೆ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ.........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

**ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ**

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

| | |
|---|---|
| ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್ ಡಿಪೊ, ಪಾಲುಕಟ್ಟೆ, ಉಡುಪಿ. |

---

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

# ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ

ಬೆಲೆ: 0-19 ಪೈಸೆ.

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು, ರಖಂ ಪ್ರತಿಗಳಿಗೆ ವಿಚಾರಿಸಿರಿ:-

**ನವಯುಗ ಪ್ರೆಸ್, ಉಡುಪಿ**

---

**ಉಡುಪಿ ಕರ್ನಾಟಕ ಸಂಘದ**
**ಒಂದೊಂದು ರೂಪಾಯಿ ಬೆಲೆಯ**
**ಮೂರು ಪ್ರಕಟಣೆಗಳು.**

**ಚಂದ್ರಲೋಕಕ್ಕೆ ಪ್ರಯಾಣ**
ಯು. ರಾಘವೇಂದ್ರ ಆಚಾರ್ಯ, ಎಂ.ಎ

**ಸಾಮಾನ್ಯ ರೋಗಗಳು**
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

**ಭೌತಿಕ ದರ್ಶನ**
ಬಡಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

---

# ನವಯುಗಕ್ಕೆ
**ಚಂದಾದಾರರಾಗಿ ಪ್ರೋತ್ಸಾಹಿಸಿರಿ**
**ವಾರ್ಷಿಕ ಚಂದಾ ರೂ. ೧೦**

---

**ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ**

O. S. No. 343 /196

ಇಂದಿರ ಶೆಟ್ಟಿ ಕೂಡಾ —ವಾದಿ

ಮತ್ತು

ಅಕ್ಕಣಿ ಶೆಟ್ಟಿ ಸಹಾ —ಪ್ರತಿವಾದಿ

ಇವರೊಳಗೆ,

ಈ ಮೂಲಕ ಸದ್ರಿ ದಾವೆಯ ಪ್ರತಿವಾದಿರು.— 42 ಭುಜಂಗ ಶೆಟ್ಟಿ. 43 ಗುಣಿ ಶೆಟ್ಟಿ. 45 ಕರುಣಾಕರ ಶೆಟ್ಟಿ 46 ಉಮಾನಾತ ಶೆಟ್ಟಿ— ಸದ್ರಾ ಶೆಟ್ಟಿರ ಮಕ್ಕಳು. 48 ಪ್ರೇಮ ಶೆಟ್ಟಿ 49 ಶೇಕರ ಶೆಟ್ಟಿ. 50 ಬಾಬು ಶೆಟ್ಟಿ 51 ಪ್ರಭಾಕರ ಶೆಟ್ಟಿ—ಕಲ್ಯಾಣಿ ಶೆಟ್ಟಿ ಮಕ್ಕಳು. 52 ಹಂಸರಾಜ. 53 ಮೇರಾಜ. 54 ಯತಿರಾಜ 55 ಅರುಣ ಶೆಟ್ಟಿ—ರಾದು ಶೆಟ್ಟಿ ಮಕ್ಕಳು, ಮಂಗಳೂರು ತಾಲ್ಕು ಅತಿಕಾರಿಬೆಟ್ಟು ಗ್ರಾಮ ಕಕ್ವ ಪರಾರಿಯಲ್ಲಿರುವವರು.

ವಾದಿರು ನೀವು ವಗ್ಯೆರೆರ ಮೇಲೆ ಮಾಡಿರುವ ದಾವೆ ನಿಂನು ಹಾಜರಿ ಬಗ್ಗೆ ತಾ 11-11-65ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜ್ರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಸಿವಾಯ್ ಮಾಡಿ ಮಾಕೀನ ದಾವೆ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court.

N. M. Adyanthaya
*Advocate for Plaintiff*

Karkala, 20-10-65.

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೨೮-೧೦-೬೫ರಿಂದ ೩-೧೧-೬೫ರ ವರೆಗೆ

### ೧. ಮೇಷ

ನಿಮ್ಮ ಆರೋಗ್ಯವಿಂದು ಬಹಳಷ್ಟಿಗೆ ಸುಧಾರಿಸಲಿದೆ. ಮಾತ್ರವಲ್ಲ ಸಾಂಸಾರಿಕ ತಾಪತ್ರಯಗಳು ಹೆಚ್ಚಿನಂಶ ದೂರವಾಗುವವು. ಉದ್ಯೋಗದಲ್ಲಿ ಕೆಲವು ತೃಪ್ತಿಕರ ವಿರುವುದರಿಂದ ಹಣದ ತೊಂದರೆ ಕಾಣಿಸದು. ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಪ್ರತಿಪಕ್ಷಿಗಳಿಂದ ಪರಾಜಯವಾದೀತು. ಅಪೇಕ್ಷಿತ ಧನಾಗಮದ ಯೋಗವಿರುವ ನಿಮಗೆ ತಾ. 31, 1, 2, 3 ಈ ದಿನಗಳಲ್ಲಿ ಸುಖಲಾಭಗಳು ಲಭಿಸಲಿವೆ.

### ೨. ವೃಷಭ

ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಗಳು ಕಾಣವು. ಗೃಹತಾಪತ್ರಯದಿಂದ ಮುಕ್ತರಾದ ನೀವು ಪರಸ್ಪರ ಅನ್ಯೋನ್ಯವಾಗಿ ವರ್ತಿಸುವಿರಿ. ಶತ್ರುಜನರ ಕಿರುಕುಳವೂ ಅಧಿಕವಾಗಿದ್ದರೂ ಹಿಡಿದ ಕಾರ್ಯವನ್ನು ಕೊನೆಗೊಳಿಸಿಯೇ ತೀರುವಿರಿ. ಖರ್ಚಿಗೆ ತಕ್ಕ ಆದಾಯವೂ ಇರೋಣದರಿಂದ ನಿಶ್ಚಿಂತೆಯಿಂದ ಕಾಲಯಾಪನೆ ಮಾಡುವಿರಿ. ಪ್ರವಾಸಕ್ಕೀಕಾಲವು ಉಚಿತವಲ್ಲ. ವಾರದ ಆದ್ಯಂತ ದಿನಗಳು ಅನುಕೂಲವಾಗಿವೆ.

### ೩. ಮಿಥುನ

ರಾಮೇಶ್ವರಕ್ಕೆ ಹೋದರೂ ಶನೈಶ್ವರನು ಬಿಡನೆಂಬ ಗಾದೆಯಂತೆ ನಿಮ್ಮ ಪರಿಸ್ಥಿತಿಯಾಗಿರುವುದು. ಸೋದರ ಜನರೊಡನೆ ಕಲಹ ಮನಸ್ತಾಪಗಳುಂಟಾಗಲಿವೆ. ಅಷ್ಟೇ ಕೆ ಧರ್ಮಾರ್ಥಕಾಮಗಳಲ್ಲಿನ ಸಮಭಾಗಿನಿಯೆಂದೆನಿಸಿದ ಅರ್ಧಾಂಗಿಯೂ ಕೂಡ ಇಂದು ನಿಮ್ಮ ಕೂಡೆ ಕಲಹಪ್ರಿಯಳಾಗಿ ವರ್ತಿಸುವಳು. ಆರ್ಥಿಕ ಬಿಕ್ಕಟ್ಟು ಗೃಹತಾಪತ್ರಯ ಗಳಿಂದ ನೊಂದ ನಿಮಗೆ ವಾರಾದಿಯ 3 ದಿನಗಳು ಸ್ವಲ್ಪ ಅನುಕೂಲವಾಗಿ ಕಾಣಿಸುವವು.

### ೪ ಕರ್ಕಟ

ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೆಡುತ್ತಿಹುದು. ವಾತದೋಷದಿಂದಾಗಿ ಆರೋಗ್ಯವು ಕೆಡುವುದು. ನಿಮ್ಮ ಅಪ್ತೇಷ್ಟರ ವರ್ಗದವರೂ ಇಂದು ನಿಮ್ಮ ಪದಸ್ಥಾನವನ್ನು ಆಕ್ರಮಿಸಿರುವರು. ತಂದೆಮಕ್ಕಳೊಳೂ ಗಂಡಹೆಂಡಿರ್ರೊಳೂ ಪರಸ್ಪರ ಕಲಹಗಳುಂಟಾಗಲಿವೆ. ಯಾವೊಂದು ಉದ್ಯಮವೂ ನಿಮಗೆ ಆಶಾದಾಯಕವಾಗಿ ಪರಿಣಮಿಸದು. ಬಂದದ್ದನ್ನೆಲ್ಲಾ ಎದುರಿಸಿಯೇ ಸಿದ್ಧನೆಂಬ ಹಟವಾದಿಗಳಾದ ನಿಮಗೆ ತಾ. 30ರಿಂದ 2ರ ವರೆಗಿನ ದಿನಗಳು ಸಹಾಯಕಗಳಾಗಿವೆ.

### ೫. ಸಿಂಹ

ನಿಮ್ಮಲ್ಲಿಂದು ಆತ್ಮಬಲವು ಸಾಕಷ್ಟಿಲ್ಲವಾದರೂ ದೈವಬಲದಿಂದಾಗಿ ಎಂತಹ ಕಾರ್ಯವನ್ನೂ ಸಾಧಿಸಲು ಶಕ್ತರಿರುವಿರಿ. ಬಂಧುಮಿತ್ರರೂ ಜನತೆಯೂ ನಿಮಗಿಂದು ಮುಕ್ತಹಸ್ತದಿಂದ ನೆರವು ನೀಡಲಿದೆ. ನಿಮ್ಮ ಆರ್ಥಿಕ ಪರಿಸ್ಥಿತಿಯು ವೃದ್ಧಿಹೊಂದುವುದಲ್ಲದೆ ಹಿಂದಿನ ಸಾಲ ಕಡಾದಿಗಳಿಂದಲೂ ಮುಕ್ತರಾಗುವಿರಿ. ಆದರೆ ನಿಮ್ಮ ಮತ್ತು ಹೆಂಡತಿ ಮಕ್ಕಳ ಆರೋಗ್ಯವು ಅಷ್ಟೊಂದು ಉತ್ತಮವಿರಲಾರದು. ವಾರಾಂತ್ಯದ 3 ದಿನಗಳು ಉತ್ತಮವಾಗಿವೆ.

### ೬. ಕನ್ಯಾ

ಹೆಚ್ಚಿನ ನಿಮ್ಮ ಕಾರ್ಯಕಲಾಪಗಳು ಶತ್ರುಗಳಿಂದುಂಟಾದ ವಿಘ್ನಗಳಿಂದಾಗಿ ಅರ್ಧದಲ್ಲೇ ತಡೆದು ನಿಲ್ಲಲಿವೆ. ಒಂದೊಮ್ಮೆಗೇ ಮುಂದುವರಿಸಿದರೂ ತುಂಬ ಕಷ್ಟನಷ್ಟಗಳಿಗೆರವಾಗುವಿರಿ. ದುರ್ಜನರ ಮಾಯಾಬಲೆಗೆ ಸಿಲುಕಿ ಧನಮಾನಗಳಿಗೆ ಹಾನಿ ತಂದುಕೊಳ್ಳಲಿರುವಿರಿ. ಗೃಹತಾಪತ್ರಯಗಳಿಂದಲೂ ಆರ್ಥಿಕ ಬಿಕ್ಕಟ್ಟಿನಿಂದಲೂ ನೊಂದ ನಿಮಗೆ ವಾರದ ಆದ್ಯಂತ ದಿನಗಳು ಸ್ವಲ್ಪ ಅನುಕೂಲವಾಗಿ ಪರಿಣಮಿಸಲಿವೆ.

### ೭. ತುಲಾ

ನಿಮ್ಮ ಆರೋಗ್ಯವಿಂದು ಸುಧಾರಿಸದಿದ್ದರೂ ಇತರ ಭಾಗಗಳಲ್ಲಿ ಪರಿಸ್ಥಿತಿಯು ಉತ್ತಮಗೊಂಡಿರುವದು. ಸಂಕಲ್ಪದಂತೆ ಕಾರ್ಯಗಳು ಏನೊಂದೂ ತೊಡಕು ತೊಂದರೆಗಳಿಲ್ಲದೆ ಪೂರ್ಣವಾಗುವವು. ನಿರುದ್ಯೋಗ ಸಮಸ್ಯಾ ಪೀಡಿತಂದವರೂ ಕೂಡಾ ಇಂದು ಸದ್ಯಮ ಪ್ರವೃತ್ತರಾಗುವರು. ನಷ್ಟವಾದ ದ್ರವ್ಯಾದಿಗಳೂ ಲಭಿಸಲಿವೆ. ಶತ್ರುಪೀಡೆಯಿಂದ ಮುಕ್ತರಾದ ನಿಮಗೆ ತಾ. 29, 30 ಅತೀವ ಅನುಕೂಲವಾದ ದಿನಗಳು.

### ೮. ವೃಶ್ಚಿಕ

ನಿಮ್ಮ ಮನಃಸ್ಥಿತಿಯು ಇನ್ನೂ ಕೊನೆಗೊಂಡಿಲ್ಲವು. ಪಿತ್ತೋಷ್ಣ ದೋಷದಿಂದ ಆರೋಗ್ಯವು ಕೆಡುವದಲ್ಲದೆ ಸಾಂಸಾರಿಕ ತಾಪತ್ರಯಗಳೂ ನಿಮ್ಮನ್ನು ನೆಮ್ಮದಿಯಿಂದಿರಗೊಡವೊಲ್ಲವು. ಪ್ರವಾಸದಲ್ಲಿ ಕಳ್ಳಕಾಕರ ಹಾವಳಿಗೆ ಸಿಲುಕಲಿರುವಿರಿ. ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನಚಲನೆಯ ಯೋಗವು ಕಂಡುಬರುವುದು. ಹಲವಾರು ತೆರದ ತಾಪತ್ರಯಗಳಿಗೆ ಸಿಲುಕಿದ ನಿಮಗೆ ತಾ 28, 31, 1, 2 ಇತರ ದಿನಗಳಿಗಿಂತ ಉತ್ತಮವಾಗಿ ಕಾಣಿಸುವದು.

### ೯. ಧನು

ನಿಮ್ಮ ಕಾರ್ಯಕಲಾಪಗಳಿಂದು ನಿರರ್ಗಲವಾಗಿ ಮುಂದೆ ಸಾಗಲಿವೆ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲವು ಲಭಿಸಿದರೂ ನೌಕರಿ ವರ್ಗದವರಿಗೆ ಪರಿಶ್ರಮಕ್ಕೆ ತಕ್ಕ ಫಲ ಕಾಣದು. ಸ್ವಂತ ಸುಖಭೋಗಗಳಿಗೆ ಬೇಕಾದ ವಸ್ತುವಡವೆಗಳು ಅನಾಯಾಸದಿಂದ ಲಭಿಸುವವು. ಹೆಂಡತಿ ಮಕ್ಕಳ ಆರೋಗ್ಯದತ್ತ ಸ್ವಲ್ಪ ಗಮನ ಕೊಡಿರಿ. ತಾ. 29, 30, 2 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಧನಾದಿಗಳನ್ನು ಪಡೆವಿರಿ.

### ೧೦. ಮಕರ

ಕರ್ತವ್ಯದಕ್ಷರಾದ ನಿಮಗೆ ದೈವವೂ ಸಾಕಷ್ಟು ನೆರವಾಗುವುದರಿಂದ ಮಾಡಿದ ಕಾರ್ಯಗಳು ಸಫಲಗಳಾಗುವವು. ಜನತೆಯ ಸಹಕಾರವು ನಿಮಗಿಲ್ಲವಾದರೂ ಸ್ವಯಂಪಕ್ಷರಾದ ನಿಮಗೆ ವ್ಯಾಪಾರ ನೌಕರಿ ಮೊದಲಾದ ಉದ್ಯಮಗಳಲ್ಲಿ ಒಳ್ಳೆಯ ಲಾಭ ಸಿಗಲಿದೆ. ಭೂಸಂಬಂಧವಾದ ವ್ಯವಹಾರದ ಸಲುವಾಗಿ ಕೆಲವಂಶ ಧನ ಅಪವ್ಯಯವಾಗಲಿದೆ. ಪ್ರವಾಸದಲ್ಲಿ ಧನಹಾನಿ ದೇಹಾಲಸ್ಯಗಳೂ ಕಂಡುಬರಲಿವೆ. ತಾ. 28, 31, 1, 2 ಈ ದಿನಗಳು ಇತರ ದಿನಗಳಿಂತ ಉತ್ತಮ.

### ೧೧ ಕುಂಭ

ನಿಮ್ಮ ದುರ್ದಿನಗಳು ದೂರವಾದವು. ಶತ್ರುಗಳೂ ಇಂದು ತಮ್ಮ ವೈರವಂ ತ್ಯಜಿಸಿ ಮಿತ್ರರಾಗಿ ಪರಿಣಮಿಸುವರು. ಮನಸ್ಸಂಕಲ್ಪಗಳು ಅನಾಯಾಸದಿಂದ ಕಾರ್ಯರೂಪಕ್ಕೆ ಬರಲಿವೆ. ಪ್ರತಿಯೊಂದು ಉದ್ಯಮದಲ್ಲೂ ನಿರೀಕ್ಷೆಗಿಂತಲೂ ಫಲ ಲಭಿಸುವದು. ಸಮಾಜದಲ್ಲೂ ಸ್ಥಾನಮಾನಗಳನ್ನು ಗಳಿಸಿರಿ. ನಿಶ್ಚಿಂತರೂ ನಿರಾಮಯರೂ ಆದ ನಿಮಗೆ ತಾ. 28, 29, 30, 3 ಈ ದಿನಗಳು ತುಂಬ ಸಹಕಾರಿಗಳಾಗಿವೆ.

### ೧೨. ಮೀನ

ಧನಭಾಗ್ಯಪತಿಯಾದ ಅಂಗಾರಕನೋರ್ವನನ್ನುಳಿದು ಇತರರೆಲ್ಲರೂ ಪ್ರತಿಕೂಲರಾಗಿರುವುದರಿಂದ ನಿಮ್ಮ ಪ್ರಯತ್ನಗಳಿಂದು ಗಾಳಿಯೊಡನೆ ಗುದ್ದಾಟವಾದಂತೆ ವ್ಯರ್ಥವಾಗಲಿವೆ ಎಷ್ಟೇ ಮಿತಭಾಷಿಗಳಾಗಿದ್ದರೂ ವಾಕ್ಕಲಹವು ಬೇರೆ ತಪ್ಪಲಾರದು. ಆರ್ಥಿಕ ಬಿಕ್ಕಟ್ಟು, ಗೃಹತಾಪತ್ರಯ ಸ್ವಜನ ವಿರೋಧಗಳಿಗೆರವಾದ ನಿಮಗೆ ವಾರದ ಆದ್ಯಂತ ದಿನಗಳಲ್ಲಿ ಧನನಷ್ಟ ಮಾನಹಾನಿಗಳು ಸಂಭವಿಸಲಿವೆ

---

## ಚಂದಾದಾರರಲ್ಲಿ ವಿನಂತಿ.

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 45ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ, ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್
ನವಯುಗ, ಉಡುಪಿ.

---


ಸಮರ ರಂಗದಲಿ ಹೋರಾಡುವ ಜವಾನ
ಭೂಮಿಯಲಿ ಹೆಣಗುವ ಕಿಸಾನ
ಇವರ ದುಡಿಮೆಯೆ ನಮ್ಮ ಮೇಲ್ಮೆ.

ಇವರಿಗೆ ಬೆಂಗೋಲಾಗಿ ನಿಲ್ಲುವ
ವೀರ ಪ್ರತಿಜ್ಞೆಯನ್ನು
ನಾವೆಲ್ಲರೂ
ಈ ದೀಪಾವಳಿಯ ದಿನ
ಮಾಡೋಣ.

ಆರ್. ಎನ್. ಶೆಟ್ಟಿ,
ಕಂಟ್ರಾಕ್ಟರ್, ಬಿ. ಎಚ್. ರೋಡ್,
ಶಿರಸಿ- ಹೊನ್ನಾವರ, ಉ. ಕ.



ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ತ್ರಿ, ಫಾರ್ಮುಗಳು
ದೊರೆಯುತ್ತವೆ, ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.


'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.


ದೀಪಾವಳಿಯ
ಶುಭಾಶಯಗಳು

ಯಾವತ್ತೂ ವಾಚನ
ಭಂಡಾರಗಳಿಗೆ
ಯೋಗ್ಯವಾದ ನವೀನ ಪುಸ್ತಕಗಳು

| | |
|---|---|
| ಭಾರತದ ವೀರಾಂಗನೆಯರು | 1—50 |
| ಬಿರಿದ ಮೊಗ್ಗುಗಳು | 1—50 |
| ಅನುವಾದಿತ ಕತೆಗಳು | 1—20 |
| ಪಂಚ ಸುಮನ | 1—20 |
| ಮುತ್ತಿನ ಮಾಲೆ | 1—80 |
| ಹೂ ಗೊಂಚಲು | 1—75 |
| ಪಂಚಗಜ್ಜಾಯ | 1—75 |
| ಏಕಾಂಕ ನಾಟಕಗಳು | 1—00 |
| ಭಾರತದ ನಾಲ್ಕುಮುಖಿಗಳು | 1—00 |
| ದೇಶ ವಿದೇಶದ ಮಹಾ ಜೀವಿಗಳು | 1—80 |
| ಹೆಂಗುಸರ ಕತೆಗಳು | 2—00 |

ಕೆಟಲಾಗಿಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

# ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ,ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

# ಸುಲಭದಲ್ಲಿ ಪತ್ರಲೇಖನ

# LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

# ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

*With best compliments*
*from*
**K. Venkatramana Bhat**
*Proprietor*

# ROYAL MAHAL

**( Boarding & Lodging )**
**UDIPI**
Phone: 169

ದೀಪಾವಳಿಯ ಶುಭಾಶಯಗಳು

# ಹೊಟೆಲ್
# ಶಿವ ಪ್ರಸಾದ

ಕುಂದಾಪುರ
ಅತ್ಯಾಧುನಿಕ ಸಲಕರಣೆ. ಸೌಕರ್ಯಗಳಿಂದ ಕೂಡಿದ
ನೂತನ ವಸತಿ ಗೃಹ

*With best compliments*
*from*

# M. KRISHNA

*Proprietor*

# Sree Krishna Motor Service,

**HASSAN (MYSORE STATE)**
**PHONE 49**

# ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

## ನಂಜನಗೂಡು.

ಸುಮಾರು ಐವತ್ತು ವರ್ಷಗಳಿಂದ ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ




ಲೋಕವಿಖ್ಯಾತಿಗಳಿಸಿರುವ

**ನಂಜನಗೂಡು**

**ಟೂತ್-ಪೌಡರ್**

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

**ಆಯುರ್ವೇದೀಯ**

**ಸಿದ್ಧೌಷಧಗಳು**

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

**ಅಗರುಬತ್ತಿ, ಹೇರ್‌ಆಯಿಲ್,**

**ಕರವಸ್ತ್ರದ ಸೆಂಟ್**

ಮುಂತಾದ

**ಸುಗಂಧದ್ರವ್ಯಗಳೂ**

ಸಹ

ಪ್ರತಿನಿತ್ಯ ಅತ್ಯುತ್ತಮರೀತಿಯಲ್ಲಿ ತಯಾರಾಗುತ್ತಲಿವೆ.

ಶಾಖೆಗಳು: ಮೈಸೂರು, ಬೆಂಗಳೂರು ಮತ್ತು ಮಂಗಳೂರು.

ಡಿಪೋ: ಟಿ. ನರಸೀಪುರ.

---

ಸೋಲ್ ಏಜಂಟರು:— (ಕರ್ನಾಟಕದಾಚೆಗೆ)

ದಿ ಯುನೈಟೆಡ್ ಕನ್ಸರ್ನ್, 54, ಬಂದರುಬೀದಿ, ಮದ್ರಾಸ್.

NAVAYUGA 29-10-1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

## ಭೂಮಿಯೇಕೆ ಸುತ್ತಲೂ ತಿರುಗುತ್ತಿದೆ?
## ಏಕಮ್ಮಾ ಏಕೆ?
## ಚಂದ್ರನೇಕೆ ಹಳದಿಯಾಗಿದ್ದಾನೆ?

**ಪ್ರಶ್ನೆಗಳು,** ಉತ್ತರದ ಅವಶ್ಯಕತೆಯುಳ್ಳ ಪ್ರಶ್ನೆಗಳು. ಮಗುವಿನ ಕೋಮಲ ಮನಸ್ಸಿನ ಕುತೂಹಲವು ಒಂದು ಅಮೂಲ್ಯವಾದ ಸೊತ್ತಾಗಿದೆ. ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವ ಅವಕಾಶ ಆತನಿಗಿರಬೇಡವೇ? ನಿಮ್ಮ ಮಗನೇ ಈ ಪರಿಯಾಗಿರಲು ಸಾಧ್ಯ ನೀವು ಹೇಗೆ ಯೋಚಿಸುವಿರಿ?

ಆತನ ಭವಿಷ್ಯ ನಿಮ್ಮ ಮೇಲೆ ಆಧರಿಸಿದೆ. ಆತನಿಗಾಗಿ ಮತ್ತು ಸ್ವತಹ ನಿಮಗಾಗಿ ಹೆಚ್ಚಿನ ಉತ್ಕರ್ಷವನ್ನು ಬಯಸುವಿರಿ ತಾನೆ? ಹಾಗಾದರೆ ಈ ಬಗ್ಗೆ ಈಗೇನು ಮಾಡುತ್ತಿದ್ದೀರಿ? ಅವನಿಗಾಗಿ ಎಷ್ಟು ಉಳಿಸುತ್ತಿದ್ದೀರಿ?

ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಗೆ ಹೋಗಿ ಅವನ ಹೆಸರಿನಲ್ಲಿ ಒಂದು ಕ್ಯುಮುಲೇಟಿವ್ ಡಿಪಾಸಿಟ್ ಖಾತೆಯನ್ನು ತೆರೆಯಿರಿ. ಪ್ರತಿ ತಿಂಗಳು ಸ್ವಲ್ಪ ಸ್ವಲ್ಪ ಒತ್ತಟ್ಟಿಗೆ ಉಳಿಸಿರಿ. ನೀವು ಉಳಿಸುವ ಪ್ರತಿಯೊಂದು ರೂಪಾಯಿಯೊಡನೆ ಅವನ ಭವಿಷ್ಯ ಬಲಗೊಳ್ಳುವುದು.

# ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: **ಮಣಿಪಾಲ,** ಮೈಸೂರು ರಾಜ್ಯ.

ಶಾಖೆಗಳು: 200ಕ್ಕೂ ಹೆಚ್ಚು    ಚಲಾವಣಾ ಸಂಪತ್ತು 70 ಕೋಟಿಗೂ ಹೆಚ್ಚು.

Edited, Printed & Published by K. H. Shetty at the Navayuga Press, Udipi, S. India.

4—11—1965



# NAVAYUGA

Phone 226

౧౦

ಧಾರಾವಾಹಿ ಕಾದಂಬರಿ

# ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ವರೆಗೆ—

ಆಲವಂತಿಯ ರೈತ ಮುರುಗನ ಸಾಕಿಸಂತೆ ರಾಮಚಂದ್ರ ಹಳ್ಳಿಯಲ್ಲೇ ಉಳಿಯುವ ಮನ ಮಾಡಿದ್ದರೂ ಗೆಳೆಯ ಕೇದಾರಿಯ ಪತ್ರ ಆತನನ್ನು ಮದ್ರಾಸಿನತ್ತ ಎಳೆಯಿತು. ವಿವಾಹಿತ ಕೇದಾರಿಯ ದೂರದ ಸಂಬಂಧಿಕ ಮೀನಾಕ್ಷಿಯ ಮಗಳು ಏರುಜವ್ವನದ ಜಾನಕಿಗೆ ರಾಮಚಂದ್ರ ಯೋಗ್ಯ ವರ— ಎಂದು ಕೇದಾರಿಯ ಅಂತರಂಗ ಹೇಳುತ್ತಿತ್ತು—ಎಂತಲೇ ಆತ ಕಾಗದ ಬರೆದಿದ್ದನು.

ಮುಂದೆ......

ಕೇದಾರಿಯ ನಿರೀಕ್ಷಣೆಯಂತೆ ರಾಮು ಬಂದೇ ಬಿಟ್ಟನು; ಅವನನ್ನು ಸ್ವಾಗತಿಸಿ ತನ್ನ ಕೋಣೆಗೆ ಕರೆದುಕೊಂಡು ಹೋದನು. ಬಾಳಿನ ಚದುರಂಗದಾಟದಲ್ಲಿ ತನ್ನ ಣಿಕೆ ಎಲ್ಲಾದರೂ ತಪ್ಪಿದಲ್ಲಿ ಅವನಿಗೆ ಅತೀವ ದುಃಖವಾಗುತ್ತಿತ್ತು. ಅತನ ಪ್ರಬಲ ಪುರುಷ ಸ್ವಭಾವಕ್ಕೆ ಸೋಲೆಂಬುದು ಕೋಮಲ ಮನಸ್ಸಿನ ಹೆಣ್ಣಿನ ಸ್ವಭಾವವೆಂದು ಮಾತ್ರ ಗೊತ್ತಿತ್ತು. ತನ್ನ ಲೇಖನಿಯು ರಾಮುವಿನಂತಹವರ ಕರ್ಮಗತಿಯನ್ನು ರೂಪಿಸಲು ಶಕ್ತಿ ಉಳ್ಳದೆಂಬುದನ್ನರಿತು ಅವನಿಗೆ ಆನಂದವಾಯಿತು. ಮೊದಲ ನೋಟದಲ್ಲಿ ಕ್ಷಣಕಾಲ ಸ್ನೇಹ ವಾತ್ಸಲ್ಯದ ಪರಸ್ಪರ ಭಾವಗಳಿಗೆ ಅ ಪಳೆಯ ಬಲುಹೆಯ ಒಪ್ಪಿಗೆ ಇತ್ತು. ಒಬ್ಬರ ಹೃದಯದ ನೋವು ಹಾಗೂ ಹೆಮ್ಮೆ ಇನ್ನೊಬ್ಬರದರಲ್ಲಿ ಲೀನವಾಗಿತ್ತು.

ಕೆಲ ನಿಮಿಷ ಮೌನ ಆವರಿಸಿತ್ತು. ಈ ಮಧ್ಯೆ ರಾಮು ಕೋಣೆ ಸುತ್ತು ಸುತ್ತು ಮುತ್ತಲಿನ ಸ್ಥಳವನ್ನು ನೋಡುತ್ತ ಮೌನವನ್ನು ಮುರಿದನು. 'ಕೇದಾರಿ, ಇದು ಬಹಳ ಚಲೋ ಕೋಣೆ. ಬಹಳ ವಿಶಾಲವಾಗಿಯೂ ಇದೆ. ಆ ಮೈದಾನವನ್ನು ವಿಭಾಗಿಸಿಕೊಂಡು ನಡುವೆ ಓಡುತ್ತಿರುವ ಲೋಹ ಮಾರ್ಗ ರಮ್ಯತೆಯನ್ನು ಹೆಚ್ಚಿಸಿದೆ. ಆದರೆ ನಮ್ಮ ದರ್ಜೆಗೆ ಈ ಬಾಡಿಗೆ —ತಿಂಗಳೊಂದಕ್ಕೆ ಇಪ್ಪತ್ತು ರೂಪಾಯಿ— ಹೆಚ್ಚು...."

"ಆದರೆ, ರಾಮು, ತಂಬುಚೆಟ್ಟಿ ಬೀದಿಯ ಕೋಣೆಯಲ್ಲಿ ಕತ್ತಲೆ ಕೋಣೆಯ ವಾಸ ನನಗೆ ಬೇಸರವನ್ನುಂಟುಮಾಡಿದ್ದ, ಧೈರ್ಯದಿಂದ ಬದಲಾವಣೆ ಮಾಡಿದ್ದೇನೆ. ನನ್ನ ಆರ್ಥಿಕ ಪರಿಸ್ಥಿತಿ ಏನೂ ಅಭಿವೃದ್ಧಿ ಹೊಂದಿಲ್ಲ. ಆದರೂ ನಾನೀಗ ವಸ್ತುಗಳನ್ನು ಲೌಕಿಕ ದೃಷ್ಟಿಯಿಂದ ಕಾಣಲಿಕ್ಕಾರಂಭಿಸಿದ್ದೇನೆ."

ರಾಮುವಿನ ಸಮ್ಮತಿಗಾಗಿ ಅವನು ಒಂದು ನಿಮಿಷ ಸುಮ್ಮನಾದನು. "ಹೌದು" ಅಥವಾ "ಇಲ್ಲ" ಏನನ್ನೂ ಆಡದೆ ಸುಮ್ಮಗೆ ಕೇಳುವುದಕ್ಕೆ ರಾಮು ಇಷ್ಟಪಟ್ಟಿದ್ದನು. ಹಾಗಾಗಿ ಕೇದಾರಿಯು ಕೊಂಚ ಗಂಭೀರ ಸ್ವರದಲ್ಲೇ ಮುಂದುವರಿಸಬೇಕಾಯಿತು.

"ಪ್ರತಿ ದಿನ ಬಾಳ ನೆರಳು ನನ್ನ ಹರೆಯದ ದಾರಿಯತ್ತ ಬೀಳುತ್ತದೆ. ಬಡವರು ಎಂದೆಂದೂ ಬಡವರಾಗಿಯೇ ಇರಲು ಕಾರಣವೇನೆಂದರೆ ಅವರೆಂದೂ ಶ್ರೀಮಂತರಾಗಲು ಪ್ರಯತ್ನಿಸದಿರುವುದು. ಇದು ವಿಷಾದದ ವಿಷಯ. ನಿನ್ನನ್ನು ನೀನೇ ಉದ್ಧರಿಸಿಕೊಳ್ಳದಿದ್ದಲ್ಲಿ, ಈ ಕಾರ್ಯಮಗ್ನ ಪ್ರಪಂಚದಲ್ಲಿ, ನಿನ್ನ ಜಾಗ್ರತೆಯನ್ನು ನೋಡುವವರಾರೂ ಇರುವದಿಲ್ಲ. ಶ್ರೀಮಂತಿಕೆಯಿಂದ ಆರಂಭಿಸು, ನೀನು ಇನ್ನೂ ಶ್ರೀಮಂತನಾಗುವಿ, ಹಾಗೆ ಕೊನೆಯಲ್ಲಿ ಮತ್ತೂ ಶ್ರೀಮಂತನಾಗುವಿ. ಈ ಪ್ರಪಂಚದಲ್ಲಿ ಬೆಲೆ ಇರುವುದು ಬಾಹ್ಯಾಡಂಬರಕ್ಕೆ. ಸ್ವ—ಸಹಾಯವೇ ಉತ್ತಮ ಸಹಾಯ. ಬಹಳ ವರ್ಷಗಳ ಹಿಂದಿನಿಂದಲೂ ಬಹಳ ಜನರು ಅದನ್ನೇ ಹೇಳುತ್ತ ಬಂದಿದ್ದಾರೆ. ಅದೇ ತತ್ವವನ್ನು ನಾನಿಂದು ಸರಿ ಎಂದೆಣಿಸಿದ್ದೇನೆ."

ರಾಮುವಿಗೆ ಈಗ ಕೇದಾರಿಯನ್ನು ತಿಂಗಳಿಗೆ ಇಪ್ಪತ್ತು ರೂಪಾಯಿ ಬಾಡಿಗೆಯ ಕೋಣೆಗೆ ಕರೆದುಕೊಂಡು ಬಂದ ತತ್ವ ಯಾವುದೆಂದು ತಿಳಿಯಿತು. ಮೊದಲ ಸ್ನೇಹಿಯಲ್ಲಾದ ಕೀರ್ಗಡೆಯ ಇಂದ್ರಜಾಲದಿಂದ ಕೇದಾರಿಯ ಕ್ಷೀಣ ಸ್ವರವು ಈಗ ಬಹು ವ್ಯತ್ಯಾಸ ಹೊಂದಿರುವುದನ್ನು ಕಂಡು ಆತನಿಗೆ ಆಶ್ಚರ್ಯವಾಯಿತು.

"ಆದರೂ"—ರಾಮು ಪ್ರತಿವಾದಿಸಲು ಪ್ರಯತ್ನಿಸಿದನು.

"ಸರಳ ಸಾಧು ರಾಮು, ನೀನು ಒಡಂಬಡದಿರಬಹುದೆಂದು ನನಗೆ ಗೊತ್ತಿತ್ತು. ನಿನ್ನಂತಿರುವ ಆದರ್ಶವಾದಿಗಳು ಮತ್ತು ಅಜ್ಞಾನಿ ಜನಜಂಗುಳಿಯು ಯಾವಾಗಲೂ ಶ್ರೀಮಂತರನ್ನು ಶ್ರೀಮಂತರನ್ನಾಗಿಯೇ ಇಡುತ್ತದೆ. ವಾಸ್ತವಿಕವಾದಿಗಳಿಗೆ ವಿಷಯ ಸಾರ ಸಿಗುತ್ತದೆ. ಆದರೆ ಆದರ್ಶವಾದಿಗಳು ಹಗಲಿಡೀ ಭಾಷಣಕೊಟ್ಟು ರಾತ್ರಿ ಸರಳತೆ ಹಾಗೂ ಸಮಪ್ರತೆಯ ಕನಸು ಕಾಣುತ್ತಾರೆ. ಹಾಗಾಗಿ ಅವರಿಗೆ ಒಣಗಿದ ಗಂಟಲು ಅಥವಾ ನಾಲಗೆಯನ್ನಾದರೂ ಒದ್ದೆ ಮಾಡಿಕೊಳ್ಳಲು ನೀರೂ ಸಿಗುವದಿಲ್ಲ. ನಾನೀಗ ಪ್ರಪಂಚವನ್ನು ಉತ್ತಮ ದೃಷ್ಟಿಯಿಂದ ನೋಡುತ್ತಿದ್ದೇನೆ."

"ನ್ಯಾಯ ವಿದ್ಯಾಲಯದಿಂದ, ಕೇದಾರಿ?" ತಗ್ಗಿದ ಸ್ವರದಿಂದ, ಗಂಟಲೊಳಗಿಂದಲೇ, ರಾಮು ಕೇಳಿದನು. "ಹಾಗಾದರೆ, ನಾನೀಗ ಕೇಳಿದುದೆಲ್ಲಾ ತಾತ್ವಿಕ ಪಕ್ಷಕ್ಕೆ ಸೇರಿದ ವಿಷಯವಿದೆ. ನಿನ್ನ ದೈನಂದಿನ ವಿದ್ಯಾಲಯ ಜೀವನದೊಳಗಿನ ಕುರಿತು ಸ್ವಲ್ಪ ಹೇಳು."

'ದೈನಂದಿನ ವಿದ್ಯಾಲಯ ಜೀವನದೊಳಗಿಂದ!" ಪ್ರತಿ ಧ್ವನಿಯಂತೆ ಉತ್ತರ ಕೊಟ್ಟನು. 'ನ್ಯಾಯ ವಿದ್ಯಾಲಯವು... ಸು ಚಿಕ್ಕ ಅರಮನೆಯಂತಹ ಪ್ರ... ದೆ. ಅಲ್ಲಿ ಎಲ್ಲೆಲ್ಲಿಂದಲೂ ಗಾಳಿ ... ಡೆಂಬು ಕಲ್ಲಿನ ಗೋಡೆಯ ಬೆನ್ನು ... ತ್ತದೆ. ಆ ಗಾಳಿಯು ಒಬ್ಬ ಕ... ನವಾಬನ ಸಂತೋಷಕರ ತೋಟ... ಬರುತ್ತದೆ. ಗೋಲಿ ಆಡುವ ಮಕ್ಕ... ಕಲೂ ಅಲ್ಲಿಯ ವಿದ್ಯಾರ್ಥಿಗಳು ಮ... ಗಾರರಿದ್ದಾರೆ. ಅಲ್ಲಿ ಆದಕ್ಕಲ್ಲದೆ ಕ... ಮಹತ್ವವಿಲ್ಲ. ತಮ್ಮ ದೈನಂದಿನ ... ಕ್ಕಾಗಿ ಉಪನ್ಯಾಸಕರು, ಮಂತ್ರ... ಹೇಳುವವರಂತೆ, ಗೊಣಗಿಕೊಂಡು ... ಗುತ್ತಾರೆ. ಆ ಉಪನ್ಯಾಸಕ್ಕೆ ಕಿವಿಕ... ರೆ ಒಳ್ಳೆಯ ನಿದ್ದೆ ಬರುತ್ತದೆ. ಅತ್ತ ... ನ ಕೊಠಡಿಯಲ್ಲಿ ಸ್ವಂತ ಕೆಲಸವನ್ನು ... ಡುತ್ತ ಇರಬಹುದು; ಬೇಕಾದಲ್ಲಿ ... ಸ್ನೇಹಿತನಿಗೆ ಸ್ನೇಹಸೂಚಿ ಎಂದು ... ಬಹುದು. ಅದೊಂದು ದೀರ್ಘ ಆನಂ... ಕಾಲ. ಇಷ್ಟೆನ ನ್ಯಾಯ ಜೀವನದ ... ಗುಲಕ್ಕಲ್ಲಿ ಎತ್ತರದ ಹೊಸಲಿದೆ. ... ಬೀಸುವಷ್ಟು ತಂಗಾಳಿ ಪ್ರಪಂಚದ ... ನ್ಯಾವ ಭಾಗದಲ್ಲೂ ಬೀಸಲಿಕ್ಕಿಲ್ಲ. ... ವಿದ್ಯಾಲಯವು ಜೀವನದ ಆಟಕ್ಕೆ ... ಯಾದ ಹಾಗೂ ಸಂತೋಷದಾಯ... ಕೊನೆ.'

ಕೇದಾರಿಯು ಸಂತೋಷದಿಂದ ... ಡುತ್ತಿದ್ದ ವಿವರಣೆಯು ರಾಮುವಿ... ಹೃದಯಕ್ಕೆ ಚೇಳು ಕುಟುಕಿದಂ... ಯಿತು. 'ಆಹ! ನನ್ನ ವಿಷ... ಒಂದೇ ಒಂದು ಶಬ್ದವೂ ಅವನ ... ಯಿಯಿಂದ ಬರಲಿಲ್ಲ! ಎಲ್ಲಾ ಅವನ ... ಷಯವನ್ನೇ ಹೇಳಿದ. ನನ್ನ ಪ್ರಿಯ... ಹಳ್ಳಿಯ ಅಥವಾ ತಾಯಿಯ ... ನನ್ನ ಸೋಲಿನ ಕುರಿತು ಒಂದು ಸಾ... ದಾಯಕ ಪ್ರಶ್ನೆಯನ್ನೂ ಅವನು ... ಲಿಲ್ಲ! ಅವನೊಂದಿಗೆ ನ್ಯಾಯ ವಿದ್ಯಾ... ಯದಲ್ಲಿ ಸಂತೋಷದಲ್ಲಿ ಭಾಗಿಯಾ... ನಾನಿಲ್ಲದಿರುವ ಬಗ್ಗೆ ಒಂದು ಸಾಂತ್ವ... ಯಿಕ ಅನುತಾಪದ ಶಬ್ದವೂ ಅವನ... ಬರಲಿಲ್ಲ! ಹೌದು. ನಿಜವಾಗಿ ಆವನ... ದಲಾವಣೆಯ ಕರೆಗೆ 'ಓ' ಕೊಟ್ಟಿದ್ದಾ... ವರ್ಷಗಳ ತನ್ನ ನಿಕಟ ಸ್ನೇಹ ಹಾ... ತ್ಯಾಗ ಅವನಿಗೆ ಜಯದ ಸಂಭ್ರಮ... ಮರೆತು ಹೋಗಿದೆ.

ಈ ಪೀಡನೆಯಿಂದಾಗಿ ರಾಮುವಿ... ಕ್ಷಣಕಾಲ ಸ್ಫೂರ್ತಿ ಬಂತು. ಆದರೆ ... ನ ವ್ಯಥಾ ಸ್ವಭಾವ ಅವನ ಮೇಲೆ ... ಸಿಟ್ಟುಮಾಡಿಕೊಂಡಿತು. "ಬಹುಶಃ ... ನು ಹೊಟ್ಟೆಕಿಚ್ಚುಪಟ್ಟುಕೊಂಡು ... ಗಳನ್ನು ಹಳದಿ ಕಣ್ಣುಗಳಿಂದ ಕಾಣ... ದ್ದೇನೆ. ಮೊದಲಿನಿಂದಲೂ ಕೇದಾರಿ... ಹಂವಾದಿ ಇದ್ದಾನೆ. ಬಹುಶಃ ನನ್ನ ... ಲಿನ ಜ್ಞಾಪಕ ಹುಟ್ಟಿಸಿ ಮನಸ್ಸ... ನೋಯಿಸಲಿಕ್ಕೆ ಅವನ ಹೃದಯ ... ಪಡಲಿಕ್ಕಿಲ್ಲ. ಹೇಗೂ ಅನುತಾಪವು ... ಖವನ್ನು ಹೆಚ್ಚಿಸುತ್ತದೆ, ಅನಿಕರವ... ಮರೆಮಾಡುತ್ತದೆ. ಆವಸರದಿಂದ ತೀ... ನಿಸಿಕೊಂಡು ಕೇದಾರಿಗೆ ನಾನು ಎ... ಬಗೆದಂತಾಗುತ್ತದೆ...."

ವಿರುದ್ಧ ಅಭಿಪ್ರಾಯವನ್ನೆಣಿಸಿಕೆ... ಡು ಪುನಃ ರಾಮು ಪೀಡನೆಗೊಳಗಾ... ನು. ಆದರೆ ರಾಮುವಿನ ಮುಖ ಸಾ... ದಲ್ಲೇಳುತ್ತಿದ್ದ ಅಲೆಗಳತ್ತ ಕೇದಾರಿ...

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7½ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | ... ... | 4 |

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

eading Kannada Weekly

UDIPI, S. Kanara

ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:

ನಿಯಮಿತ (ಕೆಜುವಲ್)
ಲಂ ಸೆಂಟಿಮೀಟರಿಗೆ ರೂ. 2-00
ಯಮಿತ (ಕಂಟ್ರಾಕ್ಟ್)
ಲಂ ಸೆಂಟಿಮೀಟರಿಗೆ ರೂ. 1-50

++

## ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿವರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಬಿಲ್ಲುಗಳನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ್ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮೇಲ್ಗಡೆ— ಉತ್ತಮ ಪೈರಿಗಾಗಿ ಉತ್ತಮ ಬೀಜ ಪರಿಶೋಧನೆಗಾಗಿ ಭಾರತವು ಹದಿನೇಳು ಲೆಬರೋಟರಿಗಳನ್ನು ನಿರ್ಮಿಸಿದೆ. ಈ ಚಿತ್ರದಲ್ಲಿ ನವದೆಹಲಿಯ ಪುಸದಲ್ಲಿಯ ಇಂಡಿಯನ್ ಎಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ವಠಾರದಲ್ಲಿರುವ ಬೀಜ ಪರಿಶೋಧನಾ ಲೆಬರೊಟರಿಯ ಬೀಜ ಪರಿಶೋಧನೆ ನಡೆಯುತ್ತಿದೆ.

ಕೆಳಗಡೆ— ಸಂಗೀತ ಕಲಿಸಲು ಯುನೈಟೆಡ್ ಸ್ಟೇಟ್ಸಿಗೆ ತೆರಳಿದ ಇಬ್ಬರು ಭಾರತೀಯ ಸಂಗೀತಗಾರರು— ಸಂಪತ್ಕುಮಾರ(ಎಡ) ಕೆ. ವಿ. ನಾರಾಯಣ ಸ್ವಾಮಿ (ಬಲ) ಇವರು ತೆರಳುವ ಮುನ್ನ ವೆಸ್ಲೀಯನ್ ಯುನಿವರ್ಸಿಟಿಯ ರೊಬರ್ಟ್ ಇ. ಬ್ರೌನ್ ಇವರೊಂದಿಗಿದ್ದಾರೆ.

ನವಯುಗ

| ಸಂಪುಟ ೪೫ | ಉಡುಪಿ | Vol. 45 |
| --- | --- | --- |
| ಸಂಚಿಕೆ ೯ | ೪—೧೧—೧೯೬೫ | No. 9 |

# ಭುಟ್ಟೋ ತಿರುಬೊಬ್ಬೆ

ಭಾರತ – ಪಾಕಿಸ್ತಾನಗಳ ನಡುವೆ ಎರಡು ತಿಂಗಳುಗಳಿಗೆ ಮೊದಲು ಪ್ರಾರಂಭವಾದ ಸಶಸ್ತ್ರ ಹೋರಾಟದ ದಿನದಿಂದಲೂ ಪಾಕಿಸ್ತಾನವು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯ ವೇದಿಕೆಯನ್ನು ತನ್ನ ಅಭಿಪ್ರಾಯಕ್ಕೆ ಮನ್ನಣೆ ದೊರಕಿಸಿಕೊಡುವ ವೇದಿಕೆಯನ್ನಾಗಿ ರೂಪಿಸಲು ಶತಪ್ರಯತ್ನ ನಡೆಸಿತು. ಆದರೆ, ಒಮ್ಮೆಗೆ ಸಮರ ವಿರಾಮವನ್ನು ಸಾಧಿಸುವ ಉದ್ದೇಶದಿಂದ ಭದ್ರತಾ ಮಂಡಳಿಯು ಅದಕ್ಕೆ ಅವಕಾಶ ಕಲ್ಪಿಸಲಿಲ್ಲ. ಅನಿವಾರ್ಯವಾಗಿ ಸಮರ ವಿರಾಮವನ್ನು ಪಾಕಿಸ್ತಾನವು ಒಪ್ಪಿಕೊಂಡರೂ ಆಬಳಿಕ ಪ್ರತಿ ಕ್ಷಣದಲ್ಲಿಯೂ ವಿರಾಮವನ್ನು ಉಲ್ಲಂಘಿಸುತ್ತ ಬರುತ್ತಿದೆ; ಎಂದರೆ, ಸಮರ ವಿರಾಮವು ಬರಿಯ ಹೆಸರಿಗೆ ಮಾತ್ರ ಎಂಬಂತಾಗಿದೆ. ನಿಜವಾಗಿ ವಿಶ್ವಸಂಸ್ಥೆಯ ಗೊತ್ತುವಳಿಗೆ ಅಪಚಾರವೆಸಗಿದ ಪಾಕ್ ನಾಯಕರು ತಮ್ಮ ಅಪರಾಧದ ಮೇಲೆ ಮುಸುಕೆಳೆಯಲು ಒದ್ದಾಡುತ್ತಾರೆ. ಕಂಗಾಲಾದ ಪಾಕ್ ನಾಯಕರು ಕಳ್ಳು ಕುಡಿದ ಮಂಗನಂತಾಗಿದ್ದಾರೆ; ಎಂತಲೇ ಅವರ ಬಾಯಿಯಿಂದ ಬಂಬಾಂದ ಮಾತುಗಳು ಬರುತ್ತಿವೆ; ಕೈಗಳು ಮಾಡಬಾರದ ಕೆಲಸಗಳನ್ನು ಮಾಡುತ್ತಿವೆ. ಇದಕ್ಕೆ ಜ್ವಲಂತ ನಿದರ್ಶನ ಇತ್ತೀಚಿಗೆ ಪ್ರತ್ಯಕ್ಷವಾಗಿ ದೊರೆತಿದೆ.

ಪಾಕಿಸ್ತಾನದ ಬಲವತ್ತರವಾದ ಬಯಕೆಯ ಮುಂದೆ ಭದ್ರತಾಸಮಿತಿಯ ಅಧ್ಯಕ್ಷರೂ ಅಮೆರಿಕೆ—ಬ್ರಿಟನ್‌ಗಳ ಪ್ರತಿನಿಧಿಗಳೂ ತಲೆ ಬಾಗಿದರು. ಭಾರತದ ಆಂತರಿಕ ವಿಷಯಗಳಿಗೆ ಕೈ ಹಾಕದೆ, ಬರಿಯ ಸಮರವಿರಾಮದ ಕುರಿತಾಗಿ ಮಾತ್ರ ಮಾತಾಡಬೇಕೆಂದು ಪಾಕ್ ವಿದೇಶಮಂತ್ರಿ ಭುಟ್ಟೋ ಅವರಿಗೆ ಮೊದಲೇ ಸೂಚನೆಯೀಯಲಾಗಿತ್ತು. ಭಾರತದ ವಿದೇಶ ಮಂತ್ರಿ ಸ್ವರಣ ಸಿಂಗರಿಗೆ ಈ ಬಗ್ಗೆ ಭರವಸೆಯನ್ನೂ ನೀಡಲಾಗಿತ್ತು. ಆದರೆ, ಈ ಸೂಚನೆಯನ್ನು ಅಂತಾರಾಷ್ಟ್ರೀಯ ನೀತಿ ಸೌಜನ್ಯಗಳನ್ನೂ ಅದರ ಜೊತೆಗೆ ಅಧ್ಯಕ್ಷರ ಮನವಿಯನ್ನೂ ಧಿಕ್ಕರಿಸಿ ಭುಟ್ಟೋ ಅವರು ಭಾರತವನ್ನು ಮನಸ್ವಿಯಾಗಿ ನಿಂದಿಸಿದರು. ಒಂದು ರಾಷ್ಟ್ರದ ಅವಹೇಳನೆಯನ್ನು ಮಾಡುವ, ವಿಶ್ವಸಂಸ್ಥೆಯ ಪಾವಿತ್ರ್ಯವನ್ನೇ ಕಳಂಕಗೊಳಿಸುವ ಭುಟ್ಟೋರವರ ನಿಂದೆಯಿಂದ ನೊಂದ ಭಾರತೀಯ ನಿಯೋಗವು ಸಭಾತ್ಯಾಗ ಮಾಡುವುದಲ್ಲದೆ ಬೇರೆ ಉಪಾಯವೇ ಇರಲಿಲ್ಲ. ಪಾಕಿಸ್ತಾನವು ತನ್ನ ಪ್ರಚಾರ ಮತ್ತು ಭಾರತೀಯ ಅಪಪ್ರಚಾರಕ್ಕೆ ತಕ್ಕ ವೇದಿಕೆಯನ್ನಾಗಿ ಭದ್ರತಾ ಸಮಿತಿಯ ಸಭೆಯನ್ನು ಉಪಯೋಗಿಸಿದಾಗ, ಸದಸ್ಯರಾರೂ ಮಾತಾಡದೆ ತೆಪ್ಪಗೆ ಕುಳಿತಿರುವುದು ಬಹಳ ಸೋಜಿಗ. ಅಮೆರಿಕೆಯ ಪ್ರತಿನಿಧಿ ಗೋಲ್ಡ್ ಬರ್ಗರು ಎಷ್ಟು ಕೇಳಿಕೊಂಡರೂ ಸಭೆಯಲ್ಲಿ ಭಾಗವಹಿಸಲು ಒಪ್ಪದ ಸ್ವರ್ಣ ಸಿಂಗರು ಭಾರತದ ನಿಲುವನ್ನು ಬಲವಾಗಿ ಸಮರ್ಥಿಸಿದ್ದಾರೆ. ಭಾರತೀಯರನ್ನು ನಾಯಿಗಳೆಂದೂ ಅವರನ್ನು ತಾವು ಆಳಿ ಸುಸಂಸ್ಕೃತರನ್ನಾಗಿ ಮಾಡಿದೆವೆಂದೂ ಬಿರುಗಾಳಿ ಬೀಸಿದ ಭುಟ್ಟೋ ಭಾರತೀಯ ಇತಿಹಾಸವನ್ನು ಅರಿತುಕೊಂಡಿಲ್ಲವೆಂದೇ ಹೇಳಬೇಕು. ೧೮ ವರ್ಷ ಪ್ರಾಯದ ಪಾಕಿಸ್ತಾನವು ಇತಿಹಾಸದ ಆರಂಭಕ್ಕೆ ಮೊದಲೇ ಪುಣ್ಯಭೂಮಿಯಾಗಿದ್ದ ಭಾರತವನ್ನು ಆಳುತ್ತಿದ್ದುದಾದರೆ, ಪಾಕಿಸ್ತಾನಿಗಳನ್ನು ನಾಗರಿಕರನ್ನಾಗಿ ಮಾಡಿದವರು ಯಾರು? ಅವರನ್ನು ಆಳಿದವರು ಯಾರು? ಭುಟ್ಟೋ ಅಪಲಾಪವು ಅವರ ರಾಜಕಾರಣದ ದಿವಾಳಿಕೋರತನವೆಂಬುದು ಸ್ವಯಂವೇದ್ಯ. ಇಂತಹ ಅಪರಿಪಕ್ವ ಕುತ್ಸಿತ, ಘೃಣಾರ್ಹ ರಾಜಕಾರಣಿಗಳಿಂದ ಬಿಡುಗಡೆಯಾಗಬೇಕೆಂದು ಪೂರ್ವ ಪಾಕಿಸ್ತಾನವು ಬಯಸುವುದಾದರೆ ತಪ್ಪೇನು? ಬಲೂಚಿಗಳೂ ಪಕ್ತೂನಿಗಳೂ ಸ್ವಾತಂತ್ರ್ಯ ಬಯಸುವುದಾದರೆ ಅಪರಾಧವೇನು?

ಇದೇ ಮಾದರಿಯ ಮತ್ತೊಂದು ಕುಚೋದ್ಯವನ್ನು ಅಯ್ಯೂಬಖಾನರು ಕರಾಚಿಯಲ್ಲಿ ಭಾರತೀಯ ಹೈಕಮಿಶನರ ಮೇಲೆ ತೋರಿದ್ದಾರೆ. ಶಾಂತಿಯ ವೇಳೆಯಲ್ಲಿ ಮಾತ್ರವಲ್ಲದೆ ಯುದ್ಧ ಕಾಲದಲ್ಲೂ ರಾಯಭಾರಿವರ್ಗದವರನ್ನು ಸಜ್ಜನಿಕೆಯಿಂದ ನೋಡಿಕೊಳ್ಳುವುದು ಅಂತಾರಾಷ್ಟ್ರೀಯ ಪರಂಪರೆ. ಆದರೆ, ಇದನ್ನು ತಿಪ್ಪೆಗೆಸೆದು ಪಾಕಿಸ್ತಾನವು ಭಾರತೀಯ ಹೈಕಮಿಶನರರನ್ನೂ ಅವರ ಪರಿವಾರವನ್ನೂ ಅಮಾನುಷ ರೀತಿಯಲ್ಲಿ ನೋಡಿತು. ಅವರ ಮೇಲೆ ಸುಲ್ತಾನೀ ದರ್ಬಾರನ್ನು ತೋರಿಸಿತು. ಇದನ್ನು ಯಾವ ಸಭ್ಯ ರಾಷ್ಟ್ರವಾದರೂ ಸಹಿಸಲಾರದು. ಆದುದರಿಂದಲೇ ಭಾರತವು ತನ್ನ ಹೈಕಮಿಶನರರನ್ನು ಹಿಂದೆ ಕರೆದುಕೊಳ್ಳಬೇಕಾಯಿತು. ಹಾಗೆಯೇ ಭಾರತೀಯ ಪತ್ರಿಕಾಕರ್ತರನ್ನೂ ಇದೇ ರೀತಿಯಿಂದ ಪಾಕ್ ಹಿಂಸಿಸಿತು. ಇದಕ್ಕೆ ಪ್ರತಿಯಾಗಿ ಭಾರತವು ಸೇಡು ತೀರಿಸಿಕೊಳ್ಳಬಹುದಾದರೂ ಸುಸಂಸ್ಕೃತ ದೇಶವು ಹಾಗೆ ಮಾಡಬಯಸುವುದಿಲ್ಲ. ಆದರೆ, ಇಂತಹ ಪ್ರವೃತ್ತಿ ಮುಂದುವರಿದರೆ, ಅಂತಾರಾಷ್ಟ್ರೀಯ ವಿಪತ್ತು ಸಂಭವಿಸುವುದು ಖಂಡಿತ. ಆದುದರಿಂದ ಈ ವಿಷಯದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ.

ಭಾರತದೊಡನೆ ತನ್ನ ಯುದ್ಧದಲ್ಲಿ ಪಾಕಿಸ್ತಾನವು ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿ ನೇಪಾಲ್ಮ್ ಬಾಂಬನ್ನು ಉಪಯೋಗಿಸಿತ್ತು. ನಾಗರಿಕರ ಮೇಲೆ ಬಾಂಬು ದಾಳಿಯನ್ನು ಮಾಡಿತು. ಈ ಬಗೆಯ ರಾಕ್ಷಸೀ ಕೃತ್ಯ ಪಾಕಿಸ್ತಾನಿಗಳಿಗೆ, ಅವರ ಸರ್ವಾಧಿಕಾರಿ ನೀತಿಗೆ, ಸ್ವಾರ್ಥಲೋಲುಪ ರಕ್ತಪಿಪಾಸು ನರಕುಕ್ಕುರಗಳಿಗೆ ಸ್ವಾಭಾವಿಕ. ಪಾಕಿಸ್ತಾನದ ಈ ಬಗೆಯ ವರ್ತನೆಯನ್ನು ಅರಿತೂ ಅರಿತೂ ಪಾಶ್ಚಾತ್ಯ ರಾಷ್ಟ್ರಗಳು ಅದರ ಬೆನ್ನು ಚಪ್ಪರಿಸುತ್ತಿರುವುದು ಶೋಚನೀಯ. ಅನ್ಯಾಯಗಾರರನ್ನು, ಅಸತ್ಯವಾದಿಯನ್ನು ಪುರಸ್ಕರಿಸುವ ಬ್ರಿಟನ್ ಮತ್ತು ಅಮೆರಿಕೆಗಳ ಪ್ರವೃತ್ತಿ ಬದಲಾಗುವ ವರೆಗೆ ಭಾರತ—ಪಾಕಿಸ್ತಾನಗಳ ನಡುವೆ ಉಚಿತ ಸಂಬಂಧವೇರ್ಪಡುವುದು ಸಾಧ್ಯವಿಲ್ಲ. ಭುಟ್ಟೋ ಮತ್ತು ಅಯ್ಯೂಬರ ವರ್ತನೆ ಮತ್ತು ಮಾತುಗಳು ಭಾರತೀಯರ ಕೋಮಲ ಹೃದಯದ ಮೇಲೆ ವಜ್ರಾಘಾತ ಮಾಡಿವೆ. ಹತ್ತಿಯಂತಹ ಕೋಮಲ ವಸ್ತುವಾದರೂ ಒತ್ತಡ ಬಿದ್ದಾಗ ಕಬ್ಬಿಣಕ್ಕಿಂತಲೂ ಕಠಿನವಾಗುವುದು. ಆದುದರಿಂದ, ಪಾಕಿಸ್ತಾನದ ಕುತರ್ಕ, ಕುತಂತ್ರಗಳಿಗೆ ಅವಕಾಶಕೊಡುವುದನ್ನು ನಿಲ್ಲಿಸುವ ವರೆಗೆ, ನಿಜವಾಗಿ ಸಮರವಿರಾಮವನ್ನು ವ್ಯವಹೃತಗೊಳಿಸುವ ವರೆಗೆ ಭದ್ರತಾ ಸಮಿತಿಯಿಂದ ಯಾವ ಕಾರ್ಯವೂ ಅಸಾಧ್ಯ. ಸಮಿತಿಯು ಈ ಆಹ್ವಾನವನ್ನು ಸ್ವೀಕರಿಸುವುದೆ? ಅಥವಾ ಕೆಲವೇ ಪ್ರಭಾವಶಾಲಿ ರಾಷ್ಟ್ರಗಳ ಖಾಸಗಿ ಸೊತ್ತು ಎಂದು ಕೆಂಪು ಚೀನಾವಿತ್ತ ಬಿರುದನ್ನು ಅನ್ವರ್ಥಕಗೊಳಿಸುವುದೆ?

(ಹದಿನಾಲ್ಕನೇ ಪುಟ ನೋಡಿರಿ)

### ವಚನಸುಧೆ

ಈರ್ಷೀ ಘೃಣೀ ನ ಸಂತುಷ್ಟಃ
ಕ್ರೋಧನೋ ನಿತ್ಯ ಶಂಕಿತಃ
ಪರಭಾಗ್ಯೋಪಜೀವೀ ಚ
ಷಡೇತೇ ನಿತ್ಯ ದುಃಖಿತಾಃ ॥

ಅಸೂಯೆಯಿಂದ ಕೂಡಿದವನು, ತಿರಸ್ಕಾರ ಬುದ್ಧಿಯುಳ್ಳವನು, ಅಸಂತೋಷಿ, ಕೋಪಿಷ್ಠ, ಸದಾ ಸಂಶಯಚಿತ್ತನು ಮತ್ತು ಪರಾನ್ನದಿಂದ ಬದುಕುವವನು— ಈ ಆರ್ವರು ಸದಾಕಾಲ ಶೋಕಪೀಡಿತರಾಗಿರುತ್ತಾರೆ.

### ನರಸಣ್ಣನ ಸರಸ

'ಭಾರತದ ನಾಯಿಗಳು ಸಭೆಯನ್ನು ಬಿಟ್ಟು ದೂರ ಸರಿದುವು; ಶ್ರೀನಗರದಿಂದ ಓಡಲಿಲ್ಲ ಎಂದು ಅರ್ಭಟಿಸಿದರಂತೆ ಸ್ವಾಮಿ, ಭುಟ್ಟೋ ಸಾಹೇಬರು'

"ನಾಯಿಗಳು ಉಂಡಮನೆಗೆ ಎರಡನ್ನು ಬಗೆಯುವುದಿಲ್ಲ. ಶ್ರೀನಗರದಿಂದ ಓಡುವುದೂ ಇಲ್ಲ."

## ಗೇಹ ರಾಜ್ಯದಲ್ಲಿ

# ನರನಾರಾಯಣರ ಸಂಬಂಧ

"ಹೌದ್ರೀ...."

"ಹೌದು..."

"ಏನು?..."

"ಯಾರಿಗೆ ಗೊತ್ತು?"

"ಗೊತ್ತಿದ್ದವರಿಗೆ...."

"ಸರೀನ್ನಿ. ಆದ್ರೆ ಗೊತ್ತಿದ್ದವರು ಯಾರೂಂತ..."

"ಅದೇ ನೋಡಿ ಬಂದು ನಿಂತಿರೋ ಸಮಸ್ಯೆ...."

"ಎಂತಹ ಸಮಸ್ಯೆಯೋ ಅದು?"

'ಅಲ್ಲಾ, ಗೊತ್ತಿದ್ದವರು ಯಾರೂಂತ ಪತ್ತೆ ಹಚ್ಚೋರು ಯಾರೂಂತ..."

"ಅದಕ್ಕೆಲ್ಲಾ ನಾವ್ಯಾಕೆ ಚಿಂತೆ ಮಾಡ ಬೇಕು? ಪತ್ತೇದಾರರು ಇದ್ದಾರಲ್ಲ.... ಅಲ್ಲಾ ಏನದೂಂತ..."

"ಮತ್ತೆ ಹೌದು ಅಂದ್ರಲ್ಲಾ...."

"ಹ್ಞಾ....ನಾನು ನೀನು ಹುಟ್ಟಿರೋದು ಹೌದು. ನನಗೂ ನಿನಗೂ ಮದುವೆಯಾಗಿರೋದೂ ಹೌದು. ಮತ್ತೆ ನಾವಿಬ್ರೂ ಇಲ್ಲಿ ಮಾತಾಡ್ತಿರೋದೂ ಹೌದು ...'

'ನಾಳು ಸುಮ್ಮನಿರೀಂದ್ರೆ. ಎತ್ತು ಏರಿಗೆಳೆದ್ರೆ ಕೋಣ ನೀರಿಗೆಳೆದಂತಾಯ್ತು ..."

'ಅಂತಹ ಪ್ರಮಾದ ಆಗಿರೋದಾದ್ರೂ ಯಾರಿಂದ?'

'ಮತ್ಯಾರಿಂದ ಈ ಭೂಪತಿ ಮಹಾಶಯರಿಂದ....'

'ಭೂಪತಿ ಯಾರ್?"

"ನೀವು....'

"ಅಯ್ಯೋ, ನೀನೊಬ್ಬಳು. ಅಲ್ಲಾ, ಭೂಮಿಯಿಲ್ಲದೇನೇ ಭೂಪತಿಯಾಗ್ತಾರೇನು?"

"ಆಯ್ತಲ್ಲ, ಉಳುವವನೇ ಹೊಲದೊಡೆಯಾಂತ."

'ನಾನ್ಯಾರ ತಲೆ ಉಳುತ್ತೇನೆಯೆ? ನಾವಿರೋದು ಬಾಡಿಗೆ ಮನೆಯಲ್ಲಿ. ಉಳಕೊಳ್ಳುವವನದೇ ಮನೆಯಾದರೆ ಆಗ ನಾನು ಗೃಹಪತಿಯಾದೇನಷ್ಟೆ..."

'ಬೇಡವಪ್ಪಾ, ಸದ್ಯ ನೀವು ಮತ್ಯಾವುದರ ಪತಿಯಲ್ಲವಾದ್ರೂ....'

'ಹ್ಞಾ, ಹೌಹೌದು, ಅದನ್ನೇ ನಾನಾಗಂದದ್ದು...'

"ಅಲ್ರಿ, ಈಗ ನಮ್ಮ ಗತಿಯೇನೂಂತ?'

'ಏನಾಗಿದೆ? ಬರೋ ನಾಳ್ಕಡಿ ಬೈರಾಸನ್ನ ಎಳ್ಕೊಳ್ಳೋದು ಕಾಲಿಗೊಮ್ಮೆ ತಲೆಗೊಮ್ಮೆ....'

'ಅದಂತೂ ಇದ್ದದ್ದೇ ಆನ್ನಿ. ಆದ್ರೆ ಇನ್ನು ಮುಂದೆ ಈ ಬೈರಾಸಕ್ಕೂ ತತ್ವಾರ ಬರುತ್ತೆಯೋ ಅಂತ ಹೆದರಿಕೆ...."

"ಅಲ್ಲಾ, ಅಂತಹ ಭಯ ಬರೋಕೆ ಕಾರಣ?"

"ಮತ್ತೇನು? ನಮ್ಮ ಯೋಜನೆಗಳೆಲ್ಲಾ ಫಲಿಕೇಗು ವ್ಯಾಪಾರವಾಗಿ ಬಿಟ್ಟವೆ. ಯಾವ್ದೂ ನಿರೀಕ್ಷಿತ ಗುರಿ ಮುಟ್ಟದಂತಿಲ್ಲ. ಅದರ ಜತೆಗೆ ಪರಕೀಯರನ್ನೇ ನಂಬಿದ ನಮ್ಮ ಯೋಜನೆ ಇನ್ನು ಬಡಕಲಾಗುವುದಂತೆ ನೋಡಿ...."

"ಆಗ್ಲಿ, ಅದರಿಂದೇನು?"

"ಇದುವರೆಗೆ ಯೋಜನೆಯ ಹೆಸ್ರಲ್ಲಾದ್ರೂ ಜನರ ಕೈಲಿ ಹಣ ತಿರುಗಾಡುತ್ತಿತ್ತು. ಇನ್ನು ಮುಂದೆ?"

"ಆಲ್ವೆ, ಜನರಿಗೆ ಹಣ ಯಾಕೇಂತ?"

"ಮತ್ತೆ ಬದುಕೋಕೆ ಬೇಡವೆ?"

"ಬದುಕೋಕೆ ಹಣ ತಿನ್ನುತ್ತಾರೆಯೆ?"

"ಇಲ್ಲಾನ್ನಿ. ಆದ್ರೂ...."

"ನೋಡು, ಜನರ ಕೈಗಳಲ್ಲಿ ಹಣ ಹೆಚ್ಚಾದಂತೆ ಮಾರುಕಟ್ಟೆಯಲ್ಲಿ ಬೆಲೆಯೂ ಹೆಚ್ಚಾಗುತ್ತೆ. ಅಂತಹ ಹಣವಾದ್ರೂ ಯಾಕೆ ಬೇಕೂಂತ? ಹತ್ತು ವರ್ಷಗಳಿಗೆ ಹಿಂದೆ ಹತ್ತು ಗಳಿಸಿ ಒಂದು ಉಳಿಸುತ್ತಿದ್ದವ ಈಗ ನೂರುಗಳಿಸಿದರೂ ಹತ್ತು ಸಾಲಮಾಡ್ತಾನೆ. ಹೌದೇ?"

"ಹ್ಞಾನ್ನಿ. ಎಲ್ಲದಕ್ಕೂ ಬೆಲೆ ಏರಿರೋವಾಗ...."

"ಅದನ್ನೇ ನೋಡು, ಅತಿಪ್ರಸರಣ ಅನ್ನೋದೆ. ಜನರಲ್ಲಿ ಕೊಳ್ಳುವ ಶಕ್ತಿ ಹೆಚ್ಚಿದಾಗ ಮಾಲುಗಳ ಬೆಲೆ ಯೇರುತ್ತೆ..."

"ಜನರಲ್ಲಿ ಎಲ್ಲಿ ಶಕ್ತಿಯೇರುತ್ತೆ? ಮಾಲುಗಳ ಕ್ರಯ ಹೆಚ್ಚಾದಾಗ ಜನರು ಸಾಲವೋ ಸೋಲವೋ ಮಾಡಿ ಹಣ ತರ್ತಾರೆ"

"ಅಂತೂ ತರ್ತಾರೆ."

"ಮತ್ತೆ ಮಾಡೋದಾದ್ರೂ ಏನು? ಸಾಯುವ ವರೆಗೆ ಬದುಕ ಬೇಕಲ್ಲ..."

"ಸಾಲ ತರೋವ್ರಿಗೆ ಹಿಂದೆ ಕೊಡುವ ಭರವಸೆಯಿರುತ್ತೆ.... ಕೊಡೋವ್ರಿಗೆ ಪಡೆಯೋ ನಂಬಿಕೆಯಿರುತ್ತೆ...."

"ಅಯ್ಯೋ ಅದನ್ನ ಏನು ಹೇಳ್ಲಿ? ನೋಡಿ ಎರಡು ತಿಂಗಳಾಯ್ತೋ ಏನೋ ಆಚೆ ಮನೆ ಸುಬ್ಬಮ್ಮ ಮಗನಿಗೆ ಸರ್ವಿಸ್ ಕಾಯಲೀಂತ ಒಂದೈದು ರೂಪಾಯಿ ಒಯ್ದಿದ್ದ್ಳು. ಇನ್ನೂ ಹಿಂದೆ ಬರಲಿಲ್ಲ..."

"ಬರೋ ಆಸೆಯಾದ್ರೂ ಇತ್ತೆ?'

"ಸುಬ್ಬಮ್ಮ ಕೊಡದೇ ಇರೋ ಆಸಾಮಿಯಲ್ಲ; ಪಾಪ, ಏನು ತಾಪತ್ರಯದಲ್ಲಿ ತೊಡಗಿದ್ದಾಳೋ."

"ಅವರವರ ತಾಪಗಳು ಅವರಿಗೆ..."

"ಆಲ್ರಿ, ಅಮೆರಿಕ ನಮಗೆ ಯಾಕೆ ಇನ್ನು ಮುಂದೆ ಸಹಾಯ ಮಾಡೋಲ್ಲಾಂತೆ?"

'ಅಯ್ಯೋ, ಮಾಡೋದಿಲ್ಲಾಂತ ಅಂದವ್ರು ಯಾರು?"

"ಮತ್ತೆ, ಯೋಜನೆಯ ರೂಪ ಬದಲಾವಣೆ ಮಾಡ್ತಾ ಇದ್ದಾರಂತಲ್ಲಾ...."

"ಹಾಗೆ, ಕೇಳು. ನಮ್ಮ ಮೇಲೆ ಪಾಕಿಸ್ತಾನ ಆಕ್ರಮಣ ಮಾಡಿದಾಗ ನಾವು ಅವರನ್ನು ಓಡಿಸಿದೆವು. ಅದು ನಮ್ಮ ತಪ್ಪು..."

"ಅದು ಹೇಗೆ?"

"ಹೇಗೆ ಅಂದರೆ, ಸತ್ಯಕ್ಕಿಂತ ಭಕ್ತಿ ಹೆಚ್ಚಿನದು. ಕೇಳಿಲ್ಲವೇ ಒಂದು ವಚನ ...'

"ಏನದು?"

"ವೇದಪ್ರಿಯ ಶಿವನೆಂಬರು; ವೇದಪ್ರಿಯ ಶಿವನಲ್ಲವಯ್ಯ; ನಾದಪ್ರಿಯ ಶಿವನೆಂಬರು; ನಾದಪ್ರಿಯ ಶಿವನಲ್ಲವಯ್ಯಾ....'

'ಹೌದಪ್ಪ ಮತ್ಯಾರ ಪ್ರಿಯ ನಿಮ್ಮ ಶಿವನಯ್ಯ?"

"ಓ..ಹಾಗೆ...."

'ಹೇಗೆ?"

'ಪರಮಾತ್ಮ ಭಕ್ತಪ್ರಿಯ. ನಾರದನಿಗೆ ಹೇಳಿದ್ದಾನಲ್ಲಾ, ನಾನು ಯೋಗಿಗಳಲ್ಲಿಲ್ಲ, ನಾಮಧ್ಯಾನವಿರುವಲ್ಲಿದ್ದೇನೇಂತ ಅಂತಾನಂತೆ ದೇವರು."

"ಮತ್ತೆ ನಮ್ಮ ದಾಸರೇನು ಕಡಿಮೆಯೇನು? ಮಲಗಿ ಪಾಡಲು ಕುಳಿತು ಕೇಳುವ, ಕುಳಿತು ಪಾಡಲು ನಿಂತು ಕೇಳುವ, ನಿಂತು ಪಾಡಲು ನಲಿದು ಕೇಳುವ ನಲಿದು ಪಾಡಲು ಒಲಿದೆ ನಿಮಗೆಂಬ..."

"ಹ್ಞಾ, ಮತ್ತೆ ನೋಡಿ, ನಾರಣಪ್ಪ ಅಂದಿದ್ದಾನೆ ಅಲ್ಲಾ...'

"ಹೌದು ಹೌದು...ನಂಬಿದವರಿಗೆ ಇನ್ನತ್ತಿಹನೆಂಬ ಬಿರುದನು ಪೊತ್ತು ಭಕ್ತ ಕುಟುಂಬಿ ಪಾರ್ಥನ ಮನೆಯ ಬಂಡಿಯ ಬೋವನಾದನು..."

"ಹೌದಪ್ಪ, ಅದೆಲ್ಲಾ ಭಕ್ತ-ಭಕ್ತಿಯ ಮಹಿಮೆಯಾಯ್ತು. ಇದಕ್ಕೂ ನಮಗೂ ಎಲ್ಲಿಯ ಬಾದರಾಯಣ ಸಂಬಂಧ?"

"ಇದು ಬಾದರಾಯಣ ಸಂಬಂಧವಲ್ಲವಮ್ಮ, ಇದು ನರನಾರಾಯಣರ ಸಂಬಂಧ..."

"ಯಾಕೆ ಹಾಗಂತೀರಿ?"

"ನೋಡು, ನಾವು ವೇದಪ್ರಿಯರು, ಆದರೆ ದೇವರು ವೇದಪ್ರಿಯನಲ್ಲ ನೋಡು.'

"ಇಲ್ಲಿ, ನಿಮ್ಮ ಒಗಟನ್ನು ಕಟ್ಟಿಡಿ. ಬಾಯಿ ತೆರೆದು ಹೇಳಿ...."

"ಅಲ್ಲಪ್ಪಾ, ಮೊದಲೇ ನಾನಂದೆ ನೋಡು, ನಮ್ಮ ಸತ್ಯಪ್ರಿಯತೆ ಅಮೆರಿಕನ್ ದೇವತೆಗಳಿಗೆ ಒಗ್ಗುವುದಿಲ್ಲ. ಆದರೆ, ಪಾಕಿಸ್ತಾನದ ಭಕ್ತಿ ಅವರನ್ನು ಒಲಿಸಿಕೊಂಡಿದೆ. ಇಂದಿಗೆ ಅಮೆರಿಕೆಯೇ ಸ್ವರ್ಗಲೋಕ. ಅಲ್ಲಿನ ದೇವತೆಗಳೆಲ್ಲಾ ಪಾಕ್ ಅನನ್ಯ ಭಕ್ತಿಯಿಂದ ಮರುಳಾಗಿ ನಿಮಗೆ ಒಲಿದಿದ್ದೇವೆ ಎಂದು ಸಾರಿರುವಾಗ, ಮತ್ತೇನು ಮಾಡಬೇಕು?"

"ಹ್ಞಾಂ....ಅಂತೂ ಸತ್ಯವಂತರಿಗಿದು ಕಾಲವಲ್ಲ ಅನ್ನೋದು ಸುಳ್ಳಲ್ಲ."

"ನೋಡು. ಶಾಸ್ತ್ರಗಳ ಮಾತುಗಳು ಇದುವರೆಗೂ ಸುಳ್ಳಾಗಿಲ್ಲ, ಇನ್ನು ಮುಂದೆಯೂ ಆಗುವುದಿಲ್ಲ...."

"ಆದರೆ?"

"ಆದರೂ ಇಲ್ಲ. ಹೋದರೂ ಇಲ್ಲ. ಶಕ್ತಿ ಸಂಬಂಧಿಯಾದುದೇ ಶಾಸ್ತ್ರ. ಯಾರ ಕೈಯಲ್ಲಿ ದೊಣ್ಣೆಯಿದೆಯೋ ಅವನದೇ ಎಮ್ಮೆ...."

"ಅದು ಹೌದೂನ್ನಿ. ಅದಕ್ಕೇ ನಾವು ನಮ್ಮ ಶಕ್ತಿಯನ್ನು ಹೆಚ್ಚಿಸಬೇಕು."

'ಅಮೇರಿಕೆಯಿರಲಿ, ಇಂಗ್ಲೆಂಡ್ ಇರಲಿ, ಸದಾಕಾಲ ನಮಗೆ ನೆರವು ಕೊಡುತ್ತಿವೆಯೆಂಬುದು ಸುಳ್ಳು. ನಾವು ಕೊಡುವ ನೆರವಿಗೆ ರಾಜಕಾರಣವನ್ನೂ ಅಂಟಿಸುವ ಪ್ರಯತ್ನ ಅವುಗಳದ್ದು. ತಮ್ಮ ಪರಮಭಕ್ತ ಪಾಕಿಸ್ತಾನದ ಹಿತವನ್ನು ಸಾಧಿಸುವುದು ಅವರ ಗುರಿ...."

"ಅದಕ್ಕೇ ಇರಬೇಕು, ಅಮೇರಿಕೆ ತನ್ನ ವಿದೇಶೀ ನೆರವಿನ ನೀತಿಯನ್ನು ಪುನರ್ವಿಮರ್ಶಿಸುತ್ತಿದೆಯಂತೆ...."

"ಹ್ಞಾನ್ನು. ಅಮೆರಿಕನ್ ಡಾಲರ್‌ಗಳು ದೊರೆಯ ಬೇಕಾದರೆ ಭಾರತ ಅಮೆರಿಕನ್ ನೀತಿಯ ಮುಂದೆ ತಲೆ ಬಾಗಬೇಕು.'

"ಅಬ್ಬಾ, ಇದೆಂತಹ ಘೋರ! ಹೊಟ್ಟೆ ಶಾಂತಿಗಾಗಿ ಆಹಾರ...."

'ಅದರ ಕತೆ! ಅದು ರಷ್ಯ—ಚೀನಾಗಳಿಂದ ಡಾಲರ್ ಗಳಿಸಬಲ್ಲುದು. ಹಾಗಿರುವಾಗ ಅದು ಹೇಗೆ ದೂರವಾದೀತು?'

'ಅಂದರೆ, ಭಾರತಮಾತೆಯನ್ನು ಅಮೆರಿಕನ್ನರ ದಾಸಿಯನ್ನಾಗಿ ಮಾಡಬೇಕು..."

"ಹಾಗಲ್ಲ. ಆದರೂ ಅದನ್ನೇ ತುಸು ಹೋಲುವಂತಹ ಅರ್ಥ..."

"ಹೌದ್ರಿ, ಅಂತಹ ಸಹಾಯ ನಮಗೆ ಯಾಕೇಂತ...."

"ಹ್ಞಾಂ.... ಸದ್ಯ ಎಲ್ಲ ಭಾರತೀಯರೂ ನಿನ್ನಷ್ಟು ಸ್ವಾಭಿಮಾನಿಗಳಾದರೆ ಸಾಕು ..."

"ಅಲ್ರಿ, ನಮ್ಮ ತನವನ್ನ ಕಳೆದುಕೊಂಡು ಬದುಕದಿದ್ದರೇನಂತೆ. ಪರರೊಡವೆ ಎಷ್ಟುದಿನ ಬಂದೀತು? ಗುಂಬೆಗಳನ್ನೇ ಮಗುವೆಂದು ತಿಳಿದು ಗೊಂಬೆಯಾಟವಾಡುವುದಕ್ಕೂ ಒಂದು ವಯಃ ಪರಿಮಿತಿಯಿದೆ. ಈ ಬಗೆಯ ಶರ್ತಗಳ ಮೇಲೆ ನಾವು ನೆರವನ್ನು ಪಡೆಯಲೇ ಬಾರದು. ನಮ್ಮ ಕಾಲ ಮೇಲೆಯೇ ನಾವು ನಿಲ್ಲಬೇಕು. ಒಮ್ಮೆಗೆ ತುಸು ಕಷ್ಟವಾಗಬಹುದು...."

'ಅದನ್ನೇ ನಮ್ಮ ಪ್ರಧಾನಿ ಶಾಸ್ತ್ರಿಯವರೂ ಅನ್ನೋದು. ಪಾಕ್ ಭಕ್ತಿಯ ಪ್ರಭಾವದಿಂದ ಭಾರತಕ್ಕೆ ಅಪಚಾರವಾಗಬಾರದು. ಅನ್ಯಾಯಿಗಳನ್ನು ಅನ್ಯಾಯಿಗಳೆಂದು ಕರೆಯಲು ಹಿಂದೆ ಮುಂದೆ ನೋಡಬಾರದು.'

"ಭಕ್ತನಿಗಿಂತಲೂ ಸತ್ಯ ಪ್ರಿಯನೇ ಭಗವಂತನಿಗೆ ಪ್ರಿಯನೆಂಬುದನ್ನು ಭಾರತ ತೋರಿಸಿಕೊಡಬೇಕು."

'ಅದೇ ನೋಡು, ದಿನನಿತ್ಯ ಸುಳ್ಳು ಹೇಳಿ ಭಕ್ತಿ ಮಾಡಿದರೆ ಅದು ಮಿಥ್ಯಾಭಕ್ತಿ ಎನ್ನುತ್ತಾರೆ ಏನೋ ಬಾಜಿ..."

"ಮತ್ತ ಅಮೇರಿಕೆ...'

"ಅಯ್ಯೋ, ಅಮೆರಿಕೆಯೇನು ನಮಗಿಂತ ಹೆಚ್ಚೆ? ಅದು ದುಡ್ಡಿದ್ದ ದೊಡ್ಡಪ್ಪ ಅಷ್ಟೆ. ರಾಗದ್ವೇಷಗಳಿಗೆ ಬಲಿಯಾದವನು ದೇವರೆಂತಾದಾನು?"

"ಹಾಗಾದರೆ ನೋಡಿ, ನಮ್ಮದು ಸತ್ಯಮಾರ್ಗ; ಸತ್ಯ ನೀತಿ. ಹರಿಶ್ಚಂದ್ರನು ಪಡಬಾರದ ಬನ್ನಬಟ್ಟರೂ ಕೊನೆಗೆ ವಿಜಯಿಯಾಗಲಿಲ್ಲವೆ?'

"ಸರೀನ್ನು. ನಮ್ಮದೂ ಸತ್ಯ—ಸತ್ವಪರೀಕ್ಷೆಯ ಕಾಲ. ಅಮೆರಿಕೆಯೇ ವಿಶ್ವಾಮಿತ್ರ, ಯಮನೇ ನಕ್ಷತ್ರಿಕನಾಗಬಹುದು. ಆದರೆ, ಸತ್ಯ ಮಾರ್ಗವನ್ನು ಮಾತ್ರ ನಾವು ಬಿಡಬಾರದು. ಯಾರ ಒತ್ತಾಯದ ಮುಂದೆಯೂ ತಲೆಬಾಗಬಾರದು... ಕಾಶ್ಮೀರ ಭಾರತದ ಬಂದು ರಾಜ್ಯ. ಅದು ನಮ್ಮದು. ನಮ್ಮ ಪ್ರಾಣ ಇರುವ ತನಕ ಅದರ ರಕ್ಷಣೆಯ ಭಾರ ನಮ್ಮದು...."

"ನಾಕು ಬಿಡಿ ನಿಮ್ಮ ಲೆಕ್ಚರು. ಕಾಶ್ಮೀರವನ್ನ ಮತ್ಯಾರು ಪಾಕಿಸ್ತಾನಕ್ಕೆ ಕಾಣಿಕೆ ನೀಡ್ತಾರಂತೆ? ನೋಡಿ ಗಂಟೆ ಹನ್ನೊಂದು ಆಗಲೇ ಬಡೆದದ...."

"ಓ........'

—ಗೋರಾ.

## ನಮ್ಮ ಕಣ್ಣು ತೆರೆದಿದೆ

# ಇಂದಿನ ರಾಜಕೀಯದಲ್ಲಿ ಪಾಕ್ ಬಾಲಬಡಕರು

**ಬರೆದವರು**
**ಶ್ರೀ ಹಳನಾಡು ಸುಬ್ರಾಯ ಭಟ್ಟ**

ಭಾರತವಿಂದು ಪ್ರಗತಿ ಹಾದಿಯಲ್ಲಿ ಹೆಜ್ಜೆ ಇರಿಸುವಾಗಲೇ ಪಾಕಿಸ್ತಾನದ ದುಸ್ಸಾಹಸ ಆಕ್ರಮಣವನ್ನೆದುರಿಸುವ ಸಂದಿಗ್ಧ ಪರಿಸ್ಥಿತಿ ಒದಗಿ ಬಂತು. ಹದಿನೆಂಟು ವರ್ಷಗಳಿಂದಲೂ ಕೇವಲ ಗಡಿ ಘರ್ಷಣೆ ಎಂದು ತೋರಿಕೊಂಡಿದ್ದರೆ ಅದೇ ಇಂದು ಭೀಕರ ಸಶಸ್ತ್ರ ಪಡೆಗಳ ಯುದ್ಧಕ್ಕಾರಂಭವಾಯಿತು. ಈ ಸಂದರ್ಭದಲ್ಲಿ ಕೆಲವು ರಾಷ್ಟ್ರಗಳು ತಟಸ್ಥವಾಗಿ ಉಳಿದರೆ ಕೆಲವು ಪ್ರಚೋದಕ ಪ್ರವೃತ್ತಿಯನ್ನೇ ತೋರಿಸಿದುವು. ಭಾರತದ ಮಿತ್ರರಾರೆಂಬುದನ್ನು ತಿಳಿಯಲು ಇಂದಿನ ಅವಕಾಶ ಚೆನ್ನಾಗಿತ್ತು.

"ಶಕ್ತನಾದರೆ ನೆಂಟರೆಲ್ಲ ಹಿತರು' ಅಶಕ್ತನಾದರೆ ಆಪ್ತ ಜನರೇ ವೈರಿಗಳು" ಈ ಉಕ್ತಿಯ ಮಹತ್ವ ವರ್ಣಿಸಲು ಅಸಾಧ್ಯ.

ಪಾಕಿಸ್ತಾನ ಹೆಜ್ಜೆ ಹೆಜ್ಜೆಗೂ ತಪ್ಪುತ್ತಿದ್ದರೆ ಬ್ರಿಟನು; ಅಮೇರಿಕಾಗಳೆರಡೂ ಮೌನ ವ್ರತವನ್ನೇ ಆಚರಿಸಿದುವು. ಕೆಲದಿನಗಳ ಅನಂತರ ರಷ್ಯಾ ಭಾರತಪರ ಸಹಾನುಭೂತಿಯನ್ನು ವ್ಯಕ್ತಪಡಿಸಿದರೆ; ಚೀನಾ ಬೆದರಿಕೆಯನ್ನೇ ಸಾರಿತು. ಅರಬ ಗಣರಾಜ್ಯ ಯಾವುದನ್ನೂ ಸರಾಗವಾಗಿ ವ್ಯಕ್ತಪಡಿಸಿಲ್ಲವಾದರೆ; ಇಂಡೋನೇಷ್ಯಾ ತನ್ನ ತಿರಸ್ಕಾರದ ಹೊಗೆಯನ್ನೇ ಕಾರಿತು.

ಭಾರತ ನ್ಯಾಯ ಹಾದಿಯಲ್ಲಿಯೇ ಧೈರ್ಯೋತ್ಸಾಹಗಳಿಂದ ಪಾಕಿಸ್ತಾನವನ್ನು ಎದುರಿಸಿ ಪ್ರತಿಯೊಂದು ರಣರಂಗದಲ್ಲಿಯೂ ವೈರಿಯನ್ನು ಬಗ್ಗು ಬಡಿದಾಗ ಸಂಯುಕ್ತ ರಾಷ್ಟ್ರ ಸಂಸ್ಥೆ ಕಣ್ತೆರೆಯಿತು. ಬ್ರಿಟನು ಅಮೇರಿಕಾಗಳೆರಡೂ ಬೆರಳು ಕಚ್ಚಿದುವು. ಚೀನಾ ಆಗಲೇ ಸಣ್ಣ ಮಕ್ಕಳನ್ನು 'ಗುಮ್ಮ ಬಂತೆಂದು' ಹೆದರಿಸುವಂತೆ ಭಾರತಕ್ಕೆ ಬೆದರಿಕೆಯ ಪತ್ರ ಕಳುಹಿಸಿತು.

ಆದರೆ ಭಾರತದ ದೃಢ ನಿಲುವು; ನಮ್ಮ ಪ್ರಧಾನಿಗಳ ಅಚಲ ಧೋರಣೆ ವೀರ ಯೋಧರ ರಣೋತ್ಸಾಹ ಯಾವುದನ್ನೂ ಅದುರಿಸಲಾರದಾಯಿತು.

ತನ್ನ ಎಣಿಕೆ ತಪ್ಪಾದಾಗ ಪಾಕಿಸ್ತಾನ ಮತ್ತೆ ಅಮೇರಿಕಾವನ್ನೇ ಮರೆಹೊಕ್ಕಿತು. ಸಮರ ವಿರಾಮದ ಮಂತ್ರವನ್ನೇ ಪಾಡಿ ಯುಕ್ತ ರಾಷ್ಟ್ರ ಸಂಸ್ಥೆಯ ಕಾರ್ಯದರ್ಶಿ ಥಾಂಟರು ಪಾಕಿಸ್ತಾನ; ಹಿಂದೂಸ್ಥಾನವನ್ನು ಸಂದರ್ಶಿಸಿದರು.

ಪಾಶ್ಚಿಮಾತ್ಯ ರಾಷ್ಟ್ರಗಳು ಪಾಕಿಸ್ಥಾನದ ತಪ್ಪು ತಿಳಿದೂ ಖಂಡಿಸಿಲ್ಲವೆಂಬಾಗ ಅವುಗಳ ಧೋರಣೆ ಏನೆಂಬುದನ್ನು ಸಾಮಾನ್ಯರೂ ಅರ್ಥಮಾಡಬಹುದು.

ಭಾರತ ಸ್ವಾವಲಂಬಿಯಾಗಿ ಸ್ವತಂತ್ರ ಧೋರಣೆಯಲ್ಲಿ ನಡೆಯುವುದು ಬ್ರಿಟನು ಅಮೇರಿಕಾಗಳೆರಡಕ್ಕೂ ಮನವೊಪ್ಪದ ವಿಚಾರವಾಗಿದೆ. ಒಂದು ಕಾಲದಲ್ಲಿ ತನ್ನ ಕುಟಿಲ ನೀತಿಯಿಂದಲೇ ಇಡೀ ಪ್ರಪಂಚದಲ್ಲಿಯೇ ಮಹಾರಾಷ್ಟ್ರ ಕಟ್ಟಿ ಆಳಿದ ಬ್ರಿಟನು ತನ್ನ ನೀತಿಯನ್ನಿಂನೂ ಬದಲಿಸಿದಂತಿಲ್ಲ.

ಮೊದಲನಾಡಿದವರೆಲ್ಲ ಮಿತ್ರರೆಂಬ ಭಾವನೆ ಹಿಂದಿನಂತೆ ಭಾರತ ಮುಂದೆಂದೂ ತಳೆಯುವಂತಿಲ್ಲ. ಒಂದು ಕಾಲದಲ್ಲಿ ಚೀನಾ ಕೂಡಾ ಭಾರತದ ಆಪ್ತನಂತಿತ್ತು. ಆ ಮಿತ್ರತ್ವದ ಫಲವನ್ನು ಭಾರತ ೧೯೬೨ರ ಅಕ್ಟೋಬರದಲ್ಲಿ ಉಣ ಬೇಕಾಯಿತು.

ಪರರಾಷ್ಟ್ರಗಳ ಮೇಲಿನ ತನ್ನ ಧೋರಣೆಯನ್ನು ಬದಲಾಯಿಸುವ ಕಾಲ ಭಾರತಕ್ಕಿಂದು ಬಂದಿದೆ. ಸ್ವತಂತ್ರವಾಗಿ ರಕ್ಷಣಾ ವಿಭಾಗವನ್ನು ಇಂದು ಹೆಚ್ಚಿಸಿಕೊಳ್ಳ ಬೇಕಾಗಿದೆ ಆಹಾರ; ರಕ್ಷಣೆ ಇವೆರಡರಲ್ಲಿ ಭಾರತ ತನ್ನ ಕಾಲುಗಳ ಮೇಲೆ ತಾನು ನಿಲ್ಲಬೇಕಾಗಿದೆ.

ಇಂದು ನಮ್ಮ ಮುಂದಾಳುಗಳು ಹಾಗೂ ಜನತೆ ಸ್ವಾರ್ಥಕ್ಕಾಗಿ ಯೋಚಿಸದೆ ಸ್ವತಂತ್ರ ಭಾರತಕ್ಕಾಗಿ ಯೋಚಿಸಬೇಕಾಗಿದೆ. ಇಂದು ಜನರಲ್ಲಿ ಪಂಥ, ಪಂಗಡ, ರಾಗ; ದ್ವೇಷವಳಿದು ಭಾವೈಕ್ಯ ಬೆಳೆದು ಬರಬೇಕು.

ಪಾಕಿಸ್ತಾನವಿಂದು ಜಾತೀಯ ಅಂಧಕಾರದಲ್ಲಿ ಮುಳುಗಿದೆ. ಆದರ ಹಾದಿಯೇ ಸರಿಯೆಂದು ತುರ್ಕಿ, ಇರಾನ್, ಇಂಡೋನೇಶಿಯಾ ರಾಷ್ಟ್ರಗಳು ಸಮರ್ಥಿಸಿ ಸಹಾನುಭೂತಿಯನ್ನು ತೋರುತ್ತಲಿವೆ.

ಆದರೆ ಜಾತ್ಯತೀತ ರಾಷ್ಟ್ರವಾದ ಭಾರತವಿಂದು ತುಳಿದ ಹಾದಿಯೇ ಆದರ ಅಭ್ಯುದಯಕ್ಕೆ ಕಾರಣವಾಗದೆ ಇರಲಾರದು. ಭಾರತ ಪ್ರತಿಯೊಂದು ರಾಷ್ಟ್ರದೊಡನೆಯೂ ಮಿತ್ರತ್ವ ಸಂಪಾದಿಸಲೇ ಬೇಕೆಂದು ಅದೆಷ್ಟು ಪ್ರಯತ್ನಿಸಿದರೂ ಆ ಯತ್ನದಲ್ಲಿ ಅದು ವಿಫಲತೆಯನ್ನೇ ಪಡೆದಿದೆ. ಅದಕ್ಕೆ ಇತರ ರಾಷ್ಟ್ರಗಳು ಕಳಿದ ತಮ್ಮ ಸ್ವಾರ್ಥ ಮನೋಭಾವನೆಯೇ ಕಾರಣವೆನ್ನ ಬಹುದು.

ಆತ್ಮಾಭಿಮಾನ ಕಳೆದುಕೊಂಡು ಯಾಚಕತನದ ಗೆಳೆತನವನ್ನು ಭಾರತವೆಂದೂ ಬಯಸಲಾರದು. ಪುರಾಣ ಪ್ರಸಿದ್ಧ ಭಾರತಲ ಇತಿಹಾಸವೇನೂ ಸಣ್ಣದಲ್ಲ.

ಬದಲಾಗುತ್ತಿರುವ ವೈಜ್ಞಾನಿಕ ಯುಗದಲ್ಲಿ ಭಾರತದ ಧೋರಣೆಯೂ ಬದಲಾಗಲೇ ಬೇಕು. ದುಷ್ಟ ಶಕ್ತಿಗಳನ್ನು ಎದುರಿಸಲು ಭಾರತ ಕೂಡಾ ಅಣುಬಾಂಬನ್ನು ತಯಾರಿಸುವುದತ್ಯಗತ್ಯ.

ತಪ್ಪು ಒಪ್ಪುಗಳನ್ನು ಈಕ್ಷಿಸಲು ಬಂದ ಯುಕ್ತರಾಷ್ಟ್ರ ಸಂಸ್ಥೆಯ ವೀಕ್ಷಕ ತಂಡದ ವಿಮಾನವನ್ನು ಪಾಕಿಸ್ಥಾನ ಹೊಡೆದುರುಳಿಸಿದಾಗ ಅದೇಕೆ ಥಾಂಟ್ ಆ ಬಗ್ಗೆ ಪಾಕಿಸ್ತಾನವನ್ನು ಕೇಳಲ್ಲ? ಅಮೇರಿಕದ ಟ್ಯಾಂಕುಗಳನ್ನು ಪಾಕಿಸ್ತಾನ ಬಳಸುವಾಗ ಅಮೇರಿಕ ಏಕೆ ಸುಮ್ಮನುಳಿಯಿತು? ನಾಗರಿಕರ ಮೇಲೆ ಆಸ್ಪತ್ರೆಗಳ ಮೇಲೆ ಅನ್ಯಾಯವಾಗಿ ಬಾಂಬು ದಾಳಿ ನಡೆಸುವಾಗ ಯಾವ ರಾಷ್ಟ್ರಗಳೂ ಅದೇಕೆ ಆಕ್ಷೇಪಿಸಲಿಲ್ಲ? ಸಮರ ವಿರಾಮ ಜಾರಿಗೆ ಬಂದಮೇಲೆ ಅದೆಷ್ಟು ಬಾರಿ ಗಡಿ ಉಲ್ಲಂಘನೆ ನಡೆಸಿಲ್ಲ?

ಹಾಗಾದರೆ ಇಂದಿನ ರಾಜಕೀಯದಲ್ಲಿ ನ್ಯಾಯಾನ್ಯಾಯ ವಿಮರ್ಶೆ ಇಲ್ಲವೇ? ಅಥವಾ ತಮ್ಮ ಕಾರ್ಯ ಸಾಧನೆಗಾಗಿ ನ್ಯಾಯ; ಧರ್ಮಗಳನ್ನು ಬಲಿಗೊಡುತ್ತಿದ್ದಾರೆಯೇ?

ಮಾನವನು ತನ್ನ ನೈಜಗುಣಗಳನ್ನು ಕಳೆದುಕೊಂಡಾಗ ದಾನವನಾಗುತ್ತಾನೆ. ಅದಕ್ಕೆ ಪ್ರೋತ್ಸಾಹ ದೊರೆತಾಗ ವಿನಾಶಕಾರಕನಾಗಿ ಮುನ್ನಡೆಯುತ್ತಾನೆ.

ಹಾಗೆಯೇ ಆಗಿದೆ ಇಂದು ಪಾಕಿಸ್ಥಾನದ ಪರಿಸ್ಥಿತಿ ಚೀನಾ ಬ್ರಿಟನು; ಅಮೇರಿಕಾಗಳು ತಮ್ಮ ನೆರವನ್ನು ಅತ್ತ ನೀಡುತ್ತಲಿವೆ. ಆದರ ಪರಿಣಾಮವನ್ನು ಆದೇಕೆ ಯೋಚಿಸಿಲ್ಲವೋ ಹೇಳ ಬರುವಂತಿಲ್ಲ.

ಈಗ ಭಾರತ ಕ್ಷಣ ಕ್ಷಣವೂ ಯೋಚಿಸಬೇಕಾಗಿದೆ. ಯಾರನ್ನು ನಂಬಿ ಸುಮ್ಮನುಳಿಯುವ ಸಮಯವಿದಲ್ಲ. ತನ್ನ ರಕ್ಷಣೆಗಾಗಿ; ತನ್ನ ಸ್ಥಾನ ಮಾನವನ್ನು ಕಾಯ್ದುಕೊಳ್ಳಲು ಅವಿರತ ಶ್ರಮಿಸ ಬೇಕಾಗಿದೆ.

---

### ಯೋಧರ ಕುಟುಂಬದವರ ಹಿತರಕ್ಷಣೆ

ದೇಶರಕ್ಷಣಾ ಕಾರ್ಯದಲ್ಲಿ ನಿರತರಾಗಿರುವ ನಮ್ಮ ಯೋಧರ ಕುಟುಂಬದವರ ಹಿತರಕ್ಷಣೆಯನ್ನು ಪರಿಣಾಮಕಾರಿಯಾಗಿ ಕೈಕೊಳ್ಳುವುದು ಅತ್ಯಾವಶ್ಯಕವಾಗಿದೆ. ಇದರಿಂದ ನಮ್ಮ ವೀರ ಯೋಧರ ಹಾಗೂ ಅವರ ಕುಟುಂಬದವರ ನೈತಿಕ ಮಟ್ಟವನ್ನು ಉನ್ನತ ಮಟ್ಟದಲ್ಲಿ ಕಾಪಾಡಿಕೊಂಡು ಬರಬಹುದು. ಯೋಧರ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಲು ಹಾಗೂ ಅವರೊಡನೆ ನಿಕಟ ಸಂಪರ್ಕ ಹೊಂದಿರಲು ಸಾಧ್ಯವಾಗುವಂತೆ ನಮ್ಮ ಮೂರೂ ವಿಭಾಗಗಳ ಅಂದರೆ ಸೈನ್ಯ, ನಾವಿಕ ಮತ್ತು ವಿಮಾನದಳಗಳ ಯೋಧರ ಕುಟುಂಬದವರು ತಮ್ಮ ಹೆಸರು ಮತ್ತು ವಿಳಾಸ ಹಾಗೂ ತಮಗೆ ಸಂಬಂಧಪಟ್ಟ ಯೋಧರ ಕೆಲಸದ ವಿವರಗಳನ್ನು ಈ ಕೆಳಗಿಂಡ ಕಚೇರಿಗಳಲ್ಲಿ ರಿಜಿಸ್ಟರ್ ಮಾಡಿಸಬೇಕೆಂದು ದ. ಕ. ಜಿಲ್ಲಾಧಿಕಾರಿಗಳೂ ಮತ್ತು ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕ ಮಂಡಲಿಯ ಅಧ್ಯಕ್ಷರೂ ಆದ ಶ್ರೀ ಎಚ್. ಎಲ್. ನಾಗೇಗೌಡರು ಸೂಚಿಸಿದ್ದಾರೆ.

ಹೆಸರು ರಿಜಿಸ್ಟರ್ ಮಾಡಿಸುವ ಸ್ಥಳಗಳು:- 1) ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕ ದಳಗಳ ಕಾರ್ಯದರ್ಶಿಗಳ ಕಚೇರಿ, ಮಂಗಳೂರು; 2) ಜಿಲ್ಲೆಯ ಎಲ್ಲಾ ತಹಸೀಲ್ದಾರ್, ಬಿ. ಡಿ. ಓ., ಮತ್ತು ಡೆಪ್ಯುಟಿ ಬಿ. ಡಿ. ಓ.ರವರ ಕಚೇರಿಗಳು; 3) ಜಿಲ್ಲೆಯ ಎಲ್ಲಾ ಪೋಲೀಸು ಠಾಣೆಗಳು.




## 40 ವರ್ಷಗಳ ನಿರಂತರ ಸೇವೆ ಮತ್ತು ಪ್ರಗತಿ

1925ನೇ ಅಕ್ಟೋಬರ್ 20ರಂದು ಸ್ಥಾಪಿಸಲ್ಪಟ್ಟ ಸಿಂಡಿಕೇಟ್ ಬ್ಯಾಂಕು ತನ್ನ ಅದ್ವಿತೀಯ ಸೇವೆಯ ನಾಲ್ಕು ದಶಕಗಳನ್ನು ಪೂರ್ತಿಗೊಳಿಸಿದೆ. ಈ ಅವಧಿಯಲ್ಲಿ ಸಿಂಡಿಕೇಟ್ ಬ್ಯಾಂಕು ದೇಶಕ್ಕೆ ಮತ್ತು ಜನತೆಗೆ ಸರ್ವೋತ್ಕೃಷ್ಟ ಸೇವೆ ಸಲ್ಲಿಸಿದೆ. ಮಾತ್ರವಲ್ಲ ಅವರ ಪ್ರೀತ್ಯಾದರ ಮತ್ತು ಸಹಕಾರಗಳಿಗೂ ಪಾತ್ರವಾಗಿದೆ. ಲಕ್ಷಾಂತರ ಮಂದಿ ಗ್ರಾಹಕರ ಹಾಗೂ ಹಿತಚಿಂತಕರ, ಸಿಬ್ಬಂದಿಗಳ ಹಾಗೂ ಶೇರ್‌ಹೋಲ್ಡರುಗಳ ಆದರ ಮತ್ತು ಬೆಂಬಲದ ಫಲಸ್ವರೂಪವಾಗಿ ಇಂದು ಸಿಂಡಿಕೇಟ್ ಬ್ಯಾಂಕು ದೇಶದ ಬ್ಯಾಂಕಿಂಗ್ ಉದ್ಯಮದಲ್ಲೇ ಒಂದು ಗೌರವಾರ್ಹ ಸ್ಥಾನವನ್ನು ಪಡೆದಿದೆ. ದೇಶದಾದ್ಯಂತ ಹಬ್ಬಿರುವ 204 ಶಾಖೆಗಳನ್ನು ಹೊಂದಿರುವ ಈ ಬ್ಯಾಂಕು 1.85 ಕೋಟಿ ರೂಪಾಯಿಗಳಷ್ಟು ತೆತ್ತ ಬಂಡವಾಳ ಮತ್ತು ಕಾದಿಟ್ಟ ನಿಧಿಯನ್ನೂ, 70 ಕೋಟಿ ರೂಪಾಯಿಗಳಿಗೂ ಮಿಕ್ಕ ಸಂಪತ್ಸಾಧನಗಳನ್ನೂ ಹೊಂದಿದೆ.

ನಮಗೆ ಸೇವಾ ಸಂದರ್ಭವನ್ನೊದಗಿಸಿದ ಮತ್ತು ನಮ್ಮ ಸಂಸ್ಥೆಗೆ ಬೆಂಬಲ ನೀಡಿದ ಎಲ್ಲಾ ಗ್ರಾಹಕರಿಗೆ ಮತ್ತು ಹಿತೈಷಿಗಳಿಗೆ ನಾವು ಚಿರಋಣಿಗಳಾಗಿದ್ದೇವೆ. ಈ ಸಿಂಡಿಕೇಟ್ ಬ್ಯಾಂಕು ವಿದೇಶ ವಿನಿಮಯ, ಕೃಷಿ ಆರ್ಥಿಕ ನೆರವು ಮಾತ್ರವಲ್ಲದೆ— ಇತರ ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳನ್ನೊದಗಿಸಲು ಸಮರ್ಥವಾಗಿದೆ. ಪ್ರಾರಂಭದಿಂದಲೇ ಸಿಂಡಿಕೇಟಿನ ವೈಶಿಷ್ಟ್ಯಗಳಾಗಿದ್ದ ಸೌಜನ್ಯತೆ ಮತ್ತು ಸೇವಾ ಮನೋಭಾವದೊಂದಿಗೆ ಜನಸೇವೆಗೈಯುವ ನಮ್ಮ ಆಶಯವನ್ನು ಪುನರಪಿ ಉಚ್ಚರಿಸುತ್ತೇವೆ.

FAITHFUL SB FRIENDLY

## ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

# ಕಿತ್ತೂರಿನ ಕಲಿ

ಶ್ರೀ ಬಿ. ಭಾಸ್ಕರ ಪೈ, ಬ್ರಹ್ಮಾವರ.

ಭಾರತ ಸ್ವಾತಂತ್ರ್ಯ ಸಂಗೀತಕ್ಕೆ ಶ್ರುತಿ ಹಿಡಿದ ಮೊದಲವಳು ಕಿತ್ತೂರಿನ ರಾಣಿ ಚೆನ್ನಮ್ಮ. ಬ್ರಿಟಿಷ ತಂತ್ರಜಾಲದಿಂದ ದೇಶವನ್ನು ಉಳಿಸಲು ರಣಚಂಡಿಕೆಯಂತೆ ಹೋರಾಡಿದ ಕ್ಷಾತ್ರ ಸ್ತ್ರೀರತ್ನಳು ಆಕೆ. ಮೊನ್ನೆ, ಅಕ್ಟೋಬರ ೨೩ರಂದು ಆಕೆಯ ಸಾಹಸ ದಿನವನ್ನು ಮಹಿಳಾದಿನವನ್ನಾಗಿ ನಾವು ಆಚರಿಸಿದೆವು; ದೇಶರಕ್ಷಣೆಯಲ್ಲಿ ಮಹಿಳೆಯರ ಪಾತ್ರವೂ ಅತಿ ಹಿರಿದೆಂಬುದನ್ನು ಅರಿತುಕೊಂಡೆವು.

“ನಾವೆಲ್ಲರೂ ಕುರಿಗಳೆಂದು ಈಗಿನವರು ಭಾವಿಸಿರುವಂತಿದೆ. ಆದುದರಿಂದಲೇ ನಮ್ಮ ಬಗ್ಗೆ ಈ ಬಿಳಿಯರ ತಿರಸ್ಕಾರದ ವರ್ತನೆ ಏನು! ಭಾರತೀಯರ, ಕನ್ನಡಾಂಬೆಯ ಪುಣ್ಯ ವಿಶೇಷವು ಇಂದಿಗೆ ತೀರಿ ಹೋಯಿತೇ? ಅಥವಾ ಎಲ್ಲ ರಾಷ್ಟ್ರೀಯರನ್ನೂ ನಪುಂಸಕತೆ ಆವರಿಸಿಕೊಂಡಿತೆ? ಹಾಯ್! ಪವಿತ್ರವಾದ ಭವ್ಯ ಭಾರತನಾಡು! ಆ ಹಿಡಿಯಷ್ಟು ಬಿಳಿ ಮೋರೆಯವರು ನಮ್ಮ ಮೇಲೆ ತಮ್ಮ ಜಬರ್ದಸ್ತು ನಡೆಸುತ್ತಿದ್ದಾರಲ್ಲ! ಇದಕ್ಕಿಂತಲೂ ಅಪಮಾನವಿದೆಯೇ?” ಎಂದು ಚಿಂತೋದಧಿಯಲ್ಲಿ ಮುಳುಗೇಳುತ್ತಿತ್ತು ಕಿತ್ತೂರು ರಾಣಿ ಚೆನ್ನಮ್ಮನ ಮನಸ್ಸು. ಅವಳ ಮನ ಮಂದಿರದಲ್ಲಿ ಆಲೋಚನಾ ತರಂಗಗಳು ಒಂದರ ಹಿಂದೊಂದಾಗಿ ಏಳುತ್ತಿದ್ದವು; ಕಾಣಿಸಿ ಮರೆಯಾಗುತ್ತಿದ್ದವು. ಒಮ್ಮೆ ಕುದಿಯುವಳು; ಒಮ್ಮೆ ಏಳುವಳು. ಮುಷ್ಟಿ ಬಿಗಿಯುವಳು; ಮರುಳು ವ್ಯಾಯಾಮ ಮಾಡುತ್ತಿತ್ತು. ಕಾರಣ? ಕಾರಣ?

ಪ್ರಬಲವಾದ ಕಾರಣವಿತ್ತು. ಅದು ೧೯ನೇ ಶತಮಾನದ ಆರಂಭದ ಮೊದಲ ದಶಕ. ಇಂದಿನ ಧಾರವಾಡ ಜಿಲ್ಲೆಯ ಒಂದು ಗ್ರಾಮವಾಗಿರುವ ಕಿತ್ತೂರು ಅಂದು ಉತ್ತರ ಕರ್ನಾಟಕದ ಒಂದು ಸರ್ವತಂತ್ರ ಸ್ವತಂತ್ರ ಪ್ರಭುತ್ವಾಧಿಕಾರವುಳ್ಳ ಕರ್ನಾಟಕದ ನಾಡಾಗಿತ್ತು. ಅದೇ ನಾಡಿನಲ್ಲಿ ಸ್ವಾತಂತ್ರ್ಯ ಸಮರದ ಇತಿಹಾಸಕ್ಕೆ ನಾಂದಿ ಹಾಡಿದ ಕಿತ್ತೂರು ಚೆನ್ನಮ್ಮನ ಆಳ್ವಿಕೆ ನಡೆದಿತ್ತು. ಕ್ರಿಸ್ತಶಕ ೧೮೨೪ರಿಂದ ೧೮೨೯ರ ವರೆಗೆ ಅದು ತನ್ನ ಪೂರ್ಣಾಧಿಕಾರವನ್ನು ಕಾಪಾಡಿಕೊಂಡು ಮೆರೆಯಿತು. ಬ್ರಿಟಿಷರು ಆಗತಾನೇ ಭಾರತಕ್ಕೆ ಬಂದಿದ್ದು ಬೇರೂರಿ ಭದ್ರವಾಗಲು ಹವಣಿಸುತ್ತಿದ್ದರು. ಭಾರತದ ಸಂಸ್ಥಾನಗಳನ್ನು ಹಿಡಿದು ಅಲ್ಲಿ ತಮ್ಮ ಪ್ರಭುತ್ವವಾದ ಹಕ್ಕನ್ನು ಸಾಧಿಸುವ ಗುರಿಯುಳ್ಳವರಾಗಿತ್ತು. ಸಾಧನೆಯ ಫಲವಾಗಿ ಅಲ್ಲೊಂದು ಇಲ್ಲೊಂದು ಸಂಸ್ಥಾನವು ಅವರ ಕುಟಿಲತೆಗೆ ಬಲಿಯಾಗಿ ಸ್ವಾತಂತ್ರ್ಯವನ್ನು ಕಳೆದುಕೊಂಡು ಬೇರೆಯವರ ದಾಸ್ಯಕ್ಕೆ ಒಳಪಡಲ್ಲಿ ನರಳುತ್ತಿದ್ದುವು. ದಿನದಿನಕ್ಕೆ ಬ್ರಿಟಿಷ ಸಾಮ್ರಾಜ್ಯ ದಾಹವು ವಿಸ್ತರಿಸತೊಡಗಿತ್ತು. ಕ್ರಮೇಣ ಬಿಳಿಯರ ವಕ್ರದೃಷ್ಟಿಯು ಸಂಪದ್ಭರಿತವಾಗಿ ಮೆರೆಯುತ್ತಿದ್ದ ಕಿತ್ತೂರಿನ ಮೇಲೂ ಬೀಳದೆ ಇರಲಿಲ್ಲ.

ದೇಶದ ಒಳಗಿನ ಪರಿಸ್ಥಿತಿಯು ಪ್ರಕ್ಷುಬ್ಧಗೊಂಡಿತ್ತು. ಬಚ್ಚಿನ ಸಂಸ್ಥಾನಿಕರು ಬ್ರಿಟಿಷರ ಆಧಿಪತ್ಯ ಸ್ವೀಕರಿಸಿ ಅವರ ಪಾದ ಪೂಜೆಯನ್ನು ಮಾಡಿ ಕೊಂಡಿದ್ದರು. ಅವರ ವಿರುದ್ಧ ಚಕಾರ ಶಬ್ದವನ್ನೆತ್ತಲಿಕ್ಕೂ ಯಾರಿಗೂ ಉಸಿರಿರಲಿಲ್ಲ. ಇಂಥ ಸಂದಿಗ್ಧಜನಕ ಪರಿಸ್ಥಿತಿಯಲ್ಲಿ ಕುಟಿಲತಂತ್ರ ಜ್ಞಾನದ ಭೇದನೀತಿ ನೀತಿಜ್ಞರಾದ ಬಿಳಿಯರ ವಿರುದ್ಧ ಬಂಡಾಯವೇಳಲು ಎದೆಗಟ್ಟಿತನ ಬೇಕಾಗಿತ್ತು? ಅದರ ಕಲ್ಪನೆ ಧೈರ್ಯವಂತರು ಮಾತ್ರ ಇದಕ್ಕೆ ಅಪವಾದವಾಗಿದ್ದರು. ಅಂಥ ಸಾಹಸಿ ಧೀರೋದಾತ್ತ ವ್ಯಕ್ತಿಗಳಲ್ಲಿ ಕಿತ್ತೂರಿನ ರಾಣಿಯಾಗಿದ್ದ ಚೆನ್ನಮ್ಮನೂ ಒಬ್ಬಳು. ಆಕೆಯ ನಾಡಿನ ನಾಡಿಯಾಗಿ ಬೆಳಗಿದ್ದಳು. ಬ್ರಿಟಿಷರ ವಿರುದ್ಧ ಮಾತ್ರ ಮೊದಲಿಗೆ ನಾಡಿನ ಸ್ವಾತಂತ್ರ್ಯ ಕಹಳೆಯನ್ನು ಊದಿದ್ದಳು. ಆ ಕಹಳೆಯ ನಾದ ಕೇವಲ ಕಿತ್ತೂರಿನಲ್ಲಿಷ್ಟೇ ಕೇಳಿ ಬರಲಿಲ್ಲ. ದೇಶದುದ್ದಗಲ ದಿಗ್ದಿಗಂತಗಳಲ್ಲಿಯೂ ಪ್ರತಿಧ್ವನಿತವಾಯಿತು. ಇದೇ ಭಾರತದ ಸ್ವಾತಂತ್ರ್ಯಕ್ಕೆ ನಾಂದಿಯಾಯಿತು. ಇತಿಹಾಸದಲ್ಲಿ ಮತ್ತೊಂದು ಅಧ್ಯಾಯವೂ ಸೇರಿ ಹೋಯಿತು. ಇಡೀ ದೇಶದ ಲಕ್ಷ್ಯ ಕಿತ್ತೂರಿನ ಕಡೆ ತಿರುಗಿತು. ಹಾಗಾದರೆ ಅವಳು ಮಾಡಿದ್ದೇನು ?

ಕಿತ್ತೂರು ಸಂಸ್ಥಾನವು ಮುಂಚಿನ ಕಾಲದಿಂದಲೂ ಕರ್ನಾಟಕದಲ್ಲಿ ಘನತೆ ಗೌರವದಿಂದ ಬಾಳಿದ ಸಂಸ್ಥಾನವಾಗಿತ್ತು. ಅಂದಿನಿಂದಲೂ ಸ್ವತಂತ್ರ ಮನೋಭಾವದಿಂದ ಕೂಡಿತ್ತು. ಅಲ್ಲಿಯ ಜನದ ಮನದಲ್ಲಿಯೂ ಮಣ್ಣಿನ ಗುಣದಲ್ಲಿಯೂ ಸ್ವಾತಂತ್ರ್ಯಾಭಿಲಾಷೆ ಎದ್ದು ಹೊರ ಹೊಮ್ಮುತ್ತಿತ್ತು. ರಾಜ್ಯದಲ್ಲಿ ತುಂಬಿದ ಭಂಡಾರವಿತ್ತು. ೧೮ನೇ ಶತಮಾನದ ಅಂತ್ಯಭಾಗದಿಂದ ೧೯ನೇ ಶತಮಾನದ ಆದಿಭಾಗದ ವರೆಗೆ ಕಿತ್ತೂರಿನಲ್ಲಿ ಮಲ್ಲಸರ್ಜದೇಸಾಯಿಯು ಒಳ್ಳೇ ಶಿಸ್ತು ವೈಭವದಿಂದ ಆಳುತ್ತಿದ್ದನು. ಆದರೆ ಇವನು ೧೮೧೬ರಲ್ಲಿ ಪರಲೋಕವಾಸಿಯಾದುದರಿಂದ ಅವನ ಹಿರಿಯ ಪತ್ನಿಯ ಪುತ್ರನಾದ ಶಿವಲಿಂಗಸರ್ಜನು ಪಟ್ಟಕ್ಕೆ ಬಂದನು. ರಾಣೀ ಚೆನ್ನಮ್ಮನು ಮಲ್ಲಸರ್ಜನ ಕಿರಿಯ ಮಡದಿ. ಆದರೂ ಮನಮೆಚ್ಚಿದವಳು. ಅವಳ ಗಾಂಭೀರ್ಯ ಪರಾಕ್ರಮಗಳೂ ಅತಿಶಯ ರೂಪವೂ ಇದಕ್ಕೆ ಕಾರಣವಾಗಿದ್ದಿತು. ಆ ಶಿವಲಿಂಗಸರ್ಜ ದೇಸಾಯಿಯು ೧೮೨೪ರಲ್ಲಿ ರೋಗ ಪೀಡಿತನಾಗಿ ಮಡಿದಾಗ ಅವನಿಗೆ ಸಮರ್ಥ ಉತ್ತರಾಧಿಕಾರಿಗಳಿರಲಿಲ್ಲ.

ಇದೇ ಘಟನೆಯು ನವ ಇತಿಹಾಸದ ನಿರ್ಮಾಣಕ್ಕೆ ನಾಂದಿಯಾಯಿತು. ಶಿವಲಿಂಗಸರ್ಜನು ಅಧಿಕಾರದಲ್ಲಿದ್ದಾಗ ಚೆನ್ನಮ್ಮನ ಸಲಹೆಯನ್ನು ಒದಗಿರಿಸಿ ಬ್ರಿಟಿಷರೊಡನೆ ಅಪಮಾನಕರವಾದ ಕರಾರನ್ನು ಮಾಡಿಕೊಂಡಿದ್ದನು. ಅದಕ್ಕೆ ರಾಣಿಯಾಗಲಿ ಅಥವಾ ಪ್ರಜಾ ಬೆಂಬಲವಿರಲಿಲ್ಲ.

೧೮೨೪ರಲ್ಲಿ ಅವನು ಸಾಯುವ ಸ್ವಲ್ಪ ದಿನಗಳ ಮೊದಲು ಶಿವಲಿಂಗನು ಮಾಸ್ತಮರಡಿ ಅನ್ವಯದ ಓರ್ವ ಹುಡುಗನನ್ನು ದತ್ತಕ್ಕೆ ತೆಗೆದುಕೊಂಡಿದ್ದನು. ಹಿರಿಯ ಹೆಂಡತಿಯಾದ ವೀರಮ್ಮನು ಅಷ್ಟೇನು ಚತುರಳೂ ರಾಜನೀತಿಜ್ಞಳೂ ಆಗಿರಲಿಲ್ಲವಾದ ಕಾರಣ ಕಿರಿಯ ರಾಣಿಯಾದ ಚೆನ್ನಮ್ಮನು ದತ್ತ ಹುಡುಗನ ಪರವಾಗಿ ಸಕಲ ರಾಜ್ಯಭಾರ ಸೂತ್ರಗಳನ್ನು ವಶದಲ್ಲಿರಿಸಿಕೊಂಡು ಸಮರ್ಪಕ ರೀತಿಯಲ್ಲಿ ನಿರ್ವಹಿಸುತ್ತಿದ್ದಳು.

ಊನ ಹುಡುಕುವ ಕಣ್ಣಿಗೆ ಎಲ್ಲಿಯಾದರೂ ಒಂದು ದೋಷ ಕಂಡೇ ಕಾಣುತ್ತದೆ. ಹಾಗೆ ಇವರ ಈ ಎಲ್ಲಾ ಕಾರ್ಯಗಳನ್ನೂ ಜಾಗರೂಕತೆಯಿಂದ ಪರಿಶೀಲಿಸುತ್ತಿದ್ದ ಧಾರವಾಡದ ರೆಸಿಡೆಂಟನಾದ ಕರ್ನಲ್ ಥ್ಯಾಕರೆಯು ಇದು ಕಾಲು ಕೆರೆದು ಜಗಳ ಹೂಡಲು ಅನುಕೂಲ ಸಂದರ್ಭವೆಂದು ಮನಗಂಡನು. ಆವನು ರಾಣಿ[?]ಗೆ ಬ್ರಿಟಿಷ್ ಸರಕಾರದ ಪ್ರತಿನಿಧಿ[?] ಒಂದು ಆಕ್ಷೇಪಣಾ ಪತ್ರವನ್ನು ಕಳ[?]ಸಿದನು. ಅದರಲ್ಲಿ “ನೀವು ತೆಗೆದುಕೊ[?] ದತ್ತಕವು ಬ್ರಿಟಿಷ್ ಸರಕಾರದಿಂದ ಕ್ರ[?] ಬದ್ಧವೆಂದು ನಿರ್ಣಯವಾಗಿರುವ [?] ಸಂಸ್ಥಾನವು ನನ್ನ ಅಪ್ಪಣೆಗನುಸಾರ[?] ನಡೆದುಕೊಳ್ಳಬೇಕು. ತಪ್ಪಿದರೆ ದ[?] ಪ್ರಯೋಗಕ್ಕೆ ಕಾಯಬೇಕಾಗಬಹು[?]ದು” ಬೆದರಿಸಿದ್ದನು. ಸ್ವಾಭಿಮಾನ[?]ಳಾದ ರಾಣಿಯು ಇದರಿಂದ ಪ್ರಳಯ[?]ಯಂತೆ ಕೆರಳಿದಳು. ಅವಳ ಸವಾ[?]ಗವೂ ಬ್ರಿಟಿಷರ ಅಬ್ಬಾಳಿಕೆಯನ್ನು ಮುರಿಯ ಮಾಡಲು ಸೈನ್ಯ ಸಿದ್ಧತೆಗೆ [?]ರೇಪಣೆ ನೀಡಿತು. ಗುರುವಾದುದ್ದ[?] ಸಿದ್ಧತಾ ತಂತ್ರಗಳು. ಇದನ್ನು [?] ಥ್ಯಾಕರೆಯೂ ಜ[?]ನಾದನು. [?] ರಣಸಿದ್ಧತೆ ನಡೆಯುತ್ತಿದ್ದಂತೆ [?] ಆವನು ಮಿಂಚಿನ ವೇಗದಿಂದ ಸೈನ್ಯ[?]ನ್ನು ನಡೆಸಿಕೊಂಡು ಬಂದು ಕಿತ್ತೂ[?] ಕೋಟೆಯನ್ನು ತಲುಪಿದನು.

೧೮೨೪ನೇ ಅಕ್ಟೋಬರ 23 ರಂದು [?]ತ್ತೂರು ಚೆನ್ನಮ್ಮನ ಸ್ವಾತಂತ್ರ್ಯ ಘೋಷಣೆ ಮೊಳಗಿತು. ಬ್ರಿಟಿಷ್ ಸೇನೆಯು ಮುನ್ನುಗ್ಗಿ ನಿಲ್ಲಲಿಲ್ಲ. ಆಗಲೇ ಕೋಟೆಯ ಮೇಲೆ ಆಕ್ರಮಣವಾಯಿತು. ಚೆನ್ನಮ್ಮನು ಅಂಜಲಿಲ್ಲ, ಅಳುಕಲಿಲ್ಲ. ಪ್ರತಿಯಾಗಿ ಉಕ್ಕಿನ ಶಿರಸ್ತ್ರಾಣ ತೊಟ್ಟು [?] ಖಡ್ಗ ಧರಿಸಿ ಜನರನ್ನೂ ಸೈನಿಕರನ್ನೂ ಹುರಿದುಂಬಿಸಿದಳು. ಕರ್ನಾಟಕದ ರು[?]ದ್ರಾಣಿಯು ಪಟುಭಟರನ್ನು ಇಟ್ಟು[?]ದಳು. ಕೋಟೆಯ ಬಗ್ಗೆ ಹತ್ತುವ ಕೆಲ[?]ವು ವಿಫಲವಾಯಿತು. ಓರ್ವ ಕನ್ನಡ ಭಟನ ಗುಂಡೇಟಿಗೆ ರೆಸಿಡೆಂಟ್ ಥ್ಯಾಕರೆಯು ಬಲಿಯಾದನು. ಬಿಳಿಯ ಸೈನ್ಯ [?]ಕ್ಕೆಡಿಯಾಯಿತು. ಪಲಾಯನ ನಾ[?]ಡಿಸಿತು. ಆಗ ರಾಣಿಯು ತಾನು [?]ಕ ತುರಗವನ್ನೇರಿ ರಣರಂಗದಲ್ಲಿ [?]ರಿಯಂತೆ, ನಗೆಯುತ್ತಿದ್ದ ತೇಜಿಯನ್ನು [?]ರುಗಿಸಿ ಖಡ್ಗಧಾರಿಯಾಗಿ ತನ್ನವರನ್ನು ಹುರಿದುಂಬಿಸುತ್ತಾ ನಡೆದ ವೀರಗಾ[?]ಯು ವರ್ಣಿಸಲಸದಳ. ಅಂದಿನ ಅವಳ [?]ನ ಸಾಹಸದ ಫಲವಾಗಿ ಬ್ರಿಟಿಷ್ ಸ[?]

(ಹನ್ನೊಂದನೇ ಪುಟ ನೋಡಿರಿ)




**ಯಾವತ್ತೂ ವಾಚನ ಭಂಡಾರಗಳಿಗೆ**

ಯೋಗ್ಯವಾದ ನವೀನ ಪುಸ್ತಕಗಳು

| | |
|---|---|
| ಭಾರತದ ವೀರಾಂಗನೆಯರು | 1—50 |
| ಬರಿದ ಮುಗುಳು | 1—00 |
| ಜನಪ್ರಿಯ ಕತೆಗಳು | 1—20 |
| ಪಂಚ ಸ್ವಪ್ನ | 1—20 |
| ಮುತ್ತಿನ ಮಾಲೆ | 1—50 |
| ಹೂ ಗೊಂಚಲು | 1—50 |
| ಪಂಚಗಜ್ಜೆಗಳು | 1—50 |
| ಏಕಾಂಕ ನಾಟಕಗಳು | 1—00 |
| ಭಾರತದ ನಾಲ್ಕುಮುಖಗಳು | 1—00 |
| ಮೇರು ಪರ್ವತದ ಮಹಾ ಜೀವಿಗಳು | 1—50 |
| ಹೆಂಗುಸರ ಕತೆಗಳು | 2—00 |

ಕೆಟಲಾಗಿಗೆ ಬರೆಯಿರಿ

**ನವಭಾರತ ಪುಸ್ತಕ ಭಂಡಾರ,**
ಉಡುಪಿ.

ಭೂ ಸುಧಾರಣಾ ಶಾಸನ

# ಸ್ಟ್ಯಾಂಡರ್ಡ್ ಎಕ್ರೆ ಅಂದರೇನು?

೨—೧೦—೬೫ ರಂದು ಬಳಕೆಗೆ ಬಂದಿರುವ ಮೈಸೂರು ಭೂಸುಧಾರಣಾ ಶಾಸನವು ಬಳಕೆಗೆ ಬರುವ ಮೊದಲು ಭೂಮಾಲಿಕರಾಗಿದ್ದವರು ೨೭ ಸ್ಟ್ಯಾಂಡರ್ಡ್ (ಪ್ರಮಾಣಬದ್ಧ) ಎಕರೆ ಹೊಲವನ್ನು ಒಂದು ಮನೆತನದ ಪರಮಾವಧಿ ಹಿಡುವಳಿಯೆಂದು ಇಟ್ಟುಕೊಳ್ಳಬಹುದಾಗಿದೆ. ಶಾಸನವು ಬಳಕೆಗೆ ಬಂದಮೇಲೆ ಭೂಮಿ ಹಿಡುವಳಿ ಪಡೆಯುವವರು ಇಟ್ಟುಕೊಳ್ಳಬಹುದಾದ ಭೂ ಪರಿಮಿತಿ ೧೮ ಎಕರೆ ಎಂದು ಗೊತ್ತುಪಡಿಸಲಾಗಿದೆ.

ಈ ಪ್ರಮಾಣಬದ್ಧ ಎಕರೆ ಎಂದರೇನು ಎಂಬುದನ್ನು ತಿಳಿಯುವುದು ಸಾಮಾನ್ಯ ರೈತನಿಗೆ ಕಠಿಣವೆನಿಸುತ್ತದೆ. ಅವುಗಳ ವಿವರ ಹೀಗಿದೆ.

ರಾಜ್ಯದ ಭೂಮಿಯನ್ನು ಏಳು ತರಗತಿಗಳಲ್ಲಿ ವಿಭಾಗಿಸಲಾಗಿದೆ. ಅವುಗಳ ವಿವರ ಇಂತಿದೆ.:

ಒಂದನೆಯ ತರ:- ನಿರಂತರ ನೀರಿನ ಸೌಕರ್ಯವುಳ್ಳ ತರಿ ಅಥವಾ ತೋಟಪಟ್ಟಿ ಇದು ವರುಷದಲ್ಲಿ ೨ಸಾರಿ ಭತ್ತ ಬೆಳೆಯುತ್ತಿರುವ ನೆಲ. ಇಂತಹ ಒಂದು ಎಕರೆ ಅಂದರೆ ಒಂದು ಪ್ರಮಾಣಬದ್ಧ ಎಕರೆ ಇಂತಹ ೨೭ ಪ್ರಮಾಣಬದ್ಧ ಎಕರೆಗಳು ಒಂದು ಮನೆತನದ ಪರಮಾವಧಿ ಹಿಡುವಳಿ ಎಂದು ಗೊತ್ತುಪಡಿಸಲಾಗಿದೆ. ಮುಂದೆ ಭೂಮಿ ಪಡೆಯುವವರು ಇಂಥಾ ೧೮ ಎಕರೆ ಮಾತ್ರ ಹೊಂದಬಹುದಾಗಿದೆ.

ಎರಡನೆಯ ತರ:—ಕಾಲುವೆ ನೀರಿನ ಸೌಕರ್ಯವಿರುವ ತರಿ ಅಥವಾ ತೋಟಪಟ್ಟಿ ಇದ್ದು ವರುಷಕ್ಕೆ ಒಂದೇ ಬತ್ತದ ಬೆಳೆ ಬರುವಂತಹ ಹೊಲ. ಇದರ ಒಂದು ಪ್ರಮಾಣಬದ್ಧ ಎಕರೆಯು ಒಂದನೆಯ ತರದ ಹೊಲದ 1⅓ ಎಕರೆಯಷ್ಟಾಗುತ್ತದೆ. ಒಂದು ಮನೆತನವು ಮುಂದೆ ಹೊಂದಬಹುದಾದ ಪರಮಾವಧಿ ಹಿಡುವಳಿಯು 18×1⅓ ಅಂದರೆ ೨೪ ಎಕರೆ.

ಮೂರನೆಯ ತರ: – ಕೆರೆಗಳಿಂದ ನೀರುಣ್ಣುವ ಸೌಕರ್ಯವುಳ್ಳ ತರಿ ಅಥವಾ ತೋಟಪಟ್ಟಿ. ಇದರ ಒಂದು ಪ್ರಮಾಣಬದ್ಧ ಎಕರೆಯು ಒಂದನೆಯ ತರದ ಹೊಲದ 1⅔ ಎಕರೆಯಷ್ಟಾಗುತ್ತದೆ. ಇದರ ಪರಮಾವಧಿ ಹಿಡುವಳಿಯು 18 × 1⅔ ಅಂದರೆ ೩೦ ಎಕರೆ.

ನಾಲ್ಕನೆಯ ತರ (೧):— ಮಳೆಯ ನೀರಿನಿಂದಾಗಲಿ (೨) ಕೆರೆ, ಕಾಲುವೆ ಅಥವಾ ಇತರ ನೀರಾವರಿಯಿಂದ ಒಸರುವ ನೀರಿನಿಂದಾಗಲಿ (೩) ಹೊಳೆ ಅಥವಾ ಕಾಲುವೆಯಿಂದ ವಿದ್ಯುತ್ತ್ ಶಕ್ತಿ ಅಥವಾ ಯಂತ್ರಗಳ ಮೂಲಕ ಎತ್ತುವ ನೀರಿನಿಂದಾಗಲಿ ಬೆಳೆಯಾಗುವಂತಹ ಹೊಲ. ಇದರ ಒಂದು ಪ್ರಮಾಣಬದ್ಧ ಎಕರೆಯು ಒಂದನೆಯ ತರದ ಹೊಲದ ಎರಡು ಎಕರೆಯಷ್ಟಾಗುತ್ತದೆ. ಇದರ ಪರಮಾವಧಿ ಹಿಡುವಳಿಯು ೧೮ × ೨ = ೩೬ ಎಕರೆಯಾಗುವದು.

ಐದನೆಯ ತರ:- ಪ್ರತಿ ವರುಷ ಸರಾಸರಿ ೩೫ ಅಂಗುಲಗಳಿಗಿಂತ ಹೆಚ್ಚು ಮಳೆಯಾಗುವ ಕುಷ್ಕಿ ಅಥವಾ ತೋಟಪಟ್ಟಿ ಅಥವಾ ಸ್ವಲ್ಪ ನೀರಾವರಿ ಇರುವ ಕುಷ್ಕಿ ತಲಾ ಅಥವಾ ಕುಷ್ಕಿ ತೋಟಪಟ್ಟಿ. ಇದರ ಒಂದು ಪ್ರಮಾಣಬದ್ಧ ಎಕರೆಯು ೧ನೇ ತರದ ಹೊಲದ ನಾಲ್ಕು ಎಕರೆಯಷ್ಟಾಗುತ್ತದೆ. ಇದರ ಪರಮಾವಧಿ ಹಿಡುವಳಿಯು ೧೮ × ೪ = ೭೨ ಎಕರೆ.

ಆರನೆಯ ತರ:— ಪ್ರತಿ ವರ್ಷ ಸರಾಸರಿ ೨೫ ಅಂಗುಲಗಳಿಗಿಂತ ಹೆಚ್ಚು ಮತ್ತು ೩೫ ಅಂಗುಲಗಳಿಗಿಂತ ಕಡಿಮೆ ಮಳೆಯಾಗುವ ಪ್ರದೇಶದ ಕುಷ್ಕಿ ಮತ್ತು ತೋಟಪಟ್ಟಿ. ಇದರ ಒಂದು ಪ್ರಮಾಣಬದ್ಧ ಎಕರೆಯು ಒಂದನೆಯ ತರದ ಹೊಲದ ಆರು ಎಕರೆಯಷ್ಟಾಗುತ್ತದೆ. ಇದರ ಪರಮಾವಧಿ ಹಿಡುವಳಿಯು ೧೮×೬ = ೧೦೮ ಎಕರೆ.

ಏಳನೆಯ ತರ:— ಪ್ರತಿ ವರ್ಷ ಸರಾಸರಿ ೨೫ ಅಂಗುಲಗಳಿಗಿಂತಲೂ ಕಡಿಮೆ ಮಳೆಯಾಗುವ ಪ್ರದೇಶದ ಕುಷ್ಕಿ ಅಥವಾ ತೋಟಪಟ್ಟಿ. ಇದೂ ಅಲ್ಲದೆ ೭೫ ಅಂಗುಲಗಳಿಗಿಂತಲೂ ಹೆಚ್ಚು ಮಳೆಯಾಗುವ ಪ್ರದೇಶದಲ್ಲಿ ನಾಗೀವಳಿಗೆ ಸಾಧ್ಯವಿಲ್ಲದಂತಹ ಕುಷ್ಕಿ ೧ನೇಯ ತರದ ಹೊಲದ ೧ ಪ್ರಮಾಣಬದ್ಧ ಎಕರೆ ಇದರ ೮ ಎಕರೆಗೆ ಸಮಾನವಾಗುತ್ತದೆ. ಇದರ ಪರಮಾವಧಿ ಹಿಡುವಳಿ ೧೮×೮ = ೧೪೪ ಎಕರೆ.

ಒಂದು ವರ್ಷದ ಮಳೆಯ ಸರಾಸರಿಯನ್ನು ಲೆಕ್ಕದಲ್ಲಿ ಹಿಡಿಯುವಾಗ ೧೯೬೫ರ ಜುಲೈ ೧ನೆಯ ದಿನಾಂಕಕ್ಕೆ ಮೊದಲಿನ ಆಯಾ ಪ್ರದೇಶದ ೨೫ ವರ್ಷಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್

ನಿಮ್ಮ ಬ್ಯಾಂಕ್-

ಕೆನರಾ ಬ್ಯಾಂಕ್

90 ಕೋಟಿ ರೂ. ಗಳಿಗೂ ಮಿಗಿಲಾದ ಸಂಪತ್ಸಾಧನಗಳು

ಭಾರತದಲ್ಲಿ 235 ಕ್ಕೂ ಹೆಚ್ಚಿಗೆ ಶಾಖೆಗಳು

ಪ್ರಪಂಚದಾದ್ಯಂತ 145 ಕ್ಕೂ ಹೆಚ್ಚು ಸಂಖ್ಯೆಯ ಪ್ರತಿನಿಧಿಗಳು

60 ವರ್ಷಗಳ ಅನುಭವ ಮತ್ತು

ವಿಶಾಲ ವ್ಯಾಪ್ತಿಯ ಸೇವಾ ಸೌಲಭ್ಯಗಳು

ಕೆನರಾ ಬ್ಯಾಂಕನ್ನು ಬಲ್ಲಂತೆಲ್ಲಾ ಹೆಚ್ಚಿಗೆ ನೀವು ಈ ಬ್ಯಾಂಕನ್ನೇ ಬಳಸುವಿರಿ

60 ವರ್ಷಗಳ ಸೇವೆ

ವಜ್ರ ಮಹೋತ್ಸವ ವರ್ಷ

CB-132 KAN

ಮುನ್ನಡೆಯಿರಿ—ನಮ್ಮೊಡನೆ ಮುನ್ನಡೆಯಿರಿ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಮಂಗಳೂರು

ಆಡಳಿತ ಕಛೇರಿ: ಬೆಂಗಳೂರು

ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್ ಕೆನರಾ ಬ್ಯಾಂಕ್

ರಾಷ್ಟ್ರೀಯ ರಕ್ಷಣಾ ನಿಧಿಗೆ ಧಾರಾಳ ಸಹಾಯ ಸಲ್ಲಿಸಿರಿ.

ಕೆನರಾ ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ಸಲ್ಲಿಸುವ ವಂತಿಗೆಗಳು ಮೂಲ ಬೆಲೆಗೆ ಸ್ವೀಕರಿಸಲ್ಪಡುತ್ತವೆ.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ.

# ರಾಷ್ಟ್ರ ಷ್ಟ
# ಮಜೂರರ ಸ್ಥಿ

## ಎಂಬತ್ತೈದು ವರ್ಷ
## ಅಮೆರಿಕನ್ ಮಜ

೧೮೮೨ರಲ್ಲಿ ಅಮೆರಿಕೆಯಲ್ಲಿ ಮೊತ್ತ ಮೊದಲಿಗೆ ಮಜೂರ ದಿನವನ್ನು ಆಚರಿಸಲಾಯಿತು. ಅಂದಿನ ಮಜೂರರು ತಮ್ಮ ದುಸ್ಥಿತಿಯಿಂದ ಕಂಗೆಟ್ಟು ಪ್ರದರ್ಶನ, ಪ್ರತಿಭಟನೆಗಳನ್ನು ಕೈಗೊಂಡಿದ್ದರು. ಅಲ್ಪ ವೇತನ ದೀರ್ಘ ಶ್ರಮಗಳೇ ಇವರ ಮುಖ್ಯ ಅನುಕೂಲತೆಗಳಾಗಿದ್ದುವು. ಆದರೆ, ಮೊನ್ನೆ, ಸಪ್ಟಂಬರ ೬ರಂದು ಆಚರಿಸಲಾದ ಮಜೂರ ದಿನದಂದು ಈ ಬಗೆಯ ಪರಿಸ್ಥಿತಿಗಳುಳಿಯಲಿಲ್ಲ. ಅಂದಿನಿಂದ ಇಂದಿನ ವರೆಗೆ ಮಜೂರರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳು ಕಾರ್ಯರೂಪಕ್ಕೆ ಬಂದುವು. ಇಂದಿಗೆ ಅಮೆರಿಕನ್ ಮಜೂರ ಸಂತೃಪ್ತನಾಗಿದ್ದಾನೆ ಎನ್ನಬಹುದು. ಆದರೆ, ಈ ಬಗೆಯ ಸಂತೃಪ್ತಿ ಆತನಿಗೆ ದೊರೆಯಬೇಕಾದರೆ ಎಂಬತ್ತೈದು ವರ್ಷಗಳ ಕಾಲ ಬೇಕಾಗಿದೆಯೆಂಬುದನ್ನು ಭಾರತೀಯ ಮಜೂರರು ಮರೆಯಬಾರದು.

ಕಾರ್ಪೆಂಟರ್ಸ್ ಯೂನಿಯನ್ನಿನ ಪೀಟರ್ ಜೆ. ಮೆಕ್‌ಗೀರೆಯವರು ಬಹಳಷ್ಟು ಹಿಂದೆಯೇ ಸ್ವಾತಂತ್ರ್ಯದಿನ (ಜುಲೈ ೪) ಮತ್ತು ಕೃತಜ್ಞತಾ ದಿನ (ನವಂಬರದ ಕೊನೆಯ ಗುರುವಾರ)ಗಳ ನಡುವೆ ಮಜೂರ ದಿನವನ್ನು ಆಚರಿಸುವ ಬಗ್ಗೆ ಮಾತುಕತೆ ನಡೆಸಿ ಸಪ್ಟಂಬರ ತಿಂಗಳ ಪ್ರಥಮ ಸೋಮವಾರವನ್ನು ಇದಕ್ಕಾಗಿ ಗೊತ್ತು ಮಾಡಿದರು. ೧೮೮೨ರಲ್ಲಿ ಅಮೆರಿಕನ್ ಮಜೂರರಿಗೆ ಇದ್ದ ರಜಾ ದಿನಗಳು ಬಹಳ ಕಡಿಮೆ; ಪ್ರತಿದಿನ ೧೦ ತಾಸುಗಳ ದುಡಿತವಿತ್ತು. ಸೋಮವಾರದಿಂದ ಶನಿವಾರದ ವರೆಗೆ ಕೆಲಸ ಮಾಡಬೇಕಿತ್ತು.

ಮಜೂರ ದಿನಾಚರಣೆಯಂದು ಪ್ರತಿಭಟಿಸುವ ಕ್ರಮವು ಪಿಕ್‌ನಿಕ್‌ಗೆ ದಾರಿ ತೋರಿಸಿತು. ಸುಸಂಬದ್ಧ ಮಜೂರರಿಗೆ ತಮ್ಮ ಪ್ರತಿಭಟನೆಯನ್ನು ಸೂಚಿಸಲು ಮತ್ತು ಕುಂದುಕೊರತೆಗಳನ್ನು ದೂರೀಕರಿಸಲು ಉತ್ತಮವಾದ ಅವಕಾಶಗಳಿವೆ. ಪಿಕ್‌ನಿಕ್‌ಗಳು ಪರಿಣಾಮಕಾರಕವಾದುವು. ಇದರ ಮೂಲಕ ತೋರಿಸಲಾದ ಪ್ರತಿಭಟನೆಯಿಂದಾಗಿಯೇ ಅಮೆರಿಕನ್ ಮಜೂರರ ದೂರು-ಕುಂದುಕೊರತೆಗಳು ದೂರವಾಗಿವೆ.

ಅಮೆರಿಕೆಯು ಮಜೂರ ದಿನಾಚರಣೆಯಂದು ಮಜೂರರ ಅಭಿವೃದ್ಧಿಯ ಸಿಂಹಾವಲೋಕನ ಮಾಡುವ ಪರಿಪಾಟವನ್ನಿಟ್ಟುಕೊಂಡಿದೆ. ಮಜೂರರ ಸ್ಥಿತಿಗತಿ, ಅವರ ಭವಿಷ್ಯಗಳು ಸಾರ್ವಜನಿಕ ವೇದಿಕೆಯ ಮೇಲೆ ಚರ್ಚಿಸಲ್ಪಡುವುವು. ರೇಡಿಯೋ, ಟೆಲಿವಿಜನ್, ಸಮಾಚಾರ ಪತ್ರಿಕೆಗಳು ಮೊದಲಾದುವುಗಳಲ್ಲಿಯೂ ಯೂನಿಯನ್ ನಾಯಕರು, ಸರಕಾರಿ ಅಧಿಕಾರಿಗಳು—ಅಧ್ಯಕ್ಷರೂ— ವ್ಯಕ್ತಿಯುತವಾಗಿ, ಅಥವಾ ಒಟ್ಟಾಗಿ ವಿವೇಚಿಸುವರು. ಮಜೂರ ಸಬ್ಬತ್ ಮತ್ತು ಆಧ್ಯಾತ್ಮಿಕ ಸೇವೆಗಳಲ್ಲಿ ಯೂನಿಯನ್ ಅಧಿಕಾರಿಗಳೂ ಸದಸ್ಯರೂ ಭಾಗವಹಿಸುತ್ತಾರೆ. ಸ್ಮಾರಕ ಸೇವೆಗಳು ದಿವಂಗತರಾದ ಮಜೂರ ನಾಯಕರಿಗೆ ಗೌರವವನ್ನು ಪ್ರದರ್ಶಿಸುತ್ತವೆ.

ಅಧ್ಯಕ್ಷ ಲಿಂಡನ್ ಬಿ. ಜಾನ್ಸನ್ನರು ಮಜೂರ ವರ್ಗದ ಕಲ್ಯಾಣಕ್ಕಾಗಿ ತನ್ನ

ಲಿಂಡನ್ ಬಿ. ಜಾನ್ಸನ್.

ಯೋಜನೆಗಳನ್ನು ರೂಪಿಸಿದಾಗ ಅವುಗಳಿಗೆ ಹೃತ್ಪೂರ್ವಕ ಬೆಂಬಲವು ಮಜೂರರಿಂದ ದೊರೆಯಿತು. ಯೂನಿಯನ್ ಸದಸ್ಯರೆಲ್ಲರೂ ದೇಶಾಭಿವೃದ್ಧಿಗಳಲ್ಲಿ ತಮ್ಮ ಪಾಲನ್ನು ಅನುಭವಿಸುವರು. ನಿರುದ್ಯೋಗಿಗಳು, ಅಲ್ಪೋದ್ಯೋಗಿಗಳು ಮತ್ತು ಅಲ್ಪ ವೇತನಿಗಳು ಇಂದಿಗೂ ಅಮೇರಿಕೆಯಲ್ಲಿದ್ದಾರೆ. ಇದನ್ನು ತಡೆಗಟ್ಟಲು ೧೯೬೪ರಲ್ಲಿ ಒಂದು ಫೆಡರಲ್ ಸಂಸ್ಥೆ ಓ ಇ ಓ (ಆಫೀಸ್ ಆಫ್ ಇಕೊನೊಮಿಕ್ ಒಪರ್ಚ್ಯುನಿಟಿ) ಸ್ಥಾಪಿತವಾಯಿತು. ಕೂಲಿಗಾರರೂ ಅವರ ನಾಯಕರೂ ಇದರ ಕೆಲಸಗಳಲ್ಲಿ ಸಹಕಾರ ನೀಡುತ್ತಿದ್ದಾರೆ.

ಮಜೂರ ದಿನದಂದು ಯೂನಿಯನ್ ನಾಯಕರು ತಮ್ಮ ಸಾಂಪ್ರದಾಯಿಕ ಕ್ರಮವನ್ನು ಬಿಡುವುದಿಲ್ಲ. ತಮ್ಮ ಲಾಭ—ಹಾನಿಗಳನ್ನು ಅವರು ಗಣಿಸುತ್ತಾರೆ. ೧೯೬೫ರ ಮೇ ತಿಂಗಳಲ್ಲಿ ಒಟ್ಟು ಕಾರ್ಖಾನೆ ಕೂಲಿಗಾರನ ಸಾಪ್ತಾಹಿಕ ಸರಾಸರಿ ಆದಾಯವು ೧೦೮ ಡಾಲರ್‌ಗಳಾಗಿತ್ತು. ಕಳೆದ ವರ್ಷ ಇದು ೧೦೩ ಡಾಲರ್ ಇತ್ತು. ವಾರದಲ್ಲಿ ದುಡಿತದ ಅವಧಿಯು ೪೦ ತಾಸು ಅಥವಾ ಅದಕ್ಕೂ ಕಡಿಮೆಯಾಗಿತ್ತು. ಇವರು ನಿರುದ್ಯೋಗ ವಿಮೆ, ವೈದ್ಯಕೀಯ ವಿಮೆ, ನಿವೃತ್ತಿ ವೇತನ ಮೊದಲಾದ ಸೌಲಭ್ಯಗಳಿಂದಲೂ ಸಂರಕ್ಷಿತರಾಗಿದ್ದಾರೆ. ಮೂರರಲ್ಲಿ ಎರಡು ಮಜೂರ ಕುಟುಂಬಗಳು ತಾವು ವಾಸಿಸುವ ಮನೆಯ ಯಜಮಾನಿಕೆಯನ್ನು ಪಡೆದಿವೆ.

ಓ ಇ ಓ ಸ್ಥಾಪನೆಯಾದುದರಿಂದ ಕಳೆದೊಂದು ವರ್ಷದಲ್ಲಿ ಉದ್ಯೋಗ ರಂಗದಲ್ಲಿ ಮಹಾ ಪ್ರಗತಿಯಾಗಿದೆ. ಶಿಕ್ಷಣವನ್ನು ಅರ್ಧದಲ್ಲಿಯೇ ನಿಲ್ಲಿಸಿ ಉದ್ಯೋಗಕ್ಕೆ ಬಂದವರಿಗೆ ತಮ್ಮ ಶಿಕ್ಷಣವನ್ನು ಮುಂದುವರಿಸಲು ಓ ಇ ಓ ಅವಕಾಶ ಮಾಡಿಕೊಡುತ್ತದೆ. ಕೆಲಸಕ್ಕೆ ಸೇರುವ ಎಳೆಯರ ಉಪಯೋಗಕ್ಕಾಗಿ ತರಬೇತಿ ವ್ಯವಸ್ಥೆಯನ್ನು ಒದಗಿಸುತ್ತದೆ. ಅಲ್ಪಸಂಖ್ಯಾಕ ಪಂಗಡದ ಕೆಲಸಗಾರರು ಉದ್ಯೋಗಾವಕಾಶವಿಲ್ಲದೆ, ಉತ್ತಮ ಕೆಲಸಗಳಿಗಾಗಿ ತರಬೇತಿಯಿಲ್ಲದೆ ತೊಂದರೆಗೀಡಾಗುತ್ತಿರುವುದನ್ನು ತಪ್ಪಿಸಲು ೧೯೬೪ರ ನಾಗರಿಕ ಹಕ್ಕುಗಳ ಕಾಯಿದೆಯು ಪ್ರಯತ್ನ ಮಾಡಿದೆ. ೧೦೦ ಜನರಿಗಿಂತ ಹೆಚ್ಚು ಕೂಲಿಗಾರರಿರುವ ಯಜಮಾನರಿಗೆ ಈ ಕಾಯಿದೆಯು ಅನ್ವಯವಾಗುತ್ತದೆ. ಎ ಎಫ್ ಎಲ್–ಸಿ ಐ ಓ

೧

೨

# ಯೊಡನೆ

# ತ್ರಿ ಸುಧಾರಣೆ

## ಅವಧಿಯಲ್ಲಿ ತೃಪ್ತರಾಗಿದ್ದಾರೆ.

ಯ ಇದೇ ತತ್ವವನ್ನು ಸ್ವೇಚ್ಛಾನುಮತಿಯಿಂದ ಕಾರ್ಯರೂಪಕ್ಕೆ ತೊಡಗಲು ಶಕ್ಯವಾಗುತ್ತಿತ್ತು.

ಅಧ್ಯಕ್ಷ ಜಾನ್ಸನ್ನರು ಕೆಲವು ಮಜೂರ ಶಾಸನಗಳನ್ನು ಎ ಎಫ್ ಎಲ್—ಸಿ ಐ ಓ ವು ಮುಂದಿಟ್ಟ ತತ್ವದ ತಳಹದಿಯಲ್ಲಿ ತಿದ್ದುಪಡಿ ಮಾಡಲು ಕಾಂಗ್ರೆಸಿಗೆ ವಿಶೇಷ ವನವಿ ಮಾಡಿರುವುದರಿಂದ ಮಜೂರರಲ್ಲಿ ಹೊಸ ಉತ್ಸಾಹವು ಮೂಡಿದೆ. ಇಡಿಯ ಅಮೆರಿಕೆಯಲ್ಲಿನ ಮಜೂರರ ವೇತನವನ್ನು ಹೆಚ್ಚಿಸುವುದು, ಶಾಸನದಿಂದ ರಕ್ಷಣೆಯನ್ನು ಹೊಂದದಿರುವ ಇನ್ನೂ ಅನೇಕ ಮಜೂರರನ್ನು ಇದರ ರಕ್ಷಣಾ ಕಕ್ಷೆಗೆ ಒಳಪಡಿಸುವುದು, ನಿರುದ್ಯೋಗ ಪರಿಹಾರ ಧನವನ್ನು ಹೆಚ್ಚಿಸುವುದು ಮತ್ತು ವಿಸ್ತರಿಸುವುದು-ಈ ಸಂದೇಶದ ಮುಖ್ಯಾಂಶಗಳು. ಎ ಎಫ್ ಎಲ್ —ಸಿ ಐ ಓ ದ ಅಭಿಪ್ರಾಯದಂತೆ ಅಮೆರಿಕೆಯ ೫೦ ರಾಜ್ಯಗಳಲ್ಲಿಯೂ ಮಜೂರ ಕಾರ್ಯಕ್ರಮಗಳು ಆಶಾದಾಯಕವಾಗಿವೆ. ಕೆಲವು ವರ್ಷಗಳಲ್ಲಿ ಕೆಲಸಗಾರರ ಪರಿಹಾರ ಧನ, ನಿರುದ್ಯೋಗ ಲಾಭಗಳು, ಕನಿಷ್ಠ ವೇತನ ಮತ್ತು ನಾಗರಿಕ ಅಧಿಕಾರಗಳಲ್ಲಿ ಪ್ರಗತಿಯು ಆವಶ್ಯ ಆಗುವುದು.



ಕಳೆದ ನಂಬರದಲ್ಲಿ ನಡೆದ ಅಮೆರಿಕನ್ ಅಧ್ಯಕ್ಷ ಚುನಾವಣೆಯಲ್ಲಿ ಮಜೂರರು ಜಾನ್ಸನ್ ಮತ್ತು ಹಂಫ್ರಿಯವರಿಗೆ ತಮ್ಮ ಹೃತ್ಪೂರ್ವಕ ಬೆಂಬಲವನ್ನು ವ್ಯಕ್ತಪಡಿಸಿದರು. ಸಾಂಪ್ರದಾಯಿಕವಾಗಿ ಎ ಎಫ್ ಎಲ್—ಸಿ ಐ ಓ ವು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುರಿಯಾಳುಗಳಲ್ಲಿ ಯಾರನ್ನು ಬೆಂಬಲಿಸಬೇಕೆಂದು ಹೇಳುತ್ತದೆ. ರಾಜ್ಯ ವಿಭಾಗಗಳು ಇದನ್ನು ಬೆಂಬಲಿಸುವುದು ಅವುಗಳ ಇಚ್ಛೆಗೆ ಒಳಪಟ್ಟ ವಿಚಾರ. ಚುನಾವಣೆಗಳು ಸಕಟವಾಗುತ್ತ ಬಂದಂತೆ ಹೆಚ್ಚಿನ ರಾಜ್ಯಗಳು ಜಾನ್ಸನ್—ಹಂಫ್ರಿಯವರ ಉಮೇದ್ವಾರಿಕೆಯನ್ನು ಇವು ಬೆಂಬಲಿಸಿದುವು. ಕಾಂಗ್ರೆಸ್ ಸದಸ್ಯರು, ಗವರ್ನರರು, ರಾಜ್ಯ ಶಾಸನ ಸಭೆ ಮೊದಲಾದ ಸಾರ್ವಜನಿಕ ಪದಗಳಿಗೆ ಈ ವರೆಗಿನ ಸಂಪ್ರದಾಯವನ್ನು ಮುರಿದು ತಮ್ಮ ಉಮೇದ್ವಾರರನ್ನು ಇವು ಬೆಂಬಲಿಸಿದುವು. ಇದೇ ಪ್ರಣಾಲಿ ನಗರಗಳಲ್ಲಿನ ಸ್ಥಾನೀಯ ಚುನಾವಣೆಗಳವರೆಗೂ ಮುಂದುವರಿಯಿತು. ಯೂನಿಯನ್ ಸದಸ್ಯರು ಮೇಯರ ಹುದ್ದೆಯಿಂದ ತೊಡಗಿ ಜಿಲ್ಲಾ ಶಾಲಾ ಬೋರ್ಡುಗಳ ಸದಸ್ಯರ ಸ್ಥಾನಗಳ ವರೆಗೂ ನಾಮಕರಣಗೊಂಡವರ ವಿದ್ಯಾರ್ಹತೆಯನ್ನು ಪರಿಶೀಲಿಸುತ್ತಾರೆ.

ಹ್ಯೂಬರ್ಟ್ ಎಚ್. ಹಂಫ್ರಿ.

ಮಜೂರ ಯೂನಿಯನ್ನಿನ ಪ್ರಾರಂಭದ ದಿನಗಳಲ್ಲಿ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ನೀಡಬೇಕೆಂಬುದು ಮಜೂರರ ಬೇಡಿಕೆಯಿತ್ತು. ಆದರೆ ಇಂದು ಸ್ಥಳೀಯ ಸರಕಾರವನ್ನು ಯಾರು ನಡಸುತ್ತಾರೆ ಎಂದವರು ನೋಡುತ್ತಾರೆ. ಎಂಬತ್ತೈದು ವರ್ಷಗಳ ಅಮೆರಿಕನ್ ಮಜೂರರು ಇತರ ನಾಗರಿಕರಂತೆಯೇ ಸುಖ ಸಂಮೃದ್ಧಿಯ ದಾರಿಯಲ್ಲಿ ಮುನ್ನಡೆಯುತ್ತಿದ್ದಾರೆ.

ದೇಶದ ಸಾಮಾನ್ಯ ಪ್ರಜೆಯ ಸ್ಥಾನಮಾನಗಳನ್ನು ಮಜೂರರೂ ಹೊಂದಬೇಕು. ಆದರೆ, ಜನಹಿತವನ್ನು ಪಕ್ಕಕ್ಕಿಟ್ಟು ಮಜೂರರ ಹಿತವನ್ನಷ್ಟೇ ನೋಡುವ ಕುದೃಷ್ಟಿ ಭಾರತೀಯ ಮಜೂರ ಯೂನಿಯನ್ ನಾಯಕರ ದೋಷ. ರಾತ್ರೆ ಬೆಳಗಾಗುವುದರೊಳಗೆ ನಾವು ಪ್ರಪಂಚವನ್ನು ತಲೆಕೆಳಗು ಮಾಡುವಂತಿಲ್ಲ. ಅಮೆರಿಕೆಯಂತಹ ಸುಸಂಪನ್ನ ರಾಷ್ಟ್ರದಲ್ಲೂ ಮಜೂರರ ಕಲ್ಯಾಣವು ಸ್ಥಿರವಾಗಲು ೮೫ ವರ್ಷಗಳು ಬೇಕಾದುವೆಂಬುದನ್ನು ಮರೆಯಬಾರದು. ಕಮ್ಯುನಿಜಂ ನಮ್ಮ ದೇಶಕ್ಕೆ ಒಪ್ಪದ ತತ್ವ. ಪ್ರಜಾತಂತ್ರ ರಾಜ್ಯದಲ್ಲಿ ಸಮಾಜವಾದ ಮಾದರಿಯ ಕಲ್ಯಾಣ ರಾಷ್ಟ್ರದಲ್ಲಿ ಮಜೂರನಿಗೂ ಸಮಾನ ಸ್ಥಾನವಿದೆ. ಅದರೊಡನೆ ದೇಶದತ್ತ ಆತನಿಗ ಕರ್ತವ್ಯವೂ ಇದೆ.

### ಚಿತ್ರಗಳು

೧. ನಿವೃತ್ತರಾದ ಅಮೆರಿಕನ್ ಮಜೂರರು ಮನೋರಂಜನೆಯಲ್ಲಿ ಸಮಯ ಕಳೆಯುತ್ತಾರೆ.

೨. ರಜಾದ ದಿನಗಳಲ್ಲಿ ಪಿಕ್‌ನಿಕ್‌ಗಳಿಗೆ ತೆರಳುವುದು, ಅಮೆರಿಕನ್ ಮಜೂರರ ಹವ್ಯಾಸ. ಕೆಲವೊಮ್ಮೆ ಅವರು ದೂರ ದೂರದ ದೇಶಗಳಿಗೂ ಯಾತ್ರೆಗೆ ಹೋಗುವುದಿದೆ.

೩. ಕೆಲಸಗಾರರಲ್ಲಿ ವೈಜ್ಞಾನಿಕ ಯೋಗ್ಯತೆಯನ್ನು ಹೆಚ್ಚಿಸುವಲ್ಲಿಯೂ ಮಜೂರ ಯೂನಿಯನ್ ಈಗ ಪ್ರಯತ್ನ ಮಾಡುತ್ತಿವೆ. ಸಮಾಜಿಕ ಮತ್ತು ಆರ್ಥಿಕ ಅಭ್ಯಾಸಗಳಲ್ಲಿ ವಿಶ್ವವಿದ್ಯಾಲಯಗಳ ನೆರವು ಯೂನಿಯನ್ನಿಗೆ ಸಿಗುತ್ತದೆ.

---

### ರಾಷ್ಟ್ರೀಯ ರಕ್ಷಣಾ ನಿಧಿಗೆ ಕೆನರಾ ಬ್ಯಾಂಕ್ ಮತ್ತು ಸಿಬಂದಿಯ ರೂ 85,000ದ ಕೊಡುಗೆ

ಕೆನರಾ ಬ್ಯಾಂಕ್ ಲಿಮಿಟೆಡ್‌ನ ಪರವಾಗಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ಡಿ. ಪೈಯವರು ತಾ 14-10-66ರಂದು ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ರೂ. 50,000ದ ಒಂದು ಚೆಕ್ಕನ್ನು ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಅರ್ಪಿಸಿದರು.

ಅದೇ ಸಂದರ್ಭದಲ್ಲಿ ಬ್ಯಾಂಕ್ ಸಿಬಂದಿಯವರ ಸ್ವಯಂಪ್ರೇರಣೆಯ ದೇಣಿಗೆ ಮತ್ತು ಅಷ್ಟೇ ಬ್ಯಾಂಕಿನ ಕೊಡುಗೆಯ ಪ್ರತಿನಿಧಿಸುವ ರೂ. 17,500ರ ಎರಡು ಚೆಕ್ಕುಗಳನ್ನು ಕೆನರಾ ಬ್ಯಾಂಕ್ ಗೋಲ್ಡನ್ ಜ್ಯುಬಿಲಿ ಸ್ಟಾಫ್ ವೆಲ್‌ಫೇರ್ ಫಂಡಿನ ಅಧ್ಯಕ್ಷ ಶ್ರೀ ಯಸ್. ಎಮ್. ರಾವ್ ಮತ್ತು ಶ್ರೀ ಎ. ಡಿ. ಪೈಯವರು ಮುಖ್ಯಮಂತ್ರಿಗಳಿಗೆ ಒಪ್ಪಿಸಿದರು. ಈ ಮೇಲಿನ ಕೊಡುಗೆಗಳು ಮುಖ್ಯ ಮಂತ್ರಿಗಳ ಚೇಂಬರ್‌ನಲ್ಲಿ ಸಣ್ಣ ಸಮಾರಂಭದಲ್ಲಿ ನಡೆದವು. ಸರ್ವಶ್ರೀ ಸ್ಪೀಕರ್ ಬಿ. ವಿ. ಬಾಕಿನ್, ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವ, ಕೆನರಾ ಬ್ಯಾಂಕಿನ ಡೈರೆಕ್ಟರ್ ಜೇನಾಮ್ಸೆ ದೇಸಾಯಿ ಇವರು ಉಪಸ್ಥಿತರಿದ್ದರು.

ಹಿಂದೆ 1962ರಲ್ಲಿ ಚೈನಾ ಆಕ್ರಮಣದ ವೇಳೆಯಲ್ಲಿ ಕೆನರಾ ಬ್ಯಾಂಕ್ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ 1,10,000ಕ್ಕೂ ಮಿಕ್ಕಿದ ಕೊಡುಗೆಯನ್ನು ನೀಡಿತ್ತು.

---

ತ್ರಿ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

# ರಾಜ್ಯದ ಹೊಸ ಆಹಾರ ನೀತಿ

## ಏಕರೆವಾರು ಆಹಾರ ಧಾನ್ಯ ಸಂಗ್ರಹಣೆ

ಮೈಸೂರು ರಾಜ್ಯದ ೧೯೬೫-೬೬ರ ಹೊಸ ಆಹಾರ ನೀತಿಯ ಮುಖ್ಯಾಂಶಗಳನ್ನು ಈ ಕೆಳಗೆ ಕೊಡಲಾಗಿದೆ.

### ಭತ್ತ ಸಂಗ್ರಹಣೆ

ದೊಡ್ಡ ಪ್ರಮಾಣದ ಕಟ್ಟೆಯ ನೀರಾವರಿಗೊಳಪಟ್ಟ ಜಮೀನುಗಳು.

೧ ಎಕರೆ —ಇಲ್ಲ

೨ರಿಂದ ೫ ಎಕರೆ —ಪ್ರತಿ ಎಕರೆಗೆ ಎರಡು ಕ್ವಿಂಟಾಲ್.

೬ರಿಂದ ೧೦ ಎಕರೆ —ಪ್ರತಿ ಎಕರೆಗೆ ನಾಲ್ಕು ಕ್ವಿಂ.

೧೧ ಎಕರೆ ಮತ್ತು ಮೇಲ್ಪಟ್ಟು—ಪ್ರತಿ ಎಕರೆಗೆ ಆರು ಕ್ವಿಂ.

### ಇತರ ತರಿ ಸಾಗು ಜಮೀನು

೧ ಎಕರೆ —ಇಲ್ಲ

೨ರಿಂದ ೫ ಎಕರೆ (೨ ಸೇರಿ) —ಪ್ರತಿ ಎಕರೆಗೆ ಒಂದು ಕ್ವಿಂ.

೬ರಿಂದ ೧೦ ಎಕರೆ (೨ ಸೇರಿ) —ಪ್ರತಿ ಎಕರೆಗೆ ಎರಡು ಕ್ವಿಂ.

೧೧ ಎಕರೆ ಮತ್ತು ಮೇಲ್ಪಟ್ಟು—ಪ್ರತಿ ಎಕರೆಗೆ ಮೂರು ಕ್ವಿಂ.

ಪ್ರತಿ ಹಿಡುವಳಿದಾರನಿಗೆ ಸೇರಿಸಿದ ಆಯಾ ಬೆಳೆಗಳ ಒಟ್ಟಾರೆ ಸಾಗುವಳಿ ವಿಸ್ತೀರ್ಣದ ಮೇಲೆ ಅವು ಒಂದು ಗ್ರಾಮದಲ್ಲಿರಲಿ ಅಥವಾ ಹೆಚ್ಚಿಗೆ ಗ್ರಾಮಗಳಲ್ಲಿರಲಿ ಅವರು ಸರಕಾರಕ್ಕೆ ಪಾವತಿಮಾಡಬೇಕಾದ "ಲೆವಿ"ಯನ್ನು ನಿರ್ಧರಿಸಲಾಗುವುದು. ಸರ್ಕಾರಕ್ಕೆ ಲೆವಿ ಕೊಡಲು ಸ್ವಂತ ಸಾಗುವಳಿ ಮಾಡುತ್ತಿದ್ದರೆ ಹಿಡುವಳಿದಾರರು, ಗೇಣಿ ಅಥವಾ ವಾರ ಸಾಗುವಳಿ ಮಾಡುತ್ತಿದ್ದರೆ ಗೇಣಿದಾರರು ಬದ್ಧರಾಗಿರುತ್ತಾರೆ.

ಬೆಳೆಗಾರರು ವಿಧಾಯಕ ಮಾಡಲ್ಪಟ್ಟ ಲೆವಿಯನ್ನು ಕೊಟ್ಟ ನಂತರ ಉಳಿದ ದವಸವನ್ನು ತಮಗೆ ಇಷ್ಟ ಬಂದಂತೆ ವಿಲೇವಾರಿ ಮಾಡಲು ಸ್ವತಂತ್ರರಾಗಿರುತ್ತಾರೆ.

"ಲೆವಿ" ಬಗ್ಗೆ ಪಾವತಿ ಮಾಡುವ ಭತ್ತದ ಬೆಲೆಯನ್ನು ಸರ್ಕಾರದವರು ನಿರ್ಧರಿಸುವ ದರದಲ್ಲಿ "ಲೆವಿ"ಗಿಂತ ಹೆಚ್ಚುವರಿ ಭತ್ತ ಕೊಟ್ಟಲ್ಲಿ ಸರ್ಕಾರದವರು ಈ ಕೆಳಗೆ ಕಂಡಂತೆ ನಿಗದಿ ಮಾಡಿರುವ ಕನಿಷ್ಟ ದರಗಳಿಗೆ ಕಡಿಮೆ ಇಲ್ಲದೆ ಆ ಕಾಲದಲ್ಲಿ ನಿಶ್ಚಯಿಸಲ್ಪಡುವ ದರದಲ್ಲಿ ಕೊಂಡುಕೊಳ್ಳುವುದು.

### ಭತ್ತ ಕ್ವಿಂಟಾಲಿನ ದರದಲ್ಲಿ

೧) ಉತ್ತಮ ದರ್ಜೆಯದು (ಬಂಗಾರಕೋವಿ, ಕೊಯಮುತ್ತೂರು ಸಣ್ಣ ವಗೈರೆ) ರೂ. ೪೨—೫೦.

೨) ಇತರ ಉತ್ತಮ ದರ್ಜೆಯದು (ಮಲ್ನಾಡು ಸಣ್ಣ, ರತ್ನ ಚೂಡಿ ವಗೈರೆ) ರೂ. ೩೯—೫೦

೩) ಮಧ್ಯಮ ದರ್ಜೆಯದು (ಹಾಲುಬ್ಬಲು, ದಪ್ಪಣಸಾಲೆ, ಪಾಳ್ಯ ವಗೈರೆ) ರೂ. ೩೬—೫೦

೪) ಕಡಿಮೆ ದರ್ಜೆಯದು (ಮಲ್ನಾಡ್ ಗಿಡ್ಡ, ಬಿಳಿ ಕಗ್ಗ, ಕರೀ ಭತ್ತ ವಗೈರೆ) ರೂ. ೩೫-೫೦

ಪ್ರತಿ ಬೆಳೆಗಾರರು ಸರ್ಕಾರಕ್ಕೆ ಪಾವತಿ ಮಾಡಬೇಕಾಗುವ ಭತ್ತ ತಪಶೀಲಿನ ಪಟ್ಟಿಯನ್ನು ಆಯಾ ಗ್ರಾಮಗಳಲ್ಲಿ ಪ್ರಕಟಿಸಲಾಗುವುದು. ಇದಕ್ಕನುಸಾರವಾಗಿ ಬೆಳೆಗಾರರು ತಾವು ಕೊಡಬೇಕೆಂದು ನಿಗದಿಯಾಗಿರುವ ಭತ್ತವನ್ನು ಪ್ರತಿ ಗ್ರಾಮಕ್ಕೆ ನೇಮಿತವಾಗಿರುವ ಏಜಂಟರಿಗೆ ಪಾವತಿ ಮಾಡಬೇಕು. ಪಾವತಿ ಮಾಡುವ ಭತ್ತ ಒಳ್ಳೆ ರೀತಿಯದಾಗಿರಬೇಕು. ಮಣ್ಣು, ಮುಗ್ಗಿದ ಕಾಳು, ಈ ಬಗ್ಗೆ ಸರ್ಕಾರದವರು ನಿಗದಿ ಮಾಡುವ ಪರಿಮಿತಿಯೊಳಗಿರಬೇಕು.

ಮೈಸೂರು ವಿಭಾಗಕ್ಕೆ ಸೇರಿದ ಎಲ್ಲಾ ಜಿಲ್ಲೆಗಳಲ್ಲೂ ಭತ್ತವನ್ನು ಕೊಳ್ಳುವ ಏರ್ಪಾಡನ್ನು ಆಹಾರ ಕಾರ್ಪೋರೇಶನಿನವರು ಕೈಗೊಳ್ಳುತ್ತಾರೆ. ಅವರು ಗ್ರಾಮದ ಮಟ್ಟಗಳಲ್ಲಿ ತಮ್ಮ ಏಜಂಟರನ್ನು ನೇಮಿಸಿ ರೈತರು ಭತ್ತವನ್ನು ಕೊಟ್ಟ ತಕ್ಷಣ ಹಣ ಪಾವತಿ ಮಾಡುವ ವ್ಯವಸ್ಥೆ ಮಾಡುತ್ತಾರೆ.

ನಿಗದಿಯಾದ ಭತ್ತ ಅಥವಾ ಜೋಳವನ್ನು ಕೊಡದೆ ತಪ್ಪುವ ಬೆಳೆಗಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಮತ್ತು ಧಾನ್ಯವನ್ನು ವಸೂಲ್ಮಾಡಲಾಗುವುದು. ಸಾಗುವಳಿದಾರರುಗಳು ತಾವು ಕೊಡಬೇಕೆಂದು ನಿಗದಿ ಮಾಡಲ್ಪಟ್ಟ ಭತ್ತವನ್ನು ಗೊತ್ತಾದ ಏಜಂಟರುಗಳಿಗೆ ಯಾವ ಒತ್ತಾಯವೂ ಇಲ್ಲದೆ ತಲುಪಿಸಬೇಕಾಗಿದೆ.

---

### ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 464/1965.

ವಾದಿ: ಚಂದ್ರಶೇಖರ ಸೆಟ್ಟಿ.

ಪ್ರತಿವಾದಿ: ವೆಂಕಪ್ಪ ಸೆಟ್ಟಿ.

ಉಡುಪಿ ತಾಲ್ಲೂಕು ಬಿಲ್ಲಾಡಿ ಗ್ರಾಮದಲ್ಲಿರುವ ನೈಲಾಡಿ ದೊಡ್ಮನೆ ನಂದ್ಯಪ್ಪ ಸೆಟ್ರ ಅಳಿಯ ವೆಂಕಪ್ಪ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯು ವಾದಿಗೆ ತಾರೀಕು 1-7-1963ರಲ್ಲು ರೂ. 436-00ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 6-11-65ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

*(Sd.)* **N. S. Parameshwaraih,**
**Advocate for Plff.**

**Date 27-10-65.**
**Coondapoor.**


ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
**ಮಂಗಳೂರು—3**



**ಉಪಯುಕ್ತವಾದ ಕೆಲವು ಪುಸ್ತಕಗಳು**

| ಪುಸ್ತಕ | | ರೂ. ನ. |
|---|---|---|
| ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ | (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ) | 1=50 |
| ನಡುಹಗಲಿನ ಕಗ್ಗತ್ತಲೆ | (ಅನು: ಕು. ಶಿ. ಹರಿದಾಸ ಭಟ್) | 2=50 |
| ಶಿಕ್ಷಣದ ಧ್ಯೇಯಗಳು | (ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ) | 2=25 |
| ಸ್ವಾತಂತ್ರ್ಯ ಮತ್ತು ಸಂಸ್ಕೃತಿ | (ಅನು: ಕು.ಶಿ.ಹರಿದಾಸ ಭಟ್) | 2=00 |
| ಹಿರೋಶಿಮಾದಿಂದ ಜಿನೇವ | (ಯು. ಆರ್. ಆಚಾರ್ಯ) | 1=50 |
| ಮೋಹದ ಮಹಾಜಾಲ | (ವೀರಪ್ಪ ಯಗಟಿ) | 1=75 |
| ಭಾರತೀಯ ಮಹಾಪುರುಷರು | (ಎಸ್. ಗೋಪಿಚಂದ ರಾವ್) | 1=50 |
| ಕಥಾ ಕೌಮುದಿ | (ಎಸ್. ಗೋಪಿಚಂದ ರಾವ್) | 1=50 |
| ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್ | (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ) | 1=25 |
| ಏಶಿಯದ ಸಂಪತ್ತು | (ಕು. ಶಿ. ಹರಿದಾಸ ಭಟ್) | 2=00 |
| ಅಮೇರಿಕದ ಆರು ಕತೆಗಳು | (ಅನು: ಕು.ಶಿ.ಹರಿದಾಸ ಭಟ್) | 1=75 |
| ಕುಲವಿಲ್ಲದ ಹೆಣ್ಣು | (ಪಿ. ವೆಂಕೋಬಾಚಾರ್ಯ) | 1=50 |
| ಚಿತ್ರಾಂಗದೆ | (ಅನು: ಕೆ. ಕೆ. ಶೆಟ್ಟಿ) | 0=60 |
| ರವೀಂದ್ರರ ಕತೆಗಳು | (ಹನುಮಂತ ರಾವ್ ಮಾಂಜ್ರೇಕರ) | 0=90 |
| ಹಸುರು ಹಂಸ | (ನಚಿಕೇತ) | 2=00 |
| ಭಾವಾರ್ಚನೆ | (ನಚಿಕೇತ) | 1=25 |
| ಋಣಯಾತ್ರೆ | (ನಚಿಕೇತ) | 1=50 |
| ಗೀತೆಯ ಕೈಗನ್ನಡಿ | (ಹೊಸಕೆರೆ ಚಿದಂಬರಯ್ಯ) | 1=00 |

ವಿವರವಾದ ಪಟ್ಟಿಗಾಗಿ ಬರೆಯಿರಿ:

**ನವಯುಗ ಪ್ರೆಸ್, ಉಡುಪಿ**

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.


### ಪಟ್ಟಾಭಿಷೇಕ ಮಹೋತ್ಸವ

ಕೋಲಾರ ಜಿಲ್ಲಾ ಶ್ರೀನಿವಾಸಪುರ ತಾಲೂಕು ನಂಬಿಹಳ್ಳಿಯ ವಿಶ್ವಬ್ರಾಹ್ಮಣ ಸಮಾಜದ ಶ್ರೀನಾಚ್ಚತ್ರೀರ ಸಿಂಹಾಸನಾಧೀಶ್ವರ ಶ್ರೀ ಶ್ರೀನಾಚ್ಚಣ್ಣನಮೂರ್ತಿ ಮಹಾಸ್ವಾಮಿಗಳವರ ಉತ್ತರಾಧಿಕಾರಿಯ ಪಟ್ಟಾಭಿಷೇಕ ಮಹೋತ್ಸವವು ತಾ. 29-10-65ರಿಂದ 31ರ ವರೆಗೆ ಶ್ರೀ ಆನೆಗುಂದೀ ಜಗದ್ಗುರು ಸಿಂಹಾಸನ ಶ್ರೀ ವೇದಗಿರಿ-ಹಿರೇಹಾಳು ಮಠಾಧ್ಯಕ್ಷ ಶ್ರೀ ಶ್ರೀಮತ್ಕೋಟೇಂದ್ರ ತೀರ್ಥ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಜರಗಿತು.

### ಮಹಿಳೆಯರ ದಿನಾಚರಣೆ

ಸುರತ್ಕಲ್ ಅಗ್ಗಿದಕಳಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದಿನಾಂಕ ೨೮ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಶ್ರೀಮತಿ ಯಂ. ಬಿ. ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಶ್ರೀ ರಾಮಚಂದ್ರರಾವ್ ಮತ್ತು ಶ್ರೀ ಟಿ. ನಾರಾಯಣ ರಾವ್ ಭಾಷಣವಿತ್ತರು.

### ಲೋಕಸೇವಾ ವೃಂದದಲ್ಲಿ ಮಹಿಳಾ ದಿನ

ತಾ. 29-10-65ರಂದು ಲೋಕಸೇವಾ ಹೈಸ್ಕೂಲಿನಲ್ಲಿ ಲೋಕಸೇವಾ ಹಾ. ಎ. ಶಾಲೆಯ ಹಿಂದಿನ ಮೆನೇಜರರಾದ ಶ್ರೀಮತಿ ಮಾಡಿಯಾಲ ಗೌರಮ್ಮನವರ ಅಧ್ಯಕ್ಷತೆಯಲ್ಲಿ ಮಹಿಳಾ ದಿನವನ್ನು ಆಚರಿಸಲಾಯಿತು. ಹೈಸ್ಕೂಲು ವಿದ್ಯಾರ್ಥಿಗಳಿಂದ ಭಾಷಣವಾದ ಬಳಿಕ ಪ್ರಧಾನ ಅತಿಥಿಗಳಾದ ಶ್ರೀ ಕೆ. ಗೋವಿಂದ ಭಟ್ಟರು ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಇತರ ವೀರ ಮಹಿಳೆಯರ ಕುರಿತು ಬೋಧಪ್ರದವಾಗಿ ಮಾತನಾಡಿದರು. ಶ್ರೀಗಳಾದ ಕೆ. ಎಸ್. ಕೃಷ್ಣ ಭಟ್, ಯು. ಗಂಗಾಧರ ಭಟ್, ಕೆ. ಸಂಜೀವ ಶೆಟ್ಟಿ ಹಾಗೂ ಕುಮಾರಿ ದೇವಕಿಯವರು ಮಾತನಾಡಿದ ಮೇಲೆ ಸಭಾಧ್ಯಕ್ಷೆಯವರು ರಾಷ್ಟ್ರೀಯ ಗಂಡಾಂತರವು ಇದಿರು ಬಂದಿರುವೀ ಸಮಯದಲ್ಲಿ ಮಹಿಳೆಯರು ಹೇಗೆ ರಾಷ್ಟ್ರ ಕಾರ್ಯಕ್ಕೆ ನೆರವಾಗಬೇಕೆಂಬುದನ್ನೂ ವಿವರಿಸಿ ಸ್ತ್ರೀಯು ಪ್ರೇಮ, ಭಕ್ತಿ, ಸೇವೆ ಹಾಗೂ ವಿನಯದಿಂದ ಪವಿತ್ರ ಶೀಲಕ್ಕೆ ಕುಂದುಂಟಾಗದಂತೆ ಮನೆಯನ್ನೂ ದೇಶವನ್ನೂ ಹೇಗೆ ಬೆಳಗಬೇಕೆಂದು ಕರೆಯಿತ್ತರು.

### ಮಹಾಸಭೆ

ಮಂಗಳೂರು ಶ್ರೀ ಜ್ಞಾನೋದಯ ಸಮಾಜದ ಮಹಾಸಭೆಯು ಇತ್ತೀಚೆಗೆ ಶ್ರೀ ಎಚ್. ಕೆ. ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಿ, ಪಾಕಿಸ್ತಾನ ಚೀನ ಧಾಳಿಕೋರರಿಂದ ಭಾರತ ರಕ್ಷಣಾ ಕಾರ್ಯದಲ್ಲಿ ಹುತಾತ್ಮರಾದ ನಮ್ಮ ಧೀರ ಯೋಧರಿಗೆ ಶ್ರದ್ಧಾಂಜಲಿ ಸಮರ್ಪಿಸಿ ರಕ್ಷಣಾ ನಿಧಿಗೆ ಒಂದು ನೂರ ಒಂದು ರೂಪಾಯಿ ವಂತಿಗೆ ಕೊಡಬೇಕಾಗಿಯೂ ನಾಗರಿಕರಿಗೆ ಪ್ರಥಮ ಚಿಕಿತ್ಸೆ ತರಬೇತಿ ನೀಡಲು ಸಮಾಜ ಮಂದಿರವನ್ನು ಉಪಯೋಗಿಸಬೇಕಾಗಿಯೂ ಮತ್ತು ಸಮಾಜದ ಎಲ್ಲಾ ಸದಸ್ಯರು ಪಕ್ಷ, ಪಂಗಡ, ಜಾತಿ ಮತ ಭೇದವಿಲ್ಲದೆ ರಾಷ್ಟ್ರರಕ್ಷಣೆಯ ಯಾವತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರೋತ್ಸಾಹಿಸಬೇಕಾಗಿಯೂ ನಿರ್ಣಯಿಸಲಾಯಿತು.

## ಕಿತ್ತೂರಿನ ಕಲಿ

(ಆರನೇ ಪುಟದಿಂದ)

ಯು ಪಟ್ಟಿನ ಮೇಲೆ ಪೆಟ್ಟನ್ನು ತಿಂದು ಒಮ್ಮೆ ಬೆಚ್ಚಿತು.

ಆದರೆ ಈ ಗೆಲವೇ ಶಾಶ್ವತವೆಂದು ಅವಳು ಹಿಗ್ಗಲಿಲ್ಲ. ಪೆಟ್ಟು ತಿಂದ ಸಿಂಹವು ಪುನಃ ತಲೆಯೆತ್ತುವಂತೆ ಇಂಗ್ಲೀಷರು ಅವರು ಖಂಡಿತವಾಗಿಯೂ ಪುನಃ ಧಾಳಿ ಇಡದೆ ಬಿಡರು ಎಂದು ದೂರದರ್ಶಿ ಚೆನ್ನಮ್ಮನಿಗೆ ಹೊಳೆಯದೇ ಇರಲಿಲ್ಲ. ಆದುದರಿಂದ ಸದಾ ಜಾಗೃತವಾಗಿಯೇ ತನ್ನ ಸೇನೆಗೂ ಪ್ರಜಾಕೋಟಿಗೂ ಕಟ್ಟಪ್ಪಣೆ ವಿಧಿಸಿ ಶತ್ರು ಬರವನ್ನು ನಿರೀಕ್ಷಿಸುತ್ತಾ ಇದ್ದಳು.

ಕೂಡಲೇ ಅವಳ ಎಣಿಕೆಯಂತೆ ನಡೆಯಿತು. ಪಶ್ಚಿಮದಿಂದ ಚೇತರಿಸಿಕೊಂಡು ಅಪಮಾನದ ಬೆಂಕಿಯಲ್ಲಿ ಬೇಯುತ್ತಿದ್ದ ಬ್ರಿಟಿಷರು ಹೊಸದಾಗಿ ಹಾಗೂ ಸಮರ್ಥ ಸೇನಾನಿಯಾದ ಕರ್ನಲ್ ಡೀಕನ ನೇತೃತ್ವದಲ್ಲಿ ಪುನಃ ಭಾರೀ ಸೈನ್ಯವನ್ನು ಕೊಟ್ಟು ಕಳುಹಿಸಿದರು. ಕಿತ್ತೂರಿನಲ್ಲೂ ಸುಭಟರ ಸಂಖ್ಯೆಗೆ ಮಿತಿ ಇರಲಿಲ್ಲ. ಪುನಃ ಘನಘೋರ ಸಮರವಾಯಿತು. ಕಿತ್ತೂರಿನ ಪುಣ್ಯ ಮೇಲಾಯಿತು ಎನ್ನುವಷ್ಟರಲ್ಲಿ ಯಾರೋ ಚೆನ್ನಮ್ಮನ ಕಡೆಯ ದ್ರೋಹಿಗಳು ಕೋಟೆಯ ಗಚ್ಚನ್ನು ಕದನಿ ತೋಫುಗಳನ್ನು ಕಾರ್ಯಹೀನ ಮಾಡಿದರು. ರಣದಿ ಸ್ವಜನರಿಂದಲೇ ದ್ರೋಹ ಘಟಿಸಿತು. ಪರಿಣಾಮವಾಗಿ ಚೆನ್ನಮ್ಮನು ಬ್ರಿಟಿಷರ ಕೈಸೆರೆಯಾಗಬೇಕಾಯಿತು. ಕೋಟೆಯೊಳಗಿದ್ದ ರಾಣಿಯೂ ಪರಿವಾರವೂ ಗುಪ್ತದ್ವಾರದಿಂದ ಪಾರಾಗುವುದು ಪತ್ತೆಯಾಗಿ ಹೋಯಿತು. ಎಲ್ಲರನ್ನೂ ಬ್ರಿಟಿಷರು ಬೈಲಹೊಂಗಲ ದುರ್ಗದಲ್ಲಿ ಸೆರೆಯಿಟ್ಟರು. ಕಿತ್ತೂರಿನ ಕೋಟೆಯ ಮೇಲೆ 'ಯೂನಿಯನ್ ಜಾಕ್' ಹಾರಾಡಿತು. ಅಪಮಾನ ಹಾಗೂ ನಿರಾಶೆಯಿಂದ ದುಃಖ ಪೀಡಿತಳಾದ ಕಿತ್ತೂರು ರಾಣಿಯು ಅಲ್ಲಿಯೇ ಕೆಲಕಾಲ ಜೀವಿಸಿದ್ದು ಪರಲೋಕ ಚಿಂತೆಯಲ್ಲಿಯೇ ಮೃತಳಾದಳು.

ಧನ್ಯ! ಧನ್ಯೆ! ಕಿತ್ತೂರು ಚೆನ್ನಮ್ಮ! ಧನ್ಯ ಕನ್ನಡದ ಕುಲಕೋಟಿ ಉದ್ಧಾರಿಣಿ! ಸಮರೋತ್ಸುಕ ವೀರ ತಪಸ್ವಿನಿ! ಅಂದಿನ ಸಮಯದಲ್ಲಿ ಉಂಟಾಗಿದ್ದ ಆಕ್ರಮಣ ಭೀತಿಯು ಇಂದೂ ತಲೆದೋರಿದೆ. ಒಬ್ಬರಲ್ಲ ಇನ್ನೊಬ್ಬರು ಭಾರತದ ಒತ್ತಡದ ಕ್ರಿಯೆಯನ್ನು ನಡೆಸುತ್ತಿದ್ದಾರೆ. ಸ್ವಾತಂತ್ರ್ಯ ರಕ್ಷಣೆಯ ಪವಿತ್ರ ಕಾರ್ಯದಲ್ಲಿ ನಾವು ಒಂದಾಗಿ ಹೋರಾಡಿದರೋಣ.







### ಸರಿ ತಪ್ಪುಗಳ ಎರಡು ಚೂರು ನಗು

# ವಾಡಿಕೆ ಮಾತಿನ ಶಕ್ತಿ

ಮಾತಿಗಿರುವ ಅಪರಿಮಿತ ಶಕ್ತಿಯನ್ನು ತೂಗಿ ನೋಡಿದವರು ಯಾರು? ಆದರೆ, ಮಾತಿನಯುಗದಲ್ಲಿ ಆಡುವ ಮಾತಿನ ಕಡೆಗೆ, ಅದರ ಪ್ರಭಾವದ ಬಗ್ಗೆ ಯಾರು ಚಿಂತಿಸುತ್ತಾರೆ? ನಿಶ್ಚಿಂತೆಯೇ ವಾಡಿಕೆಯಾಗಿರುವ ಕಾಲವಿದು.... ..

ಶ್ರೀ "ರಂಗ"

ಒಂದುಸಿನ ತಂದೆ ಮಗನನ್ನು ಕುರಿತು "ಲೋ, ರಾಮನ ಮನೆಗೆ ಹೋಗಿ ನಾಳೆ ಬೆಳಿಗ್ಗೆ ಕೆಲಸಕ್ಕೆ ಬರಬೇಕೂ ಅಂತ ಹೇಳಿ ಬಾರೋ. ಖಂಡಿತ ಬರಬೇಕಂತೆ ಅಂತ ಒತ್ತಿ ಹೇಳು ತಿಳೀತೇನೋ"

"ಖಂಡಿತಾ ಅಂತ ಒತ್ತಿ ಹೇಳಿದರೆ ತಪ್ಪಂತೆ ಅಪ್ಪಾ."

"ಯಾರೋ ಹೇಳಿದ್ದೂ?"

"ಪಂಡಿತ ಮಹಾಶಾಸ್ತ್ರಿ ಹೇಳಿದ್ರಪ್ಪಾ"

"ಆದಕ್ಕೂ ರಾಮನ ಮನೆಗೆ ಹೋಗಿ ಬರೋದಕ್ಕೂ ಏನು ಸಂಬಂಧ?"

"ಖಂಡಿತಾ ಅಂತ ಒತ್ತಿ ಹೇಳಬಾರದಂತೆ, ಬರೀ ಬಾರದಂತೆ. ಕಂಡಿತಾ ಅಂತ ಬರೀ ಬೇಕಂತೆ; ಹೇಳಬೇಕಂತೆ"

"ಯಾಕಂತೆ?"

'ಖಣ್ ತಪ್ಪಂತೆ. ಕಣ್ ಸರಿಯಂತೆ. ಕಣ್ಣು—ಹಿತ ಕಂಡಿತ, ಕಂಡದ್ದು ಕಂಡ ಹಾಗೆ ಹೇಳೋದಕ್ಕೆ ಖಂಡಿತಾ ಅಂತಾರಂತೆ. ಅದ್ದರಿಂದ ಒತ್ತಿ—"

ನಿನ್ನ ತಲೆ ಮಾಸ್ತ್ರ ತಲೆ. ಅದೆಲ್ಲಾ ಹೇಳೋಲಿಕ್ಕೆ ಮಸ್ತಕದ ಬದಲೇ ಕಾಯಿ ... ಈಗ ರಾಮನ ಹತ್ರ ಹೋಗಿ ಉಚಿತ ಬರಬೇಕೂಂತ ಒತ್ತಿಯೇ ಹೇಳು. ನೀನು ಮಲ್ಲಿಕೆ ನಾಲಿಗೆ ತುದೀಲಿ ಕಂಡಿತಾ ಗಿಂಡಿತಾ ಅಂದರೆ ಅವನಿಗೆ ಅರ್ಥವಾಗೋದಿಲ್ಲ. ಮನಸ್ಸಿಗೆ ಖಾತ್ರಿಯಾಗಿ ಖಚಿತವಾಗಬೇಕಾದರೆ ಖಂಡಿತವೇ ಬೇಕು. ಜೋರಾಗಿ ಜೋರಾಗಿ ಹೇಳಬೇಕು. ನಾಲಿಗೆ ಸಡಿಲು ಬಿಟ್ಟು ಮಾತಾಡ ಬೇಡಾ— ತಿಳೀತೇನೋ'

o o o o o

ಹಂಡತಿ: "ನೆರೆಮನೆಯಿಂದ ನಿನ್ನೆ ಒಂದು ರೂಪಾಯಿ ಸಾಲ ಕೇಳಿಕೊಂಡು ಬಂದ್ರಲ್ಲಾ— ನಾಳೆ ಖಂಡಿತ ವಾಪಾಸು ಕೊಡ್ತೇನೆ ಅಂತ ಹೇಳಿ? ಮರ್ತ್ ಬಿಟ್ರೇನು?"

ಗಂಡ: "ಮರೆಲಿಲ್ಲೇ. ಖಂಡಿತ ನಾಳೆ ಕೊಡ್ತೇನೇಂತ ಒತ್ತಿ ಹೇಳ್ಲಿಲ್ಲ ಬಿಡೂ, ಕಂಡಿತಾ ಅಂತ ಮೆಲ್ಲಗೇ ಹೇಳಿದ್ದೇನೆ. ಕೊಟ್ರಾಯಿತು ಸಾವಕಾಶ.

o o o

'ಆಕಾಶದಲ್ಲಿ ಹಾರಾಡುವ ಹಾಗೆ ನಮ್ಮ ಹಿಂದಿನವರು ಕನಸು ಕಣ್ತಾ ಇದ್ದದ್ದುಂಟು. ಆದೀಗ ನನಸಾಗಿ ಹೋಯಿತು. .'

'ಅಂದ್ರೆ ನೀವು ಏನು ಅರ್ಥದಲ್ಲಿ ಏನನ್ನು ಹೇಳ್ತಾ ಇದ್ದೀ ?"

'ವಿಮಾನಗಳ ಸರ್ವೀಸು ಬಂತು ನೋಡಿ ಅದನ್ನೇ ಹೇಳ್ತ ಇದ್ದೇನೇ!'

ವಿಮಾನಗಳ ಸರ್ವೀಸು ಪ್ರತ್ಯಕ್ಷವಾದ್ದಕ್ಕೂ ಕನಸು ನೆನಸೂ ಎಂಬುದಕ್ಕೂ ಏನ್ರೀ ಸಂಬಂಧ?"

"ಆಕಾಶದಲ್ಲಿ ಹಾರಾಡ್ತೀವಿ ಹಾಗೆ ಕನಸು ಕಂಡರೆ, ಪ್ರತ್ಯಕ್ಷವಾಗಿಲ್ಲಾ ಕನಸಿನ ಹಾಗೇ ಇತ್ತು. ಅದೀಗ—"

'ನೆನಸಾಗಿ ಹೋಯಿತೇನು?'

"ಇಲ್ಲವೇನು? ನೀವು ನೋಡಿಲ್ಲವೇನು ವಿಮಾನಗಳನ್ನ?"

"ನೋಡಿದ್ದೇನೆ ಬೇಕಾದಷ್ಟು. ಪ್ರತ್ಯಕ್ಷ ಕಾಣುತ್ತಿರೋದನ್ನು ನೆನಸೂ ಅಂತ ಹೇಳ್ತ್ತೀರೇನ್ರೀ?"

"ಹ?"

"ಏನು ಬಾಯಿ ತೆರೆದು ನಿಂತು ಬಿಟ್ರಲ್ಲಾ? ಕನಸು ನೆನಸೂ ಅಂದರೆ, ಕನಸು ಕಂಡದ್ದನ್ನ ನೆನೆಸಿಕೊಂಡಿರೋದು ನಿದ್ರೆಯಲ್ಲಿಯೂ ಎಚ್ಚರದಲ್ಲಿಯೂ ಮನಸ್ಸಿನಲ್ಲಿಯೇ ಕಾಣುವಂಥಾದ್ದಕ್ಕೆ ಕನಸು—ನೆನಸೂ ಅನ್ನಬಹುದು. ಏನೋ ಸುಮ್ಮನೆ ನನಸ—ನೆನಸ ಅಂತ ಪ್ರಾಸಾಕ್ಷರ ಬಂದ ಮಾತ್ರಕ್ಕೆ ಅರ್ಥ ಎಲ್ಲ ಸರಿಯಾಗುತ್ತೆ ಹೇಳಿ?'

'ಮತ್ತೆ ಎಲ್ಲಾ ಕನಸು — ನೆನಸಾಯಿತು ಅನ್ನುತ್ತಾರಲ್ಲ?"

"ಪ್ರಾಸಾಕ್ಷರದ ಮೋಹದಲ್ಲಿ ಆದು ಹಾಗೆ ವಾಡಿಕೆಗೆ ಬಂತು. ಆದರೆ ಅದನ್ನು ಹೇಳ ಬೇಕಾದ್ದು ಹೀಗೆ. ನಮ್ಮ ಹಿಂದಿನವರು ಕಂಡ ಕನಸು ನೆನಸುಗಳು ಈಗ ಪ್ರತ್ಯಕ್ಷವಾದುವು; ನಿಜವಾದುವು, ಕಣ್ಣೆದಿರು ಕಂಡುವು."

"ಹಾ—ದು. ಕನಸು ಕಣ್ಣೆದಿರು ಕಂಡಿತು ಎಂದರೂ ಅ.ಕ.ಅ ಅಂತ ವ್ಯತ್ಯಾಸದ ಹೊಗಸಿದೆಯಲ್ಲಾ!"

"ಇದೆ ಇದೆ. ಬರೀ 'ಕನಸು ಕಾಣಿಸುತ್ತಿದೆ' ಎಂದರೂ ಸಾಕು. ಕನಸೆಂದರೆ ನಿದ್ರೆಯಲ್ಲಿ ಎಂದೇ ಅರ್ಥ. ಕಾಣಿಸುತ್ತಿದೆ ಎಂದರೆ ಪ್ರತ್ಯಕ್ಷವಾಯಿತೆಂದೇ ಆಗುತ್ತೆ. ಆದರೆ ವಾಡಿಕೆಯಲ್ಲಿ ಕನಸು ಕಾಣಿಸುತ್ತಿದೆ ಎಂದರೆ ನಿದ್ದೆಯಲ್ಲಿ ಕಾಣುವ ಕನಸೇ ಆಗುವುದರಿಂದ 'ಕಣ್ಣೆದಿರು' ಎಂಬ ಇನ್ನೊಂದು ಪದವನ್ನು ಸೇರಿಸಿದರೇನೇ ಸ್ಪಷ್ಟಾರ್ಥ ಬರುತ್ತೆ. ಮಾಡುವುದೇನು? ವಾಡಿಕೆಯ ಮಾತಿನ ಶಕ್ತಿ ಅಂಥದ್ದು.


READ & ADVERTISE IN NAVAYUGA WEEKLY

# ಜನಮತ

## ಹಳ್ಳಿಯಿಂದ ದಿಲ್ಲಿಗೆ

### ವೃತ್ತಿಪರ ಶಿಕ್ಷಕರು

ನಮ್ಮ ಜಿಲ್ಲೆಯ ಹಾ. ಎ. ಶಾಲೆಗಳಲ್ಲಿ ದುಡಿಯುತ್ತಿರುವ ವೃತ್ತಿಪರ ಶಿಕ್ಷಕರ ಕುರಿತು ನಮ್ಮ ಸರಕಾರವು ತಳೆದಿರುವ ಧೋರಣೆಯು ಈ ಅಧ್ಯಾಪಕರ ಪಾಲಿಗೆ ಬಲವಾದ ಆಘಾತವನ್ನುಂಟು ಮಾಡಿದೆ. ಈ ಅಧ್ಯಾಪಕರಿಂದು ಅತ್ಯಂತ ನಿಕೃಷ್ಟ ವೇತನದಲ್ಲಿ ದುಡಿಯುತಿದ್ದು, ತಮ್ಮ ಸಮಸ್ಯಾ ಪರಿಹಾರಕ್ಕಾಗಿ ಚಾತಕ ಪಕ್ಷಿಯಂತೆ ಈಕ್ಷಿಸುತಿದ್ದಾರೆ. ಆದರೆ ಮಾನ್ಯ ಸರಕಾರ ಇದು ಜನಕ ಈ ಕಡೆ ಗಮನವಿತ್ತಂತೆ ತೋರುವುದಿಲ್ಲ.

ಸದ್ರಿ ಶಿಕ್ಷಕರಿಗೆ ೧೯೬೦ರ ಮೇ ತಿಂಗಳ ತನಕ ೪೦+೩೦ರ ವೇತನ ದೊರೆಯುತಿದ್ದು, ಜೂನ್ ತಿಂಗಳಿನಿಂದ ೨೫+೩೦ರ ವೇತನವು ಕೊಡಲ್ಪಟ್ಟು, ಟಿ. ಜಿ. ಯಲ್ಲಿ ೧೫ ರೂಪಾಯಿಗಳು ತಡೆ ಹಿಡಿಯಲ್ಪಟ್ಟವು. ಅಂದಿನಿಂದ ಇಂದಿನ ತನಕವೂ ಈ ನಿರ್ಭಾಗ್ಯರ ಪಾಲಿಗೆ ಈ ೨೫+೩೦ ರೂಪಾಯಿಗಳೇ ದೊರಕುತಿದ್ದು, ಸರಕಾರವು ಅಧ್ಯಾಪಕರ ಹಿತದೃಷ್ಟಿಯಿಂದ ಆಗಾಗ್ಯೆ ಹೆಚ್ಚಿಸಿದ ಯಾವೊಂದು ಏರಿಕೆಯು ವೇತನವೂ ಈ ಅಧ್ಯಾಪಕರ ಪಾಲಿಗೆ ಇಲ್ಲದಂತಾಗಿದೆ. ಯಾಕೆಂಗಿ ಈ ಧೋರಣೆಯೊ ತಿಳಿಯದು, ೧೯೬೧ರಲ್ಲಿ ವೇತನವು ಪರಿಷ್ಕರಿಸಲ್ಪಟ್ಟಾಗ ತಮ್ಮ ತಡೆಹಿಡಿಯಲ್ಪಟ್ಟ ವೇತನವು ದೊರಕುವುದರೊಂದಿಗೆ, ಹೊಸ ದರದ ವೇತನವೂ ದೊರಕಬಹುದೆಂದು ಆಶಿಸಿದ ಈ ಅಧ್ಯಾಪಕರ ತೀವ್ರ ನಿರಾಶೆಯೊಂದಿಗೆ ಬೇಸರವು ಇಮ್ಮಡಿಸಿತು. ತದನಂತರ ಮೂರು ಬಾರಿ ಸರಕಾರವು ತನ್ನೆಲ್ಲಾ ನೌಕರರ ಸೌಕರ್ಯಕ್ಕೆಂದು ಐದೈದು ರೂಪಾಯಿಗಳಂತೆ ಡಿ. ಎ. ಯನ್ನು ಹೆಚ್ಚಿಸಿದರೂ ಈ ಅಧ್ಯಾಪಕರ ಕಡೆಗೆ ದೃಷ್ಟಿ ಹಾಯಿಸಲೇ ಇಲ್ಲ. ಅತೀವ ಬೇಸರದಲ್ಲಿದ್ದ ಈ ಅಧ್ಯಾಪಕರಿಗೆ, ಮದ್ರಾಸಿನ ಟಿ. ಎ. ದರವು ಮೈಸೂರು ರಾಜ್ಯದಲ್ಲಿಯೂ ಜ್ಯಾರಿಗೊಳಿಸಲ್ಪಡುವುದೆಂದೂ, ಆಗ ಅತಿ ಕಡಿಮೆ ವೇತನವಿರುವವರ ವೇತನದ ದರವನ್ನು ಮದ್ರಾಸಿನ ದರದ ಮಟ್ಟಕ್ಕೆ ಏರಿಸಲಾಗುವುದೆಂಬುದನ್ನೂ ಕೇಳಿ ಒಮ್ಮೆಗೆ ಆನಂದವಾಯ್ತು. ಈ ಬಾರಿಯಾದರೂ ತಮ್ಮ ಸಮಸ್ಯೆಯು ನೀಗೀತೆಂಬ ವಿಶ್ವಾಸವು ಬೆಳೆಯ ತೊಡಗಿತು. ಆದರೆ? ಈ ದರವು ಜ್ಯಾರಿ ಗೊಳಿಸಲ್ಪಟ್ಟಾಗಲೂ ಈ ಬಡವರ ಸುದ್ದಿಯೇ ಯಿಲ್ಲ. ಈ ರೀತಿ ಯಾಗಿ ಪ್ರತಿ ಬಾರಿಯೂ ಸರಕಾರವು ಈ ಅಧ್ಯಾಪಕರ ಕಡೆಗೆ ಅಲಕ್ಷ್ಯ ಭಾವವನ್ನೇ ಬೀರಿತು. ಆದುದರಿಂದಲೇ ಈ ಅಧ್ಯಾಪಕ ಸಮಸ್ಯೆಯು ಇಂದಿಗೂ ಕೊಳೆಯುತಿದ್ದು, ನೀಗಲಾರದೆ ನಾರುತ್ತಿದೆ.

ಮಾನ್ಯ ಸರಕಾರವು ಈ ಕಡೆ ಗಮನ ಬೀರಬೇಕು, ನಮ್ಮ ಜಿಲ್ಲೆಯ ಇಲಾಖಾಧಿಕಾರಿಗಳು ಈ ಕಡೆ ಕೃಪಾದೃಷ್ಟಿ ಹರಿಸಬೇಕು, ನಮ್ಮ ಪ್ರತಿನಿಧಿಗಳು ಇದನ್ನು ಮನಗಂಡು ಶ್ರಮಿಸಬೇಕು, ಎಂತಾದರೂ ಈ ಸಮಸ್ಯೆ ನೀಗಬೇಕು — ಆಗತಾನೇ ಎಲ್ಲರಂತೆ ಬಾಳುವ ಅವಕಾಶ ಈ ಶಿಕ್ಷಕರ ಪಾಲಿಗೂ ದೊರಕೀತು.

ಮಾನ್ಯ ಸರಕಾರವಿಂದು ೬೦ ರಿಂದ ತಡೆ ಹಿಡಿದ ವೇತನವನ್ನು ಕರುಣಿಸುವುದರೊಂದಿಗೆ ೬೧ ರ ದರವನ್ನು ನಿರ್ಣಯಿಸಿ, ಅದನ್ನು ಜ್ಯಾರಿಗೊಳಿಸಿ ಕ್ರಮ ಕ್ರಮವಾಗಿ ಏರಿಸಿದ ಭತ್ತೆಯನ್ನೂ ದಯಪಾಲಿಸಿ, ಈ ಬಡ ಶಿಕ್ಷಕರಿಗೆ ಜೀವಿಸಲವಕಾಶವನ್ನು ಅನುಗ್ರಹಿಸ ಬೇಕಾಗಿ ಕೇಳಿಕೊಳ್ಳುತ್ತೇನೆ.

ಯಳಚಿತ್ತಾಯ

ಕಾವಳ ಕಟ್ಟೆ

# ಬಾಳ ಹೋರುವೆವು

ಭಾಗಗೊಳಿಸದಿರೆನ್ನ ದೇಶವನು ಪ್ರಾರ್ಥಿಸಿದ
ಗಾಂಧಿ ಭೀಷ್ಮನು ಅಂದು ದೂರ ದೃಷ್ಟಿಯೊಳು
ನಡೆಯುತಿದೆ ಯುದ್ಧವಿದೊ ಅಣ್ಣತಮ್ಮಂದಿರಲ್ಲಿ
ಆಂಗ್ಲ ಶಕುನಿಯ ತಂತ್ರದಿಂದ ಭಾರತದಿ
ಕೊಡಿ ನಮಗೆ ಬೇರೆಯೇ ರಾಜ್ಯವೆಂದನು ಜಿನ್ನ—
ಕೌರವನು ಹಟ ಮಾರಿಯಾಗಿ ಅಂದು
ಬೆದರದಿರಿ 'ಅಭ್ಯುತ್ಥಾನವ ಧರ್ಮಸ್ಯ
ಸಂಭವಾಮಿ ಯುಗೇಯುಗೇ' ಶ್ರೀಕೃಷ್ಣನಿಂದು
ಧರ್ಮ ಮಾರ್ಗದ ಪಿಡಿದ ಭಾರತದ ಕಡೆಗಿಹನು
ನಿರ್ಮೂಲವಪ್ಪುದದೊ ಪಾಕ್ ಹೆಸರು
ಧರ್ಮದೊಳೆ ಬೆಳೆದಿರುವ ಧರ್ಮವೇ ಉಸಿರಾದ
ನಮಗೆದುರು ಯಾರಿಹರು ಜಗದೊಳಿಂದು
ಜಗವೊಂದು ನಾವೊಂದು ಬೆದರದಿರಿ ಕುರುಡನಾ
ಪುತ್ರ ಕೌರವರಿಗೆ ಬಲವೇನು ಬಂತು
ಜಗವನೆದುರಿಸಿ ಭೀಮಬಲ ತೋರ್ಪ ಶಕ್ತಿಯಿದೆ
ಹೋರುವೆವು ಬಾಳಲಿಕೆ, ಬಾಳಿ ಹೋರುವೆವು
ಶತಮಾನ ಹೋರಾಡಿ ಗಳಿಸಿರುವ ಸ್ವಾತಂತ್ರ್ಯ
ಉಳಿಸಿ ಅಭಿಮಾನದಿಂ ಬಾಳ ಹೋರುವೆವು
ಬಾಳಿ ಜಗದೆಲ್ಲರಿಗು ಸ್ವಾತಂತ್ರ್ಯವೇನೆಂದು
ಸಾರಿ ಭಾರತ ಕೀರ್ತಿ ಹರಡಿಸಿ ಮೆರೆಯುವೆವು.

—ಶ್ರೀ ಎ. ಬಾಲಕೃಷ್ಣ ಶೆಟ್ಟಿ, ಪೊಳಲಿ.

## 'ನವಯುಗ ಚಿರವಾಗಲಿ'

ಜನಪ್ರಿಯವೂ ನಮ್ಮೆಲ್ಲರ ಮೆಚ್ಚುಗೆಯನ್ನುಪಡೆಯುವ ನವಯುಗವು ಉತ್ತಮವಾದ ಲೇಖನಗಳಿಂದ ಕೂಡಿದ್ದು ಅದರೊಡನೆ ಇನ್ನೂ ಹಲವಾರು ರಸವತ್ತಾದ ಚಿಕ್ಕ ಪುಟ್ಟ ಬರಹಗಳಿದ್ದು ನಿಜಕ್ಕೂ ಸ್ತುತ್ಯರ್ಹವಿದೆ.

— ಗೋಪಾಲಕೃಷ್ಣ ಭಟ್, ಎಂ.

ಕರೋಪಾಡಿ.

## ನಾಡರಕ್ಷಣೆಗಾಗಿ ಕರೆ

(ಪಥಚಲನ ಗೀತೆ)

ಭಾರತೀಯರೆಲ್ಲ ಗೂಡಿ |
ಮುಂದೆ ಮುಂದೆ ಸಾಗುವ |
ಪಾಕ್ ಚೀನಿ ದುರುಳರಿಂದ |
ನಮ್ಮ ನಾಡ ಕಾಯುವಾ || ೧ ||
ದೇವ ಸೇವೆ ಈಶ ಸೇವೆ |
ಎಂದು ತಿಳಿದು ದುಡಿಯುವಾ |
ದೇಶಕಾಗಿ ಪ್ರಾಣ ಕೊಡಲು |
ಸಿದ್ಧವೆಂದು ತೋರುವಾ || ೨ ||
ನಾಡ ರಕ್ಷೆಗಾಗಿ ಧನವ |
ಕೂಡಿಬೇಗ ಕಳುಹುವಾ ||
ನಾಡ ರಕ್ಷೆ ನಮ್ಮ ರಕ್ಷೆ |
ಎಂದು ತಿಳಿದು ಸಾಗುವಾ || ೩ ||
ಹಿಂದು ಮುಸಲ ಸಿಕ್ಕರೆಂಬ |
ಭೇಧಭಾವ ತೊರೆಯುತಾ |
ಒಂದೆ ಮಾತೆ ಮಕ್ಕಳಂತೆ |
ಮುಂದೆ ಮುಂದೆ ನಡೆಯುವಾ || ೪ ||
ದ್ರೋಹಿ ಭುಟ್ಟೊ ಮಾವೊರನ್ನು |
ಕತ್ತು ಹಿಸುಕಿ ದೂಡುವಾ |
ಭಾರತೀಯರೆಲ್ಲ ಕೂಡಿ |
ಮುಂದೆ ಬೇಗ ಸಾಗುವಾ || ೫ ||
ಶಾಂತಿ ವೈರಿ ಪಾಕ್‌ರವರ |
ಭ್ರಾಂತಿ ಯನ್ನು ನೀಗಿಸೆ |
ಕ್ರಾಂತಿವೀರ ಭೋಸರಂತೆ |
ಧುಮುಕಿ ಮುಂದೆ ಸಾಗುವಾ || ೬ ||

—ಶ್ರೀ ಪಿ. ಎನ್. ರಾಮಚಂದ್ರರಾವ್
ಪಡುಬಿದ್ರೆ

## ಅಮರ ವೀರರಿಗೆ ಶ್ರದ್ಧಾಂಜಲಿ

ಭಾರತಾಂಬೆಯುದರದಿಂದ
ಉದಿಸಿ ಬಂದ ವೀರರೇ !
ದೇಹದರಿಯ ನಾಶಕಾಗಿ
ಸಿದ್ಧರಾಗಿ ಶೂರರೇ || ೧ ||
ಶಾಂತಿ ವೈರಿ ಚೀನವೂ
ಅದರ ಮಿತ್ರ ಪಾಕ್‌ವೂ |
ಇಂದು ಹಿಂಸೆಯಿಂದ ನಮ್ಮ
ಎದುರು ನಿಂತ ಮರುಳರು || ೨ ||
ಮುಂದು ಜಗವನಾಳ್ವೆಯೆಂಬ
ಹುಚ್ಚು ಸ್ವಪ್ನ ಮಾಡ್ವರು |
ಭಾರತೀಯರಿದಿರಿನಲ್ಲಿ
ಸೋಣಗನಂತೆ ಒಡ್ವರು || ೩ ||
ಭಾರತೀಯರೆಂದು ನೇಳೆ
ಮನವು ಉಬ್ಬಿ ನಲಿವುದು |
ಧರ್ಮ ಶಾಂತಿ ಛಾಯೆಗಾಗಿ
ಸ್ಫೂರ್ತಿವೆತ್ತು ದುಡಿವುದು || ೪ ||
ಎಚ್ಚರಚ್ಚರದಲಿ ಇರ್ದು
ಜಗಕೆ ನಿರತ ಶಾಂತಿಯ !
ಆಶಿಸುವುದು ನೈಜಧರ್ಮ
ಇದುವೆ ನಿತ್ಯ ಜಯ ಪಥ || ೫ ||
ಅಮರ ವೀರ ಯೋಧರೆಡೆಗೆ
ನೀಡುವ ಶ್ರದ್ಧಾಂಜಲಿ |
ತಾಯ ಸೇವೆಗಾಗಿ ಮಡಿದ
ಅವರ ಕೀರ್ತಿ ಬೆಳಗಲಿ || ೬ ||

— ಶ್ರೀ ಗೋಪಾಲಕೃಷ್ಣ ಭಟ್ಟ,
ನೆಲ್ಲಿಂಜಾಲು.


ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಇದೀಗ ಪ್ರಕಟವಾಗಿದೆ–
ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ
ಭಾರತದ ವೀರಾಂಗನೆಯರು
(ಐತಿಹಾಸಿಕ ಜೀವನದ ಘಟನೆಗಳು)
ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್
.......... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ............................"
(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)
ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ
ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50
ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ಪ್ರತಿಗಳಿಗೆ ಬರೆಯಿರಿ—
ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್ ಡಿಪೊ, ವಾಲುಕೋಟೆ, ಉಡುಪಿ.

## ನಾವೆಲ್ಲಾ ಒಂದೇ

# ಯುದ್ಧವಿರಾಮದ ಬಳಿಕ . . .

**ಬರೆದವರು: ಶ್ರೀ ರೇಣುಕಾ ರಾಯ್.**

ಯುದ್ಧ ನಿಲ್ಲಿಸಬೇಕೆಂದು ವಿಶ್ವಸಂಸ್ಥೆಯು ಭದ್ರತಾ ಪರಿಷತ್ತು ನೀಡಿದ ಕರೆಗೆ ಓಗೊಟ್ಟು ಭಾರತ–ಪಾಕಿಸ್ತಾನಗಳು ಯುದ್ಧವನ್ನೇನೋ ನಿಲ್ಲಿಸಿವೆ. ಯುದ್ಧ ೨೨ ದಿನಗಳ ವರೆಗೆ ಮಾತ್ರ ನಡೆದಿದ್ದರೂ ಉಭಯ ರಾಷ್ಟ್ರಗಳು ಈ ಯುದ್ಧದಲ್ಲಿ ಭಾರೀ ನಾವುನೋವುಗಳನ್ನು ಸಂಕಷ್ಟಗಳನ್ನೂ ಅನುಭವಿಸಿವೆ. ಭಾರತವು ಶಾಂತಿಯಲ್ಲಿ ಅಚಲವಾದ ನಂಬುಗೆಯಿಟ್ಟಿರುವ ರಾಷ್ಟ್ರ. ವಿಶ್ವಶಾಂತಿ ಮತ್ತು ಸ್ವಾತಂತ್ರ್ಯಗಳ ರಕ್ಷಣೆಗಾಗಿ ಅದು ಅವಿರತವಾಗಿ ಯತ್ನಿಸುತ್ತಿರುವರೆ ಕೆಲವೊಂದು ಸಲ ಒಂದು ರಾಷ್ಟ್ರದ ಇತಿಹಾಸದಲ್ಲಿ ಉಭಯ ಸಂಕಟವನ್ನು ಎದುರಿಸುವ ಪ್ರಸಂಗ ಬರುತ್ತದೆ. ಭಾರತವೂ ಇವೇ ರೀತಿಯ ಸಂದಿಗ್ಧ ಸ್ಥಿತಿಯನ್ನೆದುರಿಸಿತು! ಆಗ ರಾಷ್ಟ್ರದ ಎದುರಿನಲ್ಲಿ ಎರಡೇ ಎರಡು ಮಾರ್ಗಗಳಿದ್ದವು. ಒಂದನೆಯದು ದೇಶದ ಸ್ವಾತಂತ್ರ್ಯ ಗೌರವಗಳ ರಕ್ಷಣೆ, ಎರಡನೆಯದು ಶಾಂತಿಸ್ಥಾಪನೆ. ಭಾರತವು ಅನಿವಾರ್ಯವಾಗಿ ಮೊದಲನೆಯ ಮಾರ್ಗವನ್ನೇ ಅರಿಸಿಕೊಂಡಿತು. ದೇಶದ ಸ್ವಾತಂತ್ರ್ಯಗಳ ರಕ್ಷಣೆಗೋಸ್ಕರ ತಾತ್ಕಾಲಿಕವಾಗಿ ಶಾಂತಿಯತ್ನಗಳನ್ನು ಕೈಬಿಡಲು ನಿರ್ಧರಿಸಿತು. ಭಾರತವು ಪಾಕಿಸ್ತಾನದ ಮೇಲೆ ವಿಜಯ ಗಳಿಸುತ್ತಿದ್ದಾಗ— ಪಾಕಿಸ್ತಾನಿಗಳು ಸೋಲುತ್ತಿದ್ದಾಗ ಅವರು ಸೋಲೊಪ್ಪಿಕೊಂಡು ಕೈಬಿಟ್ಟಾಗ— ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಯುಥಾಂಟರ ಕರೆಯನ್ನು ಮನ್ನಿಸಿ ಯುದ್ಧವಿರಾಮಕ್ಕೆ ಒಪ್ಪಿಕೊಂಡಿತು. ಭದ್ರತಾ ಸಮಿತಿಯು ಕದನ ವಿರಾಮವನ್ನು ಜಾರಿಯಲ್ಲಿ ತರಲು ವಿಧಿಸಿದ ಗಳಿಗೆಯು ಹತ್ತಿರಕ್ಕೆ ಬರುವ ವರೆಗೂ ಪಾಕಿಸ್ತಾನದ ಮಿಲಿಟರಿ ಪ್ರಭುತ್ವವು ಕದನ ವಿರಾಮಕ್ಕೆ ಒಪ್ಪಿಗೆಯನ್ನು ನೀಡಿರಲಿಲ್ಲ.

ಪಾಕಿಸ್ತಾನವು ಯುದ್ಧ ವಿರಾಮಕ್ಕೆ ಒಪ್ಪಿಗೆ ನೀಡಿತು. ಅದು ಜಾರಿಯಲ್ಲಿ ಬಂದು ಇನ್ನು ಕೆಲವು ಗಂಟೆಗಳೂ ಕಳೆದಿರಲಿಲ್ಲ, ಪಾಕ್ ವಿಮಾನಗಳು ಅಮೃತ್‌ಸರ್‌ನ ಮೇಲೆ ಬಾಂಬಿನ ಮಳಗರೆದವು. ಅನೇಕ ನಾಗರಿಕ ಪ್ರದೇಶಗಳ ಮೇಲೆ ವಿವೇಚನೆಯಿಲ್ಲದೆ ಬಾಂಬ್‌ಗಳನ್ನು ಎಸೆದು ಪಾಕಿಸ್ತಾನವು ಅಮಾನುಷ ದಬ್ಬಾಳಿಕೆ ನಡೆಸಿತು. ಮತ–ಮಂದಿರಗಳು ಮಸೀದಿಗಳು ಆಸ್ಪತ್ರೆಗಳು ಪಾಕ್ ಬಾಂಬ್ ದಾಳಿಗೆ ತುತ್ತಾದುವು.

### ನಮ್ಮ ಸೇನೆಯ ಪರಾಕ್ರಮ

ಪಾಕಿಸ್ತಾನವು ಆಗಸ್ಟ್ ೫ರಂದು ನಾಗರಿಕರ ವೇಷದಲ್ಲಿದ್ದ ತನ್ನ ಸೈನಿಕರನ್ನು ಅಧಿಕ ಸಂಖ್ಯೆಯಲ್ಲಿ, ಭಾರತದ ಪ್ರದೇಶವಾದ ಕಾಶ್ಮೀರದ ಮೇಲೆ ಹರಿಹಾಯಿಸಿ ಆಕ್ರಮಣವನ್ನು ಆರಂಭಿಸಿತು. ಪರಿಸ್ಥಿತಿಯೂ ಅಷ್ಟೇ ತ್ವರಿತವಾಗಿ ಹದಗೆಡುತ್ತ ನಡೆಯಿತು. ಈ ಅವಧಿಯಲ್ಲಿ ಸಂಭವಿಸಿದ ಘಟನೆಗಳು ಕೆಲವು ಮಹತ್ವಪೂರ್ಣ ಸಂಗತಿಗಳ ಮೇಲೆ ಬೆಳಕು ಚೆಲ್ಲಿದವು. ಜಮ್ಮು—ಕಾಶ್ಮೀರ್ ರಾಜ್ಯ ಸರಕಾರವನ್ನು ಬುಡಮೇಲು ಮಾಡುವ ಪಾಕಿಸ್ತಾನದ ಯೋಜನೆ ಮಣ್ಣು ಪಾಲಾಯಿತು. ತಾನು ದಾಳಿ ಮಾಡಿದಾಕ್ಷಣವೇ ಕಾಶ್ಮೀರಿಗಳು ತನ್ನ ನೆರವಿಗೆ ಧಾವಿಸುವರೆಂಬ ಪಾಕಿಸ್ತಾನದ ಭ್ರಮೆ ನಿರಸನವಾಯಿತು. ಕಾಶ್ಮೀರಿಗಳು ಮೂಲತಃ ಭಾರತೀಯರಲ್ಲ ಎಂಬ ಹುಚ್ಚು ಕಲ್ಪನೆಯಿಂದಲೇ ಪಾಕಿಸ್ತಾನಿನ ಫೀಲ್ಡ್‌ಮಾರ್ಷಲ್‌ರು ಈ ದುರಾಕ್ರಮಣ ನಡೆಸಿದರು.

ಪಾಕಿಸ್ತಾನವು ಭಾರತದಲ್ಲಿ ವಿಧ್ವಂಸಕ ಕೃತ್ಯಗಳನ್ನು ಆರಂಭಿಸಿದಾಗ ಪಾಕಿಸ್ತಾನಿನ ಪಾಶ್ಚಾತ್ಯ ಮಿತ್ರರು ಈ ಉಪಖಂಡದಲ್ಲಿ ನಿರಂತರವಾದ ಹಿಂದು ಮುಸ್ಲಿಂ ಯುದ್ಧ ನಡೆಯುವುದೆಂದು ಕನಸು ಕಂಡರು. ಅದೃಷ್ಟವಶಾತ್ ಅವರ ಈ ಕನಸು ನನಸಾಗಲಿಲ್ಲ. ನಮ್ಮ ಪ್ರಧಾನ ಮಂತ್ರಿಗಳು ಹೇಳಿದಂತೆ "ಇಂದು ಭಾರತದ ಜನರ— ಹಿಂದುಗಳು, ಮುಸ್ಲಿಮರು, ಸಿಕ್ಖರು, ಕ್ರೈಸ್ತರು, ಪಾರ್ಸಿಗಳು, ಮತ್ತಿತರರು— ದೃಢಸಂಕಲ್ಪ ಹಾಗೂ ಏಕಮೇವ ಧ್ಯೇಯೋದ್ದೇಶಗಳುಳ್ಳ ಒಂದು ಸಂಯುಕ್ತ ರಾಷ್ಟ್ರವೆಂಬುದು ವಿಶ್ವಕ್ಕೆ ಖಚಿತವಾಗಿರಲು ಸಾಕು. ಭಾರತದ ಎಲ್ಲ ಜಾತಿ ಮತ ಪಂಥಗಳಿಗೆ ಸೇರಿದ ಜನ ತಾಯ್ನಾಡಿನ ರಕ್ಷಣೆಗಾಗಿ ಧಾವಿಸಿದ ವೈಖರಿ ಪ್ರಧಾನ ಮಂತ್ರಿಗಳ ಈ ಮಾತುಗಳನ್ನು ಸಮರ್ಥಿಸುತ್ತದೆ. ನಮ್ಮ ಯುವಜನರು ರಾಷ್ಟ್ರ ರಕ್ಷಣೆಗಾಗಿ ಮಾಡಿದ ಅಪ್ರತಿಮ ತ್ಯಾಗ, ದೇಶದ ಜನ ವೈರಿಗಳನ್ನು ಹೊಡೆದೋಡಿಸಲು ತೋರಿಸಿದ ಹುಮ್ಮಸ್ಸು ನಿಜಕ್ಕೂ ಅದ್ಭುತ, ಅವಿಸ್ಮರಣೀಯ.

ಪಾಕಿಸ್ತಾನವು ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ಛಾಂಬ್ ಪ್ರದೇಶದಲ್ಲಿ ಭಾರತದ ಆಕ್ರಮಣ ಮಾಡಿದಾಗ ಭಾರತ ಶತ್ರುವಿನ ಗಮನವನ್ನು ಬೇರೆಡೆಗೆ ಸೆಳೆಯಲು ಅನುಸರಿಸಿದ ಮಿಲಿಟರಿ ತಂತ್ರವು ನಮ್ಮ ಮಿಲಿಟರಿ ಪ್ರಾವೀಣ್ಯದ ಪ್ರತೀಕ. ಭಾರತವು ಪಾಕಿಸ್ತಾನಿ ಆಕ್ರಮಣವನ್ನು ಹೇಗೆ ಮಣ್ಣುಮುಕ್ಕಿಸಿತು ಎಂಬುದನ್ನು ನಾವು ನೋಡಿದ್ದೇವೆ. ಅಮೇರಿಕನ್ನರು ನೀಡಿದ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾದ ಪಾಕ್ ಸೈನಿಕರ ವಿರುದ್ಧ ನಡೆದ ಹೋರಾಟದಲ್ಲಿ ನಮ್ಮ ಯೋಧರ ಕೆಚ್ಚು ಪ್ರಕಟವಾಗಿದೆ. ನಮ್ಮ ಯೋಧರು ತಮ್ಮ ಬಳಿಯಲ್ಲಿ ಪ್ಯಾಟನ್ ಟ್ಯಾಂಕ್‌ಗಳು— ಸೇಬರ್ ಜೆಟ್‌ಗಳು ಇರದಿದ್ದರೂ ಶೌರ್ಯ ಸಾಹಸಗಳಿಗೆ ನಾಯಕತ್ವಕ್ಕೆ ಏನೂ ಕೊರತೆಯಿಲ್ಲವೆಂಬುದನ್ನು ತೋರಿಸಿಕೊಟ್ಟದ್ದಾರೆ. ಪಾಕಿಸ್ತಾನಿ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಲು ನಡೆಸಿದ ಹೋರಾಟದಲ್ಲಿ ಅವರು ತೋರಿಸಿದ ಧೈರ್ಯಸ್ಥೈರ್ಯಗಳು ಶೌರ್ಯಸಾಹಸಗಳು ಭಾರತದ ಇತಿಹಾಸದಲ್ಲಿಯೇ ಒಂದು ನೂತನ ಅಧ್ಯಾಯವನ್ನು ತೆರೆದಿದೆ. ಭಾರತದ ಯೋಧರು ಅಸಮಾನ ವೀರರು ಎಂಬುದು ಈಗ ಸಮಗ್ರ ವಿಶ್ವಕ್ಕೇ ತಿಳಿದಿದೆ. ಪಾಕಿಸ್ತಾನದೊಂದಿಗೆ ನಿರಂತರ ಕಾಳಗ ನಡೆದಾಗಲೂ ನಾವು ಚೀಣೀ ಸವಾಲನ್ನೂ ಎದುರಿಸಲು ಸಿದ್ಧರಿದ್ದೆವು. ನಮ್ಮ ಯೋಧರು ಮತ್ತು ಚೀಣೀ ಆಕ್ರಮಣಕಾರರ ನಡುವೆ ಸಿಕ್ಕಿಂ ಗಡಿಯಲ್ಲಿ ಇತ್ತೀಚೆಗೆ ಸಂಭವಿಸಿದ ಚಿಕ್ಕ—ಪುಟ್ಟ ಘರ್ಷಣೆಗಳಲ್ಲಿ ಚೀಣಾ ಈಗಾಗಲೇ ನಮ್ಮ ಸೇನಾಬಲದ ಏಟಿನ ರುಚಿ ಕಂಡಿದೆ. ಚೀಣಾ ವಿವೇಕಯುತವಾಗಿ ವರ್ತಿಸುವುದೆಂದು ಭಾರತದ ಮೇಲೆ ಅಪ್ರಚೋದಿತ ಆಕ್ರಮಣ ನಡೆಸಿ ಯುದ್ಧ ವಿಸ್ತರಣೆಗೆ ಕಾರಣವಾಗಲಾರದೆಂದು ನಾವು ಆಶಿಸೋಣ. ಭಾರತದ ಮಟ್ಟಿಗೆ ಹೇಳುವುದಾದರೆ ಏನೇ ಬರಲಿ ಅದನ್ನು ಎದುರಿಸಲು ಅದು ಸಿದ್ಧವಾಗಿದೆ.

ಪ್ರಧಾನ ಮಂತ್ರಿಗಳು ಯುಥಾಂಟ್ ಅವರಿಗೆ ಬರೆದ ಪತ್ರದಲ್ಲಿ 'ಭಾರತಕ್ಕೆ ಮತ್ತೊಬ್ಬರ ನೆಲವನ್ನು ಕಬಳಿಸುವ ಆಸೆಯಿಲ್ಲ ಆದರೆ ನಮ್ಮ ಪ್ರಾದೇಶಿಕ ಪ್ರಾಮಾಧಿಕಾರವನ್ನು ಇತರರು ಗೌರವಿಸಬೇಕು. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂಬ ವಾಸ್ತವಾಂಶವನ್ನು ನಿರ್ವಿವಾದವಾಗಿ ಒಪ್ಪಿಕೊಳ್ಳಬೇಕು.' ಎಂದು ಸ್ಪಷ್ಟಗೊಳಿಸಿದ್ದಾರೆ.

ಪಾಕಿಸ್ತಾನಿ ಆಕ್ರಮಣಕಾರರು ಯಾವುದೇ ಪ್ರಚೋದನೆಯಿಲ್ಲದೆ ಭಾರತದ ಮೇಲೆ ದಾಳಿ ನಡೆಸುವುದನ್ನು ತಡೆಗಟ್ಟುವುದು ವಿಶ್ವಸಂಸ್ಥೆಗೆ ಸಾಧ್ಯವಾಗದ್ದರಿಂದ ಪಾಕಿಸ್ತಾನಿ ಆಕ್ರಮಣಗಳಿಂದ ನಮ್ಮ ದೇಶವನ್ನು ರಕ್ಷಿಸಿಕೊಳ್ಳುವ ಬಗ್ಗೆ ನಾವು ಅನ್ಯ ಉಪಾಯಗಳನ್ನು ಯೋಚಿಸಬೇಕಾಯಿತೆಂದು ಅವರು ತಿಳಿಸಿದ್ದಾರೆ.

ಆಕ್ರಮಣ ಮಾಡಿದವರು ಮತ್ತು ಆಕ್ರಮಣಕ್ಕೆ ಒಳಗಾದವರನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ನ್ಯಾಯಸಮ್ಮತವಿಲ್ಲ. ಭಾರತ—ಪಾಕ್ ಹೋರಾಟವು ಈಗ ನಿಂತಿದೆಯಾದರೂ ನಮ್ಮ ಸಾಧನೆಯ ಬಗೆಗೆ ಸಂತೃಪ್ತಿಪಟ್ಟುಕೊಳ್ಳಲು ಇದು ಸಮಯವಲ್ಲ. ಸಶಸ್ತ್ರ ಹೋರಾಟಕ್ಕೆ ನಾಂದಿಯಾಗಿದೆ. ಈ ಹೋರಾಟದ ಫಲಾಫಲಗಳು ಏನಾಗುವವು ಎಂಬುದನ್ನು ಸ್ಪಷ್ಟಗೊಳಿಸಿದ್ದೇವೆ. ಪಾಕಿಸ್ತಾನ ಮತ್ತು ಚೀಣಾ ಹಿಟ್ಲರನ ಆಕ್ಸಿಸ್ ಕಾಲದ ಹಿಟ್ಲರ್ ಮುಸೊಲಿನಿಯನ್ನೂ ಮೀರಿಸುವ ಅಪಪ್ರಚಾರವನ್ನು ಹೊಂದಿವೆ. ಭಾರತವು ಸತ್ಯಕ್ಕೆ ಜಯವಾಗುವುದೆಂದು ವಿಶ್ವವು ವಾಸ್ತವ ಸಂಗತಿಗಳನ್ನು ಬೇಗ ಅರಿತುಕೊಳ್ಳುವುದೆಂದು ಭಾವಿಸಿದೆ.

ಪಾಕಿಸ್ತಾನವು ಧರ್ಮದ ಅಡಿಪಾಯದ ಮೇಲೆಯೇ ಪ್ರಭುತ್ವ ಹುಟ್ಟಿದುವ ರಾಷ್ಟ್ರ. ಸಮಗ್ರ ಏಷ್ಯದ ಮೇಲೆಯೇ ಪ್ರಭುತ್ವ ಸ್ಥಾಪಿಸಲು ಕನಸು ಕಾಣುತ್ತಿರುವ ಯುದ್ಧಪ್ರಿಯರಾದ ಚೀಣೀಯರ ಬೆಂಬಲ ಪಡೆದು ಸರ್ವಾಧಿಕಾರಿ ಅಯೂಬ್ ಆಡಳಿತ ನಡೆಸುತ್ತಿದ್ದಾರೆ.

ಭಾರತವು ಶಾಂತಿಪ್ರಿಯ ರಾಷ್ಟ್ರವಾ

---

### ಆರೋಗ್ಯ ಸಚಿವ ಡಾ। ಕೆ. ನಾಗಪ್ಪ ಆಳ್ವರ ಜಿಲ್ಲಾ ಸಂಚಾರ ಜಯಶೀಲಗೊಳಿಸಲು ಕರೆ.

ರಾಷ್ಟ್ರ ರಕ್ಷಣೆಯಲ್ಲಿ ಪ್ರಮುಖ ಅಂಗವಾದ ಆಹಾರವಸ್ತು ಮತ್ತು ಕೃಷಿ ಉತ್ಪನ್ನವನ್ನು ಹೆಚ್ಚಿಸುವ ಸಲುವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಅಕ್ಟೋಬರ್ 30 ರಿಂದ ನವಂಬರ್ 8ನೇ ತಾರೀಖಿನ ವರೆಗೆ ಸಂಚಾರ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇನೆ.'

ಈ ಬಗ್ಗೆ ಜನತಾ ಪ್ರತಿನಿಧಿಗಳನ್ನು, ರೈತ ಮುಂದಾಳುಗಳನ್ನು ಹಾಗೂ ಸಂಬಂಧಪಟ್ಟ ಅಧಿಕಾರವರ್ಗದವರನ್ನೂ ಕಂಡು ವಿಚಾರವಿನಿಮಯ ಮಾಡಿ ಅವರ ಸೂಕ್ತ ಸಲಹೆಗಳನ್ನು ಪಡೆಯಲು ಜಿಲ್ಲೆಯ ತಾಲ್ಲೂಕು ಕೇಂದ್ರ ಹಾಗೂ ಹಲವು ಮುಖ್ಯ ಸ್ಥಳಗಳಲ್ಲಿ ಸಭೆಗಳನ್ನು ಏರ್ಪಡಿಸಲಾಗುತ್ತದೆ. ಜಿಲ್ಲೆಯ ಕಾರ್ಯಕ್ರಮದ ವಿವರವಾದ ಪಟ್ಟಿ, ಸ್ಥಳೀಯ ಹಾಗೂ ಇತರ ವಾರ್ತಾ ಪತ್ರಿಕೆಗಳಲ್ಲಿ ಕೂಡಾ ಪ್ರಕಟವಾಗಲಿದೆ. ಇದಕ್ಕೆ ತಮ್ಮೆಲ್ಲರ ಸಹಾನುಭೂತಿ ಹಾಗೂ ಹೃತ್ಪೂರ್ವಕ ಸಹಕಾರವನ್ನು ಕೋರುತ್ತೇನೆ.

ಇತಿ ನಿಮ್ಮ ವಿಶ್ವಾಸಿ,

ದಿನಾಂಕ 26—10—65

ಕೆ. ಎನ್. ಆಳ್ವ.

(K. N. Alva)

---


## In the Court of the Munsif of Kundapur.

O. S. No. 214 of 1965.

Between

John Botelho ... ... *Plff*

&

E. M. D'Sylwa Nigli and others ... *Defdts.*

2nd Defdt. Hazel D'Sylwa
3rd Defdt. Olga D'Sylwa
4th Defdt. Henry Francis D'Sylwa—Children of 1st defdt. J. P. D'Sylwa. Residing at Kajubag, Near Police Lines, Karwar, N. K.

Please take notice that the suit filed by the plaintiff for the recovery of the arrears of Mulgeni rents due till 31-3-65, against you stands posted to 24-11-65, for your appearance and trial. If you fail to appear on the said date at 11 A. M. before the Court, the matter will be heard and decided in your absence.

*By order of the Court*

G. Sanjeeva Rao,
Pleader for Plaintiff.

Kundapoor,
...-10-1965.

ಗಿದ್ದು ಜಾತ್ಯತೀತ ಆದರ್ಶದಲ್ಲಿ ದೃಢವಾದ ನಂಬುಗೆಯಿರಿಸಿದೆ. ಭವ್ಯವಾದ ಆರ್ಥಿಕ ಅಡಿಪಾಯದ ಮೇಲೆ, ಸಮಾಜವಾದಿ ಸಮಾಜ ಸ್ಥಾಪಿಸಲು ಯತ್ನಿಸುತ್ತಿರುವ ಅದು ಶಾಂತಿಯುತ ಸಹಜೀವನ ಸಾಧಿಸಲು ಉತ್ಸುಕವಾಗಿದೆ. ವಾಸ್ತವಿಕ ಸ್ಥಿತಿ ಹೀಗಿರುವಾಗ ಯಾವ ರಾಷ್ಟ್ರದ ಆದರ್ಶ ಶ್ರೇಷ್ಠವೆಂಬುದು ಸ್ವಯಂ ಸ್ಪಷ್ಟವಾಗಿದೆ. ವಿಶ್ವದಲ್ಲಿ ಕೆಲವು ರಾಷ್ಟ್ರಗಳು ಈ ನಿಷ್ಠುರ ಸತ್ಯವನ್ನು ಕಂಡೂ ಕಾಣದಂತೆ ವರ್ತಿಸುತ್ತಿರುವ ರೀತಿಯು ನಮಗೆ ವಿವಂಚನೆಯನ್ನುಂಟುಮಾಡಿದೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಆಕ್ರಮಣಕಾರರನ್ನೂ ಈ ಆಕ್ರಮಣಕ್ಕೆ ಬಲಿಯಾದವರನ್ನೂ ಸಮದೃಷ್ಟಿಯಿಂದ ನೋಡುತ್ತಿರುವುದು ನಮಗೆ ಇನ್ನೂ ಅಚ್ಚರಿಯನ್ನುಂಟುಮಾಡಿದೆ.

ಬ್ರಿಟನರು ಪಾಕಿಸ್ತಾನದ ಬಗ್ಗೆ ಅತೀವ ಪಕ್ಷಪಾತ ಪ್ರದರ್ಶಿಸುತ್ತಿರುವುದನ್ನು ಕಂಡು ನಾವು ಆಶ್ಚರ್ಯಚಕಿತರಾಗಿದ್ದೇವೆ. ಬ್ರಿಟನರು ಪಾಕಿಸ್ತಾನದ ವಿಷಯದಲ್ಲಿ ಯಾವಾಗಲೂ ಪಕ್ಷಪಾತ ತೋರಿಸುತ್ತಲೇ ಬಂದಿರುವುದಾದರೂ ಈ ಸಲ ಅದು ಹದ್ದುಮೀರಿದೆ. ಪಾಕಿಸ್ತಾನವು ಬ್ರಿಟನರ ಒಡೆದು ಆಳುವ ನೀತಿಯ ಫಲವಾಗಿ ಅಸ್ತಿತ್ವದಲ್ಲಿ ಬಂದಿದೆ. ಇದನ್ನರಿತ ನಾವು ಬ್ರಿಟನರ ಈ ಕಾರ್ಯನೀತಿಯಿಂದ ಅಷ್ಟೊಂದು ಭಯಪಡಲು ಕಾರಣವಿಲ್ಲ. ಇಂದಿನ ವಿಪತ್ತಿನ ಪ್ರಸಂಗದಲ್ಲಿ ನಾವು ನಮ್ಮ ಮಿತ್ರರು ಯಾರು ಮತ್ತು ಶತ್ರುಗಳು ಯಾರು ಎಂಬುದನ್ನು ಸ್ಪಷ್ಟವಾಗಿ ಕಂಡುಕೊಳ್ಳಬೇಕು.

ಹೊರದೇಶದಲ್ಲಿನ ನಮ್ಮ ಪ್ರಚಾರ ಮಾಧ್ಯಮಗಳು ಅಥವಾ ಪ್ರತಿನಿಧಿಗಳು ಭಾರತವನ್ನೇ ವಾಸ್ತವ ರೀತಿಯಲ್ಲಿ ಪ್ರತಿಬಿಂಬಿಸಿಲ್ಲವೆಂದು ಅವರ ಮೇಲೆ ಸಂಪೂರ್ಣ ತಪ್ಪನ್ನು ಹೊರಿಸುವುದು ಸಾಧುವಲ್ಲ. ಆದರೆ ಈ ದಿಶೆಯಲ್ಲಿ ತ್ವರಿತವಾಗಿ ಅಗತ್ಯವಾದ ಬದಲಾವಣೆಗಳನ್ನು ಮಾಡಿ, ಹೊರದೇಶಗಳಲ್ಲಿನ ನಮ್ಮ ಪ್ರಚಾರ ಮಾಧ್ಯಮಗಳು ಭಾರತವನ್ನು ನೈಜರೀತಿಯಲ್ಲಿ ಪ್ರತಿಬಿಂಬಿಸುವಂತೆ ಪುನರ್ವ್ಯವಸ್ಥೆಗೊಳಿಸಬೇಕು. ಎಲ್ಲ ಕಾಲದಲ್ಲಿಯೂ ಇದು ಅಗತ್ಯವಾಗಿದೆ. ಯುದ್ಧಕಾಲದಲ್ಲಿ ಇಂತಹ ಪುನರ್ವ್ಯವಸ್ಥೆಯ ಅಗತ್ಯ ಇನ್ನೂ ಹೆಚ್ಚು. ನಮ್ಮ ಪ್ರಚಾರ ಯಂತ್ರವು ಯೋಧರ ಯಂತ್ರದಷ್ಟೇ ಬಲಿಷ್ಠವಾಗಿರಬೇಕು. ಇತ್ತೀಚಿನ ಅನುಭವದಿಂದ ನಾವು ಈ ಪಾಠ ಕಲಿತಿದ್ದೇವೆ.

ಪ್ರಧಾನಮಂತ್ರಿಗಳು ಯುದ್ಧವು ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದರೂ, ದೇಶದ ಪ್ರತಿಯೊಬ್ಬ ಸ್ತ್ರೀ-ಪುರುಷರೂ ಧೈರ್ಯದಿಂದ ಕರೆಯುತ್ತಿದ್ದಾರೆ. ಭವಿಷ್ಯದ ಗರ್ಭದಲ್ಲಿ ಏನು ಅಡಗಿದೆ ಎಂಬುದು ನಮಗೆ ಗೊತ್ತಿಲ್ಲ. ಯಾವುದೇ ಜವಾಬ್ದಾರಿಯನ್ನೇ ನಾವು ವಹಿಸುವುದಿರಲಿ, ಎಲ್ಲರೂ ಒಗ್ಗಟ್ಟಾಗಿ ನಮ್ಮ ನಾಡಿನ ಸ್ವಾತಂತ್ರ್ಯ, ಆದರ್ಶಗಳ ರಕ್ಷಣೆಗಾಗಿ ಭುಜಕ್ಕೆ ಭುಜ ಹಚ್ಚಿ ಹೋರಾಡಲು ದೃಢ ಸಂಕಲ್ಪ ಮಾಡೋಣ. ಈ ಹೋರಾಟ ಎಷ್ಟೇ ದೀರ್ಘಾವಧಿಯದಾದರೂ ಚಿಂತೆಯಿಲ್ಲ. ದಢವಾಗಿ ಸವಾಲನ್ನೆದುರಿಸೋಣ ಎಂದು ಅವರು ಕರೆಯಿತ್ತಿದ್ದಾರೆ. (ಸೌಜನ್ಯ: ಆಕಾಶವಾಣಿ)

(ಮೂರನೆಯ ಪುಟದಿಂದ)

## ಬರಗಾಲವೇ?

ಜೀವಕ್ಕೆ ಬಾಳ್ಯ ಗಂಡ ಎರಗಿದೊಡನೆ ಪ್ರಕೃತಿಯೂ ವಿಚಿತ್ರ ಲೀಲೆಯನ್ನಾಡ ತೊಡಗುವಂತಿದೆ. ಮಳೆಗಾಲದಲ್ಲಿ ಸಕಾಲದಲ್ಲಿ ಸಾಕಷ್ಟು ಮಳೆಯಾಗದಿದ್ದರೂ ಬಯಲು ಪ್ರದೇಶವಾದರೂ ಹಸುರಾಗಿತ್ತು. ಆದರೆ, ಎರಡನೆಯ ಬೆಳೆಗೆ ಮಳೆಯೂ ಇಲ್ಲ, ಸಣ್ಣ ತೋಡುಗಳಲ್ಲಿ ನೀರೂ ಇಲ್ಲ. ಸಾಮಾನ್ಯವಾಗಿ ಹಿಂಗಾರು ಮಳೆಯನ್ನು ನಂಬಿಯೇ ಇರುವ ನಮ್ಮ ರೈತರಿಗಿಂದು ಬಲವಾದ ಏಟು ಬಿದ್ದಂತಾಗಿದೆ. ಎರಡನೆ ಬೆಳೆಯು ಕೈಗೆ ದೊರೆಯದೆ ಹೋದರೆ, ಆಹಾರದ ಅಭಾವ ಮತ್ತಷ್ಟು ಹೆಚ್ಚುವುದು ಸ್ವಾಭಾವಿಕ. ಆಗ ಬೆಲೆಯೇರಿಕೆಯನ್ನು ತಡೆಯುವುದೂ ಅಸಾಧ್ಯ. ಬರಗಾಲ ಪರಿಸ್ಥಿತಿಯನ್ನು ಎಂದೂ ಕಾಣದ ದಕ್ಷಿಣ ಕನ್ನಡ ಜಿಲ್ಲೆಯೂ ಈ ಬಾರಿ ಇಂತಹ ದುರವಸ್ಥೆಗೆ ಗುರಿಯಾಗಿದೆ. ಇನ್ನಾವರೂ ಮಳೆ ಬಾರದೆ ಹೋದರೆ, ಎರಡನೆ—ಮೂರನೆ ಬೆಳೆಗಳಂತೂ ಇಲ್ಲ; ಜತೆಗೆ ಕುಡಿಯುವ ನೀರಿಗೂ ಕೊರತೆ ಬೀಳುವ ಭಯ. ದಕ್ಷಿಣದ ಚಿರಾಪುಂಜಿ ಆಗುಂಬೆಯು ಬಟ್ಟ ಬೆಟ್ಟದಂತಿರುವಾಗ ಉಳಿದೆಡೆಯ ಕತೆಯೇನು? ಇದೇಕೆ ಹೀಗೆ? ಪ್ರಕೃತಿಯು ಈ ಲೀಲೆಯಿಂದ ಜನ ಬದುಕುವುದೆಂತು? ವೈಜ್ಞಾನಿಕ ರೀತ್ಯಾ ಇದಕ್ಕೆ ಕಾರಣವನ್ನು ಕಂಡುಹಿಡಿದು, ಪರಿಹಾರ ಕಾರ್ಯವನ್ನು ಸಾಧಿಸಬೇಡವೆ? ಸದ್ಯ ತಲೆದೋರಿದ ವಿಪನ್ನಾವಸ್ಥೆಯಿಂದ ಜನರನ್ನು ಪಾರುಮಾಡಲು ಸರಕಾರ ಸೂಕ್ತ ಕ್ರಮ ಕೈಗೊಂಡೀತೆ?

## ದ. ಕ. ಜಿಲ್ಲಾ ಕೃಷಿಕ ಸಂಘದ ಸಮ್ಮೇಳನ

ಕಾರ್ಕಳ ಬೋರ್ಡ್ ಹೈಸ್ಕೂಲಿನ ಸಭಾಭವನದಲ್ಲಿ, ಕಳೆದ ತಾ. 10-10-65ರಂದು ಜಿಲ್ಲಾ ಕೃಷಿಕ ಸಮ್ಮೇಳನವು ಜಿಲ್ಲಾ ಕೃಷಿಕ ಸಂಘದ ಅಧ್ಯಕ್ಷ ಶ್ರೀ ಯಂ. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಉದ್ಘಾಟಕರಾಗಿ ಮದ್ರಾಸಿನ ಮಾಜಿ ರೆವಿನ್ಯು ಮಂತ್ರಿಗಳೂ ಬೆಂಗಳೂರಿನ ಪ್ರಸಿದ್ಧ ನ್ಯಾಯವಾದಿಗಳೂ ಆದ ಶ್ರೀ ಕೆ. ಆರ್. ಕಾರಂತರು ಆಗಮಿಸಿದ್ದರು. ಬಹುಸಂಖ್ಯೆಯಲ್ಲಿ ನೆರೆದ ಈ ಸಭೆಯು ಪ್ರಾರಂಭದಲ್ಲಿ ನಾಡಿನ ರಕ್ಷಣೆಗಾಗಿ ದೇಹವನ್ನರ್ಪಿಸಿದ ಯೋಧರಿಗೆ ಮತ್ತು ಗುಜರಾಥಿನ ಮುಖ್ಯ ಮಂತ್ರಿ ಶ್ರೀ ಬಲವಂತರ್ಾಯ ಮೆಹತಾ ಮತ್ತವರ ಪತ್ನಿಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಶ್ರೀ ಕಾರಂತರು, ಭೂಮಸೂದೆಯ ಲೋಪದೋಷಗಳನ್ನು ಎತ್ತಿ ತೋರಿಸುತ್ತಾ, ಇದರಲ್ಲಿ ಪ್ರಯೋಜನಕ್ಕಿಂತ ಹಾನಿಯೇ ಹೆಚ್ಚಾಗಿರುವುದು, ಇದು ಲಂಚ, ಪಕ್ಷಪಾತ ಮತ್ತು ಸರ್ವಾಧಿಕಾರಕ್ಕೆ ಎಡೆಮಾಡಿಕೊಡುತ್ತದೆ ಅಲ್ಲದೇ ಇದರಿಂದಾಗಿ ಉತ್ಪನ್ನ ಇಳಿಯುವ ನಿರೀಕ್ಷೆಯೂ ಇದೆಯೆಂದು ತಿಳಿಸಿದರು.

ಶ್ರೀ ಕೆ. ಡಿ. ಜನರಾಜ ಹೆಗ್ಡೆಯವರು ಮಾತನಾಡುತ್ತಾ, ಈ ಭೂಮಸೂದೆಯಿಂದಾಗಿ ಭೂಮಿಯ ಒಡೆಯರು ಸರಕಾರೀ ಅಧಿಕಾರಿಗಳ ಕೈಕೆಳಗಿನ ಜೀತದಾಳುಗಳಾಗುವರು ಎಂದು ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಇದನ್ನೇ ಅನುಮೋದಿಸಿ, ಶ್ರೀ ಎನ್. ಎಂ. ಅಡ್ಯಂತಾಯ, ಶ್ರೀ ಬಿ. ಗೋವಿಂದರಾಯರು ಹಾಗೂ ಶ್ರೀ ವಂದರಾಯ ಪೈಯವರು ಮಾತನಾಡಿದರು.

ಕೊನೆಯಲ್ಲಿ ಭೂಸುಧಾರಣಾ ಕಾನೂನಿನಲ್ಲಿ ಯೋಗ್ಯ ತಿದ್ದುಪಡಿಗಳಾಗುವಂತೆ ಪ್ರಯತ್ನಿಸಲು ಕಾರ್ಯಕ್ರಮ ಕೈಗೊಳ್ಳಲು ಒಂದು ಕ್ರಿಯಾಸಮಿತಿಯನ್ನು ರಚಿಸಲಾಯಿತು. ಶ್ರೀಗಳಾದ ಯಂ. ಡಿ. ಅಧಿಕಾರಿ (ಅಧ್ಯಕ್ಷ); ಬೋಳ ರಘುರಾಮ ಶೆಟ್ಟಿ ಮತ್ತು ಬಿ. ಗೋವಿಂದ ರಾವ್ (ಕಾರ್ಯದರ್ಶಿಗಳು); ಕೆ. ವರದರಾಯ ಪೈ (ಕೋಶಾಧಿಕಾರಿಗಳು) ಮೊದಲಾದ 15 ಸದಸ್ಯರ ಆಯ್ಕೆಯಾಯಿತು. ಶ್ರೀ ಬೋಳ ರಘುರಾಮ ಶೆಟ್ಟಿ ಧನ್ಯವಾದಗಳನ್ನರ್ಪಿಸಿದರು.

ಈ ಸಭೆಯಲ್ಲಿ ಶ್ರೀ ಬಿ. ಗೋವಿಂದರಾಯರು ಮಂಡಿಸಿದ ಠರಾವನ್ನು ಅಂಗೀಕರಿಸಿ ಅದನ್ನು ಸರಕಾರಕ್ಕೆ ಒಪ್ಪಿಸುವ ನಿರ್ಧಾರ ಕೈಗೊಳ್ಳಲಾಯಿತು. "ಮೈಸೂರು ಭೂಸುಧಾರಣಾ ಕಾಯಿದೆಯನ್ನು ರಾಷ್ಟ್ರದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಜಾರಿಗೆ ತಂದುದು ಕೇವಲ ಅನುಚಿತವಾಗಿರುತ್ತದೆ. ಇದರಿಂದಾಗಿ ರಾಷ್ಟ್ರದ ಕೃಷಿ ಉತ್ಪಾದನೆಯು ಕುಂಠಿತವಾಗಿ ಸಮಾಜದ ಆರ್ಥಿಕ ಮತ್ತು ನೈತಿಕ ಸಮತೋಲನಕ್ಕೆ ಧಕ್ಕೆ ಬರುತ್ತದೆ. ಈ ಕಾಯಿದೆಯನ್ನು ಸಭೆಯು ಖಂಡಿಸಿ ಅದನ್ನು ತಡೆಹಿಡಿಯಬೇಕಾಗಿ ಸರಕಾರವನ್ನು ಕೇಳಿಕೊಳ್ಳುತ್ತದೆ" ಎಂಬ ನಿರ್ಣಯ ಮಾನ್ಯವಾಯಿತು.

## ಎಂ. ಜಿ. ಎಂ. ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ

ಅಂತರರಾಷ್ಟ್ರೀಯ ಸಹಕಾರದ ವಿವಿಧ ರಂಗಗಳನ್ನು ಕುರಿತು ನಾಲ್ವರು ಭಾಷಣಕಾರರು ತಾ. 26-10-65ರಂದು ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಸಹಕಾರ ದಿನಾಚರಣಾ ಸಮಾರಂಭದಲ್ಲಿ ಮಾತನಾಡಿದರು.

ಅಂತರರಾಷ್ಟ್ರೀಯ ಆರ್ಥಿಕ ನಿಧಿ ಹಾಗೂ ವಿಶ್ವಬ್ಯಾಂಕ್ ನಾನಾ ದೇಶಗಳ ನಡುವೆ ಹಣಕಾಸು ವ್ಯವಹಾರದಲ್ಲಿ ಸಹಕಾರ ನೆಲೆಸುವಂತೆ ಮಾಡಿವೆ ಎಂದು ಅಣ್ಣಾಮಲೈ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ರೀಡರ್ ಶ್ರೀ ಎ. ಸುಬ್ಬಯ್ಯನವರು ನುಡಿದರು.

ಶಿಕ್ಷಣ ಕ್ಷೇತ್ರದಲ್ಲಿರುವ ಅಂತರರಾಷ್ಟ್ರೀಯ ಸಹಕಾರವು ಬೇರೆ ಬೇರೆ ದೇಶಗಳ ನಡುವೆ ಸಾಮರಸ್ಯ ಹಾಗೂ ಶಾಂತಿಯನ್ನುಂಟುಮಾಡಬಲ್ಲದೆಂದು ಕರ್ನಾಟಕ ಸುರತ್ಕಲ್ಲಿನ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಕೆನಡಾದ ಡಾ| ಡಿ. ಜಿ. ಹ್ಯೂಬರ್ ತಿಳಿಸಿದರು. ಭಾರತದಲ್ಲಿ ಪ್ರಾಧ್ಯಾಪಕರ ವಿನಿಮಯವು ಇಂಜಿನಿಯರಿಂಗ್ ಶಿಕ್ಷಣದಲ್ಲಿ ಬಹಳ ಪರಿಣಾಮಕಾರಿಯಾಗಿದೆ ಎಂದರು.

ಮಣಿಪಾಲ ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿ ಶ್ರೀ ಕೆ. ಜಿ. ಕಾಮತ್‌ರವರು "ಕೈಗಾರಿಕೆಗಳಲ್ಲಿ ಅಂತರರಾಷ್ಟ್ರೀಯ ಸಹಕಾರ" ಕುರಿತು ಮಾತನಾಡುತ್ತಾ ಯಾವ ನಿರ್ಬಂಧವೂ ಇಲ್ಲದೆ ಜಗತ್ತಿನ ವಿವಿಧ ದೇಶಗಳಿಗೆ ಜ್ಞಾನದ ಅರಿವು ಸಿಗುವಂತಾದರೆ ಈಗ ಕೆಲವು ದೇಶಗಳಿಗೆ ಮಾತ್ರ ಆದರಿಂದಾಗುವ ಲಾಭವು ಎಲ್ಲ ದೇಶಗಳಿಗೂ ಸಿಗುವಂತಾಗುತ್ತದೆಂದರು.

ಖಾಸಗಿ ಹಾಗೂ ಸ್ವಯಂಪ್ರೇರಿತ ಸಮಾಜ ಸೇವಾ ಸಂಸ್ಥೆಗಳು ಪ್ರಪಂಚದ ಅನೇಕ ಕಡೆಗಳಲ್ಲಿ ಸಾಮಾಜಿಕ ಸುಧಾರಣೆಗಳನ್ನು ಮಾಡಿವೆ ಎಂದು ಮಂಗಳೂರಿನ ಸಮಾಜ ಸೇವಾ ಸಂಸ್ಥೆಯ ಡೈರೆಕ್ಟರ್ ರೆ| ಫಾ| ಅನುಲಿತ್ತೋ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರೊ| ಕು. ಶಿ. ಹರಿದಾಸ ಭಟ್ಟರವರು ಮಾತನಾಡಿ ರಾಷ್ಟ್ರೀಯ ಸಹಕಾರದಿಂದ ಅಂತರರಾಷ್ಟ್ರೀಯ ಸಹಕಾರ ಮೂಡುವಂತಾಗಬೇಕೆಂದರು. ಕಾಲೇಜ್ ಯೂನಿಯನ್ನಿನ ಅಧ್ಯಕ್ಷ ಶ್ರೀ ಕೆ. ಶೇಖಬ್ಬಾರವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಜೆರೋಮ ಅಳ್ವರವರು ವಂದನೆಗಳನ್ನು ಸಲ್ಲಿಸಿದರು.

## ಮಹಿಳಾ ಮತ್ತು ಸಂಯುಕ್ತರಾಷ್ಟ್ರ ದಿನಾಚರಣೆ

ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ 'ಮಹಿಳಾ ದಿನಾಚರಣೆ ಮತ್ತು ಸಂಯುಕ್ತರಾಷ್ಟ್ರ ದಿನಾಚರಣೆ'ಯನ್ನು ತಾ. ೨೮ರಂದು ಆಚರಿಸಲಾಯ್ತು. ಎಡ್ವಕೇಟ್ ಶ್ರೀ ಶಿತಾರಿ ವಿಲಿಯಂ ಪಿಂಟೋರವರು 'ಸಂಯುಕ್ತರಾಷ್ಟ್ರ ಸಂಘವು 20 ವರ್ಷಗಳಿಂದ ಜೀವಂತವಾಗಿದೆ ಎಂಬ ವಿಷಯವೇ ಅದರ ಯಶಸ್ಸನ್ನು ತೋರಿಸುತ್ತದೆ. ಪ್ರಸ್ತುತ ಸಮಸ್ಯೆಗಳು ಪರಿಹಾರ ಕಾಣದೆ ಬಿದ್ದಿರುವುದು ಅದರ ಸೋಲನ್ನು ಎತ್ತಿ ತೋರಿಸುತ್ತದೆ. ಅಂತೂ ಇಂತಹ ಸಂಘ ಲೋಕ ಶಾಂತಿಗೆ ಅತ್ಯಗತ್ಯ. ಅದು ಸುದೃಢವಾಗುವಂತೆ ಪ್ರಾರ್ಥಿಸುವ' ಎಂದರು.

ಮುಖ್ಯೋಪಾಧ್ಯಾಯ ಶ್ರೀ ಬಿ. ಎನ್. ಆಚಾರ್ಯರು ಮಹಿಳಾ ದಿನದ ಮಹತ್ವವನ್ನು ವಿವರಿಸಿ ಕಿತ್ತೂರು ಚೆನ್ನಮ್ಮ ರಾಣಿಯ ಸ್ಥೈರ್ಯ ಧೈರ್ಯ ಮಹಿಳೆಯರಲ್ಲಿ ಕಂಡುಬರಬೇಕೆಂದು ಹೇಳಿದರು.

## ನಮ್ಮ - ನಮ್ಮವರು

### ಶ್ರೀ ಎಸ್. ಸಿ. ಕೃಷ್ಣಪ್ಪ

ಅಧಿಕಾರಗಳಿಗಾಗಿ ಹೋರಾಡುವವರು ಹಲವರಾದರೆ, ಕರ್ತವ್ಯಗಳನ್ನೂ ನಿರ್ವಹಿಸುವ ಕೆಲವರಾದರೂ ಇದ್ದಾರೆ. ಕರ್ತವ್ಯವನ್ನು ಸರಿಯಾಗಿ ಪಾಲಿಸಿಕೊಂಡು ಬರುವುದು ಸುಸಂಸ್ಕೃತ ನಾಗರಿಕನ ಕರ್ತವ್ಯ. ನಮ್ಮ ಸಂವಿಧಾನದಲ್ಲಿ ಪ್ರತಿ ನಾಗರಿಕನಿಗೂ ಕೆಲವೊಂದು ಅಧಿಕಾರಗಳು ಕೊಡಲ್ಪಟ್ಟಿವೆ; ಆತನ ಕರ್ತವ್ಯಗಳೂ ಕೆಲವಿವೆ. ತಿಪಟೂರಿನ ಶ್ರೀ ಎಸ್. ಸಿ. ಕೃಷ್ಣಪ್ಪ ಇವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ಪಾಲಿಸಿಕೊಂಡು ಬರುತ್ತಾರೆ; ತನಗೆ ಮಾತ್ರವಲ್ಲ, ಎಲ್ಲರಿಗೂ ಸಮಾನವಾದ ಹಕ್ಕುಗಳು ದೊರೆಯಬೇಕು ಎನ್ನುತ್ತಾರೆ. ಹಲವಾರು ಮಾನವ ಸಹಜ ದುರ್ಬಲತೆಗಳಿಂದ ನಮ್ಮಲ್ಲಿ ಅಧಿಕಾರವೆಂಬುದು ಕೆಲವೇ ಜನರ ಸೊತ್ತಾಗಿ ಉಳಿದಿರುತ್ತದೆ. ಈ ದುರ್ಬಲತೆಗಳನ್ನು ಹಿಮ್ಮೆಟ್ಟಿಸಿದಾಗಲೇ ನಮ್ಮ ದೇಶ ಜಾತ್ಯತೀತ ಸಮಾಜವಾದ ಮಾದರಿಯ ಕಲ್ಯಾಣ ರಾಷ್ಟ್ರವಾಗುತ್ತದೆ.

ಶ್ರೀ ಕೃಷ್ಣಪ್ಪನವರು ಕೃಷ್ಣಾ ಫ್ಲೋರ್ ಮತ್ತು ಓಯಿಲ್ ಮಿಲ್ಸ್‌ನ ಮಾಲಿಕರು. ವ್ಯವಹಾರದಲ್ಲಿ ಮುಳುಗಿದ್ದರೂ ಇವರು ಜನತೆಯನ್ನು ಬಿಡಲಿಲ್ಲ. ಸಾರ್ವಜನಿಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಇವರು ಮುತುವರ್ಜಿಯಿಂದಲೂ ಕಳಕಳಿಯಿಂದಲೂ ದುಡಿಯುತ್ತಾರೆ. ಇವರ ಸೇವೆಯನ್ನು ಜನ ಮೆಚ್ಚಿಕೊಂಡೂ ಇದ್ದಾರೆ. ನಗರ ಸಭೆಯ ಸದಸ್ಯರಾಗಿ ಆಯ್ಕೆಗೊಂಡ ಶ್ರೀ ಕೃಷ್ಣಪ್ಪನವರು ಮನಃಪೂರ್ವಕವಾಗಿ ದುಡಿಯುತ್ತಿದ್ದಾರೆ. ಫಲ ಕೆಲವೊಮ್ಮೆ ಕೈಕೊಡಬಹುದು. ಶ್ರೀ ಕೃಷ್ಣಪ್ಪನವರೂ ಫಲವಾದಿಗಳು. ತಾನು ಹಿಡಿದ ಕೆಲಸವನ್ನು ಪೂರ್ಣವಾಗಿ ಸಾಧಿಸುವ ವರೆಗೆ ವಿಶ್ರಾಂತಿ ಪಡೆಯುವವರು ಇವರಲ್ಲ. ಇವರ ಫಲ ಹಿಡಿದ ದಾರಿ ಪರಿಕೋರೆ ಮುದಲ್ಲಿ ನೋಡಬಹುದು. ಸತ್ಯ ಸಾಧಕರಾದ ಇವರಿಂದ ಇನ್ನೂ ಹೆಚ್ಚಿನ ಜನಹಿತ ಸಾಧನೆಯಾಗುವಂತಾಗಬೇಕು.

# ಚೈತ್ರ ಮುರುಗ

(ಎರಡನೇ ಪುಟದಿಂದ)

ಮನವನ್ನು ಕೊಟ್ಟಿರಲಿಲ್ಲ. ಕೇಳುತ್ತಿರುವರ ಮುಖವನ್ನು ನೋಡದೆ ಬೇರೆಡೆಗೆ ನೋಡುವ—ಅವನ ಅಭ್ಯಾಸ ಬದಂತೆ—ಆಗಲೂ ಎವೆಯಿಕ್ಕದೆ ಎದುಗಡೆ ಕಾಣುತ್ತಿದ್ದ ವಿಶಾಲ ವೈದಾನಿತ್ತ ನೋಡುತ್ತ, ರಾಮೇಶ್ವರಕ್ಕೆ ದಾರಿಯನ್ನು ತೋರಿಸುತ್ತಿದ್ದ. ರೂಳಿಯುತ್ತಿ ಹಳ್ಳಿಗಳ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿದ್ದನು. ಆ ಹಳ್ಳಿಗಳ ಮೇಲೆ ತೂರೆ ಇಲ್ಲದೆ ಯಾಗೂ ಹತೋಟಿಯಲ್ಲಿ ದದಿದ್ದ ಬರಿಯ ಯಂತ್ರ ಓಡುತ್ತಿದ್ದಂ ಕೇದಾರಿಯ ಮನಸ್ಸು ಓಡಾಡುತ್ತು.

"ಒಳ್ಳೆಯದು ರಾಮು, ಜೀವನವು ಂದು ತೊಡಕಿನ ಗಂಟು. ಅದನ್ನು ಸರಿಯಾಗಿ ಬಿಡಿಸಲು ಕಾರ್ಯಶೀಲ ಮಹಾತ್ಮರಿಗಳಿಗೆ ಮಾತ್ರ ಗೊತ್ತು. ಖಡ್ಗ ಹಾ ಲೇಖನಿಗೆ ಚಿಪ್ಪು ಬಾಯಿಬಿಡುತ್ತ — ಹುದುಗಿರುವ ಪ್ರಜೋವನೆ ಒಂ ರೀತಿ ಇದೆ— ಆದರೆ ಎರಡನ್ನೂ ಭ್ಯಾಸಿಸಿ ಬಲದಿಂದ ಉಪಯೋಗಿಸಬೇ. ಒಂದು ಉದಾಹರಣೆ ನೋಡು. ಪ್ರೆಡೆನ್ಸಿ ಕಾಲೇಜಿನಲ್ಲಿ, ಬಿಂಕ, ಜಾಣತನ ತ್ತು ಶ್ರೀಮಂತಿಕೆಗಳಿಂದಾಗಿ ಕೀರ್ತಿ ಪಡೆದಿದ್ದ ಬಾಲಸುಂದರಂ ಈಗ ನನ್ನ ಹಿತನಾಗಿದ್ದಾನೆ. ಒಂದು ದಿನ ಅವನ ಲೆ ರೇಗಿ ಶರಣಾಗತನನ್ನಾಗಿ ಮಾಡಿ. ಆವನೀಗ ಪಳಗಿದ್ದಾನೆ: ಪ್ರಾಮಾಣಿಕನಿದ್ದಾನೆ. ಸ್ವಂತ ಒಪ್ಪಿಗೆಯಿಂದಲೇ ನನು ಈಗ ನನ್ನನ್ನು ಕಂಡೊಡನೆ ನಮಸ್ಕರಿಸುತ್ತಾನೆ, ಅವನು ಗುಂಡು ಗುಂಡಾವ ಅವನ ಕೈಯನ್ನು ಸಂತೋಷದಿಂ ನನ್ನ ಕೈಯಲ್ಲಿ ಹಾಕುತ್ತಾನೆ. ಒಂದು ನ ಅವನ ಪರಿಚಯವನ್ನು ನಿನಗೆ ಮಾಡಿಕೊಡುತ್ತೇನೆ."

"ರಜಾ ಕಾಲದ ಮುಂಚೆ ನೀನು ಅವನ್ನು ಊರು ಹೊಡಿಯುವವ ಮತ್ತು ವಿದ್ಯಾಗರ್ವಿ ಎಂದೆಲ್ಲಾ ಕರೆದು ನಿಂದಿಸಿ. ಕೇದಾರಿ, ನಿಜವಾಗಿ ಎಂತಹ ಬಗವಣೆ!..." ರಾಮು ಆವೇಶದಿಂದ ಗಯಾಗಿ ಹೇಳಿದನು.

"ಒಳ್ಳೇದು, ರಾಮು, ಆಗ ನನಗವನ ರಿತು. ಮಾಹಿತಿ ಇದ್ದಿಲ್ಲ ಮತ್ತು ನನ್ನ ರಿತು ಅವನಿಗೆ ಗೊತ್ತಿದ್ದಿಲ್ಲ. ಪರಸ್ಪರ ವಳಿಕೆಗೆ ಯಾವದೂ ಸಮೂನನಿಲ್ಲ. ಯಾವಾಗಲೂ ಸಹಾನುಭೂತಿಂಬ ಫಲವನ್ನೀಯುತ್ತದೆ. ಅದು ಅ ನ ಹಾಗೂ ತಪ್ಪಭಿಪ್ರಾಯಗಳ ಮಂ ಪರದೆಯನ್ನು ಹಂದೊಗೆಯುದೆ."

"ಜಯದಂತೆ ಯಾವುದೂ ಅಲ್ಲ" ರಾ ತನ್ನಷ್ಟಕ್ಕೆ ಗೊಣಗುಟ್ಟಿ ಕೊಂಡನು. ಮು ಸುಮ್ಮನಿದ್ದುದರಿಂದ ಕೇದಾರಿಯು ನವು ಅತ್ತ ಹರಿಯಲೇ ಇಲ್ಲ. ಆ ನವು ಅವನಿಗೆ ಇನ್ನಷ್ಟು ಉದ್ದದ ಷಣವನ್ನು ಕೊಡಲು ಬೆನ್ನು ತಟ್ಟಿದಂಯಿತು. ಒಪ್ಪ ಹಾಕಿದ್ದ ಹಿತ್ತಾಳೆಯ ರದಲ್ಲಿ ನೇತಾಡುತ್ತಿದ್ದ ಬಹು ಚೆಲ್ಲಿಯ ಹೊಸ ರೇಷ್ಮೆಯಂಗಿ ಮತ್ತು ಒಂದು ಬಗೆಯ ಬಟ್ಟೆಯ ನೇಲಂಗಿ ಅವನ ದೃಷ್ಟಿಯನ್ನು ಸೆರೆ ಹಿಡಿದಿತ್ತು. ಸ್ಥಿರ ನೀರವತೆಯು ಕೇದಾರಿಗೆ ಭಯದ ಸೂಚನೆಯನ್ನು ಕೊಟ್ಟಿತು. ಅವನು ತಿರುಗಿ ನೋಡಿ, ಒಂದೇ ನೋಟದಿಂದ ಸಂಪೂರ್ಣ ಪರಿಸ್ಥಿತಿಯ ಅರ್ಥವನ್ನು ಮಾಡಿಕೊಂಡನು.

"ರಾಮು, ಈ ಮಾತಿನ ರೀತಿ ನಿಜವಾಗಿ ನಿನಗೆ ರುಚಿಸಿರುವದಿಲ್ಲ. ಈ ತೋರಿಕೆಯ ಜಯಗಾನದ ಇಷ್ಟಲಾಪವು ತಪ್ಪುಗ್ರಹಿಕೆಯನ್ನು ಕೊಟ್ಟಿರುವದಕ್ಕೆ ನಾನು ದುಃಖಪಡುತ್ತೇನೆ. ಈ ರೀತಿಯು ಕ್ಷುದ್ರ ಆದರೆ, ಕುಶಾಲಿನ ಹರಟೆಯು ನಿನ್ನ ಮನಸ್ಸನ್ನು ಅತ್ತ ತಿರುಗಿಸಬಹುದೆಂದು ನಾನೆಣಿಸಿದ್ದೆ. ನನ್ನನ್ನು ಕ್ಷಮಿಸು. ನಾನು ಕೂಡ ವಿಷಾದ ಮನಸ್ಥಿತಿಯಲ್ಲಿದ್ದೆ. ನೀನಿಲ್ಲಿಗೆ ಬರುವ ಮುಂಚೆ ಕೇವಲ ಆಲೋಚನೆಯೇ ಸಂತೋಷದಿಂದ ನನ್ನನ್ನು ದುರ್ಬಲನನ್ನಾಗಿ ಮಾಡಿತು. ನಿನ್ನ ಹೆಜ್ಜೆಯ ಶಬ್ದಗಳು ನನ್ನಲ್ಲಿ ಹಳೆಯ ನೆನಪುಗಳ ಪ್ರತಿಧ್ವನಿಯನ್ನುಂಟು ಮಾಡುತ್ತಿದ್ದುವು. ಪರಸ್ಪರ ಉತ್ಸಾಹಗಳಾಗಿರುವಂತಾಗಲು ನಾಲಗೆಯ ಲಗಾಮನ್ನು ಸಡಿಲು ಮಾಡಿದೆ. ಮಾತುಗಳು ನಮ್ಮನ್ನು ಕೆಲವೊಮ್ಮೆ ಮೋಸಮಾಡುತ್ತವೆ. ಅವು ನಮ್ಮನ್ನು ಹಳಿ ತಪ್ಪಿಸಿ, ತಪ್ಪು ದಾರಿಯಲ್ಲಿ ಕಳುಹಿಸಿ, ಮಿತ್ರ ಮತ್ತು ವೈರಿ ಎಂಬ ಬೇಧವಿಲ್ಲದೆ ಡಿಕ್ಕಿ ಹೊಡೆಸುತ್ತವೆ.

ಸ್ವರವನ್ನು ಬದಲಾಯಿಸಿ ರಾಮು ಮಾತನಾಡುವ ಮುಂಚೆಯೇ ಕೇದಾರಿಯು ವಿಷಯವನ್ನು ಬದಲಾಯಿಸಿದನು. "ಸ್ನಾನಕ್ಕೆ ನಾವು ಕೆಳಗೆ ಹೋಗೋಣ. ಕೊಳವೆಯಲ್ಲಿ ಬೇಕಾದಷ್ಟು ನೀರು ಬರುತ್ತದೆ. ನಿಜವಾಗಿ ಅದೊಂದು ಸಣ್ಣ ಜೋಗು. ಕೆಣಕಿಸಲ್ಪಟ್ಟಿರುವ ನರಗಳ ಮೇಲೆ ಆ ನೀರಿನ ಬಡಿತ ಬಿದ್ದಲ್ಲಿ ನಮಗೆ ಸ್ವಲ್ಪ ಉಲ್ಲಾಸ ಉಂಟಾದೀತು. ಹಿಂದಿನ ಸಂತೋಷದ ಸ್ಥಿತಿಗೆ ಬಂಬಹುದು."

— ೫ —

ಮರುದಿನ ರಾಮು ಕ್ರಿಶ್ಚಿಯನ್ ಕೊಲೇಜಿಗೆ ಸೇರಿದನು; ಕ್ರಮಶಃ ಕೇದಾರಿಯು ಬೇರೆ ವಲಯದಲ್ಲಿ ಸುತ್ತಾಡುತ್ತಿರುವನೆಂದವನೆಣಿಸಿಕೊಂಡನು. ರಾಮು ವಿನೊಡನೆ ತಾನೆಷ್ಟು ಒಂದಾಗಲು ಪ್ರಯತ್ನಿಸಿದರೂ ಅವನು ಒಡಂಬಡುವದಿಲ್ಲ ಎಂದು ಕೇದಾರಿಯು ಭಾವಿಸಿಕೊಂಡನು. ತಾವು ಪೇಚಿನಲ್ಲಿ ಸಿಲುಕಿದ್ದೇವೆಂಬುದು ಇಬ್ಬರಿಗೂ ಗೊತ್ತಾಗಿತ್ತು. ಹಳೆಯ ನೆನಪುಗಳನ್ನು ಜ್ಞಾಪಕಕ್ಕೆ ತಂದುಕೊಂಡಾಗ ಲ್ಲಿ ... ಮನೋಸ್ವಾಗ್ನಿಗೆ ತುಪ್ಪಸುರುವಿದಂತಾಗುತ್ತಿತ್ತು. ಒಂದೇ ಕೋಣೆಯಲ್ಲಿ ಕಾಲ ಕಳೆಯುವದೆಂದರೆ ಘರ್ಷಣೆಗೆ ಪ್ರೋತ್ಸಾಹಕೊಟ್ಟಂತಾಗುತ್ತಿತ್ತು. ವಿಶ್ವವಿದ್ಯಾನಿಲಯದ ಪರೀಕ್ಷೆಯಲ್ಲಿ ಉತ್ತೀರ್ಣನಾಗುವದರಿಂದ ಅಥವಾ ಸೋಲುವದರಿಂದ ಹರೆಯದ ಗೆಳೆತನದಲ್ಲೂ ಬದಲಾವಣೆಯಾಗುತ್ತದೆಂಬುದನ್ನೆಣಿಸಿಕೊಂಡು ರಾಮು ಶಾಂತವಾಗಿ ಚಿಂತಿಸುತ್ತಿರುತ್ತಿದ್ದನು.

ಕೇದಾರಿ ಹಾಗೂ ರಾಮು, ಇಬ್ಬರೂ, ಆ ತರಹದ ಪರಿಸ್ಥಿತಿಯನ್ನು ಸುಧಾರಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದರು. ಹೃದಯಕ್ಕೆ ಚೆನ್ನಾಗಿ ಪೆಟ್ಟಾಗಿದೆಂಬುದು ಭಾಸವಾಗುತ್ತಿತ್ತು; ಇಬ್ಬರ ಹೃದಯವೂ ನೋಯುತ್ತಿತ್ತು. ಇನ್ನೂ ಹೆಚ್ಚು ಸಮಯ ಸುಮ್ಮಗಿರಲು ರಾಮುವಿನಿಂದ ಸಾಧ್ಯವಾಗಲೂ ಇಲ್ಲ; ಸುಮ್ಮನಿರಲೂ ಇಲ್ಲ.

ಒಂದು ದಿನ ಸಾಯಂಕಾಲ, ಕೇದಾರಿಯು ಎಂದಿಗಿಂತಲೂ ಹೆಚ್ಚು ನೊಂದು ಹಾಗೂ ಕುಗ್ಗಿದವನಂತೆ, ತಡವಾಗಿ, ಕೋಣೆಗೆ ಹಿಂತಿರುಗಿದನು. ಸಂದಿಗ್ಧ ಪರಿಸ್ಥಿತಿಯಲ್ಲಿ ಅವನಷೇ ಆದ ವಿಶಿಷ್ಟ ಮೃದು ಹಾಗೂ ನಿರ್ವಿಕಾರ ಸ್ವರದಿಂದ ಸ್ಪಷ್ಟವಾಗಿ ರಾಮು ಕೇಳಿದನು. "ಎಲ್ಲೋ ಗಾಡಿಯ ಕೀಲು ತಪ್ಪಿದೆ. ಪ್ರಿಯ ಕೇದಾರಿ, ನಾಲ್ಕು ವರ್ಷದಲ್ಲಿ ಒಂದು ದಿನವೂ ಬಿಡದೆ, ಪ್ರತಿದಿನ ಆಟಕ್ಕಾಗಲೀ, ಕೆಲಸಕ್ಕಾಗಲೀ, ನಾವು ಒಟ್ಟಿಗೆ ಹೋಗುತ್ತಿದ್ದೆವು. ಈಗ ಎರಡು ವಾರಗಳಿಂದ ಒಂದು ದಿನವಾದರೂ ನನ್ನೊಂದಿಗೆ ತಿರುಗಾಡಲಿಕ್ಕೆ ಬರಲು ನಿನಗೆ ಬಿಡುವೇ ಸಿಗಲಿಲ್ಲ! ಬದಲು ಕೆಣಕಿಸಲ್ಪಟ್ಟವನಂತೆ ನೀನು ಹಿಂದಕ್ಕೆ ಬರುತ್ತಿ. ದಿನದ ಉಳಿದ ಸಮಯದಲ್ಲೂ ನೀನು ಖಿನ್ನವದನನಾಗಿರುತ್ತಿ. ನನ್ನ ಇರುವಿಕೆಯು ನಿನಗೆ ನೋವನ್ನುಂಟು ಮಾಡುತ್ತದೆಯೇ? ಪ್ರಾಮಾಣಿಕತನದಿಂದ ಹೇಳು. ನಿಜ ಸ್ಥಿತಿಯನ್ನು ತಿಳಿದುಕೊಳ್ಳಲು ನಾನು ಚಡಪಡಿಸುತ್ತಿದ್ದೇನೆ.'

"ನನಗೂ ಹಾಗೆಯೇ ಆಗುತ್ತಿದೆ, ರಾಮು. ವಿವರಣೆಯನ್ನು ಕೊಡಲು ನೀನು ಕೇಳಿಗುವದು ಸಂತೋಷವೇ ಸರಿ.' ಅಭ್ಯಾಸದಂತೆ ನಿಂತುಕೊಂಡು ಕೇದಾರಿಯು ಉತ್ತರ ಕೊಟ್ಟನು.

'ಕೆಲ ಕಾರಣಗಳಿಂದಾಗಿ ನಿನಗೆ ಸಹಾನುಭೂತಿಯನ್ನು ತೋರಿಸಲಿಲ್ಲ. ದುಃಖ ಹಾಗೂ ಅಪಜಯ ಉತ್ತಮ ತಯಾರಿಕೆಗೆ ಅನುಭವವನ್ನು ಕೊಡುತ್ತವೆಂಬುದನ್ನು ನಾನು ನಂಬುತ್ತೇನೆ. ನಾನು ಪಡೆದಿರುವಂತಹ ಕ್ಷಣಿಕ ಮಿಂಚುವ ಜಯವು—ನಿಷ್ಪ್ರಯೋಜಕ ಪಶುವು ಕೊಳಕು ನೀರಿನಲ್ಲಿ ಸೊಕ್ಕಿ ಬೆಳೆದಂತೆ—ಇದೆ. ಅಂದರೆ ಅಂತರಂಗ ಅಸ್ತವ್ಯಸ್ತ ಸ್ಪಷ್ಟವಾಗುತ್ತದೆ. ಅವು ನನ್ನಂತಹ ಅಹಂವಾದಿ ಹಾಗೂ ಅಪ್ರಬುದ್ಧರಿಗೆ ಸಂತೋಷವನ್ನುಂಟು ಮಾಡಬಹುದು. ದೇವತೆಗಳು ನಿನ್ನನ್ನು ಮಾನ, ನೈತಿಕ ಹಾಗೂ ಜಾಣತನದ ಅಗ್ನಿಕುಂಡದಲ್ಲಿ ಹಾಕಿ ಪುಟಕೊಟ್ಟು, ಮಹಾನ್ ಕಾರ್ಯಕ್ಕಾಗಿ ತಯಾರು ಮಾಡುತ್ತಾರೆ ಎಂಬುದನ್ನು ನಾನು ನಂಬುತ್ತೇನೆ."

ಕೇದಾರಿಯು ಒಮ್ಮೆ ರಾಮುವಿನ ಮುಖವನ್ನು ನೋಡಿ, ಪ್ರೀತಿಮಯ ಹಾಗೂ ವ್ಯಸನಪೂರ್ಣ ಗಂಭೀರ ಸ್ವರದಿಂದ ಮುಂದರಿಸಿದನು. "ನಿನ್ನಂತಹವನ ಶ್ರೀಮತಿ, ಔದಾರ್ಯ, ಸಭ್ಯತೆ ಹಾಗೂ ಜೀವನದ ಅರಿವಿಗೆ ಜಯವು ಮಣಿಯದಿರುವನ್ನು ಕಾಣುವಾಗ, ನಿಜವಾದ ಅರ್ಹತೆಗೆ ಜಯವು ನಿಜವಾದ ಬಹುಮಾನವಲ್ಲವೆಂದು ತಿಳಿದುಕೊಳ್ಳಬೇಕಾಗಿದೆ. ಯಾವಾಗಲಾದರೂ ನಿನಗೆ ತಮಾಷೆ ಮಾಡಲು ಸಾಧ್ಯವೇ ಅಥವಾ ನಿನ್ನನ್ನು ಅಣ್ಣನಲ್ಲವೆಂದು ಗೌರವ ತೋರಿಸದಿರಲು ಸಾಧ್ಯವೇ? ನನ್ನ ಅತಿ ಅಲ್ಪತನದಲ್ಲೂ ದಯವಿಟ್ಟು ತಪ್ಪಭಿಪ್ರಾಯವನ್ನು ಪಡಬೇಡ, ಗೆಳೆತನಕ್ಕೆ ಪ್ರಕಟಣೆಯನ್ನು ಸಹಿಸಲು ಸಾಧ್ಯ ಇರುವದಿಲ್ಲ. ನೀನು ನನ್ನನ್ನು ಸಂಶಯ ದೃಷ್ಟಿಯಿಂದ ಕಾಣುತ್ತಿರುವುದು ನನಗೆ ಗೊತ್ತಿದೆ. ನನ್ನ ಈ ಜನ್ಮದಲ್ಲಿ ನಿನ್ನ ಮೇಲಿನ ನಿಷ್ಠೆ ಮತ್ತು ಮಮತೆಯನ್ನು ಇನ್ನೊಮ್ಮೆ ಒಪ್ಪಿಕೊಳ್ಳುತ್ತೇನೆ. ನೀನು ನನಗಾಗಿ ಮಾಡಿರುವ ಪ್ರೀತಿಯುಕ್ತ ತ್ಯಾಗ ಮಹತ್ವದ್ದಿದೆ, ಹೌದು, ರಾಮು, ನೀನು ಶ್ರೇಷ್ಠ ವರ್ಗದ ಮಾನವರ ಪಂಕ್ತಿಯಲ್ಲಿರುವೆ. ಇಡಿ ಪ್ರಪಂಚವೆ ನಿನಗೆ ಮರ್ಯಾದೆಯನ್ನೀಯುದಿದ್ದರೂ, ಸ್ನೇಹಿತರು ಮೋಸ ದ... ನೀನ್ಯಾತಕ್ಕಾಗಿ ನೊಂದುಕೊಳ್ಳುವುದು?"

ಕೇದಾರಿಯ ಕಣ್ಣಿನಲ್ಲಿ ನೀರು ಬಂತು. ಆದರೂ ಅವನು ಒಡನೆ ತೆರೆದಿರುವ ವಿಶಾಲ ವಿಸ್ತಾರದತ್ತ ನೋಡುವ, ಕನ್ನಡಿ ಪ್ರೀತಿಯ ಕಂಗ ವಿನ್ಯಾಸಕ್ಕೆ ಹಿಂತಿರುಗಿದನು. ಅವನು ಆಗ ಮೂಗ ದೃಷ್ಟಿ ಹಾಯಿಸಿದಾಗ 'ಸಿಲೋನ್ ಬೋಟ್-ಮೆಯಿಲ್' ಯಾತ್ರಿಕರ ಭಾರ ಹಾಗೂ ಇತರ ಉದ್ಯೋಗಗಳ ಹೊರೆಯನ್ನು ಹೊತ್ತುಕೊಂಡು, ನೀಳ ಸಾಲು ಕಂಬಗಳ ಮೇಲೆ, ಮಿಂಚು ಹುಳ ಓಡುವಂತೆ, ರಾಮೇಶ್ವರದತ್ತ ಧಾವಿಸುತ್ತಿತ್ತು.

ಸ್ನೇಹಿತನ ಮಹತ್ವಪೂರ್ಣ ಭರವಸೆಯು ರಾಮುವಿನ ಹೃದಯದ ತಳವನ್ನು ಮುಟ್ಟಿತು. "ಹೌದು, ನಾನು ನಿರ್ಬಲನಿದ್ದೇನೆ, ಹಾಗಾಗಿ ನಿನ್ನ ಜಯವನ್ನು ಕಂಡು ಹೊಟ್ಟೆ ಕಿಚ್ಚಾಯಿತು. ಕೇದಾರಿ, ನನ್ನ ಅನ್ಯಾಯದ ಸಂಶಯಕ್ಕಾಗಿ ಎರಡು ತಟಕು ಕಣ್ಣೀರನ್ನು ಮಿಡಿದು ನನ್ನನ್ನು ಕ್ಷಮಿಸು.'

ಓಡುತ್ತಿದ್ದ ಬೋಟ್ ಮೆಯಿಲ್ ಅವನ ಚಿತ್ತವನ್ನೂ ಸೆಳೆದುಕೊಂಡು ಹೋಗಿತ್ತು. ಹಾಗಾಗಿ ರಾಮು ಆಡಿದ ಮಾತು ಅವನ ಕಿವಿಯ ಮೇಲೆ ಬೀಳಲೇ ಇಲ್ಲ. ಆ ಬೋಟ್ ಮೆಯಿಲ್ ಮಾಯವಾಗುವವರೆಗೂ ಎವೆಯಿಕ್ಕದೆ ಅದನ್ನೇ ಅವನು ನೋಡುತ್ತಿದ್ದನು. ಓಡುತ್ತಿದ್ದ ಬಂಡಿಯ ಚಕ್ರಗಳು ಮಾಡುತ್ತಿದ್ದ ಶಬ್ದ, ತಾರೆಗಳು ಮಿನುಗುತ್ತಿದ್ದ ರಾತ್ರಿಯ ನೀರವತೆಯಲ್ಲಿ ಕ್ಷೀಣವಾಗಿ ಕರಗಿ ಹೋಯಿತು. ಅನಂತರ ಒಂದು ಸಲ ಬಲವಾಗಿ ತಲೆಯನ್ನಲ್ಲಾಡಿಸಿ, "ಸಾಯಂಕಾಲ ನಿನ್ನನ್ನು ಯಾಕೆ ಜೊತೆಯಲ್ಲಿ ಕರಕೊಂಡು ಹೋಗುವದಿಲ್ಲವೆಂದು ಕೇಳಿದೆ, ನಾಳೆ ನನ್ನೊಡನೆ ಬಾ, ಆಗ ನಿನಗೆಲ್ಲವೂ ಗೊತ್ತಾಗುತ್ತದೆ." ಕೇದಾರಿಯು ಮುಗಿಸಿದನು.

(ಮುಂದುವರಿಯುವುದು)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

**NAVAYUGA 4-11-1965**
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೪-೧೧-೬೫ರಿಂದ ೧೦-೧೧-೬೫ರ ವರೆಗೆ

### ೧ ಮೇಷ

ಅಲ್ಪ ಪರಿಶ್ರಮದಿಂದ ಅಧಿಕ ಲಾಭವನ್ನು ಪಡೆವಿರಿ. ನಿಮ್ಮ ಆರೋಗ್ಯವಿಂದು ಸುಧಾರಿಸುವುದಲ್ಲದೆ ಹೆಚ್ಚಿನ ಗೃಹತಾಪತ್ರಯಗಳು ಮಾಯವಾಗುವವು. ವಾದವಿವಾದಗಳಲ್ಲಿ ವಿಜಯಿಗಳಾದರೂ ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ಸಂಚಿತರಾಗುವಿರಿ. ಆಕಸ್ಮಿಕ ಪ್ರವಾಸದ ಯೋಗವಿರುವುದು. ತಾ. ೪, ೬, ೮ ಧನಲಾಭ ಸುಖಭೋಗಗಳು ಲಭಿಸುವವು.

### ೨. ವೃಷಭ

ವಿಪಕ್ಷೀಯರೆಷ್ಟೇ ಪ್ರತಿರೋಧವನ್ನೆಸಗಿದರೂ ವ್ಯವಹಾರ ಚತುರರಾದ ನೀವು ನಿಮ್ಮ ಕಾರ್ಯಗಳಲ್ಲಿ ಯಶಸ್ವಿಗಳಾಗುವಿರಿ. ಆರ್ಥಿಕ ತಗಾದೆಯಿಂದ ನೀವಿಂದು ಮುಕ್ತರಾಗಿದ್ದರೂ ಗೃಹತಾಪತ್ರಯದಿಂದ ಪೀಡಿತರಾಗುವಿರಿ. ಆಪ್ತೇಷ್ಟವರ್ಗದವರ ವಿಯೋಗವುಂಟಾಗಲಿದೆ. ತಾ. 4, 5, 6, 10 ಈ ದಿನಗಳಲ್ಲಿ ಬಹುಮುಖದಿಂದ ಧನಾಗಮವಾಗುವದು.

### ೩. ಮಿಥುನ

ದೈವ ಪ್ರಕೋಪಕ್ಕೊಳಗಾದ ನಿಮಗೆ ಯಾವ ಭಾಗದಲ್ಲೂ ಸುಖ ನೆಮ್ಮದಿಯಿರಲಾರದು. ನಿಮ್ಮ ಅಜಾಗರೂಕತೆಯಿಂದಾಗಿಯೂ ಶತ್ರುಜನರ ಉಪಟಳದಿಂದಾಗಿ ಕೂಡ ಹೆಚ್ಚಿನ ನಷ್ಟಕ್ಕೆ ಗುರಿಯಾಗುವಿರಿ. ಸ್ತ್ರೀವರ್ಗದವರಿಂದ ಕಲಹ ಅಪವಾದಗಳೂ ಪ್ರಾಪ್ತವಾದಾವು. ಅತೀವ ಕಷ್ಟದಿಂದ ಕಾಲ ಕಳೆವ ನಿಮಗೆ ತಾ. 6ರಿಂದ 9ರ ವರೆಗಿನ ದಿನಗಳು ಸ್ವಲ್ಪ ಉತ್ತಮವಾಗಿ ಕಾಣಿಸಲಿವೆ.

### ೪ ಕರ್ಕಟ

ಅಂಗಾರಕನೋರ್ವನನ್ನುಳಿದು ಇತರರೆಲ್ಲರೂ ನಿಮಗಿಂದು ಪ್ರತಿಕೂಲರಾಗಿರುವರು. ಧನಭಾಗ್ಯಪತಿಗಳು ಅನಿಷ್ಟಸ್ಥಾನವನ್ನು ಹೊಂದಿರುವುದರಿಂದ ಋಣದ ಬಿಕ್ಕಟ್ಟು ಅತಿಯಾಗಲಿದೆ. ಸೋದರರೂ ಹೆಂಡತಿ ಮಕ್ಕಳಾದಿಯಾಗಿ ಎಲ್ಲರ ಕೂಡೆ ಕಲಹ ಮನಸ್ತಾಪವುಂಟಾಗಲಿದೆ. ಆರ್ಥಿಕ ತಗಾದೆ ಆತ್ಮೀಯರ ವಿಯೋಗ ದುಃಖತಪ್ತರಾದ ನಿಮಗೆ ವಾರಾಂತ್ಯದ 3 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

### ೫. ಸಿಂಹ

ಕಾರ್ಯದಕ್ಷತೆಯು ಕೊರತೆಯು ನಿಮ್ಮಲ್ಲಿರುವದಾದರೂ ಯಾವ ಕಾರ್ಯದಲ್ಲೂ ನೀವು ವಿಫಲರಾಗಲಾರಿರಿ. ಬಂಧುಗಳ ನೆರವೂ ಜನತೆಯ ಸಹಕಾರವೂ ಚೆನ್ನಾಗಿರುವುದರಿಂದ ಯಾರೂ ನಿಮ್ಮನ್ನಿಂದು ಎದುರಿಸಲಾರರು. ಆರೋಗ್ಯ ಮತ್ತು ಆರ್ಥಿಕ ವಿಭಾಗದಲ್ಲಿ ನಿಶ್ಚಿಂತರಾದ ನಿಮಗೆ ವಾರದ ಆದ್ಯಂತ ದಿನಗಳು ಅತ್ಯುತ್ಕೃಷ್ಟ ಸುಖಾವಹವಾಗಿರುವವು.

### ೬. ಕನ್ಯಾ

ಎಂಥಹ ಬಿಕ್ಕಟ್ಟಿನ ಪರಿಸ್ಥಿತಿಯೊದಗಿದರೂ ನೀವು ನಿಮ್ಮ ಕರ್ತವ್ಯದಿಂದ ಪರಾಙ್ಮುಖರಾಗಲಾರಿರಿ. ಪರಿಶ್ರಮವು ಸಾರ್ಥಕವಾಗುವುದರಿಂದ ದಿನಯಾಪನೆಯು ದುಸ್ತರವಾಗದು. ಆದರೆ ಸಂಸಾರದಲ್ಲಿ ನೆಮ್ಮದಿಯಿರದು. ದುರ್ಜನರ ಸಹವಾಸದಿಂದಾಗಿ ಜನಾಪವಾದಕ್ಕೆ ಸಿಲುಕಲಿರುವಿರಿ. ಪ್ರವಾಸದಲ್ಲಿ ನಷ್ಟಕಷ್ಟಗಳು ಹೆಚ್ಚಲಿವೆ. ವಾರಾದಿಯ 3 ದಿನಗಳು ಹಿತಕರಗಳಾಗಿವೆ.

### ೭. ತುಲಾ

ಸಹನಶೀಲರೂ ಕಾರ್ಯದಕ್ಷರೂ ಆದ ನಿಮಗೆ ಈ ವಾರದಲ್ಲಿ ಬಹುಮುಖದಿಂದ ಧನಾಗಮವಾಗಲಿದೆ. ವ್ಯಾಪಾರ ವ್ಯವಹಾರ ಚತುರರಾದ ನಿಮಗೆ ಸಮಾಜದಲ್ಲೂ ಅದ್ವಿತೀಯ ಸ್ಥಾನಲಾಭವಾಗುವದು. ಮಕ್ಕಳು ಅನಾರೋಗ್ಯದಿಂದ ಬಳಲುವರು. ಸ್ವಾಮಿ ಸೇವಕರೊಳು ಮನಸ್ತಾಪವುಂಟಾದೀತು. ಪ್ರವಾಸವು ದುಃಖಮಯವಾಗದು. ತಾ. 6ರಿಂದ 9ರ ವರೆಗಿನ ದಿನಗಳು ಅನುಕೂಲ.

### ೮. ವೃಶ್ಚಿಕ

ಹಿಂದಿನ ಧೈರ್ಯ ಸಾಹಸಗಳು ನಿಮ್ಮಲ್ಲಿಂದು ಕಾಣಲಾರವು. ನಿಷ್ಠುರ ಭಾಷಣದಿಂದಾಗಿ ಹಲವರ ಕೂಡೆ ಕಲಹವಾಗುವದು. ಪಿತ್ತೋಷ್ಣ ಪ್ರಕೋಪದಿಂದಾಗಿ ಆರೋಗ್ಯವು ಸರಿಯಿರಲಾರದು. ತಾನೊಂದು ಬಗೆದರೆ ದೈವವೊಂದೆಣಿಸಿತೆಂಬ ಗಾದೆಯಂತೆ ನಿಮ್ಮ ಕಾರ್ಯಗಳು ವಿಪರೀತದಲ್ಲಿ ಪರ್ಯವಸಾನಗೊಳ್ಳುವವು. ಆರ್ಥಿಕ ಬಿಕ್ಕಟ್ಟಿನಿಂದ ಪೀಡಿತರಾದ ನಿಮಗೆ ವಾರಾಂತ್ಯದ 3 ದಿನಗಳು ಸ್ವಲ್ಪ ಉತ್ತಮವಾಗಿ ಕಾಣಿಸಲಿವೆ.

### ೯. ಧನು

ನಿಮ್ಮ ಬಯಕೆಗಳಿಂದು ಪೂರ್ಣವಾಗಲಿವೆ. ಯಾವ ಕಾರ್ಯದಲ್ಲೂ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ಜನತೆಯ ಸಹಕಾರವು ಸಾಕಷ್ಟಿದ್ದರೂ ರಾಜಕೀಯ ರಂಗದಲ್ಲಿ ವಿಪಕ್ಷೀಯರಿಂದ ಪರಾಜಿತರಾಗುವಿರಿ. ಧನಧಾನ್ಯಗಳ ಕೊರತೆಯು ನಿಮಗಿಲ್ಲವಾದರೂ ಗೃಹತಾಪತ್ರಯಗಳು ಆಗಾಗ ಕಂಡುಬರಲಿವೆ. ನಿರೋಗಿಗಳಾದ ನಿಮಗೆ ವಾರದ ಆದ್ಯಂತ ದಿನಗಳು ತುಂಬ ಉತ್ತಮವಿವೆ.

### ೧೦. ಮಕರ

ಕಷ್ಟ ಪರಂಪರೆಗಳನ್ನು ನೀವಿಂದು ಎದುರಿಸಬೇಕಾಗಿ ಬಂದರೂ ನಿಮ್ಮ ಇಷ್ಟಾರ್ಥವು ಪೂರ್ಣವಾಗಲಿದೆ. ಅನುಯಾಯಿಗಳು ಸಮತೂಕದಲ್ಲಿ ನಿಲ್ಲದ್ದರಿಂದ ಹಣದ ಚಿಂತೆಯಿರದು. ಪಿತ್ತದೋಷದಿಂದ ದುಃಸ್ವಪ್ನ ನಿದ್ರಾಭಂಗಾದಿಗಳು ಕಾಣಿಸಿಕೊಳ್ಳಲಿವೆ. ಬಂಧುಜನರೊಡನೆ ಅನ್ಯೋನ್ಯದಿಂದಿರಲಾರಿರಿ. ತಾ. 5, 6, 7 ಇದ್ದುದರಲ್ಲಿ ಉತ್ತಮ.

### ೧೧ ಕುಂಭ

ಮೃಗರಾಜನಂ ಕಂಡ ಹರಿಣಗಳಂತೆ ನಿಮ್ಮ ವಿಪತ್ಪರಂಪರೆಗಳು ದೂರ ಸರಿಯುವವು. ನಿಮ್ಮ ಬಯಕೆಗಳು ನಿರ್ವಿಘ್ನದಿಂದ ಪೂರ್ಣವಾಗಲಿವೆ. ನಾನಾ ತೆರದಿಂದಿಂದು ನಿಮಗೆ ಧನಾಗಮವಾಗಲಿದೆ. ವಾತದೋಷದಿಂದ ಆರೋಗ್ಯಕ್ಕೆ ಹಾನಿಯಿದೆ. ಹಣದ ಲೇವಾದೇವಿಯಲ್ಲಿ ಪರಸ್ಪರ ಮನಸ್ತಾಪಗಳು ಹುಟ್ಟುವವು. ತಾ. 4, 8, 9 ಅತೀವ ಪ್ರಶಸ್ತವಿವೆ.

### ೧೨. ಮೀನ

ಸಮುದ್ರದಲೆಗಳಂತೆ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರಲಿವೆ. ಆತ್ಮೀಯರೇ ನಿಮ್ಮನ್ನಿಂದು ವಿರೋಧಿಸುವರು. ಹೆಚ್ಚೇಕೆ ಮನೆಯ ಜನರೊಳೂ ಪರಸ್ಪರ ಭಿನ್ನಾಭಿಪ್ರಾಯವುಂಟಾಗಲಿದೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ಮನಸ್ಸಿಗೆ ನೆಮ್ಮದಿಯಿರಲಾರದು. ವಿನಾಕಾರಣ ವಾಕ್ಕಲಹಕ್ಕೆ ಗುರಿಯಾಗುವಿರಿ. ಆದರೂ ಬಾಳಿಗೆ ಬಂದದ್ದೇ ಪಂಚಾಮೃತವೆಂದು ನೆನೆವ ನಿಮಗೆ ತಾ. 5, 6, 10 ಈ ದಿನಗಳು ಸ್ವಲ್ಪ ನೆಮ್ಮದಿಯನ್ನೀಯುವವು.

---

**ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ**

S. C. 336/1965

ಮಹಾಬಲ ಶೆಟ್ಟಿ — ವಾದಿ

ನಾರಾಯಣ ಪ್ಯೂಲಿ, ಸೇಸ ಪ್ಯೂಲಿ ಮಗ, ಕಾರ್ಕಳ ಕಸಬಾ ಶ್ರೀನಿವಾಸ ಆಶ್ರಮದ ಬಳಿಯಿರುವವ —ಪ್ರತಿವಾದಿ

ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ನೀವು ವಾದಿಗೆ ತಾ. 27-7-1962ರಲ್ಲಿ ರೂಪಾಯಿ 200-00ಕ್ಕೆ ಬರಕೊಟ್ಟ ಡಿಮಾಂಡ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 238-25ಕ್ಕೆ ವಾದಿ ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾ. 17-11-65ಕ್ಕೆ ನಿಮ್ಮ ಹಾಜ್ರಿ ಬಗ್ಗೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
*Advocate for Plaintiff.*

Karkala, 25-10-65.

---

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**ಸುಲಭದಲ್ಲಿ ಇಂಗ್ಲಿಷ್**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

**ಸುಲಭದಲ್ಲಿ ಪತ್ರಲೇಖನ**

**LETTER WRITING MADE EASY**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

**ಹೊಸಕೆರೆ ಚಿದಂಬರಯ್ಯನವರ**
**ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ**

**ಗೀತೆಯ ಕೈಗನ್ನಡಿ**

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

---

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ
**ನವಕಾಲಕ್ಕೊಪ್ಪುವ ಪುಸ್ತಕಗಳು**

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೋ, ಉಡುಪಿ.

---

**ವರ್ಗ-ಓಲಿಗ**
ಇತ್ಯಾದಿ ಯಾವತ್ತೂ ತರದ
**ಎಕೌಂಟ್ ಪುಸ್ತಕಗಳು**
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ, ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

**Edited, Printed & Published by K. H. Shetty at the Navayuga Press, Udipi, S. India.**

226

NAVAYUGA

# ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ಮೊದಲು—

ಅಲವಂತಿಯ ರೈತ ಮುರುಗನ ಮಾತಿನಿಂದ ಪ್ರಭಾವಿತನಾದರೂ ರಾಮಚಂದ್ರ ಮಿತ್ರ ಕೇದಾರಿಯ ಪತ್ರ ಬಂದೊಡನೆಯೇ ಮದ್ರಾಸಕ್ಕೆ ಹೊರಟನು. ಆದರೆ ಕೇದಾರಿಯ ವರ್ತನೆಯಲ್ಲಿ ಸಂಪೂರ್ಣವಾದ ಬದಲಾವಣೆಯಾದುದನ್ನು ಕಂಡುಕೊಂಡ ರಾಮು ಚಿಂತಾಮಗ್ನನಾಗಿಯೇ ಇದ್ದನು. ಹಾಲುನೀರುಗಳಂತಿದ್ದ ಸ್ನೇಹಿತರಲ್ಲಿ ಈಗ ಸಾಮರಸ್ಯವೆಳ್ಳನಿತೂ ಇದ್ದಂತಿರಲಿಲ್ಲ.

ಮುಂದೆ .....

ಮುತ್ತು ಮುದಲಿ ಬೀದಿಯಲ್ಲಿ ಹದಿನೈದನೆ ಸಂಖ್ಯೆಯ ಮನೆ ಇದು. ಕೆಸರು ಕೊಳದಲ್ಲಿ ಸೊಗ್ಗ ಕಮಲ ಇರುವಂತೆ ಅಲ್ಲಿ ಜಾನಕಿಯು ರಮಣೀಯವಾಗಿದ್ದಳು. ಅವಳಿಗೆ ಅಡುಗೆ ಕೋಣೆಯಲ್ಲಿರುವುದಕ್ಕಿಂತಲೂ ಚಾವಡಿಯಲ್ಲಿರುವುದೆಂದರೆ ಬಹಳ ಇಷ್ಟ. ಅದು ಅವಳ ನಿರೀಕ್ಷಕ ಹಾಗೂ ತಿಳಿಯಲಾತುರವುಳ್ಳ ಸ್ವಭಾವ. ಹೆಚ್ಚಾಗಿ ಅವಳು ಸಡಿಲವಾಗಿ, ಮೆತ್ತಗೆ ಕಂಬಕ್ಕೆ ಒರಗಿಕೊಂಡು, ಅತ್ತಿತ್ತ ದೃಷ್ಟಿ ಹಾಯಿಸುತ್ತ ನಿಲ್ಲುತ್ತಿದ್ದಳು. ಅವಳ ನೀಳ ರೆಪ್ಪೆಗಳು ತಾವರೆ ಕಣ್ಣನ್ನು ಅಡಗಿಸಿಡುತ್ತಿದ್ದುವು ಮತ್ತು ಆಗಾಗ ಪ್ರಕಟಪಡಿಸುತ್ತಿದ್ದುವು. ಹದಿನೈದನೆ ವರ್ಷವೆಂಬ ಮೆಟ್ಟಿಲನ್ನು ಆಗ ತಾನೆ ಹತ್ತಿ ಅವಳು ನಿಂತಿದ್ದಳು. ಉಷ್ಣ ಪ್ರದೇಶದ ಬ್ರಾಹ್ಮಣ ಹುಡುಗಿಗೆ ಅದು ಅತ್ಯಂತ ನಿರ್ದೋಷತ್ವ, ತಾರುಣ್ಯ ಮತ್ತು ಚೆಂದದ ಪ್ರಾಯ. ಆಕೆಯ ಮುಖ ಮುದ್ರೆಯ ಮೇಲೆ ಪ್ರತಿ ಒಂದು ದಿನವೂ ಅದರ ಫಲಪ್ರದ ಫಲಿತಾಂಶವನ್ನು ಕೊಡುತ್ತಿತ್ತು. ಮಲಿನ ಆವರಣದ ಮಧ್ಯದಲ್ಲಿ ತನ್ನ ಸುಂದರ ಲಾವಣ್ಯದ ಕುರಿತು ಅವಳಿಗೆ ಅರಿವು ಇದ್ದಿಲ್ಲ. ಪ್ರತಿ ದಿನ ಸಂತೆಗೆ ಹೋಗುತ್ತಿದ್ದ ಜನ ಸಾಗರದ ಪ್ರವಾಹವನ್ನು ನಿರೀಕ್ಷಿಸುತ್ತ ನಿಲ್ಲುವುದೆಂದರೆ ಆಕೆಗೆ ಬಹಳ ಇಷ್ಟ. ಕುಟುಂಬದ ಹೊಸ ಸ್ನೇಹಿತನಿಂದಲೂ, ಕೆಲವೊಮ್ಮೆ ತಂದೆಯನ್ನೆಣಿಸಿಕೊಂಡೂ ಸ್ಫೂರ್ತಿಯನ್ನು ಪಡೆಯುತ್ತಿದ್ದಳು. ಮದುವೆಯ ವಿಷಯದಲ್ಲಿ ಆಕೆಗೆ ಅತಿ ಅಸ್ಪಷ್ಟ ಆಲೋಚನೆಗಳಿದ್ದುವು. ಆದರೂ ಐದು ವರ್ಷ ಪ್ರಾಯದ ಬಾಲಕಿಗೆ ಸೀರೆ ಮನಸೆಳೆಯುವಂತೆ ಆಕೆಗೂ ಕಲ್ಯಾಣವೆಂದರೆ ಮನಸೆಳೆಯುವಂತಹದ್ದು. ಅದು ಅನಿವಾರ್ಯವೆಂದೂ ಗೊತ್ತು.

ಸಂಧ್ಯಾಕಾಲವಾದರೂ ಬಿಸಿಗಾಳಿ ಬೀಸುತ್ತಿತ್ತು. ಕ್ರಯಕ್ಕೆ ಪಡೆದುಕೊಳ್ಳುವುದಕ್ಕೆ ಮತ್ತು ಅವರವರ ಲಾಭಕ್ಕಾಗಿ ಸಂತೆಗೆ ಹೋಗುತ್ತಿದ್ದ ಕಲ್ಲೋಲಕಲ್ಲೋಲವಾಗಿದ್ದ ಜನ ಜಂಗುಳಿಯನ್ನು ಎಂದಿನಂತೆ ಚಾವಡಿಯಲ್ಲಿ ನಿಂತುಕೊಂಡು ಜಾನಕಿಯು ನೋಡುತ್ತಿದ್ದಳು. ಮೊನ್ನೆ ಬಂದು ಹೋಗಿರುವ ಕೇದಾರಿ, ಇನ್ನು ಬರುವ ವಾರದಲ್ಲಿ ಬರುತ್ತೇನೆಂದು ಹೇಳಿ ಹೋಗಿದ್ದರಿಂದ ಅವನನ್ನು ಆಕೆ ನಿರೀಕ್ಷಿಸುವಂತಿರಲಿಲ್ಲ. ಆಗ ಆಕೆಯನ್ನೇ ನೆಟ್ಟ ನೋಟದಿಂದ ನೋಡುತ್ತ, ಅರ್ಥಗರ್ಭಿತ ಮುಗುಳ್ನಗೆಯನ್ನಾಡುತ್ತ, ಕೇದಾರಿಯು ಒಳಗೆ ಬಂದಾಗ ಆಕೆಗೆ ಆಶ್ಚರ್ಯವೂ ಆನಂದವೂ ಏಕ ಸಮಯದಲ್ಲುಂಟಾದುವು. ಅವನೊಡನೆ ಒಬ್ಬ ತರುಣ ಸ್ನೇಹಿತ! ಆಕೆ ಕಡು ಓರೆಗಣ್ಣಿನಿಂದ ಅಪರಿಚಿತನನ್ನು ನೋಡಿದಾಗ ಕ್ಷಣ ಮಾತ್ರ ಅವರ ನೋಟಗಳು ಒಂದಾದುವು ಆಗ ಅನಂತ ಬೆಳಕಿನ ಕಿಡಿಯೊಂದು ಅವರ ಹೃದಯದಲ್ಲಿ ಹಾರಿತು. ಅದಕ್ಕಿಂತ ಮುಂಚೆಯೇ ವಿಧಿಯು ಅವರ ನೋಟವನ್ನು ಸೇರಿಸಿ ಒಂದು ಗಹನವಾದ ಗಂಟನ್ನು ಹಾಕಿ ಬಿಟ್ಟಿತ್ತು.

ಜಾನಕಿಯು ಪೇಚಿನಲ್ಲಿ ಸಿಕ್ಕಿ ಬಿದ್ದಿದ್ದಳು. ಅದಕ್ಕೆ ಕಾರಣ ರಾಮುವಿನ ಇರುವಿಕೆಯೆಂದು ಕೇದಾರಿಯು ದೋಷಾರೋಪಣೆ ಮಾಡಿದನು. ಆಗ ಜಾನಕಿಯ ತಾಯಿ ಮನೆಯಲ್ಲಿ ಇಲ್ಲದಿದ್ದುದರಿಂದ ಆಕೆ ಸಮುದ್ರ ಮಧ್ಯದಲ್ಲಿ ಸಿಕ್ಕಿಬಿದ್ದವಳಂತಾಗಿದ್ದಳು. ಇಂತಹ ವೇಳೆಯಲ್ಲಿ ಕೇದಾರಿಗೆ ಸ್ವಾಗತ ನೀಡಿದುದು ಇದೇ ಮೊದಲ ಬಾರಿ. ಅಲ್ಲದೆ ಹೊಸ ಗೆಳೆಯನು ಆಕೆಗೆ ಒಂದು ಆಲೋಚನೆಯ ವಿಷಯವಾಗಿದ್ದ. ಅವಳ ಅಕ್ಕರೆಯ ಜಗಲಿಯ ಮೇಲೆ ನಿಂತುಕೊಂಡು ನೂರಾರು ಜನರನ್ನು ನೋಡಿದ್ದರೂ ಅವನಂತಹ ದಿವ್ಯ ನೋಟವನ್ನು ಬೀರಿದವರಾರೂ ಇಲ್ಲ.

ಆಕೆಯ ವಿಸ್ವಲ ಕನಸನ್ನು ಭಂಗಪಡಿಸಲು ಮನಸ್ಸಿದ್ದಿಲ್ಲವಾದರೂ ಕೇದಾರಿಯು ಮಾತಿಗಾರಂಭಿಸಿದನು. "ಜಾನಕಿ ಕೊನೆ ಇಲ್ಲದೆ ಗಂಟೆ—ಗಟ್ಟಲೆ ಯಾರ ವಿಷಯ ನಾನು ಹೇಳುತ್ತಿದ್ದೆನೋ, ಆ ಗೆಳೆಯ ಈ ರಾಮು." ರಾಮು ಮತ್ತು ಜಾನಕಿ, ಇಬ್ಬರ ಮುಖಗಳೂ ಸೂಕ್ಷ್ಮವಾಗಿ ನಾಚಿಕೆಯಿಂದ ಕೆಂಪಾದುವು. ಆ ಆನಂದದಲ್ಲಿ ಪಾಲುಗಾರನಾಗದೆ ಸುಮ್ಮಗಿರಲು ಆತನಿಗೆ ಸಾಧ್ಯವಾಗಲಿಲ್ಲ. ಜಾನಕಿಯ ಗಾಬರಿ ಮತ್ತು ಮುಂದುವರಿದ ಮೌನದಿಂದ ಕೇದಾರಿಯು ತರ್ಕಿಸಿಕೊಂಡು "ಜಾನಕಿ, ಅಮ್ಮ ಮನೆಯಲ್ಲಿಲ್ಲವೇನು?" ಎಂದು ಕೇಳಿದನು.

"ನೀವು ನಿನ್ನೆ ತಾನೆ ಇಲ್ಲಿಗೆ ಬಂದು ಹೋದುದರಿಂದ ಇವತ್ತು ನಿಮ್ಮನ್ನು ನಾವು ನಿರೀಕ್ಷಿಸಿರಲಿಲ್ಲ. ತಾಯಿಯವರು ಆಚೆ ಬೀದಿಗೆ ಹೋಗಿದ್ದಾರೆ. ರಾತ್ರಿ ಎಂಟು ಘಂಟೆಗಿಂತ ಮುಂಚೆ ಅವರು ಹಿಂ
ವಕ್ಕೆ ಬರಲಿಕ್ಕಿಲ್ಲ" ಎಂದು ಮೆಲ್ಲಗೆ
ತ್ತರಕೊಟ್ಟಳು.

"ಸುಬ್ಬುವಿನ ಮನೆಗೆ?" ಕೇ
ಕೇಳಿದನು.

"ಹೌದು. ನೀವು ಕೆಲ ನಿಮಿಷ ಇ
ಇದ್ದಲ್ಲಿ ನಾನೀಗಲೆ ಹೋಗಿ ಅವ
ಕರೆದುಕೊಂಡು ಬರುತ್ತೇನೆ" ಕೇದಾ
ತಲೂ ರಾಮುವಿಗೆ ಕೇಳುವಂತೆ
ದಳು.

ಉತ್ತರಕ್ಕಾಗಿ ಕಾದುಕೊಂಡು ಸ
ಗಿದ್ದಳು.

ಕೇದಾರಿಯು ಕಾರ್ಯಶೀಲನಾಗಿ
ರಿಂದ ಕಾರ್ಯ ಮಗ್ನನಾದನು. ಕೂ
ಅವನು ಎದ್ದುನಿಂತು ಅರ್ಥಗರ್ಭಿತ
ಷ್ಟಿಯಿಂದ ನೋಡುತ್ತ, ಬಹು ಅ
ರ್ಭಿತ ಧ್ವನಿಯಿಂದ "ಬೇಡ, ಬೇಡ,
ಸರಿ ಅಲ್ಲ, ಜಾನಕಿ. ರಾಮು, ಕೆಲ
ಷ ಇಲ್ಲೇ ಕಾದಿರು. ಅಷ್ಟರಲ್ಲೇ
ನಕಿಯು ಕಾಫಿ ಮಾಡಿಕೊಟ್ಟು, ಚೆ
ಗಿ ಹಾಗೂ ಸುಂದರವಾಗಿ ಕಟ್ಟಿದ
ಸಿನ ಮಾಲೆಯನ್ನ ಹಾಕುತ್ತಾಳೆ.
ನೆ ಅದೃಷ್ಟ ನಿನ್ನದು. ಕ್ಷಣಕಾಲದಲ್ಲಿ
ನು ಹೋಗಿ ಈಕೆಯ ತಾಯಿಯ
ನ್ನು ಕರೆದುಕೊಂಡು ಬರುತ್ತೇನೆ. ಸು
ವಿನ ಮನೆ ನನಗೆ ಚೆನ್ನಾಗಿ ಗೊ
ಒಂದೇ ರೀತಿಯ ಗರಿಗಳುಳ್ಳ ಪಕ್ಷಿಗಳ

ಕನ್ನಷ್ಟಕ್ಕೆ ಹಳೆಯ, ಗೂಢಾರ್ಥ
ಳ್ಳ ತಮಿಳು ಪ್ರಣಯಗೀತೆಯನ್ನು
ಡುತ್ತ, ಆತ್ಯಾತುರದಿಂದ ಅವನಲ್ಲಿ
ಹೋದನು. ವಿನೋದ ಕಾಲದಲ್ಲಿ ಕೇ
ರಿಯು ಉತ್ತಮ ಹಾಡುಗಾರ. ರಾ
ವನ್ನು ಕನಸುಗಾರನನ್ನಾಗಿ, ಜಾನಕಿ
ನ್ನು ಶಿರೋಭ್ರಮಣೆಯಾದವಳಂತೆ
ಡಿರುವ ಆನಂದ ಕೇದಾರಿಯನ್ನು
ಡುವ ಹಕ್ಕಿಯಂತೆ ಸಂತೋಷದವನ
ಗಿ ಮಾಡಿತು.

ಕೇದಾರಿಯು ಉದ್ದೇಶಪೂರ್ವಕ
ಗಿ, ಭರವಸೆ ಇತ್ತಿದ್ದ ನಿಮಿಷವನ್ನು
ರ್ಘಘಂಟೆಯನ್ನಾಗಿ ಮಾಡಿದನು. ಅ
ಹಬ್ಬಕ್ಕೆ ಬೇಕಾಗುವ ವಸ್ತುಗಳ
ಕೇಳುತ್ತ, ಸಕ್ಕರೆ ಮತ್ತು ಕಲ್ಲು ಸಕ್ಕ
ಪೀಸದಿಂದ ರವಿಮಿನ ವರೆಗೆ ಬೆಲೆ ವಿ
ರಿಸುತ್ತ ಪೇಟೆಯಲ್ಲಿ ತಿರುಗಾಡಿದನು
ವನು ಶುದ್ಧ ಹಾಗೂ ನಿಷ್ಕಪಟ ಆನ
ದಲ್ಲಿ ಮೈ ಮರೆತಿದ್ದನು. ಕೇದಾರಿ
ಘನ ವಾಸ್ತವಿಕವಾದವು ಪ್ರೇ
ದ ಜ್ವಾಲೆಯಿಂದ ಸ್ವಲ್ಪ ಕರಗಿ
ಅಂತಹ ಅತ್ಯುತ್ತಮ ಕ್ಷಣಗಳಲ್ಲಿ
ಜ್ಞಾನಕ್ಕೆ ವಿರಾಮ ಕೊಟ್ಟುಬಿಟ್ಟು,
ಭಾವನಾ ಕಾರ್ಯದಲ್ಲಿ ಲೀನನಾಗುವುದ
ಆ ವಿರಾಮವನ್ನು ಉಪಯೋಗಿಸಿಕೊ
ನು, ಕೇದಾರಿ. ಆದರೆ ಆ ದಿವ್ಯ ಅರಿ
ಮೂ ರಾಮು ಮತ್ತು ಜಾನಕಿಯ ನಡ
ಮೌನದ ತೆರೆ ಬಲವಾಗಿ ನಿಂತಿತ್ತು.
ರೂ ಮಾತಾಡಲಿಕ್ಕೆಂದು ಪ್ರಬಂಧಗಳ
ರಚಿಸಿಕೊಂಡರೂ ಯಾರ ಬಾಯಿಯಿ
ಲೂ ಒಂದು ಮಾತೂ ಹೊರಗೆ ಬರಲಿ
ಸಿದವಾಗ, ಕೇದಾರಿಯು ತಿಳಿ ಹೊ
ದ್ದ ಪ್ರಣಯ-ಸನ್ನೆಯಂತೆ ವರ್ತಿಸ
ಒಂದು ಗಂಡಿ ಸೇರು ಕೇಳಲು ರಾ
ಆಲೋಚಿಸಿದನು. ಆದರೆ ಮಾತು ಹೊ
ಗೆ ಬರಲಿಲ್ಲ. ಸಹಜವಾಗಿಯೂ, ಒ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7¾ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ | ಮೇಲೆ ... ... | 4 |

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

**NAVAYUGA**

Leading Kannada Weekly

UDIPI, S. Kanara

ಡಾ. ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

# ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ನೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೫

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

## ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣ ದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

**ಚಂದಾದಾರರಿಗೆ—**

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

'ಪಂಚಶೀಲ' ಶಾಂತಿಯ ಕಹಳೆ ಮೊಳಗಿಸಿದ ಪಂ। ನೆಹರು.

# ನವಯುಗ

| ಸಂಪುಟ ೪೫ | ಉಡುಪಿ | Vol. 45 |
|---|---|---|
| ಸಂಚಿಕೆ ೧೦ | ೧೧—೧೧—೧೯೬೫ | No. 10 |

## 'ಊಟವೊಂದು ಬಿಡಿರಿ'

ಸ್ವಾತಂತ್ರ್ಯಾನಂತರದಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸಲು ಭಾರತವು ಶಕ್ತಿಮೀರಿ ಪ್ರಯತ್ನ ನಡೆಸಿರುವುದು ನಿಜವಾದರೂ ಅದರಿಂದ ಹೆಚ್ಚಿನ ಪ್ರಯೋಜನ ಲಭಿಸಿದಂತೆ ತೋರುವುದಿಲ್ಲ. ಇಂದಿಗೂ ಭಾರತೀಯ ರೈತನು ಹಳೆಯನ್ನು ಕಸ್ನ ಹಳೆಯ ಕೃಷಿ ವಿಧಾನವನ್ನು ನಂಬಿಕೊಂಡಿದ್ದಾನೆ. ಉತ್ಪಾದನೆಯು ಹೆಚ್ಚುವುದ ನಿಜವಾದರೂ ಉಣ್ಣುವ ಬಾಯಿಗಳೂ ಗಣನೀಯವಾಗಿ ಹೆಚ್ಚಿದುದರಿಂದ, ಸಮಸ್ಯೆ ಸಮಸ್ಯೆಯಾಗಿಯೇ ಉಳಿದಿದೆ. ಸಾಮಾನ್ಯವಾಗಿ ನಮಗಿಂದು ಬೇಕಾಗುವ ಆಹಾರದಲ್ಲಿ ಸೇಕಡಾ ಒಂದಷ್ಟು ಕೊರತೆಯಾಗುವುದೆಂದು ಅಂದಾಜು ಮಾಡಲಾಗಿದೆ. ಭಾರತೀಯರು ಪ್ರಯತ್ನಿಸಿದರೆ, ಸ್ವಾವಲಂಬಿಯಾಗುವುದು ಸಾಧ್ಯವೆನ್ನಲಾಗುತ್ತಿದೆ. ಇನ್ನೂ ನಾವು ಆಹಾರದ ವಿಷಯದಲ್ಲಿ ಪರಾವಲಂಬಿಯಾಗಿರುವುದು ಸರ್ವಥಾ ಅಪೇಕ್ಷಣೀಯವಲ್ಲ.

ಅಮೇರಿಕೆಯು ಪಿ. ಎಲ್. ೪೮೦ರ ಯೋಜನೆಯಂತೆ ನಮಗೆ ಲಕ್ಷ್ಯ ಟನ್ ಗೋಧಿಯನ್ನು ... ಆಹಾರಧಾನ್ಯಗಳನ್ನು ಒದಗಿಸುತ್ತಿತ್ತು. ಹಸಿವೆಯಿಂದ ಜಗತ್ತನ್ನು ಮುಕ್ತಗೊಳಿಸುವುದೇ ಈ ಯೋಜನೆಯ ಗುರಿ. ನಮ್ಮ ನ್ಯಾಯ ಬೆಲೆಯ ಅಂಗಡಿಗಳಲ್ಲಿ ದೊರೆಯುತ್ತಿದ್ದ ಧಾನ್ಯಗಳಲ್ಲಿ ಸೇ. ೪೦ರಷ್ಟು ಅಮೇರಿಕನ್ ಕೊಡುಗೆಯದು. ಈಗ, ಭಾರತವು ತನ್ನ ಪವಿತ್ರ ಭೂಮಿಯ ಮೇಲೆ ದಂಡೆತ್ತಿ ಬಂದ ಪಾಕಿಸ್ತಾನವನ್ನು ಹೊಡೆದಟ್ಟಲು ದೃಢ ನಿರ್ಧಾರ ಮಾಡಿದುದರಿಂದ, ಅಮೇರಿಕೆಗೆ ತುಸು ಬೇಸರವಾದಂತಿದೆ. ಅದಕ್ಕೆಂದೇ ಅದು ಆರ್ಥಿಕ ನೆರವನ್ನೂ ಆಹಾರ ಧಾನ್ಯವನ್ನೂ ಒಂದೇ ಹಗ್ಗದಲ್ಲಿ ನೇಯಲು ಹವಣಿಸುತ್ತಿದೆ. ಈಗ ಭಾರತಕ್ಕೆ ಶಸ್ತ್ರಾಸ್ತ್ರ ಪೂರೈಕೆ ಸಂಪೂರ್ಣ ನಿಲ್ಲಿಸಿದಂತೆ ಆಹಾರ ಪೂರೈಕೆಯನ್ನು ಸ್ಥಗಿತಗೊಳಿಸಲಿಲ್ಲ, ಸಣ್ಣ ಸಣ್ಣ ಕಂತುಗಳಲ್ಲಿ ಅದು ಆಹಾರ ಬಿಡುಗಡೆ ಮಾಡತೊಡಗಿದೆ. ದೀರ್ಘ ಕಾಲಾವಧಿಯ ಒಡಂಬಡಿಕೆ ಮಾಡಿಕೊಳ್ಳಲು ಅದು ಹಿಂಜರಿಯುತ್ತಿದೆ; ಅಥವಾ ಹಿಂದೆ ಮುಂದೆ ನೋಡುತ್ತಿದೆ. ರಾಜಕೀಯದ ಪ್ರಭಾವವಿದು. ಹೀಗಾಗಿ ಅಮೇರಿಕೆಯನ್ನು ನಂಬಿ ನಾವು ಕುಳಿತರೆ ಪರಾವಲಂಬಿಯಾಗಿರುವುದರಿಂದ, ಆಗ ಕತ್ತಿಯ ದೂಡನೆ ಪಗಡೆಯಾಟವಾಡಿದಂತೆ, ಯಾವ ಕಾಲಕ್ಕೆ ಏನಾಗುತ್ತದೋ ಹೇಳಲು ಬಾರದು ಎಂದು ಹೇಳಲಾಗಿದೆ. ಹಾಗಿರುವಾಗ, ದೇಶದ ಉತ್ಪನ್ನದಿಂದಲೇ ಆಹಾರ ಸ್ವಾವಲಂಬನೆಯು ಪ್ರಮುಖ ಸೃಷ್ಟಿ. ಇದನ್ನು ನಾವು ಸಾಧಿಸುವಲ್ಲಿ ಹಿಂದುಳಿದರೆ, ಅದಕ್ಕಿಂತ ಬಲವಾದ ತಪ್ಪು ಮತ್ತೊಂದಿಲ್ಲ.

ಈ ಬಗೆಯ ಸ್ವಾವಲಂಬನೆಯನ್ನು ನಾವು ಎರಡು ರೀತಿಗಳಿಂದ ಸಾಧಿಸಬಹುದು. ಮೊದಲನೆಯದಾಗಿ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ; ಎರಡನೆಯದು ಬಳಕೆಯನ್ನು ಕಡಿಮೆಗೊಳಿಸುವ ಮೂಲಕ. ಮೊದಲನೆಯದು ಈಗಲೂ ನಡೆಯುತ್ತ ಇದೆ; ಇನ್ನು ಮುಂದಕ್ಕೂ ನಡೆಯುತ್ತದೆ. ಆದರೆ, ಪ್ರಕೃತಿಯನ್ನು ಸಂಪೂರ್ಣವಾಗಿ ಮಾನವ ಗೆದ್ದುಕೊಳ್ಳಲಾರ. ಅತಿವೃಷ್ಟಿ—ಅನಾವೃಷ್ಟಿಗಳು ಭಾರತವನ್ನು ಕಾಡುವಷ್ಟು ಮತ್ತಾವ ದೇಶವನ್ನೂ ಕಾಡಲಾರವು. ಈ ವರ್ಷದ ಅನಾವೃಷ್ಟಿಯಿಂದಾಗಿ ಕೆಲವೆಡೆ ಮೊದಲನೆಯ ಬೆಳೆ ಹಾಳಾಯಿತು. ಇನ್ನು ಕೆಲವೆಡೆ ಎರಡನೆಯ ಬೆಳೆಯೇ ಇಲ್ಲವಾಯಿತು. ಈ ಬಗೆಯ ಗಂಭೀರ ಪರಿಸ್ಥಿತಿಗಳ ನಡುವೆ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ಊಟವೊಂದನ್ನು ಬಿಡಿರಿ' ಎಂದು ಭಾರತೀಯರಿಗೆ ಕರೆಕೊಟ್ಟಿದ್ದಾರೆ. ಬಳಕೆಯನ್ನು ಕಡಿಮೆ ಮಾಡುವುದೇ ಈ ಕರೆಯ ಹಿಗ್ಗುರಿ. ವಾರದ ಒಂದು ದಿನ ರಾತ್ರಿಯ ಊಟವೊಂದನ್ನು ಬಿಡುವುದರಿಂದ ಏನು ಸಾಧನೆಯಾಗುತ್ತದೆ ಎಂದು ತಿರಸ್ಕರಿಸುವಂತಿಲ್ಲ ಕರೆಯಿದು. ಈ ಕರೆಗೆ ಓಗೊಡುವುದರಿಂದ ದೇಶಹಿತ ಸಾಧನೆಯೊಡನೆ ವೈಯಕ್ತಿಕ ಹಿತವೂ ಸಾಧನೆಯಾಗುವುದು ಎಂಬುದನ್ನು ಗಮನಿಸಬೇಕು. ಒಬ್ಬ ಭಾರತೀಯನು ದಿನವೊಂದಕ್ಕೆ ಸರಾಸರಿ ೧೬ ಔನ್ಸುಗಳಷ್ಟು ಆಹಾರ ಧಾನ್ಯವನ್ನು ಬಳಸುತ್ತಾನೆ. ಪ್ರತಿ ಭಾರತೀಯನೂ ಊಟವೊಂದನ್ನು ತ್ಯಜಿಸಿದರೆ, ಆಗ ವರ್ಷವೊಂದಕ್ಕೆ ೪೦ ಮಿಲಿಯ ಟನ್ ಆಹಾರಧಾನ್ಯ ಉಳಿಯುವುದು. ಇಂದು ನಾವು ಪಿ. ಎಲ್. ೪೮೦ರನ್ವಯ ಆಯಾತ ಮಾಡಿಕೊಳ್ಳುವ ಆಹಾರ ಧಾನ್ಯಗಳ ಪ್ರಮಾಣವು ಸುಮಾರು ಇವಕ್ಕೆ ಸರಿಯಾಗುವುದು. ಹಾಗಾಗಿ ೪೦ ಕೋಟಿ ಭಾರತೀಯರು ವಾರದಲ್ಲಿ ಒಂದು ಊಟವನ್ನು ಬಿಟ್ಟು ಬಳಕೆಯನ್ನು ಕಡಿಮೆ ಮಾಡಿಕೊಂಡರೆ, ದೇಶದಿಂದ ಆಹಾರ ಸಮಸ್ಯೆಯು ದೂರವಾಗುವುದು!

ಊಟವೊಂದನ್ನು ಬಿಡುವುದು ಭಾರತೀಯರಿಗೇನೂ ಹೊಸತಲ್ಲ. ಭಾರತೀಯ ಸ್ತ್ರೀ ಪುರುಷರು, ಮಕ್ಕಳು ಕೂಡ ಹಲವಾರು ವ್ರತಗಳನ್ನು ಆಚರಿಸುತ್ತಾರೆ. ಭಾರತೀಯ ವ್ರತಗಳು ಒಂದು ಅಂಗ ಉಪವಾಸ. ವಾರದಲ್ಲಿ ಒಂದಕ್ಕಿಂತ ಹೆಚ್ಚು ಊಟವನ್ನು ಬಿಡುತ್ತಿರುವವರೂ ಇದ್ದಾರೆ. ಏಕಾದಶಿಯು ಹದಿನೈದು ದಿನಗಳಿಗೊಮ್ಮೆ ಬರುವುದು. ಭಾರತೀಯ ಜೀವನ ಸಂಸ್ಕೃತಿಯಲ್ಲಿ ಊಟ ಬಿಡುವುದು ರಕ್ತಗತವಾಗಿ ಬಂದ ಗುಣ. ಆದರೆ, ವಿದೇಶೀಯ ಸಂಪರ್ಕದಿಂದಾಗಿ ವ್ರತಾಚರಣೆಗಳ ಬಗ್ಗೆ ತಿರಸ್ಕಾರ ಭಾವನೆ ಮೂಡಿ ಬಂದ ಮೇಲೆ ಅವುಗಳು ದೂರವಾಗುತ್ತ ಬಂತು. ಅದೇನೇ ಇರಲಿ, ವಾರವೊಂದಕ್ಕೆ ಒಂದು ಊಟ ಬಿಡುವುದರಿಂದ ಮಾನವನೇನೂ ಸಾಯುವುದಿಲ್ಲ. ಬದಲಿಗೆ, ಆತನ ಆರೋಗ್ಯವು ಸುಧಾರಿಸುವುದು, ಆತನು ದೃಢಕಾಯನಾಗುವನು. ಊಟವನ್ನು ಬಿಡುವುದೆಂದರೆ ಫಲಾಹಾರವನ್ನು ಮಾಡಬೇಕೆಂದಲ್ಲ. ಪ್ರಧಾನಿ ಶಾಸ್ತ್ರಿಯವರು ಗೋಧಿ ಮತ್ತು ಅಕ್ಕಿಗಳ ಬಳಕೆಯನ್ನು ಒಂದು ಊಟವನ್ನು ಬಿಟ್ಟು ಕಡಿಮೆ ಮಾಡಬೇಕೆಂದು ಇತ್ತ ಕರೆ ಎಲ್ಲರಿಗೂ ಸರಿಹೊಂದುವುದು; ಅದನ್ನು ಎಲ್ಲ ಭಾರತೀಯರೂ ಮನ್ನಿಸಿ ತಮ್ಮ ಕಾಲ ಮೇಲೆ ತಾವು ನಿಲ್ಲಬೇಕು.

ವಚನ ಸುಧೆ

### ವಚನ ಸುಧೆ

ಸುದುರ್ಬಲಂ ನಾವಜಾನಾತಿ ಕಂಚಿದ್
ಯುಕ್ತೋ ರಿಪುಂ ಸೇವತೇ ಬುದ್ಧಿಪೂರ್ವಂ
ನ ವಿಗ್ರಹಂ ರೋಚಯತೇ ಬಲಸ್ಥೈಃ
ಕಾಲೇ ಚ ಯೋ ವಿಕ್ರಮತೇ ಸ ಧೀರಃ॥

ತನಗಿಂತ ದುರ್ಬಲನಾದವನನ್ನು ಅಪಮಾನ ಮಾಡದಿರುವವನು, ಸದಾ ಎಚ್ಚರಿಕೆಯಿಂದ ಶತ್ರುವಿನೊಂದಿಗೆ ಬುದ್ಧಿಪೂರ್ವಕ ವ್ಯವಹರಿಸುವವನು, ಬಲಿಷ್ಠರೊಡನೆ ಯುದ್ಧ ಮಾಡಲು ಇಷ್ಟಪಡದವನು ಮತ್ತು ಸಂದರ್ಭ ಒದಗಿದಾಗ ಪರಾಕ್ರಮವನ್ನು ಪ್ರದರ್ಶಿಸುವವನು ಲೋಕದಲ್ಲಿ ಧೀರನೆನಿಸುವನು.

### ಡಾ। ನಾಗಪ್ಪ ಆಳ್ವ

ಆರೋಗ್ಯ ಮಂತ್ರಿ ಡಾ। ನಾಗಪ್ಪ ಆಳ್ವ ಅವರು ದಕ್ಷಿಣ ಕನ್ನಡ ಜಿಲ್ಲೆಯ ಸಂಚಾರವನ್ನು ಈ ಸಮಯದಲ್ಲಿ ತೊಡಗಿದ್ದು ಒಂದು ದೃಷ್ಟಿಯಿಂದ ಒಳ್ಳೆಯದೆ. ಭೂಸುಧಾರಣೆಯು ವ್ಯವಹಾರಕ್ಕೆ ಬಂದು ಒಂದು ತಿಂಗಳು ಮಾತ್ರ ಕಳೆಯಿತು. ಮೊದಲ ಬೆಳೆಯಿಂದ ಬಂದ ಉತ್ಪತ್ತಿಯಲ್ಲಿ ರೈತರು ಬಿಡ್ಡಾಯವಾಗಿ ಸರಕಾರಕ್ಕೆ ಭತ್ತ ಹಾಕಬೇಕೆಂದು ಲೆವಿ ಆಜ್ಞೆ ಈಗಾಗಲೇ ಹೊರಟಿದೆ. ಸರಕಾರ

(ಹದಿನಾಲ್ಕನೇ ಪುಟ ನೋಡಿರಿ)

### ನರಸಣ್ಣನ ಸರಸ



"ಸೋಮವಾರ ರಾತ್ರೆ ಭೋಜನ ತ್ಯಾಗ, ಮಂಗಳವಾರ ಏಕಾದಶಿ, ಬುಧವಾರ ಉಪವಾಸ, ಗುರುವಾರ ರಾಘವೇಂದ್ರ ತೃಪ್ತಿ, ಶುಕ್ರವಾರ ಶಕ್ತ್ಯಾರಾಧನೆ, ಶನಿವಾರ ಶನಿ ಪೀಡಾ ವ್ರತ, ಆದಿತ್ಯವಾರ ಸೂರ್ಯೋಪಾಸನೆ—ಎಂತ ಆಜ್ಞೆ ಮಾಡಿದರೆ ಹೇಗೆ?"

ನೆಹರು

## ವಿಚಾರವೀಚಿ

# ಪ್ರಾಚೀನ ಲೇಖನ ಸಾಮಗ್ರಿಗಳು

**ಶ್ರೀ ಸ. ನಾರಾಯಣ, ಚಿತ್ರದುರ್ಗ**

...ಂದು ಬರೆಯಲು ಲೇಖನಿಯಿದೆ, ಕಾಗದವಿದೆ. ಹಿಂದೆ? ಅರ್ವಾಚೀನ ... ನೂರಾರು ಲೇಖನ ಸಾಮಗ್ರಿಗಳಿರುವಂತೆಯೇ ಪ್ರಾಚೀನ ಕಾಲದಲ್ಲೂ ...

...ನೆಯ ಶತಮಾನ. ನವನಾಗರಿಕ ...ಯುಗ. ಅಳತೆಮೀರಿ ಬೆಳೆದಿದೆ ...ಭಾವ. ಮನದಾಸೆ ಮಾಡಿದೊ ...ಸೌಲಭ್ಯಗಳು ದೊರೆಯುತ್ತವೆ. ...ರ ಬರೆಯಬೇಕು ಎಂಬ ಆಸೆ ...ಂಕು ಹಸ್ತಪ್ರತಿ ಬರೆದಿಟ್ಟರಾ ... ಒಂದು ಹತ್ತೂ ಆಗಬಲ್ಲದು, ...ಆಗಬಲ್ಲದು, ಸಾವಿರವೂ ಆಗಬ ...ಮುದ್ರಣ ಯಂತ್ರದ ಸಹಾಯದಿಂ ...ಲ ಕೃತಿಯ ಪ್ರತಿಕೃತಿಗಳು ಅ ...ಷ್ಟೆಯಲ್ಲಿಯೇ ಬೆಳಕು ಕಾಣಬ ...ಓದುಗರ ಕೈಸೇರಬಹುದು.

... ಬರಹ ಆರಂಭವಾದ ದಿನಗಳ ...ಮುದ್ರಣ ಕಲೆ ಪ್ರಚಾರಕ್ಕೆ ಬಾರದಿ ...ಗಳಲ್ಲಿ:

...ರ್ಜ ಪತ್ರ, ಓಲೆಯ ಗರಿ, ತಾ ...ಗಡು (ಬೆಳ್ಳಿ, ಚಿನ್ನದ ತಗಡೂ ...ದಿತ್ತು) ಮತ್ತು ಬಂಡೆಗಳು ಅವಿ ...ರಹಗಾರರ ಪ್ರಮುಖ ಲೇಖನ ...ಗಳಾಗಿದ್ದವು. ನೂರಾರು ವರ್ಷ ...ದೆ ಬರೆದಿಟ್ಟ ಲೇಖನಗಳು, ಅಂ ...ರ್ವಿಕರು ಬಳಸಿದ ಲೇಖನದ ...ಗಳು ಇಂದಿಗೂ ಉಳಿದಿವೆ. ಆ ...ಮಾಚಲ ಪರ್ಯಂತ ವ್ಯಾಪಿಸಿ ...ನ್ನ ಸುಸಂಸ್ಕೃತ ಭಾರತದಲ್ಲಿ ಪೂ ...ಪೂರ್ವ ಲೇಖನ ಸಾಮಗ್ರಿಗಳ ...ಳಸಿದ ರೀತಿಯನ್ನು ಕಾಣಬ

...ಕಾಳಿದಾಸ ಹಿಮಗಿರಿಯ ವರ್ಣ ...ಶಿತ್ತಾ, ವಿದ್ಯಾಧರ ಸುಂದರಿಯ ...ರ್ಜ ಪತ್ರದ ಮೇಲೆ ಧಾತುರಸ ...ನ್ನ ಪ್ರಿಯರಿಗೆ ಬರೆಯುತ್ತಿದ್ದ ... ಆನೆಯ ಸೊಂಡಿಲಿನ ಮೇಲಿನ ...ಂತೆ ರಮ್ಯವಾಗಿದ್ದವು ಎಂದು ...ದ್ದಾನೆ.

...ರ್ಜ ಎನ್ನುವುದು ಹಿಮಾಲಯ ...ಲ್ಲಿ ೬೦ ಅಡಿಗಳಿಗೂ ಹೆಚ್ಚು ... ವರೆಗೆ ಬೆಳೆಯುವ ಮರ. ಈ ... ೧೪೦೦ ಅಡಿಗಳಿಗೂ ಹೆಚ್ಚು ...ಲ್ಲಿ ಬೆಳೆಯುವ ಮರಗಳು. ಪೂ ...ಆ ಮರದ ಎಲೆಗಳನ್ನೆಲ್ಲ ಬರೆ ...ಬಳಸುತ್ತಿದ್ದುದು ಮರದ ತೊಗ ...ಮರದ ತೊಗಟೆ ಕಾಗದದಂತೆ ...ಇದ್ದು ಬರವಣಿಗೆಗೆ ಇದು ಬಹು ...ಕ್ತವಾಗಿತ್ತೆಂಬುದು ಖಚಿತ. ...ಯುಗದ ಈ ದಿನಗಳಲ್ಲಿ ಅದರ ...ಗ ಇಲ್ಲವಾದರೂ ಕಾಶ್ಮೀರದ ...ಮಾಲಯದ ಅಂದಿನ ಆ ಬರ ...ಗೆ ಭೂರ್ಜ ಪತ್ರ (ಮರದ ತೊ ...ಟೆ) ಮುಖ್ಯ ಲೇಖನ ಸಾಮಗ್ರಿ ...ಂಬುದು ಗಣನೀಯ. ಇಂದಿಗೂ ...ದಲ್ಲಿ ಅಧಿಕ ಸಂಖ್ಯೆಯಲ್ಲಿ ಈ ... ಪತ್ರದ ಗ್ರಂಥಗಳನ್ನು ಕಾಣ

ಭೂರ್ಜ ಪತ್ರದ ಅತಿ ಪುರಾತನ ಗ್ರಂಥ ಖರೋಷ್ಠಿ ಲಿಪಿಯಲ್ಲಿ ಬರೆದ ಪ್ರಾಕೃತ ಧರ್ಮಪಟ ಎಂಬ ಧಾರ್ಮಿಕ ಗ್ರಂಥ ಮತ್ತು ಸಂಯುಕ್ತಾಗಮ ಸೂತ್ರವೆಂಬ ಸಂಸ್ಕೃತ ಗ್ರಂಥವೆಂದು ಪಂಡಿತರ ಅಭಿಪ್ರಾಯ.

ಕಾಶ್ಮೀರ ಮತ್ತು ಉತ್ತರ ಪ್ರದೇಶದಲ್ಲಷ್ಟೆ ಭೂರ್ಜ ಪತ್ರದ ಬಳಕೆ ಹೆಚ್ಚಾಗಿತ್ತು ಮತ್ತು ಮೈದಾನ ಪ್ರದೇಶದಲ್ಲಿ ತಾಳೆಗರಿ ಹೆಚ್ಚು ಉಪಯುಕ್ತ ಸಾಮಗ್ರಿಯಾಗಿತ್ತು ಎಂಬುದು ಖಚಿತ.

ತಾಳೆಗರಿಯನ್ನು ಬಿಸಿನೀರಿನಲ್ಲಿ ಬೇಯಿಸಿ ನುಣುಪಾದ ವಸ್ತುವಿನಿಂದ ಪತ್ರವನ್ನು ನುಣುಪು ಮಾಡಿ ಕಬ್ಬಿಣದ ಮೊಳೆ (ಕಂಠ-ಲೇಖಣಿ)ಯಿಂದ ಪತ್ರದ ಮೇಲೆ ಅಕ್ಷರ ಕೊರೆಯುತ್ತಿದ್ದರೆಂದು ತಿಳಿದುಬರುತ್ತದೆ. ಅನಂತರ ಕಪ್ಪು ಮಸಿಯನ್ನು ಅಕ್ಷರಗಳ ಮೇಲೆ ಕಪ್ಪು ಮಸಿ ಬಳಿದು ನುಣುಪಾದ ಭಾಗದಿಂದ ಒರೆಸುತ್ತಿದ್ದರು. ಆಗ ಬರಹ ಸ್ಫುಟವಾಗಿ ಅಂದವಾಗಿ ಕಾಣಬರುತ್ತಿತ್ತು. ದಕ್ಷಿಣ ಭಾರತದಲ್ಲಿ ಪತ್ರದ ಮೇಲೆ ಅಕ್ಷರಗಳನ್ನು ಕೊರೆಯುವ ಪರಿಪಾಠವಿತ್ತು.

ಪತ್ರ ಕಾಗದದಂತೆ ವಿಶಾಲವಾಗಿ ಇರುತ್ತಿದ್ದುದರಿಂದ ಆಯಾ ಪತ್ರಗಳ ಪ್ರಮಾಣವನ್ನು ಅನುಸರಿಸಿ ಪತ್ರದ ಮಧ್ಯೆ ಅಥವಾ ಎರಡು ತುದಿಗಳಲ್ಲಿ ರಂಧ್ರಮಾಡಿ ದಾರ ಪೋಣಿಸುತ್ತಿದ್ದರು. ಇದರಿಂದ ಪತ್ರ ಛಿದ್ರವಾಗುತ್ತಿರಲಿಲ್ಲ. ಸೂತ್ರದಿಂದ ಗ್ರಂಥಿತವಾಗುತ್ತಿದ್ದ ಕಾರಣ ಪುಸ್ತಕಗಳಿಗೆ 'ಗ್ರಂಥ' ಎಂಬ ಹೆಸರು ಬಂತೆಂದು ವ್ಯಾಖ್ಯಾನಕಾರರ ಮತ.

ತಾಳೆ ಪತ್ರದಲ್ಲಿ ಬರೆದ ಎರಡು ಪೂರ್ಣ ಗ್ರಂಥಗಳು ಜಪಾನಿನಲ್ಲಿ ಇಂದಿಗೂ ಸುರಕ್ಷಿತವಾಗಿವೆ. ಇವುಗಳ ಹೆಸರು ಪ್ರಜ್ಞಾ ಪಾರಮಿತಾ ಹೃದಯ ಸೂತ್ರ, ಮತ್ತು ಉಷ್ಣೀಶ ವಿಜಯ ಧಾರಿಣೀ. ಇವು ಕ್ರಿ. ಶ. ಆರನೆಯ ಶತಮಾನದ ಗ್ರಂಥಗಳೆಂದು ಊಹೆ.

ಭೂರ್ಜ ಮತ್ತು ತಾಳೆ ಪತ್ರಕ್ಕಿಂತಲೂ ಶಿಲೆ ಶಾಶ್ವತ ಎಂಬ ನಂಬಿಕೆ ಪೂರ್ವಿಕರ ಮನದಲ್ಲಿ ನೆಲೆಯೂರಿದ್ದುದು ಸಹಜ. ಅಂದಿನ ಅನೇಕ ಶ್ಲೋಕ, ಗದ್ಯ ಪದ್ಯ ಗ್ರಂಥಗಳು, ವ್ಯಾಖ್ಯಾನಗಳು, ಶಾಸನಗಳು, ಶತೋಪದೇಶಗಳು ಶಿಲೆಯ ಮೇಲೆ ಇರುವುದು ಗಮನಾರ್ಹ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಸಮ್ರಾಟ್ ಅಶೋಕನ ಶಿಲಾ ಶಾಸನಗಳು.

ಸಾಮ್ರಾಟ ಸಮುದ್ರ ಗುಪ್ತ ಪ್ರಯಾಗದ ಸ್ತಂಭದ ಮೇಲೆ ಕೆತ್ತಿಸಿರುವ ಹರಿಷೇಣ ಕವಿಯ ಪ್ರಶಸ್ತಿ ಪದ್ಯ ಮತ್ತು ಗದ್ಯ ಉತ್ತಮ ನಮೂನೆಗಳಲ್ಲಿ ಒಂದು. ಈ ದಿಸೆಯಲ್ಲಿ ಅಸಂಖ್ಯಾತ ಕೃತಿಗಳು, ಶಿಲಾ ಬರಹಗಳು ಸಾಕ್ಷ್ಯ ಒದಗಿಸುತ್ತವೆ. ಈ ಮಾರ್ಗದಲ್ಲಿ ದೊರೆ ಭೋಜನ ಕಂದಾಭರಣವೆಂಬ ಪಾಠಶಾಲೆಯ ಸಂಗತಿ ಗಮನೀಯ. ಧಾರದ ಕಮಾಲ ಮೌಲಾ ಮಸೀದಿಯು ಕುಸಿದು ಬಿದ್ದಾಗ ಕಲ್ಲಿನ ಮೇಲಿನ ಲಿಪಿಯನ್ನು ಸಂಶೋಧಕರು ಪರೀಕ್ಷಿಸಿದಾಗ ಮಹಾರಾಜ ಭೋಜನ ವಂಶದ ಅರ್ಜುನದೇವ ವರ್ಮನ ಗುರು ಪಂಡಿತ ಮದನ ಕವಿಯ 'ಪಾರಿಜಾತ ಮಂಜರಿ' ಎಂಬ ನಾಟಕ ಎಂದು ಗೊತ್ತಾಯಿತು. ಮಸೀದಿಯ ಹಿತಚಿಂತಕರ ಆಗ್ರಹದಿಂದ ಅಪೂರ್ಣ ನಾಟಕದ ಉತ್ತರ ಭಾಗವನ್ನು ಕಾಣಲಾಗಿಲ್ಲ ಎಂಬುದು ತಿಳಿದು ಬರುತ್ತದೆ.

ಅರಸನ ಸರಸ್ವತೀ ಕಂಠಾಭರಣ ಶಾಲೆ ಮಸೀದೆಯಾಗಿದೆ; ಇಲ್ಲಿ ಭೋಜರಾಜನ ಎರಡು ಕಾವ್ಯಗಳು ಮತ್ತು ಸೋಮೇಶ್ವರ ಕವಿಯ "ಲಲಿತ ವಿಗ್ರಹ ರಾಜ" ಎಂಬ ನಾಟಕ ಒಪ್ಪಡಿಯಲ್ಲಿ ಕೆತ್ತಿರುವುದು ಸಿಕ್ಕಿದೆ.

ಹೀಗೆ ದೇಶದಾದ್ಯಂತ ವ್ಯಾಪಿಸಿರುವ ಶಿಲಾ ಲೇಖನಗಳ ಪೂರ್ಣ ಸಾಹಿತ್ಯವನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲವಾದರೂ ಅವುಗಳು ಭಾರತೀಯ ಸಂಸ್ಕೃತಿ ಸಂಸ್ಕಾರ, ಉನ್ನತಿಯ ಕುರುಹು ಎಂಬುದು ನಿರ್ವಿವಾದ.

ಶಾಸನ, ಸಂದೇಶಗಳನ್ನು ನೀಡಲು ಶಿಲಾಪತ್ರಗಳು ಬಳಕೆಯಲ್ಲಿದ್ದಂತೆ ಸುವರ್ಣ, ರಜತ ಮತ್ತು ತಾಮ್ರದ ಪಟ್ಟ (ತಗಡು) ಗಳು ಬಳಕೆಯಲ್ಲಿದ್ದವು ಎಂಬುದು ಗಣನೀಯ. ಅರಸರು ಮತ್ತು ಶ್ರೀಮಂತರು ವಿಶೇಷವಾಗಿ ದಾನ ದತ್ತಿಗಳಿಗೆ ಬಳಸುತ್ತಿದ್ದುದು ಶಿಲೆಗಳನ್ನು ಎಂಬುದು ಸ್ಪಷ್ಟ. ಅಧಿಕ ಸಂಖ್ಯೆಯಲ್ಲಿ ಶಿಲಾ ಶಾಸನಗಳನ್ನು ಗಮನಿಸ ಬಹುದಾಗಿದೆ. ನೂರಾರು ವರ್ಷಗಳ ಹಿಂದೆ ಬಳಸಿದ ಲಿಪಿ, ಶೈಲಿ ಇಂದಿಗೂ ಅಚ್ಚಳಿಯದೆ ಶಿಲೆಗಳ ಮೇಲೆ ಶಾಶ್ವತವಾಗಿ ಉಳಿದಿವೆ.

ಶಿಲಾ ಶಾಸನಗಳಂತೆಯೇ ತಾಮ್ರದ ಹಲಗೆಗಳ ಮೇಲೆ ಬರಹಗಳನ್ನು ಅಧಿಕ ಸಂಖ್ಯೆಯಲ್ಲಿಯೇ ಕಾಣಬಹುದು. ಭಾರತೀಯರಿಗೆ ನೂರಾರು ವರ್ಷಗಳ ಮೊದಲೇ ಲೋಹಗಳ ನಿರ್ಮಾಣ ಕುಶಲತೆ ಉಪಯೋಗ ಪರಿಚಯವಿತ್ತೆಂಬುದು ಹೆಮ್ಮೆಯ ಸಂಗತಿ.

ಕನ್ನಡ ನಾಡಿನಲ್ಲಿ ಶಿಲಾಶಾಸನಗಳಿಗೆ, ತಾಮ್ರ ಪಟ್ಟಗಳಿಗೆ, ಮಹಾಸತಿಕಲ್ಲುಗಳಿಗೆ ಬರವಿಲ್ಲ. ಕಲ್ಲು ಭಾರತೀಯರಿಗೆ ನಿರ್ಜೀವ ಶಿಲೆಯಲ್ಲ ಸತ್ಯಸಂದೇಶವನ್ನು ಜಗತ್ತಿಗೆ ಸಾರುವ ಸಜೀವ ಆಕೃತಿ.

ಗ್ರಂಥ, ಲೋಹ, ಹಣ ಮತ್ತು ಆ

(ಹನ್ನೊಂದನೇ ಪುಟ ನೋಡಿರಿ)




1925ನೇ ಅಕ್ಟೋಬರ್ 20ರಂದು ಸ್ಥಾಪಿಸಲ್ಪಟ್ಟು ನವೆಂಬರ್ 1ರಂದು ಬ್ಯಾಂಕಿಂಗ್ ವ್ಯವಹಾರವನ್ನು ಪ್ರಾರಂಭಿಸಿದ ಸಿಂಡಿಕೇಟ್ ಬ್ಯಾಂಕ್ ಇಂದಿಗೆ ತನ್ನ ಅದ್ವಿತೀಯ ಸೇವೆಯ ನಾಲ್ಕು ದಶಕಗಳನ್ನು ಪೂರೈಸಿಗೊಳಿಸಿದೆ. ಈ ಅವಧಿಯಲ್ಲಿ ಸಿಂಡಿಕೇಟ್ ಬ್ಯಾಂಕು ದೇಶಕ್ಕೆ ಮತ್ತು ಜನತೆಗೆ ಸರ್ವೋತ್ಕೃಷ್ಟ ಸೇವೆ ಸಲ್ಲಿಸಿದೆ ಮಾತ್ರವಲ್ಲ ಅವರ ಪ್ರೀತ್ಯಾದರ ಮತ್ತು ಸಹಕಾರಗಳಿಗೂ ಪಾತ್ರವಾಗಿದೆ. ಲಕ್ಷಾಂತರ ಮಂದಿ ಗ್ರಾಹಕರ ಹಾಗೂ ಹಿತಚಿಂತಕರ, ಸಿಬ್ಬಂದಿಗಳ ಹಾಗೂ ಶೇರ್‌ಹೋಲ್ಡರುಗಳ ಆದರ ಮತ್ತು ಬೆಂಬಲದ ಫಲಸ್ವರೂಪವಾಗಿ ಇಂದು ಸಿಂಡಿಕೇಟ್ ಬ್ಯಾಂಕು ದೇಶದ ಬ್ಯಾಂಕಿಂಗ್ ಉದ್ಯಮದಲ್ಲೇ ಒಂದು ಗೌರವಾರ್ಹ ಸ್ಥಾನವನ್ನು ಪಡೆದಿದೆ. ದೇಶದಾದ್ಯಂತ ಹಬ್ಬಿರುವ 204 ಶಾಖೆಗಳನ್ನು ಹೊಂದಿರುವ ಈ ಬ್ಯಾಂಕು 1.85 ಕೋಟಿ ರೂಪಾಯಿಗಳಷ್ಟು ತೆತ್ತ ಬಂಡವಾಳ ಮತ್ತು ಕಾದಿಟ್ಟ ನಿಧಿಯನ್ನೂ, 70 ಕೋಟಿ ರೂಪಾಯಿಗಳಿಗೂ ಮಿಕ್ಕಿ ಸಂಪತ್ಸಾಧನಗಳನ್ನೂ ಹೊಂದಿದೆ.

ನಮಗೆ ಸೇವಾ ಸಂದರ್ಭವನ್ನೊದಗಿಸಿದ ಮತ್ತು ನಮ್ಮ ಸಂಸ್ಥೆಗೆ ಬೆಂಬಲ ನೀಡಿದ ಎಲ್ಲಾ ಗ್ರಾಹಕರಿಗೆ ಮತ್ತು ಹಿತೈಷಿಗಳಿಗೆ ನಾವು ಚಿರಋಣಿಗಳಾಗಿದ್ದೇವೆ. ಈ ಸಿಂಡಿಕೇಟ್ ಬ್ಯಾಂಕು ವಿದೇಶ ವಿನಿಮಯ, ಕೃಷಿ ಆರ್ಥಿಕ ನೆರವು ಮಾತ್ರವಲ್ಲದೆ ಇತರ ಎಲ್ಲಾ ವಿಧದ ಅತ್ಯಾಧುನಿಕ ಬ್ಯಾಂಕಿಂಗ್ ಸೌಲಭ್ಯಗಳನ್ನೊದಗಿಸಲು ಸಮರ್ಥವಾಗಿದೆ. ಪ್ರಾರಂಭದಿಂದಲೇ ಸಿಂಡಿಕೇಟಿನ ವೈಶಿಷ್ಟ್ಯಗಳಾಗಿದ್ದ ಸೌಜನ್ಯತೆ ಮತ್ತು ಸೇವಾ ಮನೋಭಾವದೊಂದಿಗೆ ಜನಸೇವೆಗೈಯುವ ನಮ್ಮ ಆಶಯವನ್ನು ಪುನರಪಿ ಉಚ್ಚರಿಸುತ್ತೇವೆ.

FAITHFUL SB FRIENDLY

**ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್**

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

200ಕ್ಕೂ ಹೆಚ್ಚು ಶಾಖೆಗಳು. | ರೂ. 70 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ.

### ರೈತ, ನಾವಿಕ, ಅರ್ಚಕರೆ, ಖಗೋಲ ಶಾಸ್ತ್ರ ಬೆಳವಣಿಗೆಯ ಮೂಲ ಪುರುಷರು.

# ಖಗೋಲ ಶಾಸ್ತ್ರ ಬೆಳೆದು ಬಂದ ರೀತಿ

ಬರೆದವರು: ಶ್ರೀ ಬಸವರಾಜ ಕುಂಚೂರು.

ಪ್ರಪಂಚ ಹುಟ್ಟಿ ಬಹಳ ದಿನಗಳ ನಂತರ ಮನುಷ್ಯನ ಉದಯವಾಯಿತು. ಮಾನವ ಒಂದು ಮಜಲಿಗೆ ಬಂದ ನಂತರ, ಖಗೋಲ ಶಾಸ್ತ್ರ ಬೆಳೆದು ಬಂತು. ಮಾನವನ ಹುಟ್ಟಿನೊಡನೆ, ಬೆಳೆದು ಬಂದ ಯಾವುದಾದರು ವಿಜ್ಞಾನವಿದ್ದರೆ ಅದು ಖಗೋಳ ಶಾಸ್ತ್ರ. ಬಹು ಪುರಾತನ ವಿಜ್ಞಾನವಾದ ಇದು, ಗ್ರೀಕರ ವೈಭವಯುಗದಲ್ಲಿ ಹೆಚ್ಚಿನ ಮಟ್ಟವನ್ನು ಮುಟ್ಟಿತು. ಆದರೆ ಅದರ ಬೆಳವಣಿಗೆ, ಇತರ ವಿಜ್ಞಾನಗಳಿಗೆ ಹೋಲಿಸಿ ನೋಡಿದರೆ, ಅಷ್ಟು ವೇಗವಾಗಿ ಬೆಳೆಯಲಿಲ್ಲವೆಂದೇ ಹೇಳಬೇಕು.

ಬೆಳಕೀವ ಸೂರ್ಯ, ಚಂದ್ರರು, ಮಳೆ ಕೊಡುವ ಮೋಡ, ಹರಿಯುವ ಹೊಳೆ ಹಳ್ಳಗಳು ಪುರಾತನ ಮಾನವನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿದವು. ಅವುಗಳ ಮೇಲಿನ ಹೆದರಿಕೆಯಿಂದಲೋ ಅಥವಾ ಅವುಗಳ ಉಪಯುಕ್ತತೆಯಿಂದಲೋ, ಅವುಗಳನ್ನು ಪೂಜಿಸಲು ಆರಂಭ ಮಾಡಿದ ಆತ. ಸಂಜೆಯ ಸಮಯದಲ್ಲಿ ಕತ್ತೆತ್ತಿ ನೋಡಿದಾಗ, ವಿಸ್ತಾರವಾದ ಗಗನದಲ್ಲಿ ಮಿನುಗುವ ಚುಕ್ಕೆಗಳು, ಬೆಳದಿಂಗಳನ್ನು ಚೆಲ್ಲುವ ಚಂದ್ರನನ್ನು ಮತ್ತೆ ಮತ್ತೆ ನೋಡಬೇಕೆನಿಸಿತು. ಕೆಲವು ದಿವಸ ಕತ್ತಲು, ಕೆಲವು ದಿವಸ ಬೆಳದಿಂಗಳು, ಇದನ್ನೆಲ್ಲಾ ನೆನಪಿಡಬೇಕಾಯಿತು. ನೀರಿದ್ದಲ್ಲಿ ವಸತಿ ನಿರ್ಮಿಸುವದು ಪುರಾತನ ಮಾನವನ ರೂಢಿಯಾಗಿತ್ತು. ಕೆಲವು ಸಲ ಮಳೆ ಚೆನ್ನಾಗಿ, ಹೊಳೆ ಉಕ್ಕಿ ಊರುಗಳೇ ನಾಶವಾಗುತ್ತಿದ್ದವು. ಹೊಳೆ ಹೊಕ್ಕ ಭೂಮಿಯಲ್ಲಿ ಹುಲುಸಾಲದ ಪೈರು ಬೆಳೆಯುವುದನ್ನು ಆತ ಕಂಡುಕೊಂಡ. ಬೆಳೆ, ತೆನೆಯೊಡೆದು ನಿಂತಾಗ, ಅವುಗಳನ್ನು ಕೊಯ್ದು ತರುವ ಕಾಲ ಅವನಿಗೆ ಸುಗ್ಗಿ ಆಯಿತು. ಕೊರೆಯುವ ಚಳಿಗಾಲವನ್ನು ಕಂಡು, ದಪ್ಪನಾದ ಉಡುಪು ಬೇಕೆಂಬುದನ್ನು ಮನಗಂಡ. ಬೇಸಿಗೆಯಲ್ಲಿ ಕೆಲವು ಸಲ ಬೆಟ್ಟ ಬೇಗೆ ಕಾಣಿಸಿಕೊಳ್ಳುತ್ತಿತ್ತು. ಆದರಿಂದ ಪಾರಾಗಲು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಬೇಕಾಯಿತು. ಕಡಲ ಬಳಿ ಇದ್ದ ಜನಕ್ಕೆ ಮೀನೇ ಜೀವನದ ಆಧಾರವಾಗಿತ್ತು. ಯಾವ ಕಾಲದಲ್ಲಿ ಮೀನು ಹಿಡಿಯುವದು ಎಂಬುದನ್ನು ನೆನಪಿಡಬೇಕಾಯಿತು. ಕೊರೆಯುವ ಚಳಿಯಿಂದ ಪಾರಾಗಲು, ಹಲುಸಾದ ಬೆಳೆಯನ್ನು ಬೆಳೆಯಲು, ಹುಚ್ಚು ಹೊಳೆಯಿಂದ ದೂರ ಹೋಗಲು, ಮನುಷ್ಯ ಸಮಯವನ್ನು ನೆನಪಿಡಬೇಕಾಯಿತು. ಚಳಿಗಾಲ, ಮಳೆಗಾಲ, ಬೇಸಿಗೆಯು ಇರುವನ್ನು ಆತ ತಿಳಿದುಕೊಂಡ. ಅವನ ಜೀವನ ಹಾಗೆಯೇ ಸುಧಾರಿಸುತ್ತಾ ಹೋಯಿತು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಲು ಆರಂಭಿಸಿದ. ದೋಣಿ ಮಾಡಿ, ಸಾಗರಯಾನ ಮಾಡಲಾರಂಭಿಸಿದ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದ ತಿಂಗಳುಗಟ್ಟಲೆ ಸಮಯ ಬೇಕಾಗುತ್ತಿತ್ತು, ಹುಟ್ಟು ಹಾಕುತ್ತಿದ್ದ ನಾವಿಕ ಸೂರ್ಯ ಹುಟ್ಟುವದನ್ನು, ಮುಳುಗುವದನ್ನು, ಬೆಳದಿಂಗಳು, ಕತ್ತಲು ಆಗುವದನ್ನು ಗಾಳಿ ಬೀಸುವ ಕಾಲ, ಎಲ್ಲವನ್ನು ನೆನಪಿಟ್ಟುಕೊಂಡ, ಅವನ ಬಾಳಿಗೆ ಅವು ಅವಶ್ಯವಾಗಿ ಬೇಕಾಗಿತ್ತು.

ದನ, ಕುರಿ, ಕಾಯುತ್ತಿದ್ದ ಮನುಷ್ಯ ಸಮಯಗಳ ಬದಲಾವಣೆಗಳನ್ನು ತನ್ನ ಜೀವನದ ನಿರ್ವಹಣೆಗಾಗಿ ತಿಳಿಯಲೇ ಬೇಕಾಯಿತು. ಕತ್ತಲು ಕವಿದ ಕೂಡಲೆ, ಅಡವಿಯಿಂದ ದನಗಳನ್ನು ಹಟ್ಟಿಗೆ ಮರಳಿಸುತ್ತಿದ್ದ. ಸೂರ್ಯನ ಉದಯ ನಂತರ ತನ್ನ ಕೆಲಸವನ್ನು ಮತ್ತೆ ಆರಂಭಿಸುತ್ತಿದ್ದ. ದಿನಗಳೆದಂತೆ, ಮನುಷ್ಯನ ಜೀವನ ವಿಸ್ತಾರವಾಗತೊಡಗಿತು. ಬಯಕೆಗಳು ಹೆಚ್ಚಾದವು. ವ್ಯಾಪಾರ, ವ್ಯವಸಾಯ, ಪಶು ಸಾಕಣಿಕೆ ಮುನ್ನಡೆಯಿತು.

ದೇವರ ಅಧಿಕಾರಿಗಳಾದ ಅರ್ಚಕರು, ಗ್ರಹಣ, ವಾರ, ತಿಥಿ, ಹುಣ್ಣಿಮೆ, ಅಮಾವಾಸ್ಯೆಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತಳೆದರು. ಪ್ರಕೃತಿಯ ಶಕ್ತಿಗಳ ಮೇಲೆ ಸ್ವಲ್ಪ ಮಟ್ಟಿಗೆ ಪ್ರಭುತ್ವವನ್ನು ಸ್ಥಾಪಿಸಿ ಜನಸಾಮಾನ್ಯರನ್ನು ಅಂಕಿತದಲ್ಲಿಟ್ಟುಕೊಳ್ಳುವದು ಅವರಿಗೂ ಬೇಕಿತ್ತು. ಅಷ್ಟೆ ಏಕೆ? ಅನೇಕ ಸಲ ಚಕ್ರವರ್ತಿಗಳು ಅವರಿಗೆ ಹೆದರಿ ನಡೆಯಬೇಕಾಗಿತ್ತು.

ಬೆಬಿಲೋನಿಯಾ, ಚೀನಾ, ಗ್ರೀಕ್ ಭಾರತ ದೇಶಗಳಲ್ಲಿ ಚರ್ಚು, ಮಸೀದಿ, ದೇವಸ್ಥಾನಗಳು ಖಗೋಲ ಶಾಸ್ತ್ರದ ಜ್ಞಾನ ಪೀಠಗಳಾಗಿದ್ದುವು. ಅರೇಬಿಯನ್ನರು ಒಂದು ಕಡೆಯಿಂದ ಇನ್ನೊಂದೆಡೆಗೆ, ವ್ಯಾಪಾರಕ್ಕಾಗಿ ಅಲೆಯುತ್ತಿದ್ದರು. ಸಮುದ್ರಯಾನ ಅವರಿಗೆ ಸಹಜವಾಗಿತ್ತು. ವಾಣಿಜ್ಯದ ಜೊತೆಗೆ ಖಗೋಲ ಶಾಸ್ತ್ರವನ್ನೂ ಹರಡಿದರು.

ಆಗಿನ ಕಾಲದಲ್ಲಿ ಸಮುದ್ರಯಾನವೆಂದರೆ ಈಗಿನಂತೆ ಉಲ್ಲಾಸದಾಯಕವಾಗಿರಲಿಲ್ಲ, ಯಾವ ಗಳಿಗೆಗೆ ಚಂಡಮಾರುತ ಬೀಸಿ ದೋಣಿಯನ್ನು ಮುಳುಗುಚುತ್ತದೆಯೋ ಯಾರಿಗೆ ಗೊತ್ತು? ಗಾಳಿಪಟಗಳಿಂದ ಚಲಿಸುವ ದೋಣಿಗಳೆಲ್ಲ ವರ್ಷಗಟ್ಟಲೆ ಪ್ರಯಾಣ ಮಾಡಬೇಕಿತ್ತು. ಆಹಾರವನ್ನೂ ಕೊಂಡಯ್ಯುವದು ಸುಲಭ ಸಾಧ್ಯವಾಗಿರಲಿಲ್ಲ. ಮೇಲೆ ಸಮುದ್ರ ಜಂತುಗಳ ಭಯ. ಅಂತಹ ಕಾಲದಲ್ಲೂ ಕೆಲವರು ಸಾಹಸ ಮಾಡಿದರು. ಅವರಲ್ಲಿ ಮೆಗಲನ್ ೧೬ನೇ ಶತಮಾನದ ಸುಮಾರಿಗೆ ಫೆಸಿಫಿಕ್ ಸಾಗರವನ್ನು ಕಂಡು ಹಿಡಿದ. ಕೊಲಂಬಸ್, ವಾಸ್ಕೋಡಿಗಾಮ ಇವರು ಚರಿತ್ರಾರ್ಹರು. ಅಮೇರಿಕಾ, ಭಾರತಗಳ ಪರಿಚಯವನ್ನು ಭೂ ಖಂಡಕ್ಕೆ ಮಾಡಿಕೊಟ್ಟರು. ಇದು ಖಗೋಲ ಶಾಸ್ತ್ರದ ಮೇಲೆ ಹೆಚ್ಚಿನ ಪರಿಣಾಮನ್ನುಂಟು ಮಾಡಿತು.

ಭೂಮಿ ಟೇಬಲ್‌ನಂತೆ ಚಪ್ಪಟೆಯಾಗಿದೆ, ಸೂರ್ಯ, ಚಂದ್ರ, ನಕ್ಷತ್ರ ದೇವರು ಬೆಳಕನ್ನು ಚೆಲ್ಲಲು ನಿರ್ಮಿಸಿರುವ ದೂತರು. ಅವು ಅಂತರಿಕ್ಷದಲ್ಲಿ ಇವೆ. ಹೀಗೆ ನಾನಾ ತರದ ಮೂಢ ನಂಬಿಕೆಗಳು ಜನರಲ್ಲಿ ಇದ್ದವು. ಆ ಕಾಲದಲ್ಲೂ ಯುವಕರ ತಲೆಯಲ್ಲಿ ಕಾಣುವ ನರೆಗೂದಲುಗಳಂತೆ, ಖಗೋಲ ಶಾಸ್ತ್ರದ ಬಗ್ಗೆ ಸತ್ಯಶೋಧನೆಯಲ್ಲಿ ಅನೇಕ ಗ್ರೀಕ್ ತತ್ವಜ್ಞಾನಿಗಳು ತೊಡಗಿದರು.

ಗೆಲಿಲಿಯೋನಿಗಿಂತ ಮುಂಚಿತವಾಗಿ ಭೂಮಿ ಗುಂಡಾಗಿದೆ ಎಂಬುದು ತಿಳಿದಿತ್ತು. ಅದು ಬೆಳಕಿಗೆ ಬಂದಿರಲಿಲ್ಲವಷ್ಟೆ. ಎರಡು ಸಾವಿರದ ಐದನೂರು ವರುಷಗಳ ಹಿಂದೆಯೇ ಪೈಥಾಗೆರಸ್ ಭೂಮಿ, ಚೆಂಡಿನಂತೆ ದುಂಡಗಿದೆ ಅದಕ್ಕೆ ತಳವಾಗಲಿ, ಮೇಲ್ ಹೊದಿಕೆಯಾಗಲಿ ಇಲ್ಲ ಎಂದು ತಿಳಿಯಪಡಿಸಿದ. ಮೊಟ್ಟ ಮೊದಲಿಗೆ ಗ್ರೀಕ್ ಖಗೋಳಶಾಸ್ತ್ರಜ್ಞ ಪಟೋಲೆಮಿ ಜಗತ್ತಿನ ಭೂಪಟವನ್ನು ಬರೆದು ಅಕ್ಷಾಂಶ ರೇಖಾಂಶಗಳನ್ನು ಗುರುತಿಸಿದ. ಇದು ಕೆಲವೊಂದು ತಪ್ಪುಗಳನ್ನು ಒಳಗೊಂಡಿದ್ದರೂ ಅವನ ಮುಂದೆ ಬಂದ ಸಂಶೋಧಕರಿಗೆ ಬಹಳ ಸಹಾಯವಾಯಿತು. ಭೂಮಿಯು ದುಂಡಗಿದೆ ಎಂದು ಇವನು ತಿಳಿದಿದ್ದ. ಆದರೆ, ಅದು ಪ್ರಚಾರವಾಗಲಿಲ್ಲ. ಖಗೋಳ ಶಾಸ್ತ್ರದಲ್ಲಿ ಗೆಲಿಲಿಯೋ, ಕೊಪರ್ನಿಕಸ್‌ನ ಹೆಸರು ಎಷ್ಟು ಚಿರಸ್ಥಾಯಿಯೋ ಅಷ್ಟೇ "ಪಟೋಲೆಮಿ"ಯದೂ ಕೂ

ಡ. ಅರಿಸ್ಟಾಟಲ್‌ನಿಗಿಂತ ಒಂದು
ಮುಂದೆ ಹೋದ ಮಹಾ ಜ್ಞಾನಿ ಇ
ಸೂರ್ಯನು ಭೂಮಿಯ ಸುತ್ತ
ಗುವನೆಂದು ಹೇಳಿದ ಅರಿಸ್ಟಾಟಲ್,
ವೃದ್ಧಾಪ್ಯದಲ್ಲಿ ಹುಟ್ಟೂರನ್ನೇ ಬಿಡ
ಯಿತು. ಖಗೋಳ ಶಾಸ್ತ್ರದಲ್ಲಿ
ಏಕೈಕ ಹೆಣ್ಣು ಮಗಳೆಂದರೆ "ಹೈ
ಯಾ". ಇವಳು ಅನೇಕ ವರ್ಷಗಳ
ಶಾಲೆಯನ್ನು ತೆರೆದು ಆ ಶಾಸ್ತ್ರದ
ಪರಿಚಯ ಮಾಡಿ ಕೊಟ್ಟಳು. ಗ್ರೀಕ
ಒಬ್ಬರ ತರುವಾಯ ಒಬ್ಬರು ಸಾಧ
ನ್ನು ಮುಂದುವರಿಸಿಕೊಂಡು ಹೋ
ನಕ್ಷತ್ರಗಳು ತಿರುಗುವದಿಲ್ಲ, ಚಂ
ಭೂಮಿಯ ಸುತ್ತ ತಿರುಗುವದಿಲ್ಲ
ಕಂಡು ಹಿಡಿದ ಕೊಪರ್ನಿಕಸ್‌ಗಿ
ಒಂದು ಪುಸ್ತಕವನ್ನು ಬರೆದ ಆದು,
ನು ಮರಣಶಯ್ಯೆಯಲ್ಲಿದ್ದಾಗ ಅ
ಬಂತು. ಮುಂದೆ ಅವನ ವಾದ
ಚರ್ಚು ತಡೆ ಆಜ್ಞೆ ಹಾಕಿತು. ಚಂ
ಸೂರ್ಯನ ಬೆಳಕಿನ ನೆರವಿನಿಂದ
ತಿರುತ್ತಾನೆ ಎಂಬುದನ್ನು ಅನೆಕ್ಸಗೊ
ಋಜು ಪಡಿಸಿದನು.

ಅರೆಬಿಯನ್, ಖಗೋಳ ಶಾಸ್ತ್ರಜ್ಞ
ಹಮದ್ ಇಬನ್ ರಶೀದ ಅನೇಕ
ಕಗಳನ್ನು ಬರೆದನು. ಕೆಲವು ಅರೇಬಿ
ಪುಸ್ತಕಗಳು ಐರೋಪ್ಯ ಭಾಷೆಗಳಿ
ರ್ಜುಮೆಯಾದವು. ಭಾರತದಲ್ಲಿ
ಯುಗದಲ್ಲಿ ಬ್ರಹ್ಮಗುಪ್ತನೆಂಬ ಖ
ಳ ಶಾಸ್ತ್ರಜ್ಞನು ಬಹು ಪ್ರಶಸ್ತಿ
ನು, ಆತನು ಸಂಸ್ಕೃತದಲ್ಲಿ ಕೆಲವು
ಕಗಳನ್ನು ಬರೆದನು.

ಚರ್ಚುಗಳು ಸತ್ಯ ಶೋಧಕರನ್ನು
ರಿಣವಾಗಿ ದಂಡಿಸುತ್ತಾ ಬಂದರೂ
ದ ರಶ್ಮಿ ಎಡೆಬಿಡದೆ ಹರಡುತ್ತ
ಗತ್ತಿನ ಚರಿತ್ರೆಯಲ್ಲಿ ವಿಜ್ಞಾನಿಯೊ
ಗೆ ಚರ್ಚುಕೊಟ್ಟ ಉಪಟಳ,
ವಾದದ್ದು. ಕೊನೆಗೆ ಅವನ ಶರೀರವ
ಅಗ್ನಿಗಾಹುತಿ ಮಾಡಿದ ಅಮಾನುಷ
ತ್ಯ. ಜನಮನದಿಂದ, ಎಂದೂ, ಹ
ಳಾರದು. ಕೊಪರ್ನಿಕಸನ ಸಿದ್ಧಾಂತ
ನ್ನು ಚೆನ್ನಾಗಿ ತಿಳಿದುಕೊಂಡು ಅ
ಬರೆದ ಪುಸ್ತಕವನ್ನು ಮಾನ್ಯತೆ ಮಾ
ದವನು ಇಟಲಿಯ ಸನ್ಯಾಸಿ ಗಿಯ
ರ್ಡಾಂಡ್ ಬ್ರೂನೋ ಇವನನ್ನು ಚ
ದೇಶಾಂತರ ಓಡುವಂತೆ ಮಾಡಿತು.
ನ ಸಿದ್ಧಾಂತಗಳು ಪಾಶ್ಚಾತ್ಯ ರಾಷ್ಟ್ರ
ಲ್ಲಿ ಜನಪ್ರಿಯವಾಗಹತ್ತಿದವು ಸೂ
ನು ತನ್ನ ಸುತ್ತು, ತಾನೇ ತಿರುಗು
ಎನ್ನುವದನ್ನು ಕಂಡುಹಿಡಿದನು. ಕೊನೆ
ಅವನನ್ನು ಯಾವುದೋ ಆಕ ತೋ
ಗರ್ಣಿ ರಲ್ಲಿ ಸೆರೆ ಹಿಡಿಯಲಾಯಿತು.
ಟು ವರ್ಷಗಳ ಕಾಲ ಸೆರೆಮನೆಯ
ಕ್ಷೆಯನ್ನೂ ಅನುಭವಿಸಿದನಾತ.
ಯ ಬೈಬಲ್‌ನ ಕಥೆಯಂತೆ
ಮೊದಲು ಕಂಡಿತು, ನಾಲ್ಕನೆಯ ದಿ
ಸೂರ್ಯ, ಚಂದ್ರ ನಕ್ಷತ್ರಗಳ
ಯವಾಯಿತು. ಇದನ್ನು ಆತನು ವಿರೋ
ಧಿಸಿದನು. ೧೬೦೦ ರಲ್ಲಿ ರೋಮಿನಲ್ಲಿ
ಸಂಶೋಧಕನೊಬ್ಬನನ್ನು ಜೀವಂತ,
ಸಲಾಯಿತು.

ಧಾರ್ಮಿಕ ತತ್ವಗಳಿಗೆ ಮೂಢನಂ
ಕೆಗಳನ್ನು ಬೆರಸಿ ಸಾಮಾನ್ಯರ ಮೇಲೆ

(ಹನ್ನೊಂದನೇ ಪುಟ ನೋಡಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ದಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಸನ್ನದ್ಧ ಭಾರತ

# ನಾವೆಲ್ಲರೂ ಭಾರತೀಯರು ಇರಲಾವುದೆ ಜಾತಿ

ಬಾರಾಮುಲಾ ಒಂದು ಐತಿಹಾಸಿಕ ಸ್ಥಳ. ಶ್ರೀನಗರದಿಂದ ೩೪ ಮೈಲಿಗಳ ಪಶ್ಚಿಮಕ್ಕಿದೆ. ಇದು. ಇಲ್ಲಿ ಎಲ್ಲರಿಗೂ ಪೂಜನೀಯವಾದ ಒಂದು ಸಮಾಧಿಯಿದೆ. ಇದು ನಿರಾಡಂಬರವಾದರೂ ಇತಿಹಾಸ ಪ್ರಸಿದ್ಧವಾದುದು. ೧೯೪೭ರಲ್ಲಿ ಕಾಶ್ಮೀರದ ಮೇಲೆ ಆಕ್ರಮಣ ಮಾಡಿದ ಪಾಕಿಸ್ತಾನದ ಗುಂಡುಗಳಿಂದ ಜರ್ಜರಿತನಾಗಿದ್ದರೂ ರಕ್ಷಣೆಗಾಗಿ ಹೋರಾಡಿದ ಮಕ್‌ಬೂಲ್ ಶೇರವಾನಿ ಮತ್ತು ಅವನ ಸಂಗಡಿಗರ ಸಮಾಧಿಯಿದು. ಭಾರತದ ಜಾತ್ಯತೀತ ನೀತಿಯ ದ್ಯೋತಕವೆಂಬಂತೆ ಈ ಸಮಾಧಿಯು ಪ್ರತಿ ಭಾರತೀಯನಿಗೂ ಅಭಿಮಾನದ ಪವಿತ್ರ ಸ್ಥಳವೆನಿಸಿದೆ.

ಶೇರವಾನಿ ನಮ್ಮನ್ನಗಲಿ ೧೮ ವರ್ಷಗಳು ಗತಿಸಿದುವು. ಇಂದು ಮತ್ತೆ ಅದೇ ವೈರಿಯನ್ನು ಹದೆಬಡಿಯಲು ಹಿಂದು, ಮುಸ್ಲಿಂ, ಸಿಕ್ಖ, ಕ್ರೈಸ್ತ, ಪಾರ್ಸಿ ಮೊದಲಾದ ಎಲ್ಲಾ ಬಂಧುಗಳು ಭುಜಕ್ಕೆ ಭುಜ ಕೊಡುತಿದ್ದಾರೆ. ಸಮಗ್ರ ದೇಶವೇ ಒಂದು ವ್ಯಕ್ತಿಯಂತೆ ಎದ್ದು ನಿಂತಿದೆ. ಪಾಕಿಸ್ತಾನವನ್ನು ರಾಜಕೀಯ ಮತ್ತು ಮಿಲಿಟರಿ ರಂಗಗಳಲ್ಲಿ ಮಣ್ಣು ಮುಕ್ಕಿಸಿದಂತೆಯೇ ನೈತಿಕವಾಗಿಯೂ ಮುಖಭಂಗಗೊಳಿಸಿತು.

ಪಾಕಿಸ್ತಾನಿ ಅಧಿಕಾರಿಗಳ ಭಾರತವನ್ನು ಹೆಜ್ಜೆ ಹೆಜ್ಜೆಯಲ್ಲೂ ತಪ್ಪು ತಿಳಿದಿದ್ದಾರೆ. ಈ ತಪ್ಪೆಣಿಕೆಯು ಆತ್ಮಘಾತುಕವೆಂದವರಿಗೆ ಮನವರಿಕೆಯಾಗಿರಬೇಕು. ಕಾಶ್ಮೀರದಲ್ಲಿ ತಾವು ಹೋರಾಟ ತೊಡಗುವುದೇ ತಡ, ಭಾರತದಲ್ಲಿ ಮತೀಯಗಲಭೆಗಳು ತಲೆಯೆತ್ತಿ ಭಾರತದ ರಕ್ಷಣಾ ಸಿದ್ಧತೆಗಳು ಕಲಕಿಳಿಗಾಗುವುವೆಂದು ಅವರು ದೃಢವಾಗಿ ನಂಬಿದ್ದರು. ಅವರ ಈ ಕಲ್ಪನೆಯೇ ತಲೆಕೆಳಗು ವ್ಯವಹಾರವಾಯಿತು.

ಪಾಕಿಸ್ತಾನ ಎಬ್ಬಿಸಿತ್ತು ಇಸ್ಲಾಂ ಧರ್ಮಕ್ಕೆ ಅಪಾಯ ಎಂಬ ಕೂಗನ್ನು. ಆದು ಕಟ್ಟಿತ್ತು ಮುಸ್ಲಿಮರ ದಮನದ ಕಥೆಗಳನ್ನು. ಈ ತಿರುಬೊಬ್ಬೆ ನೀಡಿತು ಭಾರತೀಯ ಮುಸ್ಲಿಮರಿಗೆ ಅಖಂಡ ಧೈರ್ಯವನ್ನು - ಅವರು ಮಾಡಿದರು ದೃಢ ಸಂಕಲ್ಪವನ್ನು - ದೇಶವನ್ನು ಪಾಕ್ ಆಕ್ರಮ ಆಕ್ರಮಣಕಾರರಿಂದ ಸಂರಕ್ಷಿಸುತ್ತೇವೆ.

ಪಾಕ್ ಸೇನೆಯನ್ನು ಸದೆಬಡಿದು ವೀರಸ್ವರ್ಗವೇರಿದ ಹಮೀದ್ ಮತ್ತು ಶೇಖ್ ಭಾರತೀಯರು - ಸೈನಿಕ ಪ್ರಶಸ್ತಿ ಗಳಿಸಿದ ವೀರ ಭಾರತೀಯ ಯೋಧರು ಇವರು. ಸೇಬರ್ ಜೆಟ್ ಉರುಳಿಸಿದ ಹುಸೇನ್, ಪ್ಯಾಟನ್ ಟ್ಯಾಂಕುಗಳ ಸಮಾಧಿ ಕಟ್ಟಿದ ಜಮಾಲುದ್ದೀನ್, ಕಿಡ್ವಾಯಿ, ಹಮೀದ್, ಹುಸೇನ್‌ಖಾನ್, ಅಲ್ಲಾನ ಹೆಸರಿನಲ್ಲಿ ಶತ್ರುಗಳ ಮೇಲೆ ಪುರುಷಸಿಂಹನಂತೆ ಎರಗಿ ಮಡಿದ ಹಾಶೀಮ್ ಇವರೆಲ್ಲರೂ ಭಾರತೀಯರು. ಜಾತ್ಯತೀತ ಭಾರತದ ನಾಗರಿಕರಿಗೆ ಸ್ಫೂರ್ತಿದಾತರು.

ಧರ್ಮ, ಭಾಷೆ, ಜಾತಿಮತಗಳ ಭೇದ ತೊರೆದು ಶತ್ರು ದಮನ ಮಾಡಲು ವೀರ ಭಾರತೀಯರು ದೃಢ ಸಂಕಲ್ಪ ಮಾಡಿದ್ದಾರೆ. ಪಾಕಿಸ್ತಾನವು ದುಷ್ಟ ರೀತಿಯಿಂದ ವರ್ತಿಸಿ ಅಪರಾಧ ಮಾಡಿದೆ. ಇಸ್ಲಾಂ ಧರ್ಮದ ಪವಿತ್ರ ಹೆಸರಿಗೆ ಕಲಂಕ ಹಚ್ಚಿದೆ. ಮೋಸ ಮತ್ತು ದ್ವಿಮುಖ ವರ್ತನೆಯಿಂದ ಅಂತಾರಾಷ್ಟ್ರೀಯ ರಂಗದಲ್ಲಿಯೂ ಅದು ಇಸ್ಲಾಮಿಗೆ ಅಪಮಾನ ಮಾಡಿದೆ. ಮುಗ್ಧ ಕಾಶ್ಮೀರಿಗಳನ್ನು ಮನಬಂದಂತೆ ಕೊಲ್ಲಲು, ಮಸೀದಿ — ಮಂದಿರಗಳ ಮೇಲೆ ದಾಳಿ ಮಾಡಲು ಆದೇಶ ನೀಡಿದ ಪಾಕ್ ಅಧಿಕಾರಿಗಳು ಇಸ್ಲಾಮ್ ಧರ್ಮಕ್ಕೆ ಅಪಚಾರ ಮಾಡಿದ್ದಾರೆ. ಇದು ಇಸ್ಲಾಮ್ ಧರ್ಮಕ್ಕೆ ಸಲ್ಲದ ನಡವಳಿಕೆ — ಇಂತಹ ಗೋಮುಖವ್ಯಾಘ್ರಗಳಿಂದ, ಇಸ್ಲಾಂ ಭಕ್ಷಕರಿಂದ ಇಸ್ಲಾಂ ರಕ್ಷಣೆ ಎಂತು ಸಾಧ್ಯ? ಅವರ ಬೊಬ್ಬೆ ತಿರುಬೊಬ್ಬೆ ಮಾತ್ರ.

ಭಾರತ ಬರಿಯ ಹಿಂದುಗಳ ದೇಶವಲ್ಲ. ಎಲ್ಲ ಮತೀಯರೂ ಭಾರತದಲ್ಲಿ ಸಹಬಾಳ್ವೆ ನಡೆಸುತ್ತ ಸಂತೋಷದಲ್ಲಿದ್ದಾರೆ. ಭಾರತದಲ್ಲಿ ೫೫ ಮಿಲಿಯ ಇಸ್ಲಾಂ ಧರ್ಮೀಯರಿದ್ದಾರೆ ತಮ್ಮ ಸಂಪ್ರದಾಯ — ಪರಂಪರೆಗಳಂತೆ ಅವರು ನಡೆಯುತಿದ್ದಾರೆ. ರಾಷ್ಟ್ರವನ್ನು ಕಟ್ಟಲು ಇತರರೊಡನೆ ಸೊಂಟಕಟ್ಟಿದ್ದಾರೆ. ಭಾರತೀಯ ಸೇನೆಯಲ್ಲಿ, ಆಡಳಿತೆಯಲ್ಲಿ, ಸರಕಾರಿ ನೌಕರಿಯಲ್ಲಿ, ಖಾಸಗಿ ರಂಗಗಳಲ್ಲಿ ಬೇಕೆಂಬಷ್ಟು ಮುಸ್ಲಿಮರಿದ್ದಾರೆ. ಭಾರತದ ಉಪರಾಷ್ಟ್ರಪತಿಯವರೇ ಇಸ್ಲಾಂ ಧರ್ಮಾವಲಂಬಿಗಳು! ಆದರೆ, ಅವರು ಭಾರತೀಯರು - ಭಾರತದೊಳಗೆ ಇರುವವರೆಲ್ಲರದೂ ಒಂದೇ ಮನಸ್ಸು, ಒಂದೇ ಕೆಲಸ. ಶತ್ರು ಪಾಕಿಸ್ತಾನಿಗಳನ್ನು ಬಗ್ಗು ಬಡಿಯುವುದೇ ಅವರೆಲ್ಲರ ನೆನಸು.

ಭಾರತ — ಪಾಕ್ ಹೋರಾಟವು ಎರಡು ಶಕ್ತಿಗಳ ನಡುವಣ ಹೋರಾಟ; ಎರಡು ಆದರ್ಶಗಳ ಹೋರಾಟ. ಪ್ರಜಾತಂತ್ರ, ಸಮಾಜವಾದಿ ಭಾರತ ಮತ್ತು ಬಂಡವಾಳಶಾಹಿ, ಫ್ಯಾಸಿಸ್ಟ ಪಾಕಿಸ್ತಾನಗಳ ನಡುವಣ ಹೋರಾಟ—ಇದು ಲಖ್ನೋದ ಕೌಮಿ ಆವಾಜ್ ಎಂಬ ಇಸ್ಲಾಂ ಪತ್ರಿಕೆಯ ಅಭಿಪ್ರಾಯ. ದಿಹಲಿಯ 'ಪಯೋಮು ಮಶರಿಖ್' ಎಂಬುದು ಪಾಕ್ ಆಕ್ರಮಣವನ್ನು ಹಿಮ್ಮೆಟ್ಟಿಸಬೇಕೆಂದು ಭಾರತೀಯ ಮುಸ್ಲಿಮರಿಗೆ ಕರೆಯಿತ್ತಿದೆ. 'ಪಂಚಂ—ಇ-ಹಿಂದ್' ನಮ್ಮ ಮಾತೃಭೂಮಿ ಛಿದ್ರ ವಿಚ್ಛಿದ್ರವಾಗಲು ಅವಕಾಶ ಕೊಡೆವು—ಎಂದು ಸ್ಪಷ್ಟಗೊಳಿಸಿದೆ. 'ಏಷ್ಯಾ ವು ನಮಗೆ ಕಾಶ್ಮೀರ ಒಂದೇ ಸುಂದರವಾದ ಕಣಿವೆ ಮಾತ್ರವಲ್ಲ, ಅದು ಮಾನವೀಯತೆ, ಜಾತ್ಯತೀತತೆಗಳ

(ಅತ್ತಣ ಪುಟ ನೋಡಿರಿ)

...ಪುಟ್ಟ ತೊರೆಗಳು ದೊಡ್ಡ ನದಿಯನ್ನು ಕೂಡಿಕೊಂಡು ಹರಿಯುವಂತೆ ಅನೇಕ ಧರ್ಮ ಸಾಂಪ್ರದಾಯಗಳು ಭಾರತೀಯ ...ಸ್ಕೃತಿಯಲ್ಲಿ ಒಂದಾಗಿ ಬೆರೆತಿವೆ. ನಮ್ಮ ಕೋಟಿ ಕೋಟಿ ಜನತೆಯ ಹೃದಯವನ್ನು ಶಾಂತಿಯ ಸೂತ್ರ ಒಂದಾಗಿ ಬಿಗಿದಿದೆ. ...ತಹ ಐಕ್ಯ ಸಮಾಜ ನಮ್ಮದು. ಈ ಸಮಾಜವನ್ನು ಸದಾಕಾಲ ಉಳಿಸಿಕೊಂಡು ಬರಲು ನಾವು ಯಾವ ತ್ಯಾಗಕ್ಕೂ ಸಿದ್ಧ. ...ಸ್ತ್ರೀ ನನ್ನ ನೆರೆಯವನಿಗೂ ಈ ಸಮಾಜದಲ್ಲಿ ಸ್ಥಾನವಿದೆ ಎನ್ನುವುದನ್ನು ನೆನಪಿನಲ್ಲಿಡೋಣ.

# ನಾವು ದೊಡ್ಡ ದೇಶದ ದೊಡ್ಡ ಜನ

# ಯುದ್ಧವೇ
# ನಮ್ಮ ಸತ್ಯನೀತಿಯ

ಸ್ವಾರ್ಥ ದೂರಮಾಡಿರಿ

'ಇನ್ನು ಯುದ್ಧವಿಲ್ಲ' ಎಂದು ಪೋಪ್ ಪಾಲ್ ಪ್ರತಿಜ್ಞೆ ಮಾಡಲು ಕೇಳಿದರು. ರಾಜಕೀಯದಲ್ಲಿ ಸತ್ಯದ ಬಗ್ಗೆ ಪರಿಜ್ಞಾನ ಮೂಡುವ ವರೆಗೆ ದ್ವೇಷ ವಾತಾವರಣ ತಪ್ಪದು. ಅಮೆರಿಕನ್ ಅಧ್ಯಕ್ಷ ಜಾನ್ಸನ್ ರಾಜಕೀಯದಲ್ಲಿ ಸ್ವಾರ್ಥ ಬಳಸಬಾರದು. ಆಗ ಯುದ್ಧವಿಲ್ಲದ ದಿನ ಒಂದೇ ಬರುತ್ತದೆ

ಅಮಾನುಷ

ಈಕೆ ಅನಾಥೆ. ಶತ್ರುಗಳು ಈಕೆಯ ತಾಯಿತಂದೆಯರನ್ನು ಅನ್ಯಾಯವಾಗಿ ಕೊಂದು ಹಾಕಿದರು. ಪಾಪ, ಈ ಬಾಲಿಕೆ ಅಳುಮೋರೆಯಲ್ಲಿ ದಿಕ್ಕುಕಾಣದಾಗಿದ್ದಾಳೆ. ಕೊನೆಗೂ ಸರಕಾರಿ ಪಡೆಗಳು ಶತ್ರುಗಳನ್ನು ಹೊರಗಟ್ಟಿ ಅವರ ನ್ಯಾಯಕ್ಕೊಂದು ಬೇಲಿ ಹಾಕಿದುವು.

೧೯೬೨ರಲ್ಲಿ ಚೀಣೀಯರು ನಮ್ಮ ನೆಲದಿಂದ ಕಾಲು ತೆಗೆದಾಗ ಮಿಲಿಟರಿ ಆಕ್ರಮಣ ಭೀತಿಯಿಂದೆಂದು ನಾವು ನಮ್ಮ ರಕ್ಷಣಾ ಪ್ರಯತ್ನವನ್ನು ಸ್ವಲ್ಪ ಸಡಿಲಗೊಳಿಸಿದೆವು. ಆದರೆ ಆಗ ಮಾಡಿದ ತಪ್ಪನ್ನೇ ನಾವು ಈಗಲೂ ಮಾಡಬಾರದು. ಕುತರ ಪರಿಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವುದರಿಂದಲೇ ಸಮಾಧಾನಪಟ್ಟುಕೊಳ್ಳುವ ... ನಮ್ಮ ಎಚ್ಚರಿಕೆಯಲ್ಲಿ ನಾವು ಇರಬೇಕು. ಚೀಣೀಯರು ಆಕ್ರಮಣ ನಡೆಸಿದ ಕಾಲದಲ್ಲಿ ಭಾರತದ ದೃಢ ಸಂಕಲ್ಪವನ್ನು ಪ್ರತಿನಿಧಿಸುವ ಪಂಡಿತ್ ನೆಹರೂರವರಿದ್ದರು. ಅವರು ಭಾರತದ ಪ್ರತಿಬಿಂಬವಾಗಿದ್ದರು.

ಪಾಕಿಸ್ತಾನದೊಡನೆ ನಡೆದ ಯುದ್ಧದ ಪರಿಣಾಮವಾಗಿ ಶ್ರೀ ಶಾಸ್ತ್ರಿಯವರ ವಿಷಯದಲ್ಲಿ ಜನತೆಯ ಗೌರವ ಹೆಚ್ಚಿದೆ. ಅವರ ಬಗ್ಗೆ ಅತೀವ ವಿಶ್ವಾಸ ಉಂಟಾಗಿದೆ. ದೇಶವು ಅವರ ವಿಷಯದಲ್ಲಿ ಹೊಂದಿರುವ ವಿಶ್ವಾಸ ದೃಢಪಡಲು ಇನ್ನೊಂದು ಚುನಾವಣೆ ನಡೆಯಬೇಕು ಎಂದು ಯಾರೂ ಹೇಳುವಂತಿಲ್ಲ. ಆದರೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಈ ಮಹಾನ್ ದೇಶವು ಒಗ್ಗಟ್ಟಾಗಿ ನಿಂತು ಶತ್ರುವಿನ ವಿರುದ್ಧ ಹೋರಾಡಿದ ರೀತಿಯ ಹಿಂದಿದ್ದ ಹುರುಪನ್ನು ಅವರು ಜೀವಂತವಿಡಬೇಕಾಗಿದೆ. ಪಾಕಿಸ್ತಾನ ಇದಕ್ಕೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಲಿದೆ.

ಯುದ್ಧ ಮೊನ್ನೆ ತಾನೆ ಮುಗಿದಿದೆ. ಆದರೆ ಅದರ ಬೆಲೆ ಎಷ್ಟು ದುಬಾರಿ ಎಂಬುದು ಇನ್ನೂ ಅನೇಕರಿಗೆ ಗೊತ್ತಾಗಿಲ್ಲ. ಪಂಜಾಬ್, ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಈಗಾಗಲೇ ವ್ಯವಸಾಯೋತ್ಪನ್ನಕ್ಕೆ ಭಾರಿ ಧಕ್ಕೆ ತಗಲಿದೆ. ಸುಗ್ಗಿಯ ಫಲ ಜನರ ಕೈಗೆ ಎಟುಕದೆ ಹೋಯಿತು. ನೀರಾವರಿ ಸೌಕರ್ಯ

## ಇಂಡೊನೇಶ್ಯದಲ್ಲಿ ಕಮ್ಯು
## ಕೆಂಪು ಚೀಣಾ ನೈತಿಕವಾಗಿ
## ಈಗ

...ಕ್ಕಾಗಿದ್ದ ...ರನ್ನು ಬೇರೆ ಕಡೆಗೆ ತಿರುಗಿ... ಬೇಕಾಗಿ ಬಂತು. ಇದರಿಂದ ಗಡಿ ... ದೇಶದ ... ಬೆಳೆಗಳಿಗೆ ಧಕ್ಕೆಯು... ಟಾಗಿದೆ ... ಗಳೂ ... ಲೇ ... ತ ... ಕಠಿಣವಾಗಿತ್ತು. ... ದ ... ಯುದ್ಧದ ಬೆಲೆ ಎಷ್ಟು ದುಬಾರಿ ಎಂಬುದನ್ನು ಮನವರಿಕೆ... ತದ ಅನೇಕ ... ನಗಳನ್ನು ಒದಗಿ...

ಕಮ್ಯುನಿಸ್ಟರ ವಿರು... ಂಚ್ಯಕ್ಕೆ ಸೈನಿಕ ನೆರವ... ವನ್ನದು ನಡಸುತ್ತದೆ. ...ಯಿಂದಾಗಿ ಅಂಗ... ...ೀಯ ಸೇನೆ ... ಯಟ್ಟು ನೋಡುತ್ತದೆ.



ಬಾಂಬರ್

ತಾಸಿಗೆ ಎರಡು ಸಾವಿರ ಮೈಲು ಓಡುವ ಅಮೆರಿಕನ್ ಸೂಪರ್‌ಸಾನಿ... ನಿರಪರಾಧಿ ನಾಗರಿಕರ ಮೇಲೆ ಬಾಂಬು ... ಜೀವಿಗಳಿಗೆ ...

# ...ಗಿಯಿತು

# ಬೆಳಕು ಬೀರಲಿ

## ...ರು; ವಿಯತ್ನಾಂಗದಲ್ಲಿ ಭಾರತದ ಸತ್ಯಮಾರ್ಗ ...ತ್ತಿದೆ.

...ರ ಒಂದು ಸಶಸ್ತ್ರ ಸೇನಾ ವಿಭಾ... ...ಪ್ರ ಹೊಂದಿರುವ ಎಲ್ಲಾ ಗನ್‌ಗಳನ್ನು ...ದು ಮತ್ತು ಪ್ರಯೋಗಿಸಿದರೆ (ಟ್ಯಾಂಕುಗಳು ಮತ್ತು ಆರ್ಟಿಲರಿ ಗನ್ ... ಸೇರಿ), ಇದರ ವೆಚ್ಚ 30 ಸಹಸ್ರ ...ಗುತ್ತವೆ. ಒಂದು ಡಿವಿಜನ್ನಿನ ...ದು ಮತ್ತು ಪ್ರಯೋಗದ ವೆಚ್ಚ ಇಷ್ಟಾ... ...ನಮ್ಮ ಡಿವಿಜನ್‌ಗಳು ಅನೇಕ ಬಾರಿ ...ಗ ಗುಂಡು ಹಾರಿಸಿದರೆ ಆಗುವ ವೆಚ್ಚವೆಷ್ಟು ಎಂಬುದನ್ನು ಊಹಿಸಿಕೊಳ್ಳಬಹುದು.

...ವಿಯತ್ನಾಮು ಪ್ರಜಾ ...ನೆ ತೀವ್ರ ಹೋರಾಟ ...ಹೋರಾಟಗಾರನೊಬ್ಬನು ಶತ್ರು ...ಕ್ಷಿಸುತ್ತಿದ್ದಾನೆ. ಭಾರ... ...ನ್ನು ಕಣ್ಣಿನಲ್ಲಿ ಎಣ್ಣೆ



...ಟಗಳು ಭಾರತದ

ಯುದ್ಧಕ್ಕೆ ನಿಂತ ಮೇಲೆ ನಾವು ಇಷ್ಟೇ ಗುಂಡುಮದ್ದುಗಳನ್ನು ಉಪಯೋಗಿಸುತ್ತೇವೆ ಎಂಬ ಮಿತಿ ಹಾಕಿಕೊಳ್ಳುವಂತಿಲ್ಲ. ಅದು ಸಾಧ್ಯವೂ ಇಲ್ಲ. ಅವಶ್ಯಕವಿರುವಷ್ಟು ಗುಂಡು ಮದ್ದಿನ ಸರಬರಾಜನ್ನು ಪ್ರತಿಯೊಂದು ಡಿವಿಷನ್ನಿಗೂ ಮಾಡಬೇಕಾಗುತ್ತದೆ. ಒಂದು ಸಶಸ್ತ್ರ ಡಿವಿಷನ್ನಿನ ಪ್ರಾರಂಭದ ವೆಚ್ಚ ೩೦ ಕೋಟಿ ರೂ.ಗಳಾಗುತ್ತದೆಯೆಂದು ಜನರಲ್ ಪೂಡಾಲಿಯ ಅಂದಾಜು ಮಾಡಿದ್ದಾರೆ. ಆವರ್ತಕ ವೆಚ್ಚ ೮ ಕೋಟಿ ರೂ.ಗಳು. ಗಾಂಧೀಜಿಯವರ ನಾಡಿನಲ್ಲಿ ಈ ಪ್ರಮಾಣದ ಸೈನಿಕ ವೆಚ್ಚ ಒಂದು ದೊಡ್ಡ ವಿರೋಧಾಭಾಸವಾಗಿ ಕಾಣಬಹುದು. ಆದರೆ ದೇಶದ ರಕ್ಷಣೆಗಿಂತ ದೊಡ್ಡ ಗಾಂಧೀ ತತ್ವ ಬೇರೊಂದಿಲ್ಲ. ಎಂದೇ ಯೋಜನೆಯನ್ನು ರಕ್ಷಣಾ ಅಗತ್ಯಗಳಿಗೆ ಅನುಗುಣವಾಗಿ ಸಿದ್ಧಗೊಳಿಸಬೇಕಾಗುತ್ತದೆ. ಈ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನು ಈಗಾಗಲೇ ಆಡಿದ್ದಾಗಿದೆ. ಅರ್ಥಶಾಸ್ತ್ರಜ್ಞರು ಹಾಗೂ ದೇಶದ ಆರ್ಥಿಕ ನೀತಿಯನ್ನು ರೂಪಿಸುವವರು ಈ ವಿಷಯವನ್ನು ಸದ್ಯದಲ್ಲಿಯೇ ಗಂಭೀರವಾಗಿ ಚರ್ಚಿಸಿ ಜನ ಎಷ್ಟರ ಮಟ್ಟಿನ ತ್ಯಾಗಗಳಿಗೆ ಸಿದ್ಧರಾಗಬೇಕಾಗಿದೆ ಎಂಬುದನ್ನು ತಿಳಿಸಬೇಕಾಗಿದೆ.

ಆಹಾರದ ವಿಷಯದಲ್ಲಿ ಶ್ರೀ ಶಾಸ್ತ್ರಿಯವರ ನೀತಿ ಯುಕ್ತವಾಗಿದೆ. ಸ್ವಯಂ ಪರಿಪೂರ್ಣತೆ ಕೇವಲ ನಮ್ಮ ಆಸೆಯಷ್ಟೇ ಅಲ್ಲ, ಗೌರವದ ಪ್ರಶ್ನೆಯೂ ಹೌದು. ಪಿ. ಎಲ್. ೪೮೦ರ ಕೃಪಾಕಟಾಕ್ಷದಿಂದ ಬರುವ ಆಹಾರ ಧಾನ್ಯಗಳನ್ನೇ ನಂಬಿ ಕುಳಿತುಕೊಳ್ಳುವುದು ನಮ್ಮ ಅಸಹಾಯಕತೆಯ ಕುರುಹು. ಇದರಿಂದಲೇ ನಮ್ಮ ಆಂತರಿಕ ಹಾಗೂ ವಿದೇಶಾಂಗ ನೀತಿಯನ್ನು ಸ್ವತಂತ್ರವಾಗಿ ಅನುಸರಿಸಿಕೊಂಡು ಹೋಗುವುದು ಸಾಧ್ಯವಾಗದೇ ಹೋಗುತ್ತಿದೆ. ನಮ್ಮ ಆಹಾರದ ಕೊರತೆ ಸುಮಾರು ೧೦ ಶೇ. ಇರಬಹುದು ಎಂದು ಪ್ರಧಾನಿಯವರು ತಿಳಿಸಿದ್ದಾರೆ. ಈ ಅಂದಾಜು ಒಪ್ಪಿಕೊಳ್ಳುವುದಾದರೆ [illegible] ಶೇ. ೧೦ರಷ್ಟು ಕೊರತೆಯಿದೆ ಎಂದರೆ ಅದು ಹೆಚ್ಚು ಎನ್ನಬಹುದು. [illegible] ರಿಂದ ಹಿಡಿದು [illegible] ವರೆಗೆ ಪ್ರತಿಯೊಬ್ಬರು ತಮ್ಮ ಬಳಕೆಯನ್ನು ಕಡಿಮೆ ಮಾಡಿಕೊಂಡರೆ ಮತ್ತು ತಮ್ಮ ಆಹಾರ ವಿಧಾನವನ್ನು ಬದಲಾಯಿಸಿಕೊಂಡರೆ ಬಳಕೆಯ ಪ್ರಮಾಣವನ್ನು ಕೊರತೆ ಬೀಳುವಷ್ಟು ಕಡಿಮೆ ಮಾಡಿಕೊಳ್ಳಬಹುದು. ಇದರಿಂದಾಗಿ ಹೆಚ್ಚಿನ ಆತ್ಮಗೌರವದೊಡನೆ ಬದುಕಬಹುದು. ನಾವೇಕೆ ಈ ಪ್ರಯತ್ನ ನಡೆಸಬಾರದು? ಪ್ರತಿ

(ಮುಂದಿನ ಪುಟಕ್ಕೆ)



**ನಮಗಿದು ಬೇಕೆ?**

ಸುಸಜ್ಜಿತ ಯೋಧರನ್ನು ಅವರ ಶಸ್ತ್ರಾಸ್ತ್ರಗಳೊಂದಿಗೆ ಒಯ್ಯುವ ಹೆಲಿಕಾಪ್ಟರ್ ಇದು. ಬಯಲ ಭಾಗದ ಹೋರಾಟದಲ್ಲಿ ಇವುಗಳ ಪಾತ್ರ ಹಿರಿದು.



**ನಮಗಿದು ಬೇಡವೆ?**

ರೆಕ್ಕೆಯೊಡನೆ ಅಥವಾ ರೆಕ್ಕೆಯಿಲ್ಲದೆ ಹಾರಬಲ್ಲ ಹೆಲಿಕಾಪ್ಟರ್ ಇದು. ಈ ಅಮೆರಿಕನ್ ಹೆಲಿಕಾಪ್ಟರಿನ ವೇಗ ತಾಸಿಗೆ ೩೪೦ ಮೈಲು. ಮಿಲಿಟರಿ ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳ ಮೂಲಕ ಅಮೆರಿಕೆ ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯ ರವಾನಿಸುತ್ತಿದೆ ಎಂಬ ಕಿಂವದಂತಿ ಇನ್ನೂ ದೃಢಪಟ್ಟಿಲ್ಲ

## ನಮ್ಮ ಸತ್ಯನೀತಿಯ ಮೇಲೆ ಬೆಳಕು ಬೀರಲಿ

(ಹಿಂದಿನ ಪುಟದಿಂದ)

ಯೊಂದು ಕುಟುಂಬದಲ್ಲಿಯೂ ಈ ಪ್ರಯತ್ನ ನಡೆಯಬೇಕು. ರೇಶನ್ ಡಿಪೋಗಳಲ್ಲಿ ಹಾಗೂ ಸರಕಾರದ ಪರವಾನಗಿ ಪಡೆದಿರುವ ನ್ಯಾಯದ ಬೆಲೆಯ ಅಂಗಡಿಗಳಲ್ಲಿ ಮಾರಾಟವಾಗುತ್ತಿರುವ ಆಹಾರ ಧಾನ್ಯಗಳ ಪೈಕಿ ಸುಮಾರು ಶೇ. ೪೦ ರಷ್ಟು ಪಿ. ಎಲ್. ೪೮೦ ವರದಾನವೇ ಆಗಿದೆ. ಹೆಚ್ಚು ಜನ ಅತಿಥಿಗಳಿಗೆ ಭೋಜನ ಕೊಡುವುದರ ಮೇಲೆ ಇರುವ ನಿರ್ಬಂಧಗಳನ್ನು ನಾವೆಷ್ಟು ಜನ ಗಮನಕ್ಕೆ ತೆಗೆದುಕೊಂಡಿದ್ದೇವೆ? ಉಪಾಹಾರ ಗೃಹಗಳಿಗಾದರೂ ಏನು ನಿರ್ಬಂಧವಿದೆ? ಭಾರತ ಸರಕಾರದ ಒಬ್ಬ ಆಹಾರ ಸಲಹೆಗಾರರ ಅಂದಾಜಿನಂತೆ ಐ. ಎ. ಸಿ. ಪ್ರಯಾಣ ವೇಳೆ ಬಡಿಸುವ ಅನ್ನದಲ್ಲಿ ಶೇ. ೪೦ ರಷ್ಟು ವ್ಯರ್ಥವಾಗುತ್ತದೆ. ರೈಲ್ವೆ ಪ್ರಯಾಣದ ಸಮಯದಲ್ಲಿ ಊಟ ಒದಗಿಸುವ ಡೈನಿಂಗ್ ಕಾರುಗಳಲ್ಲಿ ಚಪಾತಿಯನ್ನು ಅನ್ನವನ್ನು ಬಡಿಸುವಾಗ ಪ್ರಯಾಣಿಕರ ಅಗತ್ಯವನ್ನು ಕೇಳದೆ ಹೆಚ್ಚಿನ ಪ್ರಮಾಣದಲ್ಲಿಯೇ ಬಡಿಸುತ್ತಾರೆ. ಸುಮಾರು ೩೫೦ ದಶಲಕ್ಷ ಎಕರೆಗಳಷ್ಟು ಭೂಮಿಯಲ್ಲಿ ಆಹಾರ ಧಾನ್ಯ ಬೆಳೆಯುತ್ತಿರುವ ನಾವು ಸ್ವಾವಲಂಬನದ ಗುರಿಯನ್ನು ಬೇಗ ಸಾಧಿಸಬಹುದು ಎಂದು ಹೇಳುತ್ತಾರೆ. ೭೦ ದಶಲಕ್ಷ ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯವನ್ನು ಒದಗಿಸುವಾಗ ಇದು ಸಾಧ್ಯ ಎನ್ನುವವರೂ ಇದ್ದಾರೆ. ಆದರೆ ಬರಿ ಮಾತಿನಿಂದ ಏನೇನೂ ಸಾಧ್ಯವಿಲ್ಲ. ಗುರಿ ಮುಟ್ಟಬೇಕಾದುದು ಮುಖ್ಯ.

ರಕ್ಷಣೆಯ ಭಾರ ಅಪಾರ. ಅದಕ್ಕೆ ಹಣ ಒದಗಿಸುವುದೇ ದೊಡ್ಡ ಸಮಸ್ಯೆ. ಸಾಮಾನ್ಯ ಜನಕ್ಕೆ ಇದರ ಅಂದಾಜು ಸಿಗುವುದು ಕಷ್ಟ. ಇನ್ನು ನಮಗೆ ಬೇಕಾದ ವಿಮಾನಗಳು, ಟ್ಯಾಂಕುಗಳು, ರಾಡಾರ್ ಸಲಕರಣೆಗಳು, ಗನ್‌ಗಳು, ಕ್ಷಿಪಣಿಗಳು ಇತ್ಯಾದಿಗಳಿಗೆ ಎಲ್ಲಿಂದ ಹಣ ಒದಗಿಸಬೇಕು? ಇವುಗಳಿಗೆ ವಿದೇಶೀ ವಿನಿಮಯದ ಸೌಲಭ್ಯ ಆವಶ್ಯಕವಾಗುತ್ತದೆ. ನಮ್ಮ ಆಮದು ಪ್ರಮಾಣಕ್ಕೆ ಸರಿದೂಗುವ ರೀತಿಯಲ್ಲಿ ನಮ್ಮ ರಫ್ತು ಪ್ರಮಾಣವನ್ನು ಹೆಚ್ಚಿಸಿಕೊಳ್ಳುವುದು ಸಾಧ್ಯವೇ? ಕೈಗಾರಿಕೋದ್ಯಮಿಗಳು ಈ ಬಗ್ಗೆ ವಿಚಾರಮಾಡಬೇಕು ಮತ್ತು ತಮ್ಮ ಕಾರ್ಮಿಕರಿಗೆ ತಿಳಿಸಬೇಕು.

ಇನ್ನು ನಮ್ಮ ಜಾತ್ಯತೀತ ಸಮಾಜ ಸ್ವರೂಪದ ಪ್ರಶ್ನೆ. ಹವಲ್ದಾರ್ ಅಬ್ದುಲ್ ಹಮೀದ್ ಮತ್ತು ಅಧ್ಯಕ್ಷ ಅಯೂಬ್ ಇವರಿಬ್ಬರೂ ಒಂದು ರೀತಿಯಲ್ಲಿ ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಹವಲ್ದಾರ್ ಅಬ್ದುಲ್ ಹಮೀದ್ ಕೊಟ್ಟ ಉತ್ತರದ ಬಗ್ಗೆ ನಮಗೆ ತುಂಬಾ ಅಭಿಮಾನವಿದೆ. ಈ ಬಗ್ಗೆ ನಾವು ಎಷ್ಟು ಹೆಮ್ಮೆಪಟ್ಟರೂ ಕಡಿಮೆ. ಈ ಯುದ್ಧವನ್ನು ಆರಂಭಿಸಿ ಅಧ್ಯಕ್ಷ ಅಯೂಬರು ಭಾರತದಲ್ಲಿರುವ ಮುಸಲ್ಮಾನರಿಗೆ ಅಪಚಾರವೆಸಗುತ್ತಿರುವರೇನೋ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿತ್ತು. ಆದರೆ ಸುದೈವ ವಶಾತ್ ಭಾರತೀಯರು ಈ ಪರೀಕ್ಷಾ ಸಮಯದಲ್ಲಿ ತುಂಬಾ ಪ್ರಶಂಸಾರ್ಹ ರೀತಿಯಲ್ಲಿ ವರ್ತಿಸಿಕೊಂಡು ಗಾಂಧೀಜಿ ನೆಹರೂ ಮತ್ತು ಮೌಲಾನಾ ಅಜಾದರು ಹಾಕಿಕೊಟ್ಟ ಉನ್ನತ ಮಾರ್ಗದಲ್ಲಿ ಭಾರತೀಯರು ನಡೆದು ತಮ್ಮ ದೇಶಬಾಂಧವರಾದ ಮುಸ್ಲಿಮರ ಬಗ್ಗೆ ಕಿಂಚಿತ್ತೂ ವೈಷಮ್ಯವನ್ನು ತೋರಲಿಲ್ಲ.

ನಮ್ಮ ಜಾತ್ಯತೀತ ಧೋರಣೆ ಇಂದಿನ ಆಧುನಿಕ ಜೀವನ ವಿಧಾನದಿಂದ ರೂಪುಗೊಂಡಿರುವ ಒಂದು ನೀತಿ. ಕೈಗಾರಿಕಾ ಕ್ರಾಂತಿಯಿಂದಾಗಿ ನಮ್ಮಲ್ಲಿ ಈ ಭಾವನೆ ಇನ್ನಷ್ಟು ದೃಢವಾಗಲು ಅವಕಾಶವಾಗಿದೆ. ಕೈಗಾರಿಕಾ ಕ್ರಾಂತಿಯ ಪ್ರಶ್ನೆ ಬಂದಾಗ ನಮ್ಮ ಗಮನ ಚೀಣ ಬೆಳೆಸಿಕೊಂಡಿರುವ ಶಕ್ತಿಯ ಕಡೆಗೆ ಹೋಗಬಹುದು. ಚೀಣಾ ಇಂದು ಎಂ.ಐ.ಜಿ. ೧೯ ವಿಮಾನಗಳನ್ನು ತಯಾರಿಸುವ ಮಟ್ಟದಲ್ಲಿದ್ದರೆ, ಭಾರತ ಎಂ. ಐ. ಜಿ. ೨೧ ವಿಮಾನಗಳನ್ನು ತಯಾರಿಸುವ ಮಟ್ಟದಲ್ಲಿದೆ. ನಮ್ಮ ಜಾತ್ಯತೀತ ಧೋರಣೆಯನ್ನು ಇನ್ನಷ್ಟು ಬೆಳೆಸಿಕೊಂಡು ಈ ಬಗ್ಗೆ ಒಂದು ಪರಿಪೂರ್ಣತೆಯ ಘಟ್ಟವನ್ನು ನಾವು ಮುಟ್ಟಬೇಕು.

ಯುದ್ಧದ ಕಾಲದಲ್ಲಿ ಎಷ್ಟೋ ಕೋಮುವಾರು ಕಿಂವದಂತಿಗಳು ದೇಶದಲ್ಲೆಲ್ಲಾ ಹರಡಿದುವು. ಇವುಗಳನ್ನು ಹರಡಿದವರ ಮನೋಭಾವವೂ ನಮಗೆ ತಿಳಿದಿತ್ತು. ಎಂದೇ ಇವುಗಳ ಉದ್ದೇಶ ಸಫಲವಾಗದೇ ಹೋಯಿತು. ಇವುಗಳೇನೇ ಇರಲಿ, ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಹಂಚಿಹೋಗಿರುವ ಕುಟುಂಬಗಳ ಪ್ರಶ್ನೆಯನ್ನು ನಾವು ಸಹಾನುಭೂತಿಯಿಂದ ನೋಡಬೇಕು.

ನಮ್ಮ ವಿದೇಶಾಂಗ ವ್ಯವಹಾರಗಳ ವಿಚಾರದಲ್ಲಿ ನಮ್ಮ ಒಂದು ಹೊಣೆಯಿದೆ. ಕಾಶ್ಮೀರದ ಬಗ್ಗೆ ಭಾರತ ಅನುಸರಿಸಿರುವ ನೀತಿಯ ಸಂಬಂಧವಾಗಿ ಹರಡಿಕೊಂಡಿರುವ ತಪ್ಪು ಅಭಿಪ್ರಾಯಗಳನ್ನು ನಾವು ತೊಡೆದು ಹಾಕಿ, ಪರರಾಷ್ಟ್ರ ದೇಶಗಳಲ್ಲಿ ಈ ಬಗ್ಗೆ ಸರಿಯಾದ ಒಂದು ವಿಚಾರ ಮೂಡುವಂತೆ ಮಾಡಬೇಕು. ಇದು ಕಾನೂನಿನ ಪ್ರಶ್ನೆಯಲ್ಲ. ಕಾನೂನು ನಮ್ಮ ಕಡೆಗಿದೆ ಎಂದಷ್ಟೇ ಹೊರಗಿನವರು ಹೇಳಿದರೆ ಸಾಲದು.

ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ನಮ್ಮ ರಾಷ್ಟ್ರನೀತಿ ರೂಪುಗೊಳ್ಳಬೇಕು. ಇಂಡೋನೇಷ್ಯಾದಲ್ಲಿ ಕಮ್ಯೂನಿಸ್ಟರಿಗಾಗಿರುವ ದುರ್ಗತಿ ಹಾಗೂ ಚೀಣಾಕ್ಕಾಗಿರುವ ಮುಖಭಂಗ ನೋಡಿದಾಗ ಭಾರತದ ದಾರಿ ಈಗ ಹೆಚ್ಚು ಸುಗಮವಾಗಿದೆ ಎಂದು ಹೇಳುವವರೂ ಇದ್ದಾರೆ. ಅದೇ ರೀತಿಯಲ್ಲಿ ಅಮೆರಿಕದ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನವು ದುರುಪಯೋಗಪಡಿಸಿಕೊಂಡು ಅಮೆರಿಕದ ನಿರೀಕ್ಷೆಯನ್ನು ಹುಸಿಮಾಡಿದೆ. ರಷ್ಯಾ ಮತ್ತು ಚೀಣಾಗಳ ಮಧ್ಯೆ ಬಿಕ್ಕಟ್ಟು ಬೆಳೆಯುತ್ತಲೇ ಇದೆ. ರೊಡೇಷಿಯಾದಲ್ಲಿ ಬ್ರಿಟನ್ ಮುಗ್ಗರಿಸುತ್ತಿದೆ. ಏಷ್ಯಾದಲ್ಲಿ ಸೋವಿಯತ್ ರಷ್ಯಾ ಮತ್ತು ಅಮೆರಿಕಾದ ನೀತಿ ಸಾಮ್ಯದ ಲಕ್ಷಣಗಳನ್ನು ತೋರಿಸುತ್ತಿದೆ. ಯೂರೋಪಿನಲ್ಲಿ ಅಮೆರಿಕಾ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳುವ ಯುಕ್ತಿಯ ಮಾರ್ಗಗಳನ್ನು ಹುಡುಕುತ್ತಿವೆ. ಇವುಗಳನ್ನೆಲ್ಲಾ ಗಮನಿಸಿ ಪರಿಸ್ಥಿತಿಗೆ ಹೊಂದಿಕೊಳ್ಳುವ ರೀತಿಯಲ್ಲಿ ನಾವು ನಮ್ಮ ನೀತಿಯನ್ನು ರೂಪಿಸಿಕೊಳ್ಳುವ ಹೊಣೆ ಕೂಡ ಮುಖ್ಯವಾಗಿದೆ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

## ನಾವೆಲ್ಲರೂ ಭಾರತೀಯರು ಇರಲಾರದು ಜಾತಿ

(ಏಳನೇ ಪುಟದಿಂದ)

ನೆಲೆವೀಡು' ಎಂದು ತಿಳಿಸಿದೆ ಐದೂವರೆ ಕೋಟಿ ಭಾರತೀಯ ಮುಸ್ಲಿಮರು ಭಾರತ ಒಕ್ಕೂಟದ ಗೌರವಾರ್ಹ ಪ್ರಜೆಗಳಾಗಿ, ನಾಗರಿಕರಾಗಿ ವರ್ತಿಸಿದ್ದಾರೆ.

ಭಾರತವು ಜಗತ್ತಿನ ಅತಿದೊಡ್ಡ ಪ್ರಜಾತಂತ್ರಗಳಲ್ಲಿ ಒಂದು. ನಮ್ಮ ಸಂವಿಧಾನ ಎಲ್ಲ ನಾಗರಿಕರಿಗೂ ಧಾರ್ಮಿಕ, ವಿಚಾರ ವಾಕ್ ಸ್ವಾತಂತ್ರ್ಯಗಳನ್ನು ನೀಡಿದೆ. ನಮ್ಮ ಪ್ರಜಾಪ್ರಭುತ್ವ ದಿನೇದಿನೇ ಬೆಳೆಯುತ್ತ ಬರುತ್ತಿದೆ. ಮತ ಭೇದಗಳು ತಲೆದೋರಿದರೂ ಸಾಮೂಹಿಕ ಸಂಕಲ್ಪದಲ್ಲಿ ಲೀನವಾಗುತ್ತವೆ. ಬಲಿಷ್ಠ ಸಂಪದ್ಭರಿತ ಭಾರತ ನಿರ್ಮಾಣ ಕಾರ್ಯದಲ್ಲಿ ಎಲ್ಲ ಜಾತಿಮತ ಪಂಥಗಳ ಜನರು ಅತ್ಯಧಿಕ ಹುಮ್ಮಸ್ಸಿನಿಂದ ಭಾಗವಹಿಸಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಕಂಡು ಬರುವ ಈ ವೈವಿಧ್ಯ ನಮ್ಮ ಪ್ರಜಾಪ್ರಭುತ್ವ ಪರಂಪರೆಗೆ ಮೆರಗು ಕೊಟ್ಟಿದೆ.

ಪ್ರಜಾಪ್ರಭುತ್ವಕ್ಕೆ ಅಂಜಿ ಸರ್ವಾಧಿಕಾರದತ್ತ ಓಡಿರುವ, ತನ್ನ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ನಿರಾಕರಿಸುವ ಪಾಕ್ ಆಡಳಿತಗಾರರು ಭಾರತವನ್ನು ತಪ್ಪಾಗಿ ತಿಳಿದುಕೊಂಡರು. ಅವರ ದೃಷ್ಟಿ ದೋಷವಿತ್ತು, ಅಂತೆಯೇ ಅವರು ಜಾರಿ ಮುಗ್ಗರಿಸಿ ಬಿದ್ದರು.

ಹಿಂದುವಿರಲಿ, ಮುಸ್ಲಿಮನಿರಲಿ, ಕ್ರೈಸ್ತನಿರಲಿ, ಸಿಕ್ಖನಿರಲಿ, ಪಾರ್ಸಿಯಿರಲಿ, ಜೈನನಿರಲಿ, ಇನ್ಯಾವುದೇ ಮತಾವಲಂಬಿಯಾಗಿರಲಿ—ಅದು ನಮಗೆ ದೊಡ್ಡದಲ್ಲ. ಅವರವರ ಧರ್ಮ — ಸಂಪ್ರದಾಯಗಳು ಅವರವರಿಗೆ ದೊಡ್ಡವು. ಆದರೆ, ಇವು ನಾವೆಲ್ಲರೂ ಭಾರತೀಯರು, ಭಾರತೀಯ ರಾಷ್ಟ್ರ ಪುರುಷನ ವಿವಿಧ ಅಂಗಗಳು ಎಂಬ ನಮ್ಮ ಅಚಲ ತಿಳುವಳಿಕೆಗೆ ಭಂಗ ತರಲಾರವು.

ನಾವೆಲ್ಲರೂ ಒಂದೇ—ಭಾರತೀಯರು, ಪ್ರಜಾತಂತ್ರವಾದಿಗಳು, ಸ್ವಾತಂತ್ರ್ಯ ಪ್ರೇಮಿಗಳು, ಸುಸಂಸ್ಕೃತ ನಾಗರಿಕ ಮಾನವರು. ಪಾಕ್ ಅಂಥರ ಮೋಸದ ಬಲೆಗೆ ನಾವೆಂದೂ ಬಲಿಯಾಗಲಾರೆವು.

ಜೈ ಹಿಂದ್

## ಮೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕೋತ್ಸವ

ಮುಂಬಯಿ, ಮಂಡಳಿಯ ೬೨ನೇ ವಾರ್ಷಿಕೋತ್ಸವವೂ ಮೊಗವೀರ ರಾತ್ರಿ ಶಾಲೆಯ ಪಾರಿತೋಷಕ ವಿತರಣಾ ಸಮಾರಂಭವೂ ತಾ. 24.10.65ರಂದು ಸರ್ ಸಿ. ಜೆ. ಹಾಲಿನಲ್ಲಿ ಶ್ರೀ ವಿ. ಕೆ. ಕೃಷ್ಣಮೆನನ್, ಎಂ. ಪಿ., ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮೊಗವೀರ ಗಾರ್ಡ್ಸ್ ಮತ್ತು ಸ್ಕೌಟ್ ದಳದವರಿಂದ ಮೆರವಣಿಗೆಯೊಂದಿಗೆ ಸಭಾಸದನವನ್ನು ಪ್ರವೇಶಿಸಿದ ಶ್ರೀ ಕೃಷ್ಣಮೆನನರಿಗೆ ಕಿಕ್ಕಿರಿದ ಜನಸಂದಣಿ ಪ್ರಚಂಡ ಕರತಾಡನದೊಂದಿಗೆ ಸ್ವಾಗತವನ್ನು ಬಯಸಿತು.

ಮಂಡಳಿಯ ಅಧ್ಯಕ್ಷ ಶ್ರೀ ಎಸ್. ಸಿ. ಪಡುಬಿದ್ರಿಯವರು ಸ್ವಾಗತ ಭಾಷಣ ಮಾಡುತ್ತಾ ಶ್ರೀ ಮೆನನರ ಜೀವನದ ಸಂಕ್ಷಿಪ್ತ ಪರಿಚಯವನ್ನು ಸಭಿಕರಿಗೆ ಮಾಡಿದರು. ಜೊತೆ ಕಾರ್ಯದರ್ಶಿ ಶ್ರೀ ಟಿ. ಜಿ. ಕರ್ಕೇರರು ಸಂದೇಶ ವಾಚನವನ್ನೂ ಜೊತೆ ಕೋಶಾಧಿಕಾರಿ ಶ್ರೀ ಡಿ. ಎಚ್. ಕುಂದರರು ಮಂಡಳಿಯ ಹೊಸ ಸದಸ್ಯರ ಮತ್ತು ಧನ ಸಹಾಯವಿತ್ತವರ ಹೆಸರನ್ನು ಓದಿಹೇಳಿದರು.

ಬಹುಮಾನ ವಿತರಣೆಯ ನಂತರ ಶ್ರೀಗಳಾದ ಜಿ. ಎನ್. ವೈದ್ಯ, ಶ್ರೀ ಕೆ. ಎನ್. ದಾರಿಯಾ ಮತ್ತು ಶ್ರೀ ಹಿಮ್ಮತ ಸಿನ್ಹಜಿ, ಮೊದಲಾದವರು ಮಂಡಳಿಯ ಸಮಾಜ ಸೇವೆಯ ಕಾರ್ಯಗಳ ವಿಷಯವಾಗಿಯೂ, ಶ್ರೀ ಮೆನನರ ರಾಜಕೀಯ ವ್ಯಕ್ತಿತ್ವದ ವಿಷಯವಾಗಿಯೂ ಸಮಯೋಚಿತ ಭಾಷಣ ಮಾಡಿದರು.

ಅಧ್ಯಕ್ಷ ಭಾಷಣದಲ್ಲಿ ಶ್ರೀ ಮೆನನರು ಮಾತನಾಡುತ್ತಾ, "ಅಮೇರಿಕಾ ಮತ್ತು ಬ್ರಿಟನ್ ಪಾಕಿಸ್ತಾನಕ್ಕೆ ಸಹಾಯ ಕೊಡುವುದು ಭಾರತಕ್ಕೆ ವಿರುದ್ಧವಾಗಿದೆ. ಆ ರಾಷ್ಟ್ರಗಳು ಪಾಕಿಸ್ತಾನದೊಡನೆ ತಮ್ಮ ಸಂಬಂಧವನ್ನು ರದ್ದುಗೊಳಿಸಬೇಕೆಂದೂ, ತಮ್ಮ ಮಧ್ಯದಿಂದ ಪಾಕಿಸ್ತಾನವನ್ನು ದೂರೀಕರಿಸಬೇಕೆ"ಂದೂ ಅವರು ಕೇಳಿಕೊಂಡರು.

ತಾಟಸ್ಥ್ಯ ಧೋರಣೆಯು ಭಾರತದ ವಿದೇಶಾಂಗ ನೀತಿಯಲ್ಲ. ಅದು ವಿಶ್ವಶಾಂತಿ ಮತ್ತು ವಿಶ್ವಬಂಧುತ್ವದ ಗುರಿ. ಭಾರತ ಮಹಾ ಆಯುಧಗಳಿಂದ ಎಂದೂ ಜಯಿಸಲ್ಪಡಲಿಲ್ಲ. ಆದರೆ ಆಂತರಿಕ ಅವ್ಯವಸ್ಥೆಯಿಂದಲೇ ಅನೇಕ ಸಲ ಸೋತಿದೆ.

ಪರಸ್ಪರ ಭೇದಭಾವವನ್ನು ತೋರಿಸದೆ ಭಾರತವು ಒಂದು; ಅದು ಸದಾ ಒಗ್ಗಟ್ಟಾಗಿದೆಯೆಂದು ಹೊರರಾಷ್ಟ್ರಗಳಿಗೆ ತೋರಿಸಬೇಕೆಂದೇ ಭಾರತೀಯ ಇತಿಹಾಸ ನಮಗೆ ಕಲಿಸಿದ ಪಾಠ.

ಭಾರತಕ್ಕೆ ಮಿತ್ರರಾರೂ ಇಲ್ಲವೆಂಬುವುದು ನಿಜವಲ್ಲ; ಅದು ಸ್ವಾಭಾವಿಕವೂ ಅಲ್ಲ; ರಾಜನೀತಿಜ್ಞತೆಯೂ ಅಲ್ಲ ಮತ್ತು ಗೌರವಯುತವೂ ಅಲ್ಲ. ಜನರು ಮಿತ್ರರ ಮತ್ತು ಸಹಾಯಕರೊಳಗೆ ವ್ಯತ್ಯಾಸವನ್ನು ಸ್ಮರಿಸಬೇಕು. ಭಾರತ ಪರಾವಲಂಬಿಯಾಗಿರಲು ಸಾಧ್ಯವಿಲ್ಲ. ಅದರ ಪರಾವಲಂಬನೆಯೇ ಭಾರತೀಯ ಸ್ವಾತಂತ್ರ್ಯದ ಅಂತ್ಯವೆಂದು ತಿಳಿಯಬೇಕು.

ಭಾರತ ಕಾಶ್ಮೀರದ ಕುರಿತು ಪಾಕಿಸ್ತಾನದೊಡನೆ ಯಾವ ಪರಿಸ್ಥಿತಿಯಲ್ಲಿಯೂ ಎಂದೂ ಚರ್ಚಿಸಲಿಕ್ಕಿಲ್ಲ. ಅದರ ಜನರು ಶಾಂತ ರೀತಿಯಿಂದ ಕಾಶ್ಮೀರದಿಂದ ಹೊರಹೋಗಬೇಕು ಎಂದು ಮುಂತಾಗಿ ಸುದೀರ್ಘ ಭಾಷಣ ವನ್ನಿತ್ತರು.

ಶ್ರೀ ಜಿ. ಕೆ. ಕರ್ಕೇರರಿಂದ ಉಪಕಾರ ಸ್ಮರಣೆಯಾದ ನಂತರ "ಶ್ರೀ ನಾರಾಯಣಗುರು ಸ್ವಾಮಿ ಯಕ್ಷಗಾನ ಮಂಡಳಿ"ಯವರಿಂದ "ರತಿ ಕಲ್ಯಾಣ"ವೆಂಬ ಯಕ್ಷಗಾನ ಬಯಲಾಟವೂ, ನೃತ್ಯ ಮತ್ತು ಇತರ ವಿನೋದಾವಳಿಯಾಗಿ, ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

**READ &**
**ADVERTISE IN**
**NAVAYUGA WEEKLY**

## ಖಗೋಲ ಶಾಸ್ತ್ರ ಬೆಳೆದು ಬಂದ ರೀತಿ

(ಆರನೇ ಪುಟದಿಂದ)

ತ್ವ ನಡೆಸುತ್ತಿದ್ದ ಪೂಜಾರಿ ವರ್ಗ ವಿಜ್ಞಾನಿಗಳಿಗೆ ಕೊಟ್ಟ ಯಾತನೆ. ಅಷ್ಟಿಷ್ಟಲ್ಲ.

ಅಲೆಕ್ಸಾಂಡ್ರಿಯಾದ ವಾಚನಾಲಯದಲ್ಲಿದ್ದ ಅನೇಕ ತತ್ವ ಜ್ಞಾನಿಗಳ ಕೈ ಬರಹದ ಹೊತ್ತಗೆಗಳನ್ನು ಚರ್ಚಿನ ಅಧಿಕಾರಿಗಳು ಹಿಂದು ಮುಂದು ವಿಚಾರ ಮಾಡದೆ ಸುಡಿಸಿ ಬಿಟ್ಟರು.

ಕೋಪರ್ನಿಕಸನ ವಾದವನ್ನೆ, ಮುಂದುವರಿಸಿದ ಗೆಲಿಲಿಯೋ ಭೂಮಿಯು ಗೋಲಾಕಾರವಾಗಿದೆ, ಎಂಬುದನ್ನು ಸ್ಪಷ್ಟಪಡಿಸಿದನು. ಇವನು ಕಂಡು ಹಿಡಿದ ದೂರದರ್ಶಿ ಖಗೋಳ ಶಾಸ್ತ್ರದಲ್ಲಿ ವೈಭೋಗಲಕ್ಷ್ಮಿಯಾಯಿತು. ಅಲ್ಲಿಯ ವರೆಗೆ ಬರಿ ಕಣ್ಣಿನಿಂದ ನಕ್ಷತ್ರ ಸೂರ್ಯ ಚಂದ್ರರನ್ನು ನೋಡಲಾಗುತ್ತಿತ್ತು. ಆದರೆ ಪೂರ್ಣವಾದ ಪರಿಚಯ ಆಗುತ್ತಿರಲಿಲ್ಲ. ದೂರದರ್ಶಿಯಿಂದ ನೋಡಿದಾಗ, ಚಂದ್ರನಲ್ಲಿಯ ಏರಿಳಿತಗಳು ಕಂಡವು, ನಕ್ಷತ್ರಗಳು ದೊಡ್ಡದಾಗಿ ಕಂಡುದುದರಿಂದ ಅವುಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ಅನುಕೂಲವಾಯಿತು. ಕೊನೆಗೂ, ಈ ಸತ್ಯ ಶೋಧಕನನ್ನು ಚರ್ಚ ಕೋರ್ಟಿಗೆಳೆಯಿತು. ತನ್ನ ಹಿಂದಿನವರಿಗೆ ಕೊಟ್ಟ ಅಪಮಾನದ ಹಿಂಸೆಯನ್ನು ಗೆಲಿಲಿಯೋ ಮರೆತಿರಲಿಲ್ಲ. ಕಾರಣ, ಭೂಮಿ ಗುಂಡಗಿಲ್ಲ ಎಂದು, ನ್ಯಾಯಾಲಯದಲ್ಲಿ ಹೇಳಿದ. ಆದರೂ ಚರ್ಚಿನ ಅಡೆತಡೆಗಳು ಬಹು ದಿನ ಉಳಿಯಲಿಲ್ಲ. ಜನರಿಗೆ ಜ್ಞಾನದ ಪಿಪಾಸೆ ಹೆಚ್ಚಾಯಿತು. ಗೆಲಿಲಿಯೋನ ನಂತರದವರು ದೂರದರ್ಶಿಯನ್ನು ಇನ್ನೂ ಉತ್ತಮಗೊಳಿಸಿದರು. ಇಂದು ಅಮೇರಿಕದ ವಿಜ್ಞಾನಿಗಳು ೨೦೦ ಅಂಗುಲ ವ್ಯಾಸವುಳ್ಳ ಸುಮಾರು ೪೦ ಮೈಲು ದೂರದಲ್ಲಿರುವ ಮೇಣದ ಬತ್ತಿಯ ಬೆಳಕನ್ನು ಕಾಣ ಬಹುದಾದ ದೂರದರ್ಶಿಯನ್ನು ನಿರ್ಮಿಸಿದ್ದಾರೆ. ಗಗನದ ಅನೇಕ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬಹುದು.

ಹತ್ತೊಂಬತ್ತನೆ ಶತಮಾನ, ಯುಗದ ಆರಂಭವನ್ನ ಬಹುದು. ಹಕ್ಕಿಯಂತೆ ಗಗನದಲ್ಲಿ ಹಾರಾಡಲು ಮಾನವ ವಿಮಾನವನ್ನು ಕಂಡುಹಿಡಿದ, ಮೀನಿನಂತೆ ನೀರಿನಲ್ಲಿ ಈಜಲು, ಉಗಿಹಡಗು ಪ್ರಾರಂಭವಾಯಿತು. ಇವುಗಳ ಹಿಂದೆ ಖಗೋಲ ಜ್ಞಾನ ಅವ್ಯಕ್ತವಾಗಿ ಅಡಗಿದೆ.

ಮಾನವನ ಪ್ರಯತ್ನ ಆಕಾಶದ ಎರಿಗೆ ಎನ್ನುವ ಪರಿಮಿತಿ ಒಂದು ಕಾಲದಲ್ಲಿತ್ತು, ಇಂದು ಅವನು ಅದನ್ನು ಮೀರಿ, ಗಗನದ ಆಗುಹೋಗುಗಳ ಪರಿಚಯ ಮಾಡಿಕೊಳ್ಳುತಿದ್ದಾನೆ. ವಿಜ್ಞಾನದಲ್ಲಿ ಮುಂದುವರಿದ ರಷ್ಯ ಅಮೇರಿಕಾಗಳು ಚಂದ್ರ ಲೋಕವನ್ನು ಸುತ್ತಾಡಿ ಬಂದಿವೆ. ಅನೇಕ ಗ್ರಹಗಳಿಗೆ ಪ್ರಯಾಣ ಮಾಡುವವರಿದ್ದಾರೆ. ಪ್ರಥಮವಾಗಿ ರಷ್ಯಾದವರು ಗಗನ ವಿಹಾರಿಗಳಾದರು. ಇನ್ನೂ ಹೆಚ್ಚಿನ ಸಂಶೋಧನೆ ರಷ್ಯಾದಲ್ಲಿ ಗಗನದ ಬಗ್ಗೆ ನಡೆದಿದೆ. ಚಂದ್ರಲೋಕದಲ್ಲಿ ಮನೆ ಮಾಡಬೇಕೆನ್ನುವ ಮನುಷ್ಯನ ಆಶೆ ಈಡೇರಿದರೂ ಆಶ್ಚರ್ಯವಿಲ್ಲ.

ಸತ್ಯ ಸೂರ್ಯನನ್ನು ಎಷ್ಟು ಮುಚ್ಚಿಟ್ಟರೂ ಮತ್ತೆ ಮತ್ತೆ ಹೊರ ಬರುವದು ಖಂಡಿತ ಎನ್ನುವದು ಖಗೋಲ ವಿಜ್ಞಾನದ ಆದಿ, ಅಂತ್ಯಗಳನ್ನು ಗಮನಿಸಿದರೆ ಕಾಣದಿರಲಾರದು.

---

## ಪ್ರಾಚೀನ ಲೇಖನ ಸಾಮಗ್ರಿಗಳು

(ಐದನೇ ಪುಟದಿಂದ)

ಮೌಲ್ಯ ವಸ್ತುಗಳನ್ನು ನೆಲದಲ್ಲಿ ಹೂಳುವುದು ಭಾರತೀಯರಲ್ಲಿ ಬೆಳೆದು ಬಂದ ವಿಶಿಷ್ಟ ಸಂಪ್ರದಾಯ. ಅಂತಹ ಅನೇಕ ಶಾಸನಗಳು, ಗ್ರಂಥಗಳು ಭೂಗರ್ಭದಲ್ಲಿ ಅದೆಷ್ಟು ಅಡಗಿವೆಯೋ? ಅಮೌಲ್ಯ ಆಕೃತಿಗಳನ್ನು ಉಳಿಸಿಕೊಳ್ಳುವ ಸಂಪ್ರದಾಯ, ಕಾಪಾಡುವ ಶ್ರದ್ಧೆಯೂ ಭಾರತೀಯರಿಗೆ ಕಡಿಮೆ, ಈ ಕಾರಣದಿಂದಲೇ ಎಣಿಕೆಗೆ ನಿಲುಕದಷ್ಟು ಶಿಲಾಶಾಸನಗಳೂ ತಾಮ್ರಪಟ್ಟಗಳೂ, ಸಂಸ್ಕೃತಿಯ ಕುರುಹುಗಳು, ಸುವರ್ಣ ರಜತ ಮೋಹಕ ಮೂರ್ತಿಗಳು ನಾಮಾವಶೇಷವಾದುವು.

ತಕ್ಷಶಿಲೆಯ ಗಂಗೂ ಎಂಬ ಸ್ತೂಪದಲ್ಲಿ ಖರೋಷ್ಠಿ ಲಿಪಿಯಲ್ಲಿ ಬರೆದ ಒಂದು ಚಿನ್ನದ ತಗಡು ಮತ್ತು ಭಟ್ಟಿಪ್ರೊಲೋಹ ಸ್ತೂಪದಿಂದ ಬೆಳ್ಳಿಯ ತಗಡು ದೊರೆತಿರುವುದರಿಂದ ಭಾರತೀಯ ಶಿಲೆಯಂತೆಯೇ ಚಿನ್ನ, ಬೆಳ್ಳಿ ಮತ್ತು ತಾಮ್ರಗಳನ್ನು ಬಳಸುತ್ತಿದ್ದರು ಎಂದು ಗೊತ್ತಾಗುತ್ತದೆ.

ಚಿನ್ನ, ಬಳ್ಳಿ ಮತ್ತು ತಾಮ್ರದ ತಗಡುಗಳ ಮೇಲೆ ಬೃಹತ್ ಗ್ರಂಥಗಳನ್ನು ಚಿಕ್ಕವಾದರೂ ಅವುಗಳನ್ನು ಬಳಸಿಕೊಂಡು ರಚಿಸಿರುವ ಶಾಸನಗಳ ಸಂಖ್ಯೆ ಕಡಿಮೆಯೇನಲ್ಲ. ಚಿನ್ನ ಮತ್ತು ಬೆಳ್ಳಿಯ ತಗಡುಗಳ ಮೇಲೆ ವಿಶೇಷವಾಗಿ ಸ್ತೋತ್ರಗಳನ್ನು ರಚಿಸಿರುತ್ತಿದ್ದರು ಎಂಬುದು ವಿಶೇಷ ಸಂಗತಿ.

ಸತ್ಯ, ಸೌಂದರ್ಯಗಳ ಬೆಳಕನ್ನು ಜನತೆಗಕ್ಕ ಬೀರುವ ಶಿಲೆ, ಸುವರ್ಣ, ರಜತ, ತಾಮ್ರ ಶಾಸನಗಳ ಸಂದೇಶ ಭಾರತದ ಗತ ಸಂಸ್ಕೃತಿಯ ಸಂಕೇತ.

---

## ಭಾವ—ಬಳ್ಳಿ

ಭಾವ ಬಳ್ಳಿ ಪುಷ್ಪ ಬಿಟ್ಟು  
ನಿಂತಿತೆನ್ನ ದೇಹದಿ!  
ಬರಡು ಮನದ ನೆಲದ ಮೇಲೆ  
ಕಂಪು ತುಂಬಿ ನೇಹದಿ. ‖ ೧ ‖

ಎಲ್ಲಿ ಜಡದಿ ಸಾಗುತಿರಲು  
ಕಂಡಿತೆನ್ನ ಮರುಕದಿ?  
ಮೌನದಲ್ಲಿ ಅಪ್ಪಿ—ಸೆಳೆದು  
ಕಳೆಯಿತೆನ್ನ ಬೇಗುದಿ! ‖ ೨ ‖

ಯಾವ ಬಿತ್ತು ಎಲ್ಲಿ ಬಿತ್ತೋ?  
ತಿಳಿಯದೆನ್ನ ಮನಸಿನ—  
ಭಾವ ಮೊಗ್ಗ ನೊಡೆಯುತಿರಲು  
ಸುಖವ ಕಂಡೆ ಕನಸಿನ! ‖ ೩ ‖

ನಾನು ನೀರನೆರೆಯಲಿಲ್ಲ  
ಆದರದುವೆ ನೆರೆಯಿತು!  
ತಾನು, ಕಡಲ, ಬಾನಿನೊಡಲ-  
ನೊಲವೆಯ ತೋರೆ ಕರೆಯಿತು! ‖ ೪ ‖

ಎದೆಯ ತಿದಿಯ ಚೀಲದಲ್ಲಿ  
ಏನೋ ರಸವ ತುಂಬಿಸಿ  
'ಬಾರೋ ಹುಡುಗ; ನೋಡು ಬೆಡಗ!'  
ಎನುತಲಿತ್ತು ನಂಬಿಸಿ! ‖ ೫ ‖

ಪುಷ್ಪ ದಳದ ಬಿರಿಯೆ ನನ್ನ  
ಹೃದಯದಲ್ಲಿ ಹೊಸಬಗೆ  
ವಿಶ್ವದಲ್ಲೆ ಕಾಣದಂಥ  
ಸೊಗಸಾದ-ಮೊಗದ ತಿಳಿನಗೆ! ‖ ೬ ‖

ಅದರ ಕಂಪು ಮನಕೆ ತಂಪು  
ದೇಹಕೊಂದು ಹೊಂಬುಳಿ!  
ನುಡಿಯಲರಿಯದಂಥ ನುಣ್ಪು  
ಮರೆಯೆನದರ ಕಚಗುಳಿ! ‖ ೭ ‖

ಒರಟು ನೆಲದಿ ಪಥವ ತಪ್ಪಿ  
ಸಾಗುತಿದ್ದ ಜೀವಕೆ  
ದಾರಿ ತೋರಿ, ನಗುವ ಬೀರಿ  
ನಾನು ಮಣಿಯ ಕುಸುಮಕೆ! ‖ ೮ ‖

ಪುಷ್ಪದಳ ದೊಳೈಕ್ಯವಾಗ  
ಬೇಕು ಭಾವ ಸುಂದರಂ!  
ಯಾವ ಸೊಗವು ಬೇಡ ನನಗೆ  
ಸಾಕು ಇದುವೆ! ಬಂಧುರಂ! ‖ ೯ ‖

—ಶ್ರೀ ಎನ್. ಕೃಷ್ಣ ಮುಖಾರಿ.

---

## ಭಾರತದ ವೀರ

— ೧ —

ಒಮ್ಮೆ ಭಾರತ ಭೂಮಿಯನು ಕಬಳಿಸಿದ  
ಚೀನ!  
ರಿನ್ನೊಮ್ಮೆ ಬಂದರೋ ದೊಡ್ಡ  
ದಾಟಿಯಲಿ!  
ಆ ಮೊದಲು ಸೋದರತೆಯೊಂತ  
ಪಾಕಿಸ್ತಾನಿ!  
ವೈಮನಸ್ಯದ ತಾಳಿ ಮುಂಪಾತ್ತಿತಲ್ಲಿ ‖

— ೨ —

ಇಂತು ಭಯ ವೈರಿ ಬಲ ಕಬಳಿಸಲು  
ತಮ್ಮ ನೆಲ!  
ಪುಂಕೆಳಸಿರುವುದು ತರವಲ್ಲೆಂದು ಬಗೆದು!  
ಸಂತತವು ಹೋರಾಟವೆಸಗಿ  
!  
ಹಿಮ್ಮೆಟ್ಟಿಸುತ  
ಚಿಂತೆಯಿಲ್ಲದೆ ಯೋಧರಲ್ಲಿ ಕಾದಿದರು ‖

— ೩ —

ಈ ಉಭಯ ಕಾಳಗದಿ ಹಲವು ವೀರರು  
ತೀರಿ!  
ತಾಯ್ನೆಲದ ಋಣವ ಪರಿಹರಿಸಿಕೊಂಡು!  
ವೀರಸ್ವರ್ಗವನೇರಿ ನೋಡುತಿಹರಲ್ಲಿದ್ದ!  
ವೀರರೆವ ಪಂಕ್ತಿನ್ನು ಕಾದುತಿಹರೆಂದು ‖

— ೪ —

ಭಾರತದ ಪ್ರಾಚೀನ ಚಾರಿತ್ರಿಕಾಭ್ಯಾಸ!  
ಸಾರಿ ಕೊಳ್ಳುತ್ತೈಸೆ ಧರ್ಮಪಥವೆಂದು!  
ಸೇರಿ ಬಹ ಸನ್ಮಿತ್ರರಾಷ್ಟ್ರಗಳ ಬೆಂಬಲವ!  
ಹಾರೈಸಿಕೊಳ್ಳುವುದಲ್ಲದೆ, ಅಂಜಲುಂಟೆ? ‖

— ೫ —

ಹಲವು ಮತ ಧರ್ಮಗಳ ನೆಲೆಯಾದ  
ಸಿರಿತಾಣ!  
ಏದರ ನಿಲುವಲ್ಲೇನು ಕುಂದಪ್ಪುದೆ?!  
ಹಲವು ವರುಷದ ಹಿರಿಮೆಗರಿಮೆ  
ಗಳನುಳಿಸುತ್ತ!  
ಪರರ ದಾಸ್ಯದ ಬಲಿಗೆ ತುತ್ತಾಗದಂತೆ ‖

— ೬ —

ಭಾರತದ ವೀರ ರಣರಂಗದಲಿ  
ಹೋರಾಡಿ  
ನಾರತರದಸ್ತ್ರಗಳ ಸುರಿಮಳೆಯ ಸೂಸಿ!  
"ವೀರಭೋಜ್ಯಾ ವಸುಂಧರಾ"  
ನೀತಿ ರೀತಿಯನು!  
ಸಾರುವನು ಪೌರುಷದಿ  
ದೈವಕೃಪೆಯಿಂದ ‖

ಶ್ರೀ ಕೆ. ವೆಂಕಟರಾಯಾಚಾರ್ಯ,  
ಸುರತ್ಕಲ್ಲು.

---


ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ.

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ  
● ಮೆಳ್ಳಗಣ್ಣಿನ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ  
ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು  
● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು


---

### ರಾಷ್ಟ್ರೀಯ ರಕ್ಷಣಾ ನಿಧಿಗೆ ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಕೊಡುಗೆ

ತಾ 30-10-1965ರಂದು ಡಾ| ವೈ. ಆರ್. ಶೆಟ್ರಿ ಅಧ್ಯಕ್ಷತೆಯಲ್ಲಿ ಜರಗಿದ ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯಿಸಿದಂತೆ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ. 101-00 ಯನ್ನು ಕಳುಹಿಸಿರುವುದಾಗಿ ಕಾರ್ಯದರ್ಶಿ ಶ್ರೀ ಕೆ. ವಾಸುದೇವ ಶೆಟ್ರಿ ತಿಳಿಸುತ್ತಾರೆ.

### ಗೋಪೂಜೆ

# ಗಾವೋ ವಿಶ್ವಸ್ಯ ಮಾತರಃ

ಬರೆದವರು: — ಶ್ರೀ. ಕೆ. ಪೂವಪ್ಪ, ಪೊಲಿಪು, ಕಾಪು

ಸನಾತನ ಹಿಂದೂ ಸಂಸ್ಕೃತಿಯಲ್ಲಿ ಹಾಗೂ ಭಾರತೀಯ ಧಾರ್ಮಿಕ ಹಬ್ಬಗಳಲ್ಲಿ ದೀಪಾವಳಿಯು ಒಂದು ವಿಶೇಷವಾದ ಹಬ್ಬವಾಗಿದೆ. ಗೋಪೂಜೆಯು ಆ ೩ ದಿನಗಳ ಹಬ್ಬಗಳ ಪೈಕಿ ಒಂದು ದಿನದ ಹಬ್ಬವಾಗಿ ಗೋಮಾತೆಯ ಪೂಜ್ಯತೆ ಹಾಗೂ ವೈಶಿಷ್ಟ್ಯತೆಯನ್ನು ಹೊಂದಿಕೊಂಡಿರುತ್ತದೆ. ಆ ದಿನ ಗೋವನ್ನು ಸ್ನಾನ ಮಾಡಿಸಿ ಅಲಂಕರಿಸಿ ಪೂಜಿಸುವ ಕ್ರಮವು ಹಿಂದೂ ಸಂಸ್ಕೃತಿಯಲ್ಲಿ ಪಾರಂಪರ್ಯವಾಗಿ ನಡೆದುಕೊಂಡು ಬಂದಿದೆ. ಕೆಲವು ಕಡೆಗಳಲ್ಲಿ ಸಂಭ್ರಮದಿಂದ ಮೆರವಣಿಗೆ ಮಾಡಿಸುವ ಕ್ರಮವೂ ಇದೆ.

ಗೋವಿನ ವಿಶೇಷತೆ ಹಾಗೂ ಧಾರ್ಮಿಕ ಹಿನ್ನಲೆಯ ಕುರಿತು ಸ್ವಲ್ಪ ವಿಚಾರಿಸುವ. ಗೋವು ವಿಶ್ವದ ತಾಯಿಯಾಗಿದೆ ಎಂಬುದನ್ನು ಶ್ಲೋಕಾಧಾರದಿಂದ ತಿಳಿಯಬಹುದು. ಬಲರಾಮನು ಯುದ್ಧಕ್ಕೆ ಹೋಗುವಾಗ ಎದುರಿಗೆ ಇದ್ದ ಒಂದು ದನದ ಬೆನ್ನನ್ನು ತಟ್ಟಿದಾಗ ಅದು ಸತ್ತು ಹೋದರೂ ಅದರಿಂದ ವ್ಯಾಕುಲಗೊಂಡ ಬಲರಾಮನು ಈ ಗೋಹತ್ಯಾ ದೋಷ ನಿವಾರಣೆಗಾಗಿ ಶ್ರೀಕೃಷ್ಣನ ಆದೇಶದಂತೆ ಭೂಪ್ರದಕ್ಷಿಣೆಗೆ ಹೊರಟ ಉಲ್ಲೇಖವು ಮಹಾಭಾರತದಲ್ಲಿದೆ. ವೇದ ಶಾಸ್ತ್ರಗಳು ಗೋಹತ್ಯವನ್ನು ಕಟುವಾಗಿ ವಿರೋಧಿಸಿ ಅವುಗಳನ್ನು ಪೂಜ್ಯ ಭಾವನೆಯಿಂದ ಕಾಣಬೇಕೆಂಬುದಾಗಿ ತಿಳಿಸಿವೆ. |ಅಂತಕೋ ಯೋ ಗೋಘಾತಂ| ಎಂಬಂತೆ ಗೋಹತ್ಯ ಮಾಡಿದವನಿಗೆ ಪ್ರಾಣ ದಂಡನೆಯೂ ಕೂಡ ವಿಧಿಸಲ್ಪಡಬಹುದು ಎಂಬುದಾಗಿ ಹೇಳಿದೆ. ಗಜಾಯುರ್ವೇದ, ಅಶ್ವಾಯುರ್ವೇದ ಇವುಗಳಿದ್ದಂತೆ ಗವಾಯುರ್ವೇದವೂ ಇದ್ದು ಇದರ ಸಂರಕ್ಷಣೆಯು ಪುರಾತನ ಕಾಲದಲ್ಲಿ ಸುಭದ್ರವಾಗಿ ವ್ಯವಸ್ಥಿತವಾಗಿತ್ತು. ಆದ್ದರಿಂದಲೇ ಅಂದಿನ ಕಾಲದಲ್ಲಿ ಭಾರತವು ಗೋಧಾನ್ಯ ಸಂಪತ್ತಿನಿಂದ ಜಗತ್ತಿನಲ್ಲೇ ಉನ್ನತ ಸ್ಥಾನವನ್ನು ಪಡೆದಿತ್ತು. ಯಜ್ಞಯಾಗಾದಿ ಮತ್ತು ದೇವತಾರ್ಚನೇ ಇತ್ಯಾದಿ ಧಾರ್ಮಿಕ ಕಾರ್ಯಗಳಲ್ಲಿ ಗೊಕ್ಷೀರವು ಪ್ರಾಧಾನವಾಗಿ ಉಪಯೋಗಿಸಲ್ಪಡುತ್ತಿದೆ. ಮಾತ್ರವಲ್ಲ ಗೋಪೂಜೆಯನ್ನು ನಿತ್ಯವೂ ಭಾರತೀಯರಲ್ಲಿ ಆಚರಿಸಲ್ಪಟ್ಟು ಗೋಗ್ರಾಸ ಎಂಬ ತುತ್ತನ್ನು ಭೋಜನದ ಮೊದಲು ಶ್ರೀಕೃಷ್ಣನಿಗೆ ಪ್ರೀತಿಯರ್ಥವಾಗಿ ಅರ್ಪಿಸುವ ಸಂಪ್ರದಾಯವು ಈಗಲೂ ಇದೆ.

ಇನ್ನು ಸಾಮಾಜಿಕ ದೃಷ್ಟಿಯಿಂದ ಹೇಳುವುದಾದರೆ ಸರ್ವ ಜಾತಿಮತಸ್ಥರೂ ಇದರ ಪ್ರಯೋಜನವನ್ನು ಪಡೆಯುತ್ತಾರೆ. ಗೋಮಯದಿಂದ ಗೃಹಶುದ್ಧಿಯನ್ನು ಮಾಡುವುದು ನಾವು ಅರಿತ ವಿಷಯ. ಇದರ ಹಾಲು ಪಿದೋಷಯುಕ್ತವಾಗಿ ಅತಿ ಪುಷ್ಟಿದಾಯಕವಾದ ಅಮೃತ ಸದೃಶವಾದ ಆಹಾರವಾಗಿದೆ. ನಿರ್ಮಲೀಕರಣದಲ್ಲಿ ಗೋಮಯವು ಪ್ರಶಸ್ತವಾದುದು - ಎಂಬುದಾಗಿ ವೈಜ್ಞಾನಿಕರು ಒಪ್ಪುತ್ತಾರೆ. ನಮ್ಮನ್ನು ಹೆತ್ತ ತಾಯಿ ಸ್ವಲ್ಪ ಕಾಲ ತನ್ನ ಮೊಲೆ ಹಾಲು ಕೊಟ್ಟು ಸಾಕುತ್ತಾಳೆ. ಆದರೆ ಗೋಮಾತೆ ಹಾಗಲ್ಲ, ನಮ್ಮ ಜೀವನ ಪರ್ಯಂತ ಹಾಲು ಕೊಟ್ಟು ಸಾಕುತ್ತದೆ. ಹೀಗೆ ಮಾತೃ ಸದೃಶವಾದ ಗೋಮಾತೆಯು ವಿಶ್ವದ ಸಂಪತ್ತಾಗಿದೆ. | ಗೋಬ್ರಾಹ್ಮಣೇಭ್ಯೋ ಶುಭ ಮಸ್ತು ನಿತ್ಯಂ ಲೋಕಾಃ ಸಮಸ್ತಾಃ ಸುಖಿನೋ ಭವಂತು | ಎಂಬ ಸುಭಾಷಿತವು ಗೋವಿನ ಪೂಜ್ಯ ಭಾವನೆಯನ್ನೂ ರಾಷ್ಟ್ರೀಯತೆಯನ್ನೂ ಎದ್ದು ಕಾಣಿಸುತ್ತದೆ.

ಇನ್ನು ಆರ್ಥಿಕ ದೃಷ್ಟಿಯಿಂದ ಸೂಕ್ಷ್ಮವಾಗಿ ಹೇಳುವುದಾದರೆ ॥ ಪಶುಧಾನ್ಯ ಹಿರಣ್ಯ ಸಂಪದಾ ರಾಜತೇ ಶೋಭತೇ ಇತಿ ರಾಷ್ಟ್ರಂ । ಎಂಬಂತೆ ದೇಶದ ಸಂಪತ್ತಿಗೆ ಗೋವು ಕಾರಣವಾದ ವಿಷಯವನ್ನು ಹೇಳುತ್ತದೆ, ಪಶು ಗೊಬ್ಬರವು ಸರ್ವ ಶ್ರೇಷ್ಠ ಗೊಬ್ಬರವಾಗಿದೆ. ಗೋವಿನ ಹಾಲು, ತುಪ್ಪ, ಗೋರೋಚನ ಇತ್ಯಾದಿ ವಸ್ತುಗಳು ಆಯುರ್ವೇದ ಚಿಕಿತ್ಸೆಯಲ್ಲಿ ಪ್ರಧಾನ ಸ್ಥಾನವನ್ನು ಪಡೆದಿದೆ. ಬೇಸಾಯಕ್ಕೆ ಗೋವೇ ಕಾರಣವಾಗಿರುವುದರಿಂದ ಬೇಸಾಯ ಅಭಿವೃದ್ಧಿಯು ದೇಶದ ಆರ್ಥಿಕ ಉನ್ನತಿಗೆ ಆಧಾರವಾಗಿರುವ ವಿಷಯ ಸರ್ವ ವಿಧಿತವಾಗಿರುತ್ತದೆ.

ಈ ರೀತಿ ಪೂಜನೀಯವಾದ ರಾಷ್ಟ್ರದ ಸಂಪತ್ತಿಗೆ ಮೂಲ ಕಾರಣವಾಗಿ ಜೀವನ ಆಧಾರವಾದ ಮಾತೃಸದೃಶವಾದ ಗೋವು ಸಂರಕ್ಷಣೆಯ ಅಭಿವೃದ್ಧಿ ಹೊಂದುವ ಬದಲು ಇಂದು ಅಂತಹ ಲಕ್ಷಾಂತರ ಗೋವುಗಳು ಕಸಾಯಿಗಳ ಕತ್ತಿಗೆ ಬಲಿಯಾಗುವ ಅಸಹ್ಯವಾದ ಕರುಣಾಜನಕ ದೃಶ್ಯವು ಭಾರತದ ಸರ್ವ ಕಡೆಗಳಲ್ಲಿ ವ್ಯಾಪಿಸಿದೆ. ಗೋಧಾನ್ಯ ಸಂಪತ್ತಿನಿಂದ ತುಂಬಿದ ನಮ್ಮ ದೇಶ, ಗೋಕ್ಷೀರದಿಂದ ತುಂಬಿದ ನಮ್ಮ ದೇಶ ಇಂದು ಹಾಲು, ತುಪ್ಪಗಳಿಗಾಗಿ ಪರದೇಶವನ್ನು ನೋಡುವ ಕಾಲ ಬಂದಿದೆ. ಪೂಜನೀಯವಾದ ಮಾತೃಸದೃಶವಾದ ಗೋವುಗಳ ವಧೆಯು ಇಂದು ನಮ್ಮ ದೇಶದ ಅಧರ್ಮದ ಸಾಕ್ಷಿಯಾಗಿ ಭಾರತವನ್ನು ದರಿದ್ರಾವಸ್ಥೆಗೆ ಗುರಿಮಾಡಿದೆ ಎಂದು ಹೇಳಿದರೂ ಹೆಚ್ಚಾಗಲಾರದು. ಮಹಾತ್ಮಾಜಿಯವರ ಅಹಿಂಸಾ ಧರ್ಮವನ್ನು ಆಧಾರವಾಗಿಟ್ಟುಗೊಂಡ ನಮ್ಮ ಸರಕಾರವು ಈ ಅಸಹ್ಯವಾದ ಗೋವಧೆಯನ್ನು ಕಾನೂನುಬದ್ಧವಾಗಿ ಸಂಪೂರ್ಣ ನಿಷೇಧಿಸಲು ಅಸಮರ್ಥವಾಗಿದೆ ಎಂಬುದು ಶೋಚನೀಯವಾಗಿದೆ.

---


**ಶ್ರೀ ಕೆ.ಕೆ.ಶೆಟ್ಟಿ,ಎಂ.ಎಲ್.ಸಿ.,ಯವರ**

**ನವಕಾಲಕ್ಕೊಪ್ಪುವ ಪುಸ್ತಕಗಳು**

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

---

# ವರ್ಗ-ಊಳಿಗ

ಇತ್ಯಾದಿ ಯಾವತ್ತೂ ತರದ

**ಎಕೌಂಟ್ ಪುಸ್ತಕಗಳು**

ಶಾಲಾ ರಿಜಿಸ್ಟ್ರಿ, ಫಾರ್ಮುಗಳು

ದೊರೆಯುತ್ತವೆ.

ವಿಚಾರಿಸಿರಿ,

**ನವಯುಗ ಪ್ರೆಸ್, ಉಡುಪಿ.**

---

ಕೆಲವು ಸಂಗ್ರಾಹ್ಯ ಪುಸ್ತಕಗಳು

ಕೆ. ಎನ್. ಭಟ್ ಶಿರಾಡಿಪಾಲ್‌ರ

## ಭಾರತದ ವೀರಾಂಗನೆಯರು

ರೂ. 1—50

ಎಸ್. ಗೋಪೀಚಂದ ರಾಯರ

## ಬಿರಿದ ಮುಗುಳು

ರೂ. 1—50

ವಿವಿಧ ಬರಹಗಾರರ ಸಂಕಲನಗಳು

## ಭಾರತದ ನಾಲ್ಕು ಮುಖಗಳು

ರೂ. 1—00

## ಏಕಾಂಕಿ ನಾಟಕಗಳು

ರೂ. 1—00

## ಪಂಚಗಜ್ಜಾಯ

ರೂ. 1—75

## ಹೂ ಗೊಂಚಲು

ರೂ. 1—75

## ಪಂಚ ಸುಮನ

ರೂ. 1—20

## ಅನುವಾದಿತ ಕತೆಗಳು

ರೂ. 1—20

## ದೇಶ ವಿದೇಶದ ಮಹಾಜೀವಿಗಳು

ರೂ. 1—80

## ಮುತ್ತಿನ ಮಾಲೆ

ರೂ. 1—80

## ಹೆಂಗುಸರ ಕತೆಗಳು

ರೂ. 2—00

ಪಿ. ವೆಂಕೋಬಾಚಾರ್ಯರ

## ಕುಲವಿಲ್ಲದ ಹೆಣ್ಣು

ರೂ. 1-50

ಬಿ. ಲಕ್ಷ್ಮಣರಾಯರ

## ಭಾಗ್ಯಲಕ್ಷ್ಮಿ

ರೂ. 1-00

ಪ್ರೊ। ಕು. ಶಿ. ಹರಿದಾಸ ಭಟ್ಟರ

## ಘಂಟೆಮಾರಾ

(ಇಟಾಲಿಯನ್ ಕಾದಂಬರಿ) ರೂ. 2-00

ವೀರಪ್ಪ ಯಗಟಿಯವರ

## ನೀತಿ ವಿನೋದ ಕತೆಗಳು

ರೂ. 1-00

ಸುಬ್ರಾವ್ ಕೃಷ್ಣ ಹೆಗ್ಡೆ ಇವರ

## ಪ್ರತಿಜ್ಞಾ ಪೂರ್ತಿ

ರೂ. 1-00

ಕಾಳಿ ತಿಮ್ಮಪ್ಪ ಹೊಸಮನೆ ಇವರ

## ಶಿಲ್ಪಿ

ರೂ. 1-50

ಪ್ರತಿಗಳಿಗೆ

**ನವಭಾರತ ಪುಸ್ತಕ ಭಂಡಾರ, ಉಡುಪಿ**

ಅಥವಾ

**ನವಯುಗ ಪ್ರೆಸ್, ಉಡುಪಿ.**

## ಜಿಲ್ಲೆಗೆ ಪ್ರಸಿದ್ಧ ಚಲಚ್ಚಿತ್ರ ಕಲಾವಿದರ ನಾಟಕ ಮಂಡಳಿ

ಉಡುಪಿಯ ಸಂಗೀತ ಸಂಘದವರು ಇದೇ ...ಬರ ತಿಂಗಳ ಮೊದಲ ವಾರದಲ್ಲಿ ಉಡುಪಿ, ಮಂಗಳೂರು ಮತ್ತು ಕುಂದಾಪುರಗಳಲ್ಲಿ ನಾಟಕವಾಡಲು ಕರ್ನಾಟಕದ ಹೆಸರಾಂತ ...ರಂಗ ಶ್ರೀಮತಿ ಪಂಡರಿ ಬಾಯಿಯವರ ನೇತೃತ್ವದಲ್ಲಿರುವ ಮದ್ರಾಸಿನ ಶ್ರೀ ಕೃಷ್ಣ ಚೈ... ನಾಟಕ ಸಭಾ ಇವರನ್ನು ಜಿಲ್ಲೆಗೆ ಆಮಂತ್ರಿಸಿದ್ದಾರೆ. ಈ ನಾಟಕ ಮಂಡಳಿಯಲ್ಲಿ ಪಂಡರಿ ಬಾಯಿ, ಕೆ. ಎಸ್. ಅಶ್ವಥ್, ರಮಾ...ರಿ, ಈಶ್ವರಪ್ಪ, ನ್ಯಾನಾಪತಿ, ಭಾಸ್ಕರ್, ಕುಮಾರಿ ರಮಾ, ರತ್ನಾಕರ್, ಸೂರ್ಯಕಲಾ, ಸೀರ...ಪ್ಪ, ಸೂರ್ಯಕುಮಾರ್ ಇವರೇ ಮೊದಲಾಗಿ ಸುಮಾರು 34 ಮಂದಿ ಚಲಚ್ಚಿತ್ರ ನಟ...ರಿದ್ದಾರೆ. ನಾಟಕಗಳಿಗೆ ಹಿಮ್ಮೇಳ ...ತ್ರಿಯನ್ನು ಶ್ರೀ ವಿಜಯ ನಾರಸಿಂಹರು ನೀ...ದ್ದು, ಅವನ್ನು ಕುಮಾರಿ ಸುಸಿತ್ರಾ ... ಸತ್ಯಾರಾವ್ ಇವರು ಹಾಡಲಿರುವರು. ಕರ್ನಾಟಕದ ನಾನಾ ಭಾಗಗಳಲ್ಲಿ ಈ...ಗ ಸಾಧಾರಣ 600ಕ್ಕೂ ಮಿಕ್ಕಿ ನಾಟಕ...ನ್ನು ನೀಡಿ, ರಂಗಭೂಮಿಯಲ್ಲಿ ತಮ್ಮ ...ಾ ಪ್ರಾಧಿಮೆಯನ್ನು ತೋರಿಸಿ, ನಾಟಕ...ನದಲ್ಲಿ ಒಂದು ಹಿರಿಯ ಮೇಲ್ಪಂಕ್ತಿಯನ್ನು ...ಕೊಟ್ಟ ಈ ನಾಟಕ ಮಂಡಳಿಯು ಜಿಲ್ಲೆ... ಉಡುಪಿ, ಕುಂದಾಪುರ ಮೊದಲಾದೆಡೆ ...ಮೊದಲ ಬಾರಿಗೆ ತಮ್ಮ ನಾಟಕ ಪ್ರದ...ರ್ಶನವನ್ನು ನೀಡುವುದಾಗಿದೆ. ಉತ್ತಮ ...ರಂಗಸಜ್ಜಿಕೆ, ವೇಷಭೂಷಣ ಸಲಕರಣೆ, ...ಧುನಿಕ ವಿದ್ಯುದುಪಕರಣಗಳಿಂದ ಕೂಡಿ ಪೂರ್ಣ ರೀತಿಯಲ್ಲಿ ಸಜ್ಜುಗೊಂಡ ಈ ನಾ...ಮಂಡಳಿಯು ಹಲವಾರು ರಂಗತಜ್ಞರು ...ತಂತ್ರಜ್ಞರಿಂದ ಕೂಡಿ ಆಗಮಿಸಲಿದೆ. ಉಡುಪಿ ಮತ್ತು ಕುಂದಾಪುರಗಳಲ್ಲಿ ನೀ... ನಾಟಕ ಮಂಡಳಿಯ ನಾಟಕವು ಸ್ಥಳೀ... ಸಂಗೀತ ಸಭಾದ ಆಶ್ರಯದಲ್ಲಿ ದಶಂಬರ ...ರಿಂದ ತಾ. 18ರ ವರೆಗೂ, ಅದಕ್ಕೂ ...ಮೊದಲು ಮಂಗಳೂರಿನಲ್ಲಿ ಶ್ರೀ ವಿಮಲ... ...ದಾಸರ ವ್ಯವಸ್ಥಾಪಕತ್ವದಲ್ಲಿ ದಶಂಬರ ...ರಿಂದ ತಾ. 13ರ ವರೆಗೂ ನಡೆಯಲಿರು...ದು ಅಧಿಕೃತವಾಗಿ ತಿಳಿದುಬರುತ್ತದೆ.

### ರಕ್ಷಣಾ ನಿಧಿಗೆ ಎಕಾಡೆಮಿ ಸಂಸ್ಥೆಗಳಿಂದ ಕೊಡುಗೆ

ಮಣಿಪಾಲ, ಇಲ್ಲಿಯ ಎಕಾಡೆಮಿ ಆಫ್ ...ರಲ್ ಎಜುಕೇಶನಿನ ನಾನಾ ಶಿಕ್ಷಣ ಸಂಸ್ಥೆಗಳು ನಮ್ಮ ದೇಶದ ಮೇಲೆ ಪಾಕಿಸ್ತಾನ ಆಕ್ರಮಣ ನಡೆಸಿದಂದಿನಿಂದ ರಾಷ್ಟ್ರೀಯ ರಕ್ಷಣಾ ನಿಧಿಗೆ ೧೪,೫೦೪ ರೂ. ೩೨ ಪೈಸೆಗಳನ್ನು ಸಲ್ಲಿಸಿವೆ.

ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ೬೭೦೫ ರೂ.ಗಳನ್ನು ಸಂಗ್ರಹಿಸಿ ಕಳಿಸಿದ್ದಾರೆ. ಮಂಗಳೂರಿನ ವಿದ್ಯಾರ್ಥಿಗಳು ಅಲ್ಲಿಯ ಕಸ್ತೂರ ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ನೇತೃತ್ವದಲ್ಲಿ ಸಂಗ್ರಹಿಸಿರುವ ೬೧೩೭ ರೂ. ಗಳನ್ನು ಇಷ್ಟರಲ್ಲೇ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಗಳಿಗೆ ಒಪ್ಪಿಸಲಾಗುವುದು.

ಇತರ ಸಂಸ್ಥೆಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಲ್ಲಿಸಿರುವ ಮೊತ್ತ ಈ ರೀತಿ ಇದೆ: ಕಸ್ತೂರ ಬಾ ಮೆಡಿಕಲ್ ಕಾಲೇಜು, ಮಣಿಪಾಲ — ೪೬೬೭ ರೂ. ೨೦ ಪೈಸೆ; ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ — ೫೬೨೫ ರೂ. ೨೫ ಪೈಸೆ; ಮಣಿಪಾಲ ಪ್ರೌಢ ಶಾಲೆ, ಮಣಿಪಾಲ — ೪೦೧ ರೂ.; ಕಾರ್ಕಳ ಪ್ರೌಢ ಶಾಲೆ, ಕಾರ್ಕಳ — ೯೫ ರೂ. ೮೮ ಪೈಸೆ ಮತ್ತು ಪೆರ್ಡೂರು ಪ್ರೌಢ ಶಾಲೆ, ಪೆರ್ಡೂರು ೭೧ ರೂ. ೧೯ ಪೈಸೆ. ಹಣ ಸಂಗ್ರಹಿಸುವ ಕಾರ್ಯವನ್ನು ಈ ಸಂಸ್ಥೆಗಳಲ್ಲಿ ಹಾಗೂ ಎಕಾಡೆಮಿಯ ಇತರ ಸಂಸ್ಥೆಗಳಲ್ಲಿ ಮುಂದುವರಿಸಲಾಗುತ್ತಿದೆ.

### ಮಹಿಳಾ ದಿನಾಚರಣೆ

ಮಣಿಪಾಲ ಹೈಸ್ಕೂಲಿನಲ್ಲಿ ಮಹಿಳಾ ದಿನಾಚರಣೆಯು ಡಾ| ಶ್ರೀ| ಗೊನ್ಸಾಲ್ವೆಸರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿನಿಯರಾದ ಕುಮಾರಿ ಪ್ರಭಾವತಿ ಮತ್ತು ಎಚ್. ರತ್ನಾ ಪೈ ರಾಣಿ ಕಿತ್ತೂರು ಚೆನ್ನಮ್ಮನ ಜೀವನ ಮತ್ತು ಸಾಹಸ ಕಾರ್ಯಗಳ ಕುರಿತು ಭಾಷಣವಿತ್ತರು. ಶಾಲಾ ಮುಖ್ಯೋಪಾಧ್ಯಾಯರು ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರವನ್ನು ಒತ್ತಿ ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಕ್ಕಳು ಮುಖ್ಯವಾಗಿ ವಿದ್ಯಾರ್ಥಿನಿಯರು ರಾಣಿ ಚೆನ್ನಮ್ಮನ ಜೀವನದ ಆದರ್ಶಗಳನ್ನು ತಿಳಿದು ಅದರಂತೆ ನಡೆಯಲು ಪ್ರಯತ್ನಿಸಬೇಕು ಎಂದರು.

### ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ದಿನಾಂಕ 30-10-65ನೇ ರಾತ್ರಿ "ಸಂಜಯ ಸಂಧಾನ" ಎಂಬ ಕಥಾಭಾಗದ ಯಕ್ಷಗಾನ ತಾಳಮದ್ದಳೆಯು ನಡೆಯಲ್ಪಟ್ಟಿತು. ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟ ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೇ. ವಿ. ಕೇಶವ, ಬಿ. ವಿ. ವಿನೋದ, ಡಾ| ರಮಾನಂದ ಬನಾರಿ, ವೇಷಧಾರಿ ಗುಡ್ಡಪ್ಪ ಗೌಡ, ಕೆ. ಅಣ್ಣಯ್ಯ ಭಂಡಾರಿ, ಮುದಿಯೂರು ನಾರಾಯಣ ರೈ, ರಾಮ ಪಾಟಾಳಿ, ಮಾಸ್ಟರ್ ಶಾಂತಪ್ಪ, ತಿಮ್ಮಪ್ಪ ಗೌಡ, ಸಾಂತಪ್ಪ ರೈ ಮೊದಲಾದವರು ಭಾಗವಹಿಸಿದ್ದರು. ಕಾರ್ಯಕ್ರಮದ ವ್ಯವಸ್ಥಾಪಕರಾದ ಶ್ರೀ ಜಿ. ನಾರಾಯಣ ರೈಗಳು ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದವಿತ್ತರು.

### ಚಂಪಾಷಷ್ಠಿ ಮಹಾರಥೋತ್ಸವ

ಸುಬ್ರಹ್ಮಣ್ಯ, ದಕ್ಷಿಣ ಕನ್ನಡ ಜಿಲ್ಲಾ ಮಹತೋಬಾರ ಕುಕ್ಕೇ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪೂರ್ವ ಶಿಷ್ಟಸಂಪ್ರದಾಯ ಪ್ರಕಾರ ಇದೇ ವಿಶ್ವಾವಸು ಸಂವತ್ಸರದ ಕಾರ್ತಿಕ ಬಹುಳ ೧೨ಯು ದಿನವಾದ ತಾ. 20-11-65ರಿಂದ ಉತ್ಸವವು ಪ್ರಾರಂಭವಾಗಿ ತಾ. 24-11-65ರಲ್ಲು ಲಕ್ಷ ದೀಪೋತ್ಸವ, ತಾ. 27-11-65ರಲ್ಲು ಹೂವಿನ ತೇರು ಉತ್ಸವ, ತಾ. 28-11-65ರಲ್ಲು ಪಂಚಮಿ ರಥೋತ್ಸವ ತಾ. 29-11-65ರಲ್ಲು ಚಂಪಾಷಷ್ಠಿ ಮಹಾರಥೋತ್ಸವ, ತಾ. 30-11-65ರಲ್ಲು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

---

In the Court of the
Dt. Judge S. K.
O. S. 77/1965.

...n the matter of debts of ...naraya Kamath deceased.
...lmavathy *alias* Muktha Bai ...others ... ... *Petitioners*

...whom it may concern,

...otice is hereby given that on ...10-1965 an application was ...le by the petitioners for grant ...certificate under Indian Suc...sion Act, with respects of debts ...to the deceased and has ...posted to 27—11—1965, ...n you are at liberty to appear ...oppose the same

*(By order of Court)*
S. R. HEGDE,
*Advocate for Petitioners.*
...galore, 2-11-1965.

---

## ಅಡಿಕೆ ಕತ್ತರಿಯಿಂದ ಜಾರುವುದು

(ನಾಲ್ಕನೇ ಪುಟದಿಂದ)

"ಬಿರಸು ಸಂಗೋತ ಕಲ್ಸಿದ್ರೆ ಸಾಕು, ಕೈ ಸಂಗೋದನ್ನೂ ಕಲಿತುಕೊಳ್ಳೋ ಸರಸ್ವತಿಯೂಕೆ...'

'ಅಯ್ಯೋ, ಮತ್ತೆ ಲಕ್ಷ್ಮಿ ಹೇಗೆ?"

"ಸೇವೆ ಮಾಡೋದ್ರಲ್ಲಿ ಲಕ್ಷ್ಮೀಯೇ ಇಲ್ವೆ?"

'ಹ್ಞ... ಸ್ವಲ್ಪ ಹೆಚ್ಚಾದ್ರೆ ಸದಾ ಸೌಭಾಗ್ಯವತಿಯಿದ್ದ ಹಾಗೇ.. ಅದಿಲ್ಲಾ ಹಾಗಿದ್ಲಿ.... ನನ್ನ ಪ್ರಶ್ನೆ ಅಲ್ಲೇ ಉಳಿಯಿತಲ್ಲ...'

"ಯಾವುದದು.... ಆಹಾರದ ಕಥೆ ಅಲ್ವೆ?"

"ಹ್ಞಾ... ಅದೇ ಇರಬೇಕು...'

'ಆರದೇನು, ಏನು ಇದೆ.. ನೋಡ, ನಮಗೆ ಈ ವರ್ಷಕ್ಕೆ ಆರು ಮಿಲಿಯ ಟನ್ ಆಹಾರ ಬೇಕಾಗುತ್ತೆ ಅಂದಾಜು. ಅದನ್ನ ಅಮೇರಿಕೆ ಕೊಡಲು ಒಪ್ಪಿತ್ತು. ಕಳೆದ ತಿಂಗಳಲ್ಲಿ ಒಂದು ಮಿಲಿಯ ಟನ್ ಕೊಟ್ಟಿತು. ಮತ್ತೆ ಸಪ್ಟೆಂಬರದಲ್ಲಿ ಅರ್ಧ ಮಿಲಿಯ ಟನ್ ಕೊಟ್ಟಿತು. ಈಗ ಮತ್ತೆ ಅರ್ಧ ಮಿಲಿಯ ಟನ್ ಕೊಟ್ಟಿದೆ.."

"ಸದ್ಯ ಅಷ್ಟಾದರೂ ಕೊಟ್ರಲ್ಲ?'

"ಅದೇ ಈಗ ಕಷ್ಟಕ್ಕೆ ಬಂದದ್ದು. ಕೊಡುವವು ಮುಂದೆಯೂ ಕೊಡುತ್ತಾರೆಂತ ಗ್ಯಾರಂಟಿಯಿಲ್ಲ. ಕೊಡೋದಿಲ್ಲಾಂತ ಸ್ಮೋಕೂ ಸಾಧ್ಯವಿಲ್ಲ. ಈ ಅನಿಶ್ಚಿತ ಪರಿಸ್ಥಿತಿಯಲ್ಲಿ ತೂಗುಯ್ಯಾಲೆ ಆಡ್ತಾ ಇದ್ರೆ ನಾವೇನು ಮಾಡೋದು?'

'ಅದು ಹೌದ್ರಿ, ಮತ್ತೆ ಎಂತದೋ ವಿದೇಶ ವಿನಿಮಯವನ್ನ ಕೊಡುವ ವಾಗ್ದಾನವನ್ನೂ ಅದು ಪೂರೈಸಿಲ್ಲವಂತೆ!"

"ಹೌದು, ಇದನ್ನೆಲ್ಲಾ ಕಣ ಮಾಗ, ಹಾವು ಸಾಯಬಾರದು ಕೋಲು ಮುರಿಯಬಾರದು ಅನ್ನೋ ಹಾಗೆ ಕಾಣುತ್ತೆ...'

'ಮತ್ತೆ, ಶಾಸ್ತ್ರಿ ಇಲ್ಲಿ ಜೋರಾರೆ?'

'ಆಗೋದೇನು' ಹಿಂದೆ ಕಚ್ಛ ರಣ ಕಂಟೆಯಲ್ಲಿ ವಿಲ್ಸನ್ ಕೈಯಲ್ಲಿ ಸಿಕ್ಕಿ ಬಿದ್ದ ಶಾಸ್ತ್ರಿ ಈಗ ಜಾನ್ಸನ್ ಕೈಯಲ್ಲಿ ಖಂಡಿತ ಸಿಕ್ಕೋವಿಲ್ಲ.'

'ಅದು ಹ್ಯಾಗೆ ಗೊತ್ತು?"

'ಭಾರತೀಯರಲ್ಲಿ ಈಗ ಹೊಸ ಸಾಹಸ ತುಂಬಿದೆ.'

"ಅದು ಹೌದ್ರಿ..'

"ಮತ್ತೆ ನೋಡು, ಆರ್ಥಿಕ ಮತ್ತು ರಾಜಕೀಯವನ್ನು ಒಂದೇ ದಾರದಲ್ಲಿ ಸೇರಿಸಿ, ಭಾರತ ಅದನ್ನು ತಿರಸ್ಕರಿಸುವುದು ಎಂದು ಅಮೇರಿಕನ್ ರಾಯಭಾರಿ ಸ್ಪಷ್ಟವಾಗಿ ತಿಳಿಸಿದ್ದಾರೆ ಹಾಗಿರುವಾಗ...."

'ಮತ್ತವರು ಯಾಕೆ ಕಣ್ಣುಮುಚ್ಚಾಲೆಯಾಡ್ತಾರೆ!"

'ಏನಾದರೂ ಪಾಕಿಸ್ತಾನಕ್ಕೆ ಭಾರತ ಉಪಕಾರ ಮಾಡುವಂತೆ ಮಾಡುವುದು ಸಾಧ್ಯವೇ ಅಂತ ಅವರು ತಲೆ ಹಚ್ಚಿಕೊಳ್ಳುತ್ತಿದ್ದಾರೆ..."

'ಅದು ಸರಿಯೇ. ಪಾಕಿಸ್ತಾನ ಅನ್ಯಾಯ ಮಾಡಿದರೂ ಅವರ ಸ್ನೇಹವನ್ನು ಅವರು ಬಿಡಲು ಸಿದ್ಧರಿಲ್ಲ. ಹಾಗೆಂದು ಭಾರತವನ್ನು ಕೈಬಿಡಲೂ ಮನಸ್ಸಿಲ್ಲ.'

'ಆದ್ದರಿಂದಲೇ ಅವರು ಉಭಯಸಂಕಟದಲ್ಲಿದ್ದಾರೆ.'

"ಆದ್ರೂ ಒಂದು ನಿಜ ನ್ನಿ..."

"ಏನು?"

"ಆರ್ಥಿಕ ನೆರವಿನ ಅಲಗೊಂದು, ರಾಜಕೀಯ ಸಮಸ್ಯೆಯ ಅಲಗೊಂದು ಜಾನ್ಸನ್ನರ ಬಳಿಯಿದೆ. ಅವುಗಳ ಮಧ್ಯೆ ಶಾಸ್ತ್ರಿಯವರನ್ನು ಸಿಕ್ಕಿಸುವ ಸಂಚು ಅವರು ಮಾಡ್ತಾರೆ "

"ಆದ್ರೆ ನೋಡು, ನಮ್ಮ ಅಡಿಕೆ ಅಮೇರಿಕನ್ ಕತ್ತರಿಯಿಂದ ಪ್ರಾಸಕ್ಕನೆ ಜಾರುವುದು...."

ಸದ್ಯ ಹಾಗಾದ್ರೆ ಸಾಕೆನ್ನಿ...."

'ಓ, ಏನೇ ಇದು ಗಂಟೆ...."

ಪತಿಗೂ ಪಡಿವಾಣ ಇಲ್ಲ; ಗಂಟೆಗೂ ಇಲ್ಲ. ಹನ್ನೊಂದಾಯ್ತು ಇನ್ನು... ಬಳಸಿಟ್ಟ ಗಂಜಿ ತಣ್ಣಗಾಗಿ ಹೋಯಿತು...'

"ನಾಳೆ ಹೇಳ್ತೀನಿ ಒಪ್ಪೊತ್ತು ಇಂದಾದರೂ..'

"ಹೌದು, ಬಾ ಒಪ್ಪೊತ್ತು ಮಾಡು ಮಹರಾಯರು..."

"ನೋಡ. ನೀನು.."

"ಆ ... ಮಾಡೋಣ ನಾಳೆ. ಸದ್ಯ ... ನೋಡುವ....'

"ಹಾಗೆ ಹೇಳು, ಚೆನ್ನಾಗಿ'

— ಗೋರಾ.

---

## ಅಮೃತ ಬಿಂದು

ವಿಶ್ವಾಸು ಎಚ್ಚರಿಕೆಯನ್ನು ಕೊಡುತ್ತಾನೆ, ಶತ್ರು ಹೊಡೆದೇ ಬಿಡುತ್ತಾನೆ.

೦ ೦ ೦

ಸತ್ತವರ ಸ್ಮಾರಕಕ್ಕೆ ಕೊಡುವ ದಾನಕ್ಕಿಂತ ಸಜೀವ ಜೀವಿಗಳಿಗೆ ಕೊಡುವ ದಾನವೇ ಮೇಲು.

೦ ೦ ೦

ಕ್ಷತ್ರಿಯ ಜನರು ಕೂಡಾ ಪರಾಕ್ರಮದಿಂದ ವಿಪುಲವಾದ ಸ್ವರ್ಗವನ್ನು ಪಡೆಯಬಹುದು.

೦ ೦ ೦

ಸೌಜನ್ಯವು ಶತ್ರುವನ್ನು ಗೆಲ್ಲುತ್ತದೆ.

೦ ೦ ೦

ಕೊಟ್ಟು ಮರೆಯಬಲ್ಲವರೂ, ಕೊಂಡು ಮರೆಯಲಾರದವರೂ ಧನ್ಯರು.

೦ ೦ ೦

ರಾಷ್ಟ್ರದ ನಾಗರಿಕರ ಯೋಗ್ಯತೆ ಸಂಕಲನವೇ ರಾಷ್ಟ್ರದ ಯೋಗ್ಯತೆ.

೦ ೦ ೦

ಉಸಿರಾಡುವ ಪ್ರತಿಯೊಂದು ಪ್ರಾಣಿಯಲ್ಲಿಯೂ ಅಧಿಕಾರ ಲಾಲನೆ ಕಂಡು ಬರುತ್ತದೆ.

೦ ೦ ೦

ಎರಡು ತೆನೆ ಹೆಚ್ಚು ಕಾಳಿನಾಗಲೀ, ಎರಡು ಕಡ್ಡಿ ಹೆಚ್ಚು ಹುಲ್ಲನ್ನಾಗಲೀ ಬೆಳೆಸುವವನು ನೂರಾರು ರಾಜಕಾರಣಿಗಳಿಗಿಂತ ಶ್ರೇಷ್ಠನಾದವನು.

೦ ೦ ೦

ದಬ್ಬಾಳಿಕೆಯನ್ನು ಎದುರಿಸುವುದೇ ದೈವಾಜ್ಞೆಯ ಪಾಲನೆ.

೦ ೦ ೦

ಸೌಂದರ್ಯವು ನಿಸರ್ಗದ ನಾಣ್ಯವಾಗಿದೆ, ಅದನ್ನೆಂದಿಗೂ ಸಂಚಯಿಸಬಾರದು.

೦ ೦ ೦

ನಾವು ಯಾರಿಗೆ ಅನ್ಯಾಯ ಮಾಡಿದ್ದೇವೋ ಅವರ ಮೇಲೆಯೇ ನಮ್ಮ ಸಿಟ್ಟು

೦ ೦ ೦

ಕಡಿಮೆ ವಿಚಾರ ಮಾಡುವವರು ಬಹಳ ಮಾತಾಡುತ್ತಾರೆ.

೦ ೦ ೦

# ನಮ್ಮ - ನಮ್ಮವರು

ಶ್ರೀ ಎನ್. ನಾರಾಯಣಪ್ಪ

ತಿಪಟೂರಿನ 'ಶ್ರೀ ಕೃಷ್ಣ ...ನ ... ರಿಯವರು ಇಲ್ಲ ... ದೂ... ಬೋರ್ಡಿನ ... ಗಳ ... ಇವರು ಶ್ರೀ ಎನ್. ನಾರಾಯಣಪ್ಪನವರು. ನೂತನವಾಗಿ ... ವನೆ. ಮೈಸೂರಿನ ... ಡಾ|| ನಾಗಪ್ಪ ಆಳ್ವರು ... ಎಪಟೂರಿಗೆ ... ನಾರಾಯಣಪ್ಪನವರು ಇದೇ ಭವನವನ್ನು ... ರಸಿದ್ದರು. 'ಶ್ರೀಕೃಷ್ಣ ... ಲ್ಲಿಯೇ ... ಚಂಚಲೆಯಾದವರು. ನಾರಾಯಣಪ್ಪನವರು ತನ್ನ ಬಳಿಯದ್ದುದನ್ನು ... ವಹಿಸಿ ಕಾರ್ಯಗಳಿಗೆ ದಾನ ... ಉದಾರ ಹೃದಯರು. 'ಅರಗಣ್ಣದ ನ ಊಟ ನರಳದಂಕೊಟ್ಟ'ವೆಂಬ ... ನುಡಿಯನ್ನು ಅರಿತುಕೊಂಡವರು ಮುನ್ಸಿಪಲ್ ಕೌನ್ಸಿಲರರಾಗಿರುವ ನಾರಾಯಣಪ್ಪನವರು ಒಬ್ಬ ವ್ಯಾಪಾರಿ; ನಗರ ಸಭಾಸದಿಗಳಿಗೆ ತಿಪಟೂರಿನ ಸೇವಸಲ್ಲಿಸಿದವರು. ಸಾಮಾಜಿಕ, ಸಾರ್ವಜನಿಕ ಕಾರ್ಯಕರ್ತರು, ಅನುಭವಸ್ಥರು, ವಿದ್ಯಾವಂತ ನಾಯಕರು, ಪ್ರಭಾವಶಾಲಿಗಳು. ಉತ್ತಮ ಗುಣಸಂಪನ್ನರಾದ ಇವರ ಹೃದಯ ಉದಾರವಾದುದು ವ್ಯಾಪಾರವೊಂದು ಡೊಂಬರಾಟವಲ್ಲ—ಜನಸೇವೆಯ ನ ಧನವೆಂದು ನಂಬಿದವರು. 'ಇವರು, ಪ್ರಾಮಾಣಿಕ ವ್ಯಾಪಾರದಿಂದ ಜನಪ್ರಿಯತೆ ಗಳಿಸಬಹುದೆಂದು ದೃಢವಾಗಿ ನಂಬಿದ ನಾರಾಯಣಪ್ಪನವರ ಉದಾರತೆಯ ಪ್ರಯೋಜನ ಪಡೆಯದವರ ಅನುಪಾತಿನಲ್ಲಿ ಯಾರೂ ಇಲ್ಲ. ತುಂಬಿದ ಕೊಡವಾದ ಇವರು ಎಂದಿಗೂ ತುಳುಕುವುದಿಲ್ಲ— ಅವರೊಂದು ಅನುಭವದ ನಿಧಿ.

---

(ಮೂರನೇ ಪುಟದಿಂದ)

ಜಲ—ವ್ಯಾಪಾರಿ ಬೆಳೆಗಳಿಗೆ ಬಹುಗಡಾಂ ತಲಪಿದ ಇವೆಲ್ಲವುಗಳಿಂದ ನೊಂದಿರುವ ಜಿಲ್ಲೆಯ ರೈತರು ತಮ್ಮ ಕಷ್ಟವನ್ನು ತೋಡಿಕೊಳ್ಳುವ ಅವಕಾಶ ತಾನಾಗಿಯೇ ದೊರೆಯಿತು. ಲೆವಿ ಪದ್ಧತಿಗೆಯು ... ಹೋಗುತ್ತದೆ. ಎಂಬುದೊಂದು ಬಲವಾದ ದೂರು. ವ್ಯಾಪಾರಿಗಳು ಒಪ್ಪಿಸಿದ ಲೆವಿ ವು ರೈತನು ನಿಜವಾಗಿ ಸಾಗುವಳಿ ಮಾಡುವ ಜಮೀನನ್ನು ಸಾಮಾನ್ಯವಾಗಿ ಪ್ರತಿನಿಧೀಕರಿಸುವುದಿಲ್ಲ ಸರಕಾರಕ್ಕೆ ಭತ್ತವನ್ನು ಪಡಿಸಲ್ಲಿಯೇ ಧಾನ್ಯವನ್ನು ಖರೀದಿ ಬೇರಾಗಿ ರುವುದರಿಂದ ರೈತರಿಗೆ ದೊರೆಯತಕ್ಕದ್ದು ಮತ್ತು ಅವಶ್ಯವೂ ಇರುವ ತಾಳು ಮತ್ತು ಭತ್ತದ ಸಪ್ಪೆಗಳು ಸಿಗದಂತಾಗಿವೆ. ಸರಕಾರವು ರೈತರಿಗೆ ಕೊಡುವ ಬೆಲೆಯು ದಪ್ಪಟ್ಟು ವ್ಯಾಪಾರಿಗಳು ಕೊಡಲು ಸಿದ್ಧರಿರುವಾಗ ಸರಕಾರದ ಲೆವಿ ವಸೂಲಿಯಿಂದ ರೈತನಿಗೆ ಬಹುಮಟ್ಟಿನ ನಷ್ಟವಾಗುತ್ತದೆ—ಈ ದೂರುಗಳ ಬಗ್ಗೆ ಡಾ| ಆಳ್ವ ಗಂಭೀರವಾಗಿ ಯೋಚಿಸುವ ಆಶ್ವಾಸನ ನೀಡಿದ್ದಾರೆ. ವ್ಯಾಸುಭಾಗದ ಲೆಕ್ಕ ಸರಿಯಿಲ್ಲವಾದರೆ, ಡಿ. ಸಿ. ಯವರಿಗೆ ಬರೆಯಬೇಕು. ಮುಂದಿನ ಲೇವಿಯಲ್ಲಿ ಭತ್ತ ಮತ್ತು ಅಕ್ಕಿಯನ್ನು ಮಾರುವ ಅವಕಾಶ ಒದಗಿಸುವ ಭರವಸೆಯಿತ್ತಿದ್ದಾರೆ. ಧಾರಣೆಯ ಬಗ್ಗೆ ಪರಿಶೀಲಿಸುವ ವಿಶ್ವಾಸದಾನವನ್ನೂ ಕೊಟ್ಟಿದ್ದಾರೆ.

ಡಾ|| ನಾಗಪ್ಪ ಆಳ್ವ ನಂಬಿಕೆಗ ಅರ್ಹರಾದ ವ್ಯಕ್ತಿ. ಜಿಲ್ಲೆಯಲ್ಲಿ ಈ ವರ್ಷ ಅನಾವೃಷ್ಟಿಯ ಪರಿಣಾಮವನ್ನು ಸರಿಯಾಗಿ ಅವರು ಕಂಡುಕೊಂಡಿದ್ದಾರೆ. ಬುದ್ಧಿವಂತ ಜಿಲ್ಲೆಯ ಜನರು ಈ ವರ್ಷ ತಮ್ಮ ಬುದ್ಧಿಯನ್ನೇ ಜಗಿದು ತಿನ್ನುವ ಪ್ರಸಂಗ ಬಂದಿದೆ. ಇದನ್ನು ಅವರು ಮೈಸೂರು ಸರಕಾರಕ್ಕೆ ಮನಗಾಣಿಸಿಕೊಡುತ್ತಾರೆ, ರೈತರಿಗೆ ಆಗುತ್ತಿರುವ ತೊಂದರೆಗಳ ಪರಿಹಾರಕ್ಕೆ ಅವರು ಸದಾ ಸಿದ್ಧರಾಗಿದ್ದಾರೆ.

---

## ಉಡುಪಿಯಲ್ಲಿ ಮಂತ್ರಿ ಡಾ|| ಆಳ್ವ

ಉಡುಪಿ ತಾಲೂಕು ಬೋರ್ಡಿನ ಆಶ್ರಯದಲ್ಲಿ ಉಡುಪಿ ತಾಲೂಕು ಪಂಚಾಯತು ಕಾರ್ಯಕರ್ತರ ಹಾಗೂ ಕೃಷಿಕರ ಸಭೆಯು ಕಳೆದ ತಾ. ೯ರಂದು ಬೋರ್ಡ್ ಪ್ರೆಸಿಡೆಂಟರ ಜನತಾ ಭವನದಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ. ಯವರು ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರನ್ನು ಸ್ವಾಗತಿಸಿ, ಉಡುಪಿಯ ಕೃಷಿಕ ರಂಗದ ಬೆಳವಣಿಗೆಯನ್ನು ವಿವರಿಸುತ್ತ, ಸರಕಾರದ ಪ್ರೋತ್ಸಾಹ ದೊರೆತರೆ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದೆಂದು ನುಡಿದರು. ಶ್ರೀಗಳಾದ ವಾದಂಬಳ್ಳಿ, ಮಾಧವರಾಯರು, ಸದಾಶಿವ ಶೆಟ್ಟರು ಹಾಗೂ ಆನಂದ ರಾಯ ಹೆಗ್ಡೆಯವರು ಮಾತಾಡುತ್ತ ಬಿಟ್ಟುಗದ್ದೆಗಳಿಂದ ಈ ಬಾರಿ ಆಗುತ್ತಿರುವ ಹಾನಿಯನ್ನು ವಿವರಿಸಿ ಅವುಗಳಿಗೆ ಲೇವಿ ಹಾಕಬಾರದೆಂದು ಕೇಳಿಕೊಂಡರು ಅಲ್ಲದೇ ಲೇವಿಯ ಧಾರಣೆಯನ್ನೂ ಮಾರ್ಕೆಟಿನ ಧಾರಣೆಯನ್ನೂ ಸಮದೂಗಿಸಬೇಕೆಂದು ಒತ್ತಿ ಹೇಳಿದರು.

ಡಾ| ಆಳ್ವರು ಮಾತನಾಡುತ್ತಾ, ಇತ್ತೀಚಿನ ಆಕ್ರಮಣಗಳಿಂದ ನಮ್ಮ ಜಲ, ನೆಲ, ವಾಯು ಸೈನ್ಯಗಳು ಸುದೃಢವಾಗಿವೆ. ಅದರ ಜೊತೆಗೆ ನಾವು ಆಹಾರ ವಿಷಯದಲ್ಲೂ ಸ್ವಾವಲಂಬಿಗಳಾಗಬೇಕು. ಕೃಷಿ ಉದ್ದಿಮೆ ಚೆನ್ನಾಗಿ ನಡೆದು ಆಹಾರೋತ್ಪಾದನೆ ಹೆಚ್ಚಬೇಕು ಎಂದು ಹೇಳಿದರು.

ಕೊನೆಯಲ್ಲಿ ಶ್ರೀ ಎ. ಜಿ. ಆಚಾರ್ಯರವರು ಧನ್ಯವಾದ ಸಮರ್ಪಿಸಿದರು.

## ಹೋಟೆಲ್ ಕುಂಜವಿಹಾರ

ಕೇಂಟೀನಿನ ಆಡಳಿತವನ್ನು ಶ್ರೀ ಎಂ. ದಿನಕರ ಹೆಗ್ಡೆಯವರು ವಹಿಸಿಕೊಳ್ಳುವ ಸಮಾರಂಭವು ತಾ. ೧೦ರಂದು ಶ್ರೀ ಕೆ. ಕೆ. ಶೆಣೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೆ. ಶೆಣೈಗಳು ಸಾಂಪ್ರದಾಯಿಕ ಉದ್ಘಾಟನೆಗೈದು ಶ್ರೀ ಹೆಗ್ಡೆಯವರಿಗೆ ಒಪ್ಪಿಸಿಕೊಟ್ಟರು. ಮುಖ್ಯ ಅತಿಥಿ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ. ಅವರು ಶುಭಹಾರೈಸಿದರು. ಶ್ರೀ ... ಶೆಟ್ಟರು ವಂದನೆಗಳನ್ನರ್ಪಿಸಿದರು.

---


## ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

A. S. ನಂಬ್ರ 31/1966

ತಾರಾ ಹೆಗ್ಗಡ್ತಿ ಕೋಂ ..., ಎಪ್ಪೆಲಾಂಟರು, ಮತ್ತು ಪದ್ಮಕ್ಕ ಯಾನೆ ಪದ್ಮಾವತಿ ಹೆಗ್ಗಡ್ತಿ ಕೋಂ ... ಎದ್ರಿರು

೮ನೇ ಎದ್ರಿ— ಗುಲಾಬಿ ಯಾನೆ ಲೀಲಾವತಿ ಹೆಗ್ಗಡ್ತಿ, ಲಕ್ಷ್ಮೀ ಹೆಗ್ಗಡ್ತಿಯ ಮಗಳು, ಕಾರ್ಕಳ ತಾಲೂಕು ಪಳ್ಳಿ ಗ್ರಾಮದ ಮೊಕ್ಕಾಂನಲ್ಲಿರುವವರು.

—ಇವರಿಗೆ ತಿಳಿಯಪಡಿಸುವುದೇನೆಂದ್ರೆ— ಕಾರ್ಕಳ ಮುನ್ಸೀಫ್ ಕೋರ್ಟಿನ O. S ನಂಬ್ರ 710/1962ರ ತೀರ್ಪಿನ ಮೇಲೆ ಮಾಡಿರುವ ದಾಖಲು ಮಾಡಿರುವ ಮೇಲ್ಕಂಡ ಅಪೀಲು ಸಂಬಂಧ ನಿಮ್ಮ ನೋಟೀಸು ಒಗ್ಗೆ ಕಡೇ ತಾ. 20—11—1966 ಕ್ಕೆ ಇರುವುದ್ರಿಂದ, ನೀವು ಏನಾದರೂ ಆಕ್ಷೇಪವಿದ್ದಲ್ಲಿ ಆದಿನ ಬೆಳಿಗ್ಗೆ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ನಿವೇದಿಸಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಏಕಪಕ್ಷೀಯವಾಗಿ, ಅಪೀಲು ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

K. Vishwanatha Hegde,
ಎಪ್ಪೆಲಾಂಟರ ಕಡೆ ಎಡ್ವಕೇಟ್
ಉಡುಪಿ, ದ. ಕ. ತಾ. 8 11_1966



ನಮ್ಮ ವೀರಯೋಧರು ಸತತ ಸುಸಜ್ಜಿತರಾಗಿರಲು ಹೆಮ್ಮೆಯಿಂದ ಕಾಣಿಕೆ ನೀಡಿ

ಕದನ ವಿರಾಮವೆಂದರೆ ಹಿಂಸಾಕೃತ್ಯಗಳು ನಿಂತಿವೆಯೆಂದಲ್ಲ. ಅಪಾಯ ಇನ್ನೂ ಇದ್ದೇ ಇದೆ

ನಮ್ಮ ವೀರಯೋಧರು ನಮ್ಮ ಗಡಿಗಳನ್ನು ನಿರಂತರವಾಗಿ ಕಾಯುತ್ತಿದ್ದಾರೆ

ನಮ್ಮ ಸೈನಿಕರಲ್ಲಿ ಉತ್ಸಾಹ ತುಂಬಿರಲು, ಅವರು ಸುಸಜ್ಜಿತರಾಗಿ, ಸನ್ನದ್ಧರಾಗಿರಲು ಸಾಧ್ಯವಿದ್ದಷ್ಟನ್ನೂ ಕೊಡಿ—ಮನಃಪೂರ್ವಕವಾಗಿ ಕೊಡಿ

ರಕ್ಷಣಾನಿಧಿಗೆ ಉದಾರವಾಗಿ ವಂತಿಗೆ ಕೊಡುತ್ತ ಬನ್ನಿ—ಆವತ್ತು ತಪ್ಪುವವರೆಗೂ.

ರಾಷ್ಟ್ರೀಯ ರಕ್ಷಣಾನಿಧಿಗೆ ಇದುವರೆಗೂ ಕೆನರಾ ಬ್ಯಾಂಕ್ ನೀಡಿರುವ ಕಾಣಿಕೆ 1,87,500 ರೂ.ಗಳಿಗೂ ಮೀರಿದೆ ಕೆನರಾ ಬ್ಯಾಂಕಿನ ಸಿಬ್ಬಂದಿಯವರ ಕಾಣಿಕೆ 37,000 ರೂ ಗಳಿಗಿಂತ ಹೆಚ್ಚಾಗಿದೆ.

ರಕ್ಷಣಾನಿಧಿಗೆ ಚೆಕ್ಕುಗಳ ಸ್ವೀಕಾರ, ಯೋಧರಿಗೆ ಹಣ ಪಾವತಿ, ನಿವೃತ್ತಿ ವೇತನ ತರಿಸಿಕೊಡುವುದು ಮುಂತಾದ ಬ್ಯಾಂಕಿಂಗ್ ಸೇವೆಯನ್ನು ಕೆನರಾ ಬ್ಯಾಂಕ್ ಉಚಿತವಾಗಿ ನಿರ್ವಹಿಸುತ್ತದೆ.

**ಕೆನರಾ ಬ್ಯಾಂಕ್ ಲಿಮಿಟೆಡ್**
(ಸ್ಥಾಪನೆ. 1906)
ರಿಜಿಸ್ಟರ್ಡ್ ಆಫೀಸ್ ಮಂಗಳೂರು
ಆಡಳಿತ ಕಚೇರಿ ಬೆಂಗಳೂರು
ಭಾರತದಲ್ಲಿ 235ಕ್ಕೂ ಹೆಚ್ಚು ಶಾಖೆಗಳು
ಪ್ರಪಂಚದಾದ್ಯಂತ ಪ್ರತಿನಿಧಿಗಳು

CB-134/Kan.

# ಕೈತ್ರ ಮುರುಗ

(ಎರಡನೇ ಪುಟದಿಂದ)

...ಡಿ ಕಾಫಿ ಕೊಟ್ಟು ಅತಿಥಿ ಸತ್ಕಾರದ ...ಮಾನ್ಯ ಪದ್ಧತಿಯನ್ನು ಮುಗಿಸಿ ಬಿಡ... ಜಾನಕಿಯು ಇಚ್ಛಿಸಿದ್ದಳು. ಅದೂ ...ವಳಿಂದಾಗಲಿಲ್ಲ.

...ದಿಟ್ಟಿಸಿ ನೋಡುವದು ಮತ್ತು ನೋ...ದೆ ಇರುವದರಲ್ಲಿ ತೃಪ್ತಿ ಪಡುವ— ನೋ...ವದು ಮತ್ತು ನೋಡದಿರುವಿಕೆಯ ...ಳಿತ ಮತ್ತು ಪ್ರವಾಹದ—ಸಮಯ ಆ...ಗಿತ್ತು. ಒಬ್ಬರಿಂದಾಗಿ ಇನ್ನೊಬ್ಬರ...ನನ್ನು ಅತ್ಯಂತ ಅಲೆದಾಡುತ್ತಿತ್ತು. ...ಸ ಪ್ರಕಾಶ ಮತ್ತು ಹೊಸ ಆನಂದದ ...ವಾಹದಲ್ಲಿ ತಾನು ಕೊಚ್ಚಿಕೊಂಡು ...ಗುತ್ತ ಇರುವೆನೆಂಬುದರ ಅರಿವು ರಾ...ವಿಗೆ ಆಗಿತ್ತು. ವಸ್ತುವಿನ ಒಳನೋಟ...ದ ಅವನ ಇಂದ್ರಿಯಗಳು ಚುರುಕಾ...ತ್ತಿದ್ದುವು. ಅವನು ಬಹಳ ಚೆನ್ನಾಗಿ ...ನೋಡುತ್ತಿದ್ದನು, ಚೆನ್ನಾಗಿ ಕೇಳುತ್ತಿದ್ದ..., ಚೆನ್ನಾಗಿ ಗ್ರಹಿಸುತ್ತಲೂ ಇದ್ದನು. ...ನಕಿಯ ಉಸಿರಿನ ಗಾಳಿಯನ್ನು ಅಂತಃ...ರದಿಂದ ಹೊರಗೆ ಬೀಸಿದ ಸುಗಂಧ ...ಯುಕ್ತ ಹೊಗೆ ಎಂದು ಅವನೆಣಿಸಿದನು. ...ದಯ ಬಡಿತ ಕಿವಿಯನ್ನು ತುಂಬಿತ್ತು. ...ಟ್ಟೆಗಳನ್ನುಟ್ಟುಕೊಂಡಿರುವದು ಒಳಗೆ ...ಡಗಿಕೊಂಡಿರುವ ಇನ್ನೂ ಚೆಂದದ ಆ...ರ ಮತ್ತು ರೂಪವನ್ನು ಅಡಗಿಸಿಟ್ಟು...ಳ್ಳಲಿಕ್ಕೆ ಇದೆ. ಪರಿಮಳದಿಂದ ಭರಿತ...ಗಿರುವ ಇಬ್ಬನಿಯು ಗಾಳಿಯನ್ನು ...ರವನ್ನಾಗಿ ಮಾಡಿದೆ. ಉದಯ ರವಿ...ಯಿಂದಿನ್ನೂ ಸರಿಯಾಗಿ ಮುಚ್ಚಲ್ಪಡದ ...ತೆರೆದ ತಾವರೆಗಳಿರುವಂತ ಅವಳ ...ಣ್ಣುಗಳು ಅರೆಬಿರಿದುಕೊಂಡಿದ್ದುವು. ...ಲಗಳು ಬಾಯಿಯಲ್ಲಿ ಅಂಟಿ ಹೋ...ತ್ತು. ಆದರೆ ಎಲ್ಲವೂ ಮಾತಾಡಿದುವು.

ಹೊಸ ಜ್ಞಾನ ಹಾಗೂ ಹೊಸ ಬಾ...ಯ ರುಚಿಯ ಸಂತೋಷದಿಂದಾಗಿ ರಾ...ಮು ಹಾಗೂ ಜಾನಕಿ ಚೆನ್ನಾಗಿ ಬೆವರ...ಟ್ಟಿರು, ಬಹಳ ತಗ್ಗಿನ ನೆಳಮಾಳಿಗೆಯು ಬಹಳ ಪ್ರಕಾಶವುಳ್ಳ ದೀಪ ಹೊಯುವಂತ ಹಗಲು ಕನಸಿನ ಆನಂದವಾಯಿತು. ಪ್ರಕಾಮಯ ಸ್ವಪ್ನವನ್ನ ಕಂಡಂತೆ ...ಮುವಿಗೆ ಭಾಸವಾಯಿತು. ಹೊಸ ಸಾ...ಧ್ಯವು ತನ್ನ ಕೌಮಾರ್ಯ ಅಂತಃಸ್ಫೂರ್ತಿ ಅವನ್ನೇರಿಸಿದೆ ಎಂದು ತಿಳಿದುಕೊಂಡ... ತಿನ್ನದುರಿಗೆ ಮರ್ಯಾದೆಯೇ ಮೂರ್ತಿ...ಗಿ, ಕಲಾಚಾರ ಮತ್ತು ಶೋಭೆ, ತ... ಪ್ರತಿಲಿಪಿಯು ಪರಿವರ್ತನೆಯೇ, ತನ್ನ ... ಸ್ವಭಾವವು ಒಂದು ಚೆಂದದ ದೇಹ...ಗಿ ಗಂಡಿನ ರೂಪದಷ್ಟು ಬಟ್ಟೆಗಳಿಂದ ...ಲಂಕರಿಸಿಕೊಂಡು ಬಂದು ನಿಂತಿರುವಂತ...ಕಗೆ ಅನುಭವವಾಯಿತು. ಹಿಮಾಲಯ...ಲ್ಲಿ ಹುಟ್ಟಿ ಪುನಃ ಸಂಗ...ಯಮುನೆಯು, ಅಥವಾ ಗಂಧ ...ಮತ್ತು ದೇವದಾರು ಬಚ್ಚಗಳ ನೀಳ ಶಾ...ಗಳ ನಡುವೆ ಹುಟ್ಟಿ, ಮುಕ್ಕಳಾಟಕೆ ...ನ್ನು ಕಳೆದು ಪುನಃ ಕಾವೇರಿ-ಭ...ಯು ಒಂದಾಗುವಂತಿತ್ತು ಅವರ ಸ್ಥಿತಿ, ಅದು ಅವನಿರಬಹುದೇ? ಅದು ಅವಳಿರಬಹುದೆ? ಹೀಗೆ ವಿಚಾರ ತರಂಗಗಳಲ್ಲಿ ಸಿಕ್ಕಿ ಅವರು ಕಷ್ಟಪಡುತ್ತ ಇದ್ದರು. ಆಗ ಮೀನಾಕ್ಷಿಯ ಗಂಭೀರ ಹೆಜ್ಜೆಗಳ ನಾದ ಕೇಳಿ ಬಂತು. ಆದರೆ ಅಷ್ಟರೊಳಗೆನೇ ದೇವಾಧಿದೇವನ ಸಾನಿಧ್ಯದಲ್ಲಿ ಅವರ ಕಲ್ಯಾಣ ನಡೆದು ಹೋಗಿತ್ತು. 'ಮರ ಹೋಯ್ತು ಮಾತೆಯ ಮಾತು' ಎಂಬ ಮುರುಗನ ವಿಜ್ಞಾಪನೆಗೆ ಕೂಡಾ ಆ ಕಲ್ಯಾಣವನ್ನು ತಡೆ ಹಿಡಿಯಲಿಕ್ಕಾಗಲಿಲ್ಲ.

೭

"ಪ್ರಿಯ ಕೇದಾರಿ, ಒಬ್ಬನು ಇನ್ನೊಬ್ಬನಿಂದ ಪಡೆಯಬಹುದಾದಂತಹ ಅಮೂಲ್ಯ ಕಾಣಿಕೆಗಳಲ್ಲಿ ಅತ್ಯುತ್ತಮವಿರುವದನ್ನು ನೀನು ನನಗೆ ಕೊಟ್ಟಿರುವೆ; ಜೀವನದ ಉತ್ತಮ ಸಹಭಾಗಿಯನ್ನೇ ದಯಪಾಲಿಸಿರುವೆ." ರಾಮು ಪ್ರಾಮಾಣಿಕ ಮತ್ತು ಪ್ರೇಮದ ಮಾತುಗಳನ್ನಾಡಿದನು.

"ಪ್ರಿಯ ರಾಮು, ನಾನಿತ್ತಿರುವದು, ಪಡೆದುಕೊಂಡಿರುವ ಹಲವಾರು ಸಾಲದಿಂದ ಕೇವಲ ಒಂದನ್ನು ಮಾತ್ರ ಹಿಂದಕ್ಕೆ ಕೊಟ್ಟಂತಿದೆ. ನಿನಗೆ ಜಾನಕಿಯು ಕಾಣಿಕೆಯಾದಲ್ಲಿ ಕೋಗಿಲೆ ನಿನ್ನ ಕಾಣಿಕೆ ಇದ್ದಾಳೆ. ನಿನ್ನ ಸಾಮರ್ಥ್ಯ ಪೂರ್ಣ ಹಾಗೂ ಸಿಹಿ ಬುದ್ಧಿವಾದ-ಹೆಚ್ಚು ಕಡಿಮೆ ಆಜ್ಞೆ-ಮಾತ್ರದಿಂದಾಗಿ ಕೋಗಿಲಳೊಡನೆ ನನ್ನ ಮದುವೆಯಾಗಲು ಸಾಧ್ಯವಾಯಿತು."

"ಹೌದು. ಅದು ಹಾಗೆ. ನಾನು ಅವರಿಬ್ಬರನ್ನು—ಎರಡು ಅಪೂರ್ವ ಪುಷ್ಪಗಳನ್ನು—ಹೋಲಿಸ ಕೂಡದು. ವಿವಾಹ ಸಂಭ್ರಮವು ಸರಳ ಹಾಗೂ ಆರ್ಥಿಕವಾಗಿದ್ದು, ಪದ್ಧತಿಯ ಮೋಸ ಹಾಗೂ ವ್ಯರ್ಥಕ್ಕ ಆಶ್ರಯ ಕೊಡದೆ ಜರಗಿದುದು ಬಹಳ ಸಂತೋಷದ ಸಂಗತಿ."

"ತಿರುಪತಿಯಲ್ಲಿ ಏಳು ಪರ್ವತಗಳ ಮೇಲಿರುವ ವೆಂಕಟೇಶನ ಪವಿತ್ರ ಸನ್ನಿಧಾನದಲ್ಲಿ ಬಹು ವಿಧಿ ವಿಧಾನ ಮತ್ತು ಆಧ್ಯಾತ್ಮಿಕತೆಯಿಂದ ಆಚರಿಸಲ್ಪಟ್ಟಿದೆ. ಆ ದೇವರು ನಮ್ಮನ್ನು ಆಶೀರ್ವದಿಸಲಿ." ಕೇದಾರಿಯು ಸಲ್ಲಿಸಿದನು.

ಚಿಂತಾಯುಕ್ತ ಸ್ವರದಿಂದ ಮೆಲ್ಲನೆ ರಾಮು ಹೇಳಲು ಪ್ರಾರಂಭಿಸಿದನು. 'ಜಾನಕಿಯನ್ನು ನೋಡಲು ಹಾಗೂ ಸ್ವಾಗತಿಸಲು ತನ್ನ ತಾಯಿಯವರು ಬದುಕಿರುತ್ತಿದ್ದಲ್ಲಿ, ನಾನು ಅವರಲ್ಲಿ ನಂಬಿಕೆಯನ್ನುಂಟುಮಾಡುತ್ತಿದ್ದೆ. ಅಸಾಧಾರಣ ಒಳ್ಳೆಯದಕ್ಕೆ ನಾವಿನ್ನೂ ಬಹಳ ಅಪರಿಪಕ್ವ ಸ್ಥಿತಿಯಲ್ಲಿದ್ದೇವೆ. ಕಾಣಿಕೆಯಾಗಿ ಕೂಡಾ ಸಂಪೂರ್ಣತೆಯನ್ನು ಪಡೆಯಲು ಯಾವ ಮನುಷ್ಯನೂ ಅರ್ಹನಿರುವುದಿಲ್ಲ. ಅಹ್ಹ! ನನ್ನ ತಾಯಿಯವರು ಜೀವದಿಂದಿರುತ್ತಿದ್ದಲ್ಲಿ ನನ್ನ ಸಂತೋಷ ಅದು ಹೇಗೆ ಸಂಪೂರ್ಣವಾಗುತ್ತಿತ್ತು!"

"ಈಗ ಕೂಡಾ ನಿನ್ನನ್ನವರು ಆಶೀರ್ವದಿಸುತ್ತಾರೆಂಬುದರಲ್ಲಿ ನನಗೆ ಭರವಸೆಯಿದೆ. ತನ್ನ ಮಗನ ಕೈಹಿಡಿದು ಮದುವೆಯಾಗಿರುವ ಅವನ ಮಡದಿಯನ್ನು ಯಾವ ಹಿಂದೂ ಮಾತೆಯೂ ಕಟ್ಟಿಂತಿಯಲ್ಲಿ ಬರೆಮಾಡಿಕೊಳ್ಳುವದಿಲ್ಲ. ಮಾಡಿರುವ ಕೆಲಸ ಆಶೀರ್ವದಿಸಲ್ಪಡುವಂತಹದು. ಯಾವ ಕಾರಣದಿಂದಾದರು ಜಾನಕಿಯನ್ನು ತಿರಸ್ಕರಿಸುವವರು ಯಾರಾದರೂ ಇದ್ದಾರೆಯೇ ?

ರಾಮು ಆಲೋಚನಾ ಮಗ್ನನಾಗಿದ್ದುದರಿಂದ ಸ್ವಲ್ಪ ಹಿಂದಕ್ಕೆ ಬಿದ್ದನು. ಅನಂತರ ಹುಬ್ಬಿನಿಂದ ಬೆವರಿನ ಹನಿಯನ್ನು ಒರಸಿಕೊಂಡನು. "ಕೇದಾರಿ, ನಾವೀಗ ಜೀವನ ನೌಕೆಯಲ್ಲಿ ಕಾಲಿಟ್ಟಿದ್ದೇವೆ. ಆದರೆ ನಮ್ಮಿಬ್ಬರ ಒಳಿಯೂ ಹಣ ಇಲ್ಲ. ಸಣ್ಣ ಜಮೀನಿನಿಂದ ಬರುತ್ತಿದ್ದ ಆದಾಯವನ್ನು ಹುಚ್ಚು ಚಪಲತೆಗಾಗಿ ಬೇಕಾದಾಗಲೆಲ್ಲ ಹಾಳುಮಾಡಿಕೊಂಡು ಬರಿಗೈಯವನಾಗಿದ್ದೇನೆ. ನಾನವನನ್ನು ಜೋಪಾನವಾಗಿಡುತ್ತಿದ್ದಲ್ಲಿ ನಾವಿಬ್ಬರೂ ಕಲಾಶಾಲೆಯ ಜೀವನವನ್ನು ಕಷ್ಟವಿಲ್ಲದೆ ಮುಗಿಸಿ ಬಿಡಬಹುದಿತ್ತು. ಆದರಲ್ಲೂ ಒಂದು ಸಂತೋಷದ ಸುದ್ದಿ ಎಂದರೆ ನನಗೆ ಸಿಕ್ಕಿರುವ ವರದಕ್ಷಿಣೆ ಒಂದು ಸಾವಿರ ರೂಪಾಯಿ—ಯನ್ನು ಬುದ್ಧಿವಂತಿಕೆಯಿಂದ ಉಳಿಸಿಕೊಂಡಿದ್ದೇನೆ. ಈ ವರ್ಷದ ಕಲಾಶಾಲೆಯ ಜೀವನಕ್ಕಾಗಿ ಅದನ್ನು ಖರ್ಚು ಮಾಡಬಹುದು."

ಪುನಃ ಅವನು ತಡೆದು, "ಬರುವ ವರ್ಷ ಕೋಗಿಲೆ ಹಾಗೂ ಜಾನಕಿಯರು ಪ್ರಾಯಕ್ಕೆ ಬಂದು, ನಮ್ಮೊಡನೆ ಕೂಡಬಹುದು. ಆಗಲೂ ನಾವಿಬ್ಬರು ಸೇರಿಕೊಂಡಿದ್ದು ನಮ್ಮ ಜೀವನದ ಲಘು ಕಾರ್ಯಗಳನ್ನು ಮಾಡುತ್ತಿರೋಣ. ಸದಾ ಹಸುರಾಗಿದ್ದು ಯಾವಾಗಲೂ ಪರಿಮಳವನ್ನೀಯುತ್ತ, ಗೊಂಚಲಲ್ಲೆ ಅರಳುವ ಹೂಗಳನ್ನೀಯುವ ಹಾಗೂ ಗೊಂಚಲಲ್ಲೇ ಬಂಗಾರ ಹಳದಿ ಬಣ್ಣದಿಂದ ಹೊಳೆಯುವ ಹೂಗಳನ್ನೀಯುವ ಸಂಪಿಗೆ ಬಳ್ಳಿಯಂತೆ ಜಾನಕಿ ಮತ್ತು ಕೋಗಿಲೆಯರು ಒಟ್ಟಿಗೆ ಬೆಳೆಯಲಿ."

ಪುನಃ ತಡೆದು, ರೆಪ್ಪೆ ಮುಚ್ಚಿ, ಮತ್ತೆ ಮುಂದರಿಸಿದನು.

"ಆ ಒಂದು ಸಾವಿರದಲ್ಲಿ, ಪ್ರಿಯ ಕೇದಾರಿ, ನಿನಗಾಗಿ ಇಲ್ಲಿ ಐನೂರಿದೆ. ನಿನ್ನ ವರ್ಷದ ಖರ್ಚಿಗಾಗಿ, ನನ್ನ ಮನೋಸ್ಥಿತಿ ಅಥವಾ ಭಾವನೆಗೆ ನೀನು ಕಾದು ನಿಲ್ಲದಂತಾಗಲು ಈ ಹಣವನ್ನು ಮೊತ್ತವನ್ನಾಗಿ ತೆಗೆದುಕೊಳ್ಳು."

ರಾಮು ಪುನಃ ತಡೆದನು. ಕೇದಾರಿಯು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ, ಹತ್ತಿಯ ದುರದಿಂದ ನೇಯ್ದಿದ್ದ ಚೀಲದಲ್ಲಿ ಪ್ರಕಾಶಿಸುತ್ತಿರುವ ಮುದ್ರೆಯೊತ್ತಿರುವ ಬೆಳ್ಳಿಯ ಚೂರುಗಳತ್ತ—ನಾಣ್ಯಗಳತ್ತ—ನಂಬಿಕೆ ಇಲ್ಲದ ಕಣ್ಣುಗಳಿಂದ ದಿಟ್ಟಿಸಿ ನೋಡುತ್ತಿದ್ದನು. ರಾಮುವಿನ ಪ್ರತಿಯೊಂದು ಶಬ್ದಕ್ಕೂ ಕೃತಜ್ಞತೆಯ ನೋಟವನ್ನವನು ಬೀರುತ್ತಿದ್ದನು.

"ಪ್ರಿಯ ಕೇದಾರಿ, ಇನ್ನೊಂದು ವರ್ಷದ ನಂತರ ನೀನು ಸಂಪಾದಿಸಲು ಆರಂಭಿಸುವೆ. ಅಷ್ಟರ ವರೆಗೆ ಮುರುಗನು ನಮ್ಮಿಬ್ಬರ ಸಾಮಾನ್ಯ ಪೋಷಕನಾಗಿರಬೇಕು."

"ಆ ಮೇಲೆ, ನನ್ನ ಜೀವಮಾನದ ಕೊನೆಯ ವರೆಗೂ, ನಮಗೆ ಬೇಕಾದಷ್ಟನ್ನು ನಾನು ಸಂಪಾದಿಸುತ್ತೇನೆ. ಕೇವಲ ಮಾತುಗಳು ಸಮುದ್ರದಿಂದ ತೆಗೆದ ಖಾಲಿ ನೀರಿನ ಹಾಗಿವೆ. ನನ್ನ ತಾಯಿ ತಂದೆ ಕೂಡಾ, ಅವರ ವಿಷಯ ನನಗೆ ಗೊತ್ತಿಲ್ಲದಿದ್ದರೂ, ಹಾಗೂ ಯಾರೂ ನಿನ್ನಷ್ಟು ಉದಾರಿಗಳಾಗಿರಲು ಸಾಧ್ಯವೇ ಇಲ್ಲ." ಕೇದಾರಿ ಹೇಳಿದನು.

ಬಹು ದಿನಗಳಿಂದ ಕೇದಾರಿಗೊಂದು ಎಚ್ಚರಿಕೆಯ ಮಾತನ್ನು ಹೇಳಬೇಕೆಂದಿದ್ದ ರಾಮು ಅದೊಂದು ಉಚಿತ ಹಾಗೂ ಯೋಗ್ಯ ಕಾಲವೆಂದು ಭಾವಿಸಿದನು.

"ಆದರೆ ಕೇದಾರಿ, ಪ್ರಾಯದಲ್ಲಾದರೂ ದೊಡ್ಡವನಿರುವ ನಾನು, ಅಣ್ಣನಂತೆ, ನೀನೀಗ ಬಳಸುತ್ತಿರುವ ದುಂದುವೆಚ್ಚದ ಅಭ್ಯಾಸಕ್ಕೆ ಎದುರಾಗಿ ಯಾವಾಗವಾದರೂ ಎಚ್ಚರಿಸಿದಲ್ಲಿ ಕ್ಷಮಿಸಿ ಬಿಡು; ಹಾಗೆ ಅಮಲೇರಿಸುವ ಜಯದ ಕುಂಭು ಇನ್ನೊಂದು ಮಾತು ಹೇಳುತ್ತೇನೆ ದ್ರಾಕ್ಷಾರಸ ಮಧ್ಯವಿದೆ. ಯಶಸ್ಸು ಅಭಿವೃದ್ಧಿ ಇದೆ. ನಾನು ಹೊಟ್ಟೆಕಿಚ್ಚು ಪಡುವದಿಲ್ಲ. ಬಲವಾದ ತಲೆಗೂ ಕೂಡಾ ಮುಸಿಸು ಹಾಗೂ ವ್ಯರ್ಥ ಕಲ್ಪನೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ನೀನು, ಗೆಳೆಯ ಕೇದಾರಿ, ಪ್ರಪಂಚಕ್ಕೊಂದು ಪಾಠವಾಗಿರಬೇಕು. ನೀನು ಸಾಹಸದ, ಗೆಲುವಿನ, ಧೈರ್ಯಶಾಲಿ, ಪ್ರಕಾಶಮಯ ಹಾಗೂ ನಕ್ಕುನಗಿಸುವವನು, ಅಷ್ಟೇ ಅಲ್ಲ, ವಿನಯಶೀಲನೂ ಆಗಬೇಕು. ನೀನು ನನಗ ಧ್ಯೇಯವಾದಿಯ ದೃಷ್ಟಿಯಾಗಿರು.'

"ನೀನು ಸರಿ, ರಾಮು, ನಿನಗೆ ನಾನು ಕೃತಜ್ಞನಾಗಿದ್ದೇನ. ಆದರೆ ನೀನು ಹೇಳಿರುವ ಗುಣಗಳೆಲ್ಲ ನನ್ನಿಂದ ಅದೆಷ್ಟು ದೂರದಲ್ಲಿ..."

"ಬಹು ದೂರದಲ್ಲಿಲ್ಲ, ಪ್ರಿಯ ಕೇದಾರಿ ಮೊದಲ ನೋಟದಲ್ಲಿ ನೀನು ಅವನ್ನು ಕಂಡುಕೊಳ್ಳಬಹುದು ನಿಜವಾದ ಧೈರ್ಯ ಮತ್ತು ವಿನಯ ಯಾವಾಗಲೂ ಕೈಕೈ ಹಿಡಿದುಕೊಂಡು ಹೆಜ್ಜೆ ಹಾಕಬೇಕು. ಮಹಿಮೆ ಮತ್ತು ನಮ್ರತೆ ಜೊತೆಯಾಗಿರಬೇಕು. ಒಂದು ಇನ್ನೊಂದರ ಪರೀಕ್ಷೆ ಇದ."

"ಪ್ರಿಯ ರಾಮು, ಹಾಗಾದರೆ ನೀನು ನ್ಯಾಯ ವಿದ್ಯಾಲಯ ಜೀವನದ ಅನುಭವವನ್ನು ಪಡೆದುಕೊಳ್ಳಬೇಕು. ಅಲ್ಲಿಯ ಜೀವನವು, ಈಗ ಚಿಕ್ಕ ರೀತಿಯಲ್ಲಿದ್ದು, ಮುಂದಕ್ಕೆ ದೊಡ್ಡದಾಗಿ ಹರಿಯುವ ನದಿಯಂತಿದೆ ಎಂದು ಇತರರು ಹೇಳುತ್ತಾರೆ. ನೀನು ಯಾವಾಗಲೂ ಹೇಳುವಂತೆ, ನಮ್ಮ ವಿದ್ಯಾಲಯದ ವಿದ್ಯೆಯು ಬಾಳಿನ ನಿಷ್ಪ್ರಯೋಜಕತೆಯನ್ನು ಹೆಚ್ಚಿಸುತ್ತದೆ; ಅಲ್ಲದೆ ನಿಜ ಧ್ಯೇಯಗಳಿಗದು ಸುಳ್ಳಾಗಿದ್ದಲ್ಲಿ, ನಮ್ಮ ನ್ಯಾಯ ಶಾಸ್ತ್ರದ ವಿದ್ಯೆಯಂತೂ




NAVAYUGA 11—11—1965

Registered with the Registrar of News Papers for India under No. R. N. 3646/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೧೧-೧೧-೬೫ರಿಂದ ೧೭-೧೧-೬೫ರ ವರೆಗೆ

### ೧. ಮೇಷ

ನಿಮ್ಮ ಪರಿಸ್ಥಿತಿಯಲ್ಲಿಂದು ಏನೂ ಹೆಚ್ಚಿನ ಸುಧಾರಣೆ ಕಾಣಿಸಲಾರದಾದರೂ ಗೃಹತಾಪತ್ರಯಗಳು ಬಹುಮಟ್ಟಿಗೆ ಕಡಿಮೆಯಾಗಲಿದೆ. ಪರಿಶ್ರಮವೆಂದೂ ವಿಫಲವಾಗಲಾರದು. ಜನತೆಯ ಬೆಂಬಲವು ಇಲ್ಲವಾದರೂ ಹಿಡಿದ ಕಾರ್ಯದಲ್ಲಿ ಯಶಸ್ವಿಗಳಾಗುವಿರಿ. ನೌಕರಿ ಜನತೆಗೆ ಸ್ಥಾನಚಲನೆಯ ಯೋಗವಿದೆ. ಸ್ವಂತ ಆರೋಗ್ಯದತ್ತ ಸ್ವಲ್ಪ ನಿಗಾ ಇರಲಿ. ತಾ. 12, 13, 16, 17 ತುಂಬ ಅನುಕೂಲವಿದೆ.

### ೨. ವೃಷಭ

ವಿರೋಧಿಗಳ ಪ್ರತಿಕ್ರಿಯೆಯಿಂದಾಗಿ ನಿಮ್ಮ ಕರ್ತೃತ್ವ ಶಕ್ತಿಯು ಕುಂಠಿತವಾಗುವದು. ವಿಶೇಷತಃ ರಾಜಕೀಯ ರಂಗದಲ್ಲಿ ಪ್ರತಿಪಕ್ಷಿಗಳಿಂದ ಪರಾಭವ ಹೊಂದುವಿರಿ. ಹೆಚ್ಚಿನ ಧನಹಾನಿಯೂ ಉಂಟಾದೀತು. ಮಿತಭಾಷಿಗಳಾಗಿದ್ದರೂ ಕೂಡ ವಿಜಾತಿಯವರೊಡನೆ ವಾಕ್ಕಲಹವಾಗಲಿದೆ. ಖರ್ಚಿಗೆ ಸಾಕಷ್ಟು ದುಡಿಮೆಯಿರುವುದರಿಂದ ದಿನಯಾಪನೆಯು ದುಸ್ತರವಾಗದು. ತಾ. 11, 14, 15 ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

### ೩. ಮಿಥುನ

ಶತ್ರು ಪೀಡೆಯಿಂದ ನೀವಿಂದು ಮುಕ್ತರಾಗುವಿರಾದರೂ ದೇಹಾಲಸ್ಯವು ಪದೇಪದೇ ನಿಮ್ಮನ್ನು ಕಾಡುತ್ತಿರುವುದು. ಸತಿಪತಿಗಳಲ್ಲಿ ಸದಾ ಕಲಹ ವಿರಸಗಳುಂಟಾಗಲಿವೆ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟವುಂಟಾಗುವದು. ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಮನೋನೆಮ್ಮದಿಯು ದುರ್ಲಭವೇ ಸರಿ. ತಾ. 12, 13, 16, 17 ಕೆಲವೊಂದು ಬಯಕೆಗಳು ಈಡೇರುವವು.

### ೪ ಕರ್ಕಟ

ಕೃಷ್ಣಪಕ್ಷದ ಚಂದ್ರನೋಪಾದಿಯಲ್ಲಿ ನಿಮ್ಮ ಅದೃಷ್ಟವು ದಿನದಿಂದ ದಿನಕ್ಕೆ ಹ್ರಾಸವಾಗುತ್ತಿದೆ. ಯಾವ ಕಾರ್ಯವನ್ನೂ ಸಾಧಿಸುವ ಧೈರ್ಯೋತ್ಸಾಹಗಳು ನಿಮ್ಮಲ್ಲಿ ಕಾಣಲಾರದು. ಸ್ವಜನರು ವಿರೋಧಿಗಳ ಸಾಲಿಗೆ ಸೇರುವರು. ಹೆಚ್ಚೇಕೆ ಪತ್ನೀಪುತ್ರರೂ ಕೂಡ ಇಂದು ನಿಮ್ಮನ್ನು ವಿರೋಧಿಸುವರೆಂದರೂ ತಪ್ಪಾಗದು. ಖರ್ಚುಗಳ ಆಧಿಕ್ಯದಿಂದಾಗಿ ಮರ್ಯಾದೆಯಿಂದ ದಿನಗಳೆಯಲಾಗದು. ಕಷ್ಟಸಹಿಷ್ಣುಗಳಾದ ನಿಮಗೆ ತಾ. 11, 14, 16 ಹೆಚ್ಚಿನ ಅನಿಷ್ಟಕಾರಿಯಾಗಿ ಕಾಣಿಸದು.

### ೫. ಸಿಂಹ

ನಿಸರ್ಗತಃ ಶುಭಂಪದ ಬುಧ ಗುರು ಶುಕ್ರರ ಕೃಪಾಕಟಾಕ್ಷಕ್ಕೆ ನೀವಿಂದು ಪಾತ್ರರಾಗುವಿರಿ. ಸದುನ್ನತ ಸನ್ಮಾರ್ಗವಲಂಬಿಯಾದ ಜನತೆಗೆ ಇಂದಿನ ದಿನಗಳು ಸುಖದಾಯಿಗಳಾಗುವವು. ಶ್ರಮಜೀವೀ ಸೇವಕ ವೃಂದಕ್ಕೆ ಸ್ವಲ್ಪ ಆರ್ಥಿಕ ತಗಾದೆ ಕಾಣಿಸಿದರೂ ದಿನಯಾಪನೆಯು ದುಸ್ತರವಾಗದು. ರಾಜಕೀಯದಲ್ಲಿ ಪರಿಣಾಮವು ವಿಪರೀತವಾದೀತು. ತಾ. 14, 16ರಲ್ಲಿ ಅಧಿಕ ವ್ಯಯವಾಗಲಿದೆ.

### ೬. ಕನ್ಯಾ

ನಿಮ್ಮ ಉದ್ಯಮಗಳು ಯಶಸ್ವಿಯಾಗಿ ಕೊನೆ ಹೊಂದುವವು. ಪರಿಶ್ರಮಕ್ಕೆ ತಕ್ಕ ಫಲ ಲಭಿಸುವುದರಿಂದ ದಿನಗಳು ಸುಖಮಯವಾಗಲಿವೆ. ಮಿತ್ರರ ಸೋಗಿನಿಂದ ಕೆಲವೊಮ್ಮೆ ಶತ್ರುಜನರು ನಿಮ್ಮನ್ನು ವಂಚಿಸಲಿರುವರು. ಪ್ರವಾಸದಲ್ಲಿ ಆಕಸ್ಮಿಕ ಅಪಘಾತಾದಿಗಳು ಸಂಭವಿಸುವಂತಿವೆ. ನಿರೋಗಿಗಳಾದ ನಿಮಗೆ ತಾ. 12ರಿಂದ 16ರ ವರೆಗಿನ ದಿನಗಳು ತುಂಬ ಅನುಕೂಲವಾಗಿವೆ.

### ೭. ತುಲಾ

ನಿಮ್ಮ ಪೌರುಷಕ್ಕೆ ತಕ್ಕುದಾಗಿ ದೈವವೂ ನೆರವಾಗುವುದರಿಂದ ಆರಂಭಿಸಿದ ಕಾರ್ಯಗಳು ನಿರ್ವಿಘ್ನದಿಂದ ಕೊನೆಗೊಳ್ಳಲಿವೆ. ನಿಮ್ಮ ಬಯಕೆಗಳು ಸಫಲವಾಗುವವು. ಕೆಲವೊಮ್ಮೆ ನಿಮ್ಮ ಆತ್ಮೀಯರೇ ನಿಮ್ಮನ್ನು ವಂಚಿಸಲಿರುವರು. ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ವಿಜಯವು ನಿಮಗಾದರೂ ಖರ್ಚು ಸ್ವಲ್ಪ ಹೆಚ್ಚುವದು. ವಾರಾಂತ್ಯದ 4 ದಿನಗಳಲ್ಲಿ ಬಯಕೆಗಳು ಪೂರ್ಣವಾಗುವವು.

### ೮. ವೃಶ್ಚಿಕ

ಯಾವ ರಾಜನೇ ಬಂದರೂ ರಾಗಿ ಬೀಸುವದು ತಪ್ಪಿದ್ದಲ್ಲವೆಂಬ ಗಾದೆಯಂತೆ ನಿಮ್ಮ ಪರಿಸ್ಥಿತಿಯಾಗಿರುವುದು. ವಿಷಯಾದಿಗಳ ದುರಭಿಲಾಷೆಗೆ ಸಿಲುಕಿ ಹೆಚ್ಚಿನ ನಷ್ಟಕ್ಕೆ ಗುರಿಯಾಗುವಿರಿ. ಎಷ್ಟೇ ಮಿತಭಾಷಿಯಾಗಿದ್ದರೂ ವಾಕ್ಕಲಹವು ಅನಿವಾರ್ಯವಾಗುವದು. ಧನಪತಿಯಾದ ಗುರುವು ಅಸ್ತಮಸ್ತನಾದ ಕಾರಣ ಆರ್ಥಿಕ ಅಡಚಣೆಯು ವಿಶೇಷವಾಗಿ ಮನೋರೋಗಕ್ಕೆ ಸಿಲುಕಲಿರುವಿರಿ. ತಾ. 11, 16, 17 ಈ ದಿನಗಳು ಇತರ ದಿನಗಳಿಗಿಂತ ಸ್ವಲ್ಪ ಅನುಕೂಲವಾಗಿ ಕಾಣಿಸಬಹುದು.

### ೯. ಧನು

ಶ್ರಮವಹಿಸಿ ದುಡಿಯುವಿರಿ. ಪರಿಶ್ರಮವು ಸಫಲವಾಗುವವು. ಆದರೆ ದಿನಾಂತ್ಯದಲ್ಲಿ ನಿಮ್ಮ ಕೈಯಲ್ಲಿ ಕಾಸೊಂದೂ ಉಳಿಯದು. ಸ್ವಂತ ಉಪಭೋಗಕ್ಕೆ ಬೇಕಾದ ಸಕಲ ವಸ್ತುಗಳೂ ಅನಾಯಾಸದಿಂದ ಲಭಿಸಲಿವೆ. ವಿರೋಧಿ ಜನರು ನಿಮ್ಮನ್ನ ಒಳಹೊಕ್ಕು ನಿಮ್ಮನ್ನು ಗೆಲ್ಲಲಿರುವರು. ಪ್ರವಾಸವು ಸುಖಕರವಾಗಿ ಪರಿಣಮಿಸೀತು ಜನಾನುರಾಗವಂ ಗಳಿಸಿದ್ದ ನಿಮಗೆ ವಾರಾದಿಯ 3 ದಿನಗಳು ಅನುಕೂಲವಾಗಿವೆ.

### ೧೦. ಮಕರ

ಯಾರೊಬ್ಬರ ನೆರವು ನಿಮಗಿಂದು ಲಭಿಸಲಾರದಾದರೂ ನಿಮ್ಮ ಶಕ್ತಿ ಮೀರಿ ಶ್ರಮಿಸುವಿರಿ. ಪರಿಶ್ರಮವು ಸಫಲವಾಗುವುದು. ದುಡಿಮೆಯನ್ನು ಬಹ್ವಂಶ ಸ್ವಾರ್ಥಕ್ಕಾಗಿಯಾದರೂ ಸದ್ವಿನಿಯೋಗ ಮಾಡುವಿರಿ. ಸೋದರ ವರ್ಗದವರ ಕೂಡೆ ಕಲಹವಾದೀತು. ಅಲ್ಲದೆ ಬಂಧುಜನರೊಡನೆಯೂ ಮನಸ್ತಾಪವುಂಟಾಗಲಿದೆ. ನೀರೋಗಿಗಳಾದ ನಿಮಗೆ ತಾ. 12ರಿಂದ 14 ವರೆಗಿನದಿನಗಳುಇಷ್ಟಾರ್ಥವನ್ನೀಯಲಿವೆ.

### ೧೧ ಕುಂಭ

ನಿಮ್ಮ ನಿಮ್ಮ ದೈವವಿಂದು ಕಣ್ತೆರೆದಿರುದು. ದಿನಕರನಂ ಕಂಡ ಹಿಮರಾಶಿಯಂತೆ ನಿಮ್ಮ ಎಲ್ಲಾ ತಂಟೆತಕರಾರುಗಳೂ ತಾಪತ್ರಯಗಳೂ ಮಾಯವಾಗುವವು. ಎಂತಹ ಮಹತ್ಕಾರ್ಯಗಳೂ ನಿಮಗಿಂದು ತೃಣಪ್ರಾಯವೆನಿಸುವವು. ಸಾಮಾಜಿಕ ರಾಜಕೀಯ ರಂಗದಲ್ಲಿ ಕೀರ್ತಿ ವಿಜಯಗಳನ್ನು ಗಳಿಸುವಿರಿ. ಬಂಧುಮಿತ್ರಾದಿ ಪರಿವಾರ ವರ್ಗದವರಿಂದ ಕೂಡಿ ಸುಖದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ವಾರಾಂತ್ಯದ 4 ದಿನಗಳು ಅನುಕೂಲವಾಗಿ ಪರಿಣಮಿಸುವವು.

### ೧೨. ಮೀನ

ಧನಭಾಗ್ಯಪತಿಯೋರ್ವನನ್ನುಳಿದು ಇತರ ಗ್ರಹವೃಂದವೆಲ್ಲವೇ ನಿಮಗಿಂದು ಪ್ರತಿಕೂಲವಾಗಿರುವುದರಿಂದ ನಿಮ್ಮ ಕಾರ್ಯಕಲಾಪಗಳಿಗೆ ಹಲವಾರು ತೊಡಕು ತೊಂದರೆಗಳು ಬರಲಿವೆ. ಕನಸು ಮನಸಿನಲ್ಲೂ ನೆನಸದ ಖರ್ಚುಗಳು ಅನಿರೀಕ್ಷಿತವಾಗಿ ಪ್ರಾಪ್ತವಾಗಲಿವೆ. ಬಂಧುಗಳ ನೆರವಿನಿಂದಾಗಿ ಈ ಗಂಡಾಂತರದಿಂದ ಪಾರಾಗುವಿರಿ. ಅಂತೂ ಈ ತೀವ ಕಷ್ಟದಿಂದ ದಿನಗಳೆಯ ತಕ್ಕ ನಿಮಗೆ ತಾ. 11-16-17 ಹೆಚ್ಚಿನ ದೋಷಕಾರಿಗಳಾಗಿ ಕಾಣಿಸಲಾರವು.

---

ಸಂಪೂರ್ಣ ಮಿಥ್ಯಾಮಯ. ನೀನಲ್ಲಿ ಇಲ್ಲದಿರುವದಕ್ಕಾಗಿ ನಾನು ಬಹಳ ಬೇಸರಪಡುತ್ತಿದ್ದೇನೆ. ಅದರ ಕಪಟತ್ವ, ಚಾಳಿ, ಸೋಗು ಮತ್ತು ಠಕ್ಕುತನದಿಂದ ನೀನು ಕೂಡಾ ತಲೆ ಮರೆಸಿಕೊಳ್ಳುವದು ಕಷ್ಟ. ಅಲ್ಲಿನ ಜೀವನಕ್ಕೂ ನೀನೆಣಿಸಿರುವ ಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಆದರೂ ನಿನ್ನ ಎಚ್ಚರಿಕೆಯು ಸೂಕ್ತವಿದೆ. ಪ್ರಿಯ ರಾಮು, ನಿನ್ನ ಸ್ನೇಹದಿಂದ ಆಕಾಂಕ್ಷೆಗಳನ್ನು ತುಳಿದು ನಿಲ್ಲಲು ಪ್ರಯತ್ನಿಸುತ್ತೇನೆ."

ಕೇದಾರಿಯು ರಾಮುವಿನ ಕೈಯನ್ನು ತನ್ನದರಲ್ಲಿ ತೆಗೆದುಕೊಂಡು ಮೆಲ್ಲಗೆ ಒತ್ತಿದನು. ಹಾಗೆ ಒತ್ತಿದಾಗ ಅವರಿಬ್ಬರೂ ನವೋದಯವಾಗಲಿರುವ ಸಂತೋಷಮಯ ಪ್ರಪಂಚವನ್ನು ಕಾಣುತ್ತಿದ್ದರು. ಆವರಿಬ್ಬರ ಹೃದಯವೂ ಪುನಃ ಅಂದು ಒಂದಾಯಿತು. ರಾತ್ರಿಯ ಕಪ್ಪು ಬಣ್ಣ ಜಾಸ್ತಿಯಾಗುತ್ತಿತ್ತು. ನಿದ್ರಾದೇವಿಯು ರಾಮುವಿನ ಮೈಮೇಲೆ ಮೆಲ್ಲಮೆಲ್ಲನೆ ಕೈಯಾಡಿಸಲಾರಂಭಿಸಿದಳು. ಆಗ ಕೂಡಾ, ತಾನು ಬಿ. ಎ.ಯಲ್ಲಿ ಉತ್ತೀರ್ಣನಾಗಿದ್ದು ಯಫ್.ಯಲ್.ನಲ್ಲಿ ಕೇದಾರಿಯೊಂದಿಗೆ ಕೊನೆಯ ಹುಡುಗನಾಗಿದ್ದರೂ ಚಿಂತಿರಲಿಲ್ಲ—ಇರುತ್ತಿದ್ದಲ್ಲಿ ಬಾಳು ಆದೆಷ್ಟು ಸಿಹಿಯಾಗುತ್ತಿತ್ತೆಂಬುದು ಅವನ ಆಲೋಚನೆಗೆ ಬಾರದಿರಲಿಲ್ಲ. ಮುಳ್ಳಿನ ಕಣ ಮೆತ್ತಗಿರುವ ಮಂಚದೊಳಗೆಲ್ಲೋ ಇದ್ದುಕೊಂಡು ತೊಂದರೆ ಕೊಡುತ್ತಿದೆಂಬಂತೆ ಅವನಿಗೆ ಭಾಸವಾಯಿತು.

"ಪಾಪಿ, ವಿಶ್ವವಿದ್ಯಾಲಯ! ಉತ್ಸಾಹಪೂರ್ಣ ಪರಾಭಿಪ್ರಾಯವುಳ್ಳ ತರುಣರನ್ನು ಕೆಲವರನ್ನು ಉತ್ತೀರ್ಣ ಮತ್ತೆ ಕೆಲವರನ್ನು ಅನುತ್ತೀರ್ಣರನ್ನಾಗಿ ವಿಂಗಡಿಸಿ ವಿಶ್ವೇಶ್ವರನ ಈ ವಿಶಾಲ, ಸ್ವತಂತ್ರ, ಸಮಾನ ಹಾಗೂ ದಯಾಮಯ ತರುಣರ ಪ್ರಪಂಚದಲ್ಲಿ ವರ್ಗಕಲಹವನ್ನುಂಟುಮಾಡುತ್ತಿದೆ" ಎಂದು ಅರ್ಧ ಸ್ವಪ್ನ, ಅರ್ಧ ಜಾಗ್ರತಾವಸ್ಥೆಯಲ್ಲಿದ್ದ ರಾಮು ಗೊಣಗುಟ್ಟಿದನು.

ರಾಮು ಮಾತ್ಸರ್ಯವನ್ನು ಬೆಳೆಸುತ್ತಿದ್ದ ಭಾವನೆಗಳನ್ನು ಬದಿಗೊತ್ತಿದನು. ಆಗಲೇ ಕೇದಾರಿಯು ಗಾಢ ನಿದ್ರೆಯಲ್ಲಿದ್ದುದರಿಂದ ಅವನು ನಿದ್ರೆಯನ್ನು ಒಲಿಸಿಕೊಂಡನು.

(ಮುಂದುವರಿಯುವುದು)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

# నవయుగ

# NAVAYUGA

౧౦ న.పై.

ಧಾರಾವಾಹಿ ಕಾದಂಬರಿ

# ರೈತ ಮುರುಗ

ಇಂಗ್ಲಿಷ್ ಮೂಲ:— ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ವರೆಗೆ—

ಮಿತ್ರ ಕೇದಾರಿಯ ಬಯಕೆಯಂತೆ ಅಲವಂತಿಯ ರಾಮು ಮದ್ರಾಸಕ್ಕೆ ಮತ್ತೆ ಬಂದನು. ಆದರೆ, ಆತನು ಕಂಡುದೇನು? ಕೇದಾರಿಯ ಜೀವನ ಕ್ರಮವೇ ಬದಲಾಗಿತ್ತು. ಮಿತ್ರರ ನಡುವೆ ಹೊಂದಾಣಿಕೆಯೇ ಉಳಿಯಲಿಲ್ಲ. ಕೊನೆಗೆ, ಪರಿಸ್ಥಿತಿ ಕೆಡುವ ಮೊದಲೇ ಕೇದಾರಿ ತನ್ನ ದೂರದ ಸಂಬಂಧಿಕೆ ಜಾನಕಿಯನ್ನು ರಾಮಚಂದ್ರನಿಗೆ ಪರಿಚಯ ಮಾಡಿಸಿದನು. ಇವರಿಬ್ಬರ ವಿವಾಹವೂ ಕೆಲದಿನಗಳಲ್ಲೇ ನೆರವೇರಿತು. ಜಾನಕಿಯಿಂದ ಆಕರ್ಷಿತನಾದ ರಾಮು ಕೇದಾರಿಯನ್ನು ಮತ್ತೆ ಓಲೈಸತೊಡಗಿದನು.

ಮುಂದೆ—

ತನ್ನ ಸ್ವಾಮಿಯ ಸ್ವಯಂವರದ ವರ್ತಮಾನ ಮುರುಗನಿಗೆ ಸಿಕ್ಕಿರಲಿಲ್ಲ. ಅಲವಂತಿಯಲ್ಲಿ ಆವನು ಎಂದಿನಂತೆ ಉಳುತ್ತಿದ್ದನು. ಆವನು ಬೆಳೆ ಬಂದದ್ದನ್ನು ಸರಿಯಾಗಿ ವಾವತಿ ಮಾಡಿದ್ದನು. ರಾಮುವಿನ ಕಲ್ಯಾಣದ ಕುರಿತು ಯೋಚಿಸುತ್ತ ಆವನು ಬರಲಿಕ್ಕೆ ಇನ್ನೆಷ್ಟು ದಿನಗಳಿವೆಯೆಂಬುದನ್ನು ಲೆಖ್ಖ ಹಾಕುತ್ತ, ಸಮಯ ಕಳೆಯುತ್ತಿದ್ದನು. ರಾಮುವಿನ ತಾಯಿಯವರು ಆರಿಸಿದ್ದ ಹುಡುಗಿಯ ಮನೆಯವರ ಹತ್ತಿರ ಮದುವೆಯ ಪ್ರಸ್ತಾಪವನ್ನು ಕೂಡಾ ಆವನು ತೆಗೆದಿದ್ದನು. ಆದಷ್ಟು ಬೇಗನೆ ರಾಮುವಿನ ದಾಂಪತ್ಯ ಜೀವನವನ್ನು ಕಾಣಬೇಕೆಂಬುದು ಆವನ ಆಶೆ. ಅರ್ಧ ಶತಮಾನಗಳ ಇತ್ತೀಚೆಗೆ ಅಂತಹ ಪರಿಸ್ಥಿತಿ ಆ ಕುಟುಂಬದಲ್ಲಿ ಬಂದಿರಲಿಲ್ಲ.

ನಮ್ಮ ಸ್ಥಳವೆಂದು ಬೇರಲ್ಲೂ ಇಲ್ಲದಿದ್ದುದರಿಂದ, ಜಾನಕಿ ಮತ್ತು ಆವಳ ತಾಯಿ ಮದ್ರಾಸಿನಲ್ಲೇ ಬಾಳ್ವೆಯನ್ನು ಮುಂದರಿಸಿದ್ದರು. ಕೇದಾರಿಯ ಹೆಂಡತಿ ಮಧುರೈ ಜಿಲ್ಲೆಯ ಒಂದು ಹಳ್ಳಿಯಲ್ಲಿದ್ದಳು. ಆಕೆಯ ತಂದೆಯವರು ಸಂಸ್ಕೃತ ಮತ್ತು ಖಗೋಲ ವಿದ್ಯೆಯನ್ನು ಕರಗತವಾಗಿ ಮಾಡಿಕೊಂಡಿದ್ದರು.

ಪ್ರತಿ ಶನಿವಾರ ಸಾಯಂಕಾಲ ಜಾನಕಿ ಮತ್ತು ಮೀನಾಕ್ಷಿಯರನ್ನು ಕಾಣಲು ರಾಮು ಮತ್ತು ಕೇದಾರಿ ಒಟ್ಟಿಗೆ ಹೋಗುತ್ತಿದ್ದರು. ರಾಮು ಅವರನ್ನೆಲ್ಲ ತನ್ನ ಉದಾರತೆ ಮತ್ತು ಘನತೆಯ ಕೆರೆಯಲ್ಲಿ ಸ್ನಾನ ಮಾಡಿಸುತ್ತಿದ್ದಲ್ಲಿ, ಕೇದಾರಿಯು ಅವರನ್ನು ತನ್ನ ಚಮತ್ಕಾರದ ಮಾತುಗಳ ಮತ್ತು ಪ್ರಭೆಯ ನದಿಯಲ್ಲಿ ಈಜಾಡಿಸುತ್ತ ಇದ್ದನು. ಅಲ್ಲಿ ರಾಮು ಮಾತುಗಾರನಾಗಿರುವದಕ್ಕಿಂತಲೂ ಶ್ರೋತೃವಾಗಿರುತ್ತಿದ್ದನು. ಕೇದಾರಿಯು ಶ್ರೋತೃವಾಗಿರುತ್ತಿದ್ದಿಲ್ಲ. ವಾದಾಟದ ವಾತಾವರಣದಲ್ಲಿ ಅವನೇ ಹೆಚ್ಚು ಪ್ರಕಾಶಿಸುತ್ತಿದ್ದನು. ಅವನು ಮೀನಾಕ್ಷಿಯ ಪೂರ್ಣ ಆದರಣೆಗೆ ಒಳಪಟ್ಟಿದ್ದ. 'ಒಳ್ಳೆ ಹುಡುಗ' ರಾಮುವಿಗಿಂತ ಕೇದಾರಿಗೆ ಉತ್ತಮ ಭವಿಷ್ಯ ಕಾದಿದೆ ಎಂಬ ತೀರ್ಮಾನಕ್ಕೆ ಅವಳು ಬಂದಿದ್ದಳು. ಕೇದಾರಿಯ ಬಳಿ ಮುನ್ನಡೆಯುವ ಧೈರ, ಆಶೆ ಮತ್ತು ಶಕ್ತಿ ಇದ್ದಲ್ಲಿ ರಾಮುವಿನ ಬಳಿ ತತ್ವಶಾಸ್ತ್ರ, ಸಭ್ಯತೆ ಮತ್ತು ಆಕರ್ಷಣೀಯ ರೂಪು ಇದೆ. ಹೀಗೆ ತೂಕ ಮಾಡಿಕೊಂಡು, ಕೊನೆಯಲ್ಲಿ ಯಾರು ಜಯ ಪಡೆಯುತ್ತಾರೆ ಎಂಬುದನ್ನು ಮೀನಾಕ್ಷಿ ಲೆಖ್ಖ ಹಾಕಿಕೊಂಡಿದ್ದಳ.

ವಿಶ್ವದ ವಿಚಿತ್ರತೆಗಳನ್ನು, ಕೇದಾರಿಯ ಸಾಹಸೀ ಜೀವನವನ್ನು ನೋಡಿದಾಗಲೆಲ್ಲ, ತನ್ನ ಗಂಡನ ಗುಣನಡತೆಗಳಗೆ ಮಾರು ಹೋಗಿದ್ದ ಜಾನಕಿಯ ಮನಸ್ಸಿನಲ್ಲಿ ಕೂಡಾ ತಳಮಳವಾಗುತ್ತಿತ್ತು, ಕೇದಾರಿಯು ಆಕರ್ಷಣೆಯ ಕೇಂದ್ರ. ಮಾಕುಳತೆಗಳಲ್ಲಿ ಅವನಿಗೆನೇ ಅಗ್ರಸ್ಥಾನ. ಪ್ರಾಮಾಣಿಕ ಶ್ರದ್ಧೆ ತನ್ನ ಪ್ರಭುವಿನತ್ತ ಇದ್ದರೂ ಕೇದಾರಿಯ ವೈಶಿಷ್ಟ್ಯ ವಾಯು ಜಾನಕಿಗೂ ತಾಗಿತ್ತು.

ರಾಮುವಿಗೂ ಕೇದಾರಿಯ ಪ್ರತಿಭೆಯ ಅರಿವಿತ್ತು. ಅದನ್ನವನು ಮೆಚ್ಚಿಕೊಂಡಿದ್ದನು. ಅವನು ಮಾತ್ರ ಆಗಾಗ ಮೀನಾಕ್ಷಿ ಮತ್ತು ಜಾನಕಿಯರ ನಂಜು ನುಡಿಗಳಿಗೆ ಬಲಿಯಾಗಬೇಕಾಗುತ್ತಿತ್ತು. ಕೇದಾರಿಯ ಆ ರೀತಿಯ ಬುದ್ಧಿವಂತಿಕೆಯ ಪ್ರಭಾವ, ಅದೂ ಆ ಎರಡು ಹೆಂಗಸರ ನಡುವೆ ಅವನಿಗಾಗುತ್ತಿದ್ದ ಜಯ, ರಾಮುವಿನ ಶಾಂತ ಮನೋಸಾಗರದಲ್ಲೂ ಅಲೆಗಳನ್ನೇಳಿಸುತ್ತಿತ್ತು. ಶನಿವಾರ ಸಾಯಂಕಾಲ, ಜಾನಕಿಯ ಎದುರಿಗೆ, ಕೇದಾರಿ ಕಮ್ಮಿ ಬುದ್ಧಿವಂತನಾದಲ್ಲಿ ಒಳ್ಳೆಯದಿತ್ತು ಎಂದು ಅವನು ಭಾವಿಸುತ್ತಿದ್ದನು. ಆದರೆ ಆ ವಾತಾವರಣದಲ್ಲಿ ಕೇದಾರಿ ಉತ್ಸಾಹದಿಂದ ಜಯಶೀಲನಾಗುತ್ತಿದ್ದ. ಮಗಳ ನಿರ್ದೋಷಪೂರ್ಣ ಚಂದ, ತಾಯಿಯ ಪುರುಷತ್ವದ ಕಟ್ಟು ಮತ್ತು ವಿಚಿತ್ರಮಯ ಪುನರುಜ್ಜೀವನದಿಂದ ಗಾಳಿಯು ತುಂಬಿಹೋಗಿತ್ತು. ಅದು ಕೇದಾರಿಯಲ್ಲಿ ಭಾವನೆಗಳ ಜಾನಗಾನ ಪ್ರತಿಧ್ವನಿಸುವಂತೆ ಮಾಡುತ್ತಿತ್ತು.

ಬೇರೆ ದಾರಿ ಇಲ್ಲವೆಂದು ತಿಳಿದುಕೊಂಡ ರಾಮು, ತನ್ನ ಭಾವನೆಗಳನ್ನು ಬದಿಗೊತ್ತಿ, ಹಲವಾರು ನೆವನಗಳನ್ನು ಹೇಳಿಕೊಂಡು, ಕೇದಾರಿಯನ್ನು ಬಿಟ್ಟು ಒಬ್ಬನೇ ಜಾನಕಿಯ ಮನೆಗೆ ಹೋಗಲಾರಂಭಿಸಿದ. ಕೇದಾರಿಗದು ಗೊತ್ತಾಯಿತು.

ಕೇದಾರಿ ಅಸಾಧಾರಣ ಮನುಷ್ಯನಾಗಿದ್ದ. ಗೆಳೆತನವನ್ನು ಮಾಡಿಕೊಳ್ಳುವ ಶಕ್ತಿಯಿದ್ದಂತೆ ಅದರ ಸದುಪಯೋಗವನ್ನು ಮಾಡಿಕೊಳ್ಳುವ ಗುಣವೂ ಅವ[ನಲ್ಲಿತ್ತು]. ಮದ್ರಾಸಿನ ಸಾರ್ವಜನಿಕ ಜೀ[ವನದಲ್ಲಿ] ಅವನ ಪಾತ್ರವು ಮುಖ್ಯವಾಗುತ್ತಿತ್ತು. ವೇದಿಕೆಯ ಮೇಲೆ ಭಾ[ಷಣ ಮಾಡು]ಯುವ ಅವನ ಧೈರ್ಯ ಎಲ್ಲರ ಮ[ನ] ಸೆಳೆದಿತ್ತು. ಪತ್ರಿಕಾ ವ್ಯವಸಾಯ[ದ ಜೀ]ವನದ ರುಚಿಯನ್ನೂ ಅವನು ನೋ[ಡಿದ]ನು. ನ್ಯಾಯ ವಿದ್ಯಾಲಯದಲ್ಲಿ [ಓದು]ತ್ತಿದ್ದ ವಿದ್ಯಾರ್ಥಿ ಸಹಾಯ ಧ[ನ] ಸಂಬಳವನ್ನು ಕೊಟ್ಟು ಬಿಡುತ್ತಿದ್ದ[...]ಮು ಕೊಟ್ಟಿದ್ದ ಐನ್ನೂರು ರೂಪಾ[ಯಿ] ಹಾಗೆಯೇ ಇದ್ದುವು. ಅವನಲ್ಲಿ ಅ[...]ರವದ ದೀಪ ದೊಡ್ಡದಾಗಿ ಪ್ರಜ್ವ[ಲಿಸತೊಡಗಿ]ರಂಭಿಸಿತ್ತು. ಇನ್ನಾದರೂ ಇಪ್ಪ[ತ್ತು ವ]ರ್ಷಗಳಿಂದ ಬಂದಿರುವ ಆರ್ಥಿಕ [...] ವಿಷ ವೃಕ್ಷದ ಬುಡವನ್ನೇ ಕಡಿದ[ು ಹಾಕ]ಬೇಕೆಂದು ಅವನು ಆಲೋಚಿಸಿದ[...]ವನು ಜೀವನವನ್ನು ಬರಿಯ [...] ಸ್ವಾತಂತ್ರ್ಯದ ದೃಷ್ಟಿಯಿಂದ ನೋ[ಡಿದ]ನು. ಎಲ್ಲದರಲ್ಲೂ, ರಾಮುವಿನಲ್ಲ[ೂ ಅ]ವನು ಬದಲಾವಣೆಯನ್ನು ಕಂಡನ[ು].

ಪರೀಕ್ಷೆಗೆ ಒಂದು ತಿಂಗಳಿದ್ದಾ[ಗ ಬೇಸಿ]ಗೆಯ ರಜಾವಧಿ ಸಮೀಪಿಸುತ್ತಿದ್ದಾಗ [ಒಂದು] ಘಟನೆ ನಡೆಯಿತು. ಕೇದಾರಿಯ[ು ಕಾಲೇಜಿನ ವಿದ್ಯಾ]ಲಯದ ಚರ್ಚಾ ಸಭೆಯ ಅಧ್ಯಕ್ಷ[ಸ್ಥಾ]ನವನ್ನು ವಹಿಸಿಕೊಳ್ಳುವದಕ್ಕೆ ಶ್ರೀ [...]ಕರ್ಣಂ ಅಯ್ಯರವರನ್ನು ಆಹ್ವಾ[ನಿಸಿದ]ರು. ಅವರು ಮದ್ರಾಸು ನ್ಯಾಯವಾ[ದಿಗಳ] ಸಭೆಯ (ಬಾರ್) ಮುಖಂಡರು. [...] ತಿಂಗಳು ಹತ್ತು ಸಾವಿರ ರೂಪಾ[ಯಿಗಳನ್ನು ಅ]ವರು ಸಂಪಾದಿಸುತ್ತಿದ್ದರು. ಅವರ ಆಶ್ರಯ ಛತ್ರದಲ್ಲಿ 'ಕಿರಿಯರ' ಸೈನ್ಯವನ್ನು, ಪಡೆಯನ್ನು, ರಕ್ಷಿ[ಸಿಕೊಂ]ಡು ಬಂದಿದ್ದರು. ಆ ಸಭೆಗೆ ಯ[ಾವಾಗ]ಲೂ ನ್ಯಾಯಾಧೀಶರು (ಜಡ್ಜ್) ಅಧ್ಯಕ್ಷರಾಗಿದ್ದುಕೊಂಡು ಗೌರವ[ವನ್ನು ಸ]ಲಿಸಿಕೊಳ್ಳುವದು ಸಂಪ್ರದಾಯವಾ[ಗಿತ್ತು]. ಆದರೂ ಸ್ವಾಭಾವಿಕವಾಗಿ ಧೈರ್ಯ[ಶಾಲಿ]ಯಿದ್ದ ಕೇದಾರಿಯು ಆ ಸಂಪ್ರದಾ[ಯದ] ದಾಖಲೆಯಲ್ಲೇ ಹೊಸತಾಗುವಂತೆ [...] ಖಲೆಗಳನ್ನು ಮೀರುತ್ತಿದ್ದ ಶ್ರೀ ಮ[...]ಡಂ ಅವರಿಗೆ, ಸ್ವಾಗತವನ್ನಿತ್ತ[ು ...] ಮುಖಂಡರಿಗೂ ಆ ರೀತಿಯ ಅ[ವಕಾ]ಶ್ಯ ಸಂದರ್ಭ ತಾನೇ ತಾ[ನಾಗಿ] ಬಂದಿರುವದು, ಅದೃಷ್ಟ ದೇವ[ತೆಯನ್ನು] ನೋಡಿ ಸಂತೋಷದಿಂದ ನಗುತ್ತಿ[...]ದೆಂದು ಸಂತೋಷವಾಯಿತು. [...] ಕೇದಾರಿಯ ಸ್ವರವನ್ನು ಕೇಳಿ, [...] ಮುಂದಕ್ಕೆ ಬರುವ ಮನುಷ್ಯನ [...]ದು ಗುರುತಿಸಿದ್ದರು. ಅವರ ಜ್ಞಾ[ಪಕ ಶಕ್ತಿ]ಯಲ್ಲಿ ಅವನ ನೆರಳು ಬಿದ್ದಿತ್ತು. [...]ನು ಮರಿನಾ ಕಡಲುಕರೆಯಲ್ಲಿ ಸಿಕ್ಕಿ[...]ಲ್ಲ ಮುಗ್ಗುಳ್ಳಗುತ್ತ ಗುರುತಿಸುತ್ತಿ[...] ಒಮ್ಮೆ ಅವನನ್ನು ತನ್ನ ಕಾರಿನಲ್ಲೇ [...]ಗಡೆಯಲ್ಲಿ ಕೂತುಕೊಳ್ಳಿಸಿ, [...] ಕೊಂಡು ಹೋಗಿದ್ದರು. ಮತ್ತು [...]ತ್ರಿಕವಾಗಿ ಔತಣಕ್ಕೂ ಆಮಂತ್ರಿ[ಸಿದ್ದ]ರು. ಅವರು ಕೇದಾರಿಯ ಬಡತನ[ದ ಹಾ]ಗೂ ಸಾಹಸದ ಕಥೆಗಳನ್ನು ಕೇಳಿ[ದರು]. ಆಗ ಅವರಿಗೆ ತನ್ನ ಬಾಲ್ಯ ಜೀ[ವನದ] ಕಹಿ ನೆನಪುಗಳು ಮರುಕಳಿಸುತ್ತಿದ್ದ[ುವು]. ನಿಜವಾಗಿ, ಕೇದಾರಿ ಕೂಡಾ ತನ್ನ[...]

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

| | | | | ಸೇಕಡಾ |
|---|---|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ | .... | .... | $5\frac{1}{2}$ |
| 6 ತಿಂಗಳಿಂದ | 12 ತಿಂಗಳ ಕೆಳಗೆ | .... | .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ | .... | .... | $6\frac{1}{2}$ |
| 24 ತಿಂಗಳಿಂದ | 36 ತಿಂಗಳ ಕೆಳಗೆ | .... | .... | $6\frac{3}{4}$ |
| 36 ತಿಂಗಳಿಂದ | 48 ತಿಂಗಳ ಕೆಳಗೆ | .... | .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ | .... | .... | $7\frac{1}{4}$ |
| 60 ತಿಂಗಳಿಂದ | 84 ತಿಂಗಳ ಕೆಳಗೆ | .... | .... | $7\frac{3}{4}$ |
| 84 ತಿಂಗಳಿಂದ | 120 ತಿಂಗಳ ಕೆಳಗೆ | .... | .... | 8 |
| ಸೇವಿಂಗ್ಸ್ ಖಾತೆಯ ಮೇಲೆ | | ... | ... | 4 |

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

# ನವಯುಗ

ಸಂಪುಟ ೪೫ | ಉಡುಪಿ | Vol. 45
ಸಂಚಿಕೆ ೧೧ | ೧೮—೧೧—೧೯೬೫ | No. 11

Telephone 226.

Estd. 1921

**NAVAYUGA**

Leading Kannada Weekly

UDIPI, S. Kanara

ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

## ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

**ಕೆ. ಹೊನ್ನಯ್ಯ ಶೆಟ್ಟಿ**

**ವಾರ್ಷಿಕ ಚಂದಾ:**

ನೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

**ಜಾಹೀರಾತು ದರಗಳು:**

ಅನಿಯಮಿತ (ಕೆಜುವಲ್)

೧ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

೧ ಸೆಂಟಿಮೀಟರಿಗೆ ರೂ. 1-50

### ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿವರ್ಥದಿಂದ ಕೂಡಿರಬೇಕು. ಕಾಗದ ಕಾಪಿನ ಪ್ರಮಾಣ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅನುಕರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

**ಚಂದಾದಾರರಿಗೆ—**

ಚಂದಾ ಹಣವನ್ನಾಗಲೀ ಜಾಹೀರಾತಿನ ಬಾಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ವೆಚ್ಚವೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

...ರಿಕದ ಟ್ರೇಡ್ ಯೂನಿಯನ್ ...ಸ್ಯನೊಬ್ಬನ ಮಗು ದಂತ ಚಿಕಿತ್ಸೆ ಪಡೆಯುತ್ತಿದೆ.

## ಅಟ್ಟುದು ತಿನ್ನೆಂದಾಗ...

ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ವಿಲ್ಸನ್ ಹೊಸತೊಂದು ಸಮಸ್ಯೆಯ ಬಗ್ಗೆ ತಲೆಕೆಡಿಸಿಕೊಳ್ಳಬೇಕಾದ, ಅನಪೇಕ್ಷಣೀಯವೂ ಏಕಪಕ್ಷೀಯವೂ ಆದ ಪ್ರಸಂಗ ತಲೆದೋರಿದೆ. ಹತ್ತು ವರ್ಷಗಳಿಗೆ ಮೊದಲು ಮಧ್ಯ ಆಫ್ರಿಕಾದ ಮಹಾ ಮಂಡಳವನ್ನು ಸ್ಥಾಪಿಸುವಾಗ ಎಚ್ಚರಿಕೆ ವಹಿಸದೆ, ೧೯೬೩ರಲ್ಲಿ ಈ ಮಹಾ ಮಂಡಳದಿಂದ ರೊಡೇಸಿಯಾ ಸಿಡಿದು ಬಂದ ವೇಳೆಯಲ್ಲಿಯೂ ಜಾಗರೂಕತೆಯನ್ನು ತೋರಿಸದೆ ಬ್ರಿಟಿಷ್ ಸರಕಾರ ತಾನು ಅಟ್ಟುದನ್ನು ತಾನೇ ತಿನ್ನುವ ಕಾಲ ಬಂದಿತು. ದುರ್ದೈವದಿಂದ ಅಂದು ಯಾರುಯಾರೋ ಅಟ್ಟುದನ್ನು ಇಂದು ಲೇಬರ್ ಪ್ರಧಾನಿ ವಿಲ್ಸನ್ ಉಣ್ಣಬೇಕಾಯಿತು. ರೊಡೇಸಿಯಾದ ಪ್ರಧಾನ ಮಂತ್ರಿ ಲಿಯಾನ್ ಸ್ಮಿತ್‌ರವರು ಏಕಪಕ್ಷೀಯವಾಗಿ ಸ್ವಾತಂತ್ರ್ಯವನ್ನು ಘೋಷಿಸಿ ಜಾಗತಿಕ ಲಕ್ಷ್ಯವನ್ನು ತನ್ನತ್ತ ಸೆಳೆದ ಮಹಾ ವ್ಯಕ್ತಿಯಾಗಿದ್ದಾರೆ.

ವರ್ಣಭೇದ ನೀತಿಗೆ ಆಫ್ರಿಕೆ ತವರ್ಮನೆ. ಇಂದಿನ ನಾಗರಿಕ ಜಗತ್ತಿನಲ್ಲಿ ಅದಕ್ಕೆ ತಿಲಾಂಶ ಸ್ಥಾನವಿಲ್ಲವಾದರೂ ಕರಿಯರನ್ನು ಆದುಮಿ ಅವರ ಮೇಲೆ ತನ್ನ ಪ್ರಭುತ್ವ ಹೇರುವ ಬಿಳಿಯರಿಗೇನೂ ಕಡಮೆಯಿಲ್ಲ. ದಕ್ಷಿಣ ಆಫ್ರಿಕೆಯನ್ನು ದಿಗ್ಬಂಧನಗೊಳಿಸುವ ಒತ್ತಾಯ ಬಂದರೂ ಬ್ರಿಟನ್ನು ಇದಕ್ಕೆ ಒಪ್ಪುತ್ತಿಲ್ಲ! ರೊಡೇಸಿಯಾದ ಶಾಸನ ಸಭೆಯ ೬೫ ಸ್ಥಾನಗಳಲ್ಲಿ ಎಂಟನ್ನು ಎರಡು ಲಕ್ಷವಿರುವ ಬಿಳಿಯರಿಗಾಗಿ ಮೀಸಲಾಗಿಟ್ಟು ೪೦ ಲಕ್ಷ ಕರಿಯರಿಗೆ ಬರಿಯ ೧೫ ಸ್ಥಾನಗಳನ್ನು ಒದಗಿಸಿದ ಮಹಾ ಪಕ್ಷಪಾತವನ್ನು ಅಲ್ಲಿನ ಸಂವಿಧಾನ ಮಾಡಿದೆ. ಸಂವಿಧಾನವು ಬ್ರಿಟಿಷ್ ಪಾರ್ಲಿಮೆಂಟಿನ ಸಮ್ಮತಿಯಿಲ್ಲದೆ ಜಾರಿಗೆ ಬರಲಾರದಾದುದರಿಂದ ಈ ಪಕ್ಷಪಾತ— ಭೇದಭಾವಗಳಿಗೆ ಬ್ರಿಟಿಷ್ ಸರಕಾರವೇ ಹೊಣೆ. ತಾನೇ ಹಾಲೆರೆದು ಸಾಕಿದ ಬಿಳಿಯ ಹಾವು ತನ್ನನ್ನೆ ಕಚ್ಚಿದಂತಾಯಿತು. ಅದಕ್ಕೀಗ ಸ್ಮಿತ್ ಜವಂಗೆ ಸಂವಿಧಾನದ ಆಧಾರದ ಮೇಲಿನಿಂದ ಸ್ವಾತಂತ್ರ್ಯ ಘೋಷಣೆ ಮಾಡುವ ಅಧಿಕಾರವಿಲ್ಲ; ರಾಣಿಯ ಪ್ರತಿನಿಧಿ ಗವರ್ನರರನ್ನು ಕಿತ್ತುಹಾಕುವಂತಿಲ್ಲ. ಹಾಗಿರುವಾಗ ಅವರ ಕೃತಿ ಸಂವಿಧಾನ ವಿರೋಧವಾದುದು, ಬ್ರಿಟನ್ನಿನ ಇಂದಿಗೆ ಪ್ರತಿಯಾದುದು. ಸುನಾಗರಿಕ ಜಗತ್ತಿಗೆ ಅವಮಾನದ ಮಸಿ ಬಳಿಯುವಂತಹದು. ಈ ಸಂಘಾಹ್ವಾನವನ್ನು ಬ್ರಿಟನ್ನು ಎದುರಿಸಬೇಕು, ಅದಕ್ಕೆ ಜಾಗತಿಕ ಬೆಂಬಲವಿದ್ದೇ ಇರುವುದು. ಸಂಯುಕ್ತ ರಾಷ್ಟ್ರ ಸಂಘವು ಈ ರೊಡೇಸಿಯಾದ ಅಕ್ರಮ ಸರಕಾರಕ್ಕೆ ಮನ್ನಣೆಯೀಯಬಾರದೆಂದು ಕರೆಕೊಟ್ಟಿದೆ. ಇದನ್ನು ಎಲ್ಲ ರಾಷ್ಟ್ರಗಳೂ ಒಪ್ಪುವ ನಿರೀಕ್ಷೆಯಿದೆ.

ಕೆಲವು ತಿಂಗಳುಗಳಿಂದ ರೊಡೇಸಿಯಾದ ಸ್ವಾತಂತ್ರ್ಯದ ಕುರಿತು ವಾದವಿವಾದ ನಡೆಯ ತೊಡಗಿತ್ತು. ಸ್ವಾತಂತ್ರ್ಯದ ವಿಷಯದಲ್ಲಿ, ಅನಂತರದ ಆಳಿಕೆಯ ಸಂಬಂಧವಾಗಿ ಅಲ್ಲಿರುವ ಬಿಳಿಯ-ಕರಿಯರ ನಡುವೆ ಒಮ್ಮತವಾಗದೆ ಹೋದುದರಿಂದ ಪರಿಸ್ಥಿತಿ ಪ್ರಕೋಪಕ್ಕೆ ಹೋಯಿತು. ಹೆರಾಲ್ಡ್ ವಿಲ್ಸನ್ನರ ಮಧ್ಯಸ್ಥಿಕೆಯೂ ನಿಷ್ಪ್ರಯೋಜನವಾಯ್ತು. ಬಿಳಿ—ಕರಿಯರು ಒಂದಾಗಿ ಇಡಿ ರೊಡೇಸಿಯಾವನ್ನು ನ್ಯಾಯೋಚಿತವಾಗಿ ಪ್ರತಿನಿಧಿಸುವ ಸರಕಾರ ಸ್ಥಾಪನೆಯಾಗುವುದಾದರೆ ಮಾತ್ರ ಸ್ವಾತಂತ್ರ್ಯ ನೀಡಬಹುದೆಂದು ಅವರು ಮರಳಿದರು. ಅವರ ಹಿಂದೆಯೇ ೨ ಲಕ್ಷ ಬಿಳಿಯರ ಪ್ರಧಾನಿ ಸ್ಮಿತ್ ತನ್ನ ಗತ್ತುಗಾರಿಕೆಯಿಂದ ೪೦ ಲಕ್ಷ ಕರಿಯರನ್ನು ಮೆಟ್ಟಲು ಸೊಂಟ ಕಟ್ಟಿದರು. ಸ್ಮಿತ್ತರ ಈ ಏಕಪಕ್ಷೀಯ ಕೃತಿ ದುಡುಕಿನದ್ದು, ಕೆಡಿಗೇಡಿತನದ್ದು, ಅವರು ಘೋಷಿಸಿದ ಸ್ವಾತಂತ್ರ್ಯಕ್ಕೆ ೪೦ ಲಕ್ಷ ಕರಿಯರ ಬೆಂಬಲವೇ ಇರುವುದಿಲ್ಲ; ಮತ್ತೆ ಜಾಗತಿಕ ಬೆಂಬಲ ಎಲ್ಲಿಂದ? ಹಿಂದೆ ಅಮೇರಿಕೆಯು ಬ್ರಿಟಿಷ ಸಾಮ್ರಾಜ್ಯಶಾಹಿಯ ವಿರುದ್ಧ ಏಕಪಕ್ಷೀಯ ಸ್ವಾತಂತ್ರ್ಯ ಘೋಷಣೆ ಮಾಡಿತ್ತಾದರೂ ಅದಕ್ಕೆ ಎಲ್ಲ ವಸಾಹತುವಾಸಿಗಳ ಬೆಂಬಲವಿತ್ತು; ಅಂದಿನ ಸ್ಥಿತಿಗತಿಗಳೂ ಬೇರೆಯಿತ್ತು; ಅದರ ಸ್ವರೂಪವೂ ಬೇರೆಯಿತ್ತು. ಆದುದರಿಂದ ರೊಡೇಸಿಯಾದ ಕರಿಯರ ಬೆಂಬಲವನ್ನು ಗಳಿಸಲು ಈಗ ಸ್ಮಿತ್ ಮುಂದಾಗಬಹುದು. ಆದರೆ, ಅಲ್ಪ ಸಂಖ್ಯಾಕರ ಆಡಳಿತೆಯನ್ನು ಕರಿಯರು ಒಪ್ಪಲು ನಿರಾಕರಿಸಿದಾಗ, ರಕ್ತದ ಕಾಲುವೆ ಹರಿಸಲೂ ಸ್ಮಿತ್ ಹಿಂದೆ ಮುಂದೆ ನೋಡಲಾರರು; ಆಫ್ರಿಕೆಯ ರಾಷ್ಟ್ರಗಳು ಇಂತಹ ಕಠಿನ ಪ್ರಸಂಗವನ್ನು ತಮ್ಮ ಕಣ್ಣ ಮುಂದೆ ಇರಿಸಿಕೊಂಡು ಸುಮ್ಮನಿರುವುದಿಲ್ಲ. ಜಾಗತಿಕ ಬೆಂಬಲವೂ ಇಂದು ಆಫ್ರಿಕನ್ನರ ಮೇಲಿದೆ. ಆಫ್ರಿಕನ್ನರ ಮೇಲಿನ ಕನಿಕರದಿಂದ ಮಾತ್ರವಲ್ಲ, ಬ್ರಿಟನ್ನಿನ ಬಗ್ಗೆ ಸಹಾನುಭೂತಿಯಿಂದಾಗಿಯೂ ಸ್ಮಿತ್ತರಿಗೆ ಯಾವ ಬೆಂಬಲ ದೊರೆಯುವುದಿಲ್ಲ. ಭಾರತವು ಈ ದಿಸೆಯಲ್ಲಿ ಕಡಿದುಕೊಂಡ ಆರ್ಥಿಕ ಸಂಬಂಧ ಅನಿವಾರ್ಯ ಮತ್ತು ನ್ಯಾಯೋಚಿತ.

ಅಟ್ಟುದನ್ನು ಉಣ್ಣಬೇಕು. ಬ್ರಿಟಿಷ್ ಸರಕಾರಕ್ಕೆ ಈಗ ತನ್ನ ಅನ್ಯಾಯದ ಅರಿವಾಗದಿರದು. ಅಲ್ಪ ಸಂಖ್ಯಾಕರ ಆಡಳಿತೆಯನ್ನು ಬಹು ಸಂಖ್ಯಾಕರ ಮೇಲೆ ಹೊರಿಸಿದ ಹೊಣೆ ಅದರದ್ದು. ಬಂದಿರುವ ಗಂಡಾಂತರವನ್ನು ಕೆಚ್ಚಿನಿಂದ ಎದುರಿಸಬೇಕು, ಅದು ನ್ಯಾಯ ರೀತಿಯಿಂದ ಸ್ಮಿತ್ ಬಗ್ಗದೆ ಹೋದರೆ, ಸೈನ್ಯಶಕ್ತಿಯಿಂದಾದರೂ ಬಗ್ಗಿಸಬೇಕು. ಆಫ್ರಿಕೆಯು ಆಫ್ರಿಕನ್ನರದು. ರೊಡೇಸಿಯಾ ಅಲ್ಲಿನ ೪೦ ಲಕ್ಷ ಕರಿಯ ಪ್ರಜೆಗಳದ್ದು. ವಲಸೆ ಬಂದು ಹೊಗೆಸೊಪ್ಪಿನ ತೋಟ ಬೆಳೆಸಿ ಲಕ್ಷಾಧೀಶರಾಗಿ ಕೊಬ್ಬಿ ಇತರರ ಮೇಲೆ ಅಧಿಕಾರ ಚಲಾಯಿಸ ಬಯಸುವ ಬರಿಯ ೨ ಲಕ್ಷ ಬಿಳಿಯರ ಸ್ವತ್ತು ರೊಡೇಸಿಯಾ ಅಲ್ಲ. ಇದನ್ನು ಸ್ಮಿತ್ ಮನವರಿಕೆ ಮಾಡಿಕೊಂಡರೆ ಒಳ್ಳೆಯದು; ಇಲ್ಲವಾದರೆ, ತನ್ನ ಗೋರಿಯನ್ನು ಅವರೇ ಕಟ್ಟಿಕೊಳ್ಳುತ್ತಾರೆ.

**ವಚನ ಸುಧೆ**

ಪ್ರಿಯಾಪ್ರಿಯಂ ಸನ್ನಿಧಕೇ ಕದಾಚಿ
ದುದ್ಯೋಗವಂತ್ಯೇ ಕೃತಿ ಚಾಪ್ರಮತ್ತ:
ದು:ಖಂ ಚ ಕಾಲೇ ಸಹತೇ ಮಹಾತ್ಮಾ
ಧುರಂಧರಸ್ತಸ್ಯ ಜಿತಾ: ಸಪತ್ನಾ: ॥

ಆಪತ್ತು ಸಂಭವಿಸಿದಾಗ ದು:ಖಿಸದೆ ಎಚ್ಚರಿಕೆಯಿಂದ ಉದ್ಯೋಗವನು ಆಶ್ರಯಿಸಿ, ದು:ಖವನ್ನು ಸಹಿಸಿಕೊಳ್ಳುವ ಧುರಂಧರನು ತನ್ನ ಶತ್ರುಗಳನ್ನು ಪರಾಜಿತಗೊಳಿಸುತ್ತಾನೆ.

## ನಂಬೂದ್ರಿ ಸೂತ್ರ

ಕಮ್ಯೂನಿಸ್ಟ್ ಪಕ್ಷದಲ್ಲಿ ಎಡ-ಬಲಗಳು ಹುಟ್ಟಿ ಎಡಪಂಥೀಯರು ಚೀನಾದ ಬಾಲಬಡುಕರು....ಎಂಬುದು ಹಿಂದೆಯೇ ಬಹಿರಂಗಪಟ್ಟಿದೆ. ಈ ಪಕ್ಷದ ಹಲವಾರು ಅಗ್ರಣಿಗಳು ಸ್ಥಾನಬದ್ಧತೆಯಲ್ಲಿರುವರಾದರೂ ಅವರ ನೇತಾ ಕಾಮ್ರೇಡ್ ನಂಬೂದರಿ ಪಾದರು ಇನ್ನೂ ಮುಕ್ತರಾಗಿಯೇ ಇದ್ದಾರೆ. ಗುಜರಾತದ ಅಹಮ್ಮದಾಬಾದಕ್ಕೆ ಹೋಗಲಿದ್ದ ಅವರಿಗೆ ತಡೆಯಾಜ್ಞೆ ವಿಧಿಸಿದುದಕ್ಕೆ ಬಹಳ ಅರ್ಥ ಇದೆ. ಕೆಂಪು ಚೀನಾ ಮತ್ತು ಪಾಕಿಸ್ತಾನಗಳ ಆಕ್ರಮಣ ಮನೋವೃತ್ತಿಯನ್ನು ಅವರು ಖಂಡಿಸುತ್ತಾರೆ; ಜತೆಗೆ ಇವನ್ನು ಶಕ್ತಿ ಪ್ರಯೋಗದಿಂದ ಭಾರತ ಎದುರಿಸುವುದನ್ನೂ ವಿರೋಧಿಸುತ್ತಾರೆ. ಮತ್ತೇನು ಮಾಡಬೇಕು? ಮಾತುಕತೆಗಳ ಮೂಲಕ ಏಕಹಾರ್ದಮಯ ವಾತಾವರಣದಲ್ಲಿ ಮತಭೇದಗಳನ್ನು ದೂರ ಮಾಡಬೇಕ! ಭಾರತೀಯರಿಗೆ ಈ ನಂಬೂದರಿ ಸೂತ್ರದ ಟೀಕೆ - ಬಾಷ್ಯ ಅರ್ಥವಾಗುತ್ತದೆ. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಬಳುವಳಿ ಕೊಟ್ಟು ಸ್ನೇಹ ಗಳಿಸಬೇಕು; ಲಡಖ್ ಅಕ್ಸಾಯ ಚೀನಾ ಮೊದಲಾದವನ್ನು ಕೆಂಪು ಚೀನದ ಮಾವನಿಗೆ ಉಡುಗೊರೆ ಕೊಡಬೇಕು — ಇದನ್ನು ಯಾವ ಭಾರತೀಯ ಒಪ್ಪಿಯಾನು? ಇಂತಹ ಅರಾಷ್ಟ್ರೀಯವಾದ ದೇಶದ್ರೋಹಿ ಹೇಳಿಕೆಗಳನ್ನು ನಂಬೂದರಿ ಹೇಳತೊಡಗಿದ್ದು ಅದರ ಪರಿಣಾಮವನ್ನು ಅವರು ಉಣ್ಣಲೇಬೇಕು. ಇದೇ ರೀತಿ 'ಸ್ವತಂತ್ರ ಕಾಶ್ಮೀರ' ರಚನೆಯ ಹುಚ್ಚು ಸಲಹೆಗಾರರ ಬಗೆಗೂ ನಮ್ಮ ಸರಕಾರ ಎಚ್ಚರಿರಬೇಕು.

### ನರಸಣ್ಣನ ಸರಸ



'ರೊಡೇಸಿಯಾದ ಪ್ರಧಾನ ಮಂತ್ರಿ ಸಂವಿಧಾನ ವಿರೋಧವಾಗಿ ಏಕಪಕ್ಷೀಯ ಸ್ವಾತಂತ್ರ್ಯ ಘೋಷಿಸಿದರಂತೆ....'
"ದ್ರಾವಿಡ ಕಳಗಂಗೆ ಸ್ಮಿತ್ ಪ್ರೇರಣೆ ಶಕ್ತಿಯಾಗದಿದ್ದರೆ ಸಾಕು...."

ಗೇಹ ರಾಜ್ಯದಲ್ಲಿ

# ಬಿಡಬೇಕು, ಆದರೆ ಯಾವುದನ್ನು?

“ಇಲ್ಲಿ ಕೇಳ್ರಿ ಸ್ವಲ್ಪ....”

“ಸ್ವಲ್ಪ ಕೇಳಿದ್ರೆ ಏನು ತಾನೇ ಪ್ರಯೋಜನಾಂತ?”

“ಅಂದ್ರೆ...’

“ಅಲ್ಪಜ್ಞಾ ಮಹಾಗರ್ವಿ ಅಂತಾರೆ. ನೀನು ಅನ್ನೋದನ್ನ ನಾನು ಅರ್ಥ ಕೇಳಿದ್ರೆ ಅದ್ರಿಂದ ಅನರ್ಥ ಪರಂಪರೆಗಳು ಕಾಣಿಸಿಕೊಂಡರೆ...”

“ಬೇಡ ಬೇಡ. ಧೂಮಕೇತು ಕಾಣಿಸಿಯೇ ಅನರ್ಥ ಪರಂಪರೆಗಳು ಬರ್ಲಿಕ್ಕಿದೆ, ಇನ್ನು ನೀವು ಅರ್ಥ ಕೇಳಿ ಅದನ್ನು ಹೆಚ್ಚಿಸೋದು ಬೇಡ. ಕೇಳೋದಿದ್ರೆ ಹೂಂ, ಕೇಳಿ....’

“ಅಲ್ವೆ, ನಾನು ಕೇಳೋದಿಲ್ಲಾಂತಂದ್ರೆ ನೀನು ಹೇಳೋದನ್ನ ತಡೆಹಿಡಿಯೋ ಪ್ರಾಣಿಯಲ್ಲ ...”

“ಸಾಕ್ರಿ, ಪ್ರಾಣಿಯಂತೆ! ಕೈ ಹಿಡಿದ ಹೆಂಡ್ತಿ ಅಂದ್ರೆ ಅಷ್ಟು ಸಸಾರ. ಕೈ ಹಿಡಿಯೋವರ್ಗೆ ಮಾತ್ರ...’

“ಓಹೋಹೋ . ಇದೇನೂಂತ? ಯಾವ ಸಿನೆಮಾದ ಪ್ರಭಾವವಿದು?’

“ಸಿನೆಮಾದ ಕಥೆ ಹಾಗಿರ್ಲಿ. ಪ್ರಪಂಚದಲ್ಲಿ ನಡಯುತ್ತಿರೋದಾದ್ರೂ ಏನು? ಹೆಣ್ಣಿನಲ್ಲಿ ನಾನಾ ಬಗೆಯಿಂದ ನಂಬಿಕೆ ಹುಟ್ಟಿಸಿ ಮತ್ತೆ ತನ್ನ ಬೇಳೆ ಬೆಂದ ಮೇಲೆ ಅವಳನ್ನು ಹಣ್ಣು ಮಾಡೋದು....”

“ತಪ್ಪಿಬಿದ್ದೆ ಕಣೇ ನೀನು ....ನೀನನ್ನೋದೆಲ್ಲಾ ಪಾಶ್ಚಾತ್ಯರಲ್ಲಿರಬಹುದು. ಆದರೆ ಅಲ್ಲಿ ನೋಡು, ಒಬ್ಬಾಕೆ ಹತ್ತೇ ದಿನಗಳಲ್ಲಿ ಇಪ್ಪತ್ತು ಗಂಡಿನೊಡನೆ ಅಧಿಕಾರಿಕ ಮದುವೆಯಾಗಬಲ್ಲಳು....”

‘ಮತ್ತೆ ನಮ್ಮಲ್ಲಿ ಅಂತಹ ಅಧಿಕಾರ ವಿಲ್ಲ. ಅದೇ ಒಂದು..”

‘ಹೌದ., ಪುಣ್ಯ..’

“ಯಾಕಂತೆ?”

“ದಾಂಪತ್ಯ ಜೀವನದ ಮೊದಲ ಅಂಕ ಸಿನೆಮಾ—ನಾಟಕಗಳ ಮೂಲಕ ಅಭಿನಯಕ್ಕಾದರೂ ಬಂದಿದೆ. ಆದರೆ, ಅದರ ಉತ್ತರ ರಾಮಾಯಣ ಎಲ್ಲಾದರೂ ಬಂದದ್ದುಂಟೆ?”

“ಇರಬಹುದು.-ಇದ್ದರೂ ಭಾರಿ ಅಪರೂಪಾನ್ನಿ ...”

“ಅದನ್ನೇ ನೋಡು ನಾಟಕ ಅನ್ನೋದು ಸದ್ಯ ಸಂಪ್ರದಾಯಸ್ಥ ಕುಲೀನ ಮನೆತನದವರು ಒಬ್ಬರು ಇನ್ನೊಬ್ಬರ ಮುಂದೆ ನಾಟಕವಾಡುವುದಿಲ್ಲ; ನಂಬಿಕೆ ಹುಟ್ಟಿಸೋದೂ ಇಲ್ಲ. ನಂಬಿಕೆ ಹುಟ್ಟಿಸಲಿಲ್ಲಾಂತಾದ ಮೇಲೆ ಮುಂದೆ ಹಣ್ಣು ಮಾಡೋದೂ ಇಲ್ಲ. ’

‘ನಿಮ್ಮ ಮೊದಲ ಮಾತನ್ನು ಒಪ್ಪಿದೆ. ಆದ್ರೆ ನೋಡಿ, ಗಂಡು ನಂಬಿಕೆ ಹುಟ್ಟಿಸುವ ಪ್ರಯತ್ನ ಮಾಡ್ತಾನೆ. ಬಾಯಿಂದ ಮಾತ್ರ ಅನ್ನೋದಿಲ್ಲ ಅಷ್ಟೆ. ಆದರೆ, ತನ್ನ ಅಭಿನಯದಿಂದ, ತೀವ್ರ ನೋಟದಿಂದ ತನ್ನ ಕಾರ್ಯ ಸಾಧಿಸಿ ಬಿಡ್ತಾನೆ...’

‘ಅಂದ್ರೆ ಹೆಣ್ಣನ್ನು ಮರುಳು ಮಾಡ್ತಾನೆ....’

‘ಹ್ಞಾಂ ...’

‘ಹೆಣ್ಣೂ ಹಾಗೆ ಮಾಡೋದಿಲ್ಲವೆ?’

‘ಅಕೆಗೇನು ಗೊತ್ತು ಪಾಪ? ಬಂದಿರೋವ್ರು ತನ್ನ ಕೈ ಹಿಡೀತಾರೆಯೆ? ಖಾಲಿ ಹೋಗ್ತಾರೆಯೇಂತ ...?’

‘ಹಾಗೆ ಅನ್ನು. ಅಂತೂ ಪೂರ್ವಾರ್ಜನುರಾಗ ಗ್ರಂಥಗಳಲ್ಲಿ ಇನ್ನು ಹೆಚ್ಚೆಂದ್ರೆ ಸಿನೆಮಾಗಳಲ್ಲಿ ಮಾತ್ರ ಕಂಡು ಬರೋದು. ವ್ಯವಹಾರದಲ್ಲಿ ಇಲ್ಲಾನ್ನು.’

‘ಹೌದು, ತಂದೆ ತಾಯ್ಗಳ ಮಾತಿಗೆ ಹೆಣ್ಣು ಎದುರು ಹೇಳೋದಿದೆಯೆ?’

“ಇಲ್ಲವೆ ಮತ್ತೆ?”

‘ಅದೆಲ್ಲೋ ನೂರರಲ್ಲಿ ಒಂದು...’

“ಆದ್ರೂ ಈಗೀಗ ....’

‘ಬಾದಂತೆ ನೋಡಿ .. ಮಾನವಂತರು ಬದುಕೋದೇ ಕಷ್ಟವಾಗಿದೆ ನೋಡಿ...’

“ಏನು?”

‘ಮತ್ತೆಂಥದು?-ಬೀದಿಯ ಕಾಮಣ್ಣನವರ ಕಾಟದಿಂದ ..’

“ಹಾಗೆ ಬೀದಿಯ ಕಾಮಿನಿಯರೂ ಇಲ್ಲವೇನು?”

“ಎಷ್ಟಾದರೂ ಕಾಮಣ್ಣನವರ ಮುಂದೆ ಅವರು ನಿಲ್ಲೋದಿಲ್ಲ ..”

‘ಒಂದು ಮಾತು ಹೇಳಲೇನು?’

‘ಒಂದೂಂತೇಕೆ. ನೂರು ಹೇಳಿ .’

‘ನೋಡು ಒಂದು ಕೈತಟ್ಟಿದರೆ ಶಬ್ದವಾಗುತ್ಯೆ?’

“ಇಲ್ಲಾನ್ನು....’

“ಹಾಗೆ ಕಾಮಣ್ಣನವರಿಂದ ಯಾಕೆ ಧೃತಿಗೆಡಬೇಕು? ಅದಕ್ಕೆ ಯಾಕೆ ಪ್ರತಿಕ್ರಿಯೆ ತೋರಿಸಬೇಕು’

“ಆದರೆ, ಹಾಗೆ ಇರಲು ಸಾಧ್ಯವೆ?”

“ನಿಜವಾಗಿ ಕುಲೀನರಾದರೆ, ಸುಮ್ಮನಿರುತ್ತಾರೆ ... ಮತ್ತೆ ನೋಡು, ಕಾಮಣ್ಣನವರ ಧೈರ್ಯ ಎಲ್ಲಿವರೇಗೇಂತಿ?”

“ಅಂದ್ರೆ?”

“ಮತ್ತೇನೂ ಇಲ್ಲ. ಬೀದಿಯಲ್ಲಿ ಒಂದಷ್ಟು ದೂರ ಯಾರೂ ಇಲ್ಲದಾಗ ಹಿಂಬಾಲಿಸಿಕೊಂಡು ಬರೋದು, ತನ್ನ ನಿಕಟವರ್ತಿಗಳೊಡನೆ ಗೇಲಿ ಮಾಡೋದು. ಜಾತ್ರೆ-ಸಂತೆಗಳಲ್ಲಿ ಕಣ್ಣಿಗೆ ಕಣ್ಣು ಕೂಡಿಸೋ ಪ್ರಯತ್ನ ಮಾಡೋದು — ಬೇನಾಮಿ ಪತ್ರ ಬರಿಯೋದು. . ಹೀಗೆ, ಇದಕ್ಕೆಲ್ಲಾ ಕಾಮಿನಿ ಪ್ರತಿಕ್ರಿಯೆ ವ್ಯಕ್ತಪಡಿಸಿದರೆ, ಮೊದಲೇ ಮಂಗನಾದವನಿಗೆ ಕಳ್ಳು ಕುಡಿಸಿದಂತಾಗುತ್ತದೆ.”

‘ಅದು ಹೌದ್ರಿ....”

‘ಮತ್ತೆ ನೋಡು, ಹೆಮ್ಮಕ್ಕಳ ಅಲಂಕಾರಗಳು! ಆ ಥಳುಕು—ಬಳುಕು. ಅವರು ಅವರಿಗಾಗಿ ಅಲಂಕಾರ ಮಾಡಿಕೊಳ್ಳುವುದನ್ನು ಬಿಟ್ಟು ಇತರರಿಗಾಗಿಯೇ ಮಾಡಿಕೊಳ್ಳುತ್ತಾರೆ. ಹೀಗಿರುವಾಗ ಕಾಮಣ್ಣನವರು ಆಕರ್ಷಿತರಾದರೆ ತಪ್ಪೇನಂತೆ?”

“ಅಂದ್ರೆ, ನೀವು ಗಂಡಸ್ರು ಏನೂ ಮಾಡಬಹುದು, ನಾವು ಮಾತ್ರ...”

“ನೋಡು, ಕೋತಿಯಿದೆ. ಯಾರನ್ನು ಕಂಡರೂ ಹಲ್ಲು ಕಿರಿಯುವುದು ಅದರ ಸ್ವಭಾವ. ಈ ಕಾಮಣ್ಣನವರ ವ್ಯಾಪಾರವೂ ಅಷ್ಟೆ. ಪ್ರತಿಕ್ರಿಯೆ ತೋರಿ ಬರದಿದ್ದರೆ ಮತ್ತೆ ನಿರುಪಯುಕ್ತವೆಂದು ದೂರ ಸರಿಯುತ್ತಾರೆ. ನಾಲ್ಕು ಜನ ದಬಾಯಿಸಿದರೆ ದೂರ ಓಡುತ್ತಾನೆ....”

“ನೀವನ್ನೋದು ಸರೀರಿ. ಈಗಿನ ಹೆಣ್ಣು ಮಕ್ಕಳ ಅಲಂಕಾರವೋ, ಅವರ ಉಡುಗೆ ತೊಡುಗೆಗಳೋ ವಿಚಿತ್ರಾತಿವಿಚಿತ್ರ. ಅಲ್ಲ, ನಾವೂ ಎಳೆತನದಲ್ಲಿದ್ದೆವು. ಆದ್ರೆ, ಇಂತಹದೊಂದೂ ಇರಲಿಲ್ಲ ..’

‘ಅದ್ದರಿಂದಲೇ ಬೀದಿಯ ಕಾಮಣ್ಣನ ಬಾಯಿಗೆ ಬೀಳಲಿಲ್ಲ ..’

‘ನಿಮ್ಮ ಬಾಯಿಗೆ ಬಿದ್ದು ಬಿಟ್ಟೆ ನೋಡಿ ...’

‘ಏನೇ ಅದು? ನನ್ನ ಬಾಯಿಗೆ ಬಿದ್ದದ್ರಿಂದ ನಿನಗೆ ಆಗಿರೋ ಗಂಡಾಂತರ?’

‘ಅಯ್ಯಬ್ಬ, ಇನ್ನು ಆಗಬೇಕಾಗಿರೋದಾದ್ರೂ ಏನೂಂತ?’

‘ಯಾಕೆ? ಏನಾಯ್ತು?’

‘ಅಲ್ರಿ ದೇಶವೇ ಗಂಡಾಂತರಕ್ಕೆ ಬಿದ್ದಿರುವಾಗ ಮತ್ತೆ ನನ್ನೊಬ್ಬಳದೇನು ಮಹಾ?’

‘ಅದೊಂದು ಹೌದೂನ್ನು. ನಿನ್ನ ಮದುವೆಯಾಗೋ ಆಲೋಚನೆ ಮಾಡುತಿದ್ದಾಗಲೇ ಚೀನೀಯ ಆಕ್ರಮಣವಾಯ್ತು ನೋಡು...’

‘ಅಬ್ಬಬ್ಬ... ಸುಳ್ಳು ಹೇಳೋದೆ?’

‘ಸುಳ್ಳಲ್ಲವೇ ಇದು. ಸತ್ಯ....’

“ಅಲ್ರಿ, ಚೀನೀಯರ ಆಕ್ರಮಣವಾದದ್ದು ಅಕ್ಟೋಬರದಲ್ಲಿ. ನನ್ನ ಮದುವೆಯಾಗೋಕೆ ಬಂದದ್ದು ಮೇಯಲ್ಲಿ ...”

“ಏನಾಯ್ತೂಂತೆ? ಅಂತೂ ಮದುವೆಯಾದದ್ದು ನಿನ್ನನ್ನೇ ನೋಡು....”

“ಅದರ ಮೊದಲು ಎಷ್ಟು ಹುಡುಗಿಯರನ್ನು ಕಂಡು ಬಂದಿದ್ದೀರಿ?”

‘ಯಾರನ್ನು ಕಂಡ್ರೂ, ಆದದ್ದು ನಿನ್ನು ತಾನೆ?’

“ನೀವನ್ನುವುದು ಸರಿಯಲ್ಲ. ನೀವು ಮದುವೆಯಾಗೋಕೆ ತಯಾರಿ ನಡೆಸಿದಾಗಲೇ ಆಕ್ರಮಣವಾಯ್ತು. ಅದು ನಿಮ್ಮದು ತಪ್ಪು. ನನ್ನದೇನು”

“ಅದು ಏನೇ ಇರ್ಲಿ. ನಿನ್ನದೂ ಇದರಲ್ಲಿ ಪಾಲು ಇದೆ. ಇಲ್ಲಾದ್ರೆ ನಿನ್ನನ್ನೇ ಯಾಕೆ ಮದುವೆಯಾಗಬೇಕಾಯ್ತು?”

“ಯಾವ ಹುಡುಗಿಯೂ ಸಿಗಲಿಲ್ಲ. ಮತ್ತೆ ಮಾಡೋದೇನು? ಮಾವನ ಮಗಳು ಗತೀನ್ನಿ...”

“ನೀನೂ ಹಾಗೇ ಅನ್ನು...”

“ಅದಕ್ಕೆ ಅನ್ನೋದು... ಹತ್ತಿರದ ಸಂಬಂಧ ಬೆಳೆಸಬಾರದೂಂತ....”

“ಯಾರು ಹೇಳ್ತಿ ಇದ್ರೂ ಆಗೋದು ತಾ ಆಗಿಯೇ ಆಗುತ್ತೇನು....’

“ಅದೇ ಅಂದದ್ದೆಲ್ಲಾ, ನಿಮ್ಮ ಕೈ ಹಿಡಿದದ್ದಕ್ಕೆ ಗಂಡಾಂತರವನ್ನೇ ಎದುರಿಸಿದ್ದೇನೆ ..”

“ಏನು?”

“ದೇಶದಲ್ಲಿ ನೋಡಿ, ಧೂಮಕೇತು ಕಾಣಿಸಿತು. ಯುದ್ಧ ಆಯಿತು, ರಕ್ತನದಿ ಹರಿಯಿತು. ಮಳೆ ದೂರವಾಯ್ತು, ನದಿ ಬತ್ತಿಹೋಗಿತು. ಭೂಮಿ ಬರಡಾಯಿತು...ಇನ್ನು ಉಪವಾಸ ಸಾಯೋದೊಂದು ಬಾಕಿ ...

‘ “ಹೆದರ ಬೇಡ್ವೆ...’

“ಅಲ್ಲಾ, ನಿಮ್ಮ ಶಾಸ್ತ್ರಿಯವರನ್ನು ನೋಡಿ. ಪ್ರತಿ ಸೋಮವಾರ ರಾತ್ರೆ ಒಂದು ಊಟ ಬಿಡಬೇಕೆಂದು ಕರೆಯಿತ್ತಿದ್ದಾರಂತೆ. ಈ ಕರೆಗೆ ಎಲ್ಲೆಡೆಯಿಂದಲೂ ಮಾನ್ಯತೆ ದೊರೆಯುತ್ತಿದೆಯಂತೆ... ’

‘ಹೌದು....’

“ಅಲ್ರಿ, ಅದನ್ನೇ ಹುಟ್ಟು ಅನ್ನೋದು?”

(ಹದಿಮೂರನೇ ಪುಟನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
“ವಿಜಯ ಬ್ಯಾಂಕಿ”ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- “ವಿಜಯ ಬ್ಯಾಂಕ್ ಬಿಲ್ಡಿಂಗ್”,
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಕಾರ್ಕಳ ಮುನ್ಸಿಫ ಕೋರ್ಟಿನಲ್ಲಿ
O. S. No 607/1964

ರುದ್ರು ಶೆಟ್ಟಿ ಸಹಾ —ವಾದಿ

ಮತ್ತು

ಅಂಗರ ಶೆಟ್ಟಿ ಸಹಾ —ಪ್ರತಿವಾದಿ

ಇವರೊಳಗೆ

ಈ ಮೂಲಕ ಸದ್ರಿ ದಾವೆಯ 6ನೆ ಪ್ರತಿವಾದಿ ಕುಟ್ಟಿ ಶೆಟ್ಟಿ—ಕಲ್ಯಾಣಿ ಶೆಟ್ಟಿ ಮಗ ಕಾರ್ಕಳ ತಾಲ್ಲೂಕು ಕಡಂದಲೆ ಗ್ರಾಮದ ಕಡಂದಲೆ ಸಂಗಬೆಟ್ಟು ಕಾರಿಯಲ್ಲಿರುವವ Post Kadandale

ವಾದಿರು ನೀವು ಹೆಸ್ಸರಿ ನೋಟೀಸ್ ಮಾಡಿ ‘ಮೇಲಿನ ಹೆಸರಿಯ ದಾವಾ ನಿಮ್ಮ ಹಾಜರಿಗೆ ತಾರೀಕು 6–12–1965ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ದ್ವಾರಾ ಹಾಜ್ರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರುಹಾಜರು ಮಾಡಿ ಸದ್ರಿ ದಾವೆಯ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಬಗ್ಗೆ ತಿಳಿಸಲಾಗುತ್ತದೆ.

By order of the Court.

N. M. Adyanthaya
Advocate for plaintiffs

Karkala, 11-11-65.

## ಭಾರತ ಹಾಗೂ ಪಾಶ್ಚಾತ್ಯ ರಾಷ್ಟ್ರಗಳು

# ದೃಢ ವೈದೇಶಿಕ ನೀತಿಯನ್ನು ಭಾರತ ಅನುಸರಿಸಬೇಕು ಶತ್ರು ಮಿತ್ರರ ನಡುವಣ ಅಂತರವರಿಯಬೇಕು

ಬರೆದವರು: ಶ್ರೀ ಪಿ. ಎಸ್. ರಾಮಚಂದ್ರ ರಾವ್, ಪಡುಬಿದ್ರೆ.

'ತಾನು ಕೊಟ್ಟದ್ದೇ ತನಗೆ ಸಿಗುವುದು' ಎಂಬ ಮಾತು ನಿಜವಷ್ಟೇ? ಕಳೆದ ಹದಿನೆಂಟು ವರ್ಷಗಳಲ್ಲಿ ಸ್ವತಂತ್ರ ಭಾರತವು ವಿದೇಶಿ ರಾಷ್ಟ್ರಗಳ ಸಮಸ್ಯೆಗಳಲ್ಲಿ ಯಾವ ಧೋರಣೆಗಳನ್ನು ವಹಿಸಿತ್ತೋ ಅದನ್ನೇ ಇಂದು ಅದು ಹಿಂದೆ ಪಡೆಯಬೇಕಾಗಿದೆ. …ಯನ ವಿವಾಹಕ್ಕೆ ಏನಾದರೂ ಉಡುಗೊರೆ ಕಳುಹಿಸಿದ್ದರೆ ಇನ್ನೊಂದು ಸಂದರ್ಭದಲ್ಲಿ ಉಡುಗೊರೆಯನ್ನೇ ಪಡೆಯಬಹುದು. ಅದರ ಬದಲು ಬರೇ 'ಗ್ರೀಟಿಂಗ್ಸ್' ಕಳುಹಿಸಿದ್ದರೆ ಅದನ್ನೆ ಹಿಂದೆ ಪಡೆಯಬೇಕಾಗಿ ಬರಬಹುದು. ಹಾಗೆಯೇ ಭಾರತದ ವಿದೇಶಿ ಧೋರಣೆ ನಿಶ್ಚಿತವಿರುತಿದ್ದರೆ ಆಪತ್ಕಾಲದಲ್ಲಿ ವಿದೇಶಗಳ ಧೋರಣೆಯೂ ನಿಶ್ಚಿತವಿರುತಿತ್ತು. ಆದುದರಿಂದ ಈ ಸಂದರ್ಭದಲ್ಲಿ ನಮ್ಮ ದೇಶಕ್ಕೆ ಸಹಾಯ ಮಾಡಲಿಲ್ಲವೆಂದು ವಿದೇಶಿ ದೇಶಗಳನ್ನು ಟೀಕಿಸಲು ನಮಗೆ ನಿಜವಾಗಿ ಅಧಿಕಾರವಿದೆಯೆ? ಪಾಕಿಸ್ಥಾನವು ಭಾರತದ ಮೇಲೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ರಶ್ಯಾ, ಯುಗೊಸ್ಲೇವಿಯಾ ಮುಂತಾದ ಕೆಲವೇ ದೇಶಗಳು ನಮ್ಮ ನ್ಯಾಯಪರತೆಯನ್ನು ಎತ್ತಿ ಹಿಡಿದವು. ಕೆಲವು ಸಣ್ಣ ದೇಶಗಳು ನಮಗೆ ಶಾಂತಿ ಸಂಧಾನದ ಕುರಿತು ಉಪದೇಶವಿತ್ತವು. ಪಾಶ್ಚಾತ್ಯ ರಾಷ್ಟ್ರಗಳು ಪಕ್ಷಪಾತದ ನಿಲುವು ತಳೆದವು. ಆಕ್ರಮಣಗೈದ ಪಾಕಿಸ್ಥಾನಕ್ಕೂ ಆಕ್ರಮಣಕ್ಕೊಳಗಾದ ಭಾರತಕ್ಕೂ ವಿಶ್ವ ಸಂಸ್ಥೆಯು ಸಮಾನ ಸ್ಥಾನ ನೀಡಿತು. ಇವೆಲ್ಲಾ ಏನನ್ನು ಸೂಚಿಸುತ್ತದೆ? ನಮ್ಮ ವಿದೇಶಿ ಧೋರಣೆಯ ಅಸಫಲತೆಯನ್ನು! ನಮ್ಮ ಶತ್ರುಗಳು ಯಾರು? ಮಿತ್ರರು ಯಾರು? ಗೋಮುಖ ವ್ಯಾಘ್ರಗಳಂತಿರುವವರು ಯಾರು? ಎಂಬುದನ್ನೂ ಪರಿಶೀಲಿಸಿ ಅದಕ್ಕೊಪ್ಪುವ ಧೋರಣೆಯನ್ನು ರೂಪಿಸಿಕೊಂಡು ಇಂದು ನಾವು ಮುನ್ನಡೆಯಬೇಕಾಗಿದೆ.

ಭಾರತದ ಪ್ರಥಮ ವೈರಿ ಪಾಕಿಸ್ತಾನವೆಂತಲೂ ಅದು ಆಕ್ರಮಣ ಮಾಡಿದರೆ ಪಾಶ್ಚಾತ್ಯ ರಾಷ್ಟ್ರಗಳು ಶಸ್ತ್ರಾಸ್ತ್ರಗಳ ಪೂರೈಕೆಯನ್ನು ನಿಲ್ಲಿಸಬಹುದೆಂತಲೂ ಮಾಜೀ ರಕ್ಷಣಾಮಂತ್ರಿ ಕೃಷ್ಣಮೆನನ್‌ರವರು ಅಂದೇ ಹೇಳಿದ್ದರು. ಅಂದು ಅವರ ಮಾತಿಗೆ ಹೆಚ್ಚಿನ ಬೆಲೆ ಕೊಡದಿದ್ದರೂ ಇಂದು ಅದರ ಅರ್ಥ ನಮಗಾಗಿದೆ. ಭಾರತೀಯ ನ್ಯಾಟ್ ವಿಮಾನಗಳ ಬಗ್ಗೆ ಪಾಶ್ಚಾತ್ಯ ರಾಷ್ಟ್ರಗಳು ತಿರಸ್ಕಾರ ಸೂಚಿಸುತ್ತಿದ್ದರೂ ಧೈರ್ಯದಲ್ಲಿ ಪ್ರಾರಂಭಿಸಿ ಭಾರತದ ರಕ್ಷಣಾ ಶಾಖೆಯಕ್ಕೆ ಜೀವಕಳೆಯನ್ನು ತುಂಬಿದ ಮೆನನರವರನ್ನು ಭಾರತೀಯರು ಎಂದಿಗೂ ಮರೆಯಲಾರರು. ಮೊನ್ನೆ ನಡೆದ ಯುದ್ಧದಲ್ಲಿ ಭಾರತೀಯ ಯೋಧರ ಕೈಯಲ್ಲಿ ನ್ಯಾಟಿನ ಶಕ್ತಿಯನ್ನು ವಿಶ್ವದ ರಾಷ್ಟ್ರಗಳೇ ಅಚ್ಚರಿಯಿಂದ ನೋಡುತಿದ್ದವು.

ಬ್ರಿಟಿಷ್ ಪಾರ್ಲಿಮೆಂಟಿನ ಕಾನೂನು ಪ್ರಕಾರವೇ ಅಖಂಡ ಭಾರತ ವಿಭಜನೆ ಹೊಂದಿತು. ಅದರ ಪ್ರಕಾರವೇ ದೇಶೀಯ ರಾಜರು ಭಾರತ ಅಥವಾ ಪಾಕಿಸ್ಥಾನದೊಡನೆ ಸೇರಬಹುದಿತ್ತು! ಕಾಶ್ಮೀರದ ಮಹಾರಾಜರಿಗೆ ಭಾರತದೊಡನೆ ಸೇರುವ ಅವಕಾಶವನ್ನು ಪಾಕಿಸ್ತಾನವೇ ಮಾಡಿಕೊಟ್ಟಿತೆನ್ನಬಹುದು. ಪಾಕ್ ಆಕ್ರಮಣಕಾರರು ಅಷ್ಟೊಂದು ಅವಸರದಲ್ಲಿ ಕಾಶ್ಮೀರವನ್ನು ಆಕ್ರಮಿಸಿದಾಗ ಮಹಾರಾಜರಿಗೆ ಏನು ಮಾಡಬೇಕೆಂಬುವೇ ತಿಳಿಯಲಾರದೆ ಹೋಗಿರಬಹುದು. ಯೋಚನೆಗೆ ಅವಕಾಶವಿಲ್ಲದೆ ಭಾರತಕ್ಕೆ ಸೇರುವ ಸೇರ್ಪಡೆ ಪತ್ರಕ್ಕೆ ಸಹಿ ಹಾಕಿದರು. ಇದು ಬ್ರಿಟಿಷ್ ಪಾರ್ಲಿಮೆಂಟಿನ ಶಾಸನ ಪ್ರಕಾರ ನಡೆದ ಕಾರ್ಯವಾಗಿರುವ ಕಾರಣ ಬ್ರಿಟಿಷರು ನಿಜವಾಗಿ ಇದಕ್ಕೆ ಹೆಚ್ಚಿನ ಬೆಂಬಲ ಕೊಡಬೇಕಿತ್ತು. ಆದರೆ ವ್ಯಾಪಾರಿ ಮನೋಭಾವದ ಬ್ರಿಟಿಷರು ಪಾಕಿಸ್ತಾನದ ಅನ್ಯಾಯಗಳಿಗೆ ಬೆಂಬಲ ನೀಡುವುದರಲ್ಲಿಯೇ ಏನೋ ಒಂದು ವಿಧದ ತೃಪ್ತಿಯನ್ನು ಪಡೆಯುತಿದ್ದಾರೆ. "ಒಡೆದು ಆಳುವ ನೀತಿ" ಎಂದಾದರೂ ಬಿಟ್ಟು ಹೋದೀತೆ? ಇಂದಿನ ಪರಿಸ್ಥಿಯಲ್ಲಿ ಭಾರತ ಕಾಮನ್‌ವೆಲ್ತಿನಲ್ಲಿ ಇರುವುದರ ಕುರಿತು ಹೆಚ್ಚಿಗೆ ಯೋಚಿಸುವುದು ಅತಿ ಆವಶ್ಯವಾಗಿದೆ.

ಅಮೇರಿಕದವರು ಕಾಶ್ಮೀರ ಸಮಸ್ಯೆ ಮಟ್ಟಿಗೆ ಬ್ರಿಟಿಷರ ಧೋರಣೆಯನ್ನು ಸಂಪೂರ್ಣ ಅನುಸರಿಸಿಕೊಂಡು ಬರುತ್ತಿದ್ದಾರೆ. ಕಳೆದ ಹದಿನೆಂಟು ವರ್ಷಗಳಲ್ಲಿ ಪಾಕಿಸ್ಥಾನಕ್ಕೆ ಒಂದುವರೆ ಸಾವಿರ ಮಿಲಿಯ ಡಾಲರು ಬೆಲೆ ಬಾಳುವ ಶಸ್ತ್ರೋಪಕರಣಗಳನ್ನು ನೆರವು ನೀಡಿರುವರು. ಅವರ ವಿಮಾನ ನೆಲೆಯು ಪಾಕಿಸ್ಥಾನದಲ್ಲಿ ಇರುವುದರಿಂದ ಪಾಕಿಸ್ಥಾನವು ಏನೇ ತಪ್ಪು ಮಾಡಿದರೂ ಅದನ್ನು ಕ್ಷಮಿಸಿ ಬಿಡುವ ಧಾರಾಳ ಮನಸ್ಸು ಅವರಿಗೆ ಬಂದಿದೆ. ಅಲ್ಲದೆ ಭಾರತವು ಎಂದಿಗೂ ಚೀನದ ಬಲೆಯಲ್ಲಿ ಸಿಕ್ಕಿ ಬೀಳಲಾರದೆಂತಲೂ, ಪಾಕಿಸ್ತಾನಕ್ಕೆ ಸ್ವಲ್ಪ ನೆರವು ಕಡಿಮೆ ಮಾಡಿದರೆ ಅದು ಚೀನದ ಬಲೆಯಲ್ಲಿ ಸಂಪೂರ್ಣವಾಗಿ ಬೀಳಬಹುದೆಂತಲೂ ತಿಳಿದು ಅದಕ್ಕೆ ಸರಿಯಾದ ಧೋರಣೆಗಳಿಂದ ಕಾರ್ಯವೆಸಗುತ್ತಿರುವರು.

ಏಶ್ಯಾಖಂಡದಲ್ಲಿ ಭಾರತ ಪಾಕಿಸ್ತಾನಗಳ ಈ ಒಂದು ಸಮಸ್ಯೆ ಸದಾ ಇದ್ದರೆ ಪಾಶ್ಚಾತ್ಯರಿಗೆ ಹಲವು ವಿಧದ ಲಾಭಗಳಿವೆ. ಸದ್ಯಕ್ಕೆ ವಿಯೆಟ್ನಾಮ್ ಸಮಸ್ಯೆ ವಿಶ್ವದ ಗಮನದಲ್ಲಿ ಕಾಣಲಾರದಷ್ಟು ಕಾಶ್ಮೀರ ಸಮಸ್ಯೆ ಬೆಳೆದಿದೆ. ಅಮೇರಿಕದ ದೃಷ್ಟಿಯಿಂದ ಇದೂ ಅವರಿಗೆ ಬೇಕಾಗಿರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳನ್ನು ನಂಬದೆ ಭಾರತವು ಸ್ವತಂತ್ರವಾದ ವಿದೇಶಿ ಧೋರಣೆ ರೂಪಿಸಿಕೊಂಡು ಸ್ವಾವಲಂಬೀ ಜೀವನಕ್ಕೆ ಹೆಚ್ಚಿಗೆ ಪ್ರಾಮುಖ್ಯತೆ ಕೊಡಬೇಕಾದ ಕಾಲಬಂದಿದೆ. ನಮ್ಮ ನೆಚ್ಚಿನ ನಾಯಕ ಶಾಸ್ತ್ರಿಗಳವರಿಗೆ ನಮ್ಮ ಐಕ್ಯತೆಯ ಬಲದಿಂದ ಅತಿಮಾನವ ಶಕ್ತಿ ಉಂಟುಮಾಡಿ ಭಾರತದ ಶಕ್ತಿಯನ್ನು ವಿಶ್ವದಲ್ಲಿ ತೋರಿಸಬೇಕಾಗಿದೆ.

ಜೈ ಹಿಂದ್!

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ನಾಲ್ಕು ದಶಕಗಳ ಪೂರ್ತಿ | ನಾಲ್ಕು ದಿಸೆಗಳಲ್ಲಿ ಕೀರ್ತಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಸಿಂಡಿಕೇಟಿನ ಸೌಜನ್ಯಯುತ ಸೇವೆಯು ಜನಮನವನ್ನು ಸೂರೆಗೊಂಡಿದೆ. ಈಗಾಗಲೇ ಎಂಟು ಲಕ್ಷ ಗ್ರಾಹಕರನ್ನು ತನ್ನೆಡೆಗೆ ಆಕರ್ಷಿಸಿರುವ ಈ ಬ್ಯಾಂಕು ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದಿದೆ. ಶೀಘ್ರ, ದಕ್ಷ, ಸಮರ್ಥ ಹಾಗೂ ನಗುಮೊಗದ ಸೇವೆಯೇ ಸಿಂಡಿಕೇಟಿನ ಸಫಲತೆಯ ರಹಸ್ಯ.



ಅದರ 40 ವರ್ಷಗಳ ಪರಿಪಕ್ವ ಅನುಭವದ ಲಾಭವನ್ನು ನೀವೇಕೆ ಪಡೆಯಬಾರದು?

● ಇಂದೇ ಅತೀ ಹತ್ತಿರದ ಶಾಖೆಯನ್ನು ಸಂದರ್ಶಿಸಿರಿ.

ನಿಮ್ಮ ಆರ್ಥಿಕ ಸಮಸ್ಯೆಗಳನ್ನು ಪರಿಶೀಲಿಸಿ ನಿಮಗೆ ಯೋಗ್ಯ ಸಲಹೆ; ಮಾರ್ಗದರ್ಶನ ನೀಡಲು ನಮ್ಮ ಮ್ಯಾನೇಜರರು ಸದಾ ಸಿದ್ಧರಾಗಿದ್ದಾರೆ.

ನಿಮಗೆ ಅನುಕೂಲವಾದ ಈ ಕೆಳಗಿನ ಆಕರ್ಷಕ ಠೇವಣಾತಿ ಯೋಜನೆಗಳು:

● ಸೇವಿಂಗ್ಸ್ ● ಕರೆಂಟ್ ● ಪಿಗ್ಮಿ ● ಕ್ಯುಮುಲೇಟಿವ್
● ಕ್ಯುಮುಲೇಟಿವ್ ಎನ್ಯುಯಿಟಿ ● ಖಾಯಂ ಠೇವಣಾತಿ.

FAITHFUL SB FRIENDLY

200ಕ್ಕೂ ಮಿಕ್ಕಿದ ಶಾಖೆಗಳು

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ರೂ. 70 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ.

ದೇಶ ರಕ್ಷಣೆಗೆ ಬೇಕಾಗಿದೆ ಧನ — — ಅದನ್ನುಳಿಸಲು ಇಂದೇ ಯೋಗ್ಯ ದಿನ

ಸಾ ಹಿ ತ್ಯ ರ ಂ ಗ

# ಕಾಳಿದಾಸ ಮತ್ತವನ ಶಾಕುಂತಲಾ

ಬರೆದವರು: ಶ್ರೀ ಸ. ನಾರಾಯಣ.

ಕಾವ್ಯೇಷು ನಾಟಕಂ ರಮ್ಯಂ |
ತತ್ರ ರಮ್ಯಾ ಶಾಕುಂತಲಾ ||
ತತ್ರಾಪಿ ಚ ಚತುರ್ಥೋಂಕಃ |
ತತ್ರ ಶ್ಲೋಕ ಚತುಷ್ಟಯಂ ||

"ಕಾವ್ಯೇಷು ನಾಟಕಂ ರಮ್ಯಂ"—ಸಂದೇಹವೇ ಇಲ್ಲ. ನಾಟಕ ರಮ್ಯವಷ್ಟೇ ಅಲ್ಲ ಅಮರ ಕೃತಿ. "ತತ್ರ ರಮ್ಯಾ ಶಾಕುಂತಲಾ" ಆದರಲ್ಲಿಯೂ ನಾಟಕಗಳಲ್ಲಿ ಶಾಕುಂತಲಾ ನಾಟಕ, ನಾಟಕ ಕ್ಷೇತ್ರದ ಉತ್ತುಂಗ ಶಿಖರ, ಕವಿ ಕಾಳಿದಾಸನ ಪ್ರತಿಭಾಪೂರ್ಣ ಪಾಂಡಿತ್ಯ ಶಕ್ತಿಗೆ ಒಂದು ಉತ್ತಮ ಉದಾಹರಣೆ.

ಭಾರತದಲ್ಲಿ ಅನೂಚೀನವಾಗಿ ಬೆಳೆದು ಬಂದ ಸಂಸ್ಕೃತ ವಾಙ್ಮಯ ತನ್ನ ವಿಶಿಷ್ಟ ಶಕ್ತಿಯನ್ನು ಬೆಳೆಸಿ—ಉಳಿಸಿ, ಬಾಳಿ-ಬದುಕಿದೆ. ವೇದಗಳ ಕಾಲದಿಂದ ಆರಂಭವಾದ ಸಂಸ್ಕೃತ ವಾಙ್ಮಯ ಇತಿಹಾಸ ಇತೋಽಪ್ಯತಿಶಯವಾಗಿ ಬೆಳೆದಿದೆ. ಆದಿ ಕಾವ್ಯ ರಾಮಾಯಣ ಮತ್ತು ಲೌಕಿಕ ಕಾವ್ಯ ಮಹಾಭಾರತದಷ್ಟೇ ಕೀರ್ತಿಯನ್ನು ಕವಿ ಕಾಳಿದಾಸನ "ಅಭಿಜ್ಞಾನ ಶಾಕುಂತಲಾ" ನಾಟಕ ಪಡೆದಿದೆ.

ಕವಿ ಕಾಳಿದಾಸ, ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶೀಯದಂತಹ ನಾಟಕಗಳನ್ನು, ಕುಮಾರ ಸಂಭವ, ರಘುವಂಶದಂತಹ ಮಹಾ ಕಾವ್ಯಗಳನ್ನು ರಚಿಸಿದ್ದರೂ ಅವನ ಕೀರ್ತಿಯನ್ನು ಎತ್ತಿ ಸಾರಿದ ಕೃತಿ 'ಶಾಕುಂತಲಾ' ನಾಟಕ. ಈ ನಾಟಕ ಸಂಸ್ಕೃತ ವಾಙ್ಮಯದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದಿರುವುದು ಮಾತ್ರವಲ್ಲ; ಸರ್ವ ಜನಾದರಣೀಯವಾದ ಕೃತಿ, ವಿಶ್ವಮಾನ್ಯ ಮಹಾ ಕೃತಿ.

ಭಾರತೀಯ ಸಂಸ್ಕೃತ ಪಂಡಿತ-ವಿದ್ವಾಂಸರು ಮಾತ್ರವಲ್ಲದೆ ಪಾಶ್ಚಾತ್ಯ ನಾಟಕಕಾರರು, ಪ್ರತಿಭಾವಂತ ಸಾಹಿತಿಗಳು, ಪಂಡಿತ-ವಿದ್ವಾಂಸರು ಈ ಕೃತಿಯನ್ನು ಅಭ್ಯಾಸ ಮಾಡಿ ಅದರ ರಸಾಸ್ವಾದನೆಯಿಂದ ತೃಪ್ತರಾಗಿ ಮುಕ್ತ ಕಂಠದಿಂದ ಪ್ರಶಂಸೆ ಮಾಡಿದ್ದಾರೆ.

ಕವಿ ಕಾಳಿದಾಸ ಎಂದೊಡನೆಯೇ 'ಶಾಕುಂತಲಾ' ನಾಟಕದ ಒಂದು ಸ್ಪಷ್ಟ ಚಿತ್ರ ನಮ್ಮ ಕಣ್ಣೆದುರಿಗೆ ಸುಳಿಯುತ್ತದೆ. 'ಶಾಕುಂತಲಾ' ಹೆಸರನ್ನು, ನಾಟಕದ ವಿಷಯವನ್ನು ನೆನಪಿಗೆ ತಂದು ಕೊಂಡೊಡನೆಯೇ "ಕವಿ ಕಾಳಿದಾಸ"ನ ಗಂಭೀರ, ಪ್ರತಿಭಾ ಪಾಂಡಿತ್ಯ ಪೂರ್ಣ ದಿವ್ಯ ತೇಜೋ ಶಕ್ತಿಯೊಂದು ಮನಸ್ಸಿನ ಮೇಲೆ ಮೂಡುತ್ತದೆ.

"ಉಪಮಾ ಕಾಳಿದಾಸಸ್ಯ"—ಸನ್ನಿವೇಶಕ್ಕೆ ತಕ್ಕಂತಹ ಉಪಮಾನವನ್ನು ಕೊಡುವುದರಲ್ಲಿ ಕಾಳಿದಾಸ ಸಿದ್ಧಹಸ್ತ. ಜನ್ಮಜನ್ಮಾಂತರಗಳ ದಿವ್ಯ ಸಂಸ್ಕಾರವನ್ನು ಪಡೆದಿದ್ದ ಕವಿ ತನ್ನ ಕೃತಿ ರಚನಾ ಕಾರ್ಯದಲ್ಲಿ ಸಂಪೂರ್ಣ ಯಶಸ್ಸು ಗಳಿಸಿದ್ದಾನೆ. ಅವನ ಕಥಾ ಸಂವಿಧಾನ, ರಚಿಸಿರುವ ಪಾತ್ರಗಳು, ರೂಪಿಸಿರುವ ಸನ್ನಿವೇಶ, ನಿರೂಪಣೆಯಲ್ಲಿ ತೋರಿರುವ ಸಹಜ ಪ್ರತಿಭೆ ಅಸದೃಶವಾದುದು. ಶಕುಂತಲೆಯಂತಹ ಶಿಲಾ ಬಾಲಿಕೆಗೆ ತನ್ನ ಕವಿತಾ ಶಕ್ತಿಯ ಶಕ್ತಿ ರಸವನ್ನು ಹರಿಸಿ ಶಾಕುಂತಲಾ ಪಾತ್ರವನ್ನು ಓದುಗನ ಎದುರಿಗೆ ತೆರದ ಕನ್ನಡಿಯಂತೆ ಬಿಚ್ಚಿಟ್ಟು ಅನುಪಮ ಸ್ತ್ರೀಮೂರ್ತಿಯ ಪ್ರತ್ಯಕ್ಷ ದರ್ಶನ ಮಾಡಿರುತ್ತಾನೆ ಕವಿ.

"ಶಾಕುಂತಲಾ" ಪಾತ್ರವನ್ನು ನೈಜವಾಗಿ ಚಿತ್ರಿಸಬಲ್ಲ ಶಕ್ತಿ ಪಡೆದಿರುವ ವ್ಯಕ್ತಿ ಒಬ್ಬನೇ. ಅವನ ವಿನಃ ಬೇರೊಬ್ಬರಿಗೆ ಆ ಪಾತ್ರವನ್ನು ಸೃಷ್ಟಿಸುವ ಶಕ್ತಿ ಬರುವುದಂತಿರಲಿ; ಆ ಪಾತ್ರವನ್ನು ಪೂರ್ಣವಾಗಿ ಅರಿಯುವ ಶಕ್ತಿಯೂ ಇಲ್ಲ. ಆ ಶಕ್ತಿ ಪಡೆದ ವ್ಯಕ್ತಿ—"ಕಾಳಿದಾಸ"

ವ್ಯಾಸ ರಚಿತ ಮಹಾಭಾರತದ ಆದಿ ಪರ್ವ, ಪದ್ಮ ಪುರಾಣ ಮತ್ತು ಸ್ವರ್ಗ ಖಂಡದ ಮೊದಲೈದು ಅಧ್ಯಾಯಗಳಲ್ಲಿ ಶಕುಂತಲೋಪಖ್ಯಾನದ ಕಥೆ ಸೂಕ್ಷ್ಮವಾಗಿ ಗೋಚರವಾಗುತ್ತದೆ. ಆದರೆ ಅವುಗಳ ಶಾಕುಂತಲಾ ಪಾತ್ರ, ಕವಿ ಕಾಳಿದಾಸನ ನಾಟಕದಲ್ಲಿ ಬರುವ ನಾಯಿಕೆ "ಶಕುಂತಲೆ"ಯ ಪಾತ್ರಕ್ಕೆ ಎಳ್ಳಷ್ಟೂ ಸರಿಗಟ್ಟಲಾರವು.

ಉಳಿದ ಕೃತಿಗಳಲ್ಲಿ ಶಕುಂತಲಾ ಪಾತ್ರ ಹಸ್ತರೊಂದಿಗೆ ಕನ್ನೊಂದು ಎಂದರೆ ಕಾಳಿದಾಸನ ನಾಟಕದಲ್ಲಿ ಕಾಣುತ್ತಿರುವ ಶಾಕುಂತಲಾ ಕಥಾನಾಯಿಕಿ, ದಿವ್ಯ ಕನ್ಯೆ, ಮೇಲಾಗಿ ಸರ್ವ ಗುಣ, ರೂಪ ಸಂಪನ್ನೆ. ಕವಿ ತನ್ನ ಕಾವ್ಯ ಶೈಲಿಯನ್ನು ನಿಷ್ಕಲಂಕ ಮನಸ್ಸಿನಿಂದ ರೂಪಿಸಿ, ಪೂಜಿಸಿದ್ದಾನೆ.

ಮಹಾಭಾರತದ ಕರ್ತೃ ವ್ಯಾಸ ಮಹರ್ಷಿಗಳ ದೃಷ್ಟಿಯಲ್ಲಿ ಅಂದರೆ ಅವರು ರೂಪಿಸಿರುವ ಶಾಕುಂತಲಾ, ದುಷ್ಯಂತರ ಪಾತ್ರವನ್ನು ಗಮನಿಸಿದರೆ ಸಾಮಾನ್ಯ ಜನರಂತೆ ಯಾವುದೋ ಅಲ್ಪ ಸುಖಕ್ಕೆ ಬಲಿಯಾಗಿ, ಸ್ವಾರ್ಥ ಸಾಧನೆಯ ಆಸೆಯಿಂದ ಹೋರಾಡುವ ವ್ಯಕ್ತಿಗಳಂತೆ ಇಬ್ಬರೂ ಕಾಣಬರುತ್ತಾರೆ. ಆದರೆ ಕಾಳಿದಾಸನ ದೃಷ್ಟಿಯಲ್ಲಿ ಇಬ್ಬರೂ ಧೀರೋದಾತ್ತ ನಾಯಕರು. ಅವರ ಬಗ್ಗೆ ಪ್ರತಿಯೊಬ್ಬರಿಗೂ ಅನುಕಂಪ; ಗೌರವ ಭಾವ, ಪ್ರೇಮ ತಾನಾಗಿಯೇ ಮೂಡುತ್ತದೆ.

ನಾಟಕದ ಕಥಾವಸ್ತು ಯಾರಿಗೂ ಅಪರಿಚಿತವಾದುದಲ್ಲ. ಆದರೂ ಕೆಲ ಮಾತುಗಳಲ್ಲಿಯೇ ಸೂಕ್ಷ್ಮವಾಗಿ ವಿವರಿಸುವುದು ಸಮಯೋಚಿತ. "ಶಾಕುಂತಲಾ" ಅಪ್ಸರ ಸ್ತ್ರೀ ಮೇನಕೆ ಮತ್ತು ಬ್ರಹ್ಮರ್ಷಿ ಪದವಿಯನ್ನು ಪಡೆಯಲು ಕ್ಷತ್ರಿಯ ಧರ್ಮವನ್ನೇ ದೂರಮಾಡಿ ತಪೋಸಾಧನೆಗೆ ನಿಂತಿದ್ದ ಕೌಶಿಕನ ಮಗಳು. ಬಹು ಕಿರಿಯ ವಯಸ್ಸಿನಲ್ಲಿಯೇ ತಂದೆ-ತಾಯಿಗಳಿಂದ ದೂರಳಾಗಿ ಮುನಿ ಕಣ್ವರ ಸಾಕು ಮಗಳಾಗಿ ಬೆಳೆದು ಯೌವನಾವಸ್ಥೆಯಲ್ಲಿರುತ್ತಾಳೆ. ಹಸ್ತಿನಾಪುರದ ಅರಸು ದುಷ್ಯಂತ ಬೇಟೆಗಾಗಿ ಬಂದು ಮುನಿ ಕಣ್ವರನ್ನು ಕಾಣಲು ಆಶ್ರಮಕ್ಕೆ ಬರುತ್ತಾನೆ. ದೈವ ಸಂಯೋಗದಿಂದ ಆಶ್ರಮದ ಪ್ರಶಾಂತ ವಾತಾವರಣದಲ್ಲಿ ಶಾಕುಂತಲಾ ಮತ್ತು ದುಷ್ಯಂತರ ಮಿಲನವಾಗಿ ಪ್ರೇಮ ಬೆಳೆಯುತ್ತದೆ. ಕೊನೆಗೆ ಗಾಂಧರ್ವ ವಿವಾಹವೂ ನಡೆದು; ಶಾಕುಂತಲೆ ಗರ್ಭವತಿಯಾಗುತ್ತಾಳೆ. ಕಣ್ವರಿಗೆ ಯೋಗ ಶಕ್ತಿಯಿಂದ ಎಲ್ಲವೂ ತಿಳಿದು ಸಾಕು ಮಗಳನ್ನು ಹರಸುತ್ತಾರೆ.

ಹೆತ್ತ ತಂದೆಯ ಕರ್ತವ್ಯದಂತೆ ಕಣ್ವರು ಶಿಷ್ಯರೊಂದಿಗೆ ಸಾಕುಮಗಳನ್ನು ಅವಳ ಪತಿಯಲ್ಲಿಗೆ ಕಳುಹಿಸುತ್ತಾರೆ. ದೊರೆ ದುಷ್ಯಂತ ಶಾಕುಂತಲೆಯನ್ನು ದೂರ ಮಾಡುತ್ತಾನೆ. ಕಾರಣ ಶಾಕುಂತಲೆ ಆಶ್ರಮದಲ್ಲಿ ಪತಿಯ ಯೋಚನೆಯಲ್ಲಿ ಮಗ್ನಳಾಗಿದ್ದಾಗ ಬಂದ ದೂರ್ವಾಸರು ತಮ್ಮನ್ನು ಸತ್ಕರಿಸಲಿಲ್ಲವೆಂದು ಶಾಕುಂತಲೆಗೆ "ನೀನು ಯಾರನ್ನು ನೆನೆಸುತ್ತಿದ್ದೀಯೋ ಅವನು ನಿನ್ನನ್ನು ಮರೆಯಲಿ" ಎಂದು ಶಪಿಸುತ್ತಾರೆ. ಶಾಕುಂತಲೆಯ ಗೆಳತಿಯರಾದ ಅನಸೂಯ ಪ್ರಿಯಂವದೆಯರ ಬೇಡಿಕೆಯ ಮೇರೆಗೆ ದೂರ್ವಾಸರು ಶಾಪ ವಿಮೋಚನೆಯನ್ನು ಸೂಚಿಸಿರುತ್ತಾರೆ. ಶಾಕುಂತಲ ದೊರೆಯನ್ನು ನಂಬಿಸಲು ಬಗೆಬಗೆಯಲ್ಲಿ ಪ್ರಯತ್ನಿಸುತ್ತಾಳೆ. ಆದರೆ ಪ್ರಯೋಜನವಾಗುವುದಿಲ್ಲ. ಅವಳೊಂದಿ

(ಹನ್ನೊಂದನೇ ಪುಟ ನೋಡಿರಿ)


## ಕ್ಷಯವು ಒಂದು ಭಯಂಕರ ರೋಗ

ಕ್ಷಯರೋಗಕ್ಕೆ "ಟ್ಯುಬರಕ್ಲ್ ಬೆಸಿಲಸ್" ಎಂಬ ರೋಗಾಣುಗಳು ಕಾರಣವಾಗಿವೆ.

ಅದು ಸಂಶಯಾಸ್ಪದನಲ್ಲದ ರೋಗಿಯಿಂದ ಆರೋಗ್ಯವಂತರಿಗೆ ಅಗಾಗ್ಯೆ ಹರಡಬಲ್ಲುದು. ಮೊದಲೇ ಕ್ಷಯರೋಗಗ್ರಸ್ತನಾದವನಿಂದ ಇದು ಹರಡಲೂ ಬಹುದು. ಇದು ಹೆಚ್ಚಾಗಿ ಶ್ವಾಸಕೋಶಗಳಲ್ಲಿ ಕಾಣಬರುತ್ತದೆ. ದೇಹದ ಯಾವುದೇ ಭಾಗದಲ್ಲಿ ಕೂಡ ಕಾಣಿಸಬಹುದು.

ಆರಂಭದಲ್ಲಿ ಕ್ಷಯರೋಗದ ಚಿಹ್ನೆಗಳು ಅಷ್ಟೇನೂ ವಿಶೇಷವಾಗಿ ತೋರಿ ಬರುವುದಿಲ್ಲ. ಆರಂಭದ ಹಂತದಲ್ಲಿ ಅಪಾಯವು ಅಲ್ಪವಾದುದರಿಂದ ಶ್ವಾಸಕೋಶವು ವಾಡಿಕೆಯಂತೆ ಕಾರ್ಯ ನಿರ್ವಹಿಸುತ್ತದೆ. ಅದು ಅದರಂತೆ ಕೆಲವು ದಿವಸಗಳ ವರೆಗೆ ಅಥವಾ ತಿಂಗಳುಗಳ ವರೆಗೆ ಕೆಲಸ ಮಾಡುತ್ತಿರಬಹುದು. ಹೆಚ್ಚಾಗಿ ಖಾತ್ರಿಯಾದ ಚಿಹ್ನೆಗಳು ಹೀಗಿವೆ:— ಎ) ಪದೇ ಪದೇ ಕೆಮ್ಮುವುದು. ಬಿ) ರಕ್ತ ಅಥವಾ ರಕ್ತ ಕೂಡಿದ ಕಫವನ್ನು ಉಗುಳುವುದು. ಸಿ) ಎದೆ ನೋವು. ಡಿ) ಜ್ವರ ಬಂದಂತೆ ಮತ್ತು ಆಯಾಸವಾದಂತೆ ಆಗುವುದು.

ನೀವು ಈ ರೋಗದ ಬೇರೆ ಬೇರೆ ರೂಪಗಳನ್ನು ಗುಣ ಮಾಡುವುದಕ್ಕಿಂತಲೂ ತಡೆಗಟ್ಟುವ ದೃಷ್ಟಿಯಿಂದ ಹೆಚ್ಚಾಗಿ ಅರಿತಿರಬೇಕು. ಕ್ಷಯರೋಗದ ಕುರಿತಾದ ಹೆಚ್ಚಿನ ವಿವರಕ್ಕೆ ಸೆಕ್ರೆಟರಿ-ಜನರಲ್, ಟ್ಯುಬರ್‌ಕ್ಯುಲೋಸಿಸ್ ಎಸೋಶಿಯೇಶನ್ ಆಫ್ ಇಂಡಿಯಾ, 3-ರೆಡ್‌ಕ್ರಾಸ್ ರೋಡ್, ನ್ಯೂ-ಡೆಲ್ಲಿ—2. ಅಥವಾ ನಿಮ್ಮ ರಾಜ್ಯದ ಟಿ ಬಿ ಎಸೋಶಿಯೇಶನಿನ ಗೌರವ ಕಾರ್ಯದರ್ಶಿಗಳಿಗೆ ಬರೆಯಿರಿ. ದಯಮಾಡಿ ನಿಮ್ಮ ಕಾಗದಗಳ ಮೇಲೆ ಟಿ ಬಿ ಮೊಹರುಗಳನ್ನು ಅಂಟಿಸಿರಿ. ಒಂದು ಟಿ ಬಿ ಮೊಹರಿನ ಬೆಲೆ ಬರೇ ಹತ್ತು ಪೈಸೆ.




ಒಂದು ಮೊಹರಿನ ಬೆಲೆ
ಹತ್ತು ಪೈಸೆ ಮಾತ್ರ

ಮೊಹರುಗಳು ದೊರೆಯುವ ಸ್ಥಳ:— 1. ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಮಂಗಳೂರು 2. ಮೈಸೂರು ರಾಜ್ಯದ ಟಿ.ಬಿ. ಎಸೋಶಿಯೇಶನ್, ಕುರುಬರ ಸಂಘ ಹೋಸ್ಟೆಲ್ ಬಿಲ್ಡಿಂಗ್, ಗಾಂಧೀ ನಗರ, ಬೆಂಗಳೂರು ಮತ್ತು ಅವುಗಳ ಬೇರೆ ಬೇರೆ ಏಜನ್ಸಿಗಳು.

**16ನೆ ಕ್ಷಯರೋಗ ಮೊಹರು ಮಾರಾಟ ಚಳವಳಿ**
(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಏರ್ಪಡಿಸಲಾದುದು)

ಸ್ಥಳ ದಾನ:
Bharat Trading Co., Bombay and
C. Bole & Co., Bombay.

### ದೊಡ್ಡವರ ಚಿಕ್ಕತನ

# ಬ್ರಿಟನ್ನಿನ ಶ್ವೇತ ರೋಗ

"ಕಾಮನ್‌ವೆಲ್ತ್ ರಾಷ್ಟ್ರಗಳಿಂದ ಇಲ್ಲಿಗೆ (ಬ್ರಿಟನ್ನಿಗೆ) ಜನ ವಲಸೆ ಬರುವುದನ್ನು ನಿರ್ಬಂಧಿಸುವ ವಿಷಯದಲ್ಲಿ ನಮ್ಮ ಧೋರಣೆ ಸ್ಪಷ್ಟವಾಗಿದೆ. ನಾವು ಖಂಡಿತವಾಗಿಯೂ ಅಂಥ ನಿರ್ಬಂಧವನ್ನು ವಿರೋಧಿಸುತ್ತೇವೆ! ನಾವು ಜಗತ್ತಿನ ಅತ್ಯಂತ ನಾಗರಿಕ ರಾಷ್ಟ್ರ. ನಮ್ಮ ಮಹಾರಾಣಿಯ ಪ್ರಜೆಗಳು ಬಡವರಾಗಿದ್ದು ವಸತಿ ಉದ್ಯೋಗಗಳಿಲ್ಲದೆ ತೊಳಲುತ್ತಿರುವಾಗ, ಅವರ ಬಗೆಗೆ ನೆರೆ ಹೊಣೆಗಾರಿಕೆ ನಮ್ಮದಾಗಿದೆ."

—ಹೀಗೆ ಹೇಳಿದವರು ಇಂಗ್ಲೆಂಡಿನ ಸುಪ್ರಸಿದ್ಧ ಲೇಬರ್ ನಾಯಕ ಆರ್ಥರ್ ಬಾಟಮ್ಲಿ, ೧೯೫೮ರಲ್ಲಿ.

ಈಗ ಆ ವ್ಯಕ್ತಿಯೇ ಬ್ರಿಟಿಷ್ ಸರಕಾರದಲ್ಲಿ ಕಾಮನ್‌ವೆಲ್ತ್ ಕಾರ್ಯದರ್ಶಿಯಾಗಿದ್ದಾರೆ. ವಿಲ್ಸನ್ ಸರಕಾರ, ಕಾಮನ್‌ವೆಲ್ತ್ ರಾಷ್ಟ್ರಗಳಿಂದ ಬ್ರಿಟನ್ನಿಗೆ ಜನ ವಲಸೆ ಬರುವುದನ್ನು ತಡೆಯುವ ಕಾರ್ಯದಲ್ಲಿ ಮಗ್ನವಾಗಿದೆ. ಕನ್‌ಸರ್ವೇಟಿವ್ ಸರಕಾರ ಏಳು ವರ್ಷಗಳ ಹಿಂದೆ ವಿಧಿಸಿದ ನಿರ್ಬಂಧಗಳನ್ನು ಲೇಬರ್ ಸರಕಾರ ಮತ್ತಷ್ಟು ಬಿಗಿಗೊಳಿಸಿದೆ!

ಇದು ವರ್ಣದ್ವೇಷದ ಶಾಸನ!—ಎಂದು ಹಿಂದೆ ಕೂಗಾಡಿದವರು ಈಗ ಆ ಶಾಸನಕ್ಕೇ ಬೆಂಬಲ ನೀಡುತ್ತಿದ್ದಾರೆ.

ಬ್ರಿಟನ್ನಿನಲ್ಲಿ ಕಂಡು ಬರುತ್ತಿರುವ ವರ್ಣದ್ವೇಷದ ಪ್ರಶ್ನೆಯನ್ನು ಪೃಥಕ್ಕರಿಸೋಣ.

ಕಾಮನ್‌ವೆಲ್ತ್ ಒಕ್ಕೂಟಕ್ಕೆ ಸೇರಿದ ನಾನಾ ರಾಷ್ಟ್ರಗಳ ಜನರಿಗೆ ಕಾಮನ್‌ವೆಲ್ತ್ ಪೌರತ್ವವಿದೆ. ಬ್ರಿಟನ್ನಿಗೆ ಬರಲು ಅವರಿಗೆ ಹಕ್ಕಿದೆ. ವಿದ್ಯಾರ್ಜನೆಗೋ ಉದ್ಯೋಗಕ್ಕಾಗಿಯೋ ನಾನಾ ಮೂಲೆಗಳಿಂದ ಜನ ಅಲ್ಲಿಗೆ ಬರುತ್ತಾರೆ. ಬರುವವರು ಆಡುವ ಭಾಷೆ ಬೇರೆ. ಅವರ ರೀತಿ ನೀತಿಗಳೂ ಜೀವನ ವಿಧಾನವೂ ಬೇರೆ.

ಈ ಪರಿಸ್ಥಿತಿ ಸಾಮಾಜಿಕ ತಿಕ್ಕಾಟ ಘರ್ಷಣೆಗಳಿಗೆ ಎಡೆ ಕೊಡುತ್ತದೆ. ಬಿಳಿಯ ನೆರೆಹೊರೆಯವರು ವರ್ಣೀಯರ ಬಗೆಗೆ ಹೇಳುವುದಿಷ್ಟೆ:

'ಇವರು ಹೊಲಸು ಜನ. ಗದ್ದು ಗದ್ದಲ ಜಾಸ್ತಿ. ನೀತಿವಂತರಲ್ಲ. ಹಿಂಸೆಯನ್ನೂ ದುಶ್ಚಟಗಳನ್ನೂ ತಮ್ಮೊಂದಿಗೆ ತರುತ್ತಾರೆ. ಜಿಗಣೆಗಳಂತೆ ಅಂಟಿಕೊಂಡು ನಮ್ಮ ಕಲ್ಯಾಣರಾಜ್ಯದ ರಕ್ತ ಹೀರುತ್ತಾರೆ.'

ಇಂಥ ಧೋರಣೆ ತಪ್ಪೆಂದು ಹಿಂದೆ ಸಾರಿದ ಲೇಬರ್ ಪಕ್ಷದವರು, ಮುಂದೆ ಅಂತರ್ಲಾಗ ಹಾಕಲು ಏನು ಕಾರಣ?

ಕಳೆದ ಚುನಾವಣೆ ಸಮೀಪಿಸಿದಂತೆ ವಲಸೆ ನಿರ್ಬಂಧದ ಮೇಲಣ ತನ್ನ ವಿರೋಧವನ್ನು ಲೇಬರ್ ಪಕ್ಷ ಸದ್ದಿಲ್ಲದೆ ಬಿಟ್ಟು ಕೊಟ್ಟಿತು. ಹೊರಗಿನವರ ಅನಿರ್ಬಂಧಿತ ಪ್ರವೇಶಕ್ಕೆ ಬೆಂಬಲ ನೀಡುವುದು 'ರಾಜಕೀಯ ಆತ್ಮಹತ್ಯೆ'ಯಾಗುತ್ತದೆಂದು, ಆ ಪಕ್ಷದ ಹಿರಿಯ ಮುಖಂಡರೊಬ್ಬರು ನುಡಿದರು.

ಚುನಾವಣೆಯಲ್ಲಿ ಲೇಬರ್ ಪಕ್ಷ ಜಯಗಳಿಸಿತು. ಸರಕಾರ ರೂಪಿಸಲು ಸಾಕಾಗುವಷ್ಟು ಬಹುಮತ ಅದಕ್ಕೆ ದೊರೆಯಿತು.

ಅಧಿಕಾರ ಸ್ವೀಕರಿಸಿದ ಮೇಲೆ ವಲಸೆಗೆ ಸಂಬಂಧಿಸಿದ ತನ್ನ ಹಳೆಯ ನಿಲುವನ್ನು ಲೇಬರ್ ಪಕ್ಷ ಬಿಟ್ಟುಕೊಟ್ಟಿತು!

ಕಳೆದ ಚುನಾವಣೆಯಲ್ಲಿ ಔದ್ಯೋಗಿಕ ನಗರವಾದ ಸ್ಮೆತ್‌ವಿಕ್‌ನಲ್ಲಿ ಪೀಟರ್ ಗ್ರಿಫಿತ್ಸ್ ಆರಿಸಿಬಂದರು. ಕಾರ್ಮಿಕ ಮತದಾರರು ಹೆಚ್ಚು ಸಂಖ್ಯೆಯಲ್ಲಿದ್ದರೂ ಕನ್‌ಸರ್ವೇಟಿವ್ ಪ್ರತಿನಿಧಿ ಜಯಶಾಲಿಯಾದರು. ವರ್ಣೀಯರ ವಿಷಯದಲ್ಲಿ ಲೇಬರ ಪಕ್ಷ ಉದಾರಿಯಾಗಿದೆ ಎಂಬೊಂದೇ ವಾದವನ್ನು ಮುಂದಿಟ್ಟು ಗ್ರಿಫಿತ್ಸ್ ಬಿಳಿಯ ಮತದಾರರನ್ನು ಒಲಿಸಿಕೊಂಡರು.

ಆ ಕ್ಷೇತ್ರದಲ್ಲಿ ಆದು ಪರಾಭವ ಲೇಬರ್ ಪಕ್ಷದ ಪಾಲಿಗೆ ಅಪಾಯದ ಗಂಟೆಯಾಯಿತು. ವಲಸೆ ನಿರ್ಬಂಧ ಶಾಸನವನ್ನು ಲೇಬರ್ ಸರಕಾರ ಮತ್ತಷ್ಟು ಬಿಗಿಗೊಳಿಸಿತು.

ಕಪ್ಪು—ಬಿಳಿ ವಿವಾದಕ್ಕೆ ಸಾಮಾನ್ಯವಾಗಿ ಪ್ರೇರಣೆ ನೀಡುವುದು ಪೂರ್ವದೂಷಿತ ಅಭಿಪ್ರಾಯ. ಕಪ್ಪು ಮೈಯವರು ಕುಚ್ಛರೆನ್ನುವುದು ಶತಮಾನಗಳಿಂದ ಬೆಳೆದು ಬಂದಿರುವ ಭಾವನೆ.

ಆದರೆ ವಸ್ತುಸ್ಥಿತಿಯಲ್ಲಿ ಬ್ರಿಟನ್ನಿನ ಸಾಮಾಜಿಕ ಜೀವನದಲ್ಲಿ ವರ್ಣೀಯರಿಗಿರುವ ಸ್ಥಾನವೇನು?

ವಲಸೆ ಬಂದ ಕಾರ್ಮಿಕರೆಲ್ಲ ಬ್ರಿಟನ್ನಿಂದ ವಾಪಾಸಾದರೆ ಆ ಕ್ಷಣವೇ, ವರ್ಣೀಯ ಕಂಡಕ್ಟರುಗಳೂ ಗಾರ್ಡುಗಳೂ ಇಲ್ಲದೆ ಲಂಡನ್ನಿನ ಸಾರಿಗೆ ವ್ಯವಸ್ಥೆ ಮುರಿದು ಬೀಳುವುದು.

ವರ್ಣೀಯ ಕಾಮನ್‌ವೆಲ್ತ್ ರಾಷ್ಟ್ರಗಳಿಂದ ಬಂದಿರುವ ಡಾಕ್ಟರರೂ ನರ್ಸುಗಳೂ ಸ್ವದೇಶಗಳಿಗೆ ಹಿಂತಿರುಗಿದರೆ, ಬ್ರಿಟನ್ನಿನ ಅರ್ಧಕ್ಕರ್ಧ ಆಸ್ಪತ್ರೆಗಳನ್ನು ಮುಚ್ಚಬೇಕಾಗುವುದು.

ಇಷ್ಟಿದ್ದರೂ ವರ್ಣೀಯರನ್ನು ಆಂಗ್ಲರು ಜರೆಯುವರಲ್ಲ-ಇದೀಗ ಎದೆಗಾರಿಕೆ.

ಅವರ ಮನಸ್ಸಿನ ಗವಿಯನ್ನು ಕತ್ತಲು ತುಂಬಿದ್ದರೂ ಎಲ್ಲಿಯೋ ಒಂದೆಡೆ ಮೂಲೆಯಲ್ಲಿ ಮಂದ ಬೆಳಕು ಕಾಣಿಸುತ್ತಿದೆ. ಅದು ಲೇಬಲ್ ಪಕ್ಷದೊಳಗೆ ಮುಖಂಡರ ನೀತಿಯ ವಿರುದ್ಧ ವ್ಯಕ್ತವಾಗಿರುವ ಪ್ರತಿಭಟನೆ.

ಕನಸರ್ವೇಟಿವ್ ಪಕ್ಷದಲ್ಲೂ ಕೆಲಯುವಕ ಸದಸ್ಯರು ವರ್ಣ ಪ್ರಶ್ನೆಯನ್ನು ಚುನಾವಣೆಯ ರಂಗದಿಂದ ಹೊರಕ್ಕಿಡಬೇಕೆಂದು ಬಯಸುತಿದ್ದಾರೆ.

ಅಸಹನೆಯ ಹುಚ್ಚು ಪ್ರವಾಹಕ್ಕೆ ಇವರು ತಡೆಬಂಡೆಗಳಾಗುವರೋ ಇಲ್ಲವೋ ಎನ್ನುವುದು ಕಾದುನೋಡಬೇಕಾದ ಸಂಗತಿ.

---

ಸಾರ್ವಜನಿಕರ ಅವಗಾಹನೆಗೆ

ಶ್ರೀ ಧರ್ಮಸ್ಥಳ ಕ್ಷೇತ್ರದ ವಾರ್ಷಿಕ ಲಕ್ಷದೀಪೋತ್ಸವವು

ಇದೇ ನವಂಬರ ತಿಂಗಳ ತಾರೀಕು 20ರಿಂದ 22ನೆ ತಾರೀಕಿನ ವರೆಗೆ ನಡೆಯಲಿದೆ.

●

ಕಡೆಯ 2 ದಿವಸಗಳಲ್ಲಿ ವರ್ಷಂಪ್ರತಿ ನಡೆಯುವಂತೆ ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು ನಡೆಯಲಿವೆ.

## ಕಾಶ್ಮೀರ-ಕುರುಕ್ಷೇತ್ರ

ವಿಪುಲ ಸೇನಾಬಲಂ
ಪ್ರಳಯ ಕೋಲಾಹಲಂ
ಮೊಳಗಿತ್ತು ಕುರುಧರೆಯ ಮೇಲೆ |
ಕೌರವನ ದುಷ್ಫಲಂ
ರೌರವವೆ ಪ್ರತಿಫಲಂ
ಮೊಳಗಿತ್ತು ಪಾಂಚಜನ್ಯಲೀಲೆ ||೧||

ಸಂಧಾನ ಸದ್ಧರ್ಮ
ಮಾನವೀಯತೆ ಮರ್ಮ
ಮೊದಲಿಂ ಕಳೆದಿದ್ದ ಭೂಪ |
ತಾ ಯುದ್ಧ ಸನ್ನದ್ಧ-
ನೆಂದೆನಲು ಕುರುಕ್ಷೇತ್ರದ್ದ
ಕೆರಳಿತ್ತು ಪಾಂಡವರ ಕೋಪ ||೨||

ಪಟು ಭಟರ ಸಂಖ್ಯಾತ
ಭಾರತದ ರಣಖ್ಯಾತ
ದಾಯಾದ ಮತ್ಸರದ ಕಿಚ್ಚು |
ಕುರುಕುಲವ ಸುಟ್ಟುರುಹಿ
ಧರ್ಮ ನೀತಿಯನರುಹಿ
ನೊಂದಿರುವ ಕತೆಯನಿತು ಮೆಚ್ಚು ||೩||

ಪಾಕ್ ಜನದ ಪರ್ತನಂ
ಚರಿತ್ರೆಯಾವರ್ತನಂ
ಭಾರತದ ಜನಕೆಂದು ಬಂತು |
ಅಯೂಬ್ ದುರ್ಯೋಧನಂ
ಭುಟ್ಟೊ ದುಶ್ಶಾಸನಂ
ಕಾಶ್ಮೀರ ಕುರುಧರಣಿಯಾಯ್ತು ||೪||

ಲಾಹೋರ ಟ್ಯಾಂಕ್ ಸಮರ
ಕೀರ್ತಿಯುಳಿಯದಮರ
'ಹಮೀದ'ನಭಿಮನ್ಯು ಕೆಡೆದ |
'ಮುನ್ನುಗ್ಗಿ, ಮುನ್ನುಗ್ಗಿ
ವೈರಿ ಪಡೆಯಂ ಜಗ್ಗಿ'
ನುಡಿದಾತ ಕೊನೆಯುಸಿರನೆಳೆದ ||೫||

ಕ್ರೂರ ಕರುಳಂಬಗೆಯೆ
ವಿಜಯ-ದುಂದುಭಿಬಡಿಯೆ
ಐಕ್ಯತೆಯ ಭೀಮಬಲವುಂಟು |
ಮಾತೃಭೂಮಿಯ ಮಾನ
ಸ್ವಾತಂತ್ರ್ಯದಭಿಮಾನ
ಸತ್ಯ ನ್ಯಾಯವೆ ನಮಗೆ ನೆಂಟು ||೬||

○ ○ ○ ○

ಶ್ರೀ ಪಿ. ಶಾಮ ಭಟ್, ಪೆರಡಾಲ.

---

In the Court of the Dt. Judge S. K.

O. P. 77/1965

In the matter of debts of Ramaraya Kamath—deceased.

Padmavathy alias Mukta Bai and others ... Petitioners

To whom it may concern,

Notice is hereby given that on 12-10-1965 an application was made by the petitioner for grant of certificate under Indian Succession Act, with respects of debts due to the deceased and has been posted to 27—11—1965, when you are at liberty to appear and oppose the same.

(By order of Court)

S. R. Hegde,
Advocate for Petitioners.

Mangalore, 2—11—1965.

# ಸ್ವಾವಲಂಬನೆಯ
# ಟ್ರಾಂಬೆಯಲ್ಲಿ ಗೆ

ಮಹಾರಾಷ್ಟ್ರ ರಾಜ್ಯದ ಬೊಂಬಾಯಿಯ ಬಳಿ ಟ್ರಾಂಬೆಯಲ್ಲಿ ಭಾರತದ ರಾಸಾಯನಿಕ ಗೊಬ್ಬರ ಕಾರಖಾನೆಗಳ ಸಾಲಿನಲ್ಲಿ ಮೊದಲ ಭಾಗವು ಕಳೆದ ೬೦ಗಳಲ್ಲಿ ಆರಂಭವಾಯ್ತು. ಅದಲ್ಲದೆ ಮಾತ್ರ ಮೊದಲಿಗ ಅಮೋನಿಯಾ ಗೊಬ್ಬರವೂ ತಯಾರಾಯಿತು. ಫರ್ಟಿಲೈಜರ್ ಕಾರ್ಪರೇಶನ್ ಆಫ್ ಇಂಡಿಯಾದ ಸ್ವಾಮಿತ್ವದ ಈ ಕಾರಖಾನೆಯ ಸ್ಥಾಪನೆಗೆ ರೂ. ೩೧ ಕೋಟಿ ೪೦ ಲಕ್ಷವನ್ನು ಅಮೆರಿಕೆಯು ಸಾಲಗಳ ರೂಪವಾಗಿ ಬಂಡವಳವಾಗಿ ಕೊಟ್ಟಿದೆ.

ಟ್ರಾಂಬೆಯ ಈ ಕಾರಖಾನೆಯು ಪ್ರತಿವರ್ಷ ೯೯,೦೦೦ ಟನ್ ಯೂರಿಯಾ ಮತ್ತು ೩,೨೦,೦೦೦ ಟನ್ ನೈಟ್ರೋ ಫಾಸ್ಪೇಟನ್ನು ಉತ್ಪಾದಿಸಬಲ್ಲದು. ಈ ಎರಡೂ ಬಗೆಯ ಗೊಬ್ಬರಗಳು ವನಸ್ಪತಿಗಳಿಗೆ ಒಳ್ಳೆಯವು. ನೈಟ್ರೋ ಫಾಸ್ಫೇಟ್ ಒಂದು ಮಿಶ್ರಿತ ರಸಾಯನಿಕ ಗೊಬ್ಬರ. ಭಾರತದಲ್ಲಿ ಇದು ತಯಾರಾಗುವುದು ಈಗ ಟ್ರಾಂಬೆಯಲ್ಲಿ ಮಾತ್ರ.

ಅಮೆರಿಕೆಯು ಈ ಕಾರಖಾನೆಗೆ ಎರಡು ಬಗೆಯಲ್ಲಿ ನೆರವಿತ್ತಿದೆ. ಅಮೆರಿಕದ ಅಂತರರಾಷ್ಟ್ರೀಯ ವಿಕಾಸ ಪ್ರತಿನಿಧಿತ್ವವು ವಿದೇಶ ವಿನಿಮಯವನ್ನೊದಗಿಸಲು ೧೮ ಕೋಟಿ ರೂಪಾಯಿ ಮೊತ್ತದ ಎರಡು ಸಾಲಗಳನ್ನು ಡಾಲರ್ ರೂಪದಲ್ಲಿ ನೀಡಿದೆ. ಉಳಿದ ರೂ. ೧೩ ಕೋಟಿ ೪೦ ಲಕ್ಷವು ಪಿ. ಎಲ್. ೪೮೦ರ ಮೂಲಕ ಬಂದಿದೆ.

ಬೊಂಬಾಯಿಯಿಂದ ೧೫ ಮೈಲುಗಳಷ್ಟು ದೂರದಲ್ಲಿ ಟ್ರಾಂಬೇ ಇದೆ. ಇಲ್ಲಿ ೫೩೭ ಎಕ್ರೆ ವಿಸ್ತಾರದ ಬಯಲಲ್ಲಿ ಗೊಬ್ಬರದ ಕಾರಖಾನೆಯಿದೆ. ಈ ಪ್ರದೇಶವು ಕಾರಖಾನೆಯ ರಚನೆಯ ದೃಷ್ಟಿಯಿಂದಲೂ ಮಹತ್ವಪೂರ್ಣವಾದುದು. ಇದರ ಇಬ್ಬದಿಗಳಲ್ಲೂ, ತೈಲ ಶುದ್ಧೀಕರಣ ಕಾರಖಾನೆಗಳಿದ್ದು ಅವುಗಳಿಂದ ಕಚ್ಚಾ ವಸ್ತುಗಳು ದೊರೆಯುವ ಅನುಕೂಲತೆಯಿರುವುದು.

ಕಾರಖಾನೆಯ ಮುಖ್ಯ ವಿಭಾಗವು ಈ ರೀತಿಯಿದೆ. ಅಮೋನಿಯಾ ವಿಭಾಗದಲ್ಲಿ ಪ್ರತಿದಿನ ೩೫೦ ಟನ್ ಜಲಶೂನ್ಯ ದ್ರವ ಅಮೋನಿಯಾ ತಯಾರಾಗುವುದು. ಯೂರಿಯಾ ವಿಭಾಗದಲ್ಲಿ ದಿನಂಪ್ರತಿ ೩೦೦ ಟನ್ ನಿರ್ಮಾಣ ಮಾಡುವ ಶಕ್ತಿಯಿದೆ. ದಿನವೊಂದಕ್ಕೆ ೩೭೦ ಟನ್ ನೈಟ್ರಿಕ್ ಏಸಿಡ್ ಮತ್ತು ೨೦೦ ಟನ್ ಗಂಧಕವನ್ನು ಉತ್ಪಾದಿಸುವ ಸಾಮರ್ಥ್ಯವು ಕಾರಖಾನೆಗಿದೆ. ೧೧೦೦ ಟನ್ ನೈಟ್ರಿಕ್ ಫಾಸ್ಫೇಟನ್ನು ಕಾರಖಾನೆಯು ದಿನವೂ ಒದಗಿಸುವುದು.

ಅಮೋನಿಯಾ ಗೊಬ್ಬರ ತಯಾರಿಯಲ್ಲಿ ಉಪಯೋಗಕ್ಕೆ ಬರುವ ಮುಖ್ಯ ಸಿದ್ಧ ವಸ್ತುವೆಂದರೆ, ತೈಲ ಶುದ್ಧೀಕರಣ ಕಾರಖಾನೆಯ ಗ್ಯಾಸ್ ಮತ್ತು ಪೆಟ್ರೋಲಿಯಂ ನೇಫ್ತಾ. ಬರ್ಮಾ ಶೆಲ್‌ನ ತೈಲ ಶುದ್ಧೀಕರಣ ಕಾರಖಾನೆಯು ಟ್ರಾಂಬೆಯ ಅನತಿ ದೂರದಲ್ಲೇ ಇದ್ದು ಅದು ಪ್ರತಿವರ್ಷವೂ ೫೦ ಸಾವಿರ ಟನ್ ಗ್ಯಾಸನ್ನು ನೀಡಲು ಒಪ್ಪಿದೆ. ಬಳಿಯಲ್ಲೇ ಇರುವ ಎಸ್ಸೋ ರಿಫೈನರಿ ಶುದ್ಧೀಕರಣ ಕಾರಖಾನೆಯು ವರ್ಷವೊಂದಕ್ಕೆ ೪೫ ಸಾವಿರ ಟನ್ ಪೆಟ್ರೋಲಿಯಂ ನೇಫ್ತಾ ಪೂರೈಸಲು ಸಿದ್ಧವಿದೆ.

ಇನ್ನು ಕೆಲವೇ ಸಮಯದಲ್ಲಿ ಟ್ರಾಂಬೆಯ ಈ ಗೊಬ್ಬರದ ಕಾರಖಾನೆಯು ಸಂಪೂರ್ಣಗೊಂಡ ಬಳಿಕ ಅದರ ಒಟ್ಟು ಉತ್ಪಾದನೆಯು ೧,೩೫,೦೦೦ ಟನ್ ಆಗುವುದು. ಒಂದು ಟನ್ ರಾಸಾಯನಿಕ ಗೊಬ್ಬರವು ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ೧೦ ಟನ್‌ಗಳಷ್ಟು ಹೆಚ್ಚಳವನ್ನು ಸಾಧಿಸುವುದೆಂದು ಅಂದಾಜು ಮಾಡಿದ್ದಾರೆ. ಆ ದರಂತೆ ಟ್ರಾಂಬೆಯ ಗೊಬ್ಬರ ಕಾರಖಾನೆಯಿಂದಾಗಿ ಆಹಾರೋತ್ಪಾದನೆಯಲ್ಲಿ ೧೩,೫೦,೦೦೦ ಟನ್ ಹೆಚ್ಚಳವಾಗುವ ನಿರೀಕ್ಷೆಯಿದೆ!

ಮಹಾರಾಷ್ಟ್ರೀಯ ರೈತರಲ್ಲಿ ರಾಸಾಯನಿಕ ಗೊಬ್ಬರದ ಪ್ರಯೋಗವನ್ನು ಪ್ರಯೋಗಿಸಲು ಎರಡು ಸಾವಿರ ಪ್ರದರ್ಶನ 'ಫಾರ್ಮ್'ಗಳನ್ನು ಆರಂಭಿಸುವ ವಿಚಾರವಿದೆ. ರಾಜ್ಯದ ಅಧಿಕಾರಿಗಳು ಗದ್ದೆಗಳ ಮಣ್ಣನ್ನು ಪರೀಕ್ಷಿಸುವ ಯೋಜನೆಯೊಂದನ್ನು ತಯಾರಿಸಿದ್ದಾರೆ. ಇದರಿಂದ ರೈತನು ತನ್ನ ಗದ್ದೆಗೆ ಸೂಕ್ತವಾದ ಗೊಬ್ಬರವನ್ನು ಹಾಕುವುದು ಸಾಧ್ಯವಾಗುವುದು. ಟ್ರಾಂಬೆಯಲ್ಲಿ ತಯಾರಾದ ಗೊಬ್ಬರವನ್ನು ಮಾರುವುದರಲ್ಲಿ ಸಹಕಾರಿ ಸಂಘಗಳ ಸಹಾಯವನ್ನು ಸಂಪೂರ್ಣ ಪಡೆಯಲಾಗುವುದಲ್ಲದೆ ಇತರ ನೆರವನ್ನೂ ಉಪಯೋಗಿಸುವುದು.

## ಅಮೆರಿಕನ್ ನೆರವಿನಿಂ ಯಿಂದಾಗಿ ಹೆ ಆಹಾರೋ

ಭಾರತದ ದೊಡ್ಡ ಸಮಸ್ಯೆ ಆಹಾರ ಪೂರೈಕೆ. ಇದನ್ನು ಸಾಧ್ಯವಾದಷ್ಟು ಅಧಿಕೋತ್ಪಾದನೆಯೇ ದಾರಿ. ಈ ದಿಸೆಯಲ್ಲಿ ಫರ್ಟಿಲೈಜರ್ಸ್ ಕಾರ್ಪರೇಶನ್ ಆಫ್ ಇಂಡಿಯಾ ಕೆಲವು ವರ್ಷಗಳಿಂದ ದುಡಿಯುತ್ತಿದೆ. ಇದರ ಕಾರ್ಯಕ್ಷೇತ್ರಗಳಲ್ಲಿ ಟ್ರಾಂಬೆಯ ರಾಸಾಯನಿಕ ಗೊಬ್ಬರದ ಕಾರಖಾನೆಯೂ ಒಂದು. ಗೊಬ್ಬರದ ಇನ್ನೆರಡು ಕಾರಖಾನೆಗಳು ಭಾರತದಲ್ಲಿವೆ—ಒಂದು ಬಿಹಾರದ ಸಿಂಧ್ರಿಯಲ್ಲಿ, ಇನ್ನೊಂದು ಪಂಜಾಬದ ನಂಗಲ್‌ನಲ್ಲಿ. ಸಿಂ



### ದಾಖಲೆ ರೂಪಿಸಿದ ಕ್ರೀಡಾಪಟು

ಟೆಕ್ಸಾಸ್‌ನ ಎಗ್ರಿಕಲ್ಚರಲ್ ಮತ್ತು ಮೆಕೆನಿಕಲ್ ಕಾಲೇಜಿನ ವಿದ್ಯಾರ್ಥಿ ಇಪ್ಪತ್ತು ವರ್ಷ ವಯಸ್ಸಿನ ರ್‍ಯಾಂಡಿ ಮ್ಯಾಟ್ಸನ್ 'ಶೋಟ್ ಪುಟ್'ನಲ್ಲಿ ದಾಖಲೆ ರೂಪಿಸಿದ ಕ್ರೀಡಾಪಟುವಾದನು. ಕಳೆದ ವರ್ಷ ೬೭ ಅಡಿ ||| ಇಂಚು ದೂರ ಎಸೆದ ಅತ ಈಗ ೭೦ ಅಡಿ ಎಸೆದು ಅದ್ವಿತೀಯ ದಾಖಲೆ ಸ್ಥಾಪಿಸಿದನು. ಟೋಕಿಯೋದ ಒಲಿಂಪಿಕ್ ಕ್ರೀಡೆಗಳಲ್ಲಿ ಮ್ಯಾಟ್ಸನ್ ರಜತ ಪದಕವನ್ನು ಗಳಿಸಿದ್ದನು.

ಟ್ರಾಂಬೆ ಗೊಬ್ಬರ ಕಾರಖಾನೆಯ ಅನೇ

# ...ನ್ನೊಂದು ಹೆಜ್ಜೆ
# ...ರದ ಕಾರಖಾನೆ

...ರುವ ಈ ಕಾರಖಾನೆ
...ಟನ್ ಅಧಿಕ
...ಗುವುದು.

...ಧ್ರಿಯಲ್ಲಿ ೧೯೫೧ರಲ್ಲಿ ಉತ್ಪಾದನೆಯು ಆರಂಭವಾಗಿದ್ದರೆ, ೧೯೬೧ರಲ್ಲಿ ನಂಗಲ್ ಕಾರ್ಯಾಚರಣೆಗೆ ತೊಡಗಿತು. ಅಮೋನಿಯಂ ಸಲ್ಫೇಟು, ನೈಟ್ರೇಟ್ ಮತ್ತು ಯೂರಿಯಾ ನಾಮಕ ನೈಟ್ರೋಜನ್ ಯುಕ್ತ ಮೂರು ರಾಸಾಯನಿಕ ಗೊಬ್ಬರಗಳು ಸಿಂಧ್ರಿಯಲ್ಲಿ ತಯಾರಾಗುತ್ತವೆ. ಕ್ಯಾಲ್ಸಿಯಂ—ಅಮೋನಿಯಂ—ನೈಟ್ರೇಟ್‌ಗಳು ನಂಗಲ್‌ನಲ್ಲಿ ಉತ್ಪಾದಿತವಾಗುತ್ತವೆ.

ಟ್ರಾಂಬೆಯದು ಮೂರನೆಯ ಕಾರಖಾನೆ. ಆದುದರಿಂದ ಇದನ್ನು ಕಟ್ಟುವಲ್ಲಿ ಸಿಂಧ್ರಿ ಮತ್ತು ನಂಗಲ್‌ಗಳಲ್ಲಿನ ಅನುಭವಿ ವಿಶೇಷಜ್ಞರ ನೆರವು ಹೆಚ್ಚಾಗಿ ಲಭಿಸಿದೆ.

ಟ್ರಾಂಬೆ ಸು ಯೋಜನೆಯಲ್ಲಿ ಭಾರತದಲ್ಲಿ ಮೊತ್ತಮೊದಲ ಬಾರಿಗೆ ಮೈಥಾನೋಲನ್ನೂ ಸಂಶೋಧಿಸಿ ತಯಾರಿಸುವ ಕ್ರಮವನ್ನು ಅಳವಡಿಸಿಕೊಳ್ಳಲಾಗಿದೆ. ಫಾರ್ಮಲ್‌ಡಿಹಾಯಿಡ್ ಮೊದಲಾದುವುಗಳ ಉತ್ಪಾದನೆಯ ಮೂಲವಸ್ತು ಮೈಥಾನೋಲ್. ಫಾರ್ಮಲ್‌ಡಿಹಾಯಿಡ್ ಮೊದಲಾದುವು ಪ್ಲಾಸ್ಟಿಕ್, ಔಷಧಿಗಳು, ಬಣ್ಣಗಳು ಮತ್ತು ಕೃತ್ರಿಮ ರೇಶ್ಮೆ ಉತ್ಪಾದನೆಗೆ ಅವಶ್ಯ. ಟ್ರಾಂಬೆಯಲ್ಲಿ ಪ್ರತಿ ವರ್ಷ ೩೩ ಸಾವಿರ ಟನ್ ಮೆಥಾನೋಲ್ ತಯಾರಿಯಾಗುವ ನಿರೀಕ್ಷೆಯಿದೆ. ಇದರಿಂದ ಭಾರತವು ೪ ಕೋಟಿ ರೂಪಾಯಿಗಳ ವಿದೇಶ ವಿನಿಮಯವನ್ನು ಉಳಿಸಲು ಶಕ್ತವಾಗುವುದು.



• ಚಂದ್ರಲೋಕದತ್ತ

ಚಂದ್ರಲೋಕದಲ್ಲಿ ಇಳಿಯುವುದು ಸಾಧ್ಯವೇ ಇಲ್ಲವೆಂದು ರಶ್ಯನ್ ವಿಜ್ಞಾನಿಗಳು ಸಾರಿದ್ದಾರೆ, ನಿಜ. ಅದೇ ವೇದವಾಕ್ಯವೆಂದು ನಂಬುವುದು ಹೇಗೆ? ಅಲ್ಲಿ ಇಳಿಯಲು ತಕ್ಕ ಯಾಂತ್ರಿಕ ಸಲಕರಣೆಯಿದು ಎಂದು ಭಾವಿಸಿದ್ದಾರೆ, ಅಮೇರಿಕನ್ನರು. ಮಾನವ ಬುದ್ಧಿಯ ಹೋರಾಟ ಮತ್ತು ಸೋಲುಗಳೇ ಮುಂದಿನ ಜಯದ ಮೂಲವೆಂಬುದಕ್ಕೆ ವಿಶೇಷ ಸಾಕ್ಷಿಗಳು ಅನಗತ್ಯ.



ತರಬೇತಿ ಹೊಂದುತ್ತಿರುವ ಅಮೇರಿಕನ್ ಗಗನಯಾತ್ರಿಗಳು

ಎಡದಿಂದ ಬಲಕ್ಕೆ: ಜೋಸೆಫ್ ಕೆರ್ವಿನ್ (33), ಎಡ್ವರ್ಡ್ ಗಿಬ್ಸನ್ (29), ಫ್ರಾಂಕ್ ಕರ್ಟಿಸ್ ಮೈಕೇಲ್ (31), ಡ್ವೇನ್ ಗ್ರಾವೆಲಿನ್ (34), ಹ್ಯಾರಿಸನ್ ಸ್ಮಿಟ್ (29) ಮತ್ತು ಓವೆನ್ ಗ್ಯಾರಿಯಟ್ (34). ಮೂರು ವರ್ಷಗಳ ಅವಧಿಯ ತರಬೇತಿ ಮುಗಿದ ಬಳಿಕ ಇವರು ಅಂತರಿಕ್ಷ ಯಾನಗಳ ಚಾಲಕರಾಗುವರು. ಆಕಾಶದಲ್ಲಿ ವಿಮಾನ ಹಾರಿದಂತೆಯೇ ಅಂತರಿಕ್ಷದಲ್ಲಿ ರಾಕೆಟ್ ಹಾರಿಸುವ ಹೇರ್ಯಾಸೆ ವಿಜ್ಞಾನಿಗಳದ್ದು. ಭವಿತವ್ಯದ ಗರ್ಭದಲ್ಲಿ ಏನು ಹುದುಗಿದೆಯೋ ಯಾರು ಬಲ್ಲರು?

ಟ್ರಾಂಬೆಯಲ್ಲಿ ಮೈಥಾನೋಲ್‌ನ ವಿಸ್ತೃತ ಕಾರಖಾನೆ ಕಟ್ಟಲು ಅಮೇರಿಕನ್ ಸರಕಾರವು ೭೮ ಲಕ್ಷ ಡಾಲರ್ (೩ ಕೋಟಿ ೭೦ ಲಕ್ಷ ರೂಪಾಯಿಗಳು) ಸಾಲನೀಡಿದೆ. ಈ ಸಾಲದ ಕೆಲ ಅಂಶವನ್ನು ಗಂಧಕ ಮತ್ತು ಆರಗೋನ್ ಗ್ಯಾಸ್ ಪ್ರಾಪ್ತಿಯ ಬಗ್ಗೆ ಟ್ರಾಂಬೆಯ ಗೊಬ್ಬರದ ಕಾರಖಾನೆಗೂ ಬಳಸಬಹುದಾಗಿದೆ.

ಪೂರ್ವ ಸಮುದ್ರ ತೀರದ ವಿಶಾಖಪಟ್ಟಣದಲ್ಲಿಯೂ ರಾಸಾಯನಿಕ ಗೊಬ್ಬರ ಕಾರಖಾನೆಯನ್ನು ಕಟ್ಟುವಲ್ಲಿ ಅಮೇರಿಕವು ಆಸ್ಥೆವಹಿಸಿದೆ. ಕೋರೊಮಂಡಲ ಫರ್ಟಿಲೈಜರ್ಸ್ ಲಿಮಿಟೆಡ್ ಎಂಬ ಇಂಡೋ—ಅಮೇರಿಕನ್ ಸಂಸ್ಥೆಗೆ ಈ ಬಗ್ಗೆ ರೂ. ೩೩ ಕೋಟಿ ೭೭ ಲಕ್ಷಗಳ ಸಾಲ ದೊರೆತಿದೆ. ಎರಡು ವರ್ಷಗಳಲ್ಲಿ ಈ ಕಾರಖಾನೆಯು ಉತ್ಪಾದನೆಗೆ ತೊಡಗುವುದೆಂದೂ ಆಗ ಪ್ರತಿ ವರ್ಷವೂ ಮೂರೂವರೆ ಲಕ್ಷ ಟನ್ ಅಮೋನಿಯಂ ಸಲ್ಫೇಟ್ ಮತ್ತು ಹದಿನಾರೂವರೆ ಸಾವಿರ ಟನ್ ಯೂರಿಯಾ ತಯಾರಾಗುವುದೆಂದೂ ನಿರೀಕ್ಷೆಯಿದೆ.

ಟ್ರಾಂಬೆ ಮತ್ತು ವಿಶಾಖಪಟ್ಟಣಗಳ ಎರಡೂ ಕಾರಖಾನೆಗಳು ಸಂಪೂರ್ಣ ಕಾರ್ಯಕ್ಕೆ ತೊಡಗಿದಾಗ ಭಾರತದ ಆಹಾರೋತ್ಪಾದನೆಯಲ್ಲಿ ೩೦ ಲಕ್ಷ ಟನ್ ಹೆಚ್ಚಳವಾಗುವುದೆಂದು ಆಶಿಸಲಾಗಿದೆ. ಇದರಿಂದಾಗಿ ನಮಗೆ ವರ್ಷಂಪ್ರತಿ ೨೨ ಕೋಟಿ ರೂಪಾಯಿಗಳ ವಿದೇಶ ವಿನಿಮಯವು ಉಳಿಯುವುದು.

ಪಿ. ಎಲ್. ೪೮೦ರ ಯೋಜನೆಯಂತೆ ಭಾರತಕ್ಕೆ ಅಮೇರಿಕೆಯು ನೀಡುತ್ತಿರುವ ಆಹಾರಧಾನ್ಯಗಳ ಬೆಲೆಯನ್ನು ಅದು ತೆಗೆದುಕೊಂಡು ಹೋಗದೆ, ಭಾರತದಲ್ಲಿಯೇ ವಿವಿಧ ಯೋಜನಾ ಕಾರ್ಯಕ್ರಮಗಳಿಗೆ ಸಹಾಯವಾಗಿ ನೀಡುವುದು. ಶರಾವತಿಯ ವಿದ್ಯುದುತ್ಪಾದನಾ ಸ್ಥಾವರವಾದರೂ ಇದರ ಪ್ರತೀಕವೇ ಸರಿ. ಭಾರತ-ಪಾಕಿಸ್ತಾನಗಳ ನಡುವಣ ಹೋರಾಟದ ಬಳಿಕ, ಅಮೇರಿಕೆಯು ಕಣ್ಣುಮುಚ್ಚಾಲೆಯಾಟವಾಡತೊಡಗಿದೆ. ಆದರೂ ಇತ್ತೀಚಿಗೆ ಅಮೇರಿಕನ್ ನಾಯಕರನ್ನು ಕಂಡು ಬಂದ ಪ್ರಧಾನಿ ಶಾಸ್ತ್ರಿಯವರ ವಿಶೇಷ ಪ್ರತಿನಿಧಿ ಎಸ್. ಕೆ. ಪಾಟೀಲರು ಆಶಾದಾಯಕ ವರದಿಯನ್ನು ಕೊಟ್ಟಿದ್ದಾರೆ. ಪಿ. ಎಲ್. ೪೮೦ರ ಯೋಜನೆಯಂತೆ ಭಾರತದೊಡನೆ ದೀರ್ಘಕಾಲದ ಒಡಂಬಡಿಕೆ ಮಾಡಿಕೊಳ್ಳಲು ಅಮೇರಿಕೆ ಸಿದ್ಧವಿದೆಯೆಂದು ತಿಳಿಯುತ್ತದೆ. ಈ ವರ್ಷ ಪ್ರಕೃತಿಯ ವಿಕೋಪದಿಂದಾಗಿ ನಮ್ಮ ಬೆಳೆಗಳು ಸರಿಯಾಗಿ ಕೈಗೆ ಬರುವುದಿಲ್ಲ. ಹಾಗಾಗಿ ಆಹಾರದ ಬಗ್ಗೆ ವಿಶೇಷ ಗಮನ ಹರಿಸುವುದು ಅತ್ಯಗತ್ಯವೇ ಆಗಿದೆ.

ಅದೇನೇ ಇದ್ದರೂ ನಾವು ಸ್ವಾವಲಂಬಿಯಾಗದೆ ಹೋದರೆ, ನಮಗೆ ಭದ್ರತೆಯಿಲ್ಲ. ನಿಶ್ಶರ್ತವಾಗಿ ಬರುವ ನೆರವಿನಿಂದ ರಾಷ್ಟ್ರಾಭಿವೃದ್ಧಿಕಾರ್ಯ ಸಾಧಿಸುವ ನಾವು ಅದೇ ದಾರಿಯಲ್ಲಿ ಮುನ್ನಡೆಯೋಣ, ಅದಕ್ಕಾಗಿ ತನುಮನಧನಗಳನ್ನ ಪೇರಿಸೋಣ.

## ವಿಜ್ಞಾನ ವಿಸ್ಮಯ

# ಮಳೆಯಿಲ್ಲದೆಯೆ ಬೆಳೆ

"ಅಯ್ಯೋ!, ಮಳೆ ಬೀಳಲಿಲ್ಲವಲ್ಲಾ! ಸಾಗುವಳಿಯ ಗತಿ ಏನಪ್ಪಾ?" ಬಂದು ಆಕಾಶವನ್ನೇ ನಂಬಿ ಕುಳಿತಿರುವ ಭೂಮಿಯ ಮಕ್ಕಳ ಆಕ್ರಂದನವನ್ನು ಆಗಿಂದಾಗ್ಗೆ ಕೇಳುತ್ತಲೇ ಇರುತ್ತೇವೆ. ಆದರೆ, ಇನ್ನು ಮುಂದೆ ಈ ವಿಷಯದಲ್ಲಿ ಕಳವಳವನ್ನು ವ್ಯಕ್ತಪಡಿಸಬೇಕಿಲ್ಲವೆನ್ನುವಂತೆ ಸದಾ ಶೈತ್ಯದಿಂದ ಕೂಡಿರುವ ಪ್ಲಾಸ್ಟಿಕ್ ಮಣ್ಣನ್ನು ಕಂಡುಹಿಡಿಯಲಾಗಿದೆ.

ರಸಾಯನ ಶಾಸ್ತ್ರದ ನಾನಾ ವಿಭಾಗಗಳಲ್ಲಿ ಕೃತಕ ವಸ್ತುಗಳ ಸಂಶೋಧನೆಯಲ್ಲಿ ಸಾಧಿಸಿರುವಷ್ಟು ಪ್ರಗತಿಯನ್ನು ಈ ಕಳೆದ ದಶಕದಲ್ಲಿ ಬೇರಾವ ವಿಭಾಗದಲ್ಲಿಯೂ ಸಾಧಿಸಲಾಗಿಲ್ಲ. "ಬಾದಿಶ್ಚೇ ಅನಿಲಿನ್ ಅಂಡ್ ಸೋಡಾ—ಫ್ಯಾಬ್ರಿಕ್" ಎಂಬ ಪಶ್ಚಿಮ ಜರ್ಮನಿಯ ಪ್ರಖ್ಯಾತ ರಾಸಾಯನಿಕ ಸಂಸ್ಥೆಯು ಕೃತಕ ರೀತಿಯಲ್ಲಿ ತಯಾರಿಸಲಾದ ವಸ್ತುಗಳನ್ನು ಉಪಯೋಗಿಸಿಕೊಳ್ಳಬಹುದಾದ ಎರಡು ಮುಖ್ಯ ರೀತಿಗಳನ್ನು ಕುರಿತು ಸಂಶೋಧನೆಗಳನ್ನು ನಡೆಸುತ್ತಿದೆ.

ಅವುಗಳಲ್ಲಿ ಒಂದು ರಸ್ತೆ ನಿರ್ಮಾಣ. ರಸ್ತೆಗಳನ್ನು ನಿರ್ಮಿಸುವುದರಲ್ಲಿ ಈಗಾಗಲೇ ಕೆಲಕಾಲದಿಂದ ಇಂತಹ ವಸ್ತುಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಮೊದಲು ಇದನ್ನು ಕಾಂಕ್ರೀಟ್ ರಾಜಮಾರ್ಗಗಳನ್ನು ದುರಸ್ತು ಮಾಡುವುದಕ್ಕಾಗಿ ಉಪಯೋಗಿಸಿಕೊಳ್ಳಲಾಯಿತು. ಆಗಲೇ ಇದರ ನಿಜವಾದ ಉಪಯೋಗದ ಅಧಿಕವಾದದ್ದು. ಗಾರೆ, ಮರಳು ಮತ್ತು ಸೇಕಡಾ ಹನ್ನೆರಡರಷ್ಟು ಪೋಲಿಸ್ಟರ್ ಬೇಕ್‍ಲೈಟ ಗಳನ್ನು ಉಪಯೋಗಿಸಿಕೊಂಡು ಜರ್ಮನಿಯ ಪ್ರಮುಖ ರಾಷ್ಟ್ರೀಯ ಮಾರ್ಗವಾದ ಆಟೋಬಾನಿನ ನಾಲ್ಕು ಭಾಗಗಳನ್ನು ರಚಿಸಲಾಗಿದೆ. ಈ ಹಿಂದೆ ನಿರ್ಮಿಸಲಾದ ಯಾವುದೇ ರಸ್ತೆಗಳಿಗಿಂತಲೂ ಇದು ಯಾವ ರೀತಿಯಲ್ಲಿಯೂ ಕಡಿಮೆಯಾಗಿಲ್ಲ. ಕಾಂಕ್ರೀಟ್ ರಸ್ತೆಗಳು ಗಟ್ಟಿಯಾಗಲು ಒಂದು ತಿಂಗಳ ಕಾಲವನ್ನು ತೆಗೆದುಕೊಂಡರೆ, ಈ ಹೊಸ ವಿಧಾನದ ರಸ್ತೆಗಳು ಗಟ್ಟಿಯಾಗಲು ೨೪ ಗಂಟೆಗಳೇ ಸಾಕು, ಅಲ್ಲದೆ, ಅವು ಅತಿ ಹೆಚ್ಚು ಕಾಲ ಬಾಳಿಕೆ ಬರುವುವು. ಪಶ್ಚಿಮ ಯುರೋಪಿನ ಅತಿ ಹೆಚ್ಚಿನ ಸಾರಿಗೆಯುಳ್ಳ ಪ್ರದೇಶಗಳಲ್ಲಿ ಇಂತಹ ರಸ್ತೆಗಳ ಆಗತ್ಯ ಬಹಳವಿದೆ. ಈ ಕಾರಣಗಳಿಂದ ಪಶ್ಚಿಮ ಜರ್ಮನಿಯು ಎಲ್ಲಾ ರಸ್ತೆಗಳಿಗೂ ಬೇಕ್‍ಲೈಟನ್ನು ಉಪಯೋಗಿಸಲಾರಂಭಿಸಿದ್ದಾರೆ.

ವ್ಯಾವಸಾಯಿಕ ಕ್ಷೇತ್ರದಲ್ಲಿ ಇದರ ಉಪಯೋಗದ ಕುರಿತು ನಡೆಸಿರುವ ಸಂಶೋಧನೆಗಳು ಅದ್ಭುತ ಫಲಕಾರಿಯಾಗಿವೆ. ಕೃತಕ ಸಂಯೋಜಕ ವಸ್ತುಗಳ ಉಪಯೋಗದಿಂದ ಎಲ್ಲಾ ಭೂಮಿಗಳಲ್ಲಿಯೂ ಬೆಳೆ ಪಡೆಯಬಹುದೆಂದು ತಿಳಿಸಲಾಗಿದೆ. ಪ್ರಕೃತಿ ಸಹಜವಾಗಿಯೇ ಉತ್ತಮವೆನಿಸಿಕೊಂಡ ಭೂಮಿಯಲ್ಲಿ ಬೆಳೆಯುವುದಕ್ಕಿಂತಲೂ ಈ ಸಂಯೋಜಕ ವಸ್ತುಗಳನ್ನು ಉಪಯೋಗಿಸಿಕೊಂಡ ಭೂಮಿಯಲ್ಲಿ ಉತ್ತಮ ಫಲಿತಾಂಶ ಕಂಡು ಬಂದಿದೆ. ಈ ಕೃತಕ ವಸ್ತುಗಳ ಮಿಶ್ರಣದಿಂದ ಗಡಸಾದ ಭೂಮಿಯೂ ಹಸನಾಗುವುದೆಂದು ತಿಳಿದು ಬಂದಿದೆ. ಕೃತಕ ಹ್ಯೂಮಸ್ಸಿನ ಬಳಕೆ ದಿನೇ ದಿನೇ ಹೆಚ್ಚಾಗುತ್ತಿದೆ. ಭೂಮಿಯ ಮೇಲೆ ಎರಡು, ಮೂರು ಸೆಂಟಿಮೀಟರುಗಳ ಎತ್ತರಕ್ಕೆ ಹ್ಯೂಮಸ್ಸನ್ನು ಹರಡುವುದರಿಂದ ಭೂಮಿಯು ಮೃದುವಾಗುವುದು. ಇದನ್ನು ಬಳಸಿದ ನೆಲದಲ್ಲಿ ಬೆಳೆ ಬೆಳೆಯುವಷ್ಟು ವೇಗವಾಗಿ ಉಳಿದ ನೆಲಗಳಲ್ಲಿ ಬೆಳೆಯುವುದಿಲ್ಲವೆಂದು ಪ್ರಯೋಗಗಳ ಮುಖೇನ ತಿಳಿದುಬಂದಿದೆ. ಅದರಲ್ಲೂ ಓಟ್ಸ್, ಆಲೂಗೆಡ್ಡೆ, ಅವರೆ ಮುಂತಾದವು ಸುಪುಷ್ಟವಾಗಿ ಬೆಳೆದುವೆಂದು ತಿಳಿದುಬಂದಿದೆ.

ಭೂಮಿಯ ಮೇಲೆ ಹರಡಲಾಗುವ ಕಾರ್ಬಮೈಡ್— ಫಾರ್ಮೆಲ್‍ಡಾಹೈಡ್ ಬೇಕ್‍ಲೈಟ್ ನೊರೆಗೆ "ಪ್ಲಾಸ್ಟೋಸಾಯಿಲ್" ಎಂದು ಹೆಸರು. ಮಳೆ ಸಾಕಷ್ಟಿಲ್ಲದ ದೇಶಗಳಿಗಾಗಿಯೇ ಪಶ್ಚಿಮ ಜರ್ಮನಿಯು ಇದನ್ನು ಕಂಡುಹಿಡಿದಿದೆ.

---


ಮಹತೋಭಾರ ಕುಕ್ಕೆ

ಶ್ರೀ ಸುಬ್ರಹ್ಮಣ್ಯ ಸ್ವಾಮಿ

## ಚಂಪಾಷಷ್ಠಿ ಮಹಾ ರಥೋತ್ಸವ

ದಕ್ಷಿಣ ಕನ್ನಡ ಜಿಲ್ಲಾ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪೂರ್ವ ಶಿಷ್ಟ ಸಂಪ್ರದಾಯ ಪ್ರಕಾರ ಇದೇ ಬರುವ ವಿಶ್ವಾವಸು ಸಂವತ್ಸರದ ಕಾರ್ತಿಕ ಬ. ೧೩ಯು ಶನಿವಾರ (ತಾ. 20—11—1965) ಲಾಗಾಯ್ತು ಮಾರ್ಗಶಿರ ಶುದ್ಧ ೭ಯು ಕುಜವಾರ (ತಾ. 30—11—1965ರ) ವರೆಗೆ ಉತ್ಸವಾದಿಗಳು ಶ್ರೀ ಸುಬ್ರಹ್ಮಣ್ಯ ಸ್ವಾಮಿ ಸನ್ನಿಧಿಯಲ್ಲಿ ನಡೆದು ಬರುತ್ತವೆ. ಭಗವತ್ಸಂಕಲ್ಪ ಪ್ರಕಾರ ನಡೆಯತಕ್ಕ ಈ ಮಹೋತ್ಸವಗಳಿಗೆ ತಾವುಗಳು ಇಷ್ಟಮಿತ್ರರೊಂದೊಡಗೂಡಿ ದಯಮಾಡಿ ಬಂದು ಶ್ರೀ ದೇವರ ಮೂಲ ಮೃತ್ತಿಕಾ ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ಅಪೇಕ್ಷಿಸುತ್ತೇವೆ.

ಆಡಳಿತ ಕಮಿಟಿ:

ಕೆ. ಸುಬ್ರಹ್ಮಣ್ಯ ಗೌಡ, ಎಡ್ವೋಕೇಟ್, ಪುತ್ತೂರು, ದ. ಕ., ಚೇರ್‍ಮೇನ್.
ಬಿ. ನಾರಾಯಣ ಶೇಕ್, ಜಮೀನ್ದಾರ್, ನಾವೂರು, ಬಂಗಾಡಿ, ದ. ಕ.
ಡಿ. ಕೆ. ಹೆಬ್ಬಾರ್, ಟಿಂಬರ್ ಕಂಟ್ರ್ಯಾಕ್ಟರ್, ಪುತ್ತೂರು, ದ. ಕ.
ಬಿ. ಬಾಲಕೃಷ್ಣ ರೈ, ತಾಲೂಕು ಬೋರ್ಡ್ ಮೆಂಬರ್, ಉಪ್ಪಿನಂಗಡಿ, ದ. ಕ.
ಎಚ್. ಎನ್. ಎ. ಗೌಡ, ರಿಟಾಯರ್ಡ್ ಡಿಪ್ಯೂಟಿ ಸುಪರಿಂಟೆಂಡೆಂಟ್ ಆಫ್ ಪೋಲೀಸ್, ಹೆತ್ತೂರು, ಹಾಸನ ಜಿಲ್ಲಾ.
ಯಸ್. ರಾಮಕೃಷ್ಣ ಭಟ್, ಮೆನೇಜರ್.

ವಿ. ಸೂ:— ಕಿರುಷಷ್ಠಿ ಉತ್ಸವವು ತಾ. 29—12—65ಕ್ಕೆ ಜರಗುವುದು.



ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು—೧


### ಹೃದಯ ಕುಸುಮದ ಉದ್ಘಾಟನೆ

ಲೋಕಸೇವಾ ವೃಂದದ ಹೃದಯ ಕುಸುಮವೆಂಬ, ಶ್ರೀ ಮಡಿಪಾಲ ನಾರಾಯಣ ಭಟ್ಟರ ನೀಳ್ಗತೆಗಳ ಸಂಗ್ರಹವು ತಾ. 3.11.65ರಂದು ಮಂಗಳೂರಿನ ಸರಕಾರೀ ತರಬೇತಿ ಕಲಾ ಶಾಲೆಯ ಶಿಕ್ಷಣ ಪ್ರಾಧ್ಯಾಪಕರಾದ ಶ್ರೀ ಯುಸ್. ಪರಮೇಶ್ವರಪ್ಪ ಇವರಿಂದ ಉದ್ಘಾಟಿಸಲ್ಪಟ್ಟಿತು.

### ಲೆವಿ ಭತ್ತದ ಬೆಲೆ ಕಡಿಮೆ, ಪ್ರಮಾಣ ಅಧಿಕವಾಗಿದೆ.

ಕಳೆದ ತಾ 6ರಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯ ನಿರ್ವಾಹಕ ಸಭೆ ಸೇರಿ, ಲೆವಿ ಅಂಶ ಹಾಗೂ ಬೆಲೆ ನಿಗದಿ ಪರಿಣಾಮವಾಗಿ ತೊಂದರೆ ಹಾಗೂ ಜಿಲ್ಲೆಯ ಜನತೆಯಲ್ಲುಂಟಾಗಿರುವ ಅಸಮಾಧಾನದ ಕುರಿತು ಪರಿಶೀಲನೆ ನಡೆಸಿತು. ಈ ಕೆಳಗಿನ ಗೊತ್ತುವಳಿಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿದೆ.

೧. ಈ ವರುಷ ಮಳೆಯ ಅಭಾವದಿಂದಾಗಿ ಬೆಟ್ಟುಗದ್ದೆಯ ಬೆಳೆ ಪೂರ್ಣ ಹಾನಿಗೊಂಡಿರುವುದು ದಲ್ಲದೆ, ೨ನೇ ಬೆಳೆಯ ಸಾಗುವಳಿ ಸಂದೇಹಾಸ್ಪದವಾಗಿರುವುದರಿಂದ ಲೆವಿ ಅಂಶವು ತೀವ್ರ ಅಧಿಕವಾಗಿ ತೋರುವುದರಿಂದ, ಬೆಟ್ಟುಗದ್ದೆಗಳ ಲೆವಿ ವಿನಾಯಿತಿಗೊಳಿಸಬೇಕು.

೨. ಈ ಲೆವಿಯಿಂದಾಗಿ ಕೃಷಿ ವೆಚ್ಚ, ಬೀಜ ಮತ್ತು ಸ್ವಂತ ಉಪಯೋಗದ ಬಗ್ಗೆ ಸಾಕಷ್ಟು ಪೂರೈಕೆ ರೈತರಿಗಾಗಿಲ್ಲ.

೩. ಮಾರುಕಟ್ಟೆಯಲ್ಲಿರುವ ಬೆಲೆ ಹಾಗೂ ಕೃಷಿ ವೆಚ್ಚದ ದೃಷ್ಟಿಯಿಂದ ನಗದಿ ಬೆಲೆ ತೀರಾ ಕಡಿಮೆಯೆಂಬುದು ಸಮಿತಿಯ ಅಭಿಪ್ರಾಯವಾಗಿದೆ. ಕ್ವಿಂಟಾಲ್ ಭತ್ತದ ಬೆಲೆ ರೂ. ೪೫ ಆದರೂ ಆಗಬೇಕು. ಅದನೂ ಇದು ವೆಚ್ಚಕ್ಕೆ ತಕ್ಕಷ್ಟಿಲ್ಲ.

೪. ಕೈಯಿಂದ ಕುಟ್ಟುವುದನ್ನು ಪ್ರೋತ್ಸಾಹಿಸುವುದರಿಂದ, ಜಿಲ್ಲೆಯ ಕೈ ಕಸಬಿಗೆ ಉತ್ತೇಜನ ದೊರೆತಂತಾಗುತ್ತದೆ. ಹಲವಾರು ನಿರುದ್ಯೋಗಿಗಳಿಗೆ ಮುಖ್ಯವಾಗಿ ಸ್ತ್ರೀಯರಿಗೆ ದುಡಿಮೆಯಿಲ್ಲದ ಉದ್ಯೋಗ ನೀಡುತ್ತದೆ. ತೌಡು ಹಾಗೂ ಹೊಟ್ಟು ಜಾನುವಾರು ತಿಂಡಿ ಹಾಗೂ ಇಂಧನ ಸೌಲಭ್ಯ ನೀಡುತ್ತಿದೆ. ಹೀಗಾಗಿ ಲೆವಿ ವೇಳೆ ಭತ್ತ ಅಥವಾ ಅಕ್ಕಿ ಕೊಡುವ ಸಲವತ್ತು ರೈತರಿಗೆ ನೀಡಬೇಕು.

೫. ರೈತರಿಗೆ ನ್ಯಾಯ ನಿರ್ವಹಣೆ ನಡೆಯಬೇಕೆಂಬುದೇ ಸಮಿತಿಯ ದೃಢ ಅಭಿಪ್ರಾಯವಾಗಿದೆ. ಈಗಿರುವ ಕುಂದನ್ನು ಸರಿಗೊಳಿಸಿ ಸೂಚನೆಗಳನ್ನು ಅಂಗೀಕರಿಸಬೇಕಾಗಿದೆ ಇದರಿಂದಾಗಿ ಅಧಿಕ ಉತ್ಪಾದನೆಗೆ ಪ್ರೇರಣೆಯುಂಟಾಗುವುದು ಎಂದು ಸಮಿತಿ ಅಭಿಪ್ರಾಯ ಪಟ್ಟಿದೆ.

### ಆಹಾರ ಕೋಪೋರ್ರೇಶನಿನ ಕಾರ್ಯ ಕ್ಷೇತ್ರ ರಾಜಸ್ಥಾನದಲ್ಲೂ ವಿಸ್ತರಿಸಿದೆ.

ಭಾರತದ ಫುಡ್ ಕೋರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಕಳೆದ ತಾ 10ರಂದು ಮಂಗಳೂರಿನಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ, ಕೋಪೋರ್ರೇಶನ್ ತನ್ನ ಚಟುವಟಿಕೆಗಳನ್ನು ರಾಜಸ್ಥಾನಕ್ಕೆ ವಿಸ್ತರಿಸಿದೆಯೆಂದು ತಿಳಿಸಿದರು. ಮೈಸೂರು ರಾಜ್ಯದಲ್ಲಿ ಕೋರ್ಪೊರೇಶನು ಏಳು ಜಿಲ್ಲೆಗಳಲ್ಲಿ ಅಂಥಾ ಕಾರ್ಯ ನಿರ್ವಹಣೆ ಕೈಗೊಂಡಿತ್ತೆಂದೂ ಇತ್ತೀಚೆಗೆ ಇಡೀ ರಾಜ್ಯದ ಲೆವಿ ಶೇಖರಣೆ ಮಾಡಲು ಸರಕಾರ ಕೋರ್ಪೊರೇಶನಿನ ಅಧಿಕಾರ ನೀಡಿದೆಯೆಂದೂ ಅವರು ತಿಳಿಸಿದರು.

ಮುಂದುವರಿಸುತ್ತಾ ಅವರು, ಈ ಸಲದ ಫಸಲು ಕಡಿಮೆಯಾಗಿರುವುದಾದರೂ, ಜನರು ಈ ಪ್ರಕೃತಿಯ ಸವಾಲನ್ನು ನಗುಮೊಗದಿಂದ ಎದುರಿಸಿ ಹೆಚ್ಚು ಉತ್ಪಾದಿಸುವ ದೀಕ್ಷೆ ತಾಳಬೇಕು. ಎಲ್ಲ ಬಗೆಯ ದುಂದುವೆಚ್ಚ ನಿಲ್ಲಿಸಿ ಹೆಚ್ಚು ಬೆಳೆಯುವ ಪ್ರಯತ್ನ ಮಾಡಬೇಕು ಎಂದು ನುಡಿದರು. ಕೇಂದ್ರ ಸರಕಾರ ಅವಶ್ಯವಿರುವ ಹಣ ಒದಗಿಸುತ್ತಿರುವುದರಿಂದ ಹಣದ ಸಮಸ್ಯೆ ಇದಿರಾಗುತ್ತಿಲ್ಲವೆಂದೂ ಅವರು ತಿಳಿಸಿದರು.

### ರಾಷ್ಟ್ರರಕ್ಷಣೆ ಮತ್ತು ಆಹಾರ ಉತ್ಪಾದನಾ ಕ್ಷೇತ್ರಗಳಲ್ಲಿ ಜಿಲ್ಲೆಯ ಜನತೆಯ ಶ್ರದ್ಧೋತ್ಸಾಹಕ್ಕೆ ಮಂತ್ರಿ ಡಾ। ಆಳ್ವರ ಮೆಚ್ಚುಗೆ.

ದ. ಕ. ಜಿಲ್ಲೆಯ ಆಹಾರ ಉತ್ಪಾದನೆಯನ್ನು ತೀವ್ರವಾಗಿ ಹೆಚ್ಚುಗೊಳಿಸುವಂತೆ ಜನರನ್ನು ಪ್ರೋತ್ಸಾಹಿಸಲಿಕ್ಕಾಗಿ ಕಳೆದ ಕೆಲವು ದಿನಗಳಲ್ಲಿ ಜಿಲ್ಲೆಯ ಎಲ್ಲಾ ಪ್ರದೇಶಗಳನ್ನು ಸಂದರ್ಶಿಸಿ ಕೃಷಿಕರ ಹಾಗೂ ಸಾರ್ವಜನಿಕ ಜನತೆಯನ್ನು ಮತ್ತು ಸಂಬಂಧಿಸಿದ ಅಧಿಕಾರಿಗಳನ್ನೂ ಬೆಟ್ಟಿಯಾಗಿ ಸಮಾಲೋಚನೆ ನಡೆಸಿದ ಆರೋಗ್ಯ ಸಚಿವ ಡಾ। ನಾಗಪ್ಪ ಆಳ್ವರು ಕಳೆದ ತಾ. 8 ರಂದು ಬೆಂಗಳೂರಿಗೆ ತೆರಳುವ ಮುನ್ನ ಮಂಗಳೂರಿನ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ರಾಷ್ಟ್ರರಕ್ಷಣಾ ಕಾರ್ಯದಲ್ಲೂ ಆಹಾರೋತ್ಪಾದನಾ ಕ್ಷೇತ್ರದಲ್ಲೂ ಜಿಲ್ಲೆಯ ಜನತೆಯ ಶ್ರದ್ಧೋತ್ಸಾಹಗಳ ಕುರಿತು ತೃಪ್ತಿ ವ್ಯಕ್ತಪಡಿಸಿದರು. ಚಿಕ್ಕ ಪುಟ್ಟ ಎಡರುಗಳನ್ನು ನಿವಾರಿಸಿ ಸೂಕ್ತ ಪ್ರೋತ್ಸಾಹ ನೀಡಿದರೆ, ಹೆಚ್ಚು ಉತ್ಪಾದನೆ ಸಾಧ್ಯ, ಪ್ರಧಾನಿ ಶಾಸ್ತ್ರಿಗಳ ಸಂದೇಶವಾದ ಜೈಜವಾನ್ ಜೈಕಿಸಾನ್ ಎಂಬ ಘೋಷಣೆಯನ್ನು ಇಲ್ಲಿನ ಜನತೆ ಸಂಪೂರ್ಣ ಗ್ರಹಿಸಿದೆ ಎಂದವರು ನುಡಿದರು. ಅಲ್ಲದೆ ಸರಕಾರ ಕೃಷಿಕರಿಗೆ ನೀಡುತ್ತಿರುವ, ನೀಡಬಹುದಾದ ಸಲಕರಣೆ, ಸವಲತ್ತುಗಳನ್ನು ವಿವರಿಸಿದರು.

### ದಾರಿ ದೀಪಗಳ ಉದ್ಘಾಟನೆ

ತಾ. ೨೮-10-1965ರಂದು ನಿಡಂಬೂರು ಪಂಚಾಯತದ ವಿಸ್ತೀರ್ಣಕ್ಕೆ ವಿಸ್ತರಿಸಲ್ಪಡುವ ವಿದ್ಯುಚ್ಛಕ್ತಿಯ ದಾರಿ ದೀಪಗಳ ಉದ್ಘಾಟನೆಯು ಮೈಸೂರು ಸರಕಾರದ ವಿದ್ಯುತ್ ಮಂಡಳಿಯ ಅಸಿಸ್ಟೆಂಟ್ ಎಂಜಿನಿಯರರಿಂದ ಗುಂಡಿಯನ್ನು ಒತ್ತುವ ಮೂಲಕ ನೆರವೇರಿಸಲ್ಪಟ್ಟಿತು. ಉಡುಪಿ ಬ್ಲೋಕಿನ ಪಂಚಾಯತ ವಿಸ್ತರಣಾಧಿಕಾರಿಗಳು ಅಧ್ಯಕ್ಷತೆಯನ್ನು ವಹಿಸಿದ್ದರು. ಪಂಚಾಯತ ಚೇರಮೇನ ಶ್ರೀ ಕೆ. ಶ್ಯಾಮರಾವ್ ಅತಿಥಿಗಳನ್ನು ಸ್ವಾಗತಿಸಿದರು.

# ಕಾಳಿದಾಸ ಮತ್ತವನ ಶಾಕುಂತಲಾ

(ಆರನೇ ಪುಟದಿಂದ)

ಬಂದವರು ತಮ್ಮ ಪಾಲಿನ ಕರ್ತವ್ಯ ಮುಗಿಯಿತೆಂದು ನಡೆಯುತ್ತಾರೆ. ಕೊನೆ ಶಾಕುಂತಲಾ ಉಳಿದಿದ್ದ ಸಾಕ್ಷಿಯ ನ್ನ ತೋರಿಸಲು ಬೆರಳಲ್ಲಿದ್ದ "ದುಷ್ಯಂತ" ಂಕಿತದ ಮುದ್ರೆಯುಂಗುರದ ಕಡೆಗೆ ನೋಡುತ್ತಾಳೆ. ದುರದೃಷ್ಟದಿಂದ ಚಕ್ರ ತೀರ್ಥದಲ್ಲಿ ಸ್ನಾನ ಮಾಡುವಾಗ್ಗೆ ಅವಳ ಬೆರಳಲ್ಲಿದ್ದ ಉಂಗುರ ಜಾರಿ ಬಿದ್ದು ಹೋ ರುತ್ತದೆ. ಶಾಪಗ್ರಸ್ತನಾಗಿದ್ದ ದು ಷ್ಯಂತ, ಎಲ್ಲವನ್ನೂ ಮರೆತಿರುತ್ತಾನೆ. ಕೊನೆಗೆ ಶಾಕುಂತಲಾ ಗತ್ಯಂತರವಿಲ್ಲದೆ ಪುರೋಹಿತ ದೇವರಾತರೊಂದಿಗೆ ಹೋ ಗುವಾಗ ಮಾರ್ಗ ಮಧ್ಯದಲ್ಲಿ ಅಪ್ಸರ ಕ ನ್ಯೆ ಬಳಿ ಶಕುಂತಲಾಳ ಹೆತ್ತ ತಾಯಿ ಮೇ ನಕೆ ದಿವ್ಯ ದೇಹಿಯಾಗಿ ಬಂದು ಅವಳನ್ನು ಮಾರೀಚ ಮಹರ್ಷಿಗಳ ಆಶ್ರಯದಲ್ಲಿ ಬಿ ಟ್ಟು ಅವಳಿಗೆ ಶುಶ್ರೂಷೆ ಮಾಡುತ್ತಾಳೆ. ಅ ಲ್ಲಿಯೇ ಸರ್ವದಮನನ ಜನನವಾಗುತ್ತದೆ. ಬೆಸ್ತನೊಬ್ಬನಿಂದ ಉಂಗುರವನ್ನು ಕಂಡ ದುಷ್ಯಂತನಿಗೆ ಹಿಂದಿನ ನೆನಪು ಮರುಕ ಳಿಸುತ್ತದೆ. ಮಾಡಿದ ಕೃತ್ಯಕ್ಕೆ ಪಶ್ಚಾತ್ತಾ ಪ ಪಡುತ್ತಾನೆ. ವಿರಹತಾಪದಿಂದ ತೊಳ ಲಾಡುತ್ತಾನೆ. ಕೊನೆಯಲ್ಲಿ ಮಿತ್ರ ಇಂ ದ್ರನ ಕೋರಿಕೆಯಂತೆ ತೆರಳಿ ಕಾಲನೇಮಿ ಪುತ್ರರನ್ನು ಹೊಡೆದಟ್ಟಿ ಗೆಳೆಯನಿಂದ ಸನ್ಮಾನಿತನಾಗಿ ರಾಜಧಾನಿಗೆ ಹಿಂತಿರು ಗುವ ಮಾರ್ಗದಲ್ಲಿ ಮಾರೀಚಾಶ್ರಮಕ್ಕೆ ಬರುತ್ತಾನೆ. ಅಶೋಕ ವೃಕ್ಷದ ಅಡಿಯ ವಿಶ್ರಾಂತಿ ಪಡೆಯುವಾಗ ಬಾಲಕ ರ್ವದಮನನ ಧೈರ್ಯವನ್ನು ಕಂಡು ಚ್ಚರಿಪಡುತ್ತಾನೆ ದುಷ್ಯಂತ. ಅನಂತರ ನನಲ್ಲಿ ಅವ್ಯಕ್ತ ಅಭಿಮಾನ, ಅಂತಃಕರ ಹುಟ್ಟುತ್ತದೆ. ಕೆಲ ಕ್ಷಣಗಳಲ್ಲಿಯೇ ಕುಂತಲಾ ಸಂದರ್ಶನವೂ ಆಗುತ್ತದೆ. ಹರ್ಷಿ ಮಾರೀಚರ ಆಶೀರ್ವಾದ ಪಡೆ ಪತ್ನಿ, ಪುತ್ರನೊಂದಿಗೆ ದುಷ್ಯಂತ ಜಧಾನಿಗೆ ಮರುಳುತ್ತಾನೆ. ಇದಿಷ್ಟು ಕುಂತಲಾ' ನಾಟಕದ ಮೂಲ ಕಥಾ ಸ್ತು.

ನಾಟಕದ ಪ್ರತಿಯೊಂದು ಸನ್ನಿವೇಶದ ಯೂ, ರೂಪಿಸಿದ ಪ್ರತಿ ವ್ಯಕ್ತಿಯಲ್ಲಿ ಯೂ ವಿಶೇಷ ಶಕ್ತಿಯನ್ನು ತುಂಬಿದ್ದಾ ಕವಿ ಕಾಳಿದಾಸ. ಕವಿಯ ಸಾಮರ್ಥ್ಯ ಶಾಕುಂತಲಾ ನಾಟಕ ಜೀವಂತ ಸಾ ಏಳು ಅಂಕಗಳ ಈ ನಾಟಕ ಓದುಗ ಮನಸ್ಸಿನ ಮೇಲೆ ಅಚ್ಚಳಿಯದ ಪರಿ ಣಾಮ ಬೀರುತ್ತದೆ.

ಶಕುಂತಲೆ ನಿಸರ್ಗದ ಮಡಿಲಲ್ಲಿ ಬೆಳೆದ ಕನ್ಯೆ. ಅವಳ ಸಹಜ ಸೌಂದರ್ಯ, ಆಕರ್ಷಣೀಯ ವ್ಯಕ್ತಿತ್ವ, ನಡೆ-ನುಡಿ ಅಸದೃಶವಾದುದು. ಅವಳ ರೂಪಗುಣಾತಿಶಯಗಳಿಗೆ ಯಾವ ಕುಂದೂ ಬಂದಿಲ್ಲ. ತನ್ನ ಸದ್ವರ್ತನೆಯಿಂದ ಪ್ರತಿಯೊಬ್ಬನ ಮನಸ್ಸನ್ನು ಅಲುಗಿಸುತ್ತಾಳೆ. ದುಷ್ಯಂತ ದೊರೆ. ಅವನದು ರಾಜಗಾಂಭೀರ್ಯ. ಅವನ ವರ್ತನೆಯೂ ಎಲ್ಲೂ ಅನುಚಿತವಾಗಿಲ್ಲ. ಶಾಪದ ಪರಿಣಾಮವಾಗಿ ಶಕುಂತಲೆಯನ್ನು ತೊರೆದಾಗ ಸ್ವಾಭಾವಿಕವಾಗಿ ಎಲ್ಲರಿಗೂ 'ಎಂತಹ ಕಟುಕ ಹೃದಯ' ಎನ್ನಿಸುತ್ತದೆ. ಆದರೆ ತನ್ನ ಪತ್ನಿಗಿತ್ತ ಉಂಗುರವನ್ನು ಕಂಡ ಕರುವಾಯ ಪಶ್ಚಾತ್ತಾಪದ ಅಗ್ನಿಯಲ್ಲಿ ಬೆಂದು ಪರಿಶುದ್ಧನಾಗುತ್ತಾನೆ. ಅಲ್ಲಿ ಅವನ ಪಾತ್ರ ಉಚಿತ ರೀತಿಯದಾಗಿದೆ. ಅವನು ಸಾಮಾನ್ಯನಲ್ಲ ಭೂಪತಿ ಮೇಲಾಗಿ ಇಂದ್ರ ಮಿತ್ರ. ಕವಿಯ ನಾಟಕದ ನಾಯಕ. ದುಷ್ಯಂತನಲ್ಲಿ ನಾಯಕನಿಗೆ ಯೋಗ್ಯವಾದ ಗುಣ, ಸ್ವಭಾವ ನಡತೆ ಇದೆ.

ಕಣ್ವರು ಅವಿವಾಹಿತರಾದರೂ ದೊರೆತ ಮಗಳನ್ನು ಹೆತ್ತ ಮಗಳಂತೆಯೇ ಸಾಕಿ ಅವಳನ್ನು ಒಪಳೊಪ್ಪಿ ಲಗ್ನವಾದ ಪತಿಯ ಬಳಿಗೇ ಕಳುಹಿಸಿರುತ್ತಾರೆ. ಆಶ್ರಮ ಜೀವಿಯಾಗಿದ್ದರೂ ಗೃಹಸ್ಥನ ಪಾತ್ರವನ್ನು ಯಶಸ್ವಿಯಾಗಿ ಅವರು ವಹಿಸಿದ್ದಾರೆ. ಸಾಕು ಮಗಳ ಬಗೆಗೆ ತೋರುವ ಮಮತೆ, ಹೇಳುವ ಹಿತನುಡಿ, ಪಡುವ ಆನಂದ, ಅನುಸರಿಸಿದ ಧರ್ಮ ಗಣನೀಯವಾದುವು. ಅವರ ಶಿಷ್ಯರಾಗಿ ಶಾರ್ಙ್ಗರವ, ಶಾರದ್ವತರು ತಮ್ಮ ಪಾತ್ರವನ್ನೂ ಯಥಾರೀತಿಯಾಗಿ ನಿರ್ವಹಿಸುತ್ತಾರೆ. ಗೌತಮಿಯ ಪಾತ್ರವೂ ಕೀಳಮಟ್ಟದ್ದಲ್ಲ.

ಅನಸೂಯ ಪ್ರಿಯಂವದೆಯರು ಗೆಳತಿ ಶಾಕುಂತಲೆಗಾಗಿ ಮರುಗುವ ಹಾಗೂ ಅವಳ ಅಭ್ಯುದಯವನ್ನು ಹಾರೈಸುವುದನ್ನು ಕಾಣುವಾಗ ನಿಜವಾದ ಒಡನಾಡಿಗಳ ಅಂತರಂಗದ ಅರಿವು ನಮಗಾಗುತ್ತದೆ.

ಇನ್ನುಳಿದ ಸಾನುಮತಿ, ಮೇನಕೆ, ಮಾರೀಚ, ಸೋಮರಾತ ಮೊದಲಾದ ಪಾತ್ರಗಳ ಯೋಗ್ಯತೆ ಯಥಾವತ್ತಾದುದು. ಕವಿ ಕಾಳಿದಾಸನ ಸಿದ್ಧಹಸ್ತದಲ್ಲಿ ರೂಪು ತಾಳಿದ ಯಾವ ಪಾತ್ರವೂ ಕಳಪೆಯಾಗಿಲ್ಲ. ಪ್ರತಿ ಪಾತ್ರವೂ ತನ್ನದೇ ಆದ ಗಂಭೀರತೆ, ವೈಶಿಷ್ಟ್ಯ ಹಿರಿಮೆಗಳನ್ನು ಉಳಿಸಿಕೊಂಡಿದೆ. ಕವಿಯ ಪಾತ್ರಗಳಂತೆ ಸನ್ನಿವೇಶಗಳೂ ಮಹತ್ತರವಾದುದೇ ಆಗಿವೆ. ಪ್ರತಿ ಸನ್ನಿವೇಶದ ನಿರ್ಮಾಣದಲ್ಲಿಯೂ ಕವಿಯ ಸಾಮರ್ಥ್ಯ ಗೋಚರವಾಗುತ್ತದೆ.

ಶಾಕುಂತಲಾ ಮತ್ತು ದುಷ್ಯಂತರ ಪ್ರಥಮ ಸಮಾಗಮ ಪ್ರಕೃತಿಯ ಪ್ರಶಾಂತ ವಾತಾವರಣದ ಆಗರವಾದ, ಕಾರುಣ್ಯವೇ ಮೈವೆತ್ತು ನಿಂತ ಕಣ್ವ ಋಷಿಗಳ ಆಶ್ರಮದಲ್ಲಿ. ಶಾಕುಂತಲೆಗೆ ಕೊನೆಯವರೆವಿಗೂ ಪ್ರಕೃತಿ ದೇವಿಯ ಸಹವಾಸ ಬಿಡುವುದಿಲ್ಲ. ಕಟ್ಟಕಡೆಗೆ ಶಾಪದಿಂದ ದೂರವಾಗಿದ್ದ ಪ್ರಣಯಿಗಳ ಪುನರ್ಮಿಲನವಾಗುವುದೂ ಪ್ರಕೃತಿ ದೇವಿಯ ಸಿಂಗಾರವಾದ ಮಾರೀಚ ಮಹರ್ಷಿಗಳ ಆಶ್ರಮದಲ್ಲಿಯೇ, ಎರಡು ಆಶ್ರಮಗಳ ವರ್ಣನೆ, ಪ್ರಕೃತಿಯ ನೈಜ ಕಲ್ಪನೆ ಕವಿಯ ಕಾವ್ಯಗಂಗೆಯಲ್ಲಿ ಮಿಂದು ಕಂಗೊಳಿಸುತ್ತದೆ.

ಶಾಕುಂತಲಾ ರೂಪದಲ್ಲಿ ಅಪ್ಸರೆ, ಮೇಲಾಗಿ ಪ್ರಕೃತಿಯಲ್ಲಿಯೇ ಬೆಳೆದು ಬಂದವಳು. ಅವಳು ಹುಟ್ಟಿನೊಂದಿಗೆ ಕಷ್ಟಗಳ ಪರಂಪರೆಯನ್ನು ಹೊತ್ತಿದ್ದಾಳೆಂದು ಕಾಣುತ್ತದೆ. ಕೈ ಹಿಡಿದ ಗಂಡನೇ "ನೀನು ಹೆಂಡತಿಯಲ್ಲವೆಂದಾಗ" ಆ ಹೆಣ್ಣಿನ ಸ್ಥಿತಿ ಎಂತಹದು ಎಂದು ಸುಲಭವಾಗಿ ಊಹಿಸಬಹುದು. ಪ್ರಣಯ ಜೀವಿಗಳ ದೃಷ್ಟಾಂತಕ್ಕೆ ಶಾಕುಂತಲೆಯ ಪಾತ್ರ ಒಂದು ಉನ್ನತ ನಿದರ್ಶನ. ಅವಳು ಆಶ್ರಮ ಬಿಟ್ಟು ಗಂಡನ ಮನೆಗೆ ಹೊರಟಾಗ ಪಕ್ಷಿ ಮೃಗ, ತರು-ಲತಾದಿಗಳು ಕಂಬನಿಗರೆದವಂತೆ,ಒಂದು ಚಿಗುರಿ ಅವಳ ಸೆರಗನ್ನೇ ಹಿಡಿದು "ಬೇಡ" ಎನ್ನುವಂತೆ ದೀನ ನೋಟದಲ್ಲಿಯೇ ಕೇಳಿತಂತೆ. ಹೀಗೆ ಕವಿ ತನ್ನ ಶ್ರೇಷ್ಠ ನಿರೂಪಣೆಯಲ್ಲಿ ಬಗೆಬಗೆಯ ಸನ್ನಿವೇಶಗಳನ್ನು ಕಲ್ಪಿಸಿ, ಸಮಯೋಚಿತ ಉಪಮಾನಗಳನ್ನು ಹೇಳಿ ರಸಮಯ ಸನ್ನಿವೇಶಗಳನ್ನು ಓದುವಾಗ ಅಥವಾ ಪ್ರೇಕ್ಷಕ ಎಂದೂ ಮರೆಯದಂತೆ ಉಳಿಸಿಕೊಂಡಿರುವಂತೆ ಪ್ರಯುಕ್ತಿಸಿದ್ದಾನೆ.

ಶಾಪ ಪ್ರಭಾವದಿಂದ ಕೈಹಿಡಿದ ಪತ್ನಿಯನ್ನೇ ಮರೆತು 'ನೀನು ನನ್ನ ಹೆಂಡತಿಯಲ್ಲ' ಎಂದು ಹೇಳುವ ದುಷ್ಯಂತನನ್ನು ಕಂಡು ಅತಿಕೋಪ ಉಕ್ಕಿ ಬಂದರೆ ದರೆ ಒಂದು ಕಡೆ ಸಾಕು ತಂದೆಯಿಂದ ಹಿತವಾಗಿಯನ್ನು ಪಡೆದು ಯಾವುದೋ ಕನಸು ಕಂಡು ಬಂದ ಶಾಕುಂತಲಾ ಕೈಹಿಡಿದ ಪತಿಯಿಂದಲೇ ತಿರಸ್ಕೃತಳಾದಾಗ ಅವಳ ದೀನತೆ, ಅಸಹಾಯಕ ಪರಿಸ್ಥಿತಿ, ಅವಳ ಜೀವನದ ಮೇಲಾದ ಪರಿಣಾಮವನ್ನು ಕಂಡು ಮರಗುತ್ತೇವೆ, ಕಂಬನಿಗರೆಯುತ್ತೇವೆ.

ದುಷ್ಯಂತ ಇಂದ್ರ ಸಖನಷ್ಟೇ ಅಲ್ಲ ರಣ ಕಲಿ, ಧೀರೋದಾತ್ತ ನಾಯಕ, ಅವನ ಮಗ ಸಾಮಾನ್ಯನೇ! ಸಿಂಹದ ಮರಿಗಳೊಂದಿಗೇ ಸೆಣಸುವ ಸಿಡಿಲ ಮರಿ. ಸರ್ವದಮನನ ಪಾತ್ರದೊಂದಿಗೆ ವೀರ ರಸವನ್ನು ಹರಿಸಿದ್ದಾನೆ ಕಾಳಿದಾಸ.

ಭಾರತ ಧರ್ಮ ಪ್ರಧಾನವಾದ ನಾಡು. ಪ್ರತಿ ಕ್ಷೇತ್ರದಲ್ಲಿಯೂ ಧರ್ಮಾಭಿಮಾನ ತುಂಬಿ ತುಳುಕಿದೆ. ಧರ್ಮದ ಹಾದಿಯನ್ನೇ ಹಿಡಿದು ಸಾಗಿದ ಕಾವ್ಯಗಳು, ನಾಟಕಗಳೂ 'ಧರ್ಮವೇ ಜಯ" ಎನ್ನುವ ಸಂದೇಶವನ್ನು ಸಾರಿವೆ. ಕವಿ ಈ ನಾಟಕದಲ್ಲಿಯೂ ಧರ್ಮಾಭಿಮಾನಿಯಾಗಿಯೇ ದುಡಿದು ಜಯ ಪ್ರದನಾಗಿದ್ದಾನೆ. ನಾಟಕ ಅಗಲಿದ ಪತಿ-ಪತ್ನಿಯರ ಸಮಾಗಮದೊಂದಿಗೆ ಸುಖಾಂತವಾಗುತ್ತದೆ.

ಕವಿ ಕಾಳಿದಾಸನ ಮೂಲ 'ಅಭಿಜ್ಞಾನ ಶಾಕುಂತಲಾ' ನಾಟಕವನ್ನು ಆಧಾರವಾಗಿಟ್ಟುಕೊಂಡು ದಿ. ಬಸವಪ್ಪ ಶಾಸ್ತ್ರಿಗಳು ಅಚ್ಚ ಕನ್ನಡದಲ್ಲಿ ಮೂಲ ಕೃತಿಗೆ ಲೋಪಬಾರದಂತೆ ಕನ್ನಡಿಸಿ ಉಪಕಾರ ಮಾಡಿದ್ದಾರೆ. ಕವಿ ಕಾಳಿದಾಸನ ಶಾಕುಂತಲಾ ಕೃತಿ ಕಾವ್ಯ ಶ್ರೇಣಿಯ ಮಹಾಮೇರು. ಅದರ ಭವ್ಯತೆ ಗೋಚರಿಸುವುದು ಅದನ್ನು ಅಭ್ಯಸಿಸಿದಂದೇ.

'ಶಾಕುಂತಲಾ" ಕೃತಿ ಶತ ಶತಮಾನಗಳಿಂದ ಶತ ಶತಮಾನಗಳ ವರೆಗೆ ವಾಙ್ಮಯ ಕ್ಷೇತ್ರದಲ್ಲಿ ಹೊಳೆಯುವ ದಿವ್ಯ ತಾರೆ. ಶಾಕುಂತಲಾ ಕವಿ ಕಾಳಿದಾಸನ ಅಮರಾಂಕ್ಷೇ ಅಲ್ಲ. ಧನ್ಯರು.



ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

# ಜೀವ ಜ್ಯೋತಿ

— ಶ್ರೀ ಶಿವಮುಂಜೆ ಪರಾರಿ, ಮುಂಬಯಿ.

ದೇಶಾಟನೆಯ ಸಮಯದಲ್ಲಿ ಒಮ್ಮೆ ಭಗವಾನ್ ಬುದ್ಧ ಒಂದು ಹಳ್ಳಿಯತ್ತ ಸಾಗಿದ್ದರು. ಆ ಹಳ್ಳಿಯಲ್ಲಿ ಒಬ್ಬ ವ್ಯಕ್ತಿ ಕಾವಿ ಬಟ್ಟೆ ತೊಡೆದುಕೊಂಡು ಸನ್ಯಾಸಿಯ ಹಾಗೆ ಕುಳಿತ್ತಿದ್ದನು. ಭಗವಾನ್ ಬುದ್ಧ ಅಲ್ಲಿಗೆ ಆಗಮಿಸುತ್ತಲೇ ಆ ವ್ಯಕ್ತಿ ಬಾಯಿಗೆ ಬಂದಂತೆ ಬಯ್ಯಲಾರಂಭಿಸಿದನು. ಬಹಳಷ್ಟು ಹೊತ್ತು ಜಡಿಮಳೆಯಂತೆ ಬೈಯುತ್ತಾ ಬೈಯುತ್ತಾ ಕೊನೆಗೆ ಸುಸ್ತಾಗಿ ಸುಮ್ಮನೆ ಕುಳಿತನು. ಭಗವಾನ್ ಬುದ್ಧ ಅಷ್ಟು ಹೊತ್ತೂ ಸುಮ್ಮನೆ ಅವನನ್ನು ನೋಡುತ್ತಾ ನಿಂತಿದ್ದರು. ಅವನ ಮಾತುಗಳೆಲ್ಲಾ ಮುಗಿದ ಬಳಿಕ ಅತಿ ನಮ್ರ ಸ್ವರದಲ್ಲಿ ಅವರು—'ಸ್ವಾಮೀ, ತಪ್ಪು ತಿಳಿಯದಿದ್ದರೆ ತಮ್ಮಲ್ಲಿ ಒಂದು ವಿಚಾರ ಕೇಳಲೇ?' ಎಂದರು.

'ಹೂಂ' ಎಂದು ಗಂಭೀರವಾಗಿ ನುಡಿದ ವೇಷಧಾರೀ ಸಂನ್ಯಾಸಿ.

'ನೀವು ಯಾವುದಾದರೂ ಒಂದು ವಸ್ತುವನ್ನು ಇನ್ನೊಬ್ಬನಿಗೆ ಕೊಟ್ಟಾಗ ಅವನು ಅದನ್ನು ಸ್ವೀಕರಿಸಲು ನಿರಾಕರಿಸಿದರೆ ಆ ವಸ್ತು ಯಾರದಾಗುತ್ತದೆ?'

"ಖಂಡಿತವಾಗಿಯೂ ಅದು ನನ್ನದೇ" ಎಂದುತ್ತರ ಬಂತು.

ಕೂಡಲೇ ಭಗವಾನ್ ಬುದ್ಧ—'ಸ್ವಾಮೀ ನೀವು ಇಷ್ಟು ಹೊತ್ತು ಹಲವಾರು ಅಪಶಬ್ದಗಳನ್ನು ನನಗೆ ಕೊಟ್ಟಿದ್ದೀರಿ. ಆದರೆ, ಅದನ್ನು ನಾನು ತೆಗೆದುಕೊಳ್ಳಲಾರೆ' ಎಂದರು.

ಪಾಪ, ಸಂನ್ಯಾಸಿಯ ಮುಖ ನೋಡುವಂತಿತ್ತು!

○ ○ ○

ಕವಿವರ ರಹೀಂ ಒಂದು ದಿನ ಪಾಲಕಿಯಲ್ಲಿ ಕುಳಿತು ಎಲ್ಲಿಗೋ ಹೊರಟಿದ್ದರು. ದಾರಿಯಲ್ಲಿ ಒಬ್ಬ ಹಳ್ಳಿಗ ಓಡುತ್ತಾ ಒಂದು ದೊಡ್ಡ ಕಬ್ಬಿಣದ ತುಂಡೊಂದನ್ನು ರಹೀಮರ ಶರೀರಕ್ಕೆ ತಾಗುವಂತೆ ಇಟ್ಟು ಬಿಟ್ಟನು. ಸ್ನೇಹಿತ—ಪರಿಜನರೆಲ್ಲರೂ ಹಳ್ಳಿಗನ ಈ ವಿಚಿತ್ರ ವರ್ತನೆಯಿಂದ ತುಂಬ ಕುಪಿತರಾದರು. ಆದರೆ ರಹೀಮರು ಮಾತ್ರ ಏನೂ ಆಗಿಯೇ ಇಲ್ಲವೇನೋ ಎಂಬಂತೆ ಸಮಾಧಾನಚಿತ್ತರಾಗಿದ್ದರು. ಮಾತ್ರವಲ್ಲ ಅವರು ರಾಜ್ಯಭೊಕ್ಕಸದಿಂದ ಆ ರೈತನಿಗೆ ಕಬ್ಬಿಣದಷ್ಟೇ ತೂಕದ ಚಿನ್ನ ಕೊಡಿಸಿದರು.

"ಸ್ವಾಮೀ ನಿಮ್ಮ ಆಚರಣೆ ತುಂಬ ವಿಚಿತ್ರವಾದುದು. ಆ ಹಳ್ಳಿಗ ಅಪರಾಧಿಯಾದರೂ ತಾವು ಬಹುಮಾನವನ್ನೇ ಕೊಡಿಸಿರುವಿರಲ್ಲಾ?" ಎಂದು ವಿಚಾರಿಸಿದರು ಸ್ನೇಹಿತರು.

"ಪ್ರಾಯಶಃ ಅವನು ನನ್ನನ್ನು ಪರಶುಮಣಿಯೆಂದು ತಿಳಿದಿರಬೇಕು ಎಂದೇ ಕಬ್ಬಿಣದ ತುಂಡನ್ನು ನನಗೆ ಮುಟ್ಟುವಂತೆ ಎಸೆದ ಅದು ಚಿನ್ನವಾಗುವುದೆಂದು ಬಗೆದಿದ್ದನೋ ಏನೋ! ಅಂದ ಬಳಿಕ ಅವನ ಇಚ್ಛಾಪೂರ್ತಿ ಮಾಡುವುದನ್ನು ಬಿಟ್ಟು ಬೇರೇನು ತಾನೇ ಮಾಡಬಹುದು?'

ರಹೀಮರ ಈ ಉದಾರತೆಯಿಂದ ಮಿತ್ರರು ಅತಿ ಪ್ರಭಾವಿತರಾದರು.

○ ○ ○

ಪ್ರಾಚೀನ ಗ್ರೀಕಿನ ಮಹಾಪುರುಷರಲ್ಲೊಬ್ಬನಾದ ಡಾಯೋಜೀನಿಜನ ನೌಕರನೊಬ್ಬ ಒಂದು ದಿನ ಇದ್ದಕ್ಕಿದ್ದ ಹಾಗೇ ಓಡಿಹೋದನು. ಅವನ ಚಿಂತೆಯನ್ನೇ ಬಿಟ್ಟು ಡಾಯೋಜೀನಿಜನು ತನ್ನ ಎಲ್ಲಾ ಕೆಲಸಗಳನ್ನು ತಾನೇ ಮಾಡಲಾರಂಭಿಸಿದನು. ಇದನ್ನು ಕಂಡ ಅವನ ಮಿತ್ರನೊಬ್ಬ—"ಗೆಳೆಯಾ, ನೀನೇಕೆ ಇಷ್ಟು ಕಷ್ಟ ಪಡುತ್ತಿ? ಆ ನೌಕರನನ್ನು ಹುಡುಕಿ ಹಿಡಿದು ತರಿಸಿ ಅವನಿಂದಲೇ ಏಕೆ ಕೆಲಸ ಮಾಡಿಸಬಾರದು? ಎಂದು ಸಲಹೆಯಿತ್ತನು.

ಕೂಡಲೇ ಡಾಯೋಜೀನಿಜನು— 'ಅಲ್ಲಯ್ಯಾ, ಇದಕ್ಕಿಂತ ಅಪಮಾನದ ವಿಷಯ ಇನ್ನೇನಾದರೂ ಇದ್ದೀತೇ? ನನ್ನ ನೌಕರ ನನ್ನನ್ನು ಬಿಟ್ಟು ಇರಬಲ್ಲ. ನಾನು ನೌಕರನನ್ನು ಬಿಟ್ಟು ಇರಲಾರೆನೇನು? ನಾನು ದಾಸಾನುದಾಸನಾಗಲು ಸಿದ್ಧನಿಲ್ಲ". ಎಂದು ಬಿಟ್ಟ.

○ ○ ○

ಪ್ರಥಮ ಭಾರತೀಯರು ಸ್ವಾತಂತ್ರ್ಯ ಸಂಗ್ರಾಮದ ಬಳಿಕ ಭಾರತೀಯರು ದಿಲ್ಲಿಯ ಕಿಲ್ಲೆಯ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಿದರು. ಅದು ಕೆಲ ದಿನಗಳ ವೈಭವ ಮಾತ್ರ ಆಯಿತು. ಆಂಗ್ಲರು ಪುನಃ ಕಿಲ್ಲೆಯನ್ನ ಗೆದ್ದು ಕೊಳ್ಳುತ್ತಲೇ ಅಮಾನುಷೀಯ ವ್ಯವಹಾರವನ್ನು ಅಡೆತಡೆಯಿಲ್ಲದ ಆರಂಭಿಸಿದರು. ಅವರ ಅತ್ಯಾಚಾರಗಳು ಕ್ರೂರಿ ನಾದಿರ್ ಶಹನೂ ತಲೆ ತಗ್ಗಿಸುವಂತಿತ್ತು.

ಆಗ ದಿಲ್ಲಿಯ ಕೊನೆಯ ಮೊಗಲ ಬಾದಶಹ ಬಹದ್ದೂರ್‌ಶಹನ ಮಕ್ಕಳನ್ನು ಗಲ್ಲಿಗೆ ಕೊಟ್ಟರು. ಅವರ ತಲೆಯನ್ನು ಕಡಿದು ಪೇಟೆಯ ಮಧ್ಯೆ ತೂಗಾಡಿಸುವುದಕ್ಕೆ ಮೊದಲು ಆ ಎರಡೂ ತಲೆಯನ್ನು ಹರಿವಾಣದಲ್ಲಿಟ್ಟು ಬಾದಶಹನ ಮುಂದೆ ತರಲಾಯಿತು. ಬಹದುರ್ ಹೆಮ್ಮೆಯಿಂದ ಆ ಎರಡೂ ತಲೆಗಳನ್ನು ನೋಡಿ - "ತಮ್ಮ ಮಾನ ಮರ್ಯಾದೆಗಳ ರಕ್ಷಣೆ ಮಾಡುವ ಪ್ರತಿಯೊಬ್ಬ ವೀರ ಮನುಷ್ಯ ತಮ್ಮ ಮಕ್ಕಳನ್ನು ಸಾಕುವುದೇ ಇಂತಹ ಕ್ಷಣಗಳಿಗಾಗಿ" ಎಂದು ಬಿಟ್ಟನಂತೆ.

---

## ಅಮೃತ ಬಿಂದು

ನಮ್ಮ ಒಂದು ತಪ್ಪನ್ನು ತಿದ್ದಿಕೊಳ್ಳುವುದಕ್ಕಿಂತ ನೂರಾರು ಸದ್ಗುಣಗಳಿಂದ ನಮ್ಮನ್ನು ಸಿಂಗರಿಸಿಕೊಳ್ಳುವುದು ಹೆಚ್ಚು ಸುಲಭ.

○ ○ ○

ಮನುಷ್ಯರ ದುಷ್ಕೃತಿಗಳು ಅವರ ಅನಂತರದಲ್ಲೂ ಉಳಿಯುವವು; ಅವರು ಮಾಡಿದ ಒಳಿತು ಮಾತ್ರ ಹಲವೊಮ್ಮೆ ಅವರೊಡನೆಯೇ ಕಣ್ಮರೆಯಾಗುವವು.

○ ○ ○

ರಾಜಕಾರಣಿಗಳನ್ನು ವಂಚಿಸುವ ಉಪಾಯವೆಂದರೆ ಸತ್ಯವನ್ನಾಡುವುದು ಅವರು ನಂಬುವುದಿಲ್ಲ.

○ ○ ○

ಅಜ್ಞಾನವೇ ಆನಂದವಾಗಿರುವಲ್ಲಿ ತಿಳುವಳಿಕೆಯು ಮೌಢ್ಯವೆನಿಸುತ್ತದೆ.

○ ○ ○

ಧನಾಭಿಮಾನಿ ದೇವತೆಯ ಗುಣ ತಿಳಿಯಬೇಕಾದರೆ ಅವನ ಅನುಗ್ರಹ ಪಡೆದ ಜನರ ಗುಣ ನೋಡ.

○ ○ ○

ಕಾರ್ಯವು ಸಾಮೋಪಾಯದಿಂದ ಸಾಧಿಸಿದಂತೆ ಸಿಟ್ಟಿನಿಂದ ಸಾಧಿಸದು.

○ ○ ○

ಪುರುಷನಿಗೆ ಭೂಷಣವಾಗಿರುವುದು ಆತನ ಸುಸಂಸ್ಕೃತವಾದ ವಾಣಿಯೇ ಹೊರತು ಅಲಂಕಾರಗಳಲ್ಲ.

○ ○ ○

ಮೌನವು ಸತ್ಯದ ತಾಯಿ.

○ ○ ○

ಎಲ್ಲ ರಾಜಕೀಯ ಪಕ್ಷಗಳೂ ಕೊನೆ

## ನಾನೋರ್ವ ಸೈನಿಕ

ಮಾತೃ ಭೂಮಿಯ ಒಲವು
ತಾಯಿಪಾಲಿನ ಋಣವು
ಜನ್ಮ ಭೂಮಿಯ ಗೆಲುವು
— ಮನದೊಳಿಹುದೆನ್ನ

ಭಾರತಿ ನೀನೆನ್ನ ವಳು
ನೀ ಸ್ವರ್ಗತುಲ್ಯಳು
ವೀರ ಪುರುಷರಿಗೆ ನೀ ಜನ್ಮವಿತ್ತವಳು
— ಅರಿ ತಿರುವೆನಬನ್ನ

ಅಡಿಯ ಮುಂದಿಡೆ ಸ್ವರ್ಗ
ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧ ಫಲ
— ಧ್ಯೇಯ-ವಾಗಿಹುದೆನ್ನ

ಪಾಕ್ ಮಾರ್ಜನೆ ಬರಲಿ
ಹಳದಿ ಚೀನಿಯನಿರಲಿ
ಬೇಕಿದ್ದರಿಡಿ ಜಗವೆ ಮುನಿದೇಳಲಿ
— ಕಾಯ್ವೆ ಭಾರತಿ ನಿನ್ನ

ತೆತ್ತಾದರೂ ಸರಿಯೆ ಎನ್ನ ಜೀವಂ
ನಿನ್ನ ಗೌರವದ ರಕ್ಷಣೆಯ ಮಾಳ್ಪೆಂ
ನಿನ್ನ ಮಾನವನು ನಾ ಸದಾ ಕಾಯ್ವೆಂ
— ದೃಢ ಸಂಕಲ್ಪವಿದೆನ್ನ

— ಶ್ರೀ ನರಸಿಂಗರಾವ್,
ಕಾಸರಗೋಡು.

---

ಗೊಮ್ಮೆ ತಾವು ಇಕ್ಕಿದ ಸುಳ್ಳಿನ ಗಾಳವನ್ನು ತಾವೇ ನುಂಗಿ ಸಾಯುತ್ತವೆ.

○ ○ ○

ಸುಳ್ಳು ಆರೋಪಗಳನ್ನು ಹೊರಿಸುವವರ ವಿರುದ್ಧ ಮೌನದಿಂದಿರುವುದೇ ಉತ್ತಮ ಉಪಾಯ.

○ ○ ○

ಯೋಗ್ಯತೆಯೇ ಶಕ್ತಿ, ಚಾಣಾಕ್ಷತೆಯೇ ಚಾತುರ್ಯ, ಯೋಗ್ಯತೆಯು ಧನ, ಬದಲಿ ಚಾಣಾಕ್ಷತೆ ಖುಲ್ಲ ರೋಖ ಹಣ.

○ ○ ○

ಭವಿಷ್ಯದ ಸುಖಸ್ವಪ್ನಗಳ ಚಿಂತನೆಯಲ್ಲಿ ಕಾಲ ಕಳೆಯುವುದಕ್ಕಿಂತ ಕೈಯಲ್ಲಿದ್ದ ಕೆಲಸವನ್ನು ಮಾಡುವುದು ಶ್ರೇಷ್ಠವಾದ ಗುಣ.

○ ○ ○

ದ್ವೇಷಿಸುವುದು ಸುಲಭ, ಪ್ರೀತಿಸುವುದು ಹಿತ.

○ ○ ○

ತನ್ನ ಅಭಿಪ್ರಾಯ ಅಚಲವೆಂದು ಹಟ ಹಿಡಿಯುವ ಮನುಷ್ಯ ನಿಂತ ನೀರಿನಂತಿರುತ್ತಾನೆ. ಅವನ ಬುದ್ಧಿಯಲ್ಲಿ ಹುಳುಗಳೂ ವಿಷ ಸರ್ಪಗಳೂ ಬೆಳೆಯುತ್ತವೆ.

○ ○ ○

ದೇವರು ಗ್ರಾಮವನ್ನು ಸೃಜಿಸಿದನು ಮಾನವನು ನಗರವನ್ನು ಸೃಜಿಸಿದನು.

○ ○ ○

ಕಲಾಪೂರ್ಣನಾಗಿದ್ದರೂ ಮಲಿನ ಸ್ತ್ರೀಧಾರಿಯು ಶೋಭಿಸಲಾರನು.

○ ○ ○

ಹಕ್ಕಿಗಳು ಹಾರುತ್ತವೆ, ನಾವು ಹಾರಲಾರೆವೇಕೆಂದರೆ ಹಕ್ಕಿಗಳಿಗೆ ದೃಢ ವಿಶ್ವಾಸವಿದೆ, ನಮಗಿಲ್ಲ. ವಿಶ್ವಾಸವೇ ರೆಕ್ಕೆ.




---


## ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

**ವಾರ್ಷಿಕ ಚಂದಾ ರೂ. ೧೦**

## ಬಿಡಬೇಕು, ಆದರೆ ಯಾವುದನ್ನು?

(ನಾಲ್ಕನೇ ಪುಟದಿಂದ)

'ಯಾವುದನ್ನು?"

"ವಾರಕ್ಕೆ ಒಂದು ಊಟ ಬಿಟ್ಟರೂ ಆಹಾರ ಸಮಸ್ಯೆ ಪರಿಹಾರವಾಗುತ್ತೆ ನ್ನೋದನ್ನು...."

"ಪೂರಾ ಪುಚ್ಚಲ್ಲ; ಸಮಸ್ಯೆ ಪೂರಾ ೂರವಾಗದಿದ್ರೂ ಸ್ವಲ್ಪವಾದ್ರೂ..."

"ಅದು ಹಾಗಿರ್ಲಿ. ಊಟ ಮಾಡುತಿ ವ್ರ ಮಾತ್ರ ಅದನ್ನು ಬಿಡಬಲ್ಲರು ಇದ್ದ ಮಾತ್ರ ಬಿಡಬಲ್ಲರು ನೋಡಿ...'

'ಖರೆ...."

"ಆದರೆ, ನಮ್ಮ ದೇಶದಲ್ಲಿ ಎಷ್ಟು ಕು ಟುಂಬಗಳು ದಿನಃ ಎರಡು ಯಾ ಮೂರು ೊತ್ತು ಉಣ್ಣುತ್ತವೆ?"

'ನಿನ್ನ ಪ್ರಶ್ನೆ ಸಹಜಾನ್ನು...."

"ಹಾಗಿರುವಾಗ, ಅರ್ಧ ಉಣ್ಣುವ ೊರತೆಯುಳ್ಳವರು ವಾರಕ್ಕೊಂದಲ್ಲ, ನಾಲ್ಕು ಊಟಗಳನ್ನು ಈಗಲೇ ಬಿಡುತಿದ್ದಾರೆ; ುತ್ತೂ ಒಂದನ್ನು ಬಿಡಬೇಕು ಅನ್ನೋ ು ಯಾವ ನ್ಯಾಯ?"

"ಬಿಡಬಲ್ಲವರು ಬಿಡುವುದಕ್ಕೇನು ಡ್ಡ?"

"ಅಂದ್ರೆ ನಿಮ್ಮ ಕರೆ ಹಸಿವೆಯಿಲ್ಲದೆ ುಣ್ಣುವವರಿಗೆ....'

"ಹ್ಞಂ. ಅವರಿಗೂ; ಮತ್ತಿತರರಿಗೂ. ಹಾರವನ್ನು ಹಾಳು ಮಾಡುವವರೆಲ್ಲರಿ ೂ ಅನ್ನು. ಮತ್ತೆ ತನ್ನ ಬಳಿಯಲ್ಲಿದ್ದು ದನ್ನು ಬಿಡುವುದಾದರೂ ಹೇಗೆ ಎರಡು ೊಟ್ಟಿದ್ದರೆ ಒಂದನ್ನು ಬೇರೆಯವರಿಗೆ ೊಡಬಹುದು ನೋಡು. ಹಾಗೆ....'

'ಹಾಗಾದರೆ ತೊಂದರೆಯಿಲ್ಲ. ಅಂದ್ರೆ ೊತ್ತ ಮೊದಲು ಶ್ರೀಮಂತರು ಒಂದು ೂಟ ಬಿಡಬೇಕು....'

'ಅವರು ಬಿಡಲಿ, ಬಿಡದೆ ಇರಲಿ, ಂತಹ ಚಳವಳಿದಿಂದ ಆಹಾರದ ಂಭೀರ ಪರಿಸ್ಥಿತಿಯ ಅರಿವು ಎಲ್ಲರಿಗೂ ಆಗಬೇಕು. ವ್ಯರ್ಥ ಾಗಿ ಅದು ಪೋಲಾಗುವುದಾದರೂ ನಿ ಬೇಕು....'

"ಎಲ್ಲಿ ಪೋಲಾಗೋದರಿ? ನಗರಗಳ ಲ್ಲಿ, ಶ್ರೀಮಂತರ ಮನೆಗಳಲ್ಲಿ. ಪಾಪ, ಬ ಡವರ ಗೋಳು ಅವರಿಗೇ ಗೊತ್ತು. ಪು ಣ್ಯಕ್ಕೆ ನಿತ್ಯ ಉಪವಾಸ ಮಾಡೋದ್ರಿಂ ದ್ಲೇ ಅವರಿನ್ನೂ ಜೀವ ಹಿಡಿದಿದ್ದಾರೆ...."

"ಏನೇ ಇದು? ಏನನ್ನುತಿದ್ದೀಯಾ?"

"ಅಲ್ಲ, ಅವ್ರಿಗೂ ಹೊಟ್ಟೆ ತುಂಬ ಅನ್ನ ಸಿಗುತ್ತಿದ್ರೆ, ಅವರ ಆರೋಗ್ಯ ಕೆ ಟ್ಟು ಹೋಗುತಿತ್ತು. ಡಾಕ್ಟರುಗಳೇ ಕಾ ಣದ ಅವರ ಊರಿಗೆ ಊರೇ ಮಾರಿಗೆ ಬಲಿಯಾಗಿ ಹೋಗುತಿತ್ತು..."

'ಹುಚ್ಚಾಗಿಲ್ವೆ ನೀನು? ಒಂದು ಕಲ್ಲಿನ ಎರಡು ಹಣ್ಣು ಉದುರಿಗಿದೆ....'

'ಏನು, ಏನಾಯ್ತು?"

ಆಗೋದೇನು? ಅತ್ತ ಉಪವಾಸವಾದಿ ಗಳನ್ನು ಇತ್ತ ಕಲ್ಯಾಣವಾದಿಗಳನ್ನು...

'ಅದೆಲ್ಲಾ ನೀವು ತಿಳಕೊಳ್ಳೋದು....'

'ಎಲ್ಲಿ ಹಾಗೆಯೇ ಎನ್ನು. ಯಾರು ೇನೋ ಅನ್ನುತ್ತಾರೆ. ಅದು ಒಬ್ಬೊಬ್ಬ ಗೆ ಒಂದೊಂದು ರೀತಿಯಿಂದ ಅರ್ಥವಾ ುತ್ತದೆ. ಸೂರ್ಯನ ಕಿರಣ ಪರ್ವತದ ಮೇಲೆ ಮಾಣಿಕ್ಯದಂತೆ ನೆಲದ ಮೇಲೆ ಎಳವಳರಂತೆ...'

'ಸಾಕು ಮಾಡಿ ನಿಮ್ಮ ಕಾವ್ಯವನ್ನ....'

"ಅಷ್ಟೂ ಬೇಸರವಾಯಿತೆ?"

"ಇಲ್ಲ ಇಲ್ಲ...."

"ಹಾಗಾದರೆ ಕೇಳು...."

"ಕೇಳಿ ಕೇಳಿ ಸಾಕಾಯ್ತು....ಇನ್ನು ಕೇಳಲೇ ಬೇಕೂಂತ ನಿಮ್ಮ ಬಲವಂತ ವಿದ್ರೆ...."

"ಇಲ್ಲ, ಇಲ್ಲ....ಅಂಥದ್ದೇನೂ ಇಲ್ಲ...."

"ಆ ಮತ್ತೆಷ್ಟು, ಹೇಳಿ...."

"ನಿನಗೆ ಬೇಕಾದರೆ ಮಾತ್ರ...."

"ಆಯ್ತು ಅಂದನಲ್ಲಾ...."

"ಹೇಳು ಹಾಗಾದ್ರೆ...."

"ಹ್ಞಂ....'

'ಹೊಟ್ಟೆಯಲ್ಲಿ ಉರಿಯುವ ಬೆಂಕಿ ಯಂತೆ..."

'ಛೀ, ಇದೇಯೇ ನಿಮ್ಮದು....ಹ್ಞಂ. ಕೊರಡಿ ಮತ್ತೆ..."

'ಅಲ್ಲಾ, ಕೇಳಿ ಕೇಳಿ ನಿನಗೆ ಸಾಕಾಗಿ ರುವಂತೆಯೇ ನನಗೂ ಆಗುತ್ತೇಂತ ಗೊತ್ತಿಲ್ಲವೆ?"

'ಸಾಕು, ಬನ್ನೀಂದೆನಲ್ಲಾ..."

'ಸರಿ, ವಿಲಂಬವೇಕೆ?"

—ಗೋರಾ.

## ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಭಾಗ್ಯದರ್ಶನ: ಲೇಖಕರು: ಶ್ರೀ ಪಿ. ಸಿ. ವಾಸುದೇವ ರಾವ್. ಪ್ರಕಾಶಕರು; ವಿದ್ಯಾ ಪ್ರಕಾಶನ, ಸುರತಕಲ್ಲು, ದ. ಕ. ಪುಟಗಳು: ೨೧. ಬೆಲೆ: ರೂ. ೦—೪೦

ಶ್ರೀರಾಮನ ವಿರಹದುರಿಯಿಂದ ಮಹಾರಾಜ ದಶರಥನು ಮೃತ್ಯುವನ್ನಪ್ಪಲು ಶ್ರವಣನ ಪಿತೃ ಶಾಪವೇ ಕಾರಣವಾದ ಕಥಾನಕವನ್ನು ಆಧರಿಸಿದ ಏಕಾಂಕ ನಾಟಕ ಭಾಗ್ಯದರ್ಶನ ಅಥವಾ ಪುತ್ರ ವಿಯೋಗ. ಎಳೆಯ ಮಕ್ಕಳ ಮೂಲಕ ಅಭಿನಯಿಸಿ ಯಶಸ್ವಿಯಾದ ಈ ನಾಟಕವು ಲೇಖಕರ ಚೊಚ್ಚಲ ಮುದ್ರಿತ ಕೃತಿ. ಮೃತ್ಯುಶಯ್ಯೆಯಲ್ಲಿ ಪವಡಿಸಿದ ದಶರಥ ತಾನು ಶಾಪಗ್ರಸ್ತನಾದ ಘಟನೆಯನ್ನು ತಿಳಿಸುತ್ತಿರುವಂತೆ ನಾಟಕದ ರಚನೆಯಾಗಿದೆ--ಇದು ಉಚಿತವೆನಿಸಿದ ಕರುಣ ರಸ ಪ್ರಧಾನವಾದ ಈ ಏಕಾಂಕಿಯ ವಸ್ತು ಸರ್ವಶ್ರುತವಿದ್ದರೂ ಕಲಾತ್ಮಕವಾಗಿಯೇ ಹೆಣೆದಿದ್ದಾರೆ, ಲೇಖಕರು. ಇನ್ನೂ ಹೆಚ್ಚಿನ ಸಾಹಿತ್ಯ ಕೃಷಿಯನ್ನು ನಾವು ಅವರಿಂದ ನಿರೀಕ್ಷಿಸಿದರೆ ತಪ್ಪಲ್ಲ.

ಬಿಚ್ಚುಗತ್ತಿ: ಲೇಖಕರು ಅಬ್ದುಲ್ ರಹಿಮಾನ್, ಅರಸಳಿಕೆ. ಪ್ರಕಾಶಕರು: ಅಡ್ಯನಡ್ಕ ಕೆ. ನರಸಿಂಹ ಪೈ ಬ್ರದರ್ಸ್, ದ. ಕನ್ನಡ. ಪುಟಗಳು: ೧೪. ಬೆಲೆ: ೦—೩೦.

ಪರಾಕ್ರಮಣ ಭೀತಿಯಿಂದ ತಡತರಿಪದೆ ಆಕ್ರಮಣಕಾರರನ್ನು ಎಂಟೆದೆಯಿಂದ ಎದುರಿಸಲು ಸಿದ್ಧರಾದ ನಮಗೆ ಅಬ್ದುಲ್ ರಹಿಮಾನ್ ಬಿಚ್ಚುಗತ್ತಿಯನ್ನು ಪೂರೈಸಿದ್ದಾರೆ. ಒಂಬತ್ತು ದೇಶಪ್ರೇಮ ಪೂರಿತ ಕವನ ಸಂಕಲನವಿದು. ಇಲ್ಲಿನ ಒಂದೊಂದು ಕವನವು ಸರಳತನದಲ್ಲಿಯೇ ತನ್ನ ಉದ್ದೇಶವನ್ನು ಸಾಧಿಸಹೊರಟಿದೆ. ಜಡತೆಯಿಂದೆದ್ದು "ಕೆರಳಿ ಕೇಳಿ ಯಾಗಿರಿ, ಯುದ್ಧಬದ್ಧರಾಗಿರಿ"—ಎಂದು ಕವಿ ಕರೆ ನೀಡಿದ್ದಾರೆ. ಇಲ್ಲಿ ಸ್ವಾಭಾವಿಕವಾಗಿ ವೀರರಸ ಕೋಡಿ ಹರಿಯುತ್ತದೆ. (ಪುಟ ೫). ದೇಶವನ್ನು ಪರರು ಅನ್ಯಾಯವಾಗಿ ಆಕ್ರಮಿಸಿದಾಗ ಕವಿ ನಾಗರಿಕನಿಗೆ ದೇಶ ಕಟ್ಟಲು ಬಾ ಎಂದು ಕರೆ ನೀಡುತ್ತಾರೆ. "ಕಣ್ಣು ಮುಚ್ಚಿಬಿಡುವೆಯಾ? ಶಾಂತಿ ಜಪಿಸುತಿರುವೆಯಾ" ಎಂದು ದಿಟ್ಟ ಪ್ರಶ್ನೆಯನ್ನು ಕೇಳುತ್ತಾರೆ. (ಪುಟ. 7) ದೇಶದ ಋಣವನ್ನು ತೀರಿಸಲು ಹೂಳಿಟ್ಟ ಚಿನ್ನವನ್ನು ಅಗೆದು ತೆಗೆದು ಚೀನದ (ಪಾಕಿಸ್ತಾನದ) ಪ್ರೇತವನ್ನು ಒಡೆದು ಹೊಳೆಡಲು ಕರೆಯುತ್ತಿದ್ದಾರೆ ಕವಿ. (ಪುಟ. 8) ದಿ! ಪ್ರಧಾನಿ ನೆಹರು ಮತ್ತಿಂದಿನ ಪ್ರಧಾನಿ ಶಾಸ್ತ್ರಿ ಕರೆ ನೀಡಿದಂತೆ ಎಲ್ಲರಂಗದವರೂ ಕೃತಪೂರ್ವಕ ದುಡಿದು ವೈರಿಕುಲ ಹುಳವನ್ನು ಹೊಂದೂಡ ಬೇಕು.—ಇದು ಕವಿಯ ಆಶಯ ಹೀಗೆ ಇಲ್ಲಿನ ಕವನಗಳು ವೀರ ತುಂಬುತ್ತಿವೆ. ಇವುಗಳಲ್ಲಿ ಮಹಾಕವಿಗಳ ಅಲಂಕಾರವಿಲ್ಲ; ಆದರೆ, ಅವರ ಕೃತಿಗಳ ಮುಂದೆ ವಿನೀತ ಭಾವದಿಂದ ನಿಲ್ಲಬಲ್ಲ ಎದೆಗಾರಿಕೆಯಿದೆ - ಇದು ಪ್ರಶಂಸನೀಯ ಅಬ್ದುಲ್ ರಹಿಮಾನ್‌ರ ಈ ಪುಟ್ಟ ಕೃತಿ ತನ್ನ ಉದ್ದೇಶದಲ್ಲಿ ಯಶಗಳಿಸಿದೆ.

ಗೋರಾ,

## List of donors to the National Defence Fund through the Tahsildar, Udipi Taluk.

| | Sriyuts | Rs. P. |
|---|---|---|
| 1 | Bhasker Shetty, M. L. A., Kaup | 187 - 00 |
| 2 | K. N. Shenoy & Sons, Udipi | 101 - 00 |
| 3 | Gopala Holla, Mitra Samaj, Udipi | 201 - 00 |
| 4 | C. Abdulla, Timber Merchant, Udipi | 101 - 00 |
| 5 | Rama Baba Kamath & Sons, Kinnimoolky | 101 - 00 |
| 6 | Ammunje Madhava Nayak, Udipi | 1,000 - 00 |
| 7 | A. L. Nayak & Bros., Car Street, Udipi | 100 - 00 |
| 8 | U. Seetharama Shenoy, Car-Street, Udipi | 101 - 00 |
| 9 | M. Madhvaraj, M. L. A., Malpe | 250 - 00 |
| 10 | — Do — Garland Auctioned | 100 - 00 |
| 11 | P. Ranganath Shenoy, Chairman, Udipi Municipality | 101 - 00 |
| 12 | Kalappa Shetty, Udipi | 101 - 00 |
| 13 | Employees, Coronet Canning Company, Malpe | 101 - 00 |
| 14 | S. K. Shanbhogue & Sons. Udipi | 1,005 - 00 |
| 15 | Kalsanka Venkatraya Pai & Sons, Udipi | 201 - 00 |
| 16 | U. Laxminarayana Kini, Udipi | 105 - 00 |
| 17 | A. Anantha Nayak, Modern Stores, Udipi | 501 - 00 |
| 18 | A. G. S. Nayak & Sons, Kalsanka, Udipi | 1,115 - 00 |
| 19 | Kudigram Ramaraya Shenoy & Bros., Udipi | 105 - 00 |
| 20 | T. Ramesh Pai, Manipal | 1,000 - 00 |
| 21 | Mohandas Pai, Diana Cold Drinks, Udipi | 101 - 00 |
| 22 | T. Govindan, Vasantha Bakery, Udipi | 101 - 00 |
| 23 | Radakrishna Pai, Udipi | 200 - 00 |
| 24 | U. Ramachandra Rao, Udipi | 101 - 00 |
| 25 | Jumma Mosque, Padubidri | 101 - 00 |
| 26 | Haji Sheik Hussain Saheb, Shirva | 101 - 00 |
| 27 | Gopal Holla, Mitra Samaj, towards the auction Price of a wrist watch Presented by Sri P. Vittal Shetty | 155 - 00 |
| 28 | M/s. Kalmanje Vyasacharya's Metal Wares Emporium | 251 - 00 |
| 29 | Venkatesh Puthu Pai & Sons, Badagupet | 251 - 00 |
| 30 | M/s. N. G. Pandya & Sons, Badagupet | 101 - 00 |
| 31 | M/s. Gajanana Cloth Stores, Tenkapet | 201 - 00 |
| 32 | M/s. A. S. Kini & A. U. Kini, Tenkapet | 251 - 00 |
| 33 | T. Gopalkrishna Pai, Brahmagiri | 100 - 00 |
| 34 | H. Rama Bhat, President, Hejmadi Panchayat | 101 - 00 |
| 35 | A. J. Alse, Udipi | 101 - 00 |
| 36 | K. Chandrashekar Shettigar, Udipi | 101 - 00 |
| 37 | Brahmavar Padmanabha Pai & Sons | 101 - 00 |
| 38 | Madhvaraj, M. L. A., towards the sale proceeds of Cycle presented by Sri B. Sanjeeva Pai | 240 - 00 |
| 39 | K. Anantha Shetty, Udipi | 101 - 00 |
| 40 | H. Vittal Shenoy, Udipi | 105 - 00 |
| 41 | President, Malpe Fishermens Co-Op. Society | 500 - 00 |
| 42 | Employees of L. I. C. of India, Udipi | 2,620 - 23 |
| 43 | K. Vasudeva Kini, Katapady | 105 - 00 |
| 44 | P. G. Nayak, for Nayaks Ayurvedashrama, Katapady | 105 - 00 |

READ &
ADVERTISE IN
NAVAYUGA WEEKLY

ಚಾರುಚಯನ

# ಔದಾರ್ಯದ ಉರುಳು

ಹನ್ನೆರಡು ವರ್ಷಗಳಿಗೆ ಹಿಂದೆ ತುಂಗಭದ್ರಾ ಜಲಾಶಯದ ನಿರ್ಮಾಣಕಾರ್ಯ ಪೂರ್ತಿಯಾದಾಗ, ಆ ನೀರನ್ನು ತಕ್ಷಣವೇ ಉಪಯೋಗಿಸಿಕೊಳ್ಳುವ ವ್ಯವಸ್ಥೆ (ಒಳ ಪ್ರದೇಶಕ್ಕೆ ಕಾಲುವೆಗಳ ನಾಲೆಗಳು) ಸಿದ್ಧವಾಗಿರಲಿಲ್ಲ. ಆಗ, ಕೆಳಮಟ್ಟದ ಕಾಲುವೆಯಿಂದ ನೀರನ್ನು ಹರಿಯ ಬಿಡಬಹುದು, ವಿದ್ಯುದುತ್ಪಾದನೆ ಆದ ಮೇಲೆ ಅದು ಆಂಧ್ರದ ಕೃಷ್ಣಾ ನದಿಗೆ ಸೇರಲಿ ಎಂದು ಸಲಹೆ ಮಾಡಲಾಯಿತು. ಮೈಸೂರು ಆ ತಾತ್ಕಾಲಿಕ ಏರ್ಪಾಟಿಗೆ ಒಪ್ಪಿತು.

ಹಿಂದೆ ಈ ಅಣೆಕಟ್ಟಿನ ಕೆಲಸ ಆರಂಭವಾದಾಗ ಕರ್ನಾಟಕವೂ ಇರಲಿಲ್ಲ; ಆಂಧ್ರವೂ ಇರಲಿಲ್ಲ. ಹಳೆಯ ಹೈದರಾಬಾದ್, ಮದರಾಸ್‌ಗಳು, ತುಂಗಭದ್ರೆ ಹರಿದು ಬರುವ ಹಿಂದಿನ ಮೈಸೂರು—ಇಷ್ಟೇ ಇದ್ದುವು. ಈಗ ಇದು ಎರಡು ರಾಜ್ಯಗಳೊಳಗಿನ ವ್ಯವಹಾರ.

ನಿಜಾಮನ ಹೈದರಾಬಾದು ಮಾಡದೇ ಇದ್ದ ಕೆಲಸವನ್ನು ಹೊಸ ಮೈಸೂರು ಮಾಡಿ ಮುಗಿಸಿತು. ಎಡದಂಡೆಯ ರಾಯಚೂರು ಪ್ರದೇಶದಲ್ಲಿ ಜಲಾಶಯದ ನೀರನ್ನೊಯ್ಯುವ ಕಾಲುವೆಗಳು ನಾಲೆಗಳು ಸಿದ್ಧವಾದುವು. ಇನ್ನು ನೀರು ಬಿಟ್ಟು ಆ ನೆಲವನ್ನು ಹಸನುಗೊಳಿಸಬೇಕು. ಬಂಜೆ ನೆಲದಲ್ಲಿ ಭತ್ತ ಹುಟ್ಟಬೇಕೆಂಬ ಉದ್ದೇಶದಿಂದಲೇ ನಿರ್ಮಾಣವಾದ ಅಣೆಕಟ್ಟು. ಅದು ವ್ಯವಸಾಯ ಯೋಜನೆಗೆ ಸೇರಿದ್ದು. ಆದರೆ, ಈಗ ವಿದ್ಯುತ್ತಿನ ಉತ್ಪಾದನೆಗಾಗಿ ೪,೦೦೦ ಕ್ಯೂಸೆಕ್ಸ್ ಖರ್ಚಾಗುತ್ತಿದೆ. ಈ ವಿದ್ಯುತ್ತಿನಲ್ಲಿ ಶೇಕಡಾ ೮೦ರಷ್ಟು ಆಂಧ್ರಕ್ಕೂ ಉಳಿದದ್ದು ಮೈಸೂರಿಗೂ ಸಲ್ಲುತ್ತದೆ. ಹುಬ್ಬಳ್ಳಿಯಿಂದ ಮುನಿರಾಬಾದಿನ ತನಕ ವಿದ್ಯುತ್ ವಾಹಕ ತಂತಿಗಳನ್ನೆಳೆದರೆ ಈ ನೀರು ಉಳಿತಾಯವಾಗುತ್ತದೆ.

ಅಲ್ಲದೆ ಬಲದಂಡೆಯ ನೀರಾವರಿ ವ್ಯವಸ್ಥೆಯೂ ಮುಗಿಯುತ್ತ ಬಂದಿದೆ. ಮುಂದಿನ ಜೂನ್ ತಿಂಗಳಿಂದ ಆ ನೆಲಕ್ಕೂ ನೀರುಣಿಸಬೇಕು.

ಇದನ್ನೆಲ್ಲ ಗಮನಿಸಿ, ಇನ್ನು ನಿಮಗೆ ಎರಡನೆಯ ಬೆಳೆಗಾಗಿ ನೀರು ಕೊಡುವುದು ಕಷ್ಟವಾದೀತು — ಎಂದು ಮೈಸೂರಿನ ಸರಕಾರ ಈ ಮೊದಲೇ ಆಂಧ್ರಕ್ಕೆ ತಿಳಿಸಿತ್ತು. ಆದರೆ ಆಂಧ್ರ, ಇಷ್ಟು ವರ್ಷ ನಡೆದುಕೊಂಡು ಬಂದುದು ತಾತ್ಕಾಲಿಕ ಏರ್ಪಾಟು ಎಂಬುದನ್ನು ಮರೆತು, ಅಥವಾ ಮರೆಮಾಚಿ, ಎಂದಿನಂತೆ ನೀರು ಕೊಟ್ಟೇ ತೀರಬೇಕೆಂದು ಹಟತೊಟ್ಟಿದೆ.

### ಸುಬ್ರಹ್ಮಣ್ಯಂ ಸಂಧಾನ?

ಕೇಂದ್ರದ ಆಹಾರ ಮಂತ್ರಿ ಸುಬ್ರಹ್ಮಣ್ಯಂ ಕಳೆದ ವಾರ ಬೆಂಗಳೂರಿಗೆ ಬಂದಾಗ ರಾಜ್ಯದ ಮುಖ್ಯ ಮಂತ್ರಿ ಪ್ರವಾಸದ ಮೇಲಿದ್ದರು; ಆಹಾರ ಮಂತ್ರಿ ಜತ್ತಿ ಬೆಳಗಾಂವಿಯಲ್ಲಿದ್ದರು. ಇಲ್ಲಿ ಸುಬ್ರಹ್ಮಣ್ಯಂರ ನಿರ್ದಿಷ್ಟ ಕಾರ್ಯಕ್ರಮವೂ ಗೊತ್ತಾಗಿರಲಿಲ್ಲ. ಅವರು ಮಂಡ್ಯಕ್ಕೆ ಹೋಗಿ ಬಂದರು. ಕೊಯಮುತ್ತೂರಿಗೂ ಹೋಗಿ ಒಂದು ಸಮ್ಮೇಳನದ ಉದ್ಘಾಟನೆ ಮಾಡಿದರು. ಅಂತೂ ಅವರು ಹಿಂತಿರುಗಬೇಕಾದಾಗ ಸಂಜೆ ಮುಖ್ಯಮಂತ್ರಿಯೊಡನೆ ಸುಬ್ರಹ್ಮಣ್ಯಂ ಭೇಟಿ ಸಾಧ್ಯವಾಯಿತು. ಸುಬ್ರಹ್ಮಣ್ಯಂ ಯೋಜನಾ ಆಯೋಗದ ಸದಸ್ಯ ಪ್ರೊ. ಥ್ಯಾಕರ್‌ರನ್ನು ಕರೆಸಿದ್ದರು. ಆಂಧ್ರದ ನೀರಾವರಿ ಕೃಷಿ ಮಂತ್ರಿ ಸುಬ್ಬಾ ರೆಡ್ಡಿಯವರನ್ನು ಬರಮಾಡಿಕೊಂಡಿದ್ದರು.

ಮೂಕುಳತೆಯಲ್ಲಿ ಬಾಯುಪಚಾರವೇ ನಡೆದಂತೆ ತೋರುತ್ತದೆ. ಯಾವ ಇತ್ಯರ್ಥವೂ ಆಗದೆ ಎರಡೂ ರಾಜ್ಯಗಳ ಇಂಜಿನಿಯರ್ ತಜ್ಞರು ಆ ರಾತ್ರಿಯೂ ಮಾರನೆಯ ದಿನವೂ ಚರ್ಚಿಸಿ ಥ್ಯಾಕರ್ ಅವರಿಗೆ ವರದಿ ಒಪ್ಪಿಸಬೇಕೆಂದಾಯಿತು.

ಎಂಜಿನಿಯರು ಒಮ್ಮತ ಸಾಧ್ಯವಾಗಲಿಲ್ಲ. ಪ್ರಯತ್ನ ಇನ್ನೂ ಮುಂದುವರಿಯುತ್ತದೆ ಎಂದರು ಥ್ಯಾಕರ್.

ಈ ಮಧ್ಯೆ ಆಂಧ್ರ ಸರಕಾರ, "ದೂರನ್ನು ರಾಷ್ಟ್ರಾಧ್ಯಕ್ಷರಿಗೆ ಒಯ್ಯುತ್ತೇವೆ" ಎಂದಿದೆ.

ವಾಸ್ತವವಾಗಿ ಮೈಸೂರಿನೊಡನೆ ಆಂಧ್ರ ವಾದಿಸುವ ಅಗತ್ಯವೇ ಇಲ್ಲ. ತುಂಗಭದ್ರಾ ಜಲಾಶಯದ ಆಡಳಿತಕ್ಕೆ ಪ್ರತ್ಯೇಕ ಮಂಡಲವಿದೆ. ಗಡಿಯಲ್ಲಿ ನೀರು ಬಿಡುವುದೆಲ್ಲ ಆ ಮಂಡಲದ ಜವಾಬುದಾರಿ. ಇದು ಅಲ್ಲಿ ಇತ್ಯರ್ಥವಾಗಬೇಕಾದ ವಿಷಯ.

'ತಾತ್ಕಾಲಿಕ ಏರ್ಪಾಟು' ಎಂಬುದಕ್ಕೆ ಯಾವಗತಿ ಒದಗಿತೆಂಬುದನ್ನು ಕಂಡೆವಲ್ಲ?

ಶರಾವತಿಯ ವಿದ್ಯುದುತ್ಪಾದನೆಯಲ್ಲಿಯೂ ಅಂಥದೇ ಸನ್ನಿವೇಶ ಉಂಟಾಗಿದೆ. ಅಲ್ಲಿ, ಪ್ರತಿಯೊಂದಕ್ಕೂ ೮೯,೧೦೦ ಕಿಲೋ ವ್ಯಾಟ್ ಉತ್ಪಾದನಾ ಸಾಮರ್ಥ್ಯವಿರುವ ಎರಡು ಘಟಕಗಳು ಈಗ ಕೆಲಸ ಮಾಡುತ್ತಿವೆ. ಮೂರನೆಯದು ಮಾರ್ಚಿ ತಿಂಗಳಲ್ಲಿ ಕಾರ್ಯಾರಂಭ ಮಾಡುತ್ತದೆ. ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಎಲ್ಲ ಹತ್ತು ಘಟಕಗಳೂ ವಿದ್ಯುತ್ತನ್ನು ಉತ್ಪಾದಿಸುವ ನಿರೀಕ್ಷೆಯಿದೆ.

ಈಗ ದೊರೆಯುತ್ತಿರುವ ವಿದ್ಯುಚ್ಛಕ್ತಿಯನ್ನೆಲ್ಲ ಬಳಸಲು ಬೇಕಾದ ಟ್ರಾನ್ಸ್‌ಫಾರ್ಮರುಗಳಾಗಲೀ ಹೊಸ ಉದ್ಯಮಗಳಾಗಲೀ ನಮ್ಮಲ್ಲಿಲ್ಲ. (ಜಲಾಶಯ ನಿರ್ಮಾಣವಾಯಿತು, ಕಾಲುವೆ ನಾಲೆಗಳು ಇರಲಿಲ್ಲ, ಅದೇ ರೀತಿ.) ನಾಳೆ ಇವು ಸಿದ್ಧವಾದಾಗ ಮದರಾಸು, ಕೇರಳ, ಆಂಧ್ರಗಳಿಗೆ ಹಂಚಲು ನಮ್ಮಲ್ಲಿ ವಿದ್ಯುಚ್ಛಕ್ತಿ ದೊರೆಯದೇ ಹೋಗಬಹುದು. ಆಗ "ಬೆಳಕು ನಿಲ್ಲಿಸಿದರು!" ಎಂದು ಇತರರು ಕೂಗಾಡಬಾರದಲ್ಲ?

ಸ್ವಾರಸ್ಯದ ಸಂಗತಿ ಎಂದರೆ, ಲೋಕೋಪಯೋಗಿ ವಿದ್ಯುಚ್ಛಕ್ತಿ ಸಚಿವ ವೀರೇಂದ್ರ ಪಾಟೀಲರಿಂದ ನೆರೆರಾಜ್ಯಗಳಿಗೆ ಬೆಳಕು ಕೊಡಿಸಿದವರು ಯೋಜನಾ ಆಯೋಗದ ಸದಸ್ಯ ಪ್ರೊ. ಥ್ಯಾಕರ್. ಈಗ ಆಂಧ್ರಕ್ಕೆ ನೀರು ಕೊಡುವ ವಿಚಾರದಲ್ಲಿ ಹೆಚ್ಚು ಕಡಿಮೆ ಅಂಪೈರ್‌ಸ್ಥಾನದಲ್ಲಿ ಕುಳಿತಿರುವವರೂ ಅವರೇ. ಥ್ಯಾಕರ್‌ರವರು ಮೈಸೂರಿಗೆ ಪರಿಚಿತರಾಗಿರುವುದರಿಂದ ಈ ರಾಜ್ಯದ ಔದಾರ್ಯ ಈ ರಾಜ್ಯಕ್ಕೇ ಉರುಳಾಗದಂತೆ ಎಚ್ಚರದಿಂದಿರುವುದು ಅಗತ್ಯವಾಗಿದೆ.

ರಾಷ್ಟ್ರೀಯ ಐಕ್ಯರಕ್ಷಣಾ ಸಾಮರ್ಥ್ಯದಲ್ಲಿ ಹೆಚ್ಚಳ, ಅಧಿಕ ಆಹಾರೋತ್ಪಾದನೆ— ಈ ಮೂರು ಹೆಗ್ಗುರಿಗಳು ದೇಶದ ಜನಕೋಟಿಯನ್ನು ಕೈಮಾಡಿ ಕರೆಯುತ್ತಿರುವಾಗ, ಯಾವುದೇ ರಾಜ್ಯ ದುಂಡಾವೃತ್ತಿಯ ಭಾಷೆಯನ್ನು ಬಳಸುವುದು ಸರಿಯಲ್ಲ.

---

### ಯುಕ್ತ ರಾಷ್ಟ್ರ ಸಂಘ ದಿನಾಚರಣೆ

ಮಣಿಪಾಲ ಹೈಸ್ಕೂಲಿನಲ್ಲಿ ಯುಕ್ತ ರಾಷ್ಟ್ರ ಸಂಘದ ದಿನಾಚರಣೆಯು ಶಾಲಾ ಮಕ್ಕಳಿಂದ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಈ ಸಲ ದಿನಾಚರಣೆಯು ಒಂದು ಹೊಸ ರೀತಿಯಲ್ಲಿ ಜರಗಿತು. ವಿದ್ಯಾರ್ಥಿಗಳು ಭದ್ರತಾ ಮಂಡಲಿಯ ನಕಲಿ ಸಭೆಯನ್ನು ಜರಗಿಸಿದರು. ಕಾಶ್ಮೀರ ಪ್ರಶ್ನೆಯ ಕುರಿತಾಗಿ ಚರ್ಚೆ ನಡೆದು ಯುದ್ಧ ನಿಲ್ಲಿಸುವ ಬಗ್ಗೆ ಠರಾವು ಅಂಗೀಕಾರವಾಯಿತು. ರಶ್ಯದ ಪ್ರಾತಿನಿಧ್ಯ ವಹಿಸಿದ ವಿದ್ಯಾರ್ಥಿ ಗುರುರಾಜ ಉಪಾಧ್ಯಾಯನ ಪಾತ್ರವು ಚೆನ್ನಾಗಿತ್ತು.

### ತಹಶಿಲ್‌ದಾರರಿಗೆ ವಿದಾಯ

ಉಡುಪಿಯ ಜನಪ್ರಿಯ ತಹಶಿಲ್‌ದಾರ್ ಶ್ರೀ ಬಿ. ಎಲ್. ಮಹಲಿಂಗಪ್ಪನವರಿಗೆ ವಿದಾಯ ಬಯಸಲು ಶ್ರೀ ಮಧ್ವರಾಜ್, ಎಂ. ಎಲ್. ಎ.,ಯವರ ಅಧ್ಯಕ್ಷತೆಯಲ್ಲಿ ನಾಗರಿಕ ರಕ್ಷಣ ಸಮಿತಿ ವತಿಯಿಂದ ಸಭೆಯೊಂದು ತಾ. 11.11.1966ರಲ್ಲಿ ಜರಗಿತು. ನಗರ ಸಭಾಧಿಪತಿ ಶ್ರೀ ರಂಗನಾಥ ಶೆಣೈಯವರು ಸ್ವಾಗತಿಸಿದರು. ಶ್ರೀಗಳಾದ ವಿಲಿಯಂಪಿಂಟೊ, ರಾಜಶೇಖರಯ್ಯ, ಬಿ. ಎಸ್. ಆಚಾರ್ ಮತ್ತು ಅನಂತಕೃಷ್ಣನವರು ತಹಶಿಲ್‌ದಾರರು ಜನತಾ ಸೇವೆ ಗೈದುದನ್ನು ಪ್ರಶಂಶಿಸಿ ಮಾತನಾಡಿದರು. ತಹಶಿಲ್‌ದಾರರು ಉತ್ತರಿಸುತ್ತಾ ಜನರ ಸಹಕಾರದಿಂದ ತನ್ನ ಕೆಲಸಗಳು ಸುಗಮವಾಯಿತಲ್ಲದೆ ಉಡುಪಿಯಲ್ಲಿ ತಾನು ತುಂಬಾ ಅನುಭವಗಳಿಸಿದ್ದಾಗಿ ತಿಳಿಸಿದರು. ಶ್ರೀ ಮಧ್ವರಾಜರು ತಹಶಿಲ್‌ದಾರರು ಜನತೆಗೆಸಗಿದ ಉತ್ತಮ ಕೆಲಸಕ್ಕಾಗಿ ಅವರನ್ನು ಅಭಿನಂದಿಸಿದರು. ಕೊನೆಗೆ ಕೋ‌ಆರ್ಡಿನೇಟರ್ ಮಟ್ಟಿ ರಾಮಚಂದ್ರರಾವ್‌ರವರು ಧನ್ಯವಾದ ಸಮರ್ಪಿಸಿದರು.

### ನಾಗರಿಕ ರಕ್ಷಣಾ ತರಬೇತಿ

ನಾಗರಿಕ ರಕ್ಷಣೆ ಬಗ್ಗೆ ಉಡುಪಿಯಲ್ಲಿ ರಚಿಸಿದ ವಾರ್ಡನ್‌ರವರಿಗೆ ತರಬೇತಿ ಕೊಡುವ ಪ್ರಥಮ ತರಗತಿ ಮೇಜರ್ ಜೋಸೆಫ್‌ರವರಿಂದ ಜರಗಿತು. ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ ಜರಗಿದ ತರಬೇತಿ ಕ್ಲಾಸಿಗೆ ಮುಖ್ಯ ವಾರ್ಡನ್ ರಂಗನಾಥ ಶೆಣೈ, ಕೋ‌ಆರ್ಡಿನೇಟರ್ ಮಟ್ಟಿ ರಾಮಚಂದ್ರರಾವ್, ಅಲ್ಲದೆ 16 ಜನ ವಾರ್ಡನರು ಆಗಮಿಸಿದ್ದರು.

### ಪೆನ್ಶನ್‌ದಾರರ ಸಭೆ

ಉಡುಪಿ:— ಉಡುಪಿ ತಾಲೂಕು ಪೆನ್ಶನ್‌ದಾರರ ಮಹಾಸಭೆಯು ತಾ. 7ರಂದು ಎಡ್ವೊಕೆಟ್ ಶ್ರೀ ಶಿರ್ತಾಡಿ ವಿಲಿಯಂ ಪಿಂಟೊರವರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಹೊಸ ಘಟನೆಯನ್ನು ಸ್ವೀಕರಿಸಲಾಯಿತು. ಶ್ರೀ ಜಿ. ವಿ. ರೇಗೊರವರು ಪೆನ್ಶನ್‌ದಾರರ ಸಂಕಷ್ಟಗಳನ್ನು ವಿವರಿಸಿದರು. ತಾಲೂಕು ಕಾರ್ಯದರ್ಶಿ ಶ್ರೀ ಯು. ಗೋಪಾಲಕೃಷ್ಣ ಧನ್ಯವಾದ ಸಮರ್ಪಿಸಿದರು.

### ಮಕ್ಕಳ ದಿನಾಚರಣೆ

ಉಡುಪಿ, ನಮ್ಮ ನೆಚ್ಚಿನ ಮುಂದಾಳು ದಿ| ಜವಾಹರಲಾಲ್ ನೆಹರೂರವರ ಹುಟ್ಟಿದ ದಿನವಾದ ನವಂಬರ 14ರಂದು ಭಾರತಕ್ಕೆ ಚಲನಚಿತ್ರ ವಿತರಣೆದಾರರಾದ "ಯುನಿಸೊ ಎಂಟರ್‌ಪ್ರೈಸಸ್" ಇವರು ಚಿಲ್ಡ್ರನ್ಸ್ ಫಿಲ್ಮ ಸೊಸೈಟಿ—ಇಂಡಿಯಾ ಇವರ ಮಕ್ಕಳ ಚಿತ್ರಗಳನ್ನು ಸ್ಥಳೀಯ ಚಲಚಿತ್ರ ಮಂದಿರಗಳಲ್ಲಿ ಪ್ರದರ್ಶಿಸಿ ಮಕ್ಕಳನ್ನು ಸಾಮೂಹಿಕವಾಗಿ ಸಂತೋಷಗೊಳಿಸಿದರು.

### "ಬಾರಾಬತಿ ರ್‍ಯಾಫಲ್"

ತಾ. 31-10-66ರಂದು ಕಟಕ್‌ನಲ್ಲಿ (ಒರಿಸ್ಸಾ) ಬಾರಾಬತಿ ಲಾಟರಿ ತೆಗೆಯುವ ಸಮಾರಂಭವು ಒರಿಸ್ಸದ ರಾಜ್ಯಪಾಲರ ಸಮ್ಮುಖದಿಂದ ನೆರವೇರಿತು. ಒರಿಸ್ಸ ಸರಕಾರದಿಂದ ಮಾನ್ಯತೆ ಪಡೆದಿರುವ ಈ ರ್‍ಯಾಫಲ್‌ನ ಪ್ರಥಮ ಬಹುಮಾನ ರೂ. 1,10,000ವು ಮೈಸೂರು ರಾಜ್ಯದ ಅಟ್ಟೀನ ಹಳ್ಳಿ ಲಿಂಗಪ್ಪ ಗೌಡರಿಗೆ ಬಂದಿರುತ್ತದೆ. ಮೈಸೂರು ರಾಜ್ಯದ ಹಂಚಿಕೆದಾರರಾಗಿರುವ ಶ್ರೀ ಪಿ. ಶಿವರಾಮ ಹೊಳ್ಳರವರು ವಿಶೇಷ ಆಹ್ವಾನದ ಮೇಲೆ ಈ ಸಮಾರಂಭದಲ್ಲಿ ಡ್ರಾ ಕಮಿಟಿಯ ಸದಸ್ಯರಾಗಿ ಭಾಗವಹಿಸಿದ್ದರು. ಪ್ರಥಮ ಬಹುಮಾನ ಮಾತ್ರವೇ ಅಲ್ಲದೆ ಇತರ ಹತ್ತಾರು ಬಹುಮಾನಗಳು ಮೈಸೂರು ರಾಜ್ಯದ ವಿವಿಧ ಭಾಗಗಳಿಗೆ ಬಂದಿರುವುದಾಗಿಯೂ ತಿಳಿದು ಬಂದಿದೆ.


## ದಿ. ವಿಜಯಾ ಬೇಂಕ್, ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು ಲೈಟ್ ಹೌಸು ಹಿಲ್ ರೋಡ್ ಮಂಗಳೂರು—3.

ಏಲಂ ನೋಟಿಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರೀ ನೋಟಿಸುಗಳ ಮೂಲಕ ಕೇಳಿ ಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ-ವ-ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲಿಸತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 20-11-1966ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದ್ದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 27-11-1966ನೇ ಶನಿವಾರ ಹಗಲು ಗಂಟೆ 12ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು—ಯಾ—ಬೇಂಕಿಗೆ ಯುಕ್ತ ಕಂಡ ಇತರದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ—ಯಾ—ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಭಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು-ವ-ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

| ಸಾಲದ ಜಂಜ್ರಾ ನಂಬ್ರ. | ಸಾಲಗಾರನ ಹೆಸರು ಮತ್ತು ವಿಳಾಸ. | ಮೊಬಲಗು. |
|---|---|---|
| 8/68. | ಶ್ರೀಮತಿ ಚಂದ್ರಾವತಿ, ಯು. ರಾಮಪ್ಪನವರ ಹೆಂಡತಿ, ಕಪ್ಪೆಟ್ಟು, ಪೋಸ್ಟು ಉಡುಪಿ. | 47—76 |

ಉಡುಪಿ
ತಾ. 12-11-1966

ಕೆ. ಶೀನಪ್ಪ ರೈ,
ಮೆನೇಜರ್.

# ಕ್ರೈತ್ರ ಮುರುಗ

(ಎರಡನೇ ಪುಟದಿಂದ)

ನೀ ಜೀವನದಲ್ಲಿ ಮುಂದಕ್ಕೆ ಬರಲು ಬೇಕಾಗುವ ಉಪಾಯಗಳನ್ನು ಹೂಡುತ್ತಿದ್ದನು. ಮಾರ್ಕಂಡಂ ಅವರಲ್ಲಿ ಅನುಭವ ಪಡೆಯಲು ಅವನು ಆಲೋಚಿಸಿದ್ದನು. ಕೇದಾರಿಯ ಭವಿಷ್ಯವು ಭದ್ರತೆಯದಿತ್ತು. ಈ ಯಶಸ್ಸಿನ ಮತ್ತು ಭವಿಷ್ಯತ್ತಿನ ದೃಷ್ಟಿಗಳು ಅವರನ್ನು ಕಾರ್ಯತತ್ಪರನಾಗಿರುವಂತೆ ಮಾಡುತ್ತಿದ್ದುವು. ರಾಮು ಆಗಲೂ ಅವನ ಕೋಣೆಯಲ್ಲೇ ಇದ್ದರೂ ಅವನು ಬೇರೆಯವರೊಟ್ಟಿಗೆ ಸಮಯ ಕಳೆಯಬೇಕಾಗುತ್ತಿತ್ತು.

ಕೆಲವೊಮ್ಮೆ ಕೇದಾರಿಯು ಕಳೆದು ಹೋದುದರ ಕುರಿತು ಚಿಂತಿಸುವಾಗ ತಾನು ಕೃತಘ್ನನಾಗುತ್ತಿರುವದನ್ನು ಕಂಡುಕೊಳ್ಳುತ್ತಿದ್ದನು. ತಡೆ ಅನಿವಾರ್ಯವಿತ್ತು. ಒಂದೇ ಸಾಲಿನಲ್ಲಿ ಬೇರೆ ಬೇರೆ ಕೊನೆ ನಿಲ್ದಾಣಗಳ ಎರಡು ಚಲಿಸುತ್ತಿರುವ ವಸ್ತುಗಳು ಅದೆಷ್ಟು ದೂರದ ವರೆಗೆ ಓಡುತ್ತಿರಬಹುದು? ಈ ರೀತಿಯು ರೇಖಾಗಣಿತದ ಬಲದಿಂದ ಅವನು ವಾದಿಸುತ್ತಿದ್ದನು. ಅನಿವಾರ್ಯದ ಮೇಲೆ ಯಾರೂ ಯುದ್ಧಕ್ಕೆ ಹೋಗಲಾರರು, ಮತ್ತು ಹೋಗುವದೂ ಇಲ್ಲ. ರಾಮುವಿನಿಂದ ಮಾತ್ರ ತಲೆಮರಿಸಿಕೊಳ್ಳುತ್ತಿದ್ದುದಲ್ಲದೆ ತನ್ನ ಸಂಬಂಧಿಕೆ ಮೀನಾಕ್ಷಿ ಮತ್ತು ಜಾನಕಿಯನ್ನು ಕಾಣದೆ ಅವನು ಆರು ತಿಂಗಳುಗಳನ್ನು ಕಳೆದಿದ್ದನು. ಮೀನಾಕ್ಷಿಯ ಗಂಡು ಹೂಗಳಿಕೆಗಳ ಆದರಣೆಯಿಲ್ಲದಿದ್ದರೆ ತನ್ನ ಕಾರ್ಯಸಿದ್ಧಿಯು ಸುಮ್ಮಗೆ ಭಾರವೆಂದವನು ಭಾವಿಸಿದನು. ರಾಮುವಿನ ಅಸಮಾಧಾನಕ್ಕಿಂತಲೂ ಆಕೆಯ ಪ್ರಶಂಸೆಯು ಯುಕ್ತ ಧೈರ್ಯ ಕೊಡುವಂತಹದಿದೆ. ಒಂದು ಸಾಯಂಕಾಲ ಅವಳನ್ನು ಕಾಣಲು ಹೋಗಬೇಕೆಂಬ ನಿರ್ಣಯಕ್ಕೆ ಅವನು ಬಂದನು. ಆಗಲೆ, ಜಾನಕಿಯ ಪ್ರಕಾಶಪೂರ್ಣ ನೆರಳು ಅವನ ಮನೋಪರದೆಯ ಮೇಲೆ ಸುಳಿದಾಡಿತು. ಅದು ಅವನ ನಿರ್ಣಯವನ್ನು ಅನುಮೋದಿಸಿತು. ಅದನ್ನು ಬಿಟ್ಟುಬಿಡ ಬೇಡವೆಂದು ಮೀನಾಕ್ಷಿಯೇ ವಿಜ್ಞಾಪಿಸಿಕೊಂಡಂತೆ ಅವನಿಗೆ ಭಾಸವಾಯಿತು. ಕೇದಾರಿಯು ಪುನಃ ಅಲ್ಲಿಗೆ ಹೋಗಿ ಬರಲಾರಂಭಿಸಿದನು.

ಆ ವಿಷಯ ರಾಮುವಿಗೆ ಗೊತ್ತಾಯಿತು. ಕೇದಾರಿಯು ತನ್ನ ಸಂಬಂಧಿಕರನ್ನು ಹೋಗಿ ನೋಡುವದು ಸಂಪೂರ್ಣ ತಪ್ಪೆಂಬ ತೀರ್ಮಾನಕ್ಕೆ ಅವನು ಬರಲಿಲ್ಲ. ಆದರೂ ಅವನ ಮನಸ್ಸಿಗದು ಸರಿ ಬರಲಿಲ್ಲ. ಹಾಗಿದ್ದರೂ ತನ್ನ ಆಲೋಚನೆಯು ಯಃಕಶ್ಚಿತ್ ಹಾಗೂ ಮಾತ್ಸರ್ಯದಿಂದ ಕೂಡಿದ್ದೆಂಬುದನ್ನು ತಿಳಿದುಕೊಳ್ಳದ ಇರಲಿಕ್ಕೆ ಅವನಿಂದಾಗಲಿಲ್ಲ. ರಾಮು ಬಹಳ ನಮ್ರ ಹಾಗೂ ಸಾಧು ಸ್ವಭಾವದವನು. ಅವನು ಕೂಡಾ ತಾನು ತೊಂದರೆಯಲ್ಲಿ ಸಿಲುಕಿಕೊಂಡಿರುವೆನೆಂದು ತಿಳಿದುಕೊಂಡಿದ್ದನು.

ರಾಮುವಿನ ಪರೀಕ್ಷೆಯು ಮುಗಿದಿತ್ತು. ಕೇದಾರಿಯ ಪರೀಕ್ಷೆ ಪುನರಾರಂಭದಲ್ಲಿ ಪ್ರಾರಂಭವಾಗಲಿಕ್ಕಿತ್ತು. ಪರೀಕ್ಷೆ ಮುಗಿದೊಡನೆ, ರಾಮು ತನ್ನ ಅತ್ತೆಯೊಡನೆ ಜಗಳವಾಡಿಕೊಂಡು, ಆಕಸ್ಮಿಕವಾಗಿ ಮದ್ರಾಸನ್ನು ಬಿಟ್ಟು ಹೊರಟನು. ಕೇದಾರಿಯು ವಿದ್ಯಾಲಯದ ಓದುವ ಕೋಣೆಯಲ್ಲಿ ವಿದ್ಯಾರ್ಥಿಗಳಿಗೆ 'ಸ್ನೇಹ' ಎಂಬುದರ ಕುರಿತು ಒಂದು ಉದ್ದ ಭಾಷಣವನ್ನು ಕೊಡುತ್ತಿದ್ದಾಗ, ಇತ್ತ ರಾಮು ಪ್ರಯಾಣಕ್ಕೆ ಅಣಿಮಾಡಿಕೊಳ್ಳುತ್ತಿದ್ದನು. ಆಂದು ಅವನು ಕೋಣೆಗೆ ತಡವಾಗಿ ಬಂದನು, ಬಂದಾಗ ಕೊಟಡಿಯು ಖಾಲಿಯಾಗಿ ಇರುವದನ್ನು ಕಂಡನು.

ಕೇದಾರಿಗೆ ಸಂತೋಷ ಅಥವಾ ದುಃಖವೂ ಆಗಲಿಲ್ಲ. ಅದರ ಬದಲು ಎರಡರ ಅನುಭವವೂ ಅವನಿಗಾಯಿತು. 'ಸಿಲೋನ್ ಬೋಟ್—ಮೆಯಿಲ್' ಹೊರಡಲಿಕ್ಕೆ ಇನ್ನೂ ಸಮಯವಿದ್ದುದರಿಂದ ಎಗ್ಮೋರ್ ರೈಲ್ವೇ ನಿಲ್ದಾಣಕ್ಕೆ ಓಡಿ ಹೋಗುವದೆಂದವನು ಮೊದಲು ಯೋಚಿಸಿದನು, ಆದರೆ ಆಲೋಚನೆಯನ್ನು ಒಡನೆ ಬದಲಾಯಿಸಿ ಆರಾಮಾಸನದಲ್ಲಿ ಬಿದ್ದುಕೊಂಡನು. ಸ್ವಲ್ಪ ಸಮಯದಲ್ಲೇ ಕಣ್ಮುಂದೆ ಬೋಟ್—ಮೆಯಿಲ್ ಘರ್ಜಿಸುತ್ತ ಓಡಿ ಹೋಗುತ್ತಿರುವದನ್ನು ಕಂಡನು. ರಾಮು ಕಿಟಕಿಯಿಂದ ಹೊರಗೆ ಇಣುಕುತ್ತಿದ್ದವನ್ನು ಕಂಡೆನೆಂದವನು ಕಲ್ಪಿಸಿಕೊಂಡನು. ಆದರೆ ಅವನ ಪಕ್ಕದಲ್ಲಿ ಜಾನಕಿಯೂ ಆ ಓಡುತ್ತಿದ್ದ ಬಂಡಿಯಲ್ಲಿದ್ದಳು ಎಂಬುದು ಅವನ ಆಲೋಚನೆಗೆ ಸಿಲುಕಿರಲಿಲ್ಲ.

— ೯ —

ಅದು ಬೇಸಗೆಯ ಕಾಲ; ಜೂನ್ ತಿಂಗಳ ಮೊದಲನೆಯ ವಾರ. ನೈಋತ್ಯ ಮಾರುತ ಇನ್ನೂ ತನ್ನ ಪ್ರಭಾವವನ್ನು ಪ್ರಕಟಿಸಿರಲಿಲ್ಲ. ಕಾವೇರಿಯು ಇನ್ನೂ ತುಂಬಿರಲಿಲ್ಲ; ರಾಡಿಯಾದ ನದಿಯಾಗಿದ್ದುಕೊಂಡು ತನ್ನ ನೀರಿನಲ್ಲಿ ಸ್ವೇಚ್ಛೆಯಿಂದ ಹಾಗೂ ಸಂತೋಷದಿಂದ ಆಡುತ್ತಿರುವವರಿಗೆ ಗದರಿಸುತ್ತಿದ್ದಿಲ್ಲ. ಆಗ ಕೃಶಳಾಗಿದ್ದ ಕಾವೇರಿ, ಮೆಲ್ಲಗೆ, ಬಾಲಭಾಸ್ಕರನ ಬಂಗಾರದ ಬಣ್ಣದ ಕಿರಣಗಳಿಂದ ಪ್ರಕಾಶಿಸುತ್ತ, ಸರ್ಪದಂತೆ ಚಲಿಸುತ್ತಿದ್ದಳು. ಹೊಯಿಗೆಯ ಹಾಸಿಗೆಯ ಮೇಲೆ ಆ ರೀತಿ ವಕ್ರವಕ್ರವಾಗಿ ಹೋಗಲಿಕ್ಕೆ ಚಲಿಸುವ ನೀರಿಗೆ ಮಾತ್ರ ಗೊತ್ತು. ಪ್ರವಾಹವು ಬಹು ಸ್ಪಷ್ಟ ಹಾಗೂ ಶಾಂತವಾಗಿತ್ತು, ಹೆಚ್ಚು ಆಳವಿದ್ದಲ್ಲಿ ನೀರು ನಾಭಿ ವರೆಗೆ ಬರುತ್ತಿತ್ತು. ಆ ಆಳದ ಸಂತೋಷದಿಂದ ಹಾಗೂ ಭಯವಿಲ್ಲದೆ ಸ್ನಾನ ಮಾಡಲು ಯೋಗ್ಯವಿದೆ.

ಸ್ನಾನದ ಸಮಯದಲ್ಲಿ ಹಿಂದೂ ಹೆಂಗಸು ಪ್ರಪಂಚದಲ್ಲಿ ಸ್ವತಂತ್ರ ಜೀವಿ. ಆ ನದಿಯ ಪವಿತ್ರೋದಕದಲ್ಲಿಳಿದ ಮೇಲಂತೂ, ಅಲ್ಲಿ ಸುಂದರ ತರುಣಿಯೂ, ಹಳೇ ಮುದುಕಿಯೂ ಸಮಾನತೆಯಿಂದ ಒಬ್ಬಳನ್ನು ಇನ್ನೊಬ್ಬಳು ಕಾಣುತ್ತಾಳೆ. ಆ ಮೇಲೆ ಅಲ್ಲಿ ಅಲವಂತಿಯ ಸೂರ್ಯನ ಕೆಳಗಿರುವ ಹಾಗೂ ಇನ್ನೂ ಸ್ವಲ್ಪ ದೂರದಲ್ಲಿರುವ ಅನೇಕಾನೇಕ ವಿಷಯಗಳ ಮೇಲೆ ಸ್ವೇಚ್ಛೆಯಿಂದ ಸಮಾಜದ ಗುಪ್ತಚಾರರಂತೆ ಹಾಗೂ ತೀಕ್ಷ್ಣವಿರುವ ಚಮತ್ಕಾರದ ಮಾತುಗಳಿಂದ, ಚರ್ಚೆ ಆರಂಭವಾಗುತ್ತದೆ.

ನಾಲಗೆಗಳು ಹಾಗೆ ಸಂತೋಷದಿಂದ ಆಡುತ್ತಿರುವಾಗ, ಇತ್ತ ನೀರು ಉದ್ದ ಶೀರೆಯ ಸೆರಗು ತುದಿಗಳೊಂದಿಗೆ ಚಮತ್ಕಾರದಿಂದ ಆಟಗಳನ್ನು ಆಡುತ್ತಿರುತ್ತದೆ. ಸ್ನಾನದ ಸಮಯದಲ್ಲಿ ಕಾವೇರಿಯು ಕ್ರೀಡಾರಂಗವಾಗಿರುತ್ತದೆ. ಜಾಗರೂಕ ಕೈಗಳು ಅದಕ್ಕೆ ಪ್ರೋತ್ಸಾಹವನ್ನು ಕೊಡುತ್ತವೆ; ಅಲ್ಲದೆ ನದಿಯ ಶೃಂಗಾರ ಪ್ರಿಯತೆಯ ಮಿತಿಮೀರುವಿಕೆಯನ್ನು ತಡೆಗಟ್ಟಿ, ಅದನ್ನು ತಕ್ಕ ಆಳತೆಯಲ್ಲಿ ಹದ್ದಿನಲ್ಲಿಡುತ್ತವೆ.

ಯಾವಾಗಲೂ ಅಲವಂತಿಯಲ್ಲಿ ಸ್ನಾನ ಮಾಡುವವರ ಒಂದು ಗುಂಪಿನಲ್ಲಿ ತಾರುಣ್ಯದ ಅನುಭವವನ್ನು ಪಡೆಯಲು ಬರುತ್ತಿರುವವರ ಪ್ರಾಯದವರು ಹಾಗೂ ಮುದುಕಿಯರು—ಹೀಗೆ ಹತ್ತು ಹನ್ನೆರಡು ಮಂದಿ ಇರುತ್ತಿದ್ದರು.

"ರಾಮುವಿನ ಹೆಂಡತಿ ಘೋಷಾದವಳೇನು?" ಮಧ್ಯಮ ಪ್ರಾಯದ ಮಹಿಳೆಯೊಬ್ಬಳು, ತನ್ನ ಝೇಂಕಾರದ ವೈಖರಿಯಲ್ಲಿ, ಅಲಕ್ಷ್ಯ ಭಾವದಿಂದ ಅಂದಿನ ವಿಷಯದ ಪ್ರಸ್ತಾವನೆ ಮಾಡಿದಳು. "ಅವಳು ನಮ್ಮ ಹಳ್ಳಿಗೆ ಬಂದು ಒಂದು ತಿಂಗಳಾಗುತ್ತ ಬಂದರೂ, ನದಿಗೆ ಒಮ್ಮೆಯಾದರೂ ಬಂದೇ ಇಲ್ಲ. ಸೌಖ್ಯವಿಲ್ಲದಿರುವವರ ಹಾಗೆ ಮನೆಯಲ್ಲೇ ಬಾವಿಯ ನೀರಿನಲ್ಲಿ ಸ್ನಾನ ಮಾಡುತ್ತಾಳೋ, ಬಿಸಿ ನೀರಿನಲ್ಲಿ ಸ್ನಾನ ಮಾಡುತ್ತಾಳೋ?"

"ಅಥವಾ ಪೀಪಾಯಿಯಲ್ಲಿ ದೊರೆಸಾನಿಯು ಹಾಗೆ ಸ್ನಾನ ಮಾಡುತ್ತಾಳೋ?" ಇನ್ನೊಬ್ಬಳು ಧ್ವನಿಗೂಡಿಸಿದಳು.

"ಇಲ್ಲ, ಇಲ್ಲ, ಆಕೆ ಹೊಸಬಳಿದ್ದಾಳೆ. ಅವಳು ಭೀರು, ಅಲ್ಲದೆ ಒಬ್ಬಂಟಿಗಳಿದ್ದಾಳೆ." ಅವರಲ್ಲಿ ಅತಿ ಚಿಕ್ಕವಳು ಹಾಗೂ ಚಂದದವಳೊಬ್ಬಳು ಹೇಳಿದಳು

"ಹೊಸಬಳು ಮತ್ತು ಭೀರು! ಆದರೆ ಬೆಳಿಗ್ಗೆಯೂ ಸಂಜೆಯೂ ಹರೆಯದವರು ಅತ್ತಿತ್ತ ಹೋಗುವಾಗ, ಆರಾಮವಾಗಿ ಜಗಲಿಯ ಮೇಲೆ ನಿಂತುಕೊಂಡು ನೋಡಲಿಕ್ಕೆ ಅವಳು ಹೊಸಬಳೂ ಅಲ್ಲ, ಭೀರುವೂ ಅಲ್ಲ." ಇನ್ನೊಂದು ಸ್ವರ ಜೋರಾಗಿ ಕೇಳಿ ಬಂತು.

"ಅಲ್ಲದೆ ಒಂದಂಗುಲವೂ ಕದಲುವದೇ ಇಲ್ಲ, ಗಾಳಿಯಲ್ಲಿ ಹಾರಿ ಹೋದ ಶೀರೆಯನ್ನು ಸರಿಪಡಿಸಿಕೊಳ್ಳುವದೂ ಇಲ್ಲ" ಎಂದು ಮುಂದುವರಿಸಿ ಟೀಕಿಸಿದಳು, ಓರ್ವ ನಡು ಪ್ರಾಯ ದಾಟಿರುವ ಸ್ತ್ರೀ. ಅವಳು ತಾರುಣ್ಯ ಕಾಲದಲ್ಲಿ ಶೃಂಗಾರ ಪ್ರಿಯತೆಯ ಒಂದವಾಳವನ್ನು ಕೂಡಿಸಿಟ್ಟುಕೊಂಡಿದ್ದಾಳೆ, ಈಗಲೂ ಸರಸವಾಡಲು ಪ್ರೇರೇಪಿಸುವ ಕಾಲವನ್ನು ಮೀರದೆ ಇದ್ದವಳು. "ಆಕೆಯ ಅತ್ತೆ ಜೀವದಿಂದ ಇರುತ್ತಿದ್ದಲ್ಲಿ, ಜಾನಕಿಯು ಜೀವದಿಂದ ಇದ್ದ ಹಾಗೆ ಚರ್ಮ ಸುಲಿದು ಲಜ್ಜೆಯ ಪಾಠವನ್ನು ಹೇಳಿ ಕೊಡುತ್ತಿದ್ದಳು. ಬಡ ರಾಮು ಭೀರು. ಅವನು ಪಟ್ಟಣದಲ್ಲಿ ಬೆಳೆದ ಹುಡುಗ, ತನ್ನ ಹೆಂಡತಿಗೆ ನಮ್ಮ ಹಳ್ಳಿಯ ಸಂಪ್ರದಾಯದ ಕುರಿತು ಹೇಳುವಷ್ಟು ಅವನಿಗೆ ಧೈರ್ಯವಿಲ್ಲ."

"ಅಯ್ಯೋ! ದೊರೆಸಾನಿಯ ಹಾಗೆ ರವಿಕೆಯನ್ನು ಧರಿಸಿಕೊಳ್ಳುವ ಅವಳ ರೀತಿಯೇ!" ಸಂಪ್ರದಾಯ ಪ್ರಿಯೆ ಮುದುಕಿಯೊಬ್ಬಳು ದುಃಖದಿಂದ ಹೇಳಿದಳು, ಆಕೆಯು ಒಮ್ಮೆ ಹಳ್ಳಿಯ ಜಗಳಗಂಟಿ ಎಂದು ಪರಿಚಿತಳಾಗಿದ್ದಳು. ಆದರೂ ಕುಂದಿಲ್ಲದ ಕೀರ್ತಿ ಅವಳಿಗಿತ್ತು. "ಅಡುಗೆ ಮಾಡುವದೂ ಇಲ್ಲ, ನದಿಯಲ್ಲಿ ಮೀಯುವದೂ ಇಲ್ಲ ಅಥವಾ ದೇವಸ್ಥಾನಕ್ಕೆ ಹೋಗುವದೂ ಇಲ್ಲ.

"ಬಿಳಿ ಹೆಂಗಸಿನಂತೆ ಮನೆಯಲ್ಲೇ ಇರುತ್ತಾಳೆ. ನಿಜವಾಗಿ ಕಲಿಯುಗ ವೇಗವಾಗಿ ಹತ್ತಿರಕ್ಕೆ ಬರುತ್ತಿದೆ. ರಾಮುವಿನ ಹೆಂಡತಿ, ಈ ಕೆಟ್ಟ ಗುಣವನ್ನು ನಮ್ಮ ಹಳ್ಳಿಯ ಸಾತ್ವಿಕ ಹುಡುಗಿಯರಿಗೂ ಹಬ್ಬಿಸುತ್ತಾಳೋ ಎನ್ನುವ ಭಯ ನನಗಿದೆ."

"ಆದರೂ ನಾನವಳನ್ನು ಮೆಚ್ಚಿದ್ದೇನೆಂದು ಹೇಳಲೇಬೇಕು." ಮೊದಲು ಜಾನಕಿಯ ಪರವಾಗಿ ಮಾತನಾಡಿದ್ದ ಎಳೆಯ ಹಾಗೂ ಸುಂದರ ಹುಡುಗಿಯು ಪುನಃ ಅವರೆಲ್ಲರೊಡನೆ ವಿರುದ್ಧವಾಗಿ ಮಾತನಾಡಿದಳು. "ಜಾನಕಿಯು ಉಲ್ಲಾಸದವಳು ಹಾಗೂ ಬುದ್ಧಿಶಾಲಿನಿ ಇದ್ದಾಳೆ. ನಿಮಗೂ ನನಗೂ ಅವಳು ಮುಗುಳ್ನಗುತ್ತಾಳೆ. ಅಂತಹ ಪತ್ನಿಯನ್ನು ಪಡೆದಿರುವ ರಾಮು ಧನ್ಯ ಹಾಗೂ ಸುಖಿ ಪುರುಷನಿದ್ದಾನೆ. ನಮ್ಮದಾದರೋ ಚಿಕ್ಕ, ಕೀಳು ಸ್ಥಿತಿಯ ಹಾಗೂ ಮಾತ್ಸರ್ಯದಿಂದ ತುಂಬಿರುವ ಜೀವನವಿದೆ. ಇಲ್ಲಿ ನದಿಯಲ್ಲಿ ನಾವು ಗೂಢಚಾರಿಣಿಯರಂತೆ ಮಾತನಾಡುತ್ತೇವೆ; ದೇವಸ್ಥಾನದಲ್ಲಿ ಚಾಡಿ ಹಾಗೂ ಹೊಲಸು ಸಂಗತಿಗಳಲ್ಲಿ ಕಾಲಕಳೆಯುತ್ತೇವೆ. ಎತ್ತುಳಿದ ಸಮಯದಲ್ಲಿ, ದಿನದ ಪ್ರಾಯಶ್ಚಿತ್ತಕ್ಕಾಗಿಯೋ ಎಂಬಂತೆ, ಅಡುಗೆ ಕೋಣೆಯಲ್ಲಿ, ಸಂತೋಷ ಹಾಗೂ ಸ್ವಾತಂತ್ರ್ಯವಿಲ್ಲದೆ ಕೆಲಸ ಮಾಡುತ್ತ ಕಾಲ ಕಳೆಯುತ್ತೇವೆ. ನಮ್ಮ ಹಾಗೆ ಇಲ್ಲದೆ ಇರುವವರ ವಿಷಯವೆತ್ತಿಕೊಂಡು ನಾವು ತಮಾಷೆ ನೋಡುತ್ತೇವೆ. ನಾನು ಜಾನಕಿಯನ್ನು ಮೆಚ್ಚುತ್ತೇನೆ" ಹೀಗೆ ಅವಳು ಬಹಿರಂಗವಾಗಿ ಜಾನಕಿಯನ್ನು ಆದರಿಸಿ ಮಾತನಾಡಿದಳು. ಆ ಹಳ್ಳಿಯಲ್ಲಿ ಜಾನಕಿ ಬರುವ ಮುಂಚೆ, ಇವಳು ಪಟ್ಟಣದ ಪೋರಿ ಎಂದು ಪರಿಹಾಸ್ಯಕ್ಕೆ ಒಳಪಟ್ಟಿದ್ದಳು. ಈಗ ಜಾನಕಿ ದಾಖಲೆಯನ್ನು ಮೀರಿದ್ದಾಳೆ.

"ಅದು ಉಚಿತವಿದೆ, ಸೀತಾ, ಜಾನಕಿಗೆ ನೀನೇ ಪ್ರೋತ್ಸಾಹ ಕೊಡಬಲ್ಲೆ. ನೀವಿಬ್ಬರೂ ಒಳ್ಳೆಯ ಸ್ನೇಹಿತೆಯರಾಗಬಹುದು ಮತ್ತು ಹಳ್ಳಿಗೆ ಬೆಂಕಿ ಹಚ್ಚಿಬಿಡಲೂ ಬಹುದು ಅಥವಾ ಪಿತೂರಿ ನಡೆಸಲೂ ಬಹುದು." ಸಂಪ್ರದಾಯಪ್ರಿಯೆ ಮುದುಕಿ ಜೋರಿನಿಂದ ಹೇಳಿ ಮುಂದರಿಸಿದಳು "ಅವುಗಳನ್ನು ನೋಡುವ ಮುಂಚೆಯೇ ನನ್ನ ಕಣ್ಣುಗಳು ಮುಚ್ಚಿ ಹೋಗಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ."

ಅಲ್ಲಿಗೆ ಅಂದಿನ ಸಂಭಾಷಣೆಯು ಸಡಿಲಾಗುವಂತೆ ಕಂಡು ಬಂತು. ಆಗ ಹೊಸತಾಗಿ ಕೊಂಡುಕೊಂಡಿದ್ದ ದನವನ್ನು ನೀರು ಕುಡಿಸಲು, ಹಾಗೆ, ಮೈತೊಳೆಯಲು ಮುರುಗನು ಅಲ್ಲಿಗೆ ತರುತ್ತಿದ್ದುದು ಅವರ ದೃಷ್ಟಿಗೆ ಬಿತ್ತು.

"ಅದೋ! ಹೊಸತಾಗಿ ತೆಗೆದುಕೊಂಡಿರುವ ದನದೊಂದಿಗೆ ಮುರುಗನು ಇತ್ತ



ಹದಿನೈದು

NAVAYUGA 18—11—1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೧೮-೧೧-೬೫ರಿಂದ ೨೪-೧೧-೬೫ರ ವರೆಗೆ

### ೧ ಮೇಷ

ಈ ವಾರವು ನಿಮಗೆ ಆರೋಗ್ಯದೃಷ್ಟ್ಯಾ ಹಿತಕಂವೆನಿಸದಿದ್ದರೂ ಹಣದ ದೃಷ್ಟಿಯಿಂದ ಚೆನ್ನಾಗಿರುವದು. ನೌಕರಿ ಮತ್ತು ವ್ಯಾಪಾರಿ ವರ್ಗದವರಿಗೆ ಕೆಲಸಕ್ಕಿಂತಲೂ ಹೆಚ್ಚಿನ ಫಲ ಲಾಭಿಸಿದೆ. ದ್ಯೂತ ಪ್ರಿಯರಿಗೂ ಈ ಕಾಲವು ಚೆನ್ನಾಗಿರುವದು. ಜನತೆಯ ಸಹಕಾರದ ಕೊರತೆಯಿಂದಾಗಿ ಕೋರ್ಟುವ್ಯವಹಾರಗಳಲ್ಲಿ ಸೋಲುಂಟಾಗಲಿದೆ. ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ತಾ. 19ರಿಂದ 22ರ ವರೆಗಿನ ದಿನಗಳು ಅನುಕೂಲವಾಗಿವೆ

### ೨. ವೃಷಭ

ಮನೋದೌರ್ಬಲ್ಯವು ನಿಮ್ಮನ್ನಿಂದು ವಿಶೇಷವಾಗಿ ಕಾಡಲಿದೆ. ಯಾವ ಉದ್ಯಮವನ್ನೂ ಕೂಡ ಆರಂಭದಿಂದ ಕೊನೆ ತನಕ ಸಾಧಿಸಲಾರಿರಿ. ಅಷ್ಟಲ್ಲದೆ ವಿರೋಧಿ ಜನರೂ ಕೂಡ ಇಂದು ನಿಮ್ಮ ದೌರ್ಬಲ್ಯದ ಸದುಪಯೋಗವನ್ನು ಪಡೆಯಲಿರುವರು. ಗುರುಹಿರಿಯರ ಅನುಗ್ರಹದಿಂದಾಗಿ ನಿಮಗಿಂದು ಹಣದ ತೊಂದರೆ ಕಾಣಿಸದು. ವಾಹನಾದಿಗಳಲ್ಲಿನ ಪ್ರಯಾಣಗಳನ್ನು ಸದ್ಯ ನಿಲ್ಲಿಸುವದೊಳ್ಳಿತು. ವಾರಾಂತ್ಯದ ೪ದಿನಗಳಲ್ಲಿ ಗೃಹಸುಖ ಧನ ಮಾನಾದಿಗಳನ್ನು ಪಡೆವಿರಿ.

### ೩. ಮಿಥುನ

ಶ್ರಮವಹಿಸಿ ದುಡಿಯುವಿರಿ ಆದರೆ ನಿಮ್ಮ ನಿರೀಕ್ಷೆಯಂತೆ ಫಲವು ಮಾತ್ರ ಲಭಿಸದು. ವ್ಯಾಪಾರದಲ್ಲಿ ಆಕಸ್ಮಿಕ ನಷ್ಟವುಂಟಾಗಲಿದೆ. ಆತ್ಮೀಯರ ವಿಯೋಗ ಮತ್ತು ವಿರೋಧಗಳಿಂದಾಗಿ ಮನಸ್ಸಿಗೆ ಸ್ವಾಸ್ಥ್ಯವಿರದು. ಅಧಿಕಾರಿ ವರ್ಗದವರು ಮೇಲಿಂದ ಮೇಲೆ ಉಪದ್ರವಿಸಲಿರುವರು ಸ್ತ್ರೀಯರಿಂದಾಗಿ ನಷ್ಟಾಪವಾದಗಳು ಸಂಭವಿಸಲಿರುವವು. ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ ನಿಮಗೆ ವಾರಾಂತ್ಯದ 2 ದಿನಗಳು ಸ್ವಲ್ಪ ಅನುಕೂಲವೆನಿಸುವವು.

### ೪. ಕರ್ಕಟ

ಉಪಚಯದಲ್ಲಿಹ ಅಂಗಾರಕನೊರ್ವನನ್ನುಳಿದು ಇತರ ಗ್ರಹರೆಲ್ಲರೂ ಪ್ರತಿಕೂಲರಾಗಿರುವುದರಿಂದ ನಿಮ್ಮ ಸಂಕಲ್ಪಗಳೆಲ್ಲವೂ ನಿಷ್ಫಲಗಳಾಗಲಿವೆ. ಏನೇ ವಿಘ್ನ ವಿಪತ್ತುಗಳು ಬಂದರೂ ಧೈರ್ಯದಿಂದ ನೀವದನ್ನು ಎದುರಿಸುವಿರಿ. ಆರ್ಥಿಕ ಪರಿಸ್ಥಿತಿಯು ತೀರಾ ಹದಗೆಡುವುದರಿಂದಲೂ ಸಾಂಸಾರಿಕ ಪರಿಸ್ಥಿತಿಯಲ್ಲಿ ಅವ್ಯವಸ್ಥೆಗಳು ತಲೆದೋರುವುದರಿಂದಲೂ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರಲಾರದು. ಹೆಚ್ಚಿನ ಕಾಲವನ್ನು ಪ್ರವಾಸದಲ್ಲಿ ಕಳೆವಿರಿ. ವಾರಾದಿಯ 3 ದಿನಗಳು ಇತರ ದಿನಗಳಿಗಿಂತ ಉತ್ತಮವೆನಿಸುವವು.

### ೫. ಸಿಂಹ

ಶುಭಗ್ರಹರಾದ ಬುಧ ಗುರು ಶುಕ್ರರ ಪೂರ್ಣ ಬೆಂಬಲವು ನಿಮಗಿರುವುದರಿಂದ ಸದ್ಯ ನಿಮ್ಮ ಉದ್ಯೋಗ ವ್ಯವಹಾರಗಳು ನಿರಾತಂಕವಾಗಿ ಸಾಗಲಿವೆ. ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆವಿರಿ. ಅದಲ್ಲದೆ ರಾಜಕೀಯದಲ್ಲಿ ಪ್ರತಿಪಕ್ಷಗಳಿಂದ ಪರಾಜಿತರಾಗುವಿರಿ. ಹೆಂಡತಿ ಮಕ್ಕಳ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ ಪತ್ರ ವ್ಯವಹಾರಕ್ಕಿಂತಲೂ ಮುಖತಃ ಬೆಟ್ಟಿಯು ಒಳ್ಳೆ ಪರಿಣಾಮ ಕಾರಿಯಾದೀತು. ತಾ. 21_22ರಲ್ಲಿ ಧನಲಾಭ ವಿಜಯ ಸ್ತ್ರೀ ಸುಖಾದಿಗಳನ್ನು ಪಡೆಯಲಿರುವಿರಿ.

### ೬. ಕನ್ಯಾ

ಸದಾಚಾರ ಸಂಪನ್ನರೂ ಸತ್ಕರ್ಮ ಪ್ರವರ್ತಕರೂ ಆದ ನಿಮಗೆ ದಿನಗಳು ಸುಖಮಯಗಳಾಗಲಿವೆ. ಎಂತಹ ದುಃಸಾಧ್ಯವಾದ ಕಾರ್ಯವನ್ನೂ ಲೀಲಾಜಾಲವಾಗಿ ಕೊನೆಗಾಣಿಸುವಿರಿ. ತಮ್ಮನ್ನು ಇದಿರಿಸಿ ಗೆಲಲಾರದ ಪ್ರತಿಪಕ್ಷಿಗಳು ಒಳಹೊಕ್ಕು ಮೋಸಗೈಯ್ಯಲಿರುವರು. ವ್ಯಾಪಾರದಲ್ಲಿ ನಿಮ್ಮ ನಿರೀಕ್ಷೆಗೂ ಮಿಗಿಲಾಗಿ ಧನಲಾಭವಾಗುವದು ನಿರಾಮಯರಾದ ನಿಮಗೆ ತಾ. 19.20.23.24 ಈ ದಿನಗಳು ಅನುಕೂಲವಾಗಿವೆ.

### ೭. ತುಲಾ

ನಿಮ್ಮ ಎಲ್ಲಾ ಕಾರ್ಯಕಲಾಪಗಳು ಕೂಡ ಇಂದು ಎಂದಿಗಿಂತಲೂ ಯಶಸ್ವಿಯಾಗಿ ಮುಂದುವರಿಯಲಿವೆ. ನೌಕರಿ, ವ್ಯಾಪಾರ, ಕೃಷಿ ಮುಂತಾದ ಉದ್ಯಮಗಳಲ್ಲಿ ನಿಮ್ಮ ನಿರೀಕ್ಷೆಗಿಂತಲೂ ಹೆಚ್ಚಿನ ಫಲವು ಅನಾಯಾಸವಾಗಿ ಲಭಿಸಲಿದೆ. ಪ್ರಬಲವಾದ ಶತ್ರುವು ಕೂಡ ನಿಮ್ಮೆದುರು ಹಲ್ಲುಕಿತ್ತ ಹಾವಿನಂತಾದಾನು. ಸುಖನೆಮ್ಮದಿಯಿಂದ ಕಾಲ ಕಳೆಯುತ್ತ ನಿಮಗೆ ತಾ. 21_22 ಸರ್ವಾಭೀಷ್ಟಪ್ರದಗಳಾಗಿವೆ.

### ೮. ವೃಶ್ಚಿಕ

ಅತ್ತ ಹೋದರೆ ದರಿ, ಇತ್ತ ಬಂದರೆ ಗಿರಿ, ಎಂಬಂತಾಗಿಹುದು ನಿಮ್ಮ ಪರಿಸ್ಥಿತಿಯಿಂದು. ಕೊಳದಲ್ಲಿದ್ದ ತಾವರೆಗೆ ಕಮಲಬಾಂಧವನೆಂದೆನಿಸಿದ ರವಿಯು ನೀರಿನಿಂದ ಮೇಲಕ್ಕೆ ಬಂದ ಅದೇ ತಾವರೆಗೆ ಹೇಗೆ ಶತ್ರುವಾಗಿ ಪರಿಣಮಿಸುವನೋ ಅಂತೆಯೇ ಇಂದು ನಿಮ್ಮ ಬಂಧುಮಿತ್ರರೂ ಕೂಡ ಪ್ರತಿಕೂಲರಾಗಲಿರುವರು. ಕಫದೋಷದಿಂದ ದೇಹಾಲಸ್ಯ ಕಾಣಿಸುವದು. ವಿನಾಕಾರಣ ವಾಕ್ಕಲಹವಾಗಲಿದೆ. ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ ನಿಮಗೆ ತಾ. 19.20.23.24 ಸ್ವಲ್ಪ ಉತ್ತಮವಾಗಿ ಕಾಣಬಹುದು.

### ೯. ಧನು

ವಿರೋಧಿಗಳು ಎಷ್ಟೇ ಉಪಟಳವಿತ್ತರೂ ನೀವು ನಿಮ್ಮ ಕರ್ತವ್ಯದಿಂದ ಪರಾಙ್ಮುಖರಾಗಲಾರಿರಿ. ನಿಮ್ಮ ಶ್ರಮವು ಸಾರ್ಥಕವಾಗಲಿದೆ. ಧನಧಾನ್ಯಾದಿಗಳಿಗೆ ಏನೊಂದೂ ಕೊರತೆಯಿಲ್ಲದಾದರೂ ಮನೆಯಲ್ಲಿ ಕೆಲವೊಂದು ಅವ್ಯವಸ್ಥೆಯು ತಲೆದೋರಲಿದೆ. ನಿಮ್ಮ ಹೆಂಡತಿ ಮಕ್ಕಳೇ ನಿಮಗಿಂದು ವಿರೋಧವನ್ನುಂಟುಮಾಡಲಿರುವರು. ರಾಜಕೀಯ ರಂಗಕ್ಕೆ ಸದ್ಯ ಪ್ರವೇಶಿಸದಿರಿ. ತಾ. 19ರಿಂದ 22ರ ವರೆಗಿನ ದಿನಗಳು ಶ್ರೇಯೋದಾಯಿಗಳಾಗಿವೆ.

### ೧೦. ಮಕರ

ಆರ್ಥಿಕ ಪರಿಸ್ಥಿತಿಯು ಮಟ್ಟಿಗೆ ಸ್ವಲ್ಪ ಸುಧಾರಿಸಿರುವಿರಾದರೂ ಇತರ ವ್ಯವಹಾರಗಳು ಎಂದಿನಂತೆಯೇ ಇರುವವು. ನಿಮ್ಮ ಸುಖಭಾಗ್ಯಪಸಾದ ಕುಜನು ವ್ಯಯದಲ್ಲಿ ಕುಳಿತಿರುವುದರಿಂದ ವ್ಯರ್ಥ ಧನವ್ಯಯವಾಗುವುದಲ್ಲದೆ ಮನಸ್ಸಿಗೂ ನೆಮ್ಮದಿಯಿರಲೊಲ್ಲದು. ಭೂಸಂಬಂಧ ವ್ಯವಹಾರದಲ್ಲಿ ನಷ್ಟಪರಾಭವಗಳುಂಟಾದಾವು. ಮುಹಾತ್ಮರ ವಿರೋಧಕ್ಕೆ ಸಿಲುಕಿದ ನಿಮಗೆ ವಾರಾಂತ್ಯದ 4 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

### ೧೧ ಕುಂಭ

ಜನ್ಮಸ್ಥ ಶನಿಯೊಬ್ಬನನ್ನುಳಿದು ಇತರ ಎಲ್ಲರ ಕೃಪೆಗೆ ಪಾತ್ರರಾಗಿರುವ ನಿಮಗೆ ಯಾವ ಭಾಗದಲ್ಲೂ ಲೋಪದೋಷಗಳು ಕಂಡು ಬರಲಾರವು. ಜನಾನುರಾಗವಂ ಗಳಿಸಿದ ನಿಮಗೆ ಸರ್ವತ್ರ ವಿಜಯ ಕೀರ್ತಿಗಳು ಲಭಿಸಲಿವೆ. ಈ ಹಿಂದೆ ದೂರ ಸರಿದ ಬಂಧುಮಿತ್ರರು ತಾವಾಗಿ ಬಂದು ಸೇರಲಿರುವರು. ಸ್ವಂತ ಆರೋಗ್ಯದತ್ತ ಸ್ವಲ್ಪ ಹೆಚ್ಚಿನ ಗಮನವಿರಲಿ. ವಾರಾಂತ್ಯದ 3 ದಿನಗಳು ಕೀರ್ತಿ ವಿಜಯಗಳನ್ನು ಪಡೆವಿರಿ.

### ೧೨. ಮೀನ

ದುರ್ದೈವವೇ ಇಂದು ಮೂರ್ತಿವೆತ್ತಾಗಿ ಬಂದು ನಿಮ್ಮನ್ನು ಕಾಡುವದೋ ಎಂಬಂತಹ ಪರಿಸ್ಥಿತಿಯು ನಿಮ್ಮಲ್ಲಿಂದು ಕಂಡು ಬರಲಿದೆ. ವಿನಾಕಾರಣ ಬಂಧು ಜನರ ಕೂಡೆ ಕಲಹವಾಗಿ ಪರಸ್ಪರ ಅಗಲುವಿರಿ. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲವೆಂಬ ಗಾದೆಯಿದ್ದರೇ ಅದು ನಿಮ್ಮಲ್ಲಿಂದು ಹುಸಿಯಾಗಿ ಪರಿಣಮಿಸೀತು. ಏಳೂವರೆ ಶನಿಯ ಕಾಟದಿಂದಾಗಿ ನಿಮ್ಮ ತನುಮನಗಳಿಗೆ ಸ್ವಪ್ನದಲ್ಲೂ ಸುಖನೆಮ್ಮದಿಗಳಿಲ್ಲವೆಂದರೂ ತಪ್ಪಾಗದು. ವಾರಾದಿಯ 2 ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿ ಕಾಣಿಸುವದು.

---

ಬರುತ್ತಿದ್ದಾನೆ. ಅವರ ನಡಿಗೆಯನ್ನು ನೋಡುವುದರಲ್ಲೇ ಆಸಕ್ತನಾಗಿದ್ದಾನೆ. ಹಾಗೆಯೇ ಅಲ್ಲಿ ಜಾನಕಿಯು ನಡಿಗೆಯನ್ನು ನೋಡುವುದರಲ್ಲಿ ರಾಮು ಆಸಕ್ತನಾಗಿದ್ದಾನೆ. ನಾವು ಅವನನ್ನು ಕೇಳುವ", ಅಷ್ಟರ ವರೆಗೆ ತನ್ನ ಸಿರನ್ನು ಒಂದು ಒಳ್ಳೆಯ ಚತುರೋಕ್ತಿಗಾಗಿ ಕಾಪಾಡಿಟ್ಟುಕೊಂಡಿದ್ದ ಸಡು ಹರೆಯದವಳು ತನ್ನಭಿಪ್ರಾಯವನ್ನು ತಿಳಿಯಪಡಿಸಿದಳು.

"ಹಬ್ಬಿರುವ ಸುದ್ದಿಗಳ ಕುರಿತೂ ಜಾಣ್ಮೆಯಿಂದ ಅವನನ್ನು ಕೇಳು. ಜಾನಕಿಯು ರಾಮುವಿನ ಜಾತಿಯವಳಲ್ಲವೆಂದೂ, ಮಾಧ್ವ ಹೆಂಗಸೆಂದೂ, ಆಕೆಯನ್ನು ಒಂದು ಅನಾಥಾಶ್ರಮದಿಂದ ಕರೆದುಕೊಂಡು ಬಂದಿರುವರೆಂದಾಗಿಯೂ ಹಲವರು ಹೇಳುತ್ತಿದ್ದಾರೆ."

"ಅವಳು ಪ್ರಾಯ ಪ್ರಬುದ್ಧಳಾದ ಮೇಲೆ, ಅವರ ಮದುವೆ ಸುಧಾರಿತರ ಮದುವೆಯಂತೆ ನಡೆದಿರುವಂತಹದ್ದೋ ಎಂದೂ ಕೇಳು. ತಾಳಿಯನ್ನು ಕಟ್ಟಿದೊಡನೆ ಮಲಗಿಕೊಂಡು ಒಂದಾಗಿ ಉಳಿದರೋ ಎಂದೂ ವಿಚಾರಿಸು." ಆ ಗುಂಪಿನಲ್ಲಿದ್ದ ಅತಿ ಚಿಕ್ಕವಳು ಗಟ್ಟಿಯಾಗಿ ಕೇಳಿದಳು. ಆಕೆಯ ಅತ್ತೆಯು ಮೊಂಡುತನ ಹಾಗೂ ತರುಣ ದೇವನ ವಿಧೇಯತ್ವಗಳಿಂದಾಗಿ ಅವಳು ತನ್ನ ಗಂಡನನ್ನು ಸೇರಲು ನಾಲ್ಕು ವರ್ಷ ಕಾದಿದ್ದಳು.

"ಒಂದು ವೇಳೆ ಅವುಗಳೆಲ್ಲ ನಿಜವಾಗಿದ್ದರೂ, ಮುಂಗನಿಗೆ ಅವೆಲ್ಲ ಹೇಗೆ ಗೊತ್ತಾಗುತ್ತವೆ? ಪಾಪ! ಜಾನಕಿಯು ಇಲ್ಲ ಏನ ಕಳೆಯುವದು ಬಹು ಕಷ್ಟವೆಂದು ತಿಳಿದುಕೊಂಡಿಳು" ಸೀತೆಯು ತಗ್ಗಿದ ಸ್ವರದಲ್ಲಿ ವಿರೋಧವನ್ನು ವ್ಯಕ್ತಪಡಿಸಿದಳು.

(ಮುಂದುವರಿಯುವುದು)

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**ಸುಲಭದಲ್ಲಿ ಇಂಗ್ಲಿಷ್**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

**ಸುಲಭದಲ್ಲಿ ಪತ್ರಲೇಖನ**

**LETTER WRITING MADE EASY**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

**ಗೀತೆಯ ಕೈಗನ್ನಡಿ**

300 ಪುಟಗಳಿಗೂ ಮಿಕ್ಕಿವೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

# ನವಯುಗ

25—11—1965

lephone 226

೧೦ ಪೈಸೆ

ಧಾರಾವಾಹಿ ಕಾದಂಬರಿ

# ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ವರೆಗೆ—

ಪರಮ ಮಿತ್ರ ಕೇದಾರಿಯ ಪತ್ರದಿಂದ ಪ್ರಭಾವಿತನಾದ ಆಲನ್ತಿಯ ರಾಮಚಂದ್ರ ನಿಷ್ಠಾವಂತ ಒಕ್ಕಲು ಮುರುಗನ ಮನ ನೋಯಿಸಿ ಮದ್ರಾಸಿಗೆ ಹೋದನು. ಅಲ್ಲಿ ಕೇದಾರಿಯ ಮೂಲಕ ಜಾನಕಿಯ ಪರಿಚಯವಾಯಿತು. ಒಂದು ದಿನ ಜಾನಕಿಯು ರಾಮಚಂದ್ರನ ಕೈ ಹಿಡಿದಳು. ಬಿ. ಎ. ಓದುತ್ತಿದ್ದ ರಾಮಚಂದ್ರ ಪರೀಕ್ಷಾನಂತರ ತನ್ನೂರಿಗೆ ಸಪತ್ನೀಕನಾಗಿ ಮರಳಿದ. ನಗರದ ಸಂಕುಚಿತ ವಾತಾವರಣದಲ್ಲಿ ಬೆಳೆದಿದ್ದ ಜಾನಕಿಯ ಬಗ್ಗೆ ಊರ ಹೆಂಗಳೆಯರು ವಿವಿಧಾಭಿಪ್ರಾಯ ವ್ಯಕ್ತಪಡಿಸಿದರು. ಇದು ರಾಮಚಂದ್ರನ ಕಿವಿಗೆ ಬೀಳಲು ತಡವಾಗಲಿಲ್ಲ.

ಮುಂದೆ —

ಅಷ್ಟು ಹೊತ್ತಿನಲ್ಲಿ ಮುರುಗನು ಸೀತ ನಾಲಗೆಗಳಿಂದ ಕ್ರೀಡೆಯಾಡುತ್ತಿದ್ದ ಆ ಗುಂಪಿದ್ದ ಸ್ಥಳಕ್ಕೆ ಬಂದನು. ತುಂಟ ನಗೆಯಿಂದ ಎಲ್ಲರೂ ತನ್ನತ್ತ ನೋಡುತ್ತಿರುವದನ್ನು ಕಂಡ ಮುರುಗನಿಗೆ ಪರಿಸ್ಥಿತಿಯ ಅರಿವಾಯಿತು. ಅವನು ಮುಂದಿರುವ ಪ್ರಶ್ನೆಗಳಿಗೆ ಉತ್ತರ ಕೊಡಲು ಸಿದ್ಧನಾದನು.

"ಒಳ್ಳೇದು, ಮುರುಗ, ನಿನ್ನ ಹೊಸ ದೊರೆಸಾನಿ ಹೇಗೆ ಇದ್ದಾಳೆ?" ಒಬ್ಬಳು ಸ್ವಾಗತವನ್ನಿತ್ತಳು.

"ನಿನ್ನ ಹೊಸ ಹಸುವನ್ನು ಕೂಡಾ ನದಿಗೆ ತಂದುಬಿಟ್ಟೆ, ಅದು ನಾಚಿಕೆಪಡುವದಿಲ್ಲ; ಆದರೆ ನಿನ್ನ ಧನಿಯ ಪತ್ನಿ ಇನ್ನೂ ಇತ್ತ ಬಂದಿರುವದಿಲ್ಲ", ಇನ್ನೊಬ್ಬಳು ಟೀಕಿಸಿದಳು.

ಮುರುಗನು ಕುಹಕ ವ್ಯಂಗ್ಯಗಳತ್ತ ಲಕ್ಷ್ಯಕೊಡದೆ, ಧೈರ್ಯದಿಂದ ಸರಳ ಉತ್ತರವನ್ನಿತ್ತನು. "ಮೊದಲು ನಿಮ್ಮಂತೆ ನಾನೂ ದುಃಖಪಡುತ್ತಿದ್ದೆ, ಅಲ್ಲದೆ ಸಣ್ಣ ಅಮ್ಮನವರಿಗೆ ಕೇಡನ್ನು ಬಯಸುತ್ತಿದ್ದೆ. ನಿಜವಾಗಿ ಅವರು ಉದಾರಿ, ಉತ್ತಮ ಬುದ್ಧಿಶಾಲಿನಿ ಹಾಗೂ ವಿಚಾರ ಶಕ್ತಿಯುಳ್ಳ ಸ್ತ್ರೀ. ಹಳ್ಳಿ ಜೀವನ ಅವರಿಗೆ ಹೊಸತು. ಅವರು ಗಾಬರಿಯಾಗಿದ್ದಾರೆ. ನಿಜವಾಗಿ, ಇಂದು ಬೆಳಗ್ಗೆ, ನಿಮ್ಮೊಂದಿಗೆ ಸೇರಿ ಸ್ನಾನ ಮಾಡುವ ಆಶೆ ಅವರಿಗಿತ್ತು. ಆದರೆ ಅವರು ಅಪರಿಚಿತ ಹಾಗೂ ನಾಚಿಕೆಯುಳ್ಳವರಾದುದರಿಂದ ಸಾಧ್ಯವಾಗಲಿಲ್ಲ."

ಬಹಳ ಪ್ರಶ್ನೆಗಳು ಅವನ ಮೇಲೆ ದಾಳಿ ಮಾಡಿದುವು. ಅವುಗಳಿಗೆಲ್ಲ ಅವನ ಬಳಿ ಮುಂಚೆಯೇ ಯೋಚಿಸಿ ಸಿದ್ಧಪಡಿಸಿಟ್ಟುಕೊಂಡಿದ್ದ ಉತ್ತರಗಳಿರಲಿಲ್ಲ. ಅಲ್ಲದೆ ಅವನ ಹೊಸ ಹಸುವು ಸಳಸಳನೆ ಹರಿಯುತ್ತಿರುವ ನದಿಯನ್ನು ಹಾಗೂ ಅಲ್ಲಿದ್ದ ಹೆಂಗಸರನ್ನು ಕಂಡು ನೀರು ಕುಡಿಯಲು ಒಪ್ಪಲಿಲ್ಲ. ಹಾಗಾಗಿ ಮುರುಗನು ಒಡನೆ ಮನೆಯತ್ತ ಹಿಂತಿರುಗಿದನು.

"ನಾಳೆ ಅಲ್ಲಿಗೆ ಹೋಗಿ ನಾನವಳನ್ನು ನದಿಗೆ ಕರೆದುಕೊಂಡು ಬರುತ್ತೇನೆ. ವಾಹ್! ಅವಳೊಬ್ಬಂಟಿಗಳಿದ್ದಾಳೆ. ನಾನವಳನ್ನು ಪ್ರೀತಿಸುತ್ತೇನೆ." ಹೆಚ್ಚಾಗಿ ತನಗೆ ನೇ ಕೇಳುವಂತೆ ಸೀತೆಯು ಹೇಳಿದಳು.

ಸೀತೆಯು ಆ ಮಾತುಗಳನ್ನು ಇತರರಿಗಾಗಿ ಹೇಳಿಲ್ಲವಾದರೂ ಗಟ್ಟಿಯಾಗಿ, ಕೇಳುವಂತೆ ಹೇಳಿದ್ದಳು.

"ಬಡ ಸೀತೆಯು ಪಟ್ಟಣದ ಸ್ತ್ರೀಯರನ್ನು ಮತ್ತು ಗಂಡಸರನ್ನು ಪ್ರೀತಿಸುತ್ತಾಳೆ." ತನ್ನ ಪಕ್ಕದಲ್ಲಿದ್ದವಳಿಗೆ ನಡುಹರೆಯದಾಕೆ ಕಟುವಾಗಿ ಹೇಳಿದಳು. ಅವಳಿಗೆ ಮನಸ್ಸೆಳೆಯುವ ಜಗನ್ಮೋಹಿನಿ ಹಾಗೂ ರಸಿಕಳೆಂಬ ಖ್ಯಾತಿ ಒಂದು ಕಾಲದಲ್ಲಿ ಇತ್ತು. ಹಿಂದೆ ತನ್ನ ಆ ಯೌವನದ ಚೆಂದವನ್ನೆಲ್ಲಾ ವಿಲಾಸಿ ಸಾಹಸಗಳಿಗಾಗಿ ಉಪಯೋಗಿಸುತ್ತಿದ್ದಳು.

"ಸೀತೆಯ ಗಂಡ ಕಾಮುಕನಿದ್ದಾನೆ. ಕೆಲವಾರಗಳಿಂದವನು ಮನೆಯತ್ತ ಮುಖ ತೋರಿಸಿಯೇ ಇಲ್ಲ. ಬಡ ಹುಡುಗಿ! ಎರಡು ವರ್ಷಗಳ ಹಿಂದೆ, ಅರಳುತ್ತಿರುವ ಚೆಂಗುಲಾಬಿಯಂತೆ ಬಂದಳು. ಈಗ ಪ್ರೇಮದ ಕೊರತೆಯಿಂದ ಸೊರಗುತ್ತಿದ್ದಾಳೆ. ಮೊಗ್ಗೆಯೊಳಗೆ ಕ್ರಿಮಿ ನುಸುಳಿಕೊಂಡಿದೆ. ಈ ಕಪಟಿ ಗಂಡಂದಿರು ನಮ್ಮ ಅತ್ಯಂತ ಮೋಹಕ ವಸ್ತುಗಳಿದ್ದಾರೆ. ರಾಮುವಿನಂತಹ ಉದಾರಿ ಹಾಗೂ ಮನೋಹರ ತರುಣನನ್ನು ಅವಳು ಪ್ರೇಮಿಸಲು ಪ್ರಾರಂಭಿಸಿದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ಯಾರು ತಾನೆ ಹಾಗೆ ಮಾಡಲಿಕ್ಕಿಲ್ಲ? ಮೊದಲು ಅವನ ಮಡದಿಯನ್ನು ಮೆಚ್ಚಿಸಿಕೊಂಡು, ಅನಂತರ ಹಾಗೆ ಆತ್ಮೀಯತ್ವವಾಗಿ ಆರಂಭಿಸುತ್ತಾಳೆ."

"ರಾಮು ಬಲಶಾಲಿ ಹಾಗೂ ಸದ್ಗುಣಿ ಇದ್ದಾನೆ. ಅವನನ್ನು ಹೀಗೆಲ್ಲಾ ಆಕರ್ಷಿಸಲು ಸಾಧ್ಯವೇ ಇಲ್ಲ." ಪಕ್ಕದವಳು ತಿಳಿಸಿದಳು.

"ನಿನಗೆ ಸೀತೆಯ ಬಲದ ವಿಷಯ ಹಾಗೂ ನೀತಿಯ ಕುರಿತೇನೂಗೊತ್ತಿಲ್ಲ." ನಡುಹರೆಯದಾಕೆ ಸಂಕ್ಷಿಪ್ತವಾಗಿ ಮರುತ್ತರವನ್ನಿತ್ತಳು.

ಸೀತೆಯ ಕಿವಿಯ ಮೇಲೆ ಈ ಮಾತುಗಳೆಲ್ಲ ಬೀಳಲಿಲ್ಲವಾದರೂ ತನ್ನ ಕುರಿತು ಅವರು ಕೆಟ್ಟಮಾತುಗಳನ್ನಾಡುತ್ತಿದ್ದಾರೆಂದು ಅವಳು ತಿಳಿದುಕೊಂಡಳು. ಬೇಸರದಿಂದ ಹಾಗೂ ಕೆಣಕಿಸಲ್ಪಟ್ಟವಳಂತೆ ಆಕೆ ಮನೆಯತ್ತ ಹೆಜ್ಜೆ ಹಾಕಿದಳು.

ಅದೇ ಸಮಯದಲ್ಲಿ ಗುಂಪಿನ ಇನ್ನೊಂದು ಭಾಗದಲ್ಲಿ, ಒಬ್ಬಳು ಬಡ, ಹೊಟ್ಟೆಕಿಚ್ಚಿನ ಹೆಂಗಸು "ರಾಮು ದೊಡ್ಡ ಕಾಲದಲ್ಲಿ ಮುಳುಗಿದ್ದಾನಂತೆ–ಪೆರಿಯ ಸ್ವಾಮಿ ಅಯ್ಯರ್‌ರಿಗೆ ರಾಮುವಿನ ಭೂಮಿಯ ಮೇಲೆ, ಆದರಲ್ಲೂ ಮುರುಗನ ತೋಟದ ಮೇಲೆ ಕಣ್ಣಿದೆಯಂತೆ," ಎಂದು ಹೇಳಿದಳು, ಒಮ್ಮೆ ಅವಳು ಶ್ರೀಮಂತಳಾಗಿದ್ದಳು. ಈಗ, ಇತರರು ತೊಂದರೆಯಲ್ಲಿದ್ದಾರೆಂಬುದನ್ನು ಕೇಳುವದರಲ್ಲೇ ಆಕೆಗೆ ತೃಪ್ತಿಸಿಗುತ್ತಿತ್ತು.

"ಅವನು ಬಿ. ಎ ಕಲಿತಿದ್ದಾನೆ. ಸಂಪಾದಿಸಿ ಸಾಲದಿಂದ ಬಿಡುಗಡೆ ಹೊಂದುತ್ತಾನೆ. ಅವನು ಒಳ್ಳೆಯ ಹುಡುಗನಿದ್ದಾನೆ. ಒಳ್ಳೆಯ ನಕ್ಷತ್ರಗಳು ಅವನಿಗೆ ಕರುಣೆಯನ್ನು ತೋರಿಸಲಿ." ಸಂಪ್ರದಾಯಪ್ರಿಯೆ ಮುದುಕಿ ಹೇಳಿದಳು. ಕ್ರೀಡಾಪ್ರಿಯ ಜಲದೇವತೆಗಳ ಪ್ರಜಾಪ್ರಭುತ್ವ ಕಾಲದಲ್ಲೂ ಅವಳ ಮಾತುಗಳಿಗೆ ಭಾರವಿತ್ತು.

"ಹುಡುಗರಲ್ಲಿ ರಾಮು ಮುತ್ತು ಇದ್ದಾನೆ" ಹರೆಯದ ಸ್ತ್ರೀಯರೆಲ್ಲರೂ ಒಮ್ಮೆಲೆ ಒಂದೇ ಸ್ವರದಲ್ಲಿ ಹೇಳಿದರು. ಅದರಲ್ಲೂ ನಡುಹರೆಯದವಳ ಬೆಳ್ಳಿಸ್ವರ ಜೋರಾಗಿ ಕೇಳಿ ಬಂತು.

"ಜಾನಕಿಯು ಅದೃಷ್ಟವಂತೆ," ಎಲ್ಲಾ ತಾರುಣ್ಯದ ಹಾಗೂ ಇತ್ತೀಚೆಗೆ ಮದುವೆಯಾಗಿ ಬಂದಿರುವ ಹುಡುಗಿಯರೆಲ್ಲರೂ ಇನ್ನೊಂದು ಸ್ವರದಿಂದ ಪ್ರತಿಧ್ವನಿ ಕೊಟ್ಟರು.

ಎಲ್ಲರಿಂದಲೂ ಅಭಿನಂದನೆಯ ಪಲ್ಲವಿಯನ್ನು ಕೇಳಲು ಸೀತೆ ನದಿಯ ಬಳಿ ನಿಲ್ಲಲಿಲ್ಲ.

ನದಿ ದಡದಲ್ಲಿ ಸ್ವತಂತ್ರ ಪುಂಡಾಟಿಕೆಯ ಮತ್ತು ತುಚ್ಛ ಮಾತುಕತೆಗಳು ಹಾಗೆ ನಡೆಯುತ್ತವೆ. ಆ ವಾಕ್ ಪ್ರವಾಹವು ಪರ್ವತದಿಂದ ದಬದಬನೆ ಹರಿಯುವಜೋಗಿನ ಹಾಗೆ ಆಳವಿಲ್ಲದ ನದಿಯ ನೀರಿನಲ್ಲಿ ಹರಟೆಯು ಸಂತೋಷದಾಯಕವಿರುತ್ತದೆ. ಆ ನೀರು ಸ್ತ್ರೀ ರೂಪಗಳನ್ನು ಹಾಗೂ ಅವರ ಚಲನೆಗಳನ್ನು ಚೆನ್ನಾಗಿ ಬಿಂಬಿಸುತ್ತಿತ್ತು. ಹರಿಯುತ್ತಿದ್ದ ನೀರಿನಲ್ಲಿ, ಆಲನ್ತಿಯ ಅಬಲೆಯರು, ಜಲದೇವತೆಗಳಂತೆ, ಕ್ರೀಡಿಸುತ್ತಿದ್ದರು. ಹೊಯಿಗೆಯ ಹಾಸಿಗೆ ಮತ್ತು ಮೆತ್ತೆಯ ಮೇಲಿದ್ದ ಅವರ ಅಂದವಾದ ಪಾದಗಳಿಗೆ ಹರಿಯುತ್ತಿರುವ ಕಾವೇರಿಯ ಜಲ ಕಚಗುಳಿಯನ್ನುಂಟುಮಾಡಿ, ಸಂತೋಷವನ್ನೀಯುತ್ತಿತ್ತು. ಅವರು ಮಿತವಾಗಿ ಒಪ್ಪಿಯನ್ನು ಧರಿಸಿಕೊಂಡಿದ್ದರೂ ಮೀರಿದ ಸೀರೆಯಂಚು, ಸಂತೋಷದ ರೆಕ್ಕೆಗಳ ಹಾಗೆ, ಪ್ರವಾಹದಲ್ಲಿ ತೇಲಾಡುತ್ತಿದ್ದುವು. ವಕ್ರವಕ್ರವಾಗಿ ನದಿಯು ಆಡುತ್ತ, ನಲಿದಾಡುತ್ತ, ಮುಂದುವರಿಯುತ್ತಿತ್ತು. ಕಾವೇರಿಯ ಪವಿತ್ರೋದಕ ಬಂಗಾರದ ಧೂಳಿನಿಂದ ಹೊಳೆಯುತ್ತದೆ. ಅದಕ್ಕೆ ಚರ್ಮವನ್ನು ಮಖಮಲ್ಲಿನಂತೆ ಮೃದುವಾಗಿ ಮತ್ತು ಸುವರ್ಣದಂತೆ ನಯ ಮಾಡುವಂತಹ ದಿವ್ಯ ಗುಣವಿದೆ. ಅದು ಮಾತಾಡುವ ಧ್ವನಿಯನ್ನು ಹಾಗೂ ಶೈಲಿಯನ್ನು ಉದ್ರೇಕಿಸುತ್ತದೆ. ಅವರ ನಗೆ ಮತ್ತು ಮಾತುಗಳು ಗಾಳಿಯಲ್ಲಿ ಗಳಗಳ ಧ್ವನಿಯನ್ನುಂಟುಮಾಡುತ್ತಿದ್ದುವು. ಅವರು ಕೈಗಳಿಂದ ನೀರು ಸಿಡಿಯುವಂತೆ ಬಡಿಯುತ್ತಿದ್ದರು, ಹಾಗೆ ಮುಳುಗಿ ಮೃದು

(ಹದಿನೈದನೇ ಪುಟ ನೋಡಿರಿ)


# 8%

## ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | | ಸೇಕಡಾ |
|---|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ | .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ | .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ | .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ | .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ | .... .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ | .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ | .... .... | 7½ |
| 84 ತಿಂಗಳಿಂದ | 120 ತಿಂಗಳ ಕೆಳಗೆ | .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | | ... ... | 4 |

## ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

# ನವಯುಗ

| ಸಂಪುಟ ೪೫ | ಉಡುಪಿ | Vol. 45 |
| --- | --- | --- |
| ಸಂಚಿಕೆ ೧೨ | ೨೫—೧೧—೧೯೬೫ | No. 12 |



Telephone 226.

Estd. 1921

**NAVAYUGA**

Leading Kannada Weekly

UDIPI, S. Kanara

ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

**ಉಡುಪಿ, ದ. ಕನ್ನಡ.**

++

ಸಂಚಾಲಕ—ಸಂಪಾದಕ:

**ಕೆ. ಹೊನ್ನಯ್ಯ ಶೆಟ್ಟಿ**

++

**ವಾರ್ಷಿಕ ಚಂದಾ:**

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

**ಜಾಹೀರಾತು ದರಗಳು:**

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++


## ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

**ಚಂದಾದಾರರಿಗೆ—**

ಚಂದಾಹಣವನ್ನಾಗಲೀ ಜಾಹೀರಾತಿನ ಹಣಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ್ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

— ಮುಖಪತ್ರದಲ್ಲಿ: —

ಶ್ರೀ ಕ್ಷೇತ್ರ ಧರ್ಮಸ್ಥಳದ
ಸರ್ವಾಂಗೀನ ಅಭಿವೃದ್ಧಿಯನ್ನೇ
ಉಜ್ವಲ ಧ್ಯೇಯವನ್ನಾಗಿರಿಸಿಕೊಂಡ
ಮಹಾ ಯೋಜಕ, ಸಾಧಕ
ಧರ್ಮಾಧಿಕಾರಿ
ಶ್ರೀ ಡಿ. ರತ್ನವರ್ಮ ಹೆಗ್ಗಡೆ

## ಭುಟ್ಟೋ ರಶ್ಯಾಕ್ಕೆ....?

ಭಾರತ—ಪಾಕಿಸ್ತಾನಗಳ ನಡುವೆ ಹೋರಾಟವಿನ್ನೂ ನಿಂತಿಲ್ಲ. ಭದ್ರತಾ ಸಮಿತಿಯ ಗೊತ್ತುವಳಿಯನ್ನು ಅಯ್ಯೂಬಖಾನ್ ಒಪ್ಪಿದ್ದಾರೆ; ಆದರ ಬೆನ್ನಲ್ಲೇ ಉಲ್ಲಂಘನೆಯನ್ನೂ ಮಾಡುವಲ್ಲಿ ಅಗ್ರೇಸರರಾಗಿದ್ದಾರೆ. ಪ್ರತಿ ವಲಯದಲ್ಲಿಯೂ ಪ್ರತಿ ದಿನವೂ ಒಂದಾದರೂ ಉಲ್ಲಂಘನೆಯಾಗದಿಲ್ಲ. ಸಶಸ್ತ್ರ ಹೋರಾಟವನ್ನು ನಿಲ್ಲಿಸುವ ಇರಾದೆ ಪಾಕ್ ನಾಯಕರಿಗೆ ಇಲ್ಲವೆಂಬುದಕ್ಕೆ ಬೇರೆ ಉದಾಹರಣೆಗಳು ಬೇಡ. ಭಾರತದೊಳಗೆ ನುಗ್ಗಿಸಿದ ಸಶಸ್ತ್ರ ಬಂಡುಗಾರರ ಸಮೇತ ಸೇನಾ ಪಡೆಯನ್ನು ಒಮ್ಮೆ ಪಾಕಿಸ್ತಾನವು ಕಾಶ್ಮೀರದಿಂದ ಹಿಂದೆ ಕರೆದುಕೊಂಡರೆ ಮತ್ತೆ ನುಗ್ಗಿಸಲು ಸಾಧ್ಯವಿಲ್ಲ—ಈ ಕಾರಣದಿಂದಲೇ ಭುಟ್ಟೋ—ಅಯ್ಯೂಬರು ಆದಕ್ಕೆ ಸಿದ್ಧರಿಲ್ಲ. ಸದ್ಯದ ಯುದ್ಧದಲ್ಲಿ ಸೋತ ಸೇನೆಯ ನಿಯಂತ್ರಣವೂ ಈ ನಾಯಕರಿಂದ ಸಾಧ್ಯವಿಲ್ಲ ಎಂಬಂತಾಗಿದೆ. ಅಪಮಾನದ ಹೊರೆಯನ್ನು ಹೊತ್ತ ಪಾಕ್ ರಾಜಕೀಯ ನರಿಗಳೂ ಸೇನೆಯೂ ಅದನ್ನು ಮುಚ್ಚುವ ಸಾಹಸ ತೋರಿಸ ತೊಡಗಿವೆ.

ಬ್ರಿಟನ್ ಮತ್ತು ಅಮೆರಿಕೆಗಳ ಬೆಂಬಲ ಪಡೆದಿರುವ ಪಾಕ್ ಭುಟ್ಟೋ ಭದ್ರತಾ ಸಮಿತಿಯ ವೇದಿಕೆಯಲ್ಲಿ ನಾಟಕವಾಡಿದರು. ಇದನ್ನು ಮೆಚ್ಚಿಯಾದರೂ ತಮ್ಮ ಮಾನವನ್ನು ಅದು ಉಳಿಸಬಹುದೆಂದು ಅವರು ನಂಬಿದ್ದರು. ಅದು ನಿರಾಶೆಯಲ್ಲೇ ಕೊನೆಗೊಂಡಿತು. ಸ್ವಯಂ ಅಮೆರಿಕೆಯೂ ಕಾಶ್ಮೀರದಲ್ಲಿ ಜನಮತಗಣನೆಯು ಅವ್ಯವಹಾರ್ಯವೆಂದು ಹೇಳಲಾರಂಭಿಸಿದೆ. ಹಾಗಿರುವಾಗ ಭುಟ್ಟೋ ನ್ಯೂಯಾರ್ಕಿನಿಂದ ಬರಿಗೈಯಲ್ಲೇ ಮರಳಿ ಬಂದರು. ತನ್ನ ಸೇನೆಯೂ ಸಶಸ್ತ್ರ ಬಂಡುಗಾರರೂ ಕಾಶ್ಮೀರದೊಳಗಿರುವಾಗಲೇ ಜನಮತಗಣನೆಯ ಬಗ್ಗೆ ಏರ್ಪಾಡು ಮಾಡಿ ಮೋಸದಿಂದ ಕಾಶ್ಮೀರ ಕಬಳಿಸುವ ಅವರ ಹೇರಾಸೆ ಹಾರಿ ಹೋಯಿತು. ಅಂತೂ ಭದ್ರತಾ ಸಮಿತಿಯಲ್ಲಿ ಅವನ್ನ ಬೇಳೆ ಬೇಯುವುದಿಲ್ಲ ಎಂಬುದನ್ನು ಅವರು ಕಂಡುಕೊಂಡರು. ಭಾರತದ ಮೇಲೆ ಆಹಾರಿಕ-ಆರ್ಥಿಕ ಒತ್ತಡವನ್ನು ಹಾಕಬಹುದು ಎಂಬ ಅವರ ಕನಸು ಕನಸಾಗಿಯೇ ಉಳಿಯಿತು. ಹತಪ್ರಭರಾದ ಅಯ್ಯೂಬ್ ಭುಟ್ಟೋ ಮನೆಗೆ ಬೆಂಕಿ ಹಚ್ಚಿ ಈಗ ನೀರಿಗಾಗಿ ಹೊಯ್ದಾಡುತಿದ್ದಾರೆ. ಉರಿದ ಬೆಂಕಿಯನ್ನು ನಂದಿಸದೆ ಹೋದರೆ, ಅವರ ಅಧಿಕಾರ ಉಳಿಯುವಂತಿಲ್ಲ. ದೇಶದ ಜನತೆ ತೀವ್ರ ಅಸಮಾಧಾನ ತಳೆದಿದೆ. ಪೂರ್ವದಲ್ಲಂತೂ ದಂಗೆಯೆದ್ದಿದೆ. ಬಲೂಚಿಗಳು, ಫಖ್ತೂನಿಗಳು ಎದುರು ಬಿದ್ದಿದ್ದಾರೆ. ಹೌಹಾಕಾರ ದಿಗಂತವ್ಯಾಪಿಯಾಗಿದೆ. ಹಾಗಿರುವಾಗ ತಮ್ಮ ಮುಖವುಳಿಸಲು ಭುಟ್ಟೋ ಪ್ರತಿನಿಧಿ ಸಭೆಯಲ್ಲಿ ಘೋಷಿಸಿದರು—'ಭಾರತದೊಡನೆ ಸಾವಿರ ವರುಷ ಯುದ್ಧ ನಡೆಸುತ್ತೇವೆ; ಇನ್ನೊಮ್ಮೆ ಕದನ ಆರಂಭವಾದರೆ ಅದು ಭಾರತದ ನೆಲದಲ್ಲಿಯೇ"—ನಿಜ. ಪಾಕ್ ಪ್ರಜೆಗಳನ್ನು ತಪ್ಪು ದಾರಿಯಲ್ಲಿ ಒಯ್ಯದಿದ್ದರೆ, ಇವರು ಬದುಕುಳಿಯುವುದೂ ದುಸ್ತರ.

ಅಯ್ಯೂಬ್—ಭುಟ್ಟೋರವರಿಗೆ ಇಂದು ಭದ್ರತಾ ಸಮಿತಿಯ ಮೇಲೆ ವಿಶ್ವಾಸವಿಲ್ಲ. ಅದರ ಸಹಾಯದಿಂದ ಕಾಶ್ಮೀರದ ತಿಲಾಂಶವಾದರೂ ಕಬಳಿಸುವುದು ಸಾಧ್ಯವಿಲ್ಲವೆಂದವರು ಅರಿತಿದ್ದಾರೆ. "ಕಾಶ್ಮೀರ"ವಿಲ್ಲವಾದರೆ ಪಾಕ್‌ನಲ್ಲಿ ರಾಜಕಾರಣವೇ ಇಲ್ಲ; ಅಯ್ಯೂಬ್— ಭುಟ್ಟೋರಿಗೆ ಸ್ಥಾನವೂ ಇಲ್ಲ. ಆದುದರಿಂದ ಅವರಿಗೆ ಅಧಿಕಾರದಲ್ಲಿ ಉಳಿಯಲು ಕಾಶ್ಮೀರ ಬೇಕು ಎರಡು ತಿಂಗಳು ಮೊದಲು ಭಾರತ-ಪಾಕ್ ಭಿನ್ನಾಭಿಪ್ರಾಯವನ್ನು ಪರಿಹರಿಸಲು ರಶ್ಯ ತಾನು ಸಿದ್ಧವೆಂದು ಹೇಳಿತಾಗ. ಅದರ ಹೇಳಿಕೆಯನ್ನು ನಿರಾಕರಿಸಿದ ಭುಟ್ಟೋ—ಅದಕ್ಕೆ ಕಾರಣವೂ ಇದೆ. ರಶ್ಯಾ ಭಾರತದ ಮಿತ್ರ; ಕಾಶ್ಮೀರ ನೀತಿಯ ಪ್ರಶಂಸಕ. ಭುಟ್ಟೋರಿಗೆ ಆಂಗ್ಲೋ ಅಮೆರಿಕನ್ನರ ಮೇಲೆ ಹೆಚ್ಚು ವಿಶ್ವಾಸವಿತ್ತು—ಈಗ ರಶ್ಯದತ್ತ ಹೊರಡಲಿದ್ದಾರೆ. ಯಾರೂ ಆಗ ಬಹುದು, ಹೇಗೂ ಆಗ ಬಹುದು, ನಮಗೆ ಕಾಶ್ಮೀರದ ಹೆಸರೆತ್ತಲು ಅವಕಾಶ ಕಲ್ಪಿಸಿ ಕೊಡಿರಿ ಎಂದು ಅಂಗಲಾಚುವ ದೀನ ಭುಟ್ಟೋರ ಪರಿಸ್ಥಿತಿ ದಯನೀಯವಾಗಿದೆ. ಇದಕ್ಕೆ ಭಾರತದ ದೃಢ ನಿಲುವೆ ಕಾರಣ. ಪಾಕಿಸ್ತಾನದೊಂದಿಗಿನ ಹೋರಾಟದ ವಿಷಯದಲ್ಲಿ ನಾವು ತಳೆದ ಧೋರಣೆಯಿಂದ ಎಳ್ಳನಿತೂ ನಾವು ಕದಲಬಾರದು. ಜತೆಗೆ ಪಾಕ್ ಆಟೋಪಗಳಿಂದ ಬೆದರದೆ ನಮ್ಮ ಕರ್ತವ್ಯದಲ್ಲಿಯೇ ಲೀನರಾಗ ಬೇಕು.

ಮೇಸ್ಕೋವಿನಿಂದಲೂ ಭುಟ್ಟೋ ನೆಮ್ಮದಿಯಿಂದ ಮರಳುವರೆಂದು ಹೇಳ ಬರುವುದಿಲ್ಲ. ಕಾಶ್ಮೀರವು ಭಾರತದ ಒಂದು ರಾಜ್ಯವೆಂಬ ಭಾರತೀಯ ನೀತಿಯನ್ನು ಮನ್ನಿಸುವ ರಶ್ಯ ಈ ವಿಷಯದಲ್ಲಿ ಭುಟ್ಟೋರಿಗೆ ಸಮಾಧಾನದ ಮಾತುಗಳನ್ನಾಡುತ್ತದೆಂದು ಹೇಳುವಂತಿಲ್ಲ. ಚೀನೀಯ ಆಪ್ತಾಯವನ್ನು ಒತ್ತಿ ಹೇಳಿ, ಕಾಶ್ಮೀರದ ಆಸೆಯನ್ನು ಬಿಟ್ಟುಬಿಡುವಂತೆ ಅದು ಉಪದೇಶಿಸಬಹುದು. ಇದು ಅಪ್ರಿಯವಾದುದರಿಂದ, ಭುಟ್ಟೋ ತಳಮಳಿಸಿಯೇ ರಾವಲ್ಪಿಂಡಿಗೆ ಮರಳಿ ತಲೆಕೆರೆದುಕೊಳ್ಳಬಹುದು. ಆಗ ಅವರಿಗಿರುವ ಉಪಾಯವೆಂದರೆ, ಮತ್ತೊಮ್ಮೆ ಆಕ್ರಮ ಯುದ್ಧ ಮಾಡುವುದು ಮಾತ್ರ. ಇದು ಸಾವಿರ ವರ್ಷಗಳ ವರೆಗೆ ಮುಂದುವರಿಯಬಹುದೆಂದು ಅವರ ಕಲ್ಪನೆ. ಆದರೆ ನಮಗೆ ಹಾಗನಿಸುವುದಿಲ್ಲ. ಪರದೇಶೀಯ ಶಸ್ತ್ರಾಸ್ತ್ರಗಳ ಸಹಾಯವಿಲ್ಲದೆ ಅವರು ಸಾವಿರ ದಿವಸವೂ ಹೋರಾಡುವಂತಿಲ್ಲ ಅಂತೂ ಭಾರತೀಯರಿಗೆ ವಿರಾಮವೆಂಬುದಿಲ್ಲ. ಪಾಕ್ ಇನ್ನೊಮ್ಮೆ ಆಕ್ರಮಣ ಮಾಡಬಹುದು. ಅವರ ಮೇಲೆ ಸಹಾನುಭೂತಿ ತೋರಿಸುವವರ ನಮ್ಮ ಮೇಲೆ ಬಗೆ ಬಗೆಯ ಒತ್ತಾಯ ಹೇರಲು ಪ್ರಯುಕ್ತಿಸಬಹುದು. ನಾವು ಇನ್ನೂ ಅನೇಕ ತರಹದ ಗಂಭೀರ ಪರಿಸ್ಥಿತಿಯನ್ನು ಎದುರಿಸಬರಬೇಕಾಗಬಹುದು. ರಾಷ್ಟ್ರಪತಿ ಡಾ। ರಾಧಾಕೃಷ್ಣನ್ ಈ ಸಂಬಂಧದಲ್ಲಿ ಇತ್ತ ಎಚ್ಚರಿಕೆ ಸಮಯೋಚಿತವಾದುದು ಸಕಾಲಿಕವಾದುದು. ಆ ಬಗ್ಗೆ ಎಲ್ಲ ಭಾರತೀಯರೂ ಗಮನ ಹರಿಸಬೇಕು: "ಪಾಕಿಸ್ತಾನವು ನಮ್ಮ ಮೇಲೆ ಮತ್ತೊಮ್ಮೆ ಆ ಶೀಘ್ರದಲ್ಲೇ ಆಕ್ರಮಣ ಮಾಡಬಹುದು. ಆದಕ್ಕೆ ತಕ್ಕ ಸಿದ್ಧತೆಯಲ್ಲಿರುವುದು ನಮ್ಮ ಆದ್ಯ ಕರ್ತವ್ಯ."


**ವಚನ ಸ ಧೆ**

ತಥೈವ ಯೋಗವಿಹಿತಂ
ಯತ್ತು ಕರ್ಮ ನ ಸಿಧ್ಯತಿ
ಉಪಾಯ ಯುಕ್ತಂ ಮೇಧಾವೀ
ನ ತತ್ರ ಗ್ಲಪಯೇನ್ಮನಃ

ಸದುಪಾಯಗಳ ಉಪಯೋಗದಿಂದ, ಜಾಗರೂಕತೆಯಿಂದ ಮಾಡಿದ ಯಾವುದೇ ಕಾರ್ಯವು ವಿಫಲವಾದರೆ, ಬುದ್ಧಿವಂತನಾದವನು ಮನಸ್ಸಿನಲ್ಲಿ ಚಿಂತಿಸುವುದಿಲ್ಲ (ಅಲ್ಪ ಚೇತನನು ಮಾತ್ರ ಪರದಾಡುತ್ತಾನೆ.)


## ತಿಳುವಳಿಕೆ ಹೆಚ್ಚಿದೆ

ಭಾರತದಲ್ಲಿನ ಅಮೆರಿಕನ್ ರಾಯಭಾರಿ ಚೆಸ್ಟರ್ ಬೌಲ್ಸ್ ಭಾರತದ ನೀತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಂತಿದೆ. ಅವರು ಅಮೆರಿಕನ್ ಸೆನೇಟಿನ ಸದಸ್ಯರೊಬ್ಬರಿಗೆ ಬರೆದ ಪತ್ರದಲ್ಲಿ ಭಾರತಕ್ಕೆ ನೀಡುವ ಸಹಾಯವನ್ನೂ ರಾಜಕಾರಣವನ್ನೂ ಕಲ್ಲು ಬೆರಕೆ ಮಾಡಬಾರದೆಂದು ಉಚ್ಚರಿಸಿದ್ದಾರೆ. ಯಾವುದೇ ಶರ್ತವನ್ನು ಹೇರಿ ನೀಡುವ ಸಹಾಯವನ್ನು ಭಾರತವು ನಿರಾಕರಿಸ ಬಹುದೆಂದೂ ಅಂತಹ ಆತ್ಮಬಲ ಭಾರತೀಯರಲ್ಲಿ ಇಂದು ಅಧಿಕವಾಗಿದೆಯೆಂದೂ ಹೇಳಿರುವರು. ಮೊನ್ನೆ ಒಂದು ಉಪನ್ಯಾಸ ಗೋಷ್ಠಿಯಲ್ಲಿ ಮಾತನಾಡುತ್ತ ಸಹಾಯ ಮತ್ತು ರಾಜಕಾರಣ


(ಹದಿನಾಲ್ಕನೇ ಪುಟ ನೋಡಿರಿ)


## ನರಸಣ್ಣನ ಸರಸ



"ಮುಂದಿನ ತಿಂಗಳ ಕೊನೆಯ ವಾರದಲ್ಲಿ ನಮ್ಮ ಶಾಲೆಯ ಎಲ್ಲಾ ಮಕ್ಕಳಿಗೆ ಪಠ್ಯ ಪುಸ್ತಕ ಪೂರೈಸುತ್ತಾರಂತಪ್ಪಾ...."

ಗೇಹೆ ರಾಜ್ಯದಲ್ಲಿ

# ಕಲ್ಯಾಣ, ರಂಜನೆ, ಪರಿಚಯ



"ನೋಡಿ, ಇಲ್ಲಿ ಕೇಳೀಂದ್ರೆ....'

"ಕೇಳ್ತಲೇ ಇದ್ದೇನೆ...."

"ಅದು ನನಗೂ ಗೊತ್ತು. ಆದ್ರೆ .."

"ಏನಂತೆ....?"

'ನಾನನ್ನೋ ಮಾತನ್ನ ತುಸು ಧ್ಯಾನ ಒಂದ ಕೇಳೀಂದ್ರೆ...."

"ಮತ್ಯಾರ ಮಾತನ್ನೇ ನಾನು ಕೇಳ್ತಾ ಇರೋದು?'

'ಅಲ್ರೆ, ಕೈಯಲ್ಲಿ ಪುಸ್ತಕ ಹಿಡ್ಕೊಂಡು ಏನನ್ನೋ ಓದ್ತಾ ಇರೋವಾಗ...."

"ಏನಾಯಿತೀಗ?"

"ನನ್ನ ಮಾತನ್ನ ಕಿವಿಗೆ ಹಾಕಿ ಕೋಳ್ತೀರಿ ಹೇಗೇಂತ?"

'ಅದೆಲ್ಲಾ ನಿನಗೇಕೇಂತ?"

"ಮತ್ತೆ ನನ್ನ ಮಾತು ಅರಣ್ಯರೋದನ...."

"ಅಯ್ತಪ್ಪ, ಮುಗೀತಲ್ಲಾ, ಇನ್ನಾದ್ರೂ ಹೇಳಬಹುದಲ್ವೆ? ಕತೆಯೇನೂಂತ?"

"ಹ್ಞಾಂ, ಮತ್ತೇನಿಲ್ಲಾ, ನೋಡಿ, ನಾಳದು ಲಕ್ಷದೀಪವಂತೆ .."

"ಯಾರು ಹೇಳಿದ್ರು?"

"ಮತ್ಯಾರು ಹೇಳೋದು ತಂದೆಯವ್ರು ಬಂದಿದ್ರು, ಈವತ್ತು....'

"ಸರಿ ಹಾಗಾದ್ರೆ.... ಒಂದು ಯಾತ್ರೆ ಮಾಡೋದಕ್ಕಿದೇಂತಾಯ್ತು...'

'ಮಾಡೋದಕ್ಕಿದ್ರೂ ಮಾಡೋದುಂಟೆ?'

'ಅಯ್ಯೋ, ಯಾರು ಬೇಡಾಂತಾರೆ?'

'ಹಾಗಾದರೆ, ಅಪ್ಪಣೆ ಸಿಕ್ಕಂತಾಯ್ತು. .'

"ಹ್ಞಾಂ, ಹಾಗೇಂತ ಇಟ್ಕೊಕೋ...'

'ಅಂದ್ರೆ ಹೋಗಬಹುದಲ್ಲಾ ..."

'ಯಾರು ಬೇಡಾಂತಾರೆ' ಆದ್ರೆ ನೋಡು, ನಮ್ಮೂರಿನ ಲಕ್ಷದೀಪಕ್ಕಿಂತ್ಲೂ ಅದೇನು ದೊಡ್ಡದೂಂತ?'

'ಶುರುವಾಯ್ತು ನಿಮ್ಮದೊಂದು. ಅಲ್ರಿ, ನಿಮಗೆ ನಿಮ್ಮೂರಿನ ಉತ್ಸವ ಜಾತ್ರೆಗಳೇ ಚಂದ...."

'ಅದ್ರಲ್ಲಿ ವಿಶೇಷವೇನೂಂತ? ನಮ್ಮೂರು, ನಮ್ಮೂರಿನದ್ದು ಎಲ್ಲವೂ ಚಂದವೇ ಅಲ್ವೇ?"

"ಹೌದಪ್ಪ, ಅವಕ್ಕೆಲ್ಲಾ 'ನಮ್ದೂ' ಅನ್ನೋ ವಿಶೇಷಣ ಸೇರಿಕೊಂಡಿದೆ ತಾನೆ?'

'ಅಲ್ವಾದ್ರೆ, ನಿಮ್ಮೂರ ದೀಪ ಅಂದ್ರೆ ಯಾಕೆ ಅಷ್ಟು ಆತುರ?"

'ಯಾಕೇಂದ್ರೆ? ತವರ್ಮನೆಗೆ ಹೋಗೋದಕ್ಕೊಂಡು ಅವಕಾಶಾಂತನ್ನಿ...'

"ಅದು ಸರೀನ್ನು.... ನಮ್ಮ ಹಿಂದಿನವ್ರು ಮತ್ತೇನು ಮಾಡಿದ್ದಾರೋ ಇಲ್ವೋ, ಒಂದು ಮಾತ್ರ ಮಾಡಿಟ್ಟಿದ್ದಾರೆ...'

"ಯಾವುದನ್ನ?"

'ಖರ್ಚಿನ ದಾರಿಯನ್ನ ಸಾಫಾಗಿ ಇಟ್ಟಿದ್ದಾರೆ.'

'ಬೇಡಪ್ಪಾ, ನೀವು ಅಷ್ಟೆಲ್ಲಾ ಅಂದುಕೊಂಡು, ನನ್ನನ್ನ ಕಳಸೋದೂ ಬೇಡ...'

'ಅಂದ್ರೆ ಕರೆದುಕೊಂಡು ಹೋಗಬೇಕೂಂತೀಯ?'

"ಅದೆಲ್ಲಾ ಗತಕಾಲದ ಕತೆಯಾಯ್ತು....'

'ಯಾಕೆ?"

"ಅಲ್ಲಾ ತಿಳಿತಿಳಿದೂ ಯಾಕೇಂತೀರಲ್ಲಾ?"

"ಮತ್ತೆ ನಿನ್ನ ಮುಖದಿಂದ ಇಂತಹ ಮಾತಿನ ಬಾಣಗಳು ಹೊರಡುವಾಗ ..."

"ಸಾಕು ಬಿಡೀಂದ್ರೆ....ಅಲ್ಲಾ ನೀವು ನನ್ನನ್ನ ಎಷ್ಟು ಬಾರಿ ಕರಕೊಂಡು ಹೋಗಿದ್ದೀರೀಂತಾಗ ಬೇಕಲ್ಲಾ ..."

"ಹೌದಮ್ಮ ಹೌದು ಎಲ್ಲಿಗೂ ಇಲ್ಲಾನ್ನು..."

"ಖಂಡಿತಕ್ಕೂ....ನೋಡಿ. ನಾನು ನಿಮ್ಮೂರಿಗೆ ಬಂದು ವರ್ಷ ಮೂರು ಆಗ್ತಾ ಬಂತು."

"ಆಗ್ಲಿ, ಇನ್ನೊಂದು ಕಳೆದ್ರೆ ನಾಲ್ಕು ಆಗ್ತಾ ಬರುತ್ತದೆ...."

"ಮತ್ತೆ ಶುರು ಮಾಡಿದ್ರಲ್ಲಾ ಪುರಾಣವನ್ನ ..."

'ಹೌದು, ನಾನನ್ನೋ ನೂತು ನಿನಗೆ ಪುರಾಣವೂ ಆಗ್ತದೆ, ಹಂಕತೆಯೂ ಆಗ್ತದೆ..."

'ಅದೆರಡೂ ಅಲ್ರಿ...'

"ಮತ್ತೆ..."

"ವ್ಯಾಖ್ಯಾನ ಅನ್ನಿಸ್ತದೆ...."

"ಅಂದ್ರೆ....!"

"ಅಂದ್ರೆ ಏನು? ಹೇಳ್ತಾರೆ ನೋಡಿ, ಬರೀ ಗುಲ್ಲು ನಿದ್ದೆಗೇಡೂಂತ... ?"

'ಪಾಪ, ನಿನ್ನ ಮಾತಾದ್ರೆ ಅಮೃತದ ಬಿಂದುಗಳೂಂತ ತಿಳ್ಕೊಂಡಿದ್ದೀಯೇನು?"

"ಅದೆಲ್ಲಾ ಇರ್ಲಿ, ಈಗ ಕೇಳಿದ್ದಕ್ಕೆ ಉತ್ತರಕೊಡಿ'"

"ಯಾವುದಕ್ಕೆ?"

"ಅಲ್ರಿ, ನಿಮ್ಮ ಮುಂದೆ ಎಷ್ಟು ಬಡ್ಕೊಳ್ಬೇಕೂಂತ?"

"ಬೇಡ್ವೆ, ಎದೆ ಬಡ್ಕೊಳ್ಳೋದೂ ಬೇಡ, ತಲೆ ಬಡ್ಕೋಳ್ಳೋದೂ ಬೇಡ. ನಿನ್ನ ಕೈಕಾಲು ಬಡ್ಕೊಳ್ಳೋದೂ ಬೇಡ!"

"... ....'

"ಏನು? ಸುಮ್ಮನಾಗಿ ಬಿಟ್ಟೆ?"

'ಆಗ್ಲಿ, ನಿಮ್ಮದೇ ಪುರಾಣ...."

"ನೋಡು, ಮತ್ತೆ ಮತ್ತೆ ಪುರಾಣ ಗಿರಾಣಾಂತ ಅನ್ತಿ..."

"ಅದ್ಕೇ ನೋಡಿ, ನಾನು ಬಾಯ್ಮುಚ್ಚಿ ಸುಮ್ಮನೆ ಕೂತದ್ದು?"

'ಬಾಯಿಬಾರದೇ ಇರೋರು ಮಾತ್ರಾಡ್ಬೇಕೂಂತ ಹಠ ಹೊರ್ತಾರೆ. ಹಾಗಿರುವಾಗ, ..."

"ಆಯ್ತಪ್ಪ ಹೊರಡ್ಲಿ ..."

"ಎಲ್ಲಿಗೆ?"

'ಏನೋ ದೀಪಕ್ಕೆ ಹೋಗಬೇಕು ಅಂದಿಯಲ್ಲಾ?'

"ಖಂಡಿತಕ್ಕೂ?'

'ಖಂಡಿತಕ್ಕೂ...."

"ಅಯ್ಯಬ್ಬ... ಇಂದಾದ್ರೂ ....ಅದಿರ್ಲಿ, ಈಗ ನಿಮ್ಮನ್ನು ನಂಬಬಹುದೇಂತ ..."

"ಅಲ್ವೇ, ಮತ್ಯಾರನ್ನ ನಂಬುತ್ತೀಯಾ ನೀನು?"

"ಹ್ಞಾಂ.."

'ಏನು ಅಷ್ಟರಲ್ಲೇ ಸುಮ್ಮನಾದೆ?"

'ಮತ್ತೆ ನಾನೊಂದು ಅಂದ್ರೆ ನೀವು ಮತ್ತೇನೋ ಅನ್ನೋಕೆ ತೊಡಗಿದ್ರೆ...."

'ಮೇಲೆ ನೋಡಿ ಉಗುಳಿದ್ರೆ..."

'ನಂಮುಖಕ್ಕೇನೇ ಬೀಳೋದು..."

"ಅದು ಹೌದೂನ್ನು ..."

"ಮತ್ಯಾವುದು ಅಲ್ಲ?"

"ಎಲ್ಲವೂ ಹೌದು...ಆದ್ರೆ ನೋಡು, ಈ ತುರ್ತುಪರಿಸ್ಥಿತಿಯಲ್ಲೂ ದೀಪ ಗೀಪಾಂತ ಯಾಕೆ ಹಣ ಪೋಲುಮಾಡ್ತಾರೇಂತ?"

'ಎಲ್ಲಾ ಬಿಟ್ಟ ಮಗ ಭಂಗಿನೆಟ್ಟ ಅಂದ ಹಾಗಾಯ್ತು...'

"ಯಾಕೆ?"

"ಅಲ್ಲಾ ಎಲ್ಲವನ್ನೂ ಬಿಟ್ಟು ದೀಪ ಮಾಡೋದನ್ನೇ ವಿರೋಧಿಸ್ತೀರಿ ನೋಡಿ..."

'ಮತ್ತೆ? ನೋಡು, ಒಂದೇ ಒಂದು ದಿನದಲ್ಲಿ ಎಷ್ಟು ಎಣ್ಣೆ ಹಾಳಾಗುತ್ತೆ ನೋಡು. ಈ ದೀಪದ ಕಾಲದಲ್ಲೇ ಎಣ್ಣೆಯ ಬೆಲೆ ಆಕಾಶ ಮುಟ್ಟಿದೆ. ಹಾಗೆ ಅದು ಹಾಳಾಗದೆ ಇದ್ರೆ, ತುಸುವಾದ್ರೂ ಕಡಮೆಯಾಗ್ತಿತ್ತೋ ಏನೋ..'

"ಅದಕ್ಕೆ ಅನ್ನೋದು ನಿಮ್ಮನ್ನ...."

'ಏನೂಂತ?"

"ಶುದ್ಧ ನಾಸ್ತಿಕರೂಂತ....'

"ಯಾರೇ ಹಾಗೆಂದವ್ರು?"

(ಹದಿಮೂರನೇ ಪುಟನೋಡಿರಿ)


## ಉಪಯುಕ್ತವಾದ ಕೆಲವು ಪುಸ್ತಕಗಳು

| | | ರೂ. ನ. |
|---|---|---|
| ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ | (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ) | 1=50 |
| ನಡುಹಗಲಿನ ಕಗ್ಗತ್ತಲೆ | (ಅನು: ಕು. ಶಿ. ಹರಿದಾಸ ಭಟ್) | 2=50 |
| ಶಿಕ್ಷಣದ ಧ್ಯೇಯಗಳು | (ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ) | 2=25 |
| ಸ್ವಾತಂತ್ರ್ಯ ಮತ್ತು ಸಂಸ್ಕೃತಿ | (ಅನು: ಕು.ಶಿ.ಹರಿದಾಸ ಭಟ್) | 2=00 |
| ಹಿರೋಶಿಮಾದಿಂದ ಜಿನೇವ | (ಯು. ಆರ್. ಆಚಾರ್ಯ) | 1=50 |
| ಮೋಹದ ಮಹಾಜಾಲ | (ವೀರಪ್ಪ ಯಗಟಿ) | 1=75 |
| ಭಾರತೀಯ ಮಹಾಪುರುಷರು | (ಎಸ್. ಗೋಪಿಚಂದ ರಾವ್) | 1=50 |
| ಕಥಾ ಕೌಮುದಿ | (ಎಸ್. ಗೋಪಿಚಂದ ರಾವ್) | 1=50 |
| ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್ | (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ) | 1=25 |
| ಏಶಿಯದ ಸಂಪತ್ತು | (ಕು. ಶಿ. ಹರಿದಾಸ ಭಟ್) | 2=00 |
| ಅಮೇರಿಕದ ಆರು ಕತೆಗಳು | (ಅನು: ಕು.ಶಿ.ಹರಿದಾಸ ಭಟ್) | 1=75 |
| ಕುಲವಿಲ್ಲದ ಹೆಣ್ಣು | (ಪಿ. ವೆಂಕೋಬಾಚಾರ್ಯ) | 1=50 |
| ಚಿತ್ರಾಂಗದೆ | (ಅನು: ಕೆ. ಕೆ. ಶೆಟ್ಟಿ) | 0=60 |
| ರವೀಂದ್ರರ ಕತೆಗಳು | (ಹನುಮಂತ ರಾವ್ ಮಾಂಜ್ರೇಕರ) | 0=90 |
| ಹಸುರು ಹಂಸ | (ನಚಿಕೇತ) | 2=00 |
| ಭಾವಾರ್ಚನ | (ನಚಿಕೇತ) | 1=25 |
| ಋಣಯಾತ್ರೆ | (ನಚಿಕೇತ) | 1=50 |
| ಗೀತೆಯ ಕೈಗನ್ನಡಿ | (ಜೊಸಕೆರೆ ಚಿದಂಬರಯ್ಯ) | 1=00 |

ವಿವರವಾದ ಪಟ್ಟಿಗಾಗಿ ಬರೆಯಿರಿ:

**ನವಯುಗ ಪ್ರೆಸ್, ಉಡುಪಿ**

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.



## ನವಯುಗಕ್ಕೆ

**ಚಂದಾದಾರರಾಗಿ ಪ್ರೋತ್ಸಾಹಿಸಿರಿ.**

**ವಾರ್ಷಿಕ ಚಂದಾ ರೂ. ೧೦**

## ಸಾಹಿತ್ಯ ಸುಧೆ

# ಗೋವಿಂದ ಪದಾಭಿಷೇಕ

ನಭದಲ್ಲಿ ಚಂದ್ರನೂ ನಳಿನಿಯಲ್ಲಿ ಕಮಲವೂ ಗೋಕುಲದಲ್ಲಿ ಗೋಸಂವೃದ್ಧಿಯೂ ಮಾರ್ತಾಂಡನಲ್ಲಿ ಕಿರಣ ಸಂವೃದ್ಧಿಯೂ ವಿರಹಿಗಳಲ್ಲಿ ಪುಷ್ಪ ಬಾಣವೂ ಮಾಲತಿಯಲ್ಲಿ ಭ್ರಮರಗಣವೂ, ಮದನ ಮತ್ತ ಗಜಗಳಲ್ಲಿ ಮದೋದಯವೂ ನದಿನಲ್ಲರಲ್ಲಿ ಅನುಕೂಲ ವೃತ್ತಿಯೂ ಜನದಲ್ಲಿಯೂ ಜಲದಲ್ಲಿಯೂ ಪ್ರಸನ್ನ ಭಾವವೂ ಶರತ್ಸಮಯದಲ್ಲಿ ನೆಲಸಿತು.

ನಂದನೇ ಮೊದಲಾದ ಗೋಪರು 'ಇಂದು ಪುರಂದರ ಮುಖ' ಎಂದು ಸಂಭ್ರಮಿಸಲು ತೊಡಗಿದರು. ಆಗ ಮಂದರಧರನು ಈಕ್ಷಿಸಿ 'ಸಂಕ್ರಂದನ ಮುಖವೇಕೆ? ಇದೇನು ವಿಚಿತ್ರ?' ಎಂದು ಬೆಸಗೊಂಡನು.

'ಗೋವುಗಳಲ್ಲಿ ಗಟ್ಟಿ ಹಾಲು ಒದಗುವುದು. ತೃಣಾದಿ ಸಸ್ಯಾವಳಿ ಹೆಚ್ಚುವುದು. ನದನದಿಗಳಲ್ಲಿ ಜಗತ್ತಿಗೆ ಬೇಕಾದ ನೀರು ಪರಿವರ್ಧಿಸುವುದು. ಶಕ್ರನು ಮಳೆಗರೆಯುವುದರಿಂದ ಹೀಗಾಗುವುದು. ಆದುದರಿಂದ ಜನ ಆತನನ್ನು ಅರ್ಚಿಸುವುದು' ಎಂದು ನಂದಗೋಪನು ನುಡಿದನು.

'ಪುರುಹೂತನಿಗೆ ಕೋಪವನ್ನು ಹುಟ್ಟಿಸಬೇಕು' ಎಂದು ಯೋಚಿಸಿದ ಕೃಷ್ಣನೆಂದನು: 'ನಮಗೆ ಈ ದಿವಿಜರಾಜನಿಂದ ಪ್ರಯೋಜನವಿಲ್ಲ. ಗೋಪಾಲರಾಗಿ ವನದಲ್ಲಿ ಸಂಚರಿಸುವ ನಮಗೆ ವನಾಶ್ರಿತಗಳಾದ ಗಿರಿಗಳೂ ಗೋಧನಗಳೂ ಪರಮಗತಿಯಾಗಿವೆ; ಇಷ್ಟದೈವತವಾಗಿವೆ. ಈ ಗಿರಿಗಳು ಕಾಮರೂಪಿಗಳು ತಂತಮ್ಮ ಕಟುತೃಣಚ್ಛೇದದಿಂದ ಅಪರಾಧ ಮಾಡಿದ ನಮ್ಮನ್ನು ಸಿಂಹ ಶರಭ ಭೇರುಂಡ ಶಂಡಾಲ ಶಾರ್ದೂಲ ಸರ್ಪಾದಿ ಕ್ರೂರ ರೂಪಗಳಿಂದ ಬಾಧಿಸದಂತೆ ಶಾಂತಿಯನ್ನು ಮಾಡಬೇಕು. ಇನ್ನೆಮಗೆ ಗಿರಿಯಜ್ಞವೂ ಗೋಯಜ್ಞವೂ ಪ್ರಧಾನ ಮಂಗಳಕರ. ಆ ಕಾರಣದಿಂದ ನೀರು, ಸಾರು, ಅನ್ನಗಳಿಂದ ಕರ್ಪೂರ, ತೀರ್ಥ ಗಂಧ ಅಕ್ಷತೆಗಳಿಂದ ಚತುರ್ದಶಿಯ ಚಂದ್ರನಿರುವ ದಿನ ಗಿರಿಯಜ್ಞವನ್ನು ಮಾಡಲು ಅನುಮತಿ ನೀಡಿರಿ. ನಾನು ನಿಮಗೆ ಪುತ್ರನಾದರೆ, ನಿಮಗೆ ನನ್ನಲ್ಲಿ ಅಕ್ಕರೆಯಿರುವುದಾದರೆ ನೀವು ನಾನೆಂದುದನ್ನು ಮಾಡಿ ನನಗೆ ಮುದವನ್ನುಂಟು ಮಾಡಿರಿ.'

ಆಗ, ನಂದಗೋಪಾದಿ ಗೋಪ ವೃದ್ಧರು ಹೀಗೆಂದರು: 'ನಿನ್ನ ರೂಪ, ಸೌನ್ದರ್ಯ ಪ್ರತಿಷ್ಠೆ, ಪ್ರಭಾವ, ಶೃಂಗಾರ ಗೌರವ, ವಿಲಾಸ ವಿನ್ಯಾಸ, ವೇಷ ವಿಶೇಷ, ಸತ್ಪ್ರವರ್ತನೆ, ವಿಕ್ರಮಾಧಿಕ್ಯ, ವಿವೇಕಾತಿರೇಕಗಳನ್ನು ನೋಡುವಾಗ ನೀನು ಪರದೈವದ ಸ್ವರೂಪಿಯಾಗಿ ತೋರುವೆ. ನಿನ್ನ ಅಭಿಮತವನ್ನೇ ಒಪ್ಪಿ ಕೃತಾರ್ಥರಾಗುವ ನಮಗೆ ನೀನು ದರಸ್ಮಿತ ಪ್ರಸನ್ನವದನನಾಗುವ ಕಾರ್ಯವೇ ಉಚಿತವಾದುದು'.

ಮಹೇಂದ್ರ ಮಖವನ್ನು ಬಿಟ್ಟು ಗಿರೀಂದ್ರ ಮಖವನ್ನು ಒಪ್ಪಿ ಉಚಿತ ಪರಿಕರಗಳೊಂದಿಗೆ ಗೋವರ್ಧನ ನಗಕ್ಕೆ ಗೋಪಾಲ ಬಾಲಕರೆಲ್ಲರೂ ಅಲಂಕೃತರಾಗಿ ಗೋಧನಗಳನ್ನು ಶೃಂಗರಿಸಿ ಬರುವುದೆಂದು ಗೋಕುಲದಲ್ಲಿ ಸಾರಿದರು.

ತನ್ನ ತನ್ನ ಒಲವಿನಂತೆ ಅಲಂಕಾರ ಮಾಡಿಕೊಳ್ಳುವ, ಪರ್ವತ ಪೂಜಾಪರಿಕರಗಳನ್ನು ಕೂಡಿಸುವ, ಗೋವುಗಳನ್ನು ಅಲಂಕರಿಸುವ ಗೋಪಾಲಕರ ಕಳಕಳನಿನಾದ ಕೇಳಿಸ ತೊಡಗಿತು.

ಆಗ ಸಡಗರದಿಂದ ಕೂಡಿದ ಜನದ ಕಳಕಳದಿಂದ ದಳವೇರಿ ಬೊರ್ಗರೆದುಲಿವ ಘಂಟೆಯೂ ಉರಗೆಜ್ಜೆಯೂ ಅಂದವಡೆದು; ಹೊಳೆವ ಪಂಚ ವರ್ಣದಪಟ್ಟೆಯ ತೋರದೊವಲು, ಜೇವಿನ ದಂಡೆ, ನವಿಲ ಕಂಠದ ಬಾಸಿಂಗ, ಜಲ್ಲಿಗಳಿಂದ ಶೋಭಿಸಿ; ಮೈಗೆ ಸವರಿದ ಅರಸಿನ ದ್ರವ, ಕುಂಕುಮ ಸಂಕಗಳಿಂದ ಬಿಂಕವಡೆದು; ಶೃಂಗಾರ ಭಂಗಿಯಿಂದ ಎತ್ತು, ದನಕರುಗಳ ಅಂಬಾರವದಿಂದ ವಿಜೃಂಭಿಸಿ; ಗೋಲೋಕವು ಅವನಿಗವತರಿಸಿದಂತೆ, ಗೋಮಂಡಲವೇ ಗೋವಾದಂತೆ ಅಸಂಖ್ಯಾತ ತುರುಗಳು ನಡೆದು ಬಂದುವು. ಅವುಗಳ ಹಿಂದೆ ಬಿಳಿ ಅರಸಿನ ಹಸುರು ಲೇಪದಿಂದ, ಮೃಗಮದ ಚಂದನಾದಿ ಚರ್ಚೆಯಿಂದ, ಜೇವಿನ ಕೇಶಬಂಧಗಳಿಂದ, ವನ್ಯಕುಸುಮದ ಚಿತ್ರಪೋರ, ಕೇಯೂರ, ಕರ್ಣಪೂರಾದಿ ಭೂಷಣಗಳಿಂದ, ಪಟ್ಟೆವಳಿಯ ಗಂಡುಗೆಗಳಿಂದ ಎಸೆದು ಶೃಂಗರಿಸಿ, ತೊಳೆದು ಬೆಳಗುವ ಹಲುಗಳಿಂದಲೂ ತಾಂಬೂಲ ಚರ್ವಣ ಕಪೋಲದಿಂದಲೂ ಗೋನಿಯೋಗ ದಂಡಧರರೂ ಆಗಿ, ಕೆಲವರು ಕೊಂಬು ಕಹಳೆಗಳನ್ನೂದುತ್ತ, ಕೆಲವರು ಹಿಂದೆ ಮುಂದೆ ಓಡಿ ಬರುವ ಸೊಕ್ಕಿದ ಕರುಗಳನ್ನು ಸಾಲಿಗೆ ಸೇರಿಸುತ್ತ, ಕೆಲವರು ಕೈ ಚಪ್ಪಾಳೆ ಬಡಿಯುತ್ತ ಕೂಗುತ್ತ ಗೋಪಾಲಕರು ಬರತೊಡಗಿದರು. ನಗಯಜ್ಞೋಪಯೋಗ ದ್ರವ್ಯಗಳನ್ನು ತಂದು ನಂದಗೋಪ ಪುರೋಗಮರು ಮುಕುಂದನ ಮುಂದೆ ನಿಂತರು.

ಇವನ್ನು ಕಂಡ, ಅತಿ ಮುದಿತ ಹೃದಯನಾಗಿ, ಅವರನ್ನು ಅನುರಾಗದಿಂದ ನೋಡಿ, ದಿವ್ಯ ಲೇಪನ, ದಿವ್ಯಾಂಬರ, ದಿವ್ಯಾಲಂಕಾರ, ದಿವ್ಯಾಕೃತಿಯಿಂದ ಶೋಭಿಸುವ ಕೃಷ್ಣನು ದಿವ್ಯ ಗಂಭೀರೋಕ್ತಿಯಿಂದ 'ಇಲ್ಲಿಗೆ ಅಧಿದೇವತೆಯೆಂದು ನನ್ನನ್ನಿಲ್ಲಿ ಪೂಜಿಸಿರಿ' ಎಂದು ಅದ್ರಿಯಲ್ಲಿ ನಿಂತನು. ಆ ಜಲಜಾಕ್ಷನನ್ನು ಗೋಪಾಲಕರು ವಿವಿಧೋಪಚಾರದಿಂದ ಪೂಜಿಸಿದರು. ಗೋಪಕದಂಬಕವು ಒಳ್ಗೊಳಲನ್ನು ಬಾಜಿಸಿತು. ಕೊಂಬು ಕಹಳೆಗಳನ್ನು ಊದಿತು. ಬೊಬ್ಬಿರಿದು ಸಂಭ್ರಮವನ್ನು ಸೂಚಿಸಿತು.

ಧವಳಾಕ್ಷತಾಸಾರ ಪ್ರಕಾಶದಿಂದ, ಕಾಳ ಗಂಧ ಧೂಪಧೂಮಸ್ತೋಮದಿಂದ ಆರತಿದೀಪ ಶೋಣಾಂಶುವಿನಿಂದ, ಪಸ್ರ ದುಗ್ಧ ಕುಂಭದಿಂದ ಗೋವರ್ಧನ ನಗವು ಸೊಗಯಿಸಿತು. ಕೊನೆಗೆ 'ಅಮಿತ ಪಾಯಸ, ಆಜ್ಯ, ರಸ, ಪಕ್ವಾನ್ನವನ್ನು ಉಂಡು ತಣಿದೆನು. ಸುಪ್ರೀತನಾದೆನು' ಎಂದು ಹರಿ ನುಡಿದು, ತನ್ನ ದಿವ್ಯರೂಪವನ್ನು ತೊಲಗಿಸಿ ತನ್ನ ಮೊದಲಿನ ಗೋಪ ಸ್ವರೂಪದಿಂದ ಗೋಪ ಗೋಪೀ ಜನಗಳೊಡನೆ ಮಹಾಮಂಗಳ ಪ್ರಸನ್ನೋಕ್ತಿಗಳನ್ನು ಪಾಡುತ್ತ ಗೋಕುಲದಲ್ಲಿ ಇರತೊಡಗಿದನು.

"ಅಷ್ಟರಲ್ಲಿ ನನ್ನ ಯಜ್ಞವನ್ನಳಿದು ನಗವನ್ನು ಮುಕುಂದನು ಅರ್ಚಿಸಿದನೆಂದು ಮಹೇಂದ್ರನು ಹುಬ್ಬೇರಿಸಿದನು. ಭೂಧರ ವಿರೋಧಿಯು ಭೂಧರಧರನ ಮೇಲೆ ಕ್ರುದ್ಧನಾಗಿ ಪುಷ್ಕಲಾವರ್ತಕ ನಿಕಾಯವನ್ನು ಕರೆದನು. 'ಇಂದೇ ಪ್ರಳಯ ಕಾಲವಾಗಲಿ. ನೀವು ಗೋಕುಲಕ್ಕೆ ಹೋಗಿ ಏಳುದಿನ ಪರ್ಯಂತ ಶಿಲಾವೃಂದಾನ್ವಿತ ವೃಷ್ಟಿಯನ್ನು ಸುರಿಸಿರಿ' ಎಂದು ಬೆಸಗೊಂಡನು.

ಮರವನ್ನು ಬುಡದಿಂದ ಮೋದುವ ಗಿರಿಯನ್ನು ಗಿರಿಯಿಂದ ಹೊಡೆಯುವ ಕಡಲ ಕಡೆಯಲ್ಲಿ ಬೆರಸುವ ಪ್ರಳಯಾನಿಲದಂತೆ ಗೋಕುಲದಲ್ಲಿ ಕಡುಗಾಳಿ ಭರದಿಂದ ಬೀಸಿತು. ಗಾಳಿಯ ಹೊಯ್ಲಿಂದ ಸೂರ್ಯನು ಮಾಯವಾದನು. ತಮದೊಡ್ಡು ನೆಗಳಿತು. ಆಕಾಶದಲ್ಲಿ ಕರಿಯ ಮೋಡಗಳು ಕವಿದುವು. ಸಿಡಿಲು ಮಿಂಚು ಮೊಳಗುಗಳು ಕೂಡಿದುವು ಆನೆ ಸೊಂಡಿಲನ್ನು ಹೋಲುವ ಧಾರೆ ಸುರಿಯಿತು. ಬಂಡೆಗಳುರುಳುವಂತೆ ಆನೆಯನ್ನು ಹೋಲುವ ಮೋಡಗಳು ಮಳೆಗರೆದುವು.

ಅತ್ಯದ್ಭುತವಾದ ಕಲ್ಮಳೆಯು ಸುರಿಯುತ್ತಿರಲು, ಕರುಗಳೂ ದನಗಳೂ ಪಡ

(ಹನ್ನೆರಡನೇ ಪುಟ ನೋಡಿರಿ)

## ಅಮ್ಮಾ! ನನಗೆ ಕೆಲಸ ಸಿಕ್ಕಿತು!

ಅವಳಿಗೆ ಪ್ರಥಮ ಬಾರಿ ದೊರೆತ ಕೆಲಸ ಅದು! ಅವಳು ಉತ್ತೇಜಿತಳಾಗಿದ್ದಾಳೆ. "ನಿನ್ನ ಬಗ್ಗೆ ನನಗೆ ತುಂಬಾ ಹೆಮ್ಮೆ"—ಮಗಳೊಡನೆ ಹೇಳುತ್ತಾಳೆ ಹರ್ಷಭರಿತಳಾದ ತಾಯಿ. "ಆದರೆ ನೀನು ಒಂದು ವಿಷಯದ ಬಗ್ಗೆ ಮಾತ್ರ ಭರವಸೆ ನೀಡಲೇ ಬೇಕು. ನಿನಗೆ ದೊರಕುವ ವೇತನದ ಸ್ವಲ್ಪಾಂಶವನ್ನು ಪ್ರತಿ ತಿಂಗಳೂ ಉಳಿಸಬೇಕು. ಉಳಿತಾಯದ ಮೊತ್ತ ಎಷ್ಟೆಂಬುದು ಮುಖ್ಯವಲ್ಲ; ಸಾಧ್ಯವಾದಷ್ಟು ಉಳಿತಾಯ ಮಾಡಬೇಕು. ನನ್ನೊಡನೆ ಬಾ. ಸಿಂಡಿಕೇಟ್ ಬ್ಯಾಂಕಿನಲ್ಲಿ ನಿನ್ನ ಹೆಸರಲ್ಲೊಂದು ಖಾತೆಯನ್ನು ತೆರೆಯೋಣ. ನಿನಗೆ ಗೊತ್ತಿದೆಯೆ? ಮಹಿಳೆಯರಲ್ಲಿ ಬ್ಯಾಂಕಿಂಗ್ ಅಭ್ಯಾಸವನ್ನು ಪ್ರೋತ್ಸಾಹಿಸಲು ಸಿಂಡಿಕೇಟ್ ಬ್ಯಾಂಕ್ ಹಲವಾರು ಶಾಖೆಗಳಲ್ಲಿ ಮಹಿಳಾ ಕೌಂಟರುಗಳನ್ನು ತೆರೆದಿದೆ. ಅಲ್ಲದೆ ಮಹಿಳೆಯರಿಂದಲೇ ನಡೆಸಲ್ಪಡುವ ಕೆಲವು ಶಾಖೆಗಳನ್ನು ಅದು ತೆರೆದಿದೆ."

ಇದು ವಿವೇಕಿಯಾದ ಮಾತೆಯೊಬ್ಬಳು ತನ್ನ ಮಗಳಿಗೆ ನೀಡುವ ಬುದ್ಧಿವಾದ. ಕ್ರಮಬದ್ಧನಾಗಿ ಉಳಿತಾಯ ಮಾಡುವ ಸದಭ್ಯಾಸವು ತನ್ನ ಮಗಳಲ್ಲಿ ಉಂಟಾಗುವಂತೆ ಅವಳು ಪ್ರೇರೇಪಿಸುತ್ತಿದ್ದಾಳೆ. ಅವಳ ಹಣವು ಬಡ್ಡಿಯನ್ನು ಗಳಿಸುವುದು— ಬೆಳೆಯುತ್ತಿರುವ ಅವಳ ಉಳಿತಾಯವು ಅವಳಿಗೆ ಧೈರ್ಯ ಮತ್ತು ಆತ್ಮಗೌರವವನ್ನುಂಟುಮಾಡುವುದು. ಅಲ್ಲದೆ ಅವಳ ಭವಿಷ್ಯವು ಸುಭದ್ರವಾಗುವುದು.

### ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

200ಕ್ಕೂ ಹೆಚ್ಚು ಶಾಖೆಗಳು

ರೂ. 70 ಕೋಟಿಗೂ ಮಿಕ್ಕಿದ ಠೇವಣಾ ನಿಧಿ.

## ಜವಾಹರರ ಅಭಿಪ್ರಾಯದಲ್ಲಿ

# ವಿದ್ಯಾರ್ಥಿ ಮತ್ತು ರಾಜಕೀಯ

ಸಂಗ್ರಹ—ಶ್ರೀ ಬೇಕಲ್ ನರಸಿಂಗರಾವ್.

ಇಂದು ಭಾರತದಲ್ಲಿ ಏರುತ್ತಿರುವ ಸಮಸ್ಯೆಗಳು, ಪ್ರಶ್ನೆಗಳು ಆಶ್ಚರ್ಯಕಾರಕವಾಗಿದ್ದು ದೇಶದ ಸ್ಥಿತಿಯು ವಿಚಿತ್ರವಾಗುತ್ತಾ ಇದೆ. ಆ ವಿಚಿತ್ರ ಪ್ರಶ್ನೆಗಳಲ್ಲೊಂದಾಗಿದೆ -"ವಿದ್ಯಾರ್ಥಿ ಮತ್ತು ರಾಜಕೀಯ". ಕೆಲವರ ಅಭಿಪ್ರಾಯದಂತೆ ವಿದ್ಯಾರ್ಥಿಗಳು ಸರ್ವಥಾ ರಾಜಕೀಯದಲ್ಲಿ ಭಾಗವಹಿಸಲಾಗದು. ಹಾಗಾದರೆ ರಾಜಕೀಯವೆಂದರೇನು? ಭಾರತದಲ್ಲಿ ರಾಜಕೀಯವೆಂದರೆ ಸರಕಾರಕ್ಕೆ ಸಹಾಯ ಮಾಡುವುದು ಯಾ ಸರಕಾರದ ಧೋರಣೆಗಳನ್ನು ಸಮರ್ಥಿಸುವುದೆಂದರ್ಥ. ಇದು ಸರ್ವಥಾ ರಾಜಕೀಯವಲ್ಲ. ರಾಜಕೀಯವೆಂದರೆ ಸರಕಾರದ ಕುರಿತು ವಿಚಾರ ಪೂರ್ವಕ ಟೀಕೆ ಮಾಡುವುದು.

ವಿದ್ಯಾರ್ಥಿಯೆಂದರೆ ಯಾರು? ಪ್ರಾಥಮಿಕ ಶಾಲೆಯ ಮಕ್ಕಳಿಂದ ತೊಡಗಿ ಕಾಲೇಜಿನ ನವಯುವಕ— ನವಯುವತಿಯರೆಲ್ಲಾ ವಿದ್ಯಾರ್ಥಿಗಳೇ. ಸ್ಪಷ್ಟತಃ ಒಂದೇ ಸಿದ್ಧಾಂತ ಈ ಸರ್ವರಿಗೂ ಅನ್ವಯಿಸುವದು.

ಇಂದು ಸಾವಿರಾರು ವಿದ್ಯಾರ್ಥಿಗಳಿಗೆ ಚುನಾವಣೆಗಳಲ್ಲಿ ಮತ ಚಲಾಯಿಸುವ ಅಧಿಕಾರ ದೊರೆತಿರುವುದೂ ಇದೆ. ಮತ ಪ್ರಯೋಗಿಸುವುದೆಂದರೆ ರಾಜಕೀಯದಲ್ಲಿ ಭಾಗವಹಿಸುವುದೆಂದರ್ಥ. ಚೆನ್ನಾಗಿ ತಿಳಿದು ಮತ ಪ್ರಯೋಗಿಸಲು ರಾಜಕೀಯವನ್ನು ಆತ ತಿಳಿದಿರಬೇಕು; ರಾಜಕೀಯ ಸಮಸ್ಯೆಗಳನ್ನು ಅರಿತಿರಬೇಕು. ಅರ್ಥಾತ್ ಆತನಿಗ ಯಾವುದಾದರೂ ಒಂದು ರಾಜಕೀಯ ಪಕ್ಷದ ನೀತಿಯನ್ನು ಒಪ್ಪಲೇ ಬೇಕಾಗುವುದು. ನೀತಿಯನ್ನು ಒಪ್ಪುತ್ತಲೆ ಆತನು ಅದನ್ನು ಪ್ರಚುರಪಡಿಸಿ ತನ್ನ ಮೆಚ್ಚುಗೆಯ ಪಕ್ಷಕ್ಕೆ ಇತರ ಪಕ್ಷಕ್ಕೆ ಬೀಳುವ ಮತವನ್ನು ಗಿಟ್ಟಿಸಿಕೊಳ್ಳುವಂತೆ ಮಾಡಬೇಕು. ಈ ರೀತಿ ಮತದಾರನು ಜರೂರಾಗಿ ರಾಜನೈತಿಕ ವ್ಯಕ್ತಿಯಾಗುತ್ತಾನೆ. ಒಂದೊಮ್ಮೆ ಆತನೊಬ್ಬ ತೀಕ್ಷ್ಣ ಬುದ್ಧಿವಂತ ನಾಗರಿಕನಿದ್ದಲ್ಲಿ ಆತನೊಬ್ಬ ಚತುರ ರಾಜನೀತಿಜ್ಞನಾಗಿರಬೇಕು. ಯಾರಲ್ಲಿ ರಾಜಕೀಯ ಅಥವಾ ಸಾಮಾಜಿಕ ಭಾವನೆಗಳಿಲ್ಲವೊ ಅವರು ನಿಷ್ಕ್ರಿಯ, ತಟಸ್ಥ ಯಾ ಉದಾಸೀನರಾಗಿರುತ್ತಾರೆ.

ಮತದಾರನಾದ ಪಿಸು ಈ ಕರ್ತವ್ಯದೊಂದಿಗೆಯೇ ಉತ್ತಮ ಶಿಕ್ಷಣವನ್ನು ಪಡೆದಿದ್ದಲ್ಲಿ, ಜೀವನ ಮತ್ತು ಅದರ ಸಮಸ್ಯೆಗಳನ್ನೆದುರಿಸಲು ತನ್ನನ್ನು ಸಿದ್ಧಪಡಿಸಿಕೊಳ್ಳಬೇಕು. ಇಲ್ಲವಾದರೆ ಆತನು ಶಿಕ್ಷಣ ಪಡೆಯಲು ಪಟ್ಟ ದುಡಿತವು ನಿರುಪಯೋಗಿಯಾಗಬಹುದು. ರಾಜಕೀಯ ಹಾಗು ಅರ್ಥಶಾಸ್ತ್ರದಲ್ಲಿ ಅಂತಹ ಸಮಸ್ಯೆಗಳನ್ನು ಬಗೆಹರಿಸಲು ಮಾರ್ಗದರ್ಶನ ದೊರೆಯುತ್ತದೆ. ಆದುದರಿಂದ ಎಂದಿನ ವರೆಗೆ ಒಬ್ಬ ಶಿಕ್ಷಿತನೆನಿಸಿಕೊಳ್ಳುವ ವ್ಯಕ್ತಿಯು ಇವೆರಡರ ಜ್ಞಾನ ಪಡೆದಿರುವುದಿಲ್ಲವೊ ಅಂದಿನ ವರೆಗೆ ಆತನು ಸುರಕ್ಷಿತನೆನಿಸಿಕೊಳ್ಳಲಾರ. ಹಲವಾರು ಜನರಿಗೆ ಜೀವನದ ನಿಬಿಡಾಂಧಕಾರದಲ್ಲಿ ಬೆಳಕಿನ ಹಾದಿಯನ್ನು ಕಾಣಲು ಕಷ್ಟವಾಗುತ್ತದೆ. ಆದರೆ ಇದರಿಂದೇನು? ನಾವು ಆ ಸಮಸ್ಯೆಗಳನ್ನು ಬಗೆಹರಿಸಬಲ್ಲೆವಾದರೂ, ಬಗೆಹರಿಸಲೊಲ್ಲೆವಾದರೂ ಕಡಿಮೆ ಪಕ್ಷ ನಮಗೆ ಅವುಗಳನ್ನು ಎದುರಿಸುವ ಧೈರ್ಯವಿರಬೇಕು. ಜೀವನವು ಎಷ್ಟೊಂದು ಪ್ರಶ್ನೆಗಳನ್ನು ನಮ್ಮೆಡೆಗೆ ಎಸೆಯುತ್ತದೆ? ಉತ್ತರವನ್ನು ಕೊಡಲು ಕಷ್ಟವಿದೆ ನಿಜ, ಆದರೆ ಆಶ್ಚರ್ಯದ ಮಾತೇನೆಂದರೆ ಜನರು ಪ್ರಶ್ನೆಯನ್ನು ಸರಿಯಾಗಿ ತಿಳಿಯದೆ ಇರುವುದು. ಅದನ್ನು ಉತ್ತರಿಸಲು ಹೋಗುತ್ತಾರೆ. ಈ ತೊಡಕಿನ ಹಾದಿಯನ್ನು ಯಾವ ಗಂಭೀರ, ವಿಚಾರವಂತ ವಿದ್ಯಾರ್ಥಿಯೂ ತುಳಿಯಲಾಗದು.

ಇಂದಿನ ಜಗತ್ತಿನಲ್ಲಿ ತಮ್ಮ ತಮ್ಮ ಸ್ಥಾನವನ್ನು ಗಿಟ್ಟಿಸಿಕೊಂಡಿರುವ ತರತರದ ವಾದಗಳು — ರಾಷ್ಟ್ರೀಯವಾದ, ಉದಾರವಾದ, ಸಮಾಜವಾದ, ಸಾಮ್ರಾಜ್ಯ ವಾದ, ಫಾಸಿಸಂ ಇತ್ಯಾದಿ— ಇವುಗಳೆಲ್ಲಾ ಕೊಂಚ ಕೊಂಚವಾಗಿಯೇ ಜೀವನದ ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನಿಸುತ್ತವೆ. ಇವುಗಳಲ್ಲಿ ಯಾವುದು ಉತ್ತಮ? ಅಥವಾ ಇವೆಲ್ಲಾ ತಪ್ಪೋ? ಪ್ರತಿಯೊಂದನ್ನು ನಾವು ನಿರ್ಣಯಿಸಬೇಕು, ನಿಷ್ಪಕ್ಷಪಾತವಾಗಿ ವಿಚಾರಿಸಿ ನಿರ್ಣಯಿಸಬೇಕು. ನಮ್ಮ ಸ್ವತಂತ್ರ ವಿಚಾರಗಳ ಮೇಲೂ, ಕಾರ್ಯಗಳ ಮೇಲೂ ಒತ್ತಡ ಬೀಳುವಾಗ ನಿಷ್ಪಕ್ಷಪಾತ ನಿರ್ಣಯ ಕೈಗೊಳ್ಳಲು ಕಷ್ಟವೆನಿಸುತ್ತದೆ. ಅದೇ ರೀತಿ ಆಳುವ ಸರಕಾರವೂ ಜನತೆಯ ಮೇಲೆ ನಿರ್ಬಂಧ ಹೇರಿದರೆ ಸ್ವೇಚ್ಛಾಲೋಚನೆಗೆ ಧಕ್ಕೆಯೊದಗುತ್ತದೆ.

ಆದುದರಿಂದ ಎಲ್ಲಾ ವಿಚಾರವಂತರು, ಮುಖ್ಯವಾಗಿ ವಿದ್ಯಾರ್ಥಿಗಳು ರಾಜಕೀಯದಲ್ಲಿ ಸೈದ್ಧಾಂತಿಕವಾಗಿಯಾದರೂ ಭಾಗವಹಿಸಬೇಕು. ಸ್ವಭಾವತಃ ಈ ಮಾತು ಸಣ್ಣ ಪ್ರಾಯದ ವಿದ್ಯಾರ್ಥಿಗಳಿಗನ್ವಯಿಸುವುದಿಲ್ಲ. ಯಾಕೆಂದರೆ ಜೀವನದ ಸಮಸ್ಯೆಗಳನ್ನವರು ಕನಸಿನಲ್ಲೂ ಎದುರಿಸದವರು. ಅರ್ಥಾತ್ ರಾಜಕೀಯದಲ್ಲಿ ಭಾಗವಹಿಸುವ ಈ ಸಿದ್ಧಾಂತವು ಕೇವಲ ಪ್ರಾಯಕ್ಕೆ ಬಂದ, ಜೀವನದಲ್ಲಿ ಕಾಲಿಡುತ್ತಿರುವ, ಹೊಣೆಗಾರಿಕೆಯನ್ನರಿತ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ. ಆದರೆ ಸೈದ್ಧಾಂತಿಕ ವಿಚಾರವನ್ನು ಸರಿಯಾಗಿ ತಿಳಿದರೆ ಮಾತ್ರ ಸಾಲದು. ಸಿದ್ಧಾಂತಕ್ಕೆ ಒಪ್ಪುವ ವ್ಯವಹಾರದಲ್ಲೂ ಆತನು ಸಕ್ರಿಯನಾಗಿ ಭಾಗವಹಿಸಬೇಕು. ವಿದ್ಯೆಯೆಂದರೆ ಕೇವಲ ಉಪನ್ಯಾಸದ ಕೋಣೆ, ಪುಸ್ತಕಕ್ಕಷ್ಟೇ ಸೀಮಿತವಲ್ಲ. ಸರಿಯಾದ ನೈಜ ಜ್ಞಾನವನ್ನು ಸಂಪಾದಿಸ ಬೇಕಾದರೆ ಆತನು ಲೆಕ್ಚರ್ ಹಾಲನ್ನು ಬಿಟ್ಟು ಹಳ್ಳಿಗಳನ್ನೂ, ಪೇಟೆಗಳನ್ನೂ, ಗದ್ದೆಗಳನ್ನೂ ಸಂದರ್ಶಿಸಿ ಅಲ್ಲಿ ನಿತ್ಯಾ ಸತ್ಯತೆಯನ್ನು ಪರೀಕ್ಷಿಸಿ ಜನತೆಯ ಕಾರ್ಯದಲ್ಲಿ, ರಾಜಕೀಯ ಕಾರ್ಯದಲ್ಲೂ ಕೈಹಚ್ಚಿ ಅವರೊಂದಿಗೆ ಒಂದಾಗಬೇಕು.

ಸಾಧಾರಣವಾಗಿ ಪ್ರತಿಯೋರ್ವನಿಗೂ ತನ್ನದೊಂದು ಗುರಿಯೆಂಬುದಿರುತ್ತದೆ. ವಿದ್ಯಾರ್ಥಿಯಾದವನು ತನ್ನ ಮಿದುಳನ್ನೂ, ಬುದ್ಧಿಶಕ್ತಿಯನ್ನೂ ಚುರುಕುಗೊಳಿಸಿ ಅದನ್ನು ವಿಚಾರಮಾಡಲು, ತಿಳಿಯಲು ತೀಕ್ಷ್ಣಯಥವನ್ನಾಗಿ ಮಾಡಬೇಕು. ಎಂದಿನ ವರೆಗೆ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ದೊರೆಯುವುದಿಲ್ಲವೋ ಅಂದಿನವರೆಗೆ ಆತನಿಗೆ ಚಾತುರತೆಯಿಂದ ವಿಚಾರ ಮಾಡಲು, ತಿಳಿದು ಕೆಲಸ ಮಾಡಲು ಅಸಾಧ್ಯವಿರುತ್ತದೆ. ಆದರೆ ಶಿಕ್ಷಣವು ಪವಿತ್ರ ಸಲಹೆಯಿಂದ ಮಾತ್ರವೇ ದೊರೆಯದು, ಸಾಕಷ್ಟು ದುಡಿತವೂ ಆವಶ್ಯವಾಗಿದೆ. ಆ ರೀತಿ ಮೈ ಮುರಿದು ದುಡಿಯಲು ನಿಜವಾಗಿಯೂ ಸೈದ್ಧಾಂತಿಕ ಶಿಕ್ಷಣ ದೊರೆಯಬೇಕು. ಆದರೆ ದುಡಿಮೆಯನ್ನು ನಿಲ್ಲಿಸಿದರೆ ಶಿಕ್ಷಣವು ಗುರಿಯನ್ನು ತಲಪದು.

ನಮ್ಮ ದುರ್ಭಾಗ್ಯವೋ ಎಂಬಂತೆ ಭಾರತದಲ್ಲಿ ಶಿಕ್ಷಣವು ಹಳೆಯ ವಿಧಾನದಲ್ಲೇ ನಡೆಯುತ್ತದೆ. ಆದರೆ ಇದಕ್ಕೂ ಶೋಚನೀಯವೆಂದರೆ "ಉಚ್ಛಾಧಿಕಾರ" ದ ವಾಯುಮಂಡಲವು ನಾಲ್ದೆಸೆಗಳಿಗೂ ಹರಡಿರುವುದು. ಶಿಕ್ಷಣ ಕ್ಷೇತ್ರದಲ್ಲಷ್ಟೇ ಅಲ್ಲ, ಭಾರತದ ಪ್ರತಿಯೊಂದು ಕಛೇರಿಯಲ್ಲೂ ಕೆಂಪು ಪೋಷಾಕಿನ ಪ್ರದರ್ಶನ ಹಾಗೂ ಆಗಾಗ ಕೆಲ ಬುದ್ಧಿವಂತರನ್ನಿಟ್ಟುಕೊಂಡವರು ಎಲ್ಲರನ್ನೂ ತಮ್ಮ ಕೈಕೆಳಗೆ ಕರಲಿಟ್ಟಿಸುವುದು- ಇವರಿಂದಾಗಿ ಜನತೆಯಲ್ಲಿ ಸ್ವತಂತ್ರವಿಚಾರವು ಕಡಿಮೆಯಾಗಿ ಉಚ್ಛಾಧಿಕಾರಿಗಳ ಮುಖಸ್ತುತಿಯು ಅಧಿಕವಾಗುತ್ತದೆ. ನಮ್ಮ ವಿಶ್ವವಿದ್ಯಾಲಯಗಳಲ್ಲೂ ಈ ಉಚ್ಛಾಧಿಕಾರದ ಮರ್ದನ ಕಾರ್ಯವು ನಡೆಯುತ್ತಾ ಇದೆ. ಇದರಿಂದಾಗಿ ಆತನ ಕೈಕೆಳಗಿನವರು ಅವನ ಆಜ್ಞೆಯನ್ನು ಶಿರಸಾ ಪಾಲಿಸುತ್ತಾರೆ. ಬಲಪ್ರಯೋಗದ ಹೆದರಿಕೆಯಿದ್ದಲ್ಲಿ ಸ್ವಾತಂತ್ರ್ಯಾಭಿಲಾಷೆಯೂ ಹತವಾಗುತ್ತದೆ. ಸ್ವತಂತ್ರ ವಿಚಾರದ ಸುಳಿವೇ ಇಲ್ಲದಂತಾಗುತ್ತದೆ. ಇದರಿಂದಾಗಿಯೇ ನಮ್ಮಲ್ಲಿ ಧ್ರುವಗಳನ್ನು ಗೆಲ್ಲುವ ಸಾಹಸಿಗಳೂ, ತತ್ವಗಳನ್ನು ತಿಳಿದು ಜನತಾ ಸೇವೆ ಮಾಡುವ ವ್ಯಕ್ತಿಗಳೂ, ಅಜ್ಞಾನ — ಭಯಾಲಸ್ಯಗಳನ್ನು ದೂರ ಮಾಡುವ ಆದರ್ಶ ಪುರುಷರೂ ಜನಿಸುವುದಿಲ್ಲವಾದರೆ ಅದರಲ್ಲಿ ಆಶ್ಚರ್ಯವೇನಿದೆ?

ಹಾಗಾದರೆ ವಿದ್ಯಾರ್ಥಿಯು ರಾಜಕೀಯದಲ್ಲಿ ಭಾಗವಹಿಸಬೇಕೆ? ಜೀವನದಲ್ಲೂ, ಅದರ ಚಟುವಟಿಕೆಗಳಲ್ಲೂ ಸಕ್ರಿಯ ಭಾಗವಹಿಸಬೇಕೆ? ಅಥವಾ ಗುಮಾಸ್ತನಾಗಿ ತನ್ನ ಮೇಲಿನವರ ಆದೇಶವನ್ನು ಶಿರಸಾ ಪಾಲಿಸುತ್ತಾ ಇರಬೇಕೆ? ವಿದ್ಯಾರ್ಥಿಯಾದವನು ರಾಜಕೀಯದಿಂದ ಹೊರಗಿರಲಸಾಧ್ಯ. ಆದರಲ್ಲೂ ಭಾರತೀಯ ವಿದ್ಯಾರ್ಥಿಗಳು ರಾಜಕೀಯದೊಡನೆ ಇನ್ನೂ ಹೆಚ್ಚಿನ ಸಂಪರ್ಕವಿಡಬೇಕು. ಸಾಧಾರಣವಾಗಿ ಬೆಳೆಯುತ್ತಿರುವ ಓರ್ವ ವಿದ್ಯಾರ್ಥಿಯು ತನ್ನ ಮಿದುಳನ್ನು! ಆಲೋಚನಾ ಶಕ್ತಿಯನ್ನೂ ಬೆಳೆಸಿಕೊಳ್ಳುವಲ್ಲಿ ಹೆಚ್ಚಿನ ಗಮನನೀಡಬೇಕು. ಅವರು ಕೆಲವು ನಿಯಮಗಳನ್ನು ಪಾಲಿಸಬೇಕು; ಆದರೆ ಆ ನಿಯಮಗಳು ಆತನ ಸ್ವತಂತ್ರ ವಿಚಾರಶಕ್ತಿಯನ್ನು ಹತಗೊಳಿಸಬಾರದು. ಬದಲಾಗಿ ಆತನಿಗೆ ಸ್ಫೂರ್ತಿಯನ್ನೀಯಬೇಕು.

ಸಮಾಪ್ತಿ


ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಿ. ಆಫೀಸು--"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

**ಮಂಗಳೂರು—3**



**ಉಡುಪಿ ಕರ್ನಾಟಕ ಸಂಘದ**

ಒಂದೊಂದು ರೂಪಾಯಿ ಬೆಲೆಯ

**ಮೂರು ಪ್ರಕಟಣೆಗಳು.**

**ಚಂದ್ರಲೋಕಕ್ಕೆ ಪ್ರಯಾಣ**

ಯು. ರಾಘವೇಂದ್ರ ಆಚಾರ್ಯ, ಎಂ.ಎ.

**ಸಾಮಾನ್ಯ ರೋಗಗಳು**

ಡಾ| ಕೆ.ಎಲ್. ಎತಾಳ, ಎಂ.ಬಿ.ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

**ಭೌತಿಕ ದರ್ಶನ**

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

# ಮಂಜುನಾಥನ ಅಸ್ತಿತ್ವದಿಂದ ಮಂಜುಳವಾದ ಧರ್ಮಸ್ಥಳ

'ಮಾತು ಬಿಡ ಮಂಜುನಾಥ, ಕಾಸು ಬಿಡ ಶ್ರೀನಿವಾಸ" ಎಂಬ ಜನಜನಿತ ಲೋಕೋಕ್ತಿಯೊಂದೇ ಸಾಕು ಮಂಜುನಾಥನ ಮೇಲೆ ಭಕ್ತರು ಅದೆಷ್ಟು ಭಕ್ತಿ-ವಿಶ್ವಾಸಗಳನ್ನಿಟ್ಟಿದ್ದಾರೆ ಎಂಬುದನ್ನರಿಯುವುದಕ್ಕೆ. ಈ ರೀತಿಯ ವಿಶ್ವಾಸಕ್ಕೆ ಪಾತ್ರನಾದ ಮಂಜುನಾದ ಮಂಜುನಾಥ ಸ್ವಾಮಿಯು ನೆಲಸಿ, ತನ್ನ ಭಕ್ತ ಜನರ ಮನೋಭೀಷ್ಟವನ್ನು ಪೂರೈಸುತ್ತಿರುವ ಪುಣ್ಯಮಯ ಕ್ಷೇತ್ರ ಧರ್ಮಸ್ಥಳ. ಇಂದು ಇದರ ಹೆಸರರಿಯದವರು ಅತಿ ವಿರಳ; ಇಲ್ಲವೇ ಇಲ್ಲ. ಭಾರತದ ಮೂಲೆಮೂಲೆಯಿಂದ ದಿನಂಪ್ರತಿ ಸಾವಿರಾರು ಭಕ್ತರು ಇಲ್ಲಿಗೆ ಆಗಮಿಸಿ, ತಮ್ಮ ಇಷ್ಟಾರ್ಥ ಪೂರೈಸಿತೆಂದು ಸಂತಸವೇರಿ ನಲಿದು ಮರಳುತ್ತಿರುವುದೇ ಇದಕ್ಕೆ ನಿದರ್ಶನ. ಭಗವಾನ್ ಮಂಜುನಾಥನ ಶ್ರೀನಿಲಯುವಿದು; ಭಕ್ತಜನ ಸಮುದಾಯದ ಆತ್ಮೋನ್ನತಿ ಸೌಭಾಗ್ಯ ಪ್ರೇರಕ ಶ್ರೀಶಕ್ತಿನಿಲಯುವಿದು; ಆರ್ತರಿಗೆ ಅಭಯ ಧೈರ್ಯ ಸಾಂತ್ವನಾದಿಗಳನ್ನಿತ್ತು ಅವರನ್ನು ಕರುಣಿಸುವ ಪ್ರಸಾದ ನಿಲಯುವಿದು.

## ಹೆಮ್ಮೆಯ ಕ್ಷೇತ್ರ

ಈ ಬಗೆಯ ಹೆಸರು ಪಡೆದ ಶ್ರೀಕ್ಷೇತ್ರ ಧರ್ಮಸ್ಥಳ ಎಲ್ಲಿದೆ? ಪಡುಗಡಲ ಸುಂದರ ಜಿಲ್ಲೆ ದಕ್ಷಿಣ ಕನ್ನಡ. ತೆಂಗು-ಅಡಿಕೆಗಳ ತವರೂರಾದ ಇಲ್ಲಿ ಬೆಳ್ತಂಗಡಿ ತಾಲೂಕಿನ ಬೆಟ್ಟವೊಂದರ ಮೇಲೆ ನಿಂತಿದೆ ಧರ್ಮಸ್ಥಳ. ಸುತ್ತಮುತ್ತ ಪ್ರಕೃತಿಯ ರಮಣೀಯ ದೃಶ್ಯಗಳು ಇಲ್ಲಿವೆ. ಒಂದರೊಡನೊಂದು ಸ್ಪರ್ಧೆಗೆ ನಿಲ್ಲುವಂತಹ ಬೆಟ್ಟಗಳ ಸಾಲುಗಳು, ಒತ್ತೊತ್ತಾಗಿ ಬೆಳೆದ ತಿಕ್ಕೆಗೂ ಸಿಗದ ಮರಗಳಿದ್ದು ವಿವಿಧ ವನ್ಯಜಂತುಗಳಿಗೂ ಆಶ್ರಯ ನೀಡುವ ಕಾಡುಗಳು, ಬೆಟ್ಟ—ಕಾಡುಗಳ ಮರೆಯಲ್ಲಿ ಭೋರ್ಗರೆದು ಹರಿಯುವ ನೀರ ಜರಿಗಳು ಹಿತ—ಮಿತವಾಗಿ ಬೀಸುವ ಗಾಳಿ—ಹೀಗೆ ಪ್ರಕೃತಿ ಸುಂದರವೂ ನಿಸರ್ಗ ರಮಣೀಯವೂ ಆದ ಧರ್ಮಸ್ಥಳ ಭಕ್ತ ಜನರ ಹೆಮ್ಮೆಯ ಕ್ಷೇತ್ರವಾಗಿದೆ.

## ಹೇಗೆ ಬರಬಹುದು?

ಜಿಲ್ಲೆಯ ಮುಖ್ಯ ನಗರ ಮಂಗಳೂರಿನಿಂದ ಮಂಗಳೂರು— ಚಾರ್ಮಾಡಿ-ಕಡೂರು ಹೆದ್ದಾರಿಯಲ್ಲಿ ೪೦ ಮೈಲು ದೂರದಲ್ಲಿ ಉಜಿರೆ ಇದೆ. ಕಡೂರಿನಿಂದ ಉಜಿರೆಗೆ ೭೦ ಮೈಲು. ಉಜಿರೆಯಿಂದ ಕವಲೊಡೆದ ದಾರಿಯಲ್ಲಿ ೫ ಮೈಲು ಹೋದರೆ, ಧರ್ಮಸ್ಥಳ ಶ್ರೀಕ್ಷೇತ್ರದ ಮಹಾದ್ವಾರವು ಆದರದ ಸ್ವಾಗತವನ್ನು ನೀಡುತ್ತದೆ.

ಬಯಲು ಪ್ರದೇಶದವರು ಚಾರ್ಮಾಡಿ ಘಾಟಿಯಿಳಿದು ಬರಬಹುದು. ಕಲ-ಮುಂಡಾಜೆ—ಉಜಿರೆಗಾಗಿ ಆಗುಂಬೆ ಘಾಟಿ ಇಳಿದು, ಸೋಮೇಶ್ವರ—ಕಾರ್ಕಳ—ಮೂಡಬಿದ್ರೆ—ವೇಣೂರು— ಉಜಿರೆಗಾಗಿ ಧರ್ಮಸ್ಥಳಕ್ಕೆ ಬರಬಹುದು. ಬೆಂಗಳೂರಿನ ಕಡೆಯಿಂದ ಮಡಿಕೇರಿ— ಪುತ್ತೂರು—ಉಪ್ಪಿನಂಗಡಿ— ಉಜಿರೆ ದಾರಿಯನ್ನು ಹಿಡಿಯಬಹುದು. ಉತ್ತರ ಕನ್ನಡ ಜಿಲ್ಲೆಯವರು ಶ್ರೀ ಕೃಷ್ಣನ ಉಡುಪಿಯಿಂದಾಗಿ ಬರಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಪ್ರಮುಖ ಊರುಗಳಿಂದಲೂ ಶ್ರೀ ಧರ್ಮಸ್ಥಳಕ್ಕೆ ಬಸ್ ಸಾರಿಗೆಯ ಸೌಕರ್ಯವಿದೆ. ಕರ್ನಾಟಕ ರಾಜ್ಯದ ಮುಖ್ಯ ನಗರಗಳಿಂದಲೂ ಇದೇ ಬಗೆಯ ಸೌಕರ್ಯ ಯಾತ್ರಿಕರಿಗೆ ದೊರೆಯುತ್ತಿದೆ.

ಶ್ರೀ ಧರ್ಮಸ್ಥಳ ಕ್ಷೇತ್ರ

## ನೇತ್ರಾವತಿ

ಅಂತರಂಗ—ಬಹಿರಂಗ ಶುದ್ಧಿಗಳು ಭಕ್ತಿಯ ಮೂಲಾವಶ್ಯಕತೆಗಳು. ಧರ್ಮಸ್ಥಳ ಕ್ಷೇತ್ರದಿಂದ ಒಂದೂವರೆ ಮೈಲು ದೂರದಲ್ಲಿ, (ಉಜಿರೆಯಿಂದ ನಾಲ್ಕು ಮೈಲು) ಕಲಕಲನಾದ ಮಾಡುತ್ತ ಮಂಜುಳವಾಗಿ ಸಮುದ್ರರಾಜನತ್ತ ನಡೆಯುತಿದ್ದಾಳೆ ನೇತ್ರಾವತಿ. ಈ ನೇತ್ರಾವತಿಯ ನೀರೇ ಶ್ರೀ ಕ್ಷೇತ್ರದ ಸ್ವಾಮಿಯ ಅಭಿಷೇಕಕ್ಕೆಂದು ಒಯ್ಯುತ್ತಿರುವುದರಿಂದ ನೇತ್ರಾವತಿಯ ಪ್ರಾಧಾನ್ಯ ಹೆಚ್ಚಿದೆ. ಎಂತಲೇ ಯಾತ್ರಾರ್ಥಿ—ಭಕ್ತರು ನೇತ್ರಾವತಿಯ ಮಂಜು ನೀರಿನಲ್ಲಿ ಮಿಂದು ಮೊದಲು ಬಹಿರಂಗ ಶುದ್ಧರಾಗುತ್ತಾರೆ. ಅನಂತರ ೧½ ಮೈಲು ನಡೆದು ಏರುತ್ತಾರೆ— ಆಗ ತನಗೆ ತಾನಾಗಿಯೇ ಅಂತರಂಗ ಶುದ್ಧತೆಯು ಮೊಳದೋರುವುದು. ಆ ಹೊತ್ತಿನಲ್ಲಿಯೇ ಶ್ರೀ ಭಗವಂತನ ದಿವ್ಯ ದರ್ಶನ ಪಡೆಯಲು ತಕ್ಕ ಅರ್ಹತೆಯು ಅವರಲ್ಲಿ ಮೂಡುವುದು. ಶ್ರೀಕ್ಷೇತ್ರದ ಪವಿತ್ರ ತೀರ್ಥ ನೇತ್ರಾವತಿ ಉಪ್ಪಿನಂಗಡಿಯಲ್ಲಿ ಸುಬ್ರಹ್ಮಣ್ಯನ ಕುಮಾರಧಾರೆಯುನ್ನು ಕೂಡಿಕೊಳ್ಳುತ್ತದೆ. ಮುಂದೆ ಮಂಗಳಾ ದೇವಿಯ ಮಂಗಳೂರಿನ ಬಳಿ ಸಮುದ್ರರಾಜನನ್ನು ಸೇರುತ್ತದೆ. ದಕ್ಷಿಣ ಕನ್ನಡದ ಗಂಗೆ ನೇತ್ರಾವತಿ ಎಂಬ ತಿಳುವಳಿಕೆ ಜನತೆಯಲ್ಲಿದೆ.

ಧರ್ಮಸ್ಥಳ ಶ್ರೀಕ್ಷೇತ್ರವು ಧರ್ಮಸ್ಥಳ ಎಂಬ ಗ್ರಾಮದ ಜಯಕೀರ್ತಿ ಬೆಟ್ಟ—ಅಥವಾ ಶಿವರಾತ್ರಿ ಪರ್ವತದ ಮೇಲಿದೆ. ಈ ಗ್ರಾಮದ ಜನಸಂಖ್ಯೆ ಸುಮಾರು ಮೂರು ಸಾವಿರ. ವಸತಿಗಳು ಸುಮಾರು ಆರುನೂರು. ನೂರಕ್ಕೆ ೫೦ರಷ್ಟು ಗ್ರಾಮ ನಿವಾಸಿಗಳು ಅಕ್ಷರಸ್ಥರಾಗಿದ್ದಾರೆ.

## ಬೆಟ್ಟ ತಲೆಯೆತ್ತಿದೆ

ಜನರನ್ನು ತನ್ನತ್ತ ಆಕರ್ಷಿಸ ಬೇಕಾದರೆ, ಏನಾದರೂ ವೈಶಿಷ್ಟ್ಯವಿರಬೇಕು ಆ ಸ್ಥಾನದಲ್ಲಿ. ಶ್ರೀ ಧರ್ಮಸ್ಥಳದ ಇತಿಹಾಸ ಪುರಾಣಕಾಲಕ್ಕೆ ಸೇರಿದ್ದಲ್ಲ. ಸುಮಾರು ಒಂದು ಸಾವಿರ ವರ್ಷಗಳದ್ದು ಮಾತ್ರ. ಈ ಅವಧಿಯಲ್ಲಿ ಅನೇಕ ಸಾಮ್ರಾಜ್ಯಗಳು ಸ್ಥಾಪಿತವಾದುವು; ಅನೇಕ ನಗರಗಳು, ಮಂದಿರಗಳು ನಿರ್ಮಾಣಗೊಂಡುವು. ಆದರೆ, ನೀರ ಮೇಲಣ ಗುಳ್ಳೆಗಳಂತೆ ಅವುಗಳಲ್ಲಿ ಹೆಚ್ಚಿನವು ತಲೆ ತಗ್ಗಿಸಿ ಪತಿತವಾದುವು. ಆದರೆ, ಶ್ರೀ ಕ್ಷೇತ್ರ ಧರ್ಮಸ್ಥಳವು ಅದೇ ಪ್ರಕಾರ ತಾನು ನಿಂತ ಬೆಟ್ಟದಂತೆಯೇ ತಲೆಯೆತ್ತಿ ನಿಂತಿದೆ. ಶ್ರೀಕ್ಷೇತ್ರದ ಮಹಿಮೆಯೇನೆಂಬುದಕ್ಕೆ ಇದೊಂದೇ ಉದಾಹರಣೆ ಸಾಕು. ಅಂದಿನಿಂದ ಇಂದಿನ ತನಕವೂ ಶ್ರೀ ಕ್ಷೇತ್ರ ಅನೂಚಾನವಾಗಿ ಭಕ್ತಜನಾಶ್ರಯವಾಗಿ ಬಂದಿದೆ.

ಶ್ರೀ ಕ್ಷೇತ್ರದ ಪುರಾತನ ಹೆಸರು ಕುಡುಮ. ಇಲ್ಲಿನ ನೆಲ್ಯಾಡಿ ಬೀಡಿನಲ್ಲಿ ಬರ್ಮಣ್ಣ ಹೆಗ್ಗಡೆ ಮತ್ತು ಅಮ್ಮುದೇವಿ ಬಳ್ಳಾಳ್ತಿಯೆಂಬ ದಂಪತಿಗಳಿದ್ದರು. ಚಂದ್ರನಾಥನ ಬಸದಿಯೂ ಇವರ ಬೀಡಿನ ಪಕ್ಕದಲ್ಲಿಯೇ ಇತ್ತು. ಭಗವದ್ಭಕ್ತರಾದ ಈ ದಂಪತಿಗಳಿಗೆ ಧರ್ಮದೇವತೆಗಳು ಮನುಷ್ಯ ರೂಪದಿಂದ ಕಾಣಿಸಿಕೊಂಡರು. ತಮಗೆ ಒಪ್ಪಿಸಿದ ಆದರಾತಿಥ್ಯಗಳಿಂದ ಸುಪ್ರೀತರಾದ ಇವರು ನೆಲ್ಯಾಡಿ ಬೀಡನ್ನು ಬೇಡಿದರು. ಕಾಳರಾಹು, ಕಳರ್ಕಾಯಿ, ಕುಮಾರಸ್ವಾಮಿ ಮತ್ತು ಕನ್ಯಾ ಕುಮಾರಿ ಎಂಬ ದೇವತೆಗಳು ತಾವೆಂದೂ ತಮಗೆ ಬೇರೆ ಬೇರೆ ಗುಡಿಗಳನ್ನು ಕಟ್ಟಿಸಿ ಕಾಲಕಾಲಕ್ಕೆ ಪರ್ವ—ನಡಾವಳಿಗಳನ್ನು ನಡೆಸಿಕೊಂಡು ಬರಬೇಕೆಂದೂ ಆದೇಶವಿತ್ತರು. "ನಮ್ಮ ದೂತನಾದ ಅಣ್ಣಪ್ಪನಿಂದ ನಾವು ಎಲ್ಲ ಕಾರ್ಯಗಳನ್ನೂ ನಡೆಸುವೆವು. ನೀವು ಶ್ರದ್ಧೆ—ಭಕ್ತಿಗಳಿಂದ ನಮ್ಮನ್ನು ಆರಾಧಿಸಿಕೊಂಡು ಬಂದರೆ, ನಿಮ್ಮ ಕುಟುಂಬ—ಸಂಪತ್ತು—ಆಯುರಾರೋಗ್ಯಾದಿಗಳನ್ನು ಅಭಿವೃದ್ಧಿಗೊಳಿಸುವೆವು. ದೇಶದೇಶಾಂತರಗಳಲ್ಲಿ ನಮ್ಮ ಪ್ರಭಾವವನ್ನು ಬೀರಿ ಧಾರಾಳವಾಗಿ ಹರಿಕೆ—ಕಾಣಿಕೆಗಳನ್ನು ತರಿಸಿ ಕೊಡುವೆವು. ಅದರಿಂದ ಸರ್ವರಿಗೂ ಏಕಪ್ರಕಾರವಾದ ದಾನ ಧರ್ಮಗಳು ಸದಾಕಾಲವೂ ನಡೆಯುತ್ತಿರಬೇಕು. ನಿಮ್ಮ ಮಾತನ್ನು ನಿಜಮಾಡಿ ಕೊಟ್ಟು ನಿಮ್ಮ ಬಯಕೆಗಳಿಗೆ ಬೆಂಬಲಿಗರಾಗಿ ನಿಮ್ಮ ಸರ್ವ ಕಾರ್ಯಗಳಿಗೂ ಜಯವನ್ನು ಕೊಡುವೆವು. ಇದಕ್ಕೆ ವಿರೋಧವಾಗಿ ನಡೆದರೆ ನಿಮಗೇನೇ ಕೇಡ ಉಂಟಾಗುವುದು" ಎಂದು ಹೇಳಿದರು. ಧರ್ಮದೇವತೆಗಳ ಆದೇಶದಂತೆ ದಂಪತಿಗಳು ನಡೆದುಕೊಂಡರು.

ಆದರೆ, ದಾನ ಧರ್ಮಾದಿಗಳಿಗಾಗಿ ಬ್ರಾಹ್ಮಣ ಸಂತರ್ಪಣೆ ಮಾಡುವಲ್ಲಿ ತುಸು ತೊಂದರೆಯಾಯ್ತು. 'ದೇವರ ಆರಾಧನೆಯಿಲ್ಲದಲ್ಲಿ ನಾವು ಸಂತರ್ಪಣೆಗೆ ಬರುವುದು ಸರಿಯಲ್ಲ' ಎಂದರು ಬ್ರಾಹ್ಮಣರು. ಚಿಂತಾಕ್ರಾಂತರಾದ ಬರ್ಮಣ್ಣ ಹೆಗ್ಗಡೆಯವರು ಆಕುಲರಾದರು. ಆಗ, ಧರ್ಮದೇವತೆಗಳು ದೂತನಾದ ಅಣ್ಣಪ್ಪನನ್ನು ಕಳಿಸಿ ಕಾಶಿಯಿಂದ ಕದಿರೆಗೆ ತಂದಿದ್ದ ಶಿವಲಿಂಗವನ್ನು ತರಿಸಿ ಈಗ ದೇವಾಲಯವಿರುವ ಸ್ಥಳದಲ್ಲಿಯೇ ಇರಿಸಿದರು. ಅನಂತರ ದೇವಾಲಯವನ್ನು ಕಟ್ಟಿಸಿ ಹೆಗ್ಗಡೆಯವರು ನಿತ್ಯಪೂಜೆ, ಉತ್ಸವ ಮೊದಲಾದ ದೇವತಾ ಕಾರ್ಯಗಳನ್ನೆಲ್ಲಾ ಒಂದೊಂದಾಗಿ ಮಾಡಿಸುತ್ತ ಬಂದರು. ತನ್ನ ಸ್ವಂತ ಭೂಮಿಯ ಒಂದು ಭಾಗವನ್ನು ದೇವಾಲಯದ ವಿನಿಯೋಗಕ್ಕಾಗಿ ಮೀಸಲಿರಿಸಿದರು.

ಅಂದಿನಿಂದಲೂ ಕುಡುಮದ ಕೀರ್ತಿ ಬೆಳೆಯುತ್ತ ಬಂದಿತು. ಸ್ಥಳವನ್ನು ಕಂಡ ಕೀರ್ತಿಸಲೆಂದು ದೂರ ದೂರದ ಯಾತ್ರಾರ್ಥಿಗಳು ಬರುತಿದ್ದರು. ದಾನ-ಧರ್ಮಗಳು ಸಾಂಗವಾಗಿ ನೆರವೇರುತಿದ್ದುವು. ಇದರಿಂದ ಧರ್ಮದೇವತೆಗಳ ಮಾತಿನಂತೆ ಕ್ಷೇತ್ರದ ಕೀರ್ತಿ ನಾಲ್ದೆಸೆಗಳಲ್ಲಿಯೂ ಹರಡಿತು.

## ಧರ್ಮಸ್ಥಳ

೧೬ನೆಯ ಶತಮಾನ. ಕುಡುಮ ಕ್ಷೇತ್ರದಲ್ಲಿ ದೇವರಾಜ ಹೆಗ್ಗಡೆಯವರು ಅಧಿಕಾರ ಪೀಠದಲ್ಲಿದ್ದರು. ಆಗ, ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಶ್ರೀ ಸೋದೆ ಮಠದ ವಾದಿರಾಜ ಯತಿವರ್ಯರು ಮಹಾ ತಪಸ್ವಿಗಳೆಂದು ಹೆಸರಾಗಿದ್ದರು. ಇವರು ಪುಣ್ಯತೀರ್ಥ ದರ್ಶನಾಕಾಂಕ್ಷಿಗಳಾಗಿ ಮಂಜುನಾಥನ ಬಳಿಗೂ ಬಂದರು. ಹೆಗ್ಗಡೆಯವರು ಭಯ ಭಕ್ತಿಗಳಿಂದ ಸ್ವಾಗತಿಸಿ ಭಿಕ್ಷೆಯನ್ನು ಸ್ವೀಕರಿಸಬೇಕು ಎಂದು ಪ್ರಾರ್ಥಿಸಿದರು. ದೈವಗಳು ತಂದು ಪ್ರತಿಷ್ಠಿಸಿದ ಲಿಂಗವಿರುವಲ್ಲಿ ಭಿಕ್ಷೆ ಸ್ವೀಕರಿಸಲು ಅವರು ಒಪ್ಪಲಿಲ್ಲ. ಕೊನೆಗೆ ವಾದಿರಾಜರ ಸಲಹೆಯಂತೆ ಅವರ ನೇತೃತ್ವದಲ್ಲಿಯೇ ಹೆಗ್ಗಡೆಯವರು ವಿಧ್ಯುಕ್ತವಾಗಿ ಕಲಶ, ಪ್ರಾಣ ಪ್ರತಿಷ್ಠೆಗಳನ್ನು ನೆರವೇರಿಸಿದರು. ಸುಪ್ರೀತರಾದ ಶ್ರೀ ಸ್ವಾಮಿಯವರು ಅಲ್ಲಿ ನಡೆಯುತ್ತಿರುವ

# ಭಕ್ತ ಸಮುದಾಯ

## ಆದರ್ಶ ಆಡಳಿತ, ಆದರ್ಶ ಯ

ಶ್ರೀ ಧರ್ಮಸ್ಥಳ ಕ್ಷೇತ್ರದ ದೇವಾಲಯ— ಬಸದಿ ಮೊದಲಾದುವುಗಳ ಆಡಳಿತವು ಧರ್ಮಾಧಿಕಾರಿಗಳ ಮೂಲಕ ನಡೆಯುತ್ತವೆ. ಧರ್ಮದೇವತೆಗಳಿಂದ ಸನ್ಮಾನಿತರಾದ ಬಿರ್ಮಣ್ಣ ಹೆಗ್ಗಡೆಯವರೇ ಮೊತ್ತಮೊದಲ ಧರ್ಮಾಧಿಕಾರಿಗಳು. ಈಗಿನವರಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಈ ಪರಂಪರೆಯಲ್ಲಿ ೨೦ನೆಯವರು.

ಕಾಲಕಾಲಕ್ಕೆ ಅಧಿಕಾರಕ್ಕೆ ಬಂದ ಹೆಗ್ಗಡೆಯವರು ದೇವಾಲಯಗಳ ಉನ್ನತಿ-ಅಭಿವೃದ್ಧಿಯ ಕಾರ್ಯಗಳಲ್ಲಿ ತೊಡಗಿದರು. ದಾನ-ಧರ್ಮಾದಿಗಳಲ್ಲಿ ನ್ಯೂನತೆ ತಲೆದೋರದಂತೆ ಎಚ್ಚರಿಕೆಯನ್ನು ವಹಿಸುತ್ತಿದ್ದರು. ದೇವಾಲಯದ ಹೆಸರಿನಲ್ಲಿ ಆಸ್ತಿಗಳನ್ನು ಸಂಪಾದಿಸಿದರು. ದೇವಳದ ಆಯವನ್ನು ಹೆಚ್ಚಿಸುವುದಕ್ಕಾಗಿ ಕೃಷಿ—ಕರ್ಮಗಳನ್ನು ಕೈಗೊಂಡರು. ಹೆಗ್ಗಡೆ ಪರಂಪರೆಯಲ್ಲಿ ಕೆಲವರು ರಾಜಮರ್ಯಾದೆಯನ್ನು ಗಳಿಸಿದ ಹೆಸರು ಪಡೆದಿದ್ದಾರೆ.

### ಚಂದಯ್ಯ ಹೆಗ್ಗಡೆ

ಈಗಿನ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರ ತೀರ್ಥರೂಪರಾದ ದಿ| ಚಂದಯ್ಯ ಹೆಗ್ಗಡೆಯವರು ೧೯೦೩ರಲ್ಲಿ ಶ್ರೀಕ್ಷೇತ್ರದ ಧರ್ಮಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿದರು. ಇವರು ಗಂಭೀರ ವ್ಯಕ್ತಿ. ಮಿತಭಾಷಿ. ಕರ್ತವ್ಯದಕ್ಷ. ಅತಿಥಿ ದೇವರೆಂಬುದರಲ್ಲಿ ಅಚಲ ವಿಶ್ವಾಸಿ. ಇದರಿಂದಾಗಿಯೇ ಶ್ರೀಕ್ಷೇತ್ರದ ಆಧುನಿಕೀಕರಣವು ಮೊದಲಾಯಿತು.

ಶ್ರೀಕ್ಷೇತ್ರಕ್ಕೆ ಬರುವ ಯಾತ್ರಿಕರ ಸಂಖ್ಯೆ ಹೆಚ್ಚುತ್ತಿರುವುದನ್ನೂ ಅವರಿಗೆ ಉಳಕೊಳ್ಳಲು ಆಗುತ್ತಿರುವ ತೊಂದರೆಗಳನ್ನು ಗಮನಿಸಿ ಛತ್ರವನ್ನು ದೊಡ್ಡದಾಗಿ ಕಟ್ಟಿಸಿದರು. ಉಗ್ರಾಣದ ಕೆಳಭಾಗವನ್ನೂ ಕಲ್ಲಿನಿಂದ ಕಟ್ಟಿಸಿದರು. ಶುದ್ಧ ನೀರಿನ ಅವಶ್ಯಕತೆಯನ್ನು ಮನಗಂಡು ಪ್ರಯತ್ನಪೂರ್ವಕವಾಗಿ ನಳ್ಳಿ ನೀರನ್ನು ಒದಗಿಸಿದರು. ದೈವಗಳ ಗುಡಿಗಳನ್ನು ಹೊಸತಾಗಿ ಕಟ್ಟಿಸಿ ಬಸದಿಗೆ ಪಂಚಕಲ್ಯಾಣವನ್ನೂ ದೈವಗಳಿಗೆ ನಡಾವಳಿಯನ್ನೂ ಕೊಟ್ಟರು. ಉಜಿರೆ—ಧರ್ಮಸ್ಥಳದ ದಾರಿಯಲ್ಲಿ ಅಲ್ಲಲ್ಲಿ ಶುದ್ಧನೀರು ದೊರೆಯುವ ವ್ಯವಸ್ಥೆಯನ್ನು ಇವರು ಮಾಡಿದ್ದರು. ಇಂದದರ ಅವಶ್ಯಕತೆಯಿಲ್ಲ; ಅದರ ಅವಶೇಷಗಳನ್ನು ದಾರಿಯಲ್ಲಿ ಕಾಣಬಹುದು.

ಹೀಗೆ ಶ್ರೀ ಕ್ಷೇತ್ರದ ಧರ್ಮಸೇವೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬಂದು ಚಂದಯ್ಯ ಹೆಗ್ಗಡೆಯವರು ೧೯೧೮ರಲ್ಲಿ ದೈವಾಧೀನರಾದರು. ಅವರ ನಂತರ ಮಂಜಯ್ಯ ಹೆಗ್ಗಡೆಯವರು ಅಧಿಕಾರವಹಿಸಿದರು. (ಈ ಸಮಯದಲ್ಲಿ ರತ್ನವರ್ಮರು ಇನ್ನೂ ಹಸುಗೂಸು)

### ಮಂಜಯ್ಯ ಹೆಗ್ಗಡೆ

ಶ್ರೀ ಮಂಜಯ್ಯ ಹೆಗ್ಗಡೆಯವರು ಬಾಲ್ಯದಿಂದಲೇ ಸರಳರು. ಭಾವುಕರು. ಸ್ವತಃ ಅಭ್ಯಸಿಸಿ ಒಳ್ಳೆಯದೆಂದು ಕಂಡುಕೊಂಡ ನಂತರವೇ ಅದನ್ನು ಇತರರ ಮುಂದಿಡುವ ಸ್ವಭಾವ ಶ್ರದ್ಧೆಯಿಂದ ಕಲಾತ್ಮಕವಾಗಿ ಕಾರ್ಯ ಸಾಧಿಸುವವರು ಇವರು. ಇದರಿಂದಾಗಿಯೇ ದೇವಳದ ಬಹುಮುಖ ಅಭಿವೃದ್ಧಿಯತ್ತ ಇವರ ಗಮನಕೂಡಲೇ ಹರಿಯಿತು.

ಅನೂಚಾನವಾಗಿ ನಡೆದು ಬಂದ ದೇವಾಲಯದ ಕಾರ್ಯಗಳಿಗೆ, ನಿಯಮಗಳಿಗೆ ಲೋಪಬಾರದಂತೆ ಸದಾ ತಾನೇ ನೋಡಿಕೊಂಡಿದ್ದು ದೇವತಾ ಕಾರ್ಯ ಶ್ರದ್ಧಾ ಭಕ್ತಿಯಿಂದ ಕೂಡಿ ನಡೆಯುತ್ತಿರಬೇಕೆಂಬುದನ್ನು ತನ್ನ ಆಚರಣೆಯಿಂದ ಇವರು ತೋರಿಸಿದರು.

ಯಾತ್ರಿಕರಿಗೆ ಆಹಾರ ಸಿದ್ಧತೆ ಮಾಡಿಕೊಳ್ಳುವಲ್ಲಿ ಆಗುತಿದ್ದ ತೊಂದರೆಗಳನ್ನು ಗಮನಿಸಿ ಇವರು ಪಡಿಯಕ್ಕಿಯ ಬದಲು ಇಚ್ಛಿಸಿದ ಯಾತ್ರಿಕರಿಗೆ ಭೋಜನವನ್ನು ಏರ್ಪಡಿಸಿದರು. ನೀಚ ದೇವತೆಗಳಿಗೆ ರಕ್ತಾಹುತಿಕೊಡುವುದನ್ನು ನಿಲ್ಲಿಸಿದರು. ದೇವದಾಸಿ ಪದ್ಧತಿಯನ್ನು ತೆಗೆದುಹಾಕಿದರು. ಕ್ರಮೇಣ ಉತ್ಸವಗಳಲ್ಲಿ ದುರುಸು—ಬಾಣಗಳನ್ನು ಉರಿಸುವುದನ್ನು ನಿಲ್ಲಿಸಿದರು. ಧರ್ಮ, ಕಲೆ, ವಿದ್ಯಾಭ್ಯಾಸಗಳಿಗಾಗಿ ಹಣ ವಿನಿಯೋಗಿಸಿದರು. ನೇತ್ರಾವತಿ ನದಿಗೆ ಸೇತುವೆ ಕಟ್ಟಿಸಿ ಯಾತ್ರಿಕರ ಅನನುಕೂಲವನ್ನು ನೀಗಿಸಿದರು.

ದೀಪೋತ್ಸವದ ಸಮಯದಲ್ಲಿ ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳು ಇವರ ಕಾಲದಲ್ಲಿ ೧೯೩೩ರಲ್ಲಿ ಪ್ರಾರಂಭವಾದುವು. ಅಂದಿನಿಂದ ಇಂದಿನ ವರೆಗೂ ಇವು ಸಮುಚಿತವಾಗಿ ನಡೆದು ಬರುತ್ತಿರುವುವು. ಇವುಗಳಲ್ಲಿ ಅನೇಕಾನೇಕ ವಿದ್ವಾಂಸರು ಭಾಗವಹಿಸುತ್ತಾರೆ.

ಮಂಜಯ್ಯ ಹೆಗ್ಗಡೆಯವರು ೧೯೪೦ರಲ್ಲಿ ಉಜಿರೆಯಲ್ಲಿ ಸಿದ್ಧವನ ಗುರುಕುಲವನ್ನು ಸ್ಥಾಪಿಸಿ, ಸಂಸ್ಕೃತ, ಕನ್ನಡ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳ ಶಿಕ್ಷಣ ಸೌಕರ್ಯವನ್ನು ಕಲ್ಪಿಸಿದರು. ೧೯೪೭ರಲ್ಲಿ ಕರ್ನಾಟಕ ವಿದ್ಯಾಲಯವೆಂಬ ಹೈಸ್ಕೂಲನ್ನು ತೆರೆದರು. ಸ್ವತಃ ಕಲಾವಿದರಾದ ಹೆಗ್ಗಡೆಯವರು ಬರೆದ ಚಿತ್ರಗಳು ಆಕರ್ಷಕವಾಗಿವೆ. ಕ್ಷೇತ್ರದ ಆಸುಪಾಸಿನಲ್ಲಿ ಬೆಳೆದು ಬಂದಿದ್ದ ಕಾಡುಗಳನ್ನು ಕಡಿದು ಜನತೆಯನ್ನು ಮಲೇರಿಯಾ ಮುಕ್ತಗೊಳಿಸಿದ್ದಲ್ಲದೆ ತೆಂಗು—ಅಡಿಕೆಗಳ ತೋಟಗಳನ್ನು ಸ್ಥಾಪಿಸಿ ದೇವಳದ ಉತ್ಪತ್ತಿಯನ್ನು ಹೆಚ್ಚಿಸಿದರು.

ಬಡವರ ಮೇಲೆ ಕರುಣೆ ತೋರಿದ ಇವರು ಒಂದು ಸಂಚಾರಿ ಆಸ್ಪತ್ರೆಯ ಯೋಜನೆಯನ್ನು ರೂಪಿಸಿದರು. ಜನಸೇವೆಯೇ ಜನಾರ್ದನ ಸೇವೆಯೆಂದು ನಂಬಿದ ಶ್ರೀ ಮಂಜಯ್ಯ ಹೆಗ್ಗಡೆಯವರು ತಮ್ಮ ಆಡಳಿತಾವಧಿಯಲ್ಲಿ ಸಾಂಬ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಿ ೧೯೫೫ರಲ್ಲಿ ದಿವಂಗತರಾದರು.

### ರತ್ನವರ್ಮ ಹೆಗ್ಗಡೆ

ಮಂಜಯ್ಯ ಹೆಗ್ಗಡೆಯವರಿಂದ ಅಧಿಕಾರ ಸ್ವೀಕರಿಸಿದ ಇಂದಿನ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು ೧೯೫೫ರಿಂದ ಅಧಿಕಾರದಲ್ಲಿದ್ದಾರೆ. ಅಂದಿನಿಂದಲೂ ಕ್ಷೇತ್ರದ ಉನ್ನತಿಗಾಗಿ ಹಗಲಿರುಳು ದುಡಿಯುತ್ತಿದ್ದಾರೆ. ಸರ್ವಧರ್ಮಗಳನ್ನೂ ಅಭಿಮಾನದಿಂದ ಕಾಣುವ ಇವರು ಸರಳತನದ ಪ್ರತೀಕ. ತಮ್ಮನ್ನು ಕಾಣಲು ಬರುವವರನ್ನು ನಗುಮೊಗದಿಂದ ಸ್ವಾಗತಿಸಿ ಸತ್ಕರಿಸುವುದು, ಸರಳವಾಗಿಯೇ ಸಹಾನುಭೂತಿಪರ ಮಾತುಗಳನ್ನಾಡುವುದು ಶ್ರೀ ಹೆಗ್ಗಡೆಯವರ ಶ್ರೇಷ್ಠ ಗುಣ. ಎಷ್ಟೇ ಮಂದಿ ಬರಲಿ, ಯಾವ ಧರ್ಮಿಯನೇ ಇರಲಿ, ಎಲ್ಲರಿಗೂ ಹಾರ್ದಿಕ ಸ್ವಾಗತ, ಆದರ ಸತ್ಕಾರ ಇವರಲ್ಲಿ ದೊರೆಯುತ್ತದೆ—ಎಂತಲೇ ಹೆಗ್ಗಡೆಯವರೊಡನೆ ಯಾತ್ರಿಕರೆಲ್ಲರೂ ಮನಬಿಚ್ಚಿಯೇ ಮಾತಾಡುತ್ತಾರೆ. ಅವರ ಅಮೃತ ವಚನದಿಂದ ತಮ್ಮ ಸಂಕಷ್ಟವನ್ನೇ ಮರೆಯುತ್ತಾರೆ.

ಶ್ರೀ ರತ್ನವರ್ಮ ಹೆಗ್ಗಡೆಯವರು ಅಭಿವೃದ್ಧಿ ಕಾರ್ಯಗಳನ್ನು ಆಳವಾಗಿ ಯೋಚಿಸಿ ತನ್ನ ಮನಸ್ಸಿನಲ್ಲಿ ಸ್ಪಷ್ಟವಾದ ಚಿತ್ರ ಮೂಡಿದ ಬಳಿಕವೇ ಕಾರ್ಯರೂಪಕ್ಕೆ ತರುವವರು. ದೇವಾಲಯದ ಒಳಗೂ ಹೊರಗೂ ಸರ್ವವಿಧದಲ್ಲಿಯೂ ಪರಿಶುದ್ಧತೆ, ಶುಭ್ರತೆ, ನಿರ್ಮಲತೆಗಳು ನೆಲಸಿದರೆ ಮಾತ್ರ ಅಲ್ಲಿ ದೈವತ್ವದ ಅಸ್ತಿತ್ವವಿರುವುದು. ಶ್ರೀ ಹೆಗ್ಗಡೆಯವರು ಈ ಬಗ್ಗೆ

ಶ್ರೀ

(ಏಳನೇ ಪುಟದಿಂದ)

ಧರ್ಮಕಾರ್ಯಗಳನ್ನು ಕಂಡು ಮೆಚ್ಚಿ ಕುಡುಮವನ್ನು 'ಧರ್ಮಸ್ಥಳ'ವೆಂದು ಕರೆದರು. ಅಂದಿನಿಂದ ಈ ಹೆಸರೇ ಸರ್ವಶ್ರುತವಾಗಿ ಬಂದಿದೆ.

ಹೀಗೆ ಕಾರಣಾಂತರಗಳಿಂದ ಸಾವಿರ ವರ್ಷಗಳಿಗೆ ಹಿಂದೆ ಧರ್ಮದೇವತೆಗಳ ಕಾರಣದಿಂದ ಪ್ರಾರಂಭವಾಗಿ ಮಾಧ್ವಯತಿಗಳಿಂದ ಪವಿತ್ರತಮವಾಗಿ ಬಂದ ಶ್ರೀ ಧರ್ಮಸ್ಥಳ ಕ್ಷೇತ್ರವು ಇಂದು ಸರ್ವಮತೀಯರಿಗೂ ಆದರಣೀಯವಾಗಿದೆ; ಇಲ್ಲಿನ ಮಹತ್ತಿಕೆಯು ಅರಿವಿಂದು ಎಲ್ಲರಿಗೂ ಇದೆ.

ಶ್ರೀ ಚಂದ್ರನಾಥ ಸ್ವಾಮಿಯ ಬಸದಿ

# ಸ್ವರ್ಗ – ಧರ್ಮಸ್ಥಳ

## ಬೆಳೆದು ಬರುತ್ತಿರುವ ಪುಣ್ಯಕ್ಷೇತ್ರ

ಟಷ್ಟು ಎಚ್ಚರಿಕೆ ವಹಿಸಿದ್ದಾರೆ ಶ್ರೀ ಕ್ಷೇತ್ರದ ಮಹಾದ್ವಾರವನ್ನು ಹೊಕ್ಕೊಡನೆಯೇ ಅಲ್ಲಿನ ಪವಿತ್ರತೆಯು ಪರಿಶುದ್ಧತೆಯು ಸಂಜ್ಞಾನವಾಗುವುದು, ಆದರಿಂದಲೇ ಭಕ್ತನ ಅಂತರಂಗದ ಕೊಳಕು ದೂರವಾಗುವುದು.

ಶ್ರೀ ಹೆಗ್ಗಡೆಯವರು ಮಹಾ ಯೋಜಕರು ಮಾತ್ರವಲ್ಲ, ಸಾಧ

ಕರೂ ಹೌದು ದೇವಾಲಯ ಕ್ಷೇತ್ರಗಳಲ್ಲಿ ಗತಾನುಗತಿಕವಾಗಿ ನಡೆದುಬಂದ ಸೇವೆ, ಧರ್ಮ, ಪೂಜೆ, ಉತ್ಸವ ಇತ್ಯಾದಿ ಧಾರ್ಮಿಕ ಸಂಪ್ರದಾಯಗಳಿಗೆ ಮತ್ತೆ ಪ್ರಾಣ ಪ್ರತಿಷ್ಠೆ ಮಾಡಿದರು ತಮ್ಮ ಹಿಂದಿನವರಾದ ಮಂಜಯ್ಯ ಹೆಗ್ಗಡೆಯವರು ಪ್ರಾರಂಭಿಸಿದ್ದ ವಸಂತ ಮಹಲನ್ನು ಇವರು ಪೂರ್ಣಮಾಡಿದರು. ದೇವರಿಗೆ ಬೆಳ್ಳಿಯ ರಥವನ್ನು ಒಪ್ಪಿಸಿದರು. ದೇವಳದ ಮಂಟಪ, ಗೋಪುರಗಳಿಗೆ ಬಣ್ಣದ ಇಟ್ಟಿಗೆ ಕಟ್ಟಿಸಿದರು ಶ್ರೀ ಗಣಪತಿ ದೇವರ ಬಾಗಿಲಿಗೆ ಮತ್ತು ದೇವಾಲಯದ ಹೊರ ಗೋಪುರದ ಕಂಬಗಳಿಗೆ ಬೆಳ್ಳಿಯನ್ನು ಹೊದಿಸಿದರು. ದೇವಾಲಯದ ಕೆರೆ, ಹೂದೋಟದ ಸುತ್ತಲೂ ಕಲ್ಲಿನ ಆವರಣ ಕಟ್ಟಿಸಿದರು. ಲಲಿತೋದ್ಯಾನ, ಅಣ್ಣಪ್ಪನ ಬೆಟ್ಟ, ನೆಲ್ಯಾಡಿ ಬೀಡು— ಈ ಪ್ರದೇಶಗಳು ನಿರಾಭರಣ ಸುಂದರವಾದುವು

ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿ ಸಂದರ್ಶಕ ಯಾತ್ರಾರ್ಥಿಗಳ ಸಂಖ್ಯೆಗನುವಾಗಿ ಅವರಿಗೆ ಉಳಕೊಳ್ಳುವ ವ್ಯವಸ್ಥೆಯಿರುವುದಿಲ್ಲ ಇದನ್ನು ಮನಗಂಡ ರತ್ನವರ್ಮರು ಅವರ ಸೌಕರ್ಯಕ್ಕಾಗಿ ಆಧುನಿಕ ಮಾದರಿಯಲ್ಲಿ ಚಿಕ್ಕ ಚಿಕ್ಕ ಕೋಣೆಗಳುಳ್ಳ ಛತ್ರಗಳ ಸಾಲನ್ನೇ ನಿರ್ಮಿಸಿದ್ದಾರೆ. ದೇವಾಲಯ— ಛತ್ರಗಳಿಗೆ ಇದು ವಿದ್ಯುದ್ದೀಪಗಳು ಬೆಳಕು ಬೀರುತ್ತವೆ ಪ್ರತಿಷ್ಠಿತ ಹಾಗೂ ಆಧ್ಯಮಹನೀಯರಿಗಾಗಿ ಪ್ರತ್ಯೇಕ ಛತ್ರದ ವ್ಯವಸ್ಥೆಯನ್ನು ನಾವಿಂದು ಧರ್ಮಸ್ಥಳದಲ್ಲಿ ನೋಡಬಹುದು.

ಕ್ಷೇತ್ರದ ದರ್ಶನಕ್ಕಾಗಿ ಬರುವ ಎಲ್ಲರಿಗೂ ಧರ್ಮಾರ್ಥ ವಸತಿ ಮತ್ತು ಭೋಜನ ಸೌಕರ್ಯಗಳು ಇಲ್ಲಿ ದೊರೆಯುತ್ತವೆ ಭೋಜನ ಬೇಡವಾದವರು ಪಡಿಯಕ್ಕಿಯನ್ನು ಪಡೆಯುತ್ತಾರೆ. ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಉಚಿತ ಊಟ ಹಾಕುತ್ತಾರೆ.

ಶ್ರೀ ಹೆಗ್ಗಡೆಯವರು ಧರ್ಮಾಭಿಮಾನಿಗಳು. ಅಂತೆಯೇ ಕಲೆ, ಸಾಹಿತ್ಯಗಳ ಪಕ್ಷಪಾತಿಗಳು. ಹುಟ್ಟು ಕೃಷಿಕರು ಸರಳ ಹೃದಯರು. ಇವುಗಳ ಪ್ರಭಾವ ಅವರ ಆಡಳಿತೆಯ ಮೇಲೂ ಬಿದ್ದಿದೆ ಕಲೆ – ಸಾಹಿತ್ಯ ಸೇವಾ ಸಂಸ್ಥೆಗಳ ಅವರಿಂದ ಉಪಕಾರ ಪಡೆಯುತ್ತಿವೆ ಕರ್ನಾಟಕ ವಿದ್ಯಾಲಯ ಹೈಸ್ಕೂಲು ಈ ವರ್ಷ ಜೂನಿಯರ್ ಸೆಕೆಂಡರಿ ಶಾಲೆಯಾಗಿದೆ. ದೇವಾಲಯದ ಉತ್ಪತ್ತಿಯನ್ನು ಬಂಡವಾಳವಾಗಿ ವಿನಿಯೋಗಿಸುವ ಯೋಜನೆ ಇವರದು. ಇದರಿಂದಾಗಿಯೇ ಅಲ್ಲಲ್ಲಿ ಕಟ್ಟಡ, ಕೃಷಿಕ್ಷೇತ್ರಗಳು, ತೆಂಗ,—ಅಡಿಕೆ ಬಾಳೆತೋಟಗಳ ದೇವಳದ ಹೆಸರಿನಲ್ಲಿದ್ದು ಅವು ಮುಂದಿಂದ ಆದಾಯವನ್ನು ಹೆಚ್ಚಿಸುತ್ತಿವೆ

ಶ್ರೀ ರತ್ನವರ್ಮ ಹೆಗ್ಗಡೆಯವರ ಯೋಜನೆ ದೊಡ್ಡದು ದೇವರು ದೊಡ್ಡವನು ಎಂಬ ದರಲ್ಲಿ ಅಚಲ ವಿಶ್ವಾಸವಿರುವ ಅವರು ತನ್ನ ದೊಡ್ಡ ಯೋಜನೆಯನ್ನು ದೊಡ್ಡವನಾದ ದೇವರು ದೊಡ್ಡದಾಗಿಯೇ ನಡೆಸುತ್ತಾನೆ ಎಂದು ನಂಬುವವರು.

ಶ್ರೀ ಕ್ಷೇತ್ರದಲ್ಲಿ ನೀರಿನ ಅಭಾವವನ್ನು ಕಂಡುಕೊಂಡ ಅವರು ನೀರು ಸರಬರಾಯಿಯ ಯೋಜನೆಯೊಂದನ್ನು ರೂಪಿಸಿದರು. ವಿಧಾನ ಸಭಾಧ್ಯಕ್ಷರೂ ಬೆಳ್ತಂಗಡಿ ಪ್ರದೇಶದ ಜನ ಪ್ರತಿನಿಧಿಗಳೂ ಆದ ಶ್ರೀ ವೈಕುಂಠ ಬಾಳಿಗಾ ಅವರ ಸಹಕಾರದಿಂದ ಈ ಯೋಜನೆಗೆ ಸರಕಾರದ ಮಂಜೂರಾತಿ ದೊರೆತಿದೆ ಸುಮಾರು ಎರಡು ಲಕ್ಷ ರೂಪಾಯಿಗಳ ಈ ಯೋಜನೆ ಸದ್ಯದಲ್ಲಿಯೇ ಕಾರ್ಯರೂಪಕ್ಕೆ ಬರುವ ಸಿರಿ ಕ್ಷೇಮನೆ ಆಗ ನೇತ್ರಾವತಿಯ ತೀರ್ಥ ಧರ್ಮಛತ್ರದಲ್ಲಿಯೇ ಭಕ್ತನಿಗೆ ದೊರೆಯುವುದು.

ಉಜಿರೆ ಮತ್ತು ಧರ್ಮಸ್ಥಳಗಳ ನಡುವಲ್ಲಿ ಕಾಲೇಜೊಂದನ್ನು ಸ್ಥಾಪಿಸುವ ಇನ್ನೊಂದು ಯೋಜನೆ ಇವರದ್ದು. ದೇವರು ನಡೆಸಿದರೆ ಮುಂದಿನ ಜೂನ್‌ನಿಂದಲೇ ಅವರು ಪ್ರಾರಂಭಿಸುವ ಇರಾದೆಯಿದೆ.



ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ
ಶ್ರೀ ರತ್ನವರ್ಮ ಹೆಗ್ಗಡೆ

‡ ‡

ಹಿರಿಯರಿಂದ ನಡೆದು ಬಂದ ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿಯೂ ಶ್ರೀ ಹೆಗ್ಗಡೆಯವರಿಗೆ ಆಸಕ್ತಿ ಹೆಚ್ಚು. ದಯೆಯೇ ಧರ್ಮದ ಮೂಲವೆಂದು ನಂಬಿದ ರತ್ನವರ್ಮ ಹೆಗ್ಗಡೆಯವರು ದಯಾಮಯರು ನಾಡಿನ ವಿಖ್ಯಾತ ವಿದ್ವಾಂಸರ ಜ್ಞಾನದ ಉಪಯೋಗವನ್ನು ಜನಸಾಧಾರಣರಿಗೂ ಮಾಡಿಕೊಡುವ ದಯೆ ತೋರಿದರೆ ಧರ್ಮ ಪ್ರಚಾರವಾಗ ಬಹುದ

ಹಿಂದಿನಿಂದಲೂ ಭಾರತೀಯ ದೇವಾಲಯಗಳು ಧರ್ಮಕ್ಷೇತ್ರಗಳ ಕಾಲಾಂತರದಲ್ಲಿ ಇವು ಪರಿಶುದ್ಧವಾಗಿ ತಮ್ಮ ಸ್ಥಾನಮಾನಗಳನ್ನು ಕಳೆದು ಕೊಂಡ ಪ್ರಸಂಗಗಳು. ಅನೇಕ. ಪಾವಿತ್ರ್ಯವಿರದಲ್ಲಿ ಪರಮಾತ್ಮನೆಂತ ಉಳಿದಾನು? ಆದರೆ ಧರ್ಮಕ್ಷೇತ್ರದ ಪಾವಿತ್ರ್ಯ ಕಳೆದ ಸಾವಿರ ವರ್ಷಗಳಿಂದಲೂ ಸುರಕ್ಷಿತವಾಗಿ ಉಳಿದು ಬಂದಿವೆ—ಎಂತಲೇ ಅಲ್ಲಿ ಪರಮಾತ್ಮನಿದ್ದಾನೆ ಧರ್ಮಾಧಿಕಾರಿಗಳ ಮೇಲೆ ಆತನ ಕೃಪೆ ಅಪಾರವಾಗಿದೆ.

ಇದರಿಂದಲೇ ಶ್ರೀ ರತ್ನವರ್ಮ ಹೆಗ್ಗಡೆಯವರ ಆಡಳಿತೆಯು ಯಾತ್ರಾರ್ಥಿಗಳಿಗೆ ಮೆಚ್ಚುಗೆಯಾಗಿದೆ.

ಶ್ರೀ ಸ್ವಾಮಿ ಮಂಜುನಾಥನ ಅನುಗ್ರಹ ತನ್ನ ಭಕ್ತ ಸಂದೋಹದ ಮೇಲೆ ಸದಾ ಉಳಿಯಲಿ.



ಶ್ರೀ ಕುಮಾರಸ್ವಾಮಿಯ ಗುಡಿ



ಹೊಸತಾಗಿ ನಿರ್ಮಿತವಾದ ಛತ್ರ

# ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು

## ಧರ್ಮಸ್ಥಳ, ದ. ಕನ್ನಡ.

ಮಹಾಶಯರೇ,

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ ಮೂವತ್ತಮೂರನೆಯ ಅಧಿವೇಶನವು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ೧೯೬೫ನೆಯ ಇಸವಿ ನವೆಂಬರ್ ತಿಂಗಳ ೨೧ ಮತ್ತು ೨೨ನೆಯ ತಾರೀಖುಗಳಲ್ಲಿ ನಡೆಯುವುದು. ಸರ್ವಧರ್ಮ ಸಮ್ಮೇಳನದ ಉದ್ಘಾಟನೆಯನ್ನು ಮೈಸೂರು ರಾಜ್ಯದ ಹಣಕಾಸು, ಅಬ್ಕಾರಿ ಮತ್ತು ವಾರ್ತಾ ಇಲಾಖೆಗಳ ಸಚಿವರಾದ ಸನ್ಮಾನ್ಯ **ಶ್ರೀಮಾನ್ ರಾಮಕೃಷ್ಣ ಹೆಗಡೆ** ಅವರು ತಾ. ೨೧-೧೧-೧೯೬೫ನೆಯ ಭಾನುವಾರ ಮಧ್ಯಾಹ್ನ ೨-೪೫ ಗಂಟೆಗೂ, ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ಮೈಸೂರು ರಾಜ್ಯದ ರೆವಿನ್ಯೂ ಸಚಿವರಾದ ಸನ್ಮಾನ್ಯ **ಶ್ರೀಮಾನ್ ಎಂ.ವಿ. ಕೃಷ್ಣಪ್ಪ** ಅವರು ತಾ. ೨೨-೧೧-೧೯೬೫ನೆಯ ಸೋಮವಾರ ಮಧ್ಯಾಹ್ನ ೩-೩೦ ಗಂಟೆಗೂ ನೆರವೇರಿಸಲು ದಯವಿಟ್ಟು ಸಮ್ಮತಿಸಿರುತ್ತಾರೆ.

ಈ ಸಮ್ಮೇಳನಗಳಿಗೆ ತಾವು ಆಗಮಿಸಬೇಕಾಗಿ ಪ್ರಾರ್ಥನೆ

### ಶ್ರೀ ಧರ್ಮಸ್ಥಳ ಲಕ್ಷ ದೀಪೋತ್ಸವ ಮತ್ತು ಸರ್ವಧರ್ಮ–ಸಾಹಿತ್ಯ ಸಮ್ಮೇಳನದ ವಿವರಗಳು

ಪ್ರತಿದಿನ ರಾತ್ರಿ ಗಂ. 10ರಿಂದ ದೀಪೋತ್ಸವ. ತಾ. 21 ಮತ್ತು 22 ಅಪರಾಹ್ನ ಗಂ. 4ರಿಂದ ಸಮ್ಮೇಳನ.

18–11–1965 (ಗುರುವಾರ) ಹೊಸಕಟ್ಟೆ ದೀಪೋತ್ಸವ.
ಯುವಕ ಕಲಾ ಮಂಡಲಿ, ಮಂಗಳೂರು, ಅವರಿಂದ 'ಮೋಹಪಾಶ' ಎಂಬ ನಾಟಕಾಭಿನಯ.

19–11–1965 (ಶುಕ್ರವಾರ) ಕೆರೆಕಟ್ಟೆ ದೀಪೋತ್ಸವ.
ಮಿತ್ರ ಕಲಾ ಮಂಡಲಿ, ಭದ್ರಾವತಿ, ಅವರಿಂದ 'ಮಸ್ತಕಾಭರಣ' ಎಂಬ ನಾಟಕಾಭಿನಯ.

21–11–1965 (ಶನಿವಾರ) ಉದ್ಯಾನವನದ ದೀಪೋತ್ಸವ.
(1) ನಾಗಸ್ವರ ಮತ್ತು ಸಂಗೀತ ವಿದ್ವಾಂಸರ ಕಲಾ ಗೋಷ್ಠಿ.
ಸಂಜೆ 6 ಗಂಟೆಯಿಂದ:
(2) ದಕ್ಷಿಣ ಕನ್ನಡ ಜಿಲ್ಲೆಯ ಸುಪ್ರಸಿದ್ಧ ಯಕ್ಷಗಾನ ಕಲಾವಿದರಿಂದ ತಾಳ-ಮದ್ದಳೆ.
ರಾತ್ರಿ 11 ಗಂಟೆಗೆ:
(3) ಬೆಂಗಳೂರು ಶ್ರೀ ರಾಜರಾಜೇಶ್ವರಿ ನಾಟಕ ಸಭಾ, ಅವರಿಂದ 'ಅಶೋಕ್ ಕುಮಾರ್' ಎಂಬ ನಾಟಕಾಭಿನಯ.

21-11-1965 (ಭಾನುವಾರ) ಕಂಚಿಮಾರುಕಟ್ಟೆ ದೀಪೋತ್ಸವ.

#### ಸರ್ವಧರ್ಮ ಸಮ್ಮೇಳನ

ಉದ್ಘಾಟಕರು:
**ಸನ್ಮಾನ್ಯ**
**ಶ್ರೀಮಾನ್ ರಾಮಕೃಷ್ಣ ಹೆಗಡೆಯವರು.**
ಅಧ್ಯಕ್ಷರು:
**ಶ್ರೀ ಶ್ರೀ ಶ್ರೀ ತಿರುಚಿ ಸ್ವಾಮಿಗಳು, "ಕೈಲಾಸ ಆಶ್ರಮ", ಬೆಂಗಳೂರು.**

ಮಧ್ಯಾಹ್ನ 2-45 ಗಂಟೆಗೆ:
ಪ್ರಾರ್ಥನೆ: ಶ್ರೀ ಬಿ. ಎಸ್. ರಾಮಾಚಾರ್ ಅವರು.
ಸ್ವಾಗತ: ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು.
ಸಂಗೀತ: ಸಂಗೀತ ವಿದ್ವಾನ್ ಶ್ರೀ ಎನ್. ಎಲ್. ಚೆಲುವರಾಜ್ ಮತ್ತು ಮಂಡಲಿಯವರು.

ಭಾಷಣಗಳು: ಸರ್ವಶ್ರೀ
(1) ಪ್ರೊ| ಯಂ. ಯಾಮುನಾಚಾರ್ಯರು, ಎಂ. ಎ.
–"ಭಾರತ ಸಂಸ್ಕೃತಿಯಲ್ಲಿ ಸರ್ವಧರ್ಮ ಸಮಭಾವನಾ ಪರಂಪರೆ".
(2) ಪ್ರೊ| ಟಿ. ಜಿ. ಕಲಘಟಗಿ, ಎಂ. ಎ., ಅವರು
—"ಪೌರ್ವಾತ್ಯದ ಧರ್ಮನಿಷ್ಠೆ-ಪಾಶ್ಚಿಮಾತ್ಯದ ವಿಚಾರನಿಷ್ಠೆ."
(3) ಮೌಲ್ವಿ ಸೈಯ್ಯದ್ ಕಾಸಿಮ್ ಅವರು
–"ಶಾಂತಿಯುತ ಸಹಜೀವನಕ್ಕೆ ಇಸ್ಲಾಂ ಧರ್ಮದ ಕೊಡುಗೆ."
(4) ಪಂಡಿತರತ್ನ ವಿದ್ಯಾವಾರಿಧಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು
–"ಶಿವಶರಣರ ವಿಶ್ವಧರ್ಮ."
(5) ಆಸ್ಥಾನ ವಿದ್ವಾನ್ ಶ್ರೀ ಎಸ್.ಬಿ.ಜಿನಚಂದ್ರ ಶಾಸ್ತ್ರಿಗಳು ನ್ಯಾಯತೀರ್ಥ
–"ಜೈನ ಸಿದ್ಧಾಂತದಲ್ಲಿ ಪರಧರ್ಮ ಸಹಿಷ್ಣುತೆ-ಸ್ಯಾದ್ವಾದ."
(6) ಪ್ರೊ| ಎಚ್. ಜಿ. ರಂಗಸ್ವಾಮಿ ಅಯ್ಯಂಗಾರ್, ಎಂ. ಎ., ಅವರು
–"ಬೌದ್ಧ ಧರ್ಮದ ಅಹಿಂಸಾವಾದ."
(7) ರೆವೆರೆಂಡ್ ಶ್ರೀ ಮ್ಯಾಥ್ಯೂ ಲೂಯಿಸ್ ಅವರು
–ಯೇಸುಕ್ರಿಸ್ತನ ಬೆಟ್ಟದ ಮೇಲಿನ ಉಪದೇಶ (Sermon on the Mount) ಮತ್ತು ಭಾರತೀಯರ ಪಂಚಶೀಲ."
(8) ಡಾ| ಎಸ್. ಎಂ. ಹುಣಸ್ಯಾಳ್, ಎಂ.ಎ.ಪಿಎಚ್‌ಡಿ. ಅವರು
–"ಅನುಭವ ಮಂಟಪದ ವಿಚಾರಧಾರೆ."
(9) ಮಿರ್ಜಿ ಅಣ್ಣಾರಾಯರು
–"ಮಾನವನು ದೇವನಾಗಲು ಧರ್ಮವೇ ದಾರಿದೀಪ."

ತಾ|| 22-11-1965ನೆಯ ಸೋಮವಾರ ಗೌರಿಮಾರುಕಟ್ಟೆ ದೀಪೋತ್ಸವ.

#### ಸಾಹಿತ್ಯ ಸಮ್ಮೇಳನ

ಉದ್ಘಾಟಕರು:
**ಸನ್ಮಾನ್ಯ**
**ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು**
ಅಧ್ಯಕ್ಷರು:
**ಶ್ರೀಮಾನ್ ಕಡೆಂಗೋಡ್ಲು ಶಂಕರ ಭಟ್ಟರು, ಮಂಗಳೂರು.**

ಮಧ್ಯಾಹ್ನ 3–30 ಗಂಟೆಗೆ:
ಪ್ರಾರ್ಥನೆ: ಶ್ರೀ ಬಿ. ಎಸ್. ರಾಮಾಚಾರ್ ಅವರು.
ಸ್ವಾಗತ: ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು.
ಸಂಗೀತ: ಸಂಗೀತ ಸರಸ್ವತಿ ಕುಮಾರಿ ಎನ್. ಪ್ರೇಮ, ಬಿ.ಎಸ್‌ಸಿ. ಮತ್ತು ಮಂಡಲಿಯವರಿಂದ.

ಭಾಷಣಗಳು: ಸರ್ವಶ್ರೀ
(1) ಪ್ರೊ|| ಸಂ. ಶ. ನಾಗರಾಜಯ್ಯ, ಎಂ. ಎ., ಅವರು
—"ಹಿಂದಿನ, ಇಂದಿನ ಮತ್ತು ಮುಂದಿನ ಸಾಹಿತ್ಯದೃಷ್ಟಿ."
(2) ಬಿ. ಎ. ಸನದಿ, ಬಿ. ಎ., ಬಿ. ಇಡಿ., ಅವರು
—"ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರಾಭಿಮಾನ."
(3) ಡಾ| ಎಚ್. ಕೆ. ರಂಗನಾಥ್, ಎಂ. ಎ., ಪಿ.ಎಚ್‌ಡಿ., ಅವರು
—"ಕನ್ನಡ ರಂಗಭೂಮಿ ಓಜಸ್ಸು-ತೇಜಸ್ಸು."
(4) ಪ್ರೊ|| ಸಿ. ಎನ್. ಮಂಗಳ, ಎಂ. ಎ., ಅವರು
—"ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಸ್ಥಾನ."
(5) ಅ. ನ. ಕೃಷ್ಣರಾಯರು –"ಕನ್ನಡಿಗರ ಪೌರುಷ ಜೀವನ."
(6) ಕುಮಾರಿ ಎಸ್. ವಿಮಲ, ಬಿ. ಎ., ಅವರು
—"ಕುಂವೆಂಪು ಅವರ ಚಿತ್ರಾಂಗದೆ."
(7) ಬಿ. ಎಸ್. ರೇಣುಕ ಪ್ರಸಾದ್, ಬಿ. ಎ., ಎಲ್ ಎಲ್. ಬಿ., ಅವರು
—'ಕನ್ನಡ ಸಾಹಿತ್ಯಕ್ಕೆ ವೀರಶೈವರ ಕೊಡುಗೆ.'
(8) ಕೆ. ಎಸ್. ಧರಣೇಂದ್ರಯ್ಯ, ಎಂ. ಎ., ಬಿ. ಟಿ., ಅವರು
—"ನಾಗಚಂದ್ರನ ದುರಂತ ರಾವಣ."
(9) ಕೈಯ್ಯಾರ ಕಿಂಞಣ್ಣ ರೈ ಅವರು
—"ರಾಷ್ಟ್ರ ರಕ್ಷಣೆಯಲ್ಲಿ ಕವಿಗಳ ಪಾತ್ರ."

ತಾ. 23-11-65ನೇ ಮಂಗಳವಾರ ಉದ್ಯಾನವನದಲ್ಲಿ
ಸಮವಸರಣ ಪೂಜೆ.
ಶ್ರೀ ಕ್ಷೇತ್ರ ಧರ್ಮಸ್ಥಳ ಮೇಳದ ಆಟ.

ಕಾ. ಸ. ಧರಣೇಂದ್ರಯ್ಯ,
ಗೌರವ ಕಾರ್ಯದರ್ಶಿ.

**ಡಿ. ರತ್ನವರ್ಮ ಹೆಗ್ಗಡೆ,**
ಅಧ್ಯಕ್ಷ, ಸ್ವಾಗತ ಸಮಿತಿ.

### ಸುಖಾಂತದಲ್ಲಿ ಕೊನೆಗೊಂಡ

# ತುಂಗಭದ್ರಾ ಪುರಾಣ

ಪಶ್ಚಿಮದ ಕಾಡು ಮೇಡುಗಳಲ್ಲಿ ಧುಮುಕಿ ಬಯಲಿಗಿಳಿದು ಪೂರ್ವ ದಿಕ್ಕಿನಲ್ಲಿ ಕಡಲು ಸೇರುವ ತುಂಗಭದ್ರಾ ನದಿಗೆ ತಾನು ಜನೋಪಯೋಗಿಯಾಗಬೇಕು ಎಂಬ ಆಸೆ. ಇಂಥ ಸೇವೆ ಸಾಧ್ಯವಾಗುವುದು ಜಲಾಶಯದ ನಿರ್ಮಾಣದಿಂದ.

ಇದಕ್ಕೋಸ್ಕರ ಇಪ್ಪತ್ತು ವರ್ಷಗಳಿಗೂ ಹಿಂದೆ ಯೋಜನೆಯೊಂದು ಸಿದ್ಧವಾಯಿತು. ಆಗ ಅಸ್ತಿತ್ವದಲ್ಲಿದ್ದ ಮದರಾಸು ರಾಜ್ಯವೂ ಹೈದರಾಬಾದ್ ಸಂಸ್ಥಾನವೂ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಒಂದು ಒಪ್ಪಂದಕ್ಕೆ ಬಂದವು.

೧೯೪೫ರಲ್ಲಿ ಕೆಲಸ ಶುರುವಾಯಿತು. ಜಲಾಶಯದ ಬಲಭಾಗದ ಅರ್ಧವನ್ನೂ ಬಲದಂಡೆಯ ಕಾಲುವೆಯನ್ನೂ ಮದರಾಸು ರಾಜ್ಯ ನಿರ್ಮಿಸಿತು. ಎಡ ಅರ್ಧವನ್ನೂ ಎರಡನೆಯ ಕಾಲುವೆಯನ್ನೂ ಹೈದರಾಬಾದ್ ಸಂಸ್ಥಾನ ಕಟ್ಟಿತು. ನಿರ್ಮಾಣಕಾರ್ಯ ಪೂರ್ತಿಯಾಗಲು ಒಂಭತ್ತು ವರ್ಷಗಳು ಹಿಡಿದವು.

ಈ ಮಧ್ಯೆ ರಾಜಕೀಯ ಸ್ಥಿತ್ಯಂತರಗಳಾದುವು. ೧೯೫೩ರಲ್ಲಿ ಆಂಧ್ರ ರಾಜ್ಯದ ಸ್ಥಾಪನೆಯಾಯಿತು. ೧೯೫೬ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಯಿತು. ಇದರ ಪರಿಣಾಮವಾಗಿ, ಬಲದಂಡೆಯ ಕಾಲುವೆಯು ಮೈಸೂರು ಆಂಧ್ರಗಳೆರಡಕ್ಕೂ ನೀರುಣಿಸಬೇಕಾದ ಪ್ರಮೇಯ ಒದಗಿತು. ಹೀಗಾಗಿ, ಜಲಾಶಯದ ಬಲ ಅರ್ಧವನ್ನೂ ಆಂಧ್ರ ರಾಜ್ಯದ ಎಲ್ಲೆಯ ತನಕ ಬಲಕಾಲುವೆಯನ್ನೂ ನೋಡಿಕೊಳ್ಳುವುದಕ್ಕಾಗಿ, ತುಂಗಭದ್ರಾ ಮಂಡಲ ಎಂಬ ಸ್ವತಂತ್ರ ಸಂಸ್ಥೆಯೊಂದು ರಚಿಸಲ್ಪಟ್ಟಿತು. ಜಲಾಶಯದ ಎಡ ಅರ್ಧ ಹಾಗೂ ಎಡದಂಡೆಯ ಕಾಲುವೆ ಸಂಪೂರ್ಣವಾಗಿ ಮೈಸೂರು ರಾಜ್ಯದ್ದಾಯಿತು.

**ರೂಪಲಕ್ಷಣಗಳು**

ವಿಜಯನಗರ ಸಾಮ್ರಾಜ್ಯದ ಅವಶೇಷಗಳಿನ್ನೂ ಮೂಕರೋದನ ನಡೆಸುತ್ತಿರುವ ಹಂಪೆಗೆ ಪ್ರತಿಯಾಗಿ ಹೊಸಪೇಟೆಗೆ ಮೂರುವರೆ ಮೈಲುಗಳ ದೂರದಲ್ಲಿ (ಬಳ್ಳಾರಿ ಜಿಲ್ಲೆ) ಈ ಆಧುನಿಕ ದೇವಾಲಯ ವೈಭವದಿಂದ ತಲೆ ಎತ್ತಿ ನಿಂತಿದೆ. ಹುಬ್ಬಳ್ಳಿಯಿಂದ ಹೊಸಪೇಟೆಗೆ ೯೦ ಮೈಲು ದೂರ.)

ಈ ಜಲಾಶಯದ ಒಟ್ಟು ಉದ್ದ ೮,೦೦೬ ಅಡಿಗಳು; ಎತ್ತರ ೧,೬೪೦ ಅಡಿಗಳು. ಜಲಾಶಯದ ಪ್ರದೇಶ ೧೧೦, ೮೮೦ ಚದರ ಮೈಲುಗಳು. ನಿರ್ಮಾಣ ಕಾಲದಲ್ಲಿ ಮುಳುಗಿಹೋದ ಗ್ರಾಮಗಳು ೯೦. ಬೇರೆ ಸ್ಥಳಗಳಿಗೆ ವಲಸೆಹೋಗಬೇಕಾಗಿ ಬಂದ ರೈತರ ಸಂಖ್ಯೆ 54,452.

**ಅಷ್ಟು ನೀರು, ಇಷ್ಟು ವಿದ್ಯುತ್ತು**

ತುಂಗಭದ್ರಾ ಜಲಾಶಯದ ಮುಖ್ಯ ಉದ್ದೇಶ ನೀರಾವರಿ; ಹಲವು ಸಹಸ್ರ ಎಕರೆ ನೆಲಕ್ಕೆ ನೀರುಣಿಸುವುದು ಜತೆಯಲ್ಲಿಯೇ, ರಭಸದಿಂದ ಹರಿಯುವ ನೀರಿನಿಂದ ಸ್ವಲ್ಪ ಪ್ರಮಾಣದಲ್ಲಿ ವಿದ್ಯುತ್ತಿನ ಉತ್ಪಾದನೆಯೂ ನಡೆಯುತ್ತದೆ.

ಇದಕ್ಕೋಸ್ಕರ ಜಲಾಶಯದ ಕೆಳಮಗ್ಗುಲಲ್ಲಿ ಎರಡು ವಿದ್ಯುದಾಗಾರಗಳಿವೆ. ಇನ್ನೆರಡು ವಿದ್ಯುದಾಗಾರಗಳು ಇನ್ನೂ ಕೆಳಕ್ಕೆ ಹಂಪೆಯ ಬಳಿಯಲ್ಲಿವೆ.

ಜಲಾಶಯದ ಬಳಿ ಉತ್ಪಾದನೆಯಾಗುವ ವಿದ್ಯುತ್ತು ಎಡ ಬಲಗಳಲ್ಲಿರುವ--ಅತ್ತ ರಾಯಚೂರು ಜಿಲ್ಲೆ, ಇತ್ತ ಬಳ್ಳಾರಿ ಜಿಲ್ಲೆ—ಅನೇಕ ಕೈಗಾರಿಕೋದ್ಯಮಗಳನ್ನು ನಡೆಸಲು ಉಪಯೋಗವಾಗುತ್ತಿದೆ.

ಕೆಳಗೆ ಉತ್ಪಾದಿಸಲ್ಪಡುವ ವಿದ್ಯುತ್ತು ಆಂಧ್ರ ಪ್ರದೇಶದಲ್ಲಿ ವಿನಿಯೋಗವಾಗುತ್ತಿದೆ.

**ಎಡ - ಬಲ ಕಾಲುವೆಗಳು**

ಎಡ ದಂಡೆಯ ಕಾಲುವೆಯ ಉದ್ದ ೧೪೧ ಮೈಲು. ರಾಯಚೂರು ಜಿಲ್ಲೆಯ ೫,೮೦,೦೦೦ ಎಕರೆಗಳಿಗೆ ಅದು ನೀರುಣಿಸುತ್ತದೆ. ಆರಂಭದಲ್ಲಿ ಕೊರಕಲು ಜಾಗದಲ್ಲಿ ಹರಿದು ಕೊನೆಯ ಗುಡ್ಡವನ್ನು ೩,೫೫೭ ಅಡಿ ಉದ್ದದ ಸುರಂಗದ ಮೂಲಕ ಹಾದು ಕಾಲುವೆ ಬಯಲು ಪ್ರದೇಶಕ್ಕೆ ಬರುತ್ತದೆ. ೨೪ನೆಯ ಮೈಲಿನಿಂದಾಚೆಗೆ ದೋಣಿ ಸಾರಿಗೆಗೂ ಕಾಲುವೆ ಉಪಯುಕ್ತವಾಗಿದೆ.

ಬಲ ದಂಡೆಯ ಕೆಳಮಟ್ಟದ ಕಾಲುವೆಯ ಆರಂಭದ ೧೪ ಮೈಲುಗಳನ್ನು "ವಿದ್ಯುತ್ ಕಾಲುವೆ" ಎನ್ನುತ್ತಾರೆ. ಇದು ಹಂಪೆಯ ವಿದ್ಯುದಾಗಾರದಲ್ಲಿ ಕೊನೆಗಾಣುತ್ತದೆ. ಬಲದಂಡೆಯ ನೆಲ ಮಟ್ಟದ ಕಾಲುವೆ ವಾಸ್ತವವಾಗಿ ಆರಂಭವಾಗುವುದು ವಿದ್ಯುದಾಗಾರದಲ್ಲಿ ಆಚೆಯಿಂದ. ಇದರ ಉದ್ದ ೨೦೩ ಮೈಲು. ಬಳ್ಳಾರಿ; ಕರ್ನೂಲು ಜಿಲ್ಲೆಗಳನ್ನು ಇದು ಹಾದು ಹೋಗುತ್ತದೆ. ಇದು ನೀರು ಹಾಯಿಸುವ ಪ್ರದೇಶದ ವಿಸ್ತಾರ ೨,೫೦,೦೦೦ ಎಕರೆ. ಮೊದಲ ಆರು ಮೈಲು ಕಾಲುವೆ ಎತ್ತರ ತಗ್ಗುಗಳನ್ನು ದಾಟಿ ಕೊನೆಯ ಬೆಟ್ಟವನ್ನು ೧,೧೦೦ ಅಡಿಗಳ ಸುರಂಗ ಮಾರ್ಗವಾಗಿ ದಾಟಿ ಬಯಲನ್ನು ತಲುಪುತ್ತದೆ.

ಬಲದಂಡೆಯ ಎತ್ತರ ಮಟ್ಟದ ಕಾಲುವೆ ಜೂನ್‌ನಿಂದ ಅಕ್ಟೋಬರ್ ತನಕ ಮಾತ್ರ ಬಳಕೆಯಲ್ಲಿರುತ್ತದೆ. ಇದರ ಉದ್ದ ೧೨೨ ಮೈಲು. ೧೧೬ನೆಯ ಮೈಲಿನಲ್ಲಿ ೧,೨೫೪ ಕ್ಯೂಸೆಕ್ಸ್ ನೀರನ್ನು ಪೆನ್ನಾರ್ ನದಿಗೆ ಇದು ಬಿಡುತ್ತದೆ. ಈ ಕಾಲುವೆಯಿಂದ ಮೈಸೂರಿನ ೨,೦೦,೦೦೦ ಎಕರೆಗಳಿಗೂ ಆಂಧ್ರದ ೨,೫೧,೪೦೦ ಎಕರೆಗಳಿಗೂ ನೀರು ದೊರೆಯುತ್ತದೆ.

**ಈ ವರ್ಷದ ಒಪ್ಪಂದ**

ಈ ಜಲಾಶಯದ ಮುಖ್ಯ ಉದ್ದೇಶ ನೀರಾವರಿಯಾಗಿರುವುದರಿಂದ ಮಿಗಿತಾಯವಾಗುವ ನೀರನ್ನು ಮಾತ್ರ ವಿದ್ಯುಚ್ಛಕ್ತಿ ಉತ್ಪಾದನೆಗೆ ಬಳಸಬೇಕೆಂಬುದು ನ್ಯಾಯ. ಹುಬ್ಬಳ್ಳಿಯಿಂದ ಮುನಿರಾಬಾದಿನ ತನಕ ವಿದ್ಯುತ್ ವಾಹಕ ತಂತಿಗಳನ್ನೆಳೆದರೆ ಶರಾವತಿಯ ವಿದ್ಯುತ್ ಆ ಪ್ರದೇಶಕ್ಕೆ ತಲುಪುತ್ತದೆ. ಆಗ ಜಲಾಶಯದ ಬಳಿ ಇರುವ ವಿದ್ಯುದಾಗಾರಗಳನ್ನು ಮುಚ್ಚಬಹುದು.

ಸದ್ಯಕ್ಕಂತೂ ಎಡ ಬಲ ಕಾಲುವೆಗಳಲ್ಲಿ ನೀರು ತುಂಬಿ ಹರಿದ ಮೇಲೆ ಉಳಿದುದನ್ನು ಎರಡನೆಯ ಬೆಳೆಗಾಗಿ (ಸುಮಾರು ಒಂದು-ಒಂದೂವರೆ ಲಕ್ಷ ಎಕರೆ) ಆಂಧ್ರಕ್ಕೆ ಕೊಡಲು ಮೈಸೂರು ಒಪ್ಪಿದೆ. ಹೀಗೆ ನೋಡುವುದರಿಂದ ೨೫ ಮೆಗಾವ್ಯಾಟ್‌ಗಳಷ್ಟು ವಿದ್ಯುತ್ತಿನ ಉತ್ಪಾದನೆ ಜಲಾಶಯದ ಬಳಿಯ ವಿದ್ಯುದಾಗಾರಗಳಲ್ಲಿ ಕಡಮೆಯಾಗುತ್ತದೆ. ಇದನ್ನು ತಾನು ಪೂರೈಸುವುದಾಗಿ ಆಂಧ್ರ ಭರವಸೆ ನೀಡಿದೆ.

ಈ ಅನ್ಯೋನ್ಯ ಸಹಕಾರ ಪ್ರಶಂಸನೀಯ.




ಧರ್ಮದೀಪ

# ಶ್ರದ್ಧೆ ಮತ್ತು ಬುದ್ಧಿ

ಬುದ್ಧಿಗೆ ಶ್ರೇಷ್ಠ ಸ್ಥಾನವಿರುವಲ್ಲಿ ಸಂದೇಹವಿಲ್ಲ. ಆದರೆ ಕೆಲವು ಪ್ರಸಂಗಗಳಲ್ಲಿ ಅದು ಕನಿಷ್ಠ ಸ್ಥಾನವನ್ನು ಪಡೆಯುವುದು. ಉದಾಹರಣೆಗಾಗಿ ಹೇಳುವದಾದರೆ ದೇವನೊಬ್ಬನಿರುವನೆಂದು ಹೇಳುವಲ್ಲಿ ಬುದ್ಧಿಗಿಂತ ಶ್ರದ್ಧೆಯ ಸ್ಥಾನವೇ ಹೆಚ್ಚಿನದಾಗುತ್ತದೆ. ದೇವರ ಇರುವಿಕೆಯ ಬಗೆಗೆ ಅದೆಷ್ಟೋ ತರ್ಕವಿತರ್ಕಗಳನ್ನು ಮಾಡಲು ಬುದ್ಧಿಯು ಮುಂದೆ ಬಂದರೂ ಕೊನೆಗೆ ಅದಕ್ಕೆ ಸೋಲುಂಟಾಗುವದು. ಕೆಲವನ್ನು ಕಂಡು ನಂಬಬೇಕಾಗಿದ್ದರೂ ಕೆಲವನ್ನು ನಂಬಿಯೇ ಕಾಣಬೇಕಾಗುವದು. ಬುದ್ಧಿಯನ್ನು ಕಳೆದ ಕೊಂಡವನು ಬದುಕಲು ಅವಕಾಶವಿದೆ. ಆದರೆ ನಂಬಿಗೆಯನ್ನು ಕಳೆದ ಕೊಂಡವನಿಗೆ ಬದುಕಲು ಸಾಧ್ಯವಿಲ್ಲ. ಶ್ರದ್ಧೆಗೆ ಬುದ್ಧಿ ಸಹಾಯ ನೀಡುವವಾದರೆ ಅದಕ್ಕೆ ಮತ್ತಷ್ಟು ಗೌರವ ಉಂಟಾಗುವದು.

ಬುದ್ಧಿಗೆ ನಿಲುಕದ ವಿಷಯಗಳನ್ನು ಶ್ರದ್ಧೆಯು ಗ್ರಹಿಸುತ್ತದೆ. ಶ್ರದ್ಧೆಯಿಂದಲೆ ಕಲ್ಲು ದೇವರಾಗುತ್ತಾನೆ. ಶ್ರದ್ಧೆ ಅನಿರ್ವಚನೀಯವಾದ ಶಕ್ತಿ ಎಂದೇ ಹೇಳಬಹುದು.

ಬುದ್ಧಿವಂತರ ಅಂತಃಕರಣದಲ್ಲಿ ಅಶಾಂತಿ ಅಸಮಾಧಾನಗಳು ನೆಲೆಯಾಗಿ ನಿಲ್ಲಲವಕಾಶ ದೊರೆಯುವಂತೆ ಶ್ರದ್ಧಾವಂತರಾದವರ ಹೃದಯದಲ್ಲಿ ಶಾಂತಿ ಸಮಾಧಾನಗಳು ಚಿರಸ್ಥಾಯಿಯಾಗಿ ಉಳಿಯಲು ಅವಕಾಶ ದೊರಕುವದು. ಶ್ರದ್ಧೆಯಿಲ್ಲದ ಬುದ್ಧಿಯನ್ನು ಪಡೆದವರು ನಿಜವಾಗಿಯೂ ಮಹಾ ದುರ್ಭಾಗ್ಯರೆಂದೇ ಹೇಳಬೇಕು.

ನಮ್ಮ ನಾಡಿನಲ್ಲಿ ಹಿಂದೆ ಆಗಿಹೋದ ಅನೇಕ ಜನ ದಾರ್ಶನಿಕರು ತಮ್ಮ ಸುತೀಕ್ಷ್ಣವಾದ ಬುದ್ಧಿಯನ್ನು ತತ್ವ ವಿಚಾರಕ್ಕಾಗಿ ಬಳಸಿಕೊಂಡಿದ್ದರೂ ಕೊನೆಗೆ ಶ್ರದ್ಧೆಗೆ ಮರೆಹೊಕ್ಕ ಸಂಗತಿ ಸ್ಪಷ್ಟವಿದೆ. ಈ ಬಗ್ಗೆ ಅದ್ವಿತೀಯ ಬುದ್ಧಿವಂತರೆನಿಸಿಕೊಂಡ ಶಂಕರಾಚಾರ್ಯರನ್ನೇ ದೃಷ್ಟಾಂತವಾಗಿಟ್ಟುಕೊಳ್ಳಬಹುದು.

ಆಸೇತು ಹಿಮಾಲಯದ ಪರ್ಯಂತರ "ಜ್ಞಾನಾದೇವತು ಕೈವಲ್ಯಂ" ಎಂದು ಸಾರಿ ಅದ್ವೈತಜ್ಞಾನದ ಧ್ವಜವನ್ನು ಹಾರಿಸಿದ ಅವರು ಕೊನೆಗೆ "ಭಕ್ತಿಃ ಕಿಂ ನ ಕರೋತ್ಯಹೋ ವನಚರೋ ಭಕ್ತಾವತಂಸಾಯತೇ" ಭಕ್ತಿ ಏನು ಮಾಡಲಾರದು! ಒಬ್ಬ ಕಾಡು ಮನುಷ್ಯನನ್ನು ಕೂಡ ಭಕ್ತ ಶ್ರೇಷ್ಠನನ್ನಾಗಿ ಮಾಡಿತು ಎಂದು ಶ್ರದ್ಧೆಯ ಮಹಿಮೆಯನ್ನು ಮುಕ್ತ ಕಂಠದಿಂದ ಒಪ್ಪಿಸಿದ್ದಾರೆ. ಬುದ್ಧಿವಾದದ ಪ್ರಾಬಲ್ಯದ ಇಂದಿನ ಯುಗದಲ್ಲಿ ಶ್ರದ್ಧೆಯ ಮಹಿಮೆಯನ್ನು ಅರಿತುಕೊಳ್ಳುವದು ಒಂದು ಮಹಾ ಭಾಗ್ಯವೇ ಆಗಿರುವದು. ಎಲ್ಲಿ ಬುದ್ಧಿ ಶ್ರದ್ಧೆಗಳೆರಡು ಸಮತೂಕದಲ್ಲಿರುವವೋ ಅಲ್ಲಿ ಎಲ್ಲವೂ ಇರುವುದು, ಅದು ಸಂಪೂರ್ಣತೆಯ ಲಕ್ಷಣ. ಬುದ್ಧಿಗಿಂತ ಶ್ರದ್ಧೆಯು ಮೇಲಾದುದೆಂಬುದನ್ನೇ ಯಾರೂ ನಿರಾಕರಿಸಲು ಸಾಧ್ಯವಿಲ್ಲ. ಬುದ್ಧಿ ಕುಂಠಿತವಾದಲ್ಲಿ ಶ್ರದ್ಧೆಯು ಮಾರ್ಗದರ್ಶನ ಮಾಡಿಕೊಡುವುದು. (ಸಾ)

## ಗಾಂಧೀಜಿಯವರ ಜೀವನದಿಂದ

# ನಮಗಿರುವ ಪಾಠ

ಲೇ:- ಶ್ರೀ ಕೆ. ತ್ರಿವೇದಿ.

೧. ಗಾಂಧಿಯವರು ೩೭ ವರ್ಷ ವಯಸ್ಸಿನಲ್ಲೇ ಬ್ರಹ್ಮಚರ್ಯ ವ್ರತ ಹಿಡಿದರು. ತಮ್ಮ ಹೆಂಡತಿಯನ್ನು ತಾಯಿಯಂತೆ ನೋಡಹತ್ತಿದರು. ಕೊನೆಯ ವರೆಗೂ ತನುಮನ ವಚನದಿಂದ ಈ ವ್ರತ ಪರಿಪಾಲಿಸಿ ತಾವೂ ನಿರ್ಭಯರಾದರು. ಇತರರನ್ನೂ ನಿರ್ಭಯಗೊಳಿಸಿದರು.

೨. ತಮ್ಮ ಹಾಗೂ ತಮ್ಮ ಪರಿವಾರದ ಯಾವತ್ತೂ ಕೆಲಸಗಳನ್ನು ಸ್ವತಃ ಮಾಡುವ ನಿಶ್ಚಯಮಾಡಿ ತಮ್ಮ ನಿತ್ಯ ಜೀವನದಲ್ಲಿ ಸ್ವತಂತ್ರತೆ ಮತ್ತು ಸ್ವಾವಲಂಬನವನ್ನು ಸಾಧಿಸಿದರು. ವ್ಯಕ್ತಿಗತ ಸೇವೆಗಾಗಿ ನೌಕರರನ್ನು ಇರಿಸಲಾಗದೆಂಬ ಪಂಪಾಠ ಹಾಕಿದರು. ಎಲ್ಲರನ್ನೂ ಬಂಧು, ಮಿತ್ರ, ಸಹಾಯಕರಂತೆ ನೋಡುವ ಸಾಧನೆಗೆ ಇದು ನಾಂದಿಯಾಯಿತು.

೩. ಅವರು ಸ್ವೇಚ್ಛೆಯಿಂದ ಬಡತನ ಸ್ವೀಕರಿಸಿ ತ್ಯಾಗದ ಮಹಿಮೆಯನ್ನು ಬೆಳಗಿಸಿದರು. ಭೋಗ ಬಿಟ್ಟು ಸೇವೆ ಮತ್ತು ಪರೋಪಕಾರದ ವ್ರತತೊಟ್ಟರು. ದರಿದ್ರ ನಾರಾಯಣನ ಉಪಾಸಕರಾದರು. ತಮ್ಮ ಆವಶ್ಯಕತೆಗಳನ್ನು ಪರಮಾವಧಿ ಕಡಿಮೆ ಮಾಡಿದರು. ಸಂಯಮ ಮತ್ತು ಸಾದಾತನವೇ ಅವರ ಧ್ಯಾನ ಮಂತ್ರವಾಯಿತು. ತಾಕ ಮಾಡಿ ಉಣ್ಣುವ, ತಾಕಮಾಡಿ ಬಟ್ಟೆ ಧರಿಸುವ, ತಾಕಮಾಡಿಯೇ ಮಾತಾಡುವ ಮತ್ತು ಬರೆಯುವ ಮಾದರಿ ಹಾಕಿಕೊಟ್ಟರು.

೪. ಇಡೀ ಜೀವ ಸೃಷ್ಟಿಯೊಡನೆ ಆತ್ಮೀಯತೆ ಬೆಳೆಸಿದರು. ಇಡೀ ಪ್ರಪಂಚವೇ ಅವರ ಪರಿವಾರವಾಯಿತು. ಮನುಷ್ಯರ ಬಗ್ಗೆ ವಹಿಸುವಷ್ಟೇ ಚಿಂತೆಯನ್ನು ಹಾವು, ಚೇಳು, ಪಶುಪಕ್ಷಿ, ಗಿಡಬಳ್ಳಿ, ಕಾಗದ, ಪೆನ್ಸಿಲು ಹಾಗೂ ನೀರು ಮತ್ತು ಮಣ್ಣುಗಳ ಬಗ್ಗೂ ಅವರು ವಹಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ಜಡ ಚೇತನವೆಂಬ ಭೇದವೇ ಇರಲಿಲ್ಲ. ಒಮ್ಮೆ ಅವರದಾದ ಮನುಷ್ಯ ಹಾಗೂ ವಸ್ತುವು ಕೊನೆಯ ವರೆಗೂ ಅವರದಾಗಿಯೇ ಉಳಿಯಿತು.

೫. ಅವರು ಯಾರೊಬ್ಬರನ್ನೂ ತಮ್ಮ ವೈರಿಯೆಂದು ಭಾವಿಸಲೇ ಇಲ್ಲ. ದ. ಆಫ್ರಿಕೆಯಲ್ಲಿ ಅವರನ್ನು ಬಿಳಿಯರು ಹೊಡೆದರು, ಬಡೆದರು, ಅವಮಾನಗೊಳಿಸಿದರು. ಅವರ ಕೊಲೆಮಾಡಲೆತ್ನಿಸಿದರು. ಆತಮ್ ಎಂಬ ಪಠಾಣನು ಹೊಡೆದಾಗ ಅವರ ಹಲ್ಲು ಮುರಿದವು. ತುಟಿ ಹರಿಯಿತು, ತಲೆ ಒಡೆಯಿತು, ಮತ್ತು ಅವರು ಎಚ್ಚರ ತಪ್ಪಿ ಬಿದ್ದರು. ಇಷ್ಟಾಗಿಯೂ ಅವರು ಅವರನ್ನು ಕ್ಷಮಿಸಿ ಅವರ ಕಲ್ಯಾಣವನ್ನೇ ಬಯಸಿದರು.

೬. ದ. ಆಫ್ರಿಕೆಯಲ್ಲಾಗಲೀ ಭಾರತದಲ್ಲಿಯೇ ಆಗಲಿ ಅನ್ಯಾಯವನ್ನು ಅತ್ಯಾಚಾರಗಳನ್ನು ಪ್ರತಿಭಟಿಸುವಾಗ ತಾವೂ ತಮ್ಮ ಬೆಂಬಲಿಗರೂ ಅತ್ಯಂತ ಸಂಯಮದಿಂದ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಒಂದಿಷ್ಟು ಕೂಡ ಶೈಥಿಲ್ಯ, ದೌರ್ಬಲ್ಯ ಕಂಡರೆ ಜಾಗೃತೆಪಡಿಸದೆ ಬಿಡುತ್ತಿರಲಿಲ್ಲ. ತಮ್ಮ ಕಡ್ಡಿಯಂತ ತಪ್ಪನ್ನೂ ಗುಡ್ಡದಂತೆ ಮಾಡಿ ಪ್ರಾಯಶ್ಚಿತ್ತ ತೆಗೆದುಕೊಂಡರು.

೭. ಅನುಶಾಸನವನ್ನು ಅವರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ತಮ್ಮ ಸಂಗಡಿಗರಿಂದ ಒಂದಿಷ್ಟು ಪ್ರಮಾದವಾದರೂ ಕೂಡಾ ತಮ್ಮದೇ ತಪ್ಪು ಎಂದು ಭಾವಿಸಿ ಪ್ರಾಯಶ್ಚಿತ್ತ ತೆಗೆದುಕೊಳ್ಳುತ್ತಿದ್ದರು. ಇದರಿಂದ ತಪ್ಪಿತಸ್ಥರು ಜಾಗೃತರಾಗಿ ತಿರುಗಿ ತಪ್ಪು ಮಾಡದಂತೆ ಸುಧಾರಿಸಿಕೊಳ್ಳುತ್ತಿದ್ದರು. ತಪ್ಪುಗಳ ಬಗ್ಗೆ ತುಂಬಾ ಕಠೋರರಾಗುತ್ತಿದ್ದು ಕೂಡ ತಪ್ಪುಗಾರರ ಬಗ್ಗೆ ಸದಾಕಾಲವು ಉದಾರರಾಗಿರುತ್ತಿದ್ದರು.

೮. ನಿತ್ಯ ಜೀವನದ ವ್ಯವಹಾರಗಳಲ್ಲಿ ಯಾರಾದರೊಬ್ಬರೂ ಒಂದು ನಿಮಿಷ ಕೂಡ ತಡಮಾಡಲಾಗದು, ಮತ್ತು ತಿಂಗಳಲ್ಲಿ ೩ ಸಾರೆ ತಡಮಾಡಿದವರು ಆಶ್ರಮದಿಂದ ಹೊರಬೀಳಬೇಕೆಂದೂ ವಿಧಿಸಿದ್ದರು. ಪ್ರಾರ್ಥನೆ, ಊಟ ಹಾಗೂ ಸಾಮೂಹಿಕ ನೂಲುವದು ಮೊದಲಾದ ಎಲ್ಲ ವ್ಯವಹಾರಗಳಿಗೂ ಈ ನಿಯಮವು ಅನ್ವಯಿಸುತ್ತಿತ್ತು.

• ೯. ವೇಳೆಯಂತೆ ಸಾರ್ವಜನಿಕ ದುಡ್ಡಿನ ಉಪಯೋಗದ ವಿಷಯದಲ್ಲಿಯೂ ಅವರು ಕಟ್ಟುನಿಟ್ಟಾಗಿರುತ್ತಿದ್ದರು. ಒಂದು ಕಾಸು ದುರುಪಯೋಗವಾದರೂ ಅವರಿಗೆ ಸಹನವಾಗುತ್ತಿರಲಿಲ್ಲ. ಈ ವಿಷಯದಲ್ಲಿ ಅವರು ಯಾರ ಭಿಡೆ ಮುರುವತ್ತೂ ಲಕ್ಷಿಸುತ್ತಿರಲಿಲ್ಲ. ತಮ್ಮ ಹೆಂಡತಿ, ಮಕ್ಕಳು, ಅಕ್ಕ, ಸಕ್ರೆಟರಿಗಳು, ಸಂಗಡಿಗರು ಎಲ್ಲರೊಡನೆಯೂ ಈ ವಿಷಯದಲ್ಲಿ ಕಠೋರವಾಗಿ ನಡೆಯುತ್ತಿದ್ದರು.

---

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

---

# ಗೋವಿಂದ ಪದಾಭಿಷೇಕ

(ಐವನೇ ಪುಟದಿಂದ)

ಲಿಟ್ಟು ಬೀಳುತ್ತಿವೆಯೆಂದು ಗೋಪ ಸಂತತಿ ಶ್ರೀ ಕೃಷ್ಣನ ಮರೆ ಹೋಗಲು, ಆತನು ಗೋವರ್ಧನ ಪರ್ವತೇಶ್ವರನನ್ನು ಕಿತ್ತನು ಮಹಾವೃಷ್ಟಿಯಿಂದ ಹರಿಯುವ ನೀರ ಪ್ರವಾಹ ಜಾಲರಿಯಾಗೆ, ಎಡದೋಳು ಕಾವಾಗೆ, ಗೋಕುಲಕ್ಕೆ ಕೊಡೆಯಾಗೆ ಅದನ್ನು ಎತ್ತಿ ಹಿಡಿದನು. ಹೀಗೆ ತನ್ನ ದಿವ್ಯರೂಪದಿಂದ ನಗವನ್ನು ನೆಗಪಿ ಗೋಪ ಗೋಪೀ ಜನಗಳ ಮುಖವನ್ನು ನೋಡಿ ನಗುತ್ತ ಹೇಳಿದನು: "ನೀವು ನನ್ನನ್ನು ಅರ್ಚಿಸಿದುದರಿಂದ ಈ ನಗದೇವತೆ ತಣಿಯಿತು. ಹಿಮವೃಷ್ಟಿಭಯವನ್ನು ಪರಿಹರಿಸಲು ನಿಮ್ಮ ಸಹಾಯಕ್ಕೆ ಬಂದಿತು. ನನಗೂ ಮಹಾವಭುವಾಯಿತು."

ಹಗಲಿರುಳು ಎಡೆಬಿಡದೆ ಸುರಿವ ಮಹಾ ವೃಷ್ಟಿಯನ್ನು ನಿವಾರಿಸಲು ಪರ್ವತವನ್ನು ಹರಿ ಧರಿಸಿದನು. ಏಳು ದಿನ ಪರ್ಯಂತ ಮಳೆ ಸುರಿದು ಬಳಿಕ ಮೋಡ ಹರಿದು ಹೋಯಿತು. ತನ್ನ ಅದ್ಭುತ ಲೀಲೆಯನ್ನು ತೋರಿಸಿದ ಬಳಿಕ ಅದ್ಭುತ ವೃಷ್ಟಿ ಹೋಗಲು, ಗೋಪೀಜನರು ಮನಸ್ವಿಯಾಗಿ ಸಂಚರಿಸಲು, ಪೂರ್ವ ಪ್ರದೇಶದಲ್ಲಿ ಪರ್ವತವನ್ನಿರಿಸಿ ಅದರ ಶಿಖರ ತಳದ ಮೇಲೆ ವನಮಾಲಿ ಲೀಲೆಯಿಂದ ಕುಳಿತಕೊಂಡನು.

ಅತ್ತ ಅಮರೋತ್ತಮನು ವಿಸ್ಮಿತನಾದನು 'ಪಾತಾಳಲೋಕಕ್ಕೆ ಬಲಿಯ ಮೆಟ್ಟಿದ ಶೌರಿ, ಕ್ಷಮಾಧರತೆಯನ್ನು ಕೇಳಲು ಚಲದಿಂದ ತೋರಿದ ಧೀರ, ಈಗ ಪರ್ವತವನ್ನೆತ್ತಿ ಮೆರೆದ ಮುಕುಂದನಲ್ಲಿ ಕ್ಷಮೆ ಕೇಳಬೇಕು. ಎಂಬುದು ನಿಶ್ಚಯಿಸಿದನು. ಚಮರೀರುಹಗಳು ಮಿಳರ್ವಂತೆ ಪಾಂಡು ಛತ್ರವು ಮಿರುಗುವಂತೆ ಐರಾವತ ಮಸ್ತಕ ಮಂಡಿತನಾಗಿ ಅಮರ್ತ್ಯರಿಂದ ಸೇವಿತನಾಗಿ, ಪ್ರೀತಿಯಿಂದ ಗೋವರ್ಧನ ಪರ್ವತ ಭಾರವನ್ನು ಹೊತ್ತ ಜಲಧರ ಸದೃಶ ಶೋಭಾಯಮಾನ ವಿಷ್ಣುವಿನ ಬಳಿಗೆ ಆಕಾಶ ಮಾರ್ಗದಿಂದ ಇಳಿದು ಬಂದನು. ಬೆಟ್ಟದ ತುದಿಯಲ್ಲಿ ಆಕಾಶದಲ್ಲಿ ಕುಳಿತು ರೆಕ್ಕೆ ಬಿಡಿಸಿದ ಗರುಡನ ನೆರಳಿನ ತಂಪಿನಲ್ಲಿ, ಕುಳಿತಿದ್ದ, ಗೋಪಾಲ ವೇಷರೂಪದ, ಕಮಲ ನೇತ್ರನೂ ನೀಲಮೇಘಶ್ಯಾಮನೂ ಬಾಲನೂ ದೀರ್ಘ ಬಾಹುವೂ ಶ್ರೀವತ್ಸವಕ್ಷಸ್ಥಳನೂ ತೇಜಸ್ವಿಯೂ ಆದ ಕೃಷ್ಣನನ್ನು ವಜ್ರಿ ಕಂಡನು. ತ್ರಿಲೋಕ ಪಾಲಕನು ಗೋಪಾಲಕನಾಗಿದ್ದ ಲೀಲೆಯನ್ನು ಕಂಡು ಮರುತ್ಪಾಲಕನು ತನಗೆ ಅಕ್ಷಿ ಸಹಸ್ರವಿದ್ದುದು ಸಫಲವಾಯ್ತೆಂದು ಈಕ್ಷಿಸಿದನು. ಸಹಸ್ರಲೋಚನನು ಪರ್ಯಾಪ್ತ ಸಹಸ್ರ ಲೋಚನನಾಗಿ ಸಹಸ್ರಪತ್ರಾಯತ ನೇತ್ರನನ್ನು ಕಂಡು 'ಎಲೆ ಸರ್ವಾತ್ಮ, ಪಿಪೀಲಿಕೆಯಿಂದ ಗಜ ಪರ್ಯಂತವಿರುವ ಜಗತ್ಪ್ರಾಣಿ ಸಂಕುಲವು ನಿನ್ನಂಶ ಜಾಲ. ಈಗ ಅರಿಶಂಕ ದಿಂದ ಇಳೆಯಲ್ಲಿ ಹುಟ್ಟಿದ ನಿನ್ನ ಎಸಕವೇನು ಸಾಮಾನ್ಯವೆ? ಅಥವಾ ಜಗದ್ವಲಯ ತ್ರಾಣ ಸಮರ್ಥವೆ? ಎಂಬುದನ್ನು ತಿಳಿಯಲು ಈ ವೃಷ್ಟಿಯನ್ನು ಮಾಡಿದೆನು. ಇನ್ನು ಅವರ ಕಾರ್ಯ ಸಿದ್ಧಿಯಾಯಿತು. ಅಖಿಲ ವಿಶ್ವೋದ್ಧಾರವಧೆಯಾಗುವುದು ನಿನ್ನಿಂದ. ಈ ಗಗನ್ನನ್ನು ಸಪ್ತದಿನ ಪರ್ಯಂತ ಎತ್ತಿ ಹಿಡಿದುದರಿಂದ ನಿನ್ನ ಭುಜ ಬಲವನ್ನು ಅರಿತೆನು. ತ್ರಿಮೂರ್ತಿಯಾಕಾರದ ನೀನು ಕೊಟ್ಟನು. ನನ್ನಂತಹರು ನಿನ್ನ ಹುಬ್ಬಿನ ಹಬ್ಬಿಗೆಯಿಂದ ಕಿವುಡರಾಗುವರು. ನಿನ್ನ ಸಮಗ್ರ ಪ್ರಭಾವವನ್ನು ನಿನ್ನೀಗಳೆ ಅವತಾರದಲ್ಲಿ ಕಾಣಲಾಗುತ್ತಿದೆ. ನೀನು ತಪ್ಪಿಗಾದಡೇನು? ನಿನ್ನೊಡನೆ ಹೋರಿದವಾಗ, ನನ್ನ ವಿಲಾಸ ಮಸುಳಿದಂತೆ. ಸ್ವಯಂ ಪ್ರಭುವು ಇರುವ ತೆರವೇ ಚೆಲ್ವಾಗಿರುವುದು. ಪುರಮಥನರೂಪದಲ್ಲಿ ನೀನು ಮರುಳ್ಗಳ-ತನಾಡಿದೆ. ನರಾಕೃತಿಯಲ್ಲಿ ಗೋವುಗಳೊಡನೆ ಆಡಿದೆ. ಪರಮಾತ್ಮ ವೈಕನಿಗೆ ಈ ಬಗೆಯ ಸ್ವಾತಂತ್ರ್ಯ ಉಚಿತವಾದುದು. ಜಗತ್ತಿನ ಉದಯ ಸ್ಥಿತಿ ಪ್ರಳಯ ಕಾರಣ, ಭಕ್ತ ಸನಾತನ, ತ್ರಿಮೂರ್ತಿಗಳ ಮಹಾಧಿಪತ್ಯವು ನಿನ್ನ ವಿಡಂಬನ. ಎಲ್ಲವಾದರೆ ಗೋಪನಾಗಿ ಗವಾಧಿಪತ್ಯವನ್ನು ತಾಳ್ದು ನಲಿವಲ್ಲಿಗೆ ಆಧಿಪತ್ಯ ಬರಬಲ್ಲದೆ? ನಿನಗೆ ನಾನು ಗೋವಿಂದ ಪದಾಭಿಷೇಕವನ್ನು ಮಾಡುವೆನು. ನೀನು ಗೋವಿಂದ ನಾಮವನ್ನು ಧರಿಸು. ನಿನಗೆ ಆ ಹೆಸರು ಪ್ರಿಯವಾಗುವುದು!' ಎಂದು ಕೈಮುಗಿದನು.

ದೇವೇಂದ್ರನು ಪಯೋನಿಧಿಯ ಪಾಲನ್ನು ತರಿಸಿ, ಐರಾವತದ ಕೆಲವಣಿಯ ಚಂದ್ರಕಾಂತದ ಘಟ ಹಿಡಿದು, ನೀಲಗಿರಿಯಗ್ರ ಭಾಗದಲ್ಲಿ ಇಂದು ಮಂಡಲವ್ರತ ಮೃತಧಾರೆಯನ್ನು ಕರೆಯುತ್ತಿದೆಂಬಂತೆ ಕೃಷ್ಣನಿಗೆ ಅಭಿಷೇಕಮಾಡಿ ಪಾರಿಜಾತ ಪುಷ್ಪದಿಂದ ಮಾಡಿದ ಬಾಸಿಗವನ್ನು ಕಟ್ಟಿ, ದೇವದುಂದುಭಿ ಗಂಧರ್ವಗೇಯ ಜಯಜಯಧ್ವಾನವು ಘೋರ್ಗರೆಯುತ್ತಿರಲು ಪುಷ್ಪವೃಷ್ಟಿ ಲಾಜ ವರ್ಷಗಳು ಅಂತರಿಕ್ಷದಲ್ಲಿ ಸುರಿಯುತ್ತಿರಲು, ಗೋವಿಂದಾಭಿಧಾನವನ್ನು ಮಾಡಿದನು. ದರಸ್ಮಿತ ಪ್ರಸನ್ನವದನಾರವಿಂದನಾಗಿ, ಗೋವಿಂದ ನಾಮೋತ್ಸವ ವಿಭೂತಿಯನ್ನು ಮೆರೆದು ಮೆರೆದ ಪುರುಹೂತನ ಮೇಲೆ ಅನುಗ್ರಹದೋರಿ ವರವಿತ್ತು ಮನ್ನಿಸಿದನು.

(ರುದ್ರಭಟ್ಟನ "ಜಗನ್ನಾಥ ವಿಜಯ ಪ್ರಬಂಧದ ಸರಳ ಗದ್ಯಸಂಗ್ರಹಾನುವಾದ ಮಾಡಿದವರು: ರಾ. ಶಿ.)

---


ವೈಷ್ಣವ ಶಿಖಾಮಣಿ
ಕನಕದಾಸ ರಚಿತ

## ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0.80 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ರಖಂ ಪ್ರತಿಗಳಿಗೆ ವಿಚಾರಿಸಿರಿ:-

**ನವಯುಗ ಪ್ರೆಸ್, ಉಡುಪಿ**

# ಕಲ್ಯಾಣ, ರಂಜನೆ, ಪರಿಚಯ

(ಹನ್ನೊಂದನೇ ಪುಟದಿಂದ)

ಪೂರ್ಣಾರ್ವರ ಸುದ್ದಿ ಬಿಡಿ. ನಾನೇ ಆಸ್ತಿಕನೇ...."

'ಅಬ್ಬಾ, ನಿನ್ನ ಧೈರ್ಯವೇ?'

'ಮತ್ತೆ? ಇದ್ದದ್ದನ್ನ ಇದ್ದ ಹಾಗೆ ಅನ್ನೋಕೆ ಯಾಕೆ ಹಿಂದೆ ಮುಂದೆ ನೋಡಬೇಕು?"

"ಆದ್ರೂ ನೋಡು, ಸತ್ಯವಾಗಿದ್ರೂ ಪ್ರಿಯವಾಗಿರೋದನ್ನಾಡಬೇಕೂಂತಾರೆ...."

'ಅಂದ್ರೆ ನಾನಂದದ್ದನ್ನ ನೀವು ಒಪ್ಪಿಕೊಂಡಂತಾಯ್ತು...."

'ಅಲ್ವೆ, ನೀನು ಏನು ಬೇಕಾದರೂ ಅನ್ನು; ನಾನು ನೀನನ್ನೋ ಹಾಗೆ ನಾಸ್ತಿಕನೇ ಅಲ್ಲ...."

'ಮತ್ತೆ?'

'ಆಸ್ತಿಕ, ಶುದ್ಧ ಆಸ್ತಿಕ....'

'ಮತ್ತೆ ನೀವು ದೀಪ ಯಾಕೇಂತೀರಲ್ಲಾ?'

'ಹೌದು, ದೀಪ ಯಾಕೆ? ಧೂಪ ಯಾಕೆ? ನೈವೇದ್ಯ ಯಾಕೆ?"

'ಯಾವುದೂ ಬೇಡಾನ್ನ. ಊಟಾನೂ ಬೇಡ, ಬಟ್ಟೇನೂ ಬೇಡ....ಮನೇನೂ ಬೇಡ...."

'ಅದ್ಯಾವುದೂ ಇಲ್ಲದೆ ಇರುವವ್ರು ಇಲ್ವೆ?"

'ಇದ್ದಾರೆ, ಇದ್ದಾರೆ. ಹಾಗೆಯೇ ದೀಪ ಬೇಕು ಅನ್ನೋವ್ರೂ ಇದ್ದಾರೆ..."

"ಇಲ್ಲ....ಅವರವ್ರ ನಂಬಿಕೆ ಅವರವರಿಗನ್ನ. ಅಂತೂ ಜಾತ್ರೆ ಒಂದು ದೃಷ್ಟಿಯಿಂದ ಬೇಕು—ಮನರಂಜನೆಗೆ.."

'ಅಷ್ಟು ಮಾತ್ರವಲ್ರಿ, ರಾತ್ರಿ ದೀಪ ಉರಿಯೋದ್ರಿಂದ ವಾತಾವರಣ ಶುದ್ಧವಾಗುತ್ತೆ. ನೋಡಿ, ಹಿಂದಿನ ಕಾಲದಲ್ಲಿ ಹೋಮ—ಹವನಗಳು ಬೇಕಾದಷ್ಟು ನಡೆಯುತಿದ್ದವು. ಅಂತಲೇ ಜನ ಸುಖಿಯಾಗಿತ್ತು...."

'ಹ್ಞಾಂ, ಡಬ್ಬಿಗಟ್ಟಲೆ ತುಪ್ಪ, ಮಣಗಟ್ಟಲೆ ಗಂಧ ಉರಿಸಿ ವಾತಾವರಣವನ್ನ ಸುಗಂಧ ಧೂಮಮಯ ಮಾಡುತ್ತಿದ್ದರು.'

'ಅದ್ದರಿಂದಲೇ ನೂರಾರು ಬಗೆಯ ಅನಾರೋಗ್ಯಗಳು ದೂರವಾಗುತಿದ್ದುವು. ಅದಕ್ಕೆಂದೇ ನೋಡಿ, ಲೋಕ ಸುಭಿಕ್ಷೆ, ಆರೋಗ್ಯಕ್ಕಾಗಿ ಯಾವಾಗಲೂ ಹೋಮಗಳನ್ನ ಏರ್ಪಡಿಸುತಿದ್ದರು.'

"ಅಂದ್ರೆ, ನೀನು ಈ ದೀಪ ಬೇಕು ಅನ್ನೋವ್ರು....."

'ನೀವು ಬೇಡ ಅನ್ನೋವ್ರು....'

'ಅಲ್ವೆ, ನಾನು ಎಲ್ಲಿ ಬೇಡಾಂತಂದೆ?'

'ಮತ್ತೆ ಹಣ ಪೋಲು ಗೀಲೂಂತ....'

'ಹಾಗಂದ ಮಾತ್ರಕ್ಕೆ ನಾನು ದೀಪ ಬೇಡ ಅಂದೆನೆ?'

'ಮತ್ತೆ?'

"ಅಲ್ಲಾ, ದೇಶವನ್ನು ಗಂಡಾಂತರ ಕಾಡುತ್ತಿರುವಾಗ..."

'ಹೌದಪ್ಪ. ಗಂಡಾಂತರಾಂತ ನಮಗೆ ಏನೂ ಬೇಡ ಜೀವವೂ ಬೇಡಾನ್ನಿ....'

'ಆಯ್ತಪ್ಪ, ಇಷ್ಟೆಲ್ಲಾ ಜ್ಞಾನ ಎಲ್ಲಿಂದ ಬಂತೂಂತ?"

"ಎಲ್ಲಿಂದೋ ಬಂತೂನ್ನಿ. ನೋಡಿ, ದುರ್ಸುಬಾಣ, ಬಿಡಿಮದ್ದು, ದೀಪ ಮೊದಲಾಯುದವುಗಳಿಂದಾಗಿ ವಾತಾವರಣ ಒಮ್ಮೆ ಕಲುಷಿತವಾದ್ರೂ ಮತ್ತೆ ತಿಳಿಯಾಗುತ್ತೆ. ಲೋಕ ಕಲ್ಯಾಣ, ಲೋಕ ರಂಜನೆ, ಲೋಕ ಪರಿಚಯವೇ ಜಾತ್ರೆಗಳ ಉದ್ದೇಶಾಂತ ನೋಡಿ, ಬೇಳೆ ಕಟ್ಟಿಕಂಡ ಈ ಕಾಗದದಲ್ಲಿ ಬರೆದಿದೆ..."

'ಓ, ಹಾಗೆ. ನಾನು ಏನೋ ಏನೋ ಅಂತಿದ್ದೆ ..."

"ತಿಳೀತಲ್ಲಾ ಈಗ? ಈಗ ಹೇಳಿ, ಏನು ದೀಪಕ್ಕೆ ಹೋಗೋಣ?"

"ನಿನಗಷ್ಟು ಆಸೆಯಿರುವಾಗ ನಾನು ಮತ್ತೆ ಬೇಡಾಂತಂದೇನೆ?"

'ಅಯ್ಯೋ, ಪಾಪ...."

"ಏ, ಏನಿದು?"

'ಏನೂ ಇಲ್ಲ... ಏಳಿ ಇನ್ನು, ಆಚೆ ಮನೆ ಕಮಲು ಎರಡು ಹೋಳಿಗೆ ಕಳಿಸಿದ್ದಾಳೆ..."

"ಹೌದೆ? ಹ್ಞಾಂ ಬಂದೆ...'

—ಗೋರಾ.


# ಕುಂದಾಪುರ ಕೋ ಓಪರೇಟಿವ್ ಟೌನ್ ಬೇಂಕ್ ಲಿಮಿಟೆಡ್ ಕುಂದಾಪುರ.

## ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೇಲ್ಕಾಣಿಸಿದ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡದೆ ಬಾಕಿ ಇರುವುದರಿಂದ ಸದ್ರಿಯವರಿಗೆ ಕ್ರಮ ಪ್ರಕಾರ ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ಕೆಲವರು ನೋಟೀಸು ಪಡಕೊಂಡು ನಗಗಳನ್ನು ಇಷ್ಟರ ತನಕ ಬಿಡಿಸದಿರುವುದರಿಂದಲೂ ಮತ್ತು ಕೆಲವರಿಗೆ ಬಿಟ್ಟ ನೋಟೀಸು ವಾಪಾಸು ಬಂದಿರುವುದರಿಂದಲೂ ಸದ್ರಿಯವರಿಗೆ ಯಾ ಅವರು ಮೃತಪಟ್ಟಲ್ಲಿ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 11–12–1965ನೇ ಶನಿವಾರ ಮಧ್ಯಾಹ್ನ 12 ಘಂಟೆಯೊಳಗೆ ಬಿಡಿಸದೆ ಇದ್ದಲ್ಲಿ ಅದೇ ದಿವಸ 2 ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದ ಆ ದಿನ ಏಲಂ ಮಾಡಲು ಅನಾನುಕೂಲವಾದಲ್ಲಿ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೆ ಬೇಂಕಿನ ಆಫೀಸಿನಲ್ಲಿ ಏಲಂ ಮಾಡಲಾಗುವುದು.

| ಸಾಲದ ನಂಬ್ರ & ತಾರೀಕು | ಹೆಸರು ಮತ್ತು ವಿಳಾಸ. | ಮೊಬಲಗು ರೂ. |
|---|---|---|
| 7689 4–1–63 | 147. ಕೆ. ವಾಸುದೇವ ಪುರಾಣಿಕ, ಟೀಚರ್, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ, ವಡೇರ ಹೋಬಳಿ ಕುಂದಾಪುರ ದ. ಕ. | 35/- |
| 7640 4–1–63 | 147. ಕೆ. ವಾಸುದೇವ ಪುರಾಣಿಕ, ಟೀಚರ್, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ. ವಡೇರ ಹೋಬಳಿ ಕುಂದಾಪುರ ದ. ಕ. | 55/- |
| 7694 3–2–63 | 638. ಎನ್. ನಾರಾಯಣ ಹೆಗ್ಡೆ, ಮೋನಪ್ಪ ಹೆಗ್ಡೆಯವರ ಮಗ, ಎಡಾಡಿ ಮತ್ಯಾಡಿ ಗ್ರಾಮ ಪೋಸ್ಟ ಸಳ್ವಾಡಿ ಹರ್ಕಾಡಿ ದ. ಕ. | 290/- |
| 7752 8–3–63 | 535. ನಾಗಿ ಹೆಂಗ್ಸು, ಚಿಕ್ಕಿ ಹೆಂಗಸಿನ ಮಗಳು ವಡೇರ ಹೋಬಳಿ ಗ್ರಾಮ ಕುಂದಾಪುರ ದ. ಕ. | 40/- |
| 7835 15–4–63 | 862. ಕೆ. ಸಿದ್ಧ ನಾಯ್ಕ, ದೇವ ನಾಯ್ಕರ ಮಗ. ಚಕ್ಕನ್ ಸಾರ್ಲಿಸ್ಟ್, ಕುಂದಾಪುರ ದ. ಕ. | 85/- |
| 7876 30–4–63 | 1599. ಕೆ. ಸುಬ್ರಹ್ಮಣ್ಯ ಉಡುಪ, ಆನಂದ ರಾಮ ಉಡುಪರ ಮಗ, ಕೊಡ್ಲಿ ಕಂಪೌಂಡ್, ಕುಂದಾಪುರ ದ. ಕ. | 925/- |
| 7883 4–5–63 | 1601 ಎಮ್. ಕೆ. ದಾಸ ಗೌಡ, ಕೋಡಂಗಿ ಗೌಡರ ಮಗ, ಮೈಸೂರು ಸ್ಟೇಟ್ ಇಲೆಕ್ಟ್ರಿಕ್ ಬೋರ್ಡ್. ಪೋಸ್ಟ್ ಕುಂದಾಪುರ ದ. ಕ. | 18/- |
| 7901 11–5–63 | 1603. ಎಮ್. ಚಂದ್ರಶೇಖರ ಶೆಟ್ಟಿ, ಶೀನಪ್ಪ ಶೆಟ್ರ ಮಗ. ಬಳ್ಕೂರ್ ಗ್ರಾಮ ಪೋಸ್ಟ್ ಬಳ್ಕೂರ್. ಕುಂದಾಪುರ ತಾಲೋಕು ದ. ಕ. | 144/- |
| 7909 14–5–63 | 147. ಕೆ. ವಾಸುದೇವ ಪುರಾಣಿಕ ಟೀಚರ್, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ. ವಡೇರ ಹೋಬಳಿ ಕುಂದಾಪುರ ದ. ಕ. | 32/- |
| 7910 14–5–63 | 147. ಕೆ. ವಾಸುದೇವ ಪುರಾಣಿಕ ಟೀಚರ್. ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ, ವಡೇರ ಹೋಬಳಿ ಕುಂದಾಪುರ ದ. ಕ. | 45/- |
| 7911 14–5–63 | 147. ಕೆ. ವಾಸುದೇವ ಪುರಾಣಿಕ ಟೀಚರ್. ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ, ವಡೇರ ಹೋಬಳಿ ಕುಂದಾಪುರ ದ. ಕ. | 32/- |
| 7978 29–5–63 | 1600. ಕೆ. ಎಸ್. ಸುಬ್ಬಣ್ಣ ಉಡ್ಪ, ಕೇಶ ಉಡ್ಪರ ಮಗ. ಮೋಟರ್ ಏಜಂಟ್ ಕೋಟೇಶ್ವರ, ಕುಂದಾಪುರ ತಾಲೋಕು ದ. ಕ. | 60/- |
| 7988 1–6–63 | ಕೆ. ಶೇಕ್ ಹಸನ್ ಸಾಹೇಬ್ ಶೇಕ್‌ಮುಯಾ ಸಾಹೇಬರ ಮಗ, ಶ್ರೀರಾಮ ಭಜನಾ ಮಂದಿರದ ಹತ್ತಿರ ಹಳೆ ಪೋಸ್ಟ್ ಆಫೀಸು ರಸ್ತೆ, ಕುಂದಾಪುರ ದ. ಕ. | 15/- |
| 8021 8–6–63 | 1632 ಕೃಷ್ಣ ನಾಯ್ಕ, ಅಂಗ ನಾಯ್ಕನ ಮಗ, ಪೋಸ್ಟ್ ವಕ್ವಾಡಿ ಕುಂದಾಪುರ ತಾಲೋಕು ದ. ಕ. | 35/- |
| 8023 8–6–63 | 251 ಎಸ್. ಸದಾಶಿವ ಶೆಟ್ಟಿ, ರಾಮಣ್ಣ ಸೆಟ್ರ ಮಗ, ಆಲ್ಬಾಡಿ ಗ್ರಾಮ ಪೋಸ್ಟ್ ಆರ್ಡಿ, ಕುಂದಾಪುರ ದ. ಕ. | 160/- |
| 8042 12–6–63 | 1639. ಕೆ. ವಿಠಲ ಶೆಟ್ಟಿ, ಶೇಶಮ್ಮ ಶೆಡ್ತಿಯವರ ಮಗ, ಕೊಂಜಾಡಿ ಬೈಲ್ ಮನೆ, ಪೋಸ್ಟ್ ಆರ್ಡಿ, ಕುಂದಾಪುರ ತಾಲೋಕು ದ. ಕ. | 102/- |
| 8045 13–6–63 | 1247. ದೇವ ಪೂಜಾರಿ, ಹಾವಳಿ ಪೂಜಾರಿ ಮಗ, ಬೈಲ್ ಮನೆ, ಹಂಗಳೂರು ಗ್ರಾಮ ಹಂಗಳೂರು ಪೋಸ್ಟ್, ಕುಂದಾಪುರ ತಾಲೋಕು ದ. ಕ. | 12/- |
| 8063 18–6–63 | 1635. ಗೋಪಾಲಕೃಷ್ಣ ಮೇಸ್ತ್ರಿ, ಏಮ್ಮಪ್ಪ ನಾಯ್ಕರ ಮಗ, ಮದ್ದು ಗುಡ್ಡೆ ರಸ್ತೆ, ಕುಂದಾಪುರ ಪೋಸ್ಟ್ ದ. ಕ. | 18/- |
| 8220 25–.–63 | 133. ಜಿ. ಸುಬ್ಬರಾವ್, ಶ್ಯಾಮ ಹೊಳ್ಳರ ಮಗ. C/o ಕೋಟಿ ಮಂಜುನಾಥ ನಾಯ್ಕ, ಕುಂದಾಪುರ ದ. ಕ. | 190/- |
| 8223 26–7–63 | 147. ಕೆ. ವಾಸುದೇವ ಪುರಾಣಿಕ ಟೀಚರ್ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ ವಡೇರ ಹೋಬಳಿ ಕುಂದಾಪುರ ದ. ಕ. | 190/- |
| 8237 26–7–63 | 1667. ಚಿನ್ನಪ್ಪ, ಗೋವಿಂದ ಹರಿಜನನ ಮಗ, C/o ಕೆ. ಎಲ್. ಕಾರಂತ, ಕುಂದಾಪುರ ಪೋಸ್ಟ್ ದ. ಕ. | 10/- |
| 8346 24–8–63 | ಶೇಕ್ ಹುಸೇನ್ ಸಾಹೇಬ್, ಶೇಕ್ ಮುಯಾ ಸಾಹೇಬರ ಮಗ, ಶ್ರೀರಾಮ ಭಜನಾ ಮಂದಿರದ ಹತ್ತಿರ, ಹಳೆ ಪೋಸ್ಟ್ ಆಫೀಸು ರಸ್ತೆ. ಕುಂದಾಪುರ ಪೋಸ್ಟ್ ದ. ಕ. | 10/- |

ಕುಂದಾಪುರ, 15–11–1965.

ಸುಬ್ರಾಯ ಉಡ್ಪ, ಎಂ.
ಕಾರ್ಯದರ್ಶಿ.



ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

# ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೫—೦ (1 = 50)

ರೂ. 1 = 75 ಮನಿಯಾರ್ಡರ್ ... ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

## ಡಾ। ಶ್ರೀ ಎ. ಬಿ. ಶೆಟ್ಟಿರ ಜನ್ಮ ದಿನೋತ್ಸವ.

ದ. ಕ. ಜಿಲ್ಲೆಯ ಜನಪ್ರಿಯ ಮುಂದಾಳು ಗಳೂ ಮದ್ರಾಸು ಮತ್ತು ಮೈಸೂರು ಸರಕಾರ ಗಳಲ್ಲಿ ಆರೋಗ್ಯ ಮಂತ್ರಿಗಳೂ ಆಗಿದ್ದ ಡಾ। ಎ. ಬಿ. ಶೆಟ್ಟರ 84ನೇ ಜನ್ಮದಿನೋತ್ಸವ ವನ್ನು ತಾ. 14—11—65ರಂದು ಮಂಗ ಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ ದಲ್ಲಿ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾ ಗೇ ಗೌಡರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಡಾ। ಶೆಟ್ಟರ ನಿಕಟವರ್ತಿಗಳಾದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಹಾಗೂ ವಿಧಾನ ಪರಿ ಷತ್ತು ಸದಸ್ಯರೂ ಆದ ಶ್ರೀ ಕೆ. ಕೆ. ಶೆಟ್ಟರು ಭಾಷಣ ಮಾಡಿ, ಡಾ. ಎ. ಬಿ. ಶೆಟ್ಟರ ಜೀವ ನದ ಆದರ್ಶಗಳನ್ನು ವಿವರಿಸಿ, ಅವರು ಜಿಲ್ಲೆ ಗೆ ಸಲ್ಲಿಸಿದ ಬಹುಮುಖ ಸೇವೆಯನ್ನು ಶ್ಲಾಘಿ ಸಿದರು. ಡಾ। ಎ. ಬಿ. ಶೆಟ್ಟರ ಸ್ಮಾರಕ ಗ್ರಂ ಥವೊಂದನ್ನು ಪ್ರಕಟಿಸಲಾಗುವುದೆಂದರು. ವಿ ಧಾನ ಪರಿಷತ್ತು ಸದಸ್ಯ ಶ್ರೀ ಕೆ. ಆರ್. ಆಚಾರ್ಯರವರು ಮಾತನಾಡಿ, ಶ್ರೀ ಎ. ಬಿ. ಶೆಟ್ಟರು ಯಾವುದೇ ಸಣ್ಣ ವಿಷಯವಾದರೂ ಅದನ್ನು ಪರಾಮರ್ಶಿಸಿ ಹೇಗೆ ಅಂತಿಮ ತೀ ರ್ಮಾನ ಕೈಗೊಳ್ಳುತ್ತಿದ್ದರೆಂಬುದನ್ನು ವಿವರಿಸಿ ದರು.

ಶ್ರೀ ನಾಗೇ ಗೌಡರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಾ। ಎ. ಬಿ. ಶೆಟ್ಟರಂತಹ ವ್ಯಕ್ತಿ ಗಳನ್ನು ವಿದ್ಯಾರ್ಥಿಗಳು ತಮ್ಮ ಆದರ್ಶ ಪುರು ಷರನ್ನಾಗಿ ಮಾಡಿಕೊಳ್ಳ ಬೇಕೆಂದೂ ಅವರೊ ಬ್ಬ ಮಹಾನ್ ವ್ಯಕ್ತಿ ಎನ್ನುವುದರಲ್ಲಿ ಏನೂ ಸಂದೇಹವಿಲ್ಲವೆಂದೂ ಹೇಳಿದರು. ಆರಂಭ ದಲ್ಲಿ ಡಾ। ಕೆ. ಬಾಳಪ್ಪ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಅಂತ್ಯದಲ್ಲಿ ಶ್ರೀ ಎಸ್. ಆರ್. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿ ದರು.

### ವಿಜ್ಞಾನ ಸಂಘದ ಸಭೆ.

ತಾ. 13—11—1965ರಂದು ಮಣಿ ಪಾಲ ಹೈಸ್ಕೂಲಿನ ವಿಜ್ಞಾನ ಸಂಘದ ಸಭೆ ಯು ಸಂಘದ ಅಧ್ಯಕ್ಷ ಯಶವಂತ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಯವರು ವರದಿಯನ್ನೋದಿದರು. ಬಳಿಕ ಶ್ರೀ ವರದ ರಾಜರ ಮತ್ತು ಜಯರಾಮ ಭಟ್ ಇವರು ನೈಟ್ರೋಜನ್ನಿನ ತಯಾರಿಕೆ ಮತ್ತು ಅದರ ಗುಣಗಳ ಪ್ರಾಯೋಗಿಕ ವಿವರಣೆಯ ನ್ನು ಕೊಟ್ಟರು. ಕುಮಾರಿ ರತ್ನಾ ಪೈಯ ವರು ಬೇಕ್ಟೀರಿಯಗಳ ಕುರಿತು ಚಿಕ್ಕ ವಿವರಣೆ ಯನ್ನಿತ್ತರು.

### ಮಕ್ಕಳ ದಿನಾಚರಣೆ

ಅಲೆವೂರು ನೆಹರೂ ಹೈಸ್ಕೂಲಿನಲ್ಲಿ ಮಕ್ಕ ಳ ದಿನಾಚರಣೆಯು ಶ್ರೀ ಶಿತಾರ್ಡಿ ವಿಲಿಯಂ ಪಿಟೋರ ಅಧ್ಯಕ್ಷತೆಯಲ್ಲಿ ಜರಗಿತು. ಮು ಖ್ಯೋಪಾಧ್ಯಾಯ ಶ್ರೀ ಆನಂದರಾಯರು ಸ್ವಾ ಗತ ಭಾಷಣ ಮಾಡಿದರು. ಸಭಿಕರಲ್ಲಿ ಶ್ರೀ ಗಳಾದ ಕೆ. ರಂಗಣ್ಣ ಭಟ್, ಶ್ರೀಪತಿ ಆಚಾ ರ್ಯ, ರಾಮಕೃಷ್ಣ ಭಟ್ ಮತ್ತು ವೇದವ್ಯಾಸ ಆಚಾರ್ಯರು ಮಾತನಾಡಿದರು.

ಅಧ್ಯಕ್ಷರು ನೆಹರೂರವರ ದಿವ್ಯ ಆದರ್ಶ ಗಳನ್ನು ಪರಿಪಾಲಿಸುವಲ್ಲಿ ವಿದ್ಯಾರ್ಥಿಗಳು ಹಿಂಜರಿಯ ಬಾರದೆಂದರು. ವಿದ್ಯಾರ್ಥಿಗಳಿಂ ದ ವಿವಿಧ ವಿನೋದಾವಳಿ, ಸಿಹಿತಿಂಡಿ ಹಂ ಚೋಣಾದ ನಂತರ ಶ್ರೀ ಎ. ಮಧುಸೂದನ ಆಚಾರ್ಯರು ಧನ್ಯವಾದವನ್ನಿತ್ತರು.

### ಮಕ್ಕಳ ದಿನಾಚರಣೆ

ತಾ. 14ರಂದು ಮಕ್ಕಳ ದಿನಾಚರಣೆಯ ಅಂಗವಾಗಿ ಮಣಿಪಾಲ ಹೈಸ್ಕೂಲಿನಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸಲಾಯಿತು. ತಾ. 15ರಂ ದು ಶಾಲಾ ಮಕ್ಕಳ ಚಟುವಟಿಕೆಗಳು ಮತ್ತು ಶಾಲಾ ಎಸೆಂಬ್ಲಿ ಕಾರ್ಯಕ್ರಮಗಳು ನಡೆದ ವು. ಡಾ. ಎ. ಕೃಷ್ಣರಾವ್ ಅವರು ಸಭಾ ಧ್ಯಕ್ಷತೆಯನ್ನು ವಹಿಸಿದ್ದರು.

### ಉದಾರ ಸಹಾಯ

ಕೆಲವು ವರ್ಷಗಳಿಂದ ವಿದ್ಯಾರ್ಥಿ, ವಿದ್ಯಾ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಧನ ಸಹಾ ಯ ಮಾಡುತ್ತ ಬಂದಂತೆ, 1965ನೇ ವರ್ಷ ದಲ್ಲಿ ಉಡುಪಿಯ ವಕೀಲ್ ಆರೂರು ಲಕ್ಷ್ಮೀ ನಾರಾಯಣ ರಾಯರು ಮತ್ತು ಅವರ ಪುತ್ರರು ತಮ್ಮ ಎ. ಎಲ್. ಎನ್. ರಾವ್ ಚೆರಿಟೇಬಲ್ ಟ್ರಸ್ಟಿನ ಮೂಲಕ ಈ ಕೆಳಗಿನಂತೆ ಸಹಾಯ ಮಾಡಿರುವರು:

ಉಡುಪಿ ಮುನಿಸಿಪಲ್ ಹೈಸ್ಕೂಲಿಗೆ ವಿಜ್ಞಾನದ್ದೀಪ ಮತ್ತು ಘ್ಯಾನುಗಳಿಗಾಗಿ ರೂ 1,000. ಕೊಡವೂರು ಬೋರ್ಡ್ ಶಾ... ಶಾಲೆಗೆ ಅಶೋಕ ಸ್ತಂಭಕ್ಕಾಗಿ ರೂ. 100. ಮೂಡುಬೆಳ್ಳೆ ಸೈಂಟ್ ಲೋರೆನ್ಸ್ ಹೈಸ್ಕೂ... ಕಟ್ಟಡ ನಿಧಿಗೆ ರೂ. 300. ಕುಂದಾಪು... ತಾಲೂಕಿನ ಶಂಕರನಾರಾಯಣ ದೇವಸ್ಥಾನ... ಜೀರ್ಣೋದ್ಧಾರಕ್ಕೆ ರೂ. 250. ಉಡು... ತಾಲೂಕಿನ ಕುತ್ಪಾಡಿ ದೇವಸ್ಥಾನದ ಜೀರ್ಣೋ ದ್ಧಾರಕ್ಕೆ ರೂ. 250. ಉಡುಪಿ ಹಿಂದಿ ಪ್ರಚಾರ ಸಮಿತಿಗೆ ರೂ. 100. ಉಡು... ಸೈಂಟ್ ಸಿಸಿಲಿ ಕೋನ್ವೆಂಟ್‌ಗೆ ಗೃ... ವಿಜ್ಞಾನ ಅಭ್ಯಾಸಕ್ಕಾಗಿ ರೂ. 100. ಮ... ಪಾಲ ಕುಷ್ಠರೋಗ ನಿಧಿಗೆ ರೂ. 100. ... ಣಿಪಾಲ ಟಿಬಿ ಫಂಡಿಗೆ ರೂ. 100. ಶಿ... ಮಹಿಳಾ ಕ್ಲಬ್ಬಿಗೆ ರೂ. 100. ಕಡಿಯಾ... ಹಾ. ಎ. ಶಾಲೆಗೆ ರೂ. 200. ಕ್ರಿಶ್ಚ... ಹೈಸ್ಕೂಲ್ ಬೆನಿಫಿಟ್ ಫಂಡಿಗೆ ಸಾಲಿನ... ಸ್ಮಾರಕ ಶಾಲೆಗೆ ರೂ. 200. ಉಡು... ಬೋರ್ಡ್ ಹೈಸ್ಕೂಲಿಗೆ ಧರ್ಮಾರ್ಥ ವಿದ್ಯಾರ್ಥಿ ವೇತನಕ್ಕೆ ಎಂಡೋವ್‌ಮೆಂಟಾಗಿ ರೂ. 1,000 ಧಾರವಾರ ಮತ್ತು ಗುಜರಾತ್ ವಿದ್ಯಾಪೀ... ಗಳಲ್ಲಿ ಪೋಸ್ಟು ಗ್ರ್ಯಾಜುವೇಟ್ ಕೋರ್ಸಿಗಿ... ಇಬ್ಬರು ವಿದ್ಯಾರ್ಥಿಗಳಿಗೆ ನಿಬಡ್ಡಿಯಿಂದ ಸಾ... ರೂಪದ ವಿದ್ಯಾರ್ಥಿ ವೇತನ ರೂ. 560 ಮೈಸೂರು ಜಿ. ಸಿ. ಐ. ಯಂ. ಕೋರ್ಸಿ... ಇಬ್ಬರು ವಿದ್ಯಾರ್ಥಿಗಳಿಗೆ ನಿಬಡ್ಡಿಯಿಂದ ಸಾ... ರೂಪದ ವಿದ್ಯಾರ್ಥಿ ವೇತನ ರೂ. 700 ಎಂ. ಜಿ. ಎಂ. ಮತ್ತು ಪೂರ್ಣಪ್ರಜ್ಞ ಕಾ... ಜಿನ ವಿದ್ಯಾರ್ಥಿಗಳಿಗೆ ನಿಬಡ್ಡಿಯಿಂದ ಲೋನ ಸ್ಕಾಲರ್ ಶಿಪ್‌ಗೆ ರೂ. 2,400.

ಇದಲ್ಲದೆ ಆರೂರು ದೇವಸ್ಥಾನದಲ್ಲಿ ಸು... ಮಾರು ರೂ. 30,000 ವೆಚ್ಚದಲ್ಲಿ ಒಂ... ಉತ್ತಮವಾದ ಕಲ್ಯಾಣ ಮಂಟಪವನ್ನು ಕಟ್ಟಿಸುತ್ತಿದ್ದಾರೆ.

---

(ಮೂರನೇ ಪುಟದಿಂದ)

ಗಳ ನಡುವೆ ಅಮೇರಿಕೆ ಗಂಟು ಹಾಕು ತ್ತಿದೆ ಎಂಬುದು ಬರಿಯ ಕುಹಕ ಎಂದು ಹೇಳಿದ್ದಾರೆ. ಇವರ ಉದ್ಗಾರ ಸತ್ಯವಾ ದರೆ ಚಿಂತೆಯಿಲ್ಲ. ಆದರೆ, ಅಮೇರಿಕೆಯು ಯುದ್ಧ ಪೂರ್ವದಲ್ಲಿಯೇ ನೀಡಲು ಒಪ್ಪಿ ದ್ದ ಸಹಾಯವನ್ನು ಕಳಿಸಲು ಏಕೆ ಹಿಂದೆ ಮುಂದೆ ನೋಡುತ್ತಿದೆ? ಆಹಾರ ಪೂರೈಕೆ ಯನ್ನು ಕೂಡ ತುಂಡು ತುಂಡಾಗಿ ಮಾ ಡುತ್ತಿರುವುದೇಕೆ? ಅವರಿಗೆ ಅತ್ತ ಪಾಕಿ ಸ್ತಾನವನ್ನೂ ಸಮಾಧಾನ ಪಡಿಸಬೇಕಾ ಗಬಹುದು. ಅದೇನೇ ಇದ್ದರೂ ಅಮೇರಿಕೆ ಯಲ್ಲಿ ಇಂದು ಭಾರತದ ಕಾಶ್ಮೀರ ನೀತಿ ಯ ಬಗ್ಗೆ ತಿಳುವಳಿಕೆ ಹೆಚ್ಚಿದೆ. ಮುಂದೆ ಶಾಸ್ತ್ರಿ—ಜಾನ್ಸನ್ ಭೆಟ್ಟಿಕಾಲದಲ್ಲಿ ಇದ್ಕ ಮತ್ತಷ್ಟು ಹೆಚ್ಚಬಹುದು. ಜಾನ್ಸನ್ ಈ ಇಲಿ ಮರಿಯನ್ನು ತನ್ನ ಬಲೆಯಲ್ಲಿ ಸಿಕ್ಕಿ ಹಾಕುವ ಪ್ರಯತ್ನಮಾಡಬಹುದು; ಆದ ರೆ ಸಶರ್ತ ಸಹಾಯದ ಬಲೆಯಿಂದ ಮೈ ಲು ದೂರ ನುಸುಳಿ ಜಾರುವ ಚಾಣಾಕ್ಷತೆ ಶಾಸ್ತ್ರಿಯವರಲ್ಲಿದೆ. ಭಾರತದ ನೀತಿಯೂ ದೃಢ ಇದೇ.

---

### ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 427/1965

ವಾದಿ. ಪ್ರಭಾವತಿ ಅಮ್ಮ

ಪ್ರತಿವಾದಿ. ಶ್ರೀನಿವಾಸ ಅರ್ಸ

ಕುಂದಾಪುರ ತಾಲ್ಲೂಕು ಬೀಜಾಡಿ ಗ್ರಾಮದ ಲ್ಲಿರುವ ಕೃಷ್ಣ ಅರ್ಸರ ಮಗ ಶ್ರೀನಿವಾಸ ಅ ರ್ಸರಿಗೆ ಈ ಮೂಲಕ ತಿಳಿಯಪಡಿಸುವುದೇನೆಂ ದರೆ:—

ಪ್ರತಿವಾದಿಯು ವಾದಿಗೆ ತಾರೀಕು 2-1-1961ರಲ್ಲು ರ. ನಿಗೆ ಬರೆ ಕೊಟ್ಟ ಅಶನಾರ್ತ ಕರಾರು ವಿಧಿ ಪ್ರಕಾರ ಕಳೆದ ಕ್ರೋಧಿ ಸಂವತ್ಸರಕ್ಕೆ ಪ್ರತಿವಾದಿಯಿಂ ದ ಬರತಕ್ಕ ಅಶನಾರ್ತ ಬರಮಾಡಿ ಕೊಳ್ಳು ವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 29-11-65ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆ ಗೆ ಇರುತ್ತದೆ. ಆ ಕುರಿತು ಏನಾದರೂ ಆ ಕ್ಷೇಪಣೆಗಳಿದ್ದರೆ, ಸದ್ರಿ ನಿಮ್ಮ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾ ಜರಾಗಿ ಜ್ಯಾಹೀರು ಮಾಡತಕ್ಕದ್ದು ಎಂಬ ಸಂ ಗ್ತಿ ತಿಳಿಯಪಡಿಸಿಯದೆ.

**N. S. Parameshwariah**
Advocate for Plff.

Date 13-11-1965
Coondapoor

---

# ಅಧಿಕ ಸಂಖ್ಯೆಯಲ್ಲಿ ಟಿಬಿ ಮೊಹರುಗಳನ್ನು ಕೊಂಡುಕೊಳ್ಳಿರಿ ಮತ್ತು ಕ್ಷಯರೋಗವನ್ನು ನಿರ್ಮೂಲ ಮಾಡಲು ಸಹಕರಿಸಿರಿ

## ಈ ಕೆಳಗಿನ ಕಾರ್ಯಕ್ರಮಗಳಿಗಾಗಿ ಟಿಬಿ ಮೊಹರು ಸಹಾಯ ಮಾಡುತ್ತದೆ:

1. ಆರೋಗ್ಯ ಬೋಧೆ;
2. ಎದೆಯ ಆರೋಗ್ಯ ಧಾಮಗಳನ್ನು ಸ್ಥಾಪಿಸಲಿಕ್ಕೆ.
3. ಹದಗೆಟ್ಟ ರೋಗಿಗಳಿಗೆ ಐಸೊಲೇಶನ್ ವಾರ್ಡುಗಳ ಸ್ಥಾಪನೆಗೆ;
4. ಬಡ ರೋಗಿಗಳಿಗೆ ಸಹಾಯ ಮಾಡಲಿಕ್ಕೆ;
5. ಕ್ಷಯರೋಗಿಗಳಿಗೆ ಗುಣವಾದ ಮೇಲಿನ ಸಂರಕ್ಷಣೆಗಾಗಿ; (ಪುನರ್ವಸತಿ ಕೇಂದ್ರಗಳು ಮತ್ತು ಭಾವೀ ಸಂರಕ್ಷಣೆಯ ವಸಾಹತುಗಳನ್ನು ಪ್ರಾರಂಭಿಸಲಿಕ್ಕೆ);
6. ಕ್ಲಿನಿಕ್ ಮತ್ತು ಆಸ್ಪತ್ರೆಗಳಲ್ಲಿ ಆಗತ್ಯವುಳ್ಳ ಎಕ್ಸ್‌ರೇ ಮತ್ತು ಲೆಬೊರೇಟರಿ ಸೌಕರ್ಯ ಸಲಕರಣೆಗಳನ್ನು ಒದಗಿಸಲಿಕ್ಕೆ.




**ಒಂದು ಟಿಬಿ ಮೊಹರಿನ ಬೆಲೆ ಹತ್ತು ಪೈಸೆ ಮಾತ್ರ.**

ಮೊಹರುಗಳು ಸಿಗುವ ಸ್ಥಳಗಳು:— 1. ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಮಂಗಳೂರು. 2. ಮೈಸೂರು ರಾಜ್ಯದ ಟಿಬಿ ಎಸೋಶಿಯೇಶನ್, ಕುರುಬರ ಸಂಘ ಹೋಸ್ಟೆಲ್ ಬಿಲ್ಡಿಂಗ್, ಗಾಂಧೀ ನಗರ, ಬೆಂಗಳೂರು ಮತ್ತು ಅವುಗಳ ಬೇರೆ ಬೇರೆ ಏಜನ್ಸಿಗಳು.

## 16ನೆ ಕ್ಷಯರೋಗ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಏರ್ಪಡಿಸಲಾದುದು)

ಉದಾರ ಸ್ಥಳ ದಾನ:
**Central Bank of India Ltd., Bombay.**


---

### ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No. 47/1965

ನರ್ಸಿ ಸೇರಿಗಾರ್ತಿ ಕೂಡಾ— ಅರ್ಜಿದಾರರು

ಮತ್ತು

ಬೊಗ್ಗಯ ಸೇರಿಗಾರ — ಎದ್ರಿ

ಇವರೊಳಗೆ

ಉಡ್ಪಿ ತಾಲೂಕು ಮೂಡು ತೋನ್ಸೆ ಗ್ರಾ ಮದಲ್ಲಿರುತ್ತಿದ್ದ ಮೈರೆ ಸೇರಿಗಾರ್ತಿ ಮಗಳ ಪುಟ್ಟಿ ಸೇರಿಗಾರ್ತಿಯು ತಾ. 12-2-1965ರ ಲ್ಲು ಮೃತಪಟ್ಟಿರುತ್ತಾರೆ. ಅವರ ಬಾಬ್ತು ಮೇಲ್ಕಾಣಿಸಿದ ಅರ್ಜಿಯಲ್ಲಿ ಕಾಣಿಸಿದ ಹಣ ಗಳನ್ನು ವಸೂಲುಪಡೆಯುವರೆ ಅರ್ಜಿದಾ ರರು ದಾಖಲುಮಾಡಿದ ವಾರೀಸು ಸರ್ಟಿಫಿಕೇ ಟು ಅರ್ಜಿಯು ತಾ. 10-12-1965ಕ್ಕೆ ಇ ಟ್ಟಿರುತ್ತದೆ. ಯಾರಿಗಾದರೂ ಆಕ್ಷೇಪಣೆ ಇ ದ್ದರೆ ಆ ದಿವಸ ಪೂರ್ವಾಹ್ನ ಗಂಟೆ ಹತ್ತಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡತಕ್ಕದ್ದು ಎಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ.

**Y. D. Hegde, B. A., B. L.**
Advocate for Petitioners
Udipi, 20-11-65

---

### ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

K E P No. 50/65
in O. S. 125/61

ಪುಷ್ಪಾವತಿ ಅಂಮ— ಅರ್ಜಿದಾರ

ಮತ್ತು

ಶಿವದೇವಿ ಸಹಾ— ಎದ್ರಿಗಳು.

ಜ್ವಾಲಿನಿ ಅಂಮ, ಜಾಕು ಹೆಂಗಸಿನ ಮ ಗಳು, ಬೆಳ್ತಂಗಡಿ ತಾಲ್ಕು ಹೊಸಂಗಡಿ ಗ್ರಾ ಮದ ಪಡುಕೋಡಿ ಗುತ್ತು ಎಂಬಲ್ಲಿರುವನ ರಿಗೆ— ಕೋರ್ಟು ಹುಕುಂ ಪ್ರಕಾರ ತಿಳಿಸುವು ದೇನೆಂದರೆ:—

ಮೇಲ್ಕಂಡ ಅಮಲ್ದಾರಿಯಲ್ಲಿ ನಿಲಂ ಇ ಸ್ತಿಹಾರಿನ ಶರ್ತ ನಿರ್ಣಯ ಬಗ್ಗೆ ತಾರೀಕು 4-12-65ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪಣೆ ಏನಾದರೂ ಇದ್ದರೆ ಆ ದಿನ ಪೂ ರ್ವಾಹ್ನ 11ಕ್ಕೆ ಕೋರ್ಟು ಮುಂದೆ ಸ್ವತಃ ಇಲ್ಲ ವಕೀಲರ ದ್ವಾರ ಹಾಜರಾಗತಕ್ಕದ್ದು. ತಪ್ಪಿದರೆ ಸದ್ರಿ ಅಮಲ್ದಾರಿಯಲ್ಲಿ ನಿಮ್ಮನ್ನು ಶಿವಾಯಿ ಮಾಡಿ ಮುಂದುವರಿಸಲಾದೀತು.

**(Sd.) N. J. KADAMBA.**
Advocate for Petitioner

ಬೆಳ್ತಂಗಡಿ, 17-11-1965

# ರೈತ ಮುರುಗ

(ಎರಡನೇ ಪುಟದಿಂದ)

ಮಳಲನ್ನು ಮುಟ್ಟಿ ಬರುತ್ತಿದ್ದರು.

ಜಪಾ ಕುಡಿಯುವಾಗ ಇತರರು ಆಡಕ್ಕಾಗಿ ಮಾತುಗಳನ್ನು ಕಾದಿರಿಸಿಕೊಂಡಲ್ಲಿ, ಹಿಂದೂ ಹೆಂಗಸರು ಸ್ನಾನಘಟ್ಟದಲ್ಲಿ ಮಾತಾಡಲು ಕಾದಿರಿಸುತ್ತಾರೆ. ವೈನುವಿನ ಸುದ್ದಿಗಳನ್ನು ಅಲ್ಲಿ ಟೀಕೆ ಸಹಿತ ಒಪ್ಪಿಸಲಾಗುತ್ತದೆ. ಹಾಗಿರುವಾಗ ರಾಮುವಿನ ಚಮತ್ಕಾರಿಕ ವದುವೆಯು ಕುರಿತು ಟೀಕೆ ಆ ಮಹಿಳೆಯರ ಮಧ್ಯೆ ಬಂದದ್ದು ಆಶ್ಚರ್ಯವೇನಲ್ಲ.

ಹಾಳಾಗಿರುವ ಹಳ್ಳಿಯ ದೇಗುಲಗಳ ಕೂಡಾ, ಮುದುಕ-ಮುದುಕಿಯರು ಪ್ರಾರ್ಥನೆ ಮಾಡುತ್ತಿದ್ದಾಗಲೂ, ಅದನ್ನು ಭೇದಿಸಿಕೊಂಡು ಆ ಸ್ತ್ರೀಯರ ಮಾತುಕತೆಗಳು ಕೇಳಬರುತ್ತವೆ.

ಆ ಸಮಯದಲ್ಲಿ ರಾಮು ಮತ್ತು ಜಾನಕಿ ಸುಮ್ಮಗಿರಲಿಲ್ಲ. "ಪ್ರಿಯೆ ಜಾನಕಿ, ಹಳ್ಳಿಗೆ ನಾವಿನ್ನೂ ಮಾತಿನ ವಿಷಯವಾಗಿದ್ದೇವೆಂದು ಮುರುಗನು ಹೇಳುತ್ತಿದ್ದಾನೆ. ಒಂದು ತಿಂಗಳು ಕಳೆದು ಹೋದರೂ ಅವರ ನಾಲಗೆಯ ತುರಿಕೆ ಇನ್ನೂ ಕಡಿಮೆ ಆಗಿರುವದಿಲ್ಲ." ರಾಮು ಹೇಳಿದನು.

"ಆದರೆ ನಾವು ಅವರೊಂದಿಗೆ ಸರಿಯಾಗಿ ಕಲೆತು ಬೆರೆತಲ್ಲಿ ಆಶ್ಚರ್ಯವು ಸತ್ತು ಹೋದೀತು. ನಾನು ಅವರ ಬಳಿ ಹಳ್ಳಿಗೆ ಸಂಬಂಧಪಟ್ಟಿರುವ ಅನೇಕ ವಿಷಯಗಳನ್ನು ಕಲಿತುಕೊಂಡಲ್ಲಿ ಸಂತೋಷದಿಂದ ಹಾಗೂ ತೃಪ್ತಿಯಿಂದಿರಬಹುದು. ನಾಳೆ ನಾನು ನದಿ ಸ್ನಾನಕ್ಕೆ ಹೋಗಲೇನು?" ಜಾನಕಿ ಉತ್ತರಿಸಿ ಪ್ರಶ್ನೆ ಕೇಳಿದಳು.

"ನಿನ್ನಲ್ಲಿ ಧೈರ್ಯವಿದ್ದಲ್ಲಿ ಹಾಗೂ ಜಾಗರೂಕಳಾಗಿರಲು ಸಾಧ್ಯವಿದ್ದಲ್ಲಿ ಹೋಗಬಹುದು. ಅವರು ನಿನ್ನ ಕುರಿತು, ನನ್ನ ಕುರಿತು, ಪ್ರಪಂಚದ ಕುರಿತು ಕೀವಳ ಚಾಡಿಮಾತು, ದೂರುಗಳು, ಕಠಿಣ ಹಾಗೂ ಮನನೋಯಿಸುವ ಮಾತುಗಳನ್ನು, ಬೇಡವಾಬ್ದಾರಿಯುತ ಮತ್ತು ವಿಲಾಸಿ ಮಾತುಗಳನ್ನಾಡುತ್ತಿರುತ್ತಾರೆ. ನಮ್ಮ ಹಳ್ಳಿಯ ಜೀವನವು ಕೆಲಸಕ್ಕೆ ಬಾರದಿರುವಿಕೆ, ಅಜ್ಞಾನ ಅಲ್ಲದೆ ಒಡತನದಿಂದ ಕೂಡಿದೆ. ಇದನ್ನೆಲ್ಲಾ ಯಾರು ಸರಿಪಡಿಸುತ್ತಾರೆಂದು ನನಗೆ ಗೊತ್ತಾಗುವದಿಲ್ಲ.

"ಅದು ನೀವು ಮತ್ತು ನಾನಲ್ಲದಿದ್ದರೆ, ಇನ್ನಾರು, ಪ್ರಿಯತಮಾ?" ಗಟ್ಟಿಯಾಗಿ ಜಾನಕಿಯು ಉತ್ತರಕೊಟ್ಟಳು.

ಇಲ್ಲಿ ಮೀನಾಕ್ಷಿಯ ಅಧಿಕಾರ ಇಲ್ಲದಿದ್ದುದರಿಂದ ಜಾನಕಿಯು ಸ್ವತಂತ್ರ ಹಾಗೂ ಹೊಸ ಬಾಳ್ವೆಗಾಗಿ ಇಷ್ಟಪಡುತ್ತಿದ್ದಾಳೆಂಬುದನ್ನು ರಾಮು ಕಂಡುಕೊಂಡನು. ಅವನಿಗೆ ಸಂತೋಷವನ್ನುಂಟು ಮಾಡಿತು.

ರಾಮುವಿನ ಕಣ್ಣುಗಳಲ್ಲಿ ಮಿನುಗುತ್ತಿದ್ದ ಮೆಚ್ಚಿಕೆಯ ಚಿಹ್ನೆಯನ್ನು ಅವಲೋಕಿಸದಿರಲು ಅವಳಿಂದಾಗಲಿಲ್ಲ.

"ಪ್ರಿಯತಮಾ, ನಿಜವಾಗಿ ನಿನಗೆ ನಾನು ಸ್ವಲ್ಪ ಸಮಯದಲ್ಲೇ ಯೋಗ್ಯಳಾಗುತ್ತೇನೆ. ಹೌದು, ನೀವು ಕೊಟ್ಟಿರುವ ಘನ ಸ್ವಾತಂತ್ರ್ಯದಿಂದಾಗಿ, ವಸ್ತುಗಳನ್ನು ಕಂಡು ಕಲಿತುಕೊಳ್ಳುತ್ತೇನೆ."

ಆ ರೀತಿಯ ಶಾಂತ ಭರವಸೆಯ ರೀತಿಯಲ್ಲಿ, ಜಾನಕಿಯು ತನ್ನಂಗೈಯನ್ನು ಪ್ರೀತಿಯಿಂದ ರಾಮುವಿನ ಮೋಹಕ ಗಲ್ಲದ ಮೇಲಿಟ್ಟಳು. ಹಾಗೆ, ತನ್ನ ಕೋಮಲ ಬೆರಳುಗಳಿಂದ, ಪ್ರೀತಿಯ ಹುಟ್ಟು ಗುಣವನ್ನು ಮರೆಯದೆ, ಆ ಗಲ್ಲಗಳ ಮೇಲೆ ಕಟ್ಟಲಾರಂಭಿಸಿದಳು.

—೧೦—

ಮೊದಲೇ ನಿಶ್ಚಯಿಸಿದ್ದಂತೆ, ಜಾನಕಿಯು, ಮರುದಿನ ಬೆಳಿಗ್ಗೆ ಸ್ನಾನಕ್ಕೆ ನದಿಗೆ ಹೋದಳು. ಅಲ್ಲಿ ಅವಳು ಎಲ್ಲರೊಂದಿಗೂ ಸರಿಯಾಗಿ ಬೆರೆತಳು. ತನ್ನ ನಿಷ್ಕಪಟ, ಸ್ವತಂತ್ರ ಹಾಗೂ ಸದ್ಭಾವನೆಯ ಗುಣಗಳಿಂದ ಟೀಕಾಚಾರ್ಯೆಯರನ್ನು ದಂಗುಬಡಿಸಿದಳು. ಅಲ್ಲಿ ಅವಳ ದೃಷ್ಟಿ ಸೀತೆಯ ಮೇಲೆ ಬಿತ್ತು. ಅವಳಲ್ಲಿ ಸ್ನೇಹತ್ವದ ಬಳ್ಳಿ ಚಿಗುರೊಡೆಯಿತು. ಸೀತೆಯು ಹಳ್ಳಿಯ ಜೀವನ ಹಾಗೂ ಸ್ನಾನಘಟ್ಟದಲ್ಲಿ ವಹಿಸಿಕೊಳ್ಳಬೇಕಾದ ಚಾತುರ್ಯದ ಕುರಿತು ಪ್ರಿಯವಾಗಿ ತಿಳಿಸಿದಳು. ಸೀತೆಯ ಸುಂದರ ನಯನಗಳು ಜಾನಕಿಯ ಮನಸೆಳೆದಿದ್ದುವು; ಅವುಗಳು ಗುಪ್ತವಾಗಿ ಕಣ್ಣೀರು ಸುರಿಸುತ್ತಲೂ ಸುರಿಸದೆಯೂ ದುಃಖದಿಂದಿರುವದನ್ನು ಜಾನಕಿ ಗಮನಿಸಿದ್ದಳು. ಅದರ ರಹಸ್ಯವನ್ನು ತಿಳಿದುಕೊಳ್ಳುವದಕ್ಕಾಗಿ ಅವಳನ್ನು ಸಾಯಂಕಾಲ ಮನೆಗೆ ಬರಬೇಕೆಂದು ಒತ್ತಾಯ ಮಾಡಿದಳು.

ಅಂದು ಸಾಯಂಕಾಲ ಅಗ್ರಹಾರದಲ್ಲಿ ಅಥವಾ ಬ್ರಾಹ್ಮಣರ ವಾಸಸ್ಥಳದಲ್ಲಿ ಭಾಸ್ಕರನು ಬಿಸಿಯಾಗಿದ್ದನು; ಕೆಂಪಾಗುತ್ತಿತ್ತು. ಆದರೆ ತೆಂಗಿನ ತೋಟದಲ್ಲಿ ಗಾಳಿಯು ಬಹಳ ತಂಪಾಗಿತ್ತು. ದಿನದ ಕೆಲಸವನ್ನು ಮುಗಿಸಿ ಬಿಸಿ ಭಾಸ್ಕರನಿಂದಾಗಿ ಬಳಲಿ ಬೆಂಡಾಗಿದ್ದ ಮುರುಗನು, ಒಂದು ಎಳೆಯ ತೆಂಗಿನಮರದ ಬುಡದಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದನು. ಅಲ್ಲೂ [illegible]ಯಾಗಿರದೆ, ತನ್ನ ಮನೆಯ ಮಾಡಿಗೆ ಹೊದೆಸಲಿಕ್ಕೆ, ಹಣ್ಣಾಗಿ ಒಣಗಿರುವ ತೆಂಗಿನ ಮಡಲನ್ನು ಚಾಪೆಯಂತೆ ಹೆಣೆಯುತ್ತಿದ್ದನು. ತನ್ನ ಸಮೀಪದಲ್ಲಿದ್ದ, ಮನಸ್ಸು ಬಂದಂತೆ ಬೆಳೆದಿದ್ದ ಗಿಡಕಂಟಿಗಳನ್ನು ಕತ್ತರಿಸುತ್ತ, ಚಿಂತಾಕ್ರಾಂತ ರಾಮು ನಡೆಯುತ್ತಿದ್ದನು. ಅಪರೂಪವಾಗಿ ದರ್ಶನವೀಯುತ್ತಿರುವ ಧನಿಯನ್ನು ಮುರುಗನು ಎದ್ದು, ಸ್ವಲ್ಪ ದೂರದಲ್ಲಿ ಮರ್ಯಾದೆಯಿಂದ ನಿಂತು, ಕೈಮುಗಿಯುತ್ತ ಸ್ವಾಗತಿಸಿದನು. ಹಳ್ಳಿಗೆ ತಿರುಗಿ ಬಂದ ನಂತರ ಅವನು ಅಲ್ಲಿಗೆ ಭೇಟಿ ಇತ್ತದ್ದು ಅದು ಎರಡನೆಯ ಬಾರಿ.

"ಮುರುಗ, ದೇವತೆಗಳು ನಿನ್ನ ಪಕ್ಷ ಹಿಡಿದಿದ್ದಾರೆ. ಒಂದು ವರ್ಷದ ಹಿಂದೆ ನಿನ್ನನ್ನು ವಂಚಿಸಲು ನಾನು ಪ್ರಯತ್ನಿಸಿದ್ದೆ. ನಾನಿನ್ನು ಮುಂದೆ ನಿನ್ನ ಹಾಗೆ ನೇಗಿಲು ಹಿಡಿದು ಉಳಬೇಕು. ಹಾಗೆ ಹಿಡಿದು ಅಗೆಯಬೇಕು. ಅಲ್ಲದೆ ನಿನ್ನ ಹಾಗೆ ಸರಳ ಜೀವನದಿಂದಿರಬೇಕು. ನಿಸರ್ಗದ ಸ್ವಂತ ಚೆಂದವಾದ ರತ್ನಗಂಬಳಿ ಅಥವಾ ಜರದೆಯಂತೆ ಈ ಮಡಲನ್ನು ಹೆಣೆಯಲು ನನಗೂ ಕಲಿಸಿಕೊಡು.

ರಾಮು ಗಂಭೀರ ಸ್ವರದಿಂದ ಪ್ರಾರಂಭಿಸಿದನು. ಕೈಲಿಯು ಮುರುಗನಿಗೆ ಸಂತೋಷವನ್ನಿತ್ತಿತು. "ಸ್ವಾಮಿ, ನಿಮ್ಮ ದೃಷ್ಟಿ ಮಾತ್ರವೇ ನನ್ನ ಕೆಲಸವನ್ನು ಉಲ್ಲಾಸಗೊಳಿಸುತ್ತದೆ. ನಿಮ್ಮ ಇರುವಿಕೆಯು ಬಹಳ ಉತ್ತಮ ಉತ್ತೇಜನವನ್ನು ಕೊಡುತ್ತದೆ. ಆದರೆ ಈ ಹೆಣೆಯುವ ಕೆಲಸವಾಗಲೀ, ಹಾರೆಯ ಕೆಲಸವಾಗಲಿ, ಅಥವಾ ಉಳುವದಾಗಲೀ ನಿಮ್ಮ ಜಾತಿಗೆ ಹಾಗೂ ಕೋಮಲ ಕರಗಳಿಗೆ ಹೇಳಿಸಿದ್ದಲ್ಲ. ನಾವು ಆ ಕೆಲಸಗಳಿಗಾಗಿಯೇ ಇದ್ದೇವೆ ಅದನ್ನು ನಾವು ಸಂತೋಷದಿಂದ ಮಾಡುತ್ತೇವೆ. ಸ್ವಾಮಿಯವರು ಮಾತ್ರ ಅನಿಶ್ಚಿತ ಹಾಗೂ ಅನ್ಯದೇಶೀಯ ವಿಚಾರಗಳಲ್ಲಿ ತಲೆ ಹಾಕಿಕೊಂಡು ಅನುಪಸ್ಥಿತರಾಗದಿದ್ದರೆ ಸಾಕು."

"ನಾನು ಹಾರೆ ಹಾಗೂ ನೇಗಿಲುಗಳನ್ನು ಹಿಡಿದುಕೊಂಡು ಕೆಲಸ ಮಾಡಲೇಬೇಕು. ಮುರುಗ, ಇಲ್ಲದಿದ್ದಲ್ಲಿ ಆಹಾರ ತೆಗೆದುಕೊಳ್ಳಲು ಅಧಿಕಾರ ನನಗೆಲ್ಲಿದೆ?"

"ಅದು ಸಾಲದು, ಇಡಿ ಹಳ್ಳಿಯು ನಮ್ಮತ್ತ ನೋಡಿ ನಗಲಾರಂಭಿಸಿತು. ಆಗ ಮುರುಗನ ನಿಷ್ಠಾವಂತ ಆತ್ಮ ದಂಗೆ ಎದ್ದೀತು. ನಾವು ನಿಮಗಾಗಿ ದುಡಿಯುವದು ಕ್ರಮವಿದೆ. ಪ್ರತಿ ಒಬ್ಬನೂ ಅವನವನ ಕೆಲಸ ಕಾರ್ಯಗಳಿಗಾಗಿ ಇದ್ದಾನೆ."

"ಆದರೆ ಮುರುಗ, ನನ್ನ ಕೆಲಸದಲ್ಲಿ ನಾನು ಸೋತಿದ್ದೇನೆ. ಪುನಃ ಬಿ. ಎ. ಯಲ್ಲಿ ನಾನು ತೇರ್ಗಡೆಯಾಗಿರುವದಿಲ್ಲ. ನಾನು ನೇಗಿಲಿಗೆ ಕೈಕೊಡಬೇಕು; ಇಲ್ಲವೆ ಸುಮ್ಮನೆ ಹಸಿವಿನಿಂದ ಸಾಯಬೇಕು."

"ಸೋತಿರಿ! ಮುರುಗನು ಉಸಿರಾಡುತ್ತಿರುವ ವರೆಗೆ ಧನಿಯವರ ಹೊಟ್ಟೆಗೆ ಎಲ್ಲವೂ ಸರಿಯಾಗಿರುತ್ತದೆ. ನೀವು ಅನುತ್ತೀರ್ಣರಾಗಿರುವದು ನಿಜವಾಗಿ ನನಗೆ ಸಂತೋಷವಾಗಿದೆ. ಹಳ್ಳಿಯಲ್ಲಿ ಹಾಯಾಗಿದ್ದು ಬಿಡಿ. ಸ್ವಾಮಿ, ಬಿ. ಎ. ಯಲ್ಲಿ ಸೋತಿರುವಿರೆಂದರೆ ಅದೇನು ಮಹಾ ಇರುವದಿಲ್ಲ. ಅದರರ್ಥ ಮಳೆಗಾಲ ಸೋತಿತೆಂದೇನೂ ಇರುವದಿಲ್ಲ. ಬಹುಶಃ ನಮಗದು ಒಳ್ಳೆಯ ಸಂಗತಿ ಇರಬೇಕು. ಅದಕ್ಕಾಗಿ ದೇವತೆಗಳಿಗೆ ಧನ್ಯವಾದಗಳನ್ನರ್ಪಿಸಬೇಕು."

"ನೀನೇ ಸರಿ, ಮುರುಗ. ದೇವತೆಗಳು ನನ್ನ ಕುರಿತು ನಿರ್ಣಯಕ್ಕೆ ಬಂದಿದ್ದಾರೆ; ನಾನಿಲ್ಲಿ ನಿನಗೆ ಮತ್ತು ಜಮೀನಿಗೆ ನನ್ನನ್ನು ಅರ್ಪಿಸಿಕೊಂಡು ಇರಬೇಕು. ಹೊಸ ಹಸು ಹೇಗಿದೆ? ಅದು ಒಳ್ಳೆಯ ಜಾತಿಯದ್ದು ತಾನೇ? ಓ, ಅಲ್ಲಿರುವದು ಅದೇ ಏನು? ಕರು ಬಹಳ ಚಿಕ್ಕದಿದೆ, ಮುರುಗ. ಕೆಚ್ಚಲು ಬಹಳ ಮುದುಡಿಕೊಂಡಿದೆ. ಅವಳು ಚೆನ್ನಾಗಿ ಹಾಲು ಕೊಡುತ್ತಾಳೇನು? ಉಳಲಿಕ್ಕುಪಯೋಗಿಸುವ ಕೀಳ್ತರಗತಿಯ ಎತ್ತುಗಳ ಸಂಪರ್ಕಕ್ಕೆ ನಮ್ಮ ದನಗಳನ್ನು ಬಿಟ್ಟು ಸಂತಾನ ಪಡೆಯುವದು ಬಹಳ ವಿಷಾದಕರ ವಿಷಯವಿದೆ. ದನಗಳಿಂದ ಉತ್ತಮ ಸಂತತಿಯನ್ನು ಪಡೆಯುವ ಅಭ್ಯಾಸ ನಮ್ಮ ಜನರಿಗೆ ಬಂದಿರುವದಿಲ್ಲ. ಪಾಶ್ಚಾತ್ಯರಲ್ಲಾದರೆ, ಕೇವಲ ಐವತ್ತು ವರ್ಷಗಳೊಳಗೆ ಪ್ರತಿಯೊಂದು ವಿಷಯದಲ್ಲೂ ಅದ್ಭುತ ಅಭಿವೃದ್ಧಿಯಾಗಿದೆ. ಮೊದಲು ನಾವು ಶಾಸ್ತ್ರೀಯ ರೀತಿಯಲ್ಲಿ ಜಾನುವಾರು ಸಂಪತ್ತನ್ನು ಉತ್ತಮಗೊಳಿಸಿಕೊಂಡಲ್ಲಿ, ಅನಂತರ ವ್ಯವಸಾಯ ಪದ್ಧತಿಯಲ್ಲಿ ಮುಂದರಿಯಬಹುದು. ಅದರರ್ಥವೇನೆಂದರೆ ಆಲೋಚನಾ ಶಕ್ತಿ ಇರುವವರು, ಆ ತರುಣರು, ಹಳ್ಳಿಯಲ್ಲಿ ಸೇರಿಕೊಂಡು, ಹಳೆಯ, ಆದರೆ, ದುಡುಕಾಗಿರುವ ಮುರುಗನ ತಲೆ ಮತ್ತು ಕೈಗಳನ್ನು ಹೊಸ ರೀತಿಯಲ್ಲಿ ಉಪಯೋಗಿಸಲು ಅವನಿಗೆ ತಿಳಿಸಿಕೊಡಬೇಕು."

ರಾಮು ಪಠ್ಯ ಪುಸ್ತಕಗಳಲ್ಲಿದ್ದ ಹಾಗೂ ವರ್ತಮಾನ ಪತ್ರಿಕೆಗಳಲ್ಲಿದ್ದ ವಿಷಯಗಳನ್ನೆಲ್ಲಾ, ತನ್ನ ವಾದದ ಸಮರ್ಥನೆಗಾಗಿ, ಮುಂದೆ ಹಾಕಿದನು. ಆದರೆ ಆ ಶಾಸ್ತ್ರೀಯ ಚರ್ಚೆಯು ಮುರುಗನಿಂದ ಮೆಚ್ಚಿಕೊಳ್ಳಲು ಸಾಧ್ಯವಾಗಲಿಲ್ಲ. ಅವನು ವಿರುದ್ಧವಾಗಿ ವಾದ ಹೂಡಿದನು. "ಧನಿಯವರು ಮನೆಯಲ್ಲಿದ್ದುಕೊಂಡು, ತೋಟದಲ್ಲಿ ಇರುವ ಕಸವನ್ನು ತೆಗೆದು ಹಾಕುವ ಗದ್ದೆಗಳಿಗೆ ಗೊಬ್ಬರ ಹಾಕುವ ಹಾಗೂ ಇತರ ಕೆಲಸಗಳು ಯುಕ್ತ ಸಮಯದಲ್ಲಿ ನಡೆಯುತ್ತಿವೆಯೋ ಎಂದು ಸ್ವಬಲದಿಂದ, ತಾಳ್ಮೆ ಹಾಗೂ ಶ್ರದ್ಧೆಯಿಂದ ನೋಡಿಕೊಂಡಿದ್ದಲ್ಲಿ ತನ್ನಷ್ಟಕ್ಕೆ ವ್ಯವಸಾಯವು ಅಭಿವೃದ್ಧಿ ಹೊಂದುತ್ತದೆ." ಎಂದು ಮುರುಗನು ಹೇಳಿದನು.

ಬೇಸಾಯದ ಕುರಿತು ಮುರುಗನಿಗಿರುವ ಅಭಿಪ್ರಾಯಕ್ಕೆದುರಾಗಿ ಏನಾದರೂ ಹೇಳಿ ಅವನ ಮನಸ್ಸನ್ನು ನೋಯಿಸಬಾರದೆಂದೂ, ಅದಕ್ಕಾಗಿ ಅವನ ಅಭಿಪ್ರಾಯಗಳಿಗೆ ಸಮ್ಮತಿ ಸೂಚಿಸುವದು ಜಾಣತನದ ಲಕ್ಷಣವೆಂದು ರಾಮು ಭಾವಿಸಿದನು.

(ಮುಂದುವರಿಯುವುದು)




ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

NAVAYUGA 25—11—1965
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೨೫-೧೧-೬೫ರಿಂದ ೧-೧೨-೬೫ರ ವರೆಗೆ

### ೧. ಮೇಷ

ಇಂದು ನಿಮ್ಮ ಆರ್ಥಿಕ ಪರಿಸ್ಥಿತಿಗೆ ಕೊಂಚ ಧಕ್ಕೆ ತಗಲಲಿದೆ. ಆಯಾಧಿಕ್ಯವಾಗುತ್ತದರಿಂದ ಖರ್ಚಿನ ಕಲುವಾಗಿ ಸಾಲವಾಡುವ ಪ್ರಸಂಗ ಬರಲಿದೆ. ನಿಷ್ಕಾರಣವಾಗಿ ವಾಕ್ಕಲಹವಾದೀತು. ಪ್ರಮುಸಹಿಷ್ಣುಗಳಾದ ನೀವು ಹಿಡಿದ ಕಾರ್ಯವನ್ನು ಅರ್ಧದಲ್ಲಿ ಬಿಡಲಾರಿರಿ. ಶತ್ರುಪೀಡೆಯಿಂದ ಮುಕ್ತರಾದ ನಿಮಗೆ ಸಂಸಾರದಲ್ಲಿ ಸುಖನೆಮ್ಮದಿಗಳು ಲಭಿಸಲಿವೆ. ಅಧಿಕಾರಿಗಳ ವಕ್ರ ದೃಷ್ಟಿಗೆ ಸಿಲುಕುವ ಸಂಭವವಿದೆ. ಜಾಗ್ರತೆಯಿಂದ ವರ್ತಿಸಿರಿ. ವಾರಾಂತ್ಯದ 4 ದಿನಗಳಲ್ಲಿ ಹೆಚ್ಚಿನ ಬಯಕೆಗಳು ಪೂರ್ಣವಾಗುವವು.

### ೨. ವೃಷಭ

ವ್ಯವಹಾರ ಚತುರರಾದ ನಿಮಗೆ ಪರಿಶ್ರಮಕ್ಕಿಂತಲೂ ಹೆಚ್ಚಿನ ಫಲ ಲಭಿಸುವದು. ಆರೋಗ್ಯವು ಹಿಂದಿಗಿಂತ ಸುಧಾರಿಸಲಿದೆ. ಆದರೆ ಶತ್ರು ಜನರ ಕಾಟವು ಅಸಹನೀಯವೆನಿಸೀತು. ಪ್ರವಾಸಿಗಳಿಗೆ ನಷ್ಟನಷ್ಟಗಳು ಹೆಚ್ಚಲಿವೆ. ಸಾಕಷ್ಟು ಧನ ಜನಬಲವಿದ್ದರೂ ರಾಜಕೀಯದಲ್ಲಿ ಪರಾಭವ ಹೊಂದುವಿರಿ. ಆತ್ಮೀಯರ ವಿಯೋಗಕ್ಕೆ ಗುರಿಯಾದ ನಿಮಗೆ ವಾರಾಂತ್ಯದ 2 ದಿನಗಳು ಮಾತ್ರ ಅನುಕೂಲವಿದೆ.

### ೩. ಮಿಥುನ

ಗೃಹತಾಪತ್ರಯಗಳಿಂದ ಮುಕ್ತರಾಗುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಹಿಂದಿಗಿಂತ ಸುಧಾರಿಸುವುದರಿಂದ ದಿನಯಾಪನೆಯು ಸುಗಮವಾದೀತು. ಮಕ್ಕಳ ಮುಂಬಾತರ ಹೆಚ್ಚಿನ ಲಾಭವಿದೆ. ಕಫಪಿತ್ತದೋಷದಿಂದ ಆರೋಗ್ಯಕ್ಕೆ ಹಾನಿ ಸಂಭವಿಸುವಂತಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕಾಲವು ಅಧ್ಯಯನಕ್ಕೆ ತುಂಬ ವಿಘ್ನಕಾರಿಯಾದೀತು. ವಾರಾದಿಯ 2 ದಿನಗಳಲ್ಲಿ ಗೃಹಸುಖ ಧನಲಾಭಗಳುಂಟಾಗುವವು.

### ೪. ಕರ್ಕಟ

ಸಾಂಸಾರಿಕ ಅವ್ಯವಸ್ಥೆಯಿಂದಾಗಿ ಇಂದು ನಿಮ್ಮ ಮನಸ್ಸಿಗೆ ಆಘಾತವು ನೆಮ್ಮದಿಯಿರದು. ಸೋದರರು ಸದಾ ಕಲಹಪ್ರಿಯರಾಗುವರು. ಶತ್ರು ಜನರ ಪೀಡೆ ಆಪ್ತೇಷ್ಟರ ಕೃತಘ್ನತೆಯಿಂದಾಗಿ ಹೆಚ್ಚಿನ ನಿಮ್ಮ ಕಾರ್ಯಗಳು ಅರ್ಧದಲ್ಲೇ ಕಡೆದು ನಿಲ್ಲಲಿವೆ. ದೇಹಾಲಸ್ಯ ಮನೋರೋಗಗಳಿಗೀಡಾದ ನಿಮಗೆ ಶತ್ರು ಜನರ ಕಾಟವಿರದು. ವಾರಾದಿಯ 5 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

### ೫. ಸಿಂಹ

ನಿರೀಕ್ಷಿಸಿದಂತೆ ಕಾರ್ಯಗಳು ಪೂರ್ಣವಾಗುವವು. ವಿದ್ಯೋಪಜೀವಿಗಳಾದ ನೌಕರಿ ಜನತೆಗೂ ವಿದ್ಯಾರ್ಥಿನಿಯರಿಗೂ ಈ ಕಾಲವು ತುಂಬ ಅನುಕೂಲವಾಗಿ ಪರಿಣಮಿಸಲಿದೆ. ಸಂಸಾರವು ನಿರಾಮಯವಾಗಿದ್ದರೂ ಸೋದರವರ್ಗದಲ್ಲಿ ಮನಸ್ತಾಪವುದಿಸುವ ಸಂಭವವಿದೆ. ಜನಾನುರಾಗವನ್ನು ಗಳಿಸಿದ ನಿಮಗೆ ಸರ್ವತ್ರ ಸ್ಥಾನಮಾನಾದರಗಳು ಲಭಿಸುವವು. ವಾರಾಂತ್ಯದ 4 ದಿನಗಳು ಇಷ್ಟಾರ್ಥಪ್ರದಗಳಿವೆ.

### ೬. ಕನ್ಯಾ

ಉತ್ತೋದು ಬಿತ್ತೋದು ನಮ್ಮಿಚ್ಛೆ, ಆಗೋದು ಹೋಗೋದು ದೈವೇಚ್ಛೆ, ಎಂಬಂತೆ ನೀವಿಂದು ನಿಮ್ಮ ಕರ್ತವ್ಯವನ್ನೇನೂ ಪ್ರಯತ್ನಪಟ್ಟು ನಿರ್ವಹಿಸುವಿರಿ. ಆದರೆ ಫಲವು ಮಾತ್ರ ಎಣಿಸಿದಂತಿರಲಾರದು. ನಿಮ್ಮನ್ನು ನೇರವಾಗಿ ಇದಿರಿಸಲಾರದ ಶತ್ರು ಜನರು ಆತ್ಮೀಯರ ಸೋಗಿನಿಂದ ನಿಮ್ಮನ್ನು ವಂಚಿಸಲಿರುವರು. ಖರ್ಚಿಗೆ ತಕ್ಕ ಆದಾಯವೂ ಇರೋಣದರಿಂದ ದಿನಯಾಪನೆಯು ದುಸ್ತರವಾಗದು. ವಾರಾಂತ್ಯದ 2 ದಿನಗಳಲ್ಲಿ ನಿಮ್ಮ ನಿರೀಕ್ಷೆಯಂತೆ ಕಾರ್ಯಸಿದ್ಧಿ ಕಲಿವೆ.

### ೭. ತುಲಾ

ಧನಪತಿಯೂ ವಿಕ್ರಮಕಾರಕನೂ ಆದ ಅಂಗಾರಕನಿಂದು ಉಪಚಯ ಸ್ಥಾನದಲ್ಲಿದ್ದು ಗುರುವಿನ ನೇರ ದೃಷ್ಟಿಯನ್ನು ಪಡೆದಿಹ ಕಾರಣ ಎಂತಹ ಮಹತ್ಕಾರ್ಯವೇ ಇರಲಿ ನಿಮಗದು ತೃಣ ಸಮಾನೆನಿಸೀತು. ಮೃಗರಾಜನಂ ಕಂಡ ಹರಿಣಗಳಂತೆ ಶತ್ರು ಜನರು ನಾಯವಾಗುವರು. ನಿಮ್ಮ ನಿರೀಕ್ಷೆಗೂ ಅಧಿಕವಾದ ಫಲವು ಅನಾಯಾಸದಿಂದ ಲಭಿಸಲಿದೆ. ಸಮಾಜದಲ್ಲಿ ಗಣ್ಯ ಸ್ಥಾನವಂ ಪಡೆವಿರಿ. ವಾರಾದಿಯ 3 ದಿನಗಳು ತುಂಬ ಅನುಕೂಲವಾಗಿದೆ.

### ೮. ವೃಶ್ಚಿಕ

ಗ್ರಹಬಲವು ತೀರ ಕೆಟ್ಟಿಹುದು ನಿಮ್ಮ ಪ್ರಯತ್ನಗಳಿಂದು ನೀರಲ್ಲಿ ಗೈದ ಹೋಮದಂತೆ ನಿಷ್ಫಲವಾಗುವುದು. ನಿಮ್ಮ ಆಪ್ತೇಷ್ಟವರ್ಗದವರೂ ಕೂಡಾ ಇಂದು ನಿಮ್ಮ ವಿರೋಧಿಪಕ್ಷವನ್ನು ಸೇರಲಿರುವರು. ಅಧಿಕಾರಿಗಳ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನಾಂತರ ಹೊಂದುವ ಯೋಗವಿದೆ. ಆರ್ಥಿಕ ದೃಷ್ಟಿಯಲ್ಲಿ ಈ ವಾರವು ತುಂಬ ಕೆಡುಕೆನಿಸೀತು. ಗೃಹತಾಪತ್ರಯಗಳಿಂದ ನೊಂದ ನಿಮಗೆ ತಾ. 28, 29 ಸ್ವಲ್ಪ ಅನುಕೂಲವೆನಿಸುವವು.

### ೯. ಧನು

ನಿಮ್ಮ ಉದ್ಯಮ ವ್ಯವಹಾರಗಳು ಎಂದಿನಂತೆ ನಿರಾತಂಕವಾಗಿ ಸಾಗಲಿವೆ. ನೆನೆದಂತೆ ಪ್ರತಿಯೊಂದು ಕಾರ್ಯಗಳೂ ಸಿದ್ಧಿಸುವವು. ದರೂ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲಿ ಮಾತ್ರ ಪರಿಣಾಮವು ವಿಪರೀತವಾದೀತು. ಖರ್ಚಿಗೆ ತಕ್ಕಷ್ಟು ಆದಾಯವಿರೋಣದರಿಂದ ದಿನಯಾಪನೆಯು ಸುಗಮವಾಗಲಿದೆ. ಪ್ರವಾಸದಲ್ಲಿ ಕಷ್ಟ ನಷ್ಟಗಳುಂಟಾದಾವು. ತಾ. 25, 26, 30, 1 ಈ ದಿನಗಳು ಸುಖದಾಯಿಗಳಾಗಿವೆ.

### ೧೦. ಮಕರ

ನಿಮ್ಮ ಸುಖಲಾಭ ಪತಿಯಾದ ಅಂಗಾರಕನಿಂದು ವ್ಯಯಸ್ಥಾನದಲ್ಲಿರುವುದರಿಂದ ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗುವದು. ನಿಮ್ಮ ಸ್ವಂತಕ್ಕಿಂತಲೂ ಪರರ ಸಲುವಾಗಿಯೇ ಹೆಚ್ಚಿನಂಶ ವ್ಯಯಿಸುವಿರಿ. ಬೇಕು ಬೇಕಾದ ದವಸಧಾನ್ಯಗಳಿದ್ದರೂ ಸಮಯಕ್ಕೆ ಸರಿಯಾಗಿ ಊಟೋಪಚಾರಗಳು ಲಭಿಸಲಾರವು. ಮನೋರೋಗದಿಂದ ಪೀಡಿತರಾದ ನಿಮಗೆ ತಾ. 28, 29 ಅನುಕೂಲವೆನಿಸಲಿವೆ.

### ೧೧ ಕುಂಭ

ದೈವಾನುಗ್ರಹಕ್ಕೆ ಪಾತ್ರರಾದ ನಿಮಗಿದೀಗ ಸುಸಂಧಿಯೊದಗಿಹುದು. ಗಾಳಿ ಬಂದಾಗ ತೂರಿಕೊಂಡದ್ದೇ ಬಂತೆಂಬ ಗಾದೆಯಂತೆ ನೀವು ಕಾರ್ಯಪ್ರವೃತ್ತರಾಗಿ ಇಷ್ಟಾರ್ಥವನ್ನು ಹೊಂದಿರಿ. ಯಾವ ಭಾಗದಲ್ಲೂ ನಿಮಗೆ ಅಡೆತಡೆಗಳುಂಟಾಗಲಾರವು. ನಿಮ್ಮ ಕಾರ್ಯದಕ್ಷತೆ ಕರ್ತವ್ಯ ಚತುರತೆಯಂ ಕಂಡ ವಿರೋಧಿ ವೃಂದವು ಇಂದು ಮೂಗಿನ ಮೇಲೆ ಬೆರಳಿಟ್ಟೀತು. ಸರ್ವಾತ್ಮನಾ ಸುಖಗಳಿಂದ ನಿಮಗೆ ತಾ. 25, 26, 30, 1 ಈ ದಿನಗಳು ಸುಖಲಾಭ ಸಂತಸದಾಯಿಗಳಾಗಿವೆ.

### ೧೨. ಮೀನ

ಪರಿಸ್ಥಿತಿಯು ತೀರ ಕೆಟ್ಟಿರುವುದರಿಂದ ನಿಮ್ಮ ಸಂಕಲ್ಪಗಳಿಂದು ಶಿರುಕನ ಕನಸಿನಂತಾದಾವು. ಸಮುದ್ರದಲೆಗಳಂತೆ ಮೇಲಿಂದ ಮೇಲೆ ಖರ್ಚು ವೆಚ್ಚಗಳೂ ಆಪದವಿಪ್ಪಗಳೂ ಬರಲಿವೆ. ಆತ್ಮೀಯರ ವಿರೋಧಕ್ಕೆ ಪ್ರಯೋಗಗಳಿಗೀಡಾದ ನಿಮಗೆ ಸುಖವೆಂಬುದು ಸ್ವಪ್ನದಲ್ಲೂ ದುರ್ಲಭವೆಂದರೆ ತಪ್ಪಾಗದು. ವಿಪಕ್ಷರು ನ್ಯಾಯದಿಂದ ಕಾಲಕಳೆಯುವ ನಿಮಗೆ ವಾರಾದಿಯ 5 ದಿನಗಳು ಹೆಚ್ಚಿನ ದುಃಖಕಾರಿಗಳಾಗಲಾರವು

ಯಾವತ್ತೂ ವಾಚನ ಭಂಡಾರಗಳಿಗೆ
ಯೋಗ್ಯವಾದ ನವೀನ ಪುಸ್ತಕಗಳು

| | |
|---|---|
| ಭಾರತದ ವೀರಾಂಗನೆಯರು | 1—50 |
| ಬಿರಿದ ಮುಗುಳು | 1—50 |
| ಅನುವಾದಿತ ಕತೆಗಳು | 1—20 |
| ಪಂಚ ಸುಮನ | 1—20 |
| ಮುತ್ತಿನ ಮಾಲೆ | 1—80 |
| ಹೂ ಗೊಂಚಲು | 1—75 |
| ಪಂಚಗಜ್ಜಾಯ | 1—75 |
| ಏಕಾಂಕ ನಾಟಕಗಳು | 1—00 |
| ಭಾರತದ ನಾಲ್ಕುಮುಖಗಳು | 1—00 |
| ದೇಶ ವಿದೇಶದ ಮಹಾ ಜೀವಿಗಳು | 1—80 |
| ಹೆಂಗುಸರ ಕತೆಗಳು | 2—00 |

ಕೆಟಲಾಗಿಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
LETTER WRITING MADE EASY
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ
ಗೀತೆಯ ಕೈಗನ್ನಡಿ
300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

# నవయుగ

2—12—1965



NAVAYUGA

hone 226

ಧಾರಾವಾಹಿ ಕಾದಂಬರಿ

# ಕ್ಷೈತ್ರ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ವರೆಗೆ:—

ಪರಮ ಮಿತ್ರ ಕೇದಾರಿಯ ಹತ್ತರಂತೆ ಅಲವಂತಿಯ ರಾಮಚಂದ್ರ ಒಕ್ಕಲು ಮುರುಗನ ಜನಸೋಯಿಸಿಯೇ ಮದ್ರಾಸಿಗೆ ತೆರಳಿದನು. ಅಲ್ಲಿ ಕೇದಾರಿಯ ಮೂಲಕ ಜಾನಕಿಯ ಪರಿಚಯವಾಯಿತು. ಜಾನಕಿ-ರಾಮಚಂದ್ರರು ದಂಪತಿಗಳಾದರು. ಸಪತ್ನೀಕನಾಗಿ ಹಳ್ಳಿಗೆ ಬಂದ ರಾಮಚಂದ್ರ-ಜಾನಕಿಯರ ಮೇಲೆ ವಿವಿಧ ಅಭಿಪ್ರಾಯ ವ್ಯಕ್ತವಾಯಿತು. ಜಾನಕಿಯು ಸೀತೆಯೊಡನೆ ನದೀ ಸ್ನಾನಕ್ಕೆ ಹೋಗತೊಡಗಿದಳು. ಇವರಿಬ್ಬರ ಪರಿಚಯ ಧೃಢವಾಗುತ್ತ ಬಂತು.

ಮುಂದೆ—

ಅದೇ ಸಮಯದಲ್ಲಿ, ರಾಮು ಬೀದಿಯಿಂದ ಒಳಗೆ ತೋಟದತ್ತ ಹೋಗುತ್ತಿರುವದನ್ನು ನೋಡಿದ ಸೀತೆಯು ಜಾನಕಿಯನ್ನು ಕಾಣಲು ಅದೇ ಸುಸಮಯವೆಂದೆಣಿಸಿಕೊಂಡಳು.

"ಒಳಗೆ ಬಾ ಸೀತಾ", ಜಾನಕಿಯು ಗಟ್ಟಿಯಾಗಿ ಸ್ವಾಗತವನ್ನು ಇತ್ತಳು, "ನಿನ್ನ ವಿಷಯವನ್ನೇ ನಾನೀಗ ಆಲೋಚಿಸುತ್ತಿದ್ದೆ. ಅವರು ಹೊರಗೆ ಹೋದ್ದಾರೆ. ಸಂಕೋಚಪಡದೆ ಹೆಜ್ಜೆ ಇಡು. ಅವರಿಲ್ಲಿದ್ದರೂ ನೀನು ನಾಚಿಕೆಪಟ್ಟುಕೊಳ್ಳಬೇಕಾಗಿಲ್ಲ. ನಿನ್ನ ಸಾಮೀಪ್ಯವು ನನಗೆ ಉಲ್ಲಾಸವನ್ನು ಕೊಡುತ್ತದೆ."

"ಜಾನಕಿ, ಬೆಳಗ್ಗೆ ನೀನು ಬೆಳಗಿಕೊಂಡಿದ್ದಂತೆ ಈಗ ಬೆಳಗುತ್ತಿಲ್ಲ." ನಿನಗೇನಾಯ್ತು? ನದಿ ಸ್ನಾನವು ವಿಂಸವನ್ನು ತಂದಿದೆಯೇನು? ಅಸೌಖ್ಯ ಇರಲಿಕ್ಕಿಲ್ಲ?" ಪ್ರಾಮಾಣಿಕತನದಿಂದ ಸೀತೆ ವಿಚಾರಿಸಿದಳು.

"ಏನೂ ಇಲ್ಲ. ನಾನು ಚೆನ್ನಾಗಿಯೇ ಇದ್ದೇನೆ, ಆದರೆ ಅವರು ಈ ಸಲವೂ ಬಿ. ಎ. ಯಲ್ಲಿ ಅನುತ್ತೀರ್ಣರಾಗಿದ್ದಾರೆ. ಅತ್ತ ನಾನೇನೂ ಗಮನ ಕೊಟ್ಟಿಲ್ಲ. ಆದರೆ ಅವರು ಅದನ್ನು ಬಹಳವಾಗಿ ಮನಸ್ಸಿಗೆ ಹಚ್ಚಿಕೊಂಡು 'ನನಗಾಗಿ ವ್ಯಥೆ ಪಡುತ್ತಿರುವದಾ'ಗಿ ಹೇಳುತ್ತಿದ್ದಾರೆ. ನಾನೇನೂ ವ್ಯಥೆಪಡುತ್ತಿಲ್ಲವೆಂದು ಎಷ್ಟು ಹೇಳಿದರೂ ಅವರು ಕೇಳುವದಿಲ್ಲ."

"ರಾಮು ಪುನಃ ಅನುತ್ತೀರ್ಣರಾದರು!" ಸೀತೆಯು ಚೀರಿದಳು; "ಎಂಥ ಶೋಚನೀಯ. ಇಡೀ ಹಳ್ಳಿಯಲ್ಲಿ ಅವರು ಅತ್ಯಂತ ಚುರುಕು ಹುಡುಗರಾಗಿ ಇದ್ದರು. ದೇವತೆಗಳು ಅವರತ್ತ ದಯೆ ತೋರಿಸಲಿಲ್ಲ. ಸರಿ. ಸೋತಲ್ಲಿ ಅದೇನು ಮಹಾ? ಇನ್ನೊಂದು ಬಾರಿ ಜಯ ಪಡೆಯಬಲ್ಲರು, ಅಥವಾ ಈ ಚೆಂದದ ಹಳ್ಳಿಯ ಕಾವೇರಿ ದಂಡೆಯಲ್ಲಿ, ನಿನ್ನೊಂದಿಗೆ ಸುಖೀ ಜೀವನವನ್ನು ನಡೆಸಬಹುದು. ಬಿ. ಎ. ಆದವರಿಗೆ ತಿಂಗಳೊಂದಕ್ಕೆ ಮುವ್ವತ್ತು ರೂಪಾಯಿಗಳೂ ಸಿಗುವದಿಲ್ಲ. ಆದರಲ್ಲೂ ಗುಮಾಸ್ತರ ಜೀವನ ದುಸ್ತರವಿದೆ. ನನ್ನ ಸಹೋದರನು ಅಂತಹವರಲ್ಲೊಬ್ಬನಿದ್ದಾನೆ. ಅವನು ನಮ್ಮನ್ನೆಲ್ಲರನ್ನೂ ಬಿಟ್ಟು ದೂರದೂರಿನಲ್ಲಿ ಪಡುತ್ತಿರುವ ಕಷ್ಟ ನನಗೆ ಗೊತ್ತಿದೆ. ಇತ್ತೀಚೆಗೆ ನಾಲ್ಕು ವರ್ಷಗಳಿಂದ ನಾನವನನ್ನು ನೋಡಿಯೇ ಇಲ್ಲ. ಪ್ರಿಯೆ, ಜಾನಕಿ, ನೀನು ಹಳ್ಳಿಯಲ್ಲಿ ಇರುವಂತಾಯಿತೆಂದು ಕಾಣುತ್ತದೆ.'

'ಆದರೆ ಸೀತೆ, ನಿಮ್ಮ ಹಾಗೆ ನಾವು ಶ್ರೀಮಂತರಿರುವದಿಲ್ಲ" ಜಾನಕಿ ಮುಗುಳ್ನಗುತ್ತ ಹೇಳಿದಳು.

"ನನ್ನ ಸಿರಿವಂತಿಕೆಯನ್ನು ಸಮುದ್ರದಲ್ಲಿ ಬಿಸಾಡು. ಸರಳ ಹಾಗೂ ಪ್ರೀತಿಸುವ ರಾಮುವಿನಂತಹ ಗಂಡ, ಏಳು ಎಕ್ರೆಗಳು, ಏಳುನೂರು ಎಕ್ರೆಗಳಿಗಿಂತಲೂ ಹೆಚ್ಚು ಸುಖವನ್ನು ಕೊಡಬಲ್ಲುವು. ಸಿರಿವಂತಿಕೆಯು ಅರಿಷ್ಟವನ್ನು ತಂದು ಹಾಕುತ್ತದೆ. ಹಳ್ಳಿಯಲ್ಲಿ ಕೊರತೆಯು ಕಡಿಮೆ, 'ಬೇಕು'ಗಳು ಕಮ್ಮಿ. ಬೇಕಾಗುವದಕ್ಕಿಂತಲೂ ಜಾಸ್ತಿ ಇದ್ದಲ್ಲಿ, ಅವುಗಳನ್ನು ಕೆಟ್ಟ ಕೆಲಸಗಳಿಗಾಗಿ ಹಾಳು ಮಾಡುತ್ತಿ."

ಸೀತೆಯು ತೊದಲಿದಳು ಮತ್ತು ಅವಳ ಮುಖ ನಾಚಿಕೆಯಿಂದ ಕೆಂಪಾಯಿತು. ಆಕೆ ತಟಕ್ಕನೆ ಮಾತನ್ನು ನಿಲ್ಲಿಸಿದಳು; ಮತ್ತೆ ಪ್ರಾರಂಭಿಸಿದಳು. "ನಾನು ಸ್ವಚ್ಛಂದ ಹಾಗೂ ಮುಚ್ಚುಮರೆಯಿಲ್ಲದೆ ಮಾತಾಡಿದುದು ಸರಿಯಲ್ಲವಾದಲ್ಲಿ ಕ್ಷಮಿಸಿ ಬಿಡು. ನಾನಿನ್ನೂ ತಾರುಣ್ಯಾವಸ್ಥೆಯಲ್ಲಿರುವೆನಾದರೂ, ನನ್ನ ಜೀವಮಾನ ಹಾಗೆ ಕಳೆದು ಹೋಗಿದೆ. ನಿನಗಿಂತಲೂ ನಾನು ದೊಡ್ಡವಳಿದ್ದೇನೆ. ನಿನಗಿಂತ ಹೆಚ್ಚು ನನಗೆ ಗೊತ್ತಿರಬೇಕು; ಜಾಸ್ತಿ ನೋಡಿದ್ದೇನೆ."

"ನಿನ್ನನ್ನು ತಿಳಿದುಕೊಂಡಿದ್ದೇನೆ, ಸೀತಾ. ನೀನು ಕ್ಷಮೆಗಾಗಿ ವಾದಿಸಬೇಕಾಗಿಲ್ಲ.'

"ರಾಮು ವಿದ್ಯಾವಂತರಿದ್ದಾರೆ. ಅವರಿಗೆ ವಿದ್ಯೆಯೇ ಉಸಿರು ಇದೆ. ಅದನ್ನು ತಿಳಿಸಲು ನಾನು ಇಷ್ಟಪಡುತ್ತೇನೆ. ಜಾನಕಿ, ನಿಮ್ಮಂತಹವರಿಗೆ ಹಳ್ಳಿಯ ಜೀವನವು ಒಂದು ಸಣ್ಣ ಸ್ವರ್ಗವಿದೆ. ಒಂದು ವಿಷಯವೆಂದರೆ, ನಿನ್ನನ್ನು ದು ನನಗೆ ಕೊಡುತ್ತದೆ. ನಿನ್ನ ಸ್ನೇಹವು ಅಭಿವೃದ್ಧಿ ಹೊಂದಲಿಕ್ಕೆ ಬೇಕಾಗಿರುವ ಆಶೀರ್ವಾದವಿದೆ." ಆವಳು ಸಂತೋಷದ ನೋಟವನ್ನು ಬೀರಿದಳು.

ಎಡೆಬಿಡದೆ ತನ್ನ ಹಾಗೂ ರಾಮುವಿನ ಕುರಿತು ಹೇಳಿದುದರಿಂದ, ಆದರಲ್ಲೂ ಆಡಿದ ಮೆಚ್ಚುಗೆಯ ಮಾತುಗಳಿಂದ ಜಾನಕಿಯು ಪೇಚಿನಲ್ಲಿ ಸಿಕ್ಕಿಬಿದ್ದಳು. ಸೀತೆಯು ಆದರಲ್ಲಿ ಸಂತೋಷವನ್ನನುಭವಿಸುತ್ತಿರುವದನ್ನು ಆಕೆ ಕಂಡುಕೊಂ[...] ಹಾಗಾಗಿ ಆದಕ್ಕವಳು ಪ್ರೋತ್ಸಾಹ[...] ಯಬೇಕಾಯಿತು. ಜಾನಕಿಯು ಶ[...]ಳು ಹಾಗೂ ಸಾತ್ವಿಕಳು. ಸೀತೆಯು [...] ಡಾ ಬಹು ಪ್ರಾಮಾಣಿಕ, ನಿರ[...] ಹಾಗೂ ಬಿಚ್ಚು ಮನಸ್ಸಿನವಳು. ಮು[...] ಮಾತುಗಳನ್ನು ಸಾಂಪ್ರದಾಯಿಕ[...] ಯಾದರೂ ಅಡಗಿಸಿಡುತ್ತಿದ್ದಿಲ್ಲ. ಅ[...] ಹಾಗೆ ಮತುಕತೆಯಲ್ಲಿ ಮಗ್ನರಾಗಿ[...]ತೆ ಇತ್ತ ಮುಸಂಜೆ ಆವರಿಸಿತು. ಆ[...] ಕಾಲದ ಪರಿವೆಯೇ ಇರಲಿಲ್ಲ. [...] ಆದೆಷ್ಟು ಸಮಯ ಅವರು ಮಾ[...]ಡುತ್ತಾ ಕುಳಿತುಕೊಳ್ಳುತ್ತಿದ್ದರೇನ[...] ನೋ! ರಾಮು ಅಲ್ಲಿಗೆ ಹಿಂತಿರುಗಿ ಬ[...]ದರಿಂದ ಸೀತೆಯು ನಾಲಗೆ ಅಲುಗಾಡ[...]

ರಾಮುವನ್ನೊಮ್ಮೆ ಸೀತೆಯು ಕ[...] ನೋಡಿ,ಮೆಲ್ಲನೆ ಹಿಂದಕ್ಕೆ ಜಾರಿದಳು[...]ಷ್ಟು ಸಮೀಪದಿಂದ ಸೀತೆಯನ್ನಿಂ[...] ರಾಮು ನೋಡಿರಲಿಲ್ಲ. ಅಂದು ಸ್ಪಷ್ಟ[...]ಗಿ, ಆದೂ ತನ್ನ ಮನೆಯಲ್ಲೇ, ಸೀತೆ[...]ನ್ನು ಅವನು ನೋಡಲು ಕುತೂಹಲಿ[...] ಗಿದ್ದನು. ಆದರೆ ಜಾನಕಿಯ ಕಣ್ಣುಗಳು ಅವನನ್ನು ನೋಡಿದುದರಿಂದಾಗಿ[...] ವನಿಂದವಳನ್ನು ನೋಡಲಿಕ್ಕಾಗಲ್ಲ[...]ನ್ನ ಮನೆಯಲ್ಲೇ ಸೀತೆಯನ್ನು ನೋ[...] ಮೇಲೆ ರಾಮು ಬಹಳ ಪ್ರಕಾಶಮಾನ[...]ದನು. ಅವನ ಕನಿಕರ ಪೂರ್ಣ ಸ್ವಭಾ[...] ದಿಂದಾಗಿ, ಬಹುತೊಡಕಿನ ಸೀತೆ[...] ದುಃಖಾವಸ್ಥೆಯಲ್ಲಿ ತನ್ನ ವೈಯಕ್ತಿ[...] ದುಃಖವನ್ನು ಮರೆತು ಬಿಟ್ಟನು.

'ಒಳ್ಳೇದು ಜಾನಕಿ, ಸೀತೆಯ ಸ್ನೇ[...]ಹವನ್ನು ಹೇಗೆ ಸಂಪಾದಿಸಿ ಕೊಂಡೆ[...]' ರಾಮು ಕೇಳಿದನು.

"ಬೆಳಗ್ಗಿನ ನದಿ ಸ್ನಾನದ ಫಲ; ಕಾವೇ[...]ರಿಯಮ್ಮ ಕರುಣೆಯಿಂದ ಕೊಟ್ಟಿರುವ[...] ಅಮೂರ್ಘ ಬಹುಮಾನ. ಅವಳು ಸು[...]ರೂಂದ್ರ, ಪ್ರಿಯತಮಾ?"

'ಅವಳೋರ್ವ ಶಾಲಾ ಉಪಾಧ್ಯಾಯ[...]ಮಗಳು. ಆದರೆ ಅವಳ ಪ್ರಚಲಿತ ಪ[...]ರಿಸ್ಥಿತಿ ಹೇಗಿದೆ ಎಂದರೆ, ಓದುವ ಮು[...]ಚೆಯೇ ಹೊಸ ಪುಸ್ತಕದ ಮೊದಲ ಹಾ[...]ಳೆಯನ್ನು ಹರಿದು ಹಾಕಿರುವಂತೆ ಇ[...]ದೆ. ಅಂತಹ ವ್ಯಕ್ತಿ ಸಿಗುವದು ಬಹಳ [...]ಪರೂಪ. ಕೆಲ ನಿಮಿಷಗಳಲ್ಲಿ ಅವಳು [...]ನ್ನನ್ನೇ ಹೋಲಬಹುದು. ವಿಧಿಯು ಅವ[...]ಳನ್ನು ನಿರ್ಜೀವ ಮನೆಗೆ ಕಳುಹಿಸಿದೆ, ಮ[...]ತ್ತು ಅಶಕ್ತ ವ್ಯಕ್ತಿಯೊಂದಿಗೆ ಮದು[...] ಮಾಡಿ ಬಿಟ್ಟಿದೆ. ಜಾನಕಿ, ಅವಳ ಸ್ನೇಹ[...]ಲತೆಗೆ ನೀರು ಹಾಕುತ್ತಿರು! ಆದವಳಿ[...] ಸಮಾಧಾನವನ್ನೀಯಬಹುದು."

"ಇದೊಂದು ಪರಸ್ಪರ ಮೆಚ್ಚುಗೆಯ ಸಂಗತಿಯೆಂದು ಕಾಣುತ್ತದೆ. ನಿಮ್ಮ ವಿ[...]ಷಯ ಅವಳು ಬಹಳ ಚೆನ್ನಾಗಿ ಮಾತ[...]ನಾಡುತ್ತಾಳೆ. ನೀವೂ ಬಹಳ ಚೆನ್ನಾಗಿ ಹೇ[...]ಳುತ್ತೀರಿ." ನಗಾಡುತ್ತಾ ಜಾನಕಿ ಹೇಳಿದಳು.

"ಅವಳ ದುಃಖಾವಸ್ಥೆಯು ನನ್ನ ಸೋಲನ್ನೂ ಮರೆಸುತ್ತದೆ. ಅವಳ ಗಂಡನು ಘಟಿಂಗನಿದ್ದಾನೆ. ಅವನು ನನಗಿಂತ ಸ್ವಲ್ಪ ಹಿರಿಯವನಾಗಿದ್ದರೂ ನನ್ನ ತರಗತಿಯಲ್ಲೇ ಇದ್ದನು. ಶ್ರೀಮಂತರ ಮಗನಾಗಿದ್ದುದರಿಂದ ತಡವಾಗಿ ಶಾಲೆಗೆ ಸೇರಿ[...]

(ಹದಿನೈದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¼ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7½ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7¼ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | .... .... | 4 |

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಾಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಾಲಂ ಸೆಂಟಿಮೀಟರಿಗೆ ರೂ. 1-50

## ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಕಮಿಶನ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಅಮೆರಿಕಾದ ಉತ್ಪಾದನಾ ಕಾರ್ಖಾನೆಯೊಂದರ ಕೆಲಸಗಾರರು ಅವರವರ ಕಾರುಗಳೆಡೆಗೆ ನಡೆಯುತ್ತಿದ್ದಾರೆ.

# ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೧೩ | ೨—೧೨—೧೯೬೫ | No. 13

> **ವಚನ ಸುಧೆ**
>
> ಪರಂ ಕ್ಷಿಪತಿ ದೋಷೇಣ
> ವರ್ತಮಾನಃ ಸ್ವಯಂ ತಥಾ
> ಯಶ್ಚ ಕ್ರುಧ್ಯತ್ಯನೀಶಾನಃ
> ಸ ಚ ಮೂಢತಮೋ ನರಃ ॥
>
> ತಾನು ದೋಷಯುಕ್ತನಾಗಿ ವರ್ತಿಸಿ ಬೇರೆಯವರ ಮೇಲೆ ಅದರ ದೋಷವನ್ನು ಆರೋಪಿಸುವವನೂ ಅಸಮರ್ಥನಾಗಿದ್ದೂ ವ್ಯರ್ಥವಾಗಿ ಸಿಟ್ಟುಗೊಳ್ಳುವವನೂ ಮಹಾ ಮೂರ್ಖರು.

## ಮತ್ತೊಮ್ಮೆ ವಿವೇಕ ಪಾಠ

ಭದ್ರತಾ ಸಮಿತಿಯು ಭಾರತ—ಪಾಕಿಸ್ತಾನಗಳು ಸಮರವಿರಾಮವನ್ನು ಪಾಲಿಸಬೇಕೆಂದು ಒಂದಕ್ಕಿಂತ ಹೆಚ್ಚು ಬಾರಿ ಕೇಳಿಕೊಂಡಿದೆ. ಆದರೆ, ಪಾಕ್ ಸೇನೆಗಳು ಸಮರವಿರಾಮವನ್ನು ಮುರಿಯುತ್ತ ಬಂದಿವೆ. ಕಳೆದ ಎರಡು ತಿಂಗಳ ಅವಧಿಯಲ್ಲೇ ಅವು ಸುಮಾರು ಒಂದೂವರೆ ಸಾವಿರ ಸಲ ಉಲ್ಲಂಘನೆಯನ್ನು ಮಾಡಿವೆ. ಇವುಗಳಲ್ಲಿ ಹಲವಾರು ದೊಡ್ಡ ಪ್ರಮಾಣದವೂ ಇವೆ. ಇಂತಿರುವಾಗ, ಪಾಕ್ ಮನೀಷೆ ಯೇನೆಂಬುದನ್ನು ಸ್ಪಷ್ಟವಾಗಿ ಅರಿಯಲಾಗದು. ಭಾರತ ಪಾಕಿಸ್ತಾನದ ಪರಿಷ್ಕಾರು ಭೆಟ್ಟಿಯಾಗಿ ರಾಜ ತಾಂತ್ರಿಕವಾಗಿ ಮಾತುಕತೆ ನಡೆಸಬೇಕು, ಮತ್ತು ಕಾಶ್ಮೀರ ಸಮಸ್ಯೆಯನ್ನು ಇತ್ಯರ್ಥಗೊಳಿಸಬೇಕು ಎಂಬುದು ಉಭಯ ಮಿತ್ರ ಪಕ್ಷಗಳ ಅಭಿಲಾಷೆ. ಇದನ್ನು ಭಾರತವು ತಾತ್ವಿಕವಾಗಿ ಒಪ್ಪುತ್ತದೆ. ಒಂದೆಡೆಯಲ್ಲಿ ಸಮರವಿರಾಮವನ್ನು ಗಾಳಿಗೆ ತೂರುವುದು ಮತ್ತೊಂದೆಡೆಯಲ್ಲಿ ಸಂಧಾನದ ಮೇಜಿನ ಬಳಿ ಕೂರುವುದು ಪಾಕಿಸ್ತಾನಕ್ಕೆ ಸಲ್ಲತಕ್ಕ ಸಂಗತಿಯಾಗಬಹುದು; ಆದರೆ, ಭಾರತವು ಇದನ್ನು ಒಪ್ಪುವುದಿಲ್ಲ; ಒಪ್ಪಬಾರದು. ಸಮರ ವಿರಾಮವು ಪೂರ್ತಿಯಾಗಿ ಪಾಲಿತವಾದ ಬಳಿಕವೇ ತನ್ನ ಸೇನೆಯನ್ನು ಸಮರ ರಂಗದಿಂದ ಹಿಂದೆ ಕರೆಯಬಹುದು; ಇದು ಸಾಧಿತವಾದ ಮೇಲೆಯೇ ಎಲ್ಲಾ ವಿಚಾರಗಳ ಬಗೆಗೆ ಮುಖಾಮುಖಿಯಾಗಿ ಮಾತಾಡಬಹುದು. ಆದರೂ ಕಾಶ್ಮೀರದ ವಿಷಯದಲ್ಲಿ ಭಾರತದ ದೃಢನಿಲುವು ಒಂದೇ: ಕಾಶ್ಮೀರವು ಭಾರತದ ಒಂದು ರಾಜ್ಯ. ಅದನ್ನು ಇಡಿಯಾಗಿಯಾಗಲಿ ಖಂಡವಾಗಿಯಾಗಲೀ ಪಾಕಿಸ್ತಾನಕ್ಕೆ ಕೊಡುವಂತಹ ಪ್ರಶ್ನೆಯೇ ಇಲ್ಲ. ಭಾರತದ ಈ ನೀತಿಯನ್ನು ಈಗ ಜಗತ್ತಿನಲ್ಲಿ ಹೆಚ್ಚಿನ ರಾಷ್ಟ್ರಗಳು ಅರ್ಥಮಾಡಿಕೊಂಡಿವೆ; ಇದರಲ್ಲಿ ಯಥಾರ್ಥತೆಯಿದೆಯೆಂಬುದನ್ನು ಕಂಡುಕೊಂಡಿವೆ.

ಭಾರತ—ಪಾಕಿಸ್ಥಾನಗಳು ಯುದ್ಧಾಸಕ್ತವಾಗಿದ್ದಾಗ ಸೋವಿಯತ್ ರಶ್ಯಾ ಸಂಧಾನ ನಡೆಸುವ ಇರಾದೆಯನ್ನು ತೋರಿಸಿತ್ತು. ಭಾರತವು ಅದನ್ನು ಒಪ್ಪಿಕೊಂಡರೂ ಪಾಕಿಸ್ತಾನವು ನಿರಾಕರಿಸಿತ್ತು. ಭದ್ರತಾ ಸಮಿತಿಯ ಸದಸ್ಯರ ಮನವೊಲಿಸಿ ತನ್ನ ಬೇಳೆ ಬೇಯಿಸುವ ಮಹತ್ವಾಕಾಂಕ್ಷೆ ಅದರದ್ದಿತ್ತು. ಆದರೆ, ಭುಟ್ಟೋ ಅವರ ಗುಡುಗು ಎಲ್ಲರನ್ನೂ ಕಿವುಡುಗೊಳಿಸಿತು. ಅವರ ಕಠೋರ ವಾಕ್ಯಗಳಿಂದ ಎಲ್ಲರ ತಲೆಯೂ ತಿರುಗಿತು. ಕುಲವನ್ನು ನಾಲಿಗೆ ಅರುಹುವುದಲ್ಲವೆ? ಇದರಿಂದ ಕಂಗೆಟ್ಟ ಭುಟ್ಟೋ ದೃಷ್ಟಿ ರಶ್ಯಾದತ್ತ ಇಣಿಕಿ ನೋಡಿದರೆ ತಪ್ಪಿಲ್ಲ. ರಶ್ಯಾವು ಕಾಶ್ಮೀರದ ಬಗ್ಗೆ ಭಾರತದ ನೀತಿಯನ್ನು ಆರಂಭದಿಂದಲೂ ಒಪ್ಪಿಕೊಂಡಿದೆ. ಇದಕ್ಕಾಗಿ ತನ್ನ ವೆಟೋ ಅಧಿಕಾರವನ್ನೂ ಭದ್ರತಾ ಸಮಿತಿಯಲ್ಲಿ ಚಲಾಯಿಸಿದೆ. ಆದುದರಿಂದ ಅಲ್ಲಿ ಸಾಂತ್ವನ ಸಿಗುವ ಸ್ವೈಜ ಭರವಸೆ ಭುಟ್ಟೋರಿಗೆ ಇರಲಿಲ್ಲ. ಹಾಗಿದ್ದರೂ ತನ್ನ ಮೋಹಗಾಳಕ್ಕೆ ಕೊಸಿಗಿನ್ ಸಿಕ್ಕಿಬೀಳುವರೇ ಎಂದು ನೋಡಲು ಅವರು ಮೋಸ್ಕೋವಿಗೆ ಹೋದರು. ಮಾತುಕತೆಗಳು ತೃಪ್ತಿಕರವಾಗಿಯೇ ನಡೆದುವು. ವಿವರಗಳು ತಿಳಿಯದೆ ಹೋದರೂ ಸಮರವಿರಾಮವನ್ನು ಸಂಪೂರ್ಣ ಸ್ಥಿರಗೊಳಿಸಿದ ಬಳಿಕವೇ ಮಾತುಕತೆಗಳಿಗೆ ತಕ್ಕ ವೇದಿಕೆ ನಿರ್ಮಾಣವಾಗುವುದು ಎಂದು ಭುಟ್ಟೋ ಅನ್ನಿಸಿಕೊಂಡರು. ಭಾರತ—ಪಾಕಿಸ್ತಾನಗಳ ನಡುವಣ ಎಲ್ಲ ಪ್ರಶ್ನೆಗಳನ್ನೂ ಅವರು ಮುಕ್ತ ಮನಸ್ಸಿನಿಂದ ಪರ್ಯಾಲೋಚಿಸಲು ಒಪ್ಪಿಕೊಂಡರು. ಅವರ ಮಾತಿನಲ್ಲಿ ಹೇಳುವುದಾದರೆ, ಇಂದು ಚೆಂಡು ಭಾರತದ ಮೈದಾನದಲ್ಲಿದೆ. ಈಗ ಆಟ ಮೊದಲು ಮಾಡಬೇಕಾದವರು ಪ್ರಧಾನಿ ಶಾಸ್ತ್ರಿ. ಆದರೆ, ಶಾಸ್ತ್ರಿಯವರು ಭಾರತದ ಪಕ್ಕದಲ್ಲಿದ್ದ ಚೆಂಡನ್ನು ಹಿಂದೆಯೇ ಅಯ್ಯೂಬಖಾನರ ಕಡೆಗೆ ಎಸೆದಿದ್ದಾರೆ—ಇದನ್ನು ಭುಟ್ಟೋ ಮಹಾಶಯರು ಇನ್ನೂ ಕಂಡುಕೊಳ್ಳದಿರುವುದು ಶೋಚನೀಯ.

ಅದೇನೇ ಇರಲಿ, ಸೋವಿಯತ್ ಭೂಮಿಯಲ್ಲಿ ಅಯ್ಯೂಬ-ಶಾಸ್ತ್ರಿ ಭೆಟ್ಟಿ ನಡೆಯುವುದಕ್ಕೆ ಈಗ ಭುಟ್ಟೋ ಒಪ್ಪಿದ್ದಾರೆ. ಇದು ಶುಭ ಚಿಹ್ನೆ. ಆದರೆ, ಕಲುಷಿತ ವಾತಾವರಣದಲ್ಲಿ ಇದು ಸಾಧ್ಯವಿಲ್ಲ ಎನ್ನುತ್ತಾರೆ, ಶಾಸ್ತ್ರಿ, ಮತ್ತು ಕೊಸಿಗಿನ್. ಆದುದರಿಂದ ಭುಟ್ಟೋ ಮಾಡಬೇಕಾದ ಕೆಲಸ ಇನ್ನೂ ಇದೆ. ತಾನು ಅನ್ಯಾಯವಾಗಿ ಕಳಿಸಿದ ಎಲ್ಲಾ ಸಶಸ್ತ್ರ ಪಡೆಗಳನ್ನು ಅದು ಭಾರತದ ಭೂಭಾಗದಿಂದ ಕೂಡಲೇ ಹಿಂತೆಗೆದುಕೊಳ್ಳಬೇಕು; ಸಮರವಿರಾಮವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಬೇಕು. ಸಮಸ್ಯೆಗಳನ್ನು ಚರ್ಚಿಸುವ ವೇಳೆ ಉಭಯತರ ವಾದವನ್ನೂ ಗೌರವಿಸುವ ಉದಾರತೆ ತೋರಬೇಕು. ಜಾತೀಯತೆ, ಮತೀಯತೆಯ ಅಂಧಕಾರದಿಂದ ಮೊತ್ತ ಮೊದಲು ಹೊರಬರಬೇಕು. ನ್ಯಾಯ—ಸತ್ಯಗಳನ್ನು ಅರಿತು ಅದಕ್ಕೆ ಸರಿಯಾಗಿ ನಡೆದುಕೊಳ್ಳುವ ಪೂರ್ವ ತಯಾರಿ ಮಾಡಬೇಕು. ಇದ್ಯಾವುದೂ ಇಲ್ಲವಾದರೆ, ಬರಿಯ ಮಾತಿನಿಂದ ಯಾವ ಲಾಭವೂ ಇಲ್ಲ. ಭಾರತದ ಸದಾಶಯವಿದೇ, ಭಾರತವು ಇಡೀ ಜಗತ್ತಿನಲ್ಲಿ ಸಹೋದರ ಪ್ರೇಮದಿಂದಿರಲು ಬಯಸುತ್ತದೆ. ಹಾಗಿರುವಾಗ, ಉತ್ತಮ ನೆರೆಹೊರೆಯನ್ನು ಸ್ಥಾಪಿಸಲು ಎಂದಿಗೂ ಹಿಂದೇಟು ಹಾಕುವುದಿಲ್ಲ. ನೆರೆಹೊರೆಯ ಸಂಬಂಧ ಸರಿಗೊಳಿಸಲು ತನ್ನತನವನ್ನು ಮಾತ್ರ ಅದು ಕಳೆದುಕೊಳ್ಳಲು ಸಿದ್ಧವಿಲ್ಲ. ಸತ್ಯ-ನ್ಯಾಯ-ನೀತಿಗಳ ಭದ್ರ ತಳಹದಿಯಲ್ಲಿ ನಡೆಯುವ ಭಾರತದ ಮುಂದೆ ತಳಹದಿಯೇ ಇಲ್ಲದ ಪಾಕಿಸ್ತಾನ ವಿವೇಕದಿಂದ ವರ್ತಿಸೀತೆ? ಇದು ಸಾಧ್ಯವಾದರೆ ಸೋವಿಯತ್ತು ಭುಟ್ಟೋ ಪ್ರಭೃತಿಗಳಿಗೆ ಸರಿದಾರಿಯನ್ನು ತೋರಿಸಿದಂತಾಗುತ್ತದೆ.

## ಮೊಬುಟು ಗದ್ದಿಯಲ್ಲಿ

ಒಂದು ತಿಂಗಳಿಗೆ ಮೊದಲು ಕಾಂಗೋದ ಅಧ್ಯಕ್ಷ ಕಸವುಬುರವರು ಶೋಂಬೆಯವರನ್ನು ಕಿತ್ತುಹಾಕಿ ಕಿಂಬಾರನ್ನು ಪ್ರಧಾನಿ ಮಂತ್ರಿಯಾಗಿ ನೇಮಿಸಿದ ನಂತರವಾದರೂ ಆಫ್ರಿಕನ್ ಐಕ್ಯ ಸಂಸ್ಥೆಯೊಡನೆ ಹಾಗೂ ಅಂತರಿಕವಾಗಿ ಕಾಂಗೋದ ಪರಿಸ್ಥಿತಿ ನೆಮ್ಮದಿಯದಾಗುವುದೆಂದು ಹಾರೈಸಲಾಗಿತ್ತು. ಹಾಗಿದ್ದರೂ ಶಾಸನ ಸಭೆಯಲ್ಲಿ ಕಿಂಬುರವರನ್ನು ಕಿತ್ತುಹಾಕುವ ಶಕ್ತಿ ಶೋಂಬೆಯವರಲ್ಲಿತ್ತು ನಿಜ. ಅದೇ ಸಮಯದಲ್ಲಿ ಕಸವುಬು ಶೋಂಬೆಯವರು ಅಧಿಕಾರಕ್ಕೆ ಬಾರದಂತೆ ತಡೆಯುವ ಪ್ರಯತ್ನವನ್ನೂ ಮಾಡುತಿದ್ದರು. ಇದೀಗ ಅಲ್ಲಿ ನಡೆದ ರಕ್ತರಹಿತ ಕ್ರಾಂತಿಯು ಈಯೆಲ್ಲಾ ಊಹಾಪೋಹಗಳನ್ನು ತಲೆಕೆಳಗು ಮಾಡಿಬಿಟ್ಟಿತು. ಒಂದು ಕಾಲದಲ್ಲಿ ಪೆಟ್ರಿಸ್ ಲುಮುಂಬಾ, ಕಸವುಬು ಮತ್ತು ಶೋಂಬೆಯವರ ಬೆಂಬಲಿಗರಾಗಿದ್ದ ಸೇನಾ ಪತಿ ಮೊಬುಟುರವರ ರಾಜಕೀಯ ವಿಚಾರಧಾರೆಯ ಕುರಿತು ಈಗ ಏನೂ ಹೇಳುವು

(ಹದಿನಾಲ್ಕನೇ ಪುಟ ನೋಡಿರಿ)

## ನರಸಣ್ಣನ ಸರಸ



"ಮದ್ಯಪಾನ ಪ್ರತಿಬಂಧವನ್ನು ಸಡಿಲಿಸಬಾರದೆಂದು ಎಲ್ಲೆಡೆಯೂ ಆಂದೋಲನ ಆರಂಭವಾಗಿದೆಯಂತಲ್ಲಾ...."

"ಹೊಲ ಮೇಯುವ ತನ್ನನ್ನು ಕಿತ್ತುಹಾಕ ಬಂದರೆ ಬೇಲಿ ಯಾಕೆ ಸುಮ್ಮನಿರುತ್ತೆ?"

ಗೇಹ ರಾಜ್ಯದಲ್ಲಿ

# ಕಬ್ಬು ಡೊಂಕು; ಸವಿ ಡೊಂಕಲ್ಲ



'ಏ, ಸ್ವಲ್ಪ ಇಲ್ಲಿ ಬಾಂದ್ರೆ...'

'ಬಂದೇ....ಏನಾಗ್ಬೇಕಿತ್ತು?"

"ಆಗೋದೇನು? ಒಂದು ಲೋಟಾ ನೀರು...."

'ಹಾದ್ರಿ, ನೋಡಿ, ಹಾಲಿನವಳು ಬಂದಿದ್ಳು...'

"ಏನಂತೆ? ನಾಲ್ಕುದಿನಾ ಬೇಗ್ನೇ ಬಂದು ಬಿಟ್ಳು?"

"ಮತ್ತೇನೂ ಇಲ್ಲ. ಆಕೆಯ ಸೆಸ್ಸೂ ಏರಿದೆಯಂತೆ...."

"ಅಂದ್ರೆ?"

'ಅಂದ್ರೆ ನೋಡಿ, ಈ ವರ್ಷ ಹುಲ್ಲು ಕಡ್ಡಿ ರೇಶ್ಮೇ ನೂಲು ಆಗಿದೆಯಂತೆ. ಹಿಂಡಿ ಬೆಲ್ಲ ಚೂರು ಅಂತೆ. ಕಳೆದ ವರ್ಷವೇ ಸೆಸ್ ಅಧಿಕ ಮಾಡಬೇಕೂಂತ ಆಲೋಚನೆ ಮಾಡಿದ್ರಂತೆ. ಆದ್ರೂ ನೋಡೋಣ ರಾಮರಾಜ್ಯ ಬಂದೀತೂಂತ ಬಾಯ್ಮುಚ್ಚಿದಳಂತೆ. ಮುಂದಿನ ಒಂದನೇ ತಾರೀಕಿನಿಂದ ಸೇರಿಗೆ ಆರು ಪೈಸೆ ಸರ್ ಚಾರ್ಜ್ ಕೊಡಬೇಕಾಗುತ್ತೆ....?'

"ಆರು ಪೈಸೇನೆ? ಈಗ ನಾವು ಕೊಡೋದು?"

'ಅದೆಂಥದು? ಇಪ್ಪತ್ತು ಪೈಸೆ ಹಾಲಿಗೆ, ನಾಲ್ಕು ಪೈಸೆ ಸೆಸ್, ಈಗ ಮತ್ತೆ ಆರು ಪೈಸೆ...?

"ಅಂದ್ರೆ ಇಪ್ಪತ್ತು ಪೈಸೆಗೆ ಹತ್ತು ಪೈಸೆ ಸೆಸ್ ಕೂಡಿಸು ಸರ್ ಚಾರ್ಜ್."

'ಅದ್ಯಾಕೆ ಹಾಗಂತೀರಿ? ನಿಮ್ಮ ಸರ್ಕಾರದ ನೀತಿಯನ್ನು ತಾನೇ ಇವರೂ ಅನುಸರಿಸೋದು? ಅದೆಂತದು ನೋಡಿ ಯದ್ಯಾಚರತಿ....?"

"ಹೌದು ಹೌದು. ಅಂದ್ರೆ ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಅಂತ."

"ನೋಡಿ, ತೊಂಬತ್ತು ರೂಪಾಯಿ ವೇತನ ಪಡೆಯೋವನಿಗೆ ಐವತ್ತಾರು ರೂಪಾಯಿ ತುಟ್ಟಿಭತ್ತೆ ಮನೆಬಾಡಿಗೆ ಕೊಡುವ ಸರಕಾರದಡಿಯಲ್ಲಿ ಇಪ್ಪತ್ತು ಪೈಸ ಹಾಲಿಗೆ ಹತ್ತು ಪೈಸೆ ಕಡಿಮೆಯಾ ಥಲಿಲ್ಲವೆ?"

"ಏನು, ಇನ್ನೂ ಹೆಚ್ಚು ಮಾಡಬೇಕೂಂತೀಯಾ?'

"ನಾನು ಯಾಕನ್ಬೇಕು? ಅವರೇ ಅಂದುಕೋತಾರೆ...."

'ಅಂದ್ರೆ?'

"ನೋಡಿ, ಹಾಲಿನ ಗುಣ ನೀವೆಲ್ಲಿ ಕಂಡಿದ್ದೀರಿ?"

"ಇಲ್ಲಮ್ಮ. ಅದೆಲ್ಲವನ್ನೂ ಕಂಡವಳು ನೀನೇ. ನಾವೆಲ್ಲ ನೀರಿನ ರುಚಿ ನೋಡಿಯೇ ಬೆಳೆದಿರೋದು...."

"ಏನು? ಬೇಸರವಾಯಿತೆ?"

"ಯಾಕೆ ಬೇಸರವಾಗಬೇಕು?"

"ಮತ್ತೆ ಹೀಗೆಲ್ಲಾ ಅನ್ನುತ್ತೀರಿ...."

'ಅಲ್ಲಾ ಹಾಲಿನ ರುಚಿಯೇ ನೋಡಲಿಲ್ಲಾಂತ ಏಕಪಕ್ಷೀಯ ತೀರ್ಮಾನಕ್ಕೆ ನೀನು ಬಂದಿರೋವಾಗ ನಾನು ಏನು ಬಡಕೊಂಡ್ರೆ ಏನು ಲಾಭ? ಕುರುಡಿಯ ಮುಂದೆ...."

"ಸಾಕು ಬಿಡೀದ್ರೆ....ಅದ್ರಲ್ಲಿ ನನ್ನ ದೇನು ತಪ್ಪು? ಏನು ದೇವ್ರು ದೊಡ್ಡವನು; ಕಣ್ಣು ಉಳಯಿತು..."

'ದೇವ್ರು ದೊಡ್ಡವನು ಸರಿಯೇ. ಆದ್ರಿಂದ್ಲೇ ಬೇಗ ಡಾಕ್ಟ್ರಲ್ಲಿಗೆ ಹೋಗೋಕೆ ಬುದ್ಧಿ ಕೊಟ್ಟ. ಇಲ್ಲಾದ್ರೆ..."

'ಶೂ... ಬಾಯಿಮುಚ್ಚಿ ಕಲ್ಪನಾ ವಿಲಾಸದಲ್ಲಿ ವಿಹರಿಸ ಬೇಡಿರಿ...."

"ಯಾಕೆ? ಕಾಲ್ಪನಿಕ ಜಗತ್ತು ಸುಂದರವಾಗಿರುತ್ತದೆ...."

'ಹೌದು, ಪ್ರಾರಂಭದಲ್ಲಿ, ಕೊನೆಗೆ...'

"ಅದು ರುದ್ರ ಭೀಕರ ಅನ್ನುತ್ತೀಯಾ?"

'ನಾನೇ ಯಾಕೆ ಅನ್ಬೇಕು? ನೋಡಿ, ಒಂದು ಪದ್ಯ....ತಿರುಕನೋರ್ವ ನೂರ ಮುಂದೆ..."

"ಅದೆಲ್ಲಾ ಕಥೆಯಾಯ್ತು...."

"ಕಥೆಗೂ ಜೀವನಕ್ಕೂ ವ್ಯತ್ಯಾಸವಿರುವಂತೆ ಕಲ್ಪನೆಗೂ ವಾಸ್ತವಿಕತೆಗೂ ಅಂತರವಿಲ್ಲವೆ?"

"ಅಲ್ಲಾ, ಇದೆಲ್ಲಾ ಎಲ್ಲಿಂದ ಪಡೆದು ಬಂದ ಜ್ಞಾನಾಂತ?'

"ಏನು ಜ್ಞಾನ ಅನ್ನೋದು ನಿಮ್ಮ ಸ್ವತ್ತೆ?"

"ಹೌದು...."

'ಊಹ್ಞಾಂ....ಅದರಲ್ಲಿ ನನಗೂ ಪಾಲಿದೆ...'

"ಜ್ಞಾನ ದೀಪ ಉರಿದು ಬೆಳಗಿದಷ್ಟು ವಿಸ್ತಾರವಾಗುತ್ತೆ. ಆದ್ರಿಂದ ಕೊಡೋಣ. ಅದು ಹಾಗಿರಲಿ. ಅಲ್ಲ, ಇವತ್ತು ಹೀಗೆಲ್ಲಾ ಲೆಕ್ಚರ್ ಬಿಡೋಕೆ ಎಲ್ಲಿಂದ ಸ್ಫೂರ್ತಿ ಬಂತೂಂತ?'

"ಸ್ಫೂರ್ತಿಯೇನ್ರಿ? ಕೇಳೋರು ಇದ್ದಿದ್ರೆ ತಾಸುಗಟ್ಟಲೆ ಲೆಕ್ಚರ್ ಜಮಾಯಿಸ್ತಾರೆ ಶಾಲೆ ಕಾಲೇಜುಗಳಲ್ಲಿ. ಹಾಗಿರುವಾಗ...."

"ನನ್ನನ್ನ ಕಾಲೇಜು ಹುಡುಗನಿಗಿಂತಲೂ ಕಡಿಮೆ ಮಾಡಿಬಿಟ್ಟೆಯಲ್ಲಾ?"

'ಮತ್ತಿನ್ನೆಂಥದು? ಕಾಲೇಜು ಮೆಟ್ಟಿಲು ಇಳಿಯೋದೇ ತಡ, ಎಲ್ರೂ ತಾನಾಗಿಯೇ ಕಡಿಮೆಯಾಗಿ ಬಿಡ್ತಾರೆ...."

"ಏನೋ ಅಪೂರ್ವ ಸಂಗತಿಗಳನ್ನು ಸೂಚ್ಯವಾಗಿ ಅನ್ನುವಂತಿದೆ........ ಏನಿದೂಂತ?"

"ಏನೂಂತನ್ನೋದು. ನೋಡಿ, ಇವತ್ತು ನೀವೇ ನನ್ನ ಕರೆದಿರೋದು. ಆದ್ರಿಂದ ನಾನು ಅನ್ನೋದನ್ನೆಲ್ಲಾ ಕೇಳಿಯೇ ತೀರ್ಬೇಕು...."

"ಹ್ಞಾಂ.... ಅದು ಬೇರೆ ಮತ್ತೆ. ಅಲ್ಲಾ, ಮನೆಯ ಯಜಮಾನ ಬರೋ ಹೊತ್ತಿಗೆ ಮುಂಬಾಗಿಲಲ್ಲಿ ಕಾದು ಕುಳಿತಿರೋದು ಬಿಟ್ಟು...'

'ಹೌದಪ್ಪ, ಈ ಯಜಮಾನರಿಗೆ ಮನೆಗೆ ಬರೋಕೆ ಹೋಗೋಕೆ ಒಂದು ಹೊತ್ತು ಗೊತ್ತೂಂತ ಇದ್ರೆ ತಾನೆ?'

'ಆಯ್ತು ಆದ್ರಲ್ಲೂ ನಂದೇ ತಪ್ಪು. ಹ್ಞೂಂ, ನೀರು ತಾಂತ ಅಂದ್ರೆ....'

'ಓ, ಅದು ಸರಿಯೇ, ಹಾಲಿನ ಕಥೆ ಹೇಳಬಿಟ್ಟೆ. ಮತ್ತೆ ಮರ್ತು ಹೋದೀತೆಂದು....'

'ಅಂದ್ರೆ ಇನ್ನು ಮುಂದೆ ದಿನವೊಂದಕ್ಕೆ ಹಾಲಿನ ವೆಚ್ಚ ಮೂವತ್ತು ಪೈಸೆ ಹೆಚ್ಚುತ್ತೇಂತಾಯ್ತು.'

"ಹ್ಞೂ... ತಿಂಗಳಿಗೆ ಒಂಬತ್ತು ರೂಪಾಯಿ..."

'ಹ್ಞಾಂ...'

'ಏಕೆ ಗಾಬರಿಯಾದಿರಿ...'

'ಅಲ್ವೆ ಮೊನ್ನೆಯಿಂದ ನನಗೆ ...
ತಿಂಗಳ ಎಂಟು ರೂಪಾಯಿ ಭತ್ತೆ ...
ಹಾಲಿನ ಸೆಸ್ಸಿನಷ್ಟೂ ಆಗ್ಲಿಲ್ಲ ಇದ...
ಕ್ಕೀಕಾಳು ಚಿನ್ನದ ಪವನು ಆಗಿದೆ. ...
ಕಾರಿ ಮುಟ್ಟೋಕೇ ಹೆದರಿಕೆ. ಕಟ್ಟ...
ಭಾವ ಸ್ಥಿತಿ...ಎಣ್ಣೆ ತುಪ್ಪ ಕಾಯಿ ...
ಲ್ಲಾ ಅಪರಂಜಿ...ಇವಕ್ಕೆಲ್ಲಾ ಎಲ್ಲಿ...
ದುಡ್ಡು ತರ್ಲೀಂತ?'

"ಎಲ್ಲಿಂದಾಂತಂದ್ರೆ? ತರಬೇಕು ...
ಕಾದ್ರೆ... ಇಲ್ಲಾದ್ರೆ ಉಪವಾಸ ಬೀಳ...
ಕು. ಇದು ವರೆಗೆ ನೀರಾದ್ರೂ ಅಗ್ಗ...
ಸಿಗುತಿತ್ತು. ಈ ವರ್ಷ ಅದಕ್ಕೂ ಎ...
ಬೆಲೆಯಾಗುತ್ತೇಂತ..."

"ಆಗಲಿ ಬಿಡು. ಪಾಪ, ಹಾಲಿನವ...
ದ್ರೂ ಏನು ಮಾಡಬೇಕು? ಮತ್ತೆ, ...
ದು ಪೈಸೆ..."

"ಒಂದು ಅನ್ನಿಸುತ್ತೆ ನನಗೆ..."

"ಏನು?'

'ನೋಡಿ, ಹಾಲಿಗೆ ಅವಳು ಮ...
ತ್ತು ಪೈಸೆ ತೆಗೆದುಕೊಳ್ಳಿ. ಆದರೆ, ಒ...
ಹಾಲು ಕೊಡಬಾರದೆ?

"ಅಯ್ಯೋ ಮಂಕೆ? ಒಳ್ಳೇ ಹಾ...
ಅಂದ್ರೆ ಅಪ್ಪಟವಾದದ್ದು ತಾನೆ?'

'ಹ್ಞಾಂ...."

"ನೋಡು, ಇದು ಸ್ಪೆಶಲೈಸೇಶನ್...
ಯುವ. ಹೋಟೇಲಿಗೆ ಹೋಗು ನಾ...
ಊಟ ಕಾಫಿಯೊಡನೆ ಸ್ಪೆಶಲ್ ಊ...
ಕಾಫಿಗಳು ರೆಡಿ. ಅಂಗಡಿಗೆ ಹೋಗ...
ಸಾದಾ ಮಾಲು ಊಂಚಾ ಮಾಲು...
ನಿನ್ನ ಸ್ವಾಗತಿಸುತ್ತವೆ. ಹೆಚ್ಚು ಬೇ...
ಪಾರಗಳಲ್ಲೂ ಕಚಡಾ ದಾರಿ ...
ದಾರಿಗಳಿರುವಾಗ ಹಾಲಿನಲ್ಲಿ ಇಲ್ಲಾ ...
ದ್ರೆ ಹೇಗೆ?'

"ಆಗಲಿ, ನಮಗೆ ಪಕ್ಕಾ ಹಾಲ...
ಕೊಡಬಹುದಲ್ಲಾ ಆಕೆಗೆ?'

"ಕೊಡಬಹುದಿತ್ತು. ಆದರೆ ಒಂದು ...
ತು. ಪಕ್ಕಾ ಹಾಲಿನ ಬೆಲೆ ಕಳ್ಳಪೆ...
ಯ ವಿದೇಶೀ ಮದ್ಯವನ್ನು ಮುಟ್ಟ...
ಹುದು. ನಮ್ಮಂತಹರಿಗೆ ಅದನ್ನ ಕೊ...
ಕೊಳ್ಳೋ ತಾಕತ್ತು ಎಲ್ಲಿ? ಆದ್ರಿಂದ
ಟು ಕೇಳಿ ಹಾರ್ಟ್‌ಫೇಲಾಗದೆ ಇದ್ದೀ...
ಹಾಲು ನೀರನ್ನೇ ಕೊಡ್ತಾಳೆ, ಕಡ...
ಬೆಲೆಗೆ...."

'ಅಲ್ರಿ, ಹಾಲಿಗೆ ನೀರು ಬೆರಸೋ...
ಅನ್ಯಾಯವಲ್ವೆ?'

'ಹ್ಞೂಂ, ಅದಕ್ಕೇ ಅವಳು ನೀರಿನ
ಬಿಗೆಗೇ ಹಾಲು ಕರೆಯುತ್ತಾಳೆ...'

(ಹದಿಮೂರನೇ ಪುಟ ನೋಡಿರಿ)



## ಬೆಂಗಳೂರಿನ ಸುದ್ದಿಗಳು

# ಸವಾಲುಗಳ ಸುರಿಮಳೆ

ಕಾಂಗ್ರೆಸ್ ಕಾರ್ಯ ಸಮಿತಿ ಹಾಗೂ ಮುಖ್ಯ ಮಂತ್ರಿಗಳ ಸಭೆಯಲ್ಲಿ ಭಾಗ ವಹಿಸಿ ದಿಲ್ಲಿಯಿಂದ ಮರಳುತ್ತಿದ್ದ ಸಿದ್ದವನಹಳ್ಳಿ ನಿಜಲಿಂಗಪ್ಪನವರು ದಾರಿಯುದ್ದ ಮದರಾಸಿನಲ್ಲಿ ಮಳೆ ಕಂಡರು. ಮೈಸೂರು ರಾಜ್ಯದಲ್ಲೂ ಸುರಿಯುತ್ತಿರಬಹುದೆಂಬ ಆಸೆಯಿಂದ ಇಲ್ಲಿಗೆ ಬಂದರು. ಆದರೆ ಅವರನ್ನು ಸ್ವಾಗತಿಸಿದ್ದು ನೀರಡಿಕೆಯಿಂದ ಬಾಯ್ಬಿಡುತ್ತಿದ್ದ ನೆಲ; ಒಣಗತೊಡಗಿದ್ದ ಹಸುರು.

"ನಮ್ಮ ಪಾಲಿಗೆ ಇದು ಸವಾಲು; ನಾವಿದನ್ನು ಎದುರಿಸಲೇ ಬೇಕು," ಎಂದರು.

ಹೇಗೆ?

ನೀರಾವರಿ ಕೆಲಸಗಳನ್ನು ಬೇಗನೆ ಮುಗಿಸಿ ಹೆಚ್ಚು ನೆಲವನ್ನು ಕೃಷಿಗೆ ಒಳಪಡಿಸುವುದು. ನಾಲ್ವತ್ತೈದು ಲಕ್ಷ ರೂಪಾಯಿಗಳು ವಿಭಾಗಾಧಿಕಾರಿಗಳ ವಶವಿರುತ್ತವೆ. ಪಂಪ್‌ಸೆಟ್ಟುಗಳನ್ನು ಕೊಳ್ಳುವುದಕ್ಕೋಸ್ಕರ ರೈತರಿಗೆ ಅವರು ಸಾಲ ಕೊಡುವರು. ಬೆಳೆಯೊಗದ ಪ್ರದೇಶಗಳಲ್ಲಿ ಕಂದಾಯ ವಸೂಲು ಮಾಡದೆ ಇರುವ ಅಧಿಕಾರ ಜಿಲ್ಲಾಧಿಕಾರಿಗಳಿಗಿರುತ್ತದೆ. ರಾಗಿ, ಜೋಳ, ಆಲೂಗಡ್ಡೆ, ಗೆಣಸುಗಳಂತಹ ಕ್ಷಿಪ್ರ ಬೆಳೆಗಳನ್ನು ರೈತರು ಬೆಳೆಸಬೇಕೆಂಬುವೇ ಸರಕಾರದ ಅಪೇಕ್ಷೆ. ತನ್ನ ವಶದಲ್ಲಿರುವ ನೀರನ್ನು ಇಂತಹ ಬೆಳೆಗಾಗಿಯೇ ಒದಗಿಸಲು ಸರಕಾರ ನಿರ್ಧರಿಸಿದೆ.

ಆಹಾರ ಸ್ವಾವಲಂಬನದ ಯೋಜನೆಯನ್ನು ಕೃತಿಗಿಳಿಸಲು ಸರಕಾರ ಹೆಜ್ಜೆ ಮುಂದಿಟ್ಟೊಡನೆಯೇ ಬರಗಾಲದ ಬೇಗೆ ಉಸಿರುಕಟ್ಟಿಸುವಂತೆ ಎದ್ದಿತು. ಹಳೆಯ ಹೈದರಾಬಾದ್ ಕರ್ಣಾಟಕದಲ್ಲಿ ಪ್ರವಾಸ ಮಾಡಿದ ಮುಖ್ಯಮಂತ್ರಿ, ಉತ್ತರ ಕರ್ಣಾಟಕಕ್ಕೆ ಹೋಗಿ ಬಂದ ಆಹಾರ ಮಂತ್ರಿ, ಶಿವಮೊಗ್ಗಾ ಜಿಲ್ಲೆಗೆ ಭೇಟಿ ಇತ್ತ ಕೃಷಿಮಂತ್ರಿ, ಕೊಡಗನ್ನು ಸಂದರ್ಶಿಸಿದ ಅರಣ್ಯಮಂತ್ರಿ, ದಕ್ಷಿಣ ಪ್ರವಾಸ ಕೈಗೊಂಡ ಆರೋಗ್ಯ ಮಂತ್ರಿ, ಕೋಲಾರವನ್ನು ನೋಡಿಬಂದ ಕಂದಾಯ ಮಂತ್ರಿ—ಇವರೆಲ್ಲ ಕಂಡಿರುವುದು ಒಂದೇ ಬಗೆಯ ಚಿತ್ರವನ್ನು.

ವಿರೋಧ ಪಕ್ಷದ ನಾಯಕ ಶಿವಪ್ಪನವರು ರಾಜ್ಯವಾದ್ಯಂತ ಕಂಡಿರುವ ಚಿತ್ರವೂ ಅಂಥದೇ.

ಇಂತಹ ಪರಿಸ್ಥಿತಿಯಲ್ಲಿ ಒಮ್ಮನದ ಕಾರ್ಯಾಚರಣೆ ಅಗತ್ಯವಾಗಿದೆ.

**ನೀರಿನ ವ್ಯಾಜ್ಯ**

ಆಹಾರ ಅಭಾವದ ಪ್ರಶ್ನೆಯಂತೂ ರಾಷ್ಟ್ರದ ವ್ಯಾಪ್ತಿಯುಳ್ಳದು. ಈ ಕಾರಣದಿಂದಲೇ ಇರಬೇಕು, ತುಂಗಭದ್ರಾ ನೀರಿಗೆ ಸಂಬಂಧಿಸಿ ಮೈಸೂರು ಆಂಧ್ರಗಳ ನಡುವಣ ವ್ಯಾಜ್ಯ ಸದ್ಯದ ಮಟ್ಟಿಗೆ ಬಗೆಹರಿದಿದೆ.

ಈ ಒಪ್ಪಂದದ ಪ್ರಕಾರ ಜಲಾಶಯದ ಎಡ ಬಲ ಕಾಲುವೆಗಳೆರಡರಲ್ಲೂ ನೀರು ಪೂರ್ಣ ಪ್ರಮಾಣದಲ್ಲಿ ಹರಿಯುತ್ತದೆ. ಮಿಗತಾಯವಾಗುವ ನೀರು ಕೃಷ್ಣಾ ನದಿಯನ್ನು ಸೇರಿ, ಆಂಧ್ರದ ಸುಮಾರು ಒಂದು ಒಂದೂವರೆ ಲಕ್ಷ ಎಕರೆಯಲ್ಲಿ ಎರಡನೆಯ ಬೆಳೆ ತೆಗೆಯಲು ನೆರವಾಗುತ್ತದೆ. ಅಲ್ಲದೆ ಈ ರೀತಿ ನೀರು ಕೊಡುವುದರಿಂದ ತುಂಗಭದ್ರಾ ವಿದ್ಯುದಾಗಾರಗಳಲ್ಲಿ ವಿದ್ಯುದುತ್ಪಾದನೆ ಇಪ್ಪತ್ತೈದು ಮೆಗಾವ್ಯಾಟುಗಳಷ್ಟು ಕಡಮೆಯಾಗುತ್ತದೆ. ವಿದ್ಯುಚ್ಛಕ್ತಿಯನ್ನು (ಮುಖ್ಯವಾಗಿ ರಾಯಚೂರು, ಗುಲ್ಬರ್ಗಾ, ಬಳ್ಳಾರಿಗಳ ಸಣ್ಣ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಸಾಕಾಗುವಷ್ಟನ್ನು) ಕೊಡಲು ಆಂಧ್ರ ಸರಕಾರ ಒಪ್ಪಿದೆ. ಅದರ ಪ್ರತಿಯಾಗಿ ಹಿಂದೂಪುರದ ದಾರಿಯಿಂದ ಹತ್ತು ಮೆಗಾ ವಾಟ್‌ಗಳನ್ನು ಕೊಡುವಂತೆ ಆಂಧ್ರ ಮೈಸೂರಿನ ಮನ ಒಲಿಸಿದೆ.

ಮುಂದಿನ ವರ್ಷ ನಾಗಾರ್ಜುನಕೊಂಡ ಸಾಗರದಿಂದ ಆಂಧ್ರಕ್ಕೆ ನೀರು ದೊರೆಯುವ ಸಂಭವವಿರುವುದರಿಂದ ತುಂಗಭದ್ರಾ ನೀರು ಹಂಚಿಕೆಯ ಏರ್ಪಾಟು ಈ ವರ್ಷಕ್ಕೇ ಕೊನೆಯದಾಗುತ್ತದೆಂದು ನಿರೀಕ್ಷಿಸಬಹುದು.

ಅಲ್ಲದೆ, ಮೈಸೂರಿನ ಈ ಔದಾರ್ಯಕ್ಕೆ ಪ್ರತಿಯಾಗಿ ಧಾನ್ಯ ಸಂಗ್ರಹದ ವೇಳೆಯಲ್ಲಿ ಆಂಧ್ರವೂ ಔದಾರ್ಯದಿಂದ ವರ್ತಿಸುತ್ತದೆಂದು ನಿರೀಕ್ಷಿಸುವುದು ತಪ್ಪಾಗದು.

**ಜನಾಭಿಪ್ರಾಯ**

ರಾಜ್ಯ ಸರಕಾರದ ತೀರ್ಮಾನಗಳನ್ನು ಜನರು ಒಪ್ಪಬಹುದು, ಒಪ್ಪದಿರಬಹುದು. ಆದರೆ ಒಂದು ಮಾತ್ರ ನಿಜ. ವಿಳಂಬ ನೀತಿಯ ಆರೋಪವನ್ನು ಸರಕಾರದ ಮೇಲೆ ಈಗ ಹೊರಿಸುವಂತಿಲ್ಲ. ಭಾರತ ಪಾಕಿಸ್ತಾನಗಳ ನಡುವೆ ಕದನವಿರಾಮ ಏರ್ಪಟ್ಟ ಮೇಲಂತೂ, ಸ್ವಾವಲಂಬನ ತತ್ತ್ವವನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಂಬಂಧಿಸಿ ಅನೇಕ ತೀರ್ಮಾನಗಳನ್ನು ಸಚಿವ ಸಂಪುಟ ಸ್ವೀಕರಿಸಿತು.

ಬೆಂಗಳೂರಿನ ನಾಗರಿಕರಿಗೆ ಹಾಗೂ ಅನೌಪಚಾರಿಕ ಪಡಿತರ ಪದ್ಧತಿ ಇರುವ ಈ ರಾಜ್ಯದ ಎಲ್ಲ ನಾಗರಿಕರಿಗೆ ದೊರೆಯುವ ಅಕ್ಕಿಯನ್ನು ತಿಂಗಳಿಗೆ ತಲಾ ಐದು ಕೇಜಿಗಳಿಂದ ಮೂರಕ್ಕೆ ಇಳಿಸಲಾಗಿದೆ. ಪರಿಸ್ಥಿತಿ ಎಷ್ಟು ಗಂಭೀರವೆಂಬುದನ್ನು ಜನರಿಗೆ ಅರಿವು ಮಾಡಿಕೊಡಲು ಇದೊಂದೇ ಸಾಕು. ಆಹಾರದ ಮಿಗತಾಯ ಪ್ರತಿಯೊಬ್ಬ ದೇಶಪ್ರೇಮಿಯ ಕರ್ತವ್ಯವೆಂಬುದು ಒಪ್ಪತಕ್ಕ ಮಾತು. ಆದರೆ ಸೋಮವಾರ ಒಪ್ಪೊತ್ತಿನ ಊಟ ತಪ್ಪುವುದಕ್ಕಾಗಿ ಸಂಜೆ ಐದರ ಅನಂತರ ಊಟದ(ತಿಂಡಿಯ) ಹೋಟೆಲುಗಳನ್ನು ಮುಚ್ಚಲು ಇತ್ತಿರುವ ಆಜ್ಞೆ ಜನಪ್ರಿಯವಾಗುವುದು ಕಷ್ಟ.

ಮದ್ಯಪಾನಕ್ಕೆ ಸಂಬಂಧಿಸಿ ಕೈಗೊಳ್ಳಲಾಗಿರುವ ಕ್ರಮಗಳ ಮಾತು ಬೇರೆ. ಮಹಾರಾಷ್ಟ್ರದಲ್ಲಿರುವಂತೆ ಅದಕ್ಕಿಂತಲೂ ಸ್ವಲ್ಪ ಹೆಚ್ಚಾಗಿ—ನಿಯಮಗಳನ್ನು ಸಡಿಲಗೊಳಿಸಿರುವುದರಿಂದ ಕಳ್ಳಭಟ್ಟಿ ಮತ್ತಿತರ ದುರ್ವ್ಯಾಪಾರಗಳನ್ನು ಬಹಳ ಮಟ್ಟಿಗೆ ತಡೆಗಟ್ಟುವುದು ಸಾಧ್ಯವಾಗಬಹುದು. ಆರ್ಥಿಕ ಮಂತ್ರಿಯೂ ಮದ್ಯಪಾನ ನಿರೋಧ ಹಾಗೂ ವಾರ್ತಾಮಂತ್ರಿಯೂ ಆಗಿರುವ ರಾಮಕೃಷ್ಣ ಹೆಗ್ಗಡೆಯವರು, ಕೈಗೊಳ್ಳಲಾಗಿರುವ ಕ್ರಮದಿಂದ ವರ್ಷಕ್ಕೆ ಒಂದು ಕೋಟಿ ರೂಪಾಯಿ ಆದಾಯ ಬರುತ್ತದೆ ಎಂದಿದ್ದಾರೆ. ಇದೂ ಗಮನಿಸತಕ್ಕ ವಿಷಯ.

ಜನ ಸಾಮಾನ್ಯರಿಗೆ ಪಾನನಿರೋಧ ಸಡಿಲಿಕೆಯು ಈ ಮೊದಲ ಹಂತದಿಂದ ಸಮಾಧಾನವಾಗಿದೆ. ವಿರೋಧ ಪಕ್ಷಗಳಲ್ಲಿ ಪಿ. ಎಸ್. ಪಿ. ನಾಯಕತ್ವ ಕ್ರಮಕ್ಕೆ ಸ್ವಾಗತವಿತ್ತಿದೆ, ಪಾನನಿರೋಧವನ್ನೇ ಪೂರ್ತಿಯಾಗಿ ತೊಡೆದು ಹಾಕಬೇಕೆಂದು ಕೇಳಿದೆ. ಜನತಾ ಪಕ್ಷ "ಗಾಂಧಿ ತತ್ವಕ್ಕೆ ಎಳ್ಳುನೀರು ಬಿಟ್ಟಂತಾಯಿತು" ಎಂದಿದೆ.

ಸಮಾಜ ಕಲ್ಯಾಣ ಸಚಿವೆ ಯಶೋಧರಾ ದಾಸಪ್ಪನವರ ನಿಲುವು ಮೇಲಿನದಕ್ಕಿಂತ ಭಿನ್ನವಾದದ್ದು. ಅವರ ಮಟ್ಟಿಗೆ ಇದು ತತ್ವದ ಮನಸ್ಸಾಕ್ಷಿಯ ಪ್ರಶ್ನೆ. ಮಂತ್ರಿ ಪದವಿಗೆ ರಾಜೀನಾಮೆ ಇತ್ತು, ಕುಡಿತಕ್ಕಿದಿರು ಪ್ರಚಾರ ಕೈಕೊಂಡು, ಸಮಾಜೋದ್ಧಾರಕ ಕಾರ್ಯದಲ್ಲಿ ಯಶೋಧರಾ ದಾಸಪ್ಪನವರು ಇನ್ನು ನಿರತರಾದರೆ ಆಶ್ಚರ್ಯಪಡಬೇಕಾದುದಿಲ್ಲ.

— ಇನ್‌ಫಾ.

---

**ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ**

O. S. No. 267/1965

ಕೊಡವೂರು ಶ್ರೀ ಶಂಕರನಾರಾಯಣ ದೇವರು ಟ್ರಸ್ಟಿಗಳು ಡಾಕ್ಟರ್ ಕೆ. ಎಲ್. ಆತಾಳ ಕೂಡಾ —ವಾದಿರು

ಮತ್ತು

ಉಂಬುಕ್ಕ ಪೂಜಾರ್ತಿ ಕೂಡಾ 3 ಜನರು —ಪ್ರತಿವಾದಿರು

ಯಿವರೊಳಗೆ

3ನೇ ಪ್ರತಿವಾದಿಯು ಮುತ್ತಕ್ಕ ಪೂಜಾರ್ತಿ, ಕುದ್ರುಕರೆ ಶೇಷ ಪೂಜಾರಿ ಮಗಳು, ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಕಲ್ಮಾಡಿಯಲ್ಲಿ ರುವವಳು_ಇವಳಿಗೆ ತಿಳಿಯಪಡಿಸುವುದು—

ವಾದಿರ ಭಂಡಾರಕ್ಕೆ ವಿಳಂಬಿ ಸಂವತ್ಸರದ ಆದಿಯಿಂದ ಕ್ರೋಧಿ ಸಂವತ್ಸರದ ಅಂತ್ಯದ ತನಕ ಬರತಕ್ಕ ಮೂಲಗೇಣಿ ಬಾಕಿ ರೂಪಾಯಿ 2365 ಬಂದಾಗುವರೆಗೆ ವಾದಿರ ಕಡೆಯಿಂದ ಮಾಡಿದ ದಾವೆಯು ತಾ. 16_12_65ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ದರೆ ಬೆಳಿಗ್ಗೆ 11 ಗಂಟೆಗೆ ಆ ದಿವಸ ಹಾಜರು ಮಾಡಿಕೊಳ್ಳಬೇಕು. ಇಲ್ಲವಾದರೆ ಏಕ ಪಕ್ಷವಾಗಿ ತೀರ್ಮಾನವಾಗುವದು.

(ಕೋರ್ಟಿನ ಹುಕುಂ ಪ್ರಕಾರ)

B. Yogishwara Holla
B.A. LL.B.,
Advocate for Plaintiff.
Udipi, 22-11-65.

---




ಸಿಂಡಿಕೇಟ್ ಬ್ಯಾಂಕಿಗೆ 40 ವರ್ಷಗಳು ತುಂಬಿರುವ ಈ ಸಂದರ್ಭದಲ್ಲಿ ತನ್ನ ಅಸಂಖ್ಯಾತ ಗ್ರಾಹಕರಿಗೆ ಮತ್ತು ಹಿತೈಷಿಗಳಿಗೆ ಅವಿರತ ಸಹಕಾರಕ್ಕಾಗಿ ತನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತದೆ.

**ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯ ಭದ್ರವಾಗಬೇಕೆ?**

ಹಾಗಾದರೆ ಸಿಂಡಿಕೇಟಿನ ಈ ಕೆಳಗಿನ ಯಾವುದಾದರೂ ಉಳಿತಾಯ ಯೋಜನೆಯ ಮೂಲಕ ಕ್ರಮವಾಗಿ ಹಣ ಉಳಿಸಿಕೊಂಡು ಬನ್ನಿ.

ಪಿಗ್ಮಿ, ಸೇವಿಂಗ್ಸ್, ಕ್ಯುಮ್ಯುಲೇಟಿವ್,
ಕ್ಯುಮ್ಯುಲೇಟಿವ್ ಏನ್ಯುಯಿಟಿ
ಖಾಯಂ ಠೇವಣಾತಿ.

**ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್**

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

200ಕ್ಕೂ ಹೆಚ್ಚು ಶಾಖೆಗಳು — ರೂ. 70 ಕೋಟಿಗೂ ಮಿಕ್ಕಿದ ಸಂಪತ್ಸಾಧನಗಳು.

ಸಮೃದ್ಧಿಗೆ ಸುಲಭೋಪಾಯ — ಸಿಂಡಿಕೇಟಿನಲ್ಲಿ ಉಳಿತಾಯ.


---

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಎಲ್ಲರೂ ಕೇಳುತ್ತಾರೆ

# ವಿದ್ಯಾರ್ಥಿಗಳು ಮತ್ತು ರಾಷ್ಟ್ರ ರಕ್ಷಣೆ

ಪರದಾಸ್ಯ ಶೃಂಖಲೆಯಲ್ಲಿ ಸವೆಯುತಿದ್ದ ಭಾರತದಲ್ಲಿ ದೇಶವು ನಮ್ಮದು ಎಂದು ಹೇಳುವ ಸಾಹಸ ಅನೇಕರಲ್ಲಿರಲಿಲ್ಲ. ಇವರು ಆಡಳಿತ ವರ್ಗದ ಮುಖಸ್ತುತಿ ಮಾಡುತ್ತ ಅವರ ತಾಳಕ್ಕೆ ಸರಿಯಾಗಿ ಹೆಜ್ಜೆಯಿಡುತ್ತ ತಮ್ಮ ಕಾರ್ಯ ವಿಧಾನವನ್ನು ರೂಪಿಸುತಿದ್ದರು. ಆಳರಸರ ಪ್ರಶಂಸೆಮಾಡಿ, ಅವರಿಂದ ತಮ್ಮ ಬೆನ್ನು ತಟ್ಟಿಸಿಕೊಳ್ಳುವ ಚಟ ಇವರದಾಗಿತ್ತು. ಆದರೆ, ಇಂದು ಕಾಲ ಬದಲಾಗಿದೆ. ನಮ್ಮ ದೇಶ ನಮ್ಮ ಕೈಯಲ್ಲಿದೆ. ಅದನ್ನು ಉಳಿಸುವ ಬೆಳೆಸುವ, ಅಜರಾಮರ ಕೀರ್ತಿಯನ್ನು ಅದಕ್ಕೆ ತಂದು ಕೊಡುವ ದೊಡ್ಡ ಹೊಣೆಗಾರಿಕೆ ನಮ್ಮದಾಗಿದೆ.

ಇಂದು ನಮ್ಮ ಪವಿತ್ರ ಭಾರತವು ಸಂಕ್ರಮಣಾವಸ್ಥೆಯಲ್ಲಿದೆ. ಪಾಕಿಸ್ತಾನಿ ರಾಹು ಮತ್ತು ಚೀನೀಯ ಕೇತುಗಳು ಒಂದಾಗಿ ಇಕ್ಕಡೆಯಿಂದಲೂ ಭಾರತ ಭಾಸ್ಕರನನ್ನು ಕಬಳಿಸುವ ಹಂಚು ಹೂಡಿದ್ದಾರೆ. ಇಂತಹ ಗಂಡಾಂತರ ಮಯ ಪರಿಸ್ಥಿತಿಯಲ್ಲಿ ಭಾರತೀಯರ ಆದ್ಯ ಕರ್ತವ್ಯ, ಮಾತೃಭೂಮಿಯ ಸಂರಕ್ಷಣೆ. ಪ್ರತಿ ಭಾರತೀಯನೂ ಈ ಕರ್ತವ್ಯದಿಂದ ಚ್ಯುತನಾಗಬಾರದು; ದೇಶದ್ರೋಹವೆಸಗಬಾರದು.

ವಿದ್ಯಾರ್ಥಿಗಳು ರಾಷ್ಟ್ರ ರಕ್ಷಣೆಯಲ್ಲಿ ಹೇಗೆ ಭಾಗವಹಿಸಬಹುದು?— ಈ ಪ್ರಶ್ನೆಗೆ ಮೊದಲೇ ಒಂದು ಸವಾಲು ಏಳುತ್ತದೆ. ಹೇಳಿ ಕೇಳಿ ವಿದ್ಯೆಯನ್ನು ಬಯಸಿ ಬಂದವರು ಇವರು. ರಾಷ್ಟ್ರರಕ್ಷಣೆಯಾದರೋ ಶುದ್ಧ ರಾಜಕೀಯ ವಿಷಯ. ಇದನ್ನು ಚಿಂತಿಸುವವರ ವರ್ಗವೇ ಬೇರೆ; ವಿದ್ಯಾರ್ಥಿಗಳ ಪ್ರಪಂಚವೇ ಬೇರೆ ಎನ್ನುವ ಬುದ್ಧಿಶಾಲಿಗಳು ಕೆಲವರಿದ್ದಾರೆ. ವಿದ್ಯಾರ್ಥಿಗಳು ರಾಜಕೀಯದಲ್ಲಿ ತಲೆಹಾಕಬಾರದು ಎಂದು ಉಪದೇಶಿಸುವ ವಿವೇಕಶಾಲಿಗಳೂ ಹಲವರಿದ್ದಾರೆ. ಸರಿಯೇ. ಆದರೆ, ರಾಷ್ಟ್ರವು ಬರಿಯ ಒಂದು ವರ್ಗ ವರ್ಗದ ಸ್ವತ್ತಲ್ಲ ಆ ದೇಶದಲ್ಲಿ ಹುಟ್ಟಿ, ಬೆಳೆಯುತ್ತಿರುವ ಪ್ರತಿಯೊಂದು ಜೀವಿಗೆ ರಾಷ್ಟ್ರದ ಮೇಲೆ ಅಧಿಕಾರವಿದೆ; ಅದನ್ನು ಉತ್ಥಾನ ಪಥದತ್ತ ಒಯ್ಯುವವರೂ ಪತನಕ್ಕೆ ಕಾರಣೀಭೂತರಾಗುವವರೂ ರಾಷ್ಟ್ರೀಯರು—ರಾಷ್ಟ್ರವಾಸಿಗಳು. ವಿದ್ಯಾರ್ಥಿಗಳು ರಾಷ್ಟ್ರೀಯರಲ್ಲವೇನು? ಅವರು ರಾಷ್ಟ್ರವಾಸಿಗಳಲ್ಲವೇನು? ರಾಷ್ಟ್ರರಕ್ಷಣೆಯು ಅವರ ಕರ್ತವ್ಯವಲ್ಲವೇನು?

ಮಾತೃಭೂಮಿ ಎಲ್ಲರಿಗೂ ಪ್ರಿಯವಾದುದು. ಅದು ಮರುಭೂಮಿಯಿರಲಿ, ಹಿಮ ಪ್ರದೇಶವಿರಲಿ ಪ್ರತಿಯೊಬ್ಬನೂ ತನ್ನ ಜನ್ಮಭೂಮಿಯ ಬಗ್ಗೆ ಸುಕುಮಾರ ಭಾವನೆಯಿಡುತ್ತಾನೆ. ಸುಸಂಪೃದ್ಧ ರಾಷ್ಟ್ರವಾಸಿಗಳಂತೆಯೇ ಆತನೂ ತನ್ನ ಮಾತೃ ಭೂಮಿಯ ಪ್ರಶಂಸಾ ಗೀತವನ್ನು ಮಧುರ ಕಂಠದಿಂದ ಹಾಡುತ್ತಾನೆ. ಪಶುಪಕ್ಷಿಗಳಿಗೂ ತಮ್ಮ ಜನ್ಮಭೂಮಿಯ ಮೇಲೆ ಪ್ರೇಮವಿದೆ. ಹಿಮಾಲಯದ ಯಾಕ್ ಪ್ರಾಣಿ ಕಾವೇರಿ ನದೀ ದಡದಲ್ಲಿ ಆಡುವುದಿಲ್ಲ. ನಮ್ಮೂರಿನ ಮಾವಿನ ಮರವನ್ನು ಗೌರೀಶಂಕರದಲ್ಲಿ ನೆಟಲಾದೀತು; ಆದರೆ, ಅದು ತನ್ನ ಜನ್ಮಭೂಮಿಯನ್ನೇ ನೆನೆನೆನೆದು ಕೊರಗಿ ಕೊರಗಿ ಮೃತ್ಯುವನ್ನಪ್ಪುವುದಿಲ್ಲವೆ? ಹಾಗಿರುವಾಗ ವಿದ್ಯಾರ್ಥಿಗಳು ತಮ್ಮ ದೇಶವನ್ನು ಪ್ರೀತಿಸುವುದು, ಅದರ ರಕ್ಷಣೆಗೆ ಬದ್ಧಕಂಕಣರಾಗುವುದು ಅದೆಂತು ಅಪರಾಧವಾದೀತು?

ತಮಗಾಗಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡದಿರಬಹುದು; ಆದರೆ, ದೇಶಕ್ಕಾಗಿ ಅವರು ವಿದ್ಯೆ ಕಲಿಯಲೇ ಬೇಕು. ದೇಶದ ಹಿತ, ಸ್ವಾರ್ಥಗಳನ್ನು ಅರಿತುಕೊಂಡು ಅವುಗಳಿಗೆ ಸರಿಯಾಗಿ ತಮ್ಮ ಹಿತ—ಸ್ವಾರ್ಥಗಳನ್ನು ರೂಪಿಸಿಕೊಳ್ಳಬೇಕು, ಅವರಿಗೆ ತಮ್ಮ 'ದೇಶವೂ ಅದರ ಸಮಸ್ಯೆಗಳೂ ಅಪರಿಚಿತವಾಗಬಾರದು; ಅವಲಕ್ಷಣವೂ ಆಗಬಾರದು. ವಿದ್ಯಾರ್ಥಿಜೀವನದಲ್ಲಿಯೇ ಅವರು ದೇಶದ ಬಗ್ಗೆಯೂ ತಿಳುವಳಿಕೆ ಪಡೆದುಕೊಳ್ಳಬೇಕು. ದೇಶದ ಆತ್ಮದರ್ಶನ ಅವರಿಗಾಗಬೇಕು. ಇದಾಗದೆ ಹೋದರೆ, ಜೀವನ ಪ್ರವೇಶ ಮಾಡಿದ ಬಳಿಕ ವಾದರೂ ಅವರಿಂದ ದೇಶಸೇವೆ, ದೇಶ ರಕ್ಷಣೆಯನ್ನು ನಾವು ನಿರೀಕ್ಷಿಸುವುದೂ ಅಪರಾಧವೆನಿಸೀತು.

ವಿದ್ಯಾರ್ಥಿಗಳು ತಮ್ಮ ತಾಯ್ತಂದೆಯರನ್ನು ಅರಿತಿರುವಂತೆಯೇ ದೇಶವನ್ನೂ ಅರಿತುಕೊಳ್ಳಬೇಕು. ಹೆತ್ತವರ ಕಡೆಗೆ ತನ್ನ ಕರ್ತವ್ಯವಿರುವುದೆಂದೂ ಅವರ ರಕ್ಷಣೆಯೂ ತನ್ನ ಜವಾಬ್ದಾರಿಯೆಂದೂ ತಿಳಿದಿರುವಂತೆ ದೇಶದ ಕಡೆಗೂ ಅದರ ರಕ್ಷಣೆಯ ವಿಚಾರದಲ್ಲಿಯೂ ತನ್ನ ಪಾತ್ರವಿದೆಯೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ತಾಯಿ ನಮ್ಮನ್ನು ಹೆತ್ತು, ಹಾಲುಣಿಸಿ, ಪಾಲಿಸಿದಳು; ತಂದೆ ತನ್ನ ಪ್ರೀತಿಯ ನೆರಳಿನಲ್ಲಿ ನಮ್ಮನ್ನು ರಕ್ಷಿಸಿದನು. ನಮ್ಮ ಜನ್ಮ ಭೂಮಿಯೂ ನಮಗೆ ಅನ್ನನೀರು ಒದಗಿಸಿ ನಮ್ಮ ಶರೀರವನ್ನು ಪೋಷಿಸಿದೆ. ಆದರ ಪವಿತ್ರ ತೊಡೆಯಲ್ಲಿಯೇ ನಾವು ಆಡಿ ಓಡಿ ದೊಡ್ಡವರಾದೆವು; ಅದರ ಗಾಳಿಯನ್ನು ಸೇವಿಸಿಯೇ ನಾವು ಆರೋಗ್ಯವಂತರಾದೆವು. ಹಾಗಿರುವಾಗ ಅದರ ರಕ್ಷಣೆ ನಮ್ಮ ಕರ್ತವ್ಯವಲ್ಲವೇನು? ಆದರ ಸುಖಕಷ್ಟಗಳು ನಮ್ಮವಲ್ಲವೇನು? ತಾಯ್ತಂದೆಯರಿಗೂ ಮಿಗಿಲಾದುದು ತಾಯ್ನಾಡು. ಏಕೆಂದರೆ, ನಮ್ಮ ಹಿರಿಯರಲ್ಲಿ ಹಿರಿಯರಾದವರನ್ನೂ ಪೊತ್ತು ಸಾಕಿದ ತ್ಯಾಗಮಯಿ ಪವಿತ್ರ ಭಾರತಾಂಬೆ. ಆದುದರಿಂದ ಭಾರತ ಮಾತೆಯ ರಕ್ಷಣೆ ನಮ್ಮ ಹಿರಿಯರ ಗೌರವದ ರಕ್ಷಣೆ. ನಾವು ವಿದ್ಯಾರ್ಥಿಗಳೆಂದು, ಅಲ್ಪ ವಯಸ್ಕರೆಂದು ದೇಶದ ದುರವಸ್ಥೆಯನ್ನು ಕಂಡು ಕಣ್ಣಿದ್ದು ಕುರುಡರಾಗುವುದು ಎಂದಿಗೂ ಸಾಧ್ಯವಿಲ್ಲ.

ನಾವು ನಮ್ಮ ದೇಶದ ಅವಶ್ಯಕತೆಗಳನ್ನು ಅರಿತುಕೊಳ್ಳಬೇಕು; ದೇಶದ ಕುಂದು ಕೊರತೆಗಳನ್ನು ತಿಳಿದುಕೊಳ್ಳಬೇಕು. ಅವನ್ನು ತುಂಬಿ ಕೊಡುವುದಕ್ಕಾಗಿ ನಮ್ಮ ಪ್ರಾಣಪಣವನ್ನು ಇಡುವುದಕ್ಕೂ ಮುಂದಾಗಬೇಕು. ವಿದ್ಯಾ ದದಾತಿ ವಿನಯಂ. ವಿದ್ಯಾರ್ಥಿಗಳೆಂದ ನಮ್ಮಲ್ಲಿ ವಿನಯ ತುಂಬಿ ತುಳುಕಾಡಬೇಕು. ಕರ್ತವ್ಯ ಪಾಲನೆಯೇ ನಮ್ಮ ಧರ್ಮ. ಪ್ರತಿದೇಶದ ಯುವಕ ವಿದ್ಯಾರ್ಥಿಗಳೇ ಅದರ ಭಾಗ್ಯವಿಧಾತರು. ದೇಶಮಾತೆಯು ಅವರನ್ನೇ ಕಣ್ಮುಚ್ಚಿ ನೋಡುತ್ತಾಳೆ. ಕರುವಿಗೆ ಹಾಲುಣಿಸೆಂದು ದನಕ್ಕೆ ಹೇಳುತ್ತಾರೆಯೆ? ರಾತ್ರಿ ಉದಿಸಿ ಜಗತ್ತಿಗೆ ಶಾಂತಿ ನೀಡೆಂದು ಚಂದ್ರನಿಗೆ ಹೇಳುವವರಿದ್ದಾರೆಯೆ? ದೇಶದ ಸುಖದುಃಖಗಳ ಹೊಣೆಗಾರಿಕೆ ವಿದ್ಯಾರ್ಥಿಗಳದ್ದೆಂದು ಯಾರು ಯಾಕೆ ಹೇಳಬೇಕು?

ವಿದ್ಯಾರ್ಥಿಗಳು ದೇಶ ರಕ್ಷಣೆಯಲ್ಲಿ ಯಾವ ರೀತಿ ಭಾಗವಹಿಸಬಹುದು? ಒಂದು ಮಾತನ್ನು ನಾವು ನೆನಪಿಸಬೇಕು: 'ನಾವೆಲ್ಲರು ಸೈನಿಕರೇ ಇಂಬಾವುದೆ ಉಡುಪು'. ಎತ್ತರದ ಪರ್ವತ ಶಿಖರದಲ್ಲಿ ಹಿಮಾವೃತ ಪ್ರದೇಶದಲ್ಲಿ ಅಥವಾ ಗಿರಿಕಂದರದಲ್ಲಿ ಇಲ್ಲವೇ ಮತ್ತೆಲ್ಲಿಯಾದರೂ ಕತ್ತಿ ಹಿಡಿದು ಹೋರಾಡುವ ಜವಾನನೇ ಇರಲಿ, ನಳ ನಳಿಸುವ ನದೀ ತಟದಲ್ಲಿ ಬೆಳೆ ತೆಗೆಯುವ ಕಿಸಾನನೇ ಇರಲಿ, ನ್ಯಾಯ-ಧರ್ಮ— ಸತ್ಯಗಳ ತ್ರಿವೇಣಿಯಲ್ಲಿ ಮಿಂದು ತಂತನ್ನ ಕರ್ತವ್ಯ ಮಗ್ನನಾದ ಮಾನವನೇ ಉದ್ಯೋಗಿಯಿರಲಿ-ಎಲ್ಲರೂ ದೇಶ ರಕ್ಷಣೆಯಲ್ಲಿ ಅವಶ್ಯ ಭಾಗವಹಿಸುತ್ತಾರೆ. ಕೆಲವರು ಪ್ರತ್ಯಕ್ಷವಾಗಿ ರಣ ಕಣಕ್ಕಿಳಿಯಬಹುದು; ಉಳಿದವರು ಅವರ ಬೆಂಗೋಲಾಗಿ ನಿಲ್ಲಬಹುದು. ವಿದ್ಯಾರ್ಥಿಗಳು ಕೂಡಾ ತಮ್ಮ ಕರ್ತವ್ಯ ಪಾಲನೆಯಿಂದ ವಿಚಲಿತರಾಗಬಾರದು. ಪ್ರತಿಯೊಬ್ಬ ವಿದ್ಯಾರ್ಥಿಯೂ ತಾನು ಭಾರತಮಾತೆಯ ಸಂತಾನವೆಂಬುದನ್ನು ಅರಿತುಕೊಳ್ಳಬೇಕು. ಜನನಿಯೂ ಜನ್ಮ ಭೂಮಿಯೂ ಸ್ವರ್ಗಕ್ಕೂ ಮಿಗಿಲಾದುದೆಂದೂ ಅದರ ರಕ್ಷಣೆಯು ಪರಮ ಕರ್ತವ್ಯವೆಂದೂ ತಿಳಿಯಬೇಕು. ನಮ್ಮ ದೇಶದ ಹಾಗೂ ವಿದೇಶಗಳ ಮಹಾಪುರುಷ— ವೀರನಾರಿಯರ ಜೀವನವನ್ನು ಓದಿಕೊಳ್ಳಬೇಕು. ಎಬಿಸೀನಿಯಾ ದೇಶದ ಸರದಾರನ ಸುಕುಮಾರ ಕನ್ಯೆ ಲಾಯಿನಾ ತನ್ನ ಕೆಚ್ಚೆದೆಯಿಂದ ಚಿತ್ರಹಿಂಸೆಗೆ ಗುರಿಯಾದರೂ ದೇಶವಾಸಿಗಳಲ್ಲಿ ನವಚೇತನವನ್ನು ಹುಟ್ಟಿಸಿ ಶತ್ರುಗಳ ಆಕ್ರಮಣದಿಂದ ದೇಶವುಳಿಸುವ ಪ್ರೇರಕ ಶಕ್ತಿಯಾಗಲಿಲ್ಲವೆ? ರಾಣಿ ಲಕ್ಷ್ಮೀಬಾಯಿ—ಕಿತ್ತೂರು ಚೆನ್ನಮ್ಮನವರ ಉಜ್ವಲ ಚರಿತ್ರೆ ಮತ್ತು ಅದ್ಭುತ ತ್ಯಾಗಗಳ ರೋಮಾಂಚಕ ಇತಿಹಾಸವು ನಮ್ಮಲ್ಲಿ ಪ್ರಾಣ ಪ್ರತಿಷ್ಠೆ ಮಾಡಲಾರದೆ? ಇವನ್ನೆಲ್ಲ ಅರಿತುಕೊಳ್ಳುವುದು, ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಳ್ಳುವುದು, ಪ್ರಾಯ ಪ್ರಬುದ್ಧರಾದಾಗ ಅವಶ್ಯಕತೆ ಬಂದಾಗ ಅದರ ಉಪಯೋಗ ಮಾಡಿಕೊಳ್ಳುವುದು ಮುಂದಿನ ನಾಗರಿಕರಾದ ಇಂದಿನ ವಿದ್ಯಾರ್ಥಿಗಳ ಕರ್ತವ್ಯವಲ್ಲವೆ?

ಛತ್ರಪತಿ ಶಿವಾಜಿ, ರಾಣಾ ಪ್ರತಾಪಸಿಂಹರಂತೆ ದೇಶ ಪ್ರೇಮಿಗಳಾಗುವ ಸ್ವಪ್ನವನ್ನು ವಿದ್ಯಾರ್ಥಿ ಕಾಣಲಾರರೆ? ಸ್ವಾಮಿ ದಯಾನಂದ ಸರಸ್ವತಿಯಾಗಿ ದೇಶ ಹಿತಚಿಂತನೆಯನ್ನು ಅವರು ಮಾಡಲಾರರೆ? ಲೋಕಮಾನ್ಯ ಬಾಲಗಂಗಾಧರ ತಿಲಕರಾಗಿ ದೇಶೋದ್ಧಾರದ ಕಾರ್ಯದಲ್ಲಿ ಅವರು ತೊಡಗಲಾರರೆ? ಮಹಾತ್ಮಾ ಗಾಂಧೀಜಿಯವರು ಹೇಳಿದಂತೆ ಕಂಟಕಾಕೀರ್ಣ ಪಥವನ್ನು ನಿಷ್ಕಂಟಕ ರಾಜಮಾರ್ಗವಾಗಿ ಅವರು ಪರಿವರ್ತಿಸಲಾರರೆ? ಪಂಡಿತ ಜವಾಹರಲಾಲರ ದಿವ್ಯದೃಷ್ಟಿ ಅವರಲ್ಲಿ ಮೂಡಲಾರದೆ? ಅರವಿಂದ ಘೋಷ, ರಾಜಾಜಿ, ಲಾಲಾಲಜಪತ್‌ರಾಯ್, ಇಂದಿರಾಗಾಂಧಿ, ಸರೋಜಿನಿ ನಾಯ್ಡು—ಅಹಲ್ಯಾಬಾಯಿ ಹೋಳ್ಕರ್—ಹೀಗೆ ನೂರಾರು ಸ್ತ್ರೀ ಪುರುಷರ ಆದರ್ಶಗಳು ನಮ್ಮ ಮುಂದಿರುವಾಗ, ಅವನ್ನು ಓದಿ ಮನನ ಚಿಂತನ ಮಾಡಿ ಮುಂದೆ ಪ್ರಾಯ ಪ್ರಬುದ್ಧರಾದಾಗ ಪ್ರತ್ಯಕ್ಷವಾಗಿ ಅವನ್ನು ಕಾರ್ಯರೂಪಕ್ಕಿಳಿಸುವುದಕ್ಕೆ ತಕ್ಕ ವೇದಿಕೆಯನ್ನು ಸಿದ್ಧಮಾಡಿಕೊಳ್ಳುವುದಕ್ಕಿಂತ ದೊಡ್ಡ ದೇಶಸೇವೆ ಏನಿದೆ?

ವಿದ್ಯಾರ್ಥಿಗಳು ಶಿಸ್ತನ್ನು, ನೀತಿಯನ್ನು ಪಾಲಿಸಿಕೊಂಡು ಬರಬೇಕು. ದೇಶ ಹಿತಕರವಾದ ಉಚ್ಚ ವಿಚಾರಗಳನ್ನು

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ರಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
**ಮಂಗಳೂರು—3**

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ

# ಧರ್ಮ - ಸಾಹಿತ್ಯ ಸಮ್ಮೇಳನಗಳು

ಸ್ವಾಗತ ಸಮಿತಿಯ ಅಧ್ಯಕ್ಷರಾದ
ಶ್ರೀ ಡಿ. ರತ್ನವರ್ಮ ಹೆಗ್ಗಡೆ
((ಧರ್ಮಸ್ಥಳದ ಧರ್ಮದರ್ಶಿ)

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಸರ್ವ ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ ಮೂವತ್ತುಮೂರನೆಯ ಅಧಿವೇಶನವು ತಾ. ೨೧ ಮತ್ತು ೨೨ರಂದು ನಡೆದುವು. ಸರ್ವಧರ್ಮ ಸಮ್ಮೇಳನದ ಉದ್ಘಾಟನೆಯನ್ನು ರಾಜ್ಯದ ಹಣಕಾಸು, ಅಬಕಾರಿ ಹಾಗೂ ವಾರ್ತಾ ಇಲಾಖೆಗಳ ಸಚಿವ ಶ್ರೀ ರಾಮಕೃಷ್ಣ ಹೆಗಡೆಯವರು ಮಾಡಿದರು. ಸಭಾಧ್ಯಕ್ಷತೆಯನ್ನು ಕೈಲಾಸ ಆಶ್ರಮದ ಶ್ರೀ ತಿರುಚಿ ಸ್ವಾಮಿಗಳು ವಹಿಸಿದ್ದರು. ಸಾಹಿತ್ಯ ಸಮ್ಮೇಳನವು ರಾಜ್ಯದ ಕಂದಾಯ ಸಚಿವ ಎಂ. ವಿ. ಕೃಷ್ಣಪ್ಪ ಅವರಿಂದ ಉದ್ಘಾಟಿತವಾಯಿತು. ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಅಧ್ಯಕ್ಷಾಸನದಲ್ಲಿದ್ದರು.

ಸರ್ವಧರ್ಮ ಸಮ್ಮೇಳನದ
ಉದ್ಘಾಟಕರಾದ
ಶ್ರೀ ಕೆ. ರಾಮಕೃಷ್ಣ ಹೆಗ್ಗಡೆ
ಮೈಸೂರಿನ ಹಣಕಾಸಿನ ಮಂತ್ರಿ)

§ §

ಮೊದಲನೆಯ ದಿನ ಬಿ. ಎಸ್. ರಾಮಾಚಾರ್ಯರಿಂದ ಪ್ರಾರ್ಥನೆ ನಡೆಯಿತು. ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡುತ್ತ ೧೯೩೩ನೆ ಇಸವಿಯಿಂದ ಮೊದಲುಗೊಂಡು ಅವಿಚ್ಛಿನ್ನವಾಗಿ ನಡೆದು ಬರುತ್ತಿರುವ ಧರ್ಮ ಸಮ್ಮೇಳನದ ಉದ್ದೇಶ ಹಾಗೂ ಮಹತ್ವಗಳನ್ನು ನಿವೇದಿಸಿ, ಮಂತ್ರಿಗಳಿಗೆ ಮಾನಪತ್ರ ಅರ್ಪಿಸಿದರು. ಇದರಲ್ಲಿ ಮಂತ್ರಿಗಳ ಸಾಮಾನ್ಯ, ಕಾರ್ಯದಕ್ಷತೆ, ಧರ್ಮನಿಷ್ಠೆ ಮತ್ತು ಸರಳತೆಗಳನ್ನು ಕೊಂಡಾಡಲಾಗಿತ್ತು. ಶ್ರೀ ಕ್ಷೇತ್ರಕ್ಕೆ ಕುಡಿಯುವ ನೀರಿನ ಸೌಕರ್ಯ ನೀಡುವ ದೆಸೆಯಲ್ಲಿ ಶ್ರೀ ರತ್ನವರ್ಮ ಹೆಗ್ಗಡೆಯವರು ತನ್ನ ಸ್ವಂತ ಖರ್ಚಿನಿಂದಲೇ ಸುಮಾರು ಒಂದು ಲಕ್ಷರೂಪಾಯಿಗಳಿಗಿಂತ ಹೆಚ್ಚಿನ ವೆಚ್ಚದ ನೀರಿನ ಯೋಜನೆ ನಿರ್ಮಿಸಿರುವುದಕ್ಕೆ ಮಂತ್ರಿಗಳು ಒಪ್ಪಿ ಮಂಜೂರಾತಿ ನೀಡಿರುವುದನ್ನು ಪ್ರಸ್ತಾಪಿಸಲಾಗಿತ್ತು.

ಮಾನ್ಯ ಮಂತ್ರಿವರ್ಯರು ಮಾತನಾಡುತ್ತ ಭಾರತದಲ್ಲಿ ಹಲವಾರು ಮತ ಪಂಥಗಳಿರುವುದಾದರೂ ಎಲ್ಲಾ ಮತಗಳ ಧರ್ಮವು ಮಾನವ ಧರ್ಮದ ತಳಹದಿಯ ಮೇಲೆಯೇ ನಿಂತಿರುವುದೆಂದು ನುಡಿದರು. ಧರ್ಮ, ಸಂಸ್ಕೃತಿ, ದೇವರು, ಸಮಾಜ ಇವುಗಳ ಪರಸ್ಪರ ಸಂಬಂಧವೇ ಮಾನವನನ್ನು ಮಾನವನನ್ನಾಗಿರಿಸುವ ಶಕ್ತಿಗಳೆಂದು ಹೇಳಿದರು.

ಭಾರತವು ಜಾತ್ಯತೀತ ಧೋರಣೆ ಅನುಸರಿಸಿದೆ. ಇಂತಹ ಆದರ್ಶತತ್ವವು ಮಾನವೀಯತೆಗೆ ಮೂಲ ತಳಹದಿ. ಹಿಂದೂ ಧರ್ಮವು ಪರಮತ ಸಹಿಷ್ಣುತೆಗೆ ಹೆಸರಾಂತ ಧರ್ಮವಾಗಿದೆ. ಆದರೆ ಸಾಮೂಹಿಕ ಐಕ್ಯ ಮಾತ್ರ ಇಂದಿಗೆ ಬಹಳ ದೂರವಾಗಿದೆ. ಸಾಮೂಹಿಕ ಪ್ರಾರ್ಥನೆಯ ಪದ್ಧತಿಯನ್ನು ಅಳವಡಿಸಿಕೊಳ್ಳದಿರುವುದೇ ಇದಕ್ಕೆ ಕಾರಣವೆಂದು ಹೇಳಿದ ಮಾನ್ಯ ಮಂತ್ರಿಯವರು ಎಲ್ಲವುಗಳಿಗಿಂತ ಮುಖ್ಯವಾದ ಹಾಗೂ ಪರಮ ಶ್ರೇಷ್ಠವಾದ ಧರ್ಮವು ರಾಷ್ಟ್ರ ಧರ್ಮ. ಮಾತೃಭೂಮಿ ಅಸ್ತಿತ್ವದಲ್ಲಿದ್ದರೆ ಮಾತ್ರ ನಮ್ಮ ಬಾಳು ಸಾರ್ಥಕವೆಂದು ಘೋಷಿಸಿದರು.

ಸಾಹಿತ್ಯ ಸಮ್ಮೇಳನದ ಉದ್ಘಾಟಕರಾದ
ಶ್ರೀ ಎಂ. ವಿ. ಕೃಷ್ಣಪ್ಪ
(ಮೈಸೂರಿನ ರೆವಿನ್ಯೂ ಸಚಿವ)

§ §

ಶ್ರೀ ಕ್ಷೇತ್ರವು ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರ ನೇತೃತ್ವದಲ್ಲಿ ದಿನಂಪ್ರತಿ ಬೆಳೆದು ಬರುತ್ತಿರುವುದನ್ನು ಪ್ರತ್ಯಕ್ಷವಾಗಿ ನೋಡಿ ತಮಗಾದ ಆನಂದವನ್ನು ಪ್ರದರ್ಶಿಸಿದರು ಅವರು. ಧರ್ಮಾಧಿಕಾರಿ ಹೆಗ್ಗಡೆಯವರ ಧರ್ಮನಿಷ್ಠೆ, ದೂರದೃಷ್ಟಿ, ಯಾತ್ರಾರ್ಥಿಗಳ ಇಷ್ಟಾರ್ಥ ಸಿದ್ಧಿ ಪರಿಗ್ರಹಣ ಶಕ್ತಿ ಮೊದಲಾದುಗಳಿಂದಾಗಿಯೇ ಶ್ರೀ ಕ್ಷೇತ್ರದ ಕೀರ್ತಿ ಬೆಳೆಯುತ್ತಿದೆಯೆಂದು ಹೇಳಿದರು.

ಅನಂತರ ಅಧ್ಯಕ್ಷ ಶ್ರೀ ಸ್ವಾಮೀಜಿಯವರಿಗೂ ಮಾನಪತ್ರವನ್ನು ಅರ್ಪಿಸಲಾಯಿತು. ಅವರು ಧರ್ಮದ ಮಹತ್ವವನ್ನು, ಅದರ ಆಚರಣೆಯ ಆವಶ್ಯಕತೆಯನ್ನೂ ತಿಳಿಸಿದರು.

ಕೊನೆಯಲ್ಲಿ ಸರ್ವಶ್ರೀ ಯಂ. ಯಾಮುನಾಚಾರ್ಯ, ಟಿ.ಜಿ. ಕಲಘಟಗಿ, ನೌಲ್ವಿ ಸಯ್ಯದ್ ಕಾಸಿಮ್, ಬಿ. ಶಿವಮೂರ್ತಿ ಶಾಸ್ತ್ರಿ, ಬಿ. ಜಿನಚಂದ್ರ ಶಾಸ್ತ್ರಿ, ಎಚ್. ಜಿ. ರಂಗಸ್ವಾಮಿ ಅಯ್ಯಂಗಾರ್, ರೆವರೆಂಡ್ ಮಥ್ಯೂ ಲೂಯಿಸ್, ಎಸ್. ಎಂ. ಹುಣಸ್ಯಾಳ್ ಮತ್ತು ವಿ ಜಿ ಅಣ್ಣಾರಾಯರು — ಇವರಿಂದ ಧಾರ್ಮಿಕ ವಿಷಯಪರ ಉಪನ್ಯಾಸಗಳು ನಡೆದುವು.

ಕೊನೆಯಲ್ಲಿ ಶ್ರೀ ಕಾ. ಪ. ಧರಣೇಂದ್ರಯ್ಯನವರು ವಂದನಾರ್ಪಣೆಗೈದರು.

ಎರಡನೆಯ ದಿನ ಬಿ. ಎಸ್. ರಾಮಾಚಾರ್ಯರಿಂದ ಪ್ರಾರ್ಥನೆಯಾದ ಮೇಲೆ ಶ್ರೀ ರತ್ನವರ್ಮ ಹೆಗ್ಗಡೆಯವರು ಸ್ವಾಗತಿಸಿದರು. ಉದ್ಘಾಟಕ ಮತ್ತು ಸಮ್ಮೇಳನಾಧ್ಯಕ್ಷರಿಗೆ ಮಾನಪತ್ರಗಳನ್ನು ನೀಡಲಾಯಿತು.

ಶ್ರೀ ಕೃಷ್ಣಪ್ಪನವರು ಮಾತನಾಡುತ್ತ ಇಂದಿನ ಆಹಾರ ದುಸ್ಥಿತಿ, ಪಾಕ್ ಒತ್ತಡ ಮೊದಲಾದ ಪ್ರಮುಖ ವಿಚಾರಗಳ ಕುರಿತು ಪ್ರಸ್ತಾಪಿಸಿ ನಾವು ಗಳಿಸಿಕೊಂಡಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ತಯಾರಾಗಬೇಕು — ಇದು ನಮ್ಮ ಆದ್ಯ ಕರ್ತವ್ಯ ಎಂದು ತಿಳಿಸಿದರು.

ಹಳೆಯ ಕವನವೊಂದರಲ್ಲಿ "ನೀನಾರಿಗಾದೆಯೋ ಎಲೆ ಮಾನವಾ" ಎಂದು ಒಂದು ಪಶು ಕೇಳಿದಂತಿದೆ. ಈಗ ಅದರ ಬದಲು "ಅನ್ನಕ್ಕಿಲ್ಲದ ನನ್ನ ಹಾದೀಲಿ ಬಿದ್ದ ಕಾಳಡ್ಡಿ ತಿನ್ನ ಬಿಡುವೆಯಾ ಮಾನವ ಮೂರ್ಖಾ" ಎಂದಿದ್ದರೆ ಮಾನವನ ಅಂಧತ್ವ ಪರಿಹಾರಗೊಂಡು ವಿವೇಚನೆ ಮಾಡುವಂತಾಗುತಿತ್ತು ಎಂದು ನುಡಿದು ಪಶು ಸಂಗೋಪನೆಯ ಮಹತ್ವವನ್ನು ವಿವರಿಸಿದರು.

ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳ ಧರ್ಮ ಕಾರ್ಯವನ್ನೂ ಜನ ಸೇವೆ, ಕಲೆ ಸಾಹಿತ್ಯ ಪ್ರೇಮ, ಅವುಗಳಿಗೆ ನೀಡುವ ನೆರವನ್ನೂ ಶ್ಲಾಘಿಸಿದರು. ಆಹಾರಾಭಾವ ನೀಗಿಸುವ ಶಕ್ತಿ ರೈತನೊಬ್ಬನಲ್ಲೇ ಇರುವುದೆಂದು ಹೇಳಿದ ಅವರು ಈ ಸಂಬಂಧದಲ್ಲಿ ರೈತ ಬಾಂಧವರಲ್ಲಿ ಉತ್ತೇಜನ ಮಾಡುವಂತಹ ಸಾಹಿತ್ಯವನ್ನು ಸಾಹಿತಿಗಳು ನಿರ್ಮಿಸಬೇಕು ಎಂದು ಕರೆಯಿತ್ತರು.

ತನ್ನ ಅಧ್ಯಕ್ಷ ಭಾಷಣದಲ್ಲಿ ಶ್ರೀ ಕಡೆಂಗೋಡ್ಲು ಅವರು ಖಂಡತುಂಡವಾಗಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಶ್ರೀ ಕ್ಷೇತ್ರದಲ್ಲಿನ ಉತ್ಸವ ಸಮಾರಂಭಗಳಲ್ಲಿ ಸಾಹಿತ್ಯೋತ್ಸವಕ್ಕೂ ಎಡೆ ಮಾಡಿಕೊಟ್ಟು ಧರ್ಮ ಪ್ರಸರಣದ ಮುಖ್ಯ ಸಾಧನವಾದ ಸಾಹಿತ್ಯಕ್ಕೆ ದೊರೆಯಬೇಕಾದ ಸ್ಥಾನವನ್ನು ದೊರಕಿಸಿದ್ದನ್ನು ಪ್ರಶಂಸಿಸಿದರು. ವಾಙ್ಮಯವೊಂದು ಅಕ್ಷಯ ನಿಧಿಯೆಂದು ಉಲ್ಲೇಖಿಸಿದ ಅವರು ಅದಕ್ಕೆ "ಕ್ಷಯಮಣವಿಲ್ಲ ಕೇಳ್ದ ಕಡೆಗಂಡವನಾವನು ಮಿಲ್ಟನಲ್ ಅದಕ್ಷಯ ನಿಧಿ ತಾನೆ, ತನ್ನನೊಸೆದೋರಿಗ-ಪಂಗಿರದಿಲ್ಲೆನಿಪ್ಪ ವಾಙ್ಮಯಂ" ಎಂದು ಇದು ತ್ರಿಕರಣಕ್ರಿಯೆಯಲ್ಲಿ ಸರಿಯಾಗಿ ಸಾರ್ಥಕವಾಗಿದೆಯೆಂದರು.

ಸಾಹಿತ್ಯ-ಜೀವನದ ಮೇಲೆ ಅವರು ಮುಂದೆ ಬೆಳಕು ಬೀರಿ, ಅನೂಚಾನವಾಗಿ ಬೆಳೆದು ಬಂದ ಸಾಹಿತ್ಯ ರಾಶಿಯ ಪಾರಂಪರ್ಯವಿದ್ದೂ ಜೀವನಾದರ್ಶಗಳನ್ನು ಉದ್ಯೋತಿಸುವ ಪುರಾಣ ಕಾವ್ಯಗಳಿದ್ದೂ ನೀತಿ-ಅನೀತಿಗಳನ್ನು ತಿಳಿಸುವ ಶಾಸ್ತ್ರ ಸಮುಚ್ಚಯವಿದ್ದೂ ಸತ್ಯ, ಸಮತೆ, ಶಾಂತಿ, ಸಹನೆ, ಜೀವಕಾರುಣ್ಯ, ವಿಶ್ವಬಾಂಧವ್ಯಗಳನ್ನು ಬೋಧಿಸುವ ವಾಙ್ಮಯ ವಿಕಾಸವಿದ್ದೂ ವಿಶ್ವ ಸಮಾಜ ಜೀವನದ ವೈಷಮ್ಯಗಳೂ ಅಸಂಗತಿ ವಿಸಂಗತಿಗಳೂ ನಿವಾರಿತವಾಗುವ ಬದಲು ಅವುಗಳ ಸ್ವರೂಪಗಳೂ ವಿಧಾನಗಳೂ ಭಿನ್ನವಾಗುತ್ತಿರುವಂತೆ ಮಾತ್ರ ಭಾಸವಾಗುತ್ತಿದೆ. ಇದಕ್ಕೆ ಕಾರಣವೇನು? ಸಾಹಿತ್ಯವೊಂದರಿಂದಲೇ ಸಕಲೇಷ್ಟಾರ್ಥ ಸಿದ್ಧಿಯಾಗಲಾರದು. ಮನುಷ್ಯನ ಕ್ರಿಯಾಶಕ್ತಿ ಬಹು ಮುಖವಾಗಿದೆ. ಉತ್ತಮ ಲಕ್ಷಣಗಳನ್ನು ಹೊಂದಿದ ಸ್ವಲ್ಪಾಂಶ ಸಾಹಿತ್ಯವು ಉನ್ನತೋನ್ನತ ಮಾರ್ಗದರ್ಶನ ನೀಡುವುದು ನಿಜ. ಆದರೆ ಇದನ್ನು ಕಾಣುವವರೇ ಅಪರೂಪ. ಸಾಹಿತ್ಯ ಜೀವನದೊಂದಿ

(ಹತ್ತನೇ ಪುಟ ನೋಡಿರಿ)

REMEMBER THE JAWAN
CONTRIBUTE LIBERALLY ON
ARMED FORCES FLAG DAY
( DECEMBER 7 )
FOR THE WELFARE OF EX-SERVICEMEN AND
THEIR FAMILIES

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428
ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಏಶ್ಯನ್ ರಾಷ್ಟ್ರಗಳಲ್ಲಿ

# ಜನಸಂಖ್ಯಾ ಅಧ್ಯಯನದಲ್ಲಿ ಆಸಕ್ತಿ

ಬೊಂಬಾಯಿಯಲ್ಲಿ ಜನಗಣನಾ ಸಂಬಂಧದ ಉಚ್ಚ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರವೊಂದಿದೆ. ಅಂತಾರಾಷ್ಟ್ರೀಯ ಸಹಕಾರದಿಂದ ಏಶ್ಯನ್ ದೇಶಗಳು ತಮ್ಮ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬಲ್ಲವು ಎಂಬುದಕ್ಕೆ ಈ ಕೇಂದ್ರವೊಂದು ನಿದರ್ಶನ.

೧೯೫೭ರಲ್ಲಿ ಸರ್ ದೋರಾಬಜಿ ಟಾಟ ಟ್ರಸ್ಟ್ ಮತ್ತು ಸಂಯುಕ್ತ ರಾಷ್ಟ್ರ ಸಂಘದ ಸಹಕಾರದಿಂದ ಭಾರತ ಸರಕಾರವು ಈ ಕೇಂದ್ರವನ್ನು ಸ್ಥಾಪಿಸಿತು. ಇದೊಂದು ಪ್ರಾದೇಶಿಕ ಸಂಸ್ಥೆಯಾಗಿದ್ದು ಸಂಯುಕ್ತ ರಾಷ್ಟ್ರ ಸಂಘದ ಏಶ್ಯಾ ಮತ್ತು ದೂರಪೂರ್ವ ಸಂಬಂಧೀ ಆರ್ಥಿಕ ಕಮಿಶನ್‌ನ ಸದಸ್ಯ ದೇಶಗಳ ಸೇವೆ ಮಾಡುತ್ತಿದೆ. ಈ ಕೇಂದ್ರದ ಮುಖ್ಯ ಗುರಿಗಳು ಇವು:

೧. ಪ್ರತಿ ದೇಶದಲ್ಲಿಯೂ ಸರಕಾರ ಮತ್ತು ವಿಶ್ವವಿದ್ಯಾಲಯಗಳ ಮೂಲಕ ಜನಸಂಖ್ಯಾ ಸಂಬಂಧದ ಅಧ್ಯಯನ ಕ್ರಮಗಳನ್ನು ಕಾರ್ಯಾನ್ವಿತಗೊಳಿಸುವುದಕ್ಕಾಗಿ ಸಾಕಷ್ಟು ತಿಳುವಳಿಕೆಯನ್ನು ಹೊಂದಿರುವ ಮತ್ತು ಇತರರಿಗೆ ಜನಗಣನಾ ಕಾರ್ಯದ ಶಿಕ್ಷಣವನ್ನು ನೀಡಬಲ್ಲ ವ್ಯಕ್ತಿಗಳನ್ನು ತಯಾರಿಸುವುದು.

೨. ಸಂವೃದ್ಧತೆ, ಕುಟುಂಬ ನಿಯಂತ್ರಣ, ದೇಶ್ಯಾಂತರ ಗಮನ, ನಗರ-ಆಯೋಜನ, ಆರ್ಥಿಕ ವಿಕಾಸಗಳಿಗೂ ಜನಗಣನೆಗೂ ಇರುವ ಸಮಸ್ಯೆಗಳನ್ನು ತಿಳಿದುಕೊಳ್ಳುವುದು. ಹಾಗೂ

೩. ಏಶ್ಯನ್ ದೇಶಗಳಿಗೆ ಉತ್ತೇಜಕವಾದ ಇನ್ನಿತರ ವಿಷಯಗಳನ್ನು ಅಧ್ಯಯನ ಮಾಡುವುದು.

ಜನಗಣನೆ ಎಂದರೇನು? ಕೇಂದ್ರದ ಉಪನಿರ್ದೇಶಕ ಡಾ। ಕೆ. ಸಿ. ಜಕಾರಿಯಾರವರು ಹೀಗೆ ಹೇಳಿದ್ದಾರೆ:—

'ಜನಸಂಖ್ಯೆಯ ಅಧ್ಯಯನವೇ ಜನಗಣನ. ದೇಶದಲ್ಲಿ ಎಷ್ಟು ಜನರು ವಾಸಿಸುತ್ತಾರೆ, ಜನಸಂಖ್ಯೆಯು ಯಾವ ವೇಗದಲ್ಲಿ ಬೆಳೆಯುತ್ತದೆ, ಅದರ ಪ್ರಸಾರದ ಸಾಂದ್ರತೆ ಹೇಗೆ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಎಷ್ಟು ಸಮಯದಲ್ಲಿ ಹೋಗುತ್ತದೆ, ಮತ್ತು ಜನಸಂಖ್ಯೆಯ ಹೆಚ್ಚಳ ಹಾಗೂ ಅದರ ವ್ಯತಿಷ್ಟಗಳ ಮೇಲೆ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗಳ ಪರಿಣಾಮ ಹೇಗೆ ಬೀಳುತ್ತದೆ ಎಂಬುದನ್ನು ಕಂಡುಕೊಳ್ಳಲು ಜನಗಣನೆಯು ಸಹಾಯಕವಾಗಿದೆ."

ಕೇಂದ್ರವು ಸ್ಥಾಪಿತವಾದ ಬಳಿಕ ಇಲ್ಲಿ ಇದುವರೆಗೆ ಭಾರತ, ಘಾನಾ, ಗಿನಿ, ಅಫಘಾನಿಸ್ತಾನ, ಬರ್ಮಾ, ಸಿಂಹಳ, ಚೀನ ಪ್ರಜಾರಾಜ್ಯ, ಹಾಂಗ್‌ಕಾಂಗ್, ಇಂಡೋನೇಶಿಯಾ, ಇರಾನ, ಜಪಾನ್, ದಕ್ಷಿಣ ಕೊರಿಯಾ, ಲಾವೋಸ್, ನೇಪಾಲ್, ಪಾಕಿಸ್ತಾನ, ಫಿಲಿಪ್ಪಾಯಿನ್ ಮತ್ತು ಥ್ಯಾಲೇಂಡ್—ಹೀಗೆ ೧೯ ದೇಶಗಳ ೧೨೩ ವಿದ್ಯಾರ್ಥಿಗಳಿಗೆ ಜನಗಣನೆಯ ಸಂಬಂಧದ ವಿಶೇಷ ಶಿಕ್ಷಣವನ್ನು ಕೊಡಲಾಯಿತು.



ಬೊಂಬಾಯಿಯ ಜನಸಂಖ್ಯಾ ಸಂಸ್ಥೆಯು ಸಹಕಾರದಿಂದಲೇ ಏಶ್ಯನ್ ದೇಶಗಳ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು ಎಂದು ಚರ್ಚಿಸುತ್ತಿದ.

ಇವರಲ್ಲಿ ಅಧಿಕಾಂಶ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಗಿಸಿದ್ದಾರೆ. ಸ್ವದೇಶಗಳಿಗೆ ಮರಳಿದ್ದಾರೆ. ಅಲ್ಲಿ ತಂತಮ್ಮ ಸರಕಾರದ ಜನಗಣನೆ ಮತ್ತು ಯೋಜನಾ ಸಂಬಂಧಿ ಮಂತ್ರಾಲಯದಲ್ಲಿ ಅಂಕೆ ಸಂಖ್ಯೆ ಹಾಗೂ ಆರ್ಥಿಕ ವಿಭಾಗಗಳಲ್ಲಿ ಹಾಗೂ ಇನ್ನಿತರ ಸರಕಾರಿ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಪೆನ್ಸಿಲ್ವೇನಿಯಾ ವಿಶ್ವ ವಿದ್ಯಾಲಯದ ಜನಸಂಖ್ಯಾ ಸಂಬಂಧಿ ಅಧ್ಯಯನ ಕೇಂದ್ರದ ಅನುಸಂಧಾನ ನಿರ್ದೇಶಿಕೆ ಡಾ। ರೊಡೊರೋಥೀ ಎಸ್. ದಾಮಸ್‌ರನ್ನು ಬೊಂಬಾಯಿ ಕೇಂದ್ರದ ಕಾರ್ಯಕ್ರಮ ತಯಾರಿಸುವಂತೆ ಸಂಯುಕ್ತ ರಾಷ್ಟ್ರ ಸಂಘವು ಕೇಳಿಕೊಂಡಿತು. ಇವರು ಕಾರ್ಯಕ್ರಮ ಹಾಗೂ ಅನುಸಂಧಾನ ಕಾರ್ಯಕ್ರಮವನ್ನು ತಯಾರಿಸುವಲ್ಲಿ ತುಂಬ ನೆರವಿತ್ತರು. ಶ್ರೀಮತಿ ಡೊರೋಥೀ ಹೇಳುತ್ತಾರೆ: "ಬೊಂಬಾಯಿಯ ಜನಗಣನಾ ಕಾರ್ಯ ಕೇಂದ್ರವು ಏಶ್ಯದಲ್ಲಿ ಏಕಮಾತ್ರವಾದುದ. ಹಾಗಿದ್ದರೂ ಪ್ರಪಂಚದ ಇತರ ಮಾದರಿಯ ಶಿಕ್ಷಣ ಕೇಂದ್ರಗಳಲ್ಲಿ ಇದು ಪ್ರಮುಖ ಸ್ಥಾನವನ್ನು ಪಡೆದಿದೆ'.

ಬೊಂಬಾಯಿಯ ಜನಸಂಖ್ಯಾ ಕೇಂದ್ರವು ಅಮೆರಿಕದ ಜನಸ್ವಾಸ್ಥ್ಯ ಸೇವಾ ಸಂಬಂಧದ ಅಂಕ ಸಂಖ್ಯೆಗಳ ರಾಷ್ಟ್ರೀಯ ಕೇಂದ್ರವೊಂದರ ಸಹಕಾರದಿಂದ ಜನಸಂಖ್ಯೆಯ ಪರಿಶೀಲನ ನಡೆಸಲು ನಾಲ್ಕು ವರ್ಷಗಳ ಒಂದು ಯೋಜನೆಯನ್ನು ಆರಂಭಿಸಿದೆ. ಬೊಂಬಾಯಿಯಲ್ಲಿರುವ ಅಮೆರಿಕದ ಮಹಾ ವಾಣಿಜ್ಯದೂತ ಶ್ರೀ ಮಿಲ್ಟನ್ ಸಿ. ರೆವಿನ್‌ಕರ್‌ರು ಕೇಂದ್ರಕ್ಕೆ ರೂ ೩,೭೬,೦೦೦ ರೂಪಾಯಿಗಳ ದಾನವನ್ನು ಘೋಷಿಸಿದ್ದು ಇದರಲ್ಲಿ ಇದುವರೆಗೆ ರೂ ೬೩,೦೦೦ವನ್ನು ಕೊಟ್ಟಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆನ್ನಡಿ ಸ್ಮಾರಕ ಪಾರಿತೋಷ ನಿಧಿಯನ್ನು ಏರ್ಪಡಿಸಲು ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು (ಬಲಗಡೆ) ರೂ. 10,000ದ ಚೆಕ್ಕೊಂದನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ। ಬಿ. ಡಿ. ಲಾಠೀಯವರಿಗೆ ಒಪ್ಪಿಸುತ್ತಿರುವುದು.

ಸಂಸ್ಥೆಯು ಭಾರತದಲ್ಲಿ ಮೊತ್ತಮೊದಲಿಗ ತನ್ನ ಯೋಜನೆಯನ್ನು ಕಾರ್ಯಗತಕ್ಕೆ ತರುವುದು. ಸಂಶೋಧಕರು ಭಾರತದ ಜನಸಂಖ್ಯೆಯ ಒಂದು ಕಾಲ್ಪನಿಕ ಮಾದರಿಯನ್ನು ತಯಾರಿಸುವರು. ವ್ಯಕ್ತಿಗಳ ಸಂಖ್ಯೆ ವಿವಾಹದ ವಯಸ್ಸು, ಸಮೃದ್ಧಿ, ಜನನಾಂತರಾವಧಿ ಮೊದಲಾದುವನ್ನು ಕುರಿತು ಬಹಳಷ್ಟು ತಿಳುವಳಿಕೆ

### ಅಜ್ಞಾನ ನಿವಾರಣೆಯಲ್ಲಿ

# ಅಮೆರಿಕೆಯ ಸಂಪೂರ್ಣ ಸಹಕಾರ

ಎರಡು ತಿಂಗಳು ಮೊದಲು ವಾಶಿಂಗ್‌ಟನ್‌ನ ಸ್ಮಿಥ್ ಸೋನಿಯನ್ ಇನ್ಸ್ಟಿಟ್ಯೂಟ್‌ನ ೨೦೦ನೇಯ ವಾರ್ಷಿಕೋತ್ಸವ ನಡೆಯಿತು. ಇದರಲ್ಲಿ ೮೦ ದೇಶದ ವಿದ್ವಾಂಸರು ಒಟ್ಟುಗೂಡಿದ್ದರು. ಜಗತ್ತಿನ ಅಜ್ಞಾನ ಮತ್ತು ನಿರಕ್ಷರತೆಗಳನ್ನು ದೂರ ಮಾಡಲು ಸಂಘಟಿತ ಪ್ರಯತ್ನ ನಡೆಯಬೇಕು ಎಂದು ಅಧ್ಯಕ್ಷ ಜಾನ್ಸನ್ ಕರೆಯಿತ್ತರು.

ಜೇಮ್ಸ್ ಸ್ಮಿಥ್‌ಸನ್ ಅಮೆರಿಕೆಯ ಮೊದಲ ಪರೋಪಕಾರಿ ವ್ಯಕ್ತಿ. ಮನುಷ್ಯನ ಜ್ಞಾನವೃದ್ಧಿ ಮತ್ತು ಪ್ರಸಾರ ನಡೆಯಲಿ. ಅವರು ಈ ಸಂಸ್ಥೆಯನ್ನು ಸ್ಥಾಪಿಸಿದರು. ಇದಕ್ಕಾಗಿ ತನ್ನ ಸರ್ವಸ್ವವನ್ನೂ ಧಾರೆಯೆರೆದರು. ಅಧ್ಯಕ್ಷ ಜಾನ್‌ಸನ್ನರ ಭಾಷಣದ ಕೆಲವಂಶಗಳು ಇವು:—

ನಮ್ಮ ದೇಶ ಕಟ್ಟಿದವರು ಕ್ರಾಂತಿಕಾರಿ ಶಕ್ತಿಯಲ್ಲಿ ವಿಶ್ವಾಸವಿಟ್ಟಿದ್ದರು. ದೇಶವು ಜ್ಞಾನಪ್ರಸಾರದ ವ್ರತಧರಿಸಿದಂದೇ ಕ್ರಾಂತಿಯಾರಂಭವಾಗುವುದೆಂದವರು ತಿಳಿದಿದ್ದರು.

ಜೀವನದ ಆಕಸ್ಮಿಕ ಘಟನೆಗಳು ಪ್ರಶಂಸನೀಯವಾಗಿವೆ. ಇದರಿಂದಾಗಿಯೇ ನಾನು ಅಧ್ಯಾಪಕನಾಗಿ ವೃತ್ತಿ ಆರಂಭಿಸಿದೆ. ನನ್ನ ಕಾಲದಲ್ಲಿ ಅಮೇರಿಕೆಯ ವಿಷಯಕ ನಮ್ಮ ಆಶೆಗಳಿಗೆ ಭದ್ರ ಪಂಚಾಂಗ ಶಿಕ್ಷಣವೆಂದು ತಿಳಿದುಕೊಂಡಿದ್ದೆವು. ಇದರಿಂದಲೇ ನಮ್ಮ ಸಕಲ ಮನೋರಥಗಳು ಈಡೇರುವವು. ಬಡತನದ ನಿರ್ಮೂಲನ, ಆರೋಗ್ಯ—ಸುಖಸಾಧನೆ, ಅಪರಾಧ ನಿವಾರಣೆ, ನಗರ-ಹಳ್ಳಿಗಳನ್ನು ಸುಂದರವಾಗಿಡುವುದು—ಹೀಗೆ ನಮ್ಮೆಲ್ಲ ಆಕಾಂಕ್ಷೆಗಳ ಮೂಲಪಡಗಿರುವುದು ಶಿಕ್ಷಣದಲ್ಲಿ.

ಆದರೆ, ಜೇಮ್ಸ್ ಸ್ಮಿತ್‌ಸನ್ ಹೊಸ ಕ್ರಾಂತಿಯ ಕಳೆಯೂದಿದರು. ಅವರು ಜನರಲ್ಲಿ ಜ್ಞಾನ ವೃದ್ಧಿ ಮತ್ತು ಪ್ರಚಾರದ ಮಾತೆತ್ತಿದರು. ಅಮೇರಿಕೆಯಲ್ಲಿ ಮಾತ್ರವಲ್ಲ, ಪಾಶ್ಚಾತ್ಯ ದೇಶಗಳಲ್ಲಿ ಮಾತ್ರವಲ್ಲ, ಇಡಿಯ ಪ್ರಪಂಚದಲ್ಲಿನ ಜನರಿಗೆ ಸಂಬಂಧಿಸಿ ಅವರು ಈ ಮಾತೆತ್ತಿದರು. ಇಂದು ಪ್ರತಿ ದೇಶದಲ್ಲಿಯೂ ವೈಜ್ಞಾನಿಕ ಕ್ರಾಂತಿಯ ಜ್ವಾಲೆ ಹಾಡಿದೆ. ಶಾಸ್ತ್ರಾರ್ಥಗಳಿಗಿಂತ ವಿಚಾರ ಶಾಂತಿಯು ಅಧಿಕ ಚಿರಸ್ಥಾಯಿಯಾಗುವುದೆಂದು ಜನವರಿತಿದೆ. ನಮ್ಮ ವಿದೇಶ ನೀತಿ ಸಂಬದ್ಧ ಆಚರಣೆಯು ನಮ್ಮ ವರ್ಗಗಳಲ್ಲಿ ಪಾಠ್ಯಕ್ರಮಗಳಿಂದ ಹೊರಗೆ ಹೋಗುವುದಿಲ್ಲ. ಜ್ಞಾನವನ್ನು ಬೇರೆಯವರಿಗೆ ಹಂಚುವುದರಿಂದ ಅದು ಹೆಚ್ಚುತ್ತದೆ. ಜ್ಞಾನ ಸಂಪನ್ನ ದೇಶಗಳಿಗೆ ಮಾತ್ರ ನಾವು ಸಹಾಯ ಮಾಡಿದರೆ ಸಾಲದು. ಇಂದಿಗೂ ಕೆಲವೇ ಜನರ ಕೈಗೊಂಬೆಯಾಗಿ ಜ್ಞಾನ ಉಳಿದಿರುವಲ್ಲಿಗೂ ನಾವು ಸಹಾಯ ನೀಡಬೇಕು.

ಇಂದು ೭೦ಕೋಟಿಗಿಂತಲೂ ಅಧಿಕ ಜನರು ಅಜ್ಞಾನಾಂಧಕಾರದಲ್ಲಿ ತೊಳಲಾಡುತ್ತಿದ್ದಾರೆ (ಜಾಗತಿಕ ಸಂಖ್ಯೆಯಲ್ಲಿ ಹತ್ತರಲ್ಲಿ ನಾಲ್ಕು ಜನರು) ಇದನ್ನು ಸಂಗೊಳಿಸಲು ನಾವು ಮುಂದಾಗದೆ ಇದ್ದರೆ ಈ ಅಂಧಕಾರ ನಮ್ಮನ್ನೂ ಕಬಳಿಸಬಹುದು. ಅಮೇರಿಕೆಯು ಜ್ಞಾನ ಪ್ರಸಾರ ಕಾರ್ಯದಲ್ಲಿ ಮುಂದಡಿಯಿಡಲು, ಆರ್ಥಿಕ ನೆರವು ನೀಡಲು ಸಿದ್ಧವಿದೆ. ನಾವು ಈಗಾಗಲೇ ಈ ಸಂಬಂಧದಲ್ಲಿ ಹಲವಾರು ಕಾರ್ಯಕ್ರಮಗಳನ್ನು ತೊಡಗಿದ್ದೇವೆ. ಇನ್ನೂ ನಾವು ಮಾಡಬಹುದಾದುದು, ಮಾಡಬೇಕಾದುದು ಬಹಳಷ್ಟಿದೆ. ಇದಕ್ಕಾಗಿಯೇ ನಾನು ವಿಶ್ವವ್ಯಾಪಿ ಶಿಕ್ಷಣ ಸಂಬಂಧ ಕಾರ್ಯಕ್ರಮದ ಒಂದು ವ್ಯಾಪಕವಾಗೂ ದೀರ್ಘ ಕಾಲೀನ ಯೋಜನೆಯನ್ನು ತಯಾರಿಸುವ ಆದೇಶವಿತ್ತಿದ್ದೇನೆ. ಅಂತಾರಾಷ್ಟ್ರೀಯ ಶಿಕ್ಷಣದಲ್ಲಿ ಆಸಕ್ತಿ ವಹಿಸಿರುವ ವಿದೇಶ ಮಂತ್ರಿ ಮತ್ತು ಆರೋಗ್ಯ—ಜನ ಕಲ್ಯಾಣ ಮಂತ್ರಿಗಳು ಈ ಸಮಿತಿಯಲ್ಲಿರುವರು. ಸರಕಾರಿ-ಬೇ-ಸರಕಾರಿ ವ್ಯಕ್ತಿಗಳು ಇದರ ಸದಸ್ಯರಾಗುವರು.

ಶಿಕ್ಷಣದ ಪ್ರತಿರಂಗದಲ್ಲಿಯೂ ನಾವು ಮುಂದ ವರಿಯಬೇಕು. ಇಲ್ಲಿ ಪ್ರಪಂಚದ ಎಲ್ಲ ದೇಶಗಳ ವಿದ್ವಾಂಸರು ಬಂದು ಅಧ್ಯಯನ ಮಾಡುವ, ಮಾಡಿಸುವ ಕೇಂದ್ರವನ್ನು ತೆರೆಯುವ ಸ್ವಪ್ನ ಕೆಲವರದ್ದು. ನಾವೂ ಇದಕ್ಕೆ ನೆರವಾಗಬೇಕು. ಶಾಲೆ-ಶಾಲೆಗಳ ನಡುವೆ ಸಹಯೋಗ ಉಂಟು ಮಾಡಬೇಕು. ಮಕ್ಕಳು ಪರಸ್ಪರರನ್ನು ತಿಳಿದುಕೊಳ್ಳುವಂತಾಗಬೇಕು.

ನಮ್ಮ ದೇಶದ "ಮಹಾ ಸಮಾಜ ಸ್ವಪ್ನ" ಅಮೇರಿಕೆಗೆ ಮಾತ್ರ ಸೀಮಿತವಾಗಿರಬಾರದು. ನಾವು ಇಡಿಯ ವಿಶ್ವಕ್ಕೆ ಆಮಂತ್ರಣವೀಯಬೇಕು. ಎಲ್ಲರೂ ಒಂದಾಗಿ ಹೊಸ ಮತ್ತು ಶ್ರೇಷ್ಠ ಸಾಹಸಪೂರ್ಣ ಕಾರ್ಯಕ್ರಮವನ್ನು ಆರಂಭಿಸಬೇಕು.

೧. ವಿಕಾಸೋನ್ಮುಖ ದೇಶಗಳ ಶಿಕ್ಷಣ ಪ್ರಯತ್ನಗಳಿಗೆ ಸಹಾಯ ನೀಡುವುದು.

೨. ನಮ್ಮ ಶಾಲೆ—ವಿಶ್ವವಿದ್ಯಾಲಯಗಳಲ್ಲಿ ಪ್ರಾಪಂಚಿಕ ಜ್ಞಾನವನ್ನು ಹೆಚ್ಚಿಸುವುದು.

೩. ದೇಶದಿಂದ ಹೊರಗೆ ಹೋಗಿ ಕೆಲಸ ಮಾಡುವ ವಿದ್ಯಾರ್ಥಿ ಮತ್ತು ಅಧ್ಯಾಪಕರೊಡನೆ ಸಂಪರ್ಕ ಹೆಚ್ಚಿಸಿಕೊಳ್ಳುವುದು.

೪. ಪುಸ್ತಕ, ವಿಚಾರ, ಕಲೆ, ವಿಜ್ಞಾನಗಳ ಸ್ವಾಭಾವಿಕ ಪ್ರಸಾರವನ್ನು ತಡೆಗಟ್ಟದಿರುವುದು.

೫. ಮಾನವ ಸಮಾಜದ ಸಮಾನ ಸಮಸ್ಯೆಗಳನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸುವುದು.

ಈಯೆಲ್ಲಾ ವಿಷಯಗಳಲ್ಲಿ ಅಮೇರಿಕೆಯು ಪೂರ್ಣ ಹೃದಯದಿಂದ ಕೆಲಸ ಮಾಡುವುದು. ಮುಂದಿನ ಜನವರಿ ತಿಂಗಳೊಳಗೆ ಕಾಂಗ್ರೆಸಿನ ಮುಂದೆ ಸರಕಾರದ ನೀತಿಯನ್ನು ನಿರೂಪಿಸಲಾಗುವುದು.

ಇತಿಹಾಸದ ರಚನೆಯು ಮನುಷ್ಯನು ತ್ತವನ ವಿಚಾರಗಳಿಂದ ರಚಿತವಾಗುತ್ತದೆ. ನಾವು ಮಾನವನ ಜ್ಞಾನ ಪ್ರಕಾಶದಲ್ಲಿ ಸುಖಶಾಂತಿಯಿಂದಿರುವಂತೆ ಮಾಡಬಲ್ಲೆವು; ಇಲ್ಲವೇ ದುಃಖ ಸಾಗರದಲ್ಲೇ ಅವನನ್ನು ಅದ್ದ ಬಲ್ಲೆವು. ನಾವು ಪ್ರಾಪಂಚಿಕ ಜ್ಞಾನದಿಂದ ಅನಭಿಜ್ಞರಾಗಿ ಉಳಿಯಲಾರೆವು. ಆದುದರಿಂದ ಅದರ ಉಪಶಯನ ನಮ್ಮ ಕರ್ತವ್ಯ.

ಜಾನ್ಸನ್

ಒಬ್ಬ ಭಾರತೀಯ ಪುಸ್ತಕಾಲಯದ ಅಧಿಕಾರಿಯು ಅಮೇರಿಕೆಯ ಮಕ್ಕಳಿಗೆ ಭಾರತದ ಕತೆಗಳನ್ನು ಹೇಳುತ್ತಾನೆ. ಪರಸ್ಪರ ಪರಿಚಯ ಇದರಿಂದ ಹೆಚ್ಚಾಗುತ್ತದೆ.

---

ಯನ್ನು ಗಳಿಸುವರು. ಮಾದರಿ ಜನಸಂಖ್ಯೆ ಮತ್ತು ವಿಭಿನ್ನ ಪರಿಸ್ಥಿತಿಗಳನ್ನು ವಿವೇಚಿಸುವರು. ಈ ನಿಷ್ಕರ್ಷೆಯ ವಿಶ್ಲೇಷಣೆಯು ವಿದ್ಯುದ್ಗಣನಾಯಂತ್ರಗಳ ಸಹಾಯದಿಂದ ನಡೆಯುವುದು.

ಕೇಂದ್ರದ ನಿರ್ದೇಶಕ ಶ್ರೀ ಎಸ್. ಪಿ. ಜೈನರು ಹೇಳಿದ್ದಾರೆ: ಈ "ಯೋಜನೆಯು ಜನಸಂಖ್ಯೆಯನ್ನು ನಿಯಂತ್ರಿಸುವ ಸರಕಾರಿ ನೀತಿಯೇನೆಂದು ನಿರ್ಧರಿಸುವ ದೃಷ್ಟಿಯಿಂದಲೂ ಬಹಳ ಮಹತ್ವಪೂರ್ಣವಾಗಿದೆ. ಗಣನಾಯಂತ್ರಗಳಿಂದ ಅನುಸಂಧಾನ ಮಾಡುವ ಕಾರಣ ಜನಸಂಖ್ಯೆಯ ವಿವಿಧ ರೀತಿಯ ಸಮಸ್ಯೆಗಳನ್ನು ಕೆಲವೇ ದಿನಗಳಲ್ಲಿ ನಿಶ್ಚಯಿಸುವುದು ಸಾಧ್ಯವಾಗುವುದು."

# ಧರ್ಮ-ಸಾಹಿತ್ಯ ಸಮ್ಮೇಳನಗಳು

(ಏಳನೇ ಪುಟದಿಂದ)

ಗೆ ಕಣ್ಣುಮುಚ್ಚಾಲೆಯಾಡುವುದಿಲ್ಲ. ಬಾಳುವೆಯೇ ಆದರೊಡನೆ ಆಡಿದಂತೆ ತೋರುತ್ತದೆ. ಈ ಕಾರಣದಿಂದ ಸಾಹಿತ್ಯದ ನೋಟವು ಮುಂದಾಗಿದ್ದು ಜೀವನದ ಗತಿ ಹಿಂದಾದಂತೆ ತೋರುವ ಹಲವಾರು ಪ್ರಸಂಗಗಳು ಹುಟ್ಟುತ್ತವೆ. ಇಂತಹ ಪ್ರಸಂಗಗಳು ಕಡಿಮೆಯಾದಷ್ಟು ಸಾಹಿತ್ಯ ಪ್ರಭೆ ಹೆಚ್ಚುತ್ತದೆ ಎಂದರು.

ನಿಯತಕಾಲಿಕ ಯೋಜನೆಗಳ ತಾಳಲಯಗಳಿಗೆ ಅನುಸಾರವಾಗಿಯೇ ನಿರ್ಧಿಷ್ಟ ಪ್ರಮಾಣದ ಉತ್ತಮ ಮೂಲ ಸಾಹಿತ್ಯವನ್ನು ನಿರ್ಮಿಸುವುದಕ್ಕಾಗುವುದಿಲ್ಲ. ಸ್ವಯಂ ಪ್ರಕಾಶವಾದ ಬಹುಕಾಲ ಬಾಳಬಲ್ಲ ಉತ್ತಮ ಕೃತಿಗಳು ಯೋಜನಾಬದ್ಧವಾಗಿ ಬರುವದೇ ಇಲ್ಲ— ಭಾವನಾ ಬದ್ಧವಾಗಿ ಬರುತ್ತವೆ. ನಿರ್ಮಾತೃವಿನ ಹೃದಯ ಸಂಸ್ಕಾರದಿಂದ ಸಮಾಜದ ಪುಣ್ಯದಿಂದ ಅನಿಯತಕಾಲಿಕವಾಗಿ ಉದ್ಭವಿಸುತ್ತವೆ. ಅವುಗಳ ರಸತನ್ನಾಸ್ವಾದಿಸಿ ಜೀವನವನ್ನು ಸಂಸ್ಕಾರಗೊಳಿಸಿದಷ್ಟು ಅಂತಹ ರಚನೆಗಳ ಅವಕಾಶ ಹೆಚ್ಚುತ್ತದೆ. ಅದರಿಂದ ಜೀವನಕ್ಕಾಗುವ ಲಾಭವು ಅಧಿಕವಾಗುತ್ತದೆ ಎಂದರು.

ಸಾಹಿತ್ಯ ನಿರ್ಮಾತೃವಿನೊಡನೆ ವಾಚಕನಿಗೆ ಸಹ ಸಂವೇದನೆಯಿರಬೇಕು. ಎಂದರೆ ಸಾಹಿತ್ಯಿಕ ಮತ್ತು ರಸಾಸ್ವಾದಕನ ಹೃದಯಗಳು ಒಂದಾಗಿ ಸಾಹಿತ್ಯದಲ್ಲಿ ಪ್ರಕಟವಾಗುವ ಜೀವಭಾವ ಸಂಸ್ಕಾರದ ಮುದ್ರೆ ವಾಚಕನ ಜೀವನದ ಮೇಲೆ ಬೀಳುವಷ್ಟು ಸಹೃದಯತೆಯು ತೀವ್ರವಾಗಬೇಕು. ಇದರ ಬದಲು ಸಜಿಹ್ವತೆ ಮಾತ್ರವಿದ್ದರೆ ಅದು ಸಾಹಿತ್ಯಕ್ಕೆ ಅಪಚಾರವಾಗುತ್ತದೆ ಎಂದು ಹೇಳಿದ ಅವರು ವಿರೂಪಿತ ಜನ ಜೀವನದಲ್ಲಿ ನಿರೂಪಿತ ಲಕ್ಷಣದ ಸಾಹಿತ್ಯವು ಹೊರಡುವುದಿಲ್ಲ. ಯಂತ್ರದಂತೆ ನಿರ್ದಿಷ್ಟ ಕ್ರಮ ನಿಯಮಗಳಿಂದ ಹೃದಯ ಕೆಲಸ ಮಾಡುವುದಿಲ್ಲ. ಹೃದಯೋತ್ಪಾದಕ ಮತ್ತು ಯಾಂತ್ರಿಕ ವಸ್ತುವಿನಂತೆ ಕಾಲಬಾಧೆಗೆ ಒಳಗಾಗುವುದಿಲ್ಲ. ಹೊಸತೇ ದೊರೆತರೆ ಲೇಸು; ಅದಿಲ್ಲವಾದರೆ ಹಳತಾದರೂ ಸರಿಯೇ ಎಂದರು.

ಸಾಹಿತ್ಯರಸವು ಮಾನವ ಮನೋಧರ್ಮ ಶಾಸ್ತ್ರ ಎಂದು ವಿವರಿಸಿ ಅವರು ಶೃಂಗಾರವು ವೈಯಕ್ತಿಕ ವ್ಯಕ್ತಿ ಉಳ್ಳದು. ವೀರವು ಸ್ವಾಧೀನತೆಯನ್ನು ರಕ್ಷಿಸಿಕೊಳ್ಳುವ ಸಾಮುದಾಯಿಕ ಅಥವಾ ರಾಷ್ಟ್ರೀಯ ಸ್ವಭಾವವನ್ನು ಒಳಕೊಂಡುದು. ಇವೆರಡೂ ಕಾರ್ಯೋತ್ಸಾಹಕ್ಕೆ ಹೇತು. ಉತ್ತಮ ಪ್ರಜೆಯಾಗಿರತಕ್ಕವನಿಗೆ ಇವೆರಡೂ ಅನಿವಾರ್ಯ. ಕರುಣ, ಶಾಂತ ರಸಗಳು ವಿಶ್ವಬಾಂಧವ್ಯ—ಸ್ಥಿತಪ್ರಜ್ಞತೆಗಳಿಗೆ ಆಧಾರ. ಸಾಹಿತ್ಯವು ವ್ಯಕ್ತಿಯನ್ನು ಮರೆತಿಲ್ಲ. ಎಲ್ಲಿ ಎಂತಹ ಗುಣ ಬೇಕು ಎಂದು ತಿಳಿದು ಅದನ್ನು ಅಸ್ಖಲಿತ ವಾಣಿಯಲ್ಲಿ ತಿಳಿಸಿದೆ. ತತ್ಕಾಲ ಅಧಿಕಾರ ಪಡೆದ ನಾಯಕರು ಸಾಹಿತ್ಯದ ಮನೋಧರ್ಮ ಶಾಸನವನ್ನು ತಿದ್ದಲು ಯತ್ನಿಸಿ ನಮಗಿಂದು ಬರಿಯ ಭೀಮಾರ್ಜುನರು ಮಾತ್ರ ಬೇಕು ಎಂದರೆ ಕಷ್ಟ. ಹೀಗಾದರೆ, ಸಾಹಿತ್ಯಕ್ಕೆ ಮಾತ್ರವಲ್ಲ ಸಮಾಜದ, ರಾಷ್ಟ್ರದ ಜೀವನಕ್ಕೂ ಅನ್ಯಾಯವಾಗುತ್ತದೆ. ಈ ಅನ್ಯಾಯದ ಫಲವು ಅತ್ಯಂತ ದಾರುಣವಾಗುವುದು. ಎಂದು ಅಭಿಪ್ರಾಯಪಟ್ಟರು.

ಸಾಹಿತ್ಯದಲ್ಲಿ ಸ್ವಾತಂತ್ರ್ಯವಿರಬೇಕು. ಸಾಹಿತ್ಯ ನಿರ್ಮಾತೃಗಳ ಸರ್ವತೋಮುಖ ಶಕ್ತಿಯನ್ನು ಒಪ್ಪಿಕೊಳ್ಳಬೇಕು. ಇಂತಹುದು ಬೇಡ; ಇದು ಮಾತ್ರಬೇಕು. ಎನ್ನುವುದು ಸರಿಯಲ್ಲ. ಇಂದು ಬೇಡವಾದುದು ನಾಳೆ ಬೇಕಾಗಲೂ ಬಹುದು ಇಂದು ಪ್ರಿಯವಾದುದು ನಾಳೆ ಅಪ್ರಿಯವೂ ಆಗಬಹುದು. ಈ ಅರಿವು ಸಮಾಜದಲ್ಲಿ ಎಷ್ಟು ಬೇಗನೇ ಮೂಡಿಬರುವುದೋ ಅಷ್ಟು ಬೇಗನೆ ಸಾಹಿತ್ಯದ, ಅದರೊಡನೆ ಸಮಾಜದ ಅಭಿವೃದ್ಧಿ ಉಂಟಾಗುವುದು. ಈ ಅರಿವು ಇಲ್ಲದಿದ್ದಲ್ಲಿ ಬೇಡಿಕೆ—ಪೂರೈಕೆಗಳ ನಿಯಮಕ್ಕೆ ಮಾತ್ರ ಒಳಪಟ್ಟು ಸಾಹಿತ್ಯವು ಸಂತೆಯ ಒಡವೆಯಾಗಬಹುದು — ಹೀಗಾಗಬಾರದು— ಎಂದು ಶ್ರೀ ಕಡೆಂಗೋಡ್ಲು ಹಾರೈಸಿದರು.

ಅನಂತರ ಶ್ರೀಗಳಾದ ಹಂ. ಪ. ನಾಗರಾಜಯ್ಯ, ಬಿ. ಎ. ಸನದಿ, ಎಚ್. ಕೆ. ರಂಗನಾಥ್, ಸಿ. ಎನ್. ಮಂಗಳ, ಅ. ನ. ಕೃ., ಬಿ. ಎಸ್. ರೇಣುಕ ಪ್ರಸಾದ್, ಕೆ. ಎಸ್. ಧರಣೇಂದ್ರಯ್ಯ, ಕೈಯ್ಯಾರ ಮತ್ತು ಕುಮಾರಿ ಎಸ್. ವಿಮಲರು ಸಾಹಿತ್ಯದ ವಿವಿಧ ವಿಷಯಗಳ ಕುರಿತಾಗಿ ಭಾಷಣ ಮಾಡಿದರು. ಶ್ರೀ ಜಿ. ಸ್ವಾಮಿನಾಥನ್ ಧನ್ಯವಾದವರ್ಪಿಸಿದರು.

ಶ್ರೀ ಕ್ಷೇತ್ರದ ಲಕ್ಷದೀಪೋತ್ಸವದ ಅಂಗವಾಗಿ ಇತರ ಕಲಾ ಪ್ರದರ್ಶನಗಳೂ ಏರ್ಪಡಿಸಲ್ಪಟ್ಟಿದ್ದುವು. ತಾ. ೧೮ರಂದು ಮಂಗಳೂರಿನ ಯುವಕ ಕಲಾ ಮಂಡಳಿಯವರು 'ಮೋಹ ಪಾಶ'ವೆಂಬ ನಾಟಕವನ್ನು ಅಭಿನಯಿಸಿದರು. ೧೯ರಂದು ಭದ್ರಾವತಿಯ ಮಿತ್ರಕಲಾ ಮಂಡಳಿಯವರು 'ಮಸ್ತಕಾ ಭರಣ'ವನ್ನು ಆಡಿದರು. ತಾ. ೨೦ರಂದು ನಾಗಸ್ವರ ಮತ್ತು ಸಂಗೀತ ವಿದ್ವಾಂಸರ ಕಲಾಗೋಷ್ಠಿ, ದ. ಕ. ಜಿಲ್ಲೆಯ ಕಲಾವಿದರಿಂದ ತಾಳಮದ್ದಲೆ, ಬೆಂಗಳೂರಿನ ಶ್ರೀ ರಾಜರಾಜೇಶ್ವರಿ ನಾಟಕ ಸಭಾದವರಿಂದ 'ಅಶೋಕ ಕುಮಾರ್' ನಾಟಕಗಳು ನಡೆದುವು. ೨೧ರಂದು ಎನ್. ಎಲ್. ಚೆಲುವರಾಜು ಮಂಡಳಿಯವರ ಮತ್ತು ೨೨ರಂದು ಕುಮಾರಿ ಎನ್. ಪ್ರೇಮ ಮಂಡಳಿಯ ಸಂಗೀತ ವಿತ್ತು ತಾ. ೨೩ರಂದು ಶ್ರೀ ಧರ್ಮಸ್ಥಳ ಕ್ಷೇತ್ರದ ಮೇಳದ ಆಟ ನಡೆಯಿತು.

ಹೀಗೆ ಆರು ದಿನಗಳ ನಿರಂತರ ಕಾರ್ಯಕ್ರಮಗಳಲ್ಲಿ ಸಾವಿರಾರು ಜನರು ಭಾಗವಹಿಸಿ ಕೃತಾರ್ಥರಾದರು.



# ಕ್ಷಯರೋಗ ಮಾರಕ ಔಷಧಗಳು

| | |
|---|---|
| ಸ್ಟ್ರೆಪ್ಟೋಮೈಸಿನ್ | .. ಇಂಜೆಕ್ಷನ್ ದ್ವಾರಾ ಕೊಡುವಂಥಾದ್ದು |
| PAS | .. ಬಾಯಿಯಿಂದ ತೆಗೆದುಕೊಳ್ಳುವ ಒಂದು ದ್ರವರೂಪದ ಅಥವಾ ಪುಡಿ ಔಷಧ |
| ಐಸೋನಿಯಾಝಿಡ್ | .. ಬಾಯಿಯಿಂದ ತೆಗೆದುಕೊಳ್ಳುವ ಸಣ್ಣ ಮಾತ್ರೆ |
| ತಿಯಾಸೆಟಝೋನ್ | .. ಬಾಯಿಯಿಂದ ತೆಗೆದುಕೊಳ್ಳುವ ಸಣ್ಣ ಮಾತ್ರೆ |




ಈ ಔಷಧಗಳು ದೇಹದ ರೋಗಗ್ರಸ್ತ ಭಾಗಗಳಲ್ಲಿಯ ಕ್ಷಯ ರೋಗಾಣುಗಳನ್ನು ನಾಶಪಡಿಸುವ ಕಾರ್ಯವೆಸಗುತ್ತವೆ.

ಮೊಹರು ಮಾರಾಟದಿಂದಾಗುವ ನಿಧಿ ಸಂಗ್ರಹವನ್ನು ಬಡ ಕ್ಷಯರೋಗಿಗಳಿಗೆ ಸಹಾಯ ಮಾಡುವುದಕ್ಕಾಗಿ ಈ ಔಷಧಗಳನ್ನು ಕೊಂಡುಕೊಳ್ಳಲು ಉಪಯೋಗಿಸಲಾಗುತ್ತದೆ. ಈ ಚಳವಳದ ಉದ್ದೇಶಗಳಲ್ಲಿ ಇದೊಂದಾಗಿದೆ. ನಿಮ್ಮ ರಾಜ್ಯದ ಟಿಬಿ ಸಮಿತಿಯಿಂದ ಟಿಬಿ ಮೊಹರುಗಳನ್ನು ಕೊಂಡುಕೊಳ್ಳಿರಿ. ಒಂದು ಮೊಹರಿನ ಬೆಲೆ 19 ಪೈಸೆ ಮಾತ್ರ.

ಮೊಹರುಗಳು— ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಮಂಗಳೂರು ಮತ್ತು ಅದರ ಬೇರೆ ಬೇರೆ ಏಜನ್ಸಿಗಳಲ್ಲಿ ದೊರೆಯುತ್ತವೆ.

**16ನೆ ಕ್ಷಯರೋಗ ಮೊಹರು ಮಾರಾಟ ಚಳವಳಿ**

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಏರ್ಪಡಿಸಲಾದುದು)

ಉದಾರ ಸ್ಥಳ ದಾನ:
**Seth Mafatlal Charity Trust, Bombay.**


## ಗ್ರಾಮ ರಕ್ಷಣಾ ಸಭೆ.

ಮರ್ಣೆ— ಮಣಿಪುರ ಪಂಚಾಯಿತ್ತಿನ ಪೂರ್ವವಿಭಾಗಕ್ಕೆ ಸೇರಿದ ಮರ್ಣೆ ಗ್ರಾಮ ಮತ್ತು ಮಣಿಪುರ ಗ್ರಾಮದ ೫ ಕೊಡಂಗಳ, ಕನ... ನಿವಾಸಿಗಳ ಸಾರ್ವಜನಿಕ ಸಭೆಯು ಗ್ರಾಮ ರಕ್ಷಣಾ ಸಮಿತಿಯನ್ನು ಏರ್ಪಡಿಸುವರೆ, ಮಣಿಪುರ ಪಂಚಾಯಿತ್ತಿನ ಉಪಾಧ್ಯಕ್ಷ ಮರ್ಣೆ ಬಾ... ಮಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ಮರ್ಣೆ ಶಾಲೆಯ ಬಳಿ ತಾ. 13-11-6೨ರಂದು ಸೇರಿಯಿತು. ಮುಖ್ಯ ಅತಿಥಿ ವಿಧಾನ ಸಭಾ ಸದಸ್ಯ ಶ್ರೀ ಭಾಸ್ಕರ ಸೆಟ್ಟರು ಇಂದಿನ ಅಪಾಯ ಪರಿಸ್ಥಿತಿ, ರೈತರ ಹೊಣೆಗಾರಿಕೆ, ಅಹಾರ ದುರ್ಭಿಕ್ಷೆಯನ್ನು ತಡೆಯುವ ಆವಶ್ಯಕತೆ, ಯುದ್ಧದ ಪರಿಸ್ಥಿತಿ ಮುಂತಾದ ಕುರಿತು ವಿಚಾರಪೂರಿತ ಭಾಷಣವಿತ್ತರು. ಸಭಿಕರಲ್ಲಿ ಕೆಲವರು ಮಾತನಾಡಿದ ಬಳಿಕ ಸ್ಥಳೀಯ ಪಂಚಾಯಿತ್ತು ಮೆಂಬರರನ್ನು ಕೂಡಿ 16 ಮಂದಿಯನ್ನೊಳಗೊಂಡ ಗ್ರಾಮ ರಕ್ಷಣಾ ಸಮಿತಿ ರಚಿಸಲ್ಪಟ್ಟಿತು. ಇಂದಿನ ಸಭಾಧ್ಯಕ್ಷರೇ ಈ ಸಮಿತಿಯ ಅಧ್ಯಕ್ಷರಾಗಿಯೂ ಯುವಕ ಸದಾನಂದ ಸೆಟ್ರು ಕಾರ್ಯದರ್ಶಿಯಾಗಿಯೂ ನೇಮಿಸಲ್ಪಟ್ಟರು. ಸುಮಾರು 7 ಮೈಲು ಉದ್ದ ಮಣಿಪುರ ಗ್ರಾಮದ ಪೂರ್ವ ಕಡೆಯ ೬-... ನೇ ಬ್ಲೋಕುಗಳನ್ನು ಉಗ್ತಿಯಾಗಿರುವ ಮರ್ಣೆ ಗ್ರಾಮಕ್ಕೇನೇ ಸೇರುವಂತೆ ಸಂಬಂಧ ಪಟ್ಟವರನ್ನು ಕೇಳಿಕೊಳ್ಳುವ, ಲೆವಿಬತ್ತದ ಧಾರಣೆಯನ್ನು ಏರಿಸುವುದಲ್ಲದೆ ಬತ್ತವನ್ನೆ ಯಾ... ವಂತೆ ವತ್ತಾಯಿಸದೆ ಅಕ್ಕಿ ಮಾಡಿ ಹಾಕುವ ಅವಕಾಶ ಕೊಡಬೇಕೆನ್ನುವ, ಬೆಟ್ಟು ಗದ್ದೆ... ಲೆವಿಯನ್ನು ವಜಾಪಡಿಸ ಬೇಕೆನ್ನುವ ಜಿಲ್ಲೆಯಲ್ಲೀ ಅನಾವೃಷ್ಟಿಯಿಂದ ಎಂಡನೇ ಬೆಳೆ ಭಾರೀ ಅತಂಕವಾಗಿದ್ದೂ, ದ. ಕನ್ನಡಿಗರ ಈವರೆಗೂ ಕಂಡರಿಯದ ಬರಗಾಲವು ಈಗಲೇ ಸ್ಪಷ್ಟ ಕಾಣಿಸಿ ಕೊಂಡದ್ದರಿಂದ ಕೂಡಲೇ ಸರಕಾರದವರು ತಕ್ಕ ಪರಿಹಾರ ಕೈಗೊಳ್ಳಬೇಕಲ್ಲದೆ ಮುಂದಿನ ಫಸಲಿನ ತೀರ್ವೆಯನ್ನು ಮಾಫಿಮಾಡಬೇಕಾಗಿ ಕೇಳಿಕೊಳ್ಳುವ ನಿರ್ಣಯ... ತ್ತು ಕುರಿತು ಸರ್ವಾನುಮತದಿಂದ ಮಾಡಿದ ನಿರ್ಣಯಗಳನ್ನು ಸಂಬಂಧ ಪಟ್ಟ ಅಧಿಕಾರಿಗಳಿಗೆ ಕಳುಹಿಸುವಂತೆ ಸಭಾಧ್ಯಕ್ಷರಿಗೆ ಅಧಿಕಾರ ನೀಡಲಾಯಿತು. ಗೋವಿಂದ ಸೆಟ್ರು ಮೊದಲು ಸ್ವಾಗತಿಸಿ ಕೊನೆಗೆ ಧನ್ಯವಾದ ಅರ್ಪಿಸಿದರು.

## ಶ್ರೀ ಆನೆಗುಂದೀ ಜಗದ್ಗುರು ಆರಾಧನೆ.

ಕಟಪಾಡಿ:- ಶ್ರೀ ಆನೆಗುಂದೀ ಜಗದ್ಗುರು ಶ್ರೀ ಶ್ರೀ ನಾಗಧರ್ಮೇಂದ್ರ ತೀರ್ಥ ಮಹಾಸ್ವಾಮಿಗಳವರ ೩ನೇ ವಾರ್ಷಿಕ ಆರಾಧನೆಯು ಕಟಪಾಡಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ಕ್ಷೇತ್ರದಲ್ಲಿರುವ ಶ್ರೀ ಶ್ರೀಗಳವರ ಸಮಾಧಿ ಮಠದಲ್ಲಿ ವಿಧ್ಯುಕ್ತವಾಗಿ ಜರಗಿತು.

ಮಂಗಳೂರು:- ಶ್ರೀ ಗುರುಮಠದ ಶ್ರೀ ವಿಶ್ವಕರ್ಮೇಶ್ವರ ದೇವರ ಸನ್ನಿಧಿಯಲ್ಲಿ ಶ್ರೀಮದಾನೆಗುಂದಿ ಶ್ರೀಗಳವರ ಆರಾಧನೆಯು ತಾ. 16ರಲ್ಲು ಸ್ಥಳೀಯ ವಿಶ್ವಕರ್ಮ ಸಂಸ್ಕೃತಿ ಸಂವರ್ಧಿನೀ ಸಭಾ ಆಶ್ರಯದಲ್ಲಿ ವಿಧ್ಯುಕ್ತವಾಗಿ ಜರಗಿತು.

ಚಾ ರು ಚ ಯು ನ

# ತತ್ವ ನಿಷ್ಠೆಯೊ? ವಸ್ತು ನಿಷ್ಠೆಯೊ?

ಹಸಗು ಸಾಗರ, ಕುಡಿಯಲು ನೀರಿಲ್ಲ. ದು ಆಂಗ್ಲ ನಾಣ್ಣುಡಿಯ ಸರಳಾನು ದವಲ್ಲ. ಪರಿಸ್ಥಿತಿಯ ನಿಜ ಸ್ವರೂಪ. ಷ್ಣರಾಜ ಸಾಗರ ಕ್ಷೇತ್ರದಲ್ಲಿ ಜಲಕ್ಷಾ ಉಂಟಾಗಿದೆ. ಕುಡಿಯಲು ನೀರಿಲ್ಲ ನ್ನುವ ಕೂಗು ಕೇಳುತ್ತಿದೆ. ಬಿತ್ತಿದ್ದ ಬ್ಬು ತೆಗೆಸಿ, ರಾಗಿ, ಜೋಳ, ಮೆಕ್ಕೆ ಜೋಳ ಬೆಳೆಸಲಾಗುತ್ತಿದೆ. ಮೈಸೂರು ತಾಲೂಕಿನಲ್ಲಿ ೨೭,೦೦೦ ಎಕರೆ ನಾಗುವ ಭೂಮಿ ನೀರಿಲ್ಲದೆ ನಿರುಪಯುಕ್ತವಾ ದೆ ರಾಜ್ಯದ ಹೆಚ್ಚು ಹೆಚ್ಚು ಕಡೆಗಳಿಂ ಗೋಳಿನ ಕಥೆಯೇ ಕೇಳಿ ಬರುತ್ತಿದೆ. ಗಾಡಿ ಮೇವಿಗೆ ೩೦ ರೂಪಾಯಿಗಳಷ್ಟು ದ್ದುದು ಈಗ ೧೨೦ ರೂಪಾಯಿ ಆಗಿದೆ. ಯಲು ಸೀಮೆಯಿಂದ ಜನ ಮಲೆನಾಡಿ ವಲಸೆ ಹೋಗುತ್ತಿದ್ದಾರೆ. ನೀರು ಮೇ ಗಳಿಲ್ಲದೆ ಸಾಕಲಾಗದೆ ದನಕರು ಕುರಿ ಗಳನ್ನು ದೊರೆತ ಬೆಲೆಗೆ ಮಾರುತ್ತಿದ್ದಾರೆ.

ಮೇಲಿನ ಹಿನ್ನೆಲೆಯಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಂಘಟನೆಯ ಕಾರ್ಯ ಕಾರೀ ಸಮಿತಿ ಗುಲಬರ್ಗಾದಲ್ಲಿ ಸಭೆ ಸೇ ರಿತು, ತಾತ್ಕಾಲಿಕ ಪರಿಹಾರಗಳೂ ಶಾಶ್ವ ತ ಪರಿಹಾರೋಪಾಯಗಳೂ ಚರ್ಚಿಸಲ್ಪ ಟ್ಟವು. ಕೇಂದ್ರ ನೆರವಾಗಬೇಕೆಂದು ಕೇ ಳಲು ನಿರ್ಧರಿಸಲಾಯಿತು. ಸಂಕಟದ ಘಳಿಗೆಯಲ್ಲಿ ವರ್ತಕರು ಸಹಾಯವೊಡ ಬೇಕು; ಇಲ್ಲದೆ ಹೋದರೆ ಆಹಾರಧಾನ್ಯ ದ ಕೊರತೆಯ ಪೂರ್ತಿ ಹೊಣೆಯನ್ನು ವಹಿ ಸಿಕೊಳ್ಳಲು ಸರಕಾರವೇ ಮುಂದಾಗುವು ದು ಅನಿವಾರ್ಯ—ಎಂದು ಸ್ಪಷ್ಟಪಡಿಸಲಾ ಯಿತು.

ಕಾಂಗ್ರೆಸ್ ಸಂಘಟನೆ ಹಾಗೂ ಮಂ ತ್ರಿ ಮಂಡಲಗಳಲ್ಲಿ ಬಹ್ವಂಶ ಸಾಮರಸ್ಯ ವಿರುವ ಮೈಸೂರು—ರಾಜ್ಯದಲ್ಲಿ, ಪರಿ ಹಾರಕಾರಿ ಕ್ರಮಗಳನ್ನು ಸಜೀವ ಸಂಪು ಷ್ಟಿಗೊಳ್ಳುವುದು ಸಾಧ್ಯವಾಗಬೇಕು.

ಭಿನ್ನ ಧ್ವನಿ

"ಬಹ್ವಂಶ ಸಾಮರಸ್ಯ" ಎಂಬ ಪದಗ ಳನ್ನು ಬಳಸಲು ಕಾರಣ. ಪಾನನಿರೋಧ ನಿಯಮಗಳ ಸಡಿಲಿಕೆಯ ವಿಷಯದಲ್ಲಿ ಹಳ್ಳಿಕೇರಿಯವರಂಥ ಮುಖಂಡರು ಹಾ ಗೂ ಸರ್ವೋದಯ ಪಂಥಾನುಯಾಯಿ ಗಳು ತೋರಿಸುತ್ತಿರುವ ವಿರೋಧ.

ಈ ಪರಿಸ್ಥಿತಿಯಲ್ಲಿ ಮುಖ್ಯವಾಗಿ ಎ ದ್ದು ಕಾಣುವ ಅಂಶಗಳು ಎರಡು: ತತ್ವ ನಿಷ್ಠೆ ಮತ್ತು ವಸ್ತುನಿಷ್ಠೆ. ಇದನ್ನು ಕಾಂ ಗ್ರೆಸ್ ಒಂದೇ ಅಲ್ಲ, ಜನತಾ, ಪಿ. ಎಸ್. ಪಿ. ಮತ್ತಿತರ ಪಕ್ಷಗಳಿಗೂ ಅನ್ವಯಿಸ ಬಹುದು. ಬಡಿಗೆ ಯಾವುದಾದರೇನು? ಏಟು ತಗಲುವ ಹಾಗಿದ್ದರೆ ಪ್ರಯೋಗಿ ಸೋಣ—ಎನ್ನುವ ಸಂದರ್ಭ ಸಾಧಕರ ಸಣ್ಣ ಗುಂಪೂ ಇಲ್ಲದಿಲ್ಲ.

ಪಾನನಿರೋಧ ನಿಯಮಗಳ ಸಡಿಲಿಕೆ ಯಿಂದ ಎಷ್ಟರ ಮಟ್ಟಿನ ಪ್ರಯೋಜನ ವಾಯಿತೆಂಬುದು ಸ್ಪಷ್ಟವಾಗಲು ಇನ್ನೂ ಸ್ವಲ್ಪ ಸಮಯಬೇಕು

ಚತುರ್ಥ ಯೋಜನೆಯ ಆರಂಭದ ವರ್ಷದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿ ಗಾಗಿ ೪೭ ಕೋಟಿ ರೂಪಾಯಿಗಳನ್ನು ಮೈಸೂರು ರಾಜ್ಯ ಖರ್ಚು ಮಾಡಲಿದೆ ಇದರಲ್ಲಿ ೩೪ ಕೋಟಿ ರೂಪಾಯಿಗಳನ್ನು ಕೇಂದ್ರ ನೀಡುತ್ತದೆ ಉಳಿದ ಹಣವನ್ನು ಮೈಸೂರು ರಾಜ್ಯವೇ ದೊರಕಿಸಿಕೊಳ್ಳ ಬೇಕು. ಅರ್ಥ ಮಂತ್ರಿ ಹೆಗಡೆಯವರು ಯಕ್ಷಿಣೀ ವಿದ್ಯೆಯಲ್ಲಿ ಪಾರಂಗತರಾದರೆ ಮಾತ್ರ ಇದು ಸಾಧ್ಯವಾದೀತು.

ಪಾದಯಾತ್ರೆ

ಬರಗಾಲದ ಕರಿನೆರಳು ಪಟ್ಟವೂ ನೀ ಳವೂ ಆಗುತ್ತಿದ್ದರೂ, ಮುಖ್ಯ ಮಂತ್ರಿ ನಿಜಲಿಂಗಪ್ಪನವರು ತಮ್ಮೂರಾದ ಚಿತ್ರ ದುರ್ಗಕ್ಕೆ ಹೋಗಿ ಹಣ ಸಂಗ್ರಹಕ್ಕೆಂದು ಬೀದಿಗಿಳಿದಾಗ ಜನರು ಅಪೂರ್ವ ಉ ತ್ಸಾಹವನ್ನೂ ಔದಾರ್ಯವನ್ನೂ ತೋರಿಸಿ ದರು. ಅಲ್ಲಿ, ದಾವಣಗೆರೆಯಲ್ಲಿ, ಬಳ್ಳಾರಿ ಯಲ್ಲಿ, ಗುಲ್ಬರ್ಗಾದಲ್ಲಿ ಅವರ ಪಾದ ಯಾತ್ರೆಯ ವೇಳೆ ರಕ್ಷಣಾ ನಿಧಿಗೂ ಅ ಪ್ಪಿ ಉಳಿತಾಯ ಯೋಜನೆಗೂ ಲಕ್ಷಗ ಟ್ಟಲೆಯಲ್ಲಿ ಹಣ ಸಂಗ್ರಹವಾಯಿತು.

ಚಿನ್ನದ ಬಾಂಡುಗಳ ವಿಕ್ರಯದಲ್ಲಿ ಮಾತ್ರ ನಾಕಷ್ಟು ಪ್ರಗತಿ ಆಗುತಿಲ್ಲ. ಮೊರಾರ್ಜಿಯವರ ಸ್ವರ್ಣ ನಿಯಂತ್ರಣ ಶಾಸನ ಬರದೇ ಇದ್ದಿದರೆ ಈ ದಿನ ಬೆಟ್ಟ ದೆತ್ತರಕ್ಕೆ ಬಂಗಾರ ರಾಶಿ ಬೀಳುತ್ತಿತ್ತು. ಈಗಿನ ಪರಿಸ್ಥಿತಿಯಲ್ಲಿ ಸರಕಾರ ಬಂಗಾರ ದ ಮಾತೆತ್ತಿದರೆ ಸಾಕು. ಜನ ಅದನ್ನು ಸಂಶಯದಿಂದ ನೋಡುತ್ತದೆ.

ಮಕ್ಕಳು, ಸಹಕಾರ

ಇತ್ತೀಚೆಗೆ ರಾಷ್ಟ್ರ ವ್ಯಾಪ್ತಿಯ ಎರಡು ಕಾರ್ಯಕ್ರಮಗಳು ಜರಗಿದುವು. ಒಂದು ಸಹಕಾರ ಸಪ್ತಾಹ, ಇನ್ನೊಂದು ಮಕ್ಕ ಳ ದಿನಾಚರಣೆ

ಶ್ರೇಷ್ಠ ಮಾನವರಾದ ಜವಾಹರಲಾ ಲರ ಎಪ್ಪತ್ತಾರನೆಯ ಜನ್ಮದಿನ (ಜ್ವಲಂ ತ ವಿಚಾರಗಳಿಗೆ ಸಂಬಂಧಿಸಿ ನಾವು ಪು ಣ್ಯ ತಿಥಿಗಳ ಮಾತೇಕೆ?) ಈ ಸಲವೂ ಮಕ್ಕಳ ದಿನವಾಗಿ ಆಚರಿಸಲ್ಪಟ್ಟಿತು. ಬೆಂಗಳೂರಿಗೊಂದು ಮಕ್ಕಳ ರೈಲು ಬರು ತ್ತದೆ ಎಂದು ಕಳೆದ ವರ್ಷ ಕೊಡಲಾದ ಆಶ್ವಾಸನೆಯನ್ನೇ ಈ ವರ್ಷವೂ ನೀಡ ಲಾಯಿತು.

ಸಹಕಾರಿ ಸಪ್ತಾಹದಲ್ಲಿ ಕೇಳಿಬಂದ ಮುಖ್ಯ ಘೋಷಣೆ: ಸಹಕಾರಿಗಳು ತಾ ವು ಬೋಧಿಸುವುದನ್ನು ಮಾಡಿಯೂ ತೋರಿಸಬೇಕು.

ಕರ್ನಾಟಕದಲ್ಲಿ ಸಹಕಾರ ಚಳುವಳಿ ಯು ಕೆಲ ಸರಕಾರೀ ಅಧಿಕಾರಿಗಳ ಹಾ ಗೂ ರಾಜಕೀಯ ಮುಖಂಡರ ಹಸ್ತಕ್ಷೇ ಪದಿಂದ ಸ್ವಲ್ಪಮಟ್ಟಿಗೆ ಕುಂಠಿತವಾಗಿದ್ದ ರೂ ರಾಜ್ಯದ ಜೀವನದಲ್ಲಿ ವಿಶಿಷ್ಟ ಸ್ಥಾ ನವನ್ನು ಈಗಾಗಲೇ ಅದು ಗಳಿಸಿದೆ.

ಆಹಾರಧಾನ್ಯಗಳ ಸಂಗ್ರಹ ವಿತರಣೆ ಯಲ್ಲಿ ಸಹಕಾರೀ ಸಂಘಗಳು ಮಹತ್ವದ ಪಾತ್ರ ವಹಿಸುವುದು ಸಾಧ್ಯವಿದೆ.

— ಇನ್‌ಫಾ

## ವಿದ್ಯಾರ್ಥಿಗಳು ಮತ್ತು ರಾಷ್ಟ್ರ ರಕ್ಷಣೆ

(ಆರನೇ ಪುಟದಿಂದ)

ಯೋಚಿಸಬೇಕು. ಎಳೆತನದಲ್ಲಿಯೇ ದೇಶ ವನ್ನು ಪರಿಪೂರ್ಣವಾಗಿ ಅಧ್ಯಯನ ಮಾ ಡಬೇಕು, ತಮಗಿಂತ ಪ್ರಾಯದಲ್ಲಿ ಜ್ಞಾ ನದಲ್ಲಿ, ಹಿರಿಯರಾದವರಿಗೆ ರಾಷ್ಟ್ರೀಯ ಪುರುಷನ ಮಾತೃ ಭೂಮಿಯ ಆತ್ಮದ ರ್ಶನ ಮಾಡಿರಬಹುದು. ಈ ಉದಾತ್ತ ಗುಣಗಳು ಈಗಲೇ ನಮ್ಮಲ್ಲಿ ಮೂಡಿದ ರೆ, ಮುಂದಕ್ಕೆ ಬಹಳಷ್ಟು ಉಪಯೋಗ ವಾಗುವುದು. ಶುಚಿತ್ವ, ಸಮಯದ ಸದು ಪಯೋಗ, ಸರಳತೆ, ವಿನಯ, ಸ್ವಾವಲಂ ಬನ, ಕರ್ತವ್ಯಪಾಲನೆ— ಮೊದಲಾದ ಹತ್ತಾರು ಸತ್ ಪ್ರವೃತ್ತಿಗಳಲ್ಲಿ ನಮ್ಮ ಮನಸ್ಸನ್ನು ಹರಿಸಬೇಕು.

ವಿದ್ಯಾರ್ಥಿಗಳನ್ನು ಕರೆದು ಅವರ ಕೈಗ ಳಲ್ಲಿ ತೋಪ ಇತ್ತು ಶಸ್ತ್ರಗಳನ್ನು ಎದುರಿ ಸಿರಿ ಎಂದು ಯಾರೂ ಹೇಳುವುದಿಲ್ಲ. ಆದರೆ ನಾವು ದೊಡ್ಡವರಾದಾಗ ಅಂತಹ ಕಾರ್ಯ ಕ್ಕೂ ನಾವು ಸಿದ್ಧರಾಗಬೇಕು. ಅದಕ್ಕೆ ಪೂರ್ವ ತಯಾರಿ ನಡೆಯುವ ಸಮಯ ವೇ ವಿದ್ಯಾರ್ಥಿ ಜೀವನ. ಎನ್. ಸಿ. ಸಿ., ಎ. ಸಿ. ಸಿ., ಸ್ಕೌಟ್, ಜ್ಯೂನಿಯರ್ ರೆಡ್‌ಕ್ರಾಸ್, ಶಾಲಾ ವಿದ್ಯಾರ್ಥಿ ಸಂಘ- ಮೊದಲಾದವುಗಳಲ್ಲಿ ತನ್ನ ಇತಿ ಮಿತಿಗ ಳನ್ನರಿತುಕೊಂಡು ವಿದ್ಯಾರ್ಥಿ ಭಾಗವಹಿ ಸಬೇಕು. ದೇಶದ ಸ್ವಾತಂತ್ರ್ಯಕ್ಕೆ ಆಹ್ವಾ ನ ಬಂದುದು ಈಗ ಮಾತ್ರವಲ್ಲ. ಅದು ಎಂದೆಂದಿಗೂ ಇದ್ದೇ ಇರಬಹುದು. ರಕ್ಷ ಣೆಯೆಂದರೆ ಬಾಹ್ಯ ಆಕ್ರಮಣಗಳಿಂದ ಉಳಿದುಕೊಳ್ಳುವುದು ಮಾತ್ರವಲ್ಲ; ಆಂತ ರಿಕವಾಗಿ ದೇಶ ರಕ್ಷಣೆ ಯಾವ ಕಾಲಕ್ಕೂ ಆಗಲೇ ಬೇಕಾಗುತ್ತದೆ. ಜಾತೀಯತೆ, ಭಾಷಾಂಧತೆ, ಧರ್ಮಾಯತೆ—ಮೊದ ಲಾದ ಹತ್ತಾರು ವಿಷವೃಕ್ಷಗಳ ನಿರ್ಮೂ ಲನ ಕಾರ್ಯ ಸಾಧಿಸಲು ನೂರಾರು ವರ್ಷ ಬೇಕಾಗಬಹುದು. ಹಾಗಿರು ವಾಗ ವಿದ್ಯಾರ್ಥಿಗಳು ರಾಷ್ಟ್ರ ರಕ್ಷಣೆಯಲ್ಲಿ ಮಾಡಬಹುದಾದ ಕೆಲಸ ವೆಂದರೆ ಸೂಕ್ತ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದು. ಪ್ಯಾಟನ್ ಟ್ಯಾಂಕಿ ನಲ್ಲಿ ಸ್ಫೋಟಕಗಳನ್ನಿರಿಸಿ ಸಿದ್ಧರಿರುವುದು —ಇದರಲ್ಲಿ ವಿದ್ಯಾರ್ಥಿಗಳು ಎಂದಿಗೂ ಹಿಂದುಳಿಯಲಾರರು.

---

ಬೇರೆಯವರಿಂದ ಕಲಿತುದೆಲ್ಲವನ್ನೂ ಪ್ರತ್ಯೇಕಿಸಿದರೆ ತನ್ನದೆಂದು ಉಳಿಯುವು ದು ಅತ್ಯಲ್ಪ.

○ ○ ○

ಸುಖದ ಅಪೇಕ್ಷೆ ತುಂಬಿದವನು ಸ ದಾ ಕಾಲ ಬಡವನಾಗಿಯೇ ಇರಬೇಕಾಗು ತ್ತದೆ.

○ ○ ○

ಕರ್ತವ್ಯವನ್ನು ಆನಂದದಿಂದ ಮಾಡು ವ, ಆನಂದವನ್ನು ಕರ್ತವ್ಯವೆಂದು ಬಗೆಗ ಣಿಸುವ ಜೀವನ ತತ್ವ ಹೊಂದಿದವನು ಸದಾ ಸುಖಿಯಾಗಿರುತ್ತಾನೆ

○ ○ ○

ನಾಳೆ ತಿರುಗಿ ಕಟ್ಟಬಹುದಾದ, ಕೃದ ಯವನ್ನು ಕೂರೆಯಬಹುದಾದ ಇಂದಿನ ಸುಖ ಸರ್ವತ್ರ ತ್ಯಾಜ್ಯವಿರಬೇಕು.


## ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

| | |
|---|---|
| ಭಾರತದ ವೀರಾಂಗನೆಯರು | 1—50 |
| ...ದ ಮುಗುಳು | 1—50 |
| ಅನುವಾದಿತ ಕತೆಗಳು | 1—20 |
| ...ಜ ಸುಮನ | 1—20 |
| ಮುತ್ತಿನ ಮಾಲೆ | 1—80 |
| ... ಗೊಂಚಲು | 1—75 |
| ...ಜಗಜ್ಜಾಯ | 1—75 |
| ...ಂಕಿ ನಾಟಕಗಳು | 1—00 |
| ...ರತದ ನಾಲ್ಕುಮುಖಗಳು | 1—00 |
| ...ದ ವಿದೇಶದ ಮಹಾ ಜೀವಿಗಳು | 1—00 |
| ...ಗುಸರ ಕತೆಗಳು | 2—00 |

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,

ಉಡುಪಿ.








ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

# ಅಧ್ಯಾಪಿಕೆಯ ದೃಷ್ಟಿಯಲ್ಲಿ
# ಶಿಕ್ಷಕರ ಸಂಘದ ಸಾರ್ಥಕತೆ

ಬರೆದವರು
ಶ್ರೀಮತಿ ಯಶೋದಾ ಎನ್. ಜೆನ್ನಿ.

'ಅಯ್ಯೋ ಮೀಟಿಂಗೇ. ಯಾಕಪ್ಪಾ ರಗಳೆ?' ಎಂದೊಬ್ಬ ಉಪಾಧ್ಯಾಯರು ರಾಗವೆಳೆದರೆ ಮತ್ತೊಬ್ಬರೆನ್ನುತ್ತಾರೆ.

"ತಮಾಷೆ ನೋಡೋಣ. ಬನ್ನಿಯಯ್ಯ..."

ಮೀಟಿಂಗು; ಮತ್ತು ತಮಾಷೆ!

"ಏನಿದೆ ನಮ್ಮ ಸಭೆಯಲ್ಲಿ?" ಹೊಸತಾಗಿ ಸೇರಿದ ಉತ್ಸಾಹೀ ಅಧ್ಯಾಪಕರು ಕುತೂಹಲದಿಂದ ಉದ್ಗಾರವೆತ್ತುತ್ತಾರೆ. ಅವರಿಗೆ ಉತ್ತರ ರೂಪವಾಗಿ ದೊರೆಯುವುದೂ ನಗುವೇ.

ಕುತೂಹಲದಿಂದ, ಉತ್ಸಾಹದಿಂದ ಸಭೆಯನ್ನು ಪ್ರವೇಶಿಸುವ ಹೊಸ ಅಧ್ಯಾಪಕರಿಗೆ ಅಲ್ಲಿ ಕಾದಿರುವುದು ನಿರಾಸೆಯ ಚಿಟ್ಟು!

ಅಧ್ಯಾಪಕರ ಪ್ರಗತಿಗಾಗಿಯೋ, ಒಕ್ಕಟ್ಟಿಗಾಗಿಯೋ, ಪರಸ್ಪರ ಸ್ನೇಹ ಸೌಹಾರ್ದಗಳನ್ನು ಬೆಳೆಸುವುದಕ್ಕಾಗಿಯೋ, ಯಾವುದೋ ಒಂದು ಒಳ್ಳೆಯ ಉದ್ದೇಶದಿಂದ ತಿಂಗಳಿಗೊಮ್ಮೆ ಅಧ್ಯಾಪಕರೆಲ್ಲರೂ ಸಂಬಂಧಿಸಿದ ಕೇಂದ್ರಗಳಲ್ಲಿ ಒಂದುಗೂಡುತ್ತಾರೆ. ಕಡ್ಡಾಯವಾಗಿ ಅಲ್ಲಿ ಸೇರಲೇಬೇಕೆನ್ನುವ ನಿರ್ಬಂಧವಿಲ್ಲವೆಂದಾಗಿದ್ದರೆ ಖಂಡಿತ ಯಾರೂ ಅಲ್ಲಿಗೆ ಭಾಗವಹಿಸಲು ಬರುತ್ತಿರಲಿಲ್ಲ. ಹೋಗುವುದು ಅನಿವಾರ್ಯವೆಂದಾದಾಗ ಹೋಗುತ್ತಾರೆ.

ಅಧ್ಯಾಪಕರಿಗೆ ಸಂಬಂಧಿಸಿದ ಅಗತ್ಯವೆನಿಸುವ ಕೆಲವು ಕಾರ್ಯಕ್ರಮಗಳು ಸಭೆಯಲ್ಲಿ ನಡೆಯುತ್ತವೆ. ತಮಾಷೆ ( ? ) ಇರುವುದು ಇಲ್ಲಿಯೇ. ಚಿಕ್ಕ ಮಕ್ಕಳಿಗೆ ಮಾದರಿ ಪಾಠವನ್ನೂ ಆದನ್ನು ವಹಿಸಿಕೊಂಡ ಅಧ್ಯಾಪಕರು (ಉಪಾಯವಿಲ್ಲದೆ) ಮಾಡಬೇಕೆಂಬ ನಿಯಮವಿದೆ.

ಪಾಠವನ್ನಾರಂಭಿಸುತ್ತಾರೆ. ವ್ಯರ್ಥವಾದ ಕಂಠಶೋಷಣೆ. ಅಷ್ಟೆ. ಉಪಾಧ್ಯಾಯರ ಉಪಯುಕ್ತತೆಗಾಗಿ ಮಾಡುವ ಮಾದರಿ ಪಾಠವನ್ನು ಕೇಳುವವರೂ ಇಲ್ಲ. ನೋಡುವವರು ಮೊದಲೇ ಇಲ್ಲ. ನೋಡಲು ಕುಳಿತ ಸಭೆಯಲ್ಲಿ ಗದ್ದಲ, ನಗು. ಆ ಗಲಾಟೆಯಿಂದಾಗಿ ಪಾಠ ಮಾಡುವವರ ಸ್ವರವೂ ಕೇಳಿಸುವುದಿಲ್ಲ. ಪಾಠ ಕೇಳಲೆಂದು ಬಂದ ಮಕ್ಕಳು ಬೆರಗಾಗಿ ಹಿಂದಿರುಗಿ ನೋಡುತ್ತಿರುತ್ತಾರೆ. (ವಿಚಿತ್ರ ಪ್ರಾಣಿಗಳನ್ನು ಕಂಡು ಬೆರಗಾದವರಂತೆ.)

ಅನಿವಾರ್ಯವಾಗಿ ಮುಂದೆ ಬಂದು ನಿಂತ ತಪ್ಪಿಗೆ ಅಧ್ಯಾಪಕ ಇಲ್ಲವೇ ಅಧ್ಯಾಪಕಿ ಪಾಠವನ್ನು ಮುಗಿಸಲೇ ಬೇಕು. ಸಭೆಯನ್ನು ನೋಡಿದಾಗಲೇ ಉಂಟಾಗುವ ನಡುಕ ಅಲ್ಲಿಯ ವರ್ತನೆಯಿಂದಾಗಿ ಇನ್ನೂ ಹೆಚ್ಚಾಗಿ ಮೈ ಬೆವರುತ್ತದೆ. ಧೈರ್ಯಶಾಲಿ ಅಧ್ಯಾಪಕನಾದರೆ ನಿಸ್ಸಂಕೋಚವಾಗಿ ತನ್ನ ಕರ್ತವ್ಯವನ್ನು ಪೂರೈಸಲೂ ಬಹುದು. ಹೊಸತಾಗಿ ಪ್ರವೇಶಿಸಿದವನಾಗಿದ್ದರೆ, ಅತಿಯಾದ ಆಶ್ಚರ್ಯದಿಂದಲೇ ಮೂಕನಂತಾಗಬಹುದು. ಏನಾದರೇನು? ಅದನ್ನು ನೋಡುವ, ಕೇಳುವ, ಆಸಕ್ತಿ ವಹಿಸುವ ಅಗತ್ಯ ಸಭೆಯವರಿಗೇ ಇಲ್ಲ. ಅವರು ಬೇರೆಯೇ ವಿಚಾರಗಳಲ್ಲಿ ಮಗ್ನರಾಗಿರುತ್ತಾರೆ. ನಿಮಿಷಕ್ಕೊಮ್ಮೆ ನಗುವಿನ ಹೊಗೆ ಸಭೆಯನ್ನೇ ವ್ಯಾಪಿಸುತ್ತದೆ.

ಅಲ್ಲಿಯೂ ವಿಚಾರಶೀಲರಿಗೂ, ವಿವೇಕಿಗಳಿಗೂ, ಸದಾಚಾರಿಗೂ ಕೊರತೆಯಿಲ್ಲ. ಅಧ್ಯಾಪಕರೆಂದರೆ ಸಭ್ಯತೆಯಿಂದಿರುವವರೇ ಹೆಚ್ಚು ಮಂದಿ. ಅವರು ಮೌನವಾಗಿ ಕುಳಿತು ಇದಿರಿನಲ್ಲಿ ಏನು ನಡೆಯುತ್ತದೆ, ಏನು ಹೇಳುತ್ತಾರೆ ಎಂದು ಆಲಿಸಲೆತ್ನಿಸುತ್ತಾರೆ. ಆದರೆ ಹತ್ತಿರವಿರುವವರ ಗದ್ದಲ, ಗಲಾಟೆಗಳಿಂದಾಗಿ ಅವರಿಗೆ ಕೇಳಿಸುವುದೇನೂ ಇಲ್ಲ. ಕಾರ್ಯಕ್ರಮ ನಡೆಯುತ್ತದೆ. ಕೊನೆಗೊಮ್ಮೆ ಮುಗಿಯುತ್ತದೆ ಎನ್ನಿ. ಅಷ್ಟೇ ಅಲ್ಲ. ಆ ವರೆಗೆ ಗದ್ದಲ, ಹಾಸ್ಯಗಳಲ್ಲಿಯೇ ಮಗ್ನರಾಗಿದ್ದವರೂ ಕೊನೆಗೊಮ್ಮೆ ಎದ್ದು (ಕುಳಿತು ಆಯಾಸವಾಯಿತೆಂದು) ವಾದ ವಿವಾದ ಆರಂಭಿಸುತ್ತಾರೆ. ಆದರೆ ಅಗತ್ಯವಿದ್ದ ಯಾವ ವಿಷಯಗಳಿಗೂ, ಒಳ್ಳೆಯ ವಿಚಾರಗಳಿಗೂ ಎಡೆಯೇ ಇಲ್ಲದ ಒಣ ಚರ್ಚೆ. ಆಗಲೂ ಅಷ್ಟೆ. ವಿಚಾರವಂತರು ಯಾರೂ ತುಟಿ ಎರಡು ಮಾಡಲಾರರು. ನಿರ್ಲಿಪ್ತರಾಗಿ ಕುಳಿತು ಬಿಡುತ್ತಾರೆ. ವಿಪರೀತ ಕೋಲಾಹಲ, ಗಲಾಟೆಗಳೆಲ್ಲ ಮುಗಿದಾಗ ಕೆಲವು ನಿಟ್ಟುಸಿರುಗಳು ಹೊರ ಬೀಳುತ್ತವೆ.

ಅಲ್ಲಿಗೆ ಮುಗಿಯಿತು.

ಮಕ್ಕಳೆಲ್ಲ ಆವರೆಗೆ ಹೊರಗಿನಿಂದ ನೋಡಿ ನೋಡಿ ಕಣ್ಣರಳಿಸುತ್ತಾರೆ. ಅವರಿಗೆ ತಮ್ಮ ಸಭೆಗಳಲ್ಲಿ ಭಾಷಣ ಬಿಗಿದ ಅಧ್ಯಾಪಕರ ನೆನಪು ಬರುತ್ತದೆ.

"ಮಕ್ಕಳೇ, ಶಿಸ್ತು ಅಂದರೆ...."

ಆ ಮೇಲೆ ಶಿಸ್ತಿನ ಬಗ್ಗೆ ಗಂಟೆಗಟ್ಟಲೆ ಉಪದೇಶಗಳ ಸುರಿಮಳೆ. ಆದರೆ ಅಧ್ಯಾಪಕರ ಸಭೆಯನ್ನು ನೋಡಿದ ಮಕ್ಕಳಿಗೇ ದಿಗ್ಭ್ರಮೆಯಾಗುತ್ತದೆ. ಅದನ್ನು ನೋಡಿ ಕಲಿಯುವ ಮಕ್ಕಳ ಗತಿಯೇ?

ತಿಂಗಳಿಗೊಮ್ಮೆ ಅನಿವಾರ್ಯವಾಗಿ ಕಳೆಯುವ ಈ ಸಮಯವನ್ನು ಸದುಪಯೋಗಗೊಳಿಸುವುದು, ಸಾರ್ಥಕಗೊಳಿಸುವುದು ಸಾಧ್ಯವಿಲ್ಲವೇ?

ಆದರ್ಶವೆನಿಸುವ ರೀತಿಯಲ್ಲಿ ಒಳ್ಳೆಯ ಪಾಠ, ಉಪಾಧ್ಯಾಯರಿಗೆ ಸಂಬಂಧಿಸಿದ ಉಪಯುಕ್ತ ವಿಚಾರಗಳ ಚರ್ಚೆ, ಅಧ್ಯಾಪಕರ ಪ್ರಗತಿಗಾಗಿ, ಮಕ್ಕಳ ಏಳಿಗೆಗಾಗಿ ಸಾಧಿಸಬೇಕಾದ ಕಾರ್ಯ, ಸೇರಬೇಕಾದ ಗುರಿ, ಇವೆಲ್ಲವನ್ನೂ ಚರ್ಚಿಸಿ, ವಿಮರ್ಶಿಸಿ ಯೋಗ್ಯ ರೀತಿಯಲ್ಲಿ ಸಭೆಯನ್ನು ನಡೆಯಿಸಬಾರದೆ? ವಿಚಾರವಂತರೂ, ವಿವೇಕಿಗಳೂ, ಪ್ರಗತಿಶೀಲರೂ ಎನಿಸಿದ ಅಧ್ಯಾಪಕ ಬಂಧುಗಳು ಪ್ರಯತ್ನಿಸಿದರೆ ಖಂಡಿತ ಜಯಶೀಲರಾಗಬಹುದು. ವ್ಯರ್ಥವಾಗಿ ಬೇಸರದಿಂದ ಕಳೆಯುವ ಸಮಯದ ಸದುಪಯೋಗವಾದೀತು.

ಕೊನೆಯದಾಗಿ ಒಂದು ವಿಚಾರವ ಇಲ್ಲಿ ಪ್ರಸ್ತಾಪಿಸದಿದ್ದರೆ ಲೇಖನವು ಅಪೂರ್ಣವಾದೀತು. ಏನೆಂದರೆ ಕೆಲವು ಕೇ ಸಭೆಗಳು ನಿಜವಾಗಿಯೂ ಒಳ್ಳೆಯ ರೀತಿಯಲ್ಲಿ ಯೋಗ್ಯ ಕ್ರಮದಲ್ಲಿ ನಡೆಯು ರುವುದು ಅಭಿನಂದನದ ಸಂಗತಿಯಾಗಿ ಅದನ್ನೇ ಅನುಸರಿಸಿ ಎಲ್ಲಾ ಕೇಂದ್ರ ರೂ ಪ್ರಯತ್ನಶೀಲರಾಗಿ, ಉತ್ಸಾ ಳಾಗಿ, ವಿಚಾರವಂತರಾಗಿ ಶಿಕ್ಷಕರ ಸಂ ದ ಸಾರ್ಥಕತೆಯನ್ನು ಸಾಧಿಸುವಂ ಗಲಿ.

---

## ಕೇಳಿ ಬಂದ ಮಾತುಗಳು

ಮಂಗಳವಾರ ಬೆಳಿಗ್ಗೆ "ಅಯ್ಯ ನಿನ್ನೂ ಕೂಡೋದಿಲ್ಲಪ್ಪ!" ಎಂದು ಮುರಿದು ಏಳುತ್ತಾ ಮತ್ತೆ ಹಾಸಿ ಮೇಲೆ ಬಿದ್ದುಕೊಂಡರು ಒಬ್ಬರು.

"ನಂಗೂ ಜಡ ಬಂದು ಬಿಟ್ಟಿ ಮಗೆ ಆಫೀಸಿಗೆ ಹೋಗಲಿಕ್ಕೆ ತಿಂ ಊಟ ಎಲ್ಲಾ ಸಿದ್ಧ ಮಾಡಬೇಕಲ್ಲ! ಕಾಲು ಎಳೆದುಕೊಳ್ಳುತ್ತಲ್ಲಾ! ಉ ಹ್ಯಾಗೋ ಒಪ್ಪಾದಬೇಕಾಯ್ತು!" ಎ ತ್ತಾ ಆವರ ಹೆಂಡತಿ ಏಳಲಾರದೆ ಎ ತಳ್ಳಾಡುತ್ತಾ ಅಡಿಗೇ ಮನೆಗೆ ಹೆ ದಳು.

"ಅಲ್ಲಾ ಈ ವಾರಕ್ಕೆ ಒಪ್ಪೊತ್ತು ಉಪವಾಸಾ ಸೋಮವಾ ಬದಲಾಗಿ ಶನಿವಾರ ಇಟ್ಕೊಂಡ್ರೆ ಳ್ಳೇದಿತ್ತು. ಶನಿವಾರ ರಾತ್ರಿ ಉಪವಾ ಮಲಗಿ ಬಿಟ್ರೆ ಆದಿತ್ಯವಾರ ಎಷ್ಟು ತ್ತು ಬಿದ್ದು ಕೊಂಡಿದ್ರೂ ಕೇಳೋ ನೆಲ್ಲ ಸುಧಾರಿಸಿಕೊಂಡು ಉಪವಾ ಬಾಧೇನ ಪರಿಹರಿಸಿಕೊಳ್ಳಬಹು ತ್ತು!........" ಎಂದು ಪಟಪಟಿಸಿಕೊ ಗಂಡ.

o o o

"ಅಬ್ಬ! ರಜೇ ಗಿಜೇ ಎಂಬ ಪೆ ಇಲ್ಲದ ನಮ್ಮಂಥವರಿಗೆ ವಾರಕ್ಕೆ ಒಂ ಹೊತ್ತು ರಜೇ ಅಂತ ಒಂದು ಬಂತಲ್ಲ ಎಂದು ನೆಮ್ಮದಿಯ ನಿಡುಸುಯ್ದು ಟ್ಟು ಅಡಿಗೇ ಮನೆಯಿಂದ ಹೊರಬಿ ನೊಬ್ಬ ಅಡಿಗೇ ಭಟ್ಟ.

o o o o

"ಹೌದೂ, ವಾರಕ್ಕೆ ಒಂದು ಹೊ ಉಪವಾಸ ಅಂತ ನಿರ್ಣಯಿಸಿದರಲ್ಲಾ ಕೆಲವರು ಗಟ್ಟ್ಯಾಗಿ ಊಡ ಬಿಟ್ರೆ ಗೆ ನಂಬೋದು? ಕೊಡುವ ರೇಷನ್ ಲ್ಲೇ ಆ ಒಂದು ಹೊತ್ತಿನ ಕಾಳು ಕ ಮಾಡಿ ಬಿಟ್ರೇನೇ ಉಪವಾಸ ನಿಜ ಸೀತು. ಅದು ಮಾತ್ರವಲ್ಲ. ಪಂಚಾಂ ನೋಡಿ, ಏಕಾದಶಿ, ಅಮಾವಾಸ್ಯೆ, ಹು ಣ್ಣಿಮೆ ಮುಂತಾದ ಪರ್ವದಿನಗಳ ಉಪವಾಸವನ್ನು ರೇಶನ್ ಲೆಕ್ಕದಲ್ಲಿ ಮಾಡಿಸಿ ಬಿಡಬೇಕು. ಪುಣ್ಯವೂ ಆರೋ ಗ್ಯವೂ ಆಹಾರಾಭಾವದ ಸಮಾಲೋಚನೆ ಒಟ್ಟೇ ಸಾಧಿಸಿದ ಹಾಗಾಗುತ್ತೆ ಆಗ."

—ಶ್ರೀ ಎಂ. ರಂಗರಾವ್

READ &
ADVERTISE IN
NAVAYUGA WEEKLY

---

## ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 348/1965.

ಕುಂಞಿಪೋಳು ಯಾನೆ ಬೀಪಾತುಮ್ಮ —ವಾದಿ

ಮತ್ತು

1. ಅಬ್ಬಾಸ್ ಬ್ಯಾರಿ.
2. ಉಸ್ಮಾನ್ ಬ್ಯಾರಿ —ಪ್ರತಿವಾದಿರು

ಸದ್ರಿ 1ನೇ ಪ್ರತಿವಾದಿ ಅಬ್ಬಾಸ್ ಬ್ಯಾರಿ ಸ್ವಾಬು ಬ್ಯಾರಿ ಮಗ ಕುರೇ ಬಂಡಾಡಿ ಗ್ರಾಮದ ಕೆನೀಢ್ಯಯೆಂಬಲ್ಲಿ. ಪುತ್ತೂರು ತಾಲೂಕು. ಇವರಿಗೆ ಸದ್ರಿ ಕೋರ್ಟು ಮುಖಾಂ ಮೇಲಿಗೆ ತಿಳಿಯ ಪಡಿಸುವುದೇನೆಂದರೆ.

ಸದ್ರಿ ವಾದಿಯು ನಿಮ್ಮ ಮೇಲೆ ಗೇಣಿ ಬಾಕಿಗೆ ಮಾಡಿದ ಕ್ಲೈಮೀತಿನ ದಾವೆಯು ತಾರೀಕು 17—12—1965ಕ್ಕೆ ನಿಮ್ಮ ಹಾಜರಿಯ ಬಗ್ಗೆ ಇಟ್ಟಿರುವುದರಿಂದ ಆ ದಿನ ನೀವು ಸದ್ರಿ ಕೋರ್ಟಿಗೆ ಬೆಳಗ್ಗೆ 11 ಗಂಟೆಗೆ ಬಂದು ನಿಮ್ಮ ಉದಾಹರಣೆ ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾಗುವುದು.

B. T. Rai
Advocate for Plaintiff

ಪುತ್ತೂರು, 18—11—1965

---

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ
"ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

- ಶಾಸ್ತ್ರೀಯ ನೇತ್ರಪರೀಕ್ಷೆ—ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ
- ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ.

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು
● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

# ಕಬ್ಬು ಡೊಂಕು; ಸವಿ ಡೊಂಕಲ್ಲ

(ನಾಲ್ಕನೇ ಪುಟದಿಂದ)

'ಏನಾದರೋ ಪೂರಾಯ್ತು, ನಿಮಗೆ ಪ್ರತಿಯೊಂದರಲ್ಲೂ ತಮಾಷೇನೇ ಅನ್ನಿಸುತ್ತೆ...'

"ಮತ್ತೆ ಏನು ಮಾಡಬೇಕು ಹೇಳು. ಉದಯದಿಂದ ಮಧ್ಯಾಹ್ನದ ವರೆಗೆ ಏರಿದ ಸೂರ್ಯನಾದ್ರೂ ಮುಂದೆ ಇಳಿಯುತ್ತಾನೆ. ಆದ್ರೆ ಈ ಬೆಲೆಯೇರಿಕೆ ಇಳಿಯೋ ಲಕ್ಷಣವನ್ನೂ ಎತ್ತೋದಿಲ್ಲಾಂದ್ರೆ, ನಮ್ಮಂಥವ್ರು ಹೇಗೆ ದಿನ ದೂಡಬೇಕೂಂತ?"

"ಹೌದ್ರಿ ಅದಕ್ಕೆ ಹಾಲಿನವಳ ತಪ್ಪೇನು? ಅವಳೂ ನಿಮ್ಮ ಹಾಗೇ ನೋಡಿ ...'

"ಹೌದಪ್ಪಾ ಜಾಣೆ. ನಾನು ಅವ್ಳನ್ನೇನೂ ಅದನ್ನೇ. ಆದ್ರೂ ಒಂದು ಅರೆ. ಹೀಗೇ ಕೊನೇ ವರೆಗೂ ಇಲ್ಲಿಕ್ಕಿಲ್ಲ. ನಾಲ್ಕು ತಿಂಗಳು ಕಳೆದ ಮೇಲಾದ್ರೂ ಕುಸು ಸುಧಾರಣೆಯಾದೀತು...."

'ಸುಧಾರಣೆಯಾಗೋದು? ಗೊತ್ತಾಗುತ್ತಿಲ್ಲ? ನೋಡಿ, ಗಾಂಧೀ ಶತಾಬ್ದಿಂತ ಮದ್ಯಪಾನ ಪ್ರತಿಬಂಧವನ್ನು ಜಾರಿಗೆ ತಂದರು. ಅದನ್ನು ಕಟ್ಟು ನಿಟ್ಟಾಗಿ ಆಚರಿಸುತ್ತೇವೆಂತ ಹಾರಿಸಿದರು. ಈಗ ಅದನ್ನ ಸಡಿಲಿಸಿ ಬಿಟ್ರು ನೋಡಿ. ಏನಿದು ಅನ್ಯಾಯ? ಇದೇ ಏನು ಗಾಂಧಿ ವಾದ?'

"ಅಲ್ವೇ, ಯಾಕೆ ಹಾಗೆ ಮಾಡಿದ್ರು ಗೊತ್ತೆ?"

'ಯಾಕೆ ಹೇಳಿ....'

"ನೋಡು ಕಳ್ಳಭಟ್ಟಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತೆ. ಕಲಬೆರಕೆಯಿಂದ ಜನಾರೋಗ್ಯ ಇನ್ನೂ ಹೆಚ್ಚುತ್ತೆ.... ಲಂಚರುಸುವತ್ತುಗಳ ತಾಂಡವವೂ ಏರುತ್ತೆ; ಸರಕಾರದ ಬೊಕ್ಕಸ ಪ ಬರಿದಾಗುತ್ತೆ—ಹೀಗೆಲ್ಲಾ ಇರುವುದನ್ನು ಮನಗಂಡು ಮಸು ಸಡಿಲಿಸಿದ್ರೆ ಅದ್ರಲ್ಲಿ ತಪ್ಪೇನೂಂತ..."

"ನಾಕು ಸುಮ್ಮನಿರೀಂದ್ರೆ... ಕಳ್ಳಭಟ್ಟಿಗಳನ್ನ ತಡೀಬೇಕು; ಲಂಚಖೋರರನ್ನ ಹಿಡೀಬೇಕು, ನಿಮ್ಗೆ ತಾಕತ್ತು ಇಲ್ಲಾಂತ ಬೊಕ್ಕಸ ತುಂಬೋ ಹುಸ್ರಲ್ಲಿ ನೈತಿಕ ಅಧಃಪತನಕ್ಕೆ ಜನತೆಯನ್ನ ತಳ್ಳೋದಕ್ಕೊಂತ.."

"ನಾಕು ಬಿಡೇ....... ಅದೆಲ್ಲಾ ನಮಗ್ಯಾಕೆ?"

"ಯಾಕೆ ಅಂದ್ರೆ? ನೋಡಿ, ಮುರಾರ್ಜಿ ಭಾಯಿ ನಮ್ಮ ಪರವಾಗಿದ್ದಾರೆ. ಮುದನಕೇರಿಲಿಯಲ್ಲಿ ನಾಯಕ ಮಾಸ್ತರರು ಸತ್ಯಾಗ್ರಹ ಮಾಡಿದ್ದಾರೆ, ರಾಜ್ಯದ ಮೂಲೆಮೂಲೆಯಲ್ಲಿ ನಮ್ಮ ಈ ತೀರ್ಗೆಡಿಕನದ ನೀತಿಯನ್ನು ಖಂಡಿಸುತ್ತಿದ್ದೇವೆ. ಕೇಂದ್ರ ಸರಕಾರ ಕೂಡ ನಮ್ಮ ತಲೆಯ ಮೇಲೆ ಆಶೀರ್ವಾದ ಇಟ್ಟಿದೆ. ಮಹಾತ್ಮಾ—ಪಂಡಿತ ಅನುಗ್ರಹ ನಮ್ಮ ಪಾಲಿಗಿದೆ..."

'ಏಯ್, ಏನೇ ಇದು?'

'ಯಾವುದು?'

"ಅಲ್ಲ, ಮಾತು ಮಾತಿಗಳಿಂದಲೇ ನಿನ್ನ ನಿನ್ನ ನಡುವೆ ಭಾರಿ ಕಂದಕ ಆಗೇ ಬಿಟ್ಟಿಯಲ್ಲಾ....?"

"ಕಂದಕ?...ಹ್ಞಾಂ....ಹಾಗೆ. ಮತ್ತೆ ನೀವು ಎಷ್ಟಾದ್ರೂ ಗಂಡಸರು. ನಾವು ಏನು ಹೇಳಿದ್ರೂ ಅದನ್ನ ಕಿವಿ ಮೇಲೆ ಹಾಕಿ ಕೊಳ್ಳೋದಿಲ್ಲ. ಇಲ್ವಾದ್ರೆ.....?

'ಏನು?'

'ನೋಡಿ, ನಮ್ಮ ಯಶೋಧರಮ್ಮಾ ಮೊದಲೇ ಹೇಳಿದ್ದಾರೆ, ಇಂತಹ ಕೆಲಸ ಮಾಡಬೇಡೀಂತ.'

"ಹೇಳಿದ್ದಾರೆ ಅನ್ನು. ಆದರೆ ಒಂದು ಸಂಸಾರದಲ್ಲಿ ಸಾಮೂಹಿಕ ಅಭಿಪ್ರಾಯವನ್ನು ಕಡೆಗಣಿಸುವುದಕ್ಕಾಗುತ್ತೆಯೆ?"

"ಮನೆಯಲ್ಲಿ ಇಲೀ ಕಾಟಾಂತ ತಿಳಿದು ಅದನ್ನು ತಡೆಯೋ ತಾಕತ್ತು ಇಲ್ಲದೆ ಮನೆಗೇ ಬೆಂಕಿ ಹಚ್ಚಿ ಬಿಡೋದು. ಮತ್ತೆ ನನ್ನನ್ನು ಮಂಕು ಅಂತೀರಿ. ಇಂತಹ ಮಂಕುತನ ನಿಮ್ಮಂತಹ ಗಂಡಸ್ರಿಗೇ ಹೇಳ್ಸದ್ದು... ನೋಡಿ, ಕಾದು. ನಮ್ಮ ತಾತ್ವಿಕ ಹೋರಾಟ ಭರದಿಂದ ನಡೆಯುತ್ತಿದೆ. ಶಾಂತವಾಗಿ ನಡೆಯುತ್ತದೆ..."

"ಹೌದೇ...."

"ಏನು?"

"ಮುಗಿಯಿತೇ ನಿನ್ನ ಮಾತು?'

"ಯಾಕೆ?"

"ನಿನ್ನದೆಲ್ಲಾ ಮುಗಿದ್ರೆ ನಾನೂ ಒಂದು ಅನ್ಲೇ?"

"ಓಹೋ ಧಾರಾಳವಾಗಿ. ಅದಕ್ಕೇ ಅಡ್ಡಿ?("

"ನೀನಂನೆಯಲ್ಲಾ, ನಿಮ್ಮವರೆಲ್ಲಾ ಹೋರಾಡ್ತಾರೇಂತ. ಹೀಗೆ ಹೋರಾಡೋರಿಗೆ ಒಂದು ಸಲಹೆ....'

'ಏನದು?'

"ನೀನು ದುರುಗುಟ್ಟಿದ್ರೆ ನನ್ನನ್ನೇ ತಿಂದು ಬಿಟ್ಟ ಗೂಂತ ಹೆದ್ರಿಕೆಯಾಗುತ್ತೆ. ಸೌಜನ್ಯದಿಂದ ಕೇಳುವುದಾದರೆ ಹೇಳ್ತೇನೆ..'

ಆಯ್ತಪ್ಪ, ಏನದು?"

"ಇದನ್ನ ಕೇಳಿ, ಅದರಂತೆ ನಡೆದರೆ ನಿಮ್ಮ ಚಳವಳಿ ಖಂಡಿತಕ್ಕೂ ಯಶಸ್ವಿಯಾಗುತ್ತೆ....ಇಲ್ವಾದ್ರೆ ಒರಿಯ ತತ್ವಗಳನ್ನು...."

"ಗೊತ್ತಾಯ್ತು...ಏನದೂಂತ ಬೇಗನೆ ತಿಳಿಸುವ ಕೃಪೆ ಮಾಡಿ...'

"ಮತ್ತೇನೂ ಇಲ್ಲ. ನಿಮ್ಮವರೆಲ್ಲಾ ಪೋಲೀಸು ವಿಭಾಗದವರ ಸಹಾಯ ಪಡೆದರೆ ಸಾಕು. ಎಲ್ಲಾ ಸರಿಯಾಗುತ್ತೆ.'

"ಹೇಗೆ?"

"ಅವರಿಂದ ಕಳ್ಳ ಭಟ್ಟಿಯವರ ಪರಿಚಯವಾಗುತ್ತೆ. ಬೇಕಾದ್ರೆ ಸಶಸ್ತ್ರ ಹೋರಾಟ ಮಾಡೋದಕ್ಕೂ ಅವರು ತಯ್ಯಾರಾಗಿದ್ದಾರು....'

"ಹ್ಞಾಂ....ಏನಂತೀರಿ ನೀವು?"

"ಅನ್ನೋದೇನಿಲ್ಲ....ತತ್ವ ಯಶೋಧರಮ್ಮನವರ ಪಾಲಿಗೆ ಉಳಿಯಿತು. ಮುರಾರ್ಜಿಗಾಯಿತು. ನಾಯಕ ಮಾಸ್ತರರಿಗಾಯಿತು. ಹೇಳಿದ ಮಾತೇ ಅರ್ಥವಾಗದೆ ಇದ್ದ ನಿನ್ನಂಥವ್ರಿಗೆ ಯಾವ ತತ್ವ ಹೇಳಿದರೇನು?'

'ಯಾಕೆ ನನ್ನನ್ನು ಬೊಟ್ಟು ಮಾಡ್ತೀರಿ?'

'ಮತ್ತೇನು ಮಾಡಬೇಕು? ಒಂದು ಲೋಟಾ ನೀರು ಕೊಡು ಅಂದ್ರೆ....'

'ಓ...ಸಾರೀ. ನಾನೊಬ್ಬಳು. ಹ್ಞಾಂ ...ಮಂಕೇ....ಮತ್ತೆ ಬೇಕಾದ್ರೆ..."

"ಹೇಗೇ ಇದ್ರೆ, ಕಬ್ಬು ಡೊಂಕಾದರೂ ಸವಿ ಡೊಂಕಲ್ಲ ನೋಡು...."

"ಅಯ್ಯೋ, ಪಾಪವೇ....'

—ಗೋರಾ.

ರಾಜಾಜಿ ಅನ್ನುತ್ತಾರೆ

# ನಮ್ರರಾಗಿರಬೇಕು

ನಮ್ರತೆಯಿಂದಲೇ ಸಿದ್ಧಿ ಪ್ರಾಪ್ತಿಯಾಗುವುದರಿಂದ ನೀವೆಲ್ಲ ನಮ್ರತೆಯಿಂದಿರಬೇಕೆಂದು ಎಲ್ಲಾ ಜ್ಞಾನಿಗಳು ಹೇಳುತ್ತಾರೆ. ಸಿದ್ಧಿಯನ್ನು ಪಡೆಯುವ ಬಯಕೆಯಿಂದ ಕೆಲವರಂತೂ ನಮ್ರರಾಗಿಯೇ ಆಗುತ್ತಾರೆ. ಆದರೆ ನಮ್ರತೆಯನ್ನು ಸ್ವಾಭಾವಿಕಬುದ್ಧಿಯಿಂದ ಹಾಗೂ ಪವಿತ್ರ ಹೃದಯದಿಂದ ಆಚರಿಸಬೇಕು. ನಾವುಗಳಿಸಿದ ವಿದ್ಯೆ, ಧನ—ಗೌರವ ಮೊದಲಾದವುಗಳನ್ನು ಮಹತ್ವದ ವಿಷಯವಲ್ಲವೆಂದು ತಿಳಿದಾಗಲೇ ನಮ್ರತೆಯು ತನ್ನಿಂದಾ ತಾನೇ ಬರುವುದು.

ಬಡವನೊಬ್ಬನ ಪುತ್ರನು ತನ್ನ ತಂದೆಯೊಡನೆ ಧನವಿಲ್ಲವೆಂದು ತಿಳಿಸುತ್ತಾನೆ. ಇದರಲ್ಲೆ ಬುದ್ಧಿವಂತಿಕೆ ಅಡಗಿದೆ. ಇದೇ ರೀತಿ ಧನವಂತನೊಬ್ಬನು ನಮ್ರತಾಪೂರ್ವಕವಾಗಿ ವ್ಯವಹರಿಸಿದರೆ ಆತನೇ ಬುದ್ಧಿವಂತನೆನಿಸುವನು, ಯಾಕೆಂದರೆ ಧನ— ಸಂಪತ್ತುಗಳು ವಾಸ್ತವಿಕವಾಗಿಯೂ ತುಚ್ಛವಸ್ತುಗಳು. ನಮ್ರತೆಯು ಅಂತಃಕರಣದಿಂದ ಉಕ್ಕೇರಬೇಕೇ ಹೊರತು ಪರರಿಗೆ ಹೆದರಿಯೂ, ಇತರರ ನಡುವೆ ಉತ್ತಮನೆನಿಸಿಕೊಳ್ಳುವ ಬಯಕೆಯಿಂದಲ್ಲ.

ಒಂದೊಮ್ಮೆ ಶಿಷ್ಯನೋರ್ವನು ತನ್ನ ಗುರುವಿಗೆ ಕೈ ಜೋಡಿಸಿ ಪ್ರಾರ್ಥಿಸುತ್ತಾ ಇಂತೆಂದನು— "ನಾನು ಮಹಾ ನೀಚನಿದ್ದೇನೆ. ನನಗೆ ಮಾರ್ಗದರ್ಶನ ನೀಡಬೇಕು." ಗುರುಗಳು ಆತನ ಹೇಳಿಕೆಯನ್ನು ಮನ್ನಿಸಿ, ವಿಚಾರಮಾಡಿ ಮಾರ್ಗದರ್ಶನ ನೀಡಲು ನಿರ್ಧರಿಸಿದರು. ಅವರು ಶಿಷ್ಯನೊಡನಿಂತೆಂದರು—"ಈಗ ನೀನು ಹೋಗಿ ನಿನ್ನಿಂದಲೂ ತುಚ್ಛ, ಕಡಿಮೆ ಮೌಲ್ಯದ ವಸ್ತುವನ್ನು ನನ್ನೆಡೆಗೆ ತಂದಿರಿಸು." ಶಿಷ್ಯನು ಸಂತುಷ್ಟನಾಗಿ ಗುರುವನ್ನು ಬೀಳ್ಕೊಂಡನು. ಆದರೆ ಆತನು ತನ್ನಿಂದಲೂ ಕಡಿಮೆ ಬೆಲೆಬಾಳುವ ವಸ್ತುವನ್ನು ಹುಡುಕತೊಡಗಿದರೆ ಆತನಿಗೆ ಪ್ರತಿಯೊಂದು ವಸ್ತುವೂ ಒಂದಲ್ಲ ಒಂದು ವಿಧದಲ್ಲಿ ತನ್ನಿಂದ ಉತ್ತಮವಿದೆಯೆಂದು ಕಂಡಿತು. ಪಾವಿತ್ರ್ಯದಲ್ಲಿ ಹಾಗೂ ಉಪಯೋಗದಲ್ಲಿ ಪ್ರತಿಯೊಂದು ವಸ್ತುವೂ ಆತನಿಂದ ವಿಶೇಷವಾಗಿತ್ತು. "ನೀನು ತಂದ ವಸ್ತುವು ನಿನ್ನಿಂದಲೂ ತುಚ್ಛವೆಂದು ಹೇಗೆ ತಿಳಿದೆ?"—ಎಂದು ಗುರುಗಳು ಪ್ರಶ್ನಿಸಿಯಾರೆಂದು ಆತನು ತಿಳಿದಿದ್ದನು. ಈ ಸಮಸ್ಯೆಯನ್ನು ಬಿಡಿಸಲು ಬಡಪಾಯಿಯೊಡನೆ ಯಾವ ಉಪಾಯವಿರಲಿಲ್ಲ. ಮರುದಿನ ಆತನು ಶೌಚಕರ್ಮಕ್ಕೋಸ್ಕರ ಕಾಡಿಗೆ ಹೋಗುತ್ತಲೆ ಆಲೋಚಿಸಿದನು—"ನನ್ನ ಮಲವು ಖಂಡಿತವಾಗಿಯೂ ನನ್ನಿಂದಲೂ ತುಚ್ಛವಿದೆ, ಇದನ್ನೇ ನಾನು ಗುರುವಿನೆಡೆ ಕೊಂಡು ಹೋಗಬಾರದೇಕೆ?" ಆತನು ಒಂದು ಎಲೆಯಲ್ಲಿ ಕೊಂಚ ಮಲವನ್ನು ತೆಗೆಯುತ್ತಲೆ ಎಲ್ಲಿಂದಲೋ ಒಂದು ಅಶರೀರ ವಾಣಿ ಕೇಳಿ ಬಂತು - "ನೀಚಾ! ನನ್ನನ್ನು ಸ್ಪರ್ಶಿಸದಿರು. ನಾನು ಒಂದೊಮ್ಮೆ ಅತ್ಯಂತ ಸ್ವಾದಿಷ್ಟ ಪದಾರ್ಥವಾಗಿದ್ದೆ. ದೇವರಿಗೆ ನೈವೇದ್ಯವಾಗಿ ಉಪಯೋಗಿಸಲೂ ಉಚಿತವಿದ್ದೆ. ನನ್ನ ದೌರ್ಭಾಗ್ಯದಿಂದ ನಿನ್ನ ಸಂಪರ್ಕಕ್ಕೆ ಬಂದು ನನ್ನ ಗತಿ ಹೀಗಾಯಿತು. ದಯಮಾಡಿ ನನ್ನನ್ನು ಮರಳಿ ಸ್ಪರ್ಶಿಸದಿರು. ನನ್ನ ಸ್ಥಿತಿ ಮುಂದೇನಾದೀತೋ?"

ಶಿಷ್ಯನು ಖಾಲಿ ಕೈಯಲ್ಲೇ ಗುರುವಿನೆಡೆ ತಲುಪಿದ ಮತ್ತು ಈ ರೀತಿ ಭಿನ್ನವಿಸಿಕೊಂಡ—"ನನ್ನಿಂದಲೂ ತುಚ್ಛ ವಸ್ತುವು ಈ ಭೂಮಂಡಲದಲ್ಲೇ ಇಲ್ಲ, ನಾನು ನನ್ನ ವಿಸರ್ಜಿತ ಮಲದಿಂದಲೇ ಸೋಲುಂಡಿದ್ದೇನೆ."

(ಸಂಗ್ರಹ: ಶ್ರೀ ಬೇಕಲ್ ನರಸಿಂಗ ರಾವ್)

## ಅನ್ನ ಸತ್ಯಾಗ್ರಹ

ಅಂಕೋಲೆ ಸಪ್ಟಂಬರ: ೧೭-ಮೈಸೂರ ಸರಕಾರವು ಪಾನ ಪ್ರತಿಬಂಧವನ್ನು ಸಡಿಲುಗೊಳಿಸುವ ಕುರಿತು ನಿರ್ಧರಿಸಿದ ಧೋರಣೆಯನ್ನು ವಿರೋಧಿಸಿ, ಉತ್ತರ ಕನ್ನಡ ಜಿಲ್ಲೆಯ ಸರ್ವೋದಯ ಪ್ರಮುಖರಾದ ಶ್ರೀ ಟಿ.ಎಸ್. ನಾಯಕ ಮಾಸ್ತರರು ಇದೇ ಕಳೆದ ೧೫ನೇ ತಾರೀಖಿನಿಂದ ೧೮ ದಿನಗಳ ನಿರಾಹಾರ ಉಪವಾಸ ವ್ರತವನ್ನು ಕೈಕೊಂಡಿದ್ದಾರೆ. ಆ ಕುರಿತು ಅವರು ತಮ್ಮ ಮಾವನಗೇರಿಯ ಆಶ್ರಮದಿಂದ ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿ, ಇದು ರಾಷ್ಟ್ರಪಿತನ ನಿಜ್ಜನ ಆದರ್ಶಗಳಿಗೆ ಭಾರೀ ಆಘಾತವೆಂತಲೂ, ಇದನ್ನು ತಾನು ಪ್ರತಿಭಟಿಸದೇ ಇದ್ದರೆ, ರಾಷ್ಟ್ರಪಿತನಿಗೆ ದ್ರೋಹ ಬಗೆದ ಪಾಪಕ್ಕೆ ಗುರಿಯಾಗುವೆನೆಂತಲೂ ಹೇಳಿದ್ದಾರೆ. ಅವರು ಕೈಕೊಂಡ ನಿರಾಹಾರ ಉಪವಾಸದ ಸುದ್ದಿಯನ್ನು ಶ್ರೀ ಹರಿ ಪೈ ಅವರು ತಂತಿಮೂಲಕ ರಾಷ್ಟ್ರದ ಧುರೀಣರಿಗೆ ತಿಳಿಸಿದ್ದಾರೆ.

ಶ್ರೀ ಪ. ಪಂ. ಗಾಂವಕಾರರು ಪ್ರಕಟಣೆಯೊಂದನ್ನು ಹೊರಡಿಸಿ ಶ್ರೀ ನಾಯಕ ಮಾಸ್ತರರ ಆದರ್ಶವನ್ನು ಪ್ರಶಂಸಿಸಿದರಲ್ಲದೆ ಅವರ ಆರೋಗ್ಯಕ್ಕಾಗಿ ದೇವರಲ್ಲಿ ಪ್ರಾರ್ಥಿಸಬೇಕೆಂದು ಕರ್ನಾಟಕದ ಜನತೆಗೆ ಭಿನ್ನವಿಸಿಕೊಂಡಿದ್ದಾರೆ.

ಕೇಣಿಗೇರಿ ಸ್ಮಾರಕ ಹ್ಯಾಸ್ಕೂಲಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ನಾಯಕ ಮಾಸ್ತರರ ಆರೋಗ್ಯದ ಬಗ್ಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು.

## ಯೆನ್. ಸಿ. ಸಿ. ದಿನಾಚರಣೆ.

ಮಣಿಪಾಲ ತಾ. ೨೨ರಂದು ಮಣಿಪಾಲ ಹೈಸ್ಕೂಲಿನಲ್ಲಿ ಯೆನ್. ಸಿ. ಸಿ. ದಿನವು ಬಹಳ ಸೈಯಾಗಿ ಆಚರಿಸಲ್ಪಟ್ಟಿತು. ಬೆಳಿಗ್ಗೆ ಪೆರೇಡ್ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕಲ್ಮಾಡಿ ರಾಮರಾವ್ ಅವರು ರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್, ಹಾಗೂ ಮೇಜರ್ ಜನರಲ್ ವೀರೇಂದ್ರ ಸಿಂಗ್ ಅವರುಗಳಿಂದ ಕಳುಹಿಸಲ್ಪಟ್ಟ ಸಂದೇಶಗಳನ್ನು ಓದಿದರಲ್ಲದೆ, ಯೆನ್. ಸಿ. ಸಿ. ಯವರು, ಈ ಬಿಕ್ಕಟ್ಟಿನ ರಾಜ್ಯರಕ್ಷಣೆಯಲ್ಲಿ ಹೇಗೆ ನೆರವಾಗಬಹುದೆಂದು ಸೂಚಿಸಿದರು. ಮಣಿಪಾಲ ಹೈಸ್ಕೂಲಿನ ಪಥಾರ ಮತ್ತು ಕಟ್ಟೋಣ ಶುಚಿತ್ವ ಕಾರ್ಯ, ಹತ್ತಿರದ ಎಲಿಮೆಂಟರಿ ಶಾಲೆಯಲ್ಲಿ ತರಕಾರಿ ಬೆಳೆಸೋಣ, ಇತ್ಯಾದಿ ಕಾರ್ಯಕ್ರಮಗಳೂ ನಡೆದುವು.

# ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

**ಭಾರತದ ವೀರಾಂಗನೆಯರು:—**

ರಾಕ್ಷಸೀ ಮನೋಭಾವನೆಯ ಚೀನಾ ಪಾಕಿಸ್ತಾನಗಳು ಭಾರತದ ಮೇಲೆ ಧಾಳಿ ಮಾಡಲು ಹವಣಿಸುತ್ತಿರುವ ಈ ಕಾಲವು ಭಾರತಕ್ಕೆ ತೀವ್ರ ಗಂಡಾಂತರವನ್ನೊಡ್ಡಿದೆ. ಇಂದು ನಮ್ಮ ಸ್ವಾತಂತ್ರ್ಯ ಮತ್ತು ನಮ್ಮ ಭೌಗೋಲಿಕ ಅಖಂಡತೆಯನ್ನು ಕಾಯ್ದುಕೊಳ್ಳುವುದೇ ನಮ್ಮ ಮೊದಲ ಲಕ್ಷ್ಯವಾಗಿರ ಬೇಕು.

ಇಂತಹ ವೇಳೆ ಉಜ್ವಲ ರಾಷ್ಟ್ರಪ್ರೇಮದಿಂದ ಉತ್ಪನ್ನವಾದ ಶೌರ್ಯ, ಧೈರ್ಯ, ಪರಾಕ್ರಮ ಹಾಗೂ ಆತ್ಮತ್ಯಾಗಗಳಿಂದ ರಾಷ್ಟ್ರಕ್ಕಾಗಿ ಹೋರಾಡುವ ವೀರಾವೇಶವು ಅತ್ಯಗತ್ಯವಾಗಿದೆ.

ತೊಟ್ಟಿಲನ್ನು ತೂಗುವ ಕೈಗಳೇ ರಾಜ್ಯವನ್ನಾಳುವವು ಎಂಬ ಮಾತಿನಂತೆ, ಅಂತಹ ವೀರ ಬಾಲಕರನ್ನು ಸಿದ್ಧಪಡಿಸಲು ವೀರ ಮಾತೆಯರೇ ಬೇಕು. ಮಾತ್ರವಲ್ಲ ಎಷ್ಟೋ ವೇಳೆ ಆ ಮಾತೆಯರು ಝಾನ್ಸಿ ಲಕ್ಷ್ಮೀರಾಣಿ ಬಾಯಿಯಂತೆ ರಣರಂಗದಲ್ಲೇ ಹೋರಾಡಿ, ರಾಷ್ಟ್ರರಕ್ಷಣೆಯ ಕಾರ್ಯವನ್ನು ಮಾಡಬೇಕಾಗುತ್ತದೆ.

ಅಂತಹ ವೀರ ಮಹಿಳೆಯರು ಭಾರತದ ಇತಿಹಾಸದಲ್ಲಿ ಅಪರೂಪವೇನಲ್ಲ. ಅವರು ಆಗಾಗ ಬೆಳಗಿ ಬಾಳಿದ್ದಾರೆ.

ಅಂತಹ ವೀರಾಂಗನೆಯರ ಜೀವನ ಚಿತ್ರಗಳನ್ನು ಸಂಗ್ರಹಿಸಿ ಪ್ರಕಟಿಸುವುದರ ಔಚಿತ್ಯದ ಕುರಿತಾಗಿ, ಹಾಗೂ ಅದರ ಆವಶ್ಯಕತೆಯ ಕುರಿತಾಗಿ ಪ್ರಶ್ನಿಸಬೇಕಾಗಿಯೇ ಇಲ್ಲ. ನಿಜ ಹೇಳುವುದಿದ್ದರೆ ಎಂದೋ ಆಗಬೇಕಾಗಿದ್ದ ಒಂದು ಕೆಲಸ ಅದು.

ಉಜ್ವಲ ರಾಷ್ಟ್ರ ಪ್ರೇಮಿಗಳಾದ ಶ್ರೀ ಶಿರಾಡಿಪಾಲರು ತಮ್ಮ "ಭಾರತದ ವೀರಾಂಗನೆಯರು" ಎಂಬ ಕೃತಿಯ ಮೂಲಕವಾಗಿ ಆ ಒಂದು ಕೊರತೆಯನ್ನು ತುಂಬಲೆತ್ನಿಸಿದ್ದಾರೆ—ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯೂ ಆಗಿದ್ದಾರೆ.

117 ಪುಟಗಳಲ್ಲಿ ಹೊರಬಂದ ಈ ಗ್ರಂಥದಲ್ಲಿ ಒಟ್ಟು 17 ಲೇಖಗಳಿವೆ. ಒಂದೊಂದು ಲೇಖವು ಒಬ್ಬೊಬ್ಬ ವೀರ ರಮಣಿಗಾಗಿ ಮೀಸಲಾಗಿದೆ. ಭಾಷೆ ಸರಳವೂ ಸುಂದರವೂ ಆಗಿದೆ. ವಿಷಯ ಪ್ರತಿಪಾದನೆ ಉತ್ತಮವಾಗಿದೆ. ಆದರೆ, ಪ್ರತಿಯೊಬ್ಬಳ ಕುರಿತಾಗಿ ಇನ್ನೂ ಹೆಚ್ಚಿನ ವಿವರ ನೀಡಿದರೆ ಉತ್ತಮವಾಗಿತ್ತು ಎಂಬ ಅನುಭವ ಓದುಗರಿಗೆ ಬಂದರೆ ಆಶ್ಚರ್ಯವಲ್ಲ. ಆದರೆ ಗ್ರಂಥದ ಪುಟ ಕಡಿಮೆಯಿರಲು, ಬೆಲೆಯು ಒಂದು ಮಿತಿಯೊಳಗಿರ ಬೇಕಾದುದು ಅಗತ್ಯವಾಗಿರಲು ಲೇಖಕರು ಆ ಸಾಹಸಕ್ಕೆ ಕೈಯಿಕ್ಕದುದು, ಯೋಗ್ಯವಲ್ಲವೆಂದು ಅನ್ನುವಂತಿಲ್ಲ.

ಭಾರತದ ವೀರಾಂಗನೆಯರ ಈ ಸಮ್ಮೇಳದಲ್ಲಿ ಕರ್ನಾಟಕದ ವೀರ ಸಿಂಹಿಣಿ ಚಿತ್ತೂರಿನ ರಾಣಿ ಚೆನ್ನಮ್ಮಳಿಗೇಕೆ ಸ್ಥಾನ ದೊರೆಯಲಿಲ್ಲ ಎಂಬ ಪ್ರಶ್ನೆ ಸಹಜ. ಪ್ರಾಯಶಃ ಆಕೆಯ ಕುರಿತಾದ ಪ್ರಚಾರ ಸಾಕಷ್ಟು ಇದೆ ಎಂಬ ಅಭಿಪ್ರಾಯ ಲೇಖಕರಿಗೆ ಇದೆಯೋ ಏನೋ? ಈ ಲೋಪವನ್ನೂ ತುಂಬಿದ್ದರೆ, ಚೆನ್ನಮ್ಮನ ನೆನಪಿಗಾಗಿ ಮಹಿಳೆಯರ ದಿನವನ್ನಾಚರಿಸಿದ ಕರ್ನಾಟಕಕ್ಕೆ ಇನ್ನಷ್ಟು ಹಿಗ್ಗಾಗುತ್ತಿತ್ತು.

ಬಹಳ ಮಂದಿ ಕನ್ನಡಿಗರು ಈ ಕೃತಿಯನ್ನೋದಿ ರಾಷ್ಟ್ರರಕ್ಷಣೆಗೆ ಬದ್ಧ ಕಂಕಣರಾಗಲಿ—ಎಲ್ಲಾ ಸ್ತ್ರೀಯರೂ ಪುರುಷಸಿಂಹರಾಗಲಿ ಎಂದು ಹಾರೈಸುತ್ತೇನೆ.

—ಎಂ. ನಾರಾಯಣ ಭಟ್.

---

## ಉಡ್ಪಿ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. P. 46/1965

(1) ಸರಸ್ವತಿ ಬಾಯಿ............

(2) ಸುಮತಿ, (3) ಸುಂದರಿ, (4) ರಮೇಶ, (5) ಸುಶೀಲ } ಮೈನರ್ರು—ಕ್ಷೇಮ ಚಿಂತಕಳು—ತಾಯಿ — 1 ನೇ ಅರ್ಜಿದಾರಳು—

1ನೇಯವಳು P. R. ಸಖಲ್‌ಕಾರ್‌ರ ವಿಧವೆಯಾಗಿಯೂ, ಮಿಕ್ಕವರು ಮಕ್ಕಳಾಗಿಯೂ ಇರುತ್ತಾರೆ.

ಎಲ್ಲರೂ C/o P. ಗೋಪಾಲಕೃಷ್ಣ ನಾಯಕ್—ಗಣೇಶ ಭವನ ಉಡ್ಪಿ ತಾಲ್ಲೂಕು ಹೆರ್ಗ ಗ್ರಾಮದ ಪರ್ಕಳದಲ್ಲಿರುವವರು—

— ಅರ್ಜಿದಾರ್ರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನಂದ್ರೆ:—

1 ನೇ ಅರ್ಜಿದಾರಳ ಗಂಡ ವ ಮಿಕ್ಕ ಅರ್ಜಿದಾರ್ರ ತಂದೆ—ಮಣಿಪಾಲ ಕಸ್ತೂರ್ ಬಾ ಜನರಲ್ ಆಸ್ಪತ್ರೆಯಲ್ಲಿ ತಾ. 4—9—1965 ರಲ್ಲಿ ಮೃತಪಟ್ಟಿರುವ P. R. ಸಖಲ್ ಕಾರ್ ಬಾಬ್ತು ಅರ್ಜಿಯಲ್ಲಿ ನಮೂದಿಸಿದಂತೆ Voltar Limited. Bombay— ಯವರಲ್ಲಿರುವ ಲೈವೇಜುಗಳನ್ನು ವಸೂಲು ಪಡಿಯುವರೇ ತಮ್ಮ ಹೆಸರಿನಲ್ಲಿ ಒಂದು ವಾರೀಸು ಹಕ್ಕು ಕೊಡಿಸಬೇಕಾಗಿ ಅರ್ಜಿದಾರರು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 9—12—65ಕ್ಕೆ ಇಟ್ಟಿದೆ. ಆಕ್ಷೇಪ ಉಳ್ಳವರು ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ಬಹುದು.

**K. BALACHANDRA RAO,**
Advocate for Petitioners.
Udipi, 29-11-1965.

---

(ಮೂರನೇ ಪುಟದಿಂದ)

ದು ಸಾಧ್ಯವಿಲ್ಲ. ಮುಂದಿನ ಐದು ವರ್ಷಗಳ ಕಾಲ ತಾನೇ ಅಧ್ಯಕ್ಷನಾಗಿದ್ದು ಆಡಳಿತೆ ನಡೆಸುವುದಾಗಿ ದಂಡಾಧಿಪತಿ ಮೊಬುಟು ಘೋಷಿಸಿದ್ದಾರೆ.೧೯೬೦ರಲ್ಲಿಯೂ ಕೆಲವು ತಿಂಗಳುಗಳ ಕಾಲ ಇವರು ಅಧ್ಯಕ್ಷ ಕಸವುಬುರವರನ್ನು ತಳ್ಳಿ ಹಾಕಿದವರು. ಅಂದವರು ಪಾರ್ಲಿಮೆಂಟಿನ ಕೈಗೆ ಅಧಿಕಾರ ಒಪ್ಪಿಸಿದ್ದರು. ಮೊಬುಟುರವರ ಈ ಕೃತ್ಯ ರೊಡೇಸಿಯಾದ ಬಗೆಗೆ ಎದ್ದ ಜ್ವಾಲೆಗೆ ತುಪ್ಪವೆರೆದಂತೆಯೆಂದೂ ಹೇಳಬಹುದು. ದೇಶದ ಆಂತರಿಕ ಕ್ಷೋಭೆಯನ್ನಾದರೂ ಇವರು ನಿವಾರಿಸಿಯಾರೇ ಎಂದೂ ಹೇಳುವುದಾಗದು ಸೇನೆಯು ರಾಜಕಾರಣದಿಂದ ದೂರವುಳಿಯುವುದೆಂದೂ ಕೇಂದ್ರ ಸರಕಾರದ ವಿರುದ್ಧ ಏಳುವ ದಂಗೆಗಳನ್ನು ಅಣಗಿಸುವುದನ್ನು ಬಿಟ್ಟು ಇನ್ನಾವ ರಾಜಕೀಯ ಮುನ್ನಡೆಗೂ ಹೋಗುವುದಿಲ್ಲವೆಂದು ಮೊಬುಟು ಸಾರಿದ್ದಾರೆ. ಆದರೆ, ಪ್ರಚಲಿತ ಪರಿಸ್ಥಿತಿಯಲ್ಲಿ ಕಸವುಬು ಮತ್ತು ಶೋಂಬೆಯವರು ಒಂದುಗೂಡುವುದರಲ್ಲಿಯೇ ಕಾಂಗೋ ಹಿತವಿದೆ. ಐದು ವರ್ಷ ಆಡಳಿತೆ ನಡೆಸುವ ಆಶಯದ ಮೊಬುಟೋ ಇದನ್ನು ಅರಿತುಕೊಂಡು ನಡೆದರೆ ಒಳ್ಳೆಯದಾದೀತು, ಇಲ್ಲವಾದರೆ ಇತಿಹಾಸದ ಪುನರಾವರ್ತನೆಯು ನಡೆಯ ತೊಡಗಿದರೂ ವಿಸ್ಮಯಪಡಬೇಕಿಲ್ಲ.

---

## ಅಂತರ್ ಕಾಲೇಜು ಸ್ಪರ್ಧೆಗಳು

"ಸುರತ್ಕಲ್ಲು ಕರ್ನಾಟಕ ರೀಜನಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಳೆದ ತಿಂಗಳ 14 ರಿಂದ ಫೈನ್ ಆರ್ಟ್ಸ್ ಕ್ಲಬ್ಬಿ"ನ ವತಿಯಿಂದ ವಿವಿಧ ಕಾರ್ಯಕ್ರಮಗಳು ಜರಗಿದವು.

ಮೊದಲ ದಿನವಾದ 14—11 65ರಂದು ಅಂತರ್ಕಾಲೇಜು ಚಿತ್ರಕಲಾ ಸ್ಪರ್ಧೆಯೊಂದು ಮಂಗಳೂರಿನ ಡಾ। ಸತ್ಯಶಂಕರರಾವ್ ಇವರಿಂದ ಉದ್ಘಾಟಿಸಲ್ಪಟ್ಟಿತು. ಕೊನೆಯ ದಿನವಾದ 21—11—65ರಂದು ಜರಗಿದ ಅಂತರ್ಕಾಲೇಜು ಸಂಗೀತ ಸ್ಪರ್ಧೆಯಲ್ಲಿ ಜಿಲ್ಲೆಯ ಸುಮಾರು 12 ಕಾಲೇಜುಗಳು ಭಾಗವಹಿಸಿದ್ದವು. ಕೊನೆಯ ದಿನದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಜಿಲ್ಲಾ ಡೆಪ್ಯೂಟಿ ಕಮಿಷನರ್ ಶ್ರೀ ಹೆಚ್. ಎಲ್. ನಾಗೇಗೌಡರು, ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿಗೆ ಬೆಳಗಾಂನ ದೊಡ್ಡಣ್ಣವರ್ ರೋಲಿಂಗ್ ಶೀಲ್ಡನ್ನೂ ಸಂಗೀತ ಸ್ಪರ್ಧೆಯಲ್ಲಿ ಮೊದಲ ಸ್ಥಾನವನ್ನು ಗಳಿಸಿದ ಮಂಗಳೂರಿನ ಗವರ್ನಮೆಂಟು ಕಾಲೇಜಿಗೆ ಶ್ರೀ ವಿ. ಎಸ್. ಕುಡ್ವಾರಿಂದ ನೀಡಲ್ಪಟ್ಟ "ಕೆನರಾ ವರ್ಕ್‌ಶಾಪ್ಸ್ ರೋಲಿಂಗ್ ಶೀಲ್ಡ"ನ್ನೂ ವಿತರಿಸಿದರು. ವಾರದ ಉಳಿದ ದಿನಗಳಲ್ಲಿ ನೃತ್ಯ ಹಾಗೂ ಕಲಾ ಪ್ರದರ್ಶನ, ಕಾಲೇಜು ವಿದ್ಯಾರ್ಥಿಗಳಿಂದ ನಾಟಕ, ಯಕ್ಷಗಾನ ಬಯಲಾಟಗಳೇ ಮೊದಲಾದ ವಿವಿಧ ವಿನೋದಾವಳಿಗಳು ನಡೆದುವು."

## ಮದ್ರಾಸ್ ದಾಸಪ್ರಸಾದದಲ್ಲಿ ಸಂಕೀರ್ತನೆಗಳ ಸಮಾರಂಭ.

ಶ್ರೀ ಕೃಷ್ಣ ಸೇವಾಧುರೀಣ, ಸಮಾಜ ಭೂಷಣ ಶ್ರೀ ಕೆ. ಸೀತಾರಾಮ ರಾಯರವರ ವಾಸಗೃಹವಾದ "ದಾಸಪ್ರಸಾದ"ದಲ್ಲಿ ಎಂದಿನಂತೆ ಈ ವರ್ಷದ ತುಳಸೀ ವೃಂದಾವನೋತ್ಸವದಲ್ಲಿ ಪೂಜಾ ಸಂಕೀರ್ತನೆ, ನರ್ತನ, ಭಜನೆಗಳು ತಾ. 25-10—65ರಿಂದ 6-11—65ರ ವರೆಗೆ ವಿಜೃಂಭಣೆಯಿಂದ ನಡೆಯಿತು. ಈ ಉತ್ಸವದ ಆಕರ್ಷಣೀಯ ದೃಶ್ಯಗಳ ಚಲನ ಚಿತ್ರಗಳನ್ನು ತೆಗೆಯಲಾಗಿದೆ.

ಈ ಉತ್ಸವಕ್ಕೆ ಆಹ್ವಾನಿತರಾಗಿ ಅನೇಕಾನೇಕ ಗಣ್ಯ ಮಹನೀಯರು ಭಾಗವಹಿಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ.

## ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಡುಗೆ

ಶಿರ್ವ, ತಾ. 30—10—65ರಂದು ಡಾ। ವೈ. ಆರ್. ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿದ ಸ್ಥಳೀಯ ಮೆಡಿಕಲ್ ರಿಲೀಫ್ ಎಸೋಸಿಯೇಶನಿನ ಆಡಳಿತೆ ಸಭೆಯಲ್ಲಿ ನಿಶ್ಚೈಸಿದಂತೆ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ. 101.00 ನ್ನು ಕಳ ಹಿಸಿರುವದಾಗಿ ಕಾರ್ಯದರ್ಶಿ ಶ್ರೀ ಕೆ. ವಾಸುದೇವ ಶೆಟ್ರು ತಿಳುಹಿಸಿರುತ್ತಾರೆ.

## ಮುಂಡಾಳ ಗುತ್ತು ಸಾಂತಪ್ಪ ರೈಗಳ ನಿಧನ.

ಪುತ್ತೂರು ತಾಲ್ಲೂಕು ಕೆದಂಬಾಡಿ ಗ್ರಾಮದ ಮುಂಡಾಳ ಗುತ್ತು ಸಾಂತಪ್ಪ ರೈಗಳು ತಾ. 15-11-65ರಂದು ತನ್ನ 97ನೇ ವಯಸ್ಸಿನಲ್ಲಿ ಪುತ್ತೂರು ಬೊಳುವಾರಿನಲ್ಲಿರುವ ಶ್ರೀ ಪೆರ್ನೆ ಸಂಜೀವ ರೈಗಳ ಮನೆಯಲ್ಲಿ ಸ್ವರ್ಗಸ್ಥರಾದರು.

ದಿವಂಗತರು ಬಂಟರ ಸಮಾಜದ ಗೌರವಸ್ಥ ಮನೆತನದವರೂ, ಮಾಜಿ ಪಟೇಲರೂ, ಆಗಿದ್ದರು ಇವರು ಸತ್ಯ, ಧರ್ಮ, ನ್ಯಾಯ ನಿಷ್ಠೆಯುಳ್ಳವರಾಗಿದ್ದು ಜನಮನ್ನಣೆ ಗೌರವಕ್ಕೆ ಪಾತ್ರರಾಗಿದ್ದರು.

---

## ಶ್ರೀ ಧನ್ವಂತರಿ ಜಯಂತಿ

ನಂಜನಗೂಡಿನ ಸದ್ವೈದ್ಯಶಾಲೆಯ [illegible] ನ್ವಂತರಿ ವಿಲಾಸದಲ್ಲಿ ತಾ. 20-11-65ರಂ[illegible] ಧನ್ವಂತರಿ ಜಯಂತಿಯು ವಾಡಿಕೆಯಂತೆ [illegible] ಧಾನಾಂಗವಾಗಿ ನೆರವೇರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಡಾ। ಬಿ ಬಿ. ಸವಣೂರ್ ಇವ[illegible] ಮಾನವನಿಗೆ ಆಯುರ್ವೇದವೇ ಶಾರಕ[illegible] ಎಂಬ ಕುರಿತು ಉಪನ್ಯಾಸ ಮಾಡಿದರು. [illegible] ಯಂತಿಯ ಅಂಗವಾಗಿ ಆಸ್ಥಾನ ವಿದ್ವಾನ್ ಶ್ರೀ ಬಿ. ದೇವೇಂದ್ರಪ್ಪ ಇವರ ಸಂಗೀತ [illegible] ಚೇರಿ ನಡೆಯಿತು.

### ಸಂಗೀತ ಕಚೇರಿ

ಉಡುಪಿ, ಕಳೆದ ತಾ. 21 ರಂದು ಜನಾಬ್ ಗುಲಾಮ್ ಮುಸ್ತಾಫಾ ಖಾನ್‌ರ ಸಂಗೀತ ಕಚೇರಿಯು ಸಂಗೀತ ಸಭಾದ ವತಿಯಿಂ[illegible] ಸ್ಥಳೀಯ ಶ್ರೀ ವರದೇಂದ್ರ ಕಲಾಮಂದಿ[illegible] ದಲ್ಲಿ ಜರಗಿತು.

ಪ್ರಾರಂಭದಲ್ಲಿ ಸಂಗೀತ ಸಭಾದ ಅಧ್ಯ[illegible] ಶ್ರೀ ಕೆ. ಕೆ. ಪೈಯವರು ಸ್ವಾಗತಿಸುತ್ತಾ ಕಲಾಕಾರರ ಪರಿಚಯವನ್ನು ಮಾಡಿಕೊ[illegible] ರು. ಈ ವರೆಗೆ ನಡೆದ ಕಾರ್ಯಕ್ರಮಗಳನ್ನು ವಿವರಿಸಿದರು. ಶ್ರೀ ಬಿ. ರಂಗನಾಥ ಶೆಣೈ[illegible] ವರು ಕಲಾಕಾರರಿಗೆ ಪುಷ್ಪಹಾರವನ್ನರ್ಪಿ[illegible] ದರು.

---

# ನವಯುಗದ ಚಂದಾದಾರರಲ್ಲಿ ವಿನಂತಿ

ಚಂದಾ ಅವಧಿ ಮುಗಿದ ಚಂದಾದಾರ[illegible] ಗೆಲ್ಲಾ ನಾವು ಈಗಾಗಲೇ ಕಾರ್ಡ್ ಒ[illegible] ದು ಮುಂದಿನ ಚಂದಾಹಣವನ್ನು ಕ[illegible] ಸಲು ವಿನಂತಿಸಿಕೊಂಡಿರುತ್ತೇವೆ. ಕೆ[illegible] ವರು ನಮ್ಮ ವಿನಂತಿಯನ್ನು ಮನ್ನಿ[illegible] ಚಂದಾಹಣವನ್ನು ಕಳಿಸಿಕೊಟ್ಟಿದ್ದಾ[illegible] ಇನ್ನೂ ಚಂದಾ ಕಳಿಸದವರು ದಯ[illegible] ಮಾಡಿ ತಮ್ಮ ಚಂದಾಹಣವನ್ನು ಬೇಗ[illegible] ಕಳಿಸಿಕೊಡುವಂತೆ ಬಿನ್ನವಿಸುತ್ತೇವೆ. ಅಂತಲ್ಲ ವಾರಾಂತ್ಯದೊಳಗೆ ಚಂದಾ ಬಾರದಿದ್ದರೆ ನಾವು ಮಾಡುವ ವಿ. ಪಿ. ಯನ್ನು ದಯಮಾಡಿ ಪಡಕೊಂಡು ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳು[illegible] ತ್ತೇವೆ.

ಮೆನೇಜರ್

---

## ಕುಂದಾಪುರ ಮು. ಕೋರ್ಟಿನಲ್ಲಿ.

R. E. P. 754/64 in O. S. 93/51.

ಸೂರು ಶೆಡ್ತಿ ಸಹಾ — ಅರ್ಜಿದಾರರು

ಮತ್ತು

ಪುಟ್ಟಮ್ಮ ಶೆಡ್ತಿ ಸಹಾ — ಎದ್ರುರು

ಕುಂದಾಪುರ ತಾಲೂಕು ಪಡುವರಿ ಗ್ರಾಮದ ಬಿಜ್ಜಾಡಹಿತ್ಲಿನಲ್ಲಿರುವ 1ನೇ ಎದ್ರು[illegible] ಪುಟ್ಟಮ್ಮ ಶೆಡ್ತಿ ಮಗ 3ನೇ ರಾಮಣ್ಣ ಶೆಟ್[illegible] ಮತ್ತು 2ನೇ ಎದ್ರುಳು ರುಕ್ಕಮ್ಮ ಶೆಡ್ತಿ ಮಕ[illegible] ಳು 9ನೇ ನಾಗಮ್ಮ ಶೆಟ್ಟಿ, 10ನೇ ನಾರಾಯಣ ಶೆಟ್ಟಿ ಕೂಡಾ 3 ಜನ ಎದ್ರುರಿಗೆ ಈ ಮೂಲಕ ತಿಳಿಸುವುದೇನೆಂದರೆ —

ನೀವು ಕೂಡಾ ಎದ್ರುರ ಮೂಲಗೇಣಿ ಹಕ್ಕಿನ ಸ್ಥಿರಾಸ್ತಿ ಏಲಂ ಅಪೇಕ್ಷಿಸಿ, ಮಾಡಿ[illegible] ಮೇಲಿನ ಅಮಲ್ದಾರಿಯಲ್ಲಿ ಏಲಂ ಶರ[illegible] ನಿರ್ಣಯವಗೊಳಿಸ್ಕರ ತಾರೀಖು 18-12-6[illegible] ಕ್ಕೆ ಇಟ್ಟಿರುತ್ತದೆ. ಆ ಬಗ್ಗೆ ಆ ದಿನ ನೀ[illegible] ಸ್ವತಹಾ ಯಾ ವಕೀಲರ ಮೂಲಕ ಕೋರ್ಟಿ[illegible] ಹಾಜರಾಗುವರೇ ತಪ್ಪಿದಲ್ಲಿ ನಿಮ್ಮಿಲ್ಲದ ಗೈರ್ ಹಾಜರಿಯಲ್ಲಿ ಅಮಲ್ದಾರಿಯ ಮುಂದಿ[illegible] ಕ್ರಮ ಕೈಗೊಳ್ಳಲಾಗುವುದು.

By order
G. Kushala Hegde,
Advocate for Petitioner's
Coondapur, 24—11—65.

# ಕ್ರೈತ್ರ ಮುರುಗ

(ಎರಡನೆಯ ಪುಟದಿಂದ)

ದರು. ಅವನು ಐದನೆಯ ಈಯತ್ತೆಯಲ್ಲಿ ಭಾಗ ಹೊಡೆದನು. ಅವನು ಶ್ರೀಮಂತನಿದ್ದುದರಿಂದ ಆಹಾರಕ್ಕಾಗಿ ಕಷ್ಟಪಡಬೇಕಾಗಿರಲಿಲ್ಲ.' ಎಂಬ ತುಂಟ ಹಾಗೂ ಹೊಗಳಿಕೆಯ ಮಾತು ಅವನನ್ನು ಹಾಳು ಮಾಡಿತು, ಈಗವನು ಪಟ್ಟಣದಲ್ಲಿ ನರ್ತಕಿಯೊಂದಿಗೆ ಇದ್ದಾನಂತೆ. ಇತ್ತ ಬಡ ಸೀತೆಯ ಕೈಬಿಟ್ಟುಬಿಟ್ಟಿದ್ದಾನೆ. ಹಾಗಾಗಿ ಅವಳೀಗ ಗರ್ವಿ ಅತ್ತೆಯ ದೌರ್ಜನ್ಯಕ್ಕೆ ಬಲಿಯಾಗಿ ಕೊಂಡಿದ್ದಾಳೆ."

"ಆದರೆ, ನೋಡಿ, ಸೀತೆಯಲ್ಲಿ ನಿಮಗಿರುವ ಉತ್ಸಾಹವನ್ನು ಕಂಡು ನಾನು ಮತ್ಸರ ಪಡುತ್ತಿರುವೆನೆಂದು ಒಪ್ಪಿಕೊಳ್ಳಲೇಬೇಕು," ಅರ್ಧ ತಮಾಷೆಯಲ್ಲಿ ಜಾನಕಿ ಹೇಳಿದಳು.

"ನಾನು ಇನ್ನೂ ಹೇಳುವದನ್ನು ಕೇಳು, ಜಾನಕಿ ಅವಳದ್ದೊಂದು ಕರ್ತವ್ಯದ ಸಾಲ ನನ್ನ ಮೇಲಿದೆ. ಒಮ್ಮೆ ಸೀತೆಯ ಗಂಡನು ನನ್ನ ಪ್ರಾಣವನ್ನುಳಿಸಿದ್ದಾನೆ. ಇದೇ ಕಾವೇರಿಯಲ್ಲಿ ಈಜಾಡುತ್ತ, ಆಡುತ್ತಿದ್ದಾಗ, ನಾನು ಮುಳುಗಿ ಹೋಗುತ್ತಿದ್ದೆ. ಅವನು ತನ್ನ ಬಲವಾದ ತೋಳುಗಳಿಂದ ನನ್ನನ್ನು ರಕ್ಷಿಸಿದನು. ನಾನೀಗ ಬೇರೊಂದು ರೀತಿಯಿಂದ ಆ ಸೇವೆಯ ಋಣವನ್ನು ತೀರಿಸ ಬೇಕೆಂದಿದ್ದೇನೆ. ಆ ಸೇವೆಯಿಂದ ಸೀತೆ ಹಾಗೂ ಅವಳ ಗಂಡನು ಉಳಿದುಕೊಳ್ಳುವಂತಾಗಬೇಕು. ಇನ್ನೆದಾದರೂ ಅವನು ನೋಡಲು ಸಿಕ್ಕಿದಾಗ ಆ ಕುರಿತು ಮಾತಾಡಬೇಕೆಂದಿದ್ದೇನೆ, ಒಮ್ಮೆ ಅವನ ಮೇಲೆ ನನ್ನ ಪ್ರಭಾವ ಇತ್ತು. ಅನಂತರ ಅವನು ಅನುತ್ತೀರ್ಣನಾದನು, ಶಾಲೆ ಬಿಟ್ಟ. ನಾನೂ ಅವನನ್ನು ಅಲಕ್ಷ್ಯ ಮಾಡಿದೆನು."

"ಈಗ ಕೇದಾರಿಯು ನಿಮ್ಮನ್ನು ಅಲಕ್ಷ್ಯ ಮಾಡುವಂತೆ...." ಮೊಂಡ ರೀತಿಯಲ್ಲಿ ಸೀತೆಯು ಹೇಳಿದಳು.

"ಹೌದು, ಹೌದು. ನಾನೊಪ್ಪುತ್ತೇನೆ." ರಾಮು ಗಲಿಬಿಲಿಯಿಂದ ಹೇಳಿದನು. "ಕೆಟ್ಟ ಅಭ್ಯಾಸಗಳನ್ನು ಬಿಟ್ಟು ಬಿಟ್ಟು, ರೂಪವತಿ ಸೀತೆಯನ್ನು ಪುನಃ ಸ್ವೀಕರಿಸುವಂತೆ ನಾನು ಅಂಗಲಾಚಿ ಬೇಡಿಕೊಳ್ಳುತ್ತೇನೆ."

"ಮುಳುಗುತ್ತಿರುವ ಮನುಷ್ಯನನ್ನು ಉಳಿಸುವ ಭರದಲ್ಲಿ, ದಯವಿಟ್ಟು ನೀವು ಮುಳುಗಿ ಹೋಗಬೇಡಿ." ಜಾನಕಿಯು ಸ್ತ್ರೀ ಸಹಜ ಗುಣದಿಂದ ಮುಂಜಾಗರೂಕತೆಯ ಮಾತನ್ನು ಪ್ರಯತ್ನ ಪೂರ್ವಕವಾಗಿ ತಿಳಿಸಿದಳು.

"ಈ ಸರಳ ಪ್ರೇಮದ ಕಾರ್ಯದಿಂದ ಹಳ್ಳಿಯ ಪುನರುದ್ಧಾರಣೆಯ ಪವಿತ್ರ ಕಾರ್ಯವನ್ನಾರಂಭಿಸುವ. ಪ್ರೀತಿಸುವ ಪತ್ನಿಗೆ ಹಾಗೂ ಪತಿವ್ರತೆಗೆ ಅವಳ ಪತಿಯನ್ನು ತಿರುಗಿ ಕೊಡುವ. ಹೊಟ್ಟೆಕಿಚ್ಚು ಹೆಚ್ಚು ಆಗುತ್ತದೆಯೇನೇ?"

"ಇಲ್ಲಾಂದ್ರೆ, ಆದರೆ ನನಗೆ ಕೂಡಾ ಅದರಲ್ಲಿ ಭಾಗವಹಿಸಲು ಬಿಡುತ್ತೀರೆಂದು ಆಶ್ವಾಸನೆಯಿತ್ತರೆ ಮಾತ್ರ ಹೊಟ್ಟೆಕಿಚ್ಚು ಹೆಚ್ಚು ಆಗುವದಿಲ್ಲ."

ರಾಮು ಮತ್ತು ಜಾನಕಿ ತಮ್ಮದೇ ಆದ ಆಲೋಚನೆಯ ಸಾಗರದಲ್ಲಿ ಮುಳುಗಿದ್ದರು. ಸೀತೆಯ ಪಾತ್ರ ಬಹು ನಾಜೂಕಿನದ್ದು ಹಾಗೂ ಕಷ್ಟದ್ದಾಗಿತ್ತು. ಮೌನವನ್ನು ಭೇದಿಸುತ್ತ 'ಒಳ್ಳೇದು ಜಾನಕಿ, ಈಗ ನಮ್ಮ ವಿಷಯಕ್ಕೆ ಬರೋಣ. ನನ್ನ ಭವಿಷ್ಯತ್ತು ಸ್ಪಷ್ಟವಿದೆ. ತಿರುಗಿ ಬಿ. ಎ.ಯಲ್ಲಿ ಪ್ರಯತ್ನಿಸಲು ನಾನು ಹೋಗುವದಿಲ್ಲ. ಇಲ್ಲೇ ನೆಲಸುತ್ತೇನೆ."

"ಸೀತೆಯು ಕೂಡಾ ನಿಮ್ಮ ವಿಷಯದಲ್ಲಿ ಅದೇ ನಿಶ್ಚಯಕ್ಕೆ ಬಂದಿದ್ದಾಳೇಂದ್ರೆ."

"ನಾನೀಗ ಅತಿ ಗಂಭೀರನಿದ್ದೇನೆ, ಜಾನಕಿ. ನಮ್ಮ ಮುಂದಿನ ದಾರಿ ಮತ್ತು ದ್ರವ್ಯಾನುಕೂಲತೆಯನ್ನು ನಿನ್ನ ಮುಂದಿಡುತ್ತೇನೆ."

"ಎಳೆಕ್ರೆ ಜಮೀನು—ಸಾವಿರ ರೂಪಾಯಿ ಸಾಲ—ಜಮೀನನ್ನು ಪಾರಿಸಿಬಿಡಲಿರುವ ಸಿಡಿಮದ್ದು," ಚುರುಕಾಗಿ ಹಾಗೂ ಸಂಕ್ಷಿಪ್ತವಾಗಿ ಜಾನಕಿ ತಿಳಿಸಿದಳು.

'ನಮ್ಮ ವ್ಯವಹಾರದಲ್ಲಿ ನೀನು ಜಾಗ್ರತೆ ಹಾಗೂ ಉಪಾಯದಿಂದ ಇಂದಿದ್ದಲ್ಲಿ ಸಾಲವು ಸಿಡಿಮದ್ದೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಚೆನ್ನಾಗಿ ಯುಕ್ತಿಯಿಂದ ತಯಾರಿಸಿದ ಆಯವ್ಯಯ ಪಟ್ಟಿಯಂತೆ ನೀನು ಸದಾ ಜೀವನವನ್ನು ನಡೆಸಿದಲ್ಲಿ ಆ ಪಿಶಾಚಿಯ ತಲೆಗೆ ಮೊಳೆ ಹೊಡೆಯಬಹುದು, ಮತ್ತು ಅದರಿಂದ ಅಪಾಯರಹಿತವಾಗಿರಬಹುದು."

ರಾಮು ತಾನು ಕೂತುಕೊಂಡಿದ್ದ ಸ್ಥಿತಿಯನ್ನು ಬದಲಾಯಿಸಿದನು. ಲೇಖನಿ ಮತ್ತು ಕಾಗದ ಹಾಳೆಯನ್ನು ತೆಗೆದುಕೊಂಡು, ಪಿಶಾಚಿಗೆ ಎಂದೆಂದೂ ಇರುವಂತೆ ಮೊಳೆ ಹೊಡೆಯುವ, ಆಯವ್ಯಯದ ಪಟ್ಟಿಯನ್ನು ತಯಾರಿಸುವದರಲ್ಲಿ ಅವನು ಮಗ್ನನಾದನು. ಮುಂಜಾಗರೂಕತೆಯಿಲ್ಲದಿರುವ ಮಾನವರೆಲ್ಲರೂ ಹಾಳೆಯ ಮೇಲೆ ಬಿಡಿಸಿದ ಉತ್ತಮ ಹಂಚಿಕೆ ಹಾಗೂ ವಿಚಾರಪೂರಿತ ಯೋಜನೆಗಳನ್ನು ಕಂಡು ಸಂತೋಷಪಟ್ಟುಕೊಳ್ಳುತ್ತಾರೆ.

"ಪ್ರಿಯೆ, ನಮ್ಮ ಏಳು ಎಕ್ರೆಗದ್ದೆಗಳು ಮುನ್ನೂರು ಕಾಲಂ ಭತ್ತವನ್ನು ಕೊಡುತ್ತವೆ. ತೋಟವು ಸಾಧಾರಣ ಮುನ್ನೂರು ರೂಪಾಯಿಗಳನ್ನಾದರೂ ಕೊಡುತ್ತದೆ. ಜಾಗರೂಕತೆಯಿಂದ ಜೀವಿಸಿದಲ್ಲಿ ವರ್ಷ ಒಂದಕ್ಕೆ ಮುನ್ನೂರು ರೂಪಾಯಿಗಳನ್ನಾದರೂ ಉಳಿಸಿಕೊಳ್ಳಬಹುದು. ಹೆಚ್ಚೆಂದರೆ ಐದು ವರ್ಷಗಳಲ್ಲಿ ಸಾಲದ ಬಹುವನ್ನೇ ಕಡಿದೊಗೆಯಬಹುದು. ನಾವಿಬ್ಬರೇ ಇದ್ದೇವೆ. ನಾವು ಜಾಗ್ರತೆಯಿಂದ ಪವಿತ್ರ ಹಾಗೂ ಸುಸಂಸ್ಕೃತ ಜೀವನ ಸಾಗಿಸೋಣ."

"ಆದರೆ ಈ ಅಗ್ರಹಾರವು ಚಾಡಿ ಮಾತು, ಕಥೆ ಹಾಗೂ ಇತರ ಅಂತಹ ವಿಷಯಗಳಿಂದ ತುಂಬಿಕೊಂಡಿದೆ." ಜಾನಕಿಯು ಟೀಕಿಸಿದಳು. ಆಗ ಅವಳ ಕಣ್ಮುಂದೆ ಸೀತೆಯ ರೂಪ ತೇಲಿಹೋಯಿತು.

"ಹಾಗಿದ್ದಲ್ಲಿ ನಮ್ಮ ವಾಸಸ್ಥಳವನ್ನು ಬದಲಾಯಿಸುವ. ನನ್ನ ಹಂಚಿಕೆಯಲ್ಲಿ ಅದಕ್ಕೂ ಸ್ಥಳವಿದೆ. ಹಲಿಪೂರಿನಿಂದ ಬಂದಿರುವ, ಆದರೆ ಅದೃಷ್ಟದ ಈ ಮನೆಯನ್ನು ಮಾರಿಬಿಟ್ಟು, ಸಾಲದ ಒಂದಂಶವನ್ನು ಸುಲಭವಾಗಿ ತೀರಿಸಿಬಿಡಬಹುದು. ತೋಟದಲ್ಲಿ ನಾವೊಂದು ಚಿಕ್ಕ ಗುಡಿಸಲನ್ನು ಕಟ್ಟುವ. ಗುಡಿಸಲಿನ ಮುಖ ಮಾತ್ರ ಪವಿತ್ರ ನದಿಯತ್ತ ಇರಬೇಕು. ಅದನ್ನು ನಿಸರ್ಗದತ್ತ ಇಟ್ಟಿಗೆ ಹಾಗೂ ಹಂಚುಗಳಿಂದ ಕಟ್ಟೋಣ. ಹಾಗೆ ಮಾಡುವದರಿಂದ ಚಾಡಿಯ, ಕಥೆಕಟ್ಟುವ ಮತ್ತು ಮಾತ್ಸರ್ಯಪೂರ್ತಿ ದೃಷ್ಟಿಗಳಿಂದ ದೂರದಲ್ಲಿರಬಹುದು. ನಮ್ಮ ಸ್ವಂತ ಸ್ಥಳದಲ್ಲಿ ಮಣ್ಣಿನ ಮಕ್ಕಳಂತೆ ದುಡಿಯುವ ಮುರುಗನು ನಮಗೆ ತರಬೇತಿ ಕೊಡುತ್ತಾನೆ. ಬಡವರು ಬೆವರು ಚೆಲ್ಲಿ ಗಳಿಸಿಕೊಟ್ಟ ಧನವನ್ನು ಇಸ್ಪಿಟಾಡುತ್ತ, ಪ್ರಣಯದಲ್ಲಿ, ಹೃದಯ ಒಡೆಯುವ, ಹಾಸಿಗೆ ಒಡೆಯುವ ಧೂರ್ತ ಹಾಗೂ ಮೋಸಗಾರ ಈ ಆಲಸಿ ಶ್ರೀಮಂತರಿಗೆ ನಾವು ಆದರ್ಶರಾಗಿದ್ದು ಒಳ್ಳೆಯ ಗುರಿಯನ್ನು ತೋರಿಸೋಣ. ಅವನ ಸಂತೋಷಕ್ಕಾಗಿ ಅವನ ಕೈಯಿಂದ ಮಾಡಲ್ಪಡದಿರುವ ವಸ್ತುವನ್ನು, ಭೋಗಿಸಲು ಯಾರಿಗೂ ಹಕ್ಕು ಇರುವದಿಲ್ಲ."

"ಹದಿನೈದು, ಮತ್ತು ಮುದಲಿ ಬೀದಿಯ ಜಗಲಿಯಿಂದ ನೋಡಿದಲ್ಲಿ ನನಗೆ ಈ ಹಳ್ಳಿಯು ಒಂದು ಸಣ್ಣ ಸ್ವರ್ಗವಿದೆ. ಎಲ್ಲಿ ನೀವು ಇರುತ್ತೀರೋ, ಅದೇ ನನಗೆ ಅಯೋಧ್ಯೆ ಇದೆ. ಗರ್ವದಿಂದಾಗಿ ಮದ್ರಾಸಿನಲ್ಲಿ ತಾಯಿಯವರು ಒಬ್ಬಂಟಿಗರಾಗಿದ್ದು ಕಷ್ಟವನ್ನನುಭವಿಸುತ್ತಿದ್ದಾರೆ. ನಾವು ಅವಳ ಖರ್ಚಿಗಾಗಿ ಏನನ್ನಾದರೂ ಕಳುಹಿಸಬೇಡವೇ? ನನ್ನ ತಾಯಿಯ ಹೊಣೆ ನಿಮ್ಮ ಮೇಲಿದೆ. ಅದು ನಿಮ್ಮ ಅರಿಕೆ. ನೀವು ನನ್ನನ್ನು ಪತ್ನಿಯೆಂದು ಅರಿಸಿಕೊಂಡಾಗ ಅವರನ್ನು ಅತ್ತೆಯೆಂದು ಅರಿಸಿಕೊಂಡಿದ್ದೀರಿ.

"ಅದಕ್ಕಾಗಿ ನಾನು ದುಃಖ ಪಡುವದಿಲ್ಲ, ಪ್ರಿಯೆ ಜಾನಕಿ. ಯಾವ ತಾಯಿ ನಿನ್ನನ್ನು ನನಗೆ ಕೊಟ್ಟಿರುವರೋ, ಅವರ ಹೊಣೆ ನನಗೆ ಭಾರವಲ್ಲ. ಅವರು ಈ ಮನೆಗೆ ಹಿರಿಯರಾಗಿದ್ದು ಮಾರ್ಗದರ್ಶಕರಿದ್ದಾರೆ."

"ಆದರೆ ನಮ್ಮ ಕನಸು ಹಾಗೂ ಹಂಚಿಕೆಗಳನ್ನು ಅವರು ವಿರೋಧಿಸಬಹುದು.'

"ಅದೇ ನನ್ನ ಹೆದರಿಕೆ, ಪ್ರಿಯೆ. ನೀನು ಸರಿಯಾಗಿಯೇ ಊಹಿಸಿರುವೆ. ಅವರ ಪ್ರಕೃತಿ ನನ್ನದಕ್ಕೆ ವಿರುದ್ಧವಾಗಿದೆ. ನಾವಿಬ್ಬರೂ ಎರಡು ಧ್ರುವಗಳಂತಿದ್ದೇವೆ. ಅವರು ಮಹತ್ವಾಕಾಂಕ್ಷಿಯವರಿದ್ದಾರೆ. ನಾನು ಹಾಗಲ್ಲ ನೀನೂ ಹಾಗಲ್ಲ. ಅವರು ಜಗಳಕ್ಕಾಗಿ ಇದ್ದಾರೆ, ನಾವು ಶಾಂತಿಗಾಗಿ ಇದ್ದೇವೆ.'

"ಆದರೂ...." ಜಾನಕಿಯು ಮಧ್ಯದಲ್ಲಿ ಬಾಯಿ ಹಾಕಿದಳು.

"ಆದರೆ ನನ್ನ ಕರ್ತವ್ಯದ ದಾರಿ ಹಾಗೂ ನಿನ್ನ ವಾತ್ಸಲ್ಯ ಇವು ಸ್ಪಷ್ಟ ಇವೆ. ಅವರನ್ನು ನಮ್ಮೊಂದಿಗಿರಲು ಆಹ್ವಾನಿಸಲೇ ಬೇಕು. ಇಲ್ಲಿಗೆ ಬರಬೇಕೆಂದು ತಿಳಿಸಿ ನಾಳೆಯೇ ನಾನು ಬರೆದು ಹಾಕುತ್ತೇನೆ."

"ಒಂದು ವಾಕ್ಯವನ್ನು ಕೇದಾರಿಗೆ ಕೂಡಾ ಬರೆದು ಬಿಡೀಂದ್ರೆ.' ನಿಷ್ಕಪಟ ಮುಗುಳ್ನಗೆಯಾಡುತ್ತ ಜಾನಕಿಯು ವಾದಿಸಿದಳು.

'ಇಲ್ಲ. ನನ್ನನ್ನು ನಾನೇ ಎರಡನೆಯ ಬಾರಿಯೂ ಹುಚ್ಚನನ್ನಾಗಿ ಮಾಡಿಕೊಳ್ಳಲಾರೆ. ಅವನು ನ್ಯಾಯ ವಿದ್ಯಾಲಯದ ಮೊದಲನೆ ವರ್ಷದ ಪರೀಕ್ಷೆಯಲ್ಲಿ ಮೊದಲ ಸ್ಥಾನವನ್ನು ಪಡೆದಿದ್ದಾನೆ. ಅವನು ನನಗೇನೂ ಬರೆದಿಲ್ಲ. ನಾನು ಕೂಡಾ...."

'ಮೊದಲ ವರ್ಷದ ಪರೀಕ್ಷೆಯಲ್ಲಿ ಮೊದಲ ಸ್ಥಾನ!" ಸ್ವಲ್ಪ ಹೆಮ್ಮೆ ಹಾಗೂ ಸಂತೋಷದಿಂದ ಜಾನಕಿಯು ಧ್ವನಿಗೂಡಿಸಿದಳು.

ರಾಮು ತೊಂದರೆಗೊಳಪಟ್ಟನು. ಅವನು ಮೌನವಾಗಿದ್ದನು. ಕೇದಾರಿಯು ತನ್ನ ಹೆಂಡತಿಯ ಸಂಬಂಧಿ ಎಂಬುದು ಕೂಡಾ ಅವನ ಜ್ಞಾಪಕಕ್ಕೆ ಬರಲಿಲ್ಲ. ರಾಮು ತನ್ನವನಾಗುವಂತೆ ಮಾಡಿರುವ ಕೇದಾರಿಯನ್ನು ಅವಳು ಮರೆಯುವದು ಹೇಗೆ? ಅಲ್ಲದೆ ತಾಯಿಯು ಕೂಡಾ ಅವನಿಗೆ ಉಜ್ವಲ ಭವಿಷ್ಯತ್ತಿದೆ ಎಂದು ತಿಳಿಸಿದ್ದಳು. ಅವಳು ರಾಮುವಿನತ್ತ ನೋಡಿ, ಕ್ಷಣಕಾಲ, ಒಳಗಿಂದೊಳಗೆ ನಿಟ್ಟುಸಿರು ಬಿಟ್ಟಳು. ತನ್ನಷ್ಟಕ್ಕೆ ಶಾಂತಳಾಗಿ ಅವಳು ನಿಂತುಕೊಂಡಳು.

(ಮುಂದುವರಿಯುವುದು)

**ಬೆಳ್ತಂಗಡಿ ಮುನ್ಸಿಫ ಕೋರ್ಟಿನಲ್ಲಿ**

O. S. No. 63/1964.

ಅಬ್ಬಯಾನೆ ಅಕ್ಕಮಾಲ ಸಹ—ವಾದಿರು

Ch. ಜಿನರಾಜ ಶೆಟ್ಟಿ ಸಹ—ಪ್ರತಿವಾದಿರು

11ನೇ ಪ್ರತಿವಾದಿ—ಪುತ್ತು ಪೂಜಾರ್ತಿ, ದೇಜಮ್ಮನ ಮಗಳು—ಬೆಳ್ತಂಗಡಿ ತಾಲ್ಲೂಕು ಕಾಶಿಪಟ್ಟಣ ಗ್ರಾಮ. —ಇವರಿಗೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿರು ಆಸ್ತಿ ಸ್ವಾಧೀನತೆ ಯಿತ್ಯಾದಿ ನಿವೃತ್ತಿಗಳ ಬಗ್ಗೆ ನಿಮ್ಮ ವಗೈರೆರ ಮೇಲೆ ಹೂಡಿದ ಮೇಲಿನ ದಾವೆಯು ತಾ. 10–12–[illegible]ನೆಕ್ಕೆ ತನ್ಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ಸದ್ರಿ ಪ್ಯಾದೆ ದಿನ ನೀವು ಸ್ವತಃ ಯಾ ವಕೀಲ ದ್ವಾರಾ ಕೋರ್ಟ ಮುಂದೆ ಬೆಳಗ್ಗೆ 10 ಗಂಟೆಗೆ ಹಾಜರಾಗುವದಕ್ಕೆ ತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಗೈರ್ಹಾಜ್ರಿ ಮಾಡಿ ದಾವೆ ತೀರ್ಮಾನಿಸಲಾದೀತು.

B.K. Suryanarayana Rao
Advocate for Plaintiff.

ಬೆಳ್ತಂಗಡಿ, ತಾ. 20–11–1965.



NAVAYUGA 2—12—1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೨-೧೨-೬೫ರಿಂದ ೮-೧೨-೬೫ರ ವರೆಗೆ

### ೧. ಮೇಷ

ಈ ವಾರವು ನಿಮಗೆ ಸ್ವಲ್ಪ ಪ್ರತಿಕೂಲವಾಗಿ ಕಾಣಿಸಲಿದೆ. ಆರ್ಥಿಕ ವಿಭಾಗದಲ್ಲಿ ಸ್ವಲ್ಪ ಬಿಕ್ಕಟ್ಟು ಕಾಣಿಸುವದು. ವ್ಯಾಪಾರದಲ್ಲಿ ನಷ್ಟ ನಿಷ್ಠುರಗಳು ಸಂಭವಿಸುವವು. ಹೆಂಡತಿ ಮಕ್ಕಳ ಆರೋಗ್ಯಕ್ಕೆ ಸ್ವಲ್ಪ ಹಾನಿಯಿದೆ. ಉದ್ಯೋಗ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲವು ಪೂರ್ತಿ ಲಭಿಸಲೊಲ್ಲದು. ತಾ. 2. 5. 6. ಈ ದಿನಗಳಲ್ಲಿ ನಿಮ್ಮ ಪ್ರಯತ್ನಗಳು ಸಫಲಗಳಾಗಲಿವೆ.

### ೨. ವೃಷಭ

ನಿಮ್ಮ ಉದ್ಯಮ ಸ್ಥಾನಗಳಲ್ಲಿ ಶನೈಶ್ಚರನಿದ್ದು ಗುರುವಿನ ಪೂರ್ಣ ದೃಷ್ಟಿಯೂ ಇಡೆದಿರುವುದರಿಂದ ಇಂದು ನಿಮ್ಮ ಯಾವತ್ತೂ ವ್ಯವಹಾರಗಳು ನಿರಾತಂಕವಾಗಿ ನೆರವೇರಲಿವೆ. ಶತ್ರು ಜನರ ಕಾರಸ್ಥಾನದಿಂದಾಗಿ ರಾಜಕೀಯದಲ್ಲಿ ಪರಾಭವ ಉಂಟಾಗಲಿದೆ. ಸಮೀಪದ ಬಂಧುಗಳ ವಿಯೋಗವುಂಟಾದೀತು. ತಾ. 2. 3. 4. 7. 8. ಈ ದಿನಗಳು ಸುಖಸಂತಸದಾಯಿಗಳಾಗಿವೆ.

### ೩. ಮಿಥುನ

ಹಿಂದಿಗಿಂತ ಪರಿಸ್ಥಿತಿಯು ಸ್ವಲ್ಪ ಮಟ್ಟಿಗೆ ಸುಧಾರಣೆ ಹೊಂದಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ವಿಶೇಷ ಲಾಭವಿಲ್ಲದಿದ್ದರೂ ನಷ್ಟವಾಗದು ಗೃಹತಾಪತ್ರಯವು ಕೊಂಚ ಕಡಿಮೆಯಾಗಲಿದೆ. ಆದರೆ ರಾಜಕೀಯದಲ್ಲಿ ಹೆಚ್ಚಿನ ಶ್ರೇಯಸ್ಸು ಲಭಿಸುವ ಸಂಭವವಿಲ್ಲ. ಎದುರಾಳಿಗಳ ಕೈಯ್ಯೇ ಮೇಲಾಗಿರುವದು. ಪ್ರವಾಸಗಳನ್ನು ಸದ್ಯ ಕೈಬಿಡುವದೊಳ್ಳಿತು ತಾ. 8ರಿಂದ 6ರ ವರೆಗಿನ ದಿನಗಳು ಸುಖಲಾಭಕಾರಿಗಳಾಗಿವೆ.

### ೪. ಕರ್ಕಟ

ನಿಮ್ಮ ವ್ಯವಹಾರಗಳಿಗಿಂದು ವಿರೋಧ ವಿಘ್ನಾದಿಗಳು ಸುತ್ತಲಿಂದಲೂ ಬರಲಿವೆ. ಆತ್ಮೀಯರೆಂಬವರಾರೂ ಸದ್ಯ ನಿಮಗಿಲ್ಲವೆಂಬರೂ ತಪ್ಪಾಗದು. ಆರ್ಥಿಕ ದುರವಸ್ಥೆಯಿಂದ ತುಂಬಾ ಕಂಗಲಾದ ನಿಮಗೆ ಮನೆಯಲ್ಲೂ ಸುಖವಿರದು. ದೇಹಾಲಸ್ಯ ಮನೋರೋಗಗಳು ದಿನದಿಂದ ದಿನಕ್ಕೆ ಹೆಚ್ಚಲಿವೆ. ಸ್ವಜನ ವಿರೋಧ ಶತ್ರು ಜನರ ಪೀಡೆಗೊಳಗಾದ ನಿಮಗೆ ವಾರಾಂತ್ಯದ 4 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

### ೫. ಸಿಂಹ

ನಿಮ್ಮ ಸುಖಭಾಗ್ಯಪನಾದ ಅಂಗಾರಕನು ತನ್ನ ಉಚ್ಚದತ್ತ ದೃಷ್ಟಿ ಹರಿಸಿದನು. ಧನಲಾಭದ ಅನುಗ್ರಹವೂ ಸಾಕಷ್ಟು ಉತ್ತಮವಾಗಿದ್ದು ಲಾಭಸ್ಥಾನದಲ್ಲಿ ಬೃಹಸ್ಪತಿಯು ಕುಳಿತಿರೋಣದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿಯು ಬಹ್ವಂಶ ಸುಧಾರಿಸಲಿದೆ. ಮನೋರೋಗದಿಂದ ಮುಕ್ತರಾದ ನೀವು ಜನಾನುರಾಗವಂ ಪಡೆವಿರಿ. ಅನಿರೀಕ್ಷಿತ ಪ್ರವಾಸವು ಪ್ರಾಪ್ತವಾದೀತು. ವಾರಾಂತ್ಯದ 2 ದಿನಗಳಲ್ಲಿ ನಿಮ್ಮ ಬಯಕೆಗಳು ಕೈಗೂಡಲಿವೆ.

### ೬. ಕನ್ಯಾ

ಕಾರ್ಯದಕ್ಷರೂ ಕರ್ಮನಿರತರೂ ಆದ ನಿಮಗೆ ಇಂದಿನ ದಿನಗಳು ಹೆಚ್ಚಿನಂಶ ಅನುಕೂಲವಾಗಿರುವವು. ಪರಿಶ್ರಮವು ಸಾರ್ಥಕವಾದೀತು. ಶತ್ರು ಜನರ ವಿರೋಧವನ್ನು ಲೆಕ್ಕಿಸದೆ ಕಾರ್ಯದಲ್ಲಿ ಮುಂದರಿವ ನಿಮಗೆ ಇಂದು ಹಣದ ಕೊರತೆ ಕಾಣಿಸದು. ಆದರೆ ವಾತ ದೋಷದಿಂದಾಗಿ ಆರೋಗ್ಯಕ್ಕೆ ಸ್ವಲ್ಪ ಹಾನಿ ಸಂಭವಿಸಲಿದೆ. ಪ್ರವಾಸವು ಹಿತಕರವೆನಿಸದು ವಾರಾದಿಯ 3 ದಿನಗಳು ಇದ್ದುದರಲ್ಲಿ ಉತ್ತಮವೆನಿಸಲಿದೆ.

### ೭. ತುಲಾ

ಸ್ವಯಂ ದಕ್ಷರಾದ ನಿಮಗೆ ದೈವ ಬಲವೂ ಚೆನ್ನಾಗಿರುವುದರಿಂದ ಹೆಚ್ಚಿನ ನಿಮ್ಮ ಮನೋರಥಗಳಿಂದು ಕಾರ್ಯರೂಪಕ್ಕೆ ಬರಲಿವೆ. ಜನತೆಯ ಸಹಕಾರ ಸಹಾಯಗಳಿಂದ ಕೂಡಿದ ನೀವು ಎಂತಹ ಪ್ರಬಲ ಪ್ರತಿಪಕ್ಷಿಯನ್ನೂ ಪರಾಭವಗೊಳಿಸುವಿರಿ. ಕೆಲವೊಂದು ಆತ್ಮೀಯರೆನಿಸಿದವರು ನಿಮ್ಮನ್ನಿಂದು ವಂಚಿಸಲಿರುವರು. ಆದರೂ ವ್ಯವಹಾರ ಚತುರರಾದ ನಿಮಗೆ ತಾ. 3ರಿಂದ 6ರ ವರೆಗಿನ ದಿನಗಳು ತುಂಬ ಸಹಕಾರಿಗಳಾಗುವವು.

### ೮. ವೃಶ್ಚಿಕ

ಧನಪತಿಯಾದ ಗುರುವು ಅಷ್ಟಮದಲ್ಲಿದ್ದು ಲಾಭಪತಿಯಾದ ಬುಧನೂ ದುಃಸ್ಥಾನದುದರಿಂದ ಈ ವಾರದಲ್ಲಿ ನಿಮಗೆ ಹೆಚ್ಚಿನ ಹಣದ ಮುಗ್ಗಟ್ಟುಂಟಾಗುವದು. ಜೆರವರ ನೆರವು ನಿಮಗಿಂದು ವ್ಯಾಘ ಮರೀಚಿಕೆಯಂತೆ ವಿಫಲವಾಗುವದು. ವಿಶೇಷತಃ ವಿದ್ಯೋಪ ಜೀವಿ ಜನತೆಗೆ ನೇರಲಿಂದ ನೋಲಿ ಕಷ್ಟನಷ್ಟ ನಿಷ್ಠುರಗಳು ಪ್ರಾಪ್ತವಾಗಲಿವೆ. ವಾರಂತ್ಯದ 4 ದಿನ ಇದ್ದುದರಲ್ಲಿ ಉತ್ತಮವೆನಿಸುವವು.

### ೯. ಧನು

ಕರ್ತವ್ಯ ತತ್ಪರರೂ ಶ್ರಮಸಹಿಷ್ಣುಗಳೂ ಆದ ನಿಮಗೆ ಹಲವಾರು ತರದ ಖರ್ಚುವೆಚ್ಚಗಳು ಪ್ರಾಪ್ತವಾಗುವದಾದರೂ ನೀವಿಂದು ಚಿಂತಿಸ ಬೇಕಾದ ಕಾರಣವಿಲ್ಲ. ನಿಮ್ಮ ದು... ಮೆಯು ತೃಪ್ತಿಕರವಿರುವುದು. ಆರೋಗ್ಯ ದೃಷ್ಟ್ಯಾ ಈ ವಾರವು ಅನುಕೂಲವಿದೆ. ಕೋರ್ಟು ಕಛೇರಿಗಳ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲವು ಲಭಿಸಲೊಲ್ಲದು. ವಾರಾಂತ್ಯದ 2 ದಿನಗಳು ಇಷ್ಟಪ್ರದಗಳಿವೆ.

### ೧೦. ಮಕರ

ಸುತ್ತಮುತ್ತಲಿಂದಲೂ ನಿಮಗಾಗದವರು ಅನೇಕ ತರದ ವಿಘ್ನ ವಿಡ್ಡೂರಗಳನ್ನೆಸಗಿದರೂ ಅದು ನಿಮ್ಮ ಮೇಲಿಂದು ಪರಿಣಾಮಕಾರಿಯಾಗಲಾರದು. ಹೆಚ್ಚಿನ ಸಮಯವನ್ನು ನೀವಿಂದು ಪ್ರವಾಸದಲ್ಲೇ ಕಳೆವಿರಿ. ಮುಂ... ಕೃತಿಪ್ರಾಕ್ಯ ತಂಪಟೀತ್ ಎಂಬ ನ್ಯಾಯದಂತೆ ನೀವೆಂದೂ ಊಟೋಪಚಾರಗಳಿಗೆ ಕೊರತೆ ಮಾಡಿಕೊಳ್ಳಲಾರಿರಿ. ತಾ. 3. 4. ವಾರದಲ್ಲಿ ಉತ್ತಮ ದಿನಗಳು.

### ೧೧. ಕುಂಭ

ಎಷ್ಟೇ ಸಾಧನ ಸಂಪತ್ತುಗಳಿರಲಿ, ಸ್ವಂತಕ್ಕಾಗಿಯೂ ಕೂಡ ಖರ್ಚು ಮಾಡುವ ವಿಷಯದಲ್ಲಿ ನೀವು ಬಹಳ ಹಿಂದೆ ಮುಂದೆ ನೋಡುವಿರಿ. ಸಧ್ಯ ನಿಮ್ಮ ಎಲ್ಲಾ ಉದ್ಯಮ ವ್ಯವಹಾರಗಳೂ ನಿರಾತಂಕವಾಗಿ ಸಾಗಲಿವೆ. ನಿಮ್ಮ ಕಾರ್ಯ ದಕ್ಷತೆಯಂ ಕಂಡ ಪ್ರತಿಪಕ್ಷಿಗಳೂ ಇಂದು ತಲೆದೂಗಲಿರುವರು. ಜನಾನುರಾಗವಂಗಳಿಸಿದ ನಿಮಗೆ ತಾ. 2. 5. 6. ಅತೀವ ಪ್ರಶಸ್ತವಾಗಿವೆ.

### ೧೨. ಮೀನ

ಗ್ರಹ ಬಲವು ಸಾಕಷ್ಟು ಉತ್ತಮವಿಲ್ಲವಾದರೂ ನಿಮ್ಮ ಧನಪತಿಯೂ ಭಾಗ್ಯಪತಿಯೂ ಆದ ಅಂಗಾರಕನು ಸದ್ಯವೇ ನಿಮ್ಮ ಲಾಭ ಸ್ಥಾನಕ್ಕೆ ಉಚ್ಚನಾಗಿ ಪ್ರವೇಶಿಸಲಿರುವನಾದ್ದರಿಂದ ಈಗಿಂದೀಗಲೇ ನಿಮ್ಮ ಆರ್ಥಿಕ ಸಮಸ್ಯೆಯು ದೂರವಾಗುತ್ತಿದೆ. ಎಷ್ಟೇ ... ದಾಯವಿದ್ದರೂ ನೀವು ಕಾಸೊಂದನ್ನೂ ... ಸಲಾರಿರಿ. ತಾ. 3. 4. 7. 8. ಈ ದಿನಗಳಲ್ಲಿ ಧನ ಭೋಗಗಳನ್ನು ಪಡೆವಿರಿ.


ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

**ಚಂದ್ರಲೋಕಕ್ಕೆ ಪ್ರಯಾಣ**
ಯು. ರಾಘವೇಂದ್ರ ಆಚಾರ್ಯ,ಎಂ.ಎ.

**ಸಾಮಾನ್ಯ ರೋಗಗಳು**
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಉತ್ಪತ್ತಿ, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

**ಭೌತಿಕ ದರ್ಶನ**
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**ಸುಲಭದಲ್ಲಿ ಇಂಗ್ಲಿಷ್**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

**ಸುಲಭದಲ್ಲಿ ಪತ್ರಲೇಖನ**

**LETTER WRITING MADE EASY**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

**ಗೀತೆಯ ಕೈಗನ್ನಡಿ**

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಿಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.



ಶ್ರೀ ಕೆ. ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾದಂಬರಿಗಳ ಹೊಸ ಪುಸ್ತಕಗಳು

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.



**ವರ್ಗ-ಊಳಿಗ**
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.


Edited, Printed & Published by K. H. Shetty at the Navayuga Press, Udipi, S. India.

# ನವಯುಗ

**9—12—1965**

phone 226

೧೦ ಪೈಸೆ

**ಧಾರಾವಾಹಿ ಕಾದಂಬರಿ**

# ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ವೊದಲು—

ಅಲವಂತಿಯ ಏಳಿಗೆಗೆ ಜಮೀನುದಾರ ರಾಮು ಮಿತ್ರ ಕೇದಾರಿಯ ಪತ್ರದತ್ತ ಗಮನವಿತ್ತು, ಒಕ್ಕಲು ಮುರುಗನ ಮನನೋಯಿಸಿ ಮದ್ರಾಸಿಗೆ ತೆರಳಿದ. ಕೇದಾರಿಯ ಸಹಾಯದಿಂದ ಜಾನಕಿ–ರಾಮಚಂದ್ರರ ವಿವಾಹವಾಯಿತು. ಬಿ. ಎ. ಪರೀಕ್ಷೆಗೆ ಕುಳಿತ ನಂತರ ರಾಮು ಹಳ್ಳಿಗೆ ಮರಳಿದ. ನಗರ ವಾಸಿಗಳಾಗಿದ್ದ ಈ ದಂಪತಿಗಳ ಬಗೆಗೆ ಊರ ಮಹಿಳಾ ಮಂಡಳದಲ್ಲಿ ನಾನಾಬಗೆಯ ಊಹಾ ಪೋಹಗಳೆದ್ದುವು. ಅದರೂ ದುರ್ಭಾಗ್ಯೆ ಸೀತೆ ಜಾನಕಿಯರು ಮಿತ್ರೆಯರಾದರು. ರಾಮು ಈ ಬಾರಿಯೂ ಅನುತ್ತೀರ್ಣನಾದ. ತನ್ನ ಭವಿಷ್ಯ ಅಂಧಕಾರಮಯವೆಂದು ನಿಶ್ಚಯಿಸಿದ ರಾಮು ಕುಟುಂಬ ಕಾವೇರಿಯ ದಡದಲ್ಲೇ ನಿಲ್ಲುವುದೆಂಬ ನಿರ್ಧಾರ ಮಾಡಿತು.

ಮುಂದೆ—

"ಕೇದಾರಿ, ನಿನ್ನಂತಹ ಉಲ್ಲಾಸಿ, ಯಶಸ್ವಿ ಹಾಗೂ ದಟ್ಟಡವಿಯಲ್ಲಿ ಮುಂದಕ್ಕೆ ಹೋಗುತ್ತಿರುವ ಕೊಡಲಿಯ ಹಾಗೆ—ಬಾಳ ದಾರಿಯನ್ನು ಸರಿಪಡಿಸಿಕೊಂಡು ಹೋಗುವ, ಒಬ್ಬ ಅಳಿಯನನ್ನು ನಾನು ಪಡೆದಿರುತ್ತಿದ್ದಲ್ಲಿ!" ಕೇದಾರಿಯು ಹದಿನೈದು, ಮತ್ತು ಮುದಲಿ ಬೀದಿಗೆ ಬಂದಾಗ, ಮೀನಾಕ್ಷಿಯು ಮುಂಚೆಯೇ ಚೆನ್ನಾಗಿ ಸಿದ್ಧಪಡಿಸಿಟ್ಟುಕೊಂಡಿದ್ದ ಮಾತುಗಳಿಂದ ಆಹ್ವಾನಿಸಿದಳು. ಆ ಮಾತುಗಳನ್ನು ಕೇಳಿದ ಕೇದಾರಿಯು ಮನಸ್ಸಿನಲ್ಲಿ ಕಸಿವಿಸಿಯಾದರೂ ಅವಳು ಇನ್ನೇನು ಹೇಳುತ್ತಾಳೆ ಎಂಬುದನ್ನು ಕೇಳುವ ಕುತೂಹಲವಿತ್ತು.

"ನೀವು ರಾಮುವಿಗೆ ತಪ್ಪುಮಾಡುತ್ತಿದ್ದೀರಿ. ಅಂತಹ ಅಪೂರ್ವ ಹಾಗೂ ಶ್ರೇಷ್ಠ ಪುರುಷ ಸಿಗುವದು ಬಹಳ ಕಡಿಮೆ. ಈಗ ಸಮಯ ಮಾತ್ರ ಅವನಿಗೆ ಉತ್ತಮವಾಗಿಲ್ಲ. ಅವನು ಇಡಿ ದಿನ ಆಲೋಚಿಸುತ್ತ ಕುಳಿತುಕೊಳ್ಳುತ್ತಾನಲ್ಲದೆ, ಕೆಲಸದಲ್ಲಿ ಕೈ ಹಾಕುವದಿಲ್ಲ. ಬಾಳಿನಲ್ಲಿ ದುಃಖಾವಸ್ಥೆಗೆ ಕಾರಣ ಏನೆಂಬುದನ್ನು ಯಾವಾಗಲೂ ಆಲೋಚಿಸುತ್ತ ಇರುತ್ತಾನೆ. ನನಗಿಂತ ಬುದ್ಧಿಶಕ್ತಿ ಅವನಿಗೇನೂ ಕಮ್ಮಿ ಇಲ್ಲ, ಆದರೂ ನನ್ನ ಹಾಗೆ ಬೂಟಾಟಿಕೆ ಅವನಲ್ಲಿಲ್ಲ. ಅವನ ಜ್ಞಾನಭಂಡಾರ ಬಹಳ ದೊಡ್ಡದಿದೆ. ಆದರೆ ಅವಿಶ್ರಾಂತ ವಿಶ್ವಕ್ಕೆ ಕ್ಷಣಕಾಲ ನಿಂತು ಅವನನ್ನು ಅರಿತುಕೊಳ್ಳಲು ಬಿಡುವಿರುವದಿಲ್ಲ. ವಸ್ತುಗಳನ್ನು ಭೂತಕನ್ನಡಿಯಲ್ಲಿ ಕಾಣಲು ಅವನು ಒಪ್ಪುವದಿಲ್ಲ. ಜಾಹಿರಾತುದಾರರು ಪ್ರಪಂಚವನ್ನಾಳುತ್ತಾರೆ. ಅದಕ್ಕೆ ತಿಲಾಂಜಲಿ ಕೊಡಲು ಮಾತ್ರ ರಾಮುವಿಗೆ ಗೊತ್ತು. ಬಿಡುವಿಲ್ಲದೆ ಕಾರ್ಯಮಗ್ನರಾಗಿರುವ ಹಾಗೂ ಅತಿ ಮಹತ್ವಾಕಾಂಕ್ಷೆಯ ತತ್ವಗಳಲ್ಲಿ ಅವನಿಗೆ ನಂಬಿಕೆ ಇಲ್ಲ. ಬಹುಶಃ ಅಮ್ಮ ದುಃಖದ ನಡುವೆ ಹುಟ್ಟದಿರುತ್ತಿದ್ದಲ್ಲಿ ನಾನು ಕೂಡಾ ಇನ್ನಷ್ಟು ರಾಮುವಾಗುತ್ತಿದ್ದೆ. ತಾಯೀ, ಕಕ್ಷಿಗಾರನ ಪರವಾಗಿ ಈ ರೀತಿ ಉದ್ಬುದ್ಧದ ಮಾತುಗಳಿಂದ ವಾದಿಸುವದನ್ನು ಕಂಡು ಮುಗುಳ್ನಗುತ್ತಿದ್ದೀರಿ. ಆದರೂ ನೀವು ತಿರುಪತಿ ಬೆಟ್ಟದ ದಕ್ಷಿಣದಲ್ಲಿ ಇರುವ ಮನುಷ್ಯರಲ್ಲಿ ಉತ್ತಮನನ್ನೇ ಅಳಿಯನನ್ನಾಗಿ ಪಡೆದಿದ್ದೀರೆಂದು ನಿಮಗೆ ಆಶ್ವಾಸನೆ ಕೊಡಬಲ್ಲೆ.'

"ಬಿ. ಎ. ಯಲ್ಲಿ ಎರಡು ಸಲ ಲಾಗ ಹೊಡೆದವನ ; ಏಳು ಎಕರೆಯ ಒಡೆಯ" ಮೆಲ್ಲನೆ ಕುಹಕ ವಕ್ರೋಕ್ತಿಗಳನ್ನು, ಗಾಳಿಯನ್ನೂ ಇರಿಯುವ ಸ್ವರದಿಂದ, ಹೇಳಿದಳು. "ಗರ್ಭವನ್ನೇ ಮುಚ್ಚುವ ಸಾವಿರ ರೂಪಾಯಿ ಸಾಲದ ಕೆಸರು ಇದೆ. ಉಣ್ಣೆ ಕತ್ತರಿಸುತ್ತಿದ್ದರೂ ಕೂಗದಿರುವ ಕುರಿಯಂತೆ, ರಾಮು ನಮ್ರನು, ಸಾಧು. ಉಣ್ಣೆಯು ಇತರರಿಗೆ ಒಳ್ಳೆಯದಿದೆ; ಕುರಿಗೆ ಮಾತ್ರ ಅವಸ್ಥೆ. ರಾಮು ವಿಚಾರವಿಲ್ಲದ ಮಂಕು ಹುಡುಗನಿದ್ದಾನೆ. ಕೇದಾರಿ, ನಾನು ವರದಕ್ಷಿಣೆಯಾಗಿ ಕೊಟ್ಟಿದ್ದ ಸಾವಿರ ರೂಪಾಯಿಗಳನ್ನೂ ಅವನು ಹಾಳು ಮಾಡಿದ್ದಾನೆ. ನಿನಗದು ಗೊತ್ತಿದೆಯೇ? ಹಣವನ್ನು ತೆಗೆದುಕೊಂಡ ಮೇಲೆ ನನಗೆ ಸ್ವಲ್ಪವಾದರೂ ಮರ್ಯಾದೆ ತೋರಿಸಬೇಡವೇ?"

ಮೀನಾಕ್ಷಿಯು ಪಂದ್ಯದಲ್ಲಿ ತನ್ನನ್ನು ಗೆಲ್ಲಬಹುದೆಂದು ಕೇದಾರಿಯು ತಿಳಿದುಕೊಂಡನು. ಅವನು ಸ್ವಲ್ಪ ಅಳುಕಿದನು. ಆದರೆ ಕೂಡಲೇ ಸುಧಾರಿಸಿಕೊಂಡು, ಕೆಲವು ಮಾತುಗಳನ್ನಾಡಲು ಇಷ್ಟಪಟ್ಟನು. ಅವನು ಮಾತಾಡುವ ಮುಂಚೆಯೇ ಮೀನಾಕ್ಷಿಯು ಎಡಗೈಯನ್ನು ಅಲುಗಾಡಿಸುತ್ತ ಮಾತನ್ನು ಮುಂದುವರಿಸಿ ಕೇದಾರಿಯನ್ನು ಸುಮ್ಮನಿರಿಸಿದಳು. "ನಿಜವಾಗಿ, ಜಾನಕಿಗೆ ದುಃಖ ಕೊಟ್ಟು ಕೇವಲ ಅಡುಗೆ ಕೋಣೆಯ ಗೂಗೆಯನ್ನಾಗಿ ಅವನು ಮಾಡಿಟ್ಟಿದ್ದಾನೆ. ಅವಳಿಗೇನೂ ಭವಿಷ್ಯತ್ತಿಲ್ಲ. ಓದನ್ನು ಮುಂದರಿಸಲು ನೀನು ಅವನಿಗೆ ಬರೆದಿದ್ದಿಯೋ? ಬಿ. ಎ. ಯಲ್ಲಿ ತೇರ್ಗಡೆ ಹೊಂದದವನು ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುವವನಿಗೆ ಸಮಾನನೆಂದು ಅವನಿಗೆ ತಿಳಿಸು.'

ಕೇದಾರಿಯು ಧೀರುವಿನಂತೆ 'ಇಲ್ಲ' ಎಂದು ತಲೆ ಅಲ್ಲಾಡಿಸಿದನು. ಅವಳ ಕಣ್ಣುಗಳಿಂದ ಹೊರಟ ಮಿಂಚು. ಬಾಯಿಯಿಂದ ಬಂದ ಗುಡುಗು. ಮುಖದಲ್ಲಿನ ಮೋಡಗಳಿಂದ ಏನಾದರೂ ಘಟಿಸಬಹುದೆಂದು ಕೇದಾರಿಯು ಸುಮ್ಮಗಿದ್ದನು.

"ನೀನವನಿಗೆ ಬರೆಯಲೇ ಇಲ್ಲ! ನಿಜವಾಗಿ ಉಪಕಾರ ಬುದ್ಧಿ! ನೀನು ಬಿ. ಎ.ಯಲ್ಲಿ ಮೊದಲ ಶ್ರೇಣಿಯಲ್ಲಿ, ಬಿ. ಎಲ್.ನಲ್ಲಿ ಮೊದಲಿಗನನ್ನಾಗಿ ಉತ್ತೀರ್ಣನಾಗಿರುವೆ. ಪ್ರಸಿದ್ಧ ವಕೀಲ ಡಂರವರ ಸ್ನೇಹಿತನಿರುವೆ. ನೀನೀಗ ರಾಮುವನ್ನೇತಕ್ಕಾಗಿ ಜ್ಞಾಪಕದಲ್ಲಿಟ್ಟುಕೊಳ್ಳುವೆ? ಅವನೀಗ ಹಳಬನಾಗಿದ್ದಾನೆ. ಹರಿದು ಹೋಗಿರುವ ಬಟ್ಟೆ—ಚಿಂದಿಯಂತೆ ಅವನೀಗ ನಿರುಪಯೋಗಿ."

"ಒಂದಿಷ್ಟೂ ದಯೆ ತೋರಿಸಲಾರಿರಾ ಅಮ್ಮ? ನಾನು ಹೇಳುವದನ್ನು ಕೇಳಿಕೊಳ್ಳಿ. ನಿಮ್ಮನ್ನು ವಿಚಾರಿಸಿ ಆ ಪತ್ರ ಬರೆಯಬೇಕೂತಿದ್ದೆ.' ನಿರಾಶನಾಗಿ ಕೇದಾರಿಯು ಉತ್ತರಕೊಟ್ಟನು.

"ಹಾಗಾದಲ್ಲಿ, ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ನನ್ನ ಅಭಿಪ್ರಾಯವನ್ನು ಕೇಳಲಿಕ್ಕಾಗಿ ನೀನು ಬಂದದ್ದೇನು?" ಇನ್ನೂ ವಂಕ ವಕ್ರೋಕ್ತಿಯಿಂದ ಆಕೆ ಮರುನುಡಿದಳು. "ಇತರ ದಿನಗಳಂತಿರದೆ, ಇದು ನಿನ್ನ ಮೂಕ ಜಾಣ್ಮೆಯಿಂದಿರುವಲ್ಲ. ರಾಮು ಮತ್ತು ಕೇದಾರಿ ಒಮ್ಮೆ ಏಷ್ಟು ವರ್ಷಗಳ ವರೆಗೆ ಅಚ್ಚು ಮೆಚ್ಚಿನ ಪ್ರಾಣಸ್ನೇಹಿತರಾಗಿದ್ದರು! ಜಯಶಾಲಿ ಹುಡುಗರು ಎಂದಾದರೂ ತಮ್ಮ ತರಗತಿಯಲ್ಲಿನ ಅಪಜಯಶಾಲಿ ಸಂಗಾತಿಗಳನ್ನಾಗಲೀ, ಆಟದ ಸಂಗಾತಿಗಳನ್ನಾಗಲೀ, ಜ್ಞಾಪಕದಲ್ಲಿಟ್ಟುಕೊಳ್ಳುವುದುಂಟೇ? ಬಾಳಿನ ದ ನಿಯಮಗಳಿಗೆ ಅದು ಏಂದ್ರವಿಷ ಸೋಲಿನೊಂದಿಗೆ ಸ್ನೇಹದ ಇತಿಶ್ರೀಯಾಗಿ ಬಿಡುತ್ತದೆ. ಅದೂ ಈಗಿನ ಕಾಲದ ಸ್ನೇಹವು ಬರಿಯ ಲಾಭದಲ್ಲಿ ಪಾಲುಗಾರನಾಗಲಿಕ್ಕಾಗಿ ಮಾತ್ರವಲ್ಲವೇನು?'

"ಇಲ್ಲ ತಾಯೀ, ಇಲ್ಲ. ಈ ಕಟು ಟೀಕೆಗಳಿಗೆ ನಾನು ಅರ್ಹನಲ್ಲ. ನಾನೀಗ ಕಷ್ಟದ ಹಾಗೂ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದೇನೆ. ನಾನು ಬರೆದಲ್ಲಿ ಅವನು ಮೆಚ್ಚಲಿಕ್ಕಿಲ್ಲ. ನಾನು ಬರೆಯದೇ ಇದ್ದಲ್ಲಿ ಅವನು ತಪ್ಪು ತಿಳಿದುಕೊಳ್ಳುತ್ತಾನೆ. ಜಾನಕಿಯ ಮೇಲೆ ನಿಮಗಿರುವ ವಾತ್ಸಲ್ಯದಿಂದಾಗಿ ನನ್ನ ಮೇಲೆ ಚೆನ್ನಾಗಿ ತಪ್ಪು ಹೊರಿಸಿದಿರಿ." ಬಲವಾಗಿ ಕೇದಾರಿಯು ಕಷ್ಟವನ್ನು ನಿರಾಕರಿಸಿದನು. ಮೀನಾಕ್ಷಿಯು ಒಂದೇ ಸವನೆ ಅವನ ಮೇಲೆ ಧಾಳಿ ಮಾಡಿದುದರಿಂದಾಗಿ ಅವನ ಚಮತ್ಕಾರ ಮಾತುಗಳು ಅವ್ಯವಸ್ಥಿತವಾಗಿ ಬಿಟ್ಟಿದ್ದುವು. ಅವು ಈಗ ಮೆಲ್ಲಮೆಲ್ಲನೆ ತಮ್ಮ ಸ್ಥಾನಕ್ಕೆ ಹಿಂದಿರುಗಲಾರಂಭಿಸಿದುವು.

"ನೀನೀಗ ಬುದ್ಧಿಶಾಲಿಯಂತೆ ತರ್ಕ ಮಾಡುತ್ತಿರುವೆ." ಮೀನಾಕ್ಷಿಯು ಹೇಳಿದಳು. ನಾನು ಮಾತಾಡುವ ಭರದಲ್ಲಿ ನಾಲಗೆಗೆ ಬಹಳ ಬಹಳ ಸ್ವಾತಂತ್ರ್ಯ ಕೊಟ್ಟಿದ್ದೆನೆಂಬುದವಳಿಗರಿವಾಯಿತು. ದರಿಂದ ಕೇದಾರಿ ಕೋಪಿಸಿಕೊಂಡು ನ್ನು ಬಾರದಂತಾಗದಿರಲಿ ಎಂದು ಆಶಿಸಿದಳು.

"ನೀನು ತರುಣ ಹಾಗೂ ಮನುಷ್ಯರಲ್ಲಿ ಮನ್ನಣೆ ಪ್ರಖ್ಯಾತನಾಗಿರುವದು ಆಶ್ಚರ್ಯದ ವಿಷಯವಲ್ಲ." ಇದೀಗ ಮೆಲ್ಲನೆ ಗುನುಗುವ ಪ್ರಪಂಚದಿಂದ ಆಕೆಯು ಹೊಳೆವ ಪ್ರಸಂಗಗಳಲ್ಲಿ, ಸ್ತ್ರೀ ಗುಣಕ್ಕನುಗುಣವಾಗಿ, ಕಾಲಿರಿಸಿದಳು. ಪ್ರಾಯಶಃ ಮಾತುಗಳಾದರೂ ಉಪಾಯದ ಹಾಗೂ ಆಕರ್ಷಕ ಮಾತುಗಳಾಗಿದ್ದುವು.

ಅದೇ ಸಮಯದಲ್ಲಿ, ಅಂಚೆಯವನ

(ಹದಿನೈದನೇ ಪುಟ ನೋಡಿರಿ)


## 8%

## ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7¾ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | .... | 4 |

## ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೇಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

### ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

**ಚಂದಾದಾರರಿಗೆ—**

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬಲನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಇಂದು ಬಿಳಿಯರಿಗೂ ನೀಗ್ರೋಗಳಿಗೂ ಸರಿಸಮಾನ ಕೆಲಸಗಳು ಸಿಗುವಂತೆ ಕಾಯಿದೆಬದ್ಧ ಸಂದರ್ಭಗಳು ಒದಗಿಸಲ್ಪಟ್ಟಿವೆ.

# ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೧೪ | ೯—೧೨—೧೯೬೫ | No. 14

## ಕಣ್ಣುಮುಚ್ಚಾಲೆ

'ಪರಾನ್ನಂ ಪರಮ ಕಷ್ಟಂ' ಎಂಬುದು ಇಂದಿನ ವಿಷಮ ಪರಿಸ್ಥಿತಿಯಲ್ಲಿ ಭಾರತೀಯರಿಗೆ ಸರಿಯಾಗಿ ಮನದಟ್ಟಾಗಿದೆ. ನಾವು ಸ್ವತಂತ್ರರಾಗುವುದಕ್ಕೆ ಮೊದಲೂ ಅನಂತರವೂ ನಮ್ಮನ್ನು ಆಹಾರದ ಕಾಡುವಷ್ಟು ಮತ್ತಾವುದೂ ಪೀಡಿಸುವುದಿಲ್ಲ. ಆಹಾರದ ಪಟ್ಟಿಗೆ ನಾವು ಪರರಾಷ್ಟ್ರಗಳನ್ನೇ, ಮುಖ್ಯವಾಗಿ ಅಮೆರಿಕೆಯನ್ನೇ ಹೊಂದಿಕೊಂಡಿದ್ದೆವು. ಅವರಲ್ಲಿ ಧಾನ್ಯಗಳ ಉತ್ಪಾದನೆ ಅಧಿಕವಿತ್ತು. ಅದನ್ನು ಏನು ಮಾಡುವುದು ಎಂಬುದೇ ಅವರ ಪ್ರಶ್ನೆಯಾಗಿತ್ತು. ಶೇಖರಿಸಿಡುವ ಆಗತ್ಯವೇನೂ ಅವರಿಗಿಲ್ಲ; ಉಗ್ರಾಣಗಳೆಲ್ಲವೂ ಆಹಾರಧಾನ್ಯಗಳಿಂದ ತುಂಬಿತುಳುಕಾಡುತ್ತಿರುವಾಗ ಮತ್ತೆ ಹೆಚ್ಚು ಸಂಗ್ರಹಿಸುವುದೂ ವೆಚ್ಚದ ಬಾಬತಾಗಿತ್ತು. ಹಾಗಾಗಿ ಪಿ.ಎಲ್. ೪೮೦ ಯೋಜನೆಯಂತೆ ಅವುಗಳ ಹಂಚಿಕೆಗೆ ಆರಂಭವಾಯಿತು. ಈ ಯೋಜನೆಯಂತೆ ನಮ್ಮ ದೇಶಕ್ಕೆ ಪೂರೈಸಲಾದ ಆಹಾರ ಧಾನ್ಯಗಳ ಬೆಲೆಯನ್ನು ರೂಪಾಯಿಗಳ ರೂಪದಲ್ಲಿಯೇ ನಮ್ಮ ವಿವಿಧ ಯೋಜನೆಗಳಿಗೆ ಬಳಸಲಾಗುತ್ತದೆ. ಈ ಅವಧಿಯಲ್ಲಿ ನಮ್ಮಲ್ಲಿ ಆಹಾರದ ಅಭಾವವೇ ತಲೆದೋರಲಿಲ್ಲ. ತೃಪ್ತಿಯ ಉಸಿರನ್ನೇ ನಾವು ಬಿಡುತಿದ್ದೆವು. ಆಹಾರದಲ್ಲಿ ಸ್ವಾವಲಂಬನೆಯನ್ನು ಪಡೆಯಬೇಕು ಎಂಬುದನ್ನೂ ನಾವು ಮರೆತುಬಿಟ್ಟೆವು.

ಆದರೆ, ಇಂದು ಪರಿಸ್ಥಿತಿ ಬದಲಾಗಿದೆ. ಕಳೆದ ವರ್ಷ ಹರಡಲಾರಂಭಿಸಿದ ಅಭಾವದ ಕರಾಳ ಜ್ವಾಲೆ ಮುಂದಿನ ಕೆಲವು ವರ್ಷಗಳಲ್ಲಿಯೂ ಸುಡುವ ನಿರೀಕ್ಷೆಯಿದೆ. ಭಾರತದಂತಹ ವಿಶಾಲ ದೇಶದ ಒಂದಲ್ಲ ಒಂದು ಮೂಲೆಯಲ್ಲಿ ಅತಿವೃಷ್ಟಿ-ಅನಾವೃಷ್ಟಿಗಳ ಕಾರಣದಿಂದ ಕ್ಷಾಮ-ಡಾಮರಗಳು ಬರುವುದು ಸಹಜ-ಅನುಭವವಿದಿತ. ಆದರೆ, ಈ ವರ್ಷದ ಕತೆ ಹಾಗಲ್ಲ ಇಡಿಯ ಭಾರತದಲ್ಲೇ ಮಳೆಯ ಅಭಾವ ತಲೆದೋರಿದೆ. ಹಾಗಾಗಿ ದೇಶದ ಆಂತರಿಕ ಉತ್ಪಾದನೆಯು ಬಹಳಷ್ಟು ಕಡಿಮೆಯಾಗಲಿದೆ. ಇದೇ ವೇಳೆ ಅಮೇರಿಕನ್ ಆಹಾರವೂ ನಮ್ಮೊಡನೆ ಕಣ್ಣುಮುಚ್ಚಾಲೆಯಾಡಲು ಆರಂಭಿಸಿದೆ. ರಾಜಕೀಯ ಪ್ರಶ್ನೆಗಳನ್ನು ಆಹಾರ ವಿಷಯದಲ್ಲಿ ತುರುಕಬಾರದು; ತುರುಕುವ ಆಶಯವಿಲ್ಲ; ತುರುಕುವುದಿಲ್ಲ ಎಂದು ಮುಂತಾದ ಬಗೆಬಗೆಯ ಅಭಿಪ್ರಾಯಗಳು ಹೊರಪಟ್ಟದ್ದರೂ ಪ್ರಶ್ನೆಯಿನ್ನೂ ಸರಳವಾಗಿಲ್ಲ; ಆಟವಿನ್ನೂ ನಿಂತಿಲ್ಲ. ಒಂದು ದೇಶವು ಪರದೇಶಗಳಿಗೆ ಸಹಾಯ ನೀಡುವಾಗ ತನ್ನ ಸಾಧನ ಸಂಪತ್ತಿಯನ್ನು ನೋಡಿಕೊಳ್ಳಬೇಕು-ಇದು ಸಹಜ. ಹಿಂದೆ ಅಮೆರಿಕೆಯಲ್ಲಿ ಆಹಾರ ಧಾನ್ಯಗಳ ವಿದೇಶ ವಿತರಣೆಯೇ ಸಮಸ್ಯೆಯಾಗಿತ್ತೆಂದೂ ಇಂದು ಅಂತಹ ಪರಿಸ್ಥಿತಿಯಿಲ್ಲವೆಂದೂ ಅಲ್ಲಿಯ ಉಗ್ರಾಣಗಳು ಖಾಲಿಯಾಗಿವೆಯೆಂದೂ ಹೇಳಲಾಗುತ್ತಿದೆ. ಆದುದರಿಂದಲೇ ಇಂದು ತಾನು ಆಹಾರ ಪೂರೈಸುವ ರಾಷ್ಟ್ರಗಳು ಡಾಲರ್ ರೂಪದಲ್ಲಿ ಅಲ್ಪಾಂಶ ಬೆಲೆಯನ್ನು ಪಾವತಿ ಮಾಡಬೇಕೆಂದು ಅದು ಬಯಸುತ್ತದೆಯೆಂದೂ ತಿಳಿದು ಬಂದಿದೆ. ಇದು ನಿಜವಾದರೆ ಅಮೆರಿಕೆಯಲ್ಲೂ ಆಹಾರ ಉತ್ಪಾದನೆಯು ಕಡಿಮೆಯಾಯಿತೆಂದು ಹೇಳಬೇಕಾಗುತ್ತದೆ. ಆದರೆ, ಅಂತಹುದೇನೂ ನಡೆದಿರುವಂತೆ ಭಾಸವಾಗುವುದಿಲ್ಲ. ಅಮೆರಿಕೆಯಿಂದ ಅತ್ಯಧಿಕ ಪ್ರಮಾಣದಲ್ಲಿ ಆಹಾರ ಪಡೆಯುವ ಭಾರತವು ಡಾಲರ್ ರೂಪದಲ್ಲಿ ಅದರ ಬೆಲೆಯನ್ನು ತೆರುವುದು ಬಹಳ ಕಷ್ಟವೆನಿಸುತ್ತದೆ. ಹಾಗಾಗಿ ಈಗ ನಮ್ಮ ಮುಂದೆ ಮತ್ತೊಂದು ಸಮಸ್ಯೆಯೂ ಉಪಸ್ಥಿತವಾಗಿದೆ. ಒಂದು ವೇಳೆ ಅಮೆರಿಕೆಯು ನಮಗೆ ಆಹಾರ ಒದಗಿಸಿದರೂ ಅದರ ಬೆಲೆಯನ್ನು ಎಲ್ಲಿಂದ ಕೊಡಬೇಕು? ವಿದೇಶ ವಿನಿಮಯದ ತೀವ್ರ ಅಭಾವವಿರುವಾಗ ಅದನ್ನು ಗಳಿಸುವುದೆಂತು?

ಇತ್ತೀಚೆಗೆ ಅಮೆರಿಕನ್ ತಜ್ಞರ ತಂಡವೊಂದು ಭಾರತೀಯ ನಾಯಕರೊಡನೆ ಮಾತಾಡಿತು. ಮುಂದಿನ ವರ್ಷಕ್ಕೆ ಭಾರತವು ೧೧ ಮಿಲಿಯ ಟನ್ ಆಹಾರಧಾನ್ಯಗಳನ್ನು ಬಯಸುತ್ತದೆ ಎಂದಿವರ ಮುಂದೆ ತೋಡಿಕೊಳ್ಳಲಾಯಿತು. ಪ್ರಧಾನಿ ಶಾಸ್ತ್ರಿಯವರು ನಾಲ್ಕನೆಯ ಯೋಜನಾಂತ್ಯದೊಳಗೆ ಭಾರತವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗುವುದೆಂದು ಹಾರೈಸಿದ್ದಾರೆ—ಯೋಜನೆಯಲ್ಲಿ ಆವಶ್ಯಕತೆಗೆ ಪ್ರಾಧಾನ್ಯವಿತ್ತಿರುವುದೇ ಈ ಹಾರೈಕೆಗೆ ಕಾರಣ. ಇಂದು ನಮಗುಳಿದಿರುವ ಪರಿಹಾರಕಾರ್ಯವೆಂದರೆ, ಇದೊಂದೇ. ಆಹಾರ ಮತ್ತು ರಕ್ಷಣೆಗಳು ಜನತೆಯ ಪ್ರಾಥಮಿಕ ಆವಶ್ಯಕತೆಗಳು. ಇವುಗಳನ್ನು ನಾವು ಕಾರಣಾಂತರದಿಂದ ತುಸು ಹಿಂದೂಡಿದ್ದೆವು. ಆದರೆ, ಈ ದಿನ ಇವೆರಡನ್ನು ನಾವು ಸಾಧಿಸದೆ ಹೋದರೆ ನಮ್ಮ ಸ್ವಾತಂತ್ರ್ಯ ಉಳಿಯುವ ಹಾಗಿಲ್ಲ. ಶತ್ರುಗಳು ನಮ್ಮನ್ನು ಸದೆಬಡಿಯಲು ಹವಣಿಸುತ್ತಾರೆ. ವ್ಯಾಪಾರಿ— ಸಾಹುಕಾರರು ಕುತ್ತಿಗೆ ಹಿಚುಕತೊಡಗುತ್ತಾರೆ. ಭಾರತೀಯರು ಇವರಿಂದ ಸಂಪೂರ್ಣ ಬಿಡುಗಡೆಯಾಗದ ಹೊರತು ನೆಮ್ಮದಿಯಿಲ್ಲ. ಅಧಿಕ ಉಳಿಸಬೇಕು. ರಾಷ್ಟ್ರಪುರುಷರನ್ನು ಆಕ್ರಮಿಸಿದ ಪಿಶಾಚವನ್ನು ಬಡಿಸಲು ಅಹರ್ನಿಶಿ ಹೋರಾಡಬೇಕು. ನಮ್ಮ ಆಹಾರವನ್ನು ನಾವೇ ಬೆಳೆಯಬೇಕು; ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕು, ಇಲ್ಲವಾದರೆ ಅಭಾವ ಪರತಂತ್ರ ರೂಪದಲ್ಲಿಯೇ ನಾವು ನವೆಯಬೇಕಾಗಬರುತ್ತದೆ. ಹಾಗಾಗದಂತೆ ಈಗ-ಈಗಿಂದೀಗಲೇ ಎಚ್ಚರಿಕೆವಹಿಸೋಣ.

**ಭಜನ ಸುಧೆ**

ಅಮಿತ್ರಂ ಕುರುತೇ ಮಿತ್ರಂ
ಮಿತ್ರಂ ದ್ವೇಷ್ಟಿ ಹಿನಸ್ತಿ ಚ |
ಕರ್ಮ ಚಾರಭತೇ ದುಷ್ಟಂ
ತಮಾಹುರ್ಮೂಢಚೇತಸಮ್ ||

ಶತ್ರುವನ್ನು ಮಿತ್ರನನ್ನಾಗಿ ಮಾಡಿಕೊಳ್ಳುವವನು, ಮಿತ್ರನನ್ನು ದ್ವೇಷಿಸಿ ಅವನಿಗೆ ಉಪದ್ರವಗಳನ್ನು ಕೊಡುವವನು, ಸದಾಕಾಲ ದುಷ್ಕರ್ಮಗಳನ್ನು ತೊಡಗುವವನು ಮೂಢಮತಿಯೆನಿಸುವನು.

## ಬಕಧ್ಯಾನವೇಕೆ?

ಸೋವಿಯತ್ ರಷ್ಯದ ಸಲಹೆಯಂತೆ ಸೋವಿಯತ್ ಲ್ಯಾಂಡಿನಲ್ಲಿ ಶಾಸ್ತ್ರಿ—ಅಯೂಬಖಾನರ ಭೆಟ್ಟಿ ನಡೆಯುವುದು ಈಗ ಸಾಮಾನ್ಯವಾಗಿ ನಿರ್ಧಾರವಾಗಿದೆ. ಜನವರಿಯ ಪೂರ್ವಾರ್ಧದಲ್ಲಿ ಇದು ಜರಗಬಹುದು ಎಂದೂ ಹೇಳಲಾಗುತ್ತಿದೆ. ಆದರೆ, ಇಂತಹ ಭೆಟ್ಟಿಯು ಫಲಪ್ರದವಾಗಬೇಕಾದರೆ, ರಣಾಂಗಣದಲ್ಲಿ ಕದನ ವಿರಾಮವು ಸಂಪೂರ್ಣವಾಗಬೇಕು— ಇದು ಭಾರತದ ಹಾಗೂ ಸೋವಿಯತ್ತಿನ ಹಾರೈಕೆ. ಕಲುಷಿತ ವಾತಾವರಣದಲ್ಲಿ ನಡೆಯುವ ಮಾತುಕತೆಗಳು ತ್ರಿಶಂಕುವಾಗಿಯೇ ಮುಗಿಯುವುವು. ಕತ್ತಿಯನ್ನು ಹಿಡಿದು ಶಾಂತಿ ಮಂತ್ರ ಪಠಿಸುವುದು ಬಕಧ್ಯಾನ ಮಾತ್ರವಾಗಬಹುದು. ಈ ಸಂಗತಿಯನ್ನು ಕೋಸಿಗಿನ್ ಫೀಲ್ಡ್ ಮಾರ್ಷಲ್ ಅಯ್ಯೂಬಖಾನರಿಗೆ ತಿಳಿಸಿದ್ದಾರೆ. ಆದರೆ ಅಯ್ಯೂಬ—ಭುಟ್ಟೋಗಳು ಇದನ್ನು ಗಮನಿಸಿದಂತೆ ತೋರುವುದಿಲ್ಲ. ಗಡಿ ಉಲ್ಲಂಘನೆಯನ್ನು ಪಾಕ್ ಸೈನಿಕರು ಏಕಪ್ರಕಾರವಾಗಿ ಮುಂದುವರಿಸುತ್ತಾ ನಡೆಯುತಿದ್ದಾರೆ. ಕೆಲವೆಡೆ ಭೀಕರ ಹೋರಾಟವೂ ನಡೆಯುತ್ತಿದೆ. ಬಾರಮೇರದ ಬಳಿ ಪಾಕ್ ಟ್ಯಾಂಕುಗಳಿಂದ ಕೂಡಿದ ಸೈನ್ಯ ಪಡೆಯೂ ಸಜ್ಜಾಗಿ ನಿಂತಿವೆ. ಇವೆಲ್ಲವುಗಳ ಮರ್ಮವೇನು? ತಾನು ಮೊಸರನ್ನು ಮುಕ್ಕಿ ಆಡಿನ ಬಾಯಿಗೆ ಕೈಸವರಿದ ನರಿಯ ಕುತಂತ್ರವಲ್ಲದೆ ಮತ್ತೇನು? ಭಾರತವೇ ಸಮರವಿರಾಮವನ್ನು ಉಲ್ಲಂಘಿಸುತ್ತದೆ ಎಂಬ ತನ್ನ ಹಳೆಯ ರಾಗವನ್ನು ಭುಟ್ಟೋ ಹಾಡತೊಡಗಿಯಾರು. ಆದರೆ, ಅಸತ್ಯದ ಆವರಣದಲ್ಲಿ ಸತ್ಯ ಬಹುಕಾಲ ಅಡಗಿರುವುದಿಲ್ಲ. ಪಾಕ್ ಇದನ್ನು ಅರಿತುಕೊಂಡಷ್ಟು ನೆಮ್ಮದಿ ಹೆಚ್ಚು.

### ನರಸಣ್ಣನ ಸರಸ



'ಒಂದಕ್ಕೆ ಎರಡು ಬೆಲೆ ಮಾರುಕಟ್ಟೆಯಲ್ಲಿ ಸಿಗುವಾಗ ಲೆವಿ ಯಾಕೆ ಕೊಡಬೇಕು? ಮಳೆಯಿಲ್ಲ—ಬೆಳೆಯಿಲ್ಲವೆಂದು ಕೈಬೆಚ್ಚಗೆ ಮಾಡಿ ಅಪೀಲು ಮಾಡುತ್ತೇನೆ....'

# ನಿಮ್ಮ ಅಭಿರುಚಿಗೆ ಯೋಗ್ಯವಾದ, ಯಾವತ್ತೂ ಲೈಬ್ರೆರಿಗಳಿಗೆ ಬೇಕಾಗುವ ಉತ್ತಮ ಪುಸ್ತಕಗಳು

| | | ರೂ. | ಪೈ. |
|---|---|---|---|
| ಮಧುರ ವೀಣೆ | ಕೃಷ್ಣಮೂರ್ತಿ ಪುರಾಣಿಕ | 3 | 00 |
| ದೇವರ ಕೂಸು | ,, | 2 | 00 |
| ಮಸಣದ ಹೂ | ತ. ರಾ. ಸು. | 3 | 00 |
| ಒಮ್ಮೆ ನಕ್ಕ ನಗು | ,, | 3 | 00 |
| ಸಾಕ್ಷಾತ್ಕಾರ | ಬಸವರಾಜ ಕಟ್ಟೀಮನಿ | 2 | 00 |
| ನೂಲು ನೇಯ್ದ ಚಿತ್ರ | ಅನುಪಮಾ | 2 | 50 |
| ದ್ರೋಹಿ | ಬಸವರಾಜ ಕಟ್ಟೀಮನಿ | 2 | 00 |
| ಬೆಳದಿಂಗಳು | ಉಮಾಪತಿ | 2 | 50 |
| ರೂಪ ಶ್ರೀ | ಅ. ನ. ಕೃ. | 2 | 00 |
| ಗಂಡು ಹೆಣ್ಣಾದಾಗ | ಕೆ. ಎಸ್. ಕರುಣಾಕರನ್ | 2 | 50 |
| ಜಂಬು ನೇರಳ ಹಣ್ಣು | ಕುಲಕರ್ಣಿ ಬಿಂದು ಮಾಧವ | 2 | 00 |
| ಅಪಸ್ವರ | ತ್ರಿವೇಣಿ | 2 | 50 |
| ಒಲವಿನ ಜಾಲ | ನೀಳಾದೇವಿ | 2 | 00 |
| ಬನಶಂಕರಿ | ನಿರಂಜನ | 2 | 00 |
| ಪಾತರಗಿತ್ತಿ | ಬಸವರಾಜ ಕಟ್ಟೀಮನಿ | 2 | 00 |
| ತುಂಬಿದ ಮನೆ | ಕೃಷ್ಣಮೂರ್ತಿ ಪುರಾಣಿಕ | 2 | 50 |
| ಹೊಸ ಹಗಲು | ತ. ರಾ. ಸು. | 2 | 00 |
| ಬೆಂಗಳೂರು ಬಸ್ | ಬೀChi | 2 | 50 |
| ಕಣ್ಣುಮುಚ್ಚಾಲೆ | ಅ. ನ. ಕೃ. | 1 | 50 |
| ಖಾದಿ ಸೀರೆ | ಬೀChi | 2 | 50 |
| ಕೀಚಕ | ಪರ್ವತವಾಣಿ | 1 | 00 |
| ದೊರೆಸಾನಿ | ಕೃ. ಮೂ. ಪುರಾಣಿಕ | 1 | 00 |
| ಥರ್ಡ್ ಕ್ಲಾಸ್ ವೈಟಿಂಗ್ ರೂಮ್ | ಬೀChi | 1 | 00 |
| ಸ್ವರ್ಣಮೂರ್ತಿ | ಅ. ನ. ಕೃ. | 1 | 50 |
| ಸವಿತಾ ಸತ್ಯವತಿ | ಕೃ. ಮೂ. ಪುರಾಣಿಕ | 2 | 00 |
| ಯುಗಧರ್ಮ | ಹಿ. ಮ. ಪಂಚಯ್ಯ | 2 | 00 |
| ಶೀಲಾ—ಸುಮ | ಸಿ. ಆರ್. ಅನಂತಪದ್ಮನಾಭ ರಾವ್ | 2 | 00 |
| ಸತ್ತವನು ಎದ್ದು ಬಂದಾಗ | ಬೀChi | 1 | 25 |
| ನಿರೀಕ್ಷೆ ಮತ್ತು ವಾರ್ಕ್ಸ್ ಕಾರ್ಡ್ | ಎ. ಎಸ್. ಮೂರ್ತಿ | 1 | 25 |
| ಕಲಾವಿದ | ಪ್ರಕಾಶ್ | 0 | 50 |
| ಸಂಸ್ಕೃತಿ | ಪಂಡಿತ ಸಿ. ಆರ್. ಹೊಸಳ್ಳಯ್ಯ | 2 | 00 |
| Love ಮ್ಯಾರೇಜ್ ಮತ್ತು ಮಾಯದ ಗಾಯ | ಎ. ಎಸ್. ಮೂರ್ತಿ | 1 | 25 |
| ಗುಬ್ಬಚ್ಚಿ-ಗೂಡು | ಅ. ನ. ಕೃ. | 1 | 50 |
| ತ್ರಿಶಂಕುವಿನ ಸ್ವಪ್ನಪ್ರಭಾತ | ವಿನಾಯಕ | 1 | 50 |
| ಸೈರಂಧ್ರಿ | ಕೃಷ್ಣಮೂರ್ತಿ ಪುರಾಣಿಕ | 1 | 50 |
| ಪ್ರಾಚೀನ ಹಿಂದೂ ರಾಜ್ಯ ಪದ್ಧತಿ | ನಂಜುಂಡ ಸ್ವಾಮಿ | 1 | 50 |
| ಗಂಡಸ್ತನ | ಎ. ಎಸ್. ಮೂರ್ತಿ | 1 | 50 |
| ಮಿಸ್ India ಮತ್ತು ಶುಂಠಿಕಷಾಯ | ಎ. ಎಸ್. ಮೂರ್ತಿ | 1 | 25 |
| ಹಸಿರು ನೆಲೆ | ಕೃಷ್ಣಮೂರ್ತಿ ಪುರಾಣಿಕ | 1 | 80 |
| ಸಾಹಿತ್ಯರಶ್ಮಿ | ಗೋರೂರು ರಾಮಸ್ವಾಮಿ ಅಯ್ಯಂಗಾರ್ | 6 | 50 |
| ಗಯ್ಯಾಳಿ ಗರತಿ | ಕೃಷ್ಣಮೂರ್ತಿ ಪುರಾಣಿಕ | 2 | 00 |
| ಪಂಕಜ | ಅ. ನ. ಕೃ. | 2 | 00 |
| ಅಭಯ | ನಿರಂಜನ | 2 | 00 |
| ಟೀಪು ಪೈಗಂಬರ | ಸೀತಾರಾಮ ಶಾಸ್ತ್ರಿ | 2 | 00 |
| ಹೇಮಂತನ ಮಗಳು | ಕೃಷ್ಣಮೂರ್ತಿ ಪುರಾಣಿಕ | 1 | 50 |
| ಮಹಾಪ್ರಸ್ಥಾನದ ಪಥದಲ್ಲಿ | ಭಾರತೀರಮಣಾಚಾರ್ಯ | 1 | 75 |
| ದುರ್ಗೇಶನಂದಿನಿ | ಬಂಕಿಮಚಂದ್ರ | 1 | 75 |

| | | ರೂ. | ಪೈ. |
|---|---|---|---|
| ಅವಳ ನಿರ್ಣಯ | ಕೃಷ್ಣಮೂರ್ತಿ ಪುರಾಣಿಕ | 1 | 50 |
| ಕವಲುದಾರಿ | ,, ,, | 1 | 50 |
| ಸಮರಸುಂದರಿ | ಅ. ನ. ಕೃ | 1 | 50 |
| ಚೈನಾ—ಜಪಾನ್ ಕತೆಗಳು | ನಾ. ಕಸ್ತೂರಿ | 1 | 50 |
| ವತ್ಸಲೆ ... | ಕೃಷ್ಣಮೂರ್ತಿ ಪುರಾಣಿಕ | 1 | 50 |
| ಹುಲಿಯ ಬೆನ್ನ ಮೇಲಿಂದ | .... ಬೀChi | 2 | 50 |
| ಮೂಗಿನ ಮೇಲೆ ... | .... ಅಶ್ವಥ್ | 3 | 00 |
| ಗೃಹ ರತ್ನ ... | ಪುಷ್ಪ ಎನ್. ರಾವ್ | 2 | 50 |
| ಮಂಗಲಾಕ್ಷತೆ | ಕೃ. ಮೂ. ಪುರಾಣಿಕ | 2 | 50 |
| ಮಿಂಯಾಮಲ್ಹಾರ್ | ಅ. ನ. ಕೃ | 2 | 50 |
| ಅಣಿ ಮುತ್ತು ಭಾಗ-೧ | ಉಮಾಪತಿ | 4 | 00 |
| " ಭಾಗ-೨. | .... " | 4 | 00 |
| ಜಾನಪದ ಕತೆಗಳು | ಉಷಾ ಮತ್ತು ಕಾವೇರಿ | 1 | 50 |
| ಯುಲಿಸಿಸ್ಸಿನ ಕತೆಗಳು | ಉಮಾಪತಿ | 1 | 50 |
| ಕುಲಪುತ್ರ | ಅ. ನ. ಕೃ. | 2 | 00 |
| ಪ್ರೇಮ ಬಂಧನ | ಲೀಲಾಶೇಖರ್ | 1 | 00 |
| ಪುಸ್ತಕ ಹೇಳಿದ ಕತೆ | ಕೃಷ್ಣಸ್ವಾಮಿ ರಾವ್ | 1 | 00 |
| ಸೀತೂ ಮದುವೆ | ಬೀChi | 1 | 50 |
| ಪ್ರಜಾತಂತ್ರ | ಇಂದಿರಾತನಯ | 3 | 00 |
| ಸೌದಾಮಿನಿ | ಶರಚ್ಚಂದ್ರ | 1 | 50 |
| ಮಣ್ಣಿನ ಮಗ | ಎಸ್. ವಿ. ಶ್ರೀನಿವಾಸ್ ರಾವ್ | 1 | 50 |
| ನಿಸರ್ಗ | ಮಿರ್ಜಿ ಅಣ್ಣಾರಾಯ | 4 | 00 |
| ಗಂಗಾ-ಗೌರಿ | ಕುಲಕರ್ಣಿ ಬಿಂದುಮಾಧವ | 1 | 50 |
| ಪರದೇಶಿ | ,, | 1 | 50 |
| ಮೊದಲನೋಟ | ತ. ರಾ. ಸು. | 2 | 00 |
| ತಿಂಮನ ತಲೆ | ಬೀChi | 1 | 25 |
| ಜೀವನದ ಜೋಕಿಗಾರ | ಶ್ರೀನಿವಾಸ ಉಡುಪ | 3 | 00 |
| ಶಕ್ತಿಪೂಜೆ | ಅಂಬಿಕಾತನಯ | 3 | 00 |
| ಕಾರ್ಕೋಟಕ | ತ. ರಾ. ಸು. | 1 | 80 |
| ಕೊನೆಯ ದಾರಿ | ಕೃಷ್ಣಮೂರ್ತಿ ಪುರಾಣಿಕ | 1 | 80 |
| ಸೇಡಿನ ಕಿಡಿ | ಇಂದಿರಾತನಯ | 3 | 00 |
| ಏರದ ಬಳೆ | ಬೀChi | 2 | 50 |
| ಬಾಹ್ಯಾಂತರಂಗ | ಸ್ವಾಮಿ ವಿವೇಕಾನಂದ | 2 | 50 |
| ಮದುವೆಯ ಹಾಡು | ಕೃಷ್ಣಮೂರ್ತಿ ಪುರಾಣಿಕ | 2 | 00 |
| ವಿಜಯೋತ್ಸವ | ತ. ರಾ. ಸು. | 2 | 00 |
| ಪ್ರೇಮದ ಬೆಲೆ | ಭಗವತಿ ಚರಣವರ್ಮ | 2 | 50 |
| ಸಾಹಿತ್ಯ ಮತ್ತು ಕಾಮ ಪ್ರಚೋದನೆ | ಅ. ನ. ಕೃ. | 2 | 50 |
| ಮಂದಾರ ಕುಸುಮ | ಕುಲಕರ್ಣಿ ಬಿಂದುಮಾಧವ | 2 | 00 |
| ಹೊಸ ಹಗಲು | ತ. ರಾ. ಸು. | 2 | 00 |
| ದಿಕ್ಕೆಟ್ಟ ದೇಶ | ನಾಡಿಗೇರ ಕೃಷ್ಣರಾಯ | 2 | 50 |
| ನಕ್ಷತ್ರಗಾನ | ಇಂದಿರಾತನಯ | 2 | 00 |
| ಹೃದಯ ವೀಣೆ | ಬಿ. ಜಿ. ಸತ್ಯಮೂರ್ತಿ | 2 | 00 |
| ಮುಗಿಲ ಮಲ್ಲಿಗೆ | ಕೃಷ್ಣಮೂರ್ತಿ ಪುರಾಣಿಕ | 2 | 00 |
| ಗಾನಯೋಗಿ | ಮ. ನ. ಮೂರ್ತಿ | 2 | 00 |
| ಕಲ್ಯಾಣ ಧಾಮ | ಕೃಷ್ಣಮೂರ್ತಿ ಪುರಾಣಿಕ | 2 | 00 |
| ಲೇಡಿ ಟೈಪಿಸ್ಟ್ | ಎ. ಎಸ್. ಮೂರ್ತಿ | 1 | 50 |
| ಗಯ್ಯಾಳಿ ಗಂಡ | ,, | 1 | 50 |
| ಪದ್ಮಶ್ರೀ | ,, | 1 | 25 |
| ಅಡಿಗೆ ಮನೆ | ಉಮಾಪತಿ | 1 | 25 |
| ಮಗಳ ಮಾಂಗಲ್ಯ | ಹಿ. ಮ. ಪಂಚಯ್ಯ | 2 | 25 |
| ಜೀವನಾದ | ಕೃಷ್ಣಮೂರ್ತಿ ಪುರಾಣಿಕ | 1 | 50 |
| ನಿಮ್ಮ ಪೈಕಲು | ವಿ. ಎಸ್. ಕೃಷ್ಣಸ್ವಾಮಿ | 0 | 75 |

ಇಷ್ಟೇ ಅಲ್ಲದೆ ಇನ್ನೂ ಹಲವಾರು ಬಗೆಯ ಪುಸ್ತಕಗಳು ದೊರೆಯುತ್ತವೆ.

**ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.**

## ಗೇಹ ರಾಜ್ಯದಲ್ಲಿ

# ಅದ್ವೈತ ಭಾವದಿಂದ ದುಡಿಯೋಣ

"ಏ, ಇಲ್ಲಿ ಬಾರೇ ಸ್ವಲ್ಪ..."

'ಇದೇನು ಬಾಗಿಲ ಬಳಿ ಬರೋದಕ್ಕೆ ಮೊದಲೇ ಕೂಗಿ ಕೊಳ್ತೀರಿಂತ?"

"ಮತ್ತೇನು ಮಾಡೋದು? ನೋಡು, ಹೊರಗೆ ಸೈಕಲಲ್ಲಿ ಅಕ್ಕಿ ಕಟ್ಟಿದೆ. ಅದನ್ನು ಬಿಚ್ಚೋದಕ್ಕೆ...."

"ಸಹಾಯ ಮಾಡಬೇಕು ಅಂತೀರಾ?'

"ಮತ್ಯಾಕೆ ನಿನ್ನ ಕೂಗಿದ್ದು? ಕಿಲೋ ಒಂದೂವರೆ ದಾಟಿ ಬಿಟ್ಟಿತು ಕಣೆ ಇವತ್ತು.... ಇನ್ನು ಒಂದು ತಿಂಗಳು ಸರಿದರೆ ಎರಡು ಬರಾಬರಿಯಾಗುತ್ತೆ..."

"ಅಲ್ರಿ, ಹೀಗೆಲ್ಲಾ ಬೆಲೆಯೇರಿದ್ರೆ ಮಾಡೋದೇನು?"

'ಏನು ಮಾಡೋದಂದ್ರೆ? ಗೊತ್ತೇ ಇದೆ."

"ಏನು?" '

'ಉಪವಾಸ...."

"ಉಪವಾಸಾಂತ ಅಂದು ಫಲಾರ ಮಾಡೋದಕ್ಕೆ ಹೊರಟ್ರೆ.... ಅಲ್ಲಾ ಕೇಳಿ. ಮೊನ್ನೆ ಸೋಮವಾರ ಸಂಜೆ ಐದು ಗಂಟೆಯಿಂದ ಹೋಟೇಲುಗಳೆಲ್ಲಾ ಬಂದಾಗಿದ್ದವಲ್ಲಾ....?"

'ಹೌದು ಕಣೇ..'

"ಆ ದಿನ ರಾತ್ರೆ ಅನ್ನ ಇಲ್ಲದ ಕರ್ಮಕ್ಕೆ ಓ ಆಚೆಮನೆ ವಿನಾಯಕ ಜೊಡುಬೊಂಡ, ಡಜನ್ ಬಾಳೆಹಣ್ಣು ಕಿಲೋ ಅವಲಕ್ಕಿ ಸೇರು ಹಾಲು ತರ್ಸಿಕೊಂಡನಂತೆ........"

'ಪರ್ವಾಗಿಲ್ವೆ. ರೂಪಾಯಿಯಲ್ಲಾಗೋ ಕೆಲ್ಸ ವರಹದಲ್ಲಿ ಮುಗೀತೂನ್ನು...."

"ಅಲ್ರಿ, ಹೀಗಾದ್ರೆ ಏನು ಪ್ರಯೋಜನಾಂತ?"

'ಹೇಗೆ?'

"ಊಟದ ಹೆಸ್ರಲ್ಲಿ ಅದೇ ಉಳಿಸಿ ಫಲಾರದ ಹೆಸ್ರಲ್ಲಿ ರೂಪಾಯಿ ಸುಟ್ಕೊಂಡ್ರೆ....'

'ಅದ್ರಲ್ಲೇನಂತೆ?'

"ಏನೂ ಇಲ್ವೆ?'

"ಏನೂ ಇಲ್ಲ. ನೋಡು ನಮಗಿಂದು ಆಗಿರೋದು ಆಹಾರ ಧಾನ್ಯಗಳ ಅಭಾವ. ಅದ್ದರಿಂದ ಕಾಳುಗಳಿಲ್ಲದ ಆಹಾರ ಸೇವಿಸಿದರೂ ಸರಿಯೆ. ಇಲ್ಲ ಆಹಾರ ತ್ಯಾಗ ಮಾಡಿದರೂ ಸರಿಯೆ."

"ಹೊಟ್ಟೆ ಕೇಳುತ್ತೆ?'

"ಕೇಳದೆ ಎಲ್ಲಿ ಹೋಗುತ್ತೆ? ವಿನಾಯಕ ಆಕೇಲಿ. ಬರುತ್ತೆ ದಿನಕ್ಕೆ ಹದಿನೈದು ರೂಪಾಯಿ. ಸುರಿಯುತ್ತಾನೆ ನೀರಿನ ಹಾಗೆ. ಆದ್ರೆ ನೋಡು, ನನ್ನ ಗತಿ....'

"ಏನಾಗಿದೆ ನಿಮ್ಮ ಗತಿ....?"

"ಆಗೋದೇನು? ದಿನಾ ಐದು ರೂಪಾಯಿ ಗಳಿಸಿದ್ದು ಅಕ್ಕಿಗಾದ್ರೆ ಮತ್ತೆ ಅದನ್ನ ಬೇಯಿಸೋಕಾದ್ರೂ ಕಟ್ಟಿಗೆ ಆಗಬೇಕಲ್ಲಾ...?"

"ಓ....ಹೌದ್ರಿ.... ಇದೇನು ಗಂಡಾಂತರಾಂತ?"

"ಓಹೋ ನಿನಗೆ ಈ ಗಂಡಾಂತರದ ಅರಿವಾದುದು ಇಂದು ಮಾತ್ರಾಂತ ತೋರುತ್ತೆ... ನೋಡು ಕಳೀಲಿ ಇನ್ನೂ ಒಂದು ತಿಂಗಳು. ಆಗ ನಮ್ಮ ನಗ್ನ ಪರಿಸ್ಥಿತಿಯನ್ನು ನೀನೂ ಕಂಡುಕೊಳ್ಳಬಹುದು..."

'ಅಯ್ಯೋ... ಬೇಡ್ರಿ.. ಅದನ್ನ ಕಂಡು ಪಡಬೇಕಾದ್ದೇನು?'

"ಏನೂ ಅಂದ್ರೆ? ಹಣದ ಬೆಲೆಯೆಷ್ಟು, ಅದು ಯಾರ ಬಳಿಯಿದೆ ಎಂಬುದರ ಪರಿವೇ ಇಲ್ಲದೆ ರಂಪಾಟ ಮಾಡೋ ನಿನಗೆ..."

"ಇಲ್ರಿ... ಇನ್ನ ಮಾಡೋಲ್ಲ. ಒಂದು ಪೈಸೆ ನನಗಿನ್ನು ಕೊಡಬೇಡಿ... ಅಲ್ರಿ, ಇಂತಹ ಅಭಾವ ಪರಿಸ್ಥಿತಿ ತಲೆದೋರಿರುವಾಗ, ಜನ ಅನ್ನ ಅನ್ನ ಎಂದು ಬಡಬಡಿಸುವಾಗ ನಿಮ್ಮ ಸರಕಾರ ಏನು ಸುಮ್ಮನಿದೆ?"

"ಸರಕಾರ ಸುಮ್ಮನಿದೇಂತ ಅಂದವ್ರು ಯಾರು?'

"ಮತ್ತೆ ಅದು ಏನೂ ಮಾಡುತ್ತಿರುವಂತೆ ತೋರುವುದಿಲ್ಲ........"

"ಇಲ್ವೇ, ನೀನು ಭಾರಿ ತಪ್ಪು ತಿಳಕೊಂಡೆ."

"ಯಾಕೆ?"

"ಯಾಕೇಂದ್ರೆ? ಅಲ್ವಾದ್ರೆ ಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ಪ್ರಕಟವಾಗುವ ವಿಚಾರಗಳನ್ನ ನೀನು ಓದೋದಿಲ್ಲಾಂದ್ರೆ......'

"ಅದೆಲ್ಲಾ ಎಂಥದೂಂತ? ನೋಡಿ ಅಮೇರಿಕೆಯಿಂದ ಧಾನ್ಯ ಬರಬೇಕಾದರೆ ಜನವರಿ ಕಳೀಬಹುದೂಂತೆ... ಮತ್ತೆ ದೀರ್ಘಕಾಲದ ಪೂರೈಕೆ ಒಡಂಬಡಿಕೆಗೆ ಅದು ಸಿದ್ಧವಿಲ್ಲವೆಂದು ಭಾಸವಾಗುತ್ತಿದೆಯಂತೆ ......"

"ಹಾಗಿದ್ರೂ ಹೇಳ್ತಾರಂತೆ ಆಹಾರಧಾನ್ಯ ಪೂರೈಕೆಗೂ ರಾಜಕಾರಣಕ್ಕೂ ಸಂಬಂಧವಿಲ್ಲಾಂತ...."

"ಹೌದ್ರಿ....ಏನು ಮಾಡೋದ. ಪಾಪ ಅವರ ದೇಶದ ಗತಿಯನ್ನೂ ನೋಡಬೇಕು ವಿದೇಶೀ ಸಹಾಯಕ್ಕೆ ಲಭ್ಯವಿರುವ ಸಾಧನ ಸಂಪತ್ತಿಯ ಪ್ರಮಾಣವನ್ನ ತೂಗಿ ನೋಡಬೇಕು..."

"ಕಣ್ಣು ಮುಚ್ಚಾಲೆಯಾಟಾಂತ ನಮಗೆ ಗೊತ್ತಾಗೋದಿಲ್ವೆ?"

'ಅದ್ರಲ್ಲಿ ಅವ್ರದ್ದೇನು ತಪ್ಪು? ಪ್ರಕೃತಿಯೇ ನಮ್ಮೊಡನೆ ಕಣ್ಣುಮುಚ್ಚಾಲೆ ಆಡುತ್ತಿದೆಯಲ್ಲಾ....'

"ಹರಕೊಲ್ಲಲ್ ಪರಕಾಯ್ವನೆ? ಎಂಬ ಉಕ್ತಿ ನೆನಪಾಗುತ್ತೆ...."

'ಏನು ನೆನಪಾಗಿ ಏನು ಪ್ರಯೋಜನ? ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸವೇ ಗತಿ..."

"ವನವಾಸವಾದ್ರೂ ಪರ್ವಾಗಿಲ್ವೆ, ಗಡ್ಡೆ ಗೆಣಸು ಬೇರುಗಳನ್ನಾದರೂ ಜಗಿಯಬಹುದು. ಇದು ಹಾಗೂ ಇಲ್ಲ..."

"ಏನಂತೀರೋ ಮುಂದಿನ ಬೇಸಗೆಯಲ್ಲಿ ಮರಗಳೆಲ್ಲಾ ಸತ್ತು ಹೋಗುತ್ತವೆ ಖಂಡಿತಕ್ಕೂ..."

'ಯಾಕೆ ಹಾಗಂತೀನು?'

"ಮತ್ಯಾಕೆ? ಮಳೆಯ ಅಭಾವ..."

"ಏನು? ಭಾರಿ ವರ್ಣನೆಯಿದೆ?'

"ಮತ್ತಿನ್ನೇನಂತೆ? ಕಾಡಿನಲ್ಲಿರುವ ಮರಗಿಡಗಳು ಒಣಗಿ ಹೋಗುವುವು. ಚಿಕ್ಕಪುಟ್ಟ ಪ್ರಾಣಿಗಳು ಜನರ ಬೇಟೆಯಾಗುವುವು. ಹಾವುಗಳ, ಕಪ್ಪೆಯೊಂದೂ ಸಿಗದೆ ತಿಮಿಂಗಿಲ ನ್ಯಾಯಪರವಾಗುವುವು. ಮುಂದೆ ಅವೂ ಕ್ರೂರಪ್ರಾಣಿಗಳೂ ನಾಡಿಗೆ ದಾಳಿಯಿಡುವುವು. ಜನರು ಮೊದಲೇ ಉಪವಾಸ ವ್ರತ ಮಾಡಿರುವುದರಿಂದ ಅವುಗಳ ಆಕ್ರಮಣ ಎದುರಿಸಲು ಅಶಕ್ತರಾಗುವರು. ಜನ ಪರಸ್ಪರ ಹಗೆ ದರೋಡೆಗಳಲ್ಲಿ ಮಗ್ನರಾಗುವರು. ಎಲ್ಲೆಲ್ಲೂ ಕಾಡು ಮೇಡುಗಳಲ್ಲಿ ನಾಡು ಬೀಡುಗಳಲ್ಲಿ ಅನ್ನಕ್ಕಾಗಿ ಪರದಾಟ ನಡೆಯುವುದು. ನೀರಿಗಾಗಿ ಹಾಹಾಕಾರವೇಳುವುದು....ರಕ್ತ ಕುಡಿಯುವ ಮಾಂಸ ತಿನ್ನುವ ಪಿಶಾಚಿಗಳಂತೆ ಜನರು ವರ್ತಿಸುವರು...."

'ಛಿ....ಛಿ....ಏನೇ ಇದು? ಇಂತಹ ಭೀಭತ್ಸರಸ ವರ್ಣನೆ?'

ಈ ರೌದ್ರ ವೀರದ ನಂತರ ಭೀಭತ್ಸ ತಾನಾಗಿಯೇ ಬರಬೇಕಲ್ಲಾ....'

'ಅಂತಹ ಪರಿಸ್ಥಿತಿ ಬರಲಾರದಮ್ಮಾ..'

'ಯಾವ ಆಧಾರದಿಂದ ಹಾಗಂತೀರಿ?'

'ನೋಡು ನಮ್ಮ ಮಂತ್ರಿಮಂಡಲ ನಾಲ್ಕು ದಿನ ಇಪ್ಪತ್ತು ತಾಸು ಈ ಬಗ್ಗೆ ಸಮಾಲೋಚನೆ ನಡೆಸಿತು....'

'ಹೌದ್ರಿ, ನಲ್ವತ್ತು ಗಂಟೆ ಆಡಿಕೊಂಡ್ರೂ ಒಂದು ಕಾಳೂ ಉದುರೋದಿಲ್ಲವಲ್ಲಾ....'

'ಅದಕ್ಕೇ ಅಂದದ್ದು ಈ ಅಕಾಲ ಪರಿಸ್ಥಿತಿ ತಲೆದೋರಿರುವುದು ಈ ಶತಮಾನದಲ್ಲಿ ಇದೇ ಮೊದಲ ಬಾರಿ. ಕರ್ನಾಟಕದ ನಾಯಕತ್ವಕ್ಕೂ ಸಾಮರ್ಥ್ಯಕ್ಕೂ ದೊಡ್ಡ ಸವಾಲು..."

"ಅಯ್ತಪ್ಪ, ಈ ಸವಾಲಿಗೆ ನಿಮ್ಮ ಸರಕಾರ ಏನು ಮಾಡಿತು?"

'ಮೊತ್ತಮೊದಲು ದೆಹಲಿ ನಾಯಕರ ಮುಂದೆ ಪರಿಸ್ಥಿತಿಯನ್ನು ನಿವೇದಿಸಿತು.,'

"ಪಾಪ, ಶಾಸ್ತ್ರಿಯಾದರೂ ಎಲ್ಲಿಂದ ಕೊಡಬೇಕು? ಇದೂ ಸ್ವಲ್ಪವೆ?'

'ಯಾವಾಗಲೂ ೩—೪ ಲಕ್ಷ ಟನ್ ಕೊರತೆಯಾಗುತಿದ್ದರೆ ಈ ವರ್ಷ ಸುಮಾರು ೨೦ ಲಕ್ಷ ಟನ್ ಬೇಕಾಗುತ್ತೆ..'

"ಓ....ಎಂತಹ ಗಂಭೀರ ಸ್ಥಿತಿ...'

"ಆದುದರಿಂದಲೇ ಹೊಲಗಳಲ್ಲಿರುವ ಹಿಂಗಾರಿ ಬೆಳೆಯನ್ನು ಉಳಿಸಿಕೊಳ್ಳಲು ಸರ್ವ ಪ್ರಯತ್ನ ಮಾಡಬೇಕು. ನೀರಾವರಿ ಇಲ್ಲದೆಡೆ ನದಿಕೆರೆಗಳ ನೀರನ್ನು ಉಚಿತವಾಗಿ ರೈತರು ಉಪಯೋಗಿಸಬೇಕು. ಹೊಲಗಳನ್ನು ಖಾಲಿ ಬಿಡುವುದು ಅಪರಾಧ. ರಾಗಿ, ಜೋಳ, ಆಲೂಗೆಡ್ಡೆ, ಗೆಣಸು ಮೊದಲಾದ ಕ್ಷಿಪ್ರ ಬೆಳೆಗಳನ್ನು ಬೆಳೆಯಬೇಕು. ಯಾವ ಹೊಲದಲ್ಲಿ ಏನನ್ನು ಬೆಳೆಸಬೇಕೆಂದು ಅಪ್ಪಣೆ ಕೊಡುವ ಅಧಿಕಾರವನ್ನು ಡಿ. ಸಿ.ಗೆ ಕೊಡಬೇಕು. ಭದ್ರಾ ಜಲಾಶಯದ ನೀರನ್ನು ಇನ್ನು ಮುಂದೆ ನೀರಾವರಿಗಾಗಿಯೇ ವಿನಿಯೋಗಿಸಬೇಕು!"

'ಮತ್ತೆ?'

'ಜನರು ಸಂಕಟಕ್ಕೆ ತುತ್ತಾಗಿರುವೆಡೆ ಪರಿಹಾರ ನೀಡಲು ತಯಾರಿಸಿದ ಯೋಜನೆಯನ್ನು ೨೦೦ ಕಾರ್ಯಕರ್ತರ ಮೂಲಕ ಕಾರ್ಯಾನ್ವಿತಗೊಳಿಸಬೇಕು. ಒಟ್ಟು ೪ ಕೋಟಿ ರೂಪಾಯಿಗಳನ್ನು ಉಳಿತಾಯದಿಂದ ಒದಗಿಸಬೇಕು...."

"ಅಂದ್ರೆ, ನಿಮ್ಮ ಸರಕಾರ ಬರಗಾಲದೊಡನೆ ಸಮರವನ್ನೇ ಹೂಡಿದೆ ಅಂತಾಯಿತು....'

"ಮತ್ತೆ ಸುಮ್ಮನಿರುವುದಕ್ಕಾಗುತ್ಯೆ?"

"ಅಲ್ರಿ, ನೀರು ಇದ್ರೆ ಮಾತ್ರ ನೀರಾವರಿಯಲ್ವೆ?"

"ಹ್ಞಾಂ...."

"ಮಳೆಯೇ ಸುರಿಯದೆ ಇರೋವಾಗ ಜಲಾಶಯ ಉಸಬಿನಾಶಯವಾಗುತ್ತೆ. ಬಾವಿ ಕೆರೆಗಳು ಒಣಗುತ್ತವೆ...."

"ಸಾಕು ಕಣೇ.... ಏನೋ ಇವತ್ತು ಮಹಾರಾಣಿಯವರು ಭಿಭತ್ಸದತ್ತ ಒಲಿದಂತೆ ಕಾಣುತ್ತದೆ...."

"ಹ್ಹ ಹ್ಹ.... ಇಲ್ಲಿ ನೋಡಿ... ಹನ್ನೆರಡು ವರ್ಷಕಾಲದ ಬರಗಾಲದ ಕಥೆ..."

"ಓ... ಹಾಗೆ... ನಾನು ಏನೋ ಏನೋಂತ ಅಂದುಕೊಂಡಿದ್ದೆ...."

'ನೀವು ಏನೇ ಅನ್ರಿ.... ನನಗಂತೂ ಒಂದೇ ಒಂದು ಉಪಾಯ ಹೊಳೆಯುತ್ತೆ ........'

"ಏನದು?"

"ಪ್ರತಿ ದಿನವೂ ಒಪ್ಪೊತ್ತು...'

'ಅಲ್ವೆ, ಅದಕ್ಕೂ ಬಹುದಿನ ಬೇಡ. ಅರ್ಧ ತಿಂಗಳು ಅವ್ಯಾಹತವಾಗಿ ಉಪ

(ಹತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಅನುಭವ

# ಭರಣಿ-ಕೃತ್ತಿಕೆಯ ಶ್ರದ್ಧೆ

## ವಿಶ್ವಾಸಗಳು ಸತ್ಯವಾಗುವಾಗ ಅವನ್ನು ಅಂಧವೆಂದು ಕರೆಯಬಹುದೆ?

ಬರೆದವರು:
ಶ್ರೀ ವೀರೇಶ್ವರ ವಿ. ಪಡ್ಕೆ

ಆಧುನಿಕ ಜಗತ್ತಿನಲ್ಲಿ ಅಂಧ ವಿಚಾರಗಳಲ್ಲಿ ವಿಶ್ವಾಸವನ್ನಿಡದವರೇ ಹೆಚ್ಚು. ಜ್ಞಾನಿಗಳಾದ ಹಿರಿಯರು ಯಾವುದಾದರೊಂದು ವಿಚಾರವನ್ನು ತಿಳಿಸಿದರೆ ಅದನ್ನು ಹೀಯಾಳಿಸುವುದೇ ಈಗಿನ ಜನಾಂಗದ ಬುದ್ಧಿಯೆಂದರೂ ಹೆಚ್ಚಲ್ಲ. ನಾನೂ ಆಧುನಿಕ ವಾತಾವರಣದಲ್ಲೇ ಬೆಳೆದವನಾದುದರಿಂದ, ಇದಕ್ಕೆ ವ್ಯತಿರಿಕ್ತನಾಗಿಲ್ಲ! ಯಾವುದೇ ಅಂಧ ವಿಚಾರಗಳಲ್ಲಿ ನನಗೂ ಶ್ರದ್ಧೆ ಅಷ್ಟಕ್ಕಷ್ಟೆ!

ಹಿಂದಿನ, ಆರಿತ, ಜ್ಞಾನಿಗಳು ಶಕುನಗಳಿಗೆ ಬಲು ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾರೆ. ಆದರೆ ಅವರಲ್ಲಿ ಕೆಲವಂತ ಸುಳ್ಳಾಗುತ್ತಿದ್ದರೂ ನಿಜ. ಕೆಲವಂಶವಂತೂ ಸಂಪೂರ್ಣ ಸತ್ಯವೆನ್ನುವುದರಲ್ಲಿ ನಿಸ್ಸಂಶಯ. ನಮ್ಮ ತೀರ್ಥರೂಪರೂ ಹಳೆಯ ಸಂಪ್ರದಾಯಕ್ಕೆ ಮನ್ನಣೆ ಕೊಡುತ್ತಿದ್ದವರಾದುದರಿಂದ ಇಂತಹ ವಿಚಾರಗಳಲ್ಲಿ ಅವರಿಗೆ ಶ್ರದ್ಧೆ ಹೆಚ್ಚು. ಅದಲ್ಲದೆ, ಇದೆಲ್ಲವನ್ನು ಅವರು ನನಗೂ ಬೋಧಿಸುತ್ತಿದ್ದರು. ಆದರೆ ಪ್ರಾಚೀನತೆ ಮತ್ತು ಆಧುನಿಕತೆಗಳ ಪರಸ್ಪರ ವಿರುದ್ಧ ಶಕ್ತಿಗಳಾಗಿದ್ದ ನಮ್ಮಲ್ಲಿ, ಆಧುನಿಕತೆಯ ಪ್ರತಿಮೂರ್ತಿಯಾಗಿದ್ದ ನಾನು, ಈ ಅಂಧ ವಿಚಾರಗಳಿಗೆ ಬೆಲೆ ಕೊಡಲೇ? ಶುಕ್ರವಾರ ತಲೆಗೆ ಎಣ್ಣೆ ಹಚ್ಚಿ ಸ್ನಾನ ಮಾಡಬಾರದು, ಆದಿತ್ಯವಾರ ಕ್ಷೌರ ಮಾಡಿಸಿದರೆ ಆಯುಷ್ಯದ ಒಂದು ತಿಂಗಳು ನಶಿಸಿ ಹೋಗುವುದು; ಇವೇ ಮೊದಲಾದುವು ತಂದೆಯವರ ಉಪದೇಶಗಳಾಗಿದ್ದುವು, ನನಗೆ! ಆದರೆ ನನ್ನ ತರ್ಕ ಬುದ್ಧಿಯಿಂದಾಗಿ ಅವರೂ ಒಮ್ಮೊಮ್ಮೆ ಬಾಯಿ ಮುಚ್ಚಿಕೊಳ್ಳಬೇಕಾಗುತ್ತಿತ್ತು. ಆದಿತ್ಯವಾರ ಕ್ಷೌರ ಮಾಡಿಸಿದಲ್ಲಿ ಆಯುಷ್ಯದ ಒಂದು ತಿಂಗಳು ನಷ್ಟವಾಗುವುದಾದರೆ, ಇಷ್ಟರ ವರೆಗೆ ನಾನು ಕ್ಷೌರ ಮಾಡಿಸಿದ ಆದಿತ್ಯವಾರಗಳನ್ನು ಲೆಕ್ಕ ಹಾಕಿದಾಗ ಇರುವ ಆಯುಷ್ಯದ ಡಬ್ಬಲ್ ಆಯುಷ್ಯ ನಾಶವಾಗಬೇಕಾಗಿತ್ತು!! ನಾನೆಂದೋ ಸಾಯಬೇಕಾಗಿತ್ತು!! ಎಷ್ಟಾದರೂ ಕಾಲೇಜಿನಲ್ಲಿ ಓದುವಾಗ P. C. M. ತೆಗೆದುಕೊಂಡವರಲ್ಲವೇ, ಲೆಕ್ಕ ಅಂದರೆ ಲೆಕ್ಕ! ಇದನ್ನು ಉತ್ತರಿಸುವಷ್ಟು ತಾಕತ್ತು, ಪಾಪ, ತಂದೆಯವರಲ್ಲೆಲ್ಲಿ ಬರಬೇಕು? ಸುಮ್ಮನಾಗುತ್ತಿದ್ದರು.

ಭರಣಿ ಕೃತ್ತಿಕೆಯಂದು, ಯಾವ ಶುಭ ಕಾರ್ಯವನ್ನು ಮಾಡುವುದಾಗಲೀ, ಯಾವ ಹೊಸ ಕೆಲಸವನ್ನು ಪ್ರಾರಂಭಿಸುವುದಾಗಲೀ ಕೂಡದೆಂದು ನಮ್ಮ ತಂದೆಯವರ ಇನ್ನೊಂದು ಅಭಿಪ್ರಾಯವಾಗಿತ್ತು. ಈ ಬಗ್ಗೆ ನನಗವರು ಹೆಚ್ಚಿನ ಉಪದೇಶವನ್ನೇನೂ ಕೊಟ್ಟಿರಲಿಲ್ಲ, ಬಹುಶಃ ಕೇಳಲಾರೆನೆಂದೋ ಏನೋ! ಇದುವರೆಗೆ ನಾನೂ ಅವರಲ್ಲಿ ಈ ಬಗ್ಗೆ ಹೆಚ್ಚಿನ ಚರ್ಚೆಯನ್ನು ನಡೆಸಲು ಹೋಗಿರಲಿಲ್ಲ, ಕಾರಣ, ಇಂತಹ ಅಂಧ ವಿಶ್ವಾಸಗಳು ತಳವಿಲ್ಲದುವೆಂದು ನನಗೆ ಮೊದಲೇ ಮನದಟ್ಟಾಗಿತ್ತು. ಹಾಗೆಂದು ನನಗೂ ಭರಣಿ ಕೃತ್ತಿಕೆಯಂದು ಯಾವ ಹೊಸ ಕೆಲಸವನ್ನೂ ಮಾಡುವ ಪ್ರಮೇಯವೂ ಬಂದಿರಲಿಲ್ಲ.

ಕೆಲವು ಸಮಯಗಳ ನಂತರ ಈ ಭರಣಿ—ಕೃತ್ತಿಕೆ ನನಗೂ ತನ್ನ ಪರಾಕ್ರಮದ ಪ್ರದರ್ಶನವನ್ನು ಮಾಡಿ ತೋರಿಸಲಾರಂಭಿಸಿತು. ಕಲವಾರು ಪೆಟ್ಟುಗಳನ್ನು ನಾನು ಇದರಿಂದಾಗಿ ತಾಳಬೇಕಾಯಿತು.

ಒಮ್ಮೆ ತಂದೆಯವರಿಗೆ ಅಕಸ್ಮಾತ್ತಾಗಿ ಜ್ವರ ಬರಲಾರಂಭಿಸಿತು. ಅವರಿಗೆ ಇಷ್ಟರ ವರೆಗೂ ಜ್ವರ ಬಂದುದು ನನ್ನ ಜನನದ ನಂತರದ ಇತಿಹಾಸದಲ್ಲಿರಲಿಲ್ಲ. ದಿನಗಳು ಉರುಳಿದುವು. ಔಷಧೋಪಚಾರಗಳು ನಡೆಯುತ್ತಲೇ ಇದ್ದುವು. ಹಾಗೆಂದು ಜ್ವರ ಹೆಚ್ಚಾಗುತ್ತಲೂ ಇರಲಿಲ್ಲ. ಆನೇ ದಿನ ಯಾವುದೋ ಕಾರಣಕ್ಕಾಗಿ ಕೆಲೆಂಡರು ನೋಡುತ್ತಿರುವಾಗ, ಥಕ್ಕನೆ ನನ್ನ ದೃಷ್ಟಿ ಆ ದಿನಗಳ ಹಿಂದಿನ ತಾರೀಕಿನಲ್ಲಿಗೆ ಹೋಯಿತು. ಅಲ್ಲಿ ಭರಣಿ ಕೃತ್ತಿಕೆಯ ಇರುವಿಕೆಯು ನನಗೆ ಅರಿವಾಯಿತು. ಜೀವಮಾನದಲ್ಲೇ ಪ್ರಪ್ರಥಮವಾಗಿ ಸ್ವಲ್ಪ ಭಯ, ಅದೇಕೋ ನನ್ನನ್ನಾವರಿಸಿತು. ಎಷ್ಟೆಷ್ಟು ಲೆಕ್ಕ ಹಾಕಿದರೂ ಅದೇ ದಿನ ತಂದೆಯವರಿಗೆ ಜ್ವರ ಬರಲಾರಂಭಿಸಿದುದು ನಿಶ್ಚಿತವಾಗುತ್ತಿತ್ತು. ಫಲಿತಾಂಶ ಮರುದಿನವೇ ಹೊರಬಂತು. ಮೂರನೆಯ ದಿನ ಬೆಳಗ್ಗೆ ತಂದೆಯವರ ಮಾತನಾಡುತ್ತಿದ್ದಲ್ಲೇ ಶ್ವಾಸೋಚ್ಛ್ವಾಸ ನಡೆಯುತ್ತಿರಲಿಲ್ಲ. ತೀರ್ಥರೂಪರ ಪ್ರಾಣಪಕ್ಷಿ ಹಾರಿ ಹೋದುದು ಸ್ಪಷ್ಟವಾಗಿತ್ತು.

ಇದಾದ ನಂತರ ಕೆಲವು ವರ್ಷಗಳು ಸಂದುವು. ನಾನು ಈ ನಕ್ಷತ್ರ ದ್ವಯದ ಬಗ್ಗೆ ಅಷ್ಟೊಂದು ವಿಚಾರ ಮಾಡಲಿಲ್ಲ. ೫ ವರ್ಷಗಳ ನಂತರ ನಮ್ಮ ಮಾತೃಶ್ರೀಯವರೂ ಅಕಸ್ಮಾತ್ತಾಗಿ ಕಾಯಿಲೆ ಬಿದ್ದು ಎಂಟನೇ ದಿನ ಸ್ವರ್ಗವಾಸಿಗಳಾದರು. ನಂತರ ಒಂದು ದಿನ ಬುದ್ಧಿಪೂರ್ವಕವಾಗಿಯೇ ಕೆಲೆಂಡರನ್ನು ಮಗುಚುತ್ತಿರುವಾಗ ತಾಯಿಯವರಿಗೂ ಕಾಯಿಲೆ ಪ್ರಾರಂಭವಾದುದ ಭರಣಿ-ಕೃತ್ತಿಕೆಯಂದೇ ಎಂದು ಸಂಪೂರ್ಣ ಸ್ಪಷ್ಟವಾಯಿತು. ಈಗ ಈ ಬಗ್ಗೆ ನಿಜವಾಗಿಯೂ ನಾನು ವಿಚಾರ ಮಾಡತೊಡಗಿದ್ದೆ. ಜೀವನದಲ್ಲಿ ಬಂದ ಎರಡೇ ಆಘಾತಗಳು ನನಗೆ ಸಾಕಾಗಿದ್ದುವು. ಆದರೂ ಆಧುನಿಕ ಶಿಕ್ಷಣವನ್ನು ಪಡೆದ ನಾನು ಒಂದೊಮ್ಮೆಗೆ ಈ ಅಪಶಕುನವನ್ನು ನಂಬುವುದು ಸಾಧ್ಯವಿರಲಿಲ್ಲ. ಮತ್ತೆಂದು ಸಂದರ್ಭಕ್ಕಾಗಿ ಕಾದು ಕುಳಿತೆ.

ಒಮ್ಮೆ ನನಗೆ ಒಂದು ಹೈಸ್ಕೂಲಿನಿಂದ ಲೀವ್ ವೆಕೆನ್ಸಿಗೆ ಅಧ್ಯಾಪಕನಾಗಿ ಸೇರಬೇಕೆಂದು ಸರಕಾರದಿಂದ ಆರ್ಡರ್ ಬಂತು. ಸರಿಯೆಂದುಕೊಂಡು ಕೆಲಸ ಸಿಕ್ಕಿದ ಆನಂದದಲ್ಲಿ ಭಾವೀ ಜೀವನದ ಸುಮಧುರ ಸ್ವಪ್ನವನ್ನು ಕಾಣುತ್ತ ಆ ಶಾಲೆಗೆ ನಡೆದೆ. ಅಲ್ಲಿಯ ಮುಖ್ಯೋಪಾಧ್ಯಾಯರನ್ನು ಕಂಡು ಮಾತನಾಡಿದ ಬಳಿಕ ನನ್ನ ಉತ್ಸಾಹಕ್ಕೆ ತಣ್ಣೀರೆರಚುವಂತಹ ಸತ್ಯ ಸಂಗತಿಯು ಅರಿವಾಯಿತು. ಅಲ್ಲಿ ರಜೆಯಲ್ಲಿದ್ದ ಉಪಾಧ್ಯಾಯರಿಗೆ ಇನ್ನು ಕೇವಲ ಒಂದೇ ದಿನದ ರಜೆ ಬಾಕಿ ಉಳಿದಿತ್ತು. ನಾನು ಸೇರುವ ಎರಡನೆಯ ದಿನವೇ ಅವರೂ ಬಂದು ಸೇರುವವರಿದ್ದರು. ಆದುದರಿಂದ ಕೇವಲ ಒಂದು ದಿನಕ್ಕಾಗಿ ಮಾತ್ರ ಸೇರಿದರೆ ಎಲ್ಲರಿಗೂ ತೊಂದರೆಗೆ ಕಾರಣವೆಂದೂ, ಮೇಲಿನ ಅಧಿಕಾರಿಗಳಲ್ಲಿ ಈ ಬಗ್ಗೆ ಮಾತನಾಡಿ ಸೂಕ್ತ ವಿಚಾರವನ್ನು ಮಾಡುವುದು ಒಳ್ಳೆಯದೆಂದೂ, ಆ ಮುಖ್ಯೋಪಾಧ್ಯಾಯರಿಂದ ಹೇಳಿಸಿಕೊಂಡು ಜೋಲು ಮೋರೆಯೊಡನೆ ಮನೆಗೆ ಹಿಂತಿ

(ಒಂಭತ್ತನೇ ಪುಟ ನೋಡಿರಿ)



ಭೂಮಿಯೇಕೆ ಸುತ್ತಲೂ ತಿರುಗುತ್ತಿದೆ?
ಏಕಮ್ಮಾ ಏಕೆ?
ಚಂದ್ರನೇಕೆ ಹಳದಿಯಾಗಿದ್ದಾನೆ?

ಪ್ರಶ್ನೆಗಳು. ಉತ್ತರದ ಅವಶ್ಯಕತೆಯುಳ್ಳ ಪ್ರಶ್ನೆಗಳು.

ಮಗುವಿನ ಕೋಮಲ ಮನಸ್ಸಿನ ಕುತೂಹಲವು ಒಂದು ಅಮೂಲ್ಯವಾದ ಸೊತ್ತಾಗಿದೆ. ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವ ಅವಕಾಶ ಅವನಿಗಿರಬೇಡವೆ? ನಿಮ್ಮ ಮಗನೇ ಈ ಮಗುವಾಗಿರಲು ಸಾಧ್ಯ. ನೀವು ಹೇಗೆ ಯೋಚಿಸುವಿರಿ? ಆತನ ಭವಿಷ್ಯ ನಿಮ್ಮ ಮೇಲೆ ಅವಲಂಬಿಸಿದೆ. ಆತನಿಗಾಗಿ ಮತ್ತು ಸ್ವತಹ ನಿಮಗಾಗಿ ಹೆಚ್ಚಿನ ಉತ್ಕರ್ಷವನ್ನು ಬಯಸುವಿರಿ ತಾನೆ? ಹಾಗಾದರೆ ಈ ಬಗ್ಗೆ ಈಗೇನು ಮಾಡುತ್ತಿದ್ದೀರಿ? ಅವನಿಗಾಗಿ ಎಷ್ಟು ಉಳಿಸುತ್ತಿದ್ದೀರಿ? ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಗೆ ಹೋಗಿ ಅವನ ಹೆಸರಿನಲ್ಲಿ ಒಂದು ಕ್ಯುಮುಲೇಟಿವ್ ಖಾತೆಯನ್ನು ತೆರೆಯಿರಿ. ಪ್ರತಿ ತಿಂಗಳು ಸ್ವಲ್ಪ ಸ್ವಲ್ಪ ಒತ್ತಟ್ಟಿಗೆ ಉಳಿಸಿರಿ. ನೀವು ಉಳಿಸುವ ಪ್ರತಿಯೊಂದು ರೂಪಾಯಿಯೊಡನೆ ಅವನ ಭವಿಷ್ಯ ಬಲಗೊಳ್ಳುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ



CB. 133/Kan.

ಕೆನರಾ ಬ್ಯಾಂಕ್
ಇತ್ತೀಚೆಗೂ ಹಿರಿಯದಾಗಿತ್ತು

ಕೆನರಾ ಬ್ಯಾಂಕ್
ಇಂದು ಹಿರಿಯದೇ ಆಗಿದೆ

ಕೆನರಾ ಬ್ಯಾಂಕ್
ಮುಂದೆ ಮತ್ತೂ ಹಿರಿಯದಾಗಲಿದೆ

ನಿನ್ನೆಗಿಂತ ಉತ್ತಮ
ಸೇವೆ, ಇಂದಿನ ಉತ್ತಮ
ಸೇವೆಯನ್ನು ನಾಳೆ ಇನ್ನೂ
ಉತ್ತಮವಾಗಿರಿಸಲು
ಸದಾ ಪ್ರಯತ್ನಿಸುತ್ತಿದೆ
— ಕೆನರಾ ಬ್ಯಾಂಕ್

ಈಗಿನ ವೈಶಿಷ್ಟ್ಯಗಳು
- ಭಾರತದಲ್ಲಿ 235ಕ್ಕೂ ಹೆಚ್ಚು ಶಾಖೆಗಳು
- ಪ್ರಪಂಚದಾದ್ಯಂತ 145ಕ್ಕೂ ಹೆಚ್ಚು ಸಂಖ್ಯೆಯ ಪ್ರತಿನಿಧಿಗಳು
- 60 ವರ್ಷಗಳ ಪ್ರೌಢ ಅನುಭವ
- ಸಮಗ್ರ ಬ್ಯಾಂಕಿಂಗ್ ಸೇವಾ ವ್ಯವಸ್ಥೆ

ಮುಂಬರುವ ದಿನಗಳು
ಉಜ್ವಲ ಹಾಗೂ ಒಂದು ಸವಾಲಾಗಿದೆ
ಹೆಚ್ಚಿನ ಅವಕಾಶಗಳನ್ನೊದಗಿಸುವ
ಈ ಸವಾಲನ್ನೆದುರಿಸಿ ನಿಮಗೆ ಸೇವೆ
ಸಲ್ಲಿಸುವುದರಲ್ಲಿ ನವ ದಿಗಂತಗಳನ್ನು ಮುಟ್ಟಲು
ಕೆನರಾ ಬ್ಯಾಂಕ್ ಸದಾ ಪ್ರಯತ್ನಿಸುತ್ತಿದೆ

60 ವರ್ಷಗಳ ಸೇವೆ
ವಜ್ರ ಮಹೋತ್ಸವ ವರ್ಷ

ಮುನ್ನಡೆಯಿರಿ—ನಮ್ಮೊಡನೆ ಮುನ್ನಡೆಯಿರಿ
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)
ರಿಜಿಸ್ಟರ್ಡ್ ಆಫೀಸ್ ಮಂಗಳೂರು
ಆಡಳಿತ ಕಚೇರಿ ಬೆಂಗಳೂರು

90 ಕೋಟಿ ರೂ. ಗಳಿಗೂ ಹೆಚ್ಚಿನ ಸಂಪನ್ಮೂಲಗಳು

ರಾಷ್ಟ್ರೀಯ ರಕ್ಷಣಾ ನಿಧಿಗೆ ಧಾರಾಳ ಸಹಾಯ ಸಲ್ಲಿಸಿರಿ
ಕೆನರಾ ಬ್ಯಾಂಕಿನ ಎಲ್ಲ ಶಾಖೆಗಳಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ
ಸಲ್ಲಿಸುವ ವಂತಿಗೆಗಳು ಮೂಲ ಬೆಲೆಗೆ ಸ್ವೀಕರಿಸಲ್ಪಡುತ್ತವೆ.

## ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. No 146/1965.

ಕೊನ್ಸ್ತಂತಿ ಅನ್ಸು —ವಾದಿ
ಕಂತಾನ್ ಪಿಂಟೋನ್ ಕೂಡಾ — ಪ್ರತಿವಾದಿರು
ಇದ್ರಲ್ಲಿ ನ್ಯಾಯದ 3 ಮತ್ತು 6ನೇ ಪ್ರತಿವಾದಿರು 3) ತಿಮೋತಿ ಡಿ'ಸೋಜ, ಶ್ರೀಮತಿ ಸಂತಾನ್ ಪಿಂಟೋರ ಮಗ, ಬೆಳ್ತಂಗಡಿ ತಾಲ್ಲೂಕ್ಕು ಉಜಿರೆ ಗ್ರಾಮದ ಮುಂಡೇಲ್ ಎಂಬಲ್ಲಿರುವವ 6) ನಾವೂರ ಗ್ರಾಮದ ಮುರಿ ಎಂಬಲ್ಲಿರುವ ಮೊಹಿದ್ದೀನ್ ಪಳ್ಳಿಭಂಡಾರ ಯಾದರ ಅದಳ್ತಿದಾರ—ಜನಾಬ್ ಹಮ್ಮಬ್ಬ ಬ್ಯಾರಿ, ಜನಾಬ್ ಅದಂ ಬ್ಯಾರಿಗಳ ಮಗ, ಬೆಳ್ತಂಗಡಿ ತಾಲ್ಲೂಕ್ಕು ನಾವೂರ ಗ್ರಾಮದ ಕೋಡಿ ಕನ್ನಾಜೆ ಎಂಬಲ್ಲಿರುವವ—ಇವರೀಗೆ ಕೋರ್ಟ ಹುಕ್ಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ವಾದಿಗೆ ಬರತಕ್ಕ ಗೇಣಿ ಬಾಕಿ ಯಿತ್ಯಾದಿ ರೂ. 4460-81ಕ್ಕೆ ಪ್ರತಿವಾದಿರ ಮೇಲೆ ಮಾಡಿರುವ ಮೇಲಿನ ದಾವೆಯು ತಾ. 4-1-1966ಕ್ಕೆ ತನ್ನಿಗೆ ಯಿಟ್ಟರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪ ಇದ್ದರೆ ಸದಿ ತ್ಯಾದೆ ದಿನ ಪೂರ್ವಾಹ್ನ 10 ಗಂಟೆಗೆ ನೀವು ಸ್ವತಃ ಯಾ ವಕೀಲ ದ್ವಾರಾ ಕೋರ್ಟ ಮುಂದೆ ಹಾಜ್ರಾಗಿ ಉದಹರಿಸ ತಕ್ಕದ್ದು—ತಪ್ಪಿದ್ರೆ ನಿಮ್ಮನ್ನು ಶಿವ್ಯಾ ಮಾಡಿ ದಾವೆಯನ್ನು ತೀರ್ಮಾನಿಸಲಾಗುವುದು.

B. K. Suryanarayana Rao
Advocate for Plaintiff.
ಬೆಳ್ತಂಗಡಿ ತಾ. 8-12-65.

## ನಿನ್ನ ನುಡಿ

ಹಿಂದೊಮ್ಮೆ ನೀ ಬರೆದ ಕಣ್ಣೀರಿ
ನೋಲೆಯಲಿ
ಎರಡು ಸಾಲಿನ ನಿನ್ನ ಕವಿತೆಯೊಂದು,
ಮುಗಿಲ ನೆರೆಯಿಸಿ ಗಾಳಿ ಮೂಕನಾಡುವ
ಹಾಗೆ
ಇಂದಿಗೂ ಎನ್ನೆದೆಯೊಳಾಡುತ್ತಿದೆ.
ಮುಂಜಾವ, ಮಂಜೆಲ್ಲ ಮುತ್ತು ಚೆಲ್ಲಿದ
ಹಾಗೆ
ಹಸುರು ಹುಲ್ಲಿನ ಮೇಲೆ ಮಿನುಗುವಾಗ;
ಹಿಮಗಿರಿಯ ತೊಟ್ಟಿಲಿಂದೇಳುತಿರೆ
ನೇಸರನು,
ನಿನ್ನ ನುಡಿಯೆನ್ನೆದೆಯೊಳಾಡುತ್ತಿದೆ.
ನಾನೇರಿದೆತ್ತರದ ಗಿರಿಯ ನೆತ್ತಿಯ ಮೇಲೆ
ನಿಂತು, ನಿಮ್ಮೂರಾಚೆ ಕಣ್ಣು
ಹಾಯಿಸಲು,
ನೂರಾರು ಹರದಾರಿ ಹಾದು ಬಂದಿಹ
ಗಾಳಿ
ಪಿಸುಗುಟ್ಟುತಿದೆ ಕಿವಿಯೊಳದುವೆ
ಸಾಲುಗಳು!
ಮುಗಿಲ ಸೀರೆಯ ಹೊದ್ದ ನೀಲಿ
ಬೆಟ್ಟಗಳಾಚೆ
ತಪ್ಪಲೊಡಲಿಂದಿಳಿವ ತೊರೆಗಳೆಲ್ಲ,
ಒಂದಾಗಿ, ನಿಮ್ಮೂರ ಹಾದು ಹರಿಯುತ
ಬರುವ
ಕಲರವದೊಳಡಗಿಹುದು ನಿನ್ನ
ದನಿಯು.
ಮರು ಭೂಮಿಯುರವಣೆಯ
ಸಾಸಾರವೇರದಲಿ
ಮುಗಿಲ ಮಲ್ಲಿಗೆಯಂತೆ ಬೀದ
ಮುಗುಳು;
ಬಿಸಿಲು ಕುದುರೆಯನೇರಿ ನಾನೋಡು
ತಿರುವಾಗ
ಕರೆದು ಹೇಳಿದುದೇನು, ನಿನ್ನ
ಮಾತುಗಳು!
ಸದ್ದುಗದ್ದಲವಡಗಿ, ಮನದ ದಂಗೆಯು
ಮೆಟ್ಟಿ,
ಮನೆಯ ಸೇರಿದ ಮೇಲೆ
ಸಂಜೆಯೊಮ್ಮೆ
ಮರಸಡಿಯ ಹಾಸಿನಲಿ ಮೈಚೆಲ್ಲಿ
ಮಲಗಿರಲು,
ಹಕ್ಕಿಯೂ ಹಾಡುವುದು ನಿನ್ನ ಹಾಡು!
ಎನ್ನೆದೆಯ ಕೆನ್ನಾಲಿಯೋಲ್ದಿ ಕೋವಿಯ
ಕೊನೆಯು
ನಿನಗೆ ಮಾರೋಲೆಯನು
ಬರೆಯುವಾಗ,
ಅಂದಿಗೂ ಕೊನೆಗದನೆ ಮರೆಯಲಾರದೆ
ಬರೆವೆ,
ಇಂದಿಗೂ ಮೊದಲದನೆ ಬರೆಯಲೇನು?

— ಶ್ರೀ ಕೆ. ಟಿ. ಗಟ್ಟಿ,
ಕಾಸರಗೋಡು.

## ಅಮೃತ ಬಿಂದು

ಬೇರೆಯವರಿಂದ ಕಲಿತುದೆಲ್ಲವನ್ನೂ ಪ್ರತ್ಯೇಕಿಸಿದರೆ ತನ್ನದೆಂದು ಉಳಿಯುವದು ಅತ್ಯಲ್ಪ.

o o o

ಸುಖದ ಅಪೇಕ್ಷೆ ತುಂಬಿದವನು ಸದಾ ಕಾಲ ಬಡವನಾಗಿಯೇ ಇರಬೇಕಾಗುತ್ತದೆ.

o o o

ಕರ್ತವ್ಯವನ್ನು ಆನಂದದಿಂದ ಮಾಡುವ ಆನಂದವನ್ನು ಕರ್ತವ್ಯವೆಂದು ಪರಿಗಣಿಸುವ ಜೀವನ ತತ್ವ ಹೊಂದಿದವನು ಸದಾ ಸುಖಿಯಾಗಿರುತ್ತಾನೆ.

o o o

ನಾಳೆ ತಿರುಗಿ ಕಚ್ಚಬಹುದಾದ, ಹೃದಯವನ್ನು ಕೊರೆಯಬಹುದಾದ ಇಂದಿನ ಸುಖ ಸರ್ವತ್ರ ತ್ಯಾಜ್ಯವಿರಬೇಕು.

o o o

ನಾವು ಹೊಂದಿಕೊಳ್ಳುವ ಸುಖ ಹೆಚ್ಚಾದರೆ ಕ್ರಮಶಃ ಜಿಗುಪ್ಸೆ ಬರುತ್ತದೆ ಆದರೆ ನಾವು ಕೊಡುವ ಸುಖದಲ್ಲಿ ಹೆಚ್ಚಾದಷ್ಟೂ ಸದಾ ಆನಂದವಿರುತ್ತದೆ.

# ಭಾರತದ

ಅಸ್ಸಾಂ ರಾಜ್ಯದ ಹೊಸತಾಗಿ ಭಾರತದ ಉಳಿದೆಲ್ಲ ರಾಜ್ಯಗಳಲ್ಲೂ ಪ್ರಕೃತಿ ಕಣ್ಣಾಮುಚ್ಚಾಲೆಯಾಡಿ, ಆಹಾರ ಪ್ರಶ್ನೆಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದೆ. ಮೈಸೂರು, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾಗಳು ದಿಲ್ಲಿಯೊಡನೆ ತಮ್ಮ ಕಷ್ಟವನ್ನು ತೋಡಿಕೊಂಡಿವೆ.

ಅಮೇರಿಕದಿಂದ ಜನವರಿಯೊಳಗಾಗಿ ಐದು ಲಕ್ಷ ಟನ್ ಗೋದಿ ಬರುವುದೆಂದು ನಿರೀಕ್ಷೆ. ದೀರ್ಘಾವಧಿ ಪೂರೈಕೆಯ ಆಶ್ವಾಸನೆಯನ್ನು ಕೊಡಲು ಅಮೇರಿಕ ಸಿದ್ಧವಿಲ್ಲವೆಂಬುದು ಗಮನಿಸಬೇಕಾದ ಅಂಶ. ಇದಕ್ಕೆ ಕಾರಣ ಏನೇ ಇರಲಿ, ಹೊರಗಿನ ನೆರವಿನಿಂದ ನಮ್ಮ ಆಹಾರ ಸಮಸ್ಯೆ ಬಗೆಹರಿಯುವ ಲಕ್ಷಣಗಳಿಲ್ಲ.

ಇತ್ತ ಆಹಾರರಂಗದ ಚಿತ್ರ. ರಕ್ಷಣಾರಂಗದಲ್ಲಿ ವೈರಿಗಳ ಆಟಾಟೋಪ ಹೆಚ್ಚತೊಡಗಿದೆ. ಎರಡು ಸಾವಿರಕ್ಕೂ ಹೆಚ್ಚು ಸಲ ಕದನ ವಿರಾಮ ರೇಖೆಯನ್ನು ಪಾಕಿಸ್ತಾನೀ ಪಡೆಗಳು ಉಲ್ಲಂಘಿಸಿ, ನಮ್ಮ ರಕ್ಷಣಾ ದಳದ ಕೈಯಲ್ಲಿ ಏಟು ತಿಂದಿವೆ. ಚೀನೀಯರು ಸಿಕ್ಕಿಂನೊಳಕ್ಕೂ ಲಡಾಖ್ ನೊಳಕ್ಕೂ ನುಗ್ಗಲು ಹವಣಿಸಿ ಕಾಲು ಕೆದರುತ್ತಿದ್ದಾರೆ.

### ಪಾಕಿಸ್ತಾನದ ಕುತಂತ್ರ

ಭಾರತ—ಪಾಕಿಸ್ತಾನ ಘರ್ಷಣೆ ನಡೆಯುತ್ತಿದ್ದಾಗ, ತಮ್ಮ ನಗರಗಳ ಟಾಷ್ಕೆಂಟನಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿಯವರೂ ಆಯೂಬ್‌ಖಾನರೂ ಭೇಟಿಯಾಗಲೆಂದು ಸೋವಿಯಟ್‌ರಷ್ಯಾ ಸಲಹೆಮಾಡಿತ್ತು. ಶಾಸ್ತ್ರಿಯವರು ಒಪ್ಪಿದರು, ಆಯ್ಯೂಬ್ "ಸಾಧ್ಯವಿಲ್ಲ" ಎಂದಿದ್ದರು. ಈಗ ಒಮ್ಮೆಲೆ ಭುಟ್ಟೋ "ಭೇಟಿಗೆ ನಾವು ಸಿದ್ಧ" ಎಂದಿದ್ದಾರೆ. ಅಷ್ಟೇ ಅಲ್ಲ ಸ್ವತಃ ರಷ್ಯಾಯಾತ್ರೆ ಕೈಗೊಂಡು ಮರಳಿದ್ದಾರೆ.

ವಾಸ್ತವವಾಗಿ ಬುಟ್ಟೋ ರಾಜನೀತಿಗೆ ಪೈಸಾ ಬೆಲೆಯೂ ಇಲ್ಲ. ಮುಂಬಯಿಯಲ್ಲಿದ್ದ ತನ್ನ ಆಸ್ತಿಗಾಗಿ, ತಾನು ಭಾರತದ ಪ್ರಜೆ ಎಂದು ಇತ್ತೀಚಿನವರೆಗೂ ಸಾಧಿಸಿದ, ತನ್ನ ಪೂರ್ವಜನರು ಯಾರೆಂಬುದನ್ನು ಮರೆತು ಭಾರತೀಯರನ್ನು ಅವಹೇಳನಕ್ಕೆ ಗುರಿಮಾಡಿದ, ಸುಳ್ಳಿನ ಸರಮಾಲೆ ಪೋಣಿಸುವುದರಲ್ಲಿ ತನ್ನ ಚೀಣೀ ಬಂಧುಗಳನ್ನೂ ಮೀರಿಸಿದ ಈ ವ್ಯಕ್ತಿ, ರಾಜನೈತಿಕ ಜಗತ್ತಿನ ವಿದೂಷಕನೇ ಸರಿ. ಈತ ಭಾರತ- ರಷ್ಯಾ ಸ್ನೇಹಪಾತ್ರೆಗೆ ಹುಳಿಹಿಂಡಲು ಯತ್ನಿಸಬಹುದು. ಪಾಕಿಸ್ತಾನ—ಚೀನಾಗಳು ಒಂದಾಗಿ ಭಾರತದ ಮೇಲೆ ಪುನರಾಕ್ರಮಣ ನಡೆಸಿದರೆ ರಷ್ಯ ಏನು ಮಾಡೀತೆಂಬುದನ್ನು ತಿಳಿಯಲು ಪ್ರಯತ್ನಿಸಬಹುದು. ಇದರ ಹೊರತಾಗಿ ಹೆಚ್ಚಿನ ಮಹತ್ವ ಭುಟ್ಟೋ ದೌತ್ಯಕ್ಕೆ ಇಲ್ಲವೆಂಬುದು ಸ್ಪಷ್ಟ.

ರಷ್ಯದಿಂದ ಅರ್ಥ ಮಂತ್ರಿ ಕೃಷ್ಣಮಾಚಾರಿಯವರು ಸಂತೃಪ್ತರಾಗಿ ಹಿಂತಿರುಗಿದ್ದಾರೆ. ಆಚಾರ್ಯರು ಕಮ್ಯೂನಿಸ್ಟ್ ಮಂತ್ರ ಘೋಷಣೆಗಳಿಗೆ ಮರುಳಾಗುವ ಮುಗ್ಧರಲ್ಲ. ಅಂಥವರೇ ರಷ್ಯದ ಈಗಿನ ಧೋರಣೆಯ ಬಗ್ಗೆ ಪ್ರಮಾಣ ಪತ್ರ ನೀಡಿರುವುದು ವಿಶೇಷ ಸಂಗತಿಯಾಗಿದೆ. ವ್ಯಾಪಾರ ವಾಣಿಜ್ಯ ಕ್ಷೇತ್ರಗಳಲ್ಲಿ, ಕೈಗಾರಿಕೋದ್ಯಮಗಳ ಸ್ಥಾಪನೆ ವಿಸ್ತರಣೆಗಳಿಗೆ ಸಂಬಂಧಿಸಿ, ಹಾಗೂ ಚತುರ್ಥ ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ರಷ್ಯದಿಂದ ಹೆಚ್ಚು ನೆರವು ದೊರೆಯುವ ಸಂಭವವಿದೆ. ಈ ಸಹಾಯ ಅಭಿವೃದ್ಧಿಕ್ಷೇತ್ರದಿಂದ ರಕ್ಷಣಾ ಕ್ಷೇತ್ರಕ್ಕೂ ಹಬ್ಬಿರುವುದು ಗಮನಾರ್ಹವಾದುದು. ಭಾರತಕ್ಕೆ ಸಬ್‌ಮೆರಿನ್ [illegible] ಕೊಡಲು ರಷ್ಯ ಒಪ್ಪಿದೆ [illegible] ನೌಕಾಪಡೆ ಹೆಚ್ಚು ಬಲಶಾಲಿಯಾಗಿದೆ. ಪೂರ್ವ ಯೂರೋಪಿನ ರಾಷ್ಟ್ರಗಳಿಂದ ಶಸ್ತ್ರಾಸ್ತ್ರಗಳನ್ನು ನಾವು [illegible] ದ್ದೇವೆ. ಅಮೇರಿಕೆ ಬ್ರಿಟನ್ನುಗಳ [illegible] ಇಷ್ಟವಾಗುತ್ತದೋ ಇಲ್ಲವೋ [illegible] ಬೇರೆ.

ಯಾವ ಬಣಕ್ಕೂ ಸೇರದ ಸ್ವತಂತ್ರ ವಿದೇಶಾಂಗ ನೀತಿಯನ್ನು ಭಾರತ [illegible] ಸರಿಸುತ್ತ ಬಂದಿರುವುದು ಎಷ್ಟು [illegible] ಯೋಗ್ಯ [illegible] ಇತ್ತೀಚಿನ ಘಟನೆಗಳಿಂದ ಮತ್ತಷ್ಟು ಸ್ಪಷ್ಟವಾಗಿದೆ. [illegible] ನ್ ಅಮೇರಿಕೆಗಳು ಭಾರತದ ಬಗ್ಗೆ [illegible] ಸ್ನೇಹ ಕಡಿದುಕೊಳ್ಳುವುದನ್ನು [illegible] ಭಾರತ ತಮ್ಮ ಕೈಗೊಂಬೆಯಾಗುವುದು ಸಾಧ್ಯವಿಲ್ಲವೆಂಬುದು [illegible] ಮೇಲೆ ಸಮಾನಸ್ಕಂಧರಂತೆ [illegible]



ವಿಶ್ವದ ಭೌತಿಕವಾದದ ಮುನ್ನಡೆ

೫೯ ಮಾಳಿಗೆಗಳುಳ್ಳ ಈ ಭವನವಿರುವುದು ನ್ಯೂಯಾರ್ಕ್ ಮಹಾನಗರದಲ್ಲಿ. ಇದರ ತಲೆ ಅತಿ ವಿಶಾಲವಾಗಿದೆ. ಹೆಲಿಕಾಪ್ಟರ್ ಇದರ ಮಾಡಿನಿಂದ ವಿಮಾನದ ಜೆಟ್ ನಿಲ್ದಾಣಗಳಿಗೆ ಹಾರಿಹೋಗುವ ಯೋಜನೆಯೊಂದು ಇಷ್ಟರಲ್ಲಿಯೇ ಕಾರ್ಯಗತವಾಗುತ್ತಿದೆ. ಅನಂತರ, ನ್ಯೂಯಾರ್ಕ್ ನಗರದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೆಲಿಕಾಪ್ಟರ್‌ಗಳ ಮೂಲಕ ಪ್ರಯಾಣಿಸುವ ದಿನ ಅತಿ ಸಮೀಪವಾಗುವುದು.

ಆಧುನಿಕ ಭೌತಿಕವಾದದಲ್ಲಿ ಅಮೇರಿಕೆಯು ನಿರಂತರವಾಗಿ ಮುನ್ನಡೆಯುತ್ತಿದೆ. ಇದರ ಮುಂದೆ ಮಾನವೀಯತೆಯ ಮೇಲೆ ಮಂಜಿನ ಮುಸುಕು ಕವಿದಿದೆ. ಆಧ್ಯಾತ್ಮಿಕತೆಯ ಮಾತಂತೂ ಬಹುದೂರವುಳಿಯಿತು— ಇದರ ಕೊನೆಯೆಲ್ಲಿ ಎಂದು ಈಗಲೇ ಹೇಳುವಂತಿಲ್ಲ. ಒಂದು ಐತಿಹಾಸಿಕ ಸತ್ಯವನ್ನು ಯಾರೂ ಮರೆಯಲಾರರು. ಏರಿದವನು ಇಳಿಯಲೇ ಬೇಕು. ಅದರ್ಲ್ಲಿ ಇನ್ನೂ ಏರುವ ದಾರಿಯಲ್ಲೇ ಇದ್ದೇವೆ—ಇದು ನಮಗೆ ಭವಿಷ್ಯದ ಬಗ್ಗೆ ಭರವಸೆ ನೀಡುತ್ತದೆ.

ಅಂಗವಿಕಲತೆ ಪಾಪವಲ್ಲ

ಅಂಗವಿಕಲತೆಯೊಂದು ಮಹಾಪಾಪವೆಂದು ತಿಳಿಯುವ ಕಾಲವಿಂದು ದೂರವಾಗಿದೆ. ಪಿಕ್ಚರ್ ಫೋನಿನ ಮೂಲಕ ಸಂಜ್ಞಾಮಯ ಭಾಷೆಯನ್ನು ಕಿವುಡರು ಇಂದು ಮಾತನಾಡಬಲ್ಲರು. ಕೆನೆಕ್ಟಿಕಟ್ಟಿನ ಕಿವುಡರ ಶಾಲೆಯ ಮೂವತ್ತು ವಿದ್ಯಾರ್ಥಿಗಳಲ್ಲಿ ಒಬ್ಬನಾದ ರಾಬರ್ಟ್ ಪರ್ಮನ್ ತನ್ನ ಕಿವುಡ ಮಿತ್ರನೊಡನೆ ಪಿಕ್ಚರ್ ಫೋನಿನ ಮೂಲಕ ಸಂಜ್ಞಾಮಯ ಭಾಷೆಯಲ್ಲಿ ಮಾತಾಡುತಿದ್ದಾನೆ. ಮುಂದುಗಡೆಯ ಚಿತ್ರ ಫಲಕವೂ ಈ ಸಂಭಾಷಣಾ ಯಂತ್ರದ ಮುಖ್ಯಾಂಗವಾಗಿದೆ.

ದುರ್ದೈವಿ ಅಂಗವಿಕಲರು ಇತರರಿಗೆ ಸಮವಾಗಿ ನಿಲ್ಲಬಲ್ಲ ಆತ್ಮಶಕ್ತಿಯನ್ನು ಪಡೆದಿರುತ್ತಾರೆ. ಇದರಿಂದಾಗಿಯೇ ಆಧುನಿಕ ಕಾಲದಲ್ಲಿ ಅಂಗವಿಕಲತೆಯೊಂದು ಕೊರತೆಯೆನಿಸುವುದಿಲ್ಲ.

# ...ನ

# ...ಪ ಸ್ವರೂಪ

...ವ ನರ್ತಿಸುತ್ತದೆ. ಅನಿವಾರ್ಯವಾಗು ...ತ್ತದೆ.

...ರುಳಿ ಪ್ರವಾಸದಿಂದ ಮರಳಿರುವ ...ಮಂತ್ರಿ ಎಸ್. ಕೆ. ಪಾಟೀಲರ ಪ್ರ... ಭಾರತದ ಪ್ರಧಾನಿಯನ್ನು ಇದಿ... ಗೊಳ್ಳಲು ಅವೆ ರಿಕದ ಅಧ್ಯಕ್ಷರು ಕಾತ ...ರಾಗಿದ್ದಾರೆ. ಆದರೆ ಅಲ್ಲಿಗೆ ಹೋಗುವ ...ರವನ್ನು ಲಾಲ್‌ಬಹದ್ದೂರರು ತೋ... ಸರಗೂಡ್ಡಿ ಯುಂತೂ ಅವರು ಹೋ... ...ಲ್ಲ. ಸದ್ಭಾವನೆಯ ಸಂದರ್ಶನ ...ವತ್ರ ಭಾರತ ಪ್ರಧಾನಿಯಿಂದ ಸಾಧ್ಯ... ...ಬಿಡುವು ದೊರೆತೊಡನೆ, ಅವರಿ... ...ಪ್ರವಾಸ ಕೈಗೊಳ್ಳುತ್ತೇನೆ ಜನವರಿ ...ಲ್ಲ — ಎಂದು ಶಾಸ್ತ್ರಿಯವರು ತಿಳಿಸಿ... ದ್ದಾರೆ.

## ಸ್ಪಷ್ಟಧ್ವನಿ

...ಭಾರತ ಬಿಂಬ ಹೊಸ ಒಗೆ... ಯದು. ಬಲಾಢ್ಯ ರಾಷ್ಟ್ರಗಳು ಅನುಸ... ...ವ ... ಎದುರಲ್ಲಿ ಯು... ...ವಾಗಲ ನಮ್ಮ ರಾಷ್ಟ್ರ ನಿರಾ... ...ದೆ. ಈ ಭಾಂತ ಪುರುಷ, ಕರ್ತವ್ಯ ...ಲು ಕೈದು ಎತ್ತಿಕೊಂಡಿರುವ ಅ... ...

...ದ ಸ್ವಾತಂತ್ರ್ಯ ಹೋರಾಟದ ...ದ ಖಾನ್ ಅಬ್ದುಲ್ ಗಫಾ... ...ನ್ — ಗಡಿನಾಡಿನ ಗಾಂಧಿ — ತಮ್ಮ ...ಫಕ್ತೂನ್ ಜನಾಂಗಕ್ಕೆ ಪಾಕ್ ಸರ್ವಾಧಿಕಾರತ್ವದಿಂದ ಮುಕ್ತಿ ಕೇಳುತ್ತಿದ್ದಾರೆ. ಫಕ್ತೂನರ ಸಂಗ್ರಾಮಕ್ಕೆ ಹೊಸ ಭಾರತ ಬೆಂಬಲ ನೀಡಿದೆ.

ಟಿಬೆಟ್‌ನಲ್ಲಿ ನಡೆದಿರುವ ಮಾನವ ಹಕ್ಕುಗಳ ಅಪಹರಣವನ್ನು ಈ ರಾಷ್ಟ್ರ ಖಂಡಿಸಿದೆ.

ಪೂರ್ವ ಪಾಕಿಸ್ತಾನದ ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ಸಹಾನುಭೂತಿ ತೋರಿದೆ.

ಎಲ್ಲಕ್ಕಿಂತಲೂ ಮೇಲಾಗಿ, 'ಕಾಶ್ಮೀರ ಇನ್ನು ಮುಕ್ತಾಯಗೊಂಡ ಅಧ್ಯಾಯ. ಅದು ಭಾರತದ ಆಂತರಿಕ ವಿಷಯ. ಅದರ ಬಗೆಗೆ ಯಾರೊಡನೆಯೂ ಮಾತುಕತೆ ಇಲ್ಲ" ಎಂದು ಭಾರತ ಸ್ಪಷ್ಟವಾಗಿ ಸಾರಿದೆ.

ಈ ಹೊಸ ಚೇತನಕ್ಕೆ ಲಾಲ್‌ಬಹದ್ದೂರರು ಕಾರಣರಾಗಿದ್ದಾರೆ. ಆ ಕಾರಣದಿಂದಲೇ ಅವರೀಗ ಅತ್ಯಂತ ಜನಪ್ರಿಯರು. ಮುಂಬಯಿ, ಅಲಹಾಬಾದ್, ಕಲ್ಕತ್ತಗಳಂತೆ ಮದರಾಸಿನಲ್ಲಿಯೂ ಅವರಿಗೆ ದೊರೆತ ಅದ್ಭುತ ಸ್ವಾಗತ ಅವರ ಜನಪ್ರಿಯತೆಗೆ ನಿದರ್ಶನ. ಅಲ್ಲಿ ಅವರಿಗೆ ... ... ...ರ ಲಕ್ಷ ... ಸಹಸ್ರ ಜ...ಗಳು ಜನ...ದ ರಾಷ್ಟ್ರ ಪ್ರೇಮದ ಪ್ರತೀಕ.

ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತವನ್ನು ಯಶಸ್ಸಿನಿಂದ ಯಶಸ್ಸಿಗೆ ಮುನ್ನಡೆಸಲು ಪ್ರಧಾನಿ ... ...ದಾಗ, ರಾಷ್ಟ್ರ ನಿರ್ಮಾಪಕ ಜನಾಹರರ ಜತೆಗೆ ಅವರ ಅನುಯಾಯಿ ಲಾಲ್‌ಬಹದ್ದೂರರ ಹೆಸರೂ ಇತಿಹಾಸದ ಪುಟಗಳನ್ನು ಅಲಂಕರಿಸುತ್ತದೆ.

ಇನ್‌ಫಾ.

---

ಗೂಬೆಗೆ ಕತ್ತಲೆಯಲ್ಲಿ ಕಣ್ಣು ಕಾಣುವುದೇ ವಿನಹ ಬೆಳಕಿನಲ್ಲಲ್ಲ; ಕತ್ತಲ ಮನುಷ್ಯನಿಗೆ ಇತರರ ತಪ್ಪುಗಳು ಕಾಣುವವಲ್ಲದೆ ನೀತಿ ಪ್ರತಿಭೆಗಳಲ್ಲ.

ಬೀಚರ್

○ ○ ○

ಜೀವನವೆಂಬ ನಾಣ್ಯಕ್ಕೆ ಮೃತ್ಯು ತನ್ನ ಮುದ್ರೆಯೊತ್ತಿ ನಿಜವಾದ ಬೆಲೆಯುಳ್ಳ ವಸ್ತುವನ್ನು ಪಡೆಯುವ ಸಾಧ್ಯತೆಯನ್ನುಂಟು ಮಾಡುತ್ತದೆ.

ಠಾಗೋರ್

○ ○ ○

ಜೀವನವು ವಸಂತ ಪುಷ್ಪದಂತೆ ಸೌಂದರ್ಯ, ಸೌರಭದಿಂದ ಕೂಡಿರಲಿ. ಮೃತ್ಯುವು ಚಳಿಗಾಲದ ಎಲೆಯಂತೆ ಉದುರಿಬೀಳಲಿ.

ಠಾಗೋರ್.

○ ○ ○

ಜಗತ್ತಿನಲ್ಲಿ ಪಿಶಾಚಿಗಳವೆಯೋ ಎಂಬುದು ಭಯಕ್ಕೆ ಕಾರಣವಲ್ಲ; ಅದರೆ ಮೋಸ, ... ಪಿಶಾಚಿಗಳು ... ...

...ಡೆ.

○ ○ ○

...ಕೆಲಸ ಮಾಡುವವರನ್ನು ... ...ತ್ತೇನೆ. ಸರಿಯಾ... ... ಮಾಡಬೇಕು. ತಪ್ಪಾಗಿ ... ದೂರ ... ಬೇಕು.

ಗಿಬ್ಬನ್

○ ○ ○



ಸಂಶೋಧಕ ವಿಮಾನ

ತಾಸಿಗೆ ೫೦೦ ಕಿಲೋಮೀಟರ್ ವೇಗವಿರುವ ಈ ಎಕ್ ... ಸಂಶೋಧಕ ವಿಮಾನವು ಗಗನಗಾಮಿ ... ಕ್ಷಣದಲ್ಲಿ ಮತ್ತೆ ಪ್ರತ್ಯಕ್ಷವಾಗುವುದು. ... ನಾಲ್ಕು ಪ್ರೊಪೆಲ್ಲರ್‌ಗಳಿಂದ ಕೂಡಿದ ಇದು ತೀವ್ರ ಸಂಶೋಧನೆಗೆ ಅತ್ಯುಪಯುಕ್ತವಾಗಿದೆ.



ಮುಟ್ಟುಗೋಲಿನ ಯತ್ನ

ಇದೇನು? ಹೆದರಬೇಡಿ. ಶೂನ್ಯ ಡಿಗ್ರಿ ಉಷ್ಣತೆಯಲ್ಲಿ ಮಾನವನು ಹೇಗಿರಬೇಕೆಂಬುದನ್ನು ಸಂಶೋಧಿಸ ಹೊರಟ ವಿಜ್ಞಾನಿಯೊಬ್ಬ; ತಿಮಿಂಗಿಲವಲ್ಲ. ಆಕಾಶದೆತ್ತರಕ್ಕೆ ಶೂನ್ಯ ಡಿಗ್ರಿ ಉಷ್ಣಾಂಶದ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ಅರಿಯಲು ಈಗ ಆಳವಾದ ಬೋಯಿಂಗ್ ಬಾವಿಯೊಂದರೊಳಗಡೆ ಮುಳುಗಿದ್ದಾನೆ. ಶೂನ್ಯ ಡಿಗ್ರಿ ಉಷ್ಣಾಂಶವನ್ನು ಮುಟ್ಟುವ ತವಕದಿಂದಿದ್ದಾನೆ.

ತನ್ನ ಗುರಿ ಈಡೇರಿದನಂತರ ಉನ್ನತಾಕಾಶದಲ್ಲಿ ಹಾರುವಾಗಿನ ಸನ್ನಿವೇಶಗಳನ್ನೂ ಆತ ಅಂದಾಜು ಮಾಡಬಲ್ಲ. ಎರಡರ ತುಲನಾತ್ಮಕ ಅಧ್ಯಯನದಿಂದ ಗಗನಯಾತ್ರೆಯ ಕೆಲವೊಂದು ತೊಡಕು-ತೊಂದರೆಗಳಿಗೆ ಮುಟ್ಟುಗೋಲು ಹಾಕಬಲ್ಲ.



ವಿಲಕ್ಷಣ ವಾಹನ

ಎಂಟು ಚಕ್ರಗಳುಳ್ಳ ವಿಲಕ್ಷಣ ವಾಹನವಿದು. ಎಲ್ಲೆಂದರಲ್ಲಿ ಓಡಾಡುವುದೇ ಇದರ ವಿಲಕ್ಷಣ ಶಕ್ತಿ. ಯಾವುದೇ ವಾಹನಗಳು ಸಂಚಾರ ಮಾಡಲಾರದೆಡೆಯಲ್ಲಿ ಈ 'ಟ್ರಿಸ್‌ಪಾಕರ್' ನಿರಾತಂಕವಾಗಿ ಸಂಚರಿಸುವುದು. ಗುಡ್ಡಬೆಟ್ಟಗಳನ್ನೂ ಇದು ಹತ್ತುವುದು; ಇಳಿಯಲೂ ಇಳಿಯುವುದು.

# ಎಂತಾಗಿಸುವೆ ನಿನ್ನ ವಸಂತ?

ಭಾರತೀಯ, ಅಭಿನವ ಭರತ
ಎಂತಾಗಿಸುವೆ ನಿನ್ನ ವಸಂತ?
ಬಂದಿದೆ ತುಹಿನಾಚಲದ ಕರೆ
ಭೋರ್ಗರೆಯುತ್ತಿದೆ ಕಡಲ ತೆರೆ
ಕೇಳುತಿವೆ ಇನಶಶಿ ತಾರೆ
ಪ್ರಶ್ನೆಯ ಹೆಡೆ ಎತ್ತಿದೆ ದಿಗಂತ
ಎಂತಾಗಿಸುವೆ ನಿನ್ನ ವಸಂತ? ॥ ೧ ॥
ಕಲ ಕಂಠೆಯ ಸಂಗೀತದ ಹೊನಲೇ
ಮೊಳಗುತ್ತಿಹ ರಣರಂಗದ ಕಹಳೆ
ಶತ್ರು ದಮನ ಸಂಗೀತ ಶ್ರವಣಾ
ಏನನು ಬಯಸುವೆ ಓ ಭರತ
ಎಂತಾಗಿಸುವೆ ನಿನ್ನ ವಸಂತ? ॥ ೨ ॥
ಸಾರಿ ಹೇಳು ಏ ಅತೀತ ಮೌನ
ಲಂಕೆಯೆ ಏಕಾಯಿತು ತವ ದಹನ
ಏ ಕುರುಕ್ಷೇತ್ರವೇ ಏಳೇಗ ಏಳು
ಹೇಳಲೆ ಅನುಭವ ನಿನ್ನ ಅನಂತ
ಪ್ರತ್ಯುತ್ತರ ಕೊಡು ಓ ಭರತ? ॥ ೩ ॥
ಓ ಕಿತ್ತೂರಿನ ಶಿಲಾ ಖಂಡವೇ
ಸಿಂಹಗಡದ ಬಂಶಾಲಿ ಕೋಟೆಯೇ
ನೆತ್ತರ ಹೀರಿದ ಯುದ್ಧ ಭೂಮಿಯೇ
ಇತಿಹಾಸದ ಘಟನೆಗಳೇ ಜ್ವಲಂತ.
ಸಾರಿ ಹೇಳಿ ನಿಮ್ಮನುಭವ ಅನಂತ ॥೪॥

(ಸುಭದ್ರಾ ಕುಮಾರಿ ಚೌಹಾನರ ಈ ಕವನವನ್ನು ಅನುವಾದಿಸಿ ಕಳಿಸಿದವರು: ಶ್ರೀ ಕೃಷ್ಣ ಶರ್ಮ, ಹೊನ್ನಾವರ).

# ಅದ್ವೈತ ಭಾವದಿಂದ ದುಡಿಯೋಣ

(ನಾಲ್ಕನೇ ಪುಟದಿಂದ)

ವಾಸ ಬೇಡವಾದ್ರೆ ಪ್ರತಿ ದಿನ ಒಪ್ಪೊತ್ತು ಮಾಡಲೇ ಬೇಕು....'

"ಅಲ್ರಿ, ಏನಿದೆಲ್ಲಾ ಅಂತ.... ಸ್ವಾತಂತ್ರ್ಯ ಬಂದ ಮೇಲೆ ನಾವೆಲ್ಲಾ ಉತ್ಥಾನ ಹೊಂದುವೆವೆಂದು ಕನಸು ಕಟ್ಟಿದ್ದೆವು; ನಿಮ್ಮ ಸರಕಾರ...'

"ನೋಡು.....ಅದೇ, ಎಂದಿನ ವರೆಗೆ ನನ್ನದೂ ನಿನ್ನದೂ ಎನ್ನೋ ದ್ವೈತ ಅದ್ವೈತವಾಗುವುದಿಲ್ಲ, ಅಂದಿನ ವರೆಗೆ ನಾವು ಒಳ್ಳೆಯದಾಗುವುದಿಲ್ಲ. ನೀನೂ ನಾನೂ ಅಧ್ವೈತವಾಗಿದ್ರೆ ಮಾತ್ರ ಮುಂದಿನ ಸಮೃದ್ಧಿಯ ಕನಸು ಕಾಣುವ ಅಧಿಕಾರ ಇಲ್ಲವಾದ್ರೆ....'

"ಓ...ಹಾಗೆ ಅಲ್ವೆ? ಅದು ಹೇಗೂ ಆಗ್ಲಿ ದ್ವೈತ—ಅದ್ವೈತದಿಂದ ಬಗ ಬೇಕಾದ್ದೇನು? ಯಾವುದು ಸುಖ, ಸಮೃದ್ಧಿ, ಸುಂಕ್ಷೆಗಳತ್ತ ನಮ್ಮನ್ನು ಒಯ್ಯುತ್ತದೋ ಅದರತ್ತ ನಡೆಯೋಣ...."

ಅದೇ ಅದ್ವೈತತತ್ವ ನಾವೆಲ್ಲಾ ಭಾರತೀಯರು ಅದ್ವೈತ ಭಾವದಿಂದ ಒಂದಾದಾಗಲೇ ನಮ್ಮ ಉದ್ಧಾರ...."

"ಸರಿ ಹಾಗಾದ್ರೆ...."

"ತಿಳಿದಿಯೇನು? ಇನ್ನು ಮುಂದೆ ನಿನ್ನ—ನನ್ನ ಎಂದು ಪಾಲು ಮಾಡೋಕೆ ಹೋಗಬಾರದು..."

"ಹ್ಞೂಂ...."

"ಇಲ್ಲಿ ಬಾ...."

"ಏನೂಂದ್ರೆ ಇದು...."

"ಏನೂ ಇಲ್ವೇ, ಏನೂ ಇಲ್ಲ.... ನಿನಗೆ ಇಷ್ಟು ಸಮಯದ ಮೇಲಾದ್ರೂ ಅದ್ವೈತ ಅರಗಿತಲ್ಲಾ ಅದೇ ಸಂತೋಷ..."

'ಅಯ್ಯೋ....'

ಗೋರಾ.

# ಎಲ್ಲೆಲ್ಲಿ ಏನೇನು?

## ರತ್ನ ಪರೀಕ್ಷೆ—1966.

1966ನೇ ಇಸವಿ ಜೂನ್ ತಿಂಗಳಲ್ಲಿ ನಡೆಯಲಿರುವ ರತ್ನ ಪರೀಕ್ಷೆಗೆ ಅವೇದನಾ ಪತ್ರಗಳನ್ನು ಮತ್ತು ಪರೀಕ್ಷಾ ಶುಲ್ಕವನ್ನು 1966ನೇ ಡಿಸೆಂಬರ್ 30ರೊಳಗಾಗಿ ಕಳಿಸಬೇಕೆಂದು ಈ ಮೊದಲೇ ತಿಳಿಸಿತ್ತು. ಆದರೆ ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಕಟ್ಟುವ ತಾರೀಕನ್ನು ಮುಂದುವರಿಸಬೇಕೆಂದು ಅನೇಕ ಮನವಿಗಳು ಬಂದಿರುವುದರಿಂದ ಶುಲ್ಕವನ್ನು ಕಟ್ಟುವ ತಾರೀಕನ್ನು 1966ನೇ ಫೆಬ್ರವರಿ 28ನೇ ತಾರೀಕಿನ ವರೆಗೆ ಮುಂದುವರಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ತಿಳಿಸುತ್ತಾರೆ.

## ಕನ್ನಡ ಸಂಘ-ವಾಸ್ಕೋಡಗಾಮ

ವಾಸ್ಕೋಡಗಾಮ ಕನ್ನಡ ಸಂಘದ ಪ್ರಥಮ ವಾರ್ಷಿಕ ಸರ್ವಸದಸ್ಯರ ಸಭೆಯು ನವೆಂಬರ್ 21ರಂದು ನಡೆದು 1964-65ನೇ ಸಾಲಿನ ಲೆಕ್ಕ-ವರದಿಗಳನ್ನು ಪರಿಶೀಲಿಸಲಾಯಿತು. ಮತ್ತು ಪ್ರಸ್ತುತ 1965-66ನೇ ಸಾಲಿಗೆ ಈ ಕೆಳಕಂಡಂತೆ ಕಾರ್ಯಕಾರೀ ಸಮಿತಿಯನ್ನು ಸರ್ವಾನುಮತದಿಂದ ಚುನಾಯಿಸಲಾಯಿತು.

ಶ್ರೀ ಜಿ. ಬಿ. ಕುಲಕರ್ಣಿ – ಅಧ್ಯಕ್ಷರು.
ಶ್ರೀ ಪಿ. ಬಿ. ಆರ್. ರಾವ್ – ಉಪಾಧ್ಯಕ್ಷರು.
ಶ್ರೀ ಎಮ್. ಭೀಮರಾವ್ – ಕಾರ್ಯದರ್ಶಿ.
ಶ್ರೀ ಬಿ. ರಾಮಮೂರ್ತಿ – ಕೋಶಾಧಿಕಾರಿ.
ಶ್ರೀ ಎ. ಎನ್. ಸೆಟ್ಟಿ–ಲೆಕ್ಕ ಪರಿಶೋಧಕರು.
ಶ್ರೀ ಎಲ್. ಪಿ. ಎಸ್. ರಾವ್ – ಸಮಿತಿ ಸದಸ್ಯರು.
ಶ್ರೀ ಜಿ. ಜನಾರ್ಧನ ರಾವ್– ,,
ಶ್ರೀ ಸಿ. ಆರ್. ಎಸ್. ಅಯ್ಯಂಗಾರ್– ,,
ಶ್ರೀ. ಅಸ್ತರ್ ಪಾಶ– ,,
ಶ್ರೀ ಎಸ್. ಸತ್ಯನಾರಾಯಣ ರಾವ್– ,,

ಸಂಘದ ಬರುವ ವರ್ಷದ ಕಾರ್ಯಕ್ರಮದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯಕೊಡಬೇಕೆಂದೂ, ಪುಸಕ್ತ ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ಅಭಿವೃದ್ಧಿ ಪಡಿಸಬೇಕೆಂದೂ, ರಾಷ್ಟ್ರೀಯ ಭಾವೈಕ್ಯತೆಗಾಗಿ ಅದರಲ್ಲೂ ವಿಶೇಷವಾಗಿ ಗೋಮಾಂತಕ ಮತ್ತು ಕರ್ನಾಟಕದ ಸ್ನೇಹ ಬಾಂಧವ್ಯಕ್ಕಾಗಿ ಶ್ರಮಿಸಬೇಕೆಂದೂ ತೀರ್ಮಾನಿಸಲಾಯಿತು.

## ವಾರ್ಷಿಕ ಮಹಾಸಭೆ

ಮಂಗಳೂರು ಕೊ-ಓಪರೇಟಿವ್ ಬಿಲ್ಡಿಂಗ್ ಸೊಸೈಟಿಯ ವಾರ್ಷಿಕ ಮಹಾಸಭೆಯು ತಾ. 21—11—65ರಲ್ಲು ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕಿನ ಸಭಾಭವನದಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. 64-65ನೇ ವರುಷದ ವರದಿ ಮತ್ತು ಆಡಿಟ್ ರಿಪೋರ್ಟು ಓದಿ ರಿಕಾರ್ಡು ಮಾಡಿ ಬ್ಯಾನ್ ಮುನಾಫೆ ರೂ. 11,783-84ನ್ನು ಉಪ ನಿಬಂಧನೆ ಪ್ರಕಾರ ವಿಂಗಡಿಸಿ ಮೆಂಬರರಿಗೆ ಪಾಲು ಭಂಡವಾಳದ ಮೇಲೆ ಶೇ. 6½ರಂತೆ ಡಿವಿಡೆಂಟ್ ಕೊಡುವುದಾಗಿಯೂ, ರೂ. 500/-ನ್ನು ರಾಷ್ಟ್ರ ರಕ್ಷಣಾ ನಿಧಿಗೂ, ರೂ. 500/- ನ್ನು ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳಿಗೂ ಕೊಡುವುದಾಗಿ ನಿರ್ಣಯಿಸಲಾಯಿತು. ಅದು ಅಲ್ಲದೆ 1965-66ನೇ ವರುಷಕ್ಕೆ ಬಜೇಟನ್ನು ಕಾರ್ಯಕ್ರಮವನ್ನು ಮಂಜೂರು ಮಾಡಲಾಯಿತು. ಇದೇ ಸಭೆಯಲ್ಲಿ ಆಡಳಿತ ಮಂಡಳಿಯ ಚುನಾವಣೆಯು ನಡೆದು ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಬಹುಮತದಿಂದ ಆರಿಸಿ ಬಂದಿರುತ್ತಾರೆ. ಶ್ರೀಗಳಾದ ಎ. ಶ್ರೀಧರ, ಬಿ. ಮಂಜಯ್ಯ ಹೆಗ್ಡೆ, ಬಿ ಪೋನಪ್ಪ, ಡಾ| ಜಿ. ಸಂಜೀವಮಲ್ಲ, ಡಾ| ಕೆ. ನೇಮಿರಾಜ ಆಳ್ವ, ಎಮ್. ರಂಗ, ತೋಮಸ್ ರೇಗೊ, ಎಮ್. ಎ. ಭಂಡಾರ್‌ಕಾರ್, ಮತ್ತು ಕೆ. ಲೋಕಯ್ಯ ಶೆಟ್ಟಿ.

ಪ್ರಕೃತ ಈ ಸೊಸೈಟಿಯಲ್ಲಿ 895 ಸದಸ್ಯರಿದ್ದು, ಪಾಲು ಭಂಡವಾಳ ರೂ. 81,254/- ಮತ್ತು ಕ್ಷೇಮ ನಿಧಿ ವಗೈರೆ 25,885/- ಜಮೆಯಿರುತ್ತದೆ. ಸದಸ್ಯರಿಗೆ ಮನೆ ಕಟ್ಟುವ ರೇ ಸಾಲವನ್ನು ಕೊಡುವ ಬಗ್ಗೆ ಠೇವಣಾತಿಗಳನ್ನು (ಫಿಕ್ಸೆಡ್ ಡಿಪೋಜಿಟ್) ಆಕರ್ಷಿಸುವರೇ ಆಡಳಿತ ಮಂಡಳಿಯವರು ನಿರ್ಧರಿಸಿದ್ದಾರೆ. ಡಿಪೋಜಿಟ್ ಇಡಲು ಅನುಕೂಲವಿರುವ ಸದಸ್ಯರು ಮತ್ತು ಸದಸ್ಯರೇತರರು ಈ ಈ ಕಾರ್ಯಕ್ಕೆ ಪ್ರೋತ್ಸಾಹ ಕೊಡುವಂತೆ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ವಿನಂತಿಸಿಕೊಂಡಿದ್ದಾರೆ.

## ಸತ್ಕಾರ ಸಮಾರಂಭ

ಕಡಿಯಾಳಿ; ಉಡುಪಿ: ಉಡುಪಿ ರೇಂಜಿನ ಹಿರಿಯ ಪರೀಕ್ಷಾಧಿಕಾರಿಗಳಾಗಿದ್ದು ಇತ್ತೀಚೆಗೆ ವರ್ಗವಾಗಿರುವ ಶ್ರೀ ಎ. ನರಸಿಂಹಯ್ಯ ಇವರನ್ನು ಸತ್ಕರಿಸುವ ಸಮಾರಂಭವು ಕಡಿಯಾಳಿ ಅಧ್ಯಾಪಕರ ಕೇಂದ್ರದ ಸಭೆಯ ಪರಿಯಿಂದ ಉಡುಪಿ ರೇಂಜಿನ ಎ. ಇ. ಓ. ರವರಾದ ಶ್ರೀ ಜಿ. ವಿ. ಸಿದ್ದೇಶ್ವರರ ಅಧ್ಯಕ್ಷತೆಯಲ್ಲಿ ದಿನಾಂಕ 4-12-65ರಂದು ಜರಗಿತು. ಕೇಂದ್ರದ ಕಾರ್ಯದರ್ಶಿ ಶ್ರೀ ಕೆ. ಗೋಪಾಲ ಶೆಟ್ಟಿಗಾರರು ಸ್ವಾಗತಿಸಿದರು. ಬಳಿಕ ಕೇಂದ್ರದ ಎಲ್ಲಾ ಶಾಲೆಗಳ ಮುಖೋಪಾಧ್ಯಾಯರು ತಂತಮ್ಮ ಶಾಲೆಯ ಪ್ರೀತಿಯದ್ಯೋತಕವಾಗಿ ಮುಖ್ಯ ಅತಿಥಿಗಳಿಗೆ ಪುಷ್ಪಹಾರವನ್ನು ಅರ್ಪಿಸಿದರು. ಅಲ್ಲದೆ ಶ್ರೀಯುತರು ಪರೀಕ್ಷಾಧಿಕಾರಿಗಳಾಗಿದ್ದ ವೇಳೆ ಸಾಧಿಸಿದ ಮಹತ್ಕಾರ್ಯಗಳನ್ನು ಸ್ಮರಿಸಿದರು. ಸಭಿಕರಲ್ಲಿ ಶ್ರೀ ಕೆ. ಗೋಪಾಲ ಶೆಟ್ಟಿಗಾರ ಮತ್ತು ಶ್ರೀ ಕೃಷ್ಣ ಮಂಜರರು ಅತಿಥಿಗಳ ಗುಣಗಾನ ಗೈದರು. ಶ್ರೀ ಎ. ನರಸಿಂಹಯ್ಯನವರು ಅಧ್ಯಾಪಕರು ತನ್ನ ಮೇಲಿಟ್ಟಿರತಕ್ಕ ಪ್ರೀತ್ಯಾದರಗಳು ಶಾಶ್ವತವಾಗಿ ಉಳಿಯುವಂತಾಗಲೆಂದು ಹಾರೈಸಿದರು.

ಬಳಿಕ ಅಧ್ಯಕ್ಷರು ಮಾತನಾಡುತ್ತ— ಅಧಿಕಾರ ಸ್ಥಾನದಲ್ಲಿದ್ದಾಗ ಶ್ರೀಯುತ ನರಸಿಂಹಯ್ಯನವರು ಎಲ್ಲರ ಮೆಚ್ಚುಗೆಗೂ ಪಾತ್ರರಾಗಿದ್ದಾರೆಂದರೆ ಅವರು ನಿಜಕ್ಕೂ ಉತ್ತಮ ರೀತಿಯ ಸೇವೆಯನ್ನು ಸಲ್ಲಿಸಿದ್ದಾರೆಂದೇ ಅರ್ಥ. ಮನುಷ್ಯನನ್ನು ಹೀನ ಮಾರ್ಗದೆಡೆ ಒಯ್ಯುವ ವಸ್ತು ಅಧಿಕಾರ. ಇದನ್ನು ಶ್ರೀಯುತ ನರಸಿಂಹಯ್ಯನವರು ಉಡಿದಿಲ್ಲ ಬದಲು ಅದನ್ನು ತನ್ನಿಂದ ದೂರವಿರಿಸಿಕೊಂಡು ವಿದ್ಯಾಕ್ಷೇತ್ರದಲ್ಲಿ ದುಡಿದಿದ್ದಾರೆ ಇಂತವರು ಸಿಗುವುದು ಬಹು ವಿರಳ. ಶ್ರೀಯುತರು ಇದಕ್ಕೂ ಮಿಗಿಲಾದ ಸೇವೆಯನ್ನು ಸಾಧಿಸಿ ವಿದ್ಯಾಕ್ಷೇತ್ರದಲ್ಲಿ ಎಲ್ಲರ ಮೆಚ್ಚುಗೆಗೂ ಪಾತ್ರರಾಗುವಂತಾಗಲಿ ಎಂದು ಹಾರೈಸಿದರು.

ಬಳಿಕ ಶ್ರೀ ಪಿ. ನರಸಿಂಹ ಉಪಾಧ್ಯ ಇವರಿಂದ ಯೋಗ್ಯ ಹಿಮ್ಮೇಳದೊಂದಿಗೆ ಉತ್ತಮರೀತಿಯ ಸಂಗೀತ ಕಛೇರಿಯು ಜರಗಿತು.

## ವಾಗ್ದೇವಿ ಪ್ರಕಾಶನ

ತಾ. ೧-೧೨-೬೫ರಂದು ಆಸರಗೋಡು ಬೀಚ್ ರೋಡ್‌ನಲ್ಲಿರುವ "ಭಾರತೀ ವಿಲಾಸ"ದಲ್ಲಿ 'ವಾಗ್ದೇವಿ ಪ್ರಕಾಶನ'ವು 'ನಾಡಪ್ರೇಮಿ' ವಾರಪತ್ರಿಕೆಯ ಸಂಚಾಲಕ ಸಂಪಾದಕರಾದ ಶ್ರೀ ತೇ. ಶಿ. ಕಾರ್ಯಪಳ್ಳಿಯವರಿಂದ ಉದ್ಘಾಟಿಸಲ್ಪಟ್ಟಿತು. ಸಮಾರಂಭದಲ್ಲಿ ಕಾಸರಗೋಡಿನ ಹಲವಾರು ಹಿರಿಯ, ಕಿರಿಯ ಸಾಹಿತಿಗಳು ಉಪಸ್ಥಿತರಿದ್ದರು. ಕೊನೆಯಲ್ಲಿ ಪ್ರಕಾಶನದ ಸಂಚಾಲಕರಾದ ಶ್ರೀ ಕಾ. ರಾ. ಸಾರಂಗ ಅವರು ಮಹಾಜನರ ಪ್ರೋತ್ಸಾಹವನ್ನು ಕೋರುತ್ತ ಧನ್ಯವಾದ ಸಮರ್ಪಿಸಿದರು.

## ದೇವಸ್ಥಾನಕ್ಕೆ ಉದಾರ ಕೊಡುಗೆ

ಕಾರ್ಕಳ 3-12-1965 ಬೊಂಬಾಯಿ ಫೋರ್ಟ್ ನ್ಯೂ ವೆಲ್‌ಕಂ ರೆಸ್ಟೋರೆಂಟ್ ಮೂಲಕ ಶಿಬರೂರ್ ಮುದ್ದು ಶೆಟ್ಟಿ ಸ್ವಪ್ನದ ಪಣೆಯಿಂದ ಶ್ರೀ ಮಹಾಲಿಂಗೇಶ್ವರ ಶ್ರೀ ಮಹಾಗಣಪತಿ ದೇವಸ್ಥಾನದ ಧ್ವಜಸ್ತಂಭಕ್ಕೆ ಬೆಳ್ಳಿ ಹೊದಿಸಿ ಕೊಡುತ್ತೇನೆಂದಾಗಿ ತಿಳಿಸಿದ ಪ್ರಕಾರ ಅದಕ್ಕೆ ಇಂದು ಸಂಜೆ 400 ಕೆ. ಜಿ. (ನಾನೂರು ಕೆ. ಜಿ.)ಕ್ಕಿಂತಲೂ ಮಿಕ್ಕಿದ ಕಾಮ್ರದ ಬೆಳ್ಳಿಯನ್ನು ತಳಿರು ತೋರಣದ ಅಲಂಕಾರವಾದ ಗಾಡಿಯಲ್ಲಿ ಬಿರುದಾವಳಿಗಳ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತಂದು ಮೋಕ್ತೇಸರ ರಬ್ಯಾಡಿ ಕೃಷ್ಣ ಹೆಗ್ಡೆ ರಥ ಸಮಿತಿ ಅಧ್ಯಕ್ಷ ಗುರುರಾಜ ಜ್ಯೋತಿಷರ್, ಪಂಚಾಯತ ಅಧ್ಯಕ್ಷ ಎಮ್. ಶೆಟ್ಟಿ ಮತ್ತು ಗ್ರಾಮಸ್ಥರು ಶ್ರೀ ಶೆಟ್ಟಿಗೆ ಮತ್ತು ಕುಟುಂಬಕ್ಕೂ ಶ್ರೇಯಸ್ಸು ಆಗುವಂತೆ ದೇವರಲ್ಲಿ ಪ್ರಾರ್ಥಿಸಿಕೊಂಡು ಪೂಜೆಯ ನಂತರ ಪ್ರಸಾದ ವಿತರಣೆ ಆಯಿತು. ಇದರ ಸಂಪೂರ್ಣ ಕೆಲಸ ಶ್ರೀ ಸೆಟ್ಟಿರಿಂದಲೇ ನಡೆಸು ಅವರಿಂದಲೇ ಬರುವ ಮಾರ್ಚ ತಿಂಗಳಲ್ಲಿ ಜರಗುವ ಶಾಲಂಕೃತಿ ಉತ್ಸವಕ್ಕೆ ಮುಗಿಸಲು ಕೆಲಸ ಭರದಿಂದ ನಡೆಯುವ ಏರ್ಪಾಡು ಮಾಡಲಾಯಿತು.

## ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R.E.P. No 439/1965 O. S. No 585/1964.

ಗಿರಿಯಮ್ಮ ಶೆಟ್ತಿ— ಅರ್ಜಿದಾರಳು.

ಮತ್ತು

ಮಹಾಬಲ ಶೆಟ್ಟಿ ಸಹಾ ಎದುರು

ಇವರೊಳಗೆ

ಮೇಲಿನ ವ್ಯವಹಾರದಯ ಎದುರು 3 ವಿಟ್ಠಲ ಶೆಟ್ಟಿ, 4 ನಕುಲ ಶೆಟ್ಟಿ 5 ಸಾಧು ಶೆಟ್ಟಿ, ಬೂಬುಶೆಡ್ತಿರ ಮಕ್ಕಳು ಕಾರ್ಕಳ ತಾಲ್ಲೂಕು ಮುಳ್ಳಡ್ಕ ಗ್ರಾಮದಲ್ಲಿರುವವರಿಗೆ ಈ ಮೂಲಕ ತಿಳಿಸುವದೇನಂದ್ರೆ.

ಅರ್ಜಿದಾರರು ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿ ಇರುವ ನೀವು ಕೂಡಾ ಎದುರ ಪಕ್ಷಿನ ಸ್ಥಿರಾಸ್ತಿ ಏಲಂ ಬಗ್ಗೆ ಇಸ್ತಿಹಾರು ಪಾಜು ಮಾಡಿದ್ದು ಆ ಕುರಿತು ನಿಮಗೆ ನೋಟೀಸು ಬಗ್ಗೆ ತಾ. 18—12—65ಕ್ಕೆ ಯಿಟ್ಟಿದೆ.

ಸದ್ರಿ ದಿನ ಬೆಳಿಗ್ಗೆ 10-30 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದಲ್ಲಿ ನಿಂಮನ್ನು ಸಿವ್ಯಾಮಾಡಿ ಸದ್ರಿ ವ್ಯವಹರಣೆ ಮುಂದುವರಿಸಲಾದೀತು.

By order of the court.

N. M. Adyanthaya
Advocate for Petitioner.

Karkala 4-12-65

## ಕಾರ್ಕಳ ಮುನ್ಸಿಫ್ ಕೋರ್ಟಿನ

R.E.P. No 412/1965 O. S. No 180/196

ಜೋನ್ ಬಾಪ್ಟಿಸ್ಟ್ ಸೆರಾಂವ– ಅರ್ಜಿದಾರ

ಮತ್ತು

ಸೆಬಸ್ತಿಯಾನ್ ಮೊರಾಸ್– ಗುಸ್ತಿನ್ ಮೊರಾಸರ ಮಗ, ಮಂಗ್ಳೂರು ತಾಲ್ಲೂಕು ನೀರುಡೆ ಬೆಟ್ಟು ಗ್ರಾಮಸ್ಥ —ಎದುರು

ಇವರೊಳಗೆ

ಈ ಮೂಲಕ ಸದ್ರಿ ಎದುರಿಗೆ ತಿಳಿಸುವದೇನಂದ್ರೆ:-

ಮೇಲಿನ ಅಮಲ್ಜಾರಿಯಲ್ಲಿ ನಿಮ್ಮ ಆಸ್ತಿ ಏಲಂ ಬಗ್ಗೆ ಅರ್ಜಿದಾರನು ಹಾಜರ್ ಪಡಿಸಿದ ಇಸ್ತಿಹಾರಿನ ಕುರಿತು ನಿಮಗೆ ನೋಟೀಸು ಬಗ್ಗೆ ತಾರೀಕು 18-12-65ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10-30 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಃ ಯಾ ವಕೀಲ ದ್ವಾರಾ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದಲ್ಲಿ ನಿಂಮನ್ನು ಸಿವ್ಯಾಮಾಡಿ ಸದ್ರಿ ಅಮಲ್ಜಾರಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

By order of the court

N. M. Adyanthay
Advocate for Petition

Karkala 4-12-65

'NAVAYUGA' Weekly in the list of periodical and Newspapers approved for use in Secondary Schools as per proceeding Roc. No. 466 N/50 dated 2-12-1950 of the Director of Public Instruction Madras.

ಪರಿಚಯ

# ಬೃಹತ್ಕಥೆಯ ಕಥೆ

## ಹುಣ್ಣಿಮೆಯ ಚಂದ್ರನಷ್ಟಿದ್ದ ಬೃಹತ್ಕಥೆ ಕುಂದಿ ಮಾಸಿದ ಸತ್ಯಕಥೆ

ಬರೆದವರು:
ಶ್ರೀ. ಸ. ನಾರಾಯಣ.

ಸಂಸ್ಕೃತ ಸಾಹಿತ್ಯದಲ್ಲಿ "ಬೃಹತ್ಕಥೆ"ಗೆ ವಿಶೇಷ ಸ್ಥಾನವಿದೆ. ಸಾಹಿತ್ಯ ಸಾಗರದಲ್ಲಿಯ ಅಪೂರ್ವ ರತ್ನವೆಂದೂ ಇದನ್ನು ಹೇಳಬಹುದು. ಬೃಹತ್ಕಥೆಯ ಕರ್ತೃ ಗುಣಾಢ್ಯ. ಗುಣಾಢ್ಯನ ಸ್ಥಳ ಮತ್ತು ಕಾಲದ ಬಗ್ಗೆ ವಿದ್ವಾಂಸರಲ್ಲಿ, ಸಾಹಿತ್ಯ ಸಂಶೋಧಕರಲ್ಲಿ ಭಿನ್ನಾಭಿಪ್ರಾಯವಿದೆ. ಕವಿ ಕಾಶ್ಮೀರದವನೆಂದೂ ಮತ್ತು ನೇಪಾಳದ ಕಥೆಯಂತೆ ಕೌಶಾಂಬಿಯವನೆಂದೂ ವಾದವಿದೆ. ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಶಾತವಾಹನನ ಆಸ್ಥಾನದಲ್ಲಿ ಕವಿ ಇದ್ದನೆಂಬುದು ವಿದ್ವಾಂಸರ ಮತ.

ಬೃಹತ್ಕಥೆ ಎಂಬ ಪದವೇ ಹೇಳುವಂತೆ ಹಿರಿದಾದ ಕಥೆ (ಅಗಾಧವಾದ ಕಥಾರಾಶಿ) ಎಂದು ಹೇಳಲು ಅಡ್ಡಿ ಇಲ್ಲ. ಕಥೆ ಒಂದಲ್ಲ, ಹಲವಾರು-ಎಲ್ಲವೂ ಅಣಿಮುತ್ತುಗಳು.

ಸಂಸ್ಕೃತ ಸಾಹಿತ್ಯದಲ್ಲಿ ರಾಮಾಯಣ ಮತ್ತು ಮಹಾಭಾರತಕ್ಕಿರುವ ಪ್ರಾಶಸ್ತ್ಯವೇ ಬೃಹತ್ಕಥೆಗೂ ಇದೆ. ಸಂಸ್ಕೃತ ಕಾವ್ಯ, ನಾಟಕ, ಕಥಾ ಆಖ್ಯಾಯಿಕೆಗಳಿಗೆ ಮೇಲಿನ ಮೂರು ಮಹಾ ಗ್ರಂಥಗಳು ಮೂಲಾಧಾರ ಎಂಬುದು ಗಣನೀಯ. ಪ್ರಖ್ಯಾತ ದಂಡಿ, ಸುಬಂಧು ಮತ್ತು ಬಾಣ ಭಟ್ಟರು ಬೃಹತ್ಕಥೆಯನ್ನು ಬಳಸಿಕೊಂಡಿರುವುದು ಮತ್ತು ಗುಣಾಢ್ಯನನ್ನು ಸ್ಮರಿಸಿರುವುದು ಕವಿ-ಕಾವ್ಯಗಳ ಹಿರಿಮೆಗೆ ಸಾಕ್ಷಿ.

ಸಾಹಿತ್ಯ ಸಂಶೋಧಕರ ಅಭಿಪ್ರಾಯದಂತೆ ಮೂಲ ಬೃಹತ್ಕಥೆಯ ಪ್ರತಿ ದೊರೆತಿಲ್ಲ. ಕಾಂಬೋಡಿಯಾದ ಸಂಸ್ಕೃತ ಪ್ರಶಸ್ತಿಯೊಂದರಲ್ಲಿ ಗುಣಾಢ್ಯ ಮತ್ತು ಬೃಹತ್ಕಥೆಯ ಪ್ರಸ್ತಾಪವಿದೆ, ಆದರೆ ಆ ಕೃತಿಯೂ ಇಂದು ದೊರೆಯದು.

ಮೂಲ ಗುಣಾಢ್ಯನ 'ಬೃಹತ್ಕಥಾ' ಕೃತಿ ರಚನೆಯಾದುದು ಸಂಸ್ಕೃತದಲ್ಲಲ್ಲ. ಪ್ರಾಕೃತ ಭಾಷೆಯಲ್ಲಿ, ಅದೂ ಪೈಶಾಚಿ ಪ್ರಾಕೃತದಲ್ಲಿ. ಗುಣಾಢ್ಯನ ಜೀವನ, ಕೃತಿ ನಿರ್ಮಾಣ, ಬೃಹತ್ಕಥೆಯು ರೂಪುಗೊಂಡ ಬಗೆಯ ವಿಷಯವಾಗಿ ಒಂದು ಕಥೆಯಿದೆ. ಅದು ಅತಿ ಸ್ವಾರಸ್ಯಕರ, ರೋಮಾಂಚಕಾರಿ ಕಥೆ.

ಅರಸು ಶಾತವಾಹನ ರಾಜ್ಯವಾಳುತ್ತಿದ್ದ ಕಾಲ. ಗುಣಾಢ್ಯ ಆಸ್ಥಾನ ವಿದ್ವಾಂಸ. ವಿಖ್ಯಾತ ಪಂಡಿತ. ಕವಿಯ ಪ್ರತಿಭೆ, ಕೀರ್ತಿ ದೊರೆಯನ್ನು ಪರವಶನನ್ನಾಗಿ ಮಾಡಿದ್ದವು. ಒಂದು ಬಾರಿ ಅರಸ ತನ್ನ ಪ್ರಿಯೆಯೊಂದಿಗೆ ನೌಕಾ ವಿಹಾರ ನಡೆಸುತ್ತಿದ್ದ. ಪ್ರಿಯ ಪ್ರಾಕೃತವೇ ಯ ಸರಸ ಸಂಭಾಷಣೆಯಲ್ಲಿ ಸಂಸ್ಕೃತದ ನುಡಿಯೊಂದು ಲಜ್ಜೆಗೀಡು ಮಾಡುತ್ತದೆ. ಶಾತವಾಹನನಿಗೆ ಸಂಸ್ಕೃತ ಬಾರದು. ಖೇದಗೊಳ್ಳುತ್ತಾನೆ.

ಅರಸ ಸಂಸ್ಕೃತವನ್ನು ಕಲಿತು ನಿರರ್ಗಳವಾಗಿ ಓದುವ ವರೆಗೆ ಬರೆಯುವ ವರೆಗೆ ಅಂತಃಪುರ ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ರಾಜಾಜ್ಞೆಯಂತೆ ಪಂಡಿತ ಗುಣಾಢ್ಯರು ಅರಮನೆಗೆ ಬಂದರು. ರಾಜನ ಮನದ ದುಗುಡ, ಪ್ರತಿಜ್ಞೆಯನ್ನು ಕೇಳಿ 'ಒಂದು ವರ್ಷದ ಅವಧಿಯೊಳಗಾಗಿ ಸಂಸ್ಕೃತ ಕಲಿಸುತ್ತೇನೆ' ಎಂದು ಭರವಸೆ ನೀಡಿದರು.

ಆಸ್ಥಾನದ ಮತ್ತೊರ್ವ ಸಂಸ್ಕೃತ ಪಂಡಿತ ಗುಣಾಢ್ಯರಿಗೆ ಪ್ರತಿಸ್ಪರ್ಧಿಯಾಗಿ ನಿಂತು 'ಆರು ತಿಂಗಳೊಳಗಾಗಿ ಅರಸರಿಗೆ ಸಂಸ್ಕೃತ ಭಾಷೆಯನ್ನು ಕಲಿಸುತ್ತೇನೆ' ಎಂದು ಹೇಳಿದನು. ಗುಣಾಢ್ಯರ ಸ್ವಾಭಿಮಾನಕ್ಕೆ ದೊಡ್ಡ ಪೆಟ್ಟು ತಗಲಿತು. ಅಸಾಧ್ಯ ಕಾರ್ಯವನ್ನು ಮಾಡಿ ತೋರಿಸುತ್ತೇನೆಂದು ನಿಂತ ಪಂಡಿತನ ಬಗ್ಗೆ ಕೋಪ ಕೆರಳಿತು. 'ಆರು ತಿಂಗಳೊಳಗಾಗಿ ಸಂಸ್ಕೃತ ಭಾಷೆಯನ್ನು ಕಲಿಸಿದರೆ, ಅರಸರು ಕಲಿತರೆ ನಾನು ಸಂಸ್ಕೃತ ಭಾಷೆಗೆ ಶರಣು ಹೋಗುತ್ತೇನೆ. ಮುಂದೆ ಸಂಸ್ಕೃತದಲ್ಲಿ ಬರೆಯುವುದಿಲ್ಲ ಮತ್ತು ಮಾತನಾಡುವುದಿಲ್ಲ' ಎಂದು ಹೇಳಿದರು.

ಪಂಡಿತರು ಆರು ತಿಂಗಳೊಳಗಾಗಿಯೇ ಅರಸನಿಗೆ ಸಂಸ್ಕೃತ ಕಲಿಸಲು ಸಮರ್ಥರಾದರು. ಅವರು ಪ್ರಯತ್ನದಲ್ಲಿ ಜಯ ಗಳಿಸಿದರು. ಅರಸ ನಿರರ್ಗಳವಾಗಿ ಸಂಸ್ಕೃತದಲ್ಲಿ ಬರೆಯಲು, ಓದಲು, ಮಾತನಾಡಲು ಸಿದ್ಧನಾದ.

ಗುಣಾಢ್ಯರು ಪರಾಭವವನ್ನು ಒಪ್ಪಿಕೊಳ್ಳಲೇ ಬೇಕಾಯಿತು. ಅವರು ತಮ್ಮ ಪ್ರತಿಜ್ಞೆಯನ್ನೂ ಮರೆತಿರಲಿಲ್ಲ. ತಮ್ಮಿಬ್ಬರು ಶಿಷ್ಯರೊಂದಿಗೆ ನಗರ ಬಿಟ್ಟು ಸಂಚಾರ ಹೊರಟರು.

ನಗರದ ಹೊರವಲಯದ ಹಾಳು ಪ್ರದೇಶದಲ್ಲಿ ಗುಣಾಢ್ಯರು ಶಿಷ್ಯರೊಂದಿಗೆ ಉಳಿದರು. ಶಾಪಗ್ರಸ್ತ ಪಿಶಾಚಿಯಾಗಿ ಪ್ರಾಪ್ತ ಗಂಧರ್ವನಿಂದ ಕಥೆಯನ್ನೂ ಕೇಳಿ ಗುಣಾಢ್ಯರು ವಿಶಾಲ ಗ್ರಂಥ ಒಂದನ್ನು ಬರೆದರು. ಅದು ಕಥೆಗಳ ಸಮೂಹ ಅದೇ ಬೃಹತ್ಕಥಾ ಗ್ರಂಥ. ಅವರು ಬರೆಯಲು ಬಳಸಿದ ಕಾಗದ ಒಣ ಚರ್ಮ, ಮಸಿ ರಕ್ತ. ಪಿಶಾಚಿನಗರದಲ್ಲಿ ಸಿದ್ಧವಾಯಿತು ಗುಣಾಢ್ಯರ ಬೃಹತ್ ಗ್ರಂಥ; ಪೈಶಾಚಿ ಪ್ರಾಕೃತ ಭಾಷೆಯಲ್ಲಿ. ಗ್ರಂಥ ಮುಕ್ತಾಯವಾದ ತರುವಾಯ ಗ್ರಂಥದೊಂದಿಗೆ ಶಿಷ್ಯರೊಡನೆ ಕೂಡಿ ರಾಜಧಾನಿಗೆ ಹೊರಟರು.

ರಾಜಧಾನಿಯ ಹೊರಬಾಗಿಲಲ್ಲೇ ನಿಂತ ಗುಣಾಢ್ಯರು ಗ್ರಂಥ ಪ್ರತಿಯನ್ನೂ ಶಿಷ್ಯರಿಗೆ ಕೊಟ್ಟು "ನೀವು ಅರಸು ಶಾತವಾಹನನನ್ನೂ ಭೇಟಿಮಾಡಿ ಗ್ರಂಥವನ್ನು ಅರ್ಪಿಸಿ ಸ್ವೀಕರಿಸುವಂತೆ ತಿಳಿಸಿ" ಎಂದರು.

ಅರಸ ಗುಣಾಢ್ಯರು ಚರ್ಮದ ಮೇಲೆ ಬರೆದ ಪಿಶಾಚಿ ಭಾಷೆಯ ಬೃಹತ್ ಗ್ರಂಥವನ್ನು ಅವಹೇಳನ ಮಾಡಿ ಸ್ವೀಕರಿಸಲು ನಿರಾಕರಿಸಿ "ಗ್ರಂಥದಲ್ಲಿ ವಿಚಾರಯೋಗ್ಯವೆಂದುದೇನಿದೆ?" ಎಂದು ನಗೆಯಾಡಿದರು.

ಶಾತವಾಹನನ ತಿರಸ್ಕಾರ ಮನೋಭಾವ, ವಿವೇಕರಹಿತ ಪ್ರತಿಕ್ರಿಯೆಯನ್ನು ತಿಳಿದು ಗುಣಾಢ್ಯರ ಮನನೊಂದಿತು. ಅವರಿಂತಲೂ 'ಅವರ ಗ್ರಂಥಕ್ಕಾದ ಅವಹೇಳನವನ್ನು ಕೇಳಿ' ಮರುಗಿ ಗ್ರಂಥವನ್ನು ಅಗ್ನಿಗಾಹುತಿ ಕೊಡಲು ನಿರ್ಧರಿಸಿದರು.

ನಗರದ ಹೊರವಲಯದಲ್ಲಿ ಚಿತೆ ಸಿದ್ಧವಾಯಿತು. ಪಂಡಿತ ಗುಣಾಢ್ಯರು ಅಗ್ನಿಯ ಮುಂದೆ ಪದ್ಮಾಸನ ಹಾಕಿ ಕುಳಿತರು. ನಿರಹಂಭಾವದಿಂದ ಪ್ರತಿಯನ್ನು ಕೈಗೆತ್ತಿಕೊಂಡರು. ಬೃಹತ್ಕಥಾ ಗ್ರಂಥದ ಒಂದೊಂದೇ ಹಾಳೆಯನ್ನು ಕೈಗೆತ್ತಿಕೊಂಡು ಅಮೂಲಾಗ್ರವಾಗಿ ಓದಿ ಅಗ್ನಿಗೆ ಅರ್ಪಿಸುತ್ತಿದ್ದರು.

ಗುಣಾಢ್ಯರು ರಚಿಸಿದ್ದ ಅವರೇ ಅಗ್ನಿಗರ್ಪಿಸುವ ಮುಂಚೆ ವಾಚನ ಮಾಡುತ್ತಿದ್ದ ಕಥೆಗಳು ಮಧುರವಾಗಿದ್ದುವು, ಮನೋರಂಜಕವಾಗಿದ್ದುವು. ಪಶು ಪಕ್ಷಿ ಮೃಗಗಳಾದಿಯಾಗಿ ಜೀವ ಜಂತುಗಳು ಜಲಾಹಾರವನ್ನು ಬಿಟ್ಟು ಪರವಶತೆಯಿಂದ ಕಥಾ ಶ್ರವಣದಲ್ಲಿ ತನ್ಮಯವಾಗಿದ್ದುವು. ಹಸುಗಳು ಮೇವು ಬಿಟ್ಟುವು. ಅವುಗಳ ದೇಹ ಬಳಲಿತು.

ಆಹಾರವಿಲ್ಲದೆ ಶಕ್ತಿಹೀನ ಪಶುಗಳ ಮಾಂಸವನ್ನು ಅಡಿಗೆ ಮಾಡಿ ಅರಸನಿಗೆ ಬಡಿಸಿದುದರಿಂದ ರಾಜನಿಗೆ ಉದರ ವ್ಯಾಧಿ ಆರಂಭವಾಯಿತು.

ರಾಜ ವೈದ್ಯರು ನಾಡಿ ಪರೀಕ್ಷಿಸಿ ಕಾಯಿಲೆಯ ಲಕ್ಷಣ ತಿಳಿಸಿದರು. ಅರಸನ ಆಜ್ಞೆಯಂತೆ ಕಟುಕರು 'ಹಸುಗಳು ಮೇವು ನೀರು ಮರೆತು ಅಜ್ಞಾತ ಪಂಡಿತರೊಬ್ಬರ ಕಥಾ ಶ್ರವಣ ಮಾಡುತ್ತಿವೆ' ಎಂದರು. ಪಂಡಿತರ ಕಥಾ ಶ್ರವಣದ ಹಿರಿಮೆ, ಅಗಾಧ ಭಕ್ತಿ ದೊರೆಯ ಕಿವಿ ಮುಟ್ಟಿತು.

ಅರಸ ಶಾತವಾಹನ ಪಂಡಿತರಿದ್ದ ಸ್ಥಳಕ್ಕೆ ಧಾವಿಸಿ ಬಂದ. ಅಲ್ಲಿಯ ದೃಶ್ಯವನ್ನು ಕಂಡು ಚಕಿತನಾದ. ಗುಣಾಢ್ಯರು ತಮ್ಮ ಸ್ವಹಸ್ತದಿಂದ ಗ್ರಂಥದ ಪ್ರತಿ ಹಾಳೆಯನ್ನು ಅಗ್ನಿಗೆ ಅರ್ಪಿಸುತ್ತಿರುವುದನ್ನು ಕಂಡು ದಿಙ್ಮೂಢನಾದ.

ಅರಸ ಬರುವ ವೇಳೆಗೆ ಗ್ರಂಥದ ಆರು ಭಾಗ ಅಗ್ನಿಗೆ ಆಹುತಿಯಾಗಿ ಕೊನೆಯ ಒಂದು ಭಾಗ ಉಳಿದಿತ್ತು. ಶಾತವಾಹನ ಪಂಡಿತರ ಪಾದ ಹಿಡಿದು ಕ್ಷಮೆ ಬೇಡಿ ಉಳಿದ ಒಂದು ಭಾಗವನ್ನು ಪಡೆದ. ಕಟ್ಟ ಕಡೆಗೆ ಗುಣಾಢ್ಯರ ಬೃಹತ್ಕಥೆ ಮಹಾ ಗ್ರಂಥದಲ್ಲಿ ಕೊನೆಯ ಒಂದು ಭಾಗ ಮಾತ್ರ ಉಳಿಯಿತು. ಅದು ಅಲ್ಪವಾದರೂ ಅಗಾಧ ಆಸ್ತಿಯಾಯಿತು.

ಪೈಶಾಚಿಕ ಭಾಷೆ ಭಾರತದ ಯಾವ ಪ್ರದೇಶದ ಭಾಷೆ ಎಂಬ ತರ್ಕವಿದೆ ವಿದ್ವಾಂಸರಲ್ಲಿ. ವಿಖ್ಯಾತ ಭಾಷಾತಜ್ಞ ಥಿಯರ್ಸನ್ನರು ಪೈಶಾಚಿಯು ಭಾರತದ ಉತ್ತರ ಪಶ್ಚಿಮ ಸೀಮಾಂತ ಬರ್ಬರ ಜಾತಿ ಭಾಷೆ ಎಂದು ಪ್ರತಿಪಾದಿಸುತ್ತಾರೆ. ಗುಣಾಢ್ಯನ ಕೃತಿಗಳು ಸಂಸ್ಕೃತ ಪ್ರತಿಕೃತಿಗಳು ಕಾಶ್ಮೀರ ಮತ್ತು ನೇಪಾಳದಲ್ಲಿ ದೊರೆತಿರುವುದು ವಾದಕ್ಕೆ ಇಂಬುಕೊಟ್ಟಿದೆ.




READ &
ADVERTISE IN
NAVAYUGA WEEKLY

# ಭರಣಿ-ಕೃತ್ತಿಕೆಯ ಶ್ರದ್ಧೆ

(ಐದನೆಯ ಪುಟದಿಂದ)

ರುಗಿದೆ. ಮನೆಗೆ ಬಂದು ವಿಚಾರ ಮಾಡಿದ ನಂತರ ಅರಿವಾಯಿತು. ಭರಣಿ-ಕೃತಿಕೆಯ ಪ್ರತಾಪವೆಂದು!

ಮತ್ತೊಮ್ಮೆ ನಾನು ನನ್ನ ತಂಗಿಯನ್ನು ಕರೆತರುವುದಕ್ಕಾಗಿ ದೂರದ ಊರಿನಲ್ಲಿದ್ದ ಭಾವಯ್ಯನವರಲ್ಲಿಗೆ ಹೋಗಿದ್ದೆ. ಅಲ್ಲಿ ಎರಡು ದಿನಗಳ ಹಾಲ್ಟ್ ಮಾಡಿ ಮೂರನೆ ದಿನ ತಂಗಿಯೊಡನೆ ಮನೆಗೆ ಬರುವುದೆಂದು ನಿರ್ಧರಿಸಿದ್ದೆ. ಎರಡನೇ ದಿನ ಸಂಜೆಯೇ ಭಾವಯ್ಯನವರಿಗೂ ಈ ವಿಚಾರವನ್ನು ತಿಳಿಸಲ್ಯಾತು. ಅವರು ಮರುದಿನವೂ ನಾನು ಅಲ್ಲಿ ನಿಲ್ಲಬೇಕೆಂದು ಬಹಳ ಒತ್ತಾಯ ಪೂರ್ವಕವಾಗಿ ಹೇಳಿದರು. ಆದರೆ ಮರುದಿನ ಮನೆಗೆ ಹಿಂತಿರುಗದ ಗತ್ಯಂತರವೇ ಇರಲಿಲ್ಲ. ಆದುದರಿಂದ ಅವರ ಒತ್ತಾಯ ಪೂರ್ವಕವಾದ ಹೇಳಿಕೆಗೆ ಯಾವ ಬೆಲೆಯನ್ನೂ ಕೊಡದೇ ಹೊರಟೇ ಬಿಟ್ಟೆ. ಹೊರಡುವ ಸಮಯದಲ್ಲಿ ಭಾವಯ್ಯ ಏಕೋ ಪಂಚಾಂಗ ಬಿಡಿಸಿ ನೋಡಿ ಹೇಳಿದರು, ಅಂದು ಭರಣಿ—ಕೃತ್ತಿಕೆಯೆಂದು! ಹಿಂದಿನ ಘಟನೆಗಳ ನೆನಪು ಸಂಪೂರ್ಣ ತಲೆಯಲ್ಲಿದ್ದರೂ, ನಿರುಪಾಯನಾದ ನಾನು ಅಂದೇ ಹೊರಡಬೇಕಾಗಿತ್ತು! ಅಲ್ಲದೆ, ಈ ಭರಣಿ—ಕೃತ್ತಿಕೆಯನ್ನು ಒಮ್ಮೆಯಾದರೂ ಜಯಿಸುವುದು ಸಾಧ್ಯವೇ ಇಲ್ಲವೇ, ಎಂಬ ಹಟವೂ ಮನಸ್ಸಿನಲ್ಲಿ ಅಂಕುರಿಸಿತು; ಹೊರಟೇ ಬಿಟ್ಟೆ! ತೀರ ಹಳ್ಳಿಯಲ್ಲಿದ್ದ ಆ ಪ್ರದೇಶದಿಂದ ಪೇಟೆಯನ್ನು ಕಾಣಲು ೧೨ ಮೈಲು ದೂರವನ್ನು ಕ್ರಮಿಸಬೇಕಾಗಿತ್ತು. ಎರಡೇ ಬಸ್ಸುಗಳು ಓಡಾಡುತ್ತಿದ್ದುದು ಆ ರಸ್ತೆಯಲ್ಲಿ! ನಾವು ಮೊದಲಿನ ಬಸ್ಸಿಗೇ ಹೊರಟಿದ್ದೆವು. ಹೇಗೂ ಬಸ್ಸಿನಲ್ಲಿ ಕುಳಿತು ಮುಂದೆ ಸಾಗಿದೆವು. ನಮ್ಮ ಗ್ರಹಚಾರಕ್ಕೆ ಬಸ್ಸು ೬ ಮೈಲುಗಳಷ್ಟು ದೂರ ಓಡಿ ಬಂದು, ಅಗಲ ಕಿರಿದಾದ ಸೇತುವೆಯೊಂದರ ಮೇಲೆ ಫಕ್ಕನೆ ನಿಂತು ಬಿಟ್ಟಿತು! ಏನ ಮಾಡಿದರೂ ಮುಂದೆ ಚಲಿಸಲು ತಯಾರೇ ಇಲ್ಲ. ಆ ಸೇತುವೆಯನ್ನು ದಾಟಿಸುವುದೂ ಡ್ರೈವರನಿಂದ ಸಾಧ್ಯವಾಗಲಿಲ್ಲ. ಬಸ್ಸು ಹಿಂದೆಯೂ ಹೋಗುತ್ತಿರಲಿಲ್ಲ, ಮುಂದೆಯೂ ಚಲಿಸುತ್ತಿರಲಿಲ್ಲ! ಕೊನೆಗೆ ಪರೀಕ್ಷಿಸಿದ ನಂತರ ಹಿಂದಿನ ಚಕ್ರಗಳು ಸತ್ಯಾಗ್ರಹವನ್ನು ಹೂಡಿರುವುದು ಗೋಚರವಾಯಿತು. ಏನೇನು ಮಾಡಿದರೂ ತಿರುಗುತ್ತಲೇ ಇರಲಿಲ್ಲ. ಎರಡು ಗಂಟೆಗಳ ನಂತರ ಎರಡನೆಯ ಬಸ್ಸು ಹಿಂದಿನಿಂದ ಬಂತು. ಹಿಂದೆ ಇದ್ದ ಬಸ್ಸು, ಮುಂದಿನ ಬಸ್ಸು ಸೇತುವೆಯ ಮೇಲೇ ನಿಂತಿರುವಾಗ, ಸೇತುವೆ ಅಗಲ ಕಿರಿದಾದ ಕಾರಣ, ಬದಿಯಿಂದ ಇದು ಹೋಗುವುದು ಸಾಧ್ಯವೇ ಇಲ್ಲವೆಂದು ನಮಗೆ ತಿಳಿದುದು ನಂತರವೇ! ಅಂತೂ ತಲೆಯ ಮೇಲೆ ಕೈಯಿಟ್ಟುಕೊಂಡು ಉಳಿದ ೬ ಮೈಲುಗಳನ್ನು ನಡೆದು ಮುಗಿಸಿದೆವು. ಪೇಟೆಯನ್ನು ಮುಟ್ಟಿದಾಗ, ಇದುವರೆಗೂ ನಡೆದು ಅಭ್ಯಾಸವಿಲ್ಲದ ನಾವಿಬ್ಬರೂ ಸೋತು ಸುಣ್ಣವಾಗಿದ್ದೆವು. ಹೇಗೂ ಪೇಟೆ ಸೇರಿ ಬಸ್‌ಸ್ಟೇಂಡನ್ನು ಮುಟ್ಟುವ ಹೊತ್ತಿಗೆ, ನಮ್ಮೂರಿಗೆ ಹೋಗುವ ಬಸ್ಸುಗಳೆಲ್ಲವೂ ಹೋಗಿ ಬಿಟ್ಟಿವೆಯೆಂದೂ, ಇನ್ನು ಮರುದಿನದ ಹೊರತು ಬಸ್ಸಿಲ್ಲವೆನ್ನುವ ಸುದ್ದಿಯೂ ನಮಗಾಗಿಯೇ ಕಾದಿತ್ತು! ನನಗೆ ಜೀವ ಭಾರವಾಗ ತೊಡಗಿತ್ತು! ಆ ದಿನ ಮನೆಗೆ ಹೋಗದಿದ್ದರೆ ನಿರ್ವಾಹವೇ ಇಲ್ಲದಂತಹ ಅವಸ್ಥೆ ನನ್ನದಾಗಿತ್ತು. ಇಲ್ಲದಿದ್ದರೆ ನಾನಂದು ಹೊರಡುತ್ತಲೇ ಇರಲಿಲ್ಲ. ಕಡೆಗೆ ಒಂದು ಕಾರು ಮಾಡಿಕೊಂಡು ಮನೆ ಸೇರಿದಾಗ ರಾತ್ರಿ ಗಂಟೆ ಎಂಟಾಗಿತ್ತು!

ಈ ಸಲ ನಾನು ಭರಣಿ-ಕೃತ್ತಿಕೆಗೆ ಸಂಪೂರ್ಣ ತಲೆ ಬಾಗಿದ್ದೆ! ಈಗ ನಾನು ಇದರೊಂದಿಗೆ ಸ್ಪರ್ಧೆಗೆ ನಿಲ್ಲುವುದನ್ನು ಸಂಪೂರ್ಣ ಬಿಟ್ಟು ಬಿಟ್ಟಿದ್ದೇನೆ. ಅದಲ್ಲದೆ ಯಾವ ಕಾರ್ಯವನ್ನಾರಂಭಿಸುವಾಗಲೂ ಪಂಚಾಂಗ ನೋಡಿಕೊಂಡು, ಭರಣಿ-ಕೃತ್ತಿಕೆಗಳಿದ್ದಲ್ಲಿ, ಆ ಕಾರ್ಯಕ್ಕೂ, ಈ ನಕ್ಷತ್ರಗಳಿಗೂ ಮೂರು ದಿನಗಳ ಅಂತರವನ್ನಿಟ್ಟುಕೊಳ್ಳುವುದು ಈಗ ನನ್ನ ವಾಡಿಕೆ! ಎರಡು ದಿನಗಳ ಅಂತರವಿರಿಸಿದರೂ ಹೆದರಿಕೆ, ಎಲ್ಲಿಯಾದರೂ ಈ ನಕ್ಷತ್ರಗಳ ದುಷ್ಪರಿಣಾಮ ಅಂಶತಃ ತಟ್ಟಿ ಬಿಟ್ಟರೆ ......!!




ವೈಷ್ಣವ ಶಿಖಾಮಣಿ
ಕನಕದಾಸ ರಚಿತ

## ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ :-

**ನವಯುಗ ಪ್ರೆಸ್, ಉಡುಪಿ.**

# ಕ್ರೈತ್ರ ಮುರುಗ

(ಎರಡನೆಯ ಪುಟದಿಂದ)

ಒಂದು ಪತ್ರವನ್ನು ಹೊಸ್ತಿಲಿನಲ್ಲಿ ಎಸೆದು ಬಿಟ್ಟು ಹೋದನು. ಮೀನಾಕ್ಷಿಯು ಅದನ್ನು ತೆಗೆದು ಬಿಚ್ಚಿ ತೆರೆದು ಓದಿದಳು.

ಅಲವಂತಿ,
ಜೂನು ೧೮.

ಪ್ರಿಯ ಅಮ್ಮಾ,

ದೇವತೆಗಳು ನನ್ನ ಭವಿಷ್ಯತ್ತನ್ನು ನಿರ್ಧರಿಸಿದ್ದಾರೆ. ನಾನು ಹಳ್ಳಿಗನಾಗಿ ಇರುವವನು. ಹಾಗಿರುವದರಿಂದ, ನಾನಿಲ್ಲೇ ಜಾನಕಿಯೊಂದಿಗೆ, ನೆಲಸಿ, ಸಾದಾ ಜೀವನ ಸಾಗಿಸಬೇಕೆಂದು, ಬೇಸಾಯದ ಲಾಭ ಹಾಗೂ ಸಂತೋಷವನ್ನು ಅನುಭವಿಸಬೇಕೆಂದು ಮನಸ್ಸು ಮಾಡಿದ್ದೇನೆ. ನನ್ನೊಂದಿಗೆ ಜಾನಕಿಯ ತಾಯಿಯಂತೆ, ಬಂದಿರಲು ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ.

ನಿಮ್ಮ ಪ್ರಾಮಾಣಿಕ,
ಆರ್. ರಾಮಚಂದ್ರನ್.

"ಕೇದಾರಿ ನಿನ್ನ ಇಕ್ಕಟ್ಟಿನ ಕೆಲಸ ಮುಗಿಯಿತು. ಇದು ರಾಮುವಿನ ಪತ್ರವಿದೆ. ಅವನು ನನ್ನನ್ನು ಆಹ್ವಾನಿಸುತ್ತಿದ್ದಾನೆ, ಕೇದಾರಿ. ಪತ್ರವನ್ನೋದು—ಅಲವಂತಿಗೆ ಬರಲಿಕ್ಕೆ ಮತ್ತು ಜಾನಕಿಯ ತಾಯಿಯಂತೆ ಅವರೊಂದಿಗಿರಲು ಪತ್ರದಲ್ಲಿ ಕಾಣುವ ಉದಾಸೀನತೆ ಹಾಗೂ ಅತಿ ಸಂಕುಚಿತ ಭಾವನೆಯ ಛಾಯೆಯನ್ನು ನೋಡು. ರಾಮುವಿನಂಥ ಸೌಜನ್ಯತೆಗಳ ಮೂರ್ತಿ, ಪವಿತ್ರ ಪರ್ವತಗಳ ದಕ್ಷಿಣದಲ್ಲಿರುವ ಒಬ್ಬ ಮನುಷ್ಯರಲ್ಲಿ ಮುತ್ತು ಎಂದೆಲ್ಲಾ ನೀನು ಹೇಳುತ್ತಿದ್ದಿ."

ಕ್ಷಣಕಾಲ ಆಲೋಚಿಸಿದ ನಂತರ, ನಸನಗೆಯಾಗುವಂತೆ ಹಾಗೂ ಬಲವಾಗಿ ತನ್ನ ತುಟಿಯನ್ನು ಕಚ್ಚಿ, ಅಪೂರ್ವ ಸಮಯದಲ್ಲಿ ಒಡನೆ ನಿರ್ಣಯಕ್ಕೆ ಬಂದು ಮುಂದರಿಸಿದಳು.

"ಒಳ್ಳೇದು, ಒಳ್ಳೇದು, ಆಹ್ವಾನವನ್ನು ಸ್ವೀಕರಿಸುತ್ತೇನೆ. ಹಾಗೆ ಅಲ್ಲಿಗೆ ಹೋಗಿ, ಜಾನಕಿ ಮತ್ತು ರಾಮು, ಇಬ್ಬರನ್ನೂ ಕರೆದುಕೊಂಡು ಒಂದು ವಾರದೊಳಗೆ ಹಿಂದಕ್ಕೆ ತಿರುಗಿ ಬರುತ್ತೇನೋ ಇಲ್ಲವೋ ನೋಡುತ್ತಾ ಇರು. ರಾಮು ಇನ್ನೂ ಹುಡುಗ ಪ್ರಾಯವೇನೋ ಹೆಚ್ಚುತ್ತಿದೆ. ಅದರ ಪರಿಣಾಮ ಅವನಲ್ಲೇನೂ ಆಗುತ್ತಿರುವದಿಲ್ಲ. ಹಿರಿಯರಿಗೆ ವಿಧೇಯನಾಗಿರುವಂತೆ ಅವನಿಗೆ ಕಲಿಸಬೇಕು. ಅವನು ಮುಳುಗುತ್ತಿರುವ ದೋಣಿಗೆ ಸಮಾನ. ನಾನು ಚಾಲಕನ ಪಾತ್ರವನ್ನು ವಹಿಸಿಕೊಳ್ಳಲೇ ಬೇಕು. ಅಯ್ಯೋ! ಬಹಳ ವರ್ಷಗಳ ಹಿಂದೆ ನನ್ನ ಏಳು ವರ್ಷ ಪ್ರಾಯದ ಪ್ರೀತಿಯ ಎಳೆಯ ಮಗನನ್ನು ಶಾಲೆಗೆ ಸೇರಿಸಿದಂತೆ, ಇಂದು ರಾಮುವನ್ನು ಪುನಃ ಶಾಲೆಗೆ ಸೇರಿಸಬೇಕು ಆ ಹುಡುಗನು ಜಾನಕಿಯ ಅಣ್ಣನಾಗಿದ್ದ. ಈಗ ಬದುಕಿರುತ್ತಿದ್ದಲ್ಲಿ ಇಪ್ಪತ್ತಮೂರು ವರ್ಷ ಪ್ರಾಯ ಅವನಿಗಾಗುತ್ತಿತ್ತು; ಕುಟುಂಬದ ಉತ್ತರಾಧಿಕಾರಿಯಾಗಿರುತ್ತಿದ್ದ. ಅವನು ಜಾನಕಿಯ ಹಾಗಿರದೆ ನನ್ನ ಕಾವು ಮತ್ತು ಉತ್ಸಾಹದ ಅಂಶ ಅವನಲ್ಲಿತ್ತು. ಅವನು ಸಾಧು ಹಾಗೂ ಭೀರುವಾಗಿರಲಿಲ್ಲ.

ಅವಳಷ್ಟಕ್ಕನೇ ಅವಳು ಮಾತಾಡಿಕೊಳ್ಳಲಾರಂಭಿಸಿದಳು. ಮಾತೆಗೆ ಮೃತ ಮಗನ ಜ್ಞಾಪಕ ಯಾವಾಗಲೂ ಅಚ್ಚಳಿಯದೆ ಇರುತ್ತದೆ. ಅದು ಅವಳಿಗೆ ಪವಿತ್ರವೂ ಇರುತ್ತದೆ.

ತಪ್ಪಿಸಿ ಕೊಳ್ಳಲು ಅದೇ ಸಮಯವು ಒಳ್ಳೆಯದೆಂದೆಣಿಸಿ ಕೇದಾರಿಯು ಅವಸರ ಅವಸರವಾಗಿ 'ಹೋಗಿ ಬರುತ್ತೇನೆಂ'ದು ಹೇಳಿ ಹೊರಟನು.

೦ ೦ ೦

— ೧೨ —

ರಾಡಿಯಾದ ನೀರೂ ತಿಳಿ ನೀರೂ ಬಹು ಗಂಭೀರವಾಗಿ ಅಲವಂತಿಯ ನದಿಯಲ್ಲಿ ಹರಿಯುತ್ತಿದ್ದುವು. ಗೂಡಿನೊಳಗಿರುವ ತನ್ನ ಮರಿಯನ್ನು ಬಿಡಿಸಲು ಉಪಾಯದಿಂದ ಹಾಗೂ ಶಕ್ತಿಯಿಂದ ಸಿಂಹಿಣಿಯು ಹೊಡೆದಾಡುವಂತೆ ಮೀನಾಕ್ಷಿಯು ಪ್ರಯತ್ನಿಸುತ್ತಿದ್ದಳು. ಜಾನಕಿಯು ತನ್ನ ತಾಯಿಯ ಧೈರ್ಯ ಮತ್ತು ಹಟಪೂರಿತನವನ್ನೂ ಗಂಡನ ಶಾಂತಪೂರ್ಣ ಅಸಹಕಾರತೆಯನ್ನೂ ಮುಂದೇನು? ಮುಂದೇನು? ಎಂಬ ಲವಲವಿಕೆಯಿಂದ ಕಾದು ನೋಡುತ್ತಿದ್ದಳು. ಗೂಡಿನ ಬೀಗದ ಕೈ ರಾಮುವಿನ ಬಳಿ ಇತ್ತು. ಆಕಾಂಕ್ಷೆಯು ತೃಪ್ತಿಯನ್ನೂ, ಕೋಪವು ಉತ್ಸಾಹಹೀನತೆಯನ್ನೂ, ಹೋರಾಟವು ಶಾಂತಿಯನ್ನೂ ಮಾತುಗಳು ಮೌನವನ್ನೂ ಎದುರ್ಗೊಂಡುವು. ಮೀನಾಕ್ಷಿಗೆ ಕೂಡಾ ಘೋರ ಪ ಭಂಗವಾದ ಪರಾಧ್ಯಾಚರಣೆಅಧಿಕವಾಯ್ತೆಂದು ಅರಿವಾಗ ಹತ್ತಿತು. ಒಂದು ವಿಧದಿಂದ ರಾಮುವು ತನ್ನ ಪ್ರಭುತ್ವವನ್ನು ಪ್ರಕಟಿಸಿದನು. ಅದು ಅವನಿಗೇನೇ ಆಶ್ಚರ್ಯವನ್ನುಂಟುಮಾಡಿತು. ಅವನಿಗೆ ಅದು ಮೊದಲ ಬಾರಿಗೆ ತನ್ನ ಶಕ್ತಿಯ ಅನುಭವವಾದದ್ದು. ಆದರೆ ಮೀನಾಕ್ಷಿಯ ಇಚ್ಛೆಯು ಬಹಳ ಪ್ರಬಲವಾದುದಿತ್ತು. ಒಂದು ವಿಷಯದಲ್ಲಿ ಅವಳು ಜಯಗಳಿಸಿದಳು. ವಂಶಪಾರಂಪರ್ಯವಾಗಿ ಬಂದಿರುವ ಮನೆಯನ್ನು ಬಿಟ್ಟು ತೆಂಗಿನ ತೋಟದಲ್ಲಿ ಹೋಗಿ ವಾಸಿಸುವದು ಹುಚ್ಚುತನವೆಂದು, ಅದನ್ನವಳು ತೀವ್ರವಾಗಿ ಖಂಡಿಸಿದಳು.

ಹೀಗೆ ಎರಡು ತಂಡದವರೂ ಒಂದು ಒಪ್ಪಿಗೆಗೆ ಬಾರದೆ, ಐದು ತಿಂಗಳು ಹೋರಾಟಮಯ ಜೀವನವನ್ನು ಸಾಗಿಸಿದರು. ನವಂಬರ್ ತಿಂಗಳು ಬಂತು. ಈಶಾನ್ಯ ಮಾರುತ ತನ್ನ ಪರಾಕ್ರಮವನ್ನು ಪ್ರಕಟಿಸಲು ಪ್ರಾರಂಭಿಸಿತು. ಕೆಲ ವರ್ಷಗಳಿಂದ, ಆ ರೀತಿ ಮಳೆಯೇ ಬಂದಿರಲಿಲ್ಲ. ನಿಸರ್ಗ ಪ್ರಿಯ ರಾಮುವಿನ ಮನಸ್ಸು ನವಿಲಿನ ಗರಿಗಳಂತೆ ವಿಶಾಲವಾಯಿತು. ಮಳೆ ಸುರಿಸುತ್ತ ಇರುವ ಆಕಾಶ, ಮೋಡಗಳ ಓಡಾಟ ಇವುಗಳನ್ನು ನೋಡುವದರಲ್ಲೇ ಅವನು ಎಲ್ಲವನ್ನೂ ಮರೆಯುತ್ತಿದ್ದನು.

ತನ್ನ ಪ್ರಥಮ ಬೇಸಾಯದ ವರ್ಷವು ಉತ್ತಮವಾಗಿ ಆರಂಭವಾಗಿದೆ ಎಂದು ರಾಮುವು ತಿಳಿದುಕೊಂಡಿದ್ದನು. ಭತ್ತದ ಹಸಿರು ಗದ್ದೆಗಳು ನಕ್ಕು ನಲಿಯುತ್ತಿದ್ದುವು. ತಾಯಿಯು ಮಗುವನ್ನು ನಿರೀಕ್ಷಿಸುವಂತೆ, ಆಶಾಪೂರಿತ ಕಣ್ಣುಗಳಿಂದ ಗದ್ದೆಯತ್ತ ನೋಡುತ್ತ, ಮುರುಗನು, ಪೈರಿಗಾದ ದಿನವನ್ನು ಲೆಕ್ಕ ಹಾಕುತ್ತಿದ್ದನು. ಮಾರುತದ ಆರ್ಭಟ ಹೆಚ್ಚೆಂದರೆ ಒಂದು ವಾರ ಇರುತ್ತಿತ್ತು. ಆದರೆ ಈ ಸಲ ಹದಿನೈದು ದಿನಗಳಾದರೂ ಆಕಾಶದಲ್ಲಿ ಮತ್ತೂ ಶೇಖವಿತ್ತು. ಕಡಿಮೆಯಾಗುವ ಲಕ್ಷಣವೇ ಕಂಡುಬರುತ್ತಿದ್ದಿಲ್ಲ. ನದಿಯು ನೆರೆಯಿಂದ ತುಂಬಿ, ಪ್ರವಾಹ ಸಾಗರದಂತೆ ದಡದ ವರೆಗೆ ತುಂಬಿಕೊಂಡು ಭಯಂಕರವಾಗಿ ಕಾಣುತ್ತಿತ್ತು. ಅದು ಎಚ್ಚರಿಕೆಯ ಮುನ್ಸೂಚನೆಯನ್ನು ಕೊಡುತ್ತಿತ್ತು. ನೆರೆಯು ಹೆಚ್ಚುತ್ತಲೇ ಇತ್ತು. ಕಾವೇರಿಯು ನಡುರಾತ್ರಿಯಲ್ಲಿ ಅಲವಂತಿಯ ಪಶ್ಚಿಮ ಭಾಗದಲ್ಲಿ ದಡ ಮೀರಿ ಹರಿದು ಬಂದು, ಬೆಳಗಾಗುವ ಮುಂಚೆಯೇ ಮನುಷ್ಯರಿಗೆ, ಪ್ರಾಣಿಗಳಿಗೆ ಹಾಗೆ ಭೂಮಿಗೂ ಅಪಾಯವನ್ನು ತಂದೊಡ್ಡಿದಳು. ರಾಮು ಎಂದೆಂದಿಗೂ ತಲೆ ಎತ್ತದಂತೆ ಜೋರಾಗಿ ನಷ್ಟದ ಪೆಟ್ಟು ಬಿತ್ತು. ಒಡೆದ ಹಡಗಿನ ಮುಖಂಡನಂತೆ ಅವನು ವ್ಯಸನಾಕ್ರಾಂತನಾದನು. ತನ್ನ ಗಂಡ ಮತ್ತು ತಾಯಿಯವರ ನಡುವೆ ಜಾನಕಿಯು ಪಕ್ಷಪಾತ ಹಿಡಿದವಳಂತಾದಳು.

ಮೀನಾಕ್ಷಿಯು ಮಾತ್ರ ಆ ಅಂಧಕಾರಮಯ ಬಾಳಬಾನಲ್ಲೂ ಬೆಳಕನ್ನು ಕಂಡಳು. ತನ್ನ ಮೆಚ್ಚಿಕೆಯ ಹಂಚಿಕೆಯು ಕೈಗೂಡುವ ಸಮಯ ಪ್ರಾಪ್ತವಾಗಿದೆ ಎಂದವಳು ಆಲೋಚಿಸಿಕೊಂಡಳು. ಮಳೆಯ ಆಘಾತವಾದ ಮೇಲೆ ಮೀನಾಕ್ಷಿಯು ರಾಮುವಿನ ಮೇಲೆ ಪುನಃ ಮಾತಿನ ದಾಳಿಗಾರಂಭಿಸಿದಳು. ಇತರರನ್ನು ಹಾಳು ಮಾಡಿರುವ ಆ ನಾಶದ ಮೇಲೆ ಅವಳು ತನ್ನ ಕನಸಿನ ಕೋಟೆಯನ್ನು ಕಟ್ಟಲು ಆರಂಭಿಸಿದಳು. ಮಾನವನು ಸಂಪಾದಿಸುವ ಅನ್ನದ ಮೇಲೆ, ಅವನ ಪೌರುಷವನ್ನು ಕಟ್ಟುತ್ತಿದ್ದ ಜಾನಕಿಯು ಈಗ ತಾಯಿಯತ್ತ ಆಶೆಯ ದೃಷ್ಟಿಯಿಂದ ನೋಡಲಾರಂಭಿಸಿದಳ. ಮೀನಾಕ್ಷಿಯ ಮಾತುಗಳನ್ನೀಗ ಖಂಡಿಸುವದು ಕಷ್ಟ. ಭವಿಷ್ಯತ್ತೀಗ ಸಿಟವಾದ ಸಮಸ್ಯೆ ಆಗಿದೆ.

ಮಳೆಗಾಲವು ರಾಮುವನ್ನು ಹೊಸ ಮನುಷ್ಯನನ್ನಾಗಿ ಬದಲಾಯಿಸಿತು. ಫಸಲಿನ ಆರ ಕಿಂಚಿತ್ತೂ ಉಳಿದಿರಲಿಲ್ಲ. ಅಲ್ಲದೆ ಗದ್ದೆಗಳನ್ನು ಸರಿಪಡಿಸುವ ಕೆಲಸವೂ ಇದೆ. ಮುಂಚಿನ ಸ್ಥಿತಿಗೆ ಬರಲು ಕನಿಷ್ಟ ಪಕ್ಷ ಮೂರು ವರ್ಷಗಳಾದರೂ ಬೇಕು. ಅದರ ಮಧ್ಯೆ ಮುವ್ವರಿಗೆ ಬೇಕಾಗುವಷ್ಟನ್ನು ಅದರೂ ಅವನು ಗಳಿಸಬೇಕು—ಇಲ್ಲವೇ ಸನ್ಯಾಸಿಯಾಗಿ ಕಾಡಿಗೆ ಹೊರಟು ಹೋಗಬೇಕು. ಆದರೆ ಜಾನಕಿಯು ಮನಮೋಹಕ ರೂಪವನ್ನು ಬಿಟ್ಟು ಹೋಗಲು ಅವನಿಂದ ಸಾಧ್ಯವಿಲ್ಲ, ಅವನು ಸಂಪಾದಿಸಲೇ ಬೇಕು. ಪುನಃ ವಿದ್ಯಾಭ್ಯಾಸದ ಕುರಿತು ಯೋಚಿಸುವದೂ ದುಸ್ತರವಾಗಿದೆ. ಅದಕ್ಕೆ ಅವನ ಬಳಿ ಮನಸ್ಸಾಗಲೀ ಹಣವಾಗಲೀ ಇಲ್ಲ. ಅವನು ಗುಮಾಸ್ತನಾಗಬೇಕೆಂದು ವಿಧಿಯು ನಿಶ್ಚಯಿಸಿತ್ತು. ಅವನು ತಪ್ಪಿಸಿಕೊಳ್ಳುವದಾದರೂ ಹೇಗೆ? ವಿಧಿಗೆ ಹಾಗೂ ಮೀನಾಕ್ಷಿಗೆ, ಉಪಾಯವಿಲ್ಲದೆ, ಶರಣು ಬಂದು, ಇಪ್ಪತ್ತೈದು ಜಿಲ್ಲೆಗಳಿಗೆ ಸರಕಾರಿ ಕೆಲಸಕ್ಕಾಗಿ ವಿನಂತಿಯನ್ನು ಕಳುಹಿಸಿದನು.

ಒಂದು ಸುಪ್ರಭಾತ ಅಂಚೆಯವನು ಒಂದು ಪತ್ರವನ್ನು ರಾಮುವಿಗೆ ಕೊಟ್ಟು ಹೋದನು. ಅದರಲ್ಲಿ 'ಶಿಬಿರ—ಗುಮಾಸ್ತೆ'ನ ಕೆಲಸಕ್ಕೆ ಒಂದು ಕರೆ ಇತ್ತು. ಕಡಪ ಜಿಲ್ಲೆಯಲ್ಲಿ, ತಿಂಗಳೊಂದಕ್ಕೆ ಇಪ್ಪತ್ತೈದು ರೂಪಾಯಿ ಸಂಬಳದ ಕೆಲಸ ಅದು. ಬಿಸಿ ಕಡಪ ಸುಡುತ್ತಿರುವ ಸೂರ್ಯ ಹಾಗೂ ಛಳಿ ಜ್ವರಕ್ಕೆ ಪ್ರಖ್ಯಾತ ಪಟ್ಟಿರುವ ಆ ತೆಲುಗು ಪ್ರದೇಶವು ಒಮ್ಮೆ, ನದಿ ತಟಾಕದಲ್ಲಿರುವ ತನ್ನ ಚೆಂದದ ಹಳ್ಳಿ ಇನ್ನೊಮ್ಮೆ—ಹೀಗೆ ರಾಮುವಿನ ಕಣ್ಮುಂದೆ ಸುಳಿದು ಹೋದುವು. ಇತ್ತ, ಜಾನಕಿಯು ಅದೃಷ್ಟದ ದೇಗುಲದ ಬಾಗಿಲು ತೆರೆಯಲ್ಪಡುತ್ತಿದೆ ಎಂದು ಮೀನಾಕ್ಷಿಯು ಸಂತೋಷ ಪಡುತ್ತಿದ್ದಳು. ಆ ಸಂತೋಷದ ಚಿಗುರನ್ನು ಕಿತ್ತೊಗೆಯಲು ರಾಮು ಪ್ರಯತ್ನಿಸಿದರೂ, ಅವನು ಸೋತು ಹೋದನು. ಶಿಬಿರ–ಗುಮಾಸ್ತನ ಬಡತನ ಮತ್ತು ನೀಚ ಸ್ಥಿತಿಯ ಚಿತ್ರವನ್ನು ಆಕೆಯ ಕಣ್ಣುಗಳ ಮುಂದೆ ಇಡಲು ಪ್ರಯತ್ನಿಸಿದರೂ ಏನೂ ಪ್ರಯೋಜನ ಕಂಡು ಬರಲಿಲ್ಲ. ಅವಳು ಅದೊಂದಕ್ಕೂ ಕಿವಿಗೊಡದೆ, ಆತನ ಪ್ರಯಾಣಕ್ಕೆ ಸಿದ್ಧಪಡಿಸುತ್ತಿದ್ದಳು. ಬೇರೆ ದಾರಿ ಕಾಣದ ರಾಮು ವಿಧಿಗೆ 'ಶರಣು' ಎಂದು ಹೇಳಿದನು.

(ಮುಂದುವರಿಯುವುದು)





ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 8—12—1965

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೯-೧೨-೬೫ರಿಂದ ೧೫-೧೨-೬೫ರ ವರೆಗೆ

### ೧ ಮೇಷ

ಮನಸ್ಸಿದ್ದಲ್ಲಿ ಮಾರ್ಗವಿದೆ. ನೀವು ಯತ್ನಿಸಿದರೆ ಯಾವ ಕೆಲಸವೂ ನಿಮಗೆ ಅಶಕ್ಯವಾಗಲಾರದು. ಆದರೆ ಚಂಚಲ ಸ್ವಭಾವದವರಾದ ನೀವು ಯಾವ ಉದ್ಯಮವನ್ನೂ ಆರಂಭದಿಂದ ಅಂತ್ಯದವರೆಗೆ ಸಾಧಿಸಲಾರಿರಿ. ಆದ್ದರಿಂದಲೇ ಸದ್ಯದ ಬಿಕ್ಕಟ್ಟು ನಿಮ್ಮನ್ನು ಕಾಡಿಸಲಿದೆ. ನಿಮ್ಮ ಆರೋಗ್ಯವು ಹಿಂದಿಗಿಂತ ಎಷ್ಟೋ ಉತ್ತಮವಾಗುವದು. ಉದ್ಯಮಿಗಳಿಗೆ ದಿನಗಳು ಶುಭಮಯವಾಗಲಿವೆ. ತಾ. 9, 10, ಅತೀವ ಅನುಕೂಲವಾಗಿವೆ.

### ೨. ವೃಷಭ

ನಿಮಗಿಂದು ಕಾರ್ಯಾರಂಭಕ್ಕಿಂತ ಮುಂಚಿತವಾಗಿ ವಿಘ್ನಗಳು ಬರಲಿವೆ. ಆದಕಾರಣ ಹೆಚ್ಚಿನ ಕಾಲವನ್ನು ನಿರುದ್ಯೋಗದಿಂದ ಕಳೆವಿರಿ. ಒಳ್ಳೆಯ ವಾಚಾಳಿಗಳಾದ ನಿಮಗೆ ಜನಬೆಂಬಲಕ್ಕೇನೂ ಕೊರತೆಯಿಲ್ಲದು. ಸದ್ಯದ ಪರಿಸ್ಥಿತಿಯಲ್ಲಿ ನಿಮಗೆ ಹಣದ ಚಿಂತೆಯುಂಟಾಗದು. ಪತ್ರವ್ಯವಹಾರಕ್ಕಿಂತ ಮುಖತಃ ಭೆಟ್ಟಿಯು ಶೀಘ್ರ ಫಲಕಾರಿಯಾಗುವುದು. ತಾ. 11, 12, 13, ಇತರ ದಿನಗಳಿಗಿಂತ ಉತ್ತಮವಾಗಿವೆ.

### ೩. ಮಿಥುನ

ಈ ವಾರದಲ್ಲಿ ನಿಮ್ಮ ಲಾಭಪತಿಯಾದ ಅಂಗಾರಕನು ಅನಿಷ್ಟಸ್ಥಾನವಾದ ಅಷ್ಟಮಕ್ಕೆ ಪ್ರವೇಶಿಸುವನು. ಭಾಗ್ಯಸ್ಥಾನದಲ್ಲಿ ಶನೈಶ್ಚರನು ಸ್ಥಿರನಾಗಿದ ಕಾರಣ ಹಣದ ಬಿಕ್ಕಟ್ಟು ವಿಶೇಷವಾಗಲಿದೆ. ಭೂಸಂಬಂಧವಾದ ವ್ಯವಹಾರದಲ್ಲಿ ಹೆಚ್ಚಿನ ನಷ್ಟ ಹೊಂದುವಿರಿ. ಕಫ ಪಿತ್ಥದೋಷದಿಂದಾಗಿ ಆರೋಗ್ಯವೂ ಸರಿಯಿರದು. ಸ್ವಜನ ವಿರೋಧಕ್ಕೆರವಾದ ನಿಮಗೆ ತಾ. 11, 12, 13ರಲ್ಲಿ ಅನಿರೀಕ್ಷಿತ ನಷ್ಟ ಮಾನಚ್ಯುತಿಗಳೊದಗಲಿವೆ.

### ೪. ಕರ್ಕಟ

ಆವ ಚಲವಿದ್ದರೇನು ದೈವಬಲವಿಲ್ಲದವಗೆ ಎಂದು ದಾಸವರ್ಯರು ಹೇಳಿದರಂತೆ. ದುರ್ದೈವಿಗಳಾದ ನಿಮಗೆ ಇಂದು ಎಷ್ಟೇ ಶಕ್ತಿ ಸಂಪತ್ತುಗಳಿದ್ದರೂ ಕನ್ನಡಿಯೊಳಗಿನ ಗಂಟನಂತಾದೀತು. ಹೆಂಡತಿ ಮಕ್ಕಳಿಗಾಗಿ ಹೆಚ್ಚಿನವರ ಕೂಡೆ ವಿರೋಧ ಕಟ್ಟಿಕೊಳ್ಳುವಿರಿ. ಯಾವ ವ್ಯವಹಾರದಲ್ಲೂ ನಿಮ್ಮ ನಿರೀಕ್ಷೆಯು ಈಡೇರದು. ತನುಮನೋರೋಗಕ್ಕೆರವಾದ ನಿಮಗೆ ತಾ. 13, 13, ಇದ್ದುದರಲ್ಲಿ ಅನುಕೂಲವೆನ್ನಬಹುದು.

### ೫. ಸಿಂಹ

ಸುದಿನಗಳು ಸನ್ನಿಹಿತವಾಗಿದೆ. ನಿಮ್ಮ ಮನೋರಥಗಳು ನಿರ್ವಿಘ್ನದಿಂದ ಕಾರ್ಯರೂಪಕ್ಕೆ ಬರಲಿವೆ. ಜನಾನುರಾಗವಂಗಳಿಸಿದ ನಿಮಗೆ ಸರ್ವತ್ರ ವಿಜಯ ಲಭಿಸುವದಾದರೂ ವ್ಯಾಪಾರದಲ್ಲಿ ನಷ್ಟ ನಿಷ್ಠುರಗಳುಂಟಾಗುವವು. ಗೃಹತಾಪತ್ರಯಗಳಿಂದ ಮುಕ್ತರಾದ ನಿಮ್ಮ ಆರೋಗ್ಯವೂ ತೃಪ್ತಿಕರವಿಯದು. ತಾ. 9, 10, 14, 15, ಈ ದಿನಗಳಲ್ಲಿ ನಿಮ್ಮ ಬಯಕೆಗಳು ಸಿದ್ಧಿಸುವವು.

### ೬. ಕನ್ಯಾ

ಶಕ್ತಿ ಮೀರಿ ಶ್ರಮಿಸುವಿರಿ. ನಿಮ್ಮ ಬಯಕೆಗಳು ಪೂರ್ಣವಾಗುವವು. ಶತ್ರುಪೀಡೆಯಿಂದ ಮುಕ್ತರಾದ ನಿಮಗೆ ಹಣದ ಕೊರತೆಯೂ ಕಾಣಿಸದು. ಆದರೆ ಸಂಸಾರದಲ್ಲಿ ಒಂದಿಲ್ಲೊಂದು ಚಿಂತೆಯು ನಿಮ್ಮನ್ನು ಪೀಡಿಸಲಿದೆ. ಪಿತ್ಥಪ್ರಕೋಪದಿಂದ ಆರೋಗ್ಯವೂ ಕೆಟ್ಟೀತು. ವಿದ್ಯೋಪಜೀವೀ ನೌಕರಿ ವರ್ಗಕ್ಕೀಕಾಲವು ಹೆಚ್ಚಿಗೆ ಅನುಕೂಲವಾಗಿಲ್ಲ. ವಾರಾದಿಯ 5 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

### ೭. ತುಲಾ

ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕವೆಂಬ ಲೋಕೋಕ್ತಿಯಂತೆ ಧೈರ್ಯದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿರಿ. ನಿಮ್ಮ ಬಯಕೆಗಳು ಹೆಚ್ಚಿನಂಶ ಫಲಕಾರಿಗಳಾಗಲಿವೆ. ಜನತೆಯ ನೆರವೂ ಬಂಧುಗಳ ಸಹಕಾರವೂ ನಿಮಗೆ ವಿಶೇಷವಾಗಿ ಲಭಿಸುವದಾದರೂ ರಾಜಕೀಯ ರಂಗದಲ್ಲಿ ಸ್ವಲ್ಪ ನಷ್ಟ ಪರಾಭವಗಳುಂಟಾದಾವು. ವ್ಯವಹಾರ ಚತುರರಾದ ನಿಮಗೆ ವಾರಾಂತ್ಯದ 4 ದಿನಗಳು ತುಂಬ ಅನುಕೂಲವಾಗಿವೆ.

### ೮. ವೃಶ್ಚಿಕ

ರಾಮೇಶ್ವರಕ್ಕೆ ಹೋದರೂ ಶನೈಶ್ಚರನು ಬಿಡನೆಂಬ ಗಾದೆಯೋಪಾದಿಯಾಗಿದೆ ಇಂದು ನಿಮ್ಮ ಪರಿಸ್ಥಿತಿ. ನೂತನವಾಡಿದವರೊಡನೆ ನಿಷ್ಠುರ ಬಂಧುಗಳ ಕೂಡೆ ಕಲಹ ಶತ್ರುಜನರೊಡನೆ ಹಣಾಹಣಿ ಇತ್ಯಾದಿಗಳಿಂದಾಗಿ ಮನಸ್ಸಿಗೆ ಈಷತ್ತೂ ನೆಮ್ಮದಿಯಿರದು. ಆರ್ಥಿಕ ಪರಿಸ್ಥಿತಿಯಂತೂ ತೀರ ಕೆಳಮಟ್ಟಕ್ಕಿಳಿಯಲಿದೆ. ತಾ. 14, 15, ಇತರ ದಿನಗಳಿಗಿಂತ ಲೇಸು.

### ೯. ಧನು

ಎಂತಹ ದುಃಸಾಧ್ಯವಾದ ಕಾರ್ಯವನ್ನು ಕೂಡ ನೀವಿಂದು ಸುಲಭವಾಗಿ ಸಾಧಿಸುವಿರಿ. ಸನ್ನಿಶ್ಚರ ನೆರವಿನಿಂದಾಗಿ ವ್ಯಾಪಾರ ವ್ಯವಹಾರಗಳಲ್ಲಿ ಲಾಭಕೀರ್ತಿಗಳು ಲಭಿಸುವವು. ಆ... ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ನಿ... ನಿರೀಕ್ಷೆಯು ಹುಸಿಯಾಗಲಿ... ಶತ್ರು... ಯಿಂದ ಮುಕ್ತರಾದ ನಿಮಗೆ ವಾರಾದಿ... 5 ದಿನಗಳು ಧನಮಾನದಾಯಿಗಳಾಗಿವೆ.

### ೧೦. ಮಕ...

ಬಲವದ್ವಿರೋಧಗಳೊದಗಿದರೂ ಹಿ... ಕಾರ್ಯವನ್ನು ಮಧ್ಯೆ ಕೈಬಿಡಲಾರಿರಿ. ... ಮಕ್ಕೆ ತಕ್ಕ ಫಲ ಲಭಿಸುತ್ತಿದರಿಂದ ... ತಗಾದ ಕಾಣಿಸದು. ದುಡಿಮೆಯ ಬ... ವನ್ನು ಪರಾರ್ಥಕ್ಕಾಗಿ ವ್ಯಯಿಸುವಿರಿ. ಗು... ಹಿರಿಯರ ಕೂಡೆ ವಿರೋಧವುಂಟಾಗಲಿ... ನಿರಾಮಯವಾದ ಸಂಸಾರದಲ್ಲಿ ನಿಶ್ಚಿಂತೆ... ದಿರ ತಕ್ಕ ನಿಮಗೆ ವಾರಾಂತ್ಯದ 4 ದಿನಗ... ಅನುಕೂಲವಾಗಿವೆ.

### ೧೧. ಕುಂಭ

ನಿಮ್ಮೆಲ್ಲಾ ತಾಪತ್ರಯಗಳೂ ಸೂ... ರಶ್ಮಿಯಿಂ ಕಂಡ ಹಿಮಕಣಗಳಂತೆ ಮಾ... ವಾಗುವವು. ಸಂಕಲ್ಪಗಳು ನಿರ್ವಿಘ್ನದಿ... ಕಾರ್ಯರೂಪಕ್ಕೆ ಬರಲಿವೆ. ಆದರೂ ಸ್ವ... ಆರೋಗ್ಯ ವಿಚಾರದಲ್ಲಿ ಸ್ವಲ್ಪ ಜಾಗ್ರತೆ... ಸಿರಿ. ದುಡಿಮೆಯ ಹೆಚ್ಚಿನಂಶವನ್ನು ... ಸೋದರ ಜನತೆಯ ಸಲುವಾಗಿ ವ್ಯಯಿಸುವಿ... ವಿರಿ. ವಾರಾಂತ್ಯದ 4 ದಿನಗಳ ಸುಖ... ಮಾನದಾಯಿಗಳಾಗಿವೆ.

### ೧೨. ಮೀ...

ಹೆಚ್ಚಿನ ಬಿಕ್ಕಟ್ಟು ಇಂದು ದೂರವಾ... ಲಿವೆ. ನಿಮ್ಮ ಪರಿಶ್ರಮವು ಸಫಲವಾಗುವ... ಬಂಧು ಜನರಿಂದ ಪುರಸ್ಕರಿಸಲ್ಪಟ್ಟ ನಿಮ... ಬಾಲ್ಯಸ್ನೇಹಿತರ ನೆರವು ಲಭಿಸುವುದು. ... ಯಂಶಕ್ತರಾದ ನಿಮಗೆ ರಾಜಕೀಯದಲ್ಲಿ ಒ... ಯ ಯಶಸ್ಸು ಲಭಿಸಲಿದೆ. ಕೋರ್ಟುಕಛೇ... ಗಳ ವ್ಯವಹಾರಗಳು ನಿಮ್ಮಂತೆಯೇ ಆಗು... ವು. ಭೂಸಂಬಂಧವಾದ ವ್ಯವಹಾರಗಳ... ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟ... ತಿಹುದು. ತಾ. 14, 15, ಸರ್ವತ್ರಾ ಅನು... ಕೂಲವಾಗಿವೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ನಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

## ನವಯುಗದ ಚಂದಾದಾರರಲ್ಲಿ ವಿನಂತಿ

ಚಂದಾ ಅವಧಿ ಮುಗಿದ ಚಂದಾದಾರ... ಗೆಲ್ಲಾ ನಾವು ಈಗಾಗಲೇ ಕಾರ್ಡು ಬ... ದು ಮುಂದಿನ ಚಂದಾಹಣವನ್ನು ಕಳು... ಸಲು ವಿನಂತಿಸಿಕೊಂಡಿರುತ್ತೇವೆ. ಕೆಲವರು ನಮ್ಮ ವಿನಂತಿಯನ್ನು ಮನ್ನಿ... ಚಂದಾಹಣವನ್ನು ಕಳಿಸಿಕೊಟ್ಟಿದ್ದಾ... ಇನ್ನೂ ಚಂದಾ ಕಳಿಸದವರು ದಯ... ಮಾಡಿ ತಮ್ಮ ಚಂದಾಹಣವನ್ನು ಬೇಗನೆ ಕಳಿಸಿಕೊಡುವಂತೆ ಬಿನ್ನವಿಸುತ್ತೇವೆ. ಅಂತೂ ವಾರಾಂತ್ಯದೊಳಗೆ ಚಂದಾ ಬಾರದಿದ್ದರೆ ನಾತ್ರ ಮಾಡುವ ವಿ. ಪಿ. ಯನ್ನು ದಯಮಾಡಿ ಪಡಕೊಂಡು ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

# නවයුග

16—12—1965



226 NAVAYUGA

20 ශත

ಧಾರಾವಾಹಿ ಕಾದಂಬರಿ

# ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ಮೊದಲು —

ರಾಮಚಂದ್ರ ಮುರುಗನನ್ನು ಬಿಟ್ಟು ಕೇದಾರಿಯ ಮಾತಿನಿಂದ ಮದ್ರಾಸಿಗೆ ಹೋದರೂ ವಿವಾಹಿತನಾಗಿ ಮತ್ತೆ ಅಲಮಂತಿಗೆ ಮರಳಲೇ ಬೇಕಾಯಿತು. ದುರ್ದೈವದಿಂದ ರಾಮು ಬಿ. ಎ. ಆಗಲಿಲ್ಲ. ತನಗೆ ಅಲಮಂತಿಯ ವಾಸ, ಮುರುಗನ ಸಹವಾಸ — ಇವೇ ಹಿರಿಮೆಗಳೆಂದು ಆತ ತಿಳಕೊಂಡಿದ್ದರೆ, ಅತ್ತ ಅತ್ತೆ ಮೀನಾಕ್ಷಿ ಮಗಳು ಜಾನಕಿಯನ್ನು ಮತ್ತೆ ನಗರಕ್ಕೊಯ್ಯುವ ಜಾಲ ಹೂಡಿದಳು. ಸುದೈವದಿಂದ ಅಲಮಂತಿ ನೆರೆಯಲ್ಲಿ ಮುಳುಗಿತು; ಕಂಗೆಟ್ಟ ರಾಮಚಂದ್ರನಿಗೆ ಕಡಲಾಚೆಯಲ್ಲಿ ಗುಮಾಸ್ತನ ಕೆಲಸ ಸಿಕ್ಕಿತು. ಹೊರಡದೆ ಆತ ಮತ್ತೇನು ಮಾಡಿಯಾನು?

ಮುಂದೆ —

ಮೀನಾಕ್ಷಿಯ ಆಗಮನದ ನಂತರ ಸೀತೆ ಮತ್ತು ಜಾನಕಿಯರಿಗೆ ಆಗಾಗ ಕೂಡಲಿಕ್ಕೂ ಆಗುತ್ತಿರಲಿಲ್ಲ, ಕೂಡುತ್ತಿರಲೂ ಇಲ್ಲ. ಆದರು ಒಬ್ಬಳನ್ನು ಕುರಿತು ಇನ್ನೊಬ್ಬಳು ಚಿಂತಿಸುತ್ತಿದ್ದಳು. ಬೆಳಗ್ಗೆ ನದಿದಂಡೆಯಲ್ಲಿ; ರಾಮುವಿಗೆ ಉದ್ಯೋಗ ಪ್ರಾಪ್ತವಾಗಿರುವ ಸಂಗತಿ ಸೀತೆಗೆ ತಿಳಿಯಿತು. ಜಾನಕಿಯನ್ನು ಬೀಳ್ಕೊಡಲು, ಅಂದೇ ಸಂಜೆ ಅವಳ ಮನೆಗೆ ಬಂದಳು. ತರುಣ ಹೃದಯಗಳ, ಪ್ರೀತಿಯಿಂದ ಕಲೆತಲ್ಲಿ, ಅತ್ತೆಯಂದಿರು ಹೊಟ್ಟೆಕಿಚ್ಚು ಪಡುವದಿದೆ. ಅದರಲ್ಲೂ ಜಾನಕಿಯ ಮೇಲೆ ತಪ್ಪಭಿಪ್ರಾಯ, ಅಲ್ಲದೆ ಅವಳ ಜಾತಿಯ ಮೇಲೆ ಸಂದೇಹವಿದ್ದ, ಸೀತೆಯ ಅತ್ತೆ ಅವರ ಒಡನಾಟವನ್ನು ಹೇಗೆ ಸಹಿಸಿಕೊಂಡಾಳು? ಸೀತೆಯು ಅಲ್ಲಿಗೆ ಬಂದ ಸಮಯ ಬಿಡುವಿನ ಹಾಗೂ ನಿರ್ಬಂಧವಿಲ್ಲದ ಒಳ್ಳೆಯ ಸಮಯವಿತ್ತು. ರಾಮು ತೋಟದತ್ತ ಹೋಗಿದ್ದನು. ಮೀನಾಕ್ಷಿಯು ನದಿಯತ್ತ ಹೋಗಿದ್ದಳು. ಜಾನಕಿ ಒಬ್ಬಂಟಿಗಳಾಗಿದ್ದಳು.

"ಜಾನಕಿ, ನನಗಾಗಿರುವ ನಷ್ಟ ಅಪಾರವಿದೆ. ನಿನ್ನ ಮೇಲೆ ನನಗೆ ಸಹೋದರಿಯ ವಾತ್ಸಲ್ಯವಿದೆ."

"ನನಗೂ ಹಾಗೆಯೇ ಕಣೇ ಸೀತಾ, ನಾವಿಬ್ಬರೂ ಅದರ ಅನುಭವ ಪಡುತ್ತಿದ್ದೇವೆ. ಅವರು ಇದೀಗ ಹೇಳುತ್ತಿದ್ದರು — ನಾವಿಲ್ಲಿಂದ ಹೋದ ಮೇಲೆ ಇಬ್ಬರಲ್ಲದೆ ಬೇರೆ ಯಾರೂ ದುಃಖಪಡಲಿಕ್ಕಿಲ್ಲ; ಸೀತೆ ಮತ್ತು ಮುರುಗರೇ ಆ ಇಬ್ಬರು."

"ಹೌದು. ರಾಮು ಕರುಣಾಳು ಹಾಗೂ ಕುಲೀನರಿದ್ದಾರೆ." ಸ್ವಲ್ಪ ಬಣ್ಣ ಕೊಟ್ಟು ಸೀತೆ ಹೇಳಲಾರಂಭಿಸಿದಳು. ಹಾಗೆ ಹೇಳುತ್ತ ಇದ್ದಂತೆ, ಜಾನಕಿಯ ಬಲಗೈಯನ್ನು ತನ್ನ ಕೈಯಲ್ಲಿ ಹಾಕಿಕೊಂಡಳು "ನಾನು ಹೃತ್ಪೂರ್ವಕವಾಗಿ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಅದು ಅಲ್ಪವಿದೆ. ಒಂದು ವಿಷಯವನ್ನು ಕೆಲ ದಿನಗಳಿಂದ ನಿನ್ನ ಹತ್ತಿರ ಹೇಳಬೇಕೆಂತಿದ್ದೆ. ನಿಮ್ಮ ಅಭಿವೃದ್ಧಿಗಾಗಿ ನಾನು ಕೆರೆಯ ಬಳಿ ಹಾಗೂ ದೇವಸ್ಥಾನದಲ್ಲಿ ಪ್ರಾರ್ಥಿಸುತ್ತೇವೆ. ರಾಮುವಿನ ಉತ್ತಮ ಬುದ್ಧಿವಾದಗಳಿಂದಾಗಿ ನನ್ನ ಅವರ ಹೃದಯ ಬದಲಾಗಿದೆ. ಅವರು ಮನೆಗೆ ಬಂದಿದ್ದಾರೆ. ಮದುವೆಯಾದಂದಿನಿಂದಲೂ ಒಂದು ಸಿಹಿ ಮಾತನ್ನಾಡದೇ ಇದ್ದವರು ಈಗ ಬಹಳ ಪ್ರೀತಿಯಿಂದ ಇದ್ದಾರೆ. ಇದಕ್ಕೆಲ್ಲ ನಿನ್ನ ಪತಿಯೇ ಕಾರಣ ಕಣೇ. ನೀವು ನನಗೆ ಪುನಃ ಗಂಡನನ್ನು ದಯಪಾಲಿಸಿದ ಹಾಗೆ ಆಗಿದೆ. ನಮ್ಮ ಜಾತಿಯವರು ಸುಮ್ಮನಿರುತ್ತಿದ್ದಲ್ಲಿ ಮಾತುಗಳಿಂದಲ್ಲ, ನಿಜವಾಗಿ ನಿನ್ನ ಗಂಡನೆದುರು ಅಡ್ಡಬಿದ್ದು, ಕಾಲು ಹಿಡಿಯುತ್ತಿದ್ದೆ. ಈಗ ನಿನ್ನ ಮುಖಾಂತರ ಹಾರ್ದಿಕ ವಂದನೆಗಳನ್ನು ತಿಳಿಸಬೇಕಾಗಿದೆ."

ಸೀತೆಯು ವಾಕ್ ಪ್ರವಾಹವನ್ನೇ ಹಂಸಿ ಬಿಟ್ಟಳು.

"ಈಗ ಬೇಕಾದರೂ ನೀನು ಹಾಗೆ ಮಾಡಬಹುದಲ್ಲೇನೇ, ಸೀತಾ. ಪದ್ಧತಿ ಹಾಗೂ ನನ್ನ ಮನೋಭಿಪ್ರಾಯಕ್ಕಾಗಿ ನೀನು ಸುಮ್ಮನಾಗಬೇಕಾಗಿಲ್ಲ, ಕಣೇ. ಅತ್ತ ನಾನು ಕಿಂಚಿತ್ತೂ ಗಮನ ಕೊಡುವದಿಲ್ಲ. ನಾನು ಹೊಟ್ಟೆಕಿಚ್ಚುಪಡುವದೂ ಇಲ್ಲ. ನೀನು ಪವಿತ್ರಳು ಹಾಗೂ ನಿಷ್ಕಪಟಿ ಎಂಬುದು ನನಗೆ ಗೊತ್ತು. ನೀನು ಹಾಗೆ ಮಾಡಿದಲ್ಲಿ ನನಗೆ ಉತ್ಸಾಹವನ್ನು ಕೊಟ್ಟೀತು. ಅವರೂ ನಿನ್ನ ಕುರಿತೇನೂ ಕಡಿಮೆ ಮಾತಾಡುವದಿಲ್ಲ." ಜಾನಕಿಯು ನಿಷ್ಕಪಟತೆಯಿಂದ ಹಾಗೂ ನಯವಾಗಿ ಹೇಳಿದಳು.

ಆ ಮಾತುಗಳು ಸೀತೆಯ ಸಂತೋಷವನ್ನು ಹೆಚ್ಚಿಸಬಲ್ಲುವು ಎಂದು ಆಕೆಗೆ ಗೊತ್ತು. ಹಾಗೆ ಮುಗುಳ್ನಗೆ ನಗುತ್ತ ಸೀತೆಯು ಕೋಮಲ ಕರವನ್ನು ಮೃದುವಾಗಿ ಒತ್ತಿದಳು. ಆ ಮಾತುಗಳು ಜಾನಕಿಯ ಬಾಯಿಯಿಂದ ಬರಬಹುದೆಂದು ಸೀತೆ ಭಾವಿಸಿಕೊಂಡಿರಲಿಲ್ಲ. ಅದವಳ ಹೃದಯ ಬಡಿತವನ್ನು ಹೆಚ್ಚಿಸಿತು. ಆ ರೀತಿಯ ಸಹೋದರಿ ಸ್ನೇಹ ಆಕೆಗೆ ಆಶ್ಚರ್ಯವನ್ನುಂಟು ಮಾಡಿತು. ಗಾಬರಿಯಿಂದ ಅವಳು ನಾಚಿದಳು. ಮಾತುಗಳು ಗಂಟಲಿಂದ ಹೊರಗೆ ಬಾರದೆ ಹೋದುವು. ಕನಸಿನ ಸಂತೋಷದಿಂದ ಅವಳ ಮನಸ್ಸು ಸದ್ದೆ ಮಾಡಿತು.

ತೆಂಗಿನ ತೋಟವು ನದಿ ದಡದಿಂದ ಸ್ವಲ್ಪ ಎತ್ತರ ಪ್ರದೇಶದಲ್ಲಿ ಇದ್ದುದರಿಂದ ನೆರೆಗೆ ಅದರ ಮೇಲೆ ಬಲಪ್ರಯೋಗ ಮಾಡಲಿಕ್ಕೆ ಆಗಿರಲಿಲ್ಲ. ಉತ್ಸಾಹಿಗಳತ್ತ ಅದು ತಲೆ ಎತ್ತಿ ನೋಡುತ್ತಿತ್ತು. ಜಲ
ಪ್ರಳಯಕ್ಕದು ಹೊಸತಾಗಿ ಕಾಣ
ತ್ತು; 'ನನ್ನನ್ನು ಆಪಾದಿಸಬೇಡ,
ಗ, ಮಳೆಯ ಮೇಲೆ ಆರೋಪ ಹೊರಿ
ಕೆಲಕಾಲ ನಾನು ಬಲವಾಗಿ ನಿಂತ
ನಿಸರ್ಗ ಮತ್ತು ನರರೊಂದಿಗೆ ಹೋ
ಲಿಕ್ಕೆ ನನ್ನಿಂದ ಸಾಧ್ಯವಿಲ್ಲ. ನಾ
ಮೂರು ಹೊಟ್ಟೆಗಳನ್ನು ಕಾಪಾಡ
ಕು. ಒಂದು ವರ್ಷ ಬೆಳೆಯು ಸೋ
ದರೆ ಮೂರು ವರ್ಷ ತಲೆ ಎತ್ತಲಿಕ್ಕೆ
ಎಂದು ನೀನೇ ಹೇಳುತ್ತಿದ್ದಿ." ರಾ
ಮುರುಗನ ಬಳಿ ಬುದ್ಧಿಯ ಗಂಟನ್ನು
ಚ್ಚಿದನು.

"ನೀರಿನ ಅಭಾವದಿಂದ ಬೆ
ವಾಗುತ್ತಿದ್ದಲ್ಲಿ ಮಾತ್ರ ಹಾಗೆ ಹೇಳ
ದು ಸ್ವಾಮಿ. ಇಲ್ಲಿ ಪ್ರಬಲ ಪ್ರ
ವಾ, ಉತ್ತಮ ಸ ರವಿರುವ ಮಣ್ಣಿ
ಲ ದಪ್ಪ ಕೆಸರನ್ನು ಭೂಮಿಯ ನ
ಬಿಟ್ಟು ಹೋದೆ. ಹಾಳು ಮಾಡಿದ
ಮಿಯನ್ನು ಭರ್ತಿ ಮಾಡುವದು ನೀ
ದ ಅಭ್ಯಾಸ. ಇದು ದೇವ ಪಲ್ಲಟಿಸಿ
ದಿರುವ ಆಶೀರ್ವಾದ. ಬರುವ ಕೊ
ನಲ್ಲಿ ನಾವು ಎರಡರಷ್ಟು ಫಲವನ್ನು
ಯಬಹುದು. ಈಗಲೇ ನಾವು ಉಳ
ಆರಂಭಿಸಬೇಕು. ಕೊನೆಯ ಪಕ್ಕ
ವಾದರೂ ಬೀಜವನ್ನು ನಾನು ಸಂಗ್ರ
ಹಿಸುತ್ತೇನೆ. ಐದು ತಿಂಗಳೊಳಗೆ ಎಲ್ಲ
ಸರಿಯಾಗಿ ಬಿಡುತ್ತದೆ. ನಾವು, ಕಷ್ಟ
ಅನುಭವ ಪಡೆದಿರುವ ರೈತರು ಪ್ರವಾ
ಗಳಿಗೆ ಭಯಪಡುವದಿಲ್ಲ.
ಮ್ಮ ಸ್ತ್ರೀಯರು ಕೂಡಾ ಅದ
ಹೆದರುವದಿಲ್ಲ. ಸ್ವಾಮಿ,
ವಿಟ್ಟು, ನೀವು ಇಲ್ಲೇ ಇರಬೇಕು.
ತೋಪಿನಲ್ಲಿ ಕಷ್ಟಪಟ್ಟು ನಾನು ದು
ಯುತ್ತೇನೆ. ತೆಂಗಿನ ಮರವು ಕಲ್ಪವೃ
ವೆಂಬುದು ನನಗೆ ಗೊತ್ತಿದೆ. ಪ್ರಾಮಾ
ಕ ಶ್ರಮಿಕನ ಮನೆಯ ಒಲೆಯಲ್ಲಿ
ಆರದಂತೆ ಅದು ನೋಡಿಕೊಳ್ಳುತ್ತ
ಮನುಷ್ಯಂಗೆ ಅದು ದೇವರಿತ್ತಿರುವ
ಪೂರ್ವ ಕಾಣಿಕೆ."

"ಅದು ಹೇಗೆ ಸಾಧ್ಯ ಮುರುಗ?
ವು ಬೀಜದ ಭತ್ತ, ಆಹಾರದ ಭತ್ತ
ನ್ನು ಹಣಕೊಟ್ಟು ಪಡೆದುಕೊಳ್ಳಬೇ
ಕೆಲಸಗಾರರಿಗೆ ಸಂಬಳ ಸಲ್ಲಿಸುತ್ತಿರ
ಕು. ಸರಕಾರಕ್ಕೆ ತೆರಿಗೆಯನ್ನು ತೆರ
ಕು; ಅದನ್ನು ಕಮ್ಮಿ ಮಾಡಲು ಸಾ
ಇರುವದಿಲ್ಲ. ಪ್ರವಾಹವೇ ಬರಲಿ,
ಬೇ ಹೊಡೆಯಲಿ, ಸರಕಾರದ ಹಣ
ವನ್ನು — ರಾವಣನ ಹೊಟ್ಟೆಯನ್ನು ತ
ಬಿಸಲೇ ಬೇಕು! ಸಾಲದ ಬಡ್ಡಿಯನ್ನ
ಪಾವತಿ ಮಾಡಬೇಕು. ಮೂರು ಹೊಟ್ಟೆ
ಗಳನ್ನು ತುಂಬಿಸಬೇಕು. ಅಲ್ಲದೆ ನಿನ
ಪೊನ್ನಿಗೆ ಹಾಗೂ ಮಕ್ಕಳಿಗೆ ಏನನ್ನಾ
ರೂ ಕೊಡಬೇಕು. ಈ ಚಿಕ್ಕ ತೋಟ
ಆ ದೊಡ್ಡ ಹೊರೆಯನ್ನು ಹೊರಲಾ
ದು. ನನ್ನ ಮೇಲಿನ ಮಮತೆಯಿಂದ
ಕುತ್ತಿಗೆಗೆ ನೇಣು ಹಾಕಿಕೊಳ್ಳಬೇಡ.
ನನ್ನನ್ನು ಕಾಣದೆ, ನಿಜ ಸಂಗತಿಗಳ ಕ
ಡೆ ಆಲೋಚಿಸು."

"ಮುರುಗನ ಮಾತುಗಳು ಬರ
ವಾತುಗಳವೆ. ಸ್ವಾಮಿಯು ಅವುಗಳ
ನಂಬದಿರಬಹುದು. ಎತ್ತಿಗೆ ಗದ್ದೆಗೆ
ಗುವ ಹಾಗೂ ಕಟ್ಟಿಗೆ ಹಿಂದಕ್ಕೆ ಬರ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | $5\frac{1}{2}$ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | $6\frac{1}{2}$ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | $6\frac{3}{4}$ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... .... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | $7\frac{1}{4}$ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | $7\frac{3}{4}$ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | ... ... | 4 |

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

### ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

**ಚಂದಾದಾರರಿಗೆ—**

ಚಂದಾಹಣವನ್ನಾಗಲೀ ಜಾಹೀರಾತಿನ ಹಣಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಜೆಮಿನಿ—5ರ ಗಗನಯಾತ್ರಿಗಳಾದ ಗೋರ್ಡನ್ ಕೂಪರ್ (ಎಡ) ಮತ್ತು ಚಾರ್ಲ್ಸ್ ಕೊನ್‌ರಾಡ್.

# ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೧೫ | ೧೬—೧೨—೧೯೬೫ | No. 15

## ಕೈಕುಲುಕುವಾಗ ಎಚ್ಚರ

ಪಾಕ್ ವಿದೇಶ ಮಂತ್ರಿ ಜಡ್. ಎ. ಭುಟ್ಟೋ ಅವರು ಮಾಸ್ಕೋವಿಗೆ ತೆರಳಿ ಅಲ್ಲಿ ತಾಷ್ಕೆಂಟ್ ಮಾತುಕತೆಗಳಿಗೆ ತಮ್ಮ ರಾಷ್ಟ್ರದ ಸಂಪೂರ್ಣ ಒಪ್ಪಿಗೆಯನ್ನು ನೀಡಿ ಮರಳಿದರು. ಇದೇ ಮಾತುಕತೆಯ ಮೊದಲ ಪ್ರಸ್ತಾಪ ಬಂದಾಗ ಅದನ್ನು ಅಧ್ಯಕ್ಷ ಅಯ್ಯೂಬಖಾನರು ಗಾವುದ ದೂರವಿಸಿದ್ದರೆಂಬುದನ್ನು ಅವಲೋಕಿಸುವಾಗ ಪಾಕ್ ನಾಯಕರ ಈ ಕೃತಿ ದಿಟ್ಟತನದ್ದೆಂದೂ, ಬಹಿರಂಗದಲ್ಲಿ ಶಿಷ್ಟಾಚಾರವನ್ನು ಪ್ರಕಟಿಸಿ ಅಂತರಂಗದಲ್ಲಿ ಪಿತೂರಿಯಾಡುವ ಸಾಧನವೆಂದೂ ಯಾರಾದರೂ ತಿಳಿಯಬಹುದು. ಸೋವಿಯತ್-ಭಾರತಗಳ ಸ್ನೇಹವು ಬಲವಾಗಿ ಬೇರು ಬಿಟ್ಟಿವೆ; ಭಾರತದ ರಾಷ್ಟ್ರೀಯ ನೀತಿಯನ್ನು ಅಕ್ಷರಶಃ ಅರಿತುಕೊಂಡ ಕೆಲವೇ ಬೆರಳೆಣಿಕೆಯ ರಾಷ್ಟ್ರಗಳಲ್ಲಿ ಸೋವಿಯತ್ತು ಒಂದು—ಈ ವಿಚಾರಗಳು ಜಗಜ್ಜನಿತವಿವೆ. ಪ್ರಾಯಃ ಈ ಕಾರಣದಿಂದಲೇ ರಶ್ಯನ್ ಸಲಹೆಯು ಮೊದಲಿಗೆ ಅಯ್ಯೂಬರ ಕಸದ ಬುಟ್ಟಿ ಕಂಡಿರಬಹುದು. ಅಂತಾರಾಷ್ಟ್ರೀಯವಾಗಿ ಭಾರತವು ಉತ್ಥಾನ ಪಡೆಯುತ್ತಿರುವುದನ್ನು ಕಂಡು ಈರ್ಷ್ಯೆ ಪ್ರೇರಿತ ಪಾಕಿಸ್ತಾನವು ಶಸ್ತ್ರಬಲ ಹಿಡಿಯುವವರನ್ನು ಎಲ್ಲೆಲ್ಲಿಯೋ ಅರಸಿ ಕೊನೆಗೆ ನಿರಾಶೆಯಿಂದಲೇ ತಾಷ್ಕೆಂಟಿನತ್ತ ನೋಡಬೇಕಾಯಿತು. ಪ್ರಧಾನಿ ಶಾಸ್ತ್ರಿಯವರು ಈ ಮಾತುಕತೆಗೆ ಒಪ್ಪದೆ ಹೋದರೆ, ತಾನು ಶಾಂತಿಪ್ರಿಯನೆಂದು ಲೋಕದ ಮುಂದೆ ಡಂಗುರ ಸಾರುವ ಸುಯೋಗ ಒದಗೀತೆಂದು ಅಯೂಬರ ಕನಸು ಕಾಣುತ್ತಿತ್ತು; ಆದರೆ, ಅದು ಕನಸಾಗಿಯೇ ಉಳಿಯಿತು. ಶಾಸ್ತ್ರೀಜಿಯವರು ರಶ್ಯನ್ ಸಲಹೆ ಬಂದ ದಿನವೇ ತನ್ನ ಒಪ್ಪಿಗೆಯನ್ನು ಸೂಚಿಸಿದ್ದರು. ಅದನ್ನು ತಳ್ಳಿದವರು ಅಥವಾ ಅದಕ್ಕೆ ಕಿವಿಗೊಡದವರು ಅಯ್ಯೂಬಖಾನ್; ಆದರೆ, ಕಾಲ ಬದಲಿಸಿತು. ತಾಷ್ಕೆಂಟ್‌ನಲ್ಲಿ ಅಯ್ಯೂಬ—ಶಾಸ್ತ್ರಿ ಭೆಟ್ಟಿ ಮತ್ತು ಪರಸ್ಪರ ಮಾತುಕತೆಗಳು ಜನವರಿ ನಾಲ್ಕನೆ ತಾರೀಕಿನಿಂದ ಆರಂಭವಾಗುವುದೆಂದೀಗ ಪ್ರಕಟವಾಗಿದೆ. ಇವು ಸಫಲವಾಗುವ ವಿಷಯದಲ್ಲಿ ಭಾರತಕ್ಕಿಂತಲೂ ಪಾಕಿಸ್ತಾನಕ್ಕೆ ವಿಶ್ವಾಸ ಕಡಿಮೆ.

ಮಾತುಕತೆಗೆ ಮೊದಲು ಸೂಕ್ತ ವಾತಾವರಣವನ್ನು ನಿರ್ಮಿಸಲು ಸಂಪೂರ್ಣ ಸಮರ ವಿರಾಮವನ್ನು ಅಯ್ಯೂಬಖಾನರು ಸ್ಥಾಪಿಸಬೇಕೆಂದು ಶಾಸ್ತ್ರಿ ಮೊದಲೇ ಸೂಚಿಸಿದ್ದಾರೆ. ಸೋವಿಯತ್ ನಾಯಕರೂ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಅಯ್ಯೂಬಖಾನ್ ಒಪ್ಪಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಮಾತುಕತೆಗೆ ಒಪ್ಪಿದ ಅವರು ಅದರ ಪೂರ್ವಭಾವಿ ಆವಶ್ಯಕತೆಯನ್ನು ಪೂರೈಸುವುದು ಅತ್ಯಗತ್ಯವೆನ್ನದೆ ಗತ್ಯಂತರವಿಲ್ಲ. ಆದರೆ ಸನ್ನಿವೇಶ ಮಾತ್ರ ಹೀಗಿರುವುದಲ್ಲದುದು ಶೋಚನೀಯ. ಮೊದಲು ಪಾಕ್ ಆಕ್ರಮಣವು ಮತ್ತೂ ಮುಂದುವರಿಯುತ್ತಿರುವುದು ವರದಿಯಾಗಿದೆ. ಅಯ್ಯೂಬಖಾನರು ತಮ್ಮ ಭುಟ್ಟೋ ಮಂತ್ರಿ ತರದೊಡನೆ ವಾಶಿಂಗ್‌ಟನ್ ಯಾತ್ರೆಗೆ ಹೊರಟ ವೇಳೆಯಲ್ಲೇ ಅತಿಕ್ರಮಣ ನಡೆದುದು ಸೋಜಿಗವನ್ನುಂಟು ಮಾಡುತ್ತದೆ. ತಾಷ್ಕೆಂಟ್ ಮಾತುಕತೆಯಲ್ಲಿ ತಾನು ಯಾವ ನೀತಿಯನ್ನು ತಳೆದರೆ ಸೇಗಾದೀತು ಎಂಬುದರ ಕುರಿತೂ ಅಯ್ಯೂಬರು ಜಾನ್ಸನ್ನರೊಂದಿಗೆ ಪರ್ಯಾಲೋಚಿಸಬಹುದು. ತನಗೆ ಸೈನಿಕ ನೆರವನ್ನು ನೀಡುವಂತೆ ಮತ್ತೆ ಮನವೊಲಿಸುವ ಪ್ರಯತ್ನ ಮಾಡಬಹುದು. ಕಾಶ್ಮೀರವನ್ನು ತನಗೆ ಕೊಡಿಸುವಲ್ಲಿ ಅಮೆರಿಕೆಯ ಸಂಪೂರ್ಣ ಸಹಾಯವನ್ನು ಯಾಚಿಸಬಹುದು; ಇವೆಲ್ಲವುಗಳ ಬಗ್ಗೆ ಅಮೆರಿಕೆಯ ನೀತಿಯು ಇನ್ನೂ ಅಸ್ಪಷ್ಟವಾಗಿದೆ. ಕಾಶ್ಮೀರದ ವಿವಾದದಲ್ಲಿ ತಾನು ಮಧ್ಯೆ ಪ್ರವೇಶಿಸುವುದರಿಂದ ಭಾರತದಂತಹ ವಿಶಾಲ ಪ್ರಜಾಪ್ರಭುತ್ವದಲ್ಲಿ ತನ್ಮೂಲಕ ಆಗ್ನೇಯ ಏಶ್ಯಾದಲ್ಲಿ ಅಪ್ರಿಯವಾದರೂ ಆಗಬಹುದೆಂಬ ಅಂಜಿಕೆ ಅವರಲ್ಲಿ ಈಗ ಸರಿಯಾಗಿ ಮೂಡಿದೆ. ಈ ಕಾರಣದಿಂದಲೇ ಇತ್ತೀಚೆಗೆ ಅವರು ಒಂದು ಘೋಷಣೆಯನ್ನು ಹೊರಡಿಸಿ ಒಂದೂವರೆ ಮಿಲಿಯ ಟನ್ ಗೋಧಿ ಮತ್ತು ೨೪ ಕೋಟಿ ರೂಪಾಯಿಗಳ ಸಾಲಗಳನ್ನು ಭಾರತಕ್ಕೆ ನೀಡಿದ್ದಾರೆ. ದೀರ್ಘಾವಧಿಯ ಆಹಾರಧಾನ್ಯ ಪೂರೈಕೆಯ ವಿಷಯದಲ್ಲಿ ಒಡಂಬಡಿಕೆ ಸಾಧ್ಯವಿರಲು ಅವರೀಗ ಉತ್ಸುಕರಾಗಿದ್ದಾರೆಂದು ತಿಳಿಯುತ್ತದೆ. ಹಾಗಿರುವಾಗ, ಜಾನ್ಸನ್ನರಿಂದ ಅಯ್ಯೂಬರು ಹೆಚ್ಚಿನ ಭರವಸೆ ಪಡೆದು ಮರಳುವ ಸಂದರ್ಭ ಬಹಳ ಕಡಿಮೆ. ತಾಷ್ಕೆಂಟ್ ಮಾತುಕತೆಯಲ್ಲಿ ಕಾಶ್ಮೀರದ ವಿಷಯದ ಯಾವ ಮಾತಿಗೂ ಅವಕಾಶ ದೊರೆಯದು ಎಂದು ಶಾಸ್ತ್ರಿಯವರು ಸಾರಿದ್ದಾರೆ. ರಶ್ಯವಾದರೂ ಇದನ್ನು ಸಮ್ಮತಿಸುವುದು, ಖಂಡಿತ. ಪರಿಸ್ಥಿತಿ ಹೀಗಿರುವಾಗ ತಾಷ್ಕೆಂಟ್ ಮಾತುಕತೆಗಳು ಪಾಕ್ ಬಯಸುವ ರೀತಿಯಲ್ಲಿ ಮುಂದುವರಿಯುವ ಲಕ್ಷಣಗಳು ಬಹಳ ಕಡಿಮೆಯೆಂದೇ ಹೇಳಬೇಕು: ಹೀಗಂದಲ್ಲಿ ಚೆಕೆಸ್ಲೊವಾಕಿಯಾದ ಕರೆಗೂ ವಿಶೇಷ ಬೆಲೆಯಿಲ್ಲವಾಗುವುದು. ಮತ್ತೆ ಇರುವುದು ಒಂದೇ ವಿಧಾನ.

ಇತ್ತ ನೇಫಾದಲ್ಲಿಯೂ ಚೀನೀಯರ ಕೀಟಲೆ ಹೆಚ್ಚತೊಡಗಿದೆ. ಆಗ—ಈಗ ಅನ್ಯಾಯವಾಗಿ ನಮ್ಮ ಅಂತರಾಷ್ಟ್ರೀಯ ಗಡಿಯನ್ನು ಚೀನೀ ಸೈನಿಕರು ಉಲ್ಲಂಘಿಸುತ್ತಿದ್ದಾರೆ. ನ್ಯಾಯ—ಧರ್ಮಗಳನ್ನು ಗಾಳಿಗೆ ತೂರಿದ ಕೆಂಪು ಚೀನಾದ ಭೀತಿ ನಮ್ಮಿಂದ ದೂರವಾಗುವಂತಿಲ್ಲ. ಆದುದರಿಂದ ಇಂದು ನಮ್ಮ ನೀತಿಯೊಂದೇ- ದೇಶರಕ್ಷಣೆ. ಸಮರ ವಿರಾಮವನ್ನು ಪರಿಪೂರ್ಣವಾಗಿ ಪಾಲಿಸದೆ ಹೋದರೆ, ಅಯ್ಯೂಬರೊಡನೆ ನಿಶ್ಚಿತವಾದ ತನ್ನ ಭೆಟ್ಟಿಯನ್ನೂ ಶಾಸ್ತ್ರಿಯವರು ನಿಲ್ಲಿಸಬೇಕಾಗಿ ಬರಬಹುದು. ಚೀನೀಯ ದಾಳಿಯನ್ನೂ ಎದುರಿಸಲು ಸಮಗ್ರ ಭಾರತವೇ ಸನ್ನದ್ಧವಾಗಬೇಕು. ಮಾತೃಭೂಮಿಯ ಮೇಲಾಗುವ ಅತ್ಯಾಚಾರಗಳನ್ನು ಕಂಡೂ ಆತತಾಯಿಯ ಕೈಕುಲುಕುವ ಸಾಹಸವನ್ನು ಭಾರತೀಯ ಮಾಡಬಾರದು; ಮಾಡಲಾರನು.

> **ವಚನಸುಧೆ**
>
> ಪಡ್ಮಾನಾತ್ಮನಿ ನಿತ್ಯಾನಾ
> ವೈಶ್ವರ್ಯ ಯೋಧಿಗಚ್ಛತಿ
> ನ ಸ ಪಾಪೈಃ ಕುತೋನರ್ಥೈ
> ರ್ಯುಜ್ಯತೇ ವಿಜಿತೇಂದ್ರಿಯಃ ॥
>
> ಕಾಮ, ಕ್ರೋಧ, ಲೋಭ, ಮದ ಮೋಹ ಮತ್ತು ಮಾತ್ಸರ್ಯಗಳು ಮನಸ್ಸಿನಲ್ಲಿ ಸದಾ ಇರುತ್ತವೆ. ಇವನ್ನು ವಶದಲ್ಲಿರಿಸಿಕೊಳ್ಳುವವನು ಜಿತೇಂದ್ರಿಯನೆನಿಸುವನು. ಸಂಯಮಿಯಾದವನು ಇವುಗಳ ಕೀಟಲೆಗಳಿಗೆ ಎಂದಿಗೂ ಒಳಗಾಗುವುದಿಲ್ಲ. ಅವನೇ ಯಶಸ್ವೀಲನು.

## ಇಬ್ಬಾಯಿ ಕತ್ತರಿ

ಮಳೆಯಿಲ್ಲ; ನೀರಿಲ್ಲ ಎಂದು ಜನ ಗೋಳಾಡುತ್ತಿದ್ದಾಗ, ಅನಾವೃಷ್ಟಿಯಿಂದ ಅಕಾಲ ಸಂಭವಿಸಿದಾಗ, ಕೆಲವೆಡೆ ಮಳೆ ಬಂದು ನೀರೇ ನೀರಾದ ಸಂಗತಿ ಸಂತೋಷಕರ. ಆದರೆ, ಇದರೊಂದಿಗೆ ಬಿರುಗಾಳಿಯೂ ಬೀಸಿ ಮತ್ತಷ್ಟು ಅಂಜಿಕೆಗೆ ಕಾರಣವಾಗಿದೆ. ಬಿರುಗಾಳಿಯ ದೆಸೆಯಿಂದ ತೊಂದರೆಗೀಡಾದವರು ವಿತ್ತ ಜೀವಿಗಳಿಗೆ ಎರವಾದವರು ತುಂಬ ಮಂದಿ. ಬಂಗಾಲದಲ್ಲಿ ಅಧಿಕ ಮಾಸವೆಂಬಂತೆ, ವೃಷ್ಟಿಯೂ ಗಾಳಿಯೂ ಅತಿಯಾದುದರ ಪರಿಣಾಮವಾಗಿ ನಾಟಿದ ಬೆಳೆಗಳಿಗೂ ಅಂತಕವಾದುದು ಶೋಚನೀಯ. ಅಭಾವ ಪರಿಸ್ಥಿತಿ, ಜತೆಗೆ ಪ್ರಕೃತಿಯ ವಿಕೋಪ—ಹೀಗೆ ಇಬ್ಬಾಯಿಯ ಕತ್ತರಿಯಲ್ಲಿ ನವೆಯುತ್ತಿರುವ ಜನತೆ ನಿಜಕ್ಕೂ ಗೋಳಿನ ಬದುಕನ್ನೇ ಬದುಕಬೇಕಾಗುತ್ತದೆಯೋ ಏನೋ! ವಿಶಾಲ ದೇಶದಲ್ಲಿ ಈ ಬಗೆಯ ವೈಪರೀತ್ಯಗಳು ಸಹಜವೆಂದು ಒಪ್ಪಬಹುದಾದರೂ

(ಹದಿನಾಲ್ಕನೇ ಪುಟ ನೋಡಿರಿ)

## ನರಸಣ್ಣನ ಸರಸ

'ಋತು ಪರಿವರ್ತನೆಯಾಗಲೀಂತ ವಿಶಾಧ್ಯಕ್ಷರು ಅರ್ಜಿಸನ್ನು ಹೊರಡಿಸಿರಬೇಕು; ಅದಕ್ಕೇ ಚಳಿಗಾಲದಲ್ಲೂ ಮಳೆಗಾಳಿ ಬರುತ್ತಾ ಇದೆ....'

ಗೇಹರಾಜ್ಯದಲ್ಲಿ

# ಆಶಾವಾದವೇ ಮಧುಸ್ವಪ್ನ

"ಅಯ್ಯೋ, ಇದೇನಿದೂಂದ್ರೆ..."

"ಹುಹುಹು...ಛಳಿ ಆಗುತ್ತೆ ಛಳಿ...."

"ಅಲ್ರಿ, ಜೋರುಗಟ್ಟಿ ಸುರಿಯುತ್ತಿರೋ ಮಳೆಯಲ್ಲಿ ನನೆದುಕೊಂಡು ಬಂದ್ರೆ ಛಳಿಯಾಗದೆ ಮತ್ತೇನಾಗುತ್ತೆ? ಅದ್ರ ಮೇಲೆ ತಂಗಾಳಿ ಜೋರೆ..."

"ತಂಗಾಳಿಯಲ್ವೆ ಇದು ಬಿರುಗಾಳಿ....'

"ಬಿರುಗಾಳಿಯಾದ್ರೂ ಅದು ಬಿಸಿಯಿಲ್ಲ ತಾನೆ?"

"ಸುರುಮಾಡಿದ್ರು ತರ್ಕ ಹೂಡೋಕೆ. ಅಲ್ಲಾ ಮಳೆಯ ನೀರಲ್ಲಿ ಮಿಂದು ಬಂದಿರೋದನ್ನ ಕಂಡೂ ಕಂಡೂ ನನ್ಗೆ ತರ್ಕ ಮಾಡೋಕೆ ಮನಸ್ಸು ಬರುತ್ತಲ್ಲಾ...."

"ನೋಡಿ, ನನ್ನನ್ನ ಸುಂಸುಮ್ನೆ ಯಾಕೆ ಅಂದ್ಕೋತೀರಿ? ಕೊಡೆ ತೆಗೆದುಕೊಂಡು ಹೋಗೀಂತದ್ರೆ ಭಾರವಾಗುತ್ತೇಂತ...."

'ಏ, ನಾಲಿಗೆಯನ್ನ ತುಸು ಬಿಗಿ ಹಿಡೀಬೇಕು".

"ಯಾಕೇಂದೆ?"

"ಯಾಕೇಂದ್ರೆ... ಅದಕ್ಕೇ. ಅಲ್ವೆ, ನಾನು ಮನೆ ಬಿಡುವಾಗ ಮಳೆ ಬರುತ್ತಿರಲಿಲ್ಲ ನೋಡು...."

"ನಿಮ್ದು ಒಳ್ಳೆ ಕತೆಯಾಯ್ತು...?'

"ಯಾಕೆ?'

"ನೋಡಿ, ನಿಮ್ಮ ಹಾಗೇನೇ ಒಬ್ಬ ಇದ್ದನಂತೆ...."

'ಇಲ್ಲಿ ಕಣೇ ಇಲ್ಲಿ. ಯಾರು ಬೇಡಾಂತಾರೆ? ಸದ್ಯ ಒಳಗಿನಿಂದ ಬಟ್ಟೆಯನ್ನಾದ್ರೂ ತಂದುಕೊಡು....ಛಳಿಯಲ್ಲಿ ಹಲ್ಲು ನೋಡು ಕಟಕಟ ಕಡಿಯುತ್ತೆ...."

'ಅಯ್ಯೋ ಪಾಪವೇ! ಪೂರ ಒದ್ದೆಯಾಗಿದ್ದೀರಿ..."

'ಹೌದೇ, ಹಾದು ಪೂರಾ ಒದ್ದೆ, ಚಂಡಿ ಮುದ್ದೆ...'

"ಹಾಗಿರುವಾಗ ಛಳಿಯೇಕ್ರಿ?"

"ಛಳಿಯೇಕೆ? ಅಲ್ವೆ, ನೀರಲ್ಲಿ ಮುಳುಗಿರುವವನಿಗೆ ಛಳಿಯಾಗದೆ ಮನೆಯೊಳಗೆ ಒಲೆ ಮುಂದೆ ಕುಳಿತಿರೋ ನಿನಗೆ ಛಳಿಯಾಗಬೇಕೂಂತೀಯ?"

"ಅಲ್ರಿ, ಇಡಿ ಮುಳುಗಿದವನಿಗೆ ಛಳಿಯೆಲ್ಲಿಂದ? ಅನ್ನಾರೆ ಕೇಳಿ..."

"ಇದ್ಕೇ ಅನ್ನೋದು ಹೆಂಗಸ್ರ ಬುದ್ಧಿ ಮೊಣಕಾಲ ಕೆಳಗೇಂತ...."

"ಹೌದಪ್ಪ ನಮ್ಮ ಬುದ್ಧಿ ಮೊಣಕಾಲ ಕೆಳಗಾದ್ರೂ ಇದೆ, ನಿಮ್ದು ಎಲ್ಲೆಲ್ಲೋ ವಿಹಾರ ಮಾಡುತ್ತ ಇದೆಯಲ್ಲಾ...."

"ಹಾಗೇನಿಲ್ಲ. ನಮ್ಮದು ತಲೆಯೊಳಗೇನೇ ಇರುತ್ತೆ ..."

"ಇರುತ್ತೆ...ಬೂದಿ..."

"ಯಾಕೆ?"

"ಅಲ್ವಾದ್ರೆ, ಮಳೆ ಬರಲಿ ಬಾರದೆ ಇರಲಿ ಕೊಡೆ ತೆಗೆದು ಕೊಂಡು ಹೋದ್ರೆ ಏನಂತೆ ನಷ್ಟ?"

"ನೋಡು ಕಳೆದ ಮಳೆಗಾಲದಲ್ಲಿ ಮೂರು ಕೊಡೆ ಕಳ್ಕೊಂಡದ್ದಕ್ಕೆ ನೀನೇ ಆರ್ಡರ್ ಇತ್ತೆ— ಕೊಡೆ ಕೊಂಡು ಹೋಗಬಾರದೂಂತ..."

"ಮತ್ತೆ ಏನನ್ಬೇಕು? ತಲೆಯೊಳಗೆ ಬುದ್ಧಿಯಿದ್ರೆ ಯಾಕೆ ಕಳಕೊಳ್ಳುತ್ತಿದ್ರಿ?"

"ಅದಕ್ಕಿಂತ ಹೆಂಡ್ತಿ ಮಾತನ್ನ ಯಾಕೆ ಕೇಳ್ತೀರೀಂತಂದಿದ್ರೆ ಒಳ್ಳೆದಿತ್ತು..."

"ಅಲ್ರಿ, ಕೈ ಹಿಡಿದವಳು ಅಂದ್ರೆ ಅಷ್ಟು ಸಸಾರ ಅಲ್ವೆ?"

'ಏ ನೀನೆಲ್ಲಿಯೋ ನನ್ನ ಕೈ ಹಿಡಿದದ್ದು?"

'ಮತ್ತೆ?'

"ನಾನೇ..."

'ಅಗ್ಲಪ್ಪ, ನೀವು ಕೈ ಹಿಡಿಯ ಬಂದಾಗ ನಾನು ಕೈ ಕೊಡದಿದ್ರೆ....'

"ನೀನೆಂತದೇ ಕೊಡೋದು? ನಿನ್ನಪ್ಪ ಅಮ್ಮ ಕೊಡ್ತೇವೇಂತ ಖಾತ್ರಿ ಹೇಳದ ಮೇಲೆ ತಾನೇ ನಾನು ಒಪ್ಪಿದ್ದು?"

"ಅಂದ್ರೆ ಅದ್ಕೆ ಮೊದ್ಲು ನಿಮ್ಗೆ ಧೈರ್ಯ ಇರ್ಲಿಲ್ಲಾನ್ನಿ..."

"ಹಾಗೇನಲ್ಲಾ, ಹಾಗೇನಲ್ಲ. ಅದ್ರೂ.."

"ಏನದು ಆದ್ರೂ..."

"ಅದೆಂತದು? ಏನೂ ಇಲ್ಲನ್ನು.... ಸದ್ಯ ಇನ್ನಾದ್ರೂ ಒಟ್ಟೆ ಬದಲಿಸೋಕೆ...."

'ಪಾಪ.... ಅಯ್ಯೋ ನಿಮ್ಮ ಹಣೆಬರಹವೆ? ಇನ್ನು ನಾಳೆ ಶೀತಗೀತ ಆಗಿ ಬಿಟ್ರೆ ಗತಿ?"

'ಗತಿ... ನೀನೇ ಗತಿ..."

"ನಾನೆಂಥದ್ರಿ?"

"ಮದ್ದು ತರೋಕೆ ಓಡೋಳು ನೀನೇ ತಾನೆ?'

'ಹ್ಞಾಂ.... ಇಗೊಳ್ಳಿ.... ಬೇಗ ಬಟ್ಟೆ ಬದಲಾಯ್ಸಿಕೊಳ್ಳಿ.... ನಿಲ್ರಿ... ತಲೆ ಮೊದ್ಲು ಒರ್ಸಿಕೊಳ್ಳಿ... ಇಲ್ಲಾದ್ರೆ ಬೇಡ... ಇಲ್ಲಿ ಬನ್ನಿ....ನಾನೇ....'

"ಸ್ವಲ್ಪ ಸುಮ್ಮನಿರು ಕಣೇ. ಮೊದ್ಲು ಅಂಗಿ ಬನಿಯನ್ ಕಳಚಿ....ಅಯ್ಯಯ್ಯ ಇದೇನು? ಪೇಸ್ಟ್ ಹಾಕಿ ಅಂಟಿಸಿ ಬಿಟ್ಟಂತಾಗಿದೆ?'

"ಅಯ್ಯೋ.......ಇಲ್ಲಿ ಬನ್ನಿ... ನಾನಾದ್ರೂ ಅಂಟು ಬಿಡಿಸ್ತೇನೆ...ನೀರು ಹೊಯ್ಬೇಕೇನ.?"

"ಛೆ.. ಏನು ಮಾತಾಡ್ತಾ ಇದ್ದೀಯ? ಮೊದ್ಲೇ ಛಳಿಯಿಂದ ಗಡಗಡಾಂತಿದ್ದೇನೆ. ಮೇಲೆ ನೀರು ಹೊಯ್ಯಲೇಂತ ರಾಗ ಎಳೀತೀಯ?"

'ಮತ್ತಿನ್ನೇನು ಮಾಡಬೇಕೂಂತ? ಅಂಟು ಬಿಡಿಸಬೇಕಾದರೆ ನೀರು ಹೊಯ್ಬೇಕು ತಾನೆ?'

"ಸಾಕು ಕಣೇ ಸಾಕು....?"

"ಹ್ಞಾಂ...ಇಲ್ಲಿ ಬನ್ನಿ....ನೋಡಿ.... ಒಂದು ಶರ್ಟ್ ಹಿಂಡಿದ್ರೆ ಕೊಡಪಾನ ನೀರು...ಮುಂಡು...ಮಡ್ವಾದೀತು...' ಅಲ್ರಿ, ಇಷ್ಟೊಂದು ಮಳೆ ಬರುವಾಗ ಬಾರಡೆ ಇದ್ದಿದ್ರೆ ಏನಾಗ್ತಿತ್ತೂಂತ?'

"ಅಯ್ಯೋ, ಅದೆಲ್ಲಾ ನಿನ್ಗೇನು ಗೊತ್ತು? ಮಳೆಯಾದ್ರೂ ಆಗಬಹುದು... ಆ ಗಾಳಿ ಯಾರಿಗೆ ಬೇಕು? ಅದ್ಕೇ ಬೇಗ ಬಂದ್ಬಿಟ್ಟೆ ಕಣೇ..."

"ಇನ್ನು ನೆಗಡಿ—ಜ್ವರಾಂತ ಹೇಳ್ದಿದ್ರೆ ಸರಿ...'

'ಹ್ಹ...ಹ್ಹಹ್ಹ..."

'ಏನಾಯ್ತ್ರಿ? ಯಾಕೆ ನಗ್ತೀರಿ?'

"ಅಲ್ಲಾ, ನಿನ್ನ ಮಾತು ಕೇಳಿ ನಗು ಬರುತ್ತೆ...."

'ಹೌದಪ್ಪ, ನನ್ಮಾತೂಂತ್ರೆ ನಿಮಗೆ ಬರೀ ನಗು....'

'ಅಲ್ವೆ, ಕೇಳು, ಮಳೆ ಬಂತು ಇವತ್ತು. ನಾವು ಬಂತೂಂತಂದ್ರೆ ಮಾತ್ರ ಬಂದ ಹಾಗೆ, ಅನ್ನದೇ ಇದ್ರೆ ಬಾರದಂತಾಗುತ್ತೆ?"

'ಅದು ಹ್ಯಾಗ್ರಿ ಆಗುತ್ತೆ? ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿದ್ರೂ ಹಾಗೇ ತಾನೇ?"

"ಹಾಗೇನೇನೋಡು.... ನೆಗಡಿ ಅದ್ರೆ ಆಗಿಯೇ ಆಗುತ್ತೆ ಅದು ಸತ್ಯ ನಾವಂದ ಮಾತ್ರಕ್ಕೆ ಆಗಿರೋದು ಆಗದೇ ಹೋಗೋದಿಲ್ಲ...."

'ಇನ್ನೂ ಮಾತಿಗೆ ಮಾತು ಹಾರಿಸ್ತಾ ಇದ್ದೀರಲ್ಲಾ, ಬಟ್ಟೆ ಬದಲಾಯಿಸಿ.... ನೋಡಿ, ಈ ಕರಡಿ ತಲೆಯಲ್ಲಿ ನಿಂತಿರೋ ನೀರು ತೆಗೆಯೋಕೆ ನಾಲ್ಕು ಟೈರಾಸು ಬೇಕಾಯ್ತು...'

'ಅಷ್ಟೇನೆಯೇ?'

'ಭಾರೀ ಕಡಿಮೆಯಾಯ್ತು ಅಲ್ವೆ? ಮೊದಲೇ ಒಗೆದ ಬಟ್ಟೆಗಳನ್ನ ಆರಿಸೋಕೆ ಸ್ಥಳವಿಲ್ಲ. ಇನ್ನು ಇವನ್ನೆಲ್ಲಾ ಎಲ್ಲಿ ಹಾಕಲೀಂತ ನನಗ ಚಿಂತೆ...'

"ಹಾದಪ್ಪ, ಪಾಪ, ಎಣ್ಣೆ ಚೆಲ್ಲಿದವನೂ ಅತ್ತ; ನೀರು ಚೆಲ್ಲಿದವನೂ ಅತ್ತ.."

"ನೋಡಿ. ನೀವು ಗಂಡಸ್ರು. ನಿಮಗೆ ಯಾವಾಗ್ಲೂ ಹಾಗೇ. ನಿಮ್ದೇ ದೊಡ್ಡ ಸರ್ವಾತ. ನಾವು ಏನು ಮಾಡಿದ್ರೂ ಅದು ನಿಮ್ಮ ಗಮನಕ್ಕೇ ಬರೋಲ್ಲ..."

'ಯಾಕೆ? ಏನೀಗ ಮಾತಿನ ರಾಗ ಬೇರೆಯಾಯಿತು?'

"ಅಲ್ರಿ, ಬಟ್ಟೆಯಾರಿಸೋ ಚಿಂತೆಯಲ್ಲಿ ನಾನಿದ್ರೆ...."

"ನೋಡಮ್ಮ, ನಮಗೆ ಕಷ್ಟ ಬಂದಾಗ ಬೇರೆಯವ್ರದ್ದನ್ನು ಕಂಡು ನೆನೆದು ಮರೆಯಬೇಕು....'

"ಅದು ಹೇಗೇಂತ?"

'ಹೇಗೆ ಅಂದ್ರೆ, ನೋಡು, ನಮ್ಮಲ್ಲಿ ಬದಲಾಯಿಸೋಕೆ ಬಟ್ಟೆಯಾದ್ರೂ ಇದೆ. ಅದೂ ಇಲ್ಲದವ್ರು ಅದೆಷ್ಟು ಜನ ಇದ್ದಾರೆ?"

"ಹೌದ್ರಿ, ಪಾಪ, ನಮಗೆ ಬೆಚ್ಚನೆಯ ಮನೆಯಾದ್ರೂ...'

'ಬಾಡಿಗೇದ್ದೂಂತ ಸೇರಿಸ್ಕೋ...."

"ಬಾಡಿಗೇದ್ದಾದ್ರೇನಂತೆ? ಬಾಡಿಗೆ ಕೊಡೋ ತನಕ ನಮ್ಮದೇ ತಾನೆ?'

"ಹಾಗನ್ನೋದಕ್ಕೂ ಸಾಧ್ಯವಿಲ್ಲ....'

"ಯಾಕೆ?"

"ನೋಡೆ, ನಮ್ಮ ಕಮಲು ಮನೆ ಮೇಲೆ...."

"ಬಾಡಿಗೆ ಮನೇಂತನ್ನಿ...."

"ಹ್ಞಾಂ...... ಅದೇ ತೆಂಗಿನ ಮರ ಬಿದ್ದು...."

"ಅಯ್ಯೋ, ಏನು ಗತಿ ಇನ್ನು?"

'ಗತಿ! ಆಗಸಗಣ್ಣಿನಿಂದ ನೀರು ಸುರಿಸಿದ್ರೆ ಸರಿ...."

"ಅಲ್ರಿ, ಅವ್ರೆಲ್ಲ ಹೋಗಬೇಕು?"

"ಹೋಗೋದಲ್ಲಿಗೆ? ಮಳೆ ನೀರಿನ್ ಜೊತೆಗೆ ಕಣ್ಣೀರೂ ಸೇರ್ಸಿ ನಡುಗೋದು.... ಮತ್ತೆ ನೋಡು.... ಬರಿ ತಲೆಗೆ ಮರ ಬಿದ್ದು ಒಬ್ಬ ಹುಡುಗ ಕಲಾಸಾದನಂತೆ..."

'ಅಯ್ಯೋ ಪಾಪವೆ? ಎಷ್ಟು ವಯಸ್ಸಂತೆ?"

"ವಯಸ್ಸು ಏನಾದರೇನು? ಸತ್ತದ್ದಂತೂ ಖಂಡಿತ. ಮತ್ತೆ ಕೇಳು, ಒಬ್ಬ ನಮ್ಮ ತೋಡಿನ ಸಂಕದ ಮೇಲೆ ಕೊಡೆ ಬಿಡಿಸಿ ನಡೆಯುತಿದ್ದಾಗ ಗಾಳಿ ಬಂದು ಕೊಡೆ ಹಾರ್ಸಿಕೊಂಡು ಹೋಯ್ತಂತೆ. ಅವನೂ ಕಾಲು ಜಾರಿ..."

"ಅಯ್ಯೋ....'

'ಸಮುದ್ರ ದಂಡೆಯಲ್ಲಿನ ದೋಣಿ ಪಾಂಡಿಗಳಲ್ಲಿ ಹಲವಾರು ನೀರುಪಾಲಾದುವಂತೆ!...."

'ಹ್ಞಾಂ....ನೋಡಿ, ಇವತ್ತು ಒಬ್ಬ ಗುಳ್ಳೆ ಮಾರಿಕೊಂಡು ಬಂದಿದ್ದ..."

"ಈ ಮಳೆಯಲ್ಲಿ?'

'ಹೌದೂಂತೇನೆ....ಪಾಪ, ಅವನ ಹತ್ತಿರವೆಲ್ಲಾ ಗಾಳಿಗೆ ಮಲಗಿ ಬಿಟ್ಟಿದೆಯಂತೆ! ಇನ್ನೇನು ಗತೀಂತ ಅಳ್ತಾನೆ....ಹಾಗೇ ನೋಡಿ, ಗದ್ದೆಯಲ್ಲಿ ಬೆಳೆದ ಧಾನ್ಯದ ಗಿಡಗಳು ಕೊಳೆತು ಹೋದುವು...ತರಕಾರಿ ತೋಟ ನೆಲಸಮವಾಯ್ತು. ಕಂಗು ತಾಳೆಗಳು ಉರುಳಿದುವು. ಮಾವಿನ ಮಿಡಿ ಉದುರಿ ಹೋಯ್ತು ಮೆಣಸು ಗೆಣಸು ಕೆಟ್ಟು ಹೋಯ್ತು..."

'ಇವೆಲ್ಲವುಗಳ ಜೊತೆಗೆ ನಮ್ಮ ಜೀವನಾನೂ ಕೆಟ್ಟು ಹೋಯ್ತು...."

"ಯಾಕೆ?"

"ಅಲ್ವೆ, ಅಭಾವ ಹೆಚ್ಚಿದ್ರೆ ಬರೋ ಮಾಡುಕಾಸ್ನಲ್ಲಿ ದಿನಾ ಹ್ಯಾಗೆ ಕಳೆಯೋದೂಂತ?'

"ಅದು ಹೌದ್ರಿ ..."

"ಅನ್ಬೇ ಅಂದದ್ದು....ನೆಗಡಿ ಜ್ವರ ಬಂದು ಕಣ್ಣಾದ್ರೂ ಮು....'

"ಶ್ಯೂ.. ಎಂಥದ್ರಿ ಇದು ಮಾತು? ಹೀಗೆಲ್ಲ ಪಲಾಯನವಾದಕ್ಕೆ ಶರಣು ಹೋದ್ರೆ . . !?"

"ಮತ್ತೆ ಮಾಡುವುದಾದರೂ ಏನೂಂತ?"

'ಮನುಷ್ಯ ಆಶಾವಾದಿಯಾಗಿರಬೇಕೂಂತ ಉದ್ದುದ್ದ ಲೆಕ್ಚರ್ ಬಿಟ್ಟವ್ರು ನೀವು. ಅನುಪೆ ಮಧುಸ್ವಪ್ನಾಂತ ಡಂಗುರ ಸಾರಿದವ್ರು..."

"ಬಡೋ ಲೆಕ್ಚರ್ ಅವನಿಗೂ ಕೇಳುವವನಿಗೂ ಬಿಟ್ಟು ಉಳಿದವ್ರಿಗೆ ಮಾತ್ರ ತಾನೆ? ...'

'ನೀವೇನೇ ಎನ್ನಿ. ನನಗದು ಸರಿ ಅನ್ನಿಸುತ್ತೆ. ಸುಖದುಃಖಗಳನ್ನು ಸಮಾನವಾಗಿ ಗಣಿಸಬೇಕು....?"

"ಹೌದಪ್ಪ. ಜಯಾಜಯ, ಲಾಭಾಲಾಭ ಎಲ್ಲವನ್ನೂ ಒಂದಾಗಿ ಕಾಣಬೇಕೂಂತ ಅನ್ನಾರೆ. ಕಾಣುವವ್ರು?"

"ಯಾರೂ ಇಲ್ದಿದ್ರೇನಾಯ್ತು? ನಾವು ಕಾಣಬಾರದೇನು?'

"ಯಾರು ಬೇಡಾಂತಾರೆ? ಆದ್ರೆ ಅದು ಕಷ್ಟ ಸಾಧ್ಯ...."

"ಅದನ್ನೇ ಸಾಧಿಸಿ ತೋರಿಸಬೇಕು...."

"ಪರ್ವಾಗಿಲ್ಲ ಕಣೇ ನೀನು....ನಾನು ಏನೋಂತ ಅಂದು ಕೊಂಡಿದ್ದ...'

'ಹೌದು...... ನೀವು ಅಂದುಕೊಳ್ಳದೆ ಏನು ಮತ್ತೆ? ಅಂದು ಕೊಂಡ್ರೆ ಮಾತ್ರ ಪ್ರಯೋಜನವಿಲ್ಲ, ಉಂಡು ನೋಡಿ..."

"ಹೌದೇ ಇಂದು ಬಿಸಿ ಬಿಸಿ ಗಂಜಿ ಬೇಕು ..'

"ಬನ್ನಿ ಹಾಗಾದ್ರೆ...'

'ಹ್ಞಾಂ...."

—ಗೋರಾ.

ಒಂದು ಸಲಹೆ

# ಯೋಜನೆ ಹಾಗೂ ಬೆಲೆಯುಬ್ಬರ

ಬರೆದವರು:
ಶ್ರೀ ಪ್ರಭಾಕರ ರಾವ್, ಕೆ. ಪಿ.

ಭಾರತದಲ್ಲೀಗ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತಲೆದೋರಿ, ಬೃಹದಾಕಾರವನ್ನು ತಾಳಿದ ಸಮಸ್ಯೆಗಳಲ್ಲಿ ಬೆಲೆಯುಬ್ಬರದ ಸಮಸ್ಯೆಯೂ ಒಂದು. ಆಹಾರ ಸಮಸ್ಯೆಯೂ ಇದರ ಅತಿ ಮುಖ್ಯಭಾಗ. ಇದು ಮುಖ್ಯವಾಗಿ ಸಾಮಗ್ರಿಗಳ ಮತ್ತು ಕೈಗಾರಿಕಾ ಕಚ್ಚಾ ವಸ್ತುಗಳ ಬೆಲೆ ದಿನೇ ದಿನೇ ಅಧಿಕವಾಗಿ ಗಗನಕ್ಕೇರುತ್ತಿ ... ಭಾರತದ ಜನಸಾಮಾನ್ಯರ ಪರಿಸ್ಥಿತಿ ಇದರಿಂದಾಗಿ ಚಿಂತಾಜನಕವಾಗಿದೆ. ಹಲವರಿಗೆ ತಮ್ಮ ದುಡಿಮೆಯ ಪ್ರತಿಫಲವು ಸಾಕಾಗದೆ, ವಾರದ ಹಲವು ದಿನಗಳಲ್ಲಿ ಉಪವಾಸವನ್ನೇ ಕೈಗೊಳ್ಳುವ ದುರ್ಧರ ಪ್ರಸಂಗವು ಬಂದೊದಗಿದೆ.

ಸರಕಾರವೀಗ ಈ ರಂಗದಲ್ಲಿ ತುಂಬಾ ಪ್ರಯತ್ನಿಸುತ್ತಿದೆ. ಬೆಲೆಗಳ ನಿಯಂತ್ರಣಕ್ಕಾಗಿ ನಾನಾ ವಿಧದ ಸಮಿತಿಗಳನ್ನು ರಚಿಸಿದೆ. ಆದರೆ ಈ ಕಾರ್ಯಗಳು ಅಧಿಕ ಸಂಖ್ಯೆಯಲ್ಲಿ ಅಯಶಸ್ವಿಯಾಗುತ್ತಿರುವುದು ತುಂಬಾ ಖೇದಕರವಾದ ಸಂಗತಿ.

ಕೃಷಿಯೇ ಪ್ರಧಾನವಾದ ನಮ್ಮ ದೇಶದಲ್ಲಿ ಬೆಲೆಗಳ ಬದಲಾವಣೆಯು ಕೃಷಿಯುತ್ಪನ್ನದ ಮೇಲೆಯೇ ಹೆಚ್ಚಾಗಿ ಹೊಂದಿಕೊಂಡಿದೆ. ದ್ವಿತೀಯ ಯೋಜನೆಯ ಪ್ರಾರಂಭದಲ್ಲಿ ಇದರ ಇಳಿತವಾಯಿತು. ಯೋಜನೆಗಳಿಂದ ಪೂರ್ವೀಕೃತ ರೂಪುಗೊಂಡ ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆಗಾಗಿ ಪರದೇಶಿ ವಿನಿಮಯಗಳ ವೆಚ್ಚವು ಏರಿತು. ದ್ವಿತೀಯ ಯೋಜನೆಯಲ್ಲಿ ಹಣದ ಮೊತ್ತ ೭೦೩.೭ ಕೋಟಿ ರೂಪಾಯಿಗಳು. ಆದರೆ ವಿದೇಶಿ ವಿನಿಮಯವು ಪ್ರಥಮ ಯೋಜನೆಗಿಂತ ... ೬೭೫ ಕೋಟಿಗೆ ಇಳಿದುದೇ ಪ್ರಬಲ ಕಾರಣ. ಇದರಿಂದಾಗಿ ಬೆಲೆಯ ಮಟ್ಟವು ... ವರುಷ ಶೇ. ೬.೩ ರಂತೆ ಏರಿತು.

ತೃತೀಯ ಯೋಜನೆಯಲ್ಲಿ ಸರಕಾರ ... ಇನ್ನಷ್ಟು ಕೈಗಾರಿಕೆಗಳಿಗೆ ಪ್ರೋತ್ಸಾಹವಿತ್ತಿತ್ತು. ಜತೆಗೆ ಈ ಯೋಜನೆಯ ತೃತೀಯ ವರುಷದಲ್ಲಿ ಕೃಷಿಯುತ್ಪನ್ನವು ಪ್ರತಿ ಶತ ೩.೪ ರಷ್ಟು ಏರಿತು. ... ಸಗೀ ಮತ್ತು ಸರಕಾರೀ ವ್ಯಯಗಳ ...ಕೆಯಿಂದಾಗಿ ಇದರ ಪ್ರಯೋಜನವಾಗಲಿಲ್ಲ. ರಕ್ಷಣಾ ಸಾಮಗ್ರಿಗಳಿಗಾಗಿ ಸರಕಾರವು ಹೆಚ್ಚು ಮಹತ್ವವನ್ನು ಕೊಟ್ಟುದರಿಂದಾಗಿ ಜನತೆಯು ಬೆಲೆಗಳ ಭಾರವನ್ನು ಇನ್ನಷ್ಟು ಹೊರುವಂತಾಯಿತು. ಯೋಜನೆಯ ಮೊದಲ ಎರಡು ವರುಷಗಳಲ್ಲಿ ೧೦೦ರಲ್ಲಿದ್ದ ಬೆಲೆ ಸೂಚಿಕೆ ೬೩.೬೪ರಲ್ಲಿ ೧೧೦ಕ್ಕೇರಿತು.

೧೯೬೪—೬೫ ರಲ್ಲಿ ೮೭.೩ ಮಿಲಿಯನ್ ಟನ್ನುಗಳಷ್ಟು ಆಹಾರ ಸಾಮಗ್ರಿಗಳನ್ನು ಉತ್ಪಾದಿಸಿದರೂ ಬೆಲೆ ಸೂಚಿಕೆಯು ೧೫೩.೭ಕ್ಕೇರಿತು. ಆ ಉತ್ಪಾದನೆಯು ೬೫—೬೬ರಲ್ಲಿ ೭೨ ಮಿಲಿಯ ಟನ್ನುಗಳಷ್ಟೇರಿದೆ, ಇತ್ತೀಚೆಗಿನ ವರದಿಯಂತೆ ಈ ವರ್ಷ ಎಲ್ಲ ತರದ ಆಹಾರ ಸಾಮಗ್ರಿಗಳ ಬೆಲೆಯೂ ಏರಿದೆ.

ಮೇಲಿನ ಅಂಕೆ—ಸಂಖ್ಯೆಗಳನ್ನು ಅವಲೋಕಿಸಿದಾಗ, ಬೆಲೆಗಳ ಮಟ್ಟವು ಕೃಷಿಯುತ್ಪನ್ನದ ಮೇಲೆ ಅನುವಾಗಿದೆ ಯೆಂಬುದು ನಿಸ್ಸಂಶಯ. ಕೃಷಿಯ ಸ್ಥಾನವು ನಮ್ಮ ದೇಶದಲ್ಲಿ ಶುಭ್ರವಾಗಿಲ್ಲ. ದಿನವಿಡೀ ಗೈದು, ಮಣ್ಣಿನಲ್ಲಿ ಮಣ್ಣಾಗುತ್ತಿರುವ ರೈತನಿಗೆ ಭದ್ರತೆಯಿಲ್ಲ. ಹಳೆಯ ಕಾಲದಂತೆ ಜೋಡೆತ್ತುಗಳಿಂದ ನೆಲವನ್ನು ಉಳುತ್ತಿರುವ ರೈತರಿಗೆ ಆಧುನಿಕ ಯಂತ್ರೋಪಕರಣಗಳ ಪರಿಚಯವು ಇನ್ನೂ ಹೆಚ್ಚೆಚ್ಚು ರೀತಿಯಲ್ಲಿ ಬರಬೇಕಾಗಿದೆ. ಹಳ್ಳಿಹಳ್ಳಿಗಳಲ್ಲಿ ಸಹಕಾರೀ ಬೇಂಕುಗಳಿದ್ದರೂ ಬೇಸಾಯಗಾರನಿಗೆ ಅಗತ್ಯವಿದ್ದಾಗ ಸಾಲವು ದೊರೆಯುತ್ತಿಲ್ಲ. ದೊರೆತರೂ ಅವನ ಬೇಡಿಕೆಗಳಿಗೆ ಸಾಕಾಗುತ್ತಿಲ್ಲ. ಸುಧಾರಿತ ತಾಂತ್ರಿಕ ವಿಧಾನಗಳು, ಗೊಬ್ಬರ ಹಾಗೂ ಸುಧಾರಿತ ಬೀಜಗಳ ಬಳಕೆಗಳಿಂದಾಗಿ ಕೃಷಿಯ ಅಭಿವೃದ್ಧಿಯೂ ಭಾರೀ ಪ್ರಮಾಣದಲ್ಲಿ ಹೆಚ್ಚಳವಾಗಿರಬಹುದು. ಆದರೆ ತಾಂತ್ರಿಕ ಮಟ್ಟದಲ್ಲಿ ಇನ್ನೂ ಕೆಲವು ಪ್ರಮುಖ ಬದಲಾವಣೆಗಳು ಅವಶ್ಯಕ.

ಸರಕಾರವು ಕೃಷಿಗಾಗಿ ಎಷ್ಟು ಹಣವನ್ನು ಮೀಸಲಾಗಿರಿಸಿದೆಯೆಂಬುದು ಮುಖ್ಯವಲ್ಲ. ಅದನ್ನು ಯಾವ ಹಂತಗಳಲ್ಲಿ, ಹೇಗೆ ಉಪಯೋಗಿಸುತ್ತಿದೆಯೆಂಬುದು ಮುಖ್ಯ. ಚತುರ್ಥ ಯೋಜನೆಯಲ್ಲಿ, ಸರಕಾರವು ಕೈಗೊಳ್ಳಬೇಕಾದ ... ಸಾಧಿಸಬೇಕಾದುದು ತುಂಬಾ ಇದೆ. ಬೇಸಾಯಗಾರ ಮತ್ತು ಗ್ರಾಹಕರಲ್ಲಿ ನಿರ್ದಿಷ್ಟ ಬೆಲೆಗಳಿಗೆ ಪರಸ್ಪರ ವಿನಿಮಯವೇರ್ಪಡಬೇಕು. ಬೇಸಾಯಗಾರನಿಗೆ ನಿರ್ದಿಷ್ಟ ದರದಲ್ಲಿ ಬೇಸಾಯದ ಉಪಕರಣಗಳ ಸರಬರಾಜು ನಡೆಯಬೇಕು. ಆಹಾರ ಕಾರ್ಪೋರೇಶನ್‌ನ ಕಾರ್ಯವು ಆಹಾರ ಪೂರೈಕೆಯ ರಂಗದಲ್ಲಿ ಯೋಗ್ಯ ಕಾರ್ಯವನ್ನೆಸಗುತ್ತಿದೆ. ಆದರೆ ಆಹಾರ ಸಾಮಗ್ರಿಗಳ ವಿನಿಮಯ ತಯಾರಕನಿಂದ ಉಪಯೋಗಿಸುವವನಿಗೆ ನೇರವಾಗಿ ದೊರೆತರೆ, ಕಾಳಸಂತೆಯ ರಾಕ್ಷಸನ ಸಂಹಾರವಾದಂತಾಗುತ್ತದೆ.

ಮುಖ್ಯವಾಗಿ ಸರಕಾರವು ವಿದೇಶಿ ವಿನಿಮಯದ ಕುರಿತು ಗಮನಾರ್ಹ ಯೋಜನೆಗಳನ್ನು ರೂಪಿಸಬೇಕು ಅಧಿಕ ಸಂಖ್ಯೆಗಳಲ್ಲಿ ನ್ಯಾಯಬೆಲೆಯ ಅಂಗಡಿಗಳನ್ನು ಕೈಗಾರಿಕೆಗಳು ಬೆಳೆಯುತ್ತಿರುವಲ್ಲಿ ಹಾಗೂ ಮೂರನೇ ವರ್ಗದ ಜನರು ಅಧಿಕ ಸಂಖ್ಯೆಗಳಲ್ಲಿರುವಲ್ಲಿ ತೆರೆಯಬೇಕು. ಜನತೆ ... ಬೇಡಿಕೆ, ... ಗಳ ಮೇಲೆ ಹತೋಟಿಯಿಡುವುದು ಉತ್ತಮ ಕಾರ್ಯವಾಗಿದೆ. ಅಭಿವೃದ್ಧಿ ಪಥದಲ್ಲಿ ಇದು ಕಷ್ಟಸಾಧ್ಯವಾದರೂ, ರಕ್ಷಣಾ ವಿಭಾಗದ ಅಭಿವೃದ್ಧಿ, ಕೈಗಾರಿಕಾ ಅಭಿವೃದ್ಧಿ, ಆಹಾರ ಪೂರೈಕೆಗಳ ಅತ್ಯಗತ್ಯತೆಗಳನ್ನು ಗಮನದಲ್ಲಿರಿಸಿ, ಯೋಗ್ಯ ಹೆಜ್ಜೆಗಳನ್ನಿರಿಸುವುದು ಅಗತ್ಯವಿದೆ.

ಅಧಿಕಾರದ ದುರುಪಯೋಗ,— ದುರ್ವಿನಿಯೋಗವಾಗಬಾರದು. ಯೋಜನೆಗಳು "ಯೋಚನೆ"ಗಳಾಗಿಯೇ ಉಳಿಯದೆ ಕಾರ್ಯರೂಪದಲ್ಲಿ ಬರಲು ಜನತೆ ಪ್ರಯತ್ನಿಸಬೇಕು. ಒಮ್ಮೆ ಮುಂದಿರಿಸಿದ ಹೆಜ್ಜೆಯಲ್ಲಿ ಸದಾ ಬಿಗಿತವಿರಬೇಕು. ಆಗಲೇ ಈ ಸಮಸ್ಯೆಯ ನಿವಾರಣೆಗೊಂದು ದಾರಿ ದೊರಕಿ, ಬಡ ಜನರ— ಭಾರತದ ಮಕ್ಕಳ ಕರುಣಾರ್ದ್ರ ಕೂಗು ಮರೆಯಾಗಬಹುದು.

## ಅಮ್ಮಾ! ನನಗೆ ಕೆಲಸ ಸಿಕ್ಕಿತು!

ಅವಳಿಗೆ ಪ್ರಥಮ ಬಾರಿ ದೊರೆತ ಕೆಲಸ ಅದು! ಅವಳು ಉತ್ತೇಜಿತಳಾಗಿದ್ದಾಳೆ. "ನಿನ್ನ ಬಗ್ಗೆ ನನಗೆ ತುಂಬಾ ಹೆಮ್ಮೆ" — ಮಗಳೊಡನೆ ಹೇಳುತ್ತಾಳೆ ಹರ್ಷಭರಿತಳಾದ ತಾಯಿ. "ಆದರೆ ನೀನು ಒಂದು ವಿಷಯದ ಬಗ್ಗೆ ಮಾತ್ರ ಭರವಸೆ ನೀಡಲೇ ಬೇಕು. ನಿನಗೆ ದೊರಕುವ ವೇತನದ ಸ್ವಲ್ಪಾಂಶವನ್ನು ಪ್ರತಿ ತಿಂಗಳೂ ಉಳಿಸಬೇಕು. ಉಳಿತಾಯದ ಮೊತ್ತ ಎಷ್ಟೆಂಬುದು ಮುಖ್ಯವಲ್ಲ, ಸಾಧ್ಯವಾದಷ್ಟು ಉಳಿತಾಯ ಮಾಡಬೇಕು. ನನ್ನೊಡನೆ ಬಾ. ಸಿಂಡಿಕೇಟ್ ಬ್ಯಾಂಕಿನಲ್ಲಿ ನಿನ್ನ ಹೆಸರಲ್ಲೊಂದು ಖಾತೆಯನ್ನು ತೆರೆಯೋಣ. ನಿನಗೆ ಗೊತ್ತಿದೆಯೇ? ಮಹಿಳೆಯರಲ್ಲಿ ಬ್ಯಾಂಕಿಂಗ್ ಅಭ್ಯಾಸವನ್ನು ಪ್ರೋತ್ಸಾಹಿಸಲು ಸಿಂಡಿಕೇಟ್ ಬ್ಯಾಂಕ್ ಹಲವಾರು ಶಾಖೆಗಳಲ್ಲಿ ಮಹಿಳಾ ಕೌಂಟರುಗಳನ್ನು ತೆರೆದಿದೆ. ಅಲ್ಲದೆ, ಮಹಿಳೆಯರಿಂದಲೇ ನಡೆಸುವ ಕೆಲವು ಶಾಖೆಗಳನ್ನು ಅದು ತೆರೆದಿದೆ."

ಇದು ವಿವೇಕಿಯಾದ ಮಾತೆಯೊಬ್ಬಳು ತನ್ನ ಮಗಳಿಗೆ ನೀಡುವ ಬುದ್ಧಿವಾದ. ಕ್ರಮಬದ್ಧವಾಗಿ ಉಳಿತಾಯ ಮಾಡುವ ಸದಭ್ಯಾಸವು ತನ್ನ ಮಗಳಲ್ಲಿ ಉಂಟಾಗುವಂತೆ ಅವಳು ಪ್ರೇರೇಪಿಸುತ್ತಾಳೆ. ಅವಳ ಹಣವು ಬಡ್ಡಿಯನ್ನು ಗಳಿಸುವುದು. ಬೆಳೆಯುತ್ತಿರುವ ಅವಳ ಉಳಿತಾಯವು ಅವಳಲ್ಲಿ ಧೈರ್ಯ ಮತ್ತು ಆತ್ಮಗೌರವವನ್ನುಂಟು ಮಾಡುವುದು. ಅಲ್ಲದೆ ಅವಳ ಭವಿಷ್ಯವು ಸುಭದ್ರವಾಗುವುದು.

FAITHFUL SB FRIENDLY

### ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

200ಕ್ಕೂ ಹೆಚ್ಚು ಶಾಖೆಗಳು

ರೂ. 70 ಕೋಟಿಗೂ ಮಿಕ್ಕಿದ ಠೇವಣಾ ನಿಧಿ


## ಕಾಶ್ಮೀರದ ಪೆಡ್ಡೆ...!

ಭಾರತಮ್ಮನ ಪುತ್ರಿ ಆದುವೆ ಕಾಶ್ಮೀರ
ಪಾಕಿಸ್ತಾನಕೆ ಇಲ್ಲ ಎಂಥ(?) ಅಧಿಕಾರ!
ಚೆಲುವಾಗಿ ಮುದ್ದಾಗಿ ಬೆಳೆದ ಕಾಶ್ಮೀರ
ನಮಗೆಲ್ಲ ಅವಳಲ್ಲಿ ಪ್ರೇಮವು ಅಪಾರ ||

ದುಷ್ಟ ಭುಟ್ಟೋ ಮಾವೊ ಇವರ ಅವಿಚಾರ
ಅವರ ದುರ್ವರ್ತನೆಗೆ ನಮ್ಮ ಧಿಕ್ಕಾರ!
ಶಾಂತಿ ಧರ್ಮಗಳೆ ನಮಗೆ ಆಧಾರ
ಕರ್ತವ್ಯ ನಿಷ್ಠೆಯೇ ನಮಗೆ ಮಮಕಾರ!
ಸತ್ಯ ಅಹಿಂಸೆಯೇ ನಮ್ಮ ವ್ಯವಹಾರ
ಭಾರತದ ವೀರರೇ ಭಾರತಿಯ ಹಾರ.
ಹುಚ್ಚ ಭುಟ್ಟೋ ಖಾನ್ ಮಾವೊ ಈ ಜನರ
ಅಪಚಾರ! ಅವರಿಗಿದೋ ಛೀ ಧಿಕ್ಕಾರ!

ಓ ಮಡಿದ ಸೈನಿಕನೆ, ನೀನೀಗ ಅಮರ!
ದೇಶ ಹಿತ ಬಯಸುವಾ ಸ್ವಾತ್ಯಾಗ ವೀರ,
ಓ ಭಾರತೀಯನೇ ಮುನ್ನುಗ್ಗು ವೀರ,
ಭಾರತೀಯನೇ ನೀನು ಧನ್ಯ! ಚಿರಕಾಲ!

— ಕೆರೆಮೂಲೆ ಶೇಷಗಿರಿ ಅಮ್ಮ
(ಬಾಯಾರು) ೩ನೆ ತರಗತಿ.

ಅಭಿಪ್ರಾಯ

# ಭಾರತದ ರಾಷ್ಟ್ರಭಾಷೆ

ಬರೆದವರು:
ಕೆ. ಅಹಲ್ಯಾ
ಯು. ಕಮಲಾಬಾಯಿ ಹೈಸ್ಕೂಲ್, ಉಡುಪಿ.

ಒಂದು ದೇಶದ ಪ್ರಗತಿ, ಸಾಹಿತ್ಯ ಎಲ್ಲವಕ್ಕೂ ಮೂಲಕಾರಣ ಮಾತು. ಮಾತನಾಡುವ ಭಾಷೆಯು ಬಹಳ ಪ್ರಾಮುಖ್ಯವಾದುದು. ಪ್ರತಿಯೊಂದು ದೇಶಕ್ಕೂ ಒಂದು ರಾಷ್ಟ್ರಭಾಷೆಯು ಇರುತ್ತದೆ. ದೇಶದ ಒಳರಾಜ್ಯಗಳಲ್ಲಿ ಬೇರೆ ಬೇರೆ ಭಾಷೆಗಳಿದ್ದರೂ ಇಡಿ ದೇಶಕ್ಕೆ ಪ್ರಾಮುಖ್ಯವಾದ ಭಾಷೆಯೊಂದಿರುವುದು. ಭಾರತದಲ್ಲಿ ಕೆಲವು ದಿವಸಗಳ ಹಿಂದೆ ಈ ರಾಷ್ಟ್ರಭಾಷೆಯ ವಿಚಾರವಾಗಿ ದೊಡ್ಡದೊಂದು ಗಲಭೆಯುಂಟಾಯಿತು. ಈ ಭಾಷಾ ಸಮಸ್ಯೆಯ ವಿಚಾರದಲ್ಲಿ ಅನೇಕ ಜನರು ಸಜೀವವಾಗಿ ಅಗ್ನಿಗೆ ಆಹುತಿಯಾದರು. ಇವೆಲ್ಲಾ ಏತಕ್ಕಾಗಿ? ರಾಷ್ಟ್ರಭಾಷೆಯ ಪ್ರಶ್ನೆಯ ಮೇಲೆ ಅನೇಕ ಜನರು ಪ್ರಾಣವನ್ನು ಕಳೆದುಕೊಂಡರೆಂದರೆ ಅದರ ಪ್ರಾಮುಖ್ಯತೆಯು ಎಷ್ಟು ಎಂಬುದನ್ನು ನಾವು ತಿಳಿದುಕೊಳ್ಳಬಹುದು.

ಭಾರತದಲ್ಲಿ ಈ ರಾಷ್ಟ್ರಭಾಷಾ ಸಮಸ್ಯೆಯು ಸಾಧಾರಣವಾಗಿಯಲ್ಲ, ಬೃಹದಾಕಾರವಾಗಿ ತಲೆಯೆತ್ತಿ ನಿಂತಿತ್ತು. ಭಾರತದಲ್ಲಿಯ ಪ್ರಾಂತ್ಯಗಳು ಭಾಷಾವಾರು ಕ್ರಮದಲ್ಲಿ ವಿಂಗಡಿಸಲ್ಪಟ್ಟಿವೆ. ಬೇರೆ ಬೇರೆ ಪ್ರಾಂತ್ಯಗಳ ಜನರು ಬೇರೆ ಬೇರೆ ಭಾಷೆಗಳನ್ನಾಡುತ್ತಾರೆ. ಪ್ರಾಂತೀಯ ಭಾಷೆಗಳಾಗಿ ತಮಿಳು,ತೆಲುಗು, ಮರಾಠಿ, ಗುಜರಾಥಿ, ಕನ್ನಡ, ಹಿಂದಿ, ಮೊದಲಾದ ಅನೇಕ ಭಾಷೆಗಳಿವೆ. ಪ್ರಾಂತ್ಯಗಳ ಒಳಗೇ ಹಲವು ಬೇರೆ ಬೇರೆ ಭಾಷೆಗಳಿರುತ್ತವೆ. ಆಯಾ ಪ್ರಾಂತ್ಯಗಳ ಜನತೆಯ ಶಿಕ್ಷಣವು ಆಯಾ ಭಾಷೆಯಲ್ಲಿಯೇ ಕೊಡಲ್ಪಡುತ್ತಿದೆ. ಇದರಿಂದಾಗಿ ಒಂದು ಪ್ರಾಂತ್ಯದ ಜನರು ಇನ್ನೊಂದು ಪ್ರಾಂತ್ಯಕ್ಕೆ ಹೋದಾಗ ತಮಗೆ ತಿಳಿಯದ ಅಪರಿಚಿತ ಭಾಷೆಯಿಂದಾಗಿ ತುಂಬಾ ತೊಂದರೆಗೆ ಒಳಪಡಬೇಕಾಗುವುದು. ಒಂದು ರಾಷ್ಟ್ರಭಾಷೆಯು ಇದ್ದು ಇಡಿ ದೇಶದ ಜನರಿಗೂ ಆ ಭಾಷೆಯಲ್ಲಿಯೇ ಶಿಕ್ಷಣವು ಕೊಡಲ್ಪಟ್ಟರೆ ದೇಶದ ಎಲ್ಲಾ ಜನರಿಗೂ ಒಂದು ಭಾಷೆಯ ಅರಿವು ಇರುವುದು. ಇದುವರೆಗೆ ಎಲ್ಲಾ ಪ್ರಾಂತ್ಯಗಳಲ್ಲೂ ಕೆಲವಷ್ಟೇ ಇಂಗ್ಲಿಷ್‌ಮಾಧ್ಯಮದ ಶಾಲೆಗಳ ಹೊರತಾಗಿ ಎಲ್ಲಾ ಶಿಕ್ಷಣ ಕೇಂದ್ರಗಳಲ್ಲೂ ಕಡ್ಡಾಯವಾಗಿ ಮಾತೃಭಾಷೆ ಮತ್ತು ಇಂಗ್ಲಿಷಿನಲ್ಲಿ ಶಿಕ್ಷಣ ಕೊಡಲ್ಪಡುತ್ತಿದೆ.

ಬ್ರಿಟಿಷರು ಭಾರತಕ್ಕೆ ಬಂದು ತಮ್ಮ ಆಡಳಿತವನ್ನು ಪ್ರಾರಂಭಿಸಿ ತಮ್ಮ ಇಂಗ್ಲಿಷ್ ಭಾಷಾ ಶಿಕ್ಷಣವನ್ನು ಭಾರತದಲ್ಲಿ ಆರಂಭ ಮಾಡಿದರು. ಅವರ ಆಡಳಿತವು ಕೊನೆಗೊಂಡು ಭಾರತವು ಸಂಪೂರ್ಣವಾಗಿ ಸ್ವಾತಂತ್ರ್ಯವನ್ನು ಪಡೆದ ಬಳಿಕವೂ ಇಂಗ್ಲಿಷೇ ನಮ್ಮ ರಾಷ್ಟ್ರಭಾಷೆಯಾಗಿ ಮುಂದುವರಿಯಿತು. ಆದರೆ ಇಂಗ್ಲಿಷ್ ನಮ್ಮ ಭಾಷೆಯಲ್ಲ. ಅದು ಪರಕೀಯರ ಭಾಷೆ. ಪರಕೀಯರ ದಾಸ್ಯಶೃಂಖಲೆಯನ್ನು ಕಳಚಿಕೊಂಡ ನಂತರವೂ ಈ ಭಾಷೆಯನ್ನು ಆಡುವುದು ಮಾತ್ರವಲ್ಲ ಅದನ್ನು ನಮ್ಮ ರಾಷ್ಟ್ರದ ಪ್ರಾಮುಖ್ಯ ಭಾಷೆಯಾಗಿರಿಸಿಕೊಂಡಿರುವುದು ಅವಮಾನಕರವಾದ ವಿಷಯ; ನಮ್ಮ ರಾಷ್ಟ್ರದ ಕುರುಹು, ಸ್ವಾತಂತ್ರ್ಯವು ಸಿಕ್ಕಿ ಹದಿನೆಂಟು ವರ್ಷಗಳಾದರೂ ನಾವು ಒಂದು ಸ್ವತಂತ್ರ ಭಾಷೆಯನ್ನು ದಕ್ಕಿಸಿಕೊಳ್ಳದೆ ಬೇರೆ ದೇಶದ ಭಾಷೆಯನ್ನೇ ಅವಲಂಬಿಸಿಕೊಂಡಿರುವುದು ಅವಮಾನಾಸ್ಪದ. ಭಾರತಕ್ಕೆ ಒಂದು ಸ್ವಂತ ಭಾಷೆಯೇ ಇಲ್ಲವೆಂದ ಮೇಲೆ ಸಾಹಿತ್ಯವು ಎಲ್ಲಿಂದ ಬಂತು? ಹಾಗಾದರೆ ಭಾರತಕ್ಕೆ ತನ್ನದೇ ಆದ ಒಂದು ಭಾಷೆಯೂ ಇಲ್ಲ, ಸಾಹಿತ್ಯವೂ ಇಲ್ಲ. ಪ್ರಗತಿಯೂ ಇಲ್ಲ. ಆದುದರಿಂದ ಭಾರತಕ್ಕೆ ಇಂಗ್ಲಿಷನ್ನು ಹೊರತಾದ ತನ್ನದೇ ಆದ ಒಂದು ಭಾಷೆಯು ಅತೀ ಅಗತ್ಯವಾಗಿದೆ.

ನೂರಾರು ವರ್ಷ ಸವಾರಿ ಮಾಡಿದ ಇಂಗ್ಲಿಷಿನ ಬದಲಾಗಿ ಅದರ ಸ್ಥಾನದಲ್ಲಿ ಇನ್ನೊಂದು ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಇರಿಸುವುದು ಕಷ್ಟಕರವಾದ ವಿಷಯ. ಆದುದರಿಂದಲೇ ಈ ವಿಷಯದಲ್ಲಿ ತುಂಬಾ ಗಲಭೆ, ಕ್ಷೋಭೆಗಳುಂಟಾದವು. ಇಂಗ್ಲಿಷಿನ ಬದಲಾಗಿ ಹಿಂದಿಯನ್ನು ನಮ್ಮ ರಾಷ್ಟ್ರ ಭಾಷೆಯಾಗಿ ಮಾಡುವ ವಿಷಯವನ್ನು ತೆಗೆದು ಕೊಳ್ಳೋಣ. ಭಾರತವು ಎಲ್ಲ ದೇಶಗಳಂತಲ್ಲ. ಇಲ್ಲಿ ಬೇರೆ ಬೇರೆ ರೀತಿಯ ಸಂಸ್ಕೃತಿಯ ಬೇರೆ ಬೇರೆ ಭಾಷೆಯ ಜನರು ಇರುವರು. ಹಿಂದಿಯು ರಾಷ್ಟ್ರಭಾಷೆಯಾಗ ಬೇಕಾದರೆ ಸಮಸ್ತ ಪ್ರಜೆಗಳ ಸಮ್ಮತಿ ಬೇಕು. ಉತ್ತರ ಭಾರತದಲ್ಲಿ ಹೆಚ್ಚಿನವರು ಮಾತನಾಡುವ ಭಾಷೆ ಹಿಂದಿಯಾದುದರಿಂದ ಅವರು ಇದನ್ನು ಒಪ್ಪುತ್ತಾರೆ. ಆದರೆ ದಕ್ಷಿಣ ಭಾರತದ ಎಲ್ಲಾ ಜನರೂ ಬೇರೆ ಭಾಷೆಯನ್ನಾಡುವರು. ಅವರಲ್ಲಿ ತಮಿಳು ಭಾಷೆಯನ್ನಾಡುವ ಮದ್ರಾಸಿನ ಜನರಿಗೆ ಹಿಂದೀ ರಾಷ್ಟ್ರ ಭಾಷೆಯಾಗುವುದು ಸ್ವಲ್ಪವೂ ಸಮ್ಮತಿಯಿಲ್ಲ. ತಮ್ಮ ಪ್ರಾದೇಶಿಕ ಭಾಷೆ ತಮಿಳಿನ ಮೇಲೆ ಅತಿರೇಕ ಮೋಹವಿಡ ತೊಡಗಿದುದು ದೊಡ್ಡ ತಡೆಯನ್ನುಂಟು ಮಾಡಿತು, ಎನ್ನಬಹುದು. ಅವರ ಅಭಿಪ್ರಾಯವನ್ನು ಒಮ್ಮೆಗೇ ತೆಗೆದು ಹಾಕುವುದೂ ಅಸಾಧ್ಯ. ಆದರೆ, ಅಲ್ಪ ಸಂಖ್ಯಾಕರ ಭಾಷೆಯಾದ ತಮಿಳು—ಮರಾಠಿಗಳನ್ನು ರಾಷ್ಟ್ರಭಾಷೆಯಾಗಿ ಸ್ವೀಕರಿಸುವ ಪ್ರಮೇಯವೇ ಇಲ್ಲ. ಏಕೆಂದರೆ, ಹೀಗೆ ಮಾಡಿದರೆ, ಅಧಿಕ ಸಂಖ್ಯಾಕರು ನನೆಗುದಿಗೆ ಬೀಳುತ್ತಾರೆ. ಇದು ಬಹಳ ಶೋಚನೀಯ. ಅವರ ಬದಲಾಗಿ ಹಿಂದಿಯನ್ನು ಕೆಲವು ಜನರ ಅಸಮ್ಮತಿಯಿದ್ದರೂ ರಾಷ್ಟ್ರ ಭಾಷೆಯಾಗಿ ಮಾಡಿದರೆ ಒಳ್ಳೆಯದು. ಏಕೆಂದರೆ ಉತ್ತರ ಭಾರತದ ಜನತೆಯು ಸಾಧಾರಣವಾಗಿ ಸಂಪೂರ್ಣವಾಗಿ ಹಿಂದಿಯನ್ನು ತಿಳಿದಿರುವುದು. ದಕ್ಷಿಣ ಭಾರತದಲ್ಲಿಯೂ ಅನೇಕ ವರ್ಷಗಳಿಂದ ಶಾಲೆ, ಹೈಸ್ಕೂಲು, ಕಾಲೇಜು ಮುಂತಾದ ಶಿಕ್ಷಣ ಕೇಂದ್ರಗಳಲ್ಲಿ ಹಿಂದಿಯು ಸಾಮಾನ್ಯ ಶಿಕ್ಷಣ ಕೊಡಲ್ಪಡುತ್ತಿದೆ. ಈಚೆಗೆ ಹಲವು ವರ್ಷಗಳಿಂದ ಹಿಂದೀ ಪ್ರಚಾರ ಸಂಸ್ಥೆಗಳು ಕೆಲಸಮಾಡುತ್ತಿದ್ದು ಹಲವಾರು ಜನರು ಇವುಗಳ ಮೂಲಕ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ದಕ್ಷಿಣ ಭಾರತದಲ್ಲೂ ಬಹು ಸಂಖ್ಯಾತ ಜನರಿಗೆ ಹಿಂದಿಯು ಬರುತ್ತಿದೆ ಮತ್ತು ಹಿಂದಿಯ ಪರಿಜ್ಞಾನ ಮತ್ತು ಕಲಿಯುವ ಉತ್ಸುಕತೆ ಇದೆ. ಆದುದರಿಂದ ಹಿಂದಿಯೇ ಭಾರತದ ರಾಷ್ಟ್ರ ಭಾಷೆಯಾಗುವುದು ಸೂಕ್ತವಾಗಿದೆ.

ಭಾರತದಲ್ಲಿ ಅನಾದಿಕಾಲದಿಂದಲೂ ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡಿರುವ ಆರ್ಯರ ಭಾಷೆಯು ಸಂಸ್ಕೃತ. ಸಂಸ್ಕೃತ ಭಾಷೆಯು ನಮ್ಮ ದೇಶದ ರಾಷ್ಟ್ರ ಭಾಷೆಯಾಗಿ ಮೆರೆದಿತ್ತು. ಸಂಸ್ಕೃತವು ಒಂದು ಉತ್ತಮ ಸಾಹಿತ್ಯವಿರುವ ಮತ್ತು ತುಂಬಾ ಸರಳ ಶುದ್ಧ ಶೈಲಿಯ ವ್ಯಾಕರಣ ರಚನೆ ಮತ್ತು ಶಬ್ದಗಳಿರುವ ಪರಿಪೂರ್ಣ, ಸುಂದರ ಸ್ವತಂತ್ರ ಭಾಷೆ. ಹಿಂದಿನ ಕಾಲದ ವೇದಗಳು, ಉಪನಿಷತ್ತುಗಳು ಆಗಮ, ನಿಗಮ ಶಾಸ್ತ್ರಗಳು ಮತ್ತು ಪ್ರಾಮುಖ್ಯ ಗ್ರಂಥಗಳೆಲ್ಲಾ ಸಂಸ್ಕೃತ ಭಾಷೆಯಲ್ಲೇ ಇವೆ.
ಹಿಂದಿಯು ಮತ್ತು ಸಂಸ್ಕೃತದ ಲಿ
ಗಳು ಒಂದೇ ಆಗಿವೆ, ಮತ್ತು ವ್ಯಾಕ
ಶಬ್ದಗಳಲ್ಲಿಯೂ ತುಂಬಾ ಸಮ
ಹೋಲಿಕೆಯಿರುವುದು. ಹಿಂದಿಯು ಸಂ
ಕೃತದ ಉತ್ತರಾಧಿಕಾರಿ ಎಂದು ಹೇಳಬ
ದು. ಹಿಂದಿಯನ್ನು ರಾಷ್ಟ್ರ ಭಾಷೆ
ಗಿ ಮಾಡುವುದರಿಂದ ನಮ್ಮ ಪೂರ್ವಿ
ಉತ್ತಮ ಭಾಷೆಯ ಅಂಶವನ್ನು ನಾ
ಇಂದೂ ಉಳಿಸಿಕೊಂಡು ಬಂದಂತಾ
ವುದು. ಹಿಂದೀ ಭಾಷೆಯು ಲಿಪಿ, ಬ
ಣಿಗೆ, ವ್ಯಾಕರಣ ಇತ್ಯಾದಿ ಯಾವು
ಕಷ್ಟವಾಗಿಲ್ಲ. ಸುಲಭವಾಗಿ ಎಲ್ಲರೂ
ಯುವಂತೆ ಸರಳವಾಗಿ, ಶುದ್ಧವಾಗಿ,
ವೆ. ಹಿಂದಿಯ ಸಾಹಿತ್ಯವು ತುಂ
ಮಹತ್ತರವಾಗಿದ್ದು ಬಹಳಷ್ಟು ಪ್ರಾ
ಖ್ಯ ವಿವೇಚನೆಗಳ, ಕಾದಂಬರಿಗಳು
ತ್ತು ಕವಿತೆ, ಕಾವ್ಯಗಳೂ ಇವೆ. ಕಬೀ
ತುಲಸೀದಾಸ, ಸಂತ ರಹೀಮ, ಸೂರ
ಸ, ಪ್ರಸಾದ, ನಿರಾಲಾ ಮೊದಲಾದ ಪ್ರ
ಮುಖ್ಯವಾದ ಸಂತರ ಅಮೃತ ಸು
ವಾದ ಕಾವ್ಯಗಳು ಬಹಳ ಇವೆ. ಇ
ಳನ್ನು ಓದಿ ಅರ್ಥಮಾಡಿ ಕೊಂಡ
ಡೀ ಪ್ರಪಂಚದ ಆಗು ಹೋಗುಗಳ
ನವನ್ನು ಸಂಪಾದಿಸಿದಂತಾಗುವುದು.
ಮುದರಿಂದ ಉತ್ತಮ ಸಾಹಿತ್ಯ, ಪ್ರ
ಳಿರುವ ಹಿಂದಿಯೇ ನಮ್ಮ ದೇಶದ
ಷ್ಟ್ರ ಭಾಷೆಯಾಗುವುದು ಸೂಕ್ತವಾ
ನಿರ್ಣಯ ಎನ್ನಬಹುದು.

ಆದರೆ ಇದುವರೆಗೆ ರಾಷ್ಟ್ರಭಾ
ಯಾಗಿದ್ದ ಇಂಗ್ಲಿಷನ್ನು ಬಿಟ್ಟ
ಡುವುದೇ? ಎಂಬ ಪ್ರಶ್ನೆಯು ಉ
ಸುವುದು. ನಮ್ಮ ದೇಶದ ಅ
ದಾಖಲೆಗಳು ಇಂಗ್ಲಿಷಿನಲ್ಲಿವೆ. ಶಿಕ್ಷಿ
ನರೂ ಇಂಗ್ಲಿಷ್ ತಿಳಿದಿರುವರು. ಅ
ರು ಇಂಗ್ಲಿಷಿನಲ್ಲಿ ಅಪಾರ ಪಾಂಡಿತ್ಯ
ಪಡೆದುಕೊಂಡಿರುವರು. ನಮ್ಮಲ್ಲಿ
ಗ್ಲಿಷಿನ ಕವಿಗಳೂ ಲೇಖಕರೂ ಇ
ಶಿಕ್ಷಣ ಕೇಂದ್ರಗಳಲ್ಲಿ, ಪ್ರಾಮುಖ್ಯ
ಕಾಲೇಜುಗಳಲ್ಲಿ ಇಂಗ್ಲಿಷ್ ಭಾಷೆ
ಯೇ ಇದುವರೆಗೆ ಅಧ್ಯಯನ ನಡೆ
ದೆ. ಮೆಡಿಕಲ್ ಎಂಜಿನಿಯರಿಂಗ್
ಮೊದಲಾದ ವಿಷಯಗಳ ಅಧ್ಯಯ
ಇಂಗ್ಲಿಷ್ ಬೇಕೇ ಬೇಕು. ಉಚ್ಚ ಶಿ
ಕ್ಕಾಗಿ ಅನೇಕರು ವಿದೇಶಗಳಿಗೆ ತೆರಳು
ಗ ಇಂಗ್ಲಿಷ್ ಭಾಷೆಯು ಅಗತ್ಯವಾ
ವೆ? ಇಂಗ್ಲಿಷ್ ತಿಳಿಯದಿದ್ದರೆ ಅಲ್ಲಿ
ಣವೇ ಸಾಧ್ಯವಿಲ್ಲ. ಏಕೆಂದರೆ ಇಂಗ್ಲಿಷು
ಗತಿಕಭಾಷೆ. ನಮಗೆ ಪಾಶ್ಚಾತ್ಯ ದೇಶ
ಸಂಪರ್ಕವಾಗ ಬೇಕಾದರೆ ಇಂಗ್ಲಿಷ್ ಭಾ
ಯಿಂದ ಮಾತ್ರ ಸಾಧ್ಯ. ಆದುದರಿಂದ
ಗ್ಲಿಷನ್ನು ಸಂಪೂರ್ಣವಾಗಿ ತೊಡೆದು
ಕುವುದೂ ನಮ್ಮಿಂದ ಸಾಧ್ಯವಿಲ್ಲ. ಆದ
ಗಿ ಈಗ ಇಂಗ್ಲಿಷಿಗೆ ಕೊಡುತ್ತಿರುವ
ನವನ್ನು ಹಿಂದಿಗೆ ಕೊಟ್ಟು ಹಿಂದಿಗೆ
ಡುತ್ತಿರುವ ಸ್ಥಾನವನ್ನು ಇಂಗ್ಲಿಷಿಗೆ
ಬೇಕು. ಆಗ ಪ್ರತಿಯೊಬ್ಬನಿಗೂ ಪ್ರಾ
ಖ್ಯವಾಗಿ ಹಿಂದಿಯನ್ನು ಹಾಗೂ ಐ
ಯವಾಗಿ ಇಂಗ್ಲಿಷಿನ ಶಿಕ್ಷಣವನ್ನು
ಯಲು ಸಾಧ್ಯವಾಗುವುದು. ಇದ
ತೊಂದರೆಯೇನೂ ಉಂಟಾಗಲಾರ
ನ್ನು ಕಾಲೇಜು ಶಿಕ್ಷಣವನ್ನು ಕೆಲವು
ಗಳ ನಂತರ ಸಂಪೂರ್ಣ ಹಿಂದಿಯ

(ಹನ್ನೆರಡನೇ ಪುಟ ನೋಡಿರಿ)

"ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
**ಮಂಗಳೂರು—3**

### ಕ್ರಾಂತಿಯ ನಾಲಗೆಯಲ್ಲಿ

# ಬಿದ್ದು ಎದ್ದ ಬಂಗಾಳ

**ಬಂಗಾಲಿ ಸಿಂಹಗಳು ಇತಿಹಾಸದ ಆರಂಭದಿಂದಲೂ ಕ್ರಾಂತಿಕಾರಿ ಮನೋವೃತ್ತಿಯವರು ಪಶ್ಚಿಮ ಬಂಗಾಳಿಗಳು ಪಶ್ಚಿಮ ಪಾಕ್ ಸರಕಾರವನ್ನು ವಿರೋಧಿಸುವುದಕ್ಕೆ ಅವರ ವಿಭಜನೆಯೂ ಒಂದು ಕಾರಣ.**

ಬರೆದವರು
ಶ್ರೀ ಪಂಡಿತ ಲಕ್ಷ್ಮಣದೇವ, ವಿದ್ಯಾರ್ಥಿ

ಬಂಗಾಲವು ಮೊದಲಿನಿಂದಲೂ ಪ್ರಶ ಹಾಗೂ ಸ್ವಧರ್ಮ ರಕ್ಷಣೆಗಾಗಿ ಪ್ರಧಾರಣೆ ಮಾಡಿದೆಯೇ ಹೊರತು ರ ಮೇಲೆ ದುರಾಕ್ರಮಣ ಮಾಡುವ ರಾಲೋಚನೆಯನ್ನು ಕನಸು—ಮನಸಿನಲ್ಲಿಯೂ ಮಾಡಿರುವುದಿಲ್ಲ. ಕ್ರಿಸ್ತ ಪೂರ್ವ ನಾಲ್ಕನೆಯ ಶತಮಾನದಲ್ಲಿ ಗ್ರೀಕ್ ಶದ ರಾಜದೂತ "ಮೆಗಸ್ತನೀಸ್" ಬವನು ಬಂಗಾಲದ ಕುರಿತು "ಭಾರತೀಯ ಜನಾಂಗದ ಪೈಕಿ ಬಂಗಾಲದ ಜಿಗಳು ಸರ್ವೋತ್ತಮರಾಗಿದ್ದರು; ಇರು ತಮ್ಮ ನೆರೆ ಪ್ರಾಂತ್ಯದ ಮೇಲೆ ಎಂದೆಂದಿಗೂ ಆಕ್ರಮಣ ಮಾಡುವ ಮನೋವೃತ್ತಿಯುಳ್ಳವರಾಗಿರಲಿಲ್ಲ" ಎಂಬುದಾಗಿ ಪ್ರಶಂಸಿಸಿರುವನು.

ಈ ಪ್ರದೇಶದ ಭ್ರಾತೃಭಾವಯುಕ್ತ ದ ಜೀವನವು ಸಮ್ರಾಟ್ ಅಶೋಕನ ಜೀವನದಲ್ಲಿ ಕ್ರಾಂತಿಕಾರಕವಾದ ಪರಿವರ್ತನೆಯನ್ನುಂಟುಮಾಡಿತು. ಇದರಿಂದಾಗಿ ಅವನಲ್ಲಿದ್ದ ರಾಜನೈತಿಕ ವಿಚಾರ ಧಾರೆಯಲ್ಲಿ ಮಹತ್ವಪೂರ್ಣವಾದ ಬದಲಾವಣೆಯುಂಟಾಯಿತು.

ಬಂಗಾಲದ ಮಹಾರಾಜ 'ಶಶಾಂಕ' ಬೌದ್ಧ ಸಮ್ರಾಟನೊಂದಿಗೆ ಜೀವನ-ಮರಣದ ಸಂಘರ್ಷಣೆಯಲ್ಲಿ ಮಗ್ನನಾಗಿದ್ದಾಗ ಮೂವತ್ತು ಸಾವಿರಕ್ಕೂ ಅಧಿಕ ಬೌದ್ಧ ಭಿಕ್ಷುಗಳು ಸುವ್ಯವಸ್ಥಿತ ಬೌದ್ಧ ವಿಹಾರಗಳಲ್ಲಿ, ಶಶಾಂಕನ ಶಾಸನದ ಸಹಾಯದಿಂದ ತಮ್ಮ ಧಾರ್ಮಿಕ ಕಾರ್ಯಗಳ ಪರಿಪಾಲನೆಯಲ್ಲಿ ನಿರತರಾಗಿದ್ದರು. ಇದರಿಂದ ನಾವು ಬಂಗಾಲಿಗಳ ಸಹನಶೀಲತೆ ಮತ್ತು 'ಸರ್ವ ಬಂಧುತ್ವ' ಎಷ್ಟರ ಮಟ್ಟಿಗಿತ್ತೆಂಬುದನ್ನು ನಾವು ತಿಳಿಯಬಹುದು.

ಗುರುದೇವ ರವೀಂದ್ರನಾಥ ಠಾಕೂರರ ಮಾತಿನಲ್ಲಿ ಹೇಳುವುದಾದರೆ "ಭಾರತದ ಮಹಾ ಮಾನವತೆಯ ಸಾಗರದ ತಟದಲ್ಲಿ ಅನೇಕ ಜಾತಿ ಮತ್ತು ಉಪಜಾತಿಗಳು ಬಂದು ಪರಸ್ಪರ ಸಮ್ಮಿಳಿತವಾದವು; ಆದರೆ ಸರ್ವಾಧಿಕ ಆತ್ಮೈಕ್ಯವು ಗಂಗಾಕ್ಷೇತ್ರದಲ್ಲಾಯಿತು; ಮತ್ತು ಗಂಗೆಯು ನಮಗೆ 'ವಿಶ್ವಬಂಧುತ್ವ'ದ ಸಾರವನ್ನಿತ್ತಳು."

ಈ ಕಾರಣದಿಂದಲೇ ಬಂಗಾಲವು ತನ್ನ ಬಾಹುಗಳನ್ನು ಪಸರಿಸಿ ನವೀನ ವಿಚಾರಗಳನ್ನು ಸ್ವಾಗತಿಸಿತು; ಅವುಗಳನ್ನು ಚೆನ್ನಾಗಿ ಮಥನ ಮಾಡಿ ಸ್ವೀಕಾರಾರ್ಹ ತತ್ವಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿತು. ಯುರೋಪಿನಲ್ಲಿ ನವೀನ ಜಾಗೃತಿಯ ಮಹಾನ್ ದಾರ್ಶನಿಕ "ಗೇಟೆ"ಯ ನಿರ್ವಾಣದ ನಂತರ ನಂದಿ ಹೋಗುತ್ತಿರುವ ಸಮಯದಲ್ಲಿಯೇ ಪೂರ್ವ ದಿಕ್ಕು ಬಂಗಾಲದಲ್ಲಿ ರಾಜಾ ರಾಮ ಮೋಹನ ರೋಯ್ ಅದನ್ನು ಪ್ರಜ್ವಲಿತಗೊಳಿಸಿದರು. ಫ್ರಾನ್ಸಿನ ಮಹಾನ್ ಕ್ರಾಂತಿಯಲ್ಲಿ ಇವರಿಗೆ ನವೀನ ಕಿರಣಗಳು ಗೋಚರಿಸಿದವು. ಕ್ರಾಂತಿಯು ಒಂದು ರಾಷ್ಟ್ರದ ಉತ್ಥಾನದಲ್ಲಿಯೇ ಸೀಮಿತವಾಗಿರದೆ ಸಮಸ್ತ ಮಾನವ ಸಮೂಹದ ಉತ್ಕರ್ಷವನ್ನುಂಟು ಮಾಡುವಂಥಾದ್ದೆಂಬುದು ರಾಮಮೋಹನ ರೋಯ್‌ರವರ ನಿಲುವೆಯಾಗಿತ್ತು. ಅವರಲ್ಲಿ ಅಡಕವಾಗಿದ್ದ ಅಮೂಲ್ಯ ವಿಚಾರ ಧಾರೆಯನ್ನೂ ವಿಶ್ವಕವಿ ರವೀಂದ್ರರು ತನ್ನ ವಾಣಿಯಲ್ಲಿ "ಎಲ್ಲಾ ತರದ ಕೃತ್ರಿಮ ಬಂಧನವನ್ನು ಕಿತ್ತೊಗೆಯುವ ಯುಗವು ಸನ್ನಿಹಿತನಾಗಿದೆ; ಅದೇ ಸಜೀವ ಉಳಿಯಬಲ್ಲುದು! ವಿಶ್ವದೊಂದಿಗೆ ಅದರ ಏಕರೂಪತೆಯು ಸಮೀಕರಣವಾಗುವುದು" ಎಂದು ಸ್ಪಷ್ಟಪಡಿಸಿರುವರು.

ಕ್ರಿ. ಶ. ೧೫೭೬ರಲ್ಲಿ ಮೊಗಲ ಚಕ್ರವರ್ತಿ ಅಕ್ಬರನ ಸೇನಾಪತಿ "ಮಾನಸಿಂಹ"ನು "ದಾವೂದ್‌ಖಾನ"ನನ್ನೂ ಸೋಲಿಸಿ ಬಂಗಾಲವನ್ನು ಮೊಗಲ ಸಾಮ್ರಾಜ್ಯಕ್ಕೆ ಸೇರಿಸಿದನು. ಅಂದಿನಿಂದ ಔರಂಗಜೇಬನ ಮರಣದ ತನಕ ಇದೇ ಪರಿಸ್ಥಿತಿ ಉಳಿಯಿತು. ಔರಂಗಜೇಬನ ಬಳಿಕ "ಅಲೀವರ್ದಿಖಾನ್" ಎಂಬ ಒಬ್ಬ ಪರಾಕ್ರಮಿ ಅಫ್ಘಾನ್ ಸರದಾರನು ಬಂಗಾಲವನ್ನು ಸ್ವಾಧೀನಪಡಿಸಿ ಅದರೊಂದಿಗೆ ಬಿಹಾರ್ ಮತ್ತು ಒರಿಸ್ಸಾ ಪ್ರಾಂತ್ಯಗಳನ್ನು ಸೇರಿಸಿ ನವಾಬನಾಗಿ ರಾಜ್ಯಭಾರ ಮಾಡತೊಡಗಿದನು. ಇವನ ಮಗ "ಸಿರಾಜುದ್ದೌಲ"ನೇ ಬಂಗಾಲದ ಅಂತಿಮ ನವಾಬನಾಗಿದ್ದನು ಇವನು ಕ್ರಿ. ಶ. ೧೭೫೭ರಲ್ಲಿ ನಡೆದ "ಪ್ಲಾಸಿ ಯುದ್ಧ"ದಲ್ಲಿ ಬ್ರಿಟಿಷ್ "ರಾಬರ್ಟ ಕ್ಲೈವ"ನಿಂದ ಸೋಲಿಸಲ್ಪಟ್ಟನು. ಇವನ ನಂತರ ಬಂಗಾಲದ ಎಲ್ಲಾ ನವಾಬರು ಬ್ರಿಟಿಷರ ಕುಣಿತದ ಬೊಂಬೆಗಳಾಗಿದ್ದರು ಇಲ್ಲಿಂದಲೇ ಬಂಗಾಲದಲ್ಲಿ ಆಂಗ್ಲೇಯರ ಅಧಿಪತ್ಯ ಪ್ರಾರಂಭವಾಯಿತು. ಬಂಗಾಲದ ವೀರ ಭೂಮಿಯಲ್ಲಿಯೇ ಬ್ರಿಟಿಷರು ತಮ್ಮ ಸಾಮ್ರಾಜ್ಯದ ಅಸ್ತಿವಾರವನ್ನು ಹಾಕಿದರು; ಇಲ್ಲಿಂದಲೇ ಸಮಗ್ರ ಭಾರತ ದೇಶವನ್ನೂ ಆಕ್ರಮಿಸಿತು.

ದ್ವಿತೀಯ ಮಹಾ ಯುದ್ಧದಿಂತಕೂಡಲೇ ಬಂಗಾಲದಲ್ಲಿ ಸಶಸ್ತ್ರ ಕ್ರಾಂತಿಕಾರಿಗಳ ಆಂದೋಲನವು ರಭಸದಿಂದ ಮುಂದುವರಿಯ ತೊಡಗಿತು. ಈ ಯುದ್ಧ ಕಾಲದಲ್ಲಿ ಭಾರತೀಯರು ಬ್ರಿಟಿಷ್ ಸರಕಾರಕ್ಕೆ ಕೊಟ್ಟ ಸಹಾಯಕ್ಕೆ ಪುರಸ್ಕಾರವಾಗಿ ಬ್ರಿಟಿಷರು ಕೇವಲ ನಾಮಮಾತ್ರದ ಸುಧಾರಣೆಗಳನ್ನಿತ್ತರು; ಈ ಸುಧಾರಣೆಗಳು ಭಾರತ ಜನಾಂಗದ ಪ್ರೌರೋಭಿವೃದ್ಧಿಗೆ ಯಾವತರದ ಪ್ರಯೋಜನವೂ ದೊರಕಲಿಲ್ಲ. ಇದರಿಂದಾಗಿ ಸಮಗ್ರ ಭಾರತ ದೇಶದಲ್ಲಿ ಅಸಂತೋಷ ಉಂಟಾಯಿತು; ಮುಖ್ಯವಾಗಿ ಬಂಗಾಲದ ತರುಣರ ರಕ್ತ ಕುದಿಯ ತೊಡಗಿತು. ಈ ಮಹಾ ಆಂದೋಲನದ ಬೀಜಾಂಕುರವು ೧೯೦೫ರಲ್ಲಿ ಬಂಗಾಲ ವಿಭಜನೆಯ ಕಾಲದಲ್ಲಿ ರೂಪುಗೊಂಡಿತು. ಅಂದಿನಿಂದ ಬಂಗಾಲದಲ್ಲಿ ಸಶಸ್ತ್ರ ಕ್ರಾಂತಿಕಾರಿ ದಳ ಸಂಗಟನೆಯು ಬಲವಾಯಿತು. ಅಲ್ಲಲ್ಲಿ ಸುಸಂಘಟಿತ ರೂಪದಲ್ಲಿ "ವಿಪ್ಲವ"ದ ವ್ಯವಸ್ಥೆಯಾಗುತ್ತಿರುವುದನ್ನು ಕಂಡ ಬ್ರಿಟಿಷ ಸರಕಾರವು ಕ್ರಾಂತಿಕಾರೀ ಆಂದೋಲನವನ್ನು ಹತ್ತಿಕ್ಕುವ ಸಲುವಾಗಿ ಕೂಡಲೆ "ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟ್" ಎಂಬ ಒಂದು ಕಾನೂನನ್ನು ಜಾರಿಗೊಳಿಸಿತು ಆದರೆ ಇದರಿಂದ ಯಾವ ಪರಿಣಾಮವೂ ಬಂಗಾಲಿ ವೀರರಲ್ಲಿ ಉಂಟಾಗಲಿಲ್ಲ ಪಾಶವೀದಮನ ಶಕ್ತಿಯಿಂದ ನೈಜವಾದ ಸ್ವಾತಂತ್ರ್ಯದಾಹವನ್ನು ತಡೆಯಲು ಅಥವಾ ಜಲಪ್ರವಾಹವನ್ನು ಖಡ್ಗ ಪ್ರಹಾರದಿಂದ ಪ್ರತಿಬಂಧಿಸಲಿಕ್ಕೆ ಸಾಧ್ಯವಿದೆಯೇ? ಬ್ರಿಟಿಷರ ದಮನ ನೀತಿ ಹೆಚ್ಚಿದಂತೆಲ್ಲಾ ಕ್ರಾಂತಿಯ ಮಹಾಜ್ವಾಲೆ ಅತ್ಯಧಿಕವಾಗಿ ವಿಸ್ತಾರವಾಗುತ್ತಾ ಬಂತು. ಇದರಿಂದಾಗಿ "ಅನುಶೀಲನ ಸಮಾಜ" ಮತ್ತು "ಆತ್ಮೋನ್ನತಿ" ಎಂಬ ಹೆಸರಲ್ಲಿ ಅತಿ ಬಲಶಾಲಿಯಿಂದ ಎರಡು ಕ್ರಾಂತಿಕಾರಿ ಗುಪ್ತ ಸಂಸ್ಥೆಗಳು ರೂಪುಗೊಂಡವು. ಇವರ ಮುಖಂಡರು: ಯೋಗೀ ಅರವಿಂದ ಘೋಷರ ಅಣ್ಣ "ವಾರೀಂದ್ರ ಕುಮಾರ ಘೋಷ್"ರು ಆಗಿದ್ದರು. ಅಮರ ಮಹಾತ್ಮಾ "ಖುದೀರಾಮ್ ಬೋಸ್"ರವರು ಈ ತಂಡದ ಸದಸ್ಯರಲ್ಲೊಬ್ಬರಾಗಿದ್ದರು.

ಇಂತಹ ವೀರಭೂಮಿ ಬಂಗಾಲದ ಅಂತಃಕರಣವು ರಾಷ್ಟ್ರ ವಿಭಜನೆಯಿಂದ ಜರ್ಜರಿತವಾಯಿತು; ಮಹಾವೇದನೆಯಿಂದ ನಿವೃತ್ತಿಹೊಂದುವ ಸ್ವಪ್ನವನ್ನು ಇಂದಿಗೂ ಅದು ಕಾಣುತ್ತಿದೆ; ಅದರ ಈ ಕನಸು ಎಂದಾದರೂ ಫಲಿಸುವುದೇ? ಬಂಗಾಲವು ತನ್ನ ಗತಕಾಲದ ದುಃಖದಾಯಕ ಇತಿಹಾಸವನ್ನು ಪರಿವರ್ತಿಸಿ ಪುನರಪಿ ಸ್ವರ್ಣಮಯ ಪ್ರಕಾಶಯುಕ್ತ ಸುಖ — ಶಾಂತಿದಾಯಕವಾದ ನವೀನ ಇತಿಹಾಸವನ್ನೂ ನಿರ್ಮಿಸುವ ಸಾಮರ್ಥ್ಯವನ್ನು ದೊರಕಿಸಿಕೊಳ್ಳಬಲ್ಲುದೇ?

ಕಾಲಚಕ್ರವು ರಭಸದಿಂದ ಉರುಳತೊಡಗಿದಾಗ ಭೂತ—ವರ್ತಮಾನ—ಭವಿಷ್ಯಗಳ ಆಗುಹೋಗುಗಳ ಭಯಾನಕ ದೃಶ್ಯಗಳೆಲ್ಲವೂ ಒಮ್ಮೆ ಕಣ್ಣ ಮುಂದೆ ನಿಲ್ಲುತ್ತವೆ. ಚಂದ್ರವಂಶದ ಮಹಾರಾಜ "ಬಲಿ"ಯ ಐದು ಮಂದಿ ಮಕ್ಕಳಲ್ಲಿ ಒಬ್ಬನಾದ "ವಂಗ"ನು ಪಶ್ಚಿಮ ಭಾರತದಲ್ಲಿ "ಪದ್ಮಾ"ನದಿಯ ದಕ್ಷಿಣದಲ್ಲಿ "ಭಾಗೀರಥಿ" ಮತ್ತು "ಬ್ರಹ್ಮಪುತ್ರ" ಇವುಗಳ ನಡುವಿನ ಪ್ರದೇಶದಲ್ಲಿ ಒಂದು ರಾಜ್ಯವನ್ನು ಪ್ರತಿಷ್ಠಾನಗೊಳಿಸಿದನು. ಆ ರಾಜ್ಯದ ಮೂಲಕ ಅವನು ದೇಶ ವ್ಯಾಪಿ ಪ್ರಸಿದ್ಧಿ ಪಡೆದನು. ಅದೇ ಇಂದಿಗೆ ಪಶ್ಚಿಮ ಬಂಗಾಲವೆಂದು ಕರೆಯಲ್ಪಡುತ್ತಿದೆ. ಇದು ವಿಸ್ತಾರದಲ್ಲಿ ಕೇರಳಕ್ಕಿಂತ ಚಿಕ್ಕದಾಗಿದ್ದರೂ ರಾಜಾ "ವಂಗ"ನ ಕಾಲದಲ್ಲಿದ್ದಂತಹ ಅತುಳ ಸಂಪತ್ತಿನಿಂದ ಹೀನವಾಗಿದೆ. ಇಂದಿನ ಇದರ ಪರಿಸ್ಥಿತಿಯನ್ನೂ ಅಂದಿನ ವೈಭವಕ್ಕೆ ಹೋಲಿಸುವಾಗ ಅಂತಃಕರಣವು ಬೆಂದು ಹೋಗುತ್ತದೆ

ಮಗಧದೇಶದ ಮೂಲಕ ಆರ್ಯರು ಬಂಗಾಲವನ್ನು ಪ್ರವೇಶಿಸಿದರೆಂದು ಕೆಲವರ ಅಭಿಪ್ರಾಯ. "ಸಾಂಖ್ಯ ದರ್ಶನ"ವನ್ನೂ ರಚಿಸಿದ "ಕಪಿಲ ಮಹರ್ಷಿ, ಬಂಗಾಲಕ್ಕೆ ಅತಿ ದೂರ ದಕ್ಷಿಣ ಪ್ರದೇಶ "ಸುಂದರವನ"ದಲ್ಲಿ ತನ್ನ ಆಶ್ರಮವನ್ನು ಸ್ಥಾಪಿಸಿದ್ದನು. ಇವರ ಅನುಮೋದದಿಂದಲೇ ರಾಜಾ ಭಗೀರಥನು ಹಿಮಾಲಯದ ಉತ್ತರಕ್ಕೆ ಹರಿಯುತಿದ್ದ ಗಂಗೆಯನ್ನು ಭಾರತದತ್ತ ತಿರುಗಿಸಿ ಪೂರ್ವ ಸಮುದ್ರಕ್ಕೆ ಸೇರುವಂತೆ ಮಾಡಿ ಅಜರಾಮರ ಕೀರ್ತಿ ಪಡೆದನು. ಗುಪ್ತರ ಕಾಲದಲ್ಲಿ ಈ ಪ್ರದೇಶವು "ಸಾಮ್ರಾಟ ಸಮುದ್ರಗುಪ್ತ"ನ ಸಾಮ್ರಾಜ್ಯದ ಒಂದು ಅಂಗವಾಗಿತ್ತು. ಕ್ರಿ. ಶ. ಒಂಭತ್ತನೆಯ ಶತಮಾನದಲ್ಲಿ ಭಾರತದ ಉತ್ತರಭಾಗವೆಲ್ಲವೂ "ಪಾಲ್‌ವಂಶ"ದ ಅರಸರ ಅಧೀನ

(ಮತ್ತನೇ ಪುಟ ನೋಡಿರಿ)



'ನಡೆ ನುಡಿಯಲ್ಲಿ ನಾವು ಒಂದು
ಭಾರತೀಯರು ನಾವು ಎಂದೆಂದೂ

ಸು ಖೀ ಜ್ಞಿ

# ಆಧುನಿಕ

ಅಣುವು ಬರಿಂಪು







೧

೨

೩

**ಚಿತ್ರ ೧—ಮೋಟಾರುಗಾಡಿ**

ಇಂದಿನ ಸಂಚಾರ ಸಾಧನಗಳಲ್ಲಿ ಮೋಟಾರು ಗಾಡಿಯು ಸರ್ವಸಾಮಾನ್ಯವಾದುದು. ೬೦ ಮಿಲಿಯಗಳಿಗೂ ಹೆಚ್ಚಿನ ಮೋಟಾರು ಗಾಡಿಗಳು ಮಾನವನ ಸೇವೆ ಮಾಡಲು ಕಟಿಬದ್ಧವಾಗಿವೆ. ಅವು ಅವನನ್ನು ಹೊತ್ತುಕೊಳ್ಳುವುವು; ಅವನಿಗೆ ಅಗತ್ಯವಾದ ಆಹಾರ ಮತ್ತಿತರ ಒಡವೆ ವಸ್ತುಗಳನ್ನು ಪೂರುವುವು. ಆಂಬುಲೆನ್ಸ್ ಗಾಡಿಯಾಗಿ ಆತನ ಸೇವೆಗೆ ನಿಲ್ಲುವುವು; ಮನೆಗೆ ಬೆಂಕಿ ಬಿದ್ದಾಗ ಅಗ್ನಿಶಾಮಕವಾಗಿ ದುಡಿಯುವುವು. ಹೀಗೆ ಒಂದಲ್ಲ ನೂರು ಬಗೆಯಾಗಿ ಮೋಟಾರು ಗಾಡಿಗಳು ಮಾನವ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿವೆ. ಅವು ಮಾಡುವ ಕೆಲಸವಾದರೂ ವೇಗವಾಗಿ, ಸುರಕ್ಷಿತವಾಗಿ ಮತ್ತು ಮಿತವ್ಯಯದಿಂದ. ಈ ತ್ರಿಗುಣದಿಂದಲೇ ಜಗತ್ತಿನ ಸಾರಿಗೆ ಸಂಪರ್ಕಗಳಲ್ಲಿ ಮೋಟಾರುಗಾಡಿ ಮಹತ್ವದ ಸ್ಥಾನ ಗಳಿಸಿದೆ. ಆದರೆ, ಇಂದಿನ ಮೋಟಾರುಗಾಡಿಯು ಅಮೋಘ ಯಂತ್ರಕಲೆ ಮಾನವನಿಗಿತ್ತ ಸಫಲ ವರದಾನವೆಂದರೆ, ನ್ಯಾಯೋಚಿತವಾಗುವುದು.

**ಚಿತ್ರ ೨—ಮೋಟಾರುಗಾಡಿಗೆ ಮೊದಲು**

೧೮೩೦ನೆ ಇಸವಿಗೆ ಮೊದಲು ರೇಲು ಗಾಡಿಯ ಅವಿಷ್ಕಾರವೇನೋ ಆಗಿತ್ತು. ಆದರೆ, ಅದು ದೀರ್ಘ ಯಾತ್ರಿಕರಿಗೆ ಹೆಚ್ಚಿನ ಅನುಕೂಲವಾಗಿತ್ತೇ ಹೊರತು ಚಿಕ್ಕ ಪ್ರಯಾಣಗಳಿಗೆ ಯೋಗ್ಯವಾಗುತ್ತಿರಲಿಲ್ಲ. ಆದುದರಿಂದ ಪ್ರಾಣಿಗಳಿಂದ ಎಳೆಯಲ್ಪಡುವ ಗಾಡಿಯನ್ನೇ ನೆಲ ಪ್ರಯಾಣವು ಹೊಂದಿಕೊಂಡಿತ್ತು. ಈ ಸಾಧನಗಳಿಂದ ತನ್ನ ಎಲ್ಲ ಸಾಗಾಟದ ಕೆಲಸವನ್ನು ಸಂಯಾಗಿ ಮಾಡಲು ಮಾನವನಿಗೆ ಸಾಧ್ಯವೆನಿಸುತ್ತಿರಲಿಲ್ಲ. ಎತ್ತು-ಕುದುರೆ ಮೊದಲಾದ ಪ್ರಾಣಿಗಳು ಗಾಡಿಯನ್ನು ನಂಬುಗೆಗೆ ತಕ್ಕಂತೆ ಎಳೆಯುತ್ತವೆ ನಿಜ. ಆದರೆ ಅವುಗಳ ಶಕ್ತಿಗೊಂದು ಮಿತಿಯಿದೆ, ವೇಗದಲ್ಲೂ ತಡೆಯಿದೆ. ಆರು ಕುದುರೆಗಳನ್ನು ಒಂದು ಗಾಡಿಗೆ ಕಟ್ಟಿದರೂ ಅವು ಕೆಲವು ಟನ್ನುಗಳನ್ನು ಮಾತ್ರ ಹೊರುತಿದ್ದುವು ದಿನದ ಪ್ರಯಾಣವಾದರೂ ಅತ್ಯಲ್ಪವಾಗುತ್ತು. ವಿಚಾರದಲ್ಲಿ ತೀವ್ರತೆ ಉಂಟಾದಾಗ ಪ್ರಯಾಣದಲ್ಲಿ ಅದು ಏಕಾಗಬಾರದು?

**ಚಿತ್ರ ೩—ಆವಿಷ್ಕರ್ತರು**

ಕಗ್ನಾಟ್ ಎಂಬ ಒಬ್ಬ ಫ್ರೆಂಚನು ೧೭೬೯ರಲ್ಲಿ ಮೊತ್ತ ಮೊದಲ ಮೋಟಾರು ಗಾಡಿಯನ್ನು ನಿರ್ಮಿಸಿದನು. ಇದನ್ನು ಮೋಟಾರು ಗಾಡಿಯೆನ್ನುವುದಕ್ಕಿಂತ ಉಗಿಯ ಸಹಾಯದಿಂದ ಸರಿಯುವ 'ಗಾಡಿ' ಎಂದು ಹೇಳುವುದೇ ಒಳ್ಳೆಯದು. ಇದರ ಉಪಯೋಗವಾಗುತಿದ್ದುದು ಮಾನವ ಪ್ರಯಾಣಕ್ಕಲ್ಲ; ಯುದ್ಧದ ಸಾಮಗ್ರಿಗಳನ್ನು ಒಯ್ಯುವುದಕ್ಕಾಗಿ. ಮುಂದಿನ ನೂರಾರು ವರ್ಷಗಳಲ್ಲಿ ಅಮೆರಿಕೆ— ಯುರೋಪ್‌ಗಳಲ್ಲಿ ಮೋಟಾರುಗಾಡಿಯ ಹಲವಾರು ಮಾದರಿಗಳು ರಚನೆಯಾದುವು. ಇವೆಲ್ಲ ಪ್ರಯತ್ನ— ಸಂಶೋಧನೆಗಳ ಪರಿಣಾಮವಾಗಿ ೧೮೮೫ರಲ್ಲಿ ಜರ್ಮನಿಯ ಕಾರ್ಲ್ ಬೆಂಜ್ ಎಂಬವನು ಗ್ಯಾಸೊಲಿನ್‌ನ ಮೂಲಕ ಶಕ್ತಿ ಸಂಪಾದಿಸಿ ಓಡಾಡಬಲ್ಲ ಮೋಟಾರನ್ನು ಕಂಡು ಹಿಡಿದನು.

**ಚಿತ್ರ ೪. ಡುರ್‍ಯಿಯಾ ಸಹೋದರರು**

ಬೆಂಜನ ಶೋಧನೆಯಿಂದ ಸ್ಫೂರ್ತಿಗೊಂಡವರು ಅನೇಕರು. ಅವರಲ್ಲಿ ಅಮೆರಿಕೆಯ ಡುರ್‍ಯಿಯಾ ಸಹೋದರರೂ ಸೇರಿದ್ದರು. ಅವರು ೧೮೯೩ರಲ್ಲಿ ಸುಧಾರಿತ ಯಂತ್ರ ಒಂದನ್ನು ತಯಾರಿಸಿದರು. ಇವರನ್ನೇ ಅನುಕರಿಸಿದರು ಅನೇಕರು. ಡುರ್‍ಯಿಯಾ ಸಹೋದರರು ನಿರ್ಮಿಸಿದ ಮಾದರಿಯಲ್ಲೇ ಅನೇಕಾನೇಕ ಸುಧಾರಣೆಗಳು ನಡೆಯತೊಡಗಿದುವು. ಆ ಸಮಯದಲ್ಲಿ ಮಾರ್ಗದಲ್ಲಿ ಓಡಾಡುತಿದ್ದ ಕಾರುಗಳು ಅತ್ಯಲ್ಪ. ಇವನ್ನು ಕಂಡ ಪನ ಕುದುರೆಗಳು ಅಂಜಿ ಸಿಕ್ಕಾಪಟ್ಟೆ ಓಡುತಿದ್ದುವು. ಆದಕ್ಕೆಂದು ವಿವಿಧ ರಾಜ್ಯಗಳಲ್ಲಿ ಅವುಗಳ ಓಡಾಟದ ಬಗ್ಗೆ ನಿರ್ಬಂಧ ಹೇರಲಾಯಿತು.

**ಚಿತ್ರ ೫—ಆರಂಭದ ಕಾರುಗಳು**

ಅಮೆರಿಕೆ—ಯುರೋಪ್‌ಗಳ ಕೆಲವಾರು ಉದ್ಯಮಿಗಳು ಮೋಟಾರು ಕಾರುಗಳನ್ನು ತಯಾರಿಸಲು ಆರಂಭ ಮಾಡಿದರು. ಆದರೆ, ಕಾರಿನ ಮಟ್ಟವನ್ನು ಏಕರೀತಿಯಲ್ಲಿಂಸಲು ಅವರ್‍ಯಾರೂ ಪ್ರಯತ್ನ ಮಾಡಲಿಲ್ಲ. ಪ್ರತಿಯೊಂದನ್ನೂ ಮನುಷ್ಯ ಕೈಯಿಂದಲೇ ತಯಾರಿಸುತಿದ್ದ. ಆದುದರಿಂದ ಇವುಗಳ ಬೆಲೆ ಗಗನ ಮುಟ್ಟುತಿತ್ತು. ಹಾಗಾಗಿ ಬರಿಯ ಕೈಬೆರಳೆಣಿಕೆಯಷ್ಟೇ ಶ್ರೀಮಂತರು ಮೋಟಾರು ಗಾಡಿಗಳನ್ನು ಇಟ್ಟುಕೊಳ್ಳುವ ಶಕ್ತಿ ಹೊಂದಿದ್ದರು. ಗಾಡಿಯ ಯಾವುದಾದರೊಂದು ಭಾಗ ಕೆಟ್ಟು ಹೋಯಿತೆಂದರೆ ಆ ಗಾಡಿಗೆ ತಕ್ಕಂತೆಯೇ ಅದನ್ನು ಮತ್ತೆ ರಚಿಸಬೇಕಾಗಿತ್ತು. ೧೯೦೦ರ ಹೊತ್ತಿಗೆ ಇಡಿಯ ಅಮೆರಿಕೆಯಲ್ಲಿ ಸುಮಾರ ೪,೦೦೦ ಮೋಟಾರು ಕಾರುಗಳು ಕಟ್ಟಲ್ಪಟ್ಟಿದ್ದುವು.

**ಚಿತ್ರ ೬—ವಿಸ್ತೃತ ಮಾರುಕಟ್ಟೆ**

ಮಾರುಕಟ್ಟೆಯಲ್ಲಿ ಮೋಟಾರು ಗಾ[ಡಿ]ಗಳಿಗೆ ಬೇಕಷ್ಟು ಗಿರಾಕಿಯಿತ್ತು. ಆದ[ರೆ] ಅವರು ನಿರಾಶರಾಗುತಿದ್ದರು. ಇದರಿಂ[ದ] ಮೋಟಾರು ಉದ್ದಿಮೆದಾರರಿ[ಗೆ] ಒಂದು ಸತ್ಯ ಸಂಗತಿ ಹೊಳೆಯಿತು. [ಕಾ]ರುಗಳನ್ನು ಕಡಿಮೆ ಬೆಲೆಗೆ ಪೂರೈಸಿ[ದರೆ] ಗಿರಾಕಿಗಳು ಹೆಚ್ಚಾಗುತ್ತಾರೆ. ಅವರು [ಬೆ]ಲೆ ತೆರೆದು ಕೊಂಡಾರು. ಆಗಿನ ಗಾಡಿ ರ[ಚ]ನಾ ತಂತ್ರ ಮತ್ತು ವಿಧಾನಗಳಲ್ಲಿ ಕಾ[ರು]ಗಳ ಉತ್ಪಾದನಾ ವೆಚ್ಚವನ್ನು ಕಡಿ[ಮೆ] ಮಾಡುವುದು ಸಾಧ್ಯವೇ ಇರಲಿಲ್ಲ. ಆ[ದು]ದರಿಂದಾಗಿ ಕೆಲವೊಂದು ಪ್ರಗತಿಗಾ[ಮಿ] ಕಂಪೆನಿಗಳು ಗಾಡಿ ನಿರ್ಮಾಣವನ್ನು ಪ[ರಿ]ಷ್ಕರಿಸುವ ತಂತ್ರಗಳತ್ತ ಕಿವಿಗೊಡ[ಲಾ]ರಂಭಿಸಿದುವು.

**ಚಿತ್ರ ೭—ಹೆನ್ರಿ ಫೋರ್ಡ್**

೧೮೬೩ರಲ್ಲಿ ಮಿಚಿಗನ್‌ನ ಗ್ರೀನ್‌ಫೀ[ಲ್ಡ್]ನಲ್ಲಿ ಜನಿಸಿದ ಹೆನ್ರಿ ಫೋರ್ಡ್ ಮೋ[ಟಾರು]ಗಾಡಿ ಉದ್ದಿಮೆಯ ಕ್ರಾಂತಿ ಪು[ರು]ಷನಾದನು. ಈತನು ವ್ಯವಹಾರದಲ್ಲಿ [...] ಯಂತ್ರಜ್ಞನಾಗಿದ್ದನು. ೧೮೯೬ರಲ್ಲಿ [ಆ]ವನು ತನ್ನ ಮೊತ್ತ ಮೊದ[ಲ] ಗಾಡಿ ಕಟ್ಟಿದನು. ಆ ಸಮಯದ ಇ[ತರ] ಉತ್ಪಾದಕರಂತೆಯೇ ಗಾಡಿಯ ಬೆಲೆ[ಯ]ನ್ನು ಕಡಿಮೆ ಮಾಡುವುದೇ ಆತನ ಉದ್ದೇ[ಶ]ವಿತ್ತು. ಫೋರ್ಡ್ ಯಾರಿಗಳಿದನೋ ಇಲ್ಲವೋ. ಅಂತೂ ಈ ದಿಸೆಯಲ್ಲಿ [...] ಉಳಿದವರಿಗೆ ಮಾರ್ಗದರ್ಶನ ಮಾಡಿ[ದ]. ಇದು ಖಂಡಿತ

**ಚಿತ್ರ ೮—ಎಸೆಂಬ್ಲಿ ಲೈನ್**

೧೯೧೩ರಲ್ಲಿ ಹೆನ್ರಿ ಫೋರ್ಡ್ ಮೋ[ಟಾ]ರು ಉದ್ದಿಮೆಯಲ್ಲೇ ಮಹತ್ವದ ಕ್ರಾಂ[ತಿ]





೭

೮

೯

೧೦

ಮೈಲುಗಳಲ್ಲಿ

# ...ರು ಗಾಡಿ

...ಗಳಲ್ಲಿ ಭೀಮಾಕಾರ

...ಷೆ



೭

೮



೯

ಯನ್ನೆಬ್ಬಿಸಿದನು. 'ಎಸೆಂಬ್ಲಿ ಲೈನ್' ನ್ನು ಆತ ಪ್ರಾರಂಭಿಸಿದನು. ಈ ವಿಧಾನದಲ್ಲಿ ಕಾರು ವೇದಿಕೆಯೊಂದರಲ್ಲಿ ಮುಂದು ವರಿಯುತ್ತ ಹೋಗುವಾಗ ಮನುಷ್ಯರು ಅದರ ಅವಯವಗಳನ್ನು ಜೋಡಿಸುವುದು ಸಾಧ್ಯವಾಯಿತು. ಇದರಿಂದ ಎಸೆಂಬ್ಲಿ ಸಮಯವು ಒಂದೂವರೆ ದಿನದಿಂದ ೯೩ ನಿಮಿಷಗಳಿಗಿಳಿಯಿತು. ಫೋರ್ಡ್ ತನ್ನ ಈ ಮಾದರಿಯ ಕಾರುಗಳನ್ನು, ಕಡಿಮೆ ಬೆಲೆಯಲ್ಲಿ ಮಿಲಿಯಗಟ್ಟಲೆಯಲ್ಲಿ ಮಾರಿದನು. ಈ ಮಾದರಿಯು 'T ಕಾರು' ಎಂದು ಕರೆಯಲ್ಪಡುತ್ತದೆ.

### ಚಿತ್ರ ೯—ಸ್ವಯಂಚಾಲಕ

ಸಿ. ಎಫ್. ಕ್ಯಾಟರಿಂಗ್ ಅಮೆರಿಕೆಯ ಮೋಟಾರು ಉದ್ದಿಮೆಯ ದೊರೆ. ಈತನು ೧೯೧೧ರಲ್ಲಿ ವಿದ್ಯುತ್ ಸ್ವಯಂಚಾಲಕವನ್ನು ಸಂಶೋಧಿಸಿದನು. ಇದು ಮೋಟಾರು ಉದ್ದಿಮೆಯ ಇತಿಹಾಸವನ್ನೇ ಬದಲಿಸಿತೆನ್ನಬಹುದು. ಮೋಟಾರಿನ ಇಂಜಿನನ್ನು ಕೈಸರಳಿನಿಂದ ಚಲಿಸುವಂತೆ ಮಾಡುವ ಅಗತ್ಯವುಳಿಯಲಿಲ್ಲ. ಈಗ ಮಹಿಳೆಯರೂ ಯಾವ ಭಯೋತ್ಪಾದಕಗಳಿಲ್ಲದೆ ಮೋಟಾರುಗಳನ್ನು ನಡೆಸುವುದು ಸಾಧ್ಯವಾಯಿತು. ಕ್ಯಾಟರಿಂಗ್‌ನ ಶೋಧನೆ ಗುರಿ ಸಾವಿರಾರು ಮೈಲಿಗಲ್ಲಾಯಿತು.

### ಚಿತ್ರ ೧೦—ಇತರರು

ಎಸೆಂಬ್ಲಿ ಲೈನ್ ಕಾರಣದಿಂದ ಮೋಟಾರಿನ ಬೆಲೆ ಇಳಿಯಿತು. ಸ್ವಯಂಚಾಲಕದಿಂದ ಸೌಲಭ್ಯ ಹೆಚ್ಚಿತು. ಇವುಗಳೊಡನೆ ಮೋಟಾರುಗಳ ಬೇಡಿಕೆಯೂ ನಿರಂತರವಾಗಿ ಏರಿತು. ೧೯೧೫ ಉಕ್ಕಿನ ಶರೀರವನ್ನು ಯಂತ್ರಕ್ಕೆ ಕೊಡಲು ಆರಂಭಮಾಡಿದರು. ೧೯೧೯ರಲ್ಲಿ ನಾಲ್ಕೂ ಚಕ್ರಗಳಿಗೆ ಬ್ರೇಕ್ ವ್ಯವಸ್ಥೆಯು ದೊರೆಯಿತು. ಮುಂದೆ "ಸುರಕ್ಷಾ ಕಾಚ"ವು ಬಳಕೆಗೆ ಬಂತು. ಆಟೊಮಾಟಿಕ್ ಟ್ರಾನ್ಸ್ಮಿಶನ್‌ಗಳು ಮತ್ತು ವಿದ್ಯುತ್ ಸ್ಟೀರಿಂಗ್‌ಗಳು ಪ್ರಯೋಗಕ್ಕೆ ಬಂದುವು. ಇವುಗಳ ಜತೆಗೆ ಕಾರುಗಳು ಮನ ಮೋಹಕವಾಗಿಯೂ ಸುಖ ಪ್ರಯಾಣಕಾರಕವಾಗಿಯೂ ಆಗುವಂತೆ ಎಚ್ಚರಿಕೆ ವಹಿಸಲಾಯಿತು.

### ಚಿತ್ರ ೧೧—ಉದ್ದಿಮೆ

ಸುವಿಸ್ತೃತ ರೀತಿಯಲ್ಲಿ ಮೋಟಾರುಗಳ ರಚನೆಯಾಗತೊಡಗಿದುದರಿಂದ ಅದರ ಬಿಡಿಭಾಗಗಳನ್ನು ಪೂರೈಸುವ ಇತರ ಉದ್ಯಮಗಳು ಆರಂಭವಾದುವು. ಉಕ್ಕು, ಗಾಜು, ರಬ್ಬರ್ ಮತ್ತಿತರ ಉದ್ದಿಮೆಗಳು ಬೆಳೆದು ಬಂದುವು. ಸಾವಿರಾರು ಮಂದಿಗೆ ಕೆಲಸವನ್ನು ಒದಗಿಸಿದುವು. ಒಂದು ಅಮೆರಿಕನ್ ಮೋಟಾರು ಗಾಡಿಯನ್ನು ಕಟ್ಟಬೇಕಾದರೆ ಪ್ರಪಂಚದ ೫೬ ದೇಶಗಳಿಂದ ಸುಮಾರು ೩೦೦ ಬಗೆಯ ಭಾಗಗಳು ಬರಬೇಕಾಗುತ್ತದೆ.

### ಚಿತ್ರ ೧೨—ಮಾರ್ಗಗಳು

ಮೊದಲಿನ ಮಾರ್ಗಗಳು ಕೆಸರ ಗುಂಡಿಗಳು. ನೀರು ಬಿದ್ದಾಗ ಅವುಗಳು ಪ್ರಯಾಣಕ್ಕೆ ತೀರ ಅಯೋಗ್ಯವಾಗಿದ್ದುವು. ಮೋಟಾರು ಗಾಡಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತ ಬಂದಂತೆ ಮಾರ್ಗಗಳ ಉನ್ನತೀಕರಣದತ್ತ ಗಮನ ಹರಿಸುವುದು ಅಗತ್ಯವಾಯಿತು. ಇಂದು ಅಮೆರಿಕೆಯೊಂದರಲ್ಲೇ ಮೂವತ್ತು ಲಕ್ಷ ಮೈಲು ಮಾರ್ಗವಿದೆ. ಇದರಲ್ಲಿ ಇಪ್ಪತ್ತು ಲಕ್ಷ ಮೈಲುಗಳು ಜಲ್ಲಿ ಡಾಮರ್ ಹಾಕಿ ಗಟ್ಟಿಯಾದುವು. ಭಾರತದಂತಹ ನವೋನ್ನಿರ್ಮಿತ ದೇಶಗಳಲ್ಲಿಯೂ ಮೋಟಾರು ಗಾಡಿಗಳು ಸರ್ವಸಾಮಾನ್ಯವಾಗುವ ಕಾಲವಿಂದು ಬಂದಿದೆ. ಇದರ ಜತೆಗೆ ಮಾರ್ಗೋನ್ನತಿಯೂ ಪ್ರಗತಿ ಪಡೆಯುತ್ತಿದೆ.

### ಚಿತ್ರ ೧೩—ಎಣ್ಣೆ

ಮೋಟಾರು ಗಾಡಿಯು ಜನಪ್ರಿಯವಾಗುವ ವರೆಗೆ ತೈಲೋದ್ಯಮವು ಬೆಳೆದಿರಲಿಲ್ಲ. ಅದಕ್ಕೆ ಮಹತ್ವವೂ ಇರಲಿಲ್ಲ. ಅದು ವರೆಗೆ ಎಣ್ಣೆಯ ಉಪಯೋಗವಾಗುತಿದ್ದುದು ಬರಿಯ ದೀಪ ಉರಿಸಲಿಕ್ಕಾಗಿ. ಕಾರುಗಳ ಸಂಖ್ಯೆ ಹೆಚ್ಚುತ್ತ ಬಂದಂತೆ ಗ್ಯಾಸೊಲಿನ್‌ನ ಉಪಯೋಗವೂ ಹೆಚ್ಚತೊಡಗಿತು; ಅದರ ಮಹತ್ವವೂ ಬೆಳೆಯಿತು. ಇಂದು ಅಮೆರಿಕೆಯೊಂದೇ ಎರಡೂಕಾಲು ಬಿಲಿಯ ಬ್ಯಾರಲ್‌ಗಳಷ್ಟು ಎಣ್ಣೆ ಪ್ರತಿ ವರ್ಷ ಉತ್ಪಾದಿಸುತ್ತದೆ. ಭಾರತವೂ ಲಭ್ಯವಿರುವ ಕಲ್ಲೆಣ್ಣೆಯನ್ನು ಶುದ್ಧ ಮಾಡಿಕೊಳ್ಳುವಲ್ಲಿ ಆಸಕ್ತಿ ವಹಿಸಿದೆ. ತೈಲವಿಂದು ಮೋಟಾರುಗಳಿಗೆ ಮಾತ್ರವಲ್ಲ' ಹಡಗು ಮತ್ತಿತರ ಕ್ಷೇತ್ರಗಳಲ್ಲೂ ಉರುವಲಾಗಿದೆ.

### ಚಿತ್ರ ೧೪—ಜೀವನ

ಮೋಟಾರುಗಳು ಇಂದು ಜನ ಜೀವನದ ದೆಸೆಯನ್ನೇ ಪರಿವರ್ತಿಸಿವೆ. ಅಮೆರಿಕೆಯಂತಹ ಸಂಪನ್ನ ರಾಷ್ಟ್ರದಲ್ಲಿ ಮೂರರಲ್ಲಿ ಎರಡು ಕುಟುಂಬಗಳು ಕಾರಿನ ಮಾಲಿಕರಾಗಿವೆ. ಈ ಕಾರುಗಳು ವರ್ಷಂಪ್ರತಿ ೧೦,೦೦೦ ಮೈಲು ಓಡುತ್ತವೆ. ಕಾರು ಇದ್ದರೆ, ತಮ್ಮ ಕೆಲಸದ ಕೇಂದ್ರದಿಂದ ದೂರವಿರಬಹುದು; ಆರಾಮವಾಗಿ ದಿನ ಯಾಪನೆ ಮಾಡಬಹುದು. ನಮ್ಮ ದೇಶದಲ್ಲೂ ಇತ್ತೀಚೆಗಿನ ದಿನಗಳಲ್ಲಿ ಮೋಟಾರು ಕಾರುಗಳ ಉಪಯೋಗ ಹೆಚ್ಚಿದೆ. ಸ್ವಂತ ಕಾರಿಟ್ಟುಕೊಂಡವರು ಕೆಲವರೇ ಆದರೂ ಬಾಡಿಗೆಯ ಕಾರುಗಳ ಉಪಯೋಗ ಮಾಡದೆ ಇದ್ದವರು ಅತಿವಿರಳವೆನ್ನಬಹುದು. ಸುಲಭ ಬೆಲೆಯ ಮೋಟಾರು ಕಾರುಗಳನ್ನು ನಿರ್ಮಿಸುವ ಯೋಜನೆಯೊಂದು ಸರಕಾರದ ಯೋಜಕರ ಮುಂದಿದ್ದು ಅದು ನಾಲ್ಕನೆಯ ಯೋಜನಾವಧಿಯಲ್ಲಿ ಕಾರ್ಯರೂಪಕ್ಕೆ ಬರುವ ನಿರೀಕ್ಷೆಯಿದೆ.

### ಚಿತ್ರ ೧೫—ಭವಿಷ್ಯ

ವಾಯು ವಿಮಾನ ಉದ್ಯಮವು ತ್ವರಿತ ಗತಿಯಲ್ಲಿ ಸಾಗುತ್ತಿದೆ. ಆದರೂ ಅದರಿಂದ ಮೋಟಾರು ಉದ್ಯಮಕ್ಕೆ ಆಘಾತವೊದಗಲಾರದು. ಉರುವಲು - ಸ್ವಯಂಚಾಲನೆ, ಮಾರ್ಗಗಳು—ಮೊದಲಾದ ರಂಗಗಳಲ್ಲಿ ದಿನ ದಿನಕ್ಕೆ ನಡೆಯುತ್ತಿರುವ ಸಂಶೋಧನೆಗಳು ಈ ವಿಶ್ವಾಸವನ್ನು ದೃಢಪಡಿಸುತ್ತವೆ. ಮನೆ ಮನೆಯಲ್ಲಿ ಮೋಟಾರನ್ನಿಡುವ ಕಾಲ ಬಂದರೂ ಚಕಿತರಾಗಬೇಕಿಲ್ಲ.

---

ಜೇನಿನ ಸಹಾಯದಿಂದ ಎಲ್ಲಾ ನೊಣಗಳನ್ನೂ ಹಿಡಿಯಬಹುದು. ಜೇನಿನಂಥ ಮಾತಿನಿಂದ ಯಾರನ್ನೂ ವಶಪಡಿಸಬಹುದು.

ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಸುಳ್ಳಿನ ಗುಳಿಗೆಗಳಿಂದಲೇ ಉಸಿರುಕಟ್ಟಿ ಸಾಯುತ್ತವೆ.

० ० ०

ತಮ್ಮ ಹಿರಿಯರ ಹಿನ್ನೆಲೆಯನ್ನು ಅರಿಯದ ಜನ ತಮ್ಮ ಮುಂದಿನವರ ಭವಿಷ್ಯವನ್ನು ನೋಡಲಾರರು.

० ० ०

ಜಗತ್ತಿನಲ್ಲಿ ಎರಡೇ ಕುಟುಂಬಗಳಿವೆ. ಇರುವವರು ಮತ್ತು ಇಲ್ಲದವರು.

० ० ०

ಜಗತ್ತಿನಲ್ಲಿ ಎಲ್ಲಾ ಶಬ್ದಗಳಿಗಿಂತ ಹೊಗಳಿಕೆಯ ಶಬ್ದವೇ ಕರ್ಣಾನಂದಕರ.

೧೨



೧೩

೧೪



೧೫

ಚಾರುಚಿಯನ

# ಕನ್ನಡಕ್ಕೆ ದೊಡ್ಡ ಅನ್ಯಾಯ

## ಈ ಅನ್ಯಾಯವನ್ನು ಪ್ರತಿಭಟಿಸುವ ಕೆಚ್ಚು ಕನ್ನಡಿಗರಲ್ಲಿದೆಯೆ?

ಕೈಗಾರಿಕೆಯ ಮೂಲಕ ಔದ್ಯಮಿಕ ಉನ್ನತಿಯನ್ನ ಸಾಧಿಸಿ ಸಮೃದ್ಧ ಭಾರತ ವನ್ನು ಕಟ್ಟಬೇಕು— ಇದು ದಿವಂಗತ ಪ್ರಧಾನಿ ಜವಾಹರಲಾಲರ ನಿಲುವು ಯಾಗಿತ್ತು.

ಇದಕ್ಕಾಗಿಯೇ ವಿದೇಶೀಯ ನೆರವಿನಿಂದ ದುರ್ಗಾಪುರ, ರೂರ್ಕೇಲಾ ಮತ್ತು ಭಿಲಾಯಿಗಳಲ್ಲಿ ಉಕ್ಕಿನ ಕಾರಖಾನೆಗಳು ಸ್ಥಾಪಿತವಾದುವು; ಉತ್ಪಾದನೆಗೆ ತೊಡಗಿದುವು. ನಾಲ್ಕನೆಯದಾದ ಬೊಕಾರೋ ಕಾರಖಾನೆ ಒಮ್ಮೆ ಅಮೆರಿಕೆಯ ಮತ್ತೊಮ್ಮೆ ರಶಿಯದ ಕೋರ್ಟಿನಲ್ಲಿ ಉರುಳಾಡಿ ಈಗ ರಷ್ಯನರ ಕೈಯ ರಕ್ಷೆ ಪಡೆದಿದೆ, ಈ ನಡುವೆಯೇ ಐದನೆಯ 'ಸಾರ್ವಜನಿಕ ರಂಗದ ಉಕ್ಕಿನ ಕಾರಖಾನೆ ಎಲ್ಲಿರಬೇಕು ಎಂಬ ಪ್ರಶ್ನೆ ಉದ್ಭೂತ ವಾಯ್ತು.

ಉತ್ತರ—ದಕ್ಷಿಣಗಳ ಭೇದಭಾವ ದೂರಮಾಡಲು ಅದು ದಕ್ಷಿಣ ಭಾರತದಲ್ಲಿರಬೇಕು—ಸರಿ, ಅಲ್ಲಿ ಎಲ್ಲಿರಬೇಕು?

ಆಂಧ್ರದ ವಿಶಾಖಪಟ್ಟಣ ಮತ್ತು ಕರ್ನಾಟಕದ ಹೊಸ ಪೇಟೆಗಳು ಇದಕ್ಕೆ ಒಳ್ಳೆಯ ಸ್ಥಳಗಳು ಯಾಕೆ?

ತಜ್ಞರು ಹೇಳುತ್ತಾರೆ: ಹೊಸಪೇಟೆಯ ಸುತ್ತಲೂ ಸೇ. ೬೬ರಷ್ಟು ಕಬ್ಬಿಣವುಳ್ಳ ಅದುರುಗಳು ದೊರೆಯುತ್ತವೆ. ಇನ್ನು ಮುಂದಕ್ಕೆ ನೂರು ವರ್ಷಗಳ ಕಾಲವೂ ಕಾಣೆಯಾಗದಂತಹ ಅದುರಿನ ನಿಕ್ಷೇಪವಿಲ್ಲಿದೆ. ಸುಣ್ಣದ ಕಲ್ಲು, ಡೊಲೊಮೈಟ್, ಮ್ಯಾಂಗನೀಸ್—ಮೊದಲಾದುವೂ ಬೇಕು; ನೀರು ಅತ್ಯಗತ್ಯ. ಇವೆಲ್ಲ ಸಾಭಾಗ್ಯಗಳೂ ಹೊಸಪೇಟೆಗೆ ಸಲ್ಲುತ್ತವೆ.

ಆದರೆ, ಇದ್ದಿಲು? ಮಧ್ಯಪ್ರದೇಶದಿಂದಲೋ, ಬಿಹಾರದಿಂದಲೋ ಅಥವಾ ಮತ್ತೆಲ್ಲಿಂದಲೋ ತರಿಸಿಕೊಳ್ಳಬೇಕು.

ಛೆ...ಇದೆಂತಹ ವೆಚ್ಚದ ಬಾಬು? ಹೊಸಪೇಟೆ ಪ್ರಯೋಜನವಿಲ್ಲ. ವಿಶಾಖಪಟ್ಟಣವೇ ವಾಸಿ.

ಅದು ಹೇಗೆ?

ಅದಕ್ಕೆ ಹೊಸಪೇಟೆಯಲ್ಲಿರುವ ಯಾವ ಅನುಕೂಲತೆಯೂ ಇಲ್ಲ. ಹೊಸಪೇಟೆ—ವಿಶಾಖಪಟ್ಟಣಗಳೆರಡೂ ಯೋಗ್ಯ ಸ್ಥಳಗಳು...ಆದರೂ ಸಮುದ್ರ ಸಾಮೀಪ್ಯವಿರುವುದರಿಂದ ವಿಶಾಖಪಟ್ಟಣವೇ ಹೆಚ್ಚು ಒಳ್ಳೆಯದು— ಇದು ನೀಲಂ ಸಂಜೀವ ರೆಡ್ಡಿಯವರನ್ನು ತಲೆದೂಗಿಸಿದ ಬ್ರಿಟಿಷ್-ಅಮೆರಿಕನ್ ಸಂಸ್ಥೆಯ ಪರಿಣತರ ಅಭಿಮತ.

ಆದುದರಿಂದಲೇ ಐದನೆಯ ಉಕ್ಕಿನ ಕಾರಖಾನೆ ವಿಶಾಖಪಟ್ಟಣದಲ್ಲಿ, ಆರನೆಯದು ಹೊಸಪೇಟೆಯಲ್ಲಿ.

ಐದನೆಯದರ ಚೀಟಿ ನಾಲ್ಕನೆಯ ಯೋಜನೆಯಲ್ಲಿ ಮೇಲೆ ಬೀಳಬಹುದು. ಆದರೆ ಆರನೆಯದರದು?

ಸಮುದ್ರದ ಉಪ್ಪು ನೀರಿನಿಂದ, ದಂಡೆಯ ಉಸುಬಿನಿಂದ ಉಕ್ಕು ತಯಾರಿಸಲಾಗುತ್ತದೆಯೆ? ಅದುರಿನಿಂದ ತೊಡಗಿ ಎಲ್ಲವನ್ನೂ ವಿಶಾಖಪಟ್ಟಣಕ್ಕೆ ಸಾಗಿಸಬೇಕಾಗುತ್ತದೆ. ಈ ವೆಚ್ಚದ ದೃಷ್ಟಿಯಲ್ಲಿ ಹೊಸ ಪೇಟೆಯೇ ಲಾಭಕರ.

ತಯಾರಿಸಿದ ಉಕ್ಕನ್ನು ದೇಶದ ನಾನಾ ಮೂಲೆಗಳಿಗೆ ಕಳಿಸುವುದಕ್ಕೂ ಹೊಸಪೇಟೆಯು ಕೇಂದ್ರ ಸ್ಥಳ. ಹಾಗಿರುವಾಗ, ಹೊಸ ಪೇಟೆಯ ಕಾರಖಾನೆಗೆ ಅಡ್ಡಗಾಲು ಯಾಕೆ ಇಡಬೇಕಾಯಿತು? ಸಮುದ್ರ ಸಾಮೀಪ್ಯದ ಪ್ರಶ್ನೆ ಯಾಕೆ ಮುಂದೆ ಬಂತು? ಇದೂ ಏತಕ್ಕೆ? ನಿಂದ್ಯಾತಕ್ಕೆಂದೆ?

ನೀಲಂ ಸಂಜೀವ ರೆಡ್ಡಿಯವರು ಆಂಧ್ರಕ್ಕೆ ಉಪಕಾರ ಮಾಡಲು ಇಚ್ಛಿಸಿದ್ದಾರೆ, ಅದರ ಪಕ್ಷ ವಹಿಸಿದ್ದಾರೆ. ಯಾರೂ ಬೇಡವೆನ್ನುವುದಿಲ್ಲ. ಆದರೆ, ಒಂದು ರಾಜ್ಯಕ್ಕೆ ಅನ್ಯಾಯವೆಸಗಿ ಇನ್ನೊಂದಕ್ಕೆ ಉಪಕಾರ ಮಾಡುವುದು ಫೆಡರಲ್ ಮಾದರಿಯ ಭಾರತ ಪ್ರಜಾಪ್ರಭುತ್ವಕ್ಕೆ ಸಂಯಲ್ಲ.

ಸದ್ಯ ನೀಲಂ ಕೃಪಾಕಟಾಕ್ಷದಿಂದ ವಿಶಾಖ ಪಟ್ಟಣದಲ್ಲಿ ಐದನೆಯ ಉಕ್ಕಿನ ಕಾರಖಾನೆ ಸ್ಥಾಪಿತವಾಗಬಹುದು. ಆರನೆಯದನ್ನು ಅವರೇ ಹೊಸಪೇಟೆಯಲ್ಲಿ ತೆರೆಯಬಹುದು — ಇಲ್ಲ, ಇನ್ನಾವನಾದರೂ ಈ ಕೆಲಸ ಮಾಡಬಹುದು—ಇದು ಮುಖ್ಯವಲ್ಲ.

ಆದರೆ, ಪ್ರಜಾಪ್ರಭುತ್ವದಲ್ಲಿ ಸತ್ಯ ಮತ್ತು ಪ್ರಾಮಾಣಿಕತೆಗಳು ಗೆಲ್ಲಬೇಕು; ಅಸತ್ಯ — ಅಪ್ರಾಮಾಣಿಕತೆಗಳು ನೆಲಸಮವಾಗಬೇಕು, ಕಡಿಮೆ ವೆಚ್ಚದ ಸರ್ವ ರೀತಿಯಲ್ಲೂ ಅನುಕೂಲವಾದ ಹೊಸ ಪೇಟೆಯಲ್ಲಿ ಕಾರಖಾನೆ ಆರಂಭವಾದರೆ ಅದು ಸತ್ಯದ ವಿಜಯ. ಇಲ್ಲವಾದರೆ, ಅಸತ್ಯದ ತಾಂಡವ.

ಹೊಸ ಪೇಟೆಯ ಬಗೆಗಿನ ರಾಜಕಾರಣದಲ್ಲಿ ಕರ್ನಾಟಕ ಸರಕಾರ ಅಸಹಾಯಕವಾದಂತಿದೆ. ಮಾಜಿ ಮುಖ್ಯಮಂತ್ರಿ, ಮಾಜಿ ಕಾಂಗ್ರೆಸ್ ಅಧ್ಯಕ್ಷ ಇತ್ಯಾದಿತ್ಯಾದಿ ಮಹಾ ಬಿರುದಾಂಕಿತ ನೀಲಂರವರು ಆಂಧ್ರದ ಹಿತಾಸಕ್ತಿಗಳನ್ನು ಕೇಂದ್ರದಲ್ಲಿ ಸಂರಕ್ಷಿಸುತ್ತಿರುವುದು ಈಗೀಗ ಮತ್ತಷ್ಟು ದೃಷ್ಟಿಗೋಚರವಾಗುತ್ತಿದೆ. ಆದರೆ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗುವ ಯೋಗ್ಯತೆಯೂ ಕರ್ನಾಟಕದ ಜನತಾ ಪ್ರತಿನಿಧಿಗಳಿಗಿಲ್ಲವಾದುದು ನಮ್ಮ ದುರದೃಷ್ಟ.

ಇದ್ದವರು ಇಬ್ಬರೇ—ನೆಹರೂ ದೃಷ್ಟಿಯಲ್ಲಿ. ಒಬ್ಬರು ರಾಜ್ಯ ರಾಜಕಾರಣದಲ್ಲಿ ಸಿಲುಕಿಕೊಂಡರು. ಶುದ್ಧ ಸಾಗರದಿಂದ ಕೊಳಕು ಕುಂಟೆಯನ್ನೇ ನೆಚ್ಚಿಕೊಂಡರು. ಇನ್ನೊಬ್ಬರು ಈ ಲೋಕವನ್ನೇ ತ್ಯಜಿಸಿದರು. ಮೂರನೆಯವರು ಯಾರು?

ಕೇಂದ್ರದಲ್ಲಿ ಕರ್ನಾಟಕ ತಾಯಿಯಿಲ್ಲದ ಮಗು; ಬೀದಿಯ ನಾಯಿಪಾಡು ಅದರದು.

ಆದರೂ ಅಸತ್ಯದ ಆವರಣದಲ್ಲಿ ಸತ್ಯ ಬಹುಕಾಲ ಅಡಗಿರಲಾರದು. ಮೊಟ್ಟೆಯೊಡೆದು ಮರಿ ಹೊರ ಬರುವಂತೆ ಸತ್ಯ ಒಂದಲ್ಲ ಒಂದು ದಿನ ಹೊರಪಡುತ್ತದೆ.

ಮೊಟ್ಟೆಯೊಡೆಯಲು ಕಾವು ಕೊಡಬೇಕು. ಕರ್ನಾಟಕದ ಸತ್ಯದ ಮೊಟ್ಟೆಗೆ ಕಾವು ಕೊಡುವವರು ಯಾರು?

ಕನ್ನಡಿಗರೇ ಒಂದಾಗಿ, ಇದಕ್ಕೆ ಕಾವು ಕೊಡಬೇಕು; ಸತ್ಯಕ್ಕೆ ವಿಜಯ ತಂದು ಕೊಡಬೇಕು. ಆಧಾಗದೆ ಹೋದರೂ ಸತ್ಯಕ್ಕಾಗಿ, ನ್ಯಾಯಕ್ಕಾಗಿ ಹೋರಾಡುವ ದಿವ್ಯ ಸ್ಫೂರ್ತಿ ನಮ್ಮಲ್ಲಿ ಮೂಡಬೇಕು, ಕನ್ನಡದ ಅದೃಷ್ಟ ಕನ್ನಡದಿಂದಲೇ ಬದಲಾಗಬೇಕು.

---

## ಬಿದ್ದು ಎದ್ದ ಬಂಗಾಳ

(ಏಳನೇ ಪುಟದಿಂದ)

ಕ್ಕೆ ಒಳಗೊಂಡಿತು. ಹನ್ನೊಂದನೆಯ ಶತಮಾನದಲ್ಲಿ ಸೇನವಂಶದ ಪ್ರತಾಪಿ "ರಾಜಾ ವಿಜಯಸೇನ"ನಿಂದ ಪಾಲ್‌ವಂಶ ಪರಾಜಯಗೊಂಡಿತು. ಹನ್ನೆರಡನೆಯ ಶತಮಾನದ ಅಂತ್ಯದಲ್ಲಿ ಬಂಗಾಲವು "ಬಲಾಲ ಸೇನ" ನಪುತ್ರ "ಲಕ್ಷ್ಮಣಸೇನ"ನ ಶಾಸನಕ್ಕೆ ಒಳಪಟ್ಟಿದ್ದಾಗ 'ಮಹಮ್ಮದ' ಗೋರಿ'ಯ ಸೇನಾಪತಿ 'ಬಖ್ತಿಯಾರ್ ಖಿಲ್ಜಿ" ತನ್ನ ಚಿಕ್ಕ ಸೈನ್ಯದಿಂದ ಬಂಗಾಲದ ಮೇಲೆ ಆಕ್ರಮಣ ಮಾಡಿ ಅದರ ಸ್ವಾತಂತ್ರ್ಯವನ್ನು ಮಣ್ಣುಪಾಲು ಮಾಡಿದನು.

ಆಕಾಲದಲ್ಲಿ 'ನವದ್ವೀಪ'ವೆಂಬ ಮುಖ್ಯ ನಗರ ಸಮಗ್ರ ಬಂಗಾಲದ ರಾಜಧಾನಿಯಾಗಿತ್ತು. ಉಪರೋಕ್ತ ವಿಜಯದ ನಂತರ 'ತುಗ್ಲಕ್ ವಂಶ'ದ ಅವಸಾನದ ತನಕ ಈ ಪ್ರದೇಶವು ಬೇರೆಬೇರೆ ವಿಧಾನದಿಂದ ದಿಲ್ಲಿ ಸಾಮ್ರಾಜ್ಯ ಶಾಹಿಯ ಒಂದು ಅಧೀನ ರಾಜ್ಯವಾಗಿತ್ತು. ಮುಂದೆ ಮುಗಲರ ಗಂಡುಮೆಟ್ಟಿನ ನೆಲವಾಯಿತು ಬಂಗಾಲ.

ಬಂಗಾಲದ ಕ್ರಾಂತಿಕಾರಿ ತಂಡದ ವೀರರನ್ನು ಬಂಧಿಸಲಿಕ್ಕೆ ವಿದೇಶದಾದ್ಯಂತ ಬ್ರಿಟಿಷ ಪೋಲೀಸರು ಸುತ್ತಾಡ ತೊಡಗಿದರು. ಆ ಕಾಲದಲ್ಲಿ ಬಂಗಾಳದ ಕ್ರಾಂತಿಕಾರಿ ಆಂದೋಲನದ ಸಂಘಟನೆಯಲ್ಲಿ ಆಯರ್ಲೆಂಡಿನಲ್ಲಿ ಸ್ವಾತಂತ್ರ್ಯಕ್ಕೋಸ್ಕರ ಅಲ್ಲಿ ಸ್ಥಾಪಿಸಲ್ಪಟ್ಟಿದ್ದ ಇತಿಹಾಸ ಪ್ರಸಿ... ಕ್ರಾಂತಿಕಾರೀ ಸಂಸ್ಥೆ "ಡಬ್ಲಿನ್ ಈ... ನ್ಸ್ ರೆಬೇಲಿಯನ್" ಎಂಬ ಸಂಸ್ಥೆ... ಅತ್ಯಂತ ವ್ಯವಸ್ಥಿತ ಹಾಗೂ ಬಲಿಷ್ಠ... ಯಾಗಿತ್ತು.

೧೯೦೬ ರಿಂದ ೧೯೧೧ ತನಕದ ಬಂ... ಗಾಲದ ಇತಿಹಾಸವು ರಾಜಕೀಯ ಷಡ್ಯಂ... ತ್ರ, ರಾಜಕೀಯ ಹತ್ಯೆ, ಮೊಕದ್ದಮೆ... ಕರಿನೀರವಾಸದ ದಂಡನೆ, ಮರಣದಂ... ಡನೆ, ಮೊದಲಾದ ದಾರುಣಮಯ ಕ... ಗಳಿಂದ ತುಂಬಿ ತುಳುಕಾಡುತ್ತಿದೆ. ೧೯೩... ರಲ್ಲಿ "ಚಿತ್ತಗಾಂಗ್"ನಲ್ಲಾದ "ಶಸ್ತ್ರ... ಪಹಾರ" (Chithgong Armery Paid) ಕಾಂಡವೆಂಬುದು ಈ ಇತಿಹಾಸ... ದ ಸ್ವರ್ಣಮಯ ಅಧ್ಯಾಯವಾಗಿರುತ್ತ... ದೆಂದರೆ ಅತಿಶಯೋಕ್ತಿಯಾಗಲಾರದು. ೧೫೦ ಮಂದಿ ಯುವಕರಿಂದ ಒಳಗೊಂಡಿದ್ದ ಸುಸಂಘಟಿತ ಹಲವು ಚಿತ್ತಗಾಂಗಿನಲ್ಲಿದ್ದ ಸರಕಾರೀ ಶಸ್ತ್ರಸಂಗ್ರಹಾಲಯವನ್ನು ಆಕ್ರ... ಮಿಸಿ ಕೆಲವು ವಾರಗಳ ತನಕ ಅಲ್ಲಿ ಆಂ... ಗ್ಲ ಶಾಸನವೇ ಇಲ್ಲದಂತೆ ಮಾಡಿತ್ತು. ಪರಂತು ಬ್ರಿಟಿಷ್ ಸಾಮ್ರಾಜ್ಯ ಶಾಹಿ... ಶಕ್ತಿಯು ಆಗ ಅತ್ಯಂತ ಪ್ರಬಲವಾಗಿತ್ತು; ಇದರಿಂದ ಸರ್ವಸ್ವವೂ ಕ್ರಾಂತಿಕಾರಿ ವೀ... ರ ಯೋಧರ ಬೇಟೆಯಾಯಿತು. ತತ್ಕಾಲ... ಕ್ರಾಂತಿಕಾರರ ಆಂದೋಲನವು ಸ್ಥಗಿತವಾ... ಯಿತು. ಇಷ್ಟರಲ್ಲಿ ಅಸಂಖ್ಯಾತ ಬಂಗಾ... ತರುಣ ತರುಣಿಯರು ದೇಶ ಸ್ವಾತಂತ್ರ್ಯ... ದ ಬಲಿವೇದಿಯಲ್ಲಿ ತಮ್ಮನ್ನು ತಾವು ಬ... ಯಾಗಿ ಅರ್ಪಿಸಿ ಕೀರ್ತಿ ಶಾಲಿಗಳಾದರು... ದೇಶವು ಸ್ವತಂತ್ರವಾಯಿತು; ಆದರೆ ತ... ಅಖಂಡತೆಯನ್ನು ಉಳಿಸಿಕೊಳ್ಳಲಿಲ್ಲ; ... ದರಿಂದಾಗಿ ಬಂದೊದಗಿರುವ ವಿಪತ್ತು... ಗಳಿಂದಾಗಿ ಇಂದಿಗೂ ಬಂಗಾಲದ ಜನ... ಯಲ್ಲಿ ಕ್ರಾಂತಿಯ ದಾವಾಗ್ನಿ ಹೃದಯದ... ಉರಿಯುತ್ತಿದೆ. ವರ್ತಮಾನ ಪರಿಸ್ಥಿ... ನ್ಯಾಯಯುಕ್ತ ರೀತಿಯಲ್ಲಿ ಬಗೆಹರಿಸ... ಲ್ಪಡದಿದ್ದರೆ, ಅದು ದೇಶ ವ್ಯಾಪಿಯಾಗಿ... ಹರಡುತ್ತ ಬಂದರೆ ಬಂಗಾಲದಿಂದಲೇ... ಒಂದು ನವೀನ ತರವಾದ ಸಶಸ್ತ್ರ ಕ್ರಾಂತಿ... ಕಾರಿ ಆಂದೋಲನವು ಆರಂಭವಾದರೂ... ಹೆಚ್ಚೇನಲ್ಲ.

---


**In the Court of the Munsiff Udipi**

O. S. No. 231/64

Srinivasa Bhatta ... Plaintiff.

Laxminarayana Bhatta & others ... Depts.

To the 4th defendant Srinivasa Nakshatri, son of Shankara Nakshatri, Alevoor village, Udipi Taluk.

This suit is posted to 17-1-1966 for the appearance of the 4th defendant. He is therefore directed to appear in this Court either in person or by pleader on 17-1-66 at 11 a. m. failing which the suit will be decided in his absence.

K. L. Aithal,
Vakil for Plaintiff.
8—12—65.

**In the Court of the Munsiff Udipi**

O. P 42/65

Fatimabi, daughter of Ummar Saheb, Haradi village, Udipi Taluk ... ... Petitioner

vs.

Akbar Ali Saheb, son of Abdulkhader Saheb, having permanent residence in Padu Tonse village, Udipi Tq. ... Respt.

The above Petition filed by the Petitioner for dissolution of her marriage is posted to 6—1—66 for the appearance of the Respondent. He is therefore directed to appear in this Court either in person or by a pleader on 6-1-66 at 11 a. m. failing which orders will be passed in his absence.

K. L. Aithal,
Vakil for petitioner
8—12—65.

## ರೊಡೀಸಿಯಾದಲ್ಲಿ

# ಬಿಳಿಯರ ಬಲಾತ್ ದಬ್ಬಾಳಿಕೆ

### ಮೂವತ್ತೆಂಟು ಜನರ ಮೇಲೆ ತಾನೇ ಅಧಿಕಾರ ಚಲಾಯಿಸಲಿಚ್ಛಿಸಿದ ಈ ಸರ್ವಾಧಿಕಾರಿ ವೃತ್ತಿ ಶಾಂತಿ ಹೇತುವಲ್ಲ

ಭಾರತದ ವೈಸರಾಯ್ ಲಾರ್ಡ್ ಮೌಂಟ್‌ಬ್ಯಾಟನ್, ಅಧಿಕಾರ ಹಸ್ತಾಂತರದ ಯೋಜನೆಗೆ ಒಪ್ಪದೆ ಇಂಗ್ಲೆಂಡಿನ ಲೇಬರ್ ಸರಕಾರವನ್ನು ಧಿಕ್ಕರಿಸಿ, ಇಲ್ಲಿನ ರಾಷ್ಟ್ರೀಯ ಮುಖಂಡರನ್ನೆಲ್ಲ ಸೆರೆಮನೆಗೆ ತಳ್ಳಿ, ಭಾರತದ ಸ್ವಾತಂತ್ರ್ಯವನ್ನು ಸಾರಿ ತಾನೇ ಅರಸನೋ ಅಧ್ಯಕ್ಷನೋ ಪ್ರಧಾನಿಯೋ ಆಗಿದ್ದರೆ ಏನಾಗುತ್ತಿತ್ತು?

ಮಧ್ಯ ಆಫ್ರಿಕಾದ ರೊಡೀಸಿಯದಲ್ಲಿ ಈಗ ಸಂಭವಿಸಿರುವುದು ಮೇಲಿನ ಕಾಲ್ಪನಿಕ ಸನ್ನಿವೇಶವೇ!

ನಾಲ್ವತ್ತು ಲಕ್ಷ ಕಪ್ಪು ಜನರಿರುವ, ೧೫೦,೦೦೦ ಚದರ ಮೈಲುಗಳ, ಈ ರಾಷ್ಟ್ರದಲ್ಲಿ ಬಿಳಿಯ ವಸಾಹತುದಾರರ ಸಂಖ್ಯೆ ಎರಡು ಲಕ್ಷ ಮಾತ್ರ. ಈಗ ಈ ಅಲ್ಪಸಂಖ್ಯಾಂತರು ಸ್ವಾತಂತ್ರ್ಯ ಸಾರಿದ್ದಾರೆ. ತಮ್ಮ ಇಪ್ಪತ್ತರಷ್ಟಿರುವ ಬಹುಸಂಖ್ಯಾತರನ್ನು ದಾಸ್ಯದಲ್ಲಿಟ್ಟು, ಅವರನ್ನು ನಿರಾತಂಕವಾಗಿ ಉಪಭೋಗಿಸಲು ದೃಢ ನಿಶ್ಚಯ ಮಾಡಿದ್ದಾರೆ.

**ಅವರು ಬಂದ ಬಗೆ**

೧೮೫೯ರಲ್ಲಿ ಲಂಡನ್ನಿನ ನಾಲ್ವರು ಕ್ರೈಸ್ತ ಮತ ಪ್ರಚಾರಕರು ಮಧ್ಯ ಆಫ್ರಿಕದಲ್ಲಿ ಒಂದೆಡೆ ಬೀಡು—ಬಿಟ್ಟರು. ಮೂವತ್ತು ವರ್ಷಗಳ ಅನಂತರ ಅಲ್ಲಿಗೆ ಸೆಸಿಲ್ ರೋಡ್ಸ್ ಎಂಬ ಆಂಗ್ಲನೊಬ್ಬ ಬಂದ. ಅವನು ಮಹಾ ಸಾಹಸಿ. ಆಫ್ರಿಕಾ ಖಂಡದ ದಕ್ಷಿಣದ ತುತ್ತ ತುದಿಯಿಂದ ಉತ್ತರದ ಕಡಲ ದಂಡೆಯ ತನಕ ರೈಲು ದಾರಿ ನಿರ್ಮಿಸಬೇಕೆಂಬುದು ಆತನಿಗಿದ್ದ ಹುಚ್ಚು ಹಂಬಲ. ಆತ ಆ ಪ್ರದೇಶದ ಅರಸು ಲೊಬೆಂಗುಲನನ್ನು ಭೇಟಿಯಾದ. ಭೂ ಖನಿಜಗಳನ್ನು ಅಗೆದು ತೆಗೆಯುವ ಹಕ್ಕನ್ನು ಆ ರಾಜನಿಂದ ರೋಡ್ಸ್ ಪಡೆದು ಆ ಪ್ರಣಾಳಿಕೆಯನ್ನು ಕೃತಿಗಿಳಿಸುವುದಕ್ಕಾಗಿ ಇಂಗ್ಲೆಂಡು ಬ್ರಿಟಿಷ್ ದಕ್ಷಿಣ ಆಫ್ರಿಕಾ ಕಂಪೆನಿಯೊಂದನ್ನು ಸ್ಥಾಪಿಸಿತು. ಆ ಕಂಪೆನಿಯ ಕಾರ್ಯಾಚರಣೆಯ ಅಂಗವಾಗಿ ಬಿಳಿಯ ವಸಾಹತುದಾರರು ಅಲ್ಲಿಗೆ ಬಂದು ನೆಲೆಸಿದರು.

ಪ್ರದೇಶದ ಗಡಿ ರೇಖೆಗಳನ್ನು ಗುರುತಿಸಿದ ರೋಡ್ಸ್ ಅದನ್ನು ದಕ್ಷಿಣ ರೊಡೀಸಿಯಾ ಎಂದು ಕರೆದ. ಉತ್ತರದ ಪ್ರದೇಶ ಉತ್ತರ ರೊಡೀಸಿಯಾ ಆಯಿತು. ಮೂರನೆಯ ಭೂ ಪ್ರದೇಶವನ್ನು ನ್ಯಾಸಾಲ್ಯಾಂಡ್ ಎಂದು ಕರೆದರು.

೧೯೨೩ರ ತನಕವೂ ಈ ರಾಷ್ಟ್ರಗಳು ಕಂಪೆನಿಯ ಆಡಳಿತದಕ್ಷಯೇ ಇದ್ದುವು. ಆ ವರ್ಷ ಸೂರ್ಯ ಮುಳುಗದ ಬ್ರಿಟಿಷ್ ಚಕ್ರಾಧಿಪತ್ಯದ ಅಂಗವೆಂದು ಆ ಪ್ರದೇಶವನ್ನು ಸಾರಲಾಯಿತು. ನೇರ ಆಡಳಿತ ಆರಂಭವಾಯಿತು.

**ಸ್ವಾತಂತ್ರ್ಯದ ಕಹಳೆ**

ಗುಲಾಮಗಿರಿಯಲ್ಲಿದ್ದ ಏಸ್ಯ ಆಫ್ರಿಕಗಳ ಅನೇಕ ರಾಷ್ಟ್ರಗಳ ಬಂಧವಿಮೋಚನೆಯೇ ಈ ಶತಮಾನದ ಅತ್ಯಂತ ಮಹತ್ವಪೂರ್ಣ ಸಂಭವ.

ದ್ವಿತೀಯ ಜಾಗತಿಕ ಮಹಾ ಯುದ್ಧದ ಅನಂತರ ರಾಷ್ಟ್ರಗಳು ಒಂದರ ಬಳಿಕ ಒಂದಾಗಿ ಬಿಳಿಯರ ಸಂಕೋಲೆಗಳನ್ನು ತೊಡೆದು ಹಾಕಿದುವು. ಆಫ್ರಿಕದಲ್ಲೂ ಸ್ವಾತಂತ್ರ್ಯದ ಕೋಳಿ ಕೂಗಿತು.

ಪ್ರತ್ಯಕ್ಷ ಆಳ್ವಿಕೆ ದುಸ್ಸಾಧ್ಯವಾದಾಗ ಬ್ರಿಟನ್, ಮಹಾರಾಷ್ಟ್ರಗಳನ್ನು ಹತೋಟಿಯಲ್ಲಿರಿಸಿಕೊಳ್ಳುವ ಹೊಸ ವಿಧಾನಗಳನ್ನು ಹುಡುಕಿತು. ೧೯೫೩ರಲ್ಲಿ ದಕ್ಷಿಣ ರೊಡೀಸಿಯಾ, ಉತ್ತರ ರೊಡೀಸಿಯಾ, ನ್ಯಾಸಾಲ್ಯಾಂಡ್‌ಗಳನ್ನು ಒಳಗೊಂಡ ಸಂಯುಕ್ತ ರಾಜ್ಯವ್ಯವಸ್ಥೆಯನ್ನು ಬ್ರಿಟನ್ ರಚಿಸಿತು. ಉತ್ತರ ರೊಡೀಸಿಯಾದ ಸರ್ ವೆಲೆನ್ಸ್ಕಿ ದೇಶೀಯರ ಸ್ವಾತಂತ್ರ್ಯ ಚಳುವಳಿಯನ್ನು ಮುದಿರಿಕ್ಕಲು, ಅದು ವಿಫಲವಾದಾಗ ಬಿಳಿಯರ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಶತಪ್ರಯತ್ನ ಮಾಡಿದ. ಆದರೆ ಜಯಶಾಲಿಯಾಗಲಿಲ್ಲ. ಹತ್ತು ವರ್ಷಗಳ ಅಂತ್ಯದಲ್ಲಿ ಸಂಯುಕ್ತ ರಾಜ್ಯವ್ಯವಸ್ಥೆ ಕೊನೆಗೊಂಡು, ೧೯೬೪ರಲ್ಲಿ ಉತ್ತರ ರೊಡೀಸಿಯಾ ಮತ್ತು ನ್ಯಾಸಾಲ್ಯಾಂಡ್ ಸ್ವತಂತ್ರವಾದುವು. ಜಾಂಬಿಯಾ ಮತ್ತು ಮಾಲವಿ ಎಂಬ ಹೊಸ ಹೆಸರುಗಳನ್ನು ಪಡೆದುವು.

ತರ್ಕಬದ್ಧವಾಗಿ ದಕ್ಷಿಣ ರೊಡೀಸಿಯವೂ ಸ್ವತಂತ್ರವಾಗುವುದು ಅನಿವಾರ್ಯವಾಗಿತ್ತು. ಆದರೆ ಇತಿಹಾಸದ ಗಾಲಿಗಳನ್ನು ತಡೆದು ಹಿಂದಕ್ಕೆ ಉರುಳಿಸುವ ಸಾಹಸವನ್ನು ಸೆಸಿಲ್ ರೋಡ್ಸ್‌ನ ವಂಶಜನೊಬ್ಬನು ಮಾಡಿದ. ಆತನೇ ದಕ್ಷಿಣ ರೊಡೀಸಿಯಾದ ಪ್ರಧಾನಿ ಅಯಾನ್ ಸ್ಮಿತ್; ವರ್ಣಾಂಧ ಕುಲದ ಮೇಲ್ಮೆಯಿಂದ ವ್ಯಾಮರೆತ ಮದೋನ್ಮತ್ತ.

**ಏಕಪಕ್ಷೀಯ ಘೋಷಣೆ**

ಅಧಿಕಾರದ ಹಸ್ತಾಂತರಕ್ಕೆ ಬ್ರಿಟನ್ನಿನ ವಿಲ್ಸನ್ ಸರಕಾರ ಪ್ರಯತ್ನಿಸಿತೆನ್ನಬಹುದು. ಆದರೆ ಸ್ಮಿತ್ತನ ಕುತಂತ್ರವನ್ನು ಮೊಳಕೆಯಲ್ಲೇ ಚಿವುಟಲು ವಿಲ್ಸನ್ ಸರಕಾರ ನಿರಾಕರಿಸಿತೆನ್ನುವುದು ನಿಸ್ಸಂಶಯ. ದಕ್ಷಿಣ ರೊಡೀಸಿಯಾದ ದೇಶೀಯರಿಗೆ ಅಧಿಕಾರ ಒಪ್ಪಿಸುವುದು ಹೋಗಲಿ, ಅವರೊಡನೆ ಅಧಿಕಾರವನ್ನು ಹಂಚಿಕೊಳ್ಳುವುದಕ್ಕೂ ಸ್ಮಿತ್ ಸಿದ್ಧನಿರಲಿಲ್ಲ. ಆತ ರಾಷ್ಟ್ರೀಯ ನಾಯಕರನ್ನೆಲ್ಲ— ಎನ್‌ಕೊಮೊ, ರೆವರೆಂಡ್ ಸ್ಥಿತೋಲ್ ಮತ್ತಿತರರು—ಕಾರಾಗೃಹದಲ್ಲಿಟ್ಟು ತನ್ನ ಹನ್ನೆರಡು ಸಾವಿರ ಸಶಸ್ತ್ರ ಸೈನಿಕರ, ಹಾಗೂ ಅರುವತ್ತನಾಲ್ಕು ವಿಮಾನಗಳ ಬಲದಿಂದ ಮೂವತ್ತೆಂಟು ಲಕ್ಷ ಜನರನ್ನು ಬೆದರಿಸಿ ಆಳಲು ನಿರ್ಧರಿಸಿದ.

ರೊಡೀಸಿಯದಲ್ಲಿರುವುದು ಆಂಗ್ಲರದೇ ರಕ್ತಮಾಂಸ. ಅದರ ವಿರುದ್ಧ ಅವರೇ ಕೈ ಎತ್ತುವುದುಂಟೆ? ಗಿಯಾನಾ, ಸೈಪ್ರಸ್, ಏಡನ್‌ಗಳಿಗೆ ತಮ್ಮವರಲ್ಲದ ಜನರನ್ನು ಹತ್ತಿಕ್ಕಲು ಬ್ರಿಟನ್ನು ಸೈನ್ಯ ಕಳುಹಿಸಬಹುದು. ಆದರೆ ರೊಡೀಸಿಯದಲ್ಲಿ ಬಿಳಿಯರ ನೀಲಿರಕ್ತ ಹರಿಸುವುದುಂಟೆ? ಅಂಥ 'ಮೂರ್ಖ' ಕ್ರಮ ಕೈಕೊಂಡರೆ ವಿಲ್ಸನ್ ಸರಕಾರ ಉರುಳಿ ಸಾರ್ವತ್ರಿಕ ಚುನಾವಣೆಯಲ್ಲಿ ಅದಕ್ಕೆ ಸೋಲಾಗದೆ ಇರುವುದುಂಟೆ?

ಹೀಗೆ ಯೋಚಿಸಿದ ಸ್ಮಿತ್ ಏಕಪಕ್ಷೀಯವಾಗಿ ಘೋಷಿಸಿದ:

"ರಾಣಿಯ ಆಳ್ವಿಕೆಯಿಂದ ಬೇರ್ಪಟ್ಟು ಸ್ವತಂತ್ರರಾಗಿದ್ದೇವೆ; ರಾಣಿ ಚಿರಾಯುವಾಗಲಿ!"

**ಎರಡು ಬಣ**

ಬ್ರಿಟನ್ನು ಯುಕ್ತರಾಷ್ಟ್ರಸಂಘಕ್ಕೆ ದೂರನ್ನೊಯ್ದಿದೆ. ಆದರೆ ಯುಕ್ತರಾಷ್ಟ್ರಗಳ ಮಿಶ್ರ ಪಡೆ ರೊಡೀಸಿಯಕ್ಕೆ ಹೋಗುವುದು ವಿಲ್ಸನರಿಗೆ ಇಷ್ಟವಿಲ್ಲ. ಆರ್ಥಿಕ ದಿಗ್ಬಂಧನವನ್ನೇನೋ ಬ್ರಿಟನ್ ಮತ್ತಿತರ ಅನೇಕ ರಾಷ್ಟ್ರಗಳು ಹೇರಿಸಿವೆ. ಆದರೆ ಈ ವರ್ಷದ ಹೊಗೆಸೊಪ್ಪು ಬೆಳೆಯನ್ನು ಈಗಾಗಲೇ ಮಾರಿರುವ ರೊಡೀಸಿಯಾ ಇನ್ನು ಒಂದು ವರ್ಷ ಚಿಂತಿಸಬೇಕಾಗಿಲ್ಲ.

ಭಾರತ ಅಲ್ಲಿಂದ ಆಮದು ಮಾಡುವುದು ಒಂದು ಕೋಟಿ ರೂ.ಗಳ ಸಾಮಗ್ರಿ. ಅಲ್ಲಿಗೆ ರಫ್ತು ಮಾಡುವುದು ಎರಡು ಕೋಟಿ ಮೌಲ್ಯದ್ದು. ಅತ್ಯಮೂಲ್ಯವಾದ ಒಂದು ಕೋಟಿ ರೂಪಾಯಿಗಳ ವಿದೇಶೀ ವಿನಿಮಯ ಕೈಬಿಡುತ್ತದೆಂದು ತಿಳಿದಿದ್ದರೂ ಭಾರತ ದಕ್ಷಿಣ ರೊಡೀಸಿಯದ ಜತೆ ಸಂಬಂಧ ಕಡಿದುಕೊಂಡು ತಾನು ಆಫ್ರಿಕದ ಜನತೆಯ ಪಕ್ಷಪಾತಿ ಎಂದು ತೋರಿಸಿಕೊಟ್ಟಿದೆ.

ಬಿಳಿಯರ ದಕ್ಷಿಣ ಆಫ್ರಿಕಾ ಸರಕಾರ ತನ್ನ ಪಶ್ಚಿಮಕ್ಕಿರುವ ಪೋರ್ತುಗೀಸರ ಅಂಗೋಲಾ, ಪೂರ್ವಕ್ಕಿರುವ ಅವರದೇ ಮೊಜಾಂಬಿಕ್—ಇವು ತನ್ನ ನೆರವಿಗೆ ಬರುತ್ತವೆಂಬುದು ಆಧುನಿಕ ಶಸ್ತ್ರಾಸ್ತ್ರಗಳು ಹೇರಳವಾಗಿ ತನಗೆ ದೊರೆಯುತ್ತವೆಂಬುದು ಸ್ಮಿತ್ತನ ನಂಬಿಕೆ.

ಆದರೆ, ಮಾರಕಾಸ್ತ್ರಗಳನ್ನೇ ನೆಚ್ಚಿಕೊಂಡವರು ಮಣ್ಣುಪಾಲಾಗುತ್ತಾರೆಂಬ ಐತಿಹಾಸಿಕ ಸತ್ಯವನ್ನು ಸ್ಮಿತ್ ಅರಿತಿಲ್ಲ.

---


ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ., ಯವರ

**ನವಕಾಲಕ್ಕೊಪ್ಪುವ ಪುಸ್ತಕಗಳು**

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.








'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.



ವೈಷ್ಣವ ಶಿಖಾಮಣಿ

ಕನಕದಾಸ ರಚಿತ

**ಹರಿಭಕ್ತಿಸಾರ**

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕಾರ್ಯ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ರಖಂ ಪ್ರತಿಗಳಿಗೆ ವಿಚಾರಿಸಿರಿ :–

**ನವಯುಗ ಪ್ರೆಸ್, ಉಡುಪಿ.**

## ಭಾರತದ ರಾಷ್ಟ್ರಭಾಷೆ

(ಆರನೇ ಪುಟದಿಂದ)

ಮಾಡಬಹುದು. ಮಾತೃಭಾಷಾ ಮಾಧ್ಯಮವು ಐಚ್ಛಿಕವಿರಬಹುದು. ಆದರೆ ಇಂಗ್ಲಿಷ್ ಭಾಷಾ ಪರಿಜ್ಞಾನ ವಿದ್ಯಾರ್ಥಿಗಳಿಗೆ ಉಳಿಯುವಂತಾಗಬೇಕು.

ರಾಷ್ಟ್ರಭಾಷೆಯು ರಾಷ್ಟ್ರದ ಜನತೆಯಲ್ಲಿ ಐಕ್ಯತೆಯನ್ನುಂಟುಮಾಡುವ ಮಹತ್ವದ ಕಾರಣವೆನ್ನಬಹುದು. ಭಾಷೆಯಿಂದ ಸಾಹಿತ್ಯ, ಸಾಹಿತ್ಯದಿಂದ ವಿಚಾರ ವಿಮರ್ಶೆಗಳು, ವಿಚಾರ ವಿಮರ್ಶೆಗಳಿಂದ ಬುದ್ಧಿಶಕ್ತಿಯು ವಿಕಾಸವಾಗಿ ಜನತೆಯಲ್ಲಿ ನಾಗರಿಕತೆ ಹಾಗೂ ಪ್ರಗತಿ ಉಂಟಾಗುವುದು. ಒಂದೇ ರಾಷ್ಟ್ರದೊಳಗಿದ್ದರೂ ಬೇರೆ ಬೇರೆ ಭಾಷೆಗಳನ್ನಾಡುತ್ತಿದ್ದರೆ ಜನತೆಯಲ್ಲಿ ಪ್ರತ್ಯೇಕತೆ ಕಂಡುಬರುವುದು. ಇದರಿಂದ ಜನತೆಯಲ್ಲಿ ಐಕ್ಯತೆಯು ಎಂದಿಗೂ ಮೂಡಲಾರದು. ಎಲ್ಲರೂ ಒಂದೇ ಸಾಮಾನ್ಯ ಭಾಷೆಯನ್ನು ಉಪಯೋಗಿಸಿದರೆ, ತಾವೆಲ್ಲರೂ ಒಂದೇ. ಎಲ್ಲರೂ ಒಂದೇ ತಾಯಿಯ ಬಸಿರಿನಿಂದ ಬಂದವರು ಎಂಬ ಭಾವನೆ ಮೂಡುವುದು. ಇದರಿಂದ ಸಹೋದರತ್ವ, ಸಮಾನತೆ, ಸಹಕಾರಗಳು ಅಂಕುರಿಸುವುವು. ದೇಶದಲ್ಲಿ ಒಗ್ಗಟ್ಟು ಉಂಟಾಗುವುದು. ಸಹಕಾರದಿಂದ ಪರಸ್ಪರ ವಿಚಾರ ವಿನಿಮಯವಾಗಿ ಜನತೆಯ ಬುದ್ಧಿಶಕ್ತಿಯು ವಿಕಾಸವಾಗುವುದು. ಜನತೆಯಲ್ಲಿ ಪ್ರಗತಿ ಉಂಟಾಗುವುದು. ಐಕ್ಯತೆಯಿಂದ ದೇಶ ಸಶಕ್ತವಾಗುವುದು. ದೇಶದ ಜನತೆಯ ಐಕ್ಯತೆಯೇ ದೇಶದ ಬಲ. ಜನರ ಐಕ್ಯತಾಭಾವನೆಯಿಂದ ದೇಶದೊಳಗಿನ ಒಳಜಗಳಗಳು ಕಡಿಮೆಯಾಗುವುವು. ದೇಶದ ಆಡಳಿತವು ಸುಲಭವಾಗುವುದು. ರಾಷ್ಟ್ರಭಾಷೆಯು ದೇಶದ ಪ್ರಗತಿ ಮುನ್ನಡೆಯಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ.

ಪ್ರತಿಯೊಂದು ದೇಶಕ್ಕೂ ರಾಷ್ಟ್ರಭಾಷೆಯು ಬೀಜಕ ಮಂತ್ರವಿದ್ದಂತೆ. ಕಟ್ಟಡದ ಪಂಚಾಂಗವಿದ್ದಂತೆ. ಅಂತಹದರಲ್ಲಿ ಭಾರತಕ್ಕೆ ಒಂದು ರಾಷ್ಟ್ರಭಾಷೆಯಿಲ್ಲದಿದ್ದರೆ ಅದೊಂದು ತಳಹದಿಯಿಲ್ಲದ ಕಟ್ಟಡ. ಅದನ್ನು ಕಟ್ಟುತ್ತಾ ಹೋದಂತೆ ಕುಸಿಯುತ್ತಾ ಇರುವುದು. ಇದು ಮೊದಲು ತಿಳಿಯದಿದ್ದರೂ ನಂತರ ಅದಕ್ಕೆ ಒಂದು ಸಣ್ಣ ಆಘಾತವನ್ನೂ ತಡೆದುಕೊಳ್ಳಲು ಸಾಧ್ಯವಾಗದೆ ಒಂದಲ್ಲೊಂದು ದಿನ ಎಷ್ಟೇ ಭವ್ಯವಾಗಿದ್ದರೂ ಕೆಳಕ್ಕೆ ಬಿದ್ದು ಪುಡಿ ಪುಡಿಯಾಗಿ ನೆಲಸಮವಾಗುವುದು ಖಂಡಿತ. ಆದರೆ ಭಾರತದ ಸ್ಥಿತಿಯು ಆ ರೀತಿಯಾಗಬಾರದು. ಭಾರತಕ್ಕೊಂದು ಭದ್ರವಾದ ತಳಹದಿ ಬೇಕು. ಈ ತಳಹದಿಯು ಅಡಿಗಲ್ಲಾದ ರಾಷ್ಟ್ರಭಾಷೆಯು ಬೇಕು. ಅದರಿಂದಲೇ ಸಂಸ್ಕೃತಿ, ಪ್ರಗತಿ, ಎಲ್ಲವೂ. ಆದುದರಿಂದ ಭಾರತದಲ್ಲಿ ಸರ್ವ ಬಗೆಯ ಸಾಹಿತ್ಯವನ್ನು ಹೊಂದಿದ ಹಿಂದಿಯು ರಾಷ್ಟ್ರಭಾಷೆಯಾಗಿ ಅದರ ಮೇಲೆ ಭವ್ಯ ಭಾರತವು ಕಟ್ಟಲ್ಪಟ್ಟು ಸುಖಸಮೃದ್ಧಿ, ಸಹೋದರತೆ ಸೌಹಾರ್ದತೆಗಳು ಬೆಳೆದು ಬರಲೆಂದು ಹಾರೈಸೋಣ.

(ಕಲ್ಯಾಣ್ಪುರ, ಉಡುಪಿ ಇದರ ವಾರ್ಷಿಕೋತ್ಸವದ ವೇಳೆಯ ಹೈಸ್ಕೂಲ್ ವಿಭಾಗದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುದು.)

### ಕೃಷಿಕ ರಂಗ

## ಪುರುಷ ಪ್ರಯತ್ನಶೀಲರಾಗಿರಿ

ಗಂಭೀರ ಪರಿಸ್ಥಿತಿ— ದೇಶಕ್ಕೆ ಹೆಚ್ಚು ಆಹಾರದ ಅಗತ್ಯ. ರಾಜ್ಯದಲ್ಲಿ ಮಳೆ ಚೆನ್ನಾಗಿ ಆಗಲಿಲ್ಲ— ಆದರೆ ನಮ್ಮ ರೈತ ಜನಾಂಗ ಪುರುಷ ಪ್ರಯತ್ನದಿಂದ ಹೆಚ್ಚು ಬೆಳೆ ತೆಗೆಯಬೇಕು. ಲಭ್ಯ ನೀರಾವರಿಯ ಬಳಕೆಯಿಂದಲೇ ಸಾಗುವಳಿಯನ್ನು ಉತ್ತಮಗೊಳಿಸಬೇಕು.

**ಭತ್ತ**

ಎರಗಿ ಕಾಂಡ ಕೊರೆದು ತಿನ್ನುವ ಹುಳಗಳಿಂದ ರಕ್ಷಣೆ ಅಗತ್ಯ. ಭತ್ತದ ಗದ್ದೆಗಳಲ್ಲಿ ಮೀನು ಸಾಕುವುದರಿಂದ ಈ ರಕ್ಷಣೆ ಒದಗುತ್ತದೆ— ಇದು ಇತ್ತೀಚೆಗಿನ ಸಂಶೋಧನೆ. "ಗಂಬೂಸಿಯ" ಮತ್ತು 'ಪಾನಿಯೊ' ಮೊದಲಾದ ಜಾತಿಯ ಮೀನುಗಳು ಕೀಟ ಭಕ್ಷಕಗಳಾದುದರಿಂದ ಇವನ್ನು ಸಾಕುವುದು ಉತ್ತಮ. ಒಂದು ಕಲ್ಲಿನಿಂದ ಎರಡು ಹಣ್ಣು— ಅತ್ತ ಪೈರಿನ ಸಂರಕ್ಷಣೆ- ಇತ್ತ ಮೀನುಗಳ ಸಾಕಣೆ!

**ಜಪಾನು ಮಾದರಿ**

ಉತ್ತಮ ಸಾಗುವಳಿಗೆ ಜಪಾನು ಮಾದರಿ ಒಳ್ಳೆಯದು. ಸುಧಾರಿಸಿದ ಬೀಜ ಆಯ್ಕೆ, ೧೦—೧೨ ಸೇರು ಬೀಜಕ್ಕೆ ಒಂದು ತೊಲ ಅಗ್ರೋಸ್ ಅಥವಾ ಸೆರೆಸನ್ ಮಿಶ್ರಣ, ಎತ್ತರಿಸಿದ ಮಡಿಗಳಲ್ಲಿ ಸಾಲಾಗಿ ಬೀಜಗಳ ಬಿತ್ತನೆ-೨೫-೩೦ ದಿನಗಳಾಗುವಷ್ಟರಲ್ಲೇ ನಾಟಿ.

ನಿಯಮಿತ ಪ್ರಮಾಣದಲ್ಲಿ ಗೊಬ್ಬರ ಹಾಕಲು ಮರೆಯಬೇಡಿ— ನಾಟಿಯ ದಿನ ಅರ್ಧ ರಾತಲು ಅಮೋನಿಯಂ ಸಲ್ಫೇಟನ್ನು ಚೆಲ್ಲಿರಿ. ಪೈರನ್ನು ಸಾಲಾಗಿ ನಾಟಿರಿ.

**ಕಬ್ಬು**

ಇದು ಕಬ್ಬು ನಾಟುವ ಕಾಲ. ೮-೧೦ ತಿಂಗಳ ಎಳೆಯ ಕಬ್ಬನ್ನು ಆರಿಸಿ ಕತ್ತರಿಸಿಕೊಳ್ಳಿ. ೪೮ ತಾಸು ನೀರಿನಲ್ಲಿ ನೆನೆ ಹಾಕಿ ಬಿತ್ತನೆಯಲ್ಲಿ ಸಕ್ಕರೆಯ ಅಂಶ ಕಡಿಮೆಯಾಗಬೇಕು. ಎಕ್ರೆಗೆ ಪ್ರತಿಯೊಂದು ೧೦೦ ಕಿಲೊಗ್ರಾಮಿನಂತೆ ಸೂಪರ್ ಫಾಸ್ಫೇಟು ಮತ್ತು ಅಮೋನಿಯಂ ಸಲ್ಫೇಟನ್ನು ಹಾಕಿ ಬೆರಸಬೇಕು. ಕಣ್ಣುಗಳು ತಳಕ್ಕೆ ಸಿಕ್ಕಿಕೊಳ್ಳದ ಹಾಗೆ ತುಂಡುಗಳ ಎರಡೂ ಕಡೆಗಳಲ್ಲಿ ಬರುವಂತೆ ಇಡಬೇಕು.

(ಹದಿನಾರನೇ ಪುಟ ನೋಡಿರಿ)


# ಆರೋಗ್ಯದ ಪಾಠ

ನೆನಪಿನಲ್ಲಿಡಿರಿ — ಕ್ಷಯರೋಗಿಯು ಇತರರಿಗೆ ಅಪಾಯಕಾರಿಯಲ್ಲ. ಆತನ ಉಗುಳು ಇತರರಿಗೆ ಅಪಾಯಕಾರಿ. ಉಗುಳು ಕ್ಷಯರೋಗವನ್ನುಂಟು ಮಾಡುವ ರೋಗಾಣುಗಳನ್ನು ಕೂಡಿಕೊಂಡಿದೆ. ಕೆಮ್ಮುವ ಮತ್ತು ಉಗುಳುವ ವೇಳೆ ಕ್ಷಯರೋಗಿಯು ಬಾಯಿಯನ್ನು ಮರೆಯಾಗಿಸಿ, ಮುಚ್ಚಳವಿರುವ ಟಿನ್ನಿನಲ್ಲಿ ಉಗುಳನ್ನು ಸಂಗ್ರಹಿಸಿ, ಅದನ್ನು ಚೆನ್ನಾಗಿ ಕುದಿಸಿ ನಂತರ ಹೊರಗೆಸೆದರೆ ಅವನು ತನ್ನ ಸಂಗಾತಿಗಳಿಗಾಗಲೀ ಅಥವಾ ಕುಟುಂಬದವರಿಗಾಗಲೀ ಅಪಾಯಕಾರಿಯಾಗಲಾರ. ಆದುದರಿಂದ ಕ್ಷಯರೋಗಿಯನ್ನು ವರ್ಜಿಸದಿರಿ. ಅವನಿಗೆ ಈ ನಿರೋಧಕ ಕಾರ್ಯಗಳನ್ನು ಕೈಗೊಳ್ಳಲು ಕಲಿಸಿರಿ ಮತ್ತು ಅವನು ಸೂಕ್ತ ಚಿಕಿತ್ಸೆಯನ್ನು ಪಡೆಯುವಂತೆ ನೋಡಿರಿ.




ಈಗ ಕ್ಷಯರೋಗ ಮೊಹರು ಮಾರಾಟ ಚಳವಳವು ನಡೆಯುತ್ತಿದೆ. ಜನರಿಗೆ ಕ್ಷಯರೋಗ, ಅದರ ಪ್ರಕೃತಿ, ನಿರೋಧಕ ಮಾರ್ಗಗಳನ್ನು ತಿಳಿಸುವುದು ಕ್ಷಯರೋಗ ಮೊಹರು ಮಾರಾಟ ಚಳವಳದ ಪ್ರಧಾನ ಉದ್ದೇಶ.

ಕ್ರಿಸ್‌ಮಸ್ ಸಮೀಪಿಸುತ್ತಿದೆ. ನಿಮ್ಮ ಶುಭಾಶಯಗಳಲ್ಲಿ ಹಾಗೂ ಉಡುಗೊರೆಯ ಪೇಕೆಟುಗಳಲ್ಲಿ ಹತ್ತು ಪೈಸೆಯ ಟಿ ಬಿ ಮೊಹರುಗಳನ್ನು ಹಚ್ಚಿರಿ.

ಮೊಹರುಗಳು — ದಕ್ಷಿಣ ಕನ್ನಡ ಟಿ ಬಿ ಎಸೋಸಿಯೇಶನ್, ಮಂಗಳೂರು ಹಾಗೂ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್, ಕೊಡಗು, ಮಡಿಕೇರಿ ಹಾಗೂ ಇತರ ಏಜೆನ್ಸಿಗಳಲ್ಲಿ ದೊರೆಯುತ್ತವೆ.

## 16 ನೆಯ ಕ್ಷಯರೋಗ ಮೊಹರು ಮಾರಾಟ ಚಳವಳ

( ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಏರ್ಪಡಿಸಲಾದುದು )

ಸ್ಥಳದಾನ:

**NAVAYUGA**

## ರಾಷ್ಟ್ರದ ವಿದ್ಯಾಕ್ಷೇತ್ರಕ್ಕೆ ಅಪೂರ್ವ ಕಾಣಿಕೆ

# ಬೆಂಗಳೂರು ವಿಶ್ವವಿದ್ಯಾನಿಲಯ

**ಬರೆದವರು: ನಿರಂಜನ**

ಬೆಂಗಳೂರು ಪುರಭವನದಿಂದ ಆರು ಮೈಲುಗಳ ದೂರದಲ್ಲಿ (ಮೈಸೂರು ರಸ್ತೆ ... ನಗರದ ಎಲ್ಲೆಯಿಂದ ಎರಡೇ ಮೈಲುಗಳ ಅಂತರದಲ್ಲಿ) ಎಡಕ್ಕೆ ಸಾವಿರ ... ಪ್ರದೇಶದಲ್ಲಿ ವಿಶಿಷ್ಟವಾದೊಂದು ... ಸುತ್ತಲೂ ಬೇರೆ ಭವನಗಳು. ... ದೂರದಲ್ಲಿ ಎತ್ತರದ ಇತರ ಕಟ್ಟಡ ... ಸೊಗಸಾದ ಹೂದೋಟಗಳಿರುವ ... ಸಿಕ ಸೌಕರ್ಯಗಳಿರುವ ವಸತಿಗಳು. ... ಗಡೆ (ರಸ್ತೆಯ ಬಲಕ್ಕೆ) ದೃಷ್ಟಿ ... ಚುವವರೆಗೂ ಕಣ್ಣು ತಣಿಸುವ ಹ... ಹತ್ತಿರದಲ್ಲೇ ನಾಗರಭಾವಿ ರೈಲು ... ಣ.

"ಕ್ಯಾಂಪಸ್ ಸ್ಟೇಷನ್! ಕ್ಯಾಂಪಸ್ ... ಷನ್!"

ಎತ್ತಿನ ಗಾಡಿಗಳಿಗೆ ಆ ರಸ್ತೆಯಲ್ಲಿ ಜಾಗವಿಲ್ಲ. ಟ್ರಕ್ ಚಾಲಕರು ಬಹಳ ಎಚ್ಚರದಿಂದ ನಿಧಾನವಾಗಿ ವಾಹನ ಓಡಿಸಬೇಕು. ಅಷ್ಟೊಂದು ಸ್ಕೂಟರುಗಳು, ಕಾರುಗಳು, ಸೈಕಲುಗಳು ಕೂಡಾ. ನಗರ ಸಾರಿಗೆ ಬಸ್ಸಿನ ಕಂಡಕ್ಟರ್ ಕೂಗುತ್ತಾನೆ.

"ಕ್ಯಾಂಪಸ್! ಕ್ಯಾಂಪಸ್!"

ಅದು ಬೆಂಗಳೂರು ವಿಶ್ವವಿದ್ಯಾನಿಲಯ. ಇದು ಈಗ ಕಾಣಸಿಗುವ ಚಿತ್ರವಲ್ಲ. ಇದರ ಬಿಡುಗಡೆಯಾಗಲು ಹತ್ತು ವರ್ಷಗಳು ಬೇಕು.

### ಅಯಾಚಿತ ವರ

ಈ ವಿಶ್ವವಿದ್ಯಾನಿಲಯ, ಭಕ್ತ ಕೇಳದೆಯೇ ದೇವರು ಕೊಟ್ಟ ವರ. ಮೈಸೂರು ವಿಶ್ವವಿದ್ಯಾನಿಲಯದ ಅಧೀನ ಕಾಲೇಜುಗಳ ಸಂಖ್ಯೆ ಎಂಬತ್ತಾದರೂ ಇನ್ನೊಂದು ವಿಶ್ವವಿದ್ಯಾನಿಲಯದ ಸ್ಥಾಪನೆಯ ಯೋಜನೆ ವಿದ್ಯಾತಜ್ಞರಿಗಾಗಲೀ ರಾಜಕೀಯ ಪಟುಗಳಿಗಾಗಲೀ ಹೊಳೆಯದಿದ್ದುದು ಆಶ್ಚರ್ಯ ಸಂಗತಿ. ದೇಶದಲ್ಲಿ ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಬಗೆಗೆ ವರದಿ ಮಾಡಲು ವಿಶ್ವವಿದ್ಯಾನಿಲಯ ನೆರವು ಆಯೋಗವು ನೇಮಿಸಿದ ವಿಶೇಷ ಸಮಿತಿ ತನ್ನ ಪರಿಶೀಲನೆಯಲ್ಲಿ ಔಪಚಾರಿಕವಾಗಿ ಮೈಸೂರು ರಾಜ್ಯದಿಂದ ಕೋರಿಕೆ ಬಂದಿಲ್ಲವಾದರೂ, ಮೈಸೂರು-ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲದೆ ಇನ್ನೊಂದನ್ನು ಬೆಂಗಳೂರಲ್ಲಿ ಸ್ಥಾಪಿಸುವುದು ಸಮಂಜಸವಾಗಿದೆ— ಎಂದು ತಿಳಿಸಿತು.

ಒಡನೆಯೇ ಮೈಸೂರಿನ ಶಿಕ್ಷಣ ಸಚಿವ ಕಂಠಿಯವರ ಅಧ್ಯಕ್ಷತೆಯಲ್ಲಿ ಇಪ್ಪತ್ತು ಜನರ ಸಮಿತಿ ನೇಮಕಗೊಂಡು ವರದಿ ಸಿದ್ಧವಾಯಿತು. ಕಳೆದ ವರ್ಷ ಜುಲಾಯಿ ೧೦ರಂದು ಕೇಂದ್ರದ ವಿದ್ಯಾಮಂತ್ರಿ ಛಗಲಾ ವಿಶ್ವವಿದ್ಯಾಲಯದ ಉದ್ಘಾಟನೆಯನ್ನೂ ಮಾಡಿದರು. ಮುಂದೆ ಕೆಲತಿಂಗಳಲ್ಲಿ ರಾಷ್ಟ್ರದ ಖ್ಯಾತ ವಿದ್ಯಾತಜ್ಞ ಡಾ। ಲರೋಯಾ (ಪಂಜಾಬಿನವರು) ಉಪಕುಲಪತಿಯಾಗಿ ಅಧಿಕಾರ ಸ್ವೀಕರಿಸಿದರು. ಸರಾಗವಾದ ಮಾತುಗಾರ, ಅವಿಶ್ರಾಂತವಾಗಿ ದುಡಿಯಬಲ್ಲ, ಇತರರನ್ನು ದುಡಿಸಬಲ್ಲ ಸಮರ್ಥ. ಆಧುನಿಕ ವಿಚಾರಸರಣಿಯ ಅಪೂರ್ವ ಕನಸುಗಾರ. ಇಂಥ ಗುಣಗಳುಳ್ಳ ವ್ಯಕ್ತಿ ಮೊದಲನೆಯ ಉಪಕುಲಪತಿಯಾಗಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ದೊರೆತುದು ಅದರ ಸೌಭಾಗ್ಯ. ಹಾಗೆಯೇ, ದಕ್ಷ ಅಧಿಕಾರಿಯೆಂದು ಮೈಸೂರು ವಿಶ್ವವಿದ್ಯಾಲಯದಲ್ಲಿ ಹೆಸರು ಪಡೆದಿದ್ದ ಶ್ರೀ ಮಲ್ಲಿಕಾರ್ಜುನಪ್ಪನವರು ರೆಜಿಸ್ಟ್ರಾರಾಗಿ ನೇಮಕಗೊಂಡುದು ಬೆಂಗಳೂರು ವಿಶ್ವವಿದ್ಯಾಲಯದ ಅದೃಷ್ಟ. ಶೈಶವಾವಸ್ಥೆಯನ್ನು ನಿರಾತಂಕವಾಗಿ ಈ ವಿಶ್ವವಿದ್ಯಾಲಯ ಕಳೆಯುವುದೆಂಬ ಭರವಸೆಯನ್ನು ಈ ಎರಡೂ ನೇಮಕಗಳು ಹುಟ್ಟಿಸಿದುವು.

### ವೈಶಿಷ್ಟ್ಯ

ನಾಡಿನಲ್ಲಿರುವ ಇತರ ವಿಶ್ವವಿದ್ಯಾನಿಲಯಗಳಂತಲ್ಲ ಇದು. ಇದರ ಸ್ವರೂಪ ಫೆಡರಲ್ (ಸಂಯೋಜಿತ) ಅಧೀನದಲ್ಲಿರುವ ೩೨ ಕಾಲೇಜುಗಳು (೧೮,೦೦೦ ವಿದ್ಯಾರ್ಥಿಗಳು ೧,೦೦೦ ಅಧ್ಯಾಪಕರು) ಸ್ವತಂತ್ರವಾಗಿ ಆದರೆ ವಿಶ್ವವಿದ್ಯಾನಿಲಯದ ನಿರ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತವೆ. ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಶಿಕ್ಷಣದ ಹೊಣೆಯನ್ನು ಹೊರುತ್ತದೆ.

ತಂತ್ರ ವಿಜ್ಞಾನಕ್ಕೆ ಮಹತ್ವವಿರುವುದರಿಂದ ಹಲವು ಭಾಷೆಗಳನ್ನು ಕಲಿಯಲು ಏರ್ಪಾಟಿರುತ್ತದೆ. ಭೌತ ಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಔದ್ಯೋಗಿಕ ಅರ್ಥಶಾಸ್ತ್ರ ಔದ್ಯೋಗಿಕ ಸಮಾಜಶಾಸ್ತ್ರ ಹಾಗೂ ಔದ್ಯೋಗಿಕ ಮನಶ್ಶಾಸ್ತ್ರ— ಇವು ವಿಶ್ವವಿದ್ಯಾಲಯದಲ್ಲಿ ಬೋಧಿಸಲ್ಪಡುತ್ತವೆ.

ಉದ್ಯಮ ಮತ್ತು ವ್ಯವಹಾರ ಆಡಳಿತದಲ್ಲೂ ಶಿಕ್ಷಣ ದೊರೆಯುತ್ತದೆ.

ಕೈಗಾರಿಕೋದ್ಯಮಗಳಿಗೆ ಬೇಕಾಗುವ ತಜ್ಞರನ್ನು ಉದ್ಯೋಗಿಗಳನ್ನು ಒದಗಿಸಲು ಈ ವಿಶ್ವವಿದ್ಯಾನಿಲಯ ಸಮರ್ಥವಾಗುತ್ತದೆ.

ಇತರ ಅಧ್ಯಯನ ಈ ವಿಶ್ವವಿದ್ಯಾನಿಲಯ ಕ್ಷೇತ್ರದಲ್ಲಿ ಗೌಣ ಎಂದು ಇದರ ಅರ್ಥವಲ್ಲ. ಮೇಲಿನದು ಈ ವಿಶ್ವವಿದ್ಯಾಲಯದ ವೈಶಿಷ್ಟ್ಯ.

### ತಾಯ್ನುಡಿಗೆ ಮಹತ್ವ

ವಿಜ್ಞಾನ ತಂತ್ರಜ್ಞಾನಗಳ ಆರಾಧಕ ಡಾ। ಲರೋಯಾ ಪ್ರಾದೇಶಿಕ ಭಾಷೆಗೂ ಮಹತ್ವ ನೀಡುತ್ತಾರೆ. ಕೆಲಕಾಲದ ಹಿಂದೆ ಕನ್ನಡದ ಭಾಷಾ ಸ್ಥಾನಮಾನಕ್ಕೆ ಸಂಬಂಧಿಸಿ ಚರ್ಚಿಸಲು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ। ವೆಂಕಟಸುಬ್ಬಯ್ಯನವರ ನೇತೃತ್ವದಲ್ಲಿ ನಿಯೋಗವೊಂದು ಉಪಕುಲಪತಿಯನ್ನು ಕಂಡಾಗ, ನಿಯೋಗದ ವಾದಕ್ಕೆ ಅವರು ಪೂರ್ಣ ಬೆಂಬಲ ನೀಡಿದರು.

ಭರವಸೆಯನ್ನು ಕೃತಿಯಲ್ಲೂ ಅವರು ಒಡಮೂಡಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯ ಆರಂಭಿಸಿದ ಆನರ್ಸ್ ತರಗತಿಗಳಲ್ಲಿ ಕನ್ನಡಕ್ಕೆ ಸ್ಥಾನ ದೊರೆಯಿತು.

### ಮುನ್ನೋಟ

ರಾಷ್ಟ್ರಾಧ್ಯಕ್ಷ ಡಾ। ರಾಧಾಕೃಷ್ಣನ್, ಬೆಂಗಳೂರು ವಿಶ್ವವಿದ್ಯಾಲಯದ ಪ್ರಥಮ ಪದವೀದಾನ ಸಮಾರಂಭದಲ್ಲಿ (ಸ್ನಾತಕರು ೯೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು) ಹಿತವಚನಗಳನ್ನಾಡಿದುದು, ಹಿರಿಯ ಮುತ್ಸದ್ದಿಯ ಹರಕೆಯಂತಾಗಿದೆ.

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರವೇ ವಹಿಸಿಕೊಂಡು ನಡೆಸಬೇಕೆನ್ನುವುದು ವಿದ್ಯಾತಜ್ಞರ ಅಪೇಕ್ಷೆ. ಇದು ದುಸ್ಸಾಧ್ಯವಲ್ಲ.

ಲೇಖನದ ಆರಂಭದಲ್ಲಿ ತೋರಿಸಿದ ಚಿತ್ರ ನಿಜವಾಗುವುದರಲ್ಲಿ ಸಂದೇಹವಿಲ್ಲ.

—ಇನ್‍ಫಾ.

---

(ಹನ್ನೆರಡನೇ ಪುಟದಿಂದ)

### ಜೋಳ

ಜೋಳದ ಕಾಂಡವನ್ನೂ ಹುಳಗಳು ... ರೆಯ ಬಹುದು. ಹುಳ ತಾಗಿದ ಎಲೆ... ಯನ್ನು ಬುಡ ಸಹಿತ ಕಿತ್ತು ಹಾಕಿರಿ. ಸೇ. ... ಬಿ. ಎಚ್. ಸಿ. ಪುಡಿಯನ್ನು ಸುಳಿಯ ... ಧ್ಯಕ್ಕೆ ಆಗಾಗ ಚೆಲ್ಲಬಹುದು. ಪೌಂಡಿಗೆ ... ಗಲನ್ ನೀರಿನಂತೆ ಸೇ. ೫೦ರ ಬಿ. ... ಚ್. ಸಿ. ಅಥವಾ ಡಿ. ಡಿ. ಟಿ. ಯನ್ನು ... ಪಡಿಸಬೇಕು.

### ಆಲೂಗೆಡ್ಡೆ

... ತಡಮಾಡಬೇಡಿ; ಬಿತ್ತನೆ ಮುಗಿದವ... ಕೂಡಲೇ ಬಿತ್ತಿರಿ. ಬಿತ್ತುವ ಮೊದ... ಮಡಿಗಳಿಗೆ ನೀರು ಹಾಯಿಸಿ ತೇವ ... ಳಿಸಿರಿ. ಮೂರು ದಿನಕ್ಕೊಂದಾವರ್ತಿ ... ರು ಕೊಟ್ಟರೆ ಸಾಕು. ನಾಟುವಾಗ, ... ಜಗಳನ್ನು ಸಾಲಿನಲ್ಲಿ ೪—೬ ಅಂಗುಲ ... ಅಂತರದಲ್ಲಿರುವಂತೆಯೂ ಕಣ್ಣುಗ... ಳು ಮೇಲಕ್ಕಿರುವಂತೆಯೂ ಇಡಬೇಕು. ... ಟ್ಟ—ಕೃತಕ ಗೊಬ್ಬರಗಳನ್ನು ನೀಕ... ಹಾಕಲು ಮರೆಯ ಬೇಡಿ.

### ತೆಂಗಿನ ತೋಟ

ಗುಪ್ಪೆ ಹಾಕಿದ ಮಣ್ಣನ್ನು ಹಂಡ ಬಿಡಿ. ... ವಿದ್ದರೆ, ಸ್ವಲ್ಪ ನಿಧಾನಿಸಿ. ನೀರು ... ಹಾಯಿಸಲು ವ್ಯವಸ್ಥೆ ಮಾಡದಿರುವವರು ... ನ್ನು ತಡಮಾಡಬೇಡಿರಿ.

### ಗೆಣಸು

ಗೆಣಸು ನಾಟುವ ಸಲುವಾಗಿ ಗುಣಿ ... ತೋಡುವ ಉಚಿತ ಕಾಲವಿದು. ಎರಡೂ ... ಅಡಿ ವ್ಯಾಸ ಆರು ಅಂಗುಲ ಆಳದ ... ಗುಣಿಗಳನ್ನು ನಾಲ್ಕು ನಾಲ್ಕು ಅಡಿ ಅಂ... ರದಲ್ಲಿ ತೋಡಿ ಆ ಗುಣಿಗಳಿಗೆ ಹಿತ್ತಲಿ... ಕಸಕಡ್ಡಿಗಳನ್ನು ಹಾಕಿ ಬೆಂಕಿ ಇಡಿರಿ.

### ತರಕಾರಿ

ತರಕಾರಿ ಬೆಳೆಗೆ ಈಗಲೇ ಗವುನ ಅ... ಕ್ಕೆ ತಿಂಗಳ ಕೊನೆಯ ಹೊತ್ತಿಗೆ ಸೂ... ಮಡಿಗಳನ್ನು ಬಿತ್ತಬೇಕು ಹಂವೆ, ... ಂತೆ ಮತ್ತು ಕೊತ್ತಂಬರಿ ಮಡಿಗಳ ... ಸಾಲಿಗಳಲ್ಲಿ ಸೇವಂತಿಕ ಗಿಡ್ಡೆ ಹಾಕಿದರೆ ... ಸಂಕ್ರಾಂತಿಯ ಹೊತ್ತಿಗೆ ಹೂವು ಬಿಡುವುದು ... ಯಾರಿಗೆ ಬೇಡ?

---

### ಕೆನಡಾದ ಕಾರ್ಯಕರ್ತರ ಆಗಮನ

ಮಣಿಪಾಲ ಡಿ ೪ ಅಮೆರಿಕದ ಶಾಂತಿ ದಳದ ಮಾದರಿಯಲ್ಲಿರುವ ಕೆನಡಾದ ವಿಶ್ವವಿದ್ಯಾನಿಲಯಗಳ ವಿದೇಶ ಸೇವಾದಳದ ಇಬ್ಬರು ಕಾರ್ಯಕರ್ತರು ಎರಡು ವರ್ಷಗಳ ಅವಧಿಗಾಗಿ ಇಲ್ಲಿಗೆ ಆಗಮಿಸಿದ್ದಾರೆ. ಸಮಾಜ ಸೇವಕರೂ, ಆಂಗ್ಲ ಭಾಷಾಧ್ಯಾಪಕರೂ ಆದ ಶ್ರೀ ಗ್ಯಾರಿ ವಿಕ್ಟೋರರವರು ಅಕಾಡೆಮಿ ಆಫ್ ಜನರಲ್ ಎಜುಕೇಶನಿನ ಸಂಸ್ಥೆಗಳಲ್ಲೂ, ಶ್ರೀಮತಿ ವಿಕ್ಟೋರರವರು ದಾದಿಯರ ಶಾಲೆಯಲ್ಲೂ ಸೇವೆ ಸಲ್ಲಿಸಲಿದ್ದಾರೆ.

### ದ. ಕ. ಜಿಲ್ಲೆಗೆ ಡಾ। ಚೆರಿಯನ್

ಮಣಿಪಾಲ, ಡಿ ೪—ಬರುವ ತಿಂಗಳ ಕೊನೆಯ ವಾರದಲ್ಲಿ ಮಹಾರಾಷ್ಟ್ರದ ರಾಜ್ಯಪಾಲರಾದ ಡಾ। ಪಿ. ವಿ. ಚೆರಿಯನ್‌ರವರು ಮೈಸೂರು ರಾಜ್ಯಕ್ಕೆ ಎರಡು ದಿನಗಳ ಭೇಟಿ ಕೊಡಲಿದ್ದಾರೆ.

ಜನವರಿ ೨೮ರಂದು ಬೆಳಿಗ್ಗೆ ಮುಂಬಯಿಯಿಂದ ಬಜ್ಪೆ ವಿಮಾನ ನಿಲ್ದಾಣಕ್ಕೆ ಆಗಮಿಸಿ ಮಣಿಪಾಲದಲ್ಲಿರುವ ಸಂಸ್ಥೆಗಳನ್ನು ಸಂದರ್ಶಿಸುತ್ತಾರೆ. ಅಂದು ಸಂಜೆ ಮಂಗಳೂರಿನಲ್ಲಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಸ್ತೂರಬಾ ಮೆಡಿಕಲ್ ಕಾಲೇಜ್ ದಿನಾಚರಣಾ ಸಮಾರಂಭದಲ್ಲಿ ಶ್ರೀಮತಿ ಶಾರಾ ಚೆರಿಯನ್‌ರವರು ಬಹುಮಾನ ವಿತರಣೆ ಮಾಡುತ್ತಾರೆ.

ಮರುದಿನ ಬೆಳಿಗ್ಗೆ ಡಾ। ಚೆರಿಯನ್‌ರವರು ಕದ್ರಿಗುಡ್ಡದಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಲಯದ ಆರಂಭೋತ್ಸವವನ್ನು ನೆರವೇರಿಸಿದ ಬಳಿಕ ವಿಮಾನದಲ್ಲಿ ಮುಂಬಯಿಗೆ ಪ್ರಯಾಣ ಮಾಡುತ್ತಾರೆ.

### ವೈದಿಕ ವಿದ್ಯಾ ತರಬೇತಿ ಶಿಬಿರ

ಮಂಗಳೂರು, ಶ್ರೀ ವಿಶ್ವಕರ್ಮ ಸಂಸ್ಕೃತಿ ಸಂವರ್ಧಿನೀ ಸಭಾ, ದ. ಕ. ಮಂಗಳೂರು ಇದರ ಆಶ್ರಯದಲ್ಲಿ ಸ್ಥಳೀಯ ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ವೈದಿಕ ವಿದ್ಯಾ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ತಾ. ೫ರಲ್ಲು ಶ್ರೀ ಬಿ. ಯಶ್. ರುದ್ರಯ್ಯಾಚಾರ್ಯರಿಂದ ಶ್ರೀ ಯಚ್. ಅನಂತಯ್ಯ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಿಬಿರದ ಶಿಕ್ಷಕರಾಗಿ ಶ್ರೀ ಕೆ. ಜನಾರ್ದನಾಚಾರ್ಯರು ಕಾರ್ಯ ನಿರ್ವಹಿಸಲು ಒಪ್ಪಿರುವರು. ಕಾರ್ಯದರ್ಶಿ ಶ್ರೀ ಉ. ಬೈ. ಭಾ. ಆಚಾರ್ಯರು ಶಿಬಿರದ ಉದ್ದೇಶವನ್ನು ವಿವರಿಸಿ ವರದಿಯನ್ನೊಪ್ಪಿಸಿದ ಬಳಿಕ ಶ್ರೀ ಬಿ. ಹರಿಕೃಷ್ಣಂದ್ರಾಚಾರ್ಯರು ಶಿಬಿರದ ಆವಶ್ಯಕತೆಯ ಕುರಿತು ಉಪನ್ಯಾಸವಿತ್ತರು. ಅಧ್ಯಕ್ಷರ ಭಾಷಣವಾದ ಬಳಿಕ ವೈದಿಕ ವಿದ್ಯಾ ತರಬೇತಿಯು ಸಾಂಪ್ರದಾಯಿಕವಾಗಿ ಜರಗಿತು.

---

**ಕುಂದಾಪುರ ಮು. ಕೋರ್ಟಿನಲ್ಲಿ**

**S. C. No. 634/1965.**

ವಾದಿ ನಾಗಪ್ಪ ಸೇರೆಗಾರ,

ಪ್ರತಿವಾದಿರು ರಾಮಕೃಷ್ಣ ಸೇರೆಗಾರ ಕೂಡಾ

ಪ್ರತಿವಾದಿರಿಗೆ ಯಾವಮೂಲಕ ತಿಳಿಸುವದೇನೆಂದರೆ,

1ನೆ ಪ್ರ. ರಾಮಕೃಷ್ಣ ಸೇರೆಗಾರ

2ನೆ ಪ್ರ. ಅಣ್ಣಪ್ಪ ಸೇರೆಗಾರ

ಅಂಗಡಿಮನೆ ವಾಸಪ್ಪ ಸೇರೆಗಾರನ ಮಕ್ಕಳು, ಕುಂದಾಪುರ ತಾಲ್ಲು ಹಡುವರಿ ಗ್ರಾಮಸ್ಥರು.

ವಾದಿಯು ಬಿಮನೆಂಡು ನೋಟಿನ ಬಾಬ್ತು ಬರತಕ್ಕ ಐವಜಿಗೆ ನಿಂಮ ಮೇಲೆ ಮೇಲ್ಕಂಡ ದಾವೆಯಂನು ದಾಕಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಕು 10–1–66ಕ್ಕೆ ತನ್ಕಿಗೆ ಮುಕರ್ರರಾಗಿಯದೆ. ಸದ್ರಿ ತಾರೀಕಿನ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರು ಆಗಿ ಆ ಬಗ್ಗೆ ನಿಂಮ ಉದಾಹರಣೆಯದ್ದ ಪಕ್ಷದಲ್ಲಿ ಹಾಜ್ರು ಮಾಡತಕ್ಕದ್ದು ತಪ್ಪಿದಲ್ಲಿ ಸದ್ರಿ ದಾವೆಯಂನು ನಿಂಮ ಗೈರು ಹಾಜರಿಯಲ್ಲಿ ಕೇಳಿ ಫೈಸಲ್ ಮಾಡೋಣಾದೀತೆಂತ ಯಾಮೂಲಕ ತಿಳಿಸೋಣಾಗುತ್ತದೆ.

**M. MADHAVA RAO**

Advocate for plaintiff.

ತಾ. 10–12–65. ಮೊಕ್ಕಾಂ-ಕುಂದಾಪುರ.

# ಎಲ್ಲೆಲ್ಲಿ ಏನೇನು?

## ಸ್ಥಾಪಕರ ದಿನಾಚರಣೆ

ತಾ. 6-12-65ರಂದು ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಯೂನಿಯನ್ನಿನ ಆಶ್ರಯದಲ್ಲಿ ಕಾಲೇಜಿನ ಸ್ಥಾಪಕರಾದ ದಿವಂಗತ ಡಾ| ಅಚ್ಯುತ ಶ್ರೀನಿವಾಸ ಭಂಡಾರ್‌ಕಾರ್‌ರವರ ಜನ್ಮದಿನೋತ್ಸವನ್ನು ಆಚರಿಸಲಾಯಿತು. ಶ್ರೀ ಸುಧಾಕರ ಪೈ ಪ್ರಾರ್ಥನಾಗೀತ ಹಾಡಿದ ಬಳಿಕ ಕಾಲೇಜ್ ಯೂನಿಯನ್‌ನ ವಿದ್ಯಾರ್ಥಿ ಅಧ್ಯಕ್ಷರಾದ ಶ್ರೀ ಸುಬ್ರಾಯ ಹಾಲಂಬಿಯವರು ದಿವಂಗತ ಭಂಡಾರ್‌ಕಾರರ ಜನ್ಮದಿನದ ನೆನಪನ್ನು ಮಾಡಿಕೊಟ್ಟು, ಅವರ ಜೀವನ ಪರಿಚಯ ಮಾಡಿದರು. ವಿದ್ಯಾರ್ಥಿ ವೃಂದದಿಂದ ಶ್ರೀ ಸುರೇಶ ಕಿಣಿ, ಕೆ. ಗಣೇಶ್, ಶಿವಾನಂದ ಕಾರಂತರವರೂ, ಕುಮಾರಿ ಮಾಧುರಿ ಆಚಾರ್ಯ ಮತ್ತು ಜಾನಕಿ ಹೆಬ್ಬಾರರೂ ದಿವಂಗತ ಡಾಕ್ಟರ ಭಂಡಾರ್‌ಕಾರರ ಸಮಾಜಸೇವೆ, ಉದಾರ ದಾನಗಳ ಕುರಿತು ಗುಣಗಾನ ಮಾಡಿದರು. ಪ್ರಾಧ್ಯಾಪಕರಲ್ಲಿ ಶ್ರೀ ಮಹಮ್ಮದ್ ಯುಸ್ಸೀನ್ ಮತ್ತು ವಾಸುದೇವ ಶೆಣೈಯವರೂ ಭಂಡಾರ್‌ಕಾರ್‌ರ ಆದರ್ಶ ಜೀವನದ ಕುರಿತು ಮಾತಾಡಿದರು. ಪ್ರೋ| ಟಿ. ಕೃಷ್ಣ ರಾವ್, ಪ್ರಿನ್ಸಿಪಾಲರವರು "ಓರ್ವ ವ್ಯಕ್ತಿಯು ವಿದ್ಯಾ ಸಂಸ್ಥೆಗೆ ಇಷ್ಟು ಉದಾರ ದಾನ ಮಾಡಿದುದು ಜಿಲ್ಲೆಯಲ್ಲೇ ಪ್ರಥಮ ಮತ್ತು ಆದರ್ಶ"ವೆಂದು ಹೇಳಿ ವಿದ್ಯಾರ್ಥಿಗಳೂ ಕುಂದಾಪುರದ ಜನತೆಯೂ ಡಾ| ಭಂಡಾರ್‌ಕಾರರಿಗೆ ಎಷ್ಟು ಋಣಿಗಳೆಂಬುದನ್ನು ವಿವರಿಸಿದರು. ಕಾರ್ಯದರ್ಶಿ ಶ್ರೀ ವಾಸುದೇವ ಕೊತ್ವಾಲರು ಧನ್ಯವಾದ ಸಲ್ಲಿಸಿದರು.

## ಪ್ರತಿಷ್ಠಾ ವರ್ಧಂತ್ಯುತ್ಸವ

ಕಟಪಾಡಿ:- ಶ್ರೀ ಮಹತೋಭಾರ ಕ್ಷೇತ್ರ ವೇಣುಗಿರಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವರ ಪ್ರತಿಷ್ಠಾ ವರ್ಧಂತ್ಯುತ್ಸವ ಸಮಾರಂಭವು ತಾ. 1. 12. 65ರಿಂದ ತಾ. 4ರ ತನಕ ವಿಜೃಂಭಣೆಯಿಂದ ಜರಗಿತು. ತಾ. 3ರಲ್ಲು ಜರಗಿದ ಮಹೋತ್ಸವದ ಅಂಗವಾಗಿ ಮೈಸೂರಿನ ಸಂಗೀತ ವಿದ್ವಾನ್ ಶ್ರೀ ರಾಜಪ್ಪನವರ ಹಾಡುಗಾರಿಕೆ, ಬೇಲೂರಿನ ವಿದ್ವಾನ್ ಶ್ರೀ ಯನ್. ಸಿ. ಸುಬ್ಬರಾಯಾಚಾರ‍್ರ ಮೃದಂಗ, ಹಾಗೂ ಶ್ರೀ ಕೆ. ಕೃಷ್ಣಾಚಾರ‍್ರ ಹಾರ್ಮೋನಿಯಮ್ ವಾದನದಿಂದ ಕೂಡಿದ ಅಮೋಘ ಸಂಗೀತ ಕಚೇರಿಯನ್ನು ಏರ್ಪಡಿಸಲಾಗಿತ್ತು.

## ಕುರುಕಾಲು ಸೇವಾ ಸಹಕಾರಿ ಸಂಘದ ಮಹಾಸಭೆ.

ಕುರುಕಾಲು—ಈ ಮಹಾಸಭೆಯು ಸಂಘದ ಅಧ್ಯಕ್ಷ ಶ್ರೀ ಕೆ. ಗಣಪಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ತಾ. 4-12-65ರಂದು ಜರಗಿ ಪ್ರಥಮತ ಅನೇಕ ವರ್ಷಗಳಿಂದ ಕಂಟ್ರ್ಯಾಕ್ಟದಾರರಾಗಿದ್ದು ಸಂಘದ ಬಹುಮುಖ ಪ್ರಗತಿಯ ಬಗ್ಗೆ ತಮ್ಮ ತ್ರಿಕರಣಪೂರ್ವಕವಾದ ಸಹಕಾರವನ್ನು ಕೊಡುತ್ತಿದ್ದ, ಮಹಾ ಸಾತ್ವಿಕರೂ, ಉದಾರಿಗಳೂ ಆಗಿದ್ದ, ಕುಂಜಾರು ದೇವಸ್ಥಾನದ ಆಡಳಿತೆದಾರ ಶ್ರೀ ಕೆ. ರಾಮಕೃಷ್ಣ ಭಟ್ಟರು ತಾ. 30-9-65ರಲ್ಲು ನಿಧನರಾದ ಬಗ್ಗೆ ಸಂತಾಪ ಸೂಚಿಸಲಾಯಿತು.

ಆ ಬಳಿಕ ಸಂಘದ ವಾರ್ಷಿಕ ವರದಿ, ಆಡಿಟ್ ರಿಪೋರ್ಟ್, ಬಜೆಟ್, ಉ. ನಿಬಂಧನೆಗಳ ತಿದ್ದುಪಡಿ ವಗೈರೆ ನಿರ್ಣಯಗಳನ್ನು ಮಾಡಲ್ಪಟ್ಟು, ಮುಂದಿನ ಆಡಳಿತ ಮಂಡಳಿಗೆ, ಶ್ರೀಗಳಾದ ಕೆ. ಗಣಪಯ್ಯ ಶೆಟ್ಟಿ, ಕೆ. ವಾಸು ಶೆಟ್ಟಿ, ಕೆ. ಶಿವರಾಮ ಸೆಟ್ಟಿ, ಕೆ. ಲಿಂಗಪ್ಪ ಶೆಟ್ಟಿ, ಕೆ. ಕೃಷ್ಣರಾವ್, ವಿ. ರಾಮರಾವ್, ಮರ್ಸೆಲಿನೋಡಿಸೋಜ ಕೂಡಾ 7 ಮಂದಿ ಮೆಂಬರರನ್ನು ಸರ್ವಸಮ್ಮತದಿಂದ ಆರಿಸಲಾಯಿತು.

ಕೊನೆಗೆ ಸಭೆಗೆ ಹಾಜರಿದ್ದ ಸೊಸೈಟಿ ಸುಪರ್‌ವೈಸರ್, ಕೋಪರೇಟಿವ್ ಎಕ್ಸ್‌ಟೆನ್‌ಶನ್ ಆಫೀಸರ್, ಗ್ರಾಮ ಸೇವಕ, ಇವರು ಕೃಷಿಯ ಅಭಿವೃದ್ಧಿಯ ಕುರಿತು ಸಹಕಾರಿ ಸಂಘದಿಂದ ದೊರೆಯ ಬಹುದಾದ ಸವಲತ್ತುಗಳನ್ನು ವಿವರಿಸಿ ಭಾಷಣಗೈದನ್ನತ್ತ ಬಳಿಕ ಧನ್ಯವಾದ, ಉಪಹಾರಗಳೊಂದಿಗೆ ಸಭೆಯು ಮುಕ್ತಾಯವಾಯ್ತು.

## ಹಾಜೀ ಅಬ್ದುಲ್ಲಾ ಮುನ್ಸಿಪಲ್ ಶಾಲಾ ಕಟ್ಟಡದ ಉದ್ಘಾಟನೆ

ಉಡುಪಿಯ ಹಾಜಿ ಅಬ್ದುಲ್ಲಾ ಮುನಿಸಿಪಲ್ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ ತಾ. 5ರಂದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಮಹಮ್ಮದಾಲಿಯವರಿಂದ ಶ್ರೀ ಮಧ್ವರಾಜ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಶ್ರೀ ಎ. ಜೆ. ಅಲ್ಸೆಯವರು ಸ್ವಾಗತಿಸಿದರು. ಶ್ರೀ ಮಹಮ್ಮದಾಲಿಯವರು ಉದ್ಘಾಟಿಸುತ್ತಾ ಹಾಜೀ ಅಬ್ದುಲ್ಲಾರವರ ಉದಾರ ಚರಿತೆಯನ್ನು ಶ್ಲಾಘಿಸಿದರು. ಶ್ರೀ ಟಿ. ರಮೇಶ ಪೈಗಳು ಕಟ್ಟಡದ ವಿದ್ಯುದ್ದೀಪವನ್ನು ಉದ್ಘಾಟಿಸಿದರು. ಶ್ರೀ ಯು. ಎಸ್. ಅಬ್ದುಲ್ ಖಾದರರು ದಾನವಾಗಿತ್ತ ಹಾಜಿ ಅಬ್ದುಲ್ಲಾರ ಭಾವಚಿತ್ರವನ್ನು ಶ್ರೀ ಅಲೂರು ಲಕ್ಷ್ಮೀನಾರಾಯಣ ರಾಯರು ಅನಾವರಣಗೈದರು. ಶ್ರೀ ಬಿ. ಸತೀಶ್ಚಂದ್ರ ಹೆಗ್ಡೆಯವರು ಉಚಿತವಾಗಿತ್ತ ರೇಡಿಯೋವನ್ನು ಶ್ರೀ ಬಿ. ರಾಳಪ್ಪ ಶೆಟ್ಟರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಪಿ. ರಂಗನಾಥ ಶೆಣೈ ಮತ್ತು ಶ್ರೀ ಟಿ. ಎ. ಪೈಗಳೂ ಮಾತನಾಡಿದರು. ಕೊನೆಯಲ್ಲಿ ಮುಖ್ಯೋಪಾಧ್ಯಾಯ ಶ್ರೀ ಬಿ. ಅಬ್ದುಲ್ ಖಾದರ್‌ರವರು ಧನ್ಯವಾದ ಸಮರ್ಪಿಸಿದರು.

## 5 ಸ್ಟಾರ್ ಉದ್ಘಾಟನೆ

ಮಂಗಳೂರಿನ ಪ್ರಸಿದ್ಧ ವಸ್ತ್ರವ್ಯಾಪಾರಿಗಳಾದ ಚಂದ್ರನಾ ಬ್ರದರ್ಸ್ ಇವರು ಚಿಣ್ಣ ಬಟ್ಟೆಗಳಿಗಾಗಿಯೇ ಪ್ರತ್ಯೇಕವಾಗಿ ತಮ್ಮ ಮಳಿಗೆಯಲ್ಲಿ ಆರಂಭಿಸಿದ ಹೊಸ ಸೇಲ್ಸ್ ರೂಂ 5 ಸ್ಟಾರ್‌ನ ಉದ್ಘಾಟನಾ ಸಮಾರಂಭವು ಕಳೆದ ತಾ. 8ರಂದು ಬಕ್ಕಿಂಗ್ ಹ್ಯಾಂ ಎಂಡ್ ಕಾರ್ನಾಟಿಕ್ ಕೊ. ಲಿ., ಮದ್ರಾಸು ಇದರ ಮನೇಜಿಂಗ್ ಡೈರೆಕ್ಟರ್ ಶ್ರೀ ಆರ್. ಬಿ. ಕರ್ನಿಕ್‌ರವರಿಂದ ಸ್ಪೀಕರ್ ಶ್ರೀ ಬಿ. ವಿ. ಬಾಳಿಗಾರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಆರ್. ಬಿ. ಕರ್ನಿಕರವರು ಉದ್ಘಾಟಿಸುತ್ತಾ, 5 ಸ್ಟಾರ್‌ನ ಪ್ರಾರಂಭವು ಬಕ್ಕಿಂಗ್ ಹ್ಯಾಂ ಗ್ರೂಪ್ ಮಿಲ್ಲುಗಳಿಗೆ ಅಭಿನಂದನೀಯ ವಿಷಯವಾಗಿದೆಯೆಂದು ನುಡಿದರು.

ಪ್ರಾರಂಭದಲ್ಲಿ ಚಂದ್ರನಾ ಬ್ರದರ್ಸ್ ಸಂಸ್ಥೆಯ ಸೀನಿಯರ್ ಪಾರ್ಟ್‌ನರ್ ಸೇಟ್ ದೇವಿದಾಸ್ ಗಿರಿಧರಲಾಲ್‌ರವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಬಾಳಿಗಾರವರು ಚಂದ್ರನಾ ಬ್ರದರ್ಸ್ ಸಂಸ್ಥೆಯ ಸ್ಥಾಪಕ ಗಿರಿಧರಲಾಲ್ ನರೋತ್ತಮದಾಸರ ಭಾವಚಿತ್ರ ಅನಾವರಣಗೈದರು. ಅಧ್ಯಕ್ಷರು ಮಾತನಾಡುತ್ತಾ ಸಂಸ್ಥೆಯ ಕಾರ್ಯದಕ್ಷತೆಯನ್ನು ಶ್ಲಾಘಿಸಿದರು. ಸಭಿಕರಲ್ಲಿ ಶ್ರೀ ನಯಂಪಳ್ಳಿ ರಾಮರಾವ್ ಮತ್ತು ಶ್ರೀ ಶ್ರೀಪತಿ ರಾವ್‌ರವರು ಮಾತನಾಡುತ್ತಾ ಚಂದ್ರನಾರವರ ಗುಣಯೋಗ್ಯತೆಗಳನ್ನು ಹೊಗಳಿದರು.

ಆರಂಭದಲ್ಲಿ ಪ್ರತಾಪ್ ಗಿರಿಧರಲಾಲ್‌ರವ ರ ಶುಭಕೋರಿ ಬಂದ ಸಂದೇಶಗಳನ್ನೋದಿದರು. ಅಂತ್ಯದಲ್ಲಿ ಸೇಟ್ ಸುರೇಶ ಡಿ. ಚಂದ್ರನಾರವರು ವಂದನಾರ್ಪಣೆ ಗೈದರು.

## ವಾರ್ಷಿಕ ಮಹಾ ಸಭೆ

ಕುಂದಾಪುರ ಕೋಪರೇಟಿವ್ ಟೌನ್ ಬ್ಯಾಂಕ್ ಲಿಮಿಟೆಡ್‌ನ ವಾರ್ಷಿಕ ಮಹಾ ಸಭೆ ತಾ. 5-12-65-ರಲ್ಲು ಬ್ಯಾಂಕಿನ ಅಧ್ಯಕ್ಷ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯದರ್ಶಿಯವರಿಂದ 1964-65 ರ ವರದಿ ಮಂಡಿಸಲ್ಪಟ್ಟು ಅಧ್ಯಕ್ಷರ ಭಾಷಣದ ತರುವಾಯ ಮುಂದಿನ ವರ್ಷಕ್ಕೆ ಈ ಕೆಳಗಿನ ಮಹನೀಯರಿಂದ ಕೂಡಿದ ಆಡಳಿತ ಮಂಡಳಿಯು ಚುನಾಯಿಸಲ್ಪಟ್ಟಿತು.

ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಶ್ರೀ ಎಚ್. ದೇವಿದಾಸರಾವ್, ಶ್ರೀ ವಿ. ವಿ. ಕಾರಂತ, ಶ್ರೀ ಕೆ. ರಾಮಕೃಷ್ಣ ನಾಯ್ಕ, ಶ್ರೀ ಎಚ್. ವೆಂಕಟ್ರಾವ್, ಶ್ರೀ ಕೆ. ದೇವಣ್ಣ ಪೈ, ಶ್ರೀ ಕೆ. ಪದ್ಮನಾಭ ಭಂಡಾರಿ.

## ಜಿಲ್ಲಾಧಿಕಾರಿಗಳಿಗೆ ನಿವೇದನೆ

ದ. ಕ. ಜಿಲ್ಲಾ ಕೃಷಿಕರ ಪರಿಯಿಂದ 30-11-65ರಂದು ಸರ್ವಶ್ರೀಗಳಾದ ಎಂ. ಡಿ. ಅಧಿಕಾರಿ, ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಬೋಳ ರಘುರಾಮ ಶೆಟ್ಟಿಯವರು ದಕ್ಷಿಣ ಕನ್ನಡ ಜಿಲ್ಲಾ ಡಿಪ್ಯುಟಿ ಕಮಿಶನರ್‌ರವರಿಗೆ ಮೈಸೂರು ಸರಕಾರವು ಜ್ಯಾರಿಮಾಡಿರುವ ಮೈಸೂರು ಭತ್ತ ಲೆವಿಯಲ್ಲಿರುವ ಲೋಪದೋಷಗಳನ್ನು ಮತ್ತು ಅದನ್ನು ಜ್ಯಾರಿಗೆ ತರುವಲ್ಲಿ ಕೃಷಿಕರಿಗೂ, ಕೃಷಿ ಉತ್ಪತ್ತಿಗೂ ಆಗುವ ಅನ್ಯಾಯಗಳ ಕುರಿತು ಒಂದು ಮನವಿಯನ್ನು ಅರ್ಪಿಸಿರುವರು. ಸದ್ರಿ ಮನವಿಯ ಕುರಿತು ತಾನು ಸಂಬಂಧ ಪಟ್ಟ ಅಧಿಕಾರಿಗಳಿಗೆ ತಮ್ಮ ಅಭಿಪ್ರಾಯ ಸಹಿತ ಕಳುಹಿಸಿ ಕೊಡುತ್ತೇನೆಂತ ಭರವಸೆಯನ್ನು ಮಾನ್ಯ ಡಿಪ್ಯುಟಿ ಕಮಿಶನರು ಕೊಟ್ಟದ್ದು ಮಾತ್ರವಲ್ಲದೆ ಅವರ ಅವಗಾಹನೆಗೆ ತಂದಿರುವ ಭತ್ತದ ಲೆವಿಯನ್ನು ಜ್ಯಾರಿ ಮಾಡುವಲ್ಲಿ ಉಂಟಾಗಿರುವ ಅನ್ಯಾಯಗಳ ಪರಿಶೀಲನೆ ಮಾಡಿ ಅದರ ಪರಿಹಾರದ ಬಗ್ಗೆ ತಕ್ಕ ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಆಶ್ವಾಸನೆ ನೀಡಿರುತ್ತಾರೆ.

## ಕೃಷಿಕರ ಸಭೆ

ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘದ ಪರಿಯಿಂದ 8-12-1965ರಂದು ಕಾರ್ಕಳ ತಾಲೂಕು ಬೋಳ ಗ್ರಾಮದಲ್ಲಿ ಕೃಷಿಕರ ಸಭೆಯು ಶ್ರೀ ಬಿ. ಬೇಜ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೋಳ ರಘುರಾಮ ಶೆಟ್ಟಿಯವರು ಸ್ವಾಗತ ಭಾಷಣ ಮಾಡುತ್ತಾ ಕೃಷಿಕರ ಕುಂದುಕೊರತೆಗಳನ್ನೂ, ಅವರಲ್ಲಿ ಐಕ್ಯಮತ್ಯವಿಲ್ಲದಿರುವುದನ್ನೂ ಒತ್ತಿ ಹೇಳಿ ಕೃಷಿಕರಿಗಾಗುತ್ತಿರುವ ತೊಂದರೆಗಳನ್ನೆದುರಿಸಲು ಸದಾಸಿದ್ಧರಿರುವಂತೆ ವಿನಂತಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಯಂ. ಡಿ. ಅಧಿಕಾರಿಯವರು ಮಾತಾಡುತ್ತಾ ರೈತರಿಗಾಗುತ್ತಿರುವ ಚಿತ್ರಹಿಂಸೆಯನ್ನು ವಿವರಿಸಿ ಈ ಅನ್ಯಾಯವನ್ನು ತಡೆಗಟ್ಟಲು ಎಲ್ಲಾ ಕೃಷಿಕರು ಬೆಂಬಲ ನೀಡುವಂತೆ ಕೋರಿದರು. ಲೆವಿ ವಿಷಯದಲ್ಲಿ ಅವರು ಮುಂದುವರಿದು ಎಲ್ಲಾ ಉದ್ಯೋಗಗಳಿಗಿಂತಲೂ ಕಷ್ಟಕರವಾದ ಕೃಷಿ ಉದ್ಯಮದಲ್ಲಿ ತನ್ನ ಸುಖಶಾಂತಿಯನ್ನು ತೊರೆದು ರಾಷ್ಟ್ರಕ್ಕಾಗಿ ಅಹೋರಾತ್ರಿ ದುಡಿಯುವ ಕೃಷಿಕರ ಬಗ್ಗೆ ಸರಕಾರವು ತುಂಬಾ ಅನ್ಯಾಯವನ್ನುಂಟುಮಾಡಿ ಕೃಷಿ ಉದ್ಯಮದಲ್ಲಿ ಆವನನ್ನು ನಿರುತ್ಸಾಹಿಯನ್ನಾಗಿ ಮಾಡಿದೆ. ಲೆವಿ ಧಾರಣೆಯು ಅತ್ಯಂತ ಕಡಿಮೆಯಾಗಿರುವುದೆಂದೂ, ತನ್ನ ಏಕೈಕ ಉತ್ಪಾದನೆಯಿಂದ ಕೃಷಿಕನು ಇತರ ಎಲ್ಲಾ ತನ್ನ ಅವಶ್ಯಕತೆಯ ಸಾಮಗ್ರಿಗಳನ್ನು ಪಡೆಯುವಂತವನಾಗಿರುತ್ತಾನೆ. ಅಂತಹ ಕೃಷಿಕನ ಏಕೈಕ ಉತ್ಪಾದನೆಯ ಮೇಲೆ ಸರಕಾರವು ನಿರ್ದಾಕ್ಷಿಣ್ಯವಾಗಿ ವರ್ತಿಸಿದೆಯೆಂದರು. ಲೆವಿ ಧಾರಣೆಯನ್ನು ಕನಿಷ್ಟ ಪಕ್ಷ ರೂಪಾಯಿ ಏರಿಕೆ ಮಾಡಬೇಕೆಂದು ಸರಕಾರವನ್ನು ವಿನಂತಿಸಿದರು.

ಶ್ರೀ ಕೆ. ಯನ್. ನೇಮಪ್ಪ ಜೈನ್‌ರವರು ಮಾತನಾಡುತ್ತಾ ಇತರ ಉದ್ಯಮಗಳಲ್ಲಿ ಇರುವಂತೆ ನಮ್ಮ ಕೃಷಿಕರಲ್ಲಿ ಐಕ್ಯತೆಯಿಲ್ಲದಿರುವುದೇ ನಮ್ಮ ಇಂದಿನ ಈ ಅಧೋಗತಿಗೆ ಕಾರಣವೆಂದೂ, ಆದಕ್ಕಾಗಿ ಕೃಷಿಕರಾದ ನಾವುಗಳು ಈಗಲಾದರೂ ಜಾಗೃತರಾಗಬೇಕೆಂದು ಹೇಳಿದರು. ಕೊನೆಯಲ್ಲಿ ಸುಬ್ರಾಯ ಭಟ್ಟರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

## ಕೊಂಕಣಿ ಕವಿ ಸಮ್ಮೇಳನ

ಗೋವೆಯ ಕೊಂಕಣಿ ಭಾಷಾ ಮಂಡಳವು ಇದೇ ತಾ. 27ರಂದು ಸಂಜೆ ತಾಸು ... ಪಂಜಿಮ್‌ನ ಕ್ಲೂಟಿ ನ್ಯಾಶನಲ್ ಹಾಲಿನಲ್ಲಿ ಕೊಂಕಣಿ ಕವಿ ಸಮ್ಮೇಳನವನ್ನು ನಡೆಸುವುದು. ಕೊಂಕಣಿ ಕವಿರಾಜ-1965ನ್ನು ಆರಿಸಲಿದ್ದಾರೆ. ಎಲ್ಲೆಡೆಯ ಕೊಂಕಣಿ ಕವಿಗಳು ಇದರಲ್ಲಿ ಭಾಗವಹಿಸಬಹುದು. ಎರಡು ಕವಿತೆಗಳನ್ನು ಅವರು ಬರೆಯಬೇಕು. ಒಂದು "ನಮ್ಮ ಮಾತೃಭಾಷೆ ಕೊಂಕಣಿ" ಯ ಮೇಲಿದ್ದು ಇನ್ನೊಂದನ್ನು ಕವಿಗಳ ಆಯ್ಕೆಗೆ ಬಿಡಲಾಗಿದೆ. ದೇವನಾಗರಿ, ರೋಮನ್ ಯಾ ಕನ್ನಡ ಲಿಪಿಯಲ್ಲಿ ಇವನ್ನು ಬರೆದು ದಸಂಬರ 20ರ ಒಳಗೆ ಕಲ್ಚರಲ್ ಕಮಿಟಿ, ಕೊಂಕಣಿ ಭಾಷಾ ಮಂಡಳ, ನ್ಯಾಶನಲ್ ಸಿನೆಮಾದ ಎದುರು, ಪಂಜಿಮ್ ಇವರಿಗೆ ಕಳಿಸಬೇಕು. ಕವಿಗಳು ಸ್ವತಃ ಸಮ್ಮೇಳನದಲ್ಲಿ ಹಾಡಬಹುದು; ಇಲ್ಲವಾದರೆ ಹಾಡಿಸುವ ವ್ಯವಸ್ಥೆಯನ್ನೂ ಮಾಡಲಾಗುವುದು.

## ಕಾರ್ಕಳ ಮುನ್ಸಿಫ್ ಕೋರ್ಟಿನ

O. S. 402/1964.

ಕಾರ್ಕಳ ಶ್ರೀ ವೆಂಕಟ್ರಮಣ ದೇವರ ... ಡಾರ ಟ್ರಸ್ಟಿಗಳು ಕೆ. ನಾರಾಯಣ ಪ್ರಭು ಸಹಾ —ವಾದಿ

ಚಾರ್ಕಳ ಭೋಜರಾಜ ಹೆಗ್ಡೆ ಸಹಾ —ಪ್ರತಿವಾದಿ

3. ಮರಿಯ ಬಾಯಿ ಯಾನೆ ಪಿಯಬ್ಬ, ಗಣು ಯಾನೆ ದೂಜೆ ಸೋಜರ ಮ... ಕಾರ್ಕಳ ತಾಲ್ಲೂಕು ಯೆರ್ಲಪಾಡಿ ಗ್ರಾಮ... ರುವವಳು—

6. ಅಲೆಕ್ಸ ಡಿ. ಸೋಜ, ಮೊಡ್ತಿನ್ ಸೋಜರ ಮಗ, ಸದ್ರಿ ಯೆರ್ಲಪಾಡಿ ಗ್ರಾಮ ಕುಂಟುಪಾಡಿ ಎಂಬಲ್ಲಿರುವವ—

ಸದ್ರಿ 3, 6ನೆ ಪ್ರತಿವಾದಿರಿಗೆ ಈ ... ಲಕ ತಿಳಿಸುವದೇನಂದ್ರೆ—

ಡಿಕ್ಲರೇಶನ್ ವಗೈರೆ ಪ್ಲೈಂಟಿನ ನಿವ... ಗಳ ಬಗ್ಗೆ ವಾದಿರು ದಾಖಲ್ಲ ಮಾಡಿದ ... ದಾವೆಯು ತಾರೀಕು 3-1-1966ಕ್ಕೆ ನಿ... ಅಕೈರ ನೋಟೀಸಿಗೆ ಇಟ್ಟಿದೆ. ಆ ಕು... ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿನ ಬೆ... 10 ಘಂಟೆಗೆ ಮೇಲ್ಕಂಡ ಕೋರ್ಟು ಮು... ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕ... ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾ... ತೀರ್ಮಾನವಾಗುವದು ಎಂತ ಕೋರ್ಟು... ಹುಕುಂ ಪ್ರಕಾರ ತಿಳಿಸಿಯದೆ.

K. V. Kama

Advocate for Plainti

ಕಾರ್ಕಳ, 11-12-65

## ಚಂದಾದಾರರಲ್ಲಿ ವಿನಂತಿ

ಚಂದಾ ಅವಧಿ ಮುಗಿದ ಚಂದಾದಾ... ಗೆಲ್ಲಾ ನಾವು ಈಗಾಗಲೇ ಕಾರ್ಡು ... ದು ಮುಂದಿನ ಚಂದಾಹಣವನ್ನು ... ಸಲು ವಿನಂತಿಸಿಕೊಂಡಿರುತ್ತೇವೆ. ... ವರು ನಮ್ಮ ವಿನಂತಿಯನ್ನು ಮನ್ನಿ... ಚಂದಾ ಹಣವನ್ನು ಕಳಿಸಿಕೊಟ್ಟಿದ್ದಾ... ಇನ್ನೂ ಚಂದಾ ಕಳಿಸದವರು ದ... ಮಾಡಿ ತಮ್ಮ ಚಂದಾಹಣವನ್ನು ಬೇಗ ಕಳಿಸಿಕೊಡುವಂತೆ - ಬಿನ್ನವಿಸುತ್ತೇ... ಅಂತೂ ವಾರಾಂತ್ಯದೊಳಗೆ ಚಂ... ಬಾರದಿದ್ದರೆ ನಾವು ಮಾಡುವ ವಿ... ಯನ್ನು ದಯಮಾಡಿ ಪಡೆಕೊಂ... ಪ್ರೋತ್ಸಾಹಿಸಬೇಕಾಗಿ ಕೇಳಿಕೊ... ತ್ತೇವೆ.

ಮೆನೇಜರ

(ಮೂರನೇ ಪುಟದಿಂದ)

ಈ ವರ್ಷದ ಪರಿಸ್ಥಿತಿ ಇಡಿಯ ದೇಶಕ್ಕೂ ಒಂದೇ ಎಂಬಂತಾಗಿದೆ. ಹೀಗೆ ಅಂತರಿಕವಾಗಿ ಸಂಕಟಕ್ಕೆ ಸಿಲುಕಿರುವ ನಮಗೆ ಬಾಹ್ಯದಲ್ಲಿಯೂ ಸಂಕಟಗಳು ಕಾದಿವೆ. ಇವೆಲ್ಲವುಗಳಿಂದ ನಾವು ಆತ್ಮರಕ್ಷಣೆಯನ್ನು ಹೇಗೆ ಮಾಡಿಕೊಳ್ಳುತ್ತೇವೆ ಎಂದು ಇಡಿಯ ಜಗತ್ತು ನೋಡುತ್ತಿದೆ. ಲೋಕದ ಮುಂದೆ ಅಪಹಾಸ್ಯಕ್ಕೆ ಗುರಿಯಾಗದಂತೆ ನಾವು ತೀವ್ರ ಎಚ್ಚರಿಕೆಯಿಂದಿರಬೇಕು. ತಲೆಯೆತ್ತಿ ತಿರುಗುವಂತಹ ಕೃತಿಗಳನ್ನು ಪ್ರತಿ ಭಾರತೀಯನೂ ಮಾಡಬೇಕು. ಇದರಿಂದಲೇ ಜನರ ಕಲ್ಯಾಣ, ದೇಶದ ಕಲ್ಯಾಣವೆಂಬುದನ್ನು ಮರೆಯಬಾರದು.

# ಕ್ರೈತ್ರ ಮುರುಗ

(ಎರಡನೇ ಪುಟದಿಂದ)

...ರಿ ಗೊತ್ತಿರುವಂತೆ ಮುರುಗನಿಗೆ ಅದ
...ಂತಲೂ ಚೆನ್ನಾಗಿ ತನ್ನ ಕೆಲಸದ ಜ
...ಬ್ದಾರಿ ಗೊತ್ತಿದೆ."

"ಅದು ಸಾಧ್ಯ ಮುರುಗ, ಆ ರೀತಿ
...ವನ ನಾನು ಸಾಗಿಸಿದಲ್ಲಿ ಇಲ್ಲಿಯ ಜ
...ು ನನ್ನನ್ನು ವೈರಿಯಂತೆ ಕಾಣಬಹು
... ನಾನು ಒಪ್ಪಲಾರೆನಾದರೂ ಅವರ
...ತುಗಳಲ್ಲಿ ಅರ್ಥವಿರಬಹುದು. ಹೇಗಿ
...ರೂ ತಡವಾಯಿತು, ಎಲ್ಲ ವಿಷಯಗಳ
...ರ್ಷ ಆಗಿ ಹೋಗಿದೆ. ನಾಳೆ ಉಷೆ
... ಎದ್ದೇಳುವಾಗ, ನಕ್ಷತ್ರಕ್ಕೆ ಹಾ
... ಈ ಹಳ್ಳಿಗೆ ನಮಸ್ಕಾರ ಸಲ್ಲಿಸಿ, ನಾ
ಹೋಗುತ್ತೇನೆ. ನಿನ್ನ ವಿರೋಧಾಭಿ
...ಯದ ಮನಸ್ಸನ್ನು ತಿಳಿದುಕೊಂಡೇ,
ಕೊನೆಯ ಕ್ಷಣದ ವರೆಗೆ, ಈ ವಿಷಯ
...ನ್ನು ಗುಟ್ಟಾಗಿಟ್ಟಿದ್ದೆ. ನಾನೀಗ ಬಂದಿ
...ದು ನಿನ್ನಿಂದ ಬೀಳ್ಕೊಂಡು ಹೋಗ
... ನಾನು ಕಡಪದಲ್ಲಿ ಗುಮಾಸ್ತಗಿರಿಗೆ
...ದ್ದೇನೆ."

ಕಡಪ! ಕಾಶಿಯಂತೆ ಅದು ಬಹು ದೂ
ಊರು, ಇಲ್ಲ, ಇಲ್ಲ, ಸ್ವಾಮಿ, ನಿಮ್ಮ
...ಕ್ಷ ಆರೋಗ್ಯಕ್ಕೆ ಅದು ಸರಿಬರಲಿ
..." ಮುರುಗನು ಆಶ್ಚರ್ಯದಿಂದ
...ಳಿದನು.

'ಆದರೆ ಮುರುಗ, ಈ ವಿಷಯವನ್ನು
...ಯಿಸಿ ಆಗಿದೆ. ಅದೇನೂ ಶಾಶ್ವತ
...ವಲ್ಲ. ಮುರುಗ, ನಿನ್ನಲ್ಲಿ ನನಗೆ
...ಸವಿದೆ. ಈ ಜಮೀನಿಗೆ ನಿನ್ನನ್ನು
... ಒಕ್ಕಲನ್ನಾಗಿ ಮಾಡಿದ್ದೇನೆ. ಅಲ್ಲಿ
... ಮೂರು ವರ್ಷ ದುಡಿದು, ಕೂಡಿ
ಹಣ ಮತ್ತು ಈ ಜಮೀನಿನಿಂದ
... ಉಳಿಸಿದ ಹಣದಿಂದ ಸಾಲವನ್ನು
...ಸಿ ಬಿಡುತ್ತೇನೆ."

ಒಕ್ಕಲು!" ಮುರುಗನು ಆಶ್ಚರ್ಯವ
ವ್ಯಕ್ತಪಡಿಸಿದನು.

ಹೌದು. ಗದ್ದೆಗಳು ಹಾಗೂ ತೋಟ
...ಲ್ಲಾ ನಿನಗೆ; ನೀನು ವರ್ಷ ವರ್ಷ
...ಐವತ್ತು ರೂಪಾಯಿಗಳನ್ನು ಕೊಡು
...ತ್ತಿರು. ಕ್ಲಪ್ತ ಕಾಲದಲ್ಲಿ ಕೊಡುತ್ತಿದ್ದರೆ
...ರಿ. ವರ್ಷಕ್ಕೊಮ್ಮೆಯಾದರೂ ನಾವಿತ್ತ
...ರದಿರ ಬಹುದು. ಇದೆಲ್ಲಾ ನಿನ್ನ ಒಳ್ಳೆ
...ಮದಕ್ಕೆ ಇದೆ. ನಿನಗೆ ಬೇಕಾದಷ್ಟು ದುಃ
... ಪಡುವದಿಲ್ಲ."

ಮುರುಗನ ಕಣ್ಣುಗಳಲ್ಲಿ ನೀರು ಬಂ
... ಅವನು ಮೆಲ್ಲನೆ "ಸ್ವಾಮಿ, ಈ
ಸಂದರ್ಭದಲ್ಲಿ ಕಣ್ಣೀರ ಕಟ್ಟೆ ಒಡೆದದ್ದ
ರೂ ನಾನು ಅಳಬಾರದು. ಏಳು ಕಲೆ
ಮಾತುಗಳಲ್ಲಿ ನಿಮ್ಮ ಮನೆಗೆ ಒಮ್ಮೆಯಾ
ದರೂ ಬೀಗ ಹಾಕಿಲ್ಲಿಲ್ಲ. ಆದರೆ ಆದಿನ್ನ
ಮುಂದಕ್ಕೆ ಒಕ್ಕಲಿಲ್ಲದ ಮನೆ ಆಗುತ್ತದೆ.
ನಾನದೆಷ್ಟು ನಿರ್ಮಲವಾಗಿಟ್ಟರೂ, ಜಾಗ್ರ
ತೆ ವಹಿಸಿಕೊಂಡರೂ, ಧನಿ ಇಲ್ಲದ ಮನೆ
ಯು, ಉಪಯೋಗಿಸದ ಹಾರೆಯಂತೆ,
ಹಾಳಾಗುತ್ತ ಹೋಗುತ್ತದೆ. ಧನಿಯ ಹೆ
ಜ್ಜೆಯ ಶಬ್ದಗಳನ್ನು ಕೇಳದ ಈ ಗದ್ದೆಗಳು
ಇನ್ನು ಹಿಂದಿನಂತೆ ಮುಗುಳ್ನಗೆಯಾಡಲಿ
ಕ್ಕಿಲ್ಲ. ಬಿಸಿಲಿಗೂ ಬಿರುಗಾಳಿಗೂ ಬೆದ
ರದೆ, ಕತ್ತೆತ್ತಿ ನಿಮ್ಮತ್ತ ಕಂಡು, ಗಾಳಿ
ಗೂ ಮಳೆಗೂ ಸಂತೋಷದಿಂದ ಕುಣಿ
ಯುತ್ತಿದ್ದ ಕದಿರುಗಳು, ಇನ್ನು ಮುಂದ
ಕ್ಕೆ ಗರ್ಭದಲ್ಲೇ ಒಣಗಿ, ಕೊಯ್ಲಿನ
ಸಮಯ ಪ್ರಯೋಜನಕ್ಕೆ ಬಾರದೆ ಹೋ
ಗ ಬಹುದು. ಸ್ವಾಮಿ, ನೀವು ಇದೇ
ಮನೆಯಲ್ಲಿರಬೇಕಾಗಿ ನಾನು ಪುನಃ ಪುನಃ
ಪ್ರಾರ್ಥಿಸಿಕೊಳ್ಳುತ್ತೇನೆ. ಹೃದಯವೂ
ಜೋರಾಗಿ ಬಡಿಯುತ್ತಿದೆ."

"ಮುರುಗ, ನನ್ನ ಮಾತುಗಳು ದುಃಖ
ವನ್ನು ಹೆಚ್ಚಿಸುತ್ತವೆ. ಈ ತೋಟದಲ್ಲಿ,
ನದಿಯತ್ತ ಮುಖವಿರುವ ಒಂದು ಚಿಕ್ಕ
ಗುಡಿಸಲನ್ನು ಕಟ್ಟಿಕೊಂಡು ನಿನ್ನೊಂದಿ
ಗೆ ಉಳುತ್ತ, ಅಗೆಯುತ್ತ, ಸುಖದಿಂದ
ನಾನಿರಬಹುದಿತ್ತು. ನಾನು ಪ್ರಾಮಾಣಿಕ
ತನದಿಂದ ಪ್ರಯತ್ನಿಸಿದಾಗ ವಿಧಿ ಹಾಗೂ
ಅತ್ತೆಯವರು ಪ್ರಬಲ ಧಾಳಿನಡೆಸಿ ನನ್ನ
ಮುಖವನ್ನು ತಿರುಗಿಸಿದ್ದಾರೆ. ಎಲ್ಲವೂ
ಆಗುವದು ಒಳ್ಳೆಯದಕ್ಕೆ. ನಾವೂ ಹಾಗೆ
ಯೇ ಭಾವಿಸಿಕೊಂಡು, ನಗುನಗುತ್ತ
ದೈನಂದಿನ ಕಾರ್ಯವನ್ನು ಮಾಡುತ್ತಿ
ರೋಣ."

ಮಾತನ್ನು ಮುಗಿಸಿದ ರಾಮು, ಶ್ರ
ದ್ಧಾಪೂರ್ಣ ದೃಷ್ಟಿಯೊಂದನ್ನು ಮುರುಗ
ನತ್ತ ಬೀರಿ, ಮೌನದಿಂದ ಹಿಂತಿರುಗಿ
ದನು.

ಅದೇ ವೇಳೆಯಲ್ಲಿ ಜಾನಕಿಯು, ಮಗು
ವಿನ ಪ್ರೀತಿಪೂರ್ಣ ಮಾತುಗಳಿಂದ ಸೀ
ತೆಗೆ ಒಂದು ರೀತಿಯ ಅಪರಿಚಿತ ಆನಂದ
ಹಾಗೂ ಮನಸ್ಸಿಗೆ ಸಮಾಧಾನವಾಯಿ
ತು. ಅಂದಿನ ವರೆಗೆ ಅನುಭವಿಸದೇ ಇ
ದ್ದಂತಹ ಸುಖವನ್ನು ಅವಳು ಕೊಟ್ಟಿದ್ದ
ಳು. ರಾಮುವಿನಿಂದಾಗಿ ತನ್ನ ದುಃಖವು
ಯ ಜೀವನ ಬದಲಾದುದಕ್ಕಾಗಿ ಜಾನಕಿ
ಯ ಮೂಲಕ ಸೀತೆ ಹೃತ್ಪೂರ್ವಕ ಧನ್ಯ
ವಾದಗಳನ್ನರ್ಪಿಸಿದಳು. ಸಂಜೆ ಸಂದು ಕ
ತ್ತಲೆ ಕವಿಯುತ್ತಿದ್ದಂತೆ ನಡುಗುತ್ತಿರುವ
ಆದರೆ ಸ್ನೇಹಪೂರ್ಣ ಸ್ವರದಿಂದ ಜಾನ
ಕಿಯನ್ನು ಬಿಟ್ಟು ಪ್ರಾರ್ಥನೆಗಾಗಿ ಆ ಗ್ರಾ
ಮದ ಗುಡಿಗೆ ಸೀತೆ ನೇರ ಹೋದಳು.
ಅದೊಂದು ಚಿಕ್ಕದಾದರೂ ಚೊಕ್ಕ ದೇ
ವಸ್ಥಾನ. ಅದೂ ಒಮ್ಮೆ ಉಚ್ಛ್ರಾಯ ಸ್ಥಿ
ತಿಯಲ್ಲಿತ್ತು. ಆದರೆ ಈಗ, ಅಲ್ಲಿ ದೈನಂದಿ
ನ ಪೂಜೆಯೂ ಸರಿಯಾಗಿ ನಡೆಯುವು
ದಿಲ್ಲ.

ರಾಮು ತೋಟದಿಂದ ಮನೆಗೆ ಹಿಂತಿ
ರುಗುತ್ತಿದ್ದನು. ಅವನು ಬರುತ್ತಿದ್ದ ದಾ
ರಿಯ ಪಕ್ಕದಲ್ಲೇ ದೇವಸ್ಥಾನ ಇರುವದು.
ಅವನಿಗೆ ಅಡಿಗಡಿಗೆ ದೇವಸ್ಥಾನಕ್ಕೆ ಹೋ
ಗುವ ಅಭ್ಯಾಸ ಇರದಿದ್ದರೂ, ಈಗ, ಪ್ರ
ಯಾಣ ಕಾಲದಲ್ಲಿ, ಪ್ರಾರ್ಥಿಸಿ ಆಶೀರ್ವಾ
ದವನ್ನು ಪಡೆದುಕೊಳ್ಳಬೇಕೆಂಬ ಆಲೋ
ಚನೆ ಬಂತು. ಎಂದಿನಂತೆ "ಂದೂ ಮಂ
ದಿರ ನೀರವವಾಗಿತ್ತು. ಮೆಲ್ಲನೆ ರಾಮು ಗ
ರ್ಭಗುಡಿಗೆ ಹೋದನು. ಅಲ್ಲಿ ಒಂದು ಹ
ಣತೆ ಪ್ರಕಾಶ ನೀಡುತ್ತ, ಮೂರ್ತಿಯ
ಮುಖವನ್ನು ಕಾಣಿಸುತ್ತಿತ್ತು. ಅವನು ಹಾ
ಗೆ ಪ್ರದಕ್ಷಿಣೆ ಬರಲು ಪ್ರಾರಂಭಿಸಿದನು.
ಆಗ ಅವನ ಕಣ್ಮುಂದೆ ಒಂದು ಹೆಣ್ಣಿನ
ನೆರಳು ಒಂದು ಕಂಬದ ಹಿಂದಿನಿಂದ ಬಿದ್ದಿ
ತ್ತು. ರಾಮುವಿನ ಹೃದಯವು ಜೋರಾಗಿ
ಬಡಿಯಲಾರಂಭಿಸಿತು.

ದೇವಸ್ಥಾನವು ಹಾಳು ಬಿದ್ದಿದ್ದರೂ
ಅಲ್ಲಿನ ಅಂಬಾಳ್ ತನ್ನ ದೈವಿಕ ಶಕ್ತಿಗೆ
ಹೆಸರುವಾಸಿಯಾಗಿದ್ದರು. ಆ ಮಂದಿರದ
ಲ್ಲಿ ಅವರು ವಾಸಿಸುತ್ತ ಇದ್ದಾರೆಂದು
ಜನರು ನಂಬಿದ್ದರು. ಅವನು ಆಗ ಅಂ
ಬಾಳ್‌ರವರ ಸಾನಿಧ್ಯದಲ್ಲಿದ್ದನೇ? ಅವ
ನು ನಿಜಲೋಕಕ್ಕೆ ಬರುವ ಮುಂಚೆಯೇ,
ಆ ರೂಪವು ಅವನ ಮುಂದೆ ಬಂದು, ಅ
ಡ್ಡಬಿದ್ದು ಪಾದಗಳನ್ನು ಹಿಡಿಯಿತು.
"ನಾನು, ಸೀತೆ ಇದ್ದೇನೆ ನನ್ನ ಈ ಧೈ
ರ್ಯದ ಹಾಗೂ ಸ್ತ್ರೀ ಜಾತಿಗೆ ಯೋಗ್ಯ
ವಲ್ಲದ ರೀತಿಗೆ ಕ್ಷಮಿಸಿ ಬಿಡಿರಿ. ನಿಮ್ಮ
ಮುಖಾಂತರ, ನನ್ನ ಜೀವನ ಗತಿಯನ್ನು
ಬದಲಾಯಿಸಿದ ಅಂಬಾಳರನ್ನು ಪ್ರಾರ್ಥಿ
ಸಲು ನಾನಿಲ್ಲಿಗೆ ಬಂದಿದ್ದೆ. ಆ! ಅವ
ರೇ ನಿಮ್ಮನ್ನಿಲ್ಲಿಗೆ ಕರೆಸಿಕೊಂಡಿದ್ದಾರೆ.
ಅಭಿಪ್ರಾಯವು ಅಷ್ಟು ಸ್ಪಷ್ಟವಿರುವಾಗ
ನಿಮ್ಮನ್ನು ಪೂಜಿಸ ಕೂಡದೇನು? ಅದು
ನಾಚಿಕೆಗೇಡೆಂದು ಕಂಡು ಬಂದಲ್ಲಿ ಮನ್ನಿ
ಸಿರಿ. ಈ ಪವಿತ್ರ ಪ್ರದೇಶದಲ್ಲಿ ಆರಾಧನೆ
ಯ ಕ್ರಮಗಳಲ್ಲಿ ಒಂದು ಇರುವ ಅಡ್ಡ
ಬಿದ್ದು ನಮಸ್ಕರಿಸುವ ಹಾಗೂ..."

"ಸೀತಾ, ಎದ್ದೇಳು. ನಿನ್ನ ಮನೆಯ
ಜೀವನದಲ್ಲಿ ಒಳ್ಳೆಯ ಬದಲಾವಣೆಯಾ
ಗಿರುವದು ನಿಜವಾಗಿ ಸಂತೋಷದ ಸಂಗ
ತಿಯೇ ಇದೆ. ಅಂಬಾಳರ ಬಳಿ ನಾವಿಬ್ಬ
ರೂ ಸೇರಿ ಪ್ರಾರ್ಥಿಸೋಣ. ಕುಂಭಕೋ
ಣಮಿನಲ್ಲಿ, ತನ್ನ ಸಮಯ, ಆರೋಗ್ಯ
ಹಾಗೂ ಸಿರಿಯನ್ನು ಹಾಳು ಮಾಡಿಕೊಂ
ಡಿದ್ದ ನಿನ್ನ ಗಂಡನನ್ನು ಕಂಡೆ. ಅವನೆದು
ರಿಗೆ ಮನಸನ್ನು ತೆರೆದು ತೋರಿಸಿದೆ. ಅದ
ಕ್ಕೆ ಫಲ ಸಿಕ್ಕಿತು. ನನಗೆ ಸಂತೋಷವಾ
ಯಿತು."

"ಅವರು ದಯಾಳು ಎಂಬುದರಲ್ಲಿ ಸಂ
ದೇಹವೇ ಇಲ್ಲ. ಆದರೆ ಅವರ ಮೇಲೆ ಆ
ಗಿರುವ ಕುಸಂಸ್ಕಾರ ಇನ್ನೂ ಪೂರ್ಣ ಬ
ದಲಾವಣೆ ಹೊಂದಿಲ್ಲ. ನೀವೀಗ ದೂರ
ಹೋಗುತ್ತಿದ್ದೀರಿ..." ಸೀತೆ ಮೆಲ್ಲನೆ ಹೇಳಿ
ದಳು.

"ಹಲವಾರು ವರ್ಷಗಳಿಂದ ಬಲಿತು
ಕೊಂಡು ಬಂದಿರುವ ಕುಸಂಸ್ಕಾರ ಒಂದು
ರಾತ್ರಿಯಲ್ಲಿ ಬದಲಾಗುವದಿಲ್ಲ ಸೀತಾ,
ಎಲ್ಲವೂ ನೀನು ಅವನನ್ನು ನೋಡಿಕೊ
ಳ್ಳುವ ಉಪಾಯದ ಮೇಲೆ ಹೊಂದಿ
ಕೊಂಡಿದೆ."

"ಆದರೆ ದಿಕ್ಕು ಬಿಟ್ಟು ಸೊಟ್ಟವಾಗಿ
ಬೆಳೆದಿರುವ ಮರವನ್ನು ಮೆಲ್ಲನೆ ಎಳೆ
ದು ಸರಿಯಾದ ದಿಕ್ಕಿಗೆ ತರುವ ಹಗ್ಗವ
ನ್ನೇ ಕಡಿದು ಬಿಡುವದೂ ಉಂಟು. ಇಷ್ಟ
ರ ವರೆಗೆ ಬಿಟ್ಟು ಹೋಗಿರುವ ಅವರ ರೀ
ತಿ ನೀತಿಗಳು" ಅವಳು ಸಂದೇಹತೋರ್ಪ
ಡಿಸಿದಳು.

"ಹೌದು. ಸಂಸ್ಕೃತಿ ಪಡೆದಿರುವ ದೃ
ಷ್ಟಿಯಿಂದ ಅದೊಂದು ದುಃಖವೀಯುವ
ವಿಷಯ, ಸೀತಾ. ನನ್ನನ್ನು ಕ್ಷಮಿಸು.
ಚಂದದ ವಸತಿ ಹಾಗೂ ವ್ಯಕ್ತಿಗೆ ಶೋಭೆ
ಕೊಡಲಿಕ್ಕಾಗಿ ನಿಸರ್ಗವು ನಿನ್ನನ್ನು ನಿ
ರ್ಮಿಸಿದೆ. ನಮ್ಮ ಹಂಚಿಕೆಗಳೆಲ್ಲ, ಚಂದ
ಹಾಗೂ ಗುಣಕ್ಕೆ ಈ ರೀತಿ ಸಾಳ್ವ, ಅ
ನ್ಯಾಯ ಹಾಗೂ ತಪ್ಪಾಗುವದು ಯಾಕೆಂ
ದು ನನಗೆ ಗೊತ್ತಾಗುವದಿಲ್ಲ. ದೇವರು
ದಯಾಮಯನಿರುವಂತೆ ನಿರ್ದಯಿಯೂ
ಇರಬೇಕು. ಆಕಾಶದ ನೀಲಿ ಅಥವಾ ಸ
ಮುದ್ರದ ನಸು ನೀಲ ಬಣ್ಣದಂತೆ ಮದು
ವೆಯೂ ಒಂದು ಒಗಟನಂತಿದೆ. ಅದೊಂ
ದು ಹಟಮಾರಿ ಮೋಡ. ಅದರಿಂದ
ನಾವು ಮಳೆಯನ್ನು ಪಡೆಯಲೂ ಬಹುದು
ಪಡೆಯದಿರಲೂ ಬಹುದು. ಸೀತಾ, ಈ
ವಿಷಯಗಳಲ್ಲಿ ನೀರಿ ನನ್ನನ್ನು ಆಲೋಚ
ನಾ ಸಮುದ್ರದಲ್ಲಿ ತಳ್ಳಿವೆ. ಅದೀಗ ನನ್ನ
ನ್ನು ಕೇವಲ ಆಲೋಚನಾಕಾರನನ್ನಾಗಿ
ಮಾಡಿಬಿಟ್ಟಿವೆ."

"ಮಾಂಸದೊಂದಿಗೆ ಸೇರಿಕೊಂಡು ಬೆರ
ಳಿನ ತುದಿಯಲ್ಲಿರುವ ಉಗುರಿನ ಹಾಗೆ,
ಚಂದವನ್ನೀಯುವ ವಸ್ತು ಹಾಗೂ ಆಭ
ರಣದಂತೆ ಮದುವೆ ಇದೆ. ಆದರೆ ಅದೇ
ಉಗುರನ್ನು ಮಾಂಸದಿಂದ ಬೇರ್ಪಡಿಸಿ
ದಾಗ ಅದು ಅಸಹ್ಯ ವಸ್ತುವಾಗಿ ಬಿಡು
ತ್ತದೆ."

"ಅದೊಂದು ಸಾಧಾರಣ ಹಾಗೂ ಪರಿ
ಣಾಮವನ್ನುಂಟು ಮಾಡುವ ರೂಪಕ ಚಿ
ತ್ರವಿದೆ, ಸೀತಾ," ರಾಮು ಆತುರದಿಂದ
ಕೂಗಳಿದನು.

"ನೀವು ನಾಳೆ ಕಡಪಕ್ಕೆ ಹೋಗುವಿ
ರೆಂದು ಜಾನಕಿಯು ತಿಳಿಸಿದಳು, ನನಗ
ದು ಅಪಾರ ನಷ್ಟವಿದೆ. ಇಂದಿನ ವರೆಗೂ
ಜಾನಕಿಯ ಒಡನಾಟವು ನನ್ನನ್ನು ಜೀವಿ
ಸುವಂತೆ ಮಾಡಿದೆ."

"ನಿನ್ನಲ್ಲಿ ನಾನು ಭರವಸೆ ಇಡುತ್ತೇನೆ
ಸೀತಾ ಇಲ್ಲಿಯ ನಮ್ಮ ಸ್ಥಿತಿ ಸುಧಾರಿಸು
ವ ತನಕ, ಅಂದರೆ ಎರಡು ಮೂರು ವ
ರ್ಷ, ಆ ಉದ್ಯೋಗದಲ್ಲಿ ಇರಲಿಕ್ಕೆ ನಾ
ನು ನಿಶ್ಚಯಿಸಿದ್ದೇನೆ. ಸೀತಾ, ನಾನೇನೂ
ಶ್ರೀಮಂತನಿರುವದಿಲ್ಲ ಎಂಬುದು ನಿನಗೆ
ಗೊತ್ತಿರುವ ವಿಷಯವಿದೆ. ನೆರೆಯ ಪ್ರಭಾವ
ದಿಂದಾಗಿ ಆಹಾರವನ್ನು ಸಂಪಾದಿಸ
ಬೇಕಾಗಿ ಬಂದಿದೆ ಅದಕ್ಕಾಗಿ ಹಳ್ಳಿಯ
ನ್ನು ಬಿಡಬೇಕಾಗಿದೆ."

"ನನ್ನನ್ನು, ಜಾನಕಿಯು ನಿಷ್ಕಪಟ ಸ್ನೇ

ಹವಿದ್ದೆದು




ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428
ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

NAVAYUGA 16—12—1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೧೬-೧೨-೬೫ರಿಂದ ೨೨-೧೨-೬೫ರ ವರೆಗೆ

### ೧. ಮೇಷ

ಎಂತಹ ದುಃಸಾಧ್ಯವಾದ ಕಾರ್ಯವನ್ನು ಸಾಧಿಸುವೆನೆಂಬ ಧೈರ್ಯ ಹುಮ್ಮಸ್ಸುಗಳಿಂದ ಕೂಡಿದ ನಿಮಗೆ ಇಂದಿನ ದಿನಗಳು ಸುಗಮವಾಗಿ ಸಾಗಲಿದೆ. ನಿಮ್ಮ ನಿರೀಕ್ಷೆಗೂ ಮಿಗಿಲಾಗಿ ಫಲ ಲಭಿಸುವುದು. ದಿವಾಕರನ ಸಂಕಂಡ ದಿವಾಂಧಗಳಂತೆ ವಿರೋಧಿ ಜನರು ಮರೆಯಾಗುವರು. ನೌಕರಿ ಜನರಿಗೆ ಸ್ಥಾನ ಚಲನೆಯ ಯೋಗವಿರುವುದು. ವಾರಾದಿಯ 4 ದಿನಗಳು ನಿಮ್ಮ ಬಯಕೆಗಳನ್ನು ಪೂರ್ಣ ಮಾಡಲಿವೆ.

### ೨. ವೃಷಭ

ನಿಮ್ಮ ಕಾರ್ಯಕಲಾಪಗಳಿಗೆ ಹಲವಾರು ವಿಘ್ನ ವಿಡ್ಡುರಗಳು ಬರಲಿವೆ. ಆದರೂ ನಿಮ್ಮ ಪ್ರಯತ್ನವು ವಿಫಲವಾಗದು. ಆರ್ಥಿಕ ಭಾಗದಲ್ಲಿ ನೀವು ನಿಶ್ಚಿಂತೆಯಿಂದಿರುವಿರಾದರೂ ಆರೋಗ್ಯವು ನೆಟ್ಟಗಿರಲಾರದು. ಪಿತ್ಥದೋಷವು ಆಗಾಗ ಕಾಣಿಸಲಿದೆ. ಧನ ಜನ ಬೆಂಬಲವು ಸಾಕಷ್ಟಿದ್ದರೂ ಕೋರ್ಟು ಕಛೇರಿಗಳೇ ಮುಂತಾದ ರಾಜಕೀಯ ವ್ಯವಹಾರದಲ್ಲಿ ಪರಾಭವವುಂಟಾದೀತು. ವ್ಯವಹಾರ ಚತುರರಾದ ನಿಮಗೆ ತಾ. 18ರಿಂದ 21ರ ವರೆಗಿನ ದಿನಗಳು ಅನುಕೂಲವಾಗಿದೆ.

### ೩. ಮಿಥುನ

ದಿನಯೋಪಾಸನೆಯು ದುಸ್ತರವಾದೀತು. ನಿಮ್ಮ ಲಾಭಪತಿಯಾದ ಅಂಗಾರಕನು ಅಷ್ಟಮದಲ್ಲಿ ಬಲಿಷ್ಟನಾಗಿ ಕುಳಿತಿರುವುದರಿಂದ ನಿಮ್ಮ ಆರ್ಥಿಕ ವಿಭಾಗಕ್ಕೆ ಶತ್ರುಗಳಿಂದ ಬಲವಾದ ಪೆಟ್ಟು ಬೀಳಲಿದೆ. ಹೆರವರ ಮಾತಂತಿರಲಿ, ಒಡಹುಟ್ಟಿದವರೂ ಕೂಡ ನಿಮಗಿಂದು ನೆರವಾಗಲಾರರು. ಶ್ರಮಜೀವಿಗಳಾದ ಸೇವಕವೃಂದಕ್ಕೆ ಇಂದಿನ ದಿನಗಳು ತುಂಬ ದುಃಖದಾಯಿಗಳಾಗಿ ಪರಿಣಮಿಸಲಿವೆ. ಗೃಹತಾಪತ್ರಯಗಳಿಂದ ಬಹು ಶೀಘ್ರ ಮುಕ್ತರಾಗಿದ್ದ ನಿಮಗೆ ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಅನುಕೂಲವಾಗಿ ಕಾಣಿಸುವದು.

### ೪. ಕರ್ಕಟ

ಧನಪತಿಯಾದ ರವಿಯೋರ್ವನು ಉಚ್ಚಯ ಸ್ಥಾನದಲ್ಲಿದ್ದು ನಿಮ್ಮ ಹಿತವನ್ನು ಬಯಸುವನಾದರೂ ಇತರರೆಲ್ಲರೂ ಇಂದು ಪ್ರತಿಕೂಲರಾಗಿರುವುದರಿಂದ ಇಂದಿನ ದಿನಗಳು ತುಂಬ ಕಷ್ಟ ದುಃಖದಾಯಿಗಳಾಗಿ ಪರಿಣಮಿಸಲಿವೆ. ನಿಮ್ಮ ಮತ್ತು ಪತ್ನೀ ಪುತ್ರರ ಆರೋಗ್ಯವು ಕೆಡಲಿದೆ. ಆತ್ಮೀಯರ ಕೂಡ ವಿರೋಧ ಕಟ್ಟಿಕೊಳ್ಳುವಿರಿ. ಸರ್ವತ್ರ ನಿರಾಶೆಯೇ ಕಂಡು ಬರಲಿದೆ. ತಾ. 16, 17, 22. ಈ ದಿನಗಳು ಇತರ ದಿನಗಳಷ್ಟು ಅನಿಷ್ಟಕಾರಿಗಳಾಗಲಾರವು.

### ೫. ಸಿಂಹ

ಧನಲಾಭಪತಿಯಾದ ಬುಧನೂ, ಸುಖಭಾಗ್ಯಪನಾದ ಕುಜನೂ, ಗುರುವು ಕೂಡ ಇಂದು ನಿಮಗೆ ತುಂಬ ನೆರವಾಗಲಿರುವರು. ಎಂತಹ ಪ್ರಬಲರಾದ ಶತ್ರುಗಳೂ ಕೂಡ ಮೃಗರಾಜನಂ ಕಂಡ ಮೃಗಗಳಂತೆ ದೂರವಾಗಲಿರುವರು. ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸಲಿದೆ. ವ್ಯಾಪಾರೀ ವರ್ಗಕ್ಕೆ ಮಾತ್ರ ಅನಿರೀಕ್ಷಿತ ನಷ್ಟ ವಿರೋಧಗಳುಂಟಾದಾವು. ನಿರೋಗಿಗಳೂ ನಿಶ್ಚಿಂತರೂ ಆದ ನಿಮಗೆ ತಾ. 18, 19, ತುಂಬ ಅನುಕೂಲವಾದ ದಿನಗಳು.

### ೬. ಕನ್ಯಾ

ಕಷ್ಟ ಸಹಿಷ್ಣುಗಳೂ ಕರ್ತವ್ಯ ದಕ್ಷರೂ ಆದ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆತರೂ ಇಂದು ಸಂಭವಿಸುವ ಖರ್ಚುವೆಚ್ಚಗಳನ್ನು ನಿರ್ವಹಿಸಲು ಅಸಮರ್ಥರಾಗುವಿರಿ. ದೇಹಾರೋಗ್ಯವೂ ಸರಿಯಿರದು ಮಾತ್ರವಲ್ಲ ಸಂಸಾರದಲ್ಲೂ ಕೂಡ ನೆಮ್ಮದಿಯಿರಲಾರದು. ನೌಕರಿ ಮೊದಲಾದ ಉದ್ಯಮಗಳಲ್ಲಿ ಕೆಲವೊಂದು ಅಡೆತಡೆಗಳು ಬಂದಿವೆ. ಶತ್ರುಗಳ ಪೀಡೆಯಿಂದ ಮುಕ್ತರಾದ ನಿಮಗೆ ಸೋದರರ ನೆರವು ಚೆನ್ನಾಗಿರುವುದರಿಂದ ತಾ. 16, 17, 20, 21, ಈ ದಿನಗಳು ಸುಖನೆಮ್ಮದಿಯನ್ನೀಯುವವು.

### ೭. ತುಲಾ

ನಿಮ್ಮ ಹೆಚ್ಚಿನ ತಾಪತ್ರಯಗಳಿಂದು ದೂರವಾಗಲಿವೆ. ಸದ್ಯ ನಿಮ್ಮಲ್ಲಿ ಶಕ್ತಿ ಸಾಮರ್ಥ್ಯಗಳ ಕೊರತೆಯಿರುವದಾದರೂ ಉಪಾಯಜ್ಞರಾದ ನೀವು ಪ್ರತಿಯೊಂದು ಕಾರ್ಯವ್ಯವಹಾರಗಳಲ್ಲೂ ವಿಜಯಗಳಿಸುವಿರಿ. ನೀರೋಗಿಗಳೂ ನಿಶ್ಚಿಂತರೂ ಆದ ನಿಮಗೆ ಉದ್ಯೋಗದಲ್ಲಿ ಪ್ರಗತಿ ವ್ಯಾಪಾರದಲ್ಲಿ ಕೀರ್ತಿ ಲಾಭಗಳು ಲಭಿಸುವವು. ತಾ. 18, 19, 22. ಈ ದಿನಗಳಲ್ಲಿ ದೈಹಿಕ ಸುಖಭೋಗಗಳನ್ನು ಪಡೆವಿರಿ.

### ೮. ವೃಶ್ಚಿಕ

ದೈವದೊಲುಮೆಯಿಂದ ನೀವಿಂದು ಕ... ಮುಕ್ತರಾಗಿದ್ದರೂ ಇಂದಿನ ದಿನಗಳು ... ಗಿಂತ ಎಷ್ಟೋ ಉತ್ತಮವಾಗಿ ಕಾಣಿಸ... ನಿಮ್ಮ ಆರೋಗ್ಯವು ಉತ್ತಮವಾಗುವ... ದೇಹದಲ್ಲಿ ಚಟುವಟಿಗೆ ಶಕ್ತಿಸಾಮರ್ಥ್ಯಗ... ಹೆಚ್ಚಲಿವೆ. ನಿರುದ್ಯೋಗದಿಂದ ಮುಕ್ತ... ವಿರಲ್ಲದೆ ದೈನಂದಿನದ ವ್ಯವಹಾರಗಳಿಗೆ ... ಕಾಗುವಷ್ಟು ಧನವನ್ನೂ ಕೂಡ ಸ್ವಯಂ... ಯುವಿರಿ. ಚಂಚಲಚಿತ್ತರಾದ ನಿಮಗೆ ... 16, 17, 20, 21, ತುಂಬ ಅನುಕೂ... ವಾಗಿವೆ.

### ೯. ಧನು

ಶಕ್ತಿಮೀರಿ ದುಡಿಯುವಿರಿ, ಮನಸ್ಸಿಯ... ವ್ಯಯಿಸುವಿರಿ. ಸದ್ಯದ ದಿನಗಳಲ್ಲಿ ಸಂಗ್ರ... ಬುದ್ಧಿ ನಿಮ್ಮಲ್ಲುದಯಿಸಲೊಲ್ಲದು. ವಾ... ದಗಳಲ್ಲಿ ಎಂತಹ ಪತಿ ಪಕ್ಷಿಯನ್ನು ಪರಾಭ... ಗೊಳಿಪ ನಿಮ್ಮನ್ನು ಜನಸಾಮಾನ್ಯರೂ ಕ... ಗೌರವಾದರಗಳಿಂದ ಕಾಣಲಿರುವರು. ಕಂ... ದ್ದನ್ನು ಕಂಡಂತೆ ಹೇಳುವ ನಿಮಗೆ ಕೆಲವ... ದು ಜನರೊಡನೆ ಕಲಹವಾದೀತು. ವಾರಾ... ಯ 4 ದಿನಗಳು ನಿಮ್ಮ ಮನೋರಥಗಳನ್ನು ಪೂರ್ಣಗೊಳಿಸುವವು.

### ೧೦. ಮಕರ

ಆತ್ಮೀಯರ ವಿರೋಧವು ದಿನದಿಂದ ದಿ... ಕ್ಕೆ ಹೆಚ್ಚುತ್ತಿದೆ. ಸಂಸಾರದಲ್ಲಿ ಸುಖನೆ... ಗಳಿರಲಾರವು ಒಡಹುಟ್ಟಿದವರೊಡನೆ ಕಲ... ಮನಸ್ತಾಪಗಳುದಿಸಲಿವೆ. ಎಷ್ಟೊಂದು ಶ್ರ... ವಹಿಸಿ ದುಡಿಯುವಿರಾದರೂ ದಿನನಿತ್ಯ... ಖರ್ಚುವೆಚ್ಚಗಳನ್ನು ನಿರ್ವಹಿಸಲಾಗದೆ ಸಾ... ಮಾಡಬೇಕಾದ ಪ್ರಸಂಗವು ಬರಲಿದೆ. ರಾ... ಕೀಯ ವ್ಯವಹಾರಗಳಲ್ಲಿ ಪ್ರತಿಪಕ್ಷಿಗಳಿ... ಪರಾಜಿತರಾಗುವ ಸಂಭವವಿರುವುದು. ತಾ. 18ರಿಂದ 21ರ ವರೆಗಿನ ದಿನಗಳು ಇತರ ದಿ... ಗಳಿಗಿಂತ ಉತ್ತಮವೆನಿಸುವವು.

### ೧೧. ಕುಂಭ

ಇಂದಿನ ನಿಮ್ಮ ಆದಾಯವು ಹಿಂದಿನಂತಿ... ಲ್ಲವಾದರೂ ಹಣದ ಕೊರತೆಯು ಕಾಣ... ಲಾರದು. ಶ್ರಮಸಾಧ್ಯವಾದ ಕಾರ್ಯಗಳನ್ನು ನಿರ್ವಹಿಸಲಶಕ್ತರಾದ ನಿಮಗೆ ವ್ಯಾಪಾರವ್ಯ... ವಹಾರಗಳಲ್ಲಿ ಉತ್ತಮ ಭವಿತವ್ಯವಿದೆ. ಜನಾ... ರಾಗವಂಗಳಿಸಿದ ನೀವು ಸರ್ವತ್ರ ಸ್ವಾಗತಾ... ರಗಳನ್ನು ಪಡೆವಿರಿ. ವಾತಪ್ರಕೋಪದಿಂ... ಆರೋಗ್ಯಕ್ಕೆ ಸ್ವಲ್ಪ ಹಾನಿ ಸಂಭವಿಸಿ... ವಾರಾಂತ್ಯದ 3 ದಿನಗಳು ಸುಖಲಾಭದಾ... ಗಳಾಗಿವೆ.

### ೧೨. ಮೀನ

ಬಹುಮಟ್ಟಿಗೆ ನಿಮ್ಮ ತಾಪತ್ರಯಗ... ಇಂದು ದೂರವಾಗಲಿವೆ. ವಿಶೇಷತಃ ಆರ್ಥಿ... ಭಾಗದಲ್ಲಿ ಸುಧಾರಣೆಯಾಗಲಿದೆ. ನಿಮ್ಮ ... ಭಾಗ್ಯಪತಿಯಾದ ಅಂಗಾರಕನಿಂದು ... ಸ್ಥಾನದಲ್ಲಿ ಉಚ್ಚನಾಗಿ ಕುಳಿತಿರುವ ಕಾ... ಈ ಹಿಂದೆ ನಷ್ಟವೆಂದು ಪರಿಗಣಿಸಲ್ಪಟ್ಟ ... ಕನಕಾದಿಗಳೂ ಕೂಡ ಪುನಃ ಕೈಸೇರುವ... ರಾಜಕೀಯ ರಂಗದಲ್ಲಿ ವಿಜಯಶ್ರೀಯು ನಿಮ್ಮ ವರವರ್ತಿಯಾಗುವಳು. ತಾ. 16, 17, 22. ಈ ದಿನಗಳು ನಿಮ್ಮ ಬಯಕೆಗಳನ್ನು ಪೂರೈಸಲು ಶಕ್ತವಾಗಿವೆ.

---

ಹಿತೆಯೆನ್ನುವದನ್ನು, ಮರೆಯಾದಿರೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ದೇವರ ಸಾನ್ನಿಧ್ಯದಲ್ಲೇ. ಆದರೂ ಈ ರೀತಿ ಮಾತಾಡುತ್ತ, ನಾವಿಲ್ಲಿ ಇನ್ನು ಹೆಚ್ಚು ಹೊತ್ತು ಕಳೆಯುವಂತಿಲ್ಲ. ನನ್ನನ್ನೀಗ ಯಾರಾದರೂ ಹಳ್ಳಿಯ ತುಂಟನು ನೋಡಿದಲ್ಲಿ ಏನೆಲ್ಲ ಹೇಳಿ ಬಿಟ್ಟಾನು." ಸೀತೆಯು ಕುಗ್ಗಿದ ಹಾಗೂ ನಡುಗುತ್ತಿದ್ದ ಸ್ವರದಿಂದ ಹೇಳಿದಳು.

ಅವಳಿಗೆ ರಾಮು ಹಲವಾರು ವಿಷಯಗಳನ್ನು ತಿಳಿಸಬೇಕೆಂದಿದ್ದ. ಆದರೆ ಅವಳ ತ್ತ ಸೂಚನೆ ಹಾಗೂ ಅವಳ ಮೇಲಿದ್ದ ಗೌರವ ತಡೆಯನ್ನು ಹಾಕಿದುವು. ಯಾರಾದರೂ ತಮ್ಮನ್ನು ನೋಡಿ, ಮರುದಿನದ ನದಿಯ ಕೂಟಕ್ಕೆ ಸುದ್ದಿಯನ್ನೊದಗಿಸುವ ಮುಂಚೆಯೇ ಅಲ್ಲಿಂದ ಹೋಗಬೇಕು ಎಂದು ಇಬ್ಬರೂ ದೇವಸ್ಥಾನದ ಎರಡು ಬಾಗಿಲುಗಳಿಂದ ಬೇರೆ ಬೇರೆಯಾಗಿ ಶೀಘ್ರ ಹೊರಗೆ ಹೋದರು.

(ಮುಂದುವರಿಯುವುದು)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಆಫೀಸು ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

# నవయుగ

23—12—1965

NAVAYUGA

226

౧౦

ಧಾರಾವಾಹಿ ಕಾದಂಬರಿ

# ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ವರೆಗೆ—

ಅಲವಂತಿಯ ರಾಮಚಂದ್ರ ರೈತ ಮುರುಗನ ಮನನೋಯಿಸಿ ಮದ್ರಾಸಿಗೆ ತೆರಳಿ ಓದಲಾರಂಭಿಸಿದ. ಓದಿನಲ್ಲಿ ಆತ ಅಸಫಲನಾದ. ಆದರೆ ಕೇದಾರಿಯ ದೂರದ ಸಂಬಂಧಿ ಜಾನಕಿಯೊಡನೆ ವಿವಾಹವಾಯಿತು. ಊರಿನಲ್ಲೇ ಸುಖವಾಗಿರೋಣವೆಂದು ಆತ ಅಂದಾಗ ಮುರುಗನಿಗೆ ಸಂತೋಷವೇನೋ ಆಯಿತು. ನೆರೆ ಬಂದು ಊರಿಗೆ ಊರೇ ಮುಳುಗಿ ಹೋದಾಗ, ಅತ್ತೆ ಮೀನಾಕ್ಷಿಯ ಉಪದೇಶದ ಪರಿಣಾಮವಾಗಿ ಕಡಪಾದ ಜಿಲ್ಲಾಧಿಕಾರಿಯ ಗುಮಾಸ್ತನಾಗಿ ಸೇರಲು ನಿರ್ಧರಿಸಿದ. ರೈತಮುರುಗನ ನೂತನ್ನು ಮೀರಿ ಮತ್ತೊಮ್ಮೆ ಆತ ನಗರ ವಾಸಕ್ಕೆ ತೊಡಗಿದ—

ಮುಂದೆ—

ಅಲವಂತಿಯ ಸಾಧು ಮನುಷ್ಯ ರಾಮು, ಕಡಪ ಜಿಲ್ಲಾಧಿಕಾರಿ ಕೆಡೆಲ್, ಎಂ. ಎ., ಐ. ಸಿ. ಎಸ್., ಅವರ ಬಳಿ ಶಿಬಿರ ಗುಮಾಸ್ತ, ರಾಮಚಂದ್ರನಾದನು. ಕೆಡೆಲ್ ಕುಟುಂಬವು ಕ್ಲೈವ್ ಮತ್ತು ಕೂಟಿಯರ ಕಾಲದಿಂದಲೂ ಭಾರತದಲ್ಲಿ ವಾಸಿಸುತಿತ್ತು. ವಾಂಡಿವಾಶಿನ ಪ್ರಖ್ಯಾತ ಕದನದಲ್ಲಿ ಮೊದಲನೆ ಕೆಡೆಲನು ಸರ್ ಐರ್ ಕೂಟಿಯವರ ಪಕ್ಕದಲ್ಲಿದ್ದುಕೊಂಡು ಧೈರ್ಯದಿಂದ ಹೋರಾಡಿದ್ದನು. ಈಸ್ಟ್ ಇಂಡಿಯಾ ಕಂಪೆನಿಯ ಕಾಲದಲ್ಲಿ ಇನ್ನೊಬ್ಬ ಕೆಡೆಲನು ತಂಜಾವೂರಿನಲ್ಲಿ ಜಿಲ್ಲಾಧಿಕಾರಿಯಾಗಿದ್ದನು. ಸರಕಾರವು ಕಂಪೆನಿಯ ಕೈಯಿಂದ ಬ್ರಿಟಿಷ್ ಕಿರೀಟದ ಆಳ್ವಿಕೆಗೊಳಪಡುವ ಹಿಂದೆಯೂ ಅನಂತರವೂ ಹಲವಾರು ಕೆಡೆಲರು ಸೈನ್ಯದಲ್ಲಿ ಹಾಗೂ ಇತರ ಖಾತೆಗಳಲ್ಲಿ ಸೇವೆ ಸಲ್ಲಿಸಿದ್ದರು.

ಕೆಡೆಲ್ ನ್ಯಾಯನಿಷ್ಠ ಹಾಗೂ ಕಾರ್ಯಶೀಲ ಜಿಲ್ಲಾಧಿಕಾರಿ. ಕರ್ತವ್ಯಕ್ಕೆ ಅವರು ಗೌರವ ಸಲ್ಲಿಸುತ್ತಿದ್ದರು. ತನ್ನ ಉದ್ಯೋಗಕ್ಕೆ ಸಂಬಂಧವಿರುವ ಪುಸ್ತಕಗಳನ್ನಲ್ಲದೆ ಇತರ ಉತ್ತಮ ಗ್ರಂಥಗಳನ್ನೂ ಅವರು ಓದುತ್ತಿದ್ದರು. ಅವರನ್ನು ತೃಪ್ತಿಪಡಿಸುವದು ಆಗದ ಕೆಲಸವೆಂದು ಜನರಾಡಿಕೊಳ್ಳುತ್ತಿದ್ದರು. ಹಾಗಾಗಿ ಶಿಬಿರ—ಗುಮಾಸ್ತನ ಜಾಗವು ಯಾವಾಗಲೂ ಮೂರು ತಿಂಗಳಿಗೊಮ್ಮೆಯಾದರೂ ಖಾಲಿಯಾಗುತ್ತಿತ್ತು.

ಕೆಡೆಲರ ನಿಷ್ಠುರತೆಯ ಕಥೆ ರಾಮುವಿಗೂ ಗೊತ್ತಾಯಿತು. ಅವನ ಹೃದಯದಲ್ಲಿ ಸೋಲಿನ ಹಾಗೂ ಅಂಜಿಕೆಯ ಅಲೆಗಳೇಳುತ್ತಿದ್ದುವು. ಜಿಲ್ಲಾಧಿಕಾರಿಯ ಬಾಗಿಲ ಬಳಿ ಬಂದಾಗಲೇ, ಮೂರು ಶತಮಾನಗಳಿಂದಲೂ ತನ್ನ ವಂಶದಲ್ಲಿ ಯಾರೂ ಈ ರೀತಿ ನೀಚ ಕೆಲಸಕ್ಕಾಗಿ ಬಾಗಿಲು ಕಾದದ್ದೇ ಇಲ್ಲ; ಇನ್ನೊಬ್ಬನಲ್ಲಿ ಜೀತದಾಳಾಗಿರಲಿಲ್ಲ ಎಂಬುದು ಅವನ ಜ್ಞಾಪಕಕ್ಕೆ ಬಂದೊಡನೆ ಮನಸ್ಸಿಗೆ ನೋವಾಯಿತು.

ಹಿಂದಿನ ಕಾಲದ ವ್ಯಾಪಾರಿಗಳು ಹೊಸತಾಗಿ ತಂದು ಹಾಕಿದ ಗುಲಾಮರನ್ನು ತಲೆಯಿಂದ ಕಾಲಿನ ವರೆಗೆ ಬೆಲೆ ಕಟ್ಟಲಿಕ್ಕಾಗಿ ಪರೀಕ್ಷಿಸುವಂತೆ, ಕೆಡೆಲರು ರಾಮಚಂದ್ರನನ್ನು ದೃಷ್ಟಿಸಿ ನೋಡಿದರು. ಅಧಿಕಾರದ ಸ್ವರದಿಂದ ಅವರು ಕೇಳಿದರು—

"ನೀನು ಅಲವಂತಿಯ ರಾಮಚಂದ್ರನೇ? ನನ್ನ ಬಳಿ ಪದವೀಧರರಿಂದ ಮೂರು ಡಜನು ವಿನಂತಿಗಳು ಬಂದಿವೆಯಾದರೂ ನಿನ್ನನ್ನೇ ನಾನು ಆರಿಸಿಕೊಂಡಿದ್ದೇನೆ. ನನ್ನ ಕುರಿತು ಯುಕ್ತಿ ನಡೆಸಲು ಮೆದುಳಿರುವ ಜನರು ನನಗೆ ಬೇಕಾಗಿಲ್ಲ. ನಿನ್ನ ಜಿಲ್ಲೆಯು ಅದಕ್ಕೆ ಹೆಸರುವಾಸಿ ಇದೆ. ಪ್ರಾಮಾಣಿಕ, ನಿಷ್ಕಪಟಿ ಹಾಗೂ ಸರಳ ಸ್ವಭಾವವುಳ್ಳ ಖಾಸಗಿ ಕಾರಕೂನನೇ ನನಗೆ ಬೇಕಾಗಿದ್ದಾನೆ. ನೀನು ಕ್ರಿಶ್ಚಿಯನ್ ವಿದ್ಯಾಲಯದ ವಿದ್ಯಾರ್ಥಿ ಎಂಬುದನ್ನು ನೋಡಿದ್ದೇನೆ. ವಿನಂತಿಯೊಂದಿಗೆ ಕಳುಹಿಸಿದ್ದ, ಶ್ರೀ ಕಕ್ರೈಗ್ ಕೊಟ್ಟಿರುವ, ಯೋಗ್ಯತಾ ಪತ್ರಿಕೆಯು ನಿನ್ನ ಸಾಮರ್ಥ್ಯದ ಕುರಿತೇನೂ ತಿಳಿಸದೆ ಗುಣನಡತೆಯ ವಿಷಯ ಚೆನ್ನಾಗಿ ತಿಳಿಸುತ್ತದೆ. ನೀನು ನನಗೆ ಬೇಕಾಗಿರುವ ಮನುಷ್ಯನಿರುವೆ. ಕರ್ತವ್ಯವನ್ನು ಸರಿಯಾಗಿ ಮಾಡಿಕೊಂಡು, ನನ್ನ ಪ್ರಶಂಸೆ ಹಾಗೂ ನಿನ್ನ ಸಂಬಳವನ್ನು ಸಂಪಾದಿಸುತ್ತಿರು. ನಿನ್ನ ಕೆಲಸದ ಕುರಿತು ಮುಖ್ಯ ಗುಮಾಸ್ತನು ಚೆನ್ನಾಗಿ ತಿಳಿಸುತ್ತಾನೆ. ಮೂರು ದಿನಗಳ ನಂತರ ಯಾವಾಗ ಕರೆದರೂ ಬರಲು ಸಿದ್ಧವಾಗಿರಬೇಕು. ಈಗ ಹೋಗಬಹುದು."

ರಾಮು ಕಳುಹಿಸಲ್ಪಟ್ಟನು. ತನ್ನ ಯೋಗ್ಯತೆಯ ಕುರಿತು ಹೇಳಿದಾಗ ಎದುರು ಒಂದು ಶಬ್ದವನ್ನಾದರೂ ಆಡಲು ಅವನಿಗೆ ಧೈರ್ಯ ಬರಲಿಲ್ಲ. ತಿಂಗಳಿಗೆ ದೊರಕುವ ಇಪ್ಪತ್ತೈದು ರೂಪಾಯಿಗಳ ಸುಖಕ್ಕಾಗಿ ಅವನು ಗರ್ವವನ್ನು ನುಂಗಿಕೊಳ್ಳಬೇಕಾಯಿತು. ಕಡಪದಲ್ಲಿನ ಬಿಸಿ ಹಾಗೂ ಒಣ ಭೂಮಿಯಲ್ಲಿ, ಜಿಲ್ಲಾಧಿಕಾರಿಯ ಮೂಗಿನೆದುರಿನಲ್ಲಿರಬೇಕಾದ ಗುಮಾಸ್ತನ ಕಷ್ಟವನ್ನವನು ಕೂಡಲೇ ಕಂಡುಕೊಂಡನು. ಜಿಲ್ಲಾಧಿಕಾರಿಯ ಸಾಮಾಗ್ರಿಗಳಲ್ಲಿ ಅವನೂ ಒಂದು ಅಂಶ ಹಾಗೂ ಭಾಗವಾಗಿ ಬಿಟ್ಟನು. ಡೇರೆ, ಗೂಟ, ಮಡಿಸಲಾಗುವ ಆಸನಗಳು, ಮೇಜು ಹಾಗೂ ಇತರ ಸಾಮಾಗ್ರಿಗಳನ್ನು ಕೊಂಡೊಯ್ಯುವ ಎತ್ತಿನ ಗಾಡಿಯಲ್ಲಿ ಇದ್ದುಕೊಂಡು, ರಾತ್ರಿ ಪ್ರಯಾಣ ಮಾಡುತ್ತಿರಬೇಕಾದ ಜೀವನವು ಅವನಲ್ಲಿ ಜಿಗುಪ್ಸೆಯನ್ನುಂಟುಮಾಡಿತು. ಸಂಬಳ ಸಿಕ್ಕೊಡನೆ ಅತ್ತೆಯ ಕೈಯಲ್ಲಿ ಕೊಟ್ಟು ಬಿಡಬೇಕು. ತಿಂಗಳಿನಲ್ಲಿ ಇಪ್ಪತ್ತೈದು ದಿನಗಳಲ್ಲಾದರೂ ಹೊರಗೆ ತಿರುಗಾಡ ಬೇಕಾಗಿರುವದರಿಂದ ಹೆಚ್ಚಾಗಿ ಜಾನಕಿಯ ಮುಖವನ್ನು ನೋಡಲಿಕ್ಕೂ ಆಗುತ್ತಿರಲಿಲ್ಲ. ಪ್ರಚಲಿತ ಕಷ್ಟಗಳ ಕತ್ತಲೆಗಳ ಮುಖವನ್ನು ನೋಡಲು ಅವನೂ ಇಷ್ಟಪಡುತ್ತಿದ್ದಿಲ್ಲ.

ಕೆಲವೇ ಮಾಸಗಳ ಈ ರೀತಿಯ ಜೀವನ ರಾಮುವಿನ ಮೇಲೆ ಪರಿಣಾಮವನ್ನುಂಟು ಮಾಡಿತು. ಅವನು ಕೆಲಸದಲ್ಲಿ ಉತ್ಸಾಹದಿಂದ ಹೆಚ್ಚು ಹೆಚ್ಚು ಹೊತ್ತನ್ನು ಕಳೆಯಲಾರಂಭಿಸಿದ. ಅವನ ಆಲೋಚನೆಗೆ ಅನುಭವವು ಆಕಾರವನ್ನೀಯುತ್ತಿತ್ತು. ರಾಮು ಕೆಲಸವನ್ನು ಹೆಚ್ಚು ಹೆಚ್ಚಾಗಿ ಇಚ್ಛಿಸಿದನು. ನಿಷ್ಠುರವಾದಿ ಕೆಡಲರಿಗೆ ರಾಮುವಿನ ಕೆಲಸದಲ್ಲಿ ಕುಂದುಕೊರತೆಗಳನ್ನು ಕಂಡ ಹಿಡಿಯಲಿಕ್ಕಾಗುತ್ತಿರಲಿಲ್ಲ.

ಅದೇ ಸಮಯದಲ್ಲಿ, ಮೀನಾಕ್ಷಿ ಮತ್ತು ಜಾನಕಿಯರು, ತಮ್ಮ ಅಡಿಗೆ ಕೋಣೆಯ ಕೆಲಸದೊಂದಿಗೆ ತಮ್ಮ ಸಂಭಾಷಣೆಯ ಹಾಗೂ ಟೀಕೆಯ ಶಕ್ತಿಯನ್ನು ಕ್ರಮಶಃ ಹೆಚ್ಚಿಸಿಕೊಳ್ಳುತ್ತಿದ್ದರು. ನಿಜವಾಗಿ, ಕೆಲಸವಿಲ್ಲದ ನೋಮಾರಿಗಳಿಗೆ ಮಾತನಾಡಲು ಸೇರಲಿಕ್ಕೆ ಅದೊಂದು ಸ್ಥಳವಾಗಿ ಬಿಟ್ಟಿತು. ಜಾನಕಿಯ ಸ್ವಭಾವವು ಕೂಡಾ ದೊರಗಾಗುತ್ತ ಬರಲಾರಂಭಿಸಿತು. ರಾಮುವಿಗೆ ಅದೆಲ್ಲಾ ಗೊತ್ತಾದರೂ ಅದನತ್ತ ಗಮನಕೊಡಲಿಲ್ಲ.

ಹಾಗೆ ಮೂರು ವರ್ಷಗಳುರುಳಿದುವು.

ಅಲವಂತಿಯಲ್ಲಿ ಮುರುಗನಿಗೆ ಅದು ಉತ್ತಮ ಸಮಯವಿತ್ತು. ರಾಮುವಿನ ಅಗಲಿಕೆಯ ಸಮಯ ಮುರುಗನು ಅವನನ್ನು ತಡೆಯಲಿಕ್ಕೆ ಪ್ರಯತ್ನಿಸಿದ್ದರೂ ಅದಿನಿಂದ ಮುರುಗನ ಜೀವನದಲ್ಲಿ ಅದೃಷ್ಟಚಕ್ರ ಬೇರೆ ದಿಕ್ಕಿನಿಂದ ತಿರುಗಲು ಪ್ರಾರಂಭಿಸಿದೆ. ಹೊರೆಹೊರುವ ಜೀವಿಯಾಗಿದ್ದ ಮುರುಗನಾಗ ಮಾನವನಾಗುತ್ತ ಬರುತ್ತಿದ್ದನು. ಕೇವಲ ಭೂಮಿಯನ್ನು ಉಳುವವನೇ ಆಗಿದ್ದ ಮುರುಗನು ಒಕ್ಕಲು ಆದದ್ದು ನಿಜವಾಗಿ ಅವನ ಜೀವನಪಥದಲ್ಲಿ ಮಹಾನ್ ಬದಲಾವಣೆ ಇದೆ.

"ಪೊನ್ನಿ, ಈ ವರ್ಷದ ಪೈರು ಪ್ರಶಂಸನೀಯವಿದೆ; ಕಳೆದ ಬಾರಿಗಿಂತಲೂ ಚೆನ್ನಾಗಿದೆ. ಸ್ವಂತದಾರನೇ ರೈತನಾಗಿದ್ದುಕೊಂಡು, ಸರಿಯಾಗಿ ಕಷ್ಟಪಟ್ಟು ದುಡಿದರೆ, ಭೂಮಿತಾಯಿ ಹೇಗೆ ಫಲ ಕೊಡುತ್ತಾಳೆ, ನೋಡು! ಈ ಹೊಸ ಕಾಣಿಕೆ, ನಮ್ಮ ಚಿಕ್ಕ ಹುಡುಗಿಯು ಒಳ್ಳೆಯ ಅದೃಷ್ಟವನ್ನು ಪಡೆದುಕೊಂಡು ಬಂದಿದ್ದಾಳೆ."

"ನಾನು ಹೋದ ಮೇಲೆ ನನ್ನ ಬದಲಿಗೆ ಅವಳು ಇರುತ್ತಾಳೆ. ನಮಗೆ ಸ್ವಂತ ಒಂದು ದನವಿರುತ್ತಿದ್ದಲ್ಲಿ ಮನೆ ತುಂಬಿದಂತಾಗುತ್ತಿತ್ತು. ಅದು ನಮಗೆ ನಾನಾ ವಿಧದಲ್ಲಿ ಸಹಾಯ ಮಾಡುತ್ತದೆ. ನಮ್ಮ ಮಕ್ಕಳಿಗದು ಹಾಲನ್ನೂ ಗದ್ದೆಗೆ ಗೊಬ್ಬರವನ್ನೂ ಕೊಡುತ್ತದೆ. ಅದು ಬೆಳೆಯುತ್ತಿರುವ ಅಭಿವೃದ್ಧಿಯ ಚಿಹ್ನೆ. ಒಂದರಿಂದ ಹಲವಾರು, ಹೀಗೆ ಅದು ಹೆಚ್ಚುತ್ತ ಹೋಗುತ್ತದೆ."

"ಪೊನ್ನಿಗಳು ಮಾಡುವಂತೆ" ಹಸನ್ಮುಖ ಚಮತ್ಕಾರದ ಮಾತಿಗೆ ಮುರುಗನು, ಪೊನ್ನಿಯತ್ತ ಹಾಗೇ ಮಕ್ಕಳತ್ತ ನೋಡುತ್ತ ನಗಾಡಿದನು. ಕಣ್ಣುಗಳ ಮುಂದೆ ಅಂಗೈಯನ್ನು ನೆರಳು ಬೀಳುವಂತೆ ಹಿಡಿದು

(ಹದಿನೈದನೇ ಪುಟ ನೋಡಿರಿ)


8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

| | | | ಸೇಕಡಾ |
|---|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ | .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ | .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ | .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ | .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ | .... ... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ | .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ | .... .... | 7½ |
| 84 ತಿಂಗಳಿಂದ | 120 ತಿಂಗಳ ಕೆಳಗೆ | .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | | ... ... | 4 |

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

**NAVAYUGA**

Leading Kannada Weekly

UDIPI, S. Kanara

ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

# ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

**ವಾರ್ಷಿಕ ಚಂದಾ:**

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

**ಜಾಹೀರಾತು ದರಗಳು:**

ನಿಯಮಿತ (ಕೆಜುವಲ್)

ಲಂ ಸೆಂಟಿಮೀಟರಿಗೆ ರೂ. 2-00

ಯಮಿತ (ಕಂಟ್ರಾಕ್ಟ್)

ಲಂ ಸೆಂಟಿಮೀಟರಿಗೆ ರೂ. 1-50


## ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲಂ ತಾವಿನ ಪ್ರಮಾಣ ಕಾಗದದ ಒಂದೇ ಮಗ್ಗುಲಲ್ಲಿ ಬದಿ ಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅ ಭಾಂತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

**ಚಂದಾದಾರರಿಗೆ—**

ಚಂದಾಹಣವನ್ನಾಗಲೀ ಜಾಹೀರಾತಿನ ಸೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಮೇಲೆ:

೩೯ ವರ್ಷ ಪ್ರಾಯದ ಮೂರು ಮಕ್ಕಳ ತಾಯಿ ಡಾ| ವೀವರ್, ಇವರಿಗೆ ಕಿರಣಜನ್ಯ ಸಂಯೋಗ ಕ್ರಿಯೆಯ ಬಗ್ಗೆ ಸಂಶೋಧನೆ ನಡೆಸಲು ಅಮೆರಿಕನ್ ಅಣುಶಕ್ತಿ ಆಯೋಗವು ೩೯ ಸಾವಿರ ಡಾಲರ್ ಸಹಾಯ ನೀಡಿತು. ಮೊದಲು ಮನೆ ಆನಂತರ ಇತರ ಕೆಲಸ—ಎನ್ನುತ್ತಾರೆ ಇವರು.

ಕೆಳಗೆ:

ಅಮೆರಿಕನ್ ಅಣುಶಕ್ತಿ ಚಾಲಿತ ವ್ಯಾಪಾರಿ ಹಡಗ ಎನ್. ಎಸ್. ಸವನ್ನಾ.


# ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೧೬ | ೨೩—೧೨—೧೯೬೫ | No. 16


## ಏಕಪಾತ್ರಾಭಿನಯ

ನಿಯೋಜಿತ ಕಾರ್ಯಕ್ರಮದಂತೆ ಅಧ್ಯಕ್ಷ ಅಯ್ಯೂಬಖಾನರು ಅಧ್ಯಕ್ಷ ಜಾನ್ಸನ್ನರನ್ನು ಭೆಟ್ಟಿಯಾದರು. ಅಯ್ಯೂಬರು ತನ್ನ ಹಳೆಯ ರಾಗಕ್ಕೆ ಹೊಸ ತಾಳವನ್ನು ಬಾರಿಸಿ ಅವರ ಮುಂದೆ ಹಾಡುವ ಪ್ರಯತ್ನವನ್ನೇನೋ ಮಾಡಿದರು; ಆದರೆ ಆ ರಾಗವನ್ನು ಕಿವಿಯೊಳಗೆ ಹಾಕಿಕೊಂಡವರು ಮಾತ್ರ ಇಲ್ಲವೆಂದೇ ಹೇಳಬೇಕು. ಅಮೆರಿಕನ್ ಸಂದರ್ಶನದ ವೇಳೆ ಅಯ್ಯೂಬರು ಮಾಡಿದುದು ಎರಡೇ ಎರಡು ಕೆಲಸಗಳು. ಮೊದಲನೆಯದಾಗಿ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯಲ್ಲಿ ತಮ್ಮ ವಿಷಕಾರುವ ನಾಟಕವನ್ನು ಅಭಿನಯಿಸಿದುದು. ಆದರೆ, ಈ ನಾಟಕವನ್ನು ಕೇಳಿ ಕೇಳಿ, ನೋಡಿ ನೋಡಿ ಬೇಸತ್ತವರಿಗೆ ಇದು ಖಂಡಿತಕ್ಕೂ ರುಚಿಸಿರಲಾರದು. ಅಂತ್ಯದಲ್ಲಿ ಹೊರಟ ಪ್ರತಿಕ್ರಿಯೇ ಇದಕ್ಕೆ ಜ್ವಲಂತ ನಿದರ್ಶನ. ಎರಡನೆಯದು ತನ್ನ ವೈಯಕ್ತಿಕ ಒಡನಾಡಿಯಾದ ಜಾನ್ಸನ್ನರ ಮನವೊಲಿಸಿ ಎಂತಾದರೂ ಮಾಡಿ ತನ್ನ ಮೊಂಡುವಾದವನ್ನು ಅವರು ಬೆಂಬಲಿಸುವಂತೆ ಮಾಡುವ ಅಯ್ಯೂಬರ ಹೇರಾಸೆಯಿದ್ದರೂ ಅದೂ ಫಲಕಾರಿಯಾಗಲಿಲ್ಲ. ಹಾಗಾಗಿ ಅಯ್ಯೂಬರು ಸಾಧಿಸಿದ್ದೇನು? ಕೊನೆಗೂ ಪಾಕಿಸ್ತಾನದ ಸರ್ವಾಧಿಕಾರಿಗಳ ಒಲವೆತ್ತವಿದೆ ಎಂಬುದು ಅವರ ಮಾತಿನಿಂದ ಜಗಜ್ಜನಿತವಾಯಿತು, ಮತ್ತೊಮ್ಮೆ.

ಭಾರತ ಮತ್ತು ಕಮ್ಯುನಿಸ್ಟ್ ಚೀನಗಳ ಪೈಕಿ ಪಾಕ್ ಚೀನಾದತ್ತ ಹೆಚ್ಚುಹೆಚ್ಚಾಗಿ ವಾಲಿಕೊಂಡಿದೆ. ಈ ಇಬ್ಬರ ಸಂಬಂಧವೇನು? ಎಂಬುದು ಯಕ್ಷಪ್ರಶ್ನೆಯಾಗಿದೆ ಲೋಕಕ್ಕೆ. ಈ ವಿಷಯದ ಚರ್ಚೆಯೇ ಉಭಯ ತರರಲ್ಲಿ ಪ್ರಧಾನವಾಗಿ ನಡೆಯಿತು. ಜತೆಗೆ ಅಮೆರಿಕನ್ ಸಹಾಯ, ವಿಯತನಾಮ ಇತ್ಯಾದಿ ಇತ್ಯಾದಿಗಳೊಡ ಭಾರತದೊಡನೆ ಪಾಕ್ ಸಂಬಂಧವೂ ಮುಂದೆ ಬಂತು. ಅಮೆರಿಕೆಯು ತಾನು ಮೊದಲೇ ಕೊಡಮಾಡಿದ್ದ ಶಸ್ತ್ರಾಸ್ತ್ರಗಳ ನೆರವನ್ನು ಆಶ್ವಾಸನೆಗೆ ವಿರುದ್ಧವಾಗಿ ಭಾರತದೆದುರು ಪ್ರಯೋಗಿಸಿದ ದುರ್ಘಟನೆಯ ಕುರಿತು ಜಾನ್ಸನ್ ಪ್ರಸ್ತಾವಿಸದೆ ಉಚಿತವಾಗಿಯೇ ವರ್ತಿಸಿದರು. ಅಯ್ಯೂಬರ ಮೂಗು ಉಳಿಸಿದರು. ಜಗತ್ತಿಗೆ ಗೊತ್ತಿರುವ ಸತ್ಯವನ್ನು ಅಯ್ಯೂಬಖಾನರು ಒಪ್ಪಿಕೊಳ್ಳುತ್ತಾರೆ ಎನ್ನುವ, ಅದಕ್ಕಾಗಿ ಪಶ್ಚಾತ್ತಾಪ ಪಡುತ್ತಾರೆ ಎಂಬ, ಮುಂದೆ ಈ ಬಗೆಯ ವಿಶ್ವಾಸದ್ರೋಹ ಬಗೆಯುವುದಿಲ್ಲ ಎಂದು ಹೃದಯಪೂರ್ವಕ ಆಶ್ವಾಸನ ನೀಡುವರೆಂಬ ಭರವಸೆಯೇ ಜಾನ್ಸನ್ನರಿಗಿಲ್ಲದಿದ್ದ ಮೇಲೆ ಕಡಿದ ನೀರಿನ ಸುದ್ದಿಯೆತ್ತಿ ತಾನೇಕೆ ಮೂರ್ಖನೆನಿಸಬೇಕು? ಏಶಿಯಾದಲ್ಲಿ ಶಾಂತಿ ಸ್ಥಾಪನೆಯಾಗಬೇಕು; ಇಲ್ಲಿ ಅಮೆರಿಕನ್ ಪ್ರಭಾವ ಸದಾ ಉಳಿಯಬೇಕು— ಇದು ಅಮೆರಿಕೆಯ ಏಶ್ಯನ್ ನೀತಿಯ ಗುಟ್ಟು. ಪಾಕಿಸ್ತಾನಕ್ಕೆ ೧೯೩ ಕೋಟಿ ರೂಪಾಯಿ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಅಮೆರಿಕೆಯು ಮುಫತ್ತಾಗಿ ನೀಡಿದ್ದಾದರೂ ಇದೇ ಉದ್ದೇಶದಿಂದ. ಹಾಗಿರುವಾಗ, ಕೆಂಪು ಚೀನಾದತ್ತ ಸರಿಯುತ್ತ ಬರುತ್ತಿರುವ ಪಾಕ್ ನಾಯಕರಿಂದ ಅಮೆರಿಕನ್ ಹಿತರಕ್ಷಣೆ ಹೇಗೆ ಸಾಧ್ಯವೆಂದು ಜಾನ್ಸನ್ ಸಂದೇಹ ಪಡುವುದು ಸ್ವಾಭಾವಿಕವೇ. ಜಾನ್ಸನ್ನರಿಗೆ ಈಗ ಪಾಕ್ ಕಡೆಗಿರುವ ತನ್ನ ನೀತಿಯನ್ನು, ಭಾರತ ಪರ ನೀತಿಯನ್ನು ಕೂಡ, ಪರಾಮರ್ಶಿಸುವ ಅವಕಾಶ ಪ್ರಾಪ್ತವಾಗಿದೆ. ಅದಕ್ಕೆಂದೇ ಅಯ್ಯೂಬರ ಮುಖದಿಂದಲೇ ಇಂಪಿದೆಯನ್ನು ಕೇಳಿ ತಿಳಿದುಕೊಳ್ಳುವ ಆಶೆ ಅವರದ್ದು. ಇದೇ ಬಗೆಯ ಕಾರಣಗಳಿಂದಲೇ ಅವರು ಪ್ರಧಾನಿ ಶಾಸ್ತ್ರಿಯವರನ್ನೂ ಭೆಟ್ಟಿಯಾಗುತ್ತಾರೆ. ಅನಂತರವೇ ಜಾನ್ಸನ್ ತನ್ನ ನೀತಿಯನ್ನು ಅಂತಿಮವಾಗಿ ನಿರ್ಧರಿಸುವ ವಿಚಾರದಲ್ಲಿದ್ದಾರೆ. ಈ ನಡುವೆ ತಾಷ್ಕೆಂಟದಲ್ಲಿ ಶಾಸ್ತ್ರಿ—ಅಯ್ಯೂಬರ ನಡುವಣ ಭೆಟ್ಟಿಯಾಗುವುದರಿಂದ ಉಭಯ ರಾಷ್ಟ್ರಗಳ ಸಂಬಂಧಗಳು ಹೇಗಾದಾವು ಎಂದು ವ್ಯಕ್ತವಾಗುವುದು. ಆದುದರಿಂದ ಅಯ್ಯೂಬರ ಈ ಬಾರಿಯ ನಾಟಕವೂ ಏಕಪಾತ್ರಾಭಿನಯ ಮಾತ್ರವೆನ್ನಬೇಕು. ಜಾನ್ಸನ್ ಹ್ಞಾಂ ಎನ್ನಲೂ ಇಲ್ಲ; ಹ್ಞೂಂ ಎನ್ನಲೂ ಇಲ್ಲ.

ವೈಯಕ್ತಿಕ ಒಡನಾಟದ ದುರ್ಲಾಭ ಪಡೆಯುವ ಹಂಚಿಕೆಯನ್ನು ಅಯ್ಯೂಬ್ ಮಾಡಿದರು. ಆದರೆ, ಜಟಿಲ ರಾಜಕಾರಣದಲ್ಲಿ ಇದರಿಂದ ಜಾನ್ಸನ್ ವಿಚಲಿತರಾಗುವುದು ಸಾಧ್ಯವಿಲ್ಲ. ಅವರು ಹೆಜ್ಜೆ ತಪ್ಪಿದರೆ, ಸ್ವದೇಶದ ವಿರೋಧವನ್ನೂ ಕಟ್ಟಿಕೊಳ್ಳಬಹುದು. ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಪರಿಹರಿಸಿಕೊಂಡ ಮೇಲೆ ಭಾರತದೊಡನೆ ಯುದ್ಧ ನಿಷೇಧ ಒಡಂಬಡಿಕೆ ಮಾಡಿಕೊಳ್ಳಲು ತಾನು ಸಿದ್ಧವೆಂದರು ಅಯ್ಯೂಬರು. ಯುದ್ಧದ ಮೂಲಕವಾಗಿಯಾದರೂ ಕಾಶ್ಮೀರವನ್ನು ಕಬಳಿಸುವ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡಿದ್ದಾರೆಂಬುದು ಅವರ ಬಾಯಿಯಿಂದಲೇ ಜಾನ್ಸನ್ನರಿಗೆ ತಿಳಿಯಿತು. ಮೂರು ಮಹಾರಾಷ್ಟ್ರಗಳ ನಡುವೆ ಇರುವ ಪಾಕಿಸ್ತಾನದ ಸುದೈವ ಯಾ ದುರ್ದೈವವನ್ನು ಪ್ರಸ್ತಾಪಿಸಿದ ಫೀಲ್ಡ್ ಮಾರ್ಶಲ್ ತಮ್ಮ ಸ್ವಾತಂತ್ರ್ಯವನ್ನು ಹೇಗೆ ಕಾಪಾಡಬೇಕು ಎಂಬುದೇ ತಿಳಿಯದಾಗಿದ್ದಾರಂತೆ; ವಿಪ್ರಯಃ ಅದಕ್ಕಾಗಿಯೇ ಅವರು ಎರಡು (ಮೂರೋ) ದೋಣಿಯಲ್ಲಿ ಕಾಲಿಡ ಹೊರಟಿದ್ದಾರೆ. ಕೆಂಪು ಚೀನದ ಸಹಾಯವನ್ನು ಭಾರತದ ವಿರುದ್ಧ ಮತ್ತು ಅಮೆರಿಕನ್ ನೆರವನ್ನು ಚೀನಾ—ರಶ್ಯಗಳ ವಿರುದ್ಧ ಪಡೆಯುವ ಗತ್ತುಗಾರಿಕೆಯು, ಪಾಳಯಾತೀತ (?) ಧೋರಣೆಯು ದುರಂತ ರಾಜಕಾರಣ ಪಾಕಿಸ್ತಾನದಲ್ಲಿ ತಲೆದೋರಿರುವುದಕ್ಕೆ ಅಯ್ಯೂಬರ ಅಜ್ಞಾನವೇ ಕಾರಣ. ಅವರ ಅಭಿಪ್ರಾಯದಂತೆ ಪೇಕಿಂಗ್-ಮೋಸ್ಕೋ ಮತ್ತು ನವದೆಹಲಿಗಳನ್ನು ಒಂದರ ವಿರುದ್ಧ ಇನ್ನೊಂದನ್ನು ಎತ್ತಿಕಟ್ಟಲು ಅವರಿಗೆ ಅವಕಾಶ ಕಲ್ಪಿಸಿ ಕೊಡಬೇಕು. ಅದಕ್ಕಾಗಿ ಅಮೆರಿಕೆ ಪಾಕಿಸ್ತಾನಕ್ಕೆ ಧಾರಾಳ ಸಹಾಯ ಕೊಡಬೇಕು. ಇದನ್ನೇ ಅಯ್ಯೂಬ ಭಾಷೆ "ಹೊಂದಾಣಿಕೆಯ ನೀತಿ" ಎಂದು ಕರೆಯುತ್ತದೆ. ಅದೇನೇ ಇರಲಿ, ಜಾನ್ಸನ್ ಅಯ್ಯೂಬರ ರಂಗಿನ ಮಾತುಗಳಿಂದ ಮರುಳಾಗಲಿಲ್ಲ. ಇದು ಸಹಜ. ಜಾನ್ಸನ್ ಈಗ ಅಧ್ಯಯನ ಮಾಡುವವರು, ಅಧ್ಯಾಪಕರಲ್ಲ. ಹಾಗಿದ್ದರೂ ಅಯ್ಯೂಬರ ನೀತಿಯನ್ನು ಅವರು ಮೆಚ್ಚಲಿಲ್ಲ; ಅಯ್ಯೂಬರು ತನ್ನ ಯಾತ್ರೆಯಲ್ಲಿ ಅಮೆರಿಕೆಯ ಬೆಂಬಲ ಪಡೆಯಲು ಸಮರ್ಥರಾಗಲಿಲ್ಲ. ಸದ್ಯಕ್ಕೆ ಭದ್ರತಾ ಸಮಿತಿಯ ಸಮರವಿರಾಮ ಗೊತ್ತುವಳಿಗಿಂತ ಮುಂದೆ ಹೋಗುವುದಿಲ್ಲ— ಇದು ರಾಜತಾಂತ್ರಿಕರ ಖಚಿತಾಭಿಪ್ರಾಯ. ಶಾಸ್ತ್ರಿ—ಜಾನ್ಸನ್ ಭೆಟ್ಟಿಯ ಕಾಲದಲ್ಲಿ ಭಾರತದ ನೀತಿಯನ್ನು ಅರಿತ ಮೇಲೆಯೇ ಅಮೆರಿಕನ್ ನೀತಿಯು ಪ್ರಕಟವಾಗುವುದು. ಆಗಲೇ 'ಕಾಶ್ಮೀರ'ದ ಬಗೆಗಿನ ತೂಗುವ ಅಮೆರಿಕನ್ ನೀತಿಯು ಒಂದು ಹಂತಕ್ಕೆ ಬಂದು ನಿಲ್ಲುವುದು.

### ವಚನ ಸುಧೆ

ಸ್ವಮರ್ಥಂ ಯಃ ಪರಿತ್ಯಜ್ಯ
ಪರಾರ್ಥಮನುತಿಷ್ಠತಿ ।
ಮಿಥ್ಯಾ ಚರತಿ ಮಿತ್ರಾರ್ಥೇ
ಯಶ್ಚ ಮೂಢಃ ಸ ಉಚ್ಯತೇ ॥

ತನ್ನ ಕರ್ತವ್ಯವನ್ನು ತೊರೆದು ಪರರ ಕರ್ತವ್ಯ ಪಾಲನೆ ಮಾಡುವವನು ಮತ್ತು ಮಿತ್ರರೊಡನೆ ಅಸತ್ ಆಚರಣೆ ಮಾಡುವವನು ಮೂರ್ಖನು.

### ನಂಬೂದರಿ ಸವಾಲು

ಭಾರತದ ಎಡ ಕಮ್ಯೂನಿಸ್ಟ್ ಪಕ್ಷದ ನಾಯಕ ಇ. ಎಂ. ಎಸ್. ನಂಬೂದರಿಪಾದರ ಹಲವು ಉದ್ಗಾರಗಳು ಅರ್ಥ

(ಹದಿನಾಲ್ಕನೇ ಪುಟ ನೋಡಿರಿ)

### ನರಸಣ್ಣನ ಸರಸ



'ತಾಷ್ಕೆಂಟ್ ಮಾತುಕತೆಯ ಭವಿಷ್ಯವನ್ನು ಅಯ್ಯೂಬರು ಹೊರಡುವುದಕ್ಕೆ ಮೊದಲೇ ಶಾಸ್ತ್ರಿಯವರು ಹೇಳಿದರೆ ತಪ್ಪೇನಂತೆ?'

ಗೇಹ ರಾಜ್ಯದಲ್ಲಿ

# ರತ್ನ ಹೋದರೂ ಮುತ್ತು ಉಳಿಯದೆ?

'ಏ......'

'ಏನೂಂದ್ರೆ?"

'ಕೇಳಿದ್ಯೇನೇ ಸುದ್ದಿಯನ್ನ?'

'ಏನಂತೆ?"

'ಅಂದ್ರೆ ನಿನ್ಗಿನ್ನೂ ಗೊತ್ತಿಲ್ಲಾನ್ನ....'

'ಅಲ್ರಿ, ಏನು ಎಲ್ಲಿ ಅಂತ, ಏನೂ ಹೇಳದೆ ಇದ್ರೆ ಏನೂಂತ ಹೇಗೆ ಗೊತ್ತಾಗೋದೂಂತ..."

'ಅಲ್ವೆ, ನಮ್ಮ ಎರಡು ರತ್ನಗಳು ಕಳೆದು ಹೋದುವಲ್ವೆ?"

'ಎಂತಹ ರತ್ನಗಳಪ್ಪ ಅವು? ಎಲ್ಲಿಗೆ ಹೋದುವಂತೆ? ರಕ್ಷಣಾ ನಿಧಿಗೆ ಹೋದವೇನು?"

'ಹ್ಞೀ....ಹ್ಞೂಂ.... ಒಂದು ರೀತಿಯಿಂದ ಹಾಗೇ ಅನ್ನ..."

'ನಿಮ್ಮ ಒಂದು ರೀತಿ ಇನ್ನೊಂದು ರೀತಿಯೆಲ್ಲಾ ನನಗೆ ಬೇಡ. ಸಂಗತಿಯೇನೂಂತ ಅಂದ್ಬಿಟ್ರೆ ನೆಮ್ಮದಿಯಾಗಿ ಕೇಳಿ ಸುಮ್ಮನಿರ್ತೇನೆ.."

'ಇದೇನೋ ಒಳ್ಳೆ ಇವು ವಿಷ್ಯ...'

'ಒಳ್ಳೆಯದನ್ನ ಹೇಳೋಕೂ ದ್ರಾವಿಡ ಪ್ರಾಣಾಯಾಮವಾಗಬೇಕೇನು?"

"ನಿನ್ನ ಮಾತನ್ನೆಲ್ಲಾ ಕಟ್ಟಿಡು. ಸದ್ಯ ಸಂಗ್ತಿ ಕೇಳೋದಾದ್ರೆ ಕೇಳು..."

'ನೀವು ಕೇಳು ಕೇಳು ಅಂತ್ಲೇ ಇದ್ದೀರಿ ಹೊರ್ತು ಹೇಳೋ ಮಾತನ್ನೇ ಎತ್ತೋದಿಲ್ಲಾ ನೋಡಿ...'

"ಅಲ್ವೆ, ನೀನು ಕೇಳದೆ ಇದ್ರೆ ನಾನು ಹೇಳೋದು ಹೇಗೆ?"

'ಹಾಗೆ ಹೇಳು ಮತ್ತೆ....'

'ನಾನು ಕೇಳ್ತೀನೆ, ಹೇಳಿ....'

"ನಿಮ್ಮ ಮತ್ತೆ ಮತ್ತೆಯೆಲ್ಲಾ ಈಗ ಬೇಡ. ಹೇಳೋದಿದ್ರೆ ಹೇಳಿ ಬಿಡಿ..."

"ಏನು ಹೇಳ್ಬೇಕು?"

"ನೋಡಿ, ಎರಡು ರತ್ನಗಳು...."

"ಹ್ಞೂಂ....ಹೆಂಗಸ್ರಿಗೆ ಎಲ್ಲಾ ಮರ್ತು ಹೋಗುತ್ತೆ. ಅದ್ರೆ ರತ್ನಗಳು ಮಾತ್ರ...."

'ಅಲ್ರಿ, ಅದ್ರಲ್ಲೇನು ವಿಶೇಷಾಂತ?..'

"ಏನೂ ಇಲ್ಲಾನ್ನು, ಅದ್ಕೆ ಇರ್ಬೇಕು ಅವ್ರು ಹೆಸ್ರಲ್ಲಿ ರತ್ನ ಇರೋದು....."

'ಅಂದ್ರೆ?'

'ರತ್ನ, ರತ್ನಾವತಿ, ರತ್ನಾವಳಿ ಜಯರತ್ನ, ಗಂಗಾ ರತ್ನ, ಯಮುನಾ ರತ್ನ, ಕಾವೇರಿ ರತ್ನ, ನೇತ್ರ ರತ್ನ, ನವರತ್ನ, ಭಾರತ ರತ್ನ..."

'ಓಯ್...ಇದೆಲ್ಲಾ ಏನು?'

"ಏನು? ಯಾವುದು?"

'ನಿಮ್ಮ ರತ್ನ ಸಹಸ್ರ ನಾಮವನ್ನು ಕೇಳಿದ್ರೆ..."

"ಓ.....ನಾನೇನಂದೆ?"

'ಏನು ಅಂದ್ರೆ ಏನಂತೆ? ನವರತ್ನ ಭಾರತ ರತ್ನಾಂತ ಮುಂದುವರ್ಸಿ ಚಕ್ಕುಲಿ ರತ್ನಳನ್ನೂ ಕರೆಯುತ್ತೀರೋಂತ...."

'ಛೆ ....ಛೆ....ಹಾಗೇನೂ ಇಲ್ಲಾನ್ನು. ಏನೋ ಹೆಂಗಸಿಗೂ ರತ್ನಗಳಿಗೂ ಇರುವ ಹಾಲು ನೀರಿನ ಸಂಬಂಧವನ್ನು ವರ್ಣಿಸೋ ಗುಂಗಿನಲ್ಲಿ..."

'ಮುತ್ತನ್ನೂ ವಜ್ರವನ್ನೂ ಒಟ್ಟಿಗೆ ಕೋದಿರಿ...."

'ಇಲ್ಲಮ್ಮ..."

'ಅಲ್ರಿ, ನೀವು, ಗಂಡಸ್ರಿಗೇ ರತ್ನದ ಮೇಲೆ ಮೋಹ ಇರುವಾಗ ನಾವು ಮತ್ತೆ ಹೆಂಗಸ್ರು.."

"ಆಲ್ಲೆ? ಸುಂಸುಮ್ನೆ ಹೇಳಿದ್ರೆ ಪ್ರಯೋಜನವಿಲ್ಲ. ನೋಡು ರತ್ನಗಳ ಬಗ್ಗೆ ಮೂಗಿನ ತುದಿಯಲ್ಲಿ ಆಸೆ ಇರೋದೆಲ್ಲಾ ನಿಮಗೆ. ಕೈಗೆ ಕಾಲಿಗೆ ಕುತ್ತಿಗೆಗೆ, ತಲೆಗೆ ಕಿವಿಗೆ ಮೂಗಿಗೆ ಸೊಂಟಕ್ಕೆ ...ಇನ್ನು ಒಂದೊಂದಲ್ಲಿಗೆ ಸಾಕು, ದೇವ್ರ ಮೂರ್ತಿಯನ್ನು ಹೂಗಳಿಂದ ಮುಚ್ಚಿದಂತೆ ನಿಮ್ಮನ್ನೂ ರತ್ನಗಳಿಂದ ಮುಚ್ಚಿದಂತೆ ನಿಮ್ಮನ್ನೂ ರತ್ನಗಳಿಂದ ಮುಚ್ಚಿದ್ರೂ ಮತ್ತೂ ಅತೃಪ್ತರಾಗಿರೋರು ನೀವು..."

ಅಲ್ರಿ. ಏನಿದ್ರೆ ಏನು ಪ್ರಯೋಜನ? ನಿಮ್ಮ ಸರಕಾರ ಅದೆಲ್ಲದಕ್ಕೂ ತಡೆ ಹಾಕಿತಲ್ಲಾ....'

'ಅದ್ದರಿಂದ್ಲೇ ನಾನು ಬಚಾವಾದೆ, ಇಲ್ಲಾದ್ರೆ. ನಿನ್ನ ಕೈಯಲ್ಲಿ ನಾನು ಬದುಕುಳಿಯುತಿದ್ದನೋ ಇಲ್ಲವೋ...."

"ಪಾಪ, ಭಾರಿ ಮಾಡಿಬಿರೋರು ಅಲ್ವೆ ನೀವು... ಎಲ್ಲಾ ಗೊತ್ತೂನ್ನಿ...."

"ಏನು ಗೊತ್ತು?"

'ಮುರಾರ್ಜೀ ನಿಮ್ಗೂ ಭಾರಿ ಭಾರಿ ದೋಸ್ತೀಂತ..."

"ಏನು ಅನ್ತಾ ಇದ್ದೀಂತ? ಹಳ್ಳಿಯಲ್ಲಿರೋ ನನ್‌ಗೂ ಡಿಳ್ಳಿಯಲ್ಲಿರೋ ಅವ್ರಿಗೂ ದೋಸ್ತಿ ಎಲ್ಲಿಯದು? ದೋಸ್ತಿ ಕತೆ ಬಿಡು, ನಾನು ನೆಹರುವನ್ನಾದ್ರೂ ಒಂದು ಬಾರಿ ಕಣ್ಣಾರೆ ಕಂಡಿದ್ದೇನೆ; ನಿನ್ನ ಮುರಾರ್ಜಿಯನ್ನ ಕಾಣ್ಲೆಲ್ಲ..."

'ಕಾಣೋದು ಯಾಕ್ರಿ? ಅದೆಂತದೋ ಪೂರ್ವಾನು ರಾಗ ಉತ್ತರಾನು ರಾಗಾಂತ ಇದೆಯಲ್ಲಾ....'

'ಎಲ್ಲಾ ಇದೆ. ಸದ್ಯ ನಿನ್ನ ಕಲ್ಪನೆಗೆ ಕಾರಣವೇನೂಂತ...."

'ಮತ್ತೆಂತದ್ರಿ? ಮುರಾರ್ಜಿ ಚಿನ್ನ ಬರೋತನ್ಕ ಕಾದು ಕುಳಿತು ಮತ್ತೆ....'

"ಸಾಕು ಸಾಕೇ... ಸ್ವಲ್ಪ ಜಾಗ್ರತೆಯಾಗಿ ಮಾತನಾಡೂಂದ್ರೆ...."

"ಹೌದಪ್ಪ, ಎಲ್ಲಾ ಗಂಡಸ್ರೂ ಹಾಗೇನೆ."

"ಹೇಗೆ?"

"ಹೆಂಗಸ್ರು ತಮ್ಮ ಹುಳುಕನ್ನ ಎತ್ತಿ ಹೇಳೋದಕ್ಕೆ ಹೊರಟಾಗ, ಅವ್ರನ್ನ ದಬಾಯಿಸಿ ಸುಮ್ಮನಿರಿಸೋದು...."

"ಭಾರಿ ಉದ್ದವಾಯಿತೇ ನಿನ್ನ ನಾಲಗೆ..."

"ಹೌದೂಂದೆ.... ಅದನ್ನು ಸ್ವಲ್ಪ ಗಿಡ್ಡರಿಸಿ ಬಿಡಿ. ಆಗ ಎಲ್ಲಾ ಸರಿಹೋಗುತ್ತೆ...."

"ಅಲ್ಲಾ, ಯಾಕೆ ನಿನಗೆ ಇಷ್ಟೆಲ್ಲಾ ಕೋಪಾಂತ?"

"ಕೋಪ? ಯಾಕೆ ಮಾಡಬೇಕು? ಮಾಡಿಕೊಂಡ್ರೂ ಏನು ಪ್ರಯೋಜನ?"

'ಯಾಕೆ?"

"ಮತ್ತೇನೂಂತ? ಎಷ್ಟಾದ್ರು ನಮ್ಮದು ಹೆಂಗಸರದು, ಸೋಲುವ ಪಕ್ಷ. ಹೆಂಗಸು ಸತ್ಯ ಅಂದ್ರೂ ಅದನ್ನು ಕೇಳಿ ರೇಗೋದೇ ಗಂಡಸ್ರ ಹುಟ್ಟು ಗುಣ. ಹಿಂದಿನ ಕಾಲದಿಂದ್ಲೂ ಹೆಣ್ಣನ್ನು ತನ್ನ ಮುಷ್ಟಿಯೊಳಗಡೆ ಇಟ್ಟುಕೊಂಡು ದಬಾಯಿಸುತ್ತಾ ಇದ್ದಾನೆ...."

'ಏ, ಯಾರೇ ಹಾಗೆಲ್ಲಾ ಮಾಡಿದವರು?"

"ಯಾರು ಯಾರೆಲ್ಲಾ ಯಾಕೆ? ನಿಮ್ಮ ಸಾಕ್ಷಾತ್ ದೇವರ ಅವತಾರ ಶ್ರೀ ರಾಮಚಂದ್ರನೇ ಸೀತೆಯನ್ನ ದಬಾಯಿಸಿ ಕಾಡಿಗೆ ಕಳಿಸಲಿಲ್ಲವೇನು?"

'ಕ್ಞೂ...ಅದೇನೋ ಲೋಕಾಪವಾದಕ್ಕೆ ಅತ ಹೆದರಿದಾನ್ನ..."

"ಅದಕ್ಕೆ ನಿರಪರಾಧಿಯನ್ನು ಕಾಡಿಗೆ ಅಟ್ಟಬೇಕೇನು? ತಾನು ಮಾಡಿದ ಅಪರಾಧಕ್ಕೆ ಸೀತೆಯನ್ನು ಬಿಡುವುದು ಎಂದರೆ...."

'ಅಯ್ಯೊಪ್ಪ ನಿನೀಗ ಹೇಳುವುದಾದ್ರೂ ಏನು?"

'ಮತ್ತೆಂಥದು? ಗಂಡಸ್ರು ಏನು ಮಾಡಿದ್ರೂ ಚಂದ. ಅವರು ನೀತಿ ತಪ್ಪಬಹುದು ನಡೆ ತಪ್ಪಬಹುದು. ಇನ್ನು ಅತ್ಯಾಚಾರವನ್ನೂ ಮಾಡಬಹುದು. ಆದರೆ, ಅವೆಲ್ಲವುಗಳಿಗೂ ಗಂಡಸೆನ್ನೋ ಲೇಬಲ್ ಅವರ ಹಣೆಗಿದೆ. ಅದ್ರೆ ಹೆಂಗಸು ಹಾಲನ್ನು ಹಾಲು, ನೀರನ್ನು ನೀರು ಅನ್ನೋಕೆ ಹೊರಟ್ರೆ ಅವರು ರೇಗಿಬಿಡ್ತಾರೆ. ಆಕೆಯ ಅಶ್ರು ಪ್ರವಾಹದಿಂದಲೇ ಅವರು ಪ್ರಸನ್ನ ಚಿತ್ತರಾಗುತ್ತಾರೆ...'

"ಎಲ್ಲಿಯೋ ಕೆಲವರು ಹಾಗಿರಬಹುದೂನ್ನ..."

"ಕೆಲವರೂಂತೇನು? ನಾನು ಆದಿಯ ದ ನಿಮ್ಮ ಬಳಿ ದಿನಗಳೆಯುತ್ತೇನೆ. ಯಾರಾದ್ರೂ ಪಾಪದವರಾಗ್ತಿದ್ರೆ.."

"ಹ್ಞ...ಹ್ಞ...ಅಂತೂ ಒಂದು ಮಾತು ಇವತ್ತು ಸಿದ್ಧವಾಯ್ತು...."

"ಏನು?"

'ನೀನೂ ಜೋರಿನವಳೂಂತ....'

"ಹೇಗೆ?"

"ನೀನೇ ಅಂದೆಯಲ್ಲಾ, ಗಂಡಸ್ರಲ್ಲಿ ಜೋರು, ನೀನಾಪ್ರಿಂದ ನನ್ನೊಡನೆ..."

"ಇಲ್ಲ ಇಲ್ರಿ.... ನೀವು ಜೋರಾದ್ರೂ ಅದರಲ್ಲೂ ಸಾಮ್ಯತೆ ಇದೆ...."

"ಅಂದ್ರೆ?"

'ಚಂದ್ರೋದಯ, ಮಂದಾನಿಲಗಳ ಸಂಗಮದಂತಹ ಸೌಮ್ಯ ವಾತಾವರಣ ಇದೆ. ಅದರೊಡನೆ ಹೃದಯೇಶನ....'

'ಓ– ಹಾಗೆ ತಾನೆ? ತಿಳಿಯಿತು. ಬಿಡು....'

'ಅದರ ಮುಂದೆ ನಿಮ್ಮ ಯಾವ ರತ್ನಗಳೂ ಬೇಡ. ಸದ್ಯ ಬಂಗಾರ ನಾಣ್ಯ ಪ್ರಯೋಜನವೇನು? ರತ್ನಗಳೆಲ್ಲಾ ದೇಶ ರಕ್ಷಣೆಗೆ ಹೋದ್ರೆ ಮತ್ತೆ ನಮಗೇನು ಉಳಿಯುವುದು? ಬರಿಯ ... ಮಾತ್ರ...."

(ಹದಿಮೂರನೇ ಪುಟ ನೋಡಿ)

## ಉಲ್ಲಾಳ ಶ್ರೀನಿವಾಸ ಮಲ್ಯ

ದೇಶದ ಸ್ವಾತಂತ್ರ್ಯ ಸಮರದಲ್ಲಿ ಉತ್ಸಾಹದಿಂದ ಭಾಗವಹಿಸಿ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನನಾಯಕರಾಗಿ ಲೋಕಸಭಾ ಸದಸ್ಯರಾಗಿ ದೇಶದ ಪುನಾರಚನೆಯಲ್ಲಿ ಜಿಲ್ಲೆಯು ಅಲಕ್ಷ್ಯವಿಸದಂತೆ ಕೇಂದ್ರ ಸರಕಾರದೊಡನೆ ಸಮರಸದಿಂದಲೇ ವರ್ತಿಸಿ, ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹೋರಾಡಿದ ಉಲ್ಲಾಳ ಶ್ರೀನಿವಾಸ ಮಲ್ಯ ಅವರು 19-12-1965 ರಂದು ಮುಂಜಾನೆ 7-45ಕ್ಕೆ ನಮ್ಮನ್ನು ಅಗಲಿ ಹೋದುದು ನಮಗೆ ಮಾತ್ರವಲ್ಲ, ದೇಶಕ್ಕೂ ಬಡಿದ ವಜ್ರಾಘಾತ. ಮಾತನ್ನು ಕಡಿಮೆ ಮಾಡಿ ಕೃತಿಯತ್ತ ಮಹತ್ವ ನೀಡುವ ಉದಾತ್ತವಾದಿಗಳಾದ ಮಲ್ಯರು ಆಧುನಿಕ ಭಾರತದಲ್ಲಿ ದಕ್ಷಿಣ ಕನ್ನಡದ ಹೆಸರನ್ನೊಡನೆ ತಮ್ಮ ಸೇವೆಯನ್ನೂ ಅಜರಾಮರಗೊಳಿಸಿದರು. ಪಶ್ಚಿಮ ಕರಾವಳಿಯ ರಾಷ್ಟ್ರೀಯ ಹೆದ್ದಾರಿ, ಬಜಪೆಯ ವಿಮಾನ ನಿಲ್ದಾಣ, ಸುರತ್ಕಲ್ಲಿನ ರಿಜನಲ್ ಇಂಜಿನಿಯರಿಂಗ್ ಕಾಲೇಜು, ಮಂಗಳೂರಿನ ಬಂದರದ ಮಹಾ ಯೋಜನೆ, ಹಾಸನ ಮಂಗಳೂರು ರೇಲ್ವೆ ದಾರಿ— ಇತ್ಯಾದಿ ಇತ್ಯಾದಿಗಳು ಮಲ್ಯರ ನಿರಹಂಕಾರಿಕ ಸೇವೆಯು ನಮಗಿತ್ತ ವರದಾನಗಳು. ವಿನಯಶೀಲ ವ್ಯಕ್ತಿತ್ವ, ಸದಾಸೌಜನ್ಯ, ನಿಸ್ವಾರ್ಥ ಸೇವಾಭಾವನೆ, ಅವಿಶ್ರಾಂತ ಪರಿಶ್ರಮ, ಭಾಷಣ—ಉಪದೇಶಗಳಿಗಿಂತ ಚಿಂತನ—ಕಾರ್ಯಸಾಧನಗಳತ್ತ ಆಸಕ್ತಿ— ಇತ್ಯಾದಿ ಇತ್ಯಾದಿಗಳು ಅವರು ನಮ್ಮ ಮುಂದಿಟ್ಟ ಆದರ್ಶಗಳು.

ಕಾಂಗ್ರೆಸ್ ಕಾರ್ಯಕರ್ತರಾಗಿ, ಕಾಂಗ್ರೆಸ್ ಕಾರ್ಯದರ್ಶಿಯಾಗಿ, ಲೋಕಸಭೆಯಲ್ಲಿ ಜಿಲ್ಲೆಯ ಉತ್ತರ ವಿಭಾಗದ ಜನತಾ ಪ್ರತಿನಿಧಿಯಾಗಿ ಜಿಲ್ಲೆಯ, ರಾಜ್ಯದ, ದೇಶದ ಹಿತಚಿಂತಕನಾಗಿ ಅವರು ಮಾಡಿದ ಸೇವೆಗಳು ಚಿರಂತನವಾಗಿವೆ. ದಿವಂಗತರ ಕಾರ್ಯಶಕ್ತಿ, ಆತ್ಮಬಲ, ನಿರ್ವಿಕಲ್ಪ ಪ್ರಭಾವಶಾಲಿ ಮನಸ್ಸುಗಳ ಕೆಲವಂಶವಾದರೂ ನಮ್ಮ ಪಾಲಿಗೆ ಬರಲೆಂದು ಹಾರೈಸಿ 'ನವಯುಗ'ವು ಅವರ ಅಮರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತದೆ.

ಜನನ: 21—11—1902 ಮರಣ: 19—12—1965

ಸಾಹಿತ್ಯ ಸುಧೆ

# ಜನಪದಕವಿ ಸರ್ವಜ್ಞ

ಬರೆದವರು
ಶ್ರೀ ಪಿ. ಎಸ್. ಸತ್ಯನಾರಾಯಣ ರಾವ್.

ಕನ್ನಡ ಸಾಹಿತ್ಯೇತಿಹಾಸಕಾರರ ಅಭಿಪ್ರಾಯದ ಪ್ರಕಾರ ಸುಮಾರು ಹದಿನೇಳು ಅಥವಾ ಹದಿನೆಂಟನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯಾಕಾಶದಲ್ಲಿ ನವ ತಾರೆಯೊಂದು ಮೂಡಿ ಪ್ರಜ್ವಲಿಸಿ ಬೆಳಗಿತು. ಆ ತಾರೆಯ ಮತ್ತೊಂದು ಹೆಸರು ಸರ್ವಜ್ಞನೆಂದು.

ಕವಿ ಸರ್ವಜ್ಞನ ಕಾಲದ ಬಗ್ಗೆ ಹಲವು ಭಿನ್ನಾಭಿಪ್ರಾಯಗಳಿವೆ. ಕವಿಯ ಕಾಲವನ್ನು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಶ್ರೀ ನರಸಿಂಹಾಚಾರ್ಯರು ೧೭೦೦ ಇರಬಹುದೆಂದೂ, ಇ. ಪಿ. ರಯಿಸ್‌ರವರು ೧೬೦೦ ಎಂದೂ, ಕಿಟ್ಟೆಲ್‌ರವರು ೧೮೦೦ ಎಂದೂ. ಸರ್ವಜ್ಞ ಕವಿಯ ಸಂಶೋಧಕರಾಗಿ ತಮ್ಮ ಜೀವಿತ ಕಾಲವೆಲ್ಲಾ ಆ ಮಹಾನುಭಾವನ ತ್ರಿಪದಿಗಳ ಸಂಕಲನ ಕಾರ್ಯಕ್ಕಾಗಿ ವಿನಿಯೋಗಿಸಿ, ಶ್ರದ್ಧೆ ವಹಿಸಿ ದುಡಿದು, ಕನ್ನಡ ಜನತೆಗೆ ಸರ್ವಜ್ಞನ ಸಾಹಿತ್ಯವನ್ನು ಒದಗಿಸಿದ ದಿ. ಉತ್ತಂಗಿ ಚೆನ್ನಪ್ಪನವರು ೧೬ನೆಯ ಶತಮಾನವೆಂದೂ ಹೇಳುತ್ತಾರೆ. ಸರ್ವಜ್ಞ ಕವಿಯ ಕಾಲವನ್ನು ನಿರ್ಧಾರ ಮಾಡಿ ಹೇಳಲು ಸಾಕಷ್ಟು ಶಾಸ್ತ್ರಾಧಾರಗಳು ದೊರೆಯುವುದಿಲ್ಲ. ಆದರೂ ಕವಿಯ ಕಾಲವನ್ನು ಸಂಶೋಧಕರ, ಪಂಡಿತರ ಅಭಿಪ್ರಾಯದಂತೆ ೧೭ ಅಥವಾ ೧೮ನೆಯ ಶತಮಾನ ಎಂದು ಊಹಿಸಬಹುದಾಗಿದೆ.

ಸರ್ವಜ್ಞ ಕವಿಯ ತಂದೆ ಬಸವರಸ; ಈತ ಆರಾಧ್ಯ ಬ್ರಾಹ್ಮಣ. ಈತನ ಸ್ಥಳ ಧಾರವಾಡ ಜಿಲ್ಲೆಯ ಮಾಸೂರು. ಈತನ ಪತ್ನಿ ಮಲ್ಲಮ್ಮ. ದಂಪತಿಗಳಿಗೆ ಬಹುದಿನಗಳ ವರೆಗೆ ಮಕ್ಕಳಾಗಲಿಲ್ಲವೆನ್ನುವ ಕೊರಗಿರುತ್ತದೆ. ಬಸವರಸ ಜೀವನದಲ್ಲಿ ಬೇಸರಗೊಂಡು ಕಾಶಿಗೆ ಬಂದು ವಿಶ್ವೇಶ್ವರನಲ್ಲಿ ತನ್ನ ಮನದಳಲನ್ನು ತೋಡಿಕೊಂಡು, ಸಂತಾನ ಸೌಭಾಗ್ಯವನ್ನು ಕರುಣಿಸೆಂದು ಭಕ್ತಿಯಿಂದ ಪ್ರಾರ್ಥಿಸಿ, ಅನುಗ್ರಹಪಡೆದು ಸ್ವಗ್ರಾಮಕ್ಕೆ ಹಿಂದಿರುಗುವ ಹಾದಿಯಲ್ಲಿ ಅಂಬಲೂರು ಎಂಬ ಗ್ರಾಮದಲ್ಲಿ ತಂಗುತ್ತಾನೆ. ಅಲ್ಲಿ ಒಲುವಿನ ಖನಿ ಮಾಳಿಯ ಪರಿಚಯವಾಗುತ್ತದೆ. ಮಾಳಿ ಕುಂಬಾರ ಮತದವಳು. ಬಸವರಸ ಮತ್ತು ಮಾಳಿಯ ಅನುರಾಗದ ಫಲವಾಗಿ ಸರ್ವಜ್ಞ ಉದಯಿಸುತ್ತಾನೆ. ಇವನು ಕುಂಬಾರನ ಸಾಲೆಯಲ್ಲಿ ಹುಟ್ಟಿದ ಕಾರಣ 'ಸಾಲೆ ಸರ್ವಜ್ಞ'ನಾಗುತ್ತಾನೆ.

ಸರ್ವಜ್ಞನೆಂದು ಯಾವ ತಂದೆ ತಾಯಿಯರೂ ತಮ್ಮ ಮಗುವಿಗೆ ನಾಮಕರಣ ಮಾಡುವುದಿಲ್ಲ. ಯಾರೊಬ್ಬರೂ ತಾವು ಸರ್ವಜ್ಞನೆಂದು ಹೇಳಿ ಕೊಳ್ಳುವ ದಾರ್ಷ್ಟ್ಯತನವನ್ನು ತೋರಲಾರರು. ಅದರಂತೆ ಕವಿ ಸರ್ವಜ್ಞ ಎಲ್ಲಿಯೂ ಮರೆತೂ ತನ್ನ ಪೂರ್ವಾಶ್ರಮದ ಅಥವಾ ನಿಜವಾದ ಹೆಸರನ್ನು ಉಚ್ಚರಿಸಿಲ್ಲ. ಕವಿಗೆ ವ್ಯವಹಾರ ನಾಮವೇನೋ ಬೇರೆ ಇದ್ದು; ಕವಿ ಅದನ್ನು ಮರೆಮಾಚಿ 'ಸರ್ವಜ್ಞ' 'ಎಂಬ ಗುಪ್ತ ನಾಮದಿಂದ ತ್ರಿಪದಿಗಳನ್ನು ಬರೆದು ಬೆಳಕಿಗೆ ತಂದಿರಬಹುದೆಂದು ತೋರುತ್ತದೆ.

ಕವಿ ಸರ್ವಜ್ಞ ತಾನು ಬಾಲಕನಾಗಿ ತಿಳುವಳಿಕೆ ಮೂಡಿದ ದಿನದಿಂದಲೂ ಒಂದಲ್ಲ ಮತ್ತೊಂದು ಬಗೆಯಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿ; ಸಮಾಜದ ನಿಂದೆಗೆ, ಅವಹೇಳನಕ್ಕೆ ಗುರಿಯಾಗಿರಬಹುದೆಂದು ತೋರುತ್ತದೆ. ಕವಿಯ ಹೃದಯ ನೊಂದಿದೆ, ರೋಸಿದೆ ಎಂಬುದು ಅವನ ತ್ರಿಪದಿಗಳಿಂದ ಸಾಕಷ್ಟು ಸ್ಪಷ್ಟವಾಗಿ ಗೋಚರವಾಗುತ್ತದೆ.

ಹುಟ್ಟೂರು ಅವನಿಗೆ ಸಾಕಷ್ಟು ಉಪದ್ರವ ನೀಡಿದಾಗ, ಗತ್ಯಂತರವಿಲ್ಲದೆ ದೇಶ ಸಂಚಾರಕ್ಕೆ ಹೊರಡುತ್ತಾನೆ. ಕನ್ನಡ ನಾಡಿನ ಮೂಲೆ ಮೂಲೆಯೂ ಅವನಿಗೆ ಪರಿಚಯವಿತ್ತು ಎಂದು ಕಾಣ ಬರುತ್ತದೆ. 'ಕರದಿ ಕಪ್ಪರವುಂಟು, ಹಂನೆಂಬ ದೈವತನಗುಂಟು' ಎಂದು ಹೇಳಿದ ಸರ್ವಜ್ಞ ಯಾರ ಹಂಗಿಗೂ ಒಳಗಾಗದೆ ಸಂಚಾರ ಕೈಗೊಳ್ಳುತ್ತಾನೆ.

ಸಮಾಜದ ರೀತಿ ನೀತಿಗಳು, ಜನತೆಯ ಮನೋಧರ್ಮ, ಜಾತಿ-ಮತ-ಧರ್ಮ—ದೇವರುಗಳ ಹೆಸರಿನಲ್ಲಿ ನಡೆಯುವ ಅನಾಚಾರ ಅತ್ಯಾಚಾರ, ಜನಮನದ ಅಲ್ಪತನ ಸರ್ವಜ್ಞನ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಬೀರುತ್ತವೆ; ಅವನ ಅಂತರಂಗವನ್ನು ಕಲಕುತ್ತವೆ.

ಜನತೆಯ ಮೂಢತನ, ಅಲ್ಪ ಬುದ್ಧಿ, ವಿಚಿತ್ರ ವ್ಯವಹಾರಗಳನ್ನು ಗಮನಿಸಿದ ಕವಿ ಸತ್ಯದ ಪ್ರತಿಪಾದನೆಗೆ ಹಿಂಜರಿಯದೆ ನಿರ್ಭೀತಿಯಿಂದ ವಿಮರ್ಶೆ ಮಾಡುತ್ತಾನೆ. ಕಣ್ಣಿಗೆ ಕಂಡ ದೃಶ್ಯಗಳನ್ನು ಕಂಡು ಸಾಕಷ್ಟು ನಕ್ಕಿದ್ದಾನೆ; ನಗಿಸಿದ್ದಾನೆ.

ಕವಿ ಸರ್ವಜ್ಞ ಸುಲಭವೂ, ಮಧುರವೂ ಆದ ತ್ರಿಪದಿ ಛಂದಸ್ಸನ್ನು ಮಾತ್ರ ಬಳಕೆಗೆ ತಂದು—ತ್ರಿಪದಿಗಳನ್ನು ಮಾತ್ರವೇ ಬರೆದಿರುವನೇ ಹೊರತು ಮತ್ತಿನ್ನಾವ ಕಾವ್ಯ, ನಾಟಕ, ಶತಕಗಳನ್ನು ಬರೆದಿಲ್ಲ ಆದರೆ ಅವನ ತ್ರಿಪದಿಗಳು ಮಹಾಕಾವ್ಯಗಳ ಮಟ್ಟವನ್ನು ಮುಟ್ಟಿಲ್ಲವೆಂದು ಹೇಳಲಾಗುವುದಿಲ್ಲ. ಕವಿ ಅಂಜುಬುರುಕನಲ್ಲ; ಅವನಿಗೆ ದಯೆ ದಾಕ್ಷಿಣ್ಯಗಳ ಚಿಂತೆಯೂ ಇಲ್ಲ; ನಿರ್ಭಯವಾಗಿ ಕಂಡುದನ್ನು ಕಂಡಂತೆ ಆಡಿದ 'ಗಂಡೆದೆಯ ಕವಿ' ಈ ಮಹಾನುಭಾವ.

ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ಧರ್ಮ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನಡೆಸಿದ ಹೋರಾಟ ಸರ್ವಜ್ಞ ಕವಿಯ ಮೂಲಕವೂ ನಡೆದಿದೆ ಎಂದು ಧಾರಾಳವಾಗಿ ಹೇಳಬಹುದು. ವಚನಕಾರರು ಹೇಳಿದ ಮಾತುಗಳನ್ನೇ ಅಷ್ಟೇ ಸರಳವಾಗಿ, ಅಷ್ಟೇ ಮಧುರವಾಗಿ ಜನಮನ ಮುಟ್ಟುವಂತೆ ತನ್ನ ತ್ರಿಪದಿಗಳ ಮೂಲಕ ಪ್ರಚಾರ ಮಾಡಿದ್ದಾನೆ ಕವಿ.

ಬಂದುದೆಲ್ಲವನ್ನು ಎದುರಿಸುವ ಎದೆಗಾರಿಕೆ; ಸತ್ಯವನ್ನು ಪ್ರತಿಪಾದಿಸಿ; ತ್ರಿಪದಿಗಳ ಮೂಲಕ ಸಂದೇಶವನ್ನು ಜನ ಸಾಮಾನ್ಯರಿಗೆ ಕೈತಪಡಿಸಿದ ಜನತಾ ಕವಿ ಸರ್ವಜ್ಞ ಅಧರ್ಮ ಅಸತ್ಯಗಳಿಗೆ ತಲೆಬಾಗಲಾರಿ ಸತ್ಯ ಸಾಧನೆಗಾಗಿ ಪ್ರಾಣ ಕೊಡಲೂ ಸಿದ್ಧ ಎಂದು ಎದೆಯೊಡ್ಡಿ ನಿಂತ ಛಲಗಾರ ಸರ್ವಜ್ಞ. ಈತನ ಒಂದೊಂದು ತ್ರಿಪದಿಯೂ ಒಂದೊಂದು ಆಣಿಮುತ್ತು.

ಸರ್ವಜ್ಞನ ತ್ರಿಪದಿಗಳು ಕಾಟು ಹರಟೆಯ ಕಗ್ಗ ಅಲ್ಲ. ಅನುಭವದ ಜೇನ ಹನಿ. ಅವನದು ವಿಶಿಷ್ಟ ಶೈಲಿ. ಮನಮುಟ್ಟುವಂತಹ ಮಧುರ ಭಾವ,ಶೃಂಗಾರ, ಭಕ್ತಿ, ಕರುಣೆ ವೀರ, ಹಾಸ್ಯ, ಗಾಂಭೀರ್ಯ ಮೊದಲಾದ ಎಲ್ಲ ನವೀನ ಗುಣಗಳೂ ಅವನ ತ್ರಿಪದಿಯಲ್ಲಿ ಒಂದುಗೂಡಿವೆ. ಎಲ್ಲದಕ್ಕೂ ಮಿಗಿಲಾಗಿ ಕವಿ ಸರ್ವಜ್ಞ ತನ್ನ ತ್ರಿಪದಿಗಳಲ್ಲಿ ಹಾಸ್ಯದ ಹೊನಲನ್ನೂ ಹರಿಸಿದ್ದಾನೆ. ಅವನ ಹಾಸ್ಯ ಓದುಗನ ಮನಸ್ಸನ್ನು ಹೂವಿನಂತೆ ಅರಳಿಸಲೂ ಬಲ್ಲದು; ವಜ್ರದಂತೆ ಕತ್ತರಿಸಲೂ ಬಲ್ಲದು. ಯಾವ ಕನ್ನಡ ಕವಿಯೂ ತನ್ನ ಸಾಹಿತ್ಯದಲ್ಲಿ ಹಾಸ್ಯರಸಕ್ಕೆ ಕೊಡದಂತಹ ಉನ್ನತ ಸ್ಥಾನವನ್ನು ಸರ್ವಜ್ಞ ತನ್ನ ಬರವಣಿಗೆಯಲ್ಲಿ ಬೆರಸಿ ವಿಖ್ಯಾತನಾಗಿದ್ದಾನೆ.

(ಹನ್ನೆರಡನೇ ಪುಟ ನೋಡಿರಿ)



ನಿಮ್ಮ ಮಗನ ಭಾವನಾ ಪ್ರಪಂಚದಲ್ಲಿ
ನೀವೆಂದಾದರೂ ವಿಹರಿಸಿದ್ದುಂಟೆ?

ಆತನ ಕನಸುಗಳಲ್ಲಿ ಪಾಲುಗೊಂಡಿದ್ದೀರಾ? ಅವನ ರಹಸ್ಯಗಳು ನಿಮಗೆ ತಿಳಿದಿವೆಯೆ ?

ನಿಮ್ಮೆಡೆಗೆ ಆತ ನೋಡುತ್ತಿದ್ದಾನೆ. ಅವನ ಕಣ್ಣುಗಳಲ್ಲಿ ಹೊಳೆಯುವ ಪ್ರೀತಿ ಮತ್ತು ಸಂತೋಷವನ್ನು ನೋಡಿರಿ. ನೀವೇ ಆತನ ಸುರಕ್ಷೆ. ಅವನಿಗಾಗಿ ಯೋಜನೆಗಳನ್ನು ಹಾಕಿ ಭವ್ಯ ಭವಿಷ್ಯತ್ತಿನ ಕಡೆಗೆ ಸಾಗಲು ಅವನಿಗೆ ನೀವೊಬ್ಬರೇ ಸಹಾಯ ಮಾಡತಕ್ಕವರು. ಆದ್ದರಿಂದ ಇಂದೇ ವಿವೇಕ ಪೂರಿತ ನಿರ್ಧಾರವನ್ನು ಮಾಡಿರಿ— ನಾಳೆ ನಿಮ್ಮ ಆಕಾಂಕ್ಷೆಗಳನ್ನು ಅವನು ಪೂರೈಸುವನು. ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಗೆ ಹೋಗಿ ಅವನ ಹೆಸರಿನಲ್ಲಿ ಒಂದು ಕ್ಯುಮ್ಯುಲೇಟಿವ್ ಡಿಪಾಸಿಟ್ ಖಾತೆಯನ್ನು ತೆರೆಯಿರಿ. ಪ್ರತಿ ತಿಂಗಳೂ ಸ್ವಲ್ಪ ಸ್ವಲ್ಪ ಒತ್ತಟ್ಟಿಗೆ ಉಳಿಸಿರಿ. ನೀವು ಉಳಿಸುವ ಪ್ರತಿಯೊಂದು ರೂಪಾಯಿಯೊಡನೆ ಅವನ ಭವಿಷ್ಯ ಬಲಗೊಳ್ಳುವುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು: 200ಕ್ಕೂ ಮಿಕ್ಕಿ.

ಚಲಾವಣಾ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಭಿಪ್ರಾಯ

# ನಮ್ಮ ವಿದ್ಯಾಕೇಂದ್ರಗಳು

ಬರೆದವರು
ಶ್ರೀ ನಿ. ಶೇಷಗಿರಿ

ಇಂದು ವಿದ್ಯಾಭ್ಯಾಸಕ್ಕಾಗಿ ವಿದೇಶಗಳಿಗೆ ಹೋಗುವುದು ಒಂದು ವೈಶಿಷ್ಟ್ಯವಾಗಿರುತ್ತದೆ. ಹೆಚ್ಚೆಚ್ಚು ವ್ಯಾಸಂಗ ಬಯಸುವ ಹುಡುಗರಿಗೆ, ಅವರ ತಂದೆತಾಯಿಗಳು ಎಷ್ಟೇ ಪರಿಶ್ರಮವಾದರೂ ಅಂತೂ ಅವರ ವಿದ್ಯಾಭ್ಯಾಸ ಸಾಂಗವಾಗಿ ಮುಂದುವರಿಯುವಂತೆ ತಮ್ಮ ಜೀವನವನ್ನು ತೇದು ಪ್ರತಿ ಕ್ಷಣವನ್ನು ಅವರ ಉಜ್ವಲಕ್ಕಾಗಿ ಸಮರ್ಪಿಸುತ್ತಿದ್ದಾರೆ. 'ಬರಹವರಿಯದವನ ಬಾಳು ಕೆರಿಗೆ ಬರ್ಗೆ' ಎಂಬ ಪೂರ್ವಜರ ನಾಣ್ಣುಡಿ ಎಲ್ಲರೂ ಬಲ್ಲವರಾಗಿರುತ್ತಾರೆ. ಆದುದರಿಂದ ಪ್ರತಿಯೊಬ್ಬನೂ ವಿದ್ವತ್ ಸಂಪನ್ನತೆಯಿಂದಿರುವುದಕ್ಕಾಗಿ ಸರಕಾರವೂ ಕೋಟಿಕಟ್ಟಲೆ ಹಣ ವಿನಿಯೋಗಿಸುತ್ತಿರುವುದನ್ನು ಎಲ್ಲರೂ ತಿಳಿದಿರುತ್ತಾರೆ. ವಿದ್ಯಾಭ್ಯಾಸವಿಲ್ಲದ ಜನಾಂಗದ ಮುಂದಿನ ನಾಗರಿಕ ಜನಾಂಗದೊಡನಿರಲು ಅಸಾಧ್ಯವಾಗಿರುತ್ತದೆ. ಪ್ರತಿಯೊಂದು ಹಳ್ಳಿಗಳಲ್ಲೂ ವಿದ್ಯಾಕೇಂದ್ರಗಳು ಬಹು ಬಿರುಸಿನಿಂದ ನಿರ್ಮಾಣವಾಗುತ್ತಿರುವುದು, ಭಾರತದ ಮುಂದಿನ ನವ ಜನಾಂಗ ತಯಾರಿಯ ಮಹಾ ದೊಡ್ಡ ಮಹತ್ವದ ಕೊಡುಗೆಯಾಗಿರುತ್ತದೆ.

ಗಾಂಧೀಜಿಯವರು ಹೇಳಿರುವ "ರಾಮರಾಜ್ಯ" ಸ್ಥಾಪಿಸಬೇಕಾದರೆ, ಇಂದಿನ ವಿದ್ಯಾರ್ಥಿಗಳಲ್ಲಿ ಶ್ರೀ ರಾಮ, ಶ್ರೀ ಕೃಷ್ಣ ಮೊದಲಾದ ಯೋಗ್ಯ ಲೋಕ ಕಲ್ಯಾಣ ಪ್ರತಿಷ್ಠಿತರ ಆದರ್ಶ ಗುಣ ನಡತೆಗಳು ಪ್ರತಿ ಕ್ಷಣದಲ್ಲಿಯೂ ಹೊರ ಹೊಮ್ಮುವಂತಾಗಬೇಕು; ಆಗಲೇ ನಮ್ಮ ರಾಷ್ಟ್ರಪಿತನ ಕನಸಿನ ರಾಜ್ಯ ನೆನಸು ಆಗುವುದರಲ್ಲಿ ಸಂದೇಹವಿಲ್ಲ. ಸ್ವಧರ್ಮ ಮತ್ತು ಸ್ವದೇಶವನ್ನು ಪ್ರಾಣಕ್ಕಿಂತಲೂ ಶ್ರೇಷ್ಠವಾಗಿ ಪ್ರೇಮಿಸುವಂತೆ ಅವರು ಸಂದೇಶವಿತ್ತಿರುತ್ತಾರೆ. ಅಲ್ಲದೆ ನಮ್ಮ ರಾಷ್ಟ್ರದ ಜನಾಂಗ ಈ ರೀತಿ ಗುಲಾಮಗಿರಿ ಮತ್ತು ಹೇಡಿತನದಲ್ಲಿ ಪ್ರವೃತ್ತರಾಗಲು ವಿದೇಶೀಯ ಜನಾಂಗದ ಅನುಕರಣೆಯೇ ಕಾರಣವೆಂದೂ, ಅವರ ಪ್ರತಿಯೊಂದು ನುಡಿಯಲ್ಲಿ ಸ್ಪಷ್ಟೀಕರಿಸಿರುತ್ತಾರೆ. ಆದುದರಿಂದ ರಾಷ್ಟ್ರದ ರಕ್ಷಣೆಗಾಗಿ ವಿದೇಶೀಯತೆಗೆ ಸೂಜಿ ಮೊನೆಯಷ್ಟು ಬಲಿಬೀಳದೆ ನಾವು ನಮ್ಮ ದೇಶದ ಬಿಂದು ಬಿಂದುವನ್ನೂ ಪೂಜ್ಯತೆಯಿಂದ ಪ್ರಸನ್ನೀಕರಿಸುವಂತೆ ತನ್ನ ನಡೆ ನುಡಿಗಳಲ್ಲಿ ಆಚರಿಸಿ ಮುನ್ನಡೆಸಿರುತ್ತಾರೆ. ಆದರೂ ನಾವು ಗಾಂಧೀಜಿಯವರನ್ನು ಬರಿಯ ಡಾಂಭಿಕವಾಗಿ ಅನುಸರಿಸುತ್ತೇವೆಂದು ಪ್ರಕಟವಾಗುತ್ತಿದೆ. ಅವರು ಹಾಕಿಕೊಟ್ಟ ಹಾದಿಯೇ ಅದರ ಪ್ರತಿಕ್ರಿಯಾತ್ಮಕ ಹಾದಿಯಾಗಿ ಪರಿಣಮಿಸಿರುವುದು ಬಹಳ ಶೋಚನೀಯ ಸಮಸ್ಯೆಯಾಗಿರುತ್ತದೆ.

### ವಿದ್ಯಾ ಕೇಂದ್ರದಲ್ಲಿ ಅವ್ಯವಸ್ಥೆ

ಇಂದು ಭಾರತವನ್ನು ತತ್ವನಿಷ್ಠ ಸರ್ವ ಪೂಜನೀಯ ರಾಷ್ಟ್ರವನ್ನಾಗಿ ಮಾಡುವುದು ವಿದ್ಯಾರ್ಥಿಗೆ ಶಿಕ್ಷಣ ನೀಡುವ ಗುರುವಿನ ಸರ್ವಾಂಗೀಣ ಆದರ್ಶತೆಯ ಮೇಲೆ ಹೊಂದಿಕೊಂಡಿರುತ್ತದೆ; ಎಂದು ಖಚಿತವಾಗಿರುತ್ತದೆ. ವಿದ್ಯೆ ಕೊಡುವ ವ್ಯಕ್ತಿ ಗುರುವಿನ ಸ್ಥಾನ ಅಲಂಕರಿಸುತ್ತಾನೆ. ಅವರಿಗೆ ಪಂಚ ಪಿತೃಗಳಲ್ಲಿ ಒಂದು ಮಹತ್ವಪೂರ್ಣವಾದ "ವಿದ್ಯಾದಾತ" ಎಂಬ ಉಚ್ಚ ಸ್ಥಾನವನ್ನು ಕಲ್ಪಿಸಿರುತ್ತಾರೆ. ಈ ಗೌರವ ಪ್ರಶಂಸೆ ಈ ದಿನ ಯಾವೊಬ್ಬನೂ ಕಾಪಾಡಿಕೊಂಡು ಬರದಿರುವುದು ವಿದ್ಯಾರ್ಥಿಗಳ ಗುಣನಡತೆಯಿಂದ ಸ್ಫುಟವಾಗುತ್ತಿದೆ. ಗುರುವೆನಿಸಿರುವ ಅಧ್ಯಾಪಕರಲ್ಲಿಯೇ ಯೋಗ್ಯ ತತ್ವನಿಷ್ಠ ಚಾರಿತ್ರ್ಯ, ಧಾರ್ಮಿಕ ಕ್ರಿಯಾಶೀಲತೆ ಮತ್ತು ರಾಷ್ಟ್ರ ಪ್ರೇಮ ಇವುಗಳ ಅಭಾವದಿಂದ, ಅವರ ಹಿಂಬಾಲಕರಾದ ಶಿಷ್ಯ ವಿದ್ಯಾರ್ಥಿಗಳೂ ಅನಿಷ್ಠಾವಂತರಾಗಲು ಮುಖ್ಯ ಕಾರಣವಾಗಿರುತ್ತದೆ. ಕೆಲವು ಅಧ್ಯಾಪಕರು ಈ ಚಾರಿತ್ರ್ಯ ಸಂಪನ್ನತೆಯ ಮೂಲೋದ್ದೇಶವನ್ನು ತುಂಬ ಹೊರಟರೆ, ಅವರನ್ನು ಅವಮಾನಿಸಿ, ಹೀನೈಸಿ ಭಂಗಿಸಲು ಪ್ರತಿಯೊಬ್ಬನೂ ಮುಂದಾಗುವುದರಿಂದ ವಿದ್ಯಾರ್ಥಿ ಮತ್ತು ಅಚಾರಿತ್ರ್ಯವಂತ ಅಧ್ಯಾಪಕರಿಗೆ ಹೆಚ್ಚಿನ ಪ್ರತಿಷ್ಠೆ ಸಿಕ್ಕಿರುತ್ತದೆ.

ವಿದ್ಯಾರ್ಥಿ ತಪ್ಪು ಮಾಡುವಾಗ್ಯೆ ಶಿಕ್ಷಿಸದಿದ್ದರೆ, ಆ ಶಿಕ್ಷಣ ಶಿಕ್ಷಣವೆನಿಸಲಾರದು. ಶಿಕ್ಷಿಸಿಯೇ ಶಿಕ್ಷಾವಂತನನ್ನಾಗಿ ಮಾಡುವ ದೀರ್ಘ ಅಭ್ಯಾಸಕ್ಕೆ ಶಿಕ್ಷಣವೆಂದು ಕರೆಯಲಾಗುತ್ತದೆ. ಶಿಕ್ಷಾರ್ಥಿ ತಪ್ಪಿದಾಗ ಕಠಿಣ ಶಿಕ್ಷೆಗೆ ಒಳಪಡಿಸಿದರೇನೇ, ಯೋಗ್ಯ ವಿದ್ಯಾವಂತನಾಗಿ ಮುಂದೆ ಬರಲು ಸಾಧ್ಯವಾಗುತ್ತದೆ. ಕೆಲವು ಕಡೆ ಅಧ್ಯಾಪಕರು ಅಶ್ಲೀಲ ನಡತೆಯ ವಿದ್ಯಾರ್ಥಿಗಳನ್ನು ಶಿಕ್ಷಿಸಿದ್ದಕ್ಕೆ, ಕೊನೆಗೆ ಆ ಶಿಕ್ಷೆ ಕೊಟ್ಟುದಕ್ಕಾಗಿ ವಿದ್ಯಾರ್ಥಿ ಹತ್ತವರ ಕಾಲು ಹಿಡಿದು ನೀರು ಕುಡಿಯಬೇಕಾದ ಪ್ರಸಂಗ ಬಂದಿರುತ್ತದೆ. ಇಂದಿನ ವಿದ್ಯಾಭ್ಯಾಸ ಎಷ್ಟು ದುಃಸ್ಥಿತಿಗೆ ಇಳಿದಿದೆ ಎಂದು ಈ ಘಟನೆಯಿಂದ ಅರ್ಥವಾಗದಿರದು. ಸರಕಾರವು ತತ್ವನಿಷ್ಠ ಮತ್ತು ರಾಷ್ಟ್ರೀಯ ಚಾರಿತ್ರ್ಯ ಸಂಪನ್ನ ಅಧ್ಯಾಪಕರನ್ನು ನಿರ್ಮಿಸಿ, ಅವರಿಗೆ ಪರಿಪೂರ್ಣ ರಕ್ಷಣೆ ಕೊಟ್ಟು, ಮುಂದಿನ ನವ ಜನಾಂಗದ ಪೀಳಿಗೆಗೆ ಬೆಂಬಲ ನೀಡಿ ನಡೆಸಿದರೆ, ಅದರ ಕರ್ತವ್ಯತೆಗೆ ಘನಗೌರವ ಸಲ್ಲುತ್ತದೆ.

### ಸರಕಾರದ ಹೇಳಿಕೆ ಮತ್ತು ವಿದ್ಯಾ ಕೇಂದ್ರದಲ್ಲಿನ ಸತ್ಯತೆ.

ನಮ್ಮ ಸರಕಾರವು ಯೋಗ್ಯ ಜನಾಂಗ ನಿರ್ಮಾಣವಲ್ಲದೆ, ರಾಷ್ಟ್ರದ ಎಲ್ಲಾ ತರದ ಉನ್ನತಿಗಾಗಿ ಶ್ರಮಿಸುತ್ತಿರುವುದು ಬಹಳ ಸಂತೋಷ. ರಾಜಕೀಯದಿಂದ ವಿದ್ಯಾರ್ಥಿ ಮತ್ತು ವಿದ್ಯಾಕೇಂದ್ರಗಳು ದೂರವಿರಬೇಕೆಂದು ಘೋಷಿಸಿರುತ್ತವೆ. ಆದರೆ, ಶಾಲೆಗಳಲ್ಲೇ ರಾಜಕೀಯ
ದ ಮೂಲ ಬೀಜವಾದ ಭಿನ್ನಮತ
ದ್ವೇಷ, ಅಸೂಯೆ ಮತ್ತು ದುಶ್ಚ
ಪೀಠಿಕೆ ಪ್ರಾರಂಭಿಸಿರುವುದು ವ
ವಂಚಿಸುವುದಾಗಿರುತ್ತದೆ. ರಾಜ
ಪಕ್ಷಗಳಲ್ಲಿ ನಡೆಯುವ ಚುನಾ
ಒಂದು ನೋಟ ಮತ್ತು ಅದೇ
ಇಲ್ಲಿ ನಡೆಯುತ್ತಲಿದೆ. ಇದರಿಂದ
ಲೆ ಬಿಟ್ಟೊಡನೆ ತನ್ನಿಂದ ತಾನೇ
ಯದ ಎಲ್ಲಾ ನಡತೆಗಳು ಅವನಲ್ಲಿ
ದಿರಲು ಸಾಧ್ಯವೇ? ಸರಕಾರ ಚ
ಣಾ ಪ್ರಚಾರಕ್ಕಾಗಿ ಈ ವಿದ್ಯಾ
ಮೂಲಕ ಜಾತೀಯ ದ್ವೇಷ,
ದ್ವೇಶ ಮತ್ತು ಸ್ವಧರ್ಮ ದ್ವೇಷ
ಪಸರಿಸುವಂತೆ ಹುಚಿಕೆಯಾಗಿರು
ದು ತಿಳಿಯಬೇಕಾಗುತ್ತದೆ. ಯಾಕ
ಶಾಲೆಯ ನಾಯಕ ಚುನಾವಣೆಗ
ವ ವಿದ್ಯಾರ್ಥಿ, ಶಾಲೆಯ ಸರ್ವಾ
ಉನ್ನತಿಗಾಗಿ, ಯೋಗ್ಯ ನಡತೆಗಳ
ರ್ಶವಂತನಾಗಿದ್ದರೆ, ಅವನ ವಿರುದ್ಧ
ಅನಿಷ್ಠಾವಂತ, ದುರ್ನೀತಿ ನ
ದ್ಯೋತಕದ ಪಂಗಡ ವಿಜಯಿಯಾ
ಮ್ಮ ರಾಷ್ಟ್ರ ಘಾತುಕತನದ ವ
ಮೆಟ್ಟಲಾಗಿರುತ್ತದೆ. ರಾಷ್ಟ್ರವೆಂಬ
ಡದ ಅಡಿಪಾಯದ ಕಲ್ಲೇ ಈ ರೀತಿ
ಕನ್ನು ತುಂಬಿರುವಂತಾದರೆ, ರಾ
ಅಗಾಧ ಸೌಧ ಸ್ಥಿರವಾಗಿ ನಿಲ್ಲುವ
ಕನಸಿನ ಸಾಮ್ರಾಜ್ಯವಾಗುತ್ತದೆ.
ತಿ ಹಲವು ಶಾಲೆಗಳಲ್ಲಿ ಹಲಕೆಲ
ದ್ಯಾರ್ಥಿ, ವಿದ್ಯಾರ್ಥಿನಿಯರು ಹಾಳ
ತ್ತಾರೆ ಮತ್ತು ವಿದ್ಯಾಭ್ಯಾಸ
ಹೋಗಿರುತ್ತದೆ. ಶಾಲಾ ನಾಯಕನ
ನೀತಿವಂತನಾಗಿರುವಾಗ ಸುಶೀಲ
ರ್ಥಿ ಮತ್ತು ವಿದ್ಯಾರ್ಥಿನಿಗಳಿಗೆ
ಲಾರದ ತುತ್ತಾಗಿರುತ್ತದೆ. ಈ ರೀ
ನಾಗರಿಕತನವೆಂದ. ಅಶ್ಲೀಲ ಅವ
ಪಾಠಗಳಿಂದ ಅನಾಗರಿಕ ವಿದ್ಯಾರ್ಥಿ
ನಿರ್ಮಾಣವಾಗುತ್ತಿರುವುದು ಜನತೆ
ತ್ತು ಸರಕಾರ ನಿರ್ದಾಕ್ಷಿಣ್ಯವಾಗಿ
ನಿಸುವುದಗತ್ಯ ಸರಸ್ವತಿಯ ಆರಾಧ
ನದಲ್ಲೇ ಈ ಅಸಮಂಜಸ ಶಿಕ್ಷಣ
ರೆಯುತ್ತಲಿರುವುದು ಸರಸ್ವತಿಯನ್ನು
ರವಿಸಿದಂತಾಗಲಾರದು. ಶಿಕ್ಷಣ ಸಂ
ನಲ್ಲಿ ರಾಜಕೀಯ ನಿರ್ಮಾಣ ವ
ನಮ್ಮ ಗೋಣನ್ನೇ ನಮ್ಮ ಕೈಗೆ ಮು
ಕೊಟ್ಟಂತಾಗುತ್ತದೆ. ಈ ಘನತರ
ಷ್ಟ್ರೀಯ ಜವಾಬ್ದಾರಿಯನ್ನು ಎ
ಪರಿಶೀಲಿಸಬೇಕಾದುದು ನಿರ್ವಿವಾದ
ರುತ್ತದೆ.




ಇದೀಗ ಪ್ರಕಟವಾಗಿದೆ–

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

**ಭಾರತದ ವೀರಾಂಗನೆಯರು**

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.........."ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ.........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ).

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1–75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿ
ವಾರ್ಷಿಕ ಚಂದಾ ರೂ. ೧

ವರ್ಗ-ಊಳಿಗ
ಇತ್ಯಾದಿ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿ, ಫಾರ್ಮುಗಳು
ದೊರೆಯುತ್ತವೆ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

### ಪ್ರಚಾರ ನ್ಯೂನತೆಯೇ

# ವಿದೇಶಗಳಲ್ಲಿ ಹಿಂದೂ ದೇಶದ ಗೌರವ ಕಡಿಮೆಯಾಗಲು ಕಾರಣ

ವಿದೇಶಗಳಲ್ಲಿ ಹಿಂದೂ ದೇಶದ ವಿಚಾರದಲ್ಲಿ ತಿಳಿಯದಿರಲು ಪ್ರಚಾರ ನ್ಯೂನತೆಯೇ ಕಾರಣ. ಈ ಕಾರಣವಾಗಿ ನಮ್ಮ ದೇಶದ ಗೌರವವೂ ಕಡಿಮೆಯಾಗುತ್ತಿದೆ. ಅಲ್ಲದೆ ಪಾಕಿಸ್ತಾನದೊಡನೆ ನಡೆಸಿದ ಈ ನ ಹೋರಾಟವೂ ಕಾರಣವೆಂದು [illegible] ಪಿ. ಎಸ್.ನ ಸಂಪಾದಕರಾದ ಶ್ರೀ ಎಂ.ಪಿ. ರಾಧಾಕೃಷ್ಣರವರು ತಮ್ಮ ಯೂರೋಪಿನ ೬೬ ದಿನಗಳ ಪ್ರವಾಸದ ನ ಅನುಭವಗಳಿಂದ ಮನಗಂಡಿದ್ದಾರೆ.

ಅವರು ನಮ್ಮ ಪ್ರವಾಸದ ಅನುಭವ ವನ್ನು ಸಂಕ್ಷೇಪವಾಗಿ ಹೇಳಿದಾಗ, ವಿದೇಶೀಯರು ನಮ್ಮ ಭಾರತ ದೇಶದ ಎಲ್ಲಾ ವಿಚಾರಗಳನ್ನೂ ಕೂಲಂಕಷವಾಗಿ ತಿಳಿದು ಒಂದು ಭಾವನೆಯನ್ನು ಮಾಡಿಕೊಳ್ಳುವುದರಲ್ಲಿ ಪಾಕಿಸ್ತಾನದ ಧಾಳಿಯು ಒಂದು ವಿಧದಲ್ಲಿ ಅಡಚಣೆಯನ್ನುಂಟು ಮಾಡಿದೆ. ಶ್ರೀ ರಾಧಾಕೃಷ್ಣರವರು ಪಶ್ಚಿಮ ಜರ್ಮನಿ, ಹಾಲೆಂಡ್, ಫ್ರಾನ್ಸ್, ಬೆಲ್ಜಿಯಂ, ಇಟಲಿ ಮತ್ತು ಗ್ರೇಟ್‌ಬ್ರಿಟನ್ ಈ ದೇಶಗಳಲ್ಲಿ ಪ್ರವಾಸ ಮಾಡಿದಾಗ "ನಾವೇ ಧಾಳಿಕಾರರೋ" ಎನ್ನುವ ಅಭಿಪ್ರಾಯವು ಅಲ್ಲಿಯವರಿಗೆ ಬಂದು ನಮ್ಮ ಮೇಲಿನ ವಿಶ್ವಾಸವು ಕಡಿಮೆಯಾಗಿ ಪಾಕಿಸ್ತಾನದ ವಿಷಯದಲ್ಲಿ, ಅವರ ಸಹಾನುಭೂತಿ ಹೆಚ್ಚುತ್ತಿದೆ ಎಂಬುದನ್ನು ಅರಿತಿದ್ದಾರೆ. ಭಾರತ ದೇಶವು ಪಾಕಿಸ್ತಾನದ ಮೇಲೆ ಹೋಗಿ ಧಾಳಿ ಮಾಡಿದ್ದಾಗಿತ್ತೆಂದು ಆ ದೇಶವಲ್ಲಿ ಅಭಿಪ್ರಾಯವಿದೆ. ಅಲ್ಲದೆ ಅರಬ್ ದೇಶಗಳಲ್ಲಿಯೂ ಕೂಡ ಇದೇ ಭಾವನೆಯೇ ಇರುವುದಾಗಿ ಅಭಿಪ್ರಾಯಪಟ್ಟಿದ್ದಾರೆ.

### ವಿದೇಶಗಳಲ್ಲಿ ಕಡಿಮೆ ಪ್ರಚಾರ

ವಿದೇಶಗಳಲ್ಲಿ ನಮ್ಮ ದೇಶವನ್ನು ಕುರಿತ ಪ್ರಚಾರಗಳು ಮತ್ತು ಪ್ರಚಾರ ಸಲಕರಣಾ ವ್ಯವಸ್ಥೆಗಳೂ ಕಡಿಮೆಯಾಗಿರುವುದರ ಜೊತೆಗೆ ಪಾಕಿಸ್ತಾನದ ತೀವ್ರ ಪ್ರಚಾರವೂ, ಈ ಯುದ್ಧ ಕಾಲದಲ್ಲಿ ವಿದೇಶೀಯರಿಗೆ ನಮ್ಮ ಮೇಲಿನ ಸಹಾನುಭೂತಿಯು ಕಡಿಮೆಯಾಗಲು ಕಾರಣವಾಯಿತು. ಇಂಥ ಸನ್ನಿವೇಶಗಳನ್ನು ಕಂಡ ಕಡೆಗಳಲ್ಲೆಲ್ಲಾ ಶ್ರೀ ರಾಧಾಕೃಷ್ಣರವರು ಭಾರತದಲ್ಲಿನ ಮಹತ್ವದ ಪ್ರಜಾಪ್ರಭುತ್ವವನ್ನು ಕುರಿತೂ, ಜಾತಿ ಮತಗಳ ಐಕ್ಯ ಜೀವನವನ್ನು ಕುರಿತೂ ಅಲ್ಲದೆ ವಿಶಾಲ ಭಾರತದಲ್ಲಿ ೫೫ ಮಿಲಿಯನ್ ಮುಸ್ಲಿಂ ಸೋದರರು ಶಾಂತಿ ಸೌಹಾರ್ದಗಳಿಂದ ಜೀವನ ನಡೆಸುತ್ತಿರುವ ಸನ್ನಿವೇಶಗಳನ್ನೂ ಹೃದಯಂಗಮವಾಗಿ ವಿವರಿಸಿದ ಮೇಲೆ ಅಲ್ಲಿನ ಪತ್ರಿಕಾ ಪ್ರತಿನಿಧಿಗಳಿಗೆ ನಮ್ಮ ನಾಡಿನ ನೆಲೆಯೇನೆನ್ನುವುದು ಮನವರಿಕೆಯಾಗಿದೆಯೆಂದೂ ತಿಳಿಸಿದರು.

ನಮ್ಮ ಈ ಸಂಪಾದಕರ ಅನುಭವದಲ್ಲಿ, ವಿದೇಶಗಳಲ್ಲಿನ ಜನರಿಗೆ ನಮ್ಮ ದೇಶದಲ್ಲಿ ೫೫ ಮಿಲಿಯನ್ ಮುಸ್ಲಿಂ ಸೋದರರು ಸೌಖ್ಯದಿಂದ ವಾಸಿಸುತ್ತಿದ್ದಾರೆನ್ನುವ ಸಂಗತಿಯು ತಿಳಿಯದು. ಈ ಪಾಕಿಸ್ತಾನದ ಯುದ್ಧವು ಕೇವಲ ಮತ ಸಂಬಂಧವಾದುದೆಂದೂ, ಇಸ್ಲಾಂ ಮತ್ತು ಹಿಂದೂ ಮತಗಳ ವೈರವೇ ಈ ಘರ್ಷಣೆಗೆ ಕಾರಣವೆಂದೂ ತಿಳಿದಿರುವುದಾಗಿಯೂ ಅಭಿಪ್ರಾಯಪಟ್ಟರು. ಯೂರೋಪಿನಲ್ಲಿ,ನಮ್ಮ ಪ್ರಜಾಸತ್ತಾತ್ಮಕ ಸರಕಾರವು, ಸರ್ವಾಧಿಕಾರಿ ಸರಕಾರವಾದ ಪಾಕಿಸ್ತಾನದೊಡನೆ ಯಾವ ರೀತಿಯ ವರ್ತನೆಯಿದೆ ಎಂಬ ವಿಚಾರವನ್ನು ತಿಳಿಸುವ ಪ್ರಚಾರವನ್ನೂ, ಅದಕ್ಕೆ ಅನುಕೂಲಿಸುವಂತಹ ಸಾರ್ವಜನಿಕ ಸಂಬಂಧವನ್ನೂ ಏರ್ಪಡಿಸಿದಲ್ಲಿ ವಿದೇಶೀಯರಿಗೆ ನಮ್ಮ ಭಾರತದ ವಿಚಾರದಲ್ಲಿ ಸಹಾನುಭೂತಿಯುಂಟಾಗುವುದೆಂದೂ ಶ್ರೀ ರಾಧಾಕೃಷ್ಣರವರು ತಿಳಿಸಿದರು.

### ಬ್ರಿಟನ್ ಪತ್ರಿಕೆಗಳ ನೀತಿ

ಬ್ರಿಟನ್ ಪತ್ರಿಕೆಗಳ ವಿಷಯದಲ್ಲಿಯೂ ಬಿ. ಬಿ. ಸಿ. ಪ್ರಚಾರ ಶಾಖೆಯಲ್ಲಿಯೂ ನಾವು ಒಂದು ವಿಧವಾದ ವ್ಯಂಗ್ಯ ದೃಷ್ಟಿಕೋಣದಿಂದ ನೋಡುವಂತಿದೆ "ನಾನು ಮಾತ್ರ ನಮ್ಮಂತೆ ಪತ್ರಿಕಾ ಸ್ವಾತಂತ್ರ್ಯ ಹೊಂದಿದ ರಾಜ್ಯದ ಆ ಅಭಿಪ್ರಾಯಗಳಿಗೆ ಹೆಚ್ಚು ಗಮನ ಕೊಡುವುದಿಲ್ಲ" ಎಂದರು. ಬ್ರಿಟನರು ಸುಮಾರು ಎರಡು ಶತಮಾನಗಳಿಗೆ ಮೇಲ್ಪಟ್ಟು ನಮ್ಮೊಡನಿದ್ದು, ನಮ್ಮ ಭಾರತವನ್ನು ಕಳೆದುಕೊಂಡೆನೆಂಬ ಭಾವನೆ ಅವರಲ್ಲಿ ಇನ್ನೂ ಹೆಚ್ಚಾಗಿದೆಯೆಂದೂ ನಾವು ಅವರ ಅಭಿಪ್ರಾಯಗಳಿಗೆ, ಪ್ರಚಾರಗಳಿಗೆ ಗಮನ ಕೊಡುವುದು ಅಷ್ಟು ಉತ್ತಮವಲ್ಲವೆಂದೂ ನಮ್ಮಂಥ ಸನಾತನ ಮತ್ತು ಪ್ರಾಜ್ಞತೆಯುಳ್ಳ ರಾಷ್ಟ್ರಕ್ಕೆ ಹಿತವಲ್ಲವೆಂದೂ ಅಭಿಪ್ರಾಯಪಟ್ಟರು.

ವಿದೇಶಗಳಲ್ಲಿ ನಮ್ಮ ದೇಶವನ್ನು ಕುರಿತು ಪ್ರಚಾರವು ಕಡಿಮೆಯಾಗಿರುವ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನೆಂದು ಕೇಳಿದಾಗ, ಶ್ರೀ ರಾಧಾಕೃಷ್ಣರವರು ಸಾಮಾನ್ಯವಾಗಿ ವೈಯಕ್ತಿಕವಾಗಿ ವಿದೇಶಗಳಿಗೆ ಹೋಗಿದ್ದರೂ ಇಂಥ ರಾಜಕೀಯ ಸಂಬಂಧವಾದ ಪ್ರಶ್ನೆಗಳನ್ನು ಕೇಳಿದಾಗ ಭಾರತ ದೇಶದ ರಾಜ ಪ್ರತಿನಿಧಿಗಳೊಡನೆ ಮಾತನಾಡಿದಾಗಲೂ ನಮ್ಮ ದೇಶದ ಪ್ರಚಾರ ಕಾರ್ಯವು ಕಡಿಮೆಯೆಂದೂ, ಸರಿಯಾದ ಅನುಭವಸ್ಥರಿಲ್ಲವೆಂದೂ, ಆರ್ಥಿಕ ಮುಗ್ಗಟ್ಟಿನ ಕೊರತೆಯೆಂದೂ ವಿವರಿಸಿದ್ದಾರೆ.

ಅಲ್ಲದೆ ನಮ್ಮ ಪ್ರಚಾರ ಪ್ರತಿನಿಧಿಗಳಿಗೆ ಸಾಕಷ್ಟು ದೇಶೀಯ ಸಮಾಚಾರ ವಿವರಣೆಗಳು ಸಕಾಲದಲ್ಲಿ ಒದಗದೆ ನಮ್ಮ ದೇಶದ ಪರಿಸ್ಥಿತಿಯ ವಿಚಾರದಲ್ಲಿ ಸಾಕಷ್ಟು ಸಮರ್ಥಿಸಿ ವಿದೇಶೀಯರನ್ನು ಒಪ್ಪಿಸಿ ಅವರ ಸಹಾನುಭೂತಿಯನ್ನು ಗಳಿಸಿಲ್ಲವೆಂದೂ ಈ ಕಾರಣವಾಗಿ ನಮ್ಮ ಪ್ರಚಾರ ಪ್ರತಿನಿಧಿ ಕಾರ್ಯವು ಬಹಳ ಮಟ್ಟಿಗೆ ಕುಂಠಿತವಾಗಿದೆಯೆಂದೂ, ಇದರಿಂದ ನಮ್ಮ ದೇಶೀಯ ವಿಚಾರಗಳನ್ನು ಕೂಲಂಕಷವಾಗಿ ತಿಳಿಯಪಡಿಸಲು ಸಾಧ್ಯವಾಗದೆ ಪಾಕಿಸ್ತಾನದ ಅಪಪ್ರಚಾರಗಳನ್ನು ಎದುರಿಸಿ ಅವರ ಅಭಿಪ್ರಾಯಗಳನ್ನು ಬದಲಿಸಲೂ ಸಾಧ್ಯವಾಗಿಲ್ಲವೆಂದೂ ತಿಳಿಸಿದರು.

### ವಿದೇಶೀ ಪತ್ರಿಕಾ ಪ್ರತಿನಿಧಿಗಳು

ವಿದೇಶೀ ಪತ್ರಿಕೆಗಳಿಗೆ ಈ ಪಾಕಿಸ್ತಾನದ ಧಾಳಿಯ ಕಾಲದಲ್ಲಿ ದೊರೆತ ಸಮಾಚಾರಗಳು ವ್ಯತಿರೇಕವಾಗಿವೆ. ಅವು ನಮ್ಮ ದೇಶಕ್ಕೆ ಎದುರು ಎಂದರೆ ತಪ್ಪಾಗುತ್ತದೆ. ಆದರೂ ನಮ್ಮ ದೇಶದ ಸಮಾಚಾರ ವಾಹಕದ ನ್ಯೂನತೆಯೇ ಮುಖ್ಯ ಕಾರಣವೆನ್ನಬಹುದು. ಇದಕ್ಕೆ ಪ್ರತಿಯಾಗಿ ವಿದೇಶೀಯ ಪತ್ರಿಕಾ ಸಂಪಾದಕರನ್ನು ಆದರ, ಆಹ್ವಾನಿಸಿ ಅವರೇ ಸ್ವತಃ ಬಂದು ಕಣ್ಣಾರೆ ನಮ್ಮ ದೇಶದ ಒಳ ಆಡಳಿತವನ್ನೂ, ಜನರ ವರ್ತನೆಗಳನ್ನೂ ಅಲ್ಲದೆ ನಮ್ಮ ಸರಕಾರದ ಅಭಿಪ್ರಾಯಗಳೇನೆನ್ನುವುದನ್ನೂ ನೋಡಲು ಅವಕಾಶವನ್ನು ಕಲ್ಪಿಸುವುದು ಒಳ್ಳೆಯದೆಂದು ಶ್ರೀ ರಾಧಾಕೃಷ್ಣರವರು ಅಭಿಪ್ರಾಯಪಟ್ಟರು.

ವಿದೇಶೀಯರ ಆರ್ಥಿಕ ಸಹಕಾರವು ಹೇಗಿದೆ? ಎಂದು ಕೇಳಿದಾಗ ಮಾನ್ಯ ಸಂಪಾದಕರು ತಮ್ಮ ಪ್ರವಾಸ ಕಾಲದಲ್ಲಿ ಪಶ್ಚಿಮ ಜರ್ಮನಿಯ ಕೈಗಾರಿಕಾ ಮುಖಂಡರುಗಳೊಡನೆ ನಡೆಸಿದ ಸಂಭಾಷಣೆಯಿಂದ, ವಿದೇಶೀಯರು ನಮ್ಮ ದೇಶದಲ್ಲಿ ತಮ್ಮ ಬಂಡವಾಳವನ್ನು ವಿನಿಯೋಗಿಸಲು ಹಿಂದೆಗೆಯುತ್ತಿರುವುದಾಗಿ ತಿಳಿಯಿತು. ಇದಕ್ಕೆ ಕಾರಣ ಬಂಡವಾಳ ವಿತರಣೆಯಿಂದ ಬಂದ ಲಾಭವನ್ನು ತಮ್ಮ ದೇಶಕ್ಕೊಯ್ಯಲು ಇದ್ದ ಅಡಚಣೆಗಳು. ಇದನ್ನು ಈಚೆಗೆ ಸ್ವಲ್ಪ ಮಟ್ಟಿಗೆ ಸಡಿಲ ಮಾಡಿದ ಮೇಲೆ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿ, ಬಂಡವಾಳವನ್ನು ಹಾಕಲೂ, ಯಾಂತ್ರಿಕ ಸಹಕಾರ ನೀಡಲೂ ಮನಸ್ಸು ಮಾಡುವುದರಲ್ಲಿ ಈ ಪಾಕಿಸ್ತಾನ ಧಾಳಿಯು ಬಂದು ನಮ್ಮ ದೇಶದ ಮೇಲೆ ಅವರಿಗುಂಟಾಗಿದ್ದ ಆಸಕ್ತಿಯು ಮತ್ತೆ ನಶಿಸುತ್ತಿರುವ ಕುರುಹುಗಳವೆಯೆಂದೂ ತಿಳಿಸಿದರು.

### ಭಾರತದ ಭಾವನೆ

ಹಿಂದೂ ದೇಶದ ತಟಸ್ಥ ನೀತಿಯಿಂದ ನಮ್ಮ ದೇಶವು ಪ್ರಪಂಚದ ಶಾಂತಿ ಸ್ಥಾಪನೆಗೆ ಸಹಕಾರಿಯಾಗಿದೆಯೆಂದು ಜರ್ಮನರು ಮನಗಂಡಿದ್ದಾರೆ. ಈ ಶ್ರೇಷ್ಠ ಭಾವನೆಯು ನಾವು ಗೋವಾವನ್ನು ತೆಗೆದುಕೊಂಡಾಗ ಛಿದ್ರವಾಗಿ ಹೋಗಿದೆ. ನಮ್ಮ ನಡವಳಿಕೆಗೂ ನಮ್ಮ ಭಾವನೆಗಳಿಗೂ ಸಂಬಂಧವಿಲ್ಲವೆಂಬ ಅಭಿಪ್ರಾಯವು ಬಂದಂತಿದೆ. ಇದು ಕೇವಲ ನಮ್ಮ ರಾಷ್ಟ್ರೀಯ ಪ್ರತಿನಿಧಿಗಳ ಪ್ರಚಾರ ಲೋಪವೇ ಕಾರಣವೆಂದು ಹೇಳಬಹುದು. ಈಗ ಕಾಶ್ಮೀರ ವಿಚಾರದಲ್ಲಿನ ವಿವಾದ

([illegible]ನೇ ಪುಟ ನೋಡಿ)


ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3



ಶ್ರೀ ಕೆ.ಕೆ. ಶೆಟ್ಟಿ,ಎಂ.ಎಲ್.ಸಿ.,ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

| | |
|---|---|
| ದೇಶ ಭಕ್ತ | 1=25 |
| ಪ್ರೇಮ ವಿಜಯ | 1=00 |
| ಮುಂದಿನ ದೇವರು | 0=25 |
| ವ್ಯಭಿಚಾರಿಣಿ ಯಾರು? | 1=00 |
| ಹೆಂಡ್ತಿ ಗಂಡನಾದರೆ? | 0=25 |
| ಪುರುಷವಧು | 0=25 |
| ಸನ್ಯಾಸಿಯ ಸೋಗಿನಲ್ಲಿ! | 0=75 |
| ಸಂಶಯ ಪಿಶಾಚಿ | 0=75 |
| ಕುಶಲವ | 0=50 |
| ಚಿತ್ರಾಂಗದೆ | 0=60 |

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.


'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

# ಕತ್ತಲೆಯ ಆಫ್ರಿಕೆಯ

## ನಿರಾಶನಾಗಿ ಬೆಳ್
## ಸಂಶೋಧ

ಚಿತ್ರ ೧

ಸ್ಟಾನ್ಲಿ ಮತ್ತು ಲಿವಿಂಗ್‌ಸ್ಟೋನ್ ಎಂಬೆರಡು ಹೆಸರುಗಳು ಯುಗಯುಗಾಂತರದ ತನಕವೂ ಉಳಿಯುವಂತಹವು. ಇವರಿಬ್ಬರೂ ಹೇಗೆ ಒಂದಾದರು ಎಂಬುದು ಇತಿಹಾಸದ ಒಂದು ಮಹತ್ವಪೂರ್ಣ ಕಥೆ. ಏಕೆಂದರೆ, ಹೆನ್ರಿ ಮೋರ್ಟನ್ ಸ್ಟಾನ್ಲಿಯು ಒಬ್ಬ ಅಮೆರಿಕನ್ ಪತ್ರಕರ್ತ—ಮಹಾ ಸಾಹಸಿಕ. ಡಾ| ಲಿವಿಂಗ್ ಸ್ಟೋನ್ ಒರ್ವ ಬ್ರಿಟಿಷ್ ಮಿಶನರಿ. ದೂರ ದೇಶದ ಈ ಇರ್ವರು ಒಂದಾದ ಘಟನೆ ಜಾಗತಿಕ ಮಹತ್ವವನ್ನು ಹೊಂದಿದೆ. ಈ ಸಮ್ಮಿಳನವು ಮಹಾ ಪವಾಡಗಳನ್ನು ಮಾಡಿದೆ.

ಚಿತ್ರ ೨

ಸ್ಟಾನ್ಲಿ ಮುಂದೆ, ಕತ್ತಲೆಯ ಭೂಖಂಡ ಆಫ್ರಿಕೆಯ ಸಂಶೋಧಕರಲ್ಲಿ ಒಬ್ಬನೆನಿಸಿದರೂ ಜನ್ಮದಿಂದ ಅವನು ಬಡವನು. ಎಳೆತನದಲ್ಲಿ ಆತನ ಬದುಕು ಗಂಡಾಂತರವಾಗಿತ್ತು; ದಯನೀಯವಾಗಿತ್ತು. ವೇಲ್ಸಿನಲ್ಲಿ ಗರೀಬ ದಂಪತಿಗಳಿಗೆ ೧೮೪೧ರಲ್ಲಿ ಜನಿಸಿದ ಸ್ಟೇನ್ಲಿಯ ಅಂದಿನ ಹೆಸರು ಜಾನ್ ರಾಲಾಂಡ್ಸ್ ಎಂದಾಗಿತ್ತು. ಹುಡುಗ ಹರೆಯದಲ್ಲಿಯೇ ಆತನು ತನ್ನ ತಾಯಿ ತಂದೆಯರಿಂದ ಬೇರೆಯಾಗಿ ಕರ್ಮಶಾಲೆಯೊಂದರಲ್ಲಿ ಇದ್ದನು. ಬಡತನದ ಕಾರಣದಿಂದ ಅನ್ನದೇವರನ್ನು ಒಲಿಸುವುದೇ ಬಹಳ ಕಠಿನವೆನಿಸಿತ್ತು. ಕರ್ಮಶಾಲೆಯ ನಿರಸ ಜೀವನದ ಪರಿಣಾಮ ಇವನ ಮೇಲಾಗದೆ ಉಳಿಯಲಿಲ್ಲ, ಕ್ರೂರರಾದ ಯಜಮಾನರ ಕಠೋರ ವಾಣಿಗಳು ಅವನ ಕೋಮಲ ಮನಸ್ಸನ್ನು ನೋಯಿಸಿದುವು. ಹೀಗೆ ಪ್ರೀತಿ ಮತ್ತು ತಿಳುವಳಿಕೆಗಳಿಂದ ವಂಚಿತನಾದ ಬಾಲಕ ಸ್ಟಾನ್ಲಿಯು ಎಲ್ಲೆಲ್ಲಿಯೂ ಬೇಸರವನ್ನೇ ಹೊಂದುತಿದ್ದನು. ಅರಸಿಕತೆ ಹಾಗೂ ನೀರಸತೆಗಳು ಆತನಲ್ಲಿ ಬಿಡಾರ ಮಾಡಿದುವು. ಅವನೊಬ್ಬ ಸುಂದರ ಕನಸುಗಳನ್ನು ಕಾಣಲಾರದ ನಿಷ್ಪ್ರಯೋಜಕ ವ್ಯಕ್ತಿಯೆನಿಸಿ ಬಳೆದು ಬರತೊಡಗಿದನು.

ಚಿತ್ರ ೩

ಕರ್ಮ ಶಾಲೆಯ ಬದುಕಿನಿಂದ ಸ್ಟಾನ್ಲಿ ನೊಂದನು; ಬೆಂದನು. ಜಿಗುಪ್ಸೆಗೊಂಡನು. ಇಲ್ಲಿಂದ ಬಿಡುಗಡೆಹೊಂದುವ ದಾರಿಯೇನಾದರೂ ಇದೆಯೋ ಎಂದು ಹಗಲಿರುಳು ಯೋಚಿಸ ತೊಡಗಿದನು. ಕೊಟ್ಟಕೊನೆಗೆ ಆತನ ಇಷ್ಟಾರ್ಥ ಈಡೇರುವ ಸುಸಂದರ್ಭವೊದಗಿತು. ಆತನಿಗೆ ಹದಿನೇಳು ವರ್ಷ ವಯಸ್ಸಾಗುವಷ್ಟರಲ್ಲಿಯೇ ಅವನು ಕರ್ಮಶಾಲೆಯಿಂದ ತಲೆ ತಪ್ಪಿಸಿಕೊಂಡನು. ಅಮೆರಿಕೆಯ ಒಂದು ವ್ಯಾಪಾರಿ ಹಡಗದಲ್ಲಿ ಕ್ಯಾಬಿನ್ ಬಾಯ್ ಆಗಿ ಸೇರಿಕೊಂಡನು. ಆದರೆ, ಆ ಕೆಲಸವನ್ನು ಆತನು ಮೆಚ್ಚಿಕೊಂಡಿರಲಿಲ್ಲ. ಇಂಗ್ಲೆಂಡಿನಿಂದ ಓಡಿ ಹೋಗುವುದು ಮಾತ್ರ ಆತನಿಗೆ ಬೇಕಾಗಿತ್ತು. ಹಾಗಾಗಿ ಆ ಹಡಗವು ಅಮೆರಿಕೆಯ ನ್ಯೂ ಓರ್ಲಿಯನ್ಸ್ ಬಂದರವನ್ನು ತಲಪಿದೊಡನೆಯೇ ಆತನು ಕೆಲಸ ಬಿಟ್ಟು ಹೊಸ ಜಗತ್ತಿನಲ್ಲಿ ತನ್ನ ದಾರಿಯನ್ನು ಅರಸಲು ಹೊರಟು ಹೋದನು. ಆಗ ಅವನ ಬಳಿ ಚಿಕ್ಕಾಸೂ ಇರಲಿಲ್ಲ; ಒಬ್ಬಂಟಿಗನಾದ ಸ್ಟಾನ್ಲಿಯು ಯಾವ ಕುಶಲತೆಯನ್ನೂ ಅರಿತವನಲ್ಲ. ಯಾವ ಉದ್ಯೋಗದಲ್ಲೂ ಅನುಭವವುಳ್ಳವನಲ್ಲ. ಹೀಗೆ ಬರಿಗೈಯಲ್ಲಿ ಬರಿತಲೆಯೊಡನೆ ಉಟ್ಟ ಬಟ್ಟೆಯಲ್ಲಿ ಸ್ಟಾನ್ಲಿ ಅಮೆರಿಕದ ಮಣ್ಣಿನ ಮೇಲೆ ಕಾಲೂರಿದ.

ಚಿತ್ರ ೪

ದೈವವು ಕೆಲವೊಮ್ಮೆ ನಿಷ್ಪ್ರಯೋಜಕರಿಗೂ ಸಹಾಯ ಮಾಡುವುದುಂಟು. ಎಳೆ ಹರೆಯದ ಸ್ಟಾನ್ಲಿಯ ಮೇಲೆ ದೈವಾನುಗ್ರಹವಾಯಿತು. ಜೀವನೋಪಾಯಕ್ಕಾಗಿ ಅತ್ತಿತ್ತ ತಿರುಗಾಡುತಿದ್ದ ಸ್ಟಾನ್ಲಿಯು ಹೆನ್ರಿ ಮೋರ್ಟನ್ ಸ್ಟಾನ್ಲಿಯು ಯನ್ನು ಭೆಟ್ಟಿಯಾದನು. ಇವನು ಪ್ರಗತಿಗಾಮಿ ವ್ಯಾಪಾರಿಯಾಗಿದ್ದನು. ಯಾವುದಕ್ಕೂ ಕಡಿಮೆಯಿರಲಿಲ್ಲ. ಆದರೆ, ಅಪುತ್ರವಂತನಾಗಿದ್ದನು. ಹೆನ್ರಿಯು ತನ್ನತ್ತ ಬಂದ ಯುವಕನನ್ನು ಕಂಡು ಪ್ರಭಾವಿತನಾದನು. ದೈವವೇ ಈತನನ್ನು ತನ್ನತ್ತ ಕಳಿಸಿತೆಂದು ಭಾಸವಾಯಿತವನಿಗೆ. ಕೂಡಲೇ ಹುಡುಗನನ್ನು ಸ್ವೀಕರಿಸಿದನು. ಅವನಿಗೆ ತನ್ನ ಹೆಸರನ್ನೂ ಕೊಟ್ಟನು. ಉದ್ಯೋಗವೂ ದೊರೆಯಿತು. ಅನಾಥನೀಗ ಸನಾಥನಾದನು. ಇಲ್ಲಿ ಸುಖದಿಂದಿರತೊಡಗಿದನು.

ಚಿತ್ರ ೫

ಸ್ಟಾನ್ಲಿಯ ಯಜಮಾನ ಸ್ವೀಕೃತ ಪಿತನು ವ್ಯತ್ಯ ಮುಖನಾದ ಬಳಿಕ ಮತ್ತೊಂದು ಸಮಸ್ಯೆ ಎದುರು ಬಂತು. ಆತನ ವ್ಯಾಪಾರೋದ್ಯಮವನ್ನು ಮಾರಿದರು. ಈಗ ಸ್ಟಾನ್ಲಿಯು ಉದರ ನಿಮಿತ್ತವಾಗಿ ಬೇರೊಂದು ದಾರಿಯನ್ನು ಹುಡುಕಲೇ ಬೇಕಾಯಿತು. ಆತನು ಈ ಹೊತ್ತಿನಲ್ಲಿ ಬರವಣಿಗೆಯಲ್ಲಿ ಆಸಕ್ತಿ ಹೊಂದಿದನು. ಆದುದರಿಂದ ಸ್ವಾಭಾವಿಕವಾಗಿ ಅವನ ಮನಸ್ಸು ಪತ್ರಿಕೋದ್ಯಮದತ್ತ ಸರಿಯಿತು. ಪಶ್ಚಿಮದ ಹಲವಾರು ಸಮಾಚಾರ ಪತ್ರಗಳೊಡನೆ ವ್ಯವಸ್ಥೆ ಮಾಡಿಕೊಂಡು ಕಥೆಗಳನ್ನು ಕಳಿಸ ತೊಡಗಿದನು. ಮೊದ ಮೊದಲಿಗೆ ಅವನ ಬರವಣಿಗೆಯು ಬಹು ಬರಹವಾಗಿತ್ತು. ಆದರೆ, ಪರಿಶ್ರಮ ಮತ್ತು ಸಾಧನೆಗಳು ಅವನನ್ನು ಉತ್ತಮ ಬರಹಗಾರನನ್ನಾಗಿ ಮಾಡಿದುವು.

ಚಿತ್ರ ೬

ಪ್ರಾದೇಶಿಕ ವರದಿಗಾರನಾಗಿಯೂ ... ದ್ದ ಸ್ಟಾನ್ಲಿಯು ಉತ್ತಮ ವರ್ಗದ ವರದಿಗಾರನೆನಿಸಿದನು. ಅಮೆರಿಕೆಯಲ್ಲಿ ಆತನನ್ನು ಸರಿಗಟ್ಟುವವರು ಆ ಸಮಯದ ಯಾರೂ ಇರಲಿಲ್ಲವೆಂದರೂ ತಪ್ಪಾಗದು. ೧೮೬೯ರಲ್ಲಿ ಅವನು ನ್ಯೂಯಾರ್ಕಿಗೆ ತೆರಳಿದನು. 'ನ್ಯೂಯಾರ್ಕ್ ಹೆರಾಲ್ಡ್' ಪತ್ರಿಕೆಯ ಪ್ರಕಾಶಕ ಜೇಮ್ಸ್ ಗಾರ್ಡನ್ ಬೆನ್ನೆಟ್‌ರನ್ನು ಭೆಟ್ಟಿ ಮಾಡಿದನು. ಜಾಗತಿಕ ವರದಿಗಾರನಾಗುವ ತನ್ನ ಹಂಬಲವನ್ನು ಅವರ ಮುಂದೆ ತೋಡಿ ಕೊಂಡನು. ನನ್ನನ್ನು ನೌಕರಿಗೆ ಸೇರಿಸಿ ಕೊಂಡಲ್ಲಿ, ಸಂಚಾರದ ವೆಚ್ಚವನ್ನು ತಾನೇ ಕರುವುದಾಗಿಯೂ ತಿಳಿಸಿದನು. ಇಂತಹ ಉತ್ಸಾಹಿಯನ್ನು ಕಳೆದುಕೊಳ್ಳಲು

೧

೨

೩

೭

೮

೯

೧೦

# ಲೆ ಹೊಸ ಬೆಳಕು

## ಸ್ಟ್ಯಾನ್ಲಿಯು ಮಹಾ
## ಸಾಹಸಿಕ ಕಥೆ

ಟ್ ಸಿದ್ಧನಾಗಲಿಲ್ಲ; ಸ್ಟ್ಯಾನ್ಲಿಯನ್ನು ಸ್ತ್ರೀ ಸೇರಿಸಿಕೊಂಡು, ಅಬಿಸೀನಿಯಾ ಹೊರಟ ಬ್ರಿಟಿಷ್ ಸಂಶೋಧಕ ತಂ ಡೊಂದಿಗೆ ಕಳಿಸಿದನು

ಚಿತ್ರ ೭

ಸಾಗರೋತ್ತರ ಪ್ರದೇಶದಲ್ಲಿ ತನ್ನ ರ್‍ಯ ತತ್ಪರತೆಯಿಂದ ಸ್ಟ್ಯಾನ್ಲಿಯು ಸಂ ,ರ್ಣ ಯಶ ಪಡೆದನು. ಇದರಿಂದ ರಾಲ್ಡ್' ಆತನಿಗೆ ಹೊಸತೊಂದು ಕೆಲ ಸನ್ನು ಕೊಟ್ಟಳು. ಮಧ್ಯ ಆಫ್ರಿಕೆಯ ಜ್ಞಾತ ಕಾಡುಗಳಿಗೆ ಬ್ರಿಟಿಷ್ ಮಿಶನರಿ | ದೇವಿಡ್ ಲಿವಿಂಗ್‌ಸ್ಟೋನ್ ಹೊರ ಹೋಗಿದ್ದನು. ಎರಡು ವರ್ಷಗಳಿಂದ ಆತನ ಪತ್ತೆಯೇ ದೊರೆತಿರಲಿಲ್ಲ. ನನ್ನು ಹುಡುಕುವ ಮತ್ತು ಅವನ ಸಾರವನ್ನು ತಿಳಿದು ವರದಿ ಮಾಡುವ ನ ಕಾರ್ಯವನ್ನು ಈಗ ಹೆರಾಲ್ಡ್ ಸ್ಟ್ಯಾನ್ಲಿಗೆ ಒಪ್ಪಿಸಿಕೊಟ್ಟಿತು. ಹೆಚ್ಚಿನವರು ತ್ತಿರುವನೆಂದು ಭಾವಿಸಿದ್ದ ಲಿವಿಂಗ್ ಸ್ಟೋನ್‌ನನ್ನು ಅರಸಲು ೧೮೭೧ರ ಮಾ ೯ ೨೧ನೆಯ ದಿನಾಂಕ ಸ್ಟ್ಯಾನ್ಲಿ ಆಫ್ರಿ ಯ ಪೂರ್ವ ಕರಾವಳಿಯ ಬಗಮೊ ಯೋವಿನಿಂದ ತನ್ನ ಕಾರ್ಯವನ್ನು ಆರಂಭಿಸಿದನು.

ಚಿತ್ರ ೮

ಸ್ಟ್ಯಾನ್ಲಿಯ ಪಾದಯಾತ್ರೆ ಭಯಾನಕವಾಗಿತ್ತು. ಮಳೆನೀರಿನಿಂದ ದಾರಿ ಜಾರುತಿತ್ತು; ಕಾಡುಗಳಲ್ಲಿ ದಾರಿಕೂಡ ಇರಲಿಲ್ಲ. ಕೆಸರು-ಹುಲ್ಲು, ಬಂಡೆ ಮೊದಲಾದುವುಗಳಿಂದ ತುಂಬಿದ ನೆಲದಲ್ಲಿ ಎಡೆಬಿಡದೆ ೨೩೬ ದಿನ ನಡೆದು ನಡೆದು ಗೊತ್ತುಗುರಿಯಿಲ್ಲದೆ ಸಾಗಿದನು. ಅವನು ನಡೆದ ದಾರಿ ಸುಮಾರು ೭೫೦ ಮೈಲಿಗಳು. ನಡುದಾರಿಯಲ್ಲೇ ಮಲೇರಿಯಾ ಅವನನ್ನು ಕಾಡಿತು. ಆದರೂ ತನ್ನ ಧ್ಯೇಯದಿಂದ ತಿಲಮಾತ್ರವಿಚಲಿತನಾಗದೆ ಸ್ಟ್ಯಾನ್ಲಿ ಗುರಿಸೇರಿ ತನ್ನ ರೋಮಾಂಚಕವಾದ ಪಾದ ಯಾತ್ರೆಯಲ್ಲಿ ಯಶಗಳಿಸಿದನು. ಬೆಲ್ಜಿಯನ್ ಕಾಂಗೋದ ಟಾಂಗನೀಕ ಸರೋವರದ ದಂಡೆಯಲ್ಲಿ ಜೀವಂತ ಡಾ| ಲಿವಿಂಗ್ ಸ್ಟೋನನನ್ನು ಸ್ಟ್ಯಾನ್ಲಿ ಭೆಟ್ಟಿಯಾದನು. "ಡಾ| ಲಿವಿಂಗ್ ಸ್ಟೋನ್ ಎಂದು ನಾನು ಊಹಿಸಲೆ?" ಎಂಬುದೇ ಆತನ ಮುಖದಿಂದ ಹೊರಟ ಸಂತೋಷದ ನುಡಿಯಾಗಿತ್ತು. ಇದು ಇಂದಿಗೂ ಇತಿಹಾಸದ ಪ್ರಖ್ಯಾತ ಉದ್ಧರಣವಾಗಿ ಉಳಿದಿದೆ.

ಚಿತ್ರ ೯

ಸಘನ ಅರಣ್ಯದಲ್ಲಿ ಏಕಾಕಿಯಾಗಿ ಡಾ| ಲಿವಿಂಗ್ ಸ್ಟೋನ್ ಮಾಡಿದ ಮಹಾ ಕಾರ್ಯ ಮತ್ತು ತೋರಿಸಿದ ಅಪ್ರತಿಮ ಸಾಹಸಗಳನ್ನು ಸ್ಟ್ಯಾನ್ಲಿ ಸಿಮಿಷಾರ್ಧದಲ್ಲಿಯೇ ಮೆಚ್ಚಿಕೊಂಡನು. ಲಿವಿಂಗ್ ಸ್ಟೋನ್ ತನ್ನ ತಂಡದೊಂದಿಗೆ ಸ್ವಯಂ ಪ್ರೇರಣೆಯಿಂದ ಕಾರ್ಯತತ್ಪರನಾಗುವನು. ಜಗತ್ತಿನ ಪ್ರಶಂಸೆ- ನಿಂದೆಗಳ ಗೊಡವೆ ಆತನಿಗಿರಲಿಲ್ಲ. ಹಾಗಾಗಿ ಸ್ಟ್ಯಾನ್ಲಿಯು ಹೆರಾಲ್ಡ್‌ನ ಹಣವನ್ನು ಸುಮ್ಮನೆ ಹಾಳು ಮಾಡುತ್ತಾನೆ ಎಂದವನು ಅಸಮಾಧಾನ ವ್ಯಕ್ತ ಪಡಿಸಿದನು. ಅದೇನೇ ಇದ್ದರೂ ಸ್ಟ್ಯಾನ್ಲಿಯ ಮನಸ್ಸು ಪ್ರಸನ್ನವಾಗಿತ್ತು. ಅವನು ಡಾ| ಲಿವಿಂಗ್‌ಸ್ಟೋನ್ ಸ್ವಯಂಸ್ಫೂರ್ತಿಯಿಂದ ಮಾಡುತ್ತಿರುವ ಕಾರ್ಯಗಳನ್ನು ಲೋಕಕ್ಕೆ ತಿಳಿಯಪಡಿಸಲು ಬಯಸುತಿದ್ದನು. ಇಬ್ಬರೂ ಕೆಲವೇ ನಿಮಿಷಗಳಲ್ಲಿ ಬಹುಕಾಲದ ಗೆಳೆಯರಾದರು.

ಚಿತ್ರ ೧೦

ಸ್ಟ್ಯಾನ್ಲಿ ಲಂಡನ್ನಿನಲ್ಲಿ ಬಂದಿಳಿದನು. ಅಲ್ಲಿ ತಾನು ಡಾ| ಲಿವಿಂಗ್ ಸ್ಟೋನನ್ನು ಕಂಡಿರುವುದಾಗಿಯೂ ಆತನ ಆರೋಗ್ಯ ಚೆನ್ನಾಗಿಲ್ಲವೆಂಬುದಾಗಿಯೂ ಆತನಿಗೆ ಸಹಾಯ ಧನದ ಆವಶ್ಯಕತೆ ಇರುವುದಾಗಿಯೂ ಹೊರಗೆಡಹಿದಾಗ ಯಾರೂ ನಂಬಲಿಲ್ಲ. ಮಿಥ್ಯಾವಾದಿ ಎಂಬ ಉಪನಾಮಕ್ಕೆ ಪಾತ್ರನಾಗಬೇಕಾಯಿತು. ಇದಕ್ಕೆ ಕಾರಣವೂ ಇತ್ತು. ಡಾ| ಲಿವಿಂಗ್ ಸ್ಟೋನನನ್ನು ಹುಡುಕಲು ಬ್ರಿಟಿಷ್ ತಂಡವೂ ಬಂದು ಹೋಗಿತ್ತು. ಆದರೆ, ಅದು ಬರಿಗೈಯಿಂದ ಮರಳಿತ್ತು. ಹಾಗಿರುವಾಗ ಅಮೆರಿಕನ್ ಪತ್ರಿಕಾ ಕರ್ತನೊಬ್ಬ ತಾನು ಕಂಡಿದ್ದೇನೆಂಬುದನ್ನು ನಂಬಲು ಅವರೇನು ಅಭಿಮಾನ ಹೀನರೇನು? ಮುಂದೆ ಲಿವಿಂಗ್‌ಸ್ಟೋನ್‌ನ ಒಂದು ಪತ್ರ ಅವನ ಮರಣಾನಂತರ ಊತಸಿಗೆ ಸಿಕ್ಕಿತು. ಲಿವಿಂಗ್‌ಸ್ಟೋನ್‌ನ ಕುಟುಂಬದವರಿಂದ ಸತ್ಯ ನಿವೇದನೆ-ಇವೆಲ್ಲವೂ ಸ್ಟ್ಯಾನ್ಲಿಯ ಪಕ್ಷಕ್ಕೆ ಬೆಂಬಲವಿತ್ತುವು.

ಚಿತ್ರ ೧೧

ಸ್ಟ್ಯಾನ್ಲಿ ಪ್ರಸಿದ್ಧನಾದನು. ಆದರೆ, ಲಿವಿಂಗ್‌ಸ್ಟೋನ್ ಮತ್ತವನ ಸಾಧನೆಗಳು, ವಿಚಿತ್ರ ಆಫ್ರಿಕೆ ಆತನ ಮೇಲೆ ಅದ್ಭುತ ಪ್ರಭಾವ ಬೀರಿದುವು. ಈ ಅನುಪಮ ಪತ್ರಿಕೋದ್ಯಮಿಯು ಕೀರ್ತಿಯ ಗಂಟಲನ್ನು ಪಾದತಳದಲ್ಲಿ ಇಕ್ಕಿ ಮೆಟ್ಟಿದನು. ಹಿಂದಿನ ಮಿಶನರಿ ಮಾಡುತ್ತಿದ್ದ ಕಾರ್ಯವನ್ನು ಮುಂದುವರಿಸುವ ಉದ್ದೇಶದಿಂದ ವರ್ಷಾರಣ್ಯಗಹನಕ್ಕೆ ತೆರಳಲು ನಿರ್ಧರಿಸಿದನು. ಕತ್ತಲೆಯ ಕಾಡುಗಳ ಮಧ್ಯೆ ಹರಿಯುವ ಕಾಂಗೊ ನದಿಯ ದಡವನ್ನು ಮೊತ್ತ ಮೊದಲು ಸೇರಿದವನೇ ಸ್ಟ್ಯಾನ್ಲಿ!

ಚಿತ್ರ ೧೨

ಅವನು ಅಲ್ಬರ್ಟ್ ಸರೋವರದ ದಕ್ಷಿಣಕ್ಕಿರುವ "ರುವೆನ್ ಜೋರಿ" ಪರ್ವತಾವಳಿಯನ್ನು ಹುಡುಕಿದನು. ಇದರ ಅತ್ಯುನ್ನತ ಶಿಖರ ೧೩ ಸಾವಿರ ಅಡಿ ಎತ್ತರವಿದೆ. ಇದನ್ನು ಸ್ಟ್ಯಾನ್ಲಿ ಪಿಲ್ಲೆ ಎಂದು ನಾಮಕರಣ ಮಾಡಿದನು, ತನ್ನ ಹೆಸರನ್ನು. ತನ್ನ ಜೀವಿತಾವಧಿಯಲ್ಲಿ ಸ್ಟ್ಯಾನ್ಲಿ ಅನೇಕ ತರಹದ ಕಷ್ಟಕಾರ್ಪಣ್ಯಗಳನ್ನು ಸಹಿಸಿಕೊಂಡು ಮೂರು ಸಂಶೋಧನಾ ಯಾತ್ರೆ ಕೈಗೊಂಡನು. ಈ ನಡುವೆ ಆತನನ್ನು ಮಲೇರಿಯಾವು ಕಾಡುತಿತ್ತು. ಆರೋಗ್ಯವು ದಿನದಿಂದ ದಿನಕ್ಕೆ ಕೆಡುತ್ತ ಬರುತಿತ್ತು.

ಚಿತ್ರ ೧೩

ಸ್ಟ್ಯಾನ್ಲಿಯ ಆಫ್ರಿಕೆಯ ಜ್ಞಾನವನ್ನು ಜಗತ್ತಿಗೆ ಮಾಡಿಕೊಟ್ಟನು. ಅಧಿಕಾರ

(ಹದಿನೂರನೇ ಪುಟ ನೋಡಿರಿ)

೮

೯

೭

೧೨

೧೩




೧೪

೧೫



ನಮ್ಮನ್ನು ಕಾಡುವ

# ಸಮಸ್ಯೆಯ ಪರಿಹಾರ ಮಾರ್ಗಗಳು

ಬರೆದವರು:
ಶ್ರೀ ಎನ್. ವಿ. ರಮಣ

ಈಗ ನಮ್ಮ ಮುಂದಿರುವ ಅತಿ ಮುಖ್ಯವಾದ ಸಮಸ್ಯೆಯೆಂದರೆ ಆಹಾರ ಸಮಸ್ಯೆ ಆಗಿದೆ. ನಾವು ಈಗ ೨೦ನೇಯ ಶತಮಾನದ ಹೊಸ ವಿಜ್ಞಾನ ಯುಗದಲ್ಲಿದ್ದೇವೆ ಅನೇಕ ವಿಧದಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆ ಎಂದು ಹೆಮ್ಮೆ ಪಡಬಹುದು. ಆದರೆ ಮಾತ್ರ ನಾವು ಹಸಿವಿನ ಬಾಧೆಯಿಂದ ಪಾರಾಗಿಲ್ಲ. ಇಂದು ಹಸಿವು ನಮ್ಮ ಮೇಲೆ ಧಾಳಿ ನಡೆಸುತ್ತಾ ಇದೆ. ಇದು ಬಹಳ ಆಶ್ಚರ್ಯಕರ ಸಂಗತಿ. ನಮ್ಮ ಜೀವನದ ಸುಖಸಾಧನಗಳು ದಿನದಿಂದ ದಿನಕ್ಕೆ ಅಭಿವೃದ್ಧಿಯಾದರೂ ಶೇಕಡ ೬೦ ಜನರು ಅರೆ ಹೊಟ್ಟೆಯಿಂದ ಜೀವಿಸುತ್ತಿದ್ದಾರೆ ಎಂದು ಹೇಳಿದರೆ ಅದು ಆತಿಶಯೋಕ್ತಿಯ ಮಾತಲ್ಲ.

ನಮ್ಮ ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಜನಸಂಖ್ಯೆ ಏರುತ್ತಾ ಹೋಗುತ್ತದೆ. ಆದರೆ ಕೃಷಿ ಮಾಡುವ ಭೂಮಿ ಮಾತ್ರ ಹೆಚ್ಚುತ್ತಿಲ್ಲ. ಇದೇ ರೀತಿ ಜನಸಂಖ್ಯೆ ಏರುತ್ತಾ ಹೋದರೆ ಆಹಾರ ಅಲ್ಲದ ಇನ್ನೂ ಅನೇಕ ರೀತಿಯ ಸಮಸ್ಯೆಗಳು ಉದ್ಭವಿಸ ಬಹುದು. ಆದುದರಿಂದಾಗಿ ನಾವು ಆಹಾರ ಸಮಸ್ಯೆಯ ವಿಚಾರವಾಗಿ ಜಾಗ್ರತೆ ವಹಿಸ ಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಮ್ಮ ದೇಶದಲ್ಲಿರುವ ರೈತರು ಬಡವರಾದ ಕಾರಣ ಅವರಿಗೆ ಆಧುನಿಕ ಕ್ರಮಗಳಿಂದ ಕೃಷಿ ಮಾಡಲು ಸಾಧ್ಯವಿಲ್ಲ. ಹೊಸ ಹೊಸ ಉಪಕರಣಗಳನ್ನು ಕೊಂಡುಕೊಳ್ಳಲು ಹಣವಿರುವುದಿಲ್ಲ.

ನಮ್ಮ ದೇಶದ ಅಸಂಖ್ಯ ಜನ ಕೃಷಿ ಮಾಡಿ ಜೀವಿಸುತ್ತಾರೆ. ಭೂಹಿಡುವಳಿಗಳು ತೀರ ಚಿಕ್ಕದಾಗಿರುವುದರಿಂದಲೂ ನೀರಿನ ಸೌಕರ್ಯವಿಲ್ಲದೆ ಇರುವುದರಿಂದಲೂ ರೈತರು ಯೋಗ್ಯ ರೀತಿಯಲ್ಲಿ ಕೃಷಿ ಮಾಡುತ್ತಿಲ್ಲ. ನಮ್ಮ ಭಾರತದಲ್ಲಿ ಅನೇಕ ದೊಡ್ಡ ದೊಡ್ಡ ನದಿಗಳಿವೆ. ಈ ನದಿಗಳಿಗೆ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ಆ ಮೂಲಕ ನೀರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೊಂಡು ಹೋಗಿ ವ್ಯವಸಾಯ ಮಾಡಲು ಸಾಧ್ಯವಿದೆ. ಅನೇಕ ಬಂಜರು ಸ್ಥಳವನ್ನು ಯೋಗ್ಯ ಕೃಷಿ ಕ್ಷೇತ್ರವನ್ನಾಗಿ ಮಾರ್ಪಡಿಸ ಬಹುದು. ಭೂಮಿಯನ್ನು ಫಲವತ್ತಾಗಿ ಇಡಲು ಇರುವ ಕೃತಕ ಗೊಬ್ಬರವನ್ನು ಉಪಯೋಗಿಸಿ ಉತ್ಪತ್ತಿಯನ್ನು ಹೆಚ್ಚಿಸಬಹುದು. ಬೇರೆ ಬೇರೆ ರೀತಿಯ ಯಂತ್ರಗಳ ಸಹಾಯದಿಂದ ಎತ್ತರವಾದ ಸ್ಥಳಗಳನ್ನೂ ಕೃಷಿಕ್ಷೇತ್ರವನ್ನಾಗಿ ಏರ್ಪಡಿಸ ಬಹುದು. ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಸಂಗ್ರಹಿಸಿ ವ್ಯವಸಾಯ, ವಿದ್ಯುತ್ ಉತ್ಪಾದನೆ ಅಲ್ಲದೆ ಇನ್ನೂ ಬೇರೆ ಬೇರೆ ಕಾರ್ಯಗಳಿಗೆ ಉಪಯೋಗಿಸಿಕೊಳ್ಳ ಬಹುದು. ಇದರಿಂದಾಗಿ ಮಳೆ ಸಕಾಲಕ್ಕೆ ಬಾರದಿದ್ದರೂ ವ್ಯವಸಾಯದ ಕೆಲಸವನ್ನು ಮುಂದುವರಿಸ ಬಹುದು. ಲಕ್ಷಗಟ್ಟಲೆ ಕಿಲೋವಾಟ್ ವಿದ್ಯುದುತ್ಪಾದನೆ ಮಾಡಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡ ಬಹುದು.

ರೈತರು ಉತ್ತಮ ಬೀಜವನ್ನು ಉಪಯೋಗಿಸಿ ಉತ್ಪತ್ತಿಯನ್ನು ಹೆಚ್ಚಿಸ ಬಹುದು. ಬಿಡುವಿನ ಸಮಯದಲ್ಲಿ ರೈತರು ಹಣ್ಣು, ತರಕಾರಿಗಳನ್ನು ಬೆಳೆಸಿ ಹೆಚ್ಚು ಉತ್ಪತ್ತಿಯನ್ನು ಪಡೆಯ ಬಹುದು. ನವೀನ ಪದ್ಧತಿಗಳಿಂದ ತಳಿಗಳನ್ನು ಉತ್ತಮ ಪಡಿಸಿ ಹೆಚ್ಚು ಹಾಲು ಹಾಗೂ ಮಾಂಸ ಇವುಗಳನ್ನು ಒದಗಿಸುವಂತೆ ಮಾಡಬಹುದು. ಕೋಳಿ ಸಾಕಣೆ, ಜೇನು ಸಾಕಣೆ ಮೊದಲಾದ ಕೆಲಸಗಳನ್ನು ಕೈಗೊಂಡು ಹೆಚ್ಚು ಪ್ರಮಾಣದಲ್ಲಿ ಶುದ್ಧವಾದ ಮೊಟ್ಟೆಗಳು ಹಾಗೂ ಜೇನು ತುಪ್ಪ ದೊರೆಯುವಂತೆ ಮಾಡ ಬಹುದು. ಬೆಳೆದ ಆಹಾರ ವಸ್ತುಗಳನ್ನು ಸರಿಯಾದ ಕ್ರಮದಲ್ಲಿ ಶೇಖರಿಸಿಟ್ಟು ಎಲ್ಲರಿಗೂ ಹಂಚಲು ಸಾಧ್ಯವಾಗುವುದು.

ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣಾ ಯೋಜನೆ ದೇಶದಲ್ಲೆಲ್ಲಾ ಸ್ಥಾಪನೆಯಾಗಿವೆ. ರೈತನಿಗೆ ಸಹಕಾರವನ್ನು ಕೊಡುತ್ತಾ ಇವೆ. ಚಿಕ್ಕ ಚಿಕ್ಕ ಹಿಡುವಳಿಗಳನ್ನು ಒಂದುಗೂಡಿಸಿ ಸಹಕಾರಿ ಸಂಘಗಳ ಸಹಾಯದಿಂದಾಗಿ ಸಾಗುವಳಿ ಮಾಡಬಹುದು. ಇದಕ್ಕಾಗಿಯೇ ಸಹಕಾರ ಸಂಘಗಳ ಸ್ಥಾಪನೆಯಾಗಿದೆ. ರೈತರು ಇಂತಹ ಸಂಘಗಳಿಗೆ ಸೇರಿ ಉತ್ಪಾದನೆಗಳನ್ನು ಹೆಚ್ಚಿಸಿಕೊಳ್ಳಬಹುದು. ಇದರಿಂದಾಗಿ ಅವರ ಶ್ರಮಕ್ಕೆ ಸರಿಯಾದ ಫಲ ದೊರೆಯುವುದು. ಇಷ್ಟು ನಮ್ಮ ಸಾಧನ ಸಂಪತ್ತನ್ನು ಅಭಿವೃದ್ಧಿ ಮಾಡಿದರೂ ನಮ್ಮ ಜನಸಂಖ್ಯೆಯು ಮಿತಿಮೀರುತ್ತಿದೆ. ಆಹಾರ ಸಮಸ್ಯೆ ಪರಿಹಾರವಾಗಬೇಕಾದರೆ ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸ ಬೇಕು. ಪ್ರತಿಯೊಂದು ಕುಟುಂಬದಲ್ಲಿಯೂ ಹುಟ್ಟುವ ಮಕ್ಕಳ ಸಂಖ್ಯೆಯನ್ನು ಒಂದು ಮಿತಿಯಲ್ಲಿ ಇಡುವುದು ಕುಟುಂಬ ಯೋಜನೆಯ ಮುಖ್ಯ ಗುರಿ. ದೇಶದಲ್ಲಿರುವ ಎಲ್ಲಾ ಕುಟುಂಬಗಳಲ್ಲೂ ಮಕ್ಕಳ ಸಂಖ್ಯೆಯು ಒಂದು ಮಿತಿಯಲ್ಲಿದ್ದರೆ ಆಗ ದೇಶದ ಜನಸಂಖ್ಯೆಯು ತಾನಾಗಿಯೇ ಒಂದು ಮಿತಿಯಲ್ಲಿರುತ್ತದೆ. ಜನರ ಜೀವನ ಮಟ್ಟ ಏರುತ್ತಾ ಹೋಗುತ್ತದೆ. ಈ ಯೋಜನೆಗೆ ಅನುಕೂಲವಾದ ಯೋಗ್ಯ ಕಾರ್ಯಕ್ರಮವನ್ನು ಕೈಗೊಳ್ಳಲು ನಮ್ಮ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ತುಂಬಾ ಹಣವನ್ನು ಖರ್ಚು ಮಾಡುತ್ತಿದೆ. ಕುಟುಂಬ ಯೋಜನೆಯ ಬಗ್ಗೆ ಯೋಗ್ಯ ಸಲಹೆ ಸೂಚನೆಗಳನ್ನು ಹಳ್ಳಿ ಹಳ್ಳಿಯ ಮೂಲೆ ಮೂಲೆಗಳಲ್ಲಿರುವ ಜನತೆಗೆ ಕೊಡಬೇಕು. ಆಗ ಜನರಲ್ಲಿರುವ ಮೂಢನಂಬಿಕೆಗಳು ಹೋಗಿ ಅವರು ಕುಟುಂಬ ಯೋಜನೆಗೆ ಪ್ರೋತ್ಸಾಹ ಕೊಡುತ್ತಾರೆ. ದೇಶವು ಅಭಿವೃದ್ಧಿ ಪಥದಲ್ಲಿ ಮುಂದುವರಿಯ ಬೇಕಾದರೆ ವಿದ್ಯಾವಂತರಿಗೆ ಬುದ್ಧಿವಂತರಿಗೆ ಹಾಗೂ ಶ್ರೀಮಂತರಿಗೆ ತುಂಬಾ ಮಕ್ಕಳು ಹುಟ್ಟಬೇಕು. ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದವರಿಗೆ ಕಡಿಮೆ ಮಕ್ಕಳು ಹುಟ್ಟಬೇಕು. ಈ ಎಲ್ಲಾ ವಿಧಾನಗಳಿಂದ ನಮ್ಮ ಭಾರತದ ಆಹಾರ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿದೆ.


## ಉಪಯುಕ್ತವಾದ ಕೆಲವು ಪುಸ್ತಕಗಳು

| | | ರೂ. ನ. |
|---|---|---|
| ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ | (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ) | 1=50 |
| ನಡುಹಗಲಿನ ಕಗ್ಗತ್ತಲೆ | (ಅನು: ಕು. ಶಿ. ಹರಿದಾಸ ಭಟ್) | 2=50 |
| ಶಿಕ್ಷಣದ ಧ್ಯೇಯಗಳು | (ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ) | 2=25 |
| ಸ್ವಾತಂತ್ರ್ಯ ಮತ್ತು ಸಂಸ್ಕೃತಿ | (ಅನು: ಕು.ಶಿ.ಹರಿದಾಸ ಭಟ್) | 2=00 |
| ಹಿರೋಶಿಮಾದಿಂದ ಜಿನೇವ | (ಯು. ಆರ್. ಆಚಾರ್ಯ) | 1=50 |
| ಮೋಹದ ಮಹಾಜಾಲ | (ವೀರಪ್ಪ ಯಗಟಿ) | 1=75 |
| ಭಾರತೀಯ ಮಹಾಪುರುಷರು | (ಎಸ್. ಗೋಪಿಚಂದ ರಾವ್) | 1=50 |
| ಕಥಾ ಕೌಮುದಿ | (ಎಸ್. ಗೋಪಿಚಂದ ರಾವ್) | 1=50 |
| ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್ | (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ) | 1=25 |
| ಏಶಿಯದ ಸಂಪತ್ತು | (ಕು. ಶಿ. ಹರಿದಾಸ ಭಟ್) | 2=00 |
| ಅಮೇರಿಕದ ಆರು ಕತೆಗಳು | (ಅನು: ಕು.ಶಿ.ಹರಿದಾಸ ಭಟ್) | 1=75 |
| ಕುಲವಿಲ್ಲದ ಹೆಣ್ಣು | (ಪಿ. ವೆಂಕೋಬಾಚಾರ್ಯ) | 1=50 |
| ಚಿತ್ರಾಂಗದೆ | (ಅನು: ಕೆ. ಕೆ. ಶೆಟ್ಟಿ) | 0=60 |
| ರವೀಂದ್ರರ ಕತೆಗಳು | (ಹನುಮಂತ ರಾವ್ ಮಾಂಜ್ರೇಕರ) | 0=90 |
| ಹಸುರು ಹಂಸ | (ನಚಿಕೇತ) | 2=00 |
| ಭಾವಾರ್ಚನೆ | (ನಚಿಕೇತ) | 1=25 |
| ಋಣಯಾತ್ರೆ | (ನಚಿಕೇತ) | 1=50 |
| ಗೀತೆಯ ಕೈಗನ್ನಡಿ | (ಹೊಸಕೆರೆ ಚಿದಂಬರಯ್ಯ) | 1=00 |

ವಿವರವಾದ ಕೆಟಲಾಗಿಗೆ ಬರೆಯಿರಿ:

**ನವಯುಗ ಪ್ರೆಸ್, ಉಡುಪಿ**

**ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.**


## ವಿದೇಶಗಳಲ್ಲಿ ಹಿಂದೂ ದೇಶದ ಗೌರವ ಕಡಿಮೆಯಾಗಲು ಕಾರಣ

(ಏಳನೇ ಪುಟದಿಂದ)

ವನ್ನು ಹೇಗಾದರೂ ನಿವಾರಿಸ[illegible] ದಲ್ಲಿ ವಿದೇಶೀಯ ಆಹಾರ ಮತ್ತು ಆರ್ಥಿಕ ಸಹಾಯವು ಬಹಳ ಮಟ್ಟಿಗೆ ಉತ್ತಮ[illegible] ಗೊಳ್ಳುವುದೆಂದು ಅಭಿಪ್ರಾಯ ಪಟ್ಟರು.

ಶ್ರೀ ರಾಧಾಕೃಷ್ಣರವರು ತಮ್ಮ ಪ್ರವಾಸ ಕಾಲದಲ್ಲಿ ಭಾರತದ ನಿರಪರಾಧಿತ್ವವನ್ನು ಸ್ಥಾಪನೆಮಾಡಿ ಜರ್ಮನರ [illegible]ಭಿಪ್ರಾಯವನ್ನು ಮಾರ್ಪಡಿಸಲೂ, ಅವ[illegible]ರಿಂದ ಸಹಾಯ ಮತ್ತು ಸಹಾನುಭೂತಿಗಳನ್ನು ತರಲೂ ಪ್ರಯತ್ನಿಸಿದ್ದಾರೆ. [illegible]ಚ್ಚಾಗಿ ಜರ್ಮನರು ಭಾರತಕ್ಕೆ ಯಾತ್ರೆ [illegible]ರುವುದಕ್ಕೂ ಭಾರತದಲ್ಲಿ ತಮ್ಮ ದೇಶೀಯ ವಸ್ತುಗಳಿಗೆ ವ್ಯಾಪಾರ ಹೆಚ್ಚಿಸಲೂ ಅನುಕೂಲವಿದೆಯೆಂದು ತಿಳಿಸಿದ್ದಾರೆ. ಅಲ್ಲದೆ ಜರ್ಮನಿಯ ಕೈಗಾರಿಕಾ ಪರಿಕರಗಳನ್ನು ಇಲ್ಲಿ ವ್ಯಾಪಿಸುವ ಮನಸ್ಸಿದೆಯೆಂದೂ ಅವರು ನಡೆಸಿದ ಸಂಭಾಷಣೆಯಿಂದ ಮನಗಂಡಿದ್ದಾರೆ.

ಭಾರತ ಸರಕಾರಕ್ಕೆ ಜಾನ್ ಸರ್ಕಾರ ಆರ್ಥಿಕ ಸಹಾಯವನ್ನು ನೀಡುವ ಯೋಜನೆಗಳಿದ್ದರೂ ಈ ಪಾಕಿಸ್ಥಾನ ಯುದ್ಧದ ಕಾರಣವಾಗಿ ಅದು ಹಿಂಜರಿಯುತ್ತಿ[illegible]ಯೆಂದೂ ತಿಳಿಸಿದರು. ಹಾಗೇನಾದರೂ ಸಹಾಯ ದೊರೆತರೆ ಪಾಕಿಸ್ಥಾನದ ಮೇ[illegible]ಲಿನ ಯುದ್ಧ ಸಾಮಗ್ರಿಗಳಿಗಾಗಿ ಉಪಯೋಗಿಸಿಯಾರು ಎನ್ನುವ ಶಂಕೆಯು ಇರುವಂತಿದೆ. ಮುಖ್ಯವಾಗಿ ಕಾಶ್ಮೀರದ ಪ್ರಶ್ನೆಯನ್ನು ಶೀಘ್ರವಾಗಿ ಮುಗಿಸಲು ಸದುಪಾಯವನ್ನು ಹುಡುಕಿದರೆ ಉತ್ತಮವೆಂದಿದ್ದಾರೆ.

**ಆರಬ್ ದೇಶದ ಅಭಿಪ್ರಾಯ**

ಶ್ರೀ ರಾಧಾಕೃಷ್ಣರವರು ಆರೇಬಿಯಾ, ಲೆಬನಾನ್, ಸಿರಿಯ, ಜೋರ್ಡಾನ್ [illegible] ದೇಶಗಳಲ್ಲಿ ಪ್ರವಾಸ ಮಾಡಿದಾಗ ಅರಬ್ಬರು ಭಾರತೀಯರಲ್ಲಿ ಮೈತ್ರಿಯುಳ್ಳ[illegible]ರಿಂದಲೂ ವಿಪರೀತ ರೀತಿಯ ಮಹಮದೀಯರಲ್ಲವೆಂದೂ ಮನಗಂಡರು. ಭಾರತದ ಪತ್ರಿಕೆಗಳು ಜೋರ್ಡಾನ್ ವಿಷಯದಲ್ಲಿ ತೀವ್ರರೀತಿಯಿಂದ ಟೀಕಿಸಿರುವುದು ಮತ್ತು ಸರಿಯಾದ ರಾಜಕೀಯ ಪ್ರಾತಿ[illegible]ಧ್ಯ ಮತ್ತು ಸೂಕ್ತ ಪ್ರಚಾರಗಳಿಂದ [illegible]ಮ್ಮ ನಡವಳಿಕೆಗಳನ್ನು ಸರಿಪಡಿಸಿಕೊಳ್ಳುವುದರಿಂದಲೂ ಅರಬರ ಸಹಾನುಭೂತಿಯನ್ನು ಗಳಿಸಬಹುದೆಂದು ತಿಳಿಸಿದ್ದಾರೆ. ಮುಖ್ಯವಾಗಿ ಇಸ್ಲಾಂಮತಕ್ಕೆ ಭಾರತದಲ್ಲಿ ಯಾವ ವಿಧದ ಶಂಕೆಯಾಗಲೀ ತೊಂದರೆಯಾಗಲೀ ಇಲ್ಲವೆನ್ನುವುದನ್ನು ಖಚಿತಮಾಡುವಂತೆ ಮಾಡುವುದೇ [illegible]ಗಿನ ಮುಖ್ಯ ಕೆಲಸವೆಂದೂ ತಿಳಿಸಿದರು.

ಶ್ರೀ ರಾಧಾಕೃಷ್ಣರವರು ತಮ್ಮ ಪ್ರವಾಸವನ್ನು ಮುಗಿಸಿ ಬ್ರೈಂಟ್‌ನಿಂದ ನವಂಬರ್ 29ನೇ ದಿನಾಂಕದಂದು ಡೆಲ್ಲಿಗೆ ಆಗಮಿಸಿ, ಡಿಸೆಂಬರ್ 5ಕ್ಕೆ ಮದರಾಸಿಗೆ ಹಿಂತಿರುಗಿದ್ದಾರೆ. ಅವರು ತಮ್ಮ ಪ್ರವಾಸ ಕಾಲದ ಅನುಭವಗಳನ್ನು ಪತ್ರಿಕೆಗಳ ಮೂಲಕ ತಿಳಿಸುವರು.

ಯು. ಪಿ. ಎಸ್.

# ನಾಲ್ಕೂ ನಿಟ್ಟಿನಲ್ಲಿ

## ವಿಶ್ವಸಂಸ್ಥೆ ವಿಫಲಗೊಂಡಿದೆ

"ವಿಶ್ವಸಂಸ್ಥೆಯು ಆಗಸ್ಟ್ ತಿಂಗಳ ದಿಯಲ್ಲಿಯೇ ಪಾಕಿಸ್ತಾನವೇ ಆಕ್ರಮಣಕಾರಿ ದೇಶವೆಂದು ಘೋಷಿಸಿ, ತನ್ನ ಶಾಸ್ತಿಯಲ್ಲಿರುವ ಕ್ರಮಗಳನ್ನು ಬಳಸಿದ್ದಿದ್ದರೆ, ಪಾಕಿಸ್ತಾನದ ಮೇಲೆ ಅನಿವಾರ್ಯವಾಗಿ ಭಾರತವು ಕೈಕೊಂಡ ಪ್ರತಿದಾಳಿಯನ್ನು ತಪ್ಪಿಸಬಹುದಾಗಿತ್ತು." ಎಂದು ಅಮೇರಿಕೆಯ ಪತ್ರಕರ್ತ ಎಡ್ಮಂಡ್ ಟೇಲರ್ ಬರೆದಿದ್ದಾರೆ.

ಅವರು ನ್ಯೂಯಾರ್ಕಿನ ರಿಪೋರ್ಟರ್ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ, "ಜನರಲ್ ನಿಮ್ಮೋರ ವರದಿಯು ಪಾಕಿಸ್ತಾನವೇ ಮೂಲತಃ ಆಕ್ರಮಣಕಾರಿ ಎಂದು ಸ್ಪಷ್ಟಪಡಿಸಿದೆ. ಆದರೂ ಅವರು ನಿಷ್ಪಕ್ಷಪಾತವಾದ ವರದಿ ಕಳಿಸಿಲ್ಲವಾದ್ದರಿಂದ ತನ್ನ ನಿಯೋಗವನ್ನು ಹಾಗೂ ವಿಶ್ವಸಂಸ್ಥೆಯ ಶಾಂತಿ ಪ್ರಯತ್ನಗಳನ್ನು ಆರೋಪಗಳಿಗೆ ಗುರಿಪಡಿಸಿದ್ದಾರೆ. ತತ್ಪರಿಣಾಮವಾಗಿ ಪಾಕಿಸ್ತಾನವು ಅಮೇರಿಕೆಯ ಶಸ್ತ್ರಾಸ್ತ್ರ ಬಳಸುವುದರ ಬಗೆಗೆ ಅಮೇರಿಕೆ ಎಚ್ಚರಿಕೆ ನೀಡಿ ಅನಾಹುತವನ್ನು ತಪ್ಪಿಸಲು ಸಾಧ್ಯವಾಗಲಿಲ್ಲ"ವೆಂದೂ ಆ ಪತ್ರಕರ್ತರು ಅಭಿಪ್ರಾಯಪಟ್ಟಿದ್ದಾರೆ.

ಪಾಕ್ ಯುದ್ಧ ಸೆರೆಯಾಳುಗಳ ಹೇಳಿಕೆಗಳನ್ನು ಪ್ರಸ್ತಾಪಿಸುತ್ತ ಮಿ. ಟೇಲರರು 'ಪಾಕಿಸ್ತಾನದ ೧೬ನೇ ಅರ್ಧೂದ ಕಾಲ್ದಳದ ೩೦೦ ಯೋಧರು ಮತ್ತು ೧೦೦ ಜನ ಮುಜಾಹಿದರು ಕೇವಲ ತೊಂದರೆ ಕೊಡುವ ದೃಷ್ಟಿಯಿಂದ ಆಕ್ರಮಣ ಮಾಡಿರಲಿಲ್ಲ. ಅದೊಂದು ಯೋಜನಾಬದ್ಧವಾದ ಧಾಳಿಯಾಗಿತ್ತು. ಭಾರತೀಯ ಮುಂಚೂಣಿ ಸೇನಾ ಠಾಣ್ಯಗಳನ್ನು ಪ್ರತ್ಯೇಕಗೊಳಿಸಿ ದೊಡ್ಡ ಪ್ರಮಾಣದ ಮತ್ತೊಂದು ಧಾಳಿ ಮಾಡುವದೇ ಪಾಕಿಸ್ತಾನದ ಉದ್ದೇಶ"ವಾಗಿತ್ತು ಎಂದೂ ಅವರು ವಿವರಿಸಿದ್ದಾರೆ.

## ಮುಖಂಡರ ಜ್ಞಾನೋದಯ

ತಮ್ಮ ದೇಶವು ಅದ್ಭುತ ಸಾಧನೆಗಳಿಸಿದೆಯೆಂದು ಒಡ ಯಕೊಚ್ಚಿಕೊಳ್ಳುತ್ತಿದ್ದ ಚೀಣೀ ಪ್ರಭೃತಿಗಳಿಗೆ ಇದೀಗ ಜ್ಞಾನೋದಯವಾಗಿದೆ. ತಮ್ಮ ತಪ್ಪು ನೆಪ್ಪುಗಳ ಅರಿವುಂಟಾಗುತ್ತಿದೆ. ದೇಶದೊಳಗೆ ಕಾಣಬಂದಿರುವ ತೊಂದರೆಗಳನ್ನು ಈ ನಾಯಕರು ಪುನಃ ಪುನಃ ಪ್ರಸ್ತಾಪಿಸಲು ಪ್ರಾರಂಭಿಸಿದ್ದಾರೆ.

ಜನತಾ ಚೀಣೀ ಗಣರಾಜ್ಯದ ಅಧ್ಯಕ್ಷ ಲ್ಯು ಷಾವೊ ಚಿ ಅಕ್ಟೋಬರ್ ೩೧ ರಂದು ಮಾತನಾಡುತ್ತಾ "ನಮ್ಮ ದೇಶ ಆರ್ಥಿಕ ದೃಷ್ಟಿಯಿಂದ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ತುಂಬಾ ಹಿಂದುಳಿದಿದೆ. ನಮ್ಮ ದೇಶವನ್ನು ಬಲಿಷ್ಠವಾಗುವಂತೆ ಮಾಡಲು ಹಲವಾರು ದಶಕಗಳವರೆಗಾದರೂ ಕಷ್ಟಪಟ್ಟು ಕೆಲಸಮಾಡುವುದು ಅಗತ್ಯವಾಗುತ್ತದೆ. ಎಂದು ಉದ್ಗಾರ ತೆಗೆದರು

ಮಾವೋತ್ಸೆತುಂಗರ ನಿಕಟವರ್ತಿಯಾದ ಪೆಂಗ್ ಜಿನ್ ಸಹ ಇದೇ ರಾಗವೆತ್ತಿದ್ದಾರೆ. ಈ ವರ್ಷ ಅಕ್ಟೋಬರ್ ೧ ರಂದು ಚೀನಾದ ರಾಷ್ಟ್ರೀಯದಿನ ಪರೇಡಿನ ಸಮಾರಂಭದಲ್ಲಿ ಮಾಡಿದ ಭಾಷಣದಲ್ಲಿ ಅವರು ನಾನಾ ಕ್ಷೇತ್ರಗಳಲ್ಲಿ ಚೀಣಾದ ಅಪಜಯವನ್ನು ಪ್ರಸ್ತಾಪಿಸಿದರು.

ಚಾ ಎನ್ ಲಾಯ್ ಸಹ ಚೀಣಾ ಕಮ್ಯೂನಿಸ್ಟ್ ಪಾರ್ಟಿ ಮತ್ತು ಸರ್ಕಾರದ ಕೆಲಸಗಳಲ್ಲಿನ ಅಪಯಶಸ್ಸುಗಳನ್ನು ಎತ್ತಿ ತೋರಿಸುವುದರಲ್ಲಿ ಹಿಂದುಳಿಯಲಿಲ್ಲ. ಪೀಕಿಂಗ್‌ನ ೧೬ನೆಯ ರಾಷ್ಟ್ರೀಯ ದಿನದ ಸಂದರ್ಭದಲ್ಲಿ ಮಾತನಾಡುತ್ತಾ 'ನಮ್ಮ ದೇಶವನ್ನು ಬಲಿಷ್ಟವನ್ನಾಗಿ ಮಾಡಲು ನಮಗೆ ಕನಿಷ್ಟ ಪಕ್ಷ ೨೦—೩೦ ವರ್ಷಗಳಾದರೂ ಬೇಕಾಗುತ್ತೆ' ಎಂದು ಒಪ್ಪಿಕೊಂಡಿದ್ದಾರೆ.

## ಗಂಡಾಂತರಕಾರಿ ಚೀನ

ವಿಶ್ವದ ಶಾಂತಿಯನ್ನು ಕದಡುವದಕ್ಕಾಗಿ ಚೀಣಾ ಮಾಡುತ್ತಿರುವ ಅನೇಕ ಕುಹಕಗಳನ್ನು ವಿಶ್ವದ ಅನೇಕ ಪತ್ರಿಕೆಗಳು ಕಟುವಾಗಿ ಟೀಕಿಸಿವೆ.

ಚೀನಾದ ಭಾರತ ವಿರೋಧಿ ಕಾರ್ಯನೀತಿ ಬ್ರಿಟನಿನ 'ದ ಗಾರ್ಡಿಯನ್' ಪತ್ರಿಕೆಯು ಖಂಡಿಸಿದೆ. 'ಭಾರತ-ಪಾಕ್ ಘರ್ಷಣೆಯಿಂದ ಶಾಂತಿಗೆ ಧಕ್ಕೆಯೊದಗಲಾರದ . ಆದರೆ ಭಾರತದ ಮೇಲೆ ಸೈನಿಕ ಕಾರ್ಯಾಚರಣೆಯಿಂದ, 'ಏಷ್ಯಾದಲ್ಲಿಯೇ ಪರಾಜಿತನೆ ಹೂಡಬೇಕೆಂದು ಚೀಣಾದ ಹೆಬ್ಬಯಕೆಯಿಂದ ನಿಜವಾದ ಗಂಡಾಂತರ ಇದೆ' ಎಂದು ಈ ಪತ್ರಿಕೆಯು ಅಭಿಪ್ರಾಯ ಪಟ್ಟಿದೆ.

ಭಾರತೀಯ ಪ್ರದೇಶವನ್ನು ಅಕ್ರಮವಾಗಿ ಆಕ್ರಮಿಸಿಕೊಂಡು ಇನ್ನೂ ಆ ಪ್ರದೇಶಗಳನ್ನು ತೆರವು ಮಾಡದಿರುವ ಚೀಣಾಕ್ಕೆ ಪಾಕ್-ಭಾರತ ಘರ್ಷಣೆಯಲ್ಲಿ ಪಾಕ್ ಪರ ಉಪದೇಶ ನೀಡುವ ಹಕ್ಕು ಇಲ್ಲ ಎಂದೂ ಆ ಪತ್ರಿಕೆ ಬರೆದಿದೆ!

ಟಿಬೇಟ್‌ನಲ್ಲಿ ಚೀಣಾ ಮಾಡಿದ ದುರಾಕ್ರಮಣವನ್ನು ಪ್ರಸ್ತಾಪಿಸುತ್ತ ಆ ಪತ್ರಿಕೆಯು 'ಅಮಾನುಷಿಕ ಆಕ್ರಮಣ ಎಸಗಿ, ಸೈನಿಕ ಶಕ್ತಿಯಿಂದ ಭಯ, ಮತ್ತು ಉದ್ವಿಗ್ನತೆ ನಿರ್ಮಿಸಿ, ಬೌದ್ಧದೇವಸ್ಥಾನಗಳನ್ನು ನಾಶಪಡಿಸಿ, ಟಿಬೆಟನ್ನರನ್ನು ಕೊಂದು, ವ್ಯಕ್ತಿಸ್ವಾತಂತ್ರ್ಯವನ್ನು ಹತ್ತಿಕ್ಕಿ ಚೀಣಾ ಅಸಮಾನ ಅತ್ಯಾಚಾರ ಮಾಡಿದೆ. ಟಿಬೇಟ್ ಜನತೆಯ ನ್ಯಾಯಬದ್ಧ ಸ್ವಾತಂತ್ರ್ಯವನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುತ್ತಿರುವ ಚೀಣಾಕ್ಕೆ ರಾಷ್ಟ್ರೀಯ ವಿಮೋಚನೆ ಕುರಿತು ಮಾತನಾಡುವ ಅಧಿಕಾರ ಇಲ್ಲ.

ಯುಗೋಸ್ಲೋವಿಯಾದ 'ಪೊಲಿಟಿಕಾ' ಪತ್ರಿಕೆಯು ಪಾಕ್ ಭಾರತ ಘರ್ಷಣೆಯ ಕುರಿತು ಬರೆಯುತ್ತ-ಪ್ರಸ್ತುತ ಘರ್ಷಣೆಯ ದುರ್ಲಾಭ ಪಡೆದು ಭಾರತದಲ್ಲಿ ತಪ್ಪು ತಿಳುವಳಿಕೆ ಮೂಡಿಸಿ ಅದರ ತಟಸ್ಥ ನೀತಿಯನ್ನು ನಿಷ್ಫಲಗೊಳಿಸುವದೇ ಚೀಣಾದ ದುರುದ್ದೇಶವಾಗಿತ್ತು ಎಂದು ಬರೆದಿದೆ.

---


## ಹಬ್ಬ ಹರಿದಿನಗಳ ಸಂದರ್ಭ ನಾವು ಅವರನ್ನು ಮರೆಯಬಾರದು




ಕ್ಷಯ ರೋಗಕ್ಕೆ ಬಲಿಯಾಗಿರುವ ನಮ್ಮ ಸಹೋದರರನ್ನು ಸ್ಮರಿಸಿರಿ ಅವರ ಮನೆಗಳ, ಕುಟುಂಬಗಳ, ಸ್ನೇಹಿತರ ಸಂತೋಷವು ಹಾಳುಗೆಡಹಲ್ಪಟ್ಟಿದೆ. ಅವರ ಅದೃಷ್ಟವನ್ನು ನೆನೆಯಿರಿ. ತಮ್ಮ ಮನೆಗಳಲ್ಲಿ ಕುಳಿತು ಮಕ್ಕಳ ಕರುಣಾಜನಕ ಮುಖವನ್ನು ಹತ್ತಿಕ್ಕುವ ಅಥವಾ ಆಸ್ಪತ್ರೆ, ಸೆನೆಟೋರಿಯಂಗಳಲ್ಲಿ ತಮ್ಮಂತಿರುವ ರೋಗಿಗಳನ್ನು ಲೆಕ್ಕ ಹಾಕಿ ದಣಿದಿರುವ, ಹಾಗೂ ತಾವು ಆರೋಗ್ಯವಂತರಾಗಿದ್ದರೆ ತಾವು ಪಡಬಹುದಾಗಿದ್ದ ಹಬ್ಬ ಹರಿದಿನದ ಸಂತಸಕ್ಕಾಗಿ ಹಾರೈಸುತ್ತಿರುವ ಆ ನಿಮ್ಮ ಸಹೋದರರ ಚಿತ್ರವನ್ನು ಸ್ಮರಿಸಿರಿ. ಕ್ಷಯ ರೋಗಿಯು ಏಕಾಂತತೆಯ ನೋವನ್ನು ಅನುಭವಿಸುತ್ತಿರುವ ಒಂದು ಕಾಲವೆಂದರೆ ಅದು ಈಗಿನದು— ಕ್ರಿಸ್‌ಮಸ್‌ನ ಶುಭ ಅವಸರ.

ಅವರನ್ನು ಸ್ಮರಿಸುವ ಉತ್ತಮ ಮಾರ್ಗವೆಂದರೆ ನಿಮ್ಮ ಕ್ರಿಸ್‌ಮಸ್ ಕಾರ್ಡು ಹಾಗೂ ಉಡುಗೊರೆಯ ಪಾರ್ಸೆಲುಗಳಿಗೆ ಕ್ಷಯ ರೋಗ ಮೊಹರುಗಳನ್ನು ಹಚ್ಚುವುದು. ಈ ಸತ್ಕಾರ್ಯವು ಅವರಿಗೆ ನೇರ ಸಹಾಯವನ್ನೊದಗಿಸುತ್ತದೆ. ಕ್ಷಯರೋಗ ಮೊಹರುಗಳನ್ನು ಅಧಿಕ ಸಂಖ್ಯೆಯಲ್ಲಿ ಕೊಳ್ಳಿರಿ. ಒಂದು **ಕ್ಷಯ ರೋಗ ಮೊಹರಿನ ಬೆಲೆ ಹತ್ತು ಪೈಸೆ ಮಾತ್ರ.**

ಕ್ಷಯ ರೋಗ ಮೊಹರುಗಳು ದಕ್ಷಿಣ ಕನ್ನಡ ಜಿಲ್ಲಾ ಟ್ಯುಬರ್ ಕುಲೋಸಿಸ್ ಎಸೋಸಿಯೇಶನ್ ಮತ್ತು ಅದರ ಅನೇಕ ಶಾಖೆಗಳಲ್ಲಿ ದೊರೆಯುತ್ತವೆ.

**16ನೆ ಕ್ಷಯ ರೋಗ ಮೊಹರು ಮಾರಾಟ ಚಳವಳ**

(ನವದೆಹಲಿಯಲ್ಲಿರುವ ಕ್ಷಯ ರೋಗ ಸಮಿತಿಯಿಂದ ಏರ್ಪಡಿಸಲಾದುದು)

ಸ್ಥಳದಾನ—

**Hindustan Lever Ltd., Madras.**


---


**In the Court of Munsif Kundapur**

S. C. 762/1965

A. A. Nayak by power of attorney Syndicate Bank Ltd. ... ... Plaintiff

versus

Sheshi and 5 others ... Defendants

To

4th Deft. Dugga Maiakala,
6th Deft. Seena Marakala—
Sons of Koraga Marakala, Manur village, Udipi Taluk.

Sirs,

Please take notice that the suit filed by Plaintiff against you for recovery of chalgeni rental for the year ending 31-3-65 in respect of properties leased out, is posted to 16-1-66 for your appearance. In case you fail to appear on the said date before the Court, the suit will be heard in your absence.

By order of Court.

K. Narayana Kamath,
Advocate for Plaintiff.

Coondapoor, 16-12-65.


---


ವೈಷ್ಣವ ಶಿಖಾಮಣಿ
ಕನಕದಾಸ ರಚಿತ

## ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿ:

**ನವಯುಗ ಪ್ರೆಸ್, ಉಡುಪಿ.**

# ಜನಪದಕವಿ ಸರ್ವಜ್ಞ

(ಐದನೇ ಪುಟದಿಂದ)

ತ್ರಿಪದಿಗಳು ಕೇವಲ ಪಂಡಿತರಿಗೆ ಮಾತ್ರವೇ ಬರೆದ ಶ್ರೇಷ್ಠಮಟ್ಟದ ಬರಹಗಳಲ್ಲ. ಕವಿ ಸರ್ವಜ್ಞನ ಭಾಷೆ ಗ್ರಾಮ್ಯ ಭಾಷೆ. ಶೈಲಿ ಸರಳ. ನಿರಕ್ಷರಕುಕ್ಷಿಗೂ ಅರಿವಾಗಬಲ್ಲ ತ್ರಿಪದಿ ಛಂದಸ್ಸು; ಅಲ್ಲದೆ ಹರಿದು ಬಂದಿರುವ ಹಾಸ್ಯದ ಹೊನಲು ಎಲ್ಲವೂ ಜನಸಾಮಾನ್ಯರೇ ಓದಿ ಆನಂದಿಸುವುದು ಹಾಗಿರಲಿ ಪಂಡಿತರೂ ಮೆಚ್ಚಿ ಮನತೃಪ್ತಿ ಪಡೆಯಬಹುದು.

ಕನ್ನಡ ನಾಡಿನಲ್ಲಿ ಸರ್ವಜ್ಞನ ತ್ರಿಪದಿಗಳ ಪರಿಚಯವಿಲ್ಲದ ಜನರಿಲ್ಲ. ಅವನ ತ್ರಿಪದಿಗಳನ್ನು ಕೇಳಿ ಆನಂದಿಸಿದ ಮಕ್ಕಳಿಲ್ಲ. ಅವನದು ಜನಮನವನ್ನು ಆಕರ್ಷಿಸಿದ—ಮಟ್ಟದ ಸಾಹಿತ್ಯ. ಕವಿಯ ಶೈಲಿಯನ್ನೇ ಅನುಸರಿಸಿ ಕೆಲ ಹಿರಿಯರು, ಬುದ್ಧಿವಂತರು ತಾವೇ ತಮಗೆ ತೋಚಿದ ತ್ರಿಪದಿಗಳನ್ನು ಸೃಷ್ಟಿಸಿ ಕೊನೆಯಲ್ಲಿ ಸರ್ವಜ್ಞನೆಂದು ಹೆಸರು ಸೇರಿಸಿ ಬಳಕೆಗೆ ತಂದಿರುವುದನ್ನು ಗಮನಿಸಬಹುದು.

ತೆಲುಗು ದೇಶದ ವೇಮನ, ತಮಿಳು ನಾಡಿನ ತಿರುವಳ್ಳುವರ್ ಮತ್ತು ಕನ್ನಡ ನಾಡಿನ ಸರ್ವಜ್ಞ ಈ ಮೂವರೂ ಒಂದೇ ಶ್ರೇಣಿಯ ಜನತಾ ಕವಿಗಳು ಇವರು ಯಾರೊಬ್ಬರ ಹಂಗಿಗಾಗಲಿ ಯಾರೊಬ್ಬರ ಮನತೃಪ್ತಿಗಾಗಲಿ ದುಡಿದವರಲ್ಲ. ನಾನಾ ಕಾರಣಗಳಿಂದ ಸಮಾಜ ಅವರನ್ನು ದೂರಮಾಡಿತು; ದೂಷಿಸಿತು. ಆದರೆ ಅವರಿಂದ ಸಮಾಜ ಉದ್ಧಾರವಾಯಿತು, ಹೊಸ ಬೆಳಕು ಕಂಡಿತು. ಭವ್ಯ ಸಂದೇಶವನ್ನು ಈ ಮೂವರು ಮಹಾನುಭಾವರೂ ಹಾಡಿದರು; ಕೀರ್ತಿಯ ಆಸೆಗಾಗಿ ಅಲ್ಲ; ಮನತೃಪ್ತಿಗಾಗಿ. ಆದರೆ ಕೀರ್ತಿ ಅವರನ್ನೇ ಬೆಂಬತ್ತಿತು.

ಮತ, ಕಾಲ, ಕೃತಿಗಳ ಸಂಖ್ಯೆ ಮೊದಲಾದುವುಗಳಲ್ಲ ಸರ್ವಜ್ಞನ ಕೀರ್ತಿಯನ್ನು ಅಳೆಯುವ ಮಾನದಂಡ. ಅವನ ನಿಷ್ಕಪಟ ಸತ್ಯಾನ್ವೇಷಣೆ. ವಿಮರ್ಶಾ ವೈಖರಿ ಅವನ ಕೀರ್ತಿಯ ಅಳತೆಗೋಲುಗಳಾಗಿವೆ.

ಸರ್ವಜ್ಞ ಎನ್ನುವ ಪದವೇ ಎಲ್ಲವನ್ನು ತಿಳಿದವನು ಎನ್ನುವ ಅರ್ಥ ಕೊಡುತ್ತದೆ. ಆದರೆ ಕವಿ ಸರ್ವಜ್ಞನ ಹೃದಯದಲ್ಲಿ ಅಹಂಕಾರ, ಅಲ್ಪತನ, ಪ್ರತಿಷ್ಠೆ ಮೊದಲಾದುವುಗಳ ನೆರಳಿಲ್ಲ; ಸುಳಿವಿಲ್ಲ. ಅವನ ಹೃದಯ ಸೂಕ್ಷ್ಮ. ಅಷ್ಟೇ ವಿನಯ ವಿಶ್ವಾಸಾಭಿಮಾನಗಳೂ ಅವನಲ್ಲಿ ತುಂಬಿವೆ. ಅವನ ನಾಲಿಗೆ ಹೂವಿನಷ್ಟೇ ಕೋಮಲ ಮತ್ತು ವಜ್ರದಷ್ಟೇ ಕಠೋರವಾಗಿದೆ. ಜ್ಞಾನದೇವತೆಯನ್ನು ಭಕ್ತಿಯಿಂದ ಪೂಜಿಸಿದ ಅವನಷ್ಟೇ ಅಜ್ಞಾನಾಂಧಕಾರವನ್ನು ಹೊರದೂಡಲು ಬೆಳಕಿನ ದೀವಟಿಗೆಯನ್ನು ಧರಿಸಿದೆ.

ಸರ್ವಜ್ಞನ ಮಾತುಗಳಲ್ಲಿಯೇ ಹೇಳುವುದಾದರೆ "ಸರ್ವಜ್ಞನೆಂಬುವವನು ಗರ್ವದಿಂದ ಆಗಲಿಲ್ಲ; ಎಲ್ಲರಿಂದಲೂ ಒಂದೊಂದು ಮಾತು ಕಲಿತು ವಿದ್ಯೆಯ ಪರ್ವತವಾದ," ಅಷ್ಟೇ ಅಲ್ಲದೆ "ಹೇಳಲರಿಯೆನು ನಾನು ಕೇಳೆನಲು ಹೇಳಿದೆನು ಬಾಳಲೋಚನನ ಶರಣರ ಆಳಾಗಿ ಹೇಳಿದೆನು ........" ಕವಿಯ ನಿರ್ಮಲಾಂತಃಕರಣ, ವಿನಯಕ್ಕೆ ಇದಕ್ಕಿಂತಲೂ ಹೆಚ್ಚಿನ ಸಾಕ್ಷಿ ಅನಗತ್ಯ.

"ಸರ್ವಜ್ಞ" ಎನ್ನುವ ಹೆಸರನ್ನಿಟ್ಟುಕೊಂಡು ಕವಿ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದ್ದಾನೆ. ಅವನಿಗೆ ಗೊತ್ತಿಲ್ಲದ ವಿಷಯವೇ ಇಲ್ಲ. ಆದರೆ ಗೊತ್ತಿದೆ ಎಂದು ಮೆರೆದಿಲ್ಲ. ಎಲ್ಲ ವಿಷಯಗಳನ್ನು ನೋಡಿ, ಕೇಳಿ, ಅನುಭವಿಸಿ ಹೃದಯಾಂತರಾಳದಲ್ಲಿ ಸಂಗ್ರಹಿಸಿ ಪುನಃ ತನ್ನ ಸಹಜ ಸರಳ ಹಾಸ್ಯ ಶೈಲಿಯಲ್ಲಿಯೇ ಹೇಳಿದ್ದಾನೆ.

ಕವಿಗೆ ಸರ್ವಜ್ಞ ಶಕ್ತಿ ಹುಟ್ಟಿನೊಂದಿಗೇ ಬಂದಿರಲಿಲ್ಲ, ಅನುಭವದಿಂದ, ಸಂಸ್ಕಾರ ಬಲದಿಂದ ಮೂಡಿ ಬಂತು. ಇದು ಕವಿಯ ಮಾತಿನಿಂದಲೇ ತಿಳಿದು ಬರುತ್ತದೆ. ಶಕ್ತಿ ಸಿದ್ಧಿ ನಿಯೋಗವೂ ಆಗಿದೆ. ಅದು ಗಮನಾರ್ಹ. ಈ ಸತ್ಯದ ಕಿಡಿ ಮನೆ ಮನಗಳನ್ನೂ ಬೆಳಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಕವಿಯ ಆರಾಧನಾ ದೈವ ಶಿವ. ಕವಿ ಅನನ್ಯ ಭಕ್ತ. ತನ್ನ ಸೇವೆಯಲ್ಲಿಯೇ ಶಿವನನ್ನು ಕಂಡಿದ್ದ ಸರ್ವಜ್ಞ! ಶಿವನನ್ನೇ ದೃಢ ಭಕ್ತಿಯಿಂದ ನಂಬಿದ್ದ. ಆದರೆ ಅವನು ಅನ್ಯ ಮತ, ಧರ್ಮ, ದೇವರುಗಳ ವಿರೋಧಿಯಲ್ಲ ಆರಾಧಕ.

—ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ ಒಬ್ಬ ಸರ್ವಜ್ಞ ಕರ್ತನೀ ಜಗಕೆಲ್ಲ ಒಬ್ಬನೇ ರೈತ ಸರ್ವಜ್ಞ. ." ದೇವನೊಬ್ಬನೇ ಎನ್ನುವುದಕ್ಕೆ ಇದಕ್ಕಿಂತಲೂ ಹೆಚ್ಚಿನ ಪ್ರತಿಪಾದನೆ ಬೇಡ.

ಸರ್ವಜ್ಞ ಕವಿಯ ಕಾಲದಲ್ಲಿಯೂ ಸಮಾಜದಲ್ಲಿ ಜಾತಿ-ಮತಗಳ ಗೊಂದಲ ಸಾಕಷ್ಟಿತ್ತೆಂದು ತೋರುತ್ತದೆ. ಅದ ಕಂಡು ನೊಂದ ಮೃದು ಹೃದಯ ಸರ್ವಜ್ಞ" —ಜಾತಿ ಹೀನನ ಮನೆಯ ಜ್ಯೋತಿತಾ ಹೀನವೇ, ಜಾತಿ ವಿಜಾತಿ ಎನಬೇಡ ದೇವನೊಲ್ಲಿದಾತನೇ ಜಾತ ಸರ್ವಜ್ಞ" ಎಂದು ಸಂದೇಶ ಸಾರಿದ್ದಾನೆ.

ಸ್ವಾತಂತ್ರ್ಯದ ಮಹತ್ವ ಆಗತ್ಯವನ್ನು ಮನಮುಟ್ಟುವಂತೆ ಹೇಳಿದ್ದಾನೆ ಕವಿ ತನ್ನ ಸಹಜ ಧಾಟಿಯಲ್ಲಿ—"ತಂತ್ರ ವಾದ್ಯವು ಲೇಸು (ಮಂತ್ರಿಯ ಕೆಳೆ ಲೇಸು) ಯಂತ್ರ ವಾಹಕನ ದಯೆ ಲೇಸು, ಜಗದಿ ಸ್ವಾತಂತ್ರ್ಯವೆ ಲೇಸು" ಎಂದಿದ್ದಾನೆ.

ರೈತ ಮತ್ತು ಕೃಷಿ ಈ ವಿಷಯಗಳನ್ನು ಪ್ರಸ್ತಾಪಿಸಿ ಜಗಕ್ಕೆ ಮಾತೃ ಸಮಾನ ಭೂಮಿ ಎಂದಿದ್ದಾನೆ.

ಸರ್ವಜ್ಞ ಮುಂಬರಲಿರುವ ವಿಜ್ಞಾನ ಯುಗದ ಬಗೆಬಗೆಯ ಯಂತ್ರಗಳ ವಾಹನಗಳ ರೂಪರೇಖೆಯನ್ನು ಅರಿತಿದ್ದನೆಂದು ತೋರುತ್ತದೆ. ಅದೇ ಉದ್ದೇಶ್ಯದಿಂದಲೇ ಹೊಗೆಬಂಡಿ, ವಿಮಾನ, ಟೆಲಿಫೋನ್ ಸಂಪರ್ಕ ಮೊದಲಾದವುಗಳ ಪ್ರಸ್ತಾಪಮಾಡಿದ್ದಾನೆ.

ಕಂಡುದನ್ನು ಕಂಡಂತೆ ಆಡಿದ ಕವಿಯ ಮಾತಿಗೆ ಜನ ಕೆಂಡವಾಗಿರಬೇಕು; ಆಗ ಅವರು ತಮ್ಮ ಮನಸ್ಸಿನ ನೆಮ್ಮದಿಗೆ ಅವನಿಗೆ ಸಾಕಷ್ಟು ಕಿರುಕುಳ ಕೊಟ್ಟಿರಲೂ ಬಹುದು, ಕವಿ ಸಹನೆಯಿಂದ ಅನುಭವಿಸಿ ಅವರಿಗಾಗಿ ಮರುಗಿದ್ದಾನೆ. ಸತ್ಯದ ಕಿಡಿಯಾಗಿ ಬೆಳಕು ಬೀರಿದ ಕವಿ ಸರ್ವಜ್ಞ ಸಮಾಜದ ಮೇಲೆ ಬೀರಿರುವ ಪ್ರಭಾವ ಅಪಾರ. ಸಮಾಜವೂ ಕವಿಯನ್ನು ಸಾಕಷ್ಟು ಕೆಣಕಿದೆ! ಕವಿ ಸದುತ್ತರವನ್ನಿತ್ತು ಕೆಣಕಿದವರಿಗೆ ಸತ್ಯದ ಬೆಳಕನ್ನು ತೋರಿಸಿದ್ದಾನೆ. ಕವಿ ಸಮಾಜದ ಜಂಜಾಟದಿಂದ ದೂರವಾಗಿ ಮೂಗು ಹಿಡಿದು ಕುಳಿತು ತಪಸ್ಸುಮಾಡಿ ಮೋಕ್ಷ ಸಂಪಾದಿಸಬಹುದಿತ್ತು. ಆದರ ನಾಡಿನ ಪುಣ್ಯ ದೊಡ್ಡದು. ಕವಿ ಉಳಿದು ಬೆಳಕು ಬೀರಿದ್ದಾನೆ. ಕೃತಕೃತ್ಯನಾಗಿದ್ದಾನೆ

ಸರ್ವಜ್ಞನ ಸಾಹಿತ್ಯ, ಕಾಲ, ಜೀವನದ ಬಗೆಗೆ ಆಸಕ್ತಿ ತಾಳಿ ಆಜೀವ ಪರ್ಯಂತ ದುಡಿದು ದಿ. ಉತ್ತಂಗಿ ಚನ್ನಪ್ಪನವರು ನಾಡಿನ ಮೂಲೆ ಮೂಲೆಗಳನ್ನು ತಿರುಗಿ ಸರ್ವಜ್ಞನ ತ್ರಿಪದಿಗಳನ್ನು ಸಂಗ್ರಹಿಸಿ ಅಚ್ಚು, ಹಾಕಿಸಿ ಉಪಕಾರ ಮಾಡಿದ್ದಾರೆ.

ನಾಡು ನುಡಿಗಳಿಗೆ ಸೇವೆ ಸಲ್ಲಿಸಿ ಕವಿ ಸರ್ವಜ್ಞನನ್ನಾಗಲಿ, ದಿ. ಉತ್ತಂಗಿಯವರನ್ನಾಗಲೀ ಯಾವ ಕನ್ನಡಿಗನು ಮರೆಯಲಾರ. ಮರೆಯಲೂ ಬಾರದು. ಕವಿಯ ತ್ರಿಪದಿಗಳು ಅಂಗೈಯ ಕನ್ನಡಿಯಂತೆ ಕನ್ನಡಿ ಮಸಿಯಿಂದ ಕಪ್ಪಾಗಿಲ್ಲ. ಹೊಳೆಯುತ್ತಿದೆ ನಮ್ಮನ್ನು ನಾವು ನೋಡಿಕೊಳ್ಳಬೇಕಷ್ಟೆ. ಆಗ ನಮಗೆ ಕಾಣುವುದು ನಮ್ಮ ಮುಖ ಸೌಂದರ್ಯವಲ್ಲ, ನಮ್ಮ ಆತ್ಮಸ್ವರೂಪ.

ಸರ್ವಜ್ಞ ಕವಿ ಕೊಟ್ಟಿರುವ ತ್ರಿಪದಿಗಳು ಎನ್ನುವ ಕನ್ನಡಿಯಲ್ಲಿ ನಮ್ಮ ನೆರಳನ್ನು ನೋಡಿಕೊಂಡು ಒಮ್ಮೆ ನಮ್ಮ ಆತ್ಮವಿಮರ್ಶೆಯನ್ನು ನಾವೇ ಮಾಡಿಕೊಂಡರೆ ಸರ್ವಜ್ಞಕವಿಯ ಆತ್ಮ ಸಂತಸಗೊಳ್ಳಬಹುದೆಂದು ಭಾವನೆ.

## ಧರ್ಮಯುದ್ಧ ಜಯವು ಸಿದ್ಧ

ರಚಯಿತ ಶ್ರೀ ನಾರಾಯಣ ಭಟ್
ಶ್ರೀ ಪೂರ್ಣಪ್ರಜ್ಞ ಕಾಲೇಜ್, ಉಡುಪಿ.

ಉತ್ತರದ ಹಿಮಗಿರಿಯ ತುತ್ತತುದಿಯ ನೋಡ
ಪ್ರಜ್ವಲಿಪ ಹಗೆತನದ ಹುಚ್ಚು ಕುಣಿದಾಟ
ಪುಣ್ಯನದಿ ಸಿಂಧುವಿನ ಪಾವತಲದಲಿ ನೋಡ
ಆತ ತಾಯಿಯ ದುಷ್ಟ ಕೃತ್ಯಗಳ ನೋಟ ‖ ೧
ಭಾರತದ ಪುಣ್ಯ ಜಲ, ಸುರಗಂಗೆಯ ಮಲ ಜ
ರಕ್ತ ಸಿಂಚನದಿಂದ ತಪ್ತ ದೀಪ |
ಸುಪ್ತ ಭಾರತವೆಲ್ಲಿ? ಎಚ್ಚೆತ್ತ ನಾಡಿಲ್ಲಿ
ಶತ್ರು ಮರ್ದನ ಗೈದ ತೃಪ್ತರೂಪ ‖ ೨ ‖
ಭಾರತಾಂಬೆಯ ವರ ಕುವರರೇಂ ಕುರಿಗಳೇ!
ಮದಮತ್ತ ಮದಗಜ ಪುರುಷಸಿಂಹ।
ಕಂಗೆಟ್ಟ ಶತ್ರು ದಲ ಝರ್ಜರಿತ ವೈರಿ ಬಲ
ನೋಡು, ನೋಡುತ್ತ! ಆಕ್ರಮಣ ಕಾರಿಯನ್ನು! ‖ ೩ ‖
ತಾಯ ರಕ್ಷಣೆಗಾಗಿ ಬದ್ಧ ಕಂಕಣ ಜನತೆ
ವಿಷಮತೆಯು ಹರಿದೊಗೆದ ಐಕ್ಯತೆಯ ಬಿಗಿತ |
ತಾಯ ಮುಡಿ ಭದ್ರತೆಗೆ ಸಾರ್ವಭೌಮತೆಯೆಡೆಗೆ
ವೀರ ರಕ್ಷಾ ಕವಚ ಐಕ್ಯತೆಯ ಮೊರೆತ ‖ ೪ ‖
ಏಕ ಭಾವದ ದುಡಿತ, ಸಹನೆ ದೃಢತೆ ಪ್ರತಿಜ್ಞೆ
ಸಾಗರೋತ್ತರವಾಗಿ ಮೂಡಿಹುದು ಪ್ರಜ್ಞೆ |
ಕಣ್ಣು ತೆರೆದತ್ತ ಕಡೆ ನೋಡು ಬಾನೆತ್ತರಕೆ
ಬೆಳೆವಿಹುದು ಭಾರತದ ವಿಶ್ವರೂಪ ‖ ೫ ‖

(ಕಲಾವೃಂದದ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆದ ಕವನ ಲೇಖನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುದು)



## ರತ್ನ ಹೋದರೂ ಮುತ್ತು ಉಳಿಯದೆ?

(ನಾಲ್ಕನೇ ಪುಟದಿಂದ)

‘ಹೇಗೆ ಹೇಳೋದು? ಅವರ್ಕ್ಕೂ ರಕ್ಷ ...ಕಾರ್ಯದಲ್ಲಿ ಸಹಭಾಗಿಯಾಗುವ ದಿನ ...ಬಂದರೂ ಬರಬಹುದು....’

‘ಬರಲಿ, ಭೌತಿಕ ಮುಕ್ತಿ ಫಲಗಳಿ... ಹೋಗಲಿ, ನಮಗೆ ಅಲೌಕಿಕ ಉಳಿ... ಸಾಕೂನ್ನಿ.....ನೋಡಿ.....ಆದೆಂತ ...ಅನೂಲ್ಯ ರತ್ನಗಳು ಕಳೆದು ...ದುವು ಅಂದ್ರಲ್ಲಾ....’

‘ಹೌದೇ....ನೋಡು. ನಮ್ಮ ಭೂಸೇ... ನಿವೃತ್ತ ಮಹಾ ದಂಡಾಧಿಪತಿ ...ಮ್ಮಯ್ಯನವರು...’

‘ಅಂದ್ರೆ....ಕೊಡಗಿನವರು...’

‘ಹೌದೇ....”

‘ಅದೇ ಸೈಪ್ರೆಸ್ಸಿನಲ್ಲಿಯೋ ಎಲ್ಲಿಯೋ ...ಲ್ಲಾ...’

‘ಹೌದೆ’ ಅವ್ರು ಹೃದಯಾಘಾತ ...ದ....”

“ಏನು, ನಿಧನರಾದರೆ?”

“ಹ್ಞಾಂ....”

“ಮತ್ತೆ?”

‘ನಮ್ಮ ಎಂ. ಪಿ, ಇದ್ದಾರಲ್ಲಾ...’

“ಮಲ್ಲಯ್ಯನವರೂ ಹೋದ್ರೇನು?”

‘ಹ್ಞಾನ್ನು....’

‘ಅಯ್ಯೋ ಪಾಪವೇ...’

‘ಏನು ಪಾಪ?’

‘ಮತ್ತೇಂತದು? ಅಂತೂ ಮಂಗಳೂ...ದ್ದು ಮದ್ರಾಸು ಆಗುತಿತ್ತು. ಇನ್ನು ...ಗುತ್ತೋ....ಭಾರಿ ದುಃಖದ ದಿನಾ ...’

ದುಃಖ.... ಹ್ಞಾಂ ಒಂದು ಬಗೆಯಿಂ ದುಃಖವೇ ಅನ್ನು. ದೇಶ ಸೇವೆಯಲ್ಲಿ, ...ಶದ ಗೌರವ ರಕ್ಷಣೆಯಲ್ಲಿ ಸಿರಂಕರ ...ಡಿದು ಅಮರರಾದರು ತಿಮ್ಮಯ್ಯ. ಜಿ...ಯ ಉನ್ನತಿಗಾಗಿ ಪ್ರಯತ್ನಿಸಿ ಕೀರ್ತಿ ...ಪರಾದರು ಮಲ್ಲಯ್ಯ....ಅಂತೂ ಇಬ್ಬ... ಕರ್ನಾಟಕದ ಚಿರಂತನ ಪುತ್ರರು...’

‘ಆದರೂ ಅವರ ಭೌತಿಕ ಬಂಧನಗ...ಜಾರಲೇ ಬೇಕಲ್ಲ...”

‘ಹ್ಞಾಂ......ಅಳಿಯುವುವೊಡಲುಗಳ ...ಸಾಗರವುಳಿಯಲುಳಿವುದು ಕೀರ್ತಿ..”

‘ಅದು ಸರೀನ್ನಿ....’

‘ಮತ್ತಿನ್ನೇನನ್ನ ಬೇಕು?”

‘ಅನ್ನೋದೇನು? ಇಬ್ರ ಹೆಸ್ರಲ್ಲಿ ಒಪ್ಪೊ...ತ್ತು ಉಪವಾಸ ಮಾಡೋಕೆ ಆಜ್ಞೆ ಸೇ...ಡೋದು....’

‘ಒಳ್ಳೆಯ ಸಲಹೆ ಕಣೇ....’

—ಗೋರಾ.

(ಒಂಭತ್ತನೇ ಪುಟದಿಂದ)

...ಸಂಪನ್ನರು ಹೇಳುವಂತೆ ಈತನು ಒದಗಿಸಿ ದಷ್ಟು ಆಫ್ರಿಕನ್ ಪಂಚಜ್ಞಾನವನ್ನು ಮ...ತ್ತಾವ ಸಂಶೋಧಕನೂ ಒದಗಿಸಿರು ವುದಿಲ್ಲ. ಈ ಚಿತ್ರದಲ್ಲಿ ಆತನ ಮೂರು ಮಹಾಯಾತ್ರೆಯ ದಾರಿಯನ್ನು ನೋಡ ಬಹುದು.

1. ಡಾ। ಲಿವಿಂಗ್ ಸ್ಟೋನನನ್ನು ಅ...ರಸುವುದಕ್ಕಾಗಿ ಮಾಡಿದ ಯಾತ್ರೆ(೧೮೭೧)

೨. ೧೮೭೪ರಲ್ಲಿ ಮಾಡಿದ ಎರಡನೆ ಸಂಚಾರ ಮತ್ತು

೩. ೧೮೮೭ರಲ್ಲಿ ಕೈಗೊಂಡ ಮೂರನೆ ಯ ಹಾಗೂ ಕೊನೆಯ ಸಂಶೋಧನಾ ...ಕಾರ್ಯ.

## ಎಲ್ಲೆಲ್ಲಿ ಏನೇನು?

### ಎಂ. ಜಿ. ಎಂ. ಕಾಲೇಜಿನಲ್ಲಿ ಎನ್. ಸಿ. ಸಿ. ಸಭೆ

ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ತಾ. 16ರಂದು ನಡೆದ ಎನ್. ಸಿ. ಸಿ. ಪೆರೇಡಿನಲ್ಲಿ ಭಾಗವಹಿಸಿದ ಡಾ| ಮಾಧವ ಪೈಗಳು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಶಿಸ್ತುಬದ್ಧ ಜೀವನವನ್ನು ನಿರ್ವಹಿಸುವ ಎನ್. ಸಿ. ಸಿ. ತರಬೇತಿಯು ಮಹತ್ವಪೂರ್ಣವಾಗಿದೆ, ಇದರಿಂದ ಮಿಲಿಟರಿ ಜೀವನದ ಒಂದು ಸೂಕ್ಷ್ಮ ಅನುಭವವೂ ಅವರಿಗಾಗುತ್ತದೆ ಎಂದು ನುಡಿದರು. ಮುಂದುವರಿಯುತ್ತಾ ಅವರು, ಮುಂದಿನ ಜನಾಂಗವಾಗಿ ಬಾಳಕಕ್ಕ ಇಂದಿನ ವಿದ್ಯಾರ್ಥಿಗಳು ಶಿಸ್ತು ಸಭ್ಯತೆಯನ್ನು ಜೀವನದಲ್ಲಿ ಅಳವಡಿಸಿ ಬೆಳೆಸಿಕೊಳ್ಳಬೇಕೆಂದು ನುಡಿದರು.

ಪ್ರಾರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿ ಡಾ| ಪೈಗಳ ಕಾರ್ಯಗಳನ್ನು ಶ್ಲಾಘಿಸಿದರು. ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಮಾನ್ಯ ಅತಿಥಿಗಳಿಗೆ ಹಾರಾರ್ಪಣೆ ಗೈದರು. ಕೊನೆಯಲ್ಲಿ ಯೂನಿಯನ್ ಅಧ್ಯಕ್ಷ ಶ್ರೀ ಕೆ. ಎಸ್. ಶೇಕಬ್ಬನವರು ಧನ್ಯವಾದ ಸಮರ್ಪಿಸಿದರು.

### ಸ್ಥಾಪನಾ ದಿನಾಚರಣೆ.

ಆಳಿಕೆ, ತಾ. 7ರಂದು ಲೋಕಸೇವಾ ವೃಂದದ 6ನೆಯ ಸ್ಥಾಪನಾ ದಿನಾಚರಣೆಯು ಶ್ರೀ ಕೆ. ಶ್ಯಾಮ್ ಭಟ್ಟರ ಅಧ್ಯಕ್ಷತೆಯಲ್ಲಿ ನೆಹರು ಸಭಾಭವನದಲ್ಲಿ ವಿಜೃಂಭಣೆಯಿಂದ ನಡೆಯಿತು. ಶ್ರೀ ಬಿ. ನಾರಾಯಣರಾಯರು ಅತಿಥಿಗಳನ್ನು ಸ್ವಾಗತಿಸಿದರು.

ಸಭಾಧ್ಯಕ್ಷರ ಆರಂಭಿಕ ಭಾಷಣದ ಬಳಿಕ ಸಂಸ್ಥೆಯ ಸದಸ್ಯರು ಮತ್ತು ಹಿತಚಿಂತಕರು ಸಂಸ್ಥೆಯ ವಿವಿಧ ವಿಭಾಗಗಳನ್ನು ಕುರಿತು ಪರಿಚಯ ಮಾಡಿಕೊಟ್ಟರು. ಅಧ್ಯಕ್ಷರು, ಅದರ ಸ್ಥಾಪನೆಯ ಉದ್ದೇಶ ಮತ್ತು ಅದರ ಕಾರ್ಯಪ್ರಣಾಲಿಗಳನ್ನು ವಿವರಿಸಿದರು.

ಸಭಾಧ್ಯಕ್ಷರು ಸಂಸ್ಥೆಯ ಉದ್ದೇಶಗಳನ್ನು ಶ್ಲಾಘಿಸಿ ಮಾತನಾಡುತ್ತಾ ಇಲ್ಲಿಯ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗೆ ಬೇಕಾದ ವಿಷಯಗಳನ್ನು ಕಲಿಸುತ್ತಾರೆ. ಇಲ್ಲಿ ನಡೆಯುವ ವಿವಿಧ ರೀತಿಯ ಭಾಷಣದ ಕಾರ್ಯಕ್ರಮ ಬೇರೆಲ್ಲಿಯೂ ಜರಗುವುದಿಲ್ಲ ಎಂದು ಮುಂತಾಗಿ ನುಡಿದು ಸಂಸ್ಥೆಗೆ ಶುಭವನ್ನು ಕೋರಿದರು. ಸಂಗೀತ ಕಚೇರಿ ನಡೆದ ಬಳಿಕ ಶ್ರೀ ಬಿ. ನಾರಾಯಣರಾಯರು ವಂದನೆಗಳನ್ನರ್ಪಿಸಿದರು.

### ಚಿತ್ರ ೧೪

ಸಾಹಸಮಯ ಜೀವನವನ್ನೇ ಬದುಕಿದ ಸ್ಟಾನ್ಲಿ ೧೮೯೦ರಲ್ಲಿ, ತನ್ನ ೩೪ ವಯಸ್ಸಿನಲ್ಲಿ ಡೊರೊಥಿ ಟೆನ್ನೆಂಟ್‌ಳನ್ನು ಮದುವೆಯಾದನು. ಪತಿಯ ಮೇಲೆ ತೋರಿಸುತ್ತಿದ್ದ ಭಕ್ತಿ ಭಾವ, ಮತ್ತು ಆತನ ಮನೋಭಾವವನ್ನು ಅರಿತುಕೊಳ್ಳುವ ಆಕೆಯ ಶಕ್ತಿಯಿಂದಾಗಿ ಸ್ಟಾನ್ಲಿ ಸಗ್ಗ ಸುಖವನ್ನು ಅನುಭವಿಸಿದನು. ಡೆನ್ಸಿಲ್ ಎಂಬೊಬ್ಬ ಮಗುವನ್ನು ದತ್ತಕ ಸ್ವೀಕರಿಸಿದರು ಈ ದಂಪತಿಗಳು. ಮುಂದ ತನ್ನ ಮೇಲೆ ಪ್ರಶಂಸೆ-ಕೀರ್ತಿಗಳು ಸುರಿಯುತ್ತಿರುವಂತೆಯೇ ಆರೋಗ್ಯ ಕೆಡಿಸಿಕೊಂಡು ತನ್ನ ಕಾರ್ಯದಿಂದ ಸಂಪೂರ್ಣ ನಿವೃತ್ತನಾದನು.

### ಚಿತ್ರ ೧೫

ಸ್ಟಾನ್ಲಿಯ ಕೊನೆಯ ದಿನಗಳು ವೇದನಾ ಪೂರ್ಣವಾಗಿದ್ದವು. ಆಗಾಗ ಆತನು ಮಲೇರಿಯಾ ಮತ್ತು ವಾಯುವಿನ ಬಾಧೆಗೆ ಗುರಿಯಾಗುತಿದ್ದನು. ತನ್ನ ಪತ್ನಿಯ ಸೌಮ್ಯವರ್ತನೆಯೇ ಎಲ್ಲ ನೋವುಗಳನ್ನೂ ಸಹಿಸುವ ಶಕ್ತಿಯನ್ನು ಆತನಿಗೆ ಕೊಡುತ್ತಿತ್ತು. ೧೯೦೪ನೆಯ ಮೇ ೧೦ ರಂದು, ಸ್ಟಾನ್ಲಿಯ ಜೀವಜ್ಯೋತಿ ಅನಂತದಲ್ಲಿ ಲೀನವಾಯಿತು. ಜಗತ್ತಿನ ಸರ್ವಶ್ರೇಷ್ಠ ಸಂಶೋಧಕನ ಕಣ್ಮರೆಯಾಯಿತು. ವೆಸ್ಟ್‌ಮಿನಿಸ್ಟರ್ ಅಬೆಯು ಉನ್ನತ ಗೌರವದೊಡನೆ ಆತನ ಅಂತ್ಯ ಸಂಸ್ಕಾರವು ನಡೆಯಿತು.

### ಉಡುಪಿಗೆ ಗೋವಿಂದ ಪೈಗಳ ಗ್ರಂಥರಾಶಿ

ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿಗೆ ಶ್ರೀ ಮಂಜೇಶ್ವರ ಗೋವಿಂದ ಪೈಗಳ ಗ್ರಂಥಭಂಡಾರವನ್ನು ಅವರ ಕುಟುಂಬದವರು ಒಪ್ಪಿಸಿದ್ದು, ತಾ. 17ರಂದು ಶ್ರೀ ಜಿ. ಪಿ. ರಾಜರತ್ನಂರವರು ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರದ ಉದ್ಘಾಟನಾ ಸಮಾರಂಭವನ್ನು ಡಾ| ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಎಂ. ಜಿ. ಎಂ. ಕಾಲೇಜಿನವರು ವರ್ಷಂಪ್ರತಿ ಜರಗಿಸುವ ಮುದ್ದಣ್ಣ ಸ್ಮಾರಕ ಸಾಹಿತ್ಯೋತ್ಸವದ ಅಂಗವಾಗಿ, ನೆರವೇರಿಸಿದರು.

ಪ್ರಾರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸುತ್ತಾ, ಈ ಸಂಶೋಧನ ಕೇಂದ್ರದ ಮೂಲಕ ಕವಿಗಳ ಗ್ರಂಥಾಲಯದ ರಕ್ಷಣೆ ಮತ್ತು ಅವುಗಳ ಯಾದಿಯನ್ನು ರಚಿಸಿ ಅಭ್ಯಸಿಸುವವರಿಗೆ ಉಪಯುಕ್ತವಾಗುವಂತೆ ಒದಗಿಸಿಕೊಡುವುದು, ಕವಿಗಳು ಅವರ ಸಮಕಾಲೀನರಿಗೆ ಪತ್ರಗಳನ್ನು ಸಂಗ್ರಹಿಸಿ ಪ್ರಕಟಿಸುವುದು, ಪೈ ಸ್ಮಾರಕ ಉಪನ್ಯಾಸ ವಿಚಾರ ಗೋಷ್ಠಿಗಳನ್ನೇರ್ಪಡಿಸಿ ಅವುಗಳನ್ನು ಪ್ರಕಟಿಸುವುದು ಗೋವಿಂದ ಪೈಗಳ ಕುರಿತಾಗಿ ಸಂಶೋಧನೆ ಅಧ್ಯಯನ ವ್ಯವಸ್ಥೆಯನ್ನು ಮಾಡುವುದು ಈ ಸಂಶೋಧನ ಕೇಂದ್ರದ ಉದ್ದೇಶವಾಗಿದೆಯೆಂದು ನುಡಿದರು. ಯೂನಿಯನ್ ಅಧ್ಯಕ್ಷ ಶ್ರೀ ಕೆ. ಎಸ್. ಶೇಕಬ್ಬನವರು ಸಂದೇಶಗಳನ್ನೋದಿದರು. ರಾಷ್ಟ್ರಕವಿ ಪೈಗಳ ತಮ್ಮನ ಮಕ್ಕಳಾಗಿರುವ ಶ್ರೀ ವೆಂಕಟೇಶ ಪೈಗಳು ಪುಸ್ತಕ ಭಂಡಾರವನ್ನು ಒಪ್ಪಿಸಿದರು. ಕಾಲೇಜಿನ ಟ್ರಸ್ಟಿಗಳಲ್ಲಿ ಒಬ್ಬರಾದ ಶ್ರೀ ಪಾಂಗಾಳ ಜನಾರ್ದನ ನಾಯಕರು ಕಾಲೇಜಿನ ಪರವಾಗಿ ಸ್ವೀಕರಿಸಿದರು.

ಶ್ರೀ ರಾಜರತ್ನಂರವರು ಉದ್ಘಾಟಿಸುತ್ತಾ, ಈ ಗ್ರಂಥಭಂಡಾರ ಉಡುಪಿಗೆ ದೊರೆತುದು ಉಡುಪಿಯ ಪುಣ್ಯವೆಂದರು. ಮುಂದುವರಿಯುತ್ತಾ ಗೋವಿಂದ ಪೈಗಳ ಕಾವ್ಯ ಸತ್ವವನ್ನು ತಿಳಿಯಲು ಸಹೃದಯತೆ ಬೇಕು, ಸಾಹಸಬೇಕು ಎಂದು ನುಡಿದರು.

ಪ್ರೊ| ರಂ. ಶ್ರೀ ಮುಗಳಿಯವರು ಮಾತಾಡುತ್ತಾ ಪೈಗಳು ಒಂದು ವ್ಯಕ್ತಿಯಾಗಿರದೆ ಒಂದು ಸಂಸ್ಥೆಯಾಗಿದ್ದರು ಎಂದು ನುಡಿದು ಅವರ ವಿದ್ವತ್ತು ಪ್ರತಿಭೆಯನ್ನು ಶ್ಲಾಘಿಸಿದರು.

ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಸ್ತಿವಾಚನ ಮಾಡುತ್ತಾ, ಉಡುಪಿ ನಾಗರಿಕರ ಪರವಾಗಿ ಅಭಿನಂದನೆ ಸಲ್ಲಿಸಿದರು. ಶ್ರೀ ರಾಜಕಮಲ್‌ರವರು ಗೋವಿಂದ ಪೈಗಳ ಕವಿತಾವಾಚನ ಗೈದರು.

ಶ್ರೀ ಕಾರಂತರು ಮಾತನಾಡುತ್ತಾ 26 ಭಾಷೆಗಳ 5000 ಪುಸ್ತಕಗಳನ್ನು ಸಂಗ್ರಹಿಸಿದ ಗೋವಿಂದ ಪೈಯವರನ್ನು ಮೆಚ್ಚುತ್ತಾ ಇದರ ಉಪಯೋಗವನ್ನು ಜನತೆ ಪಡೆಯಬೇಕು. ಉಡುಪಿಯಲ್ಲಿ ಜ್ಞಾನದ ಹುಚ್ಚು ಬೆಳೆಯಬೇಕು ಎಂದರು.

ಕಾಲೇಜಿನಿಂದ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ಸಂಗ್ರಹಿಸಲಾದ ರೂ. 2001ನ್ನು ಶ್ರೀ ಪಿ. ರಂಗನಾಥ ಶೆಣೈಯವರಿಗೆ ಒಪ್ಪಿಸಲಾಯಿತು. ಕೊನೆಯಲ್ಲಿ ಯೂನಿಯನ್ ಕಾರ್ಯದರ್ಶಿ ಶ್ರೀ ಕೆ. ಮಾಧವ ಐತಾಳರು ಧನ್ಯವಾದ ಸಮರ್ಪಿಸಿದರು.

ರಾತ್ರಿ ವಿದ್ಯಾರ್ಥಿನಿಯರಿಂದ ‘ಬುದ್ಧೋದಯ’ ಎನ್ನುವ ಗೀತನಾಟಕ ಪ್ರದರ್ಶನ ನಡೆಯಿತು.

ತಾ. 18ರಂದು ಬೆಳಿಗ್ಗೆ ರಾಷ್ಟ್ರಕವಿ ಸ್ಮಾರಕ ಉಪನ್ಯಾಸಗಳಾದುವು. ಶ್ರೀ ಜಿ. ಪಿ. ರಾಜರತ್ನಂರವರು ಸಾದಾಮೆಯ ಕತ್ತೆ, ಪ್ರೊ| ವಿ. ಎಂ. ಇನಾಂದಾರರು ಗೋವಿಂದ ಪೈಯವರ ಕಾವ್ಯದ ಕುರಿತೂ ಮಾತನಾಡಿದರು.

ಸಾಯಿ ಕನಕದಾಸ ಚತುಶ್ಶತಮಾನೋತ್ಸವವು, ಡಾ| ರಂ. ಶ್ರೀ ಮುಗಳಿಯವರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ಕೆ. ಕೆ. ಪೈಗಳು ಕನಕದಾಸರ ತೈಲ ಚಿತ್ರವನ್ನು ಅನಾವರಣ ಮಾಡಿದರು.

### ಸಹಕಾರಿ ಸಂಘದ ಹೊಸ ಕಟ್ಟಡದ ಉದ್ಘಾಟನೆ

ಮಂಗಳೂರು, ದಕ್ಷಿಣ ಕನ್ನಡ ಸೆಂಟ್ರಲ್ ಕೋ ಆಪರೇಟಿವ್ ಸ್ಟೋರ್ಸಿನ ಹೊಸ ಕಟ್ಟಡದ ಉದ್ಘಾಟನೆಯನ್ನು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ತಾ. 18 ರಂದು ನೆರವೇರಿಸಿದರು. ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಇವರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು.

ಆರಂಭದಲ್ಲಿ ಶ್ರೀ ಎಸ್. ನರಸಪ್ಪಯ್ಯನವರು ಸ್ವಾಗತಿಸಿದರು. ಶ್ರೀ ಬಿ. ಎಂ. ಇದಿನಬ್ಬ ಇವರು ಸ್ವಾಗತ ಗೀತೆ ಹಾಡಿದ ಬಳಿಕ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಸಂದೇಶಗಳನ್ನೋದಿದರು.

ಮುಖ್ಯ ಮಂತ್ರಿಗಳು ಮಾತನಾಡುತ್ತಾ, ಕೃಷಿ ಪ್ರಧಾನವಾಗಿರುವ ನಮ್ಮ ದೇಶದಲ್ಲಿ ಸಹಕಾರ ಸಂಘಗಳ ಉಪಯೋಗಗಳನ್ನು ವಿವರಿಸಿದರು. ಅಧ್ಯಕ್ಷರು ಮಾತನಾಡುತ್ತಾ ಶ್ರೀ ಮೊಳಹಳ್ಳಿ ಶಿವರಾಯರ ಸತ್ಪರಂಪರೆಯನ್ನು ಪಾಲಿಸಿಕೊಂಡು ಬರುವುದು ತೀರಾ ಆವಶ್ಯಕವೆಯೆಂದು ನುಡಿದರು. ಈ ಸಂದರ್ಭದಲ್ಲಿ ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ದ. ಕ. ಬಳಕೆದಾರರ ಸಹಕಾರಿ ಸಂಘ ಹಾಗೂ ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ ಇವುಗಳ ಪರವಾಗಿ ಕ್ರಮಾ ರೂ. 10,000ವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೂ, ರೂ. 1001ನ್ನು ನೆಹರೂ ಸ್ಮಾರಕ ನಿಧಿಗೂ ಮುಖ್ಯ ಮಂತ್ರಿಯವರಲ್ಲಿ ಅರ್ಪಿಸಲಾಯಿತು. ಸಹಕಾರಿ ಸಂಘದ ಸಿಬ್ಬಂದಿಯವರ ವರ್ಗದ ಪರವಾಗಿ ತಿಂಗಳ ಕಂತಾಗಿ ರೂ. 100ನ್ನು ರಕ್ಷಣಾನಿಧಿಗೆ ನೀಡಲಾಯಿತು.

### ಕಾಪುವಿನಲ್ಲಿ ಶ್ರೀ ತ್ರಿಲೋಕೀ ಸಿಂಗ್

ತಾ 18ರಂದು ಕಾಪುವಿನಲ್ಲಿ ನೇರಿದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತಾಡುತ್ತಾ, ಅಖಿಲ ಭಾರತ ಪ್ರಜಾಸೋಶಲಿಸ್ಟ್ ಪಕ್ಷದ ಉಪಾಧ್ಯಕ್ಷ ಶ್ರೀ ತ್ರಿಲೋಕೀಸಿಂಗ್‌ರವರು ಮಾತನಾಡುತ್ತಾ, ದೇಶವಿಂದು ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸಮಸ್ಯೆಗಳ ಮೂಲಕ ಗಂಡಾಂತರ ಪರಿಸ್ಥಿತಿಯಲ್ಲಿದೆ. ನಮ್ಮ ವಿಫಲ ವಿದೇಶ ನೀತಿಯ ಮೂಲಕ ವಿದೇಶಗಳಲ್ಲಿ ನಮಗೆ ಮಿತ್ರರೂ ಇಲ್ಲದಂತಾಗಿದೆ. ಸ್ವದೇಶದಲ್ಲಿ ಕೃಷಿಯು ನಿರ್ಲಕ್ಷತನ ಧೋರಣೆಯಿಂದಾಗಿ ಆಹಾರ ಸಮಸ್ಯೆಯಿಂದ ಕಂಗೆಡುವಂತಾಗಿದೆ ಎಂದು ನುಡಿದರು.

ಸಭಾಧ್ಯಕ್ಷತೆಯನ್ನು ಉಳಿಯಾರಗೋಳಿ ಪಂಚಾಯತ್ ಅಧ್ಯಕ್ಷ ಶ್ರೀ ಭಾಸ್ಕರ ಹೆಗ್ಡೆಯವರು ವಹಿಸಿದ್ದರು. ಶ್ರೀಗಳಾದ ರಾಮಚಂದ್ರ ಶೆಟ್ಟಿ ಮತ್ತು ಪೈಕಾಡಿ ಶೀನಪ್ಪ ಶೆಟ್ಟಿರು ಈ ಸಂದರ್ಭದಲ್ಲಿ ಮಾತನಾಡಿದರು. ಪ್ರಾರಂಭದಲ್ಲಿ ಶ್ರೀ ಭಾಸ್ಕರ ಶೆಟ್ಟಿ ಎಂ. ಎಲ್. ಎ. ಇವರು ಪ್ರಾಸ್ತಾವಿಕ ಭಾಷಣಮಾಡಿ ಮುಂದಿನ ಮಾರ್ಚ್ ತಿಂಗಳಲ್ಲಿ ಜರಗಲಿರುವ ಪ್ರ. ಸೋ. ಪಾ. ಸಮ್ಮೇಲನಕ್ಕೆ ಶ್ರೀಗಳಾದ ಶ್ರೀನಾಥ್ ಪೈ, ಎಚ್. ವಿ. ಕಾಮತ್, ಪೀಟರ್ ಆಳ್ವಾರಿಸ್ ಮೊದಲಾದವರು ಬರುವರೆಂದು ತಿಳಿಸಿದರು.

### ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಹದಿನಾಲ್ಕನೆಯ ಪುಟದ 3ನೆ ಕಲಂನಲ್ಲಿ ಪ್ರಕಟವಾದ ಕುಂದಾಪುರ ಟೌನ್ ಬ್ಯಾಂಕ್ ಲಿಮಿಟೆಡಿನ ವಾರ್ಷಿಕ ಮಹಾಸಭೆಯ ಸಮಾಚಾರದಲ್ಲಿ ಆಡಳಿತ ಮಂಡಳಿಗೆ ಚುನಾಯಿಸಲ್ಪಟ್ಟ ೬ ಜನರ ಹೆಸರುಗಳು ಮಾತ್ರ ಪ್ರಕಟವಾಗಿವೆ, ಶ್ರೀ ಎಚ್. ಲಕ್ಷ್ಮೀನಾರಾಯಣಯ್ಯ, ಬಿ. ಎ. ಬಿ. ಎಲ್. ಬಿ. ಮತ್ತು ಶ್ರೀ ಕೆ. ಶಂಕರ ಶೆಟ್ಟಿ ಇವರ ಹೆಸರುಗಳು ಬಿಟ್ಟು ಹೋದ ಬಗ್ಗೆ ವಿಷಾದಿಸುತ್ತೇವೆ. (ಸಂ. ಸ.)

# ಮೈಸೂರು ಭತ್ತದ ಲೆವಿ ಆಜ್ಞೆ

**ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರು ತಾ. 30-11-65ರಂದು ಡಿ. ಸಿ.ಗೆ ಒಪ್ಪಿಸಿದ ಮನವಿಯ ಮುಖ್ಯಾಂಶಗಳು**

### 1. ದರ ಮಿತಿಮೀರಿದ್ದು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇಳಿಕೊಳ್ಳುವಂತಹ ನೀರಾವರಿ ಯೋಜನೆಗಳಿಲ್ಲ. ಬೇಸಾಯವು ಪೂರ್ಣವಾಗಿ ಅನಿಶ್ಚಿತ ಮಳೆಯನ್ನು ಹೊಂದಿಕೊಂಡಿದೆ. ಈ ವರ್ಷದ ಎಣೆಲ್ ಬೆಳೆಯ ಸಂದರ್ಭದಲ್ಲಿ ಮಳೆ ಸರಿಯಾಗಿ ಬಾರದೆ ಭತ್ತದ ಪೈರು ಉತ್ತಮವಾಗಿಲ್ಲ. ಮತ್ತು ಸುಗ್ಗಿಯ ಬೆಳೆಯ ಭವಿಷ್ಯವು ಆಶಾದಾಯಕವಾಗಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯು ಆಹಾರದ ಮಟ್ಟಿಗೆ ಕೊರತೆಯ ಜಿಲ್ಲೆಯಾಗಿದೆ. ನಿಯಮಿತ ಅಥವಾ ಅನಿಯಮಿತ ರೇಶನ್ ಪದ್ಧತಿಯಿಲ್ಲದ ಹಳ್ಳಿ ಪ್ರದೇಶಗಳಲ್ಲಿ ಭತ್ತವನ್ನು ಕಡ್ಡಾಯವಾಗಿ ವಸೂಲು ಮಾಡುವುದರಿಂದ ಆಹಾರದ ಕೊರತೆಯು ಇನ್ನೂ ಹೆಚ್ಚುವುದು.

ಬೇಸಾಯದ ಕ್ರಮದಲ್ಲಿ ನಮ್ಮ ಜಿಲ್ಲೆಯ ರೈತರು ಈಗ ಕೂಡಾ ಹಿಂದಿನ ಕ್ರಮವನ್ನೇ ಅನುಸರಿಸುತ್ತಾ ಇದ್ದಾರೆ. ರಾಸಾಯನಿಕ ಗೊಬ್ಬರಗಳ ಉಪಯೋಗವೂ ಸಾಕಷ್ಟು ಸರಬರಾಜು ಇಲ್ಲದ ಕಾರಣ ಮಿತವಾಗಿದೆ. ಆದ್ದರಿಂದ ಭತ್ತದ ಉತ್ಪಾದನೆಯು ಈ ಜಿಲ್ಲೆಯಲ್ಲಿ ಹೆಚ್ಚಿಲ್ಲ. ತಾ. 20—4—1934ರ ದಕ್ಷಿಣಕನ್ನಡ ಜಿಲ್ಲಾ ಗಜೆಟಿನಲ್ಲಿ ಪ್ರಕಟವಾದ ಎರಡನೇ ಸೆಟ್ಲಮೆಂಟ್ ವರದಿಯಿಂದ ಈ ವಿಷಯವು ಸ್ಪಷ್ಟವಾಗುವುದು. ತಾರೀಕು 25—8—1902ರ ಗ. ಒ.ನಂ. 757ರ ಪ್ರಕಾರ ಮೊದಲನೇ ಸೆಟ್ಲಮೆಂಟ್ ಈ ಜಿಲ್ಲೆಯಲ್ಲಿ ನಡೆಯಿತು. ಆಗ ಬೆಳೆಯನ್ನು ತೆಗೆಯುವ 616 ಪ್ರಯೋಗಗಳು ನಡೆದುವು. ಈ ಪೈಕಿ 296 ಪ್ರಯೋಗಗಳಿಂದ ಎಕ್ರೆಯೊಂದರ ಸರಾಸರಿ 566 ಮದ್ರಾಸು ಸೇರುಗಳಷ್ಟು ಭತ್ತವನ್ನು ಪಡೆಯಲಾಯಿತು. ಇದರ 15%ರಷ್ಟು ಕುಂದುಲು ಎಂದು ಪರಿಗಣಿಸಲಾಯಿತು. ಎಕ್ರೆ ಒಂದರ ಸರಾಸರಿ ಭತ್ತದ ಉತ್ಪನ್ನ 722 ಪೌಂಡುಗಳು ಅಂದರೆ 3·17 ಕ್ವಿಂಟಾಲ್‌ಗಳೆಂದು ತಿಳಿದು ಬಂತು. 296 ಪ್ರಯೋಗಗಳಿಂದ ಕಂಡು ಬಂದ ಸರಾಸರಿ ಉತ್ಪನ್ನವು ಇದಾಗಿದೆ. ಅಂದರೆ ಕ್ಷಿಕ್ಕಿಂತ ಹೆಚ್ಚಿನ ಪ್ರಯೋಗಗಳಲ್ಲಿ ದೊರಕಿದ ಉತ್ಪನ್ನವು ಎಕ್ರೆ ಒಂದರ ಸರಾಸರಿ 3-11 ಕ್ವಿಂಟಾಲ್‌ಗಳಿಗೂ ಕಡಿಮೆಯಾಗಿದೆ ಎಂದು ಸ್ಪಷ್ಟವಾಗುವುದು.

10 ಎಕ್ರೆಗಿಂತ ಹೆಚ್ಚಿನ ಜಮೀನು ಇದ್ದವರು 10 ಎಕ್ರೆಗಿಂತ ಹೆಚ್ಚಾಗಿ ಇರುವ ಎಕ್ರೆ ಒಂದರ 3 ಕ್ವಿಂಟಾಲ್ ಭತ್ತವನ್ನು ಕೊಡಬೇಕೆಂದು ಲೆವಿ ಆಜ್ಞೆಯಲ್ಲಿ ನಿರ್ಧರಿಸಲಾಗಿದೆ. ಈ ಆಜ್ಞೆಯು 10 ಎಕ್ರೆಗಿಂತ ಹೆಚ್ಚು ಜಮೀನು ಬೇಸಾಯ ಮಾಡುವವನಿಗೆ ಒಂದು ಶಾಪವಾಗಿದೆ. ಹೇಗೆಂದರೆ ಅವನು ತನಗಾಗುವ ನಷ್ಟ ಇನ್ನು ಪ್ರಾರಂಭದ 10 ಎಕ್ರೆಯಿಂದ ತುಂಬಿಸಿಕೊಳ್ಳಬೇಕಾಗಿದೆ. ಅನಂತರದ 5 ಎಕ್ರೆಗಳಿಗಿಂತ ಹೆಚ್ಚಿನ 5 ಎಕ್ರೆಗಳಿಗೆ ಲೆವಿಯ ದರವು 10 ಕ್ವಿಂಟಾಲ್ ಆಗಿರುತ್ತದೆ. ಆದರೆ ಮೇಲೆ ಹೇಳಿದಂತೆ ಈ 5 ಎಕ್ರೆಯಿಂದ ಬರುವ ಉತ್ಪನ್ನವು 15 ಕ್ವಿಂಟಾಲ್‌ಗಳಿಗಿಂತ ಕಡಿಮೆಯಾಗಿದೆ. ಇದರ ಪರಿಣಾಮವೆಂದರೆ 10 ಎಕ್ರೆಗಳಿಗಿಂತ ಹೆಚ್ಚಿಗೆ ಜಮೀನು ಬೇಸಾಯ ಮಾಡುವವನು 10 ಎಕ್ರೆಗಿಂತ ಹೆಚ್ಚಿನ ಭೂಮಿಯನ್ನು ಬೇಸಾಯ ಮಾಡದೆ ಇರುವುದು ಉಚಿತ ಎಂದು ಭಾವಿಸಿ ಅರೀತಿ ಮಾಡಲು ಎಡೆಕೊಟ್ಟಂತಾಗುವುದು. ಏಕೆಂದರೆ ಲೆವಿಯನ್ನು ಕೊಟ್ಟ ನಂತರ ಅವನ ಬಳಿ ಉಳಿಯುವ ಭತ್ತವು ಅವನು ಮಾಡಬೇಕಾದ ಆವಶ್ಯಕ ಸಾಗುವಳಿ ಖರ್ಚುಗಳನ್ನು ತುಂಬಲು ಸಾಲದಾಗುವುದು. ಮೊದಲಿನ 5 ಎಕ್ರೆಯ ಬೇಸಾಯದಲ್ಲಿ ಅವನು ಲೆವಿ ಕೊಡಬೇಕಾದ ಒಟ್ಟು ಭತ್ತ 4 ಕ್ವಿಂಟಾಲ್ ಆದರೆ ಅವನು ಪಡೆಯುವ ಉತ್ಪನ್ನ 15 ಕ್ವಿಂಟಾಲ್‌ಗಿಂತಲೂ ಕಡಿಮೆಯಾಗಿದೆ. ಆದರೆ ಅವನ ಪಾಲಿಗೆ ಉಳಿಯುವ ಭತ್ತ ಬರೀ 11 ಕ್ವಿಂಟಾಲ್ ಆಗಿರುತ್ತದೆ.

### 2. ಬೇಸಾಯಕ್ಕೆ ಖರ್ಚೇ ಇಲ್ಲ?

1902ನೇ ಇಸವಿಯಲ್ಲಿ ನಡೆದ ಒಂದನೇ ಸೆಟ್ಲಮೆಂಟ್ ಪ್ರಕಾರ ಒಂದು ಎಕ್ರೆ ಬೇಸಾಯಕ್ಕೆ ತಾಗುವ ಖರ್ಚು ರೂ. 13—8—0 ಎಂದು ನಿರ್ಧರಿಸಲಾಗಿದೆ. ಆಗ ಭತ್ತದ ದರ 1 ರೂಪಾಯಿಗೆ 27 ಸೇರು ಆಗಿತ್ತು. ಅಂದರೆ ಎಕ್ರೆ ಒಂದರ ಸಾಗುವಳಿ ಖರ್ಚು 4½ ಮುಡಿ ಅಕ್ಕಿ ಅಥವಾ ಮೆಟ್ರಿಕ್ ಅಳತೆಯಲ್ಲಿ 3 ಕ್ವಿಂಟಾಲ್ ಭತ್ತವೆಂದಾಗುತ್ತದೆ. ಇದು 5 ಎಕ್ರೆ ಬೇಸಾಯ ಮಾಡಿದಾಗ ಇರುವ ಸರಾಸರಿ ಉತ್ಪನ್ನಕ್ಕೆ ಸಮವಾಗುತ್ತದೆ.

ಬೇಸಾಯವು ನಮ್ಮ ದೇಶದಲ್ಲಿ ಅವನ ಕುಟುಂಬ ಪೋಷಣೆಯ ಏಕಮಾತ್ರ ಮಾರ್ಗವಲ್ಲದೆ ಅವನ ಜೀವನ ಪದ್ಧತಿಯೂ ಆಗಿದೆ. ಬೇಸಾಯವು ಅವನ ಕೆಲಸದ ಸಂಬಳವನ್ನು ಒದಗಿಸುವುದರಿಂದಲೂ ಮತ್ತು ಅವನಿಗೆ ಬೇರೆ ವೃತ್ತಿ ಗೊತ್ತಿಲ್ಲದ ಕಾರಣ ಬೇಸಾಯಗಾರನು ತನ್ನ ಈ ವೃತ್ತಿಯು ಲಾಭಕರವಲ್ಲದಿದ್ದರೂ ಮುಂದುವರಿಸಿದೊಂಡಿದ್ದಾನೆ. ನಗದು ಬೆಳೆಯನ್ನು ಅವನು ಬೆಳೆಸಬಲ್ಲನಾದರೆ ಅವನಿಗೆ ಅದರಿಂದ ಸ್ವಲ್ಪವಾದರೂ ಲಾಭ ಸಿಗುವಂತಾಗಿದೆ.

### 3 ಯಾವುದೇ ವಿನಾಯತಿ ತೋರಿಸಿಲ್ಲ.

ಮೇಲೆ ಹೇಳಿದ ಸಂಗತಿಗಳು ಸಾಮಾನ್ಯ ಋತುಮಾನಗಳಲ್ಲಿ ಸಿಗತಕ್ಕ ಸಾಧಾರಣ ಬೆಳೆಗಳಿಗೆ ಅನ್ವಯಿಸುತ್ತವೆ. ಆದರೆ ಈ ವರ್ಷವಾದಂತೆ ಮಳೆ ಬಾರದೆ ಬೆಳೆಯು ಹಾಳಾದ ಬಗ್ಗೆ ಯಾವುದೇ ವಿನಾಯತಿಯನ್ನು ಲೆವಿ ಆಜ್ಞೆಯು ಒಳಗೊಂಡಿಲ್ಲ.

### 4 ಆಕ್ಷೇಪಣೆಯನ್ನು ಎತ್ತಲು ಅವಕಾಶವಿಲ್ಲ.

ಕಲಂ 3ರ ಪ್ರಕಾರ ಬೇಸಾಯ ಮಾಡಿನ ಜಮೀನಿನ ವಿಸ್ತೀರ್ಣವನ್ನು ಹೊಂದಿಕೊಂಡು ರೈತನು ಭತ್ತವನ್ನು ಕೊಡತಕ್ಕದ್ದು. ಹಳ್ಳಿಗಳಲ್ಲಿ ಶ್ಯಾನುಭೋಗರು ತಯಾರಿಸಿದ ಪಟ್ವಾರಿಜಿಸ್ಟ್ರಿಯ ಆಧಾರದ ಮೇಲೆ ಮತ್ತು ಒಕ್ಕಲುವಾರ್ ಪ್ರಕಾರ ಬೇಸಾಯಗಾರರ ಪಟ್ಟಿಯನ್ನು ತಯಾರಿಸಿದ್ದಾರೆ. ಈ ಪಟ್ಟಿಯನ್ನು ತಯಾರಿಸಿದ ರೀತಿಯು ಬೇಜವಾಬ್ದಾರಿಯದ್ದೂ ಮತ್ತು ಅನಧಿಕೃತವೂ ಆಗಿದೆ. ಭತ್ತವನ್ನು ವಸೂಲು ಮಾಡುವ ಅಧಿಕಾರಿಗಳು ಪಟ್ಟಿಯಲ್ಲಿ ಕೊಟ್ಟ ಅಂಕೆ ಸಂಖ್ಯೆಗಳ ಆಧಾರದ ಮೇಲೆ ಲೆವಿ ಆಜ್ಞೆಯನ್ನು ಜ್ಯಾರಿಗೊಳಿಸಬೇಕು ವಿನಾ ಅದರ ನ್ಯಾಯ-ಅನ್ಯಾಯದ ಬಗ್ಗೆ ವಿಮರ್ಶೆ ಮಾಡಲು ಸಮರ್ಥರಿಲ್ಲ. ಬೇಸಾಯಗಾರನ ಬಳಿ ಇರುವ ಭತ್ತದ ಸಂಗ್ರಹವನ್ನು ಹಣ ಪಾವತಿ ಮಾಡದೆ ಜಪ್ತಿ ಮಾಡುವ ಅಧಿಕಾರ ಅವರಿಗಿದೆ. ಇದು ಸಹಕಾರಿ ಆಡಳಿತೆಯ ಸಾಮಾನ್ಯ ನಿಯಮಗಳಿಗೆ ಮತ್ತು ನ್ಯಾಯಕ್ಕೆ ವ್ಯತಿರಿಕ್ತವಾಗಿದ್ದು ಅರಾಜಕತೆಗೆ ಎಡೆಕೊಡುತ್ತದೆ.

### 5 ದಾರಣೆ ಅತೃಪ್ತಿಕರ

ಭತ್ತದ ಧಾರಣೆ, ಕ್ವಿಂಟಾಲಿಗೆ ರೂ. 38 ಎಂದು ನಿರ್ಧರಿಸಲ್ಪಟ್ಟಿದೆ. ಮಾರ್ಕೆಟು ಧಾರಣೆಯು ಕ್ವಿಂಟಾಲ್‌ಗೆ ರೂ. 75 ಇರುವಾಗ ಮೇಲಿನ ಧಾರಣೆಯನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಯಿತು ಎಂದು ತಿಳಿಸಿರುವುದಿಲ್ಲ. ಬೇಸಾಯಗಾರನ ಅತೀ ಅಗತ್ಯದ ಖರ್ಚು ವೆಚ್ಚಗಳನ್ನು ಪರಿಗಣಿಸದೆ ಅವನಿಂದ ಮಾರ್ಕೆಟ್ ಧಾರಣೆಯ 50%ರಷ್ಟು ಧಾರಣೆಗೆ ಭತ್ತವನ್ನು ವಸೂಲು ಮಾಡುವುದು ಸರಿಯೇ?

ಮೇಲಿನ ಧಾರಣೆಯಲ್ಲಿ ಪಡಕೊಂಡ ಭತ್ತದಿಂದ ತಯಾರಾಗುವ ಅಕ್ಕಿಯ ದರವು 1 ಕಿಲೋಗ್ರಾಮ್‌ಗೆ 57 ಪೈಸೆಯಾಗುವುದು. ಇಂತಹ ಅಕ್ಕಿಯನ್ನು ಮಂಗಳೂರಿನಂತಹ ರೇಶನ್ ಇರುವ ಪ್ರದೇಶದಲ್ಲಿ 1 ಕಿಲೋಗ್ರಾಂಗೆ ರೂ. 1-15ರಂತೆ ಮಾರಲಾಗುವುದು. ಮಾರ್ಕೆಟು ಧಾರಣೆಯು 1 ಕಿಲೊಗ್ರಾಂಗೆ ರೂ. 1-20ರಷ್ಟು ಇದೆ. ಅಂದರೆ ಲೆವಿಯ ಭತ್ತವನ್ನು ವಸೂಲು ಮಾಡಿ ಮಾರಾಟ ಮಾಡುವವರೇ ಅಸಲು 100% ರಷ್ಟು ಲಾಭವನ್ನು ಈ ವ್ಯವಹಾರದಲ್ಲಿ ಗಿಟ್ಟಿಸುವರು. ಬೇಸಾಯಗಾರನಿಗೆ ಎಳ್ಳಷ್ಟೂ ಪ್ರಯೋಜನವಿಲ್ಲ. ಸಾಗಾಟ, ಸಂಗ್ರಹ ಇವುಗಳ ವೆಚ್ಚ 6%ರಷ್ಟು ಎಂದು ಭಾವಿಸುವುದಾದರೆ ಉತ್ಪಾದಕನಿಗೆ ರೇಶನ್ ಧಾರಣೆಯಲ್ಲಿ 5% ರಷ್ಟು ಜಾತಾ ಉಳಿದುದನ್ನು ಪಡೆಯಲು ಹಕ್ಕು ಇದೆ. ಸೆಟ್ಲಮೆಂಟ್ ಸ್ಕೀಮ್ ಮತ್ತು 1934 ರಸೆಟ್ಲಮೆಂಟ್ ಸ್ಕೀಮ್ ವರದಿಗಳಲ್ಲಿ ಕುಂದಲು ಮತ್ತು ವ್ಯಾಪಾರಸ್ಥನ ಲಾಭ ಇದಕ್ಕಾಗಿ 15%ರ ಮಿತಿಯನ್ನು ನಿರ್ಣಯಿಸಲಾಗಿದೆ. ಶೇಕಡಾ 100ರಷ್ಟು ಲಾಭಗಳಿಸುವ ಸ್ಟೇಟ್‌ಟ್ರೇಡಿಂಗ್ ಕೋರ್ಪೊರೇಶನ್ ಇದರ ಪ್ರಯತ್ನವು ಖಂಡನೀಯವಾಗಿದೆ.

### 6ಈ ಬಗ್ಗೆ ಲೆವಿ ಆಜ್ಞೆಯನ್ನು ಬಲಾತ್ಕಾರದಿಂದ ಜ್ಯಾರಿಗೊಳಿಸಲಾಗುತ್ತಿದೆ

ಕೆಲವು ರೆವೆನ್ಯೂ ಅಧಿಕಾರಿಗಳು ಬೇಸಾಯಗಾರರ ಮನೆಯನ್ನು ಜಡ್ತಿಮಾಡಿ ಭತ್ತವನ್ನು ವಸೂಲು ಮಾಡುವರೆಂದು ವರದಿ ಬಂದಿದೆ. ಕುಟುಂಬದ ಪೋ
ಗಾಗಲೀ, ಕೆಲಸಗಾರರಿಗೆ ಕೊಡಬೇ
ಮಜೂರಿಗಾಗಲೀ ಎಳ್ಳಷ್ಟು ಭತ್ತವನ್ನ
ಬಿಡದೆ ಜಪ್ತಿ ಮಾಡಲಾಗಿದೆ ಎಂದು ಕೆ
ವು ವರದಿಗಳು ತಿಳಿಸಿವೆ. ಅಂದರೆ ಅ
ದರ್ಭಗಳಲ್ಲಿ ಬರೇ ಕಾಲಿ ಕಾಗದ ರಶೀ
ಗಳನ್ನು ಕೊಡಲಾಗಿದೆ ಎಂದೂ ತಿಳಿ
ತಿಳಿದುಬಂದಿದೆ. ಈ ರೀತಿಯಲ್ಲಿ ಮುಂದು
ವರಿದರೆ ಆಹಾರಧಾನ್ಯಗಳ ಉತ್ಪಾದನೆ
ಯು ಇಳಿದು ಜನರು ಉಪವಾಸ ಬೀಳು
ವ ಪ್ರಸಂಗವು ಬರುವುದು.

---

(ನೂರನೇ ಪುಟದಿಂದ)

ಪೂರ್ಣವಾಗಿವೆ; ಅಂತೆಯೇ ರಾಜಕೀ
ರದಲ್ಲಿ ಅವುಗಳನ್ನು ತೂಗಿ ನೋಡು
ಅಗತ್ಯವೂ ಇದೆಯೆನಿಸುತ್ತದೆ. ಪಾಕಿಸ್ತಾ
ನದೊಡನೆ ಮಾತುಕತೆಯಾಡಲು ಭಾರ
ವು ತಾಷ್ಕೆಂಟಿಗೆ ಹೋಗುವುದಾದರೆ, ಚ
ನಾದೊಡನೆ ಅದೇಕೆ ಮಾತನಾ
ಬಾರದು ಎಂದು ಅವರ ಸವಾಲು
ಚೀನಾದೊಂದಿಗಿರುವ ವಿವಾದ ಪರಿಹಾ
ರದ ಇಚ್ಛೆಯಿಂದಾಗಿಯೇ ಭಾರತವು
ಕೊಲಂಬೋ ಸಲಹೆಗಳನ್ನು ಇದ್ದಕ್ಕಿ
ದ್ದಂತೆ ಒಪ್ಪಿ ತನ್ನ ಕಡೆಯ ಮಾರ್ಗ
ನ್ನು ಹಸನುಗೊಳಿಸಿದ್ದರೂ ಕೆಂಪು ಚ
ನಾ ಅವನ್ನು ಮೊದಲು ಒಪ್ಪಿದಂತೆ ಮಾ
ಡಿ ಮುಂದೆ ತಿರಸ್ಕರಿಸಿ ನಡುವೆ ಕಲ್ಲು
ಮುಳ್ಳು ಹಾಕಿತು ಎಂಬುದನ್ನು ನಾ
ಮರೆಯುವಂತಿಲ್ಲ. ಇದು ನಡೆದು ಮೂ
ರು ವರ್ಷಗಳೇ ಆದರೂ ನಮ್ಮ ಇಂದಿ
ಪ್ರಧಾನಿ ಶಾಸ್ತ್ರಿಯವರೂ ಮಾತುಕ
ಯ ಬಾಗಿಲು ಮುಕ್ತವಿದೆಯೆಂದು ಇತ್ತೀ
ಚೆಗೆ ತಿಳಿಸಿದ್ದನ್ನು ಮತ್ತೆ ಧ್ಯಾನಿಸಬೇಕು
ತಾಷ್ಕೆಂಟ್ ಮಾತುಕತೆಯ ವೇಳೆ ಕ
ಶ್ಮೀರದ ಚರ್ಚೆಗೆ ಅವಕಾಶವಿಲ್ಲದಿ
ಮೇಲೆ ಮಾತುಕತೆಯೇಕೆ ಎಂಬುದ
ನಂಬೂದರಿಯವರ ಎರಡನೆ ಸವಾಲು
ಭಾರತದ ಒಂದು ರಾಜ್ಯ ಕಾಶ್ಮೀ
ದ ಅಸ್ತಿತ್ವದ ಬಗ್ಗೆ ಯಾರೊ
ನೆಯೂ ಯಾವ ಕಾರಣಕ್ಕಾಗಿಯೂ ಮ
ತುಕತೆಯಾಡುವುದೆಂದರೆ, ನಮ್ಮ ಸಾವ
ಭೌಮತೆಯನ್ನು ನಾವೇ ಅಲ್ಲಗಳೆದಂತೆ
ಉಭಯ ದೇಶಗಳ ನಡುವಣ ಗಡಿ ತ
ಟೆ, ಇತರ ಸಮಸ್ಯೆಗಳನ್ನು ಯಾಕೆ ವಿವೆ
ಚಿಸಬಾರದು? ಸ್ವಯಂ ಪ್ರವೃತ್ತಿಯನ್ನೇ
ಪಡೆಯಬಾರದು? ಮೂರನೆಯದಾಗಿ
ಜಾದ ಕಾಶ್ಮೀರದಿಂದ ಪಾಕ್ ಹೊರ ನ
ಯಬೇಕೆಂದು ಶಾಸ್ತ್ರಿ ಹೇಳುವರೆ? ಎ
ದು ಕೇಳುವ ನಂಬೂದರಿಯವರು ಪಾ
ಅಕ್ರಮವಾಗಿ ಅಲ್ಲಿ ತಳವೂರಿದೆ ಎಂ
ರಾಷ್ಟ್ರೀಯ ಸತ್ಯವನ್ನು ಅರಿತಿಲ್ಲ. ಆವ
ಈ ಬಗೆಯ ಸವಾಲು—ಸಮಸ್ಯೆಗಳು ರ
ಸ್ತ್ರ ಪುರುಷನ ಆರೋಗ್ಯ ಕೆಡಿಸುವ
ಪಮುಕ್ಷಿಕದಂತಿವೆ. ಆದುದರಿಂದ ಈ ಸ
ಬಂಧದಲ್ಲಿ ತೀವ್ರ ಎಚ್ಚರಿಕೆ ಬೇಕು. ಕೆ
ಪು ಚೀನಾದ ಬಾಲ ಬಡಕರಾದ ಇವ
ಪಾಕ್ ಬಾಲವನ್ನೂ ಹಿಡಿಯ ಹೊರ
ದ್ದರೆ ಅದು ಅಪಾಯಕರ.

READ &
ADVERTISE IN
NAVAYUGA WEEKL

# ಕ್ರೈತ ಮುರುಗ

(ಎರಡನೇ ಪುಟದಿಂದ)

ರಗೆ ನೋಡಿ, ಹೇಳಿದನು. "ಅಲ್ಲಿ, ಪ್ಪೈ ಬರುತಿದ್ದಾನೆ. ಜಿಂಕೆಯು ಲ್ಲುಗಾವಲನ್ನು ದಾಟುವಂತೆ, ಅವನು ಯಾಸವಾಗಿ ಮತ್ತು ಆಕರ್ಷಕವಾಗಿ ಗಳನ್ನು ದಾಟುತ್ತ ಬರುತ್ತಿದ್ದಾನೆ."

"ಅಥವಾ ಕತ್ತಲಾದೊಡನೆ, ಬಡ ಳಿಪಿಂಗಳನ್ನು ಕಾಲಿನಲ್ಲಿ ಹಿಡಿದು ದೊಯ್ಯುವ ನರಿಯು ಹಾಗೆ." ಪೊನ್ನಿ ಧೈರ್ಯದಿಂದ ಸ್ವರೂಪವನ್ನು ಬದಲಾ ಸಿದಳು.

'ಬಹುಶಃ ದುಃಖಪೂರಿತ ಕಥೆಗಳೊಂ ಅವನು ಚಲೋ ಉತ್ಸಾಹಿ ಹಾಗೂ ಲೂಕಿನ ಹುಡುಗನಿದ್ದಾನೆ." ಪುನಃ ರುಗನು ಧೈರ್ಯದಿಂದ ಹೊಗಳಿಕೆಯು ತನ್ನಾಡಿದನು.

"ಅವನನ್ನು ನೋಡಿದರೆ ನನಗೆ ಹಿಡಿ ವದಿಲ್ಲ." ಸಂಕ್ಷಿಪ್ತವಾಗಿ ಪೊನ್ನಿಯು, ನ ಮಾತನ್ನು ಒಪ್ಪದೆ, ಹೇಳಿದಳು.

"ನಿನಗೆ ಹಿಡಿಸದಿರ ಬಹುದು. ಧನಿಗೆ ಗೆ ಕೆಲಸ ಮಾಡಿಸಿಕೊಳ್ಳಬೇಕೆಂದು ತ್ತಿದ್ದಲ್ಲಿ ಅವನಿಂದ ಚೆನ್ನಾಗಿ ಕೆಲಸ ಡಿಸಿಕೊಳ್ಳ ಬಹುದು. ಅವನು ಪಟ್ಟಣದಲ್ಲಿ ಬೆಳೆದಿರುವ ಹುಡುಗನಿರುವದ ದ ಧೈರ್ಯಶಾಲಿ ಹಾಗೂ ಆತ್ಮಾಭಿ ನಿ ಇದ್ದಾನೆ. ಬಡ ಜನರಿಂದ ದುಡಿಸಿ ಳ್ಳುವ, ಚಿಕ್ಕ ಪ್ರಾಣಿ. ಪೆರಿಯಸ್ವಾಮಿ ಯ್ಯರರ ಕರುಣಾ ಶೂನ್ಯ ದಬ್ಬಾಳಿಕೆಗೆ ವನು ಬಗ್ಗುವ ಹಾಗಿಲ್ಲ."

"ನಮಗೆ ಕರುಣಾನಿಧಿ ಧನಿಯನ್ನು ಟ್ಟಿರುವದಕ್ಕಾಗಿ ನಾವು ದೇವರ ಉಪ ಸ್ಮರಣೆಯನ್ನು ಮಾಡುತ್ತಿರಬೇಕು." ಪ್ಪೈಯು ಸಮೀಪಕ್ಕೆ ಬರುತ್ತಿದ್ದಂತೆ, ಮಗಳನ್ನು ಪಕ್ಕಕ್ಕೆಳೆದುಕೊಂಡು, ದಳು.

"ಮುರುಗ, ಇತರ ತೋಟಗಳ ನಡುವೆ ತೋಟವು ಒಂದು ಚಿಕ್ಕ ಸ್ವರ್ಗವೇ ಅವುಗಳೆಲ್ಲವೂ ನಿರುಪಯೋಗಿಗಳಿ ವೆ. ಈ ತೆಂಗಿನ ಮರಗಳ ತಂಪಾದ ನೆರಳಿ ನಲ್ಲಿ ಜೀವನ ಸಾಗಿಸುವದು 'ಕಮಲ- ಸನ' ಇದೆ." ತೊಪ್ಪೈ ಮುರುಗನನ್ನು ವಂದಿಸಿದನು. "ಮತ್ತು ಎಂತಹ ನೀಚ ಧೈರ್ಯ ನನ್ನದಿದೆ!" ಎಂದನು.

"ಯಾಕೆ, ತೊಪ್ಪೈ, ನೀನೇತಕ್ಕೆ ದೂ ರಿಕೊಳ್ಳುತ್ತಿರುವೆ? ಹಳ್ಳಿಯಲ್ಲೇ ಅತಿ ದೊಡ್ಡ ಜಮೀನುದಾರನಿಗೆ ಸೇರಿದವನೆಂ ಬ ಮರ್ಯಾದೆ ನಿನಗಿದೆ. ಪುಸ್ತಕದಲ್ಲಿ ನಾವು ಕೇವಲ ಪರಮಾಣುಗಳಿದ್ದೇವೆ. ನಿನ್ನ ದಾದರೋ ಗರ್ವಮಯ ಹಾಗೂ ಶಕ್ತಿ ಪೂರ್ಣವಾದುದಿದೆ. ನಾವು ಏನು ಹಾಗೂ ಎಲ್ಲಿ? ಅಲ್ಲದೆ ನನ್ನ ಧನಿ ಓಡಿಹೋದವ ಹಾಗೂ ಗಂ ಓಡಿಸುವ ಬಡ ಬಾಡಿಗೆಯು ಗುಮಾಸ್ತನು ಎಂದು ನಿನ್ನ ಅಯ್ಯರ್ ಹೇಳುತ್ತಿದ್ದಾರೆ."

"ಜಮೀನು ಮತ್ತು ಅಯ್ಯರ್‌ನನ್ನು ಹೋಗು ಹಾಕು. ನನಗಷ್ಟು ಶಕ್ತಿ ಇರುತ್ತಿದ್ದಲ್ಲಿ, ಈ ತೆಂಗಿನ ನಾರನ್ನು ಈಗ ಇಲ್ಲೇ ಹೊಸೆದು ಹಗ್ಗ ಮಾಡಿ, ಅವನ ಜುಟ್ಟಿಗೆ ಕಟ್ಟಿ ಅತಿ ಸಮೀಪದ ಮರಕ್ಕೆ ನೇತು ಹಾಕುತ್ತಿದ್ದೆ. ಛೆ! ಅಲ್ಲಿ ಅವನು ಆ ಸಪೂರ ಗದ್ದೆಯ ಅಂಚಿನ ಮೇಲೆ, ಕಸರತ್ತಿನ ಸಣ್ಣ ಆನೆಯ ಹಾಗೆ ಓಲಾಡುತ್ತ ಹೋಗುತ್ತಿದ್ದಾನೆ. ಅವನು ಜಾರಿ ಕೆಳಗೆ ಬಿದ್ದು ಕೆಸರಿನಲ್ಲಿ ಹೂತು ಹೋಗಬೇಕೆಂಬುದೇ ನನ್ನ ಆಶೆ."

"ತೊಪ್ಪೈ ಈ ರೀತಿ ಮಾತಾಡಲು ನಿನಗೆ ಹುಚ್ಚು ಹಿಡಿದಿರಬೇಕು. ನೀನೇ ನಾಶವಾಗುತ್ತಿ, ನೋಡು,"

'ನನ್ನನ್ನವನು ನರಳಾಡಿಸುತ್ತಾನೆ, ಅಲ್ಲದೆ ಥಳಿಸುತ್ತಾನೆ. ನಾನು ಅವನಿಗೊಂದು ಪಾಠವನ್ನು ಕಲಿಸುತ್ತೇನೆ. ನಾನು ಪಟ್ಟಣದ ಪೋರನಿದ್ದೇನೆ."

'ಅವಸರ ಪಡದಿರು ತೊಪ್ಪೈ. ಅವಸರ ಪಟ್ಟಲ್ಲಿ ಕಡೆಗೆ ನೀನೇ ದುಃಖಪಡುವಿ. ಕಾದಾಡುವದು ನಿನ್ನ ಸ್ವಭಾವವಿದೆ, ಬಳಿಯ ಹಳ್ಳಿಯಲ್ಲಿರುವ ಮೊದಲಿಯಾರನೆ ಜಮೀನನ್ನು ನೋಡು. ಅಲ್ಲಿ ಕೆಲಸ ಬಹಳ ಕಷ್ಟವಿದೆ. ಅವನು ಬಹಳ ಕ್ರೂರಿ ಇದ್ದಾನೆ. ಇಷ್ಟೇ ಇರುವದು ನಿನ್ನ ಪುಣ್ಯವಿದೆ. ಕೊನೆಯ ಪಕ್ಷ, ಅಯ್ಯರ್ ಶಾಂತ ಸ್ವಭಾವದವನಲ್ಲದೆ ನಿರ್ಘಾತಕನಿದ್ದಾನೆ. ಕ್ರೂರತೆಯು ನಮ್ಮ ಹಾಗೆ ಇರುವ ಪಳ್ಳಿ ಹಾಗೂ ಪಡ್ಯಾಚಿ ದಲ್ಲಾಳಿಗಳ ಕೆಲಸವಿದೆ. ಪ್ರಾಣಿಗಳ ಹಾಗೆ ವರ್ತಿಸುವವರು ಸ್ವಜನರೇ ಇದ್ದಾರೆ."

"ಅದು ಹಾಗೆ ಇರಬಹುದು, ಮುರುಗ. ಆದರೆ, ಆ ರೀತಿ ಸೂಕ್ಷ್ಮ ಹಾಗೂ ಬೇಧ ಬುದ್ಧಿಯಿಂದ ಕಾಣುವ ಸ್ಥಿತಿಯಲ್ಲಿ ನಾನಿಲ್ಲ. ನಾನೇನೂ ಮೊದಲಿಯಾರನ ಜಮೀನಿನಲ್ಲಿಲ್ಲ. ನನ್ನ ಸಂಬಂಧ ಇರುವದು ಅಯ್ಯರ್‌ನ ಬಳಿ ಮಾತ್ರ. ಇನ್ನೂ ಅವನು ನನಗೆ ಒಂದು ತಿಂಗಳ ಸಂಬಳವನ್ನು ಕೊಟ್ಟಿರುವದಿಲ್ಲ. ಮದುವೆಯಾಗದ ಮನುಷ್ಯರಿಗೂ ಹೊಟ್ಟೆ ಇದೆ, ಅನೇಕ ಅಭ್ಯಾಸಗಳಿರುತ್ತವೆ. "ಈ ಬಡಪಾಯಿಗಳನ್ನವನು ಪ್ರಾಣಿಗಳ ಹಾಗೆ ನೋಡಿಕೊಳ್ಳುತ್ತಿದ್ದಾನೆ. ಅವರು ಪುಕ್ಕರಾಗಿ ಇರುವದರಿಂದ ಆಯಿತು. ನಾನು ಸಂಕುಚಿತ ಹೃದಯಿ ಕೂಡಾ ಇರುವದಿಲ್ಲ. ಈ ವಾರದ ಅಂತ್ಯದೊಳಗೆ, ಸೂರ್ಯನು ಇನ್ನೊಂದು ಮಂಗಳವಾರವನ್ನು ಕಾಣುವ ಮುಂಚೆ, ಅಯ್ಯರ್‌ಗೆ ನಾನು ದಾರಿ ತೋರಿಸುತ್ತೇನೆ."

"ತಾಳು ತೊಪ್ಪೈ, ತಾಳ್ಮೆಯಿಂದಿರು." ಮುರುಗನು ಹೇಳಿದನು.

"ಇಲ್ಲ, ಇನ್ನೊಂದು ಕ್ಷಣ ಕಾಲವನ್ನೂ ಹಾಳು ಮಾಡುವದಿಲ್ಲ. ದೇಹ, ಮನಸ್ಸು ಮತ್ತು ಪ್ರಾಣ ಎಲ್ಲವೂ ದಂಗೆ ಎದ್ದಿವೆ. ಕೆಲಸದಿಂದಾಗಿ ಹಾಗೂ ಹಸಿವೆಯಿಂದಾಗಿ ನನ್ನ ತಲೆ ಸುತ್ತುತ್ತಿದೆ, ಸ್ಮೃತಿ ತಪ್ಪುವಂತಿದೆ. ನೋವಿನ ಉದ್ರೇಕದಿಂದಾಗಿ ಉಸಿರು ಕಿವಿಯ ಮೂಲಕ ಕಲಕಲ ಶಬ್ದ ಮಾಡುತ್ತಿದೆ. ಮುರುಗ, ನನ್ನ ಬಾಯಾರಿಕೆ ಮತ್ತು ಹಸಿವೆಯನ್ನು ಕಮ್ಮಿ ಮಾಡಲು, ನಿನ್ನ ಈ ಚಿಕ್ಕ ಮಗುವಿನ ಹೆಸರಿನಿಂದ ನನಗೊಂದು ಸಿಹಿಯಾಳವನ್ನು ತೆಗೆದುಕೊಡಲಾರೆಯಾ?"

"ದೇವರು ನಿನ್ನನ್ನು ಆಶೀರ್ವದಿಸಲಿ." ಎನ್ನುತ್ತ, ಉಪಕಾರ ಸ್ಮರಣೆಯ ನೋಟವನ್ನು ಬೀರುತ್ತ, ಸಿಹಿಯಾಳವನ್ನು ಕುಡಿದನು.

ಹೊಟ್ಟೆಬಾಕನು ಆಕ್ಷಣಕ್ಕಾದರೂ ಉತ್ತಮ ಶ್ರೋತೃವೆಂದು ಭಾವಿಸಿಕೊಂಡ ಮುರುಗನು ಬುದ್ಧಿ ಹೇಳಲು ಪ್ರಾರಂಭಿಸಿದನು. "ಕೆಟ್ಟದಿರುವದು ರೀತಿಯಲ್ಲಿ ಅಲ್ಲದೆ ಮನುಷ್ಯನಲ್ಲಿ ಅಲ್ಲ. ನೋಡು, ನನ್ನ ಧನಿ ಬಹಳ ಒಳ್ಳೆಯವರಿದ್ದಾರೆ. ಹಾಗಿದ್ದರೂ, ನಾನು ಕೇವಲ ಉಳುವವನಾಗಿದ್ದಾಗ ಈ ಭೂಮಿ ಇಷ್ಟು ಬೆಳೆಯನ್ನು ಕೊಡುತ್ತಿರಲಿಲ್ಲ. ಆಗಲೂ ನಾನೇನೂ ಕಡಿಮೆ ದುಡಿಯುತ್ತಿದ್ದಿಲ್ಲ. ಕಳೆದ ವರ್ಷ ಇದು ಎರಡರಷ್ಟು ಬೆಳೆಯನ್ನು ಕೊಟ್ಟಿದೆ. ಈ ವರ್ಷ ಅದಕ್ಕಿಂತಲೂ ಜಾಸ್ತಿ ಬರಬಹುದೆಂಬುದರಲ್ಲಿ ಸಂದೇಹವಿಲ್ಲ."

ಮುರುಗನು ಬೇಗನೆ ಗಂಟಲನ್ನು ಸರಿಪಡಿಸಿಕೊಂಡು ಮುಂದುವರಿಸಿದನು. ಅವನಿಗೆ ತೊಪ್ಪೈ ಆ ರೀತಿ ಸಾವಧಾನದಿಂದ ಕೇಳುತ್ತಿದ್ದದ್ದು ಮತ್ತಷ್ಟು ಉತ್ಸಾಹವನ್ನಿತ್ತಿತು. ಸಿಹಿಯಾಳವು ನಿಜವಾಗಿ ಇಂದ್ರಜಾಲದಂತೆ ಬದಲಾವಣೆಯನ್ನುಂಟು ಮಾಡಿದೆ.

"ಕೂಲಿಯವನಿಂದ ಕೆಲಸ ಮಾಡಿಸಿಕೊಳ್ಳುವಷ್ಟು ಪಾಪ ಬೇರಾವದೂ ಇಲ್ಲ. ಬಾಡಿಗೆಯ ಶ್ರಮವು ದುಡಿಸಿಕೊಳ್ಳುವವನನ್ನೂ ದುಡಿಯುವವನನ್ನೂ ಶಪಿಸುತ್ತದೆ. ಆದರೆ ಪ್ರಪಂಚದಲ್ಲಿ ಯಾವಾಗಲೂ ಬದಲಾವಣೆ ಆಗಲು ಬಹಳ ಸಮಯ ಬೇಕಾಗುತ್ತದೆ. ಮನುಷ್ಯನಲ್ಲಿರುವ ಆತ್ಮಾಶೆಯು ಬದಲಾವಣೆಯನ್ನು ಮತ್ತಷ್ಟು ಹಿಡಿದು ನಿಲ್ಲಿಸುತ್ತದೆ. ಸರಿಯಾದ ರೀತಿಯಲ್ಲೇ ಆರಂಭ ಮಾಡಿ ಆಗಿದೆ ಎಂಬುದು ಸಂತೋಷದ ಸಂಗತಿ ಇದೆ. ನಿಧಾನವಾಗಿ ನಡೆ ನಡೆ, ತಾಳ್ಮೆಯಿಂದ ಕೆಲಸ ಮಾಡಿಕೊಂಡು, ನಮ್ಮ ನಮ್ಮ ಸ್ಥಾನವನ್ನು ಪಡೆದುಕೊಳ್ಳುವದರಲ್ಲಿ ನಾವು ಜಯಶಾಲಿಗಳಾಗೋಣ ತೊಪ್ಪೈ, ಸುಮುಹೂರ್ತಕ್ಕಾಗಿ ತಾಳು, ನಿನ್ನ ಕರ್ಮ ಫಲವು ಸರಿಯಾದಾಗ ಆ ಮುಹೂರ್ತ ಖಂಡಿತವಾಗಿ ಬರುತ್ತದೆ."

"ಮುರುಗ, ನಿನಗೆ ಸಂಬಂಧಪಡುವವರೆಗೂ ಅದು ಹಾಗೆ ಇರಬಹುದು. ನಾಗುವಳಿದಾರನು ತತ್ವವಿಚಾರ ಮಾಡಬಹುದು. ಹಸಿವಿನಿಂದ ಹಾಹಾಕಾರ ಗೈಯ್ಯುತ್ತಿರುವ ಹೊಟ್ಟೆಯು ಯಾವಾಗಲೂ ಮೆದುಳನ್ನು ಶಾಂತವಾಗಿ ಆಲೋಚಿಸಲಿಕ್ಕೆ ಬಿಡುವದಿಲ್ಲ. ಕರ್ಮಫಲ ಬಂದು ವನೆ ಬಾಗಿಲು ತಟ್ಟುವ ವರೆಗೆ ನಾನು ಕಾಯುವದಿಲ್ಲ. ಬಾಕಿ ಇರುವ ಕೂಲಿ ಹಾಗೂ ಬರಿ ಹೊಟ್ಟೆಯಿಂದ ಬೆಳಗ್ಗಿನ ದುಡಿತ — ಇವುಗಳ ಕುರಿತು ಮಾತ್ರವಲ್ಲದೆ, ಬೇರೆ ಯಾವುದರ ಕುರಿತೂ ಆಲೋಚಿಸಲು ಸಾಧ್ಯವಿರುವದಿಲ್ಲ."

ತೊಪ್ಪೈಯ ಸ್ವರವೇರಿತು, ಕಣ್ಣೆಯಲ್ಲಿ ಕೋಪದ ಕಿಡಿ ಕುಣಿಯುತ್ತಿತ್ತು.

"ರಾತ್ರಿಯಲ್ಲಿ ಆ ಧನಿ ಬರುವ ದಾರಿಯನ್ನು ಕಾಯುತ್ತ ನಾವು ನಿಂತಿರಬೇಕು. ಸಂಜೆಯಾದೊಡನೆ ಅವನು ಹರಟೆ ಹೊಡೆಯಲಿಕ್ಕೆ ಅಥವಾ ಕಪಟ ಪ್ರಾರ್ಥನೆಗೆಂದು — ಮಾಡಿರುವ ಪಾಪ ಮುಕ್ತಿ ಸಿಗುವ ಹಾಗಿಲ್ಲವಾದರೂ ಆಶೆಯಿಂದ — ಹೋಗುತ್ತಾನೆ. ಬಂದ ಮೇಲೆ, ಯಾವ ಮಾರುಕಟ್ಟೆಯಲ್ಲೂ ತೆಗೆದುಕೊಳ್ಳದೆ ಉಳಿದಿರುವಂತಹ ಹಳೆಯ, ಹಾಳಾಗಿರುವ ಭತ್ತವನ್ನು ಕೊಡುತ್ತಾನೆ. ಅಂಧಕಾರಮಯ ರಾತ್ರಿಯಲ್ಲಿ ಮುಳ್ಳುಗಳಿಂದ, ವಿಷ ಜಂತುಗಳಿಂದ, ಪಿಶಾಚಿಗಳಿಂದ ಕೂಡಿರುವ ಹೊಂಡ, ಕಾಡುಗಳ ದಾರಿಯಿಂದ ಮನೆಗೆ ಹೋಗಿ, ಭತ್ತವನ್ನು ಕುಟ್ಟಿ, ಅಕ್ಕಿ ಮಾಡಿ, ಆ ನಡುರಾತ್ರಿಯಲ್ಲಿ ತಿನ್ನಬೇಕು! ಅನಂತರ ಮಲಗಬೇಕು. ಬೆಳಗಾಗುವ ಮುಂಚೆಯೇ ಆಗತ್ಯದ ಕೆಲಸಕ್ಕಾಗಿ ಎಬ್ಬಿಸಲ್ಪಡುತ್ತದೆ. ಇಷ್ಟು ವರ್ಷಗಳಿಂದ ಅಷ್ಟು ತಳುಗಳು ಅದು ಹೇಗೆ ಸಹಿಸಿಕೊಂಡಿದ್ದರೋ? ನನಗೆ ಆಶ್ಚರ್ಯವಾಗುತ್ತದೆ. ಬಹುಶಃ ಕೆಲವರು ಹೇಳುವಂತೆ, ನಾನು ಪಟ್ಟಣದಲ್ಲಿ ಓದಿರುವದರಿಂದ, ಅಚ್ಚಾಗಿರುವ ಪುಸ್ತಕಗಳು ನನ್ನ ಮನಸ್ಸನ್ನು ಬದಲಾಯಿಸಿರಬಹುದು; ಹಾಗೆ ಇತರರಿಗಿಂತ ಬೇರೆ ರೀತಿಯವನಾಗಿ ಕಂಡುಬರುತ್ತೇನೆ. ದೇವರೆ, ಸ್ವಾಮಿಗಳು, ನನಗೇನೋ ಮದುವೆಯಾಗಿಲ್ಲ. ನಾನು ದಂಗೆ ಏಳುವದಕ್ಕೂ ಶಕ್ತನಿದ್ದೇನೆ. ಇಷ್ಟರ ವರೆಗೆ ಶಾಂತವಾಗಿ, ಪಳಗಿಸಿದ ನಾಯಿಯಂತೆ ಹೇಗೆ ಜೀವ ಹಿಡಿದುಕೊಂಡಿದ್ದೇನೆಂದು ನನಗೇನೇ ಆಶ್ಚರ್ಯವಾಗುತ್ತದೆ."

"ನೀನು ಇತರರಿಗಿಂತ ಭಿನ್ನ ರೀತಿಯಲ್ಲಿ ಆಲೋಚಿಸುತ್ತಿ, ತೊಪ್ಪೈ. ಕಂಗೆಟ್ಟ ಮುರುಗನು ಇನ್ನೊಮ್ಮೆ ಎಚ್ಚರಿಸಿದನು. 'ಜ್ಞಾಪಕದಲ್ಲಿಟ್ಟುಕೋ. ಒಮ್ಮೆ ನಮ್ಮ ಜೀವನವೂ ಬಹಳ ಕಠಿಣತರವಾಗಿತ್ತು. ಸಮಯವು ಬದಲಾಗುತ್ತದೆ. ದುಡಿ, ಹಾಗೆಯೇ ತಾಳು. ಸುದಿನವು ಬಂದೇ ಬರುತ್ತದೆ. ಅಯ್ಯರ್‌ನನ್ನು ನೀನು ಮೆಚ್ಚದಿದ್ದಲ್ಲಿ, ನನ್ನೊಂದಿಗೆ ಬೇಕಾದರೆ ಕೆಲಸ ಮಾಡಬಹುದು.' ಮುರುಗನು ಕೊನೆಗೆ ಆತ್ಮವಿಶ್ವಾಸದಿಂದ ಹಾಗೂ ಮೆಲ್ಲಗೆ ಹೇಳಿದನು.

'ಮುರುಗ, ನನಗೆ ಬೇಕಾದಷ್ಟು ಕೆಲಸ ನನ್ನ ಬಳಿಯೇ ಇದೆ. ಬೇರೆಯವರ ಬಳಿ ಗುಲಾಮನಾಗಿರಲು ನನಗೆ ಇಷ್ಟವಿಲ್ಲ."

"ನೀನು ಸ್ವತಂತ್ರನಾಗಿ ದುಡಿಯಬೇಕಾಗಿದ್ದಲ್ಲಿ, ಮೊದಲು ಬೇರೆಯವರ ಬಳಿ ದುಡಿಯುತ್ತಿರಬೇಕು. ಶೂನ್ಯದಿಂದ ಹೇಗೆ ಆರಂಭಿಸುತ್ತೀ? ನೀನು ಆಲೋಚಿಸುವಂತೆ, ತಾರುಣ್ಯ ಕಾಲದಲ್ಲಿ ನಾನೂ ಯೋಚಿಸುತ್ತಿದ್ದೆ. ಆದರೆ ಈ ರೀತಿ ವರ್ತಿಸುತ್ತಿರಲಿಲ್ಲ. ನೀನು ಹೇಳುವದೆಲ್ಲಾ ನ್ಯಾಯವಾಗಿದ್ದರೂ, ಬೆಂಕಿಯೊಡನೆ ಆಟವಾಡಕೂಡದು. ಅದು ನಿನ್ನನ್ನು ಸ್ವಾಹಮಾಡಿಕೊಂಡು ಬಿಟ್ಟೀತು. ಸುಸಂದರ್ಭವು ಒಂದು ದಿನ ಬಂದೇ ಬರುತ್ತದೆ. ದೊಡ್ಡವರೊಂದಿಗೆ ಜಗಳವಾಡ ಬೇಡ, ಪಿತೂರಿ ನಡೆಸಬೇಡ, ನ್ಯಾಯಾಲಯದ ತೊಂದರೆಗೆ ಹೋಗ ಬೇಡ, ಕೆಲಸ ಮಾಡುತಲಿರು. ದೇವರು ದೊಡ್ಡವರಿದ್ದಾರೆ. ನಾನು ನಿನಗೆ ಸಹಾಯ ಮಾಡುತ್ತೇನೆ. ಕೊನೆಯಲ್ಲಿ ಅವರು ನನಗೆ ಪ್ರತಿಫಲವನ್ನು ಕೊಡುತ್ತಾರೆ."

"ಮುರುಗ, ನಾನು ತೊಪ್ಪೈಯೆಂದು ಏಕೆ ಕರೆಯಲ್ಪಡುತ್ತಿದ್ದೇನೆಂದು ನಿನಗೆ ಗೊತ್ತಿದೆಯೇ? ಪಟ್ಟಣದಲ್ಲಿ, ಮಾವನ ಮನೆಯಲ್ಲಿದ್ದಾಗ, ನಾನು ತಿನ್ನುವದನ್ನು ಮತ್ತು ಮಾತಾಡುವದನ್ನು ಪ್ರೀತಿಸುತ್ತಿದ್ದೆ. ಇಂದಿಗಿಂತಲೂ ಅಂದು ನನ್ನ ಹೊಟ್ಟೆ ಎದ್ದು ಕಾಣುತ್ತಿತ್ತು. ಎಳೆಯರು ಹಾಗೂ ಮುದುಕರು ನನ್ನನ್ನು ತೊಪ್ಪೈ

# ಮೈಸೂರು ಭತ್ತದ ಲೆವಿ ಆಜ್ಞೆ

**ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರು ತಾ. 30-11-65ರಂದು ಡಿ. ಸಿ.ಗೆ ಒಪ್ಪಿಸಿದ ಮನವಿಯ ಮುಖ್ಯಾಂಶಗಳು**

### 1. ದರ ಮಿತಿಮೀರಿದ್ದು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇಳಿಕೊಳ್ಳುವಂತಹ ನೀರಾವರಿ ಯೋಜನೆಗಳಿಲ್ಲ. ಬೇಸಾಯವು ಪೂರ್ಣವಾಗಿ ಅನಿಶ್ಚಿತ ಮಳೆಯನ್ನು ಹೊಂದಿಕೊಂಡಿದೆ. ಈ ವರ್ಷದ ಎಣೆಲ್ ಬೆಳೆಯ ಸಂದರ್ಭದಲ್ಲಿ ಮಳೆ ಸರಿಯಾಗಿ ಬಾರದೆ ಭತ್ತದ ಪೈರು ಉತ್ತಮವಾಗಿಲ್ಲ. ಮತ್ತು ಸುಗ್ಗಿಯ ಬೆಳೆಯ ಭವಿಷ್ಯವು ಆಶಾದಾಯಕವಾಗಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯು ಆಹಾರದ ಮಟ್ಟಿಗೆ ಕೊರತೆಯ ಜಿಲ್ಲೆಯಾಗಿದೆ. ನಿಯಮಿತ ಅಥವಾ ಅನಿಯಮಿತ ರೇಶನ್ ಪದ್ಧತಿಯಿಲ್ಲದ ಹಳ್ಳಿ ಪ್ರದೇಶಗಳಲ್ಲಿ ಭತ್ತವನ್ನು ಕಡ್ಡಾಯವಾಗಿ ವಸೂಲು ಮಾಡುವುದರಿಂದ ಆಹಾರದ ಕೊರತೆಯು ಇನ್ನೂ ಹೆಚ್ಚುವುದು.

ಬೇಸಾಯದ ಕ್ರಮದಲ್ಲಿ ನಮ್ಮ ಜಿಲ್ಲೆಯ ರೈತರು ಈಗ ಕೂಡಾ ಹಿಂದಿನ ಕ್ರಮವನ್ನೇ ಅನುಸರಿಸುತ್ತಾ ಇದ್ದಾರೆ. ರಾಸಾಯನಿಕ ಗೊಬ್ಬರಗಳ ಉಪಯೋಗವೂ ಸಾಕಷ್ಟು ಸಂಬರಾಜು ಇಲ್ಲದ ಕಾರಣ ಮಿತವಾಗಿದೆ. ಆದ್ದರಿಂದ ಭತ್ತದ ಉತ್ಪಾದನೆಯು ಈ ಜಿಲ್ಲೆಯಲ್ಲಿ ಹೆಚ್ಚಿಲ್ಲ. ತಾ. 20—4—1934ರ ದಕ್ಷಿಣಕನ್ನಡ ಜಿಲ್ಲಾ ಗಜೆಟನಲ್ಲಿ ಪ್ರಕಟವಾದ ಎರಡನೇ ಸೆಟ್ಲಮೆಂಟ್ ವರದಿಯಿಂದ ಈ ವಿಷಯವು ಸ್ಪಷ್ಟವಾಗುವುದು. ತಾರೀಕು 25—8—1902ರ ಗ. ಒ. ನಂ. 757ರ ಪ್ರಕಾರ ಮೊದಲನೇ ಸೆಟ್ಲಮೆಂಟ್ ಈ ಜಿಲ್ಲೆಯಲ್ಲಿ ನಡೆಯಿತು. ಆಗ ಬೆಳೆಯನ್ನು ತೆಗೆಯುವ 616 ಪ್ರಯೋಗಗಳು ನಡೆದುವು. ಈ ಪೈಕಿ 296 ಪ್ರಯೋಗಗಳಿಂದ ಎಕ್ರೆಯೊಂದರ ಸರಾಸರಿ 566 ಮದ್ರಾಸು ಸೇರುಗಳಷ್ಟು ಭತ್ತವನ್ನು ಪಡೆಯಲಾಯಿತು. ಇದರ 15%ರಷ್ಟು ಕುಂದುಲು ಎಂದು ಪರಿಗಣಿಸಲಾಯಿತು. ಎಕ್ರೆ ಒಂದರ ಸರಾಸರಿ ಭತ್ತದ ಉತ್ಪನ್ನ 722 ಪೌಂಡುಗಳು ಅಂದರೆ 3· 17 ಕ್ವಿಂಟಾಲ್‌ಗಳೆಂದು ತಿಳಿದು ಬಂತು. 290 ಪ್ರಯೋಗಗಳಿಂದ ಕಂಡು ಬಂದ ಸರಾಸರಿ ಉತ್ಪನ್ನವು ಇದಾಗಿದೆ. ಅಂದರೆ ಶೈಕ್ಯಂತ ಹೆಚ್ಚಿನ ಪ್ರಯೋಗಗಳಲ್ಲಿ ದೊರಕಿದ ಉತ್ಪನ್ನವು ಎಕ್ರೆ ಒಂದರ ಸರಾಸರಿ 3-11 ಕ್ವಿಂಟಾಲ್‌ಗಳಿಗೂ ಕಡಿಮೆಯಾಗಿದೆ ಎಂದು ಸ್ಪಷ್ಟವಾಗುವುದು.

10 ಎಕ್ರೆಗಿಂತ ಹೆಚ್ಚಿನ ಜಮೀನು ಇದ್ದವರು 10 ಎಕ್ರೆಗಿಂತ ಹೆಚ್ಚಾಗಿ ಇರುವ ಎಕ್ರೆ ಒಂದರ 3 ಕ್ವಿಂಟಾಲ್ ಭತ್ತವನ್ನು ಕೊಡಬೇಕೆಂದು ಲೆವಿ ಆಜ್ಞೆಯಲ್ಲಿ ನಿರ್ಧರಿಸಲಾಗಿದೆ. ಈ ಆಜ್ಞೆಯು 10 ಎಕ್ರೆಗಿಂತ ಹೆಚ್ಚು ಜಮೀನು ಬೇಸಾಯ ಮಾಡುವವನಿಗೆ ಒಂದು ಶಾಪವಾಗಿದೆ. ಹೇಗೆಂದರೆ ಅವನು ತನಗಾಗುವ ನಷ್ಟ ಇನ್ನು ಪ್ರಾರಂಭದ 10 ಎಕ್ರೆಯಿಂದ ತುಂಬಿಸಿಕೊಳ್ಳಬೇಕಾಗಿದೆ. ಅನಂತರದ 5 ಎಕ್ರೆಗಳಗಿಂತ ಹೆಚ್ಚಿನ 5 ಎಕ್ರೆಗಳಿಗೆ ಲೆವ್ವಿಯ ದರವು 10 ಕ್ವಿಂಟಾಲ್ ಆಗಿರುತ್ತದೆ. ಆದರೆ ಮೇಲೆ ಹೇಳಿದಂತೆ ಈ 5 ಎಕ್ರೆಯಿಂದ ಬರುವ ಉತ್ಪನ್ನವು 15 ಕ್ವಿಂಟಾಲ್‌ಗಳಿಗಿಂತ ಕಡಿಮೆಯಾಗಿದೆ. ಇದರ ಪರಿಣಾಮವೆಂದರೆ 10 ಎಕ್ರೆಗಳಿಗಿಂತ ಹೆಚ್ಚಿಗೆ ಜಮೀನು ಬೇಸಾಯ ಮಾಡುವವನು 10 ಎಕ್ರೆಗಿಂತ ಹೆಚ್ಚಿನ ಭೂಮಿಯನ್ನು ಬೇಸಾಯಮಾಡದೆ ಇರುವುದುಉಚಿತ ಎಂದುಭಾವಿಸಿ ಅರೀತಿ ಮಾಡಲು ಎಡೆಕೊಟ್ಟಂತಾಗುವುದು ಏಕೆಂದರೆ ಲೆವ್ವಿಯನ್ನು ಕೊಟ್ಟ ನಂತರ ಅವನ ಬಳಿ ಉಳಿಯುವ ಭತ್ತವು ಅವನು ಮಾಡಬೇಕಾದ ಆವಶ್ಯಕ ಸಾಗುವಳಿ ಖರ್ಚುಗಳನ್ನು ತುಂಬಲು ಸಾಲದಾಗುವುದು ಮೊದಲಿನ 5 ಎಕ್ರೆಯ ಬೇಸಾಯದಲ್ಲಿ ಅವನು ಲೆವ್ವಿ ಕೊಡಬೇಕಾದ ಒಟ್ಟು ಭತ್ತ 4 ಕ್ವಿಂಟಾಲ್ ಆದರೆ ಅವನು ಪಡೆಯುವ ಉತ್ಪನ್ನ 15 ಕ್ವಿಂಟಾಲ್‌ಗಿಂತಲೂ ಕಡಿಮೆಯಾಗಿದೆ. ಆದರೆ ಅವನ ಪಾಲಿಗೆ ಉಳಿಯುವ ಭತ್ತ ಬರೀ 11 ಕ್ವಿಂಟಾಲ್ ಆಗಿರುತ್ತದೆ.

### 2. ಬೇಸಾಯಕ್ಕೆ ಖರ್ಚೇ ಇಲ್ಲ?

1902ನೇ ಇಸವಿಯಲ್ಲಿ ನಡೆದ ಒಂದನೇ ಸೆಟ್ಲಮೆಂಟ್ ಪ್ರಕಾರ ಒಂದು ಎಕ್ರೆ ಬೇಸಾಯಕ್ಕೆ ತಾಗುವ ಖರ್ಚು ರೂ. 13—8—0 ಎಂದು ನಿರ್ಧರಿಸಲಾಗಿದೆ. ಆಗ ಭತ್ತದ ದರ 1 ರೂಪಾಯಿಗೆ 27 ಸೇರು ಆಗಿತ್ತು. ಅಂದರೆ ಎಕ್ರೆ ಒಂದರ ಸಾಗುವಳಿ ಖರ್ಚು 4¼ ಮುಡಿ ಅಕ್ಕಿ ಅಥವಾ ಮೆಟ್ರಿಕ್ ಅಳತೆಯಲ್ಲಿ 3 ಕ್ವಿಂಟಾಲ್ ಭತ್ತವೆಂದಾಗುತ್ತದೆ. ಇದು 5 ಎಕ್ರೆ ಬೇಸಾಯಮಾಡಿದಾಗ ಇರುವ ಸರಾಸರಿ ಉತ್ಪನ್ನಕ್ಕೆ ಸಮವಾಗುತ್ತದೆ.

ಬೇಸಾಯವು ನಮ್ಮ ದೇಶದಲ್ಲಿ ಅವನ ಕುಟುಂಬ ಪೋಷಣೆಯ ಏಕಮಾತ್ರ ಮಾರ್ಗವಲ್ಲದೆ ಅವನ ಜೀವನ ಪದ್ಧತಿಯೂ ಆಗಿದೆ. ಬೇಸಾಯವು ಅವನ ಕೆಲಸದ ಸಂಬಳವನ್ನು ಒದಗಿಸುವುದರಿಂದಲೂ ಮತ್ತು ಅವನಿಗೆ ಬೇರೆ ವೃತ್ತಿ ಗೊತ್ತಿಲ್ಲದ ಕಾರಣ ಬೇಸಾಯಗಾರನು ತನ್ನ ಈ ವೃತ್ತಿಯು ಲಾಭಕರವಲ್ಲದಿದ್ದರೂ ಮುಂದುವರಿಸಿದೊಂಡಿದ್ದಾನೆ. ನಗದು ಬೆಳೆಯನ್ನು ಅವನು ಬೆಳೆಸಬಲ್ಲನಾದರೆ ಅವನಿಗೆ ಅದರಿಂದ ಸ್ವಲ್ಪವಾದರೂ ಲಾಭ ಸಿಗುವಂತಾಗಿದೆ.

### 3 ಯಾವುದೇ ವಿನಾಯಿತಿ ತೋರಿಸಿಲ್ಲ.

ಮೇಲೆ ಹೇಳಿದ ಸಂಗತಿಗಳು ಸಾಮಾನ್ಯ ಋತುಮಾನಗಳಲ್ಲಿ ಸಿಗತಕ್ಕ ಸಾಧಾರಣ ಬೆಳೆಗಳಿಗೆ ಅನ್ವಯಿಸುತ್ತವೆ. ಆದರೆ ಈ ವರ್ಷವಾದಂತೆ ಮಳೆ ಬಾರದೆ ಬೆಳೆಯು ಹಾಳಾದ ಬಗ್ಗೆ ಯಾವುದೇ ವಿನಾಯಿತಿಯನ್ನು ಲೆವ್ವಿ ಆಜ್ಞೆಯು ಒಳಗೊಂಡಿಲ್ಲ.

### 4 ಆಕ್ಷೇಪಣೆಯನ್ನು ಎತ್ತಲು ಅವಕಾಶವಿಲ್ಲ.

ಕಲಂ 3ರ ಪ್ರಕಾರ ಬೇಸಾಯ ಮಾಡಿದ ಜಮೀನಿನ ವಿಸ್ತೀರ್ಣವನ್ನು ಹೊಂದಿಕೊಂಡು ರೈತನು ಭತ್ತವನ್ನು ಕೊಡತಕ್ಕದ್ದು. ಹಳ್ಳಿಗಳಲ್ಲಿ ಶ್ಯಾನುಭೋಗರು ತಯಾರಿಸಿದ ಪಟ್ಟಾರಿಜಿಸ್ಟ್ರಿಯ ಆಧಾರದ ಮೇಲೆ ಮತ್ತು ಒಕ್ಕಲುವಾರ್ ಪ್ರಕಾರ ಬೇಸಾಯಗಾರರ ಪಟ್ಟಿಯನ್ನು ತಯಾರಿಸಿದ್ದಾರೆ. ಈ ಪಟ್ಟಿಯನ್ನು ತಯಾರಿಸಿದ ರೀತಿಯು ಬೇಜವಾಬ್ದಾರಿಯದ್ದೂ ಮತ್ತು ಅನಧಿಕೃತವೂ ಆಗಿದೆ. ಭತ್ತವನ್ನು ವಸೂಲು ಮಾಡುವ ಅಧಿಕಾರಿಗಳು ಪಟ್ಟಿಯಲ್ಲಿ ಕೊಟ್ಟ ಅಂಕೆ ಸಂಖ್ಯೆಗಳ ಆಧಾರದ ಮೇಲೆ ಲೆವ್ವಿ ಆಜ್ಞೆಯನ್ನು ಜ್ಯಾರಿಗೊಳಿಸಬೇಕು ವಿನಾ ಅದರ ನ್ಯಾಯ-ಅನ್ಯಾಯದ ಬಗ್ಗೆ ವಿಮರ್ಶೆ ಮಾಡಲು ಸಮರ್ಥರಿಲ್ಲ. ಬೇಸಾಯಗಾರನ ಬಳಿ ಇರುವ ಭತ್ತದ ಸಂಗ್ರಹವನ್ನು ಹಣ ಪಾವತಿ ಮಾಡದೆ ಜಪ್ತಿ ಮಾಡುವ ಅಧಿಕಾರ ಅವರಿಗಿದೆ. ಇದು ಸಹಕಾರಿ ಆಡಳಿತೆಯ ಸಾಮಾನ್ಯ ನಿಯಮಗಳಿಗೆ ಮತ್ತು ನ್ಯಾಯಕ್ಕೆ ವ್ಯತಿರಿಕ್ತವಾಗಿದ್ದು ಅರಾಜಕತೆಗೆ ಎಡೆಕೊಡುತ್ತದೆ.

### 5 ದಾರಣೆ ಅತೃಪ್ತಿಕರ

ಭತ್ತದ ಧಾರಣೆ, ಕ್ವಿಂಟಾಲಿಗೆ ರೂ. 38 ಎಂದು ನಿರ್ಧರಿಸಲ್ಪಟ್ಟಿದೆ. ಮಾರ್ಕೆಟು ಧಾರಣೆಯು ಕ್ವಿಂಟಾಲ್‌ಗೆ ರೂ. 75 ಇರುವಾಗ ಮೇಲಿನ ಧಾರಣೆಯನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಯಿತು ಎಂದು ತಿಳಿಸಿರುವುದಿಲ್ಲ. ಬೇಸಾಯಗಾರನ ಅತೀ ಅಗತ್ಯದ ಖರ್ಚು ವೆಚ್ಚಗಳನ್ನು ಪರಿಗಣಿಸದೆ ಅವನಿಂದ ಮಾರ್ಕೆಟ್ ಧಾರಣೆಯ 50%ರಷ್ಟು ಧಾರಣೆಗೆ ಭತ್ತವನ್ನು ವಸೂಲು ಮಾಡುವುದು ಸರಿಯೇ?

ಮೇಲಿನ ಧಾರಣೆಯಲ್ಲಿ ಪಡೆಕೊಂಡ ಭತ್ತದಿಂದ ತಯಾರಾಗುವ ಅಕ್ಕಿಯ ದರವು 1 ಕಿಲೋಗ್ರಾಮ್‌ಗೆ 57 ಪೈಸೆಯಾಗುವುದು. ಇಂತಹ ಅಕ್ಕಿಯನ್ನು ಮಂಗಳೂರಿನಂತಹ ರೇಶನ್ ಇರುವ ಪ್ರದೇಶದಲ್ಲಿ 1 ಕಿಲೋಗ್ರಾಂಗೆ ರೂ. 1-15ರಂತೆ ಮಾರಲಾಗುವುದು. ಮಾರ್ಕೆಟು ಧಾರಣೆಯು 1 ಕಿಲೊಗ್ರಾಂಗೆ ರೂ. 1-20ರಷ್ಟು ಇದೆ. ಅಂದರೆ ಲೆವ್ವಿಯ ಭತ್ತವನ್ನು ವಸೂಲು ಮಾಡಿ ಮಾರಾಟ ಮಾಡುವವರೇ ಅಸಲು 100% ರಷ್ಟು ಲಾಭವನ್ನು ಈ ವ್ಯವಹಾರದಲ್ಲಿ ಗಿಟ್ಟಿಸುವರು. ಬೇಸಾಯಗಾರನಿಗೆ ಎಳ್ಳಷ್ಟೂ ಪ್ರಯೋಜನವಿಲ್ಲ. ಸಾಗಾಟ, ಸಂಗ್ರಹ ಇವುಗಳ ವೆಚ್ಚ 5%ರಷ್ಟು ಎಂದು ಭಾವಿಸುವುದಾದರೆ ಉತ್ಪಾದಕನಿಗೆ ರೇಶನ್ ಧಾರಣೆಯಲ್ಲಿ 5% ರಷ್ಟು ಜಾಸ್ತಿ ಉಳಿದುದನ್ನು ಪಡೆಯಲು ಹಕ್ಕು ಇದೆ. ಸೆಟ್ಲಮೆಂಟ್ ಸ್ಕೀಮ್ ಮತ್ತು 1934 ರಿಸೆಟ್ಲಮೆಂಟ್ ಸ್ಕೀಮ್ ವರದಿಗಳಲ್ಲಿ ಕುಂದಲು ಮತ್ತು ವ್ಯಾಪಾರಸ್ಥನ ಲಾಭ ಇದಕ್ಕಾಗಿ 15%ರ ಮಿತಿಯನ್ನು ನಿರ್ಣಯಿಸಲಾಗಿದೆ. ಶೇಕಡಾ 100ರಷ್ಟು ಲಾಭಗಳಿಸುವ ಸ್ಟೇಟ್‌ಟ್ರೇಡಿಂಗ್ ಕೋರ್ಪೊರೇಶನ್ ಇದರ ಪ್ರಯತ್ನವು ಖಂಡನೀಯವಾಗಿದೆ.

### 6 ಈ ಬಗ್ಗೆ ಲೆವ್ವಿ ಆಜ್ಞೆಯನ್ನು ಬಲಾತ್ಕಾರದಿಂದ ಜ್ಯಾರಿಗೊಳಿಸಲಾಗುತ್ತಿದೆ

ಕೆಲವು ರೆವೆನ್ಯೂ ಅಧಿಕಾರಿಗಳು ಬೇಸಾಯಗಾರನ ಮನೆಯನ್ನು ಜಪ್ತಿಮಾಡಿ ಭತ್ತವನ್ನು ವಸೂಲು ಮಾಡುವರೆಂದು ವರದಿ ಬಂದಿದೆ. ಕುಟುಂಬದ ಪೋಷಣೆಗಾಗಲೀ, ಕೆಲಸಗಾರರಿಗೆ ಕೊಡಬೇಕಾದ ಮಜೂರಿಗಾಗಲೀ ಎಳ್ಳಷ್ಟು ಭತ್ತವನ್ನು ಬಿಡದೆ ಜಪ್ತಿ ಮಾಡಲಾಗಿದೆ ಎಂದು ಕೆಲವು ವರದಿಗಳು ತಿಳಿಸಿವೆ. ಅಂದರೆ ಆ ಸಂದರ್ಭಗಳಲ್ಲಿ ಬರೀ ಕಾಲಿ ಕಾಗದ ರಶೀದಿಗಳನ್ನು ಕೊಡಲಾಗಿದೆ ಎಂದೂ ತಿಳಿದು ತಿಳಿದುಬಂದಿದೆ. ಈ ರೀತಿಯಲ್ಲಿ ಮುಂದುವರಿದರೆ ಆಹಾರಧಾನ್ಯಗಳ ಉತ್ಪಾದನೆಯು ಇಳಿದು ಜನರು ಉಪವಾಸ ಬೀಳುವ ಪ್ರಸಂಗವು ಬರುವುದು.

---

(ಮೂರನೇ ಪುಟದಿಂದ)

ಪೂರ್ಣವಾಗಿವೆ; ಅಂತೆಯೇ ರಾಜಕಾ
ರದಲ್ಲಿ ಅವುಗಳನ್ನು ತೂಗಿ ನೋಡುವ
ಅಗತ್ಯವೂ ಇದೆಯೆನಿಸುತ್ತದೆ. ಪಾಕಿಸ್ತಾ
ನದೊಡನೆ ಮಾತುಕತೆಯಾಡಲು ಭಾರತ
ವು ತಾಷ್ಕೆಂಟಿಗೆ ಹೋಗುವುದಾದರೆ, ಚೀ
ನಾದೊಡನೆ ಅದೇಕೆ ಮಾತನಾಡ
ಬಾರದು ಎಂದು ಅವರ ಸವಾಲ.
ಚೀನಾದೊಂದಿಗಿರುವ ವಿವಾದ ಪರಿಹಾ
ರದ ಇಚ್ಛೆಯಿಂದಾಗಿಯೇ ಭಾರತವು
ಕೊಲಂಬೋ ಸಲಹೆಗಳನ್ನು ಇದ್ದಕ್ಕಿ
ದ್ದಂತೆ ಒಪ್ಪಿ ತನ್ನ ಕಡೆಯ ಮಾರ್ಗವ
ನ್ನು ಹಸನುಗೊಳಿಸಿದ್ದರೂ ಕೆಂಪು ಚೀ
ನಾ ಅವನ್ನು ಮೊದಲು ಒಪ್ಪಿದಂತೆ ಮಾ
ಡಿ ಮುಂದೆ ತಿರಸ್ಕರಿಸಿ ನಡುವೆ ಕಲ್ಲು
ಮುಳ್ಳು ಹಾಕಿತು ಎಂಬುದನ್ನು ನಾವು
ಮರೆಯುವಂತಿಲ್ಲ. ಇದು ನಡೆದು ಮೂ
ರು ವರ್ಷಗಳೇ ಆದರೂ ನಮ್ಮ ಇಂದಿನ
ಪ್ರಧಾನಿ ಶಾಸ್ತ್ರಿಯವರೂ ಮಾತುಕತೆ
ಯ ಬಾಗಿಲು ಮುಕ್ತವಿದೆಯೆಂದು ಇತ್ತೀ
ಚೆಗೆ ತಿಳಿಸಿದ್ದನ್ನು ಮತ್ತೆ ಧ್ಯಾನಿಸಬೇಕು
ತಾಷ್ಕೆಂಟ್ ಮಾತುಕತೆಯ ವೇಳೆ ಕಾ
ಶ್ಮೀರದ ಚರ್ಚೆಗೆ ಅವಕಾಶವಿಲ್ಲದಿದ್ದ
ಮೇಲೆ ಮಾತುಕತೆಯೇಕೆ ಎಂಬುದ
ನಂಬೂದಿರಿಯವರ ಎರಡನೆ ಸವಾಲು
ಭಾರತದ ಒಂದು ರಾಜ್ಯ ಕಾಶ್ಮೀ
ದ ಅಸ್ತಿತ್ವದ ಬಗ್ಗೆ ಯಾರೊ
ನೆಯೂ ಯಾವ ಕಾರಣಕ್ಕಾಗಿಯೂ ಮ
ತುಕತೆಯಾಡುವುದೆಂದರೆ, ನಮ್ಮ ತಾಯಿ
ಭೂಮಾತೆಯನ್ನು ನಾವೇ ಅಲ್ಲಗಳೆದಂತೆ
ಉಭಯ ದೇಶಗಳ ನಡುವಣ ಗಡಿ ತ
ಟೆ, ಇತರ ಸಮಸ್ಯೆಗಳನ್ನು ಯಾಕೆ ವಿವೇ
ಚಿಸಬಾರದು? ಸಮರ ಪ್ರವೃತ್ತಿಯನ್ನೇ
ತಡೆಯಬಾರದು? ಮೂರನೆಯದಾಗಿ
ಜಾದ ಕಾಶ್ಮೀರದಿಂದ ಪಾಕ್ ಹೊರ ನ
ಯಬೇಕೆಂದು ಶಾಸ್ತ್ರಿ ಹೇಳುವರೆ? ಎ
ದು ಕೇಳುವ ನಂಬೂದಿರಿಯವರು ಪಾಕಿ
ಅಕ್ರಮವಾಗಿ ಅಲ್ಲಿ ತಳವೂರಿದೆ ಎಂ
ರಾಷ್ಟ್ರೀಯ ಸತ್ಯವನ್ನು ಅರಿತಿಲ್ಲ. ಅವ
ಈ ಬಗೆಯ ಸವಾಲು—ಸಮಸ್ಯೆಗಳು ರ
ಷ್ಟ್ರ ಪುರುಷನ ಆರೋಗ್ಯ ಕೆಡಿಸುವ
ಸಮುಕ್ಷಿಕದಂತಿವೆ. ಆದುದರಿಂದ ಈ ಸ
ಬಂಧದಲ್ಲಿ ತೀವ್ರ ಎಚ್ಚರಿಕೆ ಬೇಕು. ಕೆ
ಪು ಚೀನಾದ ಬಾಲ ಬಡಕರಾದ ಇವರ
ಪಾಕ್ ಬಾಲವನ್ನೂ ಹಿಡಿಯ ಹೊರ
ದ್ದರೆ ಅದು ಅಪಾಯಕರ.

READ &
ADVERTISE IN
NAVAYUGA WEEKLY

# ಕ್ರೀತ ಮುರುಗ

(ಎರಡನೇ ಪುಟದಿಂದ)

...ರಗೆ ನೋಡಿ, ಹೇಳಿದನು, "ಅಲ್ಲಿ, ...ಪ್ಪೈ ಬರುತಿದ್ದಾನೆ. ಜಿಂಕೆಮರಿ ...ಲ್ಲುಗಾವಲನ್ನು ದಾಟುವಂತೆ, ಅವನು ...ನಾಯಾಸವಾಗಿ ಮತ್ತು ಆಕರ್ಷಕವಾಗಿ ...ಗಳನ್ನು ದಾಟುತ್ತ ಬರುತ್ತಿದ್ದಾನೆ."

"ಅಥವಾ ಕತ್ತಲಾದೊಡನೆ, ಬಡ ...ೇಳಿಪುಂಗಳನ್ನು ಕಾಲಿನಲ್ಲಿ ಹಿಡಿದು ...ಯ್ಯುವ ನರಿಯ ಹಾಗೆ." ಪೊನ್ನಿಯು ಧೈರ್ಯದಿಂದ ಸ್ವರೂಪವನ್ನು ಬದಲಾಯಿಸಿದಳು.

"ಬಹುಶಃ ದುಃಖಪೂರಿತ ಕಥೆಗಳೊಂ...ಅವನು ಚಲೋ ಉತ್ಸಾಹಿ ಹಾಗೂ ...ಲೂಕಿನ ಹುಡುಗನಿದ್ದಾನೆ." ಪುನಃ ಮುರುಗನು ಧೈರ್ಯದಿಂದ ಹೊಗಳಿಕೆಯ ಮಾತನ್ನಾಡಿದನು.

"ಅವನನ್ನು ನೋಡಿದರೆ ನನಗೆ ಹಿಡಿಸುವದಿಲ್ಲ." ಸಂಕ್ಷಿಪ್ತವಾಗಿ ಪೊನ್ನಿಯು, ಅವನ ಮಾತನ್ನು ಒಪ್ಪದೆ, ಹೇಳಿದಳು.

"ನಿನಗೆ ಹಿಡಿಸದಿರ ಬಹುದು. ಧನಿಗೆ ಹೇಗೆ ಕೆಲಸ ಮಾಡಿಸಿಕೊಳ್ಳಬೇಕೆಂದು ಗೊತ್ತಿದ್ದಲ್ಲಿ ಅವನಿಂದ ಚೆನ್ನಾಗಿ ಕೆಲಸ ಮಾಡಿಸಿಕೊಳ್ಳ ಬಹುದು. ಅವನು ಪಟ್ಟಣದಲ್ಲಿ ಬೆಳೆದಿರುವ ಹುಡುಗನಿರುವದರಿಂದ ಧೈರ್ಯಶಾಲಿ ಹಾಗೂ ಆತ್ಮಾಭಿಮಾನಿ ಇದ್ದಾನೆ. ಬಡ ಜನರಿಂದ ದುಡಿಸಿಕೊಳ್ಳುವ, ಚಿಕ್ಕ ಪ್ರಾಣಿ, ಪೆರಿಯಸ್ವಾಮಿ ಅಯ್ಯರಂ ಕರುಣಾ ಶೂನ್ಯ ದಬ್ಬಾಳಿಕೆಗೆ ಅವನು ಬಗ್ಗುವ ಹಾಗಿಲ್ಲ."

"ನಮಗೆ ಕರುಣಾನಿಧಿ ಧನಿಯನ್ನು ಕೊಟ್ಟಿರುವದಕ್ಕಾಗಿ ನಾವು ದೇವರ ಉಪಕಾರ ಸ್ಮರಣೆಯನ್ನು ಮಾಡುತ್ತಿರಬೇಕು." ತೊಪ್ಪೈಯು ಸಮೀಪಕ್ಕೆ ಬರುತ್ತಿದ್ದಂತೆ, ಚಿಕ್ಕ ಮಗಳನ್ನು ಪಕ್ಕಕ್ಕೆಳೆದುಕೊಂಡು, ಹೇಳಿದಳು.

"ಮುರುಗ, ಇತರ ತೋಟಗಳ ನಡುವೆ ಈ ತೋಟವು ಒಂದು ಚಿಕ್ಕ ಸ್ವರ್ಗವೇ ಇದೆ. ಅವುಗಳೆಲ್ಲವೂ ನಿರುಪಯೋಗಿಗಳಿವೆ. ಈ ತೆಂಗಿನ ಮಂಗಳ ತಂಪಾದ ನೆರಳಿನಲ್ಲಿ ಜೀವನ ಸಾಗಿಸುವದು 'ಕಮಲ-ಕಸಕು' ಇದೆ." ತೊಪ್ಪೈ ಮುರುಗನನ್ನು ವಂದಿಸಿದನು. "ಮತ್ತು ಎಂತಹ ನೀಚ ಧೈರ್ಯ ನನ್ನದಿದೆ!" ಎಂದನು.

"ಯಾಕೆ, ತೊಪ್ಪೈ, ನೀನೇತಕ್ಕೆ ದೂರಿಕೊಳ್ಳುತ್ತಿರುವೆ? ಹಳ್ಳಿಯಲ್ಲೇ ಅತಿ ದೊಡ್ಡ ಜಮೀನುದಾರನಿಗೆ ಸೇರಿದವನೆಂಬ ಮರ್ಯಾದೆ ನಿನಗಿದೆ. ಪುಷ್ಕಳದಲ್ಲಿ ನಾವು ಕೇವಲ ಪರಮಾಣುಗಳಿದ್ದೇವೆ. ನಿನ್ನದಾದರೋ ಗರ್ವಮಯ ಹಾಗೂ ಶಕ್ತಿಪೂರ್ಣವಾದುದಿದೆ. ನಾವು ಏನು ಹಾಗೂ ಎಲ್ಲಿ? ಅಲ್ಲದೆ ನನ್ನ ಧನಿ ಓಡಿಹೋದವ ಹಾಗೂ ಗಂ ಓಡಿಸುವ ಬಡ ಬಾಡಿಗೆಯ ಸುವಾಸ್ತನು ಎಂದು ನಿನ್ನ ಅಯ್ಯರ್ ...ಳುತ್ತಿದ್ದಾರೆ."

"ಜಮೀನು ಮತ್ತು ಅಯ್ಯರ್‌ನನ್ನು ...ಗು ಹಾಕು. ನನಗಷ್ಟು ಶಕ್ತಿ ಇರುತ್ತಿದ್ದಲ್ಲಿ ಈ ತೆಂಗಿನ ನಾರನ್ನು ಈಗ ಇಲ್ಲೇ ...ಸೆದು ಹಗ್ಗ ಮಾಡಿ, ಅವನ ಜುಟ್ಟಿಗೆ ಕಟ್ಟಿ ಅತಿ ಸಮೀಪದ ಮರಕ್ಕೆ ನೇತು ಹಾಕುತ್ತಿದ್ದೆ. ಆಹ್! ಅಲ್ಲಿ ಅವನು ಆ ಸಪೂರ ಗದ್ದೆಯ ಅಂಚಿನ ಮೇಲೆ, ಕಸರತ್ತಿನ ಸಣ್ಣ ಆನೆಯ ಹಾಗೆ ಓಲಾಡುತ್ತ ಹೋಗುತ್ತಿದ್ದಾನೆ. ಅವನು ಜಾರಿ ಕೆಳಗೆ ಬಿದ್ದು ಕೆಸರಿನಲ್ಲಿ ಹೂತು ಹೋಗಬೇಕೆಂಬುದೇ ನನ್ನ ಆಶೆ."

"ತೊಪ್ಪೈ ಈ ರೀತಿ ಮಾತಾಡಲು ನಿನಗೆ ಹುಚ್ಚು ಹಿಡಿದಿರಬೇಕು. ನೀನೇ ನಾಶವಾಗುತ್ತಿ, ನೋಡು."

'ನನ್ನನ್ನವನು ನರಳಾಡಿಸುತ್ತಾನೆ, ಅಲ್ಲದೆ ಥಳಿಸುತ್ತಾನೆ. ನಾನು ಅವನಿಗೊಂದು ಪಾಠವನ್ನು ಕಲಿಸುತ್ತೇನೆ. ನಾನು ಪಟ್ಟಣದ ಪೋರನಿದ್ದೇನೆ."

'ಆವಸರ ಪಡದಿರು ತೊಪ್ಪೈ. ಆವಸರಪಟ್ಟಲ್ಲಿ ಕಡೆಗೆ ನೀನೇ ದುಃಖಪಡುವಿ. ಕಾದಾಡುವದು ನಿನ್ನ ಸ್ವಭಾವವಿದೆ. ಬಳಿಯ ಹಳ್ಳಿಯಲ್ಲಿರುವ ಮೊದಲಿಯಾರನ ಜಮೀನನ್ನು ನೋಡು. ಅಲ್ಲಿ ಕೆಲಸ ಬಹಳ ಕಷ್ಟವಿದೆ. ಅವನು ಬಹಳ ಕ್ರೂರಿ ಇದ್ದಾನೆ. ಇಷ್ಟೇ ಇರುವದು ನಿನ್ನ ಪುಣ್ಯವಿದೆ. ಕೊನೆಯ ಪಕ್ಷ, ಅಯ್ಯರ್ ಶಾಂತ ಸ್ವಭಾವದವನಲ್ಲದೆ ನಿರ್ಥಕನಿದ್ದಾನೆ. ಕ್ರೂರತೆಯು ನಮ್ಮ ಹಾಗೆ ಇರುವ ಪಳ್ಳಿ ಹಾಗೂ ಪರ್‍ಯಾಟಿ ದಲ್ಲಾಳಿಗಳ ಕೆಲಸವಿದೆ. ಪ್ರಾಣಿಗಳ ಹಾಗೆ ವರ್ತಿಸುವವರು ಸ್ವಜನರೇ ಇದ್ದಾರೆ."

"ಅದು ಹಾಗೆ ಇರಬಹುದು, ಮುರುಗ. ಆದರೆ, ಆ ರೀತಿ ಸೂಕ್ಷ್ಮ ಹಾಗೂ ಭೇಧ ಬುದ್ಧಿಯಿಂದ ಕಾಣುವ ಸ್ಥಿತಿಯಲ್ಲಿ ನಾನಿಲ್ಲ. ನಾನೇನೂ ಮೊದಲಿಯಾರನ ಜಮೀನಿನಲ್ಲಿಲ್ಲ. ನನ್ನ ಸಂಬಂಧ ಇರುವದು ಅಯ್ಯರ್‌ನ ಬಳಿ ಮಾತ್ರ. ಇನ್ನೂ ಅವನು ನನಗೆ ಒಂದು ತಿಂಗಳ ಸಂಬಳವನ್ನು ಕೊಟ್ಟಿರುವದಿಲ್ಲ. ಮದುವೆಯಾಗದ ಮನುಷ್ಯನಿಗೂ ಹೊಟ್ಟೆ ಇದೆ. ಅನೇಕ ಅಭ್ಯಾಸಗಳಿರುತ್ತವೆ. "ಈ ಬಡಪಾಯಿಗಳನ್ನವನು ಪ್ರಾಣಿಗಳ ಹಾಗೆ ನೋಡಿಕೊಳ್ಳುತ್ತಿದ್ದಾನೆ. ಅವರು ಮೂಕರಾಗಿ ಇರುವದರಿಂದ ಆಯಿತು. ನಾನು ಸಂಕುಚಿತ ಹೃದಯಿ ಕೂಡಾ ಇರುವದಿಲ್ಲ. ಈ ವಾರದ ಅಂತ್ಯದೊಳಗೆ, ಸೂರ್ಯನು ಇನ್ನೊಂದು ಮಂಗಳವಾರವನ್ನು ಕಾಣುವ ಮುಂಚೆ, ಅಯ್ಯರ್‌ನಿಗೆ ನಾನು ದಾರಿ ತೋರಿಸುತ್ತೇನೆ."

"ತಾಳು ತೊಪ್ಪೈ, ತಾಳ್ಮೆಯಿಂದಿರು." ಮುರುಗನು ಹೇಳಿದನು.

"ಇಲ್ಲ, ಇನ್ನೊಂದು ಕ್ಷಣ ಕಾಲವನ್ನೂ ಹಾಳು ಮಾಡುವದಿಲ್ಲ. ದೇಹ, ಮನಸ್ಸು ಮತ್ತು ಪ್ರಾಣ ಎಲ್ಲವೂ ದಂಗೆ ಎದ್ದಿವೆ. ಕೆಲಸದಿಂದಾಗಿ ಹಾಗೂ ಹಸಿವೆಯಿಂದಾಗಿ ನನ್ನ ತಲೆ ಸುತ್ತುತ್ತಿದೆ, ಸ್ಮೃತಿ ತಪ್ಪುವಂತಿದೆ. ನೋವಿನ ಉದ್ರೇಕದಿಂದಾಗಿ ಉಸಿರು ಕಿವಿಯ ಮೂಲಕ ಕಲಕಲ ಶಬ್ದ ಮಾಡುತ್ತಿದೆ. ಮುರುಗ, ನನ್ನ ಬಾಯಾರಿಕೆ ಮತ್ತು ಹಸಿವೆಯನ್ನು ಕಮ್ಮಿ ಮಾಡಲು, ನಿನ್ನ ಈ ಚಿಕ್ಕ ಮಗುವಿನ ಹೆಸರಿನಿಂದ ನನಗೊಂದು ಸಿಹಿಯಾಳವನ್ನು ತೆಗೆದುಕೊಡಲಾರೆಯಾ?"

"ದೇವರು ನಿನ್ನನ್ನು ಆಶೀರ್ವದಿಸಲಿ." ಎನ್ನುತ್ತ, ಉಪಕಾರ ಸ್ಮರಣೆಯ ನೋಟವನ್ನು ಬೀರುತ್ತ, ಸಿಹಿಯಾಳವನ್ನು ಕುಡಿದನು.

ಹೊಟ್ಟೆಬಾಕನು ಆಕ್ಷಣಕ್ಕಾದರೂ ಉತ್ತಮ ಶ್ರೋತೃವೆಂದು ಭಾವಿಸಿಕೊಂಡ ಮುರುಗನು ಬುದ್ಧಿ ಹೇಳಲು ಪ್ರಾರಂಭಿಸಿದನು. "ಕೆಟ್ಟದಿರುವದು ರೀತಿಯಲ್ಲಿ ಅಲ್ಲದೆ ಮನುಷ್ಯನಲ್ಲಿ ಅಲ್ಲ. ನೋಡು, ನನ್ನ ಧನಿ ಬಹಳ ಒಳ್ಳೆಯವರಿದ್ದಾರೆ. ಹಾಗಿದ್ದರೂ, ನಾನು ಕೇವಲ ಉಳುವವನಾಗಿದ್ದಾಗ ಈ ಭೂಮಿ ಇಷ್ಟು ಬೆಳೆಯನ್ನು ಕೊಡುತ್ತಿರಲಿಲ್ಲ. ಆಗಲೂ ನಾನೇನೂ ಕಡಿಮೆ ದುಡಿಯುತ್ತಿದ್ದಿಲ್ಲ. ಕಳೆದ ವರ್ಷ ಇದು ಎರಡರಷ್ಟು ಬೆಳೆಯನ್ನು ಕೊಟ್ಟಿದೆ. ಈ ವರ್ಷ ಅದಕ್ಕಿಂತಲೂ ಜಾಸ್ತಿ ಬರಬಹುದೆಂಬುದರಲ್ಲಿ ಸಂದೇಹವಿಲ್ಲ."

ಮುರುಗನು ಬೇಗನೆ ಗಂಟಲನ್ನು ಸರಿಪಡಿಸಿಕೊಂಡು ಮುಂದುವರಿಸಿದನು, ಅವನಿಗೆ ತೊಪ್ಪೈ ಆ ರೀತಿ ಸಾವಧಾನದಿಂದ ಕೇಳುತ್ತಿದ್ದದ್ದು ಮತ್ತಷ್ಟು ಉತ್ಸಾಹವನ್ನಿತ್ತಿತು. ಸಿಹಿಯಾಳವು ನಿಜವಾಗಿ ಇಂದ್ರಜಾಲದಂತೆ ಬದಲಾವಣೆಯನ್ನುಂಟು ಮಾಡಿದೆ.

"ಕೂಲಿಯವನಿಂದ ಕೆಲಸ ಮಾಡಿಸಿಕೊಳ್ಳುವಷ್ಟು ಪಾಪ ಬೇರಾವದೂ ಇಲ್ಲ. ಬಾಡಿಗೆಯ ಶ್ರಮವು ದುಡಿಸಿಕೊಳ್ಳುವವನನ್ನೂ ದುಡಿಯುವವನನ್ನೂ ಶಪಿಸುತ್ತದೆ. ಆದರೆ ಪ್ರಪಂಚದಲ್ಲಿ ಯಾವಾಗಲೂ ಬದಲಾವಣೆ ಆಗಲು ಬಹಳ ಸಮಯ ಬೇಕಾಗುತ್ತದೆ. ಮನುಷ್ಯನಲ್ಲಿರುವ ಆತ್ಯಾಶೆಯು ಬದಲಾವಣೆಯನ್ನು ಮತ್ತಷ್ಟು ಹಿಡಿದು ನಿಲ್ಲಿಸುತ್ತದೆ. ಸರಿಯಾದ ರೀತಿಯಲ್ಲೇ ಆರಂಭ ಮಾಡಿ ಆಗಿದೆ ಎಂಬುದು ಸಂತೋಷದ ಸಂಗತಿ ಇದೆ. ಸಿತಾರಿ ನಡೆಸದೆ, ತಾಳ್ಮೆಯಿಂದ ಕೆಲಸ ಮಾಡಿಕೊಂಡು, ನಮ್ಮ ನಮ್ಮ ಸ್ಥಾನವನ್ನು ಪಡೆದುಕೊಳ್ಳುವದರಲ್ಲಿ ನಾವು ಜಯಶಾಲಿಗಳಾಗೋಣ ತೊಪ್ಪೈ, ಸುಮುಹೂರ್ತಕ್ಕಾಗಿ ತಾಳು, ನಿನ್ನ ಕರ್ಮ ಫಲವು ಸರಿಯಾದಾಗ ಆ ಮುಹೂರ್ತ ಖಂಡಿತವಾಗಿ ಬರುತ್ತದೆ."

"ಮುರುಗ, ನಿನಗೆ ಸಂಬಂಧಪಡುವವರೆಗೂ ಅದು ಹಾಗೆ ಇರಬಹುದು. ಸಾಗುವಳಿದಾರನು ತತ್ವವಿಚಾರ ಮಾಡಬಹುದು. ಹಸಿವಿನಿಂದ ಹಾಹಾಕಾರ ಗೈಯ್ಯುತ್ತಿರುವ ಹೊಟ್ಟೆಯು ಯಾವಾಗಲೂ ಮೆದುಳನ್ನು ಶಾಂತವಾಗಿ ಆಲೋಚಿಸಲಿಕ್ಕೆ ಬಿಡುವದಿಲ್ಲ. ಕರ್ಮಫಲ ಬಂದು ವನೆ ಬಾಗಿಲು ತಟ್ಟುವ ವರೆಗೆ ನಾನು ಕಾಯುವದಿಲ್ಲ. ಬಾಕಿ ಇರುವ ಕೂಲಿ ಹಾಗೂ ಬರಿ ಹೊಟ್ಟೆಯಿಂದ ಬೆಳಗ್ಗಿನ ದುಡಿತ — ಇವುಗಳ ಕುರಿತು ಮಾತ್ರವಲ್ಲದೆ, ಬೇರೆ ಯಾವುದರ ಕುರಿತೂ ಆಲೋಚಿಸಲು ಸಾಧ್ಯವಿರುವದಿಲ್ಲ."

ತೊಪ್ಪೈಯ ಸ್ವರವೇರಿತು, ಕಣ್ಣಿನಲ್ಲಿ ಕೋಪದ ಕುಡಿ ಕುಣಿಯುತ್ತಿತ್ತು.

"ರಾತ್ರಿಯಲ್ಲಿ ಆ ಧನಿ ಬರುವ ದಾರಿಯನ್ನು ಕಾಯುತ್ತ ನಾವು ನಿಂತಿರಬೇಕು. ಸಂಜೆಯಾದೊಡನೆ ಅವನು ಹುಂಟೆ ಹೊಡೆಯಲಿಕ್ಕೆ ಅಥವಾ ಕಪಟ ಪ್ರಾರ್ಥನೆಗೆಂದು— ಮಾಡಿರುವ ಪಾಪ ಮುಕ್ತಿ ಸಿಗುವ ಹಾಗಿಲ್ಲವಾದರೂ ಆಶೆಯಿಂದ —ಹೋಗುತ್ತಾನೆ. ಬಂದ ಮೇಲೆ, ಯಾವ ಮಾರುಕಟ್ಟೆಯಲ್ಲೂ ತೆಗೆದುಕೊಳ್ಳದೆ ಉಳಿದಿರುವಂತಹ ಹಳೆಯ, ಹಾಳಾಗಿರುವ ಭತ್ತವನ್ನು ಕೊಡುತ್ತಾನೆ. ಅಂಧಕಾರಮಯ ರಾತ್ರಿಯಲ್ಲಿ ಮುಳ್ಳುಗಳಿಂದ, ವಿಷ ಜಂತುಗಳಿಂದ, ಪಿಶಾಚಿಗಳಿಂದ ಕೂಡಿರುವ ಹೊಂಡ, ಕಾಡುಗಳ ದಾರಿಯಿಂದ ಮನೆಗೆ ಹೋಗಿ, ಭತ್ತವನ್ನು ಕುಟ್ಟಿ, ಅಕ್ಕಿ ಮಾಡಿ, ಆ ನಡುರಾತ್ರಿಯಲ್ಲಿ ತಿನ್ನಬೇಕು! ಅನಂತರ ಮಲಗಬೇಕು. ಬೆಳಗಾಗುವ ಮುಂಚೆಯೇ ಆಗತ್ಯದ ಕೆಲಸಕ್ಕಾಗಿ ಎಬ್ಬಿಸಲ್ಪಡುತ್ತದೆ. ಇಷ್ಟು ವರ್ಷಗಳಿಂದ ಆಷ್ಟು ಆಳುಗಳು ಇದು ಹೇಗೆ ಸಹಿಸಿಕೊಂಡಿದ್ದರೋ? ನನಗೆ ಆಶ್ಚರ್ಯವಾಗುತ್ತದೆ. ಬಹುಶಃ ಕೆಲವರು ಹೇಳುವಂತೆ, ನಾನು ಪಟ್ಟಣದಲ್ಲಿ ಓದಿರುವದರಿಂದ, ಅಚ್ಚಾಗಿರುವ ಪುಸ್ತಕಗಳು ನನ್ನ ಮನಸ್ಸನ್ನು ಬದಲಾಯಿಸಿರಬಹುದು; ಹಾಗೆ ಇತರರಿಗಿಂತ ಬೇರೆ ರೀತಿಯವನಾಗಿ ಕಂಡುಬರುತ್ತೇನೆ. ದೇವರೆ, ಪ್ರಣಾಮಗಳು, ನನಗೇನೋ ಮದುವೆಯಾಗಿಲ್ಲ. ನಾನು ದಂಗೆ ಏಳುವದಕ್ಕೂ ಶಕ್ತನಿದ್ದೇನೆ. ಇಷ್ಟರ ವರೆಗೆ ಶಾಂತವಾಗಿ, ಪಳಗಿಸಿದ ನಾಯಿಯಂತೆ ಹೇಗೆ ಜೀವ ಹಿಡಿದುಕೊಂಡಿದ್ದೇನೆಂದು ನನಗೇನೇ ಆಶ್ಚರ್ಯವಾಗುತ್ತದೆ."

"ನೀನು ಇತರರಿಗಿಂತ ಭಿನ್ನ ರೀತಿಯಲ್ಲಿ ಆಲೋಚಿಸುತ್ತಿ, ತೊಪ್ಪೈ. ಕಂಗೆಟ್ಟ ಮುರುಗನು ಇನ್ನೊಮ್ಮೆ ಎಚ್ಚರಿಸಿದನು. 'ಜ್ಞಾಪಕದಲ್ಲಿಟ್ಟುಕೋ. ಒಮ್ಮೆ ನಮ್ಮ ಜೀವನವೂ ಬಹಳ ಕಠಿಣತರವಿತ್ತು. ಸಮಯವು ಬದಲಾಗುತ್ತದೆ. ದುಡಿ, ಹಾಗೆಯೇ ತಾಳು. ಸುದಿನವು ಬಂದೇ ಬರುತ್ತದೆ. ಅಯ್ಯರ್‌ನನ್ನು ನೀನು ಮೆಚ್ಚದಿದ್ದಲ್ಲಿ, ನನ್ನೊಂದಿಗೆ ಬೇಕಾದರೆ ಕೆಲಸ ಮಾಡಬಹುದು.' ಮುರುಗನು ಕೊನೆಗೆ ಆತ್ಮವಿಶ್ವಾಸದಿಂದ ಹಾಗೂ ಮೆಲ್ಲಗೆ ಹೇಳಿದನು.

'ಮುರುಗ, ನನಗೆ ಬೇಕಾದಷ್ಟು ಕೆಲಸ ನನ್ನ ಬಳಿಯೇ ಇದೆ. ಬೇರೆಯವರ ಬಳಿ ಗುಲಾಮನಾಗಿರಲು ನನಗೆ ಇಷ್ಟವಿಲ್ಲ."

"ನೀನು ಸ್ವತಂತ್ರನಾಗಿ ದುಡಿಯ ಬೇಕಾಗಿದ್ದಲ್ಲಿ, ಮೊದಲು ಬೇರೆಯವರ ಬಳಿ ದುಡಿಯುತ್ತಿರಬೇಕು. ಶೂನ್ಯದಿಂದ ಹೇಗೆ ಆರಂಭಿಸುತ್ತೀ? ನೀನು ಆಲೋಚಿಸುವಂತೆ, ತಾರುಣ್ಯ ಕಾಲದಲ್ಲಿ ನಾನೂ ಯೋಚಿಸುತ್ತಿದ್ದೆ. ಆದರೆ ಈ ರೀತಿ ವರ್ತಿಸುತ್ತಿರಲಿಲ್ಲ. ನೀನು ಹೇಳುವದೆಲ್ಲಾ ನ್ಯಾಯವಾಗಿದ್ದರೂ, ಬೆಂಕಿಯೊಡನೆ ಆಟವಾಡಕೂಡದು. ಅದು ನಿನ್ನನ್ನು ಸ್ವಾಹಮಾಡಿಕೊಂಡು ಬಿಟ್ಟೀತು. ಸುಸಂದರ್ಭವು ಒಂದು ದಿನ ಬಂದೇ ಬರುತ್ತದೆ. ದೊಡ್ಡವರೊಂದಿಗೆ ಜಗಳವಾಡ ಬೇಡ, ಸಿತಾರಿ ನಡೆಸಬೇಡ, ನ್ಯಾಯಾಲಯದ ತೊಂದರೆಗೆ ಹೋಗ ಬೇಡ. ಕೆಲಸ ಮಾಡುತ್ತಾ ಇರು. ದೇವರು ದೊಡ್ಡವರಿದ್ದಾರೆ. ನಾನು ನಿನಗೆ ಸಹಾಯ ಮಾಡುತ್ತೇನೆ. ಕೊನೆಯಲ್ಲಿ ಅವರು ನನಗೆ ಪ್ರತಿಫಲವನ್ನು ಕೊಡುತ್ತಾರೆ."

"ಮುರುಗ, ನಾನು ತೊಪ್ಪೈಯೆಂದು ಏಕೆ ಕರೆಯಲ್ಪಡುತ್ತಿದ್ದೇನೆಂದು ನಿನಗೆ ಗೊತ್ತಿದೆಯೋ? ಪಟ್ಟಣದಲ್ಲಿ, ಮಾವನ ಮನೆಯಲ್ಲಿದ್ದಾಗ, ನಾನು ತಿನ್ನುವದನ್ನು ಮತ್ತು ಮಾತಾಡುವದನ್ನು ಪ್ರೀತಿಸುತ್ತಿದ್ದೆ. ಇಂದಿಗಿಂತಲೂ ಅಂದು ನನ್ನ ಹೊಟ್ಟೆ ಎದ್ದು ಕಾಣುತ್ತಿತ್ತು. ಎಳೆಯರು ಹಾಗೂ ಮುದುಕರು ನನ್ನನ್ನು ತೊಪ್ಪೈ

**NAVAYUGA 23-12-1965**
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಸಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೨೩-೧೨-೬೫ರಿಂದ ೨೯-೧೨-೬೫ರ ವರೆಗೆ

### ೧. ಮೇಷ

ಹಿಂದಿಗಿಂತ ಇಂದು ನಿಮ್ಮ ಪರಿಸ್ಥಿತಿಯು ಕೊಂಚ ಸುಧಾರಿಸಿರುವುದು. ನಿಮ್ಮ ಆರೋಗ್ಯವು ಉತ್ತಮವಾಗುವದಲ್ಲದೆ ಆರ್ಥಿಕ ತಗಾದೆಯೂ ದೂರವಾಗಲಿದೆ. ಆದರೆ ಹಣದ ವಿಚಾರವಾಗಿ ಕೆಲವರೊಡನೆ ಕಲಹ ನಿಷ್ಠುರಗಳುಂಟಾಗುವ ಸಂಭವವಿರುವುದು. ಅಧಿಕಾರಿ ನೌಕರ ವರ್ಗದವರೊಳು ಅನ್ಯೋನ್ಯವಿರಲಾರದು. ಗೃಹ ತಾಪತ್ರಯದಿಂದ ಮುಕ್ತರಾದ ನಿಮಗೆ ವಾರಾಂತ್ಯದ ೨ ದಿನಗಳು ಅನುಕೂಲವಾಗಿ ಪರಿಣಮಿಸುವವು.

### ೨. ವೃಷಭ

ನೀವೆಷ್ಟೇ ವ್ಯವಹಾರ ಚತುರರಿದ್ದರೂ ಇಂದು ಶತ್ರು ಜನರ ಕೀಟಲೆಯಿಂದ ಮುಕ್ತರಾಗಲಾರಿರಿ. ನಿಮ್ಮ ಧನಮಾನಗಳಿಗೆ ಹೆಚ್ಚಿನ ಹಾನಿ ಸಂಭವಿಸಲಿದೆ. ಅಪ್ತೇಷ್ಟ ವರ್ಗದವರ ವಿಯೋಗವುಂಟಾದೀತು. ವಿಶೇಷತಃ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲೂ ರಾಜಕೀಯ ರಂಗದಲ್ಲೂ ನಷ್ಟ ಪರಾಭವಗಳುಂಟಾಗಲಿವೆ. ಶ್ರಮ ಜೀವಿಗಳಿಗೀ ದಿನಗಳು ದುಃಖದಾಯಿಗಳಾಗಿವೆ. ವಾರಾಂತ್ಯದ ೩ ದಿನಗಳು ಇತರ ದಿನಗಳಿಗಿಂತ ಸ್ವಲ್ಪ ಉತ್ತಮವಾಗಿ ಕಂಡೀತು.

### ೩. ಮಿಥುನ

ಈ ವಾರವು ನಿಮಗೆ ಹೆಚ್ಚಿನ ದುಃಖದಾಯಿಯಾಗಿ ಪರಿಣಮಿಸೀತು. ಪರರ ತೊಂದರೆ ತೊಂದರೆಗಳಿಂದಾಗಿ ನಿಮ್ಮ ಕಾರ್ಯಕಲಾಪಗಳು ಸ್ಥಗಿತಗೊಳ್ಳಲಿವೆ. ಆರ್ಥಿಕ ದುರವಸ್ಥೆಯಿಂದಾಗಿ ಮರ್ಯಾದೆಯುಳಿಸಿಕೊಳ್ಳಲು ಕಷ್ಟವಾಗುವದು. ವಿರೋಧಿಗಳ ಮುಂದೆ ನಗೆಗೀಡಾಗುವಂತಹ ಪ್ರಸಂಗವೂ ಬಂದೀತು. ಅತೀವ ಕಷ್ಟದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ವಾರಾದಿಯ ೨ ದಿನಗಳು ಅನುಗಳು ಪರಿಣಮಿಸಬಹುದು.

### ೪. ಕರ್ಕಟಕ

ದುರ್ವಿಧಿಯು ನಿಮ್ಮನ್ನಿಂದು ವಿಶೇಷವಾಗಿ ಪೀಡಿಸಲಿದೆ. ಯಾವ ಭಾಗದಲ್ಲಿ ನೋಡಿದರೂ ನಿರಾಶೆಯೇ ಮುಂದಾಗಿ ಗೋಚರಿಸುವದು. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ಹಲವಾರು ತೆರದಿಂದ ನಷ್ಟ ಕಷ್ಟಗಳೊದಗಲಿವೆ. ಜನತೆಯೊಡನೆ ನಿಷ್ಠುರ ಕಲಹಗಳುಂಟಾಗುವವು. ಆರ್ಥಿಕ ದುರವಸ್ಥೆಗೆ ಗುರಿಯಾದ ನಿಮಗೆ ಸದ್ಯ ಹಿತೈಷಿಗಳಾರೂ ದೊರೆಯಲಾರರು. ಗೃಹ ತಾಪತ್ರಯಗಳಿಂದ ಬಳಲಿ ಬೆಂಡಾದ ನಿಮಗೆ ವಾರಾದಿಯ ೪ ದಿನಗಳು ಇನ್ನುಳಿದರಲ್ಲಿ ಉತ್ತಮವೆನಿಸಲಿವೆ

### ೫. ಸಿಂಹ

ನಿಮ್ಮ ಸುಖಭಾಗ್ಯಪ್ರದನಾದ ಅಂಗಾರಕನು ಉಚ್ಚನಾಗಿ ಉಪಚಯ ಸ್ಥಾನವನ್ನು ಪಡೆದಿರುವುದರಿಂದಲೂ ಲಾಭದಲ್ಲಿ ಸುರಗುರುಗಳು ಆಸೀನರಾಗಿರುವುದರಿಂದಲೂ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸಲಿದೆ. ಸಾಕಷ್ಟು ಅಪದ್ಧನವನ್ನೂ ಸಂಗ್ರಹಿಸುವಿರಿ. ಸ್ವಯಂ ಶಕ್ತರಾದ ನಿಮಗೆ ಜನತೆಯು ತಾನಾಗಿ ಬಂದು ನೆರವಾಗುವರು. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟ ಸಂಭವಿಸೀತು. ವಾರಾಂತ್ಯದ ೫ ದಿನಗಳು ತುಂಬ ಅನುಕೂಲವಾಗಿವೆ.

### ೬. ಕನ್ಯಾ

ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ನಾಣ್ನುಡಿ ನಿಮಗಿಂದು ಹುಸಿಯಾಗಿ ಕಾಣಿಸಬಹುದು. ಶಕ್ತಿಮೀರಿ ದುಡಿಯುವಿರಾದರೂ ನಿಮ್ಮ ಅನುದಿನದ ಖರ್ಚುವೆಚ್ಚಗಳನ್ನು ನಿರ್ವಹಿಸಲು ಕಷ್ಟವಾಗುವದು. ಅಧಿಕಾರಿ ವರ್ಗದವರ ಅಪೇಕ್ಷೆಗೆ ಪಾತ್ರರಾದ ನಿಮಗೆ ಸ್ಥಾನಪಲ್ಲಟದ ಯೋಗವಿರುವುದು. ಸೋದರರಿಂದ ಮನಸ್ತಾಪ ಹುಟ್ಟಲಿದೆ. ಅತೀವ ಕಷ್ಟದಿಂದ ದಿನಗಳೆಯುತ್ತಿರುವ ನಿಮಗೆ ತಾ. ೨೫, ೨೬ರಲ್ಲಿ ಸ್ವಲ್ಪ ನೆಮ್ಮದಿ ದೊರೆತೀತು.

### ೭. ತುಲಾ

ಮನೋದೌರ್ಬಲ್ಯವು ನಿಮ್ಮಲ್ಲಿಂದು ವಿಶೇಷವಾಗಿ ಕಂಡು ಬಂದರೂ ನಿಮ್ಮ ಸಂಕಲ್ಪಗಳು ನಿರಾತಂಕವಾಗಿ ಪೂರ್ಣವಾಗಲಿವೆ. ಬಂಧು ಮಿತ್ರರ ನೆರವುಳ್ಳ ನಿಮಗೆ ಸಮಾಜದಲ್ಲಿ ಕೈಯು ಸ್ಥಾನ ಕೀರ್ತಿ ಲಭಿಸಲಿದೆ. ಕಾರ್ಯಗಳು ಸುಖದಿಂದ ಪೂರ್ಣವಾಗಿದಕ್ಕೆ ನಿಮ್ಮನ್ನು ಬಹುದಿನಗಳಿಂದ ಹಿಂಡಿದ ಮನೋರೋಗವು ಶಮನಗೊಳ್ಳಲಿದೆ. ನಿಷ್ಕಾರಣ ವಾಕ್ಕಲಹವಾಗುವದು. ವಾರಾದಿಯ ೨ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

### ೮. ವೃಶ್ಚಿಕ

ಹಿಂದಿನ ಪರಿಸ್ಥಿತಿಯು ಇಂದು ಬದಲಿದು. ನಿಮ್ಮಲ್ಲಿ ಮನೆಮಾಡಿದ್ದ ಭಯ ಶಂಕೆಗಳಿಂದು ದೂರವಾಗುವವು. ನಿರುದ್ಯೋಗ ಸಮಸ್ಯೆಯಿಂದ ಮುಕ್ತರಾಗಿ ಸದುದ್ಯಮದಲ್ಲಿ ಪ್ರವೃತ್ತರಾಗುವಿರಿ. ಹೆಚ್ಚಿನ ನಿಮ್ಮ ಆಕಾಂಕ್ಷೆಗಳು ಕಷ್ಟದಿಂದ ಪೂರ್ಣವಾಗುವವು. ಬಹು ಪೀಡೆಯಿಂದ ಮುಕ್ತರಾದ ನಿಮಗೆ ಇಂದು ಆರ್ಥಿಕ ಅಡಚಣೆಯು ದೂರವಾಗುವದು. ತಾ. ೨೪, ೨೬. ಈ ದಿನಗಳು ಧನ ಸುಖ ನೆಮ್ಮದಿಯನ್ನೀಯುವವು.

### ೯. ಧನು

ಸಾಹಸಿಗಳಾದ ನಿಮ್ಮ ದುಡಿಮೆಯು ಇಂದು ಸಫಲವಾಗುವದಾದರೂ ಆದರಲ್ಲಿನ ಹೆಚ್ಚಿನಂಶವು ದುರ್ವ್ಯಯವಾಗಲಿದೆ. ಚಿಕ್ಕಪುಟ್ಟ ವಿಷಯಗಳಾಗಿ ಹೆಂಡತಿ ಮಕ್ಕಳ ಕೂಡ ಜಗಳವಾದೀತು. ಧನ ಜನ ಬೆಂಬಲವು ಸಾಕಷ್ಟಿದ್ದರೂ ರಾಜಕೀಯದಲ್ಲಿ ಪರಾಭವವುಂಟಾದೀತು. ಪಿತ್ತೋಷ್ಣ ಪ್ರಕೋಪವು ಆಗಾಗ ಕಾಣಿಸಿಕೊಳ್ಳಲಿದೆ. ತಾ. ೨೩-೨೪-೨೮-೨೯ರ ದಿನಗಳಲ್ಲಿ ನಿಮ್ಮ ಬಯಕೆಯು ಪೂರ್ಣವಾಗಲಿದೆ.

### ೧೦. ಮಕರ

ತಾನೊಂದು ಬಗೆದರೆ ದೈವವೊಂದೆಣಿಸಿತೆಂಬಂತೆ ಇಂದು ನಿಮ್ಮ ನಿರೀಕ್ಷೆಗಳು ಬಹುತೇಕ ನಿರಾಶಾದಾಯಿಗಳಾಗಿವೆ. ಆತ್ಮೀಯರ ವಿಶ್ವಾಸ ಧಿಕ್ಕಾರಕ್ಕೆ ಗುರಿಯಾಗುವಿರಿ. ಶತ್ರು ಜನರು ತಮ್ಮ ಸೇಡನ್ನು ತೀರಿಸಲು ಮುಂದಾಗುವರು. ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ನಿಂತುಹೋಗಲಿವೆ. ಹಣದ ಬಿಕ್ಕಟ್ಟಿನಿಂದ ದಿನಯಾಪನೆಯು ಬಹಳ ದುಸ್ತರವಾಗಿ ತೋರಲಿದೆ. ದೇಹಾಲಸ್ಯದ ಪೀಡಿತರಾದ ನಿಮಗೆ ತಾ. ೨೪-೨೬ ೨ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿ ತೋರಿಬರಲಿವೆ.

### ೧೧. ಕುಂಭ

ಪರಿಶ್ರಮವು ನಿರೀಕ್ಷೆಗೂ ಮಿಕ್ಕಿ ಫಲವೀಯುವುದಾದರೂ ಇಲ್ಲ ಸಲ್ಲದ ಖರ್ಚುಗಳು ನಿಮ್ಮಲ್ಲಿ ಮನೆಮಾಡುವುದರಿಂದ ದಿನಾಂತ್ಯದಲ್ಲಿ ಸದಾ ಕೈ ಬರಿದಾಗಿಯೇ ಉಳಿವದು. ಉದ್ಯೋಗ ನಿಮಿತ್ತ ಸ್ಥಳಾಂತರವಾಗುವ ಸಂಭವವಿದೆ. ಕೀಯದ ಸಲುವಾಗಿ ಹೆಚ್ಚಿನಂಶ ವ್ಯಯಿಸುವಿರಿ. ಗೃಹ ತಾಪತ್ರಯಗಳಿಂದ ನೀವು ಮುಕ್ತರಾಗಿದ್ದರೂ ಸ್ವಂತ ಆರೋಗ್ಯವು ಉತ್ತಮವಿರಲಾರದು. ತಾ. ೨೫-೨೬ ಅನುಕೂಲವಾಗಿಲ್ಲ.

### ೧೨. ಮೀನ

ಬಹ್ವಂಶ ನಿಮ್ಮ ತಾಪತ್ರಯಗಳಿಂದು ಪರಿಹಾರವಾಗಲಿದೆ. ಪರಿಶ್ರಮಕ್ಕಿಂತಲೂ ಮಿಗಿಲಾದ ಫಲಸಿಗಲಿದೆ. ವಿಶೇಷತಃ ರಾಜಕೀಯ ವ್ಯವಹಾರದಲ್ಲೂ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲೂ ನಿಮ್ಮ ಯತ್ನವು ಸಫಲವಾಗುವದು. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾದ ನಿಮಗೆ ದಿನಯಾಪನೆಯು ಸುಗಮವಾದೀತು. ಸಂಸಾರದಲ್ಲಿ ಚಿಕ್ಕ ಪುಟ್ಟ ಕಲಹಗಳುದಿಸುವ ಸಂಭವವಿದೆ. ವಾರಾದಿಯ ೪ ದಿನಗಳು ನಿಮ್ಮ ಬಯಕೆಗಳನ್ನು ಪೂರೈಸಲು ಶಕ್ತವಾಗಿವೆ.

---

ಎಂದು ಕರೆಯಲಾರಂಭಿಸಿದರು. ಅದೀಗ ಹಾಗೆ ಅಂಟಿಕೊಂಡು ಬಿಟ್ಟಿದೆ.' ತೊಪ್ಪೈ ಸ್ವರ ಬದಲಾಯಿಸಿ, ಪ್ರೀತಿಯಿಂದ ನನಪು ಮಾಡಿಕೊಳ್ಳುತ್ತ ಹೇಳಿದನು.

"ನಿನ್ನ ಮಾವನವರು ಏನಾಗಿದ್ದರು?"

"ಅವನು ಪಟ್ಟಣದಲ್ಲಿ ಗಾರೆ ಕೆಲಸ ಮಾಡಿಕೊಂಡು, ಹಣ ಸಂಪಾದಿಸಿ, ನನ್ನನ್ನು ಚೆನ್ನಾಗಿ ಸಾಕುತ್ತಿದ್ದ. ತನ್ನ ಚೀಲ ತುಂಬಿಸಿಕೊಳ್ಳಲಿಕ್ಕಾಗಿ ಸೋದರತ್ತೆಯು ಮಿಠಾಯಿ ಅಂಗಡಿಯೊಂದನ್ನಿಟ್ಟುಕೊಂಡಿದ್ದಳು. ಅವಳು ಇಲ್ಲದಿರುತ್ತಿದ್ದಾಗ ಅಂಗಡಿಯಲ್ಲಿ ಮಾರಲು ನಾನೇ ಕುಳಿತುಕೊಳ್ಳುತ್ತಿದ್ದೆ. "ಅವು ಬಹಳ ವಿನೋದದ ದಿನಗಳಾಗಿದ್ದುವು. ಅವರಿಬ್ಬರೂ ಇಂದು ಇಲ್ಲ. ಅವರಲ್ಲಿ ಒಬ್ಬರಾದರೂ ಇರುತ್ತಿದ್ದಲ್ಲಿ ನಾನಿಲ್ಲಿಗೆ ಬರುತ್ತಿರಲಿಲ್ಲ. ಅವರು ನನ್ನನ್ನು ಶಾಲೆಗೂ ಕಳುಹಿಸಿದ್ದರು. ಪ್ರಪಂಚವು ಕೆಟ್ಟವರಿಂದಲೇ ಇಲ್ಲವೆ ಬೇರೆ ಯಾರಿಂದಲೂ ತುಂಬಿಕೊಂಡಿಲ್ಲವೆಂದು ತಿಳಿದುಕೊಳ್ಳುವಷ್ಟರ ವರೆಗೆ ನಾನು ಓದಿದ್ದೇನೆ. ಮುರುಗ, ನೀನು ಪಟ್ಟಣದಲ್ಲಿ ಒಂದೇ ಒಂದು ದಿನವನ್ನೂ ಕಳೆದಿರುವದಿಲ್ಲ. ಬಡವರಿಗೆ ಪಟ್ಟಣ ವಾಸವೇ ಶಾಲೆ ಇದೆ. ಈ ವಿಶಾಲ ಹಾಗೂ ಶ್ರೀಮಂತ ವಿಶ್ವದಲ್ಲಿ ಬಡುವರು ಹೇಗೆ ಬಡತನಕ್ಕಂಟಿಕೊಂಡೇ ಇದ್ದಾರೆಂಬುದನ್ನು ಅಲ್ಲಿ ಅರಿತುಕೊಳ್ಳಬಹುದು. ಒಂದು ಹಿಡಿ ಜನರಿಗೆ ಮಾತ್ರ ಅದು ವಿಶಾಲ ಹಾಗೂ ಐಶ್ವರ್ಯಮಯ ಇದೆ. ಛೀ! ಮುರುಗ, ನಿನ್ನಲ್ಲಿ ಕ್ರಾಂತಿಯ ಲಕ್ಷಣವೇ ಇಲ್ಲದಿರುವದರಿಂದ ನಾನು ಅನುಭವಿಸುವ ಹಾಗೆ ನೀನು ಅನುಭವಿಸಲು ಸಾಧ್ಯ ಇರುವದಿಲ್ಲ."

"ದಂಗೆಖೋರನು ಪ್ರಯೋಜನವಿಲ್ಲ, ತೊಪ್ಪೈ. ನೀನು ನಮ್ಮೊಂದಿಗನೇ ಇರು. ದೊಡ್ಡ ಜಮೀನಿಗೆ ನಮಸ್ಕಾರ ಹಾಕಿಬಿಡು." ಆತ್ಮ ವಿಶ್ವಾಸದಿಂದ ಮುರುಗನು ತಿಳಿಸಿದನು. ತೊಪ್ಪೈ ಧನ್ಯವಾದಗಳನ್ನರ್ಪಿಸಿದನು.

ತೊಪ್ಪೈಯು ಗೂಬೆ ಅಥವಾ ಅಪಶಕುನದ ಹಕ್ಕಿಯೆಂದು ಪೊನ್ನಿಯು ಯಾವಾಗಲೂ ಅವನ ಮೇಲೆ ಕಣ್ಣಿಟ್ಟುಕೊಂಡೇ ಇದ್ದಳು. ಅವನನ್ನು ತೃಪ್ತಿಪಡಿಸಿ ಕೂಡಲೇ ಕಳುಹಿಸಿ ಬಿಡಬೇಕೆಂಬುದು ಅವಳ ಅಭಿಪ್ರಾಯ. ಮುರುಗನು ತೋರಿಸಿದ ದಯೆ ಅವಳ ಮನಸ್ಸಿಗೆ ಸರಿ ಬರಲಿಲ್ಲ. ಆದರೆ ತೊಪ್ಪೈಯ ಮೇಲೆ ಹಾಗೂ ಅವನ ಕೆಚ್ಚೆದೆಯ ಮೇಲೆ ಮುರುಗನಿಗೆ ಕರುಣೆ ಹಾಗೂ ಮೆಚ್ಚುಗೆ ಇತ್ತು.

(ಮುಂದುವರಿಯುವುದು)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**ಸುಲಭದಲ್ಲಿ ಇಂಗ್ಲಿಷ್**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ,

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

**ಸುಲಭದಲ್ಲಿ ಪತ್ರಲೇಖನ**

**LETTER WRITING MADE EASY**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

**ಗೀತೆಯ ಕೈಗನ್ನಡಿ**

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

# నవయుగ

30-12-1965

226

౧౦ పైసె

**ಧಾರಾವಾಹಿ ಕಾದಂಬರಿ**

# ರೈತ ಮುರುಗ

ಇಂಗ್ಲಿಷ್ ಮೂಲ: ಕೆ. ಎಸ್. ವೆಂಕಟರಮಣಿ
ಕನ್ನಡ ಅನುವಾದ: ಶಿವಶಂಕರ.

(ಮುಂದುವರಿದುದು)

ಈ ಮೊದಲು

ಅಲವಂತಿಯ ರಾಮುಚಂದ್ರ ರೈತ ಮುರುಗನ ಮನವೊಲಿಸಿಯೇ ಮದ್ರಾಸದಲ್ಲಿ ಓದು ಮುಂದುವರಿಸಿದರೂ ಬಿ. ಎ. ಆಗಲಿಲ್ಲ. ಆದರೆ, ಕೇದಾರಿಯ ಸಂಬಂಧಿ ಮೀನಾಕ್ಷಿ ಮಗಳು ಜಾನಕಿಯೊಡನೆ ವಿವಾಹವಾಯಿತು. ಪಳ್ಳಿಯಲ್ಲೇ ಸುಖಕಾಣುವ ಕನಸುಕಂಡು ಅಲವಂತಿಗೆ ಮರಳಿದರೆ, ನೆರೆಯಿಂದ ಊರು ಮುಳುಗಿತು; ಅತ್ತೆ ಮೀನಾಕ್ಷಿಯ ಉಪದೇಶ ಮನಸ್ಸು ಪ್ರಭಾವಶಾಲಿಯಾಯಿತು. ಕಡಪದ ನಿರ್ದಯಿ ಜಿಲ್ಲಾಧಿಕಾರಿ ಕೆಡಲ್ಸನ ಬಳಿ ರಾಮಚಂದ್ರ ಶಿಬಿರ ಗುಮಾಸ್ತನಾದ. ಅತ್ತ ಅಲವಂತಿಯಲ್ಲಿ ಧನಿ ಅಯ್ಯರನ ಕೋಟಲೆಯಿಂದ ಬೇಸತ್ತ ತೊಪ್ಪೈ ಮುರುಗನ ಬಳಿ ದುಡಿಯತೊಡಗಿದ. ಮುರುಗನಾದರೂ ನಿಷಿಯುಣ್ಣುತಿದ್ದ.

ಮುಂದೆ —

ಶಿಬಿರ ಗುಮಾಸ್ತಿಕೆಯಲ್ಲಿ ರಾಮು ಮೂರು ವರ್ಷಗಳನ್ನು ಕಳೆದನು. ನೆಚ್ಚಿಕಲಸಾಧ್ಯವಾದ ಜಿಲ್ಲಾಧಿಕಾರಿ, ಕೆಡಲರ ಬಳಿ ಶಾಂತ ಸ್ವಭಾವದ ಬ್ರಾಹ್ಮಣ ಹುಡುಗನು ಇಷ್ಟು ಕೆಲಸ ಮಾಡಿಕೊಂಡಿದ್ದದ್ದು ಇಡಿ ಕಚೇರಿಯಲ್ಲಿ ಆಶ್ಚರ್ಯದ ವಿಷಯವಾಗಿತ್ತು.

ತೊಪ್ಪೈಯ ಹಾಗೆ ರಾಮು ಕೂಡಾ ತನ್ನ ಮನ ಮತ್ತು ಕಚೇರಿ ಜೀವನದ ಪ್ರಚಲಿತ ಪರಿಸ್ಥಿತಿಯ ವಿರುದ್ಧ ಮಾನಸಿಕ ಅಸಮಾಧಾನಪಟ್ಟು ಕೊಂಡಿದ್ದನು. ಮುರುಗನ ಹಾಗೆ ಮೀನಾಕ್ಷಿ ಮತ್ತು ಜಾನಕಿಯರು ಭಾರವನ್ನು ಅದೃಷ್ಟದ ಮೇಲೆ ಹಾಕಿಬಿಟ್ಟು ಸಂತೋಷ ಹಾಗೂ ಸಮಾಧಾನದಿಂದ ಇದ್ದರು. ಆದಾಗ್ಯೂ ಜಾನಕಿಯು ತನ್ನ ಏಕಾಂತ ಹಾಗೂ ಬೇಸರ ಪೂರ್ಣ ಜೀವನದಲ್ಲಿ ಸೋತು, ಆಗಾಗ್ಗೆ ಆ ಕುರಿತು ಆಲೋಚಿಸುತ್ತಿದ್ದಳು. ತನ್ನ ಗಂಡನನ್ನು ಎಲ್ಲರೂ ಅಲಕ್ಷ್ಯದಿಂದ ಕಾಣುತ್ತಿದ್ದಾರೆಂಬುದು ಆಕೆಯ ವ್ಯಸನದ ಮೂಲಕಾರಣವಾಗಿತ್ತು. ಮೀನಾಕ್ಷಿಯು ಆ ವ್ಯಸನ ಹಾಗೂ ಆಲೋಚನೆಯ ಚಿಗುರುಗಳನ್ನು ಚಿವುಟ ತೆಗೆಯುತ್ತಿದ್ದಳು. ಮಗಳ ಮನಸ್ಸನ್ನು ಬೇರೆಡೆಗೆ ತಿರುಗಿಸಿ ಬಿಟ್ಟು ಆಲೋಚಿಸಿ ಕೊರಗಿಕೊಳ್ಳದೆ ಹಾಗೆ ನೋಡಿಕೊಳ್ಳುತ್ತಿದ್ದಳವಳು.

"ಅಮ್ಮಾ ಜಮಾಬಂದಿಯ ಕೆಲಸದ ಮೇಲೆ ಅವರು ಹೋಗಿ ಹದಿನೈದು ದಿನಗಳಿಗಿಂತಲೂ ಹೆಚ್ಚಾಗಿವೆ. ಇವತ್ತಾದರೂ ಅವರು ಬರಬಹುದೇ? ಅವರ ಜೀವನ ಬಹಳ ಕಷ್ಟಕರದ್ದು. ಈ ಮೂರು ವರ್ಷಗಳಲ್ಲಿ ತಿಂಗಳಲ್ಲಿ ಐದು ದಿನಗಳಂತೆ ಕೂಡಾ ಮನೆಯಲ್ಲಿರಲಿಕ್ಕೆ ಅವರಿಗೆ ಸಮಯ ಸಿಕ್ಕಿರುವದಿಲ್ಲ."

ತಾಯಿ ಕೊಡುತ್ತಿದ್ದ ಶಿಕ್ಷಣದ ವಿರುದ್ಧವಾಗಿಯೇ ಜಾನಕಿಯ ನೈಸರ್ಗಿಕ ಸ್ವಭಾವವು ಜಯಭೇರಿಯನ್ನು ಬಾರಿಸಿತು.

"ಜಾನಕಿ, ಕಲ್ಪನಾಶೀಲಳಾಗದಿರೇನೆ. ನಾವೆಲ್ಲಿ ಅಡಿಗೆ ಕೋಣೆಯಲ್ಲಿ ಕೆಲಸ ಮಾಡುತ್ತ ಇಲ್ಲವೇನು? ಹಾಗೆ ಮನುಷ್ಯನು ಹುಟ್ಟಿರುವದು ಕೆಲಸಕ್ಕಾಗಿ. ತಾರುಣ್ಯ ಕಾಲದಲ್ಲಾದರೂ ಮನುಷ್ಯನು ಚೆನ್ನಾಗಿ ಕಷ್ಟಪಡದಿದ್ದಲ್ಲಿ, ಮುಂದಿನ ಜೀವನವನ್ನು ಆತನು ಹೇಗೆ ನಡೆಸಿಯಾನು?

ರಾಮುವಿನ ಅತಿ ಸದ್ಗುಣತೆ ಅವನದೇ ದೋಷವಿದೆ. ಅವನಿಗದು ಮನದಟ್ಟಾಗುವಂತೆ ನೀನು ತಿಳಿಸಬೇಕು. ಆತನು ಸ್ವಲ್ಪ ಧೈರ್ಯವನ್ನು ತೋರಿಸಿ ಶಿಬಿರ—ಗುಮಾಸ್ತಿಕೆಯಿಂದ ಪದೋನ್ನತಿಯನ್ನು ಪಡೆದುಕೊಳ್ಳಬಹುದು ಕಣೇ. ನೆರೆಯ ಕಮಲನ್ನು ಕೇಳಿದುದನ್ನು ಕೇಳು. ಮೂರು ವರ್ಷಗಳ ವರೆಗೆ ಯಾರೂ ಶಿಬಿರ—ಗುಮಾಸ್ತರಾಗಿದ್ದಿಲ್ಲವಂತೆ.'

"ಆದರೆ ಅವರಿಂದೇನೂ ಮಾಡಲಿಕ್ಕೆ ಸಾಧ್ಯ, ಅಮ್ಮಾ? ತನ್ನ ಕೆಲಸವನ್ನವರು ಚೆನ್ನಾಗಿ ಮುಗಿಸುತ್ತಾರೆ."

"ಬಹಳ ಚೆನ್ನಾಗಿ, ಜಾನಕಿ, ಅದುವೇ ದೋಷ. ಅವನೇ ಅವನನ್ನು ಅನರ್ಜನೀಯವನ್ನಾಗಿ ಮಾಡಿಕೊಳ್ಳುತ್ತಾನೆ. ದೊರೆ ಸಾಹೇಬರು ಅಂಥ ಆದರ್ಶ ಕಾರಕೂನನನ್ನು ಎಂದಿಗೂ ಹೋಗಲು ಬಿಡಲಿಕ್ಕಿಲ್ಲ. ಆವನು ಮುಳ್ಳಿಲ್ಲದ ಗುಲಾಬಿ ಇದ್ದಾನೆ; ಮಗು ಕೂಡಾ ಆ ಗಿಡದ ಬೆಳವಣಿಗೆಯನ್ನು ನಿಲ್ಲಿಸಿ ಬಿಡಬಹುದು. ಅದೇನೂ ಫಲಕಾರಿಯಾಗುವದಿಲ್ಲ.'

ಜಾನಕಿಯು ನಿರಾಶೆಯಿಂದ ಕೇಳಿದಳು— "ನೀವೇನಾದರೂ ಬೋಧನೆಯನ್ನವರಿಗೆ...."

"ಎದುರೆದುರಿಗೇನೇ ತಪ್ಪು ಮಾಡಿಕೊಂಡು ಸಿಕ್ಕಿ ಬೀಳುವಂತೇನೂ ಮಾಡಕೂಡದೆಂದು", ನಡುವೆಯೇ ಬಾಯಿ ಹಾಕಿ ಆತುರದಿಂದ ಮೀನಾಕ್ಷಿ ಆಡಿದಳು. "ಶಿಬಿರ-ಗುಮಾಸ್ತನು ಎಂದಾದರೂ ತನ್ನ ಸಂಬಳದಿಂದಲೇ ಪ್ರಾಮಾಣಿಕತನದಿಂದ ಮೂರು ಹೊಟ್ಟೆಗಳನ್ನು ತುಂಬಿಸಿಕೊಂಡು, ತನ್ನ ಹಳೆಯ ಸಾಲವನ್ನು ತೀರಿಸಲು ಸಾಧ್ಯವಿದೆಯೇನೇ? ಸಾಲವನ್ನಾದರೂ ತನ್ನ ತಂಗಿಯ ಮದುವೆಗಾಗಿಯಾಗಲೀ, ಹೆಂಡತಿಯ ಆಭರಣಗಳಿಗಾಗಿಯಾಗಲೀ ಮಾಡಿಕೊಂಡುದುದಲ್ಲ— ಕೇವಲ ತನ್ನ ವಿದ್ಯಾಭ್ಯಾಸಕ್ಕಾಗಿ ಮಾಡಿಕೊಂಡದ್ದಿದೆ. ಅವನ ಕೈಯಲ್ಲಿ ಜಿಲ್ಲಾಧಿಕಾರಿಯ ಕಿವಿ ಇರುವದರಿಂದ ಜೇಕಾದಷ್ಟು ಹಣವನ್ನು ಗಳಿಸಿಕೊಳ್ಳುತ್ತಿರಬಹುದೆಂದು ಜನರಾಡಿಕೊಳ್ಳುತ್ತಿದ್ದಾರೆ. ಆದರೆ ನಿಜವಾಗಿ ದಿನದಿಂದ ದಿನಕ್ಕೆ ನಮಗೆ ಸಾಲವೇ ಹೆಚ್ಚಾಗುತ್ತಿದೆ."

"ಸಾಲ! ಹೇಗೆ ಅಮ್ಮಾ, ನಾವಿಬ್ಬರೇ ಇರುವಾಗಲೂ ಸಾಲ ಯಾಕಮ್ಮ ... ವರು ಮನೆಯಲ್ಲಿ ... ಮ್ಮಾ!"

"ಆದರೆ, ಕಾಫಿಬೀಜ ಹಾಗೂ ... ಗಳು, ರಾಮುವಿಗೆ ವರ್ತಮಾನ ಹಾಗೂ ಪುಸ್ತಕಗಳು ಪುಕ್ಕಟೆ ದಿ... ತ್ತಿವೆಯೇನೇ?'

'ಹಾಗಾದರೆ ಆ ವಿಚಾರಗಳನ್ನೆ ... ಮಾಡಿಕೊಂಡು, ಸರಳ ಜೀ... ಸಿಕೊಂಡು, ಸ್ವಲ್ಪವಾದರೂ ... ಳ್ಳಲು ಪ್ರಯತ್ನ ಮಾಡಬೇಕಮ್ಮಾ"

"ಮಾಡಬೇಕಾಗಿರುವ ಆಶ್ಚ... ರ್ಯದ ವಿಷಯ! ಹಾಗೆ ಮಾಡಿದ್ದ... ಗಾರೂ ಮರ್ಯಾದೆ ಕೊಡಲಿಕ್ಕಿಲ್ಲ... ದವಳೂ ಕೂಲಿಯನ್ನು ಮುಂಗ... ಯೇ ಕೇಳಿಯಾಳು. ನೀನಿನ್ನೂ ... ನಾಗಿರುವೆ. ಪ್ರಪಂಚದ ವಿಷಯ... ನೂ ಗೊತ್ತಿರುವದಿಲ್ಲ. ಅಥವಾ ಗ... ರೂ ನಿನ್ನ ಗಂಡನಿಗೆ ಗೊತ್ತಿ... ಗೊತ್ತಿರಬಹುದು. ಹಾಗೆ ಮಾಡ... ಮಗಾರರೂ ಸಾಲವನ್ನು ಕೊಡಲ... ಪ್ರಪಂಚದಲ್ಲಿ ಪ್ರತಿಷ್ಠೆ ಎಂಬುದು ... ರ್ಗದ ಮೋಗಿಡಗಳಂತೆ ಚಲೋ ... ಅದನ್ನು ಒಂದು ದಿನದಲ್ಲಿ ಅಥವಾ ... ದ ಹಣದಿಂದ ಹೆಚ್ಚಿಸಲು ಸಾಧ್ಯ... ವದಿಲ್ಲ. ಪ್ರತಿಷ್ಠೆಯು ಸಂಪಾದನೆಗ... ನ್ನ ದೈನಂದಿನ ಜೀವನವು ಪರಿಪೂ... ದೆ. ಆ ಕುರಿತು ನಾವು ಬಹಳ ... ಕತೆಯಿಂದಿರ ಬೇಕಾಗುತ್ತದೆ. ಅದು ... ದು ಅತ್ಯಂತ್ತಮ ಕಲೆ ಇದು. ಬದು... ವನಕ್ಕೆ ಸಂಬಂಧಪಟ್ಟಿರುವ ಉತ್ತ... ಗಳಲ್ಲಿ ಅತ್ಯುತ್ತಮವಿದು."

ಮೀನಾಕ್ಷಿಯ ಹೃದಯವು ... ಯಿಂದ ಹಿಗ್ಗಿತ. ತಾನು ಉತ್ತ... ಮವನ್ನೇ ಕೊಡುತ್ತಿದ್ದೇನೆಂಬ ... ವಿಶ್ವಾಸದಿಂದ ಆಕೆ ತಿಳಿದುಕೊಂಡ... ಆದರೆ ಆ ಸಂದೇಶ ತನ್ನ ತನುಜೆಗೆ ... ವಾಗಲಿಕ್ಕಿಲ್ಲ ಎಂದೆಣಿಸಿ ಆಕೆಯುತ್ತ... ಣಾ ಪೂರಿತ ನೋಟವನ್ನು ಬೀ...

"ಇವುಗಳೇ ವಿಷಯಗಳು. ... ನ ಇವುಗಳನ್ನು ನೀನು ಕಲಿತುಕೊ... ಬೇಕು; ಶೀಘ್ರ ಕಲಿತುಕೊಂಡಷ್ಟು ... ಯದು. ನಿನ್ನ ತಂದೆಯವರು ಕೂ... ನ್ನ ಹಾಗೆ ಇದ್ದರು. ನನ್ನ ಮಾತನ್ನು ... ಯ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ... ನ್ನು ಮಹತ್ವಾಕಾಂಕ್ಷೆಯ ಮಕ್ಕ... ದು ಮಾಡಲಿಕ್ಕಿದ್ದರು. ಆದರೆ ... ಮಗೆ ... ಮಾವದಕ್ಕಾ ಕೊನೆತ ಕಷ್ಟ... ಮೀ ಜೀವನವನ್ನು ನಡೆಸ, ... ನ್ನ ಜೀವನಕ್ಕೆ ಬೇಕಾದಷ್ಟು ಬ... ದಯಪಾಲಿಸುತ್ತಾರೆ. ಈ ವಿಷ... ನೀನು ಹಾಗೂ ರಾಮು ಇಬ್ಬರೂ, ... ತುಕೊಳ್ಳಬೇಕಾಗಿದೆ. ನೀನ. ಮಾ... ಕಲಿತುಕೊಂಡಲ್ಲಿ ರಾಮು ಅನಂ... ವಾಗಿ ತಿಳಿದು ಕೊಂಡಾನು."

ಕ್ಷಣಕಾಲ ಉಸಿರು ತೆಗೆದು ಕೆ... ವಾದಳ್ಳಾಗಿ ಪಡೆದಳು. ಜಾನಕಿಯು ... ದರೂ ಹೇಳ ಬಹುದೆಂದೆಣಿಸಿ, ಆ... ಸಂದರ್ಭ ಕೊಡಕೂಡದೆಂದು ಮಾ... ಗನೆ ಪ್ರಾರಂಭಿಸಿದಳು.

'ನಿನ್ನ ನೆರೆಮನೆಯ ಕಮಲಮ್ಮ... ನೋಡು. ಅವಳು ಹಾಗೂ ಅವನು... ವ ರೀತಿ ಕ್ಷುದ್ರ ರೀತಿಯಿಂದ ಜೀ...

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

| | | ಸೇಕಡಾ |
|---|---|---|
| 91 ದಿನಗಳಿಂದ | 6 ತಿಂಗಳ ಕೆಳಗೆ .... .... | 5½ |
| 6 ತಿಂಗಳಿಂದ | 12 ತಿಂಗಳ ಕೆಳಗೆ .... .... | 6 |
| 12 ತಿಂಗಳಿಂದ | 24 ತಿಂಗಳ ಕೆಳಗೆ .... .... | 6½ |
| 24 ತಿಂಗಳಿಂದ | 36 ತಿಂಗಳ ಕೆಳಗೆ .... .... | 6¾ |
| 36 ತಿಂಗಳಿಂದ | 48 ತಿಂಗಳ ಕೆಳಗೆ .... ... | 7 |
| 48 ತಿಂಗಳಿಂದ | 60 ತಿಂಗಳ ಕೆಳಗೆ .... .... | 7¼ |
| 60 ತಿಂಗಳಿಂದ | 84 ತಿಂಗಳ ಕೆಳಗೆ .... .... | 7½ |
| 84 ತಿಂಗಳಿಂದ | 120 ತಿಂಗಳ ಕೆಳಗೆ .... .... | 8 |
| ಸೇವಿಂಗ್ಸ್ ಖಾತೆಯ ಮೇಲೆ | ... .... | 4 |

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd. 1921

**NAVAYUGA**

Leading Kannada Weekly

UDIPI, S. Kanara

ಡಾ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

# ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

**ಕೆ. ಹೊನ್ನಯ್ಯ ಶೆಟ್ಟಿ**

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

## ಸೂಚನೆಗಳು

**ಲೇಖಕ ಬಂಧುಗಳಿಗೆ**

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಅಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅನುದಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

**ಚಂದಾದಾರರಿಗೆ—**

ಚಂದಾ ಹಣವನ್ನಾಗಲೀ ಜಾಹೀರಾತಿನ ಬಾಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

### ಸೂರ್ಯೋವಿನ ಉಪಾಸನೆ—

ಇಂದಿನ ಕಮ್ಯೂನಿಸ್ಟ್ ಚೈನಾದಲ್ಲಿ ಕಳೆಯುವರ ಬದಲಿಗೆ 'ನವ ಬುದ್ಧ'ನನ್ನು ಆರಿಸಲಾಗಿದೆ.

# ನವಯುಗ

| ಸಂಪುಟ ೪೫ | ಉಡುಪಿ | Vol. 45 |
|---|---|---|
| ಸಂಚಿಕೆ ೧೭ | ೩೦—೧೨—೧೯೬೩ | No. 17 |

**ವಚನ ಸುಧೆ**

ಅಶ್ರುತಶ್ಚ ಸಮುನ್ನದ್ಧೋ
ದರಿದ್ರಶ್ಚ ಮಹಾಮನಾಃ
ಅರ್ಥಾಂಶ್ಚಾಕರ್ಮಣಾ ಪ್ರೇ
ಪ್ಸುರ್ಮೂರ್ಖ ಇತ್ಯುಚ್ಯತೇ ಬುಧೈಃ ॥

ವಿದ್ಯೆ ಕಲಿಯದೆ ಅಹಂಕಾರ ಪಡುವವನು, ಬಡವನಾಗಿ ಮಹತ್ವಾಕಾಂಕ್ಷೆಯಿಟ್ಟುಕೊಳ್ಳುವವನು, ಕೆಲಸಮಾಡದೇನೇ ಹಣಗಳಿಸುವ ಇರಾದೆಯುಳ್ಳವನು ಮೂರ್ಖನು.

## ಹೊಸ ವರುಷದ ಹೊಸ್ತಿಲಲ್ಲಿ

ಇನ್ನೊಂದು ದಿನ ಕಳೆದರೆ ನಮ್ಮ ಪಾಲಿಗೆ ಹೊಸ ವರುಷದ ಉದಯವಾಗುವುದು. ೧೯೬೩ ಕಳೆದು ೧೯೬೪ ಬರುತ್ತಿದೆ. ಹೊಸ ವರುಷದ ಆಗಮನ ಎಲ್ಲರಲ್ಲೂ ಹೊಸ ಹುರುಪನ್ನು ಉಂಟು ಮಾಡುವುದೆಂಬುದು ಬಹು ಕಾಲದಿಂದ ನಂಬಿರುವ ವಿಷಯ. ಕಳೆದ ಹೊಸ ವರುಷಗಳ ಅನುಭವ ಹೊಸ ವರುಷ ಹೊಸತನವನ್ನುಂಟು ಮಾಡುವುದೆಂಬ ಹಾರೈಕೆ ಎಲ್ಲರದು. ಅಂತೆಯೇ ೧೯೬೪ ಭಾರತೀಯರಾದ ನಮ್ಮ ಪಾಲಿಗೆ ಹೆಜ್ಜೆ ಹೊಸತಾಗಿ ಕಂಡು ಬರುವುದೆಂಬುದು ನಿಶ್ಚಯ.

೧೯೬೩ನ್ನು ನಾವು ದಾಟಿದ್ದೇವೆ. ೧೯೬೩ ನಮ್ಮ ಪಾಲಿಗೆ ಬಹು ವಿಶೇಷವಾದ ವರುಷ. ನಮ್ಮ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ವರುಷ. ನೆರೆಯ ರಾಷ್ಟ್ರವಾದ ಚೀನಾ ಸ್ತಾನವು ಆಕಸ್ಮಿಕ ಧಾಳಿಯನ್ನು ನಡೆಸಿದ ವರುಷ ಮಾತ್ರವಲ್ಲ ಭಾರತೀಯರಲ್ಲಿನ ಅತ್ಯುಚ್ಚ ಗುಣವಿಶೇಷಗಳನ್ನು ಬೆಳಕಿಗೆ ತಂದ ವರುಷ ೧೯೬೩! ದೇಶದ ಭದ್ರತೆಗೆ ಗಂಡಾಂತರ ಒದಗಿದಾಗ ದೇಶದ ಜನತೆ ತಮ್ಮೆಲ್ಲ ಭೇದ ಭಾವಗಳನ್ನು ಮರೆತು ಒಂದಾಗಿ ದೇಶ ರಕ್ಷಣೆಗೆ ಕಟಿಬದ್ಧರಾಗುವರೆಂಬುದನ್ನು ಸಾರಿ ಹೇಳಿತು ೧೯೬೩! ರಾಷ್ಟ್ರಕ್ಕೆ ರಾಷ್ಟ್ರವೇ ಜಾಗೃತವಾಗಿ ದೇಶದ ಪ್ರಚಲಿತ ಪರಿಸ್ಥಿತಿಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಸರ್ವ ತ್ಯಾಗದಿಂದ ಸ್ವಾತಂತ್ರ್ಯದ ಸಂರಕ್ಷಣೆಗೆ ದೃಢ ನಿರ್ಧಾರ ಗೈದ ಪಾವನ ವರುಷ ೧೯೬೩!

ನಮ್ಮ ಜವಾನರು ತಮ್ಮ ಅಪ್ರತಿಮ ಸ್ಥೈರ್ಯ ಸಾಹಸಗಳ ಪ್ರದರ್ಶನ ಗೈದು ದೇಶದ ಕೀರ್ತಿಪತಾಕೆಯನ್ನು ಹಾರಿಸಿದರು! ಭಾರತೀಯ ಜವಾನರು ಎರಡನೆಯ ಜಾಗತಿಕ ಯುದ್ಧದಲ್ಲಿ ಗಳಿಸಿದ ಕೀರ್ತಿ, ಮನ್ನಣೆಗಳನ್ನು ಇಂದು ಪುನಃ ಗಳಿಸಿಕೊಂಡಿದ್ದಾರೆ. ಶೌರ್ಯ ಸಾಹಸದಲ್ಲಿ, ನೈತಿಕ ಮಟ್ಟದಲ್ಲಿ, ದೇಶ ರಕ್ಷಣೆಯಲ್ಲಿ ನಮ್ಮ ಸೈನಿಕರು ಅಪ್ರತಿಮ ಸಾಹಸಿಗರು ಎಂಬುದನ್ನು ಜಗತ್ತಿಗೇ ತೋರಿಸಿಕೊಟ್ಟಿದ್ದಾರೆ. ೧೯೬೩ ನಮ್ಮ ಜವಾನರು ಹೊಸ ಹುಂಡಿನ ಪಲ್ಲವಿ ಹಾಡಿದ ವರುಷ! ಅವರ ಕೀರ್ತಿ ದುಂದುಭಿ ಮೊಳಗಿಸಿದ ವರುಷ!

ಜವಾನರು ಯುದ್ಧರಂಗದಲ್ಲಿ ದೇಶ ರಕ್ಷಣೆಯ ಪಣತೊಟ್ಟು ನಿಂತಿದ್ದರೆ, ದೇಶದ ಮೂಲ್ಯಂತರದ ೪೪ ಕೋಟಿ ಜನತೆಯು ಅವರ ಬೆಂಬಲಕ್ಕೆ ನಿಂತಿತು. ಹಿಂದೆಂದೂ ತೋರದ ಅಪೂರ್ವ ಒಕ್ಕಟ್ಟು ಹಾಗೂ ತ್ಯಾಗವನ್ನು ನಮ್ಮ ಜನ ತೋರಿದರು. ಮಹಿಳೆಯರು ತಮ್ಮ ಮೆಚ್ಚಿನ ಬಂಗಾರವನ್ನು ದೇಶಕ್ಕಾಗಿತ್ತರು. ಬಡವ ಶ್ರೀಮಂತನೆಂಬ ಬೇಧವಿಲ್ಲದೆ ಎಲ್ಲಾ ವರ್ಗದ ಜನ ದೇಶಕ್ಕೆ ತಮ್ಮ ಕಾಣಿಕೆ ಸಲ್ಲಿಸಿದರು. ಸಲ್ಲಿಸುತ್ತಿದ್ದಾರೆ! ದೇಶದ ಭವಿಷ್ಯತ್ತು ವೈರಿಗಳ ಆಕ್ರಮಣದಿಂದ ಅತಂತ್ರತೆಯಿಂದಾವರಿಸಿ ಕೊಂಡಿದ್ದಾಗ, ಜನತೆಯ ಈ ತೆರನಾದ ತ್ಯಾಗ, ಒಕ್ಕಟ್ಟು, ಧೈರ್ಯ ಆ ಕತ್ತಲೆಯನ್ನು ಹೊಡೆದೋಡಿಸಿ ಬೆಳಕನ್ನು ಚೆಲ್ಲಿತು! ಭಾರತ ಬಾಳಬಲ್ಲುದು, ಬದುಕಬಲ್ಲುದು ಎಂದು ತೋರಿಸಿ ಕೊಟ್ಟಿತು. ೧೯೬೩ ನಾವು ನಮ್ಮ ಜೀವನದಲ್ಲಿ ಅತಿ ಮಹತ್ವದ ಪಾಠ ಕಲಿತ ವರುಷ!

ದೇಶದ ಗಂಡಾಂತರದ ಸಂದರ್ಭಗಳೇ ನಮಗೆ ಬಹು ಮಟ್ಟಿನ ಉತ್ತಮ ಪಾಠಗಳನ್ನು ಕಲಿಸಿದುವು ಎಂಬುದನ್ನು ನಾವು ಒಪ್ಪಲೇ ಬೇಕು. ನಾವು ತಪ್ಪು ಮಾಡಿ ಆ ತಪ್ಪಿನಿಂದ ಉತ್ತಮ ಪಾಠವನ್ನು ಕಲಿತವರು! ಇದು ಯಾರನ್ನೂ ಬಿಟ್ಟಿದ್ದಲ್ಲ. ಎಲ್ಲಾ ಅನುಭವ ಶಾಲೆಗಳ ಯಶಸ್ಸಿನ ಗುಟ್ಟಾದರೂ ಇದೇ. ಭಾರತವಾದರೂ ಇದಕ್ಕೆ ಅಪವಾದವಾಗಲು ಸಾಧ್ಯವಿಲ್ಲ.

'ಸ್ವಾವಲಂಬನೆ'ಯೇ ನಮ್ಮ ದೇಶದ ತಾರಕ ಮಂತ್ರವಾದ ವರುಷ ೧೯೬೩. ಈ ಮಂತ್ರದ ಪಠನದಿಂದ ನಾವು ಮುಂದೆ ಸಾಗಿ, ಸ್ವಾವಲಂಬಿಗಳಾಗ ಬೇಕಾಗಿದೆ. ದೇಶದ ರಕ್ಷಣೆಗಾಗಲೀ, ಅಥವಾ ಇನ್ನಾವುದೇ ಅವಶ್ಯಕತೆಗಾಗಲೀ ಪರಕೀಯರ ಮುಖ ನೋಡುವುದು ತಪ್ಪು ಎಂದು ನಮಗೀಗ ಅರಿವಾಗಿದೆ. ತಿರುಪೆಯ ಪಾತ್ರೆ ಹಿಡಿದು ಬಹುಕಾಲ ಬಾಳಲು ಸಾಧ್ಯವಿಲ್ಲ ಎಂಬುದು ನಮಗೀಗ ಚೆನ್ನಾಗಿ ಮಂದಟ್ಟಾಗಿದೆ. ಕಾರಣ ನಮ್ಮ ನಾಲ್ಕನೇ ಯೋಜನೆಗೆ ಬೇಕಾದ ಧನ ಸಹಾಯ ಸಾಕಷ್ಟು ಬೇರೆ ರಾಷ್ಟ್ರಗಳಿಂದ ದೊರಕದಿದ್ದುದು. ಹಾಗಾಗಿ ನಮಗೀಗ ಉಳಿದಿರುವುದು ಒಂದೇ ದಾರಿ. ಸ್ವಾವಲಂಬನೆ ಹಾಗು ಆತ್ಮ ಸಂರಕ್ಷಣೆ. ಅದಕ್ಕೀಗ ನಾವು ಸಿದ್ಧರಾಗಿದ್ದೇವೆ. ಇದನ್ನು ನಮಗೆ ಕಲಿಸಿದುದು ೧೯೬೩.

ದೇಶದ ಗಡಿಯಲ್ಲಿ ವೈರಿಗಳ ವಿರುದ್ಧ ನಾವು ಹೋರಾಟವಾಡುತ್ತಿದ್ದಂತೆ ದೇಶದೊಳಗೆ ಹಸಿವಿನ ವಿರುದ್ಧ ನಾವು ಹೋರಾಡಬೇಕಾದ ಪ್ರಸಂಗವಾಯಿತು ೧೯೬೩! ಮೊನ್ಸೂನ್ ಮಳೆಯ ಅಭಾವದಿಂದ ಇಂದು ದೇಶದಾದ್ಯಂತ ಆಹಾರ ಸಮಸ್ಯೆಯು ತೀರಾ ಬಿಗಡಾಯಿಸಿದೆ. ನಮ್ಮ ಬೇಸಾಯ ಎಷ್ಟರ ಮಟ್ಟಿಗೆ ಪ್ರಕೃತಿಯನ್ನು ಹೊಂದಿಕೊಂಡಿದೆ ಎಂಬುದನ್ನು ನಾವ ಅರಿತುಕೊಂಡು, ಸ್ವಾತಂತ್ರ್ಯದ ಈ ಹದಿನೆಂಟು ವರುಷಗಳಲ್ಲಿ ನಾವು ಕೃಷಿಯನ್ನು ಎಷ್ಟು ನಿರ್ಲಕ್ಷಿಸಿದ್ದೇವೆ ಎಂಬುದನ್ನೂ ತಿಳಿಯುವಂತಾಯಿತು. ನಮ್ಮ ಪಂಚವಾರ್ಷಿಕ ಯೋಜನೆಗಳು ಕೈಗಾರಿಕೆ ಉದ್ದಿಮೆಗಳತ್ತ ಕೇಂದ್ರೀಕೃತವಾಗಿ, ಕೃಷಿಯನ್ನು ಪೂರ್ಣ ನಿರ್ಲಕ್ಷಿಸಿದ ದರ ಫಲವಿದೆಂದು ನಾವೀಗ ಕಲಿತಿದ್ದೇವೆ. ಇದನ್ನು ಕಲಿಸಿತು ಕಳೆದ ವರುಷ ೧೯೬೩. ನಾವು ದೇಶದ ರಕ್ಷಣೆಗಾಗಿ ಶತ್ರುಗಳೊಡನೆ ಹೋರಾಡುವುದರ ಜತೆಗೆ ಈ ಆಹಾರ ರಂಗದಲ್ಲೂ ಹೋರಾಡುವ ಕಾಲ ಬಂತು.

ಇದರಿಂದ ನಾವು ಚೆನ್ನಾಗಿ ಪಾಠಕಲಿತೆವು. ಮರೆಯಲಾರದ ಪಾಠ ನಮಗೆ ದೊರಕಿತು. ಹಾಗಾಗಿ ನಾವು ಹೊಸತೊಂದು ಘೋಷಣೆಗೆ ತೊಡಗಿದೆವು -"ಜೈ ಜವಾನ್ ಜೈ ಕಿಸಾನ್"- ಯುದ್ಧರಂಗದಲ್ಲಿ ಶತ್ರುಗಳೊಡನೆ ಎಷ್ಟು ಜಾಗರೂಕತೆಯಿಂದ ಹೋರಾಡಬೇಕೋ ಆಹಾರ ರಂಗದಲ್ಲೂ ಅಷ್ಟೆ ಮಟ್ಟಿನ ಹೋರಾಟ ಅಗತ್ಯ ಎಂದು ನಾವೀಗ ಅರಿತಿದ್ದೇವೆ. ಕೃಷಿಯ ಅಭಿವೃದ್ಧಿಯತ್ತ ವಿಶೇಷ ಲಕ್ಷ್ಯ ಹರಿಯಿಸಿ ಇಂದು ಹಳ್ಳಿಗಳತ್ತ ನಮ್ಮ ಗಮನ ಹರಿದಿದೆ. ಇದು ನಮಗೆ ಪ್ರಕೃತಿ ಕಲಿಸಿದ ಪಾಠ! ೧೯೬೩ರ ಪರಿಸ್ಥಿತಿಯಾರದ ಹೊಸ ಪಾಠ!

ಹೀಗೆ ೧೯೬೩ ನಮ್ಮಲ್ಲಿ ಹೊಸ ಚೈತನ್ಯವನ್ನು ಮೂಡಿಸಿದೆ. ಮರೆಯಲಾಗದ ಪಾಠವನ್ನು ಕಲಿಸಿದೆ. ನಾವು ಈ ವರುಷದ ಅನುಭವದಿಂದ ತುಂಬಾ ಅನುಭವಿಗಳಾಗಿದ್ದೇವೆ. ಭವಿಷ್ಯತ್ತಿನ ಕುರಿತು ಯೋಗ್ಯ ರೀತಿ ಯೋಚಿಸಬಲ್ಲ ಬುದ್ಧಿ ಕೊಂಡಿದ್ದೇವೆ. ಹಾಗಾದರೆ ಮುಂದೆ ಬರುವ ೧೯೬೪ ಹಿಂದಿನ ಅನುಭವಗಳಿಂದ ಶುಭಕರವಾಗಿ ಪರಿಣಾಮಿಸಬೇಕೆಂಬ ಹಂಬಲ ಇರಿಸಿದ್ದೇವೆ.

ಈ ಶುಭಕಾಮನೆ ಸಹಜವಾದುದು. ಆದರೆ ಇದರ ಸಾಧನೆ ಕಠಿಣತರವಾದುದು. ದೇಶವು ೧೯೬೩ರಲ್ಲಿ ಇದಿರಿಸಿದ ಭೀಕರ ಸಮಸ್ಯೆಗಳಿಂದ ನಾವು ಸಾಕಷ್ಟು ಅನುಭವಿಗಳಾಗಿದ್ದೇವೆನೋ ನಿಜ. ಆದರೆ, ನಾವು ತೃಪ್ತಿಪಟ್ಟು ಕುಳಿತುಕೊಳ್ಳುವ ಕಾಲ ಇದಲ್ಲ. ದೇಶಕ್ಕೊದಗಿದ ಗಂಡಾಂತರ ಇನ್ನು ಬಗೆ ಹರಿದಿಲ್ಲ. ಚೀನಾ ಪಾಕಿಸ್ತಾನಗಳ ಭೀತಿ ಇನ್ನೂ ಇದೆ. ಆಹಾರದ ಕೊರತೆಯು ಭೀಕರ ಪರಿಣಾಮವನ್ನು ಕಾದು ನೋಡಲಿರುವ ವರ್ಷ ೧೯೬೪. ಈ ವರ್ಷ ೧೯೬೩ಕ್ಕಿಂತಲೂ ಹೆಚ್ಚಿನ ಪಾಠವನ್ನು ನಮಗೆ ಕಲಿಸೀತು. ಇನ್ನು ಭೀಕರ ಪರಿಸ್ಥಿತಿಯನ್ನು ನಾವು ಎದುರಿಸಬೇಕಾದೀತು! ಅಂತಹ ಪರಿಸ್ಥಿತಿಗ ಎದೆಯೊಡ್ಡಿ ನಮ್ಮ ಸ್ವಾತಂತ್ರ್ಯದ ರಕ್ಷಣೆಯ ಜತೆಗೆ ಆರ್ಥಿಕಾಭಿವೃದ್ಧಿಯನ್ನು ಸಾಧಿಸಬೇಕಾದ ಗುರುತರ ಹೊಣೆ ೧೯೬೪ರಲ್ಲಿ ನಮ್ಮ ಪಾಲಿಗೆ ಬರಲಿದೆ. ಅದನ್ನು ನಾವು ನಿರ್ವಹಿಸಲು ಶಕ್ತರಾಗಬೇಕು.

(ಹದಿನಾಲ್ಕನೇ ಪುಟ ನೋಡಿರಿ)

ಅನುಭವ

# ಭಾರತ ಸೋವಿಯತ್ ಮೈತ್ರಿ

ಪ್ರಧಾನಿ ಶಾಸ್ತ್ರಿ ಜನವರಿ ೪ರಂದು ತಾಷ್ಕೆಂಟಿನಲ್ಲಿ ಅಧ್ಯಕ್ಷ ಆಯ್ಯೂಬ ಖಾನರೊಡನೆ ಭೆಟ್ಟಿ ಮಾಡುತ್ತಾರೆ. ಅನುಭವಿಗಳ ದೃಷ್ಟಿಯಲ್ಲಿ ಭಾರತ ಸೋವಿಯತ್ ಮೈತ್ರಿಯ ಪರಿಚಯ ಈ ಸಂದರ್ಭದಲ್ಲಿ ಸ್ಮರಣೀಯ.

## ಮೈತ್ರಿಯ ಮಹಾ ಮನೋಭಾವ

ಭಾರತದ ಪ್ರಧಾನ ಮಂತ್ರಿ ಶ್ರೀ ಲಾಲ್ ಬಹಾದುರ್ ಶಾಸ್ತ್ರಿಯವರು ಸೋವಿಯತ್ ನಾಡಿಗೆ ಇತ್ತೀಚೆಗೆ ನೀಡಿದ ಭೇಟಿಯು ಭಾರತ—ಸೋವಿಯತ್ ಸಂಬಂಧಗಳಲ್ಲಿ ನೂತನ ಘಟ್ಟವನ್ನು ಗುರುತಿಸಿತು. ದಿವಂಗತ ಪಂಡಿತ ಜವಾಹರಲಾಲ್ ನೆಹರೂರವರು ಹತ್ತು ವರ್ಷಗಳ ಹಿಂದೆ ಸೋವಿಯತ್ ನಾಡಿಗೆ ಭೇಟಿ ಕೊಟ್ಟಾಗ ಭಾರತ— ಸೋವಿಯತ್ ದೇಶಗಳ ಮಧ್ಯೆ ಮೈತ್ರಿಗೆ ಅತ್ಯಂತ ದೃಢವಾದ ತಳಹದಿಯನ್ನು ಹಾಕಿದರು. ಕಳೆದ ಹತ್ತು ವರ್ಷಗಳಲ್ಲಿ ಭಾರತ-ಸೋವಿಯತ್ ಸಂಬಂಧಗಳಲ್ಲಿ ಯಾವ ಬಗೆಯ ಬಿಗಿತವೂ ಕಂಡುಬಂದಿಲ್ಲ.

### ಸಮಾನ ಧ್ಯೇಯಗಳು

ಭಾರತ ಮತ್ತು ಸೋವಿಯತ್ ದೇಶಗಳನ್ನು ಕೂಡಿಸುವ ಬಂಧನ ಯಾವುದು? ನಿಸ್ಸಂದೇಹವಾಗಿಯೂ ಜಾಗತಿಕ ಶಾಂತಿಯು ನಮ್ಮೆರಡು ದೇಶಗಳನ್ನೂ ಸಮೀಪಗೊಳಿಸಿದ ಸಮಾನ ಧ್ಯೇಯವಾಗಿದೆ. ಸೋವಿಯೆತ್ ಜನತೆಯು ಇಪ್ಪತ್ತೈದು ವರ್ಷಗಳಲ್ಲಿ ಎರಡು ಯುದ್ಧಗಳ ಕಟು ಅನುಭವ ಪಡೆದಿದೆ. ಯುದ್ಧದಲ್ಲಾಗುವ ಜನಹಾನಿ, ವಸ್ತುಹಾನಿ, ಅದರ ಭಯೋತ್ಪಾತಗಳು, ವಿನಾಶ ಇವೆಲ್ಲವನ್ನೂ ಚೆನ್ನಾಗಿ ಬಲ್ಲುದು. ನಾವು ಭಾರತದ ರಕ್ತಪಾತಮಯವಾದ ಯುದ್ಧಾನುಭವ ಪಡೆದಿಲ್ಲ. ಶತಮಾನಗಳ ಪರಾಧೀನತೆಯ ಆಡಳಿತದಿಂದ ಇತ್ತೀಚೆಗೆ ಮಾತ್ರವೇ ನಾವು ಪಾರಾಗಿದ್ದೇವೆ. ತತ್ಪರಿಣಾಮವಾಗಿ ನಮ್ಮದು ಆರ್ಥಿಕವಾಗಿ ಅಲ್ಪವಿಕಸಿತ ದೇಶವಾಗಿದೆ. ದಶಕಗಳ ಹಿಂದುಳಿಕೆಯನ್ನೂ, ಬಡತನವನ್ನೂ ನಾವು ದಾಟಿ ಹೋಗಬೇಕಾಗಿದೆ. ಆದುದರಿಂದಲೇ ನಮಗೆ ಶಾಂತಿ ಆವಶ್ಯಕವಾಗಿದೆ. ನಮ್ಮ ಆರ್ಥಿಕ ವಿಕಾಸಕ್ಕೆ, ನಮ್ಮ ಜನತೆಯ ಜೀವನ ಪ್ರಮಾಣ ವೃದ್ಧಿಯ ತುರ್ತು ಕಾರ್ಯಕ್ಕೆ ನಾವು ವಿಶೇಷ ಲಕ್ಷ್ಯವನ್ನು ನೀಡಬೇಕಾಗಿದೆ.

ಈ ಶಾಂತಿಯ ಅಪೇಕ್ಷೆಯಿಂದಲೇ ಭಾರತವು ಸಂಪೂರ್ಣ ನಿಃಶಸ್ತ್ರೀಕರಣಕ್ಕೆ ಪ್ರಬಲವಾದ ಬೆಂಬಲವನ್ನು ನೀಡುತ್ತದೆ. ಶಸ್ತ್ರಾಸ್ತ್ರಗಳಿಗೆ ಧನವ್ಯಯವಾಗುತ್ತದೆ. ಮೂಲಭೂತ ಮುಖ್ಯ ವಸ್ತುಗಳನ್ನು ತ್ಯಜಿಸಬೇಕಾಗುತ್ತದೆ. ಅಲ್ಪವಿಕಸಿತ ದೇಶಗಳಲ್ಲಿ ಜೀವನ ಪ್ರಮಾಣಗಳು ಮೊದಲೇ ಕಡಿಮೆ. ಅಲ್ಲಿನ ಜನರು ಇನ್ನೂ ಹೆಚ್ಚು ತ್ಯಾಗ ಮಾಡುವುದೆಂದರೆ, ಉಪವಾಸ, ದುರ್ದೆಸೆಗಳನ್ನು ಎದುರಿಸಬೇಕಾಗುತ್ತದೆ. ಆದುದರಿಂದಲೇ ಅಲ್ಪವಿಕಸಿತ ದೇಶಗಳಿಗೆ ಜಾಗತಿಕ ಶಾಂತಿಯಲ್ಲಿ ವಿಶೇಷಾಸಕ್ತಿಯಿದೆ.

ಸೋವಿಯತ್ ನಾಡಿನಂತೆಯೇ, ಭಾರತವೂ ಬೀಜಾಣು ಅಸ್ತ್ರಗಳ ವ್ಯಾಪ್ತಿಯನ್ನು ತೀವ್ರವಾಗಿ ವಿರೋಧಿಸಿದೆ. ಬೀಜಾಣು ಶಸ್ತ್ರಾಸ್ತ್ರಗಳಿಗಾಗಿ ಅತ್ಯಧಿಕ ವೆಚ್ಚವಾಗುತ್ತದೆ. ಅಲ್ಪವಿಕಸಿತ ದೇಶಗಳೂ ಬೀಜಾಣು ಅಸ್ತ್ರಗಳ ತಯಾರಿಕೆಯ ಕಾರ್ಯಕ್ರಮವನ್ನು ಕೈಗೊಂಡರೆ, ಅವರಿಗೆ ಅದು ನಿಸ್ಸಂದೇಶವಾಗಿಯೂ ಆರ್ಥಿಕ ವಿನಾಶಕ್ಕೆ ಹಾದಿಯಾಗುವುದು. ಇದಲ್ಲದೆ ಹೆಚ್ಚು ದೇಶಗಳು ಬೀಜಾಣು ಅಸ್ತ್ರಗಳನ್ನು ಪಡೆದಂತೆ, ಶಾಂತಿಗೆ ಗಂಡಾಂತರವೂ ಹೆಚ್ಚುತ್ತದೆ. ಆಗ ಯಾವ ದೇಶಕ್ಕೂ ಭದ್ರತೆ ಇರಲಾರದು. ಸಂಯುಕ್ತರಾಜ್ಯ ಅಮೆರಿಕ ಮತ್ತು ಸೋವಿಯೆತ್ ಒಕ್ಕೂಟ ದೇಶಗಳಲ್ಲಿರುವ ಬೀಜಾಣು ಬಾಂಬು ಸಂಗ್ರಹವು ಇಡೀ ಜಗತ್ತನ್ನು ಅನೇಕ ಸಲ ನಾಶಗೊಳಿಸಲು ಸಾಕಾಗುತ್ತದೆಯೆಂದು ಸೋವಿಯತ್ ಪ್ರಧಾನಿ ಕೊಸೀಗಿನವರು, ಶ್ರೀ ಶಾಸ್ತ್ರಿಯವರಿಗೆ ತಿಳಿಸಿದ್ದರು. ಸೋವಿಯೆತ್ ನಾಡು, ಮತ್ತು ಸಂಯುಕ್ತ ರಾಜ್ಯ ಅಮೆರಿಕ ದೇಶಗಳಂತೆ ಖರ್ಚು ಮಾಡಲು ಧನವಾಗಲೀ, ಸಮಯವಾಗಲೀ, ಇತರ ಮೂಲಾಧಾರಗಳಾಗಲೀ ಬೇರಾವ ದೇಶಗಳ ಬಳಿಯಲ್ಲೂ ಇಲ್ಲ. ಇಂತಹ ದೇಶವು ಯಾವುದಾದರೂ ಇದ್ದರೂ ತಾನೂ ಇನ್ನೊಂದು ಅಗ್ರ ರಾಜ್ಯಶಕ್ತಿಯೆಂದು ಕರಸಿಕೊಳ್ಳುವ ತೃಪ್ತಿ ಮಾತ್ರವಷ್ಟೇ ಅಲ್ಲದೆ ಅದರಿಂದ ಆಗುವ ಪುರುಷಾರ್ಥ ಸಾಧನೆ ಯಾವುದಾದರೂ ಏನು? ಇದೇ ಕಾರಣದಿಂದಲೇ ಭಾರತವು ಆವಶ್ಯಕ ತಾಂತ್ರಿಕ ಜ್ಞಾನವನ್ನೂ, ಸೌಕರ್ಯಗಳನ್ನೂ ಹೊಂದಿದ್ದರೂ ತಾನು ಪರಮಾಣು ಬಾಂಬನ್ನು ತಯಾರಿಸಕೂಡದೆಂದು ನಿರ್ಧರಿಸಿದೆ. ಇದೇ ಕಾರಣದಿಂದಲೇ ಭಾರತವು ತುಂಬು ಮನದಿಂದ ಮಾಸ್ಕೋ ಬೀಜಾಣು ಪರೀಕ್ಷಾ ಪ್ರಯೋಗ ನಿಷೇಧದ ಒಪ್ಪಂದಕ್ಕೆ ಬೆಂಬಲವನ್ನು ನೀಡಿ, ಹಸ್ತಾಕ್ಷರ ಮಾಡಿತು. ಮಾನವಕುಲವನ್ನು ನಿರ್ಮೂಲಗೊಳಿಸುವ ಭೀತಿ ಉಂಟುಮಾಡುತ್ತಿರುವ ಭಯಂಕರ ಬೀಜಾಣು ಬಾಂಬನ್ನು ಕೊನೆಗಾಣಿಸುವ ಭಾವೀ ಘಟ್ಟಗಳನ್ನು ಈ ಒಡಂಬಡಿಕೆಯು ಸುಗಮಗೊಳಿಸುವುದೆಂದು ಭಾರತವು ನಿರೀಕ್ಷಿಸಿತ್ತು.

ಭಾರತ ಸೋವಿಯೆತ್‌ಗಳು ಶಾಂತಿಯುತ ಸಹ—ಅಸ್ತಿತ್ವದಲ್ಲಿ ನಂಬಿಕೆಯನ್ನು ಸ್ವೀಕರಿಸಿವೆ. ಈ ದೇಶಗಳು ಬೇರೆ ಬೇರೆ ಸಾಮಾಜಿಕ ವ್ಯವಸ್ಥೆಗಳನ್ನು ಹೊಂದಿದ್ದರೂ, ಎರಡೂ ಸನ್ಮಿತ್ರ ರಾಷ್ಟ್ರಗಳಾಗಿರುವುದು ಸಾಧ್ಯವೆಂದು ವ್ಯಕ್ತವಾಗಿದೆ. ಭಾರತವು ಸಮಾಜವಾದೀ ಸಮಾಜ ಸ್ಥಾಪನೆಯ ಲಕ್ಷ್ಯವನ್ನು ತನ್ನ ಮುಂದೆ ಇಟ್ಟುಕೊಂಡಿದೆ. ಆದರೆ ಭಾರತದ ಸಮಾಜವಾದದ ಕಲ್ಪನೆಯು ಸೋವಿಯೆತ್ ನಾಡಿನ ಮತ್ತು ಇತರ ಸಮಾಜವಾದೀ ದೇಶಗಳ ಕಲ್ಪನೆಗಿಂತ ಬಿನ್ನವಾಗಿದೆ.

### ಆದರದ ಸ್ನೇಹಭಾವನೆಗಳು

ಸೋವಿಯೆತ್ ಪ್ರಧಾನಿ ಕೊಸೀಗಿನ್ನರು ಭಾರತ ಪ್ರಧಾನಿಯವರೊಡನೆ ಲೆನಿನ್‌ಗ್ರಾಡಿಗೆ ಹೋದುದು ಭಾರತದ ಬಗ್ಗೆ ಮೈತ್ರಿಯ ಮಹಾ ಮನೋಭಾವದ ನಿದರ್ಶನವಾಗಿತ್ತು. ಗಂಟೆಗಟ್ಟಲೆ ಕೊಸೀಗಿನ್ನರು ಶ್ರೀ ಶಾಸ್ತ್ರಿಯವರೊಡನೆ ನಡೆದು ಬರುತ್ತ, ಐತಿಹಾಸಿಕ ಮಹತ್ವದ ಸ್ಥಳಗಳಿಗೆ ಭೇಟಿ ಕೊಟ್ಟರು. ಸ್ವತಃ ಲೆನಿನ್‌ಗ್ರಾಡ್ ನಿವಾಸಿಯಾಗಿದ್ದ ಕೊಸೀಗಿನ್ನರು ಆ ಸ್ಥಳಗಳನ್ನು ಅನೇಕ ಸಲ ಹಿಂದೆ ನೋಡಿದ್ದರು. ಮಾಸ್ಕೋ, ಲೆನಿನ್‌ಗ್ರಾಡ್ ಕೇಯೆವ್, ತಾಷ್ಕೆಂಟ್ ನಗರಗಳಲ್ಲಿ ಸರಕಾರೀ, ಪಾರ್ಟಿ ಧುರೀಣರು ಮಾತ್ರವಷ್ಟೇ ಅಲ್ಲದೆ ಸ್ಥಳೀಯ ಜನತೆಯೂ ಶ್ರೀ ಶಾಸ್ತ್ರಿಯವರಿಗೆ ಆದರದ ಸ್ವಾಗತವನ್ನು ನೀಡಿತು. ಶ್ರೀ ಶಾಸ್ತ್ರಿಯವರ ಸಂಗಡ ಹೋಗಿದ್ದ ನನ್ನಂತಹ ಪತ್ರಿಕೋದ್ಯಮಿಗಳಿಗೂ ಭಾರತದ ಬಗ್ಗೆಯೂ, ಭಾರತೀಯರ ಬಗ್ಗೆಯೂ, ಸೋವಿಯೆತ್ ಜನತೆಯು ತೋರುತ್ತಿರುವ ಆದರದ ಸ್ನೇಹಭಾವನೆಗಳ ಒಳ್ಳೆಯ ಪರಿಚಯವಾಯಿತು. ಭಾರತ, ಸೋವಿಯೆತ್ ಜನತೆಯು ತೋರುತ್ತಿರುವ ಆದರದ ಸ್ನೇಹಭಾವನೆಗಳ ಒಳ್ಳೆಯ ಪರಿಚಯವಾಯಿತು. ಭಾರತ, ಸೋವಿಯೆತ್ ನಾಡುಗಳಂತಹ ಎರಡು ಮಹಾನ್ ದೇಶಗಳ ನಡುವಣ ಈ ಸ್ನೇಹ—ಸಹಕಾರ ಭಾವನೆಯು ಜಾಗತಿಕ ಶಾಂತಿಗೆ ಮುಖ್ಯ ಕಾರಣಕೆಯಾಗಿದೆ. ಈ ಎರಡು ದೇಶಗಳ ೬೦ ಕೋಟಿ ಜನರ ಐಕ್ಯಮತ್ಯವು ಜಾಗತಿಕ ಶಾಂತಿಗೆ ಪ್ರಬಲ ಅಂಶವಾಗಿದೆ. ಅಂತಾರಾಷ್ಟ್ರೀಯ ಮಹತ್ವದ ಅನೇಕ ವಿಷಯಗಳ ಬಗ್ಗೆ ನಮ್ಮೆರಡೂ ದೇಶಗಳ ದೃಷ್ಟಿಯು ಒಂದೇ ಆಗಿದೆ. ಭಾರತ, ಸೋವಿಯೆತ್ ದೇಶಗಳ ನಡುವಣ ಈ ಸ್ನೇಹವು ಚಿರಕಾಲ ಮುಂದುವರಿಯಲಿ, ಸಮೃದ್ಧವಾಗಲಿ.

—ಕೆ. ರಂಗಸ್ವಾಮಿ,
ಮದರಾಸಿನ 'ಹಿಂದೂ' ಪತ್ರಿಕೆಯ ಸಮೀಕ್ಷಕರು.

೦ ೦ ೦

## ಸುಸ್ಪಷ್ಟ ಭಾವನೆಗಳು

ನಾನು ಸೋವಿಯೆತ್ ಒಕ್ಕೂಟಕ್ಕೆ ಬರುವುದಕ್ಕೆ ಬಹು ಕಾಲ ಮೊದಲೇ ನನ್ನ ಭಾರತ, ಸೋವಿಯತ್ ದೇಶಗಳ ನಡುವೆ ಬೆಳೆಯುತ್ತಿರುವ ಪ್ರಬಲ ಸ್ನೇಹದ ತಿಳುವಳಿಕೆಯಿತ್ತು. ಯಾವ ಭಾರತೀಯರಾಗಲಿ, ಸೋವಿಯತ್ ನಾಗರಿಕರಾಗಲೀ ಈ ಸ್ನೇಹದ ಪರಿಚಯವಿಲ್ಲದೆ ಇರಲಾರರು.

### ಹಾರ್ದಿಕ, ಸುಸ್ಮರಣೀಯ ಅನುಭವ

ಈ ವಾಸ್ತವಾಂಶಗಳ ಅರಿವು ಒಂದು ಮಾತಾದರೆ, ಭಾರತದ ಬಗ್ಗೆ ಸೋವಿಯತ್ ಸ್ನೇಹದ ಗಾಢತೆಯನ್ನೂ ಶುದ್ಧಾಂತಃಕರಣವನ್ನೂ ಕಣ್ಣಾರೆ ಕಾಣುವುದು ಬೇರೆ ಅನುಭವ. ಸೋವಿಯತ್ ಜನತೆಯ ಆಳದ ಸ್ನೇಹ ಮನೋಭಾವ, ಉನ್ನತ ಗೌರವ ಮತ್ತು ಅಪಾರ ಆದರಗಳನ್ನು ಪ್ರಕಟಿಸುತ್ತಾರೆ. ಇದು ಹಾರ್ದಿಕ, ಸುಸ್ಮರಣೀಯ ಅನುಭವ. ನಾವು ಸೋವಿಯತ್ ಒಕ್ಕೂಟದಲ್ಲಿ ಸಂಚರಿಸಿದಾಗ ನಮ್ಮನ್ನು ಸೋವಿಯತ್ ಜನತೆಯು ಬೇರೆ ಬೇರೆ ಸ್ಥಳಗಳಲ್ಲಿ ನಮ್ಮ ಬಗ್ಗೆಯೂ, ಭಾರತದ ಬಗ್ಗೆಯೂ ಪ್ರದರ್ಶಿಸಿದ ಸದ್ಭಾವನೆಯಿಂದ ನಮ್ಮಲ್ಲಿ ಅನುಕಂಪವುಂಟಾಯಿತು. ನಮ್ಮನ್ನು ಬೀದಿಗಳಲ್ಲಿ ಆದರದಿಂದ ಸ್ವಾಗತಿಸಿದವರಲ್ಲಿ ಬಹ್ವಂಶದವರಿಗೆ ನಮ್ಮ ಭಾಷೆ ತಿಳಿಯದು; ನಮಗೆ ಅವರ ಭಾಷೆ ತಿಳಿಯದು. ಆದರೆ ಸಂಜ್ಞೆಗಳು, ಇಂಗಿತಗಳ ಭಾಷೆಯಲ್ಲಿ, ಭಾರತ ಚಲಚ್ಚಿತ್ರ ಗೀತೆಗಳು ಜವಾಹರಲಾಲ್ ನೆಹರೂ ಸಂಕೇತಗಳ ಮೂಲಕ, ಶ್ರೀ ಶಾಸ್ತ್ರಿಯವರ ಭೇಟಿಯ ಸೂಚನೆಯ ದ ಅವರು ತಮ್ಮ ಅರ್ಥವನ್ನೂ, ಮನೋಭಾವಗಳನ್ನೂ ಸ್ಪಷ್ಟವಾಗಿ ವ್ಯಕ್ತಪಡಿಸಿದರು.

### ಶಾಂತಿ ಬಗ್ಗೆ ಶ್ರದ್ಧೆ

ಸೋವಿಯೆತ್ ಜನತೆಗೆ ಶಾಂತಿಯ ಬಗ್ಗೆ ಇರುವ ಶ್ರದ್ಧೆಯು ನಮ್ಮ ಮೇಲೆ ಗಾಢ ಪ್ರಭಾವವನ್ನು ಉಂಟುಮಾಡಿತು. ಪ್ರತಿಯೊಂದು ಕಡೆಯೂ ಸುಂದರವಾದ "ಮಿರ್" (ಶಾಂತಿ) ಶಬ್ದವು ಕೇಳಿ ಬರುತ್ತದೆ. ಈ ಶಬ್ದವುಳ್ಳ ಪತಾಕೆಗಳು ಕಂಡು ಬರುತ್ತವೆ. ಯಾರಾದರೂ ಸೋವಿಯತ್ ನಾಗರಿಕರ ಕೂಡ ಐದು ನಿಮಿಷ ಮಾ

(ಹದಿಮೂರನೇ ಪುಟ ನೋಡಿರಿ)


## ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

| | |
|---|---|
| ಭಾರತದ ವೀರಾಂಗನೆಯರು | 1—50 |
| ಬರದ ಮುಗಿಲು | 1—50 |
| ಅನುವಾದಿತ ಕತೆಗಳು | 1—20 |
| ಪಂಚ ಸುಮನ | 1—20 |
| ಮುತ್ತಿನ ಮಾಲೆ | 1—80 |
| ಹೂ ಗೊಂಚಲು | 1—75 |
| ಪಂಚಗಜ್ಜಾಯ | 1—75 |
| ಏಕಾಂಕ ನಾಟಕಗಳು | 1—00 |
| ಭಾರತದ ನಾಲ್ಕುಮುಖಗಳು | 1—00 |
| ದೇಶ ವಿದೇಶದ ಮಹಾ ಜೀವಿಗಳು | 1—80 |
| ಹೆಂಗುಸರ ಕತೆಗಳು | 2—00 |

ಕೆಟಲಾಗಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.


## ಚಂದಾದಾರರಲ್ಲಿ ವಿನಂತಿ.

ಚಂದಾ ಅವಧಿ ಮುಗಿದ ಚಂದಾದಾರರೆಲ್ಲ ನಾವು ಈಗಾಗಲೇ ಕಾರ್ಡು ಬರೆದು ಮುಂದಿನ ಚಂದಾ ಹಣವನ್ನು ಕಳಿಸಲು ವಿನಂತಿಸಿಕೊಂಡಿರುತ್ತೇವೆ. ಕೆಲವರು ನಮ್ಮ ವಿನಂತಿಯನ್ನು ಮನ್ನಿಸಿ ಚಂದಾ ಹಣವನ್ನು ಕಳಿಸಿಕೊಟ್ಟಿದ್ದಾರೆ. ಇನ್ನೂ ಚಂದಾ ಕಳಿಸದವರು ದಯಮಾಡಿ ತಮ್ಮ ಚಂದಾ ಹಣವನ್ನು ಬೇಗ ಕಳಿಸಿಕೊಡುವಂತೆ ಬಿನ್ನವಿಸುತ್ತೇವೆ. ಅಂತೂ ವಾರಾಂತ್ಯದೊಳಗೆ ಚಂದಾ ಬಾರದಿದ್ದರೆ ನಾವು ಮಾಡುವ ವಿ. ಪಿ. ಯನ್ನು ದಯಮಾಡಿ ಪಡೆಕೊಂಡು ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ

### ಆದರ್ಶ ಚರಿತ್ರೆ

# ಮಹಾಸಾಧ್ವಿ ಸೀತಾಮಾತೆ

**ಪಂಚ ಮಹಾ ಪತಿವ್ರತೆಯರಲ್ಲಿ ಒಬ್ಬಳಾದ ಸೀತೆ ತನ್ನ ಪಾತಿವ್ರತ್ಯದಿಂದಲೇ ಯಶಸ್ವಿನಿಯಾದಳು.**

ಬರೆದವರು:
ಶ್ರೀ ಸ. ನಾರಾಯಣ.

ಆದಿಕಾವ್ಯ ರಾಮಾಯಣದ ಕಥಾನಾಯಕಿ ಸೀತಾದೇವಿಯನ್ನು ಅರಿಯದವರಿಲ್ಲ. ಸೀತಾದೇವಿಗೆ ಪಂಚ ಮಹಾಕನ್ಯೆಯರಲ್ಲಿ ಪ್ರಥಮ ಸ್ಥಾನ. ಈಕೆ ಪರಮ ಸಾಧ್ವಿ. ಮೇಲಾಗಿ ಪತಿವ್ರತಾ ಶಿರೋಮಣಿ. ಆದಿ ಕವಿ ವಾಲ್ಮೀಕಿಯಿಂದ ಮೊದಲುಗೊಂಡು ಇಪ್ಪತ್ತನೆಯ ಶತಮಾನದ ಆಧುನಿಕ ಕವಿಗಳ ವರೆಗೆ ಹಲವಾರು ಮಂದಿ ಕವಿಗಳು—ಬರಹಗಾರರು ಸೀತಾದೇವಿಯ ಪಾತ್ರವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಸೀತಾದೇವಿಯ ಪಾತ್ರ ಗಂಭೀರಪೂರ್ಣವಾದುದು. ಆಕೆಯ ಹೆಸರನ್ನು ಸ್ಮರಿಸಿದೊಡನೆಯೇ ನಮಗೆ ಆರ್ಯ ಸಂಸ್ಕೃತಿಯ ಪ್ರತೀಕವಾದ ಸಾಧ್ವಿಯೊಬ್ಬಳ ಸ್ಪಷ್ಟ ರೂಪ ಅಂತರಂಗಕ್ಕೆ ಗೋಚರವಾಗುತ್ತದೆ. ಜನಕ ನಂದಿನಿ ಬಾಳಿನಲ್ಲಿ ಸಿಹಿಗಿಂತಲೂ ಕಹಿಯನ್ನೇ ಹೆಚ್ಚಾಗಿ ಉಂಡು ಬೆಳೆಯುತ್ತಾಳೆ. ಅದೆಷ್ಟು ಬಗೆಯ ನೋವು-ದುಃಖಗಳನ್ನು ಅನುಭವಿಸುತ್ತಾಳೆ. ಆದರೆ ಅದೆಷ್ಟು ತಾಳ್ಮೆ! ಎಷ್ಟು ಶಾಂತ ಭಾವ! ಆಕೆಯ ಹೃದಯ ಪ್ರಶಾಂತ ಸಾಗರದಂತೆ! ಎಷ್ಟಾದರೂ ಭೂ ಮಾತೆಯಲ್ಲವೆ? ಸಹನೆಯ ಪ್ರತಿಮೂರ್ತಿ ಸೀತಾದೇವಿ. ಪಾತಿವ್ರತ್ಯ ಆದಿಯಾಗಿ ಸಕಲ ಸದ್ಗುಣಗಳ ಪ್ರತಿನಿಧಿ—ಅಥವಾ ಪ್ರತಿಬಿಂಬ ರಾಮನರಸಿ.

ಭರತಭೂಮಿಯ ಆದರ್ಶ ಮಹಿಳಾರತ್ನಗಳ ಉನ್ನತ ಸಂಸ್ಕೃತಿಯ ಏಕೈಕ ಸುಂದರ ರೂಪ ಜಾನಕಿ. ಹಿಂದೂ ಮಹಿಳೆಯರ ಹಿರಿಮೆಯನ್ನು ಈಕೆಯಲ್ಲಿ ಕಾಣಬಹುದಾಗಿದೆ.

ಕವಿ ವಾಲ್ಮೀಕಿ ತನ್ನ ಮಂಜುಳ ಕಂಠದಿಂದ ದಾಶರಥಿಯನ್ನಷ್ಟೇ ಕೊಂಡಾಡಿಲ್ಲ. ಸೀತಾರಾಮರನ್ನು ಭಕ್ತಿಯಿಂದ ಸ್ಮರಿಸಿದ್ದಾನೆ. ಅದು ಕವಿಯ ಅಂತರಾಳದಿಂದ ಭಾವಪೂರ್ಣವಾಗಿ ಹರಿದು ಬಂದ ಪ್ರೇಮ ತರಂಗಿಣಿ—ಭಕ್ತಿತರಂಗಿಣಿ ಆದರ್ಶ ಮಹಿಳೆ, ಸಾಧ್ವಿ ಶಿರೋಮಣಿ, ಶ್ರೀರಾಮ ವಲ್ಲಭೆಯನ್ನು ಕಂಡು ಆಶ್ರಮದಲ್ಲಿಟ್ಟುಕೊಂಡು ಕಾಪಾಡಿದ ವಾಲ್ಮೀಕಿ ಸೀತಾಮಾತೆಯ ಪಾತ್ರವನ್ನು ಸುಂದರವಾಗಿ ಚಿತ್ರಿಸಿದ್ದಾನೆ. ರಾಮಾಯಣ ಮಹಾ ಕಾವ್ಯದಲ್ಲಿ ಸೀತಾದೇವಿಯ ಪಾತ್ರ ಭವ್ಯ ಪಾತ್ರ. ಸೀತಾದೇವಿ ನಿಂದೆಯಿಂದ ವಿಮುಕ್ತಳಾಗಲು ತಾಯ ಮಡಿಲನ್ನು ಸೇರುವ ವೇಳೆಗೆ—ಪಾತ್ರ ನಿರೂಪಣಾ ಸಮಯದಲ್ಲಿ ಕವಿಯ ಕಣ್ಣಿಂದ ನೀರು ಧಾರಾಳವಾಗಿ ಹರಿದಿವೆ. ಕ್ರೌಂಚ ಪಕ್ಷಿಗಳ ಅಗಲುವಿಕೆಯ ಆಕ್ರಂದನಕ್ಕೆ ಮರುಗಿ ಕೋಪಗೊಂಡು ಶಾಪವಿತ್ತ ಕವಿ ಓರ್ವ ಸಾಧ್ವಿಯ ದುಃಖವನ್ನು ಕಂಡು ದುಃಖಪಡದಿರುತ್ತಾನೆಯೆ? ಕವಿಯ ಅಮೋಘ ಕವಿತಾ ಕೌಶಲದ ಕಾರಣದಿಂದ ಸೀತಾ ದೇವಿಯ ಪಾತ್ರ ಅಮರವಾಗಿದೆ.

ಪುತ್ರಾರ್ಥಿ ಜನಕರಾಜ ಮಕ್ಕಳ ಸಲುವಾಗಿ ಯಜ್ಞ ಮಾಡಲು ಹೊರಟಾಗ ಭೂಮಿಯನ್ನು ಶುದ್ಧಿ ಮಾಡಲು ಹೊರಬಿದ್ದ ನೇಗಿಲಿಗೆ ಪೆಟ್ಟಿಗೆಯೊಂದು ಸಿಕ್ಕು ಅದರಲ್ಲಿದ್ದ ಮುದ್ದು ಮಗು ಜನಕನ ಕೈ ಸೇರುತ್ತದೆ. ಜನಕನ ಆಸೆ ನೆರವೇರಿಸುವಂತಾಗುತ್ತದೆ. ವಸುಂಧರೆಯ ಮಡಿಲಲ್ಲಿ ಮಲಗಿದ್ದ ಮಗು ಜನಕನ ಅಭಿಮಾನದ ಅಪ್ಪುಗೆಯಲ್ಲಿ ಬೆಳೆಯಲಾರಂಭಿಸುತ್ತದೆ. ಮಗುವಿಗೆ ಸೀತೆ ಎಂದು ನಾಮಕರಣವಾಗುತ್ತದೆ. ಜನಕನ ಮಗಳಾದ ಕಾರಣ ಜಾನಕಿ ಎಂಬ ಅನ್ವರ್ಥ ನಾಮವೂ ಅವಳಿಗೆ ದೊರೆಯುತ್ತದೆ. ತನಗೆ ದೊರೆತ ಮಗಳನ್ನು ಸಾಕುಮಗಳೆಂದು ಭಾವಿಸದೆ ಹೆತ್ತ ಮಗಳೆಂದು ತಿಳಿದು ಬೆಳೆಸುತ್ತಾನೆ, ಜನಕರಾಜ.

ಸೀತೆ ಕಿಶೋರಾವಸ್ಥೆಯನ್ನು ದಾಟಿ ಯುವತಿ ಎನ್ನಿಸಿಕೊಳ್ಳುತ್ತಾಳೆ. ಜನಕರಾಜ ಮಿಥಿಲೆಯಲ್ಲಿ ಕ್ಷತ್ರಿಯೋಚಿತವಾದ ಸ್ವಯಂವರವನ್ನು ಏರ್ಪಾಟುಮಾಡುತ್ತಾನೆ. ಗುರು ವಿಶ್ವಾಮಿತ್ರ ಸೋದರ ಲಕ್ಷ್ಮಣರೊಂದಿಗೆ ಸ್ವಯಂವರ ಮಂಟಪಕ್ಕೆ ಬಂದ ದಶರಥರಾಮ ಗುರುವಿನ ಆಜ್ಞೆಯಂತೆ ಸ್ವಯಂವರ ಪಣವಾಗಿದ್ದ ಶಿವಧನುಸ್ಸನ್ನು ಎತ್ತಿ ಎದೆಏರಿಸಿ ಸೀತೆಯನ್ನು ವರಿಸುತ್ತಾನೆ. ಸೀತೆಯ ಪಾಣಿಗ್ರಹಣ ಮಾಡುತ್ತಾನೆ. ಸೀತಾದೇವಿಯ ಮನದಾಸೆ ಕೈಗೂಡುತ್ತದೆ. ಶ್ರೀ ರಾಮ ಪತ್ನೀ ಸಮೇತನಾಗಿ ಅಯೋಧ್ಯೆಗೆ ಹಿಂದಿರುಗುತ್ತಾನೆ. ಸೀತಾ ದೇವಿಯ ತಂದೆಯ ಮನೆಯಲ್ಲಿ ಮತ್ತು ಮದುವೆಯಾದ ತರುವಾಯ ಪತಿಯೊಂದಿಗೆ ಅಯೋಧ್ಯೆಯಲ್ಲಿ ವನವಾಸಾಭಿಮುಖವಾಗುವ ವರೆಗೆ ಪಟ್ಟ ಸುಖ ಎಷ್ಟೇ ಅಷ್ಟೇ ಅವಳ ಹಣೆಯಲ್ಲಿ ವಿಧಿ ಬರೆದಿದ್ದ ಸುಖ ಎಂದು ತೋರುತ್ತದೆ. ವಿಧಿಯ ಆಟಕ್ಕೆ ಗುರಿಯಾದ ವೈದೇಹಿ ಕಷ್ಟಕಾರ್ಪಣ್ಯಗಳನ್ನು ಎದುರಿಸಬೇಕಾಗುತ್ತದೆ. ಎಂತಹ ಸಮಯದಲ್ಲಿಯೂ ಎದೆಗುಂದದೆ, ತಾಳ್ಮೆಯಿಂದ ಬಂದೆಲ್ಲ ಕಷ್ಟ ನೋವುಗಳನ್ನು ಅನುಭವಿಸುತ್ತಾಳೆ ರಾಮ ಪ್ರಿಯೆ.

ದಶರಥ ಚಕ್ರವರ್ತಿ ಹಿರಿಯ ಕುವರ ಶ್ರೀರಾಮಚಂದ್ರನಿಗೆ ಪಟ್ಟಗಟ್ಟಬೇಕೆಂದು ಹವಣಿಸಿದಾಗ ವಿಧಿಯ ಚದುರಂಗದಾಟದಲ್ಲಿ ಯೋಜನೆಯೇ ತಲೆಕೆಳಗಾಗುತ್ತದೆ. ಚಿಕ್ಕಮ್ಮನ ಇಚ್ಛೆಯಂತೆ ರಾಮಚಂದ್ರ ಹದಿನಾಲ್ಕು ವರ್ಷ ವನವಾಸಕ್ಕೆ ಹೊರಟು ನಿಲ್ಲುತ್ತಾನೆ. ಅವನ ಮತ್ತೊಂದು ಜೀವದಂತಿದ್ದ ಲಕ್ಷ್ಮಣ ಅವನನ್ನು ಅನುಸರಿಸುತ್ತಾನೆ. ಸೀತಾ ದೇವಿಯ ಮನಸ್ಸು ಆ ಸುಖವನ್ನು, ಅರಮನೆಯ ಭೋಗ ಭಾಗ್ಯವನ್ನು ಬಯಸಲಿಲ್ಲ. ಯಾರೊಬ್ಬರ ಬೇಡಿಕೆ ಸಲಹೆಗಳಿಗೂ ಮಣಿಯದೆ ಪತಿಯ ನೆರಳಿನಂತೆ ಅವನನ್ನೇ ಅನುಸರಿಸಿ ಅರಣ್ಯಕ್ಕೆ ತೆರಳುತ್ತಾಳೆ.

ಅರಣ್ಯ ವಾಸ, ಭೀಕರ ಜೀವನ, ರಾಕ್ಷಸರ ಉಪಟಳ, ಕಷ್ಟ ನೋವುಗಳ ಕೋಟಲೆ ಕಂಡು ಹೃದಯವೇ ನಡುಗುವಂತಹುದು. ಅಷ್ಟು ಭಯಂಕರ. ಪತಿ ಜೊತೆ ಇರುವಾಗ ಅವಳಿಗೆ ಅವೆಲ್ಲವೂ ತೃಣಕ್ಕಿಂತಲೂ ಕಡೆ. ಸಮಸ್ತ ಸುಖ ಸಂತೋಷಗಳನ್ನು ಸೀತಾದೇವಿ ಪತಿಯ ಸಾನಿಧ್ಯದಲ್ಲಿ ಪಡೆಯುತ್ತಾಳೆ.

ಮಾಯಾ ಹರಿಣ ಸೀತೆಯ ಮನ ಸೆಳೆಯುತ್ತದೆ. ರಾಮನನ್ನು ವಂಚಿಸುತ್ತದೆ. ಲಂಕಾಧೀಶ ರಾವಣ ಸೀತೆಯನ್ನು ಅಪ

(ಹನ್ನೆರಡನೇ ಪುಟ ನೋಡಿರಿ)

**ಅಮ್ಮಾ! ನನಗೆ ಕೆಲಸ ಸಿಕ್ಕಿತು!**

ಅವಳಿಗೆ ಪ್ರಥಮ ಬಾರಿ ದೊರೆತ ಕೆಲಸ ಅದು! ಅವಳು ಉತ್ತೇಜಿತಳಾಗಿರುವಳು. "ನಿನ್ನ ಬಗ್ಗೆ ನನಗೆ ತುಂಬಾ ಹೆಮ್ಮೆ" — ಮಗಳೊಡನೆ ಅನ್ನುತ್ತಾಳೆ ಹರ್ಷಭರಿತಳಾದ ತಾಯಿ. "ಆದರೆ ನೀನು ಒಂದು ವಿಷಯದ ಬಗ್ಗೆ ಮಾತ್ರ ಭರವಸೆ ನೀಡಲೇ ಬೇಕು. ನಿನಗೆ ದೊರಕುವ ವೇತನದ ಸ್ವಲ್ಪಾಂಶವನ್ನು ಪ್ರತಿ ತಿಂಗಳೂ ಉಳಿಸಬೇಕು. ಉಳಿತಾಯದ ಮೊತ್ತ ಎಷ್ಟೆಂಬುದು ಮುಖ್ಯವಲ್ಲ; ಸಾಧ್ಯವಾದಷ್ಟು ಉಳಿತಾಯ ಮಾಡಬೇಕು. ನನ್ನೊಡನೆ ಬಾ. ಸಿಂಡಿಕೇಟ್ ಬ್ಯಾಂಕಿನಲ್ಲಿ ನಿನ್ನ ಹೆಸರಿನಲ್ಲಿ ಒಂದು ಕ್ಯುಮುಲೇಟಿವ್ ಡಿಪಾಜಿಟ್ ಖಾತೆಯನ್ನು ತೆರೆಯೋಣ. ನಿನಗೆ ಗೊತ್ತಿದೆಯೇ? ಮಹಿಳೆಯರಲ್ಲಿ ಬ್ಯಾಂಕಿಂಗ್ ಅಭ್ಯಾಸವನ್ನು ಪ್ರೋತ್ಸಾಹಿಸಲು ಸಿಂಡಿಕೇಟ್ ಬ್ಯಾಂಕ್ ಹಲವಾರು ಶಾಖೆಗಳಲ್ಲಿ ಮಹಿಳಾ ಕೌಂಟರುಗಳನ್ನು ತೆರೆದಿದೆ.

ಇದು ವಿವೇಕಿಯಾದ ಮಾತೆಯೊಬ್ಬಳು ತನ್ನ ಮಗಳಿಗೆ ನೀಡುವ ಬುದ್ಧಿವಾದ. ಕ್ರಮಬದ್ಧವಾಗಿ ಉಳಿತಾಯ ಮಾಡುವ ಸದಭ್ಯಾಸವು ತನ್ನ ಮಗಳಲ್ಲಿ ಉಂಟಾಗುವಂತೆ ಅವಳು ಪ್ರೇರೇಪಿಸುತ್ತಾಳೆ. ಅವಳ ಹಣವು ಬಡ್ಡಿಯನ್ನು ಗಳಿಸುವುದು— ಬೆಳೆಯುತ್ತಿರುವ ಅವಳ ಉಳಿತಾಯವು ಅವಳಲ್ಲಿ ಧೈರ್ಯ ಮತ್ತು ಆತ್ಮಗೌರವವನ್ನುಂಟು ಮಾಡುವುದು. ಅಲ್ಲದೆ ಅವಳ ಭವಿಷ್ಯವು ಸುಭದ್ರವಾಗುವುದು.

**ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್**

FAITHFUL SB FRIENDLY

ರಿಜಿಸ್ಟರ್ಡ್ ಆಫೀಸು: ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು: 200ಕ್ಕೂ ಮಿಕ್ಕಿವೆ.

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿದೆ.


**ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ**

R. E. P. 25/65
S.C. 131/63

ಜಿಥರಾಜ ಇಂದ್ರ —ಅರ್ಜಿದಾರ

ಮತ್ತು

ಧರ್ಮರಾಜ ಕಂಬಳಿ —ಎದ್ರಿ

ಬೆಳ್ತಂಗಡಿ ತಾಲ್ಲೂಕು ಕುಕ್ಕೇಡಿ ಗ್ರಾಮದ ಸೀಮಾಣಿ ಕಂಬಳಿಯವರ ಮಗ ಧರ್ಮರಾಜ ಕಂಬಳಿಯವರಿಗೆ:—ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲ್ಕಂಡ ಅಮಲ್ದಾರಿಯಲ್ಲಿ ಆಸ್ತಿಯ ಆಸ್ತಿಹಾನಿನ ಶರ್ತ ನಿರ್ಣಯದ ಮತ್ತು ಇತರ ನಿವೃತ್ತಿಗಳ ಬಗ್ಗೆ ತಾ. 18-1-66ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪಣೆ ಏನಾದರೂ ಇದ್ದರೆ ಆ ದಿನ ಪೂರ್ವಾಹ್ನ ಗಂಟೆ 11ಕ್ಕೆ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ದ್ವಾರ ಹಾಜರಾಗತಕ್ಕದ್ದು. ತಪ್ಪಿದ್ರೆ ಸದ್ರಿ ಅಮಲ್ದಾರಿಯಲ್ಲಿ ನಿಮ್ಮನ್ನು ಗೈರ್ಹಾಜರಾಗಿ ತೀರ್ಮಾನಿಸಲಾದೀತು, ತಿಳಿದಿರಲಿ.

(Sd.) N. J. KADAMBA
Advocate for Petitioner

ಬೆಳ್ತಂಗಡಿ, 16-12-65.

# ನಾಲ್ಕೂ ದಿಕ್ಕಿನಿಂದ

## ಭಾರತೀಯರ ವೀರ ಕದನ

ಡೋಗ್ರಾಯ್‌ನಲ್ಲಿನ ಭಾರತೀಯ ಸೈನಿಕರ ವೀರೋತ್ಸಾಹ ಗಮನೀಯವಾದುದು. ಕಳೆದ ಸೆಪ್ಟೆಂಬರ್ ೨೧ ಮತ್ತು ೨೨ರಂದು ಡೋಗ್ರಾಯ್‌ನಲ್ಲಿ ಪಾಕಿಸ್ತಾನದ ವಿರುದ್ಧ ನಡೆದ ಹೋರಾಟ ಬಹು ಗಂಭೀರವಾಗಿದ್ದರೂ, ಹೋರಾಟದಲ್ಲಿ ಭಾರತದ ಸೈನಿಕರಿಗೆ ಜಯ ದೊರಕಲು ಕಾರಣವಾದದ್ದು ಸೈನಿಕರಲ್ಲಿದ್ದ ವೀರೋತ್ಸಾಹವೇ ಎಂಬುದಾಗಿ ಆ ಸೇನೆಯ ಅಧಿಕಾರಿಯು ತಿಳಿಸಿದ್ದಾರೆ. "ನಾವು ವೀರರಂತೆ ಹೋರಾಡುತ್ತೇವೆ, ನಾವು ಮರಣ ತಪ್ಪಿದರೆ ಡೋಗ್ರಾಯಲ್ಲಿಯೇ ಮರಣ ತಪ್ಪುತ್ತೇವೆ. ಯುದ್ಧ ಮಾಡುತ್ತಲೇ ಸಾಯುತ್ತೇವೆ" ಎಂಬ ವೀರೋತ್ಸಾಹ ಡೋಗ್ರಾಯ್‌ನಲ್ಲಿನ ಎಲ್ಲಾ ಭಾರತೀಯ ಸೈನಿಕರಲ್ಲಿ ಮನೆ ಮಾಡಿತ್ತು ಎಂಬುದಾಗಿ ಅವರು ವರದಿ ಮಾಡಿದ್ದಾರೆ.

ಇಚೋಗಿಲ್ ಕಾಲುವೆಯ ಮೇಲಿರುವ ಡೋಗ್ರಾಯ್ ಪಾಕಿಸ್ತಾನದ ಪ್ರಮುಖ ನಗರವಾಗಿ ಗ್ರಾಂಡ್ ಟ್ರಂಕ್ ರಸ್ತೆಯು ಇಲ್ಲಿಯೇ ಹಾದುಹೋಗುವುದು. ಇಟ್ಟಿಗೆ ಮತ್ತು ಕಾಂಕ್ರೀಟಿನಿಂದ ರಚಿಸಿರುವ ಮನೆಗಳನ್ನೊಳಗೊಂಡ ಈ ನಗರವನ್ನು ಪಾಕಿಸ್ತಾನದ ಸೇನಾ ಶಿಬಿರಗಳು, ಸಶಸ್ತ್ರ ದಳಗಳು ರಕ್ಷಿಸುತ್ತಿದ್ದವು. ಸೆಪ್ಟೆಂಬರ್ ೨೧ರ ರಾತ್ರಿ ಭಾರತೀಯ ಸೇನೆಯ ದಳವೊಂದು ಡೋಗ್ರಾಯ್ ನಗರದ ಮೇಲೆ ಗ್ರಾಂಡ್ ಟ್ರಂಕ್ ರಸ್ತೆ ತಿರುವಿನ ಮೂಲಕ ಧಾಳಿಯನ್ನು ನಡಸಿತು. ಇನ್ನೊಂದು ಕಡೆ ಈಶಾನ್ಯ ದಿಕ್ಕಿನ ೬,೦೦೦ ಗಜ ಬಳಸು ದಾರಿಯ ಮೂಲಕ ಜಾಠ್ ರೆಜಿಮೆಂಟ್ ನುಗ್ಗಿತು. ಈ ಕಗ್ಗತ್ತಲಿನಲ್ಲಿ, ವೀರೋತ್ಸಾಹದಿಂದ ಭಾರತದ ಸೈನಿಕರು ಗುಂಡಿನ ಮಳೆಗರೆದರು. ಪರಿಣಾಮ ಭಾರತಕ್ಕೆ ಜಯ ದೊರಕಿತು ಎಂಬುದಾಗಿ ಪ್ರತ್ಯಕ್ಷದರ್ಶಿಯೊಬ್ಬರು ವರದಿ ಮಾಡಿದ್ದಾರೆ.

ಈಶಾನ್ಯ ಭಾಗದಿಂದ ಸೇನೆಯನ್ನು ಕರೆದೊಯ್ದ ಲೆ| ಕ|ಡಿ. ಹೇಡ್ ಅವರಿಗೆ ಅವರು ನೀಡಿದ ಮಾದರಿ ನಾಯಕತ್ವ ಮತ್ತು ತೋರಿದ ವೀರತನಕ್ಕೆ, ಮಹಾವೀರ ಚಕ್ರವನ್ನು ನೀಡಲಾಗಿದೆ. ಅವರು ತಮ್ಮ ದಳದವರಿಗೆ ಉತ್ಸಾಹ ಹಾಗೂ ಪ್ರೋತ್ಸಾಹಕಾರಕರಾಗಿದ್ದರು ಎಂದು ವಿವರಿಸಲಾಗಿದೆ.

ಮಹಾವೀರ ಚಕ್ರವನ್ನು ಪಡೆದ ಮತ್ತೋರ್ವ ವೀರರಾದ ಮೇಜರ್ ಆಸಾರಾಮ್ ತ್ಯಾಗಿಯವರು, ಗಾಯಗೊಂಡಿದ್ದರೂ ಮುಂದೆ ನುಗ್ಗಿ ಮೂರು ಟ್ಯಾಂಕ್‌ಗಳನ್ನು ವಶಪಡಿಸಿಕೊಂಡರಲ್ಲದೆ, ಕೊನೆಗೆ ಗುಂಡಿನ ಹೊಡೆತಕ್ಕೆ ಬಲಿಯಾಗಿ, ತಮ್ಮ ಕಾರ್ಯ ಸಾಧನೆಯಾಯಿತೆಂಬ ತೃಪ್ತಿಯಿಂದ ಕೊನೆಯುಸಿರೆಳೆದರು.

ಸೈನ್ಯದ ನಾಯಕರು ನೀಡಿದ ಧೀರ ಮಾರ್ಗದರ್ಶನದಿಂದ ಉತ್ತೇಜಿತರಾದ ಒಬ್ಬ ಯುವಕ ಕ್ಯಾಪ್ಟನ್ ಮತ್ತೊಬ್ಬ ಜೂನಿಯರ್ ಕಮೀಷನ್ಡ್ ಆಫೀಸರ್‌ರವರೂ ಮುನ್ನುಗ್ಗಿ ಶತ್ರುಗಳನ್ನು ಸದೆಬಡಿದು ನಮ್ಮ ಸೇನೆಯು ಮುನ್ನುಗ್ಗುವಂತೆ ಹಾದಿ ಮಾಡಿಕೊಟ್ಟರಲ್ಲದೆ, ಆ ಪ್ರಯತ್ನದಲ್ಲಿ ಸಾವನ್ನಪ್ಪಿದರು. ಭಾರತದ ಸೇನೆಯು, ಡೋಗ್ರಾಯ್‌ಯನ್ನು ತಲುಪಿದಾಗ ರಾತ್ರಿ ೩-೩೦ ಗಂಟೆಯಾಗಿತ್ತು. ಅಲ್ಲಿಯ ಪಾಕಿಸ್ತಾನದ ಸೇನೆಯನ್ನು ಪೂರ್ಣವಾಗಿ ಸೋಲಿಸಿದಾಗ ಮುಂಜಾನೆ ೫ ಗಂಟೆಯಾಗಿತ್ತು. ನಮ್ಮ ಸೇನೆಯು ಪ್ರತಿಯೊಂದು ಮಾರ್ಗದಲ್ಲಿಯೂ ಹೋರಾಟ ನಡೆಸಿತು. ಪಾಕಿಸ್ತಾನದ ಸೈನಿಕರಿಗೆ ವ್ಯವಧಾನವಿಲ್ಲದಂತಾಗಿ ಸೋತು ಗಲಿಗೆಟ್ಟಂತಾಯಿತು. ಆನಂತರ ಎಣಿಕೆ ಮಾಡಿದಾಗ ೩೦೦ ಪಾಕ್ ಸೈನಿಕರ ದೇಹಗಳು ದೊರಕಿದವು. ೧೦೮ ಜನರು ಬಂಧಿಯಾಗಿದ್ದರು. ಅವರಲ್ಲಿ ಕಮಾಂಡಿಂಗ್ ಆಫೀಸರ್ ಮತ್ತು ದಳಪತಿಗಳು ಇದ್ದರು. ಅಲ್ಲದೆ, ಅವರ ನಾಲ್ಕು ಟ್ಯಾಂಕ್‌ಗಳು, ವಾಹನಗಳು, ಮದ್ದು ಗುಂಡುಗಳನ್ನು ವಶಪಡಿಸಿಕೊಳ್ಳಲಾಯಿತು. ೭ ಪಾಕಿಸ್ತಾನ್ ಟ್ಯಾಂಕ್‌ಗಳು ನಾಶವಾದುವು.

ಸೆಪ್ಟೆಂಬರ್ ೨೨ರಂದು ಬೆಳಗ್ಗೆ ಶತ್ರು ಸೇನೆಯು ಪ್ರತಿಧಾಳಿ ಮಾಡಿದರೂ ಸೋತು ಹೋಯಿತು. ಆ ವೇಳೆಗೆ ನಮ್ಮ ಯೋಧರು ಡೋಗ್ರಾಯ್ ಪ್ರಮುಖ ಭಾಗಗಳನ್ನು ವಶಪಡಿಸಿಕೊಂಡಿದ್ದರು. ಮೂರನೆಯ ದಿನ, ಸೆಪ್ಟೆಂಬರ್ ೨೩ರಂದು ಬೆಳಗ್ಗೆ ೩-೩೦ಕ್ಕೆ ಕದನ ವಿರಾಮ ಜಾರಿಗೆ ಬಂದು, ಡೋಗ್ರಾಯ್ ನಮ್ಮವರ ವಶದಲ್ಲಿ ಬಂದು, ಕದನದಲ್ಲಿ ನಮ್ಮವರೇ ವಿಜಯ ಪತಾಕೆ ಹೊಡಿದಂತಾಯಿತು.

## ಪಾಕ್ ಯುದ್ಧ ಯಂತ್ರ

ಭಾರತದ ಅವಿಭಾಜ್ಯ ಅಂಗವಾದ ಜಮ್ಮು ಮತ್ತು ಕಾಶ್ಮೀರವನ್ನು ಹೇಗಾದರೂ ಮಾಡಿ ಕಬಳಿಸಬೇಕೆಂದು ಪಾಕಿಸ್ತಾನವು ಮೊದಲಿನಿಂದಲೂ ಶತ ಪ್ರಯತ್ನ ಮಾಡುತ್ತಲಿದೆ. ಅದಕ್ಕಾಗಿ ಪಾಕಿಸ್ತಾನವು ಅನೇಕ ದೇಶಗಳಿಂದ ಅನೇಕ ರೀತಿಯಲ್ಲಿ ಸೈನಿಕ ನೆರವು ಪಡೆಯುತ್ತಲಿದೆ. ಕಳೆದ ೯ ವರ್ಷಗಳಲ್ಲಿ ೧,೫೦೦ ದಶಲಕ್ಷ ಡಾಲರುಗಳಷ್ಟು ಸೈನಿಕ ಸಲಕರಣೆ ಸಹಾಯವನ್ನು ಅಮೇರಿಕ ಒಂದರಿಂದಲೇ ಪಡೆದಿದೆ. ಅಲ್ಲದೆ ಸೀಟೋ ಸೆಂಟೋಗಳಂಥ ಸೈನಿಕ ಗುಂಪುಗಳಲ್ಲಿಯೂ ಸೇರಿಕೊಂಡಿದೆ. ಇದರ ಪರಿಣಾಮವಾಗಿ ಪಾಕ್ ಸೇನೆ ಪುನಘಟಿತವಾಗಿದೆಯಲ್ಲದೆ ಆಧುನಿಕ ಶಸ್ತ್ರಗಳಿಂದ ಸುಸಜ್ಜಿತವಾಗಿದೆ.

ಪಾಕಿಸ್ತಾನವು ಅಮೆರಿಕ–ಇಂಗ್ಲೆಂಡ್ ಮುಂತಾದ ಸೈನಿಕ ಮಿತ್ರರಿಂದ ಪಡೆದುಕೊಂಡ ಪ್ಯಾಟನ್, ಶರ್ಮನ್, ಛಾಫಿ ಟ್ಯಾಂಕ್‌ಗಳನ್ನು ಮತ್ತು ಆಧುನಿಕ ಶಸ್ತ್ರಗಳನ್ನು ಬಳಸಿಕೊಂಡು ಕಾಶ್ಮೀರ ಕಣಿವೆಯ ಮೇಲೆ ದಾಳಿಮಾಡಿತು. ಈ ಘರ್ಷಣೆಯಲ್ಲಿ ಪಾಕ್ ಮಾಡಿದ ಬಹುದೊಡ್ಡ ತಪ್ಪು ಭಾರತದ ಸೈನಿಕ ಶಕ್ತಿಯ ಬಗ್ಗೆ ತಪ್ಪು ಲೆಖ್ಖಹಾಕಿದ್ದು. ಪಾಕ್ ವಿಮಾನ ಬಲದ ಆಧುನಿಕ ಬಾಂಬರ್, ಸುಪರ್‌ಸಾನಿಕ್ ಫೈಟರ್ಸ್, ಸೇಬರ್‌ಜೆಟ್ಸ್‌ಗಳಿಂದ ಸುಸಜ್ಜಿತವಾಗಿದ್ದರೆ, ಭಾರತೀಯ ಬಲದಲ್ಲಿ ಎರಡನೆಯ ವಿಶ್ವಸಮರದ ಕಾಲದಲ್ಲಿದ್ದ ಶರ್ಮನ್, ಸೆಂಚುರಿಯನ್ ಟ್ಯಾಂಕುಗಳು ಮತ್ತು ವ್ಯಾಂಪೈರ್ಸ್ ಕ್ಯಾನಬೆರಾ ಮತ್ತು ಬೆಂಗಳೂರಿನಲ್ಲಿ ತಯಾರಾದ ನ್ಯಾಟ್ ವಿಮಾನಗಳಿದ್ದವು. ಈ ಸಂಗತಿಯು ಪಾಕ್‌ಗೆ ಪ್ರಚೋದನೆ ನೀಡಿ, ಅದು ಅಹಂಭಾವದಿಂದ ವೈಮರೆಯುವಂತೆ ಮಾಡಿತು.

ಪಾಕಿಸ್ತಾನವು ತನ್ನ ಸೈನಿಕ ಶಸ್ತ್ರಗಳ ಮೇಲೆ ಹೆಚ್ಚು ವಿಶ್ವಾಸವಿಟ್ಟರೆ ಭಾರತವು ತನ್ನ ಅಜೇಯರ ಯೋಧರ ಮೇಲೆ ವಿಶ್ವಾಸ ಇಟ್ಟಿತು. ವೀರ ಭಾರತೀಯ ಯೋಧರ ದುರುದ್ದೇಶಕ್ಕಾಗಿ ಎರವಲು ಪಡೆದ ಪಾಕ್ ಸೈನಿಕ ಶಸ್ತ್ರಗಳ ಆಟ ನಡೆಯಲಿಲ್ಲ. ಸೋಲರಿಯದ ಭಾರತೀಯ ಸೇನೆಯ ದೃಢ ನಿರ್ಧಾರದ ಮುಂದೆ ಪಾಕ್ ಯುದ್ಧ ತಂತ್ರ ನುಚ್ಚುನೂರಾಯಿತು. ಅಚಲ ಧೈರ್ಯ, ಯುದ್ಧ ಕೌಶಲ್ಯ ಹಾಗೂ ಕರ್ತವ್ಯಪ್ರಜ್ಞೆಗಳಿಂದ ಭಾರತೀಯ ಸೇನೆಯ ಭೂಸೇನೆ ವಿಮಾನಬಲ ಪಾಕಿಸ್ತಾನದ ಸೇನೆಯನ್ನು ಮಣ್ಣುಮುಕ್ಕಿಸಿದವು, ನಮ್ಮ ಸೇನೆಯ ಪ್ರತಿಯೊಬ್ಬ ಯೋಧನೂ ದೇಶಾಭಿಮಾನದಿಂದ ಪ್ರೇರಕನಾಗಿ ಕಡುಗಲಿತನದಿಂದ ಕಾದಾಡಿ ಸರ್ವ ತ್ಯಾಗಕ್ಕೂ ಸಿದ್ಧನಾಗಿದ್ದನು, ಹೀಗೆ ಪಾಕಿಸ್ತಾನದ ಯುದ್ಧದ ಕನಸು ಬರಿದಾಯಿತು. ಅದಕ್ಕೆ ದಿಕ್ಕೇ ತೋಚದೆ ಇದ್ದುದರಿಂದ ಪಾಕಿಸ್ತಾನದ ಅಧ್ಯಕ್ಷರು ನಮ್ಮ ಸೇನೆ ಪ್ರಮಾಣದಲ್ಲಿ ಚಿಕ್ಕದಿದೆ ಎಂದು ಹೇಳಿದರು. ಬಹುಶಃ ಹಾಗೆಯೇ ಸೋತು, ಕಂಗಾಲಾದ ಪಾಕ್ ಸೇನೆಯು, ಸಮಾಧಾನ ಪಡಿಸುವುದೇ ಅವರ ಉದ್ದೇಶವಿರಬೇಕು!

ಪಾಕ್ ಎಷ್ಟು ಸೈನಿಕ ಸಿದ್ಧತೆ ಮಾಡಿಕೊಂಡರೂ ಭಾರತದ ದೃಢ ನಿರ್ಧಾರವನ್ನು ದಲಾಯಿಸಲಾರದು. ಅಲ್ಲದೆ ಸೋಲರಿಯದ ಮಾನವ ನಿರ್ಧಾರದ ಮುಂದೆ ಯಾವ ಸೈನಿಕ, ಶಸ್ತ್ರಗಳ ಹಾಗೂ ಸರ್ವಾಧಿಕಾರಿಯ ಆಟ ನಡೆಯಲಾರದೆಂದು ಈ ಘರ್ಷಣೆ ಜಗತ್ತಿಗೆ ಸಿದ್ಧಮಾಡಿ ತೋರಿಸಿಕೊಟ್ಟಿದೆ.

## ಅಯೂಬರ ಅಧಃಪತನ

ಏಳು ವರ್ಷಗಳ ಹಿಂದೆ ಅಧ್ಯಕ್ಷ ಕ್ರಾಂತಿಯ ಮೂಲಕ ಪಾಕಿಸ್ತಾನದ ಅಧಿಕಾರಕ್ಕೆ ಬಂದ ಫೀಲ್ಡ್ ಮಾರ್ಷಲ್ ಅಯೂಬರ ಅಧಃಪತನ ಸನ್ನಿಹಿತವಾಗಿದೆ ಎಂದು ಬ್ರೆಜಿಲ್‌ನ 'ಓ ಜರ್ನಲ್' ಪತ್ರಿಕೆಯು ಅಭಿಪ್ರಾಯ ಪಟ್ಟಿದೆ.

ಪತ್ರಿಕೆಯು ಮುಂದುವರಿದು ಕಾಶ್ಮೀರದಲ್ಲಿ ನಡೆದ ಯುದ್ಧವು ಅಯೂಬರ ಆಳಿಕೆಯನ್ನು ಕೊನೆಗೊಳಿಸಲು ವಿರೋಧಿ ಪಕ್ಷಗಳು ಕೈಗೊಂಡಿರುವ ಬಹು ಮಹತ್ಕಾರ್ಯಚಟುವಟಿಕೆಯ ಒಂದು ಭಾಗವಾಗಿದೆ. ಸರ್ಕಾರದ ಹತೋಟಿಯಲ್ಲಿರುವ ಪತ್ರಿಕೆಗಳು ಅಯೂಬರನ್ನು ಅಧಿಕಾರದಲ್ಲಿ ಉಳಿಸಿಕೊಳ್ಳಲು ಭಾವಿಕ ಪ್ರಚಾರವನ್ನು ಆರಂಭಿಸಿ, ಪಾಕಿಸ್ತಾನಿಗಳನ್ನು ಮರುಳುಗೊಳಿಸಿವೆ ಎಂದು ಪತ್ರಿಕೆಯು ತಿಳಿಸಿದೆ.

ಪಾಕಿಸ್ತಾನದಲ್ಲಿ ನಡೆಯುವ ಯುದ್ಧ ಸಿದ್ಧತೆಗಳನ್ನು ಪ್ರಸ್ತಾಪಿಸುತ್ತ, ಪಾಕಿಸ್ತಾನವು ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಈ ಚೌಕಟ್ಟಿನಲ್ಲಿ, ಪಿರುಸಿನಿಂದ ಸೇನಾ ಭರ್ತಿ ಕೈಗೊಂಡಿದೆ. ಯುದ್ಧಕ್ಕಾಗಿ ನಾಗರಿಕರಿಗೆ ತರಬೇತಿ ಕೊಡುತ್ತಿದೆ. ಜನರ ಮನಸ್ಥೈರ್ಯವನ್ನು ಹೆಚ್ಚಿಸಲು, ಪತ್ರಿಕೆಗಳ ಮೂಲಕ ನಿರಂತರ ಯತ್ನಗಳು ನಡೆದಿವೆ. ಶಸ್ತ್ರಾಸ್ತ್ರಗಳು ದೊರೆತರೆ ಪಾಕಿಸ್ತಾನವು ಮತ್ತೆ ಯುದ್ಧ ಮಾಡಲು ಸಿದ್ಧವಿದೆಯೆಂಬುದನ್ನು ಈ ಘಟನೆಗಳು ಸೂಚಿಸುತವೆ.




ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½ ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

## ಯೌವನದ ಮೆಟ್ಟಿಲಲ್ಲಿ

# ಕಡ ಗಿಟ್ಟಿಸುವ ಕಲೆ

ಬರೆದವರು:

ಡಾ। ಕೆ. ಎಂ. ಬಲ್ಲಾಳ್

ಪ್ರಗತಿಯು ಗಾಳಿ ಮುಂದುವರಿಯುತ್ತಿದೆ. ಹಳತು ಹೊಸದಾಗುತ್ತಿದೆ; ಹೊಸತು ಹಳದಾಗಿ, ಹೊಸತಿನಲ್ಲೂ ಹೊಚ್ಚ ಹೊಸದಾಗುತ್ತಿದೆ; ಕಾಲ ಬಗಲಾಗುತ್ತಿದ್ದಂತೆ ನವ್ಯತೆ ಪ್ರಾದುರ್ಭವಿಸುತ್ತಿದೆ; ಅದರಂತೇ 'ಕಡ ಗಿಟ್ಟಿಸುವ' ವಿದ್ಯೆ ದಿನಂದಿನೇ ಹೊಸ ಓಡಿಸಿಂದ, ಹೆಚ್ಚು ಹೆಚ್ಚಾಗಿ ಪ್ರಗತಿಯು ದಾರಿಯತ್ತ ಸಾಗುತ್ತಿದೆ. ಕಡ—ಎರವಲು—ಸಾಲ' ಇತ್ಯಾದಿ ಅದರ ನಾಮಾಂಕಿತಗಳಾಗಿವೆ. ಪ್ರಾಚೀನ ಕಾಲದಿಂದಲೂ ಈ ಕಡ ಪಡೆವ ವಿದ್ಯೆಗೊಂದು ಮಹತ್ವದ ಸ್ಥಾನವಿತ್ತು; ಬರಿಯ ಬಾಯಿ ಮಾತಿನಲ್ಲಿ ನೂರಾರು, ಸಹಸ್ರಾರು ರೂಪಾಯಿ, ಸಾಮಾನು ಕಡ ಕೊಡಲ್ಪಡುತ್ತಿದ್ದುವು; ತೆಗೆದುಕೊಳ್ಳಲ್ಪಡುತ್ತಿದ್ದುವು. ಆದರೆ, ಆ ಕಡ ಹಿಂಪಸಿಗುವಂತಿತ್ತು; ಈಗ ಗಿಟ್ಟಿಸಿದ ಕಡ ಮಾತ್ರ—ಅದು ಕಡ ಕೊಟ್ಟವನ ಕೈಗೆ ಹಿಂತಿರುಗಿ ಬಂದ ನಂತರ, ಅದು ಬಂತೆಂದು ಹೇಳಬಹುದು; ಇದು ಕಡದಲ್ಲಾದ ಪ್ರಗತಿಯ ದ್ಯೋತಕ. ಎಲ್ಲಿಗೇ ಹೋಗಲೀ, ಈಗ ನಗದಿಗಿಂತಲೂ ಕಡಕ್ಕೆ ಹೆಚ್ಚು ಪ್ರಾಶಸ್ತ್ಯ. 'ಕಡವಿಲ್ಲದೆ ವ್ಯಾಪಾರವಿಲ್ಲ" ಎಂಬ ಬಲ್ಲವರ ಬೆಲ್ಲದಂತಹಾ ಸೊಲ್ಲು, ವ್ಯವಹಾರಿಕವೆಂದು, ಇಂದಿನ ದಿನದ ಕಡದ ವ್ಯಾಪಾರದ ಸ್ಥಿತಿಗತಿ ನೋಡಿದವನಿಗೆ ಅನಿಸದಿರದು. ಸಣ್ಣ ಬೀಡಾ ಅಂಗಡಿಯಿಂದ ಹಿಡಿದು, ದೊಡ್ಡ ಸಂಸ್ಥೆಗಳ ವರೆಗೂ ಈ ಕಡ ವ್ಯಾಪಾರವು ತನ್ನ ಹೊಟ್ಟೆ ಬೆಳೆಸಿದೆ. ಸ್ವಲ್ಪ ಸಮಯದ ಹಿಂದಿನ ವರೆಗೆ ಸಿನಿಮಾ ಥೇಟರು ಹಾಗೂ ಬಸ್ಸುಗಳಲ್ಲಿ; ಸೆಲೂನಿನ ಅಂಗಡಿಗಳಲ್ಲಿ; ಮೆಟ್ಟಿನ ಅಂಗಡಿಗಳಲ್ಲಿ ನಗದು ವ್ಯಾಪಾರವಿತ್ತಾದ್ರೂ, ಈಗೀಗ ಅವುಗಳಿಗೂ ಈ ಅಂಟು ಜಾಡ್ಯ ಬಲವಾಗಿ ಹಬ್ಬಿದೆ. ಕಡ ಸರ್ವಾಂತರ್ಯಾಮಿಯಾಗಿದೆ! ಕಡಗಿಟ್ಟಿಸುವ ಜನ, ಕಡ ತೀರಿಸದಿರುವುದು ಇದರಲ್ಲಾದ ಪ್ರಗತಿ. ಇದು ಕಡ ಕೊಟ್ಟವರ ಹೊಟ್ಟೆ ಉರಿಯ ಸಂಕೇತವಾಗಿ, ದಿನಸಿತ್ಯದ ದೂರುಗಳ ಸಾಲು—

ಅಂದರೆ, ಕಡ ಪಡೆವ ವರೆಗೆ ಮಾತ್ರ ಕಡ ಕೊಡುವವನ ಸ್ನೇಹಾಚಾರ; ಗುರುತು; 'ಹೊಳೆ ದಾಟಿದ ಮೇಲೆ ಅಂಬಿಗನ ಹಂಗೇನು?' ಎಂಬಂತೇ ಕಡ ತೆಕೊಳ್ಳುವಾಗ ಸಾಲಿಗ ವಿನಯದ ಮೂರ್ತಿಯಾಗಿ, ನಂಬಿಗೆಯ ನಾಯಿಯಂತೇ, ಬೆನ್ನು ಬಗ್ಗಿಸಿ, ಬಾಯಿ ಕುಗ್ಗಿಸಿ, ಸಾಲ ಪಡೆಯುತ್ತಾನೆ. ಆದರೊಮ್ಮೆ ಕಡ ಅವನಿಗೆ ಸಿಕ್ಕಿತೆಂದ ಮೇಲೆ, ಮತ್ತೆ ಕಡ ಕೊಟ್ಟವನ 'ಪಾಪ ಪುಣ್ಯ' ಸಹಾ ಆತಗೆ ಬೇಡ. ಹೆಚ್ಚೇಕೆ? ಕಡಕೊಟ್ಟ ಪುಣ್ಯಾತ್ಮನ ಮುಖದರ್ಶನ ಸಹಾ ಮಾಡಿದಲ್ಲಿ ತನಗೆ 'ಪುಣ್ಯ' ಲಭಿಸಿತೇ ಎಂಬ ಕೃತಘ್ನರಿದ್ದಾರೆ. ಆ ದಾರಿಯೇ ಅವರಿಗೆ ಮರೆತು ಹೋಗುತ್ತದೆ. ಸಂದರ್ಭವಶಾತ್ ಸಾಲಿಗನಿಗೆ ಕಡವಿತ್ತವ ಇದಿರಾದ್ರೆ ಬೇಲಿ ಹಾರಿ, ಅಡ್ಡ ದಾರಿ ಹಿಡಿಯುತ್ತಾರೆ. ಆ ಸಂದರ್ಭ ಸಿಗದಿದ್ದಾಗ, ಹೊಸ ಮದುಮಗಳಂತೇ ತಲೆ ತಗ್ಗಿಸಿ, ನಡೆಯುತ್ತಾರೆ. ಆಗ ಸಾಲಗೊಟ್ಟವ ಮಾತನಾಡಿಸಿದ್ರೆ, ಅನಿವಾರ್ಯವಾಗಿ 'ನಮಸ್ಕಾರ.... ಸ್ವಾಮಿನ್ರ" ಎಂದು ಹೆಣಗಿ ಕುದುರೆಯಂತೆ 'ಹ್ಹಿ......ಹ್ಹಿ.....ಹ್ಹಿ" ಎಂದು ಕೆನೆಯುತ್ತಾರೆ ಬಳಿ ಹೋದ ಮುಖದಿಂದ. ಆಗ ಹಣ ಕೇಳಿದ್ರೆ "ಕೊಡ್ತೇನೇ.........ಸ್ವಾಮಿ..........." ಎಂದು ಸಮಾಧಾನದಿಂದಲೇ ಸಮಜಾಯಿಸುತ್ತಾರೆ, ಸ್ವಲ್ಪ ಸಿಟ್ಟಿನ ವ್ಯಕ್ತಿಗಳು ತಮ್ಮ ಹಣ ಬರುವದಾಗಿ ಕೇಳಿದಾಗ "ನಿಮ್ಮ ದುಡ್ಡು ತಿಂದುಹಾಕುವುದಿಲ್ಲ..ಕೊಡ್ತೇನೆ" ಎಂದು ಮುಖ ಗಂಟಿಕ್ಕಿಕೊಂಡು ಒರಟಾಗಿ ಒದರುತ್ತಾನೆ ಸಾಲಿಗ. ಸಾಲ ಕೊಟ್ಟು ಕೈ ತೊಳೆದು ಕೊಂಡವನ್ನೂ ಸಾಲಿಗನು, ಇಬ್ಬರೂ ಕಿಲ್ಲು ಹೃದಯದವರಾದ್ರೆ 'ರಾಮರಾವಣ' ಕಾಳಗ ಅಪಂದ್ದ ಸ್ಥಾನದಲ್ಲೇ ಸುರುವಾಗಿ, ನೋಟಕರ ಕಂಗಳಿಗೆ ರಸದೌತಣವಾಗುತ್ತದೆ. ಮರ್ಯಾದೆ ಬೇಕೆನ್ನುವವರಾದ್ರೆ, ನನ್ನ ಹಣ ತಿಂದು ಹಾಕಿದ; ಅವ್ನ ಹಣೇ ಬರಹ ಗೊತ್ತಾಯ್ತು ಎಂದು ತೆಪ್ಪಗಾಗುತ್ತಾರೆ; ಈ ತೆರನ ಸಾತ್ವಿಕತೆ; ಸಹನೆಯ ಸೂತ್ರದಿಂದ ಸಾಲಿಗ ಉತ್ತೇಜಿತನಾಗಿ, ತಲೆಯೆತ್ತಿ, ಎದೆಯುಬ್ಬಿಸಿ ಗೂಳಿಯಂತೆ ತಿರುಗಾಡುತ್ತಾನೆ. ಎಲ್ಲಾ ಬಿಟ್ಟವ ಊರಿಗೆ ಹಿರಿಯ"ನೆಂದು ತೋರಿಸುತ್ತಾ:

ಕೆಲವು ಸಾಲಿಗರಿಗೆ, ಸಾಲಕೊಡುವಾಗ ಇರದ ಮರ್ಯಾದೆ, ಸಾಲಿಗ, ತನ್ನ ಸಂಕಷ್ಟದಲ್ಲಿ ಅವನಲ್ಲಿ ಕೇಳಿದಾಗ, ಸ್ವಾಭಿಮಾನ ಉದ್ದೀಪನವಾಗಿ ಕೆರಳಿದ ಕೇಸರಿಯಾಗುತ್ತಾರೆ. 'ಹತ್ತು ಜನ್ರ ಎದ್ರು ನನ್ನನ್ನ 'ಇನ್‌ಸಲ್ಟ್' ಮಾಡಿದ. ಎಂಬ ದೂರು; ಅದರಲ್ಲಿ ಇಂಗ್ಲಿಷ್ ಶಬ್ದ. ಈಗೀಗ ಕಡಮಾಡಿ, ಹಣ ಹಿಡಿಸುವ ಒಳ್ಳೆಯ ಅಭ್ಯಾಸ ತುಂಬಾ ಜನ ಬೆಳೆಸಿಕೊಳ್ಳುತ್ತಿದ್ದಾರೆ. ಸಭ್ಯರ ಸೋಗು ಹಾಕಿ, ಮಣಕ್ಕೆ ಗಂಟು ಬೀಳುವ ಜನಕ್ಕೇನೂ ಈ ಕಾಲದಲ್ಲಿ ಕಡಿಮೆ ಇಲ್ಲವೆನ್ನಿ. ಅವರು ಕಡಕ್ಕಾಗಿ ಬರುವಾಗ, ತಲೆ ಕೆರೆದು, ವಿನಯದ ಗೊಂಬೆಗಳಾಗಿ, ಆಡುವ ಆಚಾರದ ನುಡಿ ಕೇಳುವಾಗ 'ಇವ' ನಯ್ಯಾ ಪೈಸ ಸಹಾ ತಿನ್ನದ ಸತ್ಯ ಹರಿಶ್ಚಂದ್ರನ ಅವತಾರ' ಎಂದೇ ನೆನಸಬೇಕು; ಆದರೆ, ಕಡ ಮಾಡಿ, ತಮ್ಮ ಕಾರ್ಯ ಮುಗಿದಾಕ್ಷಣ, ಮತ್ತೆ ಆ ವ್ಯಕ್ತಿಯನ್ನು ಹುಡುಕಾಡಲು ನೂರು ಅಶ್ವಮೇಧಯಾಗ ಮಾಡಿದರೂ ಸಿಗಲಾರ; ಸಿಕ್ಕರೂ ಅಪರಿಚಿತನಂತೆ ಮುಖ ತಿರುವಿ, ದಾಮಗಾಲು ಹಾಕುತ್ತಾ ಸಾಗುವ ಅವನನ್ನು ಕಂಡಾಗ, ಪಾಪದ ಸಾಲ ಕೊಟ್ಟಾತನಿಗೆ 'ಇಂಗು ತಿಂದ ಮಂಗ'ನಂತಾಗುತ್ತದೆ!

ಇವರಲ್ಲೂ ಇನ್ನು ಕೆಲವು ವಿಚಿತ್ರ ಜಾತಿಯ ಪ್ರಾಣಿಗಳಿದ್ದಾರೆ. ತಮ್ಮ ಕಷ್ಟಕಾಲದಲ್ಲಿ, ವಿಪನ್ನಾವಸ್ಥೆಯಲ್ಲಿ ಕಡ ಕೊಟ್ಟು ಉಪಕಾರ ಮಾಡಿದ ಮಹಾಶಯರ ಬಗ್ಗೆ ಮೊಂಡ್ದದ ಟೀಕೆ—ಅಪಹಾಸ್ಯ—ಅಪಪ್ರಚಾರದ ಸುರಿ ಮಳೆ. ಇಂತವರ ಬಗ್ಗೆ ಪ್ರಾಯಃ ದೇವರು ಬೇರೆಯೇ ನರಕ ನಿರ್ಮಾಣ ಮಾಡಿರಬಹುದೆಂದೆನಿಸುತ್ತದೆ. ಬರಿಯ ಬಾಟಾಟಿಕೆಯ ಸಲುವಾಗಿ ಪತ್ರಿಕೆ ತರಿಸಿಕೊಂಡು, ಅದರೆಡೆಗೆ ಕಣ್ಣಾಡಿಸದೆ, ಪ್ರತೀ ತಿಂಗಳಿಗೊಮ್ಮೆ ಆ ಪತ್ರಿಕೆಗಳನ್ನು, ಅಂಗಡಿಗೆ ಮಾರಲು ಕಳಿಸಿ, ಸಂಪಾದಕ ಮಹಾಶಯರ ಚಂದಾ ವಸೂಲಿಯ ಸಾಲ ಪತ್ರಗಳು ಹೋದಾಗ. ಪ್ರತ್ಯುತ್ತರ ಕೊಡದೆ, ಸುಮ್ಮನಿರುವ ಅಲ್ಪತನದ ಮಂದಿ ಕಡ ಗಿಟ್ಟಿಸುವ ಜಾತಿಗಳಲ್ಲಿ ಒಬ್ಬರು. ಡಾಕ್ಟರ ದುಡ್ಡು ತಿಂದು ಹಾಕುವ ಭೂತಗಳೂ ಸಹಾ ಈ ಲೋಕದಲ್ಲಿದ್ದಾರೆ. 'ಸೀರಿಯಸ್ ಕೇಸ್' ಎಂದು ಡಾಕ್ಟರರನ್ನು ಕರೆದೊಯ್ದು ಇಂಜಕ್ಷನ್ಸ್, ಔಷಧಿ ತೆಕ್ಕೊಂಡು, ಗುಣವಾದ ಮೇಲೂ ಡಾಕ್ಟರ ಹತ್ತಿರ ಸಹಾ ಸುಳಿಯದ ರೋಗಿಯ ರೋಗಿಯ ಕಡೆಯವರೂ ಇದ್ದಾರೆ. ಮತ್ತೆ ಹೊಸ ಡಾಕ್ಟರ ಆಸರೆ ಪಡೆದು ಅವರಿಗೂ ಕಡ ಹಿಡಿಸುವ ಭೂಪತಿಗಳು ಇದ್ದಾರೆ ಡಾಕ್ಟರು ರೋಗಿಯ ಸಂದಿಗ್ಧ ಸನ್ನಿವೇಶದಲ್ಲಿ ಕರುಣಾಮಯಿಗಳಾಗಿ, ಕಟುಕರಾಗದೆ, ಕಡ ಕೊಟ್ಟು, ಗುಣಮುಖರಾದ ಮೇಲೆ 'ಡಾಕ್ಟರ ಫೀಸು' ಸಹಾ ಇಡೀ ಇಡೀ ನುಂಗಿ ಹಾಕುವ ಶಿಬಿ ಚಕ್ರವರ್ತಿಯ ಸಮಾನರಾದ ಕೆಲವು ಹಲ್ಕಾ ರೋಗಿಗಳ ದೆಸೆಯಿಂದ ವಜ್ರಪ್ರಾಯ ಕಠೋರ ಹೃದಯಿಗಳಾಗುತ್ತಾರೆ— ಅತ್ಯಂತ ದಯಾರ್ದ್ರ ಡಾಕ್ಟರರು. ಕೆಲ ರೋಗಿಗಳಂತೂ, ಡಾಕ್ಟರ ಹತ್ತಿರ ಬರುವಾಗಲೇ "ಹಣಕೆ ಬಿದರಿಕೆ ಇಲ್ಲ, ಸ್ವಾಮೀ; ಡಾಕ್ಟ್ರೇ" ಎಂದು ಅತಿ ವಿನಯದ ಪಡಿ ನೆಳಲಾಗಿ ಹತ್ತಾರು ಸಲ ಗುಣುಗುಣಿಸುತ್ತಾರೆ; ಆಗಲೇ ಎಣಿಸಬೇಕು ಡಾಕ್ಟರು, "ಇದು ಗೀಟು ಕೊಡುವ ರೋಗಿ" ಎಂದು; "ಅತಿ ವಿನಯಂ ಧೂರ್ತನ್ಯ ಲಕ್ಷಣಂ" ಅಲ್ಲವೇ? ಹೋಟೇಲಿನವರ ಪಾಡಂತೂ, ವೈರಿಗಳಿಗೂ ಬರಬಾರದು. ಹಸಿದ ಹೊಟ್ಟೆಯಲ್ಲಿ, ತೃಪ್ತಿಯಿಂದ ತೇಪವಾರಿದ ನಾಲಗೆಯನ್ನು ಆಳ್ಪಾಡಿಸುತ್ತಾ ಬಂದ ಗಿರಾಕಿ, ಹೊಟ್ಟೆ ತುಂಬಾ ತಿಂದು, ಮತ್ತೆ ಹೇಳುವುದು ಹಣ ನಾಳೆ ಕೊಡ್ತೇನೆ ಸ್ವಾಮಿ," ಎಂದು. ಕಟ್ಟಿ ಹಾಕಲು ಸಾಧ್ಯವೇ? ಮತ್ತೆ ಆ ಹೋಟೇಲಿನ ಗಿರಾಕಿಗಳ ಸಾಲಿನಿಂದ ದೂರವಾದನೆಂದೇ ಹೇಳಬಹುದು. ಇನ್ನು ಕೆಲವರು ಹೋಟೇಲಿನಲ್ಲಿ ತಿಂದು, ಕುಡಿದು, ತಿಂಗಳ ಬಯ್ಯರಿಗೆ ಹಣ ಸಂಬಳ ಬಂದಾಗ ಕೊಡುವವರು ಇದ್ದಾರೆ. ಇವರಲ್ಲಿ ಕಡಾವತಾರ ಮಾಡಿ, ಗಿಟ್ಟಿಸುವವರು ಟ್ರಾನ್ಸ್‌ಫರ್ ಓರ್ಡರ್ ಬಂದಾಗ, ರಾತ್ರೋರಾತ್ರಿ ಪಲಾಯನ ಸೂತ್ರ ಗ್ರಹಿಸುವವರೂ ಇದ್ದಾರೆ; ಇವ

(ಹತ್ತನೇ ಪುಟ ನೋಡಿರಿ)

**ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ**

R. E. P. 98/1965.

**in**

**ಕಾರ್ಕಳ ಪಂಚಾಯ್ತ್ ಕೋರ್ಟಿನ**

C. S. No. 26/63.

ದೋಟ ರಾಮಪ್ಪಯ್ಯ —ಅರ್ಜಿದಾರ

ಅಮ್ಮತಾವತಿ ಯಾನೆ ಪೂರ್ತಾಮರಿಯ—ಎದ್ರಿ

ಮೇಲ್ಕಂಡ ಅಮಲ್ಜಾರಿಯ ಎದ್ರಿ ಕಾರ್ಕಳ ತಾಲೂಕು ಬೈಲಡ್ಕದಲ್ಲಿರುವ ಶ್ರೀಮತಿ ದ್ಯಕ್ಕ ಹೆಂಗ್ಸಿನ ಮಗಳು ಶ್ರೀಮತಿ ಅಮ್ಮ ವತಿ ಯಾನೆ ಮೂರ್ತಾಮರಿಯರಿಗೆ ಕೋರ್ಟ ಹುಕುಂ ಪ್ರಕಾರ ತಿಳಿಸುವದೇನೆಂದರೆ:-

ನಿಮಗೆ ಶ್ರೀಮತಿ ಕೂಸಮ್ಮಾಜಿ ಹೆಂಗ್ಸು ಂಬವರಿಂದ ವರ್ಷಂಪ್ರತಿ ಮಾರ್ಚ ತಾ. 30 ಕ್ಕೆ ಬರಬೇಕಾದ ಅಕ್ಕಿ ವಸೂಲಿ ಹಕ್ಕನ್ನು ಅರ್ಜಿದಾರರು ಜಪ್ತಿಪಡಿಸುತ್ತಾರೆ. ಸದ್ರಿ ಹಕ್ಕನ್ನು ಈ ಕೋರ್ಟಿನ ಅಪ್ಪಣೆ ವಿನಾ ನೀವು ಕ್ರಯ ಯಾ ದಾನದ ಮುಖಾಂತರ ಯಾ ನ್ಯಥಾ ಪರಭಾರೆ ಮಾಡಬಾರದೆಂತ ಯಾ ಾಲ ಜೋಡಿಸ ಬಾರದಂತ ನಿರ್ಬಂಧಿಸಲ್ಪಟ್ಟಿವೆ. ಈ ಕುರಿತು ನಿಮಗೇನಾದರೂ ಆಕ್ಷೇಪ ದ್ದಲ್ಲಿ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ತಾ. 11-1-66 ಳಗ್ಗೆ ಗಂಟೆ 10ಕ್ಕೆ ಸರಿಯಾಗಿ ಹಾಜರಾಗಿ ದರ್ಪಡಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ವ್ವಾ ಎಂತ ಪರಿಗಣಿಸಿ ಮುಂದುವರಿಸಲಾಗುತ್ತದೆ.

B.K. Suryanarayana Rao
Advocate
BELTHANGADY

ಬೆಳ್ತಂಗಡಿ, ತಾ. 16-12-65.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: **ಸುದರ್ಶನ ಟೈಲ್ ವರ್ಕ್ಸ್**, ಬೋಳಾರ, ಮಂಗಳೂರು-೧

**ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ**

O. S. No. 155/1965.

ದೋಟ ರಾಮಪ್ಪಯ್ಯ —ವಾದಿ

ಲಾಡ್ರು ಕ್ರಾಸ್ತ ಕೂಡಾ —ಪ್ರತಿವಾದಿರು

ಬೆಳ್ತಂಗಡಿ ತಾಲೂಕು ಮಾಡುಕೋಡಿ ಗ್ರಾಮದ ದೋಣಿ ಕಡವಿನ ಬಳಿ ಅಡ್ಕಬೈಲ್ ಪಳ್ಕೆ ಎಂಬಲ್ಲಿರುವ Mr. ಫ್ರಾನ್ಸಿಸ್ ಕ್ರಾಸ್ತರ ಮಗ Mr. ಲಾಡ್ರು ಕ್ರಾಸ್ತರಿಗೆ:-

ಮೇಲ್ಕಾಣಿಸಿದ ವ್ಯಾಜ್ಯದ 1ನೇ ಪ್ರತಿವಾದಿಯಾದ ನಿಮಗೆ ತಿಳಿಸುವದೇನೆಂದರೆ:-

ನಿಮ್ಮ ಮೇಲೆ ವಾದಿ 62-63, 63-64 ಮತ್ತು 64-65ನೇ ವರ್ಷಗಳ ಗೇಣಿ ವಸೂಲಿ ಬಗ್ಗೆ ದಾಖಲು ಮಾಡಿದ ವ್ಯಾಜ್ಯ ನಿಮ್ಮ ಹಾಜರಾತಿ ಬಗ್ಗೆ ತಾ. 15-1-66ಕ್ಕೆ ಇಟ್ಟಿರುತ್ತದೆ. ಆದಿನ ಬೆಳಗ್ಗೆ 10 ಗಂಟೆಗೆ ನೀವು ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರು ಆಗಲು ತಪ್ಪಿದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಮುಂದುವರಿಸಲಾದೀತು.

By order

B.K. Suryanarayana Rao
Advocate
BELTHANGADY

ಬೆಳ್ತಂಗಡಿ, ತಾ. 15-12-65.

ಒಬ್ಬ ಯುವ ಭಾರತೀಯ ಇಂಜನಿಯರ್ ಮತ್ತು ಭಾರತ ಸರಕಾರದ ಕೃಷಿ ಮತ್ತು ಆಹಾರ ಮಂತ್ರಾಲಯದ ಒಬ್ಬ ಅಧಿಕಾರಿ ನವದೆಹಲಿಯಲ್ಲಿ ಒಟ್ಟು ಸೇರಿದೊಡನೆಯೇ ಅಮೆರಿಕೆಗೆ ನಾನಾ ರಂಗಗಳಲ್ಲಿ ರೀತಿ-ತಂತ್ರಗಳನ್ನು ಪರಿಶೀಲಿಸಲು ಹೋಗಿ, ಅದರಲ್ಲಿ ಸಫಲರಾಗಿರುವ ಸುಮಾರು ೮,೦೦೦ ಮಂದಿ ಭಾರತೀಯರ ವಿಷಯದಲ್ಲಿ ಒಮ್ಮತದ ಅಭಿಪ್ರಾಯಕ್ಕೆ ಬಂದರು.

ಕೆಲವು ತಿಂಗಳುಗಳಿಗೆ ಮೊದಲು ಒಬ್ಬ ಯುವ ಭಾರತೀಯ ಇಂಜಿನಿಯರ್ ದಕ್ಷಿಣ ಕೆಲಿಫೋರ್ನಿಯಾದ 'ಆಲ್ ಅಮೆರಿಕನ್ ಕೆನಲ್'ನ ಕಿನಾರೆಯಲ್ಲಿ ನಿಂತು ಆ ಜಲರಾಶಿಯನ್ನು ನೋಡುತ್ತಿದ್ದ. ಈ ಕಾಲುವೆಯು ಇಂಪೀರಿಯಲ್ ಕಣಿವೆಯ ಬಂಜರು ಭೂಮಿಯನ್ನು ಕೆಲವೇ ವರ್ಷಗಳಲ್ಲಿ ಹಚ್ಚಹಸುರಿನಿಂದ ತುಂಬಿಸಿದುದನ್ನು ಯೋಚಿಸಿದೊಡನೆಯೇ, ಆತನಿಗೆ ತನ್ನ ದೇಶದ ರಾಜಸ್ಥಾನ ಕಾಲುವೆಯ ನೆನಪಾಯಿತು. ಆಕ್ಷಣದಿಂದಲೇ ಇಂಜಿನಿಯರಿಂಗ್ ಕೌಶಲದ ಈ ಬಗೆಯ ವಿಸ್ಮಯಕಾರಿ ಕೃತಿಯು ಭಾರತದ ಪಶ್ಚಿಮ ರಾಜ್ಯದ ಮರುಭೂಮಿಯಲ್ಲಿ ಹೊಸ ಪ್ರಾಣವೂದುವ ಸುದಿನದ ಸವಿಗನಸು ಕಾಣ ತೊಡಗಿದನು.

ಭಾರತ ಸರಕಾರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಾಲಯದ ಉಪಸಚಿವರಾಗಿದ್ದಾರೆ, ಕೆ. ಎನ್. ಎಸ್. ಮೂರ್ತಿ. ಪ್ರಾದೇಶಿಕ ಆರ್ಥಿಕ ವಿಕಾಸ ಗೋಷ್ಠಿಯಲ್ಲಿ ಭಾಗ ವಹಿಸಿದ ನಂತರ ಇತ್ತೀಚೆಗೆ ಸ್ವದೇಶಕ್ಕೆ ಮರಳಿದ್ದಾರೆ. ಇವರು ಟೆನೆಸಿ ಕಣಿವೆ ಆಡಳಿತೆಯ ಮೂಲಕ ಟೆನಿಸಿ

# ಸುಸಂಬದ್ಧ ಯೋಜ

ಪ್ರಗ

ವಿಶ್ವವಿದ್ಯಾಲಯದ ಸಹಯೋಗದಿಂದ ಈ ಗೋಷ್ಠಿಯು ಏರ್ಪಾಡಾಗಿತ್ತು. ಇದರಲ್ಲಿ ಬೇರೆ ಬೇರೆ ದೇಶಗಳ ಆರ್ಥಿಕ ವಿಕಾಸದ ಇತಿಹಾಸ ಮತ್ತು ಆರ್ಥಿಕ ವಿಕಾಸ; ಹಾಗೂ ಕೃಷಿ ಅರ್ಥ ವ್ಯವಸ್ಥೆಯ ವಿಭಿನ್ನ ಸಮಸ್ಯೆಗಳ ಮೇಲೆ ವಿಚಾರ ಮಾಡಲಾಯಿತು. ತಾನು ಇಂಜಿನಿಯರರಾದುದರಿಂದ ಮೂರ್ತಿಯವರಿಗೆ ಪ್ರಾದೇಶಿಕ ಮತ್ತು ರಾಷ್ಟ್ರೀಯ ವಿಕಾಸಕಾರ್ಯದಲ್ಲಿ ಟೆನಿಸಿ ಕಾಲುವೆ ಆಡಳಿತೆಯ ಕಾರ್ಯ ಸಮೀಕ್ಷೆಯಲ್ಲಿ ಅತಿರೇಕ ಆನಂದವೆನಿಸಿತು. ಈ ಯೋಜನೆಯಲ್ಲಿ ಅಂತರ್ಗತವಾದ ಮತ್ತು ಕ್ರಿಯಾನ್ವಿತವಾದ ಎಲ್ಲ ಕಾರ್ಯಕ್ರಮಗಳನ್ನು— ಇವು ಅಮೆರಿಕೆಯ ಏಳು ರಾಜ್ಯಗಳಲ್ಲಿ ಹರಡಿವೆ— ನಿರೀಕ್ಷಿಸಿದರು,

ಮೂರ್ತಿಯವರಿಗೆ ತನ್ನ ಯಾತ್ರೆಯು ಉಪಯೋಗಿಯಾಗಿತ್ತು. ಜತೆಗೆ ಪ್ರೇರಕವೂ ಆಗಿತ್ತು. ಅಲ್ಲಿ ಗಳಿಸಿದ ಜ್ಞಾನ ಮತ್ತು ತಿಳಿದ ಹೊಸ ವಿಚಾರಗಳಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿ ಶಾಖೆಯಲ್ಲಿನ ತನ್ನ ದೈನಂದಿನ ಕ್ರಿಯಾವಿಧಗಳಿಗೆ ತುಂಬ ಸಹಾಯಕವಾಗುವ ಆಶೆಯು ಅವರದು. ನೀರಾವರಿ ಮತ್ತು ಪ್ರವಾಹ ನಿಯಂತ್ರಣಗಳ

ಯೋಜನೆಯನ್ನು ಟೆನೆಸಿ ಕಾಲುವೆ ಆಡಳಿತೆಯು ಮಾಡಬೇಕಾಗುತ್ತದೆ; ಇವುಗಳ ಪ್ರಗತಿಯನ್ನು ಪರಿಶೀಲಿಸಬೇಕಾಗುತ್ತದೆ; ಬೇರೆ ಬೇರೆ ರಾಜ್ಯಗಳಿಂದ ತಾಂತ್ರಿಕ ಸಹಾಯ ಬೇಡಿಕೆಗಳ ಕಡೆಗೆ ಗಮನ ಹರಿಸಬೇಕಾಗುತ್ತದೆ.

ಮೂರ್ತಿಯವರ ಅಮೆರಿಕನ್ ಯಾತ್ರೆ ಬಹಳ ಉಪಯುಕ್ತವಾಗಿತ್ತು. ನದಿ ಕಾಲುವೆ ಯೋಜನೆಗಳಿಗಾಗಿ ಉಪಯುಕ್ತ ವ್ಯವಸ್ಥೆಗಳ ಮಹತ್ವದಲ್ಲಿ ಅವರಿಗೆ ವಿಶ್ವಾಸ ಹುಟ್ಟಿದೆ; ಅದು ಸಾಕಷ್ಟು ದೃಢತರವೂ ಆಗಿದೆ. ಅಮೆರಿಕೆಯಿಂದ ಸ್ವದೇಶಕ್ಕೆ ಮರಳುವಾಗ ಅವರು ನಮ್ಮ ದೇಶದ ಬಗ್ಗೆ ಚಿಂತಿಸಿದರು. ಇಂಜಿನಿಯರರ ಕಾರ್ಯ ಮತ್ತು ಪಗವಿಗಳಲ್ಲಿ ಉಪಯುಕ್ತ ಪರಿವರ್ತನೆ ಮಾಡಿ, ಅವರ ಹೃದಯದಲ್ಲಿ ವ್ಯವಸ್ಥಾಪಕ ಪ್ರಜ್ಞೆಗಿಂತ ಸಹಭಾಗಿದಾರ ಭಾವನೆಯು ಜಾಗ್ರತವಾಗುವಂತೆ ನೋಡಿಕೊಳ್ಳಬೇಕು—ಈ ಉಚ್ಚ ಭಾವನೆಯು ದೇಶದ ಎಲ್ಲ. ರಂಗದ ನೌಕರರಲ್ಲು ಮೂಡಿ ಬಂದಿತೆಂದರೆ, ದೇಶೋನ್ನತಿಯ ದಾರಿ ಸಿಕಟವಾದಂತೆಯೇ ಅಲ್ಲವೆ?

ಭಾರತದಲ್ಲಿ ವಿಭಿನ್ನ ಪ್ರಕಾರದ ನದಿ ಕಾಲುವೆ ಯೋಜನೆಗಳಲ್ಲಿ ಈಗಾಗಲೇ ರೂ. ೧,೫೦೦ ಕೋಟಿಯನ್ನು ತೊಡಗಿಸಲಾಗಿದೆ. ನೀರಾವರಿ ಇಂಜಿನಿಯರರಿಗೆ ಈ ಯೋಜನೆಗಳ ವ್ಯವಸ್ಥೆಯ ಹೊಣೆಗಾರಿಕೆಯನ್ನು ಒಪ್ಪಿಸಿಕೊಟ್ಟರೆ ಸಾಕಷ್ಟು ಲಾಭವಾಗುವುದು. ಅಮೆರಿಕೆಯಲ್ಲಿ ನೀರಾವರಿ ಯೋಜನೆಯಲ್ಲಿ ಬಹಳಷ್ಟು ಸಫಲತೆ ದೊರಕಿರುವುದಕ್ಕೆ ಅವುಗಳ ಕಾರ್ಯವಿಧಿಯು ಅಷ್ಟೆ ಸರಳ

ದೇಶದ ನೂರಾರು ಸಮ
ಆಗಲೇ

ಮತ್ತು ಪ್ರತ್ಯಕ್ಷವಾಗಿರುವುದೇ ಕಾರ
ಅಲ್ಲಿನ ಕೇಂದ್ರ ಸರಕಾರಕ್ಕೂ ನೀರ
ಯ ಲಾಭ ಪಡೆಯುತ್ತಿರುವವರ
ನೇರ ಸಂಪರ್ಕವಿದೆ; ಇದರಿಂದಾಗಿ
ಷ್ಠದೇ ಮಟ್ಟದಲ್ಲಿ ಮಧ್ಯಸ್ಥರ ಅಗ
ರುವುದಿಲ್ಲ. ಅಲ್ಲಿನ ರಾಷ್ಟ್ರೀಯ ನೀರ
ರಿ ಯೋಜನೆಯು ಸಮನ್ವಯ ರೀತಿಯ
ಸಂಘಟಿತವಾಗಿದೆ. ಇದರಿಂದ ಕಾರ್ಯ
ಧಾನದಲ್ಲಿ ವಿಳಂಬವಾಗುವುದಿಲ್ಲ;
ವಾಗುವುದಿಲ್ಲ. ಯಾವುದೇ ಕಾರ್ಯವ
ಎಲ್ಲೆಯನ್ನು ಮೀರಿ ಸರಿಯುವುದಿಲ್ಲ.

ನೀರಾವರಿ ವ್ಯವಸ್ಥೆಯಲ್ಲಿ ಭಾರತ
ತ್ತು ಅಮೆರಿಕೆಗಳ ನಡುವಣ ಸಮ
ಗಳ ರೀತಿ ಸಮಾನವಾದುದು; ಹಾಗ
ಅವುಗಳ ಪರಿಹಾರ ಮಾರ್ಗದಲ
ಸಮಾನತೆಯಿದೆ. ಟೆನೆಸಿ ಕಾಲುವೆ
ಳಿತೆಯು ಗಳಿಸಿದ ಸಫಲತೆ
ವಿಧಾನಗಳೇ ಭಾರತದಲ್ಲೂ
ಯುಕ್ತವಾಗುವುವು; ಈಗಿನ ವ
ಸ್ಥೆಯಾದರೂ ಇದನ್ನೇ ಹೋಲುತ್ತದೆ.

ಟೆನೆಸಿ ಕಾಲುವೆ ಯೋಜನೆಯು
ಧನ ವಿಕಾಸ ಸಂಬಂಧದಲ್ಲಿ ಬಹೂದ್ದೇ
ಯ ನೀತಿಯನ್ನು ಸ್ವೀಕರಿಸಿದೆ. ಒಂ
ಸುನಿಯೋಜಿತ ಅಣೆಕಟ್ಟು ಕಟ್ಟುವ
ವು ನದಿಗಳಿಗೆ ಒಡ್ಡು ಕಟ್ಟುತ್ತದೆ;
ರಿಂದ ಜಲ ವಿದ್ಯುತ್ತು ಉತ್ಪಾದನೆಗೆ
ರು ದೊರೆಯುತ್ತದೆ ಮತ್ತು ನೆರೆಯ
ರೂ ಸಂಗ್ರಹಿತವಾಗುತ್ತದೆ.

ಇದೇ ಮಾದರಿಯ ವ್ಯವಸ್ಥೆಯು



ಅಮೆರಿಕೆಯ ಸಾಗರ ಸಂಶೋಧನಾ ಎಕ್ಸ್‌ಪ್ಲೋರರ್ ನೌಕೆ ಕಾರ್ಯಮಗ್ನವಾಗಿದೆ. ಮೀನುಗಾರರ ನೌಕೆಗಳಿಗೆ ಸಾಗರದ ತಿರುವಳಿಕೆಯನ್ನು ಸಕಾಲದಲ್ಲಿ ತಿಳಿಸುವ ಪ್ರಯತ್ನವನ್ನು ಇದು ಮಾಡುತ್ತದೆ. ಜತೆಗೆ ಹಡಗು ವಿಮಾನಗಳಿಗೂ ವಾತಾವರಣ ಸೂಚನೆ ನೀಡುವ ಆಶಯವಿದೆ.

ಶ್ರೀ ಮೂರ್ತಿ (ಎಡ) ಪೆರು

...ಮೂಲ

# ದುರಹಂಕಾರ ತ್ಯಾಗ

(ಕೆಳಗಿನ ಚಿತ್ರ)

ಮೆಕೆಂಗ್ ನದಿಯ ಡೆಲ್ಟಾ ಪ್ರದೇಶದಲ್ಲಿ ಉಪ್ಪು ನೀರು ತುಂಬಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಅಮೆರಿಕೆಯ ನೌಕಾಪಡೆಯವರು ಇಲ್ಲಿ ಹಲವು ಬಾವಿ ತೋಡಿದರು. ಹೊಸತಾಗಿ ಒಸರಿದ ಬಾವಿ ನೀರಿನ ಸವಿಯನ್ನು ವಿಯತನಾಮಿ ಪ್ರಜೆಯೊಬ್ಬನು ಚಪ್ಪರಿಸುತ್ತಿದ್ದಾನೆ.

## ...ಪರಿಹಾರ ಮಾರ್ಗವಿದು. ...ಯು ಸಾಧ್ಯ.

[illegible]ದಲ್ಲೂ ತೊಡಗಿ ಯಶಗಳಿಸುವ ದಿನ [illegible]ರವಿಲ್ಲ ಎನ್ನುತ್ತಾರೆ ಶ್ರೀ ಮೂರ್ತಿ. [illegible]ತ್ತು ಆ ದಿನ ಬಂದಂದೇ ನಮ್ಮ ನೀರಾ[illegible]ರಿ—ವಿದ್ಯುತ್ತು—ಆಹಾರ ಸಮಸ್ಯೆಗಳ [illegible]ರಿಹಾರ ಸಾಧ್ಯವೆನ್ನುತ್ತಾರೆ, ಅವರು.

ಶ್ರೀ ನಾಗಪ್ಪನ್ ಪೆರುಮಾಳರು ಐ[illegible] ತಿಂಗಳ ಕಾಲ ಅಮೆರಿಕೆಯಲ್ಲಿದ್ದರು. [illegible]ವರ ಆಸಕ್ತಿ ಅಸಾಧಾರಣವಾದುದು. ಇವರು ಆಹಾರ ಮತ್ತು ಕೃಷಿ ಮಂತ್ರಾಲಯದ ಯುವ ಕಾರ್ಯಕ್ರಮದ ಜ್ಞಾನ ವಿಸ್ತರಣಾಧಿಕಾರಿ. ಹಾಗಾಗಿ ಇವರಿಗೆ ಕೆಲಸವಿರುವುದಾದರೂ ರೈತ ಯುವಕರೊಂದಿಗೆ, ಮನೆ, ಹೊಲ ಮತ್ತು ಹಳ್ಳಿ ಸುಧಾರಣೆಯಲ್ಲಿ ಸಹಕಾರದಿಂದ ದುಡಿಯುವ ಶಿಕ್ಷಣ ಕೊಡುವುದು. ಇವರು ಅಮೆರಿಕನ್ ಸರಕಾರದ ಕೃಷಿ ಜ್ಞಾನ ವಿಸ್ತಾರ ಸೇವೆಯ ಕಾರ್ಯಕಲಾಪಗಳನ್ನು ನೋಡಲು ಅಮೆರಿಕೆಗೆ ಹೋಗಿದ್ದರು. ಹಳ್ಳಿಯ ಜನರಿಗೆ ಹೊಸ ವಿಚಾರ ಮತ್ತು ವಿಧಾನಗಳನ್ನು ಹೇಗೆ ತಿಳಿಸಬಹುದು ಮತ್ತು ಗ್ರಾಮ ಯುವಕ ಸಂಘಗಳ ಹೊಣೆಗಾರಿಕೆಗಳು ಯಾವುವು ಎಂಬುದನ್ನು ಅರಿತುಕೊಳ್ಳಲು ಅವರು ಉತ್ಸುಕರಿದ್ದರು.

ಅಮೆರಿಕೆಯ ೪—ಎಚ್ ಕ್ಲಬ್‌ಗಳ ಸಂಬಂಧದಲ್ಲಿ ಅವರು ಹೆಚ್ಚಿನ ಅನುಭವ ಪಡೆದರು. ಇವು ಅಮೆರಿಕೆಯ ವ್ಯಾಪಕ ಜ್ಞಾನ ವಿಸ್ತರಣಾ ಕಾರ್ಯಕ್ರಮದ ಅಭಿನ್ನ ಅಂಗವಾಗಿರುವುವು.

೪—ಎಚ್ ಕ್ಲಬ್‌ನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಬಳಿಕ ನನಗೆ ಹೀಗನಿಸಿತು ಎನ್ನುತ್ತಾರೆ ಪೆರುಮಾಳ್.- "ಎಲ್ಲ ಸದಸ್ಯರಿಗೆ— ಇವರಲ್ಲಿ ಹೆಚ್ಚಿನವರು ಚಿಕ್ಕವರು —ಪೂರ್ಣ ಪ್ರಶಿಕ್ಷಣವನ್ನು ಕೊಟ್ಟಿದ್ದಾರೆ" ಇದರಿಂದಾಗಿ ಅವರು ಹೊಣೆಗಾರಿಕೆಯನ್ನು ಆತ್ಮ ವಿಶ್ವಾಸದಿಂದ ಪೂರೈಸುವಲ್ಲಿ ಸಮರ್ಥರಾಗಿದ್ದಾರೆ."

"ಕೃಷಿ, ಗೃಹ ವಿಜ್ಞಾನ ಮತ್ತು ಯುವಕರ ಪ್ರಥಮ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗ ವಹಿಸುವ ಸದವಕಾಶ ಪೆರುಮಾಳರಿಗೆ ಸಿಕ್ಕಿತು. ಡಕೋಟಾ ವಿಶ್ವವಿದ್ಯಾಲಯದಲ್ಲಿ ಜರಗಿದ ಈ ಉತ್ಸವದಲ್ಲಿ ಜಗತ್ತಿನ ಸುಮಾರು ೪೦ ದೇಶಗಳ ಪ್ರತಿನಿಧಿಗಳು ಸಮಾವೇಶಗೊಂಡಿದ್ದರು.

ಎರಡು ವಾರಗಳ ವರೆಗೆ ನಡೆದ ಈ ಸಮ್ಮೇಳನದಲ್ಲಿ ಪ್ರತಿನಿಧಿಗಳು ಒಬ್ಬರಿನ್ನೊಬ್ಬರನ್ನು ಭೆಟ್ಟಿಯಾಗಿ ಜ್ಞಾನ ಪ್ರಸಾರ ಶಿಕ್ಷಣ ಮತ್ತು ಗ್ರಾಮ ಸುಧಾರಣೆ, ಕೃಷಿ, ಕೌಟುಂಬಿಕ ಉನ್ನತಿಯಲ್ಲಿ ಮಹಿಳೆಯರ ಯೋಗದಾನ ಮೊದಲಾದುವುಗಳಿಗೆ ಸಂಬಂಧಿಸಿದ ಸೇವಾಕಾರ್ಯ ಕ್ರಮದ ಸಮಸ್ಯೆಗಳ ಬಗ್ಗೆ ಬಿಚ್ಚು ಮನಸ್ಸಿನ ಚರ್ಚೆ ನಡೆಸಿದರು.

ಪೆರುಮಾಳ್ ಮೆಡಿಸನ್ ರೈತ ಚಾರ್ಲ್ಸ್ ಎಸ್. ಮಿಲರ್‌ನ ಮನೆಯಲ್ಲೂ ಕೆಲ ದಿನವಿದ್ದು ಪ್ರತ್ಯಕ್ಷ ಅನುಭವ ಗಳಿಸಿದರು. ಇವರಿಬ್ಬರೊಳಗೆ ನಡೆದ ಚರ್ಚೆ, ವಿಚಾರ ವಿನಿಮಯಗಳಿಂದಾಗಿ ಪೆರುಮಾಳರು ಹೇಳುವಂತೆ ಅವರು ವಿಚಿತ್ರ ಅನುಭವವನ್ನು ಮಾಡಿ ಕೊಂಡರು. ಮಿಲರ್ ಜತೆಗೆ ೪೦೦ ಎಕ್ರೆಯಷ್ಟು ಕೃಷಿಜಮೀನಿದೆ; ೫೦ ದನಗಳಿವೆ. ಇವುಗಳನ್ನು ನೋಡಿಕೊಳ್ಳಲು ಒಬ್ಬ ಸಹಾಯಕನಿದ್ದಾನೆ. ಕೃಷಿಗಾಗಿ ೪ ಟ್ರಾಕ್ಟರುಗಳಿವೆ. ಮಿಲರ್ ತನ್ನ ಜೀವನದಲ್ಲಿ ಸಫಲರಾಗುವುದಕ್ಕೆ ಕಾಯ ಕಷ್ಟದಿಂದ ದುಡಿಯುವುದೇ ಕಾರಣವೆನ್ನುತ್ತಾರೆ ಪೆರುಮಾಳ್. ಅತ್ಯಂತ ಆಧುನಿಕ ವಿಧಾನದ ವೈಜ್ಞಾನಿಕ ಪ್ರತಿಕ್ರಿಯೆಗಳನ್ನು ಆತ ಅಳವಡಿಸಿಕೊಳ್ಳುತ್ತಾನೆ. ಮಿಲರ್‌ರ ಮೂವರು ಮಕ್ಕಳೂ ಶಾಲೆಗೆ ಹೋಗುತ್ತಾರೆ; ಆದ್ದರೂ ಬಿಡುವಿನ ವೇಳೆಯಲ್ಲಿ ತಂದೆಯ ಕೆಲಸಗಳಲ್ಲಿ ಸಹಕರಿಸುತ್ತಾರೆ.

ಆದರೆ, ನಮ್ಮ ದೇಶದ ಪರಿಸ್ಥಿತಿ ಹೀಗಿರುವುದಿಲ್ಲ. ಸುಶಿಕ್ಷಿತರಾದವರು ಕೃಷಿರಂಗದಲ್ಲಿ ಇಳಿಯುವುದೇ ಇಲ್ಲ. ನಾಲ್ಕು ಅಕ್ಷರ ಕಲಿತರೆಂದರೆ ನಮ್ಮ ಎಳೆಯರು. ಹಾರೆ ಹಿಡಿಯುವುದು ಅವಮಾನಕರವೆಂದು ಭಾವಿಸುತ್ತಾರೆ. ಈ ಬಗೆಯ ದುರ್ಭಿಮಾನವೇ ನಮ್ಮ ದುರ್ದೆಶೆಗೆ ಕಾರಣ. ಇಂತಹ ಪ್ರವೃತ್ತಿ ಭಾರತೀಯನಿಂದ ದೂರವಾಗಿ ಪ್ರತಿಯೊಬ್ಬನೂ ಪ್ರತಿ ಕೆಲಸವನ್ನು ಮಾಡಲು ಸನ್ನದ್ಧನಾದಂದೇ ನಮ್ಮ ಪ್ರಗತಿಯ ಆರಂಭ. ಅಧಿಕ ಉತ್ಪಾದನೆಯ ಬೀಜ ಮಂತ್ರ —ಪರಿಶ್ರಮ ಮತ್ತು ದುರಹಂಕಾರ, ತ್ಯಾಗ.



ಎಂಟು ವರ್ಷದ ಜೋಸೆಫ್ ಜೀನ್ ಪೌಲ್. ಇವನು ಕೈಕಾಲುಗಳಿಲ್ಲದೇನೇ ಹುಟ್ಟಿದ್ದ; ಅನಾಥನಾದ. ಈಗ ಕೃತಕ ಕೈಕಾಲುಗಳಿಂದ ಮೊದಲ ಹೆಜ್ಜೆಯಿಡಲು ಪ್ರಯತ್ನಿಸುತ್ತಿದ್ದಾನೆ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

## ಕಡ ಗಿಟ್ಟಿಸುವ ಕಲೆ

(ಏಳನೇ ಪುಟದಿಂದ)

ರನ್ನು ಉದ್ಧಾರ ಮಾಡಿದ ಹೋಟೇಲು ಮಾಲಿಕನಿಗೆ ಉದ್ದ ದಾಳವೇ ಗತಿ. ಈಗೀಗ 'ನಗದು ಇವತ್ತು—ಕಡ ನಾಳೆ" ಎನ್ನುವ ತೂಗಾಡುವ ಬೋರ್ಡು ಇದ್ದರೂ, ಕಡ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಕಡದ ಸಂಖ್ಯೆ ಏರುತ್ತಾ ಇದೆ.

ಇಷ್ಟೆಲ್ಲಾ ಬರೆದರು ಕಡ ಮಾಡುವವರೆಲ್ಲಾ ಹಿಡಿಸುವವರೆಂದರ್ಥವಲ್ಲ. ಕೆಲ ಮಾನವಂತರು ಸೆರಗಲ್ಲಿ ಕಟ್ಟಿಕೊಂಡ ಕೆಂಡದಂತೆ, ಹಣ ಹಿಂತಿರುಗಿಸುವ ವರೆಗೆ ಪರದಾಡುತ್ತಾರೆ. ಕ್ಲಪ್ತ ಕಾಲದಲ್ಲಿ ಕೊಡಲಾಗದಿದ್ದರೆ, ಬಂದು ಹೇಳಿಯಾದ್ರು ಹೋಗುವ ಸೌಜನ್ಯ ತೋರಿಸುತ್ತಾರೆ; ಅಂತವರಿಂದಲೇ ವ್ಯಾಪಾರ ಸರಾಗವಾಗಿ ಸಾಗುತ್ತದೆ; ಇಲ್ಲದಿದ್ರೆ ಈ ಲೇವಾದೇವಿಯಲ್ಲಿ ವ್ಯಾಪಾರ ಮುಳುಗುತಿತ್ತು. ಕೆಲವು ನೆರೆಮನೆ ನಿಮಗೆ ಹತ್ತಿರ ಬಂದ್ರೆ ಬೆನ್ನಿಗಂಟಿದ ಭೇತಾಳದಂತೆ. "ಸ್ವಲ್ಪ ಸಾಸ್ಮೆ, ಜೀರಿಗೆ, ತೆಂಗಿನ ಕಾಯಿ ಕೊಡಿ". ಇದು ಹಿಂದೆ ಕೊಡುವ ಬಾಬ್ತು ಅಲ್ಲವೆಂದೇ ನೀವು ಕೊಡಬೇಕು; ಕೆಲವರು ಹಣ ಹಿಡಿಸಿ, 'ಪರಾರಿ' ಯಾಗುವುದೂ ಇದೆ. ಕೆಲವರಿಗಂತೂ ಕಡ ಕೊಟ್ಟಿದ್ದಾರೆಂಬ ಕೃತಜ್ಞತೆ; ನೆನಹೂ ಸಹಾ ಇಲ್ಲ; ಅದೂ ಈಗಿನ ಕಾಲದಲ್ಲಿ 'ಕಡ ಕೊಟ್ಟರೆ" ನಿಷ್ಠುರ ಕಟ್ಟಿಕೊಳ್ಳುವುದಕ್ಕೊಂದು ಸುಲಭ ದಾರಿ.

ಜಗವು ಪ್ರಗತಿಯಾಗುವಾಗ ಕಡವೂ ತನ್ನ ಬಾಲ್ಯ ಕಳೆದು ಯೌವನಕ್ಕೆ ಕಾಲಿರಿಸಿದೆ.

---

### ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 297/1965.

ಎ. ಉಮಾಶಂಕರ ರಾವ್ —ವಾದಿ

ಮತ್ತು

1. ರಾಮಣ್ಣ ಉಡುಪ
2. ರಾಮಣ್ಣ ಸೆಟ್ಟಿ —ಪ್ರತಿವಾದಿರು

ಇವರೊಳಗೆ

2ನೆ ಪ್ರತಿವಾದಿ ರಾಮಣ್ಣ ಸೆಟ್ಟಿ ಮಜೂರು ಮನೆ ದೊಡ್ಡಕ್ಕ ಸೆಟ್ಟಿ ಮಗ, ಉಡುಪಿ ತಾಲ್ಲೂಕು ಮಜೂರು ಗ್ರಾಮದಲ್ಲಿ ಇರುವವರಿಗೆ,

ವಾದಿಯು ಪ್ಲೆಂಟು ನಿವೃತ್ತಿಗೋಸ್ಕರ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ.21-1-1966ಕ್ಕೆ ಈ ಕೋರ್ಟು ಮುಂದೆ ತನಿಖೆ ಬಗ್ಗೆ ಇಡೋಣಾಗಿಯದೆ. ನಿಮ್ಮ ಉದಾಹರಣೆ ಇದ್ದಲ್ಲಿ ನೀವು ಸ್ವತಹ ವ ವಕೀಲರ ಮುಖಾಂತ್ರ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಾತಿಯಿಂದ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು ಎಂದು ಈ ಮೂಲಕ ನಿಮಗೆ ತಿಳಿಸೋಣಾಗುತ್ತದೆ.

K. Gururaja Rao
Advocate for Plaintiff.

Udipi, 20—12—65.

---

**ನವಯುಗಕ್ಕೆ**
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
**ವಾರ್ಷಿಕ ಚಂದಾ ರೂ. ೧೦**

### ನನ್ನ ದೇಶದಲ್ಲಿ

# ಗುಲಾಮನಾಗಿ ಬಾಳಲಾರೆ!

ಬರೆದವರು:
ಶ್ರೀ ಬೇಕಲ್ ನರಸಿಂಗ ರಾವ್

ಉದಯಸಿಂಹನ ಮರಣಾ ನಂತರ ಆತನ ಪುತ್ರ ಮಹಾ ರಾಣಾಪ್ರತಾಪ ಸಿಂಹನು ಮೇವಾಡದ ರಾಜ ಗದ್ದುಗೆಯನ್ನೇರಿದನು. ಆತನು ರಾಜನೇನೋ ಆದನು, ಆದರೆ ಆತನಲ್ಲಿ ಆಳಲು ರಾಜ್ಯವೂ ಇರಲಿಲ್ಲ, ಧನವೂ ಸೈನವೂ ಒಂದೂ ಇರಲಿಲ್ಲ. ಅಕ್ಬರ ಬಾದಶಹನು ಅದಾಗಲೇ ಸಂಪೂರ್ಣ ರಾಜ ಪ್ರತಾಪವನ್ನು ತನ್ನ ಕೈವಶ ಮಾಡಿದ್ದನು. ಕೇವಲ 'ಮೇವಾಡ' ವಷ್ಟೆ ಉಳಿದಿತ್ತು. ಆದರೆ ವೀರ ಹೃದಯಿ ರಾಣಾ ನಿರಾಶನಾಗಲಿಲ್ಲ. "ಏನೇ ಆದರೂ ಸರಿಯೆ 'ಅಕ್ಬರನಿಗೆ ತಲೆ ಬಾಗಲಾರೆ" ಎಂದಾತ ಧೃಢ ಪ್ರತಿಜ್ಞೆ ಕೈಗೊಂಡಿದ್ದ. ಯುದ್ಧದಲ್ಲಿ ಪ್ರತಾಪನು ತನ್ನ ವೀರ ಸೈನಿಕರಲ್ಲನೇಕರನ್ನು ಕಳಕೊಂಡನು, ಸಮಸ್ತ ಭಾರತವೇ ಅವನಿಗೆ ಎದುರಾಗಿತ್ತು. ಆದರೂ ಅವನಿಗೆ ಇದೊಂದರ ಪರಿವೆಯೇ ಇರಲಿಲ್ಲ. 'ದೇಶವಿಡಿ ಕೈಬಿಟ್ಟರೂ ಸರಿಯೇ, ಆದರೆ ಗುಲಾಮನಾಗಿರಲಾರೆ"—ಎಂದವನು ನಿಶ್ಚಯಿಸಿದ್ದನು.

ಅಕ್ಬರನೊಡನೆ ನಡೆದ ಕಾಳಗದಲ್ಲಿ ಬೆರಳೆಣಿಕೆಯಷ್ಟು ಸೈನಿಕರು ಬದುಕಿ ಉಳಿದರೂ, ಹೊಟ್ಟೆ ತುಂಬಲು ಸಾಕಷ್ಟು ಆಹಾರ ದೊರೆಯದಿದ್ದರೂ ಅವನು ಅಕ್ಬರನಿಗೆ ಮಣಿಯಲಿಲ್ಲ. ತನ್ನ ಕೆಲವೇ ನಂಬಿಗಸ್ಥ ಸೈನಿಕರೊಡನೆ ಆತನು ಕಾಡನ್ನು ಸೇರಿ ಶಕ್ತಿ ಸಂಚಯಕ್ಕೆ ತೊಡಗಿದನು. ಆದರೆ ಅಕ್ಬರನ ಸೇನೆಯು ಇಲ್ಲಿಯೂ ಆತನನ್ನು ಅಟ್ಟದೆ ಬಿಡಲಿಲ್ಲ. ಮಾತೃಭೂಮಿಯ ರಕ್ಷಣೆಗಾಗಿ ಆತನು ಅದೆಷ್ಟು ಕಷ್ಟಗಳನ್ನೆದುರಿಸಬೇಕಾಯಿತು? ಕಾಡು-ಮೇಡುಗಳಲ್ಲಿ ಹೊಟ್ಟೆಗೆ ಸಾಕಷ್ಟು ಹಿಟ್ಟಿಲ್ಲದೆ ಅಲೆಯುತ್ತಿದ್ದರೂ ರಾಣಾನ ಹೃದಯದಲ್ಲಿ ದೇಶಪ್ರೇಮದ ಕಿಡಿಯು ಕಿಂಚಿತ್ತಾದರೂ ಆರಲಿಲ್ಲ.

"ಎಂದಿನ ವರೆಗೆ ಮೇವಾಡವು ಸ್ವತಂತ್ರವಾಗದೋ ಅಂದಿನ ವರೆಗೆ ವಿಶ್ರಾಂತಿ ಹೊಂದಲಾರೆ' ಎಂದಾತ ಸಂಕಲ್ಪ ಮಾಡಿಕೊಂಡನು. ಭೋಗ ವಿಲಾಸ ಸಾಧನಗಳೆಲ್ಲವನ್ನೂ ತ್ಯಜಿಸಿ ಕೇವಲ ಸನ್ಯಾಸಿಯಂತೆ ಸರಳ ಜೀವನವನ್ನಾತ ಅವಲಂಬಿಸಿದನು. ಆತನೊಂದಿಗೆ ರಾಣಿಯೂ, ಚಿಕ್ಕ ಬಾಲಕನೂ ಓರ್ವ ಹುಡುಗಿಯೂ ಇದ್ದಳು. ಅವರೊಡನೆ ಹೊಟ್ಟೆ ತುಂಬಲು ಏನೂ ಇದ್ದಿಲ್ಲ, ಕೈಯಲ್ಲಿ ಚಿಕ್ಕಾಸಂತೂ ಇರಲೇ ಇಲ್ಲ. ಇದೂ ಸಾಲದೆಂಬಂತೆ ಮೇಲಿಂದ ಮೇಲೆ ಕಷ್ಟದ ಸುರಿ ಮಳೆಯಾಗುತಿತ್ತು. ಎಂದಾದರೂ ಕಾಡು ಹಣ್ಣುಗಳು ದೊರೆತರಾಯಿತು, ಇಲ್ಲವಾದರೆ ಅಂದು ಉಪವಾಸವೇ ಗತಿಯಾಗುತಿತ್ತು.

ಅದೊಂದು ದಿನ ಭಾರೀ ಕರುಣಾಪೂರ್ಣ ಘಟನೆಯೊಂದು ನಡೆಯಿತು. ಹಲವಾರು ದಿನ ಉಪವಾಸ ಬಿದ್ದಾದ ನಂತರ ಓರ್ವ ಕಾಡು ವಾಸಿಯು ಕೊಂಚ ಹುಲ್ಲಿನ ಬೀಜದ ಹಿಟ್ಟನ್ನು ಅವರಿಗೆ ತಂದಿತ್ತಿದ್ದನು; ಅದರಿಂದ ರೊಟ್ಟಿಯನ್ನು ಮಾಡಿ ಎಲ್ಲರೂ ಒಂದೊಂದು ತುಂಡು ಸವಿದರು. ಚಿಕ್ಕ ಹುಡುಗಿಯು ತನ್ನ ಪಾಲಿನ ತುಂಡನ್ನು ತಿನ್ನಬೇಕೆನ್ನುವಷ್ಟರಲ್ಲಿ ಕಾಡು ಬೆಕ್ಕೊಂದು ಆ ತುಣುಕನ್ನು ಹಾರಿಸಿಕೊಂಡು ಹೋಯಿತು. ಹಸಿವಿನಿಂದ ಕಂಗಾಲಾದ ಆಹತ ಭಾಗ್ಯೆಯು ಜೋರಾಗಿ ಅತ್ತಳು. ಇದನ್ನು ಕಂಡ ರಾಣಾನ ಹೃದಯವೂ ಕರಗಿ ನೀರಾಯಿತು. ಅವನ ಕಣ್ಣುಗಳು ತುಂಬಿ ಬಂದುವು, ಎಂದೂ ಅಧೀರವಾಗದ ಅವರ ಹೃದಯವಿಂದು ಅಧೀರವಾಯಿತು. ಅವನು ಅಕ್ಬರನೊಡನೆ ಸಂಧಿ ಮಾಡುವುದೇ ಉಚಿತವೆಂದು ನಿಶ್ಚಯಿಸಿದನು. ಆದರೆ ಈ ಮೂರ್ಖ ಯೋಚನೆಯನ್ನಾತ ಮರುಕ್ಷಣವೇ ಕೈಬಿಟ್ಟನು.

ಈಗಾತನಲ್ಲಿ ಸಾಕಷ್ಟು ಸೇನಾ ಸಂಚಯವಾಗಿತ್ತು. ಅಕ್ಬರನನ್ನೆದುರಿಸಲುದ್ಯುಕ್ತರಾಗಿ ಅವರು ಹೊರಟರು. ಅಷ್ಟರಲ್ಲೆ ಅವರ ಹಳೆಯ ಮಿತ್ರನಾದ ಭಾಮಾಶಾಹನೆಂಬವನು ಪ್ರತಾಪನ ಚರಣಗಳಲ್ಲಿ ಮೊಹರಿನಿಂದ ತುಂಬಿದ ಚೀಲವೊಂದನ್ನಿಟ್ಟು ಈರೀತಿ ವಿಜ್ಞಾಪಿಸಿಕೊಂಡನು- "ಮಹಾರಾಜಾ, ಇದು ನನ್ನ ಜನ್ಮವಿಡೀ ದುಡಿತದ ಸಂಪಾದನೆ, ತಾವಿದನ್ನು ಸ್ವೀಕರಿಸಿ ಮೇವಾಡವನ್ನು ರಕ್ಷಿಸಬೇಕೆಂಬ ಈ ಸೇವಕನ ಬಿನ್ನಹ ಭಾಮಾಶಾಹನ ದೇಶಪ್ರೇಮವನ್ನು ಕಂಡು ಪ್ರತಾಪನ ಕಣ್ಣುಗಳು ತುಂಬಿ ಬಂದುವು, ಆತನು ಆ ಹಣವನ್ನು ಸ್ವೀಕರಿಸಲೊಪ್ಪದಿದ್ದರೂ ಕೊನೆಗೆ ಒತ್ತಾಯಕ್ಕೆ ಕಟ್ಟುಬೀಳಲೇ ಬೇಕಾಯಿತು.

ಆ ಕೂಡಲೆ ರಾಣಾನು ಕಾಡಿನಲ್ಲಿ ಅವಿತುಕೊಂಡ ತನ್ನ ಯೊವತ್ತೂ ಸೈನಿಕರನ್ನೊಂದುಗೂಡಿಸಿ ಈ ರೀತಿ ಪ್ರತಿಜ್ಞೆ ಕೈಗೊಂಡನು—"ಎಂದಿನ ವರೆಗೆ ಎದ್ದು ನಿಲ್ಲಲು ನಮ್ಮಲ್ಲಿ ಶಕ್ತಿಯಿದೆಯೋ, ಕೈಯಲ್ಲಿ ಭರ್ಜಿ ವೆಳೆಯ ಬಲ್ಲೆವೋ, ಖಡ್ಗವಿಲ್ಲದಿದ್ದರೂ ಸರಿಯೆ ನಖದಿಂದಲಾದರೂ ಯುದ್ಧ ಮಾಡಬಲ್ಲೆವೋ, ಅಂದಿನ ವರೆಗೆ ರಣರಂಗದಿಂದ ಕಾಲ್ತೆಗೆಯೆವು. ಅಡಿಯೆ ಮುಂದಿಡೆ ಸ್ವರ್ಗ, ಅಡಿಯೆ ಹಿಂದಿಡೆ ನರಕ."

ಸರಿ! ವೀರರ ಹೃದಯವು ಸ್ಫೂರ್ತಿಯಿಂದ ಉಕ್ಕೇರಿತು. ಧೀರರ ಯುದ್ಧವಾಗಿ ರಾಣಾಜೀಯು ಗೆದ್ದನು. ನಾಲ್ದೆಸೆಗಳೂ "ಮಹಾರಾಣರಿಗೆ ಜಯವಾಗಲಿ!" ಎಂಬ ಜಯ ಘೋಷದಿಂದ ಪ್ರತಿಧ್ವನಿಸಿದುವು.

---

ಕೀರ್ತಿಯೆಂಬುದು ದೂರದಲ್ಲಿ ಮಿನುಗುವ ಮಿಣುಕು ಹುಳದಂತೆ. ಹತ್ತಿರದಲ್ಲಿ ಪರಿಶೀಲಿಸಿದರೆ, ಅದರಲ್ಲಿ ಸಾಕಷ್ಟು ಬೆಳಕೂ ಇಲ್ಲ, ಶಾಖವೂ ಇಲ್ಲ.

—ವೆಬ್‌ಸ್ಟರ್.

o o o

ತನ್ನ ವಾದದಲ್ಲಿಯೇ ಸತ್ಯ ಅಡಗಿದೆಯೆಂಬ ಮನುಷ್ಯನು ಒಂದೋ ಮುಟ್ಟಾಳನಿರಬೇಕು, ಇಲ್ಲವೇ ಬೇರೆ ನಿಲುವನ್ನರಿಯದ ಕುರುಡನಿರಬೇಕು.

—ಎಡಿಸನ್.

o o o

ಕರ್ತವ್ಯವನ್ನು ನೆರವೇರಿಸುವುದು ನೈತಿಕ ಟಾನಿಕಿನಂತೆ. ಅದರಿಂದ ಜೀವನಕ್ಕೆ ಕಸುದೊರೆತು ಜೀವನ ರಮ್ಯವಾಗುವುದು. ಕರ್ತವ್ಯ ಮಾಡದವನ ಮನವು ಕುಗ್ಗಿ ನೈತಿಕ ಶಕ್ತಿ ಉಡುಗುವುದು.

—ಎಡ್ವರ್ಡ್ಸ್

o o o

ಸಂಶಯವಿರುವಲ್ಲಿ ಸತ್ಯವಿರುವಲ್ಲಿ ನೈತಿಕ ಬಲವಿಂದು. ಸಂಶಯವಿರುವವನ ಜೀವನ ನರಕ ಸದೃಶ. ಏಕೆಂದರೆ ಸಂಶಯವಿರುವಲ್ಲಿ ನಿಜಜೀವನವಿರಲಾರದು

### ಪುರಾಣ ಕಥೆ

# ಅಗ್ನಿ ಮತ್ತು ವಾಯು ದೇವರ ಸತ್ವಪರೀಕ್ಷೆ

ಲೇಖಕರು: ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಈ ಸಮಸ್ತ ಜಗತ್ತೂ ಭಗವಂತನ ಅಧೀನವು. ತನ್ನ ಸಂಕಲ್ಪದಂತೆ ಪರಮಾತ್ಮನು ಸೃಷ್ಟಿ, ಸ್ಥಿತಿ, ಲಯಗಳೆನ್ನುವ ಪ್ರಾಪಂಚಿಕ ನಾಟಕವನ್ನು ಸದಾಕಾಲ ನಡೆಯಿಸುತ್ತಿರುವನು. ಭಗವಂತನು ಸಕಲರ ಹೃದಯದಲ್ಲಿಯೂ ನೆಲಸಿರುವನು. ಅವರವರ ಕರ್ಮಕ್ಕನುಗುಣವಾಗಿ ಪ್ರತಿಯೊಬ್ಬ ಮಾನವನೂ ತಕ್ಕದಾದ ಫಲಗಳನ್ನು ಉಣ್ಣುವಂತೆ ಪರಮಾತ್ಮನ ನಿತ್ಯ ಆಜ್ಞಾಪನೆಯು. ಅಜ್ಞಾನವು ಮಾನವರ ವಿವೇಕವನ್ನು ನಾಶಗೊಳಿಸಿ ಅದರಿಂದ ಅನರ್ಥಗಳು ಸಂಭವಿಸುವವು. ಗರ್ವದಿಂದ ಉದ್ರೇಕಿತರಾದ ಅಗ್ನಿ ದೇವ ಮತ್ತು ವಾಯುದೇವರು ಕೂಡ ಪರಮಾತ್ಮನ ಮುಂದೆ ತಾವು ತೃಣ ಸಮಾನರೆಂದು ತಿಳಿಯಬೇಕಾಯಿತು.

ಒಂದು ದಿನ ಅಗ್ನಿ ಮತ್ತು ವಾಯುದೇವರು ಇಂದ್ರನ ಸಭೆಗೆ ಬಂದು ತಮ್ಮ ಪರಾಕ್ರಮವನ್ನು ಕೊಚ್ಚಿ ಕೊಳ್ಳಲಾರಂಭಿಸಿದರು. ಇವರ ಹೆಮ್ಮೆಯನ್ನು ನೋಡಿ ಇಂದ್ರನಿಗೆ ನಗು ಬಂತು. ತಾನು ವಾಯುವಿಗಿಂತ ಮಿಗಿಲಾದ ಶಕ್ತನೆಂದು ಅಗ್ನಿದೇವನು ಗರ್ವದಿಂದ ಅರ್ಭಟಿಸಿದನು. ತಾನು ಅಗ್ನಿಯನ್ನು ಕ್ಷಣದೊಳಗೆ ಮರೆಮಾಡುವ ಶಕ್ತನೆಂದು ವಾಯುದೇವನು ಹಾರಾಡಿದನು. ಪರಮಾತ್ಮನು ಇವರಿಬ್ಬರ ಗರ್ವವನ್ನು ಕಂಡು ಇವರನ್ನು ಹದಗೊಳಿಸುವುದು ನ್ಯಾಯಬದ್ಧವೆಂದು ತಿಳಿದು ವೃದ್ಧ ವಿಪ್ರನ ವೇಷವನ್ನು ಧರಿಸಿ, ಇಂದ್ರನ ಸಭೆಗೆ ಬಂದಿಳಿದನು. ವಿಪ್ರನನ್ನು ಕಂಡು ಅಗ್ನಿಯೂ ವಾಯುವೂ ಹೀಯಾಳಿಸಿದರು. ಆಗ ವಿಪ್ರನು ನಿಮ್ಮಲ್ಲಿ ಯಾರು ಹೆಚ್ಚಿನ ಬಲಶಾಲಿಯೆಂಬುದನ್ನು ತಕ್ಷಣವೇ ಪ್ರದರ್ಶಿಸಬೇಕೆಂದು ಬೇಡಿಕೊಂಡನು. ಆಗ ಅಲ್ಲಿ ಸಮೀಪವಿದ್ದ ಕಾಡಿಗೆ ಅಗ್ನಿಯು ತನ್ನ ಪ್ರಭಾವವನ್ನು ಬೀರಿ, ಕ್ಷಣ ಮಾತ್ರದೊಳಗೆ ಆ ಕಾಡನ್ನು ಸುಟ್ಟು ಬೂದಿ ಮಾಡುವೆನೆಂದು ಅರ್ಭಟಿಸಿದನು. ವಿಪ್ರನು "ಅದು ಸರಿ" ಎಂದು ಹೇಳಿದಾಗ ಅಗ್ನಿಯು ಕಾಡನ್ನು ಪ್ರವೇಶಿಸಿದನು. ಕಾಡಿನ ಒಂದೇ ಒಂದು ಗಿಡವು ಕೂಡ ಅಗ್ನಿಯಿಂದ ನಾಶವಾಗಲಿಲ್ಲ. ಅಗ್ನಿಯ ಗರ್ವವು ಸಂಪೂರ್ಣ ಕುಗ್ಗಿ ಹೋಯಿತು. ಆಗ ವಾಯುವು ತಾನು ನಿಜವಾದ ಬಲಶಾಲಿಯೆಂದು ತನ್ನನ್ನು ತಾನೇ ಹೊಗಳಿದಾಗ ವಿಪ್ರನು ಒಂದು ಸಣ್ಣ ದರ್ಬೆಯನ್ನು ಇಟ್ಟು ಅದನ್ನು ಹಾರಿಸಬೇಕಾಗಿ ಬೇಡಿಕೊಂಡನು. ಆಗ ವಾಯುವು ಬಿರುಗಾಳಿಯನ್ನು ಎಬ್ಬಿಸಿದರೂ ಆ ತೃಣವು ಅಲುಗಾಡಲಿಲ್ಲ. ವಾಯುವು ನಾಚಿಕೆಯಿಂದ ತಲೆ ತಗ್ಗಿಸಿದನು. ಅಗ್ನಿ ಮತ್ತು ವಾಯುದೇವರ ಅಹಂಕಾರವು ಕರಗಿ ಹೋದಾಗ ವಿಪ್ರ ವೇಷದ ಶ್ರೀಹರಿಯು ಚತುರ್ಭುಜಗಳಿಂದ ಅಲಂಕೃತನಾಗಿ ದೇವ ರೂಪದಲ್ಲಿ ಅಗ್ನಿ ವಾಯು ದೇವರ ಮುಂದೆ ನಿಂತನು. ಭಗವಂತನೇ ತಮ್ಮ ಸತ್ವಪರೀಕ್ಷೆಗಾಗಿ ವಿಪ್ರರೂಪದಿಂದ ಇಂದ್ರ ಸಭೆಗೆ ಬಂದ ವಿಚಾರ ಇಬ್ಬರಿಗೂ ಮನವರಿಕೆಯಾಗಿ ಇಬ್ಬರೂ ಪರಮಾತ್ಮ ಮಹಾವಿಷ್ಣುವಿನ ಪಾದಕ್ಕೆರಗಿ ಕ್ಷಮಾಪಣೆಯನ್ನು ಬೇಡಿಕೊಂಡರು. ಶರಣರ ರಕ್ಷಕನಾದ ವಿಷ್ಣುವು ಇಬ್ಬರನ್ನು ಆಲಿಂಗಿಸಿ ಕ್ಷಮಿಸಿದನು.

ಸರ್ವವೂ ಪರಮಾತ್ಮನ ವಶದಲ್ಲಿದೆ. ಆತನಲ್ಲಿ ದೃಢವಾದ ಭಕ್ತಿ ಇರಿಸಿದವರೇ ಮುಕ್ತರು. ಆತನನ್ನು ಮರೆತು ಅಧರ್ಮದಲ್ಲಿ ನಡೆಯುವ ಗರ್ವಿಷ್ಠರು ಆತನ ಅನುಗ್ರಹಕ್ಕೆ ಎಂದಿಗೂ ಪಾತ್ರರಾಗರು ಎಂಬುದೇ ಈ ಚಿಂತೆಯ ಸಾರಾಂಶವು.


## ಕಾಲೋಚಿತವಾದ ವಿಚಾರ ಸಾಹಿತ್ಯ

## ಯಾವತ್ತೂ ಲೈಬ್ರೆರಿಗಳಿಗೆ ಯೋಗ್ಯ ಪುಸ್ತಕಗಳು

1 ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ — ರೂ. 1-50
(ಮೂಲ: ಜೇಮ್ಸ್ ಬಿ. ಕೊನೇಂಟ್
ಅನು: ಉಡುಪಿ ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ., ಎಲ್. ಟಿ.)
ವಿಜ್ಞಾನದ ಪ್ರಗತಿ, ವಿಜ್ಞಾನಿಯ ಸ್ಥಾನಮಾನ, ಧ್ಯೇಯ ಸಾಧನೆಗಳನ್ನು ಪ್ರಸ್ತಾಪಿಸಿ, ಇಂದು ವಿಚಾರ ಪ್ರಪಂಚದಲ್ಲಿ ಎಂತಹ ಕ್ರಾಂತಿ ಉತ್ಪನ್ನಿಸಿದೆ ಎಂಬುದನ್ನು ಮಾರ್ಮಿಕವಾಗಿ ಪ್ರತಿಪಾದಿಸುವ ವಿಚಾರದ ನವೀನತೆಯ ಗ್ರಂಥ.

2 ನಡುಹಗಲಿನ ಕಗ್ಗತ್ತಲೆ (ಆರ್ಥರ್ ಕೊಸ್ಲರ್) — ರೂ. 2-50
ಅನು: ಕು. ಶಿ. ಹರಿದಾಸ ಭಟ್ಟ, ಎಂ. ಎ.
ಹೃದಯ ವಿದ್ರಾವಕ ಸನ್ನಿವೇಶಗಳಿಂದಲೂ, ರೋಮಾಂಚಕ ದೃಶ್ಯಗಳಿಂದಲೂ ತರ್ಕದ ಪ್ರಖರತೆಯಿಂದಲೂ ಕೂಡಿರುವ ರಾಜಕೀಯ ಕಾದಂಬರಿ.

3 ಶಿಕ್ಷಣದ ಧ್ಯೇಯಗಳು — ರೂ. 2.25
(ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್) ಅನು: ಕೆ. ಬಿ. ರಾಮಕೃಷ್ಣ ರಾವ್ & ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ., ಎಲ್. ಟಿ.
ವಿದ್ಯಾರ್ಥಿಗಳ ಆಸೆ ಕುತೂಹಲಗಳನ್ನು ಪ್ರಚೋದಿಸಿ, ಎಲ್ಲರ ಉದ್ಧಾರವನ್ನೆಸಗುವುದು ಶಿಕ್ಷಣದ ಗುರಿಯೆಂದೂ ಪ್ರತಿ ವಿದ್ಯಾರ್ಥಿಯೂ ತನ್ನ ಆತ್ಮೋದ್ಧಾರವನ್ನೆಸಗುವಂತೆ ಶಿಕ್ಷಕರು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಬೇಕೆಂಬುದನ್ನೂ, ವಿವರಿಸುವ ಅಧ್ಯಯನ ಅಧ್ಯಾಪನ ಕ್ರಮಗಳಿಗೆ ಸಂಬಂಧಿಸಿದ ಬೌದ್ಧಿಕ ವಿಚಾರಗಳ ಗ್ರಂಥ.

4 ಸ್ವಾತಂತ್ರ್ಯ ಮತ್ತು ಸಂಸ್ಕೃತಿ — ರೂ. 2-50
(ಜಾನ್ ಡ್ಯೂಯಿ) ಅನು: ಕು. ಶಿ. ಹರಿದಾಸ ಭಟ್ಟ, ಎಂ. ಎ.
ಪ್ರಜಾತಂತ್ರದ ಹೊಸಲಲ್ಲಿ ಇದೀಗ ಕಾಲಿಟ್ಟಿರುವ ಭಾರತೀಯರಿಗೆ ಮಾರ್ಗಸೂಚಕವಾದ ಓದಲೇ ಬೇಕಾದ ಉದ್ಗ್ರಂಥ.

5 ಹಿರೋಶಿಮಾದಿಂದ ಜಿನೇವ — ರೂ. 1-50
(ಯು. ರಾಘವೇಂದ್ರಾಚಾರ್ಯ)
ವಿಜ್ಞಾನದ ಪ್ರತಿಯೊಂದು ವಿಷಯವನ್ನೂ ಆದರ ಮೂಲ ಭೂತಾಂಶಗಳ ತಳಹದಿಯ ಮೇಲೆ ತಿಳಿಸಿ ಹೇಳುವ ಅತ್ಯಪೂರ್ವ ಅತ್ಯುಪಯುಕ್ತ ಗ್ರಂಥ.

6 ಮೋಹದ ಮಹಾಜಾಲ — ರೂ. 1-75
(ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ.)
ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಮತ್ತು ಸತ್ಯವರ್ತನೆಯಿಂದ ಪರಿಹಾರವಾಗುವುವು ಎಂಬುದನ್ನು ವಿವರಿಸುವ ಮನೋರಂಜಕ ಕಾದಂಬರಿ.

7 ಭಾರತೀಯ ಮಹಾ ಪುರುಷರು — ರೂ. 1-50
(ಎಸ್. ಗೋಪೀಚಂದ ರಾವ್)
ಭಾರತದ ಹನ್ನೆರಡು ಮಹಾಪುರುಷರ ಜೀವನ ಚರಿತ್ರೆ, ಅವರು ಲೋಕಕ್ಕೆ ಸಾರಿದ ನೀತಿಸಾರ, ನೀಡಿದ ಮಾರ್ಗದರ್ಶನಗಳನ್ನು ವಿವರಿಸುವ ಪುಸ್ತಕ.

8 ಕಥಾ ಕೌಮುದಿ (ಎಸ್. ಗೋಪೀಚಂದ ರಾವ್) — ರೂ. 1-50
ಪ್ರಣಯ ಕಥೆಗಳಿಂದ ವಿಭಿನ್ನವಾಗಿದ್ದು ನೀತಿಬೋಧಕ ಹಾಗೂ ಸಮಾಜದ ಸಮಸ್ಯಾ ನಿರೂಪಣೆ ಮಾಡುವ ಕಥೆಗಳ ಸಂಗ್ರಹ

9 ಅದೃಷ್ಟಶಾಲಿ ರಾಷ್ಟ್ರ ನಾಯಕ ಜಾರ್ಜ್ ವಾಶಿಂಗ್‌ಟನ್ (ಜಿನೇ ಇಯೇಟನ್) — ರೂ. 1-25
ಅನು: ಉಡುಪಿ ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ., ಎಲ್. ಟಿ.
ಜಾರ್ಜ್ ವಾಶಿಂಗ್‌ಟನ್ನನ ಬಾಲ್ಯ, ಯವ್ವನದ ಸಾಹಸಮಯ ಜೀವನ ಚಿತ್ರಿಸಿ ಈತ ಅಮೇರಿಕದ ಸ್ವಾತಂತ್ರ್ಯ ಸ್ಥಾಪಿಸುವುದಕ್ಕಾಗಿ ಹೆಣಗಿದನು ಎಂಬುದನ್ನು ವಿವರಿಸುವ ಜೀವನ ಚರಿತ್ರೆ.

10 ಏಶಿಯಾದ ಸಂಪತ್ತು (ಕು. ಶಿ. ಹರಿದಾಸ ಭಟ್ಟ ಎಂ. ಎ.) — ರೂ. 2-00
ಆಗ್ನೇಯ ಮತ್ತು ದಕ್ಷಿಣ ಏಶಿಯಾದ ರಾಷ್ಟ್ರಗಳ ರಾಜಕೀಯ ಪ್ರಭಾವಗಳನ್ನೂ ಆರ್ಥಿಕ ಚಿತ್ರಗಳನ್ನೂ ವಿವರಿಸುವ ವಿಚಾರಪೂರ್ಣ ಗ್ರಂಥ.

11 ಭಾವಾರ್ಚನೆ (ನಚಿಕೇತ) — ರೂ. 1-25
ಸರಳವೂ ಮನೋಹರವೂ ಆದ ಭಾವನಾಪೂರ್ಣ ಕಾದಂಬರಿ.

12 ಅಮೇರಿಕದ ಆರು ಕಥೆಗಳು — ರೂ. 1—75
(ಅನು: ಕು. ಶಿ. ಹರಿದಾಸ ಭಟ್ಟ, ಎಂ. ಎ.)
ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾ ಸಂಕಲನ. ಅಮೇರಿಕದ ಗ್ರಾಮ ಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಜೋಡಿಸಿರುವ ವೈಶಿಷ್ಟ್ಯಪೂರ್ಣ ಕಥಾ ಸಂಕಲನ.

13 ಋಣ ಯಾತ್ರೆ (ನಚಿಕೇತ) — ರೂ. 1-50
ಅಪೂರ್ವ ಸನ್ನಿವೇಶಗಳಿಂದ ರೂಪುಗೊಂಡಿರುವ ಮನೋಹರ ಕಾದಂಬರಿ.

14 ಚಿತ್ರಾಂಗದೆ (ಡಾ| ರವೀಂದ್ರನಾಥ ಟಾಗೂರ್) — ರೂ. 0-60
ಅನು: ಕೆ. ಕೆ. ಸೆಟ್ಟಿ, ಎಂ. ಎಲ್. ಸಿ.
ಕವೀಂದ್ರ ರವೀಂದ್ರನಾಥ ಠಾಗೋರರ 'ಚಿತ್ರಾ' ನಾಟಕದ ಅನುವಾದ

15 ರವೀಂದ್ರರ ಕಿರುಗತೆಗಳು (ಹನುಮಂತ್ರಾವ್ ಮಾಂಜ್ರೇಕರ) — ರೂ. 0-90
ರವೀಂದ್ರನಾಥ ಠಾಗೋರರ, ಸೌಂದರ್ಯದಲ್ಲಿ, ಹೃದಯ ಸ್ಪರ್ಶತೆಯಲ್ಲಿ ಭಾವಸ್ಪಂದನದಲ್ಲಿ ಅತ್ಯುಚ್ಚವಿರುವ ಕಿರುಗತೆಗಳ ಸಂಗ್ರಹ

16 ಹಸುರು ಹಂಸ (ನಚಿಕೇತ) — ರೂ. 2-00
ಬದುಕಿನ ಆದರ್ಶ ಗುಣಗಳನ್ನು ಮನಗಾಣಿಸುವ ನವೀನ ಕಾದಂಬರಿ.

17 ಬಿರಿದ ಮುಗುಳು (ಎಸ್. ಗೋಪೀಚಂದ ರಾವ್) — ರೂ. 1-50
ವಿವಿಧ ಸಂದರ್ಭ–ಸನ್ನಿವೇಶಗಳಿಂದ ಕೂಡಿದ ಹನ್ನೆರಡು ಕತೆಗಳ ಉತ್ತಮ ಸಂಕಲನ

18 ಭಾರತದ ವೀರಾಂಗನೆಯರು — ರೂ. 1-50
ಕೆ. ಎನ್. ಭಟ್ ಶಿರಾಡಿಪಾಲ್
ಭಾರತೀಯ ವೀರ ರಮಣಿಯರ ಸಾಹಸಮಯ ಜೀವನ ಘಟನೆಗಳು! ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ನಾರೀಶಕ್ತಿಯನ್ನು ಪ್ರದರ್ಶಿಸಿದ ವೀರಾಂಗನೆಯರ ಐತಿಹಾಸಿಕ ಗ್ರಂಥ! ತ್ರಿವರ್ಣ ರಕ್ಷಾಕವಚ

ಪ್ರತಿಗಳು ಸಿಗುವ ಸ್ಥಳಗಳು— ನವಯುಗ ಪ್ರೆಸ್, ಉಡುಪಿ,
2) ನವಭಾರತ ಪುಸ್ತಕ ಭಂಡಾರ, ಉಡುಪಿ.

# ಮಹಾಸಾಧ್ವಿ ಸೀತಾಮಾತೆ

(ಐದನೇ ಪುಟದಿಂದ)

ಹರಿಸಿ ಕರೆದೊಯ್ಯುತ್ತಾನೆ. ಸೀತೆಯ ರಕ್ಷಣೆಗಾಗಿ ಹೋರಾಡಿದ ಜಟಾಯು ರಾವಣನ ಶಕ್ತಿಗೆ ಬಲಿಯಾಗುತ್ತದೆ. ತಾನು ಹೋದ ದಿಕ್ಕಿನ ಗುರುತಿರಲೆಂದು ಸೀತಾದೇವಿ ತನ್ನ ಆಭರಣಗಳನ್ನು ಕಿಷ್ಕಿಂಧೆಯಲ್ಲಿ ಹಾಕಿ ಹೋಗುತ್ತಾಳೆ.

ಸೀತೆಯನ್ನು ಹುಡುಕುತ್ತ ಬಂದ ರಾಮ ಲಕ್ಷ್ಮಣರಿಗೆ ವೀರ ಹನುಮ, ಸುಗ್ರೀವರ ಸ್ನೇಹವಾಗುತ್ತದೆ. ಸೀತೆಯ ಶೋಧ ನಡೆಯುತ್ತದೆ. ಮಾರುತಿ ಸಮುದ್ರವನ್ನು ದಾಟಿ ಲಂಕೆಗೆ ಬಂದು ಸೀತೆಯನ್ನು ಕಂಡು ಮುದ್ರೆಯುಂಗುರವನ್ನೊಪ್ಪಿಸಿ ಚೂಡಾಮಣಿಯೊಂದಿಗೆ ರಾಮನಲ್ಲಿಗೆ ಹಿಂದಿರುಗುತ್ತಾನೆ.

ಲಂಕೆಯಲ್ಲಿ ಸೀತೆ ಅನುಭವಿಸಿದ ಕಷ್ಟನೋವುಗಳೆಷ್ಟು, ಹರಿಸಿದ ಕಣ್ಣೀರೆಷ್ಟು, ಅವಳ ದೇಹದ ರಕ್ತದ ಕಣ ಕಣವೂ ರಾಮ ರಾಮ ಎಂದು ನುಡಿಯುತ್ತಿತ್ತು. ಕಾಯ, ವಾಕ್, ಮನಸ್ಸು ಮೂರೂ ರಾಮಧ್ಯಾನ ಮಾಡುತ್ತಿದ್ದವು.

ಸೀತೆಯನ್ನು ಒಪ್ಪಿಸಿಕೊಳ್ಳಲು, ತನ್ನವಳನ್ನಾಗಿ ಮಾಡಿಕೊಳ್ಳಲು ರಾವಣ ನಡೆಸಿದ ಪ್ರಯತ್ನ ಅಲ್ಪವಲ್ಲ. ತ್ರಿಕರಣ ಪೂರ್ವಕವಾಗಿ ಪತಿಯೇ ಪರದೈವವೆಂದು ನಂಬಿದ್ದ ಸೀತಾದೇವಿ ರಾವಣನ ವೈಭವ ವಿಲಾಸಗಳಿಗೆ ಮಾರು ಹೋಗಲಿಲ್ಲ. ಅವನ ಭೀಕರ ಸ್ವರೂಪಕ್ಕೆ, ದರ್ಪಕ್ಕೆ ಮಣಿಯಲಿಲ್ಲ.

ವಾನರ ಸೇನೆಯೊಂದಿಗೆ ಸಮುದ್ರಕ್ಕೆ ಸೇತುವೆಕಟ್ಟಿ ರಾಮಚಂದ್ರ, ಲಕ್ಷ್ಮಣ, ಸುಗ್ರೀವ, ಹನುಮಂತ, ಜಾಂಬವ ಮೊದಲಾದ ವೀರರೊಂದಿಗೆ ಲಂಕೆಗೆ ಬರುತ್ತಾನೆ. ಘೋರ ಯುದ್ಧದಲ್ಲಿ ರಾವಣನಾದಿಯಾಗಿ ಸಮಸ್ತ ರಾಕ್ಷಸ ಪರಿವಾರ ನಾಶವಾಗುತ್ತದೆ.

ಸೀತಾದೇವಿಯ ಕನಸು ನನಸಾಗುತ್ತದೆ. ಶ್ರೀರಾಮನಿಗಾಗಿ ಕಾತರಿಸುತ್ತಿದ್ದ ಭೂಮಿಜೆ ಪತಿಯನ್ನು ಕಾಣಲು ಕಾತುರದಿಂದ ಬರುತ್ತಾಳೆ. ಶ್ರೀರಾಮ ಜಾನಕಿ ಪರಿಶುದ್ಧಳು ಎಂದು ನಿರೂಪಿಸ ಬಯಸುತ್ತಾನೆ. ಸಹಸ್ರಾರು ಜನರ ಸಮಕ್ಷಮದಲ್ಲಿ ರಾಮ ಪ್ರಿಯೆ ಅಗ್ನಿ ಪ್ರವೇಶ ಮಾಡುತ್ತಾಳೆ. ಸಾಕ್ಷಾತ್ ಅಗ್ನಿಯೇ ಸೀತಾದೇವಿಯನ್ನು ಕರೆತಂದು 'ಸೀತೆ ಪರಿಶುದ್ಧಳು, ಪತಿವ್ರತೆ, ಸ್ವೀಕರಿಸು' ಎಂದು ರಾಮನಿಗೆ ತಿಳಿಸುತ್ತಾನೆ. ರಾಮ ಆನಂದದಿಂದ ಜಾನಕಿಯನ್ನು ಬರಮಾಡಿಕೊಳ್ಳುತ್ತಾನೆ.

ಅಯೋಧ್ಯೆಯಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕ ನಡೆಯುತ್ತದೆ. ಜಾನಕಿ ಪತಿಯೊಂದಿಗೆ ಸಾಮ್ರಾಜ್ಞಿಯಾಗಿ ಸಿಂಹಾಸನವನ್ನೇರುತ್ತಾಳೆ. ಸೀತಾದೇವಿಯನ್ನು ಬೆಂಬತ್ತಿ ಬಂದ ವಿಧಿಗಿನ್ನು ತೃಪ್ತಿ ದೊರೆಯದಾಯಿತು.

ರಾಜ ಪ್ರಜೆಗಳ ಪ್ರತಿನಿಧಿ, ಪ್ರಜಾಭಿಪ್ರಾಯದ ರಾಜನಿಗೆ ಆಜ್ಞೆ ಎಂದು ಅರಿತಿದ್ದ ರಾಮಚಂದ್ರ ಗೂಢಚಾರನೊಬ್ಬ ತಂದ ರುಹಿದ ರಜಕನ ಮಾತನ್ನು ಚಿಂತಿಸಿ ಕೊನೆಗೆ ಜಾನಕಿಯನ್ನು ತ್ಯಜಿಸುತ್ತಾನೆ. 'ನಿನಗೆ ತೋಚಿದಾಗ ಬಂದರೆ ನಿನ್ನನ್ನು ಸೇರಿಸಿಕೊಳ್ಳಲು ನಾನು ರಾಮನಲ್ಲ' ಎಂದು ರಜಗ ಹೇಳಿದ ಮಾತು ರಾಮನ ಗೃಹಸ್ಥಾಶ್ರಮ ಜೀವನವನ್ನೇ ಏರುಪೇರು ಮಾಡುತ್ತದೆ.

ಲಕ್ಷ್ಮಣ ಗರ್ಭಿಣಿಯಾದ ಅತ್ತಿಗೆಯನ್ನು ಅರಣ್ಯಕ್ಕೆ ಕರೆತಂದು ಬಿಡುತ್ತಾನೆ. ನಿಜ ಸಂಗತಿ ಜಾನಕಿಗೆ ತಿಳಿಯುತ್ತದೆ. ವಿಧಿಯ ಬರಹವನ್ನು ನೆನೆದು ರೋಧಿಸುತ್ತಾಳೆ. ಆ ವೇಳೆಯಲ್ಲಿಯೂ ಅವಳ ಬಾಯಿಯಿಂದ ಒಂದು ಕೆಟ್ಟ ನುಡಿಯು ಬರುವುದಿಲ್ಲ. 'ಹೆಣ್ಣು ಜನ್ಮ'ವನ್ನೇ ನೆನೆದು ದುಃಖಿಸುತ್ತಾಳೆ.

ಅಯೋಧ್ಯಾಪತಿ ರಾಜಾರಾಮನಿಂದ ತ್ಯಜಿಸಲ್ಪಟ್ಟ ಅಯೋಧ್ಯೆಯ ಸಾಮ್ರಾಜ್ಞಿ ಸೀತಾದೇವಿ ಅರಣ್ಯದಲ್ಲಿ ವಾಲ್ಮೀಕಿಗಳ ಆಶ್ರಮದಲ್ಲಿ ಆಶ್ರಯ ಪಡೆಯುತ್ತಾಳೆ. ಆದಿಕವಿ ತನ್ನ ಕಾವ್ಯದ ಕಥಾನಾಯಿಕೆಯನ್ನು ತನ್ನ ಆಶ್ರಮದಲ್ಲಿಟ್ಟುಕೊಂಡು ದತ್ತ ಮಗಳಂತೆ ಸಲಹುತ್ತಾರೆ.

ನವ ಮಾಸ ತುಂಬಿದ ನಂತರ ಸೀತಾದೇವಿಯ ಉದರದಲ್ಲಿ ಕುಶ-ಲವರೆಂಬ ಅವಳಿ ಗಂಡು ಮಕ್ಕಳು ಹುಟ್ಟುತ್ತಾರೆ. ಮುನಿ ವಾಲ್ಮೀಕಿಗಳ ಅನುಕಂಪದ ನುಡಿ, ವಾತ್ಸಲ್ಯ ಸೀತಾದೇವಿಯ ದುಃಖವನ್ನು ಮರೆಸುತ್ತವೆ.

ಜಾನಕಿ ಪರದೇಶಿಯಂತೆ ಜೀವಿಸಿರುತ್ತಾಳೆ. ಕುಶ-ಲವರು ಬೆಳೆಯುತ್ತಾರೆ. ಜಾನಕಿಯ ಹೃದಯ ಪತಿಯನ್ನು ಚಿಂತಿಸುತ್ತಿರುತ್ತದೆ. ಪತಿಯ ಏಳಿಗೆ-ಸುಖವನ್ನು ಹಾರೈಸುತ್ತಿರುತ್ತದೆ. ನಿಜವಾದ ಹೆಸರನ್ನು ಮರೆಮಾಚಿ ಅಜ್ಞಾತವಾಸ ನಡೆಸುತ್ತಿರುತ್ತಾಳೆ ಜಾನಕಿ.

ಕಷ್ಟಗಳ ಕತ್ತಲೆ ಕಳೆದು ಆನಂ… ಅರುಣೋದಯವಾಗುತ್ತದೆ. ವೈ… ಯ ಬಾಳ ಭೂಮಿಯಲ್ಲಿ, ವಿಧಿಯ… ರಂಗದಾಟದಲ್ಲಿ ತಾರತಮ್ಯವುಂಟೆ? …ಲ್ಮೀಕಿ ಮಹರ್ಷಿಗಳ ಆಶ್ರಮದಲ್ಲಿ… ಶ್ರೀ ರಾಮಚಂದ್ರ, ಸೀತಾದೇವಿ ಇವ… ಸಮಾಗಮವಾಗುತ್ತದೆ. ತನ್ನ ಮಕ್ಕ… ಕಂಡು ಶ್ರೀ ರಾಮನ ಹೃದಯ ಹಿ… ಗುತ್ತದೆ. ಪಿತನ ಪ್ರೀತಿಯ ಅಪ್ಪುಗೆ… ಕುಶ-ಲವರು ಲೋಕವೊಂದನ್ನು ಕ… ತ್ತಾರೆ.

ದುಃಖ, ಕಷ್ಟ, ನೋವು, ನಿಂದನೆ… ವುಗಳಿಂದ ನೊಂದು ಜರ್ಝರಿತವಾ… ಸೀತಾದೇವಿಯು ಆತ್ಮ ಲೋಕದ ಬಿ… ಡೆಯನ್ನು ಬಯಸುತ್ತಿರುತ್ತದೆ. ಕುಶ… ವರನ್ನು ಪತಿಗೊಪ್ಪಿಸಿ, "ತಾನು ನಿರ… ಧಿ, ಪವಿತ್ರಳು" ಎಂದು ಸಾರಿ ಎಲ್ಲರ… ಖವನ್ನು ಹಾರೈಸಿ ಹೆತ್ತಮ್ಮನನ್ನು … ಯುತ್ತಾಳೆ. ವಸುಂಧರೆ ಬಾಯ್ತೆ… ಮುದ್ದುಗಳನ್ನು ತನ್ನ ಮಡಿಲಲ್ಲಿ… ಕೊಂಡು ಮರೆಯಾಗುವಂತಾಗುತ್ತದೆ.

ಸೀತೆಯ ಅವತಾರ ಅಂತ್ಯವಾಗುತ್ತ… ಎಲ್ಲರ ಕಣ್ಣಲ್ಲೂ ಕರುಣೆ ಮಿಡಿಯುತ್ತ…

ಸೀತೆಯ ಸ್ವಸ್ಥ ಪಾತ್ರ ಹಿಮಾಲ… ದಷ್ಟು ಉನ್ನತ, ಗಂಗೆಯಷ್ಟು ಪವಿ… ಸೂರ್ಯ ಚಂದ್ರರಷ್ಟು ಶಾಶ್ವತ. ಜ… ಕಷ್ಟಗಳ ಕೋಟಲೆಯಲ್ಲೇ ಬಾಳ ಕ… ರಿನ ಕಾಲುವೆಯನ್ನೇ ಹರಿಸಬೇಕಾಯ…

ರಾಜಾ ಜನಕನ ಮುದ್ದಿನ ಕುವ… ವೀರಾಧಿವೀರ ದಶರಥ ಚಕ್ರವರ್ತಿಯ … ಯ ಸೊಸೆ, ಪುರುಷೋತ್ತಮ ರಾ… ಚಂದ್ರನ ಧರ್ಮ ಪತ್ನಿ, ವೀರ ಸೌಮಿ… ಯ ಅತ್ತಿಗೆ, ಬೆಳಕಿನ ಕಿಡಿಯಂತಹ … ಶ-ಲವರ ತಾಯಿ; ಆದರೆ ಅವಳನ್ನು … ಡುವ ದುರ್ವಿಧಿಗೆ ಕರುಣೆ ಇರಲಿಲ್ಲ.

ಸಮಸ್ತರ ಹಿತ ಬಯಸಿದ ಜಾನಕಿ… ಣ್ಣೀರು ಕುಡಿಯ ಬೇಕಾಯ್ತು. ಆ… ತಾಳ್ಮೆಗೆ ಮಿತಿ ಇದೆಯೆ? ಎಣಿಕೆಗ… ಕಕ್ಕೆ ನಿಲುಕದಷ್ಟು. ಎಷ್ಟಾದರೂ ಸ… ನೆಯ ಪ್ರತೀಕವಾದ ವಸುಂಧರೆಯ ಮ… ಳಲ್ಲವೆ! ವೈದೇಹಿಯದು ಮಾನವೋತ… ರೂಪ. ರಾವಣ ಮರುಳಾದದ್ದು ಅ… ಕಾರಣದಿಂದಲೇ. ಪತಿ ಶ್ರೀರಾಮಚಂ… ನೇ ಗತಿ-ಮತಿ ಎಂದು ತಿಳಿದು ತ್ರಿಕರ… ಪೂರ್ವಕವಾಗಿ ನಂಬಿ ಬಾಳಿದಳು, ಅ… ಳ ಪಾತಿವ್ರತ್ಯದ ಶಕ್ತಿ ಅಗಾಧ, ಅ…

ಸೀತಾ ದೇವಿಗೆ ಸಮಾನವಾದ … ತ್ತೊಂದು ಪಾತ್ರ ನಮ್ಮ ಪುರಾಣಾದಿ… ಲ್ಲಾಗಲಿ ಇತಿಹಾಸದಲ್ಲಾಗಲಿ ದೊರೆ… ಲಾರದು. ನಿಂತವನು ತಲೆಬಾಗಿ ನಮಿ… ಬೇಕು ಆ ಮಟ್ಟದ ಮಹೋನ್ನತ ವ್ಯ… ತ್ವ ಅವಳದು. ಅಂದಿನ ಭಾರತದ ಆದ… ಮಹಿಳೆಯ ಸಕಲ ಸದ್ಗುಣ ಸಂಸ್ಕೃ… ಳು ಸೀತಾ ದೇವಿಯಲ್ಲಿ ಏಕೀಭವಿಸಿ ಮ… ಡಿವೆ ಎಂದು ಧಾರಾಳವಾಗಿ ಹೇಳಬ… ದು. ವೈದೇಹಿ ಕಥೆ ಕಂಬನಿಯನ್ನು ಮಿ… ಸುತ್ತದೆ. ಹೃದಯವನ್ನು ಮಿಡಿಸುತ್ತದೆ.

ಆದಿ ಕವಿ ವಾಲ್ಮೀಕಿ ಸೃಷ್ಟಿಸಿದ ಸೀತಾದೇವಿಯ ಅಂತರಂಗವೂ ಸುಂದರ. ಬ… ಹ್ಯ ರೂಪವೂ ಸುಂದರ. ಆ ಸೌಂದರ್ಯ… ಕ್ಕೆ ಚ್ಯುತಿಯಿಲ್ಲ. ಈ ಸೌಂದರ್ಯದ ಪ್ರ… ಬಿಂಬವೇ ಭಾರತದ ಸಂಸ್ಕೃತಿ. ಇದು … ನಾದಿ—ಅನಂತ.

---

**ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ**

O. S. No. 120/1965.

ಚಂದು ನಾಯ್ಕ —ವಾದಿ

ಮತ್ತು

ಮುದ್ದು ನಾಯ್ಕ ಸಹಾ —ಪ್ರತಿವಾದಿರು.

ಇವರೊಳಗೆ

ಸದ್ರಿ ದಾವೆಯು 1ನೆ ಪ್ರತಿವಾದಿ ಮುದ್ದು ನಾಯ್ಕ—ಮೂದು ನಾಯ್ಕರ ಮಗ, ಕಾರ್ಕಳ ತಾಲ್ಲೂಕು ಹಿರಿಗಾನ ಗ್ರಾಮದ ತೋಟ ಹೊಸ ಮನೆಯಲ್ಲಿರುವವರಿಗೆ ತಿಳಿಸುವದೇನೆಂದರೆ—

ವಾದಿಯು ನಿಂತು ಮೇಲೆ ಮಾಡಿದ ಮೇಲಿನ ದಾವೆ ನಿಮ್ಮ ಹಾಜರಿ ಬಗ್ಗೆ ತಾರೀಕು 28—1—1966ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉದಹರಿಸ ತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಹಿವಾಯ್ಯ ಮಾಡಿ ಸದ್ರಿ ದಾವಾ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court.

**N. M. Adyanthaya**

Advocate for Plaintiff.

Karkala, 18—12—65.

---

# Announcement

**On January 26th, 1966**, our beloved Republic is celebrating the greatest event in Modern History, namely, the founding of our Republic, the biggest democracy in the world.. Ever since then, our country is marching ahead as the foremost torchbearer of the rich, enviable traditions of true democracy inspite of the troubled waters we are sailing through.

On this occasion your popular Kannada Weekly, NAVAYUGA, that has been a useful vehicle for the propogation of scientific, cultural and political thought of the times, means to bring forth its "**Republic Day Special**" with rich food for thought from celebrated writers and critics. **As such, it can be quite a useful medium to advertise your fare and to speak of your achievements and get the wide publicity you deserve.**

We are sure, you will not miss this opportunity of publishing your fare and promoting your own interests, thereby encouraging us as well, in making this venture a success.

Please send your advt. matter along with the blocks, if any, on or before 10-1-1966 and kindly cooperate.

ADVERTISEMENT RATES

| | | | |
|---|---|---|---|
| Full Page | ... Rs. 200/- | Back Cover Page | ... Rs. 500/- |
| Half Page | ... Rs. 100/- | Inside 1st Cover Page | ... Rs. 400/- |
| Quarter Page | ... Rs. 50/- | Inside 2nd Cover Page | ... Rs. 300/- |

MECHANICAL DATA

Paper size ... 15" × 10" Size of type page ... 13" × 8"

(37·5 Cm. × 25 Cm.) Half Crown (32·5 Cm. × 20 Cm.)

Date of Publication: 26—1—1966.

Kindly send the advt. matter to

The Advt. Manager,
Navayuga, P. B. No. 22, Udipi, S. K.

# ಭಾರತ ಸೋವಿಯತ್ ಮೈತ್ರಿ

(ನಾಲ್ಕನೇ ಪುಟದಿಂದ)

...ನಾಡಿಗರೆ ಸಾಕು; ಶಾಂತಿಯ ವಿಷಯದ ...ಸೋವಿಯತ್ ಜನತೆಗೆ ಇರುವ ಗಾಢ ...ಮನೋಭಾವವು ವ್ಯಕ್ತಪಡುತ್ತದೆ.

ಸೋವಿಯತ್ ನಾಡಿಗೆ ಯಾವಾಗಲಾ...ಗೂ ಭೇಟಿ ಕೊಡುವ ಯಾವ ವ್ಯಕ್ತಿಗಾ...ಗೂ ಇದೇ ಅನುಭವ ಉಂಟಾಗುತ್ತದೆ ...ಂದು ನಂಬುತ್ತೇನೆ. ಫ್ಯಾಸಿಜಮ್ಮಿನ ...ಲೆ ವಿಜಯ ಸಾಧನೆಯ ೨೦ನೆಯ ...ರ್ಷಿಕೋತ್ಸವವನ್ನು ಸೋವಿಯತ್ ...ಜ ಆಚರಿಸುತ್ತಿದ್ದಾಗಲೇ ನಾವು ಭೇ... ಕೊಟ್ಟಿದ್ದೂ ಪ್ರಾಯಶಃ ನಮ್ಮ ಸು...ಯೋಗವೆನ್ನಬೇಕು. ಈ ಸಂತಸದ ಸಮ...ದಲ್ಲಿ, ಇನ್ನೊಂದು ಯುದ್ಧವನ್ನು ಹೇ...ದರೂ ತಪ್ಪಿಸಬೇಕೆಂಬ ಭಾವನೆಯು ...ಲ್ಲೂ ಎದ್ದು ಕಾಣುತ್ತಿತ್ತು. ಎಲ್ಲ...ತಲೂ ಹೆಚ್ಚಾಗಿ, ಸೋವಿಯತ್ ನಾ... ಶಾಂತಿ ಪ್ರಯತ್ನವು ಬಲಹೀನತೆಯ ...ಣಾಮವಾಗಲೀ ಸಂಕೇತ ವಾಗಲೀ ಅ...ಂಬುದನ್ನೂ ಅದು ನಿಸ್ಸಂದೇಹವಾದ, ...ವಿಗೆ ಎಡೆಗೊಡದ ಸಾಮರ್ಥ್ಯ...ತವಾಗಿದೆ. ಯೆಂಬುದನ್ನು, ಮಾ...ದಲ್ಲಿ ನಡೆದ ವಿಜಯ ಸೇನಾ ವಿ... ಪ್ರದರ್ಶನವು ಮಿತ್ರರಿಗೂ ಶತ್ರು...ಗಳಿಗೂ ತೋರಿಸಿಕೊಟ್ಟಿತು.

—ಇಂದರ್ ಮಲ್ಹೋತ್ರ,
ಹೊಸದಿಲ್ಲಿಯ 'ಸ್ಟೇಟ್ಸ್‌ಮನ್' ಪತ್ರಿಕೆಯ ಸಹಸಂಪಾದಕರು.

o o o

## ಪ್ರೀತಿ—ಗೌರವ

...ರತವು ರಾಜಕೀಯವಾಗಿ ಅಲಿಪ್ತ...ಯೂ, ಆರ್ಥಿಕವಾಗಿ ಸ್ವತಂತ್ರವಾಗಿ...ಉಳಿದಿದ್ದರೆ, ತನ್ನ ನೆರೆನಾಡ ಗ...ಡನೆ, ಇತರ ದೇಶಗಳೊಡನೆ ಭಾರತ ಸೋವಿಯತ್ ದೇಶದ ಸಂಬಂಧಗಳು ...ಗಿದ್ದರೂ ಕೂಡ, ಸೋವಿಯತ್ ಒ...ಟದ ಬೆಂಬಲ, ಸಹಾನುಭೂತಿ, ಸಹ...ಗಳನ್ನು ಭಾರತ ಪಡೆಯುವ ಭರವ...ಯೆಂದು ಶ್ರೀ ಶಾಸ್ತ್ರಿಯವರ ಭೇ... ತರುವಾಯ ಯಾರಿಗಾದರೂ ಎನ್ನಿ...ತು. ಭಾರತವು ಶಾಂತಿ, ಸಹ-ಅಸ್ತಿತ್ವ ನೀತಿಗೆ ಅಂಟಿಕೊಂಡಿರುವುದೆಂದು ಸೋವಿಯತ್ ಜನತೆಗೆ ವಿಶ್ವಾಸವುಂಟಾಗಿದೆ. ಭಾರತ ದೇಶವೂ ತನ್ನ ಪಾಲಿಗೆ, ಸೋವಿಯತ್ ನಾಡಿನ ಅಂತಃಕರಣಪೂರ್ವಕ ಪಾಠ ಬೆಂಬಲ, ಸಹಾನುಭೂತಿಗಳಲ್ಲಿ ನಂಬಿಕೆ ಇಟ್ಟಿದೆ.

### ದೊಡ್ಡ ರೀತಿಯ ಸಹಯೋಗ

ಶ್ರೀ ಲಾಲ್‌ಬಹಾದುರ್ ಶಾಸ್ತ್ರಿಯವರು ಸೋವಿಯತ್ ನಾಡಿಗೆ ಕೊಟ್ಟ ಭೇಟಿಯ ಸಫಲತೆಯು ಗತ ದಶಕದಲ್ಲಿ ಆರ್ಥಿಕ ಕ್ಷೇತ್ರ ಸಾಧಿಸಿದ ಭಾರತ—ಸೋವಿಯತ್ ಸಹಕಾರವನ್ನು ತೋರಿಸುತ್ತದೆ. ಇಂದು ಭಾರತವು ತನ್ನ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ರೂಪುಗೊಳಿಸುತ್ತಿರುವಾಗ, ಅನೇಕ ಯೋಜನೆಗಳಲ್ಲಿ ಸೋವಿಯತ್ ದೇಶವು ದೊಡ್ಡ ರೀತಿಯ ಸಹಯೋಗಕ್ಕೆ ಸಿದ್ಧವಾಗಿದೆಯೆಂಬುದು ತೃಪ್ತಿಕರವಾದ ವಿಷಯ. ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಅಶೋಕ ಮೆಹತಾರವರು ಹೇಳುವ ಪ್ರಕಾರ, ಭಾರತ ಸರಕಾರವು ಮಂಡಿಸಿದ ಬಹ್ವಂಶದ ಪ್ರಸ್ತಾಪಗಳನ್ನು ಸೋವಿಯತ ಸರಕಾರವು ಒಪ್ಪಿಕೊಂಡಿದೆ.

### ನಿಜವಾದ ಸ್ನೇಹ ಮನೋಭಾವ

ಭಾರತೀಯರ ಬಗ್ಗೆ ಸೋವಿಯತ್ ಜನತೆ ತೋರುವ ಗೌರವಾದರಗಳನ್ನು ಕಂಡು ನಾವು ಪ್ರಭಾವಿತರಾದೆವು. ಪಂಡಿತ ನೆಹರೂರವರ ವಿಷಯದಲ್ಲಿಯೂ ಭಾರತದಲ್ಲಿನಂತೆಯೇ ಸೋವಿಯತ್ ಜನತೆ ತೋರುವ ಆದರ ಗೌರವಗಳು ನಮ್ಮಲ್ಲಿ ಅನುಕಂಪವನ್ನು ಮೂಡಿಸಿದುವು. ನೆಹರೂರವರ ನಿಧನವು ಪ್ರತಿ ಸೋವಿಯತ್ ನಾಗರಿಕರಿಗೂ ನಷ್ಟವೆನಿಸಿದೆ.

—ಮಾಧವನ್ ಕುಟ್ಟಿ,
ಕೇರಳದ 'ಮಾತೃಭೂಮಿ' ಪತ್ರಿಕೆಯ ಸುದ್ದಿಗಾರರು.

o o o

## ರಶಿಯನ್ ಮನೋಭಾವ ಪರಿಶೀಲನೆ

ಸೋವಿಯತ್ ದೇಶವನ್ನು ಕಲಸಿದೊಡನೆಯೇ ವಿಮಾನ ನಿಲ್ದಾಣದಲ್ಲಿಯೇ, ಸ್ನೇಹ ಭಾವನೆಯು ಯಾವ ವ್ಯಕ್ತಿಗಾದರೂ ಎದ್ದು ಕಾಣುತ್ತದೆ.

ನಾನು ಪತ್ರಿಕೋದ್ಯಮಿಯಾದ ಕಾರಣ ತುಂಬ ಹೊತ್ತು ನಮ್ಮ ವಾರ್ತಾ ಸಂಸ್ಥೆಗೆ ಸುದ್ದಿ ಸಿದ್ಧಗೊಳಿಸಿ ಕಳಿಸುವ ಕಾರ್ಯದಲ್ಲಿ ತೊಡಗಬೇಕಾಗುತ್ತಿತ್ತು. ಆದರೂ ನಾನು ಅನೇಕ ಜನರೊಡನೆಯೂ, ಪ್ರಮುಖ ಸೋವಿಯತ್ ಪತ್ರಕರ್ತರೊಡನೆಯೂ ಮಾತನಾಡಿದ್ದೇನೆ. ರಶಿಯನ್ನರ ಮನೋಭಾವವನ್ನು ಪರಿಶೀಲಿಸಿದ್ದೇನೆ.

### ಅದ್ವಿತೀಯ ಮೈತ್ರೀ ಭಾವನೆ.

ಜನತೆಯ ಮುಖಗಳಲ್ಲಿ ಸ್ನೇಹ ಭಾವನೆ ಸ್ಪಷ್ಟವಾಗಿ ಕಂಡುಬರುತ್ತದೆ. ಮಂದಹಾಸ ಸೂಸುತ್ತ, ಕೈಗಳನ್ನಲ್ಲಾಡಿಸುತ್ತ, ಸ್ವಾಗತ ಧ್ವನಿಗಳನ್ನು ಉಚ್ಚರಿಸುತ್ತ ಪ್ರತಿ ರಶಿಯನ್ ವ್ಯಕ್ತಿಯೂ ಭಾರತೀಯರ ಬಗ್ಗೆ ಗೌರವಾದರಗಳನ್ನು ತೋರಿಸಿದನು. ಸೋವಿಯತ್ ದೇಶವು ನೀಡುವ ಆರ್ಥಿಕ ಅಥವಾ ಬೇರಾವ ಸಹಾಯಕ್ಕಿಂತಲೂ ನನಗೆ ಇದು ಹೆಚ್ಚು ಮುಖ್ಯವಾದುದು.

ನಮ್ಮ ಪ್ರಧಾನ ಮಂತ್ರಿಯವರು ಹೇಳಿದಂತೆ, ಈ ಸ್ನೇಹ ಭಾವನೆಯು ಬೇರಾವ ದೇಶದೊಡನೆಯೂ ನಿಕಟತರ ಸಂಬಂಧಗಳಿಗೆ ಬಾಧಕವಾಗಿಲ್ಲ. ಈ ಬಗ್ಗೆ ಭಾರತದ ನಿಲುವನ್ನು ಸೋವಿಯತ್ ಧುರೀಣರು ಮೆಚ್ಚುವಂತೆಯೇ ನಾನು ಕಂಡ ಸೋವಿಯತ್ ಪತ್ರಕರ್ತರೂ ಭಾವಿಸುತ್ತಾರೆ.

ಅಂತೆಯೇ ಇತರ ದೇಶಗಳೊಡನೆ ರಶಿಯಕ್ಕಿರುವ ಸ್ನೇಹವು ಭಾರತದೊಡನೆಯ ಆವಂಕ್ಕೆ ಬಾಧಕವಾಗಿಲ್ಲ. ಎರಡು ದೇಶಗಳಲ್ಲೂ ಪರಸ್ಪರ ವಿಶ್ವಾಸವಿರಬೇಕು. ಬೇರೇನೂ ತೊಂದರೆಯಿರದು. ಈ ಸಮಾನತೆಯನ್ನು ಸಾಧಿಸಲಾಗಿದೆಯೆಂಬುದೇ ನನ್ನ ಅಭಿಪ್ರಾಯ.

—ಕುಲ್ದೀಪ್ ನಾಯರ್,
'ಯುನೈಟೆಡ್ ನ್ಯೂಸ್ ಆಫ್ ಇಂಡಿಯಾ' ವಾರ್ತಾ ಸಂಸ್ಥೆಯ ವಿಶೇಷ ಸುದ್ದಿಗಾರರು.

## ಅಗಲಿದ ಧುರೀಣನಿಗೆ ಜನತೆಯ ಕಂಬನಿ

ಕಳೆದ ತಾ. 20ರಂದು, ಮಂಗಳೂರಿನ ಪುರಭವನದಲ್ಲಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ ಜರಗಿತು. ಈ ಸಭೆಯಲ್ಲಿ ಶ್ರೀ ಮಲ್ಯರ ಸ್ಮರಣೆಯನ್ನು ಚಿರಕಾಲ ಬಾಳುವಂತೆ ಮಾಡಲು ಸ್ಮಾರಕ ಸಮಿತಿಯೊಂದನ್ನು ರಚಿಸುವ ನಿರ್ಧಾರ ಮಾಡಲಾಯಿತು ಮತ್ತು ಸಂತಾಪ ಸೂಚಕ ಗೊತ್ತುವಳಿಯೊಂದನ್ನು ಅಂಗೀಕರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀಗಳಾದ ಬಿ. ವಿ. ಬಾಳಿಗಾ ಮತ್ತು ಕೆ. ಕೆ. ಶೆಟ್ಟರು ಮಾತನಾಡುತ್ತಾ ಶ್ರೀ ಮಲ್ಯರ ಕಾರ್ಯಸಾಧನಾ ಸಾಮರ್ಥ್ಯ, ಅವರ ನಿಸ್ವಾರ್ಥ ಸೇವಾಗುಣ, ರಾಷ್ಟ್ರಕ್ಕಾಗಿಯೇ ತನ್ನ ಜೀವನ ಮುಡಿಪಾಗಿಟ್ಟ ತ್ಯಾಗ ಮೊದಲಾದುವುಗಳ ಕುರಿತು ವಿವೇಚಿಸಿದರು. ಶ್ರೀ ಮಲ್ಯರ ಕಳೇಬರದೊಂದಿಗೆ ಆಗಮಿಸಿದ ಶ್ರೀ ಎಲ್. ಸಿ. ಜೈನ್‌ರವರು ಮಾತಾಡುತ್ತಾ ಶ್ರೀ ಮಲ್ಯರು ಕೇವಲ ದ. ಕ. ಜಿಲ್ಲೆಯ ನಾಯಕರಲ್ಲ ಇಡೀ ದೇಶದ ನಾಯಕರೆಂದು ನುಡಿದರು. ಅಲ್ಲದೇ ನಗರದ ಪ್ರಮುಖರನೇಕರು ಈ ಸಂದರ್ಭದಲ್ಲಿ ತಮ್ಮ ಸಂತಾಪಗಳನ್ನು ಸೂಚಿಸಿದರು.

ಸಭಾಂತ್ಯದಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಸ್ಮಾರಕ ಸಮಿತಿಯೊಂದನ್ನು ನಿರ್ಮಿಸಲಾಯಿತು. ಕೊನೆಯಲ್ಲಿ ಶ್ರೀ ಕೆ. ವಿಶ್ವನಾಥ ಕಾಮತ್‌ರವರು ವಂದನಾರ್ಪಣೆಗೈದರು.

## ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ

ಮಂಡಳಿಯ ಪ್ರಕೃತದ ಪಾರುಪತ್ಯಗಾರರ ಹಾಗೂ ಪ್ರಧಾನ ಕಾರ್ಯದರ್ಶಿಯವರ ಅವಧಿಯು ತಾ. 31-12-65 ಕ್ಕೆ ಅಂತ್ಯವಾಗುವುದರಿಂದ, ಮಂಡಳಿಯ ಕ್ರಮ ನಿಬಂಧನೆಗನುಸಾರವಾಗಿ ವ್ಯವಸ್ಥಾಪಕ ಸಮಿತಿಯು ಮುಂದಿನ 5 ವರ್ಷಗಳಿಗೆ ನೇಮಿಸಿದ ಈ ಕೆಳಗಿನ ಪಾರುಪತ್ಯಗಾರರನ್ನು ಹಾಗೂ ಪ್ರಧಾನ ಕಾರ್ಯದರ್ಶಿಯವರನ್ನು ದಿನಾಂಕ 11-12-65 ರಂದು ಜರಗಿದ ಮಂಡಳಿಯ ಸದಸ್ಯರ ವಿಶೇಷ ಮಹಾಸಭೆಯು ದೃಢೀಕರಿಸಿರುವುದು:

ಪಾರುಪತ್ಯಗಾರರು—ಸರ್ವಶ್ರೀ ವೈಕುಂಠ ಶಿವ ಸಾಲ್ಯಾನ್, ತಣ್ಣೀರುಬಾವಿ ನಾರಾಯಣ ಬಿ. ಬಂಗೇರ, ಕಾಡಿಪಟ್ಣ ಶೇಷಪ್ಪ ಸಿ. ಪಡುಬಿದ್ರಿ, ಕಣ್ಣಂಗಾರು ಪೊನ್ನಯ್ಯ ಕೆ. ಪುತ್ರನ್ ಮತ್ತು ಮಟ್ಟು ಲೋಕು ಕೆ. ಸಾಲ್ಯಾನ್. ಪ್ರಧಾನ ಕಾರ್ಯದರ್ಶಿ ಶ್ರೀ ಬೆಂಗ್ರೆ ಬಾಂತಾರಾವ್.

ಈ ಮೇಲಿನ ಮಹನೀಯರು ತಾ. 1-1-1966ರಿಂದ 31-12-1970ರ ಮುಂದಿನ 5 ವರ್ಷಗಳ ಅವಧಿಗೆ ಪಾರುಪತ್ಯಗಾರರಾಗಿ ಮತ್ತು ಪ್ರಧಾನಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಲಿರುವರು.

## ಬಾರ್ಕೂರು ಸೇತುವೆಯ ಕಾರ್ಯ ಪ್ರಾರಂಭ

ಬಾರ್ಕೂರು, ತಾ. 16-12-65ನೇ ಮಧ್ಯಾಹ್ನ ಬಾರ್ಕೂರು ಸೇತುವೆಯ ಪ್ರಾರಂಭಿಕ ಗುದ್ದಲಿ ಪೂಜೆಯ ಸಮಾರಂಭವು ಬಾರ್ಕೂರಿನ ಗಿರಿಯ ಮುಂದಾಳು ಶ್ರೀ ಹೆಂಗವಳ್ಳಿ ರಾಮಣ್ಣ ಶೆಟ್ಟಿ ದಿವ್ಯ ಹಸ್ತದಿಂದ ನೆರವೇರಿತು. ನೂರಾರು ಜನ ರೈತರೂ, ಪಟ್ಟಾದಾರರೂ ಅತ್ಯ ಸಂತೋಷದಿಂದ ಸೇತುವೆ ಬಗ್ಗೆ ಬೇಕಾಗಿದ್ದ ತಮ್ಮ ಭೂಮಿಯನ್ನು ಒಂದೇ ದಿನದಲ್ಲಿ ಪೈರು ಸಮೇತ ಸರಕಾರದ ವಶಕ್ಕೆ ಒಪ್ಪಿಸಿದರು. ಜನತೆಯ ಪ್ರೋತ್ಸಾಹ ಹಾಗೂ ಸಹಕಾರ ಅಸಾಧಾರಣವಾಗಿತ್ತು. ಶರಾವತಿ ಪ್ರಾಜೆಕ್ಟಿನಲ್ಲಿ ಕಟ್ಟಾ ಕಂಟ್ರಾಕ್ಟುದಾರರಾದ ಭಾರತ ಎಂಡ್ ಕೋ, ಕಂಟ್ರಾಕ್ಟರರು ಸೇತುವೆಯ ಕಾರ್ಯ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್ ಶ್ರೀ ಕರಿಸಿದ್ದಪ್ಪನವರು ಸಂಕ್ಷಿಪ್ತ ವಿವರಣೆ ಮತ್ತು ಅನುಕೂಲತೆಯ ವಿಚಾರ ಮಾತನಾಡಿದರು. ತದನಂತರ ಎಂ. ಎಲ್. ಎ. ಗಳಾದ ಶ್ರೀ ಎಸ್. ಎಸ್. ಕೊಳ್ಕೇಬೈಲರು ಮಾತನಾಡುತ್ತ ನಮ್ಮ ಪಾರ್ಲಿಮೆಂಟು ಸದಸ್ಯರಾದ ಶ್ರೀ ಯು. ಎಸ್. ಮಲ್ಯರು ಚುನಾವಣಾ ಕಾಲದಲ್ಲಿ ಜನತೆಗಿತ್ತ ಆಶ್ವಾಸನೆಯನ್ನು ಸ್ಮರಿಸಿ ವಿಶೇಷ ಪ್ರಯತ್ನಪಟ್ಟು ಈ ಸೇತುವೆಯನ್ನು ಮಂಜೂರು ಮಾಡಿಸಿದರೆಂದೂ, ತನ್ನ ಚುನಾವಣಾ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಕಾರ್ಯಗಳಿಗಾಗಿ ವಿಶೇಷ ಆಸ್ಥೆಯಿಂದ ದುಡಿಯುತ್ತಿರುವುದಾಗಿಯೂ ಶ್ರೀ ಮಲ್ಯರ ವಿಶ್ವ ಪ್ರಯತ್ನವಲ್ಲದಿದ್ದರೆ ಈ ತುರ್ತು ಪರಿಸ್ಥಿತಿಯಲ್ಲಿ ಈ ಕಾರ್ಯ ಕೈಗೊಳ್ಳುವುದು ಸಾಧ್ಯವಾಗುತ್ತಿರಲಿಲ್ಲವೆಂದೂ, ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಬಾರ್ಕೂರಿಗೆ ಚಿತ್ತೈಸಿದಾಗ ಜನತೆಯ ಕಳಕಳಿಯ ವಿನಂತಿಯನ್ನು ಉದಾರತೆಯಿಂದ ಮಂಜೂರು ಮಾಡಿ ಅಪಾರ ಸೇವೆ ಸಲ್ಲಿಸಿರುವರೆಂದೂ, ಈ ಸೇತುವೆಯಿಂದ ಲಕ್ಷಾಂತರ ಜನರಿಗೆ ಹೆಚ್ಚಿನ ಉಪಯೋಗವಾಗಿ ಮಂಗಳೂರು ಉಡುಪಿ ಕಡೆಯಿಂದ ಭದ್ರಾವತಿ, ಶಿವಮೊಗ್ಗ, ಸಾಗರ, ಹುಬ್ಬಳ್ಳಿ ಮೊದಲಾದ ಸ್ಥಳಗಳಿಗೆ ಅತೀ ನೇರವಾದ ದಾರಿ ತೆರೆಯಲ್ಪಟ್ಟು, ಸಾಗಾಣಿಕೆಯ ವೆಚ್ಚ ಬಹಳ ತಗ್ಗುವುದೆಂದೂ, ಈ ಬಗ್ಗೆ ಜನರು ತೋರಿದ ಅಪೂರ್ವ ಶ್ರದ್ಧೆಯನ್ನು ಕೊಂಡಾಡಿ ತಮ್ಮ ಭೂಮಿಯನ್ನು ಸೇತುವೆ ಕಾರ್ಯಕ್ಕೆ ಕೂಡಲೇ ಬಿಟ್ಟು ಕೊಟ್ಟದ್ದಕ್ಕಾಗಿ ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಈ ಸೇತುವೆಯನ್ನು ಮಂಜೂರು ಮಾಡಿಸುವುದರಲ್ಲಿ ಹಾಗೂ ಭೂಮಿಯನ್ನು ಸರಕಾರಕ್ಕೆ ಆಯಾಯ ಜನರಿಂದ ಒಪ್ಪಿಸುವಲ್ಲಿ ಶ್ರೀ ಎಸ್. ಎಸ್. ಕೊಳ್ಕೇಬೈಲು, ಸರ್ವಶ್ರೀಗಳಾದ ಯಜ್ಞನಾರಾಯಣ ರಾವ್, ಪಂಚಾಯತು ಅಧ್ಯಕ್ಷ, ಉಪಾಧ್ಯಕ್ಷ ಕರ ಶೆಟ್ಟಿ, ಸಂದಾದಿ ಪಟೇಲ ಮೋನಪ್ಪ ಸೆಟ್ಟಿ, ಇರ್ಮಾಡಿ ಸದಾಶಿವ ಸೆಟ್ಟಿ ಮೊದಲಾದ ಸ್ಥಳೀಯ ಮುಂದಾಳುಗಳೂ, ಅಧಿಕಾರಿಗಳೂ ಅತೀ ಶ್ರದ್ಧೆಯಿಂದ ಕೆಲಸ ಮಾಡಿದ್ದರಿಂದ ಕೂಡಲೇ ಕಾರ್ಯ ಪ್ರಾರಂಭಿಸಲು ಸಾಧ್ಯವಾಯಿತು.

## ಉಡುಪಿ ನಗರ ಸಭೆಯ ಶ್ರದ್ಧಾಂಜಲಿ

ಉಡುಪಿ ನಗರ ಸಭೆಯ ವಿಶೇಷ ಸಭೆಯೊಂದು ಕಳೆದ ತಾ. 21ರಂದು ಶ್ರೀ ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಸೇರಿ ಜನರಲ್ ತಿಮ್ಮಯ್ಯ ಮತ್ತು ಶ್ರೀ ಯು. ಶ್ರೀನಿವಾಸ ಮಲ್ಯರ ಬಗ್ಗೆ ತನ್ನ ಶ್ರದ್ಧಾಂಜಲಿಯನ್ನರ್ಪಿಸಿತು. ಜ| ತಿಮ್ಮಯ್ಯನವರ ಕುರಿತು ಸಂತಾಪ ಸೂಚಕ ಗೊತ್ತುವಳಿಯನ್ನು ಶ್ರೀ ಆರ್. ಎನ್. ಪಾಂಡುರಂಗಯ್ಯನವರೂ, ಶ್ರೀ ಮಲ್ಯರ ಕುರಿತು ಗೊತ್ತುವಳಿಯನ್ನು ಶ್ರೀ ಅರ್ಸಿನ್ ಅಂದ್ರಾದಿಯವರೂ ಮಂಡಿಸಿದ್ದರು.


...ಡುಪಿ ಕರ್ನಾಟಕ ಸಂಘದ
...ಂದೊಂದು ರೂಪಾಯಿ ಬೆಲೆಯ
...ನೂರು ಪ್ರಕಟಣೆಗಳು.

...ಂದ್ರಲೋಕಕ್ಕೆ ಪ್ರಯಾಣ
...ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು
...ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
...ನ ತಗಲುವ ಹಲವಾರು ಸಾಮಾನ್ಯ ...ಗಗಳ ಹುಟ್ಟು, ಕಾರಣ ಮತ್ತು ನಿವಾರ...ಣೆಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
...ಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
...ಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
...ರತ ಪುಸ್ತಕ ಭಂಡಾರ, ಉಡುಪಿ

(ಮೂರನೇ ಪುಟದಿಂದ)

ನೆರೆಯ ಪಾಕಿಸ್ತಾನದೊಡನೆ ಇರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ, ಉತ್ತಮ ಸಂಬಂಧ ಕಲ್ಪಿಸಲು ಗ್ರಾಟಿರ ಪ್ರಥಮ ವಾರದಲ್ಲಿ ನಮ್ಮ ಪ್ರಧಾನಿ ಶಾಸ್ತ್ರಿ ಹಾಗೂ ಪಾಕ್ ಅಧ್ಯಕ್ಷ ಅಯೂಬರ ಭೆಟ್ಟಿ ರಷ್ಯದ ತಾಷ್ಕೆಂಟಿನಲ್ಲಿ ಜರಗಲಿದೆ. ಭೆಟ್ಟಿಯ ಪರಿಣಾಮ ಹೆಚ್ಚು ಆಶಾದಾಯಕವಾಗಿ ಕಾಣುತ್ತಲಿಲ್ಲ. ಇದಕ್ಕೆ ಕಾರಣ ಪಾಕಿಸ್ತಾನದ ಮನೋವೃತ್ತಿ. ಬಾಯಿಯಲ್ಲಿ ಶಾಂತಿಯ ಮಂತ್ರ ಜಪಿಸುತ್ತ ಪಾಕಿಸ್ತಾನ ಇನ್ನೂ ಗಡಿಯಲ್ಲಿ ಉದ್ರೇಕಕಾರೀ ಚಟುವಟಿಕೆಗಳನ್ನು ಮುಂದೊತ್ತಿಕೊಂಡು ಬರುತ್ತದೆ. ಅಯೂಬರು ಕಂಕುಳಲ್ಲಿ ದೊಣ್ಣೆ ಹಿಡಿದೇ ಶರಣಾರ್ಥಿಗಳಾಗಿ ತಾಷ್ಕೆಂಟಿಗೆ ಬರುವವರಿದ್ದಾರೆ. ಪಾಕಿಸ್ತಾನದ ಮೂಲ ಮನೋವೃತ್ತಿಯಲ್ಲಿ ಯಾವುದೇ ಬದಲಾವಣೆಯಾದಂತಿಲ್ಲ. ತಾಷ್ಕೆಂಟಿನ ಭೇಟಿಯ ದಿನ ನಿರ್ಧಾರವಾಗಿದ್ದರೂ, ವಿಶ್ವಸಂಸ್ಥೆಯ ಜನರಲ್ ಎಸೆಂಬ್ಲಿಯ ಅಧಿವೇಶನದಲ್ಲಿ ಭಾಷಣ ಮಾಡಿದ ಅಯೂಬರು, ಆ ಕುರಿತು ಚಕಾರ ಶಬ್ದವೆತ್ತದೆ ಉಳಿದ., ಭಾರತದ ಕುರಿತು ನಾರಷ್ಟು ಅಪಪ್ರಚಾರ ಗೈದು ನಾಲಗೆಯ ತೀಟ ತೀರಿಸಿಕೊಂಡರು! ತಾಷ್ಕೆಂಟಿನ ಮಾತುಕತೆಯ ಭವಿಷ್ಯ ಇದರಿಂದಲೇ ಮನವರಿಕೆಯಾದೀತು. ಆದರೂ ಭಾರತವು ತನ್ನ ಧ್ಯೇಯ ಧೋರಣೆಗಳ ಕುರಿತು ಅಚಲವಾಗಿ ಭೇಟಿಗೆ ಸಿದ್ಧವಾಗಿದೆ. ಇದು ಅದರ ಶಾಂತಿ ಪ್ರಿಯತೆಗೊಂದು ನಿದರ್ಶನ!

ಹೊಸ ವರುಷವು ಹೊಸ ನಿರ್ಧಾರಗಳನ್ನು ಮಾಡಿ ಕೈಗೂಡಿಸುವ ವರುಷ. ಭಾರತವು ಸ್ವಾವಲಂಬನದ ನಿರ್ಧಾರ ಮಾಡಿದೆ. ನಾವು ಈ ಹೊಸ ವರುಷದಲ್ಲಿ ಆಹಾರದ ಸ್ವಾವಲಂಬನದ ಪಣತೊಟ್ಟು ಅದಕ್ಕಾಗಿ ದುಡಿಯ ಬೇಕಾಗಿದೆ. ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡಬೇಕಾಗಿದೆ. ದೇಶದ ಬಡ ಜನತೆಯ ಏಳಿಗೆಗಾಗಿ ಕಾರ್ಯವೆಸಗ ಬೇಕಾಗಿದೆ. ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆ. ನಾವು ಸಾಧಿಸಿರುವುದು ಅತ್ಯಲ್ಪ ಸಾಧಿಸಬೇಕಾದುದು ಬಹಳ.

"ಇಂದಿನ ಪೀಳಿಗೆಯವರು ಶ್ರಮಪೂರ್ವಕವಾಗಿ ದುಡಿಯಲೇ ಬೇಕು" ಎಂದು ನಮ್ಮ ಮೆಚ್ಚಿನ ಪ್ರಧಾನಿ ದಿವಂಗತ ನೆಹರೂರವರು ಹೇಳಿದರು. ನಾವು ನಮಗಾಗಿ ಅಲ್ಲದಿದ್ದರೂ ಮುಂದಿನ ಪೀಳಿಗೆಯವರಿಗಾಗಿ ದುಡಿಯಬೇಕಾಗಿದೆ. ಈ ದುಡಿಮೆಯ ಫಲವನ್ನು ನಾವು ಉಣ್ಣದಿದ್ದರೂ, ಮುಂದಿನ ಪೀಳಿಗೆ ಉಂಡು, ಅವರು ಸುಖ ನೆಮ್ಮದಿಯಿಂದ ಬಾಳುವಂತಾಗಬೇಕು. ಅದಕ್ಕಾಗಿ ನಮ್ಮ ಸರ್ವತ್ಯಾಗಕ್ಕೂ ನಾವು ಸಿದ್ಧರಿರಬೇಕು.

ಬಹುಮುಖದ ಆಶೆ ಆಶೋತ್ತರಗಳನ್ನು ಹೊತ್ತು ನಾವು ಹೊಸ ವರುಷಕ್ಕೆ ಕಾಲಿಡೋಣ. ನಮ್ಮ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತಂದು ಕೃತಕೃತ್ಯರಾಗೋಣ!

## ವರ್ಧಂತ್ಯುತ್ಸವ

ದಾವಣಗೆರೆ, ಇಲ್ಲಿಯ ದೊಡ್ಡ ಬಾತಿ ಶ್ರೀ ಸಿದ್ಧಾಂತಾಶ್ರಮದ ಶ್ರೀ ಸ್ವಾಮಿ ಜಗಂಜ್ಯೋತೀ ಪರಮ ಹಂಸರ 48ನೇ ವರ್ಧಂತ್ಯುತ್ಸವವು ತಾ. 15ರಂದು, ಶ್ರೀ D.P.J.J. ತಾನಾವಾಲಾ ಬೊಂಬಾಯಿ ಅವರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರಗಿತು. ಪ್ರಮುಖ ಭಾಷಣಕಾರರಾಗಿದ್ದ ಶ್ರೀ ಕೆ. ಎಸ್. ಭಟ್, ಶಿರಾಡಿಪಾಲ್ ಅವರು ಅಧ್ಯಾತ್ಮ ತತ್ವದ ವಿಚಾರದ ಕುರಿತಾಗಿ ಭಾಷಣ ಮಾಡಿದರು. ಡಾ| ನಂಜಪ್ಪ, ಶ್ರೀ ದೇವೇಂದ್ರ ಇವರುಗಳ ಭಾಷಣವಾದ ಬಳಿಕ ಶ್ರೀ J.J. ಬಾಬು ಅವರು, ವಿಶ್ವ ಸಂಸ್ಥೆಯ ಕಾರ್ಯದರ್ಶಿ ಮಿ| ಉಧಾಂಟ್, ರಾಷ್ಟ್ರಪತಿಗಳೇ ಮೊದಲಾದ ಪ್ರಮುಖರಿಂದ ಬಂದಿದ್ದ ಶುಭ ಸಂದೇಶಗಳನ್ನು ಓದಿ ಹೇಳಿದರು. ಅಧ್ಯಕ್ಷರ ಭಾಷಣವಾದ ಬಳಿಕ, ಶ್ರೀ ನಾರಾಯಣ ತಾಮ್ಹನ್‌ಕರ್, ಮುಂಡಾಜೆ ಅವರಿಂದ ಉತ್ತರಾದಿ–ದಕ್ಷಿಣಾದಿ ಸಂಗೀತ ನಡೆಯಿತು. ವಿವಿಧ ವಾದ್ಯಗಳೊಡನೆ ದಾವಣಗೆರೆಯ ಶ್ರೀ ನಾರಾಯಣ ರಾವ್ ಮತ್ತು ಅವರ ಶಿಷ್ಯರಿಂದ ಉತ್ತರಾದಿ ಸಂಗೀತ ನಡೆದು ಧನ್ಯವಾದ ಸಮರ್ಪಣೆಯೊಂದಿಗೆ ಸಭಾ ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗೊಂಡಿತು.

## ವಾರ್ಷಿಕ ಮಹಾ ಸಭೆ

ಶಿರ್ವ ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾ ಸಭೆಯು 19-12-65ರಂದು ಡಾ| ಎರ್ಮ. ರಾಜಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಪರಿಶೀಲಿತ ಲೆಕ್ಕ ಪತ್ರಗಳ ಮತ್ತು ಅಂದಾಜು ಆಯವ್ಯಯಗಳ ಮಂಜೂರಾತಿ, ಉಪನಿಬಂಧನೆಗಳ ತಿದ್ದುಪಡಿಗಳಾದ ನಂತರ ಈ ಕೆಳಗಿನ ಆಡಳಿತ ಮಂಡಳಿಯು ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. ಡಾ| ಎಮ್. ರಾಜಶೇಖರ ಹೆಗ್ಡೆ (ಅಧ್ಯಕ್ಷ), ಕೆ. ವಾಸುದೇವ ಶೆಟ್ಟಿ (ಕಾರ್ಯದರ್ಶಿ), ಎಸ್. ಗೋಪಾಲ ಹೆಗ್ಡೆ, ಕೆ. ಕುಮಾರ ಹೆಗ್ಡೆ, ಎಸ್. ಎರ್ಮ. ಎಲ್ಲಪ್ಪ ಶೆಟ್ಟಿ, ಕೆ. ಎಲ್. ಶರ್ಮ, ಪಿ. ದೇವಣ್ಣ ನಾಯ್ಕ್, ಶ್ಯಾಮ ನಾಯ್ಕ್, ಮತ್ತು ಎಸ್ ಮಹಮ್ಮದ್ ಬ್ಯಾರಿ (ಡೈರೆಕ್ಟರರು).

ಸಹಕಾರಿ ಸಂಘಗಳ ಸೂಪರ್‌ವೈಸರ್ ರಾದ ವಿ. ವಿಶ್ವನಾಥ ಉಡುಪರೂ, ಗ್ರಾಮ ಸೇವಕರಾದ ಹೆಬ್, ಬಿ. ಕೆ. ಗೌಡರೂ ಸೂಕ್ತ ಸಲಹೆಗಳನ್ನಿತ್ತರು.

## ಉಡುಪಿಯಲ್ಲಿ ಸಂತಾಪ ಸೂಚಕ ಸಭೆ.

ಶ್ರೀ ಶ್ರೀನಿವಾಸ ಮಲ್ಯರ ಆಕಸ್ಮಿಕ ನಿಧನದ ಬಗ್ಗೆ ಸಂತಾಪ ಸೂಚಿಸಿ ಅಂತಿಮ ಗೌರವಾರ್ಪಣೆ ಮಾಡಲು ಉಡುಪಿಯಲ್ಲಿ ವಕೀಲ್ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ತಾ. 20ರಂದು ಜರಗಿತು. ಶ್ರೀ ಪಿ. ರಂಗನಾಥ ಶೆಣೈಯವರು ಪ್ರಸ್ತಾವಿಕ ಭಾಷಣ ಮಾಡುತ್ತ ಶ್ರೀ ಮಲ್ಯರ ಜನಪ್ರಿಯತೆ ಕಾರ್ಯಪಟುತ್ವವನ್ನು ಪ್ರಶಂಸಿದರು. ಈ ಸಂದರ್ಭದಲ್ಲಿ ಶ್ರೀಗಳಾದ ಎ. ಜೆ. ಅಲ್ಸೆ, ವಿನಾಯಕ ಶೆಣೈ ನೊದಲಾದವರು ಮಾತನಾಡಿ ಶ್ರೀ ಮಲ್ಯರ ಅಸಾಧಾರಣ ಜಾಕ್ಷ ಸಾಧನೆಗಳನ್ನು ಕೊಂಡಾಡಿದರು.

ಸ್ಥಳೀಯ ಎಂ. ಜಿ. ಎಂ. ಕಾಲೇಜು, ಚೇಂಬರ್ ಆಫ್ ಕಾಮರ್ಸ್, ಕೋಪರೇಟಿವ್ ಮಾರ್ಕೆಟಿಂಗ್ ಸೊಸೈಟಿ, ಕೇರಳ ಸಮಾಜಗಳಲ್ಲೂ ಶ್ರೀ ಮಲ್ಯರ ನಿಧನದ ಕುರಿತು ಸಂತಾಪ ಸೂಚಕ ಸಭೆಗಳು ಜರಗಿದವು.

## ಶಂಕುಸ್ಥಾಪನೆ

ಉಡುಪಿ ಮುನ್ಸಿಪಲ್ ಪ್ರವಾಸೀ ಮಂದಿರದ ಶಂಕುಸ್ಥಾಪನೆಯು ತಾ. 19ರಂದು ಸ್ಥಾನಿಕ ಸಂಸ್ಥೆಗಳ ಉಪಮಂತ್ರಿ ಶ್ರೀ ರಾಮಚಂದರಿಂದ ನೆರವೇರಿತು. ಶ್ರೀ ಮಧ್ವರಾಜ ಎಂ. ಎಲ್. ಎ. ಅಧ್ಯಕ್ಷತೆಯನ್ನು ವಹಿಸಿದ್ದರು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸುತ್ತಾ ಉಡುಪಿಯಲ್ಲಿ ಒಂದು ಪ್ರವಾಸೀ ಮಂದಿರವು ಅತ್ಯಗತ್ಯ. ಬೆಳೆಯುತ್ತಿರುವ ನಗರದ ಮತ್ತು ಹೆಚ್ಚು ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಉಡುಪಿಗೆ ಬರುತ್ತಲಿದ್ದು ಅವರಿಗೆ ಯೋಗ್ಯ ಸೌಕರ್ಯವನ್ನು ಕಲ್ಪಿಸುವ ದೃಷ್ಟಿಯಿಂದ ಉಡುಪಿಯನ್ನು ನಾಲ್ಕನೇ ಯೋಜನೆಯಲ್ಲಿ ಪ್ರವಾಸೀ ಕೇಂದ್ರವನ್ನಾಗಿ ರಾಜ್ಯ ಸರಕಾರ ಘೋಷಿಸಿ ಕೇಂದ್ರ ಸರಕಾರದಿಂದ ದೊರಕುವ ಸೌಲಭ್ಯವನ್ನು ಹೊಂದುವಂತಾಗ ಬೇಕೆಂದು ನುಡಿದರು.

ಶ್ರೀ ರಾಮಚಂದ್ರ ಅವರು ಶಂಕುಸ್ಥಾಪನೆಗೈಯುತ್ತಾ, ನಗರಕ್ಕೆ ಬರುವ ಯಾತ್ರಿಕರಿಗೆ ಮುನ್ಸಿಪಾಲಿಟಿಯವರು ಒದಗಿಸುತ್ತಿರುವ ಸೌಕರ್ಯವನ್ನು ಶ್ಲಾಘಿಸಿ ಸರಕಾರದಿಂದ ದೊರಕ ಬಹುದಾದ ಸಹಾಯಕ್ಕಾಗಿ ತಾನು ಪ್ರಯತ್ನಿಸುವುದಾಗಿ ನುಡಿದರು.

ಕೊನೆಯಲ್ಲಿ ಶ್ರೀ ಕೆ. ಎಂ. ವ್ಯಥ್ಯಸ್ಥರು ವಂದನಾರ್ಪಣೆ ಗೈದರು.

## ಶ್ರಮದಾನ

ಉಪ್ಪೂರು ಗ್ರಾಮದ ಕುದ್ರುಬೆಟ್ಟಿನಿಂದ ಜಾತಾಬೆಟ್ಟಿಗಾಗಿ ಕೊಳಲಗಿರಿಗೆ ಹೋಗುವ ಒಂದೂವರೆ ಮೈಲು ಹೊಸ ರಸ್ತೆ ನಿರ್ಮಾಣ ಕಾರ್ಯವನ್ನು ಶ್ರೀ ಪೆರೋಡಿ ಕರುಣಾಕರ ಶೆಟ್ಟರ ಸಮರ್ಥ ನೇತೃತ್ವದಲ್ಲಿ ತಾರೀಕು 10-13-65ರಂದು ಪ್ರಾರಂಭಿಸಲಾಯ್ತು. ಈ ಸಂಬಂಧ ನಡೆದ ಔಪಚಾರಿಕ ಸಭೆಯ ಅಧ್ಯಕ್ಷತೆಯನ್ನು ಉಪ್ಪೂರು ಪಂಚಾಯತ್ ಸಭಾಪತಿ ಶ್ರೀ ಯು. ಕೆ ಶೇಷಪ್ಪಯ್ಯನವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಅಲಂಗಾರು ನಾರಾಯಣ ಹೆಗ್ಡೆಯವರು ನೆರವೇರಿಸಿದರು. ಸ್ವಯಂ ಸೇವಾದಳದ ದಳಪತಿಗಳಾದ ಶ್ರೀ ಪೆರೋಡಿ ಕರುಣಾಕರ ಶೆಟ್ಟರು ಸ್ವಾಗತ ಭಾಷಣ ಮಾಡಿ ಜನರಲ್ಲಿ ಉತ್ಸಾಹವನ್ನು ತುಂಬಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜನಪ್ರೀತ ಮುಂದಾಳುಗಳಾದ ಶ್ರೀ ಪೆರೋಡಿ ಕರುಣಾಕರ ಶೆಟ್ಟರನ್ನು ಗ್ರಾಮದ ಸ್ವಯಂ ಸೇವಾದಳದ ದಳಪತಿಗಳನ್ನಾಗಿ ಮಾಡಿದುದು ಸೂಕ್ತವೆಂದರು.

ತಾ. 13-12-65 ಮತ್ತು ತಾರೀಕು 18-12-65ರಂದು ರಸ್ತೆ ರಚನಾ ಕಾರ್ಯವು ಮುಂದುವರಿದು ಸುಮಾರು 200—300 ಜನ ಗ್ರಾಮಸ್ಥರು ರಸ್ತೆರಚನೆ ಕಾರ್ಯದಲ್ಲಿ ನಿರತರಾಗಿದ್ದರು. ಮಧ್ಯಾಹ್ನ ಎಲ್ಲರಿಗೂ ಊಟದ ಏರ್ಪಾಡು ಇದ್ದಿತ್ತು.

ಸಭಾಧ್ಯಕ್ಷ ಶ್ರೀ ಯು. ಕೆ. ಶೇಷಪ್ಪಯ್ಯನವರು ರಸ್ತೆ ರಚನಾ ಕಾರ್ಯದಲ್ಲಿ ಸಹಕರಿಸಿದ ಗ್ರಾಮಸ್ಥರ ಪಾತ್ರವು ಗಣನೀಯವಾದುದೆಂದೂ, ಇನ್ನುಮುಂದೆಯೂ ಇಂತಹ ಸಾರ್ವಜನಿಕ ಕೆಲಸದಲ್ಲಿ ಗ್ರಾಮಸ್ಥರು ಸಹಕರಿಸಬೇಕೆಂದೂ ಕೋರಿದರು.

## ಧರ್ಮಸ್ಥಳ ಪಂಚಾಯತ್ ಕ್ಷೇತ್ರಕ್ಕೆ ನಳ್ಳಿನೀರು.

ಧರ್ಮಸ್ಥಳ ಪಂಚಾಯತ್ ಕ್ಷೇತ್ರದಲ್ಲಿ ನಳ್ಳಿನೀರಿನ ಸರಬರಾಯಿ ಯೋಜನೆಗೆ ಸರಕಾರದಿಂದ ರೂ. 1,98,000 ಮಂಜೂರಾಗಿದ್ದು, ಈ ಕಾಮಗಾರಿ ಎಸ್ಟಿಮೆಟಿನ ಶೇ. 5 ಅಂದರೆ ರೂ 99,000 ದ ಚೆಕ್ಕೊಂದನ್ನು ಪಂಚಾಯತದ ಪರವಾಗಿ ಧರ್ಮಸ್ಥಳದ ಶ್ರೀ ಬಿ. ರತ್ನವರ್ಮ ಹೆಗ್ಡೆಯವರು ತಾ. 21 ರಂದು ಅಭಿವೃದ್ಧಿ ಪಂಚಾಯತ್ ರಾಜ್ಯದ ಉಪಸಚಿವ ಶ್ರೀ ವೈ. ರಾಮಚಂದ್ರನ್‌ರವರಿಗೆ ನೀಡಿದರೆಂದು ತಿಳಿದು ಬಂದಿದೆ.

## ಶ್ರೀ ಮಲ್ಯರಿಗೆ ಸಂತಾಪಸೂಚನೆ

ಶ್ರೀ ಟಿ. ಎ. ಪೈಗಳು ದಕ್ಷಿಣ ಕನ್ನಡದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯರ ನಿಧನದ ಕುರಿತು ಸಂತಾಪಸೂಚಿಸುತ್ತಾ, ಈ ಜಿಲ್ಲೆಯ 'ಸಂಪರ್ಕ ವ್ಯವಸ್ಥೆಗಳ ನಿರ್ಮಾತೃ' ಎಂದೂ ಅವರ ಸ್ಮರಣೆ ಚಿರಾಯುವಾಗಿ ಉಳಿಯಲಿದೆ ಎಂದೂ ನುಡಿದರಲ್ಲದೆ ಅವರ ಆತ್ಮಕ್ಕೆ ಶಾಂತಿಯನ್ನೂ ಕೋರಿದರು.

## ನಾಲ್ವರಿಗೆ ನೂತನ ವರ್ಷದ ಪ್ರಶಸ್ತಿ

ಮಣಿಪಾಲ, ಸಮಾಜಕ್ಕೆ ವಿವಿಧ ರಂಗಗಳಲ್ಲಿ ಉಪಯುಕ್ತ ಸೇವೆ ಸಲ್ಲಿಸಿರುವ ನಾಲ್ಕು ಮಂದಿ ಗಣ್ಯರಿಗೆ ನೂತನ ವರ್ಷದ ಪ್ರಶಸ್ತಿಗಳನ್ನು ಸಲ್ಲಿಸುವ ಮೂಲಕ ಉಡುಪಿಯಲ್ಲಿ ನೂತನ ವರ್ಷದ ದಿನವನ್ನು ಆಚರಿಸಲಾಗುವುದು.

ಗೌರವ ಪ್ರಶಸ್ತಿಗಳನ್ನು ಬೆಂಗಳೂರು ವ್ಯವಸಾಯ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ| ಕೆ. ಸಿ. ನಾಯಕ್, ನವದೆಹಲಿಯ ಶ್ರೀ ಬಿ. ಶಿವರಾವ್, ಸುರತ್ಕಲ್ ಕರ್ನಾಟಕ ಪ್ರಾದೇಶಿಕ ಕಾಲೇಜಿನ ಪ್ರಿನ್ಸಿಪಲ್ ಡಾ| ಎ. ಎಸ್. ಅಡ್ಕೆ ಮತ್ತು ಮಂಗಳೂರು ಎಫ್ ಎಕ್ಸ್. ಡಿ. ಪಿಂಟೋರವರಿಗೆ ... ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಮತ್ತು ಉಡುಪಿ ರೋಟರಿ ಕ್ಲಬ್ ... ಸಿವೆ. ಪ್ರಶಸ್ತಿ ಪ್ರದಾನವನ್ನು ಎಕಾಡೆಮಿ ಅಧ್ಯಕ್ಷ ಮತ್ತು ರಿಜಿಸ್ಟ್ರಾರ್ ಹಾಗೂ ರೋಟರಿ ಕ್ಲಬ್ಬಿನ ಸ್ಥಾಪಕ ಅಧ್ಯಕ್ಷ ಡಾ| ಟಿ. ಎ. ಪೈಯವರು ನೆರವೇರಿಸುವರು.

## ವಿಜ್ಞಾನ ಸಂಘ

ಕಡಿಯಾಳಿ ಜೂನಿಯರ್ ಎಲಿಮೆಂಟರಿ ... ಯ ಬಾಲ ಭಾಸ್ಕರ ವಿಜ್ಞಾನ ಸಂಘದ ಉದ್ಘಾಟನೆಯನ್ನು ತಾ. 11-12-65ರಂದು ಜಿಲ್ಲಾ ಸಹಾಯಕ ವಿದ್ಯಾಧಿಕಾರಿ ಶ್ರೀ ಜಿ. ಸಿದ್ಧೇಶ್ವರರು ನೆರವೇರಿಸಿದರು. ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತ ಭಾಷಣಗೈದರು. ಯು. ಕೆ. ... ದರ ಆಚಾರ್ಯರು ವಿಜ್ಞಾನ ಸಂಘದ ಸ್ಥೂಲ ಪರಿಚಯ ಮಾಡಿಕೊಟ್ಟರು.

ವಿದ್ಯಾರ್ಥಿಗಳು ಕೆಲವು ಪ್ರಯೋಗಗಳ ಯಶಸ್ವಿಯಾಗಿ ನೆರವೇರಿಸಿದ ಬಳಿಕ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

---


## ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 401/6

ಗಂಗಮ್ಮ — ವಾದಿ

1. ದುಗ್ಗಪ್ಪ ಗೌಡ

2ನೇ ಪ್ರತಿವಾದಿ ಶೇಷಪ್ಪ ಗೌಡರಿಗೆ ರಾಮಪ್ಪ ಗೌಡರ ಮಗ, ರೂಮ್ ನಂ 7, 8 ಪ್ಲೋರ್, 285 ಫೆರೆರಾ ರೋಡ್, ... ಫೋರ್ಟ್ ಮುಂಬಾಯಿ.

—ಪ್ರತಿವಾ

ಮೇಲಿನ ವ್ಯವಹರಣೆಯಲ್ಲಿ 2ನೇ ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸದ್ರಿ ವ್ಯವಹರಣೆಯು ವಿಚಾರಣೆಗಾಗಿ ... ಎಂತ ತಾ. 6-1-66 ಇಟ್ಟಿರುತ್ತದೆ ನೀವು ಸದ್ರಿ ತಾರೀಕಿನಂದು ಬೆಳಿಗ್ಗೆ ... ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಬೇಕು. ತಪ್ಪಿದಲ್ಲಿ ನಿಮ್ಮನ್ನು ಬಿಟ್ಟು ಎಂತ ಪರಿಗಣಿಸಿ ನಂಬ್ರವನ್ನು ಮುಂದುವರಿಸಲಾಗುವುದು ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿದೆ.

(*Sd.*) U. P. Shivara[illegible]

Advocate for Plainti[ff]

ಪುತ್ತೂರು, ದ. ಕ. 18-12-1965

---

## ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 149/19

ಬಿ. ಟಿ. ರೈ — ವಾದಿ

VS

ಅಂಣು ಶೆಟ್ಟಿ — ಪ್ರತಿವಾದಿ

ಬೆಳ್ತಂಗಡಿ ತಾಲೂಕು, ಪಡಂಗಡಿ ಗ್ರಾಮದ ಕುಜಬೆಟ್ಟುಬೈಲು ಎಂಬಲ್ಲಿರುವ ಮಾನು ಶೆಟ್ಟಿಯ ಮಗ ಅಂಣು ಶೆಟ್ಟಿಯವರಿಗೆ ಮೂಲಕ ತಿಳಿಯ ಪಡಿಸುವುದೇನೆಂದರೆ—

ಮೇಲೆ ಹೇಳಿದ ವಾದಿಯು, ಪ್ರತಿವಾದಿಯಾದ ನಿಮ್ಮಿಂದ ಬರಬೇಕಾದ ಸಾಲದ ಬಾಬ್ತು ... ದಾವೆ ಹೂಡಿದ್ದು ಸದ್ರಿ ದಾವೆಯ ವಿಚಾರಣೆಗಾಗಿ ನಿಮ್ಮ ಹಾಜರಾತಿಗೆ ತಾ. 5-1-1966ರಲ್ಲು ಇಡಲಾಗಿದೆ. ಆ ದಿವಸ ನೀವು, ಸ್ವ ವಕೀಲರ ಮುಖಾಂತರ ಹಾಜರು ಇದ್ದಲ್ಲಿ ನಿಮ್ಮ ಗೈರುಹಾಜರಿ ಎಂದು ಪರಿಗಣಿಸಿ, ನಂಬ್ರವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು

(By Order)

Venkatramana B.

Advocate for Plaint[iff]

Camp
Belthangady, 25—12—65

---

ನವಯುಗದ
## ಪ್ರಜಾರಾಜ್ಯ-ವಿಶೇಷಾಂಕ
ಎಂದಿನಂತೆ ವೈವಿಧ್ಯಪೂರ್ಣವಾಗಿ
**ಜನವರಿ 26ಕ್ಕೆ ಪ್ರಕಟವಾಗುವುದು**

# ಕ್ರೈತ್ರ ಮುರುಗ

(ಎರಡನೇ ಪುಟದಿಂದ)

...ನ್ನು ಪ್ರಾರಂಭಿಸಿದರೆಂದು ಗೊತ್ತೇನು? ...ವನು ಕೇವಲ ಹೀಗೆ ಮೋಜಿ! ಈಗ ...ಬ್-ಮೆಜಿಸ್ಟ್ರೇಟರ (ಉಪನ್ಯಾಯಾಧಿ...ಕಾರಿ) ಉನ್ನತ ಪದವಿಗೇರಿದ್ದಾನೆ. ಈಗ ...ಳು ವೈಭವದಿಂದಿದ್ದಾಳೆ. ಜಿಲ್ಲಾಧಿಕಾ...ಯ (ಕಲೆಕ್ಟರ್) ಹೆಂಡತಿಗಿಂತಲೂ ಒ...ಳ್ಳೆಯ ಬಟ್ಟೆಯನ್ನು ಉಟ್ಟುಕೊಳ್ಳುತ್ತಾ...; ಹೇಗೆ? ಹೇಗೆಂದು ನಿನಗೆ ಗೊತ್ತಿದೆ. ...ತಿ ದಿನ ತನ್ನ ಬಳಿಗೆ ಹಾಗೂ ಗಂಡನ ...ಳಿಗೆ ಬರುತ್ತಿರುವ ಮನವಿದಾರರಿಗೆ ಉ...ಪಕಾರ ಮಾಡಿ. ಬಡ, ಸರಳ ಜನರು ...ಷ್ಟದಲ್ಲಿ ಸಿಲುಕಿ ಬಿದ್ದರೆಂದರೆ ಒಡನೆ ...ಡಿ ಬರುತ್ತಾರೆ. ಆಗ ಅವರಿಗೆ ಸಹಾ...ಯ ಮಾಡಿ, ಕೈ ಬೆಚ್ಚಗೆ ಮಾಡಿಸಿಕೊಳ್ಳ...ು ಯಾರು ತಾನೇ ಮುಂದಕ್ಕೆ ಬರುವ...ಲ್ಲ? ಆದರಲ್ಲೂ ಕಮಲಮ್ಮ ಬಹಳ ...ಣ್ಮೆಯವಳು. ಅವಳ ಗಂಡನಿಗೂ ಅವ... ಮೇಲೆ ನಂಬಿಕೆ ಇದೆ. ಗಂಡನ ನೈಜ ...ವಹಾರದಲ್ಲಿ ಹೇಗೆ ಪಾಲುದಾರಳಾಗ...ಕೆಂಬುದು ಅವಳಿಗೆ ಗೊತ್ತು. ಪ್ರಾರಂ...ದಿಂದಲೂ ಆಕೆ ಜಾಗರೂಕತೆಯಿಂದ ...ವಸ್ಥೆ ಮಾಡಿಕೊಂಡು ಬಂದಿದ್ದಾಳೆ. ಆ...ರೆ ಜಾನಕಿ, ನೀನು ಮಾತ್ರ ಬಹಳ ಮೃ...ು ಸ್ವಭಾವದವಳು. ರಾಮುವಿನ ಹೆಜ್ಜೆ ...ಶಬ್ದವನ್ನು ಕೇಳಿಯೇ ನೀನು ಭಯ...ಪಡುವೆ. ಪುರುಷರು ಪ್ರಪಂಚವನ್ನು ಆಳ...ಕ್ಕೆ ಇರುವದಾದಲ್ಲಿ, ಸ್ತ್ರೀಯರಿರುವದು ...ಪ್ರಪಂಚವನ್ನಾಳುವ ಪುರುಷರನ್ನು ...ಳಿಕ್ಕಾಗಿ. ಸ್ವಸಾಮರ್ಥ್ಯದಿಂದ ಸಹಾ...ವನ್ನು ಮಾಡಿಕೊಳ್ಳುವವರಿಗೆ ಮಾತ್ರ ...ವರು ಸಹಾಯ ಮಾಡುತ್ತಾರೆ."

ತನ್ನ ಮನೋಸ್ಥಿತಿಯನ್ನು ತಿಳಿಸುವ ...ದಕ್ಕಾಗಿ ಜಾನಕಿಯು ಪುನಃ ಮಾಡಿದ ಪ್ರಯತ್ನವೂ ವ್ಯರ್ಥವಾಯಿತು.

ಆಕೆ ಪುನಃ ತಡೆದು ಮುಂದರಿಸಿದಳು. ...ಪ್ರತಿ ಒಬ್ಬರೂ ಕಮಲಮ್ಮನಿಂದ ಕಲಿ...ತುಕೊಳ್ಳಲಿ. ರೂಪ, ಗಾಂಭೀರ್ಯ, ಧೈರ್ಯ— ...ಇವುಗಳೆಲ್ಲವೂ ಅವಳಲ್ಲಿ ಚೆನ್ನಾಗಿ ಬೇರು ...ಬಿಟ್ಟಿವೆ. ನಾವು ತಿಂಗಳಲ್ಲಿ ಹತ್ತು ಬಾರಿ ...ಯಾದರೂ ಅವಳ ಮನೆಗೆ ಹೋಗುತ್ತಿ...ರುತ್ತೇವೆ. ಆದರೆ ಇತ್ತ ಬರಲೂ ಒಮ್ಮೆ ...ಕೂಡಾ ಅವಳು ಮನಸ್ಸು ಮಾಡಿಲ್ಲ. ನ...ಮ್ಮ ಕಾಲಿಗೆ ಮುತ್ತು ಕೊಡುವವರನ್ನು ...ಕಂಡುಕೊಳ್ಳುವ ವರೆಗೆ ನಮ್ಮನ್ನು ತುಳಿ...ಯುತ್ತಿರುವ ಕಾಲಿಗೆ ನಾವು ಮುತ್ತು ...ಕೊಡುತ್ತಿರಬೇಕು. ಪ್ರಪಂಚ ಆ ರೀತಿ ...ಇದೆ. ಅವಳ ಸ್ನೇಹವಿಟ್ಟು ಕೊಂಡಿರುವ...ದರಿಂದ ನಮಗೆ ಮರ್ಯಾದೆ ಹಾಗೂ ಪರ...ಕಾರಿ ಮುಂತಾದ ಪದಾರ್ಥಗಳ ರೂಪದ ...ಲ್ಲಿ ಭಕ್ಷೀಸೂ ಸಿಗುತ್ತದೆ. ನಾವು ಅವಳನ್ನು ...ನಿರೀಕ್ಷಿಸುವ ಹಾಗಿಲ್ಲ. ನಾವೀಗ ಹೋ...ಗಿ ಅವಳನ್ನು ನೋಡಿಕೊಂಡು ಬರೋಣ. ...ಲ್ಲಿಯ ನೈಜಪರಿಸ್ಥಿತಿಯನ್ನು ನೀನೇ ಕ...ಣ್ಣಾರೆ ನೋಡಿಕೊಂಡು, ಅವಳು ತನ್ನ ...ಪ್ರಯೋಗ ಶಾಲೆಯಲ್ಲಿ ಹೇಗಿರುತ್ತಾಳೆಂ...ಬುದನ್ನು ತಿಳಿದುಕೊಳ್ಳು."

ಮೀನಾಕ್ಷಿಯು ಪದೇ ಪದೇ ಹೇಳಿದ...ರೂ, ಜಾನಕಿಯು ತಾಯಿಯನ್ನು ಅನುಸರಿಸಲು ಅಸಮ್ಮತಿಯನ್ನು ಸೂಚಿಸಿದಳು. ಮೀನಾಕ್ಷಿ ಹೊರಡಲಿಕ್ಕೆ ಸಿದ್ಧವಾಗಿದ್ದಳು. ಆಗಲೇ ಯಾರೋ ಬರುತ್ತಿರುವ ಸದ್ದಾಯಿತು.

"ಒಳಗೆ ಬನ್ನಿ ಕಮಲಮ್ಮ" ಮೀನಾಕ್ಷಿಯ ಸ್ವರವು ಮನಪೂರ್ವಕ ಸ್ವಾಗತಿಸುವ ಕಂಠದಿಂದ ಘೋಷನಾದಮಾಡಿತು. "ನೀವು ನೂರು ವರ್ಷ ಬದುಕುತ್ತೀರಿ! ನಾವಿದೀಗ ನಿಮ್ಮ ವಿಷಯ ಮಾತಾಡುತ್ತಿದ್ದಂತೆ, ನಿಮ್ಮಲ್ಲಿಗೆ ಬರಲು ಹೊರಟಿದ್ದೆವು. ಅಪೂರ್ವ ಆಗಮನ! ನಮ್ಮ ನಾಲಿಗೆಯು ಹೆಮ್ಮೆಯ ಹಾಗೂ ಸುವರ್ಣಾಕ್ಷರಗಳಿಂದ ಬರೆಯಬೇಕಾಗಿರುವ ದಿನ ಜಾನಕಿ, ನಮ್ಮ ಪ್ರಖ್ಯಾತ ಭೇಟಿಗಾರರಿಗೆ ಒಳ್ಳೆಯ ಕಾಫಿ ಕೊಡು."

"ಧನ್ಯವಾದಗಳು, ಮೀನಾಕ್ಷಿ. ಕಾಫಿಗಿದು ಯುಕ್ತ ಸಮಯ ಅಲ್ಲ. ನಾನಿಲ್ಲಿ ಹೆಚ್ಚು ಕಾಲ ಕಳೆಯುವಂತಿಲ್ಲ. ನಿಮ್ಮಲ್ಲೊಂದು ಸಹಾಯ ಕೇಳಲಿಕ್ಕಾಗಿ ನಾನು ಬಂದಿದ್ದೇನೆ. ರಾಮು ಜಿಲ್ಲಾಧಿಕಾರಿಯವರ ಪ್ರೀತಿಪಾತ್ರರಾಗಿ ಇದ್ದಾರೆ. ಕೆಲಸದಲ್ಲಿ ಏನೋ ತಪ್ಪಾಗಿ ನನ್ನವರು ಕಷ್ಟದಲ್ಲಿ ಸಿಕ್ಕಿ ಬಿದ್ದಿದ್ದಾರೆ. ನನಗೆ ರಾಮು ಸಹಾಯ ಮಾಡಲಿಕ್ಕಿಲ್ಲವೇ? ಜಿಲ್ಲಾಧಿಕಾರಿಯ ಬಳಿ ಅವರು ವಿವೇಕದಿಂದ ನನ್ನವರ ಕುರಿತು ಒಂದು ಶಬ್ದವನ್ನಾಡಿದರೆ ಸಾಕಮ್ಮಾ ಅವರ ಪ್ರಾಮಾಣಿಕತನ, ಸರಳತೆ ಮತ್ತು ನೈಪುಣ್ಯತೆಗಳೆಲ್ಲಾ ಹೇಗೆ ಅಪ್ರಸಿದ್ಧ ಆದುವೋ! ಕೆಲ ಗುಪ್ತ ಪತ್ರಗಳು ನನಗೆ ಬೇಕಾಗಿವೆ. ಅವರು ಯಾವಾಗ ಇಲ್ಲಿಗೆ ಬರಬಹುದು?'

'ನಾನದನ್ನು ಸಂತೋಷದಿಂದ ಮಾಡಿಕೊಡುತ್ತೇನೆ. ನೀನು ಕೆಲ ವರ್ಷಗಳಿಂದ ಮಾಡಿರುವ ಉಪಕಾರಕ್ಕೆ ಇದೊಂದು ಚಿಕ್ಕ ವಿಷಯವೇ ಸರಿ. ರಾಮುವನ್ನು ನಾವು ನಿರೀಕ್ಷಿಸಿಕೊಂಡಿದ್ದೇವೆ. ನಿಜವಾಗಿ ಹೇಳುವುದಾದರೆ, ಅವನ ವಿಷಯವನ್ನೂ ನಾವೀಗ ಮಾತನಾಡುತ್ತಿದ್ದೆವು. ಅವನನ್ನು ನಿರೀಕ್ಷಿಸಿಕೊಂಡು ಇರುವದರಿಂದ ಇನ್ನೂ ಏನನ್ನೂ ತಿಂದಿಲ್ಲ.'

ರಾಮು ಒಂದೊಡನೆ ಮಹಿಳೆಯರ ಮಾತುಕತೆ ನಿಂತಿತು. ರಾಮುವನ್ನು ಕಂಡ ಕಮಲಮ್ಮ ನಾಚಿಕೆಯಾದವಳಂತೆ ಬೇಗನೆ ಹಾಗೂ ಒಯ್ಯಾರದಿಂದ ಹಿಂತಿರುಗಿದಳು. ರಾಮುವಿನ ಗಮನವನ್ನದು ಸೆಳೆಯಲಿಲ್ಲ.

ಇಡಿ ದಿನ ಕಮಲಮ್ಮನನ್ನು ಮಗೆಯಲ್ಲಿರಿಸಿಕೊಂಡು, ತಾನು ಶಿಬಿರ-ಗುಮಾಸ್ತನ ಹೆಂಡತಿಯ ತಾಯಿ ಮಾತ್ರವಲ್ಲ, ಇಡಿ ಕಡಪ ಪಟ್ಟಣದಲ್ಲೇ ಅತಿ ಶಕ್ತಿಶಾಲಿನಿ ಹೆಂಗಸಿನ ಹತ್ತಿರದ ಸ್ನೇಹಿತೆ ಎಂಬುದನ್ನು ಇಡಿ ಪಟ್ಟಣಕ್ಕೆ ತಿಳಿಸಲಿಕ್ಕಾಗಲಿಲ್ಲವೆಂದು ಮೀನಾಕ್ಷಿಗೆ ವ್ಯಥೆಯಾಯಿತು.

ರಾಮುವಿನ ಮುಖ ಬಾಡಿಹೋಗಿತ್ತು. ಅವನು ಯಾರ ಬಳಿಯೂ ಭಿಕಾರವೆತ್ತದೆ ಊಟ ಮುಗಿಸಿ, ಸಂಜೆಯ, ತನಕ ಸುಮ್ಮಗೆ ಕುಳಿತುಕೊಂಡಿದ್ದನು.

— ೧೭ —

ಅಂದು ಸಾಯಂಕಾಲ ಉತ್ತಮ ಉಲ್ಲಾಸದಾಯಕ ಹವೆ ಇತ್ತು. ಅಂದು ಬೆಳಿಗ್ಗೆ ಕಡೆಲರು ಕಡಪದ ತನ್ನ ಕೇಂದ್ರ ಠಾಣೆಗೆ ಬಂದಿದ್ದರು. ಪೆನ್ನಾರ್ ನದಿಯ ದಡದಲ್ಲಿ, ವಿಶಾಲ ಮಾವಿನ ತೋಪಿನ ನಡುವೆ, ಜಿಲ್ಲಾಧಿಕಾರಿಯ ನಿವಾಸ. ಆಗ ತಾನೇ ಜಮಾಬಂದಿಯ ಕೆಲಸ ಮುಗಿದಿದ್ದುದರಿಂದ ಅವರು ಹೊರೆಯನ್ನು ಇಳಿಸಿದವರಂತೆ ನಿಟ್ಟುಸಿರುಬಿಟ್ಟರು.

ಒಂದು ನೀಸಲೇಖನಿಯನ್ನು (ಪೆನ್ಸಿಲ್) ಕಚ್ಚಿಕೊಂಡು, ಕಡೆಲರು ಕಿತ್ತಳೆ ನಾರಿನ ದಪ್ಪ ಅರಿವೆಯ ಆಸನದ ಮೇಲೆ ಬಿದ್ದುಕೊಂಡು, ಅದನ್ನು ಹಿಂದಕ್ಕೆ ಮುಂದಕ್ಕೆ ಅಲುಗಾಡಿಸುತ್ತ, ಕಾಲಹರಣ ಮಾಡುತ್ತಿದ್ದರು. ಲೇಖನಿಯನ್ನು ಕಚ್ಚುವ ಅಭ್ಯಾಸ ವಿದ್ಯಾರ್ಥಿ ದಿನಗಳಿಂದಲೂ ಅವರ ಬೆನ್ನು ಹಿಡಿದುಕೊಂಡು ಬಂದಿದೆ.

'ಪ್ರಿಯತಮ, ಆಲೋಚನಾಮಗ್ನರಾಗಿ ಕುಳಿತಿರುವ ನಿಮ್ಮನ್ನು ನಾನಿನ್ನೆಂದಿಗೆಂದೂ ಕಂಡ ಜ್ಞಾಪಕ ನನಗಿಲ್ಲ." ಪಕ್ಕದ ಆಸನದಲ್ಲೇ ಕುಳಿತುಕೊಂಡಿದ್ದ ಶ್ರೀಮತಿ ಕಡೆಲ್ ಮೌನವನ್ನು ಮುರಿದಳು. ಅಂಚೆಯವನಿಂದ ಆಗ ತಾನೆ ಪಡೆದುಕೊಂಡಿದ್ದ ಹೊಸ ಪುಸ್ತಕದ, ಅಂಟಿಕೊಂಡಿದ್ದ ಹಾಗೂ ಪರಿಮಳ ಬೀರುತ್ತಿದ್ದ, ಹಾಳೆಗಳನ್ನು ಕತ್ತರಿಸಿ ಬಿಡಿಸುವದರಲ್ಲಿ ಆಕೆ ನಿರತಳಾಗಿದ್ದಳು. 'ಉಪದ್ರವೀಯಲು ನನಗೇನೂ ಇಷ್ಟವಿಲ್ಲ. ಕಾವ್ಯಮಗ್ನ ಮನುಷ್ಯ ಕಲ್ಪನಾತರಂಗದಲ್ಲಿ ಜಾರಿಬಿದ್ದಿದ್ದಾರೆ! ಚಲೋ ವಸ್ತುಗಳತ್ತ ಪ್ರಪಂಚವೇ ಮೆಲ್ಲನೆ ಸಾಗುತ್ತಿದೆ. ದಿನಪೂರ್ತಿ ದುಡಿದಿರುವ ಆ ಲೇಖನಿಗೆ ನೀವು ಕ್ರೂರ ರೀತಿಯಿಂದ ಧನ್ಯವಾದಗಳನ್ನರ್ಪಿಸುವದನ್ನು ನೋಡಿ ನನಗೆ ಭಯವಾಗುತ್ತಿದೆ. ಅದು ನೀವು ಉಪಯೋಗಿಸುತ್ತಿದ್ದ ಲೇಖನಿಯಲ್ಲ; ಪುಸ್ತಕಗಳಲ್ಲಿ ಗುರುತು ಮಾಡಲು ನಾನು ಉಪಯೋಗಿಸುವ ಲೇಖನಿ."

"ನಿನ್ನ ಸಂಸ್ಕೃತ ಪುಸ್ತಕಗಳು, ಪತ್ರಿಕೆಗಳು, ಇತರ ಮತ್ತೀಯ ಪುಸ್ತಕಗಳು ನನ್ನ ಉಸಿರಿನಿಂದಾಗಿ ಅಪವಿತ್ರವಾಗುತ್ತವೆಯೋ ಎಂದು ನನಗೆ ಭಯವಾಗುತ್ತದೆ. ನೀನು ಹೆಚ್ಚು ಕಡಿಮೆ ಜಾತಿ ಹಿಂದೂವಿನಂತೆ ತೋರುತ್ತಿ" ಲೇಖನಿಯನ್ನು ಅವಳಿಗೆ ಕೊಡುತ್ತ ಕಡೆಲ್ ನಗಾಡಿದರು; ಹಾಗೆ ಸ್ವಲ್ಪ ಗಂಭೀರ ಸ್ವರದಲ್ಲಿ ಮುಂದರಿಸಿದರು. 'ರಾಮಚಂದ್ರ, ನನ್ನ ಶಿಬಿರ-ಗುಮಾಸ್ತನು, ನಿನ್ನ ಹಾಗೆ ಒಂದು ಸಮಸ್ಯೆಯಂತಿದ್ದಾನೆ, ಪ್ರಿಯೆ. ನೀನು ಆಚ್ಚೊತ್ತಿರುವ ಪುಸ್ತಕಗಳ ಮೇಲಿಂದ ದೃಷ್ಟಿಯನ್ನೆತ್ತಿ, ಮನಸ್ಸು ಮಾಡಿ, ಜೀವಿಸುತ್ತಿರುವ ಜನರತ್ತ ಹಾಗೂ ವಸ್ತುಗಳತ್ತ ಗಮನಕೊಟ್ಟು ಪರಿಶೀಲಿಸುತ್ತ ಕಲಿಯಲಾರಂಭಿಸಿದಲ್ಲಿ, ನಿನ್ನ ತತ್ವಗಳನ್ನು ಕಲಿಯಲು ಅವನು ಯೋಗ್ಯನಿದ್ದಾನೆಂದು ನೀನು ಕಂಡುಕೊಳ್ಳುವಿ."

"ಕಛೇರಿ ಕಣ್ಣುಗಳಿಂದ ನೋಡುವಿರುವವರಿಗೆ ರಾಮಚಂದ್ರನಲ್ಲಿ ಏನೂ ಪರಿಶೀಲಿಸಲಿಕ್ಕಿರುವದಿಲ್ಲ. ಅವನು ಸರಳ, ನಿಷ್ಕಪಟ ಹಾಗೂ ಬುದ್ಧಿವಂತ ಗುಮಾಸ್ತನಿದ್ದಾನೆ. ನೀವು ಮಾತ್ರ ಅವನನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲ. ಕ್ರಿಯಾಶೀಲ ಮನುಷ್ಯರು ಸರಳತೆಯನ್ನು ಮಂಕುತನವೆಂದೇ ಭಾವಿಸಿಕೊಳ್ಳುತ್ತಾರೆ. ಇಡಿ ಪ್ರಪಂಚದ ಭಾರವನ್ನು ತಾವೇ ಹೊತ್ತುಕೊಂಡಿರುವವರು ಎಂದು ನಟಿಸುತ್ತಿರುವ ಈ ಕ್ರಿಯಾಶೀಲರಿಗೆ ಸರಳತೆಯು ಸಾಧ್ಯವಿರುವದಿಲ್ಲ."

"ಧನ್ಯವಾದಗಳು ನಿನ್ನ ಭಾಷಣಕ್ಕೆ, ಪ್ರಿಯೆ. ನೀನು ಆಳಕ್ಕೆ ಹೋಗದೆ ಚಿಪ್ಪುಗಳನ್ನು ಹೆಕ್ಕಿಕೊಂಡು ಬಂದು ಮಾತ್ರ ಒಂದು ನಟಿಸದೆ ಇರುವದು ಸಂತೋಷದ ಸಂಗತಿ. ರಾಮಚಂದ್ರನನ್ನು ನಾನು ಮೆಚ್ಚಿದ್ದೇನೆ. ಅಂತಹ ಜನರು ಸಿಗುವದು ಬಹಳ ಅಪರೂಪ. ಅವನನ್ನು ಮೂರು ವರ್ಷಗಳಿಂದ ನೋಡಿಕೊಂಡು ಬರುತ್ತಿರುವದರಿಂದ ಈ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ಅವನ ಶಾಂತತೆ, ಸರಳತೆ ಹಾಗೂ ವಿವೇಕಶಕ್ತಿ ಬಹಳ ಪ್ರಭಾವಶಾಲಿ ಇದೆ. "ನಿನ್ನ ಹಾಗೆ ನಿನ್ನ ಸಹೋದರನು ಕೂಡಾ ಅವಶ್ಯಕವಾಗಿರುವದನ್ನೇ ಮರೆತು ಬಿಡುತ್ತಾನೆ. ರಾಮುವಿನಲ್ಲಿರುವ ಉತ್ತಮ ವಿಷಯಗಳಲ್ಲ ಅವನ ಮನೋಗುಣವು ಮುಖ್ಯವಿದೆ. ನೀನು ರಾಮುವಿನ ಯೋಗ್ಯತಾಪತ್ರದ ಕುರಿತು ಜ್ಞಾಪಕವಿಟ್ಟುಕೊಂಡಿದ್ದೀಯಾ? ಅದರಲ್ಲಿ ನಿನ್ನ ಸಹೋದರನು ಮನೋಗುಣದ ಕುರಿತು ಒಂದು ಶಬ್ದವನ್ನೂ ಬರೆದಿರುವದಿಲ್ಲ. ಮನೋಗುಣವೆಂಬುದು, ಎಲ್ಲಿಯೋ ಅಡಗಿಕೊಂಡಿದ್ದರೂ ಬುಗಿಳೆದ್ದು ಶೀಲವೆಂಬ ಅಪೂರ್ವ ಮಣ್ಣಿನ ಮೂಲಕ ಹರಿಯುವ ಚಿಲುಮೆ. ಇದೆ ಕ್ರಾಸ್ಮನ್‌ರಿಗೆ ನಾನು ನನ್ನು ನೋಡಿ ಗೊತ್ತು. ಆದರೆ ಅದರ ಸಿಹಿ ನೀರಿನ ರುಚಿಯನ್ನವರೆಂದೂ ನೋಡಿರುವದಿಲ್ಲ—ಎಲ್ಲಾ ಶಿಕ್ಷಣ ಶಾಸ್ತ್ರ ಪಿತಾರದರು ಕೇವಲ ವ್ಯರ್ಥ ಇದ್ದಾರೆ."

ಶ್ರೀಮತಿ ಕಡೆಲ್ ನಡುವೆ ಬಾಯಿ ಹಾಕಲು ಪ್ರಯತ್ನಿಸಿದುದು ವ್ಯರ್ಥ ಆಯಿತು.

"ನಾನು ಆಶಿಸುತ್ತೇನೆ, ಪ್ರಿಯೆ," ಆಕೆಯ ಗಂಡ ಮುಂದರಿಸಿದರು. "ರಾಮುವಿನ ವಿಷಯ ನಿನಗೆ ಚೆನ್ನಾಗಿ ಗೊತ್ತು. ಅಧಿಕ ಬೆಲೆಬಾಳುವ ಈ ಪುಸ್ತಕಗಳಿಗಿಂತಲೂ, ಇಂತಹ ಉತ್ತಮ ಮಾನವರಿಂದ ನೀನು ಭಾರತವನ್ನು ಚೆನ್ನಾಗಿ ಅರಿತುಕೊಳ್ಳಬಹುದು. ಅವನದನ್ನು ಪ್ರತಿನಿಧಿಸುತ್ತಿದ್ದಾನೆ. ಅವನು ಸಭ್ಯನಾದರೂ ಸ್ವಾತಂತ್ರ್ಯ ಪ್ರಿಯನಿದ್ದಾನೆ. ಅವನು ಆತ್ಮಾಭಿಮಾನಿ ಉಳ್ಳವನಾದರೂ ಗರ್ವ ಇರುವುದಿಲ್ಲ. ಅವನೆಂದೂ ಎದುರು ಮಾತನಾಡಿದವನಲ್ಲ, ಕಂಡು ನೆವ ಹೇಳಿದವನಲ್ಲ, ದಾಂಧಲೆ ತಂದವನಲ್ಲ. ಚಿಕ್ಕಾಸು ಲಂಚವನ್ನು ಕೂಡಾ ಸ್ವೀಕರಿಸಿ ಕೊಂಡವನಲ್ಲ. ಅವನದೇ ಆದ ಸ್ವಂತ ದಾರಿಯಲ್ಲಿ ಅವನು ಹೋಗುತಿದ್ದಾನೆ. ಅವನ ಮಾತಿನಲ್ಲೇ ಹೇಳುವದಾದರೆ, ಅವನ ಧರ್ಮವನ್ನು ಅವನು ಮಾಡುತಿದ್ದಾನೆ. ಧರ್ಮವಾದರೋ ಈ ಕಡಪದ ಕಾಡುಗಳ ನಡುವೆ ಪೆನ್ನಾರ್ ನದಿ ಹರಿಯುವಂತಿದೆ. ರಾಮಚಂದ್ರನ ಹಾಗೆ ಇರುವವರು, ಭಾರತದಲ್ಲಿ ಬಹಳ ಕಮ್ಮಿ. ಮಂದಿ. ಅವನು ಹೇಳುವದರಲ್ಲಿ ಹಾಗೂ ಮಾಡುವದರಲ್ಲಿ ಸಡವಡಿಸಿಕೊಳ್ಳುವ ಸೊಗಸೂ, ಅರ್ಥವೂ ಇದೆ ಆದರೆ

**NAVAYUGA 30—12—1965**
Registered with the Registrar of News Papers for India under No. K. N. 3546/'57

**REGD. No. S. G. 176**
**LICENCE No. 31**
Licensed to Post without Prepayment

# ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

## ೩೦-೧೨-೬೫ರಿಂದ ೬-೧-೬೬ರ ವರೆಗೆ

### ೧. ಮೇಷ

ಕಾರ್ಯೋತ್ಸಾಹಿಗಳಾದ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರಲಿದೆ. ಶ್ರಮಸಾಧ್ಯವಾದ ಕಾರ್ಯಗಳಲ್ಲಂತೂ ವಿಜಯವು ಕಟ್ಟಿಟ್ಟ ಗಂಟಿನಂತಿರುವುದು. ಅದಾವ ಕಾರಣದಿಂದಲೋ ಮೇಲಾಧಿಕಾರಿಗಳಿಗೂ ನಿಮಗೂ ಸೌಮನಸ್ಯವಿರದು. ಆ ಕಾರಣದಿಂದಾಗಿ ಸ್ಥಾನಪಲ್ಲಟದ ಸಂಭವವಿದೆ. ನಿಮ್ಮ ಆರೋಗ್ಯವು ಚೆನ್ನಾಗಿದ್ದರೂ ಹೆಂಡತಿ ಮಕ್ಕಳ ಆರೋಗ್ಯಕ್ಕೆ ಹಾನಿಯುಂಟಾದೀತು. ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟವುಂಟಾದೀತು. ತಾ. 1, 2, 3 ಇದ್ದುದರಲ್ಲಿ ಉತ್ತಮ.

### ೨. ವೃಷಭ

ನಿಮ್ಮ ಕಾರ್ಯಕಲಾಪಗಳಿಗಿಂದು ಹಲವಾರು ತರದ ತೊಡಕು ತೊಂದರೆಗಳು ಸಂಭವಿಸುವುದಾದರೂ ನಿಮ್ಮ ಆರ್ಥಿಕ ಪರಿಸ್ಥಿತಿಗೆ ಏನೂ ಚ್ಯುತಿಯುಂಟಾಗದು. ಉದ್ಯೋಗದಲ್ಲಿ ಪ್ರಗತಿ ಹೊಂದುವಿರಿ. ಜನಾದರಕ್ಕೆ ಪಾತ್ರರಾದ ನಿಮಗೆ ಸರ್ವತ್ರಮಾನ ಮನ್ನಣೆಗಳು ಲಭಿಸುವದಾದರೂ ಕೋರ್ಟು ವ್ಯವಹಾರಗಳಲ್ಲೂ ರಾಜಕೀಯದಲ್ಲೂ ಪರಾಜಯವುಂಟಾದೀತು. ಗೃಹತಾಪತ್ರಯದಿಂದ ಮುಕ್ತರಾದ ನಿಮಗೆ ತಾ. 30, 31, 4, 5 ಈ ದಿನಗಳಲ್ಲಿ ನಾನಾ ರೀತಿಯಿಂದ ಧನಾಗಮವೂ ಸುಖಭೋಗಗಳೂ ಲಭಿಸುವವು.

### ೩. ಮಿಥುನ

ದೈವಪ್ರಕೋಪಕ್ಕೆ ಗುರಿಯಾದ ನಿಮಗೆ ಇಂದಿನ ದಿನಗಳು ತುಂಬ ದುಃಖದಾಯಿಗಳಾಗಿ ಪರಿಣಮಿಸಲಿವೆ. ಶತ್ರುಗಳ ಕಾಟದಿಂದಾಗಿ ನಿಮಗೆ ಯಾರೊಬ್ಬರ ನೆರವು ಲಭಿಸದು. ಆರ್ಥಿಕ ಬಿಕ್ಕಟ್ಟು ಆತ್ಮೀಯರ ವಿರೋಧ ಗೃಹತಾಪತ್ರಯಗಳಿಗೆ ಸಿಲುಕಿದ ನಿಮಗೆ ವಾರಾದಿಯ 4 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

### ೪. ಕರ್ಕಟ

ನಿರಾಶೆಯ ಅಂಧಕಾರದಲ್ಲಿ ದಿಕ್ಕುಗಾಣದ ನಿಮಗೆ ಈ ವಾರದಲ್ಲಿ ಆಶಾಜ್ಯೋತಿಯು ದೂರದಿಂದ ಕಾಣಸಲಿದೆ. ಶ್ರಮಕ್ಕೆ ತಕ್ಕುದಲ್ಲವಾದರೂ ಅಲ್ಪ ಸ್ವಲ್ಪ ಆದಾಯವು ಲಭಿಸುವುದರಿಂದ ಹಣದ ಬಿಕ್ಕಟ್ಟು ಕಡಿಮೆಯಾಗುವದು. ಅರ್ಧಾಂಗಿಯು ಅನುದಿನ ಕಲಹ ಪ್ರಿಯಳಾಗುವಳು. ಕಫ ದೋಷದಿಂದಾಗಿ ದೇಹಾಲಸ್ಯ ಕಾಣಸಲಿದೆ. ತನು ಮನಗಳಿಗೆ ಸುಖ ನೆಮ್ಮದಿ ಯಿಲ್ಲದ ನಿಮಗೆ ತಾ. 1ರಿಂದ 5ರ ವರೆಗಿನ ದಿನಗಳು ಆಶಾದಾಯಿಗಳಾಗಿವೆ.

### ೫. ಸಿಂಹ

ಕಾರ್ಯ ದಕ್ಷರೂ ವ್ಯವಹಾರ ಚತುರರೂ ಆದ ನಿಮಗೆ ಈ ವಾರದಲ್ಲಿ ನಿರೀಕ್ಷೆಗಿಂತಲೂ ಅಧಿಕವಾದ ಫಲವು ಲಭಿಸುವದು. ಆದರೆ ನಾನಾ ತರವಾದ ಖರ್ಚುಗಳು ನಿಮ್ಮನ್ನು ಸದಾ ಬರಿಗೈಯವರನ್ನಾಗಿ ಮಾಡಲಿವೆ. ಎಂತಹ ಪ್ರಬಲ ಇದಿರಾಳಿಯನ್ನೂ ಪರಾಭವಗೊಳಿಸಬಲ್ಲ ನಿಮಗೆ (?) ಏನಾದರೂ ಮನೆಯಲ್ಲಿನ ಆಂತರಿಕ ಪರಿಸ್ಥಿತಿಯು ಚೆನ್ನಾಗಿರದು. ಹೆಂಡತಿ ಮಕ್ಕಳ ಕೂಡೆ ಸದಾ ಕಲಹ ಕಚ್ಚಾಟಗಳಾಗಲಿವೆ. ವಾರಾಂತ್ಯದ 2 ದಿನಗಳು ಇಷ್ಟಾರ್ಥಪ್ರದಗಳಿವೆ.

### ೬. ಕನ್ಯಾ

ಸುಖ ದುಃಖ ಲಾಭ ನಷ್ಟಗಳಿಂದು ಸಮತೂಕದಲ್ಲಿ ನಿಲ್ಲಲಿವೆ. ನೌಕರಿ ವ್ಯಾಪಾರಾದಿಗಳಲ್ಲಿ ನಿಮ್ಮ ನಿರೀಕ್ಷೆಯು ಸಫಲವಾಗುವದು. ಅನಿರೀಕ್ಷಿತ ಪ್ರವಾಸವು ಪ್ರಾಪ್ತವಾಗುವದಾದರೂ ಪುಣ್ಯ ತೀರ್ಥ ಕ್ಷೇತ್ರಾದಿಗಳ ದರ್ಶನ ಲಾಭವಾಗುವದು. ಕೋರ್ಟು ಕಚೇರಿಗಳ ಕಾರ್ಯಗಳಿಗೀ ಕಾಲವು ಚೆನ್ನಾಗಿಲ್ಲವು. ನೀರೋಗವಾದ ಸುಖಮಯ ಸಂಸಾರದಲ್ಲಿ ವಿಹರಿಸುವ ನಿಮಗೆ ವಾರಾದಿಯ 2 ದಿನಗಳು ತುಂಬ ಅನುಕೂಲವಾಗಿವೆ.

### ೭. ತುಲಾ

ಹಿಂದಿನ ದಿನಗಳಂತಿರದು ನಿಮ್ಮ ಇಂದಿನ ಪರಿಸ್ಥಿತಿಯು. ಧನ ಪತಿಯಾದ ಅಂಗಾರಕನು ಸುಖ ಸ್ಥಾನದಲ್ಲಿ ಉಚ್ಚನಾಗಿ ಕುಳಿತಿಹ ಕಾರಣ ನಿಮಗಿಂದು ಹಣದ ಕೊರತೆಯು ಕಾಣದಾದರೂ ಕೈಯಲ್ಲಿ ಅದು ಉಳಿಯಲೊಲ್ಲದು. ಹಿಡ್ಯಡ ನಿಮ್ಮ ಮಿತ್ರವರ್ಗದವರು ನಿಮ್ಮನ್ನು ರಿಕ್ತ ಹಸ್ತರನ್ನಾಗಿ ಮಾಡುವರು. ಕೆಲವೊಂದು ಗೃಹ ತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರವು. ವಾರಾದಿಯ 4 ದಿನಗಳು ಸುಖ ಲಾಭದಾಯಿಗಳಾಗಿವೆ.

### ೮. ವೃಶ್ಚಿಕ

ದುರ್ವಿಧಿಯು ದೂರವಾಗುತ್ತ ಬರಲಿದೆ. ಇಂದಿನ ನಿಮ್ಮ ಯಾವತ್ತೂ ವ್ಯವಹಾರಗಳು ನಿರ್ವಿಘ್ನದಿಂದ ನೆರವೇರಲಿವೆ. ಎಂತಹದುಃಸಾಧ್ಯವಾದ ಕಾರ್ಯವನ್ನು ನಿರ್ವಹಿಸುವ ಶಕ್ತಿ ಉತ್ಸಾಹಗಳಿಂದ ಕೂಡಿದ ನಿಮಗೆ ವಿಶೇಷತಃ ಕೋರ್ಟು ವ್ಯವಹಾರಗಳಲ್ಲೂ ರಾಜಕೀಯ ಕ್ಷೇತ್ರದಲ್ಲೂ ಕೀರ್ತಿ ಲಾಭಗಳುಂಟಾಗುವವು. ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಿರಿ. ವಾರಾಂತ್ಯದ 5 ದಿನಗಳು ನಿಮ್ಮ ಬಯಕೆಯನ್ನು ಪೂರ್ಣಮಾಡುವವು.

### ೯. ಧನು

ನೀವಿಂದು ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನ ಕೊಡಬೇಕಾಗಿದೆ. ದಕ್ಷ ಪ್ರಕೋಪದಿಂದಾಗಿ ಅನಾರೋಗ್ಯವುಂಟಾಗುವ ಸಂಭವವಿದೆ. ಅಲ್ಲದೆ ಅಧಿಕಾರಿಗಳ ಕೋಪಕ್ಕೆ ಸಿಲುಕುವ ಸಂಭವವು ಕಾಣಿಸುವದು. ನಿಮ್ಮ ಉದ್ಯಮ ವ್ಯವಹಾರಗಳು ಎಂದಿನಂತೆಯೇ ಸಾಗಲಿವೆ. ಆರ್ಥಿಕ ವಿಭಾಗದಲ್ಲೇನೂ ಕೊರತೆ ಕಾಣದ ಕಾರಣ ನಿಶ್ಚಿಂತೆಯಿಂದ ದಿನಗಳೆವಿರಿ. ತಾ. 3, 4, 5 ಅನುಕೂಲವಾಗಿವೆ.

### ೧೦. ಮಕರ

ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವ ನಿಮ್ಮ ಅದೃಷ್ಟವು ಇಂದು ತೀರ ಕೆಳಮಟ್ಟಕ್ಕೆ ಬಂದಿಹುದು. ಯಾವ ಭಾಗದಲ್ಲಿ ನೋಡಿದರೂ ನಿರಾಶೆಯೇ ಮುಂದಾಗಿ ಕಾಣಿಸಲಿದೆ. ದೈನಂದಿನದ ಖರ್ಚುವೆಚ್ಚಗಳು ಎಂದಿಗಿಂತಲೂ ಹೆಚ್ಚಿ ಹೆರವರ ಕೂಡೆ ಸಾಲ ಮಾಡುವ ಪರಿಸ್ಥಿತಿ ನಿಮಗಿಂದು ಬರಲಿದೆ. ಆದರೂ ಭಾವೀ ಕಲ್ಯಾಣ ದೃಷ್ಟಿಯಿಂದ ನಿವಿಂದು ದಿನಗಳೆಯಬೇಕಾಗಿದೆ. ತಾ. 30, 31, ಇತರ ದಿನಗಳಿಗಿಂತ ಲೇಸು.

### ೧೧. ಕುಂಭ

ಬಹು ಪಟ್ಟಿನ ನಿಮ್ಮ ತೊಡಕು ತೊಂದರೆಗಳು ದೂರವಾದವು. ಪ್ರತಿಯೊಂದು ವ್ಯವಹಾರಗಳಲ್ಲೂ ನಿಮ್ಮ ನಿರೀಕ್ಷೆಯಂತೆ ಫಲ ಲಭಿಸಲಿದೆ. ಆತ್ಮೀಯರ ನೆರವು ಮಿತ್ರ ವರ್ಗದವರ ಸಹಕಾರವು ಸಾಕಷ್ಟಿದ್ದರೂ ಭೂಸಂಬಂಧವಾದ ವ್ಯವಹಾರದಲ್ಲಿ ಪರಾಜಿತರಾಗುವ ಸಂಭವವಿದೆ. ಸೋದರ ವರ್ಗದವರ ಸಲುವಾಗಿ ಹೆಚ್ಚಿನ ಧನ ವ್ಯಯಿಸುವಿರಿ. ತಾ. 1, 2, 3ರಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗುವವು.

### ೧೨. ಮೀನ

ನೀವಿಂದು ಎಷ್ಟೆಷ್ಟು ಹೆಚ್ಚಾಗಿ ದುಡಿಯುವಿರೋ ಅಷ್ಟೂ ಹೆಚ್ಚಾಗಿ ಧನ ಲಭಿಸುವದು. ಎಂತಹ ಪ್ರಬಲ ವಿರೋಧಿಯೂ ಕೂಡ ಇಂದು ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು. ವಿಶೇಷತಃ ರಾಜಕೀಯರಂಗದಲ್ಲಿ ನಿಮ್ಮ ಧ್ವಜಪತಾಕೆಯನ್ನು ಹಾರಿಸುವಿರಿ. ಬಹುಮುಖದಿಂದ ಧನವು ನಿಮ್ಮ ಕೈಸೇರಲಿದೆ. ಸುಖನೆಮ್ಮದಿಯಿಂದ ಕಾಲಕಳೆವ ನಿಮಗೆ ತಾ. 30, 31, 4, 5 ತುಂಬ ಅನುಕೂಲವಾಗಿಹವು.

---

ಅದನ್ನು ಅರಿತುಕೊಳ್ಳಲಿಕ್ಕೆ ಮಾತ್ರ ಸಮಯ ಬೇಕಾಗುತ್ತದೆ."

'ಆದರೆ ರಾಜ್," ಪ್ರವಹಿಸುತ್ತಿದ್ದ ಸ್ತುತಿ ಪಾತದಲ್ಲಿ ಕೊಂಚ ತಡೆಯನ್ನೊಡ್ಡಿ ಕೊಂಡ ಕೂಡಲೇ, ಗಟ್ಟಿಯಾಗಿ ಹೇಳಿದಳು.' 'ನಿಮ್ಮ ಬಳಿ ಹೊಗಳುವ ವಿಚಿತ್ರ ಕ್ರಮವಿದೆ. ಹೃದಯದೊಳಗೆ ಯಾರನ್ನು ಆರಾಧಿಸುತ್ತೀರೋ ಅವರನ್ನು ಹೊರಗೆ ಬಹು ಒರಟುತನದಿಂದ ನೋಡುಕೊಳ್ಳುತ್ತೀರಿ. ನನಗೆ ಗೊತ್ತು. ಪ್ರೀತವೂ, ನೀವು ಯಾರನ್ನು ಪ್ರೀತಿಸುತ್ತೀರೋ ಅವರನ್ನು ಅನಾದರದಿಂದ ಕಾಣುತ್ತೀರಿ. ಮತ್ತೆ ಆ ದಕ್ಕೆ ಪಶ್ಚಾತ್ತಾಪ ಪಡುತ್ತ ಕುಳಿತುಕೊಂಡು ಬಿಡುತ್ತೀರಿ."

(ಮುಂದುವರಿಯುವುದು.)

---

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**ಸುಲಭದಲ್ಲಿ ಇಂಗ್ಲಿಷ್**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

**ಸುಲಭದಲ್ಲಿ ಪತ್ರಲೇಖನ**

**LETTER WRITING MADE EASY**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

**ಗೀತೆಯ ಕೈಗನ್ನಡಿ**

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

---

**ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ**

S. C. No. 58/1965.

ನಾರಾಯಣ ಪಡ್ವೆಟ್ನಾಯ —ವಾದಿ
ಸೂವಮ್ಮ ಯಾನೆ ಶಿವಮ್ಮ ಕೂಡಾ —ಪ್ರತಿವಾದಿ

ಸದ್ರಿ ವ್ಯಾಜ್ಯದ 7ನೇ ಪ್ರತಿವಾದಿ ಬೆಳ್ತಂಗಡಿ ತಾಲೂಕು ಕೊಕ್ಕಡ ಫಿರ್ಕದ ಪಟ್ರಮೆ ಗ್ರಾಮದ ಎಹೆಲ ಮನೆಯಲ್ಲಿರುವ ಶ್ರೀಮತಿ ಮೋಂಟಿಯವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದ್ರೆ:-

ವಾದಿಗೆ ಬರತಕ್ಕ ಗೇಣಿ ಬಾಕಿ ಇತ್ಯಾದಿ ವಸೂಲು ಬಗ್ಗೆ ಪ್ರತಿವಾದಿಯ ಮೇಲೆ ಮಾಡಿದ ಮೇಲಿನ ದಾವೆಯು ತಾ. 12-1-1966ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನಿಮಗೇನಾದರೂ ಆಕ್ಷೇಪ ಇದ್ದರೆ ಸದ್ರಿ ವ್ಯಾಜ್ಯದ ದಿನ ಬೆಳಿಗ್ಗೆ 10 ಗಂಟೆಗೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ದಾವೆಯನ್ನು ತೀರ್ಮಾನಿಸಲಾದೀತು.

B.K. Suryanarayana Rao
Advocate
BELTHANGADY

ಬೆಳ್ತಂಗಡಿ, ತಾ. 28-12-65.

---

**READ & ADVERTISE IN NAVAYUGA WEEKLY**

Edited, Printed & Published by K. H. Shetty at the Navayuga Press, Udipi, S. India.